REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ||

ಸ್ಥಳದವರಿಗೆ ೨ ರೂ

ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೪ನೇ ಜನವರಿ ೧೯೪೩ [ಸಂಚಿಕೆ ೩೮

ಕೊಟ್ಟೂರು

ಬಳ್ಳಾರಿ ಡಿ|| ಕೊಟ್ಟೂರು ಗ್ರಾಮದಲ್ಲಿ ಈ ವರ್ಷ ಮಳೆ ಬೆಳೆಯ ಅಭಾವದಿಂದ ತಲ್ಲಣಗೊಳ್ಳುತ್ತಿರುವ ಜನರ ಉದ್ಧಾರಕ್ಕಾಗಿ ಈ ಗ್ರಾಮದ ವರ್ತಕ ಸಂಘದವರು ಸೇರಿ ೪೫ ಸಾವಿರ ರೂಪಾಯಿಗಳವರೆಗೂ ಫಂಡನ್ನು ಕೂಡಿಸಿ, ಕೆಲವು ದಿನಗಳವರೆಗೂ ೧ ರೂಪಾಯಿಗೆ ೧೦ ಸೇರು ರಾಗಿ ೮ ಸೇರು ಜೋಳವನ್ನು ಮಾರುತ್ತ ಬಂದರು ಈಗ ೧ ರೂಪಾಯಿಗೆ ೮ ಸೇರು ರಾಗಿ ೭ ಸೇರು ಜೋಳವನ್ನು ಕೊಡುತ್ತಿರುವರು ಸಂತೆಯಲ್ಲಂತು ೬|| ೭ ಸೇರು ರಾಗಿ, ೫ ೬ ಸೇರು ಜೋಳವು ಸಹ ದೊರೆಯುವುದು ದುರ್ಲಭವಾಗಿದೆ ಈ ಧಾನ್ಯಾಭಾವದಿಂದ ಬಡ ಜನರಿಗೆ ಬಹಳ ಕಷ್ಟವು ಪ್ರಾಪ್ತವಾಗಿರುವುದು. ಪರಶಿವನು ಭಕ್ತಿಶೂನ್ಯರಾದ ಪಾಪಾತ್ಮರನ್ನು ಶಿಕ್ಷಿಸುವ ನೆವದಿಂದ ಈ ಕಾಲದಲ್ಲಿ ಕಷ್ಟ ಪರಂಪರೆಯನ್ನುಂಟುಮಾಡಿದ್ದಾನೆಂದು ತೋರುತ್ತದೆ ಇನ್ನು ಮುಂದಾದರೂ ಪರಮಾತ್ಮನು ಪಾಪಿಗಳನ್ನು ಶಿಕ್ಷಿಸುವ ಉದ್ದೇಶದಿಂದ ಸತ್ಪುರುಷರಿಗೆ ಕಷ್ಟಕೊಡದೆ ರಕ್ಷಿಸಬೇಕೆಂದು ಪ್ರಾರ್ಥಿಸುತ್ತೇನೆ ಈ ಕಠಿಣ ಕಾಲದಲ್ಲಿ ಪ್ರಸಿದ್ಧವಾಗಿ ಸಾಗುತ್ತಿದ್ದ ಮುಷ್ಟೂರು ಸಂಸ್ಕೃತ ಪಾಠಶಾಲೆ, ದಾಸೋಹ ಮುಂತಾದವು ನಿಂತು ಹೋಗಿದ್ದರೂ, ಈ ಗ್ರಾಮದ ಕ|| ಹಿ|| ಮ|| ಶ್ರೀ|| ಷ|| ಬ್ರ|| ಶ್ರೀಗುರು ಪಟ್ಟದ ಭೂತಭುಜಂಗಸ್ವಾಮಿಗಳವರು ಮಾತ್ರ ಹಿಂಜರಿಯದೆ ಎಷ್ಟು ಕಷ್ಟಗಳೊದಗಿದರೂ ಸಾಧಾರಣ ರೀತಿಯಿಂದ ತಮ್ಮ ಪಾಠಶಾಲೆಯನ್ನು ನಡೆಯಿಸಿಕೊಂಡು ಹೋಗುತ್ತಿರುವುದು ಪ್ರಶಂಸನೀಯವಾಗಿರುವುದಲ್ಲದೆ ಇದು ಜಗದ್ಗುರು ಪಂಚಾಚಾರ್ಯರ ಪೂರ್ಣಾನುಗ್ರಹವೆಂದೇ ಹೇಳಬೇಕಾಗುತ್ತದೆ ಜಗದಾಚಾರ್ಯರು ಇವರ ಕಾರ್ಯವನ್ನು ನಿರ್ವಿಘ್ನವಾಗಿ ಸಾಗಿಸಲೆಂದು ಪ್ರಾರ್ಥಿಸುವ

ಓರ್ವ ಗುರುಭಕ್ತ,
ಕೊಟ್ಟೂರು

ಅನುಷ್ಠಾನ ಪ್ರಾರಂಭ

ಬೆಂಗಳೂರು ಮಹಾಂತಿನಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಮಾರ್ಗಶೀರ್ಷ ಬ|| ೬ (ತಾ|| ೨೮-೧೨-೧೯೪೨) ಸೋಮವಾರದಿಂದ ಜಗತ್ಕಲ್ಯಾಣಕ್ಕಾಗಿ ಹುಬ್ಬಳ್ಳಿ ತಾ|| ಪಾಲಿಕೊಪ್ಪ ಗ್ರಾಮದ ಸಮೀಪದಲ್ಲಿರುವ ಬಿಲ್ವವನದಲ್ಲಿ ಅಲ್ಪಕ್ಷೀರಾಹಾರಿಗಳಾಗಿ ಅನುಷ್ಠಾನವನ್ನು ಪ್ರಾರಂಭಿಸಿರುವರು. ಸುತ್ತಮುತ್ತಲ ಗ್ರಾಮಗಳ ಅನೇಕ ಜನ ಭಕ್ತಾದಿಗಳು ಬಂದು ದರ್ಶನಾಶೀರ್ವಾದಗಳನ್ನು ಪಡೆಯುತ್ತಿರುವರು ಅನುಷ್ಠಾನವು ಜಗದಾಚಾರ್ಯರ ಅನುಗ್ರಹದಿಂದ ನಿರ್ವಿಘ್ನವಾಗಿ ಸಾಗಲೆಂದು ಪ್ರಾರ್ಥಿಸುವ,

ಪಿ ಯಂ ಗಂಗಾಧರಶರ್ಮಾ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ರುದ್ರಾಭಿಷೇಕ ಮತ್ತು ಪಾದಪೂಜೆ

ಬೆಳಗಾವಿಯ ಸಮೀಪದಲ್ಲಿರುವ ಅನಿಗೋಳಗ್ರಾಮದಲ್ಲಿ ಪ್ರಸಿದ್ಧರಾಗಿರುವ ಶ್ರೀಮತಿ ನಾಡಗೇರ ಪಾರ್ವತಮ್ಮನವರು ಶ್ರೀ|| ಷ|| ಬ್ರ|| ಗುರುವರ್ಯಶಿವಾಚಾರ್ಯರು ಹಿರೇಮಠ ಸುತ್ತಗಟ್ಟಿ ಇವರಿಗೆ ಆಮಂತ್ರಣವನ್ನು ಕೊಟ್ಟು ತಮ್ಮ ಮನೆಗೆ ಕರೆದುಕೊಂಡು ಹೋಗಿ ಮಾರ್ಗಶೀರ್ಷ ಶುದ್ಧ ಪ್ರತಿಪದೆಯಿಂದ ನಿತ್ಯದಲ್ಲಿಯೂ ಶ್ರೀ ರುದ್ರಾಭಿಷೇಕ ಮತ್ತು ಪಾದಪೂಜಾ ಸಮಾರಂಭವನ್ನು ನೆರವೇರಿಸಿದರು ಶ್ರೀಮತಿ ಪಾರ್ವತಮ್ಮನವರು ಒಳ್ಳೆ ಸದಾಚಾರ ಸಂಪನ್ನೆಯರೂ ಗುರುಭಕ್ತಿಪರಾಯಣೆಯರೂ ಜೀವದಯಾಪರರೂ ಆಗಿದ್ದಾರೆ ಧರ್ಮದಲ್ಲಿ ಇವರ ಮನಸ್ಸು ಹೆಚ್ಚಾಗಿರುವದು ಅಸ್ತು! ಶ್ರೀ ಸುತ್ತಗಟ್ಟಿಸ್ವಾಮಿಗಳವರ ನೇತೃತ್ವದಲ್ಲಿ ರುದ್ರಾಭಿಷೇಕ ಮತ್ತು ಪಾದಪೂಜಾದಿಗಳು ಐದುದಿವಸಗಳವರೆಗೆ ಒಳ್ಳೆ ವೈಭವದಿಂದ ನೆರವೇರಿದವು ಅಲ್ಲದೆ ಪ್ರತಿನಿತ್ಯ ಸಾಯಂಕಾಲದಲ್ಲಿ ಪ್ರವಚನವೂ ನಡೆಯುತ್ತಿತ್ತು ಪಂಚಮಿಯ ದಿವಸ ಪೂಜಾಸಮಾರಂಭವು ಮತ್ತು ಪ್ರವಚನವು ವಿಶೇಷ ವೈಭವದೊಡನೆ ಸಮಾಪ್ತಿಗೊಳಿಸಲ್ಪಟ್ಟವು ಈ ರೀತಿಯಾಗಿ ಶ್ರೀಮತಿ ಪಾರ್ವತಮ್ಮನವರು ತಮ್ಮ ಮನೆಯಲ್ಲಿ ಸದಾ ಸತ್ಕಾರ್ಯಗಳು ನಡೆಯುತ್ತಿರಬೇಕೆಂದು ಜಗದಾಚಾರ್ಯರನ್ನು ಪ್ರಾರ್ಥಿಸಿದರು ಈ ಸಮಾರಂಭದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೧ ರೂಯನ್ನು ಸಮರ್ಪಿಸಿದರು ಈ ತಾಯಿಯವರಿಗೆ ಜಗದ್ಗುರು ಪಂಚಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳನ್ನು ದಯಪಾಲಿಸಲೆಂದು ಪ್ರಾರ್ಥಿಸುತ್ತೇನೆ

ಶಿವಪ್ಪ ವೈಜಪ್ಪ, ಅನಿಗೋಳ, ಬೆಳಗಾವ

ವೇದ ಮತ್ತು ವೀರಶೈವಮತ

(ಮೈಸೂರಿನಲ್ಲಿರತಕ್ಕ ಡಿವೈನ್ ಲೈಫ್ ಸೊಸೈಟಿ ಪ್ರೆಸಿಡೆಂಟರಾದ ಶ್ರೀ|| ಎಂ ಎಲ್ ನಾಗಣ್ಣನವರಿಂದ)

ವೀರಶೈವಮತೀಯರಲ್ಲಿ ಪಂಡಿತರೆನಿಸಿಕೊಂಡಿರುವವರಲ್ಲಿ ಕೆಲವರು ಪ್ರಪಂಚಸೃಷ್ಟಿಯ ಆದಿಯಲ್ಲಿ ಮನುಷ್ಯರು ಕಾಡುಮೃಗಗಳಂತೆ ಇದ್ದು ಬರಬರುತ್ತಾ ಅವರ ಜ್ಞಾನವು ವೃದ್ಧಿಯಾಗಿ ತತ್ವಜ್ಞಾನವನ್ನು ಹೊಂದಿ ತಮ್ಮ ಅನುಭವವನ್ನು ಇತರರಿಗೆ ಬೋಧಿಸಿದ್ದನ್ನೇ ಜನಗಳು ವೇದ, ಆಗಮ ಮತ್ತು ಉಪನಿಷತ್ತುಗಳೆಂದು ಕರೆಯುತ್ತಿದ್ದರೆಂದೂ, ಮತ್ತು ಇವುಗಳ ಕಾಲವನ್ನು ತಿಳಿಯದೆ ಯಾವುದೋ ಒಂದು ನಂಬಿಕೆಯಿಂದ ಇವು ಅಪೌರುಷೇಯಗಳೆಂದು ಪ್ರಚಾರಕ್ಕೆ ಬಂದಿರುತ್ತವೆಂದೂ, ಇನ್ನು ಕೆಲವರು ವೀರಶೈವರಿಗೆ ವೇದವು ಪ್ರಮಾಣವಲ್ಲವೆಂದೂ, ವೇದಕ್ಕೆ ಆಧಾರವಾದ ಶಿವಶರಣರ ಅನುಭವವೇ ಅಂದರೆ ಅವರ ವಚನಗಳೇ ಪ್ರಮಾಣವೆಂದೂ, ಇನ್ನು ಕೆಲವರು ವೀರಶೈವಮತವು ವೈದಿಕ ಮತ್ತು ತಾಂತ್ರಿಕ (ಅಂದರೆ ವೇದ ಮತ್ತು ಆಗಮ ಪ್ರಮಾಣವುಳ್ಳ) ಮತವೆಂದೂ ಅಭಿಪ್ರಾಯವುಳ್ಳವರಾಗಿರುತ್ತಾರೆ ಈ ರೀತಿಯಾಗಿ ಪಂಡಿತರಾಗಿರತಕ್ಕವರು ಭಿನ್ನಾಭಿಪ್ರಾಯವುಳ್ಳವರಾದುದರಿಂದ ವೀರಶೈವಮತೀಯರಲ್ಲಿ ಉತ್ಕೃಷ್ಟ ಪರಿಚಯವಿಲ್ಲದೆ ಇರತಕ್ಕವರು ಯಾವ ಪಂಡಿತರು ಹೇಳುವುದು ನಿಜ ಎಂಬುದನ್ನು ತಿಳಿಯದೆ ಸಂಶಯದಲ್ಲಿ ಮುಳುಗಿ ಹೋಗುವುದು ಸಹಜವಾಗಿದೆ ಆದ್ದರಿಂದ ಚೆನ್ನಾಗಿ ವಿಚಾರಮಾಡಿ ಯಾವ ಅಭಿಪ್ರಾಯವು ಸರಿ ಎಂಬುದನ್ನು ನಿರ್ಧರಿಸತಕ್ಕದ್ದು ಅತ್ಯಾವಶ್ಯಕವಾಗುತ್ತದೆ

ಮೇಲ್ಕಂಡ ವಿಷಯವನ್ನು ನಿರ್ಧರಿಸುವುದಕ್ಕೆ ಮೊದಲು ಈಶ್ವರನೆಂಬುವನೊಬ್ಬನಿರುವನೆಂಬುದನ್ನು ನಾವು ವಿಚಾರದಿಂದ ನಿರ್ಧರಿಸಬೇಕು ನಾವು ನೋಡಿದ ಹಾಗೆ ಈ ಲೋಕದಲ್ಲಿ ಕೆಲವರು ಸುಖಿಗಳಾಗಿಯೂ, ಮತ್ತೆ ಕೆಲವರು ದುಃಖಿಗಳಾಗಿಯೂ ಇರುತ್ತಾರೆ ಈ ವಿಧವಾದ ವ್ಯತ್ಯಾಸಕ್ಕೆ ಕಾರಣವೇನೆಂದು ವಿಚಾರಿಸಿದರೆ, ಈ ಜನ್ಮದಲ್ಲಿ ನಾವು ಅನುಭವಿಸತಕ್ಕ ಸುಖದುಃಖಗಳಿಗೆ ನಾವು ಹಿಂದೆ ಮಾಡಿದ ಪುಣ್ಯಪಾಪಗಳೇ ಕಾರಣವೆಂದು ಕಂಡುಬರುತ್ತದೆ ಒಬ್ಬನು ಕಳ್ಳತನವನ್ನು ಮಾಡಿದರೆ ಅವನು ಶಿಕ್ಷೆಯನ್ನು ಹೊಂದುತ್ತಾನೆ ಅವನು ಹೊಂದತಕ್ಕ ಶಿಕ್ಷೆಗೆ ಅವನ ಕಳ್ಳತನವೇ ಕಾರಣವಾದರೂ ಅವನ ಕಳ್ಳತನವು ಜಡವಾದುದರಿಂದ ಅವನಿಗೆ ಶಿಕ್ಷೆಯನ್ನು ಕೊಡುವುದಕ್ಕೆ ಒಬ್ಬ ಚೇತನನಾದ ಜಸ್ಟೀಸಿನ ಅವಶ್ಯಕತೆಯಿರುತ್ತದೆ ಅದರಂತೆ ನಾವು ಅನುಭವಿಸತಕ್ಕ ಸುಖದುಃಖಗಳಿಗೆ ನಮ್ಮ ಹಿಂದಿನ ಪುಣ್ಯಪಾಪಗಳೇ ಕಾರಣವಾದರೂ ಪುಣ್ಯಪಾಪಗಳು ಜಡವಾದ್ದರಿಂದ ಅವುಗಳ ಫಲವಾದ ಸುಖದುಃಖಗಳನ್ನು ನಮಗೆ ಕೊಡುವುದಕ್ಕೆ ಒಬ್ಬ ಚೇತನನ ಅವಶ್ಯಕತೆಯಿರುತ್ತದೆ ಅವನೇ ಈಶ್ವರನು. ನಮಗೆ ಪ್ರಥಮ ಜನ್ಮವೇ ಇಲ್ಲ. ಅಂದರೆ ನಾವು ಹುಟ್ಟುವದು ಮತ್ತು ಸಾಯುವದು ಪ್ರವಾಹತಃ ಅನಾದಿಯಾಗಿವೆ. ಒಂದು ವೇಳೆ ನಾವು ಪ್ರಥಮ ಜನ್ಮವನ್ನು ಒಪ್ಪಿಕೊಳ್ಳುವವಾದರೆ ಆ ಪ್ರಥಮ ಜನ್ಮಕ್ಕೆ ಹಿಂದೆ ನಾವು ಇರಲಿಲ್ಲವೆಂದೂ ಮತ್ತು ಯಾವ ಕರ್ಮವನ್ನೂ ಮಾಡಿಲ್ಲವೆಂದೂ ಹೇಳಬೇಕಾಗುತ್ತದೆ. ಆದ್ದರಿಂದ ಕರ್ಮವೆಂಬ ಕಾರಣವಿಲ್ಲದೆ ಪ್ರಥಮ ಜನ್ಮವು ಬಂದಂತಾಗುತ್ತದೆ ಲೋಕದಲ್ಲಿ ಕಾರಣವಿಲ್ಲದ ಕಾರ್ಯವನ್ನು ಯಾರೂ ನೋಡಿಲ್ಲವಾದುದರಿಂದ ಕರ್ಮವೆಂಬ ಕಾರಣವಿಲ್ಲದೆ ಇರುವ ಪ್ರಥಮ ಜನ್ಮವು ಅಸಂಭವನೀಯವು.

ಇದರಂತೆ ಪ್ರಪಂಚದ ಸೃಷ್ಟಿ ಮತ್ತು ಪ್ರಳಯಗಳು ಪ್ರವಾಹತಃ ಅನಾದಿಯಾಗಿವೆ. ಒಂದುವೇಳೆ ಪ್ರಥಮ ಸೃಷ್ಟಿಯನ್ನು ನಾವು ಒಪ್ಪುವುದಾದರೆ ಹಿಂದೆ ಪ್ರಪಂಚವಿರಲಿಲ್ಲವೆಂದೂ, ಪ್ರಥಮ ಸೃಷ್ಟಿಯ ಆದಿಯಲ್ಲಿರತಕ್ಕ ಜೀವರು ಹಿಂದೆ ಯಾವ ಕರ್ಮಗಳನ್ನೂ ಮಾಡಿರಲಿಲ್ಲವೆಂದೂ ಹೇಳಬೇಕಾಗುತ್ತದೆ. ಪ್ರಪಂಚವು ಘಟದಂತೆ ಒಂದು ಕಾರ್ಯವಾದುದರಿಂದ ಘಟವನ್ನು ರಚಿಸಿದ ಕುಂಬಾರನು ಹೇಗೆ ಇರಬೇಕೋ ಹಾಗೆಯೇ ಪ್ರಪಂಚವನ್ನು ಸೃಷ್ಟಿಮಾಡುವುದಕ್ಕೆ ಒಬ್ಬ ಈಶ್ವರನು ಇರಲೇ ಬೇಕೆಂಬುದು ಸಿದ್ಧವಾಗುತ್ತದೆ. ಈಶ್ವರನು ಪ್ರಪಂಚವನ್ನು ಸೃಷ್ಟಿಮಾಡುವಾಗ ಕೆಲವು ಜೀವರನ್ನು ಮನುಷ್ಯರನ್ನಾಗಿಯೂ, ಕೆಲವು ಜೀವರನ್ನು ಮೃಗಗಳನ್ನಾಗಿಯೂ, ಇನ್ನು ಕೆಲವು ಜೀವರನ್ನು ಕ್ರಿಮಿಕೀಟಗಳನ್ನಾಗಿಯೂ ಮಾಡುವನಲ್ಲದೆ ಇವರಲ್ಲಿ ಕೆಲವರನ್ನು ಸುಖಿಗಳನ್ನಾಗಿಯೂ ಕೆಲವರನ್ನು ದುಃಖಿಗಳನ್ನಾಗಿಯೂ ಮಾಡುತ್ತಾನೆ. ಪ್ರಥಮ ಸೃಷ್ಟಿಯಾದ್ದರಿಂದ ಹಿಂದೆ ಜೀವರು ಯಾವ ಕರ್ಮಗಳನ್ನೂ ಮಾಡದೇ ಇದ್ದರೂ ಅವರಿಗೆ ತನಗೆ ಇಷ್ಟಬಂದಂತೆ ಉತ್ತಮಾಧಮ ಜನ್ಮಗಳನ್ನೂ ಮತ್ತು ಸುಖ ದುಃಖಗಳನ್ನೂ ಈಶ್ವರನು ಕೊಟ್ಟಂತೆ ಆಗುತ್ತದೆ. ಈರೀತಿಯಾಗಿ ಈಶ್ವರನು ಅನ್ಯಾಯವನ್ನು ಮಾಡತಕ್ಕವನಲ್ಲ. ಪ್ರತಿಯೊಂದು ಸೃಷ್ಟಿಯು ಹಿಂದಿದ್ದ ಜೀವರ ಕರ್ಮಗಳನ್ನು ನಿಮಿತ್ತಮಾಡಿಕೊಂಡು ಈಶ್ವರನು ಪ್ರಪಂಚವನ್ನು ಸೃಷ್ಟಿಮಾಡಿ ಅವರವರ ಕರ್ಮಗಳಿಗೆ ಅನುಸಾರವಾಗಿ ಉತ್ತಮಾಧಮ ಜನ್ಮಗಳನ್ನು ಸುಖದುಃಖಗಳನ್ನು ಕೊಡುತ್ತಾನೆ. ಇದರಿಂದ ಪ್ರಪಂಚದ ಸೃಷ್ಟಿ ಮತ್ತು ಪ್ರಳಯಗಳು ಪ್ರವಾಹತಃ ಅನಾದಿಯಾಗಿವೆ ಎಂಬುದು ಸಿದ್ಧವಾಗುವುದು. ಪ್ರಪಂಚದ ಸೃಷ್ಟಿಯು ಮತ್ತು ಜೀವರ ಜನ್ಮವು ಅನಾದಿಯಾದು

[ಆಚೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೩ ನೇ ಜನವರಿ ತಾ|| ೪ ನೆಯ ಸೋಮವಾರ

ಇಂಗ್ಲೀಷ್ ವಿದ್ಯಾಭ್ಯಾಸದ ಪ್ರಭಾವ.

ಈಗಿನ ಇಂಗ್ಲೀಷ್ ವಿದ್ಯಾಭ್ಯಾಸಕ್ರಮದಿಂದ ವಿದ್ಯಾರ್ಥಿಗಳ ಹೃದಯ ಕ್ಷೇತ್ರದಲ್ಲಿ ಧರ್ಮಬೀಜವು ಒಣಗುತ್ತ ಹೋಗಲುಪಕ್ರಮಿಸಿರುತ್ತದೆ. ಹಿಂದಿನ ವಿದ್ಯಾಭ್ಯಾಸಕ್ರಮವು ಎಂಥ ನಾಸ್ತಿಕಸ್ವಭಾವವುಳ್ಳ ವಿದ್ಯಾರ್ಥಿಗಳನ್ನಾದರೂ ಆಸ್ತಿಕರನ್ನಾಗಿ ಮಾಡುತ್ತಿತ್ತು. ವಿದ್ಯಾರ್ಥಿಗಳು ಎಷ್ಟುಮಟ್ಟಿಗೆ ಧರ್ಮಿಷ್ಠರಾಗುತ್ತ ಬರುವರೋ ಅಷ್ಟಷ್ಟು ಧರ್ಮವು ಪ್ರಪಂಚದಲ್ಲಿ ಹರಡಲು ಅವಕಾಶವಾಗುವುದು. ಈಗಿನ ವಿದ್ಯಾರ್ಥಿಗಳಲ್ಲಿ ಅನೇಕರು ತಾವು ಆಂಗ್ಲಭಾಷೆಯನ್ನು ಅಲ್ಪಸ್ವಲ್ಪ ಕಲಿತಮಾತ್ರದಿಂದಲೇ ತಮ್ಮ ನಡೆನುಡಿಗಳಲ್ಲಿ [illegible]ರಾಗಿ ಅವರಲ್ಲೇನಿದೆ? ಇವರಲ್ಲೇನಿದೆ? ಎಂದು ಸ್ವೇಚ್ಛೆಯಾಗಿ ಮಾತನಾಡುತ್ತ ಯಾರಾದರೂ ದೇವಪೂಜಾ ಗುರುಪೂಜಾದಿ ಕಾರ್ಯಗಳನ್ನು ಮಾಡುತ್ತಿದ್ದರೆ, ಅವರನ್ನು ನೋಡಿ ಈತನು ಹಳೆತರಹದ ಮನುಷ್ಯನೆಂದು ಹಾಸ್ಯಮಾಡತೊಡಗುವರು. ಈ ವಿಧವಾದ ಭಾವನೆಯು ನಮ್ಮ ಭಾರತೀಯ ವಿದ್ಯಾರ್ಥಿಗಳ ಹೃದಯದಲ್ಲುಂಟಾಗುವುದಕ್ಕೆ ಈಗಿನ ಅಭ್ಯಾಸಕ್ರಮವೇ ಮುಖ್ಯಕಾರಣವಾಗಿದೆ. ಹೀಗೆ ವಿದ್ಯಾರ್ಥಿಗಳೆಲ್ಲರೂ ಎಲ್ಲಿ ನೋಡಿದರೂ ಈ ವಿಧವಾದ ನಾಸ್ತಿಕಸ್ವಭಾವವುಳ್ಳವರಾಗುತ್ತ ಬಂದರೆ ಭಾರತಧರ್ಮವು ನಾಮಾವಶೇಷವಾಗುವುದರಲ್ಲಿ ಸಂದೇಹವೇ ಇಲ್ಲ. ಬಿದಿರು ಎಳೆಯದಾಗಿರುವಾಗ್ಗೆ ಎತ್ತ ಬೇಕೆಂದರೂ ಅತ್ತ ಬಗ್ಗಿಸಿ ಸರಿಪಡಿಸಬಹುದು. ಆ ಕಾಲವನ್ನು ಬಿಟ್ಟು ಮುಂದೆ ಸರಿಪಡಿಸುತ್ತೇನೆಂದರೆ, ಅದು ಎಂದಿಗೂ ಸಾಧ್ಯವಾಗಲಾರದು. ಅದರಂತೆ ಧರ್ಮವೃಕ್ಷವು ಪ್ರಪಂಚದಲ್ಲಿ ಅಚ್ಚಳಿಯದಂತೆ ಬೆಳೆಯಬೇಕಾದರೆ ಬಾಲಕರ ಮನಸ್ಸನ್ನು ಚಿಕ್ಕಂದಿನಲ್ಲಿಯೇ ಸರಿಪಡಿಸಬೇಕು. ಇಂದು ಕರುವಾದುದು ನಾಳೆ ಎತ್ತಾಗಬಲ್ಲದು ಎಂಬಂತೆ ಈಗ ಬಾಲಕರಾಗಿದ್ದವರು, ಮುಂದೆ ದೊಡ್ಡ ಪ್ರಜೆಗಳಾಗುತ್ತಾರೆ. ಈಗಿನಿಂದಲೇ ವಿದ್ಯಾರ್ಥಿಗಳು ನಮ್ಮ ದೇಶವಾವುದು? ನಾವು ಹುಟ್ಟಿರುವುದೆಲ್ಲಿ? ನಮ್ಮ ದೇಶದ ನಡೆನುಡಿಗಳ ಸ್ವಭಾವವೆಂತಹದು? ನಮ್ಮ ಧರ್ಮವಾವುದು? ಈ ಧರ್ಮವನ್ನನುಸರಿಸುವುದರಿಂದಾಗುವ ಫಲವಾವುದು? ಎಂಬುದನ್ನು ಪ್ರತಿಕ್ಷಣವೂ ಪರ್ಯಾಲೋಚಿಸುತ್ತಿರಬೇಕು. ಹೀಗೆ ಯಾವುದೊಂದನ್ನೂ ಆಲೋಚಿಸದೆ ನೂತನನೂತನವಾಗಿ ಭರತಖಂಡಕ್ಕೆ ಇಳಿಯುತ್ತಿರುವ ಪರದೇಶದ ನಡವಳಿಕೆಗಳನ್ನು ಅನುಸರಿಸಿದರೆ ಎಂದೂ ಉದ್ಧಾರರಾಗಲಾರರು. ಬಾಲಕರ ಮನಸ್ಸಾದರೋ ಅತಿಕೋಮಲವಾಗಿರುವದು. ಇಂಥ ಅತಿಕೋಮಲವಾದ ಮನಸ್ಸಿಗೆ ಯಾವ ಸಂಸರ್ಗವು ಉಂಟಾಗುವುದೋ ಅದಕ್ಕನುಗುಣವಾದ ಸ್ವಭಾವವು ಉಂಟಾಗುವದು. ಬಾಲ್ಯದಶೆಯಲ್ಲಿ ವಿದ್ಯಾರ್ಥಿಗಳು ಇಹಪರಸುಖಸಾಧಕವಾದ ಧರ್ಮಶಿಕ್ಷಣವನ್ನು ಹೊಂದದೆ, ತಮ್ಮ ಅಮೂಲ್ಯವಾದ ಬಾಲ್ಯವೆಲ್ಲವನ್ನೂ ಬಾಹ್ಯಾಡಂಬರದಲ್ಲಿಯೇ ಕಳೆದರೆ ಮುಂದೆ ಅವರ ಡೊಂಕಾದ ಮನೋಭಾವನನ್ನು ತಿದ್ದುವುದೇ ಕಷ್ಟವಾಗುತ್ತದೆ. ವಿದ್ಯಾರ್ಥಿಗಳು ಈಗಿನಿಂದಲೇ ತಮ್ಮ ವಿದ್ಯಾಭ್ಯಾಸದ ಜತೆಗೆ ಬ್ರಹ್ಮಚರ್ಯಪಾಲನಕ್ರಮವನ್ನು ಕಲಿಯಬೇಕು. ಇಂದ್ರಿಯನಿಗ್ರಹವೇ ಬ್ರಹ್ಮಚರ್ಯವೆನಿಸುತ್ತದೆ. ಬ್ರಹ್ಮಚರ್ಯವನ್ನು ಪಾಲಿಸದೆ ಕಲಿಯುವ ವಿದ್ಯೆಯು ತೂತುಬಿದ್ದ ಮಡಕೆಯೊಳಗೆ [illegible]ನಂತೆ ವ್ಯರ್ಥವಾಗುವದು.

ಮಾನವನು ಇಂದ್ರಿಯಗಳಿಗೆ ಎಂದು ಅಧೀನನಾಗುತ್ತಾನೆಯೋ ಅಂದೇ ಅವನು ದೋಷಿಯಾಗುತ್ತಾನೆ. ಯಾವನು ಇಂದ್ರಿಯಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡಿರುತ್ತಾನೆಯೋ ಅವನು ಅನೇಕ ವಿಧವಾದ ಸಿದ್ಧಿಗಳನ್ನು ಪಡೆಯುತ್ತಾನೆಂದು ಧರ್ಮಶಾಸ್ತ್ರಕಾರರು ಹೇಳಿರುತ್ತಾರೆ. ಹಿಂದಿನ ಕಾಲದಲ್ಲಿ ವಿದ್ಯಾರ್ಥಿಗಳು ಇಂದ್ರಿಯಗಳನ್ನು ತಮ್ಮ ಸ್ವಾಧೀನದಲ್ಲಿಟ್ಟುಕೊಂಡು ಅಭ್ಯಾಸಮಾಡುತ್ತಲಿದ್ದುದರಿಂದ ದೃಢಕಾಯರೂ, ಪವಿತ್ರಾತ್ಮರೂ, ಆಸ್ತಿಕರೂ ಆಗುತ್ತಿದ್ದರು. ಈಗ ನಡೆಯುತ್ತಿರುವ ವಿದ್ಯಾಭ್ಯಾಸಕ್ರಮದಲ್ಲಿ ವಿದ್ಯಾರ್ಥಿಗಳ ಆತ್ಮನು ಇಂದ್ರಿಯಗಳಿಗಧೀನನಾಗಿರುವನಲ್ಲದೆ ಇಂದ್ರಿಯಗಳು ಆತ್ಮನ ಅಧೀನಗಳಾಗಿರುವುದಿಲ್ಲ. ಹಿಂದಿನಕಾಲದ ಪಾಠಶಾಲೆಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವು ಪೂರ್ಣವಾಗುವವರೆಗೂ ಮನಶ್ಚಾಂಚಲ್ಯಗೊಳಿಸುವ ಪ್ರಾಪಂಚಿಕವ್ಯವಹಾರದಲ್ಲಿ ಪ್ರವೃತ್ತರಾಗುತ್ತಿರಲಿಲ್ಲ. ವಿದ್ಯಾಭ್ಯಾಸವೆಂದರೆ, ಬ್ರಹ್ಮಚರ್ಯದಲ್ಲಿ ಮಾಡುತ್ತಿರುವ ಒಂದುವಿಧವಾದ ಕಠಿನವಾದ ತಪಸ್ಸಾಗಿಯೇ ಪರಿಣಮಿಸುತ್ತಿತ್ತು. ಹೀಗೆ ಅವರು ಪರಿಶುದ್ಧವೃತ್ತಿಯಿಂದ ವಿದ್ಯಾಭ್ಯಾಸಮಾಡುತ್ತಿದ್ದುದರಿಂದ ಮುಂದೆ ಅವರು ಮಹಾಬಲಿಷ್ಠರಾಗಿಯೂ ಸಾತ್ವಿಕಗುಣಿಗಳಾಗಿಯೂ, ದೈವಬಲವುಳ್ಳವರಾಗಿಯೂ ಆಗುತ್ತಿದ್ದರು. ಈಗಿನ ವಿದ್ಯಾಭ್ಯಾಸದಿಂದ ಇವೆಲ್ಲವೂ ತಲೆಕೆಳಗಾಗಿವೆ. ವಿದೇಶೀಯ ವಿದ್ಯಾಸಂಸ್ಕಾರವು ವಿದ್ಯಾರ್ಥಿಗಳ ಒಳಗೂ ಹೊರಗೂ ವ್ಯಾಪಿಸಿ ಸ್ವದೇಶಾಚಾರಸಂಸ್ಕಾರವು ನಷ್ಟೋನ್ಮುಖವಾಗುತ್ತ ನಡೆದಿರುವದು. ವೇದಶಾಸ್ತ್ರಪುರಾಣಗಳಲ್ಲಿಯೂ, ಮಾತಾಪಿತೃಗಳಲ್ಲಿಯೂ, ರಾಜರಲ್ಲಿಯೂ, ಗುರುಗಳಲ್ಲಿಯೂ ದೇವರಲ್ಲಿಯೂ ಶ್ರದ್ಧೆಯು ವಿಶೇಷವಾಗಿ ಕಡಿಮೆಯಾಗುತ್ತ [illegible]. ಸಂಸರ್ಗಜಾ ದೋಷಗುಣಾ ಭವಂತಿ ಎಂಬಂತೆ ಈಗಿನ ವಿದ್ಯಾಸಂಸರ್ಗಾನುಸಾರವಾಗಿ ಬುದ್ಧಿಯು [illegible]ವಾಗುತ್ತ ನಡೆದಿದೆ. ತಮ್ಮ ತಮ್ಮ ಮತಧರ್ಮಗಳನ್ನು ಯಾರಾದರೂ ಶಾಸ್ತ್ರದೃಷ್ಟಿಯಿಂದ [illegible] ಅದಕ್ಕೆ ಗಮನಕೊಡುವುದೇ ಇಲ್ಲ. ತಮ್ಮ ಸ್ವೇಚ್ಛಾಚಾರಕ್ಕೆ ಅನುಕೂಲವಾದ ಯಾವುದಾದರೊಂದು ವಿಷಯವು ಬಂದರೆ ಅದರಲ್ಲಿ ಮಾತ್ರ ಬಹು ಉತ್ಸುಕತೆಯಿಂದ ಮುಂದುವರಿಯುತ್ತಿರುವರು. ಈ ರೀತಿ ವಿದ್ಯಾರ್ಥಿಗಳು ಸ್ವೇಚ್ಛಾಚಾರಿಗಳಾಗಿ ನಡೆಯಹತ್ತಿದುದರಿಂದ ಸದ್ಯ ಭರತಖಂಡದಲ್ಲಿ ಬಂಬಿನಸ್ಫೋಟ ಮೊದಲಾದ ಅನೇಕ ದುಷ್ಟಕಾರ್ಯಗಳು ಸಾಗಹತ್ತಿರುವವು. ಈ ವಿಧವಾದ ದುಷ್ಟಕೃತ್ಯಗಳಿಗೆ ವಿದ್ಯಾರ್ಥಿಗಳೇ ಕಾರಣರೆಂಬುದು ಸರ್ವರಿಗೂ ತಿಳಿದ ವಿಷಯವಾಗಿದೆ. ಸನಾತನಧರ್ಮಾಭಿಮಾನಿಗಳಾದ ಅವರವರ ತಂದೆತಾಯಿಗಳು ಧರ್ಮಾಭಿವೃದ್ಧಿಗೆಂದು ಹೆತ್ತಿರುವ ಮಕ್ಕಳಿಂದ ಧರ್ಮವೃದ್ಧಿಯಾಗದೆ ಅಧರ್ಮಾಭಿವೃದ್ಧಿಯು ಆಗುತ್ತ ನಡೆದಿರುವುದು ವಿಷಾದಾಸ್ಪದವಲ್ಲವೇ? ಆದುದರಿಂದ ವಿದ್ಯಾರ್ಥಿಗಳು ಇನ್ನು ಮುಂದಾದರೂ ತಮ್ಮ ವಕ್ರಮಾರ್ಗವನ್ನು ಬಿಟ್ಟು ತಮ್ಮ ತಂದೆತಾಯಿಗಳು ಅನುಸರಿಸಿ ನಡೆಯುತ್ತ ಬಂದಿರುವ ಮುಕ್ತಿಸಾಧಕವಾದ ಮತಧರ್ಮಕ್ಕೆ ಲೋಪಬಾರದಂತೆ ವಿದ್ಯಾಭ್ಯಾಸವನ್ನು ಮಾಡಿ ಗುರುಹಿರಿಯರಲ್ಲಿ ನಂಬಿಕೆಯುಳ್ಳವರಾಗಬೇಕು. ಜಗದೀಶ್ವರನು ವಿದ್ಯಾರ್ಥಿಗಳ ಹೃದಯದಲ್ಲಿ ಇಂತಹ ಸದ್ಬುದ್ಧಿಯನ್ನು ಉಂಟುಮಾಡಲೆಂದು ಆಶಿಸುತ್ತೇವೆ.

ಯುದ್ಧವಾರ್ತೆ.

ಪೋಲೆಂಡಿನಲ್ಲಿ ಜರ್ಮನರ ಕ್ರೂರಕೃತ್ಯ

ಪೋಲೆಂಡಿನಲ್ಲಿ ಜರ್ಮನರು ಜನರನ್ನು ಮತ್ತೆ ಚಿತ್ರಹಿಂಸೆಗೆ ಗುರಿಮಾಡುತ್ತಿದ್ದಾರೆ. ಅನೇಕರನ್ನು ದಸ್ತಗಿರಿ ಮಾಡುತ್ತಿರುವರಲ್ಲದೆ, ಗುಂಡಿನ ಬಾಯಿಗೆ ಕೊಡುತ್ತಿದ್ದಾರೆ.

ಸ್ಪೇನಿಗೆ ಜರ್ಮನರ ಒತ್ತಾಯ

ಮೆಡಿಟರೇನಿಯನ್ ಸಮುದ್ರದ ಬಾಲೆರಿಕ್ಸ್ ದ್ವೀಪಗಳನ್ನು ತನ್ನ ವಶಕ್ಕೆ ಕೊಡಬೇಕೆಂದು ಜರ್ಮನಿಯು ಸ್ಪೇಯಿನನ್ನು ಕೇಳುತ್ತಿದೆ. ಸ್ಪೈನಿನ ಅಂತರ್ಯುದ್ಧ ಕಾಲದಲ್ಲಿ ಈ ದ್ವೀಪಗಳನ್ನು ಇಟಲಿಯವರು ಉಪಯೋಗಿಸಿದರು ಮತ್ತು ಅವುಗಳನ್ನು ಭದ್ರಪಡಿಸಿದರು. ಈಗ ಅವುಗಳನ್ನು ಹರ್ ಹಿಟ್ಲರನು ಕಸಿದುಕೊಳ್ಳಬೇಕೆಂದರೆ ಸ್ಪೈನು ಅವನನ್ನು ಪ್ರತಿಭಟಿಸಲು ಸಮರ್ಥವಾಗುವದೇ? ಎಂಬುದು ಸಂದೇಹಾಸ್ಪದವಾಗಿದೆ.

ಜ|| ಟೋಜೋರವರ ಹೇಳಿಕೆಯನ್ನು ಅಲಕ್ಷ್ಯಮಾಡಬಾರದು

ಜಪಾನ್ ಶಾಸನಸಭೆಯಲ್ಲಿ ಜ|| ಟೋಜೋರವರು ಮಾಡಿದ ಭಾಷಣವನ್ನು ಅಲಕ್ಷ್ಯದಿಂದ ಕೇಳಬಾರದೆಂದು 'ನ್ಯೂಯಾರ್ಕ್" ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಯು ಎಚ್ಚರಿಸುತ್ತ "ಬುಡವಿಲ್ಲದ ಭರವಸೆಗಳನ್ನು ಜನರಿಗೆ ಕೊಡುವದು ಟೋಜೋರವರ ಸ್ವಭಾವವಲ್ಲ. ಬೇರೆ ಕಡೆಗೆ ಜಪಾನು ಯುದ್ಧಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆಯೆಂದು ಅವರು ಹೇಳಿದರೆ, ಅದು ನಿಜವೆಂದೇ ನಂಬಬೇಕು" ಎಂದು ತಿಳಿಸಿದೆ.

ಜರ್ಮನರಿಗೆ ಹಿಂದೆ ಹೋಗಲು ಅಸಾಧ್ಯವಾಗಿದೆ

ಸ್ಟಾಲಿನ್‌ಗ್ರಾಡ್ ಪಶ್ಚಿಮದಲ್ಲಿ ರಷ್ಯನ್ ವ್ಯೂಹ ಮಧ್ಯದಲ್ಲಿ ಸಿಕ್ಕಿಬಿದ್ದಿರುವ ತಮ್ಮ 20 ಡಿವಿಜನ್ ಸೈನ್ಯವನ್ನು ಬಿಡಿಸಿಕೊಳ್ಳಲು ಬಂದಿದ್ದ ಬಲಯುತವಾದ ಜರ್ಮನ್ ಪಡೆಯು ಈಗ ತಾನೇ ಹಿಂದೋಡುವಂತಾಗಿದೆ. ಈ ಸಹಾಯಕಪಡೆಯು ಬಹಳ ಧೈರ್ಯದಿಂದಲೂ ಕಷ್ಟದಿಂದಲೂ ಬಹಳದೂರ ಪೂರ್ವಕ್ಕೆ ನುಗ್ಗಿ ಹೊಡೆದಾಡಿತಾದರೂ ಫಲವಾಗದೆ ಈಗ ಹಿಂದಕ್ಕೆ ಸರಿಯುತ್ತಿದೆ. ಸಿಕ್ಕಿಬಿದ್ದಿರುವ ಜರ್ಮನ್ ಸೇನೆಗೆ ಈಗ ಬಿಡುಗಡೆಯ ಮಾರ್ಗವೇ ಇಲ್ಲದಂತಾಗಿದೆ.

ಡಾನ್ ರಣರಂಗ

ಡಾನ್ ಮಧ್ಯಕ್ಷೇತ್ರದಲ್ಲಿ ರಷ್ಯನರು ತಮ್ಮ ಚಟುವಟಿಕೆಯನ್ನು ಪ್ರಾರಂಭಿಸಿ 16 ದಿನಗಳಮೇಲಾದವು. ರಷ್ಯಾ ಸೈನಿಕರ ಏಟನ್ನು ತಡೆಯಲಾರದೆ ಜರ್ಮನರು ಎಲ್ಲ ಕಡೆಯೂ ಹಿಮ್ಮೆಟ್ಟುತ್ತಿದ್ದಾರೆ. ಕಟ್‌ಸಿಂಸ್ಕಾಯ ಎಂಬ ಪ್ರಮುಖ ರೈಲ್ವೆಸ್ಟೇಷನನ್ನು ರಷ್ಯನರು ಹಿಡಿದಿದ್ದಾರೆ. ಜರ್ಮನರು ತಮ್ಮ ಆತುರದಲ್ಲಿ ಬಿಟ್ಟುಹೋಗಿರುವ 300 ವಿಮಾನಗಳು ಇಲ್ಲಿ ರಷ್ಯನರಿಗೆ ಸಿಕ್ಕಿದವು. ಈ ಯುದ್ಧದಲ್ಲಿ 3 ಸಾವಿರ ಜರ್ಮನರು ಸತ್ತರೆಂದೂ 6300 ಸೈನಿಕರು ಸೆರೆ ಸಿಕ್ಕಿರುವರೆಂದೂ ಹೇಳಲಾಗಿದೆ.

ರಾಸ್ಟೋವಿಗೆ ವಿಪತ್ತು

ಕೋಟೆಲ್ನಿಕೋವೋ ಕ್ಷೇತ್ರದಲ್ಲಿ ರಷ್ಯನರು ಎಡಬಿಡದೆ ಜರ್ಮನರನ್ನು ಅಟ್ಟಿಸಿಕೊಂಡು ಹೋಗುತ್ತಿದ್ದಾರೆ. ಪ್ರತಿ ಘಂಟೆಯಲ್ಲಿಯೂ ಹೊಸ ಹೊಸ ಹಳ್ಳಿಗಳನ್ನು ಆಕ್ರಮಿಸುತ್ತಿದ್ದಾರೆ. ಜರ್ಮನರು ದಕ್ಷಿಣಕ್ಕೂ ಮತ್ತು ನೈರುತ್ಯಕ್ಕೂ ಆತುರವಾಗಿ ಹಿಮ್ಮೆಟ್ಟುತ್ತಿದ್ದಾರೆ. ಸ್ಟಾಲಿನ್‌ಗ್ರಾಡಿನ ಪಶ್ಚಿಮಕ್ಕೆ ೧೮೦ ಮೈಲಿ ದೂರದಲ್ಲಿರುವ ಯಷ್‌ಗುಲ್ ಎಂಬ ಊರನ್ನು ರಷ್ಯನರು ಹಿಡಿದಿದ್ದಾರೆ. ಡಾನ್ ಮಧ್ಯರಂಗದಲ್ಲಿ ಒಂದು ಊರಿನ ಹತ್ತಿರ ಉಗ್ರ ಕದನವಾಗುತ್ತಿದೆ. ರಾಸ್ಟೋವ್ ಆಗ್ನೇಯಕ್ಕೆ ೯೦ ಮೈಲಿ ದೂರದಲ್ಲಿ ರಷ್ಯನರು ಒಂದು ಮುಖ್ಯ ರೈಲ್ವೆ ಜಂಕ್ಷನನ್ನು ಮುತ್ತಿದ್ದಾರೆ. ಕಾಕಸಸ್‌ನಲ್ಲಿರುವ ರಷ್ಯಾ ಸೇನೆಯನ್ನು ಬೇರ್ಪಡಿಸಿ, ದಕ್ಷಿಣದಿಂದ ಡಾನ್ ರಾಜಧಾನಿಯನ್ನು ಆವರಿಸಬೇಕೆಂಬುದೇ ರಷ್ಯನರ ಗುರಿ.

ಆಸ್ಟ್ರೇಲಿಯಾದಲ್ಲಿ ಶಸ್ತ್ರನಿರ್ಮಾಣಕಾರ್ಯ

ಈಗ ಆಸ್ಟ್ರೇಲಿಯದಲ್ಲಿ ಶಸ್ತ್ರಬಂಡಿಪಡೆಗಳಿಗೆ ಬೇಕಾದ ಎಲ್ಲ ಸಾಧನಗಳೂ ಉತ್ಕೃಷ್ಟರೀತಿಯಲ್ಲಿ ತಯಾರಾಗುತ್ತಿವೆ. ಟ್ಯಾಂಕ್ ನಿರ್ಮಾಣಕಾರ್ಯದಲ್ಲಂತೂ ಅತ್ಯುತ್ತಮವಾದ ಮಾರ್ಗವನ್ನು ಅನುಸರಿಸಲಾಗಿದೆ. ಆಸ್ಟ್ರೇಲಿಯದಲ್ಲಿ ಈಗ ತಯಾರಾಗುತ್ತಿರುವ "ಕ್ರೂಯಿಜರ್ ಟ್ಯಾಂಕು" ಗಳಷ್ಟು ವೇಗವಾಗಿ, ಯಾವ ದೇಶದ ಟ್ಯಾಂಕುಗಳೂ ಓಡಲಾರವು. ಆಸ್ಟ್ರೇಲಿಯಾ ಟ್ಯಾಂಕುಗಳ ಈ ವಿಶಿಷ್ಟ ಗುಣವನ್ನು ಅಮೆರಿಕನ್ನರು ತಮ್ಮ ಟ್ಯಾಂಕುಗಳಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಹಿಂದೆ ಶಸ್ತ್ರಾಸ್ತ್ರ ನಿರ್ಮಾಣಕಾರ್ಯಕ್ಕೆ ಸರಿಯಾದ ಸ್ಥಳವಲ್ಲವೆಂದು ಭಾವಿಸಲಾಗಿದ್ದ ಆಸ್ಟ್ರೇಲಿಯಾದಲ್ಲಿ ಶಸ್ತ್ರನಿರ್ಮಾಣಕಾರ್ಯವು ಯಶಸ್ವಿಯಾಗಿದೆ.

ಗೇಬ್ಸ್‌ಕಡೆಗೆ ಅಮೇರಿಕನ್ನರ ಮುಂದೋಟ

ದಕ್ಷಿಣ ಟ್ಯೂನೀಸಿಯಾದಲ್ಲಿ ಮುಂದುವರಿಯುತ್ತಿರುವ ಅಮೇರಿಕನ್ನರು ಗೇಬ್ಸ್ ನಗರದಿಂದ ೪೦ ಮೈಲಿ ದೂರದಲ್ಲಿದ್ದಾರೆ ಇದು ಟ್ಯೂನೀಸಿಯಾದಲ್ಲಿ ತೀರ ದಕ್ಷಿಣದಲ್ಲಿದೆ ಟ್ಯೂನಿಸ್‌ಮೇಲೂ ಮತ್ತು ಅಕ್ಸಿಸ್ ದೇಶಗಳು ಹಿಡಿದಿರುವ ಇತರ ಬಂದರುಗಳಮೇಲೂ ಮುತ್ತಿಗೆ ನಡೆಸಲಾಯಿತು ರೊಮೆಲ್ಲರ ಮತ್ತು ನೆಹರಿಂಗ್‌ರವರ ಸೇನೆಗಳಿಗೆ ಇರುವ ಸಂಬಂಧವನ್ನು ತಪ್ಪಿಸಲು ಅಮೇರಿಕನ್ನರು ಬಹಳ ಶೀಘ್ರವಾಗಿ ಮುಂದೆ ನುಗ್ಗುತ್ತಿದ್ದಾರೆ ಟ್ಯೂನಿಸ್ ವಿಮಾನ ನಿಲ್ದಾಣವು ಕೆಲಸಕ್ಕೆ ಬಾರದಂತೆ ನಾಶಲಾಗಿದೆಯೆಂದೂ ಲಾಗಾಲೆಟ್ ಬಂದರನ್ನೂ ಸಹ ಆಕ್ಸಿಸ್ ಹಡಗುಗಳು ಉಪಯೋಗಿಸುವಂತಿಲ್ಲವೆಂದೂ ಮೊರಾಕೋ ರೇಡಿಯೋ ತಿಳಿಸಿತು

ಟ್ಯೂನಿಸ್ ಯುದ್ಧ ಸಾಧಾರಣವಾದುದಲ್ಲ

ಟ್ಯೂನಿಸ್ ಯುದ್ಧದ ವಿಚಾರವಾಗಿ ನಿಮ್ಮ ಅಭಿಪ್ರಾಯವೇನೆಂದು ಪತ್ರಿಕೋದ್ಯೋಗಿಗಳು ಜ|| ಗಿರಾಡ್‌ರವರನ್ನು ಕೇಳಿದಾಗ ಅವರು ಈ ರೀತಿ ಹೇಳಿದರು ಟ್ಯೂನಿಸ್ ಯುದ್ಧ ಹುಡುಗಾಟವಲ್ಲ ಜರ್ಮನರು ಕತ್ತಿ ಹಿಡಿದು ಹೋರಾಟಕ್ಕೆ ನಿಂತಿದ್ದಾರೆ ಆದಕಾರಣ ಅದು ನಾವು ನಿರೀಕ್ಷಿಸುವಷ್ಟು ಸುಲಭವಲ್ಲ ಅಲ್ಲಿ ೩೦೦೦೦ ಫ್ರೆಂಚ್ ಸೇನೆಯಿದೆ ಆದರೆ, ಅದಕ್ಕೆ ತಕ್ಕ ಶಸ್ತ್ರಗಳಿಲ್ಲ ಅತ್ಯಾಧುನಿಕ ವಿಮಾನಗಳು, ಟ್ಯಾಂಕುಗಳು, ಇವುಗಳಿಂದ ಕೂಡಿದ ಜರ್ಮನರೆಲ್ಲಿ? ನಮ್ಮವರೆಲ್ಲಿ? ೧೦೦ ಮೈಲಿ ರಣಕ್ಷೇತ್ರದಲ್ಲಿ ಯುದ್ಧವಾಗುತ್ತಿದೆ ಅಮೇರಿಕ ಮತ್ತು ಬ್ರಿಟನ್ನುಗಳ ಬೆಂಬಲದಿಂದ ನಮ್ಮವರು ಉಳಿಯಬೇಕಾಗಿದೆ ಯುದ್ಧವು ಕಠಿಣವಾಗಿ ಜರುಗಿದರೂ ಫಲಿತಾಂಶವು ನಮಗೇ ಸಹಾಯಕವಾಗಿರುತ್ತದೆ

ಜರ್ಮನ್ ಸೇನೆಯು ಹಿಮ್ಮೆಟ್ಟುವುದೆ?

ರಷ್ಯದಲ್ಲಿ ಜರ್ಮನ್ ಸೇನೆಗೆ ಈಗ ಒದಗಿರುವ ವಿಪತ್ತನ್ನು ಕುರಿತು 'ನ್ಯೂಸ್ ಕ್ರಾನಿಕಲ್' ಪತ್ರಿಕೆಯ ಮಿಲಿಟರಿ ಸುದ್ದಿಗಾರರು ವಿಮರ್ಶಿಸುತ್ತ, ಕಾಕಸಸ್‌ನಿಂದ ಜರ್ಮನ್ ಸೇನೆಗಳನ್ನು ಸಮುದ್ರದ ಮೂಲಕ ಹಿಂದಕ್ಕೆ ಕರೆಸುವ ವಿಷಯವು ಪರ್ಯಾಲೋಚನೆಯಲ್ಲಿದೆಯೆಂದು ಸೂಚಿಸಿದ್ದಾರೆ ಟಾಗನ್‌ರಾಗ್ ಜಲಸಂಧಿ ಮೂಲಕ ಅಜೋವ್ ಸಮುದ್ರವನ್ನು ಸೇರಿ ಜರ್ಮನರು ಓಡಿಹೋಗಬಹುದೆಂದು ಊಹಿಸಲಾಗಿದೆ ಮಧ್ಯ ಡಾನ್ ಪ್ರದೇಶದಲ್ಲಿ ಮುಂದೆ ನುಗ್ಗುತ್ತಿರುವ ರಷ್ಯನ್ ಸೇನೆಯ ಕಡೆ ಜರ್ಮನರ ಗಮನವೆಲ್ಲವೂ ಕೇಂದ್ರೀಕೃತವಾಗಿರುವಾಗ ಸ್ಟಾಲಿನ್‌ಗ್ರಾಡಿನ ಪಶ್ಚಿಮದಲ್ಲಿ ಸಿಕ್ಕಿಬಿದ್ದಿರುವ ೧೫೦೦೦೦ ಜರ್ಮ ಯೋಧರ ಗೋಳು ಹೇಳತೀರದಾಗಿದೆ ಅವರು ಚಳಿಯಿಂದ ಕೊರಗುತ್ತಿದ್ದಾರೆ ಅನ್ನವಿಲ್ಲದೆ ಸೊರಗುತ್ತಿದ್ದಾರೆ ವಿಮಾನಗಳ ಮೂಲಕ ಎಣ್ಣೆ ಬಂಗ ದೊರೆತು ಜರ್ಮನರ ಟ್ಯಾಂಕುಗಳು ಚಲಿಸುವಂತಿಲ್ಲ ಫಿರಂಗಿಗಳಿಗೆ ಷೆಲ್‌ಗಳು ಮುಗಿದುಹೋಗಿವೆ ಅಲ್ಲಿ ಸಿಕ್ಕಿರುವ ಜರ್ಮನ್ ಸೈನಿಕರಿಗೆ ಆಹಾರವಿಲ್ಲದೆ ಇರುವುದರಿಂದ ಆಹಾರದ ಗುಳಿಗೆಗಳನ್ನು ತಿಂದು ಜೀವಿಸಬೇಕಾಗಿದೆ

ಹಿಟ್ಲರರ ನೂತನ ವರ್ಷದ ಸಂದೇಶ

ಹೊಸ ವರ್ಷದ ಶುಭ ಸಮಯದಲ್ಲಿ ಹರ್ ಹಿಟ್ಲರರು ಯುದ್ಧ ಪರಿಸ್ಥಿತಿ ಕುರಿತು ಭಾಷಣಮಾಡಿದರು ಅದರ ಸಾರಾಂಶವನ್ನು ಕೆಳಗೆ ಕೊಡಲಾಗಿದೆ—

' ಸ್ಪೇನಿನಿಂದ ನಾರ್ವೇಯವರೆಗೆ ಶತ್ರುಗಳು ನಡೆಸಬಹುದಾದ ದಂಡಯಾತ್ರೆಯ ಪ್ರಯತ್ನವನ್ನು ನಾವು ಮುರಿಯಲು ಸಿದ್ಧರಾಗಿದ್ದೇವೆ ಶತ್ರುಗಳು ಎಲ್ಲಿಂದೇ ನುಗ್ಗಲು ಪ್ರಯತ್ನಿಸಲಿ, ಭೂಗತವಾಗುವುದು ಖಂಡಿತ ಈಗ ನಾವು ಕಾಲಿಡುತ್ತಿರುವ ನೂತನ ವರ್ಷವೂ ಸಹ ಕಳೆದ ವರ್ಷಗಳಂತೆಯೇ ನಮ್ಮ ಮುಂದೆ ಕಷ್ಟಪರಂಪರೆಗಳನ್ನು ತರಬಹುದು ಆದರೆ ಜರ್ಮನ್ ಯೋಧರ ಹೋರಾಟವು ನಿರರ್ಥಕವಾಗುವುದೆಂದು ಯಾರೂ ಹೆದರಬಾರದು. ಜರ್ಮನರು ತಮ್ಮ ಅಸ್ತಿತ್ವಕ್ಕಾಗಿಯೂ ಸ್ವಾತಂತ್ರ್ಯಕ್ಕಾಗಿಯೂ ಹೋರಾಡುತ್ತಿದ್ದಾರೆ. ದೇವರು ಅವರಿಗೆ ಖಂಡಿತವಾಗಿಯೂ ಕಳೆದ ವರ್ಷಗಳಂತೆಯೇ ವಿಜಯವನ್ನು ಕರುಣಿಸಿಯೇ ಕರುಣಿಸುತ್ತಾನೆ ಈ ವರ್ಷ ನಮ್ಮ ಪ್ರಯತ್ನವನ್ನೆಲ್ಲ ಮಾಡಿಬಿಡುತ್ತೇವೆ ಈ ಚಳಿಗಾಲದಲ್ಲಿ ನಮಗೆ ಕಷ್ಟ ಬರಬಹುದು ಆದರೆ ಕಳೆದ ವರ್ಷದಷ್ಟು ಕಷ್ಟ ಈಗ ಇಲ್ಲ ಚಳಿಗಾಲ ಮುಗಿದೊಡನೆಯೇ ನಾವು ದಂಡಯಾತ್ರೆಯನ್ನು ಮತ್ತೆ ಆರಂಭಿಸುವೆವು ಆಗ ಶತ್ರುವಿನ ದರ್ಪ ಅಳಿಯುತ್ತದೆ ಜರ್ಮನರು ಯಾವ ಆಸೆಯಿಂದ ಈಗ ಬಲಿದಾನ ಮಾಡುತ್ತಿರುವರೋ ಮುಂದೆ ಆ ಶುಭ ಸಮಯವು ಕಂಡು ಬಂದು ಸಂತೋಷದಿಂದ ನಲಿಯುತ್ತಾರೆ

ಜಪಾನ್ ವಿಮಾನಬಲವು ಕಡಿಮೆಯಾಗಿದೆ

ಕಲಕತ್ತೆಯ ಮೇಲೆ ಜಪಾನರು ಬಾಂಬುಗಳನ್ನು ಸುರಿಸಿದರಷ್ಟೆ! ಅಲ್ಲಿ ನಡೆದ ವಿಮಾನ ಯುದ್ಧದಲ್ಲಿ ಅಮೇರಿಕನ್ನರ ಕೈ ಮೇಲಾಗಿರುವುದು ಶುಭಸೂಚನೆಯಾಗಿದೆ ಜಪಾನ್ ವಿಮಾನಬಲಕ್ಕೆ ಈಗಾಗಲೇ ವಿಶೇಷ ಹಾನಿಯಾಗಿರುವುದರಿಂದ, ಅದು ಭರತಖಂಡದ ಮೇಲೆ ಅಲ್ಲಲ್ಲಿ ಮುತ್ತಿಗೆ ನಡೆಸಲು ಸಾಧ್ಯವಾದೀತೇ ಹೊರತು ಉಗ್ರಮುತ್ತಿಗೆಗಳನ್ನು ಒಂದೇ ಸಮನಾಗಿ ಮುಂದುವರಿಸಲು ಸಾಧ್ಯವಾಗುವುದಿಲ್ಲ ಜಪಾನಿನ ವಿಮಾನಗಳಲ್ಲಿ ಅನೇಕ ವಿಮಾನಗಳನ್ನು ಅಮೇರಿಕವೊಂದೇ ಹಾಳು ಮಾಡುತ್ತದೆ ಸಾಲೋಮನ್ಸ್ ದ್ವೀಪಗಳಲ್ಲಿ ಕಳೆದ ೫ ತಿಂಗಳಲ್ಲಿ ೭೬೭ ಜಪಾನ್ ವಿಮಾನಗಳನ್ನು ನಷ್ಟಗೊಳಿಸಲಾಗಿದೆ ಸಾಲೋಮನ್ಸ್ ಒಂದರಲ್ಲಿಯೇ ಜಪಾನರು ತಿಂಗಳಿಗೆ ೨೦೦ ವಿಮಾನಗಳನ್ನು ಕಳೆದುಕೊಳ್ಳುತ್ತಿದ್ದಾರೆಂದು ಅಂದಾಜು ಮಾಡಲಾಗಿದೆ ಜಪಾನರು ತಿಂಗಳಿಗೆ ೩೩೫ ವಿಮಾನಗಳನ್ನು ಮಾತ್ರ ತಯಾರಿಸುತ್ತಿರುವುದರಿಂದ ಅವರಿಗೆ ವಿಮಾನಬಲವು ಬಹಳ ಕಡಿಮೆಯಾಗಿದೆ ಇದಲ್ಲದೆ ಆಸ್ಟ್ರೇಲಿಯಾ, ನ್ಯೂಗಿನಿಯಾ, ಅಲಾಸ್ಕಾ ಮುಂತಾದ ಕಡೆ ನೂರಾರು ಜಪಾನ್ ವಿಮಾನಗಳನ್ನು ನಾಶಮಾಡಲಾಗಿದೆ ಈಗ ನಡೆಯುತ್ತಿರುವ ಯುದ್ಧದಲ್ಲಿ ಅಮೇರಿಕನ್ನರ ಕೈ ಮೇಲಾಗಿದೆಯೆಂಬುದು ಜಪಾನಿನೊಡನೆ ನಡೆಸುತ್ತಿರುವ ಯುದ್ಧದಲ್ಲಿ ಮಾತ್ರವಲ್ಲ, ಜರ್ಮನರೊಡನೆ ನಡೆಸುತ್ತಿರುವ ಯುದ್ಧದಲ್ಲಿಯೂ ಸಹ ವ್ಯಕ್ತಪಟ್ಟಿದೆ ಟ್ಯೂನೀಸಿಯಾದಲ್ಲಿ ಅಮೇರಿಕನ್ನರು ೧೮ ಜರ್ಮನ್ ವಿಮಾನಗಳನ್ನು ಕೆಡವಿದರು ಅಮೇರಿಕದ ಕಡೆ ೫ ವಿಮಾನಗಳು ನಾಶವಾದವು

ಧಾನ್ಯದ ಮಳಿಗೆಗಳಿಗೆ ಬೀಗಮುದ್ರೆ

ವೆಲ್ಲೂರಿನಲ್ಲಿ ಆಹಾರವಸ್ತುಗಳ ಬೆಲೆ ವಿಪರೀತವಾಗಿ ಹೆಚ್ಚಿಹೋಗಿವೆಯೆಂದೂ, ರಾಗಿ ಮತ್ತು ಬೆಂಕಿಕಡ್ಡಿ ಪೆಟ್ಟಿಗೆಗಳ ಅಭಾವ ಬಹಳವಾಗಿರುವುದೆಂದೂ, ಕಲೆಕ್ಟರು ಅಂಗಡಿಗಳಿಗೆ ಹೋಗಿ ನಿರ್ಧರಮಾಡಿರುವ ಬೆಲೆಗಳಿಗಿಂತ ಹೆಚ್ಚಿನ ದರದಲ್ಲಿ ಆಹಾರವಸ್ತುಗಳನ್ನು ಮಾರಕೂಡದೆಂದು ಎಚ್ಚರಿಕೆ ಕೊಟ್ಟರೆಂದೂ ಮತ್ತು ನಗರದಲ್ಲಿನ ಕೆಲವು ಮಳಿಗೆಗಳಿಗೆ ಹೋಗಿ ಅಲ್ಲಿ ಅಕ್ಕಿ ಮತ್ತು ರಾಗಿಯನ್ನು ಶೇಖರಿಸಿಟ್ಟಿರುವುದನ್ನು ಕಂಡು ಅವುಗಳಿಗೆ ಬೀಗ ಮುದ್ರೆಹಾಕಿಸಿದರೆಂದೂ ತಿಳಿದುಬರುತ್ತದೆ

ಮೈಸೂರು ದಿವಾನರಿಗೆ ಸಿ. ಐ. ಇ. ಪ್ರಶಸ್ತಿ

ಮೈಸೂರಿನ ದಿವಾನರಾದ ಪ್ರಧಾನಶಿರೋಮಣಿ ಶ್ರೀನ್ಯಾಪತಿ ಮಾಧವರಾಯರವರಿಗೆ ಬ್ರಿಟಿಷ್ ಸಾರ್ವಭೌಮರು ಸಿ ಐ ಇ ಪ್ರಶಸ್ತಿಯನ್ನು ದಯಪಾಲಿಸಿರುವುದಕ್ಕಾಗಿ ಸಂತೋಷಿಸುತ್ತೇವೆ

ರಾಜಧಾನಿಯಲ್ಲಿ ಮಳೆ

ಮೈಸೂರು ನಗರದಲ್ಲಿ ಈಗ್ಗೆ ೨ ದಿವಸಗಳಿಂದ ಮಳೆಯು ಒಂದೇ ಸಮನೆ ಸುರಿಯುತ್ತಿರುವುದರಿಂದ ಹವೆಯು ವಿಶೇಷ ತಂಪಾಗಿದೆ

ಬರ್ಮಾದಲ್ಲಿ ಸಿದ್ಧತೆ

ಜಪಾನರು ಬರ್ಮಾದಲ್ಲಿ ತಮ್ಮ ಮಿಲಿಟರಿ ಸಿದ್ಧತೆಗಳನ್ನು ಹೆಚ್ಚಿಸುತ್ತಿರುವರೆಂದೂ ಮಾಂಡಲೆ ಮತ್ತು ಮಿಟ್ಕಿನಾಗಳ ನಡುವೆ ವಿಮಾನನಿಲ್ದಾಣಗಳನ್ನು ರಚಿಸುತ್ತಿದ್ದಾರೆಂದೂ ಚೀಣಾ ಮಿಲಿಟರಿ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ

ಕಲ್ಕತ್ತಾ ವರ್ತಕರಿಗೆ ಎಚ್ಚರಿಕೆ !

ಅಕ್ಕಿ ಗೋಧಿ ಮುಂತಾದ ವ್ಯಾಪಾರಗಾರರು ದಾಳಿಯ [illegible]. ಎಚ್ಚರಿಕೆ ಕೊಟ್ಟ ೨೪ ಘಂಟೆಗಳೊಳಗಾಗಿ ತಮ್ಮ ತಮ್ಮ ಅಂಗಡಿಗಳನ್ನು ತೆರೆದು ವ್ಯಾಪಾರ ಮಾಡಬೇಕು ಅಂಗಡಿಗಳನ್ನು ಮುಚ್ಚಿದ್ದರೆ ಸರ್ಕಾರದವರೇ ಬಲವಂತವಾಗಿ ತೆಗೆಯಿಸಿ, ಸರಕುಗಳನ್ನು ವಶಪಡಿಸಿಕೊಳ್ಳುವರು ಎಂದು ಸರ್ಕಾರದ ಆಜ್ಞೆಯಾಗಿದೆ

ಕಲ್ಕತ್ತಾ ನಗರದಿಂದ ಸರಕಾರಿ ಕಛೇರಿಗಳನ್ನು ಬದಲಾಯಿಸುವುದಿಲ್ಲ

ಕಲ್ಕತ್ತಾ ನಗರದ ಮೇಲೆ ಶತ್ರುಗಳ ವಿಮಾನ ಧಾಳಿ ಮಾಡುವುದರಿಂದ ಅಲ್ಲಿರುವ ಮುಖ್ಯ ಕಛೇರಿಗಳನ್ನು ಬೇರೆ ಕಡೆಗೆ ವರ್ಗಾಯಿಸುವರೆಂದು ಹರಡಿರುವ ಸುದ್ದಿಗೆ ಆಧಾರವಿಲ್ಲ ಜನರಲ್ಲಿ ಧೈರ್ಯವಿರುವಂತೆ ಮಾಡುವುದಕ್ಕಾಗಿ ಯಾವರೂ ಕಲ್ಕತ್ತಾ ನಗರದಿಂದ ಕಛೇರಿಗಳನ್ನು ಬದಲಾಯಿಸುವುದಿಲ್ಲ

ಕಲ್ಕತ್ತೆಯಿಂದ ಜನರ ಆಗಮನ

ಕಲ್ಕತ್ತೆಯಮೇಲೆ ಮೊದಲನೆಯ ದಾಳಿಯು ಆರಂಭವಾದಂದಿನಿಂದ ಪಾಟ್ನಾ ನಗರಕ್ಕೆ ಕಲ್ಕತ್ತೆಯಿಂದ ಬರುತ್ತಿರುವವರ ಸಂಖ್ಯೆ ಬಹಳವಾಗಿದೆ ಕಲ್ಕತ್ತೆಯಿಂದ ಬರುತ್ತಿರುವವರಿಗಾಗಿ ರೈಲ್ವೆಯವರು ಸ್ಪೆಷಲ್ - ರೈಗಳನ್ನು ಬಿಡುತ್ತಿರುವರು ಗೂಡ್ಸ್ ಗಾಡಿಗಳಲ್ಲಿ ಸಹ ಜನರು ಬರುತ್ತಿರುವರು ಕಲ್ಕತ್ತೆಯ ದಾಳಿಯ ಕಾಲದಲ್ಲಿ ಜನರು, ಅದರಲ್ಲಿಯೂ ಸ್ತ್ರೀಯರು ತೋರಿಸಿದ ಧೈರ್ಯವು ಅಪಾರವಾದುದು ಒಂದು ಮನೆಯ ಮೇಲೆ ಬಾಂಬು ಬಿತ್ತು ಆಗ್ಗೆ ಆ ಮನೆಯಲ್ಲಿದ್ದ ಒಬ್ಬ ಹೆಂಗಸಿಗೆ ಪ್ರಸವವೇದನೆ ಒಂದು ಉರಿಯುವ ಕೊಳ್ಳಿಯು ಸಹ ಆಕೆಗೆ ಬಡಿಯಿತು ಆದರೂ ಆಕೆಯು ಹೆದರಲಿಲ್ಲ ಆಸ್ಪತ್ರೆಗೆ ಸಾಗಿಸಿದಾಗ ಅಲ್ಲಿ ಆಕೆಗೆ ಸುಖವಾಗಿ ಪ್ರಸವವಾಯಿತು ಮಗು ತಾಯಿ ಸುಖವಾಗಿದ್ದಾರೆ

ರಂಗೂನಿನ ಮೇಲೆ ಮುತ್ತಿಗೆ

೩೦ನೆಯ ತಾರೀಖಿನ ದಿವಸ ಬಾಂಬರುಗಳು ಹರಿಕೇನ್ ಫೈಟರುಗಳ ರಕ್ಷಣೆಯಲ್ಲಿ ಕ್ಯಾಕ್ಸಾ ಎಂಬೂರಿನ ಮೇಲೆ ಹಗಲಲ್ಲಿಯೇ ಮುತ್ತಿಗೆ ನಡೆಸಿದವು ಜಪಾನರು ಆಕ್ರಮಿಸಿದ್ದ ಭವನಗಳಮೇಲೆ ಬಾಂಬುಗಳು ಬಿದ್ದು ಕೆಲವೆಡೆ ಬೆಂಕಿಹತ್ತಿಕೊಂಡಿತು ಅಕ್ಯಾಬ್‌ಮೇಲೆ ಅದೇ ದಿವಸ ರಾತ್ರಿ ಬಾಂಬುಗಳನ್ನು ಹಾಕಲಾಯಿತು ೨೯ನೇ ತಾ|| ದಿವಸ ಅಮೇರಿಕನ್ ಬಾಂಬರುಗಳ ೨ ಗುಂಪು ರಂಗೂನ್ ಬಂದರಿನಲ್ಲಿದ್ದ ಶತ್ರುಹಡಗುಗಳ ಮೇಲೆ ಮುತ್ತಿಗೆ ನಡೆಯಿಸಿತು ಮೌಲ್ಮೀನ್‌ನಿಂದ ರಂಗೂನಿಗೆ ಬರುತ್ತಿದ್ದ ೫೦೦೦ ಟನ್ ತೂಕದ ಎಣ್ಣೆ ಹಡಗಿನ ಮೇಲೆ ಮುತ್ತಿಗೆನಡೆಸಿ ಬೆಂಕಿ ಇಡಲಾಯಿತು.

ಸ್ವೀಕಾರ.

ಬೆಳಗಾಂವ ತಾ|| ಆನಿಗೋಳ ಗ್ರಾಮದಲ್ಲಿರುವ ಶ್ರೀಮತಿ ಪಾರ್ವತಮ್ಮನವರು ತಮ್ಮ ಗೃಹದಲ್ಲಿ ರುದ್ರಾಭಿಷೇಕ ಮತ್ತು ಪಾದಪೂಜಾದಿಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಶ್ರೀ|| ಷ|| ಬ್ರ|| ಸುತ್ತಗಟ್ಟಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

(೧ನೇ ಪುಟದಿಂದ ಮುಂದುವರಿದುದು)

ಪಂಚ ಪ್ರಪಂಚವನ್ನು ಸೃಷ್ಟಿಸುವ ಮತ್ತು ಜೀವರಿಗೆ ಜನ್ಮಗಳನ್ನು ಕೊಡುವ ಈಶ್ವರನ [illegible]ವನಲ್ಲವೆ ಅವನು ಅನಾದಿ ಎಂಬುದ ಸಿದ್ಧಾಂತವಿದೆ.

ಒಂದು ವೇಳೆ ಹೊಸದಾಗಿ ಸರ್ಕಾರವು ಸ್ಥಾಪಿಸಲ್ಪಡ ಬೇಕಾಗಿರುವ ಪಕ್ಷದಲ್ಲಿ ಅದು ಸ್ಥಾಪಿಸಲ್ಪಡುವಾಗಲೇ ಸರ್ಕಾರದ ರಾಜಧಾನಿಯಾಗಿ ಪ್ರಜೆಗಳನ್ನು ರಕ್ಷಿಸತಕ್ಕದ್ದು, ಪ್ರಜೆಗಳ ಸಂರಕ್ಷಣೆ ಮೇಲೆ ವಿಧೇಯರಾಗಿರತಕ್ಕದ್ದು, ಪ್ರಜೆಗಳ ವೃತ್ತಿಯನ್ನಾಗಲಿ ಯಾವ ಯಾವ ಯೋಗ್ಯತೆಯುಳ್ಳ ಅವರಿಗೆ ಯಾವ ಯಾವ ಅಧಿಕಾರವನ್ನು ಕೊಡತಕ್ಕದ್ದು, ಪ್ರಜೆಗಳು ಯಾವ ರೀತಿ ನಡೆದರೆ ತಪ್ಪು, ಯಾವ ಯಾವ ತಪ್ಪಿಗೆ ಯಾವ ಯಾವ ಶಿಕ್ಷೆಯನ್ನು ಕೊಡತಕ್ಕದ್ದು ಇವೇ ಮೊದಲಾದ ನಿಬಂಧನೆಗಳನ್ನೊಳಗೊಂಡಿರತಕ್ಕ ರಾಜಶಾಸನವು ಏರ್ಪಡಿಸಲ್ಪಡುತ್ತದೆ. ಈ ಸಂದರ್ಭದಲ್ಲಿ ಈಶ್ವರನೇ ಸರ್ಕಾರವು, ಪ್ರಪಂಚವೇ ರಾಜ್ಯವು, ಆಳುವ ವೇದವು, ಜೀವರೇ ಪ್ರಜೆಗಳು. ಈ ಪ್ರಪಂಚವನ್ನು ಈಶ್ವರನು ಸೃಷ್ಟಿಸುವ ಕಾಲದಲ್ಲೇ ತನ್ನ ಸ್ವರೂಪವೇನು, ತಾನು ಹೇಗೆ ಪ್ರಪಂಚವನ್ನು ಸೃಷ್ಟಿಸಿದನು, ಜೀವರ ಸ್ವರೂಪವೇನು, ಅವರೆಲ್ಲಿಂದ ಬಂದರು, ಅವರಿಗೂ ತನಗೂ ಏನು ಸಂಬಂಧ, ತಾನು ಯಾವ ರೀತಿ ಜೀವರನ್ನು ರಕ್ಷಿಸುವೆನು, ಜೀವರು ಏನನ್ನು ಮಾಡತಕ್ಕದ್ದು, ಏನನ್ನು ಮಾಡಕೂಡದು, ಜೀವರ ಮಂಗಳಕ್ಕೆ ಯಾವ ಮಾರ್ಗವನ್ನು ತೋರಿಸಿದ್ದಾನೆ, ಯಾವ ರೀತಿಯಿಂದ ಜೀವರು ಸಂಸಾರದಿಂದ ಬಿಡುಗಡೆ ಹೊಂದಿ ಸುಖವನ್ನು ಹೊಂದುತ್ತಾರೆ, ಇವೇ ಮೊದಲಾದ ವಿಷಯಗಳನ್ನೊಳಗೊಂಡ ಒಂದು ಶಾಸನವನ್ನು ಮಾಡಿರಬೇಕಷ್ಟೆ. ಈ ಶಾಸನವೇ ವೇದವೆಂದು ಹೇಳಿಸಿಕೊಳ್ಳುತ್ತದೆ. ಈಶ್ವರನು ಮತ್ತು ಪ್ರಪಂಚದ ಸೃಷ್ಟಿಯೂ ಅನಾದಿಯಾದುದರಿಂದ ವೇದವೂ ಅನಾದಿಯಾಗಿದೆ ಎಂಬುದ ಸಿದ್ಧವಾಗುವದು.

ಒಬ್ಬ ತಂದೆಗೆ ಇಬ್ಬರು ಜನ ಮಕ್ಕಳಿದ್ದು, ಅವರಲ್ಲಿ ಒಬ್ಬನು ಆದೇಶ ಪ್ರಕಾರ ನಡೆಯುವವನಾಗಿಯೂ [illegible] ಗಿಯೂ [illegible] ಅವರವರ [illegible] ಕೊಟ್ಟು ಬೇರೆ ಸಕ್ಕರೆ, ತನ್ನ ಇವರಿಗೆ [illegible] ಏರ್ಪಡಿಸುವುದಾಗಿ [illegible] ಅನ್ನವಸ್ತ್ರ ಮತ್ತು [illegible] ಇವರಂತೆ ಜೀವರು ತಮ್ಮ ತಮ್ಮ ಅಧಿಕಾರಕ್ಕನುಸಾರವಾಗಿ [illegible] ಈಶ್ವರನು ವೇದವನ್ನು ಕರ್ಮಕಾಂಡ [illegible] ಜ್ಞಾನಕಾಂಡವೆಂದು ಎರಡು ಭಾಗವನ್ನು ಮಾಡಿರುತ್ತಾನೆ. ಯಾರು ಸ್ವರ್ಗಲೋಕದ ಸುಖವನ್ನು ಅಪೇಕ್ಷಿಸುತ್ತಾರೋ ಅವರು ಕರ್ಮಕಾಂಡದಲ್ಲಿ ಹೇಳಿದ ಕರ್ಮಗಳನ್ನು ಮಾಡತಕ್ಕದ್ದು. ಯಾರು ಬ್ರಹ್ಮಲೋಕವನ್ನು ಹೊಂದಿ ಸಾಲೋಕ್ಯ, ಸಾಮೀಪ್ಯ ಮತ್ತು ಸಾರೂಪ್ಯ ಎಂಬ ಪದವಿಗಳನ್ನು ಪಡೆಯಬೇಕೆಂಬ ಇಚ್ಛೆಯುಳ್ಳವರೋ ಅವರು ಉಪಾಸನಾಕಾಂಡದಲ್ಲಿ ಹೇಳಿದ ಕಾರ್ಯಗಳನ್ನು ಮಾಡತಕ್ಕದ್ದು. ಯಾರು ಸ್ವರ್ಗಲೋಕದ ಸುಖವನ್ನಾಗಲಿ ಅಥವಾ ಬ್ರಹ್ಮಲೋಕದಲ್ಲಿ ಪದವಿಯನ್ನಾಗಲಿ ಅಪೇಕ್ಷಿಸದೆ ಮೋಕ್ಷ ಅಂದರೆ ಸಾಯುಜ್ಯ ಪದವಿಯನ್ನು ಅಂದರೆ ಈಶ್ವರನಲ್ಲಿ ಐಕ್ಯವನ್ನು ಹೊಂದಿ ಶಾಶ್ವತವಾದ ಆನಂದವನ್ನು ಪಡೆಯಲು ಇಚ್ಛಿಸುವರೋ ಅವರು ಜ್ಞಾನಕಾಂಡದಲ್ಲಿ ಹೇಳಿದ ಸಾಧನವನ್ನು ನಡೆಸತಕ್ಕದ್ದು. ವೇದದ ಕೊನೆಯ ಭಾಗವಾದ ಜ್ಞಾನಕಾಂಡವು ವೇದಾಂತವೆಂದೂ ಉಪನಿಷತ್ತು ಎಂದೂ ಕರೆಯಲ್ಪಡುತ್ತದೆ. ಜನಗಳು ತಮ್ಮ ಬುದ್ಧಿಶಕ್ತಿಯಿಂದ ಭೌತಿಕವಾದ ಪದಾರ್ಥಗಳನ್ನು ಶೋಧಿಸಿ ಹೊಸ ಹೊಸ ವಿಷಯಗಳನ್ನು ಕಂಡುಹಿಡಿಯಬಹುದು, ಆದಾಗ್ಯೂ ತತ್ವಜ್ಞಾನವನ್ನು ಅಂದರೆ ತನ್ನ ಸ್ವರೂಪದ ಜ್ಞಾನವನ್ನು ಶ್ರೋತ್ರಿಯ ಬ್ರಹ್ಮನಿಷ್ಠನಾದ (ಅಂದರೆ ವೇದದಲ್ಲಿ ಹೇಳಿದ ಪರಶಿವಸ್ವರೂಪದ ಜ್ಞಾನವನ್ನು ಪಡೆದು ಸದಾ ಅದರಲ್ಲಿ ನೆಲೆಸಿರತಕ್ಕ) ಗುರುವಿನ ಬೋಧೆಯಿಲ್ಲದೆ ತನ್ನ ಬುದ್ಧಿಶಕ್ತಿಯಿಂದಲೇ ಹೊಂದಿರತಕ್ಕವನು ಯಾರೂ ಇಲ್ಲ. ಅಷ್ಟರಿಂದಲೇ ಅಜ್ಞಾನಿಗಳಲ್ಲಿ ಗುರುವು ದೊರಕುವವನಾಗಿದ್ದಾನೆ.

ಒಬ್ಬನು ತಾನು ಯಾರ ಹೊಟ್ಟೆಯಲ್ಲಿ ಹುಟ್ಟಿದವನು ಎಂಬ ವಿಷಯವನ್ನು ಇತರರಿಂದ ತಿಳಿಯಬೇಕಲ್ಲದೆ ತನ್ನ ಬುದ್ಧಿಶಕ್ತಿಯಿಂದ ತಿಳಿಯುವದು ಸಾಧ್ಯವಿಲ್ಲ. ಇದಕ್ಕೆ ಕರ್ಣನೇ ಸಾಕ್ಷಿ. ಬಾಲ್ಯದಿಂದ ತಾನು ಸೂತನಾಗಿ ರಾಧೇಯನಾಗಿದ್ದರೂ, ತಾನು ಕುಂತೀಪುತ್ರನೆಂಬುದಾಗಿ ತಿಳಿಯದೆ ತಾನು ಆ ಬೆಸ್ತರ ಮಗನೆಂದು ತಿಳಿದು ಅನೇಕ ವರ್ಷಗಳು ದುಃಖದಿಂದ ಇದ್ದು ಕಡೆಗೆ ಬೇರೆಯು ಮತ್ತು ಶ್ರೀ ಕೃಷ್ಣ ಪರಮಾತ್ಮನು ಆತನಿಗೆ ತಿಳಿಸಿದ ಮೇಲೆ ತಾನು ಕುಂತೀಪುತ್ರನೆಂದು ತಿಳಿದ. ಆದುದರಿಂದ [illegible] ದವನು ಇಲ್ಲವೆ ಸಾಮಾನ್ಯವಾದ ಒಂದು ಲೌಕಿಕ ವಿದ್ಯೆಯನ್ನು ಕಲಿಯುವುದಕ್ಕೂ ಒಬ್ಬ ಗುರುವು ಬೇಕು. ಹೀಗಿರ ವಾಙ್ಮನಸ್ಸಿಗೆ ಅತೀತನಾಗಿರುವ ತನ್ನ ಸ್ವರೂಪವನ್ನು ಮತ್ತು ಈಶ್ವರ ಸ್ವರೂಪವನ್ನು ವೇದದಿಂದಲೂ, ವೇದವನ್ನು ತಿಳಿದ ಗುರುವಿನಿಂದಲೂ ತಿಳಿಯಬೇಕು. ವೇದದಲ್ಲಿ ಹೇಳಿರುವಂತೆ ಈಶ್ವರನು ಮೊದಲು ಚತುರ್ಮುಖ ಬ್ರಹ್ಮನಿಗೆ ವೇದವನ್ನು ಉಪದೇಶಿಸಿದನು. ಚತುರ್ಮುಖಬ್ರಹ್ಮನು ತನ್ನ ಮಾನಸಪುತ್ರರಾದ ಸನಕಾದಿಗಳಿಗೆ ವೇದಗಳನ್ನು ಉಪದೇಶಮಾಡಿದನು. ಇದಲ್ಲದೆ ಕೆಲವು ಋಷಿಗಳು ತಮ್ಮ ಧ್ಯಾನಯೋಗಬಲದಿಂದ ವೇದದಲ್ಲಿ ಹೇಳಿರತಕ್ಕ ಆಧ್ಯಾತ್ಮಿಕ ವಿಷಯಗಳನ್ನು ಕಂಡು ಹಿಡಿದು ಮಾನವಕೋಟಿಯಲ್ಲಿ ಪ್ರಚಾರವನ್ನು ಮಾಡಿದರು. ಇವುಗಳಿಗೇನೇ ಉಪನಿಷತ್ತುಗಳೆಂದು ಹೆಸರಾಯಿತು. ಯಾವ ಯಾವ ಋಷಿಯಿಂದ ಯಾವ ಯಾವ ಉಪನಿಷತ್ತು ಪ್ರಚಾರವಾಯಿತೋ ಅದಕ್ಕೆ ಆ ಋಷಿಯ ಹೆಸರು ಬಿದ್ದಿರುತ್ತದೆ. ಆದ್ದರಿಂದ ಕೆಲವರು ತಿಳಿದಿರುವಂತೆ ಋಷಿಗಳ ಅನುಭವಗಳೇ ಉಪನಿಷತ್ತುಗಳಲ್ಲ. ಋಷಿಗಳು ತಮ್ಮ ಧ್ಯಾನಯೋಗಬಲದಿಂದ ತಿಳಿದು ಪ್ರಚಾರಮಾಡಿದ ಅನಾದಿಯಾದ ಈಶ್ವರನಿಂದ ಹೇಳಲ್ಪಟ್ಟ ಆಧ್ಯಾತ್ಮಿಕವಿಷಯಗಳ ಸಮೂಹವೇ ಉಪನಿಷತ್ತುಗಳು. ಇದರಿಂದ ವೇದವು ಅನಾದಿಯೆಂದೂ ಮತ್ತು ಈಶ್ವರನ ಶಾಸನವೆಂದೂ ಸಿದ್ಧವಾಗುವದು.

ವೇದದ ಕರ್ಮಕಾಂಡದಲ್ಲಿ ಹೇಳಲ್ಪಟ್ಟಿರುವ ಯಜ್ಞಯಾಗಾದಿ ಕರ್ಮಗಳಲ್ಲಿ ಪಶುಹಿಂಸೆ ಮತ್ತು ಮಾಂಸಭಕ್ಷಣಾದಿಗಳಿರುವದರಿಂದಲೂ, ವೇದದಲ್ಲಿ ವರ್ಣಾಶ್ರಮಧರ್ಮಗಳನ್ನು ಪರಿಪಾಲನೆ ಮಾಡಬೇಕೆಂದೂ, ಬ್ರಾಹ್ಮಣವರ್ಣವು ಶ್ರೇಷ್ಠವೆಂದೂ, ಪೂರ್ವಜನ್ಮದ ಕರ್ಮಗಳ ನಿಮಿತ್ತ ಪುನರ್ಜನ್ಮವು ಬರುತ್ತದೆಂದೂ, ಮೂವತ್ತುಮೂರುಕೋಟಿ ದೇವತೆಗಳಿರುತ್ತಾರೆಂದೂ, ಪಿತೃಗಳ ಉದ್ದೇಶ್ಯದಿಂದ ಶ್ರಾದ್ಧಾದಿಕರ್ಮಗಳನ್ನು ಮಾಡತಕ್ಕದ್ದೆಂದೂ ಹೇಳಿರುವದರಿಂದ ವೇದವು ವೀರಶೈವಮತೀಯರಿಗೆ ಪ್ರಮಾಣವಲ್ಲವೆಂದು ಕೆಲವರು ಹೇಳುತ್ತಾರೆ. ವೀರಶೈವಮತತತ್ವಾವಲಂಬಿಗಳು ಅಷ್ಟವಿಧಾರ್ಚನೆ ಜ್ಞಾನೈಕಸಾಧಕಗಳಾದ ಇಷ್ಟಲಿಂಗಪೂಜಾದಿ ಕ್ರಿಯೆಗಳನ್ನು ಮಾಡುವವರಿಂದ ಸಕಾಮಿಗಳಿಗೆ ಹೇಳಿರುವ ಯಜ್ಞಯಾಗಾದಿ ಕರ್ಮಗಳು ವೀರಶೈವಮತೀಯರಿಗೆ ಅನ್ವಯಿಸುವದಿಲ್ಲ. ವೀರಶೈವಮತತತ್ವವನ್ನು ತಿಳಿದು ಶಿವಸ್ವರೂಪಸ್ಥಿತಿಯುಳ್ಳವರವರಿಗೆ ವರ್ಣಾಶ್ರಮ ಧರ್ಮಗಳು, ಪುನರ್ಜನ್ಮವು, ಶ್ರಾದ್ಧಾದಿ ಕರ್ಮಗಳು ಅನ್ವಯಿಸುವದಿಲ್ಲ. ಆದರೆ ವೀರಶೈವಮತತತ್ವವನ್ನು ತಿಳಿದು ಶಿವಸ್ವರೂಪಸ್ಥಿತಿಯಿಲ್ಲದೆ ಕೇವಲ ನಾಮಮಾತ್ರಕ್ಕೆ ವೀರಶೈವರಾಗಿರತಕ್ಕವರಿಗೆ ವರ್ಣಾಶ್ರಮಧರ್ಮಗಳೂ ಮತ್ತು ಪುನರ್ಜನ್ಮವೂ ಉಂಟು. ಒಂದು ಅಂಗಡಿಯಲ್ಲಿ ಅನೇಕ ಪದಾರ್ಥಗಳಿರುತ್ತವೆ. ಆದರೆ ಕೊಳ್ಳುವವನಿಗೆ ಅಂಗಡಿಯಲ್ಲಿರತಕ್ಕ ಎಲ್ಲಾ ಪದಾರ್ಥಗಳೂ ಬೇಕಿಲ್ಲ. ತನಗೆ ಬೇಕಾದ ಕೆಲವು ಪದಾರ್ಥಗಳನ್ನು ಕೊಂಡುಕೊಳ್ಳುತ್ತಾನೆಯೇ ಹೊರತು ತನಗೆ ಬೇಡವೆ ಇರತಕ್ಕ ಪದಾರ್ಥಗಳು ಅಂಗಡಿಯಲ್ಲಿರುವುದರಿಂದ ಆ ಅಂಗಡಿಯನ್ನೇ ತಿರಸ್ಕರಿಸಿ ತನಗೆ ಬೇಕಾದ ಪದಾರ್ಥಗಳನ್ನು ಕೊಂಡುಕೊಳ್ಳದೆ ಇರುವುದಿಲ್ಲ.

ವೇದಗಳ ಆಧಾರದಲ್ಲಿ ಹುಟ್ಟಿರುವ ಮತಗಳೆಲ್ಲವೂ ವೈದಿಕ ಮತಗಳೆನಿಸಿಕೊಳ್ಳುತ್ತವೆ. ವೈದಿಕ ಮತಗಳು ಮುಖ್ಯವಾಗಿ ಶೈವ ಮತ್ತು ವೈಷ್ಣವ ಎಂಬುದಾಗಿ ವಿಂಗಡಿಸಲ್ಪಟ್ಟಿವೆ. ಶೈವರಲ್ಲಿ ಅದ್ವೈತಿಗಳೆಂದೂ, ಶಕ್ತಿವಿಶಿಷ್ಟಾದ್ವೈತಿಗಳೆಂದೂ ಮತ್ತು ವೈಷ್ಣವರಲ್ಲಿ ದ್ವೈತಿಗಳೆಂದೂ, ವಿಶಿಷ್ಟಾದ್ವೈತಿಗಳೆಂದೂ ಭೇದಗಳುಂಟು. ಈ ಮತಗಳ ಸ್ವರೂಪವು ವೇದದಲ್ಲಿ ಉಕ್ತವಾಗಿದ್ದರೂ ಜನರಿಗೆ ಪ್ರಿಯವಾಗಿ ಪ್ರಕಟಗೊಂಡಿಲ್ಲ. ಆದ್ದರಿಂದ ಈಶ್ವರನೇ ಪ್ರತಿ ಸೃಷ್ಟಿಯ ಆದಿಯಲ್ಲಿ ಮತ ತತ್ವಗಳನ್ನು ಆಗಮ ರೂಪವಾಗಿ ಸೃಷ್ಟಿಸಿರುವನು. 'ಅವರವರ ದರುಶನಕೆ ಅವರವರ ವೇಷದಲಿ ಗುರುವಾಗಿ [illegible] ನೀನೊಬ್ಬನೇ' ಎಂಬುದಾಗಿ ಶ್ರೀ ಮುಪ್ಪಿನ ಷಡಕ್ಷರಿಗಳು ಹೇಳಿರುವಂತೆ ಈಶ್ವರನೇ ಒಂದೊಂದು ಕಾಲದಲ್ಲಿ ಗುರುವಾಗಿ ಅವತರಿಸಿ ಆ ಕಾಲದಲ್ಲಿದ್ದ ಜನಗಳ ಸಂಸ್ಕಾರಕ್ಕೆ ಅನುಸಾರವಾಗಿ ವೇದಾಗಮಗಳಲ್ಲಿರತಕ್ಕ ತತ್ವಗಳನ್ನು ಹೊರತೆಗೆದು ಪ್ರಚಾರಮಾಡಿರುತ್ತಾನೆ. ಆದ್ದರಿಂದ ಶಕ್ತಿವಿಶಿಷ್ಟಾದ್ವೈತ (ವೀರಶೈವ) ಮತಕ್ಕೆ ಶ್ರೀ ರೇಣುಕಾದಿ ಪಂಚಾಚಾರ್ಯರು, ಅದ್ವೈತ ಮತಕ್ಕೆ ಶ್ರೀ ಶಂಕರಾಚಾರ್ಯರು, ವಿಶಿಷ್ಟಾದ್ವೈತ ಮತಕ್ಕೆ ಶ್ರೀ ರಾಮಾನುಜಾಚಾರ್ಯರು ಮತ್ತು ದ್ವೈತಮತಕ್ಕೆ ಶ್ರೀ ಮಧ್ವಾಚಾರ್ಯರೂ ಮೂಲ ಗುರುಗಳಾಗಿರುತ್ತಾರೆ.

ಶ್ರೌತಾಶ್ರೌತವಿಭೇದೇನ ದ್ವಿಧಾ ಲಿಂಗಸ್ಯ ಧಾರಣಂ ।
ಸದಿಷ್ಟಶುದ್ಧಲಿಂಗಂ ತು ಶ್ರೌತಮಿತ್ಯಭಿಧೀಯತೇ ॥
ಅಶ್ರೌತಂ ತಪ್ತಲಿಂಗಾದಿಧಾರಣಂ ಪ್ರೋಚ್ಯತೇ ಶಿವೇ ।
ಶ್ರೌತಾನಾಂ ವೀರಶೈವಾನಾಂ ವೇದಮಾರ್ಗಾನುವರ್ತಿನಾಂ ॥
ತಪ್ತಲಿಂಗಪರಿಗ್ರಾಹೀ ಪ್ರತ್ಯವಾಯೀ ಮಹಾನ್ ಭವೇತ್ ॥

ಎಂಬ ಸಿದ್ಧಾಂತಾಗಮದ ವಚನಾನುಸಾರವಾಗಿ ಲಿಂಗಧಾರಣವು ಶ್ರೌತ (ವೈದಿಕ) ಮತ್ತು ಅಶ್ರೌತ (ಅವೈದಿಕ) ವೆಂದು ಎರಡು ವಿಧವಾಗಿರುವದು. ಅವುಗಳಲ್ಲಿ ಸಶಿದ್ಧ ಶೋಧನೆಯುಳ್ಳ ಲಿಂಗಧಾರಣವೇ ವೈದಿಕವು, ತಪ್ತಲಿಂಗಧಾರಣವು ಅವೈದಿಕವು. ಆದದರಿಂದ ತಪ್ತಲಿಂಗಧಾರಿಗಳು ವೇದಬಾಹ್ಯರೆನಿಸಿಕೊಳ್ಳುತ್ತಾರೆ. ಸಶಿದ್ಧ ಶುದ್ಧಲಿಂಗಧಾರಿಗಳು ಕೇವಲ ವೈದಿಕಕರ್ಮಗಳಲ್ಲಿ ನಿರತರಾಗಿರುವದರಿಂದ ವೈದಿಕರೆನಿಸಿಕೊಳ್ಳುತ್ತಾರೆ. ವೀರಶೈವರು ವೇದವಿರುದ್ಧವಾದ, ಬೆಂಕಿಯಿಂದ ಕಾಯಿಸಿದ ಲಿಂಗಧಾರಣೆಯನ್ನು ಮಾಡಕೂಡದು. ಹಾಗೆ ಮಾಡುವುದಾದರೆ ಮಹಾದೋಷವು ಬರುತ್ತದೆ.

ಅಷ್ಟಾವರಣಸಂಪನ್ನಾಃ ಪಂಚಾಚಾರಪರಾಯಣಾಃ ।
ವೈದಿಕಂ ಕರ್ಮ ಕುರ್ವೀತ ಜ್ಞಾನೈಕಫಲಸಾಧನಂ ॥

ಎಂಬ ಕ್ರಿಯಾಸಾರದ ವಚನಾನುಸಾರವಾಗಿ ವೀರಶೈವ ಮತಾಚಾರ್ಯರು ವೇದದ ಕರ್ಮಕಾಂಡದಲ್ಲಿ ಹೇಳಿರುವ ನಶ್ವರ ಫಲಪ್ರದವಾದ ಶ್ರುತಿಗಳಿಗಿಂತಲೂ ವೇದದ ಜ್ಞಾನಕಾಂಡದಲ್ಲಿ ಹೇಳಿರತಕ್ಕ ನಿತ್ಯ ಫಲಪ್ರದವಾದ ಶ್ರುತಿಗಳಿಗೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟು ವೇದದ ಕರ್ಮಕಾಂಡದಲ್ಲಿ ಹೇಳಿದ ಸ್ವರ್ಗಾದಿ ಸಾಧಕಗಳಾದ ಪಶುಹಿಂಸಾದಿ ಕರ್ಮಗಳನ್ನು ಅನುಷ್ಠಿಸದೆ ಜ್ಞಾನಕಾಂಡೋಕ್ತವಾಗಿರತಕ್ಕ ಲಿಂಗಧಾರಣೆ ಲಿಂಗಪೂಜಾದಿ ಜ್ಞಾನೈಕ ಸಾಧನವಾದ ಕರ್ಮಗಳನ್ನೇ ಅನುಷ್ಠಿಸಬೇಕೆಂದು ನಿಯಮವನ್ನು ಮಾಡಿರುತ್ತಾರೆ.

ವೇದಾಂತಜನ್ಯಂ ಯದ್ ಜ್ಞಾನಂ ವಿದ್ಯೇತಿ ಪರಿಕೀರ್ತ್ಯತೇ ।
ವಿದ್ಯಾಯಾಂ ರಮತೇ ಯಸ್ತು ವೀರ ಇತ್ಯಭಿಧೀಯತೇ ॥

ಎಂಬ ಸಿದ್ಧಾಂತ ಶಿಖಾಮಣಿಯ ವಚನಾನುಸಾರವಾಗಿ ಯಾವ ಜ್ಞಾನವು ವೇದಾಂತ (ವೇದದ ಜ್ಞಾನಕಾಂಡ) ದಿಂದುತ್ಪನ್ನವಾಗುವದೋ ಅದು ವಿದ್ಯೆಯೆಂದು ಹೇಳಿಸಿಕೊಳ್ಳುತ್ತದೆ. ಅಂತಹ ವೇದಾಂತ ವಿದ್ಯೆಯಲ್ಲಿ ವಿಹರಿಸುವವರು ಯಾರೋ ಅವರೇ ವೀರಶೈವರು. ಆದ್ದರಿಂದ ವೀರಶೈವ ಮತವು ವೈದಿಕವೆಂಬುದು ಸಿದ್ಧವಾಗುವುದು.

ಶೈವತಂತ್ರಮಿದಂ ಪ್ರೋಕ್ತಂ ಸಿದ್ಧಾಂತಾಖ್ಯಂ ಶಿವೋದಿತಂ ।
ಸರ್ವವೇದಾರ್ಥರೂಪತ್ವಾತ್ ಪ್ರಮಾಣಂ ವೇದವತ್ಸದಾ ॥

ವೇದಧರ್ಮಾಭಿಧಾಯಿತ್ವಾತ್ ಸಿದ್ಧಾಂತಾಖ್ಯಃ ಶಿವಾಗಮಃ ।
ವೇದಬಾಹ್ಯವಿರೋಧಿತ್ವಾದ್ವೇದಸಂಮತ ಉಚ್ಯತೇ ॥

ವೇದಸಿದ್ಧಾಂತಯೋರೈಕ್ಯಮೇಕಾರ್ಥಪ್ರತಿಪಾದನಾತ್ ।
ಪ್ರಾಮಾಣ್ಯಂ ಸದೃಶಂ ಜ್ಞೇಯಂ ಪಂಡಿತೈರೇತಯೋಸ್ಸದಾ ।

ಎಂಬ ಸಿದ್ಧಾಂತಶಿಖಾಮಣಿಯ ವಚನಾನುಸಾರವಾಗಿ ಶಿವಪ್ರಣೀತವಾದ ಶೈವಶಾಸ್ತ್ರವು (ಆಗಮಗಳು) ಸಿದ್ಧಾಂತವೆಂದು ಹೇಳಿಸಿಕೊಳ್ಳುವದು. ಈ ಸಿದ್ಧಾಂತಶಾಸ್ತ್ರವು ಸಮಸ್ತ ವೇದಾರ್ಥಮಯವಾಗಿರುವದರಿಂದ ಯಾವಾಗಲೂ ವೇದಗಳಂತೆ ಪ್ರಮಾಣಭೂತವಾಗಿರುವುದು. ಸಿದ್ಧಾಂತನಾಮಕವಾದ ಶಿವಾಗಮವು ವೇದೋಕ್ತವಾದ ಲಿಂಗಧಾರಣ, ಭಸ್ಮಧಾರಣ, ರುದ್ರಾಕ್ಷಧಾರಣಾದಿ ಧರ್ಮಗಳನ್ನು ಪ್ರತಿಪಾದಿಸುತ್ತಿರುವುದರಿಂದಲೂ, ವೇದಕ್ಕೆ ವಿರೋಧವಿಲ್ಲದಿರುವುದರಿಂದಲೂ, ವೇದಸಮ್ಮತವೆಂದು ಹೇಳಲ್ಪಡುವುದು. "ಸರ್ವವೇದೇಷು ಯದ್ದೃಷ್ಟಂ ತತ್ಸರ್ವಂ ತು ಶಿವಾಗಮೇ ॥ ಎಂಬ ವೀರಾಗಮ ಪ್ರಮಾಣಾನುಸಾರವಾಗಿ ವೇದ ಮತ್ತು ಸಿದ್ಧಾಂತ (ಶಿವಾಗಮ) ಇವೆರಡೂ ಒಂದೇ ಅರ್ಥವನ್ನು ಪ್ರತಿಪಾದಿಸುತ್ತಿರುವುದರಿಂದ ಪಂಡಿತರಾದವರು ಇವೆರಡಕ್ಕೂ ಒಂದೇ ವಿಧವಾದ ಪ್ರಾಮಾಣ್ಯವನ್ನು ಒಪ್ಪಬೇಕು.

“ವೇದವನೋದಿ ವೇದಾಧ್ಯಯನವ ಮಾಡಿಸಿದರೇನು? ಬ್ರಾಹ್ಮಣನಾಗಬಲ್ಲನೇ? ಬ್ರಹ್ಮಸೂತ್ರಗಳ [illegible] ಜನಿಸಿದರೇನು? ಬ್ರಾಹ್ಮಣನಾಗಬಲ್ಲನೇ? ಯಜನಾದಿಷಟ್ಕರ್ಮಗಳ ವಿಧವ ಮಾಡಿಸಿದರೇನು? ಬ್ರಾಹ್ಮಣನಾಗಬಲ್ಲನೇ? “ಬ್ರಹ್ಮ ಜಾನಾತಿ ಬ್ರಾಹ್ಮಣಃ” ಎಂಬ ವೇದವಾಕ್ಯವನರಿತು ಬ್ರಹ್ಮಭಾವನಾದಾತನೇ ಬ್ರಾಹ್ಮಣ ನೋಡಾ ಕಪಿಲಸಿದ್ಧಮಲ್ಲಿಕಾರ್ಜುನ ॥'

ಇಬ್ಬರು ಮೂವರು ದೇವರೆಂದು ಉಬ್ಬಿ ಮಾತಾಡಬೇಡ,
ದೇವನೊಬ್ಬನೇ ಕಾಣಿರೋ, ಇಬ್ಬರೆಂಬುದು ಹುಸಿ ನೋಡಾ,
ಕೂಡಲಸಂಗಮ ದೇವನೊಬ್ಬನೇ ಅಲ್ಲದೆ, ಇಬ್ಬರಿಲ್ಲ
ವೆಂದಿತ್ತುದಾ ವೇದವು ॥

ಇತ್ಯಾದಿ ಶಿವಶರಣರ ವಚನಗಳಲ್ಲಿ ಕಂಡಂತೆ ಅವರು ವೇದಕ್ಕೆ ಪ್ರಾಮಾಣ್ಯವನ್ನು ಕೊಟ್ಟು ತಮ್ಮ ತಮ್ಮ ಗುರುಗಳ ಮೂಲಕ ವೇದಾರ್ಥವಾದ “ಶಿವನೇ ಸಾಕು” ಎಂಬುದನ್ನು ತಿಳಿದುಕೊಂಡು ಶಿವಾನುಭವವನ್ನು ಪಡೆದರು. ಈಗಿನ ವೇದನಿಂದಕರಿಗೆ ಪರಮ ಪೂಜ್ಯರಾಗಿರುವವರೇ ತಮ್ಮ ವಚನಗಳಲ್ಲಿ ವೇದಗಳಿಗೆ ಪ್ರಾಮಾಣ್ಯವನ್ನು ಕೊಟ್ಟು ಗೌರವಿಸಿರುವಾಗ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿ ಹೋಗುವುದು ಅತ್ಯಂತ ಅನ್ಯಾಯವಲ್ಲವೆ? ಕೆಲ ಜನ ವಚನಕಾರರು ವೇದಶಾಸ್ತ್ರಪುರಾಣಗಳ ಓದುವಿಕೆಯನ್ನು ಕೊಟ್ಟಣ ಕುಟ್ಟಿ [illegible] ತೌಡನ್ನು ಹೊಂದುವುದಕ್ಕೆ ಹೋಲಿಸಿರುವುದರಿಂದ ಅವರು ವೇದವನ್ನು ಖಂಡಿಸಿದ್ದಾರೆಂದು ಕೆಲವರು ತಿಳಿದಿರುವರು. ಹೀಗೆ ತಿಳಿದುಕೊಂಡಿರುವುದು ಸರಿಯಲ್ಲ. ಏಕೆಂದರೆ, ಸರ್ವಜ್ಞನು—

“ಓದಿನಾ ಓದೆಲ್ಲ ವೇದ ಶಬ್ದನ ಸಿಪ್ಪೆ | ಓದಿನಾ ಒಡಲ ತಿಳಿವರೆ ಆ ಸಿಪ್ಪೆ ಸ್ವಾದುವಾದಂತೆ ಸರ್ವಜ್ಞ ॥ ಎಂಬುದಾಗಿ ಹೇಳಿರುವುದರಿಂದ ಅವನು ವಿದ್ಯೆಯನ್ನು ಖಂಡಿಸಿದಂತೆ ತೋರುತ್ತದೆ. ಆದರೆ ಸರ್ವಜ್ಞನು ವಿದ್ಯೆಯನ್ನು ಖಂಡಿಸಿಲ್ಲ. ಆದರೆ ವಿದ್ಯಾಭ್ಯಾಸಮಾಡಿ ವಿದ್ಯೆಯ ಅರ್ಥವನ್ನು ತಿಳಿಯದೆ ಇರತಕ್ಕದ್ದನ್ನು ಖಂಡಿಸಿದ್ದಾನೆ. ಅದರಂತೆ ಶರಣರು ವೇದಶಾಸ್ತ್ರಗಳನ್ನು ಖಂಡಿಸಿಲ್ಲ, ಆದರೆ ವೇದವನ್ನು ಓದಿಯೂ ವೇದಾರ್ಥವನ್ನು ಸರಿಯಾಗಿ ತಮ್ಮ ಅನುಭವಕ್ಕೆ ತಂದುಕೊಳ್ಳದೆ ಇರತಕ್ಕದ್ದನ್ನು ಖಂಡಿಸಿರುತ್ತಾರೆ. ವೇದಗಳನ್ನು ಖಂಡಿಸುವವರು ಹಿಂದುಗಳಲ್ಲವೆಂಬುದು ಸುಪ್ರಸಿದ್ಧವಷ್ಟೆ. ಆದುದರಿಂದ ಹಿಂದುಗಳಿಗೆ ಮುಖ್ಯ ದೇವನಾಗಿರುವ ಶಿವನನ್ನು ಅಸಾಧಾರಣ ಭಕ್ತಿಯಿಂದ ಪೂಜಿಸಿ ಶ್ರೇಷ್ಠ ಕೀರ್ತಿಗಳಿಸಿರುವ ಶರಣರ ವಚನಗಳಿಗೆ ಅನಾದಿಸಂಸಿದ್ಧವಾದ ವೇದವೇ ಆಧಾರವಲ್ಲದೆ ೧೨ನೆಯ ಶತಮಾನದಿಂದೀಚೆಗೆ ಹುಟ್ಟಿರುವ ಕನ್ನಡ ವಚನಗಳು ವೇದಕ್ಕೆ ಆಧಾರವೆಂದು ನುಡಿಯುವುದು ಅತ್ಯಂತ ಹಾಸ್ಯಾಸ್ಪದವು. ಆದುದರಿಂದ ನಿಜವಾದ ವೀರಶೈವರು ವೇದನಿಂದಕರಾದ ಅಂತಹ ಅಲ್ಪಜ್ಞರ ದುರುಪದೇಶಕ್ಕೊಳಗಾಗದೆ, ವೀರಶೈವಸಿದ್ಧಾಂತಕ್ಕೆ ಮುಖ್ಯಪ್ರಾಣಸ್ವರೂಪವಾಗಿರುವ ವೇದದಲ್ಲಿ ಪರಮಪೂಜ್ಯಬುದ್ಧಿಯನ್ನಿಟ್ಟು ಪರಮೇಶ್ವರನ ಕೃಪೆಗೆ ಪಾತ್ರರಾಗಿ ಪರಮಪುರುಷಾರ್ಥವನ್ನು ಪಡೆಯಬೇಕು.

॥ ವೇದಧರ್ಮೋ ವಿಜಯತೇತರಾಂ ॥

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಬೆಳ್ಳಿ ಪಂಡಿತ ಶ್ರೀ ಚಾಮರಾಜಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸಾದಂ ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ

ಪರಸ್ಥಳದವರಿಗೆ ೨ ರೂ ೧೨ ಆಣೆ

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಜನವರಿ ೧೯೪೩ [ಸಂಚಿಕೆ ೩೯

ಗುರುಭಕ್ತರ ಗುರುಸೇವೆ

ನಿಜಾಮ ಇಲಾಖಾ ಆಳಂದ ತಾಲೂಕ ಖಾನಾಪುರದಲ್ಲಿ ಅಣ್ಣಾರಾವ ಪಾಟೀಲರೆಂಬವರು ಪರಮಗುರುಭಕ್ತರಾಗಿದ್ದಾರೆ ಇವರು ಯಾವಾಗಲೂ ಗುರುಸೇವೆಯಲ್ಲಿಯೇ ಕಾಲಕಳೆಯುತ್ತಿರುವರು ಇವರು ಹೋಟಗಿ ಬೃಹನ್ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯರಿಂದ ಉಪದಿಷ್ಟರಾಗಿದ್ದಾರೆ ಉಪದೇಶಹೊಂದಿದ ದಿವಸವನ್ನು (ಮಾರ್ಗಶೀರ್ಷವದ್ಯ ೧೪) ಒಳ್ಳೆ ವೈಭವದಿಂದ ನೆರವೇರಿಸುತ್ತಿರುವರು ಇವರು ಶ್ರೀಮಂತರಾದರೂ ಇವರಲ್ಲಿ ಗರ್ವವಿಲ್ಲ ತಮ್ಮ ಗುರುಗಳು ಪ್ರತಿವರ್ಷ ಶ್ರಾವಣಮಾಸದ ವ್ರತಕ್ಕೋಸ್ಕರ ಎಲ್ಲಿಗೇ ಹೋಗಲಿ, ಇವರು ಅಲ್ಲಿಗೆ ಹೋಗಿ ತಮ್ಮ ಸೇವೆಯನ್ನು ಸಲ್ಲಿಸುತ್ತಿರುವರು. ಶ್ರೀಶೈಲಯಾತ್ರೆಯಿಂದ ಇವರಿಗೆ ಕಷ್ಟವಾದರೂ ಅದನ್ನು ಮನಸ್ಸಿನಲ್ಲಿ ತಾರದೆ ನಿರ್ಮಲಮನಸ್ಸಿನಿಂದ ಗುರುಸೇವೆಯನ್ನು ಮಾಡುತ್ತಿರುವರು ಗುರುವಿನ ಆಜ್ಞೆಯನ್ನು ಎಷ್ಟೂ ಮೀರುವದಿಲ್ಲ ಇವರಿಂದಲೇ ಈ ಭಾಗದಲ್ಲಿ ಶ್ರೀಜಗದಾಚಾರ್ಯರ ತತ್ತ್ವವು ಪ್ರಚಾರವಾಗಿದೆ ವಾರ್ಷಿಕ ಪದ್ಧತಿಯಂತೆ ಈ ವರ್ಷವಾದರೂ ತಮ್ಮ ಗುರುಗಳಾದ ಹೋಟಗಿ ಶ್ರೀಗಳನ್ನು ಬರಮಾಡಿಕೊಂಡು ತಮ್ಮ ಉಪದೇಶ ದಿವಸವನ್ನು ಹಬ್ಬದಂತೆ ಆಚರಿಸಿದರು. ಮೋಘೆ, ವಿಳಂಬ, ಸರಸಂಬ, ಸಕ್ಕರಗಾ, ಶಾಕಾಪೂರ, ಪಡಸಾವಳಿ, ಆಳಂದ, ರೇವೂರ, ತೆಲ್ಲಾಗಉಣಿ, ಇತ್ಯಾದಿ ಗ್ರಾಮಗಳಿಂದ ಭಜನಸಂಘಗಳನ್ನೂ ಅನೇಕ ಜನರನ್ನೂ ಬರಮಾಡಿಕೊಂಡಿದ್ದರು ಈ ಉತ್ಸವಕ್ಕೆ ೪ ೫ ನೂರು ಜನರು ಸೇರಿದ್ದರು ೩ ೪-೫ನೇ ತಾರೀಖಿನ ದಿವಸ ಹೋಟಗಿ ಶ್ರೀಗಳಿಂದ ಉಪದೇಶ ಪ್ರವಚನವನ್ನು ಮಾಡಿಸಿದರು. ದುಂಡಲಿಂಗಪ್ಪ ಶಾಲಾ ಮಾಸ್ತರ ಇವರೂ ಭಾಷಣವನ್ನು ಮಾಡಿದರು ಪಂಚಾಚಾರ್ಯ ಬಾಲ ಭಜನಸಂಘವನ್ನು ದುಂಡಲಿಂಗಪ್ಪ ಮಾಸ್ತರರು ಚೆನ್ನಾಗಿ ತಯಾರಿಸಿದ್ದಾರೆ ಆ ಬಾಲಕರಿಂದ ಆಚಾರ್ಯತತ್ತ್ವವಚನಗಳನ್ನು ಹೇಳಿಸಿದರು ಪ್ರಭಾದೇವಿಗೆ ೨ ರೂಪಾಯಿಗಳು ಸಮರ್ಪಿಸಲ್ಪಟ್ಟವು

ಬಾಪೂರಾವ ಪಾಟೀಲ ಮೋಘೆ ಸೋಲಾಪುರ.

ವರ್ಧಂತ್ಯುತ್ಸವ, ಸೋಲಾಪುರ

ಹೋಟಗಿ ಶ್ರೀಗಳ ಸಂಕಲ್ಪವನ್ನು ಮನಸಾ ನೆರವೇರಿಸಿ, ಮಾಹೇಶ್ವರವರ್ಗವನ್ನೇ ಸುಶಿಕ್ಷಿತವನ್ನಾಗಿ ಮಾಡಲು ತಿಂಗಳೊಂದಕ್ಕೆ ಬೇಕಾಗುವ ೭೫ ರೂಪಾಯಿಗಳನ್ನು 'ವೀರಶೈವ ಗುರುಕುಲ' ಕ್ಕೆ ಕೊಡಲೊಪ್ಪಿದ ದಾನವೀರೆ ಶ್ರೀಮತಿ ಸಿದ್ದವ್ವಾಬಾಯಿ ಘೋಬಡೆ ಇವರ ಜ್ಯೇಷ್ಠಪುತ್ರನಾದ ಶ್ರೀಭೀಮಾಶಂಕರ ಘೋಬಡೆ ಈತನ ೧೩ನೇ ವರ್ಷದ ವರ್ಧಂತಿಯು ಇದೇ ಚಿತ್ರಭಾನು ಸಂವತ್ಸರದ ಮಾರ್ಗಶೀರ್ಷ ಕೃಷ್ಣಪಕ್ಷ ಅಮಾವಾಸ್ಯೆ ಗುರುವಾರ ದಿವಸ ಒಳ್ಳೆ ವೈಭವದಿಂದ ನೆರವೇರಿತು ಹೋಟಗಿ ಶ್ರೀಗಳ ಪಾದಪೂಜಾ, ವೀರಶೈವ ಸಂಸ್ಕೃತಪಾಠಶಾಲಾ ವಿದ್ಯಾರ್ಥಿಗಳಿಗೆ ಅನ್ನಸಂತರ್ಪಣೆ, ಭೂರಿದಕ್ಷಿಣಾದಿಗಳು ಸಮರ್ಪಿಸಲ್ಪಟ್ಟವು ಇವರ ವಂಶಗುರುಗಳಾದ ವೇ॥ ವೀರಂತಯ್ಯಶಾಸ್ತ್ರಿಗಳೂ ಆಗಮಿಸಿದ್ದರು ಪರಮಗುರುಭಕ್ತರಾದ ಶ್ರೀಯುತ ಸಿದ್ಧರಾಮಪ್ಪಣ್ಣ ಬುಗಡೆಯವರೇ ಈ ಮನೆತನದ ಸರ್ವ ವ್ಯವಸ್ಥೆಯನ್ನು ಉತ್ತಮರೀತಿಯಿಂದ ನಡೆಸುತ್ತಿರುವರು ಈ ಸದ್ವಂಶೀಯ ಸದ್ವ್ಯಕ್ತಿಗೆ ಸಕಲಸಂಪತ್ತುಗಳನ್ನಿತ್ತು ಸಂರಕ್ಷಿಸಲೆಂದು ಸರ್ವದಾ ಗುರುಸಾರ್ವಭೌಮರನ್ನು ಸ್ಮರಿಸುವೆನು

ಓರ್ವ ಗುರುಭಕ್ತ

ವಿವಾಹಮಹೋತ್ಸವ, ಹುಬ್ಬಳ್ಳಿ

ಧಾರವಾಡ ಜಿ॥ ಹುಬ್ಬಳ್ಳಿ ನಗರ ನಿವಾಸಿಗಳಾದ ವೇ॥ ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರ ಭವನದಲ್ಲಿ ಇದೇ ಚಿತ್ರಭಾನು ಸಂವತ್ಸರ ಮಾರ್ಗಶೀರ್ಷ ಬ॥ ೧೦ ತಾ॥ ೧ ೧ ೪೩ ನೇ ಶುಕ್ರವಾರ ದಿವಸ ಸದರಿ ನಂದಿಕೇಶ್ವರಮಠದ ವೇ॥ ವಿರೂಪಾಕ್ಷಯ್ಯನವರ ಪುತ್ರ ಚಿ॥ ಗಂಗಾಧರಾರ್ಯನಿಗೆ ರಾಣೆಬೆನ್ನೂರು ತಾಲೂಕು ಕದರಮಂಡಿಗಿ ಗ್ರಾಮದ ವಿರುಪಯ್ಯನವರ ಮಠದ ವೇ॥ ಮುರಿಗಯ್ಯನವರ ಪುತ್ರಿ ಚಿ॥ ಕುಂ॥ ಸೌ॥ ಗೌರವ್ವನನ್ನು ಕೊಟ್ಟು ಶ್ರೀ ಷ॥ ಬ್ರ॥ ಷ॥ ಧೇನುಕರ್ಣ ಶಿವಾಚಾರ್ಯರು ಸೊಲ್ಲಾಪುರ ಇವರ ಅಧ್ಯಕ್ಷತೆಯಲ್ಲಿಯೂ ಲಕ್ಷ್ಮೇಶ್ವರ ಹಿರಿಯ ಮಠದ ವೇ॥ ಕಾಶಪ್ಪಯ್ಯನವರ ವೈದಿಕತ್ವದಲ್ಲಿಯೂ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಈ ವಿವಾಹಮಹೋತ್ಸವಕ್ಕೆ ಸ್ಥಳಪರಸ್ಥಳಗಳಿಂದ ಭಕ್ತ ಮಾಹೇಶ್ವರರು ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಗಿತ್ತು ಈ ಮಂಗಲ ಮಹೋತ್ಸವದಲ್ಲಿ ಪಂಚಾಚಾರ್ಯ ಪ್ರಭೆಗೆ ವಧೂವರರ ಬಂಧುಗಳ ಕಡೆಯಿಂದ ೨॥ ರೂಪಾಯಿಗಳು ತೆಗೆಸಲ್ಪಟ್ಟವು ಅನಂತರ ಶ್ರೀಜಗದ್ಗುರು ಪಂಚಾಚಾರ್ಯರ ಮಂಗಲ ಜಯ ಜಯಕಾರದೊಡನೆ ಮಹೋತ್ಸವವು ಸಮಾಪ್ತಿಗೊಂಡಿತು. ವಧೂವರರಿಗೆ ಶ್ರೀ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುವ

ಉತ್ಸವಭಾಗಿ,
ವೀರಭದ್ರಯ್ಯ, ಹೊಸಮಠ,

ಸನ್ಯಾಸಿಗಳ ಅಸಾಧುವರ್ತನೆ

ಲೇ—ವಿರೂಪಾಕ್ಷಶರ್ಮಾ ವೀರಶೈವ ಸಂಸ್ಕೃತಪಾಠಶಾಲಾ
ಕೊಲ್ಲಾಪುರ

(ಹಿಂದಿನಿಂದ ಮುಂದುವರೆದುದು)

"ಶುಭಕಾರ್ಯಗಳಲ್ಲಿ ಷಟ್ಕಲಶಗಳನ್ನು ಸ್ಥಾಪಿಸಬೇಕೆಂದು ಸಾಧಿಸುವುದು"

ಶೈವರತ್ನಾಕರೇ

ಪರಿತಸ್ತು ಯೋಜಯಿತ್ವೈವ ಸಂಖ್ಯಾರ್ಥವಿಧ್ಯಪ್ರತಿಷ್ಠಿತೈಃ ।
ಕಲ್ಪಯೇತ್ಕಲಶಾಂಭೋಭಿರಾಚಾರ್ಯೋ ಶಿಷ್ಯಮೂರ್ಧನಿ ॥

(ಅಧ್ಯಾಯ ೧೦ ಶ್ಲೋ ೬೨೧)

ಸಿದ್ಧಾಂತಶಿಖಾಮಣೌ

ವಿಧೂಪಿತಪಟ್ಟಂ ಕೃತ್ವಾ ತತ್ರೇ ಯಥಾಶಾಸ್ತ್ರಂ ಯಥಾವಿಧಿ ।
ಪಂಚಪ್ರತ್ಯಯೈಸ್ತತ್ರ ಸ್ಥಾಪಿತೈಃ ಕಲಶೋದಕೈಃ ।
ಆಚಾರ್ಯಃ ಸಮುಪಸ್ಪೃಶ್ಯ ಶಿಷ್ಯಸ್ಯ ವಾತಮುಖಶೇಖರಯೋಃ ॥

(ಪರಿಚ್ಛೇದ ೬ ಶ್ಲೋ ೯-೧೫)

ವಿನಿವೇಶ್ಯ ಪಂಚಕಲಶಪೂರಿತೈಸ್ತೀರ್ಥವಾರಿಭಿಃ ।
ತಥಾಧಿಮಂತ್ರಿತೈಃ ಶೈವೈರ್ಮಂತ್ರೈಃ ಪಂಚಾಕ್ಷರೇಣ ॥

(ಸೂಕ್ಷ್ಮಾಗಮ ಪಟಲ ೫ ಶ್ಲೋ ೬೩೫)

ಇತ್ಯಾದಿ ಪ್ರಮಾಣಗಳಿಂದ ವೀರಶೈವರು ವಿವಾಹಾದಿ ಶುಭಕಾರ್ಯಗಳಲ್ಲಿ ಪಂಚಕಲಶಗಳನ್ನೇ ಸ್ಥಾಪಿಸಬೇಕೆಂದು ಸ್ಪಷ್ಟವಾಗುವದು ಇದಲ್ಲದೆ ಸುಪ್ರಭೇದಾಗಮ, ಶಿವಪುರಾಣ, ವಾತುಲಾಗಮ, ವೇದಾಂತವೀರಶೈವಚಿಂತಾಮಣಿ, ವಿವೇಕಚಿಂತಾಮಣಿ, ಸಿದ್ಧೇಶ್ವರವಚನ ಮೊದಲಾದ ಸಹಸ್ರಾವಧಿ ಗ್ರಂಥಗಳಲ್ಲಿ ಪಂಚಕಲಶಗಳನ್ನೇ ಸ್ಥಾಪಿಸಬೇಕೆಂದು ಸ್ಪಷ್ಟವಾಗಿ ಸಾರುತ್ತಿದ್ದರೂ ಧರ್ಮಗ್ರಂಥಗಳನ್ನು ಕಣ್ಣಿನಿಂದ ನೋಡದೆ ಕಿವಿಯಿಂದ ಕೇಳದೆ ಅಶಾಸ್ತ್ರೀಯವಾದ ೬ನೇ ಕಲಶವನ್ನು ಪಂಚಕಲಶಗಳ ಜೊತೆಯಲ್ಲಿ ಸ್ಥಾಪಿಸಬೇಕೆಂದು ಸಾಧಿಸುತ್ತಿರುವುದು ಧರ್ಮದ್ರೋಹವಲ್ಲವೇ ? ಈ ವಿರಕ್ತರು ವೀರಶೈವಮತದಲ್ಲಿ ಹುಟ್ಟಿ, ಮತಸ್ಥಾಪನಾಚಾರ್ಯರು ಹಾಕಿಕೊಟ್ಟ ಧರ್ಮಮಾರ್ಗಗಳನ್ನು ಮೀರಿ ನಡೆಯುವುದೆಂದರೆ ಬಹು ವಿಷಾದದ ಸಂಗತಿಯು ಬಸವನನ್ನು ತಮ್ಮ ವಂಶಕ್ಕೆ ಮೂಲಪುರುಷನೆಂದು ಹೇಳುತ್ತ ಮುಂಡಿಗಳೆಲ್ಲರೂ ಗುರುಗಳಿಗೆ ವಿರೋಧಿಗಳಾಗಿ ತಮ್ಮ ಪಂಗಡಗಳನ್ನೇ ಬೇರೆ ಮಾಡಿಕೊಂಡು ಧರ್ಮಕಟ್ಟಳೆಗಳನ್ನು ಶಿಥಿಲ ಮಾಡಿ ಸ್ವಮತದಲ್ಲಿಯೇ ಜಗಳವನ್ನೆಬ್ಬಿಸಿ ಸಂತೋಷದಿಂದ ಗೇಣುಹೊಟ್ಟೆಯನ್ನು ತುಂಬಿಕೊಳ್ಳುತ್ತಿರುವ ಸಂಗತಿಯು ಅತ್ಯಂತ ದುಃಖಕರವಾದುದು ಪ್ರಾಚೀನ ಗ್ರಂಥಗಳಲ್ಲಿ ಷಟ್ಕಲಶಗಳ ವಿಷಯವೇ ಇರುವುದಿಲ್ಲ. ಈಗಿನ ವಿರಕ್ತರು ನವೀನಗ್ರಂಥಗಳಲ್ಲಿ ಸೇರಿಸಿದರೆ ಅವೇ ಮುಂದೆ ಕೆಲವು ಕಾಲದನಂತರ ಪ್ರಮಾಣಗಳಾಗಿ ಪರಂಪರೆಯಿಂದ ಬರುವ ವಿರಕ್ತ ಮರಿಗಳಿಗೆ ಕಲಶಗಳ ವಿಷಯದಲ್ಲಿ ಕಲಹಕ್ಕೆ ಸಾಧನವಾಗಲೆಂದೇ ಇವರ ಉದ್ದೇಶವಿದ್ದಂತೆ ಕಾಣುತ್ತದೆ ಆದರೆ ಇದು ಧರ್ಮದ್ರೋಹ, ಸಮಾಜದ್ರೋಹ, ಗುರುದ್ರೋಹವಾಗುವುದು. ಇವರ ಕುಟಿಲತನದಿಂದ ಸಮಾಜದಲ್ಲಿ ಶಾಂತತೆಯು ನೆಲಗೊಳ್ಳಲು ಶಕ್ಯವಿಲ್ಲ ಸಮಾಜ ಒಂದಾಗುವುದೂ ಶಕ್ಯವಿಲ್ಲ

ಎಲೈ ಸನ್ಯಾಸಿವರ್ಗವೇ,

ಕೃತ್ವಾ ರುದ್ರಾವಾಹನಂ ಹಿ ಬಲದೇವೇನ ಧೀಮತಾ
ಬೋಧಿತೋ ಗುರುಪಕ್ಷಸ್ತು ಸದ್ಯೋಜಾತಾದಿಕಾನ್ಮುಖಾತ್ ।
ಪಂಚಾರ್ಣಸ್ಥಾಪಕಪೋಕ್ತತನ್ತ್ರಂತ್ರ್ಯೈರ್ವೈದಿಕಶಾಸ್ತ್ರೈಃ ।

[ಆಚೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೩ನೇ ಜನವರಿ ತಾ|| ೧೧ನೆಯ ಸೋಮವಾರ

ಶಿವಲಿಂಗಸ್ವರೂಪ.

ವೀರಶೈವರು ಚರಾಚರಾತ್ಮಕನಾದೀ ಜಗತ್ತಿಗಾಧಾರವಾಗಿರುವ ಲಿಂಗರೂಪನಾದ ಶಿವನನ್ನು ದೇಹದಲ್ಲಿ ಧರಿಸಿಕೊಂಡು ಅಸಾಧಾರಣ ಭಕ್ತಿಯಿಂದ ಪೂಜಿಸುತ್ತಿರುವರು. ಆದರೆ ಇವರು ಪೂಜಿಸುವ ಶಿವಲಿಂಗಮೂರ್ತಿಯು ಇತರರು ಪೂಜಿಸುವ ಮೂರ್ತಿಗಳಂತೆ ಹಸ್ತಪಾದ ಹೃದಯವದನಂಗಳ ಕೂಡಿಲ್ಲವು. ಆಕಾಶವು ಹೇಗೆ ಸರ್ವವ್ಯಾಪಕವಾಗಿರುತ್ತದೆಯೋ ಹಾಗೆಯೇ ಲಿಂಗವು ಅಣುರೇಣುತೃಣಕಾಷ್ಠಾದಿಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತದೆ. ಲಿಂಗವಿಲ್ಲದ ಸ್ಥಳವಿಲ್ಲ. "ಸರ್ವಂ ಖಲ್ವಿದಂ ಬ್ರಹ್ಮ" ಎಂಬ ಶ್ರುತಿಯು ಇದೇ ಅರ್ಥವನ್ನು ಬೋಧಿಸುತ್ತದೆ. ಈ ಲಿಂಗಸ್ವರೂಪವು ವಚನಕ್ಕಾಗಲಿ, ಮನಸ್ಸಿಗಾಗಲಿ ಶರೀರಕ್ಕಾಗಲಿ ಗೋಚರವಾಗಲಾರದು. ಯಾರು ಯೋಗದೃಷ್ಟಿಯಿಂದ ಚಿತ್ತೈಕಾಗ್ರತೆಯನ್ನು ಪಡೆದಿರುವರೋ ಅಂತಹ ಯೋಗಿಗಳ ಹೃದಯಕಮಲದಲ್ಲಿ ಆನಂದರೂಪವಾಗಿ ತೋರುತ್ತದೆ. ಇಂತಹ ಯೋಗಶಕ್ತಿಯು ಪ್ರಪಂಚವ್ಯವಹಾರಗಳಲ್ಲಿ ಮಗ್ನರಾಗಿರುವ ಮಾನವರಿಗೆ ಸಂಭವಿಸಲಾರದು. ಅವಿಚಕ್ಷಣವಾದ ನಾಮರೂಪಕ್ರಿಯೆಗಳಿಲ್ಲದ ಆ ಲಿಂಗವು ತುಪ್ಪವು ಗಟ್ಟಿಗೊಂಡಂತೆ ಸ್ಥೂಲಾಕಾರವನ್ನು ಹೊಂದಿ ಜೀವಿಗಳನ್ನುದ್ಧರಿಸುವುದೆಂದು ಆಚಾರ್ಯರು ಪ್ರತಿಪಾದಿಸಿದ್ದಾರೆ. ಶಿವನ ಸ್ಥೂಲಾಕಾರಗಳು ಭಕ್ತರ ಇಚ್ಛಾನುಗುಣವಾಗಿ ಅನಂತವಿಧವಾಗಿದ್ದರೂ ಆ ಆಕಾರಗಳು ಸಾಮಾನ್ಯವಾಗಿ ಎರಡು ವಿಧವಾಗಿವೆ. ಅವುಗಳಲ್ಲಿ ಒಂದು ಘೋರವಾದುದು ಇನ್ನೊಂದು ಅಘೋರವಾದುದು. ಘೋರಾಕಾರವೆಂದರೆ ಭಯಂಕರವಾದ ಆಕಾರವು. ಅಘೋರಾಕಾರವೆಂದರೆ ಶಾಂತಾಕಾರವು. ಅಂದರೆ ಮನುಷ್ಯನಂತೆ ಕರಚರಣಾದ್ಯವಯವಗಳಿಂದಲೂ ಆಯುಧಗಳಿಂದಲೂ, ವಸ್ತ್ರ ಭೂಷಣಾದ್ಯುಪಕರಣಗಳಿಂದಲೂ ಪತ್ನೀಪುತ್ರಾದಿ ಪರಿವಾರದಿಂದಲೂ ಕೂಡಿರುವ ಆಕಾರವೇ ಘೋರಮೂರ್ತಿಯೆನಿಸುತ್ತದೆ. ಇಂತಹ ಕರಚರಣಾದ್ಯವಯವಾದಿಗಳೊಂದೂ ಇಲ್ಲದೆ ಪಂಚಸೂತ್ರಮಯವಾದ ಆಕಾರವೇ ಅಘೋರಾಕಾರವೆನಿಸುತ್ತದೆ. ಈ ವಿಷಯವು ಆಗಮಗಳಲ್ಲಿ ಉಕ್ತವಾಗಿರುವುದಲ್ಲದೆ 'ಯಾತೇ ರುದ್ರ ಶಿವಾತನೂರಘೋರಾಽಪಾಪಕಾಶಿನೀ' ಎಂಬ ಶ್ರುತಿಯಲ್ಲಿಯೂ ಸ್ಪಷ್ಟವಾಗಿ ಹೇಳುತ್ತದೆ. ಅಘೋರಮೂರ್ತಿ ಲಿಂಗವೆಂದೂ, ಘೋರಮೂರ್ತಿ ಬೇರವೆಂದೂ ಶಾಸ್ತ್ರವು ಬೋಧಿಸುವುದು. ಕಾಶೀ, ಶ್ರೀಶೈಲ, ಹಿಮಾಲಯ ಮುಂತಾದ ಸ್ಥಳಗಳಲ್ಲಿ ರಾರಾಜಿಸುವ ಮೂರ್ತಿಗಳು ಅಘೋರಮೂರ್ತಿಗಳೆನಿಸಿಕೊಂಡಿರುವವು. ವೀರಶೈವಸಿದ್ಧಾಂತವು ಇಂತಹ ಅಘೋರಮೂರ್ತಿಯಾದ ಲಿಂಗವೇ ಮುಕ್ತಿಸಾಧನವೆಂದು ಸ್ಪಷ್ಟವಾಗಿ ಪ್ರತಿಪಾದಿಸುತ್ತದೆ. ಯಾರು ಲಿಂಗಧಾರಕರೋ ಅವರೇ ವೀರಶೈವರು.

> ಧಾರಯೇದ್ಯಸ್ತು ಹಸ್ತೇನ ಲಿಂಗಾಕಾರಂ ಶಿವಾತ್ಮಕಂ ।
> ತಸ್ಯ ಹಸ್ತಸ್ಥಿತಾ ವಿದ್ಧಿ ಮುಕ್ತಿದಾ [illegible] ॥

ಯಾರು ಲಿಂಗಾಕಾರವಾದ ಈಶ್ವರನನ್ನು ಹಸ್ತದಲ್ಲಿ ಧರಿಸಿ ಪೂಜಿಸುವರೋ ಅವರಿಗೆ ಮುಕ್ತಿಸಂಪತ್ತು ಕರಗತವಾದುದೆಂದು ವಾತುಲಾಗಮವು ಅಘೋರಮೂರ್ತಿಸ್ವರೂಪವೆನಿಸಿದ ಲಿಂಗದ ಮಹತ್ವವನ್ನು ವಿಶೇಷವಾಗಿ ಕೊಂಡಾಡಿರುತ್ತದೆ. ಸ್ಥೂಲಶರೀರದಲ್ಲಿ ರಾರಾಜಿಸುವ ವಸ್ತುವು ಇಷ್ಟಲಿಂಗವೆಂದೂ, ಸೂಕ್ಷ್ಮಶರೀರದಲ್ಲಿ ರಾರಾಜಿಸುವ ವಸ್ತುವು ಪ್ರಾಣಲಿಂಗವೆಂದೂ, ಕಾರಣಶರೀರದಲ್ಲಿ ರಾರಾಜಿಸುವ ವಸ್ತುವು ಭಾವಲಿಂಗವೆಂದೂ ಹೇಳಿಸಿಕೊಳ್ಳಲ್ಪಡುವವು. ಸರ್ವವ್ಯಾಪಕವಾದ ಆಕಾಶವು ಹೇಗೆ ಘಟಮಠಾದ್ಯುಪಾಧಿಗಳಿಂದ ಘಟಾಕಾಶ ಮಠಾಕಾಶ ಎಂದು ಅನಂತ ಉಪನಾಮಗಳನ್ನು ಹೊಂದಿರುತ್ತದೆಯೋ ಹಾಗೆಯೇ ಶಿವಲಿಂಗವೊಂದೇ ಆಯಾಯ ಉಪಾಸಕನ ಸ್ಥೂಲ, ಸೂಕ್ಷ್ಮ, ಕಾರಣಶರೀರರೂಪ ಉಪಾಧಿನಿಮಿತ್ತದಿಂದ ಇಷ್ಟಲಿಂಗ, ಪ್ರಾಣಲಿಂಗ, ಭಾವಲಿಂಗ ಎಂಬ ನಾಮಗಳನ್ನು ಹೊಂದಿರುವುದು. ಸ್ಥೂಲೋಪಾಸನೆಯಿಲ್ಲದೆ ಸೂಕ್ಷ್ಮೋಪಾಸನೆಯು ಸಿದ್ಧಿಸುವುದಿಲ್ಲವು. ಬಾಲಕರು ಮೊದಲು ಸ್ಥೂಲಾಕಾರವಾಗಿ ಅಕ್ಷರಾಭ್ಯಾಸಮಾಡದೆ ಇದ್ದರೆ ಅವರಿಗೆ ವಿದ್ಯೆಯು ಹೇಗೆ ಪ್ರಾಪ್ತವಾಗಲಾರದೋ ಹಾಗೆಯೇ ಆನಂದಘನವಾದ ಮಹಾಲಿಂಗೋಪಾಸನೆಯು ಸಿದ್ಧಿಸಬೇಕಾದರೆ ಸ್ಥೂಲಲಿಂಗೋಪಾಸನೆಯಲ್ಲಿ ತೇರ್ಗಡೆಯಾಗಬೇಕು. ಇದೇ ಅಭಿಪ್ರಾಯವನ್ನು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು—

> ಅಂತಸ್ಥ [illegible] ಲಿಂಗಸ್ಯ ಶಕ್ತಃ ಶಕ್ತ ಏವ ನಾ ।
> ಬಾಹ್ಯಂ ಸ ಧಾರಯೇಲ್ಲಿಂಗಂ ತದಭ್ಯಾಸವಿಧಿತ್ಸಯಾ ॥

ಎಂದು ಸ್ಪಷ್ಟವಾಗಿ ಅಪ್ಪಣೆಕೊಡಿಸಿರುವರು. ಲಿಂಗೋಪಾಸಕನು ಬಾಲ್ಯದಾರಭ್ಯ ಕಾಯವಾಙ್ಮನಸ್ಸುಗಳಲ್ಲಿಯೂ "ಲಿಂಗ" ಶಬ್ದವನ್ನೇ ವಿಶೇಷವಾಗಿ ವ್ಯವಹಾರ ಮಾಡುತ್ತಿರುವುದರಿಂದ "ಏಕೇನ ಜನ್ಮನಾ ಮುಕ್ತಿರ್ವೀರಾಣಾಂತು ಮಹೇಶ್ವರಿ" ಎಂಬ ಪ್ರಮಾಣದಂತೆ ಅವನಿಗೆ ಒಂದೇ ಜನ್ಮದಲ್ಲಿ ಮುಕ್ತಿಯು ದೊರೆಯುವುದು. ಆದುದರಿಂದ ಮೋಕ್ಷಾಪೇಕ್ಷಿಗಳು ಅಘೋರರೂಪ ಲಿಂಗಮೂರ್ತಿಯನ್ನು ಪೂಜಿಸಿ ಮೋಕ್ಷಸುಖವನ್ನು ಪಡೆದು ಧನ್ಯರಾಗಬೇಕೆಂದಾಶಿಸುತ್ತೇವೆ.

ಯುದ್ಧವಾರ್ತೆ.

ಜರ್ಮನರನ್ನು ಓಡಿಸಲು ೨ ತಿಂಗಳು ಕಾಲ ಬೇಕು

ಉತ್ತರ ಆಫ್ರಿಕಾದಿಂದ ಜರ್ಮನರನ್ನು ಪೂರ್ತಿಯಾಗಿ ಓಡಿಸಲು ೨ ತಿಂಗಳ ಕಾಲ ಬೇಕಾಗುವುದೆಂದು ತುರ್ಕಿಯ ಜನರು ಅಭಿಪ್ರಾಯಪಡುತ್ತಿದ್ದಾರೆ.

ಪೆಸಿಫಿಕ್‌ನಲ್ಲಿ ಹೊಸ ವಿಮಾನ ಮಾರ್ಗಗಳು

೮ ನೇ ಬ್ರಿಟಿಷ್ ಸೇನೆಯು ಕಟ್ಟಕಡೆಗೆ ಟ್ರಿಪೋಲಿಯಿಂದ ಶತ್ರುಸೇನೆಯನ್ನು ಓಡಿಸುವುದು ಖಂಡಿತವೆಂಬುದಾಗಿ ಬ್ರಿಟಿಷ್ ರಾಯಭಾರಿಗಳಾದ ಲಾರ್ಡ್ ಹ್ಯಾಲಿಫಾಕ್ಸರು ನುಡಿದರು. ಪೆಸಿಫಿಕ್‌ನಲ್ಲಿ ಹೊಸ ವಿಮಾನ ಮಾರ್ಗಗಳನ್ನು ತೆರೆಯುವುದರ ಮೂಲಕ ಸರಬರಾಜು ಏರ್ಪಾಟನ್ನು ಬಲಪಡಿಸಲಾಗುವುದೆಂದು ಹೇಳಿದರು.

ಜರ್ಮನರು ಹಳ್ಳಿಗಳನ್ನೆಲ್ಲ ಸುಟ್ಟಿದ್ದಾರೆ

ವೆಲಿಕಿಲೂಕಿ ನಗರವನ್ನು ರಷ್ಯನರು ಪ್ರವೇಶಿಸಿದಾಗ ಊರೆಲ್ಲ ದೊಡ್ಡ ಕಾರಾಗೃಹದಂತೆ ಕಾಣಬರುತ್ತಿತ್ತು. ಸ್ತ್ರೀ ಪುರುಷರನ್ನೂ, ಮಕ್ಕಳನ್ನೂ ಒಳಗೆ ದೂಡಿದ್ದರು. ಆ ನಗರವನ್ನು ಆಕ್ರಮಿಸಿದ್ದ ಒಂದು ವರ್ಷದಲ್ಲಿ ಅರ್ಧ ಜನರು ಸತ್ತರು. ಉಳಿದರ್ಧ ಜನರು ಹೊಟ್ಟೆಗಿಲ್ಲದೆ ನರಳುತ್ತಿದ್ದರು. ವೆಲಿಕಿಲೂಕಿ ಸುತ್ತ ಹತ್ತುಮೈಲಿಗಳವರೆಗೆ ಜರ್ಮನರು ನಗರಗಳೆಲ್ಲವನ್ನೂ ಸುಟ್ಟುಹಾಕಿದ್ದಾರೆ.

ಬೆಂಕಿಗೆ ಜಗ್ಗದ ಲೇಪ

ಕ್ರಾಯ್‌ಡನ್ನಿನ ತರುಣ ವೈಜ್ಞಾನಿಕನೊಬ್ಬನು ಒಂದು ರಸಾಯನ ಪದಾರ್ಥವನ್ನು ಕಂಡುಹಿಡಿದಿದ್ದಾನೆ. ಅದನ್ನು ಮೈಗೆ ಹಚ್ಚಿಕೊಂಡರೆ ಬೆಂಕಿಯುಸಹ ಸುಡುವುದಿಲ್ಲವಂತೆ! ಆ ತರುಣನು ಇದನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸಿದನು. ಮೈಗೆಲ್ಲ ಆ ಪದಾರ್ಥವನ್ನು ಬಳಿದುಕೊಂಡು ಪೆಟ್ರೋಲ್ ಹಾಕಿಕೊಂಡು ಬೆಂಕಿ ತಗಲಿಸಿದರೂ ಅದರಿಂದ ಆತನಿಗೇನೂ ಅಪಾಯವಾಗಲಿಲ್ಲವಂತೆ! ಈ ಪದಾರ್ಥದಿಂದ ಅನೇಕ ಬ್ರಿಟಿಷ್ ವೈಮಾನಿಕರ ಜೀವ ಉಳಿಯಬಹುದೆಂದು ಆಶಿಸಲಾಗಿದೆ. ಈ ಸಂಬಂಧವಾಗಿ ಹೆಚ್ಚಿನ ಸಂಶೋಧನೆಗಳು ನಡೆಯುತ್ತವೆ.

ವಿಮಾನ ವೇಗವನ್ನು ಹೆಚ್ಚಿಸಲು ಆಕಾಶಬಾಣ

ಜರ್ಮನರು ತಮ್ಮ ಮಧ್ಯಮ ತರಗತಿಯ ಬಾಂಬರ್ ವಿಮಾನವನ್ನು ಕಾರ್ಯಾಚರಣೆಗೆ ಕಳುಹಿಸುವಾಗ ಅದರ ವೇಗವನ್ನು ಹೆಚ್ಚಿಸಲು ಆಕಾಶಬಾಣವನ್ನಿಟ್ಟು ಹೊಡೆಯುವರೆಂದು ಬ್ರಿಟಿಷ್ ವೈಮಾನಿಕ ಪ್ರವೀಣರಾದ ಗ್ರೇಯವರು ತಿಳಿಸಿದ್ದಾರೆ.

ಕಪ್ಪುಸಮುದ್ರದಲ್ಲಿ ರಷ್ಯನರ ಕಾರ್ಯಾಚರಣೆ

ಕಪ್ಪುಸಮುದ್ರ ಭಾಗದಲ್ಲಿ ರಷ್ಯನರು ಹೊಸ ದಾಳಿಯನ್ನು ನಡೆಸಬಹುದೆಂದು ಜರ್ಮನರು ಶಂಕಿಸುತ್ತಿದ್ದಾರೆ. ಈ ಭಾಗದಲ್ಲಿರುವ ಜರ್ಮನ್ ಸೈನ್ಯವು ಶಕ್ತಿಯುತವಾಗಿಲ್ಲ. ರಷ್ಯನರ ಸಮುದ್ರ ಶಕ್ತಿಯು ಕಪ್ಪು ಸಮುದ್ರದಲ್ಲಿ ಅಗಾಧವಾಗಿದೆ.

ಜರ್ಮನ್ ಸೈನ್ಯ ಕಾಕ್ಸಸ್‌ನಿಂದ ರೊಸ್ಟೋವಿಗೆ

ಕಾಕ್ಸಸ್ಸಿನಿಂದ ಬಹು ಭಾಗ ಜರ್ಮನ್ ಸೈನ್ಯವು ರೊಸ್ಟೋವ್ ಕಡೆಗೆ ಬಲವಾದ ರಕ್ಷಣೆಯನ್ನು ಪಡೆದು ಬರುತ್ತಿದೆ. ರಷ್ಯ ಸೈನ್ಯವನ್ನು ತಡೆಗಟ್ಟುವ ಭರವಸೆಯು ಅವರಿಗಿದೆಯಂತೆ! ಎಷ್ಟೇ ನಷ್ಟವಾದರೂ ಸಹ ರಾಸ್ಟೋವ್ ಪಟ್ಟಣವನ್ನು ರಕ್ಷಿಸಲು ನಿರ್ಧರಿಸಿದ್ದಾರೆಂದು ಹೇಳಲಾಗಿದೆ.

ಮರಣದಂಡನೆ

ಎಂಟುಜನ ಬರ್ಮೀಯರಿಗೂ ಮತ್ತು ಇಬ್ಬರು ಭಾರತೀಯರಿಗೂ ಜಪಾನರು ಮರಣದಂಡನೆ ವಿಧಿಸಿದ್ದಾರೆಂದು ಹೇಳಲಾಗಿದೆ. ಇವರು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿ ಜಪಾನ್ ಸೇನೆಗಳಿಗೆ ಅಡಚಣೆ ತಂದೊಡ್ಡಿದರೆಂದೂ ಮತ್ತು ರೈಲ್ವೆ ಸಂಚಾರ ಮಾರ್ಗಗಳಿಗೆ ಅಡ್ಡಿಯನ್ನುಂಟುಮಾಡಿದರೆಂದೂ ಹೇಳಲಾಗಿದೆ.

ರಷ್ಯನರ ಮುಂದೋಟ

ಟ್ರಾನ್ಸ್ ಕಕೇಷಿಯನ್ ರೈಲ್ವೆ ಮಾರ್ಗದಲ್ಲಿ ರಷ್ಯನರು ಈಗಿನಷ್ಟೇ ವೇಗವಾಗಿ ಮುಂದೋಡುವುದಾದರೆ ಉತ್ತರ ಕಾಕಸಸ್ ಮತ್ತು ಕ್ಯೂಬನ್ ಕ್ಷೇತ್ರಗಳಲ್ಲಿರುವ ಜರ್ಮನ್ ಸೇನೆಗೆ ಮಹಾವಿಪತ್ತು ಲಭಿಸುವುದೆಂಬುದಾಗಿ ಮಿಲಿಟರಿ ವಿಮರ್ಶಕರು ತಿಳಿಸುತ್ತಾರೆ. ಸಾಲ್ಸ್ಕ್, ಮಾಜ್‌ದೋಕ್ ಮತ್ತು ಪ್ರೊಕ್ಲ್ಯಾಡ್ನಾಯಾ—ಈ ಮೂರು ನಗರಗಳು ಕಾಕಸಸ್ ಪ್ರದೇಶದಲ್ಲಿ ಜರ್ಮನರಿಗೆ ತಳಹದಿಯಾಗಿದ್ದವು. ಅವೆಲ್ಲ ಈಗ ಹೋದವು. ಗ್ರಾಜ್ನಿ ಎಣ್ಣೆಗಣಿಗಳನ್ನು ಹಿಡಿಯುವ ಕನಸೆಲ್ಲ ಮಾಯವಾಯಿತು.

ಜಪಾನ್ ನೌಕಾ ಸಿದ್ಧತೆ

ಜಪಾನರು ಹಿಂದೆಂದೂ ಇಲ್ಲದಷ್ಟು ಅಗಾಧ ಸಂಖ್ಯೆಯಲ್ಲಿ ವ್ಯಾಪಾರಿ ಹಡಗುಗಳನ್ನೂ ಯುದ್ಧದ ಹಡಗುಗಳನ್ನೂ ರಬೂಲ್ ಹತ್ತಿರ ಶೇಖರಿಸಿರುವರು. ಸಾಲಮನ್ ದ್ವೀಪದ ಮೇಲೆ ಜಪಾನರು ಮೊದಲನೆಯಸಾರಿ ದಾಳಿಯನ್ನು ನಡೆಸಿದಾಗ ಇದ್ದುದಕ್ಕಿಂತಲೂ ಈಗ ಸೈನ್ಯ ಜಮಾವಣೆಯು ಹೆಚ್ಚಿದೆ.

ಜಪಾನಿಗೆ ರೂಜ್‌ವೆಲ್ಟರ ಎಚ್ಚರಿಕೆ

ಅಮೆರಿಕ ಕಾಂಗ್ರೆಸ್ಸಿಗೆ ಕಳುಹಿಸಿದ ಸಂದೇಶದಲ್ಲಿ ಮಿತ್ರ ಪಕ್ಷದವರು ಯುದ್ಧವನ್ನು ಜಪಾನ್ ದೇಶದಲ್ಲೇ ನಡೆಸುವರೆಂದೂ, ಮೆಡಿಟರೇನಿಯನ್ ಸಮುದ್ರದ ದಕ್ಷಿಣ ದಡದಿಂದ ಜರ್ಮನರನ್ನು ಓಡಿಸಲು ಸಾಧ್ಯವೆಂದೂ ಯುದ್ಧಾನಂತರ ಜರ್ಮನಿ, ಇಟಲಿ ಮತ್ತು ಜಪಾನ್ ದೇಶಗಳು ಶಸ್ತ್ರಹಿಡಿಯದಂತೆ ಮಾಡಲಾಗುವದೆಂದೂ ಹೇಳಿದಾರೆ.

ಜರ್ಮನರಿಗಾದ ವಸ್ತುನಷ್ಟ

ಜನವರಿ ೧ ರಿಂದ ೫೮ ವರೆಗೆ ಸ್ಟಾಲಿನ್‌ಗ್ರಾಡಿನ ದಕ್ಷಿಣ ಮತ್ತು ನೈಋತ್ಯಗಳಲ್ಲಿ ಮುಂದೆ ಕಾಣಿಸಿದ ವಸ್ತುಗಳು ರಷ್ಯನರ ವಶವಾದವು ೭೭ ವಿಮಾನಗಳು, ೫೬ ಟ್ಯಾಂಕುಗಳು, ೪೨೯ ಮೆಷಿನ್ ಗನ್‌ಗಳು, ೩೬೭ ಮಾರ್ಟರುಗಳು, ೧೦೧೬ ಟ್ಯಾಂಕ್ ವಿರುದ್ಧ ಫಿರಂಗಳು, ೧೦,೦೦೦ ಆಟೋಮ್ಯಾಟಿಕ್ ರೈಫಲ್‌ಗಳು, ೧೫೭೭೦ ರೈಫಲ್‌ಗಳು, ೬೦ ಲಕ್ಷಕ್ಕೆ ಮೀರಿ ಶೆಲ್‌ಗಳು, ೫ ಲಕ್ಷ ವಾಯುಬಾಂಬುಗಳು, ೮೬ ರೇಡಿಯೋ ಟ್ರಾನ್ಸ್‌ಮಿಟರುಗಳು, ೩೬೯ ಲಾರಿಗಳು, ೬೩೧೭ ಕುದುರೆಗಳು, ೪೪೦೦ ಗಾಡಿಗಳು, ೧೮ ರೈಲ್ವೆ ಎಂಜನ್ನುಗಳು, ೪೦೦ ರೈಲ್ವೆ ಟ್ರಕ್ಕುಗಳು, ೬೭ ವಸ್ತುಸಂಗ್ರಹಾಲಯಗಳು ಸುಮಾರು ೭೮೦೦ ಮಂದಿ ಅಧಿಕಾರಿಗಳನ್ನೂ ಸೈನಿಕರನ್ನೂ ಸೆರೆ ಹಿಡಿಯಲಾಯಿತು

ಜರ್ಮನರಿಗೆ ಅಪಾರ ನಷ್ಟವಾಗಿದೆ

ಉತ್ತರ ಕಾಕಸಸ್‌ನಲ್ಲಿ ರಷ್ಯನರು ಮತ್ತೊಂದು ನಗರವನ್ನು ಹಿಡಿದಿದ್ದಾರೆ ದಕ್ಷಿಣ ರಂಗದಲ್ಲೆಲ್ಲ ರಷ್ಯನರಿಗೆ ಜಯವಾಯಿತು ಕಾಕಸಸ್‌ನಲ್ಲಿರುವ ಜರ್ಮನ್ ಸೇನೆಗೆ ವಿಪತ್ತು ಅಧಿಕವಾಗುತ್ತಿದೆ ಮೂರು ಕಡೆಗಳಿಂದ ರಷ್ಯನರು ಮುಂದುವರೆಯುತ್ತಿದ್ದಾರೆ ರಾಸ್ಟೋವ್ ನೈಋತ್ಯದಲ್ಲಿ ಕಪ್ಪುಕಡಲಿನ ಕ್ಷೇತ್ರದಿಂದ ಜರ್ಮನ್ ಸೇನೆಗೆ ವಿಪತ್ತುಂಟಾಗಿದೆಯೆಂಬುದಾಗಿ ಬರ್ಲಿನ್ನಿನ ಅಧಿಕಾರಿಗಳೊಬ್ಬರು ಒಪ್ಪಿಕೊಂಡಿರುವರು. ಸ್ಟಾಲಿನ್‌ಗ್ರಾಡಿನ ವಾಯುವ್ಯದಲ್ಲಿ ಉಗ್ರವಾಗಿ ಮೇಲೆ ಬಿದ್ದರು ಸ್ವಯಂಸೇವಕ ದಳವನ್ನು ಮೂಲ ಸೇನೆಯಿಂದ ಪ್ರತ್ಯೇಕಿಸಿ, ೧೦೦ಕ್ಕಿಂತ ಹೆಚ್ಚು ಮಂದಿಯನ್ನು ಕೊಲ್ಲಲಾಯಿತು ಇನ್ನೊಂದು ಕಡೆ ೭೦ ಜರ್ಮನ್ ಕಂದಕಗಳನ್ನು ವಶಪಡಿಸಿಕೊಂಡು ಜರ್ಮನರನ್ನು ಸೆರೆಹಿಡಿಯಲಾಯಿತು ಸ್ಟಾಲಿನ್‌ಗ್ರಾಡಿನ ದಕ್ಷಿಣದಲ್ಲಿ ರಷ್ಯನರು ಮತ್ತೆರಡು ಊರುಗಳನ್ನು ಹಿಡಿದರು ಮಧ್ಯ ಡಾನ್ ಪ್ರದೇಶದಲ್ಲಿ ಜರ್ಮನ್ ವ್ಯೂಹದೊಳಗೆ ನುಗ್ಗಿ ೪೦೦ ಕ್ಕಿಂತ ಹೆಚ್ಚು ಮಂದಿ ಯೋಧರನ್ನು ಕೊಲ್ಲಲಾಯಿತು

ಜರ್ಮನಿಯ ಸ್ವರವು ಈಗ ಬದಲಾಯಿಸಿದೆ

ರಷ್ಯಾದಲ್ಲಾಗುತ್ತಿರುವ ಜರ್ಮನರ ಸೋಲನ್ನು ಗೋಬೆಲ್ಸ್‌ರವರು ಜರ್ಮನ್ ಪ್ರಜೆಗಳಿಗೆ ಇನ್ನೂ ತಿಳಿಸಿಯೇ ಇಲ್ಲ ಆದರೆ ೩ ನೇ ತಾ॥ ದಿವಸ ಜರ್ಮನ್ ರೇಡಿಯೋವು ಇಂಗ್ಲೀಷಿನಲ್ಲಿ "ಬ್ರಾಡ್‌ಕಾಸ್ಟ್ ಮಾಡುತ್ತ ತನ್ನ ಧ್ವನಿಯನ್ನು ಬದಲಾಯಿಸಿತು 'ಸೋಲು ಮತ್ತು ಗೆಲುವು ಇವೆರಡರ ಜವಾಬ್ದಾರಿಯು ಹರ್ ಹಿಟ್ಲರರಿಗೇ ಸೇರಿದ್ದು ಎಂದು ರೇಡಿಯೋ ತಿಳಿಸಿತು ಇತ್ತೀಚಿನವರೆಗೆ ಹರ್ ಹಿಟ್ಲರನ ಹೆಸರನ್ನು ಗೆಲುವಿಗೆ ಮಾತ್ರ ಸಂಬಂಧಿಸಲಾಗಿತ್ತೇ ಹೊರತು, ಸೋಲಿನ ವಿಚಾರದಲ್ಲಿ ಆತನ ಹೆಸರನ್ನೇ ಎತ್ತಿರಲಿಲ್ಲ

ರಷ್ಯದಲ್ಲಿ ಸೋಲಾಗಿದೆಯೆಂದು ಜರ್ಮನರು ಒಪ್ಪಿಕೊಳ್ಳದೆ ಹೋದರೂ ಏನು ಮಾಡೋಣ ? ಕಷ್ಟಗಳು ಬಹಳವಾಗಿವೆ. ರಷ್ಯನರ ಮಿಲಿಟರಿ ನೈಪುಣ್ಯ ಅಸಾಧ್ಯವಾದುದು. ಅವರ ಮೀಸಲು ದಳಗಳಿಗೆ ಕುದಿಮೊದಲೇ ಇಲ್ಲವಾಗಿವೆ. ಈಗ ಹೊಸ ಬಲಯುತ ಟ್ಯಾಂಕ್‌ಗಳನ್ನು ಬೇರೆ ರಚಿಸಿದ್ದಾರೆ ಅವುಗಳಮುಂದೆ ರಕ್ಷಣೆಗಾಗಿ ದಪ್ಪನಾದ ಉಕ್ಕಿನ ತಗಡನ್ನು ಹಾಕಲಾಗಿದೆ ನಮ್ಮ ಟ್ಯಾಂಕ್ ವಿರುದ್ಧ ಶೆಲ್‌ಗಳು ಅವುಗಳನ್ನು ಭೇದಿಸುವಂತಿಲ್ಲ" ಎಂದು ಬರ್ಲಿನ್ನಿನಿಂದ ವಿವರಣೆಗಳು ಹೊರಡುತ್ತಿವೆ.

ಈಗ ರಷ್ಯನ್ ರಂಗದಲ್ಲಿ ಹೋರಾಡುತ್ತಿರುವ ರಷ್ಯನ್ ಯೋಧರೆಲ್ಲರೂ ಹೊಸಬರೆಂದು ಹೇಳಲಾಗಿದೆ ಒಳ್ಳೆ ದೃಢಕಾಯರು ಬಂದೂಕು ಹಾರಿಸುವುದರಲ್ಲಿ ಬಹು ಜಾಣರು ಅಧಿಕಾರಿಗಳೆಲ್ಲ ಇನ್ನೂ ಬಹಳ ತರುಣರು ಆದರೂ ಯಾವ ಸಮಯದಲ್ಲಿ ಏನು ಮಾಡಬೇಕೆಂಬ ಬುದ್ಧಿವಂತಿಕೆಯಿರುವವರು ರಷ್ಯನ್ ಟ್ಯಾಂಕುಗಳಿಗೆ ಹೊಸ ಸಾಧನವೊಂದನ್ನು ಕಲ್ಪಿಸಿದೆ ಅವು ಮಂಜಿನಲ್ಲಿ ಕೂಡ ಬಹಳ ವೇಗವಾಗಿ ಓಡಬಲ್ಲವು. ಅವು ಬರುವುದೇ ತಿಳಿಯುವುದಿಲ್ಲ.

ವಿಚಿತ್ರಪ್ರಪಂಚ

ವಾಯುಮಂಡಲದಲ್ಲಿ 24 ಸೂರ್ಯರಷ್ಟು ದೊಡ್ಡವಾಗಿ ಜ್ವಲಿಸುತ್ತಿರುವ ಎರಡು ಗ್ರಹಗಳು ಚಕ್ರಾಕಾರವಾಗಿ ಗಂಟೆಗೆ 10,0000 ಮೈಲುಗಳ ವೇಗದಲ್ಲಿ ತಿರುಗುತ್ತಿರುವವಂತೆ ! ಈ ಗ್ರಹಗಳು ಸುತ್ತಾಡುತ್ತಿರುವ ಪ್ರದೇಶವು ಸೂರ್ಯನಿಗೂ ಭೂಮಿಗೂ ಇರುವ ದೂರಕ್ಕಿಂತಲೂ ಎರಡರಷ್ಟು ವಿಶಾಲವಾಗಿರುವವಂತೆ ! ಈ ಅದ್ಭುತ ಗ್ರಹಗಳು ಭೂಮಿಗೆ ಬಹಳ ದೂರವಾಗಿದ್ದು, ಮಹಾಶಕ್ತಿಯುಳ್ಳ ದೂರದರ್ಶಕ ಯಂತ್ರದಲ್ಲಿ ನೋಡಿದಾಗ, ಸಣ್ಣ ಚುಕ್ಕಿಯಂತೆ ಕಾಣಿಸಿಕೊಳ್ಳುವವಂತೆ !

ಪ್ರಪಂಚದಲ್ಲೆಲ್ಲಾ ಅತ್ಯಂತ ದೊಡ್ಡದೆನಿಸಿದ ಗಡಿಯಾರವು 'ಅಮೇರಿಕೆಯ ಕಾಲ್ಗೇಟ್ಸ್ ಸೋಪ್ ಇಂಡಸ್ಟ್ರಿಯಲ್ಸ್' ಕಟ್ಟಡದ ಮೇಲೆ ಸ್ಥಾಪಿಸಲ್ಪಟ್ಟಿರುವದು ಈ ಅದ್ಭುತವಾದ ಗಡಿಯಾರದ ಮುಖವು 50 ಅಡಿಗಳ ಅಗಲವುಳ್ಳದ್ದಾಗಿರುವುದು ಗಂಟೆಯನ್ನು ತೋರಿಸುವ ಮುಳ್ಳು 19 ಅಡಿಗಳ ಉದ್ದವಾಗಿಯೂ ನಿಮಿಷವನ್ನು ತೋರಿಸುವ ಮುಳ್ಳು ೨೭¾ ಅಡಿಗಳ ಉದ್ದವಾಗಿಯೂ ಇರುವುದು ಈ ಗಡಿಯಾರದ ಅಂಕಿಗಳು ಸುಮಾರು ೪೦॥ ಅಡಿಗಳ ಉದ್ದವಾಗಿರುವವು 3 ಮೈಲುಗಳ ದೂರದಲ್ಲಿ ನಿಂತು ಸ್ಪಷ್ಟವಾಗಿ ಕಾಲವನ್ನು ತಿಳಿದುಕೊಳ್ಳಬಹುದುವಂತೆ !

ಅಮೇರಿಕೆಯ ಒಬ್ಬ ಪ್ರಸಿದ್ಧ ಡಾಕ್ಟರರು, ಮನುಷ್ಯನ ಶರೀರದಲ್ಲಿ ಯಾವ ಯಾವ ವಸ್ತುಗಳು ಎಷ್ಟೆಷ್ಟು ಇರುವವೆಂಬುದನ್ನು ಈ ಕೆಳಗೆ ಕಂಡಂತೆ ವಿವರಿಸಿರುವರು '140 ಪೌಂಡ್ ತೂಕವುಳ್ಳ ಒಬ್ಬ ಮನುಷ್ಯನ ಶರೀರದಲ್ಲಿ 10 ಗ್ಯಾಲನ್ ನೀರು, 7 ತುಂಡು ಸಾಬೂನುಗಳನ್ನು ತಯಾರಿಸುವುದಕ್ಕೆ ಸಾಕಾದಷ್ಟು ಕೊಬ್ಬು, 9000 ಸೀಸದಕಡ್ಡಿಗಳನ್ನು ತಯಾರಿಸಬಹುದಾದಷ್ಟು ಕಾರ್ಬನ್, 2200 ದೀಪದಕಡ್ಡಿಗಳನ್ನು ತಯಾರಿಸಬಹುದಾದಷ್ಟು ಫಾಸ್ಫರಸ್, ಒಂದು ಡೋಜು ಉಪ್ಪನ್ನು ತಯಾರಿಸಬಹುದಾದಷ್ಟು ಮೆಗ್ನೀಷಿಯಂ, ಒಂದು ಮಧ್ಯ ಸೈಜಿನ ಮೊಳೆಯನ್ನು ತಯಾರಿಸಬಹುದಾದಷ್ಟು ಕಬ್ಬಿಣ, ಕೋಳಿಯ ಮರಿಗಳ ಗೂಡಿಗೆ ಬಳಿಯಲು ಸಾಕಾದಷ್ಟು ಸುಣ್ಣ ಮತ್ತು ಒಂದು ನಾಯಿಯ ಮೈಮೇಲಿನ ಚಿಗಟಗಳನ್ನು ನಾಶಮಾಡಲು ಸಾಕಾಗುವಷ್ಟು ಗಂಧಕ ಇರುವವಂತೆ !

ಸ್ವೀಕಾರ.

ಹುಬ್ಬಳ್ಳಿ ನಗರ ನಿವಾಸಿಗಳಾದ ವೇ॥ ನಂದಿಕೇಶ್ವರ ಮಠದ ವಿರೂಪಾಕ್ಷಯ್ಯನವರ ಪುತ್ರ ಚಿ॥ ಗಂಗಾಧರಯ್ಯನಿಗೆ ರಾಣೆಬೆನ್ನೂರು ತಾ॥ ಕದರಮಂಡಿಗಿ ಗ್ರಾಮದ ವಿರುಪಯ್ಯನವರ ಮಠದ ವೇ॥ ಮುರಿಗಯ್ಯನವರ ಪುತ್ರಿ ಚಿ॥ ಸೌ॥ ಗೌರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ವಧೂವರರಿಂದ ತೆಗೆಯಿಸಿದ **2-8-0** ರೂ ಗಳು ವೇ॥ ಮುಳುಗುಂದ ಹೊಸಮಠದ ವೀರಭದ್ರಯ್ಯನವರ ದ್ವಾರಾ ತಲ್ಪಿರುತ್ತವೆ

ನೈಜಾಂ ಇಲಾಖಾ ಆಳಂದ ತಾ॥ ಖಾನಾಪುರ ಗ್ರಾಮದಲ್ಲಿರುವ ಮ॥ ರಾ॥ ಅಣ್ಣಾರಾವ್ ಪಾಟೀಲರು ಶ್ರೀ ಹೋಟಗಿ ಸ್ವಾಮಿಗಳವರಿಂದ ಮಂತ್ರೋಪದೇಶವನ್ನು ಪಡೆದ ಸ್ಮಾರಕವಾಗಿ ನೆರವೇರಿಸಿದ ಉಪದೇಶ ಸ್ಮಾರಕೋತ್ಸವದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **2** ರೂ ಗಳು ಶ್ರೀ॥ ಷ॥ ಬ್ರ॥ ಹೋಟಗಿ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ನಗರದಲ್ಲಿ ವೀರಶೈವ ಮಹಿಳಾಸಂಘವು ಸ್ಥಾಪಿತವಾದ ಸಂತೋಷಕ್ಕಾಗಿ ಸದರಿ ಮಹಿಳಾ ಸಂಘದವರು ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ **1** ರೂಪಾಯಿಯು ಸೌ॥ ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಮದ್ರಾಸ ವೀರಶೈವ ವಿದ್ಯಾವರ್ಧಕ ಸಂಘದ ರಜತ ಮಹೋತ್ಸವ ಬಳ್ಳಾರಿ

ತಾ॥ 28 12-42ನೆಯ ಸೋಮವಾರ ಬೆಳಗ್ಗೆ ಮೇಲ್ಕಂಡ ಸಂಘದ ರಜತೋತ್ಸವ ನಿಮಿತ್ತವಾಗಿ ಪೂರ್ವದ ಉಜ್ಜಯಿನೀ ಜಗದ್ಗುರು ಶ್ರೀ ಸಿದ್ಧಲಿಂಗ ಶಿವಾಚಾರ್ಯಮಹಾಸ್ವಾಮಿಗಳವರ ಭಾವಚಿತ್ರವನ್ನು ಆನೆಯಮೇಲೆ ಅಂಬಾರಿಯಲ್ಲಿಟ್ಟು ಮಹೋತ್ಸವವು ವೈಭವದಿಂದ ನೆರವೇರಿತು ಉತ್ಸವವು ಪುರದ ಪ್ರಮುಖ ಬೀದಿಗಳಲ್ಲಿ ಜಗದಾಚಾರ್ಯರ ಜಯಘೋಷದೊಂದಿಗೆ ನಡೆದು ಶ್ರೀ ಉಜ್ಜಯಿನೀ ಜಗದ್ಗುರು ಹಾಸ್ಟೆಲ್ ಮುಂದಿನ ಸುಂದರವಾದ ಮಂಟಪಕ್ಕೆ ತಲುಪಿತು. 28, 29 ನೇ ತಾರೀಖಿನಲ್ಲಿ ಸಭೆಗಳಾಗಿ ಉತ್ಸವದ ಕಾರ್ಯಕ್ರಮಗಳು ನೇರವೇರಿದವು

ಯಜಮಾನ ಶಾಂತಪ್ಪ ಚೌಕಾ, ಬಳ್ಳಾರಿ.

ಬಳ್ಳಾರಿ ವೀರಶೈವ ಮಹಿಳೆಯರಲ್ಲಿ ಧರ್ಮಜಾಗೃತಿ

ಮದ್ರಾಸ್ ವೀರಶೈವ ವಿದ್ಯಾವರ್ಧಕ ಸಂಘದ ರಜತ ಮಹೋತ್ಸವಕ್ಕಾಗಿ ಬಳ್ಳಾರಿ ಪ್ರಮುಖರ ಆಮಂತ್ರಣದ ಮೇರೆಗೆ ಸೌ॥ ಭಾಗೀರಥೀಬಾಯಿ ಕಟಾಪ ಇವರು ಆಗಮಿಸಿದ್ದರು ತಾ॥ ೨೯ ೧೨-೪೨ ನೆಯ ಮಂಗಳವಾರ ದಿವಸ "ಉಜ್ಜಯಿನಿ ಜಗದ್ಗುರು ಹಾಸ್ಟೆಲ್" ಮುಂದಿನ ಭವ್ಯವಾದ ಪೆಂಡಾಲಿನಲ್ಲಿ ಸ್ತ್ರೀಯರ ಸಭೆ ಸೇರಿತು ಸೌ॥ ಭಾಗೀರಥೀಬಾಯಿಯವರು ೧ ಘಂಟೆಯವರೆಗೂ ತಮ್ಮ ಅಮೋಘವಾಣಿಯಿಂದ ಭಾಷಣ ಮಾಡಿದರು ಮಹಿಳೆಯರ ಮನಸ್ಸು ಅಷ್ಟಕ್ಕೆ ತೃಪ್ತಿಯಾಗದೆ ಮಾರನೆಯ ದಿವಸ ಶ್ರೀಮುರಿಸ್ವಾಮಿ ಮಠದಲ್ಲಿ ಸಭೆಯನ್ನು ಏರ್ಪಡಿಸಿದರು ಮಹಿಳೆಯರ ಸಮುದಾಯವು ಪ್ರಚಂಡವಾಗಿ ಸೇರಿತ್ತು ಸೌ॥ ಭಾಗೀರಥೀಬಾಯಿಯವರ ಉಪನ್ಯಾಸವು ಎಲ್ಲರಿಗೂ ಆನಂದವನ್ನುಂಟುಮಾಡಿದ್ದಲ್ಲದೆ ಧರ್ಮಜಾಗೃತಿಗಾಗಿ ಒಂದು ಸಂಘವನ್ನು ಸ್ಥಾಪಿಸಲು ಉತ್ಸಾಹದಿಂದ ಒಪ್ಪಿಕೊಂಡರು. ಸೌ॥ ಭಾಗೀರಥೀಬಾಯಿಯವರು ಸರ್ವರ ಇಚ್ಛಾನುಸಾರವಾಗಿ, "**ವೀರಶೈವ ಮಹಿಳಾಸಂಘ**"ವೆಂಬ ಸಂಸ್ಥೆಯನ್ನು ಸ್ಥಾಪಿಸಿದರು ಸ್ವಲ್ಪ ಜನರು 'ಅಕ್ಕನ ಬಳಗ'ವೆಂಬ ಹೆಸರನ್ನಿಡಲು ವಿಶೇಷ ಶ್ರಮಪಟ್ಟರೂ ಸಾರ್ಥಕವಾಗಲಿಲ್ಲ ಬಹು ಜನರ ಅನುಮತಿಯ ಮೇರೆಗೆ ಮಹಿಳಾಸಂಘವೆಂಬ ಅಭಿಧಾನವನ್ನಿಟ್ಟರು ಅನಂತರ ಸೊಲ್ಲಾಪುರದ ಪಂಚಮ್ಮ ಮತ್ತು ಪಾರ್ವತಮ್ಮ ಶಿನಗಿ ಈ ಉಭಯರು ಬಳಗದ ವಿಷಯವಾಗಿ ಭಾಷಣ ಮಾಡಿದರು ಆದರೆ ಜನರ ಮನಸ್ಸಿಗೆ ಅದು ಬಾರದೆ ಮರುದಿವಸ ಮೀಟಿಂಗನ್ನಿಟ್ಟು ಮಹಿಳಾ ಸಂಘವೆಂದೇ ನಿಶ್ಚಯ ಮಾಡಿ ಸೌ॥ ಭಾಗೀರಥೀಬಾಯಿಯವರಿಗೆ ನೆರೆದಂಥ ಮಹಿಳೆಯರೆಲ್ಲರೂ ಈ ಸಂಸ್ಥೆಯ ಸಲುವಾಗಿ ತನುಮನೋಧನಗಳನ್ನು ಅರ್ಪಿಸುತ್ತೇವೆಂದು ಉತ್ಸಾಹದಿಂದ ವಾಗ್ದಾನ ಮಾಡಿದರು ಅಲ್ಲದೆ ಪ್ರಮುಖ ವೀರಶೈವರೂ ಕೂಡ ಇದಕ್ಕೆ ಸಮ್ಮತಿಸಿ ಈ ಸಂಸ್ಥೆಯು ಸರ್ವತೋಮುಖವಾಗಿ ಪ್ರಸಾರವಾಗಿ ಮಹಿಳೆಯರಲ್ಲಿ ಸನಾತನ ವೀರಶೈವ ಧರ್ಮದ ಜ್ಞಾನವುಂಟಾಗಲೆಂದು ವಿಶ್ವಾಸದಿಂದ ಹೇಳಿದರು ಬಳ್ಳಾರಿ ವೀರಶೈವ ಮನೆತನದಲ್ಲಿ ಶಿರೋಮಣಿಯೆನಿಸುವ ಗಡಿಗಿಯವರ ಮನೆಯಲ್ಲಿ ಶೋಭಿಸುತ್ತಿರುವ ಸೌ॥ ಅಕ್ಕನಾಗಮ್ಮನವರನ್ನು ಈ ಸಂಸ್ಥೆಗೆ ಅಧ್ಯಕ್ಷರನ್ನಾಗಿ ಮಾಡಿದರು ಶ್ರೀ॥ ಬಸಮ್ಮನವರು ಮುರಿಸ್ವಾಮಿಮಠ ಇವರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀ ಮರಿಯಮ್ಮ ಪಟ್ಟರ ಸೌ॥ ಉಮಾದೇವಿ ವಿಚಾರಕ್ಕಿ ಇವರನ್ನು ಸೆಕ್ರೆಟರಿಗಳನ್ನಾಗಿಯೂ, ಪ್ರಮುಖ ಉತ್ಸಾಹಿ ಮಹಿಳೆಯರನ್ನು ಮೆಂಬರುಗಳನ್ನಾಗಿಯೂ ಮಾಡಿದರು ಈ ರೀತಿ ಬಳ್ಳಾರಿ ವೀರಶೈವ ಮಹಿಳೆಯರಲ್ಲಿ ಧರ್ಮಜಾಗೃತಿಯಾಗಿ ವೀರಶೈವ ಮಹಿಳಾ ಸಂಘವನ್ನು ಸ್ಥಾಪಿಸಿದ ಸಂತೋಷಕ್ಕಾಗಿ ಮತಸ್ಥಾಪಕರ ವಿಜಯಧ್ವಜವನ್ನು ಸರ್ವತೋಮುಖವಾಗಿ ಮೆರೆಯಿಸುತ್ತಿರುವ ಪಂಚಾಚಾರ್ಯಪ್ರಭೆಗೆ ಸದರಿ ಸಂಸ್ಥೆಯವರು ಒಂದು ರೂಪಾಯಿಯನ್ನು ಸಮರ್ಪಿಸಿದರು

ಸೆಕ್ರೆಟರಿ, ವೀರಶೈವ ಮಹಿಳಾಸಂಘ, ಬಳ್ಳಾರಿ.

(೧ನೆಯ ಪುಟದಿಂದ ಮುಂದುವರೆದುದು)

ಈ ಪ್ರಕಾರವಾಗಿ ನಿಮಗೆ ಅತ್ಯಂತ ಪ್ರಮಾಣವಾದ ಬಸವಪುರಾಣದ ೩ನೇ ಅಧ್ಯಾಯದಲ್ಲಿ ಬಲದೇವನ ಹೇಳಿಕೆಯ ಪ್ರಕಾರ ಗುರುವು [illegible] [illegible] ಕಲಶಗಳನ್ನು ಸ್ಥಾಪಿಸಿ [illegible] ಲಗ್ನಮಾಡಿದನೆಂದು [illegible] ನೋಡಿ [illegible] [illegible] ಅನ್ಯ[illegible] [illegible] [illegible] ಕೆಂದು ಮೈಸೂರು [illegible] ಕೇಳಿಕೊಂಡಿರುವ ವಿಷಯವು ಸುಪ್ರಸಿದ್ಧವಲ್ಲವೆ? ವಿರಕ್ತರಿಗೆ ಷಟ್ಸ್ಥಲಗಳೇ ಮುಖ್ಯವೆಂದರೆ ಆ ಷಟ್ಸ್ಥಲಗಳ ವಿಷಯದಲ್ಲೇಕೆ ಅವರು ಬೇಡವಾಗಿತ್ತು? ಹೀಗೆ ಪೂರ್ವಾಪರ ವಿಚಾರವಿಲ್ಲದೆ ವರ್ತಿಸುತ್ತಿರುವ ನಿಮ್ಮ ವರ್ತನವು ಅತ್ಯಂತ ಹೇಯವಲ್ಲವೆ?

" ಚನ್ನಬಸವನೇ ಷಟ್ಸ್ಥಲ ಸ್ಥಾಪಕನೆಂದು ಸಾಧಿಸುವುದು

ವೀರಶೈವ ಮತಸ್ಥಾಪನಾಚಾರ್ಯರು ಶ್ರೀ ಜಗದ್ಗುರು ಪಂಚಾಚಾರ್ಯರೇ ಎಂಬ ಬಗ್ಗೆ ಆಗಮ, ಪುರಾಣ, ಇತಿಹಾಸಾದಿಗಳು ಘಂಟಾಘೋಷವಾಗಿ ಸಾರುತ್ತವೆ. ಈ ಆಚಾರ್ಯರು ವೀರಶೈವ ಸಿದ್ಧಾಂತವನ್ನು ಸರ್ವತ್ರ ನೆಲೆಗೊಳಿಸಿರುವರು ಭಗವತ್ಪಾದರಿಂದ ಈ ಸಿದ್ಧಾಂತದಲ್ಲಿ ಷಟ್ಸ್ಥಲಗಳು ಬೋಧಿಸಲ್ಪಟ್ಟಿರುವುವು ಈ ಷಟ್ಸ್ಥಲಜ್ಞಾನವೇ ಮೋಕ್ಷಕ್ಕೆ ಮೂಲಭೂತವಾದುದು ಆದರೆ ಈಗಿನ ನವೀನ ವಿರಕ್ತರು ಚನ್ನಬಸವನೇ ಷಟ್ಸ್ಥಲಸ್ಥಾಪಕನೆಂಬ ಮೂಢಾಭಿಪ್ರಾಯವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಾರೆ ಈ ಸನ್ಯಾಸಿಗಳ ಅಭಿಪ್ರಾಯದಂತೆ ನೋಡಿದರೆ ಚನ್ನಬಸವನಿಗಿಂತಲೂ ಪೂರ್ವದಲ್ಲಿ ಷಟ್ಸ್ಥಲಗಳಿದ್ದಿಲ್ಲವೆಂದಂತಾಗುವದು ಶ್ರೀ ಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತನಾದ ಅಗಸ್ತ್ಯ ಮಹರ್ಷಿಗೆ ಷಟ್ಸ್ಥಲ ಸಿದ್ಧಾಂತವನ್ನುಪದೇಶಿಸಿ ಆ ಮುನಿಪುಂಗವನನ್ನು ಪುನೀತನನ್ನಾಗಿ ಮಾಡಿದರೆಂದು ಸಿದ್ಧಾಂತ ಶಿಖಾಮಣಿಯು ಘಂಟಾಘೋಷವಾಗಿ ಸಾರುತ್ತಿರುವುದಿಲ್ಲವೆ? ಇದಕ್ಕೇನು ಹೇಳುವಿರಿ? ಆ ಗ್ರಂಥದಲ್ಲಿ ೫ ರಿಂದ ೨೦ ರ ವರೆಗಿರುವ ೧೬ ಪರಿಚ್ಛೇದಗಳು ಷಟ್ಸ್ಥಲ ಸಿದ್ಧಾಂತವನ್ನೇ ಪ್ರತಿಪಾದಿಸುತ್ತಿರುವುವು ಸ್ವಲ್ಪ ಕಣ್ತೆರೆದು ನೋಡಿರಿ ಪೂರ್ವಾಪರ ಜ್ಞಾನವಿಲ್ಲದೆ ಕೂಪಮಂಡೂಕನ್ಯಾಯದಂತೆ ಬರೀ ವಚನಗಳನ್ನೇ ಓದಿಕೊಂಡು ದುರುಪದೇಶವನ್ನು ಮಾಡುವುದು ಯೋಗ್ಯವಲ್ಲ ಸಂಸ್ಕೃತಜ್ಞರಿಂದ ಸರ್ವಗ್ರಂಥಗಳನ್ನವಲೋಕಿಸಿರಿ ಆಂದರೆ ಮತದ ತಿರುಳು ತಿಳಿಯುವುದು "ಕೃಷ್ಣತಾಡನೇ ದಂತಭಂಗ" ಎನ್ನುವ ನ್ಯಾಯದಂತೆ ಷಟ್ಸ್ಥಲಗಳಿಗೂ ಚನ್ನಬಸವನಿಗೂ ಏನೂ ಸಂಬಂಧವಿಲ್ಲದಿದ್ದರೂ ಸಹ ಸಂಬಂಧವನ್ನು ಕಲ್ಪಿಸುವುದು ಅಯೋಗ್ಯವಾಗಿರುವುದು ಮತಸ್ಥಾಪನಾಚಾರ್ಯರೇ ಷಟ್ಸ್ಥಲಗಳನ್ನು ಸ್ಥಾಪಿಸಿದರೆಂಬುದು ಸಿದ್ಧಾಂತವು

" ಶಿಖೆಯಿರಕೂಡದೆಂದು ಸಾಧಿಸುವುದು '

ಇವರು ಶಿಖೆಯು ಇರಕೂಡದೆಂದು ಸಾಧಿಸುವರು ಶಿಖೆಯು ಕರ್ಮಕಾಂಡಕ್ಕೆ ಸಂಬಂಧಯುಕ್ತವಾದುದು ಇವರಿಗೆ ಕರ್ಮದ ಲಕ್ಷಣವೇ ಗೊತ್ತಿಲ್ಲವು. ಕರ್ಮಕಾಂಡವು ಸಕಾಮ, ನಿಷ್ಕಾಮ, ನಿತ್ಯ ನೈಮಿತ್ತಿಕ ಎಂದು ನಾಲ್ಕು ಭಾಗವಾಗಿರುವುದು ಫಲಾಪೇಕ್ಷೆಯಿಂದ ಯಜ್ಞಾದಿಗಳನ್ನು ಮಾಡುವುದೇ ಸಕಾಮವೆನಿಸುವದು ನಿಷ್ಕಾಮಬುದ್ಧಿಯಿಂದ ಪೂಜಿಸುವುದೇ ನಿಷ್ಕಾಮ ಕರ್ಮವೆನಿಸುವದು ಶಿವಪೂಜಾದಿ ಕರ್ಮವು ನಿತ್ಯಕರ್ಮವೆನಿಸುವುದು ಗರ್ಭಾಧಾನ ವಿವಾಹಾದಿ ಕಾರ್ಯಗಳನ್ನು ಮಾಡುವದೇ ನೈಮಿತ್ತಿಕ ಕರ್ಮವು ಕರ್ಮವಿಲ್ಲದೆ ಜ್ಞಾನವು ಉತ್ಪನ್ನವಾಗುವುದಿಲ್ಲ ಮೋಕ್ಷಕ್ಕೆ ಕರ್ಮಜ್ಞಾನಗಳೆರಡೂ ಬೇಕು

ಸಿದ್ಧಾಂತ ಶಿಖಾಮಣೌ

ಅಂಧಕಾರ ವದನ್ಯೋನ್ಯಸಾಪೇಕ್ಷೇ ಜ್ಞಾನಕರ್ಮಣೀ ।
ಫಲೋತ್ಪತ್ತೌ ವಿರಕ್ತಸ್ತು ತಸ್ಮಾತ್ತದ್ದ್ವಯಮಾಚರೇತ್ ॥

(ಕ್ರಿಯಾಗಮಸ್ಥಲ ೧೦)

ಕರ್ಮಸಹಿತನಾದ ಜ್ಞಾನವೇ ಮುಕ್ತಿಗೆ ಕಾರಣವಾಗಿರುವುದು ಆದುದರಿಂದ ಮುಕ್ತಿಗೆ ಕರ್ಮಜ್ಞಾನಗಳೆರಡೂ ಬೇಕು ಶಿಖೆಯಾದರೂ ಕೇವಲ ಕರ್ಮದ ಒಂದಂಗವಾಗಿದೆ ದೀಕ್ಷಾಸಂಸ್ಕಾರಾರ್ಹನಾದ ವೀರಶೈವದ್ವಿಜನಿಗೆ ಶಿಖೆಯು ಬೇಕೇ ಬೇಕು ಶಿಖೆಯಿಲ್ಲದಿದ್ದರ ದೀಕ್ಷೆಯು ಪೂರ್ಣವಾಗುವುದಿಲ್ಲ ಶಿಖೆಯಿಲ್ಲದಿದ್ದರೆ ಯಾವ ಕರ್ಮ ಮಾಡಿದರೂ ಫಲಿಸುವುದಿಲ್ಲ ವೈದಿಕರಿಗೆ ಶಿಖೆಯು ಇರಲಿಕ್ಕೇ ಬೇಕೆಂದು ಆಗಮೋಪನಿಷತ್ತುಗಳು ಸಾರುತ್ತವೆ

ವೀರಾಗಮೇ

ಶಿಖಾ ಸೂತ್ರಂ ಜಟಾ ಭಸ್ಮ ದಂಡಾಧಾರಾ ಕಮಂಡಲು ।
ಆಸನಂ ಧ್ಯಾನಭವನಮೇತು ಜಂಗಮಲಕ್ಷಣಂ ॥

(ಪಟಲ-೯)

ರುದ್ರಾಕ್ಷಜಾಬಾಲೋಪನಿಷದಿ

ತದಕ್ಷಮುತ್ತಮಂ ವಿದ್ಯಾತ್ತದ್ಧಾರ್ಯಂ ಶಿವಪೂಜಕೈಃ ।
ಶಿಖಾಯಾಮೇಕರುದ್ರಾಕ್ಷಂ ತ್ರಿಶತಂ ಶಿರಸಾ ವಹೇತ್ ॥

೧ ೭೫

ಇತ್ಯಾದ್ಯನೇಕ ಗ್ರಂಥಗಳು ವೀರಶೈವರು ಶಿಖೆಯನ್ನು ಧರಿಸಬೇಕೆಂದು ಪ್ರತಿಪಾದಿಸುತ್ತವೆ. ಹಾಗೂ ಜಗದ್ವಿಖ್ಯಾತರಾದ ನಿಜಗುಣಶಿವಯೋಗಿಗಳಾದರೂ ವಿವೇಕ ಚಿಂತಾಮಣಿ ಎಂಬ ಗ್ರಂಥದಲ್ಲಿ 'ಶಿಖೆಗೆ ಏಕಮುಖದ ಮಣಿಯೊಂದು' ಈ ಪ್ರಕಾರ ಶಿಖೆಗೆ ಒಂದು ಮುಖದ ಒಂದು ರುದ್ರಾಕ್ಷಿಯನ್ನು ಧರಿಸಬೇಕೆಂದು ಬೋಧಿಸಿರುವರು ಶಿಖೆಯನ್ನು ಧರಿಸಬೇಕೆಂಬ ವಿಷಯದಲ್ಲಿ ನೂರಾರು ಗ್ರಂಥಗಳನ್ನು ತೋರಿಸಬಹುದು. ಅಸ್ತು। "ನಿರಾಭಾರಿ ವೀರಶೈವೋ ಬಹಿಸ್ಸೂತ್ರಂ ಬಹಿಶ್ಶಿಖಾಂ ಚ ತ್ಯಕ್ತ್ವಾ ಲಿಂಗಂ ಧಾರಯೇತ್' ಎಂಬ ವೇದಾಂತಸಾರವೀರಶೈವಚಿಂತಾಮಣಿಯ ವಾಕ್ಯದಲ್ಲಿ ನಿರಾಭಾರಿ ವೀರಶೈವನು ಬಹಿಶ್ಶಿಖಾಸೂತ್ರಗಳನ್ನು ಬಿಟ್ಟು ಕೇವಲ ಲಿಂಗವನ್ನು ಮಾತ್ರ ಧರಿಸಬೇಕೆಂದು ಹೇಳಿದೆ ಇದರಿಂದ ನಿರಾಭಾರಿಯಾಗುವುದಕ್ಕಿಂತಲೂ ಪೂರ್ವದಲ್ಲಿ ಶಿಖಾಸೂತ್ರಗಳು ಇರಬೇಕೆಂದು ಸಿದ್ಧವಾಗುವುದಿಲ್ಲವೆ? ಈರೀತಿಯಾಗಿ ಅನೇಕ ಧರ್ಮಗ್ರಂಥಗಳು ವೀರಶೈವದ್ವಿಜರು ಶಿಖೆಯನ್ನು ಬಿಡಬೇಕೆಂದು ಹೇಳುತ್ತಿದ್ದರೂ ಸನ್ಯಾಸಿಗಳು ಇದಕ್ಕೆ ವಿರುದ್ಧವಾಗಿ ಆಚರಿಸುವರು ಆದರೆ ಇವರು ಶಿಖೆಯು ಬೇಡವೆಂದು ಹೇಳುವ ತಮ್ಮ ಸನ್ಯಾಸಪದ್ಧತಿಯನ್ನು ಸರ್ವರಿಗೂ ಬೋಧಿಸಿ ಅವರೆಲ್ಲರನ್ನೂ ಸನ್ಯಾಸಿಗಳನ್ನಾಗಿ ಮಾಡಬೇಕೆಂದಿರುವರೋ ಏನೋ ತಿಳಿಯದಾಗಿದೆ ಈ ಪ್ರಕಾರವಾಗಿ ಮಾಡುವ ಇವರ ದುರ್ಬೋಧೆಯು ಸರ್ವಥಾಯೋಗ್ಯವಲ್ಲ. ವೀರಶೈವದ್ವಿಜರೆಲ್ಲರೂ ಶಿಖೆಯನ್ನು ಧರಿಸಬೇಕೆಂಬುವೇ ಸಿದ್ಧಾಂತವು

ಮುತ್ತೈದೆಯು ಮಾಡುವ ಮಂಗಲಕಾರ್ಯದಲ್ಲಿ ವಿಧವೆಯು ಕೈಹಾಕಿದರೆ ಸಮಾಜದ ಜನರು ಒಪ್ಪುವರೋ? ಅದೇಪ್ರಕಾರ ಗುರುವಿನಿಂದಾಗತಕ್ಕ ಸರ್ವ ಮಂಗಲಕಾರ್ಯಗಳಲ್ಲಿ ಕರ್ಮಕ್ಕೆ ಬಾಧ್ಯಸ್ಥರಾಗದೆ ಇದ್ದ ಮುಂಡಿಗಳು ಕೈಹಾಕುತ್ತಿರುವುದರಿಂದಲೇ ಗೊಂದಲವೆದ್ದು ಸಮಾಜವು ಹೀನಸ್ಥಿತಿಗೆ ಕಾರಣವಾಗಿದೆ ಇರಲಿ, ವಿರಕ್ತರಿಗೆ ಪಲ್ಲಕ್ಕಿಯಲ್ಲಿ ಮೆರೆಯುವ ಹಕ್ಕೂ ಸಹ ಇರುವುದಿಲ್ಲ

ಪಾರಮೇಶತಂತ್ರೇ

ಸಾಂದೋಲಿಕಾಂ ಸಮಾರೋಹೇದಶ್ವಾರೋಹಣವರ್ಜಿತಃ ।
ಪಾದಚಾರೀ ಚ ಸಂಭೂಯ ಚರೇದ್ವಿಮಲಯೋ ಸದಾ ॥

ಸನ್ಯಾಸೋಪನಿಷದಿ

ಯಾನಾನಾರೋಹಣಂ ಯತಿಂ ದೃಷ್ಟ್ವಾ ಸಚೇಲಂ ಸ್ನಾನಮಾಚರೇತ್ ।

ಇತ್ಯಾದಿ ಪ್ರಮಾಣಗಳು ವಿರಕ್ತನು ಪಲ್ಲಕ್ಕಿ, ಅಶ್ವ ಮೊದಲಾದ ವಾಹನಗಳನ್ನು ಹತ್ತಬಾರದೆಂದೂ, ಒಂದುವೇಳೆ ಹತ್ತಿರುವ ಸನ್ಯಾಸಿಯನ್ನು ನೋಡಿದ್ದಾದರೆ ಬಟ್ಟೆಸಹಿತವಾಗಿ ಸ್ನಾನ ಮಾಡಬೇಕೆಂದೂ ಡಂಗುರದಂತೆ ಸಾರುತ್ತವೆ ಇವರು ಧರ್ಮಶಾಸ್ತ್ರ ವಿರುದ್ಧವಾಗಿ ಆಚರಿಸುವದರಿಂದ ಇವರೇ ಸಮಾಜದ ಪಕ್ಷ ಪಂಗಡಕ್ಕೆ ಕಾರಣರಾಗಿರುವರು ಇದನ್ನು ತಿಳಿಯದೆ ಕೆಲವು ಜನರು ಸನ್ಯಾಸಿಗಳ ಬಡಿವಾರದ ಮಾತಿಗೆ ಬಲೆಬಿದ್ದು ವಂಶೋದ್ಧಾರಕನಾದ ಗುರವಿನ ಕಾರ್ಯಕ್ಕೆ ವಿಘ್ನವನ್ನೊಡ್ಡುತ್ತಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ ಕೆಲವರು ಒಂದು ಪಕ್ಷವನ್ನು ಗಟ್ಟಿಯಾಗಿ ಹಿಡಿದುಕೊಂಡು ನಾವು ಯಾವ ಪಕ್ಷವನ್ನೂ ಸೇರಿದವರಲ್ಲ, ಗುರುವಿರಕ್ತರ ಕಲಹದಿಂದ ಸಮಾಜವು ಬಹು ಹೀನಸ್ಥಿತಿಯಲ್ಲಿದೆ ಕಾಶಿಯಿಂದ ಪಂಡಿತರನ್ನು ಕರೆಯಿಸಿ ವಾದಮಾಡಿಸಬೇಕೆಂದು ಹೇಳುತ್ತಿರುವರು ಬರೀ ಬಾಯಿಯಿಂದ ಮಾತನಾಡಿದರೆ ಪ್ರಯೋಜನವಿಲ್ಲ ಒಂದುಸಾರಿ ಸಮಸ್ತವೀರಶೈವರನ್ನೂ ಕೂಡಿಸಿ ಸರ್ವರಿಗೂ ಸಮ್ಮತರಾದ ಪಂಡಿತರ ಮುಂದೆ ಶಾಸ್ತ್ರರೀತ್ಯಾ ವಾದುವು ಜರುಗಲಿ, ಆಗ ನಿಮ್ಮ ಪ್ರೇಮದ ಸನ್ಯಾಸಿಗಳ ಗುಟ್ಟು ರಟ್ಟಾಗುವುದು. ಅಲ್ಲದೆ ಸನ್ಯಾಸಿಗಳ ವಂಚಕತನವು ಸಮಾಜಕ್ಕೆ ಬಹಿರಂಗವಾಗಿ ಕಂಡುಬರುವುದು.

ವಿರಕ್ತಮಹಾಶಯರೇ, ನಿಮ್ಮ ಆಶ್ರಮಧರ್ಮಗಳ ತತ್ವವು ವಚನದಲ್ಲಿಲ್ಲ ಆಗಮೋಪನಿಷತ್ತುಗಳಲ್ಲಿದೆ ಕಣ್ತೆರೆದು ನೋಡಿರಿ ಆಂದರೆ ತಿಳಿಯುವುದು. ಇಂಥ ನಿಮ್ಮ ಅಸಾಧುವರ್ತನವನ್ನು ಜಗದಾಚಾರ್ಯರ ಅಪರಾವತಾರಿಗಳೆಂದು ಜಗದ್ವಿಖ್ಯಾತರಾದ ವೀರಶೈವ ಮತೋದ್ಧಾರಕರೆಂದು ಹೊಗಳಿಸಿಕೊಳ್ಳುವ ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಖಂಡಿಸಿ ವೇದೋಪನಿಷದಾಗಮಪರಮಪ್ರಮಾಣೀಭೂತವಾದ ವೀರಶೈವಮತ ಸಿದ್ಧಾಂತವನ್ನು ಪ್ರತಿಪಾದಿಸತಕ್ಕ ಅನೇಕ ಅಪೂರ್ವ ಗ್ರಂಥಗಳನ್ನು ಜಗದಾಚಾರ್ಯರ ಆಶೀರ್ವಾದಬಲದಿಂದ ಜಗನ್ಮಧ್ಯದಲ್ಲಿ ಪ್ರಸಿದ್ಧಪಡಿಸುತ್ತಿರುವರು ಆ ಮಹಾತ್ಮನು ಮಾಡಿದ ಉಪಕಾರಕ್ಕೆ ಇಡೀ ವೀರಶೈವಸಮಾಜವೇ ಚಿರಋಣಿಯಾಗಿದೆ ಬರೀ ವಚನವನ್ನೇ ಓದಿಕೊಂಡು ಭ್ರಮಿಗಳಾಗಬೇಡಿರಿ ಶಿವಾಗಮಗಳನ್ನೋದಿ ನಿಮ್ಮ ಆಶ್ರಮಧರ್ಮಗಳನ್ನು ತಿಳಿದುಕೊಳ್ಳಿರಿ ನಿಮ್ಮ ಪೂರ್ವಜರಂತೆ ನೀವೂ ಗುರುಸೇವೆಯಲ್ಲಿ ತತ್ಪರರಾಗಿ ಅದರಿಂದಲೇ ಆಶ್ರಮವನ್ನು ಸ್ವೀಕರಿಸಿ ಧರ್ಮಮಾರ್ಗದಂತೆ ನಡೆಯಿರಿ ಆಂದರೆ ನಿಮಗೆ ಸುಖವಾಗುವದು ಶ್ರೀಜಗದ್ಗುರು ಪಂಚಾಚಾರ್ಯರು ಇನ್ನು ಮುಂದೆಯಾದರೂ ನಿಮಗೆ ಸದ್ಬುದ್ಧಿಯನ್ನು ದಯಪಾಲಿಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇನೆ

ಬಂಗಾಳದಲ್ಲಿ ಆಹಾರ ಸಮಸ್ಯೆಯು ಬಹಳ ಕಷ್ಟಕರವಾಗಿದೆ.

ಕಲಿಕತ್ತಾ ಪರಿಹಾರ ಸಮಿತಿಯವರು ಆರಂಭಿಸಿದ ಮೊದಲನೆಯ ಉಪಹಾರ ಗೃಹವನ್ನು ವಾಣಿಜ್ಯ ಸಚಿವರಾದ ಶ್ರೀನಳಿನೀರಂಜನ ಸರ್ಕಾರ್‌ರವರು ಆರಂಭಿಸುತ್ತ

"ಬಂಗಾಳದಲ್ಲಿ ಆಹಾರ ಸಮಸ್ಯೆ ಬಹಳ ಕ್ರೂರವಾಗಿದೆ ಸಂಗ್ರಾಮದ ಪರಿಸ್ಥಿತಿಯಿಂದ ಅನೇಕ ಮಧ್ಯತರಗತಿಯ ಜನರು ತಮ್ಮ ಸಂಸಾರಗಳನ್ನು ಗ್ರಾಮಾಂತರಗಳಿಗೆ ಸಾಗಿಸಿದ್ದಾರೆ. ಸೇವಕರ ಸಹಾಯದಿಂದ ಮನೆ ಮಠಗಳನ್ನು ನೋಡಿಕೊಂಡಿದ್ದಾರೆ ಇತ್ತೀಚೆಗೆ ಜಪಾನರು ಕಲಿಕತ್ತೆಯ ಮೇಲೆ ಬಾಂಬು ಹಾಕಿದ್ದರಿಂದ ಸೇವಕರೂ ಸಹ ಅಲ್ಲಿಂದ ಹೊರಡಲಾರಂಭಿಸಿದ್ದಾರೆ ಮಧ್ಯತರಗತಿಯ ಜನರೆಲ್ಲರೂ ಕಂಗೆಟ್ಟಿದ್ದಾರೆ. ಕೆಲಸಗಾರರಿಗೆ ಕಾರ್ಖಾನೆಗಳವರೇ ಸಾಮಾನುಗಳನ್ನು ಕೊಡುತ್ತಿದ್ದಾರೆ ಧನಿಕರಂತೂ ಬೇಕಾದಷ್ಟು ಸಾಮಾನನ್ನು ಸಂಗ್ರಹಿಸಿದ್ದಾರೆ ಈಗ ಇರುವ ಕಷ್ಟವೆಲ್ಲವೂ ಮಧ್ಯತರಗತಿಯ ಜನರಿಗೇ ಇದೆ ಧಾನ್ಯಗಳ ಪರಿಸ್ಥಿತಿಯು ಹೀಗೆಯೇ ಇರುವ ಪಕ್ಷದಲ್ಲಿ ೧೯೪೩ ನೇ ಮಾರ್ಚಿಯ ನಂತರ ದೇಶದಿಂದ ಧಾನ್ಯವನ್ನು ಹೊರಕ್ಕೆ ರಫ್ತು ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸಬೇಕಾಗುತ್ತದೆ ಈಗ ಭರತಖಂಡವು ಮಧ್ಯಪೂರ್ವ ಮತ್ತು ಸಿಲೋನಿಗೆ ಮಾತ್ರ ಅಕ್ಕಿಯನ್ನು ಕಳುಹಿಸುತ್ತಿದೆ ಹಿಂದೆ ಸಿಲೋನಿಗೆ ೩೮೦೦೦ ಟನ್ ಅಕ್ಕಿ ಕಳಿಸಲಾಗುತ್ತಿತ್ತು ಈಗ ಅದನ್ನು ೧೨೦೦೦ ಟನ್ನಿಗೆ ಇಳಿಸಲಾಗಿದೆ. ಕೈಪ್ಪಿಗಳಲ್ಲಿ ಆಹಾರ ವಸ್ತುಗಳನ್ನು ಮೊದಲು ಕಳುಹಿಸಿಕೊಡಲು ಅವಕಾಶ ಮಾಡಿಕೊಡಬಾಗುವುದು" ಎಂದು ನುಡಿದರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ! ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ! ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ

ಪರಸ್ಥಳದವರಿಗೆ ೨ ರೂ. ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೮ನೇ ಜನವರಿ ೧೯೪೩ [ಸಂಚಿಕೆ ೪೦

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಮತಿ ಸಿದ್ದವ್ವಬಾಯಿ ಘೋಬಡೆ

ಇವರ ಉದಾರಬುದ್ಧಿ, ಸೊಲ್ಲಾಪುರ

ವಿದ್ಯೆಯು ಎಲ್ಲಕ್ಕೂ ಶ್ರೇಷ್ಠವಾದುದು. ವಿದ್ಯೆಯಿಂದ ರಾಷ್ಟ್ರವಾಗಲಿ, ಸಮಾಜವಾಗಲಿ ಉನ್ನತ ಸ್ಥಿತಿಗೆ ಬರುತ್ತದೆ. ವಿದ್ಯೆಯು ಇಹಪರ ಸುಖಕ್ಕೆ ಸಾಧನವಾಗಿದೆ ಇದಕ್ಕೆ ಚೋರರ ಭಯವಿಲ್ಲ. ಧನದಂತೆ ಸಹೋದರ ಮೊದಲಾದವರಿಂದ ಅಪಹರಿಸಲು ಶಕ್ಯವಿಲ್ಲ. ಹೂಳಿಟ್ಟ ಧನದಂತೆ ಮನುಷ್ಯನಲ್ಲಿರುತ್ತದೆ ವಿದ್ಯೆಯು ಜನ್ಮವಿರುವವರೆಗೂ ಅವನ ಸಂಗಡವೇ ಇರುತ್ತದೆ. ಇದರಿಂದ ಮನುಷ್ಯನಲ್ಲಿ ಸತ್ಯ, ಮಿಥ್ಯಾ, ಶುಭ, ಅಶುಭ, ನೀತಿ, ಅನೀತಿ ಇವುಗಳ ವಿಚಾರವು ಉತ್ಪನ್ನವಾಗುತ್ತದೆ ವಿದ್ಯೆಯು ಧರ್ಮವಿದ್ಯೆ ಲೌಕಿಕವಿದ್ಯೆಯೆಂದು ಎರಡು ಪ್ರಕಾರವಾಗಿರುವದು. ಇವುಗಳಲ್ಲಿ ಧರ್ಮವಿದ್ಯೆಯೇ ಶ್ರೇಷ್ಠವಾದುದು. ಲೌಕಿಕವಿದ್ಯೆಯಿಂದ ಐಹಿಕ ಸುಖವು ದೊರೆಯುವುದು. ಆದರೆ ಧಾರ್ಮಿಕವಿದ್ಯೆಯಿಂದ ಐಹಿಕಾಮುಷ್ಮಿಕ ಸುಖಗಳೆರಡೂ ದೊರೆಯುತ್ತವೆ. ಧಾರ್ಮಿಕ ವಿದ್ಯೆಯೇ ನಿತ್ಯಸುಖಕ್ಕೆ ಸಾಧನವಾಗಿದೆ. ವೀರಶೈವ ಗುರುಮೂರ್ತಿಗಳಿಗೆ ಧಾರ್ಮಿಕ ವಿದ್ಯೆಯು ಅತ್ಯಾವಶ್ಯಕವಾಗಿದೆ. ಧಾರ್ಮಿಕವಿದ್ಯೆಯೇ ಇವರಿಗೆ ಜೀವಾಳ. ಧರ್ಮಾಧಿಕಾರಿಗಳಾದ ಮಠಾಧಿಕಾರಿಗಳು ತಮ್ಮ ಧರ್ಮಾಧಿಕಾರವನ್ನು ಶಿಷ್ಯರಲ್ಲಿ ಉಪಯೋಗಿಸಬೇಕಾದರೆ ಮೊದಲು ತಾವು ಧರ್ಮ ಸ್ವರೂಪವನ್ನು ಚೆನ್ನಾಗಿ ಅರಿತಿರಬೇಕು. ಪಶುಗಳಂತೆ ಐಹಿಕ ವಿಷಯೋಪಭೋಗದಲ್ಲಿಯೇ ಆಸಕ್ತರಾಗಿದ್ದಾದರೆ, ಇಂತಹ ಗುರುಗಳಿಂದ ಶಿಷ್ಯರ ಸುಧಾರಣೆಯು ಆಗುವ ಬಗೆ ಹೇಗೆ ? ಭಕ್ತರಿಗೆ ನೀತಿಮಾರ್ಗವನ್ನೂ, ಮುಕ್ತಿಮಾರ್ಗವನ್ನೂ, ದೇವರ ಉಪಾಸನಾಕ್ರಮವನ್ನೂ ಬೋಧಿಸುತ್ತ ಬಂದರೆ ತಮ್ಮ ಜನ್ಮವನ್ನು ಸಾರ್ಥಕಪಡಿಸಿಕೊಂಡಂತಾಗುವುದು. ಅದರಿಂದ ಗುರುವರ್ಗದವರು ಭಕ್ತೋದ್ಧಾರವೇ ತಮ್ಮ ಮುಖ್ಯಧ್ಯೇಯವೆಂದು ಭಾವಿಸಿ ಧಾರ್ಮಿಕವಿದ್ಯೆಯನ್ನು ಕಲಿಯಬೇಕು. ಎಲ್ಲಾ ವಿದ್ಯೆಗಳಿಗೂ ಸಂಸ್ಕೃತ ವಿದ್ಯೆಯು ಮಾತೃಸ್ಥಾನವಾಗಿರುವದು. ಮತ ತತ್ವಗಳೆಲ್ಲವೂ ಈ ದೇವಭಾಷೆಯಲ್ಲಿಯೇ ಇರುತ್ತವೆ. ಮತ ತತ್ವವನ್ನು ಮಾಹೇಶ್ವರರು ಅವಶ್ಯಕವಾಗಿ ತಿಳಿದುಕೊಳ್ಳಲಿಕ್ಕೇಬೇಕು. ಇಲ್ಲದಿದ್ದರೆ ಶಿಷ್ಯರಿಗೆ ಮತದ ತತ್ವವನ್ನು ಅರುಹಲು ಶಕ್ತರಾಗುವುದಿಲ್ಲ. ಸದ್ಯಃ ವೀರಶೈವಮತದಲ್ಲಿ ಗುರುಗಳ ಸಂಖ್ಯೆಯೇನೋ ಬಹಳವಾಗಿದ್ದರೂ ಇವರು ಸಂಸ್ಕೃತ ವಿದ್ಯೆಯಲ್ಲಿ ಬಹಳ ಹಿಂದುಳಿದಿರುವುದರಿಂದ ಭಕ್ತೋದ್ಧಾರಾದಿಕಾರ್ಯಗಳೆಲ್ಲವೂ ಕೇವಲ ನಾಟಕರೂಪವಾಗಿ ಪರಿಣಮಿಸಿವೆ. ಗುರುವಂಶದಲ್ಲಿ ಹುಟ್ಟಿದ ಅನೇಕರು ಧರ್ಮಪ್ರಚಾರಕ್ಕೆ ಮುಖ್ಯವಾದ ಸಂಸ್ಕೃತ ವಿದ್ಯೆಗೆ ತಿಲಾಂಜಲಿಯನ್ನಿತ್ತು ಲೌಕಿಕ ವ್ಯವಹಾರಗಳಲ್ಲಿಯೇ ಮಗ್ನರಾಗಿರುವುದನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ. ಸಂಸ್ಕೃತವು ಧರ್ಮಕ್ಕೆ ತಳಹದಿಯಾದುದರಿಂದಲೇ ಪೂರ್ವದಲ್ಲಿ ರಾಜಾಧಿರಾಜರೂ, ಗುರುಗಳೂ ಯೋಗಿಗಳೂ, ಸ್ತ್ರೀಯರು ಮೊದಲುಮಾಡಿಕೊಂಡು ಸರ್ವರೂ ಈ ವಿದ್ಯೆಗೆ ಅತ್ಯಂತ ಮನ್ನಣೆಯನ್ನು ಕೊಡುತ್ತಿದ್ದರು. ವೇದಶಾಸ್ತ್ರಪುರಾಣಾದಿಗಳೆಲ್ಲವೂ ಸಂಸ್ಕೃತಮಯವಾಗಿರುವುದರಿಂದ ಪೂರ್ವಕಾಲದಲ್ಲಿ ಅವುಗಳ ತತ್ವವನ್ನರಿತ ಗುರುಗಳು ಶಿಷ್ಯರನ್ನು ಧರ್ಮಮಾರ್ಗದಲ್ಲಿ ಪ್ರವೃತ್ತಿಗೊಳಿಸುತ್ತಿದ್ದರಿಂದ ಅವರು ಪರಿಪಕ್ವಾಂತಃಕರಣರಾಗಿ ಧರ್ಮಮಾರ್ಗವನ್ನು ಬಿಟ್ಟು ಚಲಿಸುತ್ತಿರಲಿಲ್ಲ. ಆದರೆ ನೂತನ ವಾತಾವರಣದಿಂದ ಗುರುವರ್ಗದಲ್ಲಿ ಸಂಸ್ಕೃತ ವಿದ್ಯಾಸಂಸ್ಕೃತಿಯು ಲೋಪಹೊಂದುತ್ತ ಬಂದಿರುವುದರಿಂದಲೂ ಅಧರ್ಮಪ್ರವರ್ತಕರ ಆಚರಣೆಯು ಹೆಚ್ಚಾದುದರಿಂದಲೂ, ಕಲಿಮಹಿಮೆಯಿಂದ ಗುರುಗಳು ಅವಿದ್ಯಾವಂತರಾಗಿರುವುದರಿಂದಲೂ ಶಿಷ್ಯವರ್ಗವು ಹ್ರಾಸವಾಗಲಿಕ್ಕೆ ಹತ್ತಿದೆ. ಮಾಹೇಶ್ವರ ವಟುಗಳು ವೇದಾಧ್ಯಯನದಲ್ಲಿ ಪ್ರವೀಣರಾಗಿ ಮತಪ್ರಚಾರದಲ್ಲಿ ಉದ್ಯುಕ್ತರಾಗಲೆಂದೂ, ಶಿಷ್ಯೋದ್ಧಾರಕ್ಕೆ ಗುರುವರ್ಗವೇ ಮೂಲಕಾರಣವೆಂದೂ, ಮತೋನ್ನತಿಯ ಮಹತ್ಕಾರ್ಯದಲ್ಲಿ ಸದಾ ಶ್ರಮಪಡುತ್ತಿರುವ ಹೋಟಗಿ ಬೃಹನ್ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚನ್ನವೀರಶಿವಾಚಾರ್ಯ ಸ್ವಾಮಿಗಳವರು ಗುರುವರ್ಗದ ಜಾಗೃತಿಯ ಸಲುವಾಗಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಬೇಕೆಂದು ಬಹುಕಾಲದಿಂದ ಚಿಂತಿಸುತ್ತಿದ್ದರು. ಆಚಾರ್ಯರ ಕೃಪಾವಿಶೇಷದಿಂದ ಶ್ರೀಗಳವರ ಸಂಕಲ್ಪವು ಈಗ ಫಲಹೊಂದಿದೆ.

ಸೊಲ್ಲಾಪುರದ ಭಕ್ತ ಮಂಡಳಿಯವರು ಶಿವಪೂಜಾನುಷ್ಠಾನಾದಿಗಳಿಗೂ, ಶಿಷ್ಯೋದ್ಧಾರದ ಸಲುವಾಗಿಯೂ, ಧರ್ಮ ರಕ್ಷಣೆಗಾಗಿಯೂ, ಹೋಟಗಿ ಶ್ರೀ ವೀರತಪಸ್ವಿಗಳಿಗೆ ನೂತನವಾಗಿ ಕಟ್ಟಿಸಿಕೊಡುತ್ತಿರುವ ಮಠದಲ್ಲಿಯೇ ವೇದಾಧ್ಯಯನ ಕಾರ್ಯವು ಸಾಂಗವಾಗಿ ಜರುಗಲೆಂಬ ಸದುದ್ದೇಶದಿಂದ ಇಲ್ಲಿಯ ಪ್ರಸಿದ್ಧ ಶ್ರೀಮಂತರೂ, ಗುರುಭಕ್ತಾಗ್ರೇಸರರೂ ಆದ ಧರ್ಮರಾವ ಘೋಬಡೆಯವರ ಧರ್ಮಪತ್ನಿಯವರಾದ ಶ್ರೀಮತೀ ಸಿದ್ದವ್ವಬಾಯಿಯವರು ಗುರುವರ್ಗದ ವಟುಗಳ ಸಲುವಾಗಿ ಸಂಸ್ಕೃತ ಪಾಠಶಾಲೆಯನ್ನು ಸ್ಥಾಪಿಸಲು ಶ್ರೀಗಳಲ್ಲಿ ಅರಿಕೆಮಾಡಿಕೊಂಡದ್ದಲ್ಲದೆ ಪ್ರತಿ ತಿಂಗಳು ಪಾಠಶಾಲೆಯ ಖರ್ಚಿನ ಸಲುವಾಗಿ ೫೦ ರೂಪಾಯಿಗಳಂತೆ ಕೊಡಲು ಪರಮ ಸಂತೋಷದಿಂದ ವಾಗ್ದಾನ ಮಾಡಿರುವುದನ್ನು ಕೇಳಿದರೆ ಯಾರಿಗೆತಾನೇ ಆನಂದವಾಗಲಿಕ್ಕಿಲ್ಲ ? ಇವರ ವಾಗ್ದಾನವು ಅತ್ಯಂತ ಸ್ತುತ್ಯವಾಗಿದೆ ಈ ಪಾಠಶಾಲೆಗೆ ಯಾವ ಹೆಸರನ್ನಿಡಬೇಕೆಂದು ವಿಚಾರವು ಉತ್ಪನ್ನವಾಯಿತು "ಲೋಕೋ ಭಿನ್ನರುಚಿಃ" ಎನ್ನುವಂತೆ ಜನರು ತಮ್ಮ ತಮ್ಮ ಅಭಿಪ್ರಾಯವನ್ನು ತಿಳಿಸಿದರು ಕೆಲವರು ಧನಸಹಾಯ ಮಾಡುವವರ ಹೆಸರೇ ಇರಬೇಕೆಂದು ಅಪೇಕ್ಷಿಸಿದರು ಆದರೆ ಸಹಾಯ ಮಾಡುವವರ ಅಭಿಪ್ರಾಯವು ಹಾಗಿರುವದಿಲ್ಲ ಈ ಪಾಠಶಾಲೆಯು ಚಿರಕಾಲ ಬಾಳಬೇಕೆಂದೂ, ತಮ್ಮ ಹೆಸರಿನಿಂದ ನಡೆಯುತ್ತ ಹೋದರೆ ಮುಂದೆ ತೊಂದರೆ ಒಂದೀತೆಂದೂ ಮಾತೃಶ್ರೀಯವರು ದೂರಾಲೋಚನೆಯನ್ನು ಮಾಡಿ ತಮ್ಮ ಹೆಸರನ್ನಿಡಲು ನಿರಾಕರಿಸಿದರು ಕೊನೆಗೆ ಹೋಟಗಿ ಶ್ರೀಗಳವರೇ ಸರ್ವ ಜನರಿಗೂ ಅನುಕೂಲವಾಗುವಂತೆ " **ವೀರಶೈವ ಗುರುಕುಲ** " ಎಂಬ ನಾಮದಿಂದ ಮಾಘ ಶು॥ ೭ ಗುರುವಾರ (ರಥಸಪ್ತಮಿ) ದಿವಸ ಸ್ಥಾಪಿಸಬೇಕೆಂದು ನಿರ್ಧರಿಸಿರುವರು ಈ ಪ್ರಕಾರ ಸಂಸ್ಕೃತಕ್ಕೆ ಮನ್ನಣೆಯನ್ನೀಯುವ ಮಾತೃಶ್ರೀಯವರ ಉದಾರ ಮನಸ್ಸನ್ನು ಎಷ್ಟು ಹೊಗಳಿದರೂ ಸ್ವಲ್ಪವೇ ಸರಿ ! ಶ್ರೀಮಂತರಲ್ಲಿ ಸದ್ಬುದ್ಧಿಯು ಹುಟ್ಟಬೇಕಾದರೆ ಸದ್ಗುರು ಕೃಪೆಯೂ, ಪೂರ್ವಕೃತ ಪುಣ್ಯವೂ ಮುಖ್ಯವಾಗಿರಬೇಕು. ಶ್ರೀಮಂತ ಘೋಬಡೆಯವರ ಮನೆತನದಲ್ಲಿ ವಂಶಪರಂಪರೆಯಿಂದಲೂ ಪುಣ್ಯಪ್ರವಾಹವು ಪ್ರವಹಿಸುತ್ತಿರುವುದರಿಂದ ರಾಜವಾಡೆಯಂತಿರುವ ಇವರ ಭವ್ಯ ಗೃಹದಲ್ಲಿ ಸಾಕ್ಷಾತ್ಪರಶಿವಸ್ವರೂಪಿಗಳಾದ ಉಜ್ಜಯಿನೀ ಶ್ರೀ ೧೦೮ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರೂ, ರಂಭಾಪುರೀ ಶ್ರೀ ೧೦೮ ಜಗದ್ಗುರು ಶಿವಾನಂದರಾಜೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರೂ ಅತ್ಯಾನಂದದಿಂದ ಶಿವಪೂಜಾನುಷ್ಠಾನವನ್ನು ಜರುಗಿಸಿದರು. ಈ ಉಭಯ ಜಗದ್ಗುರುಗಳ ಸೇವೆಯಿಂದ ಪುನೀತರಾದ ಇವರ ಸುಕೃತಕ್ಕೆ ಎಣೆಯೇ ಇಲ್ಲವೆಂದು ಸಾರಿ ಸಾರಿ ಹೇಳಬಹುದಾಗಿದೆ. ಶ್ರೀಮತಿ ಮಾತೃಶ್ರೀ ಸಿದ್ದವ್ವಬಾಯಿಯವರೂ ಮತ್ತು ಇವರ ತಾಯಿಯವರಾದ ಶ್ರೀಮತಿ ಶಿವಗಂಗವ್ವಬಾಯಿಯವರೂ ಯಾವಾಗಲೂ ಹರಗುರು ಸೇವೆಯಲ್ಲಿಯೇ ಕಾಲಕಳೆಯುತ್ತಿರುವರು. ಇವರು ಆಚಾರವಂತರೂ, ಭಕ್ತಿವಂತರೂ, ಧರ್ಮಾಭಿಮಾನಿಗಳೂ, ವಿದ್ಯಾಪ್ರೇಮಿಗಳೂ ಆಗಿರುವರು. ಗುರುಗಳ ಕೃಪಾದೃಷ್ಟಿಯು ನಮ್ಮ ಮೇಲೆ ಬಿದ್ದಹೊರತು ನಾವು ನಿತ್ಯಸುಖಿಗಳಾಗಲಾರೆವೆಂದು ತಿಳಿದೇ ಗುರುಸೇವೆಯಲ್ಲಿ ನಿರತರಾಗಿರುವರು. ಇವರಲ್ಲಿರುವ ಗುರುಭಕ್ತಿಯು ಅವರ್ಣನೀಯವಾಗಿರುವುದು. ಈಗ ಈ ತಾಯಿಯವರು ಗುರುವರ್ಗಕ್ಕೆ ಜೀವದಾನ ಮಾಡಿರುವರು. ತಂದೆಗಿಂ

[ಕಡೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೩ನೇ ಜನವರಿ ತಾ॥ ೧೮ನೆಯ ಸೋಮವಾರ

ವೀರಶೈವಮತಾಚಾರ್ಯರ ಅವತಾರ.

ವೀರಶೈವಮತಾಚಾರ್ಯರಾದ ಶ್ರೀಜಗದ್ಗುರು ರೇಣುಕ [illegible] ಪ್ರತಿಯೊಂದು ಯುಗದಲ್ಲಿಯೂ ಶಿವಲಿಂಗಮುಖದಿಂದ ಅವತರಿಸಿದರೆಂಬ ವಿಷಯವನ್ನು ಸಮಸ್ತಶಿವಾಗಮಗಳೂ ಪ್ರಾಚೀನವಾದ ಗ್ರಂಥಗಳೂ ಮುಕ್ತಕಂಠದಿಂದ ಸಾರುತ್ತಿರುವವು. ಆದರೆ ಈ ವಿಷಯವನ್ನು ಬಸವಸಂಬಂಧಿಗಳಲ್ಲಿರುವ ಕೆಲವು ನಾಸ್ತಿಕರು ಒಪ್ಪದೆ ಇದು ಸುಳ್ಳೆಂದು ವ್ಯರ್ಥವಾಗಿ ಕೂಗಾಡುತ್ತಿರುವರು. ಈ ಅಲ್ಪಜ್ಞರು ತಮ್ಮ ಉತ್ಪತ್ತಿಯಂತೆಯೇ ಪ್ರಮಥಪುಂಗವರ ಉತ್ಪತ್ತಿಯೂ ಸಹ ಇರಬಹುದೆಂದು ಭಾವಿಸಿರುವರು. ಈ ವಿಧವಾದ ಕಲ್ಮಷಬುದ್ಧಿಯ ಮಹಾಶಯರು ದೇವರಿದ್ದಾನೆಂಬ ವಿಷಯವನ್ನಾದರೂ ಹೇಗೆ ನಂಬುವರೋ ತಿಳಿಯದಾಗಿದೆ.

"ಮನುಷ್ಯರಾದವರು ಕಲ್ಲಿನಲ್ಲಿ ಎಲ್ಲಿಯಾದರೂ ಹುಟ್ಟುವುದುಂಟೇ? ಕಲ್ಲಿನಲ್ಲಿ ಹುಟ್ಟಿದ ಮಾತ್ರಕ್ಕೆ ಮಹತ್ತ್ವ ಬರುವದೇ?" ಎಂದು ಈ ನಾಸ್ತಿಕರು ಮನಸ್ಸಿಗೆ ಬಂದಂತೆ ಪ್ರಲಪಿಸುತ್ತಿರುವರು. ನಾಸ್ತಿಕಮಹಾಶಯರೇ, ಶ್ರೀರೇಣುಕಾದ್ಯಾಚಾರ್ಯರು ಕಲ್ಲಿನಲ್ಲಿ ಹುಟ್ಟಿದರೆಂದೂ ಇವರು ಮಾನವರೆಂದೂ ಯಾವ ಗ್ರಂಥಗಳೂ ಹೇಳುವುದಿಲ್ಲ. ಈ ಪ್ರಮಥಪುಂಗವರು ಶಿವಲಿಂಗಮುಖದಿಂದ ಅವತರಿಸಿದರೆಂದೂ, ತೇಜೋಮಯಶರೀರಿಗಳೆಂದೂ ಶಿವಾಗಮಗಳೂ, ಸಿದ್ಧಾಂತಶಿಖಾಮಣ್ಯಾದಿಪ್ರಾಚೀನಮತಗ್ರಂಥಗಳೂ ಮುಕ್ತಕಂಠದಿಂದ ಸಾರುತ್ತಿರುವವು. ಈ ವಿಷಯವು ನಿಮ್ಮ ಮಂದಬುದ್ಧಿಗೆ ತೋರದಿರುವುದು ಆಶ್ಚರ್ಯವಲ್ಲ. ನಾಸ್ತಿಕಮಹಾಶಯರೇ, ಆಚಾರ್ಯರು ಅವತರಿಸಿದ ಜ್ಯೋತಿರ್ಲಿಂಗಗಳು ಕಲ್ಲಾದರೆ ನಿಮ್ಮ ಕೊರಳಲ್ಲಿ ಧರಿಸಿಕೊಂಡಿರುವ ಲಿಂಗವೂ ಸಹ ಕಲ್ಲಾಗುವುದಿಲ್ಲವೇ? ಆ ಕಲ್ಲನ್ನು ಪೂಜಿಸಿದರೆ ಏನು ಪ್ರಯೋಜನ? ಆ ಕಲ್ಲನ್ನು ಕಲ್ಲಿನಲ್ಲಿ ಚಲ್ಲಿಡುವುದು ಉತ್ತಮವಲ್ಲವೇ? ಅಸ್ತು.

ಸ್ವಯಂಭುವಾಗಮದಲ್ಲಿ—

ದಾಕ್ಷಾರಾಮೇ ಭೀಮನಾಥಲಿಂಗೇ [illegible] |
ಏಕೋರಾಮಸ್ಯ ಜನನಂ [illegible] |

[illegible] ಶ್ರೀಶೈಲಕ್ಷೇತ್ರೇ [illegible] |
ಜನನಂ ಪಂಡಿತಾರಾಧ್ಯಸ್ಯ [illegible] ಶ್ರೀಗಿರೌ ಶಿವೇ ॥

ತಥಾ ರೇವಣಸಿದ್ಧಸ್ಯ [illegible] |
[illegible] ॥

ತದ್ವನ್ಮರುಳಸಿದ್ಧಸ್ಯ ವಟಕ್ಷೇತ್ರೇ [illegible] |
ಸಿದ್ಧೇಶಲಿಂಗೇ ಜನನಂ [illegible] |

ಕಾಶ್ಯಾಂ ವಿಶ್ವೇಶ್ವರೇ ಲಿಂಗೇ ವಿಶ್ವಾರಾಧ್ಯಸ್ಯ ಸಂಭವಃ |
ಸ್ಥಾನಂ ಶ್ರೀಕಾಶೀಕ್ಷೇತ್ರೇ ಶೃಣು ಪಾರ್ವತಿ ಸಾದರಂ ॥

ಈ ಪ್ರಕಾರವಾಗಿ ಪಂಚಾಚಾರ್ಯರು ಭೀಮನಾಥ, ಮಲ್ಲಿಕಾರ್ಜುನ, ಸೋಮನಾಥ, ಸಿದ್ಧೇಶ್ವರ, ವಿಶ್ವನಾಥ ಲಿಂಗಗಳಿಂದ ಅವತರಿಸಿದರೆಂದು ಸ್ವಾಯಂಭುವಾಗಮವು ಸಾರುತ್ತದೆ. ಇದಲ್ಲದೆ ವೀರಾಗಮದ ಸಹಸ್ರಕೋಟಿ ಸಂಹಿತೆಯಲ್ಲಿಯೂ ಪಾಶುಪತತಂತ್ರದಲ್ಲಿಯೂ ವಿಶೇಷವಾಗಿ ಪ್ರತಿಪಾದಿಸಲ್ಪಟ್ಟಿರುವ ಆಚಾರ್ಯರ ಲಿಂಗಾವತಾರ ವಿಷಯವನ್ನು ನೋಡಿ ಭ್ರಾಂತಿಯಿಂದ ದೂರಾಗಬೇಕು.

ಸಿದ್ಧಾಂತಶಿಖಾಮಣಿಯಲ್ಲಿ—

ಸೋಮೇಶ್ವರಾಭಿಧಾನಸ್ಯ ತತ್ರ [illegible] |
ಅಸ್ಪೃಶನ್ಮಾನುಷಂ ಭಾವಂ ಲಿಂಗಾತ್ಪ್ರಾದುರ್ಭವಿಷ್ಯತಿ ॥

[illegible] ಮುದ್ಧೃತ್ಯ ಪರಿಪಾಲಕಂ |
ಶಿಷ್ಯತಾ ಮಾನುಷಾಃ ಸರ್ವೇ [illegible] ಭಜಂತು ಪದಾಬ್ಜಯೋಃ ॥

ಮದದ್ವೈತಪರಂ ಶಾಸ್ತ್ರಂ ವೇದವೇದಾಂತಸಮ್ಮತಂ |
ಸ್ಥಾಪಯಿಷ್ಯತಿ ಭೂಲೋಕೇ ಸರ್ವೇಷಾಂ ಹಿತಕಾರಕಂ ॥

ಈ ಪ್ರಕಾರವಾಗಿ ೩ನೆಯ ಪರಿಚ್ಛೇದದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಸೋಮನಾಥಲಿಂಗಾವತಾರ ವಿಷಯವು ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಇಲ್ಲಿ **"ಅಸ್ಪೃಶನ್ ಮಾನುಷಂ ಭಾವಂ"** ಎಂದು ಸ್ಪಷ್ಟವಾಗಿ ಉಲ್ಲೇಖಿಸಿರುವುದರಿಂದ, ಶ್ರೀರೇಣುಕಾಚಾರ್ಯರು ರಕ್ತ ಮಜ್ಜಾ ಮಾಂಸಮಯವಾದ ಮಾನವಶರೀರವನ್ನು ಧರಿಸದೆ ಕೇವಲ ತೇಜೋಮಯಶರೀರಿಗಳಾಗಿ ಅವತರಿಸಿದರೆಂದು ವೇದ್ಯವಾಗುತ್ತದೆ. ಇದಲ್ಲದೆ ಶ್ರೀರೇಣುಕಾದ್ಯಾಚಾರ್ಯರ ಲಿಂಗಾವತಾರ ವಿಷಯವು ಅನವರತ ಪವಿತ್ರಚರಿತ್ರೆಗಳಲ್ಲಿಯೂ ಸಹ ಪ್ರತಿಪಾದಿಸಲ್ಪಟ್ಟಿದೆ. ಈರೀತಿ ಪ್ರಾಚೀನಗ್ರಂಥಗಳು ಸಾರುತ್ತಿದ್ದರೂ ಈ ವಿಷಯವು ಜಾತಿಸಾಂಕರ್ಯಕಾರಕರಾದ ನಾಸ್ತಿಕರಿಗೆ ತೋರದಿರುವುದು [illegible] ಪ್ರಭಾವವೆಂದೇ ಹೇಳಬೇಕಾಗಿದೆ.

ಈ ನಾಸ್ತಿಕರು ಬಹುಬುದ್ಧಿಯನ್ನು ಖರ್ಚುಮಾಡಿ ಬಹು ಗಟ್ಟಿಯಾಗಿರುವ ಕಲ್ಲಿನಲ್ಲಿ ಹುಟ್ಟುವುದು ಹೇಗೆ? ಇದು ಮಿಥ್ಯ ಎಂದು ಉದ್ವಾತದಿಂದ ಪ್ರಲಪಿಸುತ್ತಿರುವರು. ನಾಸ್ತಿಕ ಮಹಾಶಯರೆ, ಯೋಗಿಗಳಾದವರು ಕಠಿನವಾದ ಶಿಲೆಯಲ್ಲೇ? ಶಿಲೆಯನ್ನು ಭೇದಿಸತಕ್ಕ ವಜ್ರದಲ್ಲಿಯೂ ಸಹ ಪ್ರವೇಶಿಸಬಹುದೆಂದು ಯೋಗಶಾಸ್ತ್ರಜ್ಞರು ಯೋಗಶಾಸ್ತ್ರಗ್ರಂಥಗಳಲ್ಲಿ ವಿಶದವಾಗಿ ಪ್ರತಿಪಾದಿಸಿದ್ದಾರೆ. ಇದನ್ನಾದರೂ ಕಣ್ದೆರೆದು ನೋಡಿ ಭ್ರಾಂತಿಯಿಂದ ದೂರಾಗಬೇಕು.

ಯೋಗಶಾಸ್ತ್ರಪ್ರವರ್ತಕನಾದ ಪತಂಜಲಿ ಮಹರ್ಷಿಯು

"ತತೋಽಣಿಮಾದಿ ಪ್ರಾದುರ್ಭಾವಃ ಕಾಯಸಂಪತ್ತದ್ಧರ್ಮಾನಭಿಘಾತಶ್ಚ"

ಇತ್ಯಾದಿ ಸೂತ್ರಗಳಿಂದ ಯೋಗಿಯಲ್ಲಿ ಅಣಿಮಾದ್ಯಷ್ಟಸಿದ್ಧಿಗಳ ಮಹಿಮೆಯನ್ನು ಹೇಳಿರುವನು. ಈ ಸೂತ್ರಗಳಿಗೆ ವೃತ್ತಿಯನ್ನು ಬರೆದ ಭೋಜದೇವನು ತನ್ನ ವೃತ್ತಿಯಲ್ಲಿ—

"ಯಥಾ ಪರಮಾಣುತ್ವಂ ಪ್ರಾಪ್ತೋ ವಜ್ರಾದೀನಾಮಪ್ಯಂತಃ ಪ್ರವಿಶತಿ"

ಅಂದರೆ ಪರಮಾಣುತ್ವಸಿದ್ಧಿಯನ್ನು ಪಡೆದ ಯೋಗಿಯು ವಜ್ರಾದಿಗಳಲ್ಲಿಯೂ ಸಹ ಪ್ರವೇಶಮಾಡುವನು, ಎಂದು ಬರೆದಿದ್ದಾನೆ. ಅಂದಮೇಲೆ, ಶಿವಯೋಗಿಶಿಖಾಮಣಿಗಳೆನಿಸಿಕೊಂಡ ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರು ಯೋಗಮಹಿಮೆಯಿಂದ ಶಿವಲಿಂಗಮುಖದಿಂದ ಅವತರಿಸುವುದರಲ್ಲೇನಾಶ್ಚರ್ಯವು? ಈ ಶಾಸ್ತ್ರೀಯ ವಿಷಯವನ್ನು ನಾಸ್ತಿಕ ಮಹಾಶಯರು ಶುದ್ಧಮನಸ್ಸಿನಿಂದ ತಿಳಿದುಕೊಂಡು ಧನ್ಯರಾಗಬೇಕು. ಯಮನ ಬಾಧೆಯನ್ನು ತಡೆಯಲಾರದೆ ಶಿವಲಿಂಗವನ್ನಾಲಿಂಗಿಸಿ ಶಿವಲೀನಮನಸ್ಕನಾದ ಮಾರ್ಕಂಡೇಯನನ್ನು ಉದ್ಧರಿಸುವುದಕ್ಕೋಸ್ಕರ ಶ್ರೀಪರಮೇಶ್ವರನು ಶಿವಲಿಂಗಮುಖದಿಂದಲೇ ಅವತರಿಸಿ ಯಮನ ಗರ್ವವನ್ನು ನಾಶಮಾಡಲಿಲ್ಲವೇ? ಜಗತ್ಪ್ರಸಿದ್ಧವಾದ ಈ ವಿಷಯವನ್ನಾದರೂ ಈ ಮಹಾಶಯರು ಒಪ್ಪುವರೋ ಇಲ್ಲವೋ ತಿಳಿಯದಾಗಿದೆ. ಇತ್ಯಾದಿ ವಿಷಯಗಳನ್ನೆಲ್ಲಾ ವಿಮರ್ಶಿಸಿದರೆ ಕಲ್ಲಿನಲ್ಲಿ ಹುಟ್ಟುವುದು ಹೇಗೆ? ಎಂದು ನುಡಿಯುವುದು ಬೆಪ್ಪತನವಲ್ಲವೇ? ಅಘಟನಘಟನ ಸಾಮರ್ಥ್ಯಶಾಲಿಗಳಿಗೆ ಯಾವುದು ತಾನೇ ಅಸಾಧ್ಯವು? ಲೀಲಾಮಾತ್ರದಿಂದ ಸೃಷ್ಟಿಸ್ಥಿತಿಸಂಹಾರಾದಿಗಳನ್ನು ಮಾಡಬಲ್ಲ ಪ್ರಮಥಪುಂಗವರ ವಿಷಯದಲ್ಲಿ ಮನಬಂದಂತೆ ಮಾತನಾಡುವುದು ಪೂರ್ವಜನ್ಮಕೃತಪಾಪವಿಶೇಷವೆಂದೇ ಹೇಳಬೇಕಾಗಿದೆ.

ತಮ್ಮ ಉತ್ಪತ್ತಿಯು ತಮ್ಮ ತಂದೆಯಿಂದಲೇ ಆಯಿತೆಂಬುದು ಈ ನಾಸ್ತಿಕರಿಗೆ ಹೇಗೆ ಗೊತ್ತು? ತಾಯಿಯ ಮಾತನ್ನು ನಂಬಿಯಲ್ಲವೇ ತನ್ನ ಉತ್ಪತ್ತಿಯನ್ನು ನಿರ್ಧರಿಸಿಕೊಳ್ಳುವುದು? ಅದರಂತೆಯೇ ಪ್ರಾಚೀನ ಪುರುಷರ ಉತ್ಪತ್ತಿಯನ್ನು ನಿರ್ಣಯಿಸಬೇಕಾದರೆ ಪ್ರಾಚೀನ ಗ್ರಂಥಗಳನ್ನು ನಂಬಬೇಕು. ಅವುಗಳಲ್ಲಿ ಹೇಳಿರುವಂತೆ ನಡೆಯಬೇಕು. ಇದು ಸತ್ಪುರುಷರು ಆಚರಿಸತಕ್ಕ ಮಾರ್ಗವಾಗಿರುವದು. ಇದನ್ನು ಬಿಟ್ಟು ಸುಮ್ಮನೆ ಅಸೂಯೆಯಿಂದ ಮನಸ್ಸಿಗೆ ಬಂದಂತೆ ಮಾತನಾಡಿದರೆ ಅದರಿಂದ ಯಾವ ಪ್ರಯೋಜನವೂ ಆಗದೆ ವ್ಯರ್ಥಕಂಠಶೋಷಣವನ್ನು ಮಾಡಿಕೊಂಡಂತಾಗುವದು. ಪ್ರಮಥರು ಎಂದೂ ಮಾನವರಾಗಲಾರರು. ಅವರನ್ನು ತಮ್ಮಂತೆ ಮಾನವರನ್ನಾಗಿ ಭಾವಿಸುವುದು ಅತ್ಯಂತ ಪಾಪಕಾರ್ಯವು. ಆದುದರಿಂದ ನಾಸ್ತಿಕಮಹಾಶಯರು ಇನ್ನು ಮುಂದಾದರೂ ತಮ್ಮ ವಕ್ರಮಾರ್ಗವನ್ನು ಬಿಟ್ಟು ಸನ್ಮಾರ್ಗದಿಂದ ನಡೆದು ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಂಗಳೂರಲ್ಲಿ ರೇಷನಿಂಗ್

೨೫ ನೇ ತಾರೀಖಿನಿಂದ ಆಚರಣೆಗೆ ಬರುತ್ತದೆ.

ಸರಕಾರದ ಪ್ರಕಟನೆ

ಎರಡನೆಯ ತಾರೀಖಿನ ದಿವಸ ಪ್ರಕಟನೆಯೊಂದನ್ನು ಹೊರಡಿಸಿ, ಬೆಂಗಳೂರು ನಗರದಲ್ಲಿ ಆವಶ್ಯಕ ಪದಾರ್ಥಗಳನ್ನು ರೇಷನಿಂಗ್ ಮಾಡಲು ಕಾರಣಗಳನ್ನು ಕೊಟ್ಟು ಆ ಯೋಜನೆಯನ್ನು ಹೇಗೆ ಕಾರ್ಯರೂಪಕ್ಕೆ ತರಲಾಗುವುದೆಂಬುದನ್ನು ಸೂಚಿಸಲಾಗಿತ್ತು. ಈಗ ಎಲ್ಲ ಸಂಸಾರಗಳ ಎಣಿಕೆಗಳೂ ಪೂರ್ಣವಾಗಿವೆ. ರೇಷನಿಂಗ್ ಕಾರ್ಡುಗಳು ಬರೆದು ಮುಗಿಯುತ್ತ ಬಂದಿವೆ. ಇದೇ ತಿಂಗಳು ೨೫ ರಿಂದ ರೇಷನಿಂಗ್ ಜಾರಿಗೆ ತರಬೇಕೆಂದು ನಿರ್ಧರಿಸಲಾಗಿದೆ. ರೇಷನಿಂಗ್ ಕಾರ್ಡುಗಳನ್ನು ಹಂಚಲು ಈಗಿನಿಂದಲೇ ಪ್ರಾರಂಭವಾಗುವುದು. ಮನೆಮನೆಗೂ ಹೋಗಿ ಅವುಗಳನ್ನು ಕೊಡಲಾಗುವುದು. ಯಾವುದಾದರೂ ಸಂಸಾರವು ೨೦ನೇ ತಾರೀಖಿನೊಳಗಾಗಿ ರೇಷನಿಂಗ್ ಕಾರ್ಡನ್ನು ಪಡೆಯದಿದ್ದರೆ ಕೂಡಲೆ ಹಾರ್ಡಿಂಜ್ ರಸ್ತೆಯಲ್ಲಿ ಅಪೆಕ್ಸ್ ಬ್ಯಾಂಕ್ ಭವನದಲ್ಲಿರುವ ರೇಷನಿಂಗ್ ಅಧಿಕಾರಿಗಳ ಕಛೇರಿಯಿಂದಾಗಲಿ ತಮ್ಮ ಡಿವಿಜನ್ನಿನ ಫುಡ್ ಇನ್‌ಸ್ಪೆಕ್ಟರವರಿಂದಾಗಲಿ ಕೇಳಿ ಪಡೆಯತಕ್ಕದ್ದು. ಈಗ ನಮ್ಮಲ್ಲಿರುವ ಆಹಾರಪದಾರ್ಥಗಳು ಮತ್ತು ಹಲವು ಜನಗಣನೆ ನಡೆಸುವಾಗ ಹಲವು ಗೃಹಗಳಲ್ಲಿ ಹೆಚ್ಚು ಜನಸಂಖ್ಯೆ ಕೊಟ್ಟುದು—ಈ ಸಂಗತಿಗಳೆಲ್ಲವನ್ನೂ ಪರಿಶೀಲಿಸಿ ಒಬ್ಬೊಬ್ಬರಿಗೂ ಕೊಡಬೇಕಾಗಿರುವ ಪ್ರಮಾಣವನ್ನು ನಿರ್ಧರಿಸಲಾಗಿದೆ. ಇವುಗಳು ಬೇಸಿಕ್ ಅಳತೆಗಳು. ನ್ಯಾಯವಾಗಿದ್ದ ಕಡೆ ಸರಬರಾಜುಗಳನ್ನು ಹೆಚ್ಚಿಸಲಾಗುವುದು. ಸಪ್ಲಿಮೆಂಟರಿ ರೇಷನಿಂಗ್ ಕಾರ್ಡುಗಳನ್ನು ಕೊಡಲು ವ್ಯವಸ್ಥೆಗೊಳಿಸಲಾಗಿದೆ. ಆದರೆ ಅವುಗಳನ್ನು ಕೊಡಲು ಹೆಚ್ಚಾಗಿ ಉಪಯೋಗಿಸುವುದಿಲ್ಲವೆಂದು ನಿರೀಕ್ಷಿಸಲಾಗಿದೆ. ರೇಷನಿಂಗ್ ವ್ಯವಸ್ಥೆ ಆಚರಣೆಗೆ ಬಂದರೂ ಈಗ 'ಫೇರ್ ಪ್ರೈಸ್ ಡಿಪೋ'ಗಳ ಮುಂದಿರುವ ನುಗ್ಗು ಮುಂದೆಯೂ ಇದ್ದೇ ಇರುತ್ತದೆಯೆಂಬ ಭಾವನೆಯು ಹಲವರಲ್ಲಿರುವುದೆಂದು ಕಾಣುತ್ತದೆ. ಸಾಮಾನುಗಳು ೫೦೦ ಕಡೆಗೆ ಮಾರಾಟವಾಗಲು ಏರ್ಪಡಿಸಿರುವುದರಿಂದ ಈ ರೀತಿ ನೂಕುನುಗ್ಗಲಿಗೆ ಅವಕಾಶವಿಲ್ಲ. ಅವ್ಯವಸ್ಥೆಯಾಗದಂತೆ ರಹದಾರಿ ಪಡೆದಿರುವವರಿಂದ ಹೆಚ್ಚು ಹಣವನ್ನು ಡಿಪಾಜಿಟ್ಟಾಗಿ ತೆಗೆದುಕೊಳ್ಳಲಾಗಿದೆ. ಪ್ರತಿಯೊಂದು ಅಂಗಡಿಗೂ ಸರಬರಾಜು ಆಗಲು ತಕ್ಕ ವ್ಯವಸ್ಥೆ ಮಾಡಲಾಗಿದೆ.

ನಗರವನ್ನು ೯ ಡಿವಿಜನ್ನುಗಳನ್ನಾಗಿ ವಿಭಾಗಿಸಲಾಗಿದೆ. ಆಯಾ ಡಿವಿಜನ್ನಿನಲ್ಲಿ ವಾಸಿಸುವವರಿಗೆ ಅಲ್ಲಿರುವ ಕೇಂದ್ರಗಳಿಂದ ಕೊಳ್ಳಲು ರೇಷನಿಂಗ್ ಕಾರ್ಡಿನಲ್ಲಿ ಸೂಚಿಸಲಾಗಿದೆ. ಆದರೆ, ಯಾರಾದರೂ ಬೇರೆ ಕಡೆ ಕೊಳ್ಳಲು ಇಚ್ಛಿಸಿದರೆ ಬೇರೆ ಡಿವಿಜನ್ನಿನ ಕೇಂದ್ರಕ್ಕೆ ಕಳುಹಿಸಿಕೊಡಲಾಗುವುದು.

ಪ್ರತಿಯೊಂದು ಡಿವಿಜನ್ನೂ ಜವಾಬ್ದಾರಿಯುತರಾದ ಫುಡ್ ಇನ್‌ಸ್ಪೆಕ್ಟರ್ ಆಡಳಿತಕ್ಕೊಳಪಟ್ಟಿದೆ. ಇವರೊಂದಿಗೆ ಎಷ್ಟು ಮುನಿಸಿಪಲ್ ಸಬ್ ಡಿವಿಜನ್ನುಗಳಿವೆಯೋ ಅಷ್ಟು ಅಸಿಸ್ಟೆಂಟ್ ಫುಡ್ ಇನ್‌ಸ್ಪೆಕ್ಟರುಗಳನ್ನು ಕೆಲಸ ಮಾಡಲು ನೇಮಿಸಲಾಗಿದೆ. ಈ ಅಧಿಕಾರಿಗಳು ಕೇಂದ್ರಗಳಲ್ಲಿ ಮಾರಾಟಗಳನ್ನೂ ಸಾರ್ವಜನಿಕರು ತರುವ ದೂರುಗಳನ್ನೂ ಪರಿಶೀಲಿಸುವರು.

ರಹದಾರಿ ಪಡೆದಿರುವವರೂ ರೇಷನಿಂಗ್ ಕಾರ್ಡ್ ಹೊಂದಿರುವವರೂ ಇಲಾಖೆಯೊಂದಿಗೆ ಸಹಕರಿಸುವರೆಂದು ನಿರೀಕ್ಷಿಸಲಾಗಿದೆ. ಏನಾದರೂ ಯಾರಲ್ಲಾದರೂ ದುಷ್ಪ್ರವೃತ್ತಿಗಳು ಕಂಡುಬಂದರೆ ಮಾರಾಟಗಾರರಾದರೆ ಅವರ ರಹದಾರಿಯನ್ನು ಕಿತ್ತುಕೊಳ್ಳಲಾಗುವದು. ಕೊಳ್ಳುವವನಾದರೆ ಸಪ್ಲಿಮೆಂಟರಿ ರೇಷನಿಂಗ್ ಕಾರ್ಡನ್ನು ರದ್ದುಗೊಳಿಸಲಾಗುವುದು. ಇವುಗಳಲ್ಲದೆ ಬೇರೆ ಕಾರ್ಯಕ್ರಮವನ್ನೂ ಸಹ ಕೈಕೊಳ್ಳಬಹುದು. ರಹದಾರಿ ಪಡೆದಿರುವವರ ಪಟ್ಟಿಯನ್ನು ವೃತ್ತಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು.

ಯುದ್ಧವಾರ್ತೆ.

ಬ್ರಿಟಿಷ್ ಸಿಪಾಯಿಗಳಿಗೆ ಶಿಕ್ಷೆ

ದಿಲ್ಲಿಯ ಟಾಂಗಾದವನೊಬ್ಬನನ್ನು ಹೊಡೆದುದರಿಂದ ಅಲ್ಲಿಯ ಪೋಲೀಸರು ಇಬ್ಬರು ಬ್ರಿಟಿಷ್ ಸಿಪಾಯಿಗಳನ್ನು ಬಂಧಿಸಿ ಮಿಲಿಟರಿ ಪೋಲೀಸರ ವಶಕ್ಕೊಪ್ಪಿಸಿದ್ದರು. ಅಲ್ಲಿ ವಿಚಾರಣೆ ನಡೆದು ಅವರಿಬ್ಬರಿಗೂ ೬ ತಿಂಗಳ ಶಿಕ್ಷೆಯನ್ನು ವಿಧಿಸಲಾಯಿತು

ಫ್ರಾನ್ಸಿಗೆ ಹಿಟ್ಲರನ ಎಚ್ಚರಿಕೆಯೇ ?

ಫ್ರಾನ್ಸು ಸಂಪೂರ್ಣವಾಗಿ ತನ್ನೊಡನೆ ಸಹಕರಿಸಬೇಕೆಂದೂ, ಇಲ್ಲವಾದರೆ ಜರ್ಮನಿಯಿಂದ ತುಳಿಯಲ್ಪಡುವದೆಂದೂ, ಪ್ಯಾರಿಸ್‌ನಲ್ಲಿರುವ ಜರ್ಮನ್ ಪ್ರತಿನಿಧಿಗಳಾದ ಹರ್ ಒಟ್ಟೋ ಅಬೆಟ್ಜ್‌ರವರು ವಿಚಿ ಸರ್ಕಾರಕ್ಕೆ ತಿಳಿಸಿದ್ದಾರೆಂದು ಗೊತ್ತಾಗುತ್ತದೆ

ಟ್ಯುನೀಸಿಯಾದಲ್ಲಿ ಮಿತ್ರಸೇನೆಗಳು ಮೇಲೆ ಬಿದ್ದಿವೆ

ಟ್ಯುನೀಸಿಯಾ ರಂಗದ ಎರಡು ಕಡೆಗಳಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ಸೇನೆಗಳು ಮುತ್ತಿಗೆಯನ್ನು ಆರಂಭಿಸಿವೆಯೆಂದು ಪ್ಯಾರಿಸ್ ರೇಡಿಯೋವು ತಿಳಿಸಿದೆ ಮೆಡ್ಜೆಜ್ ಎಲ್‌ಬಾಬ್ ದಕ್ಷಿಣಕ್ಕೆ ೧೦ ಮೈಲಿ ದೂರದಲ್ಲಿಯೂ ಮತ್ತು ಪಿಚೌನ್ ಉತ್ತರದಲ್ಲಿಯೂ ಮುತ್ತಿಗೆಗಳನ್ನು ಆರಂಭಿಸಿರುವರು ಹೊಡೆದಾಟವು ಮುಂದುವರಿಯುತ್ತಿದೆಯೆಂದು ಹೇಳಲಾಗಿದೆ

ಗೌಡಲ್ ಕೆನಾಲಿನಲ್ಲಿ ಸಂಗ್ರಾಮ

ನ್ಯೂ ಜಾರ್ಜಿಯಾ ದ್ವೀಪದಲ್ಲಿರುವ ಮುಂಡಾ ವಿಮಾನ ನಿಲ್ದಾಣದ ಮೇಲೆ ಮಿತ್ರವಿಮಾನಗಳು ಮುತ್ತಿಗೆ ನಡೆಸಿವೆ ಗೌಡಲ್ ಕೆನಾಲಿನಲ್ಲಿ ಅಮೆರಿಕನರು ಸಣ್ಣ ಸಣ್ಣ ಮುತ್ತಿಗೆಗಳನ್ನು ನಡೆಸುತ್ತಲೇ ಇದ್ದಾರೆ ಗೌಡಲ್ ಕೆನಾಲಿನಲ್ಲಿರುವ ಅಮೆರಿಕನ್ ಸೇನೆಯನ್ನು ಬಲಪಡಿಸಲಾಗಿದೆ ಹೊಸ ಅಮೆರಿಕನ್ ಪಡೆಗಳು ಅಲ್ಲಿಗೆ ಬಂದಿಳಿದಿವೆ ಗೌಡಲ್ ಕೆನಾಲಿನ ಜಪಾನರನ್ನು ಹೊರಗೆ ಓಡಿಸಲು ಇನ್ನೂ ಸ್ವಲ್ಪ ಕಾಲ ಹಿಡಿಯಬಹುದು

ಯು-ಬೋಟ್‌ಗಳ ನಾಶ

ಬ್ರಿಟನ್ನಿನ ನೌಕಾಬಲವು ಯುದ್ಧಕ್ಕೆ ಮುಂಚೆ ಇದ್ದ ಬಲಕ್ಕಿಂತ ಈಗ ಹೆಚ್ಚಾಗಿದೆಯೆಂದೂ, ವಿಮಾನ ವಾಹಕ ನೌಕಗಳಿಗೆ ಬಹಳ ನಷ್ಟವಾದರೂ ಸಹ ಈ ನಷ್ಟಗಳನ್ನು ಸರಿಪಡಿಸಿಕೊಂಡು ಈಗ ಈ ನೌಕೆಗಳ ಸಂಖ್ಯೆಯನ್ನು ಹೆಚ್ಚಿಸಲಾಗಿದೆಯೆಂದೂ, ಈಗ ೩ ೪ ತಿಂಗಳಿಂದೀಚೆಗೆ ಶತ್ರು ಯು ಬೋಟುಗಳ ಹಾವಳಿಯು ಬಹಳ ಉಗ್ರವಾಗಿತ್ತೆಂದೂ, ಅವುಗಳಲ್ಲಿ ಬಹಳ ಸಂಖ್ಯೆಯವನ್ನು ನಾಶಮಾಡಿದೆವೆಂದೂ, ಅಟ್ಲಾಂಟಿಕ್ ಸಮುದ್ರದಲ್ಲಿ ಈಗ ೧೦೦ ಶತ್ರು ಸಬ್ ಮೆರೀನ್‌ಗಳು ಕೆಲಸಮಾಡುತ್ತಿವೆಯೆಂದೂ ಬ್ರಿಟಿಷ್ ನೌಕಾ ಮಂತ್ರಿಗಳು ಹೇಳಿದರು

ಜರ್ಮನಿಗೆ ಜನಬಲವಿಲ್ಲ!

ಜರ್ಮನರು ಸಂಗ್ರಾಮವಸ್ತು ನಿರ್ಮಾಣವನ್ನು ಸ್ವಲ್ಪವೂ ಕಡಿಮೆಮಾಡಿಲ್ಲ ಹೊಸ ಹೊಸ ಶಸ್ತ್ರಗಳನ್ನು ಸಿದ್ಧಮಾಡುತ್ತಲೇ ಇದ್ದಾರೆ ಪ್ರತಿಕ್ಷಣ ಹೊಸಮಾದರಿ ಶಸ್ತ್ರಗಳು ರಣರಂಗಕ್ಕೆ ಬರುತ್ತವೆ ಆದರೆ ವಿಮಾನನಿರ್ಮಾಣ ಕಾರ್ಯವು ಮಾತ್ರ ಮೊದಲಿನಷ್ಟು ವೇಗವಾಗಿ ನಡೆಯುತ್ತಿಲ್ಲವೆಂದು ಕಾಣುತ್ತದೆ ಜರ್ಮನಿಯ ಮುಖ್ಯ ಸಮಸ್ಯೆಯೆಂದರೆ ಜನಬಲ ಜರ್ಮನಿಯೊಳಗ ವ್ಯವಸಾಯಕ್ಕೂ ಕೈಗಾರಿಕೆಗಳಿಗೂ ಸುಮಾರು ೬೦ ಲಕ್ಷ ವಿದೇಶೀಯರನ್ನು ನೇಮಿಸಲಾಗಿದೆ. ಕೈಗಾರಿಕೆಗಳಿಗೆ ಇನ್ನೂ ಹೆಚ್ಚು ಜನ ಬೇಕಾಗಿದೆ ಕೂಲಿಗಾರರಿಲ್ಲದೆ ಕಲ್ಲಿದ್ದಲು ಗಣಿಗಳ ಕೆಲಸ ನಿಧಾನವಾಗಿದೆ ಜರ್ಮನಿಯಲ್ಲಿರುವ ೩೫೩೩೦ ಸಾವಿರ ಕೃಷಕರು ಹಂಗೇರಿಗೆ ಹಿಂತಿರುಗಬೇಕೆಂದು ಹಂಗೇರಿ ಸರಕಾರವು ಆಕ್ಷೇಪಮಾಡಿದೆ

ಜಪಾನರ ಹೊಸದಾಳಿ

ಚೀನಾ ಬರ್ಮಾಗಡಿಯಲ್ಲಿ ಷಾನ್ ಸಂಸ್ಥಾನಗಳ ಪೂರ್ವಕಡೆಯಿಂದ ಜಪಾನರು ಹೊಸ ದಾಳಿಯನ್ನಾರಂಭಿಸಿರುವರು ಕೆಂಗ್‌ಟುಂಗ್‌ಗೆ ಈಶಾನ್ಯದಲ್ಲಿ ೩೧ ಮೈಲಿ ದೂರದಲ್ಲಿ ಮೊಂಗ್ಯಾ [illegible] ಊರಿನ ಮೇಲೆ ದಾಳಿ ನಡೆಸುತ್ತಿದ್ದಾರೆ

ಇಂಗ್ಲಿಷ್ ಮತ್ತು ಅಮೆರಿಕ ಹಾಡುಗಳಿಗೆ ಬಹಿಷ್ಕಾರ

ಜಪಾನಿನಲ್ಲಿ ೧೦೦೦ ಇಂಗ್ಲಿಷ್ ಮತ್ತು ಅಮೆರಿಕ ನೃತ್ಯ ಸಂಗೀತಗಳನ್ನೂ ಇನ್ನೂ ಇತರ ಪ್ರಸಿದ್ಧವಾದ ಹಾಡುಗಳನ್ನೂ ಹಾಡಕೂಡದೆಂದು ನಿಷೇಧಿಸಿದ್ದಾರಂತೆ!

ರಷ್ಯದಲ್ಲಿ ಜರ್ಮನರು ದಿಕ್ಕೆಟ್ಟು ಓಡುತ್ತಿದ್ದಾರೆ!

ರಷ್ಯದ ಎರಡು ಸೇನೆಗಳ ಉಗ್ರ ಪ್ರಹಾರವನ್ನು ತಡೆಯಲಾರದೆ ಕಾಕಸಸ್‌ನಲ್ಲಿ ಜರ್ಮ ಸೇನೆಗಳು ಹಲವು ಕಡೆ ದಿಕ್ಕೆಟ್ಟು ಓಡುತ್ತಿವೆ ಅಪಾರ ಸಂಗ್ರಾಮ ವಸ್ತುಗಳು ರಷ್ಯನರ ವಶವಾಗಿವೆ ಕಲವು ಕಡೆ ಜರ್ಮನರು ಟ್ಯಾಂಕ್ ಸಹಾಯದಿಂದ ತಿರುಗಿಬೀಳಲು ಯತ್ನಿಸಿದರು ಆದರೆ ಫಲಿಸಲಿಲ್ಲ ರಾಸ್ಟೋವ್ ರೈಲ್ವೆಯ ಎರಡು ಪಾರ್ಶ್ವದಲ್ಲಿಯೂ ೧೦೦ ಮೈಲಿ ಅಗಲದಲ್ಲಿ ರಷ್ಯನ್ ಪಡೆಗಳು ಮುಂದೆ ಹೋಗುತ್ತಿವೆ ಕ್ಯೂಬಾ ನದಿಯ ಮೈದಾನ ಪ್ರದೇಶದ ಕಡೆಗೂ ಮತ್ತು ರೈಲ್ವೆ ಜಂಕ್ಷನ್ ಆದ ಅರ್ಮವೀರ್ ನಗರದ ಕಡೆಗೂ ರಷ್ಯನ್ ಟ್ಯಾಂಕುಗಳು ರಭಸದಿಂದ ಹೋಗುತ್ತವೆ ರಷ್ಯನ್ ವಿಮಾನಗಳು ರಷ್ಯನ್ ಭೂಸೇನೆಗಿಂತ ೩೦೦ ಮೈಲಿ ದೂರ ಮುಂದೆ ನುಗ್ಗಿ ಜರ್ಮನ್ ಸ್ಥಾನಗಳನ್ನು ಧ್ವಂಸಮಾಡುತ್ತವೆ ಡಾನ್ ನದಿಯ ಕೆಳ ಪ್ರದೇಶದಲ್ಲಿ ನದಿಯ ಎರಡು ಪಾರ್ಶ್ವಗಳಲ್ಲಿಯೂ ಉಗ್ರ ಕದನವಾಗುತ್ತದೆ ಜರ್ಮನರು ಹಸ್ತ ಬಂಡಿಗಳ ಸಹಿತ ಪಡೆಗಳನ್ನು ರಣರಂಗಕ್ಕೆ ತಂದಿದ್ದಾರೆ ರೈಲ್ವೆ ಸ್ಟೇಷನ್ನುಗಳನ್ನು ಜರ್ಮನರು ಬಹಳವಾಗಿ ಬಲಪಡಿಸಿದ್ದಾರೆ

ಸ್ಟಾಲಿನ್‌ಗ್ರಾಡಿನ ಪಶ್ಚಿಮದಲ್ಲಿ ಜರ್ಮನ್ ಸೇನೆಗಳನ್ನು ಸುತ್ತುವರಿಯಲಾಗಿದೆಯಷ್ಟೆ! ಅಲ್ಲಿರುವ ಅಧಿಕಾರಿಗಳನ್ನೂ ಮತ್ತು ಅವರ ಕಡೆಯವರನ್ನೂ ವಿಮಾನ ಮೂಲಕ ಸಾಗಿಸುತ್ತಿದ್ದಾರೆಂಬುದಾಗಿ ತಿಳಿದುಬಂದಿದೆ ೨೨ ಜರ್ಮನ್ ಡಿವಿಜನ್‌ಗಳು ಸ್ಟಾಲಿನ್‌ಗ್ರಾಡಿನ ಪಶ್ಚಿಮದಲ್ಲಿ ಸುತ್ತುವರಿಯಲ್ಪಟ್ಟಿವೆಯೆಂದು ಜರ್ಮನಿಯು ಈಗ ಒಪ್ಪಿಕೊಂಡಿದೆ ಸ್ಟಾಲಿನ್‌ಗ್ರಾಡಿನಲ್ಲಿ ಅಸಾಧ್ಯವಾಗಿ ಬಿರುಗಾಳಿ ಹೊಡೆಯುತ್ತಿದ್ದರೂ ಹಾಜಿಗಳು ಸುತ್ತುವರಿಯಲ್ಪಟ್ಟಿರುವ ಕ್ಷೇತ್ರದೊಳಗೆ ನುಗ್ಗಲು ರಷ್ಯನರು ಪ್ರಯತ್ನಿಸುತ್ತಿದ್ದಾರೆ ಇದೇ ಕಾಲದಲ್ಲಿ ರಷ್ಯನರು ಸ್ಟಾಲಿನ್‌ಗ್ರಾಡಿನ ಒಳಗಡೆಯಿಂದ ಪಶ್ಚಿಮಕ್ಕೂ ಮತ್ತು ನೈರುತ್ಯಕ್ಕೂ ನುಗ್ಗಲು ಯತ್ನಿಸುತ್ತಿದ್ದಾರೆ ಎಂದು ಸ್ಕಾಂಡಿನೇವಿಯನ್ ರೇಡಿಯೋ ತಿಳಿಸಿದೆ

ಸ್ವೀಕಾರ.

ನಿಜಾಮು ಇಲಾಖಾ ಬುದ್ರೂಕವೋಥಾ ಗ್ರಾಮದಲ್ಲಿರುವ ಮ|| ರಾ|| ಬಾಪೂರಾವ ಮತ್ತು ರಾಮಚಂದ್ರಪ್ಪ ಈ ಉಭಯರ ಪುತ್ರರಿಗೆ ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಗಳು ಶ್ರೀ|| ಷ|| ಬ್ರ|| ಹೋಟಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ವಿಚಿತ್ರ ಪ್ರಪಂಚ

'ಮೌಂಟ್ ಎಟ್ನಾ' ಎಂಬ ಅಗ್ನಿ ಪರ್ವತವು 25[illegible] ವರ್ಷಗಳಿಂದಲೂ ಹೊಗೆಯಾಡುತ್ತಿರುವುದಂತೆ!

ಇಂಡಿಯಾ ದೇಶದಲ್ಲಿ ಪ್ರತಿವರ್ಷವೂ 3,00,000 ಜನರು ನಾಗರಹಾವಿನ ಕಡಿತದಿಂದ ಸಾಯುವರಂತೆ !

ಇಂಡಿಯಾ ದೇಶದ ಜನರು 220 ಬೇರೆ ಬೇರೆ ಭಾಷೆಗಳನ್ನು ಮಾತಾಡುವರಂತೆ! ಟಿಬೆಟೊ ಚೀನಾ ಒಂದರಲ್ಲಿಯೇ 145 ಭಾಷೆಗಳು ರೂಢಿಯಲ್ಲಿರುವವಂತೆ!

ಅಟ್ಲಾಂಟಿಕ್ ಸಾಗರದಲ್ಲಿ ಒಂದು ಟನ್ ನೀರಿನಲ್ಲಿ 81 ಪೌಂಡುಗಳ ಉಪ್ಪು, ಪೆಸಿಫಿಕ್ ಸಾಗರದಲ್ಲಿ ಒಂದು ಟನ್ ನೀರಿನಲ್ಲಿ 79 ಪೌಂಡುಗಳ ಉಪ್ಪು ಇರುವುದು ಆದರೆ ಮೃತ್ಯುಸರೋವರದಲ್ಲಿ ಒಂದು ಟನ್ನಿನಲ್ಲಿ 187 ಪೌಂಡುಗಳ ಉಪ್ಪು ಇರುವುದಂತೆ!

ಮೇಜರ್ ಜಾಕ್ ಸ್ಯಾವೇಜ್ ಎಂಬ ಬ್ರಿಟಿಷ್ ವೈಮಾನಿಕನು 3,00,00,00,000 ಮೇಣದ ಬತ್ತಿಗಳ ಪ್ರಕಾಶವುಳ್ಳ ಸರ್ಚ್‌ಲೈಟ್ ಒಂದನ್ನು ನಿರ್ಮಿಸಿರುವನಂತೆ! ಈ ದೀಪದ ಬೆಳಕು ಆಕಾಶದಲ್ಲಿ ಸುಮಾರು 5 ಮೈಲುಗಳವರೆಗೆ ಹೋಗಬಲ್ಲದಂತೆ!

ಯಂತ್ರಗಳಿಗೋಸ್ಕರ ಮಾಡುವ ತಿರುಪಿನ ಮೊಳೆಗಳಲ್ಲಿ ಗಡಿಯಾರಗಳಿಗೆ ಉಪಯೋಗಿಸುವ ಮೊಳೆಗಳೇ ಅತ್ಯಂತ ಸಣ್ಣವು ಕೆಲವು ಸಣ್ಣ ಸಣ್ಣ ಕೈ ಗಡಿಯಾರಗಳಿಗೆ ಉಪಯೋಗಿಸುವ ಮೊಳೆಗಳು 1/34,000 ಅಂಗುಲದಷ್ಟು ಸೂಕ್ಷ್ಮವಾಗಿರುವುವಂತೆ! ಇಂತಹ 4,82 000 ಮೊಳೆಗಳನ್ನು ಒಟ್ಟುಗೂಡಿಸಿದರೆ 1 ಪೌಂಡು ತೂಕವಾಗುವುದಂತೆ!

ಪೂರ್ವ ಆಫ್ರಿಕಾದೇಶದಲ್ಲಿ ಗೋರಂಗೋರೋ ಎಂಬ ಅತ್ಯದ್ಭುತವಾದ ಜ್ವಾಲಾಮುಖಿಯಿರುವುದು ಈ ಜ್ವಾಲಾಮುಖಿಯು ಸದ್ಯಃ ಆರಿಹೋಗಿದ್ದು ಅದರ ಮೇಲ್ಭಾಗದಲ್ಲಿ ಒಂದು ದೊಡ್ಡ ಸರೋವರವಾಗಿರುವುದು ಅದರ ಸುತ್ತಲೂ ಅನೇಕ ಗಿಡಗಳು ಬೆಳೆದಿರುವುವು ಈ ಪ್ರದೇಶವು ಒಂದು ಕಡೆಯಿಂದ ಮತ್ತೊಂದು ಕಡೆಗೆ 12 ಮೈಲುಗಳ ಉದ್ದವಾಗಿಯೂ, [illegible] ಮೈಲುಗಳ ಸುತ್ತಳತೆಯುಳ್ಳದಾಗಿಯೂ, 2000 ಅಡಿಗಳ ಆಳವಾಗಿಯೂ ಇರುವದಂತೆ!

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ದಿವಾನ್‌ಸಾಹೇಬರವರ ಶುಭಾಗಮನ

ಮೈಸೂರು ಸಂಸ್ಥಾನದ ದಿವಾನ್‌ಸಾಹೇಬರವರಾದ ಪ್ರಧಾನಶಿರೋಮಣಿ ಶ್ರೀ|| ಎನ್ ಮಾಧವರಾಯರು ಸಿ ಐ ಇ ಇವರು ಇದೇ ತಿಂಗಳು ೧೨ನೆಯ ತಾರೀಖಿನ ದಿವಸ ಸಕಲೇಶಪುರಕ್ಕೆ ಆಗಮಿಸಿದ ಸಮಯದಲ್ಲಿ, ಅಲ್ಲಿಯೇ ಮೊಕ್ಕಾಂ ಮಾಡಿರುವ ಶ್ರೀಮದ್ರಂಭಾಪುರೀ ಜಗದ್ಗುರುಗಳ ದರ್ಶನಕ್ಕಾಗಿ ಆಗಮಿಸಿದರೆಂದೂ, ಆಗ್ಗೆ ಶ್ರೀಜಗದ್ಗುರುಗಳವರು ಆತ್ಮಾನಾತ್ಮವಿಚಾರವನ್ನೂ, ಶ್ರೀಚಂದ್ರಮೌಳೀಶ್ವರಲಿಂಗಪ್ರದಾನ ವಿಷಯವನ್ನೂ ಅಪ್ಪಣೆಕೊಡಿಸಿ, ಯುದ್ಧದ ಮಹಾಜ್ವಾಲೆಯಿಂದ ಬೆಂದು ಹೋಗುತ್ತಿರುವ ಜಗತ್ತಿನಲ್ಲಿ ಶೀಘ್ರ ಶಾಂತಿಸ್ಥಾಪನೆಯಾಗಿ ಸಕಲ ಮಾನವರೂ ಸುಖಿಗಳಾಗಲೆಂದು ಹಾರೈಸಿದರೆಂದೂ, ದಿವಾನ್‌ಸಾಹೇಬರವರು ಶ್ರೀಜಗದ್ಗುರುಗಳವರ ಮುಖದಿಂದ ಹೊರಟ ಅಮೃತಸದೃಶವಾದ ಆಶೀರ್ವಚನಗಳನ್ನು ಶಾಂತಚಿತ್ತದಿಂದ ಕೇಳಿ ಪರಮಾನಂದಭರಿತರಾದರೆಂದೂ, ಆಮೇಲೆ ದಿವಾನ್‌ಸಾಹೇಬರವರು ಪಂಚಪೀಠಗಳ ವಿಷಯವನ್ನೆತ್ತಿಕೊಂಡು, ಪೂರ್ವದ ಮಹಾಪ್ರಭುಗಳಾದ ಶ್ರೀ|| ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್‌ರವರು ಕೇದಾರಪೀಠಕ್ಕೂ ರಂಭಾಪುರೀಪೀಠಕ್ಕೂ ದಯಮಾಡಿಸಿದ್ದ ವಿಷಯವನ್ನು ಸ್ವತಃ ಹೇಳಿದರೆಂದೂ, ಬಳಿಕ ಶ್ರೀರೇಣುಕರ ಮತ್ತು ವೀರಭದ್ರಸ್ವಾಮಿಯ ದರ್ಶನವನ್ನು ಮಾಡಿಕೊಂಡು ಆನಂದತುಂದಿಲಹೃದಯರಾಗಿ ಪ್ರಯಾಣಮಾಡಿದರೆಂದೂ ತಿಳಿದುಬರುತ್ತದೆ.

[೧ನೇ ಪುಟದಿಂದ ಮುಂದುವರಿದುದು]

ತಲೂ ತಾಯಿಯ ಹೃದಯವು ಎಷ್ಟು ಕೋಮಲವಾದುದು ಆದುದರಿಂದಲೇ ಗುರುವರ್ಗದ ತನ್ನ ಮಕ್ಕಳು ಸಂಸ್ಕೃತ ವಿದ್ಯೆಗಾಗಿ ಕಷ್ಟಪಡುತ್ತಿರುವುದನ್ನು ನೋಡಿ ಅತ್ಯಂತ ಕನಿಕರದಿಂದ ಮಕ್ಕಳ ರಕ್ಷಣೆಗಾಗಿ ಎಷ್ಟು ಕಂ[illegible] ವಹಿಸಿದೆ [illegible] ಸಹ್ಯವೃತ್ತಿ [illegible] ಪರೋಪಕಾರ ಮುಂತಾದ [illegible] ಸಿದ್ದಮ್ಮಬಾಯಿಯವರನ್ನು [illegible] ಕಾಲದಲ್ಲಿ ಕಾಣುವದು [illegible] ಅತಿಶಯೋಕ್ತಿಯಾಗದು [illegible] ಕೀರ್ತಿಶಾಲಿನಿಯಾದ ಅಹಲ್ಯಾಬಾಯಿಯಂತೆ ಇವರ ಸತ್ಕಾರ್ಯಗಳು ಜಗತ್ತಿನಲ್ಲಿ ಪ್ರಜ್ವಲಿಸುತ್ತಿರುವುದರಿಂದ ಇವರನ್ನು ಮೂರ್ತಿಮತ್ತಾದ ಅಹಲ್ಯಾಬಾಯಿಯೆಂದು ಹೇಳಿದರೆ ತಪ್ಪಾಗಲಾರದು ಈ ತಾಯಿಯಲ್ಲಿ ಔದಾರ್ಯವು ಮಿಗಿಲಾಗಿರುತ್ತದೆ ಈ ತಾಯಿಯ ಔದಾರ್ಯದ ಸುದ್ದಿಯನ್ನು ಕೇಳಿ ಇವರ ಆಪ್ತಜನರಾದ ಸಧ್ಯ ಮುಂಬಯಿಯಲ್ಲಿ ಡಾಕ್ಟರ ಕೆಲಸವನ್ನು ಮಾಡುತ್ತಿರುವ ಶ್ರೀ॥ ಎಸ್. [illegible] ಮೇಲಿನಕಟ್ಟಿ ಇವರ ತತ್ಕ್ಷಣವೇ ಇಲ್ಲಿಗೆ ಹೊರಟು ಬಂದು ತಮ್ಮ ಅಕ್ಕಂದಿರ ಸತ್ಕಾರ್ಯಕ್ಕೆ ವಿಶೇಷ ಸಹಾಯವನ್ನಿತ್ತರು ಮತ್ತು ಸಿದ್ದರಾಮಪ್ಪ ಬುಗಡೆ ರೇವಣಸಿದ್ಧಪ್ಪ [illegible] ಇವರೂ ಸಹ ಸಹಾಯ ಮಾಡಿದರು ಈ ತಾಯಿಯು ಮಾಡುತ್ತಿರುವ ಸತ್ಕಾರ್ಯಗಳು ನಿರ್ವಿಘ್ನವಾಗಿ ಜರುಗಲೆಂದೂ ಉಭಯ ಮಾತೆಗಳಿಗೂ ಇವರ ಚಿರಂಜೀವಿಗಳಿಗೂ ಮತ್ತು ಇವರ ತಮ್ಮಂದಿರಾದ ಡಾಕ್ಟರವರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ಇಷ್ಟಾರ್ಥಸಿದ್ಧಿಯನ್ನೂ ಆಯುರಾರೋಗ್ಯಭಾಗ್ಯವನ್ನೀಯಲೆಂದು ಪ್ರಾರ್ಥಿಸುತ್ತೇನೆ

ವಿರೂಪಾಕ್ಷಸ್ವಾಮಿ ದಾವಣಗೆ
ಸೊಲ್ಲಾಪುರ

ಗುರುಕೃಪೆ

ಗುರುಕೃಪೆಯನ್ನು ಸಂಪಾದಿಸುವುದೇ ಮಾನವನ ಮುಖ್ಯ ಕರ್ತವ್ಯವು ಗುರುಕೃಪೆಗೋಸ್ಕರವೇ "ಷಣ್ಮಾಸಾನ್ ವತ್ಸರಂ ವಾಪಿ ಯಾವದೇಷ ಪ್ರಸೀದತಿ' ಆರು ತಿಂಗಳವಾಗಲಿ ವರ್ಷವಾಗಲಿ ಇಲ್ಲವೆ ಗುರುಕೃಪೆಯಾಗುವವರೆಗೂ ಸೇವೆಯನ್ನು ಮಾಡಬೇಕೆಂದು ಶ್ರೀರೇಣುಕ ಗೀತೆಯು ಆಜ್ಞಾಪಿಸುತ್ತದೆ ಮುಕ್ತಿಮೂಲಂ ಗುರೋಃ ಕೃಪಾ ಶ್ರೀಗುರುವಿನ ಕೃಪೆಯೇ ಮುಕ್ತಿಗೆ ಮುಖ್ಯವಾದುದೆಂದು ಗುರುಗೀತೆಯೂ ಸಹ ಉದ್ಘೋಷಿಸುತ್ತದೆ ಆದ್ದರಿಂದ ಮಾನವರು ಧನ, ಕನಕ, ವಸ್ತು, ವಾಹನಾದಿಗಳನ್ನು ಸಂಪಾದಿಸದಿದ್ದರೂ ಅಡ್ಡಿಯಿಲ್ಲ, ಗುರುಕೃಪೆಯೊಂದನ್ನು ಮಾತ್ರ ಅವಶ್ಯವಾಗಿ ಸಂಪಾದಿಸಬೇಕು ಗುರುಕೃಪೆಯಿಂದಲೇ ಐಹಿಕ, ಪಾರಲೌಕಿಕ ಸುಖಗಳು ಹಸ್ತಗತವಾಗುವವು ಆದುದರಿಂದ ಸುಖಾಪೇಕ್ಷಿಗಳು ಮುಖ್ಯವಾಗಿ ಗುರುಕೃಪೆಯನ್ನು ಪಡೆಯಬೇಕು

ನಿಜಾಮ ಇಲಾಖೆ ಹುಮನಾಬಾದ ತಾ॥ [illegible] ಮೋಘ ಗ್ರಾಮದಲ್ಲಿ ಮ॥ ರಾಮಚಂದ್ರಪ್ಪ ಮತ್ತು ಬಾಪೂರಾವ ಎಂಬೀರ್ವರು ಅಣ್ಣತಮ್ಮಂದಿರುವರು ಇವರೀರ್ವರು ರಾಮ-ಲಕ್ಷ್ಮಣರಂತೆ ಪರಸ್ಪರ ಪ್ರೇಮಿಗಳಾಗಿದ್ದಾರೆ ಇವರಲ್ಲಿರುವ ಗುರುಭಕ್ತಿಯು ನಿಸ್ಸೀಮವಾಗಿದೆ ಇವರು ಹೋಟಗಿ ಶ್ರೀ ಬಾಲತಪಸ್ವಿಗಳಿಂದ ಶಿವದೀಕ್ಷೆಯನ್ನು ಹೊಂದಿದ್ದಾರೆ ತಮ್ಮ ಊರಲ್ಲಿಯೂ ನೂರಾರು ಜನರಿಗೆ ಶಿವದೀಕ್ಷೆಯನ್ನು ಮಾಡಿಸಿದ್ದಾರೆ ಬಾಪೂರಾವ ಎಂಬವರು ೮ ವರ್ಷಗಳ ಹಿಂದೆ ಅನುಷ್ಠಾನವನ್ನು ಮಾಡಿ ತತ್ಕೀರ್ತ್ಯರ್ಥವಾಗಿ ಶ್ರೀರೇವಣಸಿದ್ಧೇಶ್ವರನ ಹೆಸರಿನಿಂದ ಲಿಂಗಸ್ಥಾಪನೆಯನ್ನು ಹೋಟಗಿ ಶ್ರೀಗಳವರಿಂದಲೇ ಮಾಡಿಸಿರುವರು ಆ ರೇವಣಸಿದ್ಧೇಶ್ವರನ ಕೃಪೆಯಿಂದ ಅನೇಕರಿಗೆ ಸುಖಗಳು ಪ್ರಾಪ್ತವಾಗಿವೆ ಶ್ರೀಶೈಲಕ್ಕೆ ಹೋಗಿಬಂದ ಕಾಲಕ್ಕೆ ಬಾಪೂರಾವ ಇವರು ಔಷಧವನ್ನು ಸ್ವೀಕರಿಸದೆ ಶ್ರೀರೇವಣಸಿದ್ಧನ ಮೇಲೆಯೇ ಭಾರವನ್ನು ಹಾಕಿದ ಕಾರಣ ಅವರು ಸುಖಿಗಳಾಗಿದ್ದಾರೆ ಒಂದು ವರ್ಷದ ಹಿಂದೆ ಶ್ರೀರಾಮಚಂದ್ರಪ್ಪನಿಗೆ ಅತ್ಯಂತ ಬಲವಾದ ರೋಗವು ಪ್ರಾಪ್ತವಾಗಿತ್ತು ಇವರೂ ಸಹ ಔಷಧವನ್ನು ಸ್ವೀಕರಿಸದೆ ಶ್ರೀ ರೇವಣಸಿದ್ಧೇಶ್ವರನಲ್ಲಿಯೇ ಭಕ್ತಿಯನ್ನಿಟ್ಟಿದ್ದರು ಇವರ ತಾಯಿಯಾದ ಶ್ರೀಮತಿ ಲಕ್ಷ್ಮೀಬಾಯಿಯವರೂ ಸಹ ಆ ಶ್ರೀರೇವಣಸಿದ್ಧನಲ್ಲಿಯೇ ಭಕ್ತಿಯನ್ನಿಟ್ಟು ದಂಡನಮಸ್ಕಾರವನ್ನೂ ೧೦೧ ಜನ ಚರತೃಪ್ತಿಯನ್ನೂ ಮಾಡುವುದಾಗಿ ಪ್ರಾರ್ಥಿಸಿಕೊಂಡಿದ್ದರು ಅವರ ಭಕ್ತಿಗೆ ಮೆಚ್ಚಿ ಶ್ರೀರೇವಣಸಿದ್ಧೇಶ್ವರನು ರಾಮಚಂದ್ರಪ್ಪನನ್ನು ಆರೋಗ್ಯಶಾಲಿಯನ್ನಾಗಿ ಮಾಡಿದನಲ್ಲದೆ ರಾಮಚಂದ್ರಪ್ಪನಿಗೂ, ಬಾಪೂರಾಯ ಇವರಿಗೂ ಪುತ್ರರತ್ನರನ್ನು ದಯಪಾಲಿಸಿದನು ಬಾಪೂರಾವ ಇವರ ಪುತ್ರನಿಗೆ ಸದ್ಯೋಜಾತನೆಂದೂ ರಾಮಚಂದ್ರಪ್ಪನ ಮಗನಿಗೆ ಶಿವಾನಂದನೆಂದೂ ಮಾರ್ಗಶೀರ್ಷ ಶು॥ ೯ ಗುರುವಾರ ದಿವಸ ಹೋಟಗಿ ಶ್ರೀಗಳಿಂದ ನಾಮಕರಣವು ಮಾಡಲ್ಪಟ್ಟಿತು ಅದೇ ದಿವಸ ಸಾಯಂಕಾಲ ಬಾಪೂರಾವ ಸರದೇಶಮುಖರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಗುರುಕೃಪೆಯ ಮಹತ್ವದ ವಿಷಯದಲ್ಲಿ ಹೋಟಗಿ ಶ್ರೀಗಳ ಪ್ರವಚನವಾಯಿತು ಆ ಕಾಲಕ್ಕೆ ಗುರುಕೃಪೆಯ ಮಾರ್ಗವನ್ನು ತೋರಿಸುವ ಪಂಚಾಚಾರ್ಯ ಪ್ರಭಾದೇವಿಗೆ ೨ರೂ ಗಳು ಸಮರ್ಪಿಸಲ್ಪಟ್ಟವು ಇಲ್ಲಿಯ ಪಂಚಾಚಾರ್ಯ ಭಜನ ಸಂಘವು ಬಹಳ ಚೆನ್ನಾಗಿದೆ ಶಿವರಾಯ ಶೇಟಿಯವರೇ ಈ ಭಜನ ಸಂಘದ ಸುಧಾರಣೆಗೆ ಕಾರಣರು

ಗುರುಸಿದ್ದಯ್ಯ ಹಿರೇಮಠ
ಮೋಘ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೩ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಾರಿ ಭಾಷಣಮುಲು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳವು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೫ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	4 As
The Philosophical Aspect of Virasaivism (*English*)	8 As
Speeches by Pandit Shri Kashinatha Shastriji (*English*)	12 As
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धान्तशिखामणिः (मूल)	६ आ
[illegible] (वीरशैवप्राचीनग्रन्थोद्धृतम्)	४ आ.
[illegible]कारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು

ಮ್ಯಾನೇಜರ- **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯರ [illegible] ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ [illegible] ಲೋಕವಂ ॥

ಸ್ಥಳದವರಿಗೆ ೩ ರೂ

ಪರಸ್ಥಳದವರಿಗೆ ೩ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ನೇ ಜನವರಿ ೧೯೪೩ [ಸಂಚಿಕೆ ೪೧

ಸಂಸ್ಥಾನದ ಖನಿಜ ಸಂಪತ್ತು

ನಲವತ್ತು ಬಗೆಯ ಉಪಯುಕ್ತವಾದ ಖನಿಜಗಳು

ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಜಿಯಲಾಜಿಕಲ್ ಮೈನಿಂಗು ಮತ್ತು ಮೆಟಲರ್ಜಿಕಲ್ ಸಂಘದ ವಾರ್ಷಿಕ ಸಭೆಯಲ್ಲಿ ಭಾಷಣ ಮಾಡುತ್ತಾ, ಪ್ರಧಾನ ಶಿರೋಮಣಿ ಶ್ರೀ ಎನ್ ಮಾಧವರಾಯರು ತಮ್ಮನ್ನು ಈ ಸಭೆಗೆ ಆಹ್ವಾನಿಸಿದುದಕ್ಕಾಗಿಯೂ ಮತ್ತು ಮಹಾಸ್ವಾಮಿಯವರು ತಮಗೆ ಅನುಗ್ರಹಿಸಿದ ಪ್ರಶಸ್ತಿಗಾಗಿ ಸೂಚಿಸಿದ ಅಭಿನಂದನೆಗಾಗಿಯೂ ಸದಸ್ಯರನ್ನು ವಂದಿಸಿದರು ಮೈಸೂರಿನ ಖನಿಜ ಸಂಪತ್ತನ್ನು ಶೋಧಿಸುವ ವಿಷಯದಲ್ಲಿ ಶ್ರೀಮಾನ್ ಬಿ ರಾಮರಾಯರು ಓದಿದ ವಿಚಾರ ಪರಿಪೂರ್ಣವಾದ ವರದಿಗಾಗಿ ಅವರನ್ನು ಪ್ರಶಂಸಿಸಿ, ಭಾರತದಲ್ಲಿ ಮೊಟ್ಟಮೊದಲು ಜಿಯಲಾಜಿಕಲ್ ಇಲಾಖೆಯನ್ನು ಸ್ಥಾಪಿಸಿದವರಲ್ಲಿ ಮೈಸೂರು ಸರ್ಕಾರದವರೂ ಒಬ್ಬರೆಂಬುದನ್ನು ತಿಳಿಸಿದರು ಖಾಸಗಿಯವರು ನಾಡಿನ ಖನಿಜ ಸಂಪತ್ತನ್ನು ಶೋಧಿಸುವುದಕ್ಕೆ ಅವಕಾಶವನ್ನು ಕೊಡುವುದರಿಂದ ಅಷ್ಟು ಉತ್ತಮವಾದ ಫಲಿತಾಂಶಗಳುಂಟಾಗಿಲ್ಲವೆಂದೂ ಇದರಿಂದ ಉತ್ತಮವಾದ ಖನಿಜವೆಲ್ಲವೂ ಮನಸ್ವಿಯಾಗಿ ರಫ್ತಾಗಿ ಕೀಳು ದರ್ಜೆಯ ಖನಿಜವು ಮಾತ್ರ ಉಳಿಯುವುದೆಂದೂ ತಿಳಿಸಿ ಮ್ಯಾಂಗನೀಸು ಮತ್ತು ಕ್ರೋಂ ಖನಿಜಗಳ ಉದಾಹರಣೆಯನ್ನು ಸೂಚಿಸಿದರು ಖನಿಜಗಳನ್ನು ಶೋಧಿಸುವ ವಿಷಯದಲ್ಲಿ ಸ್ವಲ್ಪ ಹಿಡಿತವನ್ನಿಟ್ಟುಕೊಳ್ಳುವುದು ಯುಕ್ತವೆಂದು ತಿಳಿಸಿದರು ಭೂಗರ್ಭ ಶಾಸ್ತ್ರಿಗಳು ಮಾತ್ರವೇ ಅಲ್ಲದೆ ಈ ನಿಮ್ಮ ಸಂಘದ ವಿಷಯದಲ್ಲಿ ಆಸಕ್ತಿಯುಳ್ಳ ಇತರರೂ ಸಹ ಸದಸ್ಯರಾಗಲು ಅವಕಾಶವಿರುವುದನ್ನು ಕೇಳಿ ದಿವಾನರವರು ಹರ್ಷಿಸಿ, ನಾಡಿನ ಖನಿಜಸಂಪತ್ತನ್ನು ಶೋಧಿಸಲು ಎಲ್ಲರ ಸಹಕಾರವೂ ಅವಶ್ಯಕವೆಂದು ತಿಳಿಸಿದರು

ಮೇಲೆ ಹೇಳಿದ ಸಂಘದ 18 ನೇ ವಾರ್ಷಿಕ ಸಭೆಯ ಅಧ್ಯಕ್ಷ ಭಾಷಣ ಮಾಡುತ್ತಾ ಸಂಸ್ಥಾನದ ಭೂಗರ್ಭ ಇಲಾಖೆಯ ಡೈರೆಕ್ಟರವರಾದ ಬಿ ರಾಮರಾಯರು, ಈಚಿನ ವರ್ಷಗಳಲ್ಲಿ ಒಂದು ನಿರ್ದಿಷ್ಟವಾದ ವ್ಯವಸ್ಥೆ ಇಲ್ಲದೆ ಖನಿಜಗಳನ್ನು ಶೋಧಿಸಿದುವುದರಿಂದ ಹಲವು ಖನಿಜಗಳ ಉತ್ತಮವಾದ ಭಾಗವು ರಫ್ತಾಗಿ, ಕೆಲವು ಕೆಳದರ್ಜೆಯ ಮತ್ತು ಕೆಲಸಕ್ಕೆ ಬಾರದ ಖನಿಜವು ಮಾತ್ರ ಉಳಿದಿದೆ ಆದುದರಿಂದ ಖನಿಜಗಳಲ್ಲಿ ಬಹಳ ಎಚ್ಚರಿಕೆಯಿಂದ ನಾನಾ ದರ್ಜೆಗಳನ್ನು ವಿಂಗಡಿಸಿ, ಕೇವಲ ಅತ್ಯುತ್ತಮವಾದ ದರ್ಜೆಯ ಖನಿಜವನ್ನು ಎಲ್ಲ ಕೆಲಸಗಳಿಗೂ ಉಪಯೋಗಿಸದೆ, ಸ್ವಲ್ಪ ಸಾಧಾರಣವಾದ ದರ್ಜೆಯನ್ನು ಉಪಯೋಗಿಸುವುದು ಒಳ್ಳೆಯದು ಏಕೆಂದರೆ ಹಲವು ಕೈಗಾರಿಕೆಗಳಿಗೆ ಅತ್ಯಂತ ಉತ್ತಮ ದರ್ಜೆಯ ಖನಿಜವೇ ಆಗಬೇಕೆಂದಿಲ್ಲ ಎಂದು ತಿಳಿಸಿದರು ಶ್ರೀಮಾನ್ ರಾಮರಾಯರ ಭಾಷಣದ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ

“ಮೈಸೂರಿನಲ್ಲಿ ಸುಮಾರು ನಲವತ್ತಕ್ಕಿಂತಲೂ ಹೆಚ್ಚು ಸಂಖ್ಯೆಯ ಖನಿಜಗಳಿವೆ ಇವುಗಳಲ್ಲಿ ಚಿನ್ನ, ಕಬ್ಬಿಣ, ಮ್ಯಾಂಗನೀಸು, ಕ್ರೋಮಿಯಂ, ತಾಮ್ರ ಇವೇ ಮುಖ್ಯವಾದುವು ಸೀಸ, ಅರ್ಸೆನಿಕ್ ಮತ್ತು ಅಂಟಿಮೋನಿ, ಎಂಬುವು ಸ್ವಲ್ಪ ಸ್ವಲ್ಪವಾಗಿ ದೊರೆಯುತ್ತವೆ

ಚಿನ್ನ

ಭಾರತದಲ್ಲಿ ದೊರೆಯುವ ಚಿನ್ನದ ಸೇಕಡಾ 99 ರಷ್ಟು ಭಾಗವು ಮೈಸೂರಿನಲ್ಲಿ ದೊರೆಯುತ್ತದೆ 1882ನೇ ಇಸವಿಯಲ್ಲಿ ಈ ಕೈಗಾರಿಕೆಯು ಸ್ಥಾಪಿತವಾದ ಲಾಗಾಯಿತು ಇಲ್ಲಿಯವರೆಗೂ ಸಂಸ್ಥಾನದಲ್ಲಿ ಸುಮಾರು 20 ಮಿಲಿಯನ್ ಔನ್ಸುಗಳಷ್ಟು ಅಂದರೆ 1/9 ಕೋಟಿ ರೂಪಾಯಿಗಳ ಬೆಲೆ ಬಾಳುವಷ್ಟು ಚಿನ್ನವು ಉತ್ಪತ್ತಿಯಾಗಿದೆ ಈಗ ಕೋಲಾರದ ಚಿನ್ನದ ಗಣಿಯ ಪ್ರದೇಶದಲ್ಲಿ ಮಾತ್ರ ನಾಲ್ಕು ಗಣಿಗಳಲ್ಲಿ ಸರಾಸರಿ ವರ್ಷವೊಂದಕ್ಕೆ 300000 ಔನ್ಸುಗಳಷ್ಟು ಚಿನ್ನವು ದೊರೆಯುತ್ತದೆ ಹಿಂದೆ ಚಿನ್ನವು ಸಂಸ್ಥಾನದಲ್ಲಿ ನೂರಾರು ಕಡೆಗಳಲ್ಲಿ ದೊರೆಯುತ್ತಿದ್ದಿತೆನ್ನುವುದಕ್ಕೆ ಅಲ್ಲಲ್ಲಾ ಚಿನ್ನವನ್ನು ತೆಗೆಯುವ ಸಾಧನಗಳಿರುವುದೇ ಸಾಕ್ಷಿಯಾಗಿದೆ ಇವುಗಳೆಲ್ಲವನ್ನೂ ದೀರ್ಘವಾಗಿ ಪರೀಕ್ಷಿಸಿದೆ ಆದರೆ ಲಾಭದಾಯಕವಾದ ರೀತಿಯಲ್ಲಿ ಚಿನ್ನವು ಎಲ್ಲಿಯೂ ದೊರೆಯುವಂತೆ ತೋರಲಿಲ್ಲ ಚಿನ್ನದ ಬೆಲೆಯು ವಿಶೇಷವಾಗಿ ಹೆಚ್ಚಿರುವುದರಿಂದ ಕಳೆದ ಮೂರು ನಾಲ್ಕು ವರ್ಷಗಳಲ್ಲಿ ಇನ್ನೂ ಹೆಚ್ಚಾಗಿ ಪರಿಶೀಲನಗಳನ್ನು ನಡೆಯಿಸಲಾಯಿತು 1939 ರಲ್ಲಿ ಇಲಾಖೆಯವರು, ಹೊನ್ನಾಳಿ ತಾಲ್ಲೂಕು ಪಲವನಹಳ್ಳಿಯಲ್ಲಿ ಪರೀಕ್ಷೆಗಳನ್ನು ನಡೆಯಿಸಿದರು ಈ ಪ್ರದೇಶಗಳಲ್ಲಿ ಚಿನ್ನವು ದೊರೆಯುವ ಸಂಭವವು ತೀರ ಕಡಿಮೆಯೆಂದು ಕಂಡು ಬಂದಿತು ಇದೇ ಪ್ರದೇಶದಲ್ಲಿ 10000 ಘನ ಅಡಿ ಮಣ್ಣನ್ನು ತೋಡಿದಾಗ ಸುಮಾರು 20 ತೊಲ ಚಿನ್ನವು ದೊರೆಯಿತು ಅಲ್ಲದೆ 4 ಸೇರು ತೂಕದ ಒಂದು ಚಿನ್ನದ ಗಟ್ಟಿಯೂ (ಅದಿರು) ಸಹ ದೊರೆಯಿತು ಈ ಪ್ರದೇಶದಲ್ಲಿ ಚಿನ್ನವು ಅಲ್ಲಲ್ಲಿ ದೊರೆಯುತ್ತದೆಂದು ಕಂಡು ಬಂದರೂ, ಒಂದು ಘನ ಅಡಿ ಜಾಗಕ್ಕೆ ಒಂದರಿಂದ ಎರಡು ಗ್ರೇಯಿನುಗಳಷ್ಟು ಚಿನ್ನವು ಮಾತ್ರ ದೊರೆಯುವುದಾಗಿರುವುದರಿಂದ ಇಲ್ಲಿ ಈ ಕೈಗಾರಿಕೆಯನ್ನು ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳುವುದು ಲಾಭದಾಯಕವಲ್ಲ ಆದರೆ, ಮನೆ ಕೈಗಾರಿಕೆಯ ರೀತಿಯಲ್ಲಿ ಈ ರೀತಿ ಮಣ್ಣಿನಿಂದ ಚಿನ್ನವನ್ನು ತೆಗೆಯುವ ಕೈಗಾರಿಕೆಯನ್ನು ಮುಂದುವರಿಸಬಹುದಾಗಿದೆ

ಕಬ್ಬಿಣ

ಸಂಸ್ಥಾನದಲ್ಲಿ ನಾನಾ ಬಗೆಯ ಕಬ್ಬಿಣದ ಅದಿರುಗಳೂ ನೂರಾರು ಮಿಲಿಯನ್ ಟನ್ನುಗಳಷ್ಟು ದೊರೆಯುತ್ತವೆ ಕೆಮ್ಮಣ್ಣುಗುಂಡಿಯಲ್ಲಿ ಈಗ ಕಚ್ಚಾ ಅದಿರನ್ನು ತೆಗೆದು ಭದ್ರಾವತಿಯ ಕಾರ್ಖಾನೆಗೆ ಉಪಯೋಗಿಸುತ್ತಿದೆ ಈ ಪ್ರದೇಶವೊಂದರಲ್ಲಿಯೇ ಸುಮಾರು 15, 20 ಮಿಲಿಯನ್ ಟನ್ನುಗಳಷ್ಟು ಉತ್ತಮವಾದ ಕಬ್ಬಿಣದ ಅದಿರನ್ನು ಪಡೆಯಬಹುದಾಗಿದೆ. ಇಲ್ಲಿ ದೊರೆಯುವ ಕಬ್ಬಿಣದ ಅದಿರು ಈಗಿನ ಲೆಕ್ಕದ ಪ್ರಕಾರ ಭದ್ರಾವತಿ ಕಾರ್ಖಾನೆಗೆ ಸುಮಾರು 500 ವರ್ಷಗಳವರೆಗೆ ಸಾಕಾಗುವುದು

ಮ್ಯಾಂಗನೀಸ್

1906 ನೇ ಇಸವಿ ಲಾಗಾಯಿತು 1930ರ ವರೆಗೂ ಸಂಸ್ಥಾನದಲ್ಲಿ ಮ್ಯಾಂಗನೀಸು ಅದಿರನ್ನು ತೆಗೆಯುತ್ತಿದ್ದಿತು ಸುಮಾರು ½ ಮಿಲಿಯನ್ ಟನ್ನುಗಳಷ್ಟು ಮ್ಯಾಂಗನೀಸನ್ನು ತೆಗೆಯಲಾಗಿದೆ ಅಲ್ಲಿಂದೀಚೆಗೆ ಈ ಅದಿರನ್ನು ಹೆಚ್ಚಾಗಿ ತೆಗೆದಿಲ್ಲ ಈಗ ಅಲ್ಲಿ ಉಳಿದಿರುವುದು ಕೀಳು ದರ್ಜೆಯ ಅದಿರು ಇದಕ್ಕೆ ಪರದೇಶಗಳಲ್ಲಿ ಗಿರಾಕಿಯೂ ಸಹ ಇರುವುದಿಲ್ಲ ಖನಿಜದ ಗುಣಾಂಶವನ್ನು ಹೆಚ್ಚಿಸಿ ಸ್ಥಳೀಯ ಕೈಗಾರಿಕೆಗಳಿಗೆ ಇದನ್ನು ಉಪಯೋಗಿಸಲು ತಕ್ಕ ಏರ್ಪಾಡನ್ನು ಮಾಡುತ್ತಿದೆ

ಕ್ರೋಮಿಯಂ

ಭಾರತದಲ್ಲಿ ಕ್ರೋಮೈಟಿನ ಅದಿರು ದೊರೆಯುವ ಪ್ರದೇಶಗಳಲ್ಲಿ ಮೈಸೂರೇ ಬಹಳ ಮುಖ್ಯವಾಗಿದೆ ಹಾಸನ ಜಿಲ್ಲೆಯಲ್ಲಿ ಸುಮಾರು ಅರ್ಧ ಮಿಲಿಯನ್ ಟನ್ನುಗಳಷ್ಟೂ, ಮೈಸೂರು ಜಿಲ್ಲೆಯಲ್ಲಿ ಸುಮಾರು 2 ಲಕ್ಷ ಟನ್ನುಗಳಷ್ಟು ಕ್ರೋಮೈಟು ಅದಿರು ದೊರೆಯುವುದೆಂದು ಅಂದಾಜಾಗಿದೆ ಸುಮಾರು ಶೇಕಡಾ 35ರಷ್ಟು ಕ್ರೋಮಿಕ್ ಆಕ್ಸೈಡು ಇರುವ ಕೀಳು ದರ್ಜೆಯ ಅದಿರು ಹೆಚ್ಚಾಗಿ ದೊರೆಯುತ್ತಿದೆ ಇದನ್ನು ಉತ್ತಮಗೊಳಿಸಬಹುದಾಗಿದೆ ಇಲ್ಲಿಯವರೆಗೂ ಈ ಅದಿರನ್ನು ರಫ್ತಿಗಾಗಿ ಮಾತ್ರವೇ ತಯಾರಿಸುತ್ತಿದ್ದಿತು ಫೆರ್ರೋಕ್ರೋಂ, ರಿಫ್ರ್ಯಾಕ್ಟರಿ ಇಟ್ಟಿಗೆಗಳು ಮತ್ತು ಡೈಕ್ರೋಮೈಟುಗಳನ್ನು ತಯಾರಿಸಲು ಈ ಅದಿರು ಸಾಮಾನ್ಯವಾಗಿ ಉಪಯೋಗವಾಗುತ್ತದೆ ಸಂಸ್ಥಾನದಲ್ಲಿ ಈಗ ಸುಮಾರು ವರ್ಷವೊಂದಕ್ಕೆ 1000 ಟನ್ನುಗಳಷ್ಟು ಅದಿರನ್ನು ಉಪಯೋಗಿಸುತ್ತಿವೆ ಫೆರೋಕ್ರೋಮನ್ನು ತಯಾರಿಸಲು ಒಂದು ವಿದ್ಯುಚ್ಛಕ್ತಿಯ ಫರ್ನೇಸು ಏನಾದರೂ ಸ್ಥಾಪಿತವಾದರೆ ವರ್ಷವೊಂದಕ್ಕೆ ಸುಮಾರು 2000 ಟನ್ನುಗಳಷ್ಟು ಅದಿರನ್ನು ಉಪಯೋಗಿಸಬಹುದಾಗಿದೆ

ತಾಮ್ರ

ಸಂಸ್ಥಾನದಲ್ಲಿ ಹಲವು ಪ್ರದೇಶಗಳಲ್ಲಿ ತಾಮ್ರದ ಅದಿರು ದೊರೆಯುತ್ತದೆಂದು ಕಂಡುಬಂದಿದೆ ನಮ್ಮ ಪೂರ್ವಿಕರು, ಚಿತ್ರದುರ್ಗ ಜಿಲ್ಲೆಯಲ್ಲಿ ಇಂಗಳದಾಳು, ಮತ್ತು ಅರಸೀಕೆರೆಯ ಬಳಿ ಕಲ್ಯಾದಿ, ಈ ಪ್ರದೇಶಗಳಲ್ಲಿ ತಾಮ್ರದ ಅದಿರನ್ನು ತೆಗೆದು ಕರಗಿಸುತ್ತಿದ್ದರೆಂದು ಕಂಡು ಬಂದಿದೆ ಆದರೆ ಪರೀಕ್ಷಿಸಿದ್ದರಲ್ಲಿ ಈ ಪ್ರದೇಶದಲ್ಲಿ ದೊರೆಯುವ ಲೋಹವು ಹೆಚ್ಚಾಗಿಲ್ಲ ಮತ್ತು ಆಧುನಿಕ ಕಾರ್ಖಾನೆಗಳಿಗೆ ಸಾಕಾಗುವಷ್ಟು ಪ್ರಮಾಣದಲ್ಲಿ ದೊರೆಯಲಾರದು ಆದಾಗ್ಯೂ ಇನ್ನೂ ಹೆಚ್ಚಿನ ಪರಿಶೀಲನೆಗಳು ನಡೆಯಬೇಕಾಗಿವೆ

ಬೆಳ್ಳಿ

ಮೈಸೂರಿನಲ್ಲಿ ಬೆಳ್ಳಿಯ ಅದಿರು ದೊರೆಯುವಂತೆ ತೋರಲಿಲ್ಲ ಆದರೆ ಈ ಲೋಹವು ತಾಮ್ರದೊಡನೆ

[೯ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೩ನೇ ಜನವರಿ ೩ || ೨೫ನೆಯ ಸೋಮವಾರ

ಸಚಿವಪದವಿಯು ಯಾರಿಗೆ ಸಲ್ಲಬೇಕು?

ಮೈಸೂರು ಸಂಸ್ಥಾನದಲ್ಲಿ ನ್ಯಾಯಾಂಗಸಚಿವರಾಗಿದ್ದ ಶ್ರೀ|| ಎ ವಿ ರಾಮನಾಥನ್‌ರವರು ಭರತಪುರ ಸಂಸ್ಥಾನದ ದಿವಾನರಾಗಿ ಇದೇ ತಿಂಗಳು ೨೨ನೆಯ ತಾರೀಖಿನ ದಿವಸ ಭರತಪುರಕ್ಕೆ ಪ್ರಯಾಣಮಾಡಿದರು. ಸದ್ಯಃ ಖಾಲಿಯಾಗಿರುವ ಆ ಸ್ಥಾನಕ್ಕೆ ಒಬ್ಬ ಮಹಾಮೇಧಾವಿಗಳನ್ನು ನಿಯಮಿಸುವುದು ಸೂಕ್ತವಾಗಿದೆ. ಈ ಸ್ಥಾನದ ಬಗ್ಗೆ ಅನೇಕ ಜನರು ಅನೇಕವಿಧವಾಗಿ ಅಭಿಪ್ರಾಯಪಡುತ್ತ ಒಬ್ಬೊಬ್ಬರ ಹೆಸರುಗಳನ್ನು ಸೂಚಿಸಲು ಪ್ರಾರಂಭಿಸಿರುವರು. ಈ ಸಚಿವಸ್ಥಾನವು ಅತ್ಯಂತ ಜವಾಬ್ದಾರಿಯುಳ್ಳ ಸ್ಥಾನವಾಗಿರುವುದರಿಂದ ಆ ಮಹಾಸ್ಥಾನಕ್ಕೆ ಅಸಾಧಾರಣಮೇಧಾವಿಗಳೂ ನಿಷ್ಪಕ್ಷಪಾತಿಗಳೂ, ಕಾರ್ಯಕುಶಲರೂ ಸದಾಚಾರದವರೂ ಆದವರನ್ನೇ ನಿಯಮಿಸುವುದು [illegible]ವಾಗಿದೆ. ಸದ್ಯಃ ಈ ಎಲ್ಲ ಗುಣಗಳಿಂದಲೂ [illegible]ರಾದವರೆಂದರೆ ರಾಜಮಂತ್ರಪ್ರವೀಣ ದಿವಾನ್ ಬಹದ್ದೂರ್ ಸಿ ಮಹಾದೇವನ್ ನವರು. ನಿಸ್ಸಂದೇಹವಾಗಿ ಹೇಳಬಹುದಾಗಿದೆ. ಇವರು ಮೈಸೂರು ದೇಶದ ಹೈಕೋರ್ಟಿನ ಚೀಫ್ ಜಸ್ಟಿಸ್ ಸ್ಥಾನವನ್ನಲಂಕರಿಸಿ ತಮ್ಮ [illegible] ಕಾಲದಲ್ಲಿ ಅನೇಕಸುಧಾರಣೆಗಳನ್ನು ಮಾಡಿದರು. ಅವರಲ್ಲಿ ಒಂದು ಅತ್ಯಂತ ಸ್ಮರಣೀಯವಾಗಿರುವುದು ಆದೇನೆಂದರೆ — ಕಳೆದ ೧೫೦ ವರ್ಷಗಳಿಂದ ಬ್ರಿಟಿಷ್ ಸಿವಿಲು ಮ್ಯಾಜಿಸ್ಟ್ರೇಟರು ಒಬ್ಬ ರಾಯತನ ಕಂದಾಯ [illegible] ಸಾಮಾನ್ಯ ತಪ್ಪಿಗೂ ಕೂಡ ಸೈನ್ಯದ ಮೂಲಕ ಪ್ರಜೆಗಳನ್ನು ಕುರಿಗಳಂತೆ ಹಿಡಿದು ತರಿಸುವ ಪದ್ಧತಿಯನ್ನಿಟ್ಟುಕೊಂಡಿದ್ದರು. ಈ ಅನ್ಯಾಯ ಪದ್ಧತಿಯು ಮೈಸೂರು ದೇಶದಲ್ಲೇ [illegible]ವಾಗಿ ಸಾಗಿತ್ತು. ನ್ಯಾಯವಿರೋಧವಾದ ಈ ಪದ್ಧತಿಯನ್ನು ಯಾವ ನ್ಯಾಯಾಧೀಶರೂ ಕಾಯಿದೆಗನುಸಾರವಾಗಿ ಖಂಡಿಸಿದ್ದಿಲ್ಲ. ಆದರೆ ಈ ಧೀರೋದಾತ್ತಪುರುಷರು ಈ ಅನ್ಯಾಯಪದ್ಧತಿಯನ್ನು ಅತ್ಯದ್ಭುತವಾದ ಕಾಯಿದೆ ಪಾಂಡಿತ್ಯದಿಂದಲೂ, ವಿಶಾಲವಾದ ಕಾನೂನಿನ ಬಲದಿಂದಲೂ ಖಂಡಿಸಿ ಮೈಸೂರು ದೇಶದ ಪ್ರಜೆಗಳಿಗೆ ವಿಶೇಷಸೌಖ್ಯವನ್ನುಂಟುಮಾಡಿ ಈ ದೇಶದ ಪ್ರಭಾವವನ್ನು ಸರ್ವತ್ರ ಪ್ರಕಾಶಗೊಳಿಸಿದರು. ಈ ವಿಷಯವು ಮೈಸೂರು ದೇಶದ ಚರಿತ್ರದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡತಕ್ಕದ್ದಾಗಿದೆ. ಆ ಸಮಯದಲ್ಲಿ ಬ್ರಿಟಿಷ್ ದೇಶದ ಮಹಾಮಹಾಮೇಧಾವಿಗಳಿಂದ ಹೊಗಳಿಸಿಕೊಂಡ ವೀರಪುರುಷರಿವರು. ಉನ್ನತಾಧಿಕಾರದಲ್ಲಿರುವವರು ಈ ರೀತಿ ಅದ್ಭುತ ಪ್ರತಿಭಾಸಂಪನ್ನರೂ ಧೈರ್ಯಶಾಲಿಗಳೂ ಆಗಿರಬೇಕು. ಹಾಗಿಲ್ಲದಿದ್ದರೆ ಆ ಸ್ಥಾನಕ್ಕೆ ಎಂದೂ ಶೋಭೆಯುಂಟಾಗಲಾರದು. ಈಗಿನ ಯುದ್ಧದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಂತೂ ಇಂತಹ ಧೀರೋದಾತ್ತಪುರುಷರ ಆವಶ್ಯಕತೆಯು ಹೆಚ್ಚಾಗಿರುತ್ತದೆ. ಆದುದರಿಂದ ಮಹಾಕರ್ತವ್ಯಶಾಲಿಗಳಾದ ಇವರೇ ಸಚಿವಸ್ಥಾನಕ್ಕೆ ಯೋಗ್ಯರೆಂದು ಬಹು ಜನರು ಅಭಿಪ್ರಾಯಪಡುತ್ತಿರುವರು.

ಅಲ್ಲದೆ ಈಗ ಇರತಕ್ಕ ಮಂತ್ರಿವರ್ಗದಲ್ಲಿ ವೀರಶೈವರಾರೂ ಇರುವುದಿಲ್ಲ. ಸಮಾಜದೃಷ್ಟಿಯಿಂದಲೂ ಕೂಡ ಇವರ ನೇಮಕವು ಆವಶ್ಯಕವಾದುದೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ಮಹಾಪ್ರಭುಗಳವರೂ ಗೌರ್ನಮೆಂಟಿನವರೂ ಈ ಸಮಸ್ಯೆಯನ್ನು ಕೂಲಂಕಷವಾಗಿ ವಿಮರ್ಶಿಸಿ, ಆ ಸ್ಥಾನಕ್ಕೆ ಯೋಗ್ಯರಾದ ಈ ಧೀರೋದಾತ್ತಪುರುಷರನ್ನೇ ನಿಯಮಿಸುವರೆಂದು ನಂಬಿದ್ದೇವೆ.

ಯುದ್ಧವಾರ್ತೆ.

ನಾರ್ವೆಯಲ್ಲಿ ಪ್ರಚಾರ

ಮಿತ್ರಸೇನೆಗಳು ನಾರ್ವೆಗೆ ಮುತ್ತಿಗೆ ಹಾಕುವ ಸಂಭವವಿರುವುದು ಅಲ್ಲಿಯ ಜನರಿಗೆ ಸರಿಯಾದ ತಿಳುವಳಿಕೆ ಕೊಡಲು ನಾರ್ವೆಯ ಪತ್ರಿಕೆಗಳಿಗೆ ಅನುಮತಿ ಕೊಡಲಾಗಿದೆ. ಇದುವರೆಗೆ ನಾರ್ವೆ ಪತ್ರಿಕೆಗಳು ಮುತ್ತಿಗೆಯ ವಿಷಯವನ್ನೇ ಎತ್ತುವಂತಿದ್ದಿಲ್ಲ

ಬರ್ಲಿನ್‌ಮೇಲೆ ದಾಳಿ

ಕಳೆದ [illegible]ಯ ತಾರೀಖಿನ ದಿವಸ ಬರ್ಲಿನ್ ನಗರದ ಮೇಲೆ ಬ್ರಿಟಿಷ್ ವಿಮಾನಗಳು ಭಯಂಕರ ದಾಳಿ [illegible] ನಗರದ ಅನೇಕಕಡೆ ಅಗಾಧ [illegible] ಹತ್ತಿಕೊಂಡಿತೆಂದೂ ಈ ಮುತ್ತಿಗೆಯಿಂದ ೨೨ ಬ್ರಿಟಿಷ ವಿಮಾನಗಳು ಹಿಂತಿರುಗಲಿಲ್ಲವೆಂದೂ ವರದಿಯಾಗಿದೆ

ಜರ್ಮನಿಗೆ ರಷ್ಯನರ ಭಯ

ಜರ್ಮನಿಯೊಳಗೆ ರಷ್ಯನರು ಕಾಲಿಡುವ ಸಂಭವ [illegible] ನಾಜಿ ಅಧಿಕಾರಿಗಳು ಹೊಟ್ಟೆನೋವಿ[illegible] ವ್ಯಾಕುಲಗೊಂಡಿರುವರೆಂದು ಸ್ಟಾಕ್‌ಹೋಂ ಪತ್ರಿಕೆಯೊಂದು ತಿಳಿಸುತ್ತದೆ. ರಷ್ಯನರು ಜರ್ಮನಿಯ ಕಡೆಗೆ [illegible] ಪ್ರಾರಂಭಿಸಿದರೂ ಸಹ ಅವರು ಜರ್ಮನ್ ಗಡಿಗೆ ಬರಲು ಇನ್ನೂ ಬಹಳ ಕಾಲವಿದೆ ಎಂದು ಹೇಳುವರು

ಅಕ್ಯಾಬ್ ಮೇಲೆ ವಿಮಾನ ಕದನಗಳು

ಬರ್ಮದ ಆರಕಾನ್ ಜಿಲ್ಲೆಯಲ್ಲಿ ಜಪಾನರ ಪ್ರತಿಭಟನೆ ಇನ್ನೂ ಜೋರಾಗಿದೆ. ೨೦ನೇ ತಾರೀಖಿನ ಬೆಳಗ್ಗೆ ಅಕ್ಯಾಬ್ ದ್ವೀಪದಲ್ಲಿರುವ ಇಂಡಾಲಿ ಎಂಬ ಹಳ್ಳಿಯಮೇಲೆ ಬ್ರಿಟಿಷ ವಿಮಾನಗಳು ಮುತ್ತಿಗೆ ನಡೆಸಿದವು. ಒಂದು ಜಪಾನ್ ವಿಮಾನವು ಮುರಿದುಬಿತ್ತು

ಜರ್ಮನಿಗೆ ೪೦ ಸಾವಿರ ಕೆಲಸಗಾರರು ಬೇಕು

ಜರ್ಮನ್ ಕಾರ್ಖಾನೆಗಳಲ್ಲಿ ಕೆಲಸಮಾಡಲು ೪೦ ಸಾವಿರ ಡೇನಿಷ್ ಕೆಲಸಗಾರರನ್ನು ಕಳಿಸಿಕೊಡಬೇಕೆಂಬುದಾಗಿ ಹರ್ ಹಿಟ್ಲರು ಕೇಳಿದ್ದಾರೆ. ಆದರೆ ಅಲ್ಲಿಯ ಮಹಾಪ್ರಧಾನರು ಇದಕ್ಕೆ ಒಪ್ಪಿರುವುದಿಲ್ಲ

ಅಮೆರಿಕನ್ ಸುದ್ದಿಗಾರರ ಭವಿಷ್ಯ

ಯಾವುದೇ ಸ್ಥಳವಾಗಲಿ, ಎಷ್ಟೇ ಕಷ್ಟವಾಗಲಿ ಅಮೆರಿಕನ್ ಮತ್ತು ಬ್ರಿಟಿಷ್ ಸೇನೆಗಳು ಮುಂದಿನ ಶರದೃತುವಿನಲ್ಲಿ ಯೂರೋಪಿಗೆ ಮುತ್ತಿಗೆಹಾಕಿ, ದ್ವಿತೀಯ ರಂಗವನ್ನು ಸ್ಥಾಪಿಸುವುದು ಖಂಡಿತವೆಂದು ಅಮೆರಿಕನ್ ಸುದ್ದಿಗಾರರೊಬ್ಬರು ವಾಷಿಂಗ್‌ಟನ್ನಿನಿಂದ ಬ್ರಾಡ್‌ಕಾಸ್ಟ್ ಮಾಡುತ್ತ ತಿಳಿಸಿದರು.

೫೦೦೦೦೦ ಜರ್ಮನರು ಸತ್ತರಂತೆ!

ರಷ್ಯನರ ಪ್ರಬಲ ದಾಳಿ ಪ್ರಾರಂಭವಾಗಿ ಜನವರಿ ೧೯ರ ವರೆಗೆ ಸುಮಾರು ೫೦೦೦೦೦ ಜರ್ಮನರು ಸತ್ತರೆಂದೂ ೨೦೦೦೦೦ ಜನರನ್ನು ಕೈಸೆರೆ ಹಿಡಿದಿದ್ದಾರೆಂದೂ ಮತ್ತು ೬೦೦ ಟ್ಯಾಂಕುಗಳೂ, ೧೨ ಸಾವಿರ ಗನ್ನುಗಳೂ ಮತ್ತು ೩೫೦೦ ವಿಮಾನಗಳೂ ನಷ್ಟವಾಗಿವೆಯೆಂದೂ ಗೊತ್ತಾಗಿದೆ

ಫ್ರಾನ್ಸಿನಲ್ಲಿ ಜರ್ಮನರ ಎಚ್ಚರಿಕೆ ಕಾರ್ಯ

ಫ್ರಾನ್ಸಿನಲ್ಲಿ ಮ್ಯೂಸ್ ಮತ್ತು ಮೊಸಲ್ಲೆ ನದಿಗಳುದ್ದಕ್ಕೂ ಜರ್ಮನರು ಕೋಟೆಗಳನ್ನು ರಚಿಸುತ್ತಿದ್ದಾರೆ. ಬ್ರೆನ್ನರ್ ಕಣಿವೆಯ ಉತ್ತರದಲ್ಲಿ ಕೋಟೆಗಳನ್ನು ಕಟ್ಟಲಾಗುತ್ತಿದೆಯೆಂದು ಹಿಂದೆಯೇ ವಾರ್ತೆ ಬಂದಿತ್ತು. ಇದನ್ನು ನೋಡಿದರೆ ಜರ್ಮನರು ಸಾ ಕೊಳ್ಳಬೇಕಾಗಿದೆ

ಜರ್ಮನಿಯ ಬಳಿ ೧೫೦ ಸಬ್-ಮೆರೀ ಇರುವವು

ಜರ್ಮನಿಯು ಯುದ್ಧವನ್ನಾರಂಭಿಸಿದಾಗ ಅದರ ಬಳಿ ಸುಮಾರು ೬೦ ಯು-ಬೋಟುಗಳು ಮಾತ್ರ ಇದ್ದವೆಂದೂ, ಈಗ ೧೫೦ ಇವೆಯೆಂದೂ ಅಂದಾಜು ಮಾಡಲಾಗಿದೆ. ಇದರಲ್ಲಿ ½ ಭಾಗಕ್ಕಿಂತ ಕಡಮೆ ಸಂಖ್ಯೆಯವು ಮಾತ್ರ ಸಮುದ್ರದಲ್ಲಿ ಕೆಲಸಮಾಡುತ್ತಿವೆಯೆಂದೂ, ಉಳಿದವುಗಳ ಯಂತ್ರಗಳನ್ನು ಸರಿಪಡಿಸುತ್ತಿರಲಾಗಿದೆಯೆಂದೂ, ಜರ್ಮನರು ತಿಂಗಳಿಗೆ ೧೫ ರಿಂದ ೨೦ರವರೆಗೆ ಯು ಬೋಟುಗಳನ್ನು ತಯಾರು ಮಾಡುತ್ತಿದ್ದಾರೆಂದೂ ಹೇಳಲಾಗಿದೆ

ಜರ್ಮನರ ಬಗ್ಗೆ ಇತರ ದೇಶಗಳ ಸೈನಿಕರ ಸಹಾನುಭೂತಿಯಿಲ್ಲ

ರಷ್ಯದಲ್ಲಿ ಜರ್ಮನರು ಶೀಘ್ರವಾಗಿ ಹಿಮ್ಮೆಟ್ಟುತ್ತಿದ್ದಾರಷ್ಟೆ! ಈಗ ಜರ್ಮನ್ ಕೈಗೊಂಬೆರಾಷ್ಟ್ರಗಳಾದ ರುಮೇನಿಯಾ, ಹಂಗೇರಿ, ಇಟಲಿ ಸೈನಿಕರಿಗೆ ಹೋರಾಡಲು ಇಷ್ಟವಿಲ್ಲ. ಸೆರೆಸಿಕ್ಕಿದ ಶತ್ರುಗಳು ಇದನ್ನು ಸಾರಿ ಹೇಳುತ್ತಿದ್ದಾರೆ. ನಾಜಿ ಸೈನಿಕರು ಅವರನ್ನು ಪಶುಗಳಂತೆ ರಂಗಕ್ಕೆ ಅಟ್ಟುತ್ತಿರುವುದರಿಂದ ಅವರು ಹೋರಾಡುತ್ತಿದ್ದಾರೆ. ಆದರೆ ಅನುಕೂಲವಾದ ಸಮಯ ದೊರೆತಕೂಡಲೆ ಆ ಪಡೆಗಳು ಶರಣಾಗತವಾಗುತ್ತಿವೆ

ಇರಾಕ್‌ನಲ್ಲಿ ಹೊಸ ರೈಲ್ವೆಮಾರ್ಗ

ರಷ್ಯಕ್ಕೆ ಸುಲಭವಾಗಿ ಪದಾರ್ಥಗಳನ್ನು ಸಾಗಿಸಲು ಅನುಕೂಲವಾಗುವಂತೆ ಇರಾಕಿನ ಮರುಳು ಕಾಡಿನ ಮೂಲಕ ರಷ್ಯಕ್ಕೆ ಹಾಕಿದ ಹೊಸ ರೈಲ್ವೆ ಮಾರ್ಗದ ಪ್ರಾರಂಭೋತ್ಸವವು ಕಳೆದ ತಿಂಗಳು ನಡೆಯಿತು. ಆ ಮಾರ್ಗದ ಉದ್ದ ೧೨೦ ಮೈಲಿಗಳು. ಮರಳು ಕಾಡಿನಲ್ಲಿ ಬಿಸಿಲಿನ ತಾಪ, ಬಿರುಗಾಳಿ, ಆಗಾಗ್ಗೆ ಮಳೆ, ಇಷ್ಟು ತೊಂದರೆಗಳಿದ್ದರೂ ಅದನ್ನು ಲೆಕ್ಕಿಸದೆ ಭಾರತದ ಸೈನಿಕರು ದಿನಕ್ಕೆ ೧ ಮೈಲಿಯಂತೆ ಈ ಮಾರ್ಗವನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ.

ಲಂಡನ್ ಮೇಲೆ ವಿಮಾನ ದಾಳಿ

ಕಳೆದ ೨೦ ನೆಯ ತಾರೀಖಿನ ದಿವಸ ಲಂಡನ್ ಪಟ್ಟಣದ ಮೇಲೆ ಹಗಲು ಹೊತ್ತಿನಲ್ಲಿಯೇ ನಡೆದ ವಿಮಾನದಾಳಿಯಿಂದ ಅನೇಕ ಸಾವು ನೋವುಗಳುಂಟಾ ನೆ ಅರ್ಧ ಗಂಟೆಕಾಲ ದಾಳಿ ನಡೆಯಿತು. ಜನನಿಬಿಡವಾದ ಕಡೆ ಡೈವ್ ಬಾಂಬರ್ ವಿಮಾನಗಳು ದಾಳಿ ನಡೆಸಿದವು. ಒಂದು ಕಡೆ ೮ ಶತ್ರು ವಿಮಾನಗಳು ಮನೆಯ ಮಾಳಿಗೆಗಳನ್ನೇ ಸವರಿಕೊಂಡು ಹೋದವು. ಮಕ್ಕಳನ್ನು ಫಲಾಹಾರಕ್ಕೆ ಕರೆತರುತ್ತಿದ್ದ ಒಂದು ಟ್ರೈನಿನ ಮೇಲೆ ಮಿಷನ್ ಗನ್‌ಗಳಿಂದ ಹೊಡೆದದ್ದರಿಂದ ಅನೇಕ ಜನ ಮಕ್ಕಳು ಮೃತರಾದರು. ೧೪ ಶತ್ರು ವಿಮಾನಗಳನ್ನು ಹೊಡೆದು ಉರುಳಿಸಲಾಯಿತೆಂದು ತಿಳಿದುಬರುತ್ತದೆ.

ರೋಮೆಲ್ಲರ ಸೇನೆಗಳು ಹಿಂದೆ ಸರಿದವು

ಜರ್ಮನರಾಗಲೇ ಟ್ರಿಪೋಲಿ ಬಂದರಿನ ಮೂಲಕ ತಮ್ಮ ಸೇನೆಯನ್ನು ಸಾಗಿಸಲು ಆರಂಭಿಸಿದ್ದಾರೆಂಬುದಾಗಿ ಮೊರಾಕ್ಕೋ ರೇಡಿಯೋವು ತಿಳಿಸಿತು

ಹಿಮ್ಮೆಟ್ಟುತ್ತಿರುವ ರೋಮೆಲ್ಲರ ಸೇನೆಯ ಒಂದು ಭಾಗವಾಗಲೇ ಟ್ರಿಪೋಲಿಯಿಂದ ಪಶ್ಚಿಮಕ್ಕೆ ಬಹಳ ದೂರ ಸರಿದಿದೆ ರೋಮೆಲ್ಲಿಗೆ ಕಾಲಾವಕಾಶವೇ ಇಲ್ಲದಂತಾಗಿದೆ ಬ್ರಿಟಿಷ್ ದಂಡನಾಯಕರು ಅಪಾರ ಜನ ಯೋಧರನ್ನೂ ಸಂಗ್ರಾಮ ಸಾಮಗ್ರಿಗಳನ್ನೂ ಮುಂದಕ್ಕೆ ಕಳಿಸುತ್ತಿರುವುದರಿಂದ ನಾಜಿಗಳಿಗೆ ಪುನರ್ವ್ಯವಸ್ಥೆ ಮಾಡಿಕೊಳ್ಳಲು ಅವಕಾಶವೇ ಇಲ್ಲದಾಗಿದೆ

ರಷ್ಯನರ ಉಗ್ರಪ್ರಹಾರ

ರಷ್ಯನರು ಚಳಿಗಾಲದಲ್ಲಿ ೬೦೦ ಮೈಲಿ ಅಗಲದಲ್ಲಿ ಮುತ್ತಿಗೆಯನ್ನು ಆರಂಭಿಸಿ ೧೦ ವಾರಗಳಾದವು ಜರ್ಮನರು ದಿಕ್ಕುತೋಚದೆ ಅಪಾರ ನಷ್ಟಕ್ಕೆ ಗುರಿಯಾಗುತ್ತಿದ್ದಾರೆ ೨ ತಿಂಗಳ ವೇಳೆಗೆ ರಷ್ಯನರು ವಾಲ್ಗಾ ತೀರದಿಂದ ಡೊನೆಟ್ಜ್ ತೀರಕ್ಕೆ ಅಂದರೆ ೨೦೦ ಮೈಲಿ ದೂರ ಮುಂದುವರಿದಿದ್ದಾರೆ ಉತ್ತರ ಕಾಕಸಸ್, ರಾಸ್ಟೋವ್, ಖಾರಕೋವ್ ಮತ್ತು ಕರ್ಸ್ಕಗಳಲ್ಲಿ ಕೂಡ ಶತ್ರುಸೇನೆಗೆ ಅಪಾರ ವಿಪತ್ತು ಒದಗಿದೆ ರಷ್ಯನ್ ರಣರಂಗದಲ್ಲಿ ಜರ್ಮನ್ ಕೈಗೊಂಬೆ ರಾಷ್ಟ್ರಗಳ ೨೯ ಪಡೆಗಳಿಗೆ ತೀವ್ರ ನಷ್ಟವನ್ನು ಉಂಟುಮಾಡಿದುದೇ ಅಲ್ಲದೆ, ರಷ್ಯನರು ಮುತ್ತಿಗೆಯಾರಂಭಿಸಿದಂದಿನಿಂದ ೬೦ ಜರ್ಮನ್ ಪಡೆಗಳಿಗೆ ಹೆಚ್ಚು ನಷ್ಟವಾಗಿರುವುದಾಗಿ ತಿಳಿದುಬಂದಿದೆ ರಷ್ಯನರು ಈಗ ೩೦—೪೦ ಮೈಲಿ ಅಗಲದಲ್ಲಿ ಡೊನೆಟ್ಜ್ ನದಿಯನ್ನು ದಾಟಿದ್ದಾರೆ ಶತ್ರುಗಳಿಗೆ ಅಪಾರ ಜನಬಲವೂ ವಸ್ತುಬಲವೂ ನಷ್ಟವಾಗುತ್ತಿರುವುದನ್ನು ನೋಡಿದರೆ, ಮುಂದಿನ ಯುದ್ಧವು ಬದಲಾವಣೆ ಹೊಂದಲೇಬೇಕು

ಲಾರ್ಡ್ ಹಾಲಿಫಾಕ್ಸರ ಎಚ್ಚರಿಕೆ

“ಹಿಟ್ಲರನಿಗೆ ಎಲ್ಲ ಕಡೆಯೂ ಅಪಜಯವಾಗಿ ಮುಂದೇನು ಮಾಡಲೂ ದಿಕ್ಕುತೋಚದಂತೆ ಆದಾಗ್ಯೂ ಇಂಗ್ಲೆಂಡಿನ ಮೇಲೆ ಬೀಳಬಹುದು ನಾವೀಗ ವಿಜಯಮಾರ್ಗದಲ್ಲಿ ಮುಂಪರಿಯುತ್ತಿದ್ದೇವೆ ಪೂರ್ಣ ವಿಜಯಿಗಳಾಗಲು ಎಷ್ಟುಕಾಲ ಬೇಕೆಂಬುದನ್ನು ಈಗಲೇ ಹೇಳಲಿಕ್ಕಾಗುವದಿಲ್ಲ ವಿಜಯದ ನಿಶ್ಚಿತ ಸೂಚನೆಗಳನ್ನು ೧೯೪೩ನೆಯ ವರ್ಷದಲ್ಲಿಯೇ ಕಾಣಬಹುದಾಗಿದೆ” ಎಂದು ಲಾರ್ಡ್ ಹಾಲಿಫಾಕ್ಸರು ಎಚ್ಚರಿಸಿದ್ದಾರೆ

ಸ್ವೀಡನ್ನಿನ ಮಹಾಪ್ರಧಾನರ ಎಚ್ಚರಿಕೆ

ಸ್ವೀಡನ್ನಿನ ಮಹಾಪ್ರಧಾನರಾದ ಎಂ ಹಾನ್‌ಸನ್‌ರವರು ಸ್ಟಾಕ್‌ಹೋಂ ನಗರದಲ್ಲಿ ಮಾತನಾಡುತ್ತ, “ಇಷ್ಟರಲ್ಲಿಯೇ ಸ್ವೀಡನ್ನಿನ ಮೇಲೆ ಯಾರಾದರೂ ಮುತ್ತಿಗೆ ನಡೆಸಬಹುದೆಂದೂ, ಹಾಗೇನಾದರೂ ನಡೆಯುವದಾದರೆ ದೇಶಸಂರಕ್ಷಣೆಗೆ ಸರ್ವರೂ ಸಿದ್ಧವಾಗಿರಬೇಕೆಂದೂ ಪ್ರಜೆಗಳಿಗೆ ಎಚ್ಚರಿಕೆ ಕೊಡುತ್ತ, ನಾರ್ವೆಯಾಗಲಿ ಅಥವಾ ಉತ್ತರ ಫಿನ್‌ಲೆಂಡಿನಾಗಲಿ ಮಿತ್ರಸೇನೆಗಳು ಮುತ್ತಿಗೆ ಹಾಕುವವೆಂಬ ಭಯವೇ ಈಗ ಕೆಲವು ತರಗತಿಯ ಜನರನ್ನು ಸೇನೆಗೆ ಕರೆಯಿಸಿ ಶಿಕ್ಷಣಕೊಡುತ್ತಿರುವದಕ್ಕೆ ಕಾರಣವೆಂದು ಹೇಳಿದರು

ಅತ್ಯುಗ್ರವಾದ ಕದನವಿದು!

ಜರ್ಮನ್ ರೇಡಿಯೋ ವಿಮರ್ಶಕರಾದ ಹ್ಯಾನ್ಸ್ ಫ್ರಿಸೆಯವರು ಮಂಗಳವಾರ ರಾತ್ರಿ ಮಾತನಾಡುತ್ತ— “ರಷ್ಯನರು ಆರಂಭಿಸಿರುವ ಮುತ್ತಿಗೆಯು ನಿಜವಾಗಿಯೂ ಬಹಳ ಅಗಾಧವಾದುದು ಕಳೆದ ಚಳಿಗಾಲದಲ್ಲಿ ಮಾಡಿದಂತೆ ಈಗಲೂ ರಷ್ಯನರು ನಷ್ಟವನ್ನೇ ಲೆಕ್ಕಿಸದೆ ಅಸಂಖ್ಯ ಯೋಧರನ್ನೂ ಸಂಗ್ರಾಮ ವಸ್ತುಗಳನ್ನೂ ರಣರಂಗಕ್ಕೆ ಕಳಿಸುತ್ತಿರುವರು ಜರ್ಮನ್ ಸೈನಿಕರು ಈಗ ಪೂರ್ವರಂಗದಲ್ಲಿ ಅತ್ಯುಗ್ರವಾದ ಹೋರಾಟ ನಡೆಸುತ್ತಿದ್ದಾರೆ ಪರಿಸ್ಥಿತಿಯ ನಿಜವಾದ ಚಿತ್ರವನ್ನು ನೋಡಬೇಕಾದರೆ ಬೇಸಿಗೆಯಲ್ಲಿ ನಾವೆಷ್ಟು ದೂರ ಮುಂದೆ ಹೋದೆವೆಂಬುದನ್ನೂ ಚಳಿಗಾಲದಲ್ಲಿ ರಷ್ಯನರು ಎಷ್ಟು ದೂರ ಮುಂದೆ ಬಂದಿರುವರೆಂಬುದನ್ನೂ ಹೋಲಿಸಬೇಕು” ಎಂದು ಹೇಳಿದರು

ಜರ್ಮನ್ ನಾಯಕರಾದ ಗೊಯರಿಂಗರ ಹೇಳಿಕೆ

ಎಲ್ ಎಲಾಮಿನ್‌ನಿಂದ ಶತ್ರು ಸೇನೆಗಳು ಹಿಮ್ಮೆಟ್ಟಿದಾಗ ನಾಜಿ ವಿಮಾನ ಪಡೆಯವರು ವಿಶೇಷ ಧೈರ್ಯವನ್ನೇನೂ ತೋರಿಸದೆ ಹೋದುದರಿಂದ ಗೋಯರಿಂಗ್‌ರಿಗೆ ಬಹಳ ಆಶಾಭಂಗವಾಯಿತು ಅದನ್ನವರು ಪತ್ರಮುಖೇನ ಆ ಪಡೆಗೆ ತಿಳಿಸಿಯೇ ಬಿಟ್ಟರು ಅವರ ಅಭಿಪ್ರಾಯ ಈರೀತಿ ಇದೆ —

“ನೀವು ವಿಜಯಿಗಳಾಗದೆ ಹೋದುದನ್ನು ಕಂಡು ನನಗೆ ಆಶಾಭಂಗವಾಗಿದೆ ಆಫ್ರಿಕಾ ರಂಗದಲ್ಲಿರುವ ನಿಮ್ಮ ಸಹೋದರರು ತೋರಿಸಿದ ಷಂಡತನವನ್ನು ಕಂಡು ರಷ್ಯ ಮತ್ತು ಇಂಗ್ಲಿಷ್ ಜನರು ನಗುತ್ತಿದ್ದಾರೆ ಹಿಟ್ಲರನು ಜಯಿಸಿದ ದೇಶಗಳ ಜನರನ್ನು ಗುಂಪುಗುಂಪಾಗಿ ಫಿರಂಗಿಗಳ ಬಾಯಿಗಿಟ್ಟು ವೋಲ್ಗಾ ನದಿಯ ತನಕ ಬಂದನು ಈಗ ಹಿಟ್ಲರನು ಹಿಂದೇಟು ಹಾಕುತ್ತಿದ್ದಾನೆ ಆತನ ಮಿತ್ರದೇಶಗಳ ಪಡೆಗಳು ಮಂಜಿನಂತೆ ಕರಗಿಹೋಗುತ್ತಿವೆ ಪಾಶ್ಚಿಮಾತ್ಯದೇಶಗಳು ಸಹ ಭೂಮಿಯ ಮೇಲೆ ಹಿಟ್ಲರನಿಗೆ ಬಿಸಿ ತೋರಿಸಲಾರಂಭಿಸಿದರೆ ಜರ್ಮನರು ಉಳಿಯುವುದು ಕಷ್ಟ

ರಷ್ಯದ ವಿಜಯಕ್ಕೆ ಕಾರಣವೇನು ?

ಈಗ ರಷ್ಯನರಿಗೆ ಜಯವಾಗುತ್ತಿರುವುದಕ್ಕೆ ಈಗ್ಗೆ ೬ ತಿಂಗಳ ಹಿಂದೆ ಸ್ಟಾಲಿನ್ನರು ಕೆಂಪು ಸೇನೆಯನ್ನು ಪುನರ್ವ್ಯವಸ್ಥೆಗೊಳಿಸಲು ಕೈಗೊಂಡ ಕಾರ್ಯಕ್ರಮವೇ ಕಾರಣ ಸೈನ್ಯಾಧಿಕಾರಿಗಳೆಲ್ಲರೂ ಮಧ್ಯವಯಸ್ಸಿನವರು ಎಲ್ಲಕ್ಕಿಂತ ಹೆಚ್ಚಾಗಿ ಅವರ ಸರಬರಾಜು ವ್ಯವಸ್ಥೆ ಅದ್ಭುತವಾದ್ದು ಅವರ ರಹಸ್ಯವನ್ನು ಯಾರೂ ಅರಿತಿಲ್ಲ ರಷ್ಯನರು ರಾತ್ರಿ ಕಾಲದಲ್ಲಿ ಸಾಮಾನುಗಳನ್ನು ಸಾಗಿಸಿಕೊಂಡು ಬರುತ್ತಾರೆ ಆದರೆ ಜರ್ಮನರು ಆ ಕ್ಷೇತ್ರಗಳನ್ನು ಆಕ್ರಮಿಸಿದ್ದಾಗ ಉಪಯೋಗಿಸುತ್ತಿದ್ದ ರಸ್ತೆಗಳನ್ನು ಅವರು ಉಪಯೋಗಿಸುವುದಿಲ್ಲ ಹಗಲಿನಲ್ಲಿ ರಷ್ಯನ್ ವ್ಯೂಹರಚನೆಯ ಹಿಂದೆ ವಾಹನಗಳ ಓಡಾಟವೇ ಹೆಚ್ಚಾಗಿ ಕಾಣಬರುವುದಿಲ್ಲ ರಷ್ಯನರ ವಿಜಯಕ್ಕೆ ಅವರ ಫಿರಂಗಿ ಕದನ ವಿಧಾನವು ಮುಖ್ಯ ಕಾರಣವಾಗಿದೆ ಒಂದು ಕ್ಷಣವೂ ವಿರಾಮವಿಲ್ಲದಂತೆ ಷೆಲ್‌ಗಳು ಆಯಕಟ್ಟಿನ ಸ್ಥಳದಲ್ಲಿ ಬಿದ್ದು ಸಿಡಿಯುವಂತೆ ಅವರು ಫಿರಂಗಿಗಳನ್ನು ವ್ಯವಸ್ಥೆಗೊಳಿಸಿದ್ದಾರೆ ಜರ್ಮನರು ಭೂಗರ್ಭದಲ್ಲಿ ಕೋಟೆಗಳನ್ನು ಕಟ್ಟಿಕೊಂಡು ಅಲ್ಲಿಂದ ಫಿರಂಗಿ ಹಾರಿಸುವುದರಿಂದ ಅವರಿಗೆ ಹೆಚ್ಚಿನ ರಕ್ಷಣೆಯಿರುತ್ತದೆ ಆದರೆ ರಷ್ಯನರ ಫಿರಂಗಿಗಳ ಹೊಡೆತದಿಂದ ಪ್ರತಿಕ್ಷಣ ಭೂಮಿಯು ಅದುರುವುದರಿಂದ ಶತ್ರುಗಳಿಗೆ ಬಹಳ ಅಪಾಯವುಂಟಾಗುತ್ತದೆ ಫಿರಂಗಿಗಳ ಹೊಡೆತಕ್ಕೆ ಸಿಕ್ಕಿ ಸಾಯದೆ ಇರುವವರ ಮೇಲೆ ಬಹಳ ಅನಿಷ್ಟ ಪರಿಣಾಮವುಂಟಾಗುತ್ತದೆ

ರಷ್ಯನರು ‘ಕಟೂಷಾ’ ಎಂಬ ರಹಸ್ಯ ಅಸ್ತ್ರವೊಂದನ್ನು ಕಂಡುಹಿಡಿದಿದ್ದಾರೆ ಈ ಅಸ್ತ್ರವು ಇದುವರೆಗೆ ಜರ್ಮನರ ಕೈಗೆ ಬಿದ್ದಿಲ್ಲ ಅದನ್ನು ಜರ್ಮನರು ತಯಾರಿಸಲು ಅಶಕ್ತರಾಗಿದ್ದಾರೆ ‘ಇನ್ನು ಮುಂದೆ ಕಟೂಷಾವನ್ನು ಉಪಯೋಗಿಸಿದರೆ ವಿಷವಾಯುವನ್ನು ಬಿಡಲಾಗುತ್ತದೆ’ ಎಂಬುದಾಗಿ ಬೆದರಿಸುವ ಹಸ್ತಪತ್ರಿಕೆಗಳನ್ನು ಜರ್ಮನರು ಒಂದುಸಾರೆ ಹಂಚಿದ್ದರು ರಷ್ಯನರ ವಿಜಯಕ್ಕೆ ಕಾರಣವಾದ ಇನ್ನೊಂದು ಅಂಶವೆಂದರೆ ಅವರು ತಯಾರಿಸಿರುವ ಹೊಸ ಟ್ಯಾಂಕುಗಳು ಇವು ಬಹಳ ವೇಗವಾಗಿ ಚಲಿಸಬಲ್ಲವು ಇದರಿಂದ ಶತ್ರುಗಳನ್ನು ಬಹಳವೇಗ ಅಟ್ಟಿಸಿಕೊಂಡುಹೋಗಲು ಸಾಧ್ಯವಾಗಿದೆ

ವಿದ್ಯಾರ್ಥಿಗೆ ಮರಣದಂಡನೆ

ಸಕ್ಕರ್ ನಗರದ ೨೦ ವರ್ಷ ವಯಸ್ಸಿನ ವಿದ್ಯಾರ್ಥಿ ಹೇಮುಕಲಾನಿ ಎಂಬವನು ರೈಲ್ವೆಕಂಬಿಗಳನ್ನು ತೆಗೆಯುತ್ತಿದ್ದನೆಂಬ ಅಪಾದನೆಯ ಮೇಲೆ ಮರಣದಂಡನೆಗೆ ಗುರಿಯಾದನು ಅವನನ್ನು ಫಾಶಿಗೆ ಹಾಕಲಾಯಿತೆಂದು ತಿಳಿದುಬರುತ್ತದೆ

ದೇವಕೋಟೆ ದೊಂಬಿ ಪ್ರಕರಣ

ಆಗಸ್ಟ್ ೧೭ ನೇ ತಾರೀಖಿನ ದಿನ ರಾಜಕೀಯ ಅಶಾಂತಿಯಿಂದ ಜನರು ಗುಂಪುಸೇರಿ, ಕೋರ್ಟು ಕಚೇರಿಗಳಿಗೆ ನುಗ್ಗಿ ಕಾಗದ ಪತ್ರಗಳಿಗೆ ಬೆಂಕಿ ಹಚ್ಚಿ ಪೋಲೀಸರನ್ನು ಹೊಡೆದು ಜನರಲ್ಲಿ ಭೀತಿಯನ್ನು ಕಲ್ಪಿಸಿದ್ದರು ಈ ಪ್ರಕರಣದಲ್ಲಿ ಪೋಲೀಸರು ೯೨ ಜನರನ್ನು ದಸ್ತಗಿರಿ ಮಾಡಿದ್ದರು ವಿಚಾರಣೆ ನಡೆದು ೬೬ ಜನರಿಗೆ ೨ ವರ್ಷದಿಂದ ೧೦ ವರ್ಷಗಳವರೆಗೆ ಶಿಕ್ಷೆ ವಿಧಿಸಲಾಯಿತು ೨೬ ಜನರನ್ನು ನಿರ್ದೋಷಿಗಳೆಂದು ತೀರ್ಮಾನಿಸಿ ಬಿಡುಗಡೆ ಮಾಡಲಾಯಿತು

ಕಲಕತ್ತೆಯ ಮೇಲೆ ಪುನಃ ಮುತ್ತಿಗೆ

ಜನವರಿ ೧೯ನೇ ತಾರೀಖಿನ ದಿನ ರಾತ್ರಿ ಜಪಾನ್ ವಿಮಾನಗಳ ಸಣ್ಣ ಗುಂಪೊಂದು ಕಲಕತ್ತಾ ಕ್ಷೇತ್ರದ ಮೇಲೆ ಮುತ್ತಿಗೆ ನಡೆಸಿ ಹಲವು ಬಾಂಬುಗಳನ್ನು ಹಾಕಲಾಯಿತು ಎರಡು ಕಡೆ ಬೆಂಕಿ ಹತ್ತಿಕೊಂಡಿತು ಬೇಗನೆ ಅವುಗಳನ್ನು ಹತೋಟಿಗೆ ತರಲಾಯಿತು ಬ್ರಿಟಿಷ್ ಫೈಟರುಗಳು ೨ ಶತ್ರು ವಿಮಾನಗಳನ್ನು ನಾಶಮಾಡಿದವು ಜನರು ಅಪಾಯಕ್ಕೊಳಗಾದ ಸುದ್ದಿಯೇನೂ ಬಂದಿಲ್ಲ ಅಲ್ಪ ನಷ್ಟವಾಗಿದೆ ಎಂದು ಪ್ರಕಟವಾಗಿದೆ.

ಅಣೆಕಟ್ಟು ರಿಪೇರಿಗೆ ಮಿಲಿಟರಿ ಸಹಾಯ

ಸಿಂಧುದೇಶದ ಸಕ್ಕರ್ ಬಳಿ ಸಿಂಧುನದಿಗೆ ಕಟ್ಟಿರುವ ಅಣೆಕಟ್ಟು ಒಂದುಕಡೆ ೫೦೦ ಅಡಿ ಅಗಲ ಬಿರುಕುಬಿಟ್ಟಿದೆ ಅದನ್ನು ಸರಿಪಡಿಸಲು ಒಂದಕ್ಕೆ ಮೂರರಷ್ಟು ಕೂಲಿಕೊಟ್ಟರೂ ಜನಗಳು ಸಿಕ್ಕದಿರುವದರಿಂದ ಮಿಲಿಟರಿ ಸಹಾಯದಿಂದ ಅದನ್ನು ೪೫ ದಿನಗಳಲ್ಲಿ ಸರಿಪಡಿಸಿಕೊಡಬೇಕೆಂದು ಸಿಂಧ್ ಸರಕಾರದವರು ಭಾರತದ ಸೇನಾನಿಗಳಲ್ಲಿ ಮೊರೆಯಿಟ್ಟಿದ್ದಾರೆಂದೂ, ಶೀಘ್ರವಾಗಿ ರಿಪೇರಿ ಕೆಲಸವು ನಡೆಯದಿದ್ದಲ್ಲಿ ಪಂಜಾಬಿನಲ್ಲಿ ಪ್ರವಾಹವು ಹೆಚ್ಚಿ, ಸಿಂಧುನದಿಯ ಅಣೆಕಟ್ಟಿಗೆ ಪೂರ್ಣ ಅಪಾಯವಾಗುವದೆಂದೂ ಹೇಳಲಾಗಿದೆ

ಸ್ವೀಕಾರ.

ಹುಬ್ಬಳ್ಳಿ ನಗರದಲ್ಲಿ ಶ್ರೀಮತಿ ನೀಲವ್ವ ಕೋಂ ಸಂಗನಬಸವಯ್ಯ ಶಿರುವಿನಹಳ್ಳಿ ಹಿರೇಮಠ ಇವರು ತಾ॥ ೧೪—೧—೧೯೪೩ನೆಯ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ಹುಬ್ಬಳ್ಳಿ ಹನ್ನೆರಡುಮಠದ ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ॥ ಹೊಳಲಗುಂದಿ ಗ್ರಾಮದಲ್ಲಿರುವ ಮ॥ ರಾ॥ ಸಜ್ಜನಶೆಟ್ಟರ ಗೌರಣ್ಣನವರ ಅಣ್ಣ ನಾಗಪ್ಪನವರ ಪುತ್ರ ಚಿ॥ ಕರಿಬಸವಪ್ಪನಿಗೆ ಬಳ್ಳಾರಿ ಗ್ರಾಮದ ಮ॥ ರಾ॥ ಸಜ್ಜನಶೆಟ್ಟರ ಇಲಕಲ್ಲ ಗಿರಿಮಲ್ಲಪ್ಪನವರ ಪುತ್ರಿ ಚಿ॥ ಸೌ॥ ಶಿವಗಂಗಮ್ಮನನ್ನು ಕೊಟ್ಟು ಮಾರ್ಗಶಿರ ಬ॥ ೯ ದಿವಸ ವಿವಾಹವು ನೆರವೇರಿ, ಸಿರಗುಪ್ಪಾ ಟವುನ್ನಿನಲ್ಲಿ ಮುಕ್ಕಾಂ ಮಾಡಿರುವ ಉಜ್ಜಯಿನೀ ಜಗದ್ಗುರುಗಳವರ ದರ್ಶನಮಾಡಿಕೊಂಡು ತೀರ್ಥಪ್ರಸಾದಗಳನ್ನು ಸೇವಿಸಿ ಧನ್ಯರಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಹೊಳಲಗುಂದಿ ಸಂಸ್ಕೃತ ಪಾಠಶಾಲಾಧ್ಯಾಪಕರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

ಮಿಶ್ರಿತವಾಗಿ ಚಿಪ್ಪದ ಗರ್ಸಲ್ಲಿಯೂ ಚಿನ್ನದಾತುವಿನ ಮಿಶ್ರಿತವಾಗಿ ಕೋಲಾರ್ ಎನ್ನುವ ಗಣಿಯ ಪ್ರದೇಶದಲ್ಲಿಯೂ ದೊರೆಯುತ್ತದೆ. ಚಿನ್ನದ ಗಣಿಯು ಪ್ರಾರಂಭವಾದಂದಿನಿಂದ ಇಲ್ಲಿಯವರೆಗೂ ಸುಮಾರು 27¼ ಲಕ್ಷ ಪೌಂಡುಗಳ ಬೆಲೆಯ 1½ ಮಿಲಿಯನ್ ಔನ್ಸ್ ಬೆಳ್ಳಿಯು ದೊರೆತಿದೆ. ಸೀಸ [illegible] ಅದಿರು ಚಿತ್ರದುರ್ಗ ಜಿಲ್ಲೆಯ [illegible] ಭಾಗದಲ್ಲಿಯೂ ದೊರೆಯುತ್ತದೆಂದು ಪರೀಕ್ಷೆಗಳಿಂದ ಗೊತ್ತಾಗಿದೆ. ಹೆಚ್ಚು ಪ್ರಮಾಣದಲ್ಲಿ ಈ ಖನಿಜವು ದೊರೆಯುವ ಪ್ರದೇಶವಿನ್ನೂ ದೊರೆತಿಲ್ಲ.

ಇತರ ಖನಿಜಗಳು

ಪ್ರಯೋಜನಕ್ಕೆ ಬರುವ ಇತರ ಮೂವತ್ತು ಬಗೆಯ ಖನಿಜಗಳು ಸಂಸ್ಥಾನದಲ್ಲಿ ದೊರೆಯುತ್ತವೆ. ಕ್ವಾರ್ಟ್ಸ್, ಚೀನಾ ಮಣ್ಣು, ಫೆಲ್ಸ್‌ಪರ್, ಸುಣ್ಣಕಲ್ಲು, ಗ್ರಾಫೈಟು ಮೊದಲಾದ ಅದಿರುಗಳನ್ನು ಸಿಮೆಂಟು ಸಿರಾಮಿಕ ಮತ್ತು ಇತರ ಕೈಗಾರಿಕೆಗಳಿಗೆ ಸುಮಾರು 10-12 ವರ್ಷಗಳಿಂದಲೂ ಉಪಯೋಗಿಸುತ್ತಿದೆ. ಕಲ್ನಾರು, ಬಾಕ್ಸೈಟು, ಕೊರಂಡಂ, [illegible] ಮೊದಲಾದುವುಗಳನ್ನು ಸ್ಥಳದಲ್ಲಿಯೇ ಹೇಗೆ ಉಪಯೋಗಿಸಬಹುದೆಂಬ ವಿಷಯದಲ್ಲಿ ಸಂಶೋಧನೆಗಳನ್ನು ನಡೆಯಿಸುತ್ತಿದೆ. ಈ ಪರಿಶೋಧನೆಗಳ ಪರಿಣಾಮವಾಗಿ ಸ್ಥಳದಲ್ಲಿ ಹಲವು ಕೈಗಾರಿಕೆಗಳು ಸ್ಥಾಪಿತವಾಗಬಹುದು.

ಅಪೂರ್ಣವಾದ ಖನಿಜಗಳು

ಮೊನಸೈಟು, ಕೊಲಂಬೈಟು, ಸಮರ್ಸ್ಕೈಟು ಮತ್ತು ಬೆರಿಲ್ ಎಂಬ ಖನಿಜಗಳು ಕೆಲವೆಡೆ ದೊರೆಯುತ್ತವೆ. ಇವುಗಳನ್ನು ಇನ್ನೂ ಉಪಯೋಗಿಸಿಲ್ಲ.

ರತ್ನ ಶಿಲೆಗಳು

ಶುದ್ಧವಾದ [illegible], ಬಗೆ ಬಗೆಯ ಬಣ್ಣದ ರತ್ನ ಶಿಲೆಗಳೂ, ಸಂಸ್ಥಾನದಲ್ಲಿ ದೊರೆಯುವುದಿಲ್ಲ. ಆದರೆ ಪುಷ್ಯರಾಗ, ಕೊರಂಡಂ, ಅಕ್ವಾಮರೈನ್, ಗಾರ್ನೆಟ್ಸ್, ರಾಕ್‌ಕ್ರಿಸ್ಟಲ್, ನೀಲ ಇವೇ ಮೊದಲಾದವುಗಳು ದೊರೆಯುತ್ತವೆ. ಈ ಶಿಲೆಗಳಲ್ಲಿ ಕೆಲವನ್ನು ತಿದ್ದಿ ಪ್ರತಿ ವರ್ಷವೂ ಮೈಸೂರಿನಲ್ಲಿ ದಸರಾ ಪ್ರದರ್ಶನದಲ್ಲಿ ಮಾರಾಟಕ್ಕಿಟ್ಟಿದ್ದರೂ ಈ ಶಿಲೆಗಳನ್ನು ಕೆತ್ತಿ ಅವನ್ನು ನಯಮಾಡಿ ಮಾರಾಟ ಮಾಡುವ ಕೈಗಾರಿಕೆಯನ್ನು ಸ್ಥಾಪಿಸಲು ಯಾರೂ ಮುಂದೆಬಂದಿಲ್ಲ.

ಇಲ್ಲಿಯವರೆಗೂ ಖನಿಜಗಳನ್ನು ರಫ್ತಿಗೆ ಮಾತ್ರವೇ ಮಾರಾಟ ಮಾಡುತ್ತಿತ್ತು. ಇದರಿಂದ ಅತ್ಯುತ್ತಮವಾದ ದರ್ಜೆಯ ಲೋಹವು ಕೈಬಿಟ್ಟುಹೋಗಿ, ಕೆಳ ದರ್ಜೆಯ ಮತ್ತು ಕೆಲಸಕ್ಕೆ ಬಾರದ ಅದಿರುಮಾತ್ರ ಉಳಿಯುತ್ತಿತ್ತು. ಈ ಸ್ಥಿತಿಯು ಆತ್ಮಘಾತುಕವಾದುದು. ಇದು ಕೂಡಲೆ ಬದಲಾವಣೆಯಾಗಲೇಬೇಕು. ಈ ಬಗೆಯ ನಷ್ಟವನ್ನು ನಿವಾರಿಸಲು ಖನಿಜಗಳನ್ನು ದರ್ಜೆವಾರಾಗಿ ವಿಂಗಡಿಸಿ ಸೂಕ್ತವಾದ ಕೈಗಾರಿಕೆಗಳಿಗೆ ಅವನ್ನು ಉಪಯೋಗಿಸಿಕೊಳ್ಳಬೇಕು. ಅತ್ಯಂತ ಉತ್ತಮ ದರ್ಜೆಯ ಲೋಹವು ಎಲ್ಲ ಕೈಗಾರಿಕೆಗಳಿಗೂ ಬೇಕಿಲ್ಲ. ಈ ರೀತಿ ಮಾಡಲು ಖನಿಜಗಳ ಹತೋಟಿಗೆ ಒಂದು ಕೇಂದ್ರ ಸಂಸ್ಥೆಯು ಸ್ಥಾಪಿತವಾಗಬೇಕು. ಈ ಸಂಸ್ಥೆಯವರು ಸ್ಥಳೀಯ ಕೈಗಾರಿಕೆಗಳಿಗೆ ಬೇಕಾದ ಲೋಹಗಳ ಅದಿರನ್ನು ತೆಗೆದು, ಅತ್ಯಂತ ಲಾಭದಾಯಕವಾದ ರೀತಿಯಲ್ಲಿ ಅವುಗಳನ್ನು ನಾನಾ ಕೈಗಾರಿಕೆಗಳಿಗೆ ಹಂಚಬೇಕು. ಈಗ ಉಳಿದಿರುವ ಕೆಳ ದರ್ಜೆಯ ಅದಿರುಗಳನ್ನು ಹೇಗೆ ಉಪಯೋಗಿಸಬೇಕೆಂಬ ವಿಷಯದಲ್ಲಿ ಕೆಲವು ಪರಿಶೀಲನೆಗಳನ್ನು ನಡೆಯಿಸಿದ್ದ ದೊರೆಯುವ ಅದಿರುಗಳ ಮೇಲೆ ಕೆಲವು ಪ್ರಯೋಗಗಳನ್ನು ನಡೆಯಿಸಿ ಅವುಗಳಲ್ಲಿರುವ ಗುಣಾಂಶಗಳನ್ನು ಹೆಚ್ಚಿಸಿ ಅವನ್ನು ಕೆಲವು ಕೈಗಾರಿಕೆಗಳಿಗೆ ಉಪಯೋಗಿಸಲು ಪ್ರಯತ್ನಿಸುತ್ತಿದೆ. ಈ ವಿಷಯದಲ್ಲಿ ಬಹಳ ಹೆಚ್ಚಿನ ಮತ್ತು ಸಹನೆಯಿಂದ ಕೂಡಿದ ಸಂಶೋಧನೆಗಳು ನಡೆಯಬೇಕು. ಸಂಸ್ಥಾನದ ನಾನಾ ಕೈಗಾರಿಕೆಗಳವರ ಸಹಕಾರದಿಂದ ಇರುವ ಖನಿಜ ಸಂಪತ್ತನ್ನು ಸಂಸ್ಥಾನಕ್ಕೆ ಅತ್ಯಂತ ಲಾಭದಾಯಕವಾದ ರೀತಿಯಲ್ಲಿ ದುಡಿಸಿಕೊಳ್ಳಬಹುದಾಗಿದೆ.

ಮೈಸೂರು ಸಂಸ್ಥಾನದಲ್ಲಿ ಸರಕುಗಳಿಗೆ ಯುದ್ಧದ ದೆಸೆಯಿಂದುಂಟಾಗಬಹುದಾದ ನಷ್ಟಸಂಭವಗಳ ವಿಮೆ.

ಶತ್ರುಗಳ ಕಾರ್ಯಾಚರಣೆಯಿಂದ ಅಥವಾ ಶತ್ರುಗಳನ್ನು ಹಿಮ್ಮೆಟ್ಟಿಸುವುದಕ್ಕಾಗಿ ಆಚರಿಸುವ ಕಾರ್ಯಗಳಿಂದ ಸರಕುಗಳಿಗೆ ನಷ್ಟವೇನಾದರೂ ಸಂಭವಿಸಿದಲ್ಲಿ ಅದಕ್ಕೆ ತಕ್ಕ ಪರಿಹಾರವು ದೊರೆಯುವಂತೆ ಸರಕುಗಳನ್ನು ವಿಮೆ ಮಾಡಲೇಬೇಕೆಂಬ ಯೋಜನೆಯೊಂದನ್ನು ಬ್ರಿಟಿಷ್ ಇಂಡಿಯಾದಲ್ಲಿ 1940ರಲ್ಲಿ ಆಚರಣೆಗೆ ತರಲಾಗಿದೆ. ಈ ಕಾನೂನು ಮೈಸೂರಿಗೂ ಪೂರ್ತಿಯಾಗಿ ಅನ್ವಯಿಸುವಂತೆ ಏರ್ಪಡಿಸಿದೆ. ಈ ಕಾನೂನಿನಲ್ಲಿ “ಸರಕುಗಳು,” “ವ್ಯವಸಾಯೋತ್ಪನ್ನಗಳು” “ಸರಕುಗಳನ್ನು ಮಾರುವವರು” ಎನ್ನುವ ಪದಗಳ ವಿವರಣೆಯನ್ನು ಕೊಡಲಾಗಿದೆ. ಮೈಸೂರು ಸಂಸ್ಥಾನದಲ್ಲಿ ಸರಕುಗಳ ವ್ಯಾಪಾರಿಗಳು, ಅವನ್ನು ತಯಾರಿಸುವವರು, ಅಥವಾ ಚಿಲ್ಲರೆ ವ್ಯಾಪಾರಿಗಳು, ತಾವು ವ್ಯಾಪಾರಕ್ಕಾಗಿಟ್ಟಿರುವ ಸರಕುಗಳೆಲ್ಲವನ್ನೂ ವಿಮೆ ಮಾಡಬೇಕಾಗಿದೆ. ಮೇಲೆ ಹೇಳಿದ ಸರಕುಗಳೂ ಅಲ್ಲದೆ ಈ ಸರಕುಗಳನ್ನು ತಯಾರಿಸಲು ಬೇಕಾದ ಕಚ್ಚಾ ವಸ್ತುಗಳೂ ಮತ್ತು ಇನ್ನೂ ತಯಾರಾಗುತ್ತಿರುವ ವಸ್ತುಗಳೂ, ಈ ಆಕ್ಟಿನ ಮೇರೆಗೆ ವಿಮೆ ಮಾಡಲರ್ಹವಾದ ಸರಕುಗಳೆಂದು ಭಾವಿಸಲ್ಪಡತಕ್ಕವು. ಯಾವ ಯಾವ ಸರಕುಗಳನ್ನು ವಿಮೆ ಮಾಡಬೇಕಾಗಿಲ್ಲವೆಂಬುದನ್ನು 1942ನೇ ಇಸವಿ ಆಗಸ್ಟ್ 16ನೇ ತಾರೀಖಿನದಿನ ಸಾದರಾದ ಇಸ್ತಿಹಾರ್‌ನಾಮೆಯಲ್ಲಿ ವಿವರಿಸಲಾಗಿದೆ. ಬೆಳೆ, ಗಿಡಮರಗಳು, ಜಾನುವಾರುಗಳು, ಆಮರುಗಳು ಕೆಲವು ಲೋಹಗಳ ಚೂರುಗಳು, ಚಿನ್ನ, ಬೆಳ್ಳಿ ಮತ್ತು ಇತರ ಲೋಹಗಳು ಮತ್ತು ಮಾರಾಟಕ್ಕಿಲ್ಲದ ಇತರ ಪದಾರ್ಥಗಳನ್ನು ಈ ಕಾನೂನಿನಿಂದ ವಿನಾಯಿಸಿದೆ. 1942ನೇ ಇಸವಿ ಸೆಪ್ಟೆಂಬರ್ 30ನೇ ತಾರೀಖಿನ ಮುಂಚಿತವಾಗಿ ಯಾವನೇ ಒಬ್ಬ ಮನುಷ್ಯನಾಗಲೀ, ಸರಕುಗಳ ವ್ಯಾಪಾರಗಾರನೆಂದು ಪರಿಗಣಿಸಲ್ಪಟ್ಟಲ್ಲಿ ಆತನು ಇಂಡಿಯಾ ಸರ್ಕಾರದವರು ತಮ್ಮ ಏಜೆಂಟರುಗಳೆಂದು ಸೂಚಿಸಿರುವ ವಿಮಾ ಕಂಪೆನಿಗಳಲ್ಲಿ ಸಂಸ್ಥಾನದಲ್ಲಿ ತಾನು ವ್ಯಾಪಾರಕ್ಕಾಗಿಟ್ಟಿರುವ ಸರಕಿನ ಮೇಲೆ ವಿಮಾ ಪಾಲಿಸಿಯನ್ನು ತೆಗೆದುಕೊಳ್ಳತಕ್ಕದ್ದು. ಆದರೆ ಮೇಲ್ಕಂಡಂತೆ ವ್ಯಾಪಾರಮಾಡುವಾಗ ವಿಮೆ ಮಾಡಬೇಕಾಗಿರತಕ್ಕ ಎಲ್ಲ ಸರಕುಗಳ ಮೌಲ್ಯವು 20,000 ರೂಪಾಯಿಗಳಿಗಿಂತ ಹೆಚ್ಚಾಗಿಲ್ಲದ ಪಕ್ಷದಲ್ಲಿ ವಿಮೆ ಮಾಡಲೇಬೇಕೆಂಬ ಬಲಾತ್ಕಾರವಿರುವುದಿಲ್ಲ. ಈ ಕಾನೂನಿನ ನಿಬಂಧನೆಗಳನ್ನುಲ್ಲಂಘಿಸಿದವರಿಗೆ, ಮತ್ತು ಇದಕ್ಕೆ ಪ್ರತಿಬಂಧಕವನ್ನುಂಟುಮಾಡಿದವರಿಗೆ ಹೆಚ್ಚಾದ ಜುಲ್ಮಾನೆಯನ್ನು ವಿಧಿಸಿದೆ. ಮೂರು ತಿಂಗಳಿಗೊಮ್ಮೆ ಪ್ರೀಮಿಯಂ ಕಂತುಗಳನ್ನು ಕೊಡತಕ್ಕದು. ಯಾವ ಯಾವ ತ್ರೈಮಾಸಿಕ ಅವಧಿಯಲ್ಲಿ ಯಾವ ಯಾವ ದರದಲ್ಲಿ ಪ್ರೀಮಿಯಮ್ಮನ್ನು ಕೊಡಬೇಕೆನ್ನುವುದನ್ನು ಇಂಡಿಯಾ ಸರ್ಕಾರದವರು ಆ ಅವಧಿಯ ಪ್ರಾರಂಭಕ್ಕೆ ಮುಂಚೆಯೇ ಘೋಷಿಸು ಮಾಡುತ್ತಾರೆ. 1942ನೇ ಇಸವಿ ಜುಲೈ ತಿಂಗಳಿನಿಂದ ಸಪ್ಟೆಂಬರ್ ತಿಂಗಳುವರೆಗೆ 100 ರೂಪಾಯಿಗಳಿಗೆ ತಿಂಗಳೊಂದಕ್ಕೆ ಮೂರಾಣೆಯಂತೆ ದರವನ್ನು ವಿಧಿಸಿದೆ. ಈ ಸಂಬಂಧದಲ್ಲಿ ಇಂಡಿಯಾ ಸರ್ಕಾರದವರು ಮಾಡಿರುವ ನಿಬಂಧನೆಗಳೆಲ್ಲವೂ ಸಂಸ್ಥಾನಕ್ಕೂ ಅನ್ವಯಿಸುತ್ತವೆ. ಹೆಚ್ಚಿನ ವಿವರಗಳು ಬೇಕಾದರೆ ಸಂಸ್ಥಾನದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರಿಂದ ಪಡೆಯಬಹುದು.

ಇಂಡಿಯಾಕ್ಕೆ ೩ ಲಕ್ಷ ಟನ್ ಗೋಧಿ ಬರುವುದು

ಇಂಡಿಯಾ ಸರ್ಕಾರದವರು ಆಸ್ಟ್ರೇಲಿಯಾದಿಂದ ೩ ಲಕ್ಷ ಟನ್ ಗೋಧಿಯನ್ನು ಶೀಘ್ರದಲ್ಲಿಯೇ ತರಿಸುವರೆಂದು ಗೊತ್ತಾಗಿದೆ. ಈ ಸಂಬಂಧದಲ್ಲಿ ಆಸ್ಟ್ರೇಲಿಯಾ ಸರ್ಕಾರದವರಿಗೆ ಬ್ರಿಟಿಷ್ ಸರ್ಕಾರವು ಸರಬರಾಜು ಮಾಡಲು ಹಡಗುಗಳನ್ನು ಒದಗಿಸಿಕೊಟ್ಟರೆ, ತಾವು ಗೋಧಿಯನ್ನು ಇಂಡಿಯಾಕ್ಕೆ ಕಳುಹಿಸಲು ಸಿದ್ಧರಾಗಿದ್ದೇವೆಂದು ಹೇಳಿದ್ದಾರೆ.

ಶ್ರೀಮನ್ಮಹಾರಾಜರವರ ಪ್ರವಾಸ

ಶ್ರೀಮನ್ಮಹಾರಾಜರವರು ಮುಂದಿನ ತಿಂಗಳು ೬ನೇ ತಾರೀಖಿನಿಂದ ೨೦ನೇ ತಾರೀಖಿನವರೆಗೆ ಹಾಸನ ಶಿವಮೊಗ್ಗ ಕಡೂರು ಜಿಲ್ಲೆಗಳಲ್ಲಿ ಪ್ರವಾಸವನ್ನು ಕೈಗೊಂಡಿರುವರು.

೬ನೇ ತಾರೀಖಿನ ರಾತ್ರಿ ಸ್ಪೆಷಲ್ ರೈಲಿನಲ್ಲಿ ಮೈಸೂರನ್ನು ಬಿಟ್ಟು ೭ನೇ ತಾರೀಖು ಹೊಳೆನರಸೀಪುರಕ್ಕೆ ಬಂದು ಪೌರಸಭೆಯ ಬಿನ್ನವತ್ತಳೆಯನ್ನು ಸ್ವೀಕರಿಸುವರು. ೮ನೇ ತಾರೀಖು [illegible] ಹಾಸನ ಸುಬ್ರಹ್ಮಣ್ಯಗಳಿಗೆ ಭೇಟಿಕೊಡುವರು. ೯ನೇ ತಾರೀಖು ಚನ್ನರಾಯಪಟ್ಟಣ, ಶ್ರವಣಬೆಳುಗೊಳಗಳಲ್ಲಿ ಪೌರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸುವರು. ೧೦ನೇ ತಾರೀಖು ಅರಸೀಕೆರೆಗೆ ಚಿತ್ತೈಸಿ ಪೌರಸಭೆಯಿಂದ ಬಿನ್ನವತ್ತಳೆಯನ್ನು ಸ್ವೀಕರಿಸಿ ಹಾಸನಕ್ಕೆ ಪುನಃ ಅಂದೇ ದಯಮಾಡಿಸಿ ಆಸ್ಪತ್ರೆಯ ಶಂಕುಸ್ಥಾಪನೆಯನ್ನು ನೆರವೇರಿಸುವರು. ಮಧ್ಯಾಹ್ನ ಕಡೂರು, ಬೀರೂರು, ತರೀಕೆರೆಗಳಲ್ಲಿ ಪೌರಸಭೆಗಳ ಬಿನ್ನವತ್ತಳೆಗಳನ್ನು ಸ್ವೀಕರಿಸಿ ಶಿವಮೊಗ್ಗೆಗೆ ದಯಮಾಡಿಸುವರು. ೧೨ನೇ ತಾರೀಖು ಚನ್ನಗಿರಿಯಲ್ಲಿ ಪೌರಸಭೆಯಿಂದ ಬಿನ್ನವತ್ತಳೆಯನ್ನು ಸ್ವೀಕರಿಸಿ ಸೂಳೆಕೆರೆಗೆ ದಯಮಾಡಿಸುವರು. ೧೩ನೇ ತಾರೀಖು ಹೊನ್ನಾಳಿಯಲ್ಲಿ ಪೌರಸಭೆಯ ಬಿನ್ನವತ್ತಳೆಯನ್ನು ಸ್ವೀಕರಿಸಿ ಅನಂತರ ಭದ್ರಾವತಿಗೆ ದಯಮಾಡಿಸುವರು. ೧೪, ೧೫, ೧೬ನೇ ತಾರೀಖುಗಳಲ್ಲಿ ಶಿಕಾರಿಯನ್ನು ಇಟ್ಟುಕೊಂಡಿರುವರು. ೧೭ನೇ ತಾರೀಖು ಜೋಗಿಗೆ ತೆರಳಿ ೧೮ನೇ ತಾರೀಖು ಅಲ್ಲೇ ಇರುವರು. ೧೯ನೇ ತಾರೀಖು ಜೋಗ್ ಪರಿಶೀಲಿಸಿ ಭಟ್ಕಳಿಗೆ ಬಂದು ಮಧ್ಯಾಹ್ನ ತಾಳಗುಪ್ಪೆಗೆ ದಯಮಾಡಿಸುವರು. ೨೦ನೇ ತಾರೀಖು ಸಿರ್ಸಿ ಮೂಲಕ ಗೋಕರ್ಣಕ್ಕೆ ಪ್ರಯಾಣಮಾಡುವರು. ಸಂಜೆ ತಾಳಗುಪ್ಪೆಗೆ ಹಿಂತಿರುಗಿ ೨೦ನೇ ತಾರೀಖು ರಾತ್ರಿ ಸ್ಪೆಷಲ್ ರೈಲಿನಲ್ಲಿ ಮೈಸೂರಿಗೆ ಆಗಮಿಸುವರು.

ಹೊಸ ಕಾಲಾಣೆ ಬಿಲ್ಲೆಗಳು

ಯುದ್ಧಾರಂಭವಾಗುವುದಕ್ಕೆ ಮುಂಚೆ ಒಂದು ತಿಂಗಳಿಗೆ ೧೬ ಮಿಲಿಯನ್ ಕಾಲಾಣೆಬಿಲ್ಲೆಗಳು ತಯಾರಾಗುತ್ತಿದ್ದವು. ಆದರ ಈಗ ೮೦ ಮಿಲಿಯನ್ ಬಿಲ್ಲೆಗಳು ತಯಾರಾಗುತ್ತಿವೆ. ಹಿಂದೂಸ್ಥಾನದಲ್ಲಿ ಇಷ್ಟು ಕಾಲಾಣೆಗಳು ಚಲಾವಣೆಯಲ್ಲಿದ್ದರೂ, ತಾಮ್ರದ ನಾಣ್ಯಗಳ ಕೊರತೆ ಕಡಿಮೆಯಾಗಿಲ್ಲ. ಅದನ್ನು ಪರಿಹರಿಸಲು ಸರ್ಕಾರದವರು ಒಂದು ತಿಂಗಳಲ್ಲಿ ೧೧೦ ಮಿಲಿಯನ್ ಬಿಲ್ಲೆಗಳು ತಯಾರಾಗುತ್ತವೆಂದು ಹೇಳಿದ್ದಾರೆ. ಈ ಹೊಸಕಾಲಾಣೆಯು ಈಗಿನ ನಾಣ್ಯದ ಮೂರನೇ ಒಂದು ಭಾಗವಿರುವುದೆಂದೂ ಮಧ್ಯದಲ್ಲಿ ಒಂದು ರಂಧ್ರವಿರುವದೆಂದೂ ಹೇಳಲಾಗಿದೆ.

ಶೋಚನೀಯ ನಿಧನ

ನೈಜಾಂ ಇಲಾಖಾ ಮುಕ್ತಲಿ ತಾಲೂಕು ಆಲಂಪಲ್ಲಿ ಗ್ರಾಮದ ಮಠದ ಸಂಗೀತ ವಿದ್ವಾನ್ ಪೌರಾಣಿಕ ವೇ|| ಬ್ರ|| ಶ್ರೀ|| ರಾಜೋಟಪ್ಪಯ್ಯನವರು ಮಾರ್ಗಶಿರ ಬ|| ೧ ಬುಧವಾರ ಮಧ್ಯಾಹ್ನ ತಿರಿವಾರ ಗ್ರಾಮದ ಮಠದಲ್ಲಿ ತಮ್ಮ ಅಪರ ವಯಸ್ಸಿನಲ್ಲಿ ಶಿವಾಧೀನರಾದರೆಂದು ತಿಳಿಸಲು ವಿಷಾದವೆನಿಸುತ್ತದೆ. ಇವರು ಸಂಗೀತ ವಿದ್ಯೆಯಲ್ಲಿ ಮಹಾ ನಿಪುಣರೂ, ಆಚಾರನಿಷ್ಠರೂ, ಗುರುಭಕ್ತಿತತ್ಪರರೂ ಆಗಿ, ಸಮಾಜ ಕಾರ್ಯಗಳಲ್ಲಿ ಮುಂದುವರೆಯುತ್ತಿದ್ದರು. ತಮ್ಮ ಸಂಗೀತ ವಿದ್ಯೆಯನ್ನು ಶಿಷ್ಯರಿಗೆ ಕಲಿಸಿದ್ದಲ್ಲದೆ ಈ ಮಧ್ಯೆ ಬಿದರ ಜಿಲ್ಲೆಯ ಶ್ರೀ|| ಸಂಗಮ ಕ್ಷೇತ್ರದಲ್ಲಿ ಅನುಷ್ಠಾನವಂ ಗೈದು ಲಕ್ಷಾಂತರ ಜಪವನ್ನು ಮಾಡಿದ್ದರು. ಇವರ ವಿಯೋಗವು ಈ ಪ್ರಾಂತದ ಜನರಿಗೆಲ್ಲಾ ಮಹಾ ದುಃಖವನ್ನುಂಟು ಮಾಡಿದೆ. ದೇವರು ಇವರ ಆತ್ಮಕ್ಕೆ ಶಾಂತಿಯನ್ನೂ ಮಕ್ಕಳು ಮೊಮ್ಮಕ್ಕಳಿಗೆ ದುಃಖೋಪಶಮನವನ್ನೂ ಅನುಗ್ರಹ ಮಾಡಲೆಂದು ಕೋರುವ,

ಓರ್ವ ದುಃಖಭಾಗಿ, ಮುಕ್ತಲಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 , ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧ನೇ ಫೆಬ್ರವರಿ ೧೯೪೩ [ಸಂಚಿಕೆ ೪೨

ಜನವರಿ ೧೨ ನೇ ತಾರೀಖಿನ ದಿವಸ ಮೈಸೂರು ಆಕಾಶವಾಣಿಯಲ್ಲಿ ಹೇಳಿದ ಉತ್ತರಾಯಣದ ವಿಷಯ

ಉತ್ತರಾಯಣವೆಂದರೆ ಉತ್ತರ ಗಮನ ಸೂರ್ಯನು ಉತ್ತರ ದಿಕ್ಕಿಗೆ ಹೋಗುವನು ಎಂದರ್ಥ ಈ ಅಯನವು ಡಿಸೆಂಬರ್ ೨೨, ೨೩ ರಲ್ಲೂ ಮತ್ತು ಜನವರಿ ೧೩, ೧೪ ರಲ್ಲಿಯೂ ಹೇಳಲ್ಪಡುವುದರಿಂದ ಎರಡು ಬಗೆಯಾಗಿದೆ ಇವರಲ್ಲಿ ಮೊದಲನೆಯದು ಮಕರರಾಶಿಯ ಆರಂಭ ಬಿಂದುವಿಗೆ ಸೂರ್ಯ ಬಿಂಬದ ಅಂಚಿನ ಸಂಬಂಧದಿಂದ ಉಂಟಾಗುವದು ಎರಡನೆಯದು ಆ ಬಿಂದುವಿಗೆ ಸೂರ್ಯಬಿಂಬದ ಕೇಂದ್ರಸ್ಪರ್ಶದಿಂದ ಉಂಟಾಗುವುದು ಆದುದರಿಂದ ಚಲಮಕರಸಂಕ್ರಮಣ, ಸ್ಥಿರಮಕರಸಂಕ್ರಮಣವೆಂದು ಹೇಳಲ್ಪಡುವುದು ಕ್ರಿ ಶ ೪೯೯ ರಲ್ಲಿ ಜನವರಿ ೧೩, ೧೪ ರಲ್ಲಿಯೇ ಈ ಎರಡು ಸಂಕ್ರಮಣಗಳೂ ಒಂದಾಗಿದ್ದವು ಈಗ ಅಯನ ಗ್ರಹ ಚಲನೆಯಿಂದ ವ್ಯತ್ಯಾಸವಾಗಿದೆ ಅಯನ ಗ್ರಹವೆಂದರೆ ಕ್ರಾಂತಿವೃತ್ತ, ವಿಷುವದ್ವೃತ್ತ ಅಂದರೆ ಎಕ್ಲಿಪ್ಟಿಕ್ ಮತ್ತು ಈಕ್ವೇಟರ್ ಈ ಎರಡು ವೃತ್ತಗಳ ಸಂಬಂಧ ಅಂದರೆ ಪೂರ್ವದಿಕ್ಕಿನ ಸಂಪಾತ ಇದು ಮೀನ ರಾಶಿಯ ಕೊನೆಯಿಂದ ೩೦, ೨೯, ೨೮ ಈ ಭಾಗಕ್ರಮವಾಗಿ ತಲೆ ಕೆಳಗಾಗಿ ಹೋಗುವುದು ಜನವರಿ ೧೩, ೧೪ ರಲ್ಲಿ ಸಂಭವಿಸುವ ಸ್ಥಿರಮಕರ ಸಂಕ್ರಮಣವು ಬಹಳ ಕಾಲದಿಂದ ಪ್ರಚಾರದಲ್ಲಿದೆ ಈಗ ಅದರ ವಿಷಯವಾಗಿ ಕೆಲವು ವಿಷಯಗಳನ್ನು ಹೇಳುತ್ತೇನೆ. ಈ ಸಂಕ್ರಮಣವು ಚಾಂದ್ರಯುಗಾದಿಯ ಹಾಗೆ ಸೌರಯುಗಾದಿಯಾಗಿ ಕೆಲವು ದೇಶಗಳಲ್ಲಿ ವ್ಯವಹಾರದಲ್ಲಿದೆ. ಇಲ್ಲಿಂದಲೇ ಎರಡು ತಿಂಗಳಿಗೆ ಒಂದೊಂದು ಋತುವಂತೆ ಶಿಶಿರ, ವಸಂತ, ಗ್ರೀಷ್ಮ ಈ ಮೂರು ಋತುಗಳು ಈ ಅಯನದಲ್ಲಿ ಅಡಕವಾಗಿರುತ್ತವೆ ಇದರಲ್ಲಿಯೇ ಸಕಲ ಧಾನ್ಯಗಳೂ, ಗೋಸಮೃದ್ಧಿ, ಫಲ, ಪುಷ್ಪ, ಕಂದ, ಮೂಲಾದಿಗಳೂ ತುಂಬಿರುತ್ತವೆ ಉತ್ತರ ಧ್ರುವದಲ್ಲಿ ವಾಸವಾಗಿರುವ ದೇವತೆಗಳಿಗೆ ಈ ಆರು ತಿಂಗಳೂ ಹಗಲಾಗಿರುತ್ತದೆ ಈ ತಿಂಗಳುಗಳಲ್ಲಿ ಸಂಗ್ರಹಿಸಲ್ಪಟ್ಟಿರುವ ಧಾನ್ಯಾದಿಗಳಿಂದ ದೇವತೆಗಳಿಗೆ ಪ್ರೀತಿಯನ್ನುಂಟುಮಾಡುವುದಕ್ಕೋಸ್ಕರವಾಗಿ ಉಪನಯನ, ವಿವಾಹ, ಗೃಹ ಪ್ರವೇಶ, ದೇವತಾಪ್ರತಿಷ್ಠೆ, ಗೃಹಾರಂಭ, ಯಾಗ, ಮೊದಲಾದ ಶುಭ ಕಾರ್ಯಗಳು ಮಾಡಲ್ಪಡುತ್ತವೆ ಈ ಸತ್ಕರ್ಮಗಳನ್ನು ನೆರವೇರಿಸಲು ಬಹಳ ಸೌಕರ್ಯಗಳುಂಟು

ಸೂರ್ಯನು ಈ ಪ್ರಪಂಚವೆಂಬ ರಥದಲ್ಲಿ ವರ್ಷವೆಂಬ ಒಂದು ಚಕ್ರವನ್ನಿಟ್ಟುಕೊಂಡು ಗಾಯತ್ರೀ ಮೊದಲಾದ ೭ ಛಂದಸ್ಸುಗಳೆಂಬ ೭ ಕುದುರೆಗಳನ್ನು ಸೇರಿಸಿಕೊಂಡು ಅರುಣನ ಸಾರಥ್ಯದಿಂದ ಸಂಚರಿಸುವನು ಇವನು ಧಾತಾ, ಅರ್ಯಮ, ಮಿತ್ರ ಇವೇ ಮೊದಲಾದ ೧೨ ಆಕಾರಗಳನ್ನು ತಾಳಿ ಮೇಷಾದಿ ೧೨ ಸಂಕ್ರಮಣಗಳನ್ನು ನಡೆಯಿಸುವನು ಅದರಲ್ಲಿ ಮಕರ ಮಾಸಕ್ಕೆ ಭಗನೆಂಬ ಸೂರ್ಯನು ಪ್ರವರ್ತಕನು ನಮ್ಮ ಶರೀರದಲ್ಲಿ ಕಣ್ಣು, ಕಿವಿ ಮೊದಲಾದ ನವದ್ವಾರಗಳ ಅಭಿಮಾನಿ ದೇವತೆಗಳಿರುವಂತೆ ಪ್ರತಿಸಂಕ್ರಮಣಕ್ಕೂ ಸೂರ್ಯ, ಋಷಿ, ಅಪ್ಸರಸ್ಸು ಗಂಧರ್ವ, ನಾಗ, ವರ್ಧಕಿ, ರಾಕ್ಷಸ, ರಶ್ಮಿ, ವರ್ಣ ಈ ಪ್ರಕಾರವಾಗಿ ೯ ಅಭಿಮಾನಿ ದೇವತೆಗಳುಂಟು ಅದರಲ್ಲಿ ಮಕರ ಸಂಕ್ರಮಣಕ್ಕೆ ಸೂರ್ಯನು ಭಗ, ಋಷಿಯು ಅರಿಷ್ಟನೇಮಿ, ಅಪ್ಸರಸ್ಸು ಪೂರ್ವಚಿತ್ತಿ, ಗಂಧರ್ವ ಊರ್ಣ, ನಾಗ ಕಾರ್ಕೋಟಕ, ವರ್ಧಕಿ ಅಂದರೆ ಬಡಗಿ ಆಯುಸ್ಸು, ರಾಕ್ಷಸ ಸ್ಫೂರ್ಜ, ರಶ್ಮಿ ೧೧೦೦೦, ವರ್ಣ ರಕ್ತ, ಈ ರೀತಿಯಾಗಿ ಅಂಗರಕ್ಷಕರುಂಟು

ಈ ಮಕರ ಸಂಕ್ರಾಂತಿಯನ್ನು ಧ್ಯಾನ ಜಪಾದಿಗಳಿಗೋಸ್ಕರವಾಗಿ ಮುಹೂರ್ತ ಮತ್ತು ಮಂತ್ರಶಾಸ್ತ್ರಜ್ಞರು ಒಬ್ಬ ಪುರುಷನನ್ನಾಗಿ ಕಲ್ಪಿಸಿ ಅವನ ಅಂಗ ವಿಭಾಗಗಳನ್ನು ಮಾಡಿರುತ್ತಾರೆ ಅದರ ಕ್ರಮವನ್ನು ಈ ರೀತಿಯಾಗಿ ತಿಳಿಯಬೇಕು

೨ ನೇ ಪಾದದಿಂದ ಉತ್ತರಾಷಾಢಾ ಅಭಿಜನ್ನಕ್ಷತ್ರಗಳು ಈತನ ಮುಖ ಮತ್ತು—

ಜ್ಯೇಷ್ಠೆ ಮೊದಲುಗೊಂಡು	೪	ನಕ್ಷತ್ರಗಳು	ಎಡಗಣ್ಣು
ಶ್ರವಣ ,	೪	,,	ಬಲಗಣ್ಣು
ಚಿತ್ರಾ	೪	,,	ಎಡಗಿವಿ
ಉತ್ತರ ಭಾದ್ರಪದದಿಂದ	೪	,,	ಬಲಗಿವಿ
ಮಘಾದಿಂದ	೪	,,	ಎಡಭುಜಗಳು
ಕೃತ್ತಿಕೆಯಿಂದ	೪	,,	ಬಲಭುಜಗಳು
ಪುನರ್ವಸುವಿನಿಂದ	೩	,,	ಬಲಎಡಪಾದಗಳು

ಬಲಭುಜದಲ್ಲಿ ವನಿಕೆ, ಶಕ್ತಿ, ಬಾಣ ಮತ್ತು ಎಡಭುಜದಲ್ಲಿ ಗುರಾಣಿ, ಗದೆ, ಪಾತ್ರೆ, ಧನುಸ್ಸು ಈ ಏಳು ಆಯುಧಗಳೇ ಗಾಯತ್ರೀ ಮೊದಲಾದ ೭ ಛಂದಸ್ಸುಗಳಾಗಿವೆ ಒಂದೊಂದು ಇಂದ್ರಿಯಕ್ಕೆ ೧೦೦೦ ಕಿರಣಗಳಂತೆ ೧೧ ಇಂದ್ರಿಯಗಳಿಗೆ ಈ ಪುರುಷನಿಗೆ ಮೇಲಕ್ಕೆ ಹರಡುವ ೧೧೦೦೦ ಕಿರಣಗಳು. ಅವೇ ಕೂದಲುಗಳು.

ಮಕರರಾಶಿಯು ಅಂತರಿಕ್ಷದಲ್ಲಿ ಕುತ್ತಿಗೆಯ ಮೇಲೆ ಜಿಂಕೆಯ ಹಾಗೆಯೂ, ಅದರ ಕೆಳಗೆ ಮೊಸಳೆಯ ಹಾಗೆಯೂ ಸೂಕ್ಷ್ಮದೃಷ್ಟಿಯಿಂದ ಕಾಣಲ್ಪಡುತ್ತದೆ ಒಂದು ಭಾಗಕ್ಕೆ ೬೦ ಕಲೆಗಳಾಗುವುದರಿಂದ ಇದರ ಅಗಲ ೬೦ ಯೋಜನಗಳೆಂದೂ ಈ ಮಕರರಾಶಿಯ ಅಧಿಪತಿಯಾದ ಶನಿಗೆ ೧೦೦ ವರ್ಷ ವಯಸ್ಸಾಗುವುದರಿಂದ ಎತ್ತರ ೧೦೦ ಯೋಜನಗಳೆಂದೂ, ಈ ಮಕರ ಸಂಕ್ರಾಂತಿ ಪುರುಷನ ಆಕಾರವನ್ನು ಹೇಳಿರುತ್ತಾರೆ

ಈ ಮಕರರಾಶಿಗೆ ೧, ೫, ೯, ಮಕರ, ವೃಷಭ, ಕನ್ಯಾರಾಶಿಗಳು ಆಗುತ್ತವೆ ಮಕರರಾಶಿಯು ಶನಿಯ ಮನೆಯಾದ್ದರಿಂದ ಶನಿಗೆ ಪ್ರೀತಿಯನ್ನುಂಟುಮಾಡುವ ಮೂಲಕ ಪೀಡಾಪರಿಹಾರಕ್ಕಾಗಿ ಈ ಹೊಸ ಯುಗಾದಿಯಲ್ಲಿ ಹೆಂಗಸರು ಹೊಸ ಸೀರೆಗಳನ್ನು ಧರಿಸಿಕೊಂಡು ಕಬ್ಬು, ಬೆಲ್ಲ, ಕೊಬ್ಬರಿ ಈ ಸಿಹಿ ಪದಾರ್ಥಗಳೊಡನೆ ಎಳ್ಳನ್ನು ಬೀರುತ್ತಾರೆ ಮತ್ತು ಶನಿಗೆ ಯಮನು ದೇವತೆಯಾದ್ದರಿಂದ ಅವನ ಪ್ರೀತಿಗೋಸ್ಕರವಾಗಿ ಬೂದುಗುಂಬಳಕಾಯಿ, ವಸ್ತ್ರ, ಎಳ್ಳುತುಂಬಿರುವ ಗಡಿಗೆ ಮೊದಲಾದುವುಗಳನ್ನು ದಾನಮಾಡುತ್ತಾರೆ

ಗದ್ದೆ ಮತ್ತು ಹೊಲವನ್ನು ಉತ್ತು ಬೆಳೆಯನ್ನುಂಟುಮಾಡಿ ಜನಗಳಿಗೆ ಜೀವನರೂಪವಾದ ಮಹೋಪಕಾರವನ್ನು ಮಾಡಿರುವ ಎತ್ತುಗಳಿಗೆ ಬಣ್ಣ, ಅರಿಶಿನ ಮುಂತಾದವುಗಳಿಂದ ಅಲಂಕರಿಸಿ ವಾದ್ಯಘೋಷಗಳೊಡನೆ ರೈತರು ಎಲ್ಲಾ ಬೀದಿಗಳಲ್ಲಿಯೂ ಮೆರವಣಿಗೆ ಮಾಡುವರು ಮತ್ತು ಎತ್ತುಗಳಿಗೆ ದೃಷ್ಟಿದೋಷ, ರೋಗ [illegible], ಇವುಗಳ ಪರಿಹಾರಕ್ಕಾಗಿ ಬೆಂಕಿಯಲ್ಲಿ ದಾಟಿಸುವರು

ಈ ದಿವಸ ತಮಿಳು ಮತ್ತು ಮಲಯಾಳ ದೇಶಗಳಲ್ಲಿ ಸಕಲ ಜಾತಿಯವರೂ ಸೂರ್ಯಮಂಡಲದಲ್ಲಿರುವ ಶ್ರೀಮನ್ನಾರಾಯಣನ ಪ್ರೀತಿಗೋಸ್ಕರವಾಗಿ ಸೂರ್ಯನಿಗೆ ಎದುರಾಗಿ ಕಂಚಿನಪಾತ್ರೆ ಅಥವ ಮಡಿಕೆ ಇವುಗಳಿಗೆ ೧೨ ನಾಮಗಳನ್ನು ಹಾಕಿ ಅವರ ಕುತ್ತಿಗೆಯಲ್ಲಿ ಕಬ್ಬು, ಅರಿಶಿನದ ಕೊಂಬು, ಬಾಳೇಹಣ್ಣು ಇವುಗಳನ್ನು ಕಟ್ಟಿ ಪೊಂಗಲನ್ನು ಮಾಡುವುದಕ್ಕೋಸ್ಕರ ಅಕ್ಕಿ, ಹೆಸರುಬೇಳೆ ಮುಂತಾದುವುಗಳನ್ನು ಹಾಕಿ ಕುದಿಸುತ್ತಾರೆ ಆಗ ಅದರ ಗಂಜಿಯು ಪೂರ್ವ, ಉತ್ತರ ಮತ್ತು ಈಶಾನ್ಯ ದಿಕ್ಕುಗಳಲ್ಲಿ ಸುರಿದರೆ ಅದು ಶುಭಶಕುನವೆಂದೆಣಿಸುತ್ತಾರೆ ಆದುದರಿಂದ ಈ ಹಬ್ಬಕ್ಕೆ ಪೊಂಗಲ್ ಹಬ್ಬವೆಂದು ಹೆಸರು ಆ ದಿವಸದಲ್ಲಿ ಉಂಡು ಮಿಕ್ಕಿರುವ ಪೊಂಗಲು ಮತ್ತು ಅನ್ನಗಳಿಗೆ ಮಾರನೇ ದಿನ ಅರಿಶಿನ, ಕುಂಕುಮಗಳನ್ನು ಕಲಸಿ ಅವುಗಳನ್ನು ಅರಿಶಿನ ಅಥವಾ ಬಾಳೆಯೆಲೆಯಲ್ಲಿ ಉಂಡೆಗಳನ್ನಾಗಿ ಮಾಡಿ ಭೂತತೃಪ್ತಿ ಮೂಲಕ ತೌರುಮನೆಗೆ ಕ್ಷೇಮವುಂಟಾಗುವುದಕ್ಕೋಸ್ಕರವಾಗಿ ಕಾಗೆಗಳಿಗೆ ಇಡುತ್ತಾರೆ ಅನಂತರ ಮುತ್ತೈದೆಯರಿಗೆ ಪೂಜೆ ನಮಸ್ಕಾರಗಳನ್ನು ಮಾಡುವರು ಇದಕ್ಕೆ ಕನುಹಬ್ಬವೆಂದು ಹೆಸರು ಇದು ದ್ರಾವಿಡರಲ್ಲಿ ವಿಶೇಷವಾಗಿರುತ್ತದೆ ಈ ಕನುಹಬ್ಬದಲ್ಲಿಯೇ ಹಸು ಮತ್ತು ಎತ್ತುಗಳಿಗೆ ಪೂಜೆಯನ್ನು ಮಾಡಿ ಸಾಯಂಕಾಲ ತುಷ್ಟಿಗಾಗಿ ಪೊಂಗಲನ್ನು ಮಾಡಿ ತಿನ್ನಿಸುತ್ತಾರೆ

ಲೋಕದಲ್ಲಿ ಒಬ್ಬ ಸಾರ್ವಭೌಮನು ಉತ್ತರ ದಿಕ್ಕಿಗೆ ವಿಜಯ ಯಾತ್ರೆಗಾಗಿ ಹೊರಡುವ ಸಮಯದಲ್ಲಿ ಪ್ರಜೆಗಳೆಲ್ಲವೂ ಭಕ್ತಿಯಿಂದ ನಜರುಗಳನ್ನು ಒಪ್ಪಿಸಿ ಅವನನ್ನು ಗೌರವಿಸುವಂತೆ ಸಕಲ ಗ್ರಹಗಳಿಗೂ ರಾಜನಾಗಿರುವ ಮತ್ತು ಜಗತ್ತಿಗೆ ತಂದೆಯಾಗಿರುವ ಸೂರ್ಯನು ಉತ್ತರ ದಿಕ್ಕಿಗೆ ಹೋಗುವ ಸಮಯದಲ್ಲಿ ಜನಗಳೆಲ್ಲರೂ ವಿಶೇಷ ಗೌರವ ಮತ್ತು ಭಕ್ತಿಯನ್ನು ತೋರಿಸುವರು ಈ ಸಂಕ್ರಾಂತಿ ಆದ ಮೇಲೆ ಸಮಸ್ತ ದಿಕ್ಕುಗಳೂ, ಹೊಳೆ, ಕೆರೆ, ಮತ್ತು ಭಾವಿ ನೀರುಗಳೂ ಸಹ ನಿರ್ಮಲವಾಗಿಯೂ, ಭೂಮಿಯು ಕೆಸರಿಲ್ಲದೆ ಎಲ್ಲೆಲ್ಲಿಯೂ ನಡೆಯುವದಕ್ಕೆ ಅನುಕೂಲವಾಗಿಯೂ, ಸುಗ್ಗಿಯ ಕಾಲ

[೪ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ

೧೯೪೩ನೇ ಫೆಬ್ರವರಿ ತಾ|| ೧ನೇ ಸೋಮವಾರ

ಪ್ರಧಾನಗುರುತ್ವ.

[illegible] ಪ್ರಧಾನಾಚಾರ್ಯಾ [illegible]
ಪ್ರಾಚಾರ್ಯ [illegible] ತಸಂಚಕೇ

ವೀರಶೈವಮತದಲ್ಲಿ ಗುರುತ್ವವೆಂಬುದು ಎರಡು ವಿಧವು. ಅವುಗಳಲ್ಲಿ ಒಂದು ಪ್ರಧಾನವಾದ ಗುರುತ್ವವು ಮತ್ತೊಂದು ಗೌಣವಾದ ಗುರುತ್ವವು. ಈ ಎರಡು ವಿಧವಾದ ಗುರುತ್ವದಲ್ಲಿ ಪ್ರಧಾನಗುರುತ್ವವೆಂಬುದು ಶಿವನ ಮುಖಗಳಿಂದುದ್ಭವಿಸಿದ ಶ್ರೀರೇಣುಕಾದಿ ಪಂಚಾಚಾರ್ಯರಲ್ಲಿಯೇ ಸಂಭವಿಸುವದು. ಇತರರಲ್ಲಿ ಗೌಣವಾದ ಗುರುತ್ವವಿರುವುದೆಂದೂ, ಪ್ರಧಾನವಾದ ಗುರುತ್ವವಿರುವದಿಲ್ಲವೆಂದೂ ಶಿವಾಗಮಗಳು ಸ್ಪಷ್ಟವಾಗಿ ಉಲ್ಲೇಖಿಸುವುದರಿಂದ ಶ್ರೀಪಂಚಾಚಾರ್ಯರಲ್ಲಿರುವ ಗುರುತ್ವವು ಅಸಿತರಸಾಧಾರಣವಾದುದೆಂಬುದು ಸ್ಪಷ್ಟವಾಗುತ್ತದೆ. ವೀರಶೈವಮತದಲ್ಲಿರುವ ಗೃಹಸ್ಥಾಶ್ರಮಿಗಳಾದ ಗುರುಗಳಾಗಲಿ, ಬ್ರಹ್ಮಚಾರಿಗಳಾದ ಪಟ್ಟದಾಧಿಕಾರಿಗುರುಗಳಾಗಲಿ ಎಲ್ಲರೂ ಪ್ರಧಾನಗುರುಗಳಾದ ಶ್ರೀಜಗದ್ಗುರು ಪಂಚಾಚಾರ್ಯರಲ್ಲಿ ಅಸಾಧಾರಣ ಭಕ್ತಿಯಿಂದ ನಡೆದುಕೊಳ್ಳಬೇಕೆಂದು ಶಿವಾಗಮಗಳು ಶಾಸನಮಾಡುತ್ತವೆ. ಈ ಪಂಚಾಚಾರ್ಯರೇ ವೀರಶೈವಮತವನ್ನು ಸ್ಥಾಪಿಸಿ ಮುಕ್ತಿಮೂಲಗಳಾದ ವೇದಧರ್ಮಗಳನ್ನು ಪ್ರಕಾಶಗೊಳಿಸಿದ್ದರಿಂದ ಇವರಲ್ಲಿ ಪ್ರಧಾನಗುರುತ್ವವು ನೆಲೆಗೊಂಡಿರುತ್ತದೆ. ಪ್ರಪಂಚದಲ್ಲಿ ಯಾರು ಯಾವ ವಂಶದಲ್ಲಿ ಜನ್ಮವನ್ನು ತಾಳುವರೋ, ಅವರೆಲ್ಲರೂ ಆ ವಂಶದ ಮೂಲಪುರುಷನ ಹೆಸರನ್ನು ಹೇಳುವುದು ಧರ್ಮಶಾಸ್ತ್ರದಿಂದಲೂ ರೂಢಿಯಿಂದಲೂ ವ್ಯವಹಾರವು ಬಂದಿರುವಂತೆ, ವೀರಶೈವಮತದಲ್ಲಿ ಜನ್ಮವೆತ್ತಿರುವವರೆಲ್ಲರೂ ಈ ಮತವನ್ನು ಸ್ಥಾಪಿಸಿದ ಶ್ರೀಜಗದ್ಗುರು ಪಂಚಾಚಾರ್ಯರ ಹೆಸರನ್ನೇ ಹೇಳುತ್ತಲೂ ಅವರ ನಾಮಾವಳಿಯನ್ನೇ ಧರಿಸುತ್ತಲೂ ಬರುವುದೇ ಅವರ ಮುಖ್ಯಧರ್ಮವಾಗಿದೆ. ಹಾಗಲ್ಲದ ಮತಸ್ಥಾಪನಾಚಾರ್ಯರನ್ನು ಉಪೇಕ್ಷಿಸಿ ನಾವೂ ಸಹ ವೀರಶೈವಮತದ ಗುರುಗಳೆಂದು ಅಹಂಕರಿಸುತ್ತ ಪ್ರಧಾನಗುರುಗಳನ್ನು ನಿಂದಿಸುವವರು ಹೇಗೆತಾನೇ ವೀರಶೈವರೆನಿಸಿಕೊಳ್ಳುವರು? ವಂಶದ ಮೂಲಪುರುಷರು ಸಂಪಾದಿಸಿದ ಮನೆಯಲ್ಲಿಯೇ ವಾಸವಾಗಿದ್ದು, ಅವರು ಗಳಿಸಿದ ಭೂಮಿಯಿಂದ ಬರುವ ಧಾನ್ಯದಿಂದಲೇ ಜೀವಿಸುತ್ತಲಿದ್ದರೂ ಪಿತೃಗಳನ್ನೇ ಜರೆಯುವ ಮನುಷ್ಯನು ಪಿತೃದ್ರೋಹಿಯೆನಿಸಿಕೊಂಡು ಘೋರವಾದ ನರಕವನ್ನು ಹೊಂದುವಂತೆ, ಪ್ರಧಾನಗುರುಗಳು ಕಟ್ಟಿದ ವೀರಶೈವಮತವೆಂಬ ಮನೆಯಲ್ಲಿ ವಾಸಮಾಡಿಕೊಂಡಿದ್ದು ಅವರಿಂದಲೇ ತಾವು ಸಾಧಾರಣ ಗುರುತ್ವವನ್ನು ಪಡೆದಿದ್ದರೂ, ಆ ಮೂಲಗುರುಗಳಮೇಲೆಯೇ ಟೀಕೆಯನ್ನು ಮಾಡುವವರು ಗುರುದ್ರೋಹಿಗಳೆನಿಸಿ ಅಂತ್ಯದಲ್ಲಿ ಘೋರವಾದ 'ಯಮಶಿಕ್ಷೆಗೆ ಗುರಿಯಾಗದೆ ಇರಲಾರರು. ದೇವರಲ್ಲಿ ಯಾವ ವಿಧವಾದ ಭಕ್ತಿಯನ್ನಿರಿಸಬೇಕೋ ಗುರುಗಳಲ್ಲಿಯೂ ಅದೇ ವಿಧವಾದ ಭಕ್ತಿಯನ್ನಿರಿಸಬೇಕೆಂದು ಸಾರುವ "ಯಥಾ ದೇವೇ ತಥಾಗುರೌ" ಎಂಬ ಶ್ರುತಿವಾಕ್ಯವನ್ನೂ ಸಹ ಲಕ್ಷಿಸದೆ ಇರುವ ಕೆಲ ನಾಸ್ತಿಕ ಜನಗಳು ಲೋಕದಲ್ಲಿ ಅಲ್ಲಲ್ಲಿಯೇ ಇರುವುದುಂಟು. ಇವರಿಂದ ಅವರು ತಮ್ಮ ನಾಸ್ತಿಕ ಸ್ವಭಾವವನ್ನು ತೋರಿಸಿಕೊಂಡಂತಾಗುವುದಲ್ಲದೆ ಮತಸ್ಥಾಪಕರಾದ ಮಹಾಗುರುಗಳಿಗೆ ಯಾವ ನ್ಯೂನತೆಯೂ ಉಂಟಾಗಲಾರದು. ಇವರ ದೂಷಣದಿಂದ ಮೂಲಾಚಾರ್ಯರ ಕೀರ್ತಿಗೆ ಯಾವ ಕೊರತೆಯೂ ಸಂಭವಿಸದು. ಚೋರರು ತಮ್ಮ ಸ್ವೇಚ್ಛಾಚಾರಕ್ಕೆ ಪ್ರತಿಬಂಧಕನಾದ ಚಂದ್ರನನ್ನು ದೂಷಿಸುವರು. ಇವರ ದೂಷಣೆಯಿಂದ ಜಗತ್ತನ್ನು ಬೆಳಗುವ ಚಂದ್ರನಿಗೆ ಯಾವ ನ್ಯೂನತೆಯೂ ಉಂಟಾಗಲಾರದಷ್ಟೆ! ಯಾರು ಶಿವಭಕ್ತರೆನಿಸಿಕೊಳ್ಳಬೇಕಾದರೂ ಗುರುಗಳೆನಿಸಿಕೊಳ್ಳಬೇಕಾದರೂ ಅವರು ಮತಸ್ಥಾಪಕರಾದ ಮಹಾಗುರುಗಳನ್ನೇ ಆಶ್ರಯಿಸಬೇಕು. ಇವರ ಆಶ್ರಯವನ್ನು ಯಾವನು ಅಪೇಕ್ಷಿಸುವುದಿಲ್ಲವೋ ಅವನು ಲಿಂಗಾಂಗಸಾಮರಸ್ಯವೆಂಬ ಸಿದ್ಧಿಯನ್ನು ಪಡೆಯುವುದಿಲ್ಲವಲ್ಲದೆ ವೀರಶೈವ ಎಂಬ ಅಭಿಧಾನಕ್ಕೂ ಸಹ ಅರ್ಹನಾಗುವುದಿಲ್ಲ. ಕಲಿಪ್ರಾಬಲ್ಯದಿಂದ ವೀರಶೈವಮತದಲ್ಲಿ ದುಷ್ಟರೂ ಪಾಪಾತ್ಮರೂ ಆದ ಕೆಲವರು ಹುಟ್ಟಿ ಮತಸ್ಥಾಪಕರಾದ ಮಹಾಚಾರ್ಯರ ಮೇಲೆ ಟೀಕೆಗಳನ್ನು ಮಾಡತೊಡಗಿ ತಾವು ದೊಡ್ಡವರೆನಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರಾಗಿದ್ದಾರೆ. ಇವನ್ನು ನೋಡಿದರೆ ಅತ್ಯಂತ ವ್ಯಸನವಾಗುತ್ತದೆ. ಶ್ರೀಪರಮೇಶ್ವರನು ಈ ವಿಧವಾದ ನಾಸ್ತಿಕರಿಗಲ್ಲಾ ಸದ್ಬುದ್ಧಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಸ್ಟಾಲಿನ್‌ಗ್ರಾಡ್ ಕದನ

ಸ್ಟಾಲಿನ್‌ಗ್ರಾಡ್ ನಗರದ ಮಧ್ಯಭಾಗದಲ್ಲಿ ಭಯಂಕರ ಕದನವಿನ್ನೂ ನಡೆಯುತ್ತಲೇ ಇದೆ. ಜರ್ಮನರನ್ನು ರಷ್ಯನರು ಮನೆಯಿಂದ ಮನೆಗೆ ಓಡಿಸಿಕೊಂಡು ಬಂದು ಸದೆಬಡೆಯುತ್ತಿದ್ದಾರೆ. ಜರ್ಮನರು ಶರಣಾಗತರಾಗುತ್ತಿರುವುದು ಹೆಚ್ಚುತ್ತಿದೆ. ಸ್ಟಾಲಿನ್‌ಗ್ರಾಡ್ ನಗರದ ಸುತ್ತ ಇರುವ ಜರ್ಮನ್ ವ್ಯೂಹವನ್ನು ಹಲವು ಕಡೆ ಭೇದಿಸಲಾಗಿದೆ.

ಯುದ್ಧವು ವಿಷಮಸ್ಥಿತಿಯಲ್ಲಿದೆ

ಯುದ್ಧವು ಈಗ ವಿಷಮಸ್ಥಿತಿಯಲ್ಲಿದೆ. ಯಾವುದಕ್ಕೂ ತಲೆತಗ್ಗಿಸದಂತಹ ಸ್ಥಿತಿಯಲ್ಲಿ ನಾವು ಈಗ ಸಿದ್ಧವಾಗಿರಬೇಕು. ಜರ್ಮನರಿಗೆ ತಮಗೆ ತಿಳಿದಿರುವುದಕ್ಕಿಂತ ಹೆಚ್ಚಿನ ಶಕ್ತಿಯುದೆಯಾದರೂ ಅದನ್ನಿನ್ನೂ ಹೆಚ್ಚಿಸಿಕೊಳ್ಳುವ ಪ್ರಯತ್ನಮಾಡಬೇಕು. ಈಗ ಗೆದ್ದವರು ವಿಜಯಿಗಳಾಗುವರು. ಉಕ್ಕಿನಂತೆ ದೃಢಮನಸ್ಸಿನಿಂದ ಕೂಡಿದ ಜನಾಂಗದ ಬೆಂಬಲದಿಂದಲೇ ಈಗ ಜಯವು ಸಿದ್ಧ. ನಾವು ಹೊಂದಿರುವ ಧೈರ್ಯವು ಅಚಲವಾಗಿರಬೇಕು. ಎಂದು ಜರ್ಮನ್ ನಾಯಕರಾದ ಡಾ|| ಗೊಬೆಲ್ಸ್‌ರವರು ಬರೆದಿದ್ದಾರೆ.

ಜರ್ಮನಿಯಲ್ಲಿ ಎಚ್ಚರಿಕೆ

ಜರ್ಮನರಿಗೆ ನಾನಾ ರಣರಂಗಗಳಲ್ಲಿಯೂ ಆಗುತ್ತಿರುವ ಸೋಲಿನಿಂದ ಅಲ್ಲಿಯ ಜನರಿಗೆ ಕಳವಳಕ್ಕೆ ಪ್ರಾರಂಭವಾಗಿದೆ. ನಾಜಿ ಸರ್ಕಾರವೂ ಸಹ ಅದಕ್ಕೆ ತಕ್ಕ ಸಿದ್ಧತೆಗಳನ್ನು ಮಾಡಿಕೊಂಡಿದೆ. ಈಗ ಜರ್ಮನಿಯನ್ನು ಕೈಬಿಡಲು ಯತ್ನಿಸುವ ಜರ್ಮನ್ ಪ್ರಜೆಗಳಿಗೆ ಅಪಾರ ಶಿಕ್ಷೆಯು ವಿಧಿಸಲ್ಪಡುತ್ತದೆಯೆಂದು ರೇಡಿಯೋ ಪ್ರಚಾರವು ಪ್ರಾರಂಭವಾಗಿದೆ. ಸೈನ್ಯದಿಂದ ತಲೆತಪ್ಪಿಸಿಕೊಂಡು ಬರುವವರನ್ನು ಗುಂಡಿನಿಂದ ಕೊಲ್ಲಲು ಆಜ್ಞೆಯಾಗಿದೆಯಂತೆ!

ನಾಜಿ ಸೈನಿಕರ ಅವಸ್ಥೆ

ಹಿಂದಿನಂತೆ ಈಗ ಜರ್ಮನರು ಜಂಭಕೊಚ್ಚುವಂತಿಲ್ಲ. ಅವರ ಗರ್ವವು ಮಾಯವಾಗಿದೆ. ರಷ್ಯ ರಂಗದ ಭೀಕರ ಪರಿಸ್ಥಿತಿಯನ್ನು ಜರ್ಮನ್ ರೇಡಿಯೋ ಒಪ್ಪಿಕೊಳ್ಳುತ್ತಿದೆ. ರಷ್ಯ ಸೇನೆಯು ಸಂಖ್ಯೆಯಲ್ಲೂ ಸಂಗ್ರಾಮ ಸಾಧನಗಳಲ್ಲೂ ಜರ್ಮನ್ ಸೇನೆಗಳಿಗಿಂತಲೂ ಉತ್ತಮ ಸ್ಥಿತಿಯಲ್ಲಿವೆಯೆಂದು ಜರ್ಮನರೇ ಹೇಳುತ್ತಿದ್ದಾರೆ. ಸ್ಟಾಲಿನ್‌ಗ್ರಾಡ್ ಬಳಿ ಸಿಕ್ಕಿಬಿದ್ದಿರುವ ನಾಜಿ ಪಡೆಗಳು ಇನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲವೆಂದೂ ಆ ಪಡೆಗಳ ಆಸೆ ತೀರಿತೆಂದೂ ನಾಜಿಗಳು ಭಾವಿಸಿದ್ದಾರೆ.

ಮಾರ್ಸೇಲ್ಸ್‌ನಲ್ಲಿ ಮಾರ್ಷಿಯಲ್-ಲಾ

ಮಾರ್ಸೇಲ್ಸ್‌ನಲ್ಲಿ ಮಾರ್ಷಿಯಲ್-ಲಾವನ್ನು ಆಚರಣೆಗೆ ತರಲಾಗಿದೆ. ಬರಿದಾಗುವ ಭವನಗಳನ್ನು ಯಾರೂ ಅತ್ರಮಿಸುವಂತಿಲ್ಲ. ಆಜ್ಞೆಗೆ ವಿರೋಧವಾದವರಿಗೆ ಮರಣದಂಡನೆಯೇ ಶಿಕ್ಷೆ. ಈಗಾಗಲೇ ೨೫೦ ಕ್ಕಿಂತ ಹೆಚ್ಚು ಮಂದಿಯನ್ನು ಗುಂಡಿಸಿಂದ ಹೊಡೆದು ಕೊಲ್ಲಲಾಗಿದೆ. ಹಳೇ ಬಂದರಿನ ಕ್ಷೇತ್ರವನ್ನೆಲ್ಲ ನಾಶಮಾಡಲಾಗಿದೆಯೆಂದೂ, ಅಲ್ಲಿದ್ದ ೪೦,೦೦೦ ಜನರನ್ನು ಒಳಪ್ರಾಂತ್ಯಕ್ಕೆ ಕಳಿಸಲಾಗಿದೆಯೆಂದೂ ಫ್ರಾನ್ಸ್ ರೇಡಿಯೋ ತಿಳಿಸಿತು. ರಾಜದ್ರೋಹಕರವಾದ ಕಾರ್ಯಗಳಿಗಾಗಿ ೬೦೦೦ ಕ್ಕಿಂತ ಹೆಚ್ಚು ಜನರು ಬಂಧಿಸಲ್ಪಟ್ಟಿದ್ದಾರೆ.

ಸ್ಟಾಲಿನ್ನರ ಸಂದೇಶ

ರಷ್ಯದ ಮಹಾದಂಡನಾಯಕರಾದ ಎಂ. ಸ್ಟಾಲಿನ್‌ರವರು ರಷ್ಯದ ನಾನಾರಂಗಗಳಲ್ಲಿ ಹೋರಾಡುತ್ತಿರುವ ತಮ್ಮ ಸೈನಿಕರನ್ನುದ್ದೇಶಿಸಿ "ಕಳೆದ ಎರಡು ತಿಂಗಳಿಂದ ರಷ್ಯವು ನಡೆಯಿಸಿದ ಮುತ್ತಿಗೆಯಿಂದ ಜರ್ಮನ್ ವ್ಯೂಹಗಳು ಅನೇಕ ಕಡೆಗೆ ಭೇದಿಸಲ್ಪಟ್ಟಿವೆ. ೧೦೨ ಶತ್ರುಪಡೆಗಳು ನಾಶವಾಗಿವೆ. ೨ ಲಕ್ಷ ಸೈನಿಕರು ಸೆರೆಸಿಕ್ಕಿದ್ದಾರೆ. ೧೩೦೦೦ ಬಂದೂಕುಗಳು ನಮ್ಮ ವಶವಾಗಿವೆ. ರಷ್ಯನ್ ಸೈನಿಕರು ಸುಮಾರು ೨೫೦ ಮೈಲಿ ಮುಂದೆ ನುಗ್ಗಿದಂತಾಗಿದೆ. ರಷ್ಯ ಸೈನಿಕರೇ, ಮುಂದೆ ನುಗ್ಗಿ ಜರ್ಮನರನ್ನು ರಷ್ಯದ ಗಡಿಯಿಂದಾಚೆಗೆ ಅಟ್ಟಿರಿ" ಎಂದು ಹೇಳಿದ್ದಾರೆ.

ಜರ್ಮನ್ ಸೇನೆಯು ರಷ್ಯನರಿಂದ ಧ್ವಂಸವಾಗಿಹೋಯಿತು

ಸ್ಟಾಲಿನ್‌ಗ್ರಾಡ್ ಕ್ಷೇತ್ರದಲ್ಲಿ ಸಿಕ್ಕಿಬಿದ್ದಿರುವ ನಾಜಿ ಸೇನೆಯನ್ನು ಪೂರ್ಣವಾಗಿ ಧ್ವಂಸಮಾಡಲಾಯಿತೆಂದು ವಿಶೇಷ ಪ್ರಕಟನೆಯು ತಿಳಿಸುತ್ತದೆ. ಎರಡು ಕಡೆಗಳಲ್ಲಿ ಮಾತ್ರ ಇನ್ನೂ ಒಟ್ಟು ೧೨೦೦೦ ನಾಜಿ ಸೈನಿಕರು ಉಳಿದಿದ್ದಾರೆ. ಸ್ಟಾಲಿನ್‌ಗ್ರಾಡ್ ಆಕ್ರಮಿಸಿಕೊಂಡಿದ್ದ ನಾಜಿ ಪಡೆಗಳನ್ನು ಧ್ವಂಸಮಾಡುವ ಕೆಲಸವು ಆರಂಭವಾದಂದಿನಿಂದ ಇಲ್ಲಿಯವರೆಗೆ ೪೦೦೦೦ ಜರ್ಮನರು ಹತರಾಗಿದ್ದಾರೆ, ೨೮೦೦೦ ನಾಜಿಗಳು ಸೆರೆಯಾಗಿದ್ದಾರೆ. ೧೨೯೬ ಟ್ಯಾಂಕುಗಳನ್ನೂ ೨೯೬೮ ಬಂದೂಕಗಳನ್ನೂ ೫೨೩ ವಿಮಾನಗಳನ್ನೂ ವಶಪಡಿಸಿಕೊಳ್ಳಲಾಗಿದೆ. ವಾರೊನೆಜ್‌ನಿಂದ ಹಿಡಿದು ಕಾಕಸಸ್ ಕ್ಷೇತ್ರದವರೆಗೆ-ಅಂದರೆ ೬೦೦ ಮೈಲಿ ಅಗಲದಲ್ಲಿ ರಷ್ಯನರು ಶತ್ರುಗಳಿಗೆ ಏಟುಹಾಕುತ್ತಿದ್ದಾರೆ. ಖಾರಕೋವ್, ಕರ್ಸ್ಕ ಮತ್ತು ರಾಸ್ಟೋವ್‌ಗಳನ್ನು ರಕ್ಷಿಸಿಕೊಳ್ಳುತ್ತಿರುವ ಜರ್ಮನ್ ಕಾಲಾಳು ಬಲದವರು ಸಹಾಯಕ್ಕಾಗಿ ಆಕಾಶದ ಕಡೆ ನೋಡುತ್ತಿದ್ದಾರೆ. ಆದರೆ ಅವರ ನಿರೀಕ್ಷೆಯೆಲ್ಲವೂ ನಿಷ್ಫಲವಾಗುತ್ತಿದೆ. ಒಂದು ಕಾಲದಲ್ಲಿ ಸ್ಟಾಲಿನ್‌ಗ್ರಾಡಿನಿಂದ ಹಿಡಿದು ಕಾಕಸಸ್‌ವರೆಗೆ ಅಜೇಯವೆನಿಸಿದ್ದ ಜರ್ಮ ವಿಮಾನ ಬಲವು ಈಗ ದುರ್ಬಲಸ್ಥಿತಿಗೆ ಇಳಿದಿದೆ. ೧೦೦೦ ಕ್ಕಿಂತ ಹೆಚ್ಚು ವಿಮಾನಗಳು ಕಟ್ಟಿಣದ ಮುದ್ದೆಯಾಗಿ ಬಿದ್ದಿವೆ. ರಷ್ಯನ್ ವಿಮಾನ ಬಲವನ್ನು ಪ್ರತಿಭಟಿಸುವ ಶಕ್ತಿ ಅದಕ್ಕಿಲ್ಲದಾಗಿದೆ.

ಜಪಾನು ಭಾರತದ ಮೇಲೆ ಬೀಳಬಹುದು

ಸಂಯುಕ್ತ ಪ್ರಾಂತದ ಗೌರ್ನರರಾದ ಸರ್ ಮಾರ್‍ಲಿಸ್ ಹ್ಯಾಲೆಟ್‌ರವರು ಕಳೆದ ೨೫ ನೆಯ ತಾರೀಖಿನ ದಿವಸ ಕಾಶಿಯಲ್ಲಿ ನಡೆದ ಏ. ಆರ್. ಪಿ. ರ್‍ಯಾಲಿಯಲ್ಲಿ ಮಾತನಾಡುತ್ತ "ನಾನು ಮಿಲಿಟರಿ ನಿಪುಣನೆಂದು ಹೇಳಿಕೊಳ್ಳುವಂತಿಲ್ಲವಾದರೂ ಪೆಸಿಫಿಕ್ ದ್ವೀಪಗಳಿಂದ ಜಪಾನರು ಓಡಿಸಲ್ಪಟ್ಟರೆ ಅವರು ತಮ್ಮ ಬಲವನ್ನು ಪಶ್ಚಿಮಕ್ಕೆ ತಿರುಗಿಸಿ ಭಾರತವನ್ನು ಮುತ್ತಬಹುದು ಅವರ ಪ್ರಯತ್ನವೇನೋ ವಿಫಲವಾಗುವುದು ನಿಶ್ಚಯವಾದರೂ ಅವರನ್ನು ಸೋಲಿಸುವುದರಲ್ಲಿ ಅಪಾರ ರಕ್ತವನ್ನು ಸುರಿಸಲೇಬೇಕಾಗುವದೆಂಬುದರಲ್ಲಿ ಸಂದೇಹವಿಲ್ಲ" ಎಂದು ಎಚ್ಚರಿಸಿದರು.

ಸಾವಕಾಶಮಾಡಿದರೆ ಕ್ಷೇಮವಿಲ್ಲ

ಆಸ್ಟ್ರೇಲಿಯದ ಮಹಾಪ್ರಧಾನರಾದ ಮಿ|| ಕರ್ಟಿನ್ ರವರು ಅಮೆರಿಕನ್ನರನ್ನು ಕುರಿತು ರೇಡಿಯೋ ಮೂಲಕ ಮಾತನಾಡುತ್ತ—"ನೈಋತ್ಯ ಪೆಸಿಫಿಕ್‌ನಲ್ಲಿ ತತ್‌ಕ್ಷಣ ವಿಮಾನ ಮತ್ತು ನೌಕಾಬಲವನ್ನು ಹೆಚ್ಚಿಸಬೇಕಾದುದು ಅಗತ್ಯವೆಂದೂ, ಕೇವಲ ಕಾವಲಿಗಾಗಿ ಸ್ವಲ್ಪ ಬಲವನ್ನು ಅಲ್ಲಿಟ್ಟಿರುವುದು ವಿಪತ್ಕಾರಕವಾದ ನೀತಿಯೆಂದೂ, ಈಗ ಜಪಾನಿಗೆ ಅಮೂಲ್ಯ ಕಾಲಾವಕಾಶವು ದೊರೆತಿದೆಯೆಂದೂ, ತಾನು ಆಕ್ರಮಿಸಿದ ದೇಶಗಳಿಂದ ಅದು ಪೂರ್ಣ ಪ್ರಯೋಜನ ಹೊಂದಿ, ಮಿಲಿಟರಿ ವೃದ್ಧಿ ಮಾಡಿಕೊಳ್ಳುತ್ತಿದೆಯೆಂದೂ, ಮಿತ್ರಜನಾಂಗಗಳು ಈಗ ಸುಮ್ಮನಿದ್ದರೆ ಮುಂದೆ ಜಪಾನನ್ನು ತುಳಿಯಲು ಬಹಳ ಕಷ್ಟವಾದೀತೆಂದೂ, ಮಿಲಿಟರಿ ಪ್ರಾಮುಖ್ಯದ ದೃಷ್ಟಿಯಿಂದ ನೋಡಿದರೆ, ಆಸ್ಟ್ರೇಲಿಯಾವನ್ನು ಬಲಪಡಿಸಬೇಕಾದುದು ಅತ್ಯಗತ್ಯವೆಂದೂ, ಎಷ್ಟು ಬೇಗ ಜಪಾನಿನ ಹೃದಯಕ್ಕೆ ಏಟು ಹಾಕಿದರೆ ಅಷ್ಟು ಮೇಲೆಂದೂ, ಕಾಲಮೀರಿದ ಮೇಲೆ ಕಾರ್ಯವೆಲ್ಲವೂ ನಷ್ಟವಾದೀತೆಂದೂ" ಹೇಳಿದರು

ರೂಜ್‌ವೆಲ್ಟ್ ಮತ್ತು ಚರ್ಚಿಲ್‌ರವರ ಸಂಭಾಷಣ.

ರೂಜ್‌ವೆಲ್ಟರೂ ಮತ್ತು ಚರ್ಚಿಲ್ಲರೂ ಫ್ರೆಂಚ್ ಮೊರಾಕೊದಲ್ಲಿರುವ ಕ್ಯಾಸ್‌ಬ್ಲಾಂಕಾದ ಹತ್ತಿರ ಕಳೆದ ೧೦ ದಿನಗಳ ಕಾಲ ಮಾತುಕತೆ ನಡೆಸಿದರು ೧೯೪೩ರಲ್ಲಿ ಕೈಗೊಳ್ಳಬೇಕಾದ ದಂಡಯಾತ್ರೆಗಳನ್ನು ಕುರಿತು ಅವರು ಪೂರ್ಣ ಒಪ್ಪಂದಕ್ಕೆ ಬಂದಿದ್ದಾರೆಂದು ಅಧಿಕಾರಯುತ ವರದಿಯೊಂದು ತಿಳಿಸುತ್ತದೆ ಶತ್ರುವನ್ನು ಕೆಲವು ಸ್ಥಳಗಳಲ್ಲಿ ಪ್ರತಿಭಟಿಸುವುದರ ಮೂಲಕ ರಷ್ಯನ್ ಸೇನೆಗಳ ಮೇಲೆ ಬಿದ್ದಿರುವ ಭಾರವನ್ನು ಆದಷ್ಟು ಕಡಿಮೆ ಮಾಡಬೇಕೆಂಬುದೇ ಅವರ ಗುರಿ ಜನರಲ್ ಡೀಗಾಲೆ ಮತ್ತು ಜ|| ಗಿರಾಡ್ ಇವರು ಸಹ ಕ್ಯಾಸ್‌ಬ್ಲಾಂಕಾದಲ್ಲಿ ಸಂಧಿಸಿ ಒಂದು ಒಪ್ಪಂದಕ್ಕೆ ಬಂದರು ಅವರೊಂದು ಪ್ರಕಟನೆಯನ್ನು ಹೊರಡಿಸಿ "ನಾವು ಒಟ್ಟಿಗೆ ಸೇರಿ ಮಾತನಾಡಿದೆವು ನಾವು ಸಾಧಿಸಬೇಕಾದ ಗುರಿಯ ವಿಚಾರದಲ್ಲಿ ನಾವಿಬ್ಬರೂ ಏಕಮುಖವಾದ ತೀರ್ಮಾನಕ್ಕೆ ಬಂದಿದ್ದೇವೆ ಫ್ರಾನ್ಸನ್ನು ಬಿಡುಗಡೆ ಮಾಡಿ, ಶತ್ರುಗಳನ್ನು ಸಂಪೂರ್ಣವಾಗಿ ಧ್ವಂಸಮಾಡುವುದರ ಮೂಲಕ ಮಾನವ ಸ್ವಾತಂತ್ರ್ಯಕ್ಕೆ ವಿಜಯವಾಗುವಂತೆ ಮಾಡಬೇಕೆಂಬುದೇ ಅದು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಫ್ರೆಂಚರೆಲ್ಲರೂ ಮಿತ್ರದೇಶಗಳ ಕಡೆ ಸೇರಿ ಈ ಕಾರ್ಯವನ್ನು ಸಾಧಿಸುವರು" ಎಂದು ತಿಳಿಸಿದ್ದಾರೆ ಈ ಮಾತುಕತೆಗಳಲ್ಲಿ ಭಾಗವಹಿಸುವಂತೆ ಎಂ. ಸ್ಟಾಲಿನರಿಗೆ ಆಹ್ವಾನಕೊಡಲಾಗಿತ್ತು ಆದರೆ ಅವರು ರಷ್ಯನರಿಗೆ ಮುಂದಾಳಾಗಿ ನಿಂತು ಮುತ್ತಿಗೆಗಳಿಗೆ ಸೂಚನೆ ಕೊಡುತ್ತಿರುವುದರಿಂದ ಅವರಿಗೆ ಬರಲು ಸಾಧ್ಯವಾಗಲಿಲ್ಲ ಇಲ್ಲಿ ವಿಮರ್ಶೆಗೆ ಬಂದ ಮಿಲಿಟರಿ ಸಲಹೆಗಳ ವಿಚಾರವನ್ನು ಸಂಪೂರ್ಣವಾಗಿ ಅವರಿಗೆ ತಿಳಿಸಲಾಗಿದೆ ಶ್ರೀ ಚರ್ಚಿಲ್ಲರು "ಈ ಸಂಗ್ರಾಮದಲ್ಲೆಲ್ಲ ಬಹಳ ಮುಖ್ಯವಾದ ಸಮ್ಮೇಳನವಿದು" ಎಂಬುದಾಗಿ ಹೇಳಿ ಮಿಲಿಟರಿ ಅಧಿಕಾರಿಗಳು ಈ ವರ್ಷದ ಕಾರ್ಯಯೋಜನೆಯನ್ನು ಕುರಿತು ಬಹು ವಿವರವಾಗಿ ವಿಮರ್ಶಿಸಿದ್ದಾರೆಂದೂ, ಅದರ ಫಲವು ಶೀಘ್ರವಾಗಿ ವ್ಯಕ್ತವಾಗುವುದೆಂದೂ ಹೇಳಿದರು. ಜರ್ಮನಿ ಮತ್ತು ಜಪಾನ್ ಬಲವನ್ನು ಸಂಪೂರ್ಣವಾಗಿ ನಾಶಮಾಡುವುದರಿಂದ ಮಾತ್ರ ಜಗತ್ತಿಗೆ ಶಾಂತಿಯನ್ನು ದೊರಕಿಸಲು ಸಾಧ್ಯವೆಂಬ ನಿರ್ಧಾರಕ್ಕೆ ನಾವು ಬಂದಿರುವುದಾಗಿಯೂ ಮತ್ತು ಜರ್ಮನಿ ಇಟಲಿ ಮತ್ತು ಜಪಾನ ಇವು ಮೂರೂ ಯಾವ ಷರತ್ತೂ ಇಲ್ಲದೆ ಶರಣಾಗತವಾಗುವುದೊಂದೇ ಇದಕ್ಕೆ ಮಾರ್ಗವೆಂದೂ, ಆಕ್ಸಿಸ್ ದೇಶಗಳ ಮತ್ತು ಅವುಗಳ ಜನರ ವಿನಾಶವಾಗಬೇಕೆಂಬುದು ಇದರ ಅರ್ಥವಲ್ಲವೆಂದೂ, ಆ ದೇಶಗಳ ಮನಸ್ಸನ್ನು ಆವರಿಸಿರುವ ವಿಷವಾಹಿನಿಯು ಬತ್ತುವಂತೆ ಮಾಡುವುದೇ ತಮ್ಮ ಗುರಿಯೆಂದೂ ಶ್ರೀ ರೂಜ್‌ವೆಲ್ಟರು ತಿಳಿಸಿದರು

ಅರಬ್ಬಿಯವರ ಬಳಿಯಲ್ಲಿ ೩೧೩೫ ಸವರೇನ್‌ಗಳ ಪತ್ತೆ

ಪಾಲಘಾಟ್ ಟೌನ್ ಪೋಲೀಸಿನವರು ಇಬ್ಬರು ಅರಬ್ಬಿ ವರ್ತಕರನ್ನು ದಸ್ತಗಿರಿ ಮಾಡಿ ಅವರ ಸಾಮಾನುಗಳನ್ನು ಶೋಧಿಸಿದರು ೩೧೩೫ ಇಂಗ್ಲಿಷ್ ಸವರೇನ್‌ಗಳೂ, ೫೦ ಡಬ್ಬಾಗಳಷ್ಟು ಸ್ಯಾಕ್ರೀನ್ ಗುಳಿಗೆಗಳೂ ಕೊಡಕ್ ಫಿಲ್ಮುಗಳೂ ರೇಷ್ಮೆ ಮತ್ತು ಚಿನ್ನದ ವಸ್ತುಗಳೂ ಸಿಕ್ಕವು ಅವರು ಬಸ್ರಾದಿಂದ ಮುಂಬಯಿಗೆ ಬಂದು, ಅಲ್ಲಿಂದ ಪಾಲಘಾಟಿಗೆ ಬಂದರೆಂದು ಹೇಳಲಾಗಿದೆ ಮುಂದಿನ ಶೋಧವು ನಡೆಯುತ್ತದೆ

ಮಿಡಚಿಗಳನ್ನು ನಾಶಮಾಡಲು ವಿಮಾನಗಳ ಸಹಾಯ

ಪೈರುಗಳನ್ನೂ ಮರಗಿಡಗಳನ್ನೂ ನಾಶಪಡಿಸುವ ಮಿಡಚಿಗಳ ಹಾವಳಿಯು ಭಾರತದಲ್ಲಿ ಈಗ ಬಲವಾಗುತ್ತದೆ ಆದಕಾರಣ ಅವನ್ನು ನಾಶಮಾಡುವ ರಾಸಾಯನಿಕ ವಸ್ತುಗಳನ್ನು ವಿಮಾನಗಳಿಂದ ಮಿಡಚಿಗಳ ಹಾವಳಿ ಇರುವ ಕಡೆ ಚೆಲ್ಲಬೇಕೆಂದು ಇಂಡಿಯಾ ಸರ್ಕಾರವು ಯೋಚಿಸಿದೆ ಈ ಕಾರ್ಯದಲ್ಲಿ ನಿಷ್ಣಾತರಾದವರನ್ನೂ ಕರೆಯಿಸಲಾಗಿದೆ

| ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿಮಹೋತ್ಸವ

ತಾ|| ೨೫-೧-೪೩ನೆಯ ಸೋಮವಾರ ಶ್ರೀಮಲ್ಲಿಕಾರ್ಜುನದೇವಾಲಯದಲ್ಲಿ ಸೋಲಾಪುರದ ಶ್ರೀ ವೀರಶೈವಸದಾಚಾರ ಸ್ತ್ರೀಸಮಾಜದ ವತಿಯಿಂದ ಶ್ರೀ ಶಿವಯೋಗಿ ಸಾರ್ವಭೌಮ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಪುಣ್ಯತಿಥಿನಿಮಿತ್ತವಾಗಿಯೂ, ಶ್ರೀ|| ಸಿದ್ಧವ್ವಬಾಯಿ ಘೋಬಡೆ ಇವರ ಅಭಿನಂದನಕ್ಕಾಗಿಯೂ ಮಧ್ಯಾಹ್ನ ನಾಲ್ಕು ಗಂಟೆಗೆ ಸಭೆಯು ಜರುಗಿತು ಪುಣ್ಯತಿಥಿ ಪ್ರೀತ್ಯರ್ಥವಾಗಿ ಶ್ರೀಗುರುಭಕ್ತಶಿರೋಮಣಿ ಮುಕ್ಕಪ್ಪ ಮೆಂಗಾಣೆ ಇವರ ಭವ್ಯಗೃಹದಲ್ಲಿ ಶ್ರೀ||ಷ|| ಬ್ರ|| ವೀರತಪಸ್ವಿ ಚನ್ನವೀರಶಿವಾಚಾರ್ಯರ ನೇತೃತ್ವದಲ್ಲಿ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಶ್ರೀಜಗದ್ಗುರುಗಳವರ ಭಾವಚಿತ್ರಕ್ಕೆ ಷೋಡಶೋಪಚಾರ ಪೂಜೆಯು ಜರುಗಿ ಮಾಹೇಶ್ವರತೃಪ್ತಿಯಾಯಿತು. ಆಮೇಲೆ ಮಧ್ಯಾಹ್ನ ನಾಲ್ಕು ಘಂಟೆಗೆ ಸೊಲ್ಲಾಪುರದಲ್ಲಿ ಪ್ರಸಿದ್ಧ ಮನೆತನದವರಾದ ಶ್ರೀ|| ಸರಸ್ವತೀಬಾಯಿ ಜಮ್ಮಾ ಇವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಸದರಿ ಸಮಾಜದ ಮಾತೃವರ್ಗದ ಪ್ರಾರ್ಥನೆಯ ಮೇರೆಗೆ ಶ್ರೀ|| ಷ|| ಬ್ರ|| ಹೋಟಗಿ ಶ್ರೀಗಳು, ಶ್ರೀ|| ಷ|| ಬ್ರ|| ಜೈನಾಪುರ ಶ್ರೀಗಳವರು, ಶ್ರೀ||ಷ||ಬ್ರ|| ಧೇನುಕರ್ಣಶಿವಾಚಾರ್ಯರು, ಶ್ರೀ||ಷ||ಬ್ರ|| ಮುಳ್ಳೂರು ಗುರುಪಾದಶಿವಾಚಾರ್ಯರೇ ಮೊದಲಾದವರೂ, ವೀರಶೈವಸಂಸ್ಕೃತಪಾಠಶಾಲೆಯ ವಿದ್ಯಾರ್ಥಿಗಳೂ ಆಗಮಿಸಿದ್ದಲ್ಲದೆ ಅನಂತಗುರುಭಕ್ತರೂ ಸಹ ಉತ್ಸಾಹದಿಂದ ಬಂದಿದ್ದರು ಪ್ರಥಮದಲ್ಲಿ ಸಮಾಜದ ಕುಮಾರಿಯರು ಶ್ರೀಜಗದ್ಗುರುಗಳವರ ಸ್ತೋತ್ರಪದಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು. ತರುವಾಯ ಕು|| ಮಾಳಗೆ ಕು|| ಕಟಾವ, ಕು|| ಶಿವಕಾಂತಾ ತಮಶೆಟ್ಟಿ, ಸೌ|| ತಡುತೆಟ್ಟಿ ಇವರು ಅತ್ಯಂತ ಭಕ್ತಿರಸಯುಕ್ತವಾದ ಜಗದ್ಗುರುಗಳ ಗುಣವರ್ಣನೆ ಭಾಷಣಮಾಡಿದರು ಮುಂದೆ ರುದ್ರಮುನಿ ಮಾಳಗೆಯು ಜಗದ್ಗುರುಗಳ ವಿಯೋಗದುಃಖದ ಬಗ್ಗೆ ಅತ್ಯಂತ ಹೃದಯದ್ರಾವಕವಾದ ಭಾಷಣಮಾಡುತ್ತಿರುವಾಗ್ಗೆ ಶ್ರೀಪುರುಷರ ಕಣ್ಣುಗಳಿಂದ ಅಶ್ರುಧಾರೆಯು ಸುರಿಯುತ್ತಿತ್ತು ಆಮೇಲೆ ಶ್ರೀ|| ಗುರುಬಾಯಿ ಮಠಪತ್ತಿ ಇವರು ಶ್ರೀಜಗದ್ಗುರುಗಳ ಲೀಲೆ, ಶ್ರೀಘೋಬಡೆಬಾಯಿಯವರ ಅಭಿನಂದನ ವಿಷಯವಾಗಿ ಉತ್ತಮ ಭಾಷಣವಾಡಿದರು ತರುವಾಯ ಸೌ|| ಭಾಗೀರಥೀಬಾಯಿಯವರು ಶ್ರೀಜಗದ್ಗುರುಗಳ ಮಹತ್ವ, ಸಂಸ್ಕೃತ ಭಾಷೆಯ ಆವಶ್ಯಕತೆ, ಸಂಸ್ಕೃತಭಾಷೆಯ ಉರ್ಜಿತಾವಸ್ಥೆಗೆ ಉತ್ತೇಜನವನ್ನು ಕೊಟ್ಟಂಥ ಶ್ರೀ|| ಸಿದ್ಧವ್ವಬಾಯಿ ಘೋಬಡೆ ಇವರ ದಾನಶೂರತ್ವದ ಬಗ್ಗೆ ಭಾಷಣ ಮಾಡಿದರು ಆಮೇಲೆ ವೇ|| ಷಂ|| ಜಗದೀಶಶಾಸ್ತ್ರಿಗಳವರು, ವೇ|| ಷಂ|| ಮಣೂರು ಮಲ್ಲಿಕಾರ್ಜುನಶಾಸ್ತ್ರಿಗಳವರು ಶ್ರೀ|| ಷ|| ಬ್ರ|| ಜೈನಾಪುರ ಶ್ರೀಗಳವರು, ಶ್ರೀಜಗದ್ಗುರುಗಳ ತಪಃಪ್ರಭಾವದ ಬಗ್ಗೆಯೂ ಸದರೀ ಶ್ರೀ ಘೋಬಡೆಬಾಯಿಯವರ ಅಭಿನಂದನೆಯ ಬಗ್ಗೆಯೂ ಅತ್ಯಂತ ಕಳಕಳಿಯಿಂದ ಭಾಷಣವಾಡಿದರು ತರುವಾಯ ಶ್ರೀ|| ಷ|| ಬ್ರ|| ವೀರತಪಸ್ವಿಗಳು ಶ್ರೀಜಗದ್ಗುರುಗಳವರ ಧರ್ಮೋದ್ಧಾರ, ಅವರ ಸದಿಚ್ಛೆಯ ಪ್ರಕಾರ ಶ್ರೀಘೋಬಡೆಬಾಯಿಯವರು ತಿಂಗಳೊಂದಕ್ಕೆ ೭೫ ರೂ.ಗಳನ್ನು ಗುರುಕುಲದ ಉದ್ಧಾರಕ್ಕಾಗಿ ಕೊಡಲು ವಾಗ್ದಾನಮಾಡಿದ್ದಕ್ಕಾಗಿ ಅತ್ಯಂತ ಆನಂದದಿಂದ ಅವರ ವಂಶಪರಂಪರೆಗೆ ಜಗದ್ಗುರುಗಳವರೂ ಜಗದೀಶನೂ ಕಲ್ಯಾಣವನ್ನುಂಟುಮಾಡಲೆಂದೂ, ಇಂಥ ಸದ್ಬುದ್ಧಿಯೇ ಅವರ ಮನೆತನದಲ್ಲಿ ಚಿರಕಾಲ ಉಳಿಯಲೆಂದೂ ಒಂದು ಪುಷ್ಪಮಾಲೆಯನ್ನು ದಾನಶೂರೆಯರಾದ ಸಿದ್ಧವ್ವಬಾಯಿಯವರಿಗೆ ಆಶೀರ್ವದಿಸಿದರು ಬಳಿಕ ಮನ್ನೂರುಬಾಯಿ ಬಾಹಗಿ ಇವರು ಶ್ರೀಜಗದ್ಗುರುಗಳವರ ಲೀಲೆಯ ವಿಷಯವಾಗಿ ಲಾವಣಿಪದವನ್ನು ರಚಿಸಿ ಸಭೆಯಲ್ಲಿ ಹಾಡಿ ಸರ್ವರನ್ನೂ ಆನಂದಪಡಿಸಿದರು ಬಳಿಕ ಜಗದ್ಗುರುಗಳವರ ಭಾವಚಿತ್ರಕ್ಕೆ ಮಂಗಲವಾಗಿ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು ನಾಶಿಕಪದ್ಧತಿಯಂತೆ ಶ್ರೀಮಂತ ಶಿವಲಿಂಗಪ್ಪ ಮಾಳಗೆ ಇವರ ಮನೆಯಲ್ಲಿ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಶ್ರೀಜಗದ್ಗುರುಗಳ ಭಾವಚಿತ್ರಕ್ಕೆ ಷೋಡಶೋಪಚಾರಪೂಜೆಯಾಗಿ ಗಣಾರಾಧನೆಯಾಯಿತು ಈ ರೀತಿ ಸೊಲ್ಲಾಪುರದಲ್ಲಿ ಆ ದಿವಸ ಎಲ್ಲಿ ನೋಡಿದರೂ ಗಣಾರಾಧನೆಗಳು ಶ್ರೀಜಗದ್ಗುರುಗಳ ಜಯಘೋಷದೊಂದಿಗೆ ನಡೆದವು ರತ್ನಾಬಾಯಿ ಹಿರೇಹಬ್ಬು, ಗುರುಬಾಯಿ ಮಠಪತ್ತಿ, ಪಾರ್ವತೀಬಾಯಿ ಚಪ್ಪಾಣ, ಮುಕ್ತಾಬಾಯಿ ಶೇಟೆ, ಬಸಮ್ಮ ನಂದೀಮಠ, ಗಂಗಾಬಾಯಿ ಪಾಟೀಲ್, ದಾನಮ್ಮ ಸಕ್ರೆಟರಿ, ಶಂಕರಮ್ಮ ಚಾಕೋತೆ, ಭಾಗೀರಥೀಬಾಯಿ ಮೆಂಗಾಣೆ, ಸುಂದರಾಬಾಯಿ ಜಾನಾಪುರೆ, ಕೊಂಡಾಬಾಯಿ ಮಾಳಗೆ ಪಾರ್ವತೀಬಾಯಿ ತಮಶೆಟ್ಟಿ ಇವರೇ ಮೊದಲಾದವರು ಸದರೀ ಸಮಾಜದ ವತಿಯಿಂದ ವಿಶೇಷಪ್ರಯತ್ನಪೂರ್ವಕವಾಗಿ ಜಗದ್ಗುರುಗಳವರ ಸೇವೆಯನ್ನು ಮಾಡಿ ಪುನೀತರಾದರು.

ಸೌ|| ಗಂಗಾಬಾಯಿ ಪಾಟೀಲ್
ಉಪಾಧ್ಯಕ್ಷೆ,
ವೀರಶೈವ ಸದಾಚಾರ ಸ್ತ್ರೀಸಮಾಜ, ಸೊಲ್ಲಾಪುರ.

ಸ್ವೀಕಾರ.

ಸೊಲ್ಲಾಪುರದಲ್ಲಿರುವ ಮ|| ರಾ|| ವಾಕಳೆ ಸಿದ್ಧರಾಮಪ್ಪನವರ ಧರ್ಮಪತ್ನಿಯಾದ ಸೌ|| ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಶ್ರೀ|| ಷ|| ಬ್ರ|| ಹೋಟಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ

೧೯೪೩ನೇ ಫೆಬ್ರವರಿ ತಾ॥ ೮ನೆಯ ಸೋಮವಾರ

ಗುರುಕೃಪೆಯೇ ಮುಕ್ತಿಗೆ ಮೂಲವಾದುದು

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ ಗುರೋಃ
ಪದಂ
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ ಗುರೋಃ
ಕೃಪಾ ॥

ಗುರುಮೂರ್ತಿಯೇ ಧ್ಯಾನಕ್ಕೆ ಮೂಲವಾದುದೆಂದೂ ಗುರುಚರಣವೇ ಪೂಜೆಗೆ ಮೂಲವಾದುದೆಂದೂ ಗುರುವಾಕ್ಯವೇ ಮಂತ್ರಕ್ಕೆ ಮೂಲವಾದುದೆಂದೂ, ಗುರುಕೃಪೆಯೇ ಮುಕ್ತಿಗೆ ಮೂಲವಾದುದೆಂದೂ ಈ ಶ್ಲೋಕದ ಅಭಿಪ್ರಾಯವಾಗಿದೆ. ಈ ರೀತಿಯಾಗಿ ಪ್ರಾಚೀನ ಮಹರ್ಷಿಗಳು ಗುರುವಿನ ಶ್ರೇಷ್ಠತೆಯನ್ನು ಕೊಂಡಾಡಿದ್ದಾರೆ. ಪ್ರತಿಯೊಂದು ಮತದಲ್ಲಿಯೂ ಗುರುವಿಗೆ ಅಗ್ರಸ್ಥಾನವು ಕೊಡಲ್ಪಟ್ಟಿರುವ ವಿಷಯವು ಸರ್ವರಿಗೂ ವೇದ್ಯವೇ. ಭವಸಾಗರದಲ್ಲಿ ಬಿದ್ದು ದಾರಿಗಾಣದೆ ಹೋರಾಡುತ್ತಿರುವ ಜೀವರನ್ನು ಆ ಮಹಾಸಾಗರದಿಂದ ದಾಟಿಸಿ ದುರ್ಲಭವಾದ ಮೋಕ್ಷಮಾರ್ಗವನ್ನು ತೋರಿಸುವುದೇ ಗುರುವಿನ ಆದ್ಯಕರ್ತವ್ಯವಾಗಿರುತ್ತದೆ. ಆದುದರಿಂದಲೇ ಶಾಸ್ತ್ರಕಾರರು ಈ ಮಹಾತ್ಮನಿಗೆ ಸರ್ವಶ್ರೇಷ್ಠಸ್ಥಾನವನ್ನು ಕೊಟ್ಟಿರುತ್ತಾರೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳಲ್ಲಿ ಮೋಕ್ಷವೇ ಪ್ರಧಾನವಾದ ಪುರುಷಾರ್ಥವೆನಿಸಿಕೊಂಡಿರುತ್ತದೆ. ಈ ಮಹಾಪುರುಷಾರ್ಥವನ್ನು ಸಂಪಾದಿಸುವುದಕ್ಕಾಗಿಯೇ ಜನರು ಪ್ರಯತ್ನಿಸುತ್ತಿರುವರು. ಈ ಪುರುಷಾರ್ಥವು ಗುರುವಿನ ಅನುಗ್ರಹದಿಂದಲ್ಲದೆ ಬೇರೊಂದರಿಂದ ಸಾಧ್ಯವಾಗಲಾರದು. ಆದುದರಿಂದಲೇ ಶ್ರುತಿಯು—

'ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ

ತದಾ ಮುಕ್ತಿರ್ನ ಸಂದೇಹೋ ಯದಾ ತುಷ್ಟಃ ಸ್ವಯಂ ಗುರುಃ"

ಇತ್ಯಾದಿ ವಾಕ್ಯಗಳಿಂದ ಗುರುವೇ ಮೋಕ್ಷದಾಯಕನೆಂದೂ ಮೋಕ್ಷಾಪೇಕ್ಷೆಯು ಆತನ ಸೇವೆಯನ್ನು ಮಾಡಿ ಮೋಕ್ಷವನ್ನು ಸಂಪಾದಿಸಬೇಕೆಂದೂ ಮುಕ್ತಕಂಠದಿಂದ ಸಾರುತ್ತದೆ. ಪ್ರಾಚೀನರು ಈ ರೀತಿಯಾಗಿರುವ ಗುರುಮಹಿಮೆಯನ್ನು ತಿಳಿದು ಸದಾ ಗುರುಸೇವೆಯಲ್ಲಿಯೇ ಒಬ್ಬರಾಗಿ ಗುರುವಿನ ಅನುಗ್ರಹವನ್ನು ಪಡೆದು ಮೋಕ್ಷಸುಖವನ್ನು ಅನುಭವಿಸುತ್ತಿದ್ದರು. ಆದರೆ ನಾಸ್ತಿಕಮಯವಾದ ಈ ಕಾಲದಲ್ಲಿ ಪರಿಸ್ಥಿತಿಯು ವ್ಯತ್ಯಾಸವಾಗಿ ಹೋಗಿದೆ. ಈ ಕಾಲದಲ್ಲಿ ಐಹಿಕಸುಖವನ್ನೇ ಪ್ರಾಧಾನ್ಯವನ್ನಾಗಿ ಗ್ರಹಿಸಿದ ಕೆಲ ಜನ ಸ್ವೇಚ್ಛಾಶೀಲರು ಶಾಸ್ತ್ರಾದಿಗಳನ್ನೂ ಗುರುದೇವತೆಗಳನ್ನೂ ಅಲ್ಲಗಳೆಯುತ್ತ ಮನಬಂದಂತೆ ವರ್ತಿಸುತ್ತಿದ್ದಾರೆ. ಇದು ಕಾಲಮಹಿಮೆಯೆಂದೇ ಹೇಳಬೇಕಾಗಿದೆ. ಈ ನವೀನ ನಾಸ್ತಿಕರು ಗುರುಗಳಿಗೂ ನಮಗೂ ಏನು ವ್ಯತ್ಯಾಸವಿದೆ? ಅವರಿಗೂ ಕರಚರಣಾದ್ಯವಯವಗಳುಂಟು, ನಮಗೂ ಉಂಟು, ನಮ್ಮ ಶರೀರದಲ್ಲಿಯೂ ರಕ್ತವಿದೆ, ಅವರ ಶರೀರದಲ್ಲಿಯೂ ರಕ್ತವಿದೆ, ಅವರು ಹೇಳುವ ಮಾತುಗಳನ್ನು ನಾವೂ ಹೇಳುತ್ತೇವೆಂದು ನುಡಿಯುತ್ತಿರುವರು. ಈ ರೀತಿಯಾಗಿ ನುಡಿಯುವುದು ಉನ್ಮತ್ತರಿಗೆ ಸಾಧುವಲ್ಲದೆ ಸತ್ಪುರುಷರಿಗೆ ಎಂದೂ ಸಾಧುವಲ್ಲ. ತಾಯಿಯಲ್ಲಿಯೂ ಹೆಂಡತಿಯಲ್ಲಿಯೂ ಕರಚರಣಾದ್ಯವಯವಗಳಾಗಲಿ, ರಕ್ತವಾಗಲಿ, ನಡೆನುಡಿಗಳಾಗಲಿ ಒಂದೇ ವಿಧವಾಗಿರುವುದರಿಂದ ಹೆಂಡತಿಯನ್ನು ತಾಯಿಯನ್ನಾಗಿಯೂ, ತಾಯಿಯನ್ನು ಹೆಂಡತಿಯನ್ನಾಗಿಯೂ ತಿಳಿಯಬೇಕಾಗುವುದಷ್ಟೆ! ಹೀಗೆ ಆಚರಿಸಲಿಕ್ಕೆ ಈ ನಾಸ್ತಿಕರು ಸಿದ್ಧರಿರುವರೋ? ಎಲ್ಲವನ್ನೂ ಒಂದೇ ಎಂದು ಅನ್ನಲಿಕ್ಕೆ ಬರುವುದಿಲ್ಲ. ಹಾಗೆ ಅಂದದ್ದಾದರೆ ಅನಂತಾನಂತ ಜನ್ಮಗಳಲ್ಲಿ ಘೋರವಾದ ದುಃಖವನ್ನು ಅನುಭವಿಸಬೇಕಾಗುತ್ತದೆ. ಆದುದರಿಂದಲೇ ಶಾಸ್ತ್ರಕಾರರು—

ನ ಕುರ್ಯಾದ್ಗುರುಸಾದೃಶ್ಯಂ ಗತಿ ಸಿದ್ಧಿ ಹಿತೇಚ್ಛುಕಃ ॥

ಅಂದರೆ ಮೋಕ್ಷವನ್ನಪೇಕ್ಷಿಸುವವನು ಗುರುಸಾದೃಶ್ಯವನ್ನು ಹೇಳಕೂಡದೆಂದು ಅಪ್ಪಣೆಕೊಡಿಸಿರುವರು.

ಈ ಪ್ರಪಂಚದಲ್ಲಿರುವ ಎಲ್ಲ ಮತಗಳಲ್ಲಿಯೂ ಗುರುಭಕ್ತಿಯು ರೂಢಮೂಲವಾಗಿ ಬಂದಿದೆ. ಎಲ್ಲ ಮತೀಯರೂ ಇಂದಿನವರೆಗೂ ತಮ್ಮ ತಮ್ಮ ಗುರುಗಳ ವಿಷಯದಲ್ಲಿ ಅಸಾಧಾರಣಭಕ್ತಿಯನ್ನು ವಹಿಸಿದ್ದಾರೆ. ಆದರೆ ಲಿಂಗಧಾರಿಗಳಲ್ಲಿ ಕೆಲಜನರು ಇದಕ್ಕೆ ತಿಲಾಂಜಲಿಯನ್ನು ಕೊಟ್ಟು ಮನಬಂದಂತೆ ವರ್ತಿಸುತ್ತಿರುವರು. ಹೀಗೆ ಗುರುಭಕ್ತಿವಿಮುಖರಾಗಿ ವರ್ತಿಸುವುದು ಅವರಿಗೆ ಎಂದೂ ಶ್ರೇಯಸ್ಕರವಲ್ಲ.

ಗುರುಭಕ್ತಿಂ ವಿನಾ ಯಸ್ಯ ಮಮ ಭಕ್ತಿರ್ವೃಥಾ ಭವೇತ್
ತಸ್ಮಾತ್ಸರ್ವಪ್ರಯತ್ನೇನ ಗುರೌ ಭಕ್ತಿಂ ಸಮಾಚರೇತ್

ಗುರುಭಕ್ತಿಯಿಲ್ಲದ ನನ್ನಲ್ಲಿ ಭಕ್ತಿಯನ್ನಿಟ್ಟದ್ದಾದರೆ ಆ ಭಕ್ತಿಯು ವ್ಯರ್ಥವಾಗುವುದೆಂದೂ, ಆದುದರಿಂದ ಶಿಷ್ಯನು ಮೊದಲು ಗುರುಭಕ್ತಿಯನ್ನು ಸಂಪಾದಿಸಬೇಕೆಂದೂ ಶ್ರೀಪರಶಿವನು ಬೋಧಿಸಿದ್ದಾನೆ. ಇದರಿಂದ ಗುರುವಿನ ಮಹತ್ತ್ವವು ಎಷ್ಟರಮಟ್ಟಿಗಿರುವುದೆನ್ನುವುದು ಸ್ಪಷ್ಟವಾಗುತ್ತದೆ. ಆದುದರಿಂದ ಸರ್ವರೂ ಗುರುಗಳಲ್ಲಿ ಅಕೃತ್ರಿಮವಾದ ಭಕ್ತಿಯನ್ನಿಟ್ಟು ವರ್ತಿಸಬೇಕು. ಈ ಪ್ರಪಂಚದಲ್ಲಿ ಭಕ್ತಿಶೂನ್ಯರಾರೂ ಇಂದಿನವರೆಗೆ ಮುಂದೆ ಬಂದಿರುವುದಿಲ್ಲ. ಗುರುದೇವತಾದಿಗಳಲ್ಲಿ ಭಕ್ತಿಯನ್ನಿಟ್ಟವರೇ ಇಹಪರಸುಖಗಳನ್ನು ಪಡೆದಿರುತ್ತಾರೆ. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿದವರು ಅಧೋಗತಿಯನ್ನೈದಿರುವ ವಿಷಯವು ಪುರಾಣಾದಿಗಳಲ್ಲಿ ಪ್ರಸಿದ್ಧವೇ ಇರುವುದು. ಗುರುಭಕ್ತಿಶೂನ್ಯರು ಇತ್ಯಾದಿ ವಿಷಯಗಳನ್ನೆಲ್ಲಾ ವಿಚಾರಮಾಡಿ ಮೂಲಾಚಾರ್ಯರಾದ ಶ್ರೀಜಗದ್ಗುರು ರೇಣುಕಾದಿ ಪಂಚಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನು ವಹಿಸಿ ಸದಾ ಅವರ ನಾಮಸ್ಮರಣೆಯಲ್ಲಿ ಲೋಲರಾಗಿ ಅವರ ಅನುಗ್ರಹದಿಂದ ಮೋಕ್ಷಸುಖವನ್ನು ಪಡೆದು ಧನ್ಯರಾಗಬೇಕೆಂದು ಕೋರುತ್ತೇವೆ.

ಯುದ್ಧವಾರ್ತೆ.

ರಷ್ಯಕ್ಕೆ ಹಂಗೇರಿ ಸೈನ್ಯ

ರಷ್ಯರಣರಂಗಕ್ಕೆ ಕೂಡಲೆ ೨೦ ಡಿವಿಜನ್ ಸೈನಿಕರನ್ನು ಕಳುಹಿಸಿಕೊಡಬೇಕೆಂದು ಜರ್ಮನಿಯು ಹಂಗೇರಿ ಸರ್ಕಾರವನ್ನು ಕೇಳಿರುವದೆಂದೂ ಅದಕ್ಕೆ ಆ ಸರ್ಕಾರವು ಒಪ್ಪಿರುವದೆಂದೂ ಹೇಳಲಾಗಿದೆ.

ಹಂಗೇರಿ ಅಧಿಕಾರಿಗಳನ್ನು ಕೊಂದರು.

ಕೊಟಿಟ್ಸ್ಕೋವಾ ಎಂಬಲ್ಲಿ ರಷ್ಯನರಿಗೆ ಶರಣಾಗತರಾಗಲು ಯತ್ನಿಸಿದ ೪೯ ಮಂದಿ ಹಂಗೇರಿ ಸೈನ್ಯಾಧಿಕಾರಿಗಳನ್ನು ಜರ್ಮನ್ ದಂಡನಾಯಕರ ಆಜ್ಞೆಯಂತೆ ಗುಂಡು ಹೊಡೆದು ಕೊಲ್ಲಲಾಯಿತೆಂದು ಸುದ್ದಿ ಬಂದಿದೆ.

೧೧೦೦೦ ಇಟಾಲಿಯನರ ಸೆರೆ

ಕರ್ಸ್ಕ್ ಕಡೆಗೆ ಮುಂದುವರಿಯುತ್ತಿರುವ ರಷ್ಯನ್ ಸೇನೆಗಳು ಮತ್ತೆರಡು ರೈಲ್ವೆ ಸ್ಟೇಷನ್‌ಗಳನ್ನೂ ೨೮ ಊರುಗಳನ್ನೂ ಹಿಡಿದಿವೆ. ಅಪಾರ ಸಂಗ್ರಾಮ ವಸ್ತುಗಳನ್ನು ಶತ್ರುಗಳು ಬಿಟ್ಟು ಹೋಗಿದ್ದಾರೆ. ಜರ್ಮನ್ ಮೂಲ ಬಲಕ್ಕೆ ಹಿಂದುಗಡೆಯಿಂದ ಏಟು ತಾಕದಂತೆ ರಕ್ಷಿಸಲು ಬಿಟ್ಟು ಹೋಗಿದ್ದ ೧೧೦೦೦ ಇಟಾಲಿಯನರನ್ನು ರಷ್ಯನ್ ಕುದುರೆ ಸವಾರ ದಳದವರು ಸೆರೆ ಹಿಡಿದರೆಂದು ಹೇಳಲಾಗಿದೆ.

ಫಿನ್‌ಲೆಂಡಿನಲ್ಲಿ ಆಹಾರಕ್ಕೆ ಕ್ಷಾಮ

ಬರ್ಲಿನ್ನಿನಲ್ಲಿರುವ ಫಿನ್‌ಲೆಂಡ್ ಸಚಿವರು ತಮ್ಮ ಸರಕಾರದ ಪರವಾಗಿ ಪತ್ರವೊಂದನ್ನು ಈ ದಿನ ಜರ್ಮನ್ ಸರಕಾರಕ್ಕೆ ಒಪ್ಪಿಸಿದರೆಂದೂ "ಫಿನ್‌ಲೆಂಡಿಗೆ ಆಹಾರವಸ್ತುಗಳು ಅತ್ಯಗತ್ಯವಾಗಿ ಬೇಕಾಗಿದೆ. ಕೂಡಲೇ ಅವುಗಳನ್ನು ಜರ್ಮನಿಯು ಕಳುಹಿಸಿಕೊಡದೇ ಹೋದರೆ, ಜರ್ಮನಿಯನ್ನು ಬಿಟ್ಟು ಪ್ರತ್ಯೇಕವಾದ ಶಾಂತಿಯನ್ನು ಮಾಡಿಕೊಳ್ಳಲು ಸಿದ್ಧವೇ ಎಂಬುದನ್ನು ಫಿನ್‌ಲೆಂಡ್ ಪರಿಶೀಲಿಸಬೇಕಾದೀತು! ಫಿನ್‌ಲೆಂಡಿನಲ್ಲಿ ರೇಷನ್ ಕಾರ್ಡುಗಳಲ್ಲಿ ಸೂಚಿಸಿರುವ ಪ್ರಮಾಣವು ಯೂರೋಪಿನಲ್ಲೆಲ್ಲ ತೀರ ಕನಿಷ್ಠ ಪ್ರಮಾಣ. ನಿಜವಾಗಿ ಜನರ ಕೈಗೆ ಸೇರುವುದಂತೂ ಇಷ್ಟೂ ಇಲ್ಲ" ಎಂಬದಾಗಿ ಆ ಪತ್ರದಲ್ಲಿ ತಿಳಿಸಲಾಗಿದೆಯೆಂದು ಹೇಳಲಾಗಿದೆ.

ಚೀಣಾದ ಆರ್ಥಿಕ ದುಸ್ಥಿತಿ

ಚೀಣಾದ ಆರ್ಥಿಕ ರಚನೆಯು ಕಳಚಿಬೀಳುವುದರಲ್ಲಿದೆಯೆಂದೂ, ವಿಪತ್ತು ಬಹಳ ಉಗ್ರವಾಗಿರುವದರಿಂದ ಅಮೆರಿಕವು ಬಹಳ ಬೇಗ ಮುಂದೆಬಂದು ಚೀಣಾಕ್ಕೂ ಚೀಣಾ ಸೈನ್ಯಗಳಿಗೂ ಬೇಕಾದ ವಸ್ತುಗಳನ್ನು ಸರಬರಾಜು ಮಾಡಬೇಕೆಂಬುದಾಗಿ ಬ್ರಿಟನ್ನಿನಲ್ಲಿರುವ ಚೀಣಾ ರಾಯಭಾರಿಗಳಾದ ಶ್ರೀ ವೆಲ್ಲಿಂಗ್‌ಟನ್‌ಕೂರವರ ಪತ್ನಿಯವರು ತಿಳಿಸಿರುತ್ತಾರೆ.

೮ ನೇ ಸೇನೆಯು ಮಾರೆತ್‌ಕೋಟೆಯನ್ನು ಮುಟ್ಟಿತು

೮ನೇ ಬ್ರಿಟಿಷ್ ಸೇನೆಯು ಟ್ಯೂನೀಸಿಯಾದಲ್ಲಿರುವ ಮಾರೆತ್‌ಕೋಟೆ ಸಾಲನ್ನು ತಲುಪಿದೆಯೆಂದು ಟ್ಯೂನೀಸಿಯಾ ಮಧ್ಯರಂಗದಲ್ಲಿ ಆಕ್ಸಿಸ್ ವ್ಯೂಹವನ್ನು ಒಂದು ಕಡೆ ಭೇದಿಸಲಾಯಿತೆಂದೂ ಅಲ್ಲಿ ಈಗ ಬಲಯುತ ಮಿತ್ರಸೇನೆಗಳು ಮುಂದೆ ನುಗ್ಗುತ್ತಿವೆಯೆಂದೂ ಜರ್ಮನ್ ವಾರ್ತಾಸಂಸ್ಥೆಯು ತಿಳಿಸುತ್ತದೆ.

ಜರ್ಮನರು ಆತುರವಾಗಿ ಬಲವನ್ನು ತರುತ್ತಿದ್ದಾರೆ

ರಷ್ಯನರನ್ನು ತಡೆಯಲೋಸುಗ ೧೯ ಜರ್ಮನ್ ಕಾಲಾಳು ದಳಗಳನ್ನೂ ಮತ್ತು ೩೩ ಟ್ಯಾಂಕ್ ದಳಗಳನ್ನೂ ಪಶ್ಚಿಮ ಯೂರೋಪಿನಿಂದ ಆತುರಾತುರವಾಗಿ ಕಳಿಸಲಾಗಿದೆಯೆಂದು ಸುದ್ದಿ ಬಂದಿದೆ. ಇವುಗಳಲ್ಲಿ ೧೧ ಪಡೆಗಳು ಫ್ರಾನ್ಸ್, ಬೆಲ್ಜಿಯಂಗಳಲ್ಲಿದ್ದವು. ಉಳಿದವು ಜರ್ಮನಿಯಲ್ಲಿದ್ದವು. ಮತ್ತೆ ೯ ಜರ್ಮನ್ ದಳಗಳನ್ನು ಕಳಿಸಲು ಏರ್ಪಾಟು ಮಾಡಲಾಗಿದೆಯೆಂದು ತಿಳಿದು ಬರುತ್ತದೆ.

ಚರ್ಚಿಲ್ ಇನೋನು ಭೇಟಿ

ಬ್ರಿಟಿಷ್ ಪ್ರಧಾನ ಚರ್ಚಿಲ್ಲರು ಕ್ಯಾಸಬ್ಲಾಂಕಾ ಸಭೆ ಮುಗಿಸಿಕೊಂಡು ಸ್ವಲ್ಪಕಾಲ ಕೈರೋದಲ್ಲಿದ್ದು ತುರ್ಕಿಗೆ ಭೇಟಿಯಿತ್ತು ಅಧ್ಯಕ್ಷ ಇನೋನುರವರೊಡನೆಯೂ, ಇತರ ತುರ್ಕಿರಾಜಕೀಯ ತಜ್ಞರೊಡನೆಯೂ ಸಂಭಾಷಿಸಿದರು. ಈ ಸಂಭಾಷಣೆಗಳ ಫಲವಾಗಿ ಎರಡು ರಾಷ್ಟ್ರಗಳಿಗೂ ಪರಸ್ಪರ ಸೌಹಾರ್ದ ಬೆಳೆಯಲು ಅವಕಾಶವಾಯಿತು. ತುರ್ಕಿಯ ರಕ್ಷಣಾವ್ಯವಸ್ಥೆ ಬಲಗೊಳ್ಳಲು ಯಾವ ವಿಧವಾದ ನೆರವನ್ನು ಸಂಯುಕ್ತ ರಾಷ್ಟ್ರಗಳವರು ನೀಡಬೇಕೆಂಬ ಬಗ್ಗೆ ಒಂದು ಒಪ್ಪಂದ ರೂಪುಗೊಂಡಿತು.

ಜರ್ಮನ್ ಸೇನೆಯ ಹಿಂದೋಟ

ಕಾಕಸಸ್‌ನಲ್ಲಿರುವ ಹರ್ ಹಿಟ್ಲರರ ಸೇನೆಯು ದಿನಕ್ಕೆ ೩೦ ಮೈಲಿಯಂತೆ ಹಿಂದಕ್ಕೆ ಓಡುತ್ತಿದೆ. ಈಗ ವಾನ್‌ಲಿಸ್ಟರವರ ಸೇನೆ ಎರಡು ಭಾಗವಾಗಿ ಭೇದಿಸಲ್ಪಟ್ಟಿದೆ. ಒಂದು ಭಾಗಕ್ಕೆ 'ಡನ್‌ಕರ್ಕ್' ನಲ್ಲುಂಟಾಗಿದ್ದ ವಿನಾಶದ ಪರಿಸ್ಥಿತಿಯುಂಟಾಗಿದೆ. ಕ್ರಾಸ್ನೊಡಾರ್‌ಗೂ ಮತ್ತು ಸಮುದ್ರಕ್ಕೂ ಮಧ್ಯೆ ಸಿಕ್ಕಿಕೊಂಡಿರುವ ಈ ಭಾಗಕ್ಕೆ ಇರುವುದು ಒಂದೇ ದಾರಿ. ತಮ್ಮ ಬಳಿ ಇರುವ ಸಂಗ್ರಾಮವಸ್ತುಗಳನ್ನು ಬಿಸಾಡಿ, ಕರ್ಚ್ ಜಲಸಂಧಿಯನ್ನು ದಾಟಿ ಹೋಗುವುದು. ಕಾಕಸಸ್‌ನಿಂದ ರಾಸ್ಟೋವ್‌ಗೆ ತೆರಳುವ ರೈಲ್ವೆಯನ್ನು ಕತ್ತರಿಸಲಾಗಿದೆಯೆಂದೂ ಆದ್ದರಿಂದ ನಾಜಿಪಡೆಗಳಿಗೆ ರಾಸ್ಟೋವ್ ಸಂಬಂಧ ತಪ್ಪಿಹೋಗಿದೆಯೆಂದೂ ರಷ್ಯನ್ ಪ್ರಕಟಣೆ ತಿಳಿಸುತ್ತದೆ.

ಅದಾನಾ ಸಮ್ಮೇಳನದ ಪ್ರಮುಖತೆ

ಅದಾನಾ ಸಮ್ಮೇಳನದಲ್ಲಿ ನಿರ್ಧರಿಸಾದ ನಿರ್ಣಯ ತೀರ್ಮಾನಗಳಿಗೆ ಬರದೇ ಇದ್ದರೂ ತುರ್ಕಿ ಮತ್ತು ಬ್ರಿಟಿಷ್ ಸೈನ್ಯಾಧಿಕಾರಿಗಳ ಜಂಟಿರಕ್ಷಣೆ ವಿಚಾರ ಕುರಿತು ಚರ್ಚಿಸಲಾಯಿತೆಂಬುದೇನೋ ಖಂಡಿತ. ೬ ತಿಂಗಳ ಹಿಂದೆ ತುರ್ಕಿ ಭೂಮಿಯಲ್ಲಿ ಇಂತಹ ಸಮ್ಮೇಳನವು ನಡೆಯುವುದು ಸಾಧ್ಯವೆಂದು ಊಹಿಸಲಿಕ್ಕೆ ಕೂಡ ಆಗುತ್ತಿರಲಿಲ್ಲ. ಆದರೆ ರಷ್ಯನರ ಪ್ರತಿಕ್ಷೇಪಗಳು ಹೆಚ್ಚಿದುದೂ, ಈಜಿಪ್ಟ್ ಮತ್ತು ಲಿಬಿಯಾಗಳಿಂದ ಆಕ್ಸಿಸ್ ಯೋಧರನ್ನು ಓಡಿಸಿದುದೂ ಇಂತಹ ಸಮ್ಮೇಳನ ನಡೆಯಲು ಅವಕಾಶ ಕೊಟ್ಟಿತು. ಅಲ್ಲದೆ ಅದಕ್ಕೀಗ ಪ್ರಾಮುಖ್ಯತೆ ಕೂಡ ಬಂದಿದೆ. ಡಾರ್ಡನೆಲ್ಸ್ ಜಲಸಂಧಿಯಲ್ಲಿ ಮಿತ್ರದೇಶಗಳ ಹಡಗುಗಳು ಬರದಂತೆ ಮಾಡಬೇಕೆಂದು ಹರ್ ಹಿಟ್ಲರನು ಎಂದಿಗಿಂತ ಇಂದು ಹೆಚ್ಚಾಗಿ ಬಯಸುತ್ತಿದ್ದಾನೆ. ಡಾರ್ಡನೆಲ್ಸ್ ಮಿತ್ರ ಹಡಗುಗಳಿಗೆ ತೆರೆಯಲ್ಪಟ್ಟರೆ ಸಣ್ಣ ಪುಟ್ಟ ಶತ್ರು ದೇಶಗಳಿಗೆ ಮಹಾ ವಿಪತ್ತುಂಟಾಗುತ್ತದೆ. ಅಲ್ಲದೆ ರಷ್ಯಕ್ಕೆ ಸಾಮಾನುಗಳನ್ನೊಯ್ಯಲು ಹತ್ತಿರದ ದಾರಿ ಸಿಕ್ಕಂತಾಗುತ್ತದೆ.

ಜರ್ಮನಿಯು ತುರ್ಕಿ ಮೇಲೆ ಬಿದ್ದೀತೆ

ಈ ಶರದೃತುವಿಗೆ ಮುನ್ನ ಜರ್ಮನಿಯು ತನ್ನ ದೇಶವನ್ನು ಮುತ್ತುವ ಭಯವಿದೆಯೆಂದು ತುರ್ಕಿ ರಾಜಕಾರಣ ಪಟುಗಳು ಅನೇಕ ಸಾರಿ ಹೇಳುವುದರ ದೃಷ್ಟಿಯಿಂದ ನೋಡಿದರೆ ಅದಾನಾ ಸಮ್ಮೇಳನಕ್ಕೆ ಹೆಚ್ಚಿನ ಪ್ರಾಮುಖ್ಯತೆಯಿದೆ. ಕಾಕಸಸ್ ಹಿಡಿಯುವ ಪ್ರಯತ್ನ ಮಣ್ಣುಗೂಡಿದ್ದರಿಂದ ಜರ್ಮನಿಯು ದಿಕ್ಕು ತೋಚದೆ ತುರ್ಕಿಗೆ ಮುತ್ತಿಗೆ ಹಾಕಬಹುದೆಂದೂ, ಮಧ್ಯ ಪೂರ್ವದಲ್ಲಿರುವ ಎಣ್ಣೆ ಗಣಿಗಳನ್ನು ಹಿಡಿಯುವ ಪ್ರಯತ್ನ ಮಾಡಬಹುದೆಂದೂ ಹೇಳಲಾಗಿದೆ. ಈ ಉದ್ದೇಶಕ್ಕಾಗಿಯೇ ಒಂದು ಸೇನೆಯನ್ನು ರೂಪುಗೊಳಿಸಲು ನಾಜಿ ಅಧಿಕಾರಿಗಳು ಬಲ್ಗೇರಿಯಕ್ಕೆ ಹೋಗಿದ್ದಾರೆ. ತುರ್ಕಿಗೆ ಜರ್ಮನರಿಂದ ವಿಪತ್ತು ಖಂಡಿತವೆಂದು ತೋರಿಬಂದರೆ ತುರ್ಕಿಯೇ ಮೊದಲು ಏಟು ಹಾಕಿ ಬಿಡಬಹುದೆಂದು ಹೇಳಲಾಗಿದೆ. ಯಾಕೆಂದರೆ ಇತ್ತೀಚೆಗೆ ತುರ್ಕಿ ಬಲ್ಗೇರಿಯಾ ಸಂಬಂಧವು ಬಹಳ ಕೆಟ್ಟಿದೆ. ತುರ್ಕಿಯು ಚೆನ್ನಾಗಿ ತರಬೇತು ಪಡೆದಿರುವ ೨೦ ಲಕ್ಷ ಸೈನಿಕರುಳ್ಳ ಸೇನೆಯನ್ನು ಕೂಡಿಸಬಲ್ಲದು. ಆದರೆ ಅವರಿಗೆಲ್ಲ ಸಂಗ್ರಾಮ ಸಾಧನಗಳನ್ನು ಒದಗಿಸುವುದು ಸಾಧ್ಯವೇ ಎಂಬುದು ಕೊಂಚ ಅನುಮಾನ. ಬಲ್ಗೇರಿಯವು ಹೆಚ್ಚು ಕಡಿಮೆ ೧೦ ಲಕ್ಷ ಸೇನೆಯನ್ನು ಕೂಡಿಸಬಲ್ಲುದೆಂದು ಹೇಳಲಾಗಿದೆ.

ಸ್ಟ್ಯಾಂಡರ್ಡ್ ಬಟ್ಟೆ ಯೋಜನೆ

ಬಟ್ಟೆ ಕೈಗಾರಿಕೆಯವರು ತಮ್ಮ ಉತ್ಪನ್ನ ಸಾಮರ್ಥ್ಯದ ಶೇ|| ೬೦ ಭಾಗವನ್ನು, ಸರಬರಾಯಿ ಇಲಾಖೆಯವರು ಕೋರಬಹುದಾದ ಸ್ಟ್ಯಾಂಡರ್ಡ್ ಬಟ್ಟೆಯ ಅಥವಾ ಇತರ ವಿಧ ಬಟ್ಟೆಗಳ ಸಿದ್ಧತೆಗಾಗಿ ಮೀಸಲಿರಿಸಲು ಒಪ್ಪಿದ್ದಾರೆ. ಭಾರತ ಸರ್ಕಾರದ ವಾಣಿಜ್ಯ ಸಚಿವ ಶ್ರೀ ಎನ್. ಆರ್. ಸರ್ಕಾರ್‌ರವರ ಅಧ್ಯಕ್ಷತೆಯಲ್ಲಿ ಸೇರಿದ್ದ ಸ್ಟ್ಯಾಂಡರ್ಡ್ ಬಟ್ಟೆ ಸಲಹಾ ಸಮಿತಿಯ ಸಭೆಯೊಂದರಲ್ಲಿ ಈ ತೀರ್ಮಾನವಾಯಿತು. ಮೊದಲು ೧೯೪೩ನೇ ಏಪ್ರಿಲ್ ಅಂತ್ಯಕ್ಕೆ ಮುಗಿಯುವ ಮೊದಲ ಮೂರು ತಿಂಗಳವಧಿಗೆ ಐದು ಕೋಟಿ ಗಜ ಸ್ಟ್ಯಾಂಡರ್ಡ್ ಬಟ್ಟೆ ಸಿದ್ಧಗೊಳಿಸುವ ಯೋಜನೆಯಾಗಿದೆ. ಈ ಅನುಭವದ ಬೆಳಕಿನಲ್ಲಿ ತಯಾರಿಕೆಯ ಪ್ರಮಾಣವನ್ನು ಮುಂದೆ ಹೆಚ್ಚಿಸಲಾಗುವುದು. ಇದುವರೆಗೆ ತಾತ್ಕಾಲಿಕವೆನ್ನಲಾಗಿದ್ದ ಈ ಯೋಜನೆ ಇಂದಿನ ಸಭೆಯಲ್ಲಿ ಪೂರ್ಣವಾಗಿ ರೂಪುಗೊಂಡಿತು. ಸರಬರಾಯಿ ಇಲಾಖೆಯವರು ಸ್ಟ್ಯಾಂಡರ್ಡ್ ಬಟ್ಟೆ ಸಮಿತಿಯೊಂದನ್ನು ಏರ್ಪಡಿಸುವರು. ಇದರಲ್ಲಿ ಕೈಗಾರಿಕೆಯ ಪ್ರತಿನಿಧಿಗಳೂ, ಕೇಂದ್ರಸರಕಾರ ನಾಮಕರಣಮಾಡುವ ನಾಲ್ವರು ಇತರರೂ ಇರುವರು. ಪೂರೈಕೆ, ಹಂಚಿಕೆ, ಮಾರಾಟ, ಬೆಲೆ ನಿಗದಿಮಾಡುವುದು ಇತ್ಯಾದಿ ಎಲ್ಲ ವಿಷಯಗಳಲ್ಲೂ ಈ ಸಮಿತಿ, ಸರಕಾರಕ್ಕೆ ಸಲಹೆಗಳನ್ನು ನೀಡುವುದು ಒಟ್ಟು. ಸ್ಟ್ಯಾಂಡರ್ಡ್ ಬಟ್ಟೆ ಕಮಿಷನರನ್ನು ಸರ್ಕಾರ ನಿಯಮಿಸುವುದು. ಯೋಜನೆಯನ್ನು ಕಾರ್ಯರೂಪದಲ್ಲಿ ತರುವುದಕ್ಕಾಗಿ ಪ್ರಾಂತಿಕ ಕಮಿಷನರು ಅವರ ಕೈ ಕೆಳಗೆ ಕೆಲಸಮಾಡುವರು. ಸಲಹಾ ಸಮಿತಿಯ ಸಲಹೆಗಳಂತೆ ಸರ್ಕಾರದವರು ಮೂರು ತಿಂಗಳಿಗೊಮ್ಮೆ ಬಟ್ಟೆ ಬೆಲೆ ನಿಗದಿಮಾಡುವರು. ಭಾರತೀಯ ಸಂಸ್ಥಾನಗಳನ್ನು ಯೋಜನೆಯಲ್ಲಿ ಭಾಗವಹಿಸುವಂತೆ ಆಹ್ವಾನಿಸಲಾಗುವುದು. ಸಲಹಾ ಸಮಿತಿಯ ಕೇಂದ್ರ ಕಾರ್ಯಾಲಯ ಮುಂಬಯಿನಲ್ಲಿರುವುದು. ಶ್ರೀ ವೆಲ್ಲೋಡಿಯವರನ್ನು ಸ್ಟ್ಯಾಂಡರ್ಡ್ ಬಟ್ಟೆ ಕಮಿಷನರನ್ನಾಗಿ ನಿಯಮಿಸಲಾಗುವುದೆಂದು ತಿಳಿದುಬಂದಿದೆ.

ಸ್ಟಾಲಿನ್‌ಗ್ರಾಡ್ ಕದನ ಮುಗಿಯಿತು

ಕಳೆದ ೨ನೆಯ ತಾರೀಖು ವೇಳೆಗೆ ಸ್ಟಾಲಿನ್‌ಗ್ರಾಡ್ ಕ್ಷೇತ್ರದಲ್ಲಿ ಜರ್ಮನ್ ಪಡೆಗಳನ್ನು ಮಟ್ಟಹಾಕುವ ಕಾರ್ಯವು ಸಂಪೂರ್ಣವಾಯಿತೆಂದು ಅಧಿಕಾರಯುತವಾಗಿ ತಿಳಿಸಲಾಯಿತು. ನಗರದ ಉತ್ತರದಲ್ಲಿ ಕೊನೆಯವರೆಗೆ ಪ್ರತಿಭಟಿಸುತ್ತಿದ್ದ ಜರ್ಮನ್ ಪಡೆಯೊಂದು ಶರಣಾಗತವಾಗಬೇಕಾಯಿತು. ಉತ್ತರದಲ್ಲಿದ್ದ ಶತ್ರುಪಡೆಗಳ ಮೇಲೆ ಕಟ್ಟಕಡೆ ಮುತ್ತಿಗೆಯು ಆರಂಭವಾಯಿತು. ಕೇಂದ್ರ ಭಾಗದಲ್ಲಿ ೨೪ ಗಂಟೆಗಳ ಹಿಂದೆ ಗುಂಡಿನ ಹೊಡೆತವು ಸಂಪೂರ್ಣವಾಗಿ ನಿಂತಿತು. ಹಲವು ಜರ್ಮನರು ಸಂಗ್ರಾಮ ಬಂದಿಗಳಂತೆ ವೇಷ ಮರೆಸಿಕೊಂಡು ಓಡಿಹೋಗಲು ಯತ್ನಿಸಿದರು. ಆದರೆ ರಷ್ಯನರು ಅವರನ್ನು ಕಂಡುಹಿಡಿದು ಮಟ್ಟಹಾಕಿದರು. ನಾಶವಾಗಿರುವ ಮನೆಗಳಿಂದ ಇನ್ನೂ ನೂರಾರು ಮಂದಿ ಜರ್ಮನರು ತೆವಳಿಕೊಂಡು ಬರುತ್ತಿದ್ದಾರೆ. ಒಂದು ಆಸ್ಪತ್ರೆಯಲ್ಲಿ ೩,೦೦೦ ಗಾಯಗೊಂಡ ಜರ್ಮನರಿದ್ದರು. ಅನೇಕರು ಸತ್ತಿದ್ದರು, ಸಾಯುತ್ತಿದ್ದರು. ಸ್ಟಾಲಿನ್‌ಗ್ರಾಡ್ ನಗರದ ಪುನರ್ನಿರ್ಮಾಣ ಯೋಜನೆಯು ಈಗಲೇ ಸಿದ್ಧವಾಗಿದೆಯೆಂದು 'ಪ್ರವಾಡ' ಪತ್ರಿಕೆಯು ತಿಳಿಸಿದೆ. ಸ್ಟಾಲಿನ್‌ಗ್ರಾಡಿನ ಮೇಲೆ ೧೬೨ ದಿನಗಳ ಮುತ್ತಿಗೆ ನಡೆಯಿತು. ಉಗ್ರ ಹೋರಾಟವಾಯಿತು. ಈ ಯುದ್ಧದಲ್ಲಿ ಇದುವರೆಗೆ ಇಂತಹ ರಕ್ತಪಾತ ಇನ್ನೆಲ್ಲಿಯೂ ನಡೆದಿರಲಿಲ್ಲ. ಕಳೆದ ವರ್ಷ ಸಪ್ಟೆಂಬರಿನಲ್ಲಿ ಜರ್ಮನರು ಸ್ಟಾಲಿನ್‌ಗ್ರಾಡಿನ ಬೀದಿಗಳನ್ನು ಹೊಕ್ಕರು. ಸಬಾಸ್ತಪೋಲಿನಂತೆ ಸ್ಟಾಲಿನ್‌ಗ್ರಾಡು ಸಹ ನಾಜಿ ಆಘಾತಕ್ಕೆ ಬೀಳುವುದು ಖಂಡಿತವೆಂಬಂತೆ ತೋರಿತು. ಹಗಲು ರಾತ್ರಿ ನಾಜಿ ವಿಮಾನಗಳು ಸಾವಿರಾರು ಬಾಂಬುಗಳನ್ನು ಸುರಿದವು. ಬಲಯುತ ನಾಜಿ ಫಿರಂಗಿಗಳು ಎಡೆಬಿಡದೆ ಬೀದಿಗಳ ಮೇಲೆ ಶೆಲ್ ಹಾರಿಸಿ, ಧ್ವಂಸಮಾಡಿದವು. ಇನ್ನೇನು ರಷ್ಯನರು ಮೆತ್ತಗಾದರೆಂದು ತಿಳಿದು ಜರ್ಮನರು ಅಪಾರ ಟ್ಯಾಂಕುಗಳನ್ನೂ ಮತ್ತು ಕಾಲಾಳು ದಳವನ್ನೂ ಮುಂದೆ ನುಗ್ಗಿಸಿದರು. ಆದರೆ ರಷ್ಯನರ ಪ್ರಚಂಡ ಪ್ರತಿಭಟನೆಯನ್ನು ಕಂಡು ಅವರು ಬೆರಗಾದರು. ಪ್ರತಿಯೊಂದು ಮನೆಯನ್ನೂ ಬೀದಿಯನ್ನೂ ಹಿಡಿಯಲು ಅವರು ಯತ್ನಿಸಿದರು. ರಷ್ಯನರಿಗೆ ವೋಲ್ಗಾನದಿಯ ಆಚೆ ಕಡೆಯಿಂದ ಸಾಮಾನುಗಳನ್ನು ತರಲು ಬಹಳ ಕಷ್ಟವಾಯಿತು. ಆದರೆ ರಷ್ಯನರು ನದಿಯ ಮೇಲಿನ ಹತೋಟಿಯನ್ನು ಶತ್ರುಗಳಿಗೆ ಬಿಟ್ಟುಕೊಡಲಿಲ್ಲ. ನಗರದ ಮುಕ್ಕಾಲು ಭಾಗವೆಲ್ಲ ಶತ್ರುಗಳ ವಶವಾಯಿತು. "ಸ್ಟಾಲಿನ್‌ಗ್ರಾಡನ್ನು ಹಿಡಿಯುವುದು ಖಂಡಿತ" ಎಂದು ಹಿಟ್ಲರನು ಸಪ್ಟೆಂಬರ್ ೩೦ ರಲ್ಲಿ ನುಡಿದುದು ನೆನಪಿರಬೇಕು. ಆ ವೇಳೆಗೆ ಜ|| ರೋಡಿಮ್‌ಟ್ಸೇವ್‌ರವರ ನಾಯಕತ್ವದಲ್ಲಿ ಹೊಸ ರಷ್ಯನ್ ಪಡೆಯೊಂದನ್ನು ಸ್ಟಾಲಿನ್‌ಗ್ರಾಡಿಗೆ ಕರತರಲಾಯಿತು. ಕೂಲಿಗಾರರು, ಸ್ತ್ರೀಪುರುಷರು ಮನೆಗಳನ್ನು ಬಿಟ್ಟು ರಣರಂಗ ಸೇರಿದರು. ಜರ್ಮನರು ಒಂದರಹಿಂದೊಂದರಂತೆ ಪಡೆಗಳನ್ನು ಅಟ್ಟುತ್ತಿದ್ದರು. ನವಂಬರಿನ ೨ನೆ ವಾರದಲ್ಲಿ ಬಣ್ಣ ಬದಲಾಯಿತು. ಎರಡು ರಷ್ಯನ್ ಸೇನೆಗಳು ಉತ್ತರ–ದಕ್ಷಿಣಗಳಿಂದ ನಗರದ ಕಡೆಗೆ ನುಗ್ಗಿ ಜರ್ಮನರನ್ನು ಸುತ್ತುವರಿದವು. ನವೆಂಬರ್ ೨೫ನೆ ತಾ|| ಉತ್ತರದ ಸೇನೆಯು ನಾಜಿ ವ್ಯೂಹವನ್ನು ಭೇದಿಸಿ, ಸ್ಟಾಲಿನ್‌ಗ್ರಾಡಿನೊಳಗಿದ್ದ ರಷ್ಯನ್ ಪಡೆಯೊಂದಿಗೆ ಸೇರಿತು. ಒಂದು ತಿಂಗಳೊಳಗಾಗಿ ಸಂಗ್ರಾಮ ಪರಿಸ್ಥಿತಿಯು ತಲೆಕೆಳಕಾಯಿತು. ಫೀಲ್ಡ್ ಮಾರ್ಷಲ್ ಪಾಲಸ್‌ರವರ ಸೇನೆಯು ಸುತ್ತುವರಿಯಲ್ಪಟ್ಟು ನಾಶಹೊಂದಿತು.

ಜಪಾನರು ೧೦ ಲಕ್ಷ ಚೀನಾ ಯೋಧರನ್ನು ತಯಾರು ಮಾಡಿದ್ದಾರೆ

ನ್ಯಾನ್‌ಕಿಂಗ್ ಸರ್ಕಾರವು ಮಿತ್ರರಾಷ್ಟ್ರಗಳ ಮೇಲೆ ಯುದ್ಧ ಘೋಷಣೆ ಮಾಡಿದಂದಿನಿಂದ ಈಚೆಗೆ ಜಪಾನರ ಮೇಲ್ವಿಚಾರಣೆಯಲ್ಲಿರುವ ಚೀನಾ ಪ್ರದೇಶದಲ್ಲಿ ೧೦ ಲಕ್ಷ ಚೀನಾ ಯೋಧರನ್ನು ಜಪಾನರು ತರಬೇತು ಮಾಡಿರುವದಾಗಿ ಚುಂಕಿಂಗ್ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದಲ್ಲಿ ಗೆರಿಲಾ ಸೈನ್ಯತಯಾರಿ

ಗೆರಿಲಾ ಯುದ್ಧ ಕ್ರಮವನ್ನು ಅಭ್ಯಾಸ ಮಾಡಲು ಪ್ರತಿಯೊಂದು ಪ್ರಾಂತದಿಂದಲೂ ಒಂದು ಲಕ್ಷ ಸೈನಿಕರಂತೆ ೧೧ ಲಕ್ಷ ಅನಧಿಕೃತ ಸೈನಿಕರನ್ನು ಇಂಡಿಯಾ ಸರ್ಕಾರದವರು ತರಬೇತು ಮಾಡಬೇಕೆಂದೂ ಮುಂದೆ ನುಗ್ಗಿ ಹೋರಾಡುತ್ತಿರುವ ಸೈನಿಕರ ಹಿಂಬದಿಯಲ್ಲಿ ಈ ಸೈನ್ಯವನ್ನಿಟ್ಟು ಅವಕಾಶಬಿದ್ದಲ್ಲಿ ದೇಶದಲ್ಲುಂಟಾಗಬಹುದಾದ ಗಲಭೆಯನ್ನು ಅಡಗಿಸಲು ಇದನ್ನು ಉಪಯೋಗಿಸಬಹುದೆಂದೂ ಸೂಚಿಸಲಾಗಿದೆ.

ಪೂರ್ವಬಂಗಾಲದ ಮೇಲೆ ವಿಮಾನಧಾಳಿ

ಕಳೆದ ೩ನೆಯ ತಾರೀಖು ನಾಲ್ಕು ಶತ್ರು ಬಾಂಬರು ೧೨ ಫೈಟರುಗಳ ರಕ್ಷಣಾ ಪಡೆಯೊಡನೆ ಪೂರ್ವ ಬಂಗಾಲದಲ್ಲಿರುವ ಕಾಕ್ಸ್ ಬಜಾರಿಗೆ ೨೦ ಮೈಲಿ ದೂರದಲ್ಲಿ ಧಾಳಿಮಾಡಿದವು. ಅಲ್ಪ ನಷ್ಟವಾಗಿದೆ. ಪ್ರಾಣಹಾನಿಯೇನೂ ವರದಿಯಾಗಿಲ್ಲ ಎಂಬುದಾಗಿ ಇಂಡಿಯಾ ಕಮ್ಯಾಂಡ್ ಜಾಯಿಂಟ್ ವಾರ್ ಪ್ರಕಟನೆ ತಿಳಿಸಿದೆ.

ಬಾಳೆಯೆಲೆಯ ಮೇಲೆ ಮುದ್ರಿತವಾದ ಆಹ್ವಾನ ಪತ್ರಿಕೆಗಳು

ಕಾಗದದ ಅಭಾವದ ತೀಕ್ಷ್ಣತೆ ಎಲ್ಲಿಯ ವರೆಗೆ ಹೋಗಿದೆಯೆಂದರೆ, ಅಸ್ಸಾಂ ಪ್ರಾಂತ್ಯದ ಪ್ರದೇಶಗಳಲ್ಲಿ ವಿವಾಹೇತ್ಯಾದಿ ಸಮಾರಂಭ ಆಹ್ವಾನ ಪತ್ರಿಕೆಗಳನ್ನು ಬಾಳೆಯೆಲೆಯ ಮೇಲೆ ಮುದ್ರಿಸುತ್ತಿದ್ದಾರೆಂದು ಹೇಳಲಾಗಿದೆ.

ಸ್ವೀಕಾರ.

ಬಳ್ಳಾರಿ ಜಿ|| ಕೊಟ್ಟೂರು ನಗರ ನಿವಾಸಿಗಳಾದ ಕೆ. ಸಿದ್ಧನಗೌಡರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ ೧ ರೂ ಯು ವೇ|| ಎ. ಶಿವಪ್ರಸಾದಶಾಸ್ತ್ರಿಗಳು ಗೋಚಿಮಠ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಡಿತರ ಪ್ರಯಾಣ

ಬಳ್ಳಾರಿ ಜಿ|| ಕೊಟ್ಟೂರು ನಗರದಲ್ಲಿ ಸುಪ್ರಸಿದ್ಧರಾಗಿರುವ ವೇ|| ಎಂ. ಎಂ. ಬಾಗಟಗೇರಿ ಸಣ್ಣ ವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ವಿಶೇಷ ದ್ರವ್ಯವನ್ನು ವ್ಯಯಮಾಡಿ ಶಿಲೆಯಿಂದ ಕಟ್ಟಿಸಿರುವ ನೂತನ ದೇವಾಲಯದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿ ಪ್ರತಿಷ್ಠೆಯು ಮಾಘ ಶು|| ೪ ಸೋಮವಾರ ದಿವಸ ಬಹು ವೈಭವದೊಡನೆ ನೆರವೇರುವುದರಿಂದ, ಆ ಪ್ರತಿಷ್ಠಾ ಕಾರ್ಯಕ್ಕೋಸ್ಕರ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಶುಕ್ರವಾರ ದಿವಸ ಇಲ್ಲಿಂದ ಕೊಟ್ಟೂರಿಗೆ ಪ್ರಯಾಣ ಮಾಡಿದರು.

(೩ನೆಯ ಪುಟದಿಂದ ಮುಂದುವರಿದುದು)

ನಾನೂ ಮ ಪರಿವಾರ [illegible] ನಿನ್ನ ಸಾಧನಗಳೇ ? ” ಎಂದು ಪ್ರಶ್ನೆಮಾಡಿದನು

ಅದಕ್ಕೆ [illegible] ನ್ಯಾಯವಲ್ಲ ಎಂದನು [illegible] ಅಲ್ಲಿಂದ ತೆರಳಿದನು. ಆಗ [illegible] ಸ್ವಾಮಿ! [illegible] ವೇತನವನ್ನು ಸುಮ್ಮನೆ ಕೇಳಲಾರನು [illegible] ನಾಲ್ಕಾರು ದಿನಗಳು [illegible] ನೋಡ ಬಹುದಲ್ಲವೇ ಎಂದು [illegible] ರಾಜನು ಸಮ್ಮತಿಸಿ ಅವನಿಗೆ [illegible] ವೇತನವನ್ನು ಗೊತ್ತುಪಡಿಸಿದನು

ಆ ಹೆಚ್ಚು ಸಂಬಳವನ್ನು ಅವನು ಹೇಗೆ ವಿನಿಯೋಗಿಸುವನೆಂಬುದನ್ನು ಅರಸನು ರಹಸ್ಯವಾಗಿ ಕಂಡು ಹಿಡಿದನು ವೀರವರನು ಸಂಬಳದಲ್ಲಿ ಅರ್ಧಭಾಗವನ್ನು ದೇವತಾಕಾರ್ಯಕ್ಕೂ ನಾಲ್ಕು ಸಂತತಿಗೂ ಮೂರನೆಯ ಭಾಗವನ್ನು ಬಡ ಬಗ್ಗರಿಗೂ ನಾಲ್ಕನೆಯ ಭಾಗವನ್ನು ಸ್ವಂತಕ್ಕೂ ಉಪಯೋಗಿಸುತ್ತಿದ್ದನು ಈ ರೀತಿ ದಿನಚರ್ಯೆಯು ನೆರವೇರಿದ ಕೂಡಲೆ ಅರಮನೆಯ ಮುಂದೆ ಅರ್ಧರಾತ್ರಿ ಕಾದಿರುವನು ಅರಸನು ಅಪ್ಪಣೆ ಕೊಟ್ಟ ಬಳಿಕ, ತನ್ನ ವಾಸಸ್ಥಳಕ್ಕೆ ಹೋಗುವನು ಹೀಗಿರುವ ನಡೆಯುತ್ತಿರಲಾಗಿ ಕೃಷ್ಣ ಚತುರ್ದಶಿಯ ರಾತ್ರಿ ಯಾರೋ ದುಃಖಿಸುತ್ತಿರುವ ಶಬ್ದವು ಅರಸನಿಗೆ ಕೇಳಿಸಿತು ಒಡನೆಯೇ ' ಬಾಗಿಲಲ್ಲಿ ಇರುವವರು ಯಾರು? ' ಎಂಬುದಾಗಿ ಕೇಳಲು ಪ್ರತ್ಯುತ್ತರವಾಗಿ ವೀರವರನು ' ಜೀಯಾ ! ನಾನು ' ಎನಲು ' ಅಳುವ ಧ್ವನಿ [illegible] ಹೋಗಿ ತಿಳಿದು ಬಾ ' ಎಂಬುದಾಗಿ ಅರಸನು ಹೇಳಲಾಗಿ ವೀರವರನು ಪ್ರಭುವಿನ ಅಪ್ಪಣೆ ಎನ್ನುತ್ತ ತೆರಳಿದನು [illegible] ಇವನು ಯುಕ್ತವಲ್ಲ ನಾನು ಹಿಂದೆಯೇ ಹೋಗಿ ಪರೀಕ್ಷಿಸುವೆನು ಎಂಬುದಾಗಿ ಯೋಚಿಸಿ ಖಡ್ಗವನ್ನು ಹಿಡಿದು ಅವನನ್ನು ಹಿಂಬಾಲಿಸಿದನು ವೀರವರನು ಪಟ್ಟಣದ ಹೊರಗೆ ಬಂದು ನೋಡಲಾಗಿ ರೂಪ ಯೌವನ ಚರಿತಳಾಗಿ ಸಕಲಾಭರಣ ಭೂಷಿತಳಾಗಿದ್ದ ಒರ್ವ ತರುಣಿಯನ್ನು ನೋಡಿ " ನೀನು ಯಾರು ? ಈ ರೀತಿ ಅಳುವುದಕ್ಕೆ ಕಾರಣವೇನು ? ' ಎಂಬುದಾಗಿ ಪ್ರಶ್ನಿಸಿದನು ಆ ಯುವತಿಯು ನಾನು ಈ ಪಟ್ಟಣವನ್ನಾಳುವ ಶೂದ್ರಕರಾಜನ ರಾಜಲಕ್ಷ್ಮಿ. ಬಹುಕಾಲದಿಂದಲೂ ಈತನ ಬಾಹುಬಲವನ್ನು ಆಶ್ರಯಿಸಿ ಸುಖವಾಗಿದ್ದೆನು ಈಗ ಈತನನ್ನು ತೊಲಗಿ ಹೋಗಬೇಕಲ್ಲಾ ! ಎಂಬುದಾಗಿ ದುಃಖಿಸುತ್ತಿರುವೆ ' ಎಂದಳು " ಎಲೌ ದೇವಿಯೇ ! ಅಪಾಯದ ಹಿಂದೆಯೇ ಉಪಾಯವೂ ಇರುವುದಲ್ಲವೆ ? ಈತನನ್ನು ಬಿಟ್ಟಗಲದೆ ಇಲ್ಲಿಯೇ ನೆಲೆಸಿರುವುದಕ್ಕೆ ಉಪಾಯವಾವುದು ? ” ಎಂಬುದಾಗಿ ವೀರವರನು ಕೇಳಲಾಗಿ ರಾಜಲಕ್ಷ್ಮಿಯು— ಅಪ್ಪಾ ಮಗೂ ! ಬತ್ತೀಸ (ಮುವ್ವತ್ತೆರಡು) ಲಕ್ಷಣಗಳಿಂದೊಪ್ಪುವ ನಿನ್ನ ಕುಮಾರನಾದ ಶಕ್ತಿವರನನ್ನು ಭಗವತಿಯಾದ ಸರ್ವಮಂಗಳಾದೇವಿಗೆ ಕಾಣಿಕೆ ಕೊಡುವೆಯಾದರೆ, ನಾನು ಎಂದೆಂದಿಗೂ ಇಲ್ಲಿಯೇ ಸ್ಥಿರವಾಗಿರುವೆನು ' ಎನ್ನುತಲೇ ಕಣ್ಮರೆಯಾದಳು ಕೂಡಲೆ ವೀರವರನು ತನ್ನ ಮನೆಗೆ ಹೋಗಿ, ನಿದ್ರಿಸುತ್ತಿದ್ದ ಮಡದಿ ಮಕ್ಕಳನ್ನು ಎಚ್ಚರಗೊಳಿಸಿದನು ಅವರು ಎದ್ದು ಕುಳಿತರು, ವೀರವರನು ರಾಜ್ಯಲಕ್ಷ್ಮಿಯ ಮಾತುಗಳನ್ನೆಲ್ಲ ವಿವರಿಸಿದನು ಆ ಮಾತುಗಳು ಕಿವಿಯಲ್ಲ ಬಿದ್ದೊಡನೆಯೇ ಶಕ್ತಿವರನು ಅತ್ಯಾನಂದದಿಂದ " ಪ್ರಭುವಿನ ರಾಜ್ಯವನ್ನು ಕಾಪಾಡುವುದಕ್ಕಾಗಿ ಉಪಯೋಗ ಪಡುವಂಥ ಸೌಭಾಗ್ಯವು, ನಶ್ವರವಾದ ಈ ದೇಹಕ್ಕೆ ದೊರಕುವುದಲ್ಲವೇ? ನಾನೇ ಧನ್ಯನು ನನ್ನನ್ನು ಪಡೆದ ನೀವೀರ್ವರೂ ಧನ್ಯರು ! ! ಇನ್ನು ತಡವೇಕೆ ? ಇಂತಹ ಕಾರ್ಯದಲ್ಲಿ ದೇಹವನ್ನು ವಿನಿಯೋಗಗೊಳಿಸುವುದು ಶ್ಲಾಘ್ಯವಲ್ಲವೇ ಏಕೆಂದರೆ ಪ್ರಾಜ್ಞನು ಪರರ ಸಲುವಾಗಿ ಹಣವನ್ನೂ ಹರಣವನ್ನೂ ತ್ಯಾಗಮಾಡಬೇಕು ಎಂದಿಗಾದರೂ ವಿನಾಶವು ನಿಶ್ಚಯವಾಗಿರುವಲ್ಲಿ, ಸತ್ಕಾರ್ಯದಲ್ಲಿ ವಿನಿಯೋಗಗೊಳಿಸುವುದು ಉತ್ತಮವಲ್ಲವೇ ” ಎಂದನು

ಬಳಿಕ ಶಕ್ತಿವರನ ಜನನಿಯು ಈ ರೀತಿ ಹೇಳಿದಳು— ' ನಮ್ಮ ವಂಶಕ್ಕೆ ತಕ್ಕುದಾದ ಈ ಮಹತ್ಕಾರ್ಯವನ್ನು ನಾವು ಮಾಡದಿದ್ದರೆ ಮತ್ತಾವ ಕಾರ್ಯದಿಂದ ಈ ಹೆಚ್ಚು ಸಂಬಳದ ಋಣವನ್ನು ತೀರಿಸಬಲ್ಲೆವು ' ಅಂತೆಯೇ ಎಲ್ಲರೂ ಯೋಚಿಸಿ, ಜಗಜ್ಜನನಿಯಾದ ಸರ್ವಮಂಗಳಾದೇವಿಯ ಮಂದಿರಕ್ಕೆ ಸಡಗರದಿಂದ ನಡೆದರು ಆಗ ವೀರವರನು " ದೇವೀ ! ಅನುಗ್ರಹಿಸು. ನನ್ನ ಪ್ರಭುವಾದ ಶೂದ್ರಕ ಮಹಾರಾಜನು ವೃದ್ಧಿಯನ್ನೈದಿ ಸುಖವಾಗಿರಲಿ ! ಈ ಉಪಹಾರವನ್ನು ಸ್ವೀಕರಿಸಿ, ನೀನು ಸಂತಸಗೊಳ್ಳು ' ಎನ್ನುತ್ತ ತನ್ನ ಕುಮಾರನ ಶಿರಸ್ಸನ್ನು ಕಡಿದು ಮನಸ್ಸಿನಲ್ಲಿಯೇ " ಅರಸನಿಂದ ಪಡೆದ ವೇತನದ ಋಣವನ್ನು ಇಂದು ತೀರಿಸಿದೆನು. ಪುತ್ರಹೀನನಾದ ನಾನು ಇನ್ನು ಬದುಕಿರುವುದೆಂಬುದು ಕೇವಲ ನಟನೆ ಪರಿಹಾಸಕ್ಕೆ ಗುರಿ ” ಎಂಬುದಾಗಿ ಯೋಚಿಸಿ, ತನ್ನ ಕುತ್ತಿಗೆಯನ್ನು ಕತ್ತರಿಸಿಕೊಂಡನು ಇದಲ್ಲವೇ ರಾಜನಿಷ್ಠೆ ! ಇಂತು ಪತಿ ಪುತ್ರರಿಬ್ಬರೂ ಮಡಿದ ದುಃಖವನ್ನು ಸಹಿಸಲಾರದೆ ವೀರವರನ ಪತ್ನಿಯೂ ಶಿರಚ್ಛೇದನ ಮಾಡಿಕೊಂಡಳು ಇದೆಲ್ಲವನ್ನು ಕಂಡು, ಕೇಳಿ, ಅರಸನು " ಛೀ ! ಛೀ ! ನನ್ನಂತಹ ನೀಚರು ಬದುಕಿದ್ದರೇನು ? ಸತ್ತರೇನು ? ಇವನಿಗೆ ಸಮಾನನಾದ ವೀರಪುರುಷನನ್ನು ಇಂದಿನವರೆಗೆ ನಾನು ನೋಡಿಯೂ ಇಲ್ಲ ಕೇಳಿಯೂ ಇಲ್ಲ ಇನ್ನು ಮುಂದೆ ಕಾಣುವಂತೆಯೂ ಇಲ್ಲ ಇಂತಹ ಲೋಕೈಕವೀರನೇ ಇಲ್ಲದ ಬಳಿಕ ನನಗೇಕೆ ಈ ರಾಜ್ಯ ? ಎಂಬುದಾಗಿ ಯೋಚಿಸಿ, ತನ್ನ ಶಿರಸ್ಸನ್ನು ಕತ್ತರಿಸಿಕೊಳ್ಳಲು ಖಡ್ಗವನ್ನು ಎತ್ತುವಷ್ಟರಲ್ಲಿ ಸರ್ವಮಂಗಳೆಯು ಪ್ರತ್ಯಕ್ಷಳಾಗಿ, ಅರಸನ ಕೈಯನ್ನು ಹಿಡಿದು ನಿಲ್ಲಿಸಿ—“ ಮಗೂ ! ಈ ಸಾಹಸವು ತಕ್ಕುದಲ್ಲ - ನಾನು ನಿನ್ನ ವಿಷಯದಲ್ಲಿ ಪ್ರಸನ್ನೆಯಾಗಿರುವೆನು ಈ ದುರ್ವ್ಯವಸಾಯವನ್ನು ಸಾಕುಮಾಡು. ನೀನು ಬದುಕಿರುವವರೆಗೂ ಈ ರಾಜ್ಯವು ನಿನ್ನ ಕೈಬಿಟ್ಟು ಹೋಗುವುದಿಲ್ಲ ” ಎಂದಳು ಆಗ ರಾಜನು " ಜಗನ್ಮಾತೆ ! ಈ ರಾಜ್ಯವನ್ನು ಕಟ್ಟಿಕೊಂಡು ನಾನೇನು ಮಾಡಲಿ ? ನಿನಗೆ ನಿಜವಾಗಿಯೂ ನನ್ನ ವಿಷಯದಲ್ಲಿ ಕನಿಕರವೂ, ವಾತ್ಸಲ್ಯವೂ ಇರುವುದಾದರೆ, ನನ್ನ ಆಯುಶ್ಶೇಷದಿಂದಲಾದರೂ ಈ ಮೂವರನ್ನು ಬದುಕಿಸು ಇಲ್ಲವಾದರೆ ನನ್ನ ಗತಿಯನ್ನು ನಾನು ನೋಡಿಕೊಳ್ಳುವೆನು ' ಎಂಬುದಾಗಿ ಬೇಡಿಕೊಂಡನು ಇದಲ್ಲವೇ ರಾಜಧರ್ಮ ! ಆಗ ಭಗವತಿಯು ಪ್ರಸನ್ನ ಮುಖ ಮುದ್ರೆಯಿಂದ '' ನಿನ್ನ ಸತ್ವಸಂಪತ್ತಿಗೂ, ಆಶ್ರಿತವಾತ್ಸಲ್ಯಕ್ಕೂ ಮೆಚ್ಚಿದೆನು ಜಯಶೀಲನಾಗಿ ಬಾಳು ! ಹೋಗು ! ಮಡದಿಮಕ್ಕಳೊಂದಿಗೆ ಈ ವೀರಪುರುಷನೂ ಬದುಕುವನು '' ಎನ್ನುತಲೇ ಕಣ್ಮರೆಯಾದಳು ರಾಜನು ಸಾಷ್ಟಾಂಗ ಪ್ರಣಾಮ ಮಾಡಿ ಅವರಿಗೆ ಕಾಣಿಸಿಕೊಳ್ಳದೆ ಬೇಗನೆ ರಾಜವಾಡೆಗೆ ಬಂದು ಮಲಗಿದನು ವೀರವರನು ಪತ್ನೀ ಪುತ್ರರೊಂದಿಗೆ ಮಲಗಿದವನು ಎಚ್ಚತ್ತಂತೆ ಎದ್ದು ಎಂದಿನಂತೆ ಅರಮನೆಯ ಮುಂದೆ ಪಹರೆಯನ್ನು ಕೊಡತೊಡಗಿದನು ಅರಸನು ಸಮಾಚಾರವೇನೆಂದು ಕೇಳಲಾಗಿ ' ಪ್ರಭೋ ! ಅಳುತ್ತಿದ್ದ ಆ ವನಿತೆಯು ನನ್ನನ್ನು ನೋಡಿದಾಕ್ಷಣವೇ ಕಣ್ಮರೆಯಾದಳು ” ಎಂದನು ಆ ಮಾತನ್ನು ಕೇಳಿ ಅರಸನು ಸಾನಂದಾಶ್ಚರ್ಯದಿಂದ " ಆಹಾ ! ಇವನೆಂತಹ ಸತ್ವಶಾಲಿ ! ಇವನನ್ನು ಎಷ್ಟು ಬಗೆಯಿಂದ ಹೊಗಳಿದರೂ ತೀರದು. ದೈನ್ಯವನ್ನು ತಾಳದೆ ಪ್ರಿಯವನ್ನು ನುಡಿಯಬೇಕು ಶೂರನು ಎಂದಿಗೂ ಆತ್ಮ ಪೌರುಷವನ್ನು ಮಾಡಬಾರದು ತ್ಯಾಗಿಯು ಪಾತ್ರವರಿತು ಕೊಡಬೇಕು. ಪ್ರಜ್ಞಾಶಾಲಿಯು ಕನಿಕರವುಳ್ಳವನಾಗಿರಬೇಕು ಇದೀಗ ಮಹಾಪುರುಷನ ಲಕ್ಷಣ ! ಇಂತಹ ಲಕ್ಷಣಗಳೆಲ್ಲವೂ ಈತನಲ್ಲಿಯೇ ಅಡಕವಾಗಿರುವುವು '' ಎಂಬುದಾಗಿ ಯೋಚಿಸಿ ಬೆಳಗಾದಕೂಡಲೇ ಶಿಷ್ಟರನ್ನು ಸಭೆಗೂಡಿಸಿ, ನಡೆದ ಸಮಾಚಾರವನ್ನೆಲ್ಲ ವಿಸ್ತಾರವಾಗಿ ಹೇಳಿ ವಿಶೇಷ ಪ್ರೀತಿಯಿಂದ ವೀರವರನಿಗೆ ಕರ್ನಾಟಕ ರಾಜ್ಯವನ್ನು ಕೊಟ್ಟನೆಂಬುದಾಗಿರುವುದು ವಾಚಕರೇ ! ಯಾವನು ರಾಜನನ್ನು ಸಾಕ್ಷಾತ್ ದೇವರೆಂದು ತಿಳಿಯುವನೋ ಅವನೇ ವಿವೇಕಿಯು, ಅವನೇ ರಾಷ್ಟ್ರಭಕ್ತನು, ಅವನೇ ಜ್ಞಾನಿಯು ಆದ ಪ್ರಯುಕ್ತ ನಾವು ರಾಜನಿಷ್ಠೆಯುಳ್ಳವರಾಗಿರುವುದು ಧರ್ಮವಲ್ಲವೇ ?

ಮಾದೇಶ್ವರಜಾತ್ರೆ
ದೇವಿಗೆರೆ

ಚಿತ್ರದುರ್ಗ ಜಿ|| ಹಿರಿಯೂರು ತಾ|| ಮರಡಿ ದೇವಿಗೆರೆಯಲ್ಲಿ ಕಳೆದ ಮಾರ್ಗಶಿರ ಬ|| ೧೩ ಸೋಮವಾರದಿಂದ ಮೂರು ದಿನಗಳವರೆಗೆ ಸದರಿ ಗ್ರಾಮದ ವೀರಶೈವರೆಲ್ಲರೂ ಸೇರಿ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಹತ್ತಿರವಿರುವ ವಟವೃಕ್ಷದ ಕೆಳಭಾಗದಲ್ಲಿ ಪ್ರತಿವರ್ಷವೂ ನಡೆಯಿಸಿದಂತೆ ಈ ವರ್ಷವೂ ಜಾತ್ರೆಯನ್ನು ನಡೆಯಿಸಿ ಎರಡು ಸಾವಿರ ಜನ ಭಕ್ತ ಮಾಹೇಶ್ವರರಿಗೆ ಸಂತರ್ಪಣೆಯನ್ನು ಮಾಡಿದರು. ಆ ದಿನ ಶ್ರೀ ಮಲ್ಲಿಕಾರ್ಜುನ ಸ್ವಾಮಿಗೂ ಶ್ರೀ ಅಮ್ಮನವರಿಗೂ ಅಭಿಷೇಕ ಅರ್ಚನಾದಿಗಳು ನೆರವೇರಿದವು. ಈ ಕಾರ್ಯಗಳಿಗೆಲ್ಲಾ ಮ|| ರಾ|| ಸಾ|| ರುದ್ರಪ್ಪನವರು ಮುಖ್ಯರಾಗಿ ನಿಂತು ಎರಡು ಸಾವಿರ ಜನ ಬಡ ಬಗ್ಗರಿಗೆ ಮೂರು ದಿವಸಗಳವರೆಗೆ ತಮ್ಮ ಸ್ವಂತ ಖರ್ಚಿನಿಂದ ಅನ್ನದಾನಮಾಡಿದರು ಇದೇ ಸಮಯದಲ್ಲಿ ಶಿವಕಥಾಪಂಡಿತ ವೇ|| ಜಿ. ನಂಜುಂಡಾರಾಧ್ಯಶಾಸ್ತ್ರಿಗಳವರಿಂದ ಶಿವಕಥಾಕಾಲಕ್ಷೇಪವು ನಡೆಯಿಸಲ್ಪಟ್ಟಿತು ವೇ|| ಆರಾಧ್ಯರವರು ಕಥೆಯನ್ನು ಮನೋರಂಜಕವಾಗಿ ಮಾಡಿದರು. ಅವರ ೯ ವರ್ಷದ ಕುಮಾರಿ ಮಣಿಕರ್ಣಿಕಾದೇವಿಯು ಆಷ್ಟಾವರಣ ವಿಷಯದಲ್ಲಿ ಸ್ವಾರಸ್ಯವಾಗಿ ಭಾಷಣಮಾಡಿದಳು ಈ ಬಾಲಿಕೆಯ ಭಾಷಣವನ್ನು ಕೇಳಿ ಸರ್ವರೂ ಆಶ್ಚರ್ಯಪಟ್ಟರು. ಅನಂತರ ನಮ್ಮನ್ನಾಳುವ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನು ಮಾಡಿ ಸರ್ವರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು

ದೊ. ಮಲ್ಲಿಕಾರ್ಜುನಪ್ಪ, ದೇವಿಗೆರೆ

ಶೋಚನೀಯ ನಿಧನ

ಬಳ್ಳಾರಿ ಜಿ|| ಕೂಡ್ಲಿಗಿ ತಾ|| ಕೊಟ್ಟೂರು ನಗರ ನಿವಾಸಿಗಳಾದ ಕೆ. ಸಿದ್ಧನಗೌಡರು ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತವ್ಯಸನವೆನಿಸುತ್ತಿದೆ ಇವರು ಸದಾಚಾರಸಂಪನ್ನರಾಗಿಯೂ ಶಿವ-ಗುರು ಭಕ್ತಿ ಪರಾಯಣರಾಗಿಯೂ ಜನರಿಗೆ ಉಪಕಾರಿಗಳಾಗಿಯೂ ಇದ್ದರು ಸದರಿಯವರು ಇದೇ ಚಿತ್ರಭಾನು ಸಂ|| ಪುಷ್ಯ ಬಹುಳ|| ೭ ದಿನ ಪ್ರಾತಃಕಾಲ 8 ಗಂಟೆಗೆ ತಮ್ಮ ವಂಶಗುರುಗಳಾದ ಬೃಹನ್ಮಠದ ಶ್ರೀ|| ಷ||- ಬ್ರ|| ಭೂತಭಜಂಗಸ್ವಾಮಿಗಳವರನ್ನು ತಮ್ಮ ಮನೆಗೆ ಕರೆಯಿಸಿಕೊಂಡು ಮುಖ್ಯ ವಿಷಯಗಳನ್ನೆಲ್ಲಾ ತಿಳಿಸಿ ಶಿವ ಗುರುಧ್ಯಾನಾಸಕ್ತರಾಗಿ ಮಧ್ಯಾಹ್ನ 1 ಗಂಟೆಗೆ ಶಿವೈಕ್ಯರಾದರು ಸಮಾಧಿಕ್ರಿಯೆಯು ವಿಧ್ಯುಕ್ತ ಪ್ರಕಾರ ನಡೆಯಿತು ಶ್ರೀ ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೂ ಇವರ ಕುಟುಂಬವರ್ಗಕ್ಕೆ ಶೋಕೋಪಶಮನವನ್ನೂ ಅನುಗ್ರಹಿಸಲೆಂದು ಆಶಿಸುವ

ಓರ್ವ ದುಃಖಭಾಗಿ

ಧೂಮಕೇತುವನ್ನು ರಾತ್ರಿ ಕಾಣಬಹುದು

ಆಕಾಶದ ಈಶಾನ್ಯ ಭಾಗದಲ್ಲಿ ರಾತ್ರಿ ೯ ಘಂಟೆಯ ನಂತರ ಒಂದು ಹೊಸ ಧೂಮಕೇತುವು ಈಗ ಕಾಣಬರುವುದು. ಬರಿಯ ಕಣ್ಣಿನಲ್ಲಿ ನೋಡಿದರೆ ಇದು ಸಾಮಾನ್ಯ ನಕ್ಷತ್ರದಂತೆ ಕಾಣುವುದು ಆದರೆ ಬೈನಾಕ್ಯುಲರ್ ಅಥವಾ ಭೂತಕನ್ನಡಿಯಲ್ಲಿ ನೋಡಿದರೆ ನಾಲ್ಕೈದು ಅಂಗುಲಗಳ ವ್ಯಾಸದ ಒಂದು ಗೋಳದಂತೆ ಕಾಣುವುದು ಅದಕ್ಕೆ ಬಾಲವೇನೂ ಕಾಣುವುದಿಲ್ಲ ಸಪ್ತಋಷಿ ಮಂಡಲದ ಮೊದಲನೆಯ ಎರಡು ನಕ್ಷತ್ರಗಳ ಪೈಕಿ ಧ್ರುವ ನಕ್ಷತ್ರಕ್ಕೆ ಸುಮಾರು ೧ ಗಜ ಈಶಾನ್ಯದಲ್ಲಿ ಈ ಹೊಸ ಧೂಮಕೇತುವು ಮಸುಕಾಗಿ ಒಂದು ಕಿತ್ತಳೇಹಣ್ಣಿನ ಗಾತ್ರಕ್ಕೆ ಕಾಣುವುದು ಇದು ಅಷ್ಟು ಪ್ರಕಾಶಮಾನವಾಗಿಲ್ಲವಾದುದರಿಂದ ಬೆಳದಿಂಗಳು ಹೆಚ್ಚಿದಂತೆಲ್ಲಾ ಅದನ್ನು ಕಾಣುವುದೂ ಕಷ್ಟವಾಗಬಹುದು, ಎಂಬುದಾಗಿ ಮೈಸೂರು ಜಿಯಲಾಜಿಕಲ್ ಇಲಾಖೆಯ ಡೈರೆಕ್ಟರಾದ ಶ್ರೀ ಬಿ ರಾಮರಾಯರು ತಿಳಿಸುತ್ತಾರೆ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಫೆಬ್ರುವರಿ ೧೯೪೩ [ಸಂಚಿಕೆ ೪೪

ಅಂಟುವಾಳಕಾಯಿಯ ಗುಣಧರ್ಮಗಳು

ಲೇಖಕರು —ವೈದ್ಯ ಸೋಮಶೇಖರ ಸದಾಶಿವ ಪೂಜಾರ
ಮು. ನರಗುಂದ

ನಮ್ಮ ಭರತಖಂಡದಲ್ಲಿಯ ಆರ್ಯಜನರ ಪ್ರಚಂಡ ರೋಗ ನಾಶಾರ್ಥವಾಗಿ ಪರಮೇಶ್ವರನು ಅನೇಕ ವನಸ್ಪತಿಗಳನ್ನು ನಿರ್ಮಾಣಮಾಡಿರುವನು. ಅಂಥ ವನಸ್ಪತಿಗಳು, ನಮ್ಮ ಮನೆ ಹಿತ್ತಲಿ ಅಂಗಳಗಳಲ್ಲಿಯೂ ಅಡವಿ, ಗುಡ್ಡಗಾಡು ಪ್ರದೇಶಗಳಲ್ಲಿಯೂ ಸ್ವಾಭಾವಿಕವಾಗಿ ಬೆಳೆಯತಕ್ಕಂಥ ಗಿಡಗಳಿಗೆ ನಾವು ಕಾಲಕಸದಂತೆ ಮಾಡಿ, ಇಂಗ್ಲೆಂಡ, ಅಮೇರಿಕಾ, ಜರ್ಮನಿ, ಇರಾಣ, ಇರಾಕ, ಜಪಾನ ಮುಂತಾದ ಪರರಾಷ್ಟ್ರದಲ್ಲಿ ತಯಾರಿಸಿ ಮದ್ಯಮಾಂಸ ಮಿಶ್ರಿತ ಬಾಟ್ಲಿಗಳಲ್ಲಿಯ ಔಷಧಗಳಿಗೆ "ಔಷಧಂ ಜಾಹ್ನವೀ ತೋಯಮ್" ಎಂದು ಭಕ್ತಿಪೂರ್ವಕವಾಗಿ ನಮಸ್ಕರಿಸಿ ಉಪಯೋಗಿಸಹತ್ತಿರುವೆವಲ್ಲಾ! ನಮ್ಮ ದೇಶದ ನೈಸರ್ಗಿಕವಾಗಿ ಪ್ರಚಂಡ ರೋಗನಾಶ ಮಾಡತಕ್ಕಂಥ ವನೌಷಧಿಗಳನ್ನು ನದಿ, ಸರೋವರ, ಝರಿ ಮುಂತಾದ ಪವಿತ್ರವಾದ ಜಲಗಳನ್ನು ಬಿಟ್ಟು ಪರರಾಷ್ಟ್ರದಿಂದ ತರಿಸಿದ ಸೋಡಾವಾಟರ, ಬ್ರ್ಯಾಂಡಿಮಿಶ್ರಿತ ಅಪವಿತ್ರ ಪದಾರ್ಥಗಳೆಲ್ಲಾ ನಮ್ಮ ಶ್ರೇಷ್ಠವರ್ಗದ ಮಾನವರಿಗೆ ಪ್ರೀತಿಯಾಗಹತ್ತಿರುವವಲ್ಲಾ! ಮೂರು ಸಾವಿರ ಹರದಾರಿಗಳ ದೂರಿಂದ ತಯಾರಿಸಿಬಂದಂಥ ಮದ್ಯ ಮಾಂಸಮಿಶ್ರಿತ ಪದಾರ್ಥಗಳು ಪರಮೇಶ್ವರನ ಪ್ರಸಾದಕ್ಕಿಂತಲೂ ಶ್ರೇಷ್ಠವಾಗಿರುವವಲ್ಲಾ! ಇದಕ್ಕೇನೆನ್ನಬೇಕು.

ಸಾವಿರಾರು ವರ್ಷಗಳ ಹಿಂದೆ ನಮ್ಮ ಪೂರ್ವಜರಾದ ಧನ್ವಂತರೀ, ಅಶ್ವಿನೀಕುಮಾರ, ಆತ್ರೇಯ ಪರಾಶರ, ಚರಕ, ಸುಶ್ರುತ, ವಾಗ್ಭಟ, ಅಗ್ನಿವೇಶ ವಂಗಸೇನ ಮುಂತಾದ ಮಹಾಪ್ರಭೃತಿಗಳು ಮುಕ್ತಕಂಠದಿಂದ ಗುಣಾನುವಾದಮಾಡಿ ಇಟ್ಟಂಥಾ ವನಸ್ಪತಿಗಳನ್ನು ತೃಣಸಮಾನಮಾಡಿ ಪರರಾಷ್ಟ್ರದ ನಿಂದ್ಯಪದಾರ್ಥಗಳು ನಮಗೆ ಅಮೃತಸಮಾನವಾಗಿವೆಯಲ್ಲಾ! ಇದೆಂಥ ನಮ್ಮ ಮೂರ್ಖತ್ವವು!

ಇಂಥ ವಿಪರೀತ ಆಚರಣೆಯಿಂದ ನಾವು ದೀನರೂ ಹೀನರೂ, ದುರ್ಬಲರೂ, ನಿಶ್ಶಕ್ತರೂ, ಕಂಗಾಲರೂ ಆಗಿ ಪರರಾಷ್ಟ್ರದ ಸಂಘಟಣೆಗೆ ಮೆಚ್ಚಿದ್ದರಿಂದ ಕಣ್ಣುಗಳಿದ್ದರೂ ಕುರುಡರಂತಾದ ಮೂಲಕ ಪರಕೀಯರು ನಮ್ಮ ಜ್ಞಾನಭಾಂಡಾರವನ್ನೇ ನಾಶಮಾಡಿ ನಮ್ಮ ದ್ರವ್ಯಸಂಪತ್ತನ್ನೆಲ್ಲಾ ಸೆಳೆದು ತಮ್ಮ ಧಾನ್ಯಕೋಠಿಯಲ್ಲಿ ಸೇರಿಸಿಬಿಟ್ಟಿರುವರು. ನಾವು ನಿಸ್ವಾರ್ಥಬುದ್ಧಿಯಿಂದ ಪರೋಪಕಾರ ಕೈಕೊಂಡು ಅರಣ್ಯವಾಸ ಮಾಡಿದರೂ ಕೂಡಾ ನಮ್ಮನ್ನು ಚತುರ್ಭುಜರನ್ನುಮಾಡಿ ಕತ್ತಲ ಕೋಣೆಯಲ್ಲಿ ದೂಡುವರು. ಇದು ಯಾತರ ಪರಿಣಾಮವು? ನಾವು ಸ್ವಾಭಿಮಾನಬಿಟ್ಟು ನಮ್ಮ ಪೂರ್ವಜರ ಜ್ಞಾನಭಾಂಡಾರವನ್ನು ಪರಕೀಯರ ಸ್ವಾಧೀನಮಾಡಿ ಚಕೋರಪಕ್ಷಿಯು ವಸಂತಕಾಲದಲ್ಲಿ ಸ್ವಾತಿ ಬಿಂಬವನ್ನು ಅಪೇಕ್ಷಿಸಿದಂತೆ ನಾವು ತೃಷಿತರಾಗಿ ಮೃಗಜಲಕ್ಕೆ ಧಾವಿಸಿದೆವಲ್ಲಾ. ಇನ್ನಾದರೂ ನಾವು ಜಾಣರಾಗಿ ನಮ್ಮ ಪೂರ್ವಜರು ಕಷ್ಟಪಟ್ಟು ಸಂರಕ್ಷಿಸಿದ ಆಯುರ್ವೇದ ಶಾಸ್ತ್ರವನ್ನು ಸಂಶೋಧಿಸಿ ವನೌಷಧಿಗುಣದರ್ಶನ ಶಾಸ್ತ್ರವನ್ನು ಜಗತ್ತಿನಲ್ಲಿ ಎಲ್ಲಾ ಪಾಶ್ಚಾತ್ಯ ಶಾಸ್ತ್ರಗಳಿಗಿಂತ ಮುಂದುವರಿಯುವಂತೆ ಮಾಡಿದರೇನೆ ನಾವು ಆರ್ಯಮಾತೆಯ ಉದರದಿಂದ ಜನಿಸಿದ್ದಕ್ಕೆ ಸಾರ್ಥಕವು!

ದಯಾಳುವಾದ ಪರಮೇಶ್ವರನು ಮುಖ್ಯವಾಗಿ ರಾಷ್ಟ್ರದ ರೋಗಿಗಳಿಗೆ ಉಪಯೋಗವಾಗುವದರ ದೃಷ್ಟಿಯಿಂದ ಕಲ್ಪವೃಕ್ಷದಂತಹ ವನಸ್ಪತಿಗಳನ್ನು ದಯಪಾಲಿಸಿರುವನು. ಅದರಂತೆ ಅಂಟವಾಳಕಾಯಿಯ ಗಿಡವನ್ನೂ ದಯಪಾಲಿಸಿರುವನು. ಅದರ ಸರ್ವಾಂಗಸುಂದರವಾದ ಗುಣಧರ್ಮವನ್ನು ವಿಚಾರಮಾಡಲು ದುರ್ಬಲರಾದ ನಮಗೆ ಸಿಗದೆ ಪರಕೀಯರ ಚರಬಿ, ಕ್ಷಾರಯುಕ್ತ ಸಾಬೂಣಕ್ಕೆ ಮೆಚ್ಚಿ ಇಲ್ಲದ ತ್ವಚಾರೋಗಕ್ಕೆ ಗುರಿಯಾಗಬೇಕಾಗಿದೆ. ಈಗಿನ ರಾಜ್ಯಕ್ರಾಂತಿಯ ಕಾಲದಲ್ಲಿ ಪರರಾಷ್ಟ್ರದ ಪದಾರ್ಥಗಳು ಬಂದಾಗದಿದ್ದರಿಂದ ನಮ್ಮ ಆರ್ಯಮಾತೆಯ ಮಕ್ಕಳು ಬಹು ಸಂಕಟದಲ್ಲಿ ಬಿದ್ದು ಕಷ್ಟಪಡುತ್ತಿರುವರು.

ಇನ್ನಾದರೂ ಅವರು ಸ್ವಾಭಿಮಾನವುಳ್ಳವರಾಗಿ ನಮ್ಮ ವನೌಷಧಿಗಳನ್ನು ಉಪಯೋಗಿಸಿ ಆಯುರಾರೋಗ್ಯವಂತರಾಗಬೇಕಾಗಿ ಅವರನ್ನು ಅಂಟವಾಳಕಾಯಿಯ ಗಿಡದ ಕಡೆಗೆ ಕರೆಯೊಯ್ಯುವಾ.

ಉತ್ಪತ್ತಿ—ಈ ಅಂಟವಾಳಕಾಯಿಯ ಗಿಡಗಳು ಹಿಂದುಸ್ಥಾನದಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಈ ಗಿಡದ ಎಲೆಗಳು ಅತ್ತಿಯ ಗಿಡದ ಎಲೆಗಳಂತೆ ಇದ್ದು ಬಹಳ ದೊಡ್ಡದಾಗಿ ಬೆಳೆಯುವದುಂಟು. ಅಂಟವಾಳಕಾಯಿಯ ಒಳಗಿನ ಬೀಜಗಳು ಕಪ್ಪಾಗಿ ನೆಲಗಡಲೆಕಾಳ ಗಾತ್ರವಿರುತ್ತವೆ. ಅವನ್ನು ಸಣ್ಣಮಕ್ಕಳಿಗೆ ದೃಷ್ಟಿಯಾಗಬಾರದೆಂದು ಬೀಜವನ್ನು ನೀರಿನಲ್ಲಿ ನೆನೆಹಾಕಿ ತೂತುಮಾಡಿ ಕರೀ ದಾರದಲ್ಲಿ ಪೋಣಿಸಿ ಮಾಲೆಯನ್ನು ಮಾಡಿ ಕೊರಳಲ್ಲಿ ಕಟ್ಟುತ್ತಾರೆ.

ಅಂಟವಾಳಕಾಯಿಯ ಗಿಡದ ಎಲೆಯ ರಸದಲ್ಲಿ ಪಾರದವನ್ನು ತಿಕ್ಕಲು ಕೈಯೊಳಗೆ ತೆಗೆದುಕೊಳ್ಳುವಷ್ಟು ಗಟ್ಟಿಯಾಗುತ್ತದೆ. ಆ ಗಟ್ಟಿಯಾದ ಪಾರದವನ್ನು ಭಾಂಡಿಗಳಿಗೆ ತಿಕ್ಕಲು ಮುಲಾಮ ಕೊಡುತ್ತದೆ. ಅಂಟವಾಳಕಾಯಿಯನ್ನು ನೆನೆಯಿಟ್ಟು ಅಕ್ಕಸಾಲಿಗರು ಬೆಳ್ಳಿ, ಬಂಗಾರದ ದಾಗೀನೆಗಳನ್ನು ಬೆಳಗುತ್ತಾರೆ. ಅದರಿಂದ ಅವು ಸ್ವಚ್ಛವಾಗುತ್ತವೆ. ಹೊಲಸಾದ ಬಟ್ಟೆಗಳನ್ನು ಅಂಟವಾಳಕಾಯಿಯ ನೀರಲ್ಲಿ ನನೆಯಿಟ್ಟು ಆ ನೀರಿನಲ್ಲಿ ತೋಯಿಸಿ ಒಂದು ಕುದಿ ಕುದಿಸಿ ಒಗೆಯಲು ನಿರ್ಮಲವಾಗುತ್ತವೆ. ಅಂಟವಾಳಕಾಯಿಗಳನ್ನು ಬಿಸಿ ನೀರಿನಲ್ಲಿ ನೆನೆಯಿಟ್ಟು ಸ್ನಾನಮಾಡುವ ಕಾಲಕ್ಕೆ ಮೈಗೆ ಹಚ್ಚಿ ತಿಕ್ಕಿ ಸ್ನಾನಮಾಡಲು ದೇಹವು ಸ್ವಚ್ಛವಾಗಿ ಚರ್ಮವ್ಯಾಧಿಗಳೇನಾದರೂ ಇದ್ದರೆ ನಾಶವಾಗುತ್ತವೆ.

ಹೆಸರುಗಳು

ಸಂಸ್ಕೃತ—ಫೇನಿಲ, ಗುಜರಾಥಿ—ಅರಿಠಾ, ಹಿಂದುಸ್ಥಾನಿ—ರೀಠಾ, ಮಹಾರಾಷ್ಟ್ರ—ರಿಠಾ, ತೈಲಂಗಿ—ಕುಂಕುಡ, ಫಾರ್ಸಿ—ಫಿಂದಕ, ಇಂಗ್ರೇಜಿ—ಸೋಪಬೇರಿ ಸೋಪ ನಟ (Soap Berry Soap nut)

ಗುಣಧರ್ಮ — ಕಹಿಯಾಗಿಯೂ, ತೀಕ್ಷ್ಣವಾಗಿಯೂ, ಉಷ್ಣವಾಗಿರುವದು, ಲೇಖನ, ಗರ್ಭಪಾತಕಾರಕ, ಲಘು, ಸ್ನಿಗ್ಧ, ತ್ರಿದೋಷ, ಗ್ರಹಪೀಡಾ, ದಾಹ, ಶೂಲಿ ಇತ್ಯಾದಿ ನಾಶಕವಿರುತ್ತದೆ.

ಅಂಟವಾಳಕಾಯಿಯ ಉಪಯೋಗವು ಬಹಳ ಮಹತ್ವಪೂರ್ಣವಾದ್ದರಿಂದ ಇದನ್ನು ಮೇಲುಪಚಾರಕ್ಕೂ ಹೊಟ್ಟೆಯೊಳಗೆ ತೆಗೆದುಕೊಳ್ಳಲಿಕ್ಕೂ ಹೀಗೆ ಎರಡು ಬಗೆಯಾಗಿ ಉಪಯೋಗಿಸುತ್ತಾರೆ.

೧ ಉಷ್ಣತೆಯಿಂದ ಮೈಮೇಲೆ ಕೆಂಪಾಗಿ ಹಬ್ಬುವ ಗಜಕರ್ಣ, ಇಸಬು ಮುಂತಾದ ಗುಳ್ಳೆಗಳ ಮೇಲೆ ಅಂಟವಾಳಕಾಯಿಯ ಬುರುಗನ್ನು ಎರಡು ಮೂರು ಸಲ ಹಚ್ಚಿ ಒಂದು ಗಳಿಗೆ ಬಿಟ್ಟು ಬಿಸಿ ನೀರಿನಿಂದ ತೊಳೆಯಬೇಕು. ಹೀಗೆ ಐದು ಆರು ದಿವಸಗಳವರೆಗೆ ಮಾಡಲು ಗುಣಬರುತ್ತದೆ.

೨ ಸಣ್ಣ ಮಕ್ಕಳಿಗೆ ಜಂತುಗಳಿದ್ದರೆ ಅಂಟವಾಳಕಾಯಿಯ ಮೇಲಿನ ತೊಗಟೆಯನ್ನು ೨ ೩ ಗುಂಜಿಯವರೆಗೆ ಬೆಲ್ಲದಲ್ಲಿ ಗುಳಿಗೆಮಾಡಿ ಕೊಡಲು ಜಂತುಗಳು ಬೀಳುತ್ತವೆ (ಅನುಭವಿಕ)

೩ **ದಮ್ಮಿನ ವಿಕಾರಕ್ಕೆ**— ಅಂಟವಾಳಕಾಯಿಯ ಬೀಜದೊಳಗಿನ ಪಪ್ಪು ಸಮಪ್ರಮಾಣ ಹಳೆ ಬೆಲ್ಲದಲ್ಲಿ ನೆಲಗಡ್ಲೆಕಾಳ ಗಾತ್ರಪ್ರಮಾಣ ಗುಳಿಗೆಮಾಡಿ ಬಾಯಿಯಲ್ಲಿ ಹಿಡಿದು ರಸ ನುಂಗುತ್ತ ಹೋಗಲು ಅದರಿಂದ ದಮ್ಮಿನ ಉಬ್ಬಸ ಶ್ವಾಸ, ಕಾಸ, ಕಫವು ನೀರಾಗಿಬಿದ್ದು ದಮ್ಮು ಕಡಿಮೆಯಾಗುತ್ತದೆ.

೪ **ಹೊಟ್ಟೆಶೂಲಿಗೆ**— ಅಂಟವಾಳಕಾಯಿಯೊಳಗಿನ ಬೀಜದ ಪಪ್ಪು, ಮತ್ತು ಗಜಗದ ಬೀಜದೊಳಗಿನ ಪಪ್ಪು ಸಮಪ್ರಮಾಣ, ಅರ್ಧದಷ್ಟು ಇಂಗು ಪಾದೇಲವಣ ಹಾಕಿ ಹಸೀಶುಂಠೀ ರಸದಲ್ಲಿ ಚನ್ನಾಗಿ ಅರೆದು ಕಡಲೇಕಾಳ ಗಾತ್ರ ಗುಳಿಗೆಮಾಡಿ ಪ್ರತಿಯೊಂದು ವೇಳೆಗೆ ಎರಡರಂತೆ ದಿನದಲ್ಲಿ ಮೂರು ವೇಳೆ ಬಿಸಿನೀರಿನಲ್ಲಿ ತೆಗೆದುಕೊಳ್ಳಲು ಒಂದು ವಾರದಲ್ಲಿ ಎಂಥ ಭಯಂಕರ ಹೊಟ್ಟೆಶೂಲಿ ಇದ್ದರೂ ಗುಣಬರುತ್ತದೆ.

೫ **ಕಫವು ಗಟ್ಟಿಯಾಗಿ ಎದೆಯಲ್ಲಿ ಕುಳಿತಿದ್ದರೆ** ಅಂಟವಾಳಕಾಯಿಯ ತೊಗಟೆಯನ್ನು ಬಾಯೊಳಗೆ ಹಿಡಿದು ದ್ರವಬಂದದ್ದನ್ನು ನುಂಗುತ್ತಹೋಗಬೇಕು. ಅಂದರೆ ಕಫವು ನೀರಾಗಿ ಬೀಳುತ್ತದೆ.

೬ **ನಾರಿನಮೇಲೆ**—ಅಂಟವಾಳಕಾಯಿಯ ಬೀಜದ ಪಪ್ಪು, ಮತ್ತು ಇಂಗು ಎರಡನ್ನೂ ಜಜ್ಜಿ ಬಿಸಿಮಾಡಿ ನಾರಿನಮೇಲೆ ಹಾಕಿ ಕಟ್ಟುತ್ತ ಹೋಗಬೇಕು. ಮತ್ತು ಅದರ ತೊಗಟೆಯನ್ನು ನೀರಿನಲ್ಲಿ ತೆಯಿದು ಬಿಸಿಮಾಡಿ ಬಾವುಹೆಚ್ಚಿದ್ದ ಭಾಗಕ್ಕೆ ಲೇಪಮಾಡಬೇಕು. ಇದರಿಂದ ಬಾವು ಇಳಿಯುತ್ತದೆ. ನಾರಿನ ಜಂತು ನಿಸ್ಸತ್ವವಾಗುವದಲ್ಲದೆ ಹೆಚ್ಚು ಬಾಧೆಯಾಗಲಾರದು.

[೪ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೩ನೇ ಫೆಬ್ರವರಿ ೧೫ನೆಯ ಸೋಮವಾರ

ಮಠಾಚಾರ್ಯರಲ್ಲಿ ನಿಜವಾದ ಭಕ್ತಿಯಿರಬೇಕು.

[illegible] ಪರಶಿವನು ವೀರಶೈವಮತವನ್ನು ಜಗದಾದಿಯಲ್ಲಿ ಶ್ರೀ [illegible] ರೇಣುಕಾದಿ ಪಂಚಾಚಾರ್ಯರ ದ್ವಾರಾ [illegible] ಸಮಸ್ತ ಶಿವಾಗಮಗಳಲ್ಲಿ [illegible] ಉಕ್ತವಾಗಿರುವುದು ಸರ್ವವಿದಿತವಾದುದು. ಈ ಮಹಾಸಿದ್ಧಾಂತ ಪರಶಿವನ ಆಜ್ಞೆಯ ಮೇರೆಗೆ ವಿಶ್ವೋದ್ಧಾರಿಗಳಾಗಿ ಭರತಖಂಡವಿರಾಜಮಾನಗಳಾದ ಸೋಮೇಶ್ವರ ಸಿದ್ಧೇಶ್ವರ ರಾಮನಾಥ ಮಲ್ಲಿಕಾರ್ಜುನ ವಿಶ್ವನಾಥ ಲಿಂಗಗಳಿಂದ ಅವತರಿಸಿ ಈ ಜಗತೀತಲದಲ್ಲಿ ವೀರಶೈವಸಿದ್ಧಾಂತವನ್ನು ನೆಲೆಗೊಳಿಸಿ ಆ ಮತದ ರಕ್ಷಣಾರ್ಥವಾಗಿ [illegible] ರಂಭಾಪುರಿ ಉಜ್ಜಯಿನಿ ಕೇದಾರ, ಶ್ರೀಶೈಲ ಮತ್ತು ಕಾಶಿ ಈ ಪಂಚಪುಣ್ಯಕ್ಷೇತ್ರಗಳಲ್ಲಿ ಪಂಚಮಹಾಪೀಠಗಳನ್ನು ಸ್ಥಾಪಿಸಿದರು. ಈ ಮಹಾಪೀಠಗಳು ಆಯಾ ಕ್ಷೇತ್ರಗಳಲ್ಲಿ ಅನಾದಿಕಾಲದಿಂದಲೂ ಶೋಭಿಸುತ್ತಿರುವವು. ಇಂಥ ಮಹಾಚಾರ್ಯರಲ್ಲಿ ಪ್ರತಿಯೊಬ್ಬ ಲಿಂಗಧಾರಿಯೂ ಅನಿತರಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸಿ ಮುಕ್ತಿಭಾಗಿಯಾಗಬೇಕು. ಸರ್ವರೂ ತಮ್ಮ ತಮ್ಮ ಮಠಾಚಾರ್ಯರನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಕಾಣುವುದೇ ಆಯಾ ಮತೀಯರ ಪವಿತ್ರಕರ್ತವ್ಯವಾಗಿದೆ. ಈ ಲೋಕದಲ್ಲಿರುವ ಸ್ಮಾರ್ತರು, ವೈಷ್ಣವರು, ಶ್ರೀವೈಷ್ಣವರು, ಕ್ರೈಸ್ತರು, ಬೌದ್ಧರು, ಮಹಮ್ಮದೀಯರು ತಮ್ಮ ತಮ್ಮ ಮೂಲಗುರುಗಳಾದ ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ಏಸುಕ್ರಿಸ್ತ, ಬುದ್ಧ, ಮಹಮ್ಮದ್ ಪೈಗಂಬರರನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ಕಾಣುತ್ತಿರುವ ವಿಷಯವು ಸರ್ವರ [illegible] ಇದರಂತೆ ಲಿಂಗಧಾರಿಗಳು ತಮ್ಮ ಮಠಾಚಾರ್ಯರನ್ನು ಕಾಣದೆ ತಿರುಗಿ ಅವರನ್ನು ನಿಂದಿಸುತ್ತಾರೆ. ಇದು ಅವರ ಪೂರ್ವಜನ್ಮಕೃತ ಪಾಪದ ಪ್ರಭಾವವೆಂದೇ ಹೇಳಬೇಕಾಗಿದೆ. ಕೆಲ ಜನ ಲಿಂಗಧಾರಿಗಳು ತಮ್ಮ ಜನ್ಮದಲ್ಲಿಯೇ ದೇಹದ ಮೇಲೆ ಲಿಂಗವನ್ನು ಧರಿಸದಿದ್ದರೂ, ಹಣೆಯಲ್ಲಿ ಭಸ್ಮವನ್ನು ಧರಿಸದಿದ್ದರೂ, [illegible] ಯಥೇಷ್ಟವಾಗಿ ತಿನ್ನುತ್ತಿದ್ದರೂ, ಮೇಲೆ ಮಾತ್ರ ಮತಾಭಿಮಾನದ ಸೋಗನ್ನು ಹಾಕಿಕೊಂಡು ಒದರುತ್ತಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತದೆ. ಇಂಥವರಲ್ಲಿ ಮತಾಭಿಮಾನವೆನ್ನುವುದು ಶಶವಿಷಾಣಸದೃಶವಾಗಿದೆ. ಅಸ್ತು! ಅನಾದಿಕಾಲದಿಂದ ಶುದ್ಧಸಂಪ್ರದಾಯಾನುವರ್ತಿಗಳಾಗಿ ಬಂದಿರುವ ವೀರಶೈವರು ತಮ್ಮ ಧರ್ಮಶಾಸ್ತ್ರಾನುಸಾರವಾಗಿ ತಮ್ಮ ಮೂಲಗುರುಗಳಲ್ಲಿ ಅನ್ಯಾದೃಶವಾದ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕು. ವೀರಶೈವ ಮಠಾಚಾರ್ಯರ ಸ್ವರೂಪವು ಸಾಮಾನ್ಯವಾದುದಲ್ಲ, ಜಗನ್ಮಾನ್ಯಗಳಾದ ಶಿವಾಗಮಗಳು ಈ ಮಹನೀಯರ ಮಹಿಮೆಯನ್ನು ವಿಶೇಷವಾಗಿ ಕೊಂಡಾಡಿರುತ್ತವೆ ಸುಪ್ರಭೇದಾಗಮದಲ್ಲಿ—

ಮತ್ಪಂಚವದನೋದ್ಭೂತಾಃ ಸರ್ವಏವ ಗುರೂತ್ತಮಾಃ ।
ತತ್ಸೃಷ್ಟಾನಾಂಚಸರ್ವೇಷಾಂ ತತ್ಸಾಮರ್ಥ್ಯಂ ಕಥಂಭವೇತ್ ॥
ತಸ್ಮಾತ್ಪಂಚವಿಧಾಚಾರ್ಯಾಃ ಪಂಚಪೀಠಾಧಿದೇವತಾಃ ।
ಪಂಚಸಿಂಹಾಸನಾಧೀಶಾಃ ಜಗದ್ಗುರುತ್ವಮಾಶ್ನುತೇ ॥

ಅಂದರೆ ನನ್ನ ಐದೂಮುಖಗಳಿಂದ ಜನಿಸಿದ ಪಂಚಾಚಾರ್ಯರೇ ಮುಖ್ಯಗುರುಗಳಿರುತ್ತಾರೆ. ಅವರಿಂದ ನಿರ್ಮಿತರಾದ ಸರ್ವರಿಗೆ (ಸರ್ವ ತಂಹದ ವೀರಶೈವರಿಗೆ) ಅವರ ಸಾಮರ್ಥ್ಯವು ಹೇಗೆ ಬಂದೀತು ? ಆದಕಾರಣ ಪಂಚಪ್ರಕಾರರಾದ ಆಚಾರ್ಯರು ಪಂಚಪೀಠಗಳಿಗೆ ಅಧಿದೇವತೆಗಳೂ ಪಂಚ ಸಿಂಹಾಸನಗಳಿಗೆ ಅಧಿಪತಿಗಳೂ ಜಗದ್ಗುರುಗಳೂ ಆಗುತ್ತಾರೆ ಎಂದು ಪರಮೇಶ್ವರನು ಪಾರ್ವತಿಗೆ ಉಪದೇಶಿಸಿದ್ದಾನೆ.

ಈರೀತಿಯಾಗಿ ಶಿವಾಗಮಗಳು ಆಚಾರ್ಯರ ಮಹತ್ವವನ್ನು ಸಾರುತ್ತಿರುವುದನ್ನು ನೋಡಿದರೆ ಇವರ ಮಹಿಮೆಯು ಎಷ್ಟರಮಟ್ಟಿಗಿರಬಹುದೆನ್ನುವದನ್ನು ಕುಶಲರೇ ಯೋಚಿಸಬೇಕು. ಆದಾದರಿಂದ ವೀರಶೈವಮತೀಯರೆಲ್ಲರೂ ಜಗದ್ವಂದ್ಯರಾದ ಈ ಪೂಜ್ಯಪಾದರ ವಿಷಯದಲ್ಲಿ ಅಕೃತ್ರಿಮವಾದ ಭಕ್ತಿಯನ್ನಿಡಬೇಕು; ಸದಾ ಅವರ ನಾಮಸ್ಮರಣವನ್ನು ಮಾಡುತ್ತಿರಬೇಕು, ಆ ಮಹಿಮರ ಪವಿತ್ರಚರಿತ್ರಗಳನ್ನು ಕೇಳುತ್ತಿರಬೇಕು, ಅವರ ಪೂಜೆಯಲ್ಲಿ ನಿರತರಾಗಿರಬೇಕು, ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳಲ್ಲಿಯೂ ಅವರ ಪಾದಾರವಿಂದಗಳಲ್ಲಿ ಮನಸ್ಸನ್ನು ಲಯಗೊಳಿಸಬೇಕು. ಆ ಮಹಿಮರನ್ನು ಪರಶಿವಗಭಿನ್ನರನ್ನಾಗಿ ತಿಳಿಯಬೇಕು ಸರ್ವದಾ ಅವರ ಮನಸ್ತೃಪ್ತಿಯಾಗುವಂತೆ ವರ್ತಿಸಬೇಕು ತನುಮನೋಧನಗಳಿಂದ ಅವರ ಸೇವೆಯನ್ನು ಕೈಕೊಳ್ಳಬೇಕು, ಒಟ್ಟಿಗೆ ತಮ್ಮ ಸರ್ವಸ್ವವೇ ಶ್ರೀಗುರುವಿನದೆಂದು ಭಾವಿಸಿ ಲೋಕೋತ್ತರವಾದ ಭಕ್ತಿಯನ್ನು ಪ್ರಕಾಶಗೊಳಿಸಬೇಕು ಇದೇ ನಿಜವಾದ ಶುದ್ಧಸಂಪ್ರದಾಯಜಾತರ ಆಚರಣೆಯಾಗಿದೆ. ಆದುದರಿಂದ ಸಮಸ್ತವೀರಶೈವರೂ ಈ ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡು ತಮ್ಮ ಮಠಾಚಾರ್ಯರಲ್ಲಿ ನಿರ್ಮಲವಾದ ಭಕ್ತಿಯನ್ನಿಟ್ಟು ಶ್ರೀಪರಶಿವನ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ರಾಜಕುಮಾರ ಉಂಬರ್ಟೋರವರು ದಂಡನಾಯಕರಾದರು

ರಾಜಕುಮಾರ ಉಂಬರ್ಟೋರವರನ್ನು ಪೂರ್ವರಂಗದಲ್ಲಿರುವ ಇಟಲಿ ಸೇನೆಗಳ ದಂಡನಾಯಕರನ್ನಾಗಿ ನೇಮಿಸಲಾಗಿದೆಯೆಂದು ಮೊರಾಕೋ ರೇಡಿಯೋ ತಿಳಿಸಿತು.

ಟ್ಯುನೀಸಿಯಾದಲ್ಲಿ ೮ ನೇ ಸೇನೆ

ಜ। ಮಾಂಟ್ಗೋಮರಿಯವರ ಬಹುಮಟ್ಟಿನ ಬಲವೆಲ್ಲ ಟ್ಯುನೀಸಿಯಾ ಗಡಿಯಲ್ಲಿ ನೆರೆದಿದೆಯೆಂದೂ, ಕಟ್ಟಕಡೇ ಮುತ್ತಿಗೆಗಾಗಿ ಅವರು ಸರ್ವಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದೂ ಆಲ್ಜೀರ್ಸ್ ರೇಡಿಯೋ ತಿಳಿಸಿದೆ

ಯುಗೊಸ್ಲಾವಿಯದಲ್ಲಿ ಸತ್ಯಾಗ್ರಹ !

ಯುಗೊಸ್ಲಾವಿಯದ ಸಂಗ್ರಾಮ ಸಚಿವರೂ ಮತ್ತು ದೇಶಭಕ್ತರೂ ಆದ ಜ॥ ಮಿಹೈಲೋವಿಚ್‌ರವರು ಕೇಂದ್ರ ಮತ್ತು ದಕ್ಷಿಣ ಯುಗೊಸ್ಲಾವಿಯದಲ್ಲೆಲ್ಲ ಸತ್ಯಾಗ್ರಹವಾಚರಿಸಲ್ಪಡಬೇಕೆಂದು ಆಜ್ಞೆ ಮಾಡಿದ್ದಾರೆ. ಅಲ್ಲಿರುವ ಆಕ್ಸಿಸ್ ಪಡೆಗಳಲ್ಲಿ ಅವ್ಯವಸ್ಥೆಯುಂಟಾಗುವಂತೆ ಮಾಡುವುದೇ ಇದರ ಉದ್ದಿಶ್ಯ

ಯುನಾನ್-ಬರ್ಮಾಗಡಿಯಲ್ಲಿ ಭೀಕರಕದನ

ಯುನಾನ್-ಬರ್ಮಾ ಗಡಿನಾಡಿನಲ್ಲಿ ಜಪಾನರು ಭೀಕರ ಕದನವನ್ನು ಆರಂಭಿಸಿದ್ದಾರೆ. ಚೀಣರ ಸೈನ್ಯಬಲಕ್ಕಿಂತ ಜಪಾನರ ಬಲವು ಅಧಿಕವಾಗಿದ್ದರೂ ಚೀಣರು ಶತ್ರುವನ್ನು ಹಿಂದಕ್ಕಟ್ಟಲು ಪ್ರಯತ್ನಿಸಿದ್ದಾರೆ ಅಲ್ಲಿಗೆ ಜಪಾನರು ಸಯಾಮಿನಿಂದ ೩ ಡಿವಿಜನ್ ಸೇನೆಯನ್ನು ತಂದಿರುವರೆಂದು ಹೇಳಲಾಗಿದೆ.

ಟ್ಯೂನೀಸಿಯಾದಲ್ಲಿ ಶತ್ರುಗಳು ತಿರುಗಿ ಬಿದ್ದರು

ಟೂನಿಸಿಯಾದಲ್ಲಿ ಆಕ್ಸಿಸ್ ಪಡೆಗಳು ತಿರುಗಿ ಬಿದ್ದು ಡ್ಜೆಬೆಲ್ ಮೊನ್ನೊರ್ ಗುಡ್ಡದಿಂದ ಮಿತ್ರ ಪಡೆಗಳನ್ನು ಓಡಿಸಿದವು. ಹವ ಅನುಕೂಲವಾಗಿಲ್ಲವಾದ್ದರಿಂದ ವಿಮಾನಗಳ ಚಟುವಟಿಕೆ ಹೆಚ್ಚಾಗಿರಲಿಲ್ಲ. ಸೆನೆದ್ ಹಿಡಿದ ಅಮೆರಿಕನ್ ಸೇನೆಯು ಗಾಫ್ಸಾ ಬಳಿ ಹೊಸ ಸ್ಥಾನಗಳಿಗೆ ಹಿಂದೆಸರಿದಿವೆ ಎಂದು ಹೇಳಲಾಗಿದೆ.

ಸಾಲೊಮನ್ಸ್‌ನಲ್ಲಿ ಭಾರಿ ಕದನವಾಗ ಬಹುದು

ಇತ್ತೀಚಿಗೆ ಸಾಲೊಮನ್ಸ್‌ನಲ್ಲಿ ನಡೆದ ಕದನದಲ್ಲಿ ಅಮೆರಿಕ ಮತ್ತು ಜಪಾನ್ ಬಲಗಳೆರಡಕ್ಕೂ ಸಾಮಾನ್ಯವಾದ ನಷ್ಟವಾಯಿತೆಂದೂ ಇನ್ನೂ ಭಾರಿ ಕದನವು ಅಲ್ಲಿ ನಡೆದಿಲ್ಲವೆಂದೂ ಅಂತೂ ಜಪಾನರು ಮಾಡಿಕೊಳ್ಳುತ್ತಿರುವ ಸಿದ್ಧತೆಗಳನ್ನು ನೋಡಿದರೆ, ಭಾರಿ ಹೊಡೆದಾಟವಾಗುವ ನಿರೀಕ್ಷೆಯಿದೆ ಎಂದು ಅಮೆರಿಕದ ನೌಕಾಶಾಖೆಯ ಕಾರ್ಯದರ್ಶಿಗಳಾದ ಕ॥ ನಾಕ್ಸ್‌ರವರು ತಿಳಿಸಿದ್ದಾರೆ.

ಸ್ಪೇನ್ ಪ್ರವೇಶಿಸಲು ಅವಕಾಶ ಕೇಳಿಲ್ಲ

ಸ್ಪೆಯಿನ್ ಗಡಿಯಲ್ಲಿ ಬಲಯುತ ಜರ್ಮನ್ ಪಡೆಗಳು ಬಂದು ನಿಂತಿವೆಯೆಂದೂ, ಸ್ಪೆಯಿನ್ ಮೂಲಕ ಜರ್ಮನ್ ಸೇನೆ ತೆರಳಲು ಮತ್ತು ಸ್ಪೆಯಿನಿನ ಮೆಡಿಟರೇನಿಯನ್ ತೀರವನ್ನು ಆಕ್ರಮಿಸಲು ಅವಕಾಶ ಕೊಡಬೇಕೆಂದು ಜರ್ಮನಿ ಕೇಳಿರುವುದಾಗಿಯೂ ಸ್ಟಾಕ್‌ಹೋಮಿನಿಂದ ಬಂದಿರುವ ವಾರ್ತೆಗೆ ಬುಡವಿಲ್ಲವೆಂದು ಸ್ಪೆಯಿನ್‌ವಿದೇಶಾಂಗ ಕಚೇರಿ ಅಧಿಕಾರಿಗಳು ತಿಳಿಸಿದ್ದಾರೆ.

ಪೆಸಿಫಿಕ್ ಕದನ

ನ್ಯೂಗಿನಿಯಾಕ್ಕೆ ಸೇರಿದ ವಾಯುದ್ವೀಪದಲ್ಲಿ ೪೧ ಜಪಾನ್ ವಿಮಾನಗಳನ್ನು ಹೊಡೆದು ಕೆಡವಲಾಯಿತೆಂದೂ ಅಮೆರಿಕನ್ ನೌಕೆಗಳು ಸಾಲೋಮನ್ಸ್ ತೀರದಲ್ಲಿ ಬಹಳ ಮುಂದೆ ನುಗ್ಗಿ ಹೋಗಿ, ಜಪಾನ್ ಸರಬರಾಜು ಮೂಲವಾದ ಕೊಲುಕಬಗಾರಾ ದ್ವೀಪದಮೇಲೆ ಮುತ್ತಿಗೆ ನಡೆಸಿದವೆಂದೂ, ರಾತ್ರಿ ತೀರ ಹತ್ತಿರ ಬಂದು ಷೆಲ್ ಹಾರಿಸಿದವೆಂದೂ ಅಲ್ಲಿನ ಅನೇಕ ಭವನಗಳು ಉರುಳಿ ಎಣ್ಣೆ ಸಂಗ್ರಹ ಸ್ಥಾನಗಳು ಉರಿಯಲಾರಂಭಿಸಿದವೆಂದೂ ಹೇಳಲಾಗಿದೆ.

ಓರೆಲ್‌ಗೆ ವಿಪತ್ತು

ಖಾರಖೋವ್ ಮಾಸ್ಕೋ ಮಧ್ಯೆ ಇರುವ ಓರೆಲ್‌ಗೆ ಈಗ ವಿಪತ್ತು ಉಂಟಾಗಿದೆ. ೧೦ ಲಕ್ಷ ರಷ್ಯ ಯೋಧರೂ ಸಾವಿರಾರು ಟ್ಯಾಂಕುಗಳೂ ಫಿರಂಗಿಗಳೂ ಆ ಕಡೆಗೆ ಚಲಿಸುತ್ತಿವೆ. ಓರೆಲ್‌ನಿಂದ ೪೦ ಮೈಲಿಯೊಳಗೇ ರಷ್ಯನರಿದ್ದಾರೆ. ಹಗಲೂ ರಾತ್ರಿ ರಷ್ಯನ್ ಫಿರಂಗಿಗಳು ರಾಸ್ಟೋವ್ ಮೇಲೆ ಫಿರಂಗಿ ಹಾರಿಸುತ್ತಿವೆ. ಓರೆಲ್‌ನಿಂದ ನೋವೊರೊಸಿಕ್ ವರೆಗಿರುವ ೬೦೦ ಮೈಲಿ ರಣರಂಗದಲ್ಲಿ ಈಗ ರಷ್ಯನರು ಮೇಲೆ ಬಿದ್ದು ಕಾದುತ್ತಿದ್ದಾರೆ. ಇನ್ನೂ ೧೫ ದಿನಗಳೊಳಗಾಗಿ ರಷ್ಯನರು ೧೫ ಲಕ್ಷ ಯೋಧರನ್ನು ಹೊಸದಾಗಿ ರಣರಂಗಕ್ಕೆ ಕಳಿಸಲಿದ್ದಾರೆಂದು ಹೇಳಲಾಗಿದೆ.

ಜರ್ಮನಿಯು ಏಕಾಏಕಿ ಬೀಳುವುದಿಲ್ಲ

ಬಹಳಕಾಲ ಜರ್ಮನಿಯಲ್ಲಿದ್ದು ಬಂದ ಸ್ವೀಡಿಷ್ ಪತ್ರಿಕೋದ್ಯೋಗಿಗಳಾದ ಲಿಂಡ್ ಕ್ವಿಸ್ಟ್‌ರವರು ತಮ್ಮ ಅನುಭವಕ್ಕೆ ಬಂದ ಜರ್ಮನಿಯ ಸ್ಥಿತಿಯನ್ನು ವಿವರಿಸುತ್ತ, “ ಜರ್ಮನಿಯು ಏಕಾಏಕಿ ಪತನವಾಗುವ ನಿರೀಕ್ಷೆಯಿಲ್ಲ. ಮೂರು ಪರಿಸ್ಥಿತಿಗಳು ತಲೆ ಹಾಕಿದರೆ ಜರ್ಮನಿ ಬಿದ್ದೀತು. ಮೊದಲನೆಯದಾಗಿ ಆಹಾರ ಪರಿಸ್ಥಿತಿ ಹದಗೆಡಬೇಕು. ೨ ನೆಯದು ಇನ್ನೂ ಅನೇಕ ಕಡೆ ಜರ್ಮನಿಗೆ ಸೋಲಾಗಿ ಮಿಲಿಟರಿ ಅವ್ಯವಸ್ಥೆ ತಲೆಹಾಕಬೇಕು. ಮೂರನೆಯದಾಗಿ ಮಿತ್ರ ದೇಶಗಳು ಯೂರೋಪಿಗೆ ಮುತ್ತಿಗೆ ಹಾಕಬೇಕು. ಜರ್ಮನಿಯು ಒಂದು ದುರ್ಭೇದ್ಯವಾದ ಕೋಟೆಯಂತಿದೆ. ಸುತ್ತಮುತ್ತ ಇರುವ ಆಕ್ರಮಿತ ರಾಷ್ಟ್ರಗಳು ರಕ್ಷಣೆ ಪ್ರಾಕಾರಗಳಂತಿವೆಯೆಂದು ನಾಜಿಗಳು ಭಾವಿಸಿದ್ದಾರೆ. ಅಂದರೆ ಹೊಡೆದಾಟವು ಇನ್ನೂ ಜರ್ಮನ್ ಪ್ರಜೆಗಳಿಂದ ದೂರವಾಗಿದೆ. ಈ ಆಕ್ರಮಿತ ರಾಷ್ಟ್ರಗಳಿಗೆ ಏಟುಹಾಕಿ ಭೇದಿಸಲಾರಂಭಿಸಿದರೆ ಆಗಜರ್ಮನರ ಅಭಿಪ್ರಾಯ ಬದಲಾಯಿಸೀತು ” ಎಂದು ತಿಳಿಸಿದ್ದಾರೆ.

ಕೌಂಟ್ ಸಿಯಾನೋ ಹೋಲಿಸಿಟಿ ರಾಯಭಾರಿ

ಇಟಾಲಿಯನ್ ವಿದೇಶಿ ಮಂತ್ರಿಮಂಡಲದಿಂದ ಹೊರಹಾಕಲ್ಪಟ್ಟ ಮುಸೋಲಿನಿಯ ಅಳಿಯ ಕೌಂಟ್ ಸಿಯಾನೋ ಹೋಲಿಸಿಟಿಯಲ್ಲಿ ಇಟಲಿಯ ರಾಯಭಾರಿಯಾಗಿ ನೇಮಕವಾಗಿದ್ದಾನೆಂದು ಇಟಲಿ ವಾರ್ತೆ ತಿಳಿಸುತ್ತದೆ.

ಆಫ್ರಿಕಾದಲ್ಲಿನ ಮಿತ್ರಸೈನ್ಯಗಳಿಗೆ ದಂಡನಾಯಕರ ನೇಮಕ

ಟ್ಯೂನಿಸ್ಸಿನಲ್ಲಿರುವ ಅಮೇರಿಕ, ಫ್ರೆಂಚ್ ಮತ್ತು ಬ್ರಿಟಿಷ್ ಸೇನೆಗಳಿಗೆ ಜನರಲ್ ಐಸನ್ ಹೋವರ್‌ರವರನ್ನು ಪ್ರಧಾನ ದಂಡನಾಯಕರಾಗಿ ನೇಮಿಸಿದೆ.

ಚೀನಾದಿಂದ ಜಪಾನರನ್ನು ಓಡಿಸಲು ಸಿದ್ಧತೆ

ಬೇಗನೆ ಚೀನಾ ಮತ್ತು ಜಪಾನುಗಳ ಮಧ್ಯೆ ಬಹು ಬಲವಾದ ವಿಮಾನ ಕಾರ್ಯಾಚರಣೆ ನಡೆಯುವದು ಎಂದೂ ಚೀನಾದಿಂದ ಜಪಾನರನ್ನೋಡಿಸಲು ಪ್ರಬಲ ಕಾರ್ಯಾಚರಣೆಗೆ ಸಿದ್ಧತೆಯಾಗುತ್ತಿದೆ ಎಂದೂ ಅಧ್ಯಕ್ಷ ರೂಸ್‌ವೆಲ್ಟರು ಲಿಂಕನ್ ದಿನಾಚರಣೆಯ ಸಂಬಂಧದಲ್ಲಿ ಬ್ರಾಡ್‌ಕ್ಯಾಸ್ಟ್ ಮಾಡುತ್ತಾ ತಿಳಿಸಿದರು

ರಾಸ್ಟೋವ್-ಕಾಕಸಸ್ ಸಂಬಂಧ ತಪ್ಪಿತು

ರಾಸ್ಟೋವ್ ಕಡೆಯಿಂದ ರಣರಂಗಕ್ಕೆ ಬರುತ್ತಿದ್ದ ನಾಜಿ ಪಡೆಗಳ ಮೇಲೆ ರಷ್ಯ ಬಾಂಬರುಗಳು ಉಗ್ರ ಮುತ್ತಿಗೆ ನಡೆಸಿದವು ಶತ್ರುಗಳಿಗೆ ಬಹು ಹಾನಿಯಾಗಿದೆ. ಬಟೈಸ್ಕ್ ಹಿಡಿಯಬೇಕಾದರೆ ರಷ್ಯನರು ಬೀದಿ ಬೀದಿಗಳಲ್ಲಿ ಅತ್ಯುಗ್ರ ಕದನ ನಡೆಸಬೇಕಾಯಿತು ರಷ್ಯ ಪಡೆ ಈಗ ಉತ್ತರಕ್ಕೆ ನುಗ್ಗಿ ರಾಸ್ಟೋವಿನ ದಕ್ಷಿಣ ಬಡಾವಣೆಗೆ ಅಂಟಿಕೊಂಡಂತಿರುವ ಹಲವು ಹಳ್ಳಿಗಳನ್ನು ಆಕ್ರಮಿಸಿವೆ. ರಾಸ್ಟೋವಿಗೂ ಮತ್ತು ಕಾಕಸಸ್‌ಗೂ ಇದ್ದ ಸಂಬಂಧವು ತಪ್ಪಿಹೋಯಿತು ಕಾಕಸಸ್‌ನಲ್ಲಿದ್ದ ನಾಜಿ ಸೇನೆಯು ಕ್ಯೂಬನ್ ಕ್ಷೇತ್ರದಲ್ಲಿ ಸಿಕ್ಕಿಬಿದ್ದಿದೆ

ಯು-ಬೋಟ್ ಅಪಾಂತರವನ್ನು ಅಡಗಿಸಲಾಗಿಲ್ಲ

ಕಳೆದ ೭ನೆಯ ತಾರೀಖು ರಾತ್ರೆ ವಾಷಿಂಗ್‌ಟನ್ನಿಂದ ಲಂಡನ್ನಿಗೆ ಆಗಮಿಸಿದ ಯೂರೋಪಿನಲ್ಲಿರುವ ಅಮೇರಿಕನ್ ನೌಕಾಬಲದ ದಂಡನಾಯಕರಾದ ಅ॥ ಸ್ಟಾರ್ಕ್‌ರವರು ಶತ್ರುಗಳ ನೌಕಾ ಚಟುವಟಿಕೆ ಕುರಿತು ಹೇಳುತ್ತಾ "ನಾವು ಇನ್ನೂ ಶತ್ರುಗಳ ಯು ಬೋಟ್‌ಗಳ ಅಪಾಂತರವನ್ನು ಅಡಗಿಸಲು ಶಕ್ತರಾಗಿಲ್ಲ ಆದರೆ ಕಳೆದ ವರ್ಷದ ಏಪ್ರಿಲ್‌ಗಿಂತ ಈಸಾರೆ ಉತ್ತಮ ಫಲಿತಾಂಶ ಬಂದೀತೆಂದು ನಾನು ಭಾವಿಸುತ್ತೇನೆ" ಎಂದು ಹೇಳಿದರು

ಯು-ಬೋಟ್ ಅಪಾಂತರ ಸಹಿಸಲಶಕ್ಯವಾಗಿದೆ.

ಪಾರ್ಲಿಮೆಂಟಿನಲ್ಲಿ ಮಹಾಪ್ರಧಾನ ಚರ್ಚಿಲ್‌ರವರು ಯುದ್ಧ ಪರಿಸ್ಥಿತಿಯನ್ನು ವರ್ಣಿಸಿದರು ಯು-ಬೋಟ್ ಪ್ರಸ್ತಾಪ ಬಂದಾಗ "ಸಾಗರಗಳಲ್ಲಿ ನಮಗೆ ಆಗುತ್ತಿರುವ ನಷ್ಟ ಸಹಿಸಲಶಕ್ಯವಾಗಿದೆ. ನಮ್ಮ ಸಂಪೂರ್ಣ ಬಲವನ್ನು ತೋರಿಸಲು ಯು-ಬೋಟ್‌ಗಳಿಂದ ಒದಗಿರುವ ತೊಂದರೆ ಹೇಳತೀರದು. ಆದ್ದರಿಂದಲೇ ಯುದ್ಧವು ದೀರ್ಘಕಾಲ ಎಳೆಯುತ್ತಿರುವುದು ವಿನಾಸಲು ವಸ್ತುಗಳನ್ನೂ ಆಹಾರವನ್ನೂ ಗೊತ್ತುಗುರಿಯಿಲ್ಲದೆ ಬ್ರಿಟಿಷರು ಈಗ ಹೊರಕ್ಕೆ ತೆಗೆದು ವೆಚ್ಚಮಾಡುತ್ತಿದ್ದಾರೆ ಇಂಡಿಯ, ಪೆಸಿಫಿಕ್, ಆಫ್ರಿಕ ರಂಗಗಳಿಗೆ ಅದನ್ನು ಸರಬರಾಜು ಮಾಡದೆ ವಿಧಿಯಿಲ್ಲ. ಮೊದಲನೆಯ ವರ್ಷ ಯು ಬೋಟ್‌ಗಳು ನಮ್ಮ ನೌಕೆಗಳಲ್ಲಿ ಪ್ರತಿ ೧೦೦ಕ್ಕೆ ೧೯ ಹಡಗುಗಳನ್ನು ಮುಳುಗಿಸಿದವು. ೨ನೇ ವರ್ಷ ಅದು ೧೨ಕ್ಕೆ ಇಳಿಯಿತು. ಈಗ ೭॥ ಗೆ ಇಳಿದಿದೆ" ಎಂದು ಹೇಳಿದರು. ಭಾಷಣದ ಮುಕ್ತಾಯಕಾಲದಲ್ಲಿ ಮೊದಲು ಹಿಟ್ಲರರನ್ನು ಉರುಳಿಸಿಬಿಡೋಣ ಅನಂತರ ಜಪಾನರ ಮಾತು ಎಂದು ಸಾರಿದರು. ಜರ್ಮನರನ್ನು ಸೋಲಿಸಿದ ಹೊರತು ಜಪಾನರ ಮೇಲೆ ಸೋಲಿನ ಮನೋಭಾವವನ್ನುಂಟುಮಾಡುವುದು ಕಷ್ಟ ಎಂದು ಒಪ್ಪಿಕೊಂಡರು.

ರಾಮೆಲ್ಲರ ಸೇನೆ ಬ್ರಿಟಿಷ್ ಪಡೆಯನ್ನೆದುರಿಸಿದೆ

ದಕ್ಷಿಣ ಟ್ಯೂನೀಸಿಯಾದಲ್ಲಿ ಫೈದ್ ಕಣಿವೆಗಾಗಿ ನಡೆದ ಕದನದಿಂದ ಹಿಂತಿರುಗಿದ ಅಮೇರಿಕನರು, ಆ ಕಣಿವೆಯನ್ನು ಹಿಡಿದವರು ಜ॥ ರಾಮೆಲ್ಲರ ಶಸ್ತ್ರ ಬಂಡಿಗಳ ಪಡೆಯವರೆಂದು ತಿಳಿಸಿದ್ದಾರೆ. ಈ ಪಡೆಗೆ ವಾನ್-ಆರ್ನಿಮ್‌ರವರು ಯುದ್ಧ ಪರಿಕರಗಳನ್ನು ಒದಗಿಸಿದರು ಜ॥ ರಾಮೆಲ್ಲರು ಸಾಧ್ಯವಾದಷ್ಟು ದೂರ ಉತ್ತರಕ್ಕೆ ಸರಿದಿದ್ದಾರೆ. ಮೇರೆತ್ ಸಾಲಿನಲ್ಲಿರುವ ಹಿಂಗಾವಲು ಪಡೆಗೆ ತಮ್ಮ ಬಳಿ ಉಳಿದಿದ್ದ ಶಸ್ತ್ರಗಳನ್ನು ಅವರು ಬಿಟ್ಟುಹೋಗಿದ್ದಾರೆ. ಅಂತೂ ರಾಮೆಲ್ಲರು ಬೇಗ ಬೇಗನೆ ಮುಂದುವರಿದು ಜ॥ ವಾನ್‌ಆರ್ನಿಮ್‌ರವರ ಸೇನೆಯೊಂದಿಗೆ ಸೇರಿದರು ರಾಮೆಲ್ಲರ ಅರಿತ ನುರಿತ ಯೋಧರು ಟ್ಯೂನೀಸಿಯಾಕ್ಕೆ ಬಂದ ಹೊಸ ಸಂಗ್ರಾಮ ಸಾಧನಗಳೊಂದಿಗೆ ಹೋರಾಟಕ್ಕೆ ಸಿದ್ಧವಾಗಿರುವುದರಿಂದ ಮಿತ್ರ ಸೇನೆಯು ಜರ್ಮನರ ಮಾರ್ಗ ಸೌಕರ್ಯವನ್ನು ಕತ್ತರಿಸಲು ದಕ್ಷಿಣ ಟ್ಯೂನೀಸಿಯಾದಲ್ಲಿ ಸಮುದ್ರ ತೀರದವರೆಗೆ ನುಗ್ಗಿ ಹೋಗುವ ಸಂಭವ ಈಗ ಕಡಿಮೆಯಾಗಿದೆ ಮಧ್ಯ ಪೂರ್ವದಲ್ಲಿ ನಾಜಿ ವಿಮಾನಗಳನ್ನು ಈಗ ಗೇಬ್ಸ್‌ನ ಬಳಿ ಉಪಯೋಗಿಸಲಾಗುತ್ತದೆ ನುರಿತ ಜರ್ಮನ್ ವೈಮಾನಿಕರು ಕೆಲಸಮಾಡುತ್ತಿದ್ದಾರೆ. ಜ॥ ಮಾಂಟ್ಗೊಮರಿಯವರ ಮುಂಗಾವಲು ಪಡೆಗಳು ಸಮುದ್ರತೀರದಲ್ಲಿ ಟ್ಯೂನೀಸಿಯಾ ಗಡಿಯ ಉದ್ದಕ್ಕೂ ೮ ನೇ ಬ್ರಿಟಿಷ್ ಸೇನೆಯು ಶತ್ರುವನ್ನು ಎದುರಿಸುತ್ತಿದೆ ೮ನೇ ಸೇನೆಯು ಪಿಸಿಡಾ ಎಂಬುದನ್ನು ದಾಟಿ ೧೦ ಮೈಲಿ ದೂರ ಮುಂದೆ ಸಾಗಿದಂತಾಗಿದೆ ಅಲ್ಲಿನ ಭೂಮಿಯು ಅಪಾಯಕರ ಬಾಂಬು ಪ್ರದೇಶಗಳಿಂದ ಕೂಡಿದೆ ಈಗ ಅಲ್ಲಿ ಪರಸ್ಪರ ಫಿರಂಗಿ ಕದನ ನಡೆಯುತ್ತಿದೆಯೆಂದು ಹೇಳಲಾಗಿದೆ.

೧೦-೨-೧೯೪೩ನೇ ರಾತ್ರಿ ಸುಮಾರು ೧ ಗಂಟೆ ಸಮಯದಲ್ಲಿ ಮಳವಳ್ಳಿ, ಕೊಳ್ಳೇಗಾಲ ಮತ್ತು ಚಾಮರಾಜನಗರ ಭಾಗಗಳಲ್ಲಿ ಭೂಕಂಪದ ಅನುಭವವಾಯಿತೆಂದು ವರದಿಗಳು ಬಂದಿವೆ ಯಾರಿಗೂ ಅಪಾಯವಾದಂತೆ ತಿಳಿದುಬಂದಿಲ್ಲ

ಮುಂದಿನ ಹದಿನಾಲ್ಕು ದಿನಗಳೊಳಗಾಗಿ ಒಂದು ದಿನ ಬೆಂಗಳೂರು ಮದರಾಸುಗಳ ಮೇಲೆ ವಿಮಾನ ಧಾಳಿ ಕ್ರಮವನ್ನು ವಿಮಾನಗಳ ಸಹಾಯದಿಂದಲೇ ಪ್ರದರ್ಶಿಸುವ ಏರ್ಪಾಡಾಗಿದೆ ಮಿಲಿಟರಿ ಗುರಿಗಳ ಬಳಿ ಒಂದಾಗ ವಿಮಾನಗಳು ಹುಸಿಮದ್ದನ್ನು ಹಾರಿಸುವುವು ಮಿಲಿಟರಿ ರಕ್ಷಣಾವ್ಯವಸ್ಥೆಯ ಬಗ್ಗೆಯೂ ಮತ್ತು ಜನರಿಗೆ ಅನುಭವ ಮಾಡಿಸಿಕೊಡುವುದಕ್ಕೂ ಈ ಏರ್ಪಾಡಾಗಿದೆ

ತಾನು ಸಾಧಿಸಿರುವ ಯಂತ್ರ ಮಂತ್ರಗಳ ಸಿದ್ಧಿಯಾಗಿದೆಯೋ ಎಂಬುದನ್ನು ಖಚಿತ ಪಡಿಸಿಕೊಳ್ಳುವ ಸಲುವಾಗಿ ಆನೇಕಲ್ ತಾ॥ ಸರ್ಜಾಪುರದ ಹೋಬಳಿ ಕೂಟಕಾನಹಳ್ಳಿಯ ಬಡಗಿ ಸುಬ್ಬಯ್ಯ ಎಂಬುವನು ತನ್ನ ನಾಲ್ಕು ವರ್ಷದ ಮಗುವಿನ ಕತ್ತನ್ನು ಹಿಸುಕಿದನಂತೆ! ಮಗು ಸತ್ತು ಹೋಯಿತು!! ಬೆಂಗಳೂರು ಸೆಷನ್ಸ್ ಕೋರ್ಟಿನಲ್ಲಿ ಈ ಮೊಕದ್ದಮೆಯ ವಿಚಾರಣೆಯಾಗುತ್ತಿದೆ.

ಸ್ಟಾಲಿನ್‌ಗ್ರಾಡ್ ಸ್ಮಶಾನದಂತಾಗಿದೆ

"ಸ್ಟಾಲಿನ್‌ಗ್ರಾಡಿಗೆ ಉಗ್ರ ಹಾನಿಯುಂಟಾಗಿದೆ. ಲಂಡನ್ ಅಥವಾ ಕವೆಂಟ್ರಿಯಲ್ಲಿ ಕಂಡು ಬರುವ ಉಗ್ರ ವಿನಾಶದ ದೃಶ್ಯಗಳು ಸ್ಟಾಲಿನ್‌ಗ್ರಾಡ್ ದೃಶ್ಯದ ಮುಂದೆ ತೃಣಸಮಾನ ಸ್ಟಾಲಿನ್‌ಗ್ರಾಡೆಲ್ಲ ದೊಡ್ಡ ಸ್ಮಶಾನ ಭೂಮಿಯಂತೆ ಕಾಣುತ್ತಿದೆ. ಕ್ರಾಂತಿಕಾರ ನಾಯಕರ ಚೌಕದಿಂದ ಹಿಡಿದು ಸುಪ್ರಸಿದ್ಧ ಅಕ್ಟೋಬರ್ ಕಾರ್ಖಾನೆ ಕ್ಷೇತ್ರದವರೆಗಿರುವ ೬ ಮೈಲಿಗಳಲ್ಲಿ ಒಂದು ಮನೆಯೂ ಇಲ್ಲ ಯಂತ್ರಗಳೂ, ಕಂಬಿಗಳೂ, ಇಟ್ಟಿಗೆಗಳೂ ರಾಶಿ ರಾಶಿಯಾಗಿ ಬಿದ್ದಿವೆ ಶವಗಳನ್ನೆಲ್ಲ ತೆಗೆದು ಸಾಗಿಸಲಾಗಿದೆ ಆದರೆ ಇನ್ನೂ ಅಲ್ಲಲ್ಲಿ ಮಂಜಿನಲ್ಲಿ ಹೂತಿರುವ ಮೃತದೇಹಗಳಿವೆ" ಎಂದು ರಷ್ಯನ್ ಸುದ್ದಿ ತಿಳಿಸುತ್ತದೆ.

ಜರ್ಮನ್ ಸೈನ್ಯದ ದುಸ್ಥಿತಿ

ಡೊನೆಟ್ಸ್ ತಿರುವಿನಲ್ಲಿ ನಡೆಯುತ್ತಿರುವ ಕದನದಲ್ಲಿ ೨॥ ಲಕ್ಷ ಮಂದಿ ಜರ್ಮನರು ಸುತ್ತುವರಿಯಲ್ಪಟ್ಟು ನಾಶವಾಗುವ ಸಂಭವವುಂಟಾಗಿದೆ. ರಾಸ್ಟೋವ್ ಕದನಕ್ಕಿಂತಲೂ ಡೊನೆಟ್ಸ್ ತಿರುವಿನಲ್ಲಿ ಆರಂಭವಾಗಿರುವ ಮಹಾ ಸಂಗ್ರಾಮದ ಕಡೆ ಎಲ್ಲರ ಗಮನವೂ ಕೇಂದ್ರೀಕೃತವಾಗಿದೆ ಈಗ ರಷ್ಯನರು ಕೈಗಾರಿಕೆ ನಗರವಾದ ಕ್ರಾಮಟೋರ್ ಸ್ಕಯಾ ವಿನಿಂದಾಚೆ ಮುಂದುವರೆದಿದ್ದಾರೆ. ಅಲ್ಲಿಂದ ದಕ್ಷಿಣಕ್ಕೆ ಮುಂದುವರಿಯುವುದಾದರೆ ೨೦೦೦೦ ಚದರಮೈಲಿಗಳಲ್ಲಿರುವ ಮುಖ್ಯ ಕೈಗಾರಿಕೆ ಮತ್ತು ಗಣಿ ಪ್ರದೇಶಗಳನ್ನೆಲ್ಲ ಸುತ್ತುವರಿದಂತೆ ಆಗುತ್ತದೆ.

ಫಿಲಿಪೈನ್ ಮತ್ತು ಬರ್ಮಾಗಳಿಗೆ ಸ್ವತಂತ್ರ ಪ್ರಭುತ್ವ

ನಾನ್‌ಕಿಂಗ್‌ನಲ್ಲಿ ಜಪಾನರು ತಮ್ಮ ಕೈಗೊಂಬೆ ಸರಕಾರವನ್ನು ಸ್ಥಾಪಿಸಿರುವಂತೆ ಫಿಲಿಪೈನ್ಸ್ ಮತ್ತು ಬರ್ಮಾಗಳಲ್ಲೂ ಸ್ಥಾಪಿಸುವ ಆಲೋಚನೆ ಮಾಡಿದ್ದಾರೆಂಬುದಾಗಿ ಕಳೆದ ವಾರದ ಜಪಾನ್ ಬ್ರಾಡ್ ಕಾಸ್ಟ್‌ಗಳಿಂದ ಗೊತ್ತಾಗುತ್ತದೆ ಜಪಾನರು ಆಕ್ರಮಿಸಿರುವ ದೇಶಗಳ ಆರ್ಥಿಕ ಸ್ಥಿತಿ ಬಹಳ ಕೆಟ್ಟಿರುವದರಿಂದ ಅವರನ್ನು ಸಮಾಧಾನ ಪಡಿಸಲು ಈ ರೀತಿ ಮಾಡಲಾಗುತ್ತಿದೆಯೆಂದು ಪರಿಗಣಿಸಲಾಗಿದೆ ರಂಗೂನಿನಲ್ಲಿ ಸಮ್ಮೇಳನವೊಂದು ನಡೆಯಿತೆಂದೂ, ಆಗ ಜಪಾನರು ಸ್ವತಂತ್ರ ಪ್ರಭುತ್ವದ ವ್ಯವಸ್ಥೆಯೊಂದನ್ನು ಮುಂದಿಟ್ಟರೆಂದೂ ಟೋಕಿಯೋ ರೇಡಿಯೋಯಂತ್ರವು ತಿಳಿಸುತ್ತ "ಮಹಾಪೂರ್ವ ಏಷ್ಯಾವನ್ನು ಸ್ಥಾಪಿಸುವ ಕಾರ್ಯದಲ್ಲಿ ಜಪಾನ ಬರ್ಮಾಗಳು ಸಹಕರಿಸಬೇಕಾಗಿರುವುದರಿಂದ ಇವೆರಡರ ಬಾಂಧವ್ಯವನ್ನು ನಿಕಟಗೊಳಿಸಬೇಕೆಂಬ ಒಡಂಬಡಿಕೆಯಾಯಿತು." ಎಂದು ಸೂಚಿಸಿದರು ಮನಿಲಾದಲ್ಲಿ ಜಪಾನರು ಸಂತೋಷ ಪ್ರದರ್ಶನವೊಂದನ್ನು ಏರ್ಪಡಿಸಿದ್ದಾರೆ ಆದಷ್ಟು ಬೇಗ ಫಿಲಿಪೈನಿಗೆ ಸ್ವಾತಂತ್ರ್ಯ ನೀಡುವುದಾಗಿ ಜ॥ ಟೋಜೋರವರು ಮಾಡಿದ ಘೋಷಣೆಗಾಗಿ ಕೃತಜ್ಞತೆ ಸೂಚಿಸುವುದೇ ಇದರ ಉದ್ದಿಷ್ಟವೆಂದು ಹೇಳಲಾಗಿದೆ.

ಸ್ವೀಕಾರ.

ವಿಜಾಪುರ ಜಿ॥ ಬದಾಮಿ ತಾ॥ ಗೋವನಕೊಪ್ಪ ಗ್ರಾಮದಲ್ಲಿರುವ ಮ॥ ರಾ॥ ಸಂಗಪ್ಪನವರು ಮಳವಾಡ ಇವರ ಮಾತೃಶ್ರೀಯವರಾದ ವೀರಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂಪಾಯಿಯು ಕೊಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮುರುಗೇಂದ್ರಶಿವಾಚಾರ್ಯಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

೭ **ಸ್ತ್ರೀಯರ ರಕ್ತಗುಲ್ಮಕ್ಕೆ** [illegible] ಗಳನ್ನು ಮೂರು [illegible] ನೀರಿನಲ್ಲಿ ರಾತ್ರಿ ನೆನೆಹಾಕಿ [illegible] ಅದನ್ನು [illegible] [illegible]

ಶೀತಳ ವಿಷಕ್ಕೆ [illegible] ಮತ್ತೊಂದು [illegible] ಮತ್ತೊಂದು [illegible] ಕುಡಿಯಬೇಕು [illegible] [illegible] ತಪ್ಪದೆ [illegible]

ಹಾವುಕಚ್ಚಿದ ವಿಷಕ್ಕೆ— [illegible] ವಿಷ [illegible] ವಿಷ [illegible] ದಿಂದ ವಿಷ [illegible] ಉರಿಯ [illegible] ಎರಡು [illegible] [illegible] ಹೊಟ್ಟೆಯ [illegible] [illegible]

೧೦ **ಸಂದವಾಯು** ([illegible]) — [illegible] ಮಸ್ತಕಕ್ಕೆ ಏರಿ ಮಸ್ತ [illegible] [illegible] ಬುದ್ಧಿಯ [illegible] ದಿವಸ ಕಣ್ಣಿಗೆ ಹಾಕಬೇಕು

೧೧ **ಗರ್ಭಾಶಯೋನ್ಮಾದ ವಾಯುವಿಕಾರಕ್ಕೆ** ([illegible]) [illegible] ಸ್ವಚ್ಛ [illegible] ವಾಯುವಿನ ಲಕ್ಷಣ [illegible] ನಾಲ್ಕು [illegible] ಕೊಟ್ಟೆಯನ್ನು [illegible] ಮೂರುದಿವಸ [illegible] ಸ್ವಚ್ಛವಾಗಿ [illegible]

೧೨ **ಮಲರೋಗಕ್ಕೆ**—ಕೇಸರಿ, ಪಚ್ಚಕರ್ಪೂರ, ಬೇರುದ್ದಿ ಇತ್ಯಾದಿ ಏಕಾದಿಂದ ತಲೆತಿರುಗಿ ಬೀಳತಕ್ಕವರಿಗೆ ಮೂರು ನಾಲ್ಕು ಗುಂಜಿಯಷ್ಟು ಅಂಟುವಾಳಕಾಯಿಯನ್ನು ನೀರಿನಲ್ಲಿ ಗಂಧದಂತೆ ತೇಯಿದು ಆ ನೀರನ್ನು ಮಸ್ತಕಕ್ಕೆ ಹತ್ತುವಂತೆ ತಲೆ ಕೆಳಗೆಮಾಡಿ ಮೂಗಿನಲ್ಲಿ ಹಾಕಬೇಕು ಅಂದರೆ ಶೀಘ್ರವೇ ಶುದ್ಧಿ ಬರುತ್ತದೆ ಬಹಳ ಉರಿಯಾದರೆ ಮೂಗಿನಲ್ಲಿ ಕರಗಿದ ತುಪ್ಪವನ್ನು ಹಾಕಬೇಕು ಅಂದರೆ ಉರಿಯು ಕಡಿಮೆಯಾಗುತ್ತದೆ ಕೇಸರಿ ಬರತಕ್ಕವರಿಗೆ ಬಂದಸರತಿಗೊಮ್ಮೆ ಮೇಲ್ಕಂಡಂತೆ ಮೂರು ನಾಲ್ಕು ಸಲ ಮಾಡಲು ಆ ರೋಗವೇ ಬರುವದಿಲ್ಲ. ಅಂಟುವಾಳ ಕಾಯಿಯ ಹೊಗೆ ಕೊಡುವದರಿಂದಲೂ ರೋಗವು ಬರುವದೇ ಇಲ್ಲ.

೧೩ **ಅಂತ್ರಜ್ವರಕ್ಕೆ**—(ಟೈಫಾಯಿಡ್) ಮುದತೀ ಜ್ವರದಲ್ಲಿ ಜ್ವರದ ಉಷ್ಣತೆಯು ಹೆಚ್ಚಾಗುವದರಿಂದ ವಾಯುವಿಕಾರವಾಗಿ ಅಸಂಬದ್ಧ ಬಡಬಡಿಸ ಹತ್ತುವದ [illegible] ಪ್ರಯತ್ನಮಾಡುವರು, ಹತ್ತಿಯಿಂದ [illegible] ಹೊರಡುವದು [illegible] ಇಂಥ ಪ್ರಸಂಗದಲ್ಲಿ [illegible]ಲಿನ್ ವಾಟರ್ ಎಂಬ ಮುಂತಾದ ಪಟ್ಟಿಯನ್ನು ಮಸ್ತಕಕ್ಕೆ [illegible] ಪರಿಹಾರವಿಲ್ಲ ಇಂಥ ಪ್ರಸಂಗದಲ್ಲಿ ಅಂಟುವಾಳ ಕಾಯಿಯ ನೀರಿನ ಪಟ್ಟಿಯನ್ನು ಮಸ್ತಕಕ್ಕೆ ಹಾಕುವದರಿಂದ ಜ್ವರ ಇಳಿಯುತ್ತಿರುವದು (ಪ್ರಯೋಗ) (ಆರೋಗ್ಯಮಂದಿರ)

ಸೂರ್ಯನ ಕಪ್ಪುಕಲೆಗಳ ಪರಿಣಾಮಗಳು

ಸವಿಮರ್ಶನದಿಂದ ನೋಡಿದರೆ [illegible] ದೂರದರ್ಶಕ ಯಂತ್ರದ ಸಹಾಯದಿಂದ ಸೂರ್ಯಬಿಂಬ ಪರೀಕ್ಷಿಸಿದರೆ ಒಂದಿಷ್ಟು ಕಪ್ಪು ಚುಕ್ಕೆಗಳು ರವಿಬಿಂಬದಲ್ಲಿ ಸದಾ ಕಾಣಿಸಿಕೊಳ್ಳುವವು ಪ್ರತಿ [illegible] ವರ್ಷಗಳಿಗೊಮ್ಮೆ ಅವು ಸರತಿ ಬರುವವೆಂದು ಜರ್ಮನ್ [illegible] ಎಚ್ ಶ್ವಾಬ ಗೊತ್ತುಹಚ್ಚಿದನು (184)

ಈ ಚುಕ್ಕೆಗಳ ಪರಿಭ್ರಮಣಕ್ಕೆ ಹೊಂದಿಕೊಂಡಂತೆಯೆ ಭೂಮಿಯ ಕಾಂತಾಕರ್ಷಣ ಶಕ್ತಿಯಲ್ಲಿ ಏರುಪೇರಾಗುವದನ್ನು ಜರ್ಮನ್ ವಿಜ್ಞಾನಿ [illegible] ಲಾಮೊಂಟನು ಸ್ಪಷ್ಟಗೊಳಿಸಿದನು (18.1)

[illegible] ಪ್ರದೇಶ [illegible] ಅಮೇರಿಕದ [illegible] ಡಾ|| ಜ ಇ ಹೇಲ್ [illegible] (191+) ಕಪ್ಪುಗಳ [illegible] ವಿದ್ಯುಲ್ಲಹರಿ [illegible]

[illegible] ಅರ್ಥಶಾಸ್ತ್ರಿ ಡಬ್ಲ್ಯು ಎಸ್ ಜವಾನ್ಸನು ಹೇಳುವಂತೆ ಕಪ್ಪುಚುಕ್ಕೆಗಳಿಂದ [illegible] ಜನಾಂಗಗಳಲ್ಲಿ [illegible] ವಿಜ್ಞಾನಿ [illegible]

[illegible] ಕಾಣಿಸಿಕೊಳ್ಳುವುದಕ್ಕೆ [illegible] ಕಾರಣವೇಕೆ? ಹನ್ನೊಂದುವರ್ಷಗಳ ಅವಧಿಯೇಕೆ ಎಂಬುದನ್ನು ಯಾರೂ ಗೊತ್ತುಮಾಡಿಲ್ಲ [illegible] ಬಗೆಬಗೆಯ ವಾಯುಗಳ [illegible] ಆ ಪ್ರದೇಶಗಳಲ್ಲಿ [illegible] ರವಿಜ್ವಾಲೆಯು ಪ್ರಚಂಡ ಸುಂಟರಗಾಳಿಯಂತೆ ಚಲಿಸುವುದೆಂದೂ, ಇದರಿಂದ ಆ ಭಾಗದಲ್ಲಿ ಕಾಂತಿಗುಂದಿ ಅಕ್ಕಪಕ್ಕಕ್ಕಿಂತ ಮಬ್ಬಾಗಿ ಕಪ್ಪುಚುಕ್ಕೆಗಳಂತೆ ಕಾಣುವುದೆಂದೂ ಊಹಿಸಲ್ಪಟ್ಟಿವೆ ನಮ್ಮ 'ಆದಿತ್ಯ ಹೃದಯ'ದಲ್ಲಿ ಅಡಗಿರುವ [illegible] ಗುಟ್ಟನ್ನು ಮಂತ್ರಜ್ಞರು ತಿಳಿಸಿ ಉಪಕಾರಮಾಡಬಾರದೇಕೆ?

ನಮ್ಮ ಮಂತ್ರಗಳು ಒಗಟಿನಂತಿವೆಯೆಂಬುದಕ್ಕೆ ಉದಾಹರಣೆಯೊಂದನ್ನು ಇಲ್ಲಿ ಕೊಡಬಹುದಾಗಿದೆ— ಕಾಂತಿ, ತೇಜ, ಸುಖ, ಸೌಮನಸಗಳ ವರವನ್ನು ಬೇಡುವುದುಮಾತ್ರ "ಅಗ್ನಿಸ್ತುತಿಯ ಅರ್ಥವೆಂದು ತಿಳಿದಿದ್ದವರಿಗೆ ಪ್ರೌಢ ವಂಗಪಂಡಿತನೊಬ್ಬನು ಬೇರೆಯ ಬೆಳಕಿತ್ತನು ಯೋಚಿಸದಿದ್ದರೂ ಅಗ್ನಿಯು ಶಾಖವನ್ನೂ ಕಾಂತಿಯನ್ನೂ ಕೊಡುವುದಾದರೂ [illegible] ಸೌಮನಸ ಸಲ್ಲಿಸುವ ಸಂಭವವಿಲ್ಲ ಹಾಗೂ ಋಷಿಗಳು ಸುರೆಯಿಯಸುವ ಕೀಳಾಳುಗಳಲ್ಲ ಅವರು ಬೇಡಿದುದು ಜೀವದ ಜೀವಾಳವನ್ನು, ಅದು ಅಗ್ನಿಮೂಲವು, ಸೋಮಲತೆಯಲ್ಲಿ ಅಡಗಿರುವುದು ಇದನ್ನೇ ರಸಾಯನ ಶಾಸ್ತ್ರಿಗಳು "ಆಕ್ಸಿಜನ್" ಎನ್ನುವುದು ಅವರ ಪ್ರಯೋಗಗಳಿಂದ, ಸೋಮಲತೆಯ ಬೂದಿಯಲ್ಲಿ ಅಗ್ನಿಮೂಲದ ಲವಣಗಳು ಹೇರಳವಾಗಿವೆಯೆಂದು ದೃಢಪಟ್ಟಿರುವುದಾಗಿ ಆ ಪಂಡಿತನು ಪ್ರತಿಪಾದಿಸಿರುವನು

ಬಿ ಶ್ರೀಕಂಠಯ್ಯ, ಮೈಸೂರು

ಮರಣವಾರ್ತೆ

ವಿಜಾಪುರ ಜಿಲ್ಲಾ ಬದಾಮಿ ತಾಲೂಕ ಪೈಕಿ ಗೋವನಕೊಪ್ಪ ಗ್ರಾಮದಲ್ಲಿರುವ ಮ|| ರಾ|| ಸಂಗಪ್ಪನವರು ಮೊಳವಾಡ ಇವರ ಮಾತೋಶ್ರೀಯವರಾದ ವೀರಮ್ಮನವರು ಇದೇ ಪುಷ್ಯ ಬ|| ೧೦ (ತಾ|| 31 1 1943)ನೇ ರವಿವಾರ ಹಗಲು ೩ ಘಂಟೆಗೆ ಶಿವನಲ್ಲಿ ಐಕ್ಯಹೊಂದಿದರೆಂಬ ವಾರ್ತೆಯನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಇವರು ಗುರು, ಲಿಂಗ, ಜಂಗಮರಲ್ಲಿ ಭಕ್ತಿಯುಳ್ಳವರಾಗಿದ್ದರಲ್ಲದೆ ಸರ್ವಜನಪ್ರಿಯರೂ ಆಗಿದ್ದರು ಅಂತೇ ಮರಣಕಾಲದಲ್ಲಿ ಯಾವ ಕಷ್ಟವನ್ನೂ, ಬೇನೆಯನ್ನೂ ಅನುಭವಿಸದೆ ಸಂತೋಷದಿಂದ ಮಾತಾಡುತ್ತಾ ಪ್ರಾಣವನ್ನು ಬಿಟ್ಟರು ಇವರ ಸ್ಮಶಾನಯಾತ್ರೆಗೆ ೧೫ ೨೦ ಗ್ರಾಮದ ಜನರು ಮಜಲು ತೆಗೆದುಕೊಂಡು ಬಂದಿದ್ದರಲ್ಲದೆ, ಐದಾರ ನೂರು ಜನರು ಕೂಡಿದ್ದರು ಮರಣಕಾಲದಲ್ಲಿ ಇವರಿಗೆ ೮೫ ವರ್ಷ ಆಗಿದ್ದವು ಇವರ ಅಂತ್ಯೇಷ್ಟಿವಿಧಿಯು ಕೊಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀ ಮುರುಗೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಶಾಸ್ತ್ರೀಯಪದ್ಧತಿಗನುಸಾರವಾಗಿ ಒಳ್ಳೇ ವೈಭವದಿಂದ ನೆರವೇರಿಸಲ್ಪಟ್ಟಿತು ಈ ಕಾರ್ಯದಕ್ಷ ಸದರಿ ಸ್ವಾಮಿಗಳವರಿಂದ ವೀರಶೈವಮತತತ್ವವನ್ನು ಪ್ರಚಾರಮಾಡುತ್ತಿರುವ ಪಂಚಾಚಾರ್ಯ ಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ೧ ರೂಪಾಯಿ ತೆಗೆಯಿಸಲ್ಪಟ್ಟಿತು ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನೂ ಅವರ ಬಂಧು ಬಾಂಧವರಿಗುಂಟಾದ ದುಃಖಶಮನವನ್ನೂ, ಉಂಟುಮಾಡಲೆಂದು ಹಾರೈಸುತ್ತೇನೆ

ಬಸಪ್ಪ ಹುರಕಡ್ಲಿ, ಗೋವನಕೊಪ್ಪ

ಗಾಂಧೀಜೀ ಉಪವಾಸ

ಫೆಬ್ರವರಿ ೧೦ ನೇ ತಾ|| ದಿಂದ ಗಾಂಧೀಜಿಯವರು ಮೂರುವಾರ ಕಾಲ ಉಪವಾಸಮಾಡಬೇಕೆಂದು ನಿರ್ಧರಿಸಿದ್ದಾರೆ ಇದು ಸಾಯುವತನಕ ಮಾಡುವ ಉಪವಾಸವಲ್ಲ ಆದ್ದರಿಂದ ಅವರು ನಿಂಬೆಹಣ್ಣಿನ ರಸವನ್ನು ನೀರಿಗೆ ಬೆರಸಿ, ಉಪವಾಸಕಾಲದಲ್ಲಿ ಸೇವಿಸುವರು ಮೊದಲು ಅವರು ಫೆಬ್ರುವರಿ ೯ ನೇ ತಾರೀಖು ಉಪವಾಸವನ್ನು ಆರಂಭಿಸಬೇಕೆಂದು ನಿರ್ಧರಿಸಿದ್ದರು ಆದರೆ ಅನಂತರ ಫೆ ೧೦ಕ್ಕೆ ಬದಲಾಯಿಸಿದರು ಅವರು ೧೦ನೆಯ ತಾರೀಖು ಮಧ್ಯಾಹ್ನಕ್ಕೆ ಮುಂಚೆ ಉಪವಾಸವನ್ನು ಆರಂಭಿಸಿರುವುದಾಗಿ ತಿಳಿದುಬಂದಿದೆ ಎಂದು ಭಾರತ ಸರಕಾರವು ಪ್ರಕಟಿಸಿದೆ

ಭಾರತಕ್ಕೆ ಅಮೇರಿಕನ್ ಎಂಜಿನ್‌ಗಳು

ಭರತಖಂಡಕ್ಕೆ ಅಮೇರಿಕದ ರೈಲ್ವೆ ನಿಪುಣರನ್ನು ಕಳಿಸಬೇಕೆಂದು ಗ್ರೇಡಿ ಮಿಷನ್ನಿನವರು ಶಿಫಾರಸು ಮಾಡಿದ್ದರು ಅವರು ಬರುವುದು ಅನುಮಾನವಾದರೂ ಮುಂದಿನವರ್ಷದಲ್ಲಿ ಅಮೇರಿಕದಿಂದ ೧೦೦ ಭಾರಿ ರೈಲ್ವೆ ಎಂಜಿನ್ನುಗಳೂ, ಅಷ್ಟೇ ಸಂಖ್ಯೆಯ ಸಣ್ಣ ಎಂಜಿನ್ನುಗಳೂ ಭಾರತಕ್ಕೆ ಬರುವ ನಿರೀಕ್ಷೆ ಇದೆ ಇವುಗಳನ್ನು ರಫ್ತುಮಾಡಲು ವಿಶೇಷ ರಹದಾರಿ ಪಡೆಯಲಾಗಿದೆ ಇವುಗಳ ವೆಚ್ಚ ೫ ಕೋಟಿ ರೂಪಾಯಿಗಳೆಂದು ಅಂದಾಜು ಹಾಕಲಾಗಿದೆ

ಚರ್ಚಿಲ್ಲರು ಹಿಂತಿರುಗಿದರು

ಶ್ರೀ ಚರ್ಚಿಲ್ಲರು ಮಧ್ಯಪೂರ್ವದ ಪ್ರವಾಸವನ್ನು ಮುಗಿಸಿಕೊಂಡು, ಕಳೆದ ನೇ ತಾರೀಖು ಬೆಳಿಗ್ಗೆ ಇಂಗ್ಲೆಂಡಿನ ವಿಮಾನನಿಲ್ದಾಣವೊಂದರಲ್ಲಿ ಬಂದಿಳಿದರು ಅವರು ಕೈರೊ, ಟರ್ಕಿ, ಸೈಪ್ರಸ್ ಮತ್ತು ಟ್ರಿಪೋಲಿಗಳಿಗೆ ಭೇಟಿಯಿತ್ತರು ಅವರು ವಿಮಾನನಿಲ್ದಾಣದಿಂದ ರೈಲಿನಲ್ಲಿ ಹೊರಟು ಇಂದು ಮಧ್ಯಾಹ್ನ ಲಂಡನ್ ಸೇರಿದರು ಮಂತ್ರಿಗಳೆಲ್ಲ ಇದಿರುಗೊಳ್ಳಲು ಸ್ಟೇಷನ್ನಿನಲ್ಲಿ ಕಾದಿದ್ದರು ಅವರ ಆಗಮನವನ್ನು ಬಹಳ ರಹಸ್ಯವಾಗಿಡಲಾಗಿತ್ತು ಆದರೂ ಲಂಡನ್ ನಾಗರಿಕರು ಬಹಳ ಮಂದಿ ಊಹೆಯಮೇಲೆ ಸ್ಟೇಷನ್ನಿಗೆ ಬಂದಿದ್ದರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಕಾಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಫೆಬ್ರವರಿ ೧೯೪೩ [ಸಂಚಿಕೆ ೪೫

ಉಪವಾಸವ್ರತದ ಪ್ರಯೋಜನಗಳು

ಪೂರ್ವಕಾಲದಲ್ಲಿ ನಮ್ಮ ಭರತಖಂಡದಲ್ಲಿ ಈ ಕೆಳಗೆ ಕಾಣಿಸಿದ ಅನೇಕ ಕಾರಣಗಳಿಗಾಗಿ ಉಪವಾಸವ್ರತಗಳು ವಿಧಿಸಲ್ಪಟ್ಟಿವೆ

1 ಅಸ್ವಸ್ಥತೆಯನ್ನು ಗುಣಪಡಿಸುವುದು ಮೊದಲನೆಯದು

2 ವೃದ್ಧರನ್ನು ಯುವಕರಂತೆ ಮಾಡಿ ಅವರ ದೇಹಬಲವನ್ನೂ, ದೇಹಾರೋಗ್ಯವನ್ನೂ ಕಾಪಾಡುವುದು ಎರಡನೆಯದು

3 ಕೆಟ್ಟದಾರಿಯಲ್ಲಿರುವವರನ್ನು ತಿದ್ದಿ ಅವರನ್ನು ಒಳ್ಳೇ ಮಾರ್ಗಕ್ಕೆ ತರುವಂತೆ ಅವರ ಮನಸ್ಸನ್ನು ಸಂಸ್ಕರಿಸಿ, ಜಿತೇಂದ್ರಿಯರನ್ನಾಗಿ ಮಾಡುವುದು ಮೂರನೇಯದು

4 ಜನರಲ್ಲಿ ಒಳ್ಳೇ ನಡತೆಯನ್ನು ವೃದ್ಧಿಗೊಳಿಸಿ, ಅವರನ್ನು ನೀತಿವಂತರನ್ನಾಗಿ ಮಾಡಿ ಅವರ ಸದ್ಗತಿಗೆ ದಾರಿಯನ್ನು ಕಲ್ಪಿಸುವುದು ನಾಲ್ಕನೆಯದು

ಹೀಗೆ ಹಲವು ಬಗೆಯ ಉದ್ದೇಶಗಳನ್ನು ಮನಸ್ಸಿನಲ್ಲಿಟ್ಟುಕೊಂಡೇ ನಮ್ಮ ಪೂರ್ವಿಕರು ಉಪವಾಸವೆಂಬುದೊಂದು ಪವಿತ್ರ ವ್ರತವನ್ನು ಏರ್ಪಡಿಸಿದರು

ಉಪವಾಸವೆಂದರೇನು? ಜಠರಾಗ್ನಿಶಕ್ತಿ ತಕ್ಕಷ್ಟು ವಿಶ್ರಾಂತಿ ದೊರೆಯುವುದಕ್ಕಾಗಿಯೂ, ದೇಹದಲ್ಲಿ ಜೀರ್ಣವಾಗದೆ ನಿಂತುಹೋದ ಆಹಾರಶೇಷಗಳು ಜಠರಾಗ್ನಿಯಿಂದ ದಗ್ಧವಾಗುವಂತೆ ಮಾಡುವುದಕ್ಕಾಗಿಯೂ ನಿಯತಕಾಲಕ್ಕೆ ಹೊಟ್ಟೆಗೆ ಆಹಾರವನ್ನು ಕೊಡದೆ ತಡೆಯುವುದೇ ಉಪವಾಸವೆನಿಸುವುದು ಹೀಗೆ ಆಹಾರವನ್ನು ಬಿಟ್ಟು ಉಪವಾಸವಿರುವ ಕಾಲದಲ್ಲಿ, ದೇಹದೊಳಗಿನ ಸ್ನಾಯುಗಳಲ್ಲಿರುವ ಪೋಷಣವಸ್ತುಗಳನ್ನೇ ಗ್ರಹಿಸಿ ದೇಹವು ಜೀವಿಸುತ್ತಿರುವುದು ಆದರೆ ಈ ಪೋಷಣದ್ರವ್ಯಗಳೇ ಎಂದೆಂದಿಗೂ ಒದಗಿಬರತಕ್ಕವಲ್ಲ ಕಾಲಕ್ರಮದಿಂದ ಅದರಲ್ಲಿರುವ ಸಾರವೆಲ್ಲ ಶೋಷಿಸುತ್ತ ಬಂದು, ಆ ಮೇಲೆ ಜೀವಧಾರಣೆಗೆ ಮಾರ್ಗವಿಲ್ಲದೆ ಹೋಗುವುದು ಆದುದರಿಂದಲೇ ಬಹುದಿವಸಗಳವರೆಗೆ ಉಪವಾಸವಿರುವುದು ಸಾಧ್ಯವಲ್ಲ

ಮೇಲೆ ಹೇಳಿದ ಪೋಷಣದ್ರವ್ಯಗಳು ದೇಹದಲ್ಲಿರುವವರೆಗೆ ಮಾತ್ರವೇ ಶರೀರವು ಉಳಿಯಬಲ್ಲುದು ಆದರೆ, ಹೀಗೆ ಆಹಾರವಿಲ್ಲದುದರಿಂದ ದೇಹಕ್ಕೆ ವ್ಯಾಧಿಗಳೇನೂ ಬರುವ ಸಂಭವವಿಲ್ಲ ಈ ವಿಷಯವನ್ನೆಲ್ಲ ನಮ್ಮ ಹಿರಿಯರು ಎಷ್ಟೋ ಪುರಾತನಕಾಲದಿಂದ ತಿಳಿದಿದ್ದವರಿಂದಲೇ ಅವರು ಅನೇಕಸಂದರ್ಭಗಳಲ್ಲಿ ಉಪವಾಸವನ್ನು ನಿರ್ಬಂಧಪೂರ್ವಕವಾಗಿ ವಿಧಿಸಿರುವರು ನವೀನ ವೈದ್ಯಶಾಸ್ತ್ರಪ್ರಕಾರವಾಗಿ ನೋಡಿದರೆ, ಈ ಸೂಕ್ಷ್ಮವಿಚಾರಗಳೆಲ್ಲವೂ ಈಚೀಚೆಗೆ ಹೊಸದಾಗಿ ಕಂಡುಹಿಡಿಯಲ್ಪಟ್ಟಂತೆಯೇ ತೋರುವುದು

'ಲಂಘನಂ ಪರಮೌಷಧಂ' ಎಂಬ ನಾಣ್ಣುಡಿಯು ನಮ್ಮಲ್ಲಿ ಸುಪ್ರಸಿದ್ಧವಾಗಿದೆ ಔಷಧಗಳೆಲ್ಲಕ್ಕಿಂತಲೂ ಉಪವಾಸವೇ ಶ್ರೇಷ್ಠವಾದುದೆಂದು ಇದರ ಅರ್ಥವು ಅಸಂಬದ್ಧವಾದ ಆಹಾರಗಳೂ ಅಧಿಕ ಪಾನಗಳೂ, ಜನ್ಮಾಂತರಕರ್ಮಗಳಲ್ಲಿ ಸಿಕ್ಕಿದುದನ್ನು ತಿನ್ನುವುದೂ ಆಹಾರಗಳನ್ನು ಚೆನ್ನಾಗಿ ಅಗಿಯದೆ ನುಂಗುವುದೂ, ಇವೆಲ್ಲ ಕ್ರಮವಾಗಿ ನಡೆಯಬೇಕಾದ ದೇಹದ ಯಂತ್ರಗಳನ್ನು ಕೆಡಿಸಿಬಿಡುವುವು ಇದರಿಂದ ಮೊದಲು ದೇಹದಲ್ಲಿ ಒಂದು ಬಾಧೆಯು ತೋರುವುದು ವಾಯು ಕ್ರಮವಾಗಿ ಅದರಿಂದ ಜೀರ್ಣಾವಯವಗಳೆಲ್ಲವೂ ದುರ್ಬಲವಾಗಿ ಜಠರದಲ್ಲಿ ಹಳೆಯ ಆಹಾರಶೇಷಗಳು ಜೀರ್ಣವಾಗದೆ ನಿಲ್ಲುವುವು ಹೀಗೆ ನಿಂತ ಆಹಾರಶೇಷಗಳಲ್ಲಿ ವಾಯುವು ಉತ್ಪನ್ನವಾಗುವುದು ಆ ವಾಯುವಿನಲ್ಲಿ ಅನೇಕಭಾಗಗಳು ಅಪಾನವಾಯುವಾಗಿ ಹೊರಗೆ ಬಂದರೂ ಉಳಿದ ಸ್ವಲ್ಪಾಂಶದ ವಾಯುವು ದೇಹಗಳಲ್ಲಿ ವ್ಯಾಪಿಸಿ ವ್ಯಾಧಿಗೆ ಕಾರಣವಾಗುವುದು ಹೀಗೆ ಬಹುಕಾಲದಿಂದ ನಡೆದುಬಂದರೆ ವ್ಯಾಧಿಯು ಬಲಿತು, ಆ ಮನುಷ್ಯನು ಜೀವಾವಧಿ ಕಷ್ಟಪಡುತ್ತ ಕೊನೆಗೆ ಅದರಿಂದಲೇ ಸಾಯುವನು ನೆಗಡಿ ಜ್ವರ ಮುಂತಾದ ಸೂಕ್ಷ್ಮರೋಗಗಳು ಕಂಡೊಡನೆ ಆಹಾರವನ್ನು ತ್ಯಜಿಸಿ ಲಂಘನವಿರಬೇಕೆಂಬುದು ನಮ್ಮ ಆಯುರ್ವೇದಶಾಸ್ತ್ರದ ಒಂದು ಮುಖ್ಯ ವಿಧಿ

ನಾವು ದೂರದೃಷ್ಟಿಯಿಂದ ಚೆನ್ನಾಗಿ ಯೋಚಿಸಿ ನೋಡಿದರೆ, ಈ ಲಂಘನದ ವಿಧಿಯು ಒಳ್ಳೆಯದೆಂದೇ ಏರ್ಪಡುವುದು ಏಕೆಂದರೆ, ಮನುಷ್ಯನು ಒಂದು ಕೆಲಸವನ್ನು ಮಾಡಲು ತಕ್ಕಷ್ಟು ತ್ರಾಣವು ಅವನ ದೇಹದಲ್ಲಿ ಇಲ್ಲದಿರುವಾಗ, ಅವನಿಗೆ ಮೇಲೆ ಮೇಲೆ ಅದೇ ಕೆಲಸವನ್ನು ಮಾಡಲು ನಿರ್ಬಂಧಪಡಿಸುವುದರಲ್ಲಿ ಫಲವೇನೆಂಬುದನ್ನು ಯೋಚಿಸಿ ಅದರಂತೆಯೇ ಜೀರ್ಣಾಂಗಕ್ಕೆ ಹೊರಲಾರದಷ್ಟು ಭಾರವನ್ನು ಹೊರಿಸಿದರೆ, ಅದು ಹೇಗೆ ತಾನೇ ವಿಶ್ರಾಂತಿಯಿಲ್ಲದೆ ಕೆಲಸಮಾಡಬಲ್ಲುದು? ಯೂರೋಪಿನಲ್ಲಿ ರೋಗಚಿಕಿತ್ಸೆಗಾಗಿ ಅಲ್ಲಲ್ಲಿ ಉಪವಾಸದ ಆಸ್ಪತ್ರೆಗಳನ್ನೇರ್ಪಡಿಸಿ, ರೋಗಿಗಳಿಗೆ ಉಪವಾಸರೂಪವಾದ ಚಿಕಿತ್ಸೆಗಳನ್ನೇ ನಡೆಸುತ್ತಿರುವರು ಮುಖ್ಯವಾಗಿ ಅಲ್ಲಿ ವಾತರೋಗಗಳಿಂದಲೂ, ಸ್ಥೂಲಶರೀರ ಮುಂತಾದುವುಗಳಿಂದಲೂ ಬಾಧೆಪಡತಕ್ಕ ದೀರ್ಘಕಾಲದ ರೋಗಿಗಳಿಗೆ ಚಿಕಿತ್ಸೆಯು ನಡೆದು, ಅದರಿಂದ ಅವರಿಗೆ ಆಶ್ಚರ್ಯಕರವಾದ ಗುಣವು ಕಾಣುತ್ತಿದೆ ಅನ್ಯದೇಶಗಳಲ್ಲಿ ಈಗಾಗಲೇ ಪ್ರಚಾರಕ್ಕೆ ಬರುತ್ತಿರುವ ಇಂತಹ ಚಿಕಿತ್ಸೆಯನ್ನು ನಮ್ಮ ಪೂರ್ವಿಕರು ಎಷ್ಟೋ ಕಾಲಕ್ಕೆ ಹಿಂದೆಯೇ ಕಂಡುಹಿಡಿದು, ಆಚರಣೆಗೆ ತಂದಿರುವರೆಂಬುದು ಇದರಿಂದ ಸ್ಪಷ್ಟವಾಗುವುದು ಇದರಿಂದಲೇ ನಮ್ಮವರು ಅನೇಕ ವ್ಯಾಧಿಗಳಿಗೆ "ಲಂಘನವೇ ಪರಮೌಷಧ" ವೆಂದು ನಿರ್ಣಯಿಸಿರುವರು

ಉಪವಾಸವೆಂಬುದು ಕೇವಲ ರೋಗಚಿಕಿತ್ಸೆಗಾಗಿ ಮಾತ್ರವೇ ಅಲ್ಲ. ದೇಹಾರೋಗ್ಯವನ್ನೂ, ಯೌವನವನ್ನೂ ಕಾಪಾಡುವುದಕ್ಕೂ ಕೂಡ ಉತ್ತಮವಾಗುವವು ಆಗಾಗ ಉಪವಾಸಮಾಡುವುದರಿಂದ ಮೇಲ್ಕಂಡ ಗುಣಗಳನ್ನು ಪಡೆಯಬಹುದು ಕೊನೆಯಪಕ್ಷ ಎರಡು ವಾರಗಳಿಗೊಂದಾವರ್ತಿಯಾದರೂ ಪ್ರತಿಯೊಬ್ಬನೂ ಉಪವಾಸವಿರಬೇಕೆಂದೇ ನಮ್ಮ ಪೂರ್ವಿಕರು ಏಕಾದಶೀವ್ರತವನ್ನು ನಿಯಮಿಸಿರುವರು

ತಿಂಗಳಿಗೆ ಒಂದು ದಿನವಾಗಲಿ ಎರಡು ದಿನವಾಗಲಿ ಪೂರ್ಣವಾಗಿ ಉಪವಾಸವಿರಬೇಕು ಅಲ್ಲದೇ ಆಗಾಗ ಒಂದು ಹೊತ್ತಿನ ಆಹಾರವನ್ನು ಬಿಟ್ಟು, ಒಪ್ಪೊತ್ತಿನ ಉಪವಾಸವನ್ನು ಮಾಡಬೇಕು ದಿನಕ್ಕೆ ಮೂರು ಸಾರಿ ಭೋಜನಮಾಡುವುದಕ್ಕಿಂತಲೂ ಎರಡು ಹೊತ್ತಿನ ಊಟವೇ ದೇಹಕ್ಕೆ ಲವಲವಿಕೆಯನ್ನೂ ಸೌಖ್ಯವನ್ನೂ ಕೊಡುವುದೆಂದು ಅನುಭವದಿಂದ ಹೇಳುವರು

ಈ ಹೇಳಿಕೆಯು ವಾಸ್ತವವೇ! ಮುಖ್ಯವಾಗಿ ನಲವತ್ತೈದು ವಯಸ್ಸು ಕಳೆದಮೇಲೆ ದಿನಕ್ಕೆರಡೇ ಸಾರಿ ಭೋಜನಮಾಡಬೇಕಲ್ಲದೆ ಅದಕ್ಕೆ ಮೇಲೆ ಭುಂಜಿಸಬಾರದು ನಮ್ಮ ಮತನಿಯಮದಂತೆ ನಾವು ತಿಂಗಳಿಗೆ ಒಂದೆರಡು ದಿನಗಳು ಎಂದರೆ, ಏಕಾದಶೀ ದಿನದಲ್ಲಿ ಪೂರ್ಣೋಪವಾಸವನ್ನು ಮಾಡಬೇಕು ಅಮಾವಾಸ್ಯೆ, ಸಂಕ್ರಮಣ ಮುಂತಾದ ಪಿತೃದಿನಗಳಲ್ಲಿ ಒಪ್ಪೊತ್ತಿನ ಉಪವಾಸವು ವಿಧಿಸಲ್ಪಟ್ಟಿದೆ ಇದಲ್ಲದೆ ಶನಿವಾರ, ಕೃತ್ತಿಕೆ ಮುಂತಾದ ದಿನಗಳಲ್ಲಿ ದೇವಪ್ರೀತಿಗಾಗಿ ಒಪ್ಪೊತ್ತನ್ನು ಮಾಡುವವರೆಷ್ಟೋ ಮಂದಿಯುಂಟು ಇದರಲ್ಲಿ ಗ್ರಹಿಸಬೇಕಾದ ಒಂದು ಸೂಕ್ಷ್ಮಾಂಶವುಂಟು ದೇಹದಲ್ಲಿ ಆರೋಗ್ಯವಿಲ್ಲದೆ ರೋಗಾದಿಗಳಿಂದ ಪೀಡಿತರಾದವರು, ತಾವು ಇಷ್ಟದೇವತಾಪ್ರೀತಿಗಾಗಿ ಕೆಲವು ವಾರಗಳಲ್ಲಿ ಒಪ್ಪೊತ್ತಿನ ಉಪವಾಸವನ್ನು ನಡೆಸುವ ಹಾಗೆ ಪ್ರಾರ್ಥನೆಮಾಡಿಕೊಳ್ಳುವರು ಹಾಗೆ ಕೆಲವು ದಿನಗಳು ತಪ್ಪದೆ ಅನುಸರಿಸುತ್ತ ಬಂದಮೇಲೆ ಅವರಿಗೆ ರೋಗಬಾಧೆಗಳೆಲ್ಲವೂ ನಿವೃತ್ತಿಯಾಗಿ ಆರೋಗ್ಯವಂತರಾಗುವುದನ್ನು ನಾವು ನೋಡಿರುವೆವು ಇದಕ್ಕೆ ಆ ಒಪ್ಪೊತ್ತಿನ ಉಪವಾಸದಿಂದ ನಮ್ಮಲ್ಲಿ ಒಲಿದ ದೇವರ ಅನುಗ್ರಹವೇ ಕಾರಣವೆಂಬ ನಂಬಿಕೆಯು ಬಹಳ ಮಟ್ಟಿಗೆ ಜನಗಳ ಮನಸ್ಸಿನಲ್ಲಿದ್ದರೂ, ಅವರ ಆರೋಗ್ಯಕ್ಕೆ ಕ್ಲುಪ್ತವಾದ ಅವರ ಉಪವಾಸದಿಂದ ಸಹಜವಾಗಿ ಕ್ರಮಪಟ್ಟ ದೇಹಾರೋಗ್ಯವೇ ಕಾರಣವೆಂಬುದನ್ನು ನಾವು ಒಪ್ಪಿಕೊಳ್ಳಬೇಕು

ಈಗ ಹಿಂದುಗಳು ಉಪವಾಸವೆಂದು ಹೇಳಿಕೊಂಡು ನಡೆಸುವ ವ್ರತಗಳು ಸರಿಯಾದ ಉಪವಾಸಗಳೆನಿಸುವುದಿಲ್ಲ ಅವನ್ನು ಅಸಂಬದ್ಧವಾದ ಉಪವಾಸವೆಂದೇ ಹೇಳಬೇಕು ಇಂತಹ ಉಪವಾಸಗಳನ್ನು ಕುರಿತು ಡಾಕ್ಟರ್ ಲಿಯೋನಾರ್ಡ್ ವಿಲಿಯಮ್ಸ್ ಎಂಬವರು ತಮ್ಮ "ಸೈನ್ಸ್ ಎಂಡ್ ಆರ್ಟ್ ಆಫ್ ಲಿವಿಂಗ್" ಎಂಬ ಪುಸ್ತಕದಲ್ಲಿ ಈ ಕೆಳಗೆ ಕಂಡಂತೆ ಖಂಡನಮಾಡಿ ಬರೆದಿರುವರು

(ಆಚೆಯ ಪುಟವನ್ನು ನೋಡಿ)

ಶ್ರೀಜಗದ್ಗುರು ರೇಣುಕಾಚಾರ್ಯರ
ಶಿಲಾಮೂರ್ತಿಪ್ರತಿಷ್ಠಾಮಹೋತ್ಸವ
ಕೊಟ್ಟೂರು



ಈಗ ಸ್ಥಾಪಿತವಾಗಿರುವ ಶ್ರೀಜಗದ್ಗುರು ರೇಣುಕಾಚಾರ್ಯರ ಶಿಲಾಮೂರ್ತಿಯ ಭಾವಚಿತ್ರ.

ಬಳ್ಳಾರಿ ಜಿ|| ಕೊಟ್ಟೂರು ನಗರದಲ್ಲಿ ಸುಪ್ರಸಿದ್ಧ ಮನೆತನದವರಾಗಿರುವ ವೇ|| ವೀರ ಘಟ್ಟಿನ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರು ಮತ್ತು ಅವರ ಅಣ್ಣನವರಾದ ಚನ್ನವೀರಪ್ಪಯ್ಯನವರು, ಇದೇ ಚಿತ್ರಭಾನುಸಂವತ್ಸರದ ಮಾಘ ಶು|| ೪ (ತಾ|| ೮-೨-೪೩) ಸೋಮವಾರ ದಿವಸ ತಮ್ಮ ಮನೆಯಾರಾಧ್ಯರಾದ ಶ್ರೀಜಗದ್ಗುರು ರೇಣುಕಾಚಾರ್ಯರ ದಿವ್ಯವಿಗ್ರಹವನ್ನು ಆಚಾರ್ಯ ಪ್ರತಿಷ್ಠಾವಿಧಿಗನುಸಾರವಾಗಿ ಅಸಾಧಾರಣ ವೈಭವದೊಡನೆ ಪ್ರತಿಷ್ಠಾಪಿಸಿದರು ಸದರಿಯವರ ಆಮಂತ್ರಣದ ಮೇರೆಗೆ ಈ ಮಹಾಕಾರ್ಯಕ್ಕಾಗಿ ಶ್ರೀಮದುಜ್ಜಯಿನೀ ಜಗದ್ಗುರುಗಳವರು ಆಗಮಿಸಿದ್ದರಲ್ಲದೆ, ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ, ಆಸ್ಥಾನವಿದ್ವಾನ್ ವೇ|| ಪಂ|| ಶಂಕರಶಾಸ್ತ್ರಿಗಳವರು ಆಸ್ಥಾನವಿದ್ವಾನ್ ವೇ|| ಪಂ|| ಬಸವಲಿಂಗಶಾಸ್ತ್ರಿಗಳವರು, ಹಸುಗೋಡು, ಜಮಖಂಡಿ, ಸೂಡಿ ತೆಕ್ಕಲಕೋಟೆ, ಮೊದಲಾದ ಗ್ರಾಮಗಳ ಪಟ್ಟಚರಾಧಿಕಾರಿಗಳೂ ಅನೇಕಜನಭಕ್ತಮಾಹೇಶ್ವರರೂ ಆಗಮಿಸಿದ್ದರು ಮಾಘ ಶು|| ೧ ಶುಕ್ರವಾರ ದಿವಸ ಶ್ರೀಮದುಜ್ಜಯಿನೀ ಜಗದ್ಗುರುಗಳವರ ಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿತು ಬಳಿಕ ಅದೇ ದಿವಸ ಈ ಮಹಾಕಾರ್ಯಕ್ಕೆ ಅಂಗಭೂತವಾದ ಗಣಪತಿ ಪೂಜಾ ಸ್ವಸ್ತಿವಾಚನಾದಿ ಕಾರ್ಯಗಳು ನೆರವೇರಿದವು ಶು|| ೨ ಶನಿವಾರ ದಿವಸ ಜಲಾಧಿವಾಸ, ಧಾನ್ಯಾಧಿವಾಸಾದಿ ಕಾರ್ಯಗಳೂ, ಶು|| ೩ ಭಾನುವಾರ ಸಹಸ್ರಕುಂಭಾಭಿಷೇಕ ರುದ್ರಾಭಿಷೇಕಾದಿ ಕಾರ್ಯಗಳೂ, ಶು|| ೪ ಸೋಮವಾರ ದಿವಸ ಷಡಧ್ವಶೋಧನ, ಅಷ್ಟತ್ರಿಂಶತ್ಕಲಾನ್ಯಾಸ, ಪ್ರಾಣಪ್ರತಿಷ್ಠಾ, ರುದ್ರಾಭಿಷೇಕಾದಿ ಕಾರ್ಯಗಳೂ ಪ್ರತಿಷ್ಠಾವಿಧಿಗನುಸಾರವಾಗಿ ನೆರವೇರಿದವು ಅನಂತರ ಉಜ್ಜಯಿನೀ ಜಗದ್ಗುರುಗಳವರ ಪಾದಪೂಜಾ, ಮಾಹೇಶ್ವರ ಬ್ರಾಹ್ಮಣಸಮಾರಾಧನಾದಿಗಳು ಅಭೂತಪೂರ್ವ ವೈಭವದೊಡನೆ ನೆರವೇರಿದವು ಬಳಿಕ ೩ 10 ಸಾವಿರ ಜನಗಳಿಗೆ ಮಿಷ್ಟಾನ್ನ ಭೋಜನವು ಮಾಡಿಸಲ್ಪಟ್ಟಿತು

ಅಸಾಧಾರಣಗುರುಭಕ್ತಿಸಂಪನ್ನರೂ ಗುರುಪೀಠಾಭಿಮಾನಿಗಳೂ, ಆಗರ್ಭಶ್ರೀಮಂತರೂ ಆಗಿರುವ ವೇ|| ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ಶ್ರೀಜಗದಾಚಾರ್ಯರ ಮೂರ್ತಿಪ್ರತಿಷ್ಠೆಗಾಗಿ ಸುಮಾರು 5,000 ರೂ ಗಳ ವ್ಯಯದಿಂದ ಅತ್ಯಂತಸುಂದರವಾದ ಒಂದು ದಿವ್ಯವಾದ ಶಿಲಾಮಠವನ್ನು ಕಟ್ಟಿಸಿ ಆ ದಿವ್ಯಮಂದಿರದಲ್ಲಿ ಶ್ರೀಜಗದಾಚಾರ್ಯರ ಮೂರ್ತಿ ಪ್ರತಿಷ್ಠಾಪನೆ ಮಾಡಿರುವದನ್ನು ನೋಡಿದರೆ ಇವರ ಪುಣ್ಯಕ್ಕೆ ಎಣೆಯೇ ಇಲ್ಲವೆಂದು ಸಾರಿಸಾರಿ ಹೇಳಬಹುದಾಗಿದೆ ವೇ|| ಚನ್ನವೀರಪ್ಪಯ್ಯನವರು, ತಮ್ಮ ಬುದ್ಧಿ ಪ್ರತಿಭಾ ವಿಶೇಷದಿಂದ ಪಂಪಾಕ್ಷೇತ್ರದಲ್ಲಿರುವ ಪುರಾತನ ಮಂದಿರಗಳ ಮಾದರಿಗನುಸಾರವಾಗಿ ಈ ಭವ್ಯಮಂದಿರವನ್ನು ನಿರ್ಮಿಸಿರುವದನ್ನು ನೋಡಿ ಸರ್ವರೂ ಆನಂದತುಂದಿಲರಾಗಿರುವರು ಇಂತಹ ಸುಂದರ ದೇವಮಂದಿರಗಳು ಪುರಾತನಪದ್ಧತಿಗನುಸಾರವಾಗಿ, ಈ ಕಾಲದಲ್ಲಿ ನಿರ್ಮಿತವಾಗಬೇಕಾದರೆ, ಇದು ಕರ್ತೃಗಳ ಪುಣ್ಯಪ್ರಭಾವವೆಂದೇ ಹೇಳಬೇಕಾಗಿದೆ ಚನ್ನವೀರಪ್ಪಯ್ಯನವರಿಗೆ ಪುತ್ರಸಂತಾನವಿಲ್ಲದುದರಿಂದ ಕೈ|| ದೊಡ್ಡವೀರಪ್ಪಯ್ಯನವರ ಅಭಿಪ್ರಾಯಾನುಸಾರವಾಗಿ ಈ ಭವ್ಯಮಂದಿರವು ನಿರ್ಮಿತವಾಗಿರುವದು ಈ ಮಂದಿರದಲ್ಲಿ ಶ್ರೀಜಗದಾಚಾರ್ಯರ ಎಡಬಲಗಳಲ್ಲಿ ಶ್ರೀವೀರಭದ್ರಮೂರ್ತಿಯ ಪ್ರತಿಷ್ಠೆಯೂ ತ್ರಿಕೂಟೇಶ್ವರಮೂರ್ತಿಯ ಪ್ರತಿಷ್ಠೆಯೂ ಆಗಿರುವದರಿಂದ ಈ ಭವ್ಯಮಂದಿರಕ್ಕೆ ಅತ್ಯಂತ ಶೋಭೆಯುಂಟಾಗಿರುವದು ಈ ತ್ರಿಮೂರ್ತಿಗಳ ಪೂಜಾದಿ ಕಾರ್ಯಗಳು ಆಚಂದ್ರಾರ್ಕವಾಗಿ ನಡೆಯಲೆಂಬ ಸದುದ್ದೇಶದಿಂದ ಪ್ರತಿಷ್ಠಾಪಕರು ಪೂಜಾವಿನಿಯೋಗಕ್ಕಾಗಿ ಭೂಮಿಯನ್ನು ದಾನಮಾಡಿರುವದು ಅತ್ಯಂತ ಸ್ತೋತ್ರಾರ್ಹವಾದ ವಿಷಯವಾಗಿದೆ ಇವರು ಭರತಖಂಡದಲ್ಲಿ ಪ್ರಥಮತಃ ಆಚಾರ್ಯಮೂರ್ತಿಪ್ರತಿಷ್ಠೆಯನ್ನು ಮಾಡಿ ಮುಂದೆ ಮಾಡತಕ್ಕವರಿಗೆ ಮಾರ್ಗದರ್ಶಕರಾಗಿರುವದು ಅತ್ಯಂತ ಸ್ತೋತ್ರಾರ್ಹವಾದುದು.

ಶು|| ೫ ಮಂಗಳವಾರ ದಿವಸ ರಾತ್ರಿ ಉಜ್ಜಯಿನೀ ಜಗದ್ಗುರುವರ ಅಧ್ಯಕ್ಷತೆಯಲ್ಲಿ ಈ ಮಹಾಕಾರ್ಯಾಂಗಭೂತವಾಗಿ ಮಹಾಸಭೆಯೊಂದು ನೆರವೇರಿತು. ಈ ಸಭೆಗೆ ಅನೇಕಜನ ಸರಕಾರಿ ಪ್ರಮುಖಾಧಿಕಾರಿಗಳೂ, ಪುರಪ್ರಮುಖರೂ, ಸ್ಥಳಪರಸ್ಥಳಗಳ ಸಾವಿರಾರು ಜನ ಭಕ್ತಮಾಹೇಶ್ವರರೂ ಆಗಮಿಸಿ ವಿಶೇಷವಾದ ಶೋಭೆಯನ್ನುಂಟುಮಾಡಿದ್ದರು ಪ್ರಾರಂಭದಲ್ಲಿ ಕೊಟ್ಟೂರು ಕೆಂಭಾವಿಮಠದ ವೇ|| ಚನ್ನಬಸವಶಾಸ್ತ್ರಿಗಳವರು ಜಗದಾಚಾರ್ಯರ ಸ್ತೋತ್ರಗಳನ್ನೂ ಕೈ|| ಉಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರ ಸ್ತೋತ್ರಗಳನ್ನೂ ಪಾಡಿ ಸರ್ವರನ್ನೂ ಸಂತೋಷಭರಿತರನ್ನಾಗಿ ಮಾಡಿದರು ಆಮೇಲೆ ವೇ|| ಚನ್ನವೀರಪ್ಪಯ್ಯನವರು ತಾವು ಈ ಭವ್ಯಮಂದಿರವನ್ನು ನಿರ್ಮಿಸಿದ ಕಾರಣವನ್ನೂ ಶ್ರೀರೇಣುಕಾಚಾರ್ಯರ ಮಹಿಮಾವಿಶೇಷಗಳನ್ನೂ ಹೇಳಿ ಸರ್ವರನ್ನೂ ಸಂತೋಷಪಡಿಸಿದರು ತರುವಾಯ ವೇ|| ಪಂ|| ಶಂಕರಶಾಸ್ತ್ರಿಗಳವರು ಮತ್ತು ವೇ|| ಪಂ|| ಬಸವಲಿಂಗಶಾಸ್ತ್ರಿಗಳವರು ಗುರುಮಹತ್ವದ ಬಗ್ಗೆ ಮನೋಹರವಾಗಿ ಭಾಷಣಮಾಡಿದರು ಬಳಿಕ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಲೀಲಾವೈಭವವನ್ನೂ ಹಿಮಾಲಯದಿಂದ ಕನ್ಯಾಕುಮಾರಿಯ ವರಗೂ ಪ್ರತಿಷ್ಠಾಪಿತರಾಗಿರುವ ಪಂಚಪೀಠಗಳ ಪ್ರಾಚೀನತೆಯನ್ನೂ ಶ್ರೀರೇಣುಕಾಚಾರ್ಯರು ಕೃತ, ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ದಿವ್ಯದೇಹಧಾರಿಗಳಾಗಿ ಅವತರಿಸಿ ಅಗಸ್ತ್ಯ, ವಿಭೀಷಣ, ಗೋರಕ್ಷ, ವಿಕ್ರಮ ಶಂಕರಾಚಾರ್ಯ ಮೊದಲಾದವರನ್ನು ಉದ್ಧರಿಸಿದ ವಿಷಯವನ್ನೂ ಪ್ರಮಾಣಪುರಸ್ಸರವಾಗಿ ಪ್ರತಿಪಾದಿಸಿದರು ಪಂಡಿತರ ಭಾಷಣದ ಮಹತ್ವವನ್ನು ಕೇಳಿ ಪರಮತೀಯರಾದ ಸರಕಾರಿ ಅಧಿಕಾರಿವರ್ಗದವರೂ ಸಭಿಕಮಹಾಶಯರೂ ಪರಮಾನಂದಭರಿತರಾಗಿ, ಅಸಾಧಾರಣ ಮಹಿಮಾನ್ವಿತರಾದ ಆಚಾರ್ಯಪುಂಗವರ ವಿಷಯದಲ್ಲಿ ತಮ್ಮ ನೈಜವಾದ ಭಕ್ತಿಭಾವವನ್ನು ವ್ಯಕ್ತಪಡಿಸಿದರು ಈ ರೀತಿಯಾಗಿ ಸಭಾಕಾರ್ಯವು ಅತ್ಯುತ್ಸಾಹದಿಂದ ನೆರವೇರಿದ ಮೇಲೆ ಜಗದಾಚಾರ್ಯರ ಮಂಗಲದೊಡನೆ ಸಮಾಪ್ತಿಗೊಂಡಿತು

ವೇ|| ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ಅತಿತರಸಾಧಾರಣವಾದ ಭಕ್ತ್ಯುದ್ರೇಕದಿಂದ ಅಪಾರವಾದ ಧನವನ್ನು ವ್ಯಯಮಾಡಿ ತಮ್ಮ ನಾಮವು ಚಿರಕಾಲಿನವಾಗಿ ಈ ಧರಾಮಂಡಲದಲ್ಲಿ ವಿರಾಜಿಸುವಂತೆ ಮಾಡಿಕೊಂಡಿರುವದು ಇವರ ಪೂರ್ವಜನ್ಮಕೃತಪುಣ್ಯವಿಶೇಷವೆಂದೇ ಹೇಳಬೇಕಾಗಿದೆ ವೇ|| ಸಣ್ಣವೀರಪ್ಪಯ್ಯನವರ ಪುತ್ರರಾಗಿರುವ ಚನ್ನಬಸವಪ್ಪಯ್ಯನವರಿಗೂ, ಅವರ ಮೂರುಜನ ಮಕ್ಕಳಿಗೂ ಕೈಲಾಸವಾಸಿ ದೊಡ್ಡ ವೀರಪ್ಪಯ್ಯನವರ ಪೌತ್ರ ಚಿ|| ಸದ್ಯೋಜಾತಮೂರ್ತಿಗೂ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಸಕಲಸಂಪತ್ಸಮೃದ್ಧಿಯನ್ನುಂಟುಮಾಡಿ ಅವರ ಮೂಲಕ ಸದರಿ ದೇವಾಲಯದ ಪೂಜಾವಿನಿಯೋಗಾದಿಗಳು ಸರ್ವತೋಮುಖವಾಗಿ ನಡೆಯುವಂತಾಗಲೆಂದು ಆ ಜಗನ್ನಿಯಾಮಕನನ್ನು ಅತ್ಯಂತ ಭಕ್ತಿಭಾವದಿಂದ ಭಜಿಸುತ್ತೇವೆ

ರಷ್ಯನರ ಆಕ್ರಮಣ

ರಷ್ಯನರು ಕರ್ಸ್ಕ್, ಓರೆಲ್ ಮಧ್ಯದಲ್ಲಿರುವ ರಂಗದಲ್ಲಿ ಜರ್ಮನ್ ರಕ್ಷಣ ಸಾಲನ್ನು ಭೇದಿಸಿ, ಮಗ್ಗಲಿನಿಂದ ಸೈನ್ಯದ ಹಿಂಬದಿಯನ್ನು ಸೇರಿ ಪ್ರಧಾನ ಸಂಪರ್ಕ ಮಾರ್ಗಗಳನ್ನು ಕತ್ತರಿಸಿದ್ದಾರೆಂದು ಯುದ್ಧರಂಗದಿಂದ ಬಂದಿರುವ ವಾರ್ತೆ ತಿಳಿಸುತ್ತದೆ ಓರೆಲ್ ಕಡೆ ರಷ್ಯನ್ ದಳಗಳು ಭರದಿಂದ ನುಗ್ಗುತ್ತಿವೆ ಖಾರ್ಕೋವ್ ಪಕ್ಕದಲ್ಲಿರುವ ಇನ್ನೊಂದು ರಂಗದಲ್ಲಿ ಜರ್ಮನರ ಭದ್ರಸ್ಥಾನಗಳನ್ನು ಭೇದಿಸಿವೆ. ಪ್ರಧಾನ ನಗರ ಖಾರ್ಕೋವ್ ಪತನದಿಂದಾದ ನಷ್ಟವನ್ನು ಭರ್ತಿಮಾಡುವ ಉದ್ದೇಶದಿಂದ ಹಿಟ್ಲರನು ಖಾರ್ಕೋವ್ ಪಶ್ಚಿಮಕ್ಕೆ ದೊಡ್ಡ ದಳಗಳನ್ನು ನುಗ್ಗಿಸಿದ್ದಾನೆಂದೂ, ಅವು ಹೆಂಗುದೊರೆದು ಕಾದಾಡುತ್ತಿವೆಯೆಂದೂ ಸುದ್ದಿ ಬಂದಿದೆ.

ಯುದ್ಧವಾರ್ತೆ.

ಅಮೇರಿಕಾ ಸೈನ್ಯಗಳಿಗೆ ದಳಪತಿ

ಯೂರೋಪಿನ ರಣಕ್ಷೇತ್ರದಲ್ಲಿರುವ ಅಮೇರಿಕನ್ ಸೈನ್ಯಗಳಿಗೆ ಕರ್ನಲ್ ಪೆನ್ರಿಬಾರ್ ಎಂಬವರನ್ನು ಅಧಿಪತಿಯನ್ನಾಗಿ ನಿಯಮಿಸಲಾಗಿದೆ

ಭೀಕರ ಕದನವು ಪ್ರಾರಂಭವಾಯಿತು

ಬ್ರಿಟಿಷರ ೮ ನೆಯ ಸೇನೆಯು ಟ್ಯೂನಿಸ್‌ನಲ್ಲಿ ಮ್ಯಾರೆತ್ ರಕ್ಷಣವ್ಯೂಹವನ್ನು ಮುತ್ತಲು ನುಗ್ಗಿದೆ ಜರ್ಮನರು ಈಗ ಭೀಕರ ಕದನಕ್ಕೆ ಆರಂಭಿಸಿರುವರು

ಒಣಗಿದ ಬಾಳೆ ಎಲೆಗಳ ಮೇಲೆ ಮುದ್ರಣ

ಕುಂಭಕೋಣದಲ್ಲಿ ಕಾಗದದ ಅಭಾವದ ದೆಸೆಯಿಂದ ಸಿನಿಮಾ ಮತ್ತು ತಾಮುವೃಗ ಪ್ರಸಿದ್ಧ ಪತ್ರಿಕೆಗಳನ್ನು ಒಣಗಿದ ಬಾಳೆ ಎಲೆಗಳ ಮೇಲೆ ಮುದ್ರಿಸುತ್ತಿರುವರು ಇದರ ಫಲವಾಗಿ ಒಣಗಿದ ಬಾಳೆ ಎಲೆ ೧೦೦೦ಕ್ಕೆ ೧೦ ಆಣೆ ಇದ್ದದ್ದು ೪ ರೂ ಗಳಿಗೇರಿದೆ

ಶತ್ರುಹಡಗುಗಳ ನಾಶಕ್ಕೆ ರೇಡಿಯೋ ಸಹಾಯ

ರೇಡಿಯೋ ಲೊಕೇಟರ್ಸ್ ಯಂತ್ರಸಹಾಯದಿಂದ ಮಹಾಸಾಗರಗಳಲ್ಲಿ ಅಡಗಿರುವ ಶತ್ರು ನೌಕಾದಳಗಳನ್ನು ಗುರ್ತಿಸಲು ಅವಕಾಶವಾಗಿದೆ ಜಲಸ್ಥಾನಿಸಿಗೆ ಕಾಣದಿರುವ ಸಬ್‌ಮೆರಿನುಗಳನ್ನು ರೇಡಿಯೊ ಲೊಕೇಟರ್‌ಗಳು ಪತ್ತೆಮಾಡುತ್ತವೆ ಬ್ರಿಟಿಷರು ಈಗ ಈ ಸಾಧನದ ಸಹಾಯದಿಂದ ಯು ಬೋಟ್ ದಾಳಿಯನ್ನು ತಡೆಯಲು ಪ್ರಯತ್ನಿಸುತ್ತಿರುವರು

ಹಿಟ್ಲರನಿಗೆ ಭಯ

ರಷ್ಯದಿಂದ ವಿಜಯಶಾಲಿಗಳಾಗಿ ನುಗ್ಗುತ್ತಿರುವ ರಷ್ಯಾಸೈನಿಕರ ಸಹಾಯಕ್ಕಾಗಿ ಜರ್ಮನಿಯು ಗೆದ್ದಿರುವ ರಾಷ್ಟ್ರಗಳ ಜನರು ದಂಗೆಯೆದ್ದಾರೆಂಬುದಾಗಿ ಹಿಟ್ಲರನಿಗೆ ಭಯ ಬಂದಿದೆ ಆದಕಾರಣ ಹಿಟ್ಲರನು ಜರ್ಮನ್ ರೈತರೂ ಸಹ ಶಸ್ತ್ರಸಜ್ಜಿತರಾಗಿ ಸಿದ್ಧವಾಗಿರಬೇಕೆಂದು ಎಲ್ಲ ಏರ್ಪಾಡುಗಳನ್ನೂ ಮಾಡಿದ್ದಾನೆ

ಡಾ॥ ಗೋಬೆಲ್ಸರ ಹೇಳಿಕೆ

ಜರ್ಮನಿಯ ಪ್ರಚಾರ ಮಂತ್ರಿಯಾದ ಡಾ॥ ಗೋಬೆಲ್ಸ್‌ರವರು ಸಭೆಯೊಂದರಲ್ಲಿ, ಜರ್ಮನಿಯ ಪರಾಜಯ ವಿಚಾರವಾಗಿ ಈ ರೀತಿ ಮಾತನಾಡಿದರು " ಯುದ್ಧವು ಈಗ ಉತ್ಕಟಸ್ಥಿತಿಯನ್ನು ಹೊಂದಿದೆ ರಷ್ಯರಣರಂಗದ ವಿಚಾರವನ್ನು ಚರ್ಚಿಸುತ್ತ ನಿಲ್ಲಲು ಇದು ಕಾಲವಲ್ಲ ಈಗ ಜರ್ಮನಿಯ ಸತ್ವಪರೀಕ್ಷಾ ಸಮಯಬಂದಿದೆ ಬೇಸಿಗೆಯು ಬರುವವರೆಗೆ ಜರ್ಮನಿಯ ಪ್ರಯತ್ನಕ್ಕೆ ಇಡೀ ಜರ್ಮನ್ ಜನಾಂಗವು ಬೆಂಬಲ ಕೊಡದೆ ಹೋದರೆ ಒಳ್ಳೆ ಅಪಾಯವುಂಟು ' ಎಂಬುದಾಗಿ ಹೇಳಿದರು

ಜಪಾನರಿಗಾಗಿರುವ ನಷ್ಟ

ದಕ್ಷಿಣ ಪೆಸಿಫಿಕ್ ಸಾಗರದಲ್ಲಿ ಜಪಾನರು ಇದುವರೆಗೆ 833 ನೌಕೆಗಳನ್ನೂ 874 ವಿಮಾನಗಳನ್ನೂ ಕಳೆದುಕೊಂಡಿದ್ದಾರೆ ಯುದ್ಧನೌಕೆಗಳು ಮುಳುಗಿರುವದು 107, ಕಾಣದಂತಾಗಿರುವದು 26, ಏಟು ಬಿದ್ದಿರುವವು 29, ಎಂದು ಎಣಿಸಲಾಗಿದೆ. ಅಮೇರಿಕಕ್ಕಾದರೋ, ಮುಳುಗಿದ್ದು 71 ಪತ್ತೆ ಇಲ್ಲದಿರುವುದು 12 ಶತ್ರುವಶವಾಗಕೂಡದೆಂದು ನಾಶಪಡಿಸಿದ್ದು 6 ಒಟ್ಟು 93 ಮಾತ್ರ ನಷ್ಟವಾಗಿದೆ ಎಂದು ಹೇಳಲಾಗಿದೆ

ಜಪಾನ್ ದಳಗಳ ಹಂಚಿಕೆ

ಚುಂಕಿಂಗ್‌ನಿಂದ ಬಂದಿರುವ ಸುದ್ದಿಯಂತೆ, ಜಪಾನಿನ ದಳಗಳು ಈ ರೀತಿ ಹಂಚಿ ಹರಡಿವೆ. ಬರ್ಮಾ ೬, ನ್ಯೂಗಿನಿ ೨೦, ಸಯಾಂ ಮತ್ತು ಜಾವಾ ೨, ಮಲಯಾ ೧॥, ಇಂಡೋಚೀನಾ ೧॥, ಫಿಲಿಫೈನ್ಸ್ ೧॥, ಬೋರ್ನಿಯೋ ೧, ಟಿಮೋರ್ ೧ ಉಳಿದ ೭೭ ದಳಗಳು ಚೀನಾ, ಮಂಚೂರಿಯಾ, ಕೊರಿಯಾ ಜಪಾನ್‌ಗಳಲ್ಲಿವೆ ಚೀನಾದಲ್ಲಿ ತಿಳಿದಿರುವಂತೆ ಕಳೆದ ವರ್ಷ ಜಪಾನಿನ ಯುದ್ಧರಂಗದಲ್ಲಿ ಕೆಲಸಮಾಡುತ್ತಿದ್ದ ೨೬೦೦ ವಿಮಾನಗಳೂ, ೩೦೦೦ ಮುಡುಪಿನ ವಿಮಾನಗಳೂ ನಷ್ಟವಾದವು ಇದು ಜಪಾನ್ ವಿಮಾನ ಬಲದಲ್ಲಿ ಮೂರನೆಯ ಒಂದು ಭಾಗವೆಂದು ಹೇಳಲಾಗಿದೆ

ರೊಮೆಲ್ಲರು ಎಲ್ಲಿದ್ದಾರೆ ?

ಆಫ್ರಿಕದಲ್ಲಿ ಜರ್ಮನಿಯ ಪ್ರಧಾನ ಸೈನ್ಯಾಧಿಪತಿಯಾಗಿದ್ದ ರೊಮೆಲ್ಲರಿಗೆ ತೀವ್ರ ರೋಗಪ್ರಾಪ್ತವಾಗಿರುವದೆಂದೂ ಅವರು ಜರ್ಮನಿಗೆ ಹೊರಟು ಹೋಗಿರುವರೆಂದೂ ತಿಳಿದುಬರುತ್ತದೆ ಟ್ಯೂನಿಸ್ ಬಳಿಯ 'ಎಲ್ ಅಲೋಯಿನ್' ವಿಮಾನ ನಿಲ್ದಾಣದಿಂದ ಕೆಲವು ದಿನಗಳ ಕೆಳಗೆ ಬರ್ಲಿನ್ನಿಗೆ ಅವರು ವಿಮಾನದಲ್ಲಿ ತೆರಳಿದರೆಂದು ಹೇಳಲಾಗಿದೆ ಈ ವಾರ್ತೆಯು ಅಧಿಕಾರಯುತವಾಗಿ ನಿರ್ಧರವಾಗಿಲ್ಲವಾದರೂ ಈಗ ಕೆಲವು ಕಾಲದಿಂದ ಅವರು ಆಫ್ರಿಕಾ ಸೈನ್ಯಗಳ ದಂಡನಾಯಕತ್ವ ವಹಿಸಿಲ್ಲವೆಂಬುದೇನೋ ನಿಶ್ಚಯ ಇದರ ಜೊತೆಗೆ " ರೂಮೆಲ್ಲರು ಫಿರಂಗಿ ಹೊಡೆತಕ್ಕೆ ಸಿಕ್ಕಿ ಹತನಾದನು ಎಂದು ಸೆರೆಸಿಕ್ಕಿದ ಯೂಗೋಸ್ಲೇವ್ ಸೈನಿಕರು ಹಬ್ಬಿಸಿದ ಪ್ರವಾದವೊಂದು ಗಮನಾರ್ಹವಾಗಿದೆ

ಅಮೇರಿಕದಲ್ಲಿ ರಷ್ಯನ್ ಸೈನ್ಯಾಧಿಪತಿ

ರಷ್ಯದ ಪ್ರಸಿದ್ಧ ಸೇನಾನಾಯಕರಾದ ಮಾರ್ಷಲ್ ಟಿಮೋಷಿಂಕೋರವರು ಅಮೇರಿಕದ ರಾಜಧಾನಿ ವಾಷಿಂಗ್ಟನ್ ನಗರಕ್ಕೆ ಆಗಮಿಸಿರುವರಾಗಿ ಮೊರಾಕ್ಕೊ ರೇಡಿಯೋ ತಿಳಿಸಿದೆ ಇವರು ಶ್ರೀ ರೂಜ್‌ವೆಲ್ಟ್‌ರೊಂದಿಗೆ ಮಾತುಕತೆ ನಡೆಸುವರೆಂದು ಭಾವಿಸಲಾಗಿದೆ 194೩ರಲ್ಲಿ ಮಿತ್ರಪಕ್ಷದವರೊಡನೆ ಒಟ್ಟುಗೂಡಿ ಶತ್ರುಗಳ ಮೇಲೆ ಏಕಮುಖವಾದ ಆಕ್ರಮಣ ಸಿದ್ಧಗೊಳಿಸಬೇಕೆಂಬುದೇ ಅವರ ಉದ್ದೇಶವೆಂದು ಹೇಳಲಾಗಿದೆ

ಅಮೇರಿಕನ್ ಸೈನ್ಯ ಹಿಮ್ಮೆಟ್ಟಿತು

ಜರ್ಮನರ ಸಣ್ಣ ಸಣ್ಣ ದಳಗಳು ಕಳೆದ 15 ನೆಯ ತಾರೀಖಿನ ದಿವಸ ಗಾಫ್ಸಾನಗರವನ್ನು ಪ್ರವೇಶ ಮಾಡಿದವೆಂದು ಅಧಿಕಾರಯುತವಾಗಿ ಪ್ರಕಟವಾಗಿದೆ ಟ್ಯೂನೀಶಿಯಾ ದಕ್ಷಿಣ ಕ್ಷೇತ್ರದಲ್ಲಿ ಮಿತ್ರದಳಗಳು ಸ್ವಲ್ಪವೂ ನಷ್ಟವಿಲ್ಲದೆ ಸುರಕ್ಷಿತವಾಗಿ ಗಾಫ್ಸಾ ನಗರವನ್ನು ತ್ಯಜಿಸಿದವೆಂದು ಹೇಳಲಾಗಿದೆ ಫೈದ್ ಪಶ್ಚಿಮದಲ್ಲಿ ಭೀಕರ ಕದನ ನಡೆದಿದೆ ಸಿಸಲಿಯ ಪಾಲೆರ್ಮೊದ ಬಂದರಿನ ಮೇಲೂ ಬಿಜರ್ಟ್ ಹಡಗುನಿಲ್ದಾಣದ ಮೇಲೂ ಮಿತ್ರವಿಮಾನಗಳು ದಾಳಿ ನಡೆಸಿವೆ ಟ್ರಿಪೋಲಿಟಾನಿಯಾ ಗಡಿಯಿಂದ 20 ಮೈಲು ದೂರದಲ್ಲಿರುವ ಬೆನ್‌ಗಾರ್ಡ್ ಕೈವಶವಾಯಿತು

ಭಾರತ ಮಂತ್ರಿಗಳ ರಾಜಿನಾಮೆ

ವೈಸರಾಯರ ಮಂತ್ರಿಮಂಡಲದಲ್ಲಿದ್ದ ಶ್ರೀ ಎಂ ಎಸ್ ಅಣೆ, ಎನ್ ಆರ್ ಸರ್ಕಾರ್ ಮತ್ತು ಸರ್ ಹೆಚ್ ಪಿ ಮೋದಿ ಇವರುಗಳು ತಮ್ಮ ಪದವಿಗೆ ರಾಜಿನಾಮೆ ಕೊಟ್ಟು ಆ ವಿಚಾರದಲ್ಲಿ ಒಂದು ಜಂಟಿ ಹೇಳಿಕೆಯನ್ನು ಈ ರೀತಿ ಕೊಟ್ಟಿರುತ್ತಾರೆ " ಗೌರ್ನರ್ ಜನರಲ್ಲರ ಮಂತ್ರಿಮಂಡಲಕ್ಕೆ ನಾವು ರಾಜಿನಾಮೆಯಿತ್ತ ವಿಚಾರ ಆಗಲೆ ಪ್ರಕಟವಾಗಿದೆ ಮೂಲಭೂತ ವಿಚಾರವೊಂದರಲ್ಲಿ ಭಿನ್ನಾಭಿಪ್ರಾಯ ಒಂದಿದ್ದರಿಂದ ನಾವು ನಮ್ಮ ಅಧಿಕಾರವನ್ನು ಬಿಡಬೇಕೆಂದು ನಮಗನಿಸಿತು ಸರಕಾರದಲ್ಲಿ ನಾವು ಇದ್ದಾಗ ವೈಸರಾಯರು ನಮಗೆ ತೋರಿಸಿದ ವಿನಯಕ್ಕೂ ಸೌಹಾರ್ದಭಾವಕ್ಕೂ ಅವರನ್ನು ಅಭಿನಂದಿಸುವೆವು " ಎಂದು ತಿಳಿಸಿದ್ದಾರೆ

ಸ್ವೀಕಾರ.

ಬಳ್ಳಾರಿ ಡಿ॥ ಕೊಟ್ಟೂರು ನಗರದಲ್ಲಿರುವ ವೇ॥ ಮಿರಳಭಟ್ಟಿ ಮಠದ ಜಾಗಟಗೇರಿ ಸಣ್ಣವೀರಪ್ಪಯ್ಯನವರು ಮತ್ತು ಚನ್ನವೀರಪ್ಪಯ್ಯನವರು ಶ್ರೀಜಗದ್ಗುರು ರೇಣುಕಾಚಾರ್ಯರ ಮೂರ್ತಿಪ್ರತಿಷ್ಠಾಪನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 50 ರೂಪಾಯಿಗಳನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಸೊಲ್ಲಾಪುರದಲ್ಲಿರುವ ಸೌ॥ ಭಾಗೀರಥೀಬಾಯಿ ಕಟಾಪ ಇವರ ಪುತ್ರ ಚಿ॥ ಬಸವಪ್ಪನಿಗೆ ಪಂಢರಪುರದಲ್ಲಿರುವ ಮ॥ ಮಂಠಪ್ಪ ಫಿಂಗೆ ಇವರ ಪುತ್ರಿ ಚಿ॥ ಸೌ॥ ಅನಸೂಯಾದೇವಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸುತ್ತಾರೆ

ಬಳ್ಳಾರಿ ಡಿ॥ ಹೂವಿನಹಡಗಲಿ ಗ್ರಾಮನಿವಾಸಿಗಳಾದ ಮ॥ ರಾ॥ ಸೊಪ್ಪಿನ ಚನ್ನಪ್ಪನವರ ದ್ವಿತೀಯ ಪುತ್ರ ಚಿ॥ ಮಲ್ಲಪ್ಪನಿಗೆ ಗದಗ ನಗರನಿವಾಸಿಗಳಾದ ಮ॥ ರಾ॥ ಕೆ ಎನ್ ಶಾಂತಗಿರಿ, ಬಿ ಎ , ಎಲ್‌ಎಲ್. ಬಿ , ವಕೀಲ ಇವರ ಜ್ಯೇಷ್ಠಪುತ್ರಿ ಚಿ॥ ಸೌ॥ ಲಿಂಗಮ್ಮನನ್ನು ಕೊಟ್ಟು, ಗದಗನಗರದಲ್ಲಿ (8 2 43) ಸೋಮವಾರ ವಿವಾಹಮಹೋತ್ಸವವು ಅಭೂತಪೂರ್ವವಾಗಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಚನ್ನಪ್ಪನವರ ಜ್ಯೇಷ್ಠಪುತ್ರ ಗುರುಕಿಂಕರ ಸೊಪ್ಪಿನಗುರುಲಿಂಗಪ್ಪನವರದ್ವಾರಾ ತಲ್ಪಿರುತ್ತವೆ

ಹೂವಿನಹಡಗಲಿಯಲ್ಲಿರುವ ಮ॥ ರಾ॥ ಸೊಪ್ಪಿನ ಮಲ್ಲಪ್ಪನವರ ಪುತ್ರಿ ಚಿ॥ ಸೌ ಗುರುಶಾಂತಮ್ಮನನ್ನು ಹರಪನಹಳ್ಳಿ ಪಟ್ಟೇರ ಮ॥ ರಾ॥ ಗುರುಸಿದ್ದಪ್ಪನವರ ಪುತ್ರ ಚಿ। ಗಂಗಪ್ಪನಿಗೆ ಕೊಟ್ಟು ನಿಶ್ಚಯಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿಯಲ್ಲಿರುವ ವೇ॥ ಶಾಸ್ತ್ರಿಮಠದ ಬಸವಲಿಂಗಯ್ಯನವರ ಪುತ್ರ ಚಿ॥ ರಾಜಶೇಖರಸ್ವಾಮಿಗೆ ವಿಜಾಪುರದಲ್ಲಿರುವ ವೇ॥ ವಿಶ್ವನಾಥವಾಮದೇವಶಾಸ್ತ್ರೀ ಪಂಟಿಮುರಿ ಬಿ ಎ , ಇವರ ಪುತ್ರಿ ಚಿ॥ ಸೌ॥ ಶಿವಗಂಗಾದೇವಿಯನ್ನು ಕೊಟ್ಟು ಮಾಘ ಶು॥ ೧೧ ಸೋಮವಾರ ದಿವಸ ವಿಶೇಷ ವೈಭವದೊಡನೆ ನೆರವೇರಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂ ಗಳು ವೇ॥ ವಿರೂಪಾಕ್ಷಯ್ಯನವರು ನಂದಿಕೇಶ್ವರಮಠ ಹುಬ್ಬಳ್ಳಿ ಇವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಡಿ। ಹಿರೇಹಡಗಲಿ ಗ್ರಾಮದಲ್ಲಿರುವ ವೇ॥ ಕೌಲೂರು ಲಿಂಬಿಕಾಯಿಮಠದ ಕೋಟಯ್ಯನವರು ತಮ್ಮ ಪುತ್ರನ ಉಪನಯನ ಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ

ಮಹಾಪ್ರಭುಗಳ ಆಗಮನ

ಶಿವಮೊಗ್ಗ ಕಡೂರು ಹಾಸನ ಜಿಲ್ಲೆಗಳಲ್ಲಿ ಕಳೆದ ೧೫ ದಿನಗಳಿಂದ ಸಂಚಾರವನ್ನು ಕೈಗೊಂಡಿದ್ದ ಆಳುವ ಮಹಾಪ್ರಭುಗಳವರು ೧೩ ನೇ ತಾರೀಖಿನ ದಿವಸ ಸ್ಪೆಷಲ್ ರೈಲಿನಲ್ಲಿ ರಾಜಧಾನಿಗೆ ದಯಮಾಡಿಸಿದರು

ಪಂಡಿತರ ಆಗಮನ

ವೇ। ಪಂ॥ ಶ್ರೀಕಾಶೀನಾಥಶಾಸ್ತ್ರಿಗಳವರು ಕೊಟ್ಟೂರಲ್ಲಿ ನೆರವೇರಿದ ಶ್ರೀಜಗದಾಚಾರ್ಯರ ಪ್ರತಿಷ್ಠಾಕಾರ್ಯವನ್ನು ಪೂರೈಸಿಕೊಂಡು ೧೩ ನೆಯ ತಾರೀಖಿನ ದಿವಸ ರಾಜಧಾನಿಗೆ ಆಗಮಿಸಿದರು.

(೧ನೆಯ ಪುಟದಿಂದ ಮುಂದುವರಿದುದು)

“ಉಪವಾಸದಿಂದ [illegible] ಒಳ್ಳೆಯ ಫಲಗಳೆಲ್ಲವೂ ಲಭಿಸಬೇಕಾದರೆ, ಅನೇಕ ದಿನವಾದ ಉಪವಾಸವಾಗಬೇಕು. ಅನೇಕ ದಿವಸದ ಉಪವಾಸವು ಆ ಉಪವಾಸದಲ್ಲಿ ನೀರನ್ನು ಹೊರತು ಬೇರೊಂದನ್ನೂ ತೆಗೆದುಕೊಳ್ಳಬಾರದು. ಕೆಲವರು ಉಪವಾಸದಿಂದ ದೇಹವು ಕೆಟ್ಟುಹೋಗುವುದೆಂದು [illegible] ದೀರ್ಘವಾಗಿ ಒಂದೆರಡು [illegible] ಕೆಲವರು [illegible] ಪ್ರತಿದಿನ [illegible] ಆಹಾರವನ್ನೇ [illegible] ಕಡುಬು [illegible] ಮುಂತಾದುವನ್ನು ತಿಂದುಬಿಡುವರು. ಇದರಿಂದ ಉಪವಾಸದ ಫಲವು ಪೂರ್ಣವಾಗಿ ಕೆಟ್ಟುಹೋಗುವುದಲ್ಲದೆ ಮುಂದಕ್ಕೆ ಉಪವಾಸಮಾಡತಕ್ಕ ಶಕ್ತಿಯೂ ತಪ್ಪಿಹೋಗುವುದು. ಉಪವಾಸವಿದ್ದಾಗ ಜಠರಕ್ಕೆ ಕೆಲಸವಿಲ್ಲವೆಂದು ತೋರಿದೊಡನೆ, ದೇಹದ ರಕ್ತವೆಲ್ಲವೂ ಇತರ ಅವಯವಗಳಲ್ಲಿ ಹೋಗಿ ಸೇರುವುದು. ಊಟದ ಹೊತ್ತಿಗೆ ಹೊಟ್ಟೆಯಲ್ಲಿ ಒಂದು ವಿಧವಾದ ಸಂಕಟವುಂಟಾದಂತೆ ಕಾಣುವುದು. ಆದರೆ ಆ ಸಂಕಟವು ಕೂಡಲೇ ನಿಂತುಹೋಗಿ ದೇಹದ ಶಕ್ತಿಯೆಲ್ಲವೂ ತನ್ನ ಕಾರ್ಯಗಳೆಲ್ಲವನ್ನೂ ನಡೆಸುವುದಕ್ಕಾಗಿ ಬೇರೆ ಕಡೆಗೆ ಆಕರ್ಷಿಸಲ್ಪಡುವುದು. ಈ ಸ್ಥಿತಿಯಲ್ಲಿ ಜಠರವು ಶಾಂತವಾಗಿರುವಾಗ ಜೀರ್ಣಕಾರ್ಯಕ್ಕೆ ಸಂಬಂಧಪಟ್ಟ ವಸ್ತುವೇನಾದರೂ ಆ ಜಠರಕ್ಕೆ ಹೋದಪಕ್ಷದಲ್ಲಿ ಆ ಕಾರ್ಯವನ್ನು ಮಾಡುವುದಕ್ಕಾಗಿ ದೇಹದ ಸರ್ವಶಕ್ತಿಯೂ ಆತುರದಿಂದ ಅಲ್ಲಿಗೆ ಆಕರ್ಷಿಸಲ್ಪಡುವುದು. ಅಲ್ಲಿ [illegible] ಕಾರ್ಯವು ದೊರೆಯದಿದ್ದರೆ, [illegible] ಅಧಿಕವಾಗುವುದು. ನಿಜವಾದ ಹಸಿವಿನೊಡನೆ ಕೂಡಿದ, ಮತ್ತು ಸಂತುಷ್ಟಿಯುಳ್ಳ [illegible] ತಲೆದೋರುವುದು. ಆದುದರಿಂದ ಈ ಅರ್ಧೋಪವಾಸವು ಪೂರ್ಣೋಪವಾಸಕ್ಕಿಂತಲೂ ಅಧಿಕ ಕಷ್ಟಕರವಾಗಿ ತೋರುವುದು.

ಈ ಅರ್ಧೋಪವಾಸಗಳಲ್ಲಿ ನಾವು ಕಡುಬು ದೋಸೆ ಮುಂತಾದ ಪಿಷ್ಟವಸ್ತುಗಳೂ, ಪ್ರೋಟೀನು ಕಲೆತಿರುವ ಆಹಾರಗಳನ್ನೂ ಕೊಬ್ಬನ್ನೊಳಗೊಂಡ ಎಣ್ಣೆ, ತುಪ್ಪ ಮುಂತಾದುವುಗಳನ್ನೂ, ಅದರೊಡನೆ ಮೆಣಸಿನಪುಡಿ ಸಕ್ಕರೆ ಇವುಗಳನ್ನೂ ಸೇರಿಸಿ ಊಟಮಾಡುವುದು. ಇದನ್ನು ಬಿಟ್ಟು ಕಿತ್ತಳೆ, ಅನನಾಸ್, [illegible] ಮುಂತಾಗಿ ರಸವತ್ತಾದ ಹಣ್ಣುಗಳನ್ನೂ ಕಾಯಿಪಲ್ಯಗಳನ್ನೂ ಫಲಾಹಾರಕ್ಕಾಗಿ ಉಪಯೋಗಿಸುವುದೊಳ್ಳೆಯದು. ಇದರಿಂದ ಪೂರ್ಣೋಪವಾಸದ ಫಲವು ದೊರೆಯದಿದ್ದರೂ ಉಪವಾಸದ ಸ್ವಲ್ಪ ಫಲವಾದರೂ ದೊರೆಯುವುದು. ಉಪವಾಸವು ಒಳ್ಳೆಯ ಆರೋಗ್ಯಕಾರಣವೆಂಬುದೇನೋ ನಿಶ್ಚಯವು. ಆದರೆ ಉಪವಾಸದಿಂದ ಯೌವನಬಲವುಂಟಾಗುವುದೆಂಬುದರಲ್ಲಿ ಮಾತ್ರ ಅನೇಕರು ಸಂದೇಹಿಸುವರು.

1930ನೇ ವರ್ಷದಲ್ಲಿ “ಪ್ರಷ್ಯನ್ ಅಕಾಡೆಮಿ ಆಫ್ ಸೈನ್ಸ್” ಎಂಬ ವಿದ್ವತ್ಸಭೆಯ ಮುಂದೆ ಪ್ರೊಫೆಸರ್ ನಾಕ್ಸ್ ರಫ್ನರ್ ಎಂಬವರು “ಉಪವಾಸವು ನವನಾಗರಿಕತೆಯಿಂದ ಹುಟ್ಟಿದ ಒಂದು ಭ್ರಾಂತಿಯೇ ಹೊರತು ಉಪವಾಸದಿಂದ ದೇಹದಲ್ಲಿ ಯೌವನಬಲವುಂಟಾಗುವುದಕ್ಕೆ ಶಾಸ್ತ್ರೀಯವಾದ ಆಧಾರವೇನೂ ಇಲ್ಲವೆಂದೂ ನಿರಾಕರಿಸಿ ಮಾತಾಡಿದರು. ಈ ವಿದ್ವಾಂಸರ ವಾದಗಳನ್ನು ಖಂಡಿಸಿ “ಹೆಲ್ತ್ ಫಾರ್ ಆಲ್” ಎಂಬ ಪತ್ರಿಕೆಯ ಸಂಪಾದಕರು 1930ನೇ ಸೆಪ್ಟಂಬರ್ ತಿಂಗಳ ಸಂಚಿಕೆಯಲ್ಲಿ ಒಂದು ಪ್ರತಿವಾದವನ್ನು ಬರೆದಿರುವರು. ಅವರಲ್ಲಿ ಬರೆದಿರುವ ವಿಷಯಗಳನ್ನೇ ಇಲ್ಲಿ ನಮ್ಮ ವಾಚಕರ ಅವಗಾಹನೆಗಾಗಿ ಕೊಡುವೆವು.

“ಒಬ್ಬ ಮನುಷ್ಯನ ಆರೋಗ್ಯವೂ, ಯೌವನವೂ, ಆಯುಸ್ಸೂ ಇದೆಲ್ಲ ಅವನ ದೇಹದಲ್ಲಿರುವ ಒಂದೊಂದು ಸೂಕ್ಷ್ಮ ರಚನಾತಂತುಗಳ ಆರೋಗ್ಯವನ್ನೂ, ಬಲವನ್ನೂ, ಆಯುಸ್ಸನ್ನೂ ಪೂರ್ಣವಾಗಿ ಹೊಂದಿದೆಯೆಂಬುದು ಶಾರೀರಶಾಸ್ತ್ರವನ್ನು ಸ್ವಲ್ಪವಾದರೂ ಓದಿದವರೊಬ್ಬೊಬ್ಬರಿಗೂ ಚೆನ್ನಾಗಿ ತಿಳಿದ ವಿಷಯವಾಗಿದೆ. ಆ ಒಂದೊಂದು ರಚನಾತಂತುಗಳ ಆರೋಗ್ಯವೂ ಅವುಗಳಿಗೆ ಆಹಾರವನ್ನೊದಗಿಸುವ ರಕ್ತದ ಸ್ಥಿತಿಯನ್ನು ಅನುಸರಿಸಿದೆ. ಉಪವಾಸದಿಂದ ರಕ್ತವು ಶುದ್ಧೀಕರಿಸಲ್ಪಡುವುದು. ಆದುದರಿಂದ ಉಪವಾಸದಲ್ಲಿ ರಕ್ತವನ್ನು ಶುದ್ಧೀಕರಿಸುವ ಗುಣವುಂಟು. ಈ ಒಂದು ಗುಣವೇ ಎಲ್ಲಾ ರೋಗಗಳನ್ನು ನಿವಾರಿಸುವುದಕ್ಕೆ ಮೂಲಾಧಾರವೆನಿಸಿದೆ. ಅತಿ ಕಠಿಣವಾದ ರಕ್ತಕ್ಷಯದಲ್ಲಿ, ಅಥವಾ ಪಾಂಡುರೋಗದಲ್ಲಿ ರಕ್ತದಲ್ಲಿರಬೇಕಾದ ದ್ರವ್ಯಗಳೆಲ್ಲ ಮೂರರಲ್ಲಿ ಒಂದು ಭಾಗದಷ್ಟಕ್ಕೆ ಕಡಿಮೆಯಾಗಿ ಹೋಗುವುದು. ಆದರೆ ಐದುದಿನಗಳು ಬಿಡದೆ ಉಪವಾಸವಿದ್ದರೆ ಅದರಲ್ಲಿರತಕ್ಕ ದ್ರವ್ಯಗಳು ಎರಡರಷ್ಟು ಹೆಚ್ಚಾಗಿ ಅವರಲ್ಲಿ ಕೆಂಪುಕಣಗಳು ದ್ವಿಗುಣವಾಗುವುವು. ಅಶಕ್ತಿಯಿಂದ ಸಾಯುವ ಸ್ಥಿತಿಯಲ್ಲಿದ್ದ ಮನುಷ್ಯನಿಗೂ ಒಡನೆಯೇ ಆರೋಗ್ಯಲಕ್ಷಣಗಳು ಕಂಡುಬರುವುವು. ಉಪವಾಸದಿಂದ ಯೌವನಬಲವುಂಟಾಗುವುದೆಂಬುದಕ್ಕೆ ಇದೊಂದೇ ನಿದರ್ಶನವು ಸಾಕಲ್ಲವೆ?

ಎಪ್ಪತ್ತು ವಯಸ್ಸಿನವರೊಬ್ಬರು [illegible] ದೇಹದಲ್ಲಿ ಅಧಿಕವಾದ ರಕ್ತೋತ್ಪೀಡನದಿಂದ ಬಲಹೀನರಾಗಿ ನಡೆಯುವುದಕ್ಕೂ ತ್ರಾಣವಿಲ್ಲದಿದ್ದಾಗ ಅವರಿಗೆ ಒಂದು ತಿಂಗಳು ಉಪವಾಸವನ್ನು ನಿಯಮಿಸಿದ್ದಮೇಲೆ ಅವರು ಆರೋಗ್ಯದಲ್ಲಿಯೂ ಯೌವನದಲ್ಲಿಯೂ, ಮುಖಲಕ್ಷಣಗಳಲ್ಲಿಯೂ ಒಳ್ಳೆಯ ತರುಣವಯಸ್ಕರಂತೆ ಕಾಣಿಸಿದರು. ಇದೂ ಕೂಡ ಉಪವಾಸದಿಂದ ಉಂಟಾಗತಕ್ಕ ಯೌವನಶಕ್ತಿಗೆ ಒಂದು ಉತ್ತಮನಿದರ್ಶನವು.

ವಾತರೋಗದಿಂದ ಸ್ನಾಯುಗಳು ಕೀಲುಗಳು, ಇವೆಲ್ಲವೂ ಹಿಡಿದುಕೊಳ್ಳುವುವು. ಇದರಿಂದ ಬಹಳ ಬಾಧೆಯುಂಟಾಗಿ ನಿದ್ರೆಯೂ, ವಿಶ್ರಾಂತಿಯೂ ಇಲ್ಲದ ಕಷ್ಟಪಡುತ್ತಿದ್ದ ಎಷ್ಟೋ ಜನ ರೋಗಿಗಳಿಗೆ ಉಪವಾಸದಿಂದ ಆ ಬಾಧೆಗಳೆಲ್ಲವೂ ತಪ್ಪಿ ದೇಹದಲ್ಲಿ ಬಲವುಂಟಾಗಿದೆ. ಅಲ್ಲದೆ ಅವರು ನಿರಾಯಾಸವಾಗಿ 8–10 ಮೈಲುಗಳವರೆಗೆ ನಡೆಯುತ್ತಿದ್ದರು. ಉಪವಾಸದಿಂದ ಶಕ್ತಿಯುಂಟಾಗುವುದೆಂಬುದಕ್ಕೆ ಇದೂ ಒಂದು ನಿದರ್ಶನ.

ಉಪವಾಸದಿಂದ ಅದ್ಭುತವಾದ ರಕ್ತಶುದ್ಧಿಯುಂಟಾಗುವುದು. ಆದುದರಿಂದ ದೇಹದ ಸೂಕ್ಷ್ಮರಚನಾತಂತುಗಳೆಲ್ಲ ಅಪೂರ್ವ ಯೌವನಶಕ್ತಿಯೂ ಲಭಿಸುವುದು.

ಉಪವಾಸದಲ್ಲಿರುವ ಈ ಮೇಲ್ಕಂಡ ಗುಣಗಳನ್ನು ಕುರಿತು ಈಗಿನ ವೈದ್ಯಶಾಸ್ತ್ರಜ್ಞರು ಇನ್ನೂ ಅಷ್ಟಾಗಿ ವಿಮರ್ಶೆಮಾಡಿಲ್ಲ. ನಮ್ಮ ಪುರಾತನ ಮಹರ್ಷಿಗಳು ಜನರು, ತಾವು ಮಾಡಿದ ಪಾಪನಿವೃತ್ತಿಗಾಗಿ ಎಂದರೆ, ನ್ಯಾಯವಿರುದ್ಧವಾಗಿ ಇತರರಿಗಾಗಲಿ, ಇತರರ ಸ್ವತ್ತಿಗಾಗಲಿ ಮಾಡಿದ ದ್ರೋಹಕ್ಕಾಗಿ ಅನೇಕ ವ್ರತಗಳನ್ನು ಪ್ರಾಯಶ್ಚಿತ್ತವಾಗಿ ವಿಧಿಸಿರುವರು. ಈ ವ್ರತಗಳಲ್ಲಿ ಉಪವಾಸವೇ ಪ್ರಧಾನವೆನಿಸಿದೆ. ಈ ಉಪವಾಸವು ಅವರ ಮನಸ್ಸನ್ನೂ, ಶರೀರವನ್ನೂ ಶುದ್ಧೀಕರಿಸತಕ್ಕ ಪ್ರಾಯಶ್ಚಿತ್ತರೂಪವಾಗಿ ಎಣಿಸಲ್ಪಟ್ಟಿರುವುದಲ್ಲದೆ, ತಿರುಗಿ ಅವರು ಅಂತಹ ಅಕ್ರಮಗಳಲ್ಲಿ ಪ್ರವರ್ತಿಸದಂತೆ ನಿವಾರಿಸುವ ಮಾರ್ಗವಾಗಿಯೂ ಎಣಿಸಲ್ಪಟ್ಟಿದೆ.

ಇದುವರೆಗೆ ಇಲ್ಲಿ ನಾವು ಹೇಳಿದ ವಿಷಯಗಳಿಂದ ಉಪವಾಸದ ಗುಣವೇನೆಂಬುದು ವಾಚಕರ ಅವಗಾಹನೆಗೆ ಬಂದಿರಬಹುದು. ನಮ್ಮ ಪೂರ್ವಿಕರು ಇದನ್ನು ಬಹು ಶ್ರದ್ಧೆಯಿಂದ ನಡೆಸುತ್ತಿದ್ದರು. ಈಗಿನ ನವೀನ ಶಾಸ್ತ್ರಜ್ಞರಿಗೂ ಇದರ ಗುಣವು ಈಚೆಗೆ ಚೆನ್ನಾಗಿ ತಿಳಿದು ಬಂದಿದೆ. ಈ ವಿಚಾರದಲ್ಲಿ ಅಭಿಪ್ರಾಯಭೇದಗಳೇನೂ ಇರುವುದಿಲ್ಲ. ಆದುದರಿಂದ ನಮ್ಮವರು ಈ ಉಪವಾಸದ ಫಲವನ್ನು ತಿಳಿದುಕೊಂಡು, ಕೊನೆಗೆ ಏಕಾದಶೀ ದಿನಗಳಲ್ಲಿಯಾದರೂ ತಪ್ಪದೆ ಉಪವಾಸವನ್ನು ಮಾಡಬೇಕು.

ವಿವಾಹಮಹೋತ್ಸವ ಸೋಲಾಪುರ

ಇದೇ ಚಿತ್ರಭಾನು ಸಂವತ್ಸರದ ಮಾಘ ಶುದ್ಧ ಚತುರ್ಥಿ ತಾ|| 8-2 43 ನೆಯ ಸೋಮವಾರ ಸೌ|| ಭಾಗೀರಥಿಬಾಯಿಯವರ ಸುಪುತ್ರ ಚಿ|| ಬಸವಪ್ಪನೆಂಬ ವರನಿಗೂ, ಪಂಢರಪುರದ ದುಂಡಪ್ಪ ಭಿಂಗೆ ಇವರ ಜ್ಯೇಷ್ಠ ಪುತ್ರಿ ಚಿ|| ಸೌ|| ಅನಸೂಯಾದೇವಿಗೂ ಪಾಣಿಗ್ರಹಣಮಹೋತ್ಸವವು ಪಂಚಬ್ರಹ್ಮಕಲಶಸ್ಥಾಪನಪೂರ್ವಕ ವೇ|| ಕಲ್ಲಯ್ಯಸ್ವಾಮಿ ಕಾಸೇಗಾವಕರ ಇವರ ವೈದಿಕತ್ವದಲ್ಲಿ ಬಹು ವಿಜೃಂಭಣೆಯಿಂದ ನೆರವೇರಿತು. ಸೋಮವಾರ ಬೆಳಗ್ಗೆ ಬ್ರಾಹ್ಮ ಮುಹೂರ್ತದಲ್ಲಿ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ ಇವರ ಗುರುತ್ವದಲ್ಲಿ ವಧೂವರರಿಗೆ ಶಿವದೀಕ್ಷಾ ಸಂಸ್ಕಾರವು ನೆರವೇರಿ ಗಣಾರಾಧನೆಯಾಯಿತು. ಸಾಯಂಕಾಲ ಗೋರಜ ಮುಹೂರ್ತದಲ್ಲಿ ನಡೆದ ಪಾಣಿಗ್ರಹಣ ಸಮಯದಲ್ಲಿ ನೆರೆದ ಸಹಸ್ರಾರು ಜನರ ಸಭೆಯಲ್ಲಿ ನೂತನದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಶ್ರೀ ರಂಭಾಪುರೀ ಜಗದ್ಗುರುಗಳವರು ಫಲಮಂತ್ರಾಕ್ಷತೆ ಸಹಿತ ನೂರುರೂಪಾಯಿಯನ್ನು ದಯಪಾಲಿಸಿದ ಶುಭಾಶೀರ್ವಾದ ಪತ್ರವನ್ನು ಓದಿ ಹೇಳಲಾಯಿತು. ಅಲ್ಲದೆ ಕೇದಾರ ಪೀಠದ ಜಗದ್ಗುರುಗಳವರು ಉಜ್ಜಯಿನೀ ಜಗದ್ಗುರುಗಳವರು ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯರು ಮಹಂತಿನಮಠ ಬೆಂಗಳೂರು, ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು, ವೇ|| ಪಂ|| ಸದಾಶಿವಶಾಸ್ತ್ರಿಗಳವರು ರಾವುಲಡಕಿ, ವೇ|| ಪಂ|| ವೃಷಭಲಿಂಗಶಾಸ್ತ್ರಿಗಳವರು, ಆರಾಧ್ಯಮಠ ಸುಣ್ಣಕಲ್ ಬಿದರಿ. ಮುಂತಾದವರಿಂದ ದಯಪಾಲಿಸಿದ ಫಲಮಂತ್ರಾಕ್ಷತೆಗಳು ವಧೂವರರಿಗೆ ಆಶೀರ್ವದಿಸಲ್ಪಟ್ಟವು. ಅಲ್ಲದೆ ಈ ಮಂಗಲ ಕಾರ್ಯಕ್ಕೆ ಆಗಮಿಸಿದ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ, ಶ್ರೀ|| ಷ|| ಬ್ರ|| ಗುರುಶಾಂತಶಿವಾಚಾರ್ಯರು ಬೃಹನ್ಮಠ ಜಹಗೀರದೇವರಗಿ, ಶ್ರೀ|| ಷ|| ಬ್ರ|| ಗುರುಸ್ವಾಮಿ ಹಿರೇಮಠ ಜೈನಾಪುರ, ಶ್ರೀ|| ಷ|| ಬ್ರ|| ರಾಚಲಿಂಗಶಿವಾಚಾರ್ಯರು ಪರಾಂಡೆಕರ ಬಾರ್ಸಿ, ವೀರಶೈವ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು, ಶ್ರೀ|| ಷ|| ಬ್ರ|| ಫೇನುಕರ್ಣ ಶಿವಾಚಾರ್ಯರು ಹುಬ್ಬಳ್ಳಿಮಠ, ಶ್ರೀ|| ಷ|| ಬ್ರ|| ಮುಕ್ಯಾರು, ಕುರವತ್ತಿ ಮೊದಲಾದ ಸ್ವಾಮಿಗಳವರು ದಂಪತಿಗಳ ಶ್ರೇಯೋಭಿವೃದ್ಧಿಗಾಗಿ ಫಲಮಂತ್ರಾಕ್ಷತೆಗಳನ್ನು ಆಶೀರ್ವದಿಸಿದರು. ಈ ವಿವಾಹ ಸಮಾರಂಭಕ್ಕೆ ಬಂಧು ಬಾಂಧವರೂ, ಆಪ್ತೇಷ್ಟರೂ, ಪ್ರಮುಖರೂ, ಸ್ಥಳ ಪರಸ್ಥಳದಿಂದ ಆಗಮಿಸಿದ ವರನ ಸ್ನೇಹಿತರೂ ೨೦೦ ರೂಪಾಯಿ ಬೆಲೆಯ ಸಾಮಾನುಗಳನ್ನು ಪ್ರೆಜೆಂಟಾಗಿ ಕೊಟ್ಟರು. ಅದೇ ದಿವಸ ರಾತ್ರಿ ಸಮಾರಂಭ ಪ್ರೀತ್ಯರ್ಥವಾಗಿ ಸೋಲಾಪುರದ ಸುಪ್ರಸಿದ್ಧ ಗಾಯಕರಾದ ಶ್ರೀ ವಿನಾಯಕರಾವ್ ಕಾಟಕರ್, ಶ್ರೀ ನಾರಾಯಣರಾವ್ ಕನಕಧರ ಇವರ ಸಂಗೀತವನ್ನೂ, ಸೌ|| ಸುಗ್ಗಲಾದೇವಿ ತಮಶೆಟ್ಟಿ ಇವರ ಪಂಚಾಚಾರ್ಯರ ಭಜನೆಯನ್ನೂ ಕೇಳಿ ಸರ್ವರೂ ಆನಂದಭರಿತರಾದರು. ಸೋಲಾಪುರದ ಬಾಲತಪಸ್ವಿ ಬೃಹನ್ಮಠದಲ್ಲಿ ಸ್ಥಾಪಿತವಾಗಿರುವ ವೀರಶೈವಗುರುಕುಲಕ್ಕೆ ೫ ರೂ ಗಳೂ ಪಂಚಾಚಾರ್ಯಪ್ರಭೆಗೆ ೨ ರೂ ಗಳೂ, ವೀರಶೈವಗರ್ಜನೆಗೆ ೨ ರೂ ಗಳೂ ಸಮರ್ಪಿಸಲ್ಪಟ್ಟವು. ನೂತನ ದಂಪತಿಗಳಿಗೆ ಜಗದಾಚಾರ್ಯರೂ ಜಗದೀಶನೂ ಅನುಗ್ರಹವನ್ನೀಯಲೆಂದು ಪ್ರಾರ್ಥಿಸುವ,

ಗುರುಪಾದಸ್ವಾಮಿ ಚಡಚಣಕರ್

ಉಪನಯನ ಮಹೋತ್ಸವ

ಬಳ್ಳಾರಿ ಜಿ|| ಹಿರೇಹಡಗಲಿ ಗ್ರಾಮದಲ್ಲಿರುವ ವೇ|| ಕಾಲೂರು ಲಿಂಬಿಕಾಯಿ ಮಠದ ವೇ|| ಕೋಟಯ್ಯನವರ ಮಗ ಚಿ|| ರೇವಣಸಿದ್ಧಯ್ಯನಿಗೆ ಇದೇ ಮಾಘ ಶು|| ೪ ಸೋಮವಾರ ದಿವಸ ಹೊಳಗುಂದಿ ಉಜ್ಜಯಿನೀ ಒಡೆಯರ ಮಠದ ಶ್ರೀ|| ಷ|| ಬ್ರ|| ಸಿದ್ಧಲಿಂಗಶಿವಾಚಾರ್ಯ ಸ್ವಾಮಿಗಳವರ ಸಮ್ಮುಖದಲ್ಲಿ ಉಪನಯನಮಹೋತ್ಸವವು ವಿಧ್ಯುಕ್ತವಾಗಿ ನೆರವೇರಿತು. ಅನಂತರ ಗಣಾರಾಧನೆಯು ಜರಗಿತು. ಈ ಕಾರ್ಯದಲ್ಲಿ ವೇ|| ಮಾನಿಹಳ್ಳಿ ಪುರವರ್ಗ ಮಠದ ಶಿವರುದ್ರಗೌಡರು, ಹಮ್ಮಿಗಿ ಕುಪ್ಪಸದ ಶಾಂತಪ್ಪನವರು, ಕೊಂಪಿ ವೀರಣ್ಣಪ್ಪನವರು ಹಂಪನಹಳ್ಳಿ, ಸಾ|| ಶಾಂತವೀರಪ್ಪನವರು ಮುಂತಾದವರು ಭಾಗವಹಿಸಿದ್ದರು. ಈ ಶುಭಸಮಯದಲ್ಲಿ ಪ್ರಭೆ ಪೋಷಣಕ್ಕಾಗಿ ೧ ರೂ ಯು ಹಮ್ಮಿಗಿ ಗುರುಶಾಂತಪ್ಪನವರ ದ್ವಾರಾ ಕಳಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ರಷ್ಯದಲ್ಲಿ ಹಿಮವು ಕರಗುತ್ತಿದೆ

ಪೂರ್ವ ರಷ್ಯಾರಣರಂಗದಲ್ಲಿ ಹಿಮವು ಕರಗುವುದಕ್ಕೆ ಆರಂಭಿಸಿದೆಯೆಂದು ಪ್ಯಾರಿಸ್ ರೇಡಿಯೋ ಪ್ರಕಟಿಸಿದೆ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M ೨೨೬೬ * ಶ್ರೀಜಗದ್ಗುರು ಪಂಚಾಚಾರ್ಯರ ಪ್ರಸೀದಂತು * REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ, ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ

ಪರಸ್ಥಳದವರಿಗೆ ೨ ರೂ. ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ಮಾರ್ಚಿ ೧೯೪೩ [ಸಂಚಿಕೆ ೪೬

ಆಂಧ್ರ ರೇಣುಕವಿಜಯ

ಶ್ರೀರಂಭಾಪುರೀ ಜಗದ್ಗುರುಗಳವರ ಮತ್ತು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಅಪೂರ್ವ ಸಹಾಯ

ಆಂಧ್ರದೇಶದ ಕುಲ್ಯಪಾಕ ಮಹಾಕ್ಷೇತ್ರದಲ್ಲಿ ಅವತರಿಸಿದ ಶ್ರೀ ಜಗದ್ಗುರು ರೇಣುಕಾಚಾರ್ಯರ ಚರಿತ್ರೆಯು ಆಂಧ್ರಭಾಷೆಯಲ್ಲಿ ಸದ್ಯಃ ಇಲ್ಲದಿರುವುದರಿಂದ ಆಂಧ್ರ ವೀರಶೈವರಿಗೆ ದೊಡ್ಡ ಕೊರತೆಯಾಗಿತ್ತು. ಈ ಲೋಪವನ್ನು ತೊಲಗಿಸುವುದಕ್ಕಾಗಿ ಪೂಜ್ಯರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಗೆ ನಿವೇದಿಸಲಾಯಿತು. ಕೂಡಲೇ ಈ ಬಗ್ಗೆ ಗ್ರಂಥರಚನಾ ಪ್ರಯತ್ನವನ್ನು ಕೈಕೊಳ್ಳಬೇಕೆಂತಲೂ ಅದಕ್ಕಾಗಿ ಸಹಾಯಮಾಡಲಾಗುವದೆಂತಲೂ ಪಂಡಿತರು ಮಹೋದಾರ ಹೃದಯದಿಂದ ಸೂಚಿಸಿದರು. ಆ ಮೇಲೆ ಆಂಧ್ರ ವಿದ್ವತ್ಕವಿಗಳಲ್ಲಿ ವಿಖ್ಯಾತಿಪಡೆದ ಶಿರೋಮಣಿ ಶ್ರೀ ಸನ್ನಿಧಾನಮು ಸೂರ್ಯನಾರಾಯಣಶಾಸ್ತ್ರಿಗಳವರು ಆಂಧ್ರ ರೇಣುಕವಿಜಯದ ಪದ್ಯ ಪುರಾಣ ರಚನೆಯನ್ನು ಉಪಕ್ರಮಿಸಿ ಬಹಳ ಸಮರ್ಥವಾಗಿ ಪೂರ್ತಿಗೊಳಿಸಿದರು. ಇವರ ಮಧುರವೂ ಲಲಿತವೂ ಆದ ಆಂಧ್ರಕವಿತೆಯು ರೇಣುಕವಿಜಯದಲ್ಲಿ ಮತ್ತಿಷ್ಟು ಮಂಜುಳತೆಯನ್ನು ಹೊಂದಿದೆ. ಈ ಉತ್ತಮ ಕೃತಿಯನ್ನು ನೋಡಿ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಕವಿಗಳಿಗೆ ಮಹಾಸಂಭಾವನೆಯನ್ನು ದಯಪಾಲಿಸಿ ಸತ್ಕರಿಸಿದರು. ಈ ಶುಭವಾರ್ತೆಯನ್ನು ರಂಭಾಪುರೀ ಜಗದ್ಗುರು ಮಹಾಸನ್ನಿಧಿಗೆ ಅರಿಕೆಮಾಡಿಕೊಳ್ಳಲಾಗಿ ಶ್ರೀ ಪೂಜ್ಯಪಾದರು ಸಂಮಾನುಗ್ರಹದಿಂದ ಇದರ ಮುದ್ರಣಕ್ಕೆ ಬೇಕಾದ ಸಮಸ್ತ ಸಾಹಾಯ್ಯವನ್ನೂ ಆಶೀರ್ವದಿಸಿದರು. ಮುದ್ರಣವು ಮುಗಿಯುವದರೊಳಗಾಗಿ ಶ್ರೀಪಂಡಿತರು ಇದಕ್ಕೆ ಬೇಕಾದ ಎಲ್ಲ ಚಿತ್ರಗಳನ್ನೂ ಸ್ನಿಗ್ಧಪತ್ರಗಳಲ್ಲಿ ಮುದ್ರಿಸಿಕೊಟ್ಟು ಸಹಾಯ ಮಾಡಿದರು. ಈ ರೂಪವಾಗಿ ಆಂಧ್ರರೇಣುಕವಿಜಯವು ಇದೀಗ ಪ್ರಕಾಶನವನ್ನು ಹೊಂದಿ ಆಂಧ್ರದೇಶದ ವೀರಶೈವರಿಗೆ ಚಿಂತಾಮಣಿಯಂತೆ ದರ್ಶನಕೊಟ್ಟಿದೆ.

ಒಟ್ಟು ೨೫೦ ಪುಟಗಳಿವೆ. ಸುಂದರವಾದ ಆಂಟಿಕ್ ಪೇಪರಿನಲ್ಲಿ ಮುದ್ರಿತವಾಗಿದೆ. ಬಂಧುರವಾದ ರಟ್ಟಿನ ಕಟ್ಟು (ಬೈಂಡು) ಇದೆ. ೪೦ ಪುಟಗಳ ವಿಸ್ತಾರವಾದ ಪೀಠಿಕೆಯಲ್ಲಿ ಶ್ರೀರೇಣುಕನ ಲಿಂಗಾವತಾರತತ್ತ್ವವೂ, ಸಂಸ್ಕೃತ, ಆಂಧ್ರ, ಕರ್ಣಾಟಕ, ಮಹಾರಾಷ್ಟ್ರ, ಹಿಂದಿ, ಆಂಗ್ಲ ಭಾಷೆಗಳಲ್ಲಿರುವ ರೇಣುಕನ ವಾಙ್ಮಯಪರಿಚಯವೂ, ವಿಭೀಷಣಾಗಸ್ತ್ಯಶಂಕರಾಚಾರ್ಯಾದಿಗಳ ಭಿನ್ನಭಿನ್ನಕಾಲಗಳಲ್ಲಿ ರೇಣುಕನ ಅಸ್ತಿತ್ವದ ನಿರ್ಣಯವೂ, ರೇಣುಕಕ್ಷೇತ್ರಗಳ ಪರಿಚಯವೂ ಮುಂತಾದ ವಿಷಯಗಳನ್ನು ಆಧುನಿಕಸಂಶೋಧಕರೊಪ್ಪುವಂತೆ ಅನೇಕಗ್ರಂಥಗಳ ಪ್ರಮಾಣಗಳಿಂದಲೂ ಯುಕ್ತಿಗಳಿಂದಲೂ ವಿವರಿಸಲಾಗಿದೆ. ಈ ಗ್ರಂಥವು ನಮ್ಮ ಶಿವಧರ್ಮಗ್ರಂಥಮಾಲೆಯಲ್ಲಿ ದಶಮಕುಸುಮವಾಗಿ ಅರಳಿದೆ. ಈ ಗ್ರಂಥವು ಸುಂದರವಾಗಿ ಪ್ರಕಟನೆಯಾಗುವುದಕ್ಕೆ ಶ್ರೀರಂಭಾಪುರೀ ಜಗದ್ಗುರುಗಳವರ ಮತ್ತು ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಅಪೂರ್ವವಾದ ಸಹಾಯವೇ ಕಾರಣವಾಗಿದೆ. ಇಂತಹ ಮಹಾರ್ಘತೆಯ ಕಾಲದಲ್ಲಿ ವಿಶೇಷವಾದ ದ್ರವ್ಯವು ವಿನಿಯೋಗವಾಯಿತೆಂದು ಬೇರೆ ಬರೆಯಬೇಕಾಗಿಲ್ಲ. ನನ್ನ ಪ್ರಾರ್ಥನೆಯಂತೆ ಕೇವಲ ನಿರಪೇಕ್ಷತೆಯಿಂದಲೂ ಧರ್ಮಪ್ರಚಾರದೃಷ್ಟಿಯಿಂದಲೂ ಈ ಅಮೂಲ್ಯವಾದ ಆಶ್ರಯವನ್ನನುಗ್ರಹಿಸಿರುವದಕ್ಕಾಗಿ ಶ್ರೀಜಗದ್ಗುರುಗಳವರ ದಿವ್ಯಸನ್ನಿಧಿಯಲ್ಲೂ ಪೂಜ್ಯರಾದ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಲ್ಲೂ ಮಹಾವಿನಯದಿಂದ ಕೃತಜ್ಞತೆಯನ್ನು ಅರ್ಪಿಸುತ್ತೇನೆ.*

ಸಿಕಿಂದ್ರಾಬಾದ್.
22-2-1943

ಹಿರೇಮಠದ ವೀರಭದ್ರಶಾಸ್ತ್ರಿ.

---

* ಈ ಗ್ರಂಥರತ್ನದ ಬೆಲೆಯನ್ನು ಪ್ರಚಾರದೃಷ್ಟಿಯಿಂದ ಕೇವಲ ಒಂದು ರೂಪಾಯಿ ಇಡಲಾಗಿದೆ. ಮ್ಯಾನೇಜರ್ "ವಿಭೂತಿ" ಸಿಕಿಂದ್ರಾಬಾದ್ ಎಂಬಲ್ಲಿ ದೊರೆಯುವುದು.

ಶ್ರೀಮದ್ವೀರಶೈವ ಗುರುಕುಲ
ಸೊಲ್ಲಾಪುರ

ಪಂಚಾಚಾರ್ಯಪ್ರಭಾ ದ್ವಾರಾ ಈ ಮೊದಲೇ ಪ್ರಸಿದ್ಧಿಸಿದಂತೆ ದಾನವೀರರಾದ ಶ್ರೀಮತಿ ಸಿದ್ದವ್ವಬಾಯಿ ಘೋಡಕೆ ಇವರ ಉದಾರತ್ವದಿಂದ ಶ್ರೀ॥ ಷ॥ ಬ್ರ॥ ಚನ್ನವೀರಶಿವಾಚಾರ್ಯರು ಹೋಟಗಿ ಇವರಿಂದ ಮಾಘ ಶು॥ ೭ ಗುರುವಾರ ದಿವಸ ವೀರಶೈವ ಗುರುಕುಲವು ಸ್ಥಾಪಿಸಲ್ಪಟ್ಟಿತು. ಆ ದಿವಸ ಪ್ರಾತಃಕಾಲ ಪಂ॥ ಶ್ರೀ ಜಗದೀಶಶಾಸ್ತ್ರಿಗಳಿಂದ ನೂತನಮಠ ಪ್ರವೇಶೋತ್ಸವವು ಹೋಮಾದಿ ವೈದಿಕ ಕರ್ಮಗಳಿಂದ ಸಾಂಗವಾಗಿ ನೆರವೇರಿಸಲ್ಪಟ್ಟಿತು. ಗಣತೃಪ್ತಿಯಾದ ಮೇಲೆ ವೇದಘೋಷದೊಡನೆ ಗುರುಕುಲವು "ಬಾಲತಪಸ್ವಿ ಬೃಹನ್ಮಠ"ದಲ್ಲಿ ಸ್ಥಾಪಿಸಲ್ಪಟ್ಟಿತು. ಸಾಹಿತ್ಯರತ್ನ, ವೇ॥ ಪಂ॥ ಶ್ರೀ ಜಗದೀಶಶಾಸ್ತ್ರಿಗಳಿಂದ ಪಾಠಪ್ರವಚನವು ಪ್ರಾರಂಭಿಸಲ್ಪಟ್ಟಮೇಲೆ "ಧರ್ಮವೀರ" ಶ್ರೀಮಂತ ಶರಣಪ್ಪಣ್ಣ ಪತ್ತೇಶ್ವರ ದುಬಲಗುಂಡಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ಆರಂಭವಾಯಿತು. ನಾರದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳಿಂದ ಶ್ರೀ ಜಗದಾಚಾರ್ಯರ ಸ್ತೋತ್ರವು ನೆರವೇರಿದಮೇಲೆ ಶ್ರೀ॥ ಷ॥ ಬ್ರ॥ ಪರಾಂಡಕರ, ಡಾಕ್ಟರ್ ಜಗದೇವರಾವ ದೇಶಮುಖ, ಸಿದ್ಧರಾಮಪ್ಪಾ ಚಪ್ಪಳಗಿ, ವೇ॥ ಪಂ॥ ಜಗದೀಶಶಾಸ್ತ್ರಿಗಳು ನಾಲ್ವಾರ, ವೇ॥ ಪಂ॥ ಮಣೂರ ಶಾಸ್ತ್ರಿಗಳು, ರಾ॥ ಮಲ್ಲಿಕಾರ್ಜುನಪ್ಪಾ ಪಾಟೀಲ, ಶ್ರೀಮಂತ ಡೇಕಣೆ, ವೇ॥ ಕಲ್ಲಯ್ಯಸ್ವಾಮೀ ಕಾಶೀಗಾಂವಕರ, ಶಂಕರರಾವ ಕಟಾಪ, ಸೌ॥ ಭಾಗೀರಥೀಬಾಯಿ ಕಟಾಪ ಇವರ ಭಾಷಣಗಳಾದುವು. ಹೋಟಗಿ ಶ್ರೀಗಳು ಶ್ರೀಮದ್ವೀರಶೈವ ಗುರುಕುಲದ ಉದ್ದೇಶ ಮತ್ತು ಧ್ಯೇಯಗಳನ್ನು ಸರಿಯಾಗಿ ಪ್ರತಿಪಾದಿಸಿದರು. ಅಧ್ಯಕ್ಷರ ಸಮಾರೋಪ ಭಾಷಣವಾದಮೇಲೆ ಶ್ರೀ ಜಗದಾಚಾರ್ಯರ ಜಯಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಶ್ರೀಮದ್ವೀರಶೈವ ಗುರುಕುಲಕ್ಕೆ ಸಹಾಯಮಾಡಿದವರು

೭೫ ರೂಪಾಯಿ ತಿಂಗಳೊಂದಕ್ಕೆ ಶ್ರೀಮತಿ ಸಿದ್ದವ್ವಬಾಯಿ ಘೋಡಕೆ. ೧೦ ರೂಪಾಯಿ ಬಾಡಿಗೆ ಒಡುವ ಮನೆ ಶ್ರೀಪತಿ ಸಂಗಪ್ಪಾ ಜಲ್ಲಾಮಲ್ಲೆ. ೧೨೦೦ ರೂ ಚನ್ನವ್ವ ಬೈರೋಪಾಟೀಲ. ೫೦೧ ಅಣ್ಣಾರಾವ್ ಪಾಟೀಲ ಖಾನಾಪುರ ೧೦೧ ಶ್ರೀ ರಾಮಚಂದ್ರಪ್ಪ ಪಾಟೀಲ ಮೋಘೆ ೫೧ ಶ್ರೀ ಶಂಕರರಾವ ದರ್ಗೋಪಾಟೀಲ ಸೊಲ್ಲಾಪುರ ೨೫ ರೂ ಮಡಿವಾಳಪ್ಪ ಪಾಟೀಲ ಸಕ್ಕರಗೀ ೧೧ ರೂ. ಶಿವಲಿಂಗಪ್ಪ ಪಾಟೀಲ ದೇವಂತಿಗೀ ೫ ರೂ ತಿಂಗಳಿಗೆ ಶ್ರೀ ರೇವಣಸಿದ್ಧಪ್ಪಾ ಗೋಟೇ ನಿಂಬರಗಿ ೧೨ ರೂ ವರ್ಷಕ್ಕೆ ಸೌ॥ ಪಾರ್ವತೀಬಾಯಿ ತಮಶೆಟ್ಟಿ. ಇನ್ನೂ ಅನೇಕರು ಕೊಡಲೊಪ್ಪಿದ್ದಾರೆ. ಈ ಗುರುಕುಲವು ಆದರ್ಶಗುರುಕುಲವಾಗುವಲ್ಲಿ ಸಂಶಯವಿಲ್ಲ. ಈ ಗುರುಕುಲದಲ್ಲಿ

(ಮುಂದೆ ೨ ಪುಟವನ್ನು ನೋಡಿ)

ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತೀಮಹೋತ್ಸವ

ಮಹಾಶಿವರಾತ್ರಿ

ಭರತಖಂಡದಲ್ಲಿರುವ ಸಮಸ್ತವೀರಶೈವರು ಮಹಾಶಿವರಾತ್ರಿಯ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಹಾಗೂ ಶ್ರೀಜಗದ್ಗುರು ವಿಶ್ವಾರಾಧ್ಯರ ಜಯಂತೀಮಹೋತ್ಸವವನ್ನು ಅತ್ಯಂತ ವೈಭವದಿಂದ ನೆರವೇರಿಸಿ ಧನ್ಯರಾಗಬೇಕು. ಮತಸ್ಥಾಪನಾಚಾರ್ಯರ ಜಯಂತಿಗಳನ್ನು ಮಾಡುವದೇ ಆಸ್ತಿಕಮತಾನುಯಾಯಿಗಳ ಮುಖ್ಯ ಧರ್ಮವಾಗಿದೆ. ಮತಸ್ಥಾಪನಾಚಾರ್ಯರ ಜಯಂತಿಯನ್ನು ದೊಡ್ಡ ಹಬ್ಬದಂತೆ ಅತ್ಯಂತ ವೈಭವದಿಂದ ಆಚರಿಸಬೇಕು. ಪ್ರತಿಯೊಂದು ಗ್ರಾಮದಲ್ಲಿಯೂ ಮಹಾಶಿವರಾತ್ರಿಯ ದಿವಸ ಈ ಮಹಾಚಾರ್ಯರ ಭಾವಚಿತ್ರಗಳನ್ನು ಪೀಠದಲ್ಲಿರಿಸಿ ಷೋಡಶೋಪಚಾರಗಳಿಂದ ಪೂಜಿಸಿ ಮಾಹೇಶ್ವರಾರಾಧನೆಯನ್ನು ಮಾಡಬೇಕು. ಆ ದಿವಸವೇ ಈ ಪೂಜ್ಯಪಾದರ ಭಾವಚಿತ್ರಗಳನ್ನು ಪಲ್ಲಕ್ಕಿಯಲ್ಲಿರಿಸಿ ಸಕಲ ವಾದ್ಯವೈಭವದೊಡನೆ ಮಹೋತ್ಸವವನ್ನು ನೆರವೇರಿಸಬೇಕು. ಇದೇ ಲಿಂಗಾಂಗಿಗಳ ಮೂಲಧರ್ಮವು! ಗುರುಗಳ ಜಯಂತಿಗಳನ್ನು ಭಕ್ತಿಯಿಂದ ಆಚರಿಸುವವರೇ ನಿಜವಾದ ವೀರಶೈವರು.

ಸೂಚನೆ

ಪ್ರತಿವರ್ಷ ಪದ್ಧತಿಯಂತೆ ಮಹಾಶಿವರಾತ್ರಿ ನಿಮಿತ್ತವಾಗಿ ಮುಂದಿನ (ತಾ॥ ೮-೩-೧೯೪೩) ವಾರದ ಪತ್ರಿಕೆಯು ಹೊರಡುವುದಿಲ್ಲ.

ಮ್ಯಾ.

ಯುದ್ಧವಾರ್ತೆ.

ಅಮೇರಿಕನ್ನರ ಸೇವೆ

ಅಮೇರಿಕದ ೧೫ ಲಕ್ಷ ಯೋಧರು ವಿದೇಶಗಳಿಗೆ ಹೋಗಿ ಸಮರಸೇವೆಯನ್ನು ಸಲ್ಲಿಸುತ್ತಿರುವರೆಂದು ಅಮೇರಿಕದ ಯುದ್ಧಶಾಖೆಯ ಉಪಕಾರ್ಯದರ್ಶಿಗಳು ತಿಳಿಸಿದರು

ಸಬ್‌ಮೆರೀನ್ ಕಾಟವು ಇನ್ನೂ ನಿಂತಿಲ್ಲ

ಜರ್ಮನ್ ಸಬ್‌ಮೆರೀನ್ ಕಾಟವು ಇನ್ನೂ ನಿಂತಿಲ್ಲವೆಂದೂ, ಆದ್ದರಿಂದ ಪರಿಸ್ಥಿತಿ ಇನ್ನೂ ಆಶಾದಾಯಕವಾಗಿಲ್ಲವೆಂದೂ, ಮುಳುಗಿಸುವ ಸಂಖ್ಯೆಗಿಂತ ಹೆಚ್ಚು ಪ್ರಮಾಣದಲ್ಲಿ ಜರ್ಮನರು ಸಬ್‌ಮೆರೀನ್‌ಗಳನ್ನು ನಿರ್ಮಿಸುತ್ತಿದ್ದಾರೆಂದೂ ಕರ್ನಲ್ ನಾಕ್ಸರು ಹೇಳಿಕೆಯನ್ನಿತ್ತಿರುವರು

ಯೂರೋಪಿನ ಮೇಲೆ ೧ ಲಕ್ಷ ಟನ್ ಬಾಂಬುಗಳನ್ನು ಹಾಕಲಾಗಿದೆ

ಯುದ್ಧ ಆರಂಭವಾದಂದಿನಿಂದ ಇದುವರೆಗೆ ಜರ್ಮನಿ, ಇಟಲಿ, ಫ್ರಾನ್ಸ್ ಮೊದಲಾದ ಜರ್ಮನರು ಆಕ್ರಮಿಸಿರುವ ಯೂರೋಪ್ ದೇಶಗಳ ಮೇಲೆ ಬ್ರಿಟಿಷ್ ವಿಮಾನಗಳು ೧ ಲಕ್ಷ ಟನ್ ವಿನಾಶ ಬಾಂಬುಗಳನ್ನು ಹಾಕಿವೆಯೆಂದು ತಿಳಿಯುತ್ತದೆ

ಜಪಾನರೇ ಮುಖ್ಯ ಶತ್ರುಗಳು

ತಮ್ಮ ಮುಖ್ಯ ಶತ್ರುಗಳು ಜರ್ಮನರೋ? ಜಪಾನರೋ? ಎಂದು ಅಮೇರಿಕನರ ಮುಂದೆ ಓಟಿಗೆ ಹಾಕಿದಾಗ ಸೇ॥ ೫೩ ಜನರು ಜಪಾನರೆಂದೂ ಸೇ॥ ೩೪ ಜನರು ಜರ್ಮನರೆಂದೂ ತಿಳಿಸಿದರು ಸೇ॥ ೧೩ ಜನರು ಯಾವ ನಿರ್ಧರಕ್ಕೂ ಬರಲಿಲ್ಲ. ಒಂದು ವರ್ಷದ ಹಿಂದೆ ಇದೇ ರೀತಿ ಓಟು ತೆಗೆದುಕೊಂಡಾಗ ಸೇ॥ ೬೪ ಜನರು ಜರ್ಮನರೆಂದು ಸೂಚಿಸಿದ್ದರು ೬ ತಿಂಗಳ ಕೆಳಗೆ ಸೇ॥ ೫೦ ಜನರು ಜರ್ಮನರೆಂದಿದ್ದರು ಈಗ ಜರ್ಮನರಿಗಿಂತ ಜಪಾನರೇ ಪ್ರಬಲ ಶತ್ರುಗಳೆಂದು ಬಹು ಮಂದಿ ಯೋಚಿಸುವಂತಾಗಿದೆ.

ಟ್ಯುನಿಷಿಯಾದಲ್ಲಿ ಶತ್ರುಸೈನ್ಯಗಳ ಹಿಂದೋಟ.

ಉತ್ತರ ಆಫ್ರಿಕಾದ ಕ್ಯಾಸರಿನ್ ವಾಯುವ್ಯದಲ್ಲಿ ಕಳೆದ ಮೂರು ದಿನಗಳ ಭೀಕರ ಕಾಳಗದ ಪರಿಣಾಮವಾಗಿ ಜರ್ಮನರನ್ನು ಹಿಂದಕ್ಕಟ್ಟಲು ಬ್ರಿಟಿಷ್ ಮತ್ತು ಅಮೇರಿಕನ್ ಸೇನೆಗಳಿಗೆ ಸಾಧ್ಯವಾಯಿತು. ಅವರು ಶತ್ರುವಿನ ಬೆನ್ನ ಹಿಂದೆಯೇ ಇದ್ದು ತುಂಬ ನಷ್ಟವನ್ನುಂಟು ಮಾಡಿದರು. ಶತ್ರುಗಳ ಅನೇಕ ಸಾಮಗ್ರಿಯನ್ನು ವಶಪಡಿಸಿಕೊಂಡರು. ಮಿತ್ರರ ಯಂತ್ರಸಜ್ಜಿತ ಪಡೆಯು ಜರ್ಮನರಿಗೆ ಬಲವಾದ ಪೆಟ್ಟುಕೊಟ್ಟಿತು. ಟ್ಯುನೀಷಿಯನ್ ತೀರದಲ್ಲಿ ಮೋಟಾರು ವಾಹನಗಳನ್ನು ಒಯ್ಯುತ್ತಿದ್ದ ೫ ದೋಣಿಗಳನ್ನು ಮುಳುಗಿಸಲಾಯಿತು. ಬಿಜರ್ಟಾ ಮೇಲೆ ಬಾಂಬು ಸುರಿಸಲಾಯಿತು ಇತ್ತೀಚಿನ ಸುದ್ದಿಯಂತೆ ಜರ್ಮನರ ಪಡೆಲ್ಲವೂ ಕ್ಯಾಸರೀನ್ ಕಣಿವೆಯಮೂಲಕ ಹಿಮ್ಮೆಟ್ಟುತ್ತಿದೆಯೆಂದು ಗೊತ್ತಾಗುತ್ತದೆ.

ಜಪಾನನ್ನು ಉರುಳಿಸಲು ೧೦೦೦ ವಿಮಾನಗಳು ಸಾಕು

ಜಪಾನನ್ನು ಉರುಳಿಸಲು ಚೀಣರ ಭೂಸೈನ್ಯಗಳಿಗೆ ೧೦೦೦ ವಿಮಾನಗಳನ್ನು ಕೊಟ್ಟರೆ ಸಾಕು ಎಂದು ಚೀಣಾದ ವಿದೇಶಾಂಗ ಮಂತ್ರಿಗಳಾದ ಡಾ|| ಸೂಂಗ್ ರವರು ಅಮೇರಿಕೆಯಲ್ಲಿ ಹೇಳಿದರು

ರಷ್ಯ ರಣರಂಗದಲ್ಲಿ ವಸಂತಋತುವು ಪ್ರಾರಂಭವಾಯಿತು

ರಷ್ಯದ ದಕ್ಷಿಣರಣರಂಗಗಳಲ್ಲಿ ಅನಿರೀಕ್ಷಿತವಾಗಿ ಹಿಮವು ಕರಗಲು ಆರಂಭವಾದುದರಿಂದ ರಷ್ಯನರು ರಭಸದಿಂದ ಮುಂದೆ ನುಗ್ಗುತ್ತಿದ್ದುದಕ್ಕೆ ಸ್ವಲ್ಪ ತಡೆಯಾಗಿದೆ. ಕೆಲವು ರಣಕ್ಷೇತ್ರಗಳಲ್ಲಿ ಜರ್ಮನರು ಸ್ವಲ್ಪ ಕೈ ಜೋರುಮಾಡಲು ಇದೇ ಕಾರಣವೆಂದು ನಂಬಲಾಗಿದೆ

೨೦ ಜಪಾನ ವಿಮಾನಗಳ ನಾಶ

೨೫ನೇ ತಾ|| ದಿವಸ ಅಸ್ಸಾಮಿನಲ್ಲಿರುವ ಅಮೇರಿಕಾ ವಿಮಾನ ನಿಲ್ದಾಣದ ಮೇಲೆ ದಾಳಿ ಮಾಡಿದ ಶತ್ರುವಿಮಾನಗಳ ಸಂಖ್ಯೆ ೪೬ ಎಂದು ಈಗ ಗೊತ್ತಾಗಿದೆ ಸುಮಾರು ೩೦೦ ಚದರ ಮೈಲಿಗಳಷ್ಟು ಪ್ರದೇಶದಲ್ಲಿ ಈ ವಿಮಾನಗಳು ಹಾರಾಡಿ, ಮಿತ್ರವಿಮಾನಗಳ ಸಂಗಡ ಹೋರಾಡಿದವು ಸುಮಾರು ೨೦ ಶತ್ರುವಿಮಾನಗಳು ನಾಶವಾದವೆಂದು ನಂಬಲಾಗಿದೆ ಹೆಚ್ಚಿನ ನಷ್ಟವೇನೂ ಸಂಭವಿಸಲಿಲ್ಲ

ರಷ್ಯನ್ ಸೇನೆಯು ಜರ್ಮನ್ ಗಡಿಗೆ ೨೦೦ ಮೈಲಿಗಳ ದೂರದಲ್ಲಿದೆ.

ಕ್ಯಾಲಿನಿನ್ ಯುದ್ಧರಂಗದಲ್ಲಿ ಜರ್ಮನ್ ಗಡಿಗೆ ೨೦೦ ಮೈಲಿಗಳ ದೂರದಲ್ಲಿ ಕದನವಾಗುತ್ತಿದೆ ಇಲ್ಲಿರುವ ಸೈನ್ಯಗಳು ವಾಯುವ್ಯ, ವೋಲ್ಖೋವ್, ಲೆನಿನ್‌ಗ್ರಾಡ್ ರಂಗಗಳಲ್ಲಿರುವ ಸೇನೆಗಳಿಗೆ ನೆರವಿತ್ತು ಶತ್ರುಗಳನ್ನು ಬಾಲ್ಟಿಕ್ ಸಮುದ್ರದೊಳಗೆ ತಳ್ಳಲೆಳಸುತ್ತಿವೆ ಎಂಬುದಾಗಿ ಉತ್ತರ ಕಾಕಸಸ್ ರಂಗದ ದಳಪತಿಯು ಸ್ಟಾಲಿನ್ನರಿಗೆ ಸುದ್ದಿಯನ್ನು ಕಳಿಸಿದ್ದಾನೆ

ಜರ್ಮನರಮೇಲೆ ಬೀಳಲು ಇದು ಸರಿಯಾದಕಾಲ

ಲಂಡನ್ನಿನ ಲಾರ್ಡ್ಸ್ ಸಭೆಯಲ್ಲಿ ಮಾಜಿ ವಿಮಾನ ನಿರ್ಮಾಣಶಾಖಾ ಮಂತ್ರಿ ಲಾರ್ಡ್ ಬಿವರ್ ಬ್ರೂಕ್ ರವರು ಮಾತನಾಡುತ್ತ " ಜರ್ಮನರಮೇಲೆ ಬೀಳಲು ಮಿತ್ರರಿಗಿಂದೇ ಸಕಾಲವಾಗಿದೆ. ಜೂನ್ ತಿಂಗಳಿನಲ್ಲಿ ಜರ್ಮನರು ರಷ್ಯನರಮೇಲೆ ತಿರುಗಿಬೀಳುವ ಸಂಭವವುಂಟು. ಅದಕ್ಕೆ ಅವಕಾಶ ಕೊಡಕೂಡದು. ಆಫ್ರಿಕದಿಂದ ಯೂರೋಪಿನ ಮೇಲೆ ಬೀಳಲು ಬಹಳ ಅನುಕೂಲವಿದೆಯಾದರೂ ಬ್ರಿಟನ್ನಿನಿಂದ ಬೀಳುವದೇ ಮೇಲು" ಎಂದು ತಿಳಿಸಿದರು.

ಮಿತ್ರದೇಶಗಳಿಗೆ ಚೀಣರ ಸಂದೇಶ

ಜಪಾನರ ಶಕ್ತಿಯು ಹೆಚ್ಚುತ್ತಿದೆ. ಎಂದಿಗೂ ಅದು ಕೈಕಟ್ಟಿ ಕುಳಿತುಕೊಂಡು ತನ್ನ ನಾಶವನ್ನು ನೋಡಲು ಕಾಯುವುದಿಲ್ಲ. ಜಪಾನನ್ನು ನೇರವಾಗಿ ಮುತ್ತಿ ನಾಶಪಡಿಸುವ ಮಾತು ಆಕರ್ಷಕವಾಗಿ ಕಂಡು ಬಂದರೂ, ಜಪಾನರ ವಶದಲ್ಲಿ ಮುಖ್ಯಮುಖ್ಯವಾದ ಆಯಕಟ್ಟಿನ ಪ್ರದೇಶಗಳು ಸಿಕ್ಕಿ ಬಿದ್ದಿರುವುದನ್ನು ಮರೆಯಲಾಗದು. ಮೊದಲು ಮಿತ್ರರಾಷ್ಟ್ರಗಳೆಲ್ಲವೂ ಸೇರಿ ಜಪಾನನ್ನು ಧ್ವಂಸಮಾಡಲು, ತಕ್ಕ ಯೋಜನೆಯೊಂದನ್ನು ಸಿದ್ಧಮಾಡಬೇಕು. ಎಂಬುದಾಗಿ ಲಂಡನ್ನಿಗೆ ಬಂದಿರುವ ಚೀಣಾದ ಮಿಲಿಟರಿ ಮಂಡಲದ ನಾಯಕರಾದ ಹ್ಯೂ-ಶಿಂಗ್-ಶಿನ್-ಹ.ವಾರವರು ಹೇಳಿದರು

ರಷ್ಯನರ ಪರಾಕ್ರಮವು ಜರ್ಮನರಿಗೆ ಭಯವನ್ನು ಹುಟ್ಟಿಸಿದೆ

ಜರ್ಮನ್ ಸೈನ್ಯವಿಮರ್ಶಕ ದಳಪತಿ ಡಿಟ್‌ಮಾರ್ ರವರು ತಮ್ಮ ವಾರದ ಭಾಷಣದಲ್ಲಿ " ರಷ್ಯನರು ಪಡೆಯುತ್ತಿರುವ ವಿಜಯವು ನಮಗೇ ವಿಸ್ಮಯವನ್ನುಂಟುಮಾಡುತ್ತಿವೆ ರಷ್ಯನರು ದುರ್ಬಲರೆಂದು ನಾವು ಎಣಿಸಿರಲಿಲ್ಲ ಈಗಲೂ ಎಣಿಸುತ್ತಿಲ್ಲ. ಅವರು ಅಧಿಕ ಪ್ರಮಾಣದಲ್ಲಿ ಶಸ್ತ್ರಾಸ್ತ್ರಗಳನ್ನು ನಿರ್ಮಿಸುತ್ತಿರುವ ಅಂಶವೂ ತಿಳಿದಿದೆ ಫಿನ್‌ಲೆಂಡ್ ಯುದ್ಧದಲ್ಲಿ ರಷ್ಯನರು ಆಧುನಿಕ ಅಸ್ತ್ರಗಳನ್ನು ಉಪಯೋಗಿಸಲಿಲ್ಲವೆಂಬುದೂ ನಮಗೆ ಗೊತ್ತಿತ್ತು. ಈಗ ಯುದ್ಧಾನುಭವವು ಅವರಿಗೆ ಪೂರ್ಣವಾಗಿದೆಯೆಂಬುದೂ ಸಹ ನಮಗೆ ಅನುಭವವಾಗಿದೆ ಆದರೆ ನಾವು ಹಿಮ್ಮೆಟ್ಟಿರುವುದಕ್ಕೆ ಶತ್ರುವಿನ ಮೇಲ್ಮೆ ಕಾರಣವಲ್ಲ ನಮ್ಮ ಅದೃಷ್ಟ ಕಾರಣ ಈಗ ಅವರಿಗೆ ಅನುಕೂಲವಾಗಿದೆ ಈಗ ಆಗಿರುವ ಘಟನೆಗಳು ಮತ್ತೆಂದೂ ಆಗುವಂತಿಲ್ಲ ' ಎಂದು ತಿಳಿಸಿದ್ದಾರೆ

ಭಾರತ ಸಚಿವರ ಹೇಳಿಕೆ.

ಭಾರತ ಸಚಿವರಾದ ಶ್ರೀ ಅಮೇರಿಯವರು ಗಾಂಧಿಯವರ ಬಿಡುಗಡೆಯ ವಿಚಾರವಾಗಿ ಈರೀತಿ ಹೇಳಿಕೆಯೊಂದನ್ನು ಪ್ರಕಟಿಸಿರುವರು.

" ಗಾಂಧಿಯವರು ವೈಸರಾಯರಿಗೆ ಬರೆದಿರುವ ಪತ್ರಗಳಲ್ಲಿ ಕಾಂಗ್ರೆಸ್ ಪಕ್ಷದ ಸಾಮೂಹಿಕ ಚಳವಳಿ ನಿರ್ಣಯದ ಫಲವಾಗಿ ದೇಶದಲ್ಲಾದ ದೌರ್ಜನ್ಯಗಳಿಗಾಗಿ ವಿಷಾದ ಪಡುವ ಸೂಚನೆಯನ್ನೇ ಮಾಡಿಲ್ಲ ಯಾವ ಷರತ್ತೂ ಇಲ್ಲದೆ ಬಿಡುಗಡೆ ಹೊಂದುವುದೇ ಗಾಂಧಿಯವರ ಉದ್ದೇಶವೆಂಬುದು ಸ್ಪಷ್ಟವಾಗಿದೆ ಇಂಡಿಯಾ ಸರ್ಕಾರದ ಮಂತ್ರಿಮಂಡಲದಲ್ಲಿ ೯ ಜನ ಭಾರತೀಯರಿದ್ದಾರೆ ೪ ಮಂದಿ ಮಾತ್ರ ಐರೋಪ್ಯರಿರುವರು ಈ ಮಂತ್ರಿಮಂಡಲದ ಸಲಹೆಯ ಮೇಲೆ ನಡೆಯುವವರು ವೈಸರಾಯರು ಇಂಡಿಯಾ ಸರ್ಕಾರವು ಗಾಂಧಿಯವರ ಬೆದರಿಕೆಗೆ ಬಗ್ಗುವುದಿಲ್ಲವೆಂದು ನಿಶ್ಚಯಿಸಿದೆ ಆ ತೀರ್ಮಾನವನ್ನು ಸಮ್ರಾಟ್ ಸರ್ಕಾರವೂ ಒಪ್ಪಿದೆ ಇಂಡಿಯಾಕ್ಕೆ ಶತ್ರುಗಳ ದಂಡಯಾತ್ರೆಯ ಭಯವಿನ್ನೂ ತಪ್ಪಿಲ್ಲ ಇಂತಹ ಉತ್ಕಟವಾದ ಸಂಧಿಕಾಲದಲ್ಲಿ ಅಲ್ಲಿಯ ಸರಕಾರವನ್ನು ತಟಸ್ಥವಾಗಿಡಲು ಉದ್ದೇಶಪೂರ್ವಕವಾಗಿ ಹಂಚಿಕೆ ಹಾಕಿದ್ದಲ್ಲದೆ, ಈಗಲೂ ತಮ್ಮ ಮನೋಭಾವವನ್ನು ಬದಲಾಯಿಸಲು ಇಷ್ಟಪಡದಿರುವವರನ್ನು ನಿರ್ಬಂಧದಿಂದ ಬಿಡುವುದು ದೇಶಕ್ಕೆ ಹಿತವಲ್ಲ ಗಾಂಧಿಯವರನ್ನೂ ಕಾಂಗ್ರೆಸ್ಸಿನ ಇತರರನ್ನೂ ಬೇರೆಬೇರೆಯೆಂದು ನಂಬಲಾಗದು ಗಾಂಧಿಯವರಿಗೆ ನಿರ್ಬಂಧದಲ್ಲಿದ್ದಾಗಲೂ ಸ್ವತಂತ್ರವಾಗಿ ವರ್ತಿಸಿ ವೈದ್ಯಕೀಯ ಸಲಹೆ ಪಡೆಯಲು, ಬೇಕಾದವರನ್ನು ಭೇಟಿಮಾಡಲು ಅವಕಾಶ ಕಲ್ಪಿಸಿದೆ.'

ಜರ್ಮನ್ ಸ್ಥಾನಗಳಮೇಲೆ ಪ್ರಬಲ ವಿಮಾನದಾಳಿಗಳು

26 ನೆಯ ತಾರೀಖು ರಾತ್ರಿ ಜರ್ಮನಿಯ ನ್ಯೂರೆಂಬರ್ಗ್ ಪಟ್ಟಣದ ಮೇಲೆ ಬ್ರಿಟಿಷ್ ವಿಮಾನಗಳು ದಾಳಿ ನಡೆಸಿದವು. ಹಲವು ಬಾಂಬುಗಳನ್ನು ಹಾಕಲಾಯಿತು. ಈಗಾಗಲೇ ನ್ಯೂರೆಂಬರ್ಗ್ ಮೇಲೆ ನಾಲ್ಕಾವರ್ತಿ ದಾಳಿ ನಡೆದಿತ್ತು 9 ಬ್ರಿಟಿಷ್ ವಿಮಾನಗಳು ವಾಪಸು ಬರಲಿಲ್ಲ ಬ್ರಿಟಿಷ್ ಮಸ್ಕಿಟೊ ಬಾಂಬರ್ ವಿಮಾನಗಳು ಬ್ರಿಟ್ಟನಿಯದಲ್ಲಿಯ ರೇನ ಎಂಬ ಜರ್ಮನ್ ನೌಕಾ ನಿಲ್ದಾಣದ ಮೇಲೆ ಬಲವಾಗಿ ದಾಳಿ ನಡೆಸಿದವು.

ಮಾರತ್‌ವ್ಯೂಹದ ಮೇಲೆ ದಾಳಿ

ದಕ್ಷಿಣ ಟ್ಯೂನೀಷಿಯಾದಲ್ಲಿ ಮಾರೆತ್ ರಕ್ಷಣಾವ್ಯೂಹದಲ್ಲಿ ೮ನೇ ಬ್ರಿಟಿಷ್ ಸೈನ್ಯವು ಪ್ರಬಲವಾಗಿ ದಾಳಿ ನಡೆಸುತ್ತಿವೆ ೮ನೇ ಬ್ರಿಟಿಷ್ ಸೈನ್ಯಕ್ಕೂ ಉತ್ತರ ಟ್ಯೂನೀಷಿಯಾದಲ್ಲಿರುವ ೧ನೇ ಬ್ರಿಟಿಷ್ ಸೈನ್ಯಕ್ಕೂ ಇರುವ ದೂರವನ್ನು ಕ್ರಮಕ್ರಮವಾಗಿ ಕಡಿಮೆ ಮಾಡಲಾಗುತ್ತಿದೆ.

ನಾಗಪ್ರತಿಷ್ಠಾಮಹೋತ್ಸವ

ಶ್ರೀಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ಮಹಾಪ್ರಭುಗಳವರು ೨೫ನೆಯ ತಾರೀಖಿನ ದಿವಸ ಚಾಮುಂಡಿಬೆಟ್ಟದ ಮೇಲಿರುವ ರಾಜೇಂದ್ರ ವಿಲಾಸ ಭವನದ ಆವರಣದಲ್ಲಿ ನಾಗಪ್ರತಿಷ್ಠಾ ಮಹೋತ್ಸವವನ್ನು ವಿಶೇಷ ವಿಜೃಂಭಣೆಯಿಂದ ನೆರವೇರಿಸಿದರು.

ರಾಜಕುಮಾರಿಯವರ ವಿವಾಹ

ಮೈಸೂರು ಶ್ರೀಮನ್ಮಹಾರಾಜರವರ ಸಹೋದರಿಯವರಾದ ರಾಜಕುಮಾರಿ ಶ್ರೀ ಸುಜಯಕಾಂತಮ್ಮಣ್ಣಿಯವರನ್ನು ಗುಜರಾಥ ದೇಶದಲ್ಲಿರುವ ಸಾನಂದ್ ಸಂಸ್ಥಾನದ ಠಾಕೂರ್ ಸಾಹೇಬರವರ ಪುತ್ರರಾದ ಯುವರಾಜ ಶ್ರೀ ರುದ್ರದತ್ತಸಿಂಗ್‌ರವರಿಗೆ ಕೊಟ್ಟು ವಿವಾಹಮಹೋತ್ಸವವು ಮೈಸೂರು ಅರಮನೆಯಲ್ಲಿ ತಾ|| ೨೫-೩-೪೩ ನೆಯ ದಿನ ನೆರವೇರುವಂತೆ ನಿಶ್ಚಯವಾಗಿದೆ ಸಂಗ್ರಾಮ ಪರಿಸ್ಥಿತಿಯ ನಿಮಿತ್ತ ಈ ಮಹೋತ್ಸವವನ್ನು ಆಡಂಬರದಿಂದ ನಡೆಸುವುದಿಲ್ಲವೆಂದು ಗೊತ್ತಾಗಿದೆ. ಮಿತವಾಗಿ ಆಹ್ವಾನಗಳು ಹೋಗಲಿವೆ. ಸುಮಾರು ೧೨ ಜನ ರಾಜಮಹಾರಾಜರು ಈ ವಿವಾಹ ಮಹೋತ್ಸವಕ್ಕೆ ಬರತಕ್ಕವರಾಗಿದ್ದಾರೆಂದು ತಿಳಿಯುತ್ತದೆ

ರಾಣಿ ಚೌರಮ್ಮಣ್ಣಿಯವರ ನಿಧನ.

ನೀಲಗಿರಿ ಡಿ|| ನೆಲ್ಯಾಳಸಂಸ್ಥಾನದ ರಾಣಿಯವರಾಗಿದ್ದ ಶ್ರೀಮತಿ ಚೌರಮ್ಮಣ್ಣಿಯವರು ಕಳೆದ ತಿಂಗಳು 19ನೆಯ ತಾರೀಖಿನ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳುಹಿಸಲು ಅತ್ಯಂತ ವಿಷಾದವೆನಿಸುತ್ತದೆ ಸದರಿ ರಾಣಿಯವರು ಒಳ್ಳೇ ಧರ್ಮಪರಾಯಣೆಯರಾಗಿದ್ದು ವೀರಶೈವಧರ್ಮಜಾಗೃತಿಗಾಗಿ ವಿಶೇಷ ದಾನಧರ್ಮಗಳನ್ನು ಮಾಡಿದವರಾಗಿದ್ದರು ಇವರ ವಿಯೋಗದಿಂದ ನೆಲ್ಯಾಳಸಂಸ್ಥಾನಕ್ಕೂ ವೀರಶೈವ ಮತಕ್ಕೂ ಮಹಾಹಾನಿಯೆಂದು ಹೇಳಬೇಕಾಗಿದೆ ಜಗದೀಶ್ವರನು ಶ್ರೀಮತಿ ರಾಣಿಯವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇವೆ

ಸ್ವೀಕಾರ.

ವಿಜಾಪುರ ಟವನ್ನಿನಲ್ಲಿರುವ ವೇ|| ಮಂತಯ್ಯ ಬಸಯ್ಯ ಕರ್ಪೂರಮಠ ಇವರು ಪ್ರಭಾಪೋಷಣಕ್ಕೋಸ್ಕರ **15** ರೂಪಾಯಿಗಳನ್ನು ಕಳುಹಿಸಿರುತ್ತಾರೆ.

ಹುಬ್ಬಳ್ಳಿ ಟವನ್ನಿನಲ್ಲಿರುವ ಮ|| ರಾ|| ಶಂಕರಗೌಡ ಪಾಟೀಲ್ ಇವರಿಗೆ ಮ|| ರಾ|| ಬೆನಕನಗೌಡರ ಪುತ್ರಿ ಚಿ|| ಸೌ|| ಕಾಶವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ವೇ|| ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರ ಹೇಳಿಕೆಯ ಮೇರೆಗೆ ಪ್ರಭಾಪೋಷಣಕ್ಕಾಗಿ ತೆಗೆಯುಸಿದ **1** ರೂಪಾಯಿ ಮತ್ತು ಹುಬ್ಬಳ್ಳಿಯಲ್ಲಿರುವ ಶ್ರೀಮತಿ ಗುರುಸಿದ್ಧವ್ವ ಕಾಡಪ್ಪ ಶೆಟ್ಟರ ಇವರು ಚಿ|| ಸಿದ್ಧಪ್ಪ ಜನಕತಂದಿ ಬಸಪ್ಪ ಅಯ್ಯಪ್ಪ ಶೆಟ್ಟರ ಸಾ|| ಹುಬ್ಬಳ್ಳಿ ಇವನನ್ನು ವಿಧ್ಯುಕ್ತವಾಗಿ ತಾ|| 18-2-43 ನೇ ಇಸವಿ ದಿವಸ ದತ್ತಪುತ್ರನನ್ನಾಗಿ ಸ್ವೀಕರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯುಸಿದ **2** ರೂಪಾಯಿ ಒಟ್ಟು **3** ರೂಪಾಯಿಗಳು ವೇ|| ಹುಬ್ಬಳ್ಳಿ ಹಿರಿಯಮಠದ ಸೋಮನಾಥಯ್ಯನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಡಿ|| ಹೈಸಾಪುರಗ್ರಾಮದ ಕೃಷ್ಣಾನದೀ ದಡದಲ್ಲಿರುವ ಹಿರೇಮಠದ ನಾಲ್ಕುಜನ ಪೂರ್ವಿಕರ ಸಮಾಧಿಗಳ ಮೇಲೆ ಲಿಂಗಸ್ಥಾಪನೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯುಸಿದ **1** ರೂಪಾಯಿಯು ವೇ|| ಹೈಸಾಪುರ ಹಿರಿಯಮಠದ ಗುರುಪ್ಪಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೧ ನೆಯ ಪುಟದಿಂದ ಮುಂದುವರಿದುದು)

ಸಾಹಿತ್ಯ ಗ್ರಂಥಗಳ ಜೊತೆಯಲ್ಲಿ ಮತಗ್ರಂಥಗಳ ಅಭ್ಯಾಸವೂ ಜರುಗುವುದು. ಆದುದರಿಂದ ಗುರುವರ್ಗದ ಗುರುಮೂರ್ತಿಗಳು ಇಲ್ಲಿ ಅಧ್ಯಯನಮಾಡಿ ಆಚಾರ್ಯ ತತ್ವಪ್ರಚಾರದಲ್ಲಿ ತತ್ಪರರಾಗಬೇಕಾಗಿ ಕೋರಿಕೆ.

ಈ ಗುರುಕುಲದ ಸರ್ವಭಾರವೂ ಹೋಟಗೀ ಬೃಹನ್ಮಠಾಧ್ಯಕ್ಷರಾದ ಶ್ರೀ ಚನ್ನವೀರಶಿವಾಚಾರ್ಯರ ಮೇಲೆಯೇ ಇರುತ್ತದೆ. ಈ ಗುರುಕುಲದಲ್ಲಿ ವಸತಿಗೂ, ಊಟಕ್ಕೂ ಅನುಕೂಲತೆಗಳನ್ನೊದಗಿಸಲಾಗಿದೆ. ಗುರುಕುಲದಲ್ಲಿ ವೇ|| ಪಂ|| ಸಾಹಿತ್ಯರತ್ನಂ ಶ್ರೀಜಗದೀಶ ಶಾಸ್ತ್ರಿಗಳೇ ಅಧ್ಯಾಪಕರಾಗಿದ್ದಾರೆ. ಇವರ ಅಮೃತಹಸ್ತದಿಂದ ಅನಂತ ಗುರುಮೂರ್ತಿಗಳು ತಯಾರಾಗಿದ್ದಾರೆ. ಈ ಗುರುಕುಲದಲ್ಲಿ ಸೇರಲಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬೇಕು.

ವಿಳಾಸ —

ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರ
ಬೃಹನ್ಮಠಾಧ್ಯಕ್ಷ ಹೋಟಗಿ
ಶ್ರೀಮದ್ವೀರಶೈವ ಗುರುಕುಲ
ಶ್ರೀ ಬಾಲತಪಸ್ವಿ ಬೃಹನ್ಮಠ
೯೧೮ ಉತ್ತರ ಕಸಬಾಪೇಟೆ ಸೋಲಾಪುರ ಸಿಟಿ

ಶಿವಲಿಂಗಸ್ಥಾಪನೆ, ಜೈನಾಪುರ

ವಿಜಾಪುರ ಜಿ|| ಜೈನಾಪುರಗ್ರಾಮದಲ್ಲಿ ಪ್ರಾಚೀನ ಕಾಲದಿಂದ ಒಂದು ಹಿರೇಮಠವಿದೆ. ಆ ಮಠದಲ್ಲಿ ಪಟ್ಟ ಚರ ಪಂಚಕ ಗೃಹಸ್ಥ ವೆಂಬ ನಾಲ್ಕಾಶ್ರಮಗಳು ಪರಂಪರೆಯಿಂದ ಬಂದಿರುವವು. ಆ ಮಠದಲ್ಲಿ ವೇ|| ಪಂ|| ಮಲ್ಲಿಕಾರ್ಜುನಶಾಸ್ತ್ರಿಗಳೆಂಬವರು ಬಹಳ ಪ್ರಸಿದ್ಧರಾಗಿ ಹೋಗಿರುವರು. ಸದ್ಯಃ ಈ ಮಠದಲ್ಲಿ ಶ್ರೀ|| ಷ|| ಬ್ರ|| ಮಹಾಲಿಂಗಶಿವಾಚಾರ್ಯರು ಬ್ರಹ್ಮಚರ್ಯಬಲದಿಂದಲೂ ಶಿಷ್ಯೋದ್ಧಾರಚಿಂತನೆಯಿಂದಲೂ ಪ್ರತ್ಯಕ್ಷ ಪರಶಿವನಂತೆ ತೋರುತ್ತಿರುವರು. ಇದೇ ಮಠದ ಗೃಹಸ್ಥಾಶ್ರಮಿಗಳಾದ ವೇ|| ಸಿದ್ಧರಾಮಯ್ಯನವರು ಸದ್ಗುಣಸಮಾಚಾರಶಾಲಿಗಳಾಗಿ ದಾಸೋಹ ಕಾರ್ಯದಲ್ಲಿ ಶರೀರವನ್ನು ಸವಿಸುತ್ತಿರುವರು. ಪಟ್ಟಾಧ್ಯಕ್ಷ ಶ್ರೀ|| ಷ|| ಬ್ರ|| ಗುರುಸಿದ್ಧಶಿವಾಚಾರ್ಯರು, ಚರವರ್ಯ ಶ್ರೀಸಿದ್ಧವೀರಶಿವ ಒಡೆಯರು ಶ್ರೀ ಮಲ್ಲಿಕಾರ್ಜುನಶಾಸ್ತ್ರಿಗಳು, ತಪೋನಿಧಿ ಶ್ರೀ ಸಿದ್ಧಲಿಂಗಶಿವಾಚಾರ್ಯರೆಂಬ ನಾಲ್ವರು ಪರಂಪರೆ ಪಾಲಿಸಿ ಲಿಂಗೈಕ್ಯರಾಗಿರುವರು. ಮೇಲ್ಕಾಣಿಸಿದ ನಾಲ್ವರ ಸಮಾಧಿಗಳು ಜೈನಾಪುರದ ಉತ್ತರಕ್ಕೆ ೩ ಮೈಲಿನ ಮೇಲೆ ಉತ್ತರವಾಹಿನಿಯಾಗಿರುವ ಕೃಷ್ಣಾನದಿಯ ಲಿ ಗವಹಟ್ಟಿಯ ಹತ್ತರ ಇರುವವು. ಆ ನಾಲ್ವರ ಸಮಾಧಿಯ ಮೇಲೆ ಒಂದೊಂದರಂತೆ ಲಿಂಗಸ್ಥಾಪನೆ ಮಾಡಿಸಿ ಗುರುಗಳ ಕೃಪೆಪಡೆದು ಕೃತಾರ್ಥರಾಗಬೇಕೆಂಬ ಭಾವನೆಯು ವೇ|| ಸಿದ್ಧರಾಮಯ್ಯನವರ ಮನಸ್ಸಿನಲ್ಲಿ ಬಹುಕಾಲದಿಂದ ಇತ್ತು. ಅದರಂತೆ ಇದೇ ಮಾಘ ಶುದ್ಧ ತ್ರಯೋದಶಿ ಗುರುವಾರ ತಾ|| ೧೮-೨-೧೯೪೩ ನೇ ದಿವಸ ಲಿಂಗಸ್ಥಾಪನೆ ಮಾಡುವದನ್ನು ನಿಶ್ಚೈಸಿದರು. ಈ ವಿಷಯವನ್ನು ತಮ್ಮ ಮಠದ ಚರಪಟ್ಟಾಧ್ಯಕ್ಷರಾದ ಶ್ರೀ ಮಹಾಲಿಂಗಸ್ವಾಮಿಗಳಿಗೆ ತಿಳಿಸಲು ಅವರು ಸೊಲ್ಲಾಪುರದಿಂದ ದಯಮಾಡಿಸಿದರು. ಆ ದಿವಸ ಬೆಳಿಗ್ಗೆ ಹತ್ತು ಘಂಟೆಗೆ ಶುಭಮುಹೂರ್ತದಲ್ಲಿ ಸಮಾಧಿಗಳ ಮೇಲೆ ನಾಲ್ಕು ಲಿಂಗಮೂರ್ತಿಗಳು ವಿಧ್ಯುಕ್ತವಾಗಿ ಸ್ಥಾಪಿಸಲ್ಪಟ್ಟವು. ಉಮಾಪತಿಸ್ವಾಮಿಗಳ ವೈದಿಕತ್ವದಲ್ಲಿ ರುದ್ರಾಭಿಷೇಕ ಬಿಲ್ವ ವೃಕ್ಷಶುದ್ಧಿ ಮೊದಲಾದ ಕಾರ್ಯಗಳು ನೆರವೇರಿದವು. ಈ ಗುರುಕಾರ್ಯದಲ್ಲಿ ಶ್ರೀಮಾನ್ ಸಿದ್ಧಂ ಪಪ್ಪನವರು ದೇಸಾಯಿ, ಅವರ ಧರ್ಮಪತ್ನಿ ಸೌ|| ಕಾಶೀಬಾಯಿಯವರು, ಮ|| ರಾ|| ರಾಮಚಂದ್ರಪ್ಪನವರು ನಾಡಗೌಡ ಕೆರಕಲಮಟ್ಟಿ ಇವರ ಧರ್ಮಪತ್ನಿಯವರು, ಶಿಷ್ಯರು ಬಂದು ಗುರುಸೇವೆಮಾಡಿ ಧನ್ಯರಾದರು. ಮಧ್ಯಾಹ್ನ ಗಣತೃಪ್ತಿಯಾಯಿತು. ಸಾಯಂಕಾಲ ೮ ಘಂಟೆಗೆ ಶ್ರೀಮಹಾಲಿಂಗಶಿವಾಚಾರ್ಯರ ಪ್ರವಚನವೂ, ಅನೇಕ ವಿದ್ವಾಂಸರ ಭಾಷಣಗಳೂ, ಕವಿ ಮನ್ಸೂರಭಾಯಿಯವರ ಪುತ್ರ ಮಲ್ಲಿಕ್ ಭಾಯಿಯು ಜಗದಾಚಾರ್ಯರ ಮೇಲಿನ ಲಾವಣಿ ಕವನಗಳೂ ಮನೋರಂಜಕವಾಗಿರುವಂತೆ ನಡೆದು ಜಗದಾಚಾರ್ಯರ ಜಯಘೋಷದೊಂದಿಗೆ ಕಾರ್ಯಕ್ರಮಗಳು ಪೂರ್ತಿಗೊಂಡವು. ವೇ|| ಸಿದ್ಧರಾಮಯ್ಯನವರಿಗೂ ಇವರ ಶಿಷ್ಯಸಮುದಾಯಕ್ಕೂ ಜಗದಾಚಾರ್ಯರು ಆರೋಗ್ಯಭಾಗ್ಯಾದಿಗಳನ್ನಿತ್ತು ರಕ್ಷಿಸಲೆಂದು ಪ್ರಾರ್ಥಿಸುತ್ತೇನೆ.

ಸಂಗಪ್ಪ ಅಪ್ಪಾಸಾಹೇಬ ದೇಸಾಯಿ ಸೂಸ್ನ
ಜೈನಾಪುರ

ಶ್ರೀಮಹಾರಥೋತ್ಸವಾಹ್ವಾನಪತ್ರಿಕಾ

ಸ್ವಸ್ತಿ ಶ್ರೀಮನ್ನೃಪಶಾಲಿವಾಹನಶಕ ೧೮೬೪ ನೇ ಚಿತ್ರಭಾನುಸಂವತ್ಸರದ ಫಾಲ್ಗುಣ ಶುದ್ಧ ೧೫ ಶುಕ್ರವಾರ (ತಾ|| ೧೯-೩-೧೯೪೩) ಮಘಾ ನಕ್ಷತ್ರ ಶುಭಮುಹೂರ್ತದಲ್ಲಿ ಶ್ರೀಜಗದ್ಗುರು ರಂಭಾಪುರೀ ವೀರಸಿಂಹಾಸನ ಮಠದಲ್ಲಿ ಅನಾದಿಕಾಲದಿಂದಲೂ ಜರಗುತ್ತ ಬಂದಿರುವಂತೆ ಈ ಸಂವತ್ಸರದಲ್ಲಿಯೂ ಶ್ರೀಮಹಾರಥೋತ್ಸವವು ನೆರವೇರುವುದು. ಇದಕ್ಕಂಗಭೂತಗಳಾದ ವೃಷಭೋತ್ಸವ ಅಶ್ವಾರೋಹಣೋತ್ಸವ, ಆಂದೋಲಿಕೋತ್ಸವ ಪುಷ್ಪೋತ್ಸವ ಶಯನೋತ್ಸವ, ಸುಪ್ರಭಾತೋತ್ಸವ, ಕುಂಕುಮೋತ್ಸವ, ವಸಂತೋತ್ಸವ, ಅವಭೃತಸ್ನಾನ ಭದ್ರಾನದೀ ವಿಹಾರೋತ್ಸವ ಮೊದಲಾದ ನಿತ್ಯೋತ್ಸವಗಳು ಪದ್ಧತಿಯಂತೆ ಫಾಲ್ಗುಣ ಶುದ್ಧ ೮ ಯಿಂದ ಫಾಲ್ಗುಣ ಬಹುಳ ೮ ವರೆಗೆ ವಿಜೃಂಭಣೆಯಿಂದ ನೆರವೇರುವುವು. ಈ ವರ್ಷ ಶ್ರೀಜಗದ್ಗುರುಮಹಾ ಸನ್ನಿಧಿಯ ಸವಾರಿಯು ಪೀಠಕ್ಕೆ ದಯಮಾಡಿಸುವುದಾಗುತ್ತದೆ. ಶ್ರೀಗುರುದೇವತಾಭಕ್ತಿನಿಷ್ಠಾಗರಿಷ್ಠರಾದ ಸರ್ವರೂ ಕಲತ್ರಪುತ್ರ ಮಿತ್ರಮಂಡಲಿಯೊಡನೆ ಬಂದು ಉತ್ಸವಭಾಗಿಗಳಾಗಿ ಶ್ರೀಸ್ವಾಮಿಯ ಗಂಧಪ್ರಸಾದವನ್ನೂ ಶ್ರೀಮಹಾಗುರು ಜಗದಾಚಾರ್ಯರ ಪವಿತ್ರಾಶ್ರಮಸಂದರ್ಶನಾಶೀರ್ವಾದವನ್ನೂ ಪಡೆಯತಕ್ಕದ್ದು. ಮಹಾಪೀಠದ ಕಟ್ಟಡವು ಪ್ರಾರಂಭವಾಗಿದೆ. ಪೀಠದ ಜೀರ್ಣೋದ್ಧಾರದ ವಿಷಯವಾಗಿಯೂ, ಕಟ್ಟಡದ ಪ್ಲಾನಿನ ವಿಷಯವಾಗಿಯೂ ಸಹಾಯಮಾಡಿ ಮಾಡುವ ಪೀಠಾಭಿಮಾನಿಗಳು ಅವಶ್ಯವಾಗಿ ಒಂದು ಸೂಕ್ತ ಸಲಹೆಯನ್ನು ಕೊಟ್ಟು, ಪುಣ್ಯಕ್ಕೂ ಕೀರ್ತಿಗೂ ಭಾಗಿಗಳಾಗತಕ್ಕದ್ದು. ಈ ಬಗ್ಗೆ ಗುರುಪೀಠಾಭಿಮಾನಿಗಳಿಗೆ ವಿಶೇಷವಾಗಿ ಸೂಚಿಸುವುದೇನಿದೆ

ಶ್ರೀಜಗದ್ಗುರು ರಂಭಾಪುರೀ ಮಹಾಸಂಸ್ಥಾನದ ಏಜೆಂಟ್

ಆತ್ಮವಿಚಾರಮಂದಿರ, ಮೈಸೂರು

ಈಗಿರತಕ್ಕ ವೀರಶೈವಮತೀಯರ ಪೂರ್ವಿಕರು ತಮ್ಮ ತಮ್ಮ ಊರಿನಲ್ಲಿ ಒಂದು ಮಠವನ್ನು ಕಟ್ಟಿ ತಮ್ಮ ಊರಿನಲ್ಲಿ ಲೌಕಿಕ ವ್ಯವಹಾರದಲ್ಲೇ ನಿರತರಾಗಿರತಕ್ಕ ವೀರಶೈವಮತೀಯರನ್ನು ಆಗಾಗ್ಗೆ ಎಚ್ಚರಗೊಳಿಸಿ ಅವರು ಒಂದೇ ದುಃಖದಿಂದ ಸುಖಿಗಳಾಗುವುದಕ್ಕೆ ಮಾರ್ಗವನ್ನು ಬೋಧಿಸುವುದಕ್ಕೆ ಸ್ವತಃ ವಿರಕ್ತರೂ ಮತ್ತು ಶಿವಾನುಭವಿಗಳೂ ಆದ ಒಬ್ಬ ಸ್ವಾಮಿಗಳನ್ನು ಆ ಮಠದಲ್ಲಿ ಇರತಕ್ಕ ಹಾಗೆ ಏರ್ಪಾಡುಮಾಡಿದ್ದರು. ಆದರೆ ವೀರಶೈವಸಮಾಜದ ದುರ್ದೈವದಿಂದ ಈ ಕಾಲದಲ್ಲಿ "ಗುರವೋ ಬಹವಸ್ಸಂತಿ ಶಿಷ್ಯವಿತ್ತಾಪಹಾರಕಾಃ । ತಮೇಕಂ ದುರ್ಲಭಂ ಮನ್ಯೇ ಶಿಷ್ಯಹೃತ್ತಾಪಹಾರಕಂ ॥" ಎಂಬುದಾಗಿ ಗುರುಗೀತೆಯಲ್ಲಿ ಹೇಳಿರುವ ಪ್ರಕಾರ ಶಿಷ್ಯರ ಧನವನ್ನು ಅಪಹರಿಸತಕ್ಕ ಗುರುಗಳೇ ಅನೇಕರಿರುತ್ತಾರೆಯಲ್ಲದೆ ಶಿಷ್ಯರ ದುಃಖವನ್ನು ನಿವಾರಣೆಮಾಡತಕ್ಕ ಗುರುಗಳು ಸಿಗುವುದು ಬಹಳ ದುರ್ಲಭವಾಗಿದೆ. ಇದಲ್ಲದೆ "ಉಪಾವಕ್ಷ್ಯತ್ರತದ್ಗ್ರಂಥಾ ಉಪಾಸನಂ ನಡಾತ್ಮಕಾಃ । ಅಹೋ ಮೋಹಸ್ಯ ಮಾಹಾತ್ಮ್ಯಂ ತತ್ರ್ಯ ಕಕ್ಷ್ಯಕ್ಷಕಾಂಕ್ಷಿಣಃ ॥" ಎಂಬ ವಚನದ ಪ್ರಕಾರ ಈಗಿರತಕ್ಕ ವೀರಶೈವಮತೀಯರಲ್ಲಿ ಗುರುಶಿಷ್ಯರಲ್ಲನೇಕರು ಶಾಸ್ತ್ರಜ್ಞತೆಯಿಲ್ಲದೆ ಅನುಭವದಲ್ಲಿಯೂ ಮತ್ತು ದೇಹಾತ್ಮವಾದಿತ್ವದಲ್ಲಿಯೂ ಸಮಾನರಾಗಿರುತ್ತಾರೆ.

ಇಷ್ಟೇ ಅಲ್ಲದೆ "ವೇದನ್ಯಾದಿಕವಿಸ್ರಂಸನಶೀಲಾಃ ಭಸ್ಮರುದ್ರಾಕ್ಷಹೀನಾಃ । ಚಂಡಾಲಸ್ಪರ್ಶಕರ್ತ್ರಾ ಪಾಕಂಡಾಃ ಲಿಂಗಾಲಿಂಗಿತವಕ್ಷಸಃ ॥ ಶಿರ ಪುಂಡ್ರೇದ್ಧಿ ರಾಜಾಜಾಪಸಿನಾ ನ್ಯುತ್ಯೈಸ್ಪಿಶ್ಚ ವಿ ತೀಕ್ಷ್ಣಯೇನ । ಶಿವಾತ್ಮ ಇವೇ ೮ ಗ್ನಿಸ್ಸ್ವಯಂ ತಸ್ಯ ವಿಮತ ತೋಯೈಃ ಸ್ವಪಚಂತಿ ಕಷ್ಟಂ ॥" ಎಂಬುದಾಗಿ ವಿಶ್ವಗುಣಾದರ್ಶದಲ್ಲಿ ಹೇಳಿರುವ ಪ್ರಕಾರ ವೀರಶೈವ ಮತೀಯರಲ್ಲಿ ಕೆಲವರು ವೀರಶೈವಮತಕ್ಕೆ ಪರಮಪ್ರಮಾಣವಾಗಿರುವ ಮತ್ತು ಪರಮೇಶ್ವರನಿಂದ ಹೇಳಲ್ಪಟ್ಟಿರುವ ವೇದಗಳನ್ನು ತಿರಸ್ಕರಿಸುತ್ತಲೂ ಮತ್ತು ಶಿವಾಗಮಗಳಲ್ಲಿ ಹೇಳಿರುವಂತೆ ತಮ್ಮ ಗುರುಗಳ ಪಾದೋದಕವನ್ನು ಸ್ವೀಕಾರಮಾಡದೆ ಅವಿಚಾರದಿಂದಲೂ ಮತ್ತು ಅಂಧಶ್ರದ್ಧೆಯಿಂದಲೂ ಶಾಸ್ತ್ರವಿರುದ್ಧವೂ ಮತ್ತು ನಿಂದಾಸ್ಪದವೂ ಆದ ಕ್ರಿಯೆಗಳನ್ನು ಆಚರಿಸುತ್ತಲೂ ಇದ್ದಾರೆ. ಇದಲ್ಲದೆ ವೀರಶೈವಮತೀಯರಲ್ಲನೇಕರು ವೀರಶೈವಮತತತ್ವವನ್ನು ತಿಳಿದು ಅದರಂತೆ ಆಚರಿಸಿ ಅದರ ಫಲವನ್ನು ಪಡೆಯುವುದಕ್ಕೆ ಪ್ರಯತ್ನ ಪಡದೆ ವೀರಶೈವಮತವು ಬಹುದೊಡ್ಡದು ಅಂಥ ಮತಕ್ಕೆ ಸೇರಿದವರು ನಾವು ಎಂಬುದಾಗಿ ಹೇಳಿಕೊಳ್ಳುವುದರಲ್ಲೇ ತೃಪ್ತರಾಗಿದ್ದಾರೆ. ಇವರ ಜತೆಗೆ ವೀರಶೈವಮತಸಿದ್ಧಾಂತದ ವಿಷಯದಲ್ಲಿ ವೀರಶೈವಮತೀಯರಲ್ಲಿ ಗುರುಗಳು ಮತ್ತು ಪಂಡಿತರು ಎನಿಸಿಕೊಂಡಿರುವವರಲ್ಲಿ ಭಿನ್ನಾಭಿಪ್ರಾಯಗಳಿರುತ್ತವೆ. ಈ ಕಾರಣಗಳಿಂದ ವೀರಶೈವಮತೀಯರಲ್ಲಿ ಶಾಸ್ತ್ರಪರಿಚಯವಿಲ್ಲದೆ ಇರತಕ್ಕವರು ಯಥಾರ್ಥವಾದ ಸಿದ್ಧಾಂತ ಮತ್ತು ಆಚರಣೆ ಯಾವುದು ಎಂಬುದನ್ನು ತಿಳಿಯದೆ ಸಂಶಯಗ್ರಸ್ತರಾಗಿರುವರು.

ಮೇಲ್ಕಂಡ ಕೊರತೆಗಳನ್ನು ನಿವಾರಣೆಮಾಡುವುದು ಅವಶ್ಯಕವಾದ್ದರಿಂದ ಶಾಸ್ತ್ರಜ್ಞರೂ ಮತ್ತು ಶಿವಾನುಭವಿಗಳೂ ಆಗಿರತಕ್ಕವರು ವೇದ, ಆಗಮ, ಪ್ರಾಚೀನರ ಗ್ರಂಥಗಳು ಇವೇ ಮೊದಲಾದವುಗಳನ್ನು ಚೆನ್ನಾಗಿ ಪರಿಶೀಲಿಸಿ ಯಥಾರ್ಥವಾಗಿಯೂ ಮತ್ತು ವೀರಶೈವಮತೀಯರೆಲ್ಲರೂ ತಿಳಿದು ಆಚರಿಸತಕ್ಕದ್ದಾಗಿಯೂ ಇರುವ ತತ್ವವನ್ನು ಪ್ರಚಾರಮಾಡುವದಕ್ಕಾಗಿ ಆತ್ಮವಿಚಾರಮಂದಿರವೆಂಬ ಒಂದು ಸಂಸ್ಥೆಯು ಈಶ್ವರನ ಪ್ರೇರಣೆಯಿಂದ ಮೈಸೂರು ನಗರದಲ್ಲಿ ಸ್ಥಾಪಿಸಲ್ಪಟ್ಟಿರುತ್ತದೆ. ಈ ಮಂದಿರದಿಂದ ಪ್ರಚಾರಮಾಡಲ್ಪಡತಕ್ಕ ಆಧ್ಯಾತ್ಮಿಕವಿಷಯಗಳೆಲ್ಲವೂ ಸಣ್ಣ ಪುಸ್ತಕಗಳ ರೂಪವಾಗಿರುವವು. ಈ ಪುಸ್ತಕಗಳೆಲ್ಲವೂ ಆತ್ಮವಿಚಾರಗ್ರಂಥಮಾಲೆಗೆ ಸೇರಿದ ಪುಸ್ತಕಗಳಾಗಿರುತ್ತವೆ. 'ವೇದ ಮತ್ತು ವೀರಶೈವಮತ' ಎಂಬ ಪುಸ್ತಕವು ಆತ್ಮವಿಚಾರ ಗ್ರಂಥಮಾಲೆಯ ಪ್ರಥಮ ಪುಷ್ಪವಾಗಿ ಮಹಾಜನರಿಗೆ ಸಮರ್ಪಿಸಲ್ಪಟ್ಟಿದೆ.

ಆತ್ಮವಿಚಾರಮಂದಿರದಿಂದ ಪ್ರಚಾರಮಾಡಲ್ಪಡತಕ್ಕ ಗ್ರಂಥಗಳು ವೀರಶೈವಮತೀಯರಿಗೇ ಅಲ್ಲದೆ ಸಂಸಾರವು ದುಃಖಮಯವೆಂದು ತಿಳಿದು ಸರ್ವ ದುಃಖಗಳಿಂದಲೂ ಬಿಡುಗಡೆ ಹೊಂದಿ ಪರಮಾನಂದಸ್ವರೂಪವಾದ ಮೋಕ್ಷವನ್ನು ಪಡೆಯಬೇಕೆಂಬ ಉತ್ಕಟವಾದ ಇಚ್ಛೆಯುಳ್ಳವರೆಲ್ಲರಿಗೂ ಪ್ರಯೋಜನಕಾರಿಗಳಾಗಿರುತ್ತವೆ. ಸರ್ವರಿಗೂ ಸುಲಭಪ್ರಾಪ್ಯವಾಗಿರುವದಕ್ಕಾಗಿ ಪ್ರತಿಯೊಂದು ಪುಸ್ತಕಕ್ಕೂ ಎರಡಾಣೆ ಮಾತ್ರ ಬೆಲೆಯು ನಿಶ್ಚಯಿಸಲ್ಪಟ್ಟಿರುತ್ತದೆ. ಆದ್ದರಿಂದ ಪುಸ್ತಕದ ಬೆಲೆ ಎರಡಾಣೆ ಮತ್ತು ಟಪ್ಪಾಲು ಹಾಸಲಿಗಾಗಿ ಒಂದಾಣೆ ಒಟ್ಟು ಮೂರಾಣೆಯನ್ನು ಕಳುಹಿಸುವವರಿಗೆ ಪುಸ್ತಕವು ಕಳುಹಿಸಲ್ಪಡುತ್ತದೆ. ಕೇವಲ ಬಡವರಾಗಿರತಕ್ಕವರು ಟಪ್ಪಾಲು ಹಾಸಲಿಗಾಗಿ ಒಂದಾಣೆಯನ್ನು ಕಳುಹಿಸಿದರೆ ಅವರಿಗೆ ಒಂದು ಪುಸ್ತಕವು ಉಚಿತವಾಗಿ ಕಳುಹಿಸಲಡುತ್ತದೆ.

ಅನ್ನದಾನಂ ಮಹಾದಾನಂ ವಿದ್ಯಾದಾನಂ ತತೋಧಿಕಂ ।
ಅನ್ನೇನ ಕ್ಷಣಿಕಾ ತೃಪ್ತಿಃ ಯಾವಜ್ಜೀವಂತು ವಿದ್ಯಯಾ ॥

ಎಂಬಂತೆ ಎಲ್ಲ ದಾನಗಳಿಗಿಂತಲೂ ಅನ್ನದಾನವು ದೊಡ್ಡದು. ಏತಕ್ಕೆಂದರೆ ಒಬ್ಬನಿಗೆ ಭೋಜನವನ್ನು ಮಾಡಿಸಿದರೆ ತೃಪ್ತಿಯಾಗುತ್ತದೆ. ಅದಕ್ಕೆ ಬದಲಾಗಿ ಧನವನ್ನಾಗಲೀ ಅಥವಾ ಇನ್ನೇನನ್ನಾದರಾಗಲಿ ದಾನವಾಗಿ ಅವನಿಗೆ ಕೊಟ್ಟರೆ ತೃಪ್ತಿಯಾಗದೆ ಇನ್ನೂ ಹೆಚ್ಚಾಗಿ ಕೊಡಬೇಕಾಗಿತ್ತೆಂದು ಮನಸ್ಸಿನಲ್ಲಿ ಆಶಿಸುತ್ತಾನೆ. ಆದರೆ ಅನ್ನದಾನಕ್ಕಿಂತ ವಿದ್ಯಾದಾನವು (ಅಂದರೆ ಲೌಕಿಕ ವಿದ್ಯಾದಾನವು) ದೊಡ್ಡದು. ಏತಕ್ಕೆಂದರೆ ಅನ್ನದಾನದಿಂದ ಆ ಕ್ಷಣ ಮಾತ್ರ ತೃಪ್ತಿಯಾಗುತ್ತದೆ. ಲೌಕಿಕವಿದ್ಯಾದಾನವನ್ನು ಮಾಡಿದರೆ ದಾನವನ್ನು ಹೊಂದಿದವನು ತನ್ನ ಜನ್ಮಾವಧಿ ವಿದ್ಯೆಯಿಂದ ಜೀವನವನ್ನು ಮಾಡಿಕೊಂಡು ಸುಖವಾಗಿರುತ್ತಾನೆ. ಲೌಕಿಕವಿದ್ಯಾದಾನಕ್ಕಿಂತಲೂ ಬ್ರಹ್ಮವಿದ್ಯಾದಾನವು ದೊಡ್ಡದು. ಏತಕ್ಕೆಂದರೆ, ಲೌಕಿಕ ವಿದ್ಯೆಯಿಂದ ಒಬ್ಬನು ತನ್ನನ್ನು ಈ ಜನ್ಮದಲ್ಲಿ ಮಾತ್ರ ಸಾಕಿಕೊಳ್ಳಬಹುದೇ ಹೊರತು ತನ್ನನ್ನು ಯಾವ ದುಃಖದಿಂದಲೂ ಬಿಡುಗಡೆಮಾಡಿಕೊಳ್ಳಲು ಶಕ್ತನಿಲ್ಲ. ಆದರೆ ಬ್ರಹ್ಮವಿದ್ಯೆಯಿಂದ ತಾನು ಸರ್ವ ದುಃಖಗಳಿಂದಲೂ ಬಿಡುಗಡೆಯಾಗಿ ಪರಮಾನಂದವನ್ನು ಹೊಂದಬಹುದು. ಆದ್ದರಿಂದ ಬ್ರಹ್ಮವಿದ್ಯಾದಾನವನ್ನು ಮಾಡುವವರು ಮತ್ತು ಬ್ರಹ್ಮವಿದ್ಯಾದಾನವನ್ನು ಮಾಡುವುದಕ್ಕೆ ಸಹಾಯಮಾಡುವವರು ಅತ್ಯಂತ ಉತ್ಕೃಷ್ಟವಾದ ಪುಣ್ಯಕ್ಕೆ ಭಾಗಿಗಳಾಗುತ್ತಾರೆ. ಆದ್ದರಿಂದ ಶ್ರೀಮಂತರಾದವರು ಯಥೋಚಿತವಾಗಿ ಆತ್ಮವಿಚಾರಮಂದಿರಕ್ಕೆ ಸಂಬಂಧಪಟ್ಟ ಗ್ರಂಥಪ್ರಚಾರ, ಕಟ್ಟಡ ಮತ್ತು ಪುಸ್ತಕಭಂಡಾರ ಇವುಗಳಿಗಾಗಿ ಧನವನ್ನು ಸಹಾಯಮಾಡತಕ್ಕದ್ದು. ಸಹಾಯವು ಎಷ್ಟು ಅಲ್ಪವಾದರೂ ವಂದನಾಪೂರ್ವಕ ಸ್ವೀಕರಿಸಲ್ಪಡುವುದು.

ಆತ್ಮವಿಚಾರಮಂದಿರದಿಂದ ಪ್ರಚಾರಮಾಡಲ್ಪಡತಕ್ಕ ಗ್ರಂಥಗಳಲ್ಲಿ ವಿವರಿಸಲ್ಪಡತಕ್ಕ ವೀರಶೈವಮತತತ್ವ ಮತ್ತು ಆಚರಣೆಯ ವಿಷಯದಲ್ಲಿ ಅಥವಾ ಅದಕ್ಕೆ ಸಂಬಂಧಪಟ್ಟ ಇನ್ನಾವ ವಿಷಯದಲ್ಲೇ ಆಗಲಿ ಏನಾದರೂ ಸಂದೇಹ ಬಂದರೆ ತಮ್ಮ ಸಂದೇಹಗಳನ್ನು ತಿಳಿಸಿದರೆ ಸಂದೇಹಗಳು ಮತ್ತು ಅವುಗಳಿಗೆ ತಕ್ಕ ಸಮಾಧಾನವು ವೀರಶೈವಮತೀಯರೆಲ್ಲರ ಪ್ರಯೋಜನಕ್ಕಾಗಿ ಧಾರ್ಮಿಕ ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುವು. ನಿಜವಾಗಿಯೂ ತತ್ವವನ್ನು ತಿಳಿದು ಧನ್ಯರಾಗಲಿಚ್ಛೆಯುಳ್ಳವರು ಕೇಳುವ ಪ್ರಶ್ನೆಗಳಿಗೆ ಮಾತ್ರ ಸಮಾಧಾನಗಳು ಕೊಡಲ್ಪಡುವುವು. ಹಾಗಲ್ಲದೆ ಸಮಂಜಸವಲ್ಲದ ಕುಹಕವಾದ ಪ್ರಶ್ನೆಗಳಿಗೆ ಗಮನವು ಕೊಡಲ್ಪಡುವುದಿಲ್ಲ. ವೀರಶೈವಮತೀಯರಲ್ಲಿ ಶಾಸ್ತ್ರಜ್ಞರೂ ಮತ್ತು ಅನುಭವಿಗಳೂ ಆಗಿರತಕ್ಕವರಿಂದ ಮತತತ್ವದ ವಿಷಯದಲ್ಲೇ ಆಗಲಿ ಅಥವಾ ಆಚರಣೆಯ ವಿಷಯದಲ್ಲೇ ಆಗಲಿ ಕೊಡಲ್ಪಡುವ ಶಾಸ್ತ್ರಾಧಾರಗಳು ಮತ್ತು ಅನುಭವವು ಅತ್ಯಂತ ಕೃತಜ್ಞತೆಯಿಂದ ಸ್ವೀಕರಿಸಲ್ಪಡುವುವು. ಎಲ್ಲಾ ವಿಷಯಗಳಿಗೂ ಈ ಕೆಳಗಿನ ವಿಳಾಸಕ್ಕೆ ದಯವಿಟ್ಟು ಬರೆಯತಕ್ಕದ್ದು.

೫೭೯, ವಾಣೀವಿಲಾಸ ರೋಡ್, ಎಂ ಎಲ್ ನಾಗಪ್ಪ
ಮೈಸೂರು, ವ್ಯವಸ್ಥಾಪಕ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಸ-ಚ್ಛಾಸ್ತ್ರಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ವಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ಮಾರ್ಚಿ ೧೯೪೩ [ಸಂಚಿಕೆ ೪೮

ಶ್ರೀ॥ ಉಜ್ಜಯಿನೀ ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಸ್ತೋತ್ರ

ಸಿದ್ಧಲಿಂಗ ಜಗದ್ಗುರು ಪಾಲಿಸು । ಬದ್ಧಸಂಸಾರ ಭಯವ ನಿವಾರಿಸು ॥ಪ॥

ನರದೇಹದಿಂದ ಜನಿಸಿ । ಹರನವತಾರನೆನಿಸಿ । ಗುರು ಮರುಳಸಿದ್ಧನೇ। ಧರೆಗೆ ಅವತರಿಸಿದನೆನಿಸಿ । ಒರೆಯುತಿರುವ ನಿನ್ನ ।ವರಶಿಷ್ಯಕೋಟಿಯ ಬಿಟ್ಟು ಪೋದೆಯಾ॥೧॥

ಪರಮಪಟ್ಟದಾರ್ಯರು । ಭರದಿ ಮಠದಯ್ಯಗಳು । ಮರೆತು ತಮ್ಮ ಸೂತ್ರಗೋತ್ರ । ಹೆರರ ಗುರುವೆಂದೊದರುತವರ ಮನೆಯನ್ನಿಕ್ಕೆ । ತಿರುಗುವ ನರರನ್ನು ಉರುಹೊ ನೀ ॥೨॥

ಕಾಶೀನಾಥ ಕಾವ್ಯತೀರ್ಥ।ದೇರವೆಲ್ಲವನುರೆ ಜಯಿಸಿ। ವಾಸಿಸಿದನು ನಿನ್ನ ಸನ್ನಿಧಿಯೇ । ಈಶಸನ್ನಿಧಿಯೆನಿಸಿ । ಆ ತೂರಂಗೆ ಗುರುತತ್ತ್ವವ । ಪಸರಿಸೆಂದುಸುರಿದ ॥೩॥

ಗುರುವಿನಾಜ್ಞೆಯನ್ನು ಪಡೆದು । ಗುರುದ್ರೋಹಿಗಳನೆ ಮುರಿದು । ಗುರುತತ್ತ್ವವೀ ಧರೆಯೊಳೆಲ್ಲ ಸೂರೆಗೈದು । ಮೆರೆವ ಕಾಶೀನಾಥನೋರ್ವನ ಬಿಟ್ಟು ತೀವ್ರ ಪೋದೆಯಾ ॥೪॥

ವೀರಸಿಂಹಾಸನ ಕೈ । ಸೇರಬೇಕೆಂದು ಕೆಲರು । ಸೂರೆಗೈದು ಧನವನೆಲ್ಲ। ಕ್ರೂರಪಾಪಾತ್ಮರ। ಮೀರಿದ ಗರ್ವವ। ಸೂರೆಗೊಂಡಧಿಕಾರ ಗೈದಿಹ ॥೫॥

ಎಂದೂ ಯಾರೂ ನೋಡದಂಥ । ಇಂದುಧರನ ಮಂದಿರ । ದಂದದಿ ಮೆರೆವ ಮುನಿ। ವೃಂದವಂದಿತ ಕೇದಾರ । ತಂದು ಗುರುರಾಜನ । ಅಂದಣದೊಳು ಮೆರೆಸಿ ಪೋದೆಯಾ ॥೬॥

ಗುರುಕೊಟ್ಟೂರೀಶನ । ಪುರದಿ ವಾಸಿಸಿರುವ । ವರ ಕೆಂಭಾವಿಮಠದ ಚನ್ನವೃಷಭಕವಿ ವಿನುತನ । ಗುರು ಮರುಳಾರಾಧ್ಯ ಸೂತ್ರಾಧಾರನ ಬೇಗ ಪೊರೆಯೋ ನೀ ॥೭॥

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಸ್ತುತಿ.

ಕಾಶೀನಾಥ ಕಾವ್ಯತೀರ್ಥ । ಧಾತ್ರಿಯೊಳು ನೀ ಪುನೀತ ॥ಪ॥ ಯುಗಯುಗದಾದಿಯಿಂದ । ನಿಗಮಗಳ್ ಪೊಗಳುವ। ಬಗೆಯನು ಶೋಧಿಸಿ। ಜಗಕೆ ನೀ ಬೋಧಿಸಿದೈ ॥೧॥

ಗುರುಪಂಚಾಚಾರ್ಯರ । ಇರವನು ಅರಿಯದೆ । ಅರಚುವ ನರರಿಗೆ । ಶರಭರೂಪನಾದೈ ॥೨॥

ವಚನ ವಚನ ಗಾಂಜಿ । ಅಫೀಮಿನ ವಚನವ । ವಟಿಸುವ ನೀಚರ । ನಿಚಯವನಳಿದೈ ॥೩॥

ಅನಾಮಧೇಯರು। ನಾ ನಾ ಗುರುವೆಂಬ ಅ । ಜ್ಞಾನವನು ಕಳೆದೈ । ಜ್ಞಾನಮೂರುತಿಯೇ ॥೪॥

ಶಿವನುತಸಾಗರನೋ । ಪ್ರವಚನ ಕುವರನೇ । ತವ ನಾಮ ಧರಿಸಲು । ಭುವಿಯೊಳು ಸಾಲದೈ ॥೫॥

ವರ್ಣಾಶ್ರಮಧರ್ಮ । ನಿರ್ಣಯವಿಲ್ಲೆಂದು । ವರ್ಣಿಪ ಶ್ವಾನಗೆ । ಚಣರೂಪನಾದೈ ॥೬॥

ಶುದ್ಧಗುರುವಂಶಜ । ಸಿದ್ಧೇಶನುವರದಿ । ಸದ್ಯದಿ ಜನಿಸಿಯೂ । ರಾಧ್ಯನೆಂದೆನಿಸಿದೈ ॥೭॥

ಚನ್ನವೃಷಭಕೃತ । ಸನ್ನುತ ನಿನ್ನ ಚರಿತ । ಪನ್ನಗಧರ ಸುತ । ಪಾಲಿಸಲಿ ಪುನೀತ ॥೮॥

ಲೇ—ಚನ್ನವೃಷಭಕವಿ, ಕೆಂಭಾವಿಮಠ, ಕೊಟ್ಟೂರು

ಜಗದಾಚಾರ್ಯರ ಜಯಂತೀಮಹೋತ್ಸವಗಳು

ಅಜ್ಜಂಪುರ

ತರೀಕೆರೆ ತಾ॥ ಅಜ್ಜಂಪುರ ಗ್ರಾಮದಲ್ಲಿರುವ ಪೇಟೆ ಬಸವೇಶ್ವರ ದೇವಸ್ಥಾನದಲ್ಲಿ ವಾರ್ಷಿಕ ಪದ್ಧತಿಯಂತೆ ಮಹಾಶಿವರಾತ್ರಿಯ ದಿವಸ ಮುಖಂಡರುಗಳ ಮತ್ತು ಸರ್ಕಾರಿ ಅಧಿಕಾರಿಗಳ ಇಚ್ಛೆಯ ಪ್ರಕಾರ ಶ್ರೀ ಜಗದ್ಗುರು ವಿಶ್ವಾರಾಧ್ಯ, ಪಂಡಿತಾರಾಧ್ಯರ ಜಯಂತಿ ಮಹೋತ್ಸವವೂ ಹಾಗೂ ಶ್ರೀ ಮಹಾಶಿವರಾತ್ರಿಯ ವ್ರತಾದಿಗಳೂ ನಡೆಯಲು ಏರ್ಪಾಡು ಮಾಡಲಾಯಿತು ಈ ಮಹಾ ಕಾರ್ಯಕ್ಕೆ ಅಜ್ಜಂಪುರದ ವೈಸ್ ಪ್ರೆಸಿಡೆಂಟ್ ಶೆಟ್ರು ಸಿದ್ದಪ್ಪನವರು, ಡಾಕ್ಟರ್ ಫಾಲಾಕ್ಷ, ಮೋಜಣಿದಾರ್ ಫಾಲಾಕ್ಷಪ್ಪನವರು, ಹಿರೆನೆಲ್ಲೂರು ಹೋಬಳಿ ರೆವಿನ್ಯೂ ಇನ್ಸ್ಪೆಕ್ಟರ್ ರುದ್ರಪ್ಪನವರು, ಪೇಟೆ ಮುಖಂಡರಾದ ಸುಬ್ರಹ್ಮಣ್ಯ ಸೆಟ್ಟರು, ಅಣ್ಣೆ ದೊಡ್ಡ ರುದ್ರಪ್ಪನವರು, ಕುಪ್ಪಾಳ್ ಶ್ರೀ॥ ಬಸಪ್ಪ ನಾಗಪ್ಪ ಸಿದ್ಧರಾಮಪ್ಪನವರು, ಮಂಡಿ ಮರ್ಚೆಂಟ್ಸ್ ಭಂಗಿ ರೇವಣ್ಣ ಮರುಳಪ್ಪನವರು, ಚಿಕನೆಲ್ಲೂರು ರುದ್ರಪ್ಪನವರು, ಮೋಳೀನಹಳ್ಳಿ ಕಲ್ಲಪ್ಪನವರು, ಆದಿಕೇಶವ ಮೊದ್ಲಿಯಾರವರು, ಮಂಡಿ ಸೂರ್ಯನಾರಾಯಣಪ್ಪನವರು, ಕಣಬಗಟ್ಟೆ ನಾಗಪ್ಪನವರು, ಮುಂತಾದವರು ಸೇರಿ ಮಾಡಿದ ಠರಾವಿನಂತೆ ರಾತ್ರಿ ೯ ಘಂಟೆಯಿಂದ ಶ್ರೀ ಜಗದ್ಗುರು ಲಿಂಗೋದ್ಭವಮೂರ್ತಿಗೆ ವೇ॥ ಎಂ ಎಸ್ ಮರುಳಸಿದ್ಧಯ್ಯಶಾಸ್ತ್ರಿಗಳು ಮಾಸ್ಟರ್ ಅಜ್ಜಂಪುರ ಮೇಲಿನಮಠ ಮುಪ್ಪೇನಹಳ್ಳಿ ಇವರಿಂದ ಶ್ರೀ ರುದ್ರಾದಿಗಳಿಂದ ಅಭಿಷೇಕ ಪೂಜಾ ಮಹಾ ಮಂಗಲಾರತಿಗಳು ನಡೆದುವು ಬಳಿಕ ರಾತ್ರಿ ಸುಮಾರು ಒಂದು ಘಂಟೆಯಿಂದ ತರೀಕೆರೆ ತಾ॥ ಮೋಜಣಿದಾರ್ ಫಾಲಾಕ್ಷಪ್ಪನವರ ಮತ್ತು ರೆವಿನ್ಯೂ ಇನ್ಸ್ಪೆಕ್ಟರ್ ರುದ್ರಪ್ಪನವರ ನೇತೃತ್ವದಲ್ಲಿ ಅನೇಕಜನಸಂದಣೆಯಿಂದ ಕೂಡಿದ ಸಭೆಯಲ್ಲಿ ವೇ॥ ಎಂ ಎಸ್ ಮರುಳಸಿದ್ಧಯ್ಯನವರು ಶ್ರೀ ಜಗದ್ಗುರುಪಂಚಾಚಾರ್ಯರು ಭೂಮಂಡಲದಲ್ಲಿ ವೀರಶೈವ ಮತವನ್ನು ಸ್ಥಾಪಿಸಿದ ವಿಷಯವನ್ನು ವಿವರಿಸಿದರು ಬೆಳಗಿನಜಾವ ಮೂರು ಘಂಟೆಯವರೆಗೂ ಸಿದ್ಧಾಂತ ಶಿಖಾಮಣಿಯಲ್ಲಿರುವ ಷಟ್‌ಸ್ಥಲ ವಿಚಾರಗಳನ್ನು ಪುರಾಣರೂಪದಲ್ಲಿ ಬೋಧಿಸಿದರು ಕೊನೆಯಲ್ಲಿ ಲಿಂಗಾಂಗಸಾಮರಸ್ಯಜ್ಞಾನದ ಬೆಳವಣಿಗೆಗೆ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರೇ ಮೂಲ ಕಾರಣರೆಂಬ ವಿಚಾರವನ್ನು ಬಹು ಸಮಂಜಸವಾಗಿ ವಿವರಿಸಿದರು ಅನಂತರ ಸಂಗೀತ ವಿದ್ವಾಂಸರಾದ ವೆಂಕಟಾಚಲ ಗುಪ್ತರವರ ಸುಶ್ರಾವ್ಯವಾದ ಸಂಗೀತದಿಂದ ಜಗದಾಚಾರ್ಯರ ಭಜನೆಯು ನಡೆಯಿತು ಬಳಿಕ ಗ್ರಾಮದೇವತೆಗಳಿಗೆ ರುದ್ರಾಭಿಷೇಕ ಮಹಾ ಮಂಗಳಾರತಿಗಳು ನಡೆದು ಮಧ್ಯಾಹ್ನ ೨ ಘಂಟೆಗೆ ದೇವಸ್ಥಾನದಲ್ಲಿ ಪಾನಕ ಫಲಾಹಾರಾದಿಗಳು ನಡೆದವು ಈ ಕಾರ್ಯಕ್ರಮದಿಂದ ಸರ್ವರಿಗೂ ಆನಂದವಾಯಿತು ಈ ಮಹಾಕಾರ್ಯಕ್ಕೆ ನೆರವಾಗಿದ್ದ ಮಹಾಶಯರಿಗೆಲ್ಲಾ ಶ್ರೀ ಜಗದಾಚಾರ್ಯರು ಮಂಗಲ ಪರಂಪರೆಯನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಆಚಾರ್ಯಪಾದಸೇವಕ

ಜಯಂತಿಯ ಕಾಣಿಕೆ

ಮಂಗಲಂ ಮಹಾ ಲಿಂಗಭವನಿಗೆ ।
ತುಂಗ ದಯದಿ ಜಗವ ಪೊರೆವ ಲಿಂಗಮೂರ್ತಿಗೆ ॥
ರೇಣುಕೇಶಗೆ ಸ್ಥಾಣುರೂಪಗೆ ।
ಕ್ಷೋಣಿಯೊಳಗೆ ಸೋಮನಾಥಲಿಂಗಜಾತಗೆ ॥೧॥
ಮಾರವೈರಿಯ ಸಾರಪ್ರೇಮಿಗೆ ।
ಪಾರಮಾರ್ಥತತ್ತ್ವವೀವ ದಾರುಕೇಶಗೆ ॥
ಲಿಂಗರೂಪಗೆ ಮಂಗಲಾತ್ಮಗೆ ।
ಅಂಗಲಿಂಗತತ್ತ್ವಬೋಧಿ ಸಿದ್ಧಲಿಂಗಗೆ ॥೨॥
ಏಕೋರಾಮಗೆ ನಾಕಪಾಲಗೆ ।
ಕಾಕುಮನದ ಕಲುಷ ಹರಿಪ ಲೋಕನಾಥಗೆ ॥
ಯತಿಕುಲೇಶಗೆ ಭಕ್ತಿದಾತಗೆ ।
ಯತಿಗಳೆಂಬ ಭಕ್ತಗಣಕೆ ಮುಕ್ತಿದಾತಗೆ ॥೩॥
ಅಂಗಲಿಂಗದ ಮಂಗಲಸ್ಥಲ ।
ಸಂಗದಿಂದ ನಂದವೀವ ಪಂಡಿತೇಶಗೆ ॥
ವಿಶ್ವಪೋಷಗೆ ವಿಶ್ವರೂಪಗೆ ।
ವಿಶ್ವನಾಥಸುತಗೆ ವಿಶ್ವವಿಶ್ವಪೂಜ್ಯಗೆ ॥೪॥

ಎಂ ಎಸ್ ಮರುಳಸಿದ್ಧಯ್ಯ,
ಸ್ಕೂಲ್ ಮಾಸ್ಟರ್, ಅಜ್ಜಂಪುರ

ಲಿಂಗಸೂಗೂರು.

ರಾಯಚೂರು ಡಿ॥ ಲಿಂಗಸೂಗೂರು ಗ್ರಾಮದಲ್ಲಿರುವ ಗಂಗಾಧರಮಠದ ವೇ॥ ಸಿದ್ಧರಾಮಾಚಾರ್ಯರು ತಮ್ಮ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಮಹಾಶಿವರಾತ್ರಿಯ ದಿವಸ ಜಗದಾಚಾರ್ಯರ ಜಯಂತಿಯನ್ನು ವೈಭವದಿಂದ ನೆರವೇರಿಸಿದರು.

ಓರ್ವ ಗುರುಭಕ್ತ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ.

[illegible] 8-3-44 [illegible]

ಫಾಲ್ಗುನ ಶುದ್ಧ ~~ತ್ರಯೋದಶಿ~~ (19-3-43) ಶುಕ್ರವಾರ

ಶ್ರೀ ಕುಲ್ಯಪಾಕಕ್ಷೇತ್ರದ ಸೋಮನಾಥಲಿಂಗದಿಂದ ಶ್ರೀ ಜಗದ್ಗುರು ರೇಣುಕಾಚಾರ್ಯರ ಅವತಾರ.

[illegible] 8-3-44

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ಫಾಲ್ಗುನ ಶುದ್ಧ ತ್ರಯೋದಶಿ ಶುಕ್ರವಾರ (19-3-43) ದಿವಸ ಭರತ ಖಂಡದಲ್ಲಿರುವ ಸಮಸ್ತ ವೀರಶೈವರು ಅತ್ಯಂತಭಕ್ತಿಯಿಂದ ನೆರವೇರಿಸಬೇಕು ಶ್ರೀರೇಣುಕಾಚಾರ್ಯರು ಸಾಧಾರಣ ಗುರುಗಳಲ್ಲ! ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕವಿಖ್ಯಾತರಾದ ಅಗಸ್ತ್ಯಮಹರ್ಷಿಗಳನ್ನುದ್ಧರಿಸಿದವರು. ಲೋಕಚಕ್ರವರ್ತಿಯಾದ ವಿಭೀಷಣನ ಇಷ್ಟಾನುಸಾರವಾಗಿ ಏಕಕಾಲದಲ್ಲಿಯೇ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿ ಶಿವಲಿಂಗಗಳನ್ನು ಸ್ಥಾಪಿಸಿ ರಾವಣನನ್ನೂ ವಿಭೀಷಣನನ್ನೂ ಉದ್ಧರಿಸಿದವರು. ಗರ್ವಾಂಧನಾದ ಗೋರಕ್ಷನ ಗರ್ವವನ್ನು ತಮ್ಮ ಮಹಿಮಾಪ್ರಭಾವದಿಂದ ನಾಶಮಾಡಿ ಶಿವಸಿದ್ಧಾಂತೋಪದೇಶದ್ವಾರಾ ಅವನನ್ನು ಉದ್ಧರಿಸಿದವರು. ಲೋಕಕಂಟಕರಾಗಿದ್ದ ಯಕ್ಷದಂಪತಿಗಳನ್ನು ತಮ್ಮ ಫಾಲನೇತ್ರದಿಂದ ಸುಟ್ಟು ಬೂದಿಮಾಡಿ ಸಮಸ್ತ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡಿದವರು. ನೀಲಗಲ ಚಕ್ರವರ್ತಿಯ ಭಕ್ತಿಯನ್ನು ಪರೀಕ್ಷಿಸುವದಕ್ಕೋಸ್ಕರ ಕೋಟ್ಯನುಕೋಟಿ ಪ್ರಮಥಸ್ವರೂಪವನ್ನು ಧರಿಸಿ ಅವನ ನೈಜವಾದ ಭಕ್ತಿಯನ್ನು ನಾನಾರೀತಿಯಿಂದ ಪರೀಕ್ಷಿಸಿ ಅಂತ್ಯದಲ್ಲಿ ಅವನಿಗೆ ಪ್ರಸನ್ನರಾಗಿ ಅವನನ್ನುದ್ಧರಿಸಿದವರು. ಕಾಂಚೀಕ್ಷೇತ್ರದಲ್ಲಿರುವ ವಿಷ್ಣುಮೂರ್ತಿಯ ಚಲಿಸುತ್ತಿದ್ದ ಮಸ್ತಕವನ್ನು ತಮ್ಮ ಮಹಿಮಾಪ್ರಭಾವದಿಂದ ಸ್ಥಿರಗೊಳಿಸಿ ಚೋಳಭೂಪಾಲನಿಗೆ ಗುರುಗಳಾದವರು. ಇವೇ ಮೊದಲಾದ ಅನಂತಾನಂತ ಲೀಲೆಗಳನ್ನು ಮಾಡಿ ಸಮಸ್ತಪ್ರಪಂಚವಂದ್ಯರಾದ ಈ ಜಗದ್ಗುರುಗಳವರ ಜಯಂತಿಯನ್ನು ಸರ್ವರೂ ಅತಿಭಕ್ತಿಯಿಂದ ನೆರವೇರಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಮೈಸೂರು ಆಕಾಶವಾಣಿ (ರೇಡಿಯೋ) ಯಲ್ಲಿ

ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯ ಕಾರ್ಯಕ್ರಮ

ತಾ|| ೧೯—೩—೧೯೪೩ ನೆಯ ಶುಕ್ರವಾರ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯಿರುವುದರಿಂದ ಆ ದಿವಸ ಪ್ರಾತಃಕಾಲ ೮ ಘಂಟೆಯಿಂದ ೯ ಘಂಟೆಯ ವರೆಗೆ ಮೈಸೂರು ರೇಡಿಯೋ ಸ್ಟೇಷನ್ನಿನಲ್ಲಿ ಆ ಮಹಾತ್ಮರ ಸ್ತೋತ್ರಗಳೂ, ಅವರ ಜೀವನ ಚರಿತ್ರವೂ ಆ ಮಹಾತ್ಮರ ಉಪದೇಶ ರೂಪವಾದ ಸಿದ್ಧಾಂತಶಿಖಾಮಣಿಯ ಪಠನವೂ ಬ್ರಾಡ್‌ಕಾಸ್ಟ್ ಮಾಡಲ್ಪಡುವವು. ಭರತಖಂಡದಲ್ಲಿರುವ ಸರ್ವಗುರುಭಕ್ತರೂ ಆ ದಿವಸ ತಮ್ಮ ತಮ್ಮ ಪಟ್ಟಣಗಳಲ್ಲಿರುವ ರೇಡಿಯೋಗಳ ಮೂಲಕ ಜಗದಾಚಾರ್ಯರ ಪವಿತ್ರಚರಿತ್ರಸ್ತೋತ್ರಾದಿಗಳನ್ನು ಕೇಳಿ ಧನ್ಯರಾಗಬೇಕೆಂದಾಶಿಸುತ್ತೇವೆ.

ಬೆಳಗ್ಗೆ ೮ ಘಂಟೆಯಿಂದ ೮| ಘಂಟೆಯ ವರೆಗೆ ಕರ್ಣಾಟಕದೇಶದಲ್ಲಿ ವಿಶೇಷ ಖ್ಯಾತಿಯನ್ನು ಪಡೆದಿರುವ ಸಂಗೀತವಿದ್ವಾನ್ ಶ್ರೀ|| ಕೊಟ್ಟೂರು ಬಸವಯ್ಯನವರಿಂದ ಆಚಾರ್ಯರ ಕೀರ್ತನೆಗಳು ಮನೋಹರವಾಗಿ ಹಾಡಲ್ಪಡುವವು.

೮| ಘಂಟೆಯಿಂದ ೮|| ಘಂಟೆಯ ವರೆಗೆ ಆಸ್ಥಾನವಿದ್ವಾನ್ ಪಂ|| ಶ್ರೀ ಬಿವರೆ ಆರಾಧ್ಯಮಠದ ಬಸವಲಿಂಗ ಶಾಸ್ತ್ರಿಗಳವರಿಂದ ಸಿದ್ಧಾಂತಶಿಖಾಮಣಿಯ ಪಠನವು ಜರಗುವದು.

೮|| ಘಂಟೆಯಿಂದ ೮||| ಘಂಟೆಯ ವರೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಬಗ್ಗೆ ಪಂ|| ಶ್ರೀಕಾಶೀನಾಥ ಶಾಸ್ತ್ರಿಗಳವರ ಭಾಷಣವು ನೆರವೇರುವದು.

ಈ ಪ್ರಕಾರವಾಗಿ ಕಾರ್ಯಕ್ರಮವು ನೆರವೇರುವುದರಿಂದ ಸರ್ವರೂ ಈ ಮಹಾಪರ್ವಕಾಲದ ಲಾಭವನ್ನು ಪಡೆದುಕೊಳ್ಳಬೇಕೆಂದು ಕೋರಿಕೆ.

“ ರೇಡಿಯೋ ” ಇರತಕ್ಕ ಪ್ರತಿಯೊಂದು ನಗರದ ಗುರುಭಕ್ತರು ಜಗದಾಚಾರ್ಯರ ಜಯಂತಿಯ ಕಾರ್ಯಕ್ರಮವನ್ನು ಅಚ್ಚುಹಾಕಿಸಿ ತಮ್ಮ ತಮ್ಮ ಗ್ರಾಮಗಳಲ್ಲಿ ಎಲ್ಲರಿಗೂ ತಿಳಿಯುವಂತೆ ಏರ್ಪಡಿಸಿ ಗುರುಕೃಪೆಗೆ ಪಾತ್ರರಾಗಬೇಕು.

ತಾ|| ೨೪—೩—೧೯೪೩ ನೆಯ ಬುಧವಾರ ದಿವಸ ರಾತ್ರಿ ೯ ಘಂಟೆಗೆ ಸಿಕಂದರಾಬಾದ ನಗರದಲ್ಲಿರುವ ಪಂ|| ಚಿದರೆಮಠದ ಶ್ರೀ ವೀರಭದ್ರಶಾಸ್ತ್ರಿಗಳವರು ಮೈಸೂರು ರೇಡಿಯೋದಲ್ಲಿ “ ವೀರಶೈವಸಿದ್ಧಾಂತ ” ದ ಬಗ್ಗೆ ಭಾಷಣಮಾಡುವರು.

ಬಸವಾ ಪಟ್ಟಣ

ಶಿವಮೊಗ್ಗ ಡಿ॥ ಚನ್ನಗಿರಿ ತಾ॥ ಬಸವಾಪಟ್ಟಣದಲ್ಲಿ ಮಹಾ ಶಿವರಾತ್ರಿಯ ದಿವಸ ಆ ಗ್ರಾಮದ ಸಮಸ್ತ ಮಠದವರೂ ಸೇರಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಹಾಗೂ ವಿಶ್ವಾರಾಧ್ಯರ ಜಯಂತೀ ಮಹೋತ್ಸವವನ್ನು ದೊಡ್ಡ ಹಬ್ಬದಂತೆ ಅತಿ ವೈಭವದಿಂದಲೂ, ಭಕ್ತಿಯಿಂದಲೂ, ಮಾಡಿದರು ಶ್ರೀ ಜಗದ್ಗುರುಗಳ ಉತ್ಸವವು ಶ್ರೀ ಹಾಲಸ್ವಾಮಿಯ ಗದ್ದುಗೆಯಿಂದ ಹೊರಟು ಜಗದಾಚಾರ್ಯರ ಜಯಘೋಷದೊಡನೆ ಶ್ರೀ ದುರ್ಗಾದೇವಿಯ ದೇವಸ್ಥಾನಕ್ಕೆ ಮುಟ್ಟಿತು ಅಲ್ಲಿ ಭಜನೆಯಾದಮೇಲೆ ಪುನಃ ಶ್ರೀ ಹಾಲಸ್ವಾಮಿಯ ಗದ್ದುಗೆಗೆ ಬಂದಿತು ಅಗ್ಗೆ ಸಮಸ್ತ ಭಕ್ತಾದಿಗಳೆಲ್ಲರೂ ಜಗದಾಚಾರ್ಯರ ಭಜನೆಯನ್ನು ಮಾಡಿದರು ವೇ॥ ಅನುಗೋಡು ಮಠದ ಸಂಗಪ್ಪಯ್ಯನವರು ಮತ್ತು ಹಾಲಪ್ಪಯ್ಯನವರ ಮಕ್ಕಳಾದ ವೇ॥ ಹಾಲಸಿದ್ಧಯ್ಯನವರು, ಮಹಾಲಿಂಗಯ್ಯನವರು, ವೇ॥ ಹಾಲಸ್ವಾಮಿ ಮಠದ ಶಿವಲಿಂಗಯ್ಯನವರು, ಅತ್ಯಂತ ಭಕ್ತಿಯಿಂದ ಶ್ರೀ ಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಲೀಲಾ ಭಜನೆಯನ್ನು ಪಠನ ಮಾಡಿ ಎಲ್ಲಾ ಭಕ್ತಾದಿಗಳ ಮನಸ್ಸಿನಲ್ಲಿ ಶ್ರೀ ಜಗದಾಚಾರ್ಯರ ಭಕ್ತಿಯು ಹುಟ್ಟುವಂತೆ ಮಾಡಿದರು ಆ ದಿವಸ ಎಲ್ಲಾ ಭಕ್ತಾದಿಗಳು ರೇಣುಕ ವಿಜಯ ಪುರಾಣವನ್ನು ಕೇಳಿ ಧನ್ಯರಾದರು ಪುರಾಣವು ಬೆಳಗಿನ ೫ ಘಂಟೆಯವರೆಗೆ ನಡೆಯಿತು ಪುರಾಣವನ್ನು ವೇ॥ ಹಾಲಸ್ವಾಮಿ ಮಠದ ಸಿದ್ಧಪ್ಪಯ್ಯನವರು, ಹೆಡ್ಮಾಸ್ತರಾದ ಮ॥ ರಾ॥ ಗೋಪಾಲ್ ಜೋಯಿಸರು, ಮ॥ ರಾ॥ ಮಾಸ್ತರ್ ವೆಂಕಟರಮಣರಾಯರು ಶ್ರವಣ ಮಾಡಿಸಿ ಎಲ್ಲಾ ಭಕ್ತಾದಿಗಳಿಗೂ ಭಕ್ತಿ ಹುಟ್ಟುವಂತೆ ಮಾಡಿದರು

ಈ ಆನಂದೋತ್ಸವವನ್ನು ಈ ಗ್ರಾಮದ ದೈವದವರೆಲ್ಲರೂ ಕೂಡಿ ಉಲ್ಲಾಸದಿಂದಲೂ, ಭಕ್ತಿಯಿಂದಲೂ ಪೂರೈಸಿದರು ಈ ಮಹಾಶಯರಿಗೆ ಶ್ರೀ ಜಗದಾಚಾರ್ಯರು ಆಯುರಾರೋಗ್ಯ ಭಾಗ್ಯವನ್ನೀಯಲೆಂದು ಪ್ರಾರ್ಥನೆ

ಎ ಎಂ ಹಾಲಸಿದ್ಧಯ್ಯ

ಸೊಲ್ಲಾಪುರ

ಪ್ರತಿವರ್ಷ ಪದ್ಧತಿ ಪ್ರಕಾರ ಶ್ರೀ ಜಗದ್ಗುರು ಪಂಡಿತಾರಾಧ್ಯ ಮತ್ತು ಶ್ರೀ ಜಗದ್ಗುರು ವಿಶ್ವಾರಾಧ್ಯರ ಜಯಂತೀ ಮಹೋತ್ಸವವು ಶ್ರೀ ಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಮದ್ವೀರಶೈವ ಗುರುಕುಲದ ವತಿಯಿಂದ ಮಹಾಶಿವರಾತ್ರಿಯ ದಿವಸ ಅತ್ಯಂತ ವಿಜೃಂಭಣೆಯಿಂದ ನೆರವೇರಿತು ಗುರುಕುಲದ ವಿದ್ಯಾರ್ಥಿಗಳಿಂದ ಲಿಂಗೋದ್ಭವಮೂರ್ತಿಗೆ ಏಕಾದಶ ರುದ್ರಾಭಿಷೇಕವು ನೆರವೇರಿತು ಅದೇ ದಿವಸ ಹೋಟಗಿ ಶ್ರೀಗಳವರು ತಮ್ಮ ಮಠದಲ್ಲಿ ವಿಶೇಷಪೂಜಾಕ್ರಮವನ್ನಿಟ್ಟುಕೊಂಡಿದ್ದರು ಈ ಶಿವಪೂಜಾಫಲವನ್ನು ಹೊಂದುವುದಕ್ಕಾಗಿ ಸ್ತ್ರೀ ಪುರುಷರು ವಿಶೇಷವಾಗಿ ಬಂದು ರುದ್ರಾಭಿಷೇಕ, ತೀರ್ಥ, ಪ್ರಸಾದಗಳಿಂದ ಧನ್ಯರಾದರು ಶಿವನಾಮಸ್ಮರಣೆಯಿಂದಲೂ, ಜಗದಾಚಾರ್ಯರ ಜಯಘೋಷದಿಂದಲೂ, ಮಂಗಲವಾದ್ಯಗಳಿಂದಲೂ, ವೇದ ಘೋಷದಿಂದಲೂ ಮಠವೆಲ್ಲವೂ ಮಂಗಲಮಯವಾಗಿತ್ತು ರಾತ್ರಿ ೧೧ ಘಂಟೆಗೆ ಕೆಲಜನ ಗುರುಭಕ್ತರು "ಜಯಂತೀ" "ಜಗದಾಚಾರ್ಯರಲೀಲೆ" ಮೊದಲಾದ ವಿಷಯಗಳನ್ನು ಹೇಳಿ ಜನರ ಮನಸ್ಸನ್ನು ಆನಂದಗೊಳಿಸಿದರು ಆ ಮೇಲೆ ಹೋಟಗಿ ಶ್ರೀಗಳವರು "ಜಗದಾಚಾರ್ಯರ ಮಹತ್ವ" ಮೊದಲಾದ ವಿಷಯಗಳ ಬಗ್ಗೆ ಭಾಷಣ ಮಾಡಿ ಸರ್ವರನ್ನೂ ಸಂತೋಷಪಡಿಸಿದರು ಬಳಿಕ ವೇ॥ ಸೋಮಯ್ಯ ದೇವಣಗಾವ ಇವರು "ಶಿವರಾತ್ರಿ ಮಾಹಾತ್ಮ್ಯ" ಎಂಬ ಪುರಾಣವನ್ನು ಹೇಳಿದರು ಒಟ್ಟಿಗೆ ಆ ದಿವಸ ಮಹಾಶಿವರಾತ್ರಿಯ ಜಾಗರಣೆಯು ಶಿವನಾಮಸ್ಮರಣೆಯಿಂದಲೂ, ಜಗದಾಚಾರ್ಯರ ನಾಮಸ್ಮರಣೆಯಿಂದಲೂ ಅತ್ಯಂತ ಆನಂದದಿಂದ ನೆರವೇರಿತು

ಚನ್ನಬಸವಶರ್ಮಾ ಅಳ್ಳಗಿ
ಶ್ರೀಮದ್ವೀರಶೈವ ಗುರುಕುಲ ಸೊಲ್ಲಾಪುರ

ಕೊಯಿಲಾರಗಟ್ಟಿ

ಬಳ್ಳಾರಿ ಡಿ॥ ಹುವ್ವಿನಹಡಗಲಿ ತಾ॥ ಕೊಯಿಲಾರಗಟ್ಟಿ ಗುರುಸ್ಥಲ ಮಠದಲ್ಲಿ ಮಹಾಶಿವರಾತ್ರಿ ದಿವಸ ವೀರಶೈವ ಭಕ್ತರು ಮತ್ತು ಪರಮತೀಯ ಭಕ್ತರು ಚಿಲಕನಹಟ್ಟಿ ಪಂಚಗೃಹ ಮಠದ ವೇ॥ ಸಣ್ಣ ಕೊಟ್ರಪ್ಪಯ್ಯಶಾಸ್ತ್ರಿಗಳ ನೇತೃತ್ವದಲ್ಲಿ ಜಯಂತಿಯನ್ನು ವಿಜೃಂಭಣೆಯಿಂದ ನೆರವೇರಿಸಿದರು ಆ ದಿವಸ ನೆರದ ಸಭೆಯಲ್ಲಿ ಸದರಿ ಶಾಸ್ತ್ರಿಗಳು ಶ್ರೀಮತ್ಪಂಚಾಚಾರ್ಯರ ಉತ್ಪತ್ತಿ ಅವರು ಮಾಡಿರುವ ಶಿವಧರ್ಮ ಸಂಸ್ಥಾಪನ ವಿಷಯವನ್ನೂ ಈ ಪೂಜ್ಯಪಾದರ ಜಯಂತಿಯಾಚರಣೆಯ ಅವಶ್ಯಕತೆಯನ್ನೂ ಭಕ್ತರ ಹೃದಯದಲ್ಲಿ ನೆಲೆಗೊಳ್ಳುವಂತೆ ಪ್ರತಿಪಾದಿಸಿದರು ಪರಮತೀಯರಾದ ಡಿ ಗೋಣ್ಯಪ್ಪ, ಕ ಹನುಮಂತಪ್ಪ, ವಿ ಮಾಸ್ತರವೆಂಕಪ್ಪ, ಮುಂತಾದ ಭಕ್ತ ಶಿರೋಮಣಿಗಳ ಹೃದಯದಲ್ಲಿ ಪೂಜ್ಯಪಾದರ ಬಗ್ಗೆ ನಲಿಸಿರುವ ಭಕ್ತಿಯು ವರ್ಣನಾತೀತವಾಗಿದೆ ಇದಕ್ಕೆ ವೇ॥ ವಿದ್ವದ್ರತ್ನ ಶ್ರೀಕಾಶೀನಾಥ ಶಾಸ್ತ್ರಿಗಳವರಿಂದ ಪ್ರಕಟವಾದ ಗ್ರಂಥಗಳೇ ಮೂಲಕಾರಣವೆಂದು ಹೇಳಿದರ ಅತಿಶಯೋಕ್ತಿಯಾಗಲಾರದು ಸಭೆಯು ಮುಗಿದ ಬಳಿಕ ಜಗದಾಚಾರ್ಯರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿರಿಸಿ ಮಂಗಲವಾದ್ಯಗಳೊಡನೆ ಬಿಲ್ವವೃಕ್ಷದವರೆಗೆ ತಗೆದುಕೊಂಡುಹೋಗಿ ಪುನಃ ಮಠಕ್ಕೆ ಬಂದಮೇಲೆ ಮಂಗಳಾರತಿಯಾಗಿ ಸಕಲರಿಗೂ ಪ್ರಸಾದವು ಹಂಚಲ್ಪಟ್ಟಿತು ಗಣತೃಪ್ತಿಯು ಮಾಡಲ್ಪಟ್ಟಿತು [illegible] ಗ್ರಾಮದವರಿಗೆಲ್ಲಾ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಕೋರುವ

ಕೆ ಎಂ ಶಿವಪ್ಪಯ್ಯ

ಶ್ರೀಮದ್ವೀರಶೈವ ಗುರುಕುಲದ ವಿದ್ಯಾರ್ಥಿಗಳ ಕಾರ್ಯಕಲಾಪ, ಸೊಲ್ಲಾಪುರ

ಫಾಲ್ಗುಣ ಶು॥ ೧ ರವಿವಾರ ದಿವಸ ವೀರಶೈವ ಗುರುಕುಲ ವಿದ್ಯಾರ್ಥಿಗಳು ತಮ್ಮ ವಕ್ತೃತ್ವಕಲೆಯನ್ನು ಬೆಳೆಸಬೇಕೆಂದೂ, ವೀರಶೈವ ಧರ್ಮೋದ್ಧಾರಕ್ಕೆ ಗುರುಕುಲವೇ ಕಾರಣವೆಂದೂ ತಿಳಿದು ಹೋಟಗಿ ಶ್ರೀಗಳವರ ಅಪ್ಪಣೆಯಮೇರೆಗೆ ಶ್ರೀ ಬಾಲತಪಸ್ವಿ ಬೃಹನ್ಮಠದಲ್ಲಿ "ವಕ್ತೃತ್ವಕಲಾವರ್ಧಕ ಸಭೆ" ಎಂಬ ಹೆಸರಿನಿಂದ ಸಂಘವು ಸ್ಥಾಪಿತವಾಯಿತು ಆ ದಿವಸ ಸಾಯಂಕಾಲ 4 ಘಂಟೆಗೆ ವಿದ್ಯಾರ್ಥಿಗಳು ಗುರುವರ್ಗದ ಸುಧಾರಣೆ ಎಂಬ ವಿಷಯವನ್ನಿಟ್ಟಿದ್ದರು ಆಗ್ಗೆ ಕೆಲವು ಭಕ್ತಮಂಡಳಿಯವರು ಸಭೆಗೆ ಆಗಮಿಸಿದ್ದರಲ್ಲದೆ ಶ್ರೀಮತಿ ಮಾತೃಶ್ರೀ ಸಿದ್ಧವ್ವಬಾಯಿ ದೋಬಡೆ ಮೊದಲಾದ ಮಾತೃವರ್ಗದವರು ಬಂದಿದ್ದರು ಮೊದಲು ಶ್ರೀಜಗದ್ಗುರು ಸಿದ್ಧಲಿಂಗ ಶಿವಯೋಗಿಗಳ ಭಾವಚಿತ್ರಕ್ಕೆ ಪೂಜೆಯಾದನಂತರ ವೇ॥ ಪಂ॥ ಸಾಹಿತ್ಯರತ್ನ ಜಗದೀಶ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಆಗ್ಗೆ ಶ್ರೀ॥ ಷ॥ ಬ್ರ॥ ಜಯಗುರು ವೃಷಭ ಶಿವಾಚಾರ್ಯರು ಕ್ಯಾಸನೂರು, ಶಿವರುದ್ರಶರ್ಮಾ ಮುಧೋಳ, ಶ್ರೀ॥ ಷ॥ ಬ್ರ॥ ಮೃತ್ಯುಂಜಯ ಶಿವಾಚಾರ್ಯರು ಕುರವತ್ತಿ ಇವರು "ವಕ್ತೃತ್ವ"ದ ವಿಷಯದಲ್ಲೂ, ವಿರೂಪಾಕ್ಷಶರ್ಮಾ ದಾವಣಗೆರೆ ಇವರು "ಗುರುವರ್ಗದ ಸುಧಾರಣೆ"ಯ ವಿಷಯದಲ್ಲೂ ಭಾಷಣ ಮಾಡಿದರು ಅನಂತರ ಹೋಟಗಿ ಶ್ರೀಗಳವರು ಗುರುವರ್ಗದವರು ವೇಷ, ಭಾಷೆ, ಆಚಾರಾದಿಗಳಿಂದ ಮೊದಲು ಸುಧಾರಿಸಬೇಕೆಂದು ಬಹು ಮನೋಹರವಾಗಿ ಭಾಷಣವನ್ನಿತ್ತರು ಅನಂತರ ಅಧ್ಯಕ್ಷರು "ಆರಂಭಶೂರಾಃ ಖಲು ದಾಕ್ಷಿಣಾತ್ಯಾಃ" ಎಂಬ ಲೋಕಾಪವಾದವನ್ನು ನಾವು ಕಳೆದುಕೊಳ್ಳಬೇಕು ವಿದ್ಯಾರ್ಥಿಗಳು ತಮ್ಮ ಉನ್ನತಿಯ ಸಲುವಾಗಿಯೇ ಪ್ರತಿಪಕ್ಷಕ್ಕೊಮ್ಮೆ ಸಭೆಯನ್ನು ಇಡಲಿಕ್ಕೇಬೇಕು ಆರಂಭಶೂರರಾಗಬಾರದು ಗುರುವರ್ಗದವರು ವೀರಶೈವ ಧರ್ಮೋನ್ನತಿಗೆ ಕಾರಣೀಭೂತರಾಗಿರುವರು ಆದುದರಿಂದ ಅವರು ಭಕ್ತೋದ್ಧಾರ ಕಾರ್ಯದಲ್ಲಿ ನಿರತರಾಗಬೇಕು ಎಂದು ಮನೋಹರವಾಗಿ ಉಪದೇಶ ಮಾಡಿದರು ಅನಂತರ ಜಗದಾಚಾರ್ಯರ ಮಂಗಲದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಚನ್ನವೀರಶರ್ಮಾ, ಸಾಗಣಸೂರು,
ಶ್ರೀಮದ್ವೀರಶೈವಗುರುಕುಲ, ಸೊಲ್ಲಾಪುರ

ಅನುಷ್ಠಾನ ಸಮಾಪ್ತಿ ಮಹೋತ್ಸವ ಪಾಲಿಕೊಪ್ಪ.

ಜಗತ್ಕಲ್ಯಾಣಾರ್ಥವಾಗಿ ಶ್ರೀ ಗಂಗಾಧರಶಿವಾಚಾರ್ಯಸ್ವಾಮಿಗಳವರು ಅನುಷ್ಠಾನವನ್ನು ಕೈಕೊಂಡದ್ದುದು ಸರಿಯಷ್ಟೆ ತತ್ಸಂಬಂಧವಾದ ಸಮಾಪ್ತಿಸೂಚಕ ಮಂಗಲಕಾರ್ಯವು ತಾ॥ 15/2/43ನೇ ಸೋಮವಾರ ಒಳ್ಳೇ ವಿಜೃಂಭಣೆಯಿಂದ ನಡೆಯಿತು ಆದಿನ ಬೆಳಗ್ಗೆ ಶ್ರೀ ಕರ್ತೃಗದ್ದುಗೆಗೆ ರುದ್ರಾಭಿಷೇಕಾದಿ ಪೂಜಾಕಾರ್ಯಗಳೂ ಶ್ರೀಗಳವರ ಪಾದಪೂಜೆಯೂ ನೆರವೇರಿದವು ಮಧ್ಯಾಹ್ನ ೬-೭ ಸಾವಿರ ಜನಗಳಿಗೆ ಅನ್ನಸಂತರ್ಪಣೆಯು ನಡೆಯಿತು ಸಾಯಂಕಾಲ ಶ್ರೀಗಳವರ ಮತ್ತು ಶ್ರೀ ಶಿವಮಹಾಪುರಾಣದ ಆಂದೋಲಿಕಾಮಹೋತ್ಸವವು ವಾದ್ಯವೈಭವದೊಡನೆ ಒಳ್ಳೆ ಅಟ್ಟಹಾಸದಿಂದ ಜರುಗಿತು ಉತ್ಸವವಾದನಂತರ ವೇ॥ ಪಂ॥ ಹರೀಶ್ವರ ಶಾಸ್ತ್ರಿಗಳವರಿಂದ ಪುರಾಣಸಮಾಪ್ತಿಸೂಚಕ ಪ್ರವಚನವೂ, ಹಾಗೂ ಪಿ ಎಂ ಗಂಗಾಧರಶರ್ಮರವರಿಂದ ಉಪನ್ಯಾಸವೂ, ಅನಂತರ ಶ್ರೀಗಳವರಿಂದ "ಮಾನವ ಜೀವನೋದ್ದೇಶ ವಿಷಯಕವಾದ ಭಾಷಣವೂ ನಡೆದು ಸರ್ವರಿಗೂ ಆಶೀರ್ವದಿಸಲ್ಪಟ್ಟಿತು

ಓರ್ವ ಉತ್ಸವಭಾಗಿ

ದೀಕ್ಷಾ ಸಮಾರಂಭಮಹೋತ್ಸವ, ಅರಳೀಕಟ್ಟಿ.

ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯಸ್ವಾಮಿಗಳವರು ಅರಳಿಕಟ್ಟಿ ಹೊಸ ಮಠದ ವೇ॥ ಬಸವಣ್ಣಯ್ಯನವರ ಬಿನ್ನಹವನ್ನು ಅಂಗೀಕರಿಸಿ ತಾ॥ ೧೯-೨-೪೩ ನೇ ಶುಕ್ರವಾರ ಸಾಯಂಕಾಲ ದಯಮಾಡಿಸಿದರು ಅದೇದಿವಸ ಶ್ರೀಗಳವರ ಪುರಪ್ರವೇಶೋತ್ಸವವು ಶೃಂಗರಿಸಿದ ಪಲ್ಲಕ್ಕಿಯಲ್ಲಿ ವಾದ್ಯವೈಭವದೊಡನೆ ಅತ್ಯಂತ ವಿಜೃಂಭಣೆಯೊಡನೆ ನಡೆಯಿತು ತಾ॥ ೨೦-೨-೪೩ ನೇ ರವಿವಾರ ಸಾಯಂಕಾಲ ದೀಕ್ಷಾ ಕರ್ಮಾಂಗಭೂತಗಳಾದ ಗಣಪತಿಪೂಜಾದಿಗಳು ನೆರವೇರಿದವು ಮರುದಿವಸ ಶ್ರೀ ಸ್ವಾಮಿಗಳವರ ನೇತೃತ್ವದಲ್ಲಿ ವೇ॥ ಬಸವಣ್ಣಯ್ಯನವರ ಉಭಯ ಪುತ್ರರಿಗೆ ಮಾಹೇಶ್ವರದೀಕ್ಷಾಸಂಸ್ಕಾರವು ವಿಧ್ಯುಕ್ತವಾಗಿ ಮಾಡಲ್ಪಟ್ಟಿತು ಬಳಿಕ ಸಾವಿರಾರು ಜನಗಳಿಗೆ ಅನ್ನಸಂತರ್ಪಣೆಯು ನೆರವೇರಿತು ಕಾರ್ಯಕಾರಿಗಳಿಗೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ

ಸ್ವೀಕಾರ.

ಧಾರವಾಡ ಡಿ॥ ಗದಗ ಶಹರ ನಿವಾಸಿಗಳಾದ ವೇ॥ ಶಿವಲಿಂಗಾರ್ಯ ಸದಾಶಿವಾರ್ಯ ಗುರುಸ್ವಾಮಿಮಠ ಇವರ ಪುತ್ರ ಚಿ॥ ಶ್ರೀಶರಣಿಗೆ ಇದೇ ಮಾಘ ಶು॥ ೧ಕ್ಕೆ 16 ವರ್ಷಗಳು ತುಂಬಿ 17ನೆಯ ವರ್ಷವು ಪ್ರಾರಂಭವಾದ ಸಂತೋಷಕ್ಕಾಗಿ ನೆರವೇರಿದ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ॥ ಮುಳುಗುಂದ ಹಿರೇಮಠದ ಪುರದಯ್ಯನವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿ ತಾ॥ ಪಾಲಿಕೊಪ್ಪ ಗ್ರಾಮದಲ್ಲಿ ಶ್ರೀ॥ಷ॥ ಬ್ರ॥ ಗಂಗಾಧರಶಿವಾಚಾರ್ಯಸ್ವಾಮಿಗಳವರು ಅನುಷ್ಠಾನವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿ, ವೇ॥ ಅರಳಿಕಟ್ಟಿ ಹೊಸಮಠದ ಬಸವಣ್ಣಯ್ಯನವರು ತಮ್ಮ ಪುತ್ರರ ದೀಕ್ಷಾಸಮಯದಲ್ಲಿ ತೆಗೆಯಿಸಿದ 1 ರೂಪಾಯಿ ಒಟ್ಟು 2 ರೂ ಗಳು ವೇ॥ ಪಿ ಎಂ ಗಂಗಾಧರಶರ್ಮರ ದ್ವಾರಾ ತಲ್ಪಿರುತ್ತವೆ

ಹುವ್ವಿನಹಡಗಲಿ ತಾಲೂಕು ಕೊಯಿಲಾರಗಟ್ಟಿಯ ಗುರುಸ್ಥಲ ಮಠದಲ್ಲಿ ನೆರವೇರಿದ ಜಗದಾಚಾರ್ಯರ ಜಯಂತೀ ಸಮಯದಲ್ಲಿ ಮ॥ ರಾ॥ ಡಿ ಗೋಣೆಪ್ಪನವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಚಿಲಕನಹಟ್ಟಿ ಪಂಚಗೃಹಮಠದ ಸಣ್ಣ ಕೊಟ್ರಪ್ಪಯ್ಯ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ[illegible]ಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೨ನೇ ಮಾರ್ಚ ೧೯೪೩ [ಸಂಚಿಕೆ ೪೯

ಶ್ರೀಜಗದ್ಗುರುಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಜಯಂತೀಮಹೋತ್ಸವ, ಕುಂದಗೋಳ

ಪ್ರತಿವರ್ಷಪದ್ಧತಿಯಂತೆ ಕುಂದಗೋಳ ಪಂಚಗೃಹ ಹಿರೇಮಠದಲ್ಲಿ ಮಹಾಶಿವರಾತ್ರಿ ದಿವಸ ಸಾಯಂಕಾಲ ೫ ಘಂಟೆಗೆ ಶ್ರೀಜಗದ್ಗುರು ಪಂಡಿತಾರಾಧ್ಯ ಮತ್ತು ವಿಶ್ವಾರಾಧ್ಯರ ಭಾವಚಿತ್ರಕ್ಕೆ ಪೂಜೆಯು ಪ್ರಾರಂಭವಾಗಿ ೭ ಘಂಟೆಯವರೆಗೆ ವಿಜೃಂಭಣೆಯಿಂದ ಜರಗಿತು ರಾತ್ರಿ ೮ ಘಂಟೆಗೆ ಶ್ರೀ ಜಗದ್ಗುರುಗಳವರ ಭಾವಚಿತ್ರವನ್ನು ಪಲ್ಲಕ್ಕಿಯಲ್ಲಿ ಮೂರ್ತಗೊಳಿಸಿದ ಮೇಲೆ ಉತ್ಸವವು ಸಕಲ ಬಿರುದಾವಳಿಗಳೊಡನೆಯೂ ವಾದ್ಯವೈಭವಗಳೊಡನೆಯೂ ಮತ್ತು ಪಂಚಾಚಾರ್ಯರ ಭಜನ ಮೇಳದೊಡನೆಯೂ ಗ್ರಾಮದ ಮುಖ್ಯ ಮುಖ್ಯ ರಾಜಬೀದಿಗಳಲ್ಲಿ ಹಾಯ್ದು ೧೧ ಘಂಟೆಗೆ ಮಠಕ್ಕೆ ತಲುಪಿತು ಉತ್ಸವದಲ್ಲಿ ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳು ಹನ್ನೆರಡು ಮಠ ಹುಬ್ಬಳ್ಳಿ, ಮತ್ತು ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳು ಸತ್ತಿಗೇರಿ ಇವರು ಇದ್ದುದರಿಂದ ವಿಶೇಷ ಶೋಭೆಯುಂಟಾಗಿತ್ತು ಉತ್ಸವದಲ್ಲಿ ಸಾಗರ ತಾ॥ ಸಂಬೇಕ್ಕೆ ಪಾಟೀಲರಾದ ಶಿವಪ್ಪಗೌಡರೂ, ಹೂಲಿ ಪೋಲೀಸಪಾಟೀಲ ಹನುಮಂತಗೌಡರೂ ಪುರಪ್ರಮುಖರೂ ಭಾಗವಹಿಸಿದ್ದರು. ಉತ್ಸವವು ಮಠಕ್ಕೆ ತಲುಪಿದ ನಂತರ ಮಠಾಧ್ಯಕ್ಷರಾದ ಶ್ರೀ॥ ಷ॥ ಬ್ರ॥ ಗುರುಪಾದಶಿವಾಚಾರ್ಯ ,ಸ್ವಾಮಿಗಳವರ ಉದಾರಾಶ್ರಯದಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಜಗದ್ಗುರು ವಿಶ್ವಾರಾಧ್ಯ ಫ್ರೀ ಬೋರ್ಡಿಂಗಿನ ವಿದ್ಯಾರ್ಥಿಗಳು ಶಿವರಾತ್ರಿಯ ಬಗ್ಗೆಯೂ ಮತ್ತು ಜಗದಾಚಾರ್ಯರ ಜಯಂತಿಯ ಬಗ್ಗೆಯೂ ಭಾಷಣಮಾಡಿದರು ಬಳಿಕ ಶ್ರೀ। ಷ॥ ಬ್ರ॥ ಚರಮೂರ್ತಿಸ್ವಾಮಿಗಳು ಹನ್ನೆರಡು ಮಠ ಹುಬ್ಬಳ್ಳಿ ಇವರು ಗುರುಶಿಷ್ಯರ ಲಕ್ಷಣವನ್ನು ಕುರಿತು ಅಧಿಕಾರವಾಣಿಯಿಂದ ಉಪದೇಶಿಸಿದರು ಆಮೇಲೆ ಪ್ರವಚನ ಪಟು ವೇ॥ ಸಿದ್ಧಲಿಂಗದೇವರು ಹಿರೇಮಠ ಹಿರೇಹರಕುಣಿ ಇವರು ಬಾಣಾಸುರನ ಕಥೆಯನ್ನು ಪ್ರವಚನ ರೂಪದಿಂದ ಗಾಯನ ಸಾಹಿತ್ಯದೊಡನೆ ಉಪದೇಶಿಸಿದರು. ಆಮೇಲೆ ಪಂಚಾಚಾರ್ಯರ ಮಂಗಳಗೀತೆಯೊಡನೆ ಸಭೆಯು ಸಮಾಪ್ತಿಗೊಳಿಸಲ್ಪಟ್ಟಿತು

ವಿರೂಪಾಕ್ಷಶಾಸ್ತ್ರೀ ಹಿರೇಮಠ
ಶ್ರೀ ಜ ವಿ ಜ್ಯೋತಿಷವೈದಿಕಪಾಠಶಾಲಾಧ್ಯಾಪಕ

ಹಾರ್ನಹಳ್ಳಿ

ಶಿವಮೊಗ್ಗಾ ಡಿ॥ ಹಾರನಹಳ್ಳಿಯಲ್ಲಿರುವ ವೇ॥ ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ವಾಸಗೃಹದಲ್ಲಿ ಪದ್ಧತಿಪ್ರಕಾರ ಮಹಾಶಿವರಾತ್ರಿಯದಿವಸ ಶ್ರೀಜಗದ್ಗುರು ವಿಶ್ವಾರಾಧ್ಯ ಪಂಡಿತಾರಾಧ್ಯರ ಭಾವಚಿತ್ರಗಳನ್ನು ಅಷ್ಟವಿಧಾರ್ಚನೆಗಳಿಂದ ಪೂಜಿಸಿ, ವಂದಿಸಿ ಪ್ರಸಾದವನ್ನು ವಿನಿಯೋಗಿಸಿದರು ಇದೇದಿವಸ ರಾತ್ರಿ ೧೦ ಘಂಟೆಯಿಂದ ಈ ಊರಿನ ವೀರಶೈವಮಹಾಜನರ ಪ್ರಾರ್ಥನೆಯಂತೆ ಶ್ರೀವೃಷಭೇಶ್ವರ ದೇವಾಲಯದಲ್ಲಿ ಮಹಾತ್ಮಮಂತ್ರಜಾತಾರ್ಯನ ಚರಿತ್ರವನ್ನು ಅನುವಾದ ಮಾಡಿ ನೆರೆದಿದ್ದ ಸಹಸ್ರಾರು ಜನರನ್ನು ಆನಂದಗೊಳಿಸಿದರು

ಓರ್ವ ಸನಾತನಧರ್ಮಾಭಿಮಾನಿ

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಜನನಿಯ ಶ್ರೇಷ್ಠತೆ

ಲೇ—ಮೃತ್ಯುಂಜಯಶಿವಾಚಾರ್ಯರು, ಉರವತ್ತಿ

ಜಗತ್ತಿನಲ್ಲಿ ಯಾವ ಪ್ರಾಣಿಯೂ ತಾಯಿಯಿಲ್ಲದೆ ಜೀವಿಸಲಾರದು ಆದುದರಿಂದಲೇ ವೇದವು, “ಮಾತೃದೇವೋ ಭವ” ಎಂದು ಸಾರಿರುವದು ತಾಯಿಯು ಪರಮಪೂಜ್ಯವಾದ ದೇವತೆಯು ನಾವು ಗರ್ಭದಲ್ಲಿದ್ದಾಗ್ಗೆ ತಾಯಿಯ ಆಹಾರಸಾರದಿಂದಲೇ ಬೆಳೆಯುತ್ತೇವೆ ಜನಿಸಿದ ಮೇಲೆ ತಾಯಿಯ ಮೊಲೆಹಾಲನ್ನುಂಡು ವೃದ್ಧಿಹೊಂದುತ್ತೇವೆ “ತಾಯಿಗಿಂತ ಬಂಧುವಿಲ್ಲ, ಸಕ್ಕರೆಗಿಂತ ಸವಿಯಿಲ್ಲ.” ಎಂಬ ಗಾದೆಯಂತೆ ತಾಯಿಗೆ ಸಮಾನರಾದ ಬಂಧುಗಳು ಜಗತ್ತಿನಲ್ಲಿ ಯಾರೂ ಇರುವದಿಲ್ಲ ಮಕ್ಕಳಲ್ಲಿ ತಾಯಿಯು ಪ್ರೇಮವು ತಂದೆಗಿಂತಲೂ ಹೆಚ್ಚಿರುವದು ತಾಯಿಯು ಮಕ್ಕಳಿಗೆ ಧರ್ಮಬೋಧಕಳಾಗಿರುವಳಲ್ಲದೆ ಮಕ್ಕಳ ಮನಸ್ಸನ್ನು ದೇವರ ಕಡೆಗೆ ಒಲಿಸುವಳು ಸುರುಚಿಯು ಸವತಿಯ ಮಾತ್ಸರ್ಯದಿಂದ ತಂದೆಯ ತೊಡೆಯಮೇಲೆ ಕುಳಿತಿದ್ದ ಧ್ರುವನನ್ನು ಒದೆದು ಕೆಡಹಿದಾಗ ಸುನೀತಿಯು ವಿರೋಧ ಮಾರ್ಗಕ್ಕೆ ಅವಕಾಶಕೊಡದೆ ಅವನ ಮನಸ್ಸನ್ನು ದೇವರ ಕಡೆಗೆ ಎಳೆದು ದೇವರ ಸಾಕ್ಷಾತ್ಕಾರಕ್ಕೆ ಸಾಧಕಳಾದಳು ಈಗಿನ ನಾಮಧಾರಿ ಸನ್ಯಾಸಿಗಳು ಕಾಷಾಯವಸ್ತ್ರಧಾರಿಗಳಾಗಿ ನಮಗೆ ತಾಯಿತಂದೆಗಳ ಸಂಬಂಧವೇ ಇರುವುದಿಲ್ಲವೆಂದು ತಂದೆತಾಯಿಗಳನ್ನು ದೂಷಿಸುತ್ತಿರುವರು ಅಯ್ಯೋ ಸನ್ಯಾಸಿವರ್ಗವೇ, ಜಗದ್ವಿಖ್ಯಾತರಾದ ಶಂಕರಾಚಾರ್ಯರು ಮೃತಳಾದ ತಮ್ಮ ತಾಯಿಯ ಅಂತ್ಯಸಂಸ್ಕಾರವನ್ನು ತಾವೇ ಮಾಡಲಿಲ್ಲವೇ? ತಮ್ಮ ತಾಯಿಯು ಕಷ್ಟಪಟ್ಟು ದೂರದಲ್ಲಿರುವ ನದಿಯಿಂದ ನೀರು ತರುವುದನ್ನು ನೋಡಿ ತಮ್ಮ ತಪಃಪ್ರಭಾವದಿಂದ ನದಿಯನ್ನು ತಮ್ಮ ಮನೆಯ ಕಡೆಗೆಯೇ ತಿರುಗಿಸಲಿಲ್ಲವೇ? ಕುಂತಿಯು ಗಜಗೌರೀವ್ರತವನ್ನು ಮಾಡಲಪೇಕ್ಷಿಸಲು ಭೀಮಾರ್ಜುನರು ತಮ್ಮ ಸಾಹಸದಿಂದ ಇಂದ್ರನ ಐರಾವತವನ್ನೇ ಸ್ವರ್ಗದಿಂದ ತಂದು ತಮ್ಮ ತಾಯಿಯ ಬಯಕೆಯನ್ನು ಪೂರೈಸಿದರು ರಾವಣನು ತನ್ನ ತಾಯಿಯ ಪೂಜೆಗೋಸ್ಕರ ಘೋರವಾದ ತಪಸ್ಸನ್ನಾಚರಿಸಿ ಶಿವನನ್ನು ಪ್ರತ್ಯಕ್ಷಮಾಡಿಕೊಂಡು ಪರಮಾತ್ಮನ ಆತ್ಮಲಿಂಗವನ್ನು ಭೂಲೋಕಕ್ಕೆ ತಂದು ತಾಯಿಯ ಮನಸ್ಸಿಗೆ ಸಂತೋಷವನ್ನುಂಟುಮಾಡಿದನು ಶಿವಾಜಿಯು ತಾಯಿಯ ಉಪದೇಶದಿಂದ ಛತ್ರಪತಿಯಾದನು ಆದುದರಿಂದ ಓ ನನ್ನ ಬಂಧುವರ್ಗವೇ, ತಾಯಿಯ ಆಜ್ಞೆಯನ್ನು ಉಲ್ಲಂಘಿಸದೆ ಸರ್ವವಿಧದಿಂದಲೂ ಆಕೆಯ ಸೇವೆಯನ್ನು ಮಾಡುವುದು ಪ್ರತಿಯೊಬ್ಬರ ಮುಖ್ಯ ಕರ್ತವ್ಯವಾಗಿರುವುದು ತಾಯಿಯ ಉಪಕಾರವು ಎಷ್ಟು ಜನ್ಮಗಳಲ್ಲಿ ತೀರಿಸಿದರೂ ತೀರದು. ತಾಯಿಯ ಮಹತ್ತ್ವವು ಈ ರೀತಿಯಾಗಿದ್ದರೂ ಕೆಲಜನಗಳು ಈ ಕಾಲದಲ್ಲಿ ತಾಯಿಯನ್ನು ಲೆಕ್ಕಕ್ಕೇ ತರುವದಿಲ್ಲ ಹೆಂಡರು ಮನೆಗೆ ಬಂದ ಮೇಲಂತೂ ತಾಯಿಯನ್ನು ಮೂಲೆಗೆ ಕುಳ್ಳಿರಿಸಿ ಆಕೆಯ ಮನಸ್ಸಿಗೆ ಭಯಂಕರವಾದ ತಾಪವನ್ನುಂಟುಮಾಡಹತ್ತುತ್ತಾರೆ ಇಂತಹ ಉದಾಹರಣೆಗಳು ಜಗತ್ತಿನಲ್ಲಿ ಲಕ್ಷಗಟ್ಟಲೆಯಾಗಿ ದೊರೆಯುತ್ತವೆ ಆದುದರಿಂದ ಯಾರೂ ಈ ವಿಧವಾದ ನಿಂದ್ಯಮಾರ್ಗದಲ್ಲಿ ಪ್ರವೇಶಿಸದೆ ತಾಯಿಯನ್ನು ಪ್ರತ್ಯಕ್ಷದೇವತೆಂದು ತಿಳಿದು ಆಕೆಯಲ್ಲಿ ನಿಜವಾದ ಭಕ್ತಿಯನ್ನಿಟ್ಟು ಪರಮೇಶ್ವರನ ಕೃಪೆಗೆ ಪಾತ್ರರಾಗಬೇಕೆಂದಾಶಿಸುತ್ತೇವೆ

ಶೋಚನೀಯ ನಿಧನ, ಜೈನಾಪುರ.

ವಿಜಾಪುರ ಡಿ॥ ಜೈನಾಪುರ ಹಿರಿಯಮಠದ ವೇ॥ ಸಿದ್ಧರಾಮಯ್ಯನವರು ಮಹಾಶಿವರಾತ್ರಿ ದಿವಸ ಶಿವಾಧೀನರಾದರು “ಶರಣರ ಅರಿವು ಮರಣದಲ್ಲಿ’ ಎಂಬಂತೆ ಇವರು ಶ್ರೀಜಗದ್ಗುರು ಪಂಡಿತಾರಾಧ್ಯ ವಿಶ್ವಾರಾಧ್ಯರ ಜಯಂತಿಯ ದಿವಸ ಶಿವಾಧೀನರಾದುದನ್ನು ನೋಡಿದರೆ ಪುಣ್ಯಜೀವಿಗಳೆಂದೇ ಹೇಳಬೇಕು ಈ ಮಹನೀಯರ ಆತ್ಮಶಾಂತಿಗಾಗಿ ಇಲ್ಲಿಯ ಭಜನಸಂಘದವರು ಸಮಾಧಿಸಂಸ್ಕಾರವಾಗುವವರೆಗೂ ಶಿವಭಜನೆಯನ್ನು ಮಾಡಿದರು ಇವರ ಸಮಾಧಿಯು ಕೃಷ್ಣಾನದಿಯ ದಂಡೆಯ ಮೇಲೆ ಪ್ರಾಚೀನಕಾಲದಿಂದ ನಡೆದುಬಂದ ಪವಿತ್ರಸ್ಥಳದಲ್ಲಿ ನೆರವೇರಿತು. ಆ ಕಾಲಕ್ಕೆ ಸುತ್ತಲಿನ ಹಳ್ಳಿಯ ಜನರೂ ಇಲ್ಲಿಯ ಎಲ್ಲ ಮತದ ಸಾವಿರಾರು ಜನರೂ ನೆರೆದಿದ್ದರು. ಆ ಕಾಲಕ್ಕೆ ಗೋದಾನ-ವಸ್ತ್ರದಾನಾದಿಗಳನ್ನು ಮಾಡಲಾಯಿತು ಈ ದಾನಕಾರ್ಯವು ಶ್ರೀಮಂತ ಸಿದ್ಧರಾಮಪ್ಪ ದೇಸಾಯಿ ಬಿರಾದಾರ ಇವರಿಂದ ನೆರವೇರಿತು ಆ ಕಾಲಕ್ಕೆ ಪ್ರಭಾಪೋಷಣಕ್ಕಾಗಿ ಒಂದು ರೂಪಾಯಿಯು ಸಮರ್ಪಿಸಲ್ಪಟ್ಟಿತು ಅವಸಾನಕಾಲಕ್ಕೆ ಇವರಿಗೆ ೬೦ ವರ್ಷಗಳಾಗಿದ್ದವು ಇವರು ಎಲ್ಲರಿಗೂ ಉಚಿತವಾಗಿ ಔಷಧಗಳನ್ನು ಕೊಡುತ್ತಿದ್ದರು ಇಲ್ಲಿಯ ಸಾರ್ವಜನಿಕ ವಾಚನಾಲಯದ ಅಧ್ಯಕ್ಷರಿದ್ದರು ಭಕ್ತಮಂಡಲಿಯು ಇವರನ್ನು ಕೇಳದೆ ಯಾವ ಕೆಲಸಕ್ಕೂ ಕೈಹಾಕುತ್ತಿದ್ದಿಲ್ಲ ಇಂಥ ಮಹಾವ್ಯಕ್ತಿಯನ್ನು ಕಳೆದುಕೊಂಡುದು ನಮ್ಮ ದುರ್ದೈವವೆಂದೇ ಹೇಳಬೇಕಾಗಿದೆ ಇವರಿಗೆ ಇಬ್ಬರು ತಮ್ಮಂದಿರೂ, ಒಬ್ಬ ಹೆಣ್ಣುಮಗಳೂ, ೫ ಜನ ಗಂಡುಮಕ್ಕಳೂ ಇರುವರು ಪರಮಾತ್ಮನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುವ,

ಯಮನಪ್ಪ, ಹೊನಮಲ್ಲಪ್ಪ ಸಜ್ಜನ ಮಾಸ್ತರ,
ಜೈನಾಪುರ.

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ ನಿಮಿತ್ತವಾಗಿ

ತಾ|| ೧೯-೩-೧೯೪೩ ನೆಯ ದಿವಸ

ಮೈಸೂರು ಆಕಾಶವಾಣಿಯಲ್ಲಿ

ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ಮಾಡಿದ

ಭಾಷಣ

ಜೀಯಾಚ್ಛ್ರೀರೇಣುಕಾಚಾರ್ಯಃ ಶಿವಾಚಾರ್ಯಶಿಖಾಮಣಿಃ ।
ಯೋ ವೀರಶೈವಸಿದ್ಧಾಂತಂ ಸ್ಥಾಪಯಾಮಾಸ ಭೂತಲೇ ।

ವೀರಶೈವಮತವು ಬಹುಪುರಾತನವಾದುದು ಋಗಾದಿ ವೇದಗಳೂ, ಈಶಾದ್ಯುಪನಿಷತ್ತುಗಳೂ, ಕಾಮಿಕಾದಿ ಶಿವಾಗಮಗಳೂ, ವ್ಯಾಸೋಕ್ತ ಪುರಾಣಗಳೂ ಈ ಮಹಾಮತದ ಸ್ವರೂಪವನ್ನು ಸ್ಫುಟವಾಗಿ ಪ್ರತಿಪಾದಿಸುತ್ತಿರುವವು ಈ ಸನಾತನಮತವನ್ನು ಜಗದಾದಿಯಲ್ಲಿ ಶ್ರೀ ರೇಣುಕಾದಿಪಂಚಾಚಾರ್ಯರು ಸ್ಥಾಪಿಸಿದರು ಈ ಮಹಾತ್ಮರು ಪರಮೇಶ್ವರನ ಆಜ್ಞಾನುಸಾರವಾಗಿ ಪ್ರತಿಯೊಂದು ಯುಗದ ಆದಿಯಲ್ಲಿಯೂ ಶಿವಲಿಂಗ ಮುಖದಿಂದ ದಿವ್ಯದೇಹಧಾರಿಗಳಾಗಿ ಅವತರಿಸಿ, ಸರ್ವತ್ರ ಶಿವತತ್ತ್ವವನ್ನು ಪ್ರಕಾಶಪಡಿಸಿದರೆಂಬ ವಿಷಯವನ್ನು ಸಕಲ ಶಿವಾಗಮಗಳು ಮುಕ್ತಕಂಠದಿಂದ ಸಾರುತ್ತಿರುವವು ಮಾರ್ಕಂಡೇಯನನ್ನುದ್ಧರಿಸುವದಕ್ಕೋಸ್ಕರ ಪರಮೇಶ್ವರನು ಲಿಂಗಮುಖದಿಂದ ಅವತರಿಸಿದಂತೆಯೂ, ಪ್ರಹ್ಲಾದನನ್ನುದ್ಧರಿಸುವದಕ್ಕೋಸ್ಕರ ವಿಷ್ಣುವು ಸ್ತಂಭದಿಂದ ಅವತರಿಸಿದಂತೆಯೂ, ಮಾನವಕೋಟಿಯನ್ನುದ್ಧರಿಸುವದಕ್ಕೋಸ್ಕರ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಶಿವಲಿಂಗಮುಖದಿಂದ ಅವತರಿಸಿ, ಭೂಮಂಡಲದಲ್ಲಿ ಶಿವಭಕ್ತಿಯನ್ನು ಪ್ರತಿಷ್ಠಾಪಿಸಿದರು ಶ್ರೀರೇಣುಕಾಚಾರ್ಯರು ನಿಜಾಮು ರಾಜ್ಯಕ್ಕೆ ಸೇರಿರುವ ಕೊಲ್ಲಿಪಾಕ ಕ್ಷೇತ್ರದಲ್ಲಿರುವ ಶ್ರೀ ಸೋಮೇಶ್ವರ ಲಿಂಗದಿಂದ ಅವತರಿಸಿ, ಮೈಸೂರು ರಾಜ್ಯದಲ್ಲಿರುವ ರಂಭಾಪುರೀ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿದರು ಶ್ರೀ ದಾರುಕಾಚಾರ್ಯರು ಗ್ವಾಲ್ಹೇರ್ ರಾಜ್ಯಕ್ಕೆ ಸೇರಿರುವ ವಟಕ್ಷೇತ್ರದಲ್ಲಿ ಶ್ರೀ ಸಿದ್ಧೇಶ್ವರ ಲಿಂಗದಿಂದ ಅವತರಿಸಿ ಉಜ್ಜಯಿನೀ ಮಹಾಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿದರು ಶ್ರೀಏಕೋರಾಮಾರಾಧ್ಯರು ಆಂಧ್ರದೇಶದ ಕಾಕಿನಾಡ ಡಿ|| ದ್ರಾಕ್ಷಾರಾಮಕ್ಷೇತ್ರದಲ್ಲಿರುವ ಶ್ರೀಭೀಮೇಶ್ವರಲಿಂಗದಿಂದ ಅವತರಿಸಿ, ಹಿಮವತ್ಕೇದಾರ ಕ್ಷೇತ್ರದಲ್ಲಿ ಧರ್ಮಪೀಠವನ್ನು ಸ್ಥಾಪಿಸಿದರು ಶ್ರೀಪಂಡಿತಾರಾಧ್ಯರು ಶ್ರೀಶೈಲಕ್ಷೇತ್ರದಲ್ಲಿರುವ ಶ್ರೀಮಲ್ಲಿಕಾರ್ಜುನಲಿಂಗದಿಂದ ಅವತರಿಸಿ, ಶ್ರೀಶೈಲ ಕ್ಷೇತ್ರದಲ್ಲಿಯೇ ಧರ್ಮಪೀಠವನ್ನು ಸ್ಥಾಪಿಸಿದರು ಶ್ರೀ ವಿಶ್ವಾರಾಧ್ಯರು ಶ್ರೀಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀ ವಿಶ್ವನಾಥ ಲಿಂಗದಿಂದ ಅವತರಿಸಿ, ಆ ಕ್ಷೇತ್ರದಲ್ಲಿಯೇ ಧರ್ಮಪೀಠವನ್ನು ಸ್ಥಾಪಿಸಿದರು ಈ ಮಹಾಚಾರ್ಯರು ಸ್ಥಾಪಿಸಿದ ಧರ್ಮಪೀಠಗಳು, ಅನಾದಿಕಾಲದಿಂದ ಇಂದಿನವರೆಗೂ ರಾಜಾಧಿರಾಜಮಾನ್ಯಗಳಾಗಿ ವಿಶೇಷ ವೈಭವದಿಂದ ಮೆರೆಯುತ್ತಿರುವವು ಈ ಪೂಜ್ಯಪಾದರು ಶ್ರುತಿಸೂತ್ರಾದಿಗಳಮೇಲೆ ಶಿವಾದ್ವೈತಸಿದ್ಧಾಂತವನ್ನು ಸ್ಥಾಪಿಸಿರುವರು. ಈ ಐದು ಜನ ಆಚಾರ್ಯರಲ್ಲಿ ಒಬ್ಬರಾಗಿರುವ ಭಗವತ್ಪಾದ ಶ್ರೀರೇಣುಕಾಚಾರ್ಯರ ಜಯಂತಿಯು ಈ ಶುಭದಿವಸ ಪ್ರಾಪ್ತವಾಗಿರುವದರಿಂದ ಸದ್ಯ ಆ ಮಹನೀಯರ ವಿಷಯವನ್ನು ಸಂಕ್ಷೇಪವಾಗಿ ವಿವರಿಸುವದಾಗುವದು

ಶ್ರೀ ಜಗದ್ಗುರು ರೇಣುಕಾಚಾರ್ಯರ ವಿಷಯದಲ್ಲಿ ಅನೇಕ ಜನ ಪ್ರಾಚೀನ ಕವಿಗಳು ಸಂಸ್ಕೃತ, ಕರ್ನಾಟಕ, ಆಂಧ್ರ, ದ್ರಾವಿಡ, ಮಹಾರಾಷ್ಟ್ರ ಭಾಷೆಗಳಲ್ಲಿ ಕಾವ್ಯಗಳನ್ನೂ ಪುರಾಣಗಳನ್ನೂ ಚಂಪೂ ಗ್ರಂಥಗಳನ್ನೂ ರಚಿಸಿರುವರು ಆ ಗ್ರಂಥಗಳಲ್ಲೆಲ್ಲಾ ಸಿದ್ಧಾಂತಶಿಖಾಮಣಿಯು ಬಹುಪುರಾತನವಾದುದು ಈ ಸಿದ್ಧಾಂತಶಿಖಾಮಣಿಗೆ ' ರೇಣುಕಾಗಸ್ತ್ಯ ಸಂವಾದ '' ವೆಂಬ ಬೇರೊಂದು ಹೆಸರುಂಟು ಈ ಮಹಾಗ್ರಂಥದಲ್ಲಿ ಶ್ರೀ ರೇಣುಕಾಚಾರ್ಯರು, ಅಗಸ್ತ್ಯ ಮಹರ್ಷಿಗಳಿಗೆ ವೀರಶೈವ ತತ್ತ್ವವನ್ನುಪದೇಶಿಸಿದ ವಿಷಯವು ಉಕ್ತವಾಗಿರುವದು ಅಲ್ಲದೆ, ಆ ಗ್ರಂಥದ ಅಂತ್ಯಭಾಗದಲ್ಲಿ ವಿಭೀಷಣನ ಪ್ರಾರ್ಥನಾನುಸಾರವಾಗಿ ಮೂರುಕೋಟಿ ಗುರುರೂಪವನ್ನು ಧರಿಸಿ ಮೂರುಕೋಟಿಶಿವಲಿಂಗಗಳನ್ನು ಒಂದೇ ಮುಹೂರ್ತದಲ್ಲಿ ಸ್ಥಾಪಿಸಿದ ವಿಷಯವು ಬರೆಯಲ್ಪಟ್ಟಿರುವದು ಈ ಮಹಾಚಾರ್ಯರು ಅಗಸ್ತ್ಯ ಮತ್ತು ವಿಭೀಷಣ ಇವರಿಬ್ಬರನ್ನೂ ಉದ್ಧರಿಸಿದ ವಿಷಯವು, ಇವರ ವಿಷಯಕವಾಗಿರುವ ಸಮಸ್ತಗ್ರಂಥಗಳಲ್ಲಿಯೂ ಏಕಮುಖವಾಗಿ ಹೇಳಲ್ಪಟ್ಟಿರುವದು ಇದರಿಂದ ಇವರೀ ಲೀಲೆಗಳು ಕೃತ-ತ್ರೇತಾಯುಗಗಳಿಗೆ ಸಂಬಂಧಪಟ್ಟಿರುವವೆಂದು ಸ್ಪಷ್ಟವಾಗುವದು

ದ್ವಾಪರಯುಗದಲ್ಲಿಯೂ ಸಹ ಈ ಮಹಾಚಾರ್ಯರು ಅನೇಕ ಲೀಲೆಗಳನ್ನು ಆಚರಿಸಿರುವರು ಶ್ರೀಶಂಕರನು ಕಿರಾತವೇಷವನ್ನು ತಾಳಿ ಲೋಕೈಕವೀರನಾದ ಅರ್ಜುನನೊಡನೆ ಯುದ್ಧಮಾಡಿದ ಸಮಯದಲ್ಲಿ, ಶಂಕರನ ಸಂಗತವಿದ್ದ ಪ್ರಮಥಪರಿವಾರದಲ್ಲಿ ಶ್ರೀರೇಣುಕನೂ ಸಹ ಇದ್ದನೆಂಬ ವಿಷಯವು ಮಹಾಭಾರತದಿಂದ ತಿಳಿದು ಬರುವದು ಮಹಾಭಾರತವನ್ನು ಕುಮಾರವ್ಯಾಸನೆಂಬ ಲೋಕಪ್ರಸಿದ್ಧ ಕವಿಯು ಕನ್ನಡಿಸಿರುವ ವಿಷಯವು ಸರ್ವರಿಗೂ ತಿಳಿದೇ ಇರುವದು ಈ ಮಹಾಕವಿಯು ತನ್ನಿಂದ ವಿರಚಿತವಾಗಿರುವ ಮಹಾಭಾರತದ ಆರಣ್ಯಪರ್ವದ ೫ನೆಯ ಸಂಧಿಯಲ್ಲಿ—

ದೇವನನುಕರೂಪದಲಿ ನಿಂದರು ।
ದೇವಿಯರು ಗುಹಗಣಪತಿಗಳೆ ।
ಲ್ಲಾ ವಿನೋದದ ನೋಡಿ ಧರಿಸಿದರೊಲಿದು ಶಾಬರದ ॥
ಆ ವಿಗಡ ನಂದೀಶ ವೀರಕ ।
ದೇವಲಕ ರೇಣುಕ ಮಹೋದರ
ದಾವಶಿಖಿಮುಖ ವೀರಭದ್ರಾದ್ಯಖಿಲಭೂತಗಣ ॥೩೦॥

ಶಂಕರನು ಅರ್ಜುನನೊಡನೆ ಶಬರವೇಷವನ್ನು ಧರಿಸಿದಂತೆ ಶಕ್ತಿ ಷಣ್ಮುಖ ಗಣಪತಿ, ನಂದೀಶ್ವರ, ವೀರಕ, ದೇವಲಕ ರೇಣುಕ ಮಹೋದರ ದಾವಶಿಖಿ, ವೀರಭದ್ರ ಮತ್ತು ಸಮಸ್ತ ಭೂತಸಮೂಹ ಇವರೆಲ್ಲರೂ ವಿನೋದದಿಂದ ಶಬರವೇಷವನ್ನು ಧರಿಸಿದರೆಂದು ವರ್ಣಿಸಿದ್ದಾನೆ ಇದರಿಂದ ಶ್ರೀರೇಣುಕರು ಪಾಂಡವರ ಕಾಲದಲ್ಲಿಯೂ ಇದ್ದರೆಂಬುದು ಸ್ಪಷ್ಟವಾಗುತ್ತದೆ

ಇದರಂತೆಯೇ ಈ ಆಚಾರ್ಯರು ಕಲಿಯುಗದಲ್ಲಿಯೂ ಅವತರಿಸಿ ಅನೇಕಲೀಲೆಗಳನ್ನು ಆಚರಿಸಿರುವರು ಈಗ್ಗೆ ೨೦೦೦ ವರ್ಷಗಳ ಪೂರ್ವದಲ್ಲಿ ಉಜ್ಜಯಿನೀ ಪಟ್ಟಣದಲ್ಲಿದ್ದು ಶಕಪುರುಷನೆಂದು ಜಗದ್ವಿಖ್ಯಾತನಾಗಿರುವ ವಿಕ್ರಮ ಮಹಾರಾಜನಿಗೆ ಖಡ್ಗವನ್ನಾಶೀರ್ವದಿಸಿದರು ಕುಟಿಲಸಿದ್ಧನಾದ ಗೋರಕ್ಷನ ಗರ್ವವನ್ನು ನಾಶಮಾಡಿ ಅವನಿಗೆ ಶಿವತತ್ತ್ವೋಪದೇಶವನ್ನು ಮಾಡಿದರು ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನೂ ರತ್ನಗರ್ಭ ಗಣಪತಿಯನ್ನೂ ಅನುಗ್ರಹಿಸಿದರು ಈವಿಷಯವು ಪೂರ್ವಕಾಲದಲ್ಲಿ ಶೃಂಗೇರಿಮಠಾಧಿಪತಿಗಳಿಂದ ಬರೆಯಿಸಲ್ಪಟ್ಟಿರುವ " ಗುರುವಂಶಕಾವ್ಯ "ದ ೩ ನೆಯ ಸರ್ಗದಲ್ಲಿ ಸ್ಪಷ್ಟವಾಗಿ ಬರೆಯಲ್ಪಟ್ಟಿರುವುದಲ್ಲದೆ, ಶಿವತತ್ತ್ವರತ್ನಾಕರ, ವೇದಾಂತಸಾರವೀರಶೈವಚಿಂತಾಮಣಿ, ರೇಣುಕವಿಜಯ ಮೊದಲಾದ ಗ್ರಂಥಗಳಲ್ಲಿಯೂ ಉಕ್ತವಾಗಿರುವದು ಇದೇ ರೀತಿಯಾಗಿ ಈ ಮಹಾತ್ಮರು ಭೂಮಂಡಲದಲ್ಲಿ ಅನೇಕ ಲೀಲೆಗಳನ್ನಾಚರಿಸಿ ಸುಪ್ರಸಿದ್ಧರಾಗಿರುವರು ಈ ಮಹಾತ್ಮರ ಹೆಸರಿನ ದೇವಸ್ಥಾನಗಳೂ ಸಹ ಭರತಖಂಡದ ನಾನಾಭಾಗಗಳಲ್ಲಿ ಬಹುಪುರಾತನಕಾಲದಿಂದಲೂ ವಿರಾಜಿಸುತ್ತಿರುವವು ಈ ದೇವಾಲಯಗಳು ಮೈಸೂರು ರಾಜ್ಯಕ್ಕೆ ಸೇರಿರುವ ಕಡೂರು ತಾ|| ರಂಭಾಪುರೀ ಕ್ಷೇತ್ರದಲ್ಲಿಯೂ, ಬೆಂಗಳೂರು ಡಿ|| ಕ್ಲೋಸ್‌ಪೇಟೆ ತಾ|| ರೇವಣಸಿದ್ಧೇಶ್ವರನ ಬೆಟ್ಟದಲ್ಲಿಯೂ, ಬೆಂಗಳೂರು ಡಿ|| ಶಿವಗಂಗೆಯ ಬೆಟ್ಟದಲ್ಲಿಯೂ, ತುಮಕೂರು ಡಿ|| ಕೊರಟಗೆರೆ ತಾ|| ಸಿದ್ಧರಬೆಟ್ಟದಲ್ಲಿಯೂ ನಿಜಾಮು ಇಲಾಖಾ ಗುಲಬರ್ಗಾ ಡಿ|| ರೇವಗಿಕ್ಷೇತ್ರದಲ್ಲಿಯೂ, ಬೊಂಬಾಯಿ ಇಲಾಖಾ ಸೊಲ್ಲಾಪುರ ನಗರದಲ್ಲಿಯೂ, ಸೊಲ್ಲಾಪುರ ಡಿ|| ಮಾಸನೂರುಗ್ರಾಮದಲ್ಲಿಯೂ, ಸಾತಾರಾ ಡಿ|| ವಿಟಾ ತಾ|| ರೇಣಾವಿಗ್ರಾಮದಲ್ಲಿಯೂ, ಸಾಂಗಲಿ ಸಂಸ್ಥಾನಕ್ಕೆ ಸೇರಿದ ಮಂಗಳವೇಢೆ ಗ್ರಾಮದಲ್ಲಿಯೂ, ಕೊಲ್ಹಾಪುರ ಸಂಸ್ಥಾನಕ್ಕೆ ಸೇರಿದ ರೇವಣಸಿದ್ಧನ ಗುಡ್ಡದಲ್ಲಿಯೂ, ಮದ್ರಾಸ ಇಲಾಖಾ ತಿರುವಣ್ಣಾಮಲೆ ಕ್ಷೇತ್ರದಲ್ಲಿಯೂ, ಕೊಯಿಮತ್ತೂರು ಡಿ|| ಕೊಳ್ಳೇಗಾಲ ತಾ|| ಹರಳೆಗ್ರಾಮದ ಸಮೀಪದಲ್ಲಿರುವ ಕಾವೇರೀ ನದೀತೀರದಲ್ಲಿಯೂ ಇಂದಿಗೂ ವಿರಾಜಿಸುತ್ತಿರುವವು. ಇದರಿಂದ ಈ ಮಹಾತ್ಮರ ಪವಿತ್ರನಾಮವು ಭರತಖಂಡದಲ್ಲಿ ಪ್ರಾಚೀನಕಾಲದಿಂದಲೂ ವಿಶೇಷ ಪ್ರಚಾರದಲ್ಲಿರುವದೆಂದು ಸ್ಪಷ್ಟವಾಗಿ ತೋರಿಬರುವುದು ಈ ವಿಷಯವು ಪ್ರಾಚೀನಶಿಲಾಶಾಸನಗಳಿಂದಲೂ ಸಹ ವ್ಯಕ್ತವಾಗುವುದು.

ಕ್ರಿ ಶ ೧೦ ನೆಯ ಶತಮಾನದಲ್ಲಿ ಚಾಲುಕ್ಯವಂಶದ ಕೊಟ್ಟಿಗದೇವ (ನಿತ್ಯವರ್ಷ) ನೆಂಬ ರಾಜನು ನಿಜಾಮ ರಾಜ್ಯದಲ್ಲಿರುವ ಮಳಖೇಡನಗರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ರಾಜ್ಯವನ್ನಾಳುತ್ತಿದ್ದ ಸಮಯದಲ್ಲಿ, ಪಂದಿಗನೆಂಬ ರಾಜನು ಅವನ ಸಾಮಂತರಾಜನಾಗಿ ಕರ್ನಾಟಕದೇಶವನ್ನಾಳುತ್ತಿದ್ದನು ಈ ಪಂದಿಗರಾಜನಿಗೆ " ಜಕ್ಕಿಸುಂದರಿ '' ಎಂಬ ಹೆಂಡತಿಯಿದ್ದಳು ಈ ಜಕ್ಕಿಸುಂದರಿಯು ಶಾಲಿವಾಹನ ಶಕ ೮೯೦ ನೆಯ ಪ್ರಭವನಾಮ ಸಂವತ್ಸರ ಪುಷ್ಯಮಾಸ ಉತ್ತರಾಯಣ ಪುಣ್ಯಕಾಲ ಸಂಕ್ರಾಂತಿಯ ದಿವಸ ದಾನಮಾಡಿರುವ ವಿಷಯವು ಚಿತ್ರದುರ್ಗ ತಾ|| ದೇವಿನಪಳ್ಳಿಗ್ರಾಮದ ಹನುಮಂತದೇವರ ಗುಡಿಯ ಪ್ರಾಕಾರದಲ್ಲಿರುವ ಒಂದು ಶಿಲಾಶಾಸನದಲ್ಲಿ ಹೇಳಲ್ಪಟ್ಟಿರುವದು ಇದು ಚಿತ್ರದುರ್ಗ ತಾಲೂಕಿನ 74 ನೆಯ ನಂಬರಿನ ಶಾಸನವಾಗಿರುವದು. ಈ ಶಾಸನದಲ್ಲಿ ಪಂದಿಗರಾಜನ ವಂಶಾವಳಿಯು ವರ್ಣಿಸಲ್ಪಟ್ಟಿರುವದು ಈ ವಂಶಾವಳಿಯಲ್ಲಿ ಪಂದಿಗರಾಜನಿಗೆ ಆರನೆಯ ತಲೆಯವನಾದ " **ರೇವಣನಾಥ** " ನೆಂಬ ರಾಜನ ಹೆಸರು ಉಲ್ಲಿಖಿತವಾಗಿರುವದು

ಆ ವಿಭುಗಾತ್ಮಜಂ ನೆರೆಯೆ ಪುಟ್ಟಿದ ಪುಟ್ಟಿದ
ಚಿಕ್ಕಮುಯ್ಯನಂ ,
ತಾ ವಸುಧಾಧಿಪಂಗೆ ತನಯಂ ಕಲಿಕೋಂಕಣದೇವ
ಮ . . ಹ್ಮ ॥
ದ್ಭಾವನನಂಗೆ ತೀರ್ಥಯುತನಗ್ರಜನಾತನ ಸೂನು
ದಾನಿ ತಾಂ ।
ರೇವಣನಾಥನಾತನ ಮಗಂ ನೆಗಳ್ದಂ ಸಲೆ ರಾಜಭೂ
ಭುಜಂ ॥

ಆತಂಗೆ ಚಿಕ್ಕಯಣ್ಣಂ ।
ಮಾತಿಗೆ ಸತ್ಪುತ್ರನಾಪುಪುತ್ರಂಗೆ ಸುತಂ ।
ನೂತಗುಣಂ ಗೊಗ್ಗಿ ಗೊಗ್ಗಿಗ ।
ನೀತಂ ಶ್ರೀಸೂದ್ರಕಾಂಕನಾತಂಗೆ ಮಗಂ ॥

ನಂದ ಮಹಾಸಾಮಂತಂ ।
ಪಂದಿಗನಾತ್ತಶಕ್ತಿ ಮಿಸಿದುದಿದಾ ಜಗದೊಳ್ ಸಂ ।
ಕ್ರಂದನನಂದನಸದೃಶಂ ।
ನಿಂದಂ ನಿಜರಾಜ್ಯಪದವಿಯೊಳ್ ಸುಖದಿಂದಂ ॥

ಈ ಪದ್ಯಗಳಿಂದ ಪಂದಿಗರಾಜನ ತಂದೆಯು ಶೂದ್ರಕಾಂಕನೆಂದೂ, ಅವನ ತಂದೆಯು ಗೊಗ್ಗಿಯೆಂದೂ, ಅವನ ತಂದೆಯು ಚಿಕ್ಕಯಣ್ಣನೆಂದೂ, ಅವನ ತಂದೆಯು ರಾಜಭೂಭುಜನೆಂದೂ, ಅವನ ತಂದೆಯು **ರೇವಣನಾಥ**ನೆಂದೂ ವ್ಯಕ್ತವಾಗುವದು ಇದರಿಂದ ರೇವಣನಾಥನೆಂಬ ರಾಜನು ಪಂದಿಗರಾಜನಿಗೆ ಆರನೆಯ ತಲೆಯವನೆಂದು ಸ್ಪಷ್ಟವಾಗುವದು ಪ್ರತಿಯೊಬ್ಬರಿಗೆ 30 ವರ್ಷಗಳಂತೆ ಲೆಕ್ಕ ಹಾಕಿದರೂ ಪಂದಿಗರಾಜನಿಗಿಂತ ರೇವಣನಾಥರಾಜನು ೧೮೦ ವರ್ಷಗಳ ಪೂರ್ವದಲ್ಲಿದ್ದನೆಂದು ಸ್ಪಷ್ಟವಾಗುವದು. ಪಂದಿಗರಾಜನು ಶಾಲಿವಾಹನ ಶಕ ೮೯೦ ಅಂದರೆ ಕ್ರಿ. ಶ ೯೬೮ ರಲ್ಲಿದ್ದನೆಂಬ ವಿಷಯವು ಈ ಶಾಸನದಿಂದಲೇ ತಿಳಿದುಬರುವದು. ಇದರಿಂದ ಪಂದಿಗರಾಜನಿಗೆ ಆರನೆಯ ತಲೆಯವನಾದ **ರೇವಣನಾಥ** ರಾಜನು ಸುಮಾರು ಕ್ರಿ. ಶ. ೭೮೮ ರಲ್ಲಿದ್ದನೆಂದು ತೋರಿಬರುವದು. ಈಗ್ಗೆ ಸುಮಾರು ೧೨೦೦ ವರ್ಷಗಳ ಪೂರ್ವದಲ್ಲಿದ್ದ ರಾಜರು ಈ ಮಹಾಚಾರ್ಯರ ಹೆಸರನ್ನಿಟ್ಟುಕೊಳ್ಳಬೇಕಾದರೆ ಆ ಕಾಲದಲ್ಲಿ ಈ ಭಗವತ್ಪಾದರ ತೇಜಸ್ಸು ಪ್ರಪಂಚದಲ್ಲೆಲ್ಲಾ ವ್ಯಾಪಿಸಿತ್ತೆಂದು ಧಾರಾಳವಾಗಿ ಹೇಳಬಹುದಾಗಿದೆ.

ಇದಲ್ಲದೆ ಮದ್ರಾಸ್ ಗವರ್ನಮೆಂಟಿನವರು ೧೯೩೯ ನೆಯ ಇಸವಿಯಲ್ಲಿ " ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್'' (ವಾಲ್ಯೂಂ 9 ಭಾಗ I) ಎಂಬ ಹೆಸರಿನಿಂದ ಕರ್ನಾಟಕಶಾಸನಗಳಿಂದ ಕೂಡಿರುವ ಒಂದು ಪುಸ್ತಕವನ್ನು ಮುದ್ರಿಸಿ ಪ್ರಸಿದ್ಧಪಡಿಸಿದ್ದಾರೆ ಆ ಪುಸ್ತಕದ ೧೧೪-೧೧೫ ನೆಯ ಪುಟಗಳಲ್ಲಿ ಬಳ್ಳಾರಿ ಡಿ|| ಹರಪನಹಳ್ಳಿ ತಾ|| ಬಾಗಳಿಗ್ರಾಮದ ಕಲ್ಲೇಶ್ವರದೇವಾಲಯದಲ್ಲಿರುವ ಒಂದು ಶಾಸನವು ಮುದ್ರಿಸಲ್ಪಟ್ಟಿರುವದು.

ತ್ರೈಲೋಕ್ಯಮಲ್ಲನೊಳಂಬ ಪಲ್ಲವ ಪೆರ್ಮಾಡಿ ಜಯಸಿಂಗದೇವನೆಂಬ ರಾಜನು ಬಳ್ಳಾರಿ ಜಿ|| ಕೂಡ್ಲಿಗಿ ತಾಲೂಕು ಕೋಗಳಿ ಗ್ರಾಮವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆ ಪ್ರಾಂತವನ್ನು ಆಳುತ್ತಿದ್ದ ಸಮಯದಲ್ಲಿ ಶಾಲಿವಾಹನ ಶಕ ೯೯೦ (ಕ್ರಿ.ಶ. ೧೦೬೮)ನೆಯ ಕೀಲಕಸಂವತ್ಸರದ ಜ್ಯೇಷ್ಠಮಾಸ ಪೂರ್ಣಿಮೆ ಸೋಮವಾರ ದಿವಸ ಮಹಾದೇವಯ್ಯನೆಂಬವನು ಒಂದು ವೃತ್ತಿಯನ್ನು ತೆಗೆದುಕೊಂಡು ಕೆರೆಗೆ ಕೊಟ್ಟಿರುವ ವಿಷಯವು ಆ ಶಾಸನದಲ್ಲಿ ಉಕ್ತವಾಗಿರುವದು.

ಆ ಶಾಸನದ ಕೊನೆಯಭಾಗದಲ್ಲಿ ಎರಡು ಕಂದ ಪದ್ಯಗಳು ಕೆತ್ತಲ್ಪಟ್ಟಿರುವವು ಅದರಲ್ಲಿ—

“ ಪುರುಡಿಸುವೊಡೆಲವೊ ರೇವಣಾಚಾರ್ಯನೊಳೆಂದುಂ ”
“ ಬಿನ್ನಣವೊ ಅಕ್ಷರದ ಕರಮೊಪ್ಪಂ ಕಂಠದೊಳ್ ಬಳೆದ ರೇವಣ ಕಂಠಕೆ ”

ಇತ್ಯಾದಿ ವಾಕ್ಯಗಳು ಉಲ್ಲಿಖಿತವಾಗಿರುವವು ಈ ಪದ್ಯಗಳಲ್ಲಿ **ರೇವಣಾಚಾರ್ಯ**ನೆಂಬವನು ಕಂಠದಿಂದ (ಲೋಹಲೇಖನಿಯಿಂದ) ಅಕ್ಷರಗಳನ್ನು ಅತ್ಯಂತ ಸುಂದರವಾಗಿ ಬರೆಯುತ್ತಿದ್ದನೆಂದು ಅವನ ಪ್ರಶಂಸೆಯು ವಿಶೇಷವಾಗಿ ಮಾಡಲ್ಪಟ್ಟಿರುವದು.

ಇದಲ್ಲದೆ ಇದೇ ಶಾಸನಪುಸ್ತಕದ ೧೩೧ನೆಯ ಪುಟದಲ್ಲಿ ಬಳ್ಳಾರಿ ಜಿ|| ಆಲೂರು ತಾಲೂಕು ರಾಮದುರ್ಗ ಗ್ರಾಮದ ಭೋಗೇಶ್ವರ ದೇವಾಲಯದಲ್ಲಿರುವ ಒಂದು ಶಾಸನವು ಮುದ್ರಿಸಲ್ಪಟ್ಟಿರುವದು ಈ ಶಾಸನದಲ್ಲಿ ಚಾಲುಕ್ಯ ವಿಕ್ರಮಶಕ ೪ (ಕ್ರಿ ಶ ೧೦೭೯) ಸಿದ್ಧಾರ್ಥಿ ಸಂವತ್ಸರ ಪುಷ್ಯಮಾಸ ಅಮಾವಾಸ್ಯೆ ಬೃಹಸ್ಪತಿವಾರ ಉತ್ತರಾಯಣ ಪುಣ್ಯಕಾಲ ಸಂಕ್ರಾಂತಿ ದಿವಸ ಸೋಮೇಶ್ವರದೇವರಿಗೆ ದಾನಮಾಡಿದ ವಿಷಯವು ಉಕ್ತವಾಗಿರುವದು ಇದರಲ್ಲಿ—

“ ಶ್ರೀಮತ್ಕಾಳಾಮುಖಶೇಶ್ವರ ಜೋಗಿಮ್ಮಯರ ಸರ್ಗ್ಗ ದಂಡನಾಯಕ ರೇವರಸನು ಕರಣದ ಬಾವಿರಾಜನು ರಾಜಾಧ್ಯಕ್ಷ ಎರೆಮಯ್ಯನಾಯಕನು ಮಿಳ್ತು ಮೂವರ ಬಿನ್ನಪದಿಂ ”

ಇತ್ಯಾದಿ ವಾಕ್ಯಗಳು ಕೆತ್ತಲ್ಪಟ್ಟಿರುವವು ಇದರಲ್ಲುಕ್ತವಾಗಿರುವ **ರೇವರಸ**ನೆಂಬವನು ಶ್ರೀರೇವಣಸಿದ್ಧರ ಹೆಸರನ್ನಿಟ್ಟುಕೊಂಡವನಾಗಿದ್ದಾನೆ ಈ ಮಹಾತ್ಮರ ಹೆಸರನ್ನು ಈ ಕಾಲದಲ್ಲಿಯೂ ಸಹ “ ರೇವಯ್ಯ, ರೇವಣ್ಣ, ರೇವಪ್ಪ” ಇತ್ಯಾದಿಯಾಗಿ ಇಟ್ಟುಕೊಳ್ಳುವದು ರೂಢಿಯಲ್ಲಿರುವದು ಕ್ರಿ ಶ ೮ ನೆಯ ಶತಮಾನದಲ್ಲಿದ್ದ **ರೇವಣನಾಥರಾಜನ** ವಿಷಯವೂ, ಕ್ರಿ.ಶ ೧೧ ನೆಯ ಶತಮಾನದಲ್ಲಿದ್ದ **ರೇವಣಾಚಾರ್ಯ** ಮತ್ತು **ರೇವರಸರ** ವಿಷಯವೂ ಶಿಲಾಶಾಸನಗಳಿಂದ ಸ್ಪಷ್ಟವಾಗಿ ತಿಳಿದು ಬರುವದರಿಂದ, ಪೂರ್ವಕಾಲದಲ್ಲಿ ಅನೇಕ ಜನರು ಈ ಮಹಾತ್ಮರ ಹೆಸರನ್ನಿಟ್ಟುಕೊಳ್ಳುತ್ತಿದ್ದರೆಂದೂ, ಆ ಕಾಲದಲ್ಲಿ ಈ ಮಹಾತ್ಮರ ಪವಿತ್ರನಾಮವು ಜಗತ್ಪೂಜ್ಯವಾಗಿ ಮೆರೆಯುತ್ತಿತ್ತೆಂದೂ ಸ್ಪಷ್ಟವಾಗಿ ತೋರಿಬರುತ್ತದೆ.

ಕ್ರಿ. ಶ. ೧೦೬೦ ರಲ್ಲಿದ್ದ ಶ್ರೀಪತಿ ಪಂಡಿತಾರಾಧ್ಯರು ತಮ್ಮಿಂದ ಬರೆಯಲ್ಪಟ್ಟಿರುವ ಶ್ರೀಕರಭಾಷ್ಯದ ಪ್ರಾರಂಭದಲ್ಲಿ—

ಶ್ರೀಮಚ್ಛಿವಾಚಾರವಿಚಾರದೀಕ್ಷಂ
ಸ್ವಶಿಷ್ಯಸತ್ಪ್ರೀಣನಪೂರ್ಣಪಕ್ಷಂ ।
ದುರ್ವಾರಕಾಮಾದಿವಿದಾರದಕ್ಷಂ
ಭಜಾಮ್ಯಹಂ ರೇವಣಕಲ್ಪವೃಕ್ಷಂ ॥

ಎಂದು ಈ ಮಹಾತ್ಮರನ್ನು ಅಸಾಧಾರಣ ಪೂಜ್ಯಬುದ್ಧಿಯಿಂದ ಕೊಂಡಾಡಿರುವರಲ್ಲದೆ, ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಅನೇಕ ಕಡೆಗೆ ಇವರ ಪವಿತ್ರನಾಮವನ್ನು ಉಲ್ಲೇಖಿಸಿರುವರು

ಪೂರ್ವಕಾಲದಲ್ಲಿ “ ಈಶಾನಶಿವಗುರು ” ಎಂಬವರು ಸಂಸ್ಕೃತ ಭಾಷೆಯಲ್ಲಿ ಈ ಮಹಾತ್ಮರ ಚರಿತ್ರವನ್ನು ಬರೆದಿರುವ ವಿಷಯವು, ಬೊಮ್ಮರಸನು ಬರೆದಿರುವ ರೇವಣಸಿದ್ಧೇಶ್ವರ ಪುರಾಣದಿಂದ ತಿಳಿದುಬರುವುದು.

ಈಶಾನಶಿವಗುರುಗಳು ಕ್ರಿ ಶ. ೯೩೦ ರಲ್ಲಿದ್ದರೆಂಬ ವಿಷಯವು ಕಡಪಾ ಜಿ|| ಸಿದ್ಧವಟಂ ತಾ|| ದೊಂಗಲಸಾನಿ ಗ್ರಾಮದ ಶಿವಾಲಯದಲ್ಲಿರುವ ಶಿಲಾಶಾಸನದಿಂದ ತಿಳಿದು ಬರುವದು. ಈ ಶಾಸನದ ವಿಷಯವು, ಮದ್ರಾಸ್ ಓರಿಯಂಟಲ್ ಲೈಬ್ರರಿಯಲ್ಲಿರುವ ಕರ್ನಲ್ ಕೆ. ಮೆಕೆಂಜಿಯವರ ರಿಪೋರ್ಟಿನ (ತಾ|| 15-4-1928) ೧೫೯ ನೆಯ ಪೇಜಿನಲ್ಲಿ ಬರೆಯಲ್ಪಟ್ಟಿರುವದು

ಈವರೆಗೆ ವಿವರಿಸಿರುವ ಪ್ರಾಚೀನ ಗ್ರಂಥಾಧಾರಗಳನ್ನೂ ಶಿಲಾಶಾಸನಗಳನ್ನೂ ವಿಮರ್ಶಿಸಿದರೆ ಶ್ರೀರೇಣುಕಾಚಾರ್ಯರು ಪ್ರತಿಯೊಂದು ಯುಗದಲ್ಲಿಯೂ ಅವತರಿಸಿ ಅನೇಕಾನೇಕ ಅದ್ಭುತಲೀಲೆಗಳನ್ನು ಆಚರಿಸಿ ಜಗನ್ಮಾನ್ಯರಾಗಿ ಹೋಗಿರುವರೆಂಬುದು ಸ್ಪಷ್ಟವಾಗುತ್ತದೆ. ಅಸಾಧಾರಣ ಮಹಿಮಸಂಪನ್ನರಾದ ಈ ಮಹಾತ್ಮರ ಕೃಪಾವಿಶೇಷದಿಂದ ಸದ್ಯಃ ಜಗತ್ತಿಗೊದಗಿರುವ ಮಹಾವಿಪತ್ತು ದೂರವಾಗಿ ಸರ್ವತ್ರ ಸುಖಶಾಂತಿಗಳು ನೆಲಸಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇನೆ

ಶ್ರೀರೇಣುಕಾಚಾರ್ಯರ ಜಯಂತಿಯ ದಿವಸ

ಮೈಸೂರು ಆಕಾಶವಾಣಿಯಲ್ಲಿ

ಸಂಗೀತ ವಿದ್ವಾನ್

ಶ್ರೀ ಕೊಟ್ಟೂರುಬಸವಯ್ಯನವರು ಹಾಡಿದ

ಸ್ತೋತ್ರ-ಕೀರ್ತನೆಗಳು

ಶ್ರೀಮಚ್ಛಿವಾಚಾರವಿಚಾರದೀಕ್ಷಂ ।
ಸ್ವಶಿಷ್ಯಸತ್ಪ್ರೀಣನಪೂರ್ಣಪಕ್ಷಂ ॥
ದುರ್ವಾರಕಾಮಾದಿವಿದಾರದಕ್ಷಂ ।
ಭಜಾಮ್ಯಹಂ ರೇವಣಕಲ್ಪವೃಕ್ಷಂ ||೧||

(ನೀವೇ ಗತಿಯನಿ—ಎಂಬಂತೆ, ರಾಗ-ಕಲ್ಯಾಣಿ)

ಪಾಹಿ ಪರತರ ಶಿವಕರ ಗುರುವರ| ಪಾಹಿ ವಿಶ್ವಾಧಾರ||ಪ||
ಪಾಹಿ ಪಂಚಾನನಸಂಪ್ರೀಣನ | ಪ್ರಮಥೇಶ ಶ್ರೀರೇಣುಕೇಶ ||ಅ||
ವೀರಶೈವಮತವಿಭೂಷಣ | ಶರಣಭರಣ ದೇವಾಭರಣ |
ಕಾಲಕಾಲ ಶ್ರೀಸೋಮಸಂಜನನ | ಕಾಶೀನಾಥಪೋಷಣ ಧುರೀಣ ||೧||

ಮೂಲಾಂಕುರಾಯ ಜಗತಾಮಭಯಂಕರಾಯ |
ಮೋಹಾಂಧಕಾರರವಯೇ ಕವಯೇ ಮನೂನಾಂ ॥
ಕೈವಲ್ಯಕಲ್ಪತರವೇ ಗುರವೇ ಗುರೂಣಾಂ |
ಶ್ರೀರೇಣುಕಾಯ ಗಣಪಾಯ ನಮೋಽಸ್ತು ತುಭ್ಯಂ ||೧||

(ವಿಶಾಲಲೋಚನೆ ಅಂಬ—ಎಂಬಂತೆ, ರಾಗ-ತೋಡಿ)

ರೇಣುಕೇಶ್ವರ ಪಾಹಿ| ಸ್ವರ್ಣಕೇಶ| ಚಿತ್ಕೋಶ| ಪಾಹಿ ||ಪ||
ಸೋಮಭೂಷ ಶೈವವೇಷ | ಕದಳೀಪುರವಾಸ ಯೋಗೀಶ ||ಅ||
ಲೋಕೇಶ ದೇವಾಸುರ | ಪರಿಪೂಜಿತ ರಕ್ಷಕಲತ |
ಕಾಶೀನಾಥಪ್ರಕಾಶ | ಯಮಿಚಿತ್ತಕೋಶಭಾಸ ||೧||

ಶ್ರೀರೇಣುಕ ತವ ಮಂಗಲಂ | ನಾಕಾದಿಲೋಕ ಶ್ರೀದಾಯಕ ||ಪ||
ಪಾಪಾವಲಿಪರಿಹಾರಕ| ವೇದಾಗಮಾದಿಪರಿಬೋಧಕ||ಅ||
ನಂದೀಶ್ವರಾದಿಗಣನಾಯಕ ಸನಕಾದಿವಂದ್ಯ ಶಿವ ಪೂಜಕ |
ಭವನಾಶಕ ಗುರುಕುಲತಿಲಕ| ಶ್ರೀಕಾಶೀನಾಥ ಪರಿಪೋಷಕ ||೧||

ನಮೋ ನಮೋ ಮೋಕ್ಷವಿಚಾರದಕ್ಷ |
ನಮೋ ನಮೋ ವೇದವಿಧಾನಶಿಕ್ಷ ॥
ನಮೋ ನಮಃ ಪಾಪಕೃತಾಂ ವಿಪಕ್ಷ |
ನಮೋ ನಮೋ ರೇವಣಕಲ್ಪವೃಕ್ಷ ||೧||

ಬೆಂಗಳೂರು ನಗರದಲ್ಲಿ
ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯ ಕಾರ್ಯಕ್ರಮ

ಕಳೆದವಾರ ಪಂಚಾಚಾರ್ಯಪ್ರಭಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಶ್ರೀ ಜಗದಾಚಾರ್ಯರ ಜಯಂತೀ ಸಂಬಂಧವಾದ ಕಾರ್ಯಕ್ರಮವನ್ನು ಬೆಂಗಳೂರು ನಗರದ ಗುರುಭಕ್ತರು ಶ್ರೀಮಹಾಂತಿನ ಮಠದಲ್ಲಿ ನೆರವೇರಿಸಿ ಸರ್ವರಿಗೂ ಪರಮಾನಂದವನ್ನುಂಟುಮಾಡಿದರು. ಆ ದಿವಸ್ ಪ್ರಾತಃಕಾಲ ಮಹಂತಿನ ಮಠದ ಮೇಲುಭಾಗದಲ್ಲಿ ಜಯಂತೀಮಹೋತ್ಸವಕ್ಕಾಗಿ ಅತ್ಯಂತಸುಂದರವಾಗಿ ನಿರ್ಮಿಸಲ್ಪಟ್ಟಿರುವ ಮಹಾಮಂಟಪದಲ್ಲಿ ರೇಡಿಯೋ ಯಂತ್ರವನ್ನು ತರಿಸಿ ಆ ಯಂತ್ರಕ್ಕೆ ಧ್ವನಿಯನ್ನು ವೃದ್ಧಿಗೊಳಿಸುವ ಲೌಡ್‌ಸ್ಪೀಕರುಗಳನ್ನು ಜೋಡಿಸಿದ್ದರು. ಮೊದಲೇ ಪ್ರಸಿದ್ಧಪತ್ರಿಕೆಗಳ ದ್ವಾರಾ ಸೂಚಿಸಿದಂತೆ ಆ ಸಮಯಕ್ಕೆ ಅನೇಕಜನ ಗುರುಭಕ್ತರು ಆಗಮಿಸಿದ್ದರು. ಅಂದು ಮೈಸೂರು ಆಕಾಶವಾಣಿಯಲ್ಲಿ ನಡೆದ ಸಂಗೀತ ವಿದ್ವಾನ್ ಶ್ರೀ|| ಕೊಟ್ಟೂರು ಬಸವಯ್ಯನವರ ಕರ್ಣಮನೋಹರವಾದ ಕೀರ್ತನೆಗಳನ್ನೂ ಆಸ್ಥಾನ ವಿದ್ವಾನ್ ಪಂಡಿತ ಶ್ರೀ ಬಸವಲಿಂಗಶಾಸ್ತ್ರಿಗಳವರ ಸಿದ್ಧಾಂತಶಿಖಾಮಣಿ ಪಠನವನ್ನೂ, ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಅಮೂಲ್ಯವಾದ ಭಾಷಣವನ್ನೂ ಕೇಳಿ ಸರ್ವರೂ ಪರಮಾನಂದಭರಿತರಾದರು ರೇಡಿಯೋ ಕಾರ್ಯಕ್ರಮವು ಮುಗಿದ ಮೇಲೆ ಶ್ರೀಜಗದಾಚಾರ್ಯರ ಭವ್ಯಮೂರ್ತಿಗೆ ರುದ್ರಾಭಿಷೇಕಾದಿಗಳು ನೆರವೇರಿ ಮಧ್ಯಾಹ್ನ ಗಣಸಂತರ್ಪಣೆಯು ಮಾಡಲ್ಪಟ್ಟಿತು. ಅದೇ ದಿನ ಸಾಯಂಕಾಲ 7 ಘಂಟೆಗೆ ರಾಜಧರ್ಮಪ್ರವೀಣ ದಿವಾನ್‌ಬಹದ್ದೂರ್ ಪಿ ಮಹಾದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು. ತರುವಾಯ ಲಿಂಗೋದ್ಭವಮೂರ್ತಿಯ ಮಹೋತ್ಸವವು ಬೆಂಗಳೂರು ನಗರದ ಎಲ್ಲ ರಾಜಬೀದಿಗಳಲ್ಲಿಯೂ ಅಟ್ಟಹಾಸದಿಂದ ನೆರವೇರಿ ಮಹಾಂತಿನ ಮಠಕ್ಕೆ ಬಂದು ತಲುಪಿದ ಮೇಲೆ ಮಹಾಮಂಗಳಾರತಿಯಾಗಿ ಅಂದಿನ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಓರ್ವ ಗುರುಭಕ್ತ.

ಸ್ವೀಕಾರ.

ಬಳ್ಳಾರಿ ಜಿ|| ಹುವಿನಹಡಗಲಿ ತಾಲೂಕು ಹೊಳಗುಂದಿ ಗ್ರಾಮದಲ್ಲಿರುವ ಮ|| ರಾ|| ಪಾಟೀಲ್ ಗುರುಬಸವನಗೌಡರಿಗೆ ತಾ|| 18—2—43ನೆಯ ದಿವಸ ವಿಶ್ವಪಾಲನೆಂಬ ದ್ವಿತೀಯ ಪುತ್ರನು ಜನಿಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಮ|| ರಾ|| ಪಾಟೀಲ್ ಲಿಂಗನಗೌಡರು ರೆಡ್ಡಿ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ|| ಹುವಿನಹಡಗಲಿಯಲ್ಲಿರುವ ಶ್ರೀಮಂತ ಕೊಪ್ಪದ ಮಲ್ಲಪ್ಪನವರು ತಮ್ಮ ಪುತ್ರಿ ಚಿ|| ಸೌ|| ಗುರುಶಾಂತಮ್ಮನ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ವಿಜಾಪುರ ಜಿ|| ಜೈನಾಪುರ ಗ್ರಾಮದ ಹಿರಿಯಮಠದ ವೇ|| ಸಿದ್ಧರಾಮಯ್ಯನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ|| ರಾ| ಸಜ್ಜನ ಪೂಸ್ತರ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೨ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೪—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನಿ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ ಪಿ ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರೆ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ. ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೬ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಮಹತ್ವ	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೩ನೆಯ ಆವೃತ್ತಿ, ೩೦ ವ ಹತ್ತಿನ ಫೋಟೋಗಳಿರುವುವು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಚರಣಾಃ ಪ್ರಸೀದಂತು ॥ REGISTERED No. M. 22

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಷೇತ್ರವಿಭಾಕರರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ. ೧೨ ಆ

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೯ನೇ ಮಾರ್ಚಿ ೧೯೪೩ [ಸಂಚಿಕೆ ೫

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವಗಳು

ಶ್ರೀರಂಭಾಪುರೀಕ್ಷೇತ್ರ

ಶ್ರೀಮದ್ರಂಭಾಪುರೀ ಮಹಾಸಂಸ್ಥಾನ ಮಠದಲ್ಲಿ ಫಾಲ್ಗುಣ ಶು॥ ೧೩ ಶುಕ್ರವಾರ ಶ್ರೀ ಜಗದಾಚಾರ್ಯರ ಮಹಾರಥೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು ರಥೋತ್ಸವಾಂಗಭೂತವಾದ ಕಾರ್ಯಕಲಾಪಗಳು ಆಯಾ ದಿವಸ ಕ್ರಮವಾಗಿ ನಡೆದವು ನಿಯಮಿತಕಾಲಗಳಲ್ಲಿ ವೇ॥ ಕೀರ್ತನಕೇಸರಿ, ಕವಿಭೂಷಣೇತ್ಯಾದಿ ಬಿರುದಾಂಕಿತರಾದ ಗುಬ್ಬಿ ಶಿವರುದ್ರಶಾಸ್ತ್ರಿಗಳು ಭಾಷಣ, ಕೀರ್ತನಗಳನ್ನು ಬಹು ಸ್ವಾರಸ್ಯವಾಗಿ ಮಾಡಿದರು ತಾ॥ ೧೯-೩-೪೩ ನೇ ಶುಕ್ರವಾರ ಸಾಯಂಕಾಲ ತುಕಾರಾಂ ಕಲಾ ರಾಣೆಬೆನ್ನೂರು ಇವರು ಭರತನಾಟ್ಯಕಲಾಪ್ರದರ್ಶನವನ್ನು ಮಾಡಿ, ಸರ್ವರನ್ನೂ ಸಂತೋಷಗೊಳಿಸಿದರು ಈ ಸಮಾರಂಭಕ್ಕೆ ಸಮೀಪಸ್ಥಳಗಳಿಂದಲೂ, ದೂರದೂರ ಪ್ರದೇಶಗಳಿಂದಲೂ ವಿಶೇಷವಾಗಿ ಜನರು ಸೇರಿ ಶ್ರೀಮಹಾಕ್ಷೇತ್ರ ಮಹಾಗುರು ಸಂದರ್ಶನ ಭಾಗ್ಯವನ್ನು ಹೊಂದಿ ಧನ್ಯರಾದರು ಸದ್ಯಃ ಶ್ರೀಮಹಾಸಂಸ್ಥಾನ ಮಠದ ಕಟ್ಟಡಕ್ಕೆ ಪ್ರಾರಂಭಿಸಿರುವುದು ಸರಿಯಷ್ಟೆ! ಆಗಮಿಸಿದ್ದ ಭಕ್ತಾದಿಗಳಲ್ಲಿ ಕೆಲವರು ಸೂಕ್ತಸಲಹೆಗಳನ್ನು ಕೊಟ್ಟುದಲ್ಲದೆ, ಜೀರ್ಣೋದ್ಧಾರಕ್ಕಾಗಿ ದ್ರವ್ಯವನ್ನೂ ಸಮರ್ಪಿಸಿದರು

ಉತ್ಸವಭಾಗಿ

ಶ್ರೀಕಾಶೀಕ್ಷೇತ್ರ

ಶ್ರೀಕಾಶೀಕ್ಷೇತ್ರದಲ್ಲಿ ವಿರಾಜಿಸುತ್ತಿರುವ ಶ್ರೀಜಗದ್ಗುರು ವಿಶ್ವಾರಾಧ್ಯ ಧರ್ಮಪೀಠದಲ್ಲಿ ಫಾಲ್ಗುಣ ಶು॥ ೧೩ ಶುಕ್ರವಾರ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಬಹುವಿಜೃಂಭಣೆಯಿಂದ ನೆರವೇರಿತು ಪ್ರಾತಃಕಾಲ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕಾದಿಗಳು ನಡೆದು ಮಧ್ಯಾಹ್ನ ಅನ್ನಸಂತರ್ಪಣೆಯು ನೆರವೇರಿತು ಆ ದಿವಸ ಮೈಸೂರು ರೇಡಿಯೋ ಸ್ಟೇಷನ್ನಿನಲ್ಲಿ ಬ್ರಾಡ್‌ಕಾಸ್ಟ್ ಮಾಡಲ್ಪಟ್ಟ ಶ್ರೀರೇಣುಕರ ಸ್ತೋತ್ರ, ಸಿದ್ಧಾಂತಶಿಖಾಮಣಿ ಪಠನ, ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಭಾಷಣಗಳನ್ನು ರೇಡಿಯೋ ಮೂಲಕ ಸರ್ವರೂ ಕೇಳಿ ಪರಮಾನಂದಭರಿತರಾದರು

ಗುರುಕುಲ ವಿದ್ಯಾರ್ಥಿ.

ರಾಣೆಬೆನ್ನೂರು.

ಪ್ರತಿವರ್ಷದಂತೆ ಈ ವರ್ಷವೂ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತ್ಯುತ್ಸವವು ಇದೇ ಫಾಲ್ಗುಣ ಶುದ್ಧ ೧೩ ದಿವಸ ಶ್ರೀಜಗದ್ಗುರು ಪಂಚಾಚಾರ್ಯ ತರುಣಸಂಘದಿಂದ ನೆರವೇರಿಸಲ್ಪಟ್ಟಿತು ಕಾರ್ಯಕ್ರಮವು ಮೂರು ದಿವಸಗಳವರೆಗೆ ಬಹು ವೈಭವದಿಂದ ನೆರವೇರಿತು ಗುರುವಾರ ಶ್ರೀ ರೇಣುಕಮಂದಿರದಲ್ಲಿ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷ ಮಲ್ಲಿಕಾರ್ಜುನ ಶಿವಾಚಾರ್ಯರ ನೇತೃತ್ವದಲ್ಲಿ ಭಜನೆಯು ಏರ್ಪಟ್ಟಿತ್ತು ಶುಕ್ರವಾರ ದಿವಸ ಮುಂಜಾನೆ ಅಗ್ನಿಕುಂಡದ ಕಾರ್ಯಕ್ರಮವು ನೆರವೇರಿತು ಮಧ್ಯಾಹ್ನ ಪರಸ್ಥಳದ ಯಾವತ್ತು ಜನರಿಗೆ ಅನ್ನಸಂತರ್ಪಣೆಯಾಗಿ ಸಾಯಂಕಾಲ ರಥೋತ್ಸವವು ಭಜನಸಂಘ ಬ್ಯಾಂಡ್ ವಾದ್ಯಗಳೊಡನೆ ಒಳ್ಳೇ ವೈಭವದಿಂದ ನೆರವೇರಿತು ಜಗನ್ನಿಯಾಮಕನ ಉತ್ಸವಕಾರ್ಯದಲ್ಲಿ ಭಾಗ ವಹಿಸಿದ ರಾಣೆಬೆನ್ನೂರು, ಹರಿಹರ, ದಾವಣಗೆರೆ ಮತ್ತು ಸುತ್ತಮುತ್ತ ಹಳ್ಳಿಯ ಜನಗಳಿಗೆ ಜಗದಾಚಾರ್ಯರು ಕೃಪಾಶೀರ್ವಾದವನ್ನೀಯಲೆಂದು ಬೇಡುವ,

ಕಾರ್ಯದರ್ಶಿ, ಪಂ॥ ತ॥ ಭ॥ ಸಂಘ, ರಾಣೆಬೆನ್ನೂರು

ಮುದಗಲ್ಲು.

ನಿಜಾಂ ಇಲಾಖಾ ರಾಯಚೂರು ಜಿ॥ ಮುದಗಲ್ಲು ಗ್ರಾಮದ ಗಂಗಾಧರಮಠದ ವೇ॥ ಸಿದ್ಧರಾಮಾರ್ಯರು, ತಮ್ಮ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಫಾಲ್ಗುನ ಶು॥ ೧೩ ದಿವಸ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯನ್ನು ವಿಶೇಷ ವೈಭವದಿಂದ ನೆರವೇರಿಸಿದರು ಪ್ರಾತಃಕಾಲ ಪೂಜಾದಿಗಳು ನೆರವೇರಿ ಮಧ್ಯಾಹ್ನ ಅನ್ನಸಂತರ್ಪಣೆಯು ನಡೆಯಿತು ಜಗದಾಚಾರ್ಯರು ಇವರಿಗೆ ಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಗುರುಭಕ್ತ

ಸವಣೂರು.

ಧಾರವಾಡ ಜಿ॥ ಸವಣೂರು ಸಂಸ್ಥಾನ ಟವನ್ನಿನಲ್ಲಿರುವ ಚರಂತಿಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಫಾಲ್ಗುನ ಶು॥ ೧೩ ಶುಕ್ರವಾರ ದಿವಸ ವೇ॥ ಚನ್ನಬಸವಯ್ಯನವರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ಮಹಾವೈಭವದಿಂದ ನೆರವೇರಿಸಿದರು ಅಂದು ಮಠದಲ್ಲಿ ಪೂಜಾ, ಭಜನ, ಗಣಾರಾಧನೆಗಳು ನೆರವೇರಿದವು. ಗುರುಭಕ್ತರೆಲ್ಲರೂ ಈ ಜಯಂತಿಯಲ್ಲಿ ಭಾಗವಹಿಸಿದ್ದರು. ಇತ್ತೀಚೆಗೆ ಪ್ರತಿಯೊಂದು ನಗರದಲ್ಲಿಯೂ, ಹಳ್ಳಿಯಲ್ಲಿಯೂ ಜಗದಾಚಾರ್ಯರ ಜಯಂತೀಮಹೋತ್ಸವಗಳು ಉತ್ಸಾಹದಿಂದ ನೆರವೇರುತ್ತಿರುವದಕ್ಕೆ ವಿದ್ವದ್ರತ್ನ ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರ ದಿವ್ಯಪ್ರಭಾವವೇ ಮೂಲಕಾರಣವೆಂದು ಹೇಳಬೇಕಾಗಿದೆ. ಶ್ರೀಜಗದಾಚಾರ್ಯರು ಈ ಮಹೋದಯರಿಗೆ ಆರೋಗ್ಯಾದಿಗಳನ್ನಿತ್ತು ಕಾಪಾಡಲೆಂದು ಹಾರೈಸುತ್ತೇನೆ

ಗುರುಭಕ್ತ, ಸವಣೂರು

ಹೂವಿನಹಡಗಲಿ

ಬಳ್ಳಾರಿ ಜಿ॥ ಹೂವಿನ ಹಡಗಲಿ ನಗರದಲ್ಲಿ ಪದ್ಧ
ಮೇರೆಗೆ ಶ್ರೀಜಗದ್ಗುರು ರೇಣುಕಾಚಾರ್ಯ ಜಯ
ಯನ್ನು ಇದೇ ಚಿತ್ರಭಾನು ಸಂವತ್ಸರದ ಫಾಲ್ಗುನ ಶ
೧೩ (ತಾ॥ ೧೯ ೩ ೪೩) ಶುಕ್ರವಾರ ಅತಿ ವೈಭವದಿ
ನೆರವೇರಿಸಲಾಯಿತು ಅಂದು ಮೈಸೂರು ರಾಜಧಾ
ಯಲ್ಲಿರುವ ಆಕಾಶವಾಣಿಯಲ್ಲಿ ಭಗವತ್ಪಾದರ ಕೀರ್ತ
ಗಳೂ, ಸಿದ್ಧಾಂತಶಿಖಾಮಣಿಯ ಪಠನವೂ ಮ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣ
ಇದ್ದುದರಿಂದ ಈ ವಿಷಯವನ್ನು ಇಲ್ಲಿಯ ಗುರುಭಕ್ತ
ಮೊದಲೇ ಕರಪತ್ರಗಳ ದ್ವಾರಾ ತಿಳಿಸಿದ ಪ್ರಕಾರ ಪ್ರಾ
ಕಾಲ ಎಲ್ಲಾ ಮಠೀಯರೂ ರೇಡಿಯೋ ಮಂದಿರದ
ಸಮಾವಿಷ್ಟರಾಗಿ ಕಾರ್ಯಕ್ರಮಗಳನ್ನು ಕೇಳಿ ಪರಮ
ನಂದಭರಿತರಾದರು

ಬಳಿಕ ವಿದ್ಯಾರ್ಥಿನಿಲಯದಲ್ಲಿ ರಾತ್ರಿ ೮ ಘಂಟೆ
ಸಭೆ ಕೂಡಿತು ಸಭೆಗೆ ವಿದ್ಯಾರ್ಥಿಗಳೂ, ಅಧಿಕಾ
ಗಳೂ, ಪುರಪ್ರಮುಖರೂ ಆಗಮಿಸಿದ್ದರು ಕೊಂಡೂ
ನಗರದ ಸುಪ್ರಸಿದ್ಧ ಶ್ರೀಮಂತರೂ ಮತ್ತು ವ್ಯಾಪಾ
ಗಳೂ ಆದ ಭೋಜ ಪಣ್ಣಾಚಪ್ಪನವರನ್ನು ಅಧ್ಯ
ರನ್ನಾಗಿ ಆರಿಸಿದ ಮೇಲೆ ವಿದ್ಯಾರ್ಥಿ ಎ. ಯಂ. ಸಿ
ಲಿಂಗಯ್ಯನಿಂದ ಆಚಾರ್ಯರ ಸ್ತೋತ್ರಗಳು ಬಹ
ಮನೋಹರವಾಗಿ ಹಾಡಲ್ಪಟ್ಟವು ಆ ಮೇಲೆ ನಿಲಯ
ವಿದ್ಯಾರ್ಥಿಗಳಾದ ಯನ್ ಯಂ ಕೊಟ್ರ ಬಸವಯ
ಮತ್ತು ಬಿ ಕೊಟ್ರಪ್ಪ ಇವರು ಆಚಾರ್ಯಭಗವತ್ಪಾದ
೧೮೦೦ ವರ್ಷಗಳ ವರೆಗೆ ಭೂಮಂಡಲದಲ್ಲಿದ್ದು ಮ
ಡಿದ ಅದ್ಭುತ ಲೀಲಾಕಾರ್ಯವನ್ನು ಬಹು ಹೃದಯಂ
ಮವಾಗಿ ಪ್ರತಿಪಾದಿಸಿದರು ಅನಂತರ ಸುಪ್ರಸಿದ್ಧ ಗು
ಭಕ್ತರಾದ ಶ್ರೀಮಂತ ಗುಗ್ರಿ ಹುಚ್ಚಪ್ಪನವರು ಜಯಂ
ಯ ಬಗ್ಗೆ ಸಂಭಾಷಿಸಿದರು ಬಳಿಕ ಗುರುಶಂಕ
ಸೊಪ್ಪಿನ ಗುರುಲಿಂಗಪ್ಪನವರು ಶ್ರೀರೇಣುಕಾದಿ ಪಂಚ
ಚಾರ್ಯರ ಉತ್ಪತ್ತಿ, ಆ ಮಹಾಮಹಿಮರ ಧಮ
ಪೀಠಗಳ ಪವಿತ್ರಸ್ಥಳಗಳು, ಈ ಮತಸ್ಥಾಪನಾಚಾ
ರಿಗೂ ಉಳಿದ ಮತಸ್ಥಾಪನಾಚಾರ್ಯರಿಗೂ ಇರು
ಅಂತರ ಮತ್ತು ಈ ಮಹಾಲೀಲಾವಿಭೂತಿಗಳ ಅನ
ದಿತ್ವ ಮೊದಲಾದ ವಿಷಯಗಳನ್ನು ಕುರಿತು ಸ್ಫುಟವಾ
ಮಾತನಾಡಿದರು ಅನಂತರ ಮಾಧ್ಯಮಿಕ ಶಾಲೆ
ಕನ್ನಡ ಪಂಡಿತರಾದ ವಿದ್ವಾನ್ ಬಿ ಯಂ ಶಿಕಿರಂ
ಶಾಸ್ತ್ರಿಗಳವರು, 'ಜಯಂತಿ' ಎಂದರೇನು? ಇದನ
ವಿತಕ್ಕೆ ಆಚರಿಸಬೇಕು? ಪಂಚಾಚಾರ್ಯರು ಪ್ರಾಚೀ
ನು ರಾಜರನ್ನೂ ಋಷಿಪುಂಗವರನ್ನೂ ಹೇಗೆ ಭಕ
ರನ್ನಾಗಿ ಮಾಡಿಕೊಂಡರು? ಎಂಬ ವಿಷಯವನ್ನು ಕುರಿ
ಹೃದಯಂಗಮವಾಗಿ ಭಾಷಣ ಮಾಡಿದರು. ತರುವಾಯ
ಅಧ್ಯಕ್ಷರ ಸಮಾಪ್ತಿ ಭಾಷಣವಾದ ಮೇಲೆ ಜಗದಾಚ
ರ್ಯರ ಮಂಗಲಘೋಷಣೆ ಸಭೆಯು ವಿಸರ್ಜಿಸಲ್ಪಟ್ಟಿತ

ಓರ್ವ ಗುರುಭಕ್ತ

ಕೊಟ್ಟೂರು

ಬಳ್ಳಾರಿ ಡಿ॥ ಕೊಟ್ಟೂರು ನಗರದಲ್ಲಿ ಮಹಾಶಿವರಾತ್ರಿ ದಿವಸ ಶ್ರೀಜಗದ್ಗುರು ಪಂಡಿತಾರಾಧ್ಯರ ಮತ್ತು ವಿಶ್ವಾರಾಧ್ಯರ ಜಯಂತಿಯು ವೈಭವದಿಂದ ನೆರವೇರಿತು ಅಂದು ಮಿಂಚಿನಗಟ್ಟಿದ ಮಠದಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀರೇಣುಕರ ಲಿಂಗೋದ್ಭವಮೂರ್ತಿಗೆ ಶ್ರೀಗುರು ಪಟ್ಟದ ಭೂತಭುಜಂಗಸ್ವಾಮಿಗಳವರದ್ವಾರಾ ರುದ್ರಾಭಿಷೇಕವು ನೆರವೇರಿಸಲ್ಪಟ್ಟಿತು ಸದರಿ ಶ್ರೀಗಳವರಿಂದ ಶ್ರೀರೇಣುಕರು ಅಗಸ್ತ್ಯರಿಗೆ ಉಪದೇಶಿಸಿದ ವಿಷಯವೂ ಕೆಂಭಾವಿ ಮಠದ ವೇ॥ ಚನ್ನಬಸವಶಾಸ್ತ್ರಿಗಳಿಂದ ವೀರಶೈವ ಮತೋತ್ಪತ್ತಿವಿಷಯವೂ ಬೋಧಿಸಲ್ಪಟ್ಟವು ಫಾಲ್ಗುಣ ಶು॥ ೧೩ ದಿವಸ ಮಿಂಚಿನಗಟ್ಟಿ ಮಠದಲ್ಲಿ ಉದಯ ೧೦ ಗಂಟೆಗೆ ಶ್ರೀರೇಣುಕರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಮತ್ತು ಶ್ರೀರೇಣುಕರ ಅಷ್ಟೋತ್ತರ ಶತನಾಮ ಪೂರ್ವಕ ಪುಷ್ಪಸಮರ್ಪಣವಾದನಂತರ ಸಾಯಂಕಾಲ ೫ ಗಂಟೆಗೆ ಶ್ರೀರೇಣುಕರ ರಜತಮೂರ್ತಿಯನ್ನೂ ಶ್ರೀಗುರು ಭೂತಭುಜಂಗಸ್ವಾಮಿಗಳನ್ನೂ ರಥಾರೋಹಣಮಾಡಿಸಿ, ನಗರದ ಮುಖ್ಯ ಬೀದಿಗಳಲ್ಲಿ ಉತ್ಸವವು ನೆರವೇರಿತು ಆಮೇಲೆ ಶ್ರೀಗಳವರು ಧರ್ಮವಿಷಯವನ್ನೂ ಮತ್ತು ಉಪ್ಪಿನ ಬೆಟಗೇರಿ, ಹಿರೇಮಠದ ವೇ॥ ವಾಮದೇವ ಶಾಸ್ತ್ರಿಗಳು ಪಟ್ಟದ ಮಹಿಮೆಯನ್ನೂ ವೇ॥ ಕೆಂಭಾವಿ ಮಠದ ಚನ್ನಬಸವಶಾಸ್ತ್ರಿಗಳು ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ಮಹಿಮಾಜಾಲವನ್ನೂ, ನಕಲಿ ದೇವೇಂದ್ರಪ್ಪನವರು ಶ್ರೀ ಜಗದ್ಗುರು ರೇಣುಕರು ಶ್ರೀ ಶಂಕರಾಚಾರ್ಯರಿಗೆ ಶ್ರೀ ಚಂದ್ರಮೌಳೀಶ್ವರ ಲಿಂಗಪ್ರದಾನ ಮಾಡಿದ ವಿಷಯವನ್ನೂ ಕುರಿತು ಭಾಷಣ ಮಾಡಿದರು ಈ ಮಹಾಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿದ [illegible]

[illegible]

ಚಿಕ್ಕಮುಗದೂರು

[illegible] ಪೂರ್ವ ಪುರಾಣದ [illegible] ವೀರಭದ್ರಯ್ಯ ಪುಟ್ಟಯ್ಯ, ಒನ್ನವೀರಯ್ಯ ಇವರು ಭಕ್ತಮಂಡಲಿಯೊಡನೆ ಸೇರಿ, ಫಾಲ್ಗುಣ ಶು ೧೩ ದಿವಸ ಶ್ರೀರೇಣುಕಾಚಾರ್ಯರ ಜಯಂತಿ ಮಹೋತ್ಸವವನ್ನು ಬಹು ಅಟ್ಟಹಾಸದೊಡನೆ ನೆರವೇರಿಸಿದರು ಈ ಮಹಾಕಾರ್ಯಕ್ಕಾಗಿ ಕಲಕೇರಿ ಗ್ರಾಮದ ಹಿರೇಮಠದ ವೇ॥ ವೀರಭದ್ರಪ್ಪಯ್ಯ ಶಾಸ್ತ್ರಿಗಳು ಮತ್ತು ಭಜನಸಂಘದವರು ಮೊದಲೇ ಆಗಮಿಸಿದ್ದರು ಶಿವಪ್ರೇಮಾಧ್ಯಕ್ಷರಾದ ಶ್ರೀ ಶಿವಯೋಗಿ ಶಾಂತಮಲ್ಲಸ್ವಾಮಿಗಳು ಈ ಮಹೋತ್ಸವಕ್ಕಾಗಿ ಆಗಮಿಸಿದ್ದರಿಂದ ವಿಶೇಷ ಶೋಭೆಯುಂಟಾಗಿದ್ದಿತು ಶ್ರೀಸ್ವಾಮಿಗಳವರ ಅಪ್ಪಣೆ ಪ್ರಕಾರ ಶ್ರೀ ಕಲ್ಲೇಶ್ವರ ದೇವಾಲಯವನ್ನು ತಳಿರುತೋರಣಾದಿಗಳಿಂದ ಅಲಂಕರಿಸಿ ಜಯಂತಿಯನ್ನು ಅಲ್ಲಿಯೇ ನೆರವೇರಿಸಿದರು ರುದ್ರಾಭಿಷೇಕ, ಪೂಜಾದಿಕಾರ್ಯಗಳು ವಿಧ್ಯುಕ್ತವಾಗಿ ನೆರವೇರಿದವು ವೀರಭದ್ರಶಾಸ್ತ್ರಿಗಳು ಶ್ರೀರುದ್ರವನ್ನು ಪಠಿಸಿದ್ದಲ್ಲದೆ ಶ್ರೀರೇಣುಕರ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿ, ೧೦೮ ಬಿಲ್ವಪತ್ರಗಳನ್ನು ಧರಿಸಿದರು ಆಮೇಲೆ ಶ್ರೀಸ್ವಾಮಿಗಳವರ ಅಪ್ಪಣೆ ಮೇರೆಗೆ ಪಲ್ಲಕ್ಕಿಯಲ್ಲಿ ಶ್ರೀಜಗದಾಚಾರ್ಯರ ಭಾವಚಿತ್ರವನ್ನಿಟ್ಟು ಗ್ರಾಮದಲ್ಲೆಲ್ಲಾ ಉತ್ಸವವು ಅಭೂತಪೂರ್ವವಾಗಿ ನೆರವೇರಿಸಲ್ಪಟ್ಟಿತು ಶ್ರೀಜಗದ್ಗುರು ಪಂಚಾಚಾರ್ಯ ಮಹಾರಾಜಕೀ ಜೈ ಎಂಬ ಜಯಘೋಷವು ಆಕಾಶವನ್ನು ಭೇದಿಸುತ್ತಿತ್ತು ನೂರಾರುಜನ ಮುತ್ತೈದೆಯರು ಆರತಿಗಳನ್ನು ಹಿಡಿದುಕೊಂಡು ಉತ್ಸವದಲ್ಲಿ ಭಾಗಿಗಳಾಗಿದ್ದರು ಉತ್ಸವವು ಈರೀತಿ ಅಸಾಧಾರಣ ವೈಭವದೊಡನೆ ನೆರವೇರಿ ಶ್ರೀಬಸವೇಶ್ವರ ದೇವಾಲಯಕ್ಕೆ ಬಂದು ತಲಸಿದಮೇಲೆ ಶ್ರೀಸ್ವಾಮಿಗಳವರು ಅಲ್ಲಿ ನೆರೆದ ಜನಸಮೂಹಕ್ಕೆಲ್ಲಾ ಪಂಚಾಚಾರ್ಯರ ಉತ್ಪತ್ತಿಯನ್ನೂ ಶ್ರೀರೇಣುಕರ ಅನೇಕ ಲೀಲೆಗಳನ್ನೂ ಶ್ರೀಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರಲಿಂಗವನ್ನು ಅನುಗ್ರಹಿಸಿದ ವಿಷಯವನ್ನೂ ವಿದ್ವದ್ರತ್ನ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಮುದ್ರಿಸಿರುವ ಗ್ರಂಥಗಳಿಂದ ವೀರಶೈವಮತಕ್ಕಾಗಿರುವ ಮಹೋಪಕಾರವನ್ನೂ ಹೇಳಿ ಸರ್ವರನ್ನೂ ಸಂತೋಷಪಡಿಸಿದರು ಅನಂತರ ಶ್ರೀಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಬಸವಂತಪ್ಪ ಮಳಲಿ,
ಲಿಂಗಪ್ಪ, ಲಕ್ಷ್ಮೇಶ್ವರ

ಬೆಳಗಾಂವ

ತಾ॥ ೧೯-೩-೪೩ ಶುಕ್ರವಾರದಿವಸ ಬೆಳಗಾಂವ ನಗರದಲ್ಲಿರುವ ದಂಡಿನ ಮಠದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯು ವೈಭವದಿಂದ ಜರುಗಿತು ಆ ದಿವಸ ಜಗದ್ಗುರುಗಳ ಭಾವಪಟಕ್ಕೆ ಪೂಜಾದಿಗಳು ನೆರವೇರಿದ ಮೇಲೆ ಶ್ರೀ॥ಷ॥ಬ್ರ॥ ಷಟ್ಸ್ಥಲಾಧ್ಯಕ್ಷ ಅಪ್ಪಯ್ಯಸ್ವಾಮಿಗಳು ದಂಡಿನಮಠ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಸಭೆಗೆ ಶ್ರೀಮಂತ ಕಿತ್ತೂರ ವಕೀಲರು, ಶ್ರೀ ಗುರಪ್ಪ ಉಪ್ಪಿನ, ಶ್ರೀಶಿವರುದ್ರಯ್ಯನವರು ಕಣಬರಗಿ, ಶ್ರೀ ಲಿಂಗಪ್ಪನವರು ಅಂಕಲಗಿ, ಶ್ರೀ ಹಿರೇಮಠ ಮಾಸ್ತರರು, ಶ್ರೀಗುರುಲಿಂಗಪ್ಪ ಸಮತಶೆಟ್ಟಿ ಮೊದಲಾದವರು ಬಂದಿದ್ದರು ಮೊದಲು ಹಿರೇಮಠ ಮಾಸ್ತರರು ಶ್ರೀಜಗದ್ಗುರುಗಳವರ ನವಲೀಲೆಗಳನ್ನು ಕುರಿತು ಭಾಷಣ ಮಾಡಿದರು ಆಮೇಲೆ ಸಿ ಎಮ್ ಪಾಟೀಲರು ಆಚಾರ್ಯರ ಜಯಂತಿಯನ್ನು ವೀರಶೈವರಲ್ಲರೂ ಅವಶ್ಯವಾಗಿ ಮಾಡಲೇಬೇಕೆಂಬ ವಿಷಯದಲ್ಲಿ ಚೆನ್ನಾಗಿ ಮಾತನಾಡಿದರು ಆಮೇಲೆ ಶ್ರೀ॥ ಷ॥ ಬ್ರ॥ ಗುರ ವರ್ಯಶಿವಾಚಾರ್ಯರು ಹಿರೇಮಠ ಸುತ್ತಗಟ್ಟಿ ಇವರು ಪ್ರತಿಯೊಬ್ಬ ವೀರಶೈವನೂ ತಮ್ಮ ಗುರುಗಳ ಜಯಂತಿಯನ್ನು ಆವಶ್ಯವಾಗಿ ಮಾಡಬೇಕೆಂದು ಪ್ರಮಾಣಪುರಸ್ಸರವಾಗಿ ಬೋಧಿಸಿದರು ಆಮೇಲೆ ಶ್ರೀಮಂತ ಕಿತ್ತೂರ ವಕೀಲರು ಅಧ್ಯಕ್ಷರ ಪರವಾಗಿ ಭಾಷಣವನ್ನು ಬಹು ಮನೋಹರವಾಗಿ ಮಾಡಿದರು ಈ ಮಹಾಕಾರ್ಯವನ್ನು ವೇ॥ ಚನ್ನಬಸಯ್ಯ ದಂಡಿನಮಠ, ಹಿರೇಮಠ ಮಾಸ್ತರರು ಕಣಬರಗಿ ಮಹಾಲಿಂಗಯ್ಯನವರು, ಶ್ರೀ ಲಿಂಗಪ್ಪನವರು ಅಂಕಲಗಿ ಇವರೆಲ್ಲರೂ ಒಳ್ಳೆ ವ್ಯವಸ್ಥೆಯಿಂದ ನೆರವೇರಿಸಿದರು ಆ ಮೇಲೆ ಬಾಲ ಬಾಲಿಕೆಯರಿಂದ ಆಚಾರ್ಯರ ಸ್ತೋತ್ರಗಳು ಹಾಡಲ್ಪಟ್ಟವು ಬಳಿಕ ಮಂಗಲವಾಗಿ ಸಭೆಯು ಪೂರೈಸಲ್ಪಟ್ಟಿತು ಆಚಾರ್ಯಭಗವತ್ಪಾದರು ಬೆಳಗಾಂವ ನಗರದಲ್ಲಿ ಇದೇರೀತಿ ಧರ್ಮಕಾರ್ಯಗಳು ನಡೆಯುವಂತೆ ಆಶೀರ್ವದಿಸಲೆಂದೂ, ಸರ್ವರಿಗೂ ಆಯುರಾರೋಗ್ಯಭಾಗ್ಯಗಳನ್ನು ಕೊಡಲೆಂದೂ ಪ್ರಾರ್ಥಿಸುವ,

ಅದೃಶಯ್ಯ ಕಣಬರಗಿ ಹಿರೇಮಠ

ಗುಲ್ಬರ್ಗಾ

ನಿಜಾಂ ಇಲಾಖಾ ಗುಲ್ಬರ್ಗಾ ಪಟ್ಟಣದಲ್ಲಿ ಈ ವರ್ಷ ವೀರಶೈವ ಸಮಾಜದ ವತಿಯಿಂದ ಶ್ರೀಮಲ್ಲಿಕಾರ್ಜುನ ಮಠದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತಿಯು ಬಹು ವೈಭವದಿಂದ ನೆರವೇರಿಸಲ್ಪಟ್ಟಿತು. ಸಾಯಂಕಾಲ ಚೌದಾಪುರೀ ಹಿರೇಮಠದ ಶ್ರೀ ಶಾಂತವೀರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಸೌ॥ ಭಾಗಿರಥೀಬಾಯಿ ಕಟಾಪ ಸೊಲ್ಲಾಪುರ ಇವರು ಜಗದಾಚಾರ್ಯರ ಲೀಲೆಗಳನ್ನು ಕುರಿತು ವಿಶೇಷ ಪರಿಣಾಮಕಾರಕವಾದ ಭಾಷಣವನ್ನು ಮಾಡಿದರು ಜಗದಾಚಾರ್ಯರು ಪೂರ್ವಕಾಲದಲ್ಲಿ ಅಗಸ್ತ್ಯಮಹರ್ಷಿಗಳಿಗೆ ಬೋಧಿಸಿದ ಶಿವಸಿದ್ಧಾಂತದ ಮಹಿಮೆಯನ್ನು ವಿಸ್ತರಿಸಿದ್ದಲ್ಲದೆ "ಶಿವತತ್ತ್ವರತ್ನಾಕರವೆಂಬ ಗ್ರಂಥದ ಮಹಿಮೆಯನ್ನೂ ಅದರ ಪ್ರಾಶಸ್ತ್ಯವನ್ನು ಹೆಚ್ಚಿಸಿದ ಜರ್ಮನ್ ದೇಶದ ಕೆಯಿಲ್ ಯುನಿವರ್ಸಿಟಿಯ ಸಂಸ್ಕೃತ ಪ್ರೊಫೆಸರರಾದ ಡಾ॥ ಷಾಡರವರ ಅಭಿಪ್ರಾಯವನ್ನೂ ಇಂಗ್ಲೀಷಿನಲ್ಲಿ ತಿಳಿಸಿ ಸಭೆಗೆ ಸಂತೋಷವನ್ನುಂಟುಮಾಡಿದರು ಅನಂತರ ಶ್ರೀಯುತ ಹಣಮಂತರಾವ ಹಾಗರಗಿಕರ ಹೈಕೋರ್ಟು ವಕೀಲ ಇವರು ಗುರುಮಹಿಮೆಯ ಪ್ರಭಾವವನ್ನು ಕುರಿತು ಬಹುಮನೋಹರವಾಗಿ ಭಾಷಣಮಾಡಿದರು. ಆಮೇಲೆ ಷಡಕ್ಷರಯ್ಯಸ್ವಾಮಿ ಪಲ್ಲಾಪೂರಮಠ ಇವರು ಶ್ರೀಜಗದ್ಗುರು ರೇಣುಕಾಚಾರ್ಯರ ಅಗಾಧ ಶಕ್ತಿಯನ್ನೂ ಅವರ ಭಾಷ್ಯವನ್ನು ಜರ್ಮನಿ ದೇಶದವರು ತಮ್ಮ ಲೈಬ್ರರಿಯಲ್ಲಿ ಪ್ರೀತಿಯಿಂದ ಸಂಗ್ರಹಿಸಿಟ್ಟಿರುವದನ್ನೂ ಹೇಳಿದರು. ಸಭೆಗೆ ಶ್ರೀದೊಡ್ಡಪ್ಪನವರು ಶ್ರೀ ಶರಣಬಸವೇಶ್ವರ ಸಂಸ್ಥಾನ ಮತ್ತು ಧರ್ಮಾರಾವ ಫಂಡಿನ ಸೆಕ್ರೆಟರಿಗಳಾದ ಶ್ರೀಗುರಪ್ಪನವರು ನಂದ್ಯಾಳ ಇವರೇ ಮೊದಲಾದ ಪ್ರಮುಖರು ಆಗಮಿಸಿದ್ದರು. ಶ್ರೀ ಷಡಕ್ಷರಯ್ಯನವರು ಕೊನೆಯಲ್ಲಿ ಯುವಕಸಂಘದ ವತಿಯಿಂದ ಎಲ್ಲರ ಆಭಾರವನ್ನು ಮನ್ನಿಸಿದರು ಬಳಿಕ ಶ್ರೀಜಗದ್ಗುರು ಪಂಚಾಚಾರ್ಯರ ಜಯಘೋಷದೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ನಿಜಗುಣಯ್ಯಸ್ವಾಮಿ,
ಸೆಕ್ರೆಟರಿ, ಯುವಕಸಂಘ.

ಸೊಲ್ಲಾಪುರ

ಪ್ರತಿವರ್ಷದ ಪದ್ಧತಿ ಪ್ರಕಾರ ಈ ವರ್ಷವೂ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಶ್ರೀಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಮದ್ವೀರಶೈವ ಗುರುಕುಲದ ವತಿಯಿಂದ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಆ ದಿನ ಪ್ರಾತಃಕಾಲ ೬ ಘಂಟೆಗೆ ಗುರುಕುಲದ ವಿದ್ಯಾರ್ಥಿಗಳಿಂದ ಜಗದ್ಗುರು ಲಿಂಗೋದ್ಭವಮೂರ್ತಿಗೆ ಏಕಾದಶರುದ್ರಾಭಿಷೇಕವೂ ಅಷ್ಟೋತ್ತರಶತಬಿಲ್ವಾರ್ಚನೆಯೂ ನೆರವೇರಿದವು ಸಾಯಂಕಾಲ ೫ ಘಂಟೆಗೆ ವೇ॥ ಪಂ॥ ಸಾಹಿತ್ಯರತ್ನಂ ಜಗದೀಶಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು ಲಿಂಗೋದ್ಭವಮೂರ್ತಿಗೆ ಪೂಜೆಯಾದನಂತರ ಅಂದಪ್ಪ ಮಾಸ್ತರ ತೀರ್ಥ ಇವರಿಂದ ಜಗದಾಚಾರ್ಯರ ಸ್ತೋತ್ರಗಳು ಸುಶ್ರಾವ್ಯವಾಗಿ ಹಾಡಲ್ಪಟ್ಟವು ಅನಂತರ ವೇ॥ ಅಲ್ಲಮಪ್ರಭು ಆಲೂರು, ರಟಗಲ್ಲ ಶ್ರೀಗಳು, ಶ್ರೀ ಕುರ್ವತ್ತಿ ಶ್ರೀಗಳು ಪ್ರಭುಶಂಕರ ಫೋಬಡೆ, ಭೀಮಾಶಂಕರ ಫೋಬಡೆ, ವೇ॥ ರುದ್ರಯ್ಯ ಕಾಳೀನಹಳ್ಳಿ, ವೇ॥ ವಿರೂಪಾಕ್ಷಶರ್ಮಾ ದಾವಣಗೆರೆ ಇವರೇ ಮೊದಲಾದವರು ಶ್ರೀಜಗದ್ಗುರು ರೇಣುಕಾಚಾರ್ಯರ ಪ್ರಾಚೀನತ್ವ, ಲೀಲೆ, ಶಿವತತ್ತ್ವೋಪದೇಶ, ಜಗದ್ಗುರುತ್ವ ಮೊದಲಾದ ವಿಷಯಗಳನ್ನು ಪ್ರತಿಪಾದಿಸಿ ಸರ್ವರನ್ನೂ ಆನಂದಗೊಳಿಸಿದರು. ಅನಂತರ ಹೋಟಗಿ ಶ್ರೀಗಳು ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರವನ್ನು ಪೂರ್ವಕಾಲದಲ್ಲಿ ಶ್ರೀಮನ್ಮಥಸ್ವಾಮಿಗಳು ಬರೆದಿರುವ " ಪರಮರಹಸ್ಯ " ಗ್ರಂಥ ಪ್ರಮಾಣಗಳಿಂದ ಪ್ರತಿಪಾದಿಸಿದರು. ಆ ಗ್ರಂಥದಲ್ಲಿ—

ಐಸೆ ಸಮೂಹ ಶಿವಗಣ । ಪಂಚಾಚಾರ್ಯ ಶೇ ಮುಖ್ಯ ಜಾಣ ।
ಜೇ ವೀರಶೈವಕುಲೋತ್ಪನ್ನ । ಗಣಶ್ರೇಷ್ಠ ಶೇ ॥೬॥

[illegible] ಅವತಾರ । ಚತುರ್ಯುಗಾಂತ ಸಂಚಾರ ।
[illegible] । [illegible]
[illegible] ಆಚಾರ್ಯ [illegible] । [illegible]
[illegible] ।

[illegible] । [illegible]
[illegible] ಆಚಾರ್ಯ [illegible] । [illegible]
[illegible] ।

[illegible] । [illegible] ॥೧೦॥

[illegible] ಆಚಾರ್ಯ [illegible] । [illegible]
[illegible] ।

[illegible] । ಪ್ರಗಟ [illegible]
[illegible] ॥೧೧॥
(ಅಧ್ಯಾಯ ೧)

[illegible] । ಆಚಾರ್ಯ ಗುರು [illegible] ।
[illegible] । [illegible]

[illegible] ಆಚಾರ್ಯ ಪ್ರಗಟಲೇ । [illegible]
[illegible] ।
[illegible] । [illegible] ಆಚಾರ್ಯ [illegible] ....
(ಅಧ್ಯಾಯ ೧೧)

ಇದಲ್ಲದೆ ೧೬ನೇ ಅಧ್ಯಾಯದಲ್ಲಿ ಶ್ರೀಜಗದ್ಗುರು ಪಂಚಾಚಾರ್ಯರು ಯಾವ ಯಾವ ಲಿಂಗದಿಂದ ಉದ್ಭವರಾದರೆಂಬುದನ್ನೂ ಅವರ ಗೋತ್ರ, ಸೂತ್ರ ದಂಡ ಮೊದಲಾದ ಸರ್ವವಿಷಯಗಳನ್ನೂ ವಿವರಿಸಿರುವ ವಿಷಯವನ್ನು ಬೋಧಿಸಿದರು ಆಮೇಲೆ ಶ್ರೀಮದ್ರಂಭಾಪುರೀ ಜಗದ್ಗುರುಗಳವರು "ಸಾಹಿತ್ಯರತ್ನ" ಎಂದು ಆಶೀರ್ವದಿಸಿದ ಸುವರ್ಣದ ಪದಕವನ್ನು ಮಹಾಸನ್ನಿಧಿಯ ಅಪ್ಪಣೆಯ ಮೇರೆಗೆ ಜಯಂತಿಯ ದಿವಸ ವೇ|| ಪಂ|| ಜಗದೀಶಶಾಸ್ತ್ರಿಗಳಿಗೆ ಅರ್ಪಿಸಿದರು ಅನಂತರ ಅಧ್ಯಕ್ಷರು ಸಮಾಪ್ತಿ ಭಾಷಣವನ್ನು ಮಾಡಿದ ಮೇಲೆ ಜಗದಾಚಾರ್ಯರ ಮಂಗಲದೊಡನೆ ಸಭೆಯು ಸಮಾಪ್ತಿಗೊಂಡಿತು

ಶಿವರುದ್ರಶರ್ಮಾ ಸಾಲೋಟಗಿ

ಆಲೂರು

ಹಾಸನ ಡಿ|| ಆಲೂರು ಟವನ್ನಿನಲ್ಲಿರುವ ವೀರಶೈವ ಮಹನೀಯರೆಲ್ಲರೂ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರೀರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದರು ಪ್ರಾತಃಕಾಲ ಜಗದಾಚಾರ್ಯರ ಮೂರ್ತಿಗೆ ವಿಧ್ಯುಕ್ತವಾಗಿ ಅಭಿಷೇಕ ಪೂಜಾದಿಗಳು ನಡೆದುವು ಬಳಿಕ ಬೆಳಗ್ಗೆ 7-30 ರಿಂದ ಶ್ರೀ ಮಲ್ಲಿಕಾರ್ಜುನ ದೇವಸ್ಥಾನದಿಂದ ಉತ್ಸವವು ಹೊರಟಿತು ಈ ಮಹೋತ್ಸವವು ಓಲ್ಡ್ ಟೌನ್ ಮತ್ತು ನ್ಯೂಟೌನುಗಳಲ್ಲಿ 12 ಘಂಟೆಗೆಯ ವರೆಗೆ ನಡೆಯಿತು ಪುನಃ ಸಾಯಂಕಾಲ 5 ಘಂಟೆಯಿಂದ ರಾತ್ರಿ 11 ಘಂಟೆಯ ವರೆಗೆ ದೀಪೋತ್ಸವದೊಡನೆ ನೆರವೇರಿತು ಈ ಮಹೋತ್ಸವದಲ್ಲಿ ಸಕಲ ವೀರಶೈವ ಪ್ರಮುಖರೂ ಭಾಗಿಗಳಾಗಿದ್ದರು ಉತ್ಸವವು ನೆರವೇರಿದನಂತರ ಮ|| ರಾ|| ಎ ಪಿ ನಂಜಪ್ಪನವರ ಗೃಹದಲ್ಲಿ ಪಾನಕ ಫಲಾಹಾರಾದಿಗಳು ನಡೆದವು ಮಹಾಗುರು ಭಕ್ತಿಸಂಪನ್ನರಾದ ಎ ಪಿ ಬಸವಲಿಂಗೇಗೌಡರು, ಎ. ಪಿ ನಂಜಪ್ಪನವರು, ಸಾಹುಕಾರ್ ಎ ಎಸ್ ಶಿವನಂಜಪ್ಪನವರು ಇವರೇ ಮೊದಲಾದವರಿಗೆಲ್ಲಾ ಶ್ರೀ ಜಗದಾಚಾರ್ಯರು, ಆಯುರಾರೋಗ್ಯಾದಿಗಳನ್ನು ನೀಡಲೆಂದು ಪ್ರಾರ್ಥಿಸುತ್ತೇನೆ

ಧರ್ಮಾಭಿಮಾನಿ

ದೇವನೂರು.

ಕಡೂರು ತಾ|| ದೇವನೂರು ಗ್ರಾಮದಲ್ಲಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಮಠದಲ್ಲಿ ಇದೇ ತಿಂಗಳು ೪ನೆಯ ತಾರೀಖಿನದಿವಸ ರುದ್ರಾಭಿಷೇಕಾದಿಗಳು ನೆರವೇರಿ ೬ನೆಯ ತಾರೀಖಿನ ದಿವಸ ಜಗದಾಚಾರ್ಯರ ಭಾವಚಿತ್ರ, ವೀರಲಿಂಗೇಶ್ವರ, ಚಂದ್ರಮೌಳೇಶ್ವರೀ ದೇವಿ, ಬನಶಂಕರೀದೇವಿ ಮೊದಲಾದ ದೇವತೆಗಳ ಉತ್ಸವವನ್ನು ಇಲ್ಲಿಯ ಮಹಾಜನಗಳು ವಿಶೇಷ ವೈಭವದಿಂದ ನೆರವೇರಿಸಿದರು. 19ನೆಯ ತಾರೀಖಿನ ದಿವಸ ಶ್ರೀರೇಣುಕಾಚಾರ್ಯ ಜಯಂತೀಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು ಈ ಮಹಾಗುರುಕಾರ್ಯದಲ್ಲಿ ಇಲ್ಲಿಯ ಪಾಲುಮತದವರೆಲ್ಲರೂ ಭಾಗಿಗಳಾಗಿದ್ದರು. ಮತ್ತಿಘಟ್ಟದ ಹಿರೇಮಠದ ವೇ|| ಶಿವರುದ್ರಾರಾಧ್ಯರು ರೇಣುಕರ ಮಾಹಾತ್ಮ್ಯವನ್ನು ಎಲ್ಲರಿಗೂ ವಿಶದವಾಗಿ ತಿಳಿಯಪಡಿಸಿದರು ಈ ಸಂತೋಷಸಮಯದಲ್ಲಿ ಪಾಲುಮತದ ಮ|| ರಾ|| ಹೊಸೂರೇಗೌಡರು ಪ್ರಭಾಪೋಷಣಕ್ಕೋಸ್ಕರ 2 ರೂ ಗಳನ್ನು ಸಮರ್ಪಿಸಿದರು. ಇವರಿಗೆ ಜಗದಾಚಾರ್ಯರು ಮಂಗಲವನ್ನೀಯಲೆಂದು ಪ್ರಾರ್ಥಿಸುವ,

ಗುರುಭಕ್ತ

ಬಸವಪಟ್ಟಣ

ಶಿವಮೊಗ್ಗ ಡಿ|| ಚನ್ನಗಿರಿ ತಾ|| ಬಸವಾಪಟ್ಟಣದಲ್ಲಿ ಪ್ರತಿವರ್ಷ ಪದ್ಧತಿಯಪ್ರಕಾರ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವು ಶ್ರೀಹಾಲಸ್ವಾಮಿಯ ಗದ್ದುಗೆಯಲ್ಲಿ ಶ್ರೀಮದ್ವೀರಶೈವ ಗುರುಕುಲದ ವತಿಯಿಂದ ಫಾಲ್ಗುಣ ಶು|| ೧೩ ದಿವಸ ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಉತ್ಸವವು ಭಜನ ಸಂಘದವರಿಂದಲೂ, ವಾದ್ಯಗಳಿಂದಲೂ, ಶ್ರೀಜಗದಾಚಾರ್ಯರ ಜಯಘೋಷದಿಂದಲೂ, ವೈಭವದಿಂದ ಸಾಗಿ ಶ್ರೀದುರ್ಗಾದೇವಿಯ ದೇವಸ್ಥಾನಕ್ಕೆ ಹೋಗಿ ಅಲ್ಲಿ ಮಂಗಳಾರತಿಯನ್ನು ಮುಗಿಸಿಕೊಂಡು ಪುನಃ ಹಾಲಸ್ವಾಮಿಯ ಗದ್ದುಗೆಗೆ ಬಂದಿತು. ಒಂದು ಘಂಟೆಯ ವರೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾಭಜನೆಯನ್ನು ವೇ|| ಅನುಗೋಡುಮಠದ ಹಾಲಪ್ಪಯ್ಯ ಮತ್ತು ಸಂಗಪ್ಪಯ್ಯನವರ ಮಕ್ಕಳಾದ ವೇ|| ಮಹಾಲಿಂಗಯ್ಯನವರು ಹಾಲಸಿದ್ಧಯ್ಯನವರು ಮಾಡಿ ಸಮಸ್ತ ಭಕ್ತಾದಿಗಳಿಗೂ ಆನಂದವನ್ನುಂಟುಮಾಡಿದರು ವೇ|| ಹಾಲಸ್ವಾಮಿ ಮಠದ ಸಿದ್ಧಪ್ಪಯ್ಯನವರು ಮತ್ತು ವೇ|| ಶಿವಲಿಂಗಪ್ಪಯ್ಯನವರು ಪಂಚಾಚಾರ್ಯರ ಲೀಲಾಭಜನೆಯನ್ನು ಮಾಡಿ ಸರ್ವರಲ್ಲಿಯೂ ಭಕ್ತಿಹುಟ್ಟುವಂತೆ ಮಾಡಿದರು ಈ ಕಾರ್ಯವನ್ನು ಉತ್ಸಾಹದಿಂದ ನೆರವೇರಿಸಿದ ಹಾಲಸ್ವಾಮಿಮಠದ ವೇ|| ನಂಜುಂಡಪ್ಪಯ್ಯನವರು, ಅನುಗೋಡುಮಠದ ವೇ|| ಸಂಗಪ್ಪಯ್ಯನವರು, ಮ|| ರಾ|| ಪಟೇಲ್ ಹಾಲಪ್ಪನವರು, ಮ|| ರಾ|| ದಾನಮ್ಮಳ ಬಸಪ್ಪನವರು, ಮ|| ರಾ|| ಎಲಿಗಾರ ಸಿದ್ಧಲಿಂಗಪ್ಪನವರು, ಮ|| ರಾ|| ಮೂಲೆಮನೆ ನಂಜಪ್ಪನವರು, ಮ|| ರಾ|| ಹೆಚ್. ಹಾಲಪ್ಪನವರು ಇವರೇ ಮೊದಲಾದವರಿಗೆಲ್ಲಾ ಶ್ರೀಜಗದಾಚಾರ್ಯರು ಆಯುರಾರೋಗ್ಯ ಭಾಗ್ಯವನ್ನೀಯಲೆಂದು ಪ್ರಾರ್ಥನೆ.

ಎ. ಎಂ ಹಾಲಸಿದ್ಧಯ್ಯ

ಶ್ರೀರುದ್ರಾಭಿಷೇಕ.

ಧಾರವಾಡ ಡಿ|| ಕರ್ಜಗಿ ತಾಲೂಕು ಕಲಕೋಟಿ ಗ್ರಾಮದ ಸಣ್ಣಕಳ್ಳಿ ಕ್ಯಾಪ್ಪನ ಮಕ್ಕಳಾದ ಗೂಳಪ್ಪ ಮತ್ತು ಪಕೀರಪ್ಪ ಈ ಉಭಯರೂ ಶಿವಪುರಮಠಾಧ್ಯಕ್ಷರಾದ ಶ್ರೀಶಿವಯೋಗಿ ಹಾಲಮಳೆ ಬಸವಲಿಂಗಸ್ವಾಮಿಗಳವರನ್ನು ತಮ್ಮಲ್ಲಿಗೆ ಕರೆಯಿಸಿಕೊಂಡು ತಾ|| 21 ನೆಯ ದಿವಸ ವರದಾನದಿಯ ಮಧ್ಯದಲ್ಲಿ ಶೋಭಿಸುವ ಶ್ರೀ ಶಿವಲಿಂಗದ ಸಮೀಪದಲ್ಲಿ ಸರ್ವರೂ ಸ್ನಾನವನ್ನು ಮಾಡಿ ಪೂಜಾದಿಗಳನ್ನು ನೆರವೇರಿಸಿದರು ಅನಂತರ, ಸದರಿ ಕಳ್ಳಿಯವರ ಮನೆಗೆ ಬಂದಮೇಲೆ ಶ್ರೀ ಸ್ವಾಮಿಗಳವರ ಪಾದಪೂಜೆಯು ಪ್ರಾರಂಭವಾಯಿತು ಆ ಸಮಯದಲ್ಲಿ ಶಾಲಾಮಾಸ್ತರ್ ವೇ|| ಮಠದ ಗುರುಸಿದ್ಧಪ್ಪಯ್ಯನವರು ಮತ್ತು ವೇ|| ಮಠದ ವೀರಭದ್ರಶಾಸ್ತ್ರಿಗಳು ನಮಕಚಮಕ ಪುರುಷಸೂಕ್ತಗಳನ್ನು ಮನೋಹರವಾಗಿ ಪಠಿಸಿದರು ಅಂದಿನ ಪೂಜಾವೈಭವವು ಎಂತಹ ನಾಸ್ತಿಕರನ್ನಾದರೂ ಆಸ್ತಿಕರನ್ನಾಗಿ ಮಾಡುವಂತಿತ್ತು ತೀರ್ಥಪ್ರಸಾದಾದಿಗಳು ನೆರವೇರಿದ ಮೇಲೆ ಅನ್ನಸಂತರ್ಪಣೆಯು ವಿಶೇಷವಾಗಿ ನೆರವೇರಿತು ಮನೆಯ ಮಾಲಿಕರಾದ ಈ ಉಭಯರಿಗೂ, ಜಗದಾಚಾರ್ಯರು ಸಂಪತ್ಸಮೃದ್ಧಿಯನ್ನೀಯಲಿ

ಮುಪ್ಪಯ್ಯ, ಹಿರೇಮಠ

ಶ್ರೀಮದ್ಯುವರಾಜಕುಮಾರಿಯವರ ವಿವಾಹಮಹೋತ್ಸವ

ಶ್ರೀಮನ್ಮಹಾರಾಜರವರ ದ್ವಿತೀಯ ಸಹೋದರಿಯವರಾದ ಸೌ|| ಶ್ರೀ ಸುಜಯಕಾಂತಮ್ಮಣ್ಣಿಯವರನ್ನು ಸಾನಂದ ಕೋಟೆ ಸಂಸ್ಥಾನದ ಯುವರಾಜರವರಾದ ಶ್ರೀ ರುದ್ರದತ್ತಸಿಂಹಜಿಯವರಿಗೆ ಕೊಟ್ಟು, ಇದೇ ತಿಂಗಳು ೨೫ ನೆಯ ತಾರೀಖಿನ ದಿವಸ ವಿವಾಹಮಹೋತ್ಸವವು ಅರಮನೆಯಲ್ಲಿ ವಿಶೇಷ ವೈಭವದಿಂದ ನೆರವೇರಿತು ಆ ಕಾಲಕ್ಕೆ ಶ್ರೀ ಜಗದ್ಗುರು ರಂಭಾಪುರೀ ಪೀಠದ ವತಿಯಿಂದ ವೇ|| ಪಂ|| ಚಿದಿರೆಮಠದ ವೀರಭದ್ರಶಾಸ್ತ್ರಿಗಳು ಮತ್ತು ಆಸ್ಥಾನವಿದ್ವಾನ್ ವೇ|| ಪಂ|| ಬಸವಲಿಂಗಶಾಸ್ತ್ರಿಗಳು ಆಗಮಿಸಿ ರಾಜವಧೂವರರಿಗೆ ಪಿಲ್ಲಕ್ಕುಗಳನ್ನು ಆಶೀರ್ವದಿಸಿದರು ೨೭ ನೆಯ ತಾರೀಖಿನ ದಿವಸ ರಾಜವಧೂವರರ ಉತ್ಸವವು ಸಕಲ ರಾಜವೈಭವದೊಡನೆ ನೆರವೇರಿತು ಈ ಮಹೋತ್ಸವವನ್ನು ನೋಡುವುದಕ್ಕಾಗಿ ಲಕ್ಷಾಂತರ ಜನರು ಸೇರಿದ್ದರು.

ಒಳಿತೇನು?

ಪರಶಿವ ತಾನೆಂದು
    ಗುರುದಪ್ಪ ರಚಿಸುವುದೊಳಿತೇನು ?
ಪರಧರ್ಮಗಳಿಗೊಲಿದು
    ಗುರುಧರ್ಮ ಬಿಡುವುದು ಒಳಿತೇನು ? ||೧||

ಚದುರನು ತಾನಾಗಿ
    ಕದನವ ಹೂಡುವುದೊಳಿತೇನು ?
ಹದಗೆಟ್ಟ ಮನವುಳ್ಳ
    ಚದುರೆಗೆ ಮರುಮದುವೆ ಒಳಿತೇನು ? ||೨||

ಮಸಣದ ಮತಿಯಿಂದ
    ಪಿಸುಮಾತು ಕೇಳುವುದೊಳಿತೇನು ?
ರಸರುಚಿ ತಿಳಿಯದೆ
    ಹೊಸದೆಂದು ತಿಂಬುವುದೊಳಿತೇನು ? ||೩||

ಗತಿ ತೋರಿಸುವೆನೆಂದು
    ವ್ರತಹಾನಿ ಮಾಡುವುದೊಳಿತೇನು ?
ಶ್ರುತಿಯಲ್ಲಿ ಮೆರೆಯುವ
    ಮತವನ್ನು ದ್ವೇಷಿಪುದೊಳಿತೇನು ? ||೪||

ಪ್ರಖ್ಯಾತಿ ಬೇಕೆಂದು
    ಮೂರ್ಖರ ಸೇರುವುದೊಳಿತೇನು ?
ಐಕ್ಯದ ನೆಪದಿಂದ
    ಸೌಖ್ಯವ ನಾಶಿಪುದೊಳಿತೇನು ? ||೫||

ನೇಮವ ಬದಿಗಿಟ್ಟು
    ಕಾಮನಾಳಾಗುವುದೊಳಿತೇನು ?
ಕಾಮದ ಭರದಲ್ಲಿ
    ಪ್ರೇಮವಿವಾಹವು ಒಳಿತೇನು ? ||೬||

ಚಿದಿರೆಮಠದ ವೀರಭದ್ರಶಾಸ್ತ್ರಿ.

ಈ ಸಾರಿ ಹೈದರಾಬಾದ ನಗರದಲ್ಲಿ ನಡೆದ ೨೬ ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಉದ್ಘಾಟನ ಸಮಾರಂಭವು ಈ ಕವಿಗಳಿಂದಲೇ ನೆರವೇರಿತು ಈ ಕವಿ ಸಮ್ಮೇಳನದಲ್ಲಿ ಬೇರೊಬ್ಬರು ಓದಿದ " **ತಪ್ಪೇನು ?** " ಎಂಬ ಕವಿತೆಗೆ ಆ ಕ್ಷಣದಲ್ಲಿಯೇ ಉತ್ತರರೂಪವಾಗಿ ರಚಿಸಿ ಪಠಿಸಿದ ಕವನವಿದು.

ಸ್ವೀಕಾರ.

ಕಡೂರು ಡಿ|| ದೇವನೂರು ಗ್ರಾಮದಲ್ಲಿರುವ ಶ್ರೀ ರೇವಣಸಿದ್ಧೇಶ್ವರಸ್ವಾಮಿ ಮಠದಲ್ಲಿ ನೆರವೇರಿದ ಶ್ರೀ ರೇಣುಕಜಯಂತೀ ಸಮಯದಲ್ಲಿ ಮ|| ರಾ|| ಹೊಸೂರೇಗೌಡರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಶ್ರೀ ರೇವಣಸಿದ್ಧೇಶ್ವರ ಮಠದ ವೇ|| ಸಿದ್ಧರಾಮಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಕರ್ಜಗಿ ತಾ|| ಚಿಕ್ಕಮುಗದೂರು ಪುರಾಣಮಠದ ವೇ|| ಪುಟ್ಟಯ್ಯನವರು ಮತ್ತು ರಾಚಯ್ಯನವರು ಶ್ರೀರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿ ಮತ್ತು ಸದರಿ ತಾಲೂಕು ಕಲಕೋಟಿ ಗ್ರಾಮದ ಸಣ್ಣಕಳ್ಳಿ ಗೂಳಪ್ಪ ಮತ್ತು ಫಕೀರಪ್ಪ ಇವರು ಶ್ರೀ ಶಿವಯೋಗಿ ಹಾಲಮಳೆಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 2 ರೂ. ಗಳು ಕಲಕೋಟಿ ಹಿರೇಮಠದ ವೇ|| ವೀರಭದ್ರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಹಾಸನ ಡಿ|| ಆಲೂರು ಟವನ್ನಿನಲ್ಲಿ ನೆರವೇರಿದ ಶ್ರೀ ರೇಣುಕಾಚಾರ್ಯರ ಜಯಂತೀ ಮಹೋತ್ಸವ ಸಮಯದಲ್ಲಿ ಮ|| ರಾ|| ಎ ಪಿ ನಂಜಪ್ಪನವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿದತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜ ೧೪ × ೧೦ ಬೆಲೆ ೧ಕ್ಕೆ	೦—೭—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೪
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೪
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೨—೪
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೪
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೪
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೪
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೪
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೨—೪
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—೪
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೪
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೪
ಹಿಮವತ ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೪
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೪
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೪

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಶಿಷ್ಯರ ಮನೆಗಳ ರಿಜಿಸ್ಟರ್ ಬುಕ್

ಭರತಖಂಡದಲ್ಲಿರುವ ಪ್ರತಿಯೊಂದು ಗುರುವರ್ಗದ ಮಠಕ್ಕೆ ಸಾವಿರಾರು ಶಿಷ್ಯರ ಮನೆಗಳಿರುತ್ತಿದ್ದು, ಆ ಮಠಾಧಿಕಾರಿಗಳು ಐದುವರ್ಷಕ್ಕೋ ಹತ್ತುವರ್ಷಕ್ಕೋ ಒಂದುಸಾರಿ ಹೋಗಿ ಶಿಷ್ಯರಿಂದ ಕಾಣಿಕೆಯನ್ನು ತೆಗೆದುಕೊಂಡು ಬರುತ್ತಿರುವರು. ಆದರೆ ಇವರು ತಮ್ಮ ಕರ್ತವ್ಯಕ್ಕನುಸರಿಸಿ ಶಿಷ್ಯರ ಯಾವತ್ತು ವಿಷಯಗಳನ್ನು ಬರೆದುಕೊಳ್ಳದೆ ಕಾಣಿಕೆಯನ್ನು ಮಾತ್ರ ತೆಗೆದುಕೊಂಡು ಹೋಗಿಬಿಡುವರು ಈ ಅವ್ಯವಸ್ಥೆಯಿಂದ ಅನೇಕ ಮಠದವರಿಗೆ ತಮ್ಮ ಶಿಷ್ಯರ ಮನೆಗಳೇ ಗೊತ್ತಿಲ್ಲದೆ ಹೋಗಿವೆ ಇದನ್ನು ದೂರಮಾಡುವುದಕ್ಕೋಸ್ಕರ ಮೇಲ್ಕಂಡ ಪುಸ್ತಕವನ್ನು ಹೊಸದಾಗಿ ಮುದ್ರಣಗೊಳಿಸಿದ್ದೇವೆ ಇದರಲ್ಲಿ ಬರೆಯುವ ವಿಷಯಗಳ ವಿವರವು ಚನ್ನಾಗಿ ತೋರಿಸಲ್ಪಟ್ಟಿದೆ. ಆದುದರಿಂದ ಸದರಿ ಪುಸ್ತಕವನ್ನು ಶಿಷ್ಯರುಳ್ಳ ಪ್ರತಿಯೊಬ್ಬ ಗುರುವರ್ಗದವರೂ ತರಿಸಿಕೊಂಡು ಅದರಲ್ಲಿದ್ದಂತೆ ವಿವರವನ್ನೆಲ್ಲಾ ಬರೆದು ವಂಶಪಾರಂಪರ್ಯವಾಗಿ ಬಂದ ತಮ್ಮ ಶಿಷ್ಯರನ್ನು ಕಾಪಾಡಿಕೊಳ್ಳಬೇಕು. ಇದಕ್ಕಾಗಿ ಎಂದೂ ಕೆಡದಂಥ ಕಾಗದಗಳನ್ನುಪಯೋಗಿಸಿರುವದಲ್ಲದೆ ಸುಂದರವಾದ ಮತ್ತು ಭದ್ರವಾದ ಬೈಂಡನ್ನು ಮಾಡಿಸಿದೆ.

ಬೆಲೆ ೧ ರೂಪಾಯಿ

ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್,
ಮೈಸೂರು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಭಗವಾದಿಸಿದ್ಧತತ್ವದರ್ಪಣ (೮ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಕ್ಷರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು)	೧|| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಪಾರಮೇಶ್ವರಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवदर्शन (मराठी)	१ रु
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	६ आ.
पुरुषसूक्तम् (वीरशैवप्राचीनभाष्योपेतम्)	४ आ.
नन्दिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ. ೧೨ ಆಣೆ

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಏಪ್ರಿಲ್ ೧೯೪೩ [ಸಂಚಿಕೆ ೫೧

ಶ್ರೀಜಗದ್ಗುರು ರೇಣುಕಾಚಾರ್ಯ ಜಯಂತೀ ಮಹೋತ್ಸವ, ಸಿಂಧಖೇಡ.

ನಿಜಾಮು ಇಲಾಖಾ ತಾ॥ ನೀಲಂಗಾ ಸಿಂಧಖೇಡ ಗ್ರಾಮದಲ್ಲಿ ಫಾಲ್ಗುಣ ಶು॥ ೧೩ ದಿವಸ ಶ್ರೀಜಗದ್ಗುರು ರೇಣುಕ ಭಗವತ್ಪಾದರ ಜಯಂತೀ ಮಹೋತ್ಸವವು ಒಳ್ಳೇ ವಿಜೃಂಭಣೆಯಿಂದ ಜರುಗಿತು. ದಾನವೀರರೂ ವೀರಶೈವಧರ್ಮಾಭಿಮಾನಿಗಳೂ ಸಮಾಜ ಪ್ರೇಮಿಗಳೂ ಆದ ಶ್ರೀಮಂತ ವಿಶ್ವನಾಥಪ್ಪನವರು ಶೆಟ್ಟಿ ಸಿಂಧಖೇಡ ಇವರು ತಮ್ಮ ಮನೆಯ ಮುಂಭಾಗದಲ್ಲಿ ಭವ್ಯವಾದ ಮಂಟಪವನ್ನು ನಿರ್ಮಿಸಿ ಆ ಮಂಟಪದ ಮಧ್ಯಭಾಗದಲ್ಲಿ ಶ್ರೀ ರೇಣುಕ ಭಗವತ್ಪಾದರ ಸುಂದರವಾದ ದೊಡ್ಡ ಭಾವಚಿತ್ರವನ್ನಿಟ್ಟಿದ್ದರು. ಮಂಟಪದ ಎಲ್ಲ ದಿಕ್ಕುಗಳಲ್ಲಿಯೂ "ಓಂ ನಮೋ ಭಗವತೇ ರೇಣುಕಾಚಾರ್ಯಾಯ" "ಆಚಾರ್ಯದೇವೋಭವ" "ವಿದ್ಯಯಾಮೃತಮಶ್ನುತೇ" ಮೊದಲಾದ ಬೋಧಪ್ರದವಾದ ವಾಕ್ಯಗಳು ಬರೆಯಲ್ಪಟ್ಟಿದ್ದವು. ಒಟ್ಟಿಗೆ ಮಂಟಪದ ರಚನೆಯು ಪ್ರೇಕ್ಷಕರ ಮನಸ್ಸನ್ನು ಆಕರ್ಷಿಸುತ್ತಿತ್ತು. ವೇ॥ ಸಿದ್ಧರಾಮಯ್ಯ ಮತ್ತು ಪಂಚಾಕ್ಷರಯ್ಯನವರು ಬಂಗಿ ಹುಮನಾಬಾದ ಇವರು ಶ್ರೀಜಗದ್ಗುರು ರೇಣುಕರ ಮೂರ್ತಿಗೆ ರುದ್ರಾಭಿಷೇಕ ಮತ್ತು ಷೋಡಶೋಪಚಾರ ಪೂಜೆಯನ್ನು ಮಾಡಿದರು. ಆಗ್ಗೆ ಶ್ರೀ ಪಂಡಿತ ವೇದಾಂತಾಚಾರ್ಯಸ್ವಾಮಿ ಅಮರೇಶ್ವರಾಚಾರ್ಯರು, [illegible] ಅವರಾದ, ಶ್ರೀಗುರು ಚನ್ನವೀರಸ್ವಾಮಿಗಳು ಬಾಲಕಿ, ಹಿರೇಮಠ [illegible], ಶ್ರೀ ವಿರೂಪಾಕ್ಷದೇಶಿಕೇಂದ್ರರು [illegible], ಶ್ರೀ ಸಿದ್ಧೇಶ ಶಾಸ್ತ್ರಿಗಳು [illegible], ಶ್ರೀ ಸಿದ್ಧವೀರಶಾಸ್ತ್ರಿಗಳು ಬಂಡೆಗಂಬಳಿ, ಶ್ರೀಮಾನ್ ಮಲ್ಲಿಕಾರ್ಜುನಪ್ಪ ಸಾಹೇಬ ವಕೀಲ ಕೋಣಕರೆ ಬಿ.ಎ., ಎಲ್ಎಲ್.ಬಿ., ಉಸ್ಮಾನಾಬಾದ, ಶ್ರೀ [illegible] ವಕೀಲ ಹಾಯಕೋರ್ಟ ಹೈದ್ರಾಬಾದ, ಶ್ರೀ ಸಿದ್ಧರಾಮಪ್ಪ [illegible] ವಕೀಲ ನೀಲಂಗಾ, ಶ್ರೀ॥ ರಾಜಯ್ಯ ಸ್ವಾಮಿ ಪ್ರಚಾರಕ ನೀಲಂಗಾ, ಶ್ರೀಮಂತ ವಿಶ್ವನಾಥಪ್ಪ ಶೆಟ್ಟಿ, ಶ್ರೀ ಪ್ರಭುಅಪ್ಪ [illegible] ಲಾತೂರು, ಶ್ರೀ ಸಿದ್ಧರಾಮಪ್ಪ [illegible] ಅಂಬಲಗಿ, ಶ್ರೀ ಕಲಶೆಟ್ಟಪ್ಪ ಪಾಟೀಲ ಉಮರ್ಗಾ, ಶ್ರೀ ಶರಣಪ್ಪ ಬಸಪ್ಪ ಮುಲಂಗ, ಶ್ರೀ ರುದ್ರಪ್ಪ [illegible], ಶ್ರೀ ವೀರಪ್ಪ ಉಮರ್ಗಾ, ಶ್ರೀ ಶಂಕರಪ್ಪ ಪಾಟೀಲ [illegible], ಶ್ರೀ ರಾಮಣ್ಣಪ್ಪ [illegible] ಮೊದಲಾದ ಅನೇಕಜನ ಪ್ರಮುಖರು ಆಗಮಿಸಿದ್ದರು. ಮಹಾಮಂಗಳಾರತಿಯಾದಮೇಲೆ ಜಗದಾಚಾರ್ಯರ ಜಯಘೋಷದೊಡನೆ ಪೂಜೆಯು ಸಮಾಪ್ತಿಗೊಂಡಿತು. ಸಾಯಂಕಾಲ ೫ ಘಂಟೆಗೆ ಶ್ರೀ ಚನ್ನಬಸವಸ್ವಾಮಿಗಳು ಭಾಲಕಿ ಇವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು. ಮೊದಲು ಶಿವಲಿಂಗಸ್ವಾಮಿ [illegible] ಇವರು ಶ್ರೀರೇಣುಕಾಚಾರ್ಯರ ಸ್ತೋತ್ರಗಳನ್ನು ಹಾಡಿದರು. ಆ ಮೇಲೆ ವೇ॥ ಸಿದ್ಧರಾಮಯ್ಯನವರು ಬಂಗಿ ಹುಮನಾಬಾದ ಇವರು ಆಚಾರ್ಯಭಕ್ತಿ ಈ ವಿಷಯದ ಮೇಲೆ ಭಾಷಣಮಾಡಿದರು. ತರುವಾಯ ವೇ॥ ರೇವಣಸಿದ್ಧಯ್ಯ ಪ್ರಚಾರಕ, ವೇ॥ ಸಿದ್ಧವೀರಶಾಸ್ತ್ರೀ [illegible], ವೇ॥ ಸಿದ್ಧೇಶ್ವರ ಶಾಸ್ತ್ರೀ ಬಂಡೆಗಂಬಳಿ, ವೇ॥ ಮನ್ಮಥಸ್ವಾಮಿ [illegible] ಸಿಂದಖೇಡ, ಅಂಬಿಕಾದೇವಿ ಪ್ರಚಾರಿಕಾ ಸೋಲಾಪೂರ, ಮೊದಲಾದ ಅನೇಕಜನರು ಧರ್ಮ, ಭಕ್ತಿ, ಬ್ರಹ್ಮಚರ್ಯ, ಗುರುಶಿಷ್ಯ ಮೊದಲಾದ ವಿಷಯಗಳ ಮೇಲೆ ಭಾಷಣಮಾಡಿದರು. ಅನಂತರ ಪಂಡಿತ ಶ್ರೀ ಅಮರೇಶ್ವರಾಚಾರ್ಯ ಅವರಾದಿ ಇವರು ವಿಶ್ವನಾಥಪ್ಪ ಶೆಟ್ಟಿಯವರ ಬಗ್ಗೆ ಮಾಡಿದ ಪದವನ್ನು ಮಹಾರುದ್ರಯ್ಯ ಶಾಸ್ತ್ರಿ ಅವರಾದಿ ಇವರು ಒಳ್ಳೆ ಮನೋಹರವಾಗಿ ಹಾಡಿದರು. ಅದನ್ನು ಕೇಳಿ ಸಭಿಕರೆಲ್ಲರೂ ಸಂತೋಷಪಟ್ಟರು. ಕೊನೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಗಗನಭೇದಿ ಜಯಘೋಷದಿಂದ ಸಭೆಯು ವಿಸರ್ಜಿಸಲ್ಪಟ್ಟಿತು. ವೀರಶೈವ ಮಹಾವಿದ್ಯಾಪೀಠ, ವರ್ಕಿಂಗ್ ಕಮಿಟಿ ಮತ್ತು ಶ್ರೀರೇಣುಕರ ಜಯಂತಿಗಳಿಗಾಗಿ ಸುಮಾರು ೧೫೦೦ ರೂಪಾಯಿಗಳನ್ನು ಉದಾರಮನಸ್ಸಿನಿಂದ ಖರ್ಚುಮಾಡಿದ ಶ್ರೀಮಂತ ದಾನವೀರ ವಿಶ್ವನಾಥಪ್ಪ ಶೆಟ್ಟಿ ಇವರಿಗೆ ಶ್ರೀಜಗದಾಚಾರ್ಯರು ಆಯುರಾರೋಗ್ಯಭಾಗ್ಯಾದಿಗಳಿತ್ತು ರಕ್ಷಿಸಲೆಂದು ಪ್ರಾರ್ಥಿಸುವ,

ರಾಜಯ್ಯ, ನೀಲಂಗಾ.

ಸೊಲ್ಲಾಪುರ

ತಾ॥ ೧೯-೩-೪೩ನೆಯ ಶುಕ್ರವಾರ ಸೊಲ್ಲಾಪುರ ಶ್ರೀವೀರಶೈವ ಸದಾಚಾರ ಸ್ತ್ರೀಸಮಾಜದ ವತಿಯಿಂದ ಮಧ್ಯಾಹ್ನ ನಾಲ್ಕು ಘಂಟೆಗೆ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀನಿಮಿತ್ತವಾಗಿ ಸಭೆಯು ಸೇರಿತ್ತು. ಪ್ರಥಮದಲ್ಲಿ ಸಮಾಜದ ಸೆಕ್ರೆಟರಿಗಳಾದ ಶ್ರೀ॥ [illegible] ಬಸಮ್ಮನವರು ಶ್ರೀರೇಣುಕರ ಭಾವಚಿತ್ರಕ್ಕೆ ಪೂಜೆಯನ್ನು ಮಾಡಿದಮೇಲೆ ಕು॥ ಇಂದುಕಲಾ ಗಂಧೀಕರಿ ಇವರು ಜಗದಾಚಾರ್ಯರ ಸ್ತೋತ್ರವನ್ನು ಮಂಜುಳವಾಗಿ ಹಾಡಿ ಸಭಿಕರನ್ನು ಆನಂದಗೊಳಿಸಿದರು. ತರುವಾಯ ಕು॥ ಗಂಭೀರೆ, ಕು॥ ಶಾಂತಾಬಾಯಿ ಜತಕರ, ಸೌ॥ ಬಸಮ್ಮ ನಂದೀಮಠ ಇವರು ಜಗದಾಚಾರ್ಯರ ಲೀಲೆಯನ್ನು ಬಹುಮನೋಹರವಾಗಿ ಹೇಳಿದರು. ಆಮೇಲೆ ಸಮಾಜದ ಉಪಾಧ್ಯಕ್ಷೆಯರಾದ ಸೌ॥ ಗಂಗಾಬಾಯಿ ಪಾಟೀಲ ಇವರು ಒಂದೆರಡು ಜನರ ಆಭಾರಮನ್ನಿಸಿದ ಮೇಲೆ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು

ಪಾರ್ವತೀಬಾಯಿ ಶೇಟಿ

ಶಿಗ್ಗಾಂವ

ಪ್ರತಿವರ್ಷ ಪದ್ಧತಿಯಂತೆ ವೀರಶೈವ ಮತಸ್ಥಾಪಕರಲೊಬ್ಬರಾದ ಶ್ರೀಜಗದ್ಗುರು ರೇಣುಕಶಿವಾಚಾರ್ಯರ ಜಯಂತೀಮಹೋತ್ಸವವು ಧಾರವಾಡ ಜಿಲ್ಲೆ ಶಿಗ್ಗಾಂವದಲ್ಲಿ ತಾ॥ ೧೯-೩-೪೩ನೆಯ ಶುಕ್ರವಾರ ದಿವಸ ಒಳ್ಳೇ ವೈಭವದಿಂದ ಜರುಗಿಸಲ್ಪಟ್ಟಿತು. ಪ್ರಾತಃಕಾಲ ಹಿರೇಮಠದಲ್ಲಿ ಶ್ರೀಗುರು[illegible] ಸಂಪನ್ನವಾಯಿತು. ಮಧ್ಯಾಹ್ನ ಶ್ರೀರೇವಣಸಿದ್ಧೇಶ್ವರ ಗದ್ದುಗೆ ಮತ್ತು ಗುರುಮೂರ್ತಿಗೆ ಷೋಡಶೋಪಚಾರಪೂಜಾ, ಪ್ರಸಾದ ಸ್ವೀಕಾರವಾಯಿತು. ಸಾಯಂಕಾಲ ೫ ಘಂಟೆಯಿಂದ ಪಲ್ಲಕ್ಕಿ ಮಹೋತ್ಸವವು ಹಿರೇಮಠದಿಂದ ಭಜಂತ್ರಿ ಕರಡಿಮಜಲು ಭಜನೆಗಳಿಂದ ಕೂಡಿಕೊಂಡು ಒಳ್ಳೇ ವೈಭವದಿಂದ ಹೊರಟು ಊರ ಮುಖ್ಯ ಮುಖ್ಯ ಬೀದಿಗಳಲ್ಲೆಲ್ಲಾ ಹಾಯ್ದು ರಾತ್ರಿ ೮ ಘಂಟೆಗೆ ಹಿರೇಮಠಕ್ಕೆ ತಲುಪಿತು. ಬೀದಿಗಳಲ್ಲಿ ಭಕ್ತಮಂಡಳಿಯವರು ಮಂಗಳಾರತಿ ಹಾಗು ಕರ್ಪೂರಗಳನ್ನಿತ್ತು ಭಕ್ತಿಪೂರ್ವಕ [illegible] ತಿದ್ದರು. ಉತ್ಸವವು ಮುಗಿದನಂತರ ರಾತ್ರಿ ೧೦ ಘಂಟೆಯಿಂದ [illegible] ಹಿರೇಮಠದ ವೇ॥ ವಿರೂಪಾಕ್ಷ ಶಾಸ್ತ್ರಿಗಳು ಕೀರ್ತನ ಮಾಡಿದರು. ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಉತ್ಸವಕಾರ್ಯವು ಪೂರೈಸಿತು.

ಬಸಪ್ಪ ಸವಲಗುಂಜಿ.

ಹನುಮಸಾಗರ

ಫಾಲ್ಗುಣ ಶು॥ ೧೩ ದಿವಸ ಇಲ್ಲಿಯ ಬೃಹನ್ಮಠದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯು [illegible]ವಾಗಿ ಜರುಗಿತು. ಮುಂಜಾನೆ ೧೦ ಘಂಟೆಗೆ ಷೋಡಶೋಪಚಾರ ಪೂಜೆಯಾಯಿತು. ಮಧ್ಯಾಹ್ನ ೩ ಘಂಟೆಗೆ ವೇ॥ ಪ್ರವಚನಕಾರರು ಶ್ರೀಸಿದ್ಧಲಿಂಗಶಾಸ್ತ್ರಿಗಳು ಹಿರೇಮಠ [illegible] ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿತು. ಸ್ವಮತ ಪರಮತೀಯ ಪ್ರಮುಖರು ಉಪಸ್ಥಿತರಾಗಿದ್ದರು. ಮೊದಲು ಶ್ರೀ॥ ಶಾರದಾದೇವಿ ಅಮಿನಗಡ ಹಾಗೂ ಶ್ರೀ॥ ಸಂಗನಬಸಪ್ಪ ಹಿರೇಮಠ ಮ್ಯಾಗೇರಿ ಇವರು ಪಂಚಾಚಾರ್ಯರ ಸ್ತವನವನ್ನು ಮಂಜುಳವಾಗಿ ಹಾಡಿ ಸರ್ವರನ್ನೂ ಸಂತೋಷಪಡಿಸಿದರು. ಶ್ರೀರೇವಣಸಿದ್ಧೇಶ್ವರ ಪಾಠಶಾಲೆಯ ಕಾರ್ಯದರ್ಶಿಗಳಾದ ಶ್ರೀಶಿವಮುದ್ರಪ್ಪ [illegible] ಇವರು ಐತಿಹಾಸಿಕದೃಷ್ಟಿಯಿಂದೊಡಗೂಡಿದ ಶಿವದೇವಾಲಯ ಹಾಗೂ ಗುರುಪರಂಪರೆಯನ್ನು ಕುರಿತು ಮಹತ್ವದ ಭಾಷಣಮಾಡಿದರು. ವೇ॥ ಶ್ರೀ ಶಿವಲಿಂಗಯ್ಯನವರು ಟೀಚರ್ ಹನುಮಸಾಗರ ಹಿರೇಮಠ [illegible] ಅವರು, ಗುರುಭಕ್ತಿಯೇ ಮೋಕ್ಷಮಾರ್ಗಕ್ಕೆ ಕಾರಣವೆಂಬುವದನ್ನು ವಿವರಿಸಿದರು. ವೇ॥ ಸಂಗಯ್ಯನವರು ಶಾಸ್ತ್ರಿಮಠ ಇವರು [illegible] ಎಂಬ ವಿಷಯದಲ್ಲಿ ಸ್ವಾಭಿಮಾನಯುತ ಭಾಷಣವನ್ನಿತ್ತರು. ಪಂಚಬಾಲಕರು ಪಂಚಪೀಠಗಳ ಹಾಗೂ ವೀರಶೈವ ಪ್ರಾಚೀನತ್ವವನ್ನು ನಾಟಕರೂಪವಾಗಿ ಆಡಿ ಸರ್ವರಿಗೂ ಆನಂದವನ್ನುಂಟುಮಾಡಿದರು. ಅನಂತರ ಅಧ್ಯಕ್ಷರ ಅತ್ಯುತ್ತಮ ಭಾಷಣವು ಪಂಚಾಚಾರ್ಯರಲ್ಲಿ [illegible] ಭಕ್ತಿಪ್ರವೃತ್ತರನ್ನಾಗಿ ಮಾಡಿತು. ಬಳಿಕ ಪಂಚಾಚಾರ್ಯರ ಮಂಗಲಾರತಿಯೊಡನೆ ಸಭಾಂತ್ಯವಾಯಿತು.

ಗುರುಪಾದಪ್ಪ ಪ್ರಮುಖ

ನಿಜಾಮು ವೀರಶೈವ ಮಹಾವಿದ್ಯಾಪೀಠ ವರ್ಕಿಂಗ್ ಕಮಿಟಿ ಸಿಂಧಖೇಡ

ನಿಜಾಮು ವೀರಶೈವ ಮಹಾವಿದ್ಯಾಪೀಠವೆಂಬ ಒಂದು ಉತ್ಕೃಷ್ಟವಾದ ನೂತನ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ೫-೬ ವರ್ಷಗಳಿಂದಲೂ ಪ್ರಯತ್ನಿಸುತ್ತಿರುವ ಶ್ರೀಗುರು ಪಂಡಿತ ಸ್ವಾಮಿ ಅಮರೇಶ್ವರಾಚಾರ್ಯರು ವೇದಾಂತಾಚಾರ್ಯ [illegible] ರಾದ ಇವರು ಈ ಮೊದಲು ದುಬಲಗುಂಡಿ, ಹುಮನಾಬಾದ [illegible] ಮೊದಲಾದ ಸ್ಥಳಗಳಲ್ಲಿ ಸದರಿ ಸಂಸ್ಥೆಯ ಬಗ್ಗೆ ನಾಲ್ಕೈದು ಕಮಿಟಿಗಳನ್ನು ಕೂಡಿಸಿ [illegible] ಅನೇಕ ಪ್ರಮುಖ ಜನರೊಂದಿಗೆ ವಿಚಾರ ವಿನಿಮಯಗಳನ್ನು ಮಾಡಿದ ಮೇಲೆ ತಾ॥ ೧೮-೩-೪೩ ದಿವಸ ಶ್ರೀಮಂತ ವಿಶ್ವನಾಥಪ್ಪ ಶೆಟ್ಟಿ ಸಿಂಧಖೇಡ ಇವರ ಮನೆಯಲ್ಲಿ ವಿದ್ಯಾಪೀಠ ವರ್ಕಿಂಗ್ ಕಮಿಟಿಯು ಶ್ರೀ ಅಮರೇಶ್ವರಾಚಾರ್ಯರ ಅಧ್ಯಕ್ಷತೆಯಲ್ಲಿ ಕೂಡಿತು. ಸಾಯಂಕಾಲ ೩ ಘಂಟೆಗೆ ಅಂತರಂಗ ಸಭೆಯು ಪ್ರಾರಂಭವಾಗಿ ಕೆಳಗೆ ಕಂಡ ಠರಾವುಗಳು ಚರ್ಚಿಸಲ್ಪಟ್ಟು ಪಾಸಾದವು.

(೧) ಈ ವಿದ್ಯಾಪೀಠದ ವತಿಯಿಂದ ಅಖಿಲ ನಿಜಾಮು ವೀರಶೈವ ಅನಾಥ ವಿದ್ಯಾರ್ಥಿಗಳಿಗೆ ಸದ್ಯ ನಾಲ್ಕೈದು ವರ್ಷದ ಮಟ್ಟಿಗೆ ಶಿಷ್ಯವೃತ್ತಿ ಮೊದಲಾದವುಗಳನ್ನು ಕೊಟ್ಟು ಶಿಕ್ಷಣಕ್ಕಾಗಿ ಸಹಾಯ ಮಾಡುವದು, ಅನಂತರ 'ವೀರಶೈವ ಮಹಾವಿದ್ಯಾಪೀಠವನ್ನು ಕಾಯಂ ಮಾಡುವದು'

(೨) ಇಲ್ಲಿಯವರೆಗೆ ಮಹಾವಿದ್ಯಾಪೀಠದ ಸಲುವಾಗಿ ಪ್ರತ್ಯಕ್ಷರೂಪದಿಂದ ಸಹಾಯಮಾಡಿದ ಹಣವನ್ನು ಸದ್ಯ ಕೆಲ ದಿವಸಗಳ ಮಟ್ಟಿಗೆ ಶ್ರೀ ವಿಶ್ವನಾಥಪ್ಪ ಶೆಟ್ಟಿ ಸಿಂಧಖೇಡ ಮತ್ತು ಶ್ರೀ ಶರಣಪ್ಪ ಮುಲಂಗ ಉಮರ್ಗಾ ಇವರ ಹತ್ತರ ಇಡಲಾಗಿದೆ

(೩) ಸದರಿ ಫಂಡಿನ ಅಭಿವೃದ್ಧಿಗೋಸ್ಕರ ಒಂದು ಸ್ವತಂತ್ರ ಬ್ಯಾಂಕನ್ನು ಸ್ಥಾಪನೆ ಮಾಡುವದು

(೪) ಸದರಿ ಬ್ಯಾಂಕಿನ ನಿಯಮಗಳನ್ನು ತಯಾರ ಮಾಡುವದಕ್ಕಾಗಿ ಶ್ರೀ ಮಲ್ಲಿಕಾರ್ಜುನಪ್ಪ ವಕೀಲ ಕೋಣಕರೆ, ಶ್ರೀ[illegible] ವಕೀಲ [illegible] ಹೈದ್ರಾಬಾದ, ಶ್ರೀ [illegible] ವಕೀಲ ಹುಮನಾಬಾದ, ಶ್ರೀ ಸಿದ್ಧರಾಮಪ್ಪ ವಕೀಲ ಇವರ ಒಂದು ಸಬ್ ಕಮಿಟಿಯನ್ನು ನಿರ್ಧರಿಸಲಾಯಿತು.

(೩ನೆಯ ಪುಟವನ್ನು ನೋಡಿ)

ಇಂಡಿಯಾ ಸೆಕ್ರೆಟರಿಗಳಾದ ಶ್ರೀ ಅಮೆರಿಯವರ ಭಾಷಣ.

ಪ್ರಜಾಪ್ರಭುತ್ವ ಹಾಗೂ ವ್ಯವಸ್ಥಾತ್ಮಕವಾಗಿದ್ದ ಕಾಂಗ್ರೆಸ್ಸು, ಬ್ರಿಟಿಷ್ ಸರಕಾರದ ಮೂಲೋತ್ಪಾಟನ ಮಾಡಿ ಕಾಂಗ್ರೆಸ್ ಧ್ವಜಾರೋಹಣ ಮಾಡಬೇಕೆಂಬ ಉದ್ದೇಶದಿಂದ ಸರ್ವಾಧಿಕಾರವನ್ನು ವಹಿಸಿಕೊಂಡು ಅಸಹಕಾರದ ಹೆಸರಿನಲ್ಲಿ ಕ್ರಾಂತಿಕಾರಕ ರೀತಿಯಲ್ಲಿ ವರ್ತಿಸತೊಡಗಿದ್ದೇ ವಿಪರೀತಕ್ಕೆ ಕಾರಣವಾಯಿತು

ಕಾಂಗ್ರೆಸ್ ಪಕ್ಷದ ರೀತಿನೀತಿಗಳನ್ನು ರೂಪುಗೊಳಿಸಿದವರು ಬಹುಮಟ್ಟಿಗೆ ಗಾಂಧಿಯವರೊಬ್ಬರೇ ಅವರು ಹಿಂದೂಗಳ ವಿಶ್ವಾಸವನ್ನು ಗಳಿಸಿ ಸರ್ವಾಧಿಕಾರಿಗಳಾದರು ನೆಹ್ರೂರವರು ಕಾಂಗ್ರೆಸ್ಸಿನ ಶಾಶ್ವತ ಅಧ್ಯಕ್ಷರಾದರು

೧೯೩೭ರ ಚುನಾವಣೆಗಳಲ್ಲಿ ಕಾಂಗ್ರೆಸ್ಸಿಗೆ ಐದು ಪ್ರಾಂತ್ಯಗಳಲ್ಲಿ ಬಹುಮತ ದೊರಕಿತು ಇದರಿಂದ ಕಾಂಗ್ರೆಸ್ಸಿನ ದರ್ಪ ಪಿತ್ತಕ್ಕೇರಿತು ಕಾಂಗ್ರೆಸ್ಸಿನವರ ವಿರುದ್ಧ ಪಕ್ಷದವರ ಬಲವು ದಿನದಿನಕ್ಕೆ ವೃದ್ಧಿಯಾಗುತ್ತಿದ್ದರೂ ತಾವು ಮಾತ್ರ ಭಾರತ ಎಂಬ ಅಹಂಭಾವದಿಂದ ವರ್ತಿಸತೊಡಗಿದರು

ಬೇಗ ಅಧಿಕಾರ ದೊರೆಯಿತು, ಅಹಿಂಸೆ ಗೆದ್ದಿತು, ಎನ್ನುತ್ತಿದ್ದ ಗಾಂಧಿಯವರಿಗೆ ಯುದ್ಧದಿಂದ ಸಿಡಿಲು ಬಡಿದಂತಾಯಿತು ಈ ಅಪಾಯವನ್ನು ಎದುರಿಸಲು ಮೊದಲು ಶಾಸನ ಸಭೆಗಳನ್ನು ಬಹಿಷ್ಕರಿಸಬೇಕೆಂದು ಕಾಂಗ್ರೆಸ್ ಸದಸ್ಯರಿಗೆ ಆಜ್ಞೆಯಾಯಿತು

ಅನಂತರ ಸ್ವಾರ್ಥಪರ ಕಾಂಗ್ರೆಸ್ಸಿನ ಮನವೊಲಿಸಲು ಬಹು ಪ್ರಯತ್ನಪಟ್ಟರು ಕಾಂಗ್ರೆಸ್ಸಿನ ಮತ್ತು ಇತರ ಪಕ್ಷಗಳ ಸಹಾಯವನ್ನು ಸರ್ಕಾರದ ಯುದ್ಧಪ್ರಯತ್ನಕ್ಕೆ ಪಡೆಯಬೇಕೆಂಬುದು ಅವರ ಉದ್ದೇಶ ಆದರೆ [illegible] ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜೀನಾಮೆ ಕೊಟ್ಟವು ಆಗ ನಾವು ಭಾರತಕ್ಕೆ ಯುದ್ಧಾನಂತರ ಬ್ರಿಟಿಷ್ ರಾಷ್ಟ್ರಗಳ ಕುಟುಂಬದಲ್ಲಿ ಸ್ವತಂತ್ರ ಮತ್ತು ಸಮಾಧಿಕಾರ ರಾಷ್ಟ್ರದ ಸ್ಥಾನ ಕೊಡಲು ಒಪ್ಪಿರುವೆವೆಂದೂ ತನಗೆ ಒಪ್ಪುವ ರಾಜ್ಯ ಪದ್ಧತಿಯನ್ನು ಭಾರತ ರೂಪಿಸಿಕೊಳ್ಳಬಹುದೆಂದೂ ಘೋಷಿಸಿದೆವು

ಆಗಲೂ ಯುದ್ಧಪ್ರಯತ್ನಕ್ಕೆ ಸಹಕಾರನೀಡಲು ನಾನಂತೆ ವೈಸರಾಯರ ಮಂತ್ರಿಮಂಡಲಕ್ಕೆ ಸೇರಿರಿ ಎಂದು ನಾನಾ ಪಕ್ಷಗಳನ್ನು ಕೇಳಿಕೊಳ್ಳಲಾಯಿತು ಆದರೆ ಕಾಂಗ್ರೆಸ್ಸು ಸೇರಲು ಒಪ್ಪಲಿಲ್ಲ ಗಾಂಧಿಯವರು ಭಾರತವು ಯುದ್ಧದಲ್ಲಿ ಭಾಗವಹಿಸಲ್ಲವೆಂದು ಹೇಳುತ್ತ [illegible] ಹೂಡಿದರು

[illegible] ಆಗಿಹೋಯಿತು ಕಳೆದ ವರ್ಷ ಮಾರ್ಚ ತಿಂಗಳಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸರು ಸಂಧಾನಕ್ಕಾಗಿ ಭಾರತಕ್ಕೆ ಬಂದರು ಅವರು [illegible] ಕೂಡಿದ್ದವು ಕಾಂಗ್ರೆಸ್ ಪಕ್ಷದ ಪ್ರತಿನಿಧಿಗಳು ಕೆಲವು [illegible] ಆದರೆ ಕಾಂಗ್ರೆಸ್ಸು ನಿರಾಕರಿಸಿತು [illegible] ಕಾರಣಗಳಿವೆ

೧೯೪೦ರ ಘೋಷಣೆಯನ್ನು ಕಾಂಗ್ರೆಸ್ಸು ಏಕೆ ನಿರಾಕರಿಸಿತೋ ಇದಕ್ಕೆ ಇದೇ ಕಾರಣ ಭಾರತದ ವಿವಿಧ ಜಾತಿಗಳು ಒಮ್ಮತದ ಒಪ್ಪಂದಕ್ಕೆ ಬರಬೇಕೆಂದು ಕೋರಿದುದು ಕಾಂಗ್ರೆಸ್ಸಿಗೆ ರುಚಿಸಲಿಲ್ಲ ಅದಕ್ಕೆ ಎಲ್ಲ ಅಧಿಕಾರವೂ ಬೇಕಿತ್ತು ಹಾಗೆ ಒಪ್ಪಿದ್ದರೆ ಅಲ್ಪಸಂಖ್ಯಾತರ ಹಕ್ಕು ಧ್ವಂಸವಾಗುತ್ತಿತ್ತು

ಕ್ರಿಪ್ಸರವರು ಭಾರತದಲ್ಲಿದ್ದ ಕಾಲ ಪೂರ್ವರಂಗದಲ್ಲಿ ನಮಗೆ ಭೀಕರ ಸೋಲಾಗುತ್ತಿದ್ದ ಕಾಲ, ರಂಗೂನು ಪತನವಾಗಿತ್ತು ಜಪಾನರು ವೇಗವಾಗಿ ನುಗ್ಗುತ್ತಿದ್ದರು. ಸಿಲೋನು ಭಾರತದ ಪೂರ್ವತೀರದ ನಗರಗಳ ಮೇಲೆ ಬಾಂಬಿನ ದಾಳಿಯಾಗುತ್ತಿತ್ತು ಭಾರತಕ್ಕೆ ಇನ್ನೇನು ಕಾಲ ಬಂದೀತೋ ಎಂದು ಶಂಕಿಸುತ್ತಿದ್ದೆವು ಆದರೆ ಕ್ರಿಪ್ಸ್‌ನಿಯೋಗಕ್ಕೂ ಆ ಪರಿಸ್ಥಿತಿಗೂ ಸಂಬಂಧವಿದೆಯೆಂದು ನಾವು ಭಾವಿಸಿರಲಿಲ್ಲ

ಗಾಂಧಿಯವರಿಗೆ ಮಾತ್ರ ಸಂಬಂಧ ಸ್ಪಷ್ಟವಾಗಿ ಕಾಣುತ್ತಿತ್ತು ಭಾರತದ ಗತಿಯೇನಾದರೂ ಆಗಲಿ ಬ್ರಿಟಿಷರು ಭಾರತ ಬಿಟ್ಟು ಹೊರಡಬೇಕೆಂಬುದು ಅವರ ಅಭಿಪ್ರಾಯ ಅವರು ಬರೆದ ನಿರ್ಣಯದಲ್ಲಿ ಬ್ರಿಟನ್ನು ಭಾರತವನ್ನು ರಕ್ಷಿಸಲಾರದಾದ್ದರಿಂದ, ಜಪಾನಿನೊಂದಿಗೆ ಸಂಧಾನ ನಡೆಸುವುದು ಸ್ವತಂತ್ರಭಾರತದ ಮೊದಲನೆಯ ಕೆಲಸ ಎಂದು ಬರೆದಿದೆ

ಅಲ್ಲದೆ ಗಾಂಧಿಯವರು ಭಾರತದ ಬಿಟ್ಟು ಹೋಗಿರಿ, ಇಲ್ಲದಿದ್ದರೆ ದಂಗೆ ಏಳುತ್ತೇನೆ" ಎಂದು ಹೆದರಿಸಿದರು ಆದರೆ ಅವರ ಬುದ್ಧಿಗೇಡಿತನಕ್ಕೆ ವೈಸರಾಯರ ಮಂತ್ರಿ ಮಂಡಲದವರು, ತಕ್ಕ ಪ್ರಾಯಶ್ಚಿತ್ತ ಮಾಡಿದರು. ಆದರೆ ಮುಂಚೆಯೇ ಏರ್ಪಾಡು ಮಾಡಿಟ್ಟುಕೊಂಡಿದ್ದರಿಂದ ಹಾನಿ ವಿಶೇಷವಾಯಿತು ಅದನ್ನೆಲ್ಲ ಶ್ವೇತಪತ್ರದಲ್ಲಿ ತೋರಿಸಿದೆ ಗಾಂಧಿಯವರ ಕೈವಾಡ ಎಲ್ಲಿದೆ ಎಂಬುದನ್ನು ಸ್ಪಷ್ಟಪಡಿಸಿದೆ ಕೆಲವರು ಶ್ವೇತಪತ್ರವು ಪ್ರಾಸಿಕ್ಯೂಷನ್ ಕಥೆ ಎಂದು ಟೀಕಿಸಿದ್ದಾರೆ ಅದು ಸತ್ಯಸಂಗತಿಗಳ ಸಂಗ್ರಹವಾಗಿದೆ ನಾವೀಗ ಕಾಂಗ್ರೆಸ್ ನಾಯಕರನ್ನೂ ಗಾಂಧಿಯವರನ್ನೂ ನ್ಯಾಯವಿಚಾರಣೆಗೆ ಒಪ್ಪಿಸುವುದಿಲ್ಲ ಅವರು ಮಾಡಿರುವುದೇನೋ ಮಹಾಪರಾಧ ಎಂತಹ ವಿಷಮಸನ್ನಿವೇಶದಲ್ಲಿ ಅವರು ಸರ್ಕಾರ ಯಂತ್ರವನ್ನು ಪುಡಿಮಾಡಬೇಕೆಂದರು. ಇನ್ನೂ ಈಗಲೂ ಅಲ್ಲಲ್ಲಿ ಅತ್ಯಾಚಾರಗಳಾಗುತ್ತಲೇ ಇವೆ ಈ ಕೋಟಲೆಗಾರರನ್ನು ಕೇವಲ ಬಂಧಿಸಿಟ್ಟಿದ್ದೇವೆ

ಮಿತ್ರಪಕ್ಷದವರ ಧ್ಯೇಯ ಸಾಧನೆಯಲ್ಲಿ ನೆರವಾಗಬೇಕೆಂಬ ಅಭಿಲಾಷೆ ಗಾಂಧಿಯವರಿಗೆ ಮೊಳೆಯುವ ಕುರುಹುಗಳೇನೂ ಇಲ್ಲದಿರುವುದರಿಂದ ಗಾಂಧಿಯವರಿಗೆ ರಿಯಾಯಿತಿ ತೋರಿಸುವುದು ಅಸಾಧ್ಯ ಮತ್ತು ಅಪಾಯಕರ

ಬರಿ ಸಹಾನುಭೂತಿಯಿಂದ ಬಿಕ್ಕಟ್ಟು ಬಿಡಿಸಲು ಸಾಧ್ಯವಿಲ್ಲ ಜಿನ್ನಾರವರದು ಉತ್ತರ ಮುಖವಾದರೆ ಹಿಂದೂ ಮಹಾಸಭೆಯ ನಾಯಕರುಗಳದು ದಕ್ಷಿಣ ಮುಖ ಹಿಂದುಗಳಿಗೆ ಸಂಯುಕ್ತ ಭಾರತ ಬೇಕು, ಮುಸ್ಲಿಮರಿಗೆ ಪಾಕಿಸ್ಥಾನ ಬೇಕು ಆದರೆ ಇವರಲ್ಲಿ ರಾಜಿ ಸಾಧ್ಯವಿಲ್ಲವೇ? ಎಂದರೆ ಸಾಧ್ಯವಿದೆ ಬ್ರಿಟನ್ನಿನಲ್ಲಿ ಬೆಳೆದಿರುವಂತಹ ಪ್ರಜಾಪ್ರಭುತ್ವದ ಪದ್ಧತಿಯೇ ನಮಗೂ ಬೇಕೆಂದು ಬಯಸುವುದು ತಪ್ಪು ಪ್ರಜಾಪ್ರಭುತ್ವದಲ್ಲೂ ಬೇರೆ ಬೇರೆ ಮಾದರಿಗಳಿವೆ ದೇಶಕ್ಕೆ ಹೊಂದುವಂತಹವನ್ನು ಅನ್ವಯಿಸಿಕೊಳ್ಳಬಹುದು

ಭಾರತವು ನಾನಾ ಜಾತಿ ಮತ ಕುಲಗಳ ದೇಶವಾಗಿದೆ ಭಾರತವನ್ನು ಸ್ವಾತಂತ್ರ್ಯದೆಡೆ ಕರೆದೊಯ್ಯಬೇಕೆಂಬ ಕಂಕಣ ತೊಟ್ಟಿದೆ ಈ ಸಭೆ ಆದರೆ ಮಾರ್ಗಾನುಸಂಧಾನವಾಗಬೇಕಾಗಿದ ಅದನ್ನು ಭಾರತೀಯರೇ ಹುಡುಕಿಕೊಳ್ಳಬೇಕು

ಈ ಹಿಂದೆ ಭಾರತದಲ್ಲಿ ನಾವು ಮಾಡಿದ ಕಾರ್ಯಗಳಲ್ಲಿ ನಾಚಿಕೆಗೇಡಿನದೇನೂ ಇಲ್ಲ ಭಾರತೀಯರ ಕಷ್ಟ ಕಡಿಮೆಮಾಡಿ ಸೌಕರ್ಯಗಳನ್ನು ಹೆಚ್ಚಿಸಿ ಎಷ್ಟು ಸಾಧ್ಯವೋ ಅಷ್ಟೆಲ್ಲ ಉಪಕಾರ ಮಾಡಿದ್ದೇವೆ. ಹಿಂದೆ ಪ್ರಜೆಗಳ ಪಿತೃವಾಗಿ ಪಾಲನೆ ಮಾಡುವ ಸಾಮ್ರಾಜ್ಯ ಮನೋಭಾವ ಇದ್ದರೆ ಈಗ ರಾಷ್ಟ್ರಗಳೆಲ್ಲ ಬಾಂಧವ್ಯದಿಂದ ಒಟ್ಟು ಕೂಡಿ ಒಂದು ಕುಟುಂಬವಾಗಬೇಕೆಂಬ ಅಭಿಪ್ರಾಯ ರೂಪುಗೊಳ್ಳುತ್ತಿದೆ ಸ್ವತಂತ್ರರಾಷ್ಟ್ರಗಳ ಕುಟುಂಬ ರೂಪುಗೊಳಿಸಬೇಕೆಂಬ ನಮ್ಮ ಆಲೋಚನೆಯ ಸಾಧುತ್ವ ಕುರಿತು ಹೆಚ್ಚು ಹೇಳಬೇಕಾಗಿಲ್ಲ ಇದರ ವಿಷಯದಲ್ಲಿ ಭಾರತಕ್ಕೆ ಅಪನಂಬಿಕೆಯಿದ್ದರೆ, ಅದಕ್ಕೆ ಕಾರಣವಿದೆ. ಇದುವರೆಗೆ ನಾವು ಆಳುವವರಾಗಿದ್ದುದರಿಂದ ನಾವೆಲ್ಲ ಅಂತಹ ಕುಟುಂಬವನ್ನು ಒಳಗಣ್ಣಿನಿಂದ ಸ್ಪಷ್ಟವಾಗಿ ಕಾಣುವೆವಾದರೆ ಅವರು ಕಾಣುವರು.

ಭಾರತದ ಕಷ್ಟ ಸಮಸ್ಯೆ, ವಿಶ್ವದ ಭವಿಷ್ಯ, ಜಗತ್ತಿನ ಶಾಂತಿ ಇವುಗಳಿಗಾಗಿ ನಾವೀಗ ನಮ್ಮ ಜವಾಬ್ದಾರಿಯನ್ನು ಏಷ್ಯನ್ನರ ತಲೆಯ ಮೇಲೆ ಹಾಕಲೆಳೆಸಬಾರದು ಬಿಕ್ಕಟ್ಟಿನ ಪರಿಹಾರಕ್ಕೂ ನಮ್ಮೆಲ್ಲರ ಭವಿಷ್ಯಕ್ಕೂ ದುಡಿಯಬೇಕು

ಆಧುನಿಕ ಯುದ್ಧದಲ್ಲಿ ಉಪಯೋಗಿಸುವ ಶಸ್ತ್ರಾಸ್ತ್ರಗಳು

ನೌಕಾದಳ

ನೌಕಾದಳಕ್ಕೆ ಸೇರಿದ ಹಡಗುಗಳು ತಮ್ಮ ಶತ್ರುಗಳನ್ನು ನಿಗ್ರಹಿಸಲು ಮೂರು ಬಗೆಯ ಆಯುಧಗಳನ್ನು ಉಪಯೋಗಿಸುತ್ತವೆ ಅವು ಯಾವುವೆಂದರೆ, ಕ್ಯಾನನ್, ಟಾರ್ಪೆಡೊ ಮತ್ತು ಮೈನ್. ಕ್ಯಾನನ್ನು ಎಂಬುದು ದೊಡ್ಡ ಬಂದೂಕ ಆದರೆ ಈ ಫಿರಂಗಿಯ ಗುಂಡುಗಳು 40 ರಿಂದ 3 ಸಾವಿರ ಪೌಂಡುಗಳವರೆಗೂ ಭಾರವುಳ್ಳವಾಗಿರುತ್ತವೆ. ಈ ಗುಂಡುಗಳನ್ನು ಉಕ್ಕಿನಲ್ಲಿ ತಯಾರಿಸಿರುತ್ತದೆ. ಒಳಗೆ ಪ್ರಬಲವಾದ ಸ್ಫೋಟಕ ವಸ್ತುಗಳಿರುತ್ತವೆ. ಯಾವುದಾದರೂ ವಸ್ತುವಿಗೆ ತಗುಲಿದರೆ ಒಳಗಿನ ವಸ್ತುಗಳು ಸಿಡಿಯುತ್ತವೆ ಟಾರ್ಪೆಡೋ ಸಹ ಶೆಲ್ಲಿನಂತೆಯೇ ಇರುತ್ತದೆ. ಮದ್ದಿನಿಂದ ತುಂಬಿದ ಉಕ್ಕಿನ ಚೀಲವಾಗಿರುತ್ತದೆ ಇದನ್ನು ಫಿರಂಗಿಯ ಮೂಲಕ ಹಾರಿಸುವುದಿಲ್ಲ ಇದರ ತುದಿಯಲ್ಲಿರುವ ಯಂತ್ರದ ಸಹಾಯದಿಂದ ನೀರಿನಲ್ಲಿ ನೇರವಾಗಿ ಹೋಗಿ ಶತ್ರು ನೌಕೆಯ ತಳಕ್ಕೆ ತಗುಲಿ ಅಲ್ಲಿ ಸಿಡಿಯುತ್ತದೆ ಹಾಗೆ ಸಿಡಿಯುವುದರಿಂದ ಹಡಗಿನ ತಳದಲ್ಲಿ ದೊಡ್ಡ ರಂಧ್ರವುಂಟಾಗಿ ನೀರು ನುಗ್ಗಿ ಹಡಗು ಮುಳುಗುತ್ತದೆ. ಮೈನ್ ಎಂದರೆ ಮದ್ದಿನಿಂದ ತುಂಬಿದ ದುಂಡಗಿರುವ ಉಕ್ಕಿನ ಚೀಲ ಇವು ಚಲಿಸುವುದಿಲ್ಲ ಇವು ಸಮುದ್ರ ಅಥವಾ ನದಿಯ ನೀರಿನಲ್ಲಿ ಒಂದೆಡೆ ಮುಳುಗಿರುತ್ತವೆ ಹುಲ್ಲಿನ ಮರೆಯಲ್ಲಿರುವ ಹಾವುಗಳಂತೆ ಇವುಗಳು ಹಡಗಿಗೆ ತಗುಲಿದಾಗಲೇ ಇವುಗಳಿವೆಯೆಂದು ಗೊತ್ತಾಗುವುದು ಇಲ್ಲದಿದ್ದರೆ ಇವುಗಳ ಸುಳಿವೇ ಗೊತ್ತಾಗುವುದಿಲ್ಲ ಮೈಮೇಲೆ ಕಾಲಿಟ್ಟಾಗ ಮೇಲೆದ್ದು ಕಚ್ಚುವ ಹಾವಿನಂತೆ ಈ ಮೈನು ಹಡಗು ಒಂದು ತಗುಲಿದೊಡನೆಯೇ ಸಿಡಿದು ಹಡಗಿನಲ್ಲಿ ರಂಧ್ರವನ್ನು ಮಾಡಿಬಿಡುತ್ತದೆ.

ಯುದ್ಧ ನೌಕೆಗಳು ಬಹಳ ದೊಡ್ಡವು 2,000 ಮಂದಿಗಿಂತಲೂ ಹೆಚ್ಚು ಜನರನ್ನು ಹೊತ್ತುಕೊಂಡು ಹೋಗುತ್ತವೆ ಹಡಗಿನಲ್ಲಿ ಬ್ರೆಡ್ ಅಂಗಡಿಗಳೂ ಅಗಸರ ಅಂಗಡಿಗಳೂ ಇವೆ ಸಣ್ಣ ಸಣ್ಣ ವರ್ಕ್‌ಶಾಪುಗಳನ್ನು ಒಳಗೊಂಡ ಒಂದು ಪುಟ್ಟ ಊರಿನಂತೆಯೇ ಇರುತ್ತದೆ. ಡಿಸ್ಟ್ರಾಯರುಗಳೇ ಮೊದಲಾದ ಸಣ್ಣ ಹಡಗುಗಳಲ್ಲಿ ಸಾಮಾನ್ಯವಾಗಿ 150 ಮಂದಿಗಿಂತಲೂ ಹೆಚ್ಚು ಜನರಿರುವುದಿಲ್ಲ ಒಂದು ಬಲವಾದ ನೌಕಾದಳವು 1 ಲಕ್ಷ ಮಂದಿಯನ್ನು ಸಮುದ್ರದ ಮೇಲೆ ಸಾಗಿಸಬಲ್ಲುದು.

ಯುದ್ಧನೌಕೆ

ಅರಣ್ಯದಲ್ಲಿರುವ ಪ್ರಾಣಿಗಳಲ್ಲಿ ಗಜರಾಜನು ಹೇಗೆ ದೊಡ್ಡವನೋ ನೌಕೆಗಳಲ್ಲಿ ಯುದ್ಧನೌಕೆಯು ಬಹು ಮುಖ್ಯವಾದುದು ಇದನ್ನು ಒಂದು ಅಡಿಗಿಂತಲೂ ದಪ್ಪವಾದ ಉಕ್ಕಿನ ತಗಡಿನಲ್ಲಿ ಕಟ್ಟಿರುತ್ತದೆ. 3,50,00 ಟನ್‌ಗಿಂತಲೂ ಎಂದರೆ 8 ಕೋಟಿ ಪೌಂಡಿಗಿಂತಲೂ ಹೆಚ್ಚು ತೂಕವುಳ್ಳದಾಗಿರುತ್ತದೆ. ಈ ನೌಕೆಯಲ್ಲಿಡಲಾಗಿರುವ ಫಿರಂಗಿಗಳು ಎರಡರಿಂದ ಮೂರುಸಾವಿರ ಪೌಂಡು ತೂಕವುಳ್ಳ ಸಿಡಿಗುಂಡುಗಳನ್ನು ಹಾರಿಸಬಲ್ಲವು. ಈ ಹಡಗುಗಳ ಇಂಜಿನುಗಳು ಮಹಾಶಕ್ತಿಯುತವಾದುವುಗಳು. ಇವುಗಳನ್ನು ನಡೆಯಿಸಲು ವಿಪರೀತ ಎಣ್ಣೆಯು ಬೇಕು. ಒಂದು ಯುದ್ಧನೌಕೆಯನ್ನು ನಡೆಯಿಸಲು ಸುಮಾರು ಎರಡುಸಾವಿರ ಮಂದಿ ಕೆಲಸಗಾರರು ಬೇಕಾಗುವುದು. ಇವರು ಈ ಹಡಗುಗಳಲ್ಲಿ ಸುಖವಾಗಿ ಜೀವಿಸಲು ಇವರಿಗೆ ತಕ್ಕ ಸೌಕರ್ಯಗಳನ್ನೇರ್ಪಡಿಸಿರುತ್ತದೆ. ಒಂದು ಯುದ್ಧನೌಕೆಯನ್ನು ನಿರ್ಮಿಸಲು 20 ರಿಂದ 30 ಕೋಟಿ ರೂಪಾಯಿಗಳು ಬೇಕು ಮತ್ತು ಕಟ್ಟಲು ಸುಮಾರು ನಾಲ್ಕು ವರ್ಷಗಳ ಅವಧಿಯು ಬೇಕಾಗಬಹುದು. ಈ ನೌಕೆಗಳ ಮೇಲೆ ವಿಮಾನಧಾಳಿಯನ್ನು ಮಾಡುವುದು ಸುಲಭ ಸಾಮಾನ್ಯವಾಗಿ ವಿಮಾನಗಳ ಸಹಾಯವಿಲ್ಲದೆ ಈ ಹಡಗುಗಳು ಯುದ್ಧಕ್ಕೆ ಹೋಗುವುದಿಲ್ಲ ಅಲ್ಲದೆ, ಇದ್ದಕ್ಕಿದ್ದ ಹಾಗೆಯೇ ಶತ್ರುಗಳು ಬಿಡುವ ಟಾರ್ಪೆಡೋಗಳಿಂದ ರಕ್ಷಿಸಲೂ, ಮತ್ತು ಮುಂದಿರಬಹುದಾದ ಶತ್ರುನೌಕೆಯನ್ನು ಕಂಡುಹಿಡಿದು ಆ ವಾರ್ತೆಯನ್ನು ತಿಳಿಸಲೂ, ಕ್ರೂಯಿಜರು ಮತ್ತು ಡಿಸ್ಟ್ರಾಯರುಗಳೂ ಬೇಕು. ಸದ್ಯದಲ್ಲಿ ಬ್ರಿಟನ್ನು ಮತ್ತು ಅಮೆರಿಕಾ ದೇಶದವರಲ್ಲಿ ಜರ್ಮನಿ ಜಪಾನ್ ಮತ್ತು ಇಟಲಿ ದೇಶಗಳಲ್ಲಿರುವ ನೌಕೆಗಳ ಎರಡರಷ್ಟು ಯುದ್ಧನೌಕೆಗಳಿವೆ. ಅಲ್ಲಿ ಇನ್ನು ಮುಂದೆ ಶತ್ರು ರಾಜ್ಯಗಳವರು ಒಂದು ಹಡಗು ನಿರ್ಮಿಸಿದರೆ ಅದೇ ಅವಧಿಯಲ್ಲಿ ಮಿತ್ರರಾಜ್ಯಗಳವರು ನಾಲ್ಕು ಹಡಗುಗಳನ್ನು ನಿರ್ಮಿಸಬಲ್ಲರು.

(೧ ನೇಯ ಪುಟದಿಂದ ಮುಂದುವರಿದುದು)

(೫) ಈ ವಿದ್ಯಾಪೀಠದ ಆಡಳಿತಗಳನ್ನು ಸುವ್ಯವಸ್ಥಿತವಾಗಿ ನಡಿಸಿಕೊಂಡು ಹೋಗುವುದಕ್ಕೆ ಧೀಮಂತರಾದ ಶಾಂತೇಶ ಪಾಟೀಲ ಇವರನ್ನು ಜಾಯಿಂಟ್ ಸೆಕ್ರೆಟರಿಯನ್ನಾಗಿ ನಿಯಮಿಸಲಾಗಿದೆ.

(೬) ಪ್ರಾಂತಿಕ ಸ್ಥಳೀಕರನ್ನಾಗುವವರಿಗೂ ಧಂಡಿನ ಯೋಗ್ಯ ನಿಸಿಯೋಗ ಮಾಡುವ ಅಧಿಕಾರವು ಕಮಿಟಿಗಿರುವುದು

(೭) ಸದರಿ ವಿದ್ಯಾಪೀಠದ ನಿಧಿ ಸಂಗ್ರಹಕ್ಕಾಗಿ ಅಲ್ಲಲ್ಲಿ ಸಂಚಾರ ಮಾಡಿ ಧನಸಂಗ್ರಹಿಸುವುದಕ್ಕಾಗಿ ಶ್ರೀ ಪಂಡಿತ ಅಮರೇಶ್ವರಾಚಾರ್ಯರು ಶ್ರೀ ವಿಶ್ವನಾಥಪ್ಪ ಹತ್ತಿ ಶ್ರೀ ಶರಣಪ್ಪ ಫತ್ತೆಪುರ ಶ್ರೀ ಮಲ್ಲಿಕಾರ್ಜುನಪ್ಪ ಹೋಳಕರ ಪಾಟೀಲ ಶ್ರೀ ಚನ್ನಬಸಪ್ಪ ಪಾಟೀಲ ಶ್ರೀ ಕಲಶೆಟ್ಟೆಪ್ಪ ಪಾಟೀಲ ಇವರನ್ನು ನಿಶ್ಚಯ ಮಾಡಲಾಯಿತು.

(೮) ನಿಜಾಮು ಸರಕಾರದ ಅಪ್ಪಣೆಯನ್ನು ಪಡೆದು ಪಾಠಶಾಲೆಯು [illegible] ಮಾಡಲ್ಪಟ್ಟಿತು.

ಅಂತರಂಗ ಕಮಿಟಿಯಲ್ಲಿ ಪಾಸಾದ ಠರಾವುಗಳು ಪುನಃ ಶ್ರೀ ಅಮರೇಶ್ವರಾಚಾರ್ಯರ ಅಧ್ಯಕ್ಷತೆಯಲ್ಲಿ ತಾ।। ೧೯-೩-೪೩ ಶುಕ್ರವಾರ ದಿವಸ ಜನರಲ್ ಬಾಡಿ ಸಭೆಯಲ್ಲಿ ಬಹುಮತದಿಂದ ಪಾಸು ಮಾಡಲ್ಪಟ್ಟವು

ಅನಂತರ ವಿಶ್ವನಾಥಪ್ಪ ಹತ್ತಿಯವರು ಸದರಿ ವಿದ್ಯಾಪೀಠಕ್ಕಾಗಿ ದಾನ ಮಾಡಿದ ೩೦೦೦ ರೂಪಾಯಿಗಳನ್ನು ಸಭೆಯಲ್ಲಿ ಒಪ್ಪಿಸಿದರು. ಇದೇ ರೀತಿ ಅವರ ಪುತ್ರಿಯವರಾದ ಶ್ರೀ ಲಕ್ಷ್ಮೀಬಾಯಿಯವರು ನೀಲಂಗಾ ಇವರು ೧೦೧ ರೂಪಾಯಿಗಳನ್ನೂ ಸಿದ್ದರಾಮಪ್ಪ ಸೊರಡೆ ಪಾಟೀಲ ೫೧ ರೂಪಾಯಿಗಳನ್ನೂ ಶಿವಪ್ಪ ಕೆಂಗಾರ ಇವರು ೧೧ ರೂಪಾಯಿಗಳನ್ನೂ ಶ್ರೀ ಶಂಕರಪ್ಪ ಪಾಟೀಲ ಉಸ್ತರಗಿ ಇವರು ೫೧ ರೂಪಾಯಿಗಳನ್ನೂ ಕೊಟ್ಟರು.

ಈ ಕಾರ್ಯದಲ್ಲಿ ವಿಶೇಷ ಶ್ರಮವಹಿಸಿದ ಶ್ರೀಮಂತ ವಿಶ್ವನಾಥಪ್ಪ ಹತ್ತಿ ಇವರಿಗೆ ದಯಾಘನನಾದ ಪರಮಾತ್ಮನು ಸಕಲ ಸಂಪತ್ತುಗಳನ್ನು ಅನುಗ್ರಹಿಸಲೆಂದು ಪ್ರಾರ್ಥಿಸುವ,

ಭೀಮರಾವಜಿ ಪಾಟೀಲ ಮಂತ್ರೀ
ಸಹ ಮುಖ್ಯ ಮಂತ್ರೀ
ಸಿದ್ದರಾಮಪ್ಪ ಪಾಟೀಲ ನೀಲಂಗಾ
ವಿ ಪೀ ಠ

ಮುಂಬಯಿ ವೀರಶೈವ ಮಹಿಳಾವರ್ಗದಲ್ಲಿ ಧರ್ಮಜಾಗೃತಿ

ಮುಂಬಯಿ ನಗರದಲ್ಲಿರುವ ವೀರಶೈವ ಸ್ತ್ರೀ ಪುರುಷರು ಸಮಾಜ ಸೇವೆಗಾಗಿ ಬದ್ಧಕಂಕಣರಾಗಿರುವ ಸೌ।। ಭಾಗೀರಥೀಬಾಯಿಯವರಿಂದ "ವೀರಶೈವ ಮಹಿಳಾ ಸಂಘ" ವನ್ನು ಸ್ಥಾಪಿಸಬೇಕೆಂದು ನಿಶ್ಚಯಿಸಿ ಸದರಿಯವರನ್ನು ತಾ।। ೧೯-೩-೪೩ ನೆಯ ಶುಕ್ರವಾರ ಮುಂಬಯಿ ಪಟ್ಟಣಕ್ಕೆ ಬರಮಾಡಿಕೊಂಡರು ತಾ। ೨೦ ನೆಯ ದಿವಸ ಮಹಾರಾಷ್ಟ್ರ ಲಿಂಗಾಯತ ಎಜ್ಯುಕೇಷನ್ ಸೊಸೈಟಿಯಲ್ಲಿ ಸೌ।। ಕಟಾಪಬಾಯಿಯವರು ವೀರಶೈವ ಧರ್ಮ, ಮಹಾಚಾರ್ಯರ ಸಂಚಾರ ಈ ವಿಷಯದಲ್ಲಿ, ಮರಾಠಿ ಭಾಷೆಯಿಂದ ಎಲ್ಲರಿಗೂ ತಿಳಿಯುವಂತೆ ಭಾಷಣ ಮಾಡಿದರು ಮಧ್ಯಾಹ್ನ ನಾಲ್ಕು ಘಂಟೆಗೆ ಮುಂಬಯಿ ನಳಬಾಜಾರದ ಹತ್ತರ ಗೋಲದೇವಸ್ಥಾನದ ವಾಡೆಯಲ್ಲಿ ಪ್ರಚಂಡ ಮಹಿಳಾ ಸಭೆಯು ಸೇರಿತು ಸೌ।। ಅನಸೂಯಾದೇವಿ ವಾಣಿ ಇವರು ಸೌ।। ಭಾಗೀರಥೀಬಾಯಿಯವರನ್ನು ಅಧ್ಯಕ್ಷಸ್ಥಾನ ಸ್ವೀಕರಿಸಬೇಕೆಂದು ಮುಂಬಯಿ ಸ್ತ್ರೀ ಸಮಾಜದ ಪಕ್ಷದಿಂದ ವಿನಂತಿ ಮಾಡಲು ಸೌ।। ಗೋದಾವರೀಬಾಯಿ ಉಮದಿ ಇವರು ಅನುಮೋದವಿತ್ತರು. ಆ ಮೇಲೆ ಸೌ।। ಕಟಾಪಬಾಯಿಯವರು ಅಧ್ಯಕ್ಷಸ್ಥಾನಾಪನ್ನರಾಗುವುದಕ್ಕೆ ಮೊದಲು ಮುಂಬಯಿಯಂಥ ದೊಡ್ಡ ಪಟ್ಟಣದಲ್ಲಿ ಅನಂತ ಬಿ ಎ ಗ್ರ್ಯಾಜುಯೆಟ್ ಆದ ಮಹಿಳೆಯರು ಇದ್ದರೂ ನನ್ನಂಥ ಪರಸ್ಥಳದ ಅಲ್ಪಜ್ಞಳನ್ನು ಕರೆಯಿಸಿ ಈ ಸಂಸ್ಥೆಯನ್ನು ಸ್ಥಾಪಿಸಲು ಅಧ್ಯಕ್ಷಳನ್ನು ಮಾಡಿ ಪ್ರೇಮಭಾವವನ್ನು ತೋರಿಸಿದುದು ಕೇವಲ ಜಗದಾಚಾರ್ಯರ ಕೃಪೆಯಿಂದು ಹೇಳಿ ಅಧ್ಯಕ್ಷಸ್ಥಾನಾಪನ್ನರಾದರು ಪ್ರಥಮದಲ್ಲಿ ಸೌ।। ಅನಸೂಯಾದೇವಿ ಕಟಾಪ, ಕು।। ಗೌರೀದೇವಿ ಕಟಾಪ, ಇವರು ಜಗದಾಚಾರ್ಯರ ಸ್ತೋತ್ರಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ ಸೌ। ಅನಸೂಯಾದೇವಿ, ಕು।। ಗೌರೀದೇವಿ ಇವರು ಪಾತಿವ್ರತ್ಯದ ಬಗ್ಗೆ ಸಂವಾದ ಮಾಡಿದ್ದಲ್ಲದೆ ಭಸ್ಮದ ಬಗ್ಗೆ ಭಾಷಣ ಮಾಡಿದರು ಆ ಮೇಲೆ ಸರ್ವಾನುಮತಿಯಿಂದ ಜಗದಾಚಾರ್ಯರ ಜಯಘೋಷದೊಂದಿಗೆ "ಶ್ರೀ ವೀರಶೈವ ಭಗಿನೀ ಸಮಾಜ" ವೆಂಬ ನಾಮವು ಇಡಲ್ಪಟ್ಟಿತು. ಅನಂತರ ಸಂಸ್ಥೆಯ ಅಭಿವೃದ್ಧಿ, ಉದ್ದೇಶ, ಈ ವಿಷಯವಾಗಿ ಸೌ।। ತುಂಗಭದ್ರಾಬಾಯಿ ಹತ್ತಿ ಇಚಲಕರಂಜಿ ಸೌ।। ಚಂಪಾವತಿ ಸುಲ್ತಾನಪುರ, ಶ್ರೀ।। ಗುರುಬಾಯಿ ಮಠಮತ್ತಿ, ಸೌ।। ಗೋದಾವರೀಬಾಯಿ ಉಮದಿ ಇವರ ಭಾಷಣಗಳಾದವು ಬಳಿಕ ಶ್ರೀ ಷ।। ಬ್ರ।। ಪರಾಂಡೆಕರ ಶ್ರೀಗಳು ಸ್ತ್ರೀ ಸಮಾಜದ ಧರ್ಮ ಜಾಗೃತಿ, ಅಷ್ಟಾವರಣ ಈ ವಿಷಯವಾಗಿ ಉಪದೇಶ ಮಾಡಿದನಂತರ ಸೌ।। ಭಾಗೀರಥೀ ಬಾಯಿಯವರು ಸಂಸ್ಥೆಯ ಊರ್ಜಿತಾವಸ್ಥೆ ಬಗ್ಗೆ ವಿಷಯದಲ್ಲಿ ಒಳ್ಳೆ ಕಳಕಳಿಯಿಂದ ಭಾಷಣ ಮಾಡಿದರು ಬಳಿಕ ಸೌ।। ಅನಸೂಯಾದೇವಿ ವಾಣಿ ಇವರನ್ನು ಅಧ್ಯಕ್ಷರನ್ನಾಗಿಯೂ, ಸೌ।। ಸುಶೀಲಾಬಾಯಿ ಪಾಲಖಂಡವಾರ ಇವರನ್ನು ಉಪಾಧ್ಯಕ್ಷರನ್ನಾಗಿಯೂ ಸೌ।। ಗಂಗಾಬಾಯಿ ಹತ್ತರಕಿ ಇವರನ್ನು ಸೆಕ್ರೆಟರಿಯನ್ನಾಗಿಯೂ ಸೌ। ಗೋದಾವರಿಬಾಯಿ ಉಮದಿ ಸೌ।। ಡಾಂಗೆ, ಸೌ।। ಕೊರಡೆ, ಸೌ। ಕಲಾವತಿ ಮೊದಲಾದವರನ್ನು ಸಭಾಸದಸ್ಯರನ್ನಾಗಿ ನೇಮಿಸಲಾಯಿತು ಆ ಮೇಲೆ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು ಈ ಸಮಯದಲ್ಲಿ ಸೆಕ್ರೆಟರಿಗಳು ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಒಂದು ರೂಪಾಯಿಯನ್ನು ಸಮರ್ಪಿಸಿದರು

ಸೌ।। ಅನಸೂಯಾದೇವಿ ವಾಣಿ
ಅಧ್ಯಕ್ಷೆ
ಶ್ರೀ ವೀರಶೈವ ಭಗಿನೀ ಸಮಾಜ ಮುಂಬಯಿ

ಸೌ।। ಭಾಗೀರಥೀಬಾಯಿಯವರ ಭಾಷಣ, ಮುಂಬಯಿ.

ತಾ।21, 22-3-43 ಈ ೨ ದಿವಸಗಳಲ್ಲಿ ಬೊಂಬಾಯಿಯಲ್ಲಿರುವ ಶ್ರೀ ಮಹಾದೇಶ್ವರ ಮಂಡಳಿಯವರ ಆಮಂತ್ರಣದ ಮೇರೆಗೆ ಸೌ। ಭಾಗೀರಥೀಬಾಯಿಯವರ ಭಾಷಣವು ನೆರವೇರಿತು ಸೌ। ಭಾಗೀರಥೀಬಾಯಿಯವರು ವೀರಶೈವಮತದ ಪ್ರಾಚೀನತ್ವ ಜಗದಾಚಾರ್ಯರ ಅವತಾರ ಮೊದಲಾದ ವಿಷಯಗಳನ್ನು ಹೇಳುತ್ತಿರುವಾಗ್ಗೆ ಶ್ರೋತೃಗಳು ಮೇಲಿಂದ ಮೇಲೆ ಕರತಾಡನ ಮೂಲಕ ತಮ್ಮ ಆನಂದವನ್ನು ವ್ಯಕ್ತಪಡಿಸುತ್ತಿದ್ದರು 22 ನೆಯ ತಾ। ದಿವಸ ೬ ಮಂಡಳಿಯ ಪಕ್ಷದಿಂದ 'ಅಪ್ಪಾಸಾಹೇಬ ನಾರದ ವಾಚನಾಲಯ" ಎಂಬ ಲೈಬ್ರರಿಯನ್ನು ಶ್ರೀಮಂತ ಮುತ್ತಪ್ಪ ಮೆಂಗಾಣೆ ಇವರ ಅಧ್ಯಕ್ಷತೆಯಲ್ಲಿ ಸ್ಥಾಪಿಸಿದರು ಶ್ರೀ।। ಷ। ಬ್ರ।। ಪರಾಂಡೆಕರ ಶ್ರೀಗಳೇ ಮೊದಲಾದವರ ಭಾಷಣಗಳಾದವು ನಾವು ವೀರಶೈವರೇ ? ಅಥವಾ ಲಿಂಗಾಯತರೇ ? ಎಂದು ಒಬ್ಬರು ಸಂಶಯಪಟ್ಟದ್ದಕ್ಕೆ ಸೌ। ಕಟಾಪ ಬಾಯಿಯವರು 'ಯಾರ ಹೆಸರಿನಿಂದ ಈ ಲೈಬ್ರರಿಯನ್ನು ಸ್ಥಾಪಿಸಿರುವರೋ ಅವರು ಮುದ್ರಿಸಿರುವ ಗ್ರಂಥಗಳ ಮೇಲ್ಭಾಗದಲ್ಲಿಯೇ ವೀರಶೈವ ಲಿಂಗಿ ಬ್ರಾಹ್ಮಣ" ಎಂದು ಬರೆದಿದೆ ನೋಡಿಕೊಳ್ಳಬೇಕೆಂದು ಹೇಳಲು ಎಲ್ಲರೂ ತಲೆದೂಗಿ ಕರತಾಡನೆಯನ್ನಿತ್ತರು ಆ ವಾಚನಾಲಯಕ್ಕೆ ಪರಾಂಡಕರ ಶ್ರೀಗಳೂ, ಸೌ।। ಕಟಾಪಬಾಯಿಯವರೂ ವೀರಶೈವರತ್ನವೆಂಬ ಮರಾಠಿ ಗ್ರಂಥಗಳನ್ನೂ ವೇ।। ಪಂ। ಶ್ರೀ ಕಾಶೀನಾಥಶಾಸ್ತ್ರಿಗಳವರ ಇಂಗ್ಲೀಷ ಭಾಷಣದ ಪುಸ್ತಕಗಳನ್ನೂ ಕೊಟ್ಟರು ಅಧ್ಯಕ್ಷರಾದ ಮುತ್ತಪ್ಪನವರು ೧೦೧ ರೂ ಗಳನ್ನು ಕೊಟ್ಟರು ಶ್ರೀವೀರಶೈವ ಭಗಿನೀ ಸಮಾಜಕ್ಕೆ ಸೌ। ಭಾಗೀರಥೀಬಾಯಿಯವರು, ವೀರಶೈವರತ್ನ, ಸ್ತ್ರೀನೀತಿ, ಭಕ್ತಿಯೋಗ, ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಚರಿತ್ರೆಗಳನ್ನು ಅರ್ಪಿಸಿದರು ಮುಂಬಯಿಪಟ್ಟಣದಲ್ಲಿ ಕೇವಲ ಮರಾಠಿಭಾಷೆಯಿರುವುದರಿಂದ ಸೌ। ಕಟಾಪ ಬಾಯಿಯವರ ಮರಾಠಿ ಭಾಷಣಗಳನ್ನು ಕೇಳಿ ಸರ್ವರೂ ಆನಂದಪಟ್ಟು ಬಾಯಿಯವರನ್ನು ಶ್ಲಾಘಿಸಿದರು

ಸರದಾರ ಹೈಸ್ಕೂಲ್ ಪ್ರಿನ್ಸಿಪಾಲ್
ಶ್ರೀಪಾಲಖಂಡವಾರ ಮುಂಬಯಿ,

ದುಃಖವಾರ್ತೆ

ಬೆಂಗಳೂರು ದೊಡ್ಡಪೇಟೆ ಗಂಧಿಗೆ ಅಂಗಡಿ ಮ।।ರಾ।। ಸೊಲ್ಲುಂಟಿ ಶೆಟ್ಟರು ಚನ್ನಬಸಪ್ಪನವರು ತಾ।। 16-2-43 ರಲ್ಲಿ ಅರಸೀಕೆರೆಯಲ್ಲಿ ತಮ್ಮ 62 ನೇ ವಯಸ್ಸಿನಲ್ಲಿ ಶಿವಾಧೀನರಾದರು. ಅವರ ಕುಮಾರರಾದ ಮ। ರಾ।। ಮರಿಯಪ್ಪನವರು ಅರಸೀಕೆರೆಯಲ್ಲಿ ಡಾಕ್ಟರಾಗಿದ್ದಾರೆ. ಇವರು ಪಿತೃಭಕ್ತಿಯಿಂದ ವಿಶೇಷ ಶ್ರಮವಹಿಸಿ ಚಿಕಿತ್ಸೆ ಮಾಡಿದರೂ ಗುಣವಾಗಲಿಲ್ಲ. ಅವರ ಧರ್ಮಪತ್ನಿ ಶ್ರೀಮತಿ ನಾಗಮ್ಮನವರು ಅವರ ಬಳಿಯಲ್ಲಿ ಪತಿಸೇವಾನಿರತರಾಗಿದ್ದರು. ಅವರ ಸಹೋದರರು ಮ।। ರಾ।। ನೀಲಕಂಠಪ್ಪನವರು ಮೃತರ ಕಳೇಬರವನ್ನು ಬೆಂಗಳೂರಿಗೆ ಟ್ಯಾಕ್ಸಿ ಮೂಲಕ ಸಾಗಿಸಿಕೊಂಡು ಬಂದು ಚಾಮರಾಜಪೇಟೆ ರುದ್ರಭೂಮಿಯಲ್ಲಿ ಸಮಾಧಿಗೊಳಿಸಿ, ಅಂತ್ಯೇಷ್ಟಿಕ್ರಿಯೆಗಳನ್ನೂ ಗಣಾರಾಧನೆಯನ್ನೂ ವಿಧ್ಯುಕ್ತವಾಗಿ ನೆರವೇರಿಸಿದರು. ಶ್ರೀ ಚನ್ನಬಸಪ್ಪನವರು ಮಿತಭಾಷಿಗಳಾಗಿಯೂ ಕೇವಲ ಸತ್ವಗುಣಶೋಭಿತರಾಗಿಯೂ ಇದ್ದು ಜಗದಾಚಾರ್ಯರಲ್ಲಿ ಅಸಾಧಾರಣ ಭಕ್ತಿಯುಳ್ಳವರಾಗಿದ್ದರು ಅವರಿಗೆ ೩ ಜನ ಗಂಡುಮಕ್ಕಳೂ 6 ಜನ ಹೆಣ್ಣುಮಕ್ಕಳೂ ಇದ್ದಾರೆ ಶ್ರೀಮತ್ಪಂಚಾಚಾರ್ಯರು ಅವರ ಕುಟುಂಬವರ್ಗಕ್ಕೆ ದುಃಖಶಮನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಉಂಟುಮಾಡಲೆಂದು ಪ್ರಾರ್ಥಿಸುತ್ತೇವೆ. ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 1ರೂ ಯು ಸಮರ್ಪಿಸಲ್ಪಟ್ಟಿತು

ದುಃಖಭಾಗಿ.

ಸ್ವೀಕಾರ.

ನಿಜಾಂ ಇಲಾಖಾ ನಿಲಂಗಾ ತಾಲೂಕ. ಸಿಂದಖೇಡ ಗ್ರಾಮದಲ್ಲಿರುವ ಶ್ರೀಮಂತ ಹತ್ತಿ ವಿಶ್ವನಾಥಪ್ಪನವರು ತಮ್ಮ ಗೃಹದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಒಳ್ಳಾರಿ ಡಿ।। ಹೂವಿನಹಡಗಲಿ ಗ್ರಾಮದಲ್ಲಿರುವ ಮ।। ರಾ।। ಮೈಲಾರದ ಶಾಂತಪ್ಪನವರು ಶ್ರೀ ರೇಣುಕಾಚಾರ್ಯರ ಜಯಂತಿ ದಿವಸ ಪಂಡಿತರು ಮಾಡಿದ ರೇಡಿಯೋ ಭಾಷಣವನ್ನು ಕೇಳಿದ ಸಂತೋಷಕ್ಕಾಗಿ ಸಮರ್ಪಿಸಿದ 2 ರೂಪಾಯಿ ಮತ್ತು ಶಿವಲಿಂಗನಹಳ್ಳಿ ಪಾಟೀಲ್ ಶ್ರೀ ಗುಡದೀರಗೌಡರ ಪುತ್ರಿ ಚಿ।। ಸೌ।। ಕೊಟ್ರಮ್ಮನನ್ನು ಹುಲ್ಲಿನಹಡಗಲಿ ಶೆಗ್ಗಿನಮಠದ ವೇ।। ಕಾಶೀನಾಥಶರ್ಮನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂಪಾಯಿ ಮತ್ತು ಸೊಪ್ಪಿನ ಅಡವಪ್ಪನವರು ಶಿವಾಧೀನರಾದ ಸಮಯದಲ್ಲಿ ತೆಗೆಯಿಸಿದ 1 ರೂ ಯು ಒಟ್ಟು 5 ರೂಪಾಯಿಗಳು ಶ್ರೀಮಂತ ಗುಗ್ರಿ ಮುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ

ಬೊಂಬಾಯಿನಗರದಲ್ಲಿ ವೀರಶೈವ ಮಹಿಳಾಸಂಘವು ಸ್ಥಾಪಿತವಾದ ಸಮಯದಲ್ಲಿ ಸಮರ್ಪಿಸಿದ 1 ರೂ ಯು ಸೌ। ಭಾಗೀರಥೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತದೆ

ಅರಸೀಕೆರೆ ತಾ।। ಮೊಡಾಳುಗ್ರಾಮದಲ್ಲಿರುವ ಮ।। ರಾ। ಸಿದ್ದಪ್ಪನವರುಗಳಶೆಟ್ಟರ ತಮ್ಮ ಚನ್ನಬಸಪ್ಪ ಶೆಟ್ಟರ ಪುತ್ರಿ ಚಿ।। ಸೌ।। ಮೀನಾಕ್ಷಮ್ಮನನ್ನು ತಿಪಟೂರು ತಾ।। ಹೊಸಹಳ್ಳಿ ಗ್ರಾಮದ ಮ।। ರಾ।। ಕಲ್ಲಪ್ಪ ಶೆಟ್ಟರ ಪುತ್ರ ಮುದ್ದಬಸಪ್ಪ ಶೆಟ್ಟಿ ಎಂಬ ವರನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂ ಯು ದೊಡ್ಡಮೇಟಿ ಕುರ್ಕಮಠದ ವೇ।। ಈಶ್ವರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ಹಾನಗಲ್ಲು ತಾ। ಸಂತೆಹೊಸೂರು ಗ್ರಾಮದಲ್ಲಿರುವ ಶ್ರೀಮತಿ ಬಸವಲಿಂಗಮ್ಮನವರು ಧಾರವಾಡ ಇವರು ತಮ್ಮ ಪುತ್ರ ಚಿ।। ಮುರಘೇಶನೆಂಬ ವರನಿಗೂ ಆಲೂರು ಗ್ರಾಮದ ಶ್ರೀಮಂತ ಕಂಬಳಿ ಚನ್ನಬಸಪ್ಪನವರ ಪುತ್ರಿ ಚಿ। ಸೌ।। ಗೌರೀದೇವಿಗೂ ಮತ್ತು ಶ್ರೀಮಂತ ಮುಂಟೂರ ಚನ್ನಬಸಪ್ಪನವರಿಗೂ ತಮ್ಮ ಪುತ್ರಿ ಚಿ। ಸೌ।। ಪಾರ್ವತೀದೇವಿಗೂ ತಮ್ಮ ಗೃಹದಲ್ಲಿ ವಿವಾಹಮಹೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿಯು ಎಸ್ ಜಿ. ಹರಪಿ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು)ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನುಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೧—೬
ಪದ್ಮಸಿಂಹಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರ ವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮಹಾಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ.

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೯೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾಸ್ಪದವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೨ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ತಮ್ಸೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧॥ ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत)	१ रु.
सिद्धांतशिखामणि (मूल)	६ आ.
पुरातनम् (वीरशैवप्राचीनताद्योतितम्)	४ आ.
[illegible] (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ನಯ್ಯಾಬಜಾರ್ [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ [illegible] ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ಏಪ್ರಿಲ್ ೧೯೪೩ [ಸಂಚಿಕೆ ೫೨

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ಉಜ್ಜಯಿನೀ ಸದ್ಧರ್ಮಸಿಂಹಾಸನಜ್ಞಾನಗುರುವಿದ್ಯಾಪೀಠದ ಸ್ವಾಗತಸಮಿತಿಯ ಆಹ್ವಾನಪತ್ರಿಕೆ.

ತಾ|| ೨೪ ೩ ೪೩ರಲ್ಲಿ ಶ್ರೀಮದುಜ್ಜಯಿನೀ ಜಗದ್ಗುರು ಪೀಠದಲ್ಲಿ ಜರುಗಿದ ಸ್ವಾಗತಸಮಿತಿಯ ತೀರ್ಮಾನದಂತೆ ಇದೇ ಸ್ವಭಾನುನಾಮಸಂವತ್ಸರದ ಚೈತ್ರ ಶು|| ೧೩ (ತಾ|| ೧೮-೪-೪೩) ಭಾನುವಾರ ಮೇಲ್ಕಂಡ ಸಂಸ್ಥಾನ ಮಠದಲ್ಲಿ ಶ್ರೀಜಗದ್ಗುರುಗಳ ಆಜ್ಞಾಪ್ರಕಾರ " ಶ್ರೀಸದ್ಧರ್ಮಸಿಂಹಾಸನಜ್ಞಾನಗುರುವಿದ್ಯಾಪೀಠ ದ ಮಹಾಸಭೆಯು ನಡೆಯುವಂತೆ ನಿರ್ಧರಿಸಲ್ಪಟ್ಟಿದೆ

ವಿಷಯಗಳು

೧. ಹಿಂದಿನ ಶ್ರೀಜಗದ್ಗುರು ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ನಿರ್ಧರಿಸಿದ ನಿಯಮದಂತೆ ವೈದಿಕ, ಆಧ್ಯಾತ್ಮಿಕ, ವಿದ್ಯಾಸಂಸ್ಥೆಯನ್ನು ಪ್ರಾರಂಭಿಸುವ ವಿಚಾರ

೨. ಹಿಂದಿನ ಶ್ರೀಜಗದ್ಗುರು ಮರುಳಸಿದ್ಧಸ್ವಾಮಿಗಳವರು ಸಂಕಲ್ಪಿಸಿದ್ದ ಇಂಗ್ಲೀಷ ಹಾಯಸ್ಕೂಲ, ಸಂಸ್ಕೃತ ಕಾಲೇಜುಗಳನ್ನು ಸ್ಥಾಪಿಸುವದು.

೩. ಪೀಠೋದ್ಧಾರದ ಕಾರ್ಯಗಳನ್ನು ನಡೆಯಿಸುವದು

೪. ದೇವಸ್ಥಾನದ ಪ್ರಾಚೀನ ಪದ್ಧತಿಯಂತೆ ಕಾರ್ಯಕ್ರಮಗಳನ್ನು ನಡೆಯಿಸುವದು

೫ ಇತರ ಸಾಮಾಜಿಕ ವಿಷಯಗಳ ಚರ್ಚೆ

ಕಾರ್ಯಕ್ರಮಗಳು

೧ ಇದೇ ಚೈತ್ರ ಶುದ್ಧ ೧೩ (ತಾ|| ೧೮-೪-೪೩) ಭಾನುವಾರ ಮುಂಜಾನೆ ವಿದ್ಯಾವಿಷಯ, ಧಾರ್ಮಿಕೋಪನ್ಯಾಸಗಳು, ಮತ್ತು ವಿಷಯನಿಯಾಮಕ ಕಮಿಟಿ, ಮಧ್ಯಾಹ್ನ ೨ ಘಂಟೆಗೆ ಸಭಾಕಾರ್ಯ ಪ್ರಾರಂಭ

೨. ಚತುರ್ದಶಿ (ತಾ|| ೧೯-೪-೪೩) ಸೋಮವಾರ ಮುಂಜಾನೆ ಗೊತ್ತುವಳಿಗಳನ್ನು ಮಾಡುವುದು, ಅನಂತರ ಅಧ್ಯಕ್ಷರ ಉಪಸಂಹಾರ ಭಾಷಣ ವಿದ್ಯಾಪ್ರೇಮಿಗಳಾದ ತಾವು ಈ ಸಭೆಗೆ ಒಂದು ದಿನ ಮುಂಚಿತವಾಗಿಯೇ ಬಂದು ಮೇಲ್ಕಂಡ ವಿಷಯಗಳನ್ನು ಚರ್ಚಿಸಿ ಸ್ಥಿರಗೊಳಿಸಿ ಶ್ರೀ ಜಗದ್ಗುರುಗಳ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಕೋರುವ,

ಅಧ್ಯಕ್ಷ,
ಕೊಟ್ಟೂರು ಮಿಠಾಳಭಟ್ಟಿಮಠದ
ಚನ್ನಬಸವಯ್ಯನವರು.

ಉಪಾಧ್ಯಕ್ಷ,
ಸಾಹುಕಾರ ಮಹಾಲಿಂಗಪ್ಪ,
ಜಗಳೂರು

ಕಾರ್ಯದರ್ಶಿ,
ಕೊಟ್ಟೂರು ಶಾಂತನಗೌಡರ ಶಾಂತನಗೌಡ.

ಸಹಕಾರ್ಯದರ್ಶಿ,
ಟಿ. ಸಿದ್ಧಲಿಂಗನಗೌಡ, ಉಜ್ಜಯಿನಿ.

ಸೂಚನೆ— ಮಹಾಪೀಠಕ್ಕೆ ಬರತಕ್ಕಂಥವರು ಜಗಳೂರು ಮಾರ್ಗವಾಗಿಯೂ ಮತ್ತು ಕೊಟ್ಟೂರು ಮಾರ್ಗವಾಗಿಯೂ ಬರತಕ್ಕದ್ದು ಅಲ್ಲಿ ಮೋಟಾರುಗಳ ಸೌಕರ್ಯವಿರುತ್ತದೆ ಬರತಕ್ಕ ಮಹನೀಯರು ಹಾಸಿಗೆ, ಜಂಬಿಗೆ ಮೊದಲಾದ ಸಾಮಾನುಗಳ ಸಮೇತವಾಗಿ ಬರುವದು ಉತ್ತಮವೆಂದು ಭಾವಿಸುತ್ತೇವೆ.

ಹಿಮಾಲಯಪ್ರಾಂತದ ಸಮಾಚಾರ

ಉಖಾಕ್ಷೇತ್ರದಲ್ಲಿ ಮಹಾರುದ್ರಯಾಗ

ಸನಾತನ ಧರ್ಮಾಭಿಮಾನಿಗಳಿಗೆ ಈ ಮೂಲಕ ತಿಳಿಸುವುದೇನೆಂದರೆ —

ತಾ|| ೨೮-೩ ೪೩ ನೆಯ ದಿವಸದಿಂದ ಜಗತ್ತಿನ ಕಲ್ಯಾಣಕ್ಕೋಸ್ಕರ ಸನಾತನ ಧರ್ಮ ವೈದಿಕ ಪದ್ಧತಿ ಪ್ರಕಾರ ೨೧ ದಿವಸಗಳವರೆಗೆ ಮಹಾರುದ್ರಯಾಗವು ನೆರವೇರುವದು ಇದಲ್ಲದೆ ತಾ|| ೩೦ ೪ ೪೩ ನೆಯ ದಿವಸ ಶ್ರೀ ಕೇದಾರನಾಥಸ್ವಾಮಿಯ ಬಾಗಿಲು ತೆಗೆಯಲ್ಪಡುವುದು

ಈ ಮೇಲ್ಕಂಡ ಕಾರ್ಯಗಳು ಶ್ರೀ ಜಗದ್ಗುರು ಏಕೋರಾಮ ಪೀಠಾಧೀಶ್ವರರ ಅಪ್ಪಣೆಯ ಪ್ರಕಾರ ನೆರವೇರುವವು ಆದುದರಿಂದ ಸಮಸ್ತ ಸದ್ಭಕ್ತರೂ ಇಂಥಹ ಶುಭಸಮಯದಲ್ಲಿ ತಮ್ಮ ಇಷ್ಟಮಿತ್ರರೊಡನೆ ಆಗಮಿಸಿ ದರ್ಶನಾಶೀರ್ವಾದಗಳಿಗೆ ಪಾತ್ರರಾಗಬೇಕೆಂದು ಕೋರುವ,

ಪಂ|| ಸಿದ್ಧಲಿಂಗಶರ್ಮಾ ಉಖಾಮಠ

ಸ್ವೀಕಾರ.

ತಿಪ್ಟೂರು ವೀರಶೈವ ಮಂಡಲಿಯವರು ಶ್ರೀ ರೇಣುಕಾಚಾರ್ಯರ ಜಯಂತಿಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ ಗಳು ಮ|| ರಾ|| ಸಾಸಲು ಮುರಿಗಪ್ಪನವರು ಮತ್ತು ತಿಪ್ಟೂರು ಕೋ ಆ ಸೊಸೈಟಿ ಆನರರಿ ಸೆಕ್ರೆಟರಿ ಮ|| ರಾ|| ಸಿ ಕೆ ಕಪ್ಪಣ್ಣನವರು ಇವರ ದ್ವಾರಾ ತಲ್ಪಿರುತ್ತವೆ

ಅರಸಿಕೆರೆ ತಾಲೂಕು ಉಂಡಿಗನಾಳು ಗ್ರಾಮದ ಚಿಕ್ಕನೂರು ಮಠದ ವೇ|| ಮರುಳಯ್ಯನವರ ಪುತ್ರಿ ಚಿ|| ಸೌ|| ಜಯದೇವಮ್ಮನಿಗೂ ಸದರಿ ಗ್ರಾಮದ ಮಠದ ಚಿ|| ಸ|| ಮಹಾದೇವಯ್ಯನವರಿಗೂ ನಡೆದ ವಿವಾಹದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 2 ರೂ. ಗಳು ಗುರುಗವಹಳ್ಳಿ ವೇ|| ಜಿ ಎಸ್ ಸಿದ್ಧಲಿಂಗಯ್ಯನವರ ದ್ವಾರಾ ತಲ್ಪಿರುತ್ತವೆ

ಗುಡಗೇರಿ ತಾ|| ಹರಲಾಪುರಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕಾಚಾರ್ಯರ ಜಯಂತೀ ಮಹೋತ್ಸವದಲ್ಲಿ ಮುಕ್ತಿ ಮಂದಿರದ ಸೇವಕ ಮಂಡಳಿಯವರು ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ಯು ವೇ|| ಹಿರಿಯಮಠದ ಪುಟ್ಟಯ್ಯನವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಏಪ್ರಿಲ್ ತಾ॥ ೧೯ ನೇ ಸೋಮವಾರ

ಶಿವಾಗಮಗಳಲ್ಲಿ ಲಿಂಗದಾರಣದ ವೈಭವ

ಶ್ರೀಪರಮೇಶ್ವರನು ಲೋಕೋದ್ಧಾರಕ್ಕಾಗಿ ಅನೇಕ ಶಾಸ್ತ್ರಗಳನ್ನು ನಿರ್ಮಿಸಿರುವನು ಅವುಗಳಲ್ಲಿ ವೇದಗಳೂ ಶಿವಾಗಮಗಳೂ ಮುಖ್ಯವಾಗಿರುವವು ವೀರಶೈವಮತ ವಿಷಯವು ವೇದಗಳಲ್ಲಿಯೂ ಶಿವಾಗಮಗಳಲ್ಲಿಯೂ ವಿಶೇಷವಾಗಿ ವರ್ಣಿತವಾಗಿರುವುದು ಶಿವಾಗಮಗಳಲ್ಲಿಂತೂ ಈ ಮತದ ಮಹಿಮೆ ಅಪಾರವಾಗಿರುವುದು ಆಗಮಗಳು ಕಾಮಿಕ ಯೋಗಜ ಚಿಂತ್ಯ ಕಾರಣ ಅಜಿತ ದೀಪ್ತ ಸೂಕ್ಷ್ಮ ಸಹಸ್ರ ಅಂಶುಮತ್ ಸುಪ್ರಭೇದ ವಿಜಯ ನಿಶ್ವಾಸ ಸ್ವಾಯಂಭುವ ಅನಲ ವೀರ ರೌರವ ಮಕುಟ ವಿಮಲ ಚಂದ್ರಜ್ಞಾನ ಬಿಂಬ ಪ್ರೋದ್ಗೀತ ಲಲಿತ ಸಿದ್ಧ ಸಂತಾನ ಸರ್ವೋಕ್ತ ಪಾರಮೇಶ್ವರ ಕಿರಣ ವಾತುಲ ಎಂಬ ಹೆಸರುಗಳಿಂದ ಪ್ರಸಿದ್ಧವಾಗಿರುತ್ತವೆ

[illegible] ಪಥಾ ಪ್ರೋಕ್ತಾ [illegible] ಶರಣಾತ್ಮನಾ
ಶೈವ [illegible] ॥

[illegible] ಸರ್ವಸಿದ್ಧಿದಂ ।
[illegible] ಸಿದ್ಧಾಂತಕಸಂಜ್ಞಕ ।

ಶಕ್ತಿಪ್ರಧಾನಂ ವಾಮಾಖ್ಯಂ ದಕ್ಷಿಣಂ ಭೈರವಾತ್ಮಕಂ ।
ಸಪ್ತಮಾತೃಪರಂ ಮಿಶ್ರಂ ಸಿದ್ಧಾಂತಂ ವೇದಸಮ್ಮತಂ ।

[illegible]
[illegible] ವೇದಸಮ್ಮತ ಉಚ್ಯತೇ ॥

[illegible] ।
[illegible] ।

[illegible] ಶಿವೋದಿತೇ ।
[illegible] ವೀರಶೈವಮತಂ ಪರಂ ॥

(ಶಿ ಪರಿ ೫)

ಆಗಮಗಳು ಶೈವ, ಪಾಶುಪತ, ಸೋಮ, ಲಾಕುಲ ಇತ್ಯಾದಿ ಭೇದಗಳನ್ನು ಪಡೆದಿರುತ್ತವೆ ಅವುಗಳಲ್ಲಿ ಶೈವವು ವಾಮ ದಕ್ಷಿಣ ಮಿಶ್ರ ಸಿದ್ಧಾಂತ ಎಂದು ನಾಲ್ಕು ಭಾಗವಾಗಿರುತ್ತದೆ ಇವುಗಳಲ್ಲಿ ಶಕ್ತಿಪ್ರಧಾನವಾದುದೇ ವಾಮತಂತ್ರವು ಭೈರವಪರವಾದುದೇ ದಕ್ಷಿಣತಂತ್ರವು ಸಪ್ತಮಾತೃಕಾಪರವಾದುದೇ ಮಿಶ್ರತಂತ್ರವು ವೇದಸಮ್ಮತವಾದುದೇ ಸಿದ್ಧಾಂತತಂತ್ರವು ಈ ಸಿದ್ಧಾಂತತಂತ್ರವು ವಿಶೇಷವಾಗಿ ವೇದಾಭಿಪ್ರಾಯವನ್ನೇ ಪ್ರತಿಪಾದಿಸುತ್ತಿರುವುದರಿಂದ ವೇದಸಿದ್ಧಾಂತಗಳೆರಡೂ ಏಕಾಭಿಪ್ರಾಯವುಳ್ಳವುಗಳಾಗಿವೆ

ಶಿವಾಗಮಗಳು ಪೂರ್ವಭಾಗ ಉತ್ತರಭಾಗಗಳೆಂಬ ಎರಡು ಭಾಗಗಳಿಂದೊಡಗೂಡಿರುತ್ತವೆ ಪೂರ್ವಭಾಗದಲ್ಲಿ ಸಾಮಾನ್ಯವಾಗಿ ಶೈವಮತದ ರಹಸ್ಯವೆಲ್ಲವೂ ಹೇಳಲ್ಪಟ್ಟಿರುತ್ತದೆ ಉತ್ತರಭಾಗದಲ್ಲೆಲ್ಲ ಶಿವಲಿಂಗಧಾರಣರೂಪವಾದ ವೀರಶೈವತತ್ತ್ವವು ಹೇಳಲ್ಪಟ್ಟಿರುತ್ತದೆ. ಶ್ರೀಜಗದ್ಗುರುರೇಣುಕಾದಿಪಂಚಾಚಾರ್ಯರು ಕಾಮಿಕಾದಿವಾತುಲಾಂತವಾದ ಶಿವಾಗಮಗಳ ಉತ್ಕೃಷ್ಟತೆಯನ್ನೂ ಶಿವಾಗಮೋಕ್ತವಾದ ಶಿವಲಿಂಗಧಾರಣ ಪ್ರಾಶಸ್ತ್ಯವನ್ನೂ ಚೆನ್ನಾಗಿ ಬೋಧಿಸಿರುತ್ತಾರೆ

ವಿಶಬ್ದೇನ ಸ್ಮೃತಾ ವಿದ್ಯಾ ಶಿವಜೀವೈಕ್ಯಬೋಧಿಕಾ ।
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಸ್ತು ತೇ ಮತಾಃ ॥

ಶಿವಜೀವೈಕ್ಯಬೋಧಕಬ್ರಹ್ಮವಿದ್ಯೆಯಲ್ಲಿ ರಮಿಸುವವರು ವೀರಶೈವರೆನಿಸಿಕೊಳ್ಳುವರೆಂದು ಶ್ರೀರೇಣುಕಭಗವತ್ಪಾದರು ವೀರಶೈವ ಶಬ್ದದ ನಿರ್ವಚನವನ್ನು ಮಾಡಿರುತ್ತಾರೆ

ಶ್ರೌತಾಶ್ರೌತವಿಭೇದೇನ ದ್ವಿಧಾ ಲಿಂಗಸ್ಯ ಧಾರಣಂ ।
ಷಡಧ್ವಶುದ್ಧಲಿಂಗಂ ತು ಶ್ರೌತಮಿತ್ಯಭಿಧೀಯತೇ ॥
ಅಶ್ರೌತಂ ತಪ್ತಲಿಂಗಾದಿಧಾರಣಂ ಪ್ರೋಚ್ಯತೇ [illegible] ॥
ಶ್ರೌತಾನಾಂ ವೀರಶೈವಾನಾಂ ವೇದಮಾರ್ಗೈಕವರ್ತಿನಾಂ ।
ತಪ್ತಲಿಂಗಪರಿಗ್ರ[illegible] ॥

ಶಿವಲಿಂಗಧಾರಣವು ಶ್ರೌತ ಅಶ್ರೌತವೆಂದು ಎರಡು ಪ್ರಕಾರವಾಗಿರುವುದು ಷಡಧ್ವಶೋಧನಪೂರ್ವಕವಾದ ಲಿಂಗಧಾರಣವು ಶ್ರೌತಲಿಂಗಧಾರಣವೆನಿಸುತ್ತದೆ ತಪ್ತಲಿಂಗ ಮುದ್ರಾಧಾರಣವು ಅಶ್ರೌತಲಿಂಗಧಾರಣವೆನಿಸುತ್ತದೆ ವೀರಶೈವರು ಕೇವಲ ವೇದಮಾರ್ಗದಲ್ಲಿ ನಿರತರಾಗಿರುವದರಿಂದ ಶ್ರೌತರೆನಿಸಿಕೊಳ್ಳುತ್ತಾರೆ ಆದುದರಿಂದ ವೈದಿಕರಾದ ವೀರಶೈವರು ತಪ್ತಲಿಂಗಧಾರಣವನ್ನು ಮಾಡಿಕೊಳ್ಳಬಾರದೆಂಬುದೇ ಶಾಸ್ತ್ರಸಿದ್ಧಾಂತವು

ಲಿಂಗಸ್ಯ ಧಾರಣಂ ಯಸ್ಯ ಸ್ಥೂಲದೇಹೇ ನ ದೃಶ್ಯತೇ ।
ತದ್ದೇಹಂ ನಿಷ್ಫಲಂ ಜ್ಞೇಯಂ [illegible] ।

ತಸ್ಮಾತ್ತದ್ಧಾರಣಂ ಪ್ರೋಕ್ತಂ [illegible] ।
ಯಥಾ ಸ್ವಶಾಸನೇ [illegible] ಸರ್ವಕರ್ಮಸು ।
[illegible] ॥

ವೀರಶೈವಮತದಲ್ಲಿ ಹುಟ್ಟಿ ಯಾವನು ತನ್ನ ಸ್ಥೂಲದೇಹದಲ್ಲಿ ಇಷ್ಟಲಿಂಗವನ್ನು ಧರಿಸಿರುವುದಿಲ್ಲವೋ ಅಂಥವನ ದೇಹವು ಜೀವರಹಿತವಾದ ಹೆಣದಂತೆ ನಿಷ್ಫಲವಾದುದೆಂದು ತಿಳಿಯಬೇಕು ತನ್ನ ಜೀವವಿರುವವರೆಗೂ ಲಿಂಗವನ್ನು ಧರಿಸಿ ಪೂಜಿಸುತ್ತಿರಬೇಕು ಸ್ಮಶಾನದಲ್ಲಿ ಬಿದ್ದಿರುವ ಕಟ್ಟಿಗೆಯು ಪಾಕಾದಿಕರ್ಮಗಳಿಗೆ ಹೇಗೆ ಯೋಗ್ಯವಲ್ಲವೋ ಹಾಗೆಯೇ ಲಿಂಗವಿಲ್ಲದ ವೀರಶೈವನೆಂದು ಹೇಳಿಕೊಳ್ಳುವವನು ಯಾವ [illegible] ಯೋಗ್ಯನಾಗುವದಿಲ್ಲ ಈ ರೀತಿಯಾಗಿ ಶಿವಾಗಮಗಳು ಶಿವಲಿಂಗಧಾರಣದ ಪ್ರಾಶಸ್ತ್ಯವನ್ನು ಮುಕ್ತಕಂಠದಿಂದ ಉದ್ಘೋಷಿಸುತ್ತಿರುವುದರಿಂದ ವೀರಶೈವರು ಶಿವಲಿಂಗದ ಈ ಅಸಾಧಾರಣವಾದ [illegible] ಶಿವಲಿಂಗಪೂಜಾಶೀಲರಾಗಿ ಪರಶಿವನಕರುಣೆಗೆ ಪಾತ್ರರಾಗಬೇಕೆಂದಾಶಿಸುತ್ತೇನೆ

ಆಧುನಿಕ ಯುದ್ಧದಲ್ಲಿ ಉಪಯೋಗಿಸುವ ಶಸ್ತ್ರಾಸ್ತ್ರಗಳು

ಕ್ರೂಯಿಜರು

ಕ್ರೂಯಿಜರು ಪ್ರಥಮ ತರಗತಿಯ ಹಡಗು ಇದು ಯುದ್ಧನೌಕೆಗಿಂತ ಚಿಕ್ಕದು ಆದರೆ ಡಿಸ್ಟ್ರಾಯರಿಗಿಂತ ದೊಡ್ಡದು ಯುದ್ಧನೌಕೆಗಿಂತ ವೇಗವಾಗಿ ಚಲಿಸಬಲ್ಲದು ಆದರೆ ಡಿಸ್ಟ್ರಾಯರಿಗಿಂತ ನಿಧಾನವಾದುದು 500 ರಿಂದ 600 ರ ವರೆಗೂ, ಸೈನಿಕರನ್ನು ಸಾಗಿಸಬಲ್ಲದು ನೌಕಾ ಯುದ್ಧದಲ್ಲಿ ಕ್ರೂಯಿಜರುಗಳು ಯುದ್ಧ ನೌಕೆಯ ಮುಂದೆ ನುಗ್ಗಿ, ಶತ್ರುಗಳೊಡನೆ ಕಾದಾಡುತ್ತಿರುವ ಡಿಸ್ಟ್ರಾಯರಿಗೂ, ಮತ್ತು ಯುದ್ಧ ನೌಕೆಗೂ ಸಂಬಂಧವನ್ನು ಕಲ್ಪಿಸುತ್ತವೆ ಶತ್ರು ಕ್ರೂಯಿಜರುಗಳ ಮುತ್ತಿಗೆಯಿಂದ ಡಿಸ್ಟ್ರಾಯರುಗಳನ್ನು ರಕ್ಷಿಸಲೂ ಸಹ ಸಹಾಯಮಾಡುತ್ತವೆ ಇವುಗಳು ವೇಗವಾಗಿ ಚಲಿಸುವುದರಿಂದ ಪಲಾಯನ ಮಾಡುತ್ತಿರುವ ನೌಕೆಗಳನ್ನು ಅಟ್ಟಿಕೊಂಡು ಹೋಗಲು ಈ ಕ್ರೂಯಿಜರುಗಳಿಂದ ಬಹಳ ಅನುಕೂಲ ಇದೂ ಅಲ್ಲದೆ ಕ್ರೂಯಿಜರುಗಳು ಮಾಡಬೇಕಾದ ಕರ್ತವ್ಯಗಳು ಹಲವಾರು ಇವೆ ವ್ಯಾಪಾರ ನೌಕೆಗಳನ್ನು ರಕ್ಷಿಸುವ ಗುರುತರವಾದ ಜವಾಬ್ದಾರಿಯು ಈ ಕ್ರೂಯಿಜರುಗಳಮೇಲೆ ಬಿದ್ದಿದೆ ಸಾಮಾನು ಸರಂಜಾಮುಗಳನ್ನು ಸಾಗಿಸುವ ಶತ್ರುಗಳ ಕಾನ್ವಾಯಿಗಳ ಮೇಲೂ ಸಹ ಇವು ಧಾಳಿಯನ್ನು ನಡೆಯಿಸುತ್ತವೆ ಎಕ್ಸೆಟರ್, ಅಜಾಕ್ಸ್ ಮತ್ತು ಏಕಲಿಸ್ ಎನ್ನುವ ಮೂರು ಕ್ರೂಯಿಜರು ದಕ್ಷಿಣ ಅಮೆರಿಕಾದ ತೀರದಲ್ಲಿ ಗ್ರಾಫ್‌ಸ್ಪೀ ಎನ್ನುವ ಶತ್ರು ನೌಕೆಯನ್ನು ನಾಶಮಾಡಿದವು. ಗ್ರೇಟ ಬ್ರಿಟನ್ನಿನ ಕ್ರೂಯಿಜರುಗಳ ಸಂಖ್ಯೆಯು ಮಿತ್ರ ದೇಶಗಳ ಕ್ರೂಯಿಜರುಗಳ ಸಂಖ್ಯೆಗಿಂತ ಹೆಚ್ಚಾಗಿದೆ ಆದರೆ ಇವುಗಳು ಸಣ್ಣವು ಅಮೆರಿಕಾದ ನೌಕೆಯಲ್ಲಿ ಕ್ರೂಯಿಜರುಗಳ ಸಂಖ್ಯೆಯು ಕಡಿಮೆಯಾದರೂ ಅವು ದೊಡ್ಡವು ಜಪಾನಿನವರಲ್ಲಿ ಅಮೆರಿಕನರಿಗಿರುವಷ್ಟು ಸಂಖ್ಯೆಯ ಕ್ರೂಯಿಜರುಗಳಿವೆ ಆದರೆ ಅವು ಸಣ್ಣವು ಅಕ್ಸಿಸ್ ರಾಜ್ಯಗಳಲ್ಲಿ ಅಂಥ ವ್ಯಾಪಾರ ನೌಕಾದಳಗಳಿಲ್ಲ ಇಲ್ಲಿಯವರೆಗೂ ಪ್ರಬಲವಾದ ನೌಕಾಯುದ್ಧವಾವುದೂ ಆಗಿರುವುದಿಲ್ಲ ಮಿತ್ರರಾಷ್ಟ್ರಗಳ ಕ್ರೂಯಿಜರುಗಳು ಇಲ್ಲಿಯವರೆಗೂ ನಮ್ಮ ಹಡಗುಗಳನ್ನು ರಕ್ಷಿಸುವುದರಲ್ಲೇ ನಿರತವಾಗಿವೆ.

ಡಿಸ್ಟ್ರಾಯರುಗಳು.

ಡಿಸ್ಟ್ರಾಯರುಗಳು ಸಣ್ಣ ಹಡಗುಗಳು ಸಾಮಾನ್ಯವಾಗಿ 2,000 ಟನ್ ತೂಕವುಳ್ಳವು ಮತ್ತು ಸುಮಾರು 200 ಮಂದಿ ಸೈನಿಕರನ್ನು ಸಾಗಿಸಬಲ್ಲವು ಇವುಗಳು ಬಹು ವೇಗವಾಗಿ ಚಲಿಸುತ್ತವೆ ವೇಗವೇ ಇವುಗಳ ಶಕ್ತಿ ವೇಗವಾಗಿ ಚಲಿಸುವ ಎಕ್ಸ್‌ಪ್ರೆಸ್ ರೈಲ್ವೆ ಟ್ರೇನಿನ ವೇಗದಲ್ಲಿ ಇವು ಸಮುದ್ರದ ಮೇಲೆ ಹಾದು ಹೋಗುತ್ತವೆ ಸುಮಾರು 40 ಪೌಂಡು ತೂಕದ ಗುಂಡುಗಳನ್ನು ಹಾರಿಸಬಲ್ಲ ಫಿರಂಗಿಗಳನ್ನು ಇದಕ್ಕೆ ಜೋಡಿಸಿರುತ್ತದೆ ಅಲ್ಲದೆ ಇದಕ್ಕೆ ಟಾರ್ಪೆಡೋಗಳನ್ನು ಜೋಡಿಸಿರುತ್ತದೆ ಅತ್ಯಂತ ಬಲಯುತವಾದ ನೌಕೆಗಳನ್ನೂ ಸಹ ಮುಳುಗಿಸಬಲ್ಲವು ಡಿಸ್ಟ್ರಾಯರುಗಳನ್ನು ನೌಕಾದಳದ ಕಾವಲುಗಾರರೆಂದು ಕರೆಯಬಹುದು ಇವು ಮಿತ್ರಪಕ್ಷದವರ ಹಡಗುಗಳ ಮೇಲೆ ಸದಾ ಕಾವಲಿದ್ದು ಶತ್ರುಗಳ ದಾಳಿಯಿಂದ ಇವನ್ನು ರಕ್ಷಿಸಲು ಯಾವಾಗಲೂ ಸಿದ್ಧವಾಗಿರುತ್ತವೆ ಚಿಕ್ಕವಾದರೂ ಈ ಹಡಗುಗಳು ಎಲ್ಲಾ ಕಾಲದಲ್ಲಿಯೂ ಸಮುದ್ರದ ಮೇಲೆ ಚಲಿಸಬಲ್ಲುವು, ಮತ್ತು ಈ ಹಡಗುಗಳ ಮೇಲಣ ಜೀವನವು ಮಾತ್ರ ಬಹು ಕಷ್ಟ ಈ ಬಗೆಯ ನೌಕೆಗಳು ಬಹಳ ಉಪಯುಕ್ತವಾದುವುಗಳು ಎಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಇವುಗಳನ್ನು ಇಟ್ಟುಕೊಂಡರೆ ಅಷ್ಟೂ ಒಳ್ಳೆಯದು. ಇಂಗ್ಲೆಂಡು ಮತ್ತು ಅಮೇರಿಕಾ ದೇಶಗಳವರು ಯುದ್ಧಕ್ಕೆ ಇಳಿದಾಗ ಇವರಲ್ಲಿ ಸುಮಾರು 500 ಡಿಸ್ಟ್ರಾಯರುಗಳಿದ್ದವು ಹಲವು ಡಿಸ್ಟ್ರಾಯರುಗಳು ನಾಶವಾಗಿವೆ ಆದರೆ ಹಲವಾರು ಡಿಸ್ಟ್ರಾಯರುಗಳನ್ನು ನಿರ್ಮಿಸಲಾಗಿದೆ ಈ ವಿಷಯದಲ್ಲಿ ಮಿತ್ರರಾಷ್ಟ್ರಗಳವರ ಶಕ್ತಿಯು ಹೆಚ್ಚಾಗಿದೆ

ಸಬ್‌ಮೆರಿನ್

ನದಿಯಲ್ಲಿ ಆಮೆಯು ಚಲಿಸುತ್ತಿರುವುದನ್ನು ನೀವು ನೋಡಿರಬಹುದು ಅದು ಒಮ್ಮೆ ನೀರಿನ ತಳಕ್ಕೆ ಹೋಗುತ್ತದೆ ನೀರಿನ ಮೇಲೆ ಒಂದು ಸುಮ್ಮನೆ ತೇಲುತ್ತದೆ. ನೀರಿನ ಮೇಲೆ ಈಜುತ್ತದೆ ಸ್ವಲ್ಪ ಆಳದಲ್ಲಿಯೇ ನೀರಿನೊಳಗೆ ಈಜುತ್ತದೆ ಒಮ್ಮೆ ತಲೆಯನ್ನು ಮಾತ್ರ ಹೊರಗಿಟ್ಟು ಈಜುತ್ತದೆ ಸಬ್‌ಮೆರೀನೆಂಬ ನೌಕೆಯ ಚಲನೆಯೂ ಇದೇ ರೀತಿಯಿರುತ್ತದೆ ಇದು ಒಂದು ಉಕ್ಕಿನ ದೋಣಿ ಇದರ ಮೇಲ್ಭಾಗವು ಮುಚ್ಚಿರುತ್ತದೆ. ಇದು ಮೀನಿನಂತೆ ನೀರಿನೊಳಗೆ ಮುಳುಗಲೂ ಬಲ್ಲುದು ಬೇಕಾದಾಗ ಮೇಲೂ ಬರಬಲ್ಲುದು ಅವಶ್ಯಕವಿದ್ದಂತೆ ಭಾರವನ್ನು ಹೆಚ್ಚಿಸಲೂ ಅಥವಾ ತಗ್ಗಿಸಲೂ ನೀರನ್ನು ಒಳಗೆ ತೆಗೆದುಕೊಳ್ಳಲೂ ಅಥವಾ ಹೊರಕ್ಕೆ ಬಿಡಲೂ ತಕ್ಕ ಯಂತ್ರಸೌಕರ್ಯವಿದೆ ಈ ಟ್ಯಾಂಕುಗಳು ನೀರಿನಿಂದ ತುಂಬಿದಾಗ ಸಬ್‌ಮೆರಿನುಗಳು ಮುಳುಗುತ್ತವೆ ನೀರನ್ನು ಹೊರಗೆ ಬಿಟ್ಟಾಗ ಈ ದೋಣಿಯು ಮೇಲೆ ಬರುತ್ತದೆ ಈ ಹಡಗುಗಳ ಪ್ರಮಾಣವು ಬಗೆಬಗೆಯಾಗಿರುತ್ತವೆ ಇಬ್ಬರನ್ನು ಕೂರಿಸಿಕೊಂಡು ಚಲಿಸುವ ಸಬ್‌ಮೆರೀನುಗಳಿಂದ ಇನ್ನೂರು ಜನರನ್ನು ಕೂರಿಸಿಕೊಂಡು ಹೋಗುವ ಸಬ್‌ಮೆರೀನುಗಳವರೆಗೂ ಹಲವು ಬಗೆಯ ಸಬ್‌ಮೆರೀನುಗಳಿವೆ ಈ ಹಡಗಿಗೆ ಎರಡು ಬಗೆಯ ಯಂತ್ರಗಳಿವೆ ನೀರಿನಮೇಲೆ ಚಲಿಸುವಾಗ ಎಣ್ಣೆಯ ಸಹಾಯದಿಂದ ನಡೆಯುವ ಇಂಜಿನು ಕೆಲಸ ಮಾಡುತ್ತದೆ. ನೀರಿನೊಳಗೆ ಚಲಿಸುವಾಗ ವಿದ್ಯುಚ್ಛಕ್ತಿಯ ಯಂತ್ರದ ಸಹಾಯದಿಂದ ಈ ಯಂತ್ರವನ್ನು ನಡೆಯಿಸುತ್ತದೆ ವಿದ್ಯುಚ್ಛಕ್ತಿಯ ಯಂತ್ರದ ಇಂಜಿನು ಗಾಳಿಯನ್ನು ಅಪರಿಶುದ್ಧವನ್ನಾಗಿ ಮಾಡದೆ ಸ್ವಚ್ಛವಾಗಿಟ್ಟಿರುತ್ತದೆ ಹಡಗಿನಲ್ಲಿರುವವರು ಸುಮಾರು ಎರಡು ದಿನಗಳವರೆಗೂ ಉಸಿರಾಡಲು ಸಾಕಾದಷ್ಟು ಗಾಳಿಯನ್ನು ಶೇಖರಿಸಿಟ್ಟಿರಲಾಗುವುದು ನೀರಿನ ಮೇಲಿರುವಾಗ ಶತ್ರುಗಳೊಡನೆ ಕಾದಾಡಲು ಫಿರಂಗಿಯನ್ನೂ ನೀರಿನೊಳಗೆ ಶತ್ರುನೌಕೆಗೆ ಏಟನ್ನು ಕೊಡಲು ಅನುಕೂಲಿಸಿರುವಂತೆ ಟಾರ್ಪೆಡೋಗಳನ್ನೂ ಈ ಹಡಗಿಗೆ ಜೋಡಿಸಿರುತ್ತದೆ ಅಲ್ಲದೆ ಈ ಹಡಗು ನೀರಿನೊಳಗಿರುವಾಗ ನೀರಿನ ಮೇಲೆ ಇರುವ ವಸ್ತುಗಳನ್ನು ನೋಡಲು ಅನುಕೂಲಿಸುವಂತಹ ಪೆರಿಸ್ಕೋಪು ಎಂಬ ದರ್ಶಕ ಯಂತ್ರವನ್ನಿಟ್ಟಿ

ದೆ. ಈ ಯಂತ್ರವನ್ನು ಮೇಲೆ ಬಿಡುವುದರ ಮೂಲಕ ಸಬ್‌ಮೆರೀನಿನ ನಾಯಕನು ಶತ್ರುನೌಕೆಯು ಬರುವುದನ್ನು ಅರಿಯಬಹುದು. ನೀರಿನ ಮೇಲೆ ಪೆರಿಸ್ಕೋಪು ಎಲ್ಲಿ ಕಾಣುತ್ತದೆಂದು ವ್ಯಾಪಾರಿ ನೌಕೆಗಳು ಸದಾ ನೋಡುತ್ತಲೇ ಇರಬೇಕು. ಇವುಗಳಿಂದ ನೌಕೆಗಳಿಗೆ ಬಹಳ ಅಪಾಯವಿದೆ. ಒಂದು ಕೊಳವನ್ನು ದಾಟುವಾಗ ಮೊಸಳೆಯ ಕಣ್ಣುಗಳನ್ನು ಎಚ್ಚರಿಕೆಯಿಂದ ಹೇಗೆ ನೋಡಿ ಅಪಾಯವನ್ನು ತಪ್ಪಿಸಿಕೊಳ್ಳುತ್ತೀವೆಯೋ ಹಾಗೆಯೇ ಪೆರಿಸ್ಕೋಪನ್ನು ನೋಡುತ್ತಲೇ ಇರಬೇಕು

ವಿಮಾನ ಮತ್ತು ವಿಮಾನವಾಹಕ ನೌಕೆ

ಇಂದಿನ ಯುದ್ಧಗಳಲ್ಲಿ ವಿಮಾನವು ಬಹಳ ಪ್ರಾಮುಖ್ಯವನ್ನು ವಹಿಸಿದೆ. ದೊಡ್ಡ ಬಾಂಬರುಗಳು ನಿಲ್ದಾಣದಿಂದ 2,000 ಮೈಲಿ ದೂರ ಹಾರಿ ಶತ್ರುಗಳ ನೌಕೆಗಳ ಮೇಲೆ ದಾಳಿ ನಡೆಸಬಲ್ಲುವು. ಆದರೆ ಫೈಟರ್ ವಿಮಾನಗಳು ನಿಲ್ದಾಣದಿಂದ ಬಹಳ ದೂರ ಹಾರಲಾರವು. ಆದುದರಿಂದ ಅವನ್ನು ಹಡಗುಗಳ ಮೇಲೆ ಹೊತ್ತುಕೊಂಡು ಹೋಗಬೇಕು. ಈ ಬಗೆಯ ಫೈಟರ್ ವಿಮಾನಗಳು ದೂರದಲ್ಲಿರುವ ಶತ್ರುವಿನ ಸುಳುವನ್ನು ತಿಳಿದುಕೊಂಡು ಶತ್ರುನೌಕೆಯ ಮೇಲೆ ಬಾಂಬುಗಳನ್ನು ಮತ್ತು ಟಾರ್ಪೆಡೋಗಳನ್ನು ಸುರಿಸಬೇಕು. ಅಲ್ಲದೆ ತಮ್ಮ ಕಡೆಯವರ ಫಿರಂಗಿಯಿಂದ ದೂರದಲ್ಲಿರುವ ಶತ್ರುನೆಲೆಗಳಿಂದ ನಷ್ಟವೇನೆಂಬುದನ್ನು ತಿಳಿದು ತಮ್ಮ ನೌಕೆಗೆ ವರದಿಮಾಡಬೇಕು. ಇದೆಲ್ಲಕ್ಕೂ ಮುಖ್ಯವಾಗಿ ತಮ್ಮ ನೌಕೆಗಳ ಮೇಲೆ ದಾಳಿಮಾಡಲು ಬಂದ ಶತ್ರು ವಿಮಾನಗಳನ್ನು ಧ್ವಂಸಮಾಡಬೇಕು. ಈ ರೀತಿ ವಿಮಾನಗಳನ್ನು ವಿಶೇಷರೀತಿಯ ಹಡಗುಗಳಲ್ಲಿ ಸಾಗಿಸಬೇಕು. ಹಡಗಿನ ಮೇಲ್ಭಾಗದಲ್ಲಿ ವಿಮಾನಗಳು ಇಳಿಯಲೂ ಮತ್ತು ಅಲ್ಲಿಂದ ಮೇಲಕ್ಕೆ ಏರಲೂ ಅನುಕೂಲವಾಗುವಂತೆ 250 ರಿಂದ 800 ಅಡಿ ಉದ್ದ ಮತ್ತು 60 ರಿಂದ 90 ಅಡಿ ಅಗಲವಿರುವ ಜಾಗವಿರಬೇಕು. ಇದರ ಮೇಲೆ ವಿಮಾನಗಳು ಇಳಿಯುತ್ತವೆ ಮತ್ತು ಇಲ್ಲಿಂದ ಮೇಲಕ್ಕೆ ಹಾರುತ್ತವೆ. ವಿರಾಮಕಾಲದಲ್ಲಿ ವಿಮಾನಗಳನ್ನು ಈ ಮೇಲ್ಛಾವಣಿಯ ಕೆಳಗೆ ಕಟ್ಟಿರುವ ಕೋಣೆಗಳಲ್ಲಿ ಇಡಲಾಗುವುದು. ಈ ಬಗೆಯ ಹಡಗುಗಳು ಬಹಳ ದೊಡ್ಡವಾಗಿರುವುದರಿಂದ ಶತ್ರುಗಳ ಏಟಿಗೆ ಬೇಗ ಸಿಕ್ಕಿಬೀಳುತ್ತವೆ. ಯುದ್ಧವಾರಂಭವಾದಲಾಗಾಯಿತು ಉಭಯ ಪಕ್ಷಗಳವರೂ ಈ ಬಗೆಯ ಹಡಗಗಳನ್ನು ಬಹಳವಾಗಿ ಕಳೆದುಕೊಂಡಿದ್ದಾರೆ. ಮಿತ್ರಪಕ್ಷದವರಲ್ಲಿ ಈ ಬಗೆಯ ಹಡಗುಗಳು ಹೆಚ್ಚಾಗಿದ್ದರೂ ಸಹ ಮೆಡಿಟರೇನಿಯನ್ ಮತ್ತು ಪೆಸಿಫಿಕ್ ರಣಕ್ಷೇತ್ರಗಳಲ್ಲಿ ಈ ಹಡಗುಗಳು ಇಂತಹುದೇ ವಿಮಾನವಾಹಕ ಜಹಜುಗಳ ಮೇಲಿಂದ ಬರುವ ವಿಮಾನಗಳ ಮತ್ತು ಭೂನಿಲ್ದಾಣಗಳಿಂದಲೂ ಹಾರಿಬರುವ ಶತ್ರುವಿಮಾನಗಳ ಧಾಳಿಗಳನ್ನೆದುರಿಸಬೇಕಾಗಿದೆ. ಪೆಸಿಫಿಕ್ ರಣಕ್ಷೇತ್ರದಲ್ಲಿ ಅಮೆರಿಕಾದ ವಿಮಾನಪಡೆಯು ಜಪಾನಿನ ವಿಮಾನವಾಹಕ ನೌಕೆಗಳೆಲ್ಲವನ್ನೂ ನಾಶಮಾಡಿದುದರ ಪ್ರಯುಕ್ತ ಜಪಾನಿನ ನೌಕೆಯು ಆತ್ಮರಕ್ಷಣೆಗಾಗಿ ಹಿಂದೆ ಸರಿಯಬೇಕಾಯಿತು

ಸಣ್ಣ ಹಡಗುಗಳು.

ಮೇಲೆ ಹೇಳಿದುವುಗಳೂ ಅಲ್ಲದೆ, ನೌಕಾ ದಳದಲ್ಲಿ ಇನ್ನೂ ಹಲವು ಬಗೆಯ ಹಡಗುಗಳಿವೆ. ಇವುಗಳಲ್ಲಿ ಮೈನ್ ಲೇಯರುಗಳು ಮತ್ತು ಮೈನ್ ಸ್ವೀಪರುಗಳು ಬಹು ಮುಖ್ಯವಾದವುಗಳು. ಮೈನು ಲೇಯರುಗಳು ಮೈನುಗಳೆಂಬ ಸ್ಫೋಟಕ ವಸ್ತುವನ್ನು ನೀರಿನಲ್ಲಿರುವ ಹಡಗು ಪ್ರತಿಯೊಂದು ಮೈನನ್ನೂ ಒಂದೆಡೆಯಲ್ಲಿ ನಿಲ್ಲಿಸಲು ಒಂದು ಸಾಧನವಿದೆ. ಇಂತಹ ನೂರಾರು ಮೈನುಗಳನ್ನು ಈ ಜಹಜು ಹೊತ್ತುಕೊಂಡು ಹೋಗುತ್ತದೆ. ವಿಶಾಲವಾದ ನೀರಿನ ಪ್ರದೇಶವೆಲ್ಲಾ ಈ ಮೈನುಗಳ ಸಾಲಿನಿಂದ ನೌಕೆಗಳ ಪ್ರಯಾಣಕ್ಕೆ ದುರ್ಗಮವಾಗಿ ಬಿಡುತ್ತದೆ. ಮೈನ್ ಸ್ವೀಪರ್ ಎಂಬ ಹಡಗು ಒಂದು ಕೊಕ್ಕೆಯ ಸಹಾಯದಿಂದ ಮೈನುಗಳನ್ನು ಹಿಡಿದು ನಿಲ್ಲಿಸಿರುವ ಸಾಧನೆಗಳನ್ನು ಕಿತ್ತು ಮೈನುಗಳು ಮೇಲೆ ಬರುವಂತೆ ಮಾಡಿ ಅವನ್ನು ಬಂದೂಕಿನಿಂದ ಹೊಡೆದು ಸಿಡಿದು ಹಾರಿಸುತ್ತದೆ. ಹಡಗುಗಳು ಶತ್ರು ಪ್ರದೇಶದಲ್ಲಿ ಹೋಗುವುದಕ್ಕೆ ಮೊದಲು ಮೈನ್ ಸ್ವೀಪರುಗಳು ಮೊದಲು ಮುಂದೆ ಹೋಗಿ ಇರುವ ಮೈನುಗಳನ್ನೆಲ್ಲಾ ತೆಗೆದು ದಾರಿಯನ್ನು ಸುರಕ್ಷಿತವನ್ನಾಗಿ ಮಾಡಿಕೊಡುತ್ತವೆ. ವ್ಯಾಪಾರ ನೌಕೆ ಮತ್ತು ಕಾನ್ವಾಯಿಗಳನ್ನು ರಕ್ಷಿಸಲು ಕೋರ್ವೆಟ್ಟುಗಳೆಂಬ ಒಂದು ಬಗೆಯ ಹಡಗುಗಳಿವೆ. ಇವು ಡಿಸ್ಟ್ರಾಯರುಗಳಂತೆಯೇ ಇವೆ. ಅಲ್ಲದೆ 'ಇ' ಬೋಟುಗಳೆಂಬ ಮೋಟಾರು ಬೋಟುಗಳಿವೆ. ಇವುಗಳು ಬಹು ವೇಗವಾಗಿ ಚಲಿಸಬಲ್ಲುವು. ಇವುಗಳು ಬಿಡುವ ಟಾರ್ಪೆಡೊಗಳು ಬಹು ಅಪಾಯಕರವಾದುವು. ದೊಡ್ಡ ಹಡಗುಗಳನ್ನೂ ಸಹ ಮುಳುಗಿಸಬಲ್ಲುವು. ಇವು ಹಠಾತ್ತಾಗಿ ಮುಂದೆ ನುಗ್ಗಿ ಒಂದು ಹಡಗುಗಳ ಮೇಲೆ ದಾಳಿ ನಡೆಯಿಸಿ ಬೇಗನೇ ಮಾಯವಾಗಿ ಬಿಡುತ್ತವೆ. ಅಲ್ಲದೆ ನದಿಗಳಲ್ಲಿ ಯುದ್ಧಮಾಡಲೂ, ಹಡಗುಗಳಿಗೆ ಸಾಮಾನು ಸರಂಜಾಮುಗಳನ್ನು ತೆಗೆದುಕೊಂಡು ಹೋಗಲೂ ಸಹ ಕಾವಲುಗಾರಿಕೆಯ ಕೆಲಸವನ್ನು ಮಾಡಲೂ ಸಹ ಹಲವು ಬಗೆಯ ಸಣ್ಣಸಣ್ಣ ನೌಕೆಗಳಿವೆ

ಕಾನ್‌ವಾಯಿಗಳು.

ಯುದ್ಧನೌಕೆಗಳಿಂದ ರಕ್ಷಿತವಾಗಿ ಪ್ರಯಾಣ ಮಾಡುವ ವ್ಯಾಪಾರ ನೌಕೆಗೆ ಕಾನ್‌ವಾಯಿ ಎಂದು ಹೆಸರು. ಯುದ್ಧ ನೌಕೆಗಳು ಸುತ್ತಲೂ ಶತ್ರುವಿನ ಇರವಿಕೆಯನ್ನು ಪರೀಕ್ಷಿಸುತ್ತಾ ಬರುತ್ತಿರುತ್ತವೆ. ವ್ಯಾಪಾರ ನೌಕೆಗಳು ಅವುಗಳ ನೆರಳಿನಲ್ಲಿ ಬರುತ್ತಿರುತ್ತವೆ. ಮಿತ್ರ ರಾಷ್ಟ್ರಗಳು ಒಂದರಿಂದ ಒಂದು ಬಹು ದೂರದಲ್ಲಿರುವುದರಿಂದ ಹಲವು ಯುದ್ಧಸಾಮಗ್ರಿಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಬೇಕು. ಇಂಗ್ಲೆಂಡು ಮತ್ತು ಇಂಡಿಯಾಕ್ಕೆ ಪೆಟ್ರೋಲ್ ಮತ್ತು ಎಣ್ಣೆ ಬೇಕು. ಅಮೆರಿಕಾಕ್ಕೆ ರಬ್ಬರ್ ಬೇಕು. ದಕ್ಷಿಣ ಆಫ್ರಿಕಾಕ್ಕೆ ಕಬ್ಬಿಣವು ಬೇಕು. ಇವೆಲ್ಲವನ್ನೂ ಕಾನ್‌ವಾಯಿಗಳ ಮೂಲಕವೇ ಸಾಗಿಸಬೇಕಾಗಿದೆ. ಮೊದಲು ವ್ಯಾಪಾರ ನೌಕೆಗಳೆಲ್ಲವನ್ನೂ ಒಂದೆಡೆ ಸೇರಿಸಿ ಅಲ್ಲಿಂದ ಯುದ್ಧ ನೌಕೆ, ಡಿಸ್ಟ್ರಾಯರು ಕ್ರೂಯಿಜರು ಮತ್ತು ಕೋರ್ವೆಟ್ಟುಗಳ ರಕ್ಷಣೆಯಿಂದ ಅವು ಪ್ರಯಾಣ ಮಾಡುತ್ತವೆ. ಕೆಲವು ವೇಳೆ ಶತ್ರುಗಳಿಂದ ಬಿಟ್ಟ ಮೈನುಗಳಿಗೆ ತಗಲುವುದರಿಂದ ಒಂದೆರಡು ಹಡಗುಗಳು ಮುಳುಗುವುದೂ ಉಂಟು. ಹಾಗೇನಾದರೂ ಆದಲ್ಲಿ ಹತ್ತಿರವೇ ಇರುವ ಇತರ ಹಡಗುಗಳು ಆ ಹಡಗುಗಳಲ್ಲಿರುವವರನ್ನು ರಕ್ಷಿಸುತ್ತವೆ. ಮಿತ್ರಪಕ್ಷದವರ ಕಾನ್‌ವಾಯಿಗಳು ಇಂದು ಇಂಗ್ಲೆಂಡಿನಿಂದ ರಷ್ಯಾ, ರಷ್ಯಾದಿಂದ ಅಮೆರಿಕಾ, ಅಮೆರಿಕಾದಿಂದ ಇಂಗ್ಲೆಂಡು, ಆಸ್ಟ್ರೇಲಿಯಾ ಈರೀತಿ ಸಾವಿರಾರು ಮೈಲಿ ಇರುವ ಮಿತ್ರರಾಷ್ಟ್ರಗಳಿಗೆ ಹೋಗಿಬರುತ್ತಿವೆ. ನೂರಾರು ಹಡಗುಗಳು ಸೈನಿಕರನ್ನೂ ಸರಂಜಾಮುಗಳನ್ನೂ ಈ ರೀತಿ ಸಾಗಿಸುತ್ತಿವೆ

ವ್ಯಾಪಾರ ನೌಕೆ.

ವ್ಯಾಪಾರ ನೌಕೆಗಳು ಸಂಗ್ರಾಮ ವಸ್ತುಗಳನ್ನು ಅಧಿಕ ಪ್ರಮಾಣದಲ್ಲಿ ಸಾಗಿಸುತ್ತವೆ. ಕೆಲವು ಹಡಗುಗಳು ಈಗಲೂ ಒಂದು ಬಟ್ಟೆಯ ಸಹಾಯದಿಂದ ನಡೆಯುತ್ತವೆ. ಆದರೆ ಬಹುಸಂಖ್ಯೆಯ ಹಡಗುಗಳು ಈಗ ಯಂತ್ರದಿಂದಲೇ ನಡೆಯುತ್ತವೆ. ವ್ಯಾಪಾರ ನೌಕೆಗಳು ಮಹಾಜನರಿಗೆ ಸೇರಿದುವು. ಸಾಮಾನ್ಯ ದಿನಗಳಲ್ಲಿ ಅವು ಸರಕುಗಳನ್ನು ದೇಶದಿಂದ ದೇಶಕ್ಕೆ ಸಾಗಿಸುತ್ತವೆ. ಯುದ್ಧಕಾಲದಲ್ಲಿ ಯುದ್ಧವಸ್ತುಗಳನ್ನೂ ಸೈನಿಕರನ್ನೂ ಸಾಗಿಸುತ್ತವೆ. ಇವುಗಳಲ್ಲಿ ಕೆಲವು ಯುದ್ಧನೌಕೆಗಳಿಗಿಂತಲೂ ದೊಡ್ಡವಾಗಿರುತ್ತವೆ. ಕೆಲವು ವ್ಯಾಪಾರ ನೌಕೆಗಳನ್ನು ಕೆಲವು ಬಗೆಯ ವಸ್ತುಗಳನ್ನು ಸಾಗಿಸುವುದಕ್ಕಾಗಿಯೇ ನಿರ್ಮಿಸಿರುತ್ತದೆ. ಎಣ್ಣೆಯನ್ನು ಸಾಗಿಸುವ ಹಡಗಿಗೆ ಟ್ಯಾಂಕರು ಎಂದು ಹೆಸರು. ಯುದ್ಧಕಾಲದಲ್ಲಿ ಈ ಹಡಗುಗಳಿಗೆ ಫಿರಂಗಿಗಳನ್ನು ಜೋಡಿಸಿದ್ದರೂ ಸಹ ಇವು ಶತ್ರು ಫಿರಂಗಿಗಳ ಮತ್ತು ಟಾರ್ಪೆಡೋಗಳ ಹೊಡೆತವನ್ನು ತಡೆಯಲಾರವು. ಬೇಗನೆ ಮುಳುಗಿಬಿಡುತ್ತವೆ. ಇಂತಹ ಹಡಗುಗಳಲ್ಲಿ ಕೆಲಸ ಮಾಡುವುದೂ ಸಹ ಬಹಳ ಅಪಾಯಕರ. ಇಂತಹ ಕಷ್ಟಗಳನ್ನೆದುರಿಸಿ ನಮಗಾಗಿ ಹಲವು ವಸ್ತುಗಳನ್ನು ಬೇರೆ ದೇಶಗಳಿಂದ ತಂದು ಒದಗಿಸುತ್ತಿರುವ ಧೀರ ನಾವಿಕರಿಗೆ ನಾವು ಕೃತಜ್ಞರಾಗಿರಬೇಕು. ಭಾರತಕ್ಕೆ ಸೀಮೆ ಎಣ್ಣೆಯು ಪರದೇಶದಿಂದ ಬರಬೇಕು. ನಾವು ಉರಿಸುವ ಪ್ರತಿಯೊಂದು ಬುಡ್ಡಿ ಸೀಮೆಎಣ್ಣೆಯನ್ನೂ ಸಹ ಧೀರರಾದ ನಾವಿಕರು ತಮ್ಮ ಜೀವವನ್ನು ದೊಡ್ಡ ಅಪಾಯಕ್ಕೀಡುಮಾಡಿ ತಂದೊದಗಿಸಿರುತ್ತಾರೆಂಬುದನ್ನು ಮರೆಯಕೂಡದು

ಜಪಾನ್ ವಿಮಾನದಾಳಿ

ಕಳೆದ 6ನೇ ತಾ॥ ಮಧ್ಯಾಹ್ನ ಕಾವಲು ವಿಮಾನಗಳಿಂದ ರಕ್ಷಿತವಾದ ಜಪಾನ್ ಬಾಂಬರುಗಳು ಆಗ್ನೇಯ ಬಂಗಾಳದ ವಿಮಾನ ನಿಲ್ದಾಣವೊಂದರ ಮೇಲೆ ದಾಳಿ ಮಾಡಿದವು. ನಷ್ಟ ಮತ್ತು ಸಾವು ನೋವುಗಳು ಅಲ್ಪವಾಗಿ ಸಂಭವಿಸಿದವು

ರಷ್ಯಕ್ಕೆ ಭಾರತದ ವಸ್ತುಗಳು

ಭಾರತದಿಂದ ಸೆಣಬು, ನೆಲಗಡಲೆ, ಟೀ, ತೊಗಲು, ಅರಗು ಮತ್ತು ಹತ್ತಿದಾರ ಇತ್ಯಾದಿ ವಸ್ತುಗಳು ರಷ್ಯಕ್ಕೆ ಸರಬರಾಯಿಯಾಗುತ್ತವೆ. ಇವುಗಳನ್ನು ಕರಾಚಿಯಿಂದ ಹಡಗಿನಲ್ಲಿ ತುಂಬಿಕಳಿಸಿ, ಅನಂತರ ಭೂಮಾರ್ಗವಾಗಿ ರಷ್ಯಕ್ಕೆ ಕಳಿಸಲಾಗುತ್ತವೆ.

ರಷ್ಯಾಗಡಿಯಲ್ಲಿ ಜಪಾನರ ರಕ್ಷಣಾವ್ಯವಸ್ಥೆ

ಮಂಚುಕೋ ಸರ್ಕಾರದ ಪೂರ್ಣ ಸಹಕಾರದೊಡನೆ ಉತ್ತರದಲ್ಲಿರುವ ರಕ್ಷಣಾ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಲಾಗಿದೆ. ಮಂಚುಕೋ ಸಹಕಾರವಿರುವುದರಿಂದ ಕ್ವಾಂಟಾಂಗ್ ಸೈನ್ಯವು ಗಡಿಯನ್ನು ಬಹಳ ಎಚ್ಚರಿಕೆಯಿಂದ ಕಾಯ್ದುಕೊಳ್ಳುವದೆಂದು ಜಪಾನ್ ಮಹಾಪ್ರಧಾನರಾದ ಜನರಲ್ ಟೋಜೋರವರು ಹೇಳಿದುದಾಗಿ ಪ್ರಕಟವಾಗಿದೆ

ಹಿಟ್ಲರ್-ಮುಸ್ಸೋಲಿನಿ ಮಂತ್ರಾಲೋಚನೆ

ಆಫ್ರಿಕದಲ್ಲಾಗುತ್ತಿರುವ ಸೋಲಿನಿಂದ ಭಯಭೀತರಾದ ಹೆರ್ ಹಿಟ್ಲರ್ ಮತ್ತು 'ಸಿನ್ಯೊರ್ ಮುಸ್ಸೋಲಿನಿಗಳು ಮುಂದೆ ಯೂರೋಪಿನಮೇಲೆ ಮಿತ್ರರಾಷ್ಟ್ರಗಳವರು ದಂಡಯಾತ್ರೆ ನಡೆಸುವದನ್ನು ಎದುರಿಸಲು ಯೂರೋಪಿನಲ್ಲಿ ಯಾವರೀತಿ ರಕ್ಷಣ ವ್ಯವಸ್ಥೆಯನ್ನು ಏರ್ಪಡಿಸಬೇಕೆಂಬ ವಿಷಯವನ್ನು ನಿರ್ಧರಿಸುವದಕ್ಕಾಗಿ ಒಟ್ಟಿಗೆ ಕೂಡಿ ಮಾತುಕತೆನಡೆಸುತ್ತಿರುವರೆಂದು ಸ್ವಿಸ್ ವರದಿಯು ತಿಳಿಸುತ್ತದೆ

ಹಸಿದ ಸ್ತ್ರೀಯರ ಅನ್ನಯಾತ್ರೆ.

ಕಳೆದ ಮಾರ್ಚಿ 17ನೆಯ ತಾರೀಖಿನ ದಿವಸ ಕಲ್ಕತ್ತೆಯಲ್ಲಿ 5,000 ಜನ ಹೊಟ್ಟೆಗಿಲ್ಲದೆ ಹಸಿವಿನಿಂದ ಕಂಗೆಟ್ಟ ಸ್ತ್ರೀಯರು ಸಿಸ್ತಿನಿಂದ ಶಾಂತರೀತಿಯಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಸ್ತ್ರೀ ಸದಸ್ಯರ ನಾಯಕತ್ವದಲ್ಲಿ ಹಿಂದೂ ಮುಸ್ಲಿಂ ಎಂಬ ಭೇದಭಾವವನ್ನು ತೊರೆದು ಮೆರವಣಿಗೆಯಿಂದ ಹೊರಟು ಬಂಗಾಳದ ನ್ಯಾಯವಿಧಾಯಕ ಸಭಾಂಗಣವನ್ನು ಸೇರಿದರು. "ಬಡಜನರಿರುವ ಪ್ರದೇಶಗಳಲ್ಲಿ ಧಾನ್ಯಗಳ ಅಂಗಡಿಗಳನ್ನು ತೆರೆಯಬೇಕು ಎಲ್ಲರಿಗೂ ನಿಯಮಿತ ದರದಲ್ಲಿ ಅಕ್ಕಿಯೇ ಮೊದಲಾದ ಧಾನ್ಯಗಳು ದೊರೆಯುವಂತಾಗಬೇಕು. ಜನತೆಯ ರಕ್ಷಣಾ ಸಮಿತಿಗಳನ್ನು ಸರ್ಕಾರವು ಒಪ್ಪಿಕೊಳ್ಳಬೇಕು' ಎಂಬ ಹೇಳಿಕೆಗಳನ್ನು ಮಂತ್ರಿಗಳ ಮುಂದಿಟ್ಟರು. ಮಹಾಪ್ರಧಾನರಾದ ಶ್ರೀ ಫಜ್ಲುಲ್ ಹಕ್ಕರೂ ಇತರ ಮಂತ್ರಿಗಳೂ ಈ ಕಾರ್ಯಕ್ರಮ ಕೈಗೊಳ್ಳಲು ತಾವು ಅಶಕ್ತರೆಂಬುದನ್ನು ವ್ಯಕ್ತಪಡಿಸಿ ಸ್ತ್ರೀಯರನ್ನು ಸಮಾಧಾನಪಡಿಸಲು ಯತ್ನಿಸಿದರು. ಆದರೆ 'ಹಸಿದವರಿಗೆ ಮಂತ್ರೋಪದೇಶವೇಕೆ?" ನಾವು ಅನ್ನವು ದೊರೆಯದಿದ್ದರೆ ಹಿಂತಿರುಗಲಾರೆವೆಂದರು. ಕೊನೆಗೆ ಈ ಮಾತೆಯರ ತಪಸ್ಸು ಫಲಿಸಿತು. ನ್ಯಾಯವಿಧಾಯಕ ಸಭೆಯ ಸದಸ್ಯರು ತಮ್ಮ ಸ್ವಂತ ಖರ್ಚಿನಿಂದ ಕೂಡಲೇ ನೂರು ಮಣ ಅಕ್ಕಿಯನ್ನು ಹಂಚಿದರು. ತಮ್ಮಿಂದಾದ ಸಕಲ ಯತ್ನವನ್ನೂ ಮಾಡುವ ಭರವಸೆಯಿತ್ತರು. ತಮ್ಮ ಇಷ್ಟಾರ್ಥವನ್ನು ಪಡೆದ 5,000 ಜನ ಸ್ತ್ರೀಯರು "ಅನ್ನ ದೊರೆಯದಿದ್ದರೆ ಪುನಃ ಬರುತ್ತೇವೆ" ಎಂದು ಹೇಳಿ ಹಿಂದಕ್ಕೆ ಹೋದರು

ಶ್ರೀಮಜ್ಜಗದ್ಗುರು ರೇಣುಕಾಚಾರ್ಯರ ಜಯಂತೀಮಹೋತ್ಸವ ಸಮಾರಂಭ

ಬೆಂಗಳೂರು

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವದ ಸಮಾರಂಭವು ಬೆಂಗಳೂರು ಸಿಟಿ ಚಿಕ್ಕಪೇಟೆಯಲ್ಲಿರುವ ಶ್ರೀ ಮಹಾಂತಿನ ಮಠದಲ್ಲಿ ತಾ॥ ೧೯-೩-೪೩ನೇ ಶುಕ್ರವಾರದಿಂದ ಈವರೆಗೂ ಅತಿ ವೈಭವದಿಂದ ನಡೆಯುತ್ತ ಬಂದಿರುವದು. ಪ್ರತಿದಿವಸ ಜಯಂತೀಮಹೋತ್ಸವದ ಮಂಟಪದಲ್ಲಿ ನಡೆಯುತ್ತಿರುವ ಶ್ರೀ ರೇಣುಕವಿಜಯ ಮಹಾಪುರಾಣ ಶಿವಕೀರ್ತನೋಪನ್ಯಾಸಾದಿಗಳನ್ನು ಕೇಳಲು ಬೆಂಗಳೂರು [illegible]ಗಳಾದ ಸಾವಿರಾರು ಜನರು ಬರುತ್ತಿರುವರು. ತಾ॥ ೨೧-೩-೪೩ನೇ [illegible]ವಾರ ಶ್ರೀ ರೇಣುಕವಿಜಯ ಮಹಾಪುರಾಣದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಕಥೆಯು ನಡೆಯಿತು. ಆ ದಿನ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಏಕದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನಾದಿಗಳು ನಡೆಸಿದ ಮೇಲೆ ಬೆಂಗಳೂರು ನಗರ ನಿವಾಸಿಗಳಾದ ಶ್ರೀಮಾನ್ ಯಜಮಾನ ಕೆಂಚಪ್ಪನವರು ಶ್ರೀಮಾನ್ [illegible] ಪ್ಪನವರು ಭಕ್ತಿಪೂರ್ವಕವಾಗಿ ಗಣಾರಾಧನೆಯನ್ನು ನಡೆಯಿಸಿ ಗುರುಕೃಪೆಗೆ ಪಾತ್ರರಾದರು.

ತರುವಾಯ ಸಾಯಂಕಾಲ ೭ ಘಂಟೆಯಿಂದ ಜಯಂತೀ ಮಹೋತ್ಸವದ ಮಂಟಪದಲ್ಲಿ ಸರ್ವರೂ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಕಥೆಯನ್ನು ಕೇಳಿ ಆನಂದಭರಿತರಾದರು. ನಂತರ ಸರ್ವರಿಗೂ ಪ್ರಸಾದ ವಿನಿಯೋಗವಾಗಿ ಅಂದಿನ ಕಾರ್ಯಕ್ರಮವು ಸಮಾಪ್ತಿಗೊಂಡಿತು.

ಸ್ವಭಾನುಸಂವತ್ಸರ ಚೈತ್ರ ಶು॥ ೧ ಸೋಮವಾರ ಪ್ರಾತಃಕಾಲ ನೂತನ ವರ್ಷಾರಂಭದ ನಿಮಿತ್ತವಾಗಿ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಬಿಲ್ವಾರ್ಚನಾದಿಗಳು ನಡೆದವು. ಸಾಯಂಕಾಲ ೬ ಘಂಟೆಯಿಂದ ಜಯಂತೀಮಹೋತ್ಸವದ ಮಂಟಪದಲ್ಲಿ ಶ್ರೀಮಜ್ಜಗದ್ಗುರು ರೇಣುಕ ಪುರಾಣ ಶ್ರವಣವೂ ಸ್ವಭಾನುಸಂವತ್ಸರದ ಪಂಚಾಂಗ ಶ್ರವಣವೂ ನಡೆದವು. ತರುವಾಯ ಪರಮ ತಪೋನಿಧಿಗಳೂ ಮಹಾಂತಿನ ಮಠಾಧ್ಯಕ್ಷರೂ ಆದ ಶ್ರೀ ಷ॥ ಬ್ರ॥ ಗಂಗಾಧರ ಶಿವಾಚಾರ್ಯಸ್ವಾಮಿಗಳವರು ನೂತನ ಸಂವತ್ಸರದ ಶುಭಾಗಮನರೂಪವಾದ ಭಾಷಣವನ್ನು ಮಾಡಿದರು. ಆನಂತರ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಹಾಮಂಗಳಾರತಿ ಪುಷ್ಪಾಂಜಲಿಗಳು ಸಮರ್ಪಿಸಲ್ಪಟ್ಟವು. ತರುವಾಯ ಶ್ರೀಮನ್ಮಹಾರಾಜರ ಕ್ಷೇಮ ಪ್ರಾರ್ಥನೆಯು ಮಾಡಲ್ಪಟ್ಟಿತು. ಸರ್ವರಿಗೂ ಪ್ರಸಾದ ವಿನಿಯೋಗವಾದ ಮೇಲೆ ಜಗದಾಚಾರ್ಯರ ಜಯಘೋಷಪೂರ್ವಕ ಅಂದಿನ ಕಾರ್ಯಕ್ರಮವು ಸಮಾಪ್ತಿಗೊಂಡಿತು. ಈ ಜಯಂತೀಮಹೋತ್ಸವದ ಸಮಾರಂಭ ಕಾರ್ಯವು ಇನ್ನೂ ೨೦ ದಿನಗಳವರೆಗೂ ನಡೆಯುವುದು.

ಓರ್ವ ಗುರುಭಕ್ತ

ಶ್ರೀಜಗದ್ಗುರುರೇಣುಕಜಯಂತೀಮಹೋತ್ಸವ,

ತಿಪಟೂರು.

ತಾ॥ ೧೯-೩-೧೯೪೩ನೇಯ ಶುಕ್ರವಾರ ಪ್ರಾತಃಕಾಲ ೯ ಘಂಟೆಗೆ ಶ್ರೀರೇಣುಕರ ಭಾವಚಿತ್ರಕ್ಕೂ ಶ್ರೀನಂದೀಶ್ವರನಿಗೂ ರುದ್ರಾಭಿಷೇಕವೂ ಷೋಡಶೋಪಚಾರ ಪೂಜೆಯೂ ನಡೆಯಿತು. ೧೨ ಘಂಟೆಗೆ ಸುಮಂಗಲೆಯರು ತಂಡೋಪತಂಡವಾಗಿ ಬಂದು ಫಲಪುಷ್ಪಕರ್ಪೂರಗಳನ್ನರ್ಪಿಸಿ ತೀರ್ಥಪ್ರಸಾದಗಳನ್ನು ಸ್ವೀಕರಿಸಿ ಧನ್ಯರಾದರು. ಸಾಯಂಕಾಲ ೫ ಘಂಟೆಗೆ ಮಹಾಮಂಗಳಾರತಿಯಾಗಿ ನೆರೆದ ಭಕ್ತವೃಂದಕ್ಕೆ ಪ್ರಸಾದವಿನಿಯೋಗವಾಯಿತು. ಅದೇ ದಿವಸ ಸಾಯಂಕಾಲ ೭ ಘಂಟೆಗೆ ಮ॥ ರಾ॥ ನಾಸಲು ರೇವಣಶೆಟ್ಟರ ಕಾಂಪೌಂಡಿನಲ್ಲಿ ವಿದ್ಯುದ್ದೀಪಾವಳಿಗಳಿಂದ ರಚಿಸಿದ ಭವ್ಯವಾದ ಪೆಂಡಾಲಿನಲ್ಲಿ, ಶ್ರೀ ಎಚ್ ಕೆ ವೀರಬಸವಯ್ಯನವರು ರಿಟೈರ್ಡ್ ಸೆಷನ್ಸ್ ಜಡ್ಜ್ ಇವರ ಅಧ್ಯಕ್ಷತೆಯಲ್ಲಿ ಸಭೆಯು ಕೂಡಿತು. ಪ್ರೋಗ್ರಾಂಪ್ರಕಾರ ಎ ಎಂ ಎಸ್ ಸುವರ್ಣಮ್ಮನೆಂಬ ಬಾಲಿಕೆಯಿಂದ ರೇಣುಕರ ಲೀಲಾವಳಿಯ ಪಠನವು ಬಹು ಮನೋರಂಜಕವಾಗಿ ನಡೆಯಿತು. ತದನಂತರ ವೇ॥ ಆರ್ ಎ ಮಲ್ಲಿಕಾರ್ಜುನಾರಾಧ್ಯರಿಂದ ವಿರಚಿತವಾದ ದಿವ್ಯ ವಚನಗಳ ಪ್ರವಚನವು ಬಾಲ ಬಾಲಿಕಾಮಂಡಲಿಯಿಂದ ಮನೋಹರವಾಗಿ ನಡೆಯಿತು. ತರುವಾಯ ಸಿಕಂದ್ರಾಬಾದಿನಿಂದ ಆಗಮಿಸಿದ್ದ ವೇದ ಕಾವ್ಯ ಸ್ಮೃತಿ ತೀರ್ಥ ಸಾಹಿತ್ಯವಿಶಾರದ-ಧರ್ಮಾಚಾರ್ಯ ವಿದ್ಯಾನಿಧಿ ವಿದ್ಯಾರತ್ನ ಇತ್ಯಾದಿ ಪದವೀಭೂಷಿತರಾದ ವೇ॥ ಚಿವರೆ ಮಠದ ವೀರಭದ್ರಶಾಸ್ತ್ರಿಗಳವರು ಅನೇಕಾಧಾರಗಳಿಂದ ರೇಣುಕರ ವಿಷಯದಲ್ಲಿ ದೀರ್ಘವಾದ ಭಾಷಣಮಾಡಿದರು. ತಾ ೨೦-೩-೪೩ನೇ ಶನಿವಾರ ಪಂಡಿತರು ಶ್ರೀ ಎಸ್ ಕೆ ತಿರುಮಲಾಚಾರ್ಯ ಪ್ರೀಸ್ಟ್ ಮಾಸ್ಟರ್ ಇವರ ಅಧ್ಯಕ್ಷತೆಯಲ್ಲಿ ಆರ್ಯದ್ರಾವಿಡ ಪರಿಚಯ ವಿಷಯವಾಗಿ ವೇದಾಗಮಪುರಾಣೇತಿಹಾಸ ಶ್ರುತಿ ಸ್ಮೃತ್ಯಾದಿಗಳ ಆಧಾರದಿಂದ ಯುಕ್ತಿಯುಕ್ತವಾಗಿ ಬಹು ಸರಸವಾದ ಭಾಷಣವನ್ನು ೩ ಘಂಟೆಗಳ ಕಾಲ ಮಾಡಿದರು. ಅಧ್ಯಕ್ಷರ ಉಪಸಂಹಾರ ಭಾಷಣ ವಂದನಾರ್ಪಣೆ ಮಂಗಳಾರತಿಯಾದನಂತರ ಭಗವತ್ಪಾದರ ಜಯಜಯಕಾರವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಸಾಕ್ಷಾತ್ ಬೃಹಸ್ಪತಿಯಂತೆ ವಿಷಯಗಳನ್ನು ಪ್ರತಿಪಾದಿಸುತ್ತಿದ್ದ ಪಂಡಿತಮಹೋದಯರ ಬೋಧಾಮೃತವನ್ನು ಸನಾತನ ಧರ್ಮಾಭಿಮಾನಿಗಳು ಪಾನಮಾಡಿ ಆನಂದಸಾಗರದಲ್ಲಿ ಓಲಾಡಿದರು. ವೀರಶೈವ ಜನಾಂಗದ ವಿದ್ವಾಂಸರೂ ಧರ್ಮಾಭಿಮಾನಿಗಳೂ ಧರ್ಮಪ್ರಚಾರ ಕಾರ್ಯದಲ್ಲಿ ಈ ರೀತಿ ಶ್ರದ್ಧೆಯನ್ನು ವಹಿಸಿದರೆ ಆಚಾರ್ಯತತ್ವ ದುಂದುಭಿಯು ಸರ್ವತ್ರ ಮೊಳಗುವುದರಲ್ಲಿ ಸಂದೇಹವಿಲ್ಲ.

ತಾ ೨೪-೩-೪೩ನೇ ಬುಧವಾರ ಸಾಯಂಕಾಲ ೯ ಘಂಟೆಗೆ ಸುಂದರವಾಗಿ ಶೃಂಗರಿಸಲ್ಪಟ್ಟ ಪುಷ್ಪಮಂಟಪದಲ್ಲಿ ಗುರುಸಾರ್ವಭೌಮನ ಉತ್ಸವವು ಸಕಲ ವಾದ್ಯ ವೈಭವದೊಡನೆ ವೃಷಭೇಶಾಲಯದಿಂದ ಹೊರಟಿತು. ಹೀಗೆ ಬಹು ಸಡಗರದಿಂದ ಹೊರಟ ಉತ್ಸವವು ಸನಾತನ ಧರ್ಮಶೀಲರಾದ ಸರ್ವಮತೀಯರಿಂದ ಅರ್ಚಿಸಲ್ಪಡುತ್ತಿದ್ದ ಫಲಪುಷ್ಪಕರ್ಪೂರಗಳನ್ನು ಸ್ವೀಕರಿಸುತ್ತಾ ನೋಟಕರ ಕಣ್ಮನಂಗಳಿಗೆ ಆನಂದವನ್ನು ಬೀರುತ್ತ ಸಮಸ್ತ ರಾಜಬೀದಿಗಳಲ್ಲಿ ಸಂಚರಿಸಿ ೧ ಘಂಟೆಗೆ ಸ್ವಸ್ಥಾನವನ್ನು ಸೇರಿತು. ಮಹಾಮಂಗಳಾರತಿಯಾಗಿ ಪ್ರಸಾದವು ಹಂಚಲ್ಪಟ್ಟು ಆಚಾರ್ಯರ ಜಯಘೋಷದೊಡನೆ ಜಯಂತೀ ಕಾರ್ಯವು ಸಮಾಪ್ತಿಗೊಂಡಿತು.

ಸಾರಾಸಾರ ವಿಚಾರ ಶೀಲರೇ, ಯಾವ ಭಗವತ್ಪಾದರ ಜಯಂತಿಯ ನಿಮಿತ್ತವಾಗಿ ನಾವು ಈಗ ೫೬ ದಿವಸಗಳನ್ನು ಒಂದು ನಾಡು ಹಬ್ಬದಂತೆ ಅತಿ ಸಂಭ್ರಮದಿಂದಲೂ ಬಹು ಸಂತೋಷದಿಂದಲೂ ಕಾಲವನ್ನು ಕಳೆದೆವೋ ಆ ಜಗದಾಚಾರ್ಯ ರೇಣುಕ ಗುರುಮೂರ್ತಿಯಲ್ಲಿ ಅನ್ಯಾದೃಶವಾದ ಭಕ್ತಿವಿಶ್ವಾಸಗಳನ್ನಿಟ್ಟು ವರ್ತಿಸಬೇಕು. ಆ ಪವಿತ್ರಾತ್ಮರ ಪವಿತ್ರ ಚರಿತ್ರಗಳನ್ನು ಶ್ರದ್ಧೆಯಿಂದ ಕೇಳಬೇಕು. ಶ್ರದ್ಧಾಪೂರ್ವಕವಾಗಿ ಅವರ ಪೂಜೆಯಲ್ಲಿ ನಿರತರಾಗಬೇಕು. ಜಾಗ್ರತ್ಸ್ವಪ್ನಸುಷುಪ್ತ್ಯವಸ್ಥೆಗಳಲ್ಲಿಯೂ ಆ ದಿವ್ಯದೇಹಧಾರಿಗಳ ಪಾದಾರವಿಂದಗಳಲ್ಲಿ ಮನಸ್ಸನ್ನು ಲಯಗೊಳಿಸಬೇಕು. ಅವರ ತತ್ವಪ್ರಸಾರಕ್ಕಾಗಿ ಧನವನ್ನು ವಿನಿಯೋಗಿಸಬೇಕು. ಆ ಮಹಾಮಹಿಮರು ಬೋಧಿಸಿರುವ ಅಷ್ಟಾವರಣ ಪಂಚಾಚಾರ, ಷಟ್‌ಸ್ಥಲ ಚಾತುರ್ವರ್ಣ್ಯ, ಚತುರಾಶ್ರಮ ಶಿಖಾಧಾರಣ, ಪಂಚಸೂತಕಗಳನ್ನೂ ವೇದ ಆಗಮ-ಶ್ರುತಿ-ಸ್ಮೃತಿಗಳನ್ನೂ ಮನ್ನಿಸಬೇಕು. ಆ ಗುರೂತ್ತಮರು ಪರಶಿವನಿಗೆ ಅಭಿನ್ನರೆಂದು ತಿಳಿದು ನಡೆಯಬೇಕು. ತನುಮನೋಧನಗಳಿಂದ ಅವರ ಸೇವೆಯನ್ನು ಕೈಕೊಳ್ಳಬೇಕು. ನಮ್ಮ ಸರ್ವಸ್ವವೆಲ್ಲವೂ ಶ್ರೀಗುರುವಿನದೆಂದು ಭಾವಿಸಿ ವರ್ತಿಸಬೇಕು. ಇದೇ ನಿಜವಾದ ವೀರಶೈವನ ಆಚರಣೆಯಾಗಿರುವುದು. ಮೋಕ್ಷಮೂಲಂ ಗುರೋಃ ಕೃಪಾ ಎಂಬ ಗುರುಗೀತಾ ವಾಕ್ಯದಂತೆ ಮಾನವ ಜನ್ಮದ ಮುಖ್ಯಧ್ಯೇಯವಾದ ಮೋಕ್ಷಕ್ಕೆ ಗುರುವೇ ಮೂಲನಾಗಿರುವನು. ಆದುದರಿಂದ ಸನಾತನಮತಾನುಯಾಯಿಗಳಾದ ಸಮಸ್ತ ವೀರಶೈವರೂ ಅಸಾಧಾರಣ ಮಹಿಮಶಾಲಿಗಳಾದ ತಮ್ಮ ಮತಾಚಾರ್ಯರಲ್ಲಿ ಶ್ರದ್ಧಾಭಕ್ತಿಗಳನ್ನಿಟ್ಟು ಆ ಮಹಿಮರ ಅನುಗ್ರಹವನ್ನು ಪಡೆಯಬೇಕು.

ಭಕ್ತವತ್ಸಲನಾದ ಗುರುದೇವಾ, ಈ ಮಹಾಕಾರ್ಯದಲ್ಲಿ ವಿಶೇಷ ಶ್ರದ್ಧೆಯನ್ನು ವಹಿಸಿದ್ದ ವೇ॥ ಜಿ ತಮ್ಮಯ್ಯನವರು, ವೇ॥ ಎ ಎಂ ಶಿವಲಿಂಗಾರಾಧ್ಯರು, ಎ ಎಂ ಚಿಕ್ಕಣ್ಣಾರಾಧ್ಯರು, ಜಿ ಗಂಗಾಧರಯ್ಯನವರು, ಶ್ರೀಮಾನ್ ನಾಸಲು ಮುರಿಗಪ್ಪನವರು, ಸಿ ಕೆ ಕಪ್ಪಣ್ಣನವರು, [illegible] ಆನರರಿ ಸಕ್ರೆಟರಿ ಬಿ ಎಸ್ ಮಹಾಲಿಂಗಪ್ಪನವರು, ಎಚ್ ಎಂ ಶಾಂತಣ್ಣನವರು ಇವರುಗಳಿಗೂ ನಿನ್ನ ಭಕ್ತವೃಂದಕ್ಕೂ ಆಯುರಾರೋಗ್ಯೈಶ್ವರ್ಯಾದಿಗಳನ್ನು ದಯಪಾಲಿಸಿ ತನ್ಮೂಲಕ ಪರಗುರು ಸೇವೆ, ಗ್ರಂಥಮುದ್ರಣ ಸನಾತನಧರ್ಮೋದ್ಧಾರಕಾರ್ಯಗಳು ನಡೆಯುವಂತೆ ಕೃಪೆಮಾಡು!

ಎಲೈ ದಯಾಮಯನೇ, ನಾವು ಅಸಹಾಯರು, ಧೈರ್ಯಹೀನರು ನಿರುತ್ಸಾಹಿಗಳು ನೈಸರ್ಗಿಕವಾದ ದಯೆಯನು ಪಡೆಯುವೆವೆಂಬ ಆಶಾಮಾತ್ರದಿಂದಲೇ ಧೈರ್ಯೋತ್ಸಾಹಗಳನ್ನು ಹೊಂದಿ ಮುಂದುವರೆಯುತ್ತಿರುವೆವು. ನಿರಾಶ್ರಿತರಿಗೆ ನೀನೇ ಆಶ್ರಯನು. ಆದುದರಿಂದ ನಿನ್ನ ಧ್ಯಾನವು ನಮ್ಮಲ್ಲಿ ತೈಲಧಾರೆಯಂತೆ ನಿಲ್ಲುವ ಕೃಪೆ ಮಾಡು! ನಿನ್ನ ಧ್ಯಾನದಲ್ಲಿ ಆಸಕ್ತರಾಗಿ ವಿಷಯಾಸಕ್ತಿಯನ್ನು ದೂರೀಕರಿಸುವ ಹಾಗೆ ವೈರಾಗ್ಯಸಂಪತ್ತನ್ನು ಕರುಣಿಸು! ನಿನ್ನ ಧ್ಯಾನದಲ್ಲಿ ದತ್ತಚಿತ್ತರಾಗಿ ನಾನು ನಮ್ಮದು ಇತ್ಯಾಕಾರಕವಾದ ಅಹಂಕಾರ ಮಮಕಾರ ರೂಪವಾದ ಅಜ್ಞಾನವು ದೂರವಾಗುವಂತೆ ಜ್ಞಾನವನ್ನು ದಯಪಾಲಿಸು!

ತಿಪಟೂರಿನಲ್ಲಿ ಬರಬರುತ್ತ ಆಚಾರ್ಯ ತತ್ವಪ್ರಭೆಯು ವಿಶೇಷವಾಗಿ ಬೆಳಗುತ್ತಿರುವವನ್ನು ನೋಡಿದರೆ ಆತ್ಮಾನಂದವೆನಿಸುತ್ತದೆ. ಇದೆಲ್ಲಕ್ಕೂ ಆಚಾರ್ಯ ತತ್ವಾಭಿಮಾನಿಗಳ ಧೈರ್ಯೋತ್ಸಾಹಗಳೇ ಕಾರಣ! ತಿಪಟೂರಿನ ಭಕ್ತರೇ ಧನ್ಯರು! ಪರಮಧನ್ಯರು!!

ಸರ್ವೇ ಜನಾಸ್ಸುಖಿನೋ ಭವಂತು

ಆರ್. ಎ. ಮಲ್ಲಿಕಾರ್ಜುನಾರಾಧ್ಯ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಹರಲಾಪುರ

ಪ್ರತಿವರ್ಷ ಪದ್ಧತಿ ಪ್ರಕಾರ ಈ ವರ್ಷವೂ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವವನ್ನು ಗದಗೇರಿ ತಾ॥ ಹರಲಾಪುರಗ್ರಾಮದ ಸಕಲ ಮಹನೀಯರು ಫಾಲ್ಗುಣ ಶು॥ ೧೩ ದಿವಸ ಮಹಾ ಸಂಭ್ರಮದೊಡನೆ ನೆರವೇರಿಸಿದರು. ಸರ್ವರ ಸದನದೂ ತಮ್ಮ ತಮ್ಮ ಮನೆಗಳನ್ನು ತಳಿರು ತೋರಣಗಳಿಂದ ಅಲಂಕರಿಸಿ ದೊಡ್ಡ ಹಬ್ಬದಂತೆ ಆಚರಿಸಿದರು. [illegible] ವೀರಶೈವ ಮತೀಯರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಜಂಗಮಾರಾಧನೆಯನ್ನು ಮಾಡಿ ಪಾದೋದಕ ಪ್ರಸಾದವನ್ನು ಸೇವಿಸಿ ಧನ್ಯರಾದರು. ಶ್ರೀ ಜಗದ್ಗುರು ರೇಣುಕಾಚಾರ್ಯರ ದಿವ್ಯ ಲೀಲಾಸಹಿತ ಚಿತ್ರಪಟವನ್ನು ಚಿತ್ರವಿಚಿತ್ರವಾಗಿ ಶೃಂಗರಿಸಿ ಪುಷ್ಪ ತಳಿರು ತೋರಣ ಬಾಳೆ ಕಬ್ಬುಗಳನ್ನು ಕಟ್ಟಿದ್ದ ಗಾಡಿಯಲ್ಲಿಟ್ಟು ನಾಲ್ಕು ಎತ್ತುಗಳನ್ನು ಹೂಡಿ ಡೊಳ್ಳು ಭಜನೆ ಮೊದಲಾದವುಗಳೊಂದಿಗೆ ಉತ್ಸವವು ಹಿರಿಯ ಮಠದಿಂದ ಹೊರಟಿತು. ಈ ಮಹೋತ್ಸವದಲ್ಲಿ ಸಕಲ ಮತೀಯರೂ ಕಾಯಿ ಕರ್ಪೂರಗಳನ್ನರ್ಪಿಸಿ ಪ್ರಸಾದವನ್ನು ಪಡೆಯುತ್ತಿದ್ದರು. ಅನೇಕ ಜನ [illegible] ಹಿಡಿದುಕೊಂಡು ಶ್ರೀ ರೇಣುಕರ ಮಂಗಲ ಗೀತೆಗಳನ್ನು ಮಂಜುಳ ಸ್ವರದಿಂದ ಹಾಡುತ್ತ ಸಾಗಿದ್ದರು. ಈ ರೀತಿ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಯ್ದು ಶಂಕರಲಿಂಗನ ದೇವಾಲಯಕ್ಕೆ ಬಂದು [illegible] ರಾತ್ರಿ ೮ ಘಂಟೆಗೆ ಹಿರಿಯ ಮಠಕ್ಕೆ ಬಂದು ತಲ್ಪಿತು. ಆನಂತರ ಸಭೆಯು ಪ್ರಾರಂಭವಾಯಿತು. ಮೊದಲು ವೇ॥ ಪಟ್ಟದಯ್ಯನವರು [illegible] ಪ್ರಾಸ್ತಾವಿಕ ಭಾಷಣವನ್ನು ಮಾಡಿದರು. [illegible] ಕೌನ್ಸಿಲರ್ [illegible] ಶ್ರೀಮಾನ್ [illegible] ಸಿದ್ಧಪ್ಪನವರು ಜಯಂತಿಯ ಮಹತ್ವ ಮತ್ತು ಶ್ರೀಜಗದಾಚಾರ್ಯರು ಜಗತ್ತಿನಲ್ಲಿ ಎಸಗಿದ ಅನೇಕ ಅದ್ಭುತ ಲೀಲೆಗಳನ್ನು ಕುರಿತು ಭಾಷಣ ಮಾಡಿದರು. ಆ ಮೇಲೆ ವೇ॥ ಪಟ್ಟದಯ್ಯನವರು ಹಿರಿಯ ಮಠ ಇವರು ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲೆಗಳಲ್ಲೊಂದಾದ "ಗೋರಕ್ಷಗರ್ವಹರಣ" ವೆಂಬ ಲೀಲೆಯನ್ನು ಸರ್ವರಿಗೂ ಚನ್ನಾಗಿ ತಿಳಿಯುವಂತೆ ಹೇಳಿ ಸರ್ವರಿಗೂ ಸಂತೋಷವನ್ನುಂಟುಮಾಡಿದರು. ಆ ಮೇಲೆ ಸರ್ವರೂ ಹಿರಿಯಮಠದ ಫಕೀರಯ್ಯನವರಿಂದ ಶುಭಾಶೀರ್ವಾದಗಳನ್ನು ಪಡೆದು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಸದಾ ಧರ್ಮ ಜಾಗೃತರಾಗಿ ದುಡಿಯುತ್ತಿರುವ ಈ ಗ್ರಾಮದ ಪ್ರಮುಖ ಮಹಾಶಯರಿಗೆಲ್ಲಾ ಶ್ರೀರೇಣುಕಾಚಾರ್ಯರು ಇಹಪರದಲ್ಲಿ ಸುಖವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ.

ಪ್ರತ್ಯಕ್ಷದರ್ಶಿ,

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಂಠಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾನ್ ಪಂಚಾಸ್ಯಪೀಠಾಧಿಪಾನ್ । ಪಂಚಕ್ಲೇಶವಿನಾಶಕಾನ್ ಪರತರಶ್ರೀಪಂಚಲಿಂಗೋದ್ಭವಾನ್ ॥
ಪಂಚಾಚಾರವಿಧಾಯಕಾನ್ ಸಲ್ಲಸತ್ಪಂಚಾಕ್ಷರೀಬೋಧಕಾನ್ । ಪಂಚಾಚಾರ್ಯಜಗದ್ಗುರೂತ್ತಮವರಾನ್ ಹಾರ್ದಿಸ್ಸದಾಲೋಕಯೇ ॥

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಅಣೆ

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೯ನೇ ಏಪ್ರಿಲ್ ೧೯೪೩ [ಸಂಚಿಕೆ ೫೩

ಕೇದಾರಪೀಠದ ಚಿಕ್ಕಸ್ವಾಮಿಗಳವರು ಶಿವಾಧೀನರಾದರು

ಶ್ರೀಜಗದ್ಗುರು ಕೇದಾರಪೀಠದ ಚಿಕ್ಕಸ್ವಾಮಿಗಳವರಾದ ಶ್ರೀಚಿಪ್ಪಸಲಿಂಗಶಿವಾಚಾರ್ಯ ಮಹಾಸ್ವಾಮಿಗಳವರು ತಾ|| ೧೬-೩-೧೯೪೩ನೆಯ ದಿವಸ ಕೇದಾರಪೀಠದಲ್ಲಿ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವ್ಯಸನವೆನಿಸುತ್ತದೆ ಇವರು ಅತ್ಯಂತ ಶಾಂತ ಸ್ವಭಾವವುಳ್ಳವರಾಗಿದ್ದು ಶಿವಪೂಜಾಶೀಲರಾಗಿದ್ದರು ಇವರು ಅನೇಕ ದೇಶಗಳಲ್ಲಿ ಸಂಚರಿಸಿ ಸರ್ವರ ಪ್ರೀತಿಗೆ ಪಾತ್ರರಾಗಿದ್ದರು ಇಂತಹ ಮಹಾವ್ಯಕ್ತಿಯು ಕೈಬಿಟ್ಟುಹೋದುದು ಸಮಾಜದ ದುರ್ದೈವವೆಂದೇ ಹೇಳಬೇಕಾಗಿದೆ

ಪೀಠಾಭಿಮಾನಿ

ದುಃಖವಾರ್ತೆ

ಗುಲಬುರ್ಗಾ ಜಿ|| ಜಹಗೀರ ಜೇವರಗಿ ಗ್ರಾಮದಲ್ಲಿರುವ ಮ|| ರಾ|| ಜಗದೇವಪ್ಪಾ ಹೂಗಾರ ಇವರ ಧರ್ಮಪತ್ನಿಯವರಾದ ಶ್ರೀ ಬಸವಲಿಂಗಮ್ಮನವರು ಇದೇ ಚೈತ್ರ ಶು|| ೩ ಬುಧವಾರ ಶಿವೈಕ್ಯರಾದರು ಇವರು ಬಹಳ ದಯಾಳುಗಳಾಗಿದ್ದು ಸರ್ವಜನಪ್ರಿಯರಾಗಿದ್ದರು ಇವರಿಗೆ ಇಬ್ಬರು ಹೆಣ್ಣುಮಕ್ಕಳೂ, ಒಬ್ಬ ಗಂಡುಮಗನೂ ಇರುವರು. ಇವರ ಸ್ಮಶಾನಯಾತ್ರೆಗೆ ದುಧನಿ, ಸಿಂಬಾಳ, ಬಬಲಾದ, ಬಳೂರಗಿ. ತೆಲ್ಲೂಣಗಿ. ಸರಸಂಬಿ ಮೊದಲಾದ ಗ್ರಾಮಗಳಿಂದ ಬಂಧುಬಳಗದವರು ಬಂದಿದ್ದರಲ್ಲದೆ ಗ್ರಾಮದ ಬಹುಜನರು ಸೇರಿದ್ದರು ಆ ಸಮಯದಲ್ಲಿ ಪಂಚಾಚಾರ್ಯಪ್ರಭಾಪ್ರೋತ್ಸಾಹಕ್ಕಾಗಿ ೧ ರೂ ನೀಗೆಯಿಸಲ್ಪಟ್ಟಿತು ಭಗವಂತನು ಮೃತೆಯರ ಆತ್ಮಕ್ಕೆ ಶಾಂತಿಯನ್ನಿತ್ತು ಅವರ ಬಂಧುಬಾಂಧವರಿಗೆ ದುಃಖಶಮನವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇನೆ

ಕಾಶೀನಾಥ ಮಾಸ್ತರ ಅಂಜುಟಗಿಕರ್

ದುಃಖವಾರ್ತೆ

ನಿಜಾಮ ಇಲಾಖಾ ಕುಷ್ಟಗಿ ತಾಲೂಕು ಶಾಂತಗಿರಿ ಸಂಸ್ಥಾನದ ರಾಜರು ವೀರಶೈವರಿರುವರು ಈ ಸಂಸ್ಥಾನವು ಬಹು ಪುರಾತನಕಾಲದಿಂದಲೂ ಪ್ರಸಿದ್ಧವಾಗಿರುವದು ಸದ್ಯಃ ಈ ಸಂಸ್ಥಾನವನ್ನು ಶ್ರೀಮಂತ ಮಲ್ಲಸರ್ಜಭೂಪಾಲರು ಆಳುತ್ತಿರುವರು ಶಾಂತಗಿರಿ ಗ್ರಾಮದ ಹಿರಿಯಮಠದ ವೇ|| ಪಟ್ಟದಯ್ಯನವರು ಆಚಾರನಿಷ್ಠರಾಗಿಯೂ, ಗುರುಭಕ್ತಪರಾಯಣರಾಗಿಯೂ, ಲಕ್ಷ್ಮೀಪುತ್ರರಾಗಿಯೂ ಇದ್ದು ಶ್ರೀ ಹೊಳೆಹೊನ್ನೂರು ಪಟ್ಟದಸ್ವಾಮಿಗಳಿಂದ ಅನುಗ್ರಹೀತರಾಗಿದ್ದರು ಎಂತಹ ಆಪತ್ತಿನಲ್ಲಿಯೂ ಕ್ರಿಯೆಗೆ ಲೋಪಬಾರದಂತೆ ಆಚರಿಸುತ್ತಿದ್ದರು. ಕೆರೆ, ಬಾವಿ, ಹೊಂಡ, ಧರ್ಮಛತ್ರ ಮೊದಲಾದವುಗಳನ್ನು ಕಟ್ಟಿಸಿ ಗ್ರಾಮದಲ್ಲಿ ಮೇಲಿಂದಮೇಲೆ ಪುರಾಣ ಪುಣ್ಯಕಥೆಗಳನ್ನು ಹೇಳಿಸುತ್ತಿದ್ದರು ಅನ್ನದಾನ ಮಾಡುವುದರಲ್ಲಿ ನಿಸ್ಸೀಮರಾಗಿದ್ದರು. ಇವರು ತಮ್ಮ ೬೦ ನೇ ವರ್ಷದಲ್ಲಿ ಮರಣಚಿಹ್ನವನ್ನು ಕಂಡು ಬುದ್ಧಿವಂತರಾದ ನಾಲ್ಕುಜನ ಮಕ್ಕಳನ್ನು ಕರೆದು ನನ್ನ ನಮ್ಮ ಅವಸಾನಕಾಲವು ಸಮೀಪಿಸಿದ್ದರಿಂದ ನಮ್ಮ ಮಠದ ಚೌಕಿಯಲ್ಲಿ ಶಾಸ್ತ್ರೋಕ್ತಪ್ರಕಾರ ಕ್ರಿಯಾಸಮಾಧಿಯನ್ನು ತಯಾರಿಸಬೇಕೆಂದು ಆಜ್ಞಾಪಿಸಲು ಮಕ್ಕಳು ಶಿರಸಾವಹಿಸಿ ಶೀಘ್ರದಲ್ಲಿಯೇ ಆ ಕಾರ್ಯವನ್ನು ನೆರವೇರಿಸಿದರು ಪುಣ್ಯಕಾರ್ಯಗಳನ್ನು ಮಾಡುತ್ತ ನಾಲ್ಕು ವರ್ಷಗಳು ಗತಿಸಲು ಕ್ಷಾಮ ಕಾಲವು ಬಂದದ್ದರಿಂದ ಬಡವರ ಒಳಲಿಕೆಯನ್ನು ಕಂಡು, ತರುಣರಂತೆ ಉತ್ಸಾಹದಿಂದ ಕಾರ್ಯಾಸಕ್ತರಾಗಿ ಧಾನ್ಯದ ಅಗ್ಗದರದ ಅಂಗಡಿಯನ್ನು ಸ್ಥಾಪಿಸಿ ಸುತ್ತುಮುತ್ತಿನ ಹಳ್ಳಿಯ ಜನರಿಗೆ ಬಹು ಉಪಕಾರ ಮಾಡುವುದರೊಳಗಾಗಿ ಇದೇ ಸ್ವಭಾನು ಸಂ|| ಯುಗಾದಿ ಸೋಮವಾರ ಮುಂಜಾನೆ ತಮ್ಮ ನಿತ್ಯ ಕ್ರಿಯೆಗಳನ್ನು ನೆರವೇರಿಸಿಕೊಂಡು, ಮಕ್ಕಳನ್ನೂ ಮತ್ತು ಗ್ರಾಮದ ಭಕ್ತಮಂಡಳಿಯನ್ನೂ ಕರೆದು ಆದಿನ ನಮಗೆ ಶಿವನ ಅಪ್ಪಣೆಯಾಗಿದೆ ಆದ್ದರಿಂದ ಹೂಡಿಯ ಷ|| ಬ್ರ|| ಶ್ರೀ|| ಪಟ್ಟದಸ್ವಾಮಿಗಳನ್ನು ಕರೆಯಿಸಿಕೊಂಡು ಅಂತ್ಯೇಷ್ಟಿವಿಧಿಯನ್ನು ವಿಧ್ಯುಕ್ತವಾಗಿ ನೆರವೇರಿಸಬೇಕೆಂದೂ ಸಕಲ ವರ್ಣದ ಬಡಜನರಿಗೆ ಅನ್ನದಾನ, ವಸ್ತ್ರದಾನ ಮಾಡುವುದಕ್ಕಾಗಿ ೩ ಸಾವಿರ ರೂಪಾಯಿಗಳನ್ನು ದಾನ ಮಾಡಬೇಕೆಂದೂ ಹೇಳಿ, ಶಿವ! ಶಿವ! ಶ್ರೀ ಜಗದ್ಗುರು ರೇಣುಕ! ಎಂದು ಧ್ಯಾನಮಾಡುತ್ತ ಶಿವಸಾಯುಜ್ಯವನ್ನು ಹೊಂದಿದರು ತಂದೆಯವರ ಆಜ್ಞಾನುಸಾರವಾಗಿ ಮಕ್ಕಳು ದಾನಧರ್ಮಗಳನ್ನು ಮಾಡಿದರು ಈ ಮಹಾತ್ಮರ ಉತ್ತರಕ್ರಿಯೆಗೆ ೮ ೧೦ ಸಾವಿರ ಜನರು ವರ್ಣಭೇದವಿಲ್ಲದೆ ದೊಡ್ಡ ಜಾತ್ರೆಯಂತೆ ಕೂಡಿದ್ದರು ಶ್ರೀ ಜಗದ್ಗುರು ಪಂಚಾಚಾರ್ಯರು ಇವರ ಕುಟುಂಬವರ್ಗಕ್ಕೆ ದುಃಖಶಮನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ

ಓರ್ವ ದುಃಖಭಾಗಿ

ಜೇನುತುಪ್ಪದಲ್ಲಿರುವ ಆಹಾರಗುಣಗಳು.

ಈ ಪ್ರಪಂಚದ ಎಲ್ಲಾ ದೇಶಗಳಲ್ಲಿಯೂ ಜೇನುತುಪ್ಪವು ಒಂದು ಆಹಾರವಾಗಿ ಉಪಯೋಗಿಸಲ್ಪಡುವುದು ಇದರ ವಿಷಯವಾಗಿ ಸಿ ಪ್ರೀಕರ್ ಎಂಬುವರು ಬರೆದ ರಸವತ್ತಾದ ಲೇಖನವನ್ನು ಇಲ್ಲಿ ಪ್ರಕಟಿಸಲಾಗಿದೆ.

ಹಿಂದೆ ಉಷ್ಣಪ್ರದೇಶಗಳಿಗೆ ವ್ಯಾಪಾರಮಾರ್ಗವಾಗಿ ಸಮಶೀತೋಷ್ಣ ಪ್ರದೇಶಗಳಿಂದ ಕಬ್ಬು, ಸಕ್ಕರೆ ಮುಂತಾದುವು ಮಾರ್ಕೆಟ್ಟಿನಲ್ಲಿ ವಿಕ್ರಯಕ್ಕೆ ಬರುವುದಕ್ಕೆ ಮುಂಚೆ, ಜನರು ಜೇನನ್ನೇ ಸಿಹಿ ಪದಾರ್ಥವಾಗಿ ಉಪಯೋಗಿಸುತ್ತಿದ್ದರು ಈಚೆಗೆ ನಾಗರಿಕತೆಯ ಬಲದಿಂದಲೂ ಕೈಗಾರಿಕೆ, ವ್ಯವಸಾಯಗಳ ಅಭಿವೃದ್ಧಿಯಿಂದಲೂ, ಆಮದು ರಫ್ತು ಮುಂತಾದ ವ್ಯವಹಾರ ಸೌಕರ್ಯಗಳಿಂದಲೂ ನಮ್ಮ ಮಾರ್ಕೆಟ್ಟುಗಳಲ್ಲಿ ಕಬ್ಬು ಸಕ್ಕರೆ ಇವೆಲ್ಲ ಬಹಳ ನಯವಾಗಿ ವಿಕ್ರಯಿಸಲ್ಪಡುವುದರಿಂದ, ಈಗ ಜೇನಿನ ಉಪಯೋಗವನ್ನೂ ಅದರ ಗುಣಗಳನ್ನೂ ಕುರಿತು ಜನಗಳ ಸ್ಮರಣೆಯೇ ತಪ್ಪಿಹೋಗಿದೆ ನಮ್ಮ ಶಾಲೆಯ ಹುಡುಗರಲ್ಲಿ ಅನೇಕರಿಗೆ ಹಲ್ಲು ಹುಳುಬಿದ್ದು ದುರ್ಬಲವಾಗಿರುವುದನ್ನು ನಾವು ಕಾಣುವೆವು ಇದಕ್ಕೆ ನಮ್ಮ ಆಹಾರದಲ್ಲಿ ವಿಶೇಷವಾಗಿ ಶುದ್ಧೀಕರಿಸಿ ಸಕ್ಕರೆಯನ್ನು ಸೇರಿಸಿಕೊಳ್ಳುತ್ತಿರುವುದೇ ಕಾರಣವು

ಹಿಂದೆ ಜೇನುತುಪ್ಪವು ಕಾಡುಗಳಲ್ಲಿ ಸಿಕ್ಕುತ್ತಿದ್ದಿತು ಈಗಲಾದರೋ ಜೇನುಗೂಡು ಎಲ್ಲಿರುವುದೆಂಬುದೇ ಯಾರಿಗೂ ತಿಳಿಯದು ಹಿಂದೆ ಮರಗಳ ಸಂದುಗಳಲ್ಲಿಯಾಗಲಿ, ಅಥವಾ ಕಲ್ಲುಹಾರೆಗಳ ನಡುವೆಯಾಗಲಿ ಜೇನುಗಳನ್ನು ಕಂಡುಹಿಡಿದು ಜೇನನ್ನು ತೆಗೆಯಬೇಕಾಗಿದ್ದಿತು ಈಗಲೂ ಹೀಗೆ ಕಾಡಿನಲ್ಲಿ ಜೇನನ್ನು ತೆಗೆಯುವುದುಂಟು ಆದರೆ, ಹೋಗಲಾರದ ಕಡೆಗಳಲ್ಲಿ ಆ ಗೂಡುಗಳು ಚೆನ್ನಾಗಿಲ್ಲದಿರುವುದರಿಂದ ಅದರಲ್ಲಿ ಹೆಚ್ಚುಭಾಗವು ಹರಿದು ವ್ಯರ್ಥವಾಗುತ್ತಿತ್ತು ಜೇನುಹುಳಗಳನ್ನು ಬೆಳೆಸುವುದು ಈಚೆಗೆ ಹೊಸ ಏರ್ಪಾಡಾಗಿರುವುದು ಅದರಲ್ಲಿ ಜೇನು ವ್ಯರ್ಥವಾಗುವುದಿಲ್ಲ ಅಲ್ಲದೆ ಜೇನು ಜನರಿಗೆ ಅಗ್ಗವಾಗಿಯೂ ಸಿಕ್ಕುವುದು

ಕೆಲವು ವರ್ಷಗಳಿಗೆ ಹಿಂದಿನವರೆಗೂ ಜೇನನ್ನು ಹಿಂಡಿ ತೆಗೆಯುತ್ತಿದ್ದರು ಆದುದರಿಂದ ಅದರಲ್ಲಿ ಕಶ್ಮಲವು ಬಹಳವಾಗಿ ನಿಂತುಹೋಗುತ್ತಿದ್ದಿತು ಆರೋಗ್ಯವಿಷಯವಾಗಿ ನೋಡಿದರೆ ಇಂತಹ ಜೇನು ತೃಪ್ತಿಕರವಾದುದಲ್ಲ ಈಗ ಯಂತ್ರಗಳ ಸಹಾಯದಿಂದ ಜೇನನ್ನು ಶೋಧಿಸಿ ತೆಗೆಯುವರು ಆದುದರಿಂದ ಶುದ್ಧವಾದ ಜೇನು ಸಿಕ್ಕುವುದು

ಜೇನಿನಲ್ಲಿ ಅನೇಕವಿಧವಾದ ಸಕ್ಕರೆಗಳು ಕಲೆತಿದ್ದರೂ ಅವುಗಳಿಂದ ಏನೂ ಅಪಾಯವಿಲ್ಲ ಅವು ಜನರಿಗೆ ತಕ್ಕ ಆಹಾರವಾಗಿಯೂ ಇರುವುವು ನೊಣಗಳು ಜೇನನ್ನು ಉಂಟುಮಾಡುವ ವಿಧವು ಯಾರಿಗೂ ಚೆನ್ನಾಗಿ ತಿಳಿಯದು ಆದರೆ ಅದರಲ್ಲಿ ಮೊದಲೇ ಜೇನುಹುಳದಿಂದ ಜೀರ್ಣಿಸಲ್ಪಟ್ಟ ಸಕ್ಕರೆ ಇರುವುದರಿಂದ ಬೇರೆ ಪಿಷ್ಟಪದಾರ್ಥಗಳಿಗಿಂತ ಶೀಘ್ರದಲ್ಲಿಯೇ ಜೀರ್ಣಿಸುವುದು

ಸಾಧಾರಣವಾಗಿ ಜೇನಿನಲ್ಲಿ ೧೭ ಪಾಲು ನೀರೂ, ೭೮ ಪಾಲು ಕಾರ್ಬೋಹೈಡ್ರೇಟುಗಳೂ, ೦ ೨ ಭಾಗವು ಲೋಹಗಳೂ, ೪ ಭಾಗವು ಇಂಥದೆಂದು ನಿರ್ಣಯಿಸಲಾರದಂತಹ ಪದಾರ್ಥವೂ ಇರುವುವು ಎಂದರೆ ಹೂವಿನಲ್ಲಿರುವ ಮಕರಂದದ ಪುಡಿ, ಮೇಣ, ಪತ್ರ, ಫಾರ್ಮಿಕ್ ದ್ರಾವಕ, ಆವಿಯಾಗುವಂತಹ ಎಣ್ಣೆಗಳು ಮುಂತಾದುವು ಇವೆಲ್ಲ ಇರುವುವು.

[೬ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೩ನೆಯ ಏಪ್ರಿಲ್ ತಾ|| ೧೯ ನೆಯ ಸೋಮವಾರ

ಸದ್ಗುರು ಮತ್ತು ನಿಷಿದ್ಧಗುರು.

ಲೋಕದಲ್ಲಿ ಈಗೀಗ ಅನೇಕ ಜಾತಿಯ ಜನರು ಕಾಷಾಯವಸ್ತ್ರಧಾರಿಗಳಾಗಿ ನಾನಾ ವೇಷಾಂತರೋಪದೇಶದಿಂದ ಜನರನ್ನು ವಂಚಿಸುತ್ತ ನಾನು ಗುರು ತಾನು ಗುರುವೆಂದು ಹೇಳಿಕೊಳ್ಳುತ್ತ ತಿರುಗುತ್ತಿರುವರು ಇಂತಹ ಜನರ ಬಲೆಗೆ ಯಾರೂ ಬೀಳದೆ ಅನಾದಿಸಂಸಿದ್ಧರಾದ ಗುರುಗಳಲ್ಲಿಯೇ ಭಕ್ತಿಯಿಂದ ನಡೆದುಕೊಳ್ಳಬೇಕು ಧರ್ಮಶಾಸ್ತ್ರಗಳಲ್ಲಿ ಗುರುವಿನ ಲಕ್ಷಣವು ಈ ಕೆಳಗೆ ಕಂಡಂತೆ ಹೇಳಲ್ಪಟ್ಟಿದೆ

ಶೈವಸಿದ್ಧಾಂತತತ್ತ್ವಜ್ಞಃ ಪ್ರಾಜ್ಞಃ ಶಾಸ್ತ್ರಪಾರಗಃ |
ಮೋಕ್ಷದಃ ಸಚ್ಚರಿತ್ರೋಽಪಿ ವೈರಾಗ್ಯೋ ವಿಮತ್ಸರಃ ||
ಕ್ರಿಯಾದಿಜ್ಞಾನಪರ್ಯಂತಂ ಶಿವತತ್ತ್ವಸ್ವನಿಶ್ಚಯಃ |
ಸಂಪ್ರದಾಯಾಗತಜ್ಞಾನೋ ಬೋಧಸಂಶಯವರ್ಜಿತಃ ||
ಲಿಂಗಾಂಗಸ್ಥಲಭೇದಜ್ಞಃ ಷಟ್ಸ್ಥಲಜ್ಞಾನತತ್ಪರಃ |
ದೀಕ್ಷಾಕರ್ಮಾದಿಕುಶಲಃ ಷಡಧ್ವಜ್ಞಾನವತ್ಸಲಃ ||
ಶಿವಸ್ಯ ಚ ಗುರೋರ್ಭಕ್ತಃ ಶಿವೈಕಾರ್ಪಿತಮಾನಸಃ
ಶಿವಾರ್ಚನಾಸಕ್ತಚಿತ್ತಃ ಶಿವಧ್ಯಾನೈಕತತ್ಪರಃ ||

(ಚಂದ್ರಜ್ಞಾನ ಪಟಲ ೧)

ವೀರಶೈವಸಿದ್ಧಾಂತವನ್ನು ಬಲ್ಲವನೂ, ವೇದಶಾಸ್ತ್ರಾದಿಗಳಲ್ಲಿ ಪಾರಂಗತನೂ, ಮೋಕ್ಷಪ್ರದನೂ, ಉದಾರಸಚ್ಚರಿತ್ರನೂ, ವೈರಾಗ್ಯಸಂಪನ್ನನೂ ಮಾತ್ಸರ್ಯರಹಿತನೂ, ಕ್ರಿಯಾಪಾದದಿಂದ ಜ್ಞಾನಪಾದಪರ್ಯಂತಗಿರುವ ಶಿವಾಗಮಗಳ ಅಭ್ಯಾಸದಿಂದ ಶಿವತತ್ತ್ವವನ್ನು ನಿಶ್ಚಯಿಸಿಕೊಂಡವನೂ, ಸ್ವಪಿತೃಪಿತಾಮಹಾದಿಸಂಪ್ರದಾಯದಿಂದ ಪ್ರಾಪ್ತವಾದ ಜ್ಞಾನವುಳ್ಳವನೂ, ಬೋಧಸಂಶಯಾದಿಗಳಿಲ್ಲದವನೂ, ಲಿಂಗಸ್ಥಲ ಮತ್ತು ಅಂಗಸ್ಥಲಗಳ ಭೇದವನ್ನು ತಿಳಿದವನೂ, ಷಟ್‌ಸ್ಥಲ ಜ್ಞಾನದಲ್ಲಿ ಪ್ರೇಮವುಳ್ಳವನೂ, ದೀಕ್ಷಾದಿಕರ್ಮಗಳಲ್ಲಿ ಕುಶಲನೂ, ಷಡಧ್ವಗಳನ್ನು ಬಲ್ಲವನೂ, ಶಿವನಲ್ಲಿಯೂ ತನ್ನ ಗುರುವಿನಲ್ಲಿಯೂ ಭಕ್ತಿಯುಳ್ಳವನೂ, ಶಿವನೊಬ್ಬನಲ್ಲಿ ಮಾತ್ರ ಮನಸ್ಸನ್ನಿಟ್ಟವನೂ, ಶಿವಾರ್ಚನೆಯಲ್ಲಿ ಆಸಕ್ತವಾದ ಚಿತ್ತವುಳ್ಳವನೂ ಶಿವಧ್ಯಾನದಲ್ಲಿ ತತ್ಪರನೂ ಆದವನೇ ಗುರುವೆನಿಸುವನು ಎಂದು ಚಂದ್ರಜ್ಞಾನಾಗಮವು ಬೋಧಿಸುವುದು

ಮರಸ್ಥಲಸಮುತ್ಪನ್ನಃ ಶಾಂತಶ್ಶಿವಾಗಮಾರ್ಥವಿತ್ |
ಅನೂಚಾನಃ ಪ್ರಸನ್ನಾತ್ಮಾ ಶಿವದೀಕ್ಷಾಭಿಷೇಚಿತಃ ||
ಶಿವಾಗಮಜ್ಞೋ ಮತಿಮಾಂಶ್ಶಿವಪೂಜಾಪರಾಯಣಃ |
ರುದ್ರಾಕ್ಷಮಾಲಾಭರಣಸ್ತ್ರಿಪುಂಡ್ರಾಂಕಿತಮಸ್ತಕಃ ||
ವಿಶುದ್ಧದೇಹಃ ಕುಲಜಃ ಶಿವಾಚಾರಸಮಸ್ಥಿತಃ |
ಭಸ್ಮೋದ್ಧೂಲನಶಕ್ತಾತ್ಮಾ ಭಸ್ಮತತ್ತ್ವವಿವೇಕವಾನ್ ||
ವರ್ಣಾಶ್ರಮಕ್ರಿಯಾನಿಷ್ಠೋ ಧರ್ಮವಿಚ್ಛಾಸ್ತ್ರಕೋವಿದಃ |
ಮಿತಾಶೀ ಮಿತನಿದ್ರಶ್ಚ ಮಿತವಾಗ್ಯೋಗತತ್ಪರಃ ||
ಜಿತೇಂದ್ರಿಯೋ ಜಿತದ್ವಂದ್ವಸ್ತಪಶ್ಶೀಲೋ ದಯಾಪರಃ |
ಸ್ಥಿರಬುದ್ಧಿಃ ಸ್ಥಿರಾರಂಭಶ್ಶಿವಪೂಜಾದಿಕರ್ಮವಿತ್ ||
ಸತ್ಯವಾಗೂರ್ಜಿತಃ ಪ್ರಾಜ್ಞೋ ಮೇಧಾವೀ ನಿಯತಃ ಶುಚಿಃ |
ಲಿಂಗಾಂಗಸ್ಥಲಭೇದಜ್ಞಃ ಷಟ್ಸ್ಥಲಜ್ಞಾನತತ್ಪರಃ ||
ವಯಃಷೋಡಶವರ್ಷಾದೂರ್ಧ್ವಂ ಸಪ್ತತೇರಥ ಇಷ್ಯತೇ |
ನ್ಯಾಸಮುದ್ರಾವಿಧಾನಜ್ಞೋ ಹ್ಯಂಕುರಾರ್ಪಣತತ್ತ್ವವಿತ್ ||
ಶಿವಸಿದ್ಧಾಂತಶಾಸ್ತ್ರಜ್ಞಃ ಷಡಧ್ವಜ್ಞಾನತತ್ಪರಃ |
ನಿತ್ಯಾಧಿಕಾರಕುಶಲೋ ನೈಮಿತ್ತಿಕವಿಚಕ್ಷಣಃ ||
ಕಾಮ್ಯಾಧಿಕಾರಚತುರೋ ದೀಕ್ಷಾಕರ್ಮಣಿ ಕರ್ಮಠಃ |

(ಕ್ರಿಯಾಸಾರ. ಉಪ. ೨೫)

ಮರಸ್ಥಲಸಮುತ್ಪನ್ನನೂ, ಶಾಂತಸ್ವಭಾವದವನೂ, ಶಿವಾಗಮಗಳ ಅರ್ಥವನ್ನು ತಿಳಿದವನೂ, ವೇದವೇದಾಂಗಗಳ ಅಭ್ಯಾಸವನ್ನು ಮಾಡಿದವನೂ, ಪ್ರಸನ್ನಚಿತ್ತನೂ, ಶಿವದೀಕ್ಷಾಭಿಷೇಕವುಳ್ಳವನೂ, ಬುದ್ಧಿಶಾಲಿಯೂ, ಶಿವಪೂಜಾಲೋಲನೂ, ರುದ್ರಾಕ್ಷಮಾಲೆಗಳನ್ನು ಧರಿಸಿದವನೂ, ತ್ರಿಪುಂಡ್ರಧಾರಿಯೂ, ಪರಿಶುದ್ಧವಾದ ಶರೀರವುಳ್ಳವನೂ ಸತ್ಕುಲಪ್ರಸೂತನೂ, ಶಿವಶಾಸ್ತ್ರದಲ್ಲಿ ಹೇಳಿದಂತೆ ದ್ರವ್ಯಕ್ಷೇತ್ರಗೃಹಾದಿ ಷೋಡಶ ಪದಾರ್ಥಶುದ್ಧಿರೂಪ ಶಿವಾಚಾರದಿಂದ ಯುಕ್ತನಾದವನೂ, ಭಸ್ಮೋದ್ಧೂಲನದಲ್ಲಿ ಆಸಕ್ತನೂ, ಭಸ್ಮತತ್ತ್ವವಿವೇಕಿಯೂ, ವರ್ಣಾಶ್ರಮಕ್ರಿಯಾನಿಷ್ಠನೂ, ಧರ್ಮಜ್ಞನೂ, ಶಾಸ್ತ್ರಕೋವಿದನೂ, ಮಿತಾಶನ ಮಿತನಿದ್ರೆಗಳುಳ್ಳವನೂ, ಮಿತಭಾಷಿಯೂ, ಯೋಗತತ್ಪರನೂ ಜಿತೇಂದ್ರಿಯನೂ, ಸುಖದುಃಖಸಹಿಷ್ಣುವೂ, ತಪಶ್ಶೀಲನೂ, ಕರುಣಾಶಾಲಿಯೂ, ಸ್ಥಿರವಾದ ಬುದ್ಧಿಯುಳ್ಳವನೂ, ಸ್ಥಿರವಾದ ಕಾರ್ಯಾರಂಭವುಳ್ಳವನೂ, ಶಿವಪೂಜಾದಿಕರ್ಮಗಳನ್ನು ಬಲ್ಲವನೂ, ಸತ್ಯಸಂಧನೂ, ಶ್ರೇಷ್ಠನೂ, ಪ್ರಾಜ್ಞನೂ, ಮೇಧಾವಿಯೂ, ನಿಯಮವ್ರತಶೀಲನೂ, ಶುಚಿರ್ಭೂತನೂ, ಲಿಂಗಸ್ಥಲ ಮತ್ತು ಅಂಗಸ್ಥಲಗಳ ಭೇದವನ್ನು ತಿಳಿದವನೂ, ಷಟ್‌ಸ್ಥಲ ಜ್ಞಾನಸಂಪನ್ನನೂ, ಹದಿನಾರು ವರ್ಷಗಳ ಮೇಲೆ ಎಪ್ಪತ್ತು ವರ್ಷಗಳೊಳಗೆ ಇರತಕ್ಕ ವಯಸ್ಸುಳ್ಳವನೂ, ನ್ಯಾಸ ಮತ್ತು ಮುದ್ರೆಗಳ ವಿಧಾನವನ್ನು ಬಲ್ಲವನೂ, ಅಂಕುರಾರ್ಪಣತತ್ತ್ವವನ್ನು ತಿಳಿದವನೂ, ಶಿವಸಿದ್ಧಾಂತವನ್ನೂ ಷಡಧ್ವಗಳನ್ನೂ ಬಲ್ಲವನೂ, ನಿತ್ಯನೈಮಿತ್ತಿಕ ಕಾಮ್ಯಕರ್ಮಗಳನ್ನು ತಿಳಿದವನೂ, ದೀಕ್ಷಾಕರ್ಮದಲ್ಲಿ ಕುಶಲನೂ ಆಗಿರುವ ಮಹಾನುಭಾವನೇ ಗುರುವೆನಿಸುವನು ಎಂದು ಕ್ರಿಯಾಸಾರವು ಬೋಧಿಸುವುದು

ವ್ಯಸನೀ ವಾಮನಃ ಕುಬ್ಜಃ ಕ್ರೋಧೀ ಚ ಕುಟಿಲಸ್ವರಃ |
ಚಪಲೋಽಧಿಕಹೀನಾಂಗಃ ಪಾಪೀಯಾನ್ಪಾತಕೋಽಸ್ಥಿಜಃ ||
ವ್ಯಾಧಿಗ್ರಸ್ತಸ್ತಾರ್ಕಿಕಃ ಶೂರಃ ಕಾಕನಾದೋ ಬಕವ್ರತೀ |
ಗುರುದೇವದ್ವಿಜಾತೀನಾಂ ನಿಂದಕೋ ವೃಷಲೀಪತಿಃ ||
ಲಂಬೋಷ್ಠೋ ವಕ್ರನಾಸಶ್ಚ ಗರ್ವೀ ಚ ಕಲಹಪ್ರಿಯಃ |
ಪರಾಪವಾದಶೀಲಶ್ಚ ವರ್ಜನೀಯೋ ಗುರುಃ ಸ್ಮೃತಃ ||

ದುರ್ವ್ಯಸನಿಯೂ, ಕುಳ್ಳನೂ, ಡೊಂಕಾದ ಶರೀರವುಳ್ಳವನೂ, ಕೋಪಿಯೂ, ವಕ್ರಬುದ್ಧಿಯುಳ್ಳವನೂ, ಚಪಲನೂ, ಅಧಿಕಾಂಗನೂ, ಹೀನಾಂಗನೂ, ಪಾಪಿಯೂ, ಚ ಡಿಕರೋಗನೂ, ಕುಂಡನೂ, ಗೋಲಕನೂ, ರೋಗಿಯೂ, ತಾರ್ಕಿಕನೂ, ಶೂರನೂ, ಕಾಗೆಯ ಸ್ವರದಂತೆ ಸ್ವರವುಳ್ಳವನೂ, ಬಕವ್ರತಿಯೂ, ಗುರುದೇವದ್ವಿಜರನ್ನು ನಿಂದಿಸುವವನೂ, ಶೂದ್ರಸ್ತ್ರೀಸಂಗ ಮಾಡಿದವನೂ, ಉದ್ದವಾದ ತುಟಿಯುಳ್ಳವನೂ ಡೊಂಕಾದ ಮೂಗುಳ್ಳವನೂ, ದರ್ಪಿಯುವವನೂ, ಕಲಹಪ್ರಿಯನೂ, ಪರನಿಂದೆಯನ್ನು ಮಾಡುವವನೂ ನಿಷಿದ್ಧಗುರುವೆನಿಸುವನು ಇಂತಹ ನಿಷಿದ್ಧಗುರುವನ್ನಾಶ್ರಯಿಸಬಾರದು

ಯಾವದಾರಾಧಯೇಚ್ಛಿಷ್ಯಃ ಪ್ರಸನ್ನೋಽಸೌ ಭವೇದ್ಯಥಾ |
ತಸ್ಮಿನ್ಪ್ರಸನ್ನೇ ಶಿಷ್ಯಸ್ಯ ಸದ್ಯಃ ಪಾಶಕ್ಷಯೋ ಭವೇತ್ ||

(ಚಂದ್ರ ಪ ೧)

ಗುರುವು ಪ್ರಸನ್ನನಾಗುವವರೆಗೂ ಶಿಷ್ಯನು ಗುರುವನ್ನು ಆರಾಧಿಸಬೇಕು. ಗುರುವು ಪ್ರಸನ್ನನಾಗಲು ಶಿಷ್ಯನ ಪಾಶಕ್ಷಯವಾಗುವದು ಆದುದರಿಂದ ಶಿಷ್ಯರು ನಿಷಿದ್ಧಗುರುಗಳನ್ನಾಶ್ರಯಿಸದೆ ಸದ್ಗುರುಗಳನ್ನು ಸೇವಿಸಿ ಧನ್ಯರಾಗಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಇಟಲಿಯಲ್ಲಿ ೧೪ ವಯಸ್ಸಿನ ಬಾಲಕರು ಕಾರ್ಖಾನೆ ಕೆಲಸ ಮಾಡಬೇಕು

ಕಾರ್ಖಾನೆಯಲ್ಲಿ ಕೆಲಸ ಮಾಡಲು 14 ವರ್ಷದ ಬಾಲಕರೆಲ್ಲರೂ ಬರಬೇಕೆಂದು ಇಟಲಿಯು ಒಂದು ಆಜ್ಞೆ ಹೊರಡಿಸಿದೆಯಂತೆ! ಈ ಆಜ್ಞೆಯನ್ನು ಉಲ್ಲಂಘಿಸಿದವರನ್ನು ಶಿಕ್ಷಿಸಲಾಗುವುದೆಂದು ಹೇಳಲಾಗಿದೆ.

ಆಹಾರ ಕೊರತೆಯಿಂದ ನರಳುತ್ತಿರುವ ಯೂರೋಪು

ಕಳೆದ ಮಹಾಯುದ್ಧಕ್ಕಿಂತಲೂ ಈಗಿನ ಯುದ್ಧಕಾಲದಲ್ಲಿ ಜರ್ಮನಿಗೆ ಹೆಚ್ಚು ಆಹಾರ ಒದಗುತ್ತಿದೆಯೆಂಬುದು ನಿಜವಾದರೂ ಯುರೋಪಿನ ಎಷ್ಟೋ ದೇಶಗಳು ಅರಹೊಟ್ಟೆಗೆ ಕಾಣದೆ ಬಳಲುತ್ತಿವೆ ಎಂದು ಅಮೇರಿಕದ ವಿದೇಶಾಂಗ ಸಾಂಸ್ಕೃತಿಕ ಸಂಬಂಧಸಮಿತಿಯು ಪ್ರಕಟಿಸಿದೆ

ಲಾತೂರಿನಲ್ಲಿ ಗುಂಡಿನಿಂದ ಐವರ ಮರಣ

ನಿಜಾಂ ಇಲಾಖಾ ಲಾತೂರಿನಲ್ಲಿ ನಡೆದ ಲೂಟಿ ಸಂಬಂಧವಾಗಿ 8 ಜನರನ್ನು ದಸ್ತಗಿರಿಮಾಡಿ ಪೋಲಿಸ್ ಸ್ಟೇಷನ್ನಿನಲ್ಲಿಟ್ಟಿದ್ದಾಗ 2000 ಜನರ ಗುಂಪು ಸ್ಟೇಷನ್ನಿಗೆ ನುಗ್ಗಿ ಸೆರೆಮನೆಯ ಬಾಗಿಲನ್ನೊಡೆದು ದಸ್ತಗಿರಿಯಾಗಿದ್ದವರನ್ನು ಬಿಡಿಸಿದಾಗ ಪೋಲೀಸರು ಗುಂಪಿನ ಮೇಲೆ ಗುಂಡುಹಾರಿಸಬೇಕಾಯಿತು ಇದರಿಂದ 5 ಜನರು ಸತ್ತರು 12 ಜನ ಗಾಯಗೊಂಡರು

ಜಪಾನರ ಪ್ರಯತ್ನವು ವಿಫಲವಾಯಿತು.

ಅರಕಾನ್ ರಣರಂಗದ ಗಿರಾಡ್ ಪ್ರದೇಶದಲ್ಲಿ ಜಪಾನರು ಮಿತ್ರಸ್ಥಾನದೊಳಗೆ ಹೋಗಲು ಮಾಡಿದ ಪ್ರಯತ್ನವನ್ನು ವಿಫಲಗೊಳಿಸಲಾಯಿತೆಂದು ಹೇಳಲಾಗಿದೆ. ಕಳೆದ 1೩ನೆಯ ತಾರೀಖಿನ ದಿವಸ ಬ್ರಿಟಿಷ್ ವಿಮಾನ ಪಡೆಗಳು ಶತ್ರು ಸೈನ್ಯದಮೇಲೆ ದಾಳಿಮಾಡಿದವೆಂದು ಹೇಳಲಾಗಿದೆ

ಹಡಗು ಮುಳುಗಿ ೧೪೫ ಜನರು ಸತ್ತರು

ಹಾರ್ವೆಸ್ಟರ್ ಎಂಬ ಬ್ರಿಟಿಷ್ ಡಿಸ್ಟ್ರಾಯರ್ ಯುದ್ಧನೌಕೆಯು ಶತ್ರುಗಳ ಕಾರ್ಯಾಚರಣೆಯಿಂದ ಮುಳುಗಿತೆಂದೂ, ಅದರಿಂದ ೯ ಜನ ಅಧಿಕಾರಿಗಳೂ 136 ಜನ ನೌಕಾ ಕೆಲಸಗಾರರೂ ಒಟ್ಟು 145 ಜನರು ಸಮುದ್ರದ ಪಾಲಾಗಿರಬಹುದೆಂದೂ ನೌಕಾಶಾಖೆಯವರು ಪ್ರಕಟನೆ ಹೊರಡಿಸಿದ್ದಾರೆ

ಸ್ವೀಕಾರ

ನಿಜಾಂ ಇಲಾಖಾ ಕುಷ್ಟಗಿ ತಾ|| ಶಾಂತಗಿರಿ ಹಿರಿಯಮಠದ ವೇ|| ಪಟ್ಟದಯ್ಯನವರು ಯುಗಾದಿಯ ಶುಭ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂಪಾಯಿಗಳು ಸೂಡಿ ಶ್ರೀಜುಕ್ತಿ ಹಿರಿಯಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಗದಗ ನಗರ ನಿವಾಸಿಗಳಾದ ವೇ|| ಶಿವಲಿಂಗಾರ್ಯ ಸದಾಶಿವಾರ್ಯ ಗುರುಸ್ವಾಮಿಮಠ ಇವರು ತಾರೀಖು ೧೧ ೩-೪೩ ನೆಯ ಗುರುವಾರ ದಿವಸ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿಗಳು ವೇ|| ಮುಳಗುಂದ ಹಿರಿಯಮಠದ ಘುಂಡಯ್ಯನವರ ದ್ವಾರಾ ತಲ್ಪಿರುತ್ತವೆ.

ತಿಪ್ಟೂರು ಕೋ. ಆ. ಸೊಸೈಟಿ ಆ|| ಸೆಕ್ರೆಟರಿಗಳಾದ ಮ|| ರಾ|| ಸಿ. ಕೆ. ಕಪ್ಪಣ್ಣನವರ ಪುತ್ರನಿಗೆ "ಮಲ್ಲಿಕಾರ್ಜುನಸ್ವಾಮಿ" ಎಂದು ನಾಮಕರಣ ಮಾಡಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು. ವೇ|| ಆರ್ ಯಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತದೆ.

ನಿಜಾಂ ಇಲಾಖಾ ಗುಲ್ಬರ್ಗಾ ಡಿ|| ಜಹಗೀರ ಜೇವರಗಿ ಗ್ರಾಮದಲ್ಲಿರುವ ಮ|| ಜಗದೇವಪ್ಪ ಹೂಗಾರ ಇವರ ಧರ್ಮಪತ್ನಿ ಬಸವಲಿಂಗಮ್ಮನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **1** ರೂ. ಯು. ಮ|| ಕಾಶೀನಾಥ ಮಾಸ್ತರ ಅಂಚುಟಗೇರ್ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೧ನೇಯ ಪುಟದಿಂದ ಮುಂದುವರಿದುದು]

ಜೇನಿನಲ್ಲಿ ಪುಷ್ಪದಿಂದ ಉತ್ಪತ್ತಿಯಾಗುವ ಜೇನು ಮತ್ತು ಹನಿಡ್ಯೂ ಎಂದು ಎರಡು ವಿಧವುಂಟು. ಹನೀಡ್ಯೂ ಎಂಬುದು ಸಾಧಾರಣವಾದ ಜೇನಲ್ಲ. ಮೊದಲು ಹೇಳಿದ ಜೇನು ಪುಷ್ಪದಲ್ಲಿರುವ ಒಂದು ದ್ರಾವಕದಿಂದುಂಟಾಗುವುದು. ಹನಿಡ್ಯೂ ಎಂಬುದು ಗಿಡಗಳಲ್ಲಿ ಬೇರೆ ಹುಳಗಳಿಂದ ಇಳಿಸಲ್ಪಟ್ಟ ಒಂದು ಸಿಹಿಯಾದ ಪದಾರ್ಥವು.

ಜೇನು ಹೇಗೆ ಮಾಡಲ್ಪಡುವುದೆಂಬುದು ಯಾವ ವೈದ್ಯರಿಗೂ ತಿಳಿಯದು ಜೇನುಹುಳುಗಳು ಜೇನಿಗಾಗಿ, ಅಮೃತ, ಮಕರಂದ ಮತ್ತು ಪ್ರೋಪೋಲಿಸ್ ಮುಂತಾದ ಈ ಮೂರು ಪದಾರ್ಥಗಳನ್ನೇ ಪಡೆವುವು. ಜೇನುಹುಳುವು ತನ್ನ ಉದ್ದವಾದ ನಾಲಗೆಯಿಂದ ಪುಷ್ಪದಿಂದ ಈ ಪದಾರ್ಥಗಳನ್ನು ಹೀರಿದೊಡನೆ, ಅದು ಜೇನು ಹುಳದ ಹೊಟ್ಟೆಗೆ ಹೋಗಿ ಅಲ್ಲಿ ರಸಾಯನ ಮಾರ್ಪಾಟುಗಳನ್ನು ಹೊಂದುವುದು ಮಕರಂದವು ಒಂದು ವಿಧವಾದ ಪುಡಿ ಅದರಲ್ಲಿ ಪ್ರೋಟೀನ್ ಭಾಗವು ಹೆಚ್ಚು. ಬಾಲಕರಿಗೂ, ಬೆಳೆಯುವ ಜೇನುಹುಳುಗಳಿಗೂ ಇದು ಒಳ್ಳೆಯ ಆಹಾರವೆನಿಸುವುದು. ಪ್ರೋಪೋಲಿಸ್ ಎಂಬುದು ಮೇಣದಂತಹ ಒಂದು ಪದಾರ್ಥವು ಇದು ಇರುವುದರಿಂದ ಗೂಡಿನಲ್ಲಿ ನೀರು ನಿಲ್ಲುವುದಿಲ್ಲ. ರಂಧ್ರಗಳನ್ನು ಮುಚ್ಚಿ ಗೂಡಿನ ಅಂಚನ್ನು ಭದ್ರಪಡಿಸುವುದು. ಜೇನು ಮೇಣವು ಜೇನುಹುಳದ ಹೊಟ್ಟೆಯಲ್ಲಿರುವ ಒಂದು ವಿಧವಾದ ಗೋಳಗಳಿಂದ ಹೊರಬೀಳುವುದು

ಜೇನಿನಲ್ಲಿ ಅನೇಕ ವಿಧವಾದ ಸಕ್ಕರೆಗಳುಂಟು ಅವುಗಳಲ್ಲಿ ಕೆಲವು ಇನ್ನೂ ನಮಗೆ ತಿಳಿಯದು ಇವರಲ್ಲಿ ಸುಕ್ರೋಸ್, ಡೆಕ್ಸ್ಟ್ರೋಸ್, ಲೆವ್ಯುಲೋಸ್, ಡೆಕ್ಸ್ಟ್ರಿನ್ ಮುಂತಾದುವು ಸಾಧಾರಣವಾದುವು ಸುಕ್ರೋಸ್ ಎಂಬುದು ಬಿಳಿಯ ಮಿಶ್ರಣ ಪದಾರ್ಥವು ಇದು ಕಬ್ಬು, ಬೀಟ್, ಮೇಪಲ್ ಇವುಗಳ ಸಕ್ಕರೆಯಂತಿರುವುದು. ಇದು ಕಬ್ಬಿನ ಸಕ್ಕರೆಯಷ್ಟು ಸಿಹಿಯಲ್ಲ. ಲೆವ್ಯುಲೋಸ್ ಎಂಬುದು ಹಣ್ಣಿನ ಸಕ್ಕರೆ ಡೆಕ್ಸ್ಟ್ರಿನ್ ಎಂಬುದು ಗಿಡಗಳಲ್ಲಿರುವ ಸಕ್ಕರೆ ಇವಕ್ಕೆ ಪಿಷ್ಟಪದಾರ್ಥವೇ ಆಧಾರವು. ಈ ಸಕ್ಕರೆಗಳೆಲ್ಲವೂ ಮೊದಲೇ ಜೇನುಹುಳದಿಂದ ಜೀರ್ಣಿಸಲ್ಪಟ್ಟುವು

ಜೇನಿನಲ್ಲಿ ಮಗ್ನೀಸಿಯಾ, ಸುಣ್ಣ, ಫಾಸ್ಫರಿಕ್, ದ್ರಾವಕ, ಕಬ್ಬಿಣ, ಮುಂತಾದ ಲೋಹಪದಾರ್ಥಗಳಿರುವುವು

ಜೇನುತುಪ್ಪವು ಎರಡು ಒಗೆಯವುಗಳಾಗಿದ್ದರೂ ಅವುಗಳ ವಾಸನೆಯು ಅನೇಕ ವಿಧವಾಗಿರುವುದು ಇದು ಯಾವ ಹೂವಿನಿಂದ ತೆಗೆಯಲ್ಪಡುವುದೋ ಆ ಹೂವನ್ನು ಅವಲಂಬಿಸಿರುವುದು ಆಯಾ ಸ್ಥಳಗಳಿಗೆ ತಕ್ಕಂತೆಯೂ ವಾಸನೆಯು ಮಾರ್ಪಡುವುದುಂಟು ಬಣ್ಣ, ವಾಸನೆ ಮುಂತಾದುವು ಬೇರೆಯಾಗಿದ್ದರೂ ಅವುಗಳಲ್ಲಿರುವ ರಸಾಯನ ವಸ್ತುಗಳೆಲ್ಲವೂ ಒಂದೇ. ಎಲ್ಲಾ ವಿಧವಾದ ಜೇನೂ ಮೊದಲೇ ಜೀರ್ಣಿಸಲ್ಪಟ್ಟವುಗಳು ಆದುದರಿಂದ ಅದನ್ನು ನಿರ್ಭಯವಾಗಿ ಸೇವಿಸಬಹುದು ಎಂದರೆ ಆರೆಂಜ್, ಸೇಜ್, ಕ್ಲಾವರ್, ಬಕ್‌ವೀಟ್, ಅಲ್ಫಾಲ್ಫಾ ಮುಂತಾದ ಹೂಗಳಿಂದ ತೆಗೆದುದಾದರೆ ಅದನ್ನು ನಿರ್ಭಯವಾಗಿ ಸೇವಿಸಬಹುದು

ಇಟಲಿ ನೌಕೆ ಮುಳುಗಿತು.

ಟ್ಯೂನಿಸ್ಸಿಗೆ ಸಾಮಾನುಗಳನ್ನು ತರುತ್ತಿದ್ದ ಇಟಲಿ ನೌಕೆಯು ಬ್ರಿಟಿಷ್ ಸಬ್-ಮರೀನ್‌ನಿಂದ ಮುಳುಗಿಸಲ್ಪಟ್ಟಿತೆಂದೂ, ಇದರಿಂದ 40 ಜನರು ಸತ್ತರೆಂದೂ ಹೇಳಲಾಗಿದೆ

ಭಾರತೀಯರು ಜರ್ಮನ್ ಸೈನಿಕರನ್ನು ಸೆರೆ ಹಿಡಿದರು

ಆಫ್ರಿಕದಲ್ಲಿ ಎಂಟನೆಯ ಸೈನ್ಯದಲ್ಲಿ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದ ಭಾರತೀಯ ಸೈನಿಕರು 400 ಸೈನಿಕರಿಂದ ಕೂಡಿದ ಒಂದು ಜರ್ಮನರ ಗುಂಪನ್ನು ಸೆರೆ ಹಿಡಿದರೆಂದು ತಿಳಿದುಬರುತ್ತದೆ.

ಪ್ರಸಿದ್ಧ ಪತ್ರಿಕೆ

ಇಂಡಿಯಾ ಸರ್ಕಾರದ "ಫೈನಾನ್ಸ್" ಇಲಾಖೆಯವರು ಈ ಕೆಳಗೆ ಕಂಡಂತೆ ಒಂದು ಪ್ರಸಿದ್ಧ ಪತ್ರಿಕೆಯನ್ನು ಹೊರಡಿಸಿರುತ್ತಾರೆ. ಅದನ್ನು ಸಮಸ್ತ ಜನಗಳ ತಿಳುವಳಿಕೆಗಾಗಿ ಇಲ್ಲಿ ಪ್ರಕಟಿಸಲಾಗಿದೆ—

"ದೇಶದಲ್ಲಿ ತಕ್ಕಷ್ಟು ಚಿಲ್ಲರೆ ನಾಣ್ಯಗಳಿದ್ದೂ ಅವು ದೊರೆಯದಂತಾಗಿರುವುದರ ಪರಿಣಾಮವಾಗಿ ಜನಗಳಿಗೆ ಬಹು ಅನನುಕೂಲವುಂಟಾಗಿದೆ. ಅಲ್ಲದೆ, ಮುಂದೆ ಚಿಲ್ಲರೆ ನಾಣ್ಯಗಳಿಗೆ ಅಭಾವವುಂಟಾಗುವುದೋ ಏನೋ ಎಂಬ ಕಳವಳವೂ ಜನಗಳಲ್ಲಿ ಉಂಟಾಗಿದೆ. ಆದುದರಿಂದ ಈಗಿನ ಪರಿಸ್ಥಿತಿಗೆ ಸಂಬಂಧಪಟ್ಟ ಕೆಲವು ಮುಖ್ಯ ವಿಚಾರಗಳನ್ನು ತಿಳಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಆವಶ್ಯಕವಾಗಿದೆ.

ಹಿಂದೆ 1914 ನೆಯ ಇಸವಿಯಿಂದ 1918 ನೆಯ ಇಸವಿಯವರೆಗೆ ಯುದ್ಧ ನಡೆಯಿತಷ್ಟೆ ಆ ನಾಲ್ಕು ವರ್ಷಗಳ ಅವಧಿಯಲ್ಲಿ (ಅರ್ಧ ರೂಪಾಯಿ ನಾಣ್ಯಗಳನ್ನು ಬಿಟ್ಟು) ಚಲಾವಣೆಗೆ ದೊರೆಯದಹಾಗೆ ಮರೆಮಾಡಲ್ಪಟ್ಟ ಇತರ ಚಿಲ್ಲರೆ ನಾಣ್ಯಗಳ ಒಟ್ಟು ಮೊತ್ತವು 5 ಕೋಟಿ ರೂಪಾಯಿಗಳು ಈಗ ನಡೆಯುತ್ತಿರುವ ಯುದ್ಧದ ಮೊದಲನೆಯ 2½ ವರುಷಗಳ ಅವಧಿಯಲ್ಲಿಯೇ ಆ ಸಂಖ್ಯೆಯು 8 ಕೋಟಿ ರೂಪಾಯಿಗಳು 1942 ನೆಯ ಇಸವಿ ಏಪ್ರಿಲ್ ತಿಂಗಳಿಂದ ಸೆಪ್ಟೆಂಬರ್ ತಿಂಗಳ ಕೊನೆಯವರೆಗಿನ ಆರುತಿಂಗಳ ಅವಧಿಯಲ್ಲಿ ಚಲಾವಣೆಯಲ್ಲಿರುವಂತೆ ಜನರು ಮರೆಮಾಡಿಟ್ಟುಕೊಂಡ ಚಿಲ್ಲರೆ ನಾಣ್ಯಗಳ ಮೊತ್ತವು 3½ ಕೋಟಿ ರೂಪಾಯಿಗಳು.

ಈಗಿನ ಸನ್ನಿವೇಶದಲ್ಲಿ ಮೊದಲಿಗಿಂತಲೂ ಹೆಚ್ಚಾಗಿ ಚಿಲ್ಲರೆ ನಾಣ್ಯಗಳು ಬೇಕಾಗುವುದು ಸಹಜವೇ ಸರಿ. ಏಕೆಂದರೆ, ಈಗ ದೇಶದಲ್ಲಿ ಕೈಗಾರಿಕೆ ವಾಣಿಜ್ಯ ಮುಂತಾದುವುಗಳ ಕಾರ್ಯಕಲಾಪಗಳು ಹೆಚ್ಚುತ್ತಿವೆ, ಸಾರ್ವಜನಿಕ ಕಾರ್ಯಕಲಾಪಗಳು ವೃದ್ಧಿಯಾಗುತ್ತಿವೆ, ಭರತಖಂಡದ ತೀರಪ್ರದೇಶಗಳಿಗೂ ಮತ್ತು ಗಡಿ ಸರಹದ್ದುಗಳಿಗೂ ಇಷ್ಟರಲ್ಲೇ ಯುದ್ಧ ಸಂಭವಿಸಬಹುದಾದ ಪ್ರಯುಕ್ತ ಹೆಚ್ಚು ಸೈನ್ಯಗಳು ಬಂದು ತುಂಬಿ ಸಜ್ಜಾಗಿವೆ. ಇವೆಲ್ಲ ಕಾರಣಗಳಿಂದ ಹಣದ ಚಲಾವಣೆ ಹೆಚ್ಚಿ ಯುಕ್ತವಾದ ಮಟ್ಟಿಗೆ ಚಿಲ್ಲರೆ ನಾಣ್ಯಗಳ ಆವಶ್ಯಕತೆಯು ಹೆಚ್ಚಾಗಬಹುದೆಂಬ ನಿರೀಕ್ಷೆಯೇನೋ ಉಂಟು ಆದರೆ, ಈಗ ಕಂಡುಬರುತ್ತಿರುವಂತೆ ಎಷ್ಟು ಚಿಲ್ಲರೆ ನಾಣ್ಯಗಳನ್ನು ಒದಗಿಸಿದರೂ ಬಹು ಭಾರಿ ಪ್ರಮಾಣದಲ್ಲಿ ನಾಣ್ಯಗಳು ಮಾಯವಾಗಿ, ಜನರ ಬಳಕೆಗೆ ತಕ್ಕಷ್ಟು ಚಿಲ್ಲರೆ ನಾಣ್ಯಗಳೇ ದೊರೆಯದ ಅಭಾವವುಂಟಾಗಿರುವುದು. ಖಂಡಿತವಾಗಿಯೂ ಅವಷ್ಟೇ ಕಾರಣಗಳಿಂದಲ್ಲ ಅಲ್ಲಲ್ಲಿ, ಜನರು ಚಿಲ್ಲರೆ ನಾಣ್ಯಗಳನ್ನು ಬಚ್ಚಿಟ್ಟಿರುವುದೇ ಅದಕ್ಕೆ ನಿಜವಾದ ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದಾಗಿದೆ

ಆಹಾರ ಸಾಮಗ್ರಿಗಳ ಅಭಾವವುಂಟಾಗುವುದೆಂಬ ಶಂಕೆಯಿಂದ ಅವುಗಳನ್ನು ಅನೇಕರು ಸಂಗ್ರಹಿಸಿಟ್ಟುಕೊಂಡಿರುವಂತೆ, ಚಿಲ್ಲರೆ ನಾಣ್ಯಗಳಿಗೂ ಅಭಾವವುಂಟಾಗಬಹುದೆಂದು ಯೋಚಿಸಿ ಜನರು ಅಲ್ಲಲ್ಲಿ ಚಿಲ್ಲರೆ ನಾಣ್ಯಗಳನ್ನೂ ಸಂಗ್ರಹಿಸಿಟ್ಟುಕೊಂಡಿರುವಂತೆ ಕಂಡುಬರುತ್ತದೆ, ಅವರು ಹಾಗೆ ಮಾಡಿರುವುದು ಸಹಜವೇ ಹೌದು, ಆ ರೀತಿ ಸಂಗ್ರಹಿಸಿಟ್ಟುಕೊಂಡಿರುವವರು ಅಲ್ಪ ಸ್ವಲ್ಪ ಸಂಖ್ಯೆಯ ಚಿಲ್ಲರೆ ನಾಣ್ಯಗಳನ್ನೇ ಸಂಗ್ರಹಿಸಿಟ್ಟುಕೊಂಡಿದ್ದಾಗ್ಯೂ, ಅನೇಕರು ಅದೇ ರೀತಿ ಮಾಡಿರುವುದರಿಂದ ಒಟ್ಟಿನಮೇಲೆ ಬಹುಸಂಖ್ಯೆಯ ಚಿಲ್ಲರೆ ನಾಣ್ಯಗಳನ್ನು ಚಲಾವಣೆಯಿಂದ ತಪ್ಪಿಸಿ ಶೇಖರಿಸಿಟ್ಟುಕೊಂಡಂತಾಗಿದೆ ಇದನ್ನು ತಪ್ಪಿಸಿ ಜನರು ತಮ್ಮಲ್ಲಿ ಇಟ್ಟುಕೊಂಡಿರುವ ಚಿಲ್ಲರೆ ನಾಣ್ಯಗಳನ್ನು ಹೊರಕ್ಕೆ ಬಿಟ್ಟುಕೊಡುವಂತೆ ಮಾಡಬೇಕಾದರೆ ಅದಕ್ಕಿರುವುದು ಒಂದೇ ದಾರಿ ; ಎಂದರೆ, ಚಿಲ್ಲರೆ ನಾಣ್ಯಗಳು ಆವಶ್ಯವಿರುವಮಟ್ಟಿಗೂ ದೊರೆಯುತ್ತವೆಂದೂ, ಆವಶ್ಯ ಸಂಖ್ಯೆಯ ಚಿಲ್ಲರೆ ನಾಣ್ಯಗಳನ್ನೊದಗಿಸಲು ಸರ್ಕಾರದವರು ಶಕ್ತರಾಗಿರುತ್ತಾರೆಂದೂ ಮಹಾಜನರೂ ಮತ್ತು ಪತ್ರಿಕೋದ್ಯೋಗಿಗಳೂ ಸಾರ್ವಜನಿಕರಿಗೆ ನಂಬಿಕೆಯನ್ನುಂಟುಮಾಡಲು ಮನಃಪೂರ್ವಕವಾಗಿ ಕೆಲಸಮಾಡಬೇಕಾದುದೇ ಅದಕ್ಕಿರುವ ದಾರಿ. ಜನಗಳಲ್ಲಿ ಕಳವಳವನ್ನುಂಟುಮಾಡತಕ್ಕ ರಾಜಕೀಯ ಚಳವಳಿಯನ್ನೆಬ್ಬಿಸುವುದೂ, ಭಯವನ್ನೂ ಮತ್ತು ಆತಂಕವನ್ನೂ ಉಂಟುಮಾಡತಕ್ಕ ವಿಷಯಗಳನ್ನು ಪ್ರಕಟಪಡಿಸುವುದೂ ಸಾರ್ವಜನಿಕ ಹಿತಕ್ಕೆ ಬಾಧಕವನ್ನುಂಟುಮಾಡತಕ್ಕವುಗಳಾಗಿವೆ.

ಚಿಲ್ಲರೆ ನಾಣ್ಯಗಳನ್ನು ಕೂಡಿಟ್ಟು ಲಾಭಕ್ಕೆ ಹೊರಗೆ ಬಿಟ್ಟುಕೊಡುವ ಉದ್ದೇಶದಿಂದಲೋ ಅಥವಾ ಮೂರು ಕಾಸಿನ ನಾಣ್ಯಗಳ ವಿಷಯದಲ್ಲಿರುವಂತೆ ನಾಣ್ಯದ ಮೌಲ್ಯಕ್ಕಿಂತ ಅದರಲ್ಲಿರುವ ಲೋಹದ ಧಾರಣೆಯು ಬಹಳವಾಗಿ ಹೆಚ್ಚುವುದೆಂಬ ನಿರೀಕ್ಷೆಯಿಂದ ಚಿಲ್ಲರೆ ನಾಣ್ಯಗಳನ್ನು ಕರಗಿಸಿ ಲೋಹದ ಗಟ್ಟಿಗಳನ್ನು ಮಾಡಿಟ್ಟುಕೊಂಡಲ್ಲಿ ಹೆಚ್ಚು ಲಾಭ ಪಡೆಯಬಹುದೆಂಬ ಉದ್ದೇಶದಿಂದಲೋ, ಜನರು ಚಿಲ್ಲರೆ ನಾಣ್ಯಗಳನ್ನು ಸಂಗ್ರಹಿಸಿ ಬಚ್ಚಿಡುತ್ತಿರುವಂತೆ ತೋರುತ್ತದೆ. ಚಿಲ್ಲರೆ ನಾಣ್ಯಗಳು ತಕ್ಕಷ್ಟು ದೊರೆಯದಿರುವ ಈಗಿನ ಪರಿಸ್ಥಿತಿಗೆ ಇದೇ ಮುಖ್ಯ ಕಾರಣವಾಗಿದೆಯೆಂದು ಹೇಳಬಹುದಾಗಿದೆ. ಜನರು ಈ ರೀತಿಯಲ್ಲಿ ಚಿಲ್ಲರೆ ನಾಣ್ಯಗಳನ್ನು ದುರುಪಯೋಗ ಮಾಡುತ್ತಿರುವುದು ಅಕ್ಷಮ್ಯವೇ ಸರಿ. ಆದರೆ ಸಾರ್ವಜನಿಕರು ಸುಮ್ಮನಿರದೆ, ಈ ದುರುಪಯೋಗವನ್ನು ಖಂಡನೆ ಮಾಡುತ್ತ ಬಂದ ಪಕ್ಷದಲ್ಲಿ ಜನಾಭಿಪ್ರಾಯಕ್ಕೆ ವಿರುದ್ಧವಾಗಿ ಈ ದುರುಪಯೋಗವು ಮುಂದುವರಿಯಲಾರದು

ಚಿಲ್ಲರೆ ನಾಣ್ಯಗಳನ್ನು ಅವುಗಳ ಮೇಲೆ ನಮೂದಾಗಿರುವ ಬೆಲೆಗಲ್ಲದೆ ಬೇರೆ ಬೆಲೆಗೆ ಮಾರುವುದು ಇಂಡಿಯಾದೇಶದ ರಕ್ಷಣೆಗೆ ಸಂಬಂಧಪಟ್ಟ ನಿಬಂಧನೆಗಳ ಪೈಕಿ 90 ನೆಯ ನಿಬಂಧನೆಯ (2) ನೆಯ ಒಳನಿಬಂಧನೆಯ (8) ಕ್ಲಾಸಿನ ಮೇರೆಗೆ ನಿಷಿದ್ಧ ಕಾರ್ಯವಾಗಿದೆ ಸ್ವಂತ ಉಪಯೋಗಕ್ಕಾಗಲಿ ಅಥವಾ ವ್ಯಾಪಾರದ ಆವಶ್ಯಕತೆಯಿಂದಾಗಲಿ ನ್ಯಾಯವಾಗಿ ಎಷ್ಟು ಬೇಕೋ ಅಷ್ಟಕ್ಕಿಂತಲೂ ಹೆಚ್ಚಾಗಿ ಚಿಲ್ಲರೆ ನಾಣ್ಯಗಳನ್ನು ಸಂಗ್ರಹಿಸಿಟ್ಟುಕೊಳ್ಳುವುದು ಮೇಲೆ ಕಂಡ ಒಳನಿಬಂಧನೆಯ (d) ಕ್ಲಾಸಿನ ಮೇರೆಗೆ ಕಾನೂನಿಗೆ ವಿರುದ್ಧವಾದ ಆಚರಣೆಯಾಗಿದೆ ಈ ಎರಡು ರೀತಿಗಳಲ್ಲಿಯೂ ನಿಬಂಧನೆಗಳನ್ನು ಅತಿಕ್ರಮಿಸಿ ನಡೆದವರು ಅಪರಾಧಮಾಡಿದವರಾಗುತ್ತಾರೆ ಅವರು ಅದಕ್ಕಾಗಿ 90 ನೆಯ ನಿಬಂಧನೆಯ (3) ನೆಯ ಒಳನಿಬಂಧನೆಯ ಮೇರೆಗೆ ಸಜಾಶಿಕ್ಷೆಗಾಗಲಿ ಅಥವಾ ಜುಲ್ಮಾನೆಯ ಶಿಕ್ಷೆಗಾಗಲಿ ಅಥವಾ ಈ ಎರಡು ಶಿಕ್ಷೆಗಾಗಲಿ ಗುರಿಯಾಗಬೇಕಾಗುತ್ತದೆ

ಚಿಲ್ಲರೆ ನಾಣ್ಯಗಳನ್ನು ಪರಮಾವಧಿ ಪ್ರಮಾಣಗಳಲ್ಲಿ ತಯಾರಿಸುವುದಕ್ಕಾಗಿ ಟಂಕಸಾಲೆಗಳಲ್ಲಿ ಎಷ್ಟು ಹೆಚ್ಚಾಗಿ ಕೆಲಸ ನಡೆಯಿಸುವುದು ಸಾಧ್ಯವೋ ಅಷ್ಟುಮಟ್ಟಿಗೂ ಕೆಲಸ ನಡೆಯುತ್ತಿದೆ 1939 ನೆಯ ಇಸವಿ ಸಪ್ಟೆಂಬರ್ ತಿಂಗಳಿನಲ್ಲಿ ಯುದ್ಧ ಪ್ರಾರಂಭವಾದಾಗ ತಿಂಗಳೊಂದಕ್ಕೆ 1 ಕೋಟಿ 60 ಲಕ್ಷ ಸಂಖ್ಯೆಯ ನಾಣ್ಯಗಳು ಆಗುತ್ತಿದ್ದುವು. ಈಗ ತಿಂಗಳಿಗೆ ಸುಮಾರು 7 ಕೋಟಿ ನಾಣ್ಯಗಳು ಆಗುತ್ತಿವೆ. ಯುದ್ಧ ಪ್ರಾರಂಭವಾದನಂತರ ಮೂರು ವರ್ಷಗಳೊಳಗೆ 180 ಕೋಟಿ ನಾಣ್ಯಗಳು ತಯಾರಾಗಿವೆ. ಇದು ಅಗಾಧ ಸಂಖ್ಯೆಯೇ ಸರಿ ಇದು ಕೇವಲ ಹೊಸದಾಗಿ ತಯಾರಾದ ನಾಣ್ಯಗಳ ಸಂಖ್ಯೆ ಯುದ್ಧಪ್ರಾರಂಭದ ಸಮಯಕ್ಕೆ ಚಲಾವಣೆಯಲ್ಲಿದ್ದ ನಾಣ್ಯಗಳ ಜೊತೆಗೆ ಇಷ್ಟು ನಾಣ್ಯಗಳೂ ತಯಾರಾಗಿವೆ ಚಿಲ್ಲರೆ ನಾಣ್ಯಗಳನ್ನು ಇನ್ನೂ ಭಾರಿಪ್ರಮಾಣದಲ್ಲಿ ತಯಾರಿಸುವುದಕ್ಕಾಗಿ ಸರ್ಕಾರದವರು ಇಷ್ಟರಲ್ಲೇ ಕ್ರಮವನ್ನು ಕೈಗೊಳ್ಳುತ್ತಾರೆ. ಆದರೆ ಈ ಮಧ್ಯೆ ಲಾಭದ ದುರಾಶೆಯಿಂದ ನಾಣ್ಯಗಳನ್ನು ಮಿತಿಮೀರಿ ಶೇಖರಿಸಿ ಬಚ್ಚಿಟ್ಟುಕೊಂಡು ಪ್ರಜೆಗಳಿಗೆ ಅನ್ಯಾಯವಾಗಿ ತೊಂದರೆಯನ್ನುಂಟುಮಾಡುತ್ತಿರುವವರ ಕೇಡಿತನವನ್ನು ಖಂಡಿಸಿ ಬಯಲಿಗೆಳೆಯುವುದರಲ್ಲಿ ಸಾರ್ವಜನಿಕರೂ, ಪತ್ರಿಕೋದ್ಯೋಗಿಗಳೂ ತಮ್ಮ ಕರ್ತವ್ಯವನ್ನು ನೆರವೇರಿಸಬೇಕು ; ಅಲ್ಲದೆ ಅಪರಾಧಿಗಳಿಗೆ ಶಿಕ್ಷೆಯಾಗುವಂತೆ ಮಾಡುವುದರಲ್ಲಿ ಅವರುಗಳು ತಮ್ಮ ತಮ್ಮ ಸ್ಥಳದ ಅಧಿಕಾರಿಗಳಿಗೆ ಸಹಾಯ ಮಾಡಬೇಕು ಅವರು ಈ ರೀತಿ ಮಾಡುವರೆಂದು ಸರ್ಕಾರದವರು ನಿರೀಕ್ಷಿಸುತ್ತಾರೆ"

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೬—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೨ × ೧೪ ಬೆಲೆ	೦—೧—೬
[illegible] ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೨—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೨—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	—೨—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೬
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೨—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೬
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಾನ್ಫರೆನ್ಸಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವ ಅವಕಾಶವಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಮೀರಾತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವವನಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳದ್ದು)	೧|| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shatriji (*English*)	**4 As.**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवदर्शन (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	६ आ.
शुकाष्टकम् (वीरशैवप्राचीनभाष्योपेतम्)	४ आ.
[illegible] (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವುದು.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಶೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGIETERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ. ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೬ನೇ ಏಪ್ರಿಲ್ ೧೯೪೩ [ಸಂಚಿಕೆ ೫೪

ಶ್ರೀಜಗದ್ಗುರು ಉಜ್ಜಯಿನೀ ಧರ್ಮಪೀಠದಲ್ಲಿ ಪ್ರಾಚೀನಪುಷ್ಕರಿಣಿಯು ಹೊರಬಿದ್ದಿದೆ

ಶ್ರೀಜಗದ್ಗುರು ಉಜ್ಜಯಿನೀ ಧರ್ಮಪೀಠದಲ್ಲಿ ವಿರಾಜಿಸುತ್ತಿರುವ ಶ್ರೀ ಸಿದ್ಧೇಶ್ವರಸ್ವಾಮಿಯ ಸಮ್ಮುಖದಲ್ಲಿರುವ ಮಹಾದ್ವಾರದ ಮುಂಭಾಗದಲ್ಲಿ ೨೦ ಅಡಿ ವಿಸ್ತಾರವಾದ ಪುಷ್ಕರಿಣಿಯು ಹೊರಬಿದ್ದಿರುವದು ಇದು ನೂರಾರು ವರ್ಷಗಳಿಂದ ಭೂಗರ್ಭದಲ್ಲಿ ಮುಚ್ಚಿಹೋಗಿತ್ತು. ಈಗ ಅಕಸ್ಮಾತ್ ಹೊರಬಿದ್ದಿರುವುದನ್ನು ನೋಡಿದರೆ ಇದೊಂದು ಶುಭಚಿಹ್ನವೆಂದೇ ಹೇಳಬೇಕಾಗಿದೆ ಶ್ರೀ ಸಿದ್ಧೇಶ್ವರಸ್ವಾಮಿಯ ದೇವಾಲಯವು ಶಿವಾಗಮಾನುಸಾರವಾಗಿ ಕಟ್ಟಲ್ಪಟ್ಟಿರುವುದರಿಂದ ವಸಂತೋತ್ಸವಕ್ಕಾಗಿಯೂ, ಅವಭೃತಸ್ನಾನಕ್ಕಾಗಿಯೂ ಶಾಸ್ತ್ರಾನುಸಾರವಾಗಿ ಪುಷ್ಕರಿಣಿಯು ಇದ್ದೇತೀರಬೇಕು ಅದು ಈಗ ದೊರೆತಿರುವದು ಭಕ್ತಾದಿಗಳ ಪುಣ್ಯವಿಶೇಷವೆಂದೇ ಭಾವಿಸಬೇಕು ಈ ಪುಷ್ಕರಿಣಿಯು ಇಂದು ನಿರ್ಮಿತವಾಗಿರುವಂತೆ ಕಾಣುತ್ತಿರುವದು ಪುಷ್ಕರಿಣಿಯ ಮುಂದೆ ದೋಲೋತ್ಸವಕ್ಕಾಗಿ ಅತ್ಯಂತ ಎತ್ತರವಾದ ಎರಡು ಕಲ್ಲಿನ ಕಂಬಗಳಿರುವವು ಪೂರ್ವಕಾಲದಲ್ಲಿ ಇಲ್ಲಿ ದೋಲೋತ್ಸವವು ನಡೆಯುತ್ತಿತ್ತೆಂದು ವೃದ್ಧರು ಹೇಳುತ್ತಿರುವರು. ಕೆಲವು ಕಾಲದಿಂದ ದೋಲೋತ್ಸವವು ನಿಂತುಹೋಗಿದೆ ಶ್ರೀಜಗದ್ಗುರುಗಳು ಇನ್ನು ಮುಂದೆ ವೈಶಾಖಮಾಸದಲ್ಲಿ ಆಗಮಾನುಸಾರವಾಗಿ ಪ್ರತಿಯೊಂದು ಕಾರ್ಯಗಳೂ ನೆರವೇರುವಂತೆ ಏರ್ಪಡಿಸಿ ಈ ಪ್ರಾಂತದ ಭಕ್ತಾದಿಗಳ ಮನಸ್ಸನ್ನು ಸಂತೋಷಪಡಿಸಬೇಕೆಂದು ಬಹು ಜನರು ಇಚ್ಛಿಸುತ್ತಿರುವರು ಭಕ್ತರ ಕೋರಿಕೆಯು ಶೀಘ್ರವಾಗಿ ನೆರವೇರುವಂತಾಗಲೆಂದು ಪ್ರಾರ್ಥಿಸುವ,

ಸ್ವಾಮಿಭಕ್ತ

ಸತ್ಯಾಂಶ್ಲೇಷ, ತಿಪಟೂರು

ತಾ|| 21-4-43ರಲ್ಲಿ ತಿಪಟೂರಿನ ಆರ್ಯಬಾಲಿಕಾಪಾಠಶಾಲೆಯಲ್ಲಿ ಅಭಿನವಶಾರದಾ, ಮಹಿಳಾಮಣಿ, ಆಚಾರ್ಯತತ್ತ್ವವಿಶಾರದಾ ಇತ್ಯಾದಿ ಪದವೀ ವಿಭೂಷಿತೆಯರೂ ಸೊಲ್ಲಾಪುರ ಸ್ಕೂಲ್ ಬೋರ್ಡು ಪ್ರೆಸಿಡೆಂಟರೂ ಆದ ಸೌ|| ಭಾಗೀರಥೀಬಾಯಿ ಕಟಾಪ ಇವರು, ಶ್ರೀಮಾನ್ ಎಚ್ ಕೆ ವೀರಬಸವಯ್ಯನವರು ರಿಟೈರ್ಡ್ ಸೆಷನ್ಸ್ ಜಡ್ಜ್ ಇವರ ಅಧ್ಯಕ್ಷತೆಯಲ್ಲಿ ಆರ್ಯ ಸಂಸ್ಕೃತಿ ವಿಷಯವಾಗಿಯೂ, ತಾ|| 22-4-43 ನೇಯ ದಿವಸ ಮಹಿಳಾ ಧರ್ಮದ ವಿಷಯವಾಗಿಯೂ, ಅಮೋಘವಾದ ಭಾಷಣಗಳನ್ನು ಮಾಡಿದರು. ಅಧ್ಯಕ್ಷರು ಉಪಸಂಹಾರ ಭಾಷಣದಲ್ಲಿ ಅತ್ಯುತ್ತಮವಾದ ವಿಷಯಗಳನ್ನು ಹೇಳಿದರು. ಶ್ರೀಮಾನ್ ಟಿ. ನಂಜಪ್ಪನವರು ಆಭಾರಮನ್ನಿಸಿದ ಮೇಲೆ ಸಭೆಯು ಮುಕ್ತಾಯವಾಯಿತು

ಆರ್. ಎಂ. ಮಲ್ಲಿಕಾರ್ಜುನಾರಾಧ್ಯ

ಶ್ರೀಮಜ್ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಪ್ರೇಮ

(ಲೇ :— ಶ್ರೀ|| ಷ|| ಬ್ರ|| ಮೃತ್ಯುಂಜಯ ಶಿವಾಚಾರ್ಯಶಾಸ್ತ್ರಿ)

ಸ್ವಶಿಶುಃ ಶವಾಕಾರಮಾಂಸಃ ಶೋಽಪಿ ಹೇಯಃ ।
ಸಕಲಃ ಬಹುಧಾಪೀನ್ ಪ್ರೀಯತೇ ಸಂಪ್ರಯಂತೇ ॥

ಪ್ರೇಮವು ಒಂದು ವಿಲಕ್ಷಣವಾದ ವಸ್ತುವಾಗಿದೆ ಈ ವಸ್ತುವು ಕಣ್ಣಿಗೆ ಕಾಣಿಸದಿದ್ದರೂ ಸರ್ವಪ್ರಕಾರದ ಸುಖಕ್ಕೆ ಮೂಲಕಾರಣೀಭೂತವಾದುದರಿಂದ ಅದರ ಪರಿಣಾಮವು ಮಾತ್ರ ಎದೆದು ತೋರುತ್ತದೆ ಪ್ರೇಮವು ಸರ್ವತ್ರ ಪಸರಿಸಿರುತ್ತದೆ ಪ್ರೇಮರಹಿತವಾದ ಸ್ಥಳವು ಜಗತ್ತಿನಲ್ಲಿ ಒಂದೂ ಸಿಗುವುದಿಲ್ಲ ಪ್ರತಿಯೊಂದು ಪ್ರಾಣಿಯ ಹೃದಯದಲ್ಲಿಯೂ ಪ್ರೇಮವು ಈಶ್ವರನಿಂದ ನಿರ್ಮಾಣಮಾಡಲ್ಪಟ್ಟಿದೆ ಪ್ರತಿಯೊಂದು ವಸ್ತುವಿನ ಮೇಲೆಯೂ ಹೆಚ್ಚುಕಡಿಮೆ ಪ್ರಮಾಣದಿಂದ ಎಲ್ಲರ ಪ್ರೇಮವು ಇರುತ್ತದೆ ದಯೆ, ಮಮತೆ, ಪ್ರೀತಿ ಮೊದಲಾದವುಗಳನ್ನು ದೇವರು ಎಂದು ಮನೋರಾಜ್ಯದಿಂದ ಕಿತ್ತುಹಾಕುವನೋ ಅಂದೇ ನಿಜವಾದ ಸುಖವು ದೊರೆಯುವದು ಈ ಪ್ರಪಂಚದಲ್ಲಿ ಪ್ರೇಮವು ಅತಿಶ್ರೇಷ್ಠವಾಗಿರುವದು ಪ್ರೇಮವು ಜಗತ್ತಿನ ಪ್ರಾಣವಾಗಿರುವುದು ಪ್ರೇಮವಿಲ್ಲದ ಹೃದಯವು ಜೀವಯುಕ್ತವಾಗಿದ್ದರೂ ಮೃತಪ್ರಾಯವಾದುದೇ ಸರಿ

ಕಂದಮೂಲಾದಿಗಳನ್ನು ತಿಂದು ಜೀವಿಸಿ, ಸಂಸಾರ ವಿಷಯದಲ್ಲಿ ವಿಮುಖನಾಗಿ, ಘೋರಾರಣ್ಯದಲ್ಲಿ ತಪಸ್ಸು ಮಾಡುವ ತಪಸ್ವಿಯೂ ಕೂಡ ಪ್ರೇಮಶೂನ್ಯನಾಗಿರುವುದಿಲ್ಲ ಪ್ರೇಮ ಸಂಚಾರವಿಲ್ಲದ ಹೃದಯವು ಪಾಷಾಣಕ್ಕಿಂತಲೂ ಕಠಿಣವಾದದ್ದೆಂದು ಹೇಳಬಹುದು ಮನುಷ್ಯನ ಹೃದಯಕ್ಕೆ ಪ್ರೇಮವು ಒಂದು ಆಭರಣವಾಗಿದೆ ಸದ್ಗುಣದ ಅಭಿವೃದ್ಧಿಗೆ ಪ್ರೇಮವು ಮೂಲಸಾಧನೀಭೂತವಾಗಿದೆ ಜಗತ್ತಿನಲ್ಲಿ ಕೀರ್ತಿಯನ್ನು ಗಳಿಸಿರುವ ಸಾಧು, ಸಂತ, ಕವಿ, ಲೇಖಕರ ಹೃದಯವೆಲ್ಲವೂ ಪ್ರೇಮಮಯವಾಗಿತ್ತೆಂಬುದನ್ನು ನಿಸ್ಸಂಶಯವಾಗಿ ಹೇಳಬಹುದು ಜಗತ್ತಿನ ಕಾರ್ಯಗಳೆಲ್ಲವೂ ಪ್ರೇಮದಿಂದಲೇ ಸುಖವಾಗಿ ಸಾಗುತ್ತವೆ. ಸಕಲ ಜೀವಕೋಟಿಯಲ್ಲಿಯೂ ಈಶ್ವರನು ಪ್ರೇಮವನ್ನಿಟ್ಟಿದ್ದಾನೆ ನಾವು ಕ್ರೂರಮೃಗವನ್ನು ಸಾಕಿ ಸಲಹಿ ಪ್ರೇಮದಿಂದ ಕಂಡರೆ ಅದು ನಮ್ಮಲ್ಲಿ ಪ್ರೇಮವನ್ನಿಡುತ್ತದೆ.

ಯೋಗಿಗಳು ಈಶ್ವರನಲ್ಲಿ ಪ್ರೇಮಾತಿಶಯವನ್ನಿಟ್ಟಿರುವುದರಿಂದಲೇ ಈಶ್ವರನು ಅವರಿಗೆ ಪ್ರತ್ಯಕ್ಷನಾಗುವನು. ಅವರ ಸರ್ವಕಾರ್ಯಗಳನ್ನು ನಿರಾಯಾಸವಾಗಿ ಪೂರ್ತಿಮಾಡಿಕೊಡುವನು. ಪ್ರಹ್ಲಾದನು ದೇವಪ್ರೇಮಕ್ಕಾಗಿ ತಂದೆಯೊಡನೆ ವೈರತ್ವವನ್ನು ಬೆಳಸಿಕೊಂಡನು. ತಂದೆಯು ಅವನನ್ನು ಅಗ್ನಿಕುಂಡದಲ್ಲಿ ಚೆಲ್ಲಿದರೂ ಅವನು ಈಶ್ವರನಲ್ಲಿ ತನ್ನ ನಿಸ್ಸೀಮಪ್ರೇಮವನ್ನು ಬಿಡಲಿಲ್ಲ, ಈ ಪ್ರಕಾರವಾದ ನಿಶ್ಚಲಪ್ರೇಮದಿಂದ ಅವನು ಇಂದಿನವರೆಗೆ ಜಗತ್ತಿನಲ್ಲಿ ಕೀರ್ತಿಶಾಲಿಯಾಗಿದ್ದಾನೆ. ಜಗತ್ತಿನಲ್ಲಿ ಪ್ರೀತಿಯವಸ್ತುವು ಪ್ರಾಣಕ್ಕಿಂತಲೂ ಮಹತ್ತರವಾಗಿ ತೋರುತ್ತದೆ ಒಮ್ಮೊಮ್ಮೆ ಅದರ ಪ್ರಾಪ್ತಿಯ ಸಲುವಾಗಿ ಪ್ರಾಣದ ಆಶೆಯನ್ನೇ ತೊರೆದುಬಿಡಬೇಕಾಗುತ್ತದೆ. ಎಷ್ಟೋ ಜನರು ನಿಜವಾದ ಪ್ರೇಮದ ಸಲುವಾಗಿ ಪ್ರಾಣವನ್ನು ಕಳೆದುಕೊಂಡಿದ್ದಾರೆ

ಈ ವಿಧವಾದ ಪವಿತ್ರಪ್ರೇಮಕ್ಕೆ ಮಾತೃಗಳ ಹೃದಯವು ಮೂಲಬೀಜವಾಗಿದೆ ಮಾತೃಗಳು ಮಕ್ಕಳ ಮೇಲೆ ಮಾಡುವಷ್ಟು ಪ್ರೇಮವು ಪಿತೃವಿನಲ್ಲಿರುವುದಿಲ್ಲ. ತಾಯಿಯ ಹೃದಯವು ಬಹುಮೃದುವಾದುದು ಮತ್ತು ಬಹಳ ಸರಳವಾದುದು ಮಕ್ಕಳಲ್ಲಿ ಕಾರಣಾಂತರದಿಂದ ತಾಯಿಯು ಕೋಪಗೊಂಡವಳಾದರೂ ಪುನಃ ಮಕ್ಕಳನ್ನು ಅತ್ಯಾದರದಿಂದ ಕರೆದು ಪ್ರೀತಿಸುವಳು ಆದರೆ ತಂದೆಯ ಸ್ವಭಾವವು ಹಾಗಲ್ಲ ಕಠಿಣವಾದುದು ತತ್ಕ್ಷಣದಲ್ಲಿಯೇ ನಿರ್ದಯನೂ, ನಿಷ್ಕರುಣಿಯೂ ಆಗುವನು ಕೊನೆಗೆ ಪಾಷಾಣಕ್ಕಿಂತಲೂ ಕಠಿಣನಾಗುವನು ಆದುದರಿಂದಲೇ ಮಕ್ಕಳು ತಾಯಿಯನ್ನು ಹೆಚ್ಚು ಪ್ರೀತಿಸುತ್ತವೆ. ಪ್ರೇಮಕ್ಕೆ ತಾಯಿಯೇ ಆದರ್ಶಳು. ಮಾತೃವು ಮಕ್ಕಳಲ್ಲಿಟ್ಟ ಪ್ರೇಮವನ್ನು ವರ್ಣಿಸಲಿಕ್ಕೆ ಜಿಹ್ವೆಯು ತೀರ ಅಸಮರ್ಥವಾದುದೇ ಸರಿ ! ತಾಯಿಯ ಪ್ರೇಮದ ಋಣವನ್ನು ತೀರಿಸಲಿಕ್ಕೆ ಮಕ್ಕಳಿಗೆ ಸಾಧ್ಯವೇ ? ಎಂಬುದನ್ನು ವಾಚಕರೇ ಊಹಿಸಬೇಕು. ಪ್ರೇಮವು ಜೀವನದ ಜ್ಯೋತಿ ಪ್ರೇಮವು ಜೀವನದ ಸಾರ ಪ್ರೇಮವಿಲ್ಲದ ಸ್ಥಳದಲ್ಲಿ ಎಂದೂ ಹೋಗಬಾರದು ಹೋದದ್ದಾದರೆ ಅಲ್ಲಿ ತಿರಸ್ಕಾರವಾಗುತ್ತದೆ ಅದರಿಂದ ಮನುಷ್ಯನಿಗೆ ಆನಂದವೆನಿಸುವುದಿಲ್ಲ ಪ್ರೇಮವಿಲ್ಲದ ಸ್ಥಳದಲ್ಲಿ ಕೆಲಸ ಮಾಡುವುದಾದರೆ ನಿರುತ್ಸಾಹನಾಗಿಯೇ ಮಾಡಬೇಕಾಗುತ್ತದೆ. ಕಾರ್ಯಸಾಧನೆಗೋಸ್ಕರ ಕೆಲವರು ಬೂಟಾಟಿಕೆಯ ಪ್ರೇಮವನ್ನು ತೋರಿಸುವರು. ಅದು ಶಾಶ್ವತವಾಗಿ ಉಳಿಯುವುದಿಲ್ಲ ಪ್ರೇಮವು ಚಾಡಿಕೋರರ ಮಾತುಗಳಿಂದಲೂ, ಸಣ್ಣಪುಟ್ಟಕಾರಣಗಳಿಂದಲೂ ಶೀಘ್ರವಾಗಿ ಕೆಡುತ್ತದೆ ಇದನ್ನು ಅತ್ಯಂತ ಜಾಗರೂಕತೆಯಿಂದ ಕಾಪಾಡಬೇಕು ಜಗತ್ತಿನಲ್ಲಿ ಪ್ರೇಮದಿಂದಲೇ ಸರ್ವಕಾರ್ಯಗಳಾಗುತ್ತವೆಯೆಂದಮೇಲೆ ಸರ್ವರೂ ಪ್ರಥಮದಲ್ಲಿ ಪ್ರೇಮವೆಂಬ ತಪಸ್ಸನ್ನು ಸಾಧಿಸಬೇಕು ಇದರಿಂದಲೇ ಅವರಿಗೆ ಜಯ !

ತಿದ್ದುಪಾಟಾದ ಆರ್ಡಿನೆನ್ಸ್ ಸಿದ್ಧವಾಗಿದೆ

ಭಾರತ ರಕ್ಷಣ ಶಾಸನದ ೨೬ ನೇ ವಿಧಿಯು ಜಾರಿಯಲ್ಲಿರುವ ರೂಪದಲ್ಲಿ ಅದು ಅಕ್ರಮ ಶಾಸನವೆಂದು ಇಂಡಿಯಾ ಫೆಡರಲ್ ಕೋರ್ಟು ಸಾರಿತಷ್ಟೆ ! ಈಗಾಗಲೇ ಸರ್ಕಾರದವರು ಇದನ್ನು ಸರಿಪಡಿಸಲು ತಿದ್ದುಪಾಟಾದ ಆರ್ಡಿನೆನ್ಸ್ ತರುವರೆಂದೂ ಅದು ವೈಸರಾಯರ ಸಹಿಗೋಸ್ಕರ ಸಿದ್ಧವಾಗಿದೆಯೆಂದೂ ಹೇಳಲಾಗಿದೆ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಏಪ್ರಿಲ್ ತಾ॥ ೨೬ ನೆಯ ಸೋಮವಾರ

ಪಂಚಾಚಾರ್ಯರ ಜಗದ್ಗುರುತ್ವ

ಅಖಿಲಬ್ರಹ್ಮಾಂಡನಾಯಕನಾದ ಪರಶಿವನ ಪಂಚ ಮುಖಗಳಿಂದ ಜಗದಾದಿಯಲ್ಲಿ ಶ್ರೀಜಗದ್ಗುರುರೇಣುಕಾದಿ ಪಂಚಾಚಾರ್ಯರು ಅವತರಿಸಿ ಕೈಲಾಸದಲ್ಲಿ ದೇವಾನುದೇವತೆಗಳಿಗೂ ಪ್ರಮಥಪ್ರಮಥರಿಗೂ ಗುರುಗಳಾಗಿ ಅವರಿಗೆ ಮೋಕ್ಷಮಾರ್ಗವನ್ನು ತೋರಿಸಿರುವ ವಿಷಯವು ಪಾಶುಪತ ಆಗಮಗಳಲ್ಲಿ ವಿಶದವಾಗಿ ಪ್ರತಿಪಾದಿಸಲ್ಪಟ್ಟಿರುವದು. ಸಾಕಾರಸೃಷ್ಟಿಯಾದಮೇಲೆ ಶ್ರೀರೇಣುಕಾದಿಪಂಚಾಚಾರ್ಯರು ಭೂಲೋಕದಲ್ಲಿ ಪರಶಿವನ ಅಪ್ಪಣೆಯ ಮೇರೆಗೆ ವಿಶ್ವದೇಹಧಾರಿಗಳಾಗಿ ಶ್ರೀ ಸೋಮನಾಥಾದಿ ಪಂಚಲಿಂಗಗಳಿಂದವತರಿಸಿ ವೀರಶೈವ ಸಿದ್ಧಾಂತವನ್ನು ಭೂಮಂಡಲದಲ್ಲಿ ಸ್ಥಾಪಿಸಿರುವ ವಿಷಯವು ಶಿವಾಗಮಗಳಲ್ಲಿಯೂ ಸಹಸ್ರಾರು ಮತಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಹೇಳಲ್ಪಟ್ಟಿರುವದು ಈ ಆಚಾರ್ಯರು ಭೂಲೋಕದಲ್ಲಿ ಅತ್ಯಂತ ಕೀರ್ತಿಯನ್ನು ಹೊಂದಿ ಮಹರ್ಷಿಪುಂಗವರೆನಿಸಿಕೊಂಡ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ, ವಾಮದೇವ, ಹರಕಂಠ ಮೊದಲಾದ ಮಹರ್ಷಿಗಳಿಗೂ, ವಿಭೀಷಣ, ನೀಲಗಲ ವಿಕ್ರಮಭೂಪಾಲ, ಗೌತಮೇಂದ್ರ ದೇವಸಂಪದ ಮೊದಲಾದ ಚಕ್ರವರ್ತಿಗಳಿಗೂ ಆಯಾ ಯುಗದಲ್ಲಿ ಶಿವಸಿದ್ಧಾಂತವನ್ನು ಬೋಧಿಸಿ, ಈ ಮತದ ರಕ್ಷಣಾದಿಗಳ ಬಗ್ಗೆ ರಂಭಾಪುರಿ, ಉಜ್ಜಯಿನಿ, ಹಿಮಾಲಯ, ಶ್ರೀಶೈಲ, ಕಾಶೀಕ್ಷೇತ್ರಗಳಲ್ಲಿ ಧರ್ಮಪೀಠಗಳನ್ನು ಸ್ಥಾಪಿಸಿದರು ಪ್ರತಿಯೊಂದು ಯುಗದಲ್ಲಿಯೂ ಆಚಾರ್ಯಭಗವತ್ಪಾದರು ತಮ್ಮ ಮಹಿಮಾಪ್ರಭಾವದಿಂದ ಅನೇಕ ಜನ ಚಕ್ರವರ್ತಿಗಳನ್ನು ಶಿಷ್ಯರನ್ನಾಗಿ ಮಾಡಿಕೊಂಡರು ಆ ಕಾಲದ ರಾಜರು ಈ ಮತಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ವರ್ತಿಸುತ್ತಿದ್ದರೆಂಬುದಕ್ಕೆ ಈಗಲೂ ಕಾಶೀ ಕೇದಾರಪೀಠಗಳಲ್ಲಿ ದೊರೆಯತಕ್ಕ ದಾನಶಾಸನಗಳೇ ಬಲವಾದ ಸಾಕ್ಷಿಗಳಾಗಿವೆ

ಪೂರ್ವಕಾಲದಲ್ಲಿ ಈ ಮತಾಚಾರ್ಯರ ಗುರುತ್ವವು ಎಲ್ಲ ಮತದವರ ಮೇಲೆಯೂ ನಡೆಯುತ್ತಿತ್ತೆಂಬುದಕ್ಕೆ ಈಗಲೂ ಕೇದಾರಪೀಠಾಧಿಪತಿಗಳು ಆ ಪ್ರಾಂತದಲ್ಲಿರುವ ಚತುರ್ವರ್ಣದವರ ಮೇಲೂ ತಮ್ಮ ಗುರುತ್ವವನ್ನು ನಡೆಯಿಸುತ್ತಿರುವುದೇ ಸಾಕ್ಷಿಯಾಗಿದೆ ಆದುದರಿಂದಲೇ ಈ ಮತಾಚಾರ್ಯರಿಗೆ “ ಜಗದ್ಗುರು ” ಎಂಬ ಮಹಾಪದವಿಯು ಜಗದಾದಿಯಿಂದಲೂ ಪ್ರಾಪ್ತವಾಗಿದೆ ಶಿವಾಗಮಗಳಂತೂ ಈ ಭಗವತ್ಪಾದರಲ್ಲಿ ಸ್ವಾಭಾವಿಕವಾಗಿರುವ ಜಗದ್ಗುರುತ್ವವನ್ನು ಮುಕ್ತಕಂಠವಾಗಿ ಹೊಗಳುವವು

ಸುಪ್ರಭೇದಾಗಮದಲ್ಲಿ—

ಪಂಚಾಸ್ಯವದನೋದ್ಭೂತಾಃ ಸರ್ವಜ್ಞಾ ಗುರೂತ್ತಮಾಃ |
ತತ್ಸೃಷ್ಟಾನಾಂ ಚ ಸರ್ವೇಷಾಂ ತತ್ಸಾಮರ್ಥ್ಯಂ ಕಥಂ ಭವೇತ್ ||

ಲೋಕೇ ಸರ್ವಪಕ್ಷಿಣಾಂ ಪಕ್ಷಿತ್ವಂ ವರ್ತತೇಽಪಿ ಚೇತ್ |
ಕಾಕಾನಾಂ ಖಗಪತೇಃ ಸಮಾನತಾ ಕಥಂ ನಹಿ ||

ಲೋಕೇ ಸರ್ವಶಿಲಾನಾಂ ಚ ಶಿಲಾತ್ವಂ ವರ್ತತೇಽಪಿ ಚೇತ್ |
ಚಿಂತಾಮಣೇಃ ಶಿಲಾನಾಂ ಚ ಸಮತ್ವಂ ನ ಕದಾಚನ ||

ಸರ್ವೇಷಾಂ ಭೂರುಹಾಣಾಂ ಚ ವೃಕ್ಷತ್ವಂ ವರ್ತತೇಽಪಿ ಚೇತ್ |
ತಥಾಪಿ ಕಲ್ಪವೃಕ್ಷಸ್ಯ ಬಬ್ಬೂರಾಸ್ತು ಸಮಾ ನಹಿ ||

ತಥೈವ ಚ ಗುರೂಣಾಂ ಚ ಪ್ರಭಾಸಂತ್ಯಪಿ ಜಾತಿಷು |
ನರದೇಹಸ್ಯ ಯಥಾ ದೃಷ್ಟಾ ನ ಪ್ರತ್ಯಕ್ಷ್ಯಲಕ್ಷಣೇ ||

ತಸ್ಮಾತ್ತ್ವಚ್ಛಿವಾಚಾರ್ಯಾಃ ಪಂಚಪೀಠಾಧಿದೇವತಾಃ |
ಪಂಚಸಿಂಹಾಸನಾಧೀಶಾ ಜಗದ್ಗುರುವರಾಃ ಸ್ಮೃತೇ ||

ಪಂಚಪೀಠಾಧಿದೇವಾನಾಂ ಯೇ ಜಾನಂತಿ ಸಮಾನತಾಂ |
ತೇ ನರಕಭಾಜಸ್ಸಂಪ್ರೋಕ್ತಾ ಜ್ಞಾನಹೀನತ್ವತಃ ಶಿವೇ ||

ತಸ್ಮಾತ್ಸರ್ವೇ ಪಂಚಸಿಂಹಾಸನಸಮುದ್ಭವಾಃ |
ಸರ್ವೇಷಾಂ ಸರ್ವಲೋಕಾನಾಂ ಜಗದ್ಗುರುವರೋತ್ತಮಾಃ ||

ಓ ಪಾರ್ವತೀದೇವಿಯೇ, ಸಾಕ್ಷಾತ್ ನನ್ನ ಮುಖಗಳಿಂದ ಅವತರಿಸಿ ಗುರೂತ್ತಮರೆನಿಸಿಕೊಂಡಿರುವ ಪಂಚಾಚಾರ್ಯರ ಸಾಮರ್ಥ್ಯವು ಈ ಆಚಾರ್ಯರಿಂದ ಸೃಷ್ಟಿಸಲ್ಪಟ್ಟ ಕುಲದವರಿಗೆ ಹೇಗೆ ಬಂದೀತು? ಲೋಕದಲ್ಲಿರುವ ಪಕ್ಷಿಗಳೆಲ್ಲಾ ಪಕ್ಷಿತ್ವಧರ್ಮವಿದ್ದರೂ ಕಾಗೆಗಳು ಹೇಗೆ ಗರುಡನಿಗೆ ಸಮಾನವಾಗಲಾರವೋ, ಲೋಕದಲ್ಲಿರುವ ಕಲ್ಲುಗಳೆಲ್ಲಾ ಕಲ್ಲಿನ ಸ್ವಭಾವವಿದ್ದರೂ ಕಾಡುಗಲ್ಲುಗಳು ಹೇಗೆ ಚಿಂತಾಮಣಿಗೆ ಸಮಾನವಾಗಲಾರವೋ, ಲೋಕದಲ್ಲಿರುವ ಮರಗಳೆಲ್ಲಾ ಮರಗಳ ಸ್ವಭಾವವಿದ್ದರೂ ಬೂರುಗದಮರವು ಹೇಗೆ ಕಲ್ಪವೃಕ್ಷಕ್ಕೆ ಸಮಾನವಾಗಲಾರದೋ, ಹಾಗೆಯೇ ಸಾಕ್ಷಾತ್ತಾಗಿ ನನ್ನ ಸದ್ಯೋಜಾತಾದಿ ಮುಖಗಳಿಂದ ಅವತರಿಸಿದ ಶ್ರೀರೇಣುಕಾದಿಮೂಲಪಂಚಾಚಾರ್ಯರಿಗೆ ಇವರಿಂದ ಸೃಜಿಸಲ್ಪಟ್ಟವರು ಎಂದೂ ಸಮಾನರಾಗಲಾರರು ಕಲಿಯುಗದಲ್ಲಿ ರೇವಣಾರಾಧ್ಯ, ಮರುಳಾರಾಧ್ಯ, ಏಕೋರಾಮಾರಾಧ್ಯ, ಪಂಡಿತಾರಾಧ್ಯ, ವಿಶ್ವಾರಾಧ್ಯರೆಂಬ ಹೆಸರಿನಿಂದ ಅವತರಿಸಿದ ಈ ಪಂಚಾಚಾರ್ಯರೇ ವೀರಾದಿಪಂಚಪೀಠಾಧಿಪತಿಗಳಾದುದರಿಂದ ಜಗದ್ಗುರುಗಳೆಂದು ಹೇಳಿಸಿಕೊಳ್ಳುವರು ಆದುದರಿಂದ ಓ ಗಿರಿಜೆಯೇ, ಲೋಕದಲ್ಲಿ ಇಂತಹ ಅಸಾಧಾರಣಮಹಿಮಾನ್ವಿತರಾದ ಜಗದ್ಗುರುಪಂಚಾಚಾರ್ಯರನ್ನು ಯಾರು ಅಜ್ಞಾನದಿಂದ ತಮಗೆ ಸಮಾನರನ್ನಾಗಿ ತಿಳಿಯುತ್ತಾರೆಯೋ ಅಂತಹ ಮೂಢಾತ್ಮರು ಕತ್ತೆಗಳಿಗೆ ಸಮಾನರಾಗುವರು ಆದುದರಿಂದಲೇ ಈ ಪಂಚಾಚಾರ್ಯರು ನನ್ನ ಲೋಕಕ್ಕೂ ಅಲ್ಲದೆ ಸಕಲಲೋಕಗಳಿಗೂ ಜಗದ್ಗುರುಗಳಾಗಿರುವರೆಂದು ತಿಳಿ ಎಂದು ಉಪದೇಶಿಸಿರುವನು

ಅಲ್ಲದೆ ಇದೇ ಆಗಮದಲ್ಲಿ—

ವೀರಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚ ಯಃ |
ರೇವಣಾರಾಧ್ಯಸನ್ನಾಮಾ ಜಗದ್ಗುರುತಮಶ್ಚ ಸಃ ||

ನಂದಿಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚ ಯಃ |
ಮರುಳಾರಾಧ್ಯಸನ್ನಾಮಾ ಜಗದ್ಗುರುತಮಶ್ಚ ಸಃ ||

ಭೃಂಗಿಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚ ಯಃ |
ಏಕೋರಾಮಾರಾಧ್ಯಸನ್ನಾಮಾ ಜಗದ್ಗುರುತಮಶ್ಚ ಸಃ ||

ವೃಷಗೋತ್ರಾಧಿನಾಥಶ್ಚ ಸಿಂಹಾಸನಪತಿಶ್ಚ ಯಃ |
ಪಂಡಿತಾರಾಧ್ಯಸನ್ನಾಮಾ ಜಗದ್ಗುರುತಮಶ್ಚ ಸಃ ||

ಸ್ಕಂದಗೋತ್ರಾಧಿನಾಥಶ್ಚ ಮಹಾಸಿಂಹಾಸನಾಗ್ರಣೀಃ |
ವಿಶ್ವಾರಾಧ್ಯ ಇತಿ ಖ್ಯಾತೋ ಜಗದ್ಗುರುತಮಶ್ಚ ಸಃ ||

ಯಾವನು ವೀರಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀರೇವಣಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ನಂದಿಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀಮರುಳಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ಭೃಂಗಿಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀಏಕೋರಾಮಾರಾಧ್ಯನೇ ಜಗದ್ಗುರುವಾಗಿರುವನು. ಯಾವನು ವೃಷಭಗೋತ್ರಕ್ಕೆ ಅಧಿನಾಥನೋ ಹಾಗೂ ಸಿಂಹಾಸನಾಧಿಪತಿಯೋ ಅಂಥ ಶ್ರೀಪಂಡಿತಾರಾಧ್ಯನೇ ಜಗದ್ಗುರುವಾಗಿರುವನು. ಸ್ಕಂದಗೋತ್ರಕ್ಕೆ ಅಧಿನಾಥನೂ, ಮಹಾಸಿಂಹಾಸನಾಗ್ರಣಿಯೂ ಆದ ವಿಶ್ವಾರಾಧ್ಯನೇ ಜಗದ್ಗುರುವಾಗಿರುವನು.

ಈ ರೀತಿಯಾಗಿ ಶಿವಾಗಮಗಳು ಈ ಮಹಾತ್ಮರಲ್ಲಿ ಜಗದ್ಗುರುತ್ವವನ್ನು ಮುಕ್ತಕಂಠದಿಂದ ಪ್ರತಿಪಾದಿಸಿರುವುದರಿಂದ, ಸರ್ವರೂ ಈ ಮಹಾತ್ಮರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಮುಕ್ತಿಫಲವನ್ನು ಪಡೆದು ಧನ್ಯರಾಗಬೇಕೆಂದು ಹಾರೈಸುತ್ತೇವೆ

ಯುದ್ಧವಾರ್ತೆ

ಫ್ರೆಂಚರಿಗೆ ಜಯವಾಗಲೆಂದು ಬರೆದದ್ದಕ್ಕೆ ೩೦ ಮಂದಿಗಳ ಕೊಲೆ

ಪ್ಯಾರಿಸ್‌ನಲ್ಲಿ ಡಿಗಾಲೆ ಮತ್ತು ಗಿರಾಡ್‌ರವರಿಗೆ ಜಯವಾಗಲೆಂದು ಗೋಡೆಯ ಮೇಲೆ ಬರೆದದ್ದಕ್ಕೆ ೧೧ ಫ್ರೆಂಚ್ ಹೆಂಗಸರನ್ನೂ ೧೮ ಜನ ಗಂಡಸರನ್ನೂ ಗುಂಡಿನಿಂದ ಹೊಡೆದು ಸಾಯಿಸಲಾಯಿತೆಂದು ವರದಿಯಾಗಿದೆ.

ನೊವೊರೊಸಿಸ್ಕ್ ರಷ್ಯನ್ನರ ವಶ

ನೊವೊರೊಸಿಸ್ಕ್ ಪಟ್ಟಣವನ್ನು ರಷಿಯನ್ನರು ಪ್ರವೇಶಿಸಿರುವರೆಂದೂ, ಅಲ್ಲಿಕಾಳಗವು ಭಯಂಕರ ಸ್ಥಿತಿಗೆ ಬಂದಿರುವುದೆಂದೂ ಜರ್ಮನಿ ಮಿಲಿಟರಿ ಅಧಿಕಾರಿಗಳು ಒಪ್ಪಿಕೊಂಡಿದ್ದಾರೆ ವಿಮಾನ ದಾಳಿಯು ಅತಿ ಹೆಚ್ಚಾಗಿ ನಡೆಯುತ್ತಿದೆಯೆಂದು ಹೇಳಲಾಗಿದೆ.

ಅಸ್ಸಾಮಿನಮೇಲೆ ಶತ್ರು ದಾಳಿ

ಜಪಾನಿನ ವಿಮಾನಗಳು ಅಸ್ಸಾಮಿನ ಮೇಲೆ ದಾಳಿ ನಡೆಸಿ ಇಂಫಾಲ್ ಎಂಬ ಪಟ್ಟಣದ ಮೇಲೆ ಬಾಂಬುಗಳನ್ನು ಹಾಕಿದವೆಂದೂ, ಕೆಲವು ಮಂದಿ ಸತ್ತರೆಂದೂ ವರದಿಯಾಗಿದೆ. ಎರಡು ಶತ್ರು ವಿಮಾನಗಳನ್ನು ಉರುಳಿಸಲಾಯಿತು

ಕ್ಯೂಬನ್ನಿನಲ್ಲಿ ಭೀಕರ ಕದನ

ಕ್ಯೂಬನ್ ಪ್ರದೇಶದಲ್ಲಿ ಭೀಕರ ಕದನವು ನಡೆಯುತ್ತಿದೆ ಜರ್ಮನರು ಮೂರುಸಾರಿ ದಾಳಿ ನಡೆಸಿದರೂ ಕೂಡ ಅವರನ್ನು ರಷಿಯನ್ನರು ಹಿಂದಕ್ಕೆ ಓಡಿಸಿದರು. ಜರ್ಮನರ 200 ಸೈನಿಕರು ಮಡಿದರೆಂದೂ ಮತ್ತು ಹೆಚ್ಚು ಯುದ್ಧಸಾಮಗ್ರಿಗಳನ್ನು ಬಿಟ್ಟು ಓಡಿದರೆಂದೂ ಹೇಳಲಾಗಿದೆ

ಟ್ಯೂನಿಷಿಯಾದಲ್ಲಿ ಭಾರಿ ಟ್ಯಾಂಕ್ ಕದನ

ಟ್ಯೂನಿಸಿಯದ ಮೆಡಿಜ್ ಎಲ್ ಬಾ ಎಂಬ ಪ್ರದೇಶದಲ್ಲಿ ಭಾರಿ ಟ್ಯಾಂಕ್ ಕದನವು ನಡೆಯಿತು. ಜರ್ಮನರು 80 ಟ್ಯಾಂಕುಗಳನ್ನು ಉಪಯೋಗಿಸಿ ಈ ಸ್ಥಳದಮೇಲೆ ದಾಳಿ ನಡೆಸಿದರು ಆದರೆ ಅವರು ಹೆಚ್ಚಿನ ನಷ್ಟದಿಂದ ಹಿಂತಿರುಗಬೇಕಾಯಿತು. 24 ಜರ್ಮನಿ ಟ್ಯಾಂಕುಗಳು ನಾಶವಾದವೆಂದೂ, 500 ಶತ್ರು ಸೈನಿಕರನ್ನು ಕೈಸೆರೆ ಹಿಡಿದರೆಂದೂ ಹೇಳಲಾಗಿದೆ.

ಎನ್‌ಫಿಡವಿಲ್ಲೆ ಬ್ರಿಟಿಷರ ಕೈಸೇರಿತು

ಆಫ್ರಿಕಾದಲ್ಲಿ ಹೋರಾಡುತ್ತಿರುವ ಬ್ರಿಟಿಷ್ ಅಷ್ಟಮಸೇನೆಯು ಟ್ಯೂನಿಸಿಯಾದಲ್ಲಿ ಎನ್‌ಫಿಡವಿಲ್ಲೆಯನ್ನು ಆಕ್ರಮಿಸಿ ಶತ್ರುಗಳ ನಾಲ್ಕು ಪ್ರತಿಮುತ್ತಿಗೆಗಳನ್ನು ಹಿಮ್ಮೆಟ್ಟಿಸಿದ್ದಲ್ಲದೆ ಎನ್‌ಫಿಡವಿಲ್ಲೆಯ ಪಶ್ಚಿಮಕ್ಕೆ 10 ಮೈಲು ದೂರದಲ್ಲಿರುವ ಜೆಬೆಲ್‌ಗಾರ್ಸಿ ಕ್ಷೇತ್ರದಲ್ಲಿ ಸುಮಾರು 3 ಮೈಲುದೂರ ಮುಂದೆ ನುಗ್ಗಿದೆಯೆಂದು ಪ್ರಕಟವಾಗಿದೆ

ಜಪಾನು ಸಂಗ್ರಾಮ ಸಾಧನಗಳನ್ನು ಶೇಖರಿಸುತ್ತಿದೆ

ಅಮೆರಿಕದ ವಿಮಾನಶಾಖಾಧಿಕಾರಿಗಳಾದ ಮಿ॥ ಕನ್ನಾಟ್‌ರವರು ಚೀಣಾದಲ್ಲಿ ಮಾತನಾಡುತ್ತ— “ ಜಪಾನು ಸಂಗ್ರಾಮ ಸಾಧನಗಳ ನಿರ್ಮಾಣಕ್ಕೆ ಬೇಕಾದ ಅಪೂರ್ಣ ವಸ್ತುಸಂಗ್ರಹಕ್ಕಾಗಿ ಕಾಲಾವಕಾಶ ಪಡೆಯಲು ಯತ್ನಿಸುತ್ತಿದೆ ಆದ್ದರಿಂದ ಈಗಲೇ ನೈಋತ್ಯ ಪೆಸಿಫಿಕ್, ಚೀಣಾ, ಮತ್ತು ಭರತಖಂಡದಲ್ಲಿ ಶತ್ರುಗಳನ್ನು ಏಕಪ್ರಕಾರ ಒತ್ತಾಯಕ್ಕೆ ಗುರಿಪಡಿ

ಸುವದು ಅವಶ್ಯಕ ಜಪಾನರು ಉತ್ತರಚೀನಾ, ಮಂಚೂರಿಯಾಗಳಿಂದ ಸೈನ್ಯಗಳನ್ನು ಸಂಗ್ರಾಮಸಾಧನಗಳನ್ನು ದಕ್ಷಿಣಚೀನಾ, ಥೈಲೆಂಡ್ ಮತ್ತು ಮಲಯಾಗಳಿಗೆ ಸಾಗಿಸುತ್ತಿದ್ದಾರೆ ಪ್ರಸ್ತುತ ಪೆಸಿಫಿಕ್‌ನಲ್ಲಿ ಯಾವ ಕಡೆಗೆಂದರೆ ಆ ಕಡೆಗೆ ಸೇನೆಯನ್ನು ಕಳಿಸಲು ಜಪಾನು ತಕ್ಕ ಸಿದ್ಧತೆಗಳನ್ನು ನಡೆಯಿಸುತ್ತಿರಬಹುದು ಬರ್ಮಾದಲ್ಲಿ ಮಿತ್ರಸೇನೆಗಳು ಮುತ್ತಿಗೆ ಹಾಕುವುದು ಖಂಡಿತವೆಂಬುದು ಜಪಾನಿಗೆ ತಿಳಿದಿದೆ ಆದ್ದರಿಂದ ಜಪಾನರೇ ಮೊದಲು ಮೇರೆ ಮೀರಬಹುದು ಆದರೆ ಜಪಾನು ಭಾರತದ ಸಹಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿಲ್ಲ. ಆದ್ದರಿಂದ ಅದು ಈಗ ಜಯಿಸಿರುವದನ್ನು ಮಾತ್ರ ರಕ್ಷಿಸಿಕೊಳ್ಳಲು ಯತ್ನಿಸುತ್ತಿದೆಯೆಂದು ತೋರುತ್ತದೆ" ಎಂದು ತಿಳಿಸಿದರು

ಜರ್ಮನರು ವಿಷವಾಯು ಪ್ರಯೋಗ ಮಾಡಿದರೆ ಅದಕ್ಕೆ ಪ್ರತೀಕಾರಮಾಡಲಾಗುವದು

ಬ್ರಿಟಿಷ್ ಮಹಾಪ್ರಧಾನರ ಕಚೇರಿಯಿಂದ ಒಂದು ಪ್ರಕಟನೆಯು ಹೊರಡಿಸಲ್ಪಟ್ಟಿದ್ದು ಅದರಲ್ಲಿ ... ರಷ್ಯಾ ರಂಗದಲ್ಲಿ ಜರ್ಮನರು ವಿಷವಾಯುವನ್ನು ಪ್ರಯೋಗಿಸುವ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದು ಹಲವುಕಡೆಗಳಿಂದ ಸುದ್ದಿ ಬಂದಿವೆ ಆದರೆ ಜರ್ಮನರಾಗಲಿ ಅವರ ಕೈಗೊಂಬೆ ರಾಷ್ಟ್ರಗಳಾಗಲಿ ರಷ್ಯನರಮೇಲೆ ವಿಷವಾಯುವನ್ನು ಪ್ರಯೋಗಿಸಿದ್ದಾದರೆ ಸಂಪೂರ್ಣ ಜರ್ಮನಿಯಮೇಲೆ ವಿಷವಾಯುವನ್ನು ಪ್ರಯೋಗಿಸಲಾಗುವದು ಈಗ ವರ್ಷದಿಂದೀಚೆಗೆ ಬ್ರಿಟನ್ನು ವಿಷವಾಯು ತಯಾರಿಕೆಯನ್ನು ಬಹಳ ಹೆಚ್ಚಿಸಿದೆ, ಎಂದು ತಿಳಿಸಲಾಗಿದೆ

ಶಾಂತಿ ಸಂಧಾನಕ್ಕೆ ಜಪಾನಿನ ಪ್ರಯತ್ನವೇ?

ಮಿ॥ ಶಿಗೆಮಿಟ್ಸು ಎಂಬವರನ್ನು ಜಪಾನಿನ ನೂತನ ವಿದೇಶ ಮಂತ್ರಿಗಳಾಗಿ ನೇಮಿಸಿರುವುದು ಯಾವುದೋ ಒಂದು ತಂತ್ರವೆಂದು ಹೇಳಲಾಗಿದೆ

ಜಪಾನರು ಹಿಟ್ಲರ್ ಸ್ಟಾಲಿನ್ ಇವರಿಬ್ಬರಿಗೂ ಶಾಂತಿ ಸಂಧಾನ ಮಾಡಿಸಲು ಈತನನ್ನು ನೇಮಿಸಿರುವರೆಂದೂ, ಈ ಸಂಧಿಯು ನಡೆದನಂತರ ಸ್ಟಾಲಿನರವರು ಚೈನಾದೇಶವು ಜಪಾನರಲ್ಲಿ ಸಂಧಾನ ನಡೆಸುವಂತೆ ಮಾಡಿಕೊಳ್ಳಬಹುದೆಂದೂ, ಈ ವಿಚಾರವನ್ನು ಆಗಲೇ ಮಾಸ್ಕೋವಿಗೆ ಕಳುಹಿಸಲಾಗಿದೆಯೆಂದು ಅಮೆರಿಕಾ ಹೆರಾಲ್ಡ್ ಟ್ರಿಬ್ಯೂನ್ ಪತ್ರಿಕೆಯು ತಿಳಿಸುತ್ತದೆ

ಅಮೆರಿಕಾದಲ್ಲಿ ಪೆಟ್ರೋಲ್ ತಯಾರಿಕೆಗೆ ಗಂಡಾಂತರ

ಅಮೆರಿಕಾದಲ್ಲಿ ವಿಮಾನಗಳ ಸಂಚಾರಕ್ಕೆ ಬೇಕಾಗುವ ಪೆಟ್ರೋಲ್ ತಯಾರಿಕೆಗೆ ಒಂದು ಗಂಡಾಂತರ ಬಂದಿದೆಯೆಂದು ಅಮೆರಿಕಾ ಯುದ್ಧದ ಅ॥ ಸೆಕ್ರೆಟರಿಗಳಾದ ಪ್ಯಾಟ್ರಸನ್ ಎಂಬವರು ತಿಳಿಸಿದ್ದಾರೆ. ಅಮೆರಿಕಾದಲ್ಲಿ ಸಿಂಥೆಟಿಕ್ ರಬ್ಬರಿನ ತಯಾರಿಕೆಗೆ ಹೆಚ್ಚು ಪ್ರಾಶಸ್ತ್ಯ ಕೊಡುತ್ತಿರುವುದು, ಪೆಟ್ರೋಲ್ ತಯಾರಿಕೆಯನ್ನು ಹಾನಿಗೊಳಿಸುವಂತಾಗಿದೆಯೆಂದೂ, ಹಿಂದಿನ ವರ್ಷ ಅನೇಕ ಯುದ್ಧವಿಮಾನಗಳು ಪೆಟ್ರೋಲ್ ಇಲ್ಲದೆ ಉರುಳಿದವೆಂದೂ, ಈಗಿನ ಸ್ಥಿತಿಯು ಬಹಳ ಶೋಚನೀಯವಾಗಿದ್ದೆಯೆಂದೂ ತಿಳಿಸಿದ್ದಾರೆ

ಡಿಟೆನ್ಷನ್ ಕಾನೂನು ಕ್ರಮಬದ್ಧವಾಗಿಲ್ಲ

ಭಾರತದ ರಕ್ಷಣಶಾಸನದ 26 ನೆಯ ವಿಧಿಯು ಈಗ ಜಾರಿಯಲ್ಲಿರುವ ರೂಪದಲ್ಲಿ ಶಾಸನಸಭೆಯು ಸೂಕ್ತವೆಂದು ಕೇಂದ್ರಸರ್ಕಾರಕ್ಕೆ ಕೊಡಬಹುದಾದ ಅಧಿಕಾರ ವ್ಯಾಪ್ತಿಯನ್ನು ಮೀರಿರುವದರಿಂದ ಆ ವಿಧಿಯು ಕ್ರಮವಾಗಿಲ್ಲವೆಂದು ಕಳೆದ 22 ನೆಯ ತಾರೀಖಿನ ದಿನ ಫೆಡರಲ್‌ಕೋರ್ಟು ತೀರ್ಮಾನಿಸಿತು

ಮಹಾಭಾರತದಲ್ಲಿ ಆರೋಗ್ಯಸಾಧನಗಳು.

ಅನುಶಾಸನಿಕಪರ್ವದಿಂದ.

ಯುಧಿಷ್ಠಿರನು ಭೀಷ್ಮನನ್ನು ಕುರಿತು 'ಆಚಾರ್ಯನೇ, ಮನುಷ್ಯನಿಗೆ ಬ್ರಹ್ಮನಿಂದ 'ಶತಾಯುಃ ಪುರುಷಃ' ಎಂಬಂತೆ ೧೦೦ ವರುಷಗಳ ಆಯುಸ್ಸು ವಿಧಿಸಲ್ಪಟ್ಟಿರುವುದು ಅವನು ತಕ್ಕಷ್ಟು ವೀರ್ಯಶಕ್ತಿಗಳಿಂದ ಅಷ್ಟು ಕಾಲ ಬದುಕಿರುವನೆಂದು ಹೇಳುವರಲ್ಲವೇ? ಆದರೆ ಅನೇಕರು ತೀರ ಚಿಕ್ಕಮಯಸ್ಸಿನಲ್ಲಿಯೇ ಸಾಯುವರಲ್ಲ! ಇದರ ಕಾರಣವೇನು? ಕೆಲವರು ಪೂರ್ಣಾಯುಸ್ಸಿನಿಂದ ಬದುಕುವುದಕ್ಕೂ, ಬೇರೆ ಕೆಲವರು ಅಲ್ಪಾಯುಸ್ಸಿನಲ್ಲಿಯೇ ಮೃತಿಹೊಂದುವುದಕ್ಕೂ ಕಾರಣವೇನು? ಹೇಗೆ ಮಾಡಿದರೆ ಪೂರ್ಣಾಯುಷ್ಯವನ್ನು ಅನುಭವಿಸಬಹುದು. ಮನುಷ್ಯನು ಮಹಾಕಾರ್ಯಗಳಿಂದ ಕೀರ್ತಿಯನ್ನು ಸಂಪಾದಿಸುವುದು ಹೇಗೆ? ಮನುಷ್ಯನು ಸಂಪತ್ತನ್ನೂ ಅಭ್ಯುದಯವನ್ನೂ ಹೊಂದುವುದು ಹೇಗೆ? ಇವೆಲ್ಲವೂ ಲಭಿಸುವುದು ತಪಸ್ಸಿನಿಂದಲೇ? ಬ್ರಹ್ಮಚರ್ಯೆಯಿಂದಲೇ? ಮಂತ್ರ ಜಪಗಳಿಂದಲೇ? ಮೂಲಿಕೆಗಳಿಂದಲೇ? ಈ ಮೇಲೆ ಹೇಳಿದವುಗಳನ್ನು ಮನುಷ್ಯನು ತನ್ನ ಮನೋವಾಕ್ಕಾಯಗಳ ಪ್ರವರ್ತನೆಯಿಂದಲೇ ಪಡೆಯುವನೇ? ಈ ವಿಷಯವನ್ನು ನನಗೆ ವಿವರಿಸಿ ತಿಳಿಸಬೇಕು'

ಅದಕ್ಕೆ ಭೀಷ್ಮನು 'ಧರ್ಮರಾಜಾ! ಮನುಷ್ಯರು ಅವರವರ ನಡತೆಯಿಂದಲೇ ದೀರ್ಘಾಯುಷ್ಯವನ್ನು ಪಡೆಯುವರು ಐಶ್ವರ್ಯವೂ, ಅಭ್ಯುದಯಗಳೂ ಬರುವುವು ಯಾವನ ನಡತೆಯು ಅಸಂಬದ್ಧವಾಗಿಯೂ, ವಕ್ರವಾಗಿಯೂ ಇರುವುದೋ, ಅವನು ಎಂದಿಗೂ ದೀರ್ಘಕಾಲ ಜೀವಿಸಲಾರನು ಅವನನ್ನು ಕಂಡರೆ ಸಮಸ್ತ ಪ್ರಾಣಿಗಳೂ ಭಯಪಡುವುವು ಎಲ್ಲವೂ ಅವನನ್ನು ದ್ವೇಷಿಸುವುವು ಆದುದರಿಂದ ತನ್ನ ಅಭ್ಯುದಯವನ್ನೂ, ಕ್ಷೇಮವನ್ನೂ ಕೋರತಕ್ಕ ಪ್ರತಿಯೊಬ್ಬ ಮನುಷ್ಯನೂ ಈ ಲೋಕದಲ್ಲಿ ಉತ್ತಮವಾದ ಮತ್ತು ಯೋಗ್ಯವಾದ ನಡತೆಯನ್ನು ಅವಲಂಬಿಸಬೇಕು ಯಾರು ಅನುಚಿತವಾದ ಮಾರ್ಗದಲ್ಲಿ ಹೋಗುವರೋ, ಯಾರು ಕಾಮವಶರಾಗುವರೋ ಅಂಥವರೆಲ್ಲರೂ ಅಲ್ಪಾಯುಷ್ಯವುಳ್ಳವರಾಗುವರು ಯಾವನು, ಕಾಮಕ್ರೋಧಗಳಿಗೆ ವಶನಾಗದೆ ಸತ್ಯವನ್ನೇ ವ್ರತವನ್ನಾಗಿ ಹಿಡಿದು ಪ್ರಪಂಚದಲ್ಲಿ ಯಾವ ಪ್ರಾಣಿಗಳಿಗೂ ಯಾವ ಹಿಂಸೆಯನ್ನೂ ಮಾಡದೆ ವಿಷಯಾಸಕ್ತಿ, ವಕ್ರಮಾರ್ಗ, ಅಪ್ರಮಾಣಿಕತೆ ಇವನ್ನೆಲ್ಲಾ ದೂರಮಾಡುವನೋ, ಅವನು ತನ್ನ ಪೂರ್ಣಾಯುಸ್ಸಿನವರೆಗೆ ಜೀವಿಸುವನು ಮನುಷ್ಯನು ಬ್ರಾಹ್ಮ ಮುಹೂರ್ತವೆಂದು ಕರೆಯಲ್ಪಡುವ ಬೆಳಗಿನ ಜಾವದಲ್ಲಿಯೇ ಏಳಬೇಕು ಎದ್ದೊಡನೆ ಬಾಯನ್ನೂ, ಮುಖವನ್ನೂ ಚೆನ್ನಾಗಿ ತೊಳೆಯಬೇಕು ಮನುಷ್ಯನು ಉದಯಿಸುತ್ತಿರುವ ಅಥವಾ ಅಸ್ತಮಿಸುತ್ತಿರುವ ಸೂರ್ಯನನ್ನು ದೃಷ್ಟಿಸಿ ನೋಡಬಾರದು ಗ್ರಹಣ ಹಿಡಿದಾಗಲೂ ನೋಡಬಾರದು ಮಧ್ಯಾಹ್ನದಲ್ಲಿ ಉಚ್ಚಸ್ಥಾನದಲ್ಲಿರುವಾಗಲೂ ಸೂರ್ಯನನ್ನು ನೋಡಬಾರದು ಯಾವ ಮನುಷ್ಯನೂ ಪರಸ್ತ್ರೀಯರಲ್ಲಿ ಮೋಹವನ್ನಿಡಬಾರದು ಅವರೊಡನೆ ಸಂಬಂಧಮಾಡಬಾರದು ಪರದಾರಗಮನಕ್ಕಿಂತಲೂ ಆಯುಷ್ಯವನ್ನು ತಗ್ಗಿಸುವುದು ಬೇರೆಯಾವುದೂ ಇಲ್ಲ ಯಾವ ಮನುಷ್ಯನೂ ಮಲಮೂತ್ರಗಳನ್ನು ದೃಷ್ಟಿಸಿ ನೋಡಬಾರದು ಕಾಲಿಂದ ತುಳಿಯಲೂಬಾರದು ಸ್ಪರ್ಶಿಸಲೂ ಬಾರದು ಇತರರು ಉಪಯೋಗಿಸಿದ ಚಪ್ಪಲಿಗಳನ್ನಾಗಲಿ, ಪಾದರಕ್ಷೆಗಳನ್ನಾಗಲಿ, ಇನ್ನೊಬ್ಬನು ಉಪಯೋಗಿಸಬಾರದು ಯಜ್ಞದಲ್ಲಿ ಉಪಯೋಗಿಸಲ್ಪಟ್ಟ ಮೃಗಗಳನ್ನು ಹೊರತು ಇತರ ಪಶುಗಳ ಮಾಂಸವನ್ನು ತಿನ್ನಬಾರದು. ಮೃಗಗಳ ಬೆನ್ನಿನ ಮಾಂಸವನ್ನು ತಿನ್ನಬಾರದು ಮಲಮೂತ್ರಗಳನ್ನು ವಿಸರ್ಜಿಸಿ ಬಂದರೆ ಅಥವಾ ಬೀದಿಯಲ್ಲಿ ಸಂಚಾರಮಾಡಿ ಬಂದರೆ, ಕಾಲುಗಳನ್ನು ತೊಳೆಯದೆ ನೆಟ್ಟಗೆ ಒಳಕ್ಕೆ ಪ್ರವೇಶಿಸಬಾರದು ವೇದಾಧ್ಯಯನವನ್ನು ಮಾಡುವುದಕ್ಕೆ ಮತ್ತು ಭೋಜನ ಮಾಡುವುದಕ್ಕೆ ಮೊದಲು ಕೈಕಾಲುಗಳನ್ನು ತೊಳೆದುಕೊಂಡು ಕುಳಿತುಕೊಳ್ಳಬೇಕು ಹಲ್ಲುಜ್ಜುವ ಕಡ್ಡಿಗಳಿಂದಲೇ ಹಲ್ಲುಗಳನ್ನು ತಿಕ್ಕಿ ತೊಳೆದು ಶುದ್ಧಮಾಡಬೇಕು ಸೂರ್ಯೋದಯಕಾಲದಲ್ಲಿ ಯಾವನೂ ಹಾಸಿಗೆಯಲ್ಲಿ ಮಲಗಿರಬಾರದು. ಒಂದುಸಲ ಉಜ್ಜಿದ ಹಲ್ಲುಕಡ್ಡಿಯನ್ನು ಬಿಸಾಡಿ ಪ್ರತಿದಿನವೂ ಹೊಸ ಕಡ್ಡಿಗಳನ್ನು ಉಪಯೋಗಿಸಬೇಕು. ಶಾಸ್ತ್ರನಿಷಿದ್ಧವಲ್ಲದ ಆಹಾರಗಳನ್ನೇ ತೆಗೆದುಕೊಳ್ಳಬೇಕು ಪೌರ್ಣಿಮೆ ಮತ್ತು ಅಮಾವಾಸ್ಯೆಯ ದಿನಗಳಲ್ಲಿ ಯಾವ ಆಹಾರವನ್ನೂ ತೆಗೆದುಕೊಳ್ಳಬಾರದು ಮಲಜಲ ವಿಸರ್ಜನೆಗಳನ್ನು ಮಾಡುವಾಗ ಉತ್ತರಾಭಿಮುಖವಾಗಿ ಕುಳಿತುಕೊಳ್ಳಬೇಕು. ಅಪರಿಚಿತವಾದ ಸ್ತ್ರೀಯೊಡನೆಯಾಗಲಿ, ಗರ್ಭಿಣಿಯರ ಅಥವಾ ಬಾಣಂತಿಯರೊಡನೆಯಾಗಲಿ ಸಂಭೋಗವನ್ನು ಮಾಡಬಾರದು ಉತ್ತರ ಮತ್ತು ಪಶ್ಚಿಮದ ಕಡೆಗೆ ತಲೆಯನ್ನಿಟ್ಟು ನಿದ್ರೆಮಾಡಬಾರದು ರಾತ್ರಿಯಲ್ಲಿಯಲ್ಲಾಗಲಿ ಮೈಮೇಲೆ ಯಾವ ಬಟ್ಟೆಯೂ ಇಲ್ಲದೆಯಾಗಲಿ ಸ್ನಾನಮಾಡಬಾರದು. ಯಾವನೂ ಪ್ರತಿದಿನವೂ ಒದ್ದೆಬಟ್ಟೆಯನ್ನು ಉಟ್ಟುಕೊಳ್ಳಬಾರದು ಧಾನ್ಯಗಳು ಬೆಳೆಯುವ ಹೊಲಗದ್ದೆಗಳಲ್ಲಿ ಮಲಮೂತ್ರಗಳನ್ನು ಬಿಡಬಾರದು ಮತ್ತು ಗ್ರಾಮಕ್ಕೆ ಬಹಳ ಸಮೀಪವಾದ ಗ್ರಾಮಗಳಲ್ಲಿಯೂ ಮಲಮೂತ್ರಗಳನ್ನು ವಿಸರ್ಜಿಸಬಾರದು ಜಲಾಶಯಗಳಲ್ಲಿಯೂ ಮಲಮೂತ್ರಗಳನ್ನು ಬಿಡಬಾರದು. ಯಾವ ಆಹಾರವನ್ನು ಭುಜಿಸುವುದಕ್ಕೂ ಮೊದಲು ಮೂರಾವರ್ತಿಗೆ ಕಡಿಮೆಯಿಲ್ಲದೆ ಬಾಯಿ ಮುಕ್ಕಳಿಸಿ ಶುದ್ಧಮಾಡಬೇಕು. ಆಹಾರವನ್ನು ಭುಜಿಸಿದಮೇಲೆಯೂ ಐದಾವರ್ತಿ ಬಾಯನ್ನು ಮುಕ್ಕಳಿಸಬೇಕು ಆಹಾರವನ್ನು ಭುಜಿಸುವಾಗ ಮೌನದಿಂದ ಭುಜಿಸಬೇಕು. ತಿಂದ ಆಹಾರವನ್ನು ನಿರಾಕರಿಸಬಾರದು ಧಾನ್ಯದ ಹೊಟ್ಟುಗಳ ಮೇಲೆಯೂ, ಕೂದಲು, ಬೂದಿ, ಎಲುಬು ಇವುಗಳ ಮೇಲೆಯೂ ಕುಳ್ಳಿರಬಾರದು ಒಬ್ಬನು ಸ್ನಾನಮಾಡಿದ ಪಾತ್ರೆಯ ನೀರಿನಲ್ಲಿ ಮತ್ತೊಬ್ಬನು ಸ್ನಾನಮಾಡಬಾರದು ಯಾವುದನ್ನು ತಿನ್ನಬೇಕಾದರೂ ಕುಳಿತಹಾಗೆಯೇ ತಿನ್ನಬೇಕು ನಡೆಯುವಾಗಲೂ ನಿಂತಿರುವಾಗಲೂ ತಿನ್ನಬಾರದು ಬೂದಿಯಮೇಲೆ ಮಲಮೂತ್ರಗಳನ್ನು ವಿಸರ್ಜಿಸಬಾರದು ಭೋಜನಕ್ಕೆ ಕುಳ್ಳಿರುವಾಗ ಕಾಲನ್ನು ತೊಳೆದೇ ಕುಳ್ಳಿರಬೇಕು ಒದ್ದೆಯ ಕಾಲಿನೊಡನೆ ಮಲಗಬಾರದು ಮೈಯನ್ನು ಬೆತ್ತಲೆ ಬಿಟ್ಟುಕೊಂಡು ಮಲಗಬಾರದು. ಮತ್ತೊಬ್ಬರು ತಿಂದು ಮಿಗಿಸಿದ ಆಹಾರಪದಾರ್ಥಗಳನ್ನು ಕೈಯಿಂದ ಮುಟ್ಟಲೂಬಾರದು ಒಬ್ಬನು ಮತ್ತೊಬ್ಬನ ತಲೆಯಮೇಲೆ ಹೊಡೆಯಬಾರದು. ಅವನ ತಲೆಕೂದಲನ್ನು ಹಿಡಿದು ಎಳೆಯಬಾರದು ಸ್ನಾನಮಾಡುವಾಗ ನೀರಿನಲ್ಲಿ ಬಾರಿಬಾರಿಗೂ ತಲೆಯನ್ನು ಮುಳುಗಿಸಬಾರದು ಇದರಿಂದ ಆಯುಸ್ಸು ಕ್ಷೀಣಿಸುವುದು ನೀರಿನಲ್ಲಿ ತಲೆಯನ್ನು ಮುಳುಗಿಸಿ ಸ್ನಾನಮಾಡಿ ಬಂದಮೇಲೆ ದೇಹದ ಯಾವ ಅವಯವಕ್ಕೂ ಎಣ್ಣೆಯನ್ನು ಲೇಪಿಸಬಾರದು. ಸ್ವಲ್ಪ ಎಳ್ಳನ್ನು ತಿನ್ನದೆ ಆಹಾರವನ್ನು ಮುಗಿಸಬಾರದು ತಾನು ತಿಂದು ಮಿಗಿಸಿದ ಎಂಜಲನ್ನೂ, ಎಲೆಗಳನ್ನೂ ಜನಗಳು ವಾಸಮಾಡದ ದೂರಪ್ರದೇಶಕ್ಕೆ ಬಿಸಾಡಬೇಕು ಕೆಂಪುಬಣ್ಣದ ಹೂಗಳನ್ನು ಮುಡಿಯಬಾರದು ಸ್ನಾನಮಾಡಿದೊಡನೆ ಮೈಗೆ ಸುಗಂಧವನ್ನು ಲೇಪಿಸಬೇಕು ಒಬ್ಬನು ಕೆಳಗೆ ಉಡುವ ಬಟ್ಟೆಯನ್ನು ಮೇಲೆ ಹೊದೆಯುವುದಕ್ಕೂ ಹೊದೆಯುವ ಬಟ್ಟೆಯನ್ನು ಉಡುವುದಕ್ಕೂ ಉಪಯೋಗಿಸಬಾರದು ಹಾಸಿಗೆಯಲ್ಲಿ ಮಲಗುವುದಕ್ಕೆ ಹೋಗುವಾಗ ಅದಕ್ಕಾಗಿಯೇ ಬೇರೆ ಉಡುಪನ್ನುಪಯೋಗಿಸಬೇಕು ಬೀದಿಯಲ್ಲಿ ಸಂಚಾರಮಾಡುವುದಕ್ಕೂ ಪ್ರತ್ಯೇಕವಾದ ಉಡುಪನ್ನು ಇಟ್ಟಿರಬೇಕು ಅಮಾವಾಸ್ಯೆ, ಪೌರ್ಣಿಮೆ, ಮುಂತಾದ ಪರ್ವದಿನಗಳಲ್ಲಿ ಸ್ತ್ರೀಸಂಗವನ್ನು ಮಾಡಬಾರದು ಆಡು, ಹಸು, ನವಿಲು, ಇವುಗಳ ಮಾಂಸವನ್ನು ತಿನ್ನಬಾರದು. ಒಣಗಿದ ಅಥವಾ ಹಳೆಯ ಮಾಂಸವನ್ನು ತಿನ್ನಬಾರದು. ಬೆಳಗ್ಗೆ ಒಂದು ಸಲ ರಾತ್ರಿಯಲ್ಲಿ ಒಂದು ಸಲ ಮಾತ್ರವೇ ಆಹಾರವನ್ನು ತೆಗೆದುಕೊಳ್ಳಬೇಕು ಆ ಎರಡು ವೇಳೆಗಳಲ್ಲಿ ಹೊರತು ಬೇರೆ ಯಾವ ವೇಳೆಯಲ್ಲಿಯೂ ಭುಜಿಸಬಾರದು ಆಹಾರವಸ್ತುಗಳಲ್ಲಿ ಕೂದಲು ಸಿಕ್ಕಿದರೆ ಅಂತಹ ಆಹಾರವನ್ನು ಭುಜಿಸಬಾರದು ಕ್ಷೇಮಾರೋಗ್ಯವನ್ನು ಬಯಸುವವನು ಆಹಾರಾಂತ್ಯದಲ್ಲಿ ಮೊಸರನ್ನು ಕುಡಿಯಬಾರದು. ಭೋಜನವಾದ ಮೇಲೆ ಕಣ್ಣು, ಕಿವಿ, ಮೂಗು, ಎರಡು ಕೈಗಳು ಇವನ್ನೆಲ್ಲ ಚೆನ್ನಾಗಿ ತೊಳೆಯ

ಬೇಕು ಹಗಲುಹೊತ್ತಿನಲ್ಲಿ ಸ್ತ್ರೀ ಸಂಭೋಗವನ್ನು ಮಾಡಬಾರದು ಮನೆಯ ಚಾಕರಳು, ಬಂಜೆ ಹೆಂಗಸು ಇವರಲ್ಲಿಯೂ ಸಂಗಮಿಸಬಾರದು ಸಂಜೆಯ ಹೊತ್ತಿನಲ್ಲಿ ಮಲಗಿರಬಾರದು ರಾತ್ರಿಯಲ್ಲಿ ಅತಿಥಿಗಳನ್ನು ಕರೆದು, ಊಟಮಾಡಿಸುವಾಗ ಅವರನ್ನು ಅಧಿಕವಾಗಿ ಭುಜಿಸುವುದಕ್ಕೆ ನಿರ್ಬಂಧಿಸಬಾರದು ಊಟಕ್ಕೆ ಹೋದವನು ದಾಕ್ಷಿಣ್ಯಕ್ಕಾಗಿ ಮಿತಿಮೀರಿ ತಿನ್ನಲೂ ಬಾರದು

ವಿವಾಹವಿಷಯದಲ್ಲಿ ಯಾವುದೋ ಒಂದು ಅಂಗವು ಹೀನವಾಗಿದ್ದರೂ ಅಂತಹ ಕನ್ಯೆಯನ್ನು ಮದುವೆ ಮಾಡಿಕೊಳ್ಳಬಾರದು ಸಮಾನಗೋತ್ರದಲ್ಲಿ ಮತ್ತು ಒಂದೇ ಪ್ರವರದ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನು ವಿವಾಹವಾಗಬಾರದು ತಾಯಿಯ ಕುಲದ ಕನ್ಯೆಯನ್ನೂ ಮದುವೆಯಾಗಬಾರದು ವಯಸ್ಸಿನಲ್ಲಿ ತನಗಿಂತಲೂ ದೊಡ್ಡವಳಾದ ಹೆಂಗಸಿನೊಡನೆಯೂ ಕುಷ್ಠರೋಗವುಳ್ಳ ಹೆಂಗಸಿನೊಡನೆಯೂ ಸಂಗಮಿಸಬಾರದು ಅಪಸ್ಮಾರ ಅಥವಾ ಕ್ಷಯರೋಗವಿದ್ದವನಾದರೂ ಹಿಂದೆ ಆ ಕುಟುಂಬದಲ್ಲಿದ್ದರೆ ಆ ಕುಟುಂಬದಲ್ಲಿ ಹುಟ್ಟಿದ ಕನ್ಯೆಯನ್ನು ಮದುವೆಯಾಗಬಾರದು ಹಗಲುಹೊತ್ತು ನಿದ್ರೆಮಾಡುವುದು ಆಯುಃಕ್ಷಯಕ್ಕೆ ಕಾರಣವು ಸೂರ್ಯೋದಯವಾದಮೇಲೆ ನಿದ್ರಿಸುವುದರಿಂದಲೂ ಆಯುಸ್ಸು ಕ್ಷೀಣಿಸುವುದು

ಓ ಯುಧಿಷ್ಠಿರಾ ! ದೀರ್ಘಾಯುಷ್ಯವನ್ನು ಕೋರುವವರು ಅನುಸರಿಸಬೇಕಾದ ಮಾರ್ಗಗಳನ್ನು ನಿನಗೆ ನಾನು ಆದಷ್ಟು ಸಂಗ್ರಹವಾಗಿ ತಿಳಿಸಿದೆನು ಇನ್ನೂ ಹೆಚ್ಚು ವಿವರಗಳನ್ನು ಕೇಳಿ ತಿಳಿಯಬೇಕೆಂಬ ಕೋರಿಕೆಯು ನಿನಗಿದ್ದರೆ ವೇದತ್ರಯವನ್ನೂ ಬಲ್ಲ ಪಂಡಿತರಿಂದ ಕೇಳಿ ತಿಳಿಯಬಹುದು ಮುಖ್ಯವಾಗಿ ಮನುಷ್ಯನ ನಡತೆಯೇ ಅವನ ಅಭ್ಯುದಯಕ್ಕೆ ಕಾರಣವು ನಡತೆಯಿಂದಲೇ ಕೀರ್ತಿ ! ನಡತೆಯಿಂದಲೇ ಮನುಷ್ಯನಿಗೆ ಆಯುರ್ವೃದ್ಧಿಯೆಂದು ತಿಳಿ !

ಮೈಸೂರು ಸರ್ಕಾರದ ವಿದ್ಯಾಸಚಿವರಾದ
ಮಿ| ಮಹಮದ್ ಇಮಾಂರವರ ಅಧ್ಯಕ್ಷತೆಯಲ್ಲಿ
ನಡೆದ ಮೈಸೂರು ಕುರುಡರ ಮತ್ತು ಕಿವುಡರ
ಪಾಠಶಾಲೆಯ ವಾರ್ಷಿಕೋತ್ಸವ ಸೂಚಕ

ಪಂಚರತ್ನ ಪದ್ಯಮಾಲಾ

[ಕನ್ನಡಕವಿ ಆಸ್ಥಾನ ವಿದ್ವಾನ್ ಮ| ಅನವಟ್ಟಿ ರಾಮರಾಯರಿಂದ]

ಶ್ರೀರಮ್ಯಾಂಭೋಜಪಾದಾಶ್ರಿತ ಶ್ರುತಿರಸವಂ ಜ್ಞಾನವಾಗ್ವೈಭವಂ ಲೆಂದೋ | ಸಂರಾಜದ್ಯೋಗಿನಾಥೇಶುಚರಿತರಸವಂ ಜ್ಞೇಯವಂ ಮಾಳ್ಪನೆಂದೋ ॥ ಕಾರುಣ್ಯಾಪಾಂಗದಿಂ ಕೋವಿದರ ವರರಿ ಪುಗಾನಕ್ಕೆ ಕಾರ್ಯ ಗೋಪಿನಿ| ಶ್ರೀರಾಜಕನ್ಯಾವರಂ ಲೀಲೆ ಕೊಳುತಿಹ ಶ್ರೀಕೃಷ್ಣ ಪಾಲಿಕ್ಕೆ ನಮ್ಮಂ ॥೧॥

ಮೆರೆಯುವೀ ಜಯ ವಿಭವದ ಸರಸ |
ಪರಿಯ ವಿನಯದ ನುತಿ ಭಾಸಿತ |
ಗುರುವಿನೊಳು ಚಾರುಭಕ್ತಿಯಿಂ ವಿದ್ಯೆಯಾರ್ಜಿಸುತೆ |
ನಿರುತ ಪ್ರೇಮದೆ ಪೋಷಿಸುತಲಾ |
ಇವನು ಗುಣರಾಜಿಯಿಂದೆ ಪೂಜಿ |
ತರೊಳು ಮಾಜದೆಯ ಜಯಚಾಮರಾಜ ಪ್ರಭುವೆವಿರಾಜಿಸು ॥

ಶಾಲೆಯಿಂದಾಂ ಗವಿಮೆಯಿಂದೆ ವಿ |
ಮಲಕಲೆಯಿಂ ಮೆರೆವ ವಿದ್ಯಾ |
ಶಾಲೆಯೊಳಿಹ ನಾವು ಧನ್ಯರು ತಾವು ಕಾರುಣ್ಯ ||
ಶೀಲರು ಮಹಿಮದಿಯೊಂ ಸಚಿವರಿ |
ಪಾಲಿಪುದ ಸಂತತವು ಸಚಿವ |
ರ್ಗಾಲಿಸಿ ಸೌಖ್ಯಗಳ ನವ ನಿರತ ಒಯಸುವೆವು ॥೩॥

ಹಿಂದಣದ ಜನ್ಮಕನುಗುಣಮಾ |
ಗಿಂದು ವರ್ತಿಸುತಿರ್ಪ ನಮ್ಮಯ |
ಸಂದ ಶಾಲೆಯ ಸಭೆಯ ಕಾರ್ಯಾಧ್ಯಕ್ಷರಾಗಿರುತೆ ॥
ವಂದವರೆನುತೆ ಕಲಿಯೊಳಘಹರ |
ನ ದರ್ಶನ ನೀಡಿಸಲು ಸಂತತ |
ವಂದಿಪೆವು ಸದ್ಗುಣನವದ್ಯ ರಾಮರಾಯರಿಗೆ ॥೪॥

ಸಾಂದ್ರಮಾಳ್ಪರ ಚಾತಕಾಳಿಗೆ |
ಮೆರೆವ ವೃಷ್ಟಿಯೆನಿಂತಿರಾಗುತೆ |
ಸರಸಕಲೆಗಳ ವೃದ್ಧಿಗೈದಿಸಿ ನಮ್ಮ ಕೀರ್ತಿಯನು ||
ಹರದಿ ಲೋಕಕೋದ್ಯತಿಗೈದಿರು |
ಚಿರದ ಕಸ್ತೂರಿರಾಜ ಶೆಟ್ಟಿ |
ರು ದಯಾಪರಿಕೃತಿಗೆ ನೀಡುಗೆ ದೇವ ಮಂಗಳವ ॥೫॥

ಕೋಟೀಶ್ವರನು ಮಾಯವಾಗಿದ್ದಾನೆ

ಕರಾಚಿಯ ಜಕೋಬಾಬಾದಿನ ಕೋಟ್ಯಾಧೀಶ್ವರರಾದ ಸೇರ್ ಶಿವಲೋಮಾಲ್ ಎಂಬುವರು ಈಗ್ಗೆ ೩ ತಿಂಗಳ ಹಿಂದೆ ಆ ಸ್ಥಳದಿಂದ ಅದೃಶ್ಯವಾಗಿದ್ದರು ಈಗ ಪೋಲೀಸರು ಒಂದು ಸ್ಮಶಾನದಲ್ಲಿ ಇವರ ದೇಹವನ್ನು ಗೋಣಿಚೀಲದಲ್ಲಿ ಸುತ್ತಿ ಹೂಳಿಟ್ಟಿದ್ದನ್ನು ಹೊರಗೆ ತೆಗೆದಿರುವರೆಂದು ಹೇಳಲಾಗಿದೆ ಈ ಸಂದರ್ಭದಲ್ಲಿ ಇಬ್ಬರನ್ನು ದಸ್ತಗಿರಿ ಮಾಡಿದ್ದಾರೆ

ಸಿಂಧ್ ಸರ್ಕಾರದ ಸೆಕ್ರೆಟರಿಗಳ ಕೊಲೆಯ ಪ್ರಯತ್ನ

ಸಿಂಧ್ ಸರ್ಕಾರದ ಮುಖ್ಯ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಖಾನಬಹದ್ದೂರ್ ಗೋಬಲೆ ಎಂಬವರನ್ನು ಕೊಲೆ ಮಾಡಲು ಇಬ್ಬರು ದರೋಡೆಖೋರರು ಯತ್ನಿಸಿದ ವಿಷಯವು ವರದಿಯಾಗಿದೆ ದರೋಡೆಖೋರರು ಶಸ್ತ್ರಯುತರಾಗಿ ಅವರ ಮನೆಯೊಳಕ್ಕೆ ಹೋಗಿ ಒಂದು ಕೊಠಡಿಯಲ್ಲಿ ಅವಿತುಕೊಂಡಿದ್ದರೆಂದೂ, ಅದೇ ಕೊಠಡಿಯಲ್ಲಿದ್ದ ಸೆಕ್ರೆಟರಿಯವರ ಮಕ್ಕಳು ಗಲಾಟೆ ಮಾಡದೆ ಹೊರಗೆ ಒಂದು ಪೋಲೀಸರ ಸಹಾಯದಿಂದ ಅವರನ್ನು ಹಿಡಿಯಿಸಿದರೆಂದೂ ಹೇಳಲಾಗಿದೆ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪ್ರಸಂಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯೆ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಫುರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಪಾಠ. ಟಿಪ್ಪಣಿಯು)	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ, ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಪಕ್ಕದ ಫೋಟೋಗ್ರಾಫಯುತ)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषद् (वीरशैवभाष्य-संस्कृत)	१ रु.
सिद्धांतशिखामणि (मूल)	६ आ.
पुरुषसूक्तम् (वीरशैवभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ಪಂ| ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತವಾಗಿ ಪ್ರಕಟಿಸಲ್ಪಟ್ಟಿತು.

REGISTERED No. M. 2966 ॥ [illegible] ॥ REGISTERED No M. 2966

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಧಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ. ೧೨ ಆಣೆ.

ಸಂಪುಟ ೧೬.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩ನೇ ಮೇ ೧೯೪೩ [ಸಂಚಿಕೆ ೫೫

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಜಯಂತಿಯ ದಿವಸ ವಿದ್ಯಾಸಭೆಯವರು ಮಾಡಿದ ಅಮೂಲ್ಯಭಾಷಣ

ಮೈಸೂರು ಸಂಸ್ಥಾನವು ಪ್ರಪಂಚದಲ್ಲೇ ಖ್ಯಾತಿಯನ್ನು ಗಳಿಸಿರುವ ಮಾದರಿ ಸಂಸ್ಥಾನ. ಪ್ರಪಂಚದಲ್ಲಿರುವುದು ಇದೊಂದೇ ಕರ್ನಾಟಕ ರಾಜ್ಯವೆಂದೂ, ಈ ರಾಜ್ಯದ ಪ್ರಭುಗಳು ಕರ್ನಾಟಕ ಸಿಂಹಾಸನಾಧೀಶ್ವರರೆಂದೂ ಕನ್ನಡಿಗರೆಲ್ಲರೂ ಹೆಮ್ಮೆಯಿಂದಲೂ, ಶ್ರದ್ಧೆಯಿಂದಲೂ ಗೌರವಿಸುತ್ತಿದ್ದಾರೆ. ಪ್ರಜೆಗಳ ಯೋಗಕ್ಷೇಮಸಾಧನೆಯೇ ಮುಖ್ಯಕರ್ತವ್ಯವಾಗಿರುವ ಪ್ರಭುಪುಂಗವರುಗಳು ನಮ್ಮ ಸಂಸ್ಥಾನದ ರಾಜಪೀಠದಲ್ಲಿ ವಿರಾಜಿಸುತ್ತ ಬಂದಿದ್ದಾರೆ. ರಾಜ್ಯಾಡಳಿತ ವಿಚಾರದಲ್ಲಿಯೂ ಮತ್ತು ಕೈಗಾರಿಕೆಗಳ ವಿಚಾರವಾಗಿಯೂ ಮೈಸೂರು ಸಂಸ್ಥಾನವು ವಿಶೇಷ ಗೌರವಸ್ಥಾನವನ್ನು ಗಳಿಸಿಕೊಂಡಿದೆ. ಮೈಸೂರು ಸಂಸ್ಥಾನದ ಪ್ರಜೆಗಳಲ್ಲಿ ಪ್ರತಿಯೊಬ್ಬರಿಗೂ ಸಂಸ್ಥಾನದ ವಿಚಾರದಲ್ಲಿ ಹೆಮ್ಮೆ, ಪ್ರಭುಗಳವರ ವಿಚಾರದಲ್ಲಿ ಹೆಮ್ಮೆ, ಮತ್ತು ನಾವು ಮೈಸೂರು ಸಂಸ್ಥಾನದವರೆಂಬ ಹೆಮ್ಮೆ,

ಮೈಸೂರು ಸಂಸ್ಥಾನದ ಚರಿತ್ರೆಯನ್ನು ಎಚ್ಚರಿಕೆಯಿಂದ ಓದಿ ನೋಡಿದರೆ, ಹಿಂದಿನ ಮಹಾರಾಜರುಗಳು ಸಂಸ್ಥಾನದ ಅಭ್ಯುದಯ ಸಾಧನೆಗಾಗಿ ಎಷ್ಟು ಮಟ್ಟಿನ ಪ್ರಬಲ ಪ್ರಯತ್ನ ಮಾಡಿದ್ದಾರೆಂಬುದು ನಮಗೆ ಗೊತ್ತಾಗುತ್ತದೆ. ಸಂಸ್ಥಾನವನ್ನು ಸುಪ್ರತಿಷ್ಠಿತವಾಗಿ ಕಾಪಾಡಿ ಅದರ ಘನತೆ ಗೌರವಗಳನ್ನು ಕಾಪಾಡಲು ಅವರುಗಳು ಎಷ್ಟು ಮಟ್ಟಿಗೆ ಶ್ರಮವಹಿಸಿ ಕೆಲಸಮಾಡಿದ್ದಾರೆಂಬುದು ನಾವೆಲ್ಲರೂ ಕೃತಜ್ಞತೆಯಿಂದ ನೆನೆಸಿಕೊಳ್ಳಬೇಕಾದ ಅಂಶವಾಗಿದೆ. ಅಂದಿನ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಕಾಲದಲ್ಲಿ ಸಂಸ್ಥಾನದ ಅಸ್ತಿತ್ವಕ್ಕೇ ಅತ್ಯಂತ ದಾರುಣವಾದ ಅಪಾಯ ಒದಗಿದ್ದಿತು. ಅವರು [illegible] ಸಂತತವಾಗಿ ಮಹತ್ತರ ಪ್ರಯತ್ನಗಳನ್ನು ನೆರವೇರಿಸದಿದ್ದ ಪಕ್ಷದಲ್ಲಿ, ಮೈಸೂರು ಸಂಸ್ಥಾನದ ವೈಶಿಷ್ಟ್ಯವೇ ತಪ್ಪಿಹೋಗುತ್ತಿದ್ದುದು ನಿಜ.

ಅಂದಿನ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಜೀವನ ಚರಿತ್ರೆಯ ಸ್ವಾರಸ್ಯವನ್ನು ಸರಿಯಾಗಿ ಗ್ರಹಿಸಬೇಕಾದರೆ, ಮೈಸೂರು ರಾಜ್ಯವನ್ನು ಸ್ಥಾಪಿಸಿದ ಮೂಲ ಪುರುಷರೂ, ಅವರ ಅನಂತರ ರಾಜ್ಯಭಾರ ಮಾಡಿದವರಲ್ಲಿ ಕೆಲವು ಮಂದಿ ಮಹಾರಾಜರುಗಳೂ ಸಾಧಿಸಿದ ಮಹತ್ತರ ಕಾರ್ಯಗಳನ್ನು ಸಂಕ್ಷೇಪವಾಗಿ ಸೂಚಿಸುವುದು ಅವಶ್ಯಕ. ನಿಮ್ಮೆಲ್ಲರಿಗೂ ತಿಳಿದೇ ಇರುವಂತೆ, ಮೈಸೂರಿನ ಅರಸರಾಗಿದ್ದ ಚಾಮರಾಜರ ಪುತ್ರಿಯವರನ್ನು ದುಷ್ಟ ಪಾಳೆಯಗಾರ ಮಾರನಾಯಕನು ಬಲಾತ್ಕಾರದಿಂದ ವಿವಾಹವಾಗಬೇಕೆಂದಿದ್ದ ಅಸುರೀ ಕೃತ್ಯವನ್ನು ತಪ್ಪಿಸುವ ಉದ್ದೇಶದಿಂದ ಯದುರಾಯರು ಧರ್ಮರಕ್ಷಣೆಗಾಗಿ ಯುದ್ಧಮಾಡಿ, ಅವನನ್ನು ನಿಗ್ರಹಿಸಿ, ಈಗಿನ ರಾಜಮನೆತನದ ಮೂಲ ಪುರುಷರಾದರು.

ಅವರ ತರುವಾಯ ಮೈಸೂರು ರಾಜಮನೆತನದಲ್ಲಿ ಪ್ರಸಿದ್ಧರಾದವರಲ್ಲಿ ಮೊದಲನೆಯವರು ರಾಜಒಡೆಯರವರು. ಅವರು ವಿಜಯನಗರದ ಸಾಮ್ರಾಜ್ಯದ ಸಾಮಂತರಾಗಿದ್ದುದನ್ನು ತಪ್ಪಿಸಿಕೊಂಡು, ಸ್ವತಂತ್ರರಾಗಿ ಶ್ರೀರಂಗಪಟ್ಟಣವನ್ನು ರಾಜಧಾನಿ ಮಾಡಿಕೊಂಡು ರಾಜ್ಯವನ್ನು ವಿಸ್ತರಿಸಿ ಪ್ರಖ್ಯಾತಿಗೊಳಿಸಿದರು. ಅವರ ಕಾಲದಿಂದ ೧೭೯೯ನೆಯ ಇಸವಿಯವರೆಗೂ ಶ್ರೀರಂಗಪಟ್ಟಣವೇ ರಾಜಧಾನಿಯಾಯಿತು. ರಾಜಒಡೆಯರವರು ವಿಶೇಷ ವೈಭವ ವಿಜೃಂಭಣೆಗಳಿಂದ ನವರಾತ್ರಿ ಉತ್ಸವವನ್ನು ನೆರವೇರಿಸಲು ಪ್ರಾರಂಭಿಸಿದರು. ಮೈಸೂರು ರಾಜಮನೆತನದ ಪ್ರಾಬಲ್ಯವು ಆಗಿನ ಕಾಲದವರಿಗೆ ಮನಮುಟ್ಟಿ ಗೋಚರವಾಗುವಂತೆ ಮಾಡಿದ ಮೊಟ್ಟಮೊದಲನೆಯ ಪ್ರಭುಗಳು, ರಾಜಒಡೆಯರವರು.

ರಾಜಒಡೆಯರವರ ಬಳಿಕ ಪ್ರಸಿದ್ಧರಾದವರು ಕಂಠೀರವ ನರಸಿಂಹರಾಜ ಒಡೆಯರವರು. ಅವರು ಅಮಿತ ಧೈರ್ಯಶಾಲಿಗಳೂ, ಬಲಿಷ್ಠರೂ ಆದ ವೀರಶ್ರೇಷ್ಠರಾಗಿದ್ದರು. ಅವರು ವೇಷಾಂತರದಿಂದ ತಿರುಚನಾಪಳ್ಳಿಗೆ ಹೋಗಿ, ಅಜೇಯನೆನಿಸಿದ್ದ ಜಟ್ಟಿಯೊಡನೆ ಮಲ್ಲಯುದ್ಧ ಮಾಡಿ, ಅವನನ್ನು ಸೋಲಿಸಿದ ಶೌರ್ಯಪ್ರದರ್ಶನವು ಇಂದಿಗೂ ಜನಜನಿತವಾಗಿ ಪ್ರಸಿದ್ಧವಾಗಿದೆ. ಅವರು ರಾಜ್ಯವನ್ನು ಸರ್ವತೋಮುಖವಾಗಿ ವಿಸ್ತರಿಸಿದುದಲ್ಲದೆ, ಟಂಕಸಾಲೆಯನ್ನೂ ಏರ್ಪಡಿಸಿದರು.

ಆ ಬಳಿಕ ಮೈಸೂರು ಮನೆತನದಲ್ಲಿ ಪ್ರಸಿದ್ಧರಾದವರು ಚಿಕ್ಕದೇವರಾಜ ಒಡೆಯರವರು. ಅವರು ಶಿವಾಜಿಯವರ ಮತ್ತು ಔರಂಗಜೇಬರ ಸಮಕಾಲೀನರು. [illegible] ಯವರಿಂದ ಅನೇಕ ಸ್ಥಳಗಳನ್ನು ವಶಪಡಿಸಿಕೊಂಡು, ಮೈಸೂರು ರಾಜ್ಯವನ್ನು ವಿಸ್ತರಿಸಿದರು. ಅವರ ರಾಜ್ಯಭಾರದಲ್ಲಿ ಅತಿಮುಖ್ಯವಾದ ಸಂಗತಿ ಏನೆಂದರೆ, ಅವರು ಔರಂಗಜೇಬನೊಡನೆ ಪ್ರಮಾಣವನ್ನೂ ಮೈತ್ರಿಯನ್ನೂ ಬೆಳೆಯಿಸಿ ಅವನಿಂದ "ರಾಜಾ ಜಗದೇವ್" ಎಂಬ ಬಿರುದನ್ನೂ ಮತ್ತು ಮೈಸೂರು ರಾಜಮನೆತನದಲ್ಲಿ ಇಂದಿಗೂ ನಡೆದು ಬರುತ್ತಿರುವ ಹಲವು ರಾಜಲಾಂಛನಗಳನ್ನೂ ಪಡೆದುದೇ. ರಾಜ್ಯಾಂಗ ವ್ಯವಸ್ಥೆಯನ್ನು ಏರ್ಪಡಿಸಿ ಪ್ರಸಿದ್ಧರಾದುದಲ್ಲದೆ, ಅವರು ವಿದ್ವಾಂಸರಿಗೆ ಆಶ್ರಯವನ್ನಿತ್ತು ಸಾಹಿತ್ಯಾಭಿವೃದ್ಧಿಗೆ ಪ್ರೋತ್ಸಾಹವನ್ನು ಕೊಟ್ಟರು. ಅಲ್ಲದೆ, ಅನೇಕ ಸುಧಾರಣೆಗಳನ್ನೂ ನೆರವೇರಿಸಿದರು. ಅವರು ಆಡಳಿತವನ್ನು ೧೮ ಶಾಖೆಗಳಾಗಿ ವಿಭಾಗಿಸಿ ಅಠಾರಾ ಕಚೇರಿಗಳೆಂಬ ವ್ಯವಸ್ಥೆಯನ್ನು ಮಾಡಿದರು. ಅಲ್ಲದೆ ಅಂಚೆಯ ಏರ್ಪಾಡನ್ನು ಮಾಡಿದರು, ತಮಗೆ ಸಲಹೆ ಹೇಳಲು ಒಂದು ಸಭೆಯನ್ನೂ ಸ್ಥಾಪಿಸಿದರು.

ಹದಿನೇಳನೆಯ ಶತಮಾನವು ಮೈಸೂರು ಸಂಸ್ಥಾನಕ್ಕೆ ಮಾತ್ರವೇ ಅಲ್ಲದೆ ಒಟ್ಟು ಭರತಖಂಡಕ್ಕೇ ಯುದ್ಧಗಳ ಉಲ್ಲೋಲಕಲ್ಲೋಲ ಸ್ಥಿತಿಯೊದಗಿದ್ದ ಅವಾಂತರದ ಕಾಲ. ಮೊಗಲ ಸಾಮ್ರಾಜ್ಯವಲ್ಲದೆ, ಪರಸ್ಪರ ಪ್ರತಿಸ್ಪರ್ಧಿಗಳಾದ ನಿಜಾಮರ ರಾಜ್ಯ, ಮರಾಟರ ರಾಜ್ಯ ಮತ್ತು [illegible] ಸ್ವತಂತ್ರ ರಾಜ್ಯಗಳು ಏರ್ಪಟ್ಟು, ನಿರಂತರವೂ ಅವಕ್ಕೆ ಯುದ್ಧಗಳು ನಡೆಯುತ್ತಿದ್ದುವು. ಚಿಕ್ಕದೇವರಾಜ ಒಡೆಯರವರು ೧೭೦೪ನೆಯ ಇಸವಿಯಲ್ಲಿ ಸ್ವರ್ಗಸ್ಥರಾದ ಬಳಿಕ, ಪಟ್ಟಕ್ಕೆ ಬಂದ ದೊರೆಗಳು ಅಷ್ಟೇನೂ ಹೆಚ್ಚಾಗಿ ಬಲಿಷ್ಠರಾಗಿರಲಿಲ್ಲ. ರಾಜರುಗಳಿಗೂ ಅವರ ಸಚಿವರುಗಳಿಗೂ ಸಂತತವಾಗಿ ಭಿನ್ನಾಭಿಪ್ರಾಯಗಳು ಹುಟ್ಟಿ ಸಚಿವರುಗಳಲ್ಲೇ ಪರಸ್ಪರವಾಗಿ ಪಿತೂರಿಗಳು ನಡೆಯಲು ಪ್ರಾರಂಭವಾಗಿ, ಕೊನೆಗೆ ಅಧಿಕಾರ ಸೂತ್ರಗಳೆಲ್ಲ ಹೈದರಾಲಿಯವರ ಮತ್ತು ಟಿಪ್ಪು ಸುಲ್ತಾನರ ಕೈಸೇರಿದುವು. ಅವರು ತಾವೇ ಸರ್ವಾಧಿಕಾರಿಗಳಾಗಿದ್ದರೂ ರಾಜ್ಯಾಡಳಿತವೆಲ್ಲವೂ ರಾಜರುಗಳ ಹೆಸರಿನಲ್ಲಿ ನಡೆಯುತ್ತಿದ್ದವು, ರಾಜಮನೆತನದ ಪೀಳಿಗೆಯಲ್ಲೇ ರಾಜ್ಯವನ್ನು ಇಟ್ಟು, ರಾಜರುಗಳ ಪರವಾಗಿ ಕೆಲಸಮಾಡುತ್ತಿದ್ದರು.

೧೭೯೯ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದ ಯುದ್ಧವಾಗಿ ಅದು ಬ್ರಿಟಿಷರ ವಶವಾದಮೇಲೆ, ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ಪಟ್ಟವಾಯಿತು. ಸಂಸ್ಥಾನದ ರಾಜಮನೆತನಕ್ಕೆ ಬ್ರಿಟಿಷರು ರಾಜ್ಯವನ್ನೊಪ್ಪಿಸುವರೋ ಇಲ್ಲವೋ— ಎಂದು ಪ್ರಜೆಗಳ ಮನಸ್ಸನ್ನು ಕಡಿಯುತ್ತಿದ್ದ ಕಳವಳವು ಅದರಿಂದ ಪರಿಹಾರವಾಯಿತು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಅಜ್ಜಿಯವರಾದ ರಾಣಿ ಲಕ್ಷ್ಮಮ್ಮಣ್ಣಿಯವರು ಮೈಸೂರು ರಾಜಮನೆತನಕ್ಕೆ ಮತ್ತೆ ರಾಜ್ಯವು ಲಭಿಸುವಂತೆ ಮಾಡಲು [illegible] ನೆರವೇರಿಸಿದ ಸಂಧಾನ ಕಾರ್ಯವು ಸಾಮಾನ್ಯವಾದುದಲ್ಲ. ಮೈಸೂರು ನಗರದಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಪಟ್ಟಾಭಿಷೇಕ ಮಹೋತ್ಸವವು ನೆರವೇರಿ, ಪೂರ್ಣಯ್ಯನವರು ದಿವಾನ್ ಹುದ್ದೆಗೆ ನೇಮಕವಾದರು. ದಿವಾನ್ ಪೂರ್ಣಯ್ಯನವರು ಸಂಸ್ಥಾನದ ಹಿತವನ್ನು ಸಾಧಿಸುತ್ತ, ಪ್ರಭುಗಳಾದ ಶ್ರೀಮನ್ಮಹಾರಾಜರವರಿಗೆ ರಾಜಭಕ್ತಿಯಿಂದ ಸೇವೆಯನ್ನು ಸಲ್ಲಿಸಬೇಕೆಂದು ಸಂಕಲ್ಪಮಾಡಿ, ಆ ಸಂಕಲ್ಪವನ್ನು ಈಡೇರಿಸಿದರು.

ಶ್ರೀಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ್ ಮಹಾಸ್ವಾಮಿಯವರು ೧೭೯೪ನೆಯ ಇಸವಿಯಲ್ಲಿ ಶ್ರೀರಂಗಪಟ್ಟಣದಲ್ಲಿ ಜನಿಸಿದರು. ಪಟ್ಟಾಭಿಷೇಕ ಮಹೋತ್ಸವಕಾಲದಲ್ಲಿ ಅವರಿಗೆ ಆರೇ ವರ್ಷ ವಯಸ್ಸು. ಅವರು ಅಷ್ಟು ಚಿಕ್ಕ ವಯಸ್ಸಿನವರಾಗಿದ್ದರೂ ಅಸಾಧಾರಣವಾದ ತೇಜಸ್ಸಿನಿಂದಲೂ ಗಾಂಭೀರ್ಯದಿಂದಲೂ ಸಿಂಹಾಸನದಲ್ಲಿ ಮಂಡಿಸಿದ್ದುದು ಆಶ್ಚರ್ಯಕರವಾಗಿದ್ದಿತಂತೆ. ಅವರು ಪಟ್ಟಕ್ಕೆ ಬರುವುದಕ್ಕೆ ಮುಂಚಿನ ಸನ್ನಿವೇಶಗಳನ್ನು ಕುರಿತು ಯೋಚಿಸಿದರಂತೂ, ಅದು ಮತ್ತೂ ಆಶ್ಚರ್ಯಕರವಾದುದೇ ಸರಿ. ರಾಣಿ ಲಕ್ಷ್ಮಮ್ಮಣ್ಣಿಯವರಿಗೆ ಬಹುಕಾಲದಿಂದಿದ್ದ ಅಭಿಲಾಷೆಯೂ ನೆರವೇರಿತು. ೧೭೯೯ನೆಯ ಇಸವಿಯ ಶ್ರೀರಂಗಪಟ್ಟಣದ ಯುದ್ಧವಾದ ಮೇಲೆ ಸ್ವಲ್ಪ ಕಾಲದವರೆಗೆ ಬ್ರಿಟಿಷರೂ ನಿಜಾಮರೂ ಒಟ್ಟು ಮೈಸೂರು ರಾಜ್ಯವನ್ನೆಲ್ಲಾ ತಾವೇ ಹಂಚಿಕೊಂಡು ಬಿಡಬಹುದೆಂಬ ಶಂಕೆಯುಂಟಾಗಿದ್ದಿತು. ಆದರೆ, ಬ್ರಿಟಿಷರು ಮೈಸೂರು ರಾಜಮನೆತನದವರ ನ್ಯಾಯವಾದ ಹಕ್ಕುಗಳನ್ನು ಮನಗಂಡು, ಸಿಂಹಾಸನಾಧಿಕಾರಿಗಳಾಗಿದ್ದ ಪುಟ್ಟ ಬಾಲಕುಮಾರರಿಗೆ ೧೭೯೯ನೆಯ ಇಸವಿ ಜೂನ್ ೩೦ನೆಯ ತಾರೀಖಿನ ದಿನ ಸಿಂಹಾಸನವನ್ನು ವಹಿಸಿಕೊಟ್ಟರು. ಅದಕ್ಕಾಗಿ ಹಲವು ವರ್ಷಗಳಿಂದಲೂ ಶ್ರಮಿಸಿದ್ದ ರಾಣಿ ಲಕ್ಷ್ಮಮ್ಮಣ್ಣಿಯವರು, ಚಿಕ್ಕ ವಯಸ್ಸಿನ ಮಹಾರಾಜರವರ ಪರವಾಗಿ ಬ್ರಿಟಿಷರೊಡನೆ ನಡೆದ ಒಪ್ಪಂದದ ಪತ್ರಕ್ಕೆ ಸ್ವಹಸ್ತಾಕ್ಷರವನ್ನು ಹಾಕಿದರು.

ಪಟ್ಟಾಭಿಷೇಕ ಮಹೋತ್ಸವವು ನೆರವೇರಿದ ಮೇಲೆ, ಸಂಸ್ಥಾನದೊಳಗೆ ಅನೇಕ ದಂಗೆಗಳನ್ನೂ ಅಕ್ರಮಗಳನ್ನೂ ಅಡಗಿಸಿ ಶಾಂತಿ ಸ್ಥಾಪನೆ ಮಾಡಬೇಕಾಯಿತು. ಹಲವು ಮಂದಿ ಪಾಳೆಯಗಾರರು ಶ್ರೀಮನ್ಮಹಾರಾಜರವರು ಚಿಕ್ಕ ವಯಸ್ಸಿನ ಬಾಲಕರಾಗಿದ್ದ ಕಾರಣ, ತಾವು ಅವರ ಅಧಿಕಾರಕ್ಕೆ ಬಾಗದೆ ಸ್ವತಂತ್ರರಾಗಲು ಅದೇ ತಕ್ಕ ಸಮಯವೆಂದೆಣಿಸಿದರು. ಆಗ್ಗೆ ರೈಲ್ವೇ ಮಾರ್ಗಗಳಿರಲಿಲ್ಲ. ಇದ್ದ ಸಾಮಾನ್ಯ ಸಂಚಾರ ಮಾರ್ಗಗಳು ಕಾಡ ಕೆಟ್ಟ ಮಾರ್ಗ, ಬಂಡಿಗಳ ಜಾಡು, ಈಗಿನ ಕಾಲದಲ್ಲಿರುವಂತೆ ಮೋಟಾರು ಕಾರುಗಳು ವಿಮಾನದ ವೇಗವಾಗಿ ಹೋಗುವ ಪ್ರಯಾಣ ಸಾಧನಗಳಿರಲಿಲ್ಲ. ಸುವ್ಯವಸ್ಥಿತವಾದ ಸೈನ್ಯ ಪಡೆಯಾಗಲಿ ಅಥವಾ ಪೋಲೀಸ್ ಪಡೆಯಾಗಲಿ ಇರಲಿಲ್ಲ. ಆದ ಕಾರಣ, ಪ್ರತಿಯೊಬ್ಬ ಪಾಳೆಯಗಾರನೂ ತನ್ನ ಪಾಲಿಗೆ ತಾನು ಸ್ವತಂತ್ರನಾಗಲು ಅದೇ ಸಮಯವೆಂದೆಣಿಸಿದನು. [illegible] ಪಾಳೆಯಗಾರರೂ ನಡೆಯಿಸಿದ ದಂಗೆಗಳನ್ನು [illegible] ದಿವಾನ್ ಪೂರ್ಣಯ್ಯನವರು, ದೇಶದ ಶಾಂತಿಗೆ ಕಂಟಕಪ್ರಾಯರಾಗಿದ್ದ ಈ ದಂಗೆಕೋರರ ಹಾವಳಿಯನ್ನು ಅಡಗಿಸುವುದಕ್ಕೆ ನಾನಾ ಕ್ರಮಗಳನ್ನು ಕೈಕೊಂಡರು. ಬ್ರಿಟಿಷ್ ರೆಸಿಡೆಂಟರೂ ದಿವಾನ್ ಪೂರ್ಣಯ್ಯನವರೂ ಸಣ್ಣದೊಂದು ಸೈನ್ಯದೊಡನೆ ಸಂಸ್ಥಾನದಲ್ಲಿ ಪದೇ ಪದೇ ಸಂಚಾರ ಮಾಡಿ, ಜನರಿಗೆ ತೊಂದರೆಯಿಂದ ಆಗುತ್ತಿದ್ದ ಕಾಟವನ್ನು ತಪ್ಪಿಸಿ ಸಹಾಯ ಮಾಡತೊಡಗಿದರು.

ಆಗಿನ ಕಾಲದ ದಂಗೆಕೋರರಲ್ಲೆಲ್ಲ ಪ್ರಬಲನಾಗಿದ್ದವನು ಚನ್ನಗಿರಿಯ ಧೋಂಡೋಜಿ. ಅವನು ಜನರನ್ನು ಕಟ್ಟಿ ಮುಂದಾಳಾಗಿ ನಿಂತು, ಕೊಲೆ ನಡೆಯಿಸುವುದರಲ್ಲಿ ಬಹಳ ಸಮರ್ಥನಾಗಿದ್ದನಂತೆ. ಅವನ ಹಾವಳಿಯನ್ನಡಗಿಸುವ ಕೆಲಸವು ಕಷ್ಟದಿಂದ ಸಾಗಿತು. ವಗೂರು ಮತ್ತು ಮುಂಜರಾಬಾದು ಬಳಿ ಉಪಟಳ ಮಾಡುತ್ತಿದ್ದ ವೆಂಕಟಾದ್ರಿ ನಾಯಕನು ಮತ್ತೊಬ್ಬ ದಂಗೆಕೋರ. ಸ್ವಲ್ಪ ಕಾಲದಲ್ಲೇ ದಿವಾನ್ ಪೂರ್ಣಯ್ಯನವರು ಅವನನ್ನೂ ಮಟ್ಟ ಹಾಕಿದರು.

ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ರಾಜ್ಯಭಾರದಲ್ಲಿ ಪೂರ್ಣಯ್ಯನವರು ದಿವಾನ ಪದವಿಯಲ್ಲಿದ್ದ ಅವಧಿಯಲ್ಲಿ

[[illegible]]

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ

ಹಾಗೂ

ಶ್ರೀಜಗದ್ಗುರು ದಾರುಕಾಚಾರ್ಯರ

ಜಯಂತೀಮಹೋತ್ಸವಗಳು

[illegible] [illegible]

ವೈಶಾಖ ಶು॥ ೫ ಶುಕ್ರವಾರ. ವೈಶಾಖ ಶು॥ ೭ ~~ಭಾನುವಾರ~~

ಯಾವ ಮಹಾತ್ಮರು ಭರತಖಂಡದಲ್ಲಿರತಕ್ಕ ಸಮಸ್ತಪವಿತ್ರಕ್ಷೇತ್ರ ಮಸ್ತಮಣೀಭೂತಗಳಾದ ಶ್ರೀದಾಕ್ಷಾರಾಮ, ಉಜ್ಜಯಿನೀಕ್ಷೇತ್ರಗಳಲ್ಲಿ ವಿರಾಜಿಸುವ ಶ್ರೀಭೀಮನಾಥ, ಶ್ರೀಸಿದ್ಧೇಶ್ವರ ಮಹಾಲಿಂಗಗಳಿಂದವತರಿಸಿ, ಪರಮಪವಿತ್ರವಾದ ವೀರಶೈವಸಿದ್ಧಾಂತವನ್ನು ಭೂಮಂಡಲದಲ್ಲಿ ನೆಲೆಗೊಳಿಸಿ, ವ್ಯಾಸ, ದಧೀಚಿ ಮೊದಲಾದ ಅನಂತಜನ ಮಹರ್ಷಿಗಳನ್ನೂ, ಗೌತಮೇಂದ್ರ, ದೇವನಂದನ ಮೊದಲಾದ ಚಕ್ರವರ್ತಿಗಳನ್ನೂ ಶಿವಸಿದ್ಧಾಂತೋಪದೇಶದ್ವಾರಾ ಉದ್ಧರಿಸಿ ಲೋಕೈಕಪೂಜ್ಯರಾಗಿರುವರೋ, ಅಂಥ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು ಇದೇ ವೈಶಾಖ ಶುಕ್ಲಪಕ್ಷದಲ್ಲಿ ಪ್ರಾಪ್ತವಾಗುವುದರಿಂದ ಸರ್ವ ಗುರುಭಕ್ತರೂ ಈ ಜಯಂತೀಮಹೋತ್ಸವಗಳನ್ನು ಅತ್ಯಂತ ವೈಭವದಿಂದ ನೆರವೇರಿಸಬೇಕು. **ವೈಶಾಖ ಶು॥ ೫ ಶುಕ್ರವಾರ ತಾ॥ ೭-೫-೧೯೪೩** ನೆಯ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತೀಮಹೋತ್ಸವವನ್ನೂ, **ವೈಶಾಖ ಶು॥ ೭ ಭಾನುವಾರ ತಾ॥ ೯-೫-೧೯೪೩** ನೆಯ ದಿವಸ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವವನ್ನೂ ನೆರವೇರಿಸಬೇಕು. ಈ ಮೊದಲು ಈ ಪತ್ರಿಕೆಯಲ್ಲಿ ಪ್ರಸಿದ್ಧಪಡಿಸಿದಂತೆ ಭರತಖಂಡದಲ್ಲಿರುವ ಲಕ್ಷೋಪಲಕ್ಷ ಜನ ಶುದ್ಧಸಂಪ್ರದಾಯದ ವೀರಶೈವರು ಶ್ರೀಜಗದ್ಗುರು ರೇಣುಕಾಚಾರ್ಯರ ಹಾಗೂ ಪಂಡಿತಾರಾಧ್ಯ, ವಿಶ್ವಾರಾಧ್ಯರ ಜಯಂತೀಮಹೋತ್ಸವಗಳನ್ನು ಆಯಾಯ ಪವಿತ್ರದಿನಗಳಲ್ಲಿ ಅತ್ಯಂತಭಕ್ತಿಯಿಂದಲೂ, ವೈಭವದಿಂದಲೂ ನೆರವೇರಿಸಿದ ವಿಷಯವು ಈ ಪತ್ರಿಕೆಯಿಂದ ಸರ್ವರಿಗೂ ವೇದ್ಯವೇ ಆಗಿದೆ. ಶುದ್ಧಸಂಪ್ರದಾಯದ ವೀರಶೈವರು ಸದ್ಯಃ ಪ್ರಾಪ್ತವಾಗಿರುವ ಆಚಾರ್ಯರ ಜಯಂತೀಮಹೋತ್ಸವಗಳನ್ನು ಅತ್ಯಂತ ಭಕ್ತಿಯಿಂದಲೂ, ಉತ್ಸಾಹದಿಂದಲೂ, ವೈಭವದಿಂದಲೂ ನೆರವೇರಿಸಿ, ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ಯುದ್ಧವಾರ್ತೆ.

ಅರಕಾನಿನ ಪರಿಸ್ಥಿತಿ

ಬರ್ಮಾದಲ್ಲಿರುವ ಅರಕಾನಿನಲ್ಲಿ ಎರಡು ಕಡೆಯವರೂ ಪರಸ್ಪರ ಬಲಪರೀಕ್ಷೆಗಾಗಿ ಶಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಸಾಮಾನ್ಯ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ. ಬುಥಿಡಾಂಗ್ ದಕ್ಷಿಣದಲ್ಲಿ ಜಪಾನರು ನಡೆಯಿಸಿದ ಮುತ್ತಿಗೆಯನ್ನು ವಿಶೇಷ ನಷ್ಟದೊಡನೆ ಹಿಮ್ಮೆಟ್ಟಿಸಲಾಯಿತೆಂದು ಹೇಳಲಾಗಿದೆ.

ರಂಗೂನ್‌ನಗರದ ಮೇಲೆ ದಾಳಿ

ಕಳೆದ 26 ನೆಯ ತಾರೀಖಿನ ದಿವಸ ಅಮೇರಿಕದ ಬಾಂಬರ್ ವಿಮಾನಗಳು ರಂಗೂನ್ ನಗರದ ಮೇಲೆ ದಾಳಿ ನಡೆಸಿ ಬಾಂಬುಗಳನ್ನು ಸುರಿಸಿದುವು. ಅನೇಕ ಕಡೆ ಬೆಂಕಿ ಹತ್ತಿಕೊಂಡಿತೆಂದೂ ಅಕ್ಯಾಬ್ ಮೇಲೆ ಸಹ ಬಾಂಬುಗಳನ್ನು ಹಾಕಲಾಯಿತೆಂದೂ ಹೇಳಲಾಗಿದೆ.

ಮಿತ್ರಸೈನ್ಯಕ್ಕೆ ಸರಪರಾಜು

ಆಡ್ಮಿರಲ್ ಸರ್ ವಿಲಿಯಂ ಜೇಮ್ಸ್‌ರವರು ಮೊನ್ನೆ ಮಾಡಿದ ಬ್ರಾಡ್‌ಕ್ಯಾಸ್ಟ್ ಭಾಷಣದಲ್ಲಿ ಒಂದೇ ರಾತ್ರಿಯಲ್ಲಿ ಜಿಬ್ರಾಲ್ಟರಿಂದ ಟ್ಯೂನಿಸಿಯಾದಲ್ಲಿ ಮುಂದುವರಿದ ಮಿತ್ರಸೈನ್ಯಕ್ಕೆ ಸರಪರಾಜನ್ನು ಒದಗಿಸಲು ೧೦ ಲಕ್ಷ ಟನ್‌ಗಳಷ್ಟು ನೌಕೆಗಳು ಭಾಗವಹಿಸಿದ್ದವು ಎಂದು ಹೇಳಿದ್ದಾರೆ.

೧೯೪೨ ರಲ್ಲಾದ ಹಡಗುಗಳ ನಷ್ಟ

೧೯೪೨ ರಲ್ಲಿ ಮಿತ್ರದೇಶಗಳು ಹೊಸದಾಗಿ ನಿರ್ಮಿಸಿದ್ದಕ್ಕಿಂತ ೧೦ ಲಕ್ಷ ಟನ್ ಗಳಷ್ಟು ಹೆಚ್ಚು ಹಡಗುಗಳನ್ನು ಕಳೆದುಕೊಂಡವೆಂದು ಅಮೇರಿಕದ ನೌಕಾಶಾಖೆಯು ಪ್ರಕಟಿಸಿದೆ. ಮುಳುಗಿಹೋದ ಮಿತ್ರದೇಶಗಳ ಎಲ್ಲ ಹಡಗುಗಳ ಸಂಖ್ಯೆಯು ಅಮೇರಿಕದ ನೌಕಾಶಾಖೆಗೆ ದೊರೆತಿದೆ. ಆದರೆ ರಷ್ಯದಲ್ಲಿ ಹೊಸದಾಗಿ ನಿರ್ಮಿತವಾದ ಹಡಗುಗಳ ಸಂಖ್ಯೆಯುಮಾತ್ರ ತಿಳಿದಿಲ್ಲ.

ಭಾರತ-ಚೀನಾ ಮೈತ್ರಿಯು ವೃದ್ಧಿಯಾಗಬೇಕು

ಚೀನಾ ನಿಯೋಗ ಗೋಷ್ಠಿಯವರು ಭಾರತದಲ್ಲಿ ಪ್ರವಾಸ ಮುಗಿಸಿ ಕಲ್ಕತ್ತೆಯಿಂದ ತಮ್ಮ ದೇಶಕ್ಕೆ ತೆರಳುವರು. ಅವರ ನಾಯಕರಾದ ಡಾ॥ ಕೂರವರು ಚೀನಾದಲ್ಲಿರುವ ಭಾರತ ಪ್ರಜೆಗಳು ತೋರಿಸುತ್ತಿರುವ ಉತ್ಸಾಹವನ್ನು ಪ್ರಶಂಸಿಸಿ, ಭಾರತ ಮತ್ತು ಚೀನಾಗಳಿಗಿರುವ ಮೈತ್ರಿಯು ಮುಂದೆ ಇನ್ನೂ ಹೆಚ್ಚು ಬಲಗೊಳ್ಳಬೇಕೆಂಬುದೇ ನಮ್ಮ ಆಶೆ ಎಂದು ಹೇಳಿದರು.

ರಷ್ಯದಲ್ಲಿ ಜರ್ಮನಿಯ ಸಿದ್ಧತೆ

ಜರ್ಮನರು ರಷ್ಯದಲ್ಲಿ ಮತ್ತೆ ಮೇಲೆ ಬೀಳಲು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದಾರೆಂದೂ, ಹತ್ತಾರು ಡಿವಿಜನ್ ಸೈನ್ಯಗಳನ್ನು ಯೂರೋಪಿನಿಂದ ರಣರಂಗಕ್ಕೆ ಕಳಿಸುತ್ತಿದ್ದಾರೆಂದೂ, ಮಾಸ್ಕೋ ರೇಡಿಯೋ ತಿಳಿಸುತ್ತ—"ನಾವು ಅಪಾರ ತ್ಯಾಗಮಾಡಬೇಕಾಗುತ್ತದೆ. ನಮಗಿರುವ ಸಮಸ್ತ ಸಾಧನ ಸಂಪತ್ತನ್ನು ಉಪಯೋಗಿಸಿದರೆ ಮಾತ್ರ ನಾವು ಗೆಲ್ಲುತ್ತೇವೆ. ಕೆಂಪುಸೇನೆಯು ವಿಜಯಕ್ಕೆ ಅಡಿಗಲ್ಲನ್ನು ಹಾಕಿದೆ. ನಮ್ಮ ಯೋಧರು ಶತ್ರುವಿಗೆ ಅತ್ಯುಗ್ರವಾದ ಏಟನ್ನು ಹಾಕಿದ್ದಾರೆ. ರಷ್ಯವು ಚಳಿಗಾಲದಲ್ಲಿ ನಡೆಸಿದ ಹೋರಾಟದಲ್ಲಿ ೮೫೦೦೦೦ ಜರ್ಮನರನ್ನು ಸೆರೆಹಿಡಿದುಕೊಂಡಿದೆ, ೩೫೦೦೦೦ ಶತ್ರುಗಳನ್ನು ಸೆರೆಹಿಡಿದಿದೆ, ಮತ್ತು ಶತ್ರುಗಳ ೫೦೯೦ ವಿಮಾನಗಳನ್ನೂ ೯೧೯೦ ಟ್ಯಾಂಕುಗಳನ್ನೂ ೨೦೩೬೦ ಬಂದೂಕುಗಳನ್ನೂ ನಾಶಮಾಡಿದೆ ಎಂದು ವಿವರಿಸಿದೆ.

ಜರ್ಮನರಿಗೆ ಜಪಾನರ ಸಹಾಯ

ಜರ್ಮನರ ಸ್ವಾಧೀನದಲ್ಲಿರುವ ಈಜಿಯನ್ ದ್ವೀಪಗಳ ರಕ್ಷಣಾಕ್ರಮವನ್ನು ವ್ಯವಸ್ಥೆಗೊಳಿಸಲು ಜರ್ಮನರು ಜಪಾನರ ಸಹಾಯವನ್ನು ಕೋರಿರುವರಂತೆ!

ಸ್ವಿಟ್ಜರ್‌ಲೆಂಡ್ ಗಡಿ ಮುಚ್ಚಲಾಗಿದೆ

ಕಳೆದ ಸೋಮವಾರ ಬೆಳಗ್ಗೆ ಸ್ವಿಟ್ಜರ್‌ಲೆಂಡ್ ಫ್ರಾನ್ಸ್ ಗಡಿಯನ್ನು ಮುಚ್ಚಲಾಯಿತೆಂದೂ, ಅಲ್ಲಿ ಸೈನ್ಯಗಳ ಮುಖ್ಯಚಲನವಲನವು ನಡೆಯುತ್ತಿದೆ ಯೆಂದೂ ಹೇಳಲಾಗಿದೆ.

ಅಮೆರಿಕಾದ ವಿಮಾನ ನಿರ್ಮಾಣಶಕ್ತಿ

೧೯೪೩ ರಲ್ಲಿ ಅಮೆರಿಕವು ೧ ಲಕ್ಷ ವಿಮಾನಗಳನ್ನು ತಯಾರಿಸುವದೆಂಬುದಾಗಿ ಸಂಗ್ರಾಮವಸ್ತು ನಿರ್ಮಾಣ ಬೋರ್ಡಿನ ಉಪಾಧ್ಯಕ್ಷರಾದ ಶ್ರೀ ವಿಲಿಯಂ ಬಾಟ್‌ರವರು ಅಮೆರಿಕಾದ ವಾಣಿಜ್ಯ ಸಂಘದಲ್ಲಿ ಮಾತಾಡುತ್ತ ತಿಳಿಸಿದರು.

ಚೀಣರ ಸಾಹಸ

ಚೀಣರು ಪಾನ್ಸಿಹೋನಾನ್‌ಗಡಿಯಲ್ಲಿ ಉಗ್ರವಾಗಿ ತಿರುಗಿಬಿದ್ದಿದ್ದಾರೆ. ಜಪಾನರು ತೀರ ಮುಂದುವರಿದು ಬರುವವರೆಗೆ ಚೀಣರು ಸುಮ್ಮನೆ ತಟಸ್ಥರಾಗಿದ್ದು ಅನಂತರ ಎಲ್ಲ ಕಡೆಯಿಂದಲೂ ಮೇಲೆ ಬಿದ್ದು ಶತ್ರುಗಳಿಗೆ ಅಪಾರ ನಷ್ಟವನ್ನುಂಟುಮಾಡಿದರು.

ಯು. ಪಿ. ಗವರ್ನರಿಗೆ ತುಲಾಭಾರ!

ಮತ್ರಾದಲ್ಲಿರುವ ಸಾದಾಬಾದ್ ಎಸ್ಟೇಟಿನ ಬೇಗಂ ಸಾಹಿಬಾ ಎಂಬವರು ಯು. ಪಿ. ಗವರ್ನರಾದ ಸರ್ ಮಾರಿಸ್ ಹ್ಯಾಲೆಟ್‌ರವರು ಎಷ್ಟು ತೂಕವಿರುವರೋ ಅಷ್ಟು ಬೆಳ್ಳಿ ರೂಪಾಯಿಗಳನ್ನು ಯುದ್ಧನಿಧಿಗೆ ಕೊಡುವುದಾಗಿ ತಿಳಿಸಿದ್ದಾರೆ.

ಯುದ್ಧದ ಅಧಿಕಾರಯುತ ಪುಸ್ತಕ

ಅಮೆರಿಕದ ಮಿ॥ ವಿಲ್ಕಿಯವರು ಬರೆದಿರುವ ಏಕಪ್ರಪಂಚ ಎಂಬ ಪುಸ್ತಕವನ್ನು ಯುದ್ಧದ ಅಧಿಕಾರಯುತವಾದ ಪುಸ್ತಕವೆಂದು ಅಮೆರಿಕಾ ಪುಸ್ತಕ ಪ್ರಕಟನ ಸಂಘದವರು ಘೋಷಿಸಿದ್ದಾರೆ. ಈಗಾಗಲೇ ೬ ಲಕ್ಷ ಪ್ರತಿಗಳು ಖರ್ಚಾಗಿವೆಯೆಂದು ಹೇಳಲಾಗಿದೆ.

ಬ್ರಿಟಿಷ್ ವಿಮಾನದ ಸಾಹಸ

ಬ್ರಿಟಿಷ್ ಲಿಬರೇಟರ್ ಬಾಂಬರ್ ವಿಮಾನವೊಂದು ೬ ಗಂಟೆ ೨೦ ನಿಮಿಷಗಳಲ್ಲಿ ೨೨೦೦ ಮೈಲಿಗಳನ್ನು ಪೂರ್ತಿಮಾಡಿದೆಯೆಂದೂ ನ್ಯೂ ಫೌಂಡ್‌ಲೆಂಡಿನಿಂದ ಹೊರಟು ಬ್ರಿಟಿಷ್ ವೇಲ್ಸಿಗೆ ಇಷ್ಟು ಸ್ವಲ್ಪಕಾಲದಲ್ಲಿ ಮುಟ್ಟಿತೆಂದೂ, ಅದು ವಿಶೇಷ ಭಾರವಾದ ಸಾಮಾನುಗಳನ್ನು ಹಾಕಿಕೊಂಡು ಸಂಚಾರಮಾಡಿತೆಂದೂ ಹೇಳಲಾಗಿದೆ.

ಅಸ್ಸಾಂ ಈಶಾನ್ಯ ಭಾಗದಲ್ಲಿ ಶತ್ರುವಿಮಾನಗಳು

ಚಿಟಾಗಾಂಗಿಗೆ ೬೦ ಮೈಲಿ ದೂರದಲ್ಲಿ ಅಸ್ಸಾಮಿಗೆ ಈಶಾನ್ಯಭಾಗದಲ್ಲಿರುವ ಜೋರ್ಹಾಟ್ ನಗರದ ಮೇಲೆ ಕೆಲವು ಜಪಾನ ವಿಮಾನಗಳು ಹಾರಾಡಿದವು. ಅಮೆರಿಕನ್ ಫೈಟರ್ ವಿಮಾನಗಳು ಶತ್ರು ವಿಮಾನಗಳನ್ನೆಲ್ಲಾ ಓಡಿಸಿ ಸುರಕ್ಷಿತವಾಗಿ ಹಿಂದಿರುಗಿದವು.

ಅಮೆರಿಕೆಯ ಯುದ್ಧಮಂತ್ರಿಗಳ ಹೇಳಿಕೆ

ಶತ್ರುಗಳು ಉತ್ತರ ಆಫ್ರಿಕಾವನ್ನು ಬಿಟ್ಟು ಓಡಿ ಹೋಗುವ ಪ್ರಯತ್ನದ ಲಕ್ಷಣಗಳನ್ನೂ ಕಂಡು ಬರುವುದಿಲ್ಲವೆಂದೂ, ನೈರುತ್ಯ ಪೆಸಿಫಿಕ್ಕಿನಲ್ಲಿ ಪರಿಸ್ಥಿತಿಯು ಉತ್ತಮಗೊಂಡಿದ್ದರೂ ಆಸ್ಟ್ರೇಲಿಯಾಕ್ಕೆ ಜಪಾನರ ಭಯವು ತಪ್ಪಿರುವುದಿಲ್ಲವೆಂದೂ, ಲೆನಿನ್‌ಗ್ರಾಡಿನಲ್ಲಿ ಮತ್ತೆ ಕಾಳಗವು ಪ್ರಾರಂಭವಾಗಿರುವುದನ್ನು ನೋಡಿದರೆ ಆ ನಗರವನ್ನು ವಶಪಡಿಸಿಕೊಳ್ಳಲು ಜರ್ಮನರು ಮತ್ತೊಂದು ಮಹಾಪ್ರಯತ್ನವನ್ನು ಮಾಡಬಹುದೆಂದೂ ಅಮೆರಿಕಾ ಯುದ್ಧಮಂತ್ರಿಗಳು ಹೇಳಿದರು.

ಆಫ್ರಿಕಾದಲ್ಲಿ ಜರ್ಮನರ ಕೊನೆಗಾಲ

ಬ್ರಿಟಿಷರ ಪ್ರಥಮ ಸೈನ್ಯವು ಟ್ಯೂನಿಸ್ ನಗರಕ್ಕೆ ಹೋಗುವ ಮುಖ್ಯ ರಸ್ತೆಯಿಂದ ೮ ಮೈಲು ದೂರದಲ್ಲಿದೆಯೆಂದೂ ವಾನ್ ಅರ್ನೀಮ್‌ರವರ ಸೇನೆಗೂ ಮತ್ತು ದಕ್ಷಿಣದಲ್ಲಿ ಬ್ರಿಟಿಷ್ ಅಷ್ಟಮ ಸೇನೆಯನ್ನು ಎದುರಿಸುತ್ತಿರುವ ಜರ್ಮನ್ ಪಡೆಗೂ ಸಂಬಂಧವು ತಪ್ಪಿಹೋಗುವ ಭೀತಿಯುಂಟಾಗಿದೆಯೆಂದೂ, ಶತ್ರುಗಳು ಭೀಕರವಾಗಿ ಫಿರಂಗಿಗಳನ್ನು ಹಾರಿಸುತ್ತಿದ್ದರೂ ಫ್ರೆಂಚ್ ಸೈನಿಕರು ವಾಂಟ್‌ಡುಫಾಸ್ ರಂಗದಲ್ಲಿ ಮುಂದೆ ನುಗ್ಗಿದರೆಂದೂ ಫ್ರೆಂಚರ ಶೌರ್ಯವನ್ನು ಕಂಡು ಶತ್ರುಗಳು ಆಶ್ಚರ್ಯಯುತರಾದರೆಂದೂ ಟ್ಯೂನಿಸ್‌ನಲ್ಲಿ ಎಲ್ಲ ಕಡೆಯೂ ಶತ್ರುವ್ಯೂಹವು ವಿಪತ್ತಿಗೆ ಗುರಿಯಾಗಿದೆಯೆಂದೂ, ಶತ್ರುಗಳ ಉಗ್ರಪ್ರತಿಭಟನೆಯಲ್ಲಿ ಲೋಪವು ಕಾಣಬರುತ್ತಿದೆಯೆಂದೂ, ಮಿಾಸಲುವಳಿ ಮತ್ತು ಸಂಗ್ರಾಮಸಲಕರಣೆಗಳ ಕೊರತೆಯೇ ಇದಕ್ಕೆ ಕಾರಣವಿರಬಹುದೆಂದೂ, ಮಿತ್ರಸೇನೆಗಳು ಟ್ಯೂನಿಸ್ ಮೈದಾನಕ್ಕೆ ನುಗ್ಗಿದವೆಂದರೆ ಆಗ ಜರ್ಮನರಿಗೆ ಅಂತ್ಯಕಾಲ ಬಂದಂತಾಗುವುದೆಂದೂ ಹೇಳಲಾಗಿದೆ.

ದುಃಖವಾರ್ತೆ

ಗುಲಬುರ್ಗಾ ಜಿ॥ ಜಹಗೀರ ಜೇವರಗಿ ಗ್ರಾಮದಲ್ಲಿರುವ ಮ॥ ರಾ॥ ಕಾಶೀನಾಥ ಮಾಸ್ತರ ಇವರ ತಂದೆಯವರಾದ ರಾಚಪ್ಪ ಪತ್ತಾರ ಅಂಜುಟಗಿಕರ್ ಇವರು ಚೈತ್ರಕೃಷ್ಣಪಕ್ಷ ದ್ವಿತೀಯಾ ಗುರುವಾರ ದಿವಸ ರಾತ್ರಿ ೧೦ ಘಂಟೆಗೆ ಶಿವೈಕ್ಯರಾದರು. ಇವರು ಸರ್ವಜನಪ್ರಿಯರಾಗಿದ್ದರು. ಬಿಚ್ಚಾಳಿ ಸಿದ್ದಪ್ಪ ಮಹಾರಾಜರ ಕಡೆಯಿಂದ ಅನುಗ್ರಹೀತರಾಗಿದ್ದರು. ಇವರಿಗೆ ಲಿಂಗಪ್ಪ, ಕಾಶೀನಾಥ, ಮೌನಪ್ಪ ಎಂಬ ಮೂವರು ಮಕ್ಕಳಿರುವರು. ಕಿರಿಯ ಮಗನಾದ ಮೌನಪ್ಪನು ಎಲ್ಲರೊಡನೆ ಕೂಡಿ "ಯಾರಿಲ್ಲ ನಮಗೆ ಆರಿಲ್ಲ ಯಾರಿಲ್ಲದವರನ್ನು ನೀ ಕಾಯೋ ಗುರುವೇ" ಎಂಬ ಪದವನ್ನು ಹಾಡುವಾಗ್ಗೆ ಎಲ್ಲರೂ ಶೋಕಿಸಹತ್ತಿದರು. ವೀರಪ್ಪ ಮಾಲೀಪಾಟೀಲ ಶಿವರಾವ ಪಾಟೀಲ ಮೊದಲಾದ ಅನೇಕ ಜನರು ಸ್ಮಶಾನಯಾತ್ರೆಗೆ ಆಗಮಿಸಿದ್ದರು. ಆ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೧ ರೂಪಾಯಿ ತೆಗೆಯಿಸಲ್ಪಟ್ಟಿತು. ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನಿತ್ತು ಬಂಧುಬಾಂಧವರಿಗೆ ದುಃಖಶಮನವನ್ನುಂಟುಮಾಡಲೆಂದು ಪ್ರಾರ್ಥಿಸುತ್ತೇವೆ.

ಓರ್ವ ದುಃಖಭಾಗಿ.

ಪ್ರಸಿದ್ಧ ಪತ್ರಿಕೆ

ಮೈಂದರಗಿ ಗ್ರಾಮದಲ್ಲಿರುವ ಶ್ರೀ॥ ಷ॥ ಬ್ರ॥ ವೀರಸಂಗಶಿವಾಚಾರ್ಯ ಪಟ್ಟಾಧ್ಯಕ್ಷರು ಹಿರೇಮಠ ಇವರ ಮಠದಲ್ಲಿ ಪ್ರತಿವರ್ಷ ಪದ್ಧತಿಯಂತೆ ಈ ವರ್ಷವೂ ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತಿಯು ಬಹು ವೈಭವದಿಂದ ನೆರವೇರುವದು. ಈ ವರ್ಷದ ಉತ್ಸವಕ್ಕೆ ವೇದತೀರ್ಥ ವಿದ್ಯಾರತ್ನ ವಿದ್ಯಾನಿಧಿ ಇತ್ಯಾದಿ ಪದವೀಧರರಾದ ವೇ॥ ಪಂ॥ ಚಿದರಿ ಮಠ ವೀರಭದ್ರಶಾಸ್ತ್ರಿಗಳು ಆಗಮಿಸುತ್ತಾರೆ. ವೈಶಾಖ ಶು॥ ೫ ಭಾನುವಾರ ಉದಯ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನ ಸಂಘದ ಪ್ರಭಾತ ಫೇರಿ, ಮತ್ತು ದಾರುಕಾಚಾರ್ಯ ಜಯಂತಿಯ ಪ್ರೀತ್ಯರ್ಥವಾಗಿ ವ್ಯಾಖ್ಯಾನಗಳು ನಡೆಯುವವು. ಶು॥ ೬ ಸೋಮವಾರ "ವೀರಶೈವಮತಸಿದ್ಧಾಂತ" ಶು॥ ೭ ಮಂಗಳವಾರ "ಆರ್ಯದ್ರಾವಿಡವಾದದ ವಿಮರ್ಶೆ" ಈ ಪ್ರಕಾರವಾಗಿ ಕಾರ್ಯಕ್ರಮವಿರುತ್ತದೆ. ಆದುದರಿಂದ ಸರ್ವ ಗುರುಭಕ್ತರೂ ಆ ಕಾಲಕ್ಕೆ ಆಗಮಿಸಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರಿಕೆ.

ಗುರುಭಕ್ತಮಂಡಳಿ, ಮೈಂದರ್ಗಿ.

ಉಜ್ಜಯಿನೀ ಸಿದ್ಧೇಶ್ವರ ರಥೋತ್ಸವದ ಕಾರ್ಯಕ್ರಮ.

ವೈಶಾಖ ಶು॥ ೧ ಬುಧವಾರ, ದೇವತಾಪ್ರಾರ್ಥನೆ, ಮೃತ್ತಿಕಾಸಂಗ್ರಹಣಪೂರ್ವಕ ಅಂಕುರಾರ್ಪಣ, ಕಂಕಣಬಂಧನ.
ಶು॥ ೨ ಗುರುವಾರ, ಧ್ವಜಾರೋಹಣ, ಭೇರೀತಾಡನ, ಮಯೂರವಾಹನೋತ್ಸವ.
ಶು॥ ೩ ಶುಕ್ರವಾರ, ಗಜವಾಹನೋತ್ಸವ.
ಶು॥ ೪ ಶನಿವಾರ, ವೃಷಭವಾಹನೋತ್ಸವ.
ಶು॥ ೫ ಭಾನುವಾರ, **ಮಹಾರಥೋತ್ಸವ.**
ಶು॥ ೬ ಸೋಮವಾರ, ದೇವಾಲಯಶಿಖರಕ್ಕೆ ತೈಲಾಭಿಷೇಕ.
ಶು॥ ೭ ಮಂಗಳವಾರ ಅಶ್ವವಾಹನೋತ್ಸವ.
ಶು॥ ೮ ಬುಧವಾರ, ಡೋಲೋತ್ಸವ.
ಶು॥ ೯ ಗುರುವಾರ, ಅವಭೃತಸ್ನಾನ, ಕಂಕಣವಿಸರ್ಜನೆ.
ಶು॥ ೧೦ ಶುಕ್ರವಾರ, ತಿರ್ಯಗಾಂದೋಲಿಕೋತ್ಸವ, ಧ್ವಜಾವರೋಹಣ.
ಶು॥ ೧೧ ಶನಿವಾರ, ಪುಷ್ಪಯಾಗಪೂರ್ವಕ ಕೈಲಾಸಾರೋಹಣ.

ಈ ರೀತಿ ಕಾರ್ಯಕ್ರಮಗಳು ನೆರವೇರುವುದರಿಂದ ಶ್ರೀ ಸ್ವಾಮಿಯ ಭಕ್ತರು ಆ ಕಾಲಕ್ಕೆ ಆಗಮಿಸಿ ಸ್ವಾಮಿಯ ಸೇವೆಯಲ್ಲಿ ಭಾಗವಹಿಸಿ ಧನ್ಯರಾಗಬೇಕೆಂದು ಕೋರಿಕೆ.

ಮಹಾಸಂಸ್ಥಾನದ ಏಜಂಟ್
ಉಜ್ಜಯಿನೀ

ಸ್ವೀಕಾರ

ಧಾರವಾಡ ಜಿ॥ ಗದಗ ನಗರದಲ್ಲಿರುವ ಮುಳಗುಂದ ಹಿರಿಯ ಮಠದ ವೇ॥ ಪುರದಯ್ಯನವರು ೧೯೩೪ನೆಯ ಇಸ್ವಿಯಲ್ಲಿ ಕಾಶೀಯಾತ್ರೆಯನ್ನು ನೆರವೇರಿಸಿ ಈ ವರ್ಷ ರಾಮೇಶ್ವರ ಯಾತ್ರೆಯನ್ನು ಪೂರೈಸಿದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಹಿಸಿರುತ್ತಾರೆ.

ಧಾರವಾಡ ಜಿ॥ ಶಿಗ್ಗಾವಿ ತಾ॥ ಹಿರೇಹರಕುಣಿ ಪಿ. ಆರ್. ಹಿರೇಮಠ ವಕೀಲರ ತಂದೆಯವರಾದ ವೇ॥ ಈಶ್ವರಯ್ಯನವರು ತಾ॥ ೨೮-೪-೧೯೪೩ ನೆಯ ಇಸ್ವಿ ದಿವಸ ಕುಂದಗೋಳ ಗ್ರಾಮದಲ್ಲಿ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 3 ರೂ. ಗಳು ಕುಂದಗೋಳ ಹಿರೇಮಠದ ಶ್ರೀ॥ ಷ॥ ಬ್ರ॥ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಗುಲಬರ್ಗಾ ಜಿ॥ ಜಹಗೀರ ಜೇವರಗಿ ಗ್ರಾಮದಲ್ಲಿರುವ ಮ॥ ರಾ॥ ಪತ್ತಾರ ರಾಚಪ್ಪನವರು ಶಿವಾಧೀನರಾದ ಸಮಯದಲ್ಲಿ ಅವರ ಪುತ್ರರಾದ ಕಾಶೀನಾಥ ಮಾಸ್ತರ ಅಂಜುಟಗೀಕರ ಇವರು ಪ್ರಭಾಪೋಷಣಕ್ಕೋಸ್ಕರ 1 ರೂ. ಯನ್ನು ತೆಗೆಯಿಸಿ ಕಳುಹಿಸಿರುತ್ತಾರೆ.

ತುಮಕೂರು ಜಿ॥ ಸೋಮೇನಹಳ್ಳಿ ಗ್ರಾಮದ ಶಿವಭಜನ ಸಂಘದವರು ಶಿವಭಜನೆಯನ್ನು ಸಮಾಪ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂ. ಯು ಮ॥ ರಾ॥ ಪಟೇಲ ಮರುಳಪ್ಪಶೆಟ್ಟರದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು]

ದೇಶದ ಪುರೋಭಿವೃದ್ಧಿ ಸಾಧನೆಗಾಗಿ ಅನೇಕ ಪ್ರೋತ್ಸಾಹಗಳು ನಡೆದುವು. ಕೆರೆಗಳನ್ನೂ ಮತ್ತು ನಾಲೆಗಳನ್ನೂ ಸರಿಪಡಿಸಿ ಉತ್ತಮಗೊಳಿಸುವ ಕಾಮಗಾರಿಗಳು ನಡೆದುವು. ಆರಂಭದ ಕೆಲವು ವರ್ಷಗಳಲ್ಲಿ ನೀರಾವರಿ ಅಭಿವೃದ್ಧಿಗಾಗಿ ಬಹಳ ಹಣ ವೆಚ್ಚವಾಯಿತು. ಆಗ್ಗೆ ನೆರವೇರಿದ ಪ್ರಯೋಜನಕರವಾದ ಮತ್ತೊಂದು ದೊಡ್ಡ ಕೆಲಸವೆಂದರೆ, ಮಾರ್ಕ್ವಿಸ್ ವೆಲ್ಲೆಸ್ಲಿಯವರ ನಾಮಾಂಕಿತದಲ್ಲಿ ಶ್ರೀರಂಗಪಟ್ಟಣದ ಬಳಿಯಲ್ಲಿ ಕಾವೇರಿ ನದಿಗೆ ಕಟ್ಟಿದ ವೆಲ್ಲೆಸ್ಲಿ ಸೇತುವೆಯ ಕೆಲಸವು ಶಿಲ್ಪಚಾತುರ್ಯಕ್ಕೆ ಪ್ರಸಿದ್ಧವಾಗಿ ಚಿರಸ್ಮರಣೀಯವಾಗಿರುತ್ತದೆ. [illegible] ೧೮೦೬ನೆಯ ಇಸವಿಯಲ್ಲಿ ಮೊಟ್ಟಮೊದಲು [illegible] ಇತರರಿಗೆ ಮೇಲುಪಂಕ್ತಿಯಾಗುವಂತೆ ರಾಣಿಯವರೇ ಮೊದಲು ದೇವಿ ಹಾಕಿಸಿಕೊಂಡರು. ಕರ್ನಲ್ ಮೆಕೆಂಜಿಯವರು ಮೈಸೂರು ಸಂಸ್ಥಾನವನ್ನು ಸರ್ವೆ ಮಾಡಿಸಿದ ನಂತರ ಸರಿಯಾದ ಅಳತೆ ಪ್ರಮಾಣದಲ್ಲಿ ಮೈಸೂರು ಭೂಪಟವು ೧೮೦೮ನೆಯ ಇಸವಿಯಲ್ಲಿ ಪ್ರಸಿದ್ಧವಾಯಿತು.

ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ೧೮೧೦ನೆಯ ಇಸವಿಯಲ್ಲಿ ೧೬ ವರ್ಷ ವಯಸ್ಸಾಗಲು, ರಾಜ್ಯದ ಆಡಳಿತ ಸೂತ್ರಗಳನ್ನು ಅವರು ವಹಿಸಿಕೊಂಡರು. ರಾಜ್ಯಭಾರವನ್ನು ವಹಿಸಿಕೊಂಡ ನಂತರ ಅವರಿಗೆ ಎರಡು ದೊಡ್ಡ ಪ್ರತಿಕೂಲಗಳೊದಗಿದುವು. ಆಗ್ಗೆ ಕೆಲವು ತಿಂಗಳುಗಳ ಹಿಂದೆಯೇ ರಾಣಿ ಲಕ್ಷ್ಮಮ್ಮಣ್ಣಿಯವರು ದಿವಂಗತರಾಗಿದ್ದ ಕಾರಣ, ತರುಣ ಮಹಾರಾಜರಿಗೆ ಅವರ ಮಾರ್ಗದರ್ಶನದ ಅವಲಂಬನವೇ ತಪ್ಪಿಹೋಯಿತು. ಇದು ಮೊದಲನೆಯ ಪ್ರತಿಕೂಲ. ದಿವಾನ್ ಪೂರ್ಣಯ್ಯನವರು ಕೆಲಸದಿಂದ ವಿಶ್ರಾಂತರಾಗಿ ಅನಂತರ ೧೮೧೨ನೆಯ ಇಸವಿಯಲ್ಲಿ ದಿವಂಗತರಾದ ಕಾರಣ, ವೃದ್ಧರಾಗಿದ್ದ ದಿವಾನ್ ಪೂರ್ಣಯ್ಯನವರ ವಿವೇಕಯುತವಾದ ಮಂತ್ರಾಲೋಚನೆಯ ಸಹಾಯವು ತಪ್ಪಿಹೋದುದು ಎರಡನೆಯ ಪ್ರತಿಕೂಲ. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ರಾಜ್ಯಸೂತ್ರಗಳನ್ನು ಸ್ವೀಕರಿಸಿದ ತರುವಾಯ ಸಂಸ್ಥಾನದ ಸ್ಥಿತಿಗತಿಗಳನ್ನು ಪರಿಶೀಲಿಸಿ ಮನದಟ್ಟು ಮಾಡಿಕೊಳ್ಳುವುದಕ್ಕಾಗಿ ವಿಶೇಷವಾಗಿ ಶ್ರಮಿಸಿದರು. ಪ್ರಜೆಗಳ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಪರಾಮರ್ಶಿಸುವುದಕ್ಕಾಗಿ ಅವರು ಸಂಸ್ಥಾನದಲ್ಲೆಲ್ಲ ಸಂಚಾರ ಮಾಡಿದರು. ೧೮೧೨ನೆಯ ಇಸವಿಯಲ್ಲಿ ಅವರ ಸವಾರಿ ಬೆಂಗಳೂರಿಗೆ ಚಿತ್ತೈಸಿತು. ಅನಂತರ ಅವರು ಹಲವು ತಿಂಗಳುಗಳ ಕಾಲ [illegible] ಕಡೂರು ಡಿಸ್ಟ್ರಿಕ್ಟ್‌ಗಳಲ್ಲಿ ಸಂಚಾರ ಮಾಡಿದರು. ಅನೇಕ ಧಾರ್ಮಿಕ ಸಂಸ್ಥೆಗಳಿಗೆ ಅವರು ಧನಸಹಾಯ ಮಾಡಿ ಪ್ರೋತ್ಸಾಹಿಸಿದರು. ಅವರ ತಂದೆಯವರ ನಾಮಾಂಕಿತದಲ್ಲಿ ಚಾಮರಾಜನಗರವೆಂಬ ಹೆಸರು ಆ ಊರಿಗೆ ಬಂದುದೂ ಆ ಸಮಯದಲ್ಲೇ!

ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಸ್ವಂತ ರಾಜ್ಯಭಾರದ ಇಪ್ಪತ್ತೊಂದು ವರ್ಷಗಳ ಅವಧಿಯಲ್ಲಿ, ಅನೇಕರು ದಿವಾನ್ ಗಿರಿಯನ್ನು ವಹಿಸಿದ್ದರು, ಅನೇಕಮಂದಿ ಸಲಹೆಗಾರರಿದ್ದರು. ಅನೇಕವೇಳೆ ಅವರವರಲ್ಲೇ ಅಸಮಾಧಾನವುಂಟಾಗಿ ಪಿತೂರಿಗಳು ನಡೆಯುತ್ತಿದ್ದುವು, ಅವರಲ್ಲಿ ಯಾರೂ ಆಡಳಿತವನ್ನು ನಿರ್ವಹಿಸುವುದರಲ್ಲಿ ದಕ್ಷರಾಗಿರಲಿಲ್ಲ. ಅವರಲ್ಲಿ ಕೆಲವರಂತೂ, ಸ್ವಹಿತಸಾಧನೆಗಾಗಿ [illegible] ಚಾಡಿ ಹೇಳಲುದ್ಯುಕ್ತರಾದರು. ಆಗಿನ ಕಾಲದಲ್ಲಿ ಜಾರಿಯಲ್ಲಿದ್ದ ಷರತ್ತು ಶಿಸ್ತೆಂಬ ಜಮಾವು ಕಂದಾಯದ ಶಿಸ್ತನ್ನು ಅಮಲ್ದಾರರು ಮತ್ತು ಫೌಜುದಾರರುಗಳೂ ದುರುಪಯೋಗಗೊಳಿಸಿದ ಕಾರಣದಿಂದ, ವ್ಯವಸಾಯಗಾರರಲ್ಲಿ ಅಸಮಾಧಾನವುಂಟಾಯಿತು. ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿ, ಪ್ರಜೆಗಳಿಂದ ಲಂಚ ರುಸುವತ್ತುಗಳ ಸುಲಿಗೆಮಾಡಿ ತಮ್ಮ ಬಂಧುಮಿತ್ರರುಗಳಿಗೇ ಅನುಕೂಲಮಾಡಿ ಕೊಡಲು ಪ್ರಾರಂಭಿಸಿದರು. ಸರ್ಕಾರಕ್ಕೆ ಬರಬೇಕಾದ ಹುಟ್ಟುವಳಿಯಲ್ಲಿ ಹೆಚ್ಚಿನ ಭಾಗವು ಅವರುಗಳಿಗೇ ಸೇರುವುದಕ್ಕೆ ಮೊದಲಾಯಿತು. ಹೀಗೆ ಅನ್ಯಾಯವಾದ ಸುಲಿಗೆಗೊಳಗಾದ ವ್ಯವಸಾಯಗಾರರ ಅಸಮಾಧಾನದ ಪರಿಣಾಮವಾಗಿ ಶಿವಮೊಗ್ಗ ಡಿಸ್ಟ್ರಿಕ್ಟು ಮುಂತಾದ ಪ್ರದೇಶಗಳಲ್ಲಿ ಅಲ್ಲಲ್ಲಿ ದಂಗೆಗಳಾದುವು. ಅಮಲ್ದಾರರುಗಳೇ ದರೋಡೆಗಳನ್ನು ಏರ್ಪಡಿಸುತ್ತಿದ್ದುದಾಗಿ ಸಂಶಯ ಉಂಟಾಯಿತು.

ಆಗ್ಗೆ ಅಲ್ಲಿನ ವ್ಯವಸಾಯಗಾರರಿಗೆ ಉಂಟಾಗಿದ್ದ ಅಸಮಾಧಾನದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಹೈಗನಮಲ್ಲ ಅಥವಾ ಬೂದಿಬಸಪ್ಪನೆಂಬುವನೊಬ್ಬನು ಮತ್ತು [illegible] ಪಾಳೆಯಗಾರನೆನಿಸಿದ [illegible] ರಾಜವಂಶದವನೆಂಬುವನೊಬ್ಬನೂ ತುಂಟರನ್ನು ಸೇರಿಸಿ, [illegible], [illegible] ಕೊಡಲಾರಂಭಿಸಿದರು. ಹೈಗನಮಲ್ಲನು ನಗರದ ಪ್ರಭುವಿನ ದತ್ತು ಮಗನೆಂದೂ, ಆ ಕಾರಣದಿಂದ ನಗರದ ಗಾದಿಗೆ ತಾನು ಹಕ್ಕುದಾರನೆಂದೂ ಹೇಳಿಕೊಂಡು ಜನರನ್ನು [illegible]. ಬಲಿಷ್ಠರಾದ ಸಂಚುಗಾರರು ಅವನ ಕಡೆ ಸೇರಿಕೊಂಡು ದಂಗೆಯೇಳುವಂತೆ ಜನರಿಗೆ ಬೋಧಿಸಲಾರಂಭಿಸಿದರು. ಅಕ್ರಮಗಳೂ, ದಂಗೆಗಳೂ ನಡೆಯುತ್ತಿರುವುದನ್ನು ಕೇಳಿ, ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಬಲಪ್ರಯೋಗವಿಲ್ಲದೆ ಜನರಲ್ಲಿ ಅನುನಯತೋರುವ ತಮ್ಮ ವೈಯಕ್ತಿಕ ಪ್ರಭಾವದಿಂದಲೇ ದಂಗೆಗಳು ನಿಂತುಹೋಗಿ ಶಾಂತಿಸ್ಥಾಪನೆಯಾಗುವಂತೆ ಮಾಡುವುದೇ ವಿವೇಕವೆಂದೆಣಿಸಿ ಸಂಚಾರಾರ್ಥವಾಗಿ ಚಿತ್ತೈಸಿದರು. ದಂಗೆಯ ಮುಖಂಡರಲ್ಲಿ ಅನೇಕರನ್ನು ತಮ್ಮ ಸಮ್ಮುಖಕ್ಕೆ ಕರೆಯಿಸಿ ಅವರ ಕುಂದುಕೊರತೆಗಳನ್ನು ಲಾಲಿಸಿ ಅವುಗಳನ್ನು ಪರಿಹರಿಸಲಾರಂಭಿಸಿದರು. ಲಂಚಕೋರರಾದ ಅಧಿಕಾರಿಗಳನ್ನು ಕೆಲಸದಿಂದ ತೆಗೆದುಹಾಕಿ, ತೀರ ಅವಶ್ಯವಾದ ಸಂದರ್ಭಗಳಲ್ಲಿ ಬಲಪ್ರಯೋಗದಿಂದಲೂ ದಂಗೆಯನ್ನು ಅಡಗಿಸುವ ಕೆಲಸದಲ್ಲಿ ಅವರು ನಿರತರಾಗಿರುವಷ್ಟರಲ್ಲಿ, ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ವಿರೋಧ ಪಕ್ಷದವರ ಮಾತುಗಳೇ ನಿಜವೆಂದು ನಂಬಿ, ತಾವು ನೇಮಕ ಮಾಡಲ್ಪಟ್ಟ ಕಮಿಷನರರಿಗೆ ಹತ್ತು ದಿವಸಗಳೊಳಗಾಗಿ ಆಡಳಿತವನ್ನೊಪ್ಪಿಸಬೇಕೆಂದು 1831 ನೆಯ ಇಸವಿ ಸೆಪ್ಟೆಂಬರು 7ನೆಯ ತಾರೀಖಿನ ದಿನ ಪ್ರಭುಗಳಿಗೆ ಕಳುಹಿಸಿದ್ದ ಪತ್ರವನ್ನು ಓದಿದರು. ಆ ಪತ್ರವು ನವರಾತ್ರಿಯ ದರ್ಬಾರುಗಳ ಮಧ್ಯದಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಕೈಸೇರಿತು. ಅವರು ಸ್ವಲ್ಪವೂ ಉದ್ವೇಗ ಹೊಂದದೆ ಶಾಂತಚಿತ್ತರಾಗಿಯೇ ಇದ್ದು ಆಡಳಿತವನ್ನು ಒಪ್ಪಿಸಿಕೊಟ್ಟರು.

ಆ ರೀತಿ ರಾಜ್ಯಾಡಳಿತವು ತಪ್ಪಿಹೋದುದರಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ನಡೆದಷ್ಟು ಅನ್ಯಾಯವು ಮತ್ತಾವ ಸಂಸ್ಥಾನಾಧೀಶರಿಗೂ ಎಂದೂ ನಡೆದಿರಲಿಲ್ಲ. ತಮಗಾದ ಅನ್ಯಾಯಕ್ಕೆ ವಿರೋಧವಾಗಿ ಹೋರಾಡಿ ನ್ಯಾಯವನ್ನು ದೊರಯಿಸಿಕೊಳ್ಳಲು ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಹೋರಾಡಿದಷ್ಟು ಧೈರ್ಯಸ್ಥೈರ್ಯಗಳಿಂದ ಮತ್ತಾರೂ ಹೋರಾಡಿದುದೂ ಇಲ್ಲ. ಅವರು ೧೮೧೦ ನೆಯ ಇಸವಿಯಲ್ಲಿ ರಾಜ್ಯಸೂತ್ರಗಳನ್ನು ವಹಿಸಿದಾಗ ಸನ್ನಿವೇಶಗಳು ಅವರಿಗೆ ಅನುಕೂಲವಾಗಿರಲಿಲ್ಲ. ಮೊದಲನೆಯದಾಗಿ, ಆಗಿನ ಕಾಲದಲ್ಲಿ ರಾಜಕುಮಾರರುಗಳಿಗೆ ದೊರೆಯುವಂಥ ಆಡಳಿತ ಶಿಕ್ಷಣವು ಅವರಿಗೆ ದೊರೆತಿರಲಿಲ್ಲ. ಪೂರ್ಣಯ್ಯನವರ ಕಾಲಾಂತರದ ಬಳಿಕ [illegible] ಹಿತವಾದ ಮಂತ್ರಾಲೋಚನೆ ಹೇಳಬಲ್ಲವರಾರೂ ದೊರೆಯಲಿಲ್ಲ. ಅದೇ ಸಮಯಕ್ಕೆ ದುರ್ದೈವ ವಶದಿಂದ ಅವರ ಅಜ್ಜಿಯವರಾದ ರಾಣಿ ಲಕ್ಷ್ಮಮ್ಮಣ್ಣಿಯವರೂ ಕಣ್ಮರೆಯಾದರು. ಹೀಗೆ ಆಗಲು, ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಆತುರಪಟ್ಟು ದುಡುಕಿದರು, ಅದಕ್ಕಾಗಿ ಕಾರ್ಯವು ಕೈಮೀರಿಹೋದಮೇಲೆ ಪಶ್ಚಾತ್ತಾಪಪಟ್ಟರು.

ರಾಜ್ಯಾಡಳಿತ ಸೂತ್ರಗಳು ಕೈಬಿಟ್ಟ ಬಳಿಕ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಅವಲಂಬಿಸಿದ ವರ್ತನೆಯು, ಅವರ ದೊಡ್ಡತನವನ್ನೂ, ಘನತೆಯನ್ನೂ, ದೃಢಪ್ರಯತ್ನವನ್ನೂ ಮತ್ತು ಅಸೀಮ ಧೈರ್ಯವನ್ನೂ ಪ್ರಕಾಶಗೊಳಿಸಿತು. ಅವರು ಆಡಳಿತವನ್ನು ಒಪ್ಪಿಸಿಕೊಟ್ಟ ಮೇಲೆ ಕೂಡ, ಕೋಪತಾಪಗಳನ್ನು ಎಂದೂ ತೋರಿಸಿದವರಲ್ಲ. ಅವರು ಎಂದಿನಂತೆಯೇ ಬ್ರಿಟಿಷರಲ್ಲಿ ಮೈತ್ರಿಯುಕ್ತರಾಗಿ, ಬ್ರಿಟಿಷರ ನಂಬಿಕೆಗೆ ಪಾತ್ರರಾದ ಸ್ನೇಹಿತರಾಗಿಯೇ ಇದ್ದರು. ಸಂಸ್ಥಾನವನ್ನು ಮತ್ತೆ ಹಿಂದಕ್ಕೆ ಪಡೆಯಲು ಅವರು ಮೇಲಾಗಿ ಉದ್ದಾಮ ಪ್ರಯತ್ನಗಳನ್ನು ಮಾಡತೊಡಗಿದರು. ಹಾಗೆ ಹೋರಾಡುವುದರಲ್ಲಿ ಕೂಡ ಕ್ರೋಧದ ಒಸಲೇ ಇಲ್ಲದೆ ತಮ್ಮ ಕಡೆಗೆ ನ್ಯಾಯವಿದ್ದುದರಿಂದ ತಮಗೆ ಜಯಲಾಭವಾಗಿಯೇ ತೀರಬೇಕೆಂಬ ದೃಢನಿಶ್ಚಯದಿಂದ ಮಾತ್ರವೇ ಹೋರಾಡಿದರು. ಆಗಿನವರು ಅತಿಶಯೋಕ್ತಿಗಳಿಂದ ತಮಗೆ ವಿರೋಧವಾಗಿ ವಾದಿಸುತ್ತಿದ್ದುದನ್ನೂ ಅವರು ಬಲ್ಲವರಾಗಿದ್ದರು. ಬ್ರಿಟಿಷರೊಡನೆ ನಡೆದಿದ್ದ ಒಪ್ಪಂದದ ಷರತ್ತುಗಳಿಗೆ ತಾವು ತಪ್ಪು ನಡೆದಿರಲಿಲ್ಲವೆಂಬುದನ್ನೂ ಅವರು ಅರಿತಿದ್ದರು. ಆದರೆ, ಲಾರ್ಡ್ ಡಾಲ್‌ಹೌಸಿಯವರ ಆಗಮನದ ಆಶಯವೂ, ಔರಸ ಸಂತಾನವಿಲ್ಲದ ರಾಜರುಗಳ ರಾಜ್ಯಗಳನ್ನೆಲ್ಲಾ ಈಸ್ಟ್ ಇಂಡಿಯಾ ಕಂಪೆನಿ ಸೇರಿಸಿಕೊಳ್ಳಬೇಕೆಂಬ ಕಾರ್ಯನೀತಿಯೂ, ಅವರ ಮನೋರಥವು ಈಡೇರಲು ಅಡ್ಡಿಯಾದುವು. ಅವರು ಹೋರಾಡಿದುದು ತಮಗೋಸ್ಕರವಲ್ಲ, ಕರ್ನಾಟಕ ರತ್ನಸಿಂಹಾಸನವು ಅಚ್ಛಿನ್ನವಾಗಿ ನಡೆದು ಬರುವಂತೆ ಮಾಡುವುದಕ್ಕಾಗಿ ಮಾತ್ರ. ವಿಕ್ರಮಾದಿತ್ಯನ ಸಿಂಹಾಸನದ ಮೇಲೆ ಮಂಡಿಸಿ ಯದುವಂಶದ ಪ್ರಭುಗಳು ಕುಲಕ್ರಮಾಗತವಾಗಿ ಪರಿಪಾಲಿಸಿಕೊಂಡು ಬಂದಿದ್ದ ಮೈಸೂರು ಸಂಸ್ಥಾನವು ಪ್ರತ್ಯೇಕವಾಗಿ ಉಳಿದಿದ್ದು, ಮುಂದೆ ಸಹ ತಮ್ಮ ವಂಶೀಯರಿಂದಲೇ ಅವಿಚ್ಛಿನ್ನವಾಗಿ ಪರಿಪಾಲಿತವಾಗಬೇಕೆಂಬುದು ಅವರ ಅಭಿಲಾಷೆ. ಅದಕ್ಕಾಗಿ ಅವರು ದತ್ತುಸ್ವೀಕಾರ ಮಾಡಬೇಕೆಂದು ಬಯಸಿದರು. ಆದರೆ, ಅವರ ಸ್ವೀಕೃತ ಪುತ್ರರನ್ನು ರಾಜ್ಯಕ್ಕೆ ಉತ್ತರಾಧಿಕಾರಿಗಳೆಂದು ಅಂಗೀಕರಿಸಲಾಗುವುದಿಲ್ಲವೆಂದು ಈಸ್ಟ್ ಇಂಡಿಯಾ ಕಂಪೆನಿಯವರು ನಿರಾಕರಿಸಿದರು. ಮೈಸೂರು ಸಂಸ್ಥಾನದ ಪ್ರಜೆಗಳು ಅದರಿಂದ ಉಂಟಾದ ನಿರಾಶೆಯಿಂದ ಕಳವಳಗೊಂಡು, ಆ ಅವಮಾನವನ್ನು ಸಹಿಸಲಾರದೆ ಉದ್ರೇಕಗೊಂಡಿದ್ದರು. ಅವರುಗಳು ಭಾರಿ ಭಾರಿ ಸಂಖ್ಯೆಗಳಲ್ಲಿ ಸಭೆ ಸೇರಿ, ತಮ್ಮ ಪ್ರಭುಗಳಿಗೆ ರಾಜ್ಯವನ್ನು ಹಿಂದಕ್ಕೊಪ್ಪಿಸಬೇಕೆಂದು ಬ್ರಿಟಿಷ್ ಸರ್ಕಾರದವರಿಗೆ ಅರ್ಜಿಗಳನ್ನು ಕಳುಹಿಸಲಾರಂಭಿಸಿದರು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಮಿತ್ರವರ್ಗಕ್ಕೆ ಸೇರಿದ ಮಹಾಶಯರುಗಳನೇಕರು ಅವರ ಕಡೆಗೇ ನ್ಯಾಯವಿದ್ದುದನ್ನು ಮನಗಂಡು, ಅವರ ಪಕ್ಷವನ್ನು ವಹಿಸಿ ಇಂಗ್ಲೆಂಡಿನಲ್ಲಿಯೂ ಮತ್ತು ಭರತಖಂಡದಲ್ಲಿಯೂ ಹೋರಾಡಲುಪಕ್ರಮಿಸಿದರು. ಅನೇಕ ಮಂದಿ ಇಂಗ್ಲೀಷರು ಕೂಡ ಅವರ ಪಕ್ಷವನ್ನು ವಹಿಸಿ ವಾದಿಸ ತೊಡಗಿದರು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ಎಪ್ಪತ್ತೊಂದು ವರ್ಷ ವಯಸ್ಸಾಯಿತು. ಸಂತತವಾಗಿ ಶ್ರಮಿಸಿದ ಚಿಂತಾಕ್ಲೇಶದ ದೆಸೆಯಿಂದ ಅವರ ದೇಹವು ದುರ್ಬಲವಾಯಿತು. ಅವರ ಕಾಲಾನಂತರ ಮೈಸೂರು ಸಂಸ್ಥಾನವು ಬ್ರಿಟಿಷ್ ಸರ್ಕಾರಕ್ಕೆ ಸೇರಿ ಹೋಗದೆ ಪ್ರತ್ಯೇಕವಾಗಿ ಉಳಿದಿದ್ದು ವಿರಾಜಿಸಬೇಕೆಂದು ಪ್ರಜೆಗಳಲ್ಲಿ ಬಹುಮಂದಿಗೆ ತೀವ್ರಾಭಿಲಾಷೆಯುಂಟಾಯಿತು. ಪ್ರಭುಗಳು ಪುತ್ರಸ್ವೀಕಾರ ಮಾಡಿಕೊಳ್ಳಬೇಕೆಂದು ಸಲಹೆಯಾದ ಕಾರಣ, ೧೮೬೫ನೆಯ ಇಸವಿ ಜೂನ್ ೧೮ನೆಯ ತಾರೀಖಿನ ದಿನ ಅವರು ನಮ್ಮ ಈಗಿನ ಪ್ರಭುಗಳವರ ತಾತಂದಿರಾದ ಶ್ರೀಮನ್ಮಹಾರಾಜ ಶ್ರೀ ಚಾಮರಾಜೇಂದ್ರ ಒಡೆಯರವರನ್ನು ತಮ್ಮ ಬಂಧುಗಳ ಮತ್ತು ಇತರರೆಲ್ಲರ ಒಪ್ಪಿಗೆಯೊಡನೆ ದತ್ತು ಮಾಡಿಕೊಂಡರು. ಅವರ ಸ್ವೀಕೃತಪುತ್ರರಿಗೆ ಆಗ್ಗೆ ಎರಡೂವರೆ ವರ್ಷ ವಯಸ್ಸು. ರಾಜ್ಯವನ್ನು ನ್ಯಾಯವಾದ ಹಕ್ಕುದಾರರಿಗೆ ಹಿಂದಕ್ಕೆ ಕೊಡಲು ಬ್ರಿಟಿಷ್ ಸರ್ಕಾರದವರಿಗೂ ಮತ್ತು ವೈಸ್ರಾಯಿಯವರಿಗೂ ಸಹ ಇಷ್ಟವಿರಲಿಲ್ಲ; ಆದಕಾರಣ, ಸ್ವೀಕೃತಪುತ್ರರು ಸಿಂಹಾಸನಾಧಿಕಾರಿಗಳೆಂದು ಅಂಗೀಕರಿಸುವುದಿಲ್ಲವೆಂದು ಅವರು ತಿಳಿಸಿದರು. ಆಳಿದ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು, ತಮಗೆ ನ್ಯಾಯದೊರೆಯಬೇಕೆಂದು ಇಂಗ್ಲೆಂಡಿನಲ್ಲಿದ್ದ ತಮ್ಮ ಹಲವು ಮಿತ್ರರ ಮೂಲಕ ಅಲ್ಲಿ ಹೋರಾಟ ನಡೆಯಿಸಲು ಪ್ರಾರಂಭಿಸಿದರು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ಆಗಿದ್ದ ಅನ್ಯಾಯವನ್ನು ತೋರಿಸಿ ಮೇಜರ್ ಇವಾನ್ಸ್ ಬೆಲ್‌ರವರು ಒಂದು ಪುಸ್ತಕವನ್ನು ಬರೆದರು. ಭಾರತೀಯ ಸಂಸ್ಥಾನಗಳನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಕೊಳ್ಳುತ್ತಿದ್ದ ಕಾರ್ಯನೀತಿಯನ್ನು ಇಂಗ್ಲೆಂಡಿನ ವೃತ್ತಪತ್ರಿಕೆಗಳೆಲ್ಲವೂ ಖಂಡಿಸಿದುವು. "ಪಾರ್ಲಿಮೆಂಟ್" ಸಭೆಯ ಸದಸ್ಯರುಗಳೂ ಮತ್ತು ಇತರ ಕೆಲವು ಮಂದಿ ದೊಡ್ಡ ಮನುಷ್ಯರೂ ಸರ್ ಹೆನ್ರಿ ರಾಲಿನ್ಸನ್ನರವರ ನೇತೃತ್ವದಲ್ಲಿ ಲಾರ್ಡ್ ಕ್ರ್ಯಾನ್‌ಬೋರ್ನ್‌ರವರಲ್ಲಿಗೆ ಹೋಗಿ, ಶ್ರೀಮನ್ಮಹಾರಾಜರವರಿಗೆ ಅನ್ಯಾಯವಾಗಿದ್ದುದನ್ನು ಕುರಿತು ವಾದಿಸಿದರು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ಆಗಿದ್ದ ಅನ್ಯಾಯವನ್ನು ಕುರಿತು ಜಾನ್ ಸ್ಟ್ಯೂಯರ್ಟ್ ಮಿಲ್‌ರವರು "ಹೌಸ್ ಆಫ್ ಕಾಮನ್ಸ್" ಸಭೆಗೆ ಒಂದು ಅರ್ಜಿಯನ್ನೂ ಕೊಟ್ಟರು. ಮೈಸೂರು ಸಂಸ್ಥಾನವನ್ನು ಬ್ರಿಟಿಷ್ ಇಂಡಿಯಾಕ್ಕೆ ಸೇರಿಸಿಕೊಳ್ಳುವುದು ಸಾಮ್ರಾಜ್ಯ ಸರ್ಕಾರದವರ ಉದ್ದೇಶವಲ್ಲವೆಂದೂ, ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಸ್ವೀಕೃತ ಪುತ್ರರು ಪ್ರಾಪ್ತವಯಸ್ಕರಾದ ಕೂಡಲೇ ಅವರಿಗೆ ಸಂಸ್ಥಾನವನ್ನು ಒಪ್ಪಿಸಲಾಗುವುದೆಂದೂ ಸಾಮ್ರಾಜ್ಯ ಸರ್ಕಾರದವರು ಕೊನೆಗೆ ಸೂಚಿಸಿದರು. ಆಳಿದ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಸಾಹಸದಿಂದ ಸಂತತವಾಗಿ ಹೋರಾಡಿ, ತಮಗೆ ಆಗಿದ್ದ ಅನ್ಯಾಯವನ್ನು ಹೋಗಲಾಡಿಸಿಕೊಂಡರು. ಮೈಸೂರು ಸಂಸ್ಥಾನಕ್ಕೆ ಇತಿಹಾಸ ಪ್ರಸಿದ್ಧವಾದ ಮತ್ತು ಚಿರಸ್ಮರಣೀಯವಾದ ದೊಡ್ಡ ಉಪಕಾರವನ್ನು ಮಾಡಿ, ಅವರು ೧೮೬೮ನೆಯ ಇಸವಿ ಮಾರ್ಚಿ ೨೭ನೆಯ ತಾರೀಖಿನ ದಿನ ಸ್ವರ್ಗಸ್ಥರಾದರು. ಅವರು ದಿವಂಗತರಾದ ಬಳಿಕ ಅವರ ಸ್ವೀಕೃತಪುತ್ರರಾದ ಶ್ರೀಚಾಮರಾಜೇಂದ್ರ ಒಡೆಯರವರು ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರೆಂದು ಉದ್ಘೋಷಿಸಿ ಇಂಡಿಯಾ ಸರ್ಕಾರದವರು ಪ್ರಸಿದ್ಧಪತ್ರಿಕೆಯನ್ನು ಹೊರಡಿಸಿದರು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ಅರ್ಧಶತಮಾನ ಕಾಲ ಮಾಡಿದ ಪ್ರಯತ್ನಗಳು ಸಾರ್ಥಕವಾದುವು.

ಆಳಿದ ಮಹಾಸ್ವಾಮಿಯವರಾದ ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರು ದಿವಂಗತರಾದಾಗ್ಗೆ, ಅವರಿಗೆ ೭೪ ವರ್ಷ ವಯಸ್ಸು. ಅವರು ವಿದ್ವಾಂಸರಿಗೆ ವಿಶೇಷ ಪ್ರೋತ್ಸಾಹವನ್ನಿತ್ತರು. ಅಸಂಖ್ಯಾತ ಧರ್ಮಕಾರ್ಯಗಳನ್ನು ನೆರವೇರಿಸಿದರು. ಸಮಸ್ತ ಜಾತಿಜನಾಂಗಗಳವರಿಗೂ ಸಹಾಯಮಾಡಿ ಕೃಪೆತೋರಿಸಿದರು. ಉನ್ನತಿ ಕಾಲದಲ್ಲಿಯೂ ಮತ್ತು ಅವನತಿ ಕಾಲಗಳಲ್ಲಿಯೂ ಅವರು ಒಂದೇ ಸಮನಾಗಿ ಬ್ರಿಟಿಷರೊಡನೆ ನಿಷ್ಕಲ್ಮಷವಾದ ಮೈತ್ರಿಯಿಂದಿದ್ದುದು ಅತ್ಯಂತ ಗಮನಾರ್ಹವಾದ ಅವರ ಸದ್ವರ್ತನೆ. ರಾಜ್ಯಭಾರವನ್ನು ಅವರ ಕೈತಪ್ಪಿಸಿದುದು ತೀರ ಅನ್ಯಾಯವಾಗಿದ್ದರೂ ಸಹ, ಅವರು ಬ್ರಿಟಿಷರಲ್ಲಿ ಎಂದಿನಂತೆಯೇ ಸೌಹಾರ್ದವನ್ನು ತೋರಿಸುತ್ತ ವಿಶ್ವಾಸದಿಂದಿದ್ದರು; ಅವರು ಕ್ರೋಧವನ್ನಾಗಲಿ ಅಥವಾ ದ್ವೇಷವನ್ನಾಗಲಿ ಎಂದೂ ತೋರಿಸಲಿಲ್ಲ. ಮೈಸೂರು ಸಂಸ್ಥಾನವು ಮೈಸೂರು ರಾಜ ಮನೆತನಕ್ಕೆ ಮತ್ತೆ ದೊರೆತುದಕ್ಕೆ, ಅವರು ಬ್ರಿಟಿಷರಲ್ಲಿ ತೋರಿಸಿದ ತ್ರಿಕರಣಶುದ್ಧವಾದ ಮೈತ್ರಿಯೇ ಕಾರಣ. ಅವರು ಆ ರೀತಿ ಮಾಡಿದುದರ ಪರಿಣಾಮವಾಗಿ ಸಂಸ್ಥಾನಕ್ಕೆ ಸತ್ಪ್ರಭುಗಳು ಲಭಿಸಿ ಸಂಸ್ಥಾನದ ಪುರೋಭಿವೃದ್ಧಿ ಸಾಧನೆಮಾಡಿ ಪ್ರಜೆಗಳಿಗೆ ತೃಪ್ತಿಯನ್ನುಂಟುಮಾಡಲು ಕಾರಣವಾಯಿತು. ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರಿಗೆ ನ್ಯಾಯವು ದೊರೆಯದೆ ಹೋಗಿದ್ದರೆ ಇಷ್ಟು ಮಟ್ಟಿನ ಪುರೋಭಿವೃದ್ಧಿ ಸಾಧನೆಯಾಗಲಿ ಅಥವಾ ತೃಪ್ತಿಯಾಗಲಿ ಕಂಡುಬರುತ್ತಿರಲಿಲ್ಲ. ಪ್ರಜಾವರ್ಗವು ಅದನ್ನರಿತೇ, ಜನಜನಿತವಾಗಿ "ಶ್ರೀ ಕೃಷ್ಣ ಭೂಪ ಮನೆಯಲ್ಲಾ ದೀಪ" ಎಂದು ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರವರ ಗುಣಗಾನ ಮಾಡಿದುದು. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರವರ ಪ್ರಪೌತ್ರರೂ ನಮ್ಮನ್ನಾಳುವ ಮಹಾಸ್ವಾಮಿಯವರೂ ಆದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರರವರು ಸಂಸ್ಥಾನದ ಪ್ರಗತಿ ಸಾಧನೆಮಾಡಿ ಪ್ರಜೆಗಳ ಪುರೋಭಿವೃದ್ಧಿಯನ್ನೂ ಸುಖ ಸಂತೋಷಗಳನ್ನೂ ಹೆಚ್ಚಿಸುವ ಪ್ರಯತ್ನದಲ್ಲಿ ವಂಶಾನುಗತವಾಗಿ ನಡೆದು ಬಂದಿರುವ ತಮ್ಮ ಮನೆತನದ ಸತ್ಸಂಪ್ರದಾಯವನ್ನೇ ಅನುಸರಿಸುತ್ತ, ರಾಜ್ಯಭಾರ ಮಾಡುತ್ತಿದ್ದಾರೆ. ಮೈಸೂರು ಸಂಸ್ಥಾನವು ಶಾಶ್ವತವಾಗಿ ಮೆರೆಯಲಿ! ಯದುವಂಶವು ಶಾಶ್ವತವಾಗಿ ವರ್ಧಿಸಲಿ: ಆಳುವ ಮಹಾಸ್ವಾಮಿಯವರಾದ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರವರು ದೀರ್ಘಾಯುರಾರೋಗ್ಯಗಳಿಂದ ಕೂಡಿರುವಂತೆ ಭಗವಂತನು ಅನುಗ್ರಹಿಸಲಿ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ [illegible] ಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

17

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ. ೧೨ ಆಣೆ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೦ನೇ ಮೇ ೧೯೪೩. [ಸಂಚಿಕೆ ೧

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀಜಗದ್ಗುರು ರೇಣುಕಾಚಾರ್ಯರ ಜಯಂತೀ ಕಾರ್ಯಕ್ರಮ ಸಮಾಪ್ತಿ ಮಂಗಳ ಮಹೋತ್ಸವ,

ಬೆಂಗಳೂರು ಸಿಟಿ

ಜಗತ್ತಿನಲ್ಲಿ ವರ್ಣಾಶ್ರಮಧರ್ಮಗಳನ್ನಾಚರಿಸುತ್ತ ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳನ್ನು ಸಂಪಾದಿಸುವದೇ ವೈದಿಕಮತೀಯರ ಮುಖ್ಯ ಕರ್ತವ್ಯವಾಗಿರುವದು. ಚತುರ್ವಿಧಪುರುಷಾರ್ಥಗಳಲ್ಲಿ ಮೋಕ್ಷರೂಪ ಪುರುಷಾರ್ಥವೇ ಪರಮಶ್ರೇಷ್ಠವಾಗಿರುವದು. ಈ ಮೋಕ್ಷರೂಪಪುರುಷಾರ್ಥವನ್ನು ಹೊಂದಬೇಕಾದರೆ ಶ್ರೀಗುರುಕೃಪೆಯು ಅತ್ಯಾವಶ್ಯಕವಾಗಿರುವದು. ಆದಕಾರಣ ವೈದಿಕಮತೀಯರು ತಮ್ಮ ಮತಾಚಾರ್ಯರ ಜಯಂತೀಮಹೋತ್ಸವಗಳನ್ನೂ, ಆ ಮಹಾತ್ಮರ ಮೂರ್ತಿಪ್ರತಿಷ್ಠೆಗಳನ್ನೂ, ಗುರುಗಳ ಆರಾಧನೆಯನ್ನೂ, ಆಚಾರ್ಯರ ಸಪ್ತಾಹಗಳನ್ನೂ ಆಚರಿಸುತ್ತಿರುವದು ಜಗತ್ಪ್ರಸಿದ್ಧವಾಗಿರುವದು. ಅದರಂತೆಯೇ ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯ ಜಗದ್ಗುರು ರೇಣುಕಭಗವತ್ಪಾದಾಚಾರ್ಯರ ಜಯಂತೀಮಹೋತ್ಸವದ ಕಾರ್ಯಕ್ರಮವು ವಾರ್ಷಿಕ ಪದ್ಧತಿಯಂತೆ ಚಿತ್ರಭಾನು ಸಂ|| ಫಾಲ್ಗುಣ ಶು|| ೧೩ ತಾ|| ೧೯-೩-೧೯೪೩ ನೇ ಶುಕ್ರವಾರದಿಂದ ಪ್ರಾರಂಭವಾಗಿ ಸ್ವಭಾನು ಸಂ|| ಚೈತ್ರ ಬ|| ೬ ತಾ|| ೨೬-೪-೪೩ ಸೋಮವಾರದವರೆಗೂ ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಶ್ರೀಮಹಾಂತಿನ ಮಠದಲ್ಲಿ ಬೆಂಗಳೂರು ವೀರಶೈವರ ಸೇವಾಸತ್ಕಾರದೊಡನೆ ಶ್ರೀಮದ್ರಂಭಾಪುರೀ ವೀರಸಿಂಹಾಸನಶಾಖಾ ಶ್ರೀಮದ್ವಿಭೂತಿಪುರಮಠ ಶ್ರೀಮತ್ಕಲ್ಯಾಣಪುರೀ (ಬೆಂಗಳೂರು) ಮಹಾಂತಿನ ಮಠಾಧ್ಯಕ್ಷರೂ ಪರಮ ತಪೋನಿಧಿಗಳೂ ಆದ ಶ್ರೀ||ಷ||ಬ್ರ||ಷ|| ಗಂಗಾಧರ ಶಿವಾಚಾರ್ಯಸ್ವಾಮಿಗಳವರ ನೇತೃತ್ವದಲ್ಲಿ ಅತಿ ವೈಭವದಿಂದ ಆಚರಿಸಲ್ಪಟ್ಟಿತು. ಪ್ರತಿದಿನ ಶ್ರೀಮಹಾಂತಿನ ಮಠದ ಮೇಲ್ಭಾಗದಲ್ಲಿ ಜಯಂತೀಮಹೋತ್ಸವಕ್ಕಾಗಿ ಅತಿ ಸುಂದರವಾಗಿ ನಿರ್ಮಿಸಲ್ಪಟ್ಟಿರುವ ಮಹಾಮಂಟಪದಲ್ಲಿ ಪ್ರಾತಃಕಾಲ ಶ್ರೀಜಗದ್ಗುರು ರೇಣುಕ ಭಗವತ್ಪಾದಾಚಾರ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಬಿಲ್ವಾರ್ಚನೆಗಳು ನಡೆಯುತ್ತಿದ್ದವು. ಸಾಯಂಕಾಲ ಮೈಸೂರಿನ ಪುರಾಣರತ್ನ ಶ್ರೀ|| ಬಸವಾರಾಧ್ಯರು ಮತ್ತು ಆಸ್ಥಾನವಿದ್ವಾನ್ ಬಿದರಿ ಆರಾಧ್ಯಮಠದ ಶ್ರೀ|| ವೃಷಭಲಿಂಗಶಾಸ್ತ್ರಿಗಳು ಇವರಿಂದ ನಡೆಯುತ್ತಿದ್ದ ಶ್ರೀ ರೇಣುಕವಿಜಯಮಹಾಪುರಾಣದ ಪಠನಪ್ರವಚನಗಳನ್ನೂ, ಕೀರ್ತನಕಂಠೀರವ ಕವಿಭೂಷಣೇತ್ಯಾದಿ ಬಿರುದಾಂಕಿತರಾದ ಶ್ರೀ|| ಶಿವದೇವಶಾಸ್ತ್ರಿಗಳವರ ಮತ್ತು ಕೀರ್ತನಕಲಾಕೋವಿದ ಶ್ರೀ|| ಯಸ್. ಜಿ. ರೇಣುಕಾರಾಧ್ಯರ ಶಿವಗುರುಕೀರ್ತನೆಗಳನ್ನೂ, ವಿದ್ವಾಂಸರ ಉಪನ್ಯಾಸಗಳನ್ನೂ, ಮಹಾಂತಿನ ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಷ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಧರ್ಮೋಪದೇಶವನ್ನೂ ಕೇಳುವದಕ್ಕೆ ಸಾವಿರಾರು ಜನ ಬೆಂಗಳೂರು ನಗರ ನಿವಾಸಿಗಳು ಬರುತ್ತಿದ್ದರು. ಪ್ರತಿದಿನ ಕಾರ್ಯಕ್ರಮದ ಕೊನೆಯಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಂಗಲವಾದ ತರುವಾಯ ಸರ್ವರಿಗೂ ಪ್ರಸಾದವಿನಿಯೋಗವಾಗುತ್ತಿತ್ತು. ಈ ಪ್ರಕಾರ ೫ ವಾರಗಳ ವರೆಗೂ ಜಯಂತೀಮಹೋತ್ಸವವು ಅತಿವೈಭವದಿಂದ ನಡೆದು ಚೈತ್ರ ಬ|| ೬ ತಾ|| ೨೬-೪-೪೩ ನೇ ಸೋಮವಾರ ಸಮಾಪ್ತಿಗೊಳಿಸಲ್ಪಟ್ಟಿತು. ಆ ದಿನ ಪ್ರಾತಃಕಾಲ ಶ್ರೀ ವಿರೂಪಾಕ್ಷೇಶ್ವರನಿಗೂ, ಶ್ರೀಜಗದ್ಗುರು ಲಿಂಗೋದ್ಭವ ಮೂರ್ತಿಗೂ ಏಕಾದಶವಾರ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಗಳು, ರುದ್ರಹೋಮಾದಿಗಳು ವೈದಿಕಭೂಷಣ ಶ್ರೀ|| ಗುರುಲಿಂಗಶಾಸ್ತ್ರಿಗಳಿಂದಲೂ, ಶ್ರೀ|| ಸಿದ್ಧನಂಜಾರಾಧ್ಯರಿಂದಲೂ ನಡೆದ ಬಳಿಕ ಮಹಾಗಣಾರಾಧನೆಯು ಮಾಡಲ್ಪಟ್ಟಿತು. ಸಾಯಂಕಾಲ ೫ ಘಂಟೆಗೆ ದಿವಾನ್ ಬಹದ್ದೂರ್ ರಾಜಧರ್ಮಪ್ರವೀಣ ರಿ| ಚೀಫ್ ಜಸ್ಟಿಸ್ ಸಿ. ಮಹಾದೇವಯ್ಯನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿಯಿತು. ಸದರಿ ಸಭೆಗೆ ಮೆ|| ಜೆ. ಎಂ. ಇಮಾಂ ಸಾಹೇಬರು ಪಬ್ಲಿಕ್‌ವರ್ಕ್ಸ್ ಮಂತ್ರಿಗಳು, ಮೆ|| ಎಂ. ಅಪ್ಪಾಜಿಗೌಡರು ವಿದ್ಯಾಇಲಾಖಾಮಂತ್ರಿಗಳು. ಡಿ. ಹೆಚ್. ಚಂದ್ರಶೇಖರಯ್ಯನವರು ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೆಸಿಡೆಂಟರು, ಯಸ್ ನಾರಾಯಣರಾಯರು ಫುಡ್ ಕಂಟ್ರೋಲ್ ಕಮಿಷನರು, ಜೆ. ಬಿ ಮಲ್ಲಾರಾಧ್ಯರು, ಸೀನಿಯರ್ ಅಸಿಸ್ಟೆಂಟ್ ಕಮಿಷನರು. ಆರ್. ರಾಮಚಂದ್ರ ಬೊಂಬಾಟೆಯವರು. ಕೆ. ರೇವಣ್ಣನವರು, ಹೆಚ್. ಕೆ. ವೀರಬಸಯ್ಯನವರು ರಿ|| ಸೆಷನ್ಸ್ ಜಡ್ಜರು, ಜಿ. ಕೆ. ರುದ್ರಾರಾಧ್ಯರು ರಿ|| ಇನ್‌ಕಂಟ್ಯಾಕ್ಸ್ ಅ|| ಕಮಿಷನರು ಮೊದಲಾದ ರಾಜಕೀಯ ಉದ್ಯೋಗಸ್ಥರೂ, ಬೆಂಗಳೂರು ನಗರದ ಶ್ರೀಮಂತರೂ ಮೊದಲಾದವರು ಆಗಮಿಸಿದ್ದರು. ಪ್ರಥಮತಃ ಸಭೆಯಲ್ಲಿ ವೇದಘೋಷ, ಆಚಾರ್ಯರ ಸ್ತೋತ್ರಗಳಾದ ತರುವಾಯ ಶ್ರೀರೇಣುಕವಿಜಯ ಮಹಾಪುರಾಣದ ಉಪಸಂಹಾರಾತ್ಮಕ ಪ್ರವಚನವು ನಡೆಯಿತು. ಅನಂತರ ಪರಮತಪೋನಿಧಿಗಳಾದ ಮಹಾಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಷ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಜೀವಗತಿ ಎಂಬ ವಿಷಯದಲ್ಲಿ ಅಮೋಘವಾದ ಭಾಷಣವನ್ನು ಮಾಡಿದರು. ತರುವಾಯ ಅಧ್ಯಕ್ಷಮಹೋದಯರು ಉಪಸಂಹಾರಾತ್ಮಕವಾದ ಭಾಷಣವನ್ನು ಮಾಡಿದರು. ಅನಂತರ ಶ್ರೀಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಹಾಮಂಗಳಾರತಿ ಪುಷ್ಪಾಂಜಲಿಗಳು ಸಮರ್ಪಿಸಲ್ಪಟ್ಟವು. ತರುವಾಯ ರಾಜಾಶೀರ್ವಾದ ಮಹಾರಾಜರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟವು. ಬಳಿಕ ಶ್ರೀಜಗದ್ಗುರು ರೇಣುಕಾಚಾರ್ಯರ ಪ್ರಸಾದವನ್ನು ಮಹಾಂತಿನ ಮಠದ ಶ್ರೀಗಳು ರಾಜಕೀಯ ಉದ್ಯೋಗಸ್ಥರೆಲ್ಲರಿಗೂ ಆಶೀರ್ವಾದಪೂರ್ವಕವಾಗಿ ದಯಪಾಲಿಸಿದರು. ಬಳಿಕ ಆಚಾರ್ಯರ ಜಯಘೋಷದೊಡನೆ ಸಭೆಯು ಸಮಾಪ್ತಿಗೊಂಡಿತು. ಅನಂತರ ರಾತ್ರಿ ೯ ಘಂಟೆಗೆ ಶ್ರೀರೇಣುಕವಿಜಯಮಹಾಪುರಾಣದ ಮಹೋತ್ಸವವು ನಂದಿಧ್ವಜ ವೇಷವಿಶೇಷವಾದ್ಯಗಳೊಡನೆ ಶ್ರೀಮಹಾಂತಿನ ಮಠದಿಂದ ಹೊರಟು ಬೆಂಗಳೂರು ನಗರದ ಸಮಸ್ತರಾಜಬೀದಿಗಳಲ್ಲಿ ಸಂಚರಿಸಿ ರಾತ್ರಿ ೧೨ ಘಂಟೆಗೆ ಶ್ರೀಮಹಾಂತಿನ ಮಠವನ್ನು ತಲ್ಪಿತು.

ತಾ|| ೨೭-೪-೪೩ ನೇ ಮಂಗಳವಾರ ಜಯಂತ್ಯುತ್ಸವಾಂಗಭೂತವಾಗಿ ಬೆಂಗಳೂರು ನಗರದ ಬಡಜನರಿಗೆ ಸಂತರ್ಪಣೆಯು ಮಾಡಲ್ಪಟ್ಟಿತು. ಆದಿನ ಮಧ್ಯಾಹ್ನ ೧೨ ಘಂಟೆಯಿಂದ ಸಾಯಂಕಾಲ ೫ ಘಂಟೆಯವರೆಗೂ ಚಿಕ್ಕಪೇಟೆಯಲ್ಲಿ ೩ ಫರ್ಲಾಂಗುಗಳವರೆಗೆ ಬಡಜನರು ನಾಲುಸಾಲಾಗಿ ಕುಳಿತುಕೊಂಡು ಊಟಮಾಡಿದರು. ಈ ಪ್ರಕಾರವಾಗಿ ಅತಿ ವೈಭವದಿಂದ ಜಯಂತೀ ಮಹೋತ್ಸವವನ್ನು ನೆರವೇರಿಸಿದ ಬೆಂಗಳೂರು ನಗರ ನಿವಾಸಿಗಳೂ ಗುರುಭಕ್ತ ಪಾರಾಯಣರೂ ಆದ ಎಂ. ರುದ್ರಯ್ಯನವರು, ಸರಾಫ್ ಬಿ. ಬಸಪ್ಪನವರು ದೇವರ ಶೆಟ್ಟರು ಬಿ. ರುದ್ರಪ್ಪ ಶೆಟ್ಟರು, ಯಜಮಾನ್ ಕೆಂಚಪ್ಪ ಅಂಡ್ ಬ್ರದರ್ಸ್, ಬುಳ್ಳಪ್ಪನವರ ಶಿವನಂಜಪ್ಪ ಗುಬ್ಬಣ್ಣನವರು, ಅಡಕೆ ಅಂಗಡಿ ಅಪ್ಪಾಜಪ್ಪನವರು, ಡಿ. ಬಿ. ಗುರುಸಿದ್ದಪ್ಪ ಮೊದಲಾದ ಜಯಂತೀ ಮಹೋತ್ಸವದ ಕಾರ್ಯಕಾರಿಮಂಡಲಿಯವರಿಗೆ ಆಯುರಾರೋಗ್ಯೈಶ್ವರ್ಯವನ್ನುಂಟುಮಾಡಲೆಂದು ಶ್ರೀಜಗದ್ಗುರುರೇಣುಕ ಭಗವತ್ಪಾದರನ್ನು ಪ್ರಾರ್ಥಿಸುತ್ತೇನೆ.

ಓರ್ವ ಗುರುಭಕ್ತ

ವಿವಾಹ ಮಹೋತ್ಸವ ಸಮಾರಂಭ ಕನಕಗಿರಿ

ನಿಜಾಂ ಇಲಾಖಾ ರಾಯಚೂರು ಡಿ|| ಕನಕಗಿರಿ ತಗ್ಗಿನಮನಿ ಕರಡೆಪ್ಪನವರ ಪುತ್ರಿ ಚಿ|| ಸೌ|| ಗುರುಬಸಮ್ಮನನ್ನು ಹಿರೇವಂಕಲಕುಂಟೆ ಮು|| ರಾ|| ಬಂಗಾರಗೌಡರ ಪುತ್ರ ಚಿ|| ಶಿವಪ್ಪನಿಗೆ ಕೊಟ್ಟು, ಇದೇ ಚೈತ್ರ ಶು|| ೧೩ ರವಿವಾರ ದಿವಸ ವಿವಾಹ ಸಮಾರಂಭವು ಕನಕಗಿರಿಯಲ್ಲಿ ಒಳ್ಳೆ ವೈಭವದಿಂದ ನೆರವೇರಿತು. ಚೈತ್ರ ಶು|| ೧೨ ದಿವಸ ಶ್ರೀ ಪಂಚಾಕ್ಷರ ಶಿವಾಚಾರ್ಯರ ಪಾದಪೂಜಾ ಸಮಾರಂಭವು ನಡೆದು ಸರ್ವರೂ ತೀರ್ಥಪ್ರಸಾದವನ್ನು ಸ್ವೀಕರಿಸಿದ ಮೇಲೆ ಭಕ್ತ ಮಾಹೇಶ್ವರರಿಗೆ ಅನ್ನ ಸಂತರ್ಪಣೆಯಾಯಿತು. ಶು|| ೧೩ ಭಾನುವಾರ ಶ್ರೀ ಪಟ್ಟಾಧ್ಯಕ್ಷರ ಸನ್ನಿಧಿಯಲ್ಲಿ ಶ್ರೀ ಪಂಚಕಲಶ ಸ್ಥಾಪನ ಪೂರ್ವಕವಾಗಿ ಮಾಂಗಲ್ಯಧಾರಣವು ವಿಧ್ಯುಕ್ತವಾಗಿ ನೆರವೇರಿ ಸರ್ವ ಕಾರ್ಯಗಳು ಸಮಾಪ್ತಿಗೊಂಡವು ಈ ಮಂಗಲ ಮಹೋತ್ಸವ ಸಮಾರಂಭವನ್ನು ಅಮರಪ್ಪ ತಗ್ಗಿನಮನಿ, ಅನ್ನದಾನಯ್ಯನವರು ಹಿರೇಮಠ ವಂಕಲಕುಂಟೆ, ಶಿವಪ್ಪ ಬಂಗಾರಶೆಟ್ಟಿ, ವೇ|| ಬಸಲಿಂಗಯ್ಯನವರು ಕಲ್ಲುಬಾಗಿಲ ಮಠ, ಪಂಚಯ್ಯ, ಕೊಟ್ರಪ್ಪ ತಗ್ಗಿನಮನಿ ಮೊದಲಾದವರು ಚನ್ನಾಗಿಮಾಡಿ ಕೀರ್ತಿಶಾಲಿಗಳಾದರು. ಶ್ರೀ ಜಗದ್ಗುರು ಪಂಚಾಚಾರ್ಯರು ವಧೂವರರಿಗೆ ಆಯುರಾರೋಗ್ಯ ಭಾಗ್ಯಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿಸುವ.

ಕೊಟ್ರಪ್ಪ ತಗ್ಗಿನಮನಿ ಕನಕಗಿರಿ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ವರ್ಷಗಳು ತುಂಬಿ ೧೭ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿ **ರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ.** ಮಾಡುವುದರಿಂದ **ನಮಗೂ ತೊಂದರೆಯಾಗುವುದು** ಹಾಗೂ ಚಂದಾ**ದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು** ಆದುದರಿಂದ **ಚಂದಾದಾರರೆಲ್ಲರೂ ಕೂಡಲೆ ೨ ರೂ ೧೨ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮ ದಲ್ಲಿರುವ ಅಭಿಮಾನಿಗಳು** ಚಂದಾದಾರರ ಹಣವನ್ನೆಲ್ಲ **ಒಟ್ಟುಗೂಡಿಸಿ ಒಂದೇ ಸಾರೇ** ಮನಿಯಾರ್ಡರ್ ಮಾಡಿ**ಸಬೇಕು** ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯೆಯಿಟ್ಟು ಮರೆಯದೆ ತಿಳಿಸಬೇಕು

ಸಂ —

ಪಂಚಾಚಾರ್ಯಪ್ರಭಾ.

೧೯೪೨ನೆಯ ಮೇ ತಾ॥ ೧೧ನೆಯ ಸೋಮವಾರ

೧೭ನೆಯ ವರ್ಷ ಪ್ರಾರಂಭ.

ಪಂಚಾಚಾರ್ಯಪ್ರಭಾಪತ್ರಿಕೆಗೆ ಈ ಸ್ವಭಾನುನಾಮಸಂವತ್ಸರದ ವೈಶಾಖ ಶುದ್ಧ ಪಂಚಮಿಗೆ ೧೬ ವರ್ಷಗಳು ತುಂಬಿ ೧೭ನೆಯ ವರ್ಷವು ಪ್ರಾರಂಭವಾಗಿರುವುದು. ಪ್ರಭಾಪತ್ರಿಕೆಯು ೧೬ ವರ್ಷಗಳ ವರೆಗೆ ಯಾವ ಚ್ಯುತಿಯೂ ಇಲ್ಲದಂತೆ ತಾನು ಕೈಕೊಂಡ ಕಾರ್ಯವನ್ನು ಅತ್ಯಾನಂದದಿಂದ ನೆರವೇರಿಸಿದುದು ಶ್ಲಾಘನೀಯವಾಗಿದೆ. ಈ ಪತ್ರಿಕೆಯು ತಾನು ಜನ್ಮವೆತ್ತಿದಂದಿನಿಂದ ಇಂದಿನವರೆಗೆ ವೀರಶೈವಸಮಾಜದಲ್ಲಿ ವಿಶೇಷವಾದ ಜಾಗೃತಿಯನ್ನುಂಟುಮಾಡಿದೆ. ವೀರಶೈವಮತಸ್ಥಾಪಕರ ಸ್ವರೂಪವೇ ಜನಗಳಿಗೆ ಗೋಚರವಿದ್ದಿಲ್ಲ. ಮತಾಚಾರ್ಯರ ನಾಮವೇ ಲೋಪವಾಗುವ ಸಂಭವವೊದಗಿತ್ತು. ಇಂಥ ಸಮಯದಲ್ಲಿ ಈ ಪತ್ರಿಕೆಯು ಅವತರಿಸಿ ಮತಾಚಾರ್ಯರ ಸ್ವರೂಪವನ್ನೂ ಆ ಮಹನೀಯರ ಮಹಿಮಾವಿಶೇಷವನ್ನೂ ಇಡೀ ಜಗತ್ತಿನಲ್ಲಿ ಪ್ರಕಾಶಿಸುವಂತೆ ಮಾಡಿತು. ಆಂಧ್ರ ಮಹಾರಾಷ್ಟ್ರ ಮೊದಲಾದ ದೇಶಗಳಲ್ಲಿಯೂ ತನ್ನ ಪ್ರಭೆಯನ್ನು ಪಸರಿಸಿ ಅಲ್ಲಿಯ ವೀರಶೈವ ಜನಾಂಗವನ್ನುದ್ಧರಿಸುವಂತೆ ಮಾಡಿತು. ಪ್ರತಿವಾರದಲ್ಲಿಯೂ ತಪ್ಪದೆ ಪ್ರಸಿದ್ಧವಾಗತಕ್ಕ ಧರ್ಮಸಂಬಂಧವಾದ ಲೇಖಗಳಿಂದ ವೀರಶೈವಸಿದ್ಧಾಂತಜ್ಞಾನವನ್ನು ಸರ್ವರಲ್ಲಿಯೂ ಅಂಕುರಿಸುವಂತೆ ಮಾಡಿತು. ತನ್ನಲ್ಲಿ ಪ್ರಕಟವಾಗುತ್ತಿರುವ ಅಮೂಲ್ಯ ಲೇಖಗಳಿಂದ ಪರಮತೀಯರನ್ನೂ ಸಹ ಸಂತೋಷಸಾಗರದಲ್ಲಿ ಮುಳುಗಿಸಿತು. ವೀರಶೈವರ ಉದ್ಧಾರಕ್ಕಾಗಿ ಜನ್ಮವೆತ್ತಿದ ಈ ಪತ್ರಿಕೆಯ ವಿಷಯದಲ್ಲಿ ಅನೇಕಜನ ಮತಾಭಿಮಾನಿಗಳು ಇದರ ಪುರೋಭಿವೃದ್ಧಿಗಾಗಿ ವಿಶೇಷ ಪ್ರಯತ್ನವನ್ನು ಮಾಡುತ್ತಿರುವುದು ಅತ್ಯಾನಂದಕರವಾದ ವಿಷಯವಾಗಿದೆ. ಯುದ್ಧದ ಪ್ರಭಾವದಿಂದ ಈ ಕಾಲದಲ್ಲಿ ಅನೇಕ ಪತ್ರಿಕೆಗಳು ನಿಂತುಹೋಗಿರುವವು ಮತ್ತು ಹೋಗುತ್ತಿರುವವು. ಇಂತಹ ಕಠಿನ ಸಮಯದಲ್ಲಿಯೂ ಕೂಡ ಈ ಪತ್ರಿಕೆಯು ನಿರ್ವಿಘ್ನವಾಗಿ ಕಾರ್ಯವನ್ನು ಮಾಡುತ್ತಿರುವುದಕ್ಕೆ ಶ್ರೀ ಜಗದ್ಗುರು ರೇಣುಕಾದಿ ಭಗವತ್ಪಾದರ ಅನುಗ್ರಹವೇ ಮೂಲಕಾರಣವೆಂದು ಹೇಳಬಹುದಾಗಿದೆ.

ಭರತಖಂಡದಲ್ಲಿ ಇರುವ ಗುರುಭಕ್ತಾಭಿಮಾನಿಗಳು ಈ ಪತ್ರಿಕೆಯ ಪೋಷಣಕ್ಕಾಗಿ ಲಿಂಗಧಾರಣ ದೀಕ್ಷಾ ವಿವಾಹಾದಿಕಾರ್ಯಗಳಲ್ಲಿ ಹೆಚ್ಚು ಸ್ವೀಕಾರ ದ್ರವ್ಯಸಹಾಯವನ್ನು ಮಾಡುವ ಕಾರ್ಯವನ್ನು ಕೈಕೊಳ್ಳಬೇಕೆಂದಾಶಿಸುತ್ತೇವೆ ಈ ವಿಷಯದಲ್ಲಿ ಸರ್ವರೂ ವಿಶೇಷವಾದ ಉತ್ಸಾಹವನ್ನು ತೋರಿಸಬೇಕು ಮತಾಚಾರ್ಯರ ಪ್ರಭಾವವನ್ನು ಪ್ರಕಾಶಪಡಿಸಲು ಕಂಕಣಬದ್ಧವಾಗಿ ಕಾರ್ಯಮಾಡುತ್ತಿರುವ ಈ ಪತ್ರಿಕೆಯ ಅಭಿವೃದ್ಧಿಯು ಎಲ್ಲ ಸಮಸ್ತ ಗುರುಭಕ್ತರೂ ಸಹಾಯವಮಾಡಿ ಜಗದಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಜಗದಾಚಾರ್ಯರ ಆಶೀರ್ವಾದಬಲದಿಂದ ಪ್ರಭಾಪತ್ರಿಕೆಯು ಚಿರಕಾಲ ಬಾಳಿ ತನ್ನ ಪ್ರಭೆಯಿಂದ ಜನರಲ್ಲಿರುವ ಅಜ್ಞಾನಾಂಧಕಾರವನ್ನು ಹೋಗಲಾಡಿಸಿ, ಜಗತ್ತನ್ನು ಪ್ರಭಾಮಯವನ್ನಾಗಿ ಮಾಡುವಂತಾಗಲೆಂದು ಆ ಪೂಜ್ಯಪಾದರನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ನಾಜಿ ವಿಮಾನ ಬಲ

ಜರ್ಮನರ ವಿಮಾನಬಲವು ದಿನದಿನಕ್ಕೆ ಕಡಿಮೆಯಾಗುತ್ತಿದೆ ಅವರ ವಿಮಾನ ಬಲದಲ್ಲಿ ಅರ್ಧದಷ್ಟು ರಷ್ಯದಲ್ಲಿದೆ ಸುಮಾರು ಮೂರರಲ್ಲಿ ಒಂದು ಪಾಲು ಪಶ್ಚಿಮರಂಗದಲ್ಲೂ, ನಾಲ್ಕರಲ್ಲಿ ಒಂದರಷ್ಟು ಮೆಡಿಟರೇನಿಯನ್‌ನಲ್ಲೂ ಇದೆ ಎಂದು ಹೇಳಲಾಗಿದೆ

ನಾಜಿವ್ಯೂಹ ಭೇದಿಸಲ್ಪಟ್ಟಿತು

ಕೋ. ಕಣಿವೆಯಲ್ಲಿ ನೊವೊರೆಸಿಸ್ಕ ಈಶಾನ್ಯದಲ್ಲಿ ರಷ್ಯನರು ಉಗ್ರಕದನ ನಡೆಸಿ ಜರ್ಮನ್ ವ್ಯೂಹವನ್ನು ಭೇದಿಸಿದ್ದಾರೆ ಕ್ರಿಮ್‌ಸ್ಕಾಯಾ ರೈಲ್ವೆ ಸ್ಟೇಷನ್ನನ್ನು ಹಿಡಿದಿದ್ದಾರೆ ಕ್ಯೂಬನ್ ಕ್ಷೇತ್ರದಲ್ಲಿ ರಷ್ಯನರು ಎಲ್ಲ ಕಡೆಯೂ ಉಗ್ರಕದನ ನಡೆಸುತ್ತಿದ್ದಾರೆ ರಷ್ಯನ್ ವಿಮಾನ ಬಲದಿಂದ ಶತ್ರುಗಳಿಗೆ ಅಪಾರ ಹಾನಿಯಾಗುತ್ತಿದೆ

ಅಮೆರಿಕಾದ ನಿರ್ಮಾಣಸಾಮರ್ಥ್ಯ

ಹಡಗು ಕಟ್ಟುವದರಲ್ಲಿ ಅಮೆರಿಕವು ಏಪ್ರಿಲ್ ತಿಂಗಳಲ್ಲಿ ಹೊಸ ರೆಕಾರ್ಡು ಸ್ಥಾಪಿಸಿತು ಒಟ್ಟು **16,62,000 ಟನ್ ತೂಕದ 157 ಹಡಗುಗಳನ್ನು ಕಟ್ಟಿತು ಮಾರ್ಚ ತಿಂಗಳಲ್ಲಿ 6,200 ವಿಮಾನಗಳನ್ನು ತಯಾರಿಸಿತು ಇತರ ಸಂಗ್ರಾಮ ಸಲಕರಣೆಗಳ ಸೃಷ್ಟಿಯೂ ಸಹ ಅಧಿಕವಾಗುತ್ತಿದೆ.**

ಜಪಾನರ ಚಟುವಟಿಕೆ

ಅರಕಾನಿನಲ್ಲಿ ಕದನವು ಜೋರಾಗಿದೆ ಮಾಯು ಗುಡ್ಡಗಳಿಗೆ ನೈರುತ್ಯದಲ್ಲಿ ಜಪಾನರ ಒತ್ತಾಯ ಹೆಚ್ಚಾಗಿದೆ ಹಿಂದೆ ಈ ಕ್ಷೇತ್ರದಲ್ಲಿ ಮುಂದೆ ನುಗ್ಗಲು ಯತ್ನಿಸಿದ ಶತ್ರುಗಳಿಗೆ ವಿಶೇಷ ನಷ್ಟವನ್ನುಂಟುಮಾಡಲಾಗಿತ್ತು ಅದನ್ನು ಲೆಕ್ಕಿಸದೆ ಈಗ ತಿರುಗಿ ಅವರು ಮುಂದೆ ನುಗ್ಗುತ್ತಿದ್ದಾರೆ. ಮಿತ್ರಯೋಧರ ಸಂಖ್ಯೆಗಿಂತ ಜಪಾನರ ಸಂಖ್ಯೆ ಬಹಳ ಹೆಚ್ಚಾಗಿದ್ದುದರಿಂದ ಅವರು ಸ್ವಲ್ಪ ದೂರ ಮುಂದೆ ನುಗ್ಗಲು ಶಕ್ತರಾದರು. ಬ್ರಿಟಿಷ್ ಪಿರಂಗಿಗಳು ಉಗ್ರವಾಗಿ ಗುಂಡು ಹಾರಿಸುತ್ತಿರುವವು.

ಸ್ಪೇನಿನಲ್ಲಿ ಜರ್ಮನಿಯ ಪ್ರಯತ್ನ ನಡೆಯಲಿಲ್ಲ

ನಾಜಿ ಗುಪ್ತಚಾರಪಡೆಯ ನಾಯಕನಾದ **ಹರ್** ಹಿಮ್ಲರನು ಇತ್ತೀಚೆಗೆ ಮೆಡ್ರಿಡ್ ನಗರಕ್ಕೆ ಬಂದಿದ್ದಾಗ ಫ್ರಾಂಕೋರವರನ್ನು ಭೇಟಿ ಮಾಡಲು ಇಚ್ಛಿಸಿದನು ಆದರೆ ಸಾಧ್ಯವಾಗಲಿಲ್ಲ. ಪೋರ್ಚುಗಲ್ಲಿನ ಮಹಾಪ್ರಧಾನರಾದ ಸಾಲಾಜಾರ್‌ರವರೂ ಮತ್ತು ಸ್ಪೇನಿನ್ ವಿದೇಶಾಂಗ ಸಚಿವರೂ ಸೇರದಂತೆ ಫ್ರಾಂಕೋರವರನ್ನು ಒತ್ತಾಯ ಪಡಿಸಲೋಸುಗವೇ ಹಿಮ್ಲರರು ವಿಮಾನದ ಮೂಲಕ ಮೇಡ್ರಿಡ್ಡಿಗೆ ಬಂದಿದ್ದರು ಆದರೆ ಜ॥ ಫ್ರಾಂಕೊ ಅವರನ್ನು ಸಂದರ್ಶಿಸಲೂ ಸಹ ಅವಕಾಶ ಕೊಡಲಿಲ್ಲ

ಅರಕಾನ್ ಯುದ್ಧರಂಗದ ಪರಿಸ್ಥಿತಿ

ಅರಕಾನ್ ಯುದ್ಧರಂಗದಲ್ಲಿ ಸಾಮಾನ್ಯ ಪರಿಸ್ಥಿತಿಯು ಒಂದೇ ಸಮನಾಗಿದ್ದರೂ ಹಲವು ಸಾರೆ ಉಗ್ರ ಹೊಡೆದಾಟಗಳಾಗಿವೆ ನಮ್ಮ ಕಾವಲುಗಾರ ಪಡೆಯೊಂದು ಹಲವು ಜಪಾನರನ್ನು ಮುತ್ತಿ 7 ಮಂದಿಯನ್ನು ಕೊಂದಿತು ನಮ್ಮ ಕಡೆಯವರಾರಿಗೂ ಅಪಾಯವಾಗಲಿಲ್ಲ. ಇಂಡೌ ಎಂಬ ಎಣ್ಣೆನಗರದ ಮೇಲೆ 8 ಬಾಂಬುಗಳನ್ನು ಹಾಕಲಾಯಿತು ಒಂದು ಎಣ್ಣೆಕೊಳಾಯಿ ಕತ್ತರಿಸಿಹೋಯಿತು ಇತರ ಬಾಂಬುಗಳು ಭವನಗಳಮೇಲೆ ಬಿದ್ದು ಅವುಗಳಿಂದೆದ್ದ ಹೊಗೆ 30 ಮೈಲು ದೂರ ಕಾಣಿಸಿತು. 20 ಶತ್ರು ಬಾಂಬರುಗಳು ಫೈಟರುಗಳ ರಕ್ಷಣೆಯೊಡನೆ ಒಂದು ಆಗ್ನೇಯ ಬಂಗಾಳದ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ ನಡೆಸಿದವು ಅಲ್ಪ ನಷ್ಟವಾಯಿತು. ಹಲವರಿಗೆ ಗಾಯಗಳಾದವು. ಆರ್ ಎ. ಎಫ್ ಫೈಟರುಗಳು ಶತ್ರುವಿಮಾನಗಳನ್ನೆದುರಿಸಿ ಒಂದನ್ನು ಹೊಡೆದುರುಳಿಸಿದವು ಅದು ಉರಿದು ಬಿತ್ತು. ಇತರ ಹಲವು ಶತ್ರುವಿಮಾನಗಳಿಗೆ ಸಹ ಏಟು ಬಿತ್ತು.

ಜಪಾನು ಸುಮ್ಮನೆ ಕುಳಿತಿಲ್ಲ

ಆಸ್ಟ್ರೇಲಿಯದ ಸೈನ್ಯಶಾಖಾ ಸಚಿವರಾದ ಶ್ರೀ॥ ಎಫ್. ಎಂ. ಫೋರ್ಡ್‌ರವರು ವಿಮಾನದಲ್ಲಿ ಕುಳಿತು ಕ್ವೀನ್ಸ್‌ಲೆಂಡನ್ನು ಬಳಸಿ ಪರೀಕ್ಷೆಯನ್ನು ನಡೆಸಿದರು. ನೈಋತ್ಯ ಪೆಸಿಫಿಕ್‌ಗೆ ಹೆಚ್ಚು ನೌಕೆಗಳನ್ನೂ **ವಿಮಾನಗಳನ್ನೂ** ಕಳುಹಿಸುವದು ಅಗತ್ಯವೆಂದೂ, ಜ॥ **ಮೆಕಾರ್ಥರ್** ಜ॥ ಬ್ಲೇಮಿ ಮತ್ತು ಅವರ **ಯೋಧರಲ್ಲಿ ಸರ್ಕಾರಕ್ಕೆ ಪೂರ್ಣ** ನಂಬಿಕೆಯಿದೆಯೆಂದೂ ಆಸ್ಟ್ರೇಲಿಯವೂ **ಇತರ ಪ್ರಜಾ** ಪ್ರಭುತ್ವ ದೇಶಗಳೂ ಅವರಿಗೆ **ಪೂರ್ಣ ಬೆಂಬಲ ಕೊಡ**ಬೇಕೆಂದೂ ಸೂಚಿಸುತ್ತ **"ಡಾರ್ವಿನ್ ಮೇಲೆ ಉಗ್ರ ಮುತ್ತಿಗೆಯು ನಡೆಯಿತು. ಆಸ್ಟ್ರೇಲಿಯದ ಪೂರ್ವ ತೀರದಲ್ಲಿ ಜಪಾನ್ ಸಬ್‌ಮೆರೀನುಗಳ ಅವಾಂತರ ಹೆಚ್ಚಾಗಿದೆ. ಇದನ್ನು ನೋಡಿದರೆ ಜಪಾನು ತೆಪ್ಪಗೆ ಕುಳಿತಿಲ್ಲವೆಂಬುದೂ, ಮೇಲೆ ಬಿದ್ದು ಹೊಡೆಯುವದೇ ಅದರ ನೀತಿಯೆಂಬುದೂ ಸ್ಪಷ್ಟವಾಗದೆ ಇರದು" ಎಂದು ತಿಳಿಸಿದ್ದಾರೆ.**

ಜಪಾನರ ಸಬ್‌ಮೆರೀನ್

ಆಸ್ಟ್ರೇಲಿಯಾದ ಸುತ್ತಮುತ್ತಲ ಸಮುದ್ರ **ಪ್ರದೇಶಗಳಲ್ಲಿ** ಜಪಾನರು ಸಬ್‌ಮೆರೀನ್‌ಗಳನ್ನು **ಶೇಖರಿಸುತ್ತಿದ್ದಾರೆ** ಅಟ್ಲಾಂಟಿಕ್ ಸಾಗರದಲ್ಲಿ **ಯು-ಬೋಟುಗಳು ಉಂಟುಮಾಡಿರತಕ್ಕ** ಪರಿಸ್ಥಿತಿಯನ್ನೇ **ಇಲ್ಲಿಯೂ ಉಂಟು** ಮಾಡಬೇಕೆಂಬುದೇ ಅವರ ಉದ್ದೇಶ. **ಜಪಾನು ಯುದ್ಧಕ್ಕೆ** ತೊಡಗಿದಂದಿನಿಂದ **ಈಗ ನಡೆಯುತ್ತಿರುವಷ್ಟು** ವಿಮಾನಮುತ್ತಿಗೆಯನ್ನಾಗಲಿ ಸಬ್‌ಮೆರೀನ್ ಅವಾಂತರವನ್ನಾಗಲಿ ಆಸ್ಟ್ರೇಲಿಯವು **ಕಂಡಿರಲಿಲ್ಲ** ಬಹಳ ದೂರ ಬಳಸಿಬರಲು ಶಕ್ತಿಯುಳ್ಳ ಸಬ್‌ಮೆರೀನ್‌ಗಳನ್ನು ಜಪಾನರು ಉಪಯೋಗಿಸುತ್ತಿದ್ದಾರೆಂದು ಹೇಳಲಾಗಿದೆ. ಇವುಗಳು ಒಂದು ಸಾರೆ **ಸಾಮಾನುಗಳನ್ನು ತುಂಬಿಕೊಂಡು** ಹೊರಟರೆ 90 ದಿನಗಳ **ಕಾಲ ನೀರಿನಲ್ಲಿ** ಇರಬಲ್ಲವಂತೆ! ಇವುಗಳಿಂದ **ಆಸ್ಟ್ರೇಲಿಯದ** ಜಲಮಾರ್ಗಗಳಿಗೆ **ವಿಪ**ತ್ತೊದಗಿದೆಯೆಂದು ಹೇಳಲಾಗಿದೆ

ಬಂಗಾಳಾ ವಿಮಾನನಿಲ್ದಾಣದ ಮೇಲೆ ಮುತ್ತಿಗೆ

ಆಗ್ನೇಯ ಬಂಗಾಳದಲ್ಲಿರುವ ವಿಮಾನ ನಿಲ್ದಾಣವೊಂದರಮೇಲೆ ಜಪಾನ ವಿಮಾನವೊಂದು ಮುತ್ತಿಗೆ ನಡೆಸಿತು. ಅಲ್ಪ ನಷ್ಟಸಂಭವಿಸಿತು. ಹಲವರು ಅಪಾಯಕ್ಕೊಳಗಾದರು.

ರಂಗೂನ್ ಬಂದರು ಕೆಲಸಕ್ಕೆ ಬಾರದಂತಾಗಿದೆ

ರಂಗೂನ್ ನೌಕಾ ಮೂಲವು ಕಾರ್ಯಾಚರಣೆಗೆ ಉಪಯೋಗವಿಲ್ಲದಂತಾಗಿದೆಯೆಂದು ಇಂಡಿಯಾದಲ್ಲಿ ನೆಲೆಸಿರುವ ಅಮೇರಿಕನರ ಹತ್ತನೆಯ ದಳದ ಮುಖ್ಯಾಧಿಕಾರಿಗಳಾದ ಕರ್ನಲ್ ವಿನೆಟ್‌ಟಡೊವೆಲ್‌ರವರು ತಿಳಿಸಿರುತ್ತಾರೆ ಅಮೇರಿಕನರ ಅತ್ಯುಗ್ರದಾಳಿಯ ಫಲವಾಗಿ ರಂಗೂನ್ ದ್ವೀಪವು ಛಿನ್ನವಾಗಿವೆಯೆಂದೂ ಜಪಾನೀಯರ ವಾರ್ತಾ ಸಂಸ್ಥೆಗಳಮೇಲೂ ಸೇತುವೆಗಳ ಮೇಲೂ ಮತ್ತು ಸರಬರಾಯಿ ಕ್ಷೇತ್ರಗಳ ಮೇಲೂ ನಡೆಯುತ್ತಿರುವ ದಾಳಿಯಿಂದ ಶತ್ರುಗಳು ತಮ್ಮ ಬರ್ಮಾ ವಿಜಯದ ಫಲವನ್ನು ಅನುಭವಿಸಲು ಸಾಧ್ಯವಿಲ್ಲದಂತಾಗಿದೆ ಎಂದೂ ಹೇಳಲಾಗಿದೆ.

ಅಕ್ಯಾಬ್ ಮೇಲೆ ಮುತ್ತಿಗೆ

ಕಳೆದ ೩ ನೆಯ ತಾರೀಖಿನ ಬೆಳಗ್ಗೆ 'ಬ್ಲೆನ್ ಹೀಂ" ಬಾಂಬರುಗಳು ಫೈಟರುಗಳ ರಕ್ಷಣೆಯಲ್ಲಿ ಹೊರಟು ಅಕ್ಯಾಬ್ ಮೇಲೆ ಮುತ್ತಿಗೆ ನಡೆಸಿದವು. ಅನೇಕ ಕಡೆ ಬೆಂಕಿ ಹತ್ತಿಕೊಂಡಿತು. ಕೊಂಚಕಾಲದಿಂದ ಅರಕಾನ್ ರಂಗದಲ್ಲಿ ಜಪಾನ್ ವಿಮಾನಗಳ ಚಟುವಟಿಕೆ ಹೆಚ್ಚಾಗಿರಲಿಲ್ಲ, ಈಗ ಹೆಚ್ಚಿದೆ

ಪೋಲೀಸರೇ ಕದ್ದರು

ಬಾಗಲಕೋಟೆ–ಸೊಲ್ಲಾಪುರ ನಿಲ್ದಾಣಗಳ ರೈಲು ಮಾರ್ಗದಲ್ಲಿರುವ ತಡವಲ ಸ್ಟೇಷನನ್ನು ಕಾಯಲು ನಿಯಮಿತರಾಗಿದ್ದ ಮಹಿಬೂಬ ಮಹಮದ್ ಆಗಾ ಮತ್ತು ಶಾಮರಾವ್ ಆಕರಾಂ ಪಾಟೀಲ್ ಎಂಬ ಇಬ್ಬರು ಪೋಲೀಸರು ಸ್ಟೇಷನ್ನಿನಲ್ಲಿದ್ದ ಅಕ್ಕಿ ಚೀಲಗಳಿಂದ ಅಕ್ಕಿ ಕದ್ದರೆಂದು ಅವರುಗಳ ಮೇಲೆ ಮೊಕದ್ದಮೆ ಹೂಡಲಾಗಿದೆ.

ಸ್ವೀಕಾರ

ರಾಯಚೂರು ಡಿ|| ಅಂಕಸದಡ್ಡಿಯಲ್ಲಿರುವ ಮ|| ರಾ|| ಕೇಶೇದ ನಾಗಪ್ಪನವರ ಅಳಿಯ ಚಿ|| ವೀರಪ್ಪನಿಗೆ ಕನಕಗಿರಿಯಲ್ಲಿರುವ ಮ|| ರಾ|| ಗುಗ್ಗಳಶೆಟ್ಟಿ ಹಿರಾಳಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ವಧೂವರರ ಕಡೆಯಿಂದ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿ ಮತ್ತು ಕನಕಗಿರಿಯಲ್ಲಿರುವ ಮ||ರಾ|| ತೆಗ್ಗಿನಮನಿ ಕರಡೆಪ್ಪನವರ ಪುತ್ರಿ ಚಿ|| ಸೌ|| ಗುರುಬಸಮ್ಮನನ್ನು ಬಂಕಲಕುಂಟೆಯಲ್ಲಿರುವ ಮ|| ರಾ|| ಬಂಗಾರಗೌಡರ ಪುತ್ರ ಚಿ|| ಶಿವಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ತೆಗೆಯಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಕನಕಗಿರಿ ಬೃಹನ್ಮಠದ ಶ್ರೀ|| ಷ|| ಬ್ರ|| ಪಂಚಾಕ್ಷರ ಶಿವಾಚಾರ್ಯರ ದ್ವಾರಾ ತಲ್ಪಿರುತ್ತವೆ

ತರೀಕೆರೆ ತಾಲೂಕು ಬುಕ್ಕಾಂಬುಧಿ ಗ್ರಾಮದಲ್ಲಿರುವ ಶಿವಣ್ಣನವರ ಚನ್ನಪ್ಪನವರ ಪುತ್ರಿ ಚಿ|| ಸೌ|| ದೊಡ್ಡಪುಟ್ಟಮ್ಮನನ್ನು ಚಿಕ್ಕನಲ್ಲೂರು ಮ|| ರಾ|| ಭಂಗಿ ಮುರಿಗಪ್ಪನವರ ಪುತ್ರ ಚಿ|| ದೊಡ್ಡಬಸವರಾಜಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹಮಹೋತ್ಸವದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ವೇ|| ಗುಬ್ಬಿಶಿವಕಥಾ ಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ಸಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮಲೇರಿಯಾ ಜ್ವರದ ವಿಷಯವಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕಾಗಿರುವ ಕೆಲವು ಮುಖ್ಯ ಅಂಶಗಳು

ಅನಾಫಲೀಜ್ ಜಾತಿಗೆ ಸೇರಿದ ಹೆಣ್ಣು ಸೊಳ್ಳೆಗಳ ಕಡಿತದಿಂದಲೇ ಮಲೇರಿಯಾ ಜ್ವರವು ಪ್ರಾಪ್ತವಾಗುವುದು ಈ ಕಾಯಿಲೆಗೆ ಮೊಟ್ಟಮೊದಲು ಛಳಿಛಳಿಯಾಗಿ ಜ್ವರ ಬರುವುದೇ ಮುಖ್ಯವಾದ ಗುರುತು, ಅಲ್ಲದೆ ಜ್ವರವು ಕೆಲವರಿಗೆ ಪ್ರತಿನಿತ್ಯವೂ ಬರುವುದು ಕೆಲವರಿಗೆ ದಿನಬಿಟ್ಟು ದಿನ ಅಥವಾ ನಾಲ್ಕು ದಿನಗಳಿಗೆ ಒಂದಾವರ್ತಿ ಬರುವುದು ಮತ್ತೆ ಕೆಲವರಿಗೆ ಜ್ವರ ಬಂದು ನಿಂತುಹೋಗಿ ಮತ್ತೆ ಕೆಲವು ದಿವಸಗಳ ನಂತರ ಬರುವುದು. ಈ ಜ್ವರಕ್ಕೆ ಕಾರಣವಾದ ಅನಾಫಲೀಜ್ ಜಾತಿಯ ಹೆಣ್ಣು ಸೊಳ್ಳೆಗಳನ್ನು ಸುಲಭವಾಗಿ ಗುರ್ತಿಸಬಹುದು ಹ್ಯಾಗೆಂದರೆ—ಈ ಸೊಳ್ಳೆಗಳು ಗೋಡೆಗಳ ಮೇಲೆ ಅಥವಾ ಇನ್ನೆಲ್ಲಿಯಾದರೂ ಕೂತುಕೊಂಡು ಇರುವಾಗ ಅವುಗಳು ನಿಂತೇ ಇರುವ ಹಾಗೆ ಕಾಣುತ್ತವೆ ಅವು ಮುಂದಿನ ಕಾಲುಗಳನ್ನು ಊರಿಕೊಂಡು ಹಿಂದಿನ ಕಾಲುಗಳನ್ನು ಎತ್ತಿಕೊಂಡು ಕೂತುಕೊಂಡು ಇರುತ್ತವೆ ಈ ಜಾತಿಯ ಸೊಳ್ಳೆಗಳ ರೆಕ್ಕೆಗಳಲ್ಲಿ ಚುಕ್ಕೆಗಳು ಹೇರಳವಾಗಿ ಇರುತ್ತವೆ; ಅಲ್ಲದೆ ಈ ಸೊಳ್ಳೆಗಳು ಹಗಲಿನಲ್ಲಿ ಎಲ್ಲಿಯೋ ಅವಿತುಕೊಂಡು ಸಂಧ್ಯಾಕಾಲದ ನಂತರವೇ ಹೊರಗೆ ಬಂದು ಮನೆಗಳಲ್ಲಿ ಸೇರಿಕೊಂಡು ಜನರನ್ನು ಕಚ್ಚುವುವು ಈ ಸೊಳ್ಳೆಗಳು ಜೌಗುಪ್ರದೇಶಗಳಲ್ಲಿ ನಿಂತಿರುವ ನೀರಿನಲ್ಲಿಯೂ ಅಲ್ಲದೆ ಸಾಮಾನ್ಯವಾಗಿ ಚಲಿಸದೆ ಒಂದೇಕಡೆಯಲ್ಲಿ ನಿಂತಿರುವ ನೀರಿನಲ್ಲೂ ಮೊಟ್ಟೆಗಳನ್ನು ಇಡುತ್ತವೆ.

ಮಲೇರಿಯಾ ಜ್ವರದಿಂದ ಜನಗಳಲ್ಲಿರುವ ಶಕ್ತಿಯು ನಾಶವಾಗುವುದು ಅವರ ರಕ್ತಪುಷ್ಟಿ ಕಡಮೆಯಾಗುವುದು ಅವರು ಯಾವ ಕೆಲಸಕ್ಕೂ ಬಾರದ ಹಾಗೆ ಬಲಹೀನರಾಗುವರು ಮೈಸೂರು ಸಂಸ್ಥಾನದಲ್ಲಾದರೋ ಅನೇಕ ಕಡೆಗಳಲ್ಲಿ ತತ್ರಾಪಿ ಮಲೆನಾಡು ಡಿಸ್ಟ್ರಿಕ್ಟುಗಳಾದ ಶಿವಮೊಗ್ಗಾ, ಕಡೂರು, ಹಾಸನ ಪ್ರಾಂತಗಳಲ್ಲಿ ಈ ಕಾಯಿಲೆಯ ಹಾವಳಿಯ ದೆಸೆಯಿಂದ ರೈತರ ಶಕ್ತಿಯೇ ಕುಗ್ಗಿಹೋಗಿ ಅನೇಕ ಇತರ ಕಾಯಿಲೆಗಳಿಗೆ ಈಡಾಗಿರುತ್ತಾರೆ

ಮಲೇರಿಯಾ ಜ್ವರವನ್ನು ತಡೆಯಲು ಬಹಳ ಸುಲಭ. ಹ್ಯಾಗೆಂದರೆ ಸೊಳ್ಳೆಗಳ ಉತ್ಪತ್ತಿಗೆ ಅವಕಾಶ ಕೊಡದೆ ಸ್ವಲ್ಪ ಎಚ್ಚರಿಕೆಯಿಂದ ನೋಡಿಕೊಂಡರೆ ಮಲೇರಿಯಾ ಜ್ವರವೇ ಬರುವುದಿಲ್ಲ ಮನೆಗಳ ಅಜೂಬಾಜೂ ಎಲ್ಲಿಯೂ ನೀರು ನಿಂತು ಕೊಳೆಯದಹಾಗೆ ನೋಡಿಕೊಳ್ಳುವುದರಿಂದಲೂ, ಹಾಳು ಇರುವ ಹಳ್ಳಕೊಳ್ಳಗಳನ್ನು ಮಣ್ಣಿನಿಂದ ಭರ್ತಿಮಾಡಿ ಮುಚ್ಚುವುದರಿಂದಲೂ, ಅಥವಾ ನೀರು ಅವಶ್ಯಕವಾಗಿ ನಿಲ್ಲುವ ಕೊಳ, ಕಟ್ಟೆ ಮುಂತಾದುವುಗಳಲ್ಲಿ ವಾರಕ್ಕೆ ಒಂದಾವರ್ತಿ ಪ್ಯಾರಿಸ್ ಗ್ರೀನ್ ಎಂಬ ಪುಡಿಯನ್ನು ಉದುರಿಸುವುದರಿಂದಲೂ, ಅಥವಾ ಸ್ವಲ್ಪ ಸೀಮೆ ಎಣ್ಣೆಯನ್ನು ಚೆಲ್ಲುವುದರಿಂದಲೂ ಸೊಳ್ಳೆ ಮರಿಗಳನ್ನು ಕೊಲ್ಲುವುದರ ಮೂಲಕ ಕಾಯಿಲೆಯನ್ನು ಹೋಗಲಾಡಿಸಬಹುದು. ಕೆರೆಗಳಲ್ಲಿ, ಕೊಳಗಳಲ್ಲಿ ಮತ್ತು ಬಾವಿಗಳಲ್ಲಿ "ಗ್ಯಾಂಬೋಸಿಯಾ" ಎಂಬ ಸಣ್ಣ ಸಣ್ಣ ಮೀನುಗಳನ್ನು ಬಿಡುವುದರಿಂದ ಸೊಳ್ಳೆಮರಿಗಳು ಮೀನುಗಳಿಗೆ ಆಹಾರವಾಗಿ ಸೊಳ್ಳೆಗಳ ಉತ್ಪತ್ತಿ ನಾಶವಾಗುವುದು.

ಮಲೇರಿಯಾ ಜ್ವರದಿಂದುಂಟಾಗುವ ನಷ್ಟ ಪರಂಪರೆಗಳು ಅಧಿಕವಾಗಿರುತ್ತವೆ ರೈತರು ಕೆಟ್ಟರೆ ದೇಶದ ಸಂಪತ್ತೇ ನಾಶ, ದೇಶದ ಸಂಪತ್ತು ಕೆಟ್ಟರೆ ಕ್ಷಾಮ, ಕ್ಷಾಮ ಪ್ರಾಪ್ತವಾದರೆ ಹೇಳಲೇ ಬೇಕಾಗಿಲ್ಲ ಬಾಲಬಾಲಿಕೆಯರು ಈ ಕಾಯಿಲೆಗೆ ತುತ್ತಾಗಿ ನರಳಿದರೆ ವಿದ್ಯಾಭ್ಯಾಸಕ್ಕೆ ಕುಂದುಕ ಉಂಟಾಗುತ್ತದೆ.

ಈ ಮೇಲ್ಕಂಡ ಕಾರಣಗಳಿಂದ ಪ್ರತಿಯೊಬ್ಬರೂ ತಿಳುವಳಿಕೆಯುಳ್ಳವರಾಗಿ ಸೊಳ್ಳೆಗಳ ಉತ್ಪತ್ತಿಗೆ ಅವಕಾಶ ಕೊಡದೆ ಪರಸ್ಪರ ಸಹಾನುಭೂತಿಯಿಂದ ವರ್ತಿಸಿದರೆ ಲೋಕಕ್ಕೆ ಕ್ಷೇಮ

2. ನೊಣಗಳ ಹಾವಳಿ.

ನೊಣವು ಮನುಷ್ಯನಿಗೆ ಅತ್ಯಂತ ಅಪಾಯಕರ. ನೊಣವು ಹೋಗುವ ಕಡೆಗಳಿಗೆಲ್ಲಾ ವಿಷಕ್ರಿಮಿಗಳನ್ನು ತೆಗೆದುಕೊಂಡು ಹೋಗುವುದು. ನೊಣಗಳ ವಾಸಸ್ಥಾನವು ಗೊಬ್ಬರ ಮತ್ತು ಕಶ್ಮಲಗಳಿಂದ ಕೂಡಿರುವ ಜಾಗಗಳು. ಅಂಥ ಜಾಗಗಳಲ್ಲಿ ಬೇಸಗೆ ಕಾಲಗಳಲ್ಲಿ ಲಕ್ಷಾಂತರ ನೊಣಗಳು ಉತ್ಪತ್ತಿಯಾಗುವುವು.

ನೊಣಗಳು ಸಂಚರಿಸುವ ಗಲೀಜು ಜಾಗಗಳನ್ನೆಲ್ಲಾ ವಿವರಿಸಲು ಅಸಾಧ್ಯ ಗೊಬ್ಬರದಿಂದ ಕಕ್ಕಸಿಗೂ ಅಲ್ಲಿಂದ ಬಚ್ಚಲಿಗೂ ನಂತರ ಉಗ್ರಾಣಕ್ಕೂ ಆ ಮೇಲೆ ವಿಷಮಶೀತಜ್ವರದಿಂದ ನರಳುತ್ತಿರುವ ಮನುಷ್ಯನ ಕೊಟಡಿಗೂ ಹೋಗಿ ತೊಟ್ಟಿಲಿನಲ್ಲಿ ಮಲಗಿರುವ ಮಗುವಿನ ತುಟಿಯ ಮೇಲೆ ಕುಳಿತು ನಂತರ ಅವು ಅಡಿಗೆ ಮನೆಯೊಳಕ್ಕೆ ಇಳಿದು ಆಹಾರ ಪದಾರ್ಥಗಳ ಮೇಲೆ ಕುಳಿತುಕೊಳ್ಳುವುವು. ನೊಣಗಳು ಕುಳಿತ ಕಡೆಗಳಲ್ಲೆಲ್ಲಾ ತಮ್ಮ ಮೈ ಮೇಲೂ ಕಾಲುಗಳಲ್ಲಿಯೂ ಇರುವ ವಿಷಕ್ರಿಮಿಗಳನ್ನು ಹರಡುವುವು ಅದರ ವಿಷಯ ಅರಿಯದ ಜನರಿಗೆ ಈ ವಿಷಕ್ರಿಮಿಗಳ ಸಂಗತಿಯು ತಿಳಿಯುವುದಿಲ್ಲ. ಯಾಕೆಂದರೆ ಅಂಥ ಕ್ರಿಮಿಗಳು ಬಹಳ ಸೂಕ್ಷ್ಮವಾಗಿರುವುದರಿಂದ ಅವು ಬರೀ ಕಣ್ಣಿಗೆ ಕಾಣಿಸುವುದಿಲ್ಲ ನೊಣಗಳು ಕಾಲರಾ, ವಿಷಮಶೀತಜ್ವರ, ಆಮಶಂಕೆ, ಭೇದಿ ಮತ್ತು ಕ್ಷಯರೋಗಾದಿಗಳನ್ನು ಹರಡುತ್ತವೆ

ನೊಣಗಳನ್ನು ಕೊಲ್ಲಬೇಕೆಂಬುದೇ ಪ್ರತಿಯೊಬ್ಬರ ಕರ್ತವ್ಯವಾಗಿರಬೇಕು –(1) ಮನೆಗಳ ಬಾಗಿಲುಗಳಿಗೂ, ಕಿಟಕಿಗಳಿಗೂ ಜಾಲರಿ ಹಾಕಿಸಿರಿ (2) ಮನೆಗಳನ್ನು ಶುಚಿಯಾಗಿಡಿರಿ, ಸುತ್ತಮುತ್ತಲು ಎಲ್ಲಿಯೂ ಗಲೀಜು ಇರಲು ಅವಕಾಶ ಕೊಡಬೇಡಿರಿ (3) ಆಹಾರ ಪದಾರ್ಥಗಳನ್ನು ಮುಚ್ಚಿಡಿರಿ (4) ಬಜಾರಿನಲ್ಲಿ ತೆರೆದು ಇಟ್ಟಿರುವ ಆಹಾರ ಪದಾರ್ಥಗಳನ್ನು ಕೊಂಡುಕೊಳ್ಳಬೇಡಿರಿ (5) ನೊಣಗಳನ್ನು ನಾಶಮಾಡಿರಿ.

ಮಹಾದೇವಿ ಗರ್ಲ್‌ಸ್ಕೂಲು ಗುಲಬುರ್ಗಾ

೧೨೦೦೦ ರೂ. ಸ್ತುತ್ಯದಾನ

ಶ್ರೀಮಾನ್ ದೊಡ್ಡಪ್ಪ ಅಪ್ಪ ಉರ್ಫ್ ಶ್ರೀ ಶರಣಬಸವೇಶ್ವರ ಸಂಸ್ಥಾನ ಗುಲಬರ್ಗಾ ಇವರು ತಮ್ಮ ಜ್ಯೇಷ್ಠ ಪುತ್ರಿಯರಾದ ಕೈ|| ಸೌ|| ಮಹಾದೇವಮ್ಮನವರ ಸ್ಮರಣಾರ್ಥವಾಗಿ ಬಹ್ಮಪುರದಲ್ಲಿ ಒಂದು ಕನ್ಯಾಶಾಲೆಯನ್ನು ಸ್ಥಾಪಿಸಿ ೮ ವರ್ಷಗಳಾದವು. ಇಂದಿನವರೆಗೂ ಈ ಶಾಲೆಯು ಶ್ರೀಮಾನ್ ಯಜಮಾನರ ನೇತೃತ್ವದಲ್ಲಿ ಮಾನ್ಯ ಸರಕಾರದವರಿಂದ ಗ್ರ್ಯಾಂಟನ್ನು ಪಡೆದು ಒಳ್ಳೆ ಯಶಸ್ವಿಯಾಗಿ ನಡೆಯುತ್ತ ಬಂದಿದೆ. ಮಾನವನನ್ನು ಸುಶಿಕ್ಷಿತನನ್ನಾಗಿ ಮಾಡಬೇಕಾದರೆ ಶಿಕ್ಷಣವೇ ಮೂಲ ಕಾರಣವು ಅದರಲ್ಲಿ ಸ್ತ್ರೀ ಶಿಕ್ಷಣವು ಹಿಂದುಳಿದ ಸ್ತ್ರೀ ಸಮಾಜವನ್ನು ಮುಂದುವರಿಸಲು ಹೆಚ್ಚು ಪ್ರಯೋಜನಕಾರಿಯಾಗಿರುವುದು ಆದುದರಿಂದಲೇ ಯಜಮಾನರು ತಮ್ಮ ಓಣಿಯಲ್ಲಿ ಸರಕಾರದವರಿಂದಾಗಲಿ ಅಥವಾ ಜನತೆಯಿಂದಾಗಲಿ ಹೆಣ್ಣುಮಕ್ಕಳಿಗೆ ಶಿಕ್ಷಣ ಪಡೆಯಲು ಅನುಕೂಲವಿಲ್ಲದ್ದನ್ನು ನೋಡಿ ಮನಕರಗಿ ತಮ್ಮ ಮಗಳ ಹೆಸರಿನಿಂದ ಈ ಕನ್ಯಾ ಶಾಲೆಯನ್ನು ಸ್ಥಾಪಿಸಿ ಅದರ ಮೂಲಕ ಸ್ತ್ರೀ ಶಿಕ್ಷಣ ಪ್ರಸಾರ ಮಾಡುವ ಮಹಾಕಾರ್ಯವನ್ನು ಕೈಕೊಂಡರು ಸದ್ಯಃ ಈ ಶಾಲೆಯಲ್ಲಿ ೫ ನೆಯ ಇಯತ್ತೆಯವರೆಗೂ ಅಭ್ಯಾಸವಾಗುತ್ತಿದ್ದು ೧೫೦ ಹುಡುಗಿಯರು ಪ್ರತಿವರ್ಷ ಕನ್ನಡ, ಮರಾಠಿ, ಉರ್ದು ಮತ್ತು ಇಂಗ್ಲಿಷ್ ಶಿಕ್ಷಣ ಪಡೆದು ಪಾಸಾಗಿ ಹೈಸ್ಕೂಲಿಗೆ ಸೇರುತ್ತಿದ್ದಾರೆ ಮತಾಭಿಮಾನವಿಲ್ಲದೆ ಎಲ್ಲ ಜಾತಿಯವರಿಗೂ ಸಮಾನ ಶಿಕ್ಷಣ ಕೊಡುವ ಮಹದ್ಧ್ಯೇಯವನ್ನಿಟ್ಟುಕೊಂಡ ಶಾಲೆಗಳಲ್ಲಿ ಇದೊಂದು ಆದರ್ಶಶಾಲೆಯಾಗಿದೆ. ಯಜಮಾನರ ಧರ್ಮಪತ್ನಿಯವರಾದ ಸೌ|| ಗೋದಾಬಾಯಿಯವರು ಶಾಲೆಯ ಮೇಲ್ವಿಚಾರಣೆಯನ್ನು ನೋಡುತ್ತಿರುವರು

ಈ ಶಾಲೆಯನ್ನು ಸ್ಥಾಪಿಸುವಾಗ್ಗೆ ರಾವ ಬಹದೂರ್ ನಾಗಪ್ಪ ಅಣ್ಣಾ ಅಬಮಲ್ ಪುರಕರ ಸೋಲಾಪುರ ಇವರ ಧರ್ಮಪತ್ನಿಯವರಾದ ಕೈ|| ಸೌ|| ಗೌರಮ್ಮನವರು ಇಲ್ಲಿಗೆ ಆಗಮಿಸಿದ್ದರು. ಯಜಮಾನರ ಶುಭಹಸ್ತದಿಂದ ಸ್ತ್ರೀ ಶಿಕ್ಷಣಕ್ಕೆ ಒದಗುವ ಮಹಾ ಸಾಹಸ

ವನ್ನು ಕಣ್ಣಾರೆ ಕಂಡು ತಾವು ಅವಕ್ಕೆ ಬಂಬಲಕೊಟ್ಟು ಚಿರಕಾಲ ನಡೆಯುವಂತೆ ಪ್ರೇರಿಸಿದರು

ಸೌ|| ಶಿವಮ್ಮನವರು ಒಳ್ಳೆ ಸದ್ಗುಣಗಳುಳ್ಳ ಪರಮ ಪತಿವ್ರತೆಯರಾಗಿದ್ದುದಲ್ಲದೆ ತಮ್ಮ ತಾಯಿಯವರ ಕಡೆಯಿಂದ ಶ್ರೀ ಶರಣ ಬಸವೇಶ್ವರ ಸಂಸ್ಥಾನಾಧಿಪತಿಗಳ ಹಾಗೂ ಯಜಮಾನರ ಮನೆತನಕ್ಕೆ ಸಂಬಂಧ ಪಟ್ಟವರಾಗಿದ್ದರು ಅವರಲ್ಲಿ ಶಿವಶರಣೆಯರ ಮಹಾತ್ಮ್ಯ ಗುಣವೂ ಸತ್ಸಂಭಾವನೆಯೂ ಯಾವಾಗಲೂ ಒಡೆದು ತೋರುತ್ತಿದ್ದವು ದೈವವಶಾತ್ ಇವರಿಗೆ ರಕ್ತಕ್ಷಯವೆಂಬ ರೋಗವುಂಟಾಗಿ ೧೯೪೩ ಸೌ|| ಮಾ|| ೪ ದಿವಸ ಶಿವೈಕ್ಯರಾದರು. ಅವರು ತಮ್ಮ ಅಂತ್ಯಕಾಲದಲ್ಲಿ ಕಲಬುರ್ಗಿಯಿಂದ ಶ್ರೀ ಯಜಮಾನರನ್ನು ಸಾನ್ನಿಧ್ಯಕ್ಕೆ ಬರಮಾಡಿಕೊಂಡು ಈ ಶರೀರವು ಅಸ್ಥಿರವಾದದ್ದು ತಾವು ಸ್ಥಾಪನೆ ಮಾಡಿದ ಮಹಾದೇವಿ ಸ್ಕೂಲು ಸುವ್ಯವಸ್ಥಿತವಾಗಿ ನಡೆಯಲೆಂದು ಹೇಳಿ ೧೩೦೦೦ ರೂ ಗಳ ನಿಧಿಯನ್ನು ಯಜಮಾನರ ಕೈಯಲ್ಲಿ ಕಾಣಿಕೆಯಾಗಿ ಕೊಟ್ಟರು ಹೆಣ್ಣುಹುಡುಗಿಯರ ಶಿಕ್ಷಣವೇ ನನ್ನ ಆಸೆಯ ಉದ್ದೇಶವೆಂದು ತೃಪ್ತಿಪೂರ್ವಕವಾಗಿ ಹೇಳಿದರು ವೀರ ಮಾತೆಯ ಜಡದೇಹವು ಕಣ್ಮರೆಯಾಯಿತು ಆದರೆ ಅವರ ತೇಜೋಮಯವಾದ ಕೀರ್ತಿಯು ಅಜರಾಮರವಾಗಿದೆ ಶ್ರೀ ಪರಮೇಶ್ವರನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ

ರಾವ ಬಹದೂರ್ ನಾಗಪ್ಪಣ್ಣನವರು ತಮ್ಮ ಧರ್ಮ ಪತ್ನಿಯವರ ಸದಿಚ್ಛೆಯು ನಿರಾತಂಕವಾಗಿಯೂ ಸುರಕ್ಷಿತವಾಗಿಯೂ ಸಾಗುವಂತೆ ಆ ಹಣದಿಂದ ಶ್ರೀ ಶರಣ ಬಸವೇಶ್ವರ ದೇವಾಲಯದ ಸಮೀಪದಲ್ಲಿ ಒಂದು ಫಲವತ್ತಾದ ತೋಟವನ್ನು ಖರೀದಿಗೆ ತೆಗೆದುಕೊಂಡು ಅದರ ಉತ್ಪನ್ನವೆಲ್ಲವೂ ಮಹಾದೇವಿ ಸ್ಕೂಲಿಗೆ ಸಲ್ಲಬೇಕೆಂದು ಅದನ್ನು ಯಜಮಾನರ ಹೆಸರಿನಿಂದ ರಿಜಿಸ್ಟರ ಮಾಡಿಕೊಟ್ಟರು ಕೀರ್ತಿವಂತರಾದ ರಾವ ಬಹದ್ದೂರರಿಗೆ ದೇವರು ಚಿರಾಯುಷ್ಯವನ್ನು ಕೊಡಲಿ

ಷಡಕ್ಷರಯ್ಯ ಕಲ್ಯಾಣಪುರಮಠ

— [illegible] —

ವಿವಾಹ ಮಹೋತ್ಸವ ಸಮಾರಂಭ
ಅಂಕಸದಡ್ಡಿ

ನಿಜಾಂ ಇಲಾಖೆ ರಾಯಚೂರು ಜಿ|| ಅಂಕಸದಡ್ಡಿ ಕೇಣೀದ ಮ|| ರಾ|| ನಾಗಪ್ಪನವರ ಅಳಿಯಂದಿರಾದ ಚಿ|| ವೀರಪ್ಪ ಆಶಿನಾ - ಇವರಿಗೆ ಕನಕಗಿರಿ ಗುಗ್ಗಳಶೆಟ್ಟಿ ಮ|| ರಾ|| ಹಿರೇಬಸಪ್ಪನವರ ಪುತ್ರಿ ಚಿ|| ಸೌ|| ಗೌರಮ್ಮನನ್ನು ಕೊಟ್ಟು ಫಾಲ್ಗುಣ ಬಹುಳ ೧೩ ಶುಕ್ರವಾರ ದಿವಸ ನಾಗಪ್ಪನವರ ಸ್ವಗೃಹದಲ್ಲಿ ವಿವಾಹಮಹೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿತು ಈ ಮಹೋತ್ಸವಕ್ಕೆ ಕನಕಗಿರಿ ಹಿರೇಮಠದ ಶ್ರೀ|| ಷ|| ಬ್ರ|| ಪಂಚಾಕ್ಷರಶಿವಾಚಾರ್ಯ ಸ್ವಾಮಿಗಳು ದಯಮಾಡಿಸಿದ್ದರು ಅಂದು ವೀರಶೈವ ಮತಸ್ಥಾಪಕರಾದ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತಿಯಿದ್ದ ಮೂಲಕ ಶ್ರೀಗಳ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯರ ದಿವ್ಯ ವಿಗ್ರಹಕ್ಕೆ ಪಂಡಿತ ಶ್ರೀ ವಿರುಪಾಕ್ಷಶಾಸ್ತ್ರಿಗಳು ತುರುವಿಹಾಳ ಮಠ ಗುಂಜಳ್ಳಿ ಇವರ ವೈದಿಕತ್ವದಲ್ಲಿ ಏಕಾದಶ ರುದ್ರಾಭಿಷೇಕವು ಸಹಸ್ರ ಬಿಲ್ವಾರ್ಚನೆಯೂ ಗಣಾರಾಧನೆಯೂ ನಡೆಯಿತು ತರುವಾಯ ಪಂಚಕಲಶಸ್ಥಾಪನಪೂರ್ವಕ ಹಿರೇಮಠದ ವೇ|| ಅಮರಯ್ಯನವರು ವೇ|| ವಿರುಪಾಕ್ಷ ಶಾಸ್ತ್ರಿಗಳು ಮೊದಲಾದವರ ಪೌರೋಹಿತ್ಯದಿಂದ ವಿವಾಹ ಕಾರ್ಯವು ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು ಈ ಮಂಗಲ ಮಹೋತ್ಸವವನ್ನು ಮ|| ರಾ|| ಸಂಗಪ್ಪ ನಗರದ, ನೀಲಕಂಠಪ್ಪ ಕೇಣೀದ, ಗುಂಡಪ್ಪ ಕೇಣೀದ ಮೊದಲಾದವರು ವೈಭವದಿಂದ ನೆರವೇರಿಸಿ ತಮ್ಮ ಪಾಲಿಗೆ ಕೀರ್ತಿಯನ್ನು ತಂದುಕೊಂಡರು ವೀರಶೈವ ಮತೋದ್ಧಾರಕ್ಕಾಗಿ ಹೋರಾಡುತ್ತಿರುವ ಪಂಚಾಚಾರ್ಯಪ್ರಭಾಪೋಷಣಕ್ಕಾಗಿ ಶ್ರೀ ಪಂಚಾಕ್ಷರ ಶಿವಾಚಾರ್ಯರು ೨ ರೂ ಗಳನ್ನು ತೆಗೆಯಿಸಿದರು ಶ್ರೀ ಜಗದಾಚಾರ್ಯರು ವಧೂವರರಿಗೆ ನಿತ್ಯ ಮಂಗಲವನ್ನೀಯಲೆಂದು ಹಾರೈಸುವ,

ಮಹಾಂತಪ್ಪ, ಕೇಣೀದ ಅಂಕಸದಡ್ಡಿ

|| ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ||

ವಿವಾಹಮಹೋತ್ಸವ

ತರೀಕೆರೆ ತಾ|| ಬುಕ್ಕಾಂಬುಧಿ ಗ್ರಾಮದಲ್ಲಿರುವ ಶಿವಣ್ಣನವರ ಚನ್ನಪ್ಪನವರ ಗೃಹದಲ್ಲಿ ಇವರ ಪುತ್ರಿ ಚಿ|| ಸೌ|| ದೊಡ್ಡಪುಟ್ಟಮ್ಮ ಎಂಬ ವಧುವಿಗೂ ಚಿಕ್ಕನಲ್ಲೂರು ಮ|| ರಾ|| ಭಂಗಿ ಮುರಿಗಪ್ಪನವರ ಪುತ್ರ ಚಿ|| ದೊಡ್ಡಬಸವರಾಜಪ್ಪ ಎಂಬ ವರನಿಗೂ ಚೈತ್ರ ಬ|| ೯ (ತಾ|| 28 4 1943) ಬುಧವಾರ ದಿವಸ ಪಾಣಿಗ್ರಹಣ ಮಹೋತ್ಸವವೂ ಶ್ರೀ ಬಿಲ್ವವೃಕ್ಷದೀಕ್ಷಾ ಸಂಸ್ಕಾರವೂ ಹೊಳಲ್ಕೆರೆ ಶ್ರೀ ಹಾಲಸಿದ್ಧೇಶ್ವರ ಮಠಾಧ್ಯಕ್ಷ ಶ್ರೀ ಚರಮೂರ್ತಿಸ್ವಾಮಿಗಳವರ ನೇತೃತ್ವದಲ್ಲಿ ವೇ|| ಮಠದ ಪುಟ್ಟಯ್ಯನವರ ಪೌರೋಹಿತ್ಯದಿಂದ ವಿಧ್ಯುಕ್ತವಾಗಿ ವಿಶೇಷ ವೈಭವದೊಡನೆ ನೆರವೇರಿದವು ನೂತನ ವಧೂವರರ ಶ್ರೇಯೋಭಿವೃದ್ಧಿಗಾಗಿ ಶ್ರೀ ರಂಭಾಪುರೀ ಜಗದ್ಗುರು ಮಹಾಸನ್ನಿಧಿಯಿಂದ ಅನುಗ್ರಹಿಸಲ್ಪಟ್ಟ ಆಶೀರ್ವಚನ ನಿರೂಪವನ್ನು ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಓದಿ ಹೇಳಿದರು ಅಗ್ಗೆ ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೨ ರೂ ಗಳು ಸಮರ್ಪಿಸಲ್ಪಟ್ಟವು ಶಾಸ್ತ್ರಿಗಳವರಿಂದ ಅದೇ ದಿವಸ “ಮಹಾತ್ಮ ಮಂತ್ರಜಾತಾರ್ಯ” ಎಂಬ ಕೀರ್ತನೆಯೂ ಮರುದಿವಸ ಸಾಧ್ವೀಶಿರೋಮಣಿ ಸುಕನ್ಯಾದೇವಿ” ಎಂಬ ಕೀರ್ತನೆಯೂ ಬಹು ಸರಸವಾಗಿ ನಡೆದು ಸರ್ವರೂ ಆನಂದಭರಿತರಾದರು ಈ ಸಮಾರಂಭಕ್ಕಾಗಿ ಅನೇಕ ಜನ ಪ್ರಮುಖರೂ ಬಂಧುಮಿತ್ರರೂ ಆಗಮಿಸಿದ್ದರು ಬಿ ಸಿ ವಿರೂಪಾಕ್ಷಪ್ಪ, ಸಿ ಬಿ ಮುರಿಗಪ್ಪ, ಹೆಚ್ ಹಾಲಪ್ಪ, ಬಿ ಕೆ ಮರುಳಪ್ಪ, ಹೆಚ್ ಹಾಲಸಿದ್ದಪ್ಪ, ಬಿ ಗುರುಸಿದ್ದಪ್ಪ. ಸಿ ಬಿ ಕರಿಸಿದ್ದಪ್ಪ, ಪಿ ತಿಪ್ಪೆ ರುದ್ರಪ್ಪ ಇವರುಗಳ ಕಾರ್ಯದಕ್ಷತೆಯು ಶ್ಲಾಘನೀಯವಾಗಿತ್ತು ಶ್ರೀ ಜಗದ್ಗುರು ಪಂಚಾಚಾರ್ಯರು ನೂತನ ವಧೂವರರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಹಾರೈಸುವ,

ವಿವಾಹಮಹೋತ್ಸವಭಾಗಿ

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಬಂಧುತ್ವ ಬಹು ಬಣ್ಣಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾ ವಿಧ ಬಣ್ಣಗಳಿಂದ ಮುದ್ರಿತವಾದದ್ದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಅಗಸ್ತ್ಯ, ದಧೀಚಿ ವ್ಯಾಸ ನಾರದ ದುರ್ವಾಸ ಮಹರ್ಷಿಗಳಿಗೆ ಶಿವದೀಕ್ಷಾ ತತ್ವವನ್ನು ಉಪದೇಶಿಸುವ ಫೋಟೋ ಸೈಜು ೨೦ × ೧೪ ಬೆಲೆ	೦—೨—೬
[illegible] ಮಾಡಿದಂತಕ್ಕೆ ಇವರು ಆಚಾರ್ಯರು ಬಾವದಲ್ಲಿಯೇ ಇರುವ ಫೋಟೋ ಸೈಜು ೧೪ × ೧೮ ಬೆಲೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದುದ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಪರ್ಣಕುಟೀರದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದದ್ದು) ಸೈಜು ೧೪ × ೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ನಿಂತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ—ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ ಕಳುಹಿಸುವುದಕ್ಕಾಗುವುದಿಲ್ಲ ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮವೆತ್ತಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸಂಸ್ಕೃತದ ಸಿದ್ಧಾಂತ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವರುಗಳಿಗೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದವರಿಗೆ ಈ ವಿಸ್ತೃತ ವ್ಯಾಖ್ಯಾನದ ಮಹತ್ತ್ವವು ವೇದ್ಯವಾಗುವುದು ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ. ೧೨ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೭ನೇ ಮೇ ೧೯೪೩ [ಸಂಚಿಕೆ ೨

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ಬಸವಾಪಟ್ಟಣ

ಶಿವಮೊಗ್ಗಾ ಡಿ|| ಚನ್ನಗಿರಿ ತಾ|| ಬಸವಾಪಟ್ಟಣದಲ್ಲಿ ಪ್ರತಿ ವರ್ಷ ಪದ್ಧತಿಯ ಪ್ರಕಾರ ವೈಶಾಖ ಶು|| ೩ ಶುಕ್ರವಾರ (7 5 43) ಮತ್ತು ಇದೇ ವೈಶಾಖ ಶು|| ೫ ಭಾನುವಾರ (9 5 43) ದಿವಸಗಳಲ್ಲಿ ವೀರಶೈವ ಮತ ಸ್ಥಾಪಕರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಹಾಗೂ ದಾರುಕಾಚಾರ್ಯರ ಜಯಂತೀ ಮಹೋತ್ಸವಗಳನ್ನು ಊರಿನ ಸಮಸ್ತ ಗುರುಭಕ್ತಾದಿಗಳೂ, ಪರಮತೀಯರೂ ಬಹು ವೈಭವದಿಂದ ಜರುಗಿಸಿದರು ಪ್ರಾತಃಕಾಲ ಮಧ್ಯಾಹ್ನಗಳಲ್ಲಿ ತಳಿರುತೋರಣಗಳಿಂದ ಅಲಂಕರಿಸಿದ ಶ್ರೀ ಹಾಲಸ್ವಾಮಿಯ ಗದ್ದುಗೆಯಲ್ಲಿ ಶ್ರೀ ಜಗದಾಚಾರ್ಯರ ಲಿಂಗೋದ್ಭವ ಭಾವಚಿತ್ರಗಳಿಗೆ ಷೋಡಶೋಪಚಾರ ಪೂಜೆನಡೆದು ಸಾಯಂಕಾಲ 4 ಘಂಟೆಗೆ ಪಲ್ಲಕ್ಕಿಯಲ್ಲಿ ಉತ್ಸವವು ಶ್ರೀ ಹಾಲಸ್ವಾಮಿಯ ಗದ್ದುಗೆಯಿಂದ ಬಾಲಕರ ನೃತ್ಯ ಗಾನಗಳಿಂದಲೂ, ಆನೇಗೋಡು ಮಠದ ವೇ|| ಹಾಲಸಿದ್ದಯ್ಯನವರ ಶ್ರೀ ಜಗದಾಚಾರ್ಯರ ಲೀಲಾಭಜನೆಗಳಿಂದಲೂ, ಅತ್ಯಂತ ವೈಭವದಿಂದ ಹೊರಟಿತು ಸ್ವಲ್ಪದೂರ ಉತ್ಸವವು ಸಾಗಿದಮೇಲೆ, ಗಾಳಿ-ಧೂಳಿನಿಂದಲೂ, ಗುಡುಗು ಮಿಂಚುಗಳಿಂದಲೂ ವಿಪರೀತ ಭಯಂಕರವಾಯಿತು ಇದನ್ನು ನೋಡಿ ಸಮಸ್ತ ಗುರುಭಕ್ತಾದಿಗಳು ಭಯಪಟ್ಟು ಶ್ರೀ ಜಗದಾಚಾರ್ಯರ ಉತ್ಸವಕ್ಕೆ ಎಲ್ಲಿ ವಿಘ್ನವಾಗುವುದೊ ಎಂದು ಚಿಂತಿಸತೊಡಗಿದರು. ಆದರೆ ಶ್ರೀ ಜಗದಾಚಾರ್ಯರ ಮಹಿಮಾಪ್ರಭಾವದಿಂದಲೂ, ಶ್ರೀ ಜಗದ್ಗುರು ಪಂಚಾಚಾರ್ಯರ ಜಯಘೋಷವು ನಭೋಮಂಡಲವನ್ನು ವ್ಯಾಪಿಸಿದ್ದರಿಂದಲೂ ಮಳೆ, ಗಾಳಿ, ಗುಡುಗು, ಮಿಂಚುಗಳ ಆರ್ಭಟವು ಸ್ವಲ್ಪ ಕಡಿಮೆಯಾಯಿತು ಇದನ್ನು ನೋಡಿ ಸಮಸ್ತ ಭಕ್ತಾದಿಗಳೂ ಆಶ್ಚರ್ಯಪಟ್ಟು ಉತ್ಸವವನ್ನು ಇನ್ನೂ ಇಮ್ಮಡಿಯಾಗಿ ಊರಿನಲ್ಲೆಲ್ಲಾ ಮಾಡಿ ಅದೇ ಊರಿನಲ್ಲಿರುವ ಶ್ರೀ ದುರ್ಗಾದೇವಿಯ ದೇವಸ್ಥಾನಕ್ಕೆ ಹೋಗಿ ಮಂಗಳಾರತಿ ಮುಗಿಸಿಕೊಂಡು ರಾತ್ರಿ ೧೦||| ಗಂಟೆಗೆ ಪುನಃ ಶ್ರೀ ಹಾಲಸ್ವಾಮಿಯ ಗದ್ದುಗೆಗೆ ಮುಟ್ಟಿಸಿದರು ಬೀದಿಗಳಲ್ಲಿ ಭಕ್ತಮಂಡಳಿಯವರು ಮಂಗಳಾರತಿ ಕಾಯಿ ಕರ್ಪೂರಗಳನ್ನೊಪ್ಪಿಸಿ ಫಲಾಶೀರ್ವಾದಗಳನ್ನು ಪಡೆಯುತ್ತಿದ್ದರು

ಈ ಶ್ರೀ ಜಗದಾಚಾರ್ಯರ ಮಹಾಕಾರ್ಯಕ್ಕೆ ಬದ್ಧಕಂಕಣರಾದ ಹಾಲಸ್ವಾಮಿ ಮಠದ ವೇ|| ನಂಜುಂಡಪ್ಪಯ್ಯನವರು, ಆನೆಗೋಡು ಮಠದ ವೇ|| ಸಂಗಪ್ಪಯ್ಯನವರು, ಮ|| ರಾ|| ಪಟೇಲ್ ಹಾಲಪ್ಪನವರು, ಮ|| ರಾ|| ಶ್ಯಾನುಭೋಗ್ ಪಟೇಲ್ ಹಾಲಪ್ಪನವರು, ಮ|| ರಾ|| ಉಬ್ರಾಣಿ ವೀರಭದ್ರಪ್ಪನವರು, ಮ|| ರಾ|| ದಾನಪ್ಪನ ಬಸಪ್ಪನವರು, ಮ|| ರಾ|| ಹೆಚ್ ಹಾಲಪ್ಪನವರು, ಮ|| ರಾ|| ಎಲಿಗಾರಸಿದ್ದಲಿಂಗಪ್ಪನವರು ಇವರುಗಳಿಗೂ ಮತ್ತು ಈ ಊರಿನ ಸಮಸ್ತ ಭಕ್ತಾದಿಗಳಿಗೂ ಶ್ರೀ ಜಗದಾಚಾರ್ಯರು ಆಯುರಾರೋಗ್ಯಭಾಗ್ಯವನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಗುರುಭಕ್ತ,

ಕಲುಕೋಟಿ

ಕರಜಗಿ ತಾ|| ಕಲಕೋಟಿ ಗ್ರಾಮದಲ್ಲಿರುವ ಬಣಕಾರ (ಕಳ್ಳಿ) ಲಿಂಗಪ್ಪನವರ ಮೈಯಲ್ಲಿ ವಿಶೇಷ ಶೂಲಿ ಇದ್ದು ಅನೇಕ ಔಷಧೋಪಚಾರಗಳಿಂದಲೂ ಗುಣಹೊಂದದೆ ಇದ್ದುದರಿಂದ ಅಲ್ಲಿಗೆ ಒಂದು ತಿಂಗಳ ಪೂರ್ವದಲ್ಲಿ ಶ್ರೀಮಾನ್ ಶಿವಯೋಗಿ ಶ್ರೀ ಹಾಲಮಠೀಸ್ವಾಮಿಗಳು ಪುರವರ್ಗಮಠ ಶಿವಪುರ ಈ ಮಹಾತ್ಮರ ದಿವ್ಯಾಗಮನವಾಗಲು ಸದರಿ ಕಳ್ಳಿ ಲಿಂಗಪ್ಪನವರು ಬಂದು ಶ್ರೀಗಳವರ ಪಾದಸನ್ನಿಧಿಯಲ್ಲಿ ತನ್ನ ಕಾಯಿಲೆ ಗುಣಮುಖವಾಗದೆ ಇರುವದನ್ನು ಅರಿಕೆ ಮಾಡಿಕೊಳ್ಳಲು ಶ್ರೀಗಳು ನಿನ್ನ ಕಾಯಿಲೆಯು ಶ್ರೀ ಜಗದಾಚಾರ್ಯರ ಸೇವೆಯಿಂದ ಗುಣವಾಗುವದು, ಶ್ರೀ ಜಗದ್ಗುರು ಪಂಚಾಚಾರ್ಯರ ನಾಮಸ್ಮರಣಪೂರ್ವಕವಾಗಿ ಈ ಭಸ್ಮವನ್ನು ಸೇವಿಸುತ್ತಿರು ಮುಂದೆ ವೈಶಾಖ ಶುದ್ಧದಲ್ಲಿ ಉಭಯ ಮಹಾಚಾರ್ಯರ ಜಯಂತ್ಯುತ್ಸವವಿದೆ ಅದಕ್ಕೆ ನೀನು ಮಹಾಚಾರ್ಯರ ಜಯಂತಿಯನ್ನು ಮಾಡು ಹಾಗಾದರೆ ನಿನ್ನ ರೋಗವು ಗುಣಹೊಂದುವದೆಂದು ಮಹಾತ್ಮರು ಭಸ್ಮವನ್ನಭಿಮಂತ್ರಿಸಿ ಕೊಡುತ್ತಾ ಪಂಚಾಕ್ಷರಿ ಮಂತ್ರೋಪದೇಶ ಮಾಡಿದರು ಆ ಪ್ರಕಾರವಾಗಿ ಗುರು ಆಜ್ಞೆಯನ್ನು ಶಿರಸಾವಹಿಸಿ ನಡಸುತ್ತಾ ಬಂದುದರಿಂದ ಸದರಿ ಲಿಂಗಪ್ಪನವರಿಗೆ ರೋಗವೆಲ್ಲಾ ಪರಿಹಾರವಾಗಲು ಮಹಾಸ್ವಾಮಿಗಳ ಆಜ್ಞಾ ಪ್ರಕಾರ ಶ್ರೀಜಗದಾಚಾರ್ಯರ ಜಯಂತಿಯನ್ನು ವೈಶಾಖ ಶು|| ೩ ರಲ್ಲು ಶು|| ೫ ರಲ್ಲು ಅತಿವೈಭವದಿಂದ ನೆರವೇರಿಸಿ ಶ್ರೀ ರುದ್ರಾಭಿಷೇಕ ಮಹೇಶ್ವರ ಸಂತರ್ಪಣೆಮಾಡಿ ಶ್ರೀ ಜಗದ್ಗುರು ಏಕೋರಾಮ ಶ್ರೀ ಜಗದ್ಗುರು ದಾರುಕಾಚಾರ್ಯರ ಕೃಪೆಗೆ ಪಾತ್ರರಾಗಿರುತ್ತಾರೆ

ಓರ್ವ ಗುರುಭಕ್ತ

ಚಿಲಕನಹಟ್ಟಿ

ಬಳ್ಳಾರಿ ಡಿ|| ಹೊಸಪೇಟೆ ತಾಲೂಕು ಚಿಲಕನಹಟ್ಟಿ ಪಂಚಗೃಹಮಠದಲ್ಲಿ ಇದೇ ವೈಶಾಖ ಶು|| ೩ ಶುಕ್ರವಾರ ಜಗದ್ಗುರು ಏಕೋರಾಮರ ಜಯಂತಿಯನ್ನೂ ಶುದ್ಧ|| ೫ ಆದಿತ್ಯವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನು ಅತ್ಯಂತ ವೈಭವದಿಂದ ನೆರವೇರಿಸಲಾಯಿತು ಈ ಉಭಯ ದಿವಸಗಳಲ್ಲೂ ಶ್ರೀಲಿಂಗೋದ್ಭವ ಭಾವಚಿತ್ರಗಳನ್ನು ಉನ್ನತಸ್ಥಾನದಲ್ಲಿ ಸ್ಥಾಪಿಸಿ ಶ್ರೀಶಿವಸಹಸ್ರನಾಮದ್ವಾರ ಸಹಸ್ರಬಿಲ್ವಾರ್ಚನವನ್ನು ನಡೆಸಲಾಯಿತು ಪೂಜಾನಂತರ ಸದ್ರಿ ಮಠದಲ್ಲಿಯೇ ಗಣಸಂತೃಪ್ತಿಯಾಗಿ ಆದಿನವೇ ಸಾಯಂಕಾಲಕ್ಕೆ ಸೇರಿದ ಸಭಾಂಗಣದಲ್ಲಿ ಪಿ ಎಂ ಸಣ್ಣಕೊಟ್ರಪ್ಪಯ್ಯಶಾಸ್ತ್ರಿಗಳು ಆದಿಗುರುಗಳ ಭಕ್ತಿವಿಷಯವಾಗಿಯೂ ಅಷ್ಟಾವರಣಗಳ ವಿಷಯವಾಗಿಯೂ ಸ್ತ್ರೀಧರ್ಮನೀತಿಯನ್ನು ಕುರಿತು ವಿವರಿಸಿದರು. ಮಂಗಲವಾದನಂತರ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟಿತು ಶ್ರೀಜಗದ್ಗುರು ಪಂಚಾಚಾರ್ಯ ಗುರುಸಾರ್ವಭೌಮರ ಜಯಕಾರದೊಡನೆ ಸಭೆ ವಿಸರ್ಜಿಸಲ್ಪಟ್ಟಿತು

ಓರ್ವ ಗುರುಭಕ್ತ.

ಹಾರನಹಳ್ಳಿ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬೀ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಗೃಹದಲ್ಲಿ ಇದೇ ವೈಶಾಖ ಶು|| ೩ ಶುಕ್ರವಾರ ಶ್ರೀ ಜಗದ್ಗುರು ಏಕೋರಾಮಾರಾಧ್ಯರ, ೫ ಭಾನುವಾರ ಶ್ರೀ ಜಗದ್ಗುರು _ ದಾರುಕಾಚಾರ್ಯರ ಭಾವ ಚಿತ್ರಗಳನ್ನು ವಿಧ್ಯುಕ್ತವಾಗಿ ಪೂಜಿಸಿ ಅಷ್ಟೋತ್ತರ ಶತನಾಮಾವಳಿಯನ್ನು ಪಠಿಸಿ ವಂದಿಸಿ ಪ್ರಸಾದವನ್ನು ವಿನಿಯೋಗಿಸಿದರು ಈ ಉಭಯ ದಿವಸ ಸಾಯಂಕಾಲ ಧಾರ್ಮಿಕೋಪನ್ಯಾಸಗಳನ್ನು ಮಾಡಿ ಸರ್ವರನ್ನೂ ಆನಂದಗೊಳಿಸಿದರು

ಓರ್ವ ಗುರುಭಕ್ತ

॥ ಶ್ರೀ ಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಚೌಲೋಪನಯನ ಮಹೋತ್ಸವ

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳವರು ತಮ್ಮ ಪುತ್ರ ಚಿ|| ರಾ|| ಶಿವಾನಂದಸ್ವಾಮಿಗೆ ಇದೇ ವೈಶಾಖ ಶು|| ೩ ಶುಕ್ರವಾರ ಶುಭಮುಹೂರ್ತದಲ್ಲಿ ಚೌಲೋಪನಯನ ಸಂಸ್ಕಾರ ಮಂಗಳಕಾರ್ಯವನ್ನು ವಿಧ್ಯುಕ್ತವಾಗಿ ವಿಶೇಷ ವೈಭವದಿಂದ ನೆರವೇರಿಸಿದರು ಈ ನೂತನ ವಟುವಿನ ಉತ್ತರೋತ್ತರಾಭಿವೃದ್ಧಿಗಾಗಿ ಶ್ರೀ ರಂಭಾಪುರೀ ಜಗದ್ಗುರು ಮಹಾ ಸನ್ನಿಧಿಯಿಂದ ಅನುಗ್ರಹಿಸಲ್ಪಟ್ಟ ಆಶೀರ್ವಚನ ನಿರೂಪವನ್ನು ವೇ|| ಬ್ರಹ್ಮಸಂದ್ರದ ಮಠದ ವೀರಾರಾಧ್ಯರು ಓದಿ ಹೇಳಿದರು. ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೧ ರೂ. ಸಮರ್ಪಿಸಲ್ಪಟ್ಟಿತು ಬಳಿಕ ಭಕ್ತಮಾಹೇಶ್ವರ ಸಂತರ್ಪಣೆಯು ವಿತರಣೆಯಿಂದ ನಡೆದು ಗಂಧಪುಷ್ಪತಾಂಬೂಲಾದಿಗಳನ್ನಿತ್ತು ಸತ್ಕರಿಸಿದರು. ಶ್ರೀ ಜಗದ್ಗುರು ಪಂಚಾಚಾರ್ಯರು ಈ ನೂತನ ವಟುವಿಗೆ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ,

ಬಿ. ವೀರಾರಾಧ್ಯ.

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು|| ಪಂಚಮಿಗೆ ೧೬ ವರ್ಷಗಳು ತುಂಬಿ ೧೭ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ೧೩ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೇ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ನೆನೆಯಿಟ್ಟು ಮರೆಯದ ತಿಳಿಸಬೇಕು

ಸಂ —

ಪಂಚಾಚಾರ್ಯಪ್ರಭಾ.

೧೯೪೩ನೆಯ ಮೇ ತಾ|| ೧೭ನೆಯ ಸೋಮವಾರ

ವೇದಾಜ್ಞಾಪಾಲನ.

ವೇದವೆಂಬುದು ಸೃಷ್ಟಿಪೂರ್ವದಿಂದಲೂ ಪರಮೇಶ್ವರನ ಮುಖಗಳಿಂದಾವಿರ್ಭವಿಸಿರುವ ಆನುಪೂರ್ವಿಯಾದ ದಿವ್ಯವಾಣಿಯಾದುದರಿಂದ ಅದು ಅಪೌರುಷೇಯವಾಣಿ ಎನಿಸಿಕೊಂಡಿರುವುದಲ್ಲದೆ ಅಲ್ಲಿ ಹೇಳಿದತತ್ವವೆಲ್ಲವೂ ಯಥಾರ್ಥವಾದುದಾಗಿದೆ ಸಕಲ ಶಾಸ್ತ್ರಕಾರರೂ ಈ ವೇದವನ್ನು ನಿತ್ಯವೆಂದು ಒಪ್ಪಿಕೊಂಡಿರುವುದರಿಂದ, ವೇದದಲ್ಲಿ ಹೇಳಲ್ಪಟ್ಟುದುದೆಲ್ಲವೂ ಪ್ರಮಾಣವೆಂದೇ ಸಿದ್ಧವಾಗುತ್ತದೆ ವೇದವು ಪರಮೇಶ್ವರನ ಆಜ್ಞಾರೂಪವಾಗಿರುತ್ತದೆ. ಈ ಪರಮೇಶ್ವರಾಜ್ಞೆಯನ್ನು ಯಾರೂ ಮೀರಬಾರದು ತಂದೆಯ ಆಜ್ಞೆಯನ್ನು ಪಾಲಿಸುವವನೇ ಸತ್ಪುತ್ರನೆನಿಸುವಂತೆ ಭಾರತಭೂಮಿಯಲ್ಲಿ ಜನ್ಮವೆತ್ತಿದವರೆಲ್ಲರೂ ಲೋಕಜನಕನಾದ ಪರಮೇಶ್ವರನ ಆಜ್ಞಾರೂಪವಾದ ವೇದವಾಣಿಯನ್ನು ಪಾಲಿಸಿ ಆಸ್ತಿಕರೆನಿಸಿಕೊಳ್ಳಬೇಕು ಯಾವನು ವೇದವನ್ನು ಸುಳ್ಳೆಂದು ಹೇಳುವನೋ ಅವನು ದೇವರಿಲ್ಲವೆಂದು ಹೇಳಲು ಭಯಪಡುವುದಿಲ್ಲ. ದೇವರನ್ನು ಪ್ರತ್ಯಕ್ಷವಾಗಿ ನೋಡಿಯೇ ದೇವರುಂಟೆಂದು ಯಾರೂ ಹೇಳುವುದಿಲ್ಲ ದೇವರಿದ್ದಾನೆಂಬುವುದನ್ನು ಆಪ್ತವಾಕ್ಯದಿಂದಲೇ ನಿಶ್ಚಯಮಾಡಿಕೊಳ್ಳಬೇಕಾಗಿದ

ಅಂಥ ಆಪ್ತವಾಕ್ಯವೆಂದರೆ ಈಶ್ವರನ ವಾಣಿಯೇ ಹೊರತು ಇನ್ನಾವುದೂ ಆಗಲಾರದು. ಇದನ್ನೇ ಶಾಸ್ತ್ರಕಾರರು ಶಬ್ದಪ್ರಮಾಣವೆನ್ನುತ್ತಾರೆ. ಲೋಕದಲ್ಲಿ ಆಪ್ತನಾದ ಪುರುಷನು ಏನು ಹೇಳಿದರೂ ಅದನ್ನು ನಂಬಲೇಬೇಕು. ಅವನು ಹೇಳುವುದೆಲ್ಲವೂ ಹಿತಕ್ಕಾಗಿಯೇ ಹೊರತು ಅಹಿತಕ್ಕಾಗಿ ಯಾವುದೂ ಇರುವುದಿಲ್ಲ. ಅಂಥ ಅಹಿತವನ್ನು ಕೋರುವವನು ಆಪ್ತನೇ ಅಲ್ಲ. ಆಪ್ತನೆಂದರೆ "ಯಥಾರ್ಥವಕ್ತಾ" ಇದ್ದದ್ದು ಇದ್ದಹಾಗೆ ಬೋಧಿಸುವವನೇ ಆಪ್ತನು. ಇದರಂತೆ ತನ್ನಿಂದ ಸೃಷ್ಟಿಸಲ್ಪಟ್ಟ ಈ ಜಗತ್ತಿನಲ್ಲಿ ಪ್ರಾಣಿಗಳ ತಾರತಮ್ಯಾನುಸಾರವಾಗಿ ಹಿತಾನುಕೂಲವಾದ ಧರ್ಮಮಾರ್ಗವನ್ನು ಅಹಿತಾನುಕೂಲಗಳಾದ ಅಧರ್ಮಮಾರ್ಗಗಳನ್ನೂ ಸರ್ವತೋಮುಖವಾಗಿ ವೇದವು ಬೋಧಿಸುತ್ತದೆ. ಈಶ್ವರನ ಮಕ್ಕಳಂತಿರುವ ಮಾನವರೆಲ್ಲರೂ ಪರಮಾಪ್ತನಾದ ಪರಮೇಶ್ವರನ ವೇದರೂಪವಾದ ಶಾಸನವನ್ನು ಶ್ರದ್ಧೆಯಿಂದ ಪಾಲಿಸುವುದರಿಂದ ಅವರಿಗೆಂದೂ ಹಾನಿಯು ತಟ್ಟುವುದಿಲ್ಲ ವೇದವು ಒಳ್ಳೆಯ ಕೆಲಸವನ್ನು ಮಾಡುವುದರಿಂದಾಗುವ ಸುಖವನ್ನೂ ಕೆಟ್ಟಕೆಲಸವನ್ನು ಮಾಡುವುದರಿಂದಾಗುವ ದುಃಖವನ್ನೂ ಬೋಧಿಸುತ್ತದೆ. ಲೋಕದಲ್ಲಿ ಪ್ರತಿಯೊಬ್ಬ ಮನುಷ್ಯನೂ ತಾನು ಸುಖವನ್ನು ಪಡೆಯಬೇಕೆಂದು ಬಯಸುವನಲ್ಲದ ದುಃಖವನ್ನು ಪಡೆಯಬೇಕೆಂದು ಬಯಸುವುದಿಲ್ಲ ಆದರೂ ಕೆಲವರು ದುಃಖಸಾಧನಗಳಾದ ಕೆಲಸಗಳನ್ನು ಸುಖಸಾಧನಗಳೆಂದು ಭ್ರಮಿಸಿ ವೇದಶಾಸನವನ್ನು ಮೀರಿ ತಾವು ಮಾಡುವುದೆಲ್ಲವೂ ನ್ಯಾಯವೆಂದು ಭ್ರಮಿಸಿರುತ್ತಾರೆ ಆಪ್ತವಾಕ್ಯವೆನಿಸಿದ ವೇದವು ಮುಂದೆ ಬಂದು ನಿಂತಿದ್ದರೂ ಅದನ್ನು ಲಕ್ಷ್ಯ ಮಾಡದ ಮಾಡಬಾರದ ಕಾರ್ಯವನ್ನು ಮಾಡಿ ದೈವದ್ರೋಹಿಗಳಾಗಿ ಅಲೆಯುವದು ಮಾನವಜನ್ಮಕ್ಕೆ ಅತ್ಯಂತ ಹೇಯವಾದ ಕಾರ್ಯವೆಂದು ಸ್ಪಷ್ಟವಾಗುತ್ತದ

ಪರಮೇಶ್ವರನ ವಿಹಿತಮಾರ್ಗವೇ ಧರ್ಮವೆಂದೂ ಅನಿಷ್ಟಮಾರ್ಗವೇ ಅಧರ್ಮವೆಂದೂ ಒಂದು ನಿಯಮವನ್ನು ಮಾಡಿರುತ್ತಾನೆ ವೇದಬೋಧಿತೇಷ್ಟಸಾಧನತಾಕೋ ಧರ್ಮಃ ' ವೇದನಿಷಿದ್ಧಾನಿಷ್ಟಸಾಧನತಾಕೋ ಅಧರ್ಮಃ ಎಂಬ ಆರ್ಯೋಕ್ತಿಯು ಸಹ ಇದನ್ನೇ ಬೋಧಿಸುತ್ತದ ಆದುದರಿಂದ ವೇದವು ಯಾವುದನ್ನು ನಿಷಿದ್ಧವೆಂದು ಬೋಧಿಸುತ್ತದೆಯೋ ಅದನ್ನು ಅಧರ್ಮವೆಂತಲೂ, ಯಾವುದನ್ನು ಇಷ್ಟವಾದುದೆಂದು ಬೋಧಿಸುತ್ತದೆಯೋ ಅದನ್ನು ಧರ್ಮವೆಂತಲೂ ತಿಳಿದುಕೊಂಡು ಧರ್ಮಾಧರ್ಮಗಳನ್ನು ನಿಶ್ಚಯಿಸಿಕೊಳ್ಳಬೇಕಲ್ಲದ ತನಗಿಷ್ಟವಾದುದೆಲ್ಲವೂ ಧರ್ಮವೆಂದೂ ತನಗಿಷ್ಟವಿಲ್ಲದುದೆಲ್ಲವೂ ಅಧರ್ಮವೆಂದೂ ಯಾರೂ ತಿಳಿಯಬಾರದು. ಇದೇ ಸನಾತನಧರ್ಮದ ರಹಸ್ಯವು ಲೋಕದಲ್ಲಿ ಮಹಾರಾಜನು ತನ್ನ ಪ್ರಜಾಸುಖಕ್ಕಾಗಿ ಒಂದು ಶಾಸನವನ್ನು ಮಾಡಿ ಆ ಶಾಸನವನ್ನು ಯಾರು ಮೀರುತ್ತಾರೆಯೋ ಅವರು ರಾಜದ್ರೋಹಿಗಳೆಂದು ಭಾವಿಸಿ ಅಂಥವರಿಗೆ ಶಾಸನಪ್ರಕಾರವಾಗಿ ಶಿಕ್ಷೆಯನ್ನು ವಿಧಿಸುತ್ತಾನೆ ಯಾರು ಆ ಶಾಸನವನ್ನು ಪಾಲಿಸುತ್ತಾರೆಯೋ ಅವರನ್ನು ಅನುಗ್ರಹಿಸುತ್ತಾನೆ ಅದರಂತೆ ಚತುರ್ದಶಭುವನಗಳನ್ನೂ ಲೀಲಾಮಾತ್ರದಿಂದ ಆಳುತ್ತಿರುವ ದೇವತಾಸಾರ್ವಭೌಮನಾದ ಪರಮೇಶ್ವರನು ವೇದವೆಂಬ ಶಾಸನದ್ವಾರಾ ಈ ಲೋಕವನ್ನು ಆಳುತ್ತಿರುವನು ಯಾವನು ವೇದದಲ್ಲಿ ನಿಷೇಧಿಸಲ್ಪಟ್ಟಿರುವ ದುರ್ಮಾರ್ಗದಲ್ಲಿ ಪ್ರವೇಶಿಸುತ್ತಾನೆಯೋ ಅವನು ಘೋರವಾದ ಶಿಕ್ಷೆಗೆ ಗುರಿಮಾಡಲ್ಪಟ್ಟು ಸೂಕರಾದಿ ಹೀನಜನ್ಮಗಳಿಗೆ ಒಯ್ಯಲ್ಪಡುತ್ತಾನೆ ಯಾವನು ಈಶ್ವರಶಾಸನವನ್ನು ಸ್ವಲ್ಪಮಾತ್ರವೂ ಮೀರದಂತೆ ಪಾಲಿಸುತ್ತಾನೆಯೋ ಅವನು ಈ ಮನುಷ್ಯಜನ್ಮಕ್ಕಿಂತಲೂ ಉತ್ತಮವಾದ ದೇವತಾಜನ್ಮಕ್ಕೇರಿಸಲ್ಪಡುವನು

ಹೀಗಿದ್ದರೂ ಕೆಲವರು ಇಂಥ ಪರಮಾಪ್ತನಾದ ಈಶ್ವರನ ಶಾಸನವನ್ನು ಬಹಳ ಹಗುರಾಗಿ ಕಾಣುತ್ತಿರುವುದನ್ನು ನೋಡಿದರೆ ಇದು ಪಾಪಮಯವಾದ ಕಲಿಯುಗದ ಪ್ರಭಾವವೆಂದೇ ಹೇಳಬೇಕಾಗಿದೆ ಎಲ್ಲಿ ನೋಡಿದರೂ ವೇದಶಾಸನೋಲ್ಲಂಘನಕಾರಿಯಾದ ವರ್ತನಗಳೂ, ಆ ವೇದವೆಂಬ ಈಶ್ವರನ ಶಾಸನವನ್ನು ಪ್ರಚಾರಮಾಡುವ ಗುರುಗಳ ತಿರಸ್ಕಾರಶಬ್ದವೂ ದುಷ್ಟನಿಗ್ರಹ ಶಿಷ್ಟಪರಿಪಾಲನೆ ಮಾಡುತ್ತಿರುವ ಪ್ರಭುತ್ವನಿರಾಕರಣ ಶಬ್ದಗಳೂ ಕೇಳಿಬರುವವಲ್ಲದೆ, ತಮ್ಮಗಳ ಮೇಲೆ ಯಾರ ಶಾಸನವೂ ಇಲ್ಲದಂತೆ ನಿರಂಕುಶರಾಗಬೇಕೆಂಬ ಹವಣಿಕೆಯು ಅನೇಕರಲ್ಲಿ ಒಡಮೂಡುತ್ತಲಿರುವುದು ಇದರಿಂದ ಪ್ರಪಂಚವು ಅನಾಯಕತ್ವವನ್ನಾಗಲಿ ಬಹುನಾಯಕತ್ವವನ್ನಾಗಲಿ ಹೊಂದಿ ಉತ್ತರೋತ್ತರ ಅನರ್ಥಪರಂಪರೆಯನ್ನನುಭವಿಸುವುದೇ ಫಲವಲ್ಲದೆ ಇನ್ನಾವುದೂ ಫಲವಿಲ್ಲ.

ಅಷ್ಟಾಭಿಶ್ಚ ಸುರೇಂದ್ರಾಣಾಂ ಮಾತ್ರಾಭಿರ್ನಿರ್ಮಿತೋನೃಪಃ |

ಎಂಬಂತೆ ಪ್ರಜಾಪಾಲಕರಾದ ಮಹಾರಾಜರಾದರೂ ಕೇವಲ ದೇವಾಂಶಸಂಭೂತರಾದ್ದರಿಂದ ವೇದಶಾಸನವನ್ನು ಯಾರೂ ಮೀರದಂತೆ ಪ್ರಜೆಗಳನ್ನು ಶಿಕ್ಷಿಸುವದು ಅವರ ಕರ್ತವ್ಯವಾಗಿದೆ. ಹಾಗೆ ಶಿಕ್ಷೆ ಮಾಡದೆಹೋದರೆ, ದಂಡಧರನಾದ ಪಶುಪಾಲಕನು ಕಾಡಿನಲ್ಲಿ ಎಚ್ಚರದಿಂದ ಪಶುಗಳನ್ನು ರಕ್ಷಿಸದೆ ನಿದ್ರಾಸಕ್ತನಾಗಿದ್ದರೆ ಆ ಪಶುಗಳು ಎತ್ತಬೇಕಾದರೂ ನುಗ್ಗಿ ಕಂಡಕಂಡವರ ಹೊಲಗಳನ್ನು ಮೇದು ಏಟುಗಳನ್ನು ತಿಂದು ವ್ಯಾಘ್ರಾದಿ ಕ್ರೂರಜಂತುಗಳ ಬಾಯಿಗೆ ಸಿಕ್ಕು ಅನರ್ಥವನ್ನನುಭವಿಸುವ ಪ್ರಸಕ್ತಿಯು ಬರುವಂತೆ ರಾಜರ ಆಲಸ್ಯದಿಂದ ಜನಗಳು ವೇದಶಾಸನವನ್ನು ಮೀರಿ ಅಧರ್ಮಗಳಲ್ಲಿ ಕಾಲಿಟ್ಟು ಈ ಮಾನವ ಜನ್ಮದ ಮುಖ್ಯೋದ್ದೇಶವನ್ನೇ ಹಾಳುಮಾಡಿದಂತಾಗುತ್ತದೆ. ಆದುದರಿಂದ ಪ್ರಭುಗಳಾದವರು ವೇದಧರ್ಮದಂತೆ ಶಾಸನಮಾಡಬೇಕು. ವೇದಮಾರ್ಗಾನುಯಾಯಿಗಳೆಲ್ಲರೂ ವೇದಾಜ್ಞೆಯನ್ನು ಶಿರಸಾವಹಿಸಿ ಪಾಲಿಸಬೇಕು. ಇದೇ ಸನಾತನಧರ್ಮಾನುಯಾಯಿಗಳ ಮುಖ್ಯ ಧರ್ಮವಾಗಿದ

ಯುದ್ಧವಾರ್ತೆ.

ಅಮೆರಿಕಾ ಸರಬರಾಯಿ ವಿಮಾನಗಳು ಭಾರತಕ್ಕೆ ಬಂದವು

ಅಮೆರಿಕದ ಸರಬರಾಯಿ ವಿಮಾನಗಳು ಭಾರತದಲ್ಲಿ ಬಂದಿಳಿದವು. ಈ ವಿಮಾನಗಳ ಪ್ರಯಾಣ, ದೂರ, ಸಂಖ್ಯೆ, ಚರಿತ್ರೆಯಲ್ಲೇ ಪ್ರಥಮ ಎಂಬುದಾಗಿ ನ್ಯೂಯಾರ್ಕ್ ರೇಡಿಯೋ ಈ ದಿನ ತಿಳಿಸಿತು.

ದ್ವಿತೀಯ ರಂಗಸ್ಥಾಪನಾ ಮಾರ್ಗ

ಮಿತ್ರರ ಟ್ಯೂನೀಷಿಯಾ ವಿಜಯ ದ್ವಿತೀಯರಂಗ ಸ್ಥಾಪನಾ ಮಾರ್ಗ ಎಂಬುದಾಗಿ ರಷ್ಯನ್ ಪತ್ರಿಕೆಗಳೆಲ್ಲ ಘೋಷಿಸಿವೆ ಟ್ಯೂನೀಷಿಯದಲ್ಲಿ ಹಿಟ್ಲರ್ ರೊಮೆಲ್ಲರು ಮಾಡಿದ ತಪ್ಪು ಈಗ ಅವರ ಕೊರಳಿಗೆ ಉರುಲಾಗಿದೆ.

ಫ್ರೆಂಚ್ ಖೈದಿಗಳ ಬಿಡುಗಡೆ

ಟ್ಯೂನೀಷಿಯದಲ್ಲಿ ಸೆರೆ ಹಿಡಿಯಲ್ಪಟ್ಟು, ಈಗ ಇಟಲಿ, ಜರ್ಮನಿಗಳಲ್ಲಿ ಬಂಧಿತರಾಗಿರುವ ಎಲ್ಲ ಫ್ರೆಂಚ್ ಸೆರೆಯಾಳುಗಳನ್ನು ಬಿಡುಗಡೆ ಮಾಡಬೇಕೆಂದು ಹಿಟ್ಲರ್ ಆಜ್ಞೆ ಹೊರಡಿಸಿರುವುದಾಗಿ ಪ್ಯಾರಿಸ್ ರೇಡಿಯೋ ತಿಳಿಸಿತು.

ಮಿತ್ರರ ನೌಕಾ ನಾಶ ಸುದ್ದಿ ಸುಳ್ಳು

ಡರ್ಬಾನ್ ಬಳಿ ೨೩ ಮಿತ್ರರ ವಾಹಕನೌಕೆಗಳನ್ನು ಮುಳುಗಿಸಿದೆವೆಂಬ ಜರ್ಮನರ ಹೇಳಿಕೆ ಶುದ್ಧ ಅಪಪ್ರಚಾರ ಎಂಬುದಾಗಿ ದಕ್ಷಿಣ ಅಟ್ಲಾಂಟಿಕ್ ಉಪನೌಕಾಧಿಪತಿಗಳು ತಿಳಿಸಿದಾರೆ. ಜರ್ಮನರು ಮುಳುಗಿಸಿದ್ದು, ಕತ್ತೆ, ಹೇಸರಕತ್ತೆಗಳು ತುಂಬಿದ್ದ ಒಂದೇ ಒಂದು ನೌಕೆಯನ್ನು ಎಂಬುದಾಗಿ ಹೇಳಿದಾರೆ.

ಚೀಣರ ಸಾಹಸ

ಉತ್ತರ ಹುನಾನ್‌ನಲ್ಲಿರುವ ಟುಂಗ್‌ಟಿಂಗ್ ಸರೋವರದ ತೀರದಲ್ಲಿ ಜಪಾನರು ಮಾಡಿದ ಬೀಡುಬಿಡುವ ಹೊಸ ಪ್ರಯತ್ನದಲ್ಲಿ ಅವರನ್ನು ಹಿಮ್ಮೆಟ್ಟಿಸಲಾಯಿತೆಂದೂ ಶನಿವಾರ ರಾತ್ರಿ ಅಮೇರಿಕನ್ ಬಾಂಬರುಗಳು ಫೈಟರುಗಳೊಡನೆ ಕ್ಯಾಂಟನ್ ಬಳಿ ಇರುವ ಜಪಾನೀ ವಿಮಾನ ಮೂಲವೊಂದರ ಮೇಲೆ ದಾಳಿಮಾಡಿದವು. ಜಪಾನರ ನಲವತ್ತು ಫೈಟರುಗಳೂ ೧೩ ಬೇರೆ ವಿಮಾನಗಳೂ ಖಚಿತವಾಗಿ ನಾಶವಾದವು. ಇನ್ನು ೫ ನಾಶವಾಗಿರಬಹುದೆಂದೂ ಹೇಳಲಾಗಿದೆ.

ಜಪಾನರು ಯಾಂಗಟೀಸ್ ದಾಟಿದರು

ಸುಂಗ್‌ಟಿಸೀ ಬಳಿ ಜಪಾನರು ಇಂದು ಯಾಂಗ್‌ಟೀಸ್ ನದಿ ದಾಟಿದರು. ಟುಂಗ್ ಟಿಂಗ್ ಸರೋವರದ ಪಶ್ಚಿಮದಲ್ಲಿ ೪೦೦೦೦ ಜಪಾನಿ ಸೈನಿಕರು ನುಗ್ಗುತ್ತಿದ್ದಾರೆಂದು ಚೀಣೀ ಸೈನ್ಯ ವಿಮರ್ಶಕರು ಇಂದು ತಿಳಿಸಿದರು. ಹುನಾನ್ ಪ್ರಾಂತ್ಯದಲ್ಲಿರುವ ಬಹು ಫಲವತ್ತಾದ ಬತ್ತದ ಗದ್ದೆಗಳನ್ನು ಆಕ್ರಮಿಸಿ ಕ್ಯಾಂಟನ್ ಹಾಂಕ್ ರೈಲ್ವೆ ಮಾರ್ಗದಲ್ಲಿರುವ ಪ್ರಾಂತ್ಯದ ಪ್ರಧಾನ ನಗರಗಳಾದ ಚಾಂಗ್‌ಷಾ ಹಂಗ್ಯಾಂಗ್ ಹಿಡಿಯಬೇಕೆಂಬುದೇ ಜಪಾನರ ಉದ್ದೇಶ. ಡೈಹುಂಗ್ ಸಾನ್ ಪರ್ವತಗಳ ಪ್ರದೇಶದಲ್ಲಿ ಚೀಣರು ಕೆಲವು ವ್ಯೂಹ ಪ್ರದೇಶಗಳನ್ನು ಹಿಡಿಯುತ್ತಿದಾರೆ.

ಸಿಸಿಲಿ ಇಟಲಿಗಳ ಮೇಲೆ ದಾಳಿ

ಬ್ರಿಟಿಷ್ ಮತ್ತು ಅಮೇರಿಕನ್ ಪಡೆಗಳು ಸಿಸಿಲಿ ಮತ್ತು ದಕ್ಷಿಣ ಇಟಲಿಗಳ ಮೇಲೆ ಉಗ್ರವಾಗಿ ವಿಮಾನದಾಳಿ ಮಾಡಿವೆ. 'ಇದು ನಿಲ್ಲಬೇಕಾದರೆ ಶಾಂತಿ ಬಿಕ್ಷೆಬೇಡಿ ಶಾಂತಿಗಾಗಿ ಒತ್ತಾಯಮಾಡಿ ಪ್ರದರ್ಶನ ಹೂಡಿ" ಎಂದು ತಿಳಿಸುವ ಹಸ್ತಪತ್ರಗಳನ್ನು ಇಟಲಿಯಮೇಲೆ ಸುರಿಸಿದರು.

ಕದನದ ಅಂತ್ಯ ಸಮೀಪಿಸಿದೆ

ಜ|| ಫ್ರಾಂಕೋರವರು ನಗರಭವನದಲ್ಲಿ ಮಾತನಾಡುತ್ತ "ಯುದ್ಧ ಪ್ರವೃತ್ತರಾಷ್ಟ್ರಗಳು ಶಾಂತಿ ಕರೆಗೆ ಕಿವಿಗೊಡುತ್ತಿಲ್ಲವೆಂಸರೆ, ಈ ಯುದ್ಧದ ಪರಿಹಾರ ಶಾಂತಿಯಲ್ಲಿಲ್ಲವೆಂದಲ್ಲ ಕದನಾಂತ್ಯವೆಂದು ಯಾವುದನ್ನು ಕರೆಯುವದೋ ಅದನ್ನು ನಾವೀಗಾಗಲೇ ಮುಟ್ಟಿದೇವೆ. ಸಂಗ್ರಾಮ ಆರಂಭವಾಗಿ ಮೂರು ವರ್ಷಗಳಾಗಿದ್ದರೂ ಶಾಂತಿ ಸ್ಥಾಪನೆಯ ವಿಷಯದಲ್ಲಿ ಇನ್ನೂ ತಡಮಾಡುತ್ತಿರುವುದು ಶುದ್ಧ ಮೂರ್ಖತನ" ಎಂಬುದಾಗಿ ನುಡಿದರು

ಜ. ವಾನ್ ಆರ್ನಿಂ ಸೆರೆ

ಅಲ್ಲಲ್ಲಿ ಕೆಲ ತುಕಡಿಗಳ ಪ್ರತಿಭಟನೆ ಬಿಟ್ಟರೆ, ಟ್ಯೂನೀಷಿಯಾದಲ್ಲಿ ಶತ್ರುಗಳ ಕೈ ನಿಂತಂತೆಯೇ ಆಗಿದೆ ಟ್ಯುನೀಷಿಯಾದಲ್ಲಿರುವ ಆಕ್ಸಿಸ್ ಸೈನ್ಯಗಳ ದಳಪತಿ ವಾನ್ ಆರ್ನಿಂ ಸೆರೆ ಸಿಕ್ಕಿದ್ದಾನೆ. ಮೇ ೫ ನೇ ತಾರೀಖಿನಿಂದ ಇದುವರೆಗೆ ೧|| ಲಕ್ಷಕ್ಕೂ ಮೀರಿ ಶತ್ರು ಸೈನಿಕರು ಸೆರೆಯಾಳುಗಳಾಗಿದ್ದಾರೆ. ಉಪಯೋಗಾರ್ಹ ಬಂದೂಕಗಳೂ, ವಿಮಾನಗಳೂ, ಇತರ ಸಂಗ್ರಾಮವಸ್ತುಗಳೂ ಹೇರಳವಾಗಿ ಸಿಕ್ಕಿವೆ.

ಜರ್ಮನ್ ಕಮ್ಯಾಂಡರರಾದ ಜನರಲ್ ವಾನ್ ಅರ್ನಿಮ್‌ರವರನ್ನು ೪ ನೇ ಭಾರತೀಯ ಡಿವಿಜನ್ ಸೈನ್ಯವೇ ಕೈಸೆರೆ ಹಿಡಿಯಿತು ಎಂಬುದಾಗಿ ಈಗ ಅಧಿಕಾರಯುತವಾಗಿ ತಿಳಿಸಲಾಗಿದೆ.

ವಿಜಯ ಕುರಿತು ಬ್ರಿಟಿಷ್ ಮಂತ್ರಿಗಳ ಅಭಿಪ್ರಾಯ

"ಆಫ್ರಿಕದ ವಿಜಯದಿಂದ ನಮ್ಮ ದೇಹಗಳೆಲ್ಲ ಹರ್ಷ ರೋಮಾಂಚಿತವಾಗಿವೆ ಆದರೆ ಕಾಳಗದ ಅಂತ್ಯ ಕಣ್ಣಿಗೆ ಕಾಣುತ್ತಿಲ್ಲ. ಅಂದರೆ ನಾವಿಂದು ಸಂತೋಷದಲ್ಲಿ ಮುಳುಗುವಂತಿಲ್ಲ. ವಿರಾಮವಾಗಿ ಕಾಲು ನೀಡುವಂತಿಲ್ಲ' ಎಂಬುದಾಗಿ ವಿದೇಶಾಂಗ ಮಂತ್ರಿ ಶ್ರೀ ಆಂಥೋನಿ ಈಡನ್ನರು "ವಿಂಗ್ಸ್ ಫಾರ್ ವಿಕ್ಟರಿ" ಸಭೆಯ ಉಪಹಾರ ಕೂಟದಲ್ಲಿ ಭಾಷಣ ಮಾಡುತ್ತ ನುಡಿದರು.

"ಉತ್ತರ ಆಫ್ರಿಕದ ವಿಜಯ, ಮುಂದ ಬರಲಿರುವ ಇಂತಹ ಅನೇಕ ಸಂಗತಿ ಪರಂಪರೆಗಳ ಮೊದಲ ಹೆಜ್ಜೆ. ಯುದ್ಧ ಜೀವನದಲ್ಲಾಗಿರುವ ಈ ಬದಲಾವಣೆ ನಿಜವಾಗಿಯೂ ಶುಭ. ಯುದ್ಧ ಮುಗಿಸಲು ಬಹು ದಿನ ಬೇಕಾದೀತೆಂದು ನಮ್ಮ ಆಶೆ" ಎಂಬುದಾಗಿ ಅರ್ಥಶಾಖಾಧ್ಯಕ್ಷ ಸರ್ ಕಿಂಗ್ಸ್ಲೆ ವುಡ್‌ರು ನುಡಿದರು.

ಹಿಟ್ಲರನ ಭಾಷಣ

ಚಳಿಗಾಲ ಸಹಾಯ ಚಳುವಳಿಯ ನಾಲ್ಕನೆ ವಾರ್ಷಿಕೋತ್ಸವ ಸಂದರ್ಭದಲ್ಲಿ ಹಿಟ್ಲರ್ ರೇಡಿಯೋ ಮೂಲಕ ಭಾಷಣ ಮಾಡುತ್ತ, "ಜನರ ಬಲಿದಾನ ಇಂದು ತೀರಾ ಅಗತ್ಯವಾಗಿದೆ ಮಿತಿಯಿಲ್ಲದ ತ್ಯಾಗಕ್ಕೆ ಜನರು ಸಿದ್ಧರಾಗಬೇಕಾಗಿದೆ. ಆದರೆ ಇಲ್ಲಿಯವರು ಮಾಡುವ ತ್ಯಾಗ ಅನುಭವಿಸುವ ಸಂಕಟವನ್ನು ಪೂರ್ವರಣರಂಗದಲ್ಲಿ ನಮ್ಮ ಯೋಧರು ಪಡುತ್ತಿರುವ ಕಷ್ಟ ಯಾತನೆಗೆ ಅನುಭವಿಸುತ್ತಿರುವ ನಿತ್ಯ ಕಷ್ಟಕ್ಕೆ ಹೋಲಿಸಿದರೆ ಅತ್ಯಲ್ಪ. ನಿಮ್ಮ ಸುಖಕ್ಕಾಗಿ, ದೇಶದ ಕ್ಷೇಮಕ್ಕಾಗಿ ಅವರು ಮಾಡುತ್ತಿರುವ ಬಲಿದಾನ ಅಮೋಘವಾದದ್ದು. ಅಂತೇ ನಾಲ್ಕನೇ ಸಾರಿ ನಾನು ಮತ್ತೆ ಬೇಡುತ್ತಿದೇನೆ ಯುದ್ಧಕಾರ್ಯದಲ್ಲಿ ನೆರವಾಗಿ, ರೆಡ್‌ಕ್ರಾಸ್‌ಗಾಗಿ ದುಡಿದು, ನಮ್ಮ ಯೋಧರಿಗೆ ಸಲ್ಲಿಸಬೇಕಾದ ಋಣ ತೀರಿಸಿಕೊಳ್ಳಿ' ಎಂದು ಹೇಳಿದರು.

ರಷ್ಯನ್ ಪ್ರಜೆಗಳ ಅಪಹರಣ

"ರಷ್ಯನ್ ಸ್ತ್ರೀಪುರುಷರನ್ನು ಬಲಾತ್ಕಾರದಿಂದ ಜರ್ಮನಿಗೆ ಎಳೆದೊಯ್ದು ಗುಲಾಮರಂತೆ ದುಡಿಸಿಕೊಳ್ಳುತ್ತಿದಾರೆ. ತುಂಬ ಕನಿಷ್ಟವಾಗಿ ಕ್ರೂರವಾಗಿ ಅವರನ್ನು ನೋಡಿಕೊಳ್ಳುತ್ತಿದಾರೆ. ಜ|| ಗೋಯರಿಂಗ್ ಈ ರಷ್ಯನ್ ಬಡಪಾಯಿಗಳ ಅಪರಾಧ ದಂಡನೆಗೆ ಎರಡು ವಿಧಿಗಳನ್ನು ಗೊತ್ತು ಪಡಿಸಿದ್ದಾರೆ, ಹಸಿವಿನಿಂದ ಕೊರಗಿಸುವುದು, ಮರಣದಂಡನೆ, ಬೇರೆ ಯಾವ ಶಿಕ್ಷೆಯೂ ಅನಗತ್ಯವೆಂಬ ಸೂಚನೆ ಬೇರೆ ಕೊಟ್ಟಿದ್ದಾನೆ. ರಷ್ಯನ್ ಜನರನ್ನು ಜರ್ಮನ್ ಕೆಲಸಗಾರರಾಗಿ ಬಳಸಿಕೊಳ್ಳುವ ಯೋಜನೆಯನ್ನು ಕಾರ್ಯ ರೂಪಕ್ಕೆ ತರುವ ಜವಾಬ್ದಾರಿಯನ್ನು ಚೀಫ್ ಕಮೀಷನರ್ ಒಬ್ಬರನ್ನು ನೇಮಿಸಿ ಅವರಿಗೆ ವಹಿಸಿಕೊಡಲಾಗಿದೆ ಈ ಕಮೀಷನರು ೨೦-೨-೪೩ರಲ್ಲಿ ಗುಪ್ತ ಸೂಚನೆ ಕಳುಹಿಸಿ ಅದರಲ್ಲಿ ಜರ್ಮನ್ ರೈತರಿಗೆ ಬಿಡುವು ಕೊಡುವ ಸಲುವಾಗಿ ೪ ರಿಂದ ೫ ಲಕ್ಷ ಮಂದಿ ದೃಢಕಾಯರಾದ ಆರೋಗ್ಯವಂತರಾದ ಹುಡುಗಿಯರನ್ನು ಪೂರ್ವ ಪ್ರಾಂತ್ಯಗಳಿಂದ ಆರಿಸಿ ಕಳುಹಿಸಬೇಕೆಂದು ಫ್ಯೂರರ್ ನನಗೆ ಆಜ್ಞೆಮಾಡಿದ್ದಾನೆ ಎಂದು ತಿಳಿಸಿದರು ಹಸಿವಿನಿಂದ ಕಂಗಾಲಾಗಿದ್ದ ಪ್ರಜೆಗಳಿಗೆ, ರೊಟ್ಟಿ ಹಂಚುತ್ತೇವೆ ಬನ್ನಿ ಎಂದು ಸಾರಿ, ಹೌದೋ ಏನೋ ಎಂದು ಅವರು ಗುಂಪುಕೂಡಿದರೆ, ಸೈನಿಕರು ಬಂದು ಸುತ್ತುವರಿಯುತ್ತಿದ್ದರು ಗುಂಡು ಹಾರಿಸಿ ಕೊಲ್ಲುವವೆಂದು ಹೆದರಿಸಿ ಎಲ್ಲರನ್ನು ರೈಲು ಹತ್ತಿಸಿ ಜರ್ಮನಿಗೆ ಸಾಗುಮಾಡುತ್ತಿದ್ದರು. ಗುಲಾಮ ಬೇಟೆಗಾರರ ಕಣ್ಣು ತಪ್ಪಿಸಲೆತ್ನಿಸುವವರಿಗೆ ಚಿತ್ರ ಹಿಂಸೆಯೋ ಸಾವೋ ಗತಿ. ಗುಟ್ಟಾಗಿ ಸೈನಿಕರ ಪಹರೆಯಲ್ಲಿ ರೈಲುಗಳಲ್ಲಿ ತುಂಬಿಕೊಂಡು ರಷ್ಯನ್ ಪ್ರಜೆಗಳನ್ನು ಸಾಗಿಸುವ ವಿಚಾರದ ಪೂರ್ಣ ವಿವರಗಳು ರಷ್ಯನ್ ಸರ್ಕಾರಕ್ಕೆ ಗೊತ್ತಿವೆ" ಎಂಬದಾಗಿ ರಷ್ಯನ್ ವಿದೇಶಾಂಗ ಮಂತ್ರಿಗಳು ತಿಳಿಸಿದರು

ಜಪಾನರ ಚಟುವಟಿಕೆ
ಬೂತಿಡಾಂಗ್ ವಶ

ಬುತಿಡಾಂಗ್‌ನ್ನು ಜಪಾನರು ಆಕ್ರಮಿಸಿದರು. ಈಗ ಮಾಂಗ್‌ಡಾಕ್ಕಾಗಿ ಯುದ್ಧಮಾಡುತ್ತಿದ್ದಾರೆ. ಬುತಿಡಾಂಗ್ ಶತ್ರುಗಳ ಕೈಲಿರುವುದರಿಂದ ಅವರಿಗೆ ಅಲ್ಲಿಂದ ಪಶ್ಚಿಮಕ್ಕೂ ತೀರದ ಕಡೆಗೂ ನುಗ್ಗುವು ಸುಲಭ ಬ್ರಿಟಿಷ್ ಮತ್ತು ಭಾರತೀಯ ಎಂಜಿನಿಯರರು ಟಾನ್‌ಬೈಕ್‌ನಿಂದ ಮಾಂಗ್‌ಡಾವರೆಗೆ ನಿರ್ಮಿಸಿರುವ ರಸ್ತೆಯನ್ನು ಅವರು ಬಳಸಬಹುದು. ಆದ್ದರಿಂದ ಮಾಂಗ್‌ಡಾ ಉಳಿಸಿಕೊಳ್ಳುವುದು ಕಷ್ಟ. ಇನ್ನು ಹದಿನೈದು ದಿನಗಳಲ್ಲಿ ಮಳೆಗಾಲ ಆರಂಭವಾದೀತು ಆದರೂ ಜಪಾನರ ಮುಂದೊತ್ತಿಕೆ ಏನು ಅಡ್ಡಿಯಾಗಲಾರದು. ಕಳೆದ ವರ್ಷ ಮಳೆ ಸುರಿಯುತ್ತಿದ್ದಾಗಲೇ ಮಿತ್ರರು ಬೂತಿಡಾಂಗ್ ಮಾಂಗ್‌ಡಾಗಳನ್ನು ಹಿಡಿದದ್ದು. ಮಾಂಗ್‌ಡಾದಲ್ಲಿ ಮಿತ್ರರ ಪರಿಸ್ಥಿತಿ ಬಹು ಕಠಿಣವಾಗಿರುವುದರಿಂದಲೂ ಅಲ್ಲಿ ಅವರು ಮಳೆಗಾಲಕ್ಕೆಂದು ಯಥೇಚ್ಛವಾಗಿ ಆಹಾರ ಸಂಗ್ರಹಿಸಿಟ್ಟುಕೊಂಡಿರುವುದರಿಂದಲೂ, ಕಾಕ್ಸ್ ಬಜಾರ್ (ತೀರದಲ್ಲಿ ಸರಹದ್ದಿನಿಂದ ೫೦ ಮೈಲಿ ದೂರ) ಕ್ಕೆ ಹಿಮ್ಮೆಟ್ಟಬಹುದು. ಇತ್ತೀಚೆಗೆ ಜಪಾನರ ವಿಮಾನ ಧಾಳಿ ಚಟುವಟಿಕೆ ಹೆಚ್ಚುತ್ತಿದೆ. ಮೋಡ ಕಟ್ಟಿಕೊಳ್ಳುತ್ತಿರುವುದರಿಂದ, ಅವರ ವಿಮಾನಗಳು ನಮ್ಮ ಫೈಟರ್ ವಿಮಾನಗಳ ಕಣ್ಣು ತಪ್ಪಿಸುತ್ತವೆ. ಮಾಂಗ್‌ಡಾಮೇಲೆ ಅವರು ಉಗ್ರಧಾಳಿ ಮಾಡಬಹುದು. ಬಾಲ ಬಜಾರ್ ಮತ್ತು ಕಾಕ್ಸ್ ಬಜಾರ್ ಕಡೆಗೆ ಹಿಮ್ಮೆಟ್ಟುವ ಸೇನೆಯ ಮೇಲೂ ವಸ್ತು ವಾಹಕಗಳ ಮೇಲೂ ಅವರು ಬಾಂಬುಸುರಿಸಬಹುದು ಎಂದು ಹೇಳಲಾಗಿದೆ.

ಸಿಂಧ್ ಪ್ರಾಂತದ ಮಾಜಿ ಮುಖ್ಯ ಮಂತ್ರಿಗಳ ಕೊಲೆ

ಸಿಂಧ್ ಪ್ರಾಂತದ ಮಾಜಿ ಮುಖ್ಯಮಂತ್ರಿಯಾದ ಮಿ|| ಅಲ್ಲಾಭಕ್ಷರವರನ್ನು 14 ನೇ ತಾರೀಖು ಬೆಳಿಗ್ಗೆ ಶಿಕಾರ್‌ಪುರದಲ್ಲಿ ಯಾರೋ ದುಷ್ಟರು ಗುಂಡು ಹಾರಿಸಿ ಕೊಂದುಹಾಕಿದ್ದಾರೆ. ಹೆಚ್ಚಿನ ವಿವರ ಇನ್ನೂ ತಿಳಿದು ಬಂದಿಲ್ಲ.

ಬರ್ಲಿನ್ನಿನಲ್ಲಿ ಹೊಡೆದಾಟ

ಟ್ಯುನಿಸಿಯಾದಲ್ಲಿ ಸೋಲಾಯಿತೆಂಬ ಸುದ್ದಿ ಬಂದೊಡನೆ ಸ್ತ್ರೀಪುರುಷರು ಜರ್ಮನ್ ಸುದ್ದಿ ಶಾಖಾ ಕಛೇರಿಯ ಮುಂದೆ ನೆರೆದು ಆಫ್ರಿಕಾ ರಣರಂಗದಲ್ಲಿದ್ದ ತಮ್ಮ ಬಳಗದವರ ಗತಿಯೇನಾಯಿತೆಂದು ಪ್ರಶ್ನಿಸಲು ತೊಡಗಿದರು ಸುದ್ದಿ ಖಾತೆಯವರು ಸೂಕ್ತಕಾಲದಲ್ಲಿ ತಿಳಿಸುತ್ತೇವೆ ಎನ್ನಲಾಗಿ ಹೊಡೆದಾಟ ಮೊದಲಾಯಿತು. ಕೂಡಲೆ ಸ್ಥಳಕ್ಕೆ ಬಂದ ಸೈನ್ಯಪಡೆ ಆಯುಧಗಳನ್ನು ಉಪಯೋಗಿಸಲಿಲ್ಲ. ಜರ್ಮನಿಯ ಇನ್ನೂ ಅನೇಕ ಕಡೆಗಳಲ್ಲಿ ಇದೇರೀತಿಯ ಗಲಭೆಯಾಯಿತೆಂದು ವರದಿಯಾಗಿದೆ

ಟ್ಯುನಿಸಿಯ ವಿಜಯ
ವೈಸರಾಯರ ಸಂದೇಶ

ವೈಸ್‌ರಾಯರು ಉತ್ತರ ಆಫ್ರಿಕಾದಲ್ಲಿರುವ ಮಿತ್ರ ಸೇನೆಗಳ ಸೈನಾಧಿಪತಿ ಜ|| ಐಸೆನ್ ಹೊವರ್ ಅವರಿಗೆ ಈ ರೀತಿ ಸಂದೇಶ ಕಳುಹಿಸಿದಾರೆ. "ಭಾರತದ ಪ್ರಜೆಗಳ ರಾಜರುಗಳ ಅಭಿನಂದನೆಗಳನ್ನು ನಿಮಗೂ ನಿಮ್ಮ ಸೈನ್ಯಕ್ಕೂ ತಿಳಿಸಬಯಸುತ್ತೇನೆ ಭಾರತೀಯ ಸೈನಿಕರೇ ಮೊಟ್ಟಮೊದಲಿಗೆ ಟ್ಯೂನಿಸಿಯಾ ಪ್ರವೇಶಿಸಿದ್ದು ಅವರು ಅಮೆರಿಕನ್, ಫ್ರೆಂಚ್, ಬ್ರಿಟಿಷ್ ಸೈನಿಕರ ಜೊತೆಗೆ ಹೆಗಲು ಕೊಟ್ಟು ಅತುಳಪರಾಕ್ರಮದಿಂದ ಹೋರಾಡಿದ ಸಂಗತಿ ನಮಗೆ ಹೆಮ್ಮೆಯನ್ನುಂಟುಮಾಡಿದೆ'

ಟ್ಯೂನೀಷಿಯಾದ ವಿಜಯೋತ್ಸವಕ್ಕಾಗಿ ಮೇ ೨೧ನೇ ತಾರೀಖು ಶುಕ್ರವಾರವನ್ನು ಸಾರ್ವತ್ರಿಕ ರಜಾ ದಿನವನ್ನಾಗಿ ಘೋಷಿಸಿರುವುದಾಗಿ ವೈಸರಾಯರು ನಿನ್ನೆ ರಾತ್ರಿ ತಾವು ಮಾಡಿದ ಬ್ರಾಡ್‌ಕ್ಯಾಸ್ಟ್ ಭಾಷಣದಲ್ಲಿ ತಿಳಿಸಿದರು

ಸ್ವೀಕಾರ

ಸಾರ್ಥವಳ್ಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಚಿ|| ಕೊಟ್ರಪ್ಪನವರ ಸೋದರಿ ಚಿ|| ಸೌ|| ನೀಲಾಂಬಿಕೆಗೂ, ಸಾಸಲು ಮು|| ರಾ|| ಗುಬ್ಬೆಪ್ಪನವರ ಸೋದರ ಚಿ|| ರೇವಣಸಿದ್ದಪ್ಪನಿಗೂ ನೆರವೇರಿದ ವಿವಾಹದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರಿಂದ ಸಮರ್ಪಿಸಲ್ಪಟ್ಟ 2 ರೂ. ಮತ್ತು ನಸಿವಾಳದ ಚಿ|| ಮರಿಬಸಪ್ಪಸೆಟ್ಟರ ಪುತ್ರಿ ಚಿ|| ಸೌ|| ಚನ್ನಬಸಮ್ಮನಿಗೂ ಮಾದಾಳು ಮು|| ರಾ|| ಬಸಪ್ಪಸೆಟ್ಟರ ಪುತ್ರ ಚಿ|| ಶಿವಲಿಂಗಪ್ಪನಿಗೂ ನೆರವೇರಿದ ವಿವಾಹದಲ್ಲಿ ಸಮರ್ಪಿಸಲ್ಪಟ್ಟ 2 ರೂ. ಒಟ್ಟು 4 ರೂಪಾಯಿಗಳು ಶಿವಟೂರು ಮು|| ರಾ|| ಸಾಸಲು ಮುರಿಗೆಪ್ಪನವರ ದ್ವಾರಾ ತಲ್ಪಿರುತ್ತವೆ.

ಕರಜಗಿ ತಾ|| ಕಲುಕೋಟೆ ಗ್ರಾಮದ ಬಣಕಾರ ಕಳ್ಳಿ ಲಿಂಗಪ್ಪನವರು ತಮ್ಮ ಗೃಹದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯ ದಾರುಕಾಚಾರ್ಯರ ಜಯಂತೀ ಮಹೋತ್ಸವಗಳನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಶ್ರೀ ವೇ|| ಶಿವಯೋಗಿ ಹಾಲಮಠ ಸ್ವಾಮಿಗಳ ದ್ವಾರಾ ತಲ್ಪಿರುತ್ತದೆ.

ಶಿವಮೊಗ್ಗಾ ಡಿ|| ಹಾರನಹಳ್ಳಿಯಲ್ಲಿರುವ ವೇ|| ಗುಬ್ಬಿ ಶಿವಕಥಾ ಪಂಡಿತ ಶಿವರುದ್ರ ಶಾಸ್ತ್ರಿಗಳವರು ತಮ್ಮ ಪುತ್ರ ಚಿ|| ಶಿವಾನಂದಸ್ವಾಮಿಯ ಚೌಲೋಪನಯನ ಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಧಾರವಾಡ ಡಿ|| ಕಲಘಟಗಿ ತಾ|| ಬೆಲವಂತರ ಗ್ರಾಮದಲ್ಲಿ ಬಸಪ್ಪ ಚನ್ನಪ್ಪ ನೂಲವಿ ಇವರು ತಾ|| 6-5-43 ರಲ್ಲಿ ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಶ್ರೀ ಚನ್ನಬಸವೇಶ್ವರ ಭಜನಾಸಂಘದ ಛೇರ್ಮನ್ ವೇ|| ಬಸವಣ್ಣಯ್ಯ ಪೂಜಾರ ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಹಲ್ಲುಗಳಿಗೂ ದೇಹಾರೋಗ್ಯಕ್ಕೂ ಇರುವ ಸಂಬಂಧ.

ಶುಚಿಯಾದ ಮತ್ತು ಕ್ರಮವಾದ ದಂತಪಂಕ್ತಿಯು ಸ್ತ್ರೀಯರ ಮತ್ತು ಪುರುಷರ ಮುಖಸೌಂದರ್ಯವನ್ನು ಹೆಚ್ಚಿಸುವುದು ಆದರೆ ನೂರರಲ್ಲಿ 50 ಮಂದಿ ತಮ್ಮ ಯೌವನದಶೆಯ ಪ್ರಥಮಭಾಗವು ಕಳೆಯುವಷ್ಟರಲ್ಲಿಯೇ ಈ ಭಾಗ್ಯವನ್ನು ಕಳೆದುಕೊಳ್ಳುವರು

ಹಲ್ಲುಗಳ ಆಕೃತಿಯು ಮುಖಲಕ್ಷಣಕ್ಕೆ ಹೇಗೆ ಸಹಕಾರಿಯೋ ಹಾಗೆಯೇ ಶುಚಿಯಾದ ಒಳ್ಳೆಯ ದಂತಪಂಕ್ತಿಗಳೂ ನಿರ್ಮಲವಾದ ಬಾಯಿಯೂ ಶರೀರಾರೋಗ್ಯಕ್ಕೂ, ಚಿರಾಯುಷ್ಯಕ್ಕೂ ಸಹಕಾರಿಗಳು ಆದರೂ ದಂತ ನೈರ್ಮಲ್ಯದ ವಿಷಯದಲ್ಲಿಯೂ ಬಾಯಿಯ ಶುಚಿತ್ವದ ವಿಷಯದಲ್ಲಿಯೂ ಅನೇಕರು ಅಲಕ್ಷ್ಯದಿಂದಿರುವರು ಈ ವಿಷಯದಲ್ಲಿ ಅಜಾಗರೂಕತೆಯಿಂದಿದ್ದಲ್ಲಿ ದೇಹದ ಮಿಕ್ಕ ಭಾಗಗಳಲ್ಲಿ ಅನಾರೋಗ್ಯದಿಂದಿದ್ದಂತೆಯೇ ಇದೇ ಅನೇಕ ರೋಗಗಳಿಗೂ ಆಲಯವಾದ ದೃಶ್ಯಕ್ಕೂ ಕಾರಣ [illegible]ಯಾಗುವುದು

ಹಲ್ಲುಗಳ ಜೋಡಣೆ

ಮನುಷ್ಯನಿಗೆ ಸಾಮಾನ್ಯವಾಗಿ 32 ಹಲ್ಲುಗಳಿರಬೇಕು ಅವುಗಳಲ್ಲಿ [illegible] ಹಲ್ಲುಗಳು 8 ಮುಂದಿನ ಹಲ್ಲುಗಳು 4 ಅರೆಯುವ ಹಲ್ಲುಗಳು 8 ದವಡೆಯ ಹಲ್ಲುಗಳು 12 ಇವೆ. ಪ್ರತಿ ಮೇಲಿನ ಪಂಕ್ತಿಯಲ್ಲಿ 16 ಹಲ್ಲುಗಳೂ ಕೆಳಗಿನ ಪಂಕ್ತಿಯಲ್ಲಿ 16 ಹಲ್ಲುಗಳೂ ಇರುವುವು

ಮೇಲುಸಾಲಿನಲ್ಲಿಯೂ ಕೆಳಸಾಲಿನಲ್ಲಿಯೂ ಮುಂಭಾಗದಲ್ಲಿರುವ ಹಲ್ಲುಗಳು ಹರಿತವಾಗಿ ಉಳಿಯಂತಿರುವುವು ಗಟ್ಟಿಪದಾರ್ಥಗಳನ್ನು ತಿನ್ನುವಾಗ ಈ ಹಲ್ಲುಗಳಿಂದಲೇ ಆ ಪದಾರ್ಥಗಳನ್ನು ಕಡಿದು ಚೂರುಮಾಡಬೇಕಾಗುವುದು ಆದುದರಿಂದ ಇವಕ್ಕೆ ಕಡಿಯುವ ಹಲ್ಲುಗಳೆಂದು ಹೆಸರು

ಆ ಹಲ್ಲುಗಳ ಪಕ್ಕದಲ್ಲಿರುವ ಹಲ್ಲುಗಳಿಗೆ ನಾಯಿಹಲ್ಲು ಅಥವಾ ಕೋರೆಹಲ್ಲುಗಳೆಂದು ಹೆಸರು ಇವು ನಾಯಿ ಬೆಕ್ಕು ಮುಂತಾದ ಪ್ರಾಣಿಗಳಿಗೆ ಬಹಳ ಮುಖ್ಯವಾಗಿರುವುವು ಮೇಲಿನ ಸಾಲಿನಲ್ಲಿ ಉದ್ದವಾಗಿಯೂ, ಚೂಪಾಗಿಯೂ ಇರುವ ಇಂತಹ ಎರಡು ಹಲ್ಲುಗಳಿಗೆ ಇವಕ್ಕೆ ‘ ಕಣ್ಣು ಹಲ್ಲು ” ಗಳೆಂದೂ ಹೆಸರುಂಟು

“ ಬೈಕಸ್ಪಿಡ ” ಎಂಬ ಅರೆಯುವ ಹಲ್ಲುಗಳ ಮೇಲುಭಾಗದಲ್ಲಿ ಆಹಾರವನ್ನು ಅರೆಯುವುದಕ್ಕಾಗಿ ಎರಡು [illegible] ಈ ಹಲ್ಲುಗಳು ಕೋರೆಹಲ್ಲುಗಳಿಗೂ ದವಡೆಹಲ್ಲುಗಳಿಗೂ ಮಧ್ಯಭಾಗದಲ್ಲಿವೆ

ಆಹಾರವನ್ನು ಚೆನ್ನಾಗಿ ಅಗಿಯುವುದಕ್ಕೆ ಸಹಕಾರಿಗಳು ದವಡೆಹಲ್ಲುಗಳು ಈ ಹಲ್ಲುಗಳ ಮೇಲುಭಾಗದಲ್ಲಿ ನಾವು ತಿಂದ ಗಟ್ಟಿಪದಾರ್ಥಗಳನ್ನು ಚೆನ್ನಾಗಿ ಅರೆದು, ಅದು ಜೊಲ್ಲುರಸದೊಡನೆ ಸೇರುವಂತೆ ಮಾಡಲು ಒರಟಾದ ಆಕೃತಿಯ ಹಲ್ಲುಗಳಿರುವುವು ಈ ಹಲ್ಲುಗಳ ನೆತ್ತಿಯಲ್ಲಿ ಎರಡು ಮೂರು ಸಣ್ಣ ಹಲ್ಲುಗಳಿರುವುವು ಆಹಾರ ಜೀರ್ಣಕ್ಕೆ ಈ 12 ಹಲ್ಲುಗಳೂ ಬಹಳ ಮುಖ್ಯವಾದುದರಿಂದ, ಇವುಗಳ ರಕ್ಷಣೆಯ ವಿಷಯದಲ್ಲಿ ಬಹಳ ಜಾಗರೂಕರಾಗಿರಬೇಕು

ಹಲ್ಲುಗಳು ಡೆಂಟೈನ್ ಎಂಬ ಕೋವೆಯ ಆಕೃತಿಯ ಒಂದು ಗಟ್ಟಿಪದಾರ್ಥದಿಂದ ಮಾಡಲ್ಪಟ್ಟಿವೆ ಅವುಗಳ ಮೇಲೆ ಎಲ್ಲಾ ಭಾಗದಲ್ಲಿಯೂ ಗಟ್ಟಿಯಾಗಿ ಗಾಜಿನಂತೆ ಹೊಳೆಯುವ ಎನಾಮಲ್ ಎಂಬ ಪದಾರ್ಥದ ಹೊದಿಕೆಯಿರುವುದು ಈ ಎನಾಮಲಿಗೆ ಸ್ವಲ್ಪವೂ ಅಪಾಯವಾಗದಂತೆ ನೋಡಿಕೊಳ್ಳಬೇಕು ಆ ‘ಎನಾಮಲ್’ ಎಂಬುದು ಒಂದಾವರ್ತಿ ಹೋದಲ್ಲಿ ಪುನಃ ಬೆಳೆಯಲಾರದು

ಹಲ್ಲುಗಳ ಮಧ್ಯಭಾಗವು, “ ಟೂತ್ ಪಲ್ಪ್ ’ ಎಂಬ ಹೆಸರುಳ್ಳ ನರಗಳ ಮತ್ತು ರಕ್ತನಾಳಗಳ ಸೇರುವಿಕೆಯಿಂದಾಗಿದೆ ಈ ರಕ್ತನಾಳಗಳ ಮೂಲಕವೇ ಹಲ್ಲುಗಳು ಬೆಳೆಯುವುದಕ್ಕೆ ಬೇಕಾದ ಸಾಮಗ್ರಿಗಳೊದಗುವುವು ಮತ್ತು ಅವು ಚೆನ್ನಾಗಿ ಬೆಳೆದಮೇಲೆ, ದೃಢವಾಗಿ ನಿಲ್ಲುವುದಕ್ಕೂ ಇವೇ ಸಹಕಾರಿಗಳಾಗುವುವು ಈ ಹಲ್ಲುಗಳು ಎಲುಬಿನಂತಿರುವ ಸಿಮೆಂಟಂ ಎಂಬ ಪದಾರ್ಥದಿಂದ ದವಡೆಯ ಎಲುಬುಗಳಲ್ಲಿರುವ ಗೂಡುಗಳಲ್ಲಿ ಬಂಧಿಸಲ್ಪಟ್ಟಿವೆ

ದಂತರಕ್ಷಣೆಯ ಉಪಾಯಗಳು

ಹಾಲುಹಲ್ಲುಗಳು ಬಿದ್ದು ಬೇರೆ ಹಲ್ಲುಗಳು ಹುಟ್ಟಿದವೇಳೆ ಅವುಗಳು ತಂಟು ಕಟು ಹೋಗದಂತಿರುವುದಕ್ಕಾಗಿಯೂ [illegible] ಹಲ್ಲುಗಳನ್ನು [illegible]ಸದಂತೆ ರಕ್ಷಿಸುವುದಕ್ಕಾಗಿಯೂ ಪ್ರಾರಂಭದಿಂದಲೂ ಅವುಗಳಿಗೆ ಕೆಲಸವನ್ನು ಕೊಡುತ್ತಿರಬೇಕು

ಚೆನ್ನಾಗಿ ಗಟ್ಟಿ ರೊಟ್ಟಿಯಲ್ಲಿ, ಗಟ್ಟಿಭಾಗವನ್ನು ತಿನ್ನುವುದರಿಂದ ಹಲ್ಲುಗಳಿಗೆ ಒಳ್ಳೆಯ ಸಾಧನೆಯನ್ನು ಕಲ್ಪಿಸಿದಂತಾಗುವುದು ಮಿಶ್ರಣವೆಯಿಂದ ಮಾಡಿದ ಬೀಯ ರೊಟ್ಟಿ [illegible] ಆಹಾರ ಪಕ್ವದಯ ಪದಾರ್ಥಗಳು [illegible] ಇವುಗಳನ್ನು [illegible] ಸೇವಿಸುವುದರಿಂದ ಹಲ್ಲುಗಳಿಗೆ ಕೆಲಸ ಕಡಿಮೆಯಾಗಿ ಅವು ಕೆಡುವುದಕ್ಕೆ ಆಸ್ಪದವುಂಟಾಗುವುದು

ಗಟ್ಟಿಯಾದ ಆಹಾರ ಪದಾರ್ಥಗಳು ರೊಟ್ಟಿಯ ಚೂರುಗಳು ಧಾನ್ಯಗಳು ಹಣ್ಣುಕಾಯಿಗಳು ಇವುಗಳನ್ನು ಅಧಿಕವಾಗಿ ಸೇವಿಸುವುದರಿಂದಲೂ ಆಹಾರವನ್ನು ಚೆನ್ನಾಗಿ ಅಗಿದು ತಿನ್ನುವುದರಿಂದಲೂ ಆಹಾರ [illegible] ಸೇವಿಸಿದಮೇಲೆ ಸಾಧ್ಯವಾದಾಗಲೆಲ್ಲ ಬ್ರಷ್ಷಿನಿಂದ [illegible] ತೊಳೆಯುತ್ತಾ ಬರುವುದರಿಂದಲೂ ಹಲ್ಲುಗಳು ಕೆಡುವುದಕ್ಕೆ ಆಸ್ಪದವು ಕಡಿಮೆಯಾಗಿ ಅವು ಆರೋಗ್ಯಸ್ಥಿತಿಯಲ್ಲಿರುವುವು

ಹಲ್ಲುಗಳ ನಿಯಮಿತ [illegible] ವಿಷಯದಲ್ಲಿ ಅಜಾಗರೂಕತೆಯಿಂದಿರುವುದು ಆಹಾರ ಸೇವನೆಯ ವಿಷಯದಲ್ಲಿ ತಕ್ಕ ನಿಯಮಗಳನ್ನು ಅವಲಂಬಿಸದಿರುವುದು ಈ ಮುಂತಾದುವುಗಳಿಂದ ಹಲ್ಲುಗಳ ಮೇಲೂ ಅವುಗಳ ಸಂದುಗಳಲ್ಲಿಯೂ ಆಹಾರದ ಚೂರುಗಳು ಅಂಟಿಕೊಂಡು ಅಲ್ಲಿಯೇ ಕೊಳೆತು ಹುಳುಕು ಹಲ್ಲುಗಳ ಒಸಡುಗಳಿಗೆ ಪ್ರವೇಶಿಸಿ ಅವು ಕೆಡುವುದಕ್ಕೆ ಕಾರಣವಾಗುವುದು

ಬ್ರಷ್ಷು, ಹಲ್ಲುಪುಡಿಗಳು ಮುಂತಾದ ದಂತ ಶೋಧಕ ಪದಾರ್ಥಗಳು

ನೀವು ಉಪಯೋಗಿಸುವ ಬ್ರಷ್ಷುಗಳು ಮೆತ್ತಗೂ ಬಿಗಿಯಾಗಿಯೂ ಇರಬೇಕು ಮತ್ತು ಅವು ಯಾವಾಗಲೂ ಶುಭ್ರವಾಗಿರಬೇಕು ಮೇಲುಸಾಲಿನ ದಂತಗಳನ್ನುಜ್ಜುವಾಗ ಬ್ರಷ್ಷನ್ನು ಅಧೋಮುಖವಾಗಿ ಹಿಡಿದು ಉಜ್ಜಬೇಕು ಕೆಳಗಿನ ಸಾಲಿನ ಹಲ್ಲುಗಳನ್ನುಜ್ಜುವಾಗ ಬ್ರಷ್ಷನ್ನು ಊರ್ಧ್ವಮುಖವಾಗಿ ಹಿಡಿದು ಉಜ್ಜಬೇಕು ಹೀಗೆ ಉಜ್ಜುವುದರಿಂದ ಬಾಯಿಯು ನಿರ್ಮಲವಾಗಿಯೂ ಆರೋಗ್ಯಕರವಾಗಿಯೂ ಇರುವುದು

ಹಲ್ಲುಗಳನ್ನು ಒಂದು ಪಕ್ಕದಿಂದ ಮತ್ತೊಂದು ಪಕ್ಕಕ್ಕೆ ಉಜ್ಜುವುದು ತಪ್ಪು ಇದರಿಂದ ಆಹಾರದ ಚೂರುಗಳೆಲ್ಲವೂ ಹಲ್ಲುಸಂದುಗಳಲ್ಲಿ ಸೇರಿ ಅಲ್ಲಿಯೇ ಕೊಳೆತು, ಹಲ್ಲುಗಳಲ್ಲಿ ಕ್ರಿಮಿಗಳು ಸೇರುವುದಕ್ಕೂ, ಪಾಚಿ ಕಟ್ಟುವುದಕ್ಕೂ ಕಾರಣವಾಗುವುವು ಅಲ್ಲದೆ ಹಲ್ಲಿನ ಮೇಲಿರುವ ಎನಾಮಲ್ ಎಂಬ ಆವರಣವು ಕಿತ್ತುಹೋಗುವುದು ಹಲ್ಲು ಕೆಟ್ಟರೆ ಹೊಸ ಹಲ್ಲುಗಳನ್ನು ಕಟ್ಟಿಸಬಹುದು ಇವು ಸ್ವಭಾವಜನ್ಯವಾದ ಹಲ್ಲುಗಳಷ್ಟು ಪ್ರಯೋಜನಕಾರಿಗಳಾಗುವುದಿಲ್ಲ ಆದರೂ ತಿನ್ನುವ ಆಹಾರವು ಜೀರ್ಣಿಸಿ ರಕ್ತಗತವಾಗಲು ಅಷ್ಟು ಬಹಳಮಟ್ಟಿಗೆ ಸಹಕಾರಿಗಳಾಗುವುವು ಸ್ವಭಾವಜನ್ಯವಾದ ಹಲ್ಲುಗಳ ವಿಷಯದಲ್ಲಿ ಹೇಗೋ, ಹಾಗೆಯೇ ಈ ಹಲ್ಲುಗಳ ನಿರ್ಮಲತೆಯ ವಿಚಾರದಲ್ಲಿಯೂ ತಕ್ಕ ಎಚ್ಚರಿಕೆಗಳನ್ನು ತೆಗೆದುಕೊಳ್ಳಬೇಕು ಅವುಗಳನ್ನು ಆಗಿಂದಾಗ್ಗೆ ಬ್ರಷ್ಷುಗಳಿಂದ ಉಜ್ಜುತ್ತಿರಬೇಕು ಇಲ್ಲದಿದ್ದರೆ ಬಾಯಿಯಿಂದ ದುರ್ವಾಸನೆಯು ಹೊರಟು, ನಿಶ್ವಾಸದ ಗಾಳಿಯನ್ನು ಕೆಡಿಸುವುದು ಇದರಿಂದ ಆ ಹಲ್ಲುಗಳು ಆರೋಗ್ಯಕ್ಕೆ ಸಹಕಾರಿಗಳಾಗುವುದು ತಪ್ಪಿ, ಕ್ರಿಮಿಗಳಿಗೆ ಆಶ್ರಯಸ್ಥಾನಗಳಾಗುವುವು ಅಶುದ್ಧವಾದ ಕೃತಕದಂತಗಳು ನಾವು ತಿನ್ನುವ ಆಹಾರವನ್ನು ಒಡನೆ ವಿಷಮಿಶ್ರ ಮಾಡಿ ರೋಗಕಾರಣಗಳಾಗುವುವು

ಪ್ರಕಟಣೆ

ಬೆಂಗಳೂರು ಚಿಕ್ಕಪೇಟೆ ಮಹಾಂತಿನಮಠದಲ್ಲಿರುವ ಶ್ರೀಜಗದ್ಗುರು ರೇಣುಕಾದಿ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಸಂಸ್ಕೃತ ಮತ್ತು ವೇದಪಾಠವನ್ನು ಕಲಿಯಲಪೇಕ್ಷೆಯುಳ್ಳ ವಿದ್ಯಾರ್ಥಿಗಳು ಮೇ ತಿಂಗಳು 20 ನೇ ತಾರೀಖಿನ ಒಳಗಾಗಿ ತಮ್ಮ ಅಪ್ಲಿಕೇಷನ್‌ಗಳನ್ನು ಪಾಠಶಾಲಾ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು ಅಪ್ಲಿಕೇಷನ್ ಫಾರಂಗಳು ಬೇಕಾಗಿದ್ದ ಪಕ್ಷದಲ್ಲಿ ಎರಡಾಣೆ ಸ್ಟಾಂಪನ್ನು ಕಳುಹಿಸಿದರೆ ಅಪ್ಲಿಕೇಷನ್ ಫಾರಂಗಳು ರವಾನಿಸಲಾಗುತ್ತದೆ ಹಿಂದಿನ ವರ್ಷದ ವಿದ್ಯಾರ್ಥಿಗಳು ಕೂಡ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು

ಸಂಸ್ಕೃತ ವಿದ್ಯಾರ್ಥಿಗಳಿಗೆ ಸೂಚನೆ

ಬಳ್ಳಾರಿ ಶ್ರೀಗುರುನಿವಾಸ ಸಂಸ್ಕೃತ ಪಾಠಶಾಲೆಯನ್ನು ಮದ್ರಾಸ್ ಪ್ರಭುತ್ವದ ವಿದ್ಯಾಶಾಲೆಯವರ ಸಲಹೆಯ ಪ್ರಕಾರ ಹೈಸ್ಕೂಲನ್ನಾಗಿ ಮಾರ್ಪಡಿಸುವ ನಿರ್ಧಾರದಲ್ಲಿರುವೆವಾದ್ದರಿಂದ ಮದ್ರಾಸ್ ಗವರ್ನಮೆಂಟ ಎಂಟ್ರೆನ್ಸ್ ಹಾಗೂ ಕೆಳಗಿನ ತರಗತಿಯಲ್ಲಿ ಅಭ್ಯಾಸ ಮಾಡಲಿಚ್ಛಿಸುವ ವಿದ್ಯಾರ್ಥಿಗಳು ಇದೇ ಜೂನ್ 1 ನೇ ತೇದಿಯೊಳಗಾಗಿ ಸ್ಕೂಲು ಮೇನೇಜರಿಗೆ ಅರ್ಜಿ ಕಳುಹಿಸತಕ್ಕದ್ದು

ಮೇನೇಜರ್
ಗುರುನಿವಾಸ ಸಂಸ್ಕೃತ ಸ್ಕೂಲು, ಬಳ್ಳಾರಿ

ಶ್ರೀಮತಿ ಚಿಕ್ಕಬಸಮ್ಮಯ್ಯನವರ ಛತ್ರ

1943 44 ನೇ ಸಾಲಿನಲ್ಲಿ ಈ ಧರ್ಮಛತ್ರಕ್ಕೆ ಸೇರಿ ವಿದ್ಯಾಭ್ಯಾಸಮಾಡಲು ಇಚ್ಛಿಸುವ ವೀರಶೈವ ಬಡ ವಿದ್ಯಾರ್ಥಿಗಳು ಈ ಕೆಳಗೆ ರುಜುಮಾಡಿರುವವರಿಗೆ ಇದೇ ಮಾಹೆ ತಾರೀಖು 5 ರೊಳಗೆ ನಿರ್ಧಾರಿತವಾದ ಫಾರಂನಲ್ಲಿ ಅಪ್ಲಿಕೇಷನ್ ಕೊಡತಕ್ಕದ್ದು

ಕಾಲಾತೀತವಾಗಿ ಬಂದವರ ಮತ್ತು ನಿರ್ಧಾರಿತವಾದ ಫಾರಂನಲ್ಲಿ ಬರೆದುಕೊಳ್ಳದಿದ್ದರೆ ಸೀಟು ಕೊಡುವುದಿಲ್ಲ

ಅಪ್ಲಿಕೇಷನ್ ಫಾರಂ ಬೇಕಾದವರು 0 1 9 ಸ್ಟಾಂಪು ರವಾನಿಸತಕ್ಕದ್ದು

8 5 43 ಎಂ ಪಿ ಚನ್ನಪ್ಪ,
ಮೈಸೂರು ಕನ್‌ವಿನರ್

ಪ್ರಕಟಣೆ

ರಾವ್‌ಬಹದ್ದೂರ್ ಧರ್ಮಪ್ರವರ್ತಕ ಗುಬ್ಬಿ ತೋಟದಪ್ಪನವರ ಛತ್ರದ ಉಚಿತ ವಿದ್ಯಾರ್ಥಿನಿಲಯದ ಆನರರಿ ಸೆಕ್ರೆಟರಿಯವರು ಪ್ರಕಟಿಸುವುದೇನೆಂದರೆ

ಮೇಲ್ಕಂಡ ಉಚಿತ ವಿದ್ಯಾರ್ಥಿನಿಲಯಕ್ಕೆ 1943 44 ನೇ ಸಾಲಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದಕ್ಕಾಗಿ ಮೈಸೂರು ದೇಶದ ವೀರಶೈವ ಮತಸ್ಥರ ಬಡ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಸ್ವೀಕರಿಸಲಾಗುತ್ತೆ ಅಂಥಾ ವಿದ್ಯಾರ್ಥಿಗಳು ಈ ತಿಂಗಳು 20 ನೇ ತಾರೀಖಿನೊಳಗಾಗಿ ನಿಯಮಿತವಾದ ಫಾರಂನಲ್ಲಿ ತಮ್ಮ ದರಖಾಸ್ತುಗಳನ್ನು ಭರ್ತಿಮಾಡಿ ಆನರರಿ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸಬೇಕು ಯಸ್ ಯಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವವರೂ, ಪ್ರೌಢ ವಿದ್ಯಾಭ್ಯಾಸದ ಹೆಚ್ಚಿನ ತರಗತಿಗಳಲ್ಲಿ ವ್ಯಾಸಂಗ ಮಾಡತಕ್ಕವರೂ ಅರ್ಜಿಗಳನ್ನು ಹಾಕಿಕೊಳ್ಳಬಹುದು ಕೈಗಾರಿಕೆ ಮತ್ತು ಸಂಸ್ಕೃತ ವ್ಯಾಸಂಗದ ವಿದ್ಯಾರ್ಥಿಗಳಿಗೂ ಅವಕಾಶವಿರುತ್ತೆ ಬೆಂಗಳೂರು ಡಿಸ್ಟ್ರಿಕ್ಟಿನವರಾಗಿ ಹೈಸ್ಕೂಲು ತರಗತಿಗಳಲ್ಲಿ ಓದತಕ್ಕವರಿಗೆ ನಿಯಮಿತ ಸಂಖ್ಯೆಯಲ್ಲಿ ಅವಕಾಶ ಕೊಡಲಾಗುತ್ತೆ ದರಖಾಸ್ತುದಾರರು ವಿದ್ಯಾರ್ಥಿನಿಲಯದ ಅಧಿಕಾರ ವರ್ಗದವರು ಏರ್ಪಡಿಸುವ ಪರೀಕ್ಷಾಬೋರ್ಡಿನ ಮುಂದೆ ಈ ತಿಂಗಳು ಆಖೈರು ಸುಮಾರಿನಲ್ಲಿ ಗೊತ್ತುಪಡಿಸುವ ತಾರೀಖಿನಲ್ಲಿ ಹಾಜರಾಗಬೇಕು

ಜಿ ಕೆ ರುದ್ರಾರ್ಯ, ಆನರರಿ ಸೆಕ್ರೆಟರಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೪ನೇ ಮೇ ೧೯೪೩ [ಸಂಚಿಕೆ ೩

ಶ್ರೀಮಜ್ಜಗದ್ಗುರು ಏಕೋರಾಮಾರಾಧ್ಯ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀಮಹೋತ್ಸವಗಳು

ಬೆಂಗಳೂರು

ಚಿಕ್ಕಪೇಟೆಯಲ್ಲಿರುವ ಶ್ರೀ ಮಹಾಂತಿನಮಠದಲ್ಲಿ ವೈಶಾಖ ಶು|| ೩ ಶುಕ್ರವಾರ ಪ್ರಾತಃಕಾಲದಲ್ಲಿ ಶ್ರೀಮದ್ವೀರಶೈವ ಮಹಾಮತಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರಲ್ಲೊಬ್ಬರಾದ ಶ್ರೀ ಹಿಮವತ್ಕೇದಾರ ವೈರಾಗ್ಯಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವ ನಿಮಿತ್ತವಾಗಿ ಶ್ರೀ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ, ಬಿಲ್ವಾರ್ಚನೆ, ಮಹಾಮಂಗಳಾರತಿಗಳು ನಡೆದ ತರುವಾಯ ಗಣಾರಾಧನೆಯು ಮಾಡಲ್ಪಟ್ಟಿತು ಅದೇ ದಿನ ಸಾಯಂಕಾಲ ಜಯಂತೀ ಮಹೋತ್ಸವದ ಮಂಟಪದಲ್ಲಿ ವೇ|| ಶಿವದೇವಶಾಸ್ತ್ರಿಗಳಿಂದ ಓಹಿಲಾರ್ಯ ” ಎಂಬ ಶಿವಕಥಾನುವಾದವೂ ಶ್ರೀಗಳವರಿಂದ ಧರ್ಮೋಪದೇಶವೂ ನಡೆದ ಬಳಿಕ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಲಿಂಗೋದ್ಭವಮೂರ್ತಿಗೆ ಮಹಾಮಂಗಳ ಪುಷ್ಪಾಂಜಲಿಗಳು ಸಮರ್ಪಿಸಲ್ಪಟ್ಟು ಸರ್ವರಿಗೂ ಪ್ರಸಾದವಿನಿಯೋಗವು ನಡೆದ ತರುವಾಯ ಆಚಾರ್ಯರ ಜಯಘೋಷದೊಡನೆ ಅಂದಿನ ಕಾರ್ಯಕ್ರಮವು ಸಮಾಪ್ತಿಯಾಯಿತು

ವೈಶಾಖ ಶು|| ೪ ಶನಿವಾರ ಮತ್ತು ವೈಶಾಖ ಶು|| ೫ ಭಾನುವಾರ ಶ್ರೀಮದ್ವೀರಶೈವ ಮಹಾಮತಸ್ಥಾಪಕರಲ್ಲೊಬ್ಬರಾದ ಶ್ರೀಮದುಜ್ಜಯಿನೀ ಸದ್ಧರ್ಮಸಿಂಹಾಸನಾಧೀಶ್ವರ ಶ್ರೀ ೧೦೮ ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ ನಿಮಿತ್ತವಾಗಿ ಪ್ರಾತಃಕಾಲ ಶ್ರೀ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಬಿಲ್ವಾರ್ಚನೆ ಮಹಾಮಂಗಳಪೂಜಾದಿಗಳು ನಡೆದ ತರುವಾಯ ಮಹಾಗಣಾರಾಧನೆಯು ಮಾಡಲ್ಪಟ್ಟಿತು ಸಾಯಂಕಾಲ ೬ ಗಂಟೆಗೆ ಶ್ರೀ ಜಯಂತೀ ಮಹೋತ್ಸವ ಮಂಟಪದಲ್ಲಿ ಶ್ರೀ|| ಷ|| ಬ್ರ|| ಷ|| ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಕೀರ್ತನ ಕಲಾಕೋವಿದ ವೇ|| ರೇಣುಕಾರಾಧ್ಯರಿಂದ “ ಗುರುಭಕ್ತಿ ” ಎಂಬ ಏಕಲವ್ಯ ಕಥಾನುವಾದವೂ ಮಾಡಲ್ಪಟ್ಟಿತು ತರುವಾಯ ಮಹಾಂತಿನ ಮಠದ ಶ್ರೀಗಳು ಗುರುಮಹಿಮೆಯೆಂಬ ವಿಷಯದಲ್ಲಿ ಮಹೋಪನ್ಯಾಸವನ್ನು ಮಾಡಿದರು ಕೀರ್ತನೋಪನ್ಯಾಸಗಳನ್ನು ಕೇಳಿ ಬೆಂಗಳೂರು ನಗರನಿವಾಸಿಗಳು ಸಾವಿರಾರು ಜನರು ಆನಂದಭರಿತರಾದರು ತರುವಾಯ ಶ್ರೀ ಜಗದ್ಗುರು ದಾರುಕಾಚಾರ್ಯರ ಲಿಂಗೋದ್ಭವಮೂರ್ತಿಗೆ ಮಹಾಮಂಗಳಾರತಿ ಪುಷ್ಪಾಂಜಲಿಗಳು ಸಮರ್ಪಿಸಲ್ಪಟ್ಟವು ತರುವಾಯ ಮಹಾರಾಜರ ಶ್ರೇಯಃಪ್ರಾರ್ಥನೆಗಳು ಮಾಡಲ್ಪಟ್ಟವು ಬಳಿಕ ಶ್ರೀ ಜಗದ್ಗುರು ದಾರುಕಾಚಾರ್ಯರ ಪ್ರಸಾದವು ಸರ್ವರಿಗೂ ಕೊಡಲ್ಪಟ್ಟಿತು ಅನಂತರ ಜಗತ್ತಿಗೆ ಪ್ರಾಪ್ತಗಳಾದ ಕಷ್ಟಗಳನ್ನು ದೂರಮಾಡಿ ಸರ್ವರಿಗೂ ಸುಖವನ್ನುಂಟುಮಾಡಲೆಂದು ಶ್ರೀ ಜಗದ್ಗುರು ದಾರುಕಾಚಾರ್ಯ ಭಗವತ್ಪಾದರನ್ನು ಪ್ರಾರ್ಥಿಸಿ ಆಚಾರ್ಯರ ಜಯಘೋಷದೊಡನೆ ಜಯಂತೀಮಹೋತ್ಸವ ಸಮಾರಂಭವು ಸಮಾಪ್ತಿಗೊಂಡಿತು ಓರ್ವ ಗುರುಭಕ್ತ

ಶ್ರೀ ಕ್ಷೇತ್ರ ಕಾಶೀ

ಪ್ರತಿವರ್ಷ ಪದ್ಧತಿಯಂತೆ ಶ್ರೀ ಜಗದ್ಗುರು ವಿಶ್ವಾರಾಧ್ಯ ಗುರುಕುಲ ಕಾಶೀ ಈ ಪುರದಲ್ಲಿ ತಾ ೩ ೫ ೪೩ ಮತ್ತು ೯ ೫ ೪೩ ನೇ ದಿವಸ ಕ್ರಮವಾಗಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಮತ್ತು ಶ್ರೀ ಜಗದ್ಗುರು ದಾರುಕಾಚಾರ್ಯರ ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ನಡೆಯಿತು ಆ ದಿನ ಪ್ರಾತಃಕಾಲ ೮ ಘಂಟೆಗೆ ಶೃಂಗರಿಸಲ್ಪಟ್ಟ ಶ್ರೀ ಮಹಾಸಂಸ್ಥಾನ ಮಧ್ಯ ವಿರಾಜಿಸುವ ಶ್ರೀ ರಾಮನಾಥಮಂದಿರದಲ್ಲಿ ಮತ್ತು ಶ್ರೀ ಸಿದ್ಧೇಶ್ವರಮಂದಿರದಲ್ಲಿ ಲಿಂಗೋದ್ಭವ ಮೂರ್ತಿಗಳಿಂದೊಪ್ಪುವ ಶ್ರೀ ರಾಮನಾಥ ಶಿವಲಿಂಗಕ್ಕೂ, ಶ್ರೀ ಸಿದ್ಧನಾಥ ಶಿವಲಿಂಗಕ್ಕೂ ಶ್ರೀ ಲಿಂಗೋದ್ಭವ ಮೂರ್ತಿಗಳಿಗೂ ಪಂಡಿತ ವೈದಿಕಮಂಡಲಿಯಿಂದ ವೇದಘೋಷದೊಡನೆ ರುದ್ರಾಭಿಷೇಕವೂ ಅಷ್ಟೋತ್ತರ ಶತ ಬಿಲ್ವಾರ್ಚನೆಯೂ ಮಹಾಮಂಗಳಾರತಿಯೂ, ಮಹಾನೈವೇದ್ಯವೂ ನಡೆಯಿಸಲ್ಪಟ್ಟಿತು ನಂತರ ೧೧ ಘಂಟೆಯಿಂದ ಬಂದ ಭೂಸುರವರಮಾಹೇಶ್ವರರಿಗೆ ಅನ್ನಸಂತರ್ಪಣೆಯು ನಡೆಯಿತು ಸಂಜೆ ೩|| ಘಂಟೆಗೆ ಸಭಾಕಾರ್ಯಾರಂಭವಾಯಿತು ಮೊದಲು ಶ್ರೀ ಗಂಗಾಧರ ಶರ್ಮಾ ಶಾಲಾಮಠ ಅನುಗೊಂಡ ಇವರು ಸೂಚಿಸಿದಂತೆ ಶ್ರೀ ಶಿವಲಿಂಗಯ್ಯಾ ಗವಾಯಿ ಕಾಟೇರಿ, ಇವರು ಶ್ರೀ ಜಗದಾಚಾರ್ಯರ ಲೀಲಾಗರ್ಭಿತ ಪದ್ಯದ್ವಯವನ್ನು ತಮ್ಮ ಗಾನಕಂಠದಿಂದ ಸುಶ್ರಾವ್ಯವಾಗಿ ಹಾಡಿ ಶ್ರೋತೃವರ್ಗವನ್ನು ಆನಂದಪಡಿಸಿದರು ಆ ಮೇಲೆ ಶ್ರೀ|| ಷ|| ಬ್ರ|| ಅನ್ನದಾನ ಶಿವಾಚಾರ್ಯರು ಜಮಖಂಡಿ ಇವರು “ಶ್ರೀ ಜಗದಾಚಾರ್ಯರ ಜಯಂತಿಯವಶ್ಯಕತೆ ಈ ವಿಷಯವನ್ನು ತಮ್ಮ ಅಮೋಘ ವಾಣಿಯಿಂದ ಪ್ರತಿಪಾದಿಸಿ ಸಭಿಕರಿಗೆ ಆನಂದಾತಿಶಯವನ್ನುಂಟುಮಾಡಿದರು ಅದರಂತೆ ಶ್ರೀ|| ಷ|| ಬ್ರ|| ಗುರುಪಾದ ಶಿವಾಚಾರ್ಯ ಮುಳ್ಳೂರು ವೇ|| ಪಂ|| ಶರಣಬಸವಶಾಸ್ತ್ರಿಗಳು ಜ್ಯೋತಿಷರತ್ನಂ ತುಮಕೂರು ಇವರೇ ಮೊದಲಾದವರೆಲ್ಲರೂ ಕ್ರಮವಾಗಿ ಗುರುಭಕ್ತಿ, ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ, ಶ್ರೀ ಭಗವತ್ಪಾದರ ಅವತಾರವೂ ದುಷ್ಟನಿಗ್ರಹ ಶಿಷ್ಟ ಪರಿಪಾಲನೆಯೂ ಇತ್ಯಾದಿ ವಿಷಯಗಳನ್ನು ಬಹು ಸಮಂಜಸವಾಗಿ ಪ್ರತಿಪಾದಿಸಿ ಸಭಿಕರನ್ನು ಚಿತ್ರದಲ್ಲಿಯ ಬೊಂಬೆಗಳಂತೆ ಮಾಡಿದರು ಆ ಮೇಲೆ ಪ್ರಥಮಸೂಚನೆಯಂತೆ ಭಗವತ್ಪಾದರ ಭಜನೆಯೊಂದಿಗೆ ಮಂಗಳಾರತಿಯೂ, ಪುಷ್ಪಾಂಜಲಿಯೂ ಪ್ರಸಾದ ವಿನಿಯೋಗವೂ ಆಗಿ ಜಗದಾಚಾರ್ಯರ ಜಯಜಯಕಾರದೊಡನೆ ಅಂದಿನ ಕಾರ್ಯಕಲಾಪಗಳೆಲ್ಲವೂ ಮುಗಿಸಲ್ಪಟ್ಟವು ಓರ್ವ ಗುರುಭಕ್ತ

ಸೊಲ್ಲಾಪುರ

ವಾರ್ಷಿಕ ಪದ್ಧತಿಯಂತೆ ಸೊಲ್ಲಾಪುರ ವೀರಶೈವ ಸದಾಚಾರ ಸ್ತ್ರೀ ಸಮಾಜದ ವತಿಯಿಂದ ಶ್ರೀ ಜಗದಾಚಾರ್ಯರ ಜಯಂತೀಮಹೋತ್ಸವವು ಬಹಳ ಮನೋಹರವಾಗಿ ಮಾಡಲ್ಪಟ್ಟಿತು ತಾ ೭ ೫ ೪೩ ನೆಯ ಶುಕ್ರವಾರ ಬೆಳಗ್ಗೆ ಸದರೀ ಸಮಾಜದಲ್ಲಿ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಮಾಹೇಶ್ವರ ತೃಪ್ತಿಯಾಗಿ, ಸಾಯಂಕಾಲ ಐದು ಘಂಟೆಗೆ ಸಭೆಯು ಪ್ರಾರಂಭವಾಯಿತು ಪ್ರಥಮದಲ್ಲಿ ಸೌ|| ಸುಗ್ಗಲಾದೇವಿ ತಮಶೆಟ್ಟಿ ಕು|| ಗೌರೀದೇವಿ ಕಟಾಪ ಇವರು ಜಗದಾಚಾರ್ಯರ ಸ್ತೋತ್ರಗಳನ್ನು ಮಂಜುಳವಾಗಿ ಹಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ ಶ್ರೀ ಸೀತಾಬಾಯಿ ಉಡುಚಣ, ಸೌ|| ರಾಧಾಬಾಯಿ ಉಡುಚಣ ಬ್ರಾಹ್ಮಣರು ಇವರು ಗುರುಮಹತ್ವದ ಬಗ್ಗೆ ಶ್ರೀ ಪರಮಾತ್ಮನ ಮೇಲೆ ಪದಗಳನ್ನು ಹಾಡಿ ಸಭಿಕರನ್ನು ಆನಂದಗೊಳಿಸಿದರು ನಂತರ ಸೌ|| ಬಸಮ್ಮನಂದೀಮಠ ಸೌ|| ದಾನಮ್ಮ ಹಿರೇಮಠ ಇವರು ಜಯಂತೀ ವಿಷಯವಾಗಿ ಹಿಂದಿಯಲ್ಲಿಯೂ ಕನ್ನಡದಲ್ಲಿ ಭಾಷಣ ಮಾಡಿದ ಮೇಲೆ ಸೌ|| ಭಾಗೀರಥೀಬಾಯಿಯು ಗುರುತತ್ವ ಜಯಂತೀ ವಿಷಯವಾಗಿ ಉಪನ್ಯಾಸಮಾಡಿ, ಸಭಿಕರ ಮತ್ತು ಪರಸ್ಥಳದಿಂದ ಬಂದ ಬಹಳ ಭಕ್ತಿಯಿಂದ ಗುರುಮಹಿಮೆ ಪರಮಾತ್ಮನ ಮಹಿಮೆ ಈ ವಿಷಯ ಹಾಡಿದ ಶ್ರೀ ಸೀತಾಬಾಯಿ ಸೌ|| ರಾಧಾಬಾಯಿ ಇವರ ಆಭಾರಮನ್ನಿಸಿದರು ಆ ಮೇಲೆ ಜಗದಾಚಾರ್ಯರ ಭಾವಚಿತ್ರಕ್ಕೆ ಮಂಗಲವಾಗಿ ಪಂಚಾಚಾರ್ಯರ ಜಯಘೋಷದೊಂದಿಗೆ ಸಭೆಯು ವಿಸರ್ಜಿಸಲ್ಪಟ್ಟಿತು

ಸೌ|| ದಾನಮ್ಮ, ಹಿರೇಮಠ, ಸಕ್ರೆಟರಿ,
ವೀರಶೈವ ಸದಾಚಾರ ಸ್ತ್ರೀಸಮಾಜ, ಸೊಲ್ಲಾಪುರ

ಸೊಲ್ಲಾಪುರ

ಪ್ರತಿ ವರ್ಷದ ಪದ್ಧತಿಯ ಪ್ರಕಾರ ವೀರಶೈವ ಗುರುಕುಲದ ವತಿಯಿಂದ ಶ್ರೀ ಬಾಲತಪಸ್ವೀ ಬೃಹನ್ಮಠದಲ್ಲಿ ಶ್ರೀಜಗದ್ಗುರು ಏಕೋರಾಮಾರಾಧ್ಯರ ಹಾಗೂ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವವು ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ವೈಶಾಖ ಶು|| ೩ನೇ ಶುಕ್ರವಾರ ದಿವಸ ಪ್ರಾತಃಕಾಲ ಶ್ರೀ|| ಷ|| ಬ್ರ|| ಚನ್ನಬಸವ ಸ್ವಾಮಿಗಳು ಹಾವೇರಿ ಇವರ ನೇತೃತ್ವದಲ್ಲಿ ೫ ಬಾಲಕರಿಗೆ ಮಾಹೇಶ್ವರ ದೀಕ್ಷಾವಿಧಿಯು ಪಂಚಕಲಶಸ್ಥಾಪನಾಪೂರ್ವಕ ನೆರವೇರಿದ ನಂತರ ಶ್ರೀ ಜಗದಾಚಾರ್ಯ ಮೂರ್ತಿಗೆ ವೇದೋಕ್ತವಾಗಿ ಏಕಾದಶ ರುದ್ರಾಭಿಷೇಕವು ನೆರವೇರಿತು ಸಾಯಂಕಾಲ ಸಿದ್ಧಪ್ಪ ಹಟ್ಟಿ ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರವೇರಿತು ವೈಶಾಖ ಶು|| ೫ ಭಾನುವಾರ ಶ್ರೀ ಜಗದ್ಗುರು ದಾರುಕಾಚಾರ್ಯ ಮೂರ್ತಿಗೆ ವೇದೋಕ್ತವಾಗಿ ಏಕಾದಶ ರುದ್ರಾಭಿಷೇಕ ಸಹಸ್ರ ಬಿಲ್ವಾ

[೩ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಪಂಚಮಿಗೆ ೧೬ ವರ್ಷಗಳು ತುಂಬಿ ೧೭ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದ ಪತ್ರಿಕೆಯನ್ನು ವಿ.ಪಿ. ಮಾಡಬೇಕಾಗುತ್ತದೆ ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೨ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೆ ೩ ರೂ ೧೨ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಭಿಮಾನಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರೇ ಮನಿಯಾರ್ಡರ್ ಮಾಡಿಸಬೇಕು ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ಮರೆಯದೆ ಬರೆದು ತಿಳಿಸಬೇಕು

ಸಂ —

ಪಂಚಾಚಾರ್ಯಪ್ರಭಾ.

೧೯೪೩ನೆಯ ಮೇ ೨೪ ನೆಯ ಸೋಮವಾರ

ಸನಾತನಧರ್ಮ.

ಯಾವ ಮನುಷ್ಯನೇ ಆಗಲಿ ಧರ್ಮವನ್ನು ಬಿಡಬಾರದು ಧರ್ಮವು ಆತ್ಮನನ್ನು ಪಾರಲೌಕಿಕಕ್ಕೆ ಸಾಗಿಸಿಕೊಂಡು ಹೋಗುವುದು ಅಧರ್ಮವು ಆತ್ಮನನ್ನು ನರಕದಕಡೆಗೆ ಒಯ್ಯುವುದು ಎಷ್ಟೇ ಪಂಡಿತನಾಗಿದ್ದರೂ ಸಹ ಧರ್ಮವನ್ನು ಬಿಟ್ಟರೆ ಆ ಪಾಂಡಿತ್ಯವು ನಿರರ್ಥಕವಾಗುವುದು ಆದುದರಿಂದ ಮನುಷ್ಯನು ಇಹದಲ್ಲಿ ಕೀರ್ತಿಯನ್ನು ಪಡೆಯಬೇಕಾದರೂ ಪರದಲ್ಲಿ ಸದ್ಗತಿಯನ್ನು ಪಡೆಯಬೇಕಾದರೂ ಧರ್ಮವೇ ಮುಖ್ಯಸಾಧನವಾಗಿರುವುದು ರಾವಣಾದಿಗಳು ವೇದವೇದಾಂಗಾದಿಸಕಲಶಾಸ್ತ್ರಪಾರಂಗತರಾಗಿದ್ದರೂ ಧರ್ಮವಿರುದ್ಧವಾದ ಮಾರ್ಗದಲ್ಲಿ ಪ್ರವರ್ತಿಸಿದ್ದರಿಂದ ಇಹಲೋಕದಲ್ಲಿ ಸೂರ್ಯಚಂದ್ರರಿರುವವರೆಗೂ ಅಪಕೀರ್ತಿಭಾಗಿಗಳಾದರು ರಾಮಾದಿಗಳು ಕೇವಲ ಧರ್ಮನಿಷ್ಠರಾದುದರಿಂದ ಅವರು ಭಗವತ್ಸ್ವರೂಪರಾದರಲ್ಲದೆ ಅವರ ಯಶೋವಲ್ಲರಿಯು ಅಂದಿನಿಂದಲೂ ಹಬ್ಬುತ್ತಲೇ ಬರುತ್ತಿರುವದು ಎಂತಹ ಕಷ್ಟಗಳೊದಗಿದರೂ ಧರ್ಮವನ್ನು ಬಿಡದಿರುವುದೇ ಇಂತಹ ಕೀರ್ತಿಯನ್ನು ಪಡೆದಿರುವುದಕ್ಕೆ ಕಾರಣವೆಂಬುದು ಇದರಿಂದ ಗೊತ್ತಾಗುವದು ಈ ಧರ್ಮದ ಸ್ವರೂಪವು ಆಯಾಯ ದೇಶಾನುಗುಣವಾಗಿ ನಾನಾವಿಧ ಸ್ವರೂಪವನ್ನು ಹೊಂದಿದ್ದರೂ ನಮ್ಮ ಭಾರತೀಯರಲ್ಲಿಯಾದರೋ ಜಗದಾದಿಯಿಂದ ಒಂದೇ ರೂಪವನ್ನೇ ಹೊಂದಿರುವುದಲ್ಲದೆ ಅನ್ಯರ ಸಂಸರ್ಗಾನುಸಾರವಾಗಿ ಬದಲಾವಣೆಯನ್ನು ಹೊಂದುವುದಿಲ್ಲ ವಿದೇಶೀಯರಲ್ಲಿ ನೆಲೆಗೊಂಡ ಧರ್ಮವಾದರೂ ಕಾಲಾನುಗುಣವಾಗಿ ಅನೇಕ ಬದಲಾವಣೆಗಳನ್ನು ಹೊಂದತಕ್ಕದ್ದಾಗಿದೆ ಕೆಲವರು ತಮ್ಮ ಪ್ರಾಪಂಚಿಕಸೌಖ್ಯಕ್ಕೆ ಯಾವುದು ಅನುಕೂಲಿಸುವುದೋ ಅದನ್ನೇ ಧರ್ಮವೆಂದೂ, ಯಾವುದು ಪ್ರತಿಕೂಲಿಸುವುದೋ ಅದನ್ನೇ ಅಧರ್ಮವೆಂದೂ ತಿಳಿದುಕೊಂಡಿರುವುದರಿಂದ, ಅವರವರ ಇಚ್ಛಾನುಸಾರವಾಗಿ ಧರ್ಮವು ಅಧರ್ಮವಾಗಿಯೂ ಅಧರ್ಮವು ಧರ್ಮವಾಗಿಯೂ ಪರಿಣಮಿಸಿರುತ್ತದೆ

"ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋಽರ್ಥೋ ಧರ್ಮಃ"

ವೇದದಲ್ಲಿ ಯಾವುದು ವಿಹಿತವೆಂದು ಹೇಳಲ್ಪಟ್ಟಿರುವದೋ ಅದೇ ಧರ್ಮವೆಂದೂ, ಯಾವುದು ಅವಿಹಿತವೆಂದು ಹೇಳಲ್ಪಟ್ಟಿರುವದೋ ಅದೇ ಅಧರ್ಮವೆಂದೂ ಶಾಸ್ತ್ರಕಾರರು ನಿರ್ಣಯಿಸಿರುತ್ತಾರೆ ವೇದಗಳಾದರೋ ಪುರುಷಕಲ್ಪಿತಗಳಲ್ಲ, ಸರ್ವಜ್ಞನಾದ ಈಶ್ವರನು "ಯಃ ಕಲ್ಪಃ ಸ ಕಲ್ಪಪೂರ್ವಃ" ಎಂಬ ನ್ಯಾಯದಂತೆ ಪ್ರತಿಯೊಂದು ಕಲ್ಪದಲ್ಲಿಯೂ ಆ ವೇದವನ್ನು ಸ್ಮರಿಸಿ ಉಪದೇಶಿಸುತ್ತ ಬಂದಿರುವುದರಿಂದ ಅಪೌರುಷೇಯವಾದ ಆ ವೇದಧರ್ಮವನ್ನು ಮನುವ್ಯಾಸಾದ್ಯನೇಕ ಮಹರ್ಷಿಗಳು ಸ್ಮೃತ್ಯಾದಿರೂಪದಿಂದ ಬರೆದಿಟ್ಟಿರುತ್ತಾರೆ ಆದುದರಿಂದ ಋಷಿಪ್ರಣೀತಗಳಾದ ಧರ್ಮಗಳೆಲ್ಲವೂ ಈಶ್ವರಪ್ರಣೀತವಾದ ವೇದಗಳನ್ನು ಅನುಸರಿಸುತ್ತಲೇ ಬಂದಿರುವುವಲ್ಲದೆ ಸ್ವತಃ ಕಲ್ಪಿತಗಳಾಗಿರುವುದಿಲ್ಲ ಯಾವವು ಪುರುಷಕಲ್ಪಿತಗಳಾಗಿ ಧರ್ಮಗಳೆನಿಸಿಕೊಂಡಿರುತ್ತವೆಯೋ ಅವು ಒಂದು ಕಾಲದಲ್ಲಿ ಮಹತ್ವಾಕಾಂಕ್ಷಿ ಪುರುಷನ ಇಚ್ಛೆಯಿಂದ ಆವಶ್ಯಕವಾಗಿ ತೋರಿದರೂ ತೋರಬಹುದು ಜೀವಕಲ್ಯಾಣದವುಗಳಲ್ಲವು ಸತ್ಯವಾಗುವುದಿಲ್ಲವು ಅಂತಹ ಪ್ರಾಯಶಃ ವಿದೇಶೀಯ ಧರ್ಮಗಳೆಲ್ಲವೂ ಆತ್ಮವೃತ್ತಿಗೆ ವಿಮುಖವಾಗಿ ಕೇವಲ ಬಾಹ್ಯಸೌಖ್ಯಪ್ರದಗಳಲ್ಲಿಯೇ ಲೋಲಗಳಾದ್ದರಿಂದ ಅಂತಹ ಸೌಖ್ಯಕ್ಕೆ ಪ್ರತಿಬಂಧಕವಾಗುವ ಪಕ್ಷದಲ್ಲಿ ಅಂತಹ ಧರ್ಮಗಳನ್ನು ನಿಯಮಗೊಳಿಸುವ ಪದ್ಧತಿಯುಂಟೆಂದು ಕಾಣುತ್ತದೆ ಹಾಗೆ ನಮ್ಮ ಭರತಖಂಡದಲ್ಲಿ ನೆಲೆಗೊಂಡಿರುವ ಶ್ರುತ್ಯುಕ್ತಧರ್ಮಗಳೆಲ್ಲವೂ ಆತ್ಮೋದ್ಧಾರ ಸಾಧಕವಾಗಿರುವುವಲ್ಲದೆ ಕೇವಲ ದೇಹಸೌಖ್ಯವನ್ನೇ ಅನುಸರಿಸಿ ಬಂದವುಗಳಲ್ಲ ಆದುದರಿಂದ ಈ ಧರ್ಮವು ಯಾವಾಗಲೂ ಒಂದೇ ವಿಧವಾಗಿರುವುದಲ್ಲದೆ ಕಾಲಾನುಸಾರವಾಗಿ ಪರಿಣಾಮವನ್ನು ಹೊಂದಲಾರದು ಇತರ ವ್ಯವಹಾರಧರ್ಮಗಳಾಗಲೀ ರಾಜಕೀಯಧರ್ಮಗಳಾಗಲೀ ಕಾಲಾನುಸಾರವಾಗಿಯೂ ಸಂಸರ್ಗಾನುಸಾರವಾಗಿಯೂ ಪ್ರಯೋಜನಾನುಸರಿಸಿ ಬೇಗೆ ಬೇಕಾದರೂ ಬದಲಾವಣೆಯಾಗಬಹುದು ಆದರಂತೆ ವೇದಧರ್ಮವನ್ನು ಬದಲಾಯಿಸುತ್ತೇವೆಂದರೆ ಸಾಧ್ಯವಾಗಲಾರದು ಲೌಕಿಕಧರ್ಮಗಳನ್ನು ಹೇಗೆಬೇಕಾದರೂ ಬದಲಾಯಿಸಿಕೊಂಡರೆ ಯಾರಿಗೂ ಏನೂ ಬಾಧಕ ಬರಲಾರದು ಆದರಂತೆ ಆತ್ಮಸಂಬಂಧವಾದ ವೈದಿಕ ಧರ್ಮವನ್ನು ಬದಲಾಯಿಸುವದು ಮಾತ್ರ ಈಶ್ವರ ಸಂಕಲ್ಪವನ್ನು ಬದಲಾಯಿಸಿದಂತೆಯೇ ಸರಿ ಪ್ರಕೃತದಲ್ಲಿ ವಿದೇಶೀಯಸಂಸ್ಕೃತಿಯ ಸೆಳವಿಗೆ ಬಿದ್ದಿರುವ ಅನೇಕ ಮಹಾಶಯರು ಅದರಂತೆ ತಾವೂ ಆಗಬೇಕೆಂದು ಯೋಚಿಸಿ ಪೂರ್ವದ ವೈದಿಕಧರ್ಮಗಳನ್ನೆಲ್ಲ ತೆಗೆದುಹಾಕಿ ಹೊಸದಾಗಿ ನೂತನಧರ್ಮಗಳನ್ನು ಸ್ಥಾಪಿಸಬೇಕೆಂದು ಹವಣಿಸುತ್ತಿರುವರು ವಿಧವಾವಿವಾಹವು ಶಾಸ್ತ್ರನಿಷಿದ್ಧವೆಂದರೆ ಅದು ವಿಹಿತವೆಂದೂ, ಪ್ರೌಢಾವಿವಾಹವು ನಿಷಿದ್ಧವೆಂದರೆ ಅದು ವಿಹಿತವೆಂದೂ, ಅಸ್ಪೃಶ್ಯತ್ವವುಂಟೆಂದರೆ 'ಇಲ್ಲವೆಂದೂ,' ವರ್ಣಾಶ್ರಮಗಳುಂಟೆಂದರೆ ಇಲ್ಲೆಂದೂ, ಹೀಗೆ ನಾನಾರೀತಿಯಾಗಿ ಸನಾತನಪದ್ಧತಿಗಳನ್ನು ತೊಡೆದುಹಾಕಲು ಪ್ರಯತ್ನಿಸಿರುವುದನ್ನು ನೋಡಿ ಸನಾತನಾಚಾರಪದ್ಧತಿಯುಳ್ಳ ಆಸ್ತಿಕರು ನಮ್ಮ ನಮ್ಮವರೇ ನಮಗೆ ವ್ಯತ್ಯಸ್ತರೂಪರಾಗಿರುವರೆಂದು ವ್ಯಸನಪಡುತ್ತಿರುವರು ಕಲಿಯುಗದ ಪ್ರಭಾವವು ಇನ್ನೂ ಎಲ್ಲಿಯವರೆಗೆ ಸಾಗುವುದೋ ನೋಡಬೇಕಾಗಿದೆ ಯತೋಧರ್ಮಸ್ತತೋಜಯಃ !

ಯುದ್ಧವಾರ್ತೆ.

ಹಿಟ್ಲರನು ಇಟಲಿಯನ್ನು ಕೈಬಿಡುವನೆ?

ಇಟಲಿಯಲ್ಲಿರುವ ಜರ್ಮನ್ ಅಧಿಕಾರಿಗಳನ್ನೆಲ್ಲಾ ಹಿಟ್ಲರನು ವಾಪಸು ಕರೆಸಿಕೊಂಡು ಮಿತ್ರಮಂಡಲಿಯ ದಂಡಯಾತ್ರೆಯನ್ನು ಮುಸೋಲಿನಿಯು ಒಬ್ಬಂಟಿಗನಾಗಿ ಎದುರಿಸುವಂತೆ ಮಾಡಲು ಆಲೋಚಿಸಿರುವುದಾಗಿ ಬಲವಾದ ವದಂತಿ ಹರಡಿದೆ

ಯುದ್ಧವು ಎಳೆಯಲು ಬಿಡಬಾರದು

ಅಮೇರಿಕದ ಪಾರ್ಲಿಮೆಂಟಿನ ಜಂಟಿ ಅಧಿವೇಶನದಲ್ಲಿ ಬ್ರಿಟಿಷ್ ಮಹಾಪ್ರಧಾನ ಶ್ರೀ ಚರ್ಚಿಲ್ಲರು ಭಾಷಣ ಮಾಡುತ್ತ "ಯುದ್ಧದಲ್ಲಿ ಈಗ ನಮಗೆ ಅನುಕೂಲವಾದ ಪರಿಸ್ಥಿತಿ ಒದಗಿದೆ ಅದು ಕೈತಪ್ಪಿ ಹೋಗದಂತೆ ಎಚ್ಚರವಾಗಿರಬೇಕು ಎಲ್ಲೆಲ್ಲಿಗೂ ಹರಡುತ್ತಿರುವ ಈ ವಿನಾಶವನ್ನು ಆದಷ್ಟುಬೇಗ ನಿಲ್ಲಿಸಬೇಕೆಂಬುದೇ ನಮ್ಮ ಉದ್ದೇಶ ಶತ್ರುವಿನ್ನೂ ಬಲಯುತನಾಗಿದ್ದಾನೆ ಆತನನ್ನು ಹಿಡಿಯುವುದು ಕಷ್ಟವಾಗಿದೆ. ಆತನಿಗಿನ್ನೂ ಅಪಾರ ಸೇನೆಯಿದೆ ಅಗಾಧ ಸಾಧನಸಂಪತ್ತುಗಳಿವೆ ಅಮೂಲ್ಯವಾದ ಬಲಮೂಲಗಳಿವೆ. ನಾವು ಅನೇಕ ವಿಪತ್ತುಗಳನ್ನು ಎದುರಿಸಿದೆವು ಮುಂದೆ ಎದುರಿಸಬೇಕಾದ್ದು ಇನ್ನೂ ಇದೆ ಪ್ರಜಾಪ್ರಭುತ್ವದೇಶಗಳು ಬಳಲಿ ಬೆಂಡಾಗುವವರೆಗೆ ಯುದ್ಧವನ್ನು ಎಳೆಯುವುದೇ ಜರ್ಮನ್, ಜಪಾನ್‌ಗಳ ಗುರಿ ಆದ್ದರಿಂದ ನಾವೆಲ್ಲ ಒಂದೇ ಮನಸ್ಸಿನಿಂದ, ಒಂದೇ ಗುರಿಯಿಂದ ಹೊಡೆದಾಡಿ, ಶತ್ರುವಿನ ಈ ಕಾರ್ಯವನ್ನು ಬಂಗಪಡಿಸಬೇಕು ' ಎಂದು ಹೇಳಿದರು

ರಷ್ಯಾದಿಂದ ಜಪಾನಿನ ಮೇಲೆ ದಾಳಿಯೇ ?

ಜಪಾನಿನ ಮೇಲೆ ಪ್ರಚಂಡ ದಾಳಿ ನಡೆಸಲು ಬ್ರಿಟನ್ ಮತ್ತು ಅಮೇರಿಕವು ರಷ್ಯಾದ ವಿಮಾನ ನಿಲ್ದಾಣಗಳನ್ನು ಉಪಯೋಗಿಸಲು ಸ್ಟಾಲಿನರವರನ್ನು ಕೇಳುವರೆಂದೂ ಈ ವಿಷಯವು ಮಿ॥ ಚರ್ಚಿಲರೂ, ಪ್ರೆ॥ ರೂಸ್ವೆಲ್ಟರೂ ಮಿ। ಸ್ಟಾಲಿನರವರೂ ಮತ್ತು ಮಿ॥ ಚಿಯಾಂಗ್ ಕೈಷೆಕ್‌ರವರು ಭೇಟಿ ನಡೆಸಿದಾಗ ತೀರ್ಮಾನವಾಗುವುದೆಂದು ಹೇಳಲಾಗಿದೆ

ಅಮೆರಿಕನ್ ಸೇನೆಗಳು ಮುನ್ನುಗ್ಗುತ್ತಿವೆ

ಅಟ್ಟು ದ್ವೀಪದಲ್ಲಿ ಜಪಾನರು ಅಡಗಿದ್ದ ಗಡ್ಡವನ್ನು ಅಮೇರಿಕನರು ಹಿಡಿದಿದ್ದಾರೆ ಅಮೇರಿಕನರು ಈಗ ಜಪಾನ್‌ಸೇನೆಯ ಸಮೀಪಕ್ಕೆ ಬಂದಿದ್ದಾರೆ ಅಮೇರಿಕನರ ಪದಾತಿಬಲವು, ಹೆಚ್ಚಿನ ವಿಮಾನಬಲದ ನೆರವಿಲ್ಲದೆ ಮುಂದೆ ನುಗ್ಗಿ ಗುಡ್ಡವನ್ನು ಹಿಡಿದದ್ದು ಜಪಾನರಿಗೆ ಆಶ್ಚರ್ಯವೆನಿಸಿದೆ ಅಮೇರಿಕನ್ ಪಡೆಯ ಮುನ್ನೋಟದ ವಿಷಯದಲ್ಲಿ ಅಮೇರಿಕನ್ ಸೇನಾಮೂಲಕ್ಕೆ ತೃಪ್ತಿಯಾಗಿದೆ "ಅಟ್ಟು ದ್ವೀಪದಲ್ಲಿ ಪರಿಸ್ಥಿತಿ ಹದಗೆಟ್ಟಿದೆ. ಆದರೆ ನಾವು ಎದೆಗೆಡಬಾರದು ವಿಶ್ವಾಸದಿಂದ ಕಾಳಗ ಮುಂದುವರಿಸಬೇಕು" ಎಂಬುದಾಗಿ ಜಪಾನ್ ರೇಡಿಯೋ ತಮ್ಮ ಕಡೆಯವರಿಗೆ ಸೂಚಿಸಿದೆ

ಲಂಡನ್ನಿನಮೇಲೆ ವಿಮಾನದಾಳಿ

ಕಳೆದ ೧೮ ನೆಯ ತಾರೀಖು ರಾತ್ರಿ ಲಂಡನ್ನಿನಲ್ಲಿ ವಿಮಾನಧಾಳಿ ಸೂಚನೆ ಕೊಡಲಾಯಿತು ಹೀಗೆ ಒಂದೇರಾತ್ರಿ ಮೂರು ಸಾರಿ ಮಾಡಲಾಯಿತು. ಮಂಗಳವಾರ ರಾತ್ರಿ ನಡೆದ ದಾಳಿಯಲ್ಲಿ ಎಲ್ಲೋ ಹಲಕೆಲವು ಪ್ರಾಣಾಪಾಯ, ಅಲ್ಪ ನಷ್ಟವಾಗಿದೆಯೆಂದು ತಿಳಿದುಬಂದಿದೆ ದಾಳಿಯಲ್ಲಿ ಎಲ್ಲೋ ಹಲಕೆಲವು ಶತ್ರುವಿಮಾನಗಳು ಮಾತ್ರ ಬಂದಿದ್ದವು ಎರಡು ಮೂರು ಅಂತಸ್ತಿನ ಮನೆಗಳಿಗೇಟುಬಿದ್ದಿದೆ ೩ ಜನ ಸತ್ತಿರಬಹುದೆಂದು ನಂಬಲಾಗಿದೆ. ಮತ್ತೆ ಕೆಲವರಿಗೆ ಗಾಯಗಳಾಗಿವೆ

ವಿಮಾನ ಧಾಳಿ ಭೀತಿ

ದಕ್ಷಿಣ ಇಟಲಿಯ ಜನರು ಮಿತ್ರರ ವಿಮಾನ ಧಾಳಿಯ ತೀಕ್ಷ್ಣತೆ ತಡೆಯಲಾರದೆ ರೋಂ ನಗರಕ್ಕೆ ಧಾವಿಸುತ್ತಿದ್ದಾರೆ ಈಗಾಗಲೆ ೩ ಲಕ್ಷ ಮಂದಿ ಮನೆ ಭೂಮಿ ಕಾಣಿ ಬಿಟ್ಟು ಓಡಿಬಂದಿದಾರೆ ಎಂಬುದಾಗಿ ಮಾಸ್ಕೋ ರೇಡಿಯೋ ತಿಳಿಸಿತು

ಮೂಂಗ್ಡಾ ಮೇಲೆ ದಾಳಿ

ಮೇ ೧೬ ೧೭ ನೇ ತಾ॥ ದಿನ ಮಿತ್ರ ಸೇನೆಗಳು ಮೂಂಗ್ಡಾ ಬಳಿಯ ಭೂಶಿರದ ಮೇಲೆ ದಾಳಿ ಮಾಡಿದರು ಶತ್ರು ಪ್ರತಿಭಟನೆ ಜೋರಾಗಿತ್ತು ಶತ್ರುಗಳು ಭಲ್ಲೆಗಳನ್ನು ಹಿಡಿದು ಮೇಲೆ ಬಿದ್ದರು ಇದರಲ್ಲಿ ೫೦ ಜನ ಶತ್ರು ಸೈನಿಕರು ಸತ್ತರು ಮಿತ್ರಸೈನಿಕರಲ್ಲಿ ಇಬ್ಬರು

ಮಾತ್ರ ಸತ್ತರು. ಕಳೆದ ಸೋಮವಾರದ ದಿನ ಆರ್ ಎ ಎಫ್ ಬಾಂಬರುಗಳು ಅಕ್ಯಾಬ್ ಬಳಿಯ ರೇಡಿಯೋ ಪ್ರತಿಷ್ಠಾಪನೆಗಳ ಮೇಲೆ ದಾಳಿ ನಡೆಸಿದವು ಮತ್ತೊಂದು ವಿಮಾನ ಪಡೆ ಗುಡಾಬಸ್ ಮೇಲೆ ದಾಳಿ ನಡೆಸಿದವು ಮಂಗಳವಾರ ಬೆಳಗ್ಗೆ ಮಾಯು ನದಿಯ ಮೇಲಣ ಮುಖ್ಯ ಸ್ಥಾನಗಳ ಮೇಲೆ ಹರಿಕೇನ್ ವಿಮಾನಗಳು ಘೋರ ಧಾಳಿಮಾಡಿದವು ಕ್ಯಾಜಾಬಳಿ ೩ ಸಣ್ಣ ದೋಣಿಗಳನ್ನು ಮುಳುಗಿಸಲಾಯಿತು ವೆಲಿಂಗ್‌ಟನ್ ಬಾಂಬರ್‌ಗಳು ಕಾಂಗುವಾನ್ ವಿಮಾನ ಮೂಲದ ಮೇಲೆ ದಾಳಿಮಾಡಿಬಂದವು ರಾಥೆಡಾಂಗ್ ಮೊದಲಾದ ಕಡೆಯಲ್ಲೂ ಬಾಂಬು ಸುರಿಸಲಾಯಿತು

ಯುದ್ಧಕ್ಕೆ ೭೧೦೦೦ ಮಿಲಿಯನ್ ಡಾಲರುಗಳ ಖರ್ಚು

ಅಮೇರಿಕಾದಲ್ಲಿ ಯುದ್ಧ ಖರ್ಚಿಗೋಸ್ಕರ ೭೧ ಸಾವಿರ ಮಿಲಿಯನ್ ಡಾಲರುಗಳ ಅಂದಾಜನ್ನು ೧೯೪೪ ನೇ ವರ್ಷಕ್ಕೆ ಮುಂಜೂರು ಮಾಡಲು ಅಧ್ಯಕ್ಷರು ಕೇಳಿದ್ದಾರೆ ೧೯೪೪ ನೇ ವರ್ಷದಲ್ಲಿ ವಿಮಾನ ತಯಾರಿಕೆಯು ಎಲ್ಲಾ ದೇಶದವರ ಒಟ್ಟು ತಯಾರಿಕೆಗಿಂತಲೂ ಹೆಚ್ಚಾಗುವುದೆಂದು ಹೇಳಲಾಗಿದೆ

ಪ್ರವಾಹ ಅನಾಹುತ

ಜರ್ಮನಿಯಲ್ಲಿ ಮೊಹ್ನೆ ಮತ್ತು ಈಡರ್ ಅಣೆಕಟ್ಟುಗಳು ಒಡೆದುದರಿಂದ ೫೪ ನಗರಗಳು ನೀರಿನಲ್ಲಿ ಮುಳುಗಿಹೋಗಿವೆ ೫೦೦೦೦ ಕುಟುಂಬಗಳಿಗೆ ನೆಲೆಯಿಲ್ಲದಂತಾಗಿದೆ

ಅಮೇರಿಕಾದಲ್ಲಿ ಪ್ರವಾಹ ಭೀತಿ

ಅಮೇರಿಕಾದ ಮಿಸಿಸಿಪ್ಪಿ ನದಿಯಲ್ಲಿ ಪ್ರಚಂಡ ಪ್ರವಾಹ ಬಂದು ೩೦ ಸಾವಿರ ಜನಗಳು ಮನೆ ಮಠಗಳಿಲ್ಲದೆ ನಿರಾಶ್ರಿತರಾಗಿದ್ದಾರೆಂದೂ, ಬೆಳೆಗಳು ಹಾಳಾಗಿ ೩೦ ಮಿಲಿಯನ್ ಡಾಲರುಗಳಷ್ಟು ನಷ್ಟವಾಗಿದೆಯೆಂದೂ ವರದಿಯಾಗಿದೆ ಪ್ರವಾಹದ ರಭಸದಿಂದ ಮಿಸಿಸಿಪ್ಪಿಯ ಅಣೆಕಟ್ಟು ಒಡೆದುಹೋಗಿ ೧೨೦ ಮೈಲಿ ದೂರ ಆವರಿಸುವ ಭಯವಿದೆಯೆಂದು ಹೇಳಲಾಗಿದೆ ಇಲಿನಾಯ್ಸ್, ಇಂಡಿಯಾನಾ ಮುಂತಾದ ಸ್ಥಳಗಳಲ್ಲಿ ೫ ಸಾವಿರ ಸೈನಿಕರೂ ಇತರ ಜನಗಳೂ ಸೇರಿ ಇವನ್ನು ತಡೆಗಟ್ಟಲು ಎತ್ನಿಸುತ್ತಿದ್ದಾರೆ ಮಿಸೋರಿ ಮತ್ತು ಓಕ್ಲಹಾಮಗಳ ಗಣಿಗಳಿಗೆ ನೀರು ನುಗ್ಗಿ ೫ ಸಾವಿರ ಕೆಲಸಗಾರರಿಗೆ ಕೆಲಸವಿಲ್ಲದಾಗಿದೆ

ಸ್ವೀಕಾರ

ಧಾರವಾಡದಲ್ಲಿರುವ ಮ|| ರಾ|| ವೀರಪ್ಪಾ ಚನ್ನಪ್ಪ ಹರ್ತಿ ಇವರ ಪುತ್ರ ಚಿ|| ಈಶ್ವರಪ್ಪನಿಗೆ ಸವದತ್ತಿ ರುದ್ರಪ್ಪ ಪಾಲಿ ಇವರ ಪುತ್ರಿ ಚಿ|| ಸೌ|| ಗಂಗಾದೇವಿಯನ್ನು ಕೊಟ್ಟು ನಡೆದ ವಿವಾಹಸಮಯದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 2 ರೂ ಗಳು ಶ್ರೀಪಟ್ಟದ ಸ್ವಾಮಿಗಳು ಹಿರೇಮಠ ಸತ್ತಿಗೇರಿ ಇವರ ದ್ವಾರಾ ತಲ್ಪಿರುತ್ತವೆ

ಬೆಂಗಳೂರು ಶ್ರೀಮಹಾಂತಿನ ಮಠದ ಶ್ರೀಗಳವರ ನೇತೃತ್ವದಲ್ಲಿ ಶ್ರೀರೇಣುಕಾಚಾರ್ಯಜಯಂತೀಕಾರ್ಯಕಾರೀ ಮಂಡಲಿಯವರು ನಡೆಯಿಸಿದ ಶಿವದೀಕ್ಷಾ ಸಮಾರಂಭ ಸಮಯದಲ್ಲಿ ಸಮರ್ಪಿಸಿದ 2 ರೂ ಗಳು ರಾಮಬುಡ್ಡಿ ಬೃಹನ್ಮಠದ ವೇ|| ಸದಾಶಿವಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ

ಹಿರಿಯೂರು ತಾಲೂಕು ಮೆಟಿಕುರಿಕೆಯಲ್ಲಿರುವ ಛೇರ್ಮನ್ ಮ|| ರಾ|| ಆರ್ ಸಿದ್ಧಯ್ಯನವರು ತಮ್ಮ ನೂತನ ಗೃಹಪ್ರವೇಶ ಮತ್ತು ಮೊಮ್ಮಕ್ಕಳ ಚೌಲಕರ್ಮ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು]

ರ್ಚನೆಯಾದನಂತರ ಸಾಯಂಕಾಲ ೭ ಗಂಟೆಗೆ ವಿದ್ವದ್ರತ್ನ ವೇ|| ಪಂ|| ಬಸವಲಿಂಗ ಶಾಸ್ತ್ರಿಗಳು ಗಂಡಾರಿ ಇವರ ಅಧ್ಯಕ್ಷತೆಯಲ್ಲಿ ವಿರೂಪಾಕ್ಷಶರ್ಮಾ, ದಾವಣಗೆರೆ ಇವರು "ಜಗದಾಚಾರ್ಯರ ಲೀಲೆ"ಯ ಬಗ್ಗೆ ಚನ್ನಮಲ್ಲಶರ್ಮಾ ಅಡಳ್ಳಿ ಇವರು "ಗುರುಮಹತ್ವ"ದಬಗ್ಗೆ ಶ್ರೀ|| ಷ|| ಬ್ರ|| ಸಿದ್ಧರಾಮ ಶಿವಾಚಾರ್ಯ ರೌಡಕುಂದಿ ಇವರು "ಜಯಂತಿ"ಯ ಬಗ್ಗೆ ಭಾಷಣಗಳನ್ನು ಮಾಡಿದರು. ಶ್ರೀ|| ಷ|| ಬ್ರ|| ಯಶವಂತಪುರ ವಿರಕ್ತಮಠಾಧ್ಯಕ್ಷ ಸಿದ್ಧರಾಮ ಶಿವಾಚಾರ್ಯರು "ಜಗದ್ಗುರುಗಳು ಯಾರು"? ಎನ್ನುವಬಗ್ಗೆ ಶ್ರೀ ಜಗದ್ಗುರು ಪಂಚಾಚಾರ್ಯರೇ ಜಗದ್ಗುರುಗಳು ಅನ್ಯರು ಆಗುವುದಿಲ್ಲವೆಂದು ತಮ್ಮ ವಿದ್ವತ್ಪ್ರಚುರವಾಣಿಯಿಂದ ಪ್ರಮಾಣಪೂರ್ವಕ ಉಪದೇಶಿಸಿ, ತಮ್ಮ ಗುರುಭಕ್ತಿಯನ್ನು ಪ್ರಕಟಿಸಿದರು ಆಮೇಲೆ ಶ್ರೀ ಹೋಟಗೀ ಬಾಲತಪಸ್ವಿ ಸ್ವಾಮಿಗಳವರು "ಜಗದ್ಗುರುಗಳ ಪ್ರಾಚೀನತ್ವ"ದ ಬಗ್ಗೆ ತಮ್ಮ ಅಮೃತವಾಣಿಯಿಂದ ಸರ್ವರಿಗೂ ಆನಂದವಾಗುವಂತೆ ಉಪದೇಶಿಸಿದರು ಅನಂತರ ಅಧ್ಯಕ್ಷವರ್ಯರು "ಅಷ್ಟಾವರಣ" "ಪಂಚಾಚಾರ"ಗಳ ತತ್ತ್ವಗಳ ತಿರುಳನ್ನು ಸರ್ವರಿಗೂ ತಿಳಿಯುವಂತೆ ವಿವರಿಸಿದನಂತರ ಜಗದಾಚಾರ್ಯರ ಮಂಗಲದೊಡನೆ ಸಭೆಯು ಮುಕ್ತಾಯವಾಯಿತು

- ಓರ್ವ ಗುರುಕುಲನಿವಾಸಿ

ಹೋಟಗಿ

ಪ್ರತಿ ವರ್ಷ ಪದ್ಧತಿಯ ಪ್ರಕಾರ ಶ್ರೀ|| ಷ|| ಬ್ರ|| ಬಾಲತಪಸ್ವೀ ಚನ್ನವೀರ ಶಿವಾಚಾರ್ಯರ ಬೃಹನ್ಮಠದಲ್ಲಿ ತಾ|| ೪ ೫ ೪೩ನೇ ಮಂಗಳವಾರದಿಂದ ಭಾನುವಾರದವರೆಗೆ ಬಹು ವಿಜೃಂಭಣೆಯಿಂದ ಶ್ರೀ ಜಗದ್ಗುರು ಏಕೋರಾಮಾರಾಧ್ಯ ಹಾಗೂ ದಾರುಕಾಚಾರ್ಯರ ಜಯಂತಿಯು ನಡೆಯಿತು ನಿತ್ಯದಲ್ಲಿ ಮಠದ ಮೂಲಗದ್ದಿಗೆಗೆ ಮತ್ತು ಲಿಂಗೋದ್ಭವ ಮೂರ್ತಿಗೆ ಏಕಾದಶ ರುದ್ರಾಭಿಷೇಕವೂ ಸಹಸ್ರ ಬಿಲ್ವಾರ್ಚನೆಯೂ ಆಗುತ್ತಿತ್ತು ಭಾನುವಾರ ಗಣಾರಾಧನೆಯಾಗಿ ಸಾಯಂಕಾಲ ಮಠದಲ್ಲಿ ಸಭೆಯು ಸೇರಿತು ಆ ಸಭೆಗೆ ಶ್ರೀ ಗುರುಬಸವ ದೇಶಿಕರು ಹಳದೂರು ಇವರು ಅಧ್ಯಕ್ಷರಾಗಿದ್ದರು ಮೊದಲು ವೇ|| ವೀರಯ್ಯನವರು ಚಿಂಚೋಳಿ ಮಾಸ್ತರ ಇವರ ಸೂಚನೆ ಪ್ರಕಾರ ಚಿಂಚೋಳಿ ಭಜನಾಸಂಘದವರಿಂದ ಶ್ರೀ ಜಗದಾಚಾರ್ಯರ ಸ್ತೋತ್ರಗಳು, ಹೋಟಗೀ ಬಾಲಕರ ಸುಶ್ರಾವ್ಯ ಜಗದಾಚಾರ್ಯರ ಸ್ತೋತ್ರಗಳಾದನಂತರ ಕು|| ಸರಸ್ವತೀಬಾಯಿ ಗಂಧಿಗೆ, ಕು|| ಜಗದೇವಿ ಪಾಟೀಲ, ಕು|| ಸುಗ್ಗಲಾಬಾಯಿ ಗಂಧಿಗೆ ಈ ಬಾಲಕಿಯರ ಭಾಷಣವಾದನಂತರ ನೂರಂದಶರ್ಮಾ ಪ್ಯೆಂದರಿಗೆ ಗುರುಕುಲ ವಿದ್ಯಾರ್ಥಿಯಿಂದ ಭಾಷಣವಾಯಿತು ಆ ಮೇಲೆ ಅಧ್ಯಕ್ಷರು "ಗುರುಭಕ್ತಿ"ಯ ವಿಷಯವಾಗಿ ಬಹಳ ಮನೋಹರವಾಗಿ ಭಾಷಣಮಾಡಿ ಸರ್ವರನ್ನೂ ಆನಂದಗೊಳಿಸಿ ಜಗದಾಚಾರ್ಯರ ಮಂಗಲದೊಡನೆಯೂ, ಜಯಕಾರದೊಡನೆಯೂ ಸಭೆಯು ಮುಕ್ತಾಯವಾಯಿತು ಜಯಂತಿಗೆ ವನಳ್ಳಿ, ದರ್ಶನಹಾಳ, ಸೋಲಾಪುರ, ಚಿಂಚೋಳಿ, ಯತ್ನಳ್ಳಿ ಮೊದಲಾದ ಊರಿನ ಅನೇಕ ಭಕ್ತರು ಆಗಮಿಸಿ ತಮ್ಮ ಗುರುಭಕ್ತಿಯನ್ನು ಪ್ರಕಟಿಸಿದರು.

ಓರ್ವ ಪ್ರತ್ಯಕ್ಷದರ್ಶಿ

ಚಿಂಚೋಳಿ ನಿಜಾಂಸ್ಟೇಟ್

ವಾರ್ಷಿಕ ಪದ್ಧತಿಯಂತೆ ಚಿಂಚೋಳಿ ಗ್ರಾಮದಲ್ಲಿ ಉಭಯ ಶ್ರೀ ಜಗದ್ಗುರುಗಳವರ ಜಯಂತೀ ಮಹೋತ್ಸವಗಳು ಅತ್ಯಂತ ವೈಭವದಿಂದ ನೆರವೇರಿದವು ತಾ|| 7-5 43ನ ಶುಕ್ರವಾರ ಜಯಂತೀ ಪ್ರೀತ್ಯರ್ಥವಾಗಿ ಶ್ರೀಮಂತ ಕಾಶೀನಾಥ ಚಿಲಕಟ್ಟಿ ಇವರ ಮನೆಯಲ್ಲಿ ಲಿಂಗೋದ್ಭವ ಮೂರ್ತಿಗೆ ಮಹಾರುದ್ರಾಭಿಷೇಕವೂ ಶ್ರೀ|| ಷ|| ಬ್ರ|| ರಾಚಲಿಂಗಶಿವಾಚಾರ್ಯರು ವೀರಶೈವ ಗರ್ಜನಾ ಸಂಪಾದಕ ಬ ಶಿ ಪರಾಂಡಕರ ಶ್ರೀಗಳ ಪಾದಪೂಜೆ ಗಣಾರಾಧನೆಯಾಗಿ ಮಧ್ಯಾಹ್ನ ಸದರೀ ಶ್ರೀಗಳ ಅಧ್ಯಕ್ಷತೆಯಲ್ಲಿ ವೀರಶೈವ ತರುಣ ಸಂಘದ ವತಿಯಿಂದ ಸಭೆಯು ಪ್ರಾರಂಭವಾಯಿತು ಪ್ರಥಮ ಶ್ರೀ ವೇ|| ಕೊಟ್ರಯ್ಯನವರು ಪರಾಂಡಕರ್ ಶ್ರೀಗಳನ್ನು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಲು ಪ್ರಾರ್ಥಿಸಿದನಂತರ ಶ್ರೀಗಳು ಸ್ಥಾನಾಪನ್ನರಾದರು ತರುವಾಯ ಶ್ರೀ ವೇ|| ಸಿದ್ಧಲಿಂಗಸ್ವಾಮಿಗಳು ಜಗದಾಚಾರ್ಯರ ಜಯಂತಿ ವಿಷಯವಾಗಿ ಎಲ್ಲರಿಗೂ ತಿಳಿಯುವಂತೆ ಭಾಷಣ ಮಾಡಿದರು. ಆ ಮೇಲೆ ಅಧ್ಯಕ್ಷಮಹಾಶಯರು ಆಚಾರ್ಯರ ತತ್ವ, ಗುರುಭಕ್ತಿ, ಸಮಾಜಸೇವೆ ಈ ವಿಷಯವಾಗಿ ಒಳ್ಳೆಯ ಕಳಕಳಿಯಿಂದ ಉಪದೇಶ ಮಾಡಿದರು ನಂತರ ಶ್ರೀ ವೇ|| ಕೊಟ್ರಯ್ಯನವರು ಪರ್ವತಮಠ ಇವರು ಅಧ್ಯಕ್ಷರು ಮಾಡುತ್ತಿರುವ ವೀರಶೈವ ಧರ್ಮ ಜಾಗೃತಿ ಶ್ರೀ ವೇ|| ಪಂ|| ಕಾಶೀನಾಥಶಾಸ್ತ್ರಿಗಳವರ ದಿವ್ಯ ಪ್ರಭಾವ ಈ ಬಗ್ಗೆ ಭಾಷಣಮಾಡಿ ಎಲ್ಲರು ಆಭಾರ ಮನ್ನಿಸಿದಮೇಲೆ ಜಗದಾಚಾರ್ಯರ ಜಯಂತಿ ಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು. ಹಾಗೂ ತಾ|| ೯ ೫-೪೩ ನಯ ಭಾನುವಾರ ಬೆಳಗ್ಗೆ ಶ್ರೀ ವೇ|| ಕೊಟ್ರಯ್ಯನವರು ಪರ್ವತಮಠ ಇವರ ಮನೆಯಲ್ಲಿ ಜಯಂತೀ ಪ್ರೀತ್ಯರ್ಥವಾಗಿ ಶ್ರೀ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಶ್ರೀ ಪರಾಂಡಕರ ಸ್ವಾಮಿಗಳವರ ಪಾದಪೂಜೆ ಗಣಾರಾಧನೆಯಾಯಿತು. ಸಾಯಂಕಾಲ ಏಳು ಘಂಟೆಗೆ ಪರಾಂಡಕರ ಶ್ರೀಗಳ ಅಧ್ಯಕ್ಷತೆಯಲ್ಲಿ ಸಭೆಯು ಪ್ರಾರಂಭವಾಯಿತು ಶ್ರೀ ವೇ|| ಸಿದ್ಧರಾಮಯ್ಯ ಒಂಗಿ ಹುಮನಾಬಾದ ಇವರು ಸಾಮಾಜಿಕ ವಿಷಯವಾಗಿ ಭಾಷಣಮಾಡಿದರು ನಂತರ ವೀರಶೈವ ತರುಣ ಸಂಘದ ಸೆಕ್ರೆಟರಿಗಳಾದ ಶ್ರೀ ವೇ|| ಸಿದ್ಧಲಿಂಗಸ್ವಾಮಿಗಳು ಅಷ್ಟಾವರ್ಣ ದೀಕ್ಷೆ ಮೊದಲಾದ ವಿಷಯಗಳ ಬಗ್ಗೆ ಎಲ್ಲರಿಗೂ ತಿಳಿಯುವಂತೆ ಭಾಷಣ ಮಾಡಿದರು ಮುಂದೆ ಸೌ|| ಭಾಗೀರಥೀಬಾಯಿ ಕಟ್ಟೀಮ ಸೊಲ್ಲಾಪುರ ಇವರು ಜಗದಾಚಾರ್ಯರ ಅವತಾರ, ವೀರಶೈವಮತದ ಪ್ರಾಚೀನತ್ವ ಶ್ರೀ ವೇ|| ಪಂ|| ಕಾಶೀನಾಥಶಾಸ್ತ್ರಿಗಳವರ ಕಾರ್ಯಕಲಾಪದಿಂದ ಆಗುತ್ತಿರುವ ಗುರುಪುಂಗವರ ಶಿವಲಿಂಗಾನುಷ್ಠಾನದ ಪ್ರಭಾವದಿಂದ ದಶ ದಿಕ್ಕುಗಳಲ್ಲಿ ಪ್ರಕಾಶಿಸುತ್ತಿರುವ ಜಗದಾಚಾರ್ಯರ ಜಯಧ್ವಜದ ಬಗ್ಗೆ ಭಾಷಣ ಮಾಡುತ್ತಿರುವಾಗ್ಗೆ ನೆರದಂಥ ಅಬಾಲವೃದ್ಧ ಸ್ತ್ರೀಪುರುಷರು ತಲೆದೂಗುತ್ತಿದ್ದರು ಆ ಮೇಲೆ ಅಧ್ಯಕ್ಷ ಶ್ರೀಗಳು ಸಮಯೋಚಿತವಾಗಿ ಉಪದೇಶಮಾಡಿದಮೇಲೆ ಶ್ರೀ ವೇ| ಪರ್ವತಮಠ ಇವರು ಪರಾಂಡಕರ ಶ್ರೀಗಳ ಮತ್ತು ಭಾಗೀರಥೀ ಬಾಯಿಯವರ ಹಾಗೂ ಸ್ಥಳ ಪರಸ್ಥಳಗಳಿಂದ ಆಗಮಿಸಿದ ಶ್ರೀ|| ಷ|| ಬ್ರ|| ದಾರುಕಶಾಖಾಮಠ ಸಿದ್ಧಲಿಂಗ ಸ್ವಾಮಿಗಳವರು ಶ್ರೀ ರಾಜೇಶ್ವರಸ್ವಾಮಿಗಳು ಮೊದಲಾದವರ ಆಭಾರ ಮನ್ನಿಸಿದ ಮೇಲೆ ಜಗದಾಚಾರ್ಯರ ಜಯಘೋಷದೊಂದಿಗೆ ಸಭೆಯು ಮುಕ್ತಾಯವಾಯಿತು. ಈ ಉತ್ಸವಕ್ಕೆ ಸೊಲ್ಲಾಪುರ ಬಾರ್ಶಿ ವೇಣಿ ರಂಜೇರಿ, ರಾಜೇಶ್ವರ, ಹುಮನಾಬಾದ್ ಮೊದಲಾದ ಗ್ರಾಮಗಳಿಂದ ಪಟ್ಟಚರಾಧಿಕಾರಿಗಳು ಗುರುಭಕ್ತರು ಆಗಮಿಸಿದ್ದರು ಈ ಮಂಗಲ ಮಹೋತ್ಸವದಲ್ಲಿ ಶ್ರೀ ವೀರಶೈವ ತರುಣಸಂಘದ ವತಿಯಿಂದ ಶ್ರೀಮಜ್ಜಗದ್ಗುರು ಪಂಚಾಚಾರ್ಯ ವಾಚನಾಲಯವನ್ನು ಸ್ಥಾಪಿಸಿದರು.

ಶ್ರೀ ವೇ|| ಸಿದ್ಧಲಿಂಗಯ್ಯನವರು ಸೆಕ್ರೆಟರಿ,
ವೀರಶೈವ ತರುಣಸಂಘ ಚಿಂಚೋಳಿ

ಪ್ರಕಟನೆ

ಬೆಂಗಳೂರು ಚಿಕ್ಕಪೇಟೆ ಮಹಾಂತಿನ ಮಠದಲ್ಲಿರುವ ಶ್ರೀ ಜಗದ್ಗುರು ರೇಣುಕಾದಿ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಸಂಸ್ಕೃತ ಮತ್ತು ವೇದ ಪಾಠವನ್ನು ಕಲಿಯಲು ಅಪೇಕ್ಷೆಯುಳ್ಳ ವಿದ್ಯಾರ್ಥಿಗಳು ಜೂನ್ 1ನೇ ತಾರೀಖಿನ ಒಳಗಾಗಿ ತಮ್ಮ ಅಪ್ಲಿಕೇಷನ್‌ಗಳನ್ನು ಪಾಠಶಾಲಾ ಸೆಕ್ರೆಟರಿಯವರಿಗೆ ಕಳುಹಿಸತಕ್ಕದ್ದು ಅಪ್ಲಿಕೇಷನ್ ಫಾರಂಗಳು ಬೇಕಾಗಿದ್ದ, ಪಕ್ಷದಲ್ಲಿ ಎರಡು ಆಣೆ ಸ್ಟಾಂಪ್ ಕಳುಹಿಸಿಕೊಟ್ಟರೆ ಮುಂಚಿತವಾಗಿ ಅಪ್ಲಿಕೇಷನ್ ಫಾರಂಗಳು ರವಾನಿಸಲಾಗುತ್ತದೆ

ಹಿಂದಿನ ವರ್ಷದ ವಿದ್ಯಾರ್ಥಿಗಳೂ ಕೂಡ ಅಪ್ಲಿಕೇಷನ್ ಹಾಕಿಕೊಳ್ಳತಕ್ಕದ್ದು

ಮ್ಯಾನೇಜರ್—ಮಹಾಂತಿನ ಮಠ
ಚಿಕ್ಕಪೇಟೆ ಬೆಂಗಳೂರು ಸಿಟಿ

ಶಿವದೀಕ್ಷಾ ಸಮಾರಂಭ, ಬೆಂಗಳೂರು

ಪರಮಾತ್ಮನ ಅಂಶಭೂತರಾದ ವೈದಿಕ ಪಂಚಾಚಾರ್ಯರು ಭಾರತ ಭೂಮಿಯಲ್ಲಿ ಅವತರಿಸಿ ವೇದೋಕ್ತ ಪಾವಿತ್ರಗಳಾದ ವೈದಿಕ ಮತಗಳನ್ನು ಸ್ಥಾಪಿಸಿದರು. [illegible] ವೈದಿಕ ಮತ ಪ್ರಚಾರದಲ್ಲಿ ಶ್ರೀ ಸೋಮನಾಥಾದಿ ಲಿಂಗಗಳಿಂದ ಆವಿರ್ಭವಿಸಿದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು [illegible] ರಾಚಾರ್ಯರು ಶ್ರೀ ಜಗದ್ಗುರು [illegible] ಯರು ಶ್ರೀ ಜಗದ್ಗುರು ವಿಶ್ವಾರಾಧ್ಯ [illegible] ರಿಂದ ಸ್ಥಾಪಿತಗಳಾದ [illegible] ವೈಷ್ಣವ ಮತ [illegible] ಜಗತ್ತಿನಲ್ಲಿ [illegible] ಗಿರುವವು ಮೊದಲಿನಿಂದ ಮತಗಳು [illegible] ಯಿಂದಲೂ [illegible] ಧರ್ಮಗಳನ್ನು [illegible] ಪ್ರತಿಪಾದಿಸಿ [illegible] [illegible] ವ [illegible] ಸಂಸ್ಕಾರ [illegible] ವಿಧಿಯು [illegible] ವೈಷ್ಣವ ಮತ [illegible] ಸಿದ್ಧಾಂತ [illegible] ಮತ ಸಂಸ್ಕಾರ ವಿಸ್ತೃತವಾಗಿ ಹೇಳಲ್ಪಟ್ಟಿರುವುದು [illegible] ಉಪನಿಷದ್ [illegible] ಅಂಬಿಕಾ [illegible] ಸಂಸ್ಕಾರವಾಗಿ ಹೇಳಲ್ಪಟ್ಟಿರುವ [illegible] ವೈಷ್ಣವ ಮತ [illegible] ಊರ್ಧ್ವಪುಂಡ್ರ ಧಾರಣ ತುಲಸೀಮಾಲಾ ಧಾರಣ [illegible] ಶ್ರೀ ವಿಷ್ಣು ಭಗವಂತನ ಉಪಾಸನಾ [illegible] ವಿಷ್ಣುಭಗವಂತನ ಉಪಾಸನ [illegible] ಹೇಳಲ್ಪಟ್ಟಿರುವವು. ವೀರಶೈವ ಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ಭಸ್ಮ ರುದ್ರಾಕ್ಷಧಾರಣ ಪೂರ್ವಕವಾಗಿ ಶಿವದೀಕ್ಷಾ ಸಂಸ್ಕಾರದಿಂದ ಶುದ್ಧಗೊಳಿಸಲ್ಪಟ್ಟ ಶಿವಲಿಂಗಧಾರಣೆಯನ್ನು ಇಷ್ಟಲಿಂಗರೂಪಿಯಾದ ಶಿವಭಗವಂತನ ಉಪಾಸನೆಯನ್ನು ಮತಸಂಸ್ಕಾರವನ್ನಾಗಿ ಹೇಳಿರುವರು. ಈ ಮತಸಂಸ್ಕಾರವು ಮತ್ತು ಮಂತ್ರೋಪದೇಶ ಮೊದಲಾದವು ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಪರಂಪರಾಗತರಾದ ಶಿವಾಚಾರ್ಯರಿಂದಲೂ ಪಟ್ಟದಚರಮೂರ್ತಿಗಳಿಂದಲೂ ಪಡೆಯತಕ್ಕವುಗಳೆಂದು ಶಿವಾಗಮದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದು. ಆದರೆ ಕಲಿಯ ಪ್ರಭಾವ [illegible] ದಲ್ಲಿ ಕಲವು ಅನಧಿಕಾರಿ ತಾನೇ ವೀರಶೈವರಲ್ಲಿ ದೀಕ್ಷಾಸಂಸ್ಕಾರ ಮಂತ್ರೋಪದೇಶಗಳನ್ನು ಮಾಡುತ್ತಾ ಮತಾಚಾರ್ಯರಿಂದ ನಿರ್ಮಿಸಲ್ಪಟ್ಟ ಮತಧರ್ಮಗಳನ್ನು ವೇದಪ್ರತಿಪಾದಿತಗಳಾದ ವರ್ಣಾಶ್ರಮಧರ್ಮಗಳನ್ನು ತಪ್ಪಿಸಿ ವೀರಶೈವ ಮತಕ್ಕೆ ಮಹಾಗ್ಲಾನಿಯನ್ನುಂಟು ಮಾಡಿದರು. ಈ ವಿಧವಾದ ಮತಗ್ಲಾನಿಯನ್ನು ದೂರ ಮಾಡುವದಕ್ಕೋಸ್ಕರ ಕರಶಿವಾವತಾರಿಗಳಾದ ವೇ|| ಪಂ|| ಕಾಶೀನಾಥ ಶಾಸ್ತ್ರಿಗಳವರು ಅವತರಿಸಿ ವೇದಾಗಮೋಪನಿಷತ್ತುಗಳಲ್ಲಿರುವ ವೀರಶೈವ ಮತಧರ್ಮಗಳನ್ನು ಪ್ರಚಾರಗೊಳಿಸಿ, ವೀರಶೈವ ಮತದ ಗುರುವರ್ಗದವರನ್ನು ಸ್ವಕರ್ತವ್ಯ ಕರ್ಮದಲ್ಲಿ ನಿರತರನ್ನಾಗಿ ಮಾಡಿದರು. ತರುವಾಯ ಶಾಸ್ತ್ರಾಭ್ಯಾಸವನ್ನು ಮಾಡಿ ಪರಮ ತಪಸ್ವಿಗಳಾಗಿ ವೀರಶೈವರನ್ನುದ್ಧರಿಸಲು ನಿರತರಾದ ಪಟ್ಟದಚರಮೂರ್ತಿಗಳಲ್ಲಿ ಕೀರ್ತಿಶಾಲಿಗಳೂ, ಪರಮ ತಪೋನಿಧಿಗಳೂ ಆದ ಬೆಂಗಳೂರಿನಲ್ಲಿರುವ ಚಿಕ್ಕಪೇಟೆ ಮಹಾಂತಿನ ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಷ|| ಗಂಗಾಧರ ಶಿವಾಚಾರ್ಯ ಸ್ವಾಮಿಗಳವರು ಬೆಂಗಳೂರು ಪ್ರಾಂತ್ಯದಲ್ಲಿ ಮತ್ತು ಧಾರವಾಡ ಪ್ರಾಂತ್ಯದಲ್ಲಿ ಶಿವಪೂಜಾನುಷ್ಠಾನಾದಿಗಳನ್ನಾಚರಿಸುತ್ತಾ ಪುರಾಣಪ್ರವಚನಗಳನ್ನು ನಡಿಸಿ ಧರ್ಮತತ್ತ್ವಗಳನ್ನು ತಿಳಿಸುತ್ತಾ ವೀರಶೈವರಲ್ಲಿ ಧರ್ಮಜಾಗೃತಿಗೊಳಿಸುತ್ತಿರುವದು ಸರ್ವರಿಗೂ ತಿಳಿದ ವಿಷಯವೇ ಇದೆ. ಇದೇ ಸ್ವಭಾನು ಸಂವತ್ಸರ ವೈಶಾಖ ಶುದ್ಧ ೩ ಗುರುವಾರ ಶುಭ ದಿನದಲ್ಲಿ ಬೆಂಗಳೂರು ಸಿಟಿ ಚಿಕ್ಕಪೇಟೆ ಶ್ರೀ ಮಹಾಂತಿನ ಮಠದಲ್ಲಿ ಪರಮ ತಪೋನಿಧಿಗಳಾದ ಶ್ರೀ|| ಷ|| ಬ್ರ|| ಷ|| ಗಂಗಾಧರ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾಚಾರ್ಯ ಜಯಂತಿ ಕಾರ್ಯಕಾರಿ ಮಂಡಲಿಯವರು ಶಿವದೀಕ್ಷಾ ಮಹೋತ್ಸವವನ್ನು ನೆರವೇರಿಸಿ ಆದವಶ್ಯ ಮೂರು ಜನ ವಿದ್ಯಾರ್ಥಿ ವಟುಗಳಿಗೆ ಶಿವದೀಕ್ಷೋಪನಯನವನ್ನು ಮಾಡಿಸಿದರು. ವೈಶಾಖ ಶು|| ೧ ಬುಧವಾರ ಶಿವದೀಕ್ಷಾಸಂಸ್ಕಾರಾಂಗಭೂತಗಳಾದ ಪುಣ್ಯಾಹವಾಚನ [illegible] ಅಂಕುರಾರ್ಪಣಗಳು, ವೈಶಾಖ ಶು|| ೩ [illegible] ಶಿವಲಿಂಗ ಸಂಸ್ಕಾರ ರುದ್ರಾಭಿಷೇಕ ಪೂಜಾದಿಗಳು ಶ್ರೀ ರುದ್ರಹೋಮವು ವೈದಿಕ ಭೂಷಣ ವೇ|| ಪಂ|| ಗುರುಲಿಂಗಶಾಸ್ತ್ರಿಗಳವರ ವೈದಿಕ [illegible] ನಡೆದವು. ತರುವಾಯ ಪರಮ ತಪೋನಿಧಿ [illegible] ಮಹಾತ್ಮರೂ ಆದ ಶ್ರೀ|| ಷ|| [illegible] ಶಿವಾಚಾರ್ಯ ಸ್ವಾಮಿಗಳವರು [illegible] ಪ್ರದಾನವನ್ನೂ, ಮಂತ್ರೋಪ [illegible] ಮಹಾ ಗಣಾ [illegible] ಅದೇ ದಿನ ಸಾಯಂ [illegible] ಶ್ರೀಗಳವರ ಅಧ್ಯಕ್ಷತೆಯಲ್ಲಿ [illegible] ಶಿವದೇವಶಾಸ್ತ್ರಿಗಳ [illegible] ಅನುವಾದವನ್ನು ಮಾಡಿದರು. ತರುವಾಯ ಶ್ರೀಗಳವರು ಶಿವದೀಕ್ಷಾ [illegible] ವನ್ನು [illegible] ಮಹೋಪನ್ಯಾಸವನ್ನು ಮಾಡಿದರು. ಅನಂತರ ಶ್ರೀ ಜಗದ್ಗುರು ಪಂಚಾಚಾರ್ಯರ ಮಂಗಳಘೋಷದ ಅಂದಿನ ಕಾರ್ಯಕ್ರಮವು ಸಮಾಪ್ತಿಯಾಯಿತು.

ಆರ್ ಹೆಚ್ ಎಂ ಸದಾಶಿವಶಾಸ್ತ್ರಿ

ಶಿವದೀಕ್ಷಾ ಸಂಸ್ಕಾರ

ಹಿರಿಯೂರ ತಾಲ್ಲೂಕು ನೇಟೇಕುರಿಕೆ ನಿವಾಸಿಗಳಾದ ಟೀಚರ್ ಮುನ್ಸಿ ಆರ್ ಸಿದ್ಧಯ್ಯನವರು ತಮ್ಮ ನೂತನ ಗೃಹಪ್ರವೇಶ ತಮ್ಮ ಮೊಮ್ಮಕ್ಕಳ ಚೌಲಕಾರ್ಯ ನಡಸುವ ಸಂದರ್ಭದಲ್ಲಿ ಪಂಚಬ್ರಹ್ಮ ಕಲಶಸ್ಥಾಪನ ಮೂಲಕ ವೀರಮಾಹೇಶ್ವರ ವಟುಗಳಿಗೆ ಧರ್ಮಾರ್ಥವಾಗಿ ಶಿವದೀಕ್ಷಾ ಸಂಸ್ಕಾರವನ್ನು ನೆರವೇರಿಸಿದರು.

ಇದೇ ಮೇ ತಾ|| ೧೩ನೇ ಗುರುವಾರ ಬೆಳಿಗ್ಗೆ ಈ ಕಾರ್ಯಕ್ಕೆ ಆಚಾರ್ಯಪುರುಷರಾದ ಮಂಗಪ್ಪೋಲ ಮಠದ ಪಟ್ಟಾಧ್ಯಕ್ಷ ಮಹಾಸ್ವಾಮಿಗಳವರು ಆಪ್ತೇಷ್ಟರೊಡನೆ ದಯಮಾಡಿಸಲು ಸಂತೋಷದಿಂದ ಸ್ವಾಮಿಗಳನ್ನು ಆಹ್ವಾನಿಸಿದಮೇಲೆ ಆಗಮಿತರಾದ ಗುರುಬಸವ ಶಾಸ್ತ್ರಿಗಳು ಬಸವರಾಜ ಶಾಸ್ತ್ರಿಗಳೂ ವಿಧ್ಯುಕ್ತವಾಗಿ ಕಾರ್ಯಗಳನ್ನು ನಡೆಸುತ್ತಿರಲು ಸ್ವಾಮಿಗಳವರು ತಮ್ಮ ಅಮೃತ ಹಸ್ತದಿಂದ ಗೃಹಪ್ರವೇಶವನ್ನ ನಡೆಸಿದರು.

ನಂತರ ನೂತನಗೃಹದ ಮುಂಭಾಗದಲ್ಲಿ ಲಿಂಗಾಕೃತಿಯ ಮೇಲೆ ನಿಲ್ಲಿಸಿದ್ದ ವೀರಶೈವಮಂಗಳಧ್ವಜಪಟವನ್ನು ಕಾರ್ಯಾಧ್ಯಕ್ಷರ ಕೋರಿಕೆಯಂತೆ ವೈದಿಕರ ಪೂಜೆಯಾಗಿ ಓಂಕಾರಪ್ಪನವರು ಸ್ವಾಗತಗೀತೆಯನ್ನು ಪಠಿಸಿದನಂತರ ಪಟ್ಟಾಧ್ಯಕ್ಷರು ಹಾರಿಸಿದರು. ಸಮಾಜಾಭಿಮಾನಿಗಳೂ ವೃದ್ಧಪಿತಾಮಹರೂ ಆದ ಪಿ. ಎಂ. ಚಂದ್ರಶೇಖರಯ್ಯನವರು ಕಾರ್ಯಾಧ್ಯಕ್ಷ ಸಿದ್ದಯ್ಯನವರ ಕಾರ್ಯನೈಪುಣ್ಯವನ್ನೂ ನಡೆಯಬೇಕಾದ ಕಾರ್ಯಗಳನ್ನೂ ಹಿರಿಯೂರಲ್ಲಿ ಸ್ಥಾಪಿಸಿರುವ ವಿದ್ಯಾವರ್ಧಕ ಸಂಘವನ್ನು ಸರ್ವರೂ ಹೇಗೆ ಪೋಷಿಸಬೇಕೆಂಬುದನ್ನು ಇದುವರೆಗ ಆದ ಕಾರ್ಯಗಳನ್ನೂ ವಿಶದವಾಗಿ ಸರ್ವರಿಗೂ ತಿಳಿಸಿದರು.

ಕಾರ್ಯಾಧ್ಯಕ್ಷರು ನೆರೆದ ಸಮಸ್ತ ಬಂಧುಗಳು ಗುರುಹಿರಿಯರು ಬಡಬಗ್ಗರು ಮುಂತಾದವರಿಗೆ ಅನ್ನಸಂತರ್ಪಣೆಯನ್ನು ನಡಿಸಿ ಸರ್ವರನ್ನೂ ಸತ್ಕರಿಸಿದರು.

ಈ ಗ್ರಾಮದ ಸಮಾಜ ಬಾಂಧವರು ಏಕಾದಶ ರುದ್ರಪೂಜೆಯನ್ನು ನೆರವೇರಿಸಬೇಕೆಂಬ ಕುತೂಹಲವುಳ್ಳವರಾಗಿರುತ್ತಾರೆ. ಇಲ್ಲಿನ ಮಾ|| ರಾ|| ಪಟೇಲ್ ವೀರಣ್ಣನವರು ಈ ಕಾರ್ಯ ನಡಸಲು ತುಂಬಾ ಲವಲವಿಕೆಯಿಂದ ಆತುರರಾಗಿರುತ್ತಾರೆ. ಈ ಕಾರ್ಯ ಸಾಂಗವಾಗಿ ನೆರವೇರಿಸಿಕೊಡಲು ಅದ್ವಿತೀಯ ಪಂಡಿತರೂ ಧರ್ಮೋದ್ಧಾರಕರೂ ಪೂಜ್ಯರೂ ಆದ ಪಂಚಾಚಾರ್ಯಪ್ರಭಾ ಪೋಷಕರಾದ ಶ್ರೀಮಾನ್ ಮೈಸೂರು ಪಂಡಿತ ವೇ|| ಶ್ರೀ ಕಾಶೀನಾಥಶಾಸ್ತ್ರಿಗಳನ್ನು ಪ್ರಾರ್ಥಿಸಿಕೊಂಡಲ್ಲಿ ಈ ಘನ ಕಾರ್ಯವು ಸುಗಮವಾಗಿ ನೆರವೇರಿ ಮಹಾಜನಗಳ ಸಂಕಲ್ಪವು ಯಶಸ್ವಿಯಾಗಿ ನಡೆಯುವುದೆಂದು ನಿರ್ಧರಿಸಲಾಯಿತು.

ಈ ಮೇಲ್ಕಂಡ ಕಾರ್ಯಗಳ ಜ್ಞಾಪಕಾರ್ಥವಾಗಿ ಜಗದ್ಗುರು ಪಂಚಸಂಸ್ಥಾನ ಪೀಠಗಳಿಗೂ, ಪಂಚಾಚಾರ್ಯಪ್ರಭಾಪೋಷಣೆಗೂ ಯಥಾಶಕ್ತಿ ಕಾಣಿಕೆಯನ್ನು ಸಮರ್ಪಿಸಬೇಕೆಂತಲೂ ಹಿರಿಯೂರು ಶ್ರೀ ಗಿರೀಶಾ ವಿದ್ಯಾವರ್ಧಕ ಸಂಘಕ್ಕೆ ಕಾಣಿಕೆಯನ್ನರ್ಪಿಸಲು ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳ ಸಲಹೆಯನ್ನು ಪಡೆಯಬೇಕೆಂತಲೂ ಇಲ್ಲಿ ನೆರೆದ ಸಭೆಯಲ್ಲಿ ನಿರ್ಧರಿಸಿ ಆಚಾರ್ಯರಿಗೆ ದಕ್ಷಿಣೆ ತಾಂಬೂಲಗಳನ್ನು ಸಮರ್ಪಿಸಿ ಗಂಧ ತಾಂಬೂಲ ವಿನಿಯೋಗಾನಂತರ ಜಯಘೋಷ ಕರತಾಡನಗಳಿಂದ ಸಭೆಯು ವಿಸರ್ಜಿಸಲ್ಪಟ್ಟಿತು.

ಪ್ರತ್ಯಕ್ಷದರ್ಶಿ

ಶಿವಲಿಂಗಾನುಷ್ಠಾನ ಪ್ರಾರಂಭ ಸೊಲ್ಲಾಪುರ

ಲೋಕದಲ್ಲಿ ಚಂದ್ರನು ತನಗೆ ಪ್ರತ್ಯುಪಕಾರ ಮಾಡಲೆಂಬ ಇಚ್ಛೆಯಿಂದ ಕುಮುದಗಳನ್ನು ಅರಳಿಸುವನೇನು? ಇಲ್ಲ ಅರಳಿಸುವುದು ಅವನ ಸ್ವಭಾವ. ಅದರಂತೆ ಮಹಾತ್ಮರಾದವರೂ ಪ್ರತ್ಯುಪಕಾರದ ಇಚ್ಛೆಯಿಂದ ಪರೋಪಕಾರವನ್ನು ಮಾಡುವುದಿಲ್ಲ ಅವರ ಸ್ವಭಾವವೇ ಹಾಗಿದೆ ಅವರಿಗೆ ಈಶ್ವರನು ಕೊಟ್ಟಿದ್ದೇಣಿಗೆ "ಪರೋಪಕಾರಾರ್ಥಮಿದಂ ಶರೀರಂ" ಎನ್ನುವಂತೆ ಮಹಾತ್ಮರ ಶರೀರವು ಪರೋಪಕಾರಕ್ಕೋಸ್ಕರವಾಗಿಯೇ. ಅವರಲ್ಲಿ ಸ್ವಸುಖದ ಲೇಶಮಾತ್ರವೂ ಕಾಣುವುದಿಲ್ಲ. ಜನಹಿತಕ್ಕೋಸ್ಕರ ಅವರ ದುಡಿತ. ಈಶ್ವರನ ಚಿಂತೆ. ನಿಸ್ಸಾರವಾದ ಸಂಸಾರದಲ್ಲಿ ಬೆಂದು ಬೆಂಡಾಗುತ್ತಿರುವ ಮಾನವರನ್ನುದ್ಧರಿಸುವುದೇ ಮಹಾತ್ಮರ ನಿತ್ಯಾಚಾರ. "ನಮ್ಮದು ಧರ್ಮಭೂಮಿ ಧರ್ಮದಿಂದ ಪಡೆದ ನಿಜವಾದ ಜಯವೇ ಜಯವು ಧರ್ಮದಿಂದಲೇ ಸುಖ ಪ್ರತಿಯೊಂದು ಮತ ಧರ್ಮವು ಕ್ಷೀಣವಾಗುತ್ತಿದ್ದರೆ ಆ ಧರ್ಮವನ್ನುದ್ಧರಿಸಲು ಪರಮಾತ್ಮನು ಮಹಾತ್ಮರನ್ನು ಹುಟ್ಟಿಸುವನು. ಅದೇ ಪ್ರಕಾರ ಈಶ್ವರನ ಅಪ್ಪಣೆಯಮೇರೆಗೆ ಈ ಪರಮ ಪವಿತ್ರ ವೀರಶೈವಮತದಲ್ಲಿ ಮಹಾತ್ಮರುದಯಿಸಿ ಕಲವು ಕಾಲದಿಂದ ಜರ್ಝರಿತವಾಗಿದ್ದ ಈ ಮತವನ್ನು ತಮ್ಮ ತಪೋಬಲದಿಂದಲೂ ಬ್ರಹ್ಮತೇಜೋ ಬಲದಿಂದಲೂ ಉದ್ಧರಿಸಿದರು. ಜಗದಾಚಾರ್ಯರ ಧರ್ಮತತ್ತ್ವ ಪ್ರಕಾಶಕ್ಕೋಸ್ಕರ ಹಗಲಿರುಳೂ ದುಡಿಯುತ್ತಿರುವ ಪರಮತಪೋನಿಧಿಗಳಾದ ಹೋಟಗೀ ಬೃಹನ್ಮಠಾಧ್ಯಕ್ಷ ಶ್ರೀ|| ಷ|| ಬ್ರ|| ಬಾಲತಪಸ್ವೀ ಚನ್ನವೀರಶಿವಾಚಾರ್ಯ ಸ್ವಾಮಿಗಳವರಿಂದ ವೀರಶೈವ ಮತಕ್ಕಾದ ಉಪಕಾರವು ಚಿರಸ್ಮರಣೀಯವಾಗಿದೆ. ಇಂಥಹ ಮಹಾತ್ಮರನ್ನು ಪಡೆದ ವೀರಶೈವರೇ ಧನ್ಯರು. ವೀರಶೈವರ ಸುಖಕ್ಕೋಸ್ಕರ ತಮ್ಮ ತಪಸನ್ನೇ ಧಾರೆಯೆರೆದಿರುವರು ಎರೆಯುತ್ತಿರುವರು. ಈ ಮೊದಲು ಇವರು ಒಂದು ಕೋಟಿ ಪಂಚಾಕ್ಷರೀ ಮಂತ್ರ ಜಪಾನುಷ್ಠಾನವನ್ನು ಆಚರಿಸಿದ ವಿಷಯವು ಎಲ್ಲರಿಗೂ ತಿಳಿದೇ ಇದೆ. ಈಗಾದರೂ ಈ ತಪೋನಿಧಿಗಳು ನೂತನವಾಗಿ ಕಟ್ಟಿಸುತ್ತಿರುವ ಬಾಲತಪಸ್ವೀ ಬೃಹನ್ಮಠದಲ್ಲಿ ಶ್ರೀ ಕಾಶೀವಿಶ್ವಾರಾಧ್ಯ ಪೀಠಾಧಿಪತಿಗಳಿಂದ ಆಶೀರ್ವದಿಸಲ್ಪಟ್ಟ ಶ್ರೀ ಜಗದ್ಗುರು ಪಂಡಿತಾರಾಧ್ಯ ಲಿಂಗೋದ್ಭವ ಮೂರ್ತಿಯನ್ನು ಸ್ಥಾಪಿಸಬೇಕೆನ್ನುವ ವೀರಶೈವರ ಅಪೇಕ್ಷೆಯ ಮೇರೆಗೆ ಒಂದು ಕೋಟಿ ಶಿವಪಂಚಾಕ್ಷರೀ ಮಹಾಮಂತ್ರದ ಜಪದ ಸಲುವಾಗಿ ಅಲ್ಪಕ್ಷೀರಾಹಾರಿಗಳಾಗಿ ವೈಶಾಖ ಶು|| ೨ ತಾ 7-5-43ನೇ ಶುಕ್ರವಾರದ ದಿವಸ ಪ್ರಾತಃಕಾಲ ಈ ಮಹಾಮಂತ್ರವನ್ನು ಒಂಬತ್ತು ತಿಂಗಳಲ್ಲಿಯೇ ಮುಗಿಸಬೇಕೆಂಬ ದೃಢಸಂಕಲ್ಪದಿಂದ ಅನುಷ್ಠಾನವನ್ನು ಪ್ರಾರಂಭಿಸಿರುವರು. ತಪಸ್ವಿಗಳ ದರ್ಶನಾರ್ಥವಾಗಿ ಬರುತ್ತಿರುವ ಪರಸ್ಥಳದವರ ಸಲುವಾಗಿ ಮಠದಲ್ಲಿ ದಾಸೋಹವನ್ನೂ ಸಹ ಇಟ್ಟಿದೆ. ಈಗ ಕೈಗೊಂಡಿರುವ ಸ್ವಾಮಿಗಳ ಜಪಾನುಷ್ಠಾನ ಕಾರ್ಯವು ನಿರ್ವಿಘ್ನವಾಗಿ ಸಾಗಲೆಂದು ಶ್ರೀ ಜಗದಾಚಾರ್ಯರನ್ನು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಮುಕ್ತೆಪ್ಪ ಮೇಂಗಾಣೆ
ಸಿದ್ರಾಮಪ್ಪ ಬುಗುಡೆ
ರೇವಣಸಿದ್ದಪ್ಪ ಹಿರೇಹಬ್ಬು
ಬಾಬಾದಗೌಡ ಪಾಟೀಲ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೩೧ನೇ ಮೇ ೧೯೪೩ [ಸಂಚಿಕೆ ೪

॥ ಶ್ರೀ ಜಗದ್ಗುರು ದಾರುಕಾಚಾರ್ಯಾಯನಮಃ ॥

ಆತ್ಮಸಂಯಮನ

ಲೇ। ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಳೇಮಠ ಮುದೇನೂರು.

ಆತ್ಮಸಂಯಮನವೆಂದರೆ ಇಂದ್ರಿಯಗಳನ್ನು ಸ್ವಾಧೀನದಲ್ಲಿಡುವುದು, ಅಂದರೆ ಮನಸ್ಸಿನ ಇಚ್ಛೆಗೊಳಗಾಗದೆ ಅವನ್ನು ತನ್ನಧೀನದಲ್ಲಿಟ್ಟುಕೊಂಡು ಯೋಗ್ಯಾಯೋಗ್ಯ ವಿಚಾರಗಳನ್ನು ವಿಚಾರಿಸತಕ್ಕದ್ದು ಸಂಸ್ಕೃತದಲ್ಲಿ ಇದಕ್ಕೆ ಇಂದ್ರಿಯ ನಿಗ್ರಹ, ಇಂದ್ರಿಯ ಸಂಯಮನ ಇತ್ಯಾದಿ ಪರ್ಯಾಯ ನಾಮಗಳುಂಟು ಅದು ಒಂದು ಬಗೆಯ ನೈತಿಕ ಧೈರ್ಯವಿದ್ದು ಸದ್ವರ್ತನದ ಉಗಮಸ್ಥಾನವಾಗಿರುವುದು ಮನುಷ್ಯನಲ್ಲಿ ಈ ಅಮೂಲ್ಯ ಗುಣವಿರುವುದರಿಂದಲೇ ಅವನಿಗೂ ಪಶುಪಕ್ಷ್ಯಾದಿಗಳಿಗೂ ಇರುವ ಭೇದವು ವ್ಯಕ್ತವಾಗುತ್ತದೆ ರಥಕ್ಕೆ ಹೂಡಿದ ಕುದುರೆಗಳ ಕಡಿವಾಣವು ಕೈಯೊಳಗಿದ್ದರೆ, ಸಾರಥಿಯು ಅಪೇಕ್ಷಿತ ಸ್ಥಳಕ್ಕೆ ತೀವ್ರವಾಗಿಯೂ ಸುರಕ್ಷಿತವಾಗಿಯೂ ಮುಟ್ಟುವನು ಆದರೆ ಆ ಲಗಾಮನ್ನು ಬಿಟ್ಟುಬಿಟ್ಟರೆ, ಅವನು ಗೊತ್ತಾದ ಸ್ಥಳಕ್ಕೆ ಜಾಗ್ರತೆಯಾಗಿ ಸೇರುವುದಿಲ್ಲೆಂಬ ಮಾತು ಒತ್ತಟ್ಟಿಗಿರಲಿ, ಯಾವಾಗ ತಗ್ಗು ದಿನ್ನೆಗಳಲ್ಲಿ ಬಿದ್ದು ರಥದೊಡನೆ ನಾಶಹೊಂದುವನೆಂಬುದು ತಿಳಿಯುವದಿಲ್ಲ ಈ ಮಾನುಷ ಶರೀರಕ್ಕೆ ಇಂಥದ ಉಪಮಾನವನ್ನು ಕೊಡಬಹುದು ಮನುಷ್ಯನ ಶರೀರವೆಂಬುದೊಂದು ರಥವು, ಮನಸ್ಸು ಸಾರಥಿಯು, ಮತ್ತು ಇಂದ್ರಿಯಗಳೇ ಕುದುರೆಗಳು ಕುದುರೆಗಳು ಸ್ವಾಧೀನದೊಳಗಿದ್ದರೆ, ಜಾಣನಾದ ಸಾರಥಿಯು ನಿರಾಯಾಸವಾಗಿ ಮಾರ್ಗಕ್ರಮಣಮಾಡುವಂತೆ ಆತ್ಮಸಂಯಮಿಯಾದ ಮನುಷ್ಯನು ಸಂಸಾರರೂಪದ ಮಾರ್ಗವನ್ನು ಆಯಾಸವಿಲ್ಲದೆ ಕ್ರಮಿಸುವನು ಆದರೆ ಇಂದ್ರಿಯಗಳು ನಿರ್ಬಂಧರಹಿತವಾದೊಡನೆಯೇ ಅವನ ಚಿತ್ತಸ್ವಾತಂತ್ರ್ಯವು ಹರಣವಾಗಿ ಅವನು ಅಧೋಗತಿಗಿಳಿಯುವನು

ಮನುಷ್ಯನು ಪಶುಪಕ್ಷ್ಯಾದಿ ಜೀವರಾಶಿಗಳಿಗಿಂತ ಶ್ರೇಷ್ಠನವನೆನಿಸಿಕೊಳ್ಳಬೇಕಾದರೆ, ಅವನು ತನ್ನ ಮನಸ್ಸಿನ ಆಳಾಗದೆ ಅದನ್ನು ತನ್ನ ಆಳಾಗಿ ಮಾಡಿಕೊಳ್ಳಬೇಕು ಈ ಕಾರ್ಯವು ಆತ್ಮಸಂಯಮನದಿಂದ ಸಾಧ್ಯವಾಗುವುದು ಅವನು ಸಾರಾಸಾರ ಸಂಗತಿಗಳ ವಿಚಾರ ಮಾಡತಕ್ಕದ್ದು ಅಯೋಗ್ಯವಾದದ್ದು ಒಂದುವೇಳೆ ಅವನಿಗೆ ಸೇರುತ್ತಿದ್ದರೂ, ಇಂದ್ರಿಯನಿಗ್ರಹದ ಸಹಾಯದಿಂದ ಅದನ್ನು ಅವನು ಬಿಟ್ಟುಬಿಡತಕ್ಕದ್ದು, ಹಾಗೆಯೇ ಯೋಗ್ಯವಿದ್ದದ್ದು ಸೇರದಿದ್ದರೂ, ಅದನ್ನು ಅವನು ಸಹಿಸತಕ್ಕದ್ದು ರಣಾಂಗಣದಲ್ಲಿ ಪರಾಕ್ರಮದಿಂದ ವೈರಿಗಳನ್ನು ಗೆಲ್ಲುವ ವೀರನಿಗಿಂತಲೂ ಮನಸ್ಸನ್ನು ತನ್ನಧೀನದಲ್ಲಿಟ್ಟುಕೊಂಡ ವೀರನು ಹೆಚ್ಚಿನ ಯೋಗ್ಯತೆಯುಳ್ಳವನು ಅವನಿಗೆ ಮನೋನಿಗ್ರಹದ ಅಭ್ಯಾಸವಿರುವುದರಿಂದ ಅವನ ವಿಚಾರಗಳೂ, ನಾಲಿಗೆಯೂ, ಕೃತ್ಯಗಳೂ ಸಂಪೂರ್ಣವಾಗಿ ಅವನಧೀನದಲ್ಲಿರುವುವು ಮನುಷ್ಯನಲ್ಲಿ ಸುಶಿಕ್ಷಣ, ಸ್ವಾಭಿಮಾನ, ಆತ್ಮಸಂಯಮನ ಇತ್ಯಾದಿ ಸುಗುಣಗಳು ಅಧಿಕಾಧಿಕವಾಗಿ ಜಾಗೃತವಿದ್ದಂತೆ ಅವನ ದುರ್ವ್ಯಸನ, ದುರಾಚಾರಾದಿಗಳು ಸೂರ್ಯೋದಯದಿಂದ ಕತ್ತಲೆಯಂತೆ ಮಾಯವಾಗಹತ್ತುತ್ತವೆ ಆತ್ಮಸಂಯಮನಾಭಾವವೇ ಎಷ್ಟೋ ದುರಾಚಾರಗಳ ಕಾರಣವಾಗಿರುವುದು

ಸುಶಿಕ್ಷಣದಿಂದಲೇ ಆತ್ಮಸಂಯಮನವು ಬರುವುದು ಸುಶಿಕ್ಷಣದಿಂದ ಕೆಟ್ಟ ಮನುಷ್ಯನೂ ಸಹ ತಕ್ಕಮಟ್ಟಿಗಾದರೂ ಸುಧಾರಿಸಿ ಅವನಲ್ಲಿ ಧೈರ್ಯ, ಶಾಂತಿ, ಸ್ವಾರ್ಥತ್ಯಾಗ ಮುಂತಾದ ಸುಗುಣಗಳು ಉದಯಿಸಿ ಪಲ್ಲವಿಸುವುವು ಸುಶಿಕ್ಷಣವಿಲ್ಲದಿದ್ದರೆ ಹುಡುಗರು ದುರ್ಮಾರ್ಗರಾಗುವರು ಮಾತಾಪಿತೃಗಳು ಮಕ್ಕಳಿಗೆ ಆತ್ಮಸಂಯಮನದ ಮಹತ್ವವನ್ನು ಚೆನ್ನಾಗಿ ತಿಳಿಸುವದಕ್ಕೆ ಅವರ (ಮಕ್ಕಳ) ಬಾಲ್ಯಾವಸ್ಥೆಯೇ ತಕ್ಕ ಸಮಯವೆಂದು ಹೇಳಬಹುದು ಹುಡುಗರು ಚಿಕ್ಕವರಾಗಿರುವಾಗಲೇ ಮನಸ್ಸನ್ನು ಬಿಗಿಹಿಡಿಯುವ ಅಭ್ಯಾಸವನ್ನು ಮಾಡತಕ್ಕದ್ದು ಅವರು ವಿದ್ಯಾಭ್ಯಾಸಕ್ಕೆ ಹೋಗಹತ್ತಿದರೆಂದರೆ, ಗುರುಗಳು ಅವರಿಗೆ ಆತ್ಮಸಂಯಮನದ ಮಹತ್ವವನ್ನು ಬೋಧಿಸತಕ್ಕದ್ದು ಅವರಿಗೆ ನೈತಿಕ ಶಿಕ್ಷಣದ ಮೂಲ ತತ್ವಗಳನ್ನು ಕಲಿಸಬೇಕಾದರೆ, ಅವರನ್ನು ದಂಡಿಸಲೇಬೇಕೆಂಬ ನಿಯಮವೇನೂ ಇಲ್ಲ ಅವರ ಮುಂದೆ ನಾವು ಸದಾಚಾರದಿಂದ ನಡೆದರೆ, ಸದ್ವರ್ತನವು ತಾನಾಗಿಯೇ ಅವರ ಮನಸ್ಸಿನಲ್ಲಿ ಅಂಕುರಿಸುವುದು ವಾಚಕರೇ! ಹೊಸ ಪಾತ್ರೆಗೆ ಅಂಟಿದ ಸಂಸ್ಕಾರವು ಎಂದಿಗೂ ಕೆಡುವುದಿಲ್ಲ ಅಂತೆಯೇ ಎಳೆತನದಲ್ಲಿ ಹುಡುಗರ ಮನಸ್ಸಿನಲ್ಲಿ ನಾಟಿದ ತಿಳುವಳಿಕೆಯು ಎಂದಿಗೂ ಬರಿದಾಗುವುದಿಲ್ಲ “ಮೂರು ವರ್ಷದ ಬುದ್ಧಿ ನೂರು ವರ್ಷದತನಕ” ಎಂಬ ಲೋಕೋಕ್ತಿಯೂ ಇರುವುದು ಆದ ಪ್ರಯುಕ್ತ ಹುಡುಗರಿಗೆ ಸುಶಿಕ್ಷಣವನ್ನು ಕೊಡುವುದಲ್ಲದೆ ನಾವೂ ಸಹ ಮಾತುಗಳಲ್ಲಿಯೂ, ಕ್ರಿಯೆಗಳಲ್ಲಿಯೂ ಮಾರ್ಗದರ್ಶಕರಾಗಿರತಕ್ಕದ್ದು

ಮನಸ್ಸನ್ನು ಬಿಗಿಹಿಡಿಯುವುದು ಇಲ್ಲವೆ ಉಚ್ಛೃಂಖಲವಾಗಿ ಮಾಡುವುದು ಕೆಲವು ಅಂಶಗಳಲ್ಲಿ ಶರೀರಪ್ರಕೃತಿಯ ಮೇಲೂ ಮನಸ್ಸಿನ ಸ್ವಾಸ್ಥ್ಯದ ಮೇಲೂ, ಎಷ್ಟೋ ಅಂಶಗಳಲ್ಲಿ ಗೃಹಶಿಕ್ಷಣ, ಬಾಲ್ಯಾಭ್ಯಾಸ ಅನುಕರಣ ಮುಂತಾದವುಗಳ ಮೇಲೂ ಅವಲಂಬಿಸಿರುತ್ತದೆ ಹೀಗಿದ್ದರೂ ಮನಸ್ಸನ್ನು ದೀರ್ಘ ಪ್ರಯತ್ನದಿಂದ ಅಧೀನದಲ್ಲಿಟ್ಟುಕೊಳ್ಳುವುದು ವಸ್ತುತಃ ಮನುಷ್ಯನ ಕೈಕೆಳಗೇ ಇರುತ್ತದೆ ಅಭ್ಯಾಸದಿಂದ ಶಾಂತಿಯೂ ತೃಪ್ತಿಯೂ ಸಾಧ್ಯವಾಗುವುವು ಅದರಂತೆಯೇ ಯಾವಾಗಲೂ ಗುಣಗುಟ್ಟೋಣವೂ ಅಸಮಾಧಾನವೂ ಸಹ ಅದರಿಂದಲೇ ಹುಟ್ಟುವುವು ಅಭ್ಯಾಸದಿಂದ ಅಲ್ಪ ದುಃಖವನ್ನು ಅತಿಶಯೋಕ್ತಿಯಾಗಿ ಹೇಳಬಹುದು ಹಾಗೂ ಹೆಚ್ಚು ಲಾಭವನ್ನು ತೃಣಕ್ಕೆ ಸಮಾನವಾಗಿ ಹೇಳಬಹುದು ಆದ್ದರಿಂದ ಯಾವುದೇ ಸ್ಥಿತಿಯಲ್ಲಿದ್ದರೂ ಕರ್ತವ್ಯವನ್ನು ಮಾಡಿ ಮನಸ್ಸನ್ನು ಬಿಗಿ ಹಿಡಿದು ಸಂತೋಷದಿಂದಿರುವುದೇ ಶ್ರೇಯಸ್ಕರವು.

ಜಿತೇಂದ್ರಿಯತ್ವದ ಹೊರತು ಸಾಧುತ್ವವೂ ಎಂದೂ ಸಾಧ್ಯವಾಗಲಾರದು ಪ್ರಪಂಚದಲ್ಲಿ ಇದುವರೆಗೆ ಆಗಿಹೋದ ಸಾಧುಸಂತ ಮೊದಲಾದವರು ಇಂದ್ರಿಯನಿಗ್ರಹಿಗಳಾಗಿದ್ದರು ಅವರು ಸುಖದುಃಖಗಳನ್ನು ಸಮವಾಗಿ ತಿಳಿದು ನಿಶ್ಚಲಮನಸ್ಸಿನಿಂದ ಎಷ್ಟೋ ವರ್ಷಗಳವರೆಗೆ ಜಗನ್ನಿಯಾಮಕನನ್ನು ಸ್ತುತಿಸಿದ್ದರಿಂದಲೇ ಸಾಯುಜ್ಯ ಪದವಿಯನ್ನು ಪಡೆದರು ನಮ್ಮ ಭರತಖಂಡದಲ್ಲಿ ಆಗಿಹೋದ ತಪೋನಿಧಿಗಳನ್ನು ಬೇರೆಯಾವ ದೇಶದಲ್ಲಿಯೂ ಇಲ್ಲ ಶುಕ ಮೊದಲಾದ ಮುನಿವರ್ಯರು ಸಂಸಾರ ಸುಖಗಳನ್ನು ತುಚ್ಛೀಕರಿಸಿ ಎಷ್ಟೋವರ್ಷಗಳವರೆಗೆ ತಪಶ್ಚರ್ಯೆಗಳನ್ನು ಆಚರಿಸಿದರು ಅವರ ತಪೋಭಂಗವನ್ನು ಮಾಡುವುದಕ್ಕಾಗಿ ಇಂದ್ರಾದಿ ದಿಕ್ಪಾಲಕರು ರಂಭಾದಿಸುರಾಂಗನೆಯರನ್ನು ಪ್ರೇರೇಪಿಸಿ ಕಳುಹಿಸಿದಾಗ್ಯೂ, ಆ ಮುನಿಶ್ರೇಷ್ಠರು ಅವರ ಶೃಂಗಾರ ಚೇಷ್ಟೆಗಳಿಗೆ ಮೋಹಿಸಲಿಲ್ಲ! ಅವರ ಪ್ರಯತ್ನಗಳೆಲ್ಲ ಚಂಡಮಾರುತದಿಂ ಸೊಳ್ಳೆಗಳಂತೆ ಮಾಯವಾದುವು! ಇದಂತೂ ಕೃತ, ತ್ರೇತ, ದ್ವಾಪರಯುಗಗಳ ಮಾತಾಯಿತು ಕಲಿಯುಗದಲ್ಲಾದರೂ ಇಂತಹ ತಪಸ್ವಿಗಳು ಕಡಿಮೆಯಾಗಿಲ್ಲ ಪ್ರಿಯಪತ್ನಿಯು ಗಂಡುಶಿಶುವನ್ನು ಹೆತ್ತಿರಲು ಸತಿಪುತ್ರರ ವ್ಯಾಮೋಹಕ್ಕೊಳಗಾಗದೆ ಬೌದ್ಧಮತಸ್ಥಾಪಕನಾದ ರಾಜಪುತ್ರ ಸಿದ್ಧಾರ್ಥನು ಕೇವಲ ಇಪ್ಪತ್ತೆರಡು ವಯಸ್ಸಿನಲ್ಲಿ ಅರಮನೆಯನ್ನು ಬಿಟ್ಟು ಹೋಗಲಿಲ್ಲವೇ! ಶ್ರೀನಿಜಗುಣಶಿವಯೋಗಿಗಳು ರಾಜರಾಗಿದ್ದರೂ ಸರ್ವಸ್ವವನ್ನೂ ತ್ಯಜಿಸಿ ಅರಣ್ಯವನ್ನು ಸೇರಲಿಲ್ಲವೇ! ಯೋಗಸಾಧನಕ್ಕೆ ಆತ್ಮ ಸಂಯಮನವೇ ಮುಖ್ಯಕಾರಣವಾಗಿರುವುದೆಂದು ಭಗವದ್ಗೀತೆಯೂ ಸಾರುತ್ತದೆ

ಆತ್ಮಸಂಯಮನವು ಕೇವಲ ಪರಲೋಕಸಾಧನದ ಸಲುವಾಗಿಯೇ ಉಪಯುಕ್ತವಾದದ್ದೆಂದು ತಿಳಿಯಲಾಗದು ಐಹಿಕ ಸುಖಕ್ಕೂ ಅದರ ಅವಶ್ಯಕತೆಯುಂಟು ದುಷ್ಕರ್ಮಗಳನ್ನಾಚರಿಸಬಾರದೆಂತಲೂ, ದುರ್ಭಾಷೆಗಳನ್ನಾಡಬಾರದೆಂತಲೂ ಅಪೇಕ್ಷೆಯುಳ್ಳವರು ಅವಶ್ಯಕವಾಗಿ ಇಂದ್ರಿಯನಿಗ್ರಹಿಗಳಾಗಿರಬೇಕು ಲೋಹಬಾಣಗಳಿಗಿಂತಲೂ ವಾಗ್ಬಾಣಗಳೇ ಹೆಚ್ಚು ಕ್ರೂರಗಳೂ ಕಠಿಣಗಳೂ ಆಗಿರುತ್ತವೆ ಶಸ್ತ್ರದಿಂದುಂಟಾಗುವ ಗಾಯವು ಔಷಧಗಳಿಂದ ಮಾಯುತ್ತವೆ ಆದರೆ ಮರ್ಮಭೇದಕವಾದ ಬಿರುನುಡಿಗಳಿಂದುಂಟಾಗುವ ನೋವನ್ನು ಹೋಗಲಾಡಿಸುವುದಕ್ಕೆ ಔಷಧಗಳೇ ಇಲ್ಲವು ಆದ್ದರಿಂದ ಅಂತಹ ಬಿರುನುಡಿಗಳು ಕಡೆತನಕ ಮನಸ್ಸಿನಲ್ಲಿ ಉಳಿಯುವುವು ನಾಲಿಗೆಯು ಸ್ವಾಧೀನದಲ್ಲಿದ್ದರೆ ಜಗತ್ತಿನ ಎಲ್ಲಾ ವ್ಯಾಜ್ಯಗಳೂ ದ್ವೇಷಗಳೂ ಕಡಮೆಯಾಗಬಹುದು ಲೋಕಪ್ರಿಯರಾಗುವುದಕ್ಕೆ ಸವಿಮಾತುಗಳೇ ಮುಖ್ಯವಾದ ಸಾಧನಗಳು “ವಾಕ್ಪಾರುಷ್ಯವು ತಪ್ತಲೋಹಕ್ಕಿಂತಲೂ ತಾಪವುಳ್ಳದಾಗಿದೆ,

[೪ನೆಯ ಪುಟವನ್ನು ನೋಡಿ]

ಚಂದಾದಾರರಲ್ಲಿ ವಿಜ್ಞಾಪನೆ

ಈ ಪತ್ರಿಕೆಯು ಜನ್ಮವೆತ್ತಿ ವೈಶಾಖ ಶು॥ ಹುಣ್ಣಿಮೆಗೆ ೧೬ ವರ್ಷಗಳು ತುಂಬಿ ೧೭ ನೆಯ ವರ್ಷವು ಪ್ರಾರಂಭವಾಗಿರುವುದು. ವರ್ಷಾರಂಭದಿಂದ ಚಂದಾದಾರರಾಗಿರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ. ಪಿ. ಮಾಡಬೇಕಾಗುತ್ತದೆ. ವಿ. ಪಿ. ಮಾಡುವುದರಿಂದ ನಮಗೂ ತೊಂದರೆಯಾಗುವುದು ಹಾಗೂ ಚಂದಾದಾರರಿಗೂ ೫ ಆಣೆ ಹೆಚ್ಚಿಗೆ ಬೀಳುವುದು ಆದುದರಿಂದ ಚಂದಾದಾರರೆಲ್ಲರೂ ಕೂಡಲೇ ೨ ರೂ ೧೨ ಆಣೆಗಳನ್ನು ಮನಿಯಾರ್ಡರ್ ದ್ವಾರಾ ಕಳುಹಿಸಬೇಕು. ಯಾವ ಗ್ರಾಮದಲ್ಲಿ ವಿಶೇಷ ಚಂದಾದಾರರಿರುವರೋ ಆ ಗ್ರಾಮದಲ್ಲಿರುವ ಅಧಿಕಾರಿಗಳು ಚಂದಾದಾರರ ಹಣವನ್ನೆಲ್ಲ ಒಟ್ಟು ಕೂಡಿಸಿ ಒಂದೇ ಸಾರಿ ಮನಿಯಾರ್ಡರ್ ಮಾಡಿಸಬೇಕು. ಹೀಗೆ ಮಾಡುವುದರಿಂದ ಸರ್ವರಿಗೂ ಹಿತವಾಗುತ್ತದೆ. ಮನಿಯಾರ್ಡರ್ ಮಾಡುವ ಚಂದಾದಾರರು ತಮ್ಮ [illegible] ನಂಬರನ್ನು ಮಾತ್ರ [illegible]

ಸಂ —

ಪಂಚಾಚಾರ್ಯಪ್ರಭಾ.

೧೯೪೩ನೆಯ ಮೇ ತಾ॥ ೩೧ನೆಯ ಸೋಮವಾರ

ಶಿವಯೋಗ.

ಶಿವಯೋಗವೆಂದರೆ ಶಿವನಲ್ಲಿ ಚಿತ್ತವೃತ್ತಿಗಳನ್ನು ನಿರೋಧಿಸಿ ಬಾಹ್ಯಾಕಾರವೃತ್ತಿಗಳನ್ನು ತಡೆದು ಶಿವಾಕಾರಗಳನ್ನಾಗಿ ಮಾಡುವದೆಂದು ಅರ್ಥವಾಗುವುದು. ಹೀಗೆ ಮಾಡುವುದು ಸುಲಭಸಾಧ್ಯವಲ್ಲ. ಒಂದು ಪರ್ವತದ ಮೇಲ್ಭಾಗದಿಂದ ಅತಿವೇಗದಿಂದ ಕೆಳಗೆ ಬೀಳುವ ದೊಡ್ಡ ಪ್ರವಾಹವನ್ನು ತಡೆದು ಅದನ್ನು ಮೇಲಕ್ಕೆ ತಿರುಗಿಸುವದು ಎಷ್ಟು ಕಷ್ಟವೋ ಸ್ರಕ್ಚಂದನವನಿತಾದಿ ವಿಷಯಪ್ರದೇಶವೆಂಬ ತಗ್ಗಿಗೆ ಬೀಳುತ್ತಿರುವ ಚಿತ್ತವೃತ್ತಿಪ್ರವಾಹವನ್ನು ತಡೆದು ಶಿವನೆಂಬ ಊರ್ಧ್ವಪ್ರದೇಶಕ್ಕೆ ತಿರುಗಿಸುವುದು ಅಷ್ಟೇ ಕಷ್ಟಸಾಧ್ಯವಾಗಿರುವುದು. ಇಂಥ ಕಷ್ಟತರವಾದ ಶಿವಯೋಗವು ಯಾವನಿಗೆ ಸಾಧ್ಯವಾಗುವುದೆಂದರೆ [illegible] ಧೀರನು ವೀರನು ಶೂರನೆಂದು [illegible] ಮಾತ್ರ ಹೇಳಲು ಎಂದಿಗೂ [illegible] ಇವನಿಗೆ ಬಾಹ್ಯ [illegible] ಶಿವಯೋಗವನ್ನು ಸಾಧಿಸಿದ ವಿಜಯ ಮಾತ್ರ [illegible] ಇವನು ಕಾಮಕ್ರೋಧಾದಿ ಷಡ್ರಿಪುಗಳ ಜನಕ (ಉಪಾದಾನಕಾರಣ)ವಾದ ಚಿತ್ತವೆಂಬ ಪ್ರಬಲಶತ್ರುವನ್ನೇ ಜಯಿಸಿಬಿಟ್ಟಿರುವಾಗ ಕಾಮಾದಿಗಳಲ್ಲಿಂದ ಬರಬೇಕು? ಚಿತ್ತವನ್ನು ಜಯಿಸಿದವನು ಮೊದಲೇ ಬಾಹ್ಯೇಂದ್ರಿಯಗಳನ್ನು ಜಯಿಸಿಯೇ ಇರುವನು. ಚಿತ್ತವನ್ನು ಜಯಿಸುವದೆಂದರೆ ಅದರ ಸ್ವಾಭಾವಿಕವಾದ ವಿಷಯಗಳಲ್ಲಿಯ ಹರಿದಾಟವನ್ನು ನಿಲ್ಲಿಸಿ ಶಿವನಲ್ಲಿ ಲಯಗೊಳಿಸುವಿಕೆ. ಇದೇ ಶಿವಯೋಗವು, ಇಂಥ ಶಿವಯೋಗವುಳ್ಳವನೇ ಪ್ರತ್ಯಗಾತ್ಮನಾದ ಶಿವನನ್ನು ಕಣ್ಣಾಗಿ ನೋಡುವನು ಶಿವನನ್ನು ಸಾಕ್ಷಾತ್ಕರಿಸಿದವನೇ ಮುಕ್ತನು, ಈ ಬಗ್ಗೆ ಕಶ್ಚಿದ್ಧೀರಃ ಪ್ರತ್ಯಗಾತ್ಮಾನಮೈಕ್ಷದಾವೃತ್ತಚಕ್ಷುರಮೃತತ್ವಮಿಚ್ಛನ್ ॥ ಎಂಬ ಶ್ರುತಿಯು ಪ್ರಮಾಣವಾಗಿದೆ. ಈ ಶಿವಯೋಗವು ಸಾಧನರೂಪವೆಂತಲೂ ಸಾಧ್ಯರೂಪವೆಂತಲೂ ಎರಡು ಪ್ರಕಾರವಾಗಿರುವುದು. ಸಾಧನರೂಪವಾದ ಶಿವಯೋಗದಲ್ಲಿ ಷಡ್ಭಕ್ತ್ಯಾದಿ ಷಟ್‌ಸ್ಥಲಗಳೂ ಅವುಗಳಲ್ಲಿ ಅಡಕವಾಗಿರುವ ಯಮಾದಿ ಧಾರಣಾಂತಗಳಾದ ಏಳು ಅಂಗಗಳೂ ಅಡಕಗಳಾಗುವವು. ಸಾಧ್ಯರೂಪವಾದ ಶಿವಯೋಗವು ಪಾತಂಜಲದರ್ಶನದಲ್ಲಿ ಸಮಾಧಿಯೆಂದು ಹೇಳಿಸಿಕೊಳ್ಳುವ ಐಕ್ಯಸ್ಥಲವೆನಿಸುವದು. ಈ ಐಕ್ಯಸ್ಥಲವನ್ನು ಹೊಂದಿದವನೇ ಜೀವಭಾವವನ್ನು ಬಿಟ್ಟು ಶಿವನಾಗುವನು. ಇವನು ಸರ್ವೋಪಾಧಿಗಳಿಂದ ಬಿಡಲ್ಪಟ್ಟವನಾದಕಾರಣ ಶಿವನೆನಿಸಿಕೊಳ್ಳುವನು. ಆದ್ದರಿಂದ "ಪಾಶಬದ್ಧೋ ಭವೇಜ್ಜೀವಃ ಪಾಶಮುಕ್ತೋ ಭವೇಚ್ಛಿವಃ" ಎಂದು ಆಗಮವು ಸಾರುತ್ತದೆ. ಕೀಟವು ಭ್ರಮರಧ್ಯಾನದಿಂದ ಭ್ರಮರವೇ ಆಗುವಂತೆ ಮನುಷ್ಯನು ಸಾಧನರೂಪವಾದ ಶಿವಯೋಗದಿಂದ ಶಿವನೇ ಆಗುವನು. ಸಾಧನರೂಪವಾದ ಶಿವಯೋಗವು ಬಾಹ್ಯವೆಂತಲೂ ಅಭ್ಯಂತರವೆಂತಲೂ ಎರಡು ಪ್ರಕಾರವಾಗಿರುವದು. ಬಾಹ್ಯಶಿವಯೋಗವೆಂದರೆ ಬಾಹ್ಯಶರೀರದಲ್ಲಿ ಇಷ್ಟಲಿಂಗಧಾರಣವೆನಿಸಿಕೊಳ್ಳುವುದು. ಇದು ಮುಮುಕ್ಷುವಾದ ಪ್ರತಿಯೊಬ್ಬ ಮನುಷ್ಯನಿಗೂ ಇಷ್ಟೇ ಇರಬೇಕು. ಇಲ್ಲದಿದ್ದರೆ ಕರ್ಮಕಮಲವೆಂಬ ಪಾಶವು ನಾಶವಾಗಿ ಹೋಗುವದೇ ಇಲ್ಲವು. ಅದು ಇಲ್ಲದರೆ ಮುಕ್ತಿಯು ಲಭಿಸುವದಿಲ್ಲ. ಈ ವಿಷಯವನ್ನು "ಅವ್ರತಸ್ಯ ನೈವ ದಾರಣ್ಯೋ ಬೂಯಾಸಂ" "ಅತಪ್ತತನೂರ್ನ ತದಾಮೋ ಅಶ್ನುತೇ" ಇತ್ಯಾದಿ ಶ್ರುತಿಗಳು ಉದ್ಘೋಷಿಸುವವು. ಧನುರ್ಧಾರಿಗೆ ಆದಿಯಲ್ಲಿ ಸ್ಥೂಲಗುರಿಯು ಸಿದ್ಧಿಸದೆ ಸೂಕ್ಷ್ಮಗುರಿಯು ಸಿದ್ಧಿಸದಿರುವಂತೆ ಮಾನವನಿಗೆ ಬಾಹ್ಯಯೋಗಸಿದ್ಧಿಯಿಲ್ಲದೆ ಅಭ್ಯಂತರ ಸೂಕ್ಷ್ಮಯೋಗವು ಸಿದ್ಧಿಸಲಾರದು. ಈ ಉಭಯವಿಧ ಶಿವಯೋಗಕ್ಕೆ ಅಷ್ಟಾವರಣಗಳೂ, ಪಂಚಾಚಾರಗಳೂ ಅಂಗಗಳಾಗಿರುವವು. ಈ ಶಿವಯೋಗಕ್ಕೆ ಲಿಂಗಾಂಗಸಾಮರಸ್ಯವೆಂದು ಬೇರೊಂದು ಹೆಸರುಂಟು. ಮೋಕ್ಷಾಪೇಕ್ಷಿಯು ಮೊದಲು ಸಾಧನಸಂಪನ್ನನಾಗಬೇಕು. ಸಾಧನವಿಲ್ಲದೆ ಸಾಧ್ಯರೂಪವಾದ ಫಲವು ದೊರೆಯಲಾರದೆಂಬುದು ಲೋಕಾನುಭವಸಿದ್ಧವೇ ಆಗಿರುವುದು. ದಂಡಾದಿಸಾಧನಗಳಿಲ್ಲದ ಘಟವು ಲಭಿಸದು. ಬೀಜವನ್ನು ಬಿತ್ತಿ ಅದಕ್ಕೆ ಜಲಸೇಚನಾದಿ ಸಾಧನಗಳಿಲ್ಲದಿದ್ದರೆ [illegible] ಫಲವು ಸಿಕ್ಕಲಾರದು. ಆದ್ದರಿಂದ ಸಾಧನಗಳಾದ ಅಷ್ಟಾವರಣಾದಿಗಳನ್ನು ಮೊದಲು ಸಂಪಾದಿಸಬೇಕು. ಈ ಸಂಪಾದನೆಗಾಗಿ ಶ್ರೀ ಗುರುಮೂರ್ತಿಯನ್ನು ಆಶ್ರಯಿಸಿ ಅವನಿಂದ ಶಿವದೀಕ್ಷೆಯನ್ನು ಹೊಂದಬೇಕು. ಆಗ ಸಾಧನರೂಪ ಶಿವಯೋಗವು (ಲಿಂಗಾಂಗ ಸಾಮರಸ್ಯವು) ತನಗೆ ಪ್ರಾಪ್ತವಾಗುವುದು. ಸಾಧನಸಹಿತ ಶಿವಯೋಗದಲ್ಲಿಯೇ ಶಿವಭಕ್ತಿ, ಶಿವಧ್ಯಾನ, ಶಿವವ್ರತ, ಶಿವಾರ್ಚನ, ಶಿವಜ್ಞಾನಗಳು ಅಂತರ್ಗತಗಳಾಗುವವು. ಈ ಸಾಧನಸಹಿತ ಶಿವಯೋಗವು ದೀಕ್ಷಾಕಾಲದಲ್ಲಿ ಶಿಷ್ಯನಿಗೆ ದೊರೆಯುವದು. ಗುರುವು ಆ ಕಾಲದಲ್ಲಿ ಉಪದೇಶಮಾಡಿದ ಪ್ರಕಾರ ಆ ಸಾಧನಗಳನ್ನು ಆಚರಿಸುತ್ತ ಹೋದರೆ ಎರಡನೆಯದಾದ ಸಾಧ್ಯರೂಪವಾದ ಮೋಕ್ಷವು ಲಭಿಸುವದು. ಗುರುವಿನ ಅಪ್ಪಣೆಗೆ ವಿರುದ್ಧವಾಗಿ ಆಚರಿಸಿದ್ದಾದರೆ ಮೋಕ್ಷವು ದೊರೆಯದೆ ಗುರುವಿನ ಆಜ್ಞಾಭಂಗದೋಷಕ್ಕೆ ಪಾತ್ರನಾಗುವನು. ಕ್ರಿಯಾಸಾರಕಾರರು ಲಿಂಗಾಂಗಸಾಮರಸ್ಯವು ಎರಡು ಪ್ರಕಾರವೆಂದು ಹೇಳಿ ಆ ಮೇಲೆ ಸಾಧನಸಹಿತವಾದ ಸಾಮರಸ್ಯವು ಗುರುವಿನಿಂದಲೇ ದೀಕ್ಷೆಯಲ್ಲಿ ಮಾಡಲ್ಪಡುವದೆಂತಲೂ ಎರಡನೆಯದು ಫಲರೂಪವಾದುದೆಂತಲೂ ಹೇಳಿದ್ದಾರೆ. "ದ್ವಿತೀಯಮಪಿಶಿಷ್ಯಸ್ಯ ಗುರುವಾಕ್ಯಸ್ಯ ಪಾಲನಾತ್" ಎಂದು ಹೇಳಿರುವದರಿಂದ ತನ್ನ ದೀಕ್ಷಾಗುರುವಿನ ಅಪ್ಪಣೆಯನ್ನು ಯಾವಜ್ಜೀವವೂ ಪಾಲಿಸಲೇ ಬೇಕು. ಯಾವ ಮಾನವನು ತನಗೆ ದೀಕ್ಷಾಕಾಲದಲ್ಲಿ ಒದಗಿದ ಅಷ್ಟಾವರಣಗಳನ್ನು ಬಿಡುವನೋ ಅಥವಾ ಅವುಗಳಲ್ಲಿ ಒಂದನ್ನಾದರೂ ಎರಡನ್ನಾದರೂ ಬಿಡುವನೋ ಅವನು ಎಂದಿಗೂ ವೀರಶೈವನೆನಿಸಿಕೊಳ್ಳಲಾರನು ಮತ್ತು ಸಾಧನಾವಸ್ಥಾಸಹಿತ ಶಿವಯೋಗಸಂಪನ್ನನೆಂತಲೂ ಸಹ ಹೇಳಿಸಿಕೊಳ್ಳಲಾರನು. ಅಂದರೆ ಸಾಧಕಶಿವಯೋಗಿಯೆಂದೆನಿಸನು. ಸಾಧಕನೆನಿಸದಿದ್ದರೆ ಸಾಧ್ಯ (ಮೋಕ್ಷ)ವುಳ್ಳವನೂ ಸಹ ಆಗಲಾರನು. ಆದ್ದರಿಂದ ಸಾಧನಾವಸ್ಥಾಸಹಿತ ಶಿವಯೋಗಿಯೆನಿಸಿಕೊಂಡು ಸಾಧ್ಯರೂಪವಾದ ಶಿವಯೋಗಸಂಪನ್ನನಾಗಬೇಕು. ದೀಕ್ಷಾಕಾಲದಲ್ಲಿ ಶ್ರೀಗುರುಮೂರ್ತಿಯು ಎಲೈ ಶಿಷ್ಯನೇ ಮುಂದು ಮುಂದಿನ ಆಶ್ರಮಧರ್ಮಗಳನ್ನು ನೀನು ಹೊಂದಿದಾಗ ನನ್ನನ್ನೂ ನಾನು ಉಪದೇಶಿಸಿದ ಮಂತ್ರವನ್ನೂ ಬಿಟ್ಟು ಆಚರಿಸು ಎಂದು ಅಪ್ಪಣೆಮಾಡಿಲ್ಲವು. ಗುರುಲಿಂಗಜಂಗಮಾದ್ಯಷ್ಟಾವರಣನಿಷ್ಠೆಯುಳ್ಳವನಾಗಿರು; ಎಂಬುದೇ ಅವನ ಅಪ್ಪಣೆಯಾಗಿದೆ. ಆದ್ದರಿಂದ ವೀರಶೈವರೆನಿಸುವ ಸರ್ವರೂ ಗುರುವಾಕ್ಯಪಾಲನವನ್ನು ಮಾಡಿ ಪುನರಾವೃತ್ತಿರಹಿತವಾದ ಮೋಕ್ಷಸಾಮ್ರಾಜ್ಯವನ್ನು (ಶಿವಯೋಗವನ್ನು) ಪಡೆಯಬೇಕಲ್ಲದೆ ಅವನ ಆಜ್ಞೆಗೆ ವಿರುದ್ಧವಾಗಿ ಆಚರಿಸಿ ನರಕರೂಪವಾದ ಮಹಾದುಃಖವನ್ನು ಹೊಂದಬಾರದು.

ಯುದ್ಧವಾರ್ತೆ

ಅಮೇರಿಕನ್ ನಷ್ಟ

ಉತ್ತರ ಆಫ್ರಿಕಾ ಯುದ್ಧದಲ್ಲಿ ಅಮೇರಿಕದ ಒಟ್ಟು ೧೮೫೫೮ ಸೈನಿಕರು ಸತ್ತರೆಂದೂ ಅಟ್ಟೋ ದ್ವೀಪದಲ್ಲಿ ೬೪೪ ಸೈನಿಕರು ಮಡಿದರೆಂದೂ ಪ್ರಕಟವಾಗಿದೆ.

ಹಾಲೆಂಡಿನಲ್ಲಿ ೧ ಸಾವಿರ ಜನರ ಕೊಲೆ

ಹಾಲೆಂಡಿನಲ್ಲಿ ನಾಜಿ ಆಡಳಿತದ ಬಗ್ಗೆ ಅಶಾಂತಿಯುಂಟಾಗಿದೆಯೆಂದೂ, ಜನಗಳು ದೊಂಬಿ ಎದ್ದು ಅದರ ಪರಿಣಾಮವಾಗಿ ಜರ್ಮನಿಯವರ ಕೈಯಿಂದ ೧ ಸಾವಿರ ಮಂದಿ ಕೊಲ್ಲಲ್ಪಟ್ಟರೆಂದು ಹೇಳಲಾಗಿದೆ.

ಜಪಾನಿ ಹೆಂಗಸರಿಗೆ ನಿರ್ಬಂಧದ ಕೆಲಸ

ಜಪಾನಿನಲ್ಲಿ ಹೆಂಗಸರು ಕೆಲಸಮಾಡಬೇಕೆಂಬ ಒತ್ತಾಯದ ಆಜ್ಞೆಯೊಂದನ್ನು ಹೊರಡಿಸಿ, ಹೆಂಗಸರು ಕೆಲಸ ಮಾಡಬಲ್ಲ ಹುದ್ದೆಗೆ ಗಂಡಸರನ್ನು ನೇಮಿಸಕೂಡದೆಂದು ಪ್ರತಿಬಂಧಿಸಿದ್ದಾರೆ. ನಿರ್ಬಂಧದಿಂದ ಸೈನ್ಯಕ್ಕೆ ಸೇರಬೇಕಾದ ಜನಗಳು ೪೦ ವರ್ಷವಾದರೂ ಅವರನ್ನು ತೆಗೆದುಕೊಳ್ಳಲಾಗುತ್ತಿದೆ

ಯಾಂಗ್ಟ್ಸೀಸ್ ಬಂದರುಗಳ ಮೇಲೆ ಜಪಾನರ ಮುತ್ತಿಗೆ

ಯಾಂಗ್ಟ್ಸೀಸ್ ಬಂದರಾದ ಇಚಾಂಗಿನ ದಕ್ಷಿಣಕ್ಕೆ ೩೫ ಮೈಲಿ ದೂರದಲ್ಲಿರುವ ಯುಯಾಂಗ್ ಕ್ವಾನ್ ಎಂಬ ಮುಖ್ಯ ನಗರವು ಶತ್ರುಗಳ ವಶವಾಯಿತು.

೬ ಜಪಾನ್ ಡಿವಿಜನ್‌ಗಳು ಯಾಂಗ್ಟ್ಸೀಸ್ ಬಂದರುಗಳ ಕಡೆಗೆ ನುಗ್ಗುತ್ತಿವೆ. ಈ ಹೊಸ ಕಾರ್ಯಕ್ರಮವು ಚಂಕಿಂಗ್ ಕಡೆ ನುಗ್ಗುವ ಯೋಚನೆಯ ಒಂದು ಕವಲು. ಚಂಗ್‌ಕಿಂಗ್ ಅಲ್ಲಿಂದ ಪಶ್ಚಿಮಕ್ಕೆ ೩೫೫ ಮೈಲಿ ದೂರದಲ್ಲಿದೆ. ಯಾಂಗ್ಟ್ಸೀಸ್ ನದಿಯ ದಕ್ಷಿಣದಲ್ಲಿ ಉಗ್ರ ಕದನ ನಡೆಯುತ್ತಿದೆ. ಇಚಾಂಗ್ ಪಶ್ಚಿಮಕ್ಕೆ ಬಲಯುತ ಜಪಾನ್ ಪಡೆಗಳು ನದಿಯನ್ನು ದಾಟಿ ಮುಂದೋಟವನ್ನು ತ್ವರಗೊಳಿಸಿವೆ. ಚೀಣರು ಕೂಡ ಉಗ್ರ ಕದನ ನಡೆಸಲು ಸಿದ್ಧರಾಗಿದ್ದಾರೆಂದು ಹೇಳಲಾಗಿದೆ

ಚೀಣರ ಪ್ರತಿಮುತ್ತಿಗೆ

ಯಾಂಗ್ಟ್ಸೀಸ್ ನದಿಯ ದಕ್ಷಿಣ ದಡದಲ್ಲಿ ಜಪಾನರು ಆರಂಭಿಸಿರುವ ಮುತ್ತಿಗೆಗೆ ಪ್ರತಿಯಾಗಿ ಚೀಣರು ಉತ್ತರ ದಡದಲ್ಲಿ ಇಚಾಂಗ್ ಮತ್ತು ಟಾಂಗ್‌ಯಾಂಗ್ ಕಡೆಗೆ ನುಗ್ಗುತ್ತಿದ್ದಾರೆ. ಟಾಂಗ್‌ಯಾಂಗ್ ಸುತ್ತ ಹಲವು ಮುಖ್ಯ ಸ್ಥಾನಗಳನ್ನು ಚೀಣರು ಹಿಡಿದಿದ್ದಾರೆ. ದಕ್ಷಿಣದಡದಲ್ಲಿ ಜಪಾನರ ಮುಂದೋಟ ಅಷ್ಟೇನೂ ತೀವ್ರವಾಗಿಲ್ಲ.

ಜಪಾನರು ಯಾಂಗ್ಟ್ಸೀಸ್ ನದಿ ದಾಟಿದರು

ಯಾಂಗ್ಟ್ಸೀಸ್ ನದೀತೀರದ ಬಂದರಾದ ಇಚಾಂಗಿನ ದಕ್ಷಿಣಕ್ಕೆ ೧೮ ಮೈಲಿ ದೂರದಲ್ಲಿರುವ ಚಾಂಗ್‌ಯಾಂಗ್ ಎಂಬುದು ಜಪಾನರ ವಶವಾದುದು ನಿಜವೆಂದು ಚೀಣಾ ಒಪ್ಪಿಕೊಂಡಿದೆ. ಇಚಾಂಗಿಗೆ ಎದುರಾಗಿ ಮತ್ತೊಂದು ಜಪಾನ್ ಪಡೆ ನದಿಯನ್ನು ದಾಟಿ ಪಶ್ಚಿಮದ ಕಡೆಗೆ ನುಗ್ಗುತ್ತಿದೆ. ಮೂರು ಕಡೆಗಳಿಂದ ಜಪಾನರು ನುಗ್ಗುತ್ತಿದ್ದಾರೆ.

ಚೀಣಾಕ್ಕೆ ಜಪಾನಿನ ಶಾಂತಿ ಸಲಹೆ

ಮುಂದಿನ ಸೆಪ್ಟೆಂಬರ್ ಒಳಗಾಗಿ ಜಪಾನು ಚೀಣದ ಮುಂದೆ ಪ್ರತ್ಯೇಕವಾದ ಶಾಂತಿ ಸಲಹೆಯನ್ನು ಇಡುವುದಾಗಿ ಕೋರಿಯಾದ ನಾಯಕರಾದ ಶ್ರೀ ಕಿಲ್ಯೂಕಿಹ್ಯಾನ್ ರವರು ವಲಸೆ ಸಮಿತಿಯ ಮುಂದೆ ತಿಳಿಸಿದರು.

ಟೋಕಿಯೋದಿಂದ ಮಾರ್ಷಲ್ ಚೆಯಾಂಗ್ ಕೈಷೇಕರಿಗೆ ಕಳಿಸಲಿರುವ ಶಾಂತಿಸಲಹೆಯಲ್ಲಿ ಕೆಳಗಿನ ಅಂಶಗಳಿವೆಯೆಂದು ಅವರು ತಿಳಿಸಿದ್ದಾರೆ (೧) ಚೀಣವು ಸಂಯುಕ್ತರಾಷ್ಟ್ರಗಳಿಂದ ಪ್ರತ್ಯೇಕವಾಗಬೇಕು. (೨) ೧೯೩೭ ರಲ್ಲಿದ್ದ ಪರಿಸ್ಥಿತಿಯನ್ನೇ ಜಪಾನು ಈಗ ಮತ್ತೆ ಸ್ಥಾಪಿಸುವುದು ಆದರೆ ಯುದ್ಧ ಮುಗಿಯುವವರೆಗೆ ಜಪಾನು ಈಗ ತನ್ನ ವಶದಲ್ಲಿರುವ ರೈಲ್ವೆಗಳನ್ನು ಬಂದರುಗಳನ್ನು ಇಟ್ಟುಕೊಂಡಿರುವುದು. (೩) ಮಂಚುಕೋವನ್ನು ಜಪಾನ್ ಚೀಣಾ ಎರಡೂ ಅನುಭವಿಸುವುದು. (೪) ಜಪಾನು ಚೀಣಾಕ್ಕೆ ಧನಸಹಾಯನೀಡುವುದು

ಜರ್ಮನಿಗೂ ಇಟಲಿಗೂ ಭಿನ್ನಾಭಿಪ್ರಾಯವೆ?

ಹೊರಗಿದ್ದ ಇಟಲಿಯ ಸೇನೆಯೆಲ್ಲ ಬಹುಮಟ್ಟಿಗೆ ಮಾತೃಭೂಮಿಯ ರಕ್ಷಣೆಗಾಗಿ ಹಿಂತಿರುಗಿವೆಯೆಂದು ಕೈರೋದಿಂದ ಸುದ್ದಿ ಬಂದಿದೆ ಆದ್ದರಿಂದ ಇಟಲಿ, ಜರ್ಮನಿಗಳಿಗೆ ಭಿನ್ನಾಭಿಪ್ರಾಯವುಂಟಾಗಿದೆ ಯುದ್ಧ ಪ್ರಾರಂಭವಾದಂದಿನಿಂದ ಈ ಎರಡು ದೇಶಗಳಿಗೆ ಇಂತಹ ಪರಿಸ್ಥಿತಿ ಒದಗಿರಲಿಲ್ಲ ಕಟ್ಟಕಡೆಯದಾಗಿ ಆಫ್ರಿಕಾದಿಂದ ಹಿಂತಿರುಗಿದ ಇಟಲಿ ಪಡೆಗಳು ಅಲ್ಲಿಂದ ಕಮ್ಯೂನಿಸ್ಟ್ ಸಾಹಿತ್ಯವನ್ನು ತಂದು ಸೈನಿಕರಲ್ಲಿ ಹಂಚಿದರೆಂದು ಸುದ್ದಿ.

ಇಟಲಿ ರಕ್ಷಣೆಗೆ ಹೆಚ್ಚು ವಿಮಾನಗಳು ಬೇಕು

ಇಟಲಿ ವಿಮಾನಬಲವೆಲ್ಲ ಬಹುಮಟ್ಟಿಗೆ ನಾಶವಾಗಿರುವುದರಿಂದ ಹೆಚ್ಚು ಜರ್ಮನ್ ವಿಮಾನ ಬಲವನ್ನು ಒದಗಿಸಬೇಕೆಂದು ಇಟಲಿಯು ಕೇಳಿದೆ ಸಾರ್ಡಿನಿಯಾ ಮತ್ತು ಸಿಸಿಲಿಗಳಲ್ಲಿರುವ ವಿಮಾನ ನಿಲ್ದಾಣಗಳು ಧ್ವಂಸವಾಗಿವೆ. ಅಲ್ಲಿದ್ದ ನೂರಾರು ವಿಮಾನಗಳು ನಾಶವಾದವು. ಇಟಲಿಗೆ ಇನ್ನುಮುಂದೆ ವಿಮಾನ ಸಹಾಯ ನೀಡಲು ಜರ್ಮನಿ ತಿರಸ್ಕರಿಸಿದೆಯೆಂದು ಒಂದು ಸುದ್ದಿ ಬಂದಿದೆ. ಪೂರ್ವ ರಂಗಕ್ಕೆ ಹೆಚ್ಚು ಇಟಲಿ ಪಡೆಗಳನ್ನು ಕಳಿಸಲು ಇಟಲಿಯು ತಿರಸ್ಕರಿಸಿದ್ದು ಮೊದಲ ಕಾರಣ ಪೆಟ್ರೋಲನ್ನು ಆದಷ್ಟು ಉಳಿಸುವುದು ಎರಡನೇ ಕಾರಣ. ಜರ್ಮನಿಗೆ ಸಾಕಾದಷ್ಟು ವಿಮಾನ ಬಲವಿದೆಯೋ ಎಂದು ಕೂಡ ಇಟಲಿಯ ಹಲವು ಕ್ಷೇತ್ರಗಳಲ್ಲಿ ಅನುಮಾನಪಡುವಂತಾಗಿದೆ

ಇಟಲಿಯಲ್ಲಿ ರಕ್ಷಣಾ ಸಿದ್ಧತೆ !

ಸಿಸಿಲಿ ಮತ್ತು ಸಾರ್ಡಿನಿಯಾಗಳಿಗೆ ತೆರಳಲು ಅಪಾರ ಮಂದಿ ಇಟಲಿ ಯೋಧರು ಇಟಲಿಯ ಬಂದರುಗಳಲ್ಲಿ ನೆರೆದಿದ್ದಾರೆಂದು ಮೆಡ್ರಿಡ್‌ನಲ್ಲಿರುವ ಸುದ್ದಿಗಾರರೊಬ್ಬರು ತಿಳಿಸುತ್ತಾರೆ ನಿನ್ನೆರಾತ್ರಿ ಸಂಗ್ರಾಮಸಮಿತಿಯು ಮುಸೂಲಿನಿಯ ಅಧ್ಯಕ್ಷತೆಯಲ್ಲಿ ಸಭೆಸೇರಿದ ಮೇಲೆ ಈ ರೀತಿ ಸೇನೆಯ ವರ್ಗಾವರ್ಗಿ ಆರಂಭವಾಯಿತು ಇಟಲಿಯ ದ್ವೀಪಗಳನ್ನೆಲ್ಲ ಕಟ್ಟಕಡೇವರೆಗೆ ಸಂರಕ್ಷಿಸಬೇಕೆಂಬ ತೀರ್ಮಾನಕ್ಕೆ ಬರಲಾಗಿದೆಯೆಂದು ವರ್ತಮಾನ ಸಿಸಿಲಿಯನ್ನಾಗಲಿ ಸಾರ್ಡಿನಿಯಾವನ್ನಾಗಲಿ ಮಿತ್ರಸೇನೆಗಳು ಹಿಡಿದರೆ ಇಟಲಿಯ ಮೂಲ ಭೂಮಿಗೆ ಉಗ್ರ ವಿಪತ್ತು ಬರುವುದೆಂದು ಮುಸೂಲಿನಿಗೆ ಅಧಿಕಾರಿಗಳು ಎಚ್ಚರಿಸಿದರೆಂದು ಗೊತ್ತಾಗಿದೆ. ಆದ್ದರಿಂದ ಸಿಸಿಲಿ ಮತ್ತು ಸಾರ್ಡಿನಿಯಾಗಳಲ್ಲಿ ತಕ್ಕ ರಕ್ಷಣೆ ಸಿದ್ಧತೆ ಮಾಡಿಕೊಳ್ಳುವಂತೆ ಮುಸೂಲಿನಿ ಆಜ್ಞೆಮಾಡಿದ್ದಾರೆ. ಮಿತ್ರದೇಶಗಳು ಇಟಲಿಗೆ ಮುತ್ತಿಗೆ ಹಾಕುವ ಭೀತಿ ಅಧಿಕವಾಗುತ್ತಿರುವುದರಿಂದ ಜರ್ಮನಿಯಲ್ಲಿರುವ ಇಟಲಿ ಕೂಲಿಗಾರರನ್ನೆಲ್ಲ ಹಿಂದಕ್ಕೆ ಕರೆಸಲಾಗುತ್ತಿದೆ

ಜನರು ಹೆದರಿ ಓಡುತ್ತಿದ್ದಾರೆ

ದಕ್ಷಿಣ ಇಟಲಿಯಿಂದ ಮುಖ್ಯವಾಗಿ ಸಮುದ್ರತೀರದಲ್ಲಿರುವ ಸಾರ್ಡಿನಿಯಾ ಸಿಸಿಲಿ ಮತ್ತು ಕಲಬ್ರಿಯಾಗಳಿಂದ ಇಟಲಿ ಸಿವಿಲಿಯನರು ಉತ್ತರಕ್ಕೆ ಓಡುತ್ತಿದ್ದಾರೆ ಸಾವಿರಾರು ಮಂದಿ ಈಗಾಗಲೇ ರೋಮಿಗೂ ಕೇಂದ್ರ ಇಟಲಿಗೂ ಬಂದಿದ್ದಾರೆ. ಅಲ್ಲಿ ಅವರಿಗೆ ಸಾಕಾದಷ್ಟು ಆಹಾರವಿಲ್ಲದಿರುವುದರಿಂದ ಉತ್ತರ ಇಟಲಿಗೆ ತೆರಳುವರೆಂದು ಹೇಳಲಾಗಿದೆ.

ಸಂಗ್ರಾಮವು ದೀರ್ಘಕಾಲ ಎಳೆಯಬಹುದು

ಸಂಗ್ರಾಮವು ದೀರ್ಘಕಾಲ ಎಳೆಯುವುದೆಂದು ನಿರೀಕ್ಷಿಸದೆ ಇರಲು ಯಾವ ಕಾರಣವೂ ಇಲ್ಲವೆಂಬುದಾಗಿ ಶ್ರೀ ಚರ್ಚಿಲ್ಲರು ಅಮೇರಿಕದಲ್ಲಿರುವ ಬ್ರಿಟಿಷ್ ರಾಯಭಾರ ಕಚೇರಿ ನೌಕರರ ಸಭೆಯಲ್ಲಿ ತಿಳಿಸಿದರು ಕಳೆದ ಸಂಗ್ರಾಮದಲ್ಲಿ ಜರ್ಮನ್ ಸೇನೆ ಸೋತುಹೋದಂತೆ ಈಗಲೂ ಸೋಲಬಹುದೆಂದೂ, ಆದರೂ ಜರ್ಮನಿಯು ಏಕಾಏಕಿ ಬೀಳುವ ಸಂಭವವಿಲ್ಲವೆಂದೂ ತಿಳಿಸಿದರು. ಟೋಬ್ರುಕ್ ಮತ್ತು ಸಿಂಗಪುರಗಳಲ್ಲಿ ಆದ ಅವಮಾನಕಾರಕವಾದ ಸೋಲನ್ನು ಸರಿಪಡಿಸಲು ಬ್ರಿಟಿಷ್ ಸೇನೆ ಈಗ ಶಕ್ತವಾಗಿದೆಯೆಂದೂ, ಈಗ ಎಲ್ಲ ತೃಪ್ತಿಕರವಾಗಿ ನಡೆಯುತ್ತಿದೆಯೆಂದೂ ತಿಳಿಸಿದರು

ಲೆನಿಗ್ರಾಡಿನಲ್ಲಿ ಭಾರಿ ಮುತ್ತಿಗೆ

ಲೆನಿನ್‌ಗ್ರಾಡಿನ ಮೇಲೆ ಭಾರಿ ಮುತ್ತಿಗೆ ಹಾಕುವ ಹಂಚಿಕೆ ಜರ್ಮನರು ನಡೆಸುತ್ತಿದ್ದಾರೆಂದೂ ಆ ಪಟ್ಟಣವನ್ನು ಕೈವಶಮಾಡಿಕೊಳ್ಳಲು ಆಗದಿದ್ದಲ್ಲಿ ಅದನ್ನು ಸಂಪೂರ್ಣವಾಗಿ ನಾಶಮಾಡಲಾಗುವುದೆಂದೂ ಹೇಳಲಾಗಿದೆ ಜರ್ಮನಿಯ ವಿಮಾನಗಳು ಮತ್ತು ಫಿರಂಗಿದಳಗಳು ಈ ಕೆಲಸಕ್ಕೆ ಆಗಲೇ ಪ್ರಾರಂಭಿಸಿವೆಯೆಂದು ವರದಿಯಾಗಿದೆ

ಟ್ಯುನೀಸಿಯಾದಲ್ಲಿ ದಸ್ತಗಿರಿಗಳು

ಟ್ಯುನೀಸಿಯಾದಲ್ಲಿ ದೇಶದ್ರೋಹಿಗಳನ್ನೂ ಮತ್ತು ಶತ್ರುಗಳ ಏಜಂಟರನ್ನೂ ಶೋಧಿಸುತ್ತಿರಲಾಗಿದೆ ಇದುವರೆಗೆ ೧೦೦೦ ಕ್ಕಿಂತ ಹೆಚ್ಚುಮಂದಿಯನ್ನ ಬಂಧಿಸಲಾಗಿದೆ

ಯೂರೋಪಿನಲ್ಲಿ ದ್ವಿತೀಯರಂಗ ಸ್ಥಾಪನೆಯ ವಿಮರ್ಶೆ

ವಾಷಿಂಗ್‌ಟನ್ನಿನಲ್ಲಿ ನಡೆಯುತ್ತಿರುವ ಮಾತುಕತೆಗಳು ಕಟ್ಟಕಡೇ ಘಟ್ಟವನ್ನು ಮುಟ್ಟಿವೆ ಪ್ರತಿಯೊಂದು ರಂಗದಲ್ಲಿಯೂ ಆಕ್ಸಿಸ್ ಸೇನೆಗಳಿಗೆ ಉಗ್ರ ಪ್ರಹಾರ ಮಾಡುವ ವ್ಯವಸ್ಥೆ ಕುರಿತು ಮಿ|| ಚರ್ಚಿಲ್ಲರೂ ರೂಜ್‌ವೆಲ್ಟರೂ ಮಾತನಾಡಿದರು ಇದರ ಫಲವಾಗಿ ಶತ್ರುಗಳ ಮೇಲೆ ಪ್ರಚಂಡ ಕದನವಾರಂಭವಾಗುವುದು ಖಂಡಿತ ಹಿಟ್ಲರನನ್ನು ಮೊದಲು ಸೋಲಿಸಬೇಕೆಂಬ ನೀತಿಯನ್ನೇ ಅಲ್ಲಿನ ಮಾತುಕತೆಗಳಲ್ಲಿ ಬಹುಮಟ್ಟಿಗೆ ಪ್ರತಿಪಾದಿಸಲಾಗುತ್ತಿದೆ ನಾಜಿಗಳನ್ನು ಮಟ್ಟಹಾಕುವ ಕಾರ್ಯದಲ್ಲಿ ರಷ್ಯನರೊಡನೆ ಸಹಕರಿಸುವುದು ಅತ್ಯಗತ್ಯವಾಗಿರುವುದರಿಂದ ಸದ್ಯದಲ್ಲಿಯೇ ಯೂರೋಪು ಮುಖ್ಯ ರಣರಂಗವಾಗುವುದರಲ್ಲಿ ಸಂದೇಹವಿಲ್ಲ ಇತ್ತ ಮೆಡಿಟರೇನಿಯನ್ ದ್ವೀಪಗಳ ಮೇಲೆ ಮುತ್ತಿಗೆಯನ್ನು ಜೋರುಮಾಡಿ, ಅತ್ತ ನಾರ್ವೆಗೆ ಮಿತ್ರಸೇನೆಗಳು ಬಂದಿಳಿಯುವುವೆಂದು ನಿರೀಕ್ಷಿಸಲಾಗಿದೆ ನಾರ್ವೆಗೆ ಮುತ್ತಿಗೆ ಹಾಕಿದರೆ ಹಿಟ್ಲರನ ಬಳಿ ಕೇವಲ ೮ ಡಿವಿಜನ್ ಸೇನೆ ಇರುವುದರಿಂದ ಆತನು ಶತ್ರುಗಳನ್ನು ಎದುರಿಸಲು ಅಶಕ್ತನಾಗಬಹುದೆಂದು ನಿರೀಕ್ಷಿಸಲಾಗಿದೆ

ಹೊಸ ಒಂದಾಣೆ ನಾಣ್ಯ

ಇಂಡಿಯಾ ಸರಕಾರದವರು ಹೊಸಬಗೆಯ ಒಂದಾಣೆ ನಾಣ್ಯವನ್ನು ಚಲಾವಣೆಗೆ ತಂದಿದ್ದಾರೆ. ಇದು ಹಿತ್ತಾಳೆಯದು ದುಂಡಗಿದೆಯೆಂದು ಪ್ರಕಟವಾಗಿದೆ

ಸ್ವೀಕಾರ

ಸಾಸಲು ಸಾಹುಕಾರ ಶ್ರೀಮಾನ್ ಶಿವಣ್ಣಶೆಟ್ಟರ ಪುತ್ರ ಮ|| ರಾ|| ಮರುಳಪ್ಪನವರ ಪುತ್ರಿ ಚಿ|| ಸೌ|| ಸುಶೀಲಮ್ಮನಿಗೂ, ಚಿಟ್ಟಕೆರೆ ಮ|| ಎಂ ಶಿವಲಿಂಗಪ್ಪನವರ ಪುತ್ರ ಚಿ|| ಮರುಳಸಿದ್ಧಪ್ಪನಿಗೂ ನೆರವೇರಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೫ ರೂಪಾಯಿಗಳು ವೇ|| ಗುರುಬಸವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತೆ

ಬೆಂಗಳೂರು ಸಿಟಿಯಲ್ಲಿರುವ ನೆಲಮಂಗಲದ ಮ|| ರಾ|| ಸಿದ್ದಲಿಂಗಪ್ಪನವರ ಪುತ್ರಿ ಚಿ|| ಸೌ|| ಭಾಗೀರತಮ್ಮನನ್ನು ಮಶೂರಿನಲ್ಲಿರುವ ಬೇಲಿಕೆ ಬಸಲಿಂಗಪ್ಪನವರ ಪುತ್ರ ಚಿ|| ಸ|| ಬಿ ಬಸವರಾಜಪ್ಪನಿಗೆ ಕೊಟ್ಟು ನಡೆಸಿದ ವಿವಾಹ ಸಮಯದಲ್ಲಿ ವಧೂವರರ ಕಡೆಯಿಂದ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ ೨ ರೂ. ಗಳು ಹೊಸೂರಿನಲ್ಲಿರುವ ಎಸ್ ಮುದ್ದುಬಾಲಶೆಟ್ರ ಪುತ್ರ ಚಿ|| ಸ|| ಎಂ. ಶಿವಶಂಕರಯ್ಯನಿಗೆ ಬೆಂಗಳೂರು ಸಿಟಿಯಲ್ಲಿರುವ ಮ|| ರಾ|| ಮುನಿಚನ್ನಪ್ಪನವರ ಪುತ್ರಿ ಚಿ|| ಸೌ|| ಪುಟ್ಟಮ್ಮನನ್ನು ಕೊಟ್ಟು ನಡೆಸಿದ ವಿವಾಹ ಸಮಯದಲ್ಲಿ ಸಮರ್ಪಿಸಲ್ಪಟ್ಟ ೨ ರೂ ಒಟ್ಟು ೪ ರೂ ಗಳು ಮೈಸೂರು ಊದುಬತ್ತಿ ಫ್ಯಾಕ್ಟರಿಯ ಮ|| ರಾ|| ಯಜಮಾನ್ ಕೆಂಚಪ್ಪನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಕರ್ಜಗಿ ತಾ|| ಕಲಕೋಟಿ ಗ್ರಾಮದ ಲಕ್ಷ್ಮೇಶ್ವರ ಸೀಲಪ್ಪನವರ ಮಕ್ಕಳು ಮ|| ರಾ|| ಲಿಂಗಪ್ಪನವರ ಗೃಹದಲ್ಲಿ ಶ್ರೀಹಾಲಮಳೀ ಸ್ವಾಮಿಗಳ ನೇತೃತ್ವದಲ್ಲಿ ನೆರವೇರಿದ ಶ್ರೀ ರುದ್ರಾಭಿಷೇಕ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ ೧ ರೂಪಾಯಿಯು ಶ್ರೀ ಹಾಲಮಳೆಸ್ವಾಮಿಗಳ ದ್ವಾರಾ ತಲ್ಪಿರುತ್ತದೆ

ಗುಡಗೇರಿ ತಾಲೂಕು ಹರಲಾಪುರ ಗ್ರಾಮದ ಹಿರಿಯಮಠದಲ್ಲಿ ಗ್ರಾಮದ ಸರ್ವ ಭಕ್ತರೂ ಕೂಡಿ ನಡೆಸಿದ ಶ್ರೀ ಜಗದ್ಗುರು ಏಕೋರಾಮಾರಾಧ್ಯ ಮತ್ತು ಜಗದ್ಗುರು ದಾರುಕಾಚಾರ್ಯರ ಜಯಂತೀ ಮಹೋತ್ಸವ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ೧ ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಶಿವಮೊಗ್ಗ ಡಿ|| ಚಳ್ಳಕೆರೆ ತಾ|| ಪರಶುರಾಮಪುರದ ಮಠದ ವೇ|| ಚನ್ನವೀರಪ್ಪಯ್ಯನವರ ಪುತ್ರ ಚಿ|| ಸ|| ಗಂಗಾಧರಶರ್ಮಾ ಇವರಿಗೆ ಹುಬ್ಬಳ್ಳಿ ತಾ|| ಪಾಲಿಕೊಪ್ಪ ಬೃಹನ್ಮಠದ ವೇ|| ಗುರುಸಿದ್ಧಪ್ಪಯ್ಯನವರ ಪುತ್ರಿ ಚಿ|| ಸೌ|| ಶಿವಬಾಯಿಯನ್ನು ಕೊಟ್ಟು ನಡೆದ ವಿವಾಹ ಮಹೋತ್ಸವ ಸಮಯದಲ್ಲಿ ಪ್ರಭಾಪೋಷಣೆಗಾಗಿ ಸಮರ್ಪಿಸಲ್ಪಟ್ಟ ೧ ರೂಪಾಯಿಯು ವೇ|| ಪಂ|| ಹರೀಶ್ವರ ಶಾಸ್ತ್ರಿಗಳ ದ್ವಾರಾ ತಲ್ಪಿರುತ್ತದೆ

ನವಲಗುಂದದ ಸಬ್-ರಿಜಿಸ್ಟ್ರಾರ್ ಆಫೀಸ್ ಶೀವನ್ ಲಕ್ಷ್ಮಣ ಕಾಶಪ್ಪ ತಳವಾರ ಇವರ ಇಷ್ಟಾರ್ಥಗಳು ಶ್ರೀ ಜಗದಾಚಾರ್ಯರ ಕೃಪೆಯಿಂದ ಪೂರ್ಣವಾದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ವೇ|| ವೀರಭದ್ರಯ್ಯ ಹಿರೇಮಠ ಹೊಂಬಳ ಇವರ ದ್ವಾರಾ ತಲ್ಪಿರುತ್ತದೆ.

ತಿಪ್ಟೂರು ನಿವಾಸಿಗಳಾದ ಅಥಣಿ ಮ|| ರಾ|| ಮರುಳಸಿದ್ದಪ್ಪ ಚನ್ನಬಸಪ್ಪ ಸಿಂದಿಗಿ ಇವರ ಪುತ್ರ ಚಿ|| ಸೂರ್ಯಪ್ರಭುವಿನ ಚೌಲೋಪನಯನ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂ ಯು ವೇ|| ಆರ್. ಎಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುತ್ತೇವೆ.

[೧ನೆಯ ಪುಟದಿಂದ ಮುಂದುವರಿದುದು]

ಮೃದುವಾದ ಮಾತು ಮುಕುಟಕ್ಕಿಂತಲೂ ಮಿಗಿಲಾದುದಾಗಿದೆ” ಎಂದು ಅನುಭವಿಗಳು ಹೇಳಿರುವರು ಅದ ಕಾರಣ ಪ್ರಿಯವಚನವನ್ನಾಡುವುದನ್ನು ಸರ್ವದಾ ಅಭ್ಯಾಸಮಾಡಿದರೆ ಆಗ ಧರ್ಮವೂ, ನ್ಯಾಯವೂ ನಮ್ಮ ಹೃದಯ ಪದ್ಮದಲ್ಲಿ ತಾವಾಗಿ ನೆಲೆಸುವುದರಲ್ಲಿ ಸಂಶಯವುಂಟೆ! ಈ ಸಾಧನಗಳು ಎಲ್ಲರಿಗೂ ಸಾಧ್ಯವಿರುವುದಿಲ್ಲೆಂಬುದು ನಿಜವು ಆದರೂ ಮಿತ ಭಾಷಣವು ಎಲ್ಲರ ಕೈಯಲ್ಲಿಯೂ ಉಂಟು ಮನುಷ್ಯನ ಆಚರಣೆಯು ಅವನ ಮಾತಿನಿಂದಲೇ ತಿಳಿಯುತ್ತದೆ ನಾಲಿಗೆಯನ್ನು ಬಿಗಿಹಿಡಿಯುವದಗದ ಮೂಲಕ ಎಷ್ಟೋ ವಿಚಾರಶೂನ್ಯರಾದ ಜನರು ಪರಸ್ಪರರಲ್ಲಿ ವೈಷಮ್ಯವನ್ನು ಹುಟ್ಟಿಸಿ ಬಹು ಅನರ್ಥಗಳನ್ನುಂಟುಮಾಡುವರು ಆದ ಪ್ರಯುಕ್ತ ಮಾತಾಡುವುದರಲ್ಲಿಯೂ ದುರಾಚಾರಗಳನ್ನು ಮಾಡದಿರುವುದರಲ್ಲಿಯೂ ಮನೋನಿಗ್ರಹವು ಅವಶ್ಯವಾಗಿಬೇಕು ಶರೀರದ ಬೇರೆ ಬೇರೆ ಅವಯವಗಳು ಶರೀರ ಸುಖಕ್ಕಾಗಿ ಕೆಲಸ ಮಾಡಿದ ಹೊರತು ಶರೀರವು ಆರೋಗ್ಯವುಳ್ಳದ್ದಾಗಿ ಎಂದೂ ಇರಲಾರದು ಅದರಂತೆಯೇ ಮನುಷ್ಯನು ಆತ್ಮಸಂಯಮನವನ್ನು ಸಾಧಿಸಿದ ವಿನಹ ಸುಖಿಯಾಗನು

ಸಾರಾಂಶ—ಮನಸ್ಸನ್ನು ಸ್ವಾಧೀನದಲ್ಲಿಟ್ಟುಕೊಂಡು ತಮ್ಮ ತಮ್ಮ ಯೋಗ್ಯತಾನುಸಾರವಾಗಿ ಇರುವ ಜನರ ಸಂಸಾರವು ಬಹುಕಾಲ ಬಾಳುವುದು ಆದ್ದರಿಂದ ಪ್ರತಿಯೊಬ್ಬರೂ ಸರ್ವ ಪ್ರಯತ್ನದಿಂದ ಆತ್ಮಸಂಯಮಿಯಾಗುವುದಕ್ಕೆ ಯತ್ನಿಸತಕ್ಕದ್ದು

ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಮತ್ತು ಶ್ರೀ ದಾರುಕಾಚಾರ್ಯರ ಜಯಂತೀ ಮಹೋತ್ಸವ ಹರಲಾಪುರ.

ಶ್ರೀಮದ್ವೀರಶೈವ ಮಹಾಮತಸ್ಥಾಪನಾಚಾರ್ಯರಾದ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಜಯಂತೀ ಮಹೋತ್ಸವವನ್ನು ಗುಡಗೇರಿ ತಾಲೂಕು ಪೈಕಿ ಹರಲಾಪುರ ಗ್ರಾಮದ ಸಕಲ ಮತೀಯರೂ ಪ್ರತಿವರ್ಷ ಪದ್ಧತಿ ಪ್ರಕಾರ ಈ ವರ್ಷವೂ ಅಂದರ ಸ್ವಭಾನು ಸಂವತ್ಸರ ವೈಶಾಖ ಶುದ್ಧ ಅಕ್ಷಯ ತೃತೀಯಾ ದಿವಸ ಮಹಾ ವೈಭವದಿಂದ ಜರುಗಿಸಿದರು ಸರ್ವ ಮತದವರೂ ತಮ್ಮ ತಮ್ಮ ಮನೆಗಳನ್ನು ತಳಿರುತೋರಣಗಳಿಂದಲಂಕರಿಸಿ ದೊಡ್ಡ ಹಬ್ಬದಂತೆ ವರ್ತಿಸಿದರು ಹಿರಿಯಮಠದಲ್ಲಿ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಲಿಂಗೋದ್ಭವ ಮೂರ್ತಿಗೆ ಶಾಸ್ತ್ರೋಕ್ತ ಪೂಜೆಯಾಗಿ ಆ ಭಗವತ್ಪಾದಂ ತೀರ್ಥಪ್ರಸಾದಗಳನ್ನು ಪಡೆದು ಸರ್ವರೂ ಧನ್ಯರಾದರು ಆಮೇಲೆ ಶ್ರೀ ಜಗದ್ಗುರು ಏಕೋರಾಮಾರಾಧ್ಯರ ಲಿಂಗೋದ್ಭವ ಚಿತ್ರಪಟವನ್ನು ಅಂದವಾಗಿ ಸಿಂಗರಿಸಿದ ಪುಷ್ಪ ಪಲ್ಲಕ್ಕಿಯಲ್ಲಿಟ್ಟು ಡೊಳ್ಳು ಭಜನೆ ಮೊದಲಾದವುಗಳಿಂದ ಸರ್ವೋತ್ಸವವಾಗಿ ಉತ್ಸವವು ಮಠದಿಂದ ಸಾಯಂಕಾಲ ೭ ಘಂಟೆಗೆ ಹೊರಟಿತು ಈ ಉತ್ಸವದಲ್ಲಿ ಸಕಲ ಮತೀಯರೂ ಕಾಯಿಕರ್ಪೂರ ಫಲಗಳನ್ನರ್ಪಿಸಿ ಪ್ರಸಾದವನ್ನು ಪಡೆಯುತ್ತಿದ್ದರು ಅನೇಕ ಜನ ಸುವಾಸಿನಿಯರು ಆರತಿಗಳನ್ನು ಹಿಡಿದುಕೊಂಡು ಶ್ರೀ ಜಗದಾಚಾರ್ಯರ ಮಂಗಲಗೀತೆಗಳನ್ನು ಮಂಜುಳಸ್ವರದಿಂದ ಹಾಡುತ್ತ ಹೊರಟಿದ್ದರು ಈ ಪ್ರಕಾರ ಉತ್ಸವವುಗ್ರಾಮದ ಪ್ರಮುಖ ಬೀದಿಗಳಲ್ಲ ಹಾಯ್ದು ಶ್ರೀ ಶಂಕರಲಿಂಗ ದೇವಸ್ಥಾನಕ್ಕೆ ಬಂದು ಪುನಃ ರಾತ್ರಿ ೮ ಘಂಟೆಗೆ ಹಿರಿಯ ಮಠಕ್ಕೆ ಬಂದು ತಲ್ಪಿತು ಮುಂಚಿತವಾಗಿಯೇ ನಿರ್ಧರಿಸಿದ್ದಂತೆ ಸಭೆಯು ಪ್ರಾರಂಭವಾಯಿತು ಮೊದಲು ವೇ॥ ಪುಟ್ಟಯ್ಯಸ್ವಾಮಿ ಹಿರಿಯಮಠ ಇವರು ಶ್ರೀ ಹಿಮವತ್ಕೇದಾರ ಪೀಠದ ಮಹತ್ವದ ಬಗ್ಗೆ ಭಾಷಣ ಮಾಡಿದನಂತರ ವೇ॥ ಪಂ॥ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ ‘ವೀರಶೈವರತ್ನ’ ವೆಂಬ ಗ್ರಂಥದಲ್ಲಿ ಮುದ್ರಿಸಿರುವ ಪ್ರಕಾರ ಶ್ರೀ ಕೇದಾರ ಸಿಂಹಾಸನಕ್ಕೆ ಪಾಂಡವರವಂಶಜನಾದ ಜನಮೇಜಯ ಮಹಾರಾಜನು ಅತ್ಯಂತ ಭಕ್ತಿಪೂರ್ವಕ ಬರೆದುಕೊಟ್ಟಿರುವ ದಾನಶಾಸನದವರ್ಣನೆಯನ್ನು ಸರ್ವರಿಗೂ ತಿಳಿಯುವಂತೆ ಚೆನ್ನಾಗಿ ಓದಿ ಹಿಂದಿನ ಮತ್ತು ಈಗಿನವರ ಭಕ್ತಿಗೂ ತುಲನೆಮಾಡಿ ಸರ್ವರನ್ನೂ ಆನಂದಪಡಿಸಿದರು ಬಳಿಕ ವೇ॥ ವೀರಬಸಯ್ಯನವರು ಹಿರಿಯಮಠ ಪಾಲೀಕೊಪ್ಪ ಇವರಿಂದ ಶ್ರೀ ಜಗದಾಚಾರ್ಯರ ಜಯಂತಿಯ ಮಹತ್ವದ ಬಗ್ಗೆ ಒಳ್ಳೇ ಸ್ಫೂರ್ತಿದಾಯಕ ಭಾಷಣವಾದ ಮೇಲೆ ನ ಮದಾರ ಯಲ್ಲಪ್ಪ ಕೊರಡೂರ ಇವರು ಸರ್ವರ ಆಭಾರ ಮನ್ನಿಸಿ ಇನ್ನಂತೆ ವೈಶಾಖ ಶುದ್ಧ ಪಂಚಮಿ ದಿನ ಶ್ರೀ ದಾರುಕಾಚಾರ್ಯರ ಜಯಂತಿಯನ್ನು ಸರ್ವರೂ ಆಚರಿಸಬೇಕಾಗಿ ಸರ್ವರಿಗೂ ಸೂಚನಾಮಾಡಿದರು ಆ ಮೇಲೆ ಸರ್ವರೂ ಹಿರಿಯ ಮಠದ ವೇ॥ ಗದಿಗಯ್ಯನವರಿಂದ ಫಲಾಶೀರ್ವಾದಗಳನ್ನು ಪಡೆದು ತಂತಮ್ಮ ಗೃಹಗಳಿಗೆ ತೆರಳಿದರು.

ಇದರಂತ ಮೊದಲೇ ಪ್ರಸಿದ್ಧಪಡಿಸಿದ ಪ್ರಕಾರ ಶ್ರೀ ದಾರುಕಾಚಾರ್ಯರ ಜಯಂತಿ ಉತ್ಸವವನ್ನು ವೈಶಾಖ ಶುದ್ಧ ಪಂಚಮಿದಿವಸ ಮಹಾ ವೈಭವದೊಡನೆ ನೆರವೇರಿಸಿದರು

ಹಿರಿಯಮಠದಲ್ಲಿ ಶ್ರೀ ದಾರುಕಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಶಾಸ್ತ್ರೋಕ್ತ ಪೂಜೆಯಾಗಿ ತೀರ್ಥ ಪ್ರಸಾದಗಳನ್ನು ಪಡೆದು ಸರ್ವರೂ ಧನ್ಯರಾದರು ನಂತರ ಶ್ರೀ ದಾರುಕಾಚಾರ್ಯರ ಲಿಂಗೋದ್ಭವ ಚಿತ್ರಪಟವನ್ನು ಸಿಂಗರಿಸಿ ಪುಷ್ಪ ತಳಿರುತೋರಣ ಬಾಳೆಕಂಬಗಳಿಂದಲಂಕರಿಸಿದ ರಥದಲ್ಲಿಟ್ಟು ೬ ಎತ್ತುಗಳನ್ನು ಹೂಡಿ ಸುಪ್ರಸಿದ್ಧ ಬಜಂತ್ರಿ ಕರಡಿ ಮಜಲು ಡೊಳ್ಳು ಭಜನೆ ಮೊದಲಾದವುಗಳಿಂದ ಉತ್ಸವವು ಹಿರಿಯ ಮಠದಿಂದ ಸರಿಯಾಗಿ ರಾತ್ರಿ ೯ ಘಂಟೆಗೆ ಹೊರಟಿತು ಈ ಉತ್ಸವದಲ್ಲಿಯೂ ಕೂಡಾ ಸಕಲ ಮತೀಯರು ಕಾಯಿಕರ್ಪೂರ ಫಲಗಳನ್ನರ್ಪಿಸಿ ಪ್ರಸಾದ ಪಡೆಯುತ್ತಿದ್ದರು ಅನೇಕ ಜನ ಸುಮಂಗಲೆಯರು ಆರತಿಗಳನ್ನು ಹಿಡಿದುಕೊಂಡು ಶ್ರೀ ಜಗದಾಚಾರ್ಯರ ಮಂಗಲ ಪದ್ಯಗಳನ್ನು ಸ್ವರಯುಕ್ತವಾಗಿ ಹಾಡುತ್ತ ಸಾಗಿದ್ದರು ಈ ಪ್ರಕಾರ ಉತ್ಸವವು ಗ್ರಾಮದ ಪ್ರಮುಖ ಬೀದಿಗಳಲ್ಲಿ ಹಾಯ್ದು ಪುನಃ ರಾತ್ರಿ ೯ ತಾಸಿಗೆ ಹಿರಿಯಮಠಕ್ಕೆ ತಲ್ಪಿತು ವಿಶೇಷ ರಾತ್ರಿಯಾದ ಮೂಲಕ ಸಭೆಯ ಕಾರ್ಯಗಳು ನಡೆಯದ ಶ್ರೀ ಜಗದಾಚಾರ್ಯರ ಮಹಾಮಂಗಳಾರತಿಯೊಡನ ಉತ್ಸವದ ಕಾರ್ಯಕ್ರಮಗಳನ್ನು ಮುಗಿಸಿ ಸದರಿ ಹಿರಿಯಮಠದ ವೇ॥ ಗದಿಗಯ್ಯನವರಿಂದ ಫಲಾಶೀರ್ವಾದಗಳನ್ನು ಪಡೆದು ಸರ್ವರೂ ತಂತಮ್ಮ ಮನೆಗಳಿಗೆ ತೆರಳಿದರು ಈ ಆಚಾರ್ಯರ ಮಹೋತ್ಸವಗಳಲ್ಲಿ ಹೆಚ್ಚಾಗಿ ತರುಣರೇ ಭಾಗವಹಿಸಿದ್ದರು ಸದಾ ಧರ್ಮ ಜಾಗ್ರತರಾಗಿ ಹೆಣಗಾಡುತ್ತಿರುವ ಈ ಗ್ರಾಮದಲ್ಲಿಯ ಸಕಲರಿಗೂ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಬೇಡುತ್ತೇನೆ

ಓರ್ವ ಗುರು ಭಕ್ತ

ರುದ್ರಾಭಿಷೇಕ ಮಹೋತ್ಸವ ಕಲುಕೋಟಿ

ದಾರವಾಡ ಜಿಲ್ಲಾ [illegible] ತಾಲ್ಲೂಕ ಕಲುಕೋಟಿ ಗ್ರಾಮದ ಮ॥ ರಾ॥ ಲಕ್ಷ್ಮೇಶ್ವರ ನೀಲಪ್ಪನವರ ಮಕ್ಕಳಾದ ಮ॥ ರಾ॥ ಲಿಂಗಪ್ಪನವರು ಶ್ರಿ ಹಾಲಮಳೇಸ್ವಾಮಿ ವೃಷಭಲಿಂಗಶಿವಾಚಾರ್ಯ ಸ್ವಾಮಿಗಳವರ ಸದ್ಬೋಧೆಯ ಮೇರೆಗೆ ಶ್ರೀ ರುದ್ರಾಭಿಷೇಕವನ್ನು ತಮ್ಮ ಸ್ವಗೃಹದಲ್ಲಿ ತಾ॥ 29 4 43 ನೇ ಗುರುವಾರ ನಡೆಸುವುದಾಗಿ ಸಂಕಲ್ಪಿಸಿ ಒಂದು ದಿನ ಮುಂಚಿತವಾಗಿಯೇ ಸದರಿ ಶ್ರಿಗಳನ್ನು ತಮ್ಮ ಸ್ವಗೃಹಕ್ಕೆ ಬಿಜಯಂಗೈಸಿಕೊಂಡವರಾಗಿ ಸ್ವಾಮಿಗಳ ಆಜ್ಞಾಧಾರಕರೂ ಶಿವಭಕ್ತಿಧುರೀಣರೂ ಗ್ರಾಮದ ಮುರಾಧಿಕಾರಿಗಳೂ ಆದ ವೇದಮೂರ್ತಿ ಶ್ರಿ ವೀರಭದ್ರ ಶಾಸ್ತ್ರಿಗಳನ್ನು ಜಗದಾಚಾರ್ಯರ ಭಜನಾಸಂಘದವರೊಡನೆ ಕರೆಸಿಕೊಂಡರು, ಪೂಜಾ ಮಂಟಪವನ್ನು ನೋಡುವವರ ಮನ ಸಂದಗೊಳಿಸುವಂತೆ ರಚಿಸಿದ್ದರು ಗೃಹದ ಎಲ್ಲಾ ಭಾಗಗಳೂ ತಳಿರುತೋರಣ ರಂಭಾಸ್ತಂಭಗಳಿಂದಲಂಕರಿಸಲ್ಪಟ್ಟಿತ್ತು ಇವರು ಇಂಥಾ ಕಠಿಣಕಾಲದಲ್ಲಿಯೂ ಕೂಡತಮ್ಮ ಯಾವತ್ತೂ ಆಪ್ತಮಿತ್ರ ಬಂಧುವರ್ಗದವರನ್ನು ಈ ಮಂಗಲಕಾರ್ಯಕ್ಕಾಗಿ ಕರೆಯಿಸಿಕೊಂಡಿದ್ದರು. ಕಲುಕೋಟಿ ಗ್ರಾಮದ ಚಾತುರ್ವರ್ಣದವರಿಗೂ ಆಮಂತ್ರಣವನ್ನು ಕೊಟ್ಟಿದ್ದರಿಂದ ಜನಸಂದಣಿಯು ವಿಶೇಷವಾಗಿ ಸೇರಿ ಆ ಮನೆಗೂ ಓಣಿಗೂ ಒಂದು ತರದ ಶೋಭೆಯುಂಟಾಗಿತ್ತು ಗುರುವಾರ ಸೂರ್ಯೋದಯ ಕಾಲಕ್ಕೆ ಸರಿಯಾಗಿ ಸಹಸ್ರರೂ ಮಂಗಲವಾದ್ಯ ಭಜನಾ ಸಂಘದೊಡನೆ ವರದಾನದಿಯ ಮಧ್ಯದೋಳ್ಪರಿಶೋಭಿಸುವ ಶ್ರಿ ವರದೇಶ್ವರ ಲಿಂಗಮೂರ್ತಿಯ ಮಹಾಭಿಷೇಕಕ್ಕಾಗಿ ಹೊರಟರು ಈ ಜನಸಂದಣಿಯ ಮಧ್ಯದಲ್ಲಿ ಶ್ರಿ ವೇ॥ ವೀರಭದ್ರಶಾಸ್ತ್ರಿಗಳೊಡನೆ ಶ್ರಿ ಹಾಲಮಳೇಸ್ವಾಮಿಗಳು ಜಟಾಮುಕುಟಧಾರಣದಿಂದಲೂ ಅಂಗಾಂಗಗಳಲ್ಲಿ ಭಸ್ಮರುದ್ರಾಕ್ಷ ಮಾಲಾದಿಗಳಿಂದಲೂ ಅಲಂಕೃತರಾಗಿ ಹಸನ್ಮುಖಿಗಳಾಗಿ ಹೊರಟಿದ್ದರು ಈ ರೀತಿ ಹೊರಟ ಮಹೋತ್ಸವವು ಸಮಸ್ತ ಭಕ್ತಮಹೇಶ್ವರರೊಡನೆ ನದಿಯ ಮಧ್ಯದಲ್ಲಿರುವ ಶ್ರಿ ಶಿವಲಿಂಗ ಮೂರ್ತಿಯ ಪುಣ್ಯಜಲಾಶಯವಂ ಸೇರಿ ವಿಧ್ಯುಕ್ತ ಪ್ರಕಾರ ಪೂಜಾದಿಗಳು ನೆರವೇರಿದನಂತರ ಮಂಗಳಾರತಿಯಂಮಾಡಿ ಅಲ್ಲಿಂದ ಲಿಂಗಪ್ಪನವರ ಗೃಹಕ್ಕೆ ಹಿಂತಿರುಗಿಬಂದು ರಚಿಸಲ್ಪಟ್ಟಿದ್ದ ಮಂಟಪದಲ್ಲಿ ಸಿಂಹಾಸನಾರೋಹಣವನ್ನು ಶ್ರಿಗಳು ಮಾಡಿದಮೇಲೆ ಕ್ರಮಪ್ರಕಾರ ರುದ್ರಾಭಿಷೇಕವು ಪ್ರಾರಂಭವಾಯ್ತು ಶಾಸ್ತ್ರಿಗಳ ಶುಕ್ಲ ಯಜುರ್ವೇದ ಪಠನವೂ ವೇ॥ ಗುರುಸಿದ್ಧಪ್ಪಯ್ಯ ಮಾಸ್ತರು ಇವರ ಶ್ರಿ ರುದ್ರಪಠನವು ಮನೋಹರವಾಗಿದ್ದುದರಿಂದ ಕೇಳುವವರ ಮನಾನಂದವನ್ನುಂಟುಮಾಡುತ್ತಿದ್ದವು ಈ ರೀತಿ ಪೂಜಾಸಮಾಪ್ತಿಯಾದಮೇಲೆ ಗಣತೃಪ್ತಿ ನಡೆಯಿತು ಅನಂತರ ಗ್ರಾಮದ ಯಾವತ್ತೂ ಚಾತುರ್ವರ್ಣದವರೂ ಸಾಯಂಕಾಲ ಪರ್ಯಂತರ ತಂಡೋಪತಂಡವಾಗಿ ಊಟಮಾಡಿ ಶ್ರೀ ಜಗದಾಚಾರ್ಯರ ಸ್ತುತಿಯಂ ಮಾಡುತ್ತಾ ಹೊರಟರು ಇಂಥಾ ಮಂಗಲಕಾರ್ಯಮಂಮಾಡಿ ಶ್ರಿ ಜಗದಾಚಾರ್ಯರ ಕೃಪೆಗೆ ಪಾತ್ರರಾದ ಲಕ್ಷ್ಮೇಶ್ವರದ ಲಿಂಗಪ್ಪನವರ ಕುಟುಂಬ ವರ್ಗಕ್ಕೆಲ್ಲಾ ಶ್ರಿ ಜಗದಾಚಾರ್ಯರು ಆಯುರಾರೋಗ್ಯೈಶ್ವರ್ಯಾಭಿವೃದ್ಧಿಯನ್ನೀಯಲೆಂದು ಕೋರುತ್ತೇನೆ

ಉತ್ಸವಭಾಗಿ

ವಿವಾಹಮಹೋತ್ಸವ

ಇದೇ ಸ್ವಭಾನು ಸಂವತ್ಸರ ವೈಶಾಖ ಶು॥ ೧೩ ರವಿವಾರ ತಾ॥ ೧೬ ೫ ೪೩ ಮಧ್ಯಾಹ್ನ ೪ ೧೧ ಘಂಟೆಗೆ ಸಲ್ಲುವ ಕನ್ಯಾಲಗ್ನದ ಶುಭಾಂಶದಲ್ಲಿ ಚಳ್ಳಕೆರೆ ತಾಲ್ಲೂಕು ಪರಶುರಾಮಪುರದ ಮಠದ ವೇ॥ ಚನ್ನವೀರಪ್ಪಯನವರ ಸುಪುತ್ರ ವೇ॥ ಗಂಗಾಧರಶರ್ಮಾ ಮತ್ತು ಹುಬ್ಬಳ್ಳಿ ತಾಲೂಕು ಪಾಲೀಕೊಪ್ಪ ಬೃಹನ್ಮಠದ ವೇ॥ ಗುರುಸಿದ್ಧಪ್ಪಯ್ಯನವರ ಸುಪುತ್ರಿ ಹ॥ ಕುಂ॥ ಕೊ॥ ಚಿ॥ ಸೌ॥ ಸಿವಬಾಯಿಇವರ ವಿವಾಹಮಹೋತ್ಸವವು ಪಾಲೀಕೊಪ್ಪದ ಬೃಹನ್ಮಠದಲ್ಲಿ ಬೆಂಗಳೂರು ಮಹಂತಿನ ಮಠದ ಪಟ್ಟಾಧ್ಯಕ್ಷ ಶ್ರೀ॥ ಷ॥ ಬ್ರ॥ ಗಂಗಾಧರಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ವೇ॥ ಪಂ॥ ಧರ್ಮ ಭೂಷಣ ಪರೇಶ್ವರ ಶಾಸ್ತ್ರಿಗಳ ವೈದಿಕತ್ವದೊಡನೆ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಈ ಮಂಗಲಮಹೋತ್ಸವ ಕಾರ್ಯಕ್ಕಾಗಿ ಶ್ರೀಮಠಕ್ಕೆ ಹೊಂದಿದ ಬಂಧುವರ್ಗದವರೆಲ್ಲರೂ ಸೇರಿದ್ದರು. ಬಡಬಗ್ಗರಿಗೆ ಅನ್ನಸಂತರ್ಪಣೆ ಮಾಡಲ್ಪಟ್ಟಿತು ಶ್ರೀಜಗದಾಚಾರ್ಯರ ಕೃಪಾಶೀರ್ವಾದದಿಂದ ವಿವಾಹಾಂಗಭೂತಗಳಾದ ವಿಶಿಷ್ಟ ಕಾರ್ಯಗಳು ವಿಶೇಷ ವೈಭವದೊಡನೆ ಜರುಗಿದವು ಇದೇ ಸಮಯದಲ್ಲಿ ಪ್ರಭಾಪೋಷಣೆಗಾಗಿ ೧ ರೂಪಾಯಿ ತೆಗೆಯಿಸಲ್ಪಟ್ಟಿತು

ಸೋಮನಾಥಸ್ವಾಮಿ ಪಾಲೀಕೊಪ್ಪ, ಹಿರೇಮಠ

ಧನ್ಯವಾದಗಳು

ಶ್ರೀ॥ ಬೃಹನ್ಮಠಾಧ್ಯಕ್ಷ ವೇ॥ ಪಂಡಿತ ಶ್ರೀ॥ ಕಾಶೀನಾಥಶಾಸ್ತ್ರಿಗಳವರು ರಾಣೇಬೆನ್ನೂರ ಶ್ರೀರೇವಣಸಿದ್ಧೇಶ್ವರ ವಾಚನಾಲಯಕ್ಕೆ ತಮ್ಮ ಅಮೃತ ಹಸ್ತದಿಂದ ದಾನರೂಪವಾಗಿ ೪೦ ರೂ ಕಿಮ್ಮತ್ತಿನ ೨೫ ಪುಸ್ತಕಗಳನ್ನು ಕೊಟ್ಟಿದ್ದರಿಂದ ಸಂಘದ ವತಿಯಿಂದ ಅವರಿಗೆ ಧನ್ಯವಾದಗಳನ್ನು ಅರ್ಪಿಸಿದ್ದಲ್ಲದೆ ಸರ್ವೇಶ ಶ್ರೀರೇವಣಸಿದ್ಧೇಶ್ವರನು ಅವರಿಗೆ ಇವಕ್ಕೂ ಹೆಚ್ಚಿನ ಆಯುರಾರೋಗ್ಯಭಾಗ್ಯಗಳನ್ನು ನೀಡಲೆಂದು ಬೇಡಲಾಗಿದೆ

ಚೇರಮನ್,
22 5 43 ಶ್ರೀರೇವಣಸಿದ್ಧೇಶ್ವರ ವಾಚನಾಲಯ,
ರಾಣೇಬೆನ್ನೂರು.

ಮೈಸೂರು ಸಯ್ಯಾಜೀರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್
ಪಂಚಾಚಾರನಿಯಾಮಕರ್ ಪರಿಲಸಚ್ಛಾಸ್ತ್ರಪ್ರಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೭ನೇ ಜೂನ್ ೧೯೪೩ [ಸಂಚಿಕೆ ೫

ನೂತನವಾಗಿ ಪ್ರಕಟವಾಗಿರುವ

ಗ್ರಂಥಗಳು

ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಶೈವೋಪನಿಷತ್ಸಂಗ್ರಹ	೪ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

೨೭ ನೇ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನ

ಶ್ರೀ ಅನಂತರಾಮರ ಪ್ರಾರಂಭ ಭಾಷಣ

ಶ್ರೀಮನ್ಮಹಾರಾಜರವರ ಅಪ್ಪಣೆಯ ಮೇರೆಗೆ ತಮ್ಮೆಲ್ಲರನ್ನು ಪ್ರಜಾಪ್ರತಿನಿಧಿ ಸಭೆಯ ಈ ಇಪ್ಪತ್ತೇಳನೆಯ ಬಡ್ಜೆಟ್ ಅಧಿವೇಶನಕ್ಕೆ ಅತ್ಯಂತ ಆದರದಿಂದ ಸ್ವಾಗತಿಸುವುದು ಒಂದು ದೊಡ್ಡ ಗೌರವವೆಂದು ನಾನು ಭಾವಿಸಿದ್ದೇನೆ ಸರ್ಕಾರದವರು ರಚಿಸಿರುವ ಬಡ್ಜೆಟ್ಟಿನ ಮೇರೆಗೆ ೧೯೪೩-೪೪ ನೆಯ ಸಾಲಿನ ಆಯವ್ಯಯಗಳನ್ನು ಕುರಿತು ಈ ಸಭೆಯಿಂದ ಸಮಾಲೋಚನೆ ನಡೆಯುವುದೇ, ಈ ಅಧಿವೇಶನದಲ್ಲಿ ಜರುಗುವ ಮುಖ್ಯ ಕಾರ್ಯವಾಗಿದೆ ಈ ಸಂಬಂಧವಾಗಿ ಅಧಿಕಾರಿ ವರ್ಗದಲ್ಲಿ, ಕಳೆದ ಅಧಿವೇಶನದಿಂದೀಚೆಗೆ ನಡೆದಿರುವ ಬದಲಾವಣೆಗಳನ್ನು ಕುರಿತು ಪ್ರಸ್ತಾಪಿಸಬಯಸುವೆನು ಈ ವರ್ಷ ರಾಜಮಂತ್ರಪ್ರವೀಣ ಶ್ರೀಮಾನ್ ಎ ವಿ ರಾಮನಾಥನ್‌ರವರು ವಿಶ್ರಾಂತರಾಗುವುದಕ್ಕೆ ಪೂರ್ವಭಾವಿ ರಜ ಪಡೆದರು ಅವರು ನಾನಾ ಜವಾಬ್ದಾರಿ ಹುದ್ದೆಗಳಲ್ಲಿದ್ದು ೩೪ ವರ್ಷಗಳಿಗಿಂತಲೂ ಹೆಚ್ಚುಕಾಲ ಸಂಸ್ಥಾನಕ್ಕೆ ಸೇವೆಯನ್ನು ಸಲ್ಲಿಸಿದ್ದಾರೆ ಭರತಪುರ ಸಂಸ್ಥಾನದ ದಿವಾನ್ ಪದವಿಯಲ್ಲಿ ಯಶಸ್ವಿಯಾಗಿ ಅವರಿಂದ ಕೆಲಸ ನಡೆಯಲೆಂದು ನಾವೆಲ್ಲರೂ ಹಾರೈಸೋಣ! ಶ್ರೀಮನ್ಮಹಾರಾಜರವರು ಕೃಪೆಮಾಡಿ ಶ್ರೀಮಾನ್ ಎಂ ಎ ಶ್ರೀನಿವಾಸನ್‌ರವರನ್ನೂ ಮತ್ತು ಶ್ರೀಮಾನ್ ಜಿ ಅಪ್ಪಾಜಿಗೌಡರನ್ನೂ ತಮ್ಮ ಸಚಿವರಾಗಿ ನೇಮಕ ಮಾಡಿದ್ದಾರೆ

೧೯೪೧ ೪೨ನೇ ಸಾಲಿನಲ್ಲಿ ಉಳಿತಾಯ ೧,೭೦೦೦೦ ರೂಪಾಯಿಗಳು ಮಾತ್ರವೇ ಆ ವರ್ಷದ ಒಟ್ಟು ಹುಟ್ಟುವಳಿ ೫,೧೬,೭೯೦೦೦ ರೂಪಾಯಿ ಒಟ್ಟು ಖರ್ಚು ೫ ೧೫,೦೯೦೦೦ ರೂಪಾಯಿ

ಕಳೆದ ವರ್ಷ

೧೯೪೨ ೪೩ನೆಯ ಸಾಲಿನಲ್ಲಿ ೫,೮೮,೪೮೦೦೦ ರೂಪಾಯಿ ಹುಟ್ಟುವಳಿ ಎಂದರೆ ನಮ್ಮ ನಿರೀಕ್ಷೆಗಿಂತಲೂ ಹೆಚ್ಚಾಗಿ ೧೧೩,೯೩೦೦೦ ಬಂದಿದೆ ಜಮೀನು ಕಂದಾಯದಲ್ಲಿ ೪,೨೫೦೦೦ ರೂಪಾಯಿ ಹೆಚ್ಚು ಬಂದಿದೆ ಧಾರಣೆ ಹೆಚ್ಚಿದುದರ ಪರಿಣಾಮವಾಗಿ ಬಾಕಿ ವಸೂಲಿ ಎಂದಿಗಿಂತಲೂ ಚೆನ್ನಾಗಿ ನಡೆದುದೇ ಅದಕ್ಕೆ ಕಾರಣ ಫಾರೆಸ್ಟ್ ಹುಟ್ಟುವಳಿ ೧೧,೦೩೦೦೦ ಹೆಚ್ಚಾಗಿ ಬಂದಿದೆ ಯುದ್ಧ ಕಾರ್ಯಗಳಿಗಾಗಿ ಇಂಡಿಯಾ ಸರ್ಕಾರದವರಿಗೆ ಚೌಬೀನೇ ಒದಗಿಸಿದುದೂ, ನಿರೀಕ್ಷೆಯಿದ್ದುದಕ್ಕಿಂತ ಹೆಚ್ಚಾಗಿ ಗಂಧದ ಎಣ್ಣೆ ಮಾರಾಟವಾದುದೂ, ಮುಖ್ಯ ಕಾರಣ ಎಕ್ಸೈಜ್ ಹುಟ್ಟುವಳಿ ೧೧.೩೨೦೦೦ ರೂಪಾಯಿ ಹೆಚ್ಚಿತು ಕಂಪೆನಿಗಳಿಂದ ವರಮಾನದ ತೆರಿಗೆ ಹೆಚ್ಚಿದುದರ ಫಲಿತಾಂಶವಾಗಿ, ೬,೦೨೦೦೦ ರೂಪಾಯಿ ಹೆಚ್ಚು ಬಂದಿದೆ ಚಿನ್ನದ ಧಾರಣೆ ಬಹಳ ಹೆಚ್ಚಿದುದರಿಂದ ಚಿನ್ನದ ಮೇಲಿನ ಸುಂಕದಿಂದ ನಾವು ನಿರೀಕ್ಷಿಸಿದ್ದುದಕ್ಕಿಂತಲೂ ಬಹಳ ಭಾರಿ ಹುಟ್ಟುವಳಿ ಬಂದಿದೆ ನಿರೀಕ್ಷಿಸಿದ್ದುದು ೨೪ ಲಕ್ಷ ರೂಪಾಯಿ ಮಾತ್ರ ಆದರೆ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಬರುವಂತೆ ಕಂಡುಬಂದಿದೆ ರೈಲ್ವೆ ಬಾಬಿನಿಂದ ಹೆಚ್ಚಾಗಿ, ೭,೧೨೦೦೦ ರೂಪಾಯಿ ಬರುವಂತೆ ತೋರುತ್ತದೆ "ರೈಲು ಚಾರ್ಜು" ಹೆಚ್ಚಿದುದೂ, ಕೆಲವು ರಿಯಾಯಿತಿ ತಪ್ಪಿಸಿದುದೂ, ಅದಕ್ಕೆ ಕಾರಣ

ಚಾಲ್ತಿ ವರ್ಷದಲ್ಲಿ ಪಟೇಲರ ಮತ್ತು ಶ್ಯಾನುಭೋಗರ ಪ್ರೋಟಿಗಳನ್ನು ಶೇಕಡ ೨೫ ರಂತೆ ಹೆಚ್ಚಿಸಿದುದರಿಂದ ಹೆಚ್ಚಾಗಿ ೨,೪೯೦೦೦ ರೂಪಾಯಿಗಳು ವೆಚ್ಚವಾದವು ೧೯೩೯ನೆಯ ಇಸವಿಯಿಂದ ನಡೆಯುತ್ತಿರುವ ಯುದ್ಧಸಂಬಂಧದ ವೆಚ್ಚ ೩೬ ೫೭೦೦೦ ರೂಪಾಯಿಗಳಾಗುತ್ತದೆ

೧೯೪೪

ಇನ್ನು, ಮುಂದಿನ ವರ್ಷದ ಬಡ್ಜೆಟ್ಟಿನ ವಿಚಾರ ಮುಂದಿನ ವರ್ಷ ೬೦೨ ೯೮೦೦೦ ರೂಪಾಯಿಗಳ ಹುಟ್ಟುವಳಿ ಬರಬಹುದೆಂದು ಅಂದಾಜು ಮಾಡಲಾಗಿದೆ. ಇದನ್ನು ಕೇಳಿ ಈ ಸಭೆಯ ಸದಸ್ಯರೆಲ್ಲರಿಗೂ ಸಂತೋಷವುಂಟಾಗುವುದೆಂದು ನಾನು ನಂಬಿದ್ದೇನೆ ಇಷ್ಟು ಭಾರಿ ಹುಟ್ಟುವಳಿ ನಮ್ಮ ಸಂಸ್ಥಾನದಲ್ಲಿ ಹಿಂದೆ ಯಾವ ವರ್ಷದಲ್ಲಿಯೂ ಬಂದಿರಲಿಲ್ಲ ಕಳೆದ ವರ್ಷದ ಹುಟ್ಟುವಳಿ ಐದು ಕೋಟಿ ರೂಪಾಯಿಗಿಂತ ಸ್ವಲ್ಪ ಹೆಚ್ಚಿತ್ತು ಅಷ್ಟು ಭಾರಿ ಹುಟ್ಟುವಳಿಯೇ ಅದಕ್ಕೆ ಹಿಂದೆ ಮತ್ತಾವ ವರ್ಷವೂ ಬಂದಿರಲಿಲ್ಲ ಮುಂದಿನ ವರ್ಷ ೫೯೬,೦೨೦೦೦ ರೂ ಗಳ ವೆಚ್ಚಗಳಿಗೆ ಹಣವನ್ನೊದಗಿಸಿದ್ದೇವೆ ಈ ವೆಚ್ಚ ಚಾಲ್ತಿ ವರ್ಷದ ವೆಚ್ಚಕ್ಕಿಂತ ಸುಮಾರು ೧೦ ಲಕ್ಷ ರೂಪಾಯಿ ಹೆಚ್ಚಾಗಿರುತ್ತದೆ ಮುಂದಿನ ವರ್ಷ ವೆಚ್ಚ ಕಳೆದು ೬,೯೬೦೦೦ ರೂಪಾಯಿಗಳ ಉಳಿತಾಯವು ಕಂಡುಬರುವಂತಿದೆ ಆದರೆ, ಮುಂದಿನ ವರ್ಷದಲ್ಲಿ ಆಡಳಿತದ ವೆಚ್ಚಗಳಿಗೆ ಎಂದು ಎಂದಿನಂತೆ ಹಣವನ್ನೊದಗಿಸಿರುವುದು ಮಾತ್ರವೇ ಅಲ್ಲದೆ, ಈಗಿನ ಪರಿಸ್ಥಿತಿಯಲ್ಲಿ ಅವಶ್ಯಕವಾಗಿ ಕೈಕೊಳ್ಳಬೇಕಾಗಿರುವ ವಿಶೇಷ ವೆಚ್ಚಗಳಿಗೂ ಮತ್ತು ದೇಶೋನ್ನತಿ ಸಾಧಕವಾದ ಅನೇಕ ಕಾರ್ಯಕಲಾಪಗಳ ಪುರೋಭಿವೃದ್ಧಿಗೂ ಭಾರಿ ಭಾರಿ ಮೊಬಲಗುಗಳನ್ನೊದಗಿಸಿಯೂ ಸಹ, ಆ ರೀತಿ ಉಳಿತಾಯ ಕಂಡುಬರುವುದಾಗಿದೆ ನಮ್ಮ ಸಂಸ್ಥಾನದ ಹುಟ್ಟುವಳಿ ೬ ಕೋಟಿ ರೂಪಾಯಿಗಳಿಗೆ ಮೀರಿ ನಿಂತಿರುವುದಕ್ಕಾಗಿ ನಾವೇನೂ ಹೆಮ್ಮೆಯಿಂದ ಹರ್ಷಿಸಬಹುದಾಗಿದೆ ಆದರೆ, ಆ ರೀತಿ ಹೆಚ್ಚು ಹುಟ್ಟುವಳಿ ಬರುವಂತಾಗಿರುವುದು ತಾತ್ಕಾಲಿಕವಾದ ಕೆಲವು ವಿಶೇಷ ಕಾರಣಗಳಿಂದಲೆ ಈ ದೃಷ್ಟಿಯಿಂದ ನೋಡಿದರೆ, ನಾವು ನಮ್ಮ ಸಾಧನ ಸಂಪತ್ತುಗಳನ್ನು ಸರಿಯಾಗಿ ರೂಢಿಸಿ, ಹಿಂದಿನ ಅನುಭವವನ್ನೂ ಗಮನದಲ್ಲಿಟ್ಟುಕೊಂಡು, ಸಂಸ್ಥಾನದ ಈಗಿನ ಮತ್ತು ಮುಂದಿನ ಅವಶ್ಯಕತೆಗಳನ್ನೂ ಅರಿತು, ಅವುಗಳನ್ನೂ ಜಾಗರೂಕತೆಯಿಂದಲೂ ವಿವೇಕದಿಂದಲೂ ಉಪಯೋಗಿಸಿ ಹೊಂದಿಸಿಕೊಂಡು ಅವುಗಳಿಂದ ಸಾಧ್ಯವಿರುವಷ್ಟು ಮಟ್ಟಿನ ಅತ್ಯುತ್ತಮ ಪ್ರಯೋಜನವನ್ನೂ ಪಡೆಯಬೇಕಾದುದು ತೀರ ಅಗತ್ಯವಾಗಿದೆ

ಎಕ್ಸೈಜು ಇಲಾಖೆ.– ಎಕ್ಸೈಜು ಬಾಬಿನಿಂದ ಬರುವ ಹುಟ್ಟುವಳಿ, ಮುಂದಿನ ಸಾಲಿನಲ್ಲಿ, ಚಾಲ್ತಿ ಸಾಲಿಗಿಂತಲೂ ಹೆಚ್ಚಾಗಬಹುದೆಂದು ತೋರುತ್ತದೆ. ಈಚಿನ ಎಕ್ಸೈಜು ಹರಾಜುಗಳಲ್ಲಿ ಬಂದಿರುವ ಗೇಣಿ ಧರ

[೩ನೆಯ ಪುಟವನ್ನು ನೋಡಿ]

ಪಂಚಾಚಾರ್ಯಪ್ರಭಾ.

೧೯೪೩ನೆಯ ಜೂನ್ ತಾ। ೭ನೆಯ ಸೋಮವಾರ

ಮಹಾಚಾರ್ಯ ಭಕ್ತಿ.

ಈ ಪ್ರಪಂಚದಲ್ಲಿ ಅನೇಕಾನೇಕಮತಗಳು ಬಹುಕಾಲದಿಂದ ವಿರಾಜಿಸುತ್ತಿದ್ದು ಒಂದೊಂದು ಮತವನ್ನು ಒಬ್ಬೊಬ್ಬ ಮಹರ್ಷಿಯರು ಸ್ಥಾಪಿಸಿರುತ್ತಾರೆ. ಆ ಮಹರ್ಷಿಯರು ನೆಲೆಗೊಳಿಸಿದ ಸಿದ್ಧಾಂತದಂತೆ ವರ್ತಿಸುವದು ಆಯಾಮತಾನುಯಾಯಿಗಳ ಪ್ರಥಮಕರ್ತವ್ಯವಾಗಿರುವದು. ಅದರಂತೆಯೇ ಪ್ರತಿಯೊಂದು ಮತದವರು ತಮ್ಮ ತಮ್ಮ ಮೂಲಾಚಾರ್ಯರು ಸ್ಥಾಪಿಸಿರುವ ಧರ್ಮಸಿದ್ಧಾಂತಗಳನ್ನು ಆಶ್ರಯಿಸಿ ನಡೆಯುತ್ತ ಅಸಾಧಾರಣವಾದ ಗುರುಭಕ್ತಿಯನ್ನೂ ತೋರಿಸುತ್ತಿದ್ದಾರೆ. ಇವರ ಈ ಪ್ರವೃತ್ತಿಗೆ ಗುರುಭಕ್ತಿಯೇ ಮೂಲಕಾರಣವಾಗಿದೆ. ಗುರುವು ಸಾಮಾನ್ಯವಾದ ವ್ಯಕ್ತಿಯಲ್ಲ. ಸಂಸಾರಸಮುದ್ರದಲ್ಲಿ ಬಿದ್ದು ತೇಲುತ್ತ ಮುಳುಗುತ್ತ ದುಃಖಪಡುತ್ತಿರುವ [illegible]ಪ್ರಾಣಿಗಳನ್ನು ತನ್ನ ಉಪದೇಶವೆಂಬ ನೌಕೆಯಿಂದ ದಾಟಿಸತಕ್ಕ ಮಹಾನಾವಿಕನಾಗಿದ್ದಾನೆ. ಇಂಥ ಅಪ್ರತಿಮಸಾಮರ್ಥ್ಯವು ಶ್ರೀಗುರುವನ್ನು ಬಿಟ್ಟು ಇನ್ನಾವಲ್ಲಿಯೂ ಇರುವುದಿಲ್ಲವೆಂದು ಘಂಟಾಘೋಷವಾಗಿ ಹೇಳಬಹುದಾಗಿದೆ. ಅದುದರಿಂದಲೇ ಶ್ರುತಿದೇವಿಯು "ನ ಗುರೋರಧಿಕಂ" "ನಾಸ್ತಿ ತತ್ತ್ವಂ ಗುರೋಃ ಪರಂ" ಇತ್ಯಾದಿ ವಾಕ್ಯಗಳಿಂದ ಗುರುವಿನ ಸರ್ವೋತ್ಕೃಷ್ಟತೆಯನ್ನು ಕೈಯೆತ್ತಿ ಸಾರಿದ್ದಾಳೆ. ಈ ಶ್ರುತಿದೇವಿಯ ಅಭಿಪ್ರಾಯದಂತೆ ಪ್ರತಿಯೊಬ್ಬ ವೈದಿಕಮತೀಯನೂ ತಮ್ಮ ತಮ್ಮ ಗುರುಗಳಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು ಸೇವಿಸಿ ತದ್ದ್ವಾರಾ ಪರಮಪುರುಷಾರ್ಥವಾದ ಮೋಕ್ಷವನ್ನು ಪಡೆಯಬೇಕಾಗಿದೆಯೆಂಬುದನ್ನು ಬೇರೆಯಾಗಿ ಹೇಳಲು ಕಾರಣವೇ ಇಲ್ಲ. ನಮ್ಮೀ ಭರತಖಂಡದಲ್ಲಿರುವ ಸಕಲ ಮತದವರು ಅನನ್ಯವಾದ ಗುರುಭಕ್ತಿಯಿಂದ ವರ್ತಿಸುತ್ತಿದ್ದರೂ, ವೀರಶೈವರು ಮಾತ್ರ ಇದಕ್ಕೆ ತಿಲಾಂಜಲಿಯನ್ನು ಕೊಡುತ್ತಿರುವವನ್ನು ನೋಡಿದರೆ ಅತ್ಯಂತ ವ್ಯಸನವೆನಿಸುತ್ತದೆ. ವೀರಶೈವರಿಗೆ ತಮ್ಮ ಮೂಲಾಚಾರ್ಯರ ಮಹಿಮೆಯೇ ಗೊತ್ತಿಲ್ಲದಾಗಿದೆ. ಆ ಮಹಾತ್ಮರ ಮಹಿಮೆಯು ಇವರಿಗೆ ಗೊತ್ತಿದ್ದರೆ ಇಂತಹ ಅಪಮಾರ್ಗದಲ್ಲಿ ಎಂದೂ ಪ್ರವೇಶಿಸುತ್ತಿರಲಿಲ್ಲವೆಂದು ಹೇಳಬಹುದಾಗಿದೆ. ವೀರಶೈವಮತಾಚಾರ್ಯರ ಪ್ರಭಾವವು ಸಾಮಾನ್ಯವಾದುದಲ್ಲ! ಅವರ ಪ್ರಭಾವವನ್ನು ಕೇಳಿದರೆ ಎಂಥ ನಾಸ್ತಿಕನೂ ಕೂಡ ಆಸ್ತಿಕನಾಗುವನೆಂಬುದರಲ್ಲಿ ಸಂದೇಹವಿಲ್ಲ. ಆ ಮಹಿಮರ ಪ್ರಭಾವವನ್ನು ಇಲ್ಲಿ ಸಂಕ್ಷೇಪವಾಗಿ ವಿವರಿಸುವುದಾಗುವುದು. ತನ್ನ ಅದ್ಭುತವಾದ ಯೋಗಸಾಮರ್ಥ್ಯದಿಂದ ಸಪ್ತಸಮುದ್ರಗಳನ್ನೇ ಒಂದು ಹನಿಯಂತೆ ಪಾನಮಾಡಿ ಲೋಕೋತ್ತರಕೀರ್ತಿಶಾಲಿಯಾಗಿರುವ ಅಗಸ್ತ್ಯಮಹರ್ಷಿಯು, ರಾಕ್ಷಸಸಮೂಹಕ್ಕೆಲ್ಲ ಒಡೆಯನಾಗಿ ಲೋಕಚಕ್ರವರ್ತಿಯೆನಿಸಿಕೊಂಡ ವಿಭೀಷಣನು, ಪ್ರಪಂಚದ ಸಮಸ್ತ ಶಕಪುರುಷರಲ್ಲಿ ಅದ್ವಿತೀಯ ಶಕಪುರುಷನೆಂದು ಭರತಖಂಡದಲ್ಲಿ ಇಂದಿನವರೆಗೆ ತನ್ನ ಮಂಗಲನಾಮದಿಂದ ಪ್ರತಿಯೊಬ್ಬರ ಮುಖಕಮಲದಲ್ಲಿ ನರ್ತನ ಮಾಡುತ್ತಿರುವ ವಿಕ್ರಮ ಮಹಾರಾಜನು, ತನ್ನ ಅದ್ಭುತವಾದ ವಿದ್ವತ್ಪ್ರಭಾವದಿಂದ ಜಗತ್ತಿನ ಜನರನ್ನೆಲ್ಲ ಬೆರಗುಮಾಡಿ ದಶದಿಕ್ಕುಗಳಲ್ಲಿ ತನ್ನ ಯಶೋದುಂದುಭಿಯ ನಾದವನ್ನು ಪಸರಿಸಿದ ಶಂಕರಾಚಾರ್ಯನು, ನಾರಕಿಗಳ ಸಮುದಾಯದಿಂದ ತುಂಬಿತುಳುಕುತ್ತಿದ್ದ ಯಮಲೋಕವನ್ನು ಲೋಕಪಾವನವಾದ ಪಂಚಾಕ್ಷರೀಮಹಾಮಂತ್ರದ ಸಾಮರ್ಥ್ಯದಿಂದ ಅಲ್ಲಿದ್ದ ಸಮಸ್ತನಾರಕಿಗಳನ್ನುದ್ಧರಿಸುವ ಮೂಲಕ ಜನಶೂನ್ಯವನ್ನಾಗಿ ಮಾಡಿ ದಿಗಂತವಿಶ್ರಾಂತಕೀರ್ತಿಶಾಲಿಯಾದ ಸಾನಂದಮಹರ್ಷಿಯು, ತನ್ನ ಶಾಪಪ್ರಭಾವದಿಂದ ಇಂದ್ರನ ಚತುರ್ದಶಸಂಪತ್ತುಗಳನ್ನು ಸಮುದ್ರದಪಾಲು ಮಾಡಿ ಸಮಸ್ತದೇವದಾನವರನ್ನು ಕಷ್ಟಕ್ಕೀಡುಮಾಡಿ ಪರಮಾತ್ಮನಿಗೆ ವಿಷವನ್ನುಣ್ಣಿಸಿ ಅವನನ್ನು ನೀಲಕಂಠನೆಂಬ ಪದವಿಯಿಂದ ಜಗದ್ವಿಖ್ಯಾತನನ್ನಾಗಿ ಮಾಡಿದ ಮಹರ್ಷಿಪುಂಗವನಾದ ದೂರ್ವಾಸನು, ಹದಿನೆಂಟು ಪುರಾಣಗಳನ್ನೂ, ಬ್ರಹ್ಮಸೂತ್ರಗಳನ್ನೂ ರಚಿಸಿ ಸನಾತನವಾದ ವೈದಿಕಧರ್ಮಕ್ಕೆ ಅಸಾಧಾರಣವಾದ ಉಪಕಾರವನ್ನು ಮಾಡಿ ಜಗದ್ವಿಖ್ಯಾತಕೀರ್ತಿಶಾಲಿಯಾಗಿರುವ ವ್ಯಾಸಮಹರ್ಷಿಯು ಇವರೇ ಮೊದಲಾದ ಪ್ರಸಿದ್ಧಪುರುಷರು ಈ ಮಹಾತ್ಮರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಧನ್ಯರಾದರು. ಈ ವಿಷಯವು ಈ ಪೂಜ್ಯಪಾದರ ಚರಿತ್ರೆಗಳಲ್ಲಿ ವಿರಾಜಿಸುತ್ತಿರುವುದು. ಈ ರೀತಿ ಮಹಾಮಹಾಮಹಿಮಶಾಲಿಗಳ ಗುರುವೆನಿಸಿದ ಶ್ರೀಜಗದ್ಗುರು ಪಂಚಾಚಾರ್ಯರ ಪವಿತ್ರ ನಾಮಸ್ಮರಣವನ್ನು ಮಾಡಿ ಪ್ರತಿಯೊಬ್ಬರೂ ಭವಬಂಧನದಿಂದ ಮುಕ್ತರಾಗಬೇಕಾಗಿದೆ. ಭವಬಂಧನದ ಮುಕ್ತಿಗೆ ಗುರುಧ್ಯಾನದ ಹೊರತು ಬೇರೊಂದು ಸಾಧನವೇ ಇರುವುದಿಲ್ಲ. [illegible] ಕೆಲವರು [illegible] ವರ್ತಿಸುತ್ತಿರುವದನ್ನು ನೋಡಿದರೆ ಇವರ ದುರ್ದೈವಕ್ಕೆ ಎಣೆಯೇ ಇಲ್ಲವೆಂದು ಮುಕ್ತಕಂಠದಿಂದ ಹೇಳಬಹುದಾಗಿದೆ. ಇನ್ನು ಈ ವಿಧವಾದ [illegible] ಫಲವೆಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಗುರುಭಕ್ತಿಶೂನ್ಯರಾಗಿ ವರ್ತಿಸುವ ಜನರು ಈ ವಿಷಯವನ್ನೆಲ್ಲ ಪೂರ್ಣವಾಗಿ ಆಲೋಚಿಸಿ ಆ ಗುರುಸಾರ್ವಭೌಮರ ನೈಜವಾದ ಚರಿತ್ರವನ್ನು ತಿಳಿದುಕೊಂಡು ಅವರಲ್ಲಿ ಅತ್ಯುತ್ತಮವಾದ ಭಕ್ತಿಯನ್ನಿಟ್ಟು "ಮೋಕ್ಷಮೂಲಂ ಗುರೋಃ ಕೃಪಾ" ಎಂಬೀ ಗುರುಗೀತಾವಾಕ್ಯದಂತೆ ಪರಮಪುರುಷಾರ್ಥವಾದ ಮೋಕ್ಷವನ್ನು ಶ್ರೀಗುರುವಿನಿಂದ ಪಡೆದು ಇಹಪರಸುಖಭಾಗಿಗಳಾಗಲೆಂದೂ, ಜಗದೀಶ್ವರನು ಗುರುಭಕ್ತಿಶೂನ್ಯರಲ್ಲಿ ಇಂತಹ ಸದ್ಬುದ್ಧಿಯನ್ನುಂಟುಮಾಡಲೆಂದೂ ಆ ಜಗನ್ನಿಯಾಮಕನನ್ನು ಪ್ರಾರ್ಥಿಸುತ್ತೇವೆ.

ಯುದ್ಧವಾರ್ತೆ.

ಜಪಾನರ ಮುನ್ನೋಟ

ಹೋಪೆಪ್ರಾಂತದಲ್ಲಿರುವ ಇಚಾಂಗ್ ಬಳಿ ಜಪಾನೀ ಸೇನೆಗಳು ಯಾಂಗ್‌ಟಿಸ್ ನದಿಯನ್ನು ರಕ್ಷಿಸುತ್ತಿರುವ ಚುಂಕಿಂಗ್ ಸೇನೆಗಳನ್ನು ಹಿಮ್ಮೆಟ್ಟಿಸುತ್ತಿವೆ. ಇಚಾಂಗಿಗೆ ೧೫ ಮೈಲಿ ದೂರದಲ್ಲಿರುವ ಪಾಫಂಗ್‌ಪುವನ್ನು ಹಿಡಿದುಕೊಂಡುದಾಗಿಯೂ, ಯಾಂಗ್ಟೀಸ್ ನದಿಯ ಉಪನದಿಯಾದ ಟಾನ್‌ಸುಯಿಹೋ ನದಿಯ ಕೇಂದ್ರಸ್ಥಳವಾದ ಚೌಂಘಿಯಾಕೋವನ್ನು ಹಿಡಿದುಕೊಂಡುದಾಗಿಯೂ ಜಪಾನ್ ನ್ಯೂಸ್ ಏಜನ್ಸಿ ತಿಳಿಸುತ್ತದೆ.

ಜರ್ಮನಿ ಧೈರ್ಯಗೆಟ್ಟಿದೆ

ಜರ್ಮನರಲ್ಲಿ ಇಷ್ಟು ದೀರ್ಘವಾಗಿ ಯುದ್ಧ ಎಳೆದದ್ದರಿಂದಲೂ, ಮತ್ತು ಇತ್ತೀಚಿನ ಸೋಲಿನಿಂದಲೂ ನಿರುತ್ಸಾಹ ಆವರಿಸುತ್ತಿದೆ. ದಾಳಿಮಾಡುವ ಉತ್ಸಾಹ ಕುಗ್ಗಿ, ರಕ್ಷಣೆಮಾಡಿಕೊಳ್ಳುವ ಆತುರ ಹೆಚ್ಚುತ್ತಿದೆ. ಈ ಬಾರಿ ಜರ್ಮನಿಯು ಲೆನಿನ್‌ಗ್ರಾಡಿನಂತಹ ಬಿಡಿಬಿಡಿ ಸ್ಥಾನಗಳಲ್ಲಲ್ಲದೆ ಇಡೀ ರಷ್ಯದಮೇಲೆ ಆಕ್ರಮಣ ದಾಳಿಮಾಡಲಾರದು, ಇಟಲಿಯ ಸೋಲಿಗೆ ಜರ್ಮನಿ ಸಿದ್ಧಮಾಡಿಕೊಳ್ಳುತ್ತಿದೆ ಎಂಬುದಾಗಿ ನಂಬಿಕೆಗರ್ಹವಾದ ಕಡೆಯಿಂದ ತಿಳಿದುಬಂದಿದೆ. ಬಹುಕಾಲ ಎಳೆದ ಯುದ್ಧದಿಂದ ಜನರಿಗೆ ಬೇಸರವಾದರೂ ಅವರಲ್ಲಿ ಹಿಟ್ಲರನ ವಿರುದ್ಧ ದಂಗೆ ಏಳುವ ಸೂಚನೆಯಾಗಲಿ, ಬೇಗನೆ ಹಿಟ್ಲರನ ಪತನವಾಗುವ ಸೂಚನೆಯಾಗಲಿ ಕಾಣುತ್ತಿಲ್ಲವೆಂದು ತಿಳಿದುಬಂದಿದೆ.

ರಷ್ಯನ್ ವಿಮಾನಧಾಳಿಗಳು

ಕಳೆದ ಬುಧವಾರ ರಾತ್ರಿ ಭಾರಿ ರಷ್ಯನ್ ಬಾಂಬರ್ ವಿಮಾನಗಳು ಜರ್ಮನ್ ನಿಲ್ದಾಣವಾಗಿರುವ ಕೀವ್ ಮೇಲೆ ಧಾಳಿ ನಡೆಸಿದವು ಎಂದು ಮಾಸ್ಕೋ ರೇಡಿಯೋ ತಿಳಿಸಿದೆ. ಮಧ್ಯರಣಕ್ಷೇತ್ರದ ಇನ್ನೊಂದು ಪಟ್ಟಣದ ಮೇಲೂ ಧಾಳಿ ನಡೆಸಿವೆ. ಶತ್ರುಗಳ ಸರಬರಾಜು ಡಿಪೋಗಳ ಮೇಲೂ ಟ್ರೈನುಗಳ ಮೇಲೂ ಬೆಂಕಿ ಬಿದ್ದು ನಷ್ಟಸಂಭವಿಸಿದೆ.

ಅಟ್ಟೂದ್ವೀಪದಲ್ಲಿ ಜಪಾನರ ಮರಣ

ಅಟ್ಟೂದ್ವೀಪದಲ್ಲಿ ಜಪಾನರ ಪ್ರತಿಭಟನೆಯೆಲ್ಲಾ ನಿಂತಿದೆ. ಇಲ್ಲಿಯವರೆಗೆ ಅಟ್ಟುದ್ವೀಪದಲ್ಲಿ ೧೭೯೧ ಜನ ಜಪಾನರು ಮಡಿದರೆಂದೂ, ವಿಮಾನ ಧಾಳಿಗಳಿಂದಲೂ, ಆರ್ಟಿಲರಿ ಧಾಳಿಗಳಿಂದಲೂ ಸತ್ತವರ ಸಂಖ್ಯೆಯು ಇದರಲ್ಲಿ ಸೇರಿಲ್ಲವೆಂದೂ ತಿಳಿಸಲಾಗಿದೆ.

ಬರ್ಮಾಪುನರಾಕ್ರಮಣ ಅತ್ಯಗತ್ಯ

ಅಟ್ಟು ದ್ವೀಪದ ವಿಜಯದಿಂದ ಅಲ್ಯೂಷಿಯನ್ ದ್ವೀಪದಿಂದ ಜಪಾನರನ್ನು ಹೊಡೆದಟ್ಟುವುದು ಖಾತರಿಯಾಯಿತೆಂದೂ, ಬರ್ಮಾವನ್ನು ಮತ್ತೆ ವಶಪಡಿಸಿಕೊಳ್ಳುವುದು ಪೆಸಿಫಿಕ್ ಕದನವನ್ನೇ ಅವಲಂಬಿಸಿದೆಯೆಂದೂ ಪೆಸಿಫಿಕ್‌ನಲ್ಲಿ ಜಪಾನರ ನೌಕಾ ಸಾಲನ್ನು ಕತ್ತರಿಸಿದರೆ ಜಪಾನರ ಗಂಟಲು ಕತ್ತರಿಸಿದಂತಾಗುವುದೆಂದೂ ಬರ್ಮಾದಲ್ಲಿ ಜಪಾನರು ಕೈಗಾರಿಕೆಗಳನ್ನು ಸ್ಥಾಪಿಸಿ ರೂಢಿಸಿಕೊಂಡರೆ, ಆಮೇಲೆ ಅವರು ಅಜೇಯರಾಗುವರೆಂದೂ ಆದಕ್ಕಾಗಿ ಬರ್ಮಾ ಮೇಲೆ ಪೆಸಿಫಿಕ್ ಕದನಕ್ಕೆ ಸಂಬಂಧಿಸಿದಂತೆಯೇ ನೇರವಾದ ಧಾಳಿ ಮಾಡಬೇಕಾದುದು ಕಷ್ಟ ಸಾಧ್ಯವಾದರೂ ಅತ್ಯಗತ್ಯವಾದದ್ದು ಎಂಬುದಾಗಿ ಡೇಲಿ ಟೆಲಿಗ್ರಾಫ್‌ನ ಮಿಲಿಟರಿ ಸುದ್ದಿಗಾರರು ಬರೆದಿದಾರೆ.

ಆಸ್ಟ್ರೇಲಿಯಾಕ್ಕೆ ಆಕ್ರಮಣದ ಭೀತಿ

"ಈ ಯುದ್ಧವಾರಂಭವಾದಾಗಿನಿಂದಲೂ ಮಿತ್ರರು ಜಪಾನರ ೧೧೦೦ ವಿಮಾನಗಳನ್ನು ನಾಶಪಡಿಸಿದ್ದಾರೆ. ೪೮೦ನ್ನು ನಷ್ಟಪಡಿಸಿದಾರೆ. ಇನ್ನು ೩೯೨ ವಿಮಾನಗಳು ನಾಶವಾಗಿರಬಹುದು. ಇಷ್ಟಾದರೂ ಜಪಾನರ ವಿಮಾನ ಬಲ ಕುಗ್ಗಿಲ್ಲ. ದಿನದಿನಕ್ಕೆ ಅವರು ತಮ್ಮ ನೌಕಾ ಮತ್ತು ವಿಮಾನ ಮೂಲಗಳನ್ನು ವಿಸ್ತರಿಸಿ, ಬಲಪಡಿಸಿಕೊಂಡು, ಆಸ್ಟ್ರೇಲಿಯದ ಮುಖ್ಯಸ್ಥಾನಗಳನ್ನು ಕಬಳಿಸಲು ಎತ್ನಿಸುತ್ತಿದಾರೆ. ಜನಬಲವಂತೂ ಅಪಾರವಾಗಿದೆ ಜಪಾನರಿಗೆ ಎಷ್ಟು ಏಟು ಬಿದ್ದರೂ ತಡೆದುಕೊಳ್ಳುವಷ್ಟಿವೆ. ಆದರೆ ಅವರ ಭೀತಿತಪ್ಪಲು ಆಸ್ಟ್ರೇಲಿಯಕ್ಕೆ ಹೆಚ್ಚು ವಿಮಾನಬಲ ಬೇಕು; ಸಾಮಾನು ಸರಂಜಾಮು ಬೇಕು ಹೊರಗಿನಿಂದ ಸಹಾಯವೇನೋ ಬರುತ್ತಿದೆ. ಆದರೆ ಜಪಾನರನ್ನು ಬಗ್ಗು ಬಡೆಯಲು ಇನ್ನೂ ಜುರುಕಾದ ಸಹಾಯಬೇಕು' ಎಂಬುದಾಗಿ ಕಾಮನ್‌ವೆಲ್ತ್ ಸಚಿವರಾದ ಶ್ರೀ ಎ. ಎಸ್. ಡ್ರೇಕ್‌ಫರ್ಡ್ ತಿಳಿಸಿದರು.

ಅಮೆರಿಕದಲ್ಲಿ ಕೂಲಿಗಾರರ ಮುಷ್ಕರ

ಅಮೆರಿಕಾದಲ್ಲಿ ೫,೦೦,೦೦೦ ಕೂಲಿಗಾರರು ಮುಷ್ಕರ ಹೂಡಿದ್ದಾರೆ. ಮುಷ್ಕರವು ತುಂಬಾ ಹುರುಪಿನಿಂದ ನಡೆಯುತ್ತಿದೆ. ಮುಷ್ಕರವು ಭಾರಿಯಾಗಿರುವುದರಿಂದ ಸರ್ಕಾರವು ತನ್ನಲ್ಲಿರುವ ಕಾನೂನಿನ ಯಾವ ಅಸ್ತ್ರಗಳನ್ನುಪಯೋಗಿಸಲೂ ಸಾಧ್ಯವಿಲ್ಲವಾಗಿದೆ ೪೮ ಗಂಟೆಗಳೊಳಗಾಗಿ ಏನಾದರೂ ಒಪ್ಪಂದವಾಗದಿದ್ದಲ್ಲಿ ರೂಜ್‌ವೆಲ್ಟರು ಕಾರ್ಮಿಕ ಸಂಸ್ಥೆಗಳ ಬಂಡವಾಳದಮೇಲೆ ೫ ಕೋಟಿಯಷ್ಟು ಮುಷ್ಕರಕಾರರಿಗೆ ಹಣದ ಬಿಕ್ಕಟ್ಟನ್ನು ತಂದೊಡ್ಡಬಹುದು. ಪೆನ್ಸಿಲ್‌ವೇನಿಯಾ, ಕೆಂಟಕ್ಕಿ, ವೆಸ್ಟ್ ವರ್ಜಿನಿಯಾಗಳಲ್ಲಿ ಕೊನೆಯಪಕ್ಷ ಕೆಲಸ ಮಾಡದೆ ೩,೫೦,೦೦೦ ಜನ ನಿಂತಿದ್ದಾರೆ. ಗಣಿ ಕೆಲಸಗಾರರು ದಿನಕ್ಕೆ ೨ ಡಾಲರುಗಳನ್ನು ಹೆಚ್ಚು ಮಾಡಬೇಕೆಂದು ಕೇಳಿದಾರೆ. ಮಾಲೀಕರು ೮ ಸೆಂಟುಗಳನ್ನು ಕೊಡುತ್ತೇವೆಂದು ಹೇಳುತ್ತಿದ್ದಾರೆ. ಆಡಳಿತಗಾರರು ಇದು ಸರ್ಕಾರದಮೇಲೆ ದಂಗೆ ಎಂದು ಎಚ್ಚರಿಕೆ ಕೊಡುತ್ತಿದ್ದಾರೆ. ಆದರೆ ಯೂನಿಯನ್‌ಗಳಿಂದ ಯಾವ ವಿಧವಾದ ಅಪ್ಪಣೆಯೂ ಬರದೆ ಮುಷ್ಕರಕಾರರು ಕೆಲಸಕ್ಕೆ ಹಿಂದಿರುಗುವಂತಿಲ್ಲ. ಲೆವಿಸ್‌ರು ೧॥ ಡಾಲರುಗಳನ್ನು ಹೆಚ್ಚು ಮಾಡುವ ಹಾಗಿದ್ದರೆ ತಾತ್ಕಾಲಿಕವಾಗಿ ತಾವು ಒಪ್ಪಂದಕ್ಕೆ ಬರಲು ಸಿದ್ಧರಿದ್ದೇವೆಂದು ತಿಳಿಸಿರುತ್ತಾರೆ. ಒಳದೇಶದ ಮಂತ್ರಿಗಳಾದ ಇಕ್ಕಾರು ಈ ಮುಷ್ಕರವು ಸರ್ಕಾರದ ವಿರುದ್ಧವಾಗಿದ್ದರೂ ಕೆಲವು ಮಾಲೀಕರ ಹಟಮಾರಿತನದಿಂದ ಯಾವ ಒಪ್ಪಂದವೂ ಸಾಧ್ಯವಿಲ್ಲವಾಗಿದೆ ಎಂದು ತಿಳಿಸಿದ್ದಾರೆ.

ಸ್ವೀಕಾರ

ಹಾಸನದ ಮಠದ ವೇ॥ ಸಿದ್ಧಯ್ಯನವರ ಪುತ್ರ ಶ್ರೀ॥ ರಾಜಶೇಖರಯ್ಯನಿಗೂ, ನಾಗಮಂಗಲದ ವೇ॥ ಪ್ಪಣ್ಣಯ್ಯನವರ ಪುತ್ರಿ ಚಿ॥ ಕುಂ॥ ಸೌ॥ ಶಾರದಮ್ಮ ಗೂ ನಾಗಮಂಗಲದಲ್ಲಿ ನೆರವೇರಿದ ವಿವಾಹಸಮಯದಲ್ಲಿ ತಿಪಟೂರು ಶ್ರೀಮಾನ್ C. K ಕಣ್ಣಣ್ಣನವರು ಕೋಆಪರೇಟಿವ್ ಸೊಸೈಟಿ ಆಫೀಸು ಸೆಕ್ರೆಟರಿ ಇವರ ಸೂಚನೆಮೇರೆಗೆ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ ! ರೂಪಾಯಿಗಳು ವೇ॥ ಆರ್. ಎಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ.

ದೊಡ್ಡಬಳ್ಳಾಪುರದ ವ॥ ವೀರಭದ್ರಪ್ಪನವರ ಪುತ್ರ ಶ್ರೀ॥ ಡಿ. ವಿ. ರಾಜಶೇಖರಯ್ಯನಿಗೆ ಗುಂಜೂರಿನಲ್ಲಿರುವ ವ॥ ಜಿ. ಪುಟ್ಟಣ್ಣನವರ ಬಸಪ್ಪನವರ ಪುತ್ರಿ ಚಿ॥ ಸೌ॥ ಮುನ್ನಮ್ಮನನ್ನು ತಂದು ಗುಂಜೂರಿನಲ್ಲಿ ನಡೆದ ವಿವಾಹಮಹೋತ್ಸವ ಸಮಯದಲ್ಲಿ ವಧೂವರರ ಕಡೆಯಿಂದ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಗಳು ಮೈಸೂರು ಊದುಬತ್ತಿ ಫ್ಯಾಕ್ಟರಿ ಯಜಮಾನ ಕೆಂಚಪ್ಪನವರ ದ್ವಾರಾ ತಲ್ಪಿರುತ್ತವೆ.

ಚಿಕ್ಕಮಗಳೂರು ತಾ॥ ಆಲ್ದೂರು ಎಲಗೋಡು ಎಸ್ಟೇಟ್ ವ॥ ಬಿ. ವಿ. ಮಲ್ಲಪ್ಪಶೆಟ್ಟರ ಸಹೋದರ ಶ್ರೀ॥ ಬಿ. ವಿ. ಪುಟ್ಟಣ್ಣಶೆಟ್ಟರಿಗೆ ಆನೇಕಟ್ಟೆ ವ॥ ಎ. ಮರುಳಪ್ಪನವರ ಪುತ್ರಿ ಚಿ॥ ಸೌ॥ ಪಾರ್ವತಮ್ಮನನ್ನು ತಂದು ನೆರವೇರಿಸಿದ ವಿವಾಹಮಹೋತ್ಸವ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂ. ಗಳು ಬಾಳೇಹೊನ್ನೂರು ಶ್ರೀರಂಭಾಪುರೀಮಠದ [illegible] ದ್ವಾರಾ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇನೆ.

ಓಂ ನಮಃ ಪಂಚಜಗದ್ಗುರುಭ್ಯಃ

ಪ್ರಸಿದ್ಧಪತ್ರಿಕೆ

ಸೊಲ್ಲಾಪುರದಲ್ಲಿ 'ಶ್ರೀಮದ್ವೀರಶೈವ ಗುರುಕುಲ'ವು ಸ್ಥಾಪಿಸಲ್ಪಟ್ಟು ೫ ತಿಂಗಳಾಗುತ್ತ ಬಂತು. ಈ ಗುರುಕುಲವು ಕ್ರಮಶಃ ವೃದ್ಧಿಸ್ಥಿತಿಯಲ್ಲಿಯೇ ಇದೆ. ಈಗ ಈ ಗುರುಕುಲದಲ್ಲಿ ವೇದಾಧ್ಯಯನವನ್ನು ಹೇಳುವುದಕ್ಕೆ ಓರ್ವ ವೈದಿಕಪಂಡಿತರ ಆವಶ್ಯಕತೆಯಿದೆ. ನಮ್ಮ ವೀರಶೈವ ವೈದಿಕ ಪಂಡಿತರು ಕೆಳಗಿನ ವಿಳಾಸಕ್ಕೆ ಸಂಬಳದ ಬಗ್ಗೆ ಪತ್ರವ್ಯವಹಾರವನ್ನು ಮಾಡಬೇಕಾಗಿ ಸೂಚನೆ.

ವೇದವಾಠವನ್ನು ಹೇಳುವದಲ್ಲದೆ ಜ್ಯೋತಿಷ್ಯವನ್ನೂ ಹೇಳುವವರಿದ್ದರೆ ಅವರೂ ಪತ್ರವ್ಯವಹಾರವನ್ನು ಮಾಡಬೇಕು.

ಶ್ರೀಮದ್ವೀರಶೈವ ಗುರುಕುಲಾಧ್ಯಕ್ಷರು
ಶ್ರೀ॥ಷ॥ಬ್ರ॥ ಚನ್ನವೀರಶಿವಾಚಾರ್ಯರು, ಹೋಟಗಿ
ಬಾಲತಪಸ್ವಿ, ಬೃಹನ್ಮಠ.
ಉತ್ತರಕಸಬಾ ೯೧೮.
ಸೊಲ್ಲಾಪುರ ಸಿಟಿ

ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು

ಜಯಂತೀಮಹೋತ್ಸವ

ನಿಜಾಂ ಸ್ಟೇಟ್, ಜಿಲ್ಲಾ ರಾಯಚೂರ, ಕಸಬಾ ಮುದಗಲ್ಲ ಗಂಗಾಧರಮಠದ ವೇ॥ ಸಿದ್ಧರಾಮಾರ್ಯರು ವಾರ್ಷಿಕ ಪದ್ಧತಿಯಂತೆ ಈ ವರ್ಷವೂ ವೈಶಾಖ ಶು॥ ೬ ಶುಕ್ರವಾರ ದಿವಸ ಶ್ರೀಜಗದ್ಗುರು ಏಕೋರಾಮಾರಾಧ್ಯರ ಜಯಂತಿಯನ್ನೂ ಹಾಗು ಇದೇ ಶು॥೫ ಭಾನುವಾರ ಶ್ರೀಜಗದ್ಗುರು ದಾರುಕಾಚಾರ್ಯರ ಜಯಂತಿಯನ್ನು, ಷೋಡಶೋಪಚಾರಗಳಿಂದ ವಿಧ್ಯುಕ್ತವಾಗಿ ತಮ್ಮ ಮಠದಲ್ಲಿ ಆಚರಿಸಿ ಉಭಯ ಆಚಾರ್ಯರ ಆಶೀರ್ವಾದಗಳಿಗೆ ಪಾತ್ರರಾದರು.

ಓರ್ವ ಆಚಾರ್ಯಪ್ರೇಮಿ

[೧ನೆಯ ಪುಟದಿಂದ ಮುಂದುವರಿದುದು]

ಪಂಚಾಸ್ತ್ರಗಳನ್ನು ಪರಿಗಣಿಸಿನೋಡಿ ಮುಂದಿನ ವರ್ಷ (೧೯೪೩-೪೪) ಒಟ್ಟು ೯೯,೪೧೦೦೦ ರೂಪಾಯಿಗಳು ಹುಟ್ಟುವಳಿ ಬರಾಗಬಹುದೆಂದು ನಾವು ಅಂದಾಜು ಮಾಡಿದ್ದೇವೆ ಎಕ್ಸೈಜು ಹುಟ್ಟುವಳಿಯು ಇಷ್ಟು ಹೆಚ್ಚಾಗಿರುವುದರಿಂದ ಅನ್ಯಥಾ ಶಂಕೆಗೆ ಕಾರಣವಾಗದಿರಲೆಂಬ ಬುದ್ಧಿಯಿಂದ ಒಂದೆರಡು ಸಂಗತಿಗಳನ್ನು ಸೂಚಿಸಬೇಕಾಗಿದೆ ಮಿಲಿಟರಿ ಸಿಬ್ಬಂದಿಗಳಿಗೂ, ಈಚೆಗೆ ಏರ್ಪಟ್ಟ ಯುದ್ಧ ಕೈಗಾರಿಕೆಗಳಿಗೂ ಬಹುಭಾರಿ ಸಂಖ್ಯೆಯಲ್ಲಿ ಕೆಲಸಗಾರರು ಹೊರಗಿನಿಂದ ನಮ್ಮ ಸಂಸ್ಥಾನಕ್ಕೆ ಬಂದು ನೆಲೆಸಿದ್ದಾರೆ. ದೇಶೀಯ ಮದ್ಯಗಳ ಸೇವನೆಯು ಗಣನೀಯವಾಗಿ ಹೆಚ್ಚಿ, ಎಕ್ಸೈಜು ಹುಟ್ಟುವಳಿಯೂ ಹೆಚ್ಚಿರುವುದು ಕೇವಲ ತಾತ್ಕಾಲಿಕವಾಗಿ ಮಾತ್ರವೇ ಎಂದು ಭಾವಿಸಬಹುದು.

ವೆಚ್ಚ

ಇನ್ನು, ವೆಚ್ಚದ ವಿಚಾರ! ಪ್ರಜೆಗಳ ಯೋಗಕ್ಷೇಮ ಸಾಧನೆಗೂ ಅಭ್ಯುದಯಕ್ಕೂ ಸಂಬಂಧಪಟ್ಟ ಬಾಬುಗಳಲ್ಲಿ ಸ್ವಲ್ಪ ಹೆಚ್ಚುಕಡಿಮೆ ಪ್ರತಿಯೊಂದು ಬಾಬಿನಲ್ಲಿಯೂ ಕೂಡ, ಮುಂದಿನವರ್ಷದ ಬಜೆಟ್ಟಿನಲ್ಲಿ ಒದಗಿಸಿರುವ ವೆಚ್ಚದ ಮೊಬಲಗು, ಚಾಲ್ತಿಸಾಲಿನಲ್ಲಿ ಒದಗಿಸಿದ್ದ ವೆಚ್ಚದ ಮೊಬಲಗಿಗಿಂತಲೂ ಹೆಚ್ಚಾಗಿದೆ. ವಿದ್ಯಾಭ್ಯಾಸದ ಬಾಬಿನಲ್ಲಿ ಚಾಲ್ತಿ ಸಾಲಿಗಿಂತ ಹೆಚ್ಚಾಗಿ ೭,೧೪,೦೦೦ ರೂಪಾಯಿಗಳನ್ನೊದಗಿಸಿರುವುದೂ, ಹುಟ್ಟುವಳಿ ಬಾಬಿಗೆ ಖರ್ಚು ಬೀಳತಕ್ಕ ನೀರಾವರಿ ಕಾಮಗಾರಿಗಳ ಬಾಬಿನಲ್ಲಿ ಚಾಲ್ತಿ ಸಾಲಿಗಿಂತ ಹೆಚ್ಚಾಗಿ ೩,೮೮,೦೦೦ ರೂಪಾಯಿಗಳನ್ನೊದಗಿಸಿರುವುದೂ ಮತ್ತು ಸಾರ್ವಜನಿಕ ಸ್ವಭಾವದ ಅಭಿವೃದ್ಧಿಕಾರ್ಯಗಳ ಬಾಬಿನಲ್ಲಿ ಚಾಲ್ತಿಸಾಲಿಗಿಂತ ಹೆಚ್ಚಾಗಿ ೬,೦೧,೦೦೦ ರೂಪಾಯಿಗಳನ್ನೊದಗಿಸಿರುವುದೂ ವಿಶೇಷ ಗಮನಾರ್ಹವಾಗಿರುವಂತೆ ಈ ಸಂಬಂಧದಲ್ಲಿ ಸೂಚಿಸಬಹುದಾಗಿದೆ ಶ್ರೀಜಯಚಾಮರಾಜೇಂದ್ರ ಔದ್ಯೋಗಿಕ ಶಿಕ್ಷಣಶಾಲೆಯ ಅನಾವೃತ್ತ ವೆಚ್ಚಗಳಿಗಾಗಿ ಒಟ್ಟು ಮೊತ್ತದಲ್ಲಿ ೪,೧೫,೦೦೦ ರೂಪಾಯಿಗಳನ್ನು ಒದಗಿಸಲಾಗಿದೆ ಆಕಾಶವಾಣಿ"ಬ್ರಾಡ್‌ಕಾಸ್ಟಿಂಗ್ ಸ್ಟೇಷನ್" ಕಾರ್ಯಾಲಯಕ್ಕಾಗಿ ಬೇಕಾದ ೫ ಕಿಲೋವಾಟ್ ಜೋರಿನ ಟ್ರಾನ್ಸ್‌ಮಿಟರ್ ಯಂತ್ರಸಾಧನವನ್ನು ಕೊಳ್ಳುವುದಕ್ಕಾಗಿ ೧ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ "ರೋಡ್ ಕ್ಲಾಸಿಫಿಕೇಷನ್ ಕಮಿಟಿ" ಸಲಹೆಗಳನ್ನು ಆಚರಣೆಗೆ ತರುವುದಕ್ಕಾಗಿ ಮುಂದಿನಸಾಲಿನ ಬಜೆಟ್ಟಿನಲ್ಲಿ ೩ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

ಪೋಲೀಸು ಸಿಬ್ಬಂದಿಯನ್ನು ಹೆಚ್ಚಿಸಿ, ೧೩೫ಮಂದಿ ಕೆಳದರ್ಜೆಯ ಅಧಿಕಾರಿಗಳನ್ನೂ ಮತ್ತು ೧,೦೬೮ ಕಾನ್‌ಸ್ಟೇಬಲುಗಳನ್ನೂ ಹೊಸದಾಗಿ ನೇಮಕಮಾಡಲಾಯಿತು. ಸಂಸ್ಥಾನದಲ್ಲಿ ಪ್ರಜಾ ನೆಮ್ಮದಿಯನ್ನು ದಕ್ಷತೆಯಿಂದ ಕಾಪಾಡಿ, ಆಹಾರ ಧಾನ್ಯಗಳು ಸಂಸ್ಥಾನದಿಂದ ಅಕ್ರಮವಾಗಿ ಸಾಗಿಹೋಗುವುದನ್ನು ತಪ್ಪಿಸುವ ಸಂಬಂಧದಲ್ಲಿ ಮೊದಲಿಗಿಂತಲೂ ಹೆಚ್ಚಾದ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗಿ ಬಂದ ಸನ್ನಿವೇಶದ ದೆಶೆಯಿಂದ ಅದು ಆವಶ್ಯಕವಾಯಿತು.

ಮೈಸೂರು ಸಂಸ್ಥಾನದ ಪದಾತಿ ಸೈನ್ಯದ ಆಫೀಸರುಗಳ ಮತ್ತು ಸೈನಿಕರ ಸಂಬಳಗಳು ಇಂಡಿಯಾ ಸರ್ಕಾರದ ಸೈನ್ಯದಲ್ಲಿ ಆಯಾ ದರ್ಜೆಗಳವರಿಗೆ ಪಾವತಿಯಾಗುವ ಸಂಬಳಗಳಿಗೆ ಸಮವಾಗಿರುವಂತೆ ಹೆಚ್ಚಿಸಲಾಯಿತು.

ಆಹಾರ ಸಮಸ್ಯೆ

ಜನರ ಬಳಕೆಗೆ ಬೇಕಾದ ಆಹಾರ ವಸ್ತುಗಳನ್ನೂ ಮತ್ತು ಇತರ ಮುಖ್ಯವಸ್ತುಗಳನ್ನೂ ತಕ್ಕಷ್ಟು ಪ್ರಮಾಣಗಳಲ್ಲಿ ಒದಗಿಸಿಕೊಂಡು ಯುಕ್ತವಾದ ಕ್ರಯಗಳಿಗೆ ನ್ಯಾಯವಾದ ರೀತಿಯಲ್ಲಿ ಕಾಲಕಾಲಕ್ಕೆ ದೊರೆಯುವುದು ಖಂಡಿತ ಪಡುವಂತೆಮಾಡುವ ಕೆಲಸವು, ಹೆಚ್ಚು ಕ್ಲೇಶದಾಯಕವಾಗಿ ಪರಿಣಮಿಸಿ, ತೊಡಕಾಗುತ್ತ ಬರುತ್ತಿದೆ. ಹೀಗಿರುವ ತೊಡಕಿನ ಸನ್ನಿವೇಶದಲ್ಲಿ ಆಗಿಂದಾಗ್ಗೆ ಅವಶ್ಯಕ ಕಂಡಂತೆ ಅದನ್ನು ಎದುರಿಸಿ ಉದ್ದೇಶಸಾಧನೆ ಮಾಡುವುದಕ್ಕಾಗಿ ಸಂತತವಾಗಿ ಪ್ರಯತ್ನಗಳು ನಡೆಯುತ್ತಿವೆ.

ಧಾನ್ಯಗಳೇ ಮುಂತಾದ ಆಹಾರ ಪದಾರ್ಥಗಳ ಬೆಳೆಯನ್ನು ಹೆಚ್ಚಿಸುವ ಕಾರ್ಯಕ್ರಮದ ಯೋಜನೆಯ ಮೇರೆಗೆ ೧೩೧,೩೮೧ ಎಕರೆಗಳ ವಿಸ್ತೀರ್ಣದ ಜಮೀನುಗಳನ್ನು ಸಾಗುವಳಿಗೇನೊ ಕೊಟ್ಟಾಯಿತು ಆದರೆ ಇದುವರೆಗೆ ವ್ಯವಸಾಯ ನಡೆದಿರುವುದು ಕೇವಲ ೫೭, ೮೬೦ ಎಕರೆಗಳಲ್ಲಿ ಮಾತ್ರವೇ ಆಗಿದೆ;

ಅರ್ವಿನ್ ನಾಲಾ ಪ್ರದೇಶದಲ್ಲಿ ಒಡೆದುಹೋಗಿರುವ ಕೆರೆ ಅಂಗಳಗಳನ್ನು ಹಂಗಾಮಿ ಸಾಗುವಳಿಗೆ ಕೊಡುವಂತೆ ತಿಳಿಸಲಾಯಿತು. ಆದರೆ, ಈ ಸೌಕರ್ಯವನ್ನು ಉಪಯೋಗಿಸಿಕೊಳ್ಳುವ ವಿಚಾರದಲ್ಲಿ ರೈತರಿಂದ ನಿರೀಕ್ಷಿಸಿದಷ್ಟು ಆಸಕ್ತಿಯನ್ನು ಅವರು ಇದುವರೆಗೂ ತೋರಿಸಿಲ್ಲ.

ಸರಿಯಾಗಿ ಬೆಳೆಯಾದರೆ, ಸಂಸ್ಥಾನದ ಬಳಕೆಗೆ ಬೇಕಾಗುವಷ್ಟು ರಾಗಿಯು ಸಂಸ್ಥಾನದಲ್ಲೇ ಒದಗುತ್ತದೆ. ಈ ಕಳೆದ ವರ್ಷ ಸರಿಯಾಗಿ ಮಳೆಯಾಗದೆ ರಾಗಿಯ ಬೆಳೆ ಕೆಟ್ಟುಹೋಯಿತು. ಈ ಕೊರತೆಯನ್ನು ಸ್ವಲ್ಪ ಮಟ್ಟಿಗೆ ಪರಿಹರಿಸುವ ಉದ್ದೇಶದಿಂದ, ಕಳೆದ ಜನವರಿ ತಿಂಗಳಿನಲ್ಲಿ ಅರ್ವಿನ್ ನಾಲಾ ಬಯಲಿನ ೨೪,೦೦೦ ಎಕರೆಗಳ ಪ್ರದೇಶದಲ್ಲಿ ನಾಲಾ ನೀರನ್ನು ಹಾಯಿಸಿ ರಾಗಿಯ ಬೆಳೆಯನ್ನು ತೆಗೆಯುವ ಏರ್ಪಾಡು ಮಂಜೂರಾಯಿತು.

ಅಕ್ಕಿ

ಇನ್ನು ಅಕ್ಕಿಯ ವಿಚಾರ ಸಂಸ್ಥಾನದಲ್ಲಿ ಜನರ ಬಳಕೆಗೆ ಸಾಕಾಗುವಷ್ಟು ಅಕ್ಕಿ ಒದಗುವಷ್ಟು ಮಟ್ಟಿಗೆ ಇಲ್ಲಿ ಎಂದೂ ಬತ್ತ ಬೆಳೆದಿಲ್ಲ. ಆದಕಾರಣ, ಪ್ರತಿವರ್ಷವೂ ೫೪,೦೦೦ ಟನ್ನು ಅಕ್ಕಿಯನ್ನು ಹೊರಗಿನಿಂದ ತರಿಸುತ್ತಿದ್ದುದೇ ವಾಡಿಕೆ. ಹಾಗೆ ಒದಗಿಸುತ್ತಿದ್ದ ಮದರಾಸು ಸರಕಾರದವರು ಈಸಲ ನಮ್ಮ ಸಂಸ್ಥಾನದ ಪಾಲಿಗೆ ಸಲ್ಲುವ ಭಾಗವು ೪೪,೦೦೦ ಟನ್ನುಗಳೆಂದು ತಿಳಿಸಿದ್ದರು. (ಆ ತರುವಾಯ ಅದು ೩೦,೦೦೦ ಟನ್ನುಗಳೆಂದು ನಿರ್ಧರವಾಗಿ ಇನ್ನೂ ಕಡಿಮೆಯಾಯಿತು) ಈ ಮಧ್ಯದಲ್ಲಿ ಇಂಡಿಯಾ ಸರಕಾರದವರು ಅಕ್ಕಿಯ ಹಂಚಿಕೆಯ ಮೇಲೂ ಅಕ್ಕಿಯ ಸರಬರಾಯಿ ಮೇಲೂ ಹತೋಟಿ ವಹಿಸಿಕೊಂಡರು ನಮ್ಮ ಸಂಸ್ಥಾನಕ್ಕೆ ಅಕ್ಕಿ ಕಳುಹಿಸುವ ಅಧಿಕಾರ ಮದರಾಸು ಸರ್ಕಾರಕ್ಕೆ ತಪ್ಪಿಹೋಯಿತು; ಆ ವಿಚಾರದಲ್ಲಿ ಪತ್ರವ್ಯವಹಾರ ನಡೆಯುತ್ತಿದೆ.

೧೯೪೩-೪೪ನೇ ಸಾಲಿಗೆ ೧೨,೦೦೦ ಟನ್ನು ಗೋಧಿಯೂ ೩,೦೦೦ ಟನ್ನು ಬೇರೆ ವಸ್ತುಗಳೂ ಸಲ್ಲುವಂತೆ ಇಂಡಿಯಾ ಸರ್ಕಾರದವರು ತೀರ್ಮಾನಿಸಿದ್ದಾರೆ ಕೆಲವು ಪ್ರಾಂತ್ಯಗಳಿಗೆ ಸಂಸ್ಥಾನದಿಂದ ಬೆಲ್ಲವನ್ನೂ ಜೋಳ ಮುಂತಾದುವುಗಳನ್ನೂ ಕಳುಹಿಸಿ ಅಲ್ಲಿಂದ ತೊಗರಿ ಬೇಳೆ ಹುರುಳಿ ಮುಂತಾದ ದ್ವಿದಳ ಧಾನ್ಯಗಳನ್ನು ತರಿಸುವುದಕ್ಕಾಗಿ ಪತ್ರವ್ಯವಹಾರ ನಡೆಯುತ್ತಿದೆ. ಈ ಏರ್ಪಾಡುಗಳ ಜೊತೆಗೆ ಸಂಸ್ಥಾನದಿಂದ ಬತ್ತ, ಅಕ್ಕಿ, ರಾಗಿ, ಜೋಳ, ನವಣೆ, ಕಂಬು ಮುಂತಾದ ಧಾನ್ಯಗಳು, ಹುರುಳಿ, ಸಕ್ಕರೆ, ಬೆಲ್ಲ, ಆಲೂಗೆಡ್ಡೆ, ಹುಣಸೆಹಣ್ಣು, ಕೊತ್ತಂಬರಿ ಬೀಜ, ಮೆಣಸಿನಕಾಯಿ, ಹಿಂಡಿ, ಗೋಧಿರವೆ, ಮುಂತಾದ (ಗೋಧಿಯಿಂದ ತಯಾರಿಸಿದ) ವಸ್ತುಗಳು, ಹತ್ತಿಬೀಜ ಇವುಗಳು ರಫ್ತಾಗುವುದನ್ನು ಪರಿಮಿತಗೊಳಿಸುವ ಮೂಲಕ, ಅವು ದೊರೆಯತಕ್ಕ ಪರಿಮಾಣದಲ್ಲಿ ಸಂಸ್ಥಾನದಲ್ಲೇ ಅವುಗಳು ಉಳಿದು ಜನರಿಗೆ ಅನುಕೂಲವಾಗುವಂತೆ ಕ್ರಮ ಜರುಗಿಸಿದ್ದೇವೆ.

ಹಂಚಿಕೆ ಏರ್ಪಾಡು

ದೊರೆಯುವಷ್ಟು ಮಟ್ಟಿಗೂ, ಮುಖ್ಯವಾದ ಆಹಾರ ಧಾನ್ಯಗಳು ಸಂಸ್ಥಾನದ ನಾನಾ ಪ್ರದೇಶಗಳಲ್ಲಿಯೂ ನ್ಯಾಯವಾದ ರೀತಿಯಲ್ಲಿ ಜನರ ಬಳಕೆಗೆ ಸಿಕ್ಕಿ ಅನುಕೂಲವಾಗುವಂತೆ ಮಾಡುವುದಕ್ಕಾಗಿ ಏರ್ಪಾಡುಗಳನ್ನು ಮಾಡಿದ್ದೇವೆ ಅಲ್ಲದೆ ವರ್ತಕರು ಮುಂತಾದವರು ಅಕ್ರಮವಾಗಿ ದುಬಾರಿ ಧಾರಣೆಗಳಿಗೆ ಮಾರಾಟಮಾಡುವುದಕ್ಕೆ ಅನುಕೂಲವಾಗತಕ್ಕ ಸನ್ನಿವೇಶಗಳಿಗೆ ಅವಕಾಶ ತಪ್ಪುವಂತೆ ತಕ್ಕ ಏರ್ಪಾಡುಗಳನ್ನು ಮಾಡಿದ್ದೇವೆ. ಸಂಸ್ಥಾನದೊಳಗೆ ಒಂದು ಜಿಲ್ಲೆಯಿಂದ ಮತ್ತೊಂದ

ಡಿಸ್ಟ್ರಿಕ್ಟಿಗೆ ಆಹಾರಧಾನ್ಯಗಳನ್ನು ಕಳುಹಿಸುವ ವಿಚಾರದಲ್ಲಿ ವಿಧಾಯಕವಾಗಿದ್ದ ನಿರ್ಬಂಧಗಳನ್ನು ಕಡಿಮೆ ಮಾಡಿದ್ದೇವೆ ಸಂಸ್ಥಾನದೊಳಗೆ ಜನರ ಬಳಕೆಗೆ ಬೇಕಾದ ಪರಿಮಾಣಗಳಿಗಿಂತ ಹೆಚ್ಚಾಗಿ ಆಹಾರ ಧಾನ್ಯಗಳು ಬೆಳೆಯುವ ಪ್ರದೇಶಗಳಿಂದ ಅಲ್ಲಿಯ ಅವಶ್ಯಕತೆಗಳಿಗೆ ಮೀರಿ ಉಳಿದಿರುವ ಆಹಾರ ಧಾನ್ಯಗಳನ್ನು, ಸಂಸ್ಥಾನದಲ್ಲಿ ಜನರ ಬಳಕೆಗೆ ತಕ್ಕಷ್ಟು ಆಹಾರ ಧಾನ್ಯಗಳು ಬೆಳೆಯದಿರುವ ಪ್ರದೇಶಗಳಿಗೆ ಅಲ್ಲಿಯ ಅವಶ್ಯಕತೆಗಳಿಗೆ ತಕ್ಕಂತೆ ಸಾಗಿಸುವ ಸೌಕರ್ಯವಿರುವಂತೆ ಸುಧಾರಿಸಿದ ಹೊಸ ಕ್ರಮವೊಂದನ್ನು ಈಗ ಆಚರಣೆಗೆ ತಂದಿದ್ದೇವೆ ಮಳೆಬೀಳುವುದು ಕಡಮೆಯಾಗಿರುವ ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು ಡಿಸ್ಟ್ರಿಕ್ಟುಗಳಿಗೆ ಭಾರಿ ಭಾರಿ ಪ್ರಮಾಣಗಳಲ್ಲಿ ಅಕ್ಕಿ ಸಾಗುತ್ತಿದೆ ಚಿತ್ರದುರ್ಗ ಕಡೂರು ಮತ್ತು ಶಿವಮೊಗ್ಗ ಡಿಸ್ಟ್ರಿಕ್ಟುಗಳಿಂದ ಮೈಸೂರು ಮಂಡ್ಯ ಕೋಲಾರ ಬೆಂಗಳೂರು ಮತ್ತು ತುಮಕೂರು ಡಿಸ್ಟ್ರಿಕ್ಟುಗಳಿಗೆ ರಾಗಿಯೂ ಜೋಳವೂ ಭಾರಿ ಭಾರಿ ಪ್ರಮಾಣಗಳಲ್ಲಿ ಸಾಗುತ್ತಿವೆ

ರಾಗಿಯನ್ನೂ, ಅಕ್ಕಿಯನ್ನೂ ಮತ್ತು ಜೋಳವನ್ನೂ ಕೊಳ್ಳುವುದಕ್ಕಾಗಿ ಮೈಸೂರು, ಶಿವಮೊಗ್ಗ, ದಾವಣಗೆರೆ ಮತ್ತು ಹಾಸನ ಈ ನಾಲ್ಕು ಊರುಗಳಲ್ಲಿಯೂ ಗ್ರೇನ್ ಪರ್ಚೇಸಿಂಗ್ ಆಫೀಸರುಗಳೆಂಬ ಅಧಿಕಾರಿಗಳನ್ನು ನೇಮಿಸಲಾಗಿದೆ ಬೆಂಗಳೂರು ಮುಂತಾದ ಡಿಸ್ಟ್ರಿಕ್ಟು ಕಸಬೆಗಳಲ್ಲಿಯೂ ಮತ್ತು ಹಲವು ತಾಲ್ಲೂಕುಗಳ ಕಸಬೆಗಳಲ್ಲಿಯೂ "ಎಮರ್ಜೆನ್ಸಿ ಡಿಪೋ" ಗಳನ್ನು ಏರ್ಪಡಿಸಲಾಗಿದೆ

ರೇಷ್ಮೆ

ರೇಷ್ಮೆಯ ಧಾರಣೆ ಏರಿಹೋಗಿರುವುದರಿಂದ ರೇಷ್ಮೆ ಕೈಗಾರಿಕೆಯು ಸರ್ವತೋಮುಖವಾಗಿ ಅಭಿವೃದ್ಧಿಗೊಳ್ಳುವುದಕ್ಕೆ ಉತ್ತೇಜನ ದೊರೆತಿದೆ ಜಪಾನ್ ಮತ್ತು ಚೀಣಾದೇಶಗಳಿಂದ ಈ ದೇಶಕ್ಕೆ ರೇಷ್ಮೆಯು ಸರಬರಾಯಿಯಾಗುತ್ತಿದ್ದುದು ನಿಂತುಹೋದ ಮೇಲೆ ಯುದ್ಧಕ್ಕೆ ಬೇಕಾದ ಪ್ಯಾರಚೂಟ್ ಬಟ್ಟೆಗಳನ್ನೂ ಮತ್ತು ಅದಕ್ಕೆ ಸಂಬಂಧಪಟ್ಟ ರೇಷ್ಮೆಸುರಿಗಳು ಹಗ್ಗಗಳು ಮುಂತಾದ ಇತರ ಬಗೆಗಳನ್ನೂ ತಯಾರಿಸುವುದಕ್ಕೆ ಆವಶ್ಯಕವಾದ ಉತ್ತಮ ದರ್ಜೆಯ "ಫಿಲೇಚರ್" ರೇಷ್ಮೆಯನ್ನು ತಯಾರಿಸುವ ಕೆಲಸವು ಭರತಖಂಡದ ಮೇಲೆ ಬಿದ್ದು, ಅದರ ಸ್ಥಾನವು ವಿಶೇಷ ಪ್ರಾಮುಖ್ಯವಾಗಿ ಪರಿಣಮಿಸಿ ನಮ್ಮಲ್ಲಿ ಹೀಗೆ ತಯಾರಾಗತಕ್ಕ ರೇಷ್ಮೆಯನ್ನು ಸಂಪೂರ್ಣವಾಗಿ ಇಂಡಿಯಾ ಸರ್ಕಾರದವರಿಗೆ ಒದಗಿಸಬೇಕೆಂದೂ ತೀರ್ಮಾನವಾಗಿದೆ ರೇಷ್ಮೆ ಇಲಾಖೆಯ ಆಡಳಿತದಲ್ಲಿ ಕನಕನಹಳ್ಳಿಯಲ್ಲಿ ೨೦೦ 'ಬೇಸಿನ್' ಯಂತ್ರೋಪಕರಣಗಳೊಡನೆ ಫಿಲೇಚರ್ ರೇಷ್ಮೆ ಕಾರ್ಖಾನೆ ಏರ್ಪಡಿಸಲಾಗುವುದು ಅದರ ವೆಚ್ಚವನ್ನೆಲ್ಲಾ ಸಾರ್ವಭೌಮ ಸರ್ಕಾರದವರೇ ಪೂರ್ತಿಯಾಗಿ ವಹಿಸುತ್ತಾರೆ

ಜೋಗಿನ ವಿದ್ಯುಚ್ಛಕ್ತಿ ಯೋಜನೆಯ ಸಂಬಂಧದಲ್ಲಿ ೩೬,೦೦೦ ಅಶ್ವ ಸಾಮರ್ಥ್ಯದ ಪ್ರಮಾಣದಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲು ೨,೫೦,೫೦,೦೦೦ ರೂ ಗಳ ವೆಚ್ಚ ತಗಲುವುದಾಗಿ ಮೊದಲು ಅಂದಾಜಾಗಿದ್ದಿತು ಆಮೇಲೆ ಬದಲಾಯಿಸಿ ಮಂಜೂರುಮಾಡಿರುವ ಅಂದಾಜು ಮೊಬಲಗು ೪,೦೮,೨೦,೦೦೦ ರೂಪಾಯಿ ಈ ರೀತಿ ಹೆಚ್ಚುವುದಕ್ಕೆ ೬೦೦೦೦ ಅಶ್ವಸಾಮರ್ಥ್ಯದ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡಬೇಕೆಂದು ನಿರ್ಧರಿಸಿದುದೂ ಮುಂದೆ ೧,೨೮,೦೦೦ ಅಶ್ವ ಸಾಮರ್ಥ್ಯದ ಪರಿಮಾಣ ಉತ್ಪತ್ತಿ ಮಾಡಲು ಸಾಧ್ಯವಾಗುವಂತೆ ಕಟ್ಟಡದಲ್ಲಿ ಅನುಕೂಲಗಳನ್ನು ಮಾಡಿಸಿರುವುದು ಯುದ್ಧದ ದೆಸೆಯಿಂದ ವಿದ್ಯುಚ್ಛಕ್ತಿ ಯಂತ್ರಗಳ ಧಾರಣೆಗಳು ಅತಿಯಾಗಿ ಹೆಚ್ಚಿರುವುದೂ ಮುಖ್ಯವಾದ ಕಾರಣಗಳಾಗಿವೆ

ಪರಿಸಮಾಪ್ತಿ

ಈಗಿನ ಸಮಯದಲ್ಲಿ ನಮ್ಮೆಲ್ಲರ ಮನಸ್ಸನ್ನೂ ಅತ್ಯಂತ ಹೆಚ್ಚಾಗಿ ಹಿಡಿಯುತ್ತಿರುವ ವಿಚಾರವೆಂದರೆ ಯುದ್ಧದ ಮುನ್ನಡೆಯ ವಿಚಾರ ನಾನು ಈ ಭಾಷಣವನ್ನು ಮುಗಿಸುವುದಕ್ಕೆ ಮುಂಚೆ, ಅದರ ವಿಷಯವಾಗಿ ಒಂದೆರಡು ಸಂಗತಿಗಳನ್ನು ಸೂಚಿಸಲಿಚ್ಛಿಸುವೆನು ಈಗಿನದು, ಪ್ರಪಂಚವನ್ನೇ ಆವರಿಸಿರುವ ಯುದ್ಧ. ಸಮಸ್ತರೂ ಸರ್ವ ಸಾಮರ್ಥ್ಯವನ್ನೂ ವಿನಿಯೋಗಿಸಿ ಪೂರ್ಣ ಮನಸ್ಸಿನಿಂದ ಭಾಗವಹಿಸಬೇಕಾದ ಯುದ್ಧ ಯುದ್ಧದ ಮುನ್ನಡೆಯು, ಜನಜೀವನದಮೇಲೆ ಅನೇಕ ರೀತಿಗಳಲ್ಲಿ ಬಗೆಬಗೆಯ ಪರಿಣಾಮವನ್ನುಂಟುಮಾಡಿದೆ ಯುದ್ಧದ ಅಪಾಯವು ಭರತಖಂಡದ ಬಾಗಿಲಿಗೇ ಬಂದಿದೆ ಮೈಸೂರು ಸಂಸ್ಥಾನದಲ್ಲಿ ನಾವು ಬಹಳ ಆತಂಕದ ದಿನಗಳನ್ನು ಕಳೆಯಬೇಕಾಯಿತು ಆದರೆ, ಈಚೆಗೆ ಟ್ಯುನೀಷಿಯಾದಲ್ಲಿ ಮಿತ್ರರಾಷ್ಟ್ರಗಳವರು ಜಯಭೇರಿ ಹೊಡೆದ ಸುಯೋಗದ ದೆಸೆಯಿಂದ ಪಶ್ಚಿಮದ ಕಡೆಯಿಂದ ಶತ್ರುಭೀತಿಯುಂಟಾಗಲಾರದ ಭರವಸೆಯುಂಟಾಗಿದೆ ಕಾಲಚಕ್ರವು ಮಿತ್ರರಾಷ್ಟ್ರಗಳವರಿಗೆ ಅನುಕೂಲವಾಗಿ ತಿರುಗಿದೆಯೆಂಬಷ್ಟು ಮಾತ್ರ ಹೇಳುವ ಸ್ಥಿತಿಯಲ್ಲಿ ಈಗ ನಾವಿದ್ದೇವೆ ಶತ್ರುಗಳನ್ನು ಪೂರ್ತಿಯಾಗಿ ಸೋಲಿಸಿ, ಪೂರ್ಣ ವಿಜಯವನ್ನು ಕಾಣುವ ಸಮಯವು ಇನ್ನೂ ದೂರದಲ್ಲಿರಬಹುದು ಆದಾಗ್ಯೂ ನಾವುಗಳೆಲ್ಲರೂ ಲೇಶಮಾತ್ರವೂ ಎದೆಗುಂದದೆ ಧೈರ್ಯ, ಸ್ಥೈರ್ಯಗಳಿಂದಿದ್ದು ನಮ್ಮ ಸಮಸ್ತ ಸಾಧನ ಸಂಪತ್ತುಗಳನ್ನೂ ಸುವ್ಯವಸ್ಥಿತವಾಗಿ ಒಟ್ಟುಗೂಡಿಸಿ ಯುದ್ಧದಲ್ಲಿ ವಿಜಯವನ್ನು ಸಾಧಿಸುವ ಪ್ರಯತ್ನಗಳಿಗೆ ಇನ್ನುಮುಂದೆ ಕೂಡ, ಇದುವರೆಗಿನಂತೆಯೇ ವಿನಿಯೋಗಿಸುತ್ತಾ ಬರುವುದು ನಮ್ಮೆಲ್ಲರ ಆವಶ್ಯ ಕರ್ತವ್ಯವೇ ಸರಿ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ್ಟಿ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೩ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯೆ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೫ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೨ನೆಯ ಆವೃತ್ತಿ, ೩೦ ಸತ್ಪುರುಷರ ಫೋಟೋಗಳಿರುವುವು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಸಹಿತ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೮೪ ಪುಟ)	೮ ರೂ
A brief Life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	६ आ.
पुरुषसूक्तम् (वीरशैवप्रार्थनाभाष्योपेतम्)	४ आ.
नंदिकेश्वरकारिका (संस्कृत)	२ आ.

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ನಜರ್ಬಾದ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಶಿವಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೪ನೇ ಜೂನ್ ೧೯೪೩ [ಸಂಚಿಕೆ ೬

ನೂತನವಾಗಿ ಪ್ರಕಟವಾಗಿರುವ

ಗ್ರಂಥಗಳು

ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಶೈವೋಪನಿಷತ್ಸಂಗ್ರಹ	೪ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ಪಂಚಾಚಾರಪ್ರಕಾಶಿಕಾ	೨ ಆಣೆ

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಮಾಹೇಶ್ವರ ದೀಕ್ಷಾ ಸಮಾರಂಭ,

ಮನ್ನಳ್ಳಿ

ನಿಜಾಮು ಇಲಾಖಾ ಜಹೀರಾಬಾದ್ ತಾಲೂಕು ಮನ್ನಳ್ಳಿ ಗ್ರಾಮದಲ್ಲಿರುವ ಪೇಟೆ ಮಠದಲ್ಲಿ ಇದೇ ಸ್ವಭಾನುನಾಮ ಸಂವತ್ಸರ ವೈಶಾಖ ಬ॥ ೧ ಶುಕ್ರವಾರ ದಿವಸ ಅಲ್ಲಿಯ ಭಕ್ತಾದಿಗಳ ಅಭಿಪ್ರಾಯದ ಮೇರೆಗೆ ಸದರಿ ಮಠದ ಮಹಾಂತ ಸ್ವಾಮಿಗಳವರ ಸ್ಥಾನಕ್ಕೆ ಒಬ್ಬ ಮರಿದೇವರನ್ನು ನೇಮಿಸಲಾಯಿತು. ಈ ಕಾರ್ಯಕ್ಕಾಗಿ ಶ್ರೀ ಸಾವಿರದೇವರು ಶಿವಾನಂದ ಶಿವಾಚಾರ್ಯ ಸ್ವಾಮಿಗಳವರು ಮುಖ್ಯವಾಗಿ ಆಗಮಿಸಿದ್ದರು. ಮಠವು ಭವ್ಯವಾಗಿ ಅಲಂಕರಿಸಲ್ಪಟ್ಟಿತ್ತು. ಶ್ರೀ ಜಗದಾಚಾರ್ಯರ ಭಾವ ಚಿತ್ರಕ್ಕೂ ಪಂ॥ ಕಾಶೀನಾಥ ಶಿವಾಚಾರ್ಯರ ಭಾವ ಚಿತ್ರಕ್ಕೂ ಅಭಿಷೇಕವಾದಮೇಲೆ ವೇ॥ ಚನ್ನಬಸಯ್ಯನವರ ಜ್ಯೇಷ್ಠ ಪುತ್ರ ಚಿ॥ ರೇವಣ ಸಿದ್ಧಯ್ಯನವರನ್ನು ಶಾಸ್ತ್ರ ಪ್ರಕಾರವಾಗಿ ಮಹಾಂತ ಸ್ವಾಮಿಗಳವರ ಪಾದದ ಕೆಳಗೆ ಮರಿಯನ್ನು ಮಾಡುವ ಕಾರ್ಯವು ನೆರವೇರಿತು. ಶ್ರೀ ಪರ್ವತ ಶಿವಾಚಾರ್ಯರು ಲಾಡಗೇರಿ, ಇವರು ವೈದಿಕ ಕರ್ಮವನ್ನು ನೆರವೇರಿಸಿದರು. ಅಲ್ಲದೆ ಶ್ರೀ ಸದ್ಯೋಜಾತ ಶಿವಾಚಾರ್ಯರು ಬೇಕಳಗಿ, ಶ್ರೀದಾರುಕ ಶಾಖಾ ಮಠದ ಸಿದ್ಧಲಿಂಗ ಶಿವಾಚಾರ್ಯರು. ಮನ್ನಳ್ಳಿ ಮಠದ ಬಸಶಂಕರಯ್ಯನವರು, ಶ್ರೀಗೋಪನಹಳ್ಳಿ ನಾಗೇಂದ್ರಪ್ಪನವರು ಮೊದಲಾದವರು ಆಗಮಿಸಿದ್ದರು. ಇವರೆಲ್ಲರ ಸಮ್ಮುಖದಲ್ಲಿ ಚಿ॥ ರೇವಣಸಿದ್ಧಯ್ಯನಿಗೆ ಮಾಹೇಶ್ವರ ದೀಕ್ಷಾ ಸಮಾರಂಭವು ವಿಧ್ಯುಕ್ತವಾಗಿ ನೆರವೇರಿತು. ಆ ಮೇಲೆ ಜಗದಾಚಾರ್ಯರ ಜಯಘೋಷದೊಡನೆ ಕಾರ್ಯವು ಸಮಾಪ್ತಿಗೊಂಡಿತು.

ಶಾಂತಪ್ಪ, ಮನ್ನಳ್ಳಿ.

ವಿವಾಹಮಹೋತ್ಸವ

ಇದೇ ಸ್ವಭಾನು ಸಂವತ್ಸರ ವೈಶಾಖ ಶು॥ ೯ ಗುರುವಾರ ದಿವಸ ಹುಲಗೂರು ಪಟ್ಟಣಶೆಟ್ಟರ ಸಂಗಪ್ಪನವರ ಮಕ್ಕಳು ಚಿ॥ ವೀರಪ್ಪನೆಂಬವರನಿಗೂ ಶ್ರೀಮಾನ್ ಬಿ ಎಸ್ ಬೆಂಡೀಗೇರಿ ಬಿ ಎ ಎಲ್ ಎಲ್ ಬಿ, ವಕೀಲ ಹುಬ್ಬಳ್ಳಿ ಇವರ ಪುತ್ರಿ ಚಿ॥ ಸೌ॥ ನೀಲವ್ವನೆಂಬ ವಧುವಿಗೂ ವಿವಾಹಮಹೋತ್ಸವವು ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಶ್ರೀಜಗದ್ಗುರು ಪೀಠಾಧಿಪತಿಗಳಿಗೆ ಬಿನ್ನೈಸಿಕೊಂಡ ಪ್ರಕಾರ ಶ್ರೀ ಜಗದ್ಗುರು ಪಂಚಪೀಠಾಧಿಪತಿಗಳು ವಧೂವರರ ಅಭಿವೃದ್ಧಿಗೋಸ್ಕರ ಶುಭಾಶೀರ್ವಾದ ಪತ್ರಿಕೆಯೊಡನೆ ಫಲಮಂತ್ರಾಕ್ಷತೆಗಳನ್ನು ಆಶೀರ್ವದಿಸಿದ್ದರು. ಕಾರ್ಯಸ್ಥರಾದ ಶ್ರೀಯುತ ವೀರಪ್ಪನವರ ಆಮಂತ್ರಣವನ್ನು ಅಂಗೀಕರಿಸಿ ಬೆಂಗಳೂರಿಂದ ಮಹಂತಿನಮಠಾಧ್ಯಕ್ಷ ಶ್ರೀ ಷ॥ ಬ್ರ॥ ಗಂಗಾಧರ ಶಿವಾಚಾರ್ಯ ಸ್ವಾಮಿಗಳವರು ಆಗಮಿಸಿದ್ದರು. ವಂಶ ಗುರುಗಳಾದ ಹಿರೇ ಬೆಂಡೀಗೇರಿ ಕಂಬಾಳಿ ಮಠದ ಶ್ರೀ ಪಟ್ಟಾಧ್ಯಕ್ಷರು ಆಗಮಿಸಿದ್ದರು. ಬಂಕಾಪುರ ನಿವಾಸಿಗಳಾದ ಸುಣ್ಣಕಲ್ಲು ಬಿದರಿ ಆರಾಧ್ಯಮಠದ ವೇ॥ ಪಂ॥ ಧರ್ಮಭೂಷಣ ಹರೀಶ್ವರಶಾಸ್ತ್ರಿಗಳವರ ವೈದಿಕತ್ವದಲ್ಲಿ ವಿವಾಹ ಕಾರ್ಯಕಲಾಪಗಳೆಲ್ಲ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು. ಈಗಿನ ಕಠಿಣ ಪರಿಸ್ಥಿತಿಯನ್ನು ಲಕ್ಷಿಸದೆ ಗ್ರಾಮದ ೫-೬ ಸಾವಿರ ಜನರಿಗೆ ಅನ್ನಸಂತರ್ಪಣೆ ಮಾಡಲ್ಪಟ್ಟಿತು. ಈ ಸನ್ನಿವೇಶದಲ್ಲಿ ಗುರುವರ್ಗದ ಉನ್ನತಿಗಾಗಿ ಜನ್ಮವೆತ್ತಿರುವ ಪ್ರಭಾಪೋಷಣೆಗಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟವು. ನೂತನ ವಧೂವರರಿಗೆ ಜಗದಾಚಾರ್ಯರು ಉತ್ತರೋತ್ತರ ಅಭಿವೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇನೆ

ಸಂಗಪ್ಪ ಅತ್ತೀಗೇರಿ

ಸ್ವೀಕಾರ

ಬೆಳಗಾಂವ ಜಿ॥ ಸಂಪಗಾಂವ ತಾ॥ ನಾಗನೂರು ಗ್ರಾಮದಲ್ಲಿ ಶ್ರೀ ಅಡ್ಡಿಮಠದ ಸ್ವಾಮಿಗಳವರ ಗುರುತ್ವದಲ್ಲಿ ನೆರವೇರಿದ ಮಾಹೇಶ್ವರದೀಕ್ಷಾ ಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಕೂಡಿದ **23** ರೂ ಗಳು ಮೇಲ್ಕಂಡ ಶ್ರೀಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಟವನ್ನಿನಲ್ಲಿರುವ ತೆಂಗಿನಕಾಯಿ ಕಲ್ಯಾಣಪ್ಪಾ ರುದ್ರಪ್ಪ ಇವರ ಪುತ್ರಿ ಚಿ॥ ಸೌ॥ ಗಂಗವ್ವನನ್ನು ಹುಬ್ಬಳ್ಳಿಯಲ್ಲಿರುವ ಮ॥ ರಾ॥ ಹರ್ತಿ ಮ॥ ಬಸವಣ್ಣೆಪ್ಪನವರ ಪುತ್ರ ಚಿ॥ ಶಿವಮೂರ್ತೆಪ್ಪನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **3** ರೂಪಾಯಿ ಮತ್ತು ಹುಬ್ಬಳ್ಳಿಯಲ್ಲಿರುವ ಮ॥ ಹರ್ತಿ ವೀರಪ್ಪನವರ ಪುತ್ರ ಚಿ॥ ಈಶ್ವರಪ್ಪನಿಗೆ ಸವದತ್ತಿಯಲ್ಲಿರುವ ಮ॥ ಗಂಗಪ್ಪ ವಾಲಿ ಇವರ ಪುತ್ರಿ ಚಿ॥ ಸೌ॥ ಕಾಶೀಬಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **2** ರೂಪಾಯಿ ಒಟ್ಟು **5** ರೂಪಾಯಿಗಳು ಇವರ ವಂಶಗುರುಗಳಾದ ಶ್ರೀ॥ಷ॥ಬ್ರ॥ ಸತ್ತಿಗೇರಿ ಹಿರೇಮಠದ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಬಳ್ಳಾರಿ ಜಿ॥ ಹೊಸಪೇಟೆ ಟವನ್ನಿನಲ್ಲಿರುವ ವೇ॥ ಕನಕಗಿರಿ ಮಠದ ಕಡ್ಡೆ ಸಾಂಬಯ್ಯನವರ ಪುತ್ರ ಚಿ॥ ಸಣ್ಣಕೊಟ್ರಯ್ಯನಿಗೆ ಗದಗಿನಲ್ಲಿರುವ ವೇ॥ ಕಡರಳ್ಳಿ ಹಿರೇಮಠದ ವೇ॥ ಕರಿಬಸಯ್ಯನವರ ಪುತ್ರಿ ಚಿ॥ ಸೌ॥ ವೀರವ್ವನನ್ನು ತಂದು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ **5** ರೂಗಳು ಹೊಸಪೇಟೆಯಲ್ಲಿರುವ ವೇ॥ ವೈದ್ಯ ಮೈಸೂರು ಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ॥ ತಿರುವಿನಹಳ್ಳಿ ಗ್ರಾಮದಲ್ಲಿ ಶ್ರೀಮತಿ ಕಲ್ಲವ್ವ ಕೋಂ ಶಿವಜೋಗಯ್ಯ ಕರವೀರಯ್ಯನವರ ಸಾ॥ ಅಣ್ಣಿಗೇರಿ ಇವರು ಇದೇ ತಿಂಗಳು 2 ನೆಯ ತಾರೀಖು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ತೆಗೆಯಿಸಿದ **2** ರೂಪಾಯಿ ಮತ್ತು ಇದೇ ಗ್ರಾಮದ ಶ್ರೀಮತಿ ಬಸವಣ್ಣೆವ್ವಾ ಕೋಂ ಗುರುಶಾಂತಪ್ಪಾ ಕುಬಸದ ಇವರು ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು **3** ರೂಪಾಯಿಗಳು ವೇ॥ ಬಸವಣ್ಣಯ್ಯ ಹಿರೇಮಠ ತಿರುವಿನಹಳ್ಳಿ ಇವರ ದ್ವಾರಾ ತಲ್ಪಿರುತ್ತವೆ

ಬೀದರ ಜಿ॥ ಮನ್ನಳ್ಳಿಯಲ್ಲಿರುವ ಪೇಟೆಮಠದ ಶ್ರೀ ಮಹಾಂತಸ್ವಾಮಿಗಳವರ ಪಾದದ ಕೆಳಗೆ ವೇ॥ ಚನ್ನಬಸಯ್ಯನವರ ಜ್ಯೇಷ್ಠ ಪುತ್ರ ಚಿ॥ ರೇವಣಸಿದ್ಧಯ್ಯನನ್ನು ವಟುವನ್ನಾಗಿಮಾಡಿ ಮಾಹೇಶ್ವರದೀಕ್ಷೆಯನ್ನು ನೆರವೇರಿಸಿದ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 2 ರೂಗಳನ್ನು ಕಳುಹಿಸಿರುತ್ತಾರೆ.

ಹುವ್ವಿನಹಡಗಲಿ ಗ್ರಾಮದ ಕೈ॥ ಗಂಗಾಪುರಮಠದ ಗವಿಯಯ್ಯನವರ ಪುಣ್ಯತಿಥಿಯಲ್ಲಿ ತೆಗೆಯಿಸಿದ 1 ರೂ ಯು ಮ॥ ರಾ॥ ಸೊಪ್ಪಿನ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತದೆ.

ಚಂದಾದಾರರಲ್ಲಿ ವಿಜ್ಞಾಪನೆ

ವಾರ್ಷಿಕ ಚಂದಾ ೨ ರೂ ೧೨ ಆಣೆ

ವಿ. ಪಿ. ಚಾರ್ಜು ಸೇರಿ ೩ ರೂಪಾಯಿ

ಈ ಪತ್ರಿಕೆಯು ಒನ್ನತ್ತಿ ಸ್ವಭಾನು ಸಂ॥ ಪಂಚಮಿಗೆ ೧೭ ವರ್ಷಗಳು ತುಂಬಿ ೧೮ ನೆಯ ವರ್ಷವು ಪ್ರಾರಂಭವಾಗಿರುವುದು ವರ್ಷಾರಂಭದಿಂದ ಚಂದಾ [illegible]ರುವ ಸರ್ವರಿಗೂ ಇನ್ನು ಮುಂದೆ ಪತ್ರಿಕೆಯನ್ನು ವಿ ಪಿ ಮಾಡಬೇಕಾಗುತ್ತದೆ ವಿ. ಪಿ [illegible]ದಿಂದ ಚಂದಾದಾರರಿಗೆ ೪ ಆಣೆ [illegible] [illegible]ದರಿಂದ ಚಂದಾದಾರರೆಲ್ಲರೂ ಕೂಡಲೆ ೨ ರೂ ೧೨ ಆಣೆಗಳನ್ನು ಮನಿಯಾರ್ಡರ್ ದ್ವಾರಾ [illegible]ಬೇಕು ಮನಿಯಾರ್ಡರ್ ಕಳಿಸುವ ಚಂದಾದಾರರು ತಮ್ಮ ಹೆಸರಿನ ಪಕ್ಕದಲ್ಲಿರುವ ನಂಬರನ್ನು ಮಾತ್ರ ದಯಯಿಟ್ಟು ಮರೆಯ[illegible]

ಯುದ್ಧದಿಂದ [illegible] ರಷ್ಟು ಹೆಚ್ಚಾಗಿರುವ ವಿಷಯವು [illegible] ಇಂತಹ ಕಠಿನ ಪರಿಸ್ಥಿತಿಯಲ್ಲಿ [illegible] ಪತ್ರಿಕೆಯವರೂ ಚಂದಾ ಹಣವನ್ನು ಹೆಚ್ಚು ಮಾಡಿದ್ದಾರೆ ನಾವು [illegible] ಹೆಚ್ಚು ಮಾಡದೆ ವರ್ಷ[illegible] ಮಾತ್ರ ಹೇಳಿಸಿದ್ದೇವೆ ಆದುದರಿಂದ [illegible] ಪತ್ರಿಕೆಯ ವಿಷಯದಲ್ಲಿ ಮೊದಲಿನಂತೆ ಅಭಿಮಾನವಿಟ್ಟು ವಿ ಪಿ ಯನ್ನು ಸ್ವೀಕರಿಸಿ ಪ್ರೋತ್ಸಾಹಿಸಬೇಕೆಂದು [illegible]ಸುತ್ತೇವೆ

ಸಂ —

ಪಂಚಾಚಾರ್ಯಪ್ರಭಾ.

೧೯೪೩ನೆಯ ಜೂನ್ ತಾ ೧[illegible]ನೆಯ ಸೋಮವಾರ

ದೈವಾಭಿಮಾನ.

[illegible]ಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ದೈವಾಭಿಮಾನವೂ, ಸ್ವಾಭಿಮಾನವೂ, ಸ್ವಜನಾಭಿಮಾನವೂ, ಸ್ವಜಾತ್ಯಭಿಮಾನವೂ, ಸ್ವಮತಾಭಿಮಾನವೂ, ಸ್ವಗ್ರಾಮಾಭಿಮಾನವೂ, ಸ್ವದೇಶಾಭಿಮಾನವೂ, ಸ್ವರಾಷ್ಟ್ರಾಭಿಮಾನವೂ ಇದ್ದೇ ಇರಬೇಕು ಇವುಗಳಲ್ಲಿ ಸ್ವದೈವಾಭಿಮಾನವು ಇಲ್ಲದಿದ್ದರೆ ದೇವರೊಲುಮೆಯುಂಟಾಗುವುದಿಲ್ಲ ಸ್ವಾಭಿಮಾನವಿಲ್ಲದಿದ್ದರೆ ಆತ್ಮಸೌಖ್ಯವುಂಟಾಗುವುದಿಲ್ಲ ಸ್ವಜನಾಭಿಮಾನವಿಲ್ಲದಿದ್ದರೆ ತನ್ನ ಬಂಧುಬಾಂಧವರ ರಕ್ಷಣೆಯಾಗುವುದಿಲ್ಲ ಸ್ವಜಾತ್ಯಭಿಮಾನವಿಲ್ಲದಿದ್ದರೆ ವರ್ಣಸಾಂಕರ್ಯವುಂಟಾಗಿ ಆಶ್ರಮಧರ್ಮಗಳು ಹಾಳಾಗಿ ಹೋಗುವುವು ಸ್ವಮತಾಭಿಮಾನವಿಲ್ಲದಿದ್ದರೆ ಮತಾಭಿವೃದ್ಧಿಯಾಗುವುದಿಲ್ಲ ಸ್ವಗ್ರಾಮಾಭಿಮಾನವಿಲ್ಲದಿದ್ದರೆ ಗ್ರಾಮಪುರೋಭಿವೃದ್ಧಿಯು ಕೆಟ್ಟುಹೋಗುವುದು ಸ್ವದೇಶಾಭಿಮಾನವಿಲ್ಲದಿದ್ದರೆ ದೇಶವು ಪರಾಕ್ರಾಂತವಾಗಿ ಹೀನಾವಸ್ಥೆಯನ್ನು ಪಡೆಯುವುದು ಸ್ವರಾಷ್ಟ್ರಾಭಿಮಾನವಿಲ್ಲದಿದ್ದರೆ ಆ ರಾಷ್ಟ್ರವು ಪರದಾಸ್ಯವೃತ್ತಿಯನ್ನನುಭವಿಸಬೇಕಾಗುವುದು ಹೀಗೆ ಸ್ವದೈವಾಭಿಮಾನವೇ ಆದಿಯಾಗಿ ಸ್ವರಾಷ್ಟ್ರಾಭಿಮಾನಾಂತರ್ಗತವಾದ ಸಕಲ ಅಭಿಮಾನಗಳನ್ನು ರಕ್ಷಿಸಿಕೊಳ್ಳಬೇಕಾದುದು ಮಾನವನ ಆದ್ಯ ಕರ್ತವ್ಯವು ಇವುಗಳಲ್ಲಿ ಒಂದು ಅಭಿಮಾನವಿಲ್ಲದಿದ್ದರೂ ಅನೇಕ ವಿಧಗಳಾದ ಅನರ್ಥಪರಂಪರೆಗಳು ಬಂದೊದಗುತ್ತವೆ ಇವುಗಳಲ್ಲಿ ಸ್ವದೈವಾಭಿಮಾನವೇ ಪ್ರಧಾನವಾದುದು ಈ ಅಭಿಮಾನವು ಆತ್ಮಕಲ್ಯಾಣಕ್ಕೆ ಸಾಧನವಾಗುವುದರಿಂದ ಪ್ರಥಮತ. ಇದನ್ನು ದೃಢಪಡಿಸಬೇಕು ಸಾರ್ವಭೌಮನಂತೆ ರಾರಾಜಿಸುವ ಆತ್ಮನು [illegible]ವಾಗಲೂ ಪವಿತ್ರನಾಗಿಯೇ ಇರಬೇಕು ಆತ್ಮರಕ್ಷಣೆಯೆಂಬುದು ಕೇವಲ ದೈವಬಲದಿಂದಾಗಬೇಕಲ್ಲದೆ ಇನ್ನಾವ ಬಲದಿಂದಲೂ ಆಗಲಾರದು 'ಆತ್ಮಾರ್ಥಂ ಪೃಥಿವೀಂ ತ್ಯಜೇತ್' ಎಂಬ ವಾಕ್ಯವನ್ನು ವಿಚಾರಮಾಡಿ ನೋಡಿದರೆ ಆತ್ಮರಕ್ಷಣೆಗೆ ಸುಖಸಂಪತ್ತುಗಳೆಷ್ಟಿದ್ದರೂ ಅವುಗಳಿಂದೇನೂ ಪ್ರಯೋಜನವಿಲ್ಲವೆಂದೂ, ಆತ್ಮರಕ್ಷಣಾನುಕೂಲಗಳಾದ ವಿಪತ್ಪರಂಪರೆಯು ಎಷ್ಟಿದ್ದರೂ ಅದು ಇಷ್ಟಾಪತ್ತಿಯೇ ಎಂದೂ ಎಲ್ಲರಿಗೂ ಸ್ಪಷ್ಟವಾಗಿ ಗೊತ್ತಾಗುತ್ತದೆ ಸ್ವಜನ, ಸ್ವಜಾತಿ, ಸ್ವಮತ ಸ್ವಗ್ರಾಮ, ಸ್ವದೇಶ, ಸ್ವರಾಷ್ಟ್ರ ಎಂಬ ಭೂಮಿಕೆಗಳೆಲ್ಲವೂ ಸ್ವದೈವತಾಧಾರದಲ್ಲಿ ನಿಂತಿರುತ್ತವೆ ಒಂದು ಮನೆಯನ್ನು ಕಟ್ಟಬೇಕಾದರೆ ಅದಕ್ಕೆ ತಳಹದಿಯೇ ಮುಖ್ಯವಾದುದು ತಳಹದಿಯು ಭದ್ರವಾಗಿದ್ದರೆ ಅದರ ಮೇಲೆ ಎಂಥ ಮಹಡಿಯನ್ನಾದರೂ ಕಟ್ಟಬಹುದು ಎಂಥ ಕಿಡಿಕಿಗಳನ್ನಾದರೂ ಇಟ್ಟುಕೊಳ್ಳಬಹುದು ಎಂಥ ಕಂಬಗಳನ್ನಾದರೂ ನಿಲ್ಲಿಸಬಹುದು ಮನೋರಂಜಕವಾದ ಚಿತ್ರವಿಚಿತ್ರಗಳಾದ ಕಲಶಗಳನ್ನು ಮಾಡಿಸಿ [illegible]ದ ಅಲಂಕಾರಗೊಳಿಸಬಹುದು ಆಧಾರವೇ ಬಲವಾಗಿಲ್ಲದಿದ್ದರೆ ಮೇಲೆ ಮೇಲೆ ಮಾಡುವ [illegible] ಪ್ರಯೋಜನವೇನು? [illegible] ಕ್ರೀಸ ಶಿರಸ್ಥ[illegible] [illegible] ಕಣ್ಣು ಮೂಗು [illegible] ಕೈಕಾಲುಗಳನ್ನು ರಕ್ಷಿಸಿದರೂ [illegible] ತಲೆಯು ಕೆಟ್ಟುಹೋದ [illegible] ಅವಯವರಕ್ಷಣೆಯಿಂದ ಆಗುವ [illegible] ಏನು? ಹಾಗೆ ಮನೆಯ ತಳಹದಿಯಂತೆಯೂ [illegible] ತಲೆಯಂತೆಯೂ ಇರುವ ದೈವಾಭಿಮಾನವನ್ನು ಬಿಟ್ಟು ತನಯ ಮೇಲೆ ಇರುವ [illegible] ಓಡಾಡುವ ಮನುಷ್ಯನು ಸಿನಿಮಾದಲ್ಲಿ ಹಾಡುವ ಕುಣಿಯುವ [illegible] ಸುಖಾನುಭವ ಮಾಡುವ ಚಲನಚಿತ್ರಗಳಿಗೆ ಸಮಾನನೆಂಬುವಲ್ಲಿ ಸಂಶಯವಿಲ್ಲ ಪ್ರಾಣವನ್ನು ದಾನ ಮಾಡಲು [illegible]ವರಿಗೆ ವಿಧೇಯನಾಗಿದ್ದು ಬಳಿಕ ತನ್ನವರನ್ನೂ ತನ್ನ ಜಾತಿಯವರನ್ನೂ ತನ್ನ ಮತದವರನ್ನೂ ಆಮೇಲೆ ತನ್ನ ಊರನ್ನೂ ತನ್ನ ದೇಶವನ್ನೂ ತನ್ನ ರಾಷ್ಟ್ರವನ್ನೂ ಉದ್ಧರಿಸುವುದರಲ್ಲಿ ತೊಡಗಬೇಕು ತನ್ನ ಆತ್ಮನನ್ನೂ, ತನ್ನವರನ್ನೂ ತನ್ನ ಜಾತಿಯವರನ್ನೂ, ತನ್ನ ಮತೀಯರನ್ನೂ ತನ್ನ ಗ್ರಾಮವನ್ನೂ ತನ್ನ ದೇಶವನ್ನೂ ಉದ್ಧರಿಸದಿದ್ದವನು ಒಂದು ರಾಷ್ಟ್ರವನ್ನುದ್ಧರಿಸುವುದು [illegible] ಹಾಸ್ಯಾಸ್ಪದವಲ್ಲವೆ? ನೇತಾರನೆಯಾಗಲಿ ರಾಷ್ಟ್ರರಕ್ಷಕನಾಗಲಿ ಎಲ್ಲವೂ ಆತ್ಮರಕ್ಷೆಯನ್ನು ಹೊಂದಿಸುವುದಕ್ಕಾಗಿಯೇ ಹೊರತು ತಮ್ಮ ತಮ್ಮ ಸ್ವೇಚ್ಛಾವಿಹಾರಕ್ಕಾಗಿ ಮನಬಂದಂತೆ ಕುಣಿದು ತೇಗಿ ಮಹಾರಾಕ್ಷಸರಂತೆ ಲೋಕಪ್ರಸಿದ್ಧರಾಗುವುದು ದೇಹಾತ್ಮವಿಯೋಗವಾದ ಬಳಿಕ ನರಕದಲ್ಲಿ ಕ್ರಿಮಿಕೀಟಾದಿ ಹೀನಜನ್ಮಗಳನ್ನೆತ್ತುವುದಕ್ಕಲ್ಲ ಯಾವನು ಈ ಮೇಲೆ ಹೇಳಿದ ಸಪ್ತವಿಧ[illegible]ಗಳಲ್ಲಿಯೂ ಸ್ವಲ್ಪವೂ ಲೋಪವಿಲ್ಲದಂತೆ ಕ್ರಮಕ್ರಮದಿಂದ ಮುಂದುವರಿಯುವನೋ ಅವನೇ ಮಹಾ[illegible] ಪ್ರಸಿದ್ಧನೆನಿಸಿಕೊಳ್ಳುತ್ತಾನೆ ಹಿಂದಿನ ಅಷ್ಟು ಮಹಿಮಾಶಾಲಿಗಳಾದ ಮಹಾತ್ಮರು ಆತ್ಮಬಲಶಾಲಿಗಳಾಗಿದ್ದರು ಆದುದರಿಂದಲೇ ಅವರ ನಾಮಾವಳಿಗಳು ಸುವರ್ಣಾಕ್ಷರದಂತೆ ಎಲ್ಲರ ಕಣ್ಣುಮುಂದೆ ಕಂಗೊಳಿಸುತ್ತಲಿವೆ ಸ್ವದೈವಾಭಿಮಾನದಿಂದೊಡಗೂಡಿದ ರಾಷ್ಟ್ರಾಭಿಮಾನಿಗಳನ್ನು ಮಾತ್ರ [illegible]ಯಾಗಿ ಎಲ್ಲರೂ ಸ್ತೋತ್ರಮಾಡುವರು ಇದಕ್ಕೆ ಶಿವಾಜಿ ಮುಂತಾದ ಮಹಾರಾಜರುಗಳೇ ಬಲವಾದ ಸಾಕ್ಷಿಯಾಗಿದ್ದಾರೆ ಈಗಿನ ವಾತಾವರಣವೇ ಒಂದು ವಿಧವಾಗಿ ಬೀಸುತ್ತಲಿದೆ ಕೆಲವರು ಸ್ವರಾಷ್ಟ್ರಾಭಿಮಾನವನ್ನು ಅಭಿನಯಿಸುತ್ತ ಸ್ವದೈವಾಭಿಮಾನ ಸ್ವಮತಾಭಿಮಾನವನ್ನು ಅಲ್ಲಗಳೆಯುತ್ತಾರೆ ಇಂಥವರಿಗೆ ಆತ್ಮರಕ್ಷಣೆಯೂ ದೇಶರಕ್ಷಣೆಯೂ ಹೇಗೆ ತಾನೆ ಸಂಭವಿಸುವವು? 'ಜಾಣನು ಲೌಕಿಕ ಪರಮಾರ್ಥ ಎರಡನು ಮಾಣದೆ ಕೂಡಿ ನಡೆಸುತಿಹನಿಂತು" ಎಂಬಂತೆ ಪ್ರತಿಯೊಬ್ಬ ಭಾರತೀಯನೂ ಆಸ್ತಿಕಮತಾವಲಂಬಿಯಾದುದರಿಂದ ಪಾರಮಾರ್ಥಿಕ ಲೌಕಿಕಗಳೆರಡಕ್ಕೂ ವಿರೋಧವಿಲ್ಲದಂತೆ ನಡೆಯುವುದೇ ಜಾಣತನವೆಂದು ಅನೇಕ ಮಹಾತ್ಮರು ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದರೂ ಅದನ್ನೆಲ್ಲಾ ಮರೆತು ಸ್ವಮತಕ್ಕೂ ಸ್ವಜಾತಿಗೂ ಸ್ವಜನರಿಗೂ ಸ್ವದೇಶಕ್ಕೂ ತರ್ಪಣವನ್ನಿತ್ತು ಕೇವಲ ಶೂನ್ಯಹೃದಯರಾಗಿ ರಾಷ್ಟ್ರಕೂಟದಲ್ಲಿ ಬೆರೆತರೆ ಅದು ದೈವದ್ರೋಹಿಯಾದ ರಾವಣರಾಜ್ಯವಾಗುವುದಲ್ಲದೆ ರಾಮರಾಜ್ಯವೆನಿಸಲಾರದು ಮನುಷ್ಯನಾದವನಿಗೆ ಐಹಿಕಸೌಖ್ಯ ಒಂದೇ ಮುಖ್ಯಧ್ಯೇಯವಲ್ಲ ಪಾರಮಾರ್ಥಿಕಮಾರ್ಗಕ್ಕೆ ವಿರೋಧವಿಲ್ಲದಂತೆ ಐಹಿಕಸೌಖ್ಯವನ್ನು ಹೊಂದುವುದೇ ಮುಖ್ಯಧ್ಯೇಯವು ಎರಡು ಕಣ್ಣುಗಳಂತಿರುವ ಇಂಥ ಐಹಿಕ ಪಾರಮಾರ್ಥಿಕ ಮಾರ್ಗಗಳೆರಡಕ್ಕೂ ಸಾಧಕವಾದ ಸ್ವದೈವಾಭಿಮಾನಾದಿ ಸ್ವರಾಷ್ಟ್ರಾಭಿಮಾನಾಂತವಾದ ಸಕಲಾಭಿಮಾನವನ್ನು ಬಿಡದೆ ಇಹಪರಸೌಖ್ಯಭಾಗಿಗಳಾಗಬೇಕೆಂದು ತಿಳಿಸುತ್ತೇವೆ

ಯುದ್ಧವಾರ್ತೆ.

ರಷ್ಯದ ಕೈಯಲ್ಲಿ ಸೋಲುವುದಕ್ಕಿಂತ ಇಂಗ್ಲಿಷರ ಕೈಯಲ್ಲಿ ಸೋಲು ಮೇಲು

ಜರ್ಮನಿಗೆ ಸೋಲು ಖಂಡಿತವೆಂದು ಜರ್ಮನರಿಗೆ ಗೊತ್ತಾಗಿದೆ ಆದರೆ ರಷ್ಯದ ಕೈಯಲ್ಲಿ ಸೋಲುವುದಕ್ಕಿಂತ ಬ್ರಿಟನ್—ಅಮೆರಿಕರ ಕೈಯಲ್ಲಿ ಸೋಲುವುದು ಮೇಲೆಂದು ಜರ್ಮನರು ತಿಳಿದಿದ್ದಾರೆ ಎಂಬುದಾಗಿ ಒಂದು ವಾರ್ತೆಯು ಲಂಡನ್ನಿನಲ್ಲಿರುವ ಫ್ರೆಂಚರಲ್ಲಿ ಹುಟ್ಟಿಕೊಂಡಿದೆ

ಜರ್ಮನಿಯ ಸಿದ್ಧತೆ

ಡೋವರ್ ಜಲಸಂಧಿಯಿಂದಲೇ ಜರ್ಮನರು ತಮ್ಮ ರಹಸ್ಯ ದುರ್ಗಮ ದುರ್ಗಗಳನ್ನು ರಚಿಸಿಕೊಂಡಿದ್ದಾರೆ ಇಂಗ್ಲೆಂಡಿನ ತೀರಗಳಿಗೆದುರಾಗಿ ಫ್ರೆಂಚ್ ನೆದರ್‌ಲೆಂಡ್ ತೀರಪ್ರದೇಶಗಳಲ್ಲಿ ದುರ್ಗಮವಾದ ವಿಮಾನ ವಿರೋಧಕ ಕ್ಷೇತ್ರಗಳಿವೆ ಇಲ್ಲಿನವರಿಗೆ ಸಣ್ಣ ದೋಣಿಗಳ ಮೂಲಕ ಶಸ್ತ್ರಾಸ್ತ್ರಗಳ ಸರಬರಾಯಿ ಏರ್ಪಾಡಿದೆ ಧಾಳಿ ಮಾಡಲು ಬರುವ ಸೈನಿಕರಿಗೆ ಇವು ಮೊದಲನೆಯ ಏಟನ್ನು ಹಾಕುವವೆಂದೂ ಉತ್ತರಸಮುದ್ರ, ಬಿಸ್ಕೆ ಕೊಲ್ಲಿ ಮತ್ತು ಫ್ರೆಂಚ್ ತೀರಗಳಲ್ಲಿ ಗುಪ್ತ ಕೋಟೆಗಳು ಸಾಲುಸಾಲಾಗಿ ನಿಂತಿವೆ ಎಂದು ಜರ್ಮನರು ಜಂಭ ಕೊಚ್ಚುತ್ತಿದ್ದಾರೆ

ರಷ್ಯಾ ರಣರಂಗ

೭೦ ಡಿವಿಜನ್‌ಗಳ ೧೦ ಲಕ್ಷ ಸೇನೆಯನ್ನು ಶೇಖರಿಸಿ ಮಾಸ್ಕೋಮೇಲೆ ಧಾಳಿಮಾಡಲು ಹಿಟ್ಲರನು ಹೊಂಚುತ್ತಿದ್ದಾನೆ ಎಂದು ತುರ್ಕಿಯಲ್ಲಿ ಹೇಳಲಾಗುತ್ತಿದೆ ರಷ್ಯನರು ಹಗಲಿರುಳೂ ಸತತವಾಗಿ ಜರ್ಮನರ ಕೇಂದ್ರ ಸ್ಥಾನಗಳ ಮೇಲೂ ಕೈಗಾರಿಕೆ ಪ್ರದೇಶಗಳ ಮೇಲೂ ಧಾಳಿಮಾಡುತ್ತಾ ಅಸಾಧ್ಯ ನಷ್ಟವುಂಟು ಮಾಡುತ್ತಿದ್ದಾರೆ ಗೋರಿಲ್ಲಾಗಳು ಉಕ್ರೈನಿನಲ್ಲಿ ಅವಾಂತರ ಮಾಡುತ್ತಾ ೪,೨೨೭ ಜರ್ಮನರನ್ನು ಕೊಂದುಹಾಕಿದ್ದಾರೆ ರಷ್ಯನ್ ವಿಮಾನಗಳು ೬ ಜರ್ಮನ್ ಏರೋಡ್ರೋಂಗಳ ಮೇಲೆ ಭಾರಿ ಬಾಂಬು ಮಳೆ ಸುರಿಸಿದವು ಬಾಲ್ಟಿಕ್‌ನಲ್ಲಿ ಶತ್ರುವಿನ ಒಂದು ಟ್ರಾನ್ಸ್‌ಪೋರ್ಟು ಹಡಗೂ ೩ ಪೆಟ್ರೋಲ್ ದೋಣಿಗಳೂ ನಾಶವಾದವು ಎಂದು ಮಾಸ್ಕೋ ಪ್ರಕಟಣೆ ತಿಳಿಸುತ್ತದೆ

ದಾಳಿಯನ್ನೆದುರಿಸಲು ಇಟಲಿಯು ಸಿದ್ಧವಾಗಿದೆ

ಇಟಲಿ ಸೇನೆಯು ದಂಡಯಾತ್ರೆಯನ್ನು ಎದುರಿಸಲು ಸಿದ್ಧವಿದೆಯೆಂದೂ, ಮಿತ್ರರು ಟ್ಯುನೀಷಿಯಾ, ಮಾಲ್ಟಾ ಮಧ್ಯವಿರುವ ಲಂಪೆಡೂಸಾ ದ್ವೀಪದಲ್ಲಿ ಬಂದಿಳಿಯಲು ಮಾಡಿದ ಪ್ರಯತ್ನವು ಸಫಲವಾಗಲಿಲ್ಲವೆಂದೂ ಆಕ್ಸಿಸ್ ವಾರ್ತೆ ತಿಳಿಸುತ್ತದೆ ಇದಕ್ಕೆ ಮಿತ್ರರ ಕಡೆಯಿಂದ ಸಮರ್ಥನೆಯಿಲ್ಲ ಅಸಾಧ್ಯಸೈನ್ಯ, ವಿಮಾನ, ನೌಕಾ ಶೇಖರಣೆಯನ್ನ ಮಿತ್ರರು ಮಾಡಿರುತ್ತಾರೆ ಸೈನ್ಯವು ಅಪ್ಪಣೆ ಕೊಟ್ಟ ಕೂಡಲೇ ಕಾರ್ಯಕ್ಕೆ ನುಗ್ಗಲು ಸಿದ್ಧವಾಗಿದೆ ವಿಮಾನ ಬಲವು ವಿಶೇಷ ಬಲಯುತವಾಗಿದೆ. ಬ್ರಿಟಿಷ್ ಎಂಟು, ಒಂಭತ್ತು, ಹತ್ತನೇ ದಳಗಳು ವಿಶೇಷ ಮಾರ್ಪಾಡಾಗಿವೆ ಜರ್ಮನರು "ಮಿತ್ರರಾಷ್ಟ್ರಗಳು ಮೊದಲನೇ ರಕ್ಷಣಾ ಸ್ಥಾನಗಳನ್ನು ಭೇದಿಸಬಹುದು ಮತ್ತು ಜಯವನ್ನೂ ಪಡೆಯಬಹುದು" ಎಂದು ಹೇಳುತ್ತಾರೆ ಆದರೆ "ಎಲ್ಲಿ ಮತ್ತು ಯಾವಾಗ" ಧಾಳಿ ನಡೆಯಬಹುದು ಎಂಬುದನ್ನು ಊಹಿಸುತ್ತಾ ಭ್ರಾಂತರಾಗಿದ್ದಾರೆ

ದಂಡಯಾತ್ರೆಗೆ ಅಸಾಧ್ಯ ಸಿದ್ಧತೆ

ಪ್ರಪಂಚದ ಎಲ್ಲಾ ಕಡೆಗಳಲ್ಲಿಯೂ ದಂಡಯಾತ್ರೆ ಯಾವಾಗ, ಎಲ್ಲಿ ಎಂಬ ವಿಷಯದಲ್ಲಿ ಊಹಾಪೋಹಗಳು ನಡೆಯುತ್ತಿದೆ ಕಾತುರರಾಗಿದ್ದಾರೆ ಆಫ್ರಿಕಾ ತೀರದಲ್ಲಿ ಅಟ್ಲಾಸ್ ಪರ್ವತ ಶ್ರೇಣಿಗಳಿಂದ ಹಿಡಿದು, ಇರಾನ್ ಪಶ್ಚಿಮದ ಕಡೆಗೂ, ಸಿರಿಯಾ ತೀರಗಳವರೆಗೂ ೩೦೦೦ ಮೈಲಿಗಳ ದೂರ ಮಿತ್ರ ರಾಷ್ಟ್ರಗಳು ಸೇನೆ, ವಿಮಾನ, ನೌಕಾ ಬಲಗಳಿಂದ ಸಿದ್ಧರಾಗಿದ್ದಾರೆ ಇಂಗ್ಲಿಷ್, ಅಮೇರಿಕಾ, ಪೋಲೆಂಡ್, ಫ್ರೆಂಚ್ ಮೊದಲಾಗಿ ೫ ಭಾರಿ ಸೇನೆಗಳು ಶತ್ರು ನಿರ್ಮೂಲ ಮಾಡಲು ಉತ್ಸಾಹದಿಂದ ಎದುರು ನೋಡುತ್ತಿವೆ ಇಟಲಿಯ ಬೆನ್ನುಮೂಳೆ ಮುರಿದು ಅದನ್ನು ಅಕ್ಷರಾಷ್ಟ್ರಗಳಿಂದ ಪ್ರತ್ಯೇಕಿಸುವುದೇ ಮಿತ್ರ ರಾಷ್ಟ್ರಗಳ ಹಂಚಿಕೆಯೆಂದು ಪ್ರವೀಣರು ಊಹಿಸುತ್ತಾರೆ ಮಿತ್ರರಿಗೆ ವಿಮಾನಬಲ ಆಧಿಕವಾಗಿದೆ ಶತ್ರುಪಕ್ಷದವರು ಅಮೇರಿಕಾ ಸೇನೆಗಳು ಕೆಲವು ವಾರಗಳ ಹಿಂದೆ ಸೈಪ್ರಸ್ ಹತ್ತಿರ ಪಹರಾ ಮಾಡಿರುತ್ತೆಂದೂ ಡೊಡೆಕನಿಸ್ ಹಿಡಿಯಲು ಹವಣಿಸುತ್ತಿದ್ದಾರೆಂದೂ ಹೇಳುತ್ತಿದ್ದಾರೆ ಮಿತ್ರರು ಹತ್ತು ಲಕ್ಷ ಸೇನೆಯನ್ನು ಸಂಗ್ರಹಿಸಿರಬಹುದೆಂದು ಊಹಿಸಲಾಗಿದೆ ದಂಡಯಾತ್ರೆಯ ವಿಷಯ ಮತ್ತು ಹಂಚಿಕೆಯಲ್ಲಿ ಚೀನ ಮತ್ತು ರಷ್ಯಾದ ಅಭಿಪ್ರಾಯವನ್ನು ಮಿತ್ರರು ಅರಿತಿದ್ದಾರೆ ಇತ್ತ ಕಡೆ ಮಿತ್ರರು ದಾಳಿ ಪ್ರಾರಂಭಿಸಿದ ಕೂಡಲೇ ರಷ್ಯವು ಪೂರ್ವದಲ್ಲಿ ದಂಡಯಾತ್ರೆ ಆರಂಭಿಸಬಹುದೆಂದು ವ್ಯಕ್ತವಾಗುತ್ತದೆ

ಯುದ್ಧದ ಯಂತ್ರಗಳು

ಫಿರಂಗಿಗಳು

ಪೂರ್ವದ ಫಿರಂಗಿಗಳು

ಬಂದೂಕುಗಳ ಚರಿತ್ರೆಯು ಬಹು ಸರಳವಾದುದು ಬಂದೂಕುಗಳನ್ನು ಹೇಗೆ ಉಪಯೋಗಿಸಲಾಗುವುದು ಎಂಬುದನ್ನು ತಿಳಿಯಲು ಅಷ್ಟು ಕಷ್ಟವಾಗುವುದಿಲ್ಲ ಆದರೆ ವಾಸ್ತವಿಕವಾಗಿ ಬಂದೂಕನ್ನು ಉಪಯೋಗಿಸುವುದು ಜಟಿಲಕರವೇ ಆಗಿದೆ ಯುದ್ಧಶಾಸ್ತ್ರದಲ್ಲಿ ಬಂದೂಕುಗಳನ್ನು ಉಪಯೋಗಿಸುವುದು ಬಹು ಮುಖ್ಯವಾದ ಭಾಗವಾಗಿದೆ

ಬಂದೂಕಿನಲ್ಲಿ ಮೂರು ಭಾಗಗಳಿವೆ ಮೊದಲು ಲೋಹದ ಕೊಳವೆಯಿದೆ, ಒಂದು ಭಾಗದಲ್ಲಿ ಇದು ಮುಚ್ಚಿದೆ ಇನ್ನೊಂದು ಭಾಗದಲ್ಲಿ ಇದು ತೆರೆದಿದೆ ಎರಡನೆಯ ಭಾಗದಲ್ಲಿ ಒಂದು ಸ್ಫೋಟಕ ವಸ್ತುವಿರುತ್ತದೆ ಈ ವಸ್ತುವಿಗೆ ಸ್ವಲ್ಪ ಏಟುಬಿದ್ದರೆ ಅಥವಾ ಸ್ವಲ್ಪ ಅಲ್ಲಾಡಿಸಿದರೆ ಕೂಡಲೆ ಇದು ಬೇಗನೆ ವಾಯುವಾಗಿ ಪರಿಣಮಿಸಿಬಿಡುತ್ತದೆ ಈ ವಾಯುವು ಹೆಚ್ಚು ಪ್ರದೇಶವನ್ನು ಆಕ್ರಮಿಸಿಕೊಳ್ಳುತ್ತದೆ ಈ ಪರಿವರ್ತನೆಯಾಗುವಾಗ ದೊಡ್ಡ ಶಬ್ದವಾಗುತ್ತದೆ ಮತ್ತು ಬಹಳ ಒತ್ತಡವನ್ನುಂಟುಮಾಡುತ್ತದೆ ಮೂರನೆಯದಾಗಿ ಒಂದು ಲೋಹದ ಚೂರು ಇರುತ್ತದೆ ಇದನ್ನು ಕೊಳವೆಯ ಒಳಗೆ ಅಮುಕಿಸುತ್ತದೆ ಸ್ಫೋಟಕ ವಸ್ತುವು ವಾಯುವಾದಾಗ ಅದು ಕೊಳವೆಯ ಹಿಂಭಾಗವು ಮುಚ್ಚಿರುವುದರಿಂದ ಅಲ್ಲಿ ಹೋಗಲಾರದು ಆದುದರಿಂದ ಪ್ರತಿಬಂಧಕವಾದ ಲೋಹದ ಚೂರನ್ನು ಮಹಾ ವೇಗದಿಂದ ತಳ್ಳಿಕೊಂಡು ಕೊಳವೆಯ ಇನ್ನೊಂದು ಮುಖದಿಂದ ಹೊರಬೀಳುತ್ತದೆ ಬಂದೂಕುಗಳು ಮತ್ತು ಫಿರಂಗಿಗಳು ಕೆಲಸ ಮಾಡುವ ತತ್ವವೇ ಇದು

ಬಂದೂಕುಗಳು ಬಳಕೆಗೆ ಬಂದು ಸುಮಾರು ೬೦೦ ವರ್ಷಗಳಾದುವು ಮೊದಲನೆಯ ೩೦೦ ವರ್ಷಗಳಲ್ಲಿ ಯಾವ ಹೆಚ್ಚಿನ ಬದಲಾವಣೆಯೂ ಆಗಲಿಲ್ಲ ಗುಂಡಗಿರುವ ಒಂದು ಲೋಹದ ಚೂರನ್ನು "ಷೆಲ್ಲು" ಎಂದು ಉಪಯೋಗಿಸುತ್ತಿದ್ದರು

ಆಧುನಿಕ ಸುಧಾರಣೆಗಳು

ಈ ಬಂದೂಕುಗಳು ಅಷ್ಟು ಜೋರಾಗಿರಲಿಲ್ಲ ಇವುಗಳ ತೋಟಾಗಳು ಬಹು ದೂರ ಹೋಗುತ್ತಿರಲಿಲ್ಲ ಸ್ಫೋಟಕ ವಸ್ತುವು ಅಷ್ಟು ತೀಕ್ಷ್ಣವಾಗಿಯೂ ಇರಲಿಲ್ಲ ಎರಡನೆಯದಾಗಿ ಸ್ಫೋಟಕವು ಸಿಡಿಯಲು ಬಹಳ ಹೊತ್ತು ಹಿಡಿಯುತ್ತಿತ್ತು ಷೆಲ್ಲು ಗುಂಡಗಿದ್ದುದರಿಂದ ನೇರವಾಗಿ ಹೋಗದೆ ಹಲವು ವೇಳೆ ಗುರಿಯಿಟ್ಟ ಸ್ಥಳಕ್ಕೆ ಹೋಗಿ ತಗಲುತ್ತಿರಲಿಲ್ಲ

ಇತ್ತೀಚೆಗೆ ಬಂದೂಕುಗಳನ್ನು ಕಬ್ಬಿಣದ ಬದಲು ಉಕ್ಕಿನಲ್ಲಿ ತಯಾರಿಸಲಾರಂಭಿಸಿತು ಉಕ್ಕು ಕಬ್ಬಿಣಕ್ಕಿಂತಲೂ ಗಟ್ಟಿ ಹೆಚ್ಚು ಪ್ರಮಾಣದಲ್ಲಿ ಸ್ಫೋಟಕ ವಸ್ತುವನ್ನು ಇಟ್ಟುಕೊಳ್ಳಬಲ್ಲುದು ಎರಡನೆಯದಾಗಿ ಟಿ ಎನ್ ಟಿ ಎಂಬ ಬಹು ತೀಕ್ಷ್ಣವಾದ ಸ್ಫೋಟಕ ವಸ್ತುವನ್ನು ಕಂಡುಹಿಡಿಯಲಾಯಿತು ಬ್ರೀಚು ಲೋಡಿಂಗು ಎಂಬ ಪದ್ಧತಿಯು ಬಳಕೆಗೆ ಬಂದಿತು ಮೊದಲಿನ ಬಂದೂಕುಗಳ ಕೊಳವೆಯು ಒಂದು ಕಡೆ ಮಾತ್ರ ತೆರೆದಿರುತ್ತಿತ್ತು ಈಗ ಕೊಳವೆಯು ತೆರೆದೇ ಇರುತ್ತದೆ ಒಂದೆಡೆ ಒಂದು ಮುಚ್ಚಳವನ್ನು ಹಾಕಿರುತ್ತಾರೆ ಬೇಕಾದಾಗ ಇದನ್ನು ತೆಗೆದು ಹಿಂದಿನಿಂದ ತೋಟಾವನ್ನು ಏರಿಸಬಹುದು ಮೊದಲಿನಂತೆ ಮುಂಭಾಗದಿಂದಲೇ ಬಂದೂಕನ್ನು ಶುದ್ಧಿಗೊಳಿಸಿ ಲೋಡುಮಾಡುವ ಆವಶ್ಯಕತೆಯಿಲ್ಲ

ರೈಫ್ಲಿಂಗು, ಲಾಂಗ್ ಷೆಲ್ಲುಗಳು, ಎಂಬ ಎರಡು ಗುಂಡು ತೋಟಾಗಳಿಂದ ಇದ್ದ ಕೊರತೆಯೂ ನಿವಾರಣೆಯಾಯಿತು ಷೆಲ್ಲು ಬಂದೂಕಿನ ಕೊಳವೆಗಳನ್ನು ಬಿಡುವಾಗ ಮಹಾ ರಭಸದಿಂದ ಗಿರ್ರನೆ ತಿರುಗುತ್ತಾ ನೇರವಾಗಿ ಹೋಗಿ ಗುರಿಯಿಟ್ಟ ವಸ್ತುವಿಗೆ ತಾಗುತ್ತದೆ ಆಧುನಿಕ ಕಾಲದಲ್ಲಿ ಗುರಿಯಿಟ್ಟ ವಸ್ತುವಿಗೆ ಸರಿಯಾಗಿ ಬಂದೂಕದಿಂದ ಹೊಡೆಯಲು ಸಾಧ್ಯವಾಗುತ್ತಿರುವುದು ಈ ಸಲಕರಣೆ ಉಪಯೋಗದಿಂದಲೇ

ರಿಕಾಯಲ್

ಬಂದೂಕಿನಿಂದ ತೋಟಾವು ಹಾರಿದಾಗ ಬಂದೂಕು ಹಿಂದಕ್ಕೆ ಒದೆಯುವುದು ಇದು ಅದನ್ನುಪಯೋಗಿಸಿದವರೆಲ್ಲರಿಗೂ ತಿಳಿಯುವುದು ಯಾರಾಗಲಿ ಬಂದೂಕನ್ನು ತಮ್ಮ ಭುಜಕ್ಕೆ ಒತ್ತಿಹಿಡಿದು ತೋಟಾವನ್ನು ಹಾರಿಸುತ್ತಾರೆ ಇದಕ್ಕೇ ರಿಕಾಯಲ್ ಎಂದು ಹೆಸರು ಪೂರ್ವದ ಬಂದೂಕುಗಳು ಅಷ್ಟು ಜೋರಾಗಿ ಹಿಂದಕ್ಕೆ ಒದೆಯುತ್ತಿರಲಿಲ್ಲ ಆದರೆ, ಈಗಿನ ಬಂದೂಕುಗಳು ಮಹಾವೇಗದಿಂದ ಹಿಂದೆ ಸರಿಯುತ್ತವೆ ಇವುಗಳನ್ನು ತಡೆಯಲು ಪ್ರತ್ಯೇಕವಾದ ಯಂತ್ರಸಾಧನವು ಆವಶ್ಯಕವಾಗಿ ಪರಿಣಮಿಸಿದೆ ಈ ಯಂತ್ರವು ಬಂದೂಕವು ಬಹಳ ಹೆಚ್ಚಾಗಿ ಹಿಂದೆ ಸರಿಯದಂತೆ ನೋಡಿಕೊಳ್ಳುವುದಲ್ಲದೆ ಪುನಃ ಬಂದೂಕು ಬಹು ಬೇಗ ಮೊದಲಿನ ಸ್ಥಾನದಲ್ಲಿಯೇ ಬಂದು ನಿಲ್ಲುವಂತೆ ಮಾಡುತ್ತದೆ ದೊಡ್ಡ ಫಿರಂಗಿಯಿಂದ ಗುಂಡು ಹಾರಿದಾಗ ಅದು ಹಿಂದಕ್ಕೆ ಬಂದು ಪುನಃ ಮುಂದಕ್ಕೆ ಹೋಗುತ್ತದೆ ಸಣ್ಣ ಸಣ್ಣ ಬಂದೂಕುಗಳಲ್ಲಿ ಈ ಸಂಬಂಧದಲ್ಲಿ ಒಂದು ಸ್ಟೀಲ್ ಸ್ಪ್ರಿಂಗು ಇರುತ್ತದೆ ದೊಡ್ಡ ಫಿರಂಗಿಗಳಲ್ಲಿ ಇನ್ನೂ ಬಲವಾದ ಯಂತ್ರಗಳು ಬೇಕು ಈ ಯಂತ್ರವನ್ನು ನಿರ್ಮಾಣಿಸುವುದು ಬಹು ಕಷ್ಟ

ಬ್ರೀಚು ಲೋಡಿಂಗು

ಈ ವಿಧಾನವನ್ನು ಮುಂಚೆಯೇ ತಿಳಿಸಿದೆ ಬಂದೂಕಿಗೆ ತೋಟಾವನ್ನು ಬೇಗನೆ ಏರಿಸಲು ಅನುಕೂಲವಾಗಲೆಂದು ಬ್ರೀಚುಲೋಡಿಂಗು ಪದ್ಧತಿಯು ಬಳಕೆಗೆ ಬಂದಿದೆ ಈ ಬಗೆಯ ಬ್ರೀಚುಲೋಡಿಂಗಿನಿಂದ ವಾಯುವು ಕೊಳವೆಯ ಹಿಂಭಾಗದಿಂದಲೂ ಸ್ವಲ್ಪವಾಗಿ ಹೊರಟು ವಾಯುವಿನ ರಭಸವು ಕಡಿಮೆಯಾಗುವ ಸಂಭವವಿದೆ ಇದನ್ನು ನಿವಾರಣೆ ಮಾಡಲು ಎರಡು ಯಂತ್ರ ಸಾಧನಗಳನ್ನು ಕಂಡು ಹಿಡಿದಿದೆ ಮೃದುವಾದ ಹಿತ್ತಾಳೆಯ ಚೀಲದಲ್ಲಿ ಸ್ಫೋಟಕ ವಸ್ತುವನ್ನಿಟ್ಟಲ್ಲಿ ವಾಯುವು ಸಿಡಿಯುವಾಗ ಲೋಹವು ಉಬ್ಬಿ ವಾಯುವು ಹಿಂದಕ್ಕೆ ಹೋಗದಂತೆ ತಡೆಯುವುದು ಈ ತೋಟಾವೇ ಮುಂದಕ್ಕೆ ಬರುವಂತೆ ಮಾತ್ರ ಮುಚ್ಚಳವು ತಡೆದಿರುತ್ತದೆ ದೊಡ್ಡ ಫಿರಂಗಿಗಳಲ್ಲಿ ಈ ಮುಚ್ಚಳವು ಬಹಳ ಬಲವಾಗಿರಬೇಕು ಈ ಮುಚ್ಚಳವು ಬಿಗಿಯಾಗಿರುವಂತೆ ಹಲವು ಸುತ್ತು ಮತ್ತು ನಟ್ಟುಗಳಿಂದ ಬಿಗಿ ಮಾಡಲಾಗುವುದು

ಬೇಗನೆ ಸಿಡಿಯುವ ಫಿರಂಗಿಗಳು

ಈ ಬಗೆಯ ಬಂದೂಕುಗಳಿಗೆ ಹಿಗ್ಗುವ ಲೋಹದ ತೋಟಾಗಳನ್ನುಪಯೋಗಿಸಲಾಗುವುದು ಬ್ರೀಚುಬ್ಲಾಕನ್ನು ಹಿಂದಕ್ಕೆಳೆದು ತೋಟಾದ ಕೇಸನ್ನು ಹೊರಕ್ಕೆ ತಳ್ಳಲು, ರಿಕಾಯಲ್ ರಭಸ ಅಥವಾ ಸ್ಫೋಟಕ ರಭಸ ಇವುಗಳಲ್ಲಿನ ಸ್ವಲ್ಪ ಶಕ್ತಿಯನ್ನುಪಯೋಗಿಸಿಕೊಳ್ಳಬೇಕು ಈಗಿನ ಯಂತ್ರ ಸಾಧನೆಯ ಮೇರೆ ತೋಟಾಗಳು ತಾವಾಗಿಯೇ ಬಂದು ಸ್ಥಾನದಲ್ಲಿ ಕುಳಿತುಬಿಡುತ್ತವೆ ಆಟೋಮಾಟಿಕ್ ಪಿಸ್ತೂಲ್, ಬ್ರೆಂಗನ್, ಮ್ಯಾಚಿನ್‌ಗನ್ನು, ಆಂಟಿಏರ್‌ಕ್ರಾಫ್ಟ್‌ಗನ್ ಇವೆಲ್ಲವನ್ನೂ ಇದೇ ರೀತಿ ನಡೆಸಲಾಗುವುದು ರಿವಾಲ್ವರಿನಲ್ಲಿ ಮಾತ್ರ ವಿಧಾನವು ಸ್ವಲ್ಪ ವ್ಯತ್ಯಾಸ ಅದರ ನಳಿಗೆಗಳಲ್ಲಿ ತೋಟಾಗಳು ಒಂದು ಕ್ರಮದಲ್ಲಿ ಸುರುಳಿಕೊಂಡು ಬಂದು ತಮ್ಮ ಸ್ಥಾನದಲ್ಲಿ ನಿಲ್ಲುವುದು ಹೀಗೆ ನಿಲ್ಲಲು ಹಿಂದಿನಿಂದ ಟ್ರಿಗ್ಗರನ್ನು ಎಳೆಯುತ್ತಿರಬೇಕು

ಲೋಡಿಂಗು ಮತ್ತು ಗುಂಡು ಹಾರಿಸುವುದು

ಫಿರಂಗಿಯನ್ನು ಒಮ್ಮೆ ಹಾರಿಸಿದ ಮೇಲೆ ಪುನಃ ಅದನ್ನು ಲೋಡ್ ಮಾಡಿದ ಮೇಲೆ ಮಾತ್ರವೇ ಅದನ್ನು ಹಾರಿಸಬಹುದು ಆದರಲ್ಲಿಯೂ ಸಮುದ್ರದ ಮೇಲಣ ಯುದ್ಧಗಳಲ್ಲಿ ವಿಜಯವು ಎಷ್ಟು ಬೇಗನೆ ಈ ರೀತಿ ಲೋಡು ಮಾಡುವರೆಂಬುದನ್ನವಲಂಬಿಸುತ್ತದೆ ಕೆಲವು ಬಂದೂಕುಗಳು ತಾವಾಗಿಯೇ ಸಿಡಿಯುತ್ತವೆ ಇವು ಆಟೋಮ್ಯಾಟಿಕು ಬಂದೂಕುಗಳು, ಮೊದಲು ಫಿರಂಗಿಯು ಹಿಂದಕ್ಕೂ ಮುಂದಕ್ಕೂ ಚಲಿಸುತ್ತದೆ ಅನಂತರ ಬ್ರೀಚನ್ನು ತೆರೆದು ತೋಟಾವನ್ನು ಒಳಗಿಟ್ಟು ಬ್ರೀಚನ್ನು ಮುಚ್ಚಲಾಗುವುದು ಅನಂತರ ಗುಂಡನ್ನು ಹಾರಿಸಲಾಗುವುದು ದೊಡ್ಡ ದೊಡ್ಡ ಆದರಲ್ಲಿಯೂ ಹಡಗುಗಳ ಮತ್ತು ವಿಮಾನಗಳ ಮೇಲಿರುವ ಬಂದೂಕುಗಳಿಗೆ ಹಾಕುವ ಷೆಲ್ಲುಗಳು ಬಹು ಭಾರ ಇವನ್ನು ಯಂತ್ರಗಳ ಮೂಲಕ ತಂದು ಜೋಡಿಸಬೇಕು ಇವನ್ನು ಸ್ಫೋಟಕ ವಸ್ತುಗಳಿಂದ ಪ್ರತ್ಯೇಕವಾಗಿಡಲಾಗುತ್ತದೆ ಇಂಥ ಫಿರಂಗಿಗಳನ್ನು ಪ್ರತಿಸಲವೂ ಯಂತ್ರಗಳ ಮೂಲಕ ಒಂದು ನಿಲುವಿಗೆ ತಂದು ಗುಂಡುಗಳನ್ನು ಜೋಡಿಸಬೇಕು ಇದಕ್ಕಾಗಿಯೇ ವಿಶೇಷರೀತಿಯ ಯಂತ್ರಗಳಿವೆ ದೊಡ್ಡ ಫಿರಂಗಿಗಳನ್ನು ವಿದ್ಯುಚ್ಛಕ್ತಿಯ ಮೂಲಕ ಹಾರಿಸಲಾಗುವುದು ಒಂದು ಗುಂಡಿಯನ್ನೊತ್ತಿದರೆ ಶಾಖವುತ್ಪನ್ನವಾಗಿ ಸ್ಫೋಟಕ ವಸ್ತುವು ಸಿಡಿಯುವುದು ಷೆಲ್ಲುಗಳಲ್ಲಿರುವ ಸ್ಫೋಟಕ ವಸ್ತುವು ಸಿಡಿಯುವಂತೆ ಮಾಡಲು ಬೇರೆ ಸಾಧನಗಳನ್ನೇರ್ಪಡಿಸಿರುತ್ತದೆ ರಕ್ಷಣೆಯ ಸಲುವಾಗಿ ಸಾಧಾರಣವಾದ ಸ್ಫೋಟಕ ವಸ್ತುವನ್ನು ಬಹಳವಾಗಿಟ್ಟು ಬಹಳ ತೀಕ್ಷ್ಣವಾದ ಸ್ವಲ್ಪಭಾಗ ಸ್ಫೋಟಕ ವಸ್ತುವಿನಿಂದ ಗುಂಡನ್ನು ಹಾರಿಸುವುದೇ ವಾಡಿಕೆ ದೊಡ್ಡ ಫಿರಂಗಿಗಳಲ್ಲಿ ಈ ಎರಡು ಬಗೆಯ ಸ್ಫೋಟಕಗಳನ್ನು ಲೋಡು ಮಾಡುವವರೆಗೂ ಪ್ರತ್ಯೇಕವಾಗಿರಿಸಿರಬಹುದು

ಷೆಲ್ಲುಗಳು

ಪೂರ್ವಕಾಲದಲ್ಲಿ ಗುಂಡುಗಳನ್ನು ಷೆಲ್ಲುಗಳನ್ನಾಗಿ ಉಪಯೋಗಿಸುತ್ತಿದ್ದರು ಈಗ ಷೆಲ್ಲುಗಳಲ್ಲಿ ಸ್ಫೋಟಕ ವಸ್ತುಗಳಿದ್ದು ಅವು ಯಾವುದಾದರೂ ವಸ್ತುವಿಗೆ ತಗುಲಿದೊಡನೆ ಸಿಡಿದು ಅವನ್ನು ನಾಶಮಾಡಿಬಿಡುತ್ತವೆ ಈ ಷೆಲ್ಲುಗಳು ವಸ್ತುವಿಗೆ ತಾಗಿದೊಡನೆಯೇ ಸಿಡಿಯುವಂತೆಯೂ, ಅಥವಾ ಸ್ವಲ್ಪ ಕಾಲವಾದಮೇಲೆ ಸಿಡಿಯುವಂತೆಯೂ, ಮಾಡಲು ಸಾಧನಗಳನ್ನು ಕಲ್ಪಿಸಿದೆ ಕೆಲವುವೇಳೆ ಇವುಗಳಲ್ಲಿ ಅಗ್ನಿಕಾರಕ ವಸ್ತುಗಳನ್ನೂ ವಿಷವಾಯುವನ್ನೂ ತುಂಬಿಸಲೂಬಹುದು

ಶ್ರೀ ಮಲ್ಲಿಕಾರ್ಜುನ ವೀರಶೈವ ಹಾಸ್ಟೆಲ್, ಹಾಸನ

ಮೇಲ್ಕಂಡ ಹಾಸ್ಟೆಲ್ ಇದೇ ಜುಲೈ ಒಂದನೇ ತಾರೀಖಿನಿಂದ ತೆರೆಯಲ್ಪಡುತ್ತದೆ ಹಾಸ್ಟೆಲ್ಲಿಗೆ ಸೇರಲಿಚ್ಛಿಸುವ ವಿದ್ಯಾರ್ಥಿಗಳು ಈ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳುವದು

ಹಾಸನ } ಎಂ ಎಸ್ ಸಿದ್ದಲಿಂಗಯ್ಯ
10-6-43 } ಬಿ ಎ. ಬಿ ಎಲ್ ಲಾಯರು

ವಿವಾಹ ಮಹೋತ್ಸವ

ಇದೇ ಸ್ವಭಾನು ಸಂವತ್ಸರದ ವೈಶಾಖ ಶು ೧೨ರ ಬುಧವಾರ ತಾ॥ 30-5-43ರಲ್ಲಿ ಎಳ್ಳಾರ್ತಿ ಡಿ॥ ಹೊಸಪೇಟೆಯಲ್ಲಿರುವ ವೇ॥ ಕನಕಗಿರಿ ವರದ ಕಡ್ಲೆ ಸಾಂಬಯ್ಯನವರ ಪುತ್ರ ಚಿ॥ ಪಂಚಾಕ್ಷರಯ್ಯನೆಂಬ ವರನಿಗೆ ಗದುಗಿನಲ್ಲಿರುವ ಕಡಸ್ಲ್ಯ ಹಿರೇಮಠದ ವೇ॥ ಕರಿಬಸಯ್ಯನವರ ಪುತ್ರಿ ಚಿ॥ಕುಂ॥ಸೌ॥ ವೀರಮ್ಮನೆಂಬ ಕನ್ಯೆಯನ್ನು ಕೊಟ್ಟು ವಿವಾಹಮಹೋತ್ಸವವು ಹೊಸಪೇಟೆಯಲ್ಲಿ ಕಡ್ಲೆ ಪಟ್ಟದ ಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮಿಗಳವರ ನೇತೃತ್ವದಲ್ಲಿ ಅತ್ಯಂತ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು ಈ ಮಂಗಲಮಹೋತ್ಸವ ಕಾರ್ಯಕ್ಕಾಗಿ ಬಂಧುವರ್ಗದವರೆಲ್ಲರೂ ಸೇರಿದ್ದರು ಶ್ರೀ ಜಗದಾಚಾರ್ಯರ ಕೃಪಾಶೀರ್ವಾದದಿಂದ ವಿವಾಹಕಾರ್ಯವು ನಿರ್ವಿಘ್ನದಿಂದ ವಧೂವರರೊಡನೆ ಜರುಗಿತು ಈ ಸುಸಮಯದಲ್ಲಿ ಪ್ರಭಾಪೋಷಣೆಗಾಗಿ ವೇ॥ ವೈದ್ಯ ಮೈಸೂರು ಸಿದ್ಧಯ್ಯನವರ ಹಕ ಪ್ರಕಾರ ೧ ರೂಪಾಯಿಗಳು ಸಮರ್ಪಿಸಲ್ಪಟ್ಟವು ನೂತನ ವಧೂವರರಿಗೆ ಜಗದಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಪ್ರಾರ್ಥಿಸುವ

ವೈದ್ಯ ಮೈಸೂರು ಶಿವಪ್ಪಯ್ಯ ಹೊಸಪೇಟೆ

ಮಾಹೇಶ್ವರ ದೀಕ್ಷಾಸಮಾರಂಭ

ಅಡ್ಲಿಮಠ ಶಿಗಡಿ

ಬೆಳಗಾಂವ ಡಿಸ್ಟ್ರಿಕ್ಟ್ ಶಿಗಡಿಗ್ರಾಮದ ಅಡ್ಲಿಮಠಾಧ್ಯಕ್ಷರಾದ ಶ್ರೀಚರಮೂರ್ತಿಸ್ವಾಮಿಗಳವರು ತಾ॥ 7-5-43ನೇ ದಿವಸ ತಮ್ಮ ಮಠದಲ್ಲಿ ಅನೇಕಜನ ಮಾಹೇಶ್ವರ ವಟುಗಳಿಗೆ ಧರ್ಮಾರ್ಥವಾಗಿ ಮಾಹೇಶ್ವರ ದೀಕ್ಷೆಯನ್ನಿತ್ತು ಸರ್ವರನ್ನೂ ಸಂತೋಷಪಡಿಸಿದರು ಈ ಕಾರ್ಯೋತ್ಸವಕ್ಕೆ ಅನೇಕಜನ ಭಕ್ತಮಾಹೇಶ್ವರರು ಆಗಮಿಸಿದ್ದರು ದೀಕ್ಷಾಸಮಾರಂಭವು ನೆರವೇರಿದ ಮೇಲೆ ಸಭೆ ಗೂಡಿತು ಆಗ್ಗೆ ಶ್ರೀಮಾನ್ ಜ ಬಿ ಅಮರಗೋಳಮಠ ಮಾಸ್ತರರು ಈಗ ನಡೆಯುತ್ತಿರುವ ಕಷ್ಟಕಾಲದ ವಿಷಯದಲ್ಲಿಯೂ ಬಡ ಜಂಗಮರಿಗುಂಟಾಗಿರುವ ತೊಂದರೆಯ ವಿಷಯಗಳಲ್ಲಿಯೂ ಜನ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಭಾಷಣಮಾಡಿದರು. ಬಳಿಕ ಅಡ್ಲಿ [illegible] ಶ್ರೀ ಸ್ವಾಮಿಗಳವರು ತಮ್ಮ [illegible] ಪದಲ್ಲಿರುವ ನಾಗನೂರ [illegible] ಉಕ್ತರ [illegible] ನಯ ಮೇರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಜಯಂತೀ ಮಹೋತ್ಸವನ್ನಾಚರಿಸಲು ನಿಯಮಾಡಿಸಿದರು ಜಯಂತಿಯ ದಿವಸ ಅಲ್ಲಿಯ [illegible] ಮಾಹೇಶ್ವರ ವಟುಗಳಿಗೆ ಧರ್ಮಾರ್ಥವಾಗಿ ದೀಕ್ಷೆಯನ್ನು ಅನುಗ್ರಹಿಸುವರು [illegible] ಕ್ಕಾಗಿ ಅವರ ಉಪಸ್ಥಿತರಿದ್ದ [illegible] ಪ್ರಭಾ [illegible] ಪೋಷಣಕ್ಕಾಗಿ ಸಹಾಯ [illegible] ಅಪ್ಪನ ಮಾಡಲು 1 ರೂಪಾಯಿ [illegible] ಶ್ರೀಸ್ವಾಮಿಗಳವರ ಶಿಷ್ಯರಾದ [illegible] ಶಿವನಗೌಡ ಪಾಟೀಲ ಇವರು ಪ್ರಭಾಪೋಷಣಕ್ಕಾಗಿ [illegible] ಸಂತೋಷದಿಂದ ಸಮರ್ಪಿಸಿದರು [illegible] ಪಟ್ಟ ಚರಮೂರ್ತಿ ಸ್ವಾಮಿಗಳವರಂತೆ ನಿಸ್ವಾರ್ಥತೆಯಿಂದ ಧರ್ಮಕಾರ್ಯ ಮಾಡುತ್ತಿರುವ ಶ್ರೀ ಅಡ್ಲಿಮಠದ ಸ್ವಾಮಿಗಳವರ ಮಾರ್ಗವನ್ನು ಅನುಸರಿಸಿದರೆ ವೀರಶೈವ ಮತವು ಬೇಗನೆ ಸುಧಾರಿಸುವದರಲ್ಲಿ ಸಂಶಯವಿಲ್ಲ ಸರ್ವರಿಗೂ ಶ್ರೀಜಗದಾಚಾರ್ಯರು ಇದೇ ವಿಧವಾದ ಬುದ್ಧಿಯನ್ನೀಯಲೆಂದು ಪ್ರಾರ್ಥಿಸುವ

ಓರ್ವ ಪ್ರತ್ಯಕ್ಷದರ್ಶಿ

ಪುಣ್ಯತಿಥಿ ಸಮಾರಂಭ ಹೂವಿನಹಡಗಲಿ

ಬಳ್ಳಾರಿ ಡಿ ಹೂವಿನಹಡಗಲಿ ಪಟ್ಟಣವು [illegible] ಗಣ್ಯರೆಂದೆನ್ನಿಸಿಕೊಂಡಿದ್ದ ವೇ॥ ಗಂಗಾಪುರ ಮಠದ ಗವಿಯಯ್ಯನವರು ಶಿವಾಧೀನರಾಗಿ ಇಲ್ಲಿಗೆ ಒಂದು ವರ್ಷವಾಗಿದ್ದರಿಂದ, ಅವರ ಪುಣ್ಯತಿಥಿಯನ್ನು ಅವರ ಸ್ವಗೃಹದಲ್ಲಿ ಇದೇ ಸ್ವಭಾನುಸಂವತ್ಸರ ಜ್ಯೇಷ್ಠ ಶು ೧ (ತಾ॥ ೩-೬-೪೩) ಗುರುವಾರ ಬಹು ಉತ್ಸಾಹದಿಂದ ಆಚರಿಸಲಾಯಿತು ಅಂದು ಪ್ರಾತಃಕಾಲ ಇಲ್ಲಿಯ ಕನ್ನಡ ಪಂಡಿತರಾದ ವಿದ್ವಾನ್ ವೇ॥ ಬಿ ಎಂ ಶಿತಿಕಂಠಶಾಸ್ತ್ರಿಗಳವರ ನೇತೃತ್ವದಲ್ಲಿ ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯ ಲಿಂಗೋದ್ಭವ ಮೂರ್ತಿಗಳಿಗೆ ಮಹಾಭಿಷೇಕ, ಸಹಸ್ರ ಬಿಲ್ವಾರ್ಚನೆ ಪಾದಪೂಜಾ ಸಮಾರಂಭ ಮೊದಲಾದವುಗಳು ಕ್ರಮಪ್ರಕಾರ ನೆರವೇರಿದ ಬಳಿಕ ಮಹಾಗಣಾರಾಧನೆ ಜರುಗಿ ಮಾಹೇಶ್ವರ ವರ್ಗಕ್ಕೆ ಭೂರಿ ದಕ್ಷಿಣೆ ತಾಂಬೂಲಾದಿಗಳು ಸಮರ್ಪಿಸಲ್ಪಟ್ಟವು ಗುರುವಾಯ ನೆರೆದ ಐದಾರು ನೂರುಜನ ಭಕ್ತವೃಂದಕ್ಕೆ ಅನ್ನ ಸಂತರ್ಪಣೆಯು ನಡೆಯಿತು ವೇ॥ ಗವಿಯಯ್ಯನವರ ಮೇಲಿನ ಪ್ರೇಮಾತಿಶಯದಿಂದ ಸ್ಥಳ ಪರಸ್ಥಳಗಳಿಂದ ಬಹುಜನರು ಆಗಮಿಸಿದ್ದರು. ಅಲ್ಲದೆ ಹೊಳಗುಂದಿ ಬಾವಿಹಳ್ಳಿಗಳಿಂದ ಮುಖ್ಯ ಶಿಷ್ಯರಾದ ಗುರುಭಕ್ತ ಶಿರೋಮಣಿ ಶಾನಭೋಗರ ಸಿದ್ಧಲಿಂಗಪ್ಪನವರು, ಶಾನಭೋಗರ ಸಣ್ಣ ಕೋಟೆಪ್ಪನವರು ಪಾವಡಿಗೌಡರ ವೀರನಗೌಡರು, ವೀರಪ್ಪನವರ ಬಣಕಾರ ಶ್ರೀಮಂತ ಕರಿಬಸವಪ್ಪನವರು ಮೊದಲಾದವರು ಆಗಮಿಸಿದ್ದರು ಈ ಸಮಾರಂಭಕ್ಕೆ ಆಗಮಿಸಿದ ಸರ್ವರಿಗೂ ಪುರಪ್ರಮುಖರಾದ ಶ್ರೀಮಾನ್ ಕರಿಯತ್ತಿನ ಶಾಂತಪ್ಪನವರು, ಒಲಿಗಾರ ಶಂಕರಪ್ಪನವರು ಬಣಕಾರ ಶಂಕರಪ್ಪನವರು ಮತ್ತು ಡಾ॥ ಅನ್ನದಾನ ಶರ್ಮರವರು ಮುತುವರ್ಜಿವಹಿಸಿ ಕಾರ್ಯವನ್ನು ಪೂರೈಸಿ ಯಶೋಭಾಗಿಗಳಾದರು ಈ ಸಮಾರಂಭದಲ್ಲಿ ಹೊಳಗುಂದಿ ಗುರುಭಕ್ತಶಿರೋಮಣಿ ಶಾನಭೋಗರ ಸಿದ್ಧಲಿಂಗಪ್ಪನವರಿಂದ ಪಂಚಾಚಾರ್ಯಪ್ರಭಾಪೋಷಣೆಗೆ 1 ರೂಪಾಯಿ ತೆಗೆಯಲ್ಪಟ್ಟಿತು

ಓರ್ವ ಕಾರ್ಯಭಾಗಿ

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (ಎರಡನೆ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮ ವಿಚಾರ (ಎರಡನೆ ಆವೃತ್ತಿ ಸಂಸ್ಕೃತ)	೧ ಆಣೆ
[illegible] (ಎರಡನೆ ಆವೃತ್ತಿ)	೧ ಆಣೆ
ಶ್ರೀ [illegible] (ಎರಡನೆ ಆವೃತ್ತಿ)	೧ ಆಣೆ
[illegible] (ಎರಡನೆ ಆವೃತ್ತಿ)	೧ ಆಣೆ
ಶ್ರೀ [illegible] ಸಾಮಾನ್ಯ (ಎರಡನೆ ಆವೃತ್ತಿ)	೨ ಆಣೆ
[illegible] (ಎರಡನೆ ಆವೃತ್ತಿ)	೩ ಆಣೆ
ಶ್ರೀ [illegible] (ಎರಡನೆ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೩ ಆಣೆ
ಶ್ರೀಗುರುತತ್ತ್ವ[illegible]ಗಳು	೩ ಆಣೆ
ಶ್ರೀರ ವೃಷಮುನಿಶಿವಾಚಾರ್ಯಶತಕ	೩ ಆಣೆ
ಪಂಚಾಕ್ಷರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೭ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಸಂಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯ ಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಅಷ್ಟೋತ್ತರಶತಕ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿವ ಸೂತ್ರ [illegible]	೧೨ ಆಣೆ
ಶ್ರೀಕರಭಾಷ್ಯ ([illegible])	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
[illegible]ವರತ್ನ ([illegible])	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
[illegible]ನ್ನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ ([illegible])	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೬ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धांतशिखामणि (मूल)	६ आ.
पुरुषसूक्तम् (वीरशैवप्राचीनभाष्योपेतम्)	४ आ.
[illegible]कारिका (संस्कृत)	२ आ.

೧ ರೂಪಾಯಿ [illegible] ಕಡಿಮೆ ಬೆಲೆಗೆ ವಿ. ಪಿ. ಕಳುಹಿಸಲ್ಪಡುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು.

EGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಪಿಪ್ಪುದೀಲೋಕಮಂ ॥

ಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೧ನೇ ಜೂನ್ ೧೯೪೩ [ಸಂಚಿಕೆ ೭

ನೂತನವಾಗಿ ಪ್ರಕಟವಾಗಿರುವ
ಗ್ರಂಥಗಳು

ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಶೈವೋಪನಿಷತ್ಸಂಗ್ರಹ	೪ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ಪಂಚಾಚಾರಪ್ರಕಾಶಿಕಾ	೨ ಆಣೆ

ಮ್ಯಾನೇಜರ್—ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪಂಡಿತರ ವರ್ಧಂತೀಮಹೋತ್ಸವ, ಸೊಲ್ಲಾಪುರ

ಸನಾತನ ವೀರಶೈವ ಧರ್ಮೋದ್ಧಾರಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಗೆ ಜೇಷ್ಠ ಶು|| ೪ ಮಿತಿಗೆ ನಲವತ್ತೆಂಟನೆಯ ವರ್ಷವು ಪ್ರಾರಂಭವಾದ ಸಂತೋಷಕ್ಕಾಗಿ ಅಂದು ಸೊಲ್ಲಾಪುರದಲ್ಲಿರುವ ವೀರಶೈವ ಸದಾಚಾರ ಸ್ತ್ರೀಸಮಾಜದಲ್ಲಿ ಪ್ರತಿವರ್ಷ ಪದ್ಧತಿಯಂತೆ ವರ್ಧಂತೀ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿಸಲ್ಪಟ್ಟಿತು ಸೋಮವಾರ ಬೆಳಗ್ಗೆ ಪಂಡಿತರ ಆಯುಸ್ಸು ಮತ್ತು ಆರೋಗ್ಯಾಭಿವೃದ್ಧಿಗಾಗಿ ಶ್ರೀ ಜಗದಾಚಾರ್ಯರ ಲಿಂಗೋದ್ಭವಮೂರ್ತಿಗೆ ವೀರಶೈವ ಗುರುಕುಲದ ವತಿಯಿಂದ ಏಕಾದಶ ರುದ್ರಾಭಿಷೇಕವು ನೆರವೇರಿದಮೇಲೆ ಪಂಡಿತರ ಭಾವಚಿತ್ರಕ್ಕೆ ಷೋಡಶೋಪಚಾರಪೂಜೆಯು ಮಾಡಲ್ಪಟ್ಟಿತು ಅನಂತರ ಮಾಹೇಶ್ವರಾರಾಧನೆಯು ನೆರವೇರಿತು ಅಂದು ಸಾಯಂಕಾಲ ಸೊಲ್ಲಾಪುರದಲ್ಲಿರುವ ಶ್ರೀ ಬಾಲತಪಸ್ವಿ ಬೃಹನ್ಮಠದಲ್ಲಿ ವರ್ಧಂತಿಮಹೋತ್ಸವ ನಿಮಿತ್ತವಾಗಿ ಸಭೆಯು ಕೂಡಿತು ಸಭೆಗೆ ಬಹು ಜನರು ಆಗಮಿಸಿದ್ದರು ಅಧ್ಯಕ್ಷಸ್ಥಾನವನ್ನಲಂಕರಿಸಿದರು. ಬಳಿಕ ಮ|| ರಾ|| ಅಂದಪ್ಪ ಮಾಸ್ತರವರು ಶ್ರೀ ಜಗದಾಚಾರ್ಯರ ಸ್ತೋತ್ರಗಳನ್ನೂ ಪಂಡಿತರ ಗುಣಗಾನರೂಪವಾದ ಪದ್ಯಗಳನ್ನೂ ಮನೋಹರವಾಗಿ ಪಠಿಸಿ ಸರ್ವರನ್ನೂ ಸಂತೋಷಪಡಿಸಿದರು ಆಮೇಲೆ ಸೌ|| ಭಾಗೀರಥೀಬಾಯಿಯವರು “ಯದಾಯದಾಹಿಧರ್ಮಸ್ಯ ಗ್ಲಾನಿರ್ಭವತಿಭೂತಲೆ ತದಾತದಾವತಾರೋಽಯಂ ಗಣೇಶಾನಾಂ ನಗಾತ್ಮಜೇ” ಎಂಬ ಶಿವಾಗಮ ವಾಕ್ಯದಂತೆ, ಪಂಡಿತರು ವಿಶೇಷ ಹೀನಾವಸ್ಥೆಯಲ್ಲಿದ್ದ ವೀರಶೈವ ಮತವನ್ನುದ್ಧರಿಸಲು ಅವತರಿಸಿದವರೆಂದು ಹೇಳಿ, ಅವರು ಈವರೆಗೆ ತಮ್ಮ ಜೀವಮಾನದಲ್ಲಿ ಮಾಡಿರುವ ಅದ್ಭುತಕಾರ್ಯಗಳ ವಿಷಯವನ್ನು ವಿವರಿಸಿ ಸರ್ವರನ್ನೂ ಸಂತೋಷಪಡಿಸಿದರು ಅನಂತರ ಗುರುಕುಲದ ವಿದ್ಯಾರ್ಥಿಗಳಾದ ಶ್ರೀ ಕಡಪಟ್ಟಿ ಚರಮೂರ್ತಿಸ್ವಾಮಿಗಳವರು ಪಂಡಿತರ ವಿದ್ಯಾಪ್ರಭಾವ, ಧೈರ್ಯ, ಸಾಹಸಗಳನ್ನು ವರ್ಣಿಸಲು ಆದಿಶೇಷನಿಗೂ ಸಹಾ ಸಾಧ್ಯವಿಲ್ಲವೆಂದು ಹೇಳಿ ಸಂಕ್ಷೇಪವಾಗಿ ಅವರ ಜನ್ಮವೃತ್ತಾಂತವನ್ನು ಹೇಳಿದರು ತರುವಾಯ ಗೌಡಕುಂದಿಮಠದ ಶ್ರೀ ಸ್ವಾಮಿಗಳವರು ಪಂಡಿತರು ಕಾಶೀಕ್ಷೇತ್ರದಲ್ಲಿ ಅಭ್ಯಾಸ ಮಾಡುತ್ತಿದ್ದ ಸಮಯದಲ್ಲಿ, ಅತ್ಯಂತ ಚಿಕ್ಕವಯಸ್ಸಿನವರಾಗಿದ್ದರೂ ಪರವಾದಿಗಳನ್ನು ಖಂಡಿಸಿ ವೀರಶೈವ ಮತಕ್ಕೆ ವಿಶೇಷ ಗೌರವವನ್ನುಂಟುಮಾಡಿದರೆಂದೂ ಆದುದರಿಂದ ಅವರು ಅವತಾರಿ ಪುರುಷರಲ್ಲದೆ ನಮ್ಮಂತೆ ಮಾನವಕೋಟಿಗೆ ಸೇರಿದವರಲ್ಲವೆಂದೂ ಮನೋಹರವಾಗಿ ಭಾಷಣವನ್ನು ಮಾಡಿದರು ಬಳಿಕ ವೇ|| ಪುರಾಣಪಟು ಅಲ್ಲಮಪ್ರಭು ಆಲೂರು, ಇವರು ಕುರಿಗಳ ಗುಂಪಿನಲ್ಲಿ ಸೇರಿದ ಹುಲಿಯ ಮರಿಯು ತನ್ನ ಸ್ವರೂಪವನ್ನೇ ಮರೆತಂತೆ ನಮ್ಮ ಗುರುವರ್ಗದವರು ತಮ್ಮ ಸ್ವರೂಪವನ್ನೇ ಮರೆತಿದ್ದರೆಂದೂ ಈ ವಿಧವಾದ ಹೀನಾವಸ್ಥೆಗೀಡಾಗಿದ್ದ ಗುರುವರ್ಗಕ್ಕೆ ನವಚೈತನ್ಯವನ್ನುಂಟುಮಾಡಿ ಅವರನ್ನು ತಮ್ಮ ಕರ್ತವ್ಯಕರ್ಮದಲ್ಲಿ ನಿರತರಾಗಿರುವಂತೆ ಮಾಡಿದ ಮಹಾತ್ಮರೇ ಇವರೆಂದೂ, ಇವರ ಅವತಾರವಾಗದಿದ್ದರೆ ಇಷ್ಟು ಹೊತ್ತಿಗೆ ಗುರುವರ್ಗವು ನಾಮಾವಶೇಷವಾಗಿ ಹೋಗುತ್ತಿತ್ತೆಂದೂ, ಆದುದರಿಂದ ಪಂಡಿತರ ಉಪಕಾರವು ಗುರುವರ್ಗದ ಮೇಲೆ ಅಪಾರವಾಗಿರುವುದೆಂದೂ, ಇವರು ಗುರುವರ್ಗದಲ್ಲಿ ಒಬ್ಬ ಮಹಾತ್ಮರೆಂದೂ ಪ್ರತಿಪಾದಿಸಿದರು ಆಮೇಲೆ ವೇ|| ದೇವಣಗಾಂವ ನಾಗಭೂಷಣ ಶಾಸ್ತ್ರಿಗಳು, ನಾವೆಲ್ಲರೂ ಶಾಸ್ತ್ರಿಗಳೆಂದು ಹೆಸರಿಟ್ಟುಕೊಂಡಿದ್ದೇವೆ ಈ ಹೆಸರು ನಮಗ ಅಂಕಿತನಾಮವಾಗುವದಲ್ಲದೆ ಅನ್ವರ್ಥನಾಮವಾಗುವದಿಲ್ಲ ಆದರೆ ಶಾಸ್ತ್ರಿ ಎಂಬ ನಾಮವು ಪಂಡಿತರಿಗೆ ಒಪ್ಪುವದೇ ಹೊರತು ನಮಗೆ ಎಂದೂ ಒಪ್ಪುವದಿಲ್ಲ’ ಎಂಬಿವೇ ಮೊದಲಾದ ವಿಷಯಗಳನ್ನು ಜನರ ಮನಸ್ಸಿನಮೇಲೆ ಪರಿಣಾಮವಾಗುವಂತೆ ಹೇಳಿದರು

ಆಮೇಲೆ ಅಧ್ಯಕ್ಷಮಹೋದಯರು, ವರ್ಧಂತಿಯೆಂದರೇನು? ವರ್ಧಂತಿಯನ್ನು ಏಕ ಮಾಡಬೇಕು? ಯಾರದು ಮಾಡಬೇಕು? ಇತ್ಯಾದಿ ವಿಷಯಗಳನ್ನು ಕುರಿತು ಬಹು ಚನ್ನಾಗಿ ವಿವರಿಸಿದರು ಶ್ರೀರಾಮರ ಪಾದಸ್ಪರ್ಶದಿಂದ ಅಹಲ್ಯೆಯು ಉದ್ಧೃತಳಾದಂತೆ ವೀರಶೈವಧರ್ಮವು ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಶ್ರೀ ಜಗದ್ಗುರು ಸಿದ್ಧಲಿಂಗ ಶಿವಾಚಾರ್ಯರ ಆಶೀರ್ವಾದಬಲದಿಂದಲೂ ಮತ್ತು ಶ್ರೀ ಪಂಡಿತರ ವಿದ್ವತ್ಪ್ರಭಾವದಿಂದಲೂ ಉದ್ಧಾರವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಪಂಡಿತರ ಅವತಾರವಾಗದಿದ್ದರೆ ನಮ್ಮ ಗುರುವರ್ಗವು ಯಾವ ಮೂಲೆಯನ್ನು ಹಿಡಿಯುತ್ತಿತ್ತೋ? ಗುರುವರ್ಗದ ಉದ್ಧಾರಕ್ಕಾಗಿ ಅನಂತ ಕಷ್ಟಗಳನ್ನು ಸಹಿಸಿ ಅವರು ಸಟುವಾಗಿಯೇ ಶರೀರವನ್ನು ಕ್ಷಯಿಸುತ್ತಿರುವ ಪಂಡಿತರ ಶರೀರಕ್ಕೆ ಶ್ರೀ ಪರಮೇಶ್ವರನು ನಿರುದ್ಯೋಗಿಗಳ ಆಯುಸ್ಯವನ್ನೆಲ್ಲಾ ಅನುಗ್ರಹಿಸಿ ಇಂತಹ ಇನ್ನೂ ಅನೇಕ ವರ್ಧಂತಿ ಮಹೋತ್ಸವಗಳು ಜರಗುವಂತಾಗಲೆಂದು ಸರ್ವರೂ ಜಗದೀಶ್ವರನ ಸನ್ನಿಧಿಯಲ್ಲಿ ಪ್ರಾರ್ಥಿಸಬೇಕೆಂದು ಹೇಳಿ ಸರ್ವತ್ರ ಶ್ರೀ ಜಗದ್ಗುರು ಪಂಚಾಚಾರ್ಯರ ವಿಜಯಧ್ವಜವನ್ನು ಮೆರೆಯುವಂತೆ ಮಾಡಿದ ಪಂಡಿತರ ಧೈರ್ಯಸಾಹಸಗಳನ್ನು ಅಪ್ರತಿಮವಾಗಿ ವರ್ಣಿಸಿದರು ತರುವಾಯ ವೇ|| ಚನ್ನಮಲ್ಲಿಕಾರ್ಜುನಶರ್ಮ ಅಡಳ್ಳಿ ಇವರು ಸರ್ವರ ಆಭಾರಮನ್ನಿಸಿದ ಮೇಲೆ ಜಗದಾಚಾರ್ಯರ ಭಾವಚಿತ್ರಕ್ಕೂ ಪಂಡಿತರ ಭಾವಚಿತ್ರಕ್ಕೂ ಮಂಗಲವಾಗಿ ಸಭೆಯು ವಿಸರ್ಜಿಸಲ್ಪಟ್ಟಿತು ಈ ವರ್ಧಂತಿ ಮಹೋತ್ಸವ ಕಾರ್ಯದಲ್ಲಿ ಸೌ|| ದಾನಮ್ಮ ಹಿರೇಮಠ, ಸೌ|| ಭಾಗೀರಥೀಬಾಯಿ ಕಟಾಪ, ಸೌ|| ಬಸಮ್ಮ ನಂದೀಮಠ, ಸೌ|| ಸುಗ್ಗಲಾದೇವಿ ತಮಶೆಟ್ಟಿ, ಸೌ|| ಪಾರ್ವತೀಬಾಯಿ ತಮಶೆಟ್ಟಿ, ಸೌ|| ಅನುಸೂಯಾದೇವಿ ಕಟಾಪ, ಸೌ|| ಸುಭದ್ರಾಬಾಯಿ ಶೇಟಿ, ಸೌ|| ಗಂಗಾಬಾಯಿ ಪಾಟೀಲ, ಸೌ|| ಧೋಂಡೂಬಾಯಿ ಇಟಾಣೆ, ಶ್ರೀ|| ಕಾಶೀಬಾಯಿ ನಂದೀಮಠ, ಶ್ರೀ|| ರತ್ನಾಬಾಯಿ ಹಿರೇಕೆಂಪ್ಪ, ಶ್ರೀ|| ಲಕ್ಷ್ಮೀಬಾಯಿ ಗಾಬಣೆ, ಶ್ರೀ|| ಪಾರ್ವತೀಬಾಯಿ ಶೇಟಿ, ಶ್ರೀ|| ಮುಕ್ತಾಬಾಯಿ ಶೇಟಿ, ಶ್ರೀ|| ಗಂಗಾಬಾಯಿ ಕಳಸೆ, ಕು|| ಶಿವಕಾಂತಾ ತಮಶೆಟ್ಟಿ, ಕು|| ಗಂಗಾದೇವಿ ಕಟಾಪ, ಕು|| ಗೌರೀದೇವಿ ಕಟಾಪ, ಕು|| ಶಾಂತಾದೇವಿ ಮಾಳಿಗೆ ಮೊದಲಾದವರು ವಿಶೇಷ ಭಕ್ತಿ ಶ್ರದ್ಧೆಗಳಿಂದ ಭಾಗವಹಿಸಿ ಪಂಡಿತರಿಗೆ ಆರೋಗ್ಯವನ್ನೂ ಆಯುಸ್ಸನ್ನೂ ಕೋರಿದರು.

ಪ್ರತ್ಯಕ್ಷದರ್ಶೀ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಜೂನ್ ತಾ॥ ೨೧ನೆಯ ಸೋಮವಾರ

ಧರ್ಮಾಧರ್ಮಸ್ವರೂಪ.

ನಮ್ಮ ಭರತಖಂಡದ ಪೂರ್ವಾಚಾರ್ಯರು ಅನೇಕ ವಿಧಗಳಾದ ಆಚಾರಗಳನ್ನು ಅನೇಕವಿಧಗಳಾದ ಕರ್ಮಾನುಷ್ಠಾನಗಳನ್ನು ಧರ್ಮಮಾರ್ಗಗಳನ್ನೂ ತೋರಿಸಿರುತ್ತಾರೆ. ಇವುಗಳಿಗೆ ವಿರುದ್ಧವಾದ ದುರಾಚಾರಗಳನ್ನು ದುಷ್ಕರ್ಮಗಳನ್ನು, ಅಧರ್ಮಗಳನ್ನು ಸಹ ತೋರಿಸಿರುತ್ತಾರೆ. ಇವುಗಳಲ್ಲಿ ಸದಾಚಾರ ಸುಕರ್ಮಧರ್ಮಗಳನ್ನು ಅನುಸರಿಸುವುದರಿಂದ ಪೊರೆಯನ್ನು ಬಿಟ್ಟು ಪರಿಶುದ್ಧಿಗೊಂಡ ಹಾವಿನಂತೆ ಆತ್ಮನು ಬಹುಕಾಲದಿಂದ ಆವರಿಸಿದ ಜನ್ಮಹೇತುವಾದ ಪಾಪದಿಂದ ಬಿಡಲ್ಪಟ್ಟವನಾಗಿ ಸುಜ್ಞಾನೋದಯವುಳ್ಳವನಾಗಿ ಮೋಕ್ಷಾನಂದಸೌಖ್ಯವನ್ನನುಭವಿಸುವನು. ಇದಕ್ಕೆ ವಿರುದ್ಧವಾಗಿ ದುರಾಚಾರಗಳನ್ನೂ, ದುಷ್ಕರ್ಮಗಳನ್ನೂ, ಅಧರ್ಮಗಳನ್ನೂ ಅನುಸರಿಸುವುದಾದರೆ ಆತ್ಮನು ಪಾಪಪಂಕದಿಂದ ಮುಚ್ಚಲ್ಪಟ್ಟವನಾಗಿ ಆಕಾಶಕ್ಕೆ ಎಸೆದ ಮಣ್ಣಿನ ಹೆಂಟೆಯಂತೆ ಜರ್ಝರಿತನಾಗಿ ನಾನಾವಿಧ ಹೀನಯೋನಿಗಳಲ್ಲಿ ಜನ್ಮವನ್ನು ಪಡೆದು ದುಃಖಭಾಗಿಯಾಗುವನು. ಇಂಥ ದುಃಖವನ್ನು ಅನುಭವಿಸಬೇಕೆಂಬಿಚ್ಛೆಯಿಲ್ಲ [illegible] ದುರಾಚಾರ ದುಷ್ಕರ್ಮಗಳನ್ನು [illegible]ನಾಗುತ್ತಾನೆ. [illegible] ಆತ್ಮನಿಗೆ ದುರ್ಮಾರ್ಗಗಳಲ್ಲಿಯೇ ಮನಃಪ್ರವೃತ್ತಿ [illegible] ಸಕಲ ಆತ್ಮರೂ ದುಃಖದಿಂದ ಬಿಡಲ್ಪಟ್ಟವರಾಗಿ ಪರಮಾತ್ಮನ ಕೃಪೆಗೆ ಪಾತ್ರರಾಗಬೇಕೆಂಬ [illegible]ದಿಂದ ನಮ್ಮ ಪೂರ್ವಾಚಾರ್ಯರು ಆಚಾರ [illegible], ಧರ್ಮ ಮೊದಲಾದ ನ್ಯಾಯಮಾರ್ಗವನ್ನು ಸಾರಿ ಕೊಟ್ಟಿರುತ್ತಾರೆ. ಮತ್ತು ಶ್ರೀಗುರುವೇ ಶಿವನು, ಅವನು ಅನುಕೂಲವಾದ ಮಾನವದೇಹವನ್ನು [illegible] ಅನುಗ್ರಹಿಸುತ್ತಾನೆ. ಜೀವನಿಗೆ ಕರ್ಮಗಳು [illegible] ಜ್ಞಾನವು ಉದಯಿಸುವುದಿಲ್ಲ. ಜ್ಞಾನವು ಉದಯವಾಗದ ಹೊರತು ಮೋಕ್ಷಾನಂದವು ದೊರೆಯುವುದಿಲ್ಲ. ಅನುಭವಿಸದ ಹೊರತು ಕರ್ಮಗಳು ಪರಿಪಕ್ವತೆಯನ್ನು ಹೊಂದುವುದೇ ಇಲ್ಲ. [illegible] ಕರ್ಮಫಲಗಳನ್ನು ಅನುಭವಿಸುವುದಕ್ಕಾಗಿ ಆಯಾ ಆಯಾ ಜೀವರಿಗೆ ಪರಮೇಶ್ವರನು ಭೌತಿಕಶರೀರಗಳನ್ನು ಕೊಡುತ್ತ ಬರುವನು. ಜೀವನು ಹಿಂದಿನ ಕರ್ಮಾನುಸಾರವಾಗಿ ಶರೀರವನ್ನು ಧರಿಸಿದಮೇಲೆ ಭೋಗಗಳಿಂದ ಕರ್ಮಗಳು ಪಕ್ವಗಳಾಗುವವು. ಅನಂತರ ಜೀವನು ಶುದ್ಧಿಗೊಳ್ಳುವನು. ಆಗ ಪರಮೇಶ್ವರನು ಜ್ಞಾನವನ್ನು ಉಂಟುಮಾಡಿ ನಿತ್ಯಾನಂದರೂಪವಾದ ಮೋಕ್ಷಲಕ್ಷ್ಮಿಯನ್ನು ಪ್ರಕಾಶಗೊಳಿಸುವನು. ಇದು ಪರಮೇಶ್ವರನ ನಿಯಮವಾಗಿರುತ್ತದೆ. ಆದರೆ ಪರಮೇಶ್ವರನು ಸರ್ವಶಕ್ತನೂ ಪರಮಕಾರುಣಿಕನೂ ಆದಮೇಲೆ ಒಂದೊಂದು ಜೀವನು ಮಾಡಿದ ಕರ್ಮಗಳಿಗನುಸಾರವಾಗಿ ದೇಹವನ್ನು ಧರಿಸುವಂತೆ ಮಾಡಿ ಕ್ರಮವಾಗಿ ಮೋಕ್ಷಲಕ್ಷ್ಮಿಯನ್ನು ಕೊಡುವುದೇಕೆ, ಏಕಕಾಲದಲ್ಲಿಯೇ ಎಲ್ಲ ಜೀವರುಗಳ ಕರ್ಮಗಳನ್ನು ಪರಿಪಕ್ವಗೊಳಿಸಿ ಮೋಕ್ಷಾನಂದವನ್ನು ಏಕೆ ಅನುಗ್ರಹಿಸಬಾರದೆಂದು ಅನೇಕರು ಆಕ್ಷೇಪಿಸುವುದುಂಟು. ಆದರೆ ಪರಮೇಶ್ವರನಾದರೂ ಹೆಚ್ಚು ಕಡಿಮೆಯೆಂಬ ಭಾವನೆಯಿಲ್ಲದೆ ಒಂದೇ ಕಾಲದಲ್ಲಿ ಎಲ್ಲ ಜೀವರ ಮೇಲೆ ಅನುಗ್ರಹಕಿರಣವನ್ನು ಹರಿಸಿದ್ದರೂ ಪರಿಪಕ್ವಗಳಾದ ಜೀವರುಗಳು ಮಾತ್ರ ಬಂಧನದಿಂದ ಬಿಡುಗಡೆಯಾಗುವರು. ಉಳಿದ ಜೀವರು ಕಾಲಕ್ರಮದಿಂದ ಬಿಡುಗಡೆಯಾಗುವರು. ಲೋಕದಲ್ಲಿ ಸೂರ್ಯಕಿರಣಗಳು ಏಕಕಾಲದಲ್ಲಿ ಎಲ್ಲಾ ಕಮಲಗಳ ಮೇಲೆ ಬಿದ್ದರೂ ಆ ಕಮಲಗಳೆಲ್ಲವೂ ಏಕಕಾಲದಲ್ಲಿ ಅರಳುವುದಿಲ್ಲ. ಅವುಗಳಲ್ಲಿ ಯಾವ ಕಮಲಗಳು ಪರಿಪಕ್ವಗಳಾಗಿರುತ್ತವೆಯೋ ಅವುಗಳು ಮಾತ್ರ ಅರಳುತ್ತವೆ. ಅಪಕ್ವಗಳಾದ ಕಮಲಗಳು ಕಾಲಕ್ರಮದಿಂದ ಅರಳಬೇಕಾಗುತ್ತವೆ. ಈ ವಿಷಯದಲ್ಲಿ ಶ್ರೀಭಾಷ್ಯಕಾರರು ಸ್ಪಷ್ಟಪಡಿಸಿ ಪ್ರಮಾಣವಾಕ್ಯಗಳನ್ನುದಹರಿಸಿರುತ್ತಾರೆ.

ಆದಿತ್ಯೇನ ಯಥಾ ಹೀನಂ ತಮೋಭೂತಮಿದಂ ಜಗತ್ ।
ಶಿವೇನಾಪಿ ವಿನಾ ತದ್ವತ್ ತಮೋಭೂತಮಿದಂ ಜಗತ್ ॥
ವೈದ್ಯಂ ವಿನಾ ನಿದಾನಜ್ಞಂ ಕ್ಲಿಶ್ಯಂತೇ ರೋಗಿಣೋ ಯಥಾ ।
ಶಿವಂ ವಿನಾ [illegible] ಕ್ಲಿಶ್ಯತೇ ಹಿ ಜಗತ್ತ್ರಯಂ ।
ವ್ಯಾಧೀನಾಂ ಭೇಷಜಂ ಯದ್ವತ್ ಪ್ರತಿಪಕ್ಷಂ ಸ್ವಭಾವತಃ ।
ಶಿವಸ್ಸಂಸಾರರೋಗಾಣಾಂ ಪ್ರತಿಪಕ್ಷಸ್ಸ್ವಭಾವತಃ ।
ಯಥಾಽನಾದಿಪ್ರವೃತ್ತೋಽಯಂ ಘೋರಸ್ಸಂಸಾರಮಂಡಲಃ ।
ತಥಾಽನಾದಿಪ್ರವೃತ್ತೋಽಯಂ ಶಿವಸ್ಸಂಸಾರಮೋಚಕಃ ॥

ಸೂರ್ಯನಿಲ್ಲದಿದ್ದರೆ ಜಗತ್ತೆಲ್ಲವೂ ಅಂಧಕಾರಮಯವಾಗುವಂತೆ ಕರ್ತನಾದ ಪರಮೇಶ್ವರನಿಲ್ಲದಿದ್ದಲ್ಲಿ ಜಗತ್ತು ತಮೋಮಯವಾಗುತ್ತಿದ್ದಿತು. ವೈದ್ಯರಿಲ್ಲದೆಹೋದರೆ ರೋಗಿಗಳೆಲ್ಲರೂ ಯಾವಾಗಲೂ ಕಷ್ಟಪಡುವಂತೆ ಪರಮೇಶ್ವರನಿಲ್ಲದಿದ್ದಲ್ಲಿ ಸಕಲ ಪ್ರಾಣಿಗಳೂ ಆನಂದವಿಲ್ಲದೆ ಯಾವಾಗಲೂ ಕ್ಲೇಶಪಡಬೇಕಾಗುವದು. ಔಷಧಿಯು ಸಕಲರೋಗಗಳನ್ನೂ ನಾಶಗೊಳಿಸುವಂತೆ ಪರಮೇಶ್ವರನು ಜನನಮರಣರೂಪವಾದ ಮಹಾರೋಗವನ್ನು ನಾಶಗೊಳಿಸುವನು. ಇದು ಅವನ ಸ್ವಭಾವಸಿದ್ಧವಾದ ಗುಣವಾಗಿರುತ್ತದೆ. ಕ್ಲೇಶಕರವಾದ ಈ ಘೋರ ಸಂಸಾರವಿಷವೃಕ್ಷವು ಅನಾದಿಕಾಲದಿಂದ ಮುಂದು ಮುಂದು ಬೆಳೆದ ಹಾಗೆಲ್ಲಾ ಪರಮೇಶ್ವರನು ಅದನ್ನು ನಾಶಗೊಳಿಸುತ್ತಲೇ ಬಂದಿರುವನು. ಹೀಗೆ ಪರಮಕಾರುಣಿಕನಾದ ಪರಮೇಶ್ವರನು ಸಕಲಜೀವಿಗಳ ಮೇಲೆ ಅನುಗ್ರಹದೃಷ್ಟಿಯನ್ನು ಪ್ರಸರಿಸಿದ್ದರೂ ಬಹುಕಾಲದಿಂದ ಪಾಪಪಂಕದಲ್ಲಿ ಮುಳುಗಿರುವುದರಿಂದ ಅನೇಕ ಆತ್ಮರು ಅಜ್ಞಾನಾವರಣದಿಂದ ಕೂಡಿ ದುರಾಚಾರಗಳನ್ನು, ಮಾಡುತ್ತ ಅಧರ್ಮಾನುಷ್ಠಾನದಲ್ಲಿ ನಿರತರಾಗಿ ಹೋಗಿರುತ್ತಾರೆ. ಇದರಿಂದ ಜೀವಾತ್ಮರು, ಪರಮೇಶ್ವರನ ಕಡೆಗೆ ತಿರುಗುವುದೇ ಕಷ್ಟವಾಗಿಹೋಗಿದೆ. ಹೀಗೆ ಸಂಸಾರಾಭಿಮುಖನಾದ ಜೀವಾತ್ಮನು ಕ್ರಮಕ್ರಮವಾಗಿ ಸದಾಚಾರ, ಸುಕರ್ಮ, ಸುಧರ್ಮಗಳಲ್ಲಿ ಆಸಕ್ತನಾಗಿ ಪರಮೇಶ್ವರನಲ್ಲಿ ಸಹಜಪ್ರೇಮವನ್ನು ತೋರಿಸುತ್ತ ಬಂದರೆ ಒದಗುವ ಬಂಧವಿಮೋಚನೆಯಾಗಿ ನಿಜಸ್ಥಿತಿಯನ್ನು ಪಡೆಯುವನು. ಅದಕ್ಕಾಗಿಯೇ ಪೂರ್ವಾಚಾರ್ಯರು ಧರ್ಮ, ಕರ್ಮ, ಸದಾಚಾರಗಳೆಂಬ ಸನ್ಮಾರ್ಗಗಳನ್ನು ಕಲ್ಪಿಸಿರುತ್ತಾರೆ.

ಯುದ್ಧವಾರ್ತೆ.

ಜಪಾನ್ ಸೇನೆಗೆ ಸೋಲು

ಇಚಾಂಗ್—ಷಾಸಿಗಳಿಗೆ ಮಧ್ಯೆ ಇರುವ ಸಂಗ್ ಟ ಎಂಬ ನಗರವನ್ನು ಚೀಣಾ ಸೈನಿಕರು ಸಂಪೂರ್ಣವಾಗಿ ಆಕ್ರಮಿಸಿದ್ದಾರೆ. ಇಚಾಂಗಿನೊಂದಿಗೆ ಜಪಾನರು ಸಂಬಂಧವಿಟ್ಟುಕೊಳ್ಳಲು ಇದರಿಂದ ಕಷ್ಟವಾಗಿದೆ. ಸಂಗ್‌ಟಯಿಂದ ಹೊರದೂಡಲ್ಪಟ್ಟ ಜಪಾನ್ ಸೈನಿಕರು ಅವ್ಯವಸ್ಥೆಯಿಂದ ಓಡುತ್ತಿದ್ದಾರೆ. ಅದೇ ಕ್ಷೇತ್ರದಲ್ಲಿರುವ ಮತ್ತೆ ಹಲವು ಮುಖ್ಯ ಸ್ಥಾನಗಳು ಸಹ ಚೀಣಾ ವಶವಾಗಿವೆ. ಹೆಚ್ಚು ಭತ್ತ ಬೆಳೆಯುವ ಪ್ರದೇಶಗಳನ್ನು ಚೀಣರು ಮತ್ತೆ ಹಿಡಿದಂತಾಯಿತು. ಭತ್ತದ ಬೆಳೆ ಬರುವುದು ಇನ್ನೂ ಮೂರುತಿಂಗಳಿರುವುದರಿಂದ ಪೈರಿರುವಂತೆಯೇ ಆ ಕ್ಷೇತ್ರವನ್ನವರು ಹಿಡಿದಂತಾಗಿದೆ.

ರುಮೇನಿಯ ಜರ್ಮನಿಯನ್ನು ಬಿಡುವುದೇ ?

ರುಮೇನಿಯವು ಜರ್ಮನಿಯ ಸಂಬಂಧವನ್ನು ತ್ಯಜಿಸಿ, ಮಿತ್ರದೇಶಗಳ ಕಡೆ ಸೇರಿಕೊಳ್ಳುವ ಸಲುವಾಗಿ ಮಿತ್ರದೇಶಗಳ ಅಭಿಪ್ರಾಯ ತಿಳಿಯಲು ತಾಟಸ್ಥ್ಯ ದೇಶಗಳ ಅಧಿಕಾರಿಗಳ ಮೂಲಕ ಯತ್ನಿಸುತ್ತಿದೆಯೆಂದು ತಿಳಿದುಬಂದಿದೆ. ಬೆಸ್ಸರೇಬಿಯಾ ಮತ್ತು ಬುಕೋವಿನಾ ಪ್ರಾಂತ್ಯಗಳ ಹಲವು ಭಾಗಗಳನ್ನು ರುಮೇನಿಯಾ ಇಟ್ಟುಕೊಳ್ಳಲು ಮಿತ್ರದೇಶಗಳು ಒಪ್ಪಿದರೆ, 1943 ರಲ್ಲಿ ಜರ್ಮನಿಯು ರಷ್ಯದಲ್ಲಿ ಮುತ್ತಿಗೆ ಆರಂಭಿಸಿದೊಡನೆಯೇ ರುಮೇನಿಯವು ಜರ್ಮನಿ ಸಂಬಂಧವನ್ನು ತ್ಯಜಿಸುವುದಾಗಿ ಸೂಚನೆ ಮಾಡಿದೆಯೆಂದು ಹೇಳಲಾಗಿದೆ.

ಜಪಾನಿನ ಬಯಕೆ

ಹಿಂದೆ ಜಪಾನಿನಲ್ಲಿ ರಾಯಭಾರಿಯಾಗಿದ್ದ ಶ್ರೀ ಜೋಸೆಫ್ ಗ್ರ್ಯೂರವರು ಹೇಳುತ್ತ 'ಅವಶ್ಯಕವಿದ್ದರೆ ೧೦೦ ವರ್ಷ ಕದನ ನಡೆಸಿ, ಅಮೇರಿಕವನ್ನು ಗೆಲ್ಲಬೇಕೆಂದು ಜಪಾನ್ ಮಿಲಿಟರಿ ಅಧಿಕಾರಿಗಳು ಬಯಸು ದ್ದಾರೆ. ಈಗ ಜಪಾನ್ ಗೆದ್ದಿರುವ ಪ್ರದೇಶಗಳನ್ನು ಬ ಪಡಿಸಿಕೊಂಡು ಅಲ್ಲಿನ ಸಾಧನ ಸಂಪತ್ತನ್ನು ಉಪಯೋಗಿಸಿಕೊಳ್ಳಲು ಅವಕಾಶವಿತ್ತರೆ ಜಪಾನಿನ ಶಸ್ತ್ರಬಲವು ಅಮೆರಿಕ, ಬ್ರಿಟನ್ ಅಥವ ರಷ್ಯಗಳ ಬಲಕ್ಕಿಂತ ಅಧಿಕವಾಗುವುದು' ಎಂದರು.

ಲಫೋಟೆನ್ ದ್ವೀಪವನ್ನು ಜರ್ಮನರು ತ್ಯಜಿಸಿದರು

ಉತ್ತರ ನಾರ್ವೆಯ ಆಚೆ ಇರುವ ಲಫೋಟೆನ ದ್ವೀಪಗಳನ್ನು ಬರಿದುಮಾಡಿ ಬರುವಂತೆ ಜರ್ಮನ್ ಸೇನಾನಿಗಳು ತಮ್ಮ ಯೋಧರಿಗೆ ಆಜ್ಞೆ ಮಾಡಿದ್ದಾರೆಂದು ಸ್ಟಾಕ್‌ಹೋಂನಿಂದ ಬಂದ ಸುದ್ದಿಯನ್ನು ನ್ಯೂಯಾರ್ಕ್ ರೇಡಿಯೋ ತಿಳಿಸಿತು. ಮಿತ್ರರ ದಂಡಯಾತ್ರೆಯನ್ನು ಎದುರಿಸುವುದೇ ಇದರ ಉದ್ದಿಷ್ಟ. ನಾರ್ವೆಯಲ್ಲಿರುವ ನಾರ್ವಿಕ್ ಬಂದರಿನಾಚೆ ಈ ದ್ವೀಪಗಳಿವೆ. ಬ್ರಿಟಿಷ್ ಯೋಧರು ಇದುವರೆಗೆ ಮೂರುಸಾರಿ ಅಲ್ಲಿ [illegible] ಧಾಳಿ ನಡೆಸಿದ್ದರು.

ಆಗ್ನೇಯ ಯೂರೋಪಿಗೆ ಮುತ್ತಿಗೆ ಹಾಕುವುದು ಕಷ್ಟ

ತುರ್ಕಿ-ಸಿರಿಯಾ ಗಡಿಯನ್ನು ಸಂಪೂರ್ಣವಾಗಿ ಮುಚ್ಚಿಬಿಡಲಾಗಿದೆ. ಈ ಅಂಶವನ್ನು ಗಮನಿಸಿ ಜರ್ಮನರೀಗಲೇ ಪ್ರಚಾರ ಮಾಡಲಾರಂಭಿಸಿದ್ದಾರೆ "ಆಗ್ನೇಯ ಯೂರೋಪಿನ ರಕ್ಷಣೆಗೆ ಮಾಡಬೇಕಾದುದೆಲ್ಲ ಮಾಡಲಾಗಿದೆ. ಮುಖ್ಯ ಸ್ಥಳಗಳನ್ನೆಲ್ಲ ಇಟಾಲಿಯನರೂ ಜರ್ಮನರೂ ಉಗ್ರವಾಗಿ ರಕ್ಷಿಸುತ್ತಿರುವುದರಿಂದ ಶತ್ರುಗಳು ಸುಲಭವಾಗಿ ಮುತ್ತಿಗೆ ಹಾಕಲಾರರು. ಕ್ರೀಟ್ ಜರ್ಮನರ ಕೈಲಿದ್ದರೆ ಸಾಕು ಆಗ್ನೇಯ ಯೂರೋಪಿನಲ್ಲಿ ಅಶಾಂತಿ ತೊಲಗಿದಂತೆಯೆ ಎಂದು ನಾಜಿಗಳು ಹೇಳುತ್ತಿದ್ದಾರೆ.

ಜರ್ಮನರ ಸುಳ್ಳು ಸುದ್ದಿ

ಜರ್ಮನರಿಗೆ ಅನುಕೂಲವಾಗಿರುವ 'ಅಲೆಹಾಂಡಾ' ಎಂಬ ಪತ್ರಿಕೆಯು ವಿಶೇಷ ಸಂಚಿಕೆಯೊಂದನ್ನು ಹೊರಡಿಸಿ, ಇತ್ತೀಚೆಗೆ ಸ್ಟಾಕ್‌ಹೋಂನಲ್ಲಿ ಜರ್ಮನರಿಗೂ ರಷ್ಯನರಿಗೂ ಸಂಧಾಸಾಧನ ನಡೆಯಿತೆಂಬ ಸುದ್ದಿಯನ್ನು ಪ್ರಕಟಿಸಿತು. ಸ್ಟಾಕ್‌ಹೋಂನ ಹೋಟಲೊಂದರಲ್ಲಿ ಈ ಸಂಧಾನ ನಡೆಯಿತೆಂದೂ, ರಷ್ಯಾದ ಕಡೆ ಶ್ರೀಮತಿ ಕೊಲ್ಲಾಂಟೆ ಮುಂತಾದವರೂ ಜರ್ಮನಿಯ ಕಡೆ ಭಾರಿ ಅಧಿಕಾರಿಗಳೂ ಭಾಗವಹಿಸಿದ್ದರೆಂದೂ ಆ ಪತ್ರಿಕೆ ತಿಳಿಸಿದೆ. ಈ ಕತೆಯ ಪ್ರಕಾರ ಬಾಲ್ಟಿಕ್ ದೇಶಗಳನ್ನೂ ಪೋಲೆಂಡನ್ನೂ ಜರ್ಮನಿಗೆ ಬಿಟ್ಟುಕೊಡಲು ರಷ್ಯಾವು ಸಿದ್ಧವಾಗಿತ್ತೆಂದೂ ಆದರೆ ಜರ್ಮನರು ತಮಗೆ ಉಕ್ರೇನನ್ನು ಕೊಡಬೇಕೆಂದು ಹಟ ಹಿಡಿದುದರಿಂದ ಸಂಧಾನ ಮುರಿದುಬಿತ್ತೆಂದೂ ಹೇಳಲಾಗಿದೆ. ಈಗ ಮಿತ್ರದೇಶಗಳವರಲ್ಲಿ ಸಹಕಾರಭಾವವು ತೀರ ನಿಕಟವಾಗಿರುವುದರಿಂದ ಅವರಲ್ಲಿ ಪರಸ್ಪರ ಅನುಮಾನವನ್ನು ಬಿತ್ತಲೋಸುಗ ಜರ್ಮನಿಯು ಈ ಕತೆ ಕಟ್ಟಿದೆಯೆಂದು ವಿಮರ್ಶಕರು ಹೇಳುತ್ತಾರೆ.

ಭಾರತವು ಸ್ವತಂತ್ರವಾಗಲೇಬೇಕು

ಇಂಡಿಯಾ ಲೀಗ್‌ನವರು ವೆಸ್ಟ್ ಮಿನಿಸ್ಟರ ಸಭಾಂಗಣದಲ್ಲಿ ಒಂದು ಸಭೆ ಸೇರಿಸಿದ್ದರು. ಪಾಲಿಮೆಂಟ್ ಸದಸ್ಯರಾದ ಶ್ರೀ ಡೊಬ್ಬಿಯವರು ಅಧ್ಯಕ್ಷ ವಹಿಸಿದ್ದರು. ಭರತಖಂಡದ ರಾಜಕೀಯ ಬಿಕ್ಕಟ್ಟನ್ನು ಕುರಿತು ಕಾತುರವನ್ನು ವ್ಯಕ್ತಪಡಿಸುವ ಮತ್ತು ರಾಷ್ಟ್ರೀಯ ಸರಕಾರವನ್ನು ಸ್ಥಾಪಿಸುವುದಕ್ಕಾಗಿ, ಮತ್ತೆ [illegible]ನವಾರಂಭಿಸುವುದಲ್ಲದೆ ರಾಜಕೀಯ ಬಂದಿಗ

ನ್ನೆಲ್ಲ ಬಿಡುಗಡೆ ಮಾಡಬೇಕೆಂದು ಒತ್ತಾಯಪಡಿಸುವ ನಿರ್ಣಯವಾಯಿತು. ಸರಕಾರದವರಿಗೆ ಏನೂ ಸಮಾಧಾನ ಯೋಚನೆ ಇಲ್ಲವೆಂಬ ಅನುಮಾನ ತಮಗುಂಟಾಗಿವೆಯೆಂದು ಲಾರ್ಡ್ ಹ್ಯಾರಿಂಗ್‌ಟನ್‌ರವರು ತಿಳಿಸಿದರು.

ಸ್ವೀಕಾರ

ಬಳ್ಳಾರಿ ಡಿ|| ಹೂವಿನಹಡಗಲಿ ಗ್ರಾಮದ ಶೆಟ್ಟರ (ಮುದ್ದಿ) ವೀರಪ್ಪನವರು ನೂತನಗೃಹಪ್ರವೇಶೋತ್ಸವವನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಗಳು ಮತ್ತು ನೀಲಗುಂದ ಹನಸಕುಂಟೆ ಮಠದ ಡಾ|| ಅನ್ನದಾನಶರ್ಮರವರ ಮನಸ್ಸಂಕಲ್ಪವು ಜಗದಾಚಾರ್ಯರ ಆಶೀರ್ವಾದಬಲದಿಂದ ಪೂರ್ಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂ. ಯು ಒಟ್ಟು 3 ರೂಪಾಯಿಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ತರೀಕೆರೆ ತಾಲೂಕು ಅಜ್ಜಂಪುರದಲ್ಲಿರುವ ಶ್ರೀಯುತ ಬಿ ಜಿ. ವೀರಭದ್ರಪ್ಪನವರ ಸಹೋದರ ಚಿ|| ರುದ್ರಪ್ಪನೆಂಬ ವರನಿಗೆ ಮ|| ರಾ|| ಮಲ್ಲಿಕಾರ್ಜುನಪ್ಪನವರ ಬಸಪ್ಪನವರ ಪುತ್ರಿ ಚಿ|| ಸೌ|| ಮಲ್ಲಮ್ಮನನ್ನೂ ಮತ್ತು ಬಾಣಾವರದ ಮ|| ರಾ|| ಕುಪ್ಪಾಳು ನಂಜುಂಡಪ್ಪನವರ ತಮ್ಮ ಚಿ|| ಬಸಪ್ಪನೆಂಬ ವರನಿಗೆ ಮ|| ರಾ|| ಬಂಕನಕಟ್ಟೆ ಚನ್ನಯ್ಯನವರ ಪುತ್ರಿ ಚಿ|| ಸೌ|| ಬಸಮ್ಮನನ್ನೂ ಕೊಟ್ಟು ನೆರವೇರಿಸಿದ ವಿವಾಹಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ ಮತ್ತು ಇದೇ ಗ್ರಾಮದ ಶಿವಟೂರು ಮಲ್ಲಯ್ಯನವರ ಪುತ್ರ ಚಿ|| ಮಾದಪ್ಪನೆಂಬ ವರನಿಗೆ ಮ|| ರಾ|| ನಿರಂಜನಶೆಟ್ಟರ ಬಸಪ್ಪನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ತಂದು ನೆರವೇರಿಸಿದ ವಿವಾಹಸಮಯದಲ್ಲಿ ಸಮರ್ಪಿಸಿದ 1 ರೂ ಯು ಒಟ್ಟು 3 ರೂಪಾಯಿಗಳು ಅಜ್ಜಂಪುರದ ಸ್ಕೂಲ್ ಮಾಸ್ಟರ್ ವೇ|| ಎಂ ಎನ್. ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತವೆ

ಧಾರವಾಡ ಡಿ|| ಹುಲಗೂರು ಗ್ರಾಮದ ಪಟ್ಟಣಶೆಟ್ರು ಮ|| ರಾ|| ಸಂಗಪ್ಪನವರ ಪುತ್ರ ಚಿ|| ವೀರಪ್ಪನಿಗೆ ಹುಬ್ಬಳ್ಳಿಯಲ್ಲಿರುವ ಮ|| ರಾ|| ಬಿ ಎಸ್. ಬೆಂಡಿಗೇರಿ ಬಿ ಎ, ಎಲ್‌ಎಲ್.ಬಿ., ವಕೀಲ್ ಇವರ ಪುತ್ರಿ ಚಿ|| ಸೌ|| ನೀಲಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ವೇ|| ಪಂಡಿತ ಹಿರೇಶ್ವರಶಾಸ್ತ್ರಿಗಳ ದ್ವಾರಾ ತಲ್ಪಿರುತ್ತವೆ.

ಶಿವಟೂರು ನಗರದಲ್ಲಿರುವ ವೇ|| ತುಂಬಾಪುರದ ನಂಜುಂಡಯ್ಯನವರಿಗೆ ಹೊನ್ನವಳ್ಳಿ ಗ್ರಾಮದ ವೇ|| ಮರುಳಯ್ಯನವರ ಪುತ್ರಿ ಚಿ|| ಸೌ|| ಚನ್ನಬಸಮ್ಮನನ್ನು ಕೊಟ್ಟು ಹೊನ್ನವಳ್ಳಿಯಲ್ಲಿ ನೆರವೇರಿಸಿದ ವಿವಾಹಸಮಯದಲ್ಲಿ ವೇ|| ಎ. ಎಂ. ಚಿಕ್ಕಣ್ಣಾರಾಧ್ಯರ ಸೂಚನೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂ. ಗಳು ವೇ|| ಆರ್. ಎಂ. ಮಲ್ಲಿಕಾರ್ಜುನಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಮೈಸೂರು ನಗರದಲ್ಲಿರುವ ಮ|| ರಾ|| ಡಾಕ್ಟರ್ ಟಿ. ಎಸ್. ಸಿದ್ಧಪ್ಪನವರು ಇದೇ ತಿಂಗಳು ೧೩ ನೆಯ ತಾರೀಖಿನ ದಿವಸ ಶ್ರೀಜಗದ್ಗುರು ರೇಣುಕಜಯಂತಿಯ ಸ್ಮಾರಕವಾಗಿ ಸಭೆಯನ್ನು ನೆರವೇರಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂ ಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಕೃಷ್ಣರಾಜನಗರ ತಾ|| ಕಾರಗಳ್ಳಿಕೊಪ್ಪಲು ಗ್ರಾಮದಲ್ಲಿರುವ ಮ|| ರಾ|| ಬಿ. ವೀರಣ್ಣನವರ ಪುತ್ರ ಚಿ|| ಬಿ ಶಿವಪ್ಪ ಜನರಲ್ ಮರ್ಚೆಂಟ್ ಇವರಿಗೆ ಹೊಳೆನರಸಿಪುರ ತಾ|| ನಿಡುವಣಿ ಗ್ರಾಮದಲ್ಲಿರುವ ಮ|| ರಾ|| ಮಾಜೀ ಪಟೇಲ ಬಸಪ್ಪನವರ ಪುತ್ರಿ ಚಿ|| ಸೌ|| ಸಾವಿತ್ರಮ್ಮನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮ|| ರಾ|| ಬಿ. ವೀರಣ್ಣನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀರೇಣುಕಜಯಂತೀಮಹೋತ್ಸವವೂ
ಡಾಕ್ಟರ್ ಸಿದ್ಧಪ್ಪನವರ ಉದಾರ ದಾನವೂ.

ಆಚಾರ್ಯ ಸೇವಾಧುರಂಧರ ಮೈಸೂರು ಡಾಕ್ಟರು ಟಿ. ಎಸ್. ಸಿದ್ಧಪ್ಪನವರು ಶ್ರೀ ರೇಣುಕ ಜಯಂತಿಯನ್ನು ಕಾರಣಾಂತರಗಳಿಂದ ಸಕಾಲದಲ್ಲಿ ಮಾಡುವದಕ್ಕೆ ಅನಾನುಕೂಲವಾದ್ದರಿಂದ ತಾ|| 13-6-43 ಭಾನುವಾರ ಸಾಯಂಕಾಲ ಮೈಸೂರಿನಲ್ಲಿ ತುಂಬಾ ವಿಜೃಂಭಣೆಯಿಂದ ನೆರವೇರಿಸಿದರು ರಾವ್ ಬಹದ್ದೂರ್ ಎಂ ರಾಮಸ್ವಾಮಿಯವರು, ಪಬ್ಲಿಕ್‌ಸರ್ವಿಸ್ಸು ಕಮಿಷನರ್ ಮ|| ರಾ|| ಬಿ ಎಸ್. ಪುಟ್ಟಸ್ವಾಮಿಯವರು ಮೊದಲಾದ ಪ್ರಮುಖರೂ, ಮಹಿಳೆಯರೂ ಆಗಮಿಸಿದ್ದರು. ಮೈಸೂರು ವಾಣೀವಿಲಾಸ ರೋಡಿನಲ್ಲಿರುವ ಮ|| ರಾ|| ಚಲುವೇಂಗಸಿನವರ ವಿಶಾಲವಾದ (ಸ್ವಾಮಿಯರ ಇನ್ಷೂರೆನ್ಸ್ ಕಂಪನಿ ಇರುವ) ಬಂಗ್ಲೆಯಲ್ಲಿ ಆಚಾರ್ಯರ ಭಾವಚಿತ್ರಕ್ಕೆ ಪೂಜೆಯಾಗಿ ಫಲಹಾರವಾದ ತರುವಾಯ ಸಭಾಕಾರ್ಯವು ಪ್ರಾರಂಭವಾಯಿತು ಸುತ್ತೂರು ಮಠದ ಪಟ್ಟದ ಸ್ವಾಮಿಗಳವರು ಅಗ್ರಾಸನವನ್ನು ವಹಿಸಿದ್ದರು. ಶ್ರೀ ವೀರಶೈವ ಮಹಾಮತಸ್ಥಾಪನಾಚಾರ್ಯರಾದ ರೇಣುಕಾಚಾರ್ಯರ ಸಂಕ್ಷಿಪ್ತ ಚರಿತ್ರೆಯನ್ನು ಅಚ್ಚು ಹಾಕಿಸಿರುವ ಪುಸ್ತಕಗಳನ್ನು ಸಭಿಕರಿಗೆಲ್ಲಾ ಕೊಟ್ಟು, ಚರಿತ್ರೆಯನ್ನು ಮ|| ಎಂ. ಪಿ. ಚನ್ನಪ್ಪನವರು ಓದಿದರು ತರುವಾಯ ಮ|| ಎಂ ಎಲ್. ನಾಗಣ್ಣನವರೇ ಮೊದಲಾದವರು ಭಾಷಣಗಳನ್ನು ಮಾಡಿದರು ತರುವಾಯ ಡಾ|| ಟಿ. ಎಸ್ ಸಿದ್ಧಪ್ಪನವರು ಧರ್ಮಕಾರ್ಯಗಳಿಗೆ ತಮ್ಮ ಸೇವೆಯನ್ನು ಸಲ್ಲಿಸಿ ಧನ್ಯನಾಗಬೇಕೆಂದು ಇದೇನೆ ಎಂದು ಈ ರೀತಿ ಹೇಳಿದರು —

(1) ಶ್ರೀಮದ್ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀ ಜಗದ್ಗುರುಶಿವಾನಂದರಾಜೇಂದ್ರಮಹಾಸ್ವಾಮಿಗಳವರ ಸವಾರಿಯು 1935 ನೆಯ ಇಸವಿಯಲ್ಲಿ ಮೈಸೂರಿಗೆ ದಯಮಾಡಿಸಿದ್ದಾಗ ಮ|| ಮುಪ್ಪುಟ್ಟಣ್ಣನವರ ದೇವಣ್ಣನವರು ಜಗದ್ಗುರುಗಳವರಿಗೆ ದಾನವಾಗಿ ಕೊಟ್ಟಿರುವ ಜಾಗದಲ್ಲಿ ರೇಣುಕಾಲಯವನ್ನು ಕಟ್ಟುವದಕ್ಕಾಗಿ ರೂ 2,000 ವನ್ನೂ, (2) ಬಡವರಾದ ವೀರಶೈವರಲ್ಲಿ ನಡಿಯಬೇಕಾದ ಅಂತ್ಯಕರ್ಮದ ವೆಚ್ಚಕ್ಕಾಗಿ ರೂ 1,000 ವನ್ನೂ, (3) ವೀರಶೈವ ವಿದ್ಯಾರ್ಥಿಗಳ ಭೋಜನದ ಖರ್ಚಿಗಾಗಿ ರೂ 50,000 ವನ್ನೂ, (4) ವೀರಶೈವವಿದ್ಯಾರ್ಥಿಗಳ ವಾಸಕ್ಕಾಗಿ ರೂ 13,000 ಬಾಳುವ ಶ್ರೀರಂಭಾಪುರೀ ಜಗದ್ಗುರುಗಳವರಿಗೆ ದಾನಮಾಡಿರುವ ರೇಣುಕಾನಂದಮಂದಿರವನ್ನೂ, (5) ಕ್ಷಯರೋಗ ಆಸ್ಪತ್ರೆ ವಗೈರೆಗಾಗಿ 14,000 ರೂ. ಗಳನ್ನೂ ದಾನ ಮಾಡಿರುವದಾಗಿಯೂ, ಈ ಕಾರ್ಯಗಳನ್ನು ನೆರವೇರಿಸುವದಕ್ಕಾಗಿ ಇಷ್ಟರಲ್ಲಿ ಒಂದು ('Trust-deed) ಟ್ರಸ್ಟ್ ಡೀಡನ್ನು ಬರೆದು (Trustees) ಟ್ರಸ್ಟೀಸ್‌ಗಳಿಗೆ ವಹಿಸುವದಾಗಿ ಹೇಳಿದರು. ತಮ್ಮ ಕೋರಿಕೆಗಳನ್ನು ನಡಿಸಿಕೊಡಬೇಕಾಗಿ ಇವರನ್ನು ಕೇಳಿಕೊಳ್ಳುತ್ತೇನೆ ಎಂದು ತಿಳಿಸಿದರು. ಕರತಾಡನವಾದಮೇಲೆ ರಾವ್‌ಸಾಹೇಬ್ ಎಂ. ರಾಮಸ್ವಾಮಿಯವರು ಮತ್ತು ಮ|| ಟಿ. ಕೃಷ್ಣರಾಯರು ಡಾಕ್ಟರವರ ಗುಣಕಥನವನ್ನು ಮಾಡಿದರು. ಆಮೇಲೆ ವೀರಶೈವಜನಗಳಪರವಾಗಿ ಡಾಕ್ಟರನ್ನು ವಂದಿಸಲಾಯಿತು ಆಸ್ಥಾನ ವಿದ್ವಾನ್ ಶಿವಪ್ಪನವರ ಇಂಪಾದ ಸಂಗೀತವಾದಮೇಲೆ ಶ್ರೀರೇಣುಕಾಚಾರ್ಯರ ಭಾವಚಿತ್ರಪೂಜೆ, ಮಂಗಳಾರತಿ, ಪ್ರಸಾದವಿನಿಯೋಗವಾಗಿ ಸಭೆಯು ಸಮಾಪ್ತಿಗೊಂಡಿತು

ಪ್ರತ್ಯಕ್ಷದರ್ಶಿ.

ವಿವಾಹಮಹೋತ್ಸವ, ಅಜ್ಜಂಪುರ

ಕಡೂರು ಡಿ|| ಅಜ್ಜಂಪುರ ಟೌನ್ನಿನಲ್ಲಿರುವ ಶ್ರೀಯುತ ಬೆಳ್ಳಳ್ಳಿ ಗುರುಶಾಂತಪ್ಪನವರ ಪುತ್ರರಾದ ಮ|| ರಾ|| ಬಿ ಜಿ ವೀರಭದ್ರಪ್ಪನವರ ಗೃಹದಲ್ಲಿ ಸದರಿಯವರ ಸಹೋದರರಾದ ಚಿ|| ರುದ್ರಪ್ಪನೆಂಬ ವರನಿಗೆ, ಅಜ್ಜಂಪುರಗ್ರಾಮದ ಮ|| ರಾ|| ಮಲ್ಲಿಕಾರ್ಜುನಪ್ಪನವರ ಬಸಪ್ಪನವರ ಪುತ್ರಿ ಚಿ|| ಸೌ|| ಮಲ್ಲಮ್ಮನನ್ನೂ ಮತ್ತು ಇದೇ ಗ್ರಾಮದಲ್ಲಿರುವ ಬಾಣಾವರದ ಕುಪ್ಪಾಳು ಮ|| ರಾ|| ನಂಜುಂಡಪ್ಪನವರ ತಮ್ಮ ಚಿ|| ಬಸಪ್ಪನೆಂಬ ವರನಿಗೆ, ಬಂಕನಕಟ್ಟೆ ಮ|| ರಾ|| ಚನ್ನಯ್ಯನವರ ಪುತ್ರಿ ಚಿ|| ಸೌ|| ಬಸಮ್ಮನನ್ನೂ ಕೊಟ್ಟು ಇದೇ ಜೇಷ್ಠ ಶು|| ೧೦ (ತಾ|| 13-6-43) ಭಾನುವಾರ ದಿವಸ ಮ|| ರಾ|| ಬಿ. ಜಿ. ವೀರಭದ್ರಪ್ಪನವರ ಗೃಹದಲ್ಲಿ ವಿವಾಹಮಹೋತ್ಸವವು ವೈಭವದೊಡನೆ ನೆರವೇರಿತು ಮತ್ತು ಅಜ್ಜಂಪುರದ ಕೈ|| ಶಿವಟೂರು ಮಲ್ಲಯ್ಯನವರ ಪುತ್ರ ಚಿ|| ಮಾದಪ್ಪನಿಗೆ ಶ್ರೀಯುತ ನಿರಂಜನಶೆಟ್ಟರ ಬಸಪ್ಪನವರ ಪುತ್ರಿ ಚಿ|| ಸೌ|| ಬಸಮ್ಮನನ್ನು ಕೊಟ್ಟು ವಿವಾಹವು ವರನಗೃಹದಲ್ಲಿ ನೆರವೇರಿತು. ಶ್ರೀ ಅಕ್ಷೋ ಪಟ್ಟಾಧ್ಯಕ್ಷರ ಅಧ್ಯಕ್ಷತೆಯಲ್ಲಿಯೂ ಮತ್ತು ಅಜ್ಜಂಪುರ ಸ್ಕೂಲ್ ಮಾಸ್ತರ್ ಮುದ್ದೇನಹಳ್ಳಿ ಮೇಲಿನ ಮಠದ ವೇ|| ಎಂ ಎನ್. ಮರುಳಸಿದ್ಧಯ್ಯನವರ ಮತ್ತು ಅಜ್ಜಂಪುರ ಹಿರೇಮಠದ ವೇ|| ಪುಟ್ಟಸಾಮಯ್ಯನವರ ವೈದಿಕತ್ವದಲ್ಲಿಯೂ ಈ ವಿವಾಹಕಾರ್ಯಗಳೆಲ್ಲವೂ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟವು ಈ ಕಾಲದಲ್ಲಿಯೂ ಸಹ ಮಿಷ್ಟಾನ್ನ ಸಂತರ್ಪಣೆಯು ನೆರವೇರಿಸಲ್ಪಟ್ಟಿತು. ಈ ವಿವಾಹಸಮಾರಂಭಕ್ಕೆ ಅಜ್ಜಂಪುರ ಗ್ರಾಮಕ್ಕೆ ಕಾವಂದಿರಂತಿರುವ ಈ ಟವನ್ನಿನ ವೈಸ್‌ಪ್ರೆಸಿಡೆಂಟರೂ ಶ್ರೀಮಂತರೂ ಗುರುಭಕ್ತರೂ ಆಗಿರುವ ಶ್ರೀಯುತ ಶೆಟ್ಟರ ಸಿದ್ಧಪ್ಪನವರು ಆಗಮಿಸಿ ಶೋಭೆಯನ್ನುಂಟುಮಾಡಿದ್ದರು. ಮೈಸೂರು ವೀರಶೈವ ವಿದ್ಯಾಫಂಡಿಗೋಸ್ಕರ ಶ್ರೀಯುತ ಬಿ ಜಿ. ವೀರಭದ್ರಪ್ಪನವರಿಂದ 3 ರೂ ಗಳೂ, ಶ್ರೀಯುತ ಮಾದಪ್ಪನವರಿಂದ 1 ರೂ ಯು ತೆಗೆಯಿಸಲ್ಪಟ್ಟವು. ಇದರಂತೆಯೇ ವೀರಶೈವಮತೋದ್ಧಾರಕ್ಕಾಗಿ ಅವತಾರವೆತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ಮೇಲ್ಕಂಡವರಿಂದ ಅನುಕ್ರಮವಾಗಿ 2 ಮತ್ತು 1 ರೂ. ಗಳು ತೆಗೆಯಿಸಲ್ಪಟ್ಟವು ಈ ವಿವಾಹ ಮಹೋತ್ಸವಕ್ಕೆ ಶ್ರೀಮಾನ್ ರೆವಿನ್ಯೂ ಇನ್‌ಸ್ಪೆಕ್ಟರ್ ಎಂ. ಸಿ. ರುದ್ರಪ್ಪನವರು, ಇಲ್ಲಿಯ ಮಿಡಲ್‌ಸ್ಕೂಲ್, ಪ್ರೈಮರಿಸ್ಕೂಲ್, ಗರ್ಲ್‌ಸ್ಕೂಲುಗಳ ಉಪಾಧ್ಯಾಯರುಗಳು, ಮುನಿಸಿಪಾಲಿಟಿ ಮೆಂಬರರೂ ಸ್ಯಾನಿಟರಿ ಇನ್ಸ್‌ಪೆಕ್ಟರೂ, ಪೋಸ್ಟು ಮತ್ತು ಪೋಲೀಸ್ ಇಲಾಖೆಯವರೂ, ಪಟೇಲ್ ಶಾನುಭೋಗರುಗಳು ಇವರೇ ಮೊದಲಾದವರು ಸುಮಾರು 2–3 ಸಾವಿರ ಜನರು ಆಗಮಿಸಿದ್ದರು ಇಂತಹ ಭವ್ಯಸಭೆಯಲ್ಲಿ ವಧೂವರರ ಶ್ರೇಯೋಭಿವೃದ್ಧಿಗಾಗಿ ಶ್ರೀರಂಭಾಪುರೀ ಜಗದ್ಗುರುಗಳವರಿಂದ ಫಲಮಂತ್ರಾಕ್ಷತೆಗಳೊಡನೆ ಆಶೀರ್ವದಿಸಲ್ಪಟ್ಟ ಮಂಗಳಾಶೀರ್ವಾದ ಪತ್ರಿಕೆಯು ವೇ|| ಎಂ. ಎನ್. ಮರುಲಸಿದ್ಧಯ್ಯನವರಿಂದ ಓದಲ್ಪಟ್ಟಿತು. ಶ್ರೀಜಗದ್ಗುರುಗಳವರ ನಿರೂಪವನ್ನು ಕೇಳಿ ಸರ್ವರೂ ಪರಮಾನಂದಭರಿತರಾದರು. ಜಗದಾಚಾರ್ಯರು ನೂತನ ವಧೂವರರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುವ,

ಓರ್ವ ಪ್ರತ್ಯಕ್ಷದರ್ಶಿ.

ಸರ್ ವೇವಲ್‌ರಿಗೆ ವೈಸ್ರಾಯಪದವಿ

ಇಂಡಿಯಾದ ಮುಂದಿನ ವೈಸರಾಯರಾಗಿ ಚಕ್ರವರ್ತಿ ಸಾರ್ವಭೌಮರು ಫೀಲ್ಡ್ ಮಾರ್ಷಲ್ ಸರ್ ಆರ್ಕಿಬಾಲ್ಡ್ ವೇವಲ್‌ರನ್ನು ನೇಮಿಸಿರುತ್ತಾರೆ. ಲಾರ್ಡ್ ಲಿನ್‌ಲಿತ್‌ಗೋರವರು ವೈಸರಾಯ ಪದವಿಯಿಂದ ಬರುವ ಅಕ್ಟೋಬರ್ ತಿಂಗಳಲ್ಲಿ ನಿವೃತ್ತರಾಗುವರು. ಇವರ ಬದಲು ಸರ್ ವೇವಲ್‌ರು ವೈಸರಾಯರಾಗಿಯೂ ಗವರ್ನರ್ ಜನರಲ್‌ರಾಗಿಯೂ ನೇಮಕರಾಗಿದ್ದಾರೆ.

ವೈದಿಕ ಶಿವಪೂಜಾವಿಧಿ

ಈ ಪುಸ್ತಕಗಳೆಲ್ಲ ಮುಗಿದುಹೋಗಿವೆ. ಆದುದರಿಂದ ಯಾರೂ ಈ ಪುಸ್ತಕವನ್ನು ಕಳುಹಿಸಬೇಕೆಂದು ಬರೆಯಬಾರದು. ದ್ವಿತೀಯ ಮುದ್ರಣವು ಸಿದ್ಧವಾದ ಮೇಲೆ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು.

ಮ್ಯಾ||
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಹಾಲಿನ ಬದಲಾಗಿ ಮಜ್ಜಿಗೆ

ಚಿಕ್ಕವರಿಗೆ, ದೊಡ್ಡವರಿಗೆ, ಮುದುಕರಿಗೆ, ಆಹಾರದಲ್ಲಿ ಮುಖ್ಯ ಪದಾರ್ಥವೆಂದರೆ ಹಾಲು ಆಹಾರ ಪದಾರ್ಥಗಳಲ್ಲಿ ಹಾಲಿಗೆ ಮಹತ್ವದ ಸ್ಥಾನವಿರುತ್ತದೆ "ಪಯಸಾವರ್ಧತೇ ತನುಃ" ಎಂದು ಹೇಳಿದೆ ಸಪ್ತಧಾತುಗಳ ವೃದ್ಧಿಯನ್ನು ಮಾಡಿ ಶಾರೀರಿಕ ಮತ್ತು ಮಾನಸಿಕ ಬಲಗಳೆರಡನ್ನೂ ಕೊಡುವದು ಈ ವಿಧವಾದ ಹಾಲು ಪ್ರತಿಯೊಬ್ಬ ವ್ಯಕ್ತಿಗೂ ಸಾಕಷ್ಟು ದೊರೆಯುವಂತೆ ನೋಡಿಕೊಳ್ಳುವದು ಆರೋಗ್ಯ ದೃಷ್ಟಿಯಿಂದ ಮಹತ್ವವಾದದ್ದು ಆರೋಗ್ಯ ಖಾತೆಯ ವರಿಷ್ಠ ಅಧಿಕಾರಿಗಳು ಈ ವಿಚಾರವನ್ನು ಲಕ್ಷ್ಯಕ್ಕೆ ತಂದು, ಪ್ರತಿಯೊಬ್ಬ ವ್ಯಕ್ತಿಗೂ ಸಾಕಷ್ಟು ಪ್ರಮಾಣದಲ್ಲಿ ಶುದ್ಧವಾದ ಹಾಲು ದೊರೆಯುವಂತೆ ಮಾಡಿದರೆ, ಆಹಾರದ ಅಭಾವ ಆಹಾರ ಸತ್ವಾಂಶಗಳ ನ್ಯೂನತೆಗಳಿಂದ ಉಂಟಾಗುವ ರೋಗಗಳಿಂದ ಬಳಲುವ ಈಗಿನ ಸಮಾಜಕ್ಕೆ ಜೀವದಾನ ಕೊಟ್ಟಂತಾಗುವದು

ಆದರೆ ದೈವದುರ್ವಿಪಾಕದಿಂದಲೋ ಜನತೆಯ ಅಲಕ್ಷ್ಯದಿಂದಲೋ ಈಗಿನ ಅಧಿಕಾರಿಗಳಿಂದ ಈ ಕೆಲಸವಾಗುತ್ತಿರುವದಿಲ್ಲ ಇದಲ್ಲದೆ ಸಮಾಜದಲ್ಲಿ ಚಹಾ-ಕಾಫಿಗಳಂಥ ಉತ್ತೇಜಕ ಪೇಯಗಳಿಗೆ ಹೆಚ್ಚು ಉತ್ತೇಜನ ದೊರೆತಿದೆ ಇದರಿಂದ ಮಗುವಿನಿಂದ ದೊಡ್ಡ ವಯಸ್ಸಿನವರೆಗೆ ಇರತಕ್ಕ ವ್ಯಕ್ತಿಗಳ ಶರೀರದ ಮೇಲೆ ಎಂಥ ಕೆಟ್ಟ ಪರಿಣಾಮವಾಗುತ್ತಿದೆಯೆಂಬವನ್ನು ನೋಡುತ್ತಿದೇವೆ ಶಿಥಿಲವಾದ ಸಂದುಗಳು, ಮಾಂಸರಹಿತವಾದ ಶುಷ್ಕದೇಹ, ಬಾಗಿದ ಬೆನ್ನು ಅಪಚನ-ಮಲಾವರೋಧ ಮುಂತಾದ ದೀರ್ಘಕಾಲದ ವಿಕಾರಗಳಿಂದ ಪೀಡಿತ ಶರೀರವುಳ್ಳವರೇ ಹೆಚ್ಚಾಗಿದ್ದಾರೆ

ಮುಖದಮೇಲೆ ಓಜಸ್ಸಿಲ್ಲ, ಎಂಥ ಕೆಲಸಬಿದ್ದರೂ ಮಾಡಿ ಕೊನೆಗಾಣಿಸುವೆನೆಂಬ ಹುಮ್ಮಸ್ಸು ಇಲ್ಲ ಸ್ಮರಣಶಕ್ತಿ ಕಡಿಮೆ, ದೃಷ್ಟಿಶಕ್ತಿ ಕಡಿಮೆ ಹಲ್ಲು ಬಾಯಿಗಳ ರೋಗಗಳು ಇವೆಲ್ಲ ಸಮಾಜದಲ್ಲಿ ಬಹಳ ಜನರನ್ನು ಪೀಡಿಸುತ್ತಿವೆ ಇದಕ್ಕೆ ಕಾರಣ ಪೌಷ್ಟಿಕವಾದ ಆಹಾರದ ಅಭಾವ! ಕೆಟ್ಟಪದಾರ್ಥಗಳ ಅಪರಿಮಿತ ಸೇವನ!

ಮೊದಲು ಹಳ್ಳಿಗಳೆಂದರೆ ಹೈನದ ತವರೂರು ಎಂಬ ಕಲ್ಪನೆ ಬೇಕಾದಷ್ಟು ಹಾಲು, ಮಜ್ಜಿಗೆ ಬೆಣ್ಣೆ ಮೊಸರು ಸಿಗುತ್ತಿತ್ತು, ಇತ್ತೀಚಿಗೆ ಕೆಲವು ಹಳ್ಳಿಗಳಲ್ಲಿ ಹಾಲು ನೋಡುವದಕ್ಕೆ ಸಹ ಸಿಗದಂತಾಗಿದೆ ಹಣಕೊಟ್ಟರೆ ನೀರು ಬೆರೆತದ್ದೋ ಇನ್ನಾವದಾದರೂ ಮಿಶ್ರವಾದದ್ದೋ ಹಾಲು ಎಂಬುವ ಪದಾರ್ಥವಾದರೂ ಶಹರದಲ್ಲಿ ದೊರೆಯುವದು ಆದರೆ ಹಳ್ಳಿಗಳಲ್ಲಿ ದೊರೆಯುವದಿಲ್ಲ ಇದಕ್ಕೆ ಕಾರಣ ನಮ್ಮ ಜನರಿಗೆ ಹೈನದ ಮಹತ್ವವು ಮರೆತುಹೋಗಿದೆ ನಮ್ಮ ಪೂರ್ವಜರು ಗಟ್ಟಿಮುಟ್ಟೆಯಾಗಿದ್ದರೆಂದು ನಾವು ಹೇಳಿಕೊಳ್ಳುತ್ತೇವೆ ಇದಕ್ಕೆ ಮುಖ್ಯ ಕಾರಣವೆಂದರೆ ಆಗಿನ ಕಾಲದ ಸಮೃದ್ಧವಾದ ಹೈನವೇ ಆಗಿರುತ್ತದೆ ರಾಜರಿಗೆ ಸಾಮ್ರಾಜ್ಯಾಭಿಷೇಕದ ಕಾಲಕ್ಕೆ ಕ್ಷೀರಾಭಿಷೇಕ ಮಾಡಿಸುತ್ತಿದ್ದರಂತೆ! ಈ ಪ್ರಕಾರವಾಗಿ ಸಮೃದ್ಧ ಗೋರಸವುಳ್ಳ ದೇಶದಲ್ಲಿ ಹಾಲು ಸಿಗುವದೆಂದರೆ ದುರ್ಲಭವಾಗಿದೆ ಇದೇ ಪರಿಸ್ಥಿತಿ ಅನೇಕ ದಿನಗಳವರೆಗೆ ಅಲಕ್ಷ್ಯವಾಗಿ ಉಳಿದರೆ ದೇಶದಲ್ಲಿ ಹೈನವೆಲ್ಲ ಮಾಯವಾಗಿ ಪರದೇಶಗಳಿಂದ ಬಂದ ಡಬ್ಬಿಯ ಹಾಲನ್ನೇ ನಾವು ಉಪಯೋಗಿಸುವ ಪ್ರಸಂಗ ಬರಬಹುದು! ಅಷ್ಟು ಆದ್ದರಿಂದಲೇ ಹೈನದ ಮಹತ್ವವನ್ನರಿತವರೆಲ್ಲ ಅದರ ಅಭಿವೃದ್ಧಿಗೆ ಪ್ರಯತ್ನಮಾಡಬೇಕೆಂಬುದೇ ಇಷ್ಟುಹೇಳುವದರ ಉದ್ದೇಶವಾಗಿರುತ್ತದೆ

ಆಹಾರದಲ್ಲಿ ನಿಯಮಿತತನವಿಲ್ಲದೇ ಅಥವಾ ಇತರ ಕಾರಣಗಳಿಂದ ಉಂಟಾಗಿರುವ ಕೆಲವು ರೋಗಗಳಲ್ಲಿ ಹಾಲಿನ ಪ್ರಮಾಣವನ್ನು ಪಥ್ಯದಲ್ಲಿ ಹೆಚ್ಚಾಗಿ ಹೇಳಬೇಕಾಗಿ ಬರುವದು ಈ ಪ್ರಸಂಗದಲ್ಲಿ ಹೆಚ್ಚಿಗೆ ಹಾಲು ಸಿಗುವದಿಲ್ಲ ಆ ಕಾಲಕ್ಕೆ ಮಾಡಬೇಕಾದುದೇನು? ಆ ಸಮಯದಲ್ಲಿ ಹಾಲಿನ ಬದಲಾಗಿ ತಾಜಾ ಮಜ್ಜಿಗೆಯು ಕೆಲಸಕ್ಕೆ ಬರುವದು ಪರಿಣಾಮದಲ್ಲಿ ಸ್ವಲ್ಪ ಭೇದವಾದರೂ ಉಪಯೋಗದಲ್ಲಿ ಅದರ ಪ್ರತಿನಿಧಿಯೆಂದು ಉಪಯೋಗಿಸಲು ಆತಂಕವಿಲ್ಲವೆಂಬುದು ಅನುಭವದಿಂದ ಗೊತ್ತಾಗಿದೆ ಆದ್ದರಿಂದ ಅದರ ಉಪಯೋಗವಿಧಾನವನ್ನು ವಿಶದವಾಗಿ ತಿಳಿಸಿಕೊಡುವದು ಅವಶ್ಯವಿದ್ದರಿಂದ ಅದನ್ನು ಈ ಲೇಖದಲ್ಲಿ ಹೇಳುವೆನು.

ಆಹಾರ ವಿಜ್ಞಾನಶಾಸ್ತ್ರದೃಷ್ಟಿಯಿಂದ ಉಪಯುಕ್ತತೆ ಮಹತ್ವಗಳಲ್ಲಿ ಹಾಲಿನ ತರುವಾಯ ಮಜ್ಜಿಗೆಯೊಂದೇ ಎಂದು ಹೇಳಬಹುದು ಪಚನಕ್ಕೆ ಹಾಲಿಗಿಂತಲೂ ಹಗುರಾದದ್ದು ಶ್ರೇಷ್ಠವಾದುದು ಪಚನೇಂದ್ರಿಯಗಳಿಗೆ ಮಜ್ಜಿಗೆ ಪಚನಮಾಡುವ ಕಾಲಕ್ಕೆ ಹೆಚ್ಚು ಶ್ರಮ ಬೀಳುವದಿಲ್ಲ ಆದ್ದರಿಂದ ಮಜ್ಜಿಗೆಯನ್ನು ಊಟದಲ್ಲಿ ಹೆಚ್ಚು ಉಪಯೋಗಮಾಡುವದು ಆರೋಗ್ಯರಕ್ಷಣ ದೃಷ್ಟಿಯಿಂದ ಅವಶ್ಯವಾದದ್ದು ಅದರ ಪ್ರಮಾಣ, ಕಾಲ, ಗುಣಧರ್ಮಗಳನ್ನು ತಿಳಿದು ಉಪಯೋಗಿಸುವದು ಹೆಚ್ಚು ಉತ್ತಮ

ಈ ವಿಧವಾದ ಸೇವನೆಗೆ ಯೋಗ್ಯವಾದ ಮಜ್ಜಿಗೆಯನ್ನು ತಯಾರಿಸುವದಾದರೆ ಹಾಲು, ಅದನ್ನು ಕಾಸುವ ಪದ್ಧತಿ, ಹೆಪ್ಪುಹಾಕುವ ಕ್ರಮ ಮಜ್ಜಿಗೆ ಮಾಡುವ ವಿಧಾನ ಇವೆಲ್ಲವುಗಳನ್ನು ಲಕ್ಷ್ಯಪೂರ್ವಕವಾಗಿ ತಿಳಿದುಕೊಳ್ಳಬೇಕು ಮಜ್ಜಿಗೆ ಮಾಡತಕ್ಕ ಮೊಸರು ಹುಳಿ ಆಗದಂತೆ ಹೆಪ್ಪುಹಾಕಬೇಕಾಗುವದು ಬೆಳಗ್ಗೆ ಹೆಪ್ಪು ಹಾಕಿದ್ದನ್ನು ಸಾಯಂಕಾಲಕ್ಕೆ, ಸಾಯಂಕಾಲಕ್ಕೆ ಹೆಪ್ಪು ಹಾಕಿದ್ದನ್ನು ಬೆಳಗ್ಗೆ ಉಪಯೋಗಿಸಬೇಕು ಹಾಲಿಗಿಂತ ಮಜ್ಜಿಗೆಯ ಪ್ರಮಾಣವನ್ನು ಊಟದಲ್ಲಿ ಹೆಚ್ಚಿಗೆ ಸೇವಿಸಬೇಕು ಅಂದರೇನೆ ಸಾಕಷ್ಟು ಪೌಷ್ಟಿಕ ಪದಾರ್ಥಗಳು ಆದರಿಂದ ದೊರೆಯುವವು ಮಜ್ಜಿಗೆಯನ್ನು ಒಮ್ಮೆಲೆ ಒಂದು ಕಪ್ಪು ಕುಡಿಯುವದಕ್ಕಿಂತ ಅದನ್ನೇ ಒಂದೊಂದು ಗುಟುಕನ್ನು ಬಾಯಿಯನ್ನು ತೆಗೆದು ಒಂದು ಅರೆನಿಮಿಷ ಇಟ್ಟುಕೊಂಡು ಲಾಳಮಿಶ್ರಿತವಾಗಿ ಗಂಟಲಕ್ಕೆ ಕಳಿಸಿ ನುಂಗಬೇಕು ಈ ಪ್ರಕಾರ ಮಾಡಿ ಆ ಒಂದು ಕಪ್ಪು ಮಜ್ಜಿಗೆಯನ್ನು ತೀರಿಸಬೇಕು ಈ ಪದ್ಧತಿಯು ಒಳ್ಳೇದಾಗುವದು ಈ ಕ್ರಮದಿಂದ ಮಜ್ಜಿಗೆಯ ರುಚಿಯೂ ಚನ್ನಾಗಿ ಆಸ್ವಾದನ ಮಾಡಲಿಕ್ಕೆ ಬರುವದು

ಹಾಲು ಮಜ್ಜಿಗೆ ಅಥವಾ ಮೊಸರು ಕೂಡಿಸಿ ಹೆಪ್ಪು ಹಾಕಿದಾಗ ಹಾಲಿನಲ್ಲಿಯ ದುಗ್ಧಶರ್ಕರೆಯ ಮೇಲೆ ದುಗ್ಧಾಮ್ಲ ಜಂತುವಿನ ಸಂಯೋಗವಾಗಿ ಮೊಸರು ಹೆರುವದು ಈ ದುಗ್ಧಾಮ್ಲ (ಲ್ಯಾಕ್ಟಿಕ್ ಆಸಿಡ್ ಉತ್ಪನ್ನ ಮಾಡತಕ್ಕ ಬಾಸಿಲಸ್ ಬಲ್ಗೇರಿಕಸ್) ವು ಉಳಿದ ರೋಗಜಂತುಗಳ ಬೆಳವಣಿಗೆಯನ್ನು ನಿಲ್ಲಿಸುವ ಸಾಮರ್ಥ್ಯವುಳ್ಳದ್ದಿರುವದು ಮತ್ತು ಪಚನಕ್ಕೆ ಸಹಾಯಕಾರಿಯಾಗುವದು ಹಾಲಿನಲ್ಲಿ ರೋಗಜಂತುಗಳು ಭರದಿಂದ ಬೆಳೆಯುವವು ಸ್ವಚ್ಛವಾದ ಹಾಲು ನಮ್ಮಲ್ಲಿ ದೊರೆಯುವದಿಲ್ಲ ಈ ಕಾರಣದಿಂದ ವಿಚಾರ ಮಾಡಿದರೆ ಹಾಲಿಗಿಂತಲೂ ಮಜ್ಜಿಗೆ ಉಪಯೋಗ ಮಾಡುವದೇ ಒಳ್ಳೇದು ಹಾಲಿನಂತೆಯೇ ಇದರಲ್ಲಿ ಕ್ಯಾಲ್ಸಿಯಮ್ ಸಹ ಸಾಕಷ್ಟು ಇರುವದು ಈ ಕ್ಯಾಲ್ಸಿಯಮ್ ಪಚನಕ್ಕೆ ಹಗುರಾಗಿರುವದು ಮಜ್ಜಿಗೆಯು ದೀರ್ಘಾಯುಷ್ಯವನ್ನು ಕೊಡುವದೆಂದು ಹೇಳಿದೆ ಮಜ್ಜಿಗೆಯು ಅನ್ನದಂತೆ ಪೋಷಕವೂ ಇರುವದು ಇದೇ ಅದಕ್ಕೆ ಕಾರಣವು ಒಂದು ಔನ್ಸು ಮಜ್ಜಿಗೆಯಿಂದ ೧೦ ಕ್ಯಾಲರಿ ಉಷ್ಣತೆ ದೊರೆಯುವದು ಮಜ್ಜಿಗೆಯಲ್ಲಿ ಅ ಬ ಮತ್ತು ಕ ಜೀವನ ಸತ್ವಗಳಿರುವವು ಕೊಬ್ಬು (Fat] ಮತ್ತು ಸಸಾರಜನಕ (Protein) ಗಳು ಹಾಲಿಗಿಂತ ಕಡಿಮೆ ಇದ್ದರೂ ಪಚನಕ್ಕೆ ಹಗುರಾಗಿರುವವು

ಹಾಲನ್ನು ಮಣ್ಣಿನ ಗಡಿಗೆಯಲ್ಲಿ ಕಾಸುವ ಪದ್ಧತಿಯು ಹೆಚ್ಚಾಗಿರುವದು ಇದು ಒಳ್ಳೇದು ಒಳ್ಳೆ ಮಜ್ಜಿಗೆ ತಯಾರಾಗಬೇಕಾದರೆ ಹಾಲನ್ನು ಕಾಸುವದೂ, ಹೆಪ್ಪು ಹಾಕುವದೂ ಚನ್ನಾಗಿ ಸಾಧಿಸಬೇಕು ಮೊಸರು ಸ್ವಲ್ಪ ಹುಳಿ ಹೆಚ್ಚು ಮಧುರವಾಗಿ ತಯಾರಾಗಬೇಕು ಹುಳಿ ಮೊಸರಿನ ಹೆಪ್ಪುಹಾಕಿ ತಯಾರಾದ ಮಜ್ಜಿಗೆಯು ಹುಳಿಯಾಗುವದು ಅತಿ ಮಧುರವಾಗಿರತಕ್ಕ ಮಜ್ಜಿಗೆ ಹೆಚ್ಚಾಗಿ ಸೇವಿಸಿದರೆ ಥಂಡಿ, ಕೆಮ್ಮು, ನೆಗಡಿಯಾಗುವದು ಹುಳಿ ಹೆಚ್ಚಾಗಿರತಕ್ಕ ಮಜ್ಜಿಗೆ ಅತಿ ಸೇವಿಸಿದರೆ ಪಿತ್ತ ಉದ್ರೇಕವಾಗಿ ಎದೆಯಲ್ಲಿ ಹುಳಿಸುವದು, ತಲೆತಿರುಗುವದು ಆಗುವದು ಹಾಲು ಚನ್ನಾಗಿ ಕಾದಮೇಲೆ ಆರಿ ಸ್ವಲ್ಪು ಬಿಸಿ ಇರುವಾಗ ಅದಕ್ಕೆ ಹುಳಿ ಮಧುರವಾಗಿರತಕ್ಕ ಮೊಸರನ್ನು (ಸೀ ಮೊಸರೆಂತಲೇ ಇದನ್ನು ಕರೆಯಬಹುದು) ಸ್ವಲ್ಪು ಕೂಡಿಸಿ ಹೆಪ್ಪು ಹಾಕಬೇಕು ಹಾಲು ಒಂದೊಂದು ಬೆಂದಾಗಿ, ಒಡೆದು ಕೆಟ್ಟುಹೋಗುವದು ಇದರ ಮಜ್ಜಿಗೆಮಾಡಿ ಅಥವಾ ಮಜ್ಜಿಗೆಯಲ್ಲಿ ಕೂಡಿಸಿ ತಯಾರುಮಾಡುವರು ಅದನ್ನು ಊಟಕ್ಕೆ ಮಾತ್ರ ಉಪಯೋಗಿಸಬಹುದು ಈ ಮಜ್ಜಿಗೆಯಿಂದ ಹೆಪ್ಪು ಹಾಕಬಾರದು ಮೊಸರಿನ ವಿನಃ ಇತರ ಹುಳಿದ್ರವ್ಯಗಳಿಂದ ಹೆಪ್ಪುಹಾಕಿ ಮಾಡಿದಮೊಸರು ಸಹ ಅಷ್ಟು ಚನ್ನಾಗಿ ತಯಾರಾಗುವದಿಲ್ಲ

ಈ ಪ್ರಕಾರ ಚನ್ನಾಗಿ ತಯಾರಿಸಿದ ಮೊಸರಿಗೆ ಅದರ ಚತುರ್ಥಾಂಶ ತಣ್ಣಗಿನ ನೀರು ಹಾಕಿ ಕಡೆಯಬೇಕು ಬೆಣ್ಣೆ ತೆಗೆದ ಮಜ್ಜಿಗೆಯು ಹೆಚ್ಚು ಹಗುರು ಪಥ್ಯಕರವಾದುದು. ಬೆಣ್ಣೆಸಹಿತವಾದುದು ಸ್ವಲ್ಪ ಜಡವಾದರೂ ಧಾತುವರ್ಧಕವಾದುದು ಕಫಕಾರಕವಾದುದು ಪೌಷ್ಟಿಕವೂ ಬಲ್ಯವೂ ಆಗಿರುವದು.

ಹಾಲಿನಂತೆಯೇ ಅಥವಾ ಹಾಲಿನ ಪ್ರತಿನಿಧಿಯಾಗಿ ಮಜ್ಜಿಗೆ ಸೇವಿಸುವದಾದರೆ ಬೆಣ್ಣೆತೆಗೆದ ಸೀಯಾದ ತಾಜಾ ಮಜ್ಜಿಗೆಯನ್ನು ಉಪಯೋಗಿಸುವದೇ ಮೇಲು ಅದು ಪಚನಕ್ಕೆ ಹಗುರು ಮಲಮೂತ್ರವನ್ನು ವಿಸರ್ಜನ ಮಾಡಿಸಿ, ದೀಪನ ಪಾಚನವಿರುವದು

ಸರ್ವದಾ ದೋಷಜಿತ್ತಕ್ರಂ ತ್ರಿಷು ದೋಷೇಷ್ವಪೀಷ್ಯತೇ |
ಪೀನಸಶ್ವಾಸಕಾಸಾದೌ ಸಿದ್ಧಮೇವ ಪ್ರಶಸ್ಯತೇ ||

(ವಾ. ಸೂ. ಅಧ್ಯಾಯ ೮

ವಾತವಿಕಾರಕ್ಕೆ ಸೈಂಧವಮಿಶ್ರಿತ ಹುಳಿಮಜ್ಜಿಗೆ ಕೊಡಬೇಕು ಪಿತ್ತವಿಕಾರದಲ್ಲಿ ಸಕ್ಕರೆ ಹಾಕಿದ ಸೀ ತಾಜಾಮಜ್ಜಿಗೆ ಕೊಡಬೇಕು ಕಫವಿಕಾರಗಳಿಗೆ ಬೆಣ್ಣೆಯನ್ನು ಪೂರಾ ತೆಗೆದ ಮಜ್ಜಿಗೆಗೆ ತ್ರಿಕಟು ಚೂರ್ಣವನ್ನು ಹಾಕಿ ಕೊಡಬೇಕು ಎಮ್ಮೆ ಹಾಲಿನ ಮಜ್ಜಿಗೆಗಿಂತಲೂ ಆಕಳ ಮಜ್ಜಿಗೆ ಹಗುರಾದುದು ಚಳಿಗಾಲದಲ್ಲಿ ಮಜ್ಜಿಗೆ ಕೊಡುವದು ಒಳ್ಳೇದು ಮೂಲವ್ಯಾಧಿ, ಸಂಗ್ರಹಣಿ, ಅಗ್ನಿಮಾಂದ್ಯ, ವಾತರೋಗಗಳ ಮೇಲೆ ಮಜ್ಜಿಗೆಯು ಅಮೃತತುಲ್ಯವಾದುದು ಹಸಿವೆಯನ್ನು ಹೆಚ್ಚಿಸಿ ಆಮದೋಷ, ಕಫದೋಷಗಳನ್ನು ನಾಶಮಾಡಿ ರಕ್ತವೃದ್ಧಿಯನ್ನು ಮಾಡುವದು ಬಿಸಿಲುಗಾಲದಲ್ಲಿಯೂ ಪಿತ್ತವಿಕಾರವಿದ್ದವರೂ, ಮಜ್ಜಿಗೆ ಸೇವಿಸಬಾರದೆಂದು ಶಾಸ್ತ್ರದಲ್ಲಿ ಹೇಳಿದೆ ದೋಷದುಷ್ಟಿಯುತ್ಪನ್ನವಾಗದ ಪದ್ಧತಿಯಿಂದ ಯಾವ ಋತುವಿನಲ್ಲಾದರೂ ಚಹಾ ಕಾಫಿಗಳಿಗೆ ಬದಲಾಗಿ ಮಜ್ಜಿಗೆಯನ್ನು ಸೇವಿಸಬಹುದು.

ಪೇಟೆಗಳಲ್ಲಿ ಸೋಡಾ, ಶರಬತ್ತುಗಳಿಗಿಂತಲೂ ಒಳ್ಳೇ ಮಜ್ಜಿಗೆಯು ಶರೀರಕ್ಕೆ ಬಹಳ ಹಿತವಾದುದು. ಇತ್ತೀಚಿಗೆ ಕೆಲವು ಉಪಹಾರಗೃಹಗಳಲ್ಲಿ ಮಜ್ಜಿಗೆಯು ದೊರೆಯುತ್ತಿದೆ ಆದರೆ ಅದು ಒಳ್ಳೆದಾಗಿಯೂ ಕಾಲಕ್ಕನುಸಾರವಾಗಿ ವೇಳೆಗೆ ಸರಿಯಾಗಿ ದೊರೆಯುವಂತೆ ವ್ಯವಸ್ಥೆ ಚನ್ನಾಗಿರುವದೋ ಇಲ್ಲವೋ ಎಂಬುವನ್ನು ನೋಡಿಕೊಳ್ಳಬೇಕು ಶರದ ಗ್ರೀಷ್ಮ ಋತುಗಳಲ್ಲಿ ಮಜ್ಜಿಗೆಯನ್ನು ರಾತ್ರಿ ಸೇವಿಸಬಾರದು, ಚಳಿಗಾಲದಲ್ಲಿ ಪಚನಕ್ರಿಯೆ ಸರಿಯಾಗಿದ್ದರೆ ಬೇಕಾದಷ್ಟು ಒಳ್ಳೇ ಮಜ್ಜಿಗೆ ಕುಡಿಯಬೇಕು. ಮಳೆಗಾಲದಲ್ಲಿ ಅರ್ಧ ಪ್ರಮಾಣ-ಜೀರಿಗೆಯಲ್ಲಿ ಮಧ್ಯಾಹ್ನದಲ್ಲಿ ಈ ಪ್ರಕಾರ ಸೇವಿಸಬೇಕು

ಮಜ್ಜಿಗೆಯಲ್ಲಿ ಹೆಚ್ಚು ನೀರು ಕೂಡಿಸಬಾರದು ಮಜ್ಜಿಗೆಯಲ್ಲಿ ಕ್ಯಾಲ್ಸಿಯಮ್, ಮ್ಯಾಗ್ನಿಶಿಯಮ್, ಪೊಟ್ಯಾಶಿಯಮ್, ಸೋಡಿಯಮ್, ಫಾಸ್ಫರಸ್, ಕ್ಲೋರಿನ್, ಗಂಧಕ ಈ ದ್ರವ್ಯಗಳು ಸಹ ಅಲ್ಪ ಪ್ರಮಾಣದಿಂದ ಕೂಡಿರುವದರಿಂದ ಎಲಬು ರಕ್ತಗಳ ಪೋಷಣೆ ಚನ್ನಾಗಿ ಆಗುವದು ಮಜ್ಜಿಗೆಯಿಂದ ಪಚನಶಕ್ತಿ ಹೆಚ್ಚುವದು ಮಾತ್ರವಲ್ಲದೆ ಕರುಳಿನಲ್ಲಿಯ ಕೊಳೆಯುವ ಕ್ರಿಯೆಯು-ಟಾಗುವದೂ, ರೋಗಜಂತುಗಳು ಬೆಳೆಯುವದೂ, ಇವು ಕಡಿಮೆ ಆಗುವವು. ಸ್ರೋತಸ್ಸುಗಳ ಶುದ್ಧಿಯೂ ಆಗುವದು ರುಧಿರಾಭಿಸರಣ, ಪಚನ ಕ್ರಿಯೆಗಳೆರಡರ ಕಾರ್ಯವು ಚನ್ನಾಗಿ ನಡೆಯುವದು ಪ್ರತಿದಿನವೂ ಮೂರು ಸಲ ಮಜ್ಜಿಗೆ ಸೇವಿಸಬಹುದು ಮಗುವಿನಿಂದ ಮುದುಕರೂ ಸಹ ಹಾಲನ್ನು ಉಪಯೋಗಿಸುವಂತೆ ಉಪಯೋಗಿಸಬಹುದು. ವಯಸ್ಸಿಗನುಸಾರವಾಗಿ ಕಾಲು ಅಥವಾ ಅರ್ಧ ಕಪ್ಪಿನಿಂದ ಮೂರು ಕಪ್ಪುಗಳವರೆಗೆ ಸೇವಿಸಬಹುದು ಬಂದವರಿಗೆ ಚಹಾ ಮುಂತಾದ್ದರ ಬದಲು ಮಜ್ಜಿಗೆ ಕೊಡುವ ಪದ್ಧತಿಯನ್ನಿಡುವದು ಒಳ್ಳೇದು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಜಿ. ಶಿವಶಂಕರಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No. M. 2266   ॥ ಶ್ರೀಜಗದ್ಗುರು [illegible] ಪ್ರಸೀದಂತು ॥   REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರಪ್ರಯೋಜಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ದವರಿಗೆ ೨ ರೂ   ಪರಸ್ಥಳದವರಿಗೆ ೨ ರೂ. ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಂಪುಟ ೧೭.]   ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೮ನೇ ಜೂನ್ ೧೯೪೩   [ಸಂಚಿಕೆ ೮

ಪಂಚಾಚಾರ್ಯಾಃ ಪ್ರಸೀದಂತು ಪಂಚಸಿಂಹಾಸನಾಧಿಪಾಃ ।
ಪಂಚಾನನಮುಖೋದ್ಭೂತಾಃ ಪಂಚಾಕ್ಷರವಿಬೋಧಕಾಃ ।

ಶ್ರೀಕಾಶೀನಾಥಕುಶಲಪ್ರಾರ್ಥನಾಪಂಚಕಂ

ಯೋ ವಿಶ್ವಂ ಸೃಜತಿ ಪ್ರಪಾತಿ ಹರತಿ ಪ್ರೀತ್ಯಾಽನುಗೃಹ್ಣಾತಿ ಚ ।
ಸ್ವಾತಂತ್ರ್ಯೇಣ ತಿರೋದಧಾತಿ ಪರಯಾ ಶಕ್ತ್ಯಾ ಸ್ವಯಾಽಭಿನ್ನಯಾ ॥
ತಸ್ಯ ಶ್ರೀಪರಮೇಶ್ವರಸ್ಯ ಕೃಪಯಾ ಲೋಕೋಪಕಾರೋದ್ಯತಃ ।
ಕಾಶೀನಾಥಬುಧೋತ್ತಮೋ ವಿಜಯತಾಮಾರೋಗ್ಯಭಾಗ್ಯಾನ್ವಿತಃ ॥೧॥

ಯಃ ಕಾರುಣ್ಯಸುಧಾನಿಧಿಃ ಪರಶಿವಃ ಸಂಸಾರರೋಗಾಕುಲಾನ್ ।
ಜಂತೂನ್ ಮೋಚಯತಿ ಪ್ರಸನ್ನಹೃದಯಃ ಪಾಪಾತ್ಮನೋಽಪಿ ಪ್ರಭುಃ ॥
ಸ ಪ್ರೇಮ್ಣಾ ಭಗವಾನ್ ಭವಾಮಯಭಿಷಕ್ ಪುಣ್ಯಪ್ರಭಾಭಾಸುರಂ ।
ಕಾಶೀನಾಥಬುಧಾಗ್ರಗಣ್ಯಮವತಾದಾರೋಗ್ಯಭಾಗ್ಯಂ ದಿಶನ್ ॥೨॥

ಕಾಲಾಕ್ರಾಂತಬಲಂ ಮೃಕಂಡುತನಯಂ ಲಿಂಗಾಂತಿಕಸ್ಥಂ ಬಲಾ ।
ದಾಲಿಂಗ್ಯೋತ್ಕಟಭಕ್ತಿಭಾವಭರಿತಂ ಕ್ರೋಶಂತಮತ್ಯಾಕುಲಂ ॥
ದೃಷ್ಟ್ವಾ ವೀಕ್ಷ್ಯ ರರಕ್ಷ ಪೂರ್ಣಕೃಪಯಾ ಮೃತ್ಯುಂಜಯೋ ಯೋಽಚಿರಾತ್ ।
ಕಾಶೀನಾಥಬುಧಂ ಸ ಸಜ್ಜನಮಣಿಂ ಸಂರಕ್ಷತಾದಾಪದಃ ॥೩॥

ಯನ್ನಾಮಾಮೃತಮಾರ್ತಭಕ್ತಜನತಾಸಂತ್ರಾಣಸಿದ್ಧೌಷಧಂ ।
ಯದ್ಧ್ಯಾನದ್ಯುತಿರಂತರಂಗಪಿಹರತ್ಪಾಪಾಂಧಕಾರಕ್ಷಮಾ ॥
ಯಸ್ಯ ಶ್ರೀಚರಣಾರವಿಂದಯುಗಲಂ ಸರ್ವಾರ್ಥಸಿದ್ಧಿಪ್ರದಂ ।
ಕಾಶೀನಾಥಬುಧಂ ಸ ಪಾತು ಸದಯಃ ಶ್ರೀಚಂದ್ರಚೂಡಾಮಣಿಃ ॥೪॥

ಶ್ರೀಶಂಭೋರ್ಮುಖಪಂಕಜಾತಜನಿತಾ ಭೂಮೌ ನಿದೇಶಾದ್ವಿಭೋ ।
ರಾನಂದಾದವತೀರ್ಯ ಲಿಂಗಮುಖತಃ ಸದ್ಧರ್ಮಸಂಸ್ಥಾಪಕಾಃ ॥
ಶ್ರೀಮದ್ರೇಣುಕಮುಖ್ಯವಿಶ್ವಗುರವೋ ವಿಶ್ವೇಡಿತಾ ವಿಶ್ವತಃ ।
ಕಾಶೀನಾಥಮವಂತು ವಿಶ್ವವಿದಿತಂ ಶ್ರೀವಿಶ್ವನಾಥಪ್ರಿಯಂ ॥೫॥

ಪಂಡಿತಪ್ರೇಮಿ
ಶ್ರೀಗಂಗಾಧರಶಿವಾಚಾರ್ಯಃ.
ಬೆಂಗಳೂರು ಮಹಾಂತಮಠಾಧ್ಯಕ್ಷಃ

ಶ್ರೀ ಹಿಮಾಲಯ ಪ್ರಾಂತದ ಸಮಾಚಾರ

ಶ್ರೀಮಜ್ಜಗದ್ಗುರು ಏಕೋರಾಮ ಪೀಠ ಉಖಾಕ್ಷೇತ್ರದಲ್ಲಿ ತಾ|| 28 5 43ನೇ ದಿವಸ ಶುಭಮುಹೂರ್ತದಲ್ಲಿ ಮಹಾರುದ್ರಯಾಗವು ಪ್ರಾರಂಭವಾಗಿ ತಾ|| 18 5 43 ನೇ ದಿವಸ ಸಮಾಪ್ತಿಗೊಂಡಿತು

ಈ ಯಜ್ಞಕಾರ್ಯದಲ್ಲಿ 20 ಜನ ಪಂಡಿತರು ರಂಜನೆ ಶ್ರೀ ಕೇದಾರ ಸನಾತನ ಧರ್ಮ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಮತ್ತು 40 ಜನ ಯಜ್ಞದ ಕಾರ್ಯಕ್ಕಾಗಿ ನೇಮಿಸಿದ ಕಾರ್ಯಭಾಗಿಗಳು ಈ ಸರ್ವರೂ 21 ದಿವಸ ವಿಶೇಷ ಶ್ರದ್ಧೆಯಿಂದ ಮಹಾರುದ್ರ ಯಜ್ಞದ ಸೇವೆಯನ್ನು ಮಾಡಿದರು ನಿತ್ಯವೂ ಅನೇಕ ಜನರು ಯಜ್ಞದ ದರ್ಶನಕ್ಕಾಗಿ ಬರುತ್ತಿದ್ದರು ಅನೇಕ ದೇಶಗಳಿಂದ ಯಜ್ಞಕ್ಕಾಗಿ ಒಂದ ಜನಗಳಲ್ಲಿ ಭಾವನಗರದ ಮಹಾರಾಜರು ಪಟಿಯಾಲ ಮಹಾರಾಜರ ಮುಖ್ಯದ್ದಿಗಳಾದ ಪಂ|| ಅಂಬಿಕಾದಿತ್ ಜಿಯವರು ಕೇದಾರ ಸಂಸ್ಥಾನದ ಸರ್ವಾಧಿಕಾರಿಗಳಾದ ಶ್ರೀ ಶಿವಚರಮೂರ್ತಿ ಸ್ವಾಮಿಗಳವರು ಮೊದಲಾದವರೂ ಈ ಯಜ್ಞದ ಶುಭ ದರ್ಶನಕ್ಕಾಗಿ ಆಗಮಿಸಿದ್ದರು

ಯಜ್ಞ ಸಮಾರಂಭದಲ್ಲಿ ಮುಖ್ಯವಾಗಿ ಯಜ್ಞ ಭಗವಾನನ ಪಲ್ಲಕ್ಕಿ ಮಹೋತ್ಸವವು ಜಲಯಾತ್ರೆ ಇವು ನೋಡತಕ್ಕಂಥವುಗಳಾಗಿದ್ದವು ನಿತ್ಯದಲ್ಲಿ ಶಿವಕೀರ್ತನೆ, ಶಿವಭಜನೆ, ಶಿವಪುರಾಣ ಶ್ರವಣಾದಿಗಳಿಂದಲೂ ಮತ್ತು ಯಜ್ಞದಲ್ಲಿ ಆಹುತಿಕೊಡತಕ್ಕಂಥ ವೇದಧ್ವನಿಗಳಿಂದಲೂ ಉಖಾಮಠವು ಸಾಕ್ಷಾತ್ ಶಿವಲೋಕದಂತೆ ಕಾಣಿಸುತ್ತಿತ್ತು ಈ ಪ್ರಕಾರ ಯಜ್ಞಕಾರ್ಯವು ಸಮಾಪ್ತಿ ಹೊಂದಿದ ಒಳಿಕ ತಾ|| 19 5 43 ನೇ ದಿವಸ ಅನೇಕ ಜನ ಪಂಡಿತರಿಂದಲೂ ವಿದ್ಯಾರ್ಥಿಗಳಿಂದಲೂ ಇತರ ದರ್ಶಕ ಜನರಿಂದಲೂ ಶ್ರೀ ಕೇದಾರನಾಥ ಸನಾತನ ಧರ್ಮ ಮಹಾವಿದ್ಯಾಲಯದ ವಾರ್ಷಿಕೋತ್ಸವದ ಸಮಾರಂಭವು ಶ್ರೀಮಜ್ಜಗದ್ಗುರು ನೀಲಕಂಠಲಿಂಗ ಮಹಾಸ್ವಾಮಿಗಳವರ ಸಭಾಧ್ಯಕ್ಷತೆಯಲ್ಲಿ ಸಮಾಪ್ತಿಯನ್ನು ಹೊಂದಿತು

ಸಿದ್ಧಲಿಂಗ ಶರ್ಮಾ ಉಖಾಮಠ

ವೈದಿಕ ಶಿವಪೂಜಾವಿಧಿ

ಈ ಪುಸ್ತಕಗಳೆಲ್ಲ ಮುಗಿದುಹೋಗಿವೆ. ಆದುದರಿಂದ ಯಾರೂ ಈ ಪುಸ್ತಕವನ್ನು ಕಳುಹಿಸಬೇಕೆಂದು ಬರೆಯಬಾರದು. ದ್ವಿತೀಯ ಮುದ್ರಣವು ಸಿದ್ಧವಾದ ಮೇಲೆ ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು

ಮ್ಯಾನೇಜರ್,
ಪಂಚಾಚಾರ್ಯಪ್ರಭಾ ಆಫೀಸ್, ಮೈಸೂರು.

ಪಂಚಾಚಾರ್ಯಪ್ರಭಾ.

೧೯೪೩ನೆಯ ಜೂನ್ ತಾ॥ ೨೮ನೆಯ ಸೋಮವಾರ

ಗುರುಸರ್ವೋತ್ತಮತ್ವ

ಗುರುರ್ದೇವೋ ಮಹಾದೇವೋ ಗುರುರ್ದೇವಃ ಸದಾಶಿವಃ ।
ಗುರುದೇವಾತ್ಪರಂ ನಾಸ್ತಿ ತಸ್ಮೈ ಶ್ರೀಗುರವೇ ನಮಃ ॥

ಶ್ರೀಗುರುದೇವನೇ ದೇವದೇವೋತ್ತಮನೆಂದೂ, ಗುರುದೇವನೇ ಸದಾಶಿವನೆಂದೂ, ಗುರುದೇವನಿಗಿಂತಲೂ ಅಧಿಕವಾದ ವಸ್ತುವು ಈ ಜಗತ್ತಿನಲ್ಲಿ ಯಾವುದೂ ಇಲ್ಲವೆಂದೂ, ಆದುದರಿಂದ ದೇವೋತ್ತಮನಾದ ಶ್ರೀಗುರುವನ್ನಾಶ್ರಯಿಸಬೇಕೆಂದೂ ಗುರುಗೀತೆಯು ಗುರುವಿನ ಆಧಿಕ್ಯವನ್ನು ಮುಕ್ತಕಂಠದಿಂದ ಸಾರುತ್ತದೆ. ಮಾನವಜನ್ಮವು ಅಜ್ಞಾನಾವರಕವಾಗಿರುವುದು ಮನುಷ್ಯನು ಅಜ್ಞಾನಾವೃತನಾಗಿ ಸದ್ಬೋಧೆಯಿಲ್ಲದೆ ಘೋರ ಸಂಸಾರಸಾಗರದಲ್ಲಿ ಮುಳುಗುತ್ತ ತೇಲುತ್ತ ಬಾಯಿ ಬಿಡುತ್ತಿರುವ ಸಮಯದಲ್ಲಿ—ಯಾವ ಮಹಾತ್ಮನು ಜ್ಞಾನೋಪದೇಶರೂಪನೌಕಾ ಸಹಾಯದಿಂದ ಭವಾಬ್ಧಿಪತಿತರನ್ನು ತೀರಕ್ಕೆ ತಂದುಬಿಡುವನೋ ಅವನೇ ಸಂಸಾರ ದುಃಖಮೋಚಕ ಶ್ರೀಗುರುವೆಂದು ಜಗತ್ತಿನಲ್ಲೆಲ್ಲ ಖ್ಯಾತಿಗೊಂಡಿರುತ್ತಾನೆ ಇಂಥ ಗುರುಮೂರ್ತಿಯಿಂದಲೇ ಸಕಲ ಪ್ರಾಣಿಗಳ ಉದ್ಧಾರವಾಗಬೇಕಾಗಿದೆ. ನಮ್ಮ ಭರತಖಂಡದಲ್ಲಿ ಅನೇಕ ಜನ ಮಹಾತ್ಮರು ಅವತರಿಸಿ ತಮ್ಮ ದಿವ್ಯಜ್ಞಾನಬೋಧೆಯಿಂದ ಒಂದೊಂದು ಸಿದ್ಧಾಂತವನ್ನು ಸ್ಥಾಪಿಸಿದ್ದಾರೆ ಆಯಾ ಸಿದ್ಧಾಂತಗಳು ಇಂದಿನವರೆಗೂ ಆಯಾ ಮತೀಯ ಶಿಷ್ಯರಿಂದ ಆಚರಿಸಲ್ಪಡುತ್ತಿವೆ ಆಯಾ ಮತಾನುಯಾಯಿಗಳು ತಮ್ಮ ಮೂಲಾಚಾರ್ಯರ ಸಿದ್ಧಾಂತದಲ್ಲಿ . ಅಸಾಧಾರಣವಾದ ವಿಶ್ವಾಸವನ್ನಿಟ್ಟು ತಮ್ಮ ಗುರುಗಳ ವಿಷಯದಲ್ಲಿ ಸರ್ವಸ್ವವನ್ನೂ ಅರ್ಪಿಸಲು ಸಹ ಸಿದ್ಧರಾಗಿರುವರು ಇದನ್ನು ನಾವು ಸರ್ವತ್ರ ನೋಡುತ್ತಲಿದ್ದೇವೆ ಆದರೆ ಲಿಂಗಧಾರಿಗಳಲ್ಲಿ ಮಾತ್ರ ಈ ಸ್ಥಿತಿಯು ವಿರುದ್ಧವಾಗಿ ಪರಿಣಮಿಸಿದೆಯೆಂದು ಬಹು ವಿಷಾದದಿಂದ ಹೇಳಬೇಕಾಗಿದೆ ಈ ಮತೀಯರಲ್ಲಿ ಕೆಲವರು ಸಂಸರ್ಗಪ್ರಭಾವದಿಂದಲೋ ಅಥವಾ ಇನ್ನಾವ ಪ್ರಭಾವದಿಂದಲೋ ತಮ್ಮ ಮೂಲಾಚಾರ್ಯರನ್ನೇ ಹಳಿಯಹತ್ತಿದ್ದಾರೆ ತಮಗೆ ಮೋಕ್ಷದಾಯಕವಾದ ಶಿವಲಿಂಗವನ್ನೂ, ಭಸ್ಮರುದ್ರಾಕ್ಷಾದಿಗಳನ್ನೂ, ಸಂಸಾರಸಾಗರತಾರಣತರಣಿಸ್ವರೂಪವಾದ ಶಿವಪಂಚಾಕ್ಷರೀಮಹಾಮಂತ್ರವನ್ನೂ ಇವೇ ಮೊದಲಾದ ಇನ್ನೂ ಅನೇಕ ಮೋಕ್ಷಸಾಧನೀಭೂತಸಾಮಗ್ರಿಗಳನ್ನೂ ಒದಗಿಸಿಕೊಟ್ಟ ಮತಾಚಾರ್ಯರಲ್ಲಿ ಸ್ವೇಚ್ಛೆಯಾಗಿ ವರ್ತಿಸುವುದನ್ನು ಪರಿಶೀಲಿಸಿದರೆ ಇವರ ದುರ್ದೈವಕ್ಕೆ ಸೀಮೆಯೇ ಇಲ್ಲವೆಂದು ಹೇಳಬೇಕಾಗುತ್ತದೆ.

ಶ್ರೀಮಾಂಶ್ಚಾಪಿ ತಪಸ್ವೀ ಚ ಶಾಸ್ತ್ರಜ್ಞಃ ಕುಲಶೀಲವಾನ್ ।
ಸಾಷ್ಟಾಂಗದಂಡನಮಸ್ಕಾರಂ ನಿರ್ಲಜ್ಜೋ ಗುರುಸನ್ನಿಧೌ ॥

ಕೋಟೀಶ್ವರನೇ ಆಗಲಿ, ಮಹಾತಪಸ್ವಿಯೇ ಆಗಲಿ, ಷಟ್‌ಶಾಸ್ತ್ರಸಂಪನ್ನನೇ ಆಗಲಿ, ಸರ್ವೋತ್ಕೃಷ್ಟವಂಶಸಂಜಾತನೇ ಆಗಲಿ, ಶ್ರೀಗುರುವಿನ ಸನ್ನಿಧಿಯಲ್ಲಿ ಅಭಿಮಾನವನ್ನು ವಹಿಸದೆ ದೀರ್ಘದಂಡನಮಸ್ಕಾರವನ್ನು ಮಾಡಬೇಕೆಂದು ಧರ್ಮಗ್ರಂಥಗಳು ಸಾರುತ್ತವೆ.

ಗುರುಯಾತ್ರಾ ದೇವಯಾತ್ರಾ ತೀರ್ಥಯಾತ್ರೇತಿ ಚ ತ್ರಿಧಾ ।
ತಾಸಾಂ ತ್ರಿವಿಧಯಾತ್ರಾಣಾಂ ಗುರುಯಾತ್ರಾ ಫಲಾಧಿಕಾ ॥

ಗುರೋಃ ಸಂದರ್ಶನಾರ್ಥಂ ತು ಭಕ್ತ್ಯಾ ಯಾತ್ರಾಂ ಕರೋತಿ ಯಃ ।
ಪುಣ್ಯದೇಹೋ ಸ ವಿಜ್ಞೇಯಃ ಸಮಸ್ತಸುರವಲ್ಲಭಃ ॥

ಜಗತ್ತಿನಲ್ಲಿ ಗುರುಯಾತ್ರೆಯೆಂದೂ, ದೇವಯಾತ್ರೆಯೆಂದೂ, ತೀರ್ಥಯಾತ್ರೆಯೆಂದೂ ಮೂರುವಿಧವಾದ ಯಾತ್ರೆಗಳುಂಟು ಈ ಮೂರುವಿಧ ಯಾತ್ರೆಗಳಲ್ಲಿ ಗುರುಯಾತ್ರೆಯೇ ವಿಶೇಷಫಲದಿಂದ ಕೂಡಿರುವುದು. ಯಾವನು ಗುರುದರ್ಶನಕ್ಕಾಗಿ ಅಸಾಧಾರಣವಾದ ಭಕ್ತಿಯಿಂದ ಗುರುಯಾತ್ರೆಯನ್ನು ಮಾಡುತ್ತಾನೆಯೋ ಅವನೇ ಪುಣ್ಯದೇಹಿಯೆಂದೂ, ಅವನೇ ಸಮಸ್ತದೇವತಾಸಾರ್ವಭೌಮನೆಂದೂ ಶಿವಾಗಮಗಳು ಹಸ್ತವನ್ನೆತ್ತಿ ಉದ್ಘೋಷಿಸುತ್ತಿರುವುವು. ಕೈವಲ್ಯಕಲ್ಪದ್ರುಮನಾದ ಇಂಥ ಮಹಾಗುರುವಿನ ಮಹಿಮೆಯನ್ನರಿಯದೆ ಬಳಲುತ್ತಿರುವುದು ಯಾವ ಕರ್ಮದ ವಾಸನೆಯೋ ತಿಳಿಯದಾಗಿದೆ ಗುರುಮೂರ್ತಿಯ ಅದ್ಭುತಮಹಿಮೆಯು ಈ ರೀತಿಯಾಗಿರುವುದರಿಂದಲೇ ಜಗನ್ಮಾತೆಯಾದ ಶ್ರುತಿಮಾತೆಯೂ ಕೂಡ ಆ ಗುರುದೇವನ ಮಹಿಮೆಯನ್ನು. “**ಆಚಾರ್ಯದೇವೋಭವ-ನಾಸ್ತಿತತ್ತ್ವಂಗುರೋಃಪರಂ-ನಗುರೋರಧಿಕಂ**” ಇತ್ಯಾದಿ ಸಹಸ್ರಾವಧಿ ವಾಕ್ಯಗಳಿಂದ ಉದ್ಘೋಷಿಸಿರುತ್ತಾಳೆ ಇತ್ಯಾದಿ ವಿಷಯಗಳನ್ನಾದರೂ ಗುರುಭಕ್ತಿಶೂನ್ಯರು ತ್ರಿಕರಣಪೂರ್ವಕವಾಗಿ ಪರಾಮರ್ಶಿಸಿ ಶ್ರೀಗುರುವಿನ ಸರ್ವೋತ್ತಮೋತ್ತಮತೆಯನ್ನು ತಿಳಿದುಕೊಂಡು ಆ ಭವಸಾಗರತಾರಕನ ಚರಣಾರವಿಂದವನ್ನಾಶ್ರಯಿಸಿ ನಿತ್ಯಾನಂದವನ್ನು ಹೊಂದಬೇಕೆಂದಾಶಿಸುತ್ತೇವೆ

ಯುದ್ಧವಾರ್ತೆ.

ಪ್ರಚಂಡ ಧಾಳಿಗಾಗಿ ರಷ್ಯನರ ಸಿದ್ಧತೆ

ಮಾಸ್ಕೋ ಪಶ್ಚಿಮದಲ್ಲೂ ಸ್ಟೈರುಶ್ಯದಲ್ಲೂ ರಷ್ಯನರು ಭರದಿಂದ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆಂದು ಜರ್ಮನ್ ರೇಡಿಯೋ ತಿಳಿಸಿತು ಉತ್ತರ ಡೊನೆಟ್ಸ್ ದಾಟಲು ಯತ್ನಿಸಿದ ಜರ್ಮನರ ಪ್ರಯತ್ನ ವಿಫಲವಾಯಿತೆಂದೂ ಜರ್ಮನರ ವಶದಲ್ಲಿರುವ ಸ್ಟಿವ್‌ಮೇಲೆ ನೆನ್ನೆರಾತ್ರೆ ರಷ್ಯನ್ ವಿಮಾನಗಳು ಧಾಳಿಮಾಡಿ ಮದ್ದುಗುಂಡಿನ ಕಣಜಕ್ಕೆ ಕಿಚ್ಚು ಹಚ್ಚಿದವು ಎಂದೂ ಸುದ್ದಿ ಹರಡಿದೆ

ಯೂರೋಪಿನ ಮೇಲೆ ದಂಡಯಾತ್ರೆ

ಯೂರೋಪಿನ ಮೇಲೆ ದಂಡಯಾತ್ರೆಯನ್ನು ಗ್ರೀಸ್ ಮತ್ತು ಡೊಡಕನೀಸ್ ಮುಖಾಂತರವಾಗಿ ಕೈಗೊಳ್ಳಲಾಗುವುದೆಂದೂ ಅನಂತರ ಬಾಲ್ಕನ್ ರಾಷ್ಟ್ರಗಳ ಮೇಲೆ ಬೀಳಲಾಗುವುದೆಂದೂ ಈ ಅಂಶವನ್ನು ಮುಚ್ಚಿಡಬೇಕಾದ ಪ್ರಸಂಗವೇನೂ ಇಲ್ಲವೆಂದೂ ಪರಿಣಾಮ ಏನಾದರೂ ಆಗಲಿ ಮಹಾಘಟನೆಗಳು ಸಂಭವಿಸಲಿವೆಯೆಂದು ಅಂಕಾರಾ ರೇಡಿಯೊ ತಿಳಿಸಿದೆ.

ಜರ್ಮನಿಯ ಉಕ್ಕಿನ ಕೇಂದ್ರದಮೇಲೆ ಧಾಳಿ

ಆರ್. ಎ ಎಫ್ ವಿಮಾನಗಳು ಜರ್ಮನಿಯ ಸೈನ್ಯಕೇಂದ್ರಗಳ ಮೇಲೆ ನಿರಂತರ ಧಾಳಿ ಮಾಡುತ್ತಿವೆ ಈ ೨೪ ಗಂಟೆಗಳ ಸಂತತ ಧಾಳಿಯಲ್ಲಿ ಜರ್ಮನಿಯ ಉಕ್ಕು ಕೈಗಾರಿಕಾಕೇಂದ್ರ ಮುಲ್ಹಿ, ಕ್ರಫೆಲ್ಡ್ ಹಲ್ಸ್, ಆಂಟ್‌ವರ್ಪ್, ರಾಟರ್‌ಡಾಂಗಳು ನುಚ್ಚುನೂರಾಗುತ್ತಿವೆ. ಕ್ರೆಫೀಲ್ಡ್‌ದಲ್ಲಿ ೨೪ ಘಂಟೆಗಳ ಹಿಂದೆ ಹತ್ತಿದ ಬೆಂಕಿ ಇನ್ನೂ ಉರಿಯುತ್ತಿತ್ತು. ಪರಿಶೀಲನಾ ವಿಮಾನಗಳು ಫ್ರಾನ್ಸ್ ಬೆಲ್ಜಿಯಂಗಳನ್ನೂ ಪರಿಶೀಲಿಸಿದವೆಂದು ಪ್ರಕಟವಾಗಿದೆ.

ತುರ್ಕಿಯಲ್ಲಿ ಭಯಂಕರ ಭೂಕಂಪ

ಇಸ್ತಾಂಬೂಲಿಗೆ ೬೦ ಮೈಲಿ ಪೂರ್ವದಲ್ಲಿರುವ ಅದಾಬಜಾರ್ ಎಂಬ ನಗರವು ಭೂಕಂಪದ ಪರಿಣಾಮವಾಗಿ ಸಂಪೂರ್ಣ ನಾಶವಾಗಿದೆಯೆಂದು ಸುದ್ದಿ ಬಂದಿದೆ. ಆ ಊರಿನ ಜನಸಂಖ್ಯೆ ೨೪,೦೦೦. ಎರಡು ಕಂಪನಗಳಾದವು ಎರಡೂ ಇಸ್ತಾಂಬೂಲಿನಲ್ಲಿ ಅನುಭವವಾಯಿತು ಪಕ್ಕದ ಗೈವೆ ಎಂಬ ಇನ್ನೊಂದು ಊರಿನಲ್ಲೂ ಅನಾಹುತವಾಗಿದೆಯೆಂದು ಜರ್ಮನ್ ರೇಡಿಯೋ ತಿಳಿಸಿದೆ. ಅಂಕಾರ-ಇಸ್ತಾಂಬೂಲ್ ತಂತಿ ಸೌಕರ್ಯ ನಾಶವಾಗಿದೆ. ಇಸ್ತಾಂಬೂಲಿನಲ್ಲೂ ಕೆಲಮನೆಗಳುರುಳಿದವಾದರೂ ಅಂತಹ ಹೆಚ್ಚಿನ ಅನಾಹುತವೇನೂ ಆಗಿಲ್ಲ. ಭೂಕಂಪದ ಪೂರ್ಣ ಅನಾಹುತದ ವಿವರಗಳನ್ನು ಈಗಲೇ ಅಂದಾಜು ಮಾಡಲು ಸಾಧ್ಯವಿಲ್ಲ. ಅದಾಬಜಾರಿನಲ್ಲಿ ಶೇ. ೪೦ ಮನೆಗಳು ನಾಶವಾಗಿವೆ. ಶೇ. ೩೦ ಕ್ಕೆ ನಷ್ಟವಾಗಿದೆಯೆಂದು ಗೊತ್ತಾಗಿದೆ. ಕಂಪನವಾದದ್ದು ರಾತ್ರಿ ೩-೩೦ ರ ಸುಮಾರಿನಲ್ಲಿ. ಅದಾಬಜಾರಿನಲ್ಲಿ ೧೫,೦೦೦ ಮಂದಿ ಸತ್ತಿರಬೇಕೆಂದು ಅಂದಾಜಾಗಿದೆಯೆಂದು ಜರ್ಮನ್ ರೇಡಿಯೋ ತಿಳಿಸಿದೆ.

ನೆದರ್‌ಲೆಂಡ್ ಜನರಿಗೆ ಮಿತ್ರರ ಎಚ್ಚರಿಕೆ

“ಜರ್ಮನಿಗಾಗಿ ಕೆಲಸ ಮಾಡುತ್ತಿರುವ ನೆದರ್‌ಲೆಂಡಿನಲ್ಲಿರುವ ಎಲ್ಲ ಕಾರ್ಖಾನೆಗಳನ್ನೂ ನೆಲಸಮ ಮಾಡಿಸಲು ನಾವು ಇನ್ನುಮುಂದೆ ಪ್ರಚಂಡ ವಿಮಾನ ಧಾಳಿ ಕೈಗೊಳ್ಳುತ್ತೇವೆ. ಜರ್ಮನರ ವಿನಾಶಕ್ಕಾಗಿ ಈ ಕಾರ್ಯ ಅಗತ್ಯ ಆದ್ದರಿಂದ ನೀವುಗಳೆಲ್ಲ ನಿಮ್ಮ ಸಂಸಾರಗಳನ್ನು ಕೈಗಾರಿಕಾ ಕೇಂದ್ರಗಳಿಂದ ಹೊರಕ್ಕೆ ಸಾಗಿಸಿಬಿಡುವದು ಕಾರ್ಖಾನೆಯ ಕೆಲಸಬಿಡುವುದು ನಿಮಗೆ ಅಸಾಧ್ಯವೆನಿಸಿದರೆ ಮುನ್ನೆಚ್ಚರಿಕೆಯಿಂದಿರಿ” ಎಂಬುದಾಗಿ ಮಿತ್ರರ ಆರೆಂಜ್ ರೇಡಿಯೋ ನೆದರ್‌ಲೆಂಡಿನ ಜನರಿಗೆ ಎಚ್ಚರಿಕೆ ಕೊಟ್ಟಿದೆ.

ಸಾಲೆರ್ನೊ ಮೇಲೆ ಭೀಕರ ಧಾಳಿ ಅಪರಿಮಿತ ನಷ್ಟ

ನೇಪಲ್ಸ್‌ಗೆ ೩೦ ಮೈಲಿ ಆಗ್ನೇಯದಲ್ಲಿರುವ ಸಾಲೆರ್ನೊ ನಗರದ ಮೇಲೆ ಆರ್. ಎ. ಎಫ್. ವಿಮಾನಗಳು ಒಂದೇ ದಿನದಲ್ಲಿ ಎರಡು ಸಾರಿ ಧಾಳಿ ಮಾಡಿದವು ಕಳೆದ ಸೋಮವಾರ ನಡೆಸಿದ ಈ ದಾಳಿಗಳಿಂದಾದ ನಷ್ಟದ ಪ್ರಮಾಣವನ್ನು ಅರಿಯುವ ಸಲುವಾಗಿ ಪರಿಶೀಲನಾ ವಿಮಾನಗಳು ಛಾಯಾ ಚಿತ್ರಗಳನ್ನು ತೆಗೆದುಕೊಂಡು ಬಂದವು. ರಾಯಲ್ ಮದ್ದು ಗುಂಡಿನ ಕಣಜದಲ್ಲಿ ಶೇ-೪೦ ಭಾಗ ಧ್ವಂಸವಾಗಿರಬೇಕೆಂದೂ ಟಾರ್ಪೆಡೋ ಕಾರ್ಖಾನೆಗೂ, ವಿಮಾನ ಕಾರ್ಖಾನೆಗೂ ತುಂಬಾ ನಷ್ಟವೇ ಆಗಿದೆಯೆಂದೂ ಆರ್ಟಿಲರಿ ಪಡೆಯ ನಿಲ್ದಾಣದ ಮೇಲೂ ಮೋಟಾರುವಾಹನ ನಿಲ್ದಾಣಗಳ ಮೇಲೂ ಬಾಂಬು ಬಿದ್ದ ಗುರುತುಗಳು ಕಾಣಬರುತ್ತಿವೆಯೆಂದು ಹೇಳಲಾಗಿದೆ

ಸ್ವೀಕಾರ

ಸೊಲ್ಲಾಪುರ ನಗರದಲ್ಲಿರುವ ಶ್ರೀಮತಿ ಪಾರ್ವತಿಬಾಯಿ ಚನ್ನಬಸಪ್ಪ ಚವ್ಹಾಣ ಇವರ ಪುತ್ರ ಚಿ॥ ಶಿವಶಂಕರಪ್ಪನಿಗೆ ಬಾರ್ಶಿ ನಗರದಲ್ಲಿರುವ ಶ್ರೀಮತಿ ಶಿವಗಂಗಾಬಾಯಿ ಅಣ್ಣಾಸಾಹೇಬ ಕಥಲೆ ಇವರ ಪುತ್ರಿ ಚಿ॥ಸೌ॥ ಕುಸುಮಾವತಿಬಾಯಿಯನ್ನು ಕೊಟ್ಟು, ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 11 ರೂಪಾಯಿಗಳು ಸೌ॥ ಭಾಗೀರಥೀಬಾಯಿ ಕಟಾಸ ಇವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಬಿ. ಆರ್. ಝುಂಜೆ ವಕೀಲ ಇವರ ಪುತ್ರ ಚಿ॥ ಬಸವೇಶ್ವರನಿಗೆ ಮುದ್ದೇಬಿಹಾಳದಲ್ಲಿರುವ ಮ॥ರಾ॥ ಬಸಪ್ಪಾ ಚನಿವಾರ ಇವರ ಪುತ್ರಿ ಚಿ॥ ಸೌ॥ ನೀಲಗಂಗವ್ವನನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 5 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿದ್ದಾರೆ.

ಮಹಾರಾಷ್ಟ್ರ ದೇಶದಲ್ಲಿರುವ ಸೋನಪೇಟ (ಜಹಗೀರು) ಗ್ರಾಮದ ಗುರುವರ್ಗದ ಮಠಕ್ಕೆ ಪಟ್ಟಾಭಿಷೇಕ ಸಮಾರಂಭವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 4 ರೂಪಾಯಿಗಳು ಶ್ರೀ ಬರದಾಪುರ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಬೆಳಗಾಂವ ನಗರದಲ್ಲಿರುವ ಸಿ. ಎಂ. ಪಾಟೀಲರವರು ಜಗದಾಚಾರ್ಯರ ಆಶೀರ್ವಾದ ಬಲದಿಂದ ಮೆಟ್ರಿಕ್ ಪರೀಕ್ಷೆಯಲ್ಲಿ ಪ್ಯಾಸಾದ ಸಂತೋಷಕ್ಕಾಗಿ ಶ್ರೀಸುತ್ತಗಟ್ಟಿ ಸ್ವಾಮಿಗಳವರ ಅಪ್ಪಣೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ 2 ರೂಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಸೇಲಂ ಡಿ॥ ಹೊಸೂರು ತಾಲೂಕು ಅಯ್ಯನಪುರ ದೊಡ್ಡಿಮಠದ ವೇ॥ ಮುಂಡಲಾರಾಧ್ಯರ ಪುತ್ರರಾದ

ಚಿ|| ಶಿವಣ್ಣಾರಾಧ್ಯ ಮತ್ತು ಚಿ|| ವೀರಣ್ಣಾರಾಧ್ಯ ಇವರಿಗೆ ಭೀಮಸಂದ್ರ ಮಠದ ವೇ|| ವೀರಣ್ಣಾರಾಧ್ಯರ ಪುತ್ರಿಯರಾದ ಚಿ|| ಸೌ|| ವೀರಾಂಬಿಕೆ ಮತ್ತು ಚಿ|| ಸೌ|| ಗುರುಬಸವಾಂಬಿಕೆ ಇವರನ್ನು ಅನುಕ್ರಮವಾಗಿ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ವೇ|| ಭೀಮಸಂದ್ರ ಮಠದ ವೀರಣ್ಣಾರಾಧ್ಯರ ದ್ವಾರಾ ತಲ್ಪಿರುತ್ತವೆ.

ಧಾರವಾಡ ಜಿ|| ನವಲಗುಂದ ತಾಲೂಕು ಕೊಂಗವಾಡ ಗ್ರಾಮದಲ್ಲಿ ಶ್ರೀ ಹನುಮಂತ ದೇವರ ಪ್ರತಿಷ್ಠೆಯಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಗಳು. ಶ್ರೀ|| ಷ|| ಬ್ರ|| ಕೊಣ್ಣೂರು ಬೃಹನ್ಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ

ಮೈಸೂರು ಜಿ|| ಕೃಷ್ಣರಾಜನಗರದಲ್ಲಿರುವ ಮ|| ರಾ|| ಬಿ. ಜಾನಲಿಂಗಪ್ಪನವರ ಸಹೋದರ ಚಿ|| ಬಿ ಯನ್ ಶಿವಣಸಿದ್ದಪ್ಪನಿಗೆ ಇದೇ ಟವನ್ನಿನಲ್ಲಿರುವ ಮ|| ರಾ|| ಮುಡೆಯೂರ ಶೆಟ್ರ ಸೋದರ ಸೊಸೆ ಚಿ|| ಸೌ|| ಸರೋಜಮ್ಮನನ್ನು ಕೊಟ್ಟು ಮೈಸೂರಲ್ಲಿ ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿಗಳು ಮೈಸೂರು ದೇಶದ ಶೆಟ್ರು ಮ|| ರಾ|| ಯಂ ಸಿ. ರೇಣುಕಸ್ವಾಮಿ ದ್ವಾರಾ ತಲ್ಪಿರುತ್ತವೆ

ಸಾಗರ ತಾಲೂಕು ಗೂಳೀಹಳ್ಳಿಯಲ್ಲಿರುವ ಮ||ರಾ|| ಎಚ್. ಬಿ ಚನ್ನಬಸಪ್ಪ ಗೌಡರ ಧರ್ಮಪತ್ನಿಯವರು ಶಿವಾಧೀನರಾದ ಸಮಯದಲ್ಲಿ ಸದರಿಯವರು ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ವಿವಾಹಮಹೋತ್ಸವ, ಸೊಲ್ಲಾಪುರ

ಇದೇ ಸ್ವಭಾನುನಾಮಸಂವತ್ಸರ ಜೇಷ್ಠ ಶು|| ೧೦ ಭಾನುವಾರ ದಿವಸ ಸೊಲ್ಲಾಪುರದಲ್ಲಿ ಸುಪ್ರಸಿದ್ಧ ಮನೆತನದವರಾಗಿರುವ ಶ್ರೀಮತಿ ಪಾರ್ವತೀಬಾಯಿ ಚನ್ನಬಸಪ್ಪಾ ಚವ್ಹಾಣ ಇವರ ಪುತ್ರ ಚಿ|| ಶಿವಶಂಕರಪ್ಪನೆಂಬ ವರನಿಗೂ ಬಾರ್ಸಿನಗರದಲ್ಲಿ ಅತ್ಯಂತ ಪ್ರಸಿದ್ಧರಾಗಿರುವ ಕೈ|| ಅಣ್ಣಾಸಾಹೇಬ್ ಕಧಲೆ ಇವರ ಪುತ್ರಿ ಚಿ|| ಸೌ|| ಕುಸುಮಾವತಿ ಎಂಬ ವಧುವಿಗೂ ವಿವಾಹಮಹೋತ್ಸವವು ಸೊಲ್ಲಾಪುರನಗರದಲ್ಲಿ ವಿಶೇಷ ವೈಭವದಿಂದ ನೆರವೇರಿತು ವಧೂವರರ ಶ್ರೇಯೋಭಿವೃದ್ಧಿಗಾಗಿ ಶ್ರೀಜಗದ್ಗುರು ಪಂಚಪೀಠಾಧಿಪತಿಗಳು ಆಶೀರ್ವಾದಪತ್ರಿಕೆಗಳೊಡನೆ ಫಲಮಂತ್ರಾಕ್ಷತೆಗಳನ್ನು ಆಶೀರ್ವದಿಸಿ ಕಳುಹಿಸಿದ್ದರು. ಅಲ್ಲದೆ ಶ್ರೀ|| ಷ|| ಬ್ರ|| ಚನ್ನವೀರಶಿವಾಚಾರ್ಯರು ಬೃಹನ್ಮಠ ಹೋಟಗಿ, ಶ್ರೀ|| ಷ|| ಬ್ರ|| ರಾಚಲಿಂಗಶಿವಾಚಾರ್ಯರು ಬಾರ್ಸಿ, ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯರು ಮಹಂತಿನಮಠ ಬೇಗೂರು, ಶ್ರೀ|| ಷ|| ಬ್ರ|| ಗುರುಸ್ವಾಮಿ ಹಿರೇಮಠ ಜೈನಾಪುರ, ಇವರೇ ಮೊದಲಾದ ಪಟ್ಟಚರಮೂರ್ತಿಸ್ವಾಮಿಗಳವರು ಫಲಮಂತ್ರಾಕ್ಷತೆಗಳನ್ನು ಆಶೀರ್ವದಿಸಿ ಕಳುಹಿಸಿದ್ದರು. ಬಾರ್ಸಿ, ಮಂಗಳವೇಢೆ, ಕವಾಳೆ ಇತ್ಯಾದಿ ಗ್ರಾಮಗಳ ಸ್ವಾಮಿಗಳವರು ವಿವಾಹಕ್ಕಾಗಮಿಸಿ ವಧೂವರರಿಗೆ ಆಶೀರ್ವದಿಸಿದರು. ವೇ|| ಪಂ|| ಶ್ರೀಕಾಶೀನಾಥಶಾಸ್ತ್ರಿಗಳವರು ವಧೂವರರ ಶ್ರೇಯೋಭಿವೃದ್ಧಿಗಾಗಿ ಆಶೀರ್ವದಿಸಿ ಕಳುಹಿಸಿದ ನೂತನ ದಿವ್ಯಾಂಬರಗಳನ್ನು ವೇ|| ಪಂ|| ಶ್ರೀ ಜಗದೀಶಶಾಸ್ತ್ರಿಗಳವರು ಫಲಮಂತ್ರಾಕ್ಷತೆಗಳೊಡನೆ ಆಶೀರ್ವದಿಸಿದರು ವಿವಾಹವು ವೇ|| ಜಗದೀಶಶಾಸ್ತ್ರಿಗಳವರ ಮತ್ತು ವೇ|| ವೀರಂತಯ್ಯಶಾಸ್ತ್ರಿಗಳವರ ಪೌರೋಹಿತ್ಯನಲ್ಲಿ ವಿಧ್ಯುಕ್ತವಾಗಿ ನೆರವೇರಿತು. ಕೈ|| ಶ್ರೀಮಂತ ಅಣ್ಣಾಸಾಹೇಬರಂತೆಯೇ ಅವರ ಧರ್ಮಪತ್ನಿಯವರಾದ ಶ್ರೀಮತಿ ಶಿವಗಂಗಾಬಾಯಿಯವರೂ ಉದಾರವಾದ ಬುದ್ಧಿಯಿಂದ ಸರ್ವ ವ್ಯವಸ್ಥೆಯನ್ನೂ ತೃಪ್ತಿಕರವಾಗಿ ಮಾಡಿದ್ದರು. ಈ ವಿವಾಹಮಹೋತ್ಸವಕ್ಕಾಗಿ ಪಂಢರಪುರ, ಬಾರ್ಸಿ, ಮಂಗಳವೇಢೆ, ಬೀಡ, ಉಸದ, ಪೂನಾ, ಖಾಮಗಾಂವ ಮೊದಲಾದ ಅನೇಕ ಊರುಗಳಿಂದ ಆಗಮಿಸಿದ [illegible] ವರರ ಶ್ರೇಯೋಭಿವೃದ್ಧಿಗಾಗಿ ಬೆಳ್ಳಿಯ ಸಾಮಾನುಗಳನ್ನು ಆಶೀರ್ವದಿಸಿದರು. ಗುರುಭಕ್ತಿ ಧುರೀಣೆಯರಾದ ಶ್ರೀಮತಿ ಪಾರ್ವತಿಬಾಯಿ ಚವ್ಹಾಣ ಇವರ ಅಭಿಪ್ರಾಯದಂತೆ ಅವರ ಪುತ್ರರಾದ ಚಿ|| ಶಿವಶಂಕರಪ್ಪನವರು ಜಗತ್ತಿನಲ್ಲಿ ಗುರುಪ್ರಭಾವವನ್ನು ಸಾರುತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಪೋಷಣಕ್ಕಾಗಿ ೧೧ ರೂಪಾಯಿಗಳನ್ನು ಸಮರ್ಪಿಸಿದರು ಇದಲ್ಲದೆ ಕನ್ಯೆಯ ತಾಯಿಯವರಾದ ಶ್ರೀಮತಿ ಶಿವಗಂಗಾಬಾಯಿಯವರು ವಿವಾಹ ಸಮಯದಲ್ಲಿ ಈ ಕೆಳಗೆ ತೋರಿಸಿದ ಪ್ರಕಾರ ಸಹಾಯ ಮಾಡಿದರು.

ಮಹಾಜನ ಬೋರ್ಡಿಂಗ್ ಸೊಲ್ಲಾಪುರ	೧೧ ರೂ ಗಳು
ಶ್ರೀಮದ್ವೀರಶೈವಗುರುಕುಲ ಸೊಲ್ಲಾಪುರ	೧೧ ರೂ.ಗಳು
ಪಂಚಾಚಾರ್ಯ ಪ್ರಭಾ ಮೈಸೂರು	೧೧ ರೂ. ಗಳು
ವೀರಶೈವಗರ್ಜನ ಬಾರ್ಸಿ	೧೧ ರೂ. ಗಳು
ಸದಾಚಾರ ಸ್ತ್ರೀ ಸಮಾಜ ಸೊಲ್ಲಾಪುರ	೧೧ ರೂ ಗಳು
ದುಷ್ಕಾಳ ಫಂಡ್ ಬಿಜಾಪುರ	೧೧ ರೂ ಗಳು
ವೀರಶೈವ ಬೋರ್ಡಿಂಗ್ ಬಾರ್ಸಿ	೫ ರೂ ಗಳು
ಹಿಂದೂ ಸೇವಾಸಂಘ ಸೊಲ್ಲಾಪುರ	೫ ರೂ ಗಳು
ಗಜಾನನ ವ್ಯಾಯಾಮಶಾಲಾ ಸೊಲ್ಲಾಪುರ	೩ ರೂ. ಗಳು

ಈ ರೀತಿ ಸಹಾಯಮಾಡಿ ಸರ್ವರ ಸ್ತೋತ್ರಕ್ಕೆ ಪಾತ್ರರಾದರು. ಶ್ರೀ ಜಗದೀಶ್ವರನು ನೂತನ ದಂಪತಿಗಳಿಗೆ ಆಯುರಾರೋಗ್ಯಭಾಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇನೆ.

ಸೌ|| ಭಾಗೀರಥೀಬಾಯಿ ಕಟಾರ.

ವಿವಾಹಮಹೋತ್ಸವ

ಸೇಲಂ ಜಿ|| ಹೊಸೂರು ತಾಲ್ಲೂಕು ಅಯ್ಯನಪುರ ದೊಡ್ಡಿ ಮಠದಲ್ಲಿ ಇದೇ ಜೇಷ್ಠ ಶು|| ೧೦ ತಾ|| 13 6-43 ನೆಯ ಭಾನುವಾರ ದಿವಸ ದೊಡ್ಡಿ ಮಠದ ವೇ|| ಮಂಡಲಾರಾಧ್ಯರ ಪುತ್ರರಾದ ಚಿ|| ಎ. ಎಂ ಶಿವಣ್ಣಾರಾಧ್ಯ ಮತ್ತು ಚಿ|| ಎ ಎಂ ವೀರಣ್ಣಾರಾಧ್ಯ ಈ ಉಭಯರಿಗೆ ಹೊಸೂರು ತಾಲೂಕು ಭೀಮಸಂದ್ರ ಮಠದ ವೇ|| ವೀರಣ್ಣಾರಾಧ್ಯರ ಪುತ್ರಿಯರಾದ ಚಿ|| ಸೌ|| ವೀರಾಂಬಿಕೆ ಮತ್ತು ಚಿ|| ಸೌ|| ಗುರುಬಸವಾಂಬಿಕೆ ಈ ಉಭಯರನ್ನು ಅನುಕ್ರಮವಾಗಿ ಕೊಟ್ಟು ವಿವಾಹಮಹೋತ್ಸವವು ವಿಶೇಷ ವೈಭವದೊಡನೆ ನೆರವೇರಿತು. ಈ ವಿವಾಹಮಹೋತ್ಸವಕ್ಕಾಗಿ ಅನೇಕಜನ ಬಂಧುಗಳೂ ಗುರುವರ್ಗದವರೂ ಆಗಮಿಸಿದ್ದರಲ್ಲದೆ ಅನೇಕ ಗ್ರಾಮಗಳಿಂದ ಶಿಷ್ಯವರ್ಗದವರೂ ಆಗಮಿಸಿದ್ದರು. ವಧೂವರರಿಗೆ ಶ್ರೀ ಜಗದಾಚಾರ್ಯರು ಮಂಗಲಪರಂಪರೆಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಮುರುಡಬಸವೇಶ್ವರಸ್ವಾಮಿ,
ಅಯ್ಯನಪುರ, ದೊಡ್ಡಿ ಮಠ

ವಿವಾಹಮಹೋತ್ಸವ

ಸೊಲ್ಲಾಪುರ ನಗರದಲ್ಲಿರುವ ಶ್ರೀಮಂತ ಬಿ ಆರ್. ಝುಂಜೆ . ವಕೀಲರವರ ಪುತ್ರ ಚಿ|| ಬಸವೇಶ್ವರನೆಂಬ ವರನಿಗೆ ಬಿಜಾಪುರ ಜಿ|| ಮುದ್ದೇಬಿಹಾಳದಲ್ಲಿರುವ ಮ|| ರಾ|| ಬಸಪ್ಪಾ ಚಿನಿವಾರ ಇವರ ಪುತ್ರಿ ಚಿ|| ಸೌ|| ನೀಲಗಂಗವ್ವನನ್ನು ಕೊಟ್ಟು ತಾ|| 16 6-43 ನೆಯ ದಿವಸ ಮುದ್ದೇಬಿಹಾಳ ಗ್ರಾಮದಲ್ಲಿ ವಿವಾಹಮಹೋತ್ಸವವು ಬಹು ವೈಭವದಿಂದ ನೆರವೇರಿತು. ಆ ಸಮಯದಲ್ಲಿ ವರನ ತಂದೆಯವರಾದ ವಕೀಲರು ಪಂಚಾಚಾರ್ಯಪ್ರಭಾ ಪೋಷಣಕ್ಕಾಗಿ ೫ ರೂ ಗಳನ್ನೂ ವೀರಶೈವಗರ್ಜನಕ್ಕಾಗಿ ೫ ರೂ. ಗಳನ್ನೂ ಬಿಜಾಪುರ ಜಿಲ್ಲೆಯ ದುಷ್ಕಾಳಫಂಡಿಗಾಗಿ ೧೦೧ ರೂ ಗಳನ್ನೂ ಮುದ್ದೇಬಿಹಾಳದಲ್ಲಿರುವ ಬಸವೇಶ್ವರ ಫಂಡಿಗಾಗಿ ೫೧ ರೂ ಗಳನ್ನೂ ಸಮರ್ಪಿಸಿ ತಮ್ಮ ಉದಾರಬುದ್ಧಿಯನ್ನು ವ್ಯಕ್ತಪಡಿಸಿದರು. ಜಗದಾಚಾರ್ಯರು ನೂತನದಂಪತಿಗಳಿಗೆ ಸಕಲ ಸೌಭಾಗ್ಯಪರಂಪರೆಯನ್ನೀಯಲೆಂದು ಹಾರೈಸುವ.

ಓರ್ವ ಪ್ರತ್ಯಕ್ಷದರ್ಶಿ.

। ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ।

ನೂತನ ದೇವತಾಪ್ರತಿಷ್ಠಾಪನೆ, ಕೊಂಗವಾಡ

ಧಾರವಾಡ ಜಿ|| ನವಲಗುಂದ ತಾಲೂಕ ಪೈಕಿ ಕೊಂಗವಾಡ ಗ್ರಾಮದ ಸಮಸ್ತ ಧೈವದವರು ನೂತನ ಶಿಲಾಕಟ್ಟಡದ ಮಾರುತಿ ಗುಡಿಯನ್ನು ಕಟ್ಟಿಸಿ, ಇದೇ ಜ್ಯೇಷ್ಠ ಶು|| ೧೪ (ತಾ|| 17-6 43) ಗುರುವಾರ ಶುಭ ಮುಹೂರ್ತದಲ್ಲಿ ನೂತನ ಹನುಮಂತದೇವರ ಪ್ರತಿಷ್ಠಾಕಾರ್ಯವನ್ನು ಶ್ರೀ ಕೊಣ್ಣೂರು ಹಿರೇಮಠದ ಪಟ್ಟದ ಸ್ವಾಮಿಗಳವರ ನೇತೃತ್ವದಲ್ಲಿಯೂ ನರಗುಂದ ಶ್ರೀ ವಿರಕ್ತಮಠದ ಪಾಠಶಾಲಾಧ್ಯಾಪಕರಾದ ಗೌರೀಶಂಕರ ಶಾಸ್ತ್ರಿಗಳು ಹಿರೇಮಠ ಕೊಂಗವಾಡ ಹಾಗೂ ಗುರುಲಿಂಗಯ್ಯ ಬೀಳಗಿ ಇವರ ವೈದಿಕತ್ವದಲ್ಲಿಯೂ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಿದರು ಗ್ರಾಮವು ತಳಿರು ತೋರಣಗಳಿಂದಲೂ, ರಂಭಾಸ್ತಂಭಗಳಿಂದಲೂ, ಅಲಂಕೃತವಾಗಿತ್ತು. ಜ್ಯೇಷ್ಠ ಶು|| ೧೫ (ತಾ|| 18-6-43) ಶುಕ್ರವಾರ ಗ್ರಾಮದೇವತೆಯಾದ ದ್ಯಾಮವ್ವ ನಗುಡಿಯು ವಾದ್ಯವೈಭವದಿಂದ ತುಂಬಲ್ಪಟ್ಟಿತು. ಈ ಕಾರ್ಯದಲ್ಲಿ ಗ್ರಾಮದ ತರುಣಮಂಡಲಿಯವರೇ ವಿಶೇಷ ಭಾಗವಹಿಸಿದ್ದರು. ಈ ಸತ್ಕಾರ್ಯದಲ್ಲಿ ಧರ್ಮದ ತತ್ವಗಳನ್ನು ಪ್ರಚಾರ ಮಾಡುತ್ತಿರುವ ಪಂಚಾಚಾರ್ಯಪ್ರಭಾ ಪತ್ರಿಕೆಯ ಅಭಿವೃದ್ಧಿಗಾಗಿ ೨ ರೂ. ಗಳು ಸದರಿ ಪಟ್ಟದ ಸ್ವಾಮಿಗಳವರಿಂದ ತಿಳಿಯಿಸಲ್ಪಟ್ಟವು. ಶ್ರೀ ಜಗದ್ಗುರು ಪಂಚಾಚಾರ್ಯರು ಸದರಿ ಗ್ರಾಮದ ಸಮಸ್ತ ಜನರಿಗೂ ಆಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನುಂಟುಮಾಡಲೆಂದು ಹಾರೈಸುತ್ತೇನೆ

ಕಳಕನಗೌಡ ಕಲ್ಲನಗೌಡ, ಹಿರೇಗೌಡ್ರ, ಕೊಂಗವಾಡ.

ಗುರುಮಹತ್ವ

ಶ್ರೀ|| ಷ|| ಬ್ರ|| ಹೋಟಗಿ ಶ್ರೀಗಳವರು ವೈಶಾಖ ಶು|| ೩ ನೆಯ ದಿವಸ ಒಂದು ಕೋಟಿ ಮಂತ್ರ ಜಪಾನುಷ್ಠಾನಕ್ಕಾಗಿ ಹೊಸದಾಗಿ ಕಟ್ಟಿಸಲ್ಪಟ್ಟಿರುವ ಬಾಲತಪಸ್ವಿ ಬೃಹನ್ಮಠದಲ್ಲಿ ಕುಳಿತಿರುವದು ಸರಿಯಷ್ಟೆ. ಸೊಲ್ಲಾಪುರದ ಗುರುಭಕ್ತರು ವಿಶೇಷವಾದ ದ್ರವ್ಯವನ್ನು ವ್ಯಯಮಾಡಿ ಮಠವನ್ನು ಅತ್ಯಂತ ಭದ್ರವಾಗಿಯೂ ಸುಂದರವಾಗಿಯೂ ಕಟ್ಟಿಸಿರುವದು ಸ್ತುತ್ಯವಾಗಿದೆ. ಹೋಟಗಿ ಶ್ರೀಗಳವರು ತಮ್ಮ ಮಠದಲ್ಲಿ ವೀರಶೈವ ಗುರುಕುಲವನ್ನು ಸ್ಥಾಪಿಸಿ ಕಾರ್ಯವನ್ನು ಯಾವ ಚ್ಯುತಿಯೂ ಇಲ್ಲದಂತೆ ನಡೆಸುತ್ತಿರುವರು ಕಳೆದ ಮಹಾಶಿವರಾತ್ರಿಯ ದಿವಸ ಮಠಕ್ಕೆ ಅನೇಕ ಸ್ತ್ರೀ ಪುರುಷರು ಆಗಮಿಸಿದ್ದರು ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗೆ ಮಹಾ ವೈಭವದಿಂದ ಪೂಜೆಯು ನಡೆಯುತ್ತಿತ್ತು. ಇಂಥಹ ಸಮಯದಲ್ಲಿ ಪರಮ ಗುರುಭಕ್ತಶಿಖಾಮಣಿಗಳಾದ ಶ್ರೀಮಂತ ಮುತ್ಯಪ್ಪಣ್ಣ ನೆಂಗಾಣಿ ಇವರ ಬಾಲಕನು ಮಹಡಿಯ ಮೇಲಿಂದ ಕೆಳಗಿರುವ ಕಲ್ಲಿನ ಹಾಸಿಗೆಯ ಮೇಲೆ ಬಿದ್ದನು. ಮಹಾ ಶಬ್ದವಾಯಿತು ಹುಡುಗನು ಪ್ರಜ್ಞೆತಪ್ಪಿದನು ಆಗ್ಗೆ ಬಾಲಕನ ತಾಯಿಯು ಬಂದು ಬಾಲಕನನ್ನು ತೊಡೆಯ ಮೇಲೆಹಾಕಿಕೊಂಡು ದುಃಖಿಸಲಾರಂಭಿಸಿದಳು ಈ ವಿಷಯವನ್ನು ಹೋಟಗಿ ಶ್ರೀಗಳು ಕೇಳಿ ಜಗದಾಚಾರ್ಯರ ಜಯಂತಿಯ ಶುಭ ದಿವಸ ಅಶುಭವು ಎಂದೂ ಉಂಟಾಗಲಾರದು, ಯಾರೂ ದುಃಖಪಡಬಾರದೆಂದು ಹೇಳಿ ಶಿವಪೂಜಾಸಕ್ತರಾದರು ಹೇಳಿದ ಐದು ನಿಮಿಷಗಳಲ್ಲಿ ಆ ಹುಡುಗನು ಎಚ್ಚೆತ್ತು ಅಳುತ್ತಿದ್ದ ತಾಯಿಯನ್ನು ನೋಡಿ ತಾಯೀ ಅಳಬೇಡ ನನಗೇನೂ ಆಗಿಲ್ಲ ಗುರುಗಳ ತೀರ್ಥಪ್ರಸಾದವನ್ನು ಕೊಡು ಎಂದು ನುಡಿದನು. ಇದನ್ನು ಕೇಳಿ ಸರ್ವರೂ ಆಶ್ಚರ್ಯಭರಿತರಾದರು. ಆಮೇಲೆ ತಂದೆ ತಾಯಿಗಳು ಆ ಬಾಲಕನಿಗೆ ತೀರ್ಥಪ್ರಸಾದಗಳನ್ನು ಕೊಡಿಸಿ ಮನೆಗೆ ಕರೆದುಕೊಂಡು ಹೋದರು ಈಗಿನ ರಂಭಾಪುರೀ ಜಗದ್ಗುರುಗಳವರಿಗೆ ಅಧಿಕಾರವಾಗುವ ಕಾಲಕ್ಕೆ ಇದೇ ವಿಧವಾದ ಲೀಲೆಯೊಂದು ನಡೆದಿತ್ತು. ಆಗ್ಗೆ ಉಜ್ಜಯಿನಿ ಜಗದ್ಗುರುಗಳವರು ರಂಭಾಪುರೀಪೀಠದ ವಿಜಯಯಾತ್ರೆಗೆ ಇದೊಂದು ಶುಭ ಸೂಚನೆಯೆಂದು ಅಪ್ಪಣೆ ಕೊಡಿಸಿ

ದ್ದರು. ಅದರಂತೆಯೇ ಬಾಲತಪಸ್ವಿ ಬೃಹನ್ಮಠದ ಏಳಿಗೆಗೆ ಇದೊಂದು ಶುಭ ಸೂಚನೆಯೆಂದು ಹೇಳಬೇಕಾಗಿದೆ. ಬಾಲತಪಸ್ವಿಗಳು ಅನುಷ್ಠಾನವನ್ನು ಕೈಕೊಂಡು ನಲವತ್ತೊಂದು ದಿವಸಗಳು ನಿರ್ವಿಘ್ನವಾಗಿ ನೆರವೇರಿದ ಸಂತೋಷಕ್ಕಾಗಿ ಶ್ರೀಮತಿ ಸಿದ್ದವ್ವಬಾಯಿ ಘೋಡಕೆ ಇವರು ತಾ ೧೬-೪-೪೮ನೇ ದಿವಸ ಮಠದಲ್ಲಿ ಏಕಾದಶ ರುದ್ರಾಭಿಷೇಕಾದಿಗಳನ್ನು ನೆರವೇರಿಸಿದರು. ಬಳಿಕ ಅನ್ನ ಸಂತರ್ಪಣೆಯಾಯಿತು. ಸಾಯಂಕಾಲ ಶ್ರೀಶೈಲ ಮಲ್ಲಿಕಾರ್ಜುನನ ಪುರಾಣಪ್ರವಚನವಾಯಿತು. ಆಮೇಲೆ ಶ್ರೀಬಾಲತಪಸ್ವಿಗಳು ಒಂದು ಘಂಟೆಯವರೆಗೆ ಪಂಚಾಕ್ಷರಿ ಮಹಾಮಂತ್ರದ ಮಹತ್ವವನ್ನು ಉಪದೇಶಿಸಿದರು. ಸೊಲ್ಲಾಪುರದಲ್ಲಿ ಕಟ್ಟಲ್ಪಟ್ಟಿರುವ ಈ ನೂತನ ಮಠದಲ್ಲಿ ಶ್ರೀ ಜಗದ್ಗುರು ಪಂಡಿತಾರಾಧ್ಯರ ಲಿಂಗೋದ್ಭವ ಮೂರ್ತಿಯ ಪ್ರತಿಷ್ಠೆಯಾಗಬೇಕಾಗಿದೆ. ಅದಕ್ಕಾಗಿ ಶ್ರೀಗಳವರು ದೀರ್ಘಕಾಲ ಅನುಷ್ಠಾನಕ್ಕೆ ಕೂತಿರುವರು. ಈ ಮಹಾಕಾರ್ಯವು ಶ್ರೀ ಜಗದಾಚಾರ್ಯರ ಅನುಗ್ರಹದಿಂದ ಅಸಾಧಾರಣ ವೈಭವದೊಡನೆ ನೆರವೇರಿ ಗುರುಭಕ್ತಿಯು ಸರ್ವತ್ರ ಪ್ರಕಾಶಿಸಲೆಂದು ಪ್ರಾರ್ಥಿಸುವ

ಓರ್ವ ಗುರುಭಕ್ತ

ದುಃಖವಾರ್ತೆ

ಸಾಗರ ತಾಲೂಕು ನಳ್ಳೇಹಳ್ಳಿ ಗ್ರಾಮದಲ್ಲಿಯ ಮ||ರಾ|| ಹಿರೇಮನೆ ಚೆನ್ನಬಸಪ್ಪ ಗೌಡರ ಧರ್ಮಪತ್ನಿಯವರಾದ ಸೌ|| ಹಾಲಮ್ಮನವರು ತಾ|| 12-೫-೪೮ನೆಯ ದಿವಸ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ. ಇವರು ಮಹಾ ಪತಿವ್ರತಾ ಶಿರೋಮಣಿಗಳಾಗಿದ್ದು ಗುರುಹಿರಿಯರಲ್ಲಿ ಒಳ್ಳೇ ಭಕ್ತಿಯುಳ್ಳವರಾಗಿದ್ದರು. ಇವರು ತೀರ ಚಿಕ್ಕವಯಸ್ಸಿನವರಾಗಿದ್ದು ಮೃತಿ ಹೊಂದಿದ್ದರಿಂದ ಪರಮ ಗುರುಭಕ್ತರಾದ ಇವರ ಪತಿಗೆ ಅಸಾಧಾರಣ ದುಃಖವು ಪ್ರಾಪ್ತವಾದುದು ಸ್ವಾಭಾವಿಕವಾಗಿದೆ. ಮೃತರ ಸಂಬಂಧವಾದ ಗಣಾರಾಧನೆಯು ತಾ|| ೪-೬-೪೮ ನೆಯ ದಿವಸ ನೆರವೇರಿಸಲ್ಪಟ್ಟಿತು. ಇದಕ್ಕಾಗಿ ಅನೇಕ ಜನ ಬಂಧುಗಳೂ ಮತ್ತು ಮಾಹೇಶ್ವರರೂ ಆಗಮಿಸಿ ಮೃತೆಯರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಶ್ರೀ ಪರಮೇಶ್ವರನು ಸೌ|| ಹಾಲಮ್ಮನವರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಓರ್ವ ದುಃಖಭಾಗಿ

ತಾಂಬೂಲಸ್ವೀಕಾರ ವಿಚಾರ

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ, ಕೊಣ್ಣೂರು

ತಾಂಬೂಲದ ಗುಣ —ಶೀತವಾಯು ಹರ, ಉತ್ಸಾಹಕಾರಿ, ಜೀರ್ಣಕಾರಿ, ಬಾಯಿದುರ್ಗಂಧಹರ, ಹೆಚ್ಚಾದರೆ ಪ್ರವೃತ್ತಿಯನ್ನು ಮಾಡಿಸುವುದು, ಇದರ ರಸವನ್ನು ನುಂಗಬಾರದು. ಉಬ್ಬಸ, ಕೆಮ್ಮು, ಶ್ಲೇಷ್ಮಜ್ವರ ಈ ರೋಗಗಳಿರುವ ಕಾಲದಲ್ಲಿ ಮಕ್ಕಳಿಗೆ ಈ ರಸವನ್ನು ಹಾಕುವ ಸಂಪ್ರದಾಯವುಂಟು. ಹೆಚ್ಚಾದರೆ ರಕ್ತಪಿತ್ತಕಾರಿ, ಇದರ ರಸ ಕ್ಷಾರ, ಕಹಿ, ಒಗರು ಆಗಿರುತ್ತದೆ.

ತಾಂಬೂಲ ಸ್ವೀಕಾರ ಮಾಡತಕ್ಕ ಕಾಲ —ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ ಹೀಗೆ ತ್ರಿಕಾಲಗಳಲ್ಲಿ ಮಿತಿಯಿಂದ ಸೇವನೆ ಮಾಡಬೇಕು.

ತೊಳೆದ ಎಲೆಯನ್ನೂ, ಒಡೆದ ಅಡಿಕೆಯನ್ನೂ, ಸೋಸಿದ ಸುಣ್ಣವನ್ನೂ ಹಾಕಿಕೊಳ್ಳಬೇಕು. ಇದರ ವಿರುದ್ಧ ಎಂದೂ ಸೇವಿಸಬಾರದು.

ಮಿತಿಮೀರಿದ ತಾಂಬೂಲ ಸ್ವೀಕಾರದಿಂದ ಆಗತಕ್ಕ ಹಾನಿ —ದೇಹ ಕ್ಷೀಣವಾಗುವುದು, ಚಕ್ಷುವಿನ ಪ್ರಕಾಶವು ಮಧ್ಯಮವಾಗುವುದು, ಕರ್ಣ ಮಂದವಾಗುವವು, ಮೈಬಣ್ಣ ಕೆಡುವದು. ಆದಕಾರಣ ತಾಂಬೂಲವನ್ನು ವಿಶೇಷ ಸೇವಿಸಬಾರದು.

ಎಲೆಗಳಲ್ಲಿ ಪ್ರಕಾರ ಅವುಗಳ ಗುಣ.—ಎಲೆಗಳಲ್ಲಿ ಕರಿ ಎಲೆ, ಚಿಟ್ಟ್ಯಾದ ಎಲೆ, ಬಿಳಿ ಎಲೆ ಹೀಗೆ ಮೂರು ಪ್ರಕಾರಗಳುಂಟು. ಕರಿ ಎಲೆಯು ಪಿತ್ತವಿಕಾರವನ್ನೂ, ವಾತನಾಶವನ್ನೂ, ಕ್ರಿಮಿನಾಶವನ್ನೂ ಮಾಡುತ್ತದೆ. ಚಿಟ್ಟ್ಯಾದ ಎಲೆಯು ವಾತವನ್ನೂ, ಶ್ಲೇಷ್ಮವನ್ನೂ ನಾಶಮಾಡುತ್ತದೆ. ಬಿಳಿ ಎಲೆಯು ತ್ರಿದೋಷವನ್ನೂ ನಾಶಮಾಡುತ್ತದೆ.

ತಾಂಬೂಲಂ ಕಟು ತೀಕ್ಷ್ಣಂ ಮಧುರಂ [illegible]
ಕ್ಷಾರಂ ಕಷಾಯಾನ್ವಿತಂ | ವಾತಘ್ನಂ ಕ್ರಿಮಿನಾಶನಂ
ಕಫಹರಂ ಶ್ಲೇಷ್ಮಾಪಹಂ [illegible] ವಕ್ತ್ರಸ್ಯಾಭರಣಂ
ವಿಶುದ್ಧಿಕರಣಂ ಕಾಮಾಗ್ನಿಸಂದೀಪನಂ
ತಾಂಬೂಲಸ್ಯ ಸಖೇ ತ್ರಯೋದಶ ಗುಣಾ
ಸ್ವರ್ಗೇಽಪಿ ತೇ ದುರ್ಲಭಾಃ

ಅಂದರೆ —ತಾಂಬೂಲವು ಕಟುವು, ತೀಕ್ಷ್ಣವು, ಮಧುರವು, ಕ್ಷಾರವು, ಒಗರು, ವಾತಹರವು, ಕ್ರಿಮಿನಾಶನವು, ಕಫಹರವು, ಶ್ಲೇಷ್ಮನಾಶನವು, ಮುಖಭೂಷಣವು, ದುರ್ಗಂಧನಾಶನವು, ಕಾಮೋದ್ದೀಪನವು. ಈ ಪ್ರಕಾರ ತಾಂಬೂಲದಲ್ಲಿ ಹದಿಮೂರು ಗುಣಗಳುಂಟು. ಈ ಗುಣಗಳು ಸ್ವರ್ಗದಲ್ಲಿಯೂ ಸಹ ದೊರೆಯುವದು ದುರ್ಲಭವೆಂದೂ ವೈದ್ಯಶಾಸ್ತ್ರವು ಸಾರುತ್ತದೆ.

ಪರ್ಣಮೂಲೇ ಭವೇದ್ವ್ಯಾಧಿಃ ಪರ್ಣಾಗ್ರೇ ಪಾಪಸಂಭವಃ |
ಚೂರ್ಣಪರ್ಣಂ ಹರೇತ್ಯಾಯುಃ ಶಿರಾ ಬುದ್ಧಿವಿನಾಶಿನೀ |
ತಸ್ಮಾದಗ್ರಂ ಚ ಮೂಲಂ ಚ ಶಿರಾಂಶ್ಚೈವ ವಿಶೇಷತಃ |
ಚೂರ್ಣಪರ್ಣಂ ವರ್ಜಯಿತ್ವಾ ತಾಂಬೂಲಂ ಖಾದಯೇನ್ನರಃ |
ಅಭಿಂದಿತಂ ಪೂಗಮುಖಂ ಪರ್ಣಮಕ್ಷಾಲಿತಂ ತಥಾ |
ಅಶೋಧಿತಂ ತಥಾ ಚೂರ್ಣಂ ಭಕ್ಷಯನ್ ಸರ್ವದೋಷಭಾಕ್ ||
ಅನಾಧಾಯ ಮುಖೇ ಪರ್ಣಂ ಪೂಗಂ ಖಾದತಿ ಯೋ ನರಃ |
[illegible]ಜನ್ಮದರಿದ್ರಃ ಸ್ಯಾನ್ನ [illegible] ||
ಚೂರ್ಣಪರ್ಣೇ ಕುರ್ವೀತ ನ ಬಹಿಷ್ಠಾವ ಕುಂಠನಂ |
ಪ್ರಾತಃಕಾಲೇ ಫಲಾಧಿಕ್ಯಂ ಚೂರ್ಣಂ ಮಧ್ಯಂದಿನೇಽಧಿಕಂ ||
ಸಾಯಂ ಪರ್ಣಸ್ಯ ಚಾಧಿಕ್ಯಂ ಏವಂ ತಾಂಬೂಲ ಭಕ್ಷಣಂ ||

ಅಂದರೆ—ಎಲೆಯ ತುಂಬು ಹಾಗೂ ತುದಿಯು ವ್ಯಾಧಿಯನ್ನುಂಟುಮಾಡುವದೆಂದೂ, ಕೇವಲ ಸುಣ್ಣದ ಎಲೆಯು ಆಯುಸ್ಸನ್ನು ಹರಣಮಾಡುವದೆಂದೂ, ನಾಡಿಯು ಬುದ್ಧಿಯನ್ನು ನಾಶಮಾಡುವದೆಂದೂ, ಆದಕಾರಣ ಇವೆಲ್ಲವುಗಳನ್ನು ಬಿಟ್ಟು ತಾಂಬೂಲವನ್ನು ಭಕ್ಷಿಸಬೇಕೆಂದೂ, ಒಡೆಯದೆಯಿದ್ದ ಅಡಿಕೆ, ತೊಳೆಯದೆಯಿದ್ದ ಎಲೆ, ಶೋಧಿಸದೆಯಿದ್ದ ಸುಣ್ಣವನ್ನು ಹಾಕಿಕೊಳ್ಳಬಾರದೆಂದೂ, ಎಲೆಯಿಲ್ಲದೆ ಕೇವಲ ಅಡಿಕೆಯನ್ನು ತಿನ್ನಬಾರದೆಂದೂ, ತಿಂದದ್ದಾದರೆ ಅವನು ಏಳು ಜನ್ಮಗಳಲ್ಲಿ ದರಿದ್ರನಾಗಿ ಜನಿಸುವನೆಂದೂ, ಸುಣ್ಣವನ್ನು ಎಲೆಯ ಒಳಭಾಗದಲ್ಲಿ ಹಚ್ಚದ ಹೊರಭಾಗದಲ್ಲಿ ಹಚ್ಚಬೇಕೆಂದೂ, ಪ್ರಾತಃಕಾಲದಲ್ಲಿ ಅಡಿಕೆಯನ್ನು ಹೆಚ್ಚು ಹಾಕಬೇಕೆಂದೂ, ಮಧ್ಯಾಹ್ನದಲ್ಲಿ ಸುಣ್ಣವನ್ನು ಹೆಚ್ಚು ಹಾಕಬೇಕೆಂದೂ, ರಾತ್ರಿಯಲ್ಲಿ ಎಲೆಯನ್ನು ಹೆಚ್ಚು ಹಾಕಬೇಕೆಂದೂ, ಸ್ಮೃತಿ ಮುಕ್ತಾಫಲವು ಬೋಧಿಸುತ್ತದೆ. ಆದಕಾರಣ ಈ ಕ್ರಮದಂತೆಯೇ ತಾಂಬೂಲವನ್ನು ಸ್ವೀಕರಿಸಬೇಕು.

ತರ್ಜನ್ಯಾ ಚೂರ್ಣಮಾದಾಯ ಪತ್ರಸ್ಯೋಪರಿ ಲೇಪಯೇತ್ |

ತರ್ಜನಿ ಬೆರಳಿನಿಂದ ಸುಣ್ಣವನ್ನು ತೆಗೆದುಕೊಂಡು ಎಲೆಯ ಮೇಲ್ಭಾಗದಲ್ಲಿ ಹಚ್ಚಬೇಕೆಂದು ಬೋಧಿಸುವ ಕಾರಣ ತರ್ಜನಿಬೆರಳಿನಿಂದಲೇ ಸುಣ್ಣವನ್ನು ಹಚ್ಚಬೇಕಲ್ಲದೆ, ಬೇರೆ ಬೆರಳುಗಳಿಂದ ಹಚ್ಚಬಾರದು. ಕೆಲವರು ಭವಿಗಳು ಮುಟ್ಟಿದ ಸುಣ್ಣವನ್ನು ಹಾಕಿಕೊಳ್ಳುತ್ತಾರೆ. ಸುಣ್ಣಕ್ಕೆ ದೋಷವಿಲ್ಲವೆನ್ನುತ್ತಾರೆ. ಇದು ಕೇವಲ ತಪ್ಪು. ಜಲಮಿಶ್ರವಾದ ಪ್ರತಿಯೊಂದು ವಸ್ತುವು ಅಲಿಂಗಿಗಳ ಸ್ಪರ್ಶವಾದರೆ ಅಶುದ್ಧವಾಗುತ್ತದೆ. ಆದಕಾರಣ ಭವಿಗಳು ಮುಟ್ಟಿದ ಸುಣ್ಣವನ್ನು ಹಾಕಬಾರದು. ಈ ಪ್ರಕಾರ ಆಚಾರವಿಧಿ ಘಂಟಾಘೋಷವಾಗಿ ಸಾರುತ್ತದೆ. ತಾಂಬೂಲ ಸ್ವೀಕಾರವು ಯಾವಾಗಲೂ ಶ್ರೇಷ್ಠವೆನಿಸಿದೆ. ಆದ್ದರಿಂದಲೇ ದೇವರಿಗೆ ಮಾಡತಕ್ಕ ಷೋಡಶೋಪಚಾರಗಳಲ್ಲಿ ತಾಂಬೂಲಸ್ವೀಕಾರವು ಒಂದು ಉಪಚಾರವಾಗಿದೆ.

ಸಪೂಗೀ ಫಲ ಕರ್ಪೂರನಾಗವಲ್ಲೀದಲೈರ್ಯುತಮ್ |
ಸಚೂರ್ಣಖದಿರಂ ದೇವ ತಾಂಬೂಲಂ ಪ್ರತಿಗೃಹ್ಯತಾಮ್ ||

ಈ ಮಂತ್ರದಿಂದ ದೇವರಿಗೆ ತಾಂಬೂಲವನ್ನು ಸಮರ್ಪಿಸುವರು. ಮಿತಿಮೀರಿ ತಾಂಬೂಲಸೇವನೆ ಮಾಡುವದು ಅನಾರೋಗ್ಯಕರವೆಂದು ಮೇಲೆ ಹೇಳಿದೆಯಷ್ಟೆ! ಕೆಲವರು ಮಿತಿಮೀರಿ ತಾಂಬೂಲವನ್ನಷ್ಟೇ ಸೇವಿಸುವರು. ಕೆಲವರು ಅದರ ಸಂಗಡ ತಂಬಾಕ ಇಲ್ಲವೆ ಜರದಾ ಪುಡಿಯನ್ನು ಹಾಕಿಕೊಳ್ಳುತ್ತಾರೆ. ಇದಂತೂ ಅತ್ಯಂತ ಅನಾರೋಗ್ಯವಾಗುವುವಲ್ಲದೆ, ನಾಲಿಗೆಯು ಬಿರುಸಾಗುತ್ತದೆ. ಮೇಲಿಂದಮೇಲೆ ಉಗುಳುವದರಿಂದ ಬಾಯೊಳಗಿನ ಲಾಲಾರಸವು ಹೊರಟುಹೋಗುತ್ತದೆ. ಇದರಿಂದ ಊಟಮಾಡತಕ್ಕ ಪದಾರ್ಥಗಳು ನಾಲಿಗೆಗೆ ರುಚಿ ಹತ್ತುವದಿಲ್ಲ. ಆದಕಾರಣ ಊಟವು ಸರಿಯಾಗಿ ಆಗುವದಿಲ್ಲ. ಇಂಥವರು ಯಾವದಾದರೊಂದು ಸಭೆಗೆ ಹೋದರೆ ಒತ್ತಟ್ಟಿಗೆ ಕೂಡ್ರದೆ ಮೇಲಿಂದಮೇಲೆ ಉಗುಳಲಿಕ್ಕೆ ಎದ್ದುಹೋಗಬೇಕಾಗುತ್ತದೆ. ಮತ್ತು ಆ ಸಭೆ ಮುಗಿಯುವದರೊಳಗಾಗಿ ಅವರು ಉಗುಳಿದ್ದು ಒಂದು ಕಣದ ಅಳತೆ ಓಕಳಿ ಉಗ್ಗಿದಂತೆ ಆಗುತ್ತದೆ. ಇವರು ಕುಳಿತ ಕುಳಿತಲ್ಲಿಯೇ ನಿಂತನಿಂತಲ್ಲಿಯೇ ಉಗುಳುತ್ತಿರುತ್ತಾರಲ್ಲದೆ, ಮಲಮೂತ್ರ ವಿಸರ್ಜನೆಗೆ ಹೋಗುವಾಗಲೂ ಸಹ ಬಾಯಾಡಿಸುತ್ತಿರುವರು. ಇನ್ನು ಕೆಲವರು ಅಡಿಕೆಯ ಬೆಟ್ಟವನ್ನು ಅಡಕೊತ್ತಿನಿಂದಾಗಲಿ ಇಲ್ಲವೆ ಬೇರೆ ಯಾವುದಾದರೊಂದು ಸಾಧನದಿಂದಾಗಲಿ ಒಡೆಯದೆ, ಹಲ್ಲಿನಿಂದ ಒಡೆದು ಹೆಚ್ಚಿನ ಹೋಳುಗಳನ್ನು ಕಿಸೆಯಲ್ಲಿಯಾಗಲಿ ಚಂಚಿಯಲ್ಲಿಯಾಗಲಿ ಹಾಕುತ್ತಾರೆ. ಡಬ್ಬಿಯಲ್ಲಿರುವ ಸುಣ್ಣವನ್ನು ಹೆಬ್ಬೆಟ್ಟಿನಿಂದ ತೆಗೆದುಕೊಂಡು ಎಲೆಗೆ ಹಚ್ಚಿಕೊಂಡು ಹಾಕಿಕೊಳ್ಳುತ್ತಾರೆ. ಕಡಿಮೆ ಆದಲ್ಲಿ ಪುನಃ ಅದೇ ಹೆಬ್ಬೆಟ್ಟಿನಿಂದ ತೆಗೆದುಕೊಂಡು ನಾಲಿಗೆಗೆ ಹಚ್ಚಿಕೊಳ್ಳುತ್ತಾರೆ. ಬೇಡಿದವರಿಗೆ ಅದೇ ಅಡಿಕೆಯ ಹೋಳನ್ನೂ ಅದೇ ಸುಣ್ಣವನ್ನೂ ಕೊಡುತ್ತಾರೆ. ಅವರಲ್ಲಿ ಎಂಜಲವೆಂಬ ತಾರತಮ್ಯ ಭಾವವೇ ಬರುವದಿಲ್ಲ. ಹೀಗೆ ಮಾಡುವದು ಧರ್ಮಕ್ಕೆ ಅತ್ಯಂತ ವಿರೋಧವಾಗುವದು. ಹೀಗೆ ಮಾಡುವುದನ್ನು ಬಿಟ್ಟರೆ ಧರ್ಮಕ್ಕೆ ಒಂದು ದೊಡ್ಡ ಉಪಕಾರ ಮಾಡಿದಂತಾಗುತ್ತದೆ.

ನೂತನವಾಗಿ ಪ್ರಕಟವಾಗಿರುವ
ಗ್ರಂಥಗಳು

ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ವೀರಶೈವಾಂತ್ಯೇಷ್ಟಿ-ಶ್ರಾದ್ಧವಿಧಿ	೬ ಆಣೆ
ಶೈವೋಪನಿಷತ್ಸಂಗ್ರಹ	೪ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ಪಂಚಾಚಾರಪ್ರಕಾಶಿಕಾ	೨ ಆಣೆ

ಮ್ಯಾನೇಜರ್—ಪಂಚಾಚಾರ್ಯ ಪ್ರಭಾ ಆಫೀಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೫ನೇ ಜುಲೈ ೧೯೪೩ [ಸಂಚಿಕೆ ೯

ವ್ಯಾಯಾಮದ ಅವಶ್ಯಕತೆ

ಲೇ—ಶ್ರೀ ಪಟ್ಟದಸ್ವಾಮಿಗಳು ಹಿರೇಮಠ ಕೊಣ್ಣೂರು

ವ್ಯಾಯಾಮ ಅಂದರೇನು? ಆರೋಗ್ಯದ ರಕ್ಷಣೆಗಾಗಿ ಶರೀರವನ್ನು ಶ್ರಮಗೊಳಿಸುವದರ ಸಲುವಾಗಿ ಮಾಡುವ ಯಾವದಾದರೊಂದು ಅಂಗಸಾಧನೆಗೆ ವ್ಯಾಯಾಮವೆನ್ನುವರು

ವ್ಯಾಯಾಮದಲ್ಲಿ ಪ್ರಕಾರಗಳು—ಓಡುವದು ಹಗ್ಗಗಳನ್ನು ಹಾರುವುದು, ಕೋಲಾಟ, ಕುಸ್ತಿ, ಕಣ್ಣುಮುಚ್ಚಿಕೆಗೆ ಚಂಡಾಟ, ಈಜುವದು ಕುದುರೆಯಮೇಲೆ ಸವಾರಿಮಾಡುವದು, ಸಾಮುತೆಗೆಯುವದು, ಉಟಬೈಸ ತೆಗೆಯುವದು, ಮಲಕಂಬಯೇರುವದು, ತಿಳ್ಳಿ, ಯೋಗ ಆಸನ ಹಾಕುವದು, ತೀವ್ರ ನಡೆಯುವದು, ಇವೇ ಮೊದಲಾದ ಅನೇಕ ತರದ ಆಟಗಳಿರುತ್ತವೆ ವ್ಯಾಯಾಮಮಾಡತಕ್ಕ ಕಾಲ—ಪ್ರಾತಃಕಾಲ ಸಾಯಂಕಾಲ ಈ ಎರಡು ಕಾಲಗಳು ವ್ಯಾಯಾಮ ಮಾಡಲಿಕ್ಕೆ ಯೋಗ್ಯಗಳಾಗಿರುತ್ತವೆ

ವ್ಯಾಯಾಮ ಮಾಡುವುದರಿಂದ ಆಗತಕ್ಕ ಲಾಭ—ವ್ಯಾಯಾಮ ಮಾಡುವದರಿಂದ ಮನುಷ್ಯರ ಬುದ್ಧಿಬಲವೂ ಶರೀರಬಲವೂ, ಹೆಚ್ಚುತ್ತದೆ. ಕಾಂತಿಯು ಬೆಳೆಯುತ್ತದೆ. ಉಂಡ ಅನ್ನವು ಚನ್ನಾಗಿ ಪಚನವಾಗುತ್ತದೆ. ರಕ್ತಾಭಿಸರಣವು ಒತ್ತರದಿಂದ ಸಾಗುತ್ತದೆ ಪ್ರತಿಯೊಂದು ಕೆಲಸವನ್ನು ಮಾಡಲಿಕ್ಕೆ ಹುರುಪು ಬರುತ್ತದೆ. ರೋಗವು ಹತ್ತರ ಸುಳಿದಾಡುವುದಿಲ್ಲ ದೀರ್ಘಾಯುಷ್ಯವಂತರಾಗುವರು ಇವೇ ಮೊದಲಾದ ಅನೇಕ ತರದ ಲಾಭಗಳು ದೊರಕುತ್ತವೆ

ವ್ಯಾಯಾಮ ಮಾಡದೆಯಿರುವದರಿಂದ ಆಗತಕ್ಕ ಹಾನಿ—ವ್ಯಾಯಾಮವನ್ನು ಮಾಡದೆ ಸುಮ್ಮನೆ ಮನೆಯಲ್ಲಿ ಕೂಡ್ರುವದರಿಂದ ಲಾಭದಲ್ಲಿ ಹೇಳಿದ ಪ್ರತಿಯೊಂದಕ್ಕು ವಿರುದ್ಧ ಫಲವು ದೊರಕುತ್ತದೆ. "ಕೋಣೆಯ ಕೂಸು ಕೊಳೆಯಿತು ಓಣಿಯ ಕೂಸು ಬೆಳೆಯಿತು" ಎಂಬ ನಾಣ್ಣುಡಿಯು ವ್ಯಾಯಾಮಮಾಡದೆಯಿರುವದರಿಂದ ಆಗತಕ್ಕ ಹಾನಿಯನ್ನೂ ಮಾಡುವುದರಿಂದ ಆಗತಕ್ಕ ಲಾಭವನ್ನೂ ಸ್ಪಷ್ಟಪಡಿಸುತ್ತದೆ .

ಸಂಪತ್ತುಗಳಲ್ಲಿ ಶ್ರೇಷ್ಠವಾದದ್ದು ಯಾವದು?—ಕೆಲವರು ಮುತ್ತು ರತ್ನ, ಬಂಗಾರ, ಬೆಳ್ಳಿ ಇವೇ ಮೊದಲಾದ ಸಂಪತ್ತೇ ಶ್ರೇಷ್ಠವೆಂದು ತಿಳಿದಿದ್ದಾರೆ ಇದು ತಪ್ಪು ಶರೀರಸಂಪತ್ತೇ ಎಲ್ಲಕ್ಕೂ ಶ್ರೇಷ್ಠವಾದದ್ದು ಹ್ಯಾಗಂದರೆ—

ಮನುಷ್ಯನು ಪೂರ್ವದ ಪುಣ್ಯವಿಶೇಷದಿಂದ ಅಷ್ಟೈಶ್ವರ್ಯವನ್ನು ಪಡೆದಿದ್ದರೂ, ತನಗೆ ಬೇಕಾದ ಮೃಷ್ಟಾನ್ನಭೋಜನವನ್ನು ಮಾಡುವ ಶಕ್ತಿಯನ್ನು ಹೊಂದಿದ್ದರೂ, ತಾನು ಆರೋಗ್ಯದಿಂದಿರದೆ ಹಾಸಿಗೆಯಲ್ಲಿಯೇ ರೋಗದಿಂದ ಹೊರಳಾಡುತ್ತಿದ್ದು ಆ ಐಶ್ವರ್ಯದ ಭೋಗವನ್ನು ತೆಗೆದುಕೊಳ್ಳದಿದ್ದರೆ, ಆ ಐಶ್ವರ್ಯದಿಂದ ಫಲವೇನು? ಇದ್ದು ಇಲ್ಲದಂತೆಯೇ ಸರಿ. ಮನೆಯಲ್ಲಿ ಒಂದು ಕಾಸು ಸಹ ಇರದಿದ್ದರೂ, ತಿನ್ನಲಿಕ್ಕೆ ಏನೂ ಸಿಗದಿದ್ದರೂ, ಶರೀರ ಸಾಮರ್ಥ್ಯವೊಂದಿದ್ದರೆ ಯಾರಲ್ಲಿಯಾದರೂ ದುಡಿದು ಬೇಕಾದಷ್ಟು ದುಡ್ಡನ್ನು ಸಂಪಾದಿಸಬಹುದು ಆದರಿಂದ ಸುಖೋಪಭೋಗವನ್ನು ಹೊಂದಬಹುದು ಕಾರಣ ಎಲ್ಲಕ್ಕೂ ಶರೀರಸಂಪತ್ತೇ ಶ್ರೇಷ್ಠವೆಂದು ಸಿದ್ಧವಾಗುತ್ತದೆ. ರೋಗಾದಿಗಳು ಬಂದ ಮೇಲೆ ಶರೀರವನ್ನು ಸುಧಾರಿಸಿಕೊಳ್ಳುವದಕ್ಕಿಂತ ಮೊದಲೇ ರೋಗಾದಿಗಳು ಬಾರದಂತೆ ಶರೀರವನ್ನು ಕಾಪಾಡಿಕೊಂಡಿರುವದು ಎಲ್ಲಕ್ಕೂ ಮೇಲು ಯಾವಾಗಲೂ ಊರಹೊರಗೆ ದೊಡ್ಡ ಮೈದಾನದಲ್ಲಿ ದುಡಿಯುತ್ತಿರುವ ಸ್ತ್ರೀಪುರುಷರಿಗೆ ವ್ಯಾಯಾಮದ ಆವಶ್ಯಕತೆ ಬೀಳುವದಿಲ್ಲ ಮತ್ತು ಕುಟ್ಟುವದು, ಬೀಸುವದು, ಬಟ್ಟೆಗಳನ್ನು ಒಗೆಯುವದು ಬಾವಿನೀರು ಸೇದುವದು, ಮನೆಯನ್ನು ಸಾರಣೆಮಾಡುವದು. ಅಡಿಗೆ ಮಾಡುವದು ಇವೇ ಮೊದಲಾದ ತಮ್ಮ ಗೃಹಕೃತ್ಯಗಳನ್ನು ಮಾಡುತ್ತಿರುವ ಸ್ತ್ರೀ ಪುರುಷರಿಗೆ ವ್ಯಾಯಾಮವು ಸ್ವಭಾವಿಕವಾಗುತ್ತದೆ ಶುದ್ಧ ಗಾಳಿಗಾಗಿ ಬೈಲಿನಲ್ಲಿ ಮಾತ್ರ ಹೋಗಿ ಕೂತು ಬರಬೇಕು

ಕೆಲವು ಶ್ರೀಮಂತ ಸ್ತ್ರೀ ಪುರುಷರು ಮಾತ್ರ ತಮ್ಮ ಸ್ವಂತ ಮನೆಯ ಕೆಲಸವನ್ನು ಮಾಡುವದು ಸಹ ಅಪಮಾನಕರವೆಂದು ತಿಳಿದು, ತಮ್ಮ ಎಲ್ಲ ಕೆಲಸವನ್ನು ಆಳುಗಳಿಂದ ಮಾಡಿಸುತ್ತಾರೆ ತಾವು ಕೂತಲ್ಲಿಯೇ ಕೂತು ಪ್ರಾತಃಕಾಲ ಸಾಯಂಕಾಲ ಹೀಗೆ ಎರಡು ಕಾಲಗಳಲ್ಲಿ ಮಧುರಾನ್ನವನ್ನು ಭುಂಜಿಸುತ್ತಾರೆ ಪಥ್ಯದಲ್ಲಿ ಪರಾಳವನ್ನಾಗಲಿ, ಹಣ್ಣುಹಂಪಲುಗಳನ್ನಾಗಲಿ ಸೇವಿಸುತ್ತಾರೆ ಇವರಿಗೆ ಮನೆಯಬಿಟ್ಟು ಹೊರಗೆ ಹೋಗುವುದೆಂದರೆ ಪ್ರಾಣಸಂಕಟ ಇದರಿಂದ ವಾತ ಬೆಳೆದು ತಮ್ಮ ಶರೀರ ತಮಗೆ ಭಾರವಾಗುವದಲ್ಲದೆ. ಅಸಡ್ಡಾಳವಾಗುತ್ತವೆ ನಾನಾತರದ ರೋಗಗಳು ಇವರಲ್ಲಿ ಸೇರಲಿಕ್ಕೆ ತಾಮುಂದೆ ನಾಮುಂದೆ ಎಂದು ಹೋರಾಡುವವು. ರೋಗವು ಪ್ರವೇಶವಾದಕೂಡಲೇ ಹಗಲಿರುಳು ಡಾಕ್ಟರ ಮನೆಗೆ ಎಡತಾಕಬೇಕಾಗುತ್ತದೆ ಗುಣ ಆದರೇನು ಆಗದಿದ್ದರೇನು, ಡಾಕ್ಟರರಿಗೆ ನೂರುನೂರು ರೂಪಾಯಿಗಳನ್ನು ಪ್ರತಿವರ್ಷ ತೆಗೆದಿಡಬೇಕಾಗುತ್ತದೆ ಈ ತೆರದ ಅನಾರೋಗ್ಯಕ್ಕೆ ವ್ಯಾಯಾಮ ಮಾಡದಿರುವುದೇ ಮೂಲಕಾರಣವು ಈ ವಿಷಯವನ್ನು ಪ್ರತಿಯೊಬ್ಬರೂ ಅನುಭವದಿಂದ ತಿಳಿದಿದ್ದರೂ ವ್ಯಾಯಾಮದ ಕಡೆಗೆ ಲಕ್ಷ್ಯಕೊಡುವುದಿಲ್ಲ ಹೀಗೆ ಅಲಕ್ಷ್ಯಮಾಡುವದು ಮೂರ್ಖತನವೇ ಸರಿ ತಮ್ಮ ಕೆಲಸವನ್ನು ತಾವೇ ಸ್ವಂತ ಮಾಡಿಕೊಳ್ಳುವವರಿಗೂ, ದುಡಿದು ಊಟಮಾಡುವವರಿಗೂ ಶ್ರೀಮಂತರಂತೆ ರೋಗಾದಿಗಳು ವಿಶೇಷ ಬರುವದಿಲ್ಲ ಇದಕ್ಕೆಲ್ಲ ಸ್ವಾಭಾವಿಕ ವ್ಯಾಯಾಮವಾಗುವದೇ ಮೂಲಕಾರಣವು

ಲೌಕಿಕ ಪಾರಮಾರ್ಥಿಕ ಸಾಧನಗಳಿಗೆ ಶರೀರವೇ ಮೂಲವು—ಮನುಷ್ಯ ಶರೀರವನ್ನು ಧರಿಸಿದ ಪ್ರತಿಯೊಂದು ವ್ಯಕ್ತಿಯೂ, ಧರ್ಮಾರ್ಥ ಕಾಮಮೋಕ್ಷಗಳಲ್ಲಿ ಯಾವದಾದರೊಂದು ಪ್ರಯೋಜನವನ್ನು ಸಾಧಿಸಲು ನಿರಂತರವಾಗಿ ಪ್ರಯತ್ನ ಮಾಡಬೇಕೆಂಬುವದು ಸಿದ್ಧವಾಗುವದು ಇದಲ್ಲದೆ ಮನುಷ್ಯನಾರೆಂಬುವದನ್ನು ಮೊದಲು ತಿಳಿದುಕೊಳ್ಳಬೇಕಾಗುತ್ತದೆ ಪಂಚ ಜ್ಞಾನೇಂದ್ರಿಯಗಳೂ, ಪಂಚ ಕರ್ಮೇಂದ್ರಿಯಗಳೂ, ಮನಸ್ಸು, ಆತ್ಮಾ, ಇವುಗಳಿಂದ ಕೂಡಿದ ಪಂಚ ಭೂತಾತ್ಮಕವಾದ ಶರೀರಕ್ಕೆ ಮನುಷ್ಯ ಸಂಕೇತವೆಂದು ಸಕಲ ಶಾಸ್ತ್ರಕಾರರ ಅಭಿಪ್ರಾಯವಾಗಿರುತ್ತದೆ ನಿತ್ಯ ಶುದ್ಧ ಬುದ್ಧ ಮುಕ್ತ ಸ್ವರೂಪವಾದ ಪರವಸ್ತುವು ಈ ಪಂಚ ಭೂತಾತ್ಮಕ ಶರೀರದಲ್ಲಿ ಪ್ರವೇಶಿಸಿ ಜೀವಾತ್ಮನೆಂಬ ನಾಮಧೇಯವನ್ನು ಹೊಂದಿರುತ್ತದೆ. ಪಂಚಭೂತಮಯವಾದ ಶರೀರವು ಪರಮಾತ್ಮನ ಭೋಗಸ್ಥಾನವಾಗಿರುತ್ತದೆ ಶರೀರ, ಇಂದ್ರಿಯ, ಮನಸ್ಸು ಇವುಗಳಿಂದ ಕೂಡಿದವನಿಗೆ 'ಭೋಕ್ತಾ' ಎಂಬ ಹೆಸರು ಬರುತ್ತದೆ ಅಂದಮೇಲೆ ಜೀವಾತ್ಮನ ಸಕಲ ಭೋಗಗಳಿಗೂ ಶರೀರವೇ ಆಧಾರವಾದಂತಾಯಿತು ಶರೀರವನ್ನು ಬಿಟ್ಟು, ಜೀವನು ಯಾವ ಕಾರ್ಯವನ್ನೂ ಮಾಡಲಾರನು "ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವಚ' (ಭ-ಗೀ) ಶರೀರವನ್ನು ರಥವನ್ನಾಗಿಯೂ, ಜೀವನನ್ನು ಸಾರಥಿಯನ್ನಾಗಿಯೂ ಭಗವದ್ಗೀತೆಯಲ್ಲಿ ವರ್ಣಿಸಿರುತ್ತಾರೆ ಧರ್ಮವನ್ನಾಗಲಿ, ಅರ್ಥವನ್ನಾಗಲಿ, ಕಾಮವನ್ನಾಗಲಿ ಮೋಕ್ಷವನ್ನಾಗಲಿ ಸಾಧಿಸಿಕೊಳ್ಳಬೇಕಾದರೆ ಈ ಶರೀರವೇ ಪ್ರಧಾನ ಕಾರಣವಾಗಿರುತ್ತದೆ. ಸಕಲ ಶಾಸ್ತ್ರಗಳೂ, ಪುರಾಣಗಳೂ ಶರೀರಾವಚ್ಛಿನ್ನ ಜೀವಾತ್ಮನ ಉದ್ಧಾರಕ್ಕಾಗಿಯೇ ನಿರ್ಮಾಣವಾಗಿರುತ್ತವೆ ಧರ್ಮಾಧರ್ಮಗಳೂ, ಸುಖದುಃಖಗಳೂ, ಪಾಪಪುಣ್ಯಗಳೂ ಶರೀರಸಹಿತನಾದ ಜೀವಾತ್ಮನಿಗೇ ಉಂಟಾಗುತ್ತವೆ ಶ್ರವಣ, ಮನನ, ನಿದಿಧ್ಯಾಸ, ಧ್ಯಾನ, ಧಾರಣ ಸಮಾಧಿಗಳಾದರೂ ಈ ಶರೀರದ ಹೊರತಾಗಿ ಸಾಧ್ಯವಿಲ್ಲ ಲೌಕಿಕ ಪಾರಮಾರ್ಥಿಕ ವ್ಯವಹಾರಗಳಿಗಾದರೂ ಶರೀರವೇ ಆಧಾರಭೂತವಾಗಿದೆ. ಎಷ್ಟು ಸೂಕ್ಷ್ಮವಿಚಾರ ಮಾಡಿದರೂ ಈ ಪಂಚಭೂತಾತ್ಮಕ ಶರೀರವೇ ಜಗತ್ತಿನ ಸಕಲ ಕಾರ್ಯಕಲಾಪಗಳಿಗೆ ಮೂಲವಾದುದೆಂಬುದೇ ಸಿದ್ಧವಾಗುತ್ತದೆ ಹೀಗಾದ ಮೇಲೆ ಈ ಪುರುಷಾರ್ಥಸಾಧಕವಾದ ಶರೀರವನ್ನು ರಕ್ಷಿಸಿಕೊಳ್ಳಲು ನಿರಂತರವಾಗಿ ಪ್ರಯತ್ನ ಮಾಡುವದು ಮೊದಲನೆಯ ಕರ್ತವ್ಯವಾಗಿದೆ 'ಶೀರ್ಯತ ಇತಿ ಶರೀರಂ' ಎಂಬ ವ್ಯುತ್ಪತ್ತಿಯಿಂದ ಶರೀರವು ಕ್ಷೀಣವಾಗತಕ್ಕ ಸ್ವಭಾವವುಳ್ಳದ್ದಾದುದರಿಂದ, ರೋಗಾದಿಬಾಧೆಗಳುಂಟಾದಲ್ಲಿ ಅತ್ಯಂತ ಕ್ಷೀಣವಾಗಿ ಕಡೆಗೆ ಒಂದು ದಿನ ಮೃತ್ಯುವಿನ ಬಾಯಿಗೆ ತುತ್ತಾಗುವುದು ಆದುದರಿಂದಲೇ "ಶರೀರಂ ಸತ್ವಸಂಜ್ಞಂಚ ವ್ಯಾಧೀನಾಮಾಶ್ರಯೋಮತಃ" ಎಂದು ಚರಕಮುನಿಗಳು ಹೇಳಿರುತ್ತಾರೆ. ಇಂತಹ ಅಮೂಲ್ಯವಾದ ಶರೀರವನ್ನು ಕಾಪಾಡಿಕೊಳ್ಳಬೇಕೆಂಬ ಅಭಿಲಾಷೆಯು ಪ್ರತಿಯೊಬ್ಬರಿಗೂ ಅವಶ್ಯಬೇಕು "ಶರೀರಮಾದ್ಯಂ ಖಲುಧರ್ಮಸಾಧನಂ" ಎಂಬ ಕಾಳಿದಾಸನ ಉಕ್ತಿಯಾದರೂ ಮೇಲಿನ ವಿಷಯವನ್ನೇ ವ್ಯಕ್ತಪಡಿಸುತ್ತದೆ. ಆದ್ದರಿಂದ ಪ್ರತಿಯೊಬ್ಬರೂ ವ್ಯಾಯಾಮಮಾಡಿ ಅದರ ಮಹಾಫಲವನ್ನು ಅನುಭವಿಸಬೇಕು

ಪಂಚಾಚಾರ್ಯಪ್ರಭಾ.

೧೯೪೩ನೆಯ ಜುಲೈ ತಾ| ೫ ನೆಯ ಸೋಮವಾರ

ಆಚಾರ.

ಮಾನವಕೋಟಿಯು ಉದ್ಧಾರಕ್ಕೋಸ್ಕರ ಆಚಾರವೇ ಶ್ರೇಷ್ಠವಾದ ಸಾಧನವಾಗಿರುತ್ತದೆ ಆಚಾರದಿಂದಲೇ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಪುರುಷಾರ್ಥಗಳು ಪ್ರಾಪ್ತವಾಗುತ್ತವೆ ಪೂರ್ವಕಾಲದ ಮಹರ್ಷಿಗಳೂ, ಮಹಾತ್ಮರೂ, ಸತ್ಪುರುಷರೂ ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಜಗತ್ತಿನಲ್ಲಿ ಈ ಹೊತ್ತಿನವರೆಗೆ ತಮ್ಮ ಪವಿತ್ರನಾಮವನ್ನುಳಿಸಿಕೊಂಡು ಸರ್ವರಿಂದಲೂ ಸ್ತುತ್ಯರಾಗಿ ಪ್ರಕಾಶಿಸುತ್ತಿರುವರು ಆದುದರಿಂದಲೇ ಭಗವತೀ ಶ್ರುತಿದೇವಿಯು “ಆಚಾರಃ ಪರಮೋ ಧರ್ಮಃ” ಎಂದು ಈ ಆಚಾರದ ಶ್ರೇಷ್ಠತೆಯನ್ನು ನಾನಾವಿಧವಾಗಿ ಕೊಂಡಾಡಿರುವಳು ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಲೋಕವಿಖ್ಯಾತನಾದ ಅಗಸ್ತ್ಯಮಹರ್ಷಿಗೆ ವೀರಶೈವಸಿದ್ಧಾಂತವನ್ನುಪದೇಶಿಸುವ ಸಮಯದಲ್ಲಿ “ಸದಾಚಾರಪ್ರಿಯಃ ಶಂಭುಃ ಸದಾಚಾರೇಣ ಪೂಜ್ಯತೇ। ಸದಾಚಾರಂ ವಿನಾ ತಸ್ಯ ಪ್ರಸಾದೋನೈವಜಾಯತೇ ಎಂದು ಬೋಧಿಸಿರುವರು ಅಂದರೆ ಭಗವದ್ಭವಾನೀಪತಿಯು ಸದಾಚಾರದಿಂದಲೇ ಪ್ರೀತಿಯುಳ್ಳವನಾಗುವನೆಂದೂ, ಮಾನವನು ಸದಾಚಾರದಿಂದ ಮಾನ್ಯನಾಗುವನೆಂದೂ, ಸದಾಚಾರಶೂನ್ಯನಾದ ಮಾನವನಿಗೆ ಶಿವಪ್ರಸಾದವು ಲಭಿಸುವದಿಲ್ಲವೆಂದೂ, ಆದುದರಿಂದ ಮನುಷ್ಯನು ಮುಖ್ಯವಾಗಿ ಸದಾಚಾರಸಂಪನ್ನನಾಗಿ ಪರಮಪುರುಷಾರ್ಥವನ್ನು ಸಂಪಾದಿಸಿಕೊಳ್ಳಬೇಕೆಂದೂ ಬೋಧಿಸಿದ್ದಾರೆ ಅಲ್ಲದೆ ಲೋಕವಿಖ್ಯಾತರಾದ ಗೌತಮಮಹರ್ಷಿಗಳೂ ಕೂಡ ಈ ಆಚಾರದ ಮಹತ್ವವನ್ನು ಬಹುರೀತಿಯಿಂದ ವರ್ಣಿಸಿದ್ದಾರೆ.

ಆಚಾರಃ ಪರಮೋಧರ್ಮ ಆಚಾರಃ ಪರಮಂಧನಂ।
ಆಚಾರಃ ಪರಮಾ ವಿದ್ಯಾ ಆಚಾರಃ ಪರಮಾಗತಿಃ।
ಸದಾಚಾರೇಣ ದೇವತ್ವಮೃಷಿತ್ವಂಚ ವರಾನನೇ।
ಉಪಾಗತಾಃ ಕುಯೋನಿತ್ವಂ ಮನುಷ್ಯಾಸ್ತದ್ವಿಪರ್ಯಯೇ॥
ಜ್ಞಾನಮಾಚಾರಹೀನೇಷು ಸರ್ವಥೈವಸಮನ್ವಿತಂ।
ದುಷ್ಟಚಂಡಾಲಭಾಂಡೇಷು ಯಥಾ ಭಾಗೀರಥೀಜಲಂ।

ಆಚಾರವೇ ಶ್ರೇಷ್ಠವಾದ ಧರ್ಮವೆಂದೂ, ಆಚಾರವೇ ಶ್ರೇಷ್ಠವಾದ ದ್ರವ್ಯವೆಂದೂ, ಆಚಾರವೇ ಶ್ರೇಷ್ಠವಾದ ಬ್ರಹ್ಮವಿದ್ಯೆಯೆಂದೂ, ಆಚಾರವೇ ಶ್ರೇಷ್ಠವಾದ ಮೋಕ್ಷವೆಂದೂ, ಇಂಥ ಸರ್ವೋತ್ತಮವಾದ ಆಚಾರದಿಂದಲೇ ಮನುಷ್ಯರು ದೇವತ್ವವನ್ನೂ ಹಾಗೂ ಮಹರ್ಷಿತ್ವವನ್ನೂ ಪಡೆಯುವರೆಂದೂ, ಆಚಾರಹೀನರಾದ ಮನುಷ್ಯರು ಶ್ವಾನಸೂಕರಾದಿ ಜನ್ಮಗಳನ್ನು ತಾಳುವರೆಂದೂ, ಚಂಡಾಲರ ಪಾತ್ರೆಯಲ್ಲಿ ಪವಿತ್ರವಾದ ಗಂಗಾಜಲವಿದ್ದರೂ ಸಹ ಆ ಜಲವು ಪ್ರಯೋಜನಕಾರಿಯಾಗದಂತೆ ಅನಾಚಾರಿಗಳಲ್ಲಿ ಜ್ಞಾನವಿದ್ದರೂ ಕೂಡ ಆ ಜ್ಞಾನವು ಪ್ರಯೋಜನಕಾರಿಯಲ್ಲವೆಂದೂ, ಬೋಧಿಸಿರುವರು ಇದರ ಮೇಲಿಂದ ಆಚಾರದ ಆವಶ್ಯಕತೆಯು ಸನಾತನ ಧರ್ಮಾವಲಂಬಿಗಳಿಗೆ ಎಷ್ಟರಮಟ್ಟಿಗೆ ಇರಬಹುದೆನ್ನುವದು ಚಿಕ್ಕ ಬಾಲಕರಿಗೂ ಕೂಡ ತಿಳಿಯುವಂತಿದೆ. ಹೀಗಿದ್ದರೂ ಸಹ ಈ ಕಾಲದಲ್ಲಿ ಈ ಆಚಾರದ ಸ್ವರೂಪವನ್ನು ತಿಳಿದು ಅದರಂತೆ ವರ್ತಿಸುವವರು ಕೇವಲ ವಿರಳರಾಗಿದ್ದಾರೆ ಪೂರ್ವಕಾಲದ ಜನರು ಸಂಪನ್ನರಾಗಿ ಧರ್ಮಕರ್ಮಗಳಿಗೆ ಭೀತರಾಗಿ ವರ್ತಿಸುತ್ತಿದ್ದರು ಈಗಿನವರು ಅವೆಲ್ಲಕ್ಕೂ ಬಹಿಷ್ಕಾರವನ್ನು ಹಾಕಿಬಿಟ್ಟಿದ್ದಾರೆ. ಈಗಿನವರಿಗೆ ತಮ್ಮ ಧರ್ಮ ಬೇಡ, ಕರ್ಮ ಬೇಡ, ಗುರುಗಳು ಬೇಡ, ಆಚಾರವು ಬೇಡ, ತಂದೆಯು ಬೇಡ, ತಾಯಿಯು ಬೇಡ, ಆಚಾರವನ್ನು ಬೋಧಿಸುವವರು ಮೊದಲೇ ಬೇಡವಾಗಿದೆ ಯಾರು ಅನಾಚಾರವನ್ನು ಬೋಧಿಸುವರೋ ಅವರೇ ಈಗಿನವರಿಗೆ ತಂದೆತಾಯಿಗಳು, ಗುರುಹಿರಿಯರು, ಬಂಧುಬಳಗದವರಾಗಿದ್ದಾರೆ. ವೀರಶೈವಧರ್ಮಶಾಸ್ತ್ರದಲ್ಲಿ ಭವಿಗಳ ನೆರಳೂ ಸಹ ಇವರ ಮೇಲೆ ಬೀಳಕೂಡದೆಂದು ಇಷ್ಟು ಕಠಿಣಶಾಸನವಿರುವಲ್ಲಿ ಆ ಮಾರ್ಗವನ್ನು ತೊರೆದು ಅಲ್ಪರೀತಿಯಿಂದಾದರೂ ಕ್ರಿಯೆಗಳನ್ನು ಸಾಗಿಸದ ನಿರ್ಭೀತಿಯಿಂದ ಅನ್ಯಮತೀಯರ ಕಾಫೀಕ್ಲಬ್ಬುಗಳಿಗೆ ಹೋಗಿ ಚಹಾ, ಕಾಫಿ, ಉಪ್ಪಿಟ್ಟು, ದೋಸೆ, ಕೇಸರಿಭಾತ, ವಾಂಗೀಭಾತ, ಮೊದಲಾದವುಗಳನ್ನು ತಿಂದು ತೇಗುತ್ತ ಬರುತ್ತಿರುವುದನ್ನು ನೋಡಿದರೆ ಯಾರಿಗೆ ವ್ಯಸನವೆನಿಸಲಿಕ್ಕಿಲ್ಲ? ಈ ಧರ್ಮಭ್ರಷ್ಟರು ತಾವು ಕೆಡುವದಲ್ಲದೆ ತಮ್ಮ ಮನೆಯವರನ್ನೆಲ್ಲ ಕೆಡಿಸುವರು ಅಲ್ಲದೆ ಸದಾಚಾರಿಗಳ ಮನೆಯಲ್ಲಿ ಹೋಗಿ ಅವರೊಡನೆ ಪಂಕ್ತಿಯಲ್ಲಿ ಕುಳಿತು ತಿಂದು ಅವರು ಅಲ್ಪಸ್ವಲ್ಪ ಆಚಾರವನ್ನು ಕಾಯ್ದುಕೊಂಡಿದ್ದರೂ ಅವರನ್ನು ಸಹ ಕೆಡಿಸಹತ್ತಿರುವರು ಈ ಕಾಲದಲ್ಲಿ ಇಂಥ ಧರ್ಮಲಂಡರ ಸಹವಾಸಕ್ಕೆ ಬಿದ್ದು ಅನೇಕರು ಕೆಡಲಿಕ್ಕೆ ಪ್ರಾರಂಭಿಸಿರುವರು ಇದು ಕಲಿಕಾಲದ ಪ್ರಭಾವವೆಂದೇ ಹೇಳಬೇಕಾಗಿದೆ ಈ ಜನರಲ್ಲಿ ಮೂರು ತರಗತಿಗಳಿವೆ ಒಂದನೆಯ ತರಗತಿಯವರು ಉಡುಪಿಹೋಟಲ್ಲುಗಳಿಗೆ ಹೋಗುವವರು ಎರಡನೆಯ ತರಗತಿಯವರು ಯುರೋಪಿಯನ್ನರ ಹೋಟಲ್ಲುಗಳಿಗೆ ಹೋಗುವವರು ಮೂರನೆಯ ತರಗತಿಯವರು ಮುಸಲ್ಮಾನರ ಹೋಟಲ್ಲುಗಳಿಗೆ ಹೋಗುವವರು ಇವರೇ ಹೆಚ್ಚಿನ ಗ್ರೇಡಿನವರು ಇಂಥ ಅಧಮರು ಸಮಾಜದಲ್ಲಿ ಕಾಲಿಡುತ್ತ ಹೋದರೆ ಸಮಾಜವು ಸುಧಾರಿಸುವ ಬಗೆಯೆಂತು? ಶಿವಪ್ರೀತಿಯಾಗುವದೆಂತು? ಪ್ರತಿಯೊಬ್ಬ ಜಾತಿಯವನು ಬಾಯಲ್ಲಿಟ್ಟುಕೊಂಡು ಕುಡಿದು ಎಂಜಲದಿಂದ ಕೂಡಿದ ಪಾತ್ರೆಯಲ್ಲೇ ಮತ್ತೊಬ್ಬನು ಕುಡಿಯುತ್ತಾನೆ ಅದರಲ್ಲೇ ಬೇರೊಬ್ಬನ ಪಾನಮಾಡುತ್ತಾನೆ ಇದೊಂದು ನೂತನ ಯಮಲೋಕವೆಂದೇ ಹೇಳಬೇಕಾಗಿದೆ ಇಂಥ ಧರ್ಮವಿರುದ್ಧ ಅಸಹ್ಯದುಷ್ಕೃತಿಯನ್ನು ಮಾಡಲಿಕ್ಕೆ ಇವರ ಮನಸ್ಸು ಹೇಗೆ ಒಪ್ಪುವದೋ ಯಾರಿಗೂ ತಿಳಿಯದಾಗಿದೆ ಇಂಥ ಪುಣ್ಯಾತ್ಮರಿಗೆ ಸದಾಚಾರಿಗಳು ಆದಷ್ಟುಮಟ್ಟಿಗೆ ಬುದ್ಧಿವಾದವನ್ನು ಹೇಳಿ ಅವರನ್ನು ಆ ದುರ್ಮಾರ್ಗದಿಂದ ತಪ್ಪಿಸುವ ಪ್ರಯತ್ನವನ್ನು ಮಾಡಬೇಕೆಂದು ಕೋರುತ್ತೇವೆ ಈ ರೀತಿ ಅನಾಚಾರಶೀಲರಾಗಿ ನಡೆಯುವವರು ಇಹಲೋಕದ ಅಲ್ಪಸುಖದ ಕಡೆಗೆ ದೃಷ್ಟಿಯನ್ನಿಡದೆ ಪರಲೋಕದ ಭೀತಿಯ ಕಡೆಗೆ ದೃಷ್ಟಿಯನ್ನಿಟ್ಟು ಪಾಪಪುಣ್ಯಗಳ ಮತ್ತು ಧರ್ಮಾಧರ್ಮಗಳ ಸ್ವರೂಪವನ್ನು ತಿಳಿದು ತಾವು ಯಾವ ಮತದಲ್ಲಿ ಜನ್ಮವೆತ್ತಿರುವರೋ ಆ ಮತದ ಕಟ್ಟಳೆಗಳನ್ನೂ ಮೇಲೆ ಹೇಳಿದಂತೆ ಆಚಾರದ ಶ್ರೇಷ್ಠತೆಯನ್ನೂ ತಿಳಿದುಕೊಂಡು ಸದಾಚಾರಶೀಲರಾಗಿ ವರ್ತಿಸಿ ಪರಮೇಶ್ವರನ ಕೃಪೆಗೆ ಪಾತ್ರರಾಗಿ ಇಹಪರಸುಖಗಳೆರಡನ್ನೂ ಅನುಭವಿಸಿ ಧನ್ಯರಾಗಬೇಕೆಂದು ಆಶಿಸುತ್ತೇವೆ

ಯುದ್ಧವಾರ್ತೆ.

ಜರ್ಮನಿಯ ಪ್ರಧಾನ ಸೇನಾ ಕಛೇರಿ ಬದಲಾವಣೆ

ಫೀಲ್ಡ್ ಮಾರ್ಷಲ್ ವಿಲ್ ಹೆಲ್ಮಕೈತಿಲರ ಕಛೇರಿಯನ್ನು ಪಶ್ಚಿಮಕ್ಕೆ ಜರ್ಮನಿಯ ಪ್ರಧಾನ ಸೇನಾ ಕಛೇರಿ ಸ್ಥಾಪಿತವಾಗುವೆಡೆಗೆ ಬದಲಾಯಿಸುತ್ತಿದ್ದಾರೆಂದೂ,ದಕ್ಷಿಣ ಮತ್ತು ಪಶ್ಚಿಮ ಯುರೋಪುಗಳ ಮೇಲಾಗಬಹುದಾದ ಮಿತ್ರರ ಧಾಳಿಯನ್ನು ಎದುರಿಸುವ ಸಲುವಾಗಿ ಮಧ್ಯ ಮತ್ತು ಪೂರ್ವಕ್ಷೇತ್ರಗಳಿಂದ ಸೈನ್ಯಗಳು ಚಲಿಸುತ್ತಿವೆಯೆಂದೂ ಫೀ. ಮಾ ಕೈತಿಲರು ಪಶ್ಚಿಮಕ್ಕೆ ತೆರಳಿದಾರೆಂಬುದು ನಿಜವೇ ಆದ ಪಕ್ಷದಲ್ಲಿ ಜರ್ಮನರು ಸಧ್ಯಕ್ಕೆ ರಷ್ಯನ್ ಯುದ್ಧವನ್ನು ನಿಲ್ಲಿಸಿದ್ದಾರೆಂದೇ ಹೇಳಬೇಕಾಗುತ್ತದೆಂದೂ ಸುದ್ದಿ ಹರಡಿದೆ

ಕರ್ನಲ್ ನಾಕ್ಸರವರ ಭಾಷಣ

ದೀರ್ಘವಾದ ಘೋರವಾದ ಯುದ್ಧವನ್ನು ಮಿತ್ರರು ಎದುರಿಸಬೇಕಾಗಿದೆ ಯುದ್ಧ ೩-೪ ವರ್ಷ ನಡೆಯಬಹುದು ಎಂಬದಾಗಿ ಅಮೆರಿಕದ ನೌಕಾ ಕಾರ್ಯದರ್ಶಿ ಕರ್ನಲ್ ನಾಕ್ಸರು ಯುದ್ಧೋದ್ಯಮಿಗಳ ಸಭೆಯ ಭಾಷಣಮಾಡುತ್ತ ನುಡಿದರು ಮುಂದುವರಿಸಿ, ವಿಜಯ ಸಾಧನೆಗೆ ಎಷ್ಟುಬೇಕೋ ಅಷ್ಟೆಲ್ಲ ಪ್ರಯತ್ನಗಳನ್ನು ನಾವು ಮಾಡುತ್ತಿದ್ದೇವೆ ಯುರೋಪಿನ ದಂಡಯಾತ್ರೆ ಬೇಕಾದ ವಸ್ತುಗಳನ್ನು ಸರಬರಾಜು ಮಾಡಲು ನಾವ ಏರ್ಪಡಿಸಿಕೊಂಡಿರುವ ಸರಬರಾಜು ಮಾರ್ಗಗಳ ತಂಟೆ ಇಟಾಲಿಯನರೂ ಜರ್ಮನರೂ ಬಾರದಂತೆ ತಕ್ಕಬಂದೋ ಬಸ್ತು ಮಾಡಿದೇವೆ ಎಂದರು

ಬ್ರಿಟಿಷ್ ಮಹಾಪ್ರಧಾನರ ಭಾಷಣ

ಕಳೆದವಾರ ಗಿಲ್ಡ್‌ಹಾಲ್‌ನಲ್ಲಿ ಬ್ರಿಟಿಷ್ ಮಹಾ ಪ್ರಧಾನರಾದ ಚರ್ಚಿಲ್‌ರವರು ಭಾಷಣ ಮಾಡುತ್ತಾ ಶರತ್ಕಾಲ ಮುಗಿಯುವುದರೊಳಗಾಗಿ ಮೆಡಿಟರೇನಿಯ ಲ್ಲಿಯೂ ಇತರ ಕಡೆಗಳಲ್ಲಿಯೂ ಧಾರಿಧಾಳಿ ಕೈಗೊಂಡ ಶತ್ರುಗಳ ಕೈಯಲ್ಲಿ ಶರಣು ಹೊಡೆಸುವೆವು ಎಂಬ ದಾಗಿ ತಿಳಿಸಿದರು ಯೂಬೋಟುಗಳ ಮರ್ದ ವಿಚಾರ ಪ್ರಸ್ತಾಪಿಸಿ, ನೌಕಾ ತಯಾರಿ ಅಮೆರಿಕಾದ ಭಾರಿಯಾಗಿ ನಡೆಯುತ್ತಿದೆಯೆಂದೂ, ಮೇ ತಿಂಗಳ ಮಧ್ಯ ಭಾಗದಿಂದ ಒಂದು ವ್ಯಾಪಾರಿ ಹಡಗೂ ಮುಳ ಗಿಲ್ಲವೆಂದೂ ನುಡಿದರು ಶತ್ರು ಸಾಮಗ್ರಿ ಕೇಂದ್ರಗ ಮೇಲೆ ಅಹೋರಾತ್ರಿ ಬಾಂಬು ಸುರಿಸುತ್ತಿರುವುದರಿಂ ಮುಖ್ಯವಾಗಿ ಶತ್ರು ರಾಷ್ಟ್ರಗಳ ಪ್ರಜಾಕೋಟಿಯ ಮೇ ಆಗುವ ಪರಿಣಾಮಗಳನ್ನು ವಿವರಿಸಿದರು ನಂತರ ಕ ಯುದ್ಧದಲ್ಲಿ ಆಂಗ್ಲೊ ಅಮೆರಿಕ ಸಹಕಾರ, ತಮ ವಿಪತ್ತಿನಲ್ಲಿ ಸಾಮ್ರಾಜ್ಯದ ಇತರ ರಾಷ್ಟ್ರಗಳ ಸೇ ತ್ಯಾಗಗಳನ್ನು ಪ್ರಶಂಸಿಸುತ್ತಾ ಭಾರತ ಸೇನೆಯ ಭೂಲೋಕದಲ್ಲಿ ಎಲ್ಲೂ ಕಾಣದಂತಹ ಅಗಾಧ ವೈಖ ಯನ್ನು ಕಂಡರೆಂದೂ, ಒಬ್ಬನಾದರೂ ಬಲಾತ್ಕಾರದಿಂ ಬಂದವರಲ್ಲವೆಂದೂ, ಎಲ್ಲರೂ ಸ್ವಪ್ರೇರಿತರಾಗಿ ಬಂದ ರೆಂದೂ ಭಾರತೀಯ ಸೇನೆಯನ್ನು ಸ್ತುತಿಸಿದರು ನಂತರ ಹಿಟ್ಲರ್ ಮತ್ತು ಅವನ ಅನುಯಾಯಿಗಳನ ಸದೆಬಡಿದ ತರುವಾಯ ಸರ್ವಸಾಧನ ಸಾಮಗ್ರಿಗಳನ್ನು ಪೆಸಿಫಿಕ್‌ಗೆ ಸಾಗಿಸಿ ಜಪಾನನ್ನು ಮಣ್ಣು ಮುಕ್ಕಿಸು ವೆಂದು ವಾಗ್ದಾನವಿತ್ತರು

ನಾಜಿಗಳ ನೂತನ ಆಯುಧ

ತೈಲಜ್ವಾಲೆ ನಾಜಿಗಳ ನೂತನಾಯುಧವೆಂದ ಜರ್ಮನ್ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅಟ್ಲಾಂಟಿಕ ತೀರದ ಬಂದರುಗಳ ಮೇಲೆ ಧಾಳಿಯಾದೀತೆಂಬ ಸುಳುಹ ಕಂಡೊಡನೆ ನೀರಿನ ಮೇಲೆ ತೈಲ ಜ್ವಾಲೆಯ ತೆರೆಯುಬ್ಬಿ ಸುವರೆಂದು ಆ ಪತ್ರಿಕೆಗಳಲ್ಲಿ ವಿವರಣೆಯಿದೆ

ಜಪಾನಿನಲ್ಲಿ ವಿಮಾನ ಧಾಳಿ ಎಚ್ಚರಿ

ಅಮೆರಿಕನರು ಜಪಾನಿನ ಮೇಲೆ ತೀವ್ರ ವಿಮಾ ಧಾಳಿ ಕೈಕೊಂಡೇ ತೀರುವರೆಂದು ಜಪಾನೀಯರಿಗೆ ದೃಢ ವಾಗಿದೆ, ಭೀತಿಯೂ ಅಂಟಿಕೊಂಡಿದೆ ಜಪಾನಿನ ಆದ್ಯಂ ವಿಮಾನಧಾಳಿ ಎಚ್ಚರಿಕೆ ಕಾರ್ಯಕ್ರಮವನ್ನು ಕೈಕೊ ಡಿದ್ದಾರೆ

ಶತ್ರುವನ್ನೆದುರಿಸಲು ನಾಜಿಗಳು ಕೋಟೆ ಕಟ್ಟುತ್ತಿದ್ದಾರೆ

ರಷ್ಯನ್ ಯುದ್ಧಮುಖದ ಹಿಂಬದಿಯಲ್ಲಿದ್ದ ೧ ರಿಂದ ೧೮ ವಯಸ್ಸಿನ ಜರ್ಮನ್ ಯುವಕರು ದಕ್ಷಿಣ ಫ್ರಾನ್ಸ್ ತೀರದುದ್ದಕ್ಕೂ ಕೋಟೆಕೊತ್ತಳ ನಿರ್ಮಿಸುತ್ತಿ ದ್ದಾರೆಂದು ಜರ್ಮನ್ ರೇಡಿಯೋ ತಿಳಿಸಿದೆ ಯುದ್ಧ ಬಂಧಿಗಳು ಒಂದು ಲಕ್ಷ ಮಂದಿಯ ಕೈಯಲ್ಲಿ, ವಿಮಾ ಧಾಳಿಗೆ ಸಿಕ್ಕಿ ನುಚ್ಚು ನೂರಾಗಿರುವ ಆಸ್ಟ್ರಿಯದ ಬಾಂಬ ಕಾರ್ಖಾನೆಗಳನ್ನು ಪುನರ್ನಿರ್ಮಿಸುವ ಯೋಜನೆಯನ್ನು ಹಿಟ್ಲರ್ ಮುಂಜೂರುಮಾಡಿದ್ದಾನೆಂದು ಹೇಳಲಾಗಿದೆ

ಜಪಾನಿನ ನೂತನ ಸಂಶೋಧನೆ

ರಬ್ಬರ್ ಹಡಗು ಜಪಾನಿನ ನೂತನ ಸಂಶೋಧನೆ ಅದರ ಪ್ರತಿಯೊಂದು ಅಂಗವೂ ರಬ್ಬರಿನದೇ. ಚಲನ ಮೋಟಾರು ಅದರಲ್ಲಿರುವುದಿಲ್ಲ. ಶಕ್ತಿಚಲನೆಯ ಸಣ್ಣ

ಲಚರಗಳು ಈ ಹಡಗನ್ನು ಎಳೆದುಕೊಂಡು ಹೋಗು ವು ಗಡಿಯನ್ನು ಮುಟ್ಟಿದಮೇಲೆ ಈ ಹಡಗಿನಿಂದ ವಿಧ ರಬ್ಬರ್ ವಸ್ತುಗಳನ್ನು ನಿರ್ಮಿಸುವರು ಆಕ್ರಮಿತ ದೇಶಗಳಿಂದ ಮೂಲವಸ್ತುಗಳನ್ನು ಜಪಾನಿಗೆ ಸಾಗಿ ವುದಕ್ಕಾಗಿ ಈ ಹಡಗನ್ನು ನಿರ್ಮಿಸಲಾಯಿತೆಂದು ಪಾನ್ ಸುದ್ದಿ ಸಂಸ್ಥೆ ತಿಳಿಸುತ್ತದೆ

ಸ್ವೀಕಾರ

ಬೆಳಗಾಂವ ಡಿ|| ತೇರದಾಳ ಗ್ರಾಮದಲ್ಲಿರುವ ಮ|| ಾ|| ಮಹಾಲಿಂಗಪ್ಪ ಸಬರದ ಇವರ ಪುತ್ರ ಚಿ|| ವೀರ ಂಗಪ್ಪನಿಗೆ ಮ|| ರಾ|| ಬಾಳಪ್ಪ ಬಾಳಿ ಉರ್ಫ ಹಾವೇರಿ ುಕ್ಕಾಂ ಮುನ್ನೊಳ್ಳಿ ಇವರ ಪುತ್ರಿ ಚಿ|| ಸೌ|| ಕಮಲಾ ಾಯಿಯನ್ನು ಕೊಟ್ಟು ನೆರವೇರಿಸಿದ ವಿವಾಹ ಸಮಯ ಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾ ಯಿಗಳು, ರಬಕವಿ ಗ್ರಾಮದಲ್ಲಿರುವ ಮ|| ರಾ| ಮಹಾ ಲಿಂಗಪ್ಪ ನಾಶೀ ಇವರಿಗೆ ತೇರದಾಳದಲ್ಲಿರುವ ಮ|| ರಾ|| ಎರುಲಿಂಗಪ್ಪ ಪಟ್ಟಣಶೆಟ್ಟಿ ಇವರ ಪುತ್ರಿಯನ್ನು ಕೊಟ್ಟು ರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ೂಪಾಯಿ, ತೇರದಾಳದಲ್ಲಿರುವ ಮ|| ರಾ|| ಗುರುಬಸಪ್ಪಾ ಾಲಿ ಇವರಿಗೆ ಮ|| ರಾ|| ಬಸಟ್ಟೆಪ್ಪ ಹಂಜಿ ಇವರ ುತ್ರಿ ಚಿ|| ಸೌ|| ಅನುಸೂಯಾ ಬಾಯಿಯನ್ನು ಕೊಟ್ಟು ರವೇರಿಸಿದ ವಿವಾಹ ಸಮಯದಲ್ಲಿ ಸಮರ್ಪಿಸಿದ 2 ರೂ ಳು ಒಟ್ಟು 5 ರೂಪಾಯಿಗಳು ಶ್ರೀ| ಷ|| ಬ್ರ|| ಮದರ ಂಡಿ ಹಿರೇಮಠದ ಚರಮೂರ್ತಿಸ್ವಾಮಿಗಳ ದ್ವಾರಾ ಲ್ಪಿರುತ್ತವೆ

ಬೆಂಗಳೂರುನಗರದಲ್ಲಿರುವ ಮ|| ರಾ|| ದಿಬ್ಬೂರು ರ್ ವೀರಪ್ಪನವರ ಪುತ್ರಿಯ ವಿವಾಹ ಸಮಯದಲ್ಲಿ ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿ ುತ್ತು ಮೊ| ಕಾ|| ಮ| ಪುಟ್ಟಬಸಪ್ಪನವರ ದ್ವಿತೀಯ ುತ್ರ ಚಿ ನೀಲಕಂಠಪ್ಪನ ವಿವಾಹ ಸಮಯದಲ್ಲಿ ಮರ್ಪಿಸಿದ 2 ರೂಪಾಯಿ ಒಟ್ಟು 4 ರೂಪಾಯಿಗಳು ಬೆಂಗಳೂರು ಸಿಟಿಯಲ್ಲಿರುವ ಮ|| ರಾ|| ಸರಾಫ್ ಬಿ ಸಪ್ಪನವರ ದ್ವಾರಾ ತಲ್ಪಿರುತ್ತವೆ

ಒಣ್ಣಾರಿ ಡಿ| ಹೂವಿನಹಡಗಲಿಯಲ್ಲಿರುವ ಮ|| ರಾ|| ಾಪ್ಪಿನ ಚೆನ್ನಪ್ಪನವರ ಪುತ್ರಿ ಚಿ|| ಸೌ|| ಗುಂಡಮ್ಮನನ್ನು ಜಾನು ಇಲಾಖಾ ಗುದ್ದುನೂರು ಗ್ರಾಮದಲ್ಲಿರುವ ಮ|| ರಾ|| ಅಂಗಡಿ ಪರಪ್ಪನವರ ಪುತ್ರ ಚಿ| ಗವಿಸಿದ್ದಪ್ಪ ಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ರೆಹಂಚಿನಾಳ ಹಿರೇಮಠದ ವೇ|| ರುದ್ರಯ್ಯನವರಿಂದ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿ ಳು ಗುರುಶಂಕರ ಶ್ರೀಯುತ ಸೊಪ್ಪಿನ ಗುರುಲಿಂಗಪ್ಪ ವರ ದ್ವಾರಾ ತಲ್ಪಿರುತ್ತವೆ

ಕೃಷ್ಣರಾಜನಗರದ ತಾಲೂಕು ಕಾರಗಲ್ಲಿ ಕೊಪ್ಪಲು ಗ್ರಾಮದಲ್ಲಿರುವ ಮ|| ರಾ|| ಚಿಕ್ಕವೀರತ್ತಪ್ಪನವರ ಪುತ್ರಿ ಚಿ|| ಸೌ|| ವೀರಾಜಮ್ಮನನ್ನು ಇದೇ ತಾಲೂಕು ಆಡ ೂರು ಗ್ರಾಮದ ಚಿ|| ಪಟೇಲ ಸಿದ್ಧಲಿಂಗಪ್ಪನೆಂಬ ರನಿಗೆ ಕೊಟ್ಟು ನೆರವೇರಿಸಿದ ವಿವಾಹ ಸಮಯದಲ್ಲಿ ಪ್ರಭಾ ಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂಪಾಯಿ ಳು ಮ|| ರಾ|| ಬಿ ವೀರಣ್ಣನವರ ದ್ವಾರಾ ತಲ್ಪಿರುತ್ತವೆ

ಹುಬ್ಬಳ್ಳಿಯಲ್ಲಿರುವ ವೇ|| ಚನ್ನಯ್ಯನವರು ಘುಮ ಾಬಾದಿಮಠ ಇವರ ಪುತ್ರಿ ವೀರವ್ವನು ಶಿವಾಧೀನಳಾದ ಾಲಕ್ಕೆ ವೇ|| ಹಿರೇಮಠದ ಸೋಮನಾಥಯ್ಯನವರು ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿ 4 ಆಣೆ ಳು ವೇ|| ನಂದಿಕೇಶ್ವರ ಮಠದ ವಿರೂಪಾಕ್ಷಯ್ಯನವರ ದ್ವಾರಾ ತಲ್ಪಿರುತ್ತದೆ

ಸಾಂಗಲಿ ಸಂಸ್ಥಾನಕ್ಕೆ ಸೇರಿದ ಮಂಗಳವೇಢೆ ಗ್ರಾಮ ದಲ್ಲಿರುವ ಹಿರೇಮಠಕ್ಕೆ ಪಟ್ಟಾಧಿಕಾರವು ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಬಾರ್ಶಿ ಶ್ರೀ ಪರಾಂಡಕರ ಸ್ವಾಮಿಗಳ ವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಬ್ರಹ್ಮವಿಚಾರ ಅಗತ್ಯವೆ?

ವೇ| ಮಲ್ಲಿಕಾರ್ಜುನಾರಾಧ್ಯ ರಾಣೀಬೆನ್ನೂರು ಹುಲೇಮಠ

ಬ್ರಹ್ಮವಿಚಾರ ಅಗತ್ಯವೆ? ಎಂಬದೊಂದು ದೊಡ್ಡ ಸಂದೇಹ ಒಂದಿದೆ ಬ್ರಹ್ಮವಸ್ತುವಿನ ವಿಚಾರವಾಗಿ ವಿಚಾರವೇ ಅಗತ್ಯವಿಲ್ಲವೆಂದು ತೋರುತ್ತದೆ ಏಕೆಂದರೆ ಯಾವ ವಿಷಯ ಸಂಶಯಾಸ್ಪದವಾಗಿವೆಯೋ, ಆ ವಿಷಯವು ವಿಚಾರಕ್ಕೆ ಅರ್ಹವಾದುದು. ಬ್ರಹ್ಮವಸ್ತು ವಿಷಯವು ಸಂದೇಹಾಸ್ಪದವಾಗಿದ್ದರೆ ಅದೂ ವಿಚಾರಾರ್ಹವಾದುದೇ ಸರಿ. ಸಿದ್ಧಾಂತವಾಗಿರುವ ವಿಷಯದಲ್ಲಿ ವೃಥಾ ಸಂಶಯವನ್ನೇಕೆ ಕಲ್ಪನೆಮಾಡಬೇಕು "ಸತ್ಯಂ ಜ್ಞಾನಮನಂತಂ ಬ್ರಹ್ಮ" ಎಂದು ಬ್ರಹ್ಮಸ್ವರೂಪವು ಸಿದ್ಧಾಂತವಾಗಿಯೇ ಇದೆ ಹೀಗೆ ಬ್ರಹ್ಮವಸ್ತು ಸತ್ಯವೂ ಜ್ಞಾನವೂ ಅನಂತವೂ ಆದುದೆಂದು ನಿರ್ದಿಷ್ಟವಾಗಿ ಗೊತ್ತಾಗಿರುವಾಗ ಸಂದೇಹವಾದ ವಿಷಯವಾವುದು? ಈ ಅರ್ಥವನ್ನು ಮನನ ಮಾಡಿಕೊಂಡರೆ ಸಾಕಾಗಿದೆ ಇದಕ್ಕೆ ವಿಚಾರ ಇನ್ನೇನು ಬೇಕು ?

ವಾಚಕರೆ, ಹಾಗಾದ ಪಕ್ಷದಲ್ಲಿ ವೇದಾಂತ ವಿಚಾರದಲ್ಲಿ ಅನೇಕಾನೇಕ ಗ್ರಂಥಗಳು ಹೊರಟಿರುವುದು ಕೇವಲ ಅನವಶ್ಯಕವೆಂದು ಸಾಧಿಸಬಹುದಲ್ಲವೆ? ಮತ್ತು ನಮ್ಮ ಪೂರ್ವಿಕರ ವಿಚಾರ ಚಾತುರ್ಯವೆಲ್ಲಾ ವೃಥಾ ಕಂಠಶೋಷಣವೆಂದೂ ತರ್ಕಿಸಬಹುದಲ್ಲವೆ? ಸ್ಥೂಲಮಾರ್ಗದಲ್ಲಿ ನೋಡಿದರೆ ವೇದಾಂತ ವಿಚಾರವು ಅನವಶ್ಯಕವಾಗಿ ತೋರಿದರೂ ಸೂಕ್ಷ್ಮಮಾರ್ಗದಲ್ಲಿ ನೋಡಿದರೆ ಅದು ಅಗತ್ಯವಾಗಿ ಕಂಡುಬರುವುದು "ಅಯಮಾತ್ಮಾ ಬ್ರಹ್ಮ" ಎಂಬ ಶ್ರುತ್ಯುಕ್ತಿಯಂತೆ ಬ್ರಹ್ಮವಸ್ತುವನ್ನು ಆತ್ಮಶಬ್ದದಿಂದಲೂ ಕರೆಯುವುದುಂಟು ಬ್ರಹ್ಮ ಶಬ್ದವನ್ನು ಪಯೋಗಿಸುವಾಗ ಸಂದೇಹ ಉಂಟಾಗದೆ ಹೋದರೂ ಆತ್ಮಶಬ್ದವನ್ನು ಪಯೋಗಿಸುವಾಗ ಅಪಾರವಾದ ಸಂದೇಹಕ್ಕೆ ಅವಕಾಶವುಂಟಾಗುತ್ತವೆ ಆತ್ಮಶಬ್ದಕ್ಕೆ 'ತಾನು' ಎಂಬ ಮಾತು ಬಹುಬೇಗ ಶರೀರಕ್ಕೆ ಅನ್ವಯಿಸುವುದೇ ಸಾಮಾನ್ಯಜನರಲ್ಲಿ ರೂಢಿಗೆ ಬಂದಿದೆ "ಅಯಮಾತ್ಮಾ" ಎಂಬ ಶ್ರುತಿಗೆ ಅರ್ಥಮಾಡುವಾಗ ವಿವೇಕಹೀನರು ಕಪ್ಪೇಚಿಪ್ಪನ್ನು ಬೆಳ್ಳಿಯೆಂದು ತಿಳಿಯುವಂತೆ ಅಸದ್ರೂಪವೂ ಜಡರೂಪವೂ ಮತ್ತು ದುಃಖರೂಪವೂ ಆದ ಶರೀರವನ್ನು ಸದ್ರೂಪವೂ ಚಿದ್ರೂಪವೂ ಆನಂದರೂಪವೂ ಆದ ಬ್ರಹ್ಮವೆಂದು ಮೋಸಹೋಗುವರು ಶರೀರಾಭಿಮಾನವು ಮತ್ತಷ್ಟು ಹೆಚ್ಚುವುದು ಅಮಾವಾಸ್ಯೆಯ ಕತ್ತಲೆಯ ಜತೆಗೆ ವರ್ಷಾಕಾಲದ ಮೇಘಾವರಣವೂ ಕೂಡಿಕೊಂಡಂತೆ ಸಹಜವಾದ ಅಜ್ಞಾನದ ಜೊತೆಗೆ ಶ್ರುತಿಯ ಅಪಾರ್ಥವೂ ಸೇರಿ ಅವನನ್ನು ದಿಕ್ಕುಗೆಡಿಸುವುದು ಅನಾತ್ಮವಾದ ಶರೀರವನ್ನು ಆತ್ಮಶಬ್ದ ವಾಚ್ಯವೆಂದು ಅವನು ಎಷ್ಟೆಷ್ಟು ಬಲವತ್ತರವಾಗಿ ತಿಳಿಯುತ್ತ ಹೋಗುತ್ತಾನೊ ಮೋಕ್ಷವು ಅವನ ಭಾಗಕ್ಕೆ ಅಷ್ಟಷ್ಟು ಹಿಂದುಳಿಯುವುದು ಅಯ್ಯೋ! ಕ್ಷಣಕ್ಕೊಂದೊಂದು ಬಗೆಯ ವಿಕಾರವನ್ನು ಹೊಂದುತ್ತ ಕೊನೆಗೆ ರೂಪವಳಿದು ಹೋಗುವ ಶರೀರವು ಅಸದ್ರೂಪವಲ್ಲದೆ ಸದ್ರೂಪವೆನಿಸಿಕೊಂಡೀತೆ? ಚಿಕ್ಕಂದಿನಿಂದಲೂ ವಿಧವಿಧವಾದ ಭೋಗಗಳನ್ನನುಭವಿಸಿ ಅನೇಕರಿಂದ ಉಪಚಾರಗಳನ್ನು ಮಾಡಿಸಿಕೊಂಡು ಅಂತ್ಯಕಾಲದಲ್ಲಿ "ಅಯ್ಯೊ, ನಂಬಿದವರ ತಲೆಯಮೇಲೆ ಕಲ್ಲನ್ನೆಳೆದು ಹೋಗುವೆಯ ?' ಎಂದು ಬಂಧುಬಾಂಧವರು ಎಷ್ಟು ಎದೆಯೊಡೆದುಕೊಂಡರೂ ಮಿಸುಕದೆ ಸ್ತಂಭದಂತೆ ಬಿದ್ದಿರುವ ಶರೀರವು ಜಡರೂಪವಲ್ಲದೆ ಚಿದ್ರೂಪವೆನಿಸಿಕೊಂಡೀತೆ? ಆಲಸ್ಯದಿಂದಲೋ- ಮುಪ್ಪಿನಿಂದಲೋ ರೋಗದಿಂದಲೋ- ವ್ರಣದಿಂದಲೋ- ಕುರೂಪಿನಿಂದಲೋ- ಯಾವಾಗಲೂ ಯಾವುದಾದರೊಂದು ಬಗೆಯ ಕೊರತೆಯನ್ನು ಅನುಭವಿಸುತ್ತಿರುವ ಶರೀರವು ದುಃಖರೂಪವಲ್ಲದೆ ಆನಂದರೂಪವೆನಿಸಿಕೊಂಡೀತೆ? ಹೀಗೆ ಆತ್ಮಶಬ್ದ ವಾಚ್ಯವಾದ ವಿಷಯವು ಎಷ್ಟು ಮಾತ್ರಕ್ಕೂ ಅಸದ್ರೂಪವೂ ಜಡರೂಪವೂ ದುಃಖರೂಪವೂ ಆದ ಶರೀರವಲ್ಲವೇ ಅಲ್ಲವೆಂದೂ, ಸದ್ರೂಪವೂ ಚಿದ್ರೂಪವೂ ಆನಂದರೂಪವೂ ಆದ ಬ್ರಹ್ಮವೇ ಎಂದೂ ನಿಶ್ಚಯ ಜ್ಞಾನವುಂಟಾಗುವುದಕ್ಕಾಗಿ ವಿಚಾರಮಾಡಬೇಕು

ಆತ್ಮಶಬ್ದದಿಂದುಂಟಾಗುವ ಭ್ರಮೆಯಿಂದ ಹೊರತು ಬ್ರಹ್ಮಜ್ಞಾನ ಸಿದ್ಧಿಸದಂತಾಗುವುದಿಲ್ಲ. ಆತ್ಮಶಬ್ದಾರ್ಥವೇ ಪ್ರಕೃತ ಸಂಶಯಾಸ್ಪದವಾಗಿ ತೋರಿದ ವಿಷಯ ಆ ಸಂಶಯವು ವಿಚಾರವಿಲ್ಲದೆ ನಿವಾರಣೆಯಾಗುವುದಿಲ್ಲ ಆದುದರಿಂದಲೇ "ಆತ್ಮಾವಾ ಅರೇದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ" ಎಂದು ಶ್ರುತಿಯು ಸಾರುತ್ತಿರುವುದು. ಆತ್ಮದರ್ಶನ ಫಲವನ್ನು ಉದ್ದೇಶಮಾಡಿಯೇ ಅದಕ್ಕೆ ಸಾಧಕವಾಗಿ ಶ್ರವಣಮನನ ನಿದಿಧ್ಯಾಸಗಳು ಉಕ್ತವಾಗಿವೆ ಶ್ರವಣವೆಂದರೆ ವೇದಾಂತಾರ್ಥವೆಲ್ಲಾ ಬ್ರಹ್ಮೈಕ್ಯಕ್ಕೇನೇ ಅನ್ವಯಿಸುವುದೆಂದು ನಿಶ್ಚಯಿಸುವುದಕ್ಕೆ ಅನುಕೂಲವಾದ ವಿಚಾರ

ಹೀಗೆ ಬ್ರಹ್ಮ ಸಾಕ್ಷಾತ್ಕಾರಕ್ಕೆ ವಿಚಾರವು ಮೊದಲನೆಯ ಸಾಧನ ಆದುದರಿಂದ ಬ್ರಹ್ಮವಿಚಾರ ಮಾಡಬೇಕಾದುದಗತ್ಯ

ವಿವಾಹ ಮಹೋತ್ಸವ, ನಿಡೋಣಿ

ಹೊಳೆನರಸೀಪುರದ ತಾಲೂಕು ನಿಡೋಣಿ ಗ್ರಾಮದ ಮಾಜಿ ಪಟೇಲ ಲಿಂಗಪ್ಪನವರು ತಮ್ಮ ಪುತ್ರಿ ಚಿ|| ಸೌ|| ಸಾವಿತ್ರಮ್ಮನನ್ನು ಕೃಷ್ಣರಾಜನಗರ ತಾಲೂಕು ಕಾರುಗಳ್ಳಿ ಕೊಪ್ಪಲು ಗ್ರಾಮದಲ್ಲಿರುವ ಮ||ರಾ|| ಬಿ ವೀರಣ್ಣನವರ ಪುತ್ರ ಚಿ|| ಬಿ ಶಿವಪ್ಪ ಜನರಲ್ ಮರ್ಚೆಂಟ್ ಇವರಿಗೆ ಕೊಟ್ಟು ವಿಧಿಪೂರ್ವಕವಾಗಿ ಕನ್ಯಾದಾನಮಾಡಿ ವಿವಾಹವನ್ನು ವಿಜೃಂಭಣೆಯಿಂದ ನೆರವೇರಿಸಿದರು ಈ ವಿವಾಹ ಕಾರ್ಯವು ಸೋಮನಹಳ್ಳಿ ಮಠದ ವೇ|| ಶಿವಲಿಂಗಾರಾಧ್ಯರ ಪೌರೋಹಿತ್ಯದಲ್ಲಿ ವಿಧ್ಯುಕ್ತವಾಗಿ ನೆರವೇರಿತು ಮ|| ರಾ|| ಪಟೇಲ್ ಬಸಪ್ಪನವರು ಹಳ್ಳಿಯಲ್ಲಿದ್ದರೂ ಸುಧಾರಕರಾಗಿದ್ದುಕೊಂಡು ಕನ್ಯಾದಾನಮಾಡಿ ಸರ್ವರ ಪ್ರೀತಿಗೂ ಪಾತ್ರರಾದರು ಈ ಕಠಿನಕಾಲದಲ್ಲಿಯೂ ಸಹಾ ವಿಶೇಷವಾಗಿ ದ್ರವ್ಯವನ್ನು ವೆಚ್ಚಮಾಡಿ ಸರ್ವರನ್ನು ಮಿಷ್ಟಾನ್ನದಿಂದ ತೃಪ್ತಿಪಡಿಸಿದರು ಈ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ 2 ರೂಪಾಯಿಗಳನ್ನು ಸಮರ್ಪಿಸಿದರು

ಓರ್ವ ಪ್ರತ್ಯಕ್ಷದರ್ಶಿ

ತಿದ್ದುಪಡಿಗಳು

ಕಳೆದವಾರ ನಮ್ಮ ಪತ್ರಿಕೆಯಲ್ಲಿ ಸೊಲ್ಲಾಪುರದಲ್ಲಿರುವ ಚವ್ಹಾಣರ ಮನೆಯಲ್ಲಿ ನೆರವೇರಿದ ವಿವಾಹ ಮಹೋತ್ಸವ ಸಂಬಂಧವಾದ ಲೇಖದಲ್ಲಿ ಬಾರ್ಶಿನಗರದ ಶ್ರೀಮತಿ ಶಿವಗಂಗಾಬಾಯಿ ಕಥಲೆ ಇವರು ಸೊಲ್ಲಾಪುರದಲ್ಲಿರುವ ನಾನಾ ಸಂಸ್ಥೆಗಳಿಗೆ ಸಹಾಯ ಮಾಡಿದರೆಂದು ಪ್ರಕಟವಾಗಿದೆ ಆ ಸಹಾಯವು ಅವರದಾಗಿರದೆ ಮ|| ರಾ|| ಶಿವಶಂಕರಪ್ಪಾ ಚವ್ಹಾಣ ಇವರಿಂದಾಗಿರುವದೆಂದು ಓದಿಕೊಳ್ಳಬೇಕು

ಕಳೆದವಾರ ಪತ್ರಿಕೆಯ ಸ್ವೀಕಾರದಲ್ಲಿಯೂ ಮತ್ತು ವಿವಾಹಮಹೋತ್ಸವ ಎಂಬ ಲೇಖದಲ್ಲಿಯೂ ವಿಜಾಪುರ ಡಿ|| ಮುದ್ದೇಬಿಹಾಳ ಗ್ರಾಮದ ಮ|| ರಾ|| ಬಸಪ್ಪಾ ಚಿನಿವಾರ ಇವರ ಪುತ್ರಿ ಎಂದು ತಪ್ಪು ಬಿದ್ದಿದೆ ಅದನ್ನು ಮ|| ರಾ|| ಸಂಗಪ್ಪಾ ಚಿನಿವಾರ ಇವರ ಪುತ್ರಿ ಎಂದು ಓದಿಕೊಳ್ಳಬೇಕು

ಪಂಡಿತರ ಪ್ರಯಾಣ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಶರೀರದಲ್ಲಿ ಈಗ್ಗೆ 2 ತಿಂಗಳಿಂದಲೂ ವಾತಬಾಧೆ ಉಂಟಾಗಿ ಬಹಳ ತೊಂದರೆಯನ್ನುಂಟುಮಾಡಿದ್ದು ಈಗ ಗುಣವಾಗಿದೆ. ಡಾಕ್ಟರರ ಅಭಿಪ್ರಾಯದ ಮೇರೆಗೆ ಪಂಡಿತರು ಹವಾ ಬದಲಾವಣೆಗಾಗಿ ನಿನ್ನೆ ದಿವಸ ಮದರಾಸಿಗೆ ಪ್ರಯಾಣ ಮಾಡಿದರು ಅವರೊಡನೆ ಪತ್ರವ್ಯವಹಾರ ಮಾಡುವವರು ಈ ಕೆಳಗಿನ ವಿಳಾಸಕ್ಕೆ ಮಾಡಬೇಕು

Pandit Kashinathsastry,
C/o Dr. M N Channabasappa,
M.B.B.S.,
Rayapuram Hospital, Madras.

|| ಶಿ ||

ಶ್ರೀಕರಭಾಷ್ಯವು ನಮ್ಮದು

ಶರಣಸಂದೇಶದ ಸಂಪಾದಕರ ಸ|| ಕ್ಕೆ

ಮಹಾಶಯರೇ, ನಿಮ್ಮ 21-6-43ನೇ ಪತ್ರಿಕೆಯ ಸಂಚಿಕೆಯಲ್ಲಿ ಶ್ರೀಮಾನ್ ಟಿ ಎಚ್ ಸದಾಶಿವಯ್ಯನವರು ಎಮ್ಮ ಅಧ್ಯಕ್ಷತೆಯಲ್ಲಿ ವೀರಶೈವಸಾಹಿತ್ಯ ಮತ್ತು ಸಂಸ್ಕೃತಿ ಸಂಬಂಧವಾಗಿ ದಾವಣಗೆರೆಯ ಶ್ರೀ ಶಿವಯೋಗೀಶ್ವರ ಆಶ್ರಮದಲ್ಲಿ ಮಾಡಿದ ಭಾಷಣದಲ್ಲಿ, (1) ವೀರಶೈವಶರಣರು ಉಪನಿಷತ್ ಮುಂತಾದವುಗಳ ಹಂಗಿಲ್ಲದೆ ತಮ್ಮ ಅನುಭವವನ್ನು ಸಾರಿದ್ದಾರೆಂತಲು, (2) ನಾವು ಓದಿನೋಡಿದ್ದರಲ್ಲಿ ಶ್ರೀಕರಭಾಷ್ಯವು ಮಹಾಪಂಡಿತರಾದ ಪ್ರಾಚೀನ ಶ್ರೀಪತಿಪಂಡಿತರಿಂದ ರಚಿತವಾಗದೆ 30 ವರ್ಷದ ಹಿಂದೆ ಇದ್ದ ಒಬ್ಬ ಶ್ರೀಪತಿಪಂಡಿತರಿಂದ ರಚಿಸಲ್ಪಟ್ಟಿರುತ್ತೆಂತಲು ಮತ್ತು (3) ಶ್ರೀಕರಭಾಷ್ಯದಲ್ಲಿ ವೀರಶೈವನು ಶಿಖಾಯಜ್ಞೋಪವೀತಧಾರಿಯಾಗಬೇಕೆಂದೂ, ಈತನ ಅಂತ್ಯಸಂಸ್ಕಾರವು ದಹನವೆಂದ ಹೇಳಿರುವದರಿಂದ ಸದರೀ ಗ್ರಂಥವು ವೀರಶೈವರದಲ್ಲವೆಂತಲು ಹೇಳಿರುತ್ತಾರೆಂದು ಪ್ರಕಟವಾಗಿದೆ

ಒಂದು ವಿಷಯದ ಜ್ಞಾನ ಅಂದರೆ ಅನುಭವವಾಗಬೇಕಾದರೆ ಷಟ್ಪ್ರಮಾಣಗಳಲ್ಲಿ ಯಾವುದಾದರೂ ಒಂದು ಪ್ರಮಾಣವು ಅವಶ್ಯಕವಾಗಿರುತ್ತದೆ ಅಂದರೆ ಪರ್ವತದಲ್ಲಿರತಕ್ಕ ಅಗ್ನಿಯ ಜ್ಞಾನ ಅಂದರೆ ಅನುಭವವು ಪ್ರತ್ಯಕ್ಷ ಪ್ರಮಾಣದಿಂದ (ಅಂದರೆ ನೇತ್ರೇಂದ್ರಿಯದಿಂದ ನೋಡುವದರಿಂದ)ಆಗಲಿ, ಅನುಮಾನ ಪ್ರಮಾಣದಿಂದ (ಅಂದರೆ ಪರ್ವತದಲ್ಲಿ ಹೊಗೆಯಾಡುವದನ್ನು ನೋಡಿ ಅಗ್ನಿ ಇದೆಯೆಂದು ತಿಳಿಯುವದರಿಂದ)ಆಗಲಿ, ಶಬ್ದಪ್ರಮಾಣದಿಂದ (ಅಂದರೆ ಆಪ್ತರಾಗಿರತಕ್ಕವರ ಹೇಳಿದ್ದರಿಂದ)ಆಗಲಿ ಅಥವಾ ಸಾದೃಶ್ಯಪ್ರಮಾಣದಿಂದ (ಅಂದರೆ ಮನೆಯಲ್ಲಿರತಕ್ಕ ಅಗ್ನಿಯ ಹೋಲಿಕೆಯಿಂದ)ಆಗಲಿ ಆಗಬೇಕೇ ಹೊರತು ಅನ್ಯಥಾ ಆಗುವದಿಲ್ಲ ಉಳಿದ ಎರಡು ಪ್ರಮಾಣಗಳಲ್ಲಿ ಅರ್ಥಾಪತ್ತಿಪ್ರಮಾಣದಿಂದ ನೋಡಿದ ಅಥವಾ ಕೇಳಿದ ವಿಷಯದ ವ್ಯತಿರೇಕಜ್ಞಾನವಾಗುವದರಿಂದಲು ಮತ್ತು ಅನುಪಲಬ್ಧಿಪ್ರಮಾಣದಿಂದ ವಿಷಯದ ಅಭಾವದ ಜ್ಞಾನವಾಗುವದರಿಂದಲೂ ಅಗ್ನಿಯ ಜ್ಞಾನಕ್ಕೆ ಈ ಎರಡು ಪ್ರಮಾಣಗಳು ಉಪಯೋಗವಾಗುವದಿಲ್ಲ ಆದ್ದರಿಂದ ಯಾರಿಗಾದರು ತಮ್ಮ ಸ್ವರೂಪದ ಜ್ಞಾನವಾಗಬೇಕಾದರೆ ಆ ಪ್ರಮಾಣಗಳ ಪೈಕಿ ಶಬ್ದಪ್ರಮಾಣದಿಂದ (ಅಂದರೆ ಗುರುವಿನ ಬೋಧೆಯಿಂದ) ಆಗಬೇಕೇ ಹೊರತು ಅನ್ಯಥಾ ಆಗುವದಿಲ್ಲ

'ಶಿವನ ಚಿತ್ಕಳೆಯಾದ ತನ್ನನು ಶಂಭುಲಿಂಗವೆಂದರುಹಿದ ಗುರುಚರಣವನು' ಎಂಬುದಾಗಿ ಶ್ರೀಮನ್ನಿಜಗುಣಶಿವಯೋಗಿಗಳು ಅಪ್ಪಣೆಕೊಟ್ಟಿರುವಂತೆ 'ತತ್ತ್ವಮಸಿ' ಎಂಬ ಮಹಾವಾಕ್ಯದ ಅರ್ಥವಾದ 'ಶಿವನೇ ನೀನು' ಎಂಬುದನ್ನು ಶ್ರುತಿಪ್ರಮಾಣ (ಅಂದರೆ ಉಪನಿಷದ್ವಾಕ್ಯ)ಗಳಿಂದಲು ಮತ್ತು ಯುಕ್ತಿ (ಅಂದರೆ ಲೌಕಿಕ ದೃಷ್ಟಾಂತ)ಗಳಿಂದಲು ಶಿಷ್ಯ ಅನುಭವಕ್ಕೆ ಬರುವಂತೆ ಬೋಧೆಯನ್ನು ಮಾಡತಕ್ಕವನೇ ಗುರುವು. ಶಿವಶರಣರು ತಮ್ಮ ಗುರುಗಳಿಂದ ಉಪನಿಷದ್ವಾಕ್ಯಗಳ ಬೋಧೆಯನ್ನು ಹೊಂದದೆ ತಮ್ಮ ಸ್ವರೂಪಾನುಭವವನ್ನು ಹೊಂದಿದರು ಎಂಬುವಾಗಿ ಹೇಳುವದಕ್ಕೆ ಶಾಸ್ತ್ರಕ್ಕೂ, ಯುಕ್ತಿಗೂ ಮತ್ತು ಅನುಭವಕ್ಕೂ ವಿರೋಧವಾಗುವದಲ್ಲದೆ ಅವರಿಗೆ ಅಷ್ಟಾವರಣಗಳೇ ಇರಲಿಲ್ಲವೆಂದು ಹೇಳಬೇಕಾಗುತ್ತದೆ ಏತಕ್ಕೆಂದರೆ ಅಷ್ಟಾವರಣಗಳಲ್ಲಿ ಗುರುವೇ ಮುಖ್ಯನು ಮತ್ತು ಇತರ ಆವರಣಗಳಿಗೆ ಗುರುವೇ ಕಾರಣನು ಆದ್ದರಿಂದ ಶರಣರು ಅಷ್ಟಾವರಣಯುಕ್ತರಾದ್ದರಿಂದ ಅವರು ಉಪನಿಷದ್ವಾಕ್ಯಗಳ ಬೋಧೆಯನ್ನು ತಮ್ಮ ತಮ್ಮ ಗುರುಗಳಿಂದ ಪಡೆದೇ ತಮ್ಮ ಸ್ವರೂಪಾನುಭವವನ್ನು ಹೊಂದಿರಬೇಕು ಅಲ್ಲದೆ ವಚನವಾಙ್ಮಯವನ್ನು ವಿಶೇಷವಾಗಿ ಶೋಧಿಸಿರುವ ರಾವ್ ಬಹದ್ದೂರ್ ಪಿ. ಜಿ. ಹಳಕಟ್ಟಿಯವರು ತಮ್ಮ ವಚನಶಾಸ್ತ್ರಸಾರ ಎಂಬ ಗ್ರಂಥದ ಮೊದಲನೆಯ ಭಾಗದ ಪೂರ್ವಾರ್ಧದ ಪೀಠಿಕೆಯಲ್ಲಿ "ವಚನಕಾರರು ವೇದಾಗಮೋಪನಿಷತ್ತುಗಳಲ್ಲಿಯ ತತ್ತ್ವಗಳನ್ನೇ ತೆಗೆದುಕೊಂಡು ಅವುಗಳನ್ನು ಹೇಗೆ ವ್ಯವಹರಣೆಯಲ್ಲಿ ತರಬೇಕೆಂಬುವದು ವಿಷಯವಾಗಿ ಚೆನ್ನಾಗಿ ಬಿಚ್ಚಿಕೊಟ್ಟಿರುವರು ಅವರ ತತ್ತ್ವಗಳೆಲ್ಲ ವೇದಾಗಮೋಪನಿಷತ್ತುಗಳಿಂದಲೇ ತೆಗೆದುಕೊಂಡವಿರುತ್ತವೆ ಒಂದುವೇಳೆ ಅವರು ಈ ಗ್ರಂಥಗಳನ್ನು ಅಭ್ಯಸಿಸುತ್ತಿದ್ದರೆ, ಅವುಗಳಲ್ಲಿಯ ಉಕ್ತಿಗಳನ್ನು ಹೀಗೆ ತಮಗೆ ಆಧಾರವಾಗಿಟ್ಟುಕೊಂಡು ಎಂದೂ ಅವುಗಳನ್ನು ಉದಹರಿಸುತ್ತಿದ್ದಿಲ್ಲ" ಎಂಬುದಾಗಿ ಹೇಳಿರುತ್ತಾರೆ. ಹೀಗಿರುವಾಗ ಶಿವಶರಣರುಗಳಿಗೆ ಉಪನಿಷತ್ತುಗಳ ಮತ್ತು ಇವುಗಳ ಸಾರಸಾರವಾದ ಶ್ರೀಮದ್ಭಗವದ್ಗೀತೆಯ ಮತ್ತು ಬ್ರಹ್ಮಸೂತ್ರದ ಹಂಗಿಲ್ಲವೆಂದು ಹೇಳುವದು ಸರಿಯಲ್ಲ

ಶ್ರೀಕರಭಾಷ್ಯವು 1893ನೇ ಇಸವಿಯಲ್ಲಿ ಅಂದರೆ 50 ವರ್ಷಗಳ ಹಿಂದೆ ಭೈರವಾರಾಧ್ಯರೆಂಬುವರು ತೆಲುಗು ಅಕ್ಷರದಲ್ಲಿ ಮುದ್ರಣವನ್ನು ಮಾಡಿಸಿರುತ್ತಾರೆ ಅಲ್ಲದೆ ಪ್ರಾಚೀನ ಶ್ರೀಪತಿಪಂಡಿತರ ವಂಶೀಯರಾದ ಮತ್ತು ಈಗ ಸುಮಾರು 300 ವರ್ಷಗಳ ಹಿಂದೆ ಇದ್ದ ಶ್ರೀಬಸವಪಂಡಿತಾರಾಧ್ಯರು ತಾವು ರಚಿಸಿರತಕ್ಕ ತೈತ್ತಿರೀಯೋಪನಿಷತ್, ಮಹಾನಾರಾಯಣೀಯೋಪನಿಷತ್ ಮುಂತಾದವುಗಳ ಭಾಷ್ಯಗಳಲ್ಲಿ ಶ್ರೀಕರಭಾಷ್ಯದ ಪಂಕ್ತಿಗಳನ್ನೇ ಉದಾಹರಿಸಿರುತ್ತಾರೆ ಈ ಬಸವಪಂಡಿತಾರಾಧ್ಯರ ಭಾಷ್ಯಗಳು ಶಾಲಿವಾಹನ ಶಕ 1797ನೇ ವರ್ಷದಲ್ಲಿ ಅಂದರೆ 68 ವರ್ಷಗಳ ಹಿಂದೆ ತೆಲುಗು ಅಕ್ಷರದಲ್ಲಿ ಮುದ್ರಣವಾಗಿವೆ. ಹೀಗಿರುವಾಗ ಶ್ರೀಕರಭಾಷ್ಯವು 30 ವರ್ಷಗಳ ಹಿಂದೆ ಒಬ್ಬ ಶ್ರೀಪತಿಪಂಡಿತರಿಂದ ರಚಿತವಾಗಿದೆಯೆಂದು ಹೇಳುವದು ಕೇವಲ ಹಾಸ್ಯಾಸ್ಪದವಾಗಿರುವದಲ್ಲದೆ, ಶ್ರೀಮಾನ್ ಸದಾಶಿವಯ್ಯನವರು ಹೇಳುವಂತೆ ಆಂಧ್ರದೇಶದ [illegible] ಪಂಡಿತಮಂಡಲಿಯವರು [illegible] ನಾಗಿರುತ್ತಾರೆಂಬುದು ಸಹ ನಂಬಲಿಕ್ಕೆ ಆಸ್ಪದವಾಗಿರುವದಿಲ್ಲ

ಶ್ರೀಮಾನ್ ಸದಾಶಿವಯ್ಯನವರು ಹೇಳಿರುವಂತೆ ವೀರಶೈವನ ಅಂತ್ಯಸಂಸ್ಕಾರವು ದಹನವೆಂದು ಶ್ರೀಕರಭಾಷ್ಯದಲ್ಲಿ ಎಲ್ಲಿಯೂ ಹೇಳಿರುವದಿಲ್ಲ ಅವರು ಹೇಳಿರುವಂತೆ ವೀರಶೈವನಿಗೆ ಶಿಖಾಯಜ್ಞೋಪವೀತಗಳುಂಟೆಂದು ಶ್ರೀಕರಭಾಷ್ಯದಲ್ಲಿ ಹೇಳಿರುವದು ನಿಜ ವೀರಶೈವನಿಗೆ ಶಿಖಾಯಜ್ಞೋಪವೀತಗಳ ಅವಶ್ಯಕತೆಯು ಶ್ರೀಕರಭಾಷ್ಯದಲ್ಲಿಯೇ ಏಕೆ? ವೀರಶೈವರಿಗೆ ಪರಮಪ್ರಮಾಣಭೂತವಾಗಿರುವ ಶಿವಾಗಮಗಳಲ್ಲಿಯೂ ಮತ್ತು ಅನೇಕ ಮಹಾತ್ಮರುಗಳಿಂದ ರಚಿತವಾಗಿರುವ ಪ್ರಾಚೀನಗ್ರಂಥಗಳಲ್ಲಿಯೂ ಘಂಟಾಘೋಷವಾಗಿ ಹೇಳಲ್ಪಟ್ಟಿದೆ ಅಲ್ಲದೆ ಶ್ರೀಕರಭಾಷ್ಯದಲ್ಲಿ ಶ್ರೀಪತಿಪಂಡಿತರು ಬ್ರಹ್ಮಸೂತ್ರಗಳನ್ನು ಶ್ರುತಿಪ್ರಮಾಣ ಮತ್ತು ಯುಕ್ತಿಗಳಿಂದ ವೀರಶೈವಮತಪರವಾಗಿ ಅರ್ಥಮಾಡಿ ವೀರಶೈವಮತತತ್ತ್ವವನ್ನು ಸಿದ್ಧಾಂತಮಾಡಿರುವದರಿಂದ ಈ ಸಿದ್ಧಾಂತವು ವೀರಶೈವರಿಗೆ ಮುಖ್ಯಗುರಿಯಾಗಿರತಕ್ಕ ಮೋಕ್ಷಕ್ಕೆ ಸಾಧಕವಾಗಿರುತ್ತದೆ ಹೀಗಿರುವಾಗ ಶ್ರೀಮಾನ್ ಸದಾಶಿವಯ್ಯನವರು ಶ್ರೀಕರಭಾಷ್ಯವು ವೀರಶೈವಮತಪರವಾದದ್ದಲ್ಲವೆಂದು ಹೇಳಿರುವದನ್ನು ನೋಡಿದರೆ ಇವರ ಧೈರ್ಯಕ್ಕೆ ಎಣೆಯೇ ಇಲ್ಲವೆಂದು ಹೇಳಬೇಕಾಗಿದೆ

ಶ್ರೀಮಾನ್ ಸದಾಶಿವಯ್ಯನವರಂತೆ ಈ ಮೊದಲು ಕೆಲವರು ಶ್ರೀಕರಭಾಷ್ಯದಲ್ಲಿ ಷಟ್ಸ್ಥಲಗಳ ಚನ್ನಾಗಿ ಪ್ರತಿಪಾದಿಸಲ್ಪಟ್ಟಿದ್ದರೂ ಅವುಗಳ ಪ್ರತಿಪಾದಿಸಲ್ಪಟ್ಟಿಲ್ಲವೆಂದು ಅಪಪ್ರಚಾರವನ್ನು ಮಾಡಿದ್ದರು ಈ ರೀತಿಯಾಗಿ ಗ್ರಂಥಗಳನ್ನು ಆನುಪೂರ್ವಿಯಾಗಿ ಪರಿಶೀಲಿಸದೆ ಮತ್ತು ಅದರಲ್ಲಿರತಕ್ಕ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ ವೀರಶೈವರಿಗೆ ಪ್ರಾಣಸ್ವರೂಪವಾಗಿರುವ ಆ ಮಹಾಗ್ರಂಥದ ಒಗ್ಗೆ ಅಲ್ಲದ ಸಲ್ಲದ ಅಪವಾದಗಳನ್ನು ಹರಿಸಿ ಅಪಪ್ರಚಾರವನ್ನು ಮಾಡುವದು ಯಾರಿಗೂ ಭೂಷಣವಲ್ಲ ಹೀಗೆ ಅಪಪ್ರಚಾರಮಾಡುವವರು ಸಮಾಜಕ್ಕೆ ದೊಡ್ಡ ಕೆಡಕನ್ನುಂಟುಮಾಡಿದ ಹಾಗಾಗುತ್ತದೆ ಆದ್ದರಿಂದ ಇನ್ನುಮುಂದೆ ಯಾರೂ ಇಂತಹ ಅಪಪ್ರಚಾರಮಾರ್ಗದಲ್ಲಿ ತೊಡಗಬಾರದೆಂದು ಆಶಿಸುತ್ತೇನೆ

875, ವಾಣೀವಿಲಾಸ ರೋಡ್ — ಎಂ ಎಸ್ ನಾಗಣ್ಣ,
ಮೈಸೂರು — ವ್ಯವಸ್ಥಾಪಕ,
ತಾ|| 1 7-1943 — ಆತ್ಮವಿಚಾರ ಮಂದಿರ

ಮೈಸೂರು ವೀರಶೈವ ವಿದ್ಯಾವರ್ಧಕ ಫಂಡ್, ಸ್ವೀಕಾರ

(1) ಬೆಂಗಳೂರ ಸಿಟಿ ಚಿಕ್ಕಪೇಟೆ ದಿವಾನ್ ಗುರಪ್ಪನವರ ಗಲ್ಲಿಯಲ್ಲಿರುವ ಮ|| ರಾ|| ಟಿಂಬರ್ ಆರ್ ವೀರಪ್ಪನವರ ಪುತ್ರಿ ಚಿ|| ಸೌ|| ಸಿದ್ಧಗಂಗಮ್ಮ ಎಂಬ ಕನ್ನೆಯನ್ನು ಬೆಂಗಳೂರು ದಂಡಿನಲ್ಲಿರುವ ಮ|| ರಾ|| ಗಂಜಾಂ ಪುಟ್ಟಣ್ಣನವರ ಕುಮಾರ ಚಿ|| ಬಸವರಾಜಪ್ಪನೆಂಬವರಿಗೆ ತಾ|| 6 5 43 ರಲ್ಲಿ ಕೊಟ್ಟು ವಿವಾಹ ಸಮಾರಂಭವನ್ನು ನಡೆಸಿದ ಕಾಲದಲ್ಲಿ ವಧುವಿನ ಕಡೆಯವರಿಂದ ಹತ್ತು ರೂಪಾಯಿಗಳು

(2) ಬೆಂಗಳೂರು ಸಿಟಿ ಅಕ್ಕಿಪೇಟೆ ಜವಳಿ ಅಂಗಡಿ ಮ|| ರಾ|| ಮಲ್ಲಪ್ಪನವರ ಪುತ್ರ ಚಿ|| ರಾಜಶೇಖರನೆಂಬವರಿಗೆ ಸಂತೇಪೇಟೆಯಲ್ಲಿರುವ ಮ|| ರಾ|| ಸಿದ್ದಪ್ಪನವರ ಪುತ್ರಿ ಚಿ|| ಸೌ|| ಶಾರದಮ್ಮ ಎಂಬ ಕನ್ನೆಯನ್ನು ಕೊಟ್ಟು ತಾ|| 13 5-43 ರಲ್ಲಿ ನಡೆದ ವಿವಾಹ ಸಂದರ್ಭದಲ್ಲಿ ಟಿ ಎಸ್ ಆನವಪ್ಪನವರ ಮುಖೇನ ಬಂದದ್ದು ಐದು ರೂಪಾಯಿಗಳು

(3) ಬೆಂಗಳೂರು ಸಿಟಿ ಮೋ|| ಕಾ|| ವ|| ಪುಟ್ಟಬಸವಪ್ಪನವರ ದ್ವಿತೀಯಪುತ್ರ ಚಿ|| ನೀಲಕಂಠಪ್ಪನೆಂಬ ವರನಿಗೆ ಬಿಡದಿ ಮ|| ರಾ|| ಶಿವರುದ್ರಪ್ಪನವರ ದ್ವಿತೀಯಪುತ್ರಿ ಚಿ|| ಸೌ|| ಸರ್ವಮಂಗಳಮ್ಮ ಎಂಬ ಕನ್ನೆಯನ್ನು ತಾ|| 13-5-43 ರಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ವಧುವಿನ ಕಡೆಯಿಂದ ಎರಡು ರೂಪಾಯಿಗಳೂ ವರನ ಕಡೆಯಿಂದ ಎರಡು ರೂಪಾಯಿಗಳು

(4) ಹೊಸಕೋಟೆ [illegible] ಮ|| ರಾ|| ಲೇಟ್ ಎಸ್ ಮುದ್ದಬಸವಶೆಟ್ಟಿ ಪುತ್ರ ಚಿ|| ಎಂ ಶಿವಶಂಕರಯ್ಯ ಎಂಬ ವರನಿಗೂ ಬೆಂಗಳೂರು ಸಿಟಿ ಮ|| ಮುನಿಚನ್ನಪ್ಪನವರ ಪುತ್ರಿ ಚಿ|| ಸೌ|| ಪುಟ್ಟಮ್ಮ ಎಂಬ ವಧುವಿಗೂ ತಾ|| 22-5-43 ರಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ವರನ ಕಡೆಯವರಿಂದ ಮೂರು ರೂಪಾಯಿಗಳೂ ವಧುವಿನ ಕಡೆಯವರಿಂದ ಎರಡು ರೂಪಾಯಿಗಳು .

(5) ಬೆಂಗಳೂರು ಸಿಟಿ ಶ್ರೀರಾಮಪುರದಲ್ಲಿರುವ [illegible] ಪೋಲೀಸ್ ಇನ್ಸ್ಪೆಕ್ಟರ್ ಮ|| ರಾ|| ಬಿ ಭೋಗಪ್ಪನವರ ಪುತ್ರಿ ಚಿ|| ಸೌ|| ಬಿ ಬಸವರಾಜಮ್ಮ ಎಂಬ ವಧುವಿಗೂ ನೆಲಮಂಗಲದ ಶೆಟ್ರು ಗುಬ್ಬಿಯಪ್ಪನವರ ಪುತ್ರ ಚಿ|| ಎಂ. ಜಿ ಚನ್ನಬಸಪ್ಪ ಎಂಬ ವರನಿಗೂ ತಾ|| 21-5 43ರಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ವಧುವಿನ ಕಡೆಯವರಿಂದ ಮೂರು ರೂಪಾಯಿಗಳು ವೇ|| ಎಸ್. ರುದ್ರಯ್ಯನವರ ದ್ವಾರಾ ಬಂದಿರುತ್ತೆ.

(6) ಬೆಂಗಳೂರು ಸಿಟಿ ಚಾಮರಾಜಪೇಟೆ ಪುಂಡಿ ವೇ|| ರುದ್ರಯ್ಯನವರು ತಾವು [illegible] ರೋಡಿನಲ್ಲಿ ಕಟ್ಟಿಸಿದ ತಮ್ಮ ಸ್ವಂತ ಶ್ರೀಕಂಠೇಶ್ವರ ರೈಸ್ ಆಯಿಲ್ ಮಿಲ್ಲಿನ ಪಕ್ಕದಲ್ಲಿ ನೂತನವಾಗಿ ಕಟ್ಟಿಸಿರುವ ರೇಣುಕಭವನದ ಆರಂಭೋತ್ಸವವನ್ನು ತಾ|| 28 5-43ರಲ್ಲಿ ನಡೆಯಿಸಿದ ಕಾಲದಲ್ಲಿ ಈ ಫಂಡಿಗಾಗಿ ಮ|| ರಾ|| ಎಸ್. ಡಿ. ನಂಜುಂಡಯ್ಯನವರ ಮೂಲಕ ಐದು ರೂಪಾಯಿಗಳು ಬಂದಿರುತ್ತೆ

(7) ತರೀಕೆರೆ ಚಿಕ್ಕಾಳೂರ್ ಮ|| ರಾ|| ರುದ್ರಪ್ಪನವರ ಪುತ್ರ ಚಿ|| ಬಸಪ್ಪ ಉರುಫ್ ಶಿವಣ್ಣನೆಂಬ ವರನಿಗೂ ಭದ್ರಾವತಿ ಮ|| ರಾ|| ಮರಿಯಪ್ಪನವರ ಕುಮಾರಿ ಚಿ|| ಸೌ|| ರುದ್ರಾಂಬಾ ಎಂಬ ಕನ್ನೆಗೂ ತಾ|| 2-5 1943 ರಲ್ಲಿ ನಡೆದ ವಿವಾಹ ಕಾಲದಲ್ಲಿ ಸಂಘದ ಫಂಡಿಗಾಗಿ ಬಿ. ಎಸ್. ರಾಚಪ್ಪನವರ ಮೂಲಕ ಎರಡು ರೂಪಾಯಿಗಳು

(8) ಬೆಂಗಳೂರು ಸಿಟಿ ಅರಳೇಪೇಟೆ ಮ|| ರಾ|| ಹಂ. ಬಸಪ್ಪನವರ ದ್ವಿತೀಯ ಪುತ್ರ ಚಿ|| ಜಯಶಂಕರಪ್ಪನೆಂಬ ವರನಿಗೂ ಅರಳೇಪೇಟೆ ಮರ್ಚಂಟ್ ಡಿ ಗಂಗಪ್ಪನವರ ಕುಮಾರಿ ಚಿ|| ಸೌ|| ಹೊನ್ನಮ್ಮನೆಂಬ ವಧುವಿಗೂ ತಾ|| 16-5-43 ರಲ್ಲಿ ಅತ್ತಿಬೆಲೆ ಸಾಹುಕಾರ್ ಶರಭಣ್ಣನವರ ಸ್ವಗೃಹದಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಸಂಘದ ಫಂಡಿಗಾಗಿ ದೇಶದ ದೊಡ್ಡಪೇಟೆ ದೀವಣ್ಣಶೆಟ್ಟರವರ ಮೂಲಕ ಹದಿನೈದು ರೂಪಾಯಿಗಳು

(9) ಬೆಂಗಳೂರು ಸಿಟಿ ಶ್ರೀರಾಮಪುರದಲ್ಲಿರುವ ಮ|| ರಾ|| ದೇಶದ ದೊಡ್ಡಪೇಟೆ ದೀವಣ್ಣ ಶೆಟ್ಟರ ಸಹೋದರ ಚಿ|| ಸೌ|| ಕಾಂತಮ್ಮನೆಂಬ ವಧುವಿಗೂ ತುಮಕೂರಿನಲ್ಲಿರುವ ಮ|| ರಾ|| ಬಳೆ ಸಿದ್ಧಲಿಂಗಶೆಟ್ಟರವರ ಕುಮಾರ ಚಿ|| ನಂದೀಶ್ವರನೆಂಬ ವರನಿಗೂ ತಾ|| 10-6-43 ರಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಸಂಘದ ಫಂಡಿಗಾಗಿ ಅರಳೇಪೇಟೆ ದೇಶದ ರುದ್ರಪ್ಪಶೆಟ್ಟರವರ ಮೂಲಕ ಐದು ರೂಪಾಯಿಗಳು .

(10) ತರೀಕೆರೆ ಲೇಟ್ ಮ|| ರಾ|| ಸೋಗೂರಪ್ಪನವರ ಪುತ್ರ ಚಿ|| ಬಸವರಾಜಯ್ಯನೆಂಬ ವರನಿಗೂ ಬೆಂಗಳೂರು ಕಂಟೋನ್ಮೆಂಟ್ ಮ|| ರಾ|| ಸಿ. ಎಂ. ಮರಿಕಾಮಪ್ಪನವರ ದ್ವಿತೀಯ ಪುತ್ರಿ ಚಿ|| ಸೌ|| ನಾಗಮ್ಮನೆಂಬ ವಧುವಿಗೂ ತಾ|| 13-6-43 ರಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಸಂಘದ ಫಂಡಿಗಾಗಿ ಮ|| ರಾ|| ಸಿ. ಎಂ ಮರಿಕಾಮಪ್ಪನವರಿಂದ ಎರಡು ರೂಪಾಯಿಗಳು

(11) ಬೆಂಗಳೂರು [illegible] ಕೋರ್ಟ್ಸ್ ರೋಡಿನಲ್ಲಿರುವ ಮ|| ರಾ|| ಬಿ ಎಸ್ ರಾಚಣ್ಣನವರ ಪುತ್ರಿ ಚಿ|| ಸೌ|| ಗಂಗಮ್ಮನೆಂಬ ವಧುವಿಗೂ ತರೀಕೆರೆ ಚಿಕ್ಕಾಳೂರ್ ಪಟೇಲ್ ಮ|| ರಾ|| ಬಸಪ್ಪನವರ ಪುತ್ರ ರಾಜಶೇಖರಪ್ಪನೆಂಬ ವರನಿಗೂ ತಾ|| 16 6 43 ರಲ್ಲಿ ನಡೆದ ವಿವಾಹ ಕಾಲದಲ್ಲಿ ಸಂಘದ ಫಂಡಿಗಾಗಿ ಮ|| ರಾ|| ವಿಶ್ವೇಶ್ವರಪುರದಲ್ಲಿರುವ ಬಿ ಎಸ್. ರಾಚಪ್ಪನವರ ಮೂಲಕ ಎರಡು ರೂಪಾಯಿಗಳು

(12) ಬೆಂಗಳೂರು ಸಿಟಿ ಅರಳೇಪೇಟೆ ದೇಶದ ಶೆಟ್ರು ಬಿ. ರುದ್ರಶೆಟ್ಟರವರ ಭಾವಮೈದ ಚಿ|| ಚಂದ್ರಶೇಖರಪ್ಪನೆಂಬ ವರನಿಗೆ ದೊಡ್ಡಬಳ್ಳಾಪುರದ ಮ|| ರಾ|| ಯಜಮಾನ್ ನಂಜಪ್ಪನವರ ಕುಮಾರಿ ಚಿ|| ಸೌ|| ಶಾರದಾಂಬ ಎಂಬ ಕನ್ನೆಯನ್ನು ಕೊಟ್ಟು ತಾ|| 2 -6-43 ರಲ್ಲಿ ನಡೆದ ವಿವಾಹ ಕಾಲದಲ್ಲಿ ಸಂಘದ ಫಂಡಿಗಾಗಿ ವೇ|| ಎಸ್ ರುದ್ರಯ್ಯನವರ ದ್ವಾರ ಐದು ರೂಪಾಯಿಗಳ

ವಿವಾಹ ಮಹೋತ್ಸವ, ಕಾರಗಳ್ಳಿ ಕೊಪ್ಪಲು

ಕೃಷ್ಣರಾಜನಗರದ ತಾಲೂಕು ಕಾರಗಳ್ಳಿ ಕೊಪ್ಪಲು ಗ್ರಾಮದಲ್ಲಿರುವ ಮ|| ರಾ|| ಚಿಕ್ಕವೀರಶೆಟ್ಟಪ್ಪನವರು ತಮ್ಮ ಪುತ್ರಿ ಚಿ|| ಸೌ|| ವೀರಾಜಮ್ಮನನ್ನು ಇದೇ ತಾಲೂಕು ಅಡಗೂರು ಗ್ರಾಮದ ಪಟೇಲ್ ಚಿ|| ಸಿದ್ದಲಿಂಗಪ್ಪನೆಂಬ ವರನಿಗೆ ಕೊಟ್ಟು, ಕನ್ಯಾದಾನವನ್ನು ವಿಜೃಂಭಣೆಯಿಂದ ನೆರವೇರಿಸಿದರು ಈ ವಿವಾಹ ಕಾರ್ಯವು ಸೋಮನಹಳ್ಳಿ ಮಠದ ವೇ|| ಶಿವಲಿಂಗಾರಾಧ್ಯರಿಂದ ವಿಧ್ಯುಕ್ತವಾಗಿ ನೆರವೇರಿಸಲ್ಪಟ್ಟಿತು ಈ ಕಾರ್ಯಕ್ಕೆ ಲೋಕಸೇವಾನಿರತ ಬಿ ಸಿದ್ದಲಿಂಗ ಶೆಟ್ಟರೂ ಪಟೇಲ್ ಚನ್ನಪ್ಪನವರು ಚಂದಗಾಲ ಮಾಜಿ ಪಟೇಲ್ ಲಿಂಗಪ್ಪನವರೂ ವಾಳ ಹಳ್ಳಿ ಪಾಪಣ್ಣನವರೂ ಇವರೇ ಮೊದಲಾದ ಪ್ರಮುಖರೂ ಆಗಮಿಸಿ ಶೋಭೆಯನ್ನುಂಟುಮಾಡಿದರು ಕಾರ್ಯದರ್ಶಿಗಳಾದ ಮ|| ರಾ|| ಹಲಗಪ್ಪನವರು ಬಂ ಜನರ ಆದರಾತಿಥ್ಯವನ್ನು ವಿಶೇಷ ವಿಚಕ್ಷಣತೆಯಿಂ ನೆರವೇರಿಸಿದರು ಮ|| ರಾ|| ವೀರಶೆಟ್ಟಪ್ಪನವರು ಇಂ ಕಠಿನ ಕಾಲದಲ್ಲಿಯೂ ವಿಶೇಷ ಧನವ್ಯಯಮಾಡಿ ಸರ್ವ ರನ್ನೂ ಮಿಷ್ಟಾನ್ನದಿಂದ ಸಂತೋಷಪಡಿಸಿದರು ಈ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ 2 ರೂಗಳು ಸಮರ್ಪಿ ಸಲ್ಪಟ್ಟವು.

ಪ್ರತ್ಯಕ್ಷದರ್ಶಿ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೨ನೇ ಜುಲೈ ೧೯೪೩ [ಸಂಚಿಕೆ ೧೦

ವೇದದ ಕವಿ ಚರಿತ್ರೆ

ಲೇ|| ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವಕೀಲರು

ಇದು ಬಹು ದೊಡ್ಡವಿಷಯ ನಮ್ಮಂತಹ ಕಿಂಚಿಜ್ಞ ಗೆ ಗೋಚರವಾಗುವುದಲ್ಲ ಆದರೂ ವಿಚಾರಮಾಡಿದರೆ ಷ್ಟೇನೂ ಆಗಲಾರದು ಕೇವಲ ಕ್ಷುದ್ರಗ್ರಂಥಗಳಿಗೂ ವು ಎಷ್ಟೋ ಬಗೆಯಾಗಿ ಕವಿಚರಿತ್ರೆಗಳನ್ನು ಬರೆದೋ ತ್ತೇವೆ ಸರ್ವಕ್ಕೂ ಮೂಲವಾಗಿರುವ ವೇದದ ಕವಿ ರಿತ್ರೆಯನ್ನು ವಿಚಾರಮಾಡುವುದು ಹೇಗೆ ತಪ್ಪಾ ತು? ಸಾಮಾನ್ಯವಾಗಿ ಯಾವ ಗ್ರಂಥವನ್ನೋದಿದರೂ ಗ್ರಂಥದ ಆದಿಭಾಗದಲ್ಲಿ ಕವಿಯು ಅಷ್ಟಿಷ್ಟಾದರೂ ಸ್ವ ಚರಿತ್ರೆಯನ್ನು ಹೇಳಿಕೊಂಡೇ ಇರುವನು ಆದರೆ ೇದದಕವಿಯು ಮಾತ್ರ ಹಾಗೆ ಹೇಳಿಕೊಂಡಂತೆ ವ್ಯಕ್ತ ಗುವುದಿಲ್ಲ ವೇದದಂತಹ ಪ್ರಶಸ್ತವಾದ ಗ್ರಂಥವನ್ನು ರೆದೂ ಅದರ ಖ್ಯಾತಿಯನ್ನು ತನಗುಳಿಸಿಕೊಳ್ಳಬೇ ಂಬ ದುರಭಿಮಾನವಿಲ್ಲದೆ ಇರುವ ಆ ವೇದಕರ್ತೃವಿನ ಸಾಧಾರಣ ಸೌಜನ್ಯವು ಬಹು ಹೃದಯಂಗಮವಾಗಿದೆ ಲವು ಗ್ರಂಥಗಳಲ್ಲಿ ಕವಿಗಳು ತಮ್ಮ ಚರಿತ್ರೆಗಳನ್ನು ೇಳಿಕೊಳ್ಳದೆ ಇರುವುದೂ ಉಂಟು ಅಂತಹ ಸಂದರ್ಭ ಳಲ್ಲಿ ಗ್ರಂಥಗಳೊಳಗಣ ಸಂಗತಿಗಳ ಆಧಾರದ ಮೇಲೆ ವಿಚರಿತ್ರೆಯನ್ನೂಹಿಸಬೇಕಾಗುವುದು ಸದ್ಯಃ ವೇದದ ವಿಚರಿತ್ರೆಯ ವಿಷಯದಲ್ಲಿ ಈ ನಡವಳಿಕೆಯನ್ನ ನುಸರಿಸಬೇಕಾಗಿದೆ ಹಾಗೆ ವಿಚಾರ ಮಾಡಿದರೆ ವೇದಕ್ಕೆ ರ್ತೃವೇ ಇಲ್ಲವೆಂದೂಹಿಸುವ ಅವಕಾಶವೊಂದು ದೊರೆ ಯುವುದು "ವಾಚಾವಿರೂಪ ನಿತ್ಯಯಾ' ಎಂಬ ಒಂದು ಮಂತ್ರವಿದೆ "ಹೆ, ವಿರೂಪ, ನಿತ್ಯಯಾ ವಾಚಾಸ್ತುತಿಂ ಪ್ರೇರಯ" ಎಂಬುದು ಅದರ ಅಭಿ ಪ್ರಾಯ "ವಿರೂಪನಾಮಕನಾದ ದೇವತೆಯೆ, ಅನಾದಿ ಯಾದ ವಾಕ್ಕಿನಿಂದ ಸ್ತುತಿಸುವಹಾಗೆ ಮಾಡು' ಎಂಬುದು ಅದರ ತಾತ್ಪರ್ಯ ಅನಾದಿಯಾದ ವಾಕ್ಕು ೇದ ಆದಕ್ಕಾಧಾರವೇನೆಂದರೆ —

ಅನಾದಿನಿಧನಾ ನಿತ್ಯಾ ವಾಗುತ್ಸೃಷ್ಟಾ ಸ್ವಯಂಭುವಾ ।
ದಾ ವೇದಮಯೀ ದಿವ್ಯಾ ಯತಃ ಸರ್ವಾಃ ಪ್ರವೃತ್ತಯಃ ॥"

ಂದು ಶ್ರುತಿಯಲ್ಲಿ ಹೇಳಿದೆ ಇದರಿಂದ ವೇದಕ್ಕೆ ಬೇರೆ ರ್ತೃವೇ ಇಲ್ಲವೆಂದು ತಿಳಿಯ ಬರುವುದು ಆದರೆ ಇನ್ನೂ ಚ್ಚು ವಿಚಾರ ಮಾಡಿದರೆ ವೇದವು ಬ್ರಹ್ಮಕರ್ತೃಕ ಂದು ಸಿದ್ಧವಾಗುವುದು "ಅಸ್ಯ ಮಹತೋ ಭೂತಸ್ಯ ಶ್ವಸಿತ ಮೇತ ದ್ಯದೃಗ್ವೇದೋ ಯಜುರ್ವೇದ ಸ್ಸಾಮ ೇದಃ" ಎಂಬುದೊಂದು ಶ್ರುತಿ ಋಗ್ವೇದವೇ ೊದಲಾದವುಗಳೆಲ್ಲಾ ನಿತ್ಯಸಿದ್ಧನಾದ ಬ್ರಹ್ಮನ ನಿಶ್ವಾಸ ಪವಾದವುಗಳೆಂದರ್ಥ ಪುರುಷಸೂಕ್ತದಲ್ಲಿ:

"ತಸ್ಮಾದ್ಯಜ್ಞಾತ್ಸರ್ವಹುತಃ ಋಚಃ ಸಾಮಾನಿಜಜ್ಞಿರ"

ಂದು ಹೇಳಿರುವಂತೆ ಯಜ್ಞಶಬ್ದವಾಚ್ಯನಾದ ಬ್ರಹ್ಮ ಂದ ವೇದೋತ್ಪತ್ತಿಯು ಸ್ಪಷ್ಟವಾಗುತ್ತದೆ. ವೇದವು ಪೌರುಷೇಯವೆಂದು ಪ್ರಸಿದ್ಧವಾಗಿದೆಯಷ್ಟೆ. ಅದು ಹ್ಮಕೃತವೆಂದು ಸಿದ್ಧವಾದ ಮೇಲೆ ಅಪೌರುಷೇಯ ವು ಹಾರಿಹೋಯಿತಲ್ಲ! ಎಂದರೆ ಕಾಳಿದಾಸ ಪ್ರಭೃತಿಗಳ ವಾಕ್ಯಗಳಹಾಗೆ ವೇದವಾಕ್ಯಗಳು ಬ್ರಹ್ಮವಸ್ತುವಿನ ಪ್ರಯತ್ನದಿಂದ ಹುಟ್ಟಿದವುಗಳಲ್ಲ, 'ನಿಶ್ವಾಸರೂಪವಾದವುಗಳು ಎಂಬ ಮಾತಿನ ದೆಸೆಯಿಂದ ಅಪ್ರಯತ್ನದಿಂದ ಹುಟ್ಟಿದವುಗಳೆಂಬ ಅರ್ಥ ಈ ಕಾರಣದಿಂದ ಅಪೌರುಷೇಯತ್ವಕ್ಕೇನೂ ಹಾನಿಯಿಲ್ಲ

ಈಗ ಇನ್ನೊಂದು ಸಂದೇಹಬಂತು "ವಾಚಾ ವಿರೂಪ ನಿತ್ಯಯಾ ಎಂಬ ಹೇಳಿಕೆಯಿಂದ ವೇದವಾಕ್ಕು ಅನಾದಿಯೆಂದು ಹೇಳಿ ಈಗ ಬ್ರಹ್ಮಕೃತವೆಂಬ ಹೇಳಿಕೆಯಿಂದ ಅದನ್ನು ಸಾದಿಯಾಗಿ ಮಾಡಬಹುದೆ? ಎಂದರೆ ವೇದವು ಬ್ರಹ್ಮಕೃತವಾದ ಮಾತ್ರಕ್ಕೇ ಅದರ ಅನಾದಿತ್ವಕ್ಕೇನೂ ಕೊರತೆಯಿಲ್ಲ ಪ್ರತಿ ಸರ್ಗದಲ್ಲಿಯೂ ಪೂರ್ವದಂತೆಯೇ ಪ್ರವಾಹರೂಪದಿಂದ ನಿತ್ಯವಾಗಿರುವುದರಿಂದ ಅದನ್ನು ಅನಾದಿಯೆಂದು ಹೇಳಬಹುದು ವೇದವು ಬ್ರಹ್ಮಕರ್ತೃಕವೆಂಬ ಮಾತಿಗೆ ಎದುರಿಲ್ಲ

ವೇದದ ಕವಿಯ ಹೆಸರು ಗೊತ್ತಾಯಿತು ಇನ್ನು ಕವಿಚರಿತ್ರೆಯನ್ನು ಹೇಳಬೇಕಷ್ಟೆ ಅದು ನಮ್ಮಂತಹವರಿಂದ ಆಗದಮಾತು "ಯತೋವಾಚೋನಿವರ್ತಂತೆ ಅಪ್ರಾಪ್ಯಮನಸಾ ಸಹ" ಎಂಬ ಶ್ರುತಿಯಂತೆ ಅದು ವಾಕ್ಕಿಗೆ ಸಿಕ್ಕದೆ ಇರುವುದೂ ಅಲ್ಲದೆ ಮನಸ್ಸಿಗೂ ಅಗೋಚರವಾದುದು

ವಿಟಮಿನ್

ಆಯುರ್ವೇದ ವೈದ್ಯರಿಗೆ ವಿಟಮಿನ್ ಎನ್ನುವುದು ಒಂದು ಹೊಸ ವಸ್ತುವೇ ಅಥವಾ ವೈದ್ಯಶಾಸ್ತ್ರದಲ್ಲಿ ಹೇಳಲ್ಪಟ್ಟ ಪದಾರ್ಥಕ್ಕೆ ಈಗಿನವರು ಕೊಟ್ಟಿರುವ ಹೊಸ ನಾಮಧೇಯವೆ?

ಪಾಶ್ಚಾತ್ಯರು ಹೇಳುವುದು ಹೀಗೆ ಈ ವಿಟಮಿನ್ ಎನ್ನುವುದು ಇತ್ತೀಚಿಗೆ ಕಂಡು ಹಿಡಿಯಲ್ಪಟ್ಟಿರುವ ಒಂದು ಹೊಸ ವಸ್ತು ಈ ವಸ್ತುವು ನಮ್ಮ ಆಹಾರದಲ್ಲಿ ಸಾಕಾಗುವಷ್ಟು ಇಲ್ಲವಾದರೆ ನಮ್ಮ ದೇಹವು ಸರಿಯಾಗಿ ಅಂದರೆ ಹೃಷ್ಟಪುಷ್ಟವಾಗಿರುವುದಿಲ್ಲ ಅನೇಕ ಬಗೆಯ ವಿಟಮಿನುಗಳಿವೆ ಒಂದೊಂದು ಬಗೆಯ ವಿಟಮಿನುಗಳ ಅಭಾವದಿಂದ ಒಂದೊಂದು ಬಗೆಯ ವಿಕಾರಗಳುಂಟಾಗುತ್ತವೆ ಆದ್ದರಿಂದ ನಾವು ಬೇರೆ ಬೇರೆ ವಿಟಮಿನುಗಳನ್ನು ಶೇಖರಿಸಿ ಗಾಜಿನ ಟ್ಯೂಬುಗಳಲ್ಲಿ ನಿಮಗಾಗಿ ಸಿದ್ಧಗೊಳಿಸಿದ್ದೇವೆ ನೀವು ಅವುಗಳನ್ನು ನಿಮ್ಮ ರಕ್ತದಲ್ಲಿ ಚುಚ್ಚಿಸಿಕೊಂಡು ಸಶಕ್ತರಾಗಿಯೂ ನಿರೋಗಿಗಳಾಗಿಯೂ ಆಗಿರಿ ಇದು ಅವರ ಅಂಬೋಣ

ಇಲ್ಲಿ ನಮ್ಮದೊಂದು ಪ್ರಶ್ನೆ ಈ ವಿಟಮಿನ್ನುಗಳ ಶೋಧನೆಯು ಇತ್ತೀಚಿನದು ಈ ಶೋಧಕ್ಕೆ ಮುಂಚೆ ಸಶಕ್ತರೂ ನಿರೋಗಿಗಳೂ ಇರಲೇ ಇಲ್ಲವೋ? ವಿಟಮಿನುಗಳು ಪ್ರತಿಯೊಬ್ಬನ ಆರೋಗ್ಯರಕ್ಷಣೆಗೂ ಅತ್ಯಾವಶ್ಯಕವೆಂದ ಮೇಲೆ ಅವತ್ತಿಗೆ ಅವರಿಗೆ ವಿಟಮಿನುಗಳು ಹೇಗೆ ಮತ್ತು ಯಾವರೀತಿ ಒದಗುತ್ತಿದ್ದವು?

ಪಾಶ್ಚಾತ್ಯರ ಶೋಧನೆಗಳ ಫಲಿತಾಂಶವನ್ನು, ಮತ್ತು ಅವರುಗಳು ಇಂತಿಂತಹ ವಸ್ತುವಿನಲ್ಲಿ ಈ ಬಗೆಯ ವಿಟಮಿನುಗಳು ಇಷ್ಟಿಷ್ಟಿದೆ ಎಂದು ತೋರಿಸಿರುವ ಪಟ್ಟಿಯನ್ನೂ ನಾವು ಸೂಕ್ಷ್ಮವಾಗಿ ಪರ್ಯಾಲೋಚಿಸಿದರೆ ವಿಟಮಿನ್ ಎಂಬ ವಸ್ತುವು ಹೊಸದಲ್ಲ——ನಮ್ಮ ಆಹಾರ ವಸ್ತುಗಳಲ್ಲಿಯೇ ಇದೆ ಹೆಸರು ಮಾತ್ರ ಹೊಸದು ಎಂಬ ತೀರ್ಮಾನಕ್ಕೆ ಬರುತ್ತೇವೆ

ವಿಟಮಿನ್ ಎಂಬ ವಸ್ತುವನ್ನು ಆಹಾರ ಪದಾರ್ಥಗಳ ಮೂಲಕ ಹಿಂದೆಯೂ ನಮ್ಮ ದೇಹಪೋಷಣೆಗಾಗಿ ಒದಗಿಸುತ್ತಿದ್ದೆವು ಇಂದಿಗೆ "ವಿಟಮಿನ್" ಎಂಬ ಹೆಸರಿನಿಂದ ಗಾಜಿನ ಟ್ಯೂಬಿನಲ್ಲಿರುವದನ್ನು ಕೈತುಂಬಾ ಕ್ರಯ ಕೊಟ್ಟು, ರಕ್ತಕ್ಕೆ ಚುಚ್ಚಿಸಿಕೊಳ್ಳುತ್ತಿದ್ದೇವೆ ಇದೊಂದು ಪಾಶ್ಚಿಮಾತ್ಯರ ವ್ಯಾಪಾರದ ಯುಕ್ತಿ ಇದಕ್ಕೆ ಹೊಂದಿಕೆಯಾದ ಭಾರತೀಯರ ದಡ್ಡತನ ಅಷ್ಟೇ——ಬೇರೇನೂ ಇಲ್ಲ ಹಾಗಿದ್ದ ಮೇಲೆ ನಮ್ಮ ಆಯುರ್ವೇದ ಪದ್ಧತಿಯಂತೆ ನಾವು ವಿಟಮಿನ್ ಎಂದು ಯಾವುದನ್ನು ಕರೆಯೋಣ

ಆಯುರ್ವೇದ ಶಾಸ್ತ್ರವು ಪ್ರತಿಯೊಂದು ವಸ್ತುವಿನ ಗುಣದೋಷ ವಿಮರ್ಶೆಯನ್ನೂ ಆಯುರ್ವೇದ ಪದ್ಧತಿಯಂತೆ ಮಾಡಿ ದ್ರವ್ಯಗುಣ ಶಾಸ್ತ್ರದಲ್ಲಿ ವಿಶದಪಡಿಸಿದೆ ಮೂಲ ಸಂಹಿತೆಗಳಾದ ಚರಕ ಸುಶ್ರುತ ವಾಗ್ಭಟಗಳಲ್ಲಿಯೂ ಈ ವಿಷಯಗಳು ಸ್ಪಷ್ಟವಾಗಿವೆ ನಮ್ಮಲ್ಲಿ ಹೇಳಿರುವ (೧) ಬಲ್ಯ (ಬಲವರ್ಧಕ) (೨) ಹೃದ್ಯ (ಹೃದಯಕ್ಕೆ ಹಿತ) (೩) ಜೀವನೀಯ (ಜೀವಧಾರಣೆಗೆ ಅತ್ಯುಪಯುಕ್ತ (೪) ಬೃಂಹಣೀಯ (ಶರೀರವು ಕೃಶವಾಗಿದ್ದರೆ ಮಾಂಸವರ್ಧಕ (೫) ಸಂಧಾನೀಯ (ಅಸ್ಥಿಯಲ್ಲಿ ಬಿಗಿತಪ್ಪಿದಲ್ಲಿ ಸರಿಮಾಡುವುದು (೬) ಶುಕ್ರಜನಕ (ಶುಕ್ರಧಾತುವನ್ನು ಉತ್ಪಾದನೆ ಮಾಡುವುದು (೭) ಶೋಣಿತಸ್ಥಾಪನ (ರಕ್ತವನ್ನು ಸರಿಯಾದ ಸ್ಥಿತಿಯಲ್ಲಿಡುವದು) (೮) ಸಂಜ್ಞಾಸ್ಥಾಪನ (ಜ್ಞಾನಶಕ್ತಿಯನ್ನು ಸರಿಪಡಿಸುವುದು) (೯) ವಯಃಸ್ಥಾಪನ (ಮುದಿತನವು ಕಾಣದಂತೆ ಕಾಪಾಡುವುದು (೧೦) ರಸಾಯನ (ಜರಾವ್ಯಾಧಿ ನಾಶಕ) (೧೧) ವಾಜೀಕರಣ (ಸಂಭೋಗದಲ್ಲಿ ಕುತೂಹಲವನ್ನು ಹುಟ್ಟಿಸುವುದು (೧೨) ವರ್ಣ್ಯ (ದೇಹಕ್ಕೆ ಕಾಂತಿಕೊಡುವದು ಇವುಗಳಲ್ಲೆಲ್ಲಾ ಪಾಶ್ಚಾತ್ಯರ ವಿಟಮಿನ್ನುಗಳ ಗುಣಗಳೇ ಕಾಣಬರುತ್ತವೆ

ನಮ್ಮವರು ಆಯುರ್ವೇದವನ್ನು ಕೃಪಾದೃಷ್ಟಿಯಿಂದ ನೋಡಿ ಉಪಯೋಗಕ್ಕೆ ತಂದುಕೊಂಡು ವೈದ್ಯರನ್ನು ಪ್ರೋತ್ಸಾಹಿಸಿದರೆ ಎ ಬಿ ಸಿ ವಿಟಮಿನ್ನುಗಳಷ್ಟೇ ಗುಣಕರಗಳಾದ ಒಂದು ಔಷಧಿಗಳ ವರ್ಗವನ್ನೇ ಸೃಷ್ಟಿಸಲು ಅವಕಾಶವಿದೆ ಪ್ರಸಿದ್ಧವಾಗಿರುವ "ಚ್ಯವನಪ್ರಾಶ" ದಲ್ಲಿ ಪಾಶ್ಚಾತ್ಯರ ವಿಟಮಿನುಗಳಿವೆ ಡಾಕ್ಟರರು ವಿಟಮಿನಿನ ಅಭಾವದಲ್ಲಿ ಚ್ಯವನಪ್ರಾಶವನ್ನು ಸೇವಿಸಲು ಹೇಳುವುದಿಲ್ಲ. ನಮ್ಮವರಿಗೆ ಅದು ತಿಳಿಯುವಹಾಗಿಲ್ಲ ಅವರು ಹೇಳುವುದು ವಿಟಮಿನ್ ಇಂಜಕ್ಷನ್ನೇ ಇವರು ಕೇಳುವುದು ಅದೇ ಮುಖ್ಯವಾಗಿ "ಧರ್ಮಸ್ಯತತ್ವಂ ನಿಹಿತಂಗುಹಾಯಾಂ ಮಹಾಜನೋ ಯೇನ ಗತಸ್ಸ ಪಂಥಾಃ" ಎನ್ನುವ ಗಾದೆಯಾಗಿದೆ. ಇದನ್ನು ಆಯುರ್ವೇದ ವೈದ್ಯರು ಯಾರ ಮುಂದೆ ಹೇಳಿಕೊಳ್ಳಬೇಕು.

ಪಂಚಾಚಾರ್ಯಪ್ರಭಾ.

೧೯೪೩ನೆಯ ಜುಲೈ ತಾ| ೧೨ನೆಯ ಸೋಮವಾರ

ಬ್ರಹ್ಮಚರ್ಯಾಶ್ರಮ.

ಭಾರತೀಯ ಧರ್ಮಶಾಸ್ತ್ರಾನುಸಾರವಾಗಿ ಬ್ರಹ್ಮಚರ್ಯ ಗಾರ್ಹಸ್ಥ್ಯ, ವಾನಪ್ರಸ್ಥ, ಸನ್ಯಾಸ ಎಂಬ ನಾಲ್ಕಾಶ್ರಮಗಳು ಮಾನವನ ಏಳಿಗೆಗೆ ಸಾಧನಗಳಾಗಿವೆ ಬ್ರಹ್ಮಚಾರಿಯೆಂದರೆ ಕೇವಲ ವಿವಾಹವಿಲ್ಲದವನೆಂದರ್ಥವಲ್ಲ ಸರ್ವೇಂದ್ರಿಯಗಳ ಜಯವನ್ನು ಪಡೆದು ವಿದ್ಯಾಭ್ಯಾಸದಲ್ಲಿ ನಿರತನಾಗಿ ಶಮದಮಾದಿ ಗುಣಗಳನ್ನಾರ್ಜಿಸುತ್ತ ಭಗವಂತನಲ್ಲಿ ನಿರ್ವಿಶೇಷವಾದ ಭಕ್ತಿಸಮರ್ಪಣೆಮಾಡುತ್ತ ವೀರ್ಯವಂ ರಕ್ಷಿಸುವವನೇ ಬ್ರಹ್ಮಚಾರಿಯು ಈತನಿಗೆ ಬುದ್ಧಿಶಕ್ತಿಯೂ ದೇಹಶಕ್ತಿಯೂ ನವಾಂಕುರದಂತೆ ದಿನೇ ದಿನೇ ಬೆಳೆಯುತ್ತ ವಿಸ್ತಾರವನ್ನು ಹೊಂದುತ್ತದೆ ಯಾವುದರಲ್ಲಿ ಈತನ ಮನಸ್ಸು ಪ್ರವೇಶಿಸುವುದೋ ಅದರಲ್ಲಿ ನಿಶಿತಪಾಂಡಿತ್ಯವು ಸಿದ್ಧಿಸುವುದು ಯೋಗಮಾರ್ಗದಲ್ಲಿ ಪ್ರವೇಶಿಸಿದರೆ ಪರಮಾತ್ಮನನ್ನು ಸಾಕ್ಷಾತ್ಕರಿಸುವವರೆಗೆ ಬಿಡುವದಿಲ್ಲ ಪ್ರಾಪಂಚಿಕವಸ್ತುಗಳಲ್ಲಿ ಪ್ರವೇಶಿಸಿದರೆ ಅದು ಸಿದ್ಧಿಸುವವರೆಗೂ ಹಿಂಜರಿಯುವುದಿಲ್ಲ ಒಂದು ವಿಧವಾದ ಧೈರ್ಯವನ್ನೂ ಸಾಹಸವನ್ನೂ ಉಂಟುಮಾಡಿಕೊಡುತ್ತದೆ ಬ್ರಹ್ಮಚರ್ಯವನ್ನು ಮಾನವನು ಎಷ್ಟರಮಟ್ಟಿಗೆ ಪರಿಪಾಲಿಸುವನೋ ಅಷ್ಟು ಮನೋದಾರ್ಢ್ಯವೂ ಮನೋನೈರ್ಮಲ್ಯವೂ ಸಿದ್ಧಿಸುವದು ಬ್ರಹ್ಮಚರ್ಯವನ್ನು ಪಾಲಿಸದಿದ್ದವನಿಗೆ ಆತ್ಮಶಕ್ತಿಯಾಗಲಿ ಬುದ್ಧಿಶಕ್ತಿಯಾಗಲಿ ಬೆಳೆಯಲಾರದು ಶಕ್ತಿಯನ್ನು ಒಂದು ಬಳ್ಳಿಗೂ ಅಗ್ನಿಗೂ ಹೋಲಿಸಬಹುದು ಗಿಡವ ಆಧಾರವಿಲ್ಲದಿದ್ದಲ್ಲಿ ಬಳ್ಳಿಯು ಹಬ್ಬುವುದಿಲ್ಲ ಅದರಂತೆ ಆತ್ಮನಲ್ಲಿ ಗುಪ್ತವಾಗಿರುವ ಶಕ್ತಿಯು ಬ್ರಹ್ಮಚರ್ಯದ ಆಶ್ರಯದಿಂದಲೇ ಹೊರಗೆ ಪ್ರಸರಿಸಬೇಕಾಗಿದೆ ಅಗ್ನಿಯಲ್ಲಿ ದಾಹಶಕ್ತಿಯಿದ್ದರೂ ಅದು ಕಟ್ಟಿಗೆಯ ಆಶ್ರಯದಿಂದಲೇ ಪ್ರಜ್ವಲಿಸುತ್ತದೆ ಅದರಂತೆ ಆತ್ಮನು ಪರಮಾತ್ಮನ ಅಂಶವಾದುದರಿಂದ ಪರಮಾತ್ಮನಲ್ಲಿರುವಂತೆ ಸರ್ವಜ್ಞತ್ವಾದಿಶಕ್ತಿಗಳು ಜೀವಾತ್ಮನಲ್ಲಿದ್ದರೂ ಅವು ಉಪಾಧಿವಶದಿಂದ ಸಂಕುಚಿತಗಳಾಗಿರುತ್ತವೆ ಇವುಗಳನ್ನು ಎಂದಿನಂತೆ ವಿಕಾಸಗೊಳಿಸಿ ಬ್ರಹ್ಮಾನಂದಾಮೃತವನ್ನು ಆಸ್ವಾದಿಸಬೇಕಾದರೆ ಬ್ರಹ್ಮಚರ್ಯವು ಸಂಪೂರ್ಣ ಸಹಾಯವನ್ನುಂಟುಮಾಡುತ್ತದೆ

ಲೋಕದಲ್ಲಿ ಒಂದೊಂದು ಇಂದ್ರಿಯಕ್ಕೆ ವಶವಾಗಿ ಒಂದೊಂದು ಪ್ರಾಣಿಯು ನಷ್ಟವಾಗುವುದನ್ನು ನೋಡುತ್ತಲಿದ್ದೇವೆ ಪ್ರಾಣಿಗಳಲ್ಲೆಲ್ಲಾ ದೊಡ್ಡ ಪ್ರಾಣಿಯೆನಿಸಿದ ಆನೆಯು ಒಂದು ಉಪಸ್ಥೇಂದ್ರಿಯಕ್ಕೆ ವಶವಾಗಿ ಕಾಡಿನಲ್ಲಿ ಗಜಗ್ರಾಹಿಗಳು ಮಾಡಿಟ್ಟ ಕೃತ್ರಿಮವಾದ ಹೆಣ್ಣಾನೆಯನ್ನು ಮೋಹಿಸಿ ಹಳ್ಳದಲ್ಲಿ ಬಿದ್ದು ಪ್ರಾಣವನ್ನು ಬಿಡುವದು ಪತಂಗವು ನೇತ್ರೇಂದ್ರಿಯದ ದೋಷದಿಂದ ದೀಪವನ್ನು ಹಣ್ಣೆಂದು ಭ್ರಮಿಸಿ ಸುಟ್ಟು ಬೂದಿಯಾಗುವದು ಭ್ರಮರವು ಘ್ರಾಣೇಂದ್ರಿಯದೋಷದಿಂದ ಸಂಪಿಗೆಯ ಹೂವಿಗೆರಗಿ ಮೃತಿಯನ್ನು ಹೊಂದುವದು ಜಿಂಕೆಯು ಶ್ರೋತ್ರೇಂದ್ರಿಯದ ಚಾಂಚಲ್ಯದಿಂದ ಕೊಳಲಿನ ಮಧುರಶಬ್ದವನ್ನು ಕೇಳಿ ಬಲೆಯೊಳಗೆ ಶಿಕ್ಕಿಬೀಳುವದು ಮೀನುಗಳು ನಾಲಗೆಯ ರುಚಿಗಾಗಿ ಬೆಸ್ತರವನ ಗಾಳಕ್ಕೆ ಶಿಕ್ಕು ನರಳಬೇಕಾಗುವದು. ಹೀಗೆ ಒಂದೊಂದು ಇಂದ್ರಿಯಗಳಿಗೆ ವಶವಾಗಿ ಒಂದೊಂದು ಜಾತಿಯ ಪ್ರಾಣಿಗಳೇ ನಷ್ಟವಾಗುತ್ತಿರುವಲ್ಲಿ ಇನ್ನು ಮನುಷ್ಯನು ಕಣ್ಣು, ಮೂಗು, ನಾಲಗೆ, ಕಿವಿ, ಚರ್ಮಗಳೆಂಬ ಐದು ಜ್ಞಾನೇಂದ್ರಿಯಗಳಿಂದಲೂ ವಾಕ್ ಪಾಣಿ ಪಾದ ಪಾಯು ಉಪಸ್ಥ ಎಂಬ ಐದು ಕರ್ಮೇಂದ್ರಿಯಗಳಿಂದಲೂ ಅಂತಃಕರಣದಿಂದಲೂ ಕೂಡಿರುವುದರಿಂದ ಈತನು ಅಂಥ ಇಂದ್ರಿಯ ಸಮೂಹವನ್ನು ತಡೆಯುವುದೆಂದರೆ ಬಹಳ ಕಷ್ಟತರವಾದ ಕೆಲಸವೇ ಸರಿ.

ಇಂದ್ರಿಯಾಣಾಂ ತು ಸರ್ವೇಷಾಂ ಯದ್ಯೇಕಂ ಕ್ಷರತೀಂದ್ರಿಯಂ ।
ತೇನಾಸ್ಯ ಕ್ಷರತಿ ಪ್ರಜ್ಞಾ ದೃತೇಃ ಪಾತ್ರಾದಿವೋದಕಂ ॥

ಇಷ್ಟು ಇಂದ್ರಿಯಗಳಲ್ಲಿ ಒಂದು ಇಂದ್ರಿಯವು ಕಳಚಿದರೂ ಒಳಗೆ ತುಂಬಿರುವ ಪ್ರಜ್ಞಾಶಕ್ತಿಯೆಲ್ಲ ಕ್ರಮವಾಗಿ ಕ್ಷತಿಸಿಹೋಗುವದು ನೀರನ್ನು ತುಂಬಿದ ಚರ್ಮದ ತಿತ್ತಿಯನ್ನು ಯಾವುದಾದರೂ ಒಂದು ಭಾಗದಲ್ಲ ಮುಳ್ಳಿನಿಂದ ಚುಚ್ಚಿದರೆ ಸಾಕು ಆ ಸಣ್ಣ ದ್ವಾರದಿಂದ ಕ್ರಮವಾಗಿ ಒಳಗೆ ತುಂಬಿದ ನೀರೆಲ್ಲವೂ ಸುರಿದುಹೋಗಿ ಚೀಲವು ಬರಿದಾಗುವುದು ಎಂದು ಮನುಧರ್ಮಶಾಸ್ತ್ರವು ಆತ್ಮಶಕ್ತಿಯು ಪ್ರಬಲಿಸುವುದಕ್ಕೆ ಇಂದ್ರಿಯಜಯವೇ ಕಾರಣವೆಂಬುವನ್ನು ಸಾರುತ್ತದೆ ಮತ್ತು

ಇಂದ್ರಿಯಾಣಾಂ ವಿಚರತಾಂ ವಿಷಯೇಷ್ವಪಹಾರಿಷು ।
ಸಂಯಮೇ ಯತ್ನಮಾತಿಷ್ಠೇತ್ ವಿದ್ವಾನ್ ಯಂತೇವ ವಾಜಿನಾಂ ॥

ಯಾವಾಗಲೂ ಇಂದ್ರಿಯಗಳು ಸ್ಪಂದನಾದಿ ವಿಷಯಗಳ ಮೇಲೆ ಹರಿಯುವ ಸ್ವಭಾವವುಳ್ಳವುಗಳಾಗಿವೆ ವಿಷಯಗಳ ಮೇಲೆ ಎರಗಿದಷ್ಟು ಇಂದ್ರಿಯಗಳು ಪ್ರಬಲಿಸಿ ಕ್ರಮವಾಗಿ ಆತ್ಮಶಕ್ತಿಯನ್ನು ನಾಶ ಮಾಡಿ ದೇಹವನು ನೀರಿನ ಬುರುಡೆಯಂತೆ ನಿಸ್ಸಾರಮಾಡುತ್ತವೆ ಆದುದರಿಂದ ಅಡ್ಡಮಾರ್ಗದಲ್ಲಿ ಸ್ವೇಚ್ಛೆಯಾಗಿ ಹೋಗಲು ಬಯಸುವ ರಥಕ್ಕೆ ಹೂಡಿದ ಮದಿಸಿದ ಕುದುರೆಗಳನ್ನು ಬಲಾತ್ಕಾರದಿಂದ ತಡೆದು ಉತ್ತಮದಾರಿಯಲ್ಲಿ ನಡೆಸಬೇಕೆಂದಿಚ್ಛಿಸುವ ಕುಶಲ ಸಾರಥಿಯೋಪಾದಿಯಲ್ಲಿ ಯಾವ ವಿದ್ವಾಂಸನು ಪರಸ್ತ್ರೀವ್ಯಾಮೋಹ ಪರದ್ರವ್ಯಾಪಹರಣಾದಿದುರ್ವ್ಯಸನಗಳಲ್ಲಿ ಬೀಳದ ಇಂದ್ರಿಯಜಾಲವನ್ನು ಬಲಾತ್ಕಾರದಿಂದ ಹಿಮ್ಮೆಟ್ಟಿಸಿ ಆತ್ಮಶಕ್ತಿಯನ್ನು ಕಾಪಾಡಿಕೊಳ್ಳುವನೋ ಅವನೇ ನಿಜವಾದ ಬ್ರಹ್ಮಚಾರಿಯು ಇಂಥ ಸಿದ್ಧಿಯನ್ನು ಪಡೆದನೆಂದರೆ ಆಕ್ಷಣದಲ್ಲಿಯೇ ಸರ್ವಸಂಗಪರಿತ್ಯಾಗಮಾಡಿ ಸನ್ಯಾಸವನ್ನು ಸ್ವೀಕರಿಸುವನು ಇಂಥ ಬ್ರಹ್ಮಚಾರಿಗೆ ಮಧ್ಯದಲ್ಲಿ ಗೃಹಸ್ಥಾಶ್ರಮವಾಗಲಿ ವಾನಪ್ರಸ್ಥಾಶ್ರಮವಾಗಲಿ ತೊಡಕನ್ನುಂಟುಮಾಡುವುದಿಲ್ಲ ಇಂಥ ಉತ್ತಮವಾದ ಸ್ಥಿತಿಯು ಪ್ರತಿಯೊಬ್ಬ ಬ್ರಹ್ಮಚಾರಿಗೂ ಬರುತ್ತದೆಂದು ನಿಯಮವಾಗಿ ಹೇಳಲು ಸಾಧ್ಯವಿಲ್ಲ ಯೌವನವೆಂಬ ಮದಗಜವು ಮೋಹವೆಂಬ ಅರಣ್ಯದಲ್ಲಿ ಪ್ರವೇಶಿಸಿದಾಗಲೇ ಆತ್ಮನಿಗಿರುವ ಸ್ವಾತಂತ್ರ್ಯವು ತಪ್ಪಿಹೋಗುವದು ತಾನು ವೇದಶಾಸ್ತ್ರಪುರಾಣಗಳೆಂಬ ಅಂಕುಶವನ್ನು ಹಿಡಿದಾಗ್ಯೂ ಈ ಯೌವನವು ಪರವಶತೆಯನ್ನುಂಟುಮಾಡದಿರದು ಮದವೇರಿದ ಆನೆಯನ್ನು ಸಾಮೋಪಾಯದಿಂದ ಹತೋಟಿಗೆ ತೆಗೆದುಕೊಳ್ಳುವಂತೆ ಶಾಸ್ತ್ರೀಯವಾಗಿ ಸತ್ಸಂತಾನಸಿದ್ಧಿಗಾಗಿ ಆ ಸಮಯದಲ್ಲಿ ಗೃಹಸ್ಥಾಶ್ರಮವನ್ನು ಸ್ವೀಕರಿಸಿ ಮೆಲ್ಲಮೆಲ್ಲನೆ ಯೌವನಮದವನ್ನು ಇಳಿಸಿ ಇಂದ್ರಿಯಗಳಿಗೆ ಶಾಂತಿಯನ್ನುಂಟುಮಾಡಿ ಪುನಃ ತನ್ನ ಆತ್ಮಶಕ್ತಿಯನ್ನು ಬೆಳೆಯಿಸುವುದೇ ವಿವೇಕಿಯ ಕರ್ತವ್ಯವಾಗಿರುತ್ತದೆ ಪ್ರತಿಯೊಬ್ಬನಿಗೂ ಮೋಕ್ಷಮಾರ್ಗವನ್ನು ಸುಲಭಮಾಡಿಕೊಡುವುದಕ್ಕಾಗಿ ಹಿಂದಿನ ಮಹರ್ಷಿಗಳು ನಿರ್ಮಲಾಕಾಶವನ್ನು ಮಲಿನಗೊಳಿಸುವ ಮೇಘಗಳಂತೆ ಆತ್ಮನನ್ನು ಮಧ್ಯಮಧ್ಯದಲ್ಲಿ ಮಲಿನಗೊಳಿಸಹತ್ತಿರುವ ದುರ್ವಿಷಯಗಳನ್ನು ಪರಿಹರಿಸುವುದಕ್ಕಾಗಿ ಗೃಹಸ್ಥ ವಾನಪ್ರಸ್ಥಾದ್ಯಾಶ್ರಮಗಳನ್ನೇರ್ಪಡಿಸಿರುತ್ತಾರೆ

ಸಕಲಾಶ್ರಮಗಳಿಗೂ ಮೂಲಾಧಾರವಾದ ಬ್ರಹ್ಮಚರ್ಯಾಶ್ರಮವು ಬಹು ಜವಾಬ್ದಾರಿಯುಳ್ಳ ಆಶ್ರಮವಾಗಿದೆ ವಿದ್ಯೆ ಬುದ್ಧಿ ಜ್ಞಾನ ತಪಸ್ಸು ಯಾವುದನ್ನು ಸಂಗ್ರಹ ಮಾಡಬೇಕಾಗಿದ್ದರೂ ಈ ಬ್ರಹ್ಮಚರ್ಯಾಶ್ರಮದಲ್ಲಿಯೇ ಹೊರತು ಇನ್ನಾವ ಆಶ್ರಮಗಳಲ್ಲಿಯೂ ಆಗಲಾರದು ಇಂಥ ನಾಲ್ಕಾಶ್ರಮಗಳಿಂದ ಶೋಭಿಸುವ ವೀರಶೈವ ಮತದಲ್ಲಿ ಈ ಮತಾಚಾರ್ಯರು ಬ್ರಹ್ಮಚರ್ಯಾಶ್ರಮಕ್ಕೆ ಅತ್ಯಂತ ಮಹತ್ವವನ್ನು ಕೊಟ್ಟಿರುತ್ತಾರೆ ಈ ಮತದಲ್ಲಿ ಗುರುಪಟ್ಟವನ್ನು ವಹಿಸುವವರೂ ಬ್ರಹ್ಮಚಾರಿಗಳೇ ಆಗಿರುತ್ತಾರೆ ಚರಪಟ್ಟವನ್ನು ವಹಿಸುವವರೂ ಬ್ರಹ್ಮಚಾರಿಗಳೇ ಆಗಿರುತ್ತಾರೆ ಸಿಂಹಾಸನಾಧಿಪತಿಗಳೂ ಬ್ರಹ್ಮಚಾರಿಗಳೇ ಆಗಿರುತ್ತಾರೆ ವಿರಕ್ತರೂ ಬ್ರಹ್ಮಚಾರಿಗಳೇ ಆಗಿರುತ್ತಾರೆ ಮತ್ತು ಎಲ್ಲೆಲ್ಲಿಯೂ ಇಂಥ ಸ್ಥಿರ ಚರಪಟ್ಟಾಧಿಕಾರಿಗಳಾದ ಬ್ರಹ್ಮಚಾರಿಗಳೇ ದೀಕ್ಷೋಪನಯನಾದಿಸಂಸ್ಕಾರಗಳನ್ನು ಮಾಡಿ ಷಟ್‌ಸ್ಥಲೋಪದೇಶಕರಾಗಿದ್ದಾರೆ. ಆದುದರಿಂದ ಪಟ್ಟಚರಾಧಿಕಾರಿಗಳು ಇಂದ್ರಿಯದಮನಶಕ್ತಿಯನ್ನು ಅರ್ಜಿಸಬೇಕು ವಿಷಯದಲ್ಲಿ ವೈರಾಗ್ಯವನ್ನು ಪಡೆಯಬೇಕು. ವೇದವೇದಾರ್ಥವನ್ನು ಚೆನ್ನಾಗಿ ತಿಳಿದಿರಬೇಕು. ಈ ಗುಣಗಳಿರದಿದ್ದರೆ ಯಾವ ಪ್ರಯೋಜನವೂ ಇಲ್ಲ ಇಂಥವರಿಂದ ಶಿಷ್ಯರು ಎಂದೂ ಉದ್ಧಾರವಾಗುವುದಿಲ್ಲ ಆದುದರಿಂದ ಪಟ್ಟಚರಾಧಿಕಾರಿಗಳು ತಮ್ಮ ಬ್ರಹ್ಮಚರ್ಯಾಶ್ರಮಧರ್ಮವನ್ನು ಚೆನ್ನಾಗಿ ಕಾಯ್ದುಕೊಂಡು ಮಠೋದ್ಧಾರಮಾಡಬೇಕು.

ಯುದ್ಧವಾರ್ತೆ

ನಾಜಿ ವಿಮಾನದ ಪ್ರಧಾನ ಕಛೇರಿ ಇಟಲಿಯಲ್ಲಿ

ಜರ್ಮನ್ ವಿಮಾನ ಸೇನಾಧಿಪತಿ ಜ|| ಫೀಲ್ಡ್ ಮಾರ್ಷಲ್ ರಿಕ್ಟ್‌ಫೋಫೆನ್ ದಕ್ಷಿಣ ಇಟಲಿಯಲ್ಲಿ ತಮ್ಮ ಪ್ರಧಾನ ಕಚೇರಿಯನ್ನು ಸ್ಥಾಪಿಸಿದಾರೆಂದೂ ಅವರ ಜೊತೆಯಲ್ಲಿ ಜ| ಫೀಲ್ಡ್ ಮಾರ್ಷಲ್ ಕೆಸೆಲ್ ರಿಂಗರಿದ್ದಾರೆಂದು ಜರ್ಮನ್ ಸುದ್ದಿ ಸಂಸ್ಥೆ ತಿಳಿಸಿದೆ

ಲಂಡನ್ ಮೇಲೆ ದಾಳಿ

ಕಳೆದ ಮಾರ್ಚಿ ತಿಂಗಳಿನಿಂದ ಲಂಡನ್ ನಗರದ ಮೇಲೆ ಶತ್ರುದಾಳಿ ನಡೆದಿರಲಿಲ್ಲ ಕಳೆದವಾರ ಅಲ್ಪಪ್ರಮಾಣದಲ್ಲಿ ನಡೆಯಿತು ಕೆಲವು ಅಂಗಡಿಮುಂಗಟ್ಟುಗಳು ನಾಶವಾದವು ಸಿನಿಮಾ ಮಂದಿರವೊಂದಕ್ಕೆ ಬಾಂಬು ಬಿದ್ದ ನಿಮಿತ್ತ ೧೨ ಮಂದಿ ಮಡಿದರು ಶತ್ರುವಿಮಾನಗಳನ್ನು ಓಡಿಸಲಾಯಿತು

ಸಿಸಿಲಿ ಮೇಲೆ ಧಾಳಿ

ಮಿತ್ರರ ವೈಮಾನಿಕ ಪಡೆ ೩೬ ಗಂಟೆಗಳಕಾಲ ಸಿಸಿಲಿಯ ಮೇಲೆ ಸಂತತವಾಗಿ ಧಾಳಿ ಮಾಡಿತು ಇದರಿಂದ ನಾಜಿಗಳ ವಿಮಾನ ಪಡೆ ದಿಕ್ಕೆಟ್ಟು ಓಡಿತು ಮಿತ್ರ ವಿಮಾನಗಳು ನಿಂಬೆ ಹಾಗು ಆಲಿವ್ ತೋಪುಗಳ ಮರೆಯಲ್ಲಿ ಅಡಗಿದ್ದ ಸೈನ್ಯ ಇಳಿಸುವುದಕ್ಕೆ ಅನುಕೂಲವಾದ ತೀರಪ್ರದೇಶಗಳನ್ನು ಪತ್ತೆ ಮಾಡಿ ಬಾಂಬು ಸುರಿಸಿದವು ಜೆರ್ಬಿನ ವಿಮಾನ ನಿಲ್ದಾಣವನ್ನು ಪುಡಿಪುಡಿ ಮಾಡಿದವು ನಾಜಿ ವಿಮಾನ ಪಡೆ ಮಿತ್ರವಿಮಾನಗಳನ್ನು ಓಡಿಸುವ ಸಲುವಾಗಿ ಏನೇನೋ ತಂತ್ರೋಪಾಯಗಳನ್ನು ಬಳಸಿತಾದರೂ ಏನೂ ಉಪಯೋಗವಾಗಲಿಲ್ಲ ನಾಜಿಗಳಿಗೆ ಪೆಟ್ಟಿಗೆ ಪೆಟ್ಟು ಬಿತ್ತು ೪೨ ವಿಮಾನಗಳು ನಾಶವಾದವು

ಜರ್ಮನ್ ದಾಳಿ ವಿಫಲವಾಯಿತು

ಜರ್ಮನರು ರಷ್ಯದಲ್ಲಿ ಹೊಸ ಮುತ್ತಿಗೆ ಆರಂಭಿಸಿರುವರು ಯುದ್ಧವು ಇಂದಿನವರೆಗೆ ರಷ್ಯನರಿಗೆ ಅನುಕೂಲವಾಗಿಯೇ ಇದೆ ವಿಮಾನ ಬಲದಲ್ಲಿ ತಮ್ಮ ಕೈಮೇಲು ಮಾಡಿಕೊಳ್ಳಲು ನಾಜಿಗಳು ಅಶಕ್ತರಾಗಿದ್ದಾರೆ ರಷ್ಯನರ ವ್ಯೂಹವನ್ನು ಒಡೆಯಲು ಅವರ ಕೈಲಿ ಆಗಲಿಲ್ಲ ಜರ್ಮನರ 'ಟೈಗರ್ ಟ್ಯಾಂಕು'ಗಳ ಆಟವೇನೂ ಸಾಗಲಿಲ್ಲ ನಾಜಿ ಮುತ್ತಿಗೆಯ ಪ್ರಥಮ ಆಘಾತವನ್ನು ರಷ್ಯನ್ ವ್ಯೂಹವು ಬಹಳ ಚೆನ್ನಾಗಿ ತಡೆದಿದೆ ರಷ್ಯನ್ ಟ್ಯಾಂಕ್ ಧ್ವಂಸಕ ಫಿರಂಗಿಗಳು ಸುರಿಸುವ ಉಗ್ರ ಗುಂಡಿನ ಮಳೆಯನ್ನು ನಾಜಿ ಟ್ಯಾಂಕ್ ಪಡೆಯವರು ತಡೆಯಲಾರದೆ ಹಿಂದೋಡುತ್ತಿರುವರೆಂದು ಜರ್ಮನ್ ಬಂದಿಗಳು ತಿಳಿಸಿದ್ದಾರೆ ಬೈಲ್‌ಗೊರಾಡ್ ಕಡೆಗೆ ನುಗ್ಗುತ್ತ ಶತ್ರುಗಳು ಕೊಂಚ ದೂರ ಮುಂದೆ ಹೋಗಲು ಶಕ್ತರಾಗಿದಾರೆ ಆದರೆ ಅವರಿಗೆ ವಿಶೇಷ ಹಾನಿ ಆಗಿದೆ ಓರೆಲ್ ಕರ್ಸ್ಕ್ ರಂಗದಲ್ಲಿ ಈಗಿನ ಹೊಡೆದಾಟದಲ್ಲಿ ೫೨೦ ಜರ್ಮನ್ ಟ್ಯಾಂಕುಗಳು ನಾಶವಾದವು

ಮಾರ್ಷಲ್ ಕ್ಲುಗ್‌ರವರು ಸೇನೆ ನಡೆಸುತ್ತಿದ್ದಾರೆ

ಓರೆಲ್-ಬೈಲ್‌ಗೊರಾಡ್ ಭಾಗದಲ್ಲಿ ರಷ್ಯದ ಮೇಲೆ ನುಗ್ಗಿರುವ ಜರ್ಮನ್ ಸೇನೆಗಳ ದಂಡನಾಯಕತ್ವವನ್ನು ಮಾರ್ಷಲ್ ಕ್ಲುಗ್‌ರವರು ವಹಿಸಿಕೊಂಡಿರುವರು. ಪೋಲೆಂಡ್, ಫ್ರಾನ್ಸ್‌ಗಳನ್ನು ಸುಲಭವಾಗಿ ಬೀಳುವಂತೆ ಮಾಡಿ, ಮೊದಲನೆ ಶರದೃತುವಿನಲ್ಲಿ ರಷ್ಯದ ಮೇಲಿನ ದಾಳಿಯನ್ನು ನಡೆಯಿಸಿ ಮಾಸ್ಕೋ ನಗರದ ಬಾಗಿಲವರೆಗೂ ಜರ್ಮನ್ ಸೇನೆಯನ್ನು ಇವರು ತಂದುಬಿಟ್ಟಿದ್ದರು ಆದರೆ ರಷ್ಯನರು ಇವರನ್ನು ಹಿಂದಕ್ಕಟ್ಟಿದರು ಇವರಿಗೆ ಈಗ ೬೧ ವಯಸ್ಸು.

ಗಡಿಯಲ್ಲಿರುವ ನಗರಗಳನ್ನು ಬರಿದುಮಾಡಬೇಕು

ಮೆಡಿಟರೇನಿಯನ್ ತೀರದಲ್ಲಿರುವ ಫ್ರೆಂಚ್ ನಗರಗಳಲ್ಲೂ ಮತ್ತು ಸ್ಪೆಯಿನ್ ಗಡಿನಾಡಿನಲ್ಲಿರುವ ಫ್ರೆಂಚ್ ಪ್ರದೇಶಗಳಲ್ಲೂ ಅನಾವಶ್ಯಕವಾಗಿ ಯಾವ ಪ್ರಜೆಯೂ ಇರಲಾಗದೆಂದು ಜರ್ಮನರ ಆಜ್ಞೆಯಾಗಿದೆ

ಭೂತ ಧಾಳಿ

ಪತ್ತೆ ಕೊಡದಂತೆ ಅತಿವೇಗದ ವಿಮಾನಗಳಲ್ಲಿ ದೇಶದ ಮಧ್ಯ ಪ್ರದೇಶಗಳಿಗೆ ಸಾಗಿ ಧಾಳಿ ಮಾಡಿಬರುವುದಕ್ಕೆ ಭೂತಧಾಳಿ ಎಂಬ ಹೊಸಹೆಸರು ಕೊಡಲಾಗಿದೆ ಜಗತ್ತಿನಲ್ಲೇ ಅತಿವೇಗದ ಸೊಳ್ಳೆ ವಿಮಾನಗಳನ್ನು ಮಿತ್ರರು ಭೂತಧಾಳಿಗೆ ಬಳಸುತ್ತಿದಾರೆ ರಾತ್ರಿಯ ಹೊತ್ತು ಬರ್ಲಿನ್ ಇತ್ಯಾದಿ ನಗರಗಳ ಮೇಲೆ ಈ ಬಗೆಯ ಧಾಳಿಯನ್ನು ಆರ್ ಎ ಎಫ್ ವಿಮಾನಗಳು ಕೈಗೊಳ್ಳುತ್ತಿವೆಯಾದರೂ ವಿವರಾಂಶಗಳನ್ನು ಸಹಜ ಕಾರಣಗಳಿಗಾಗಿಯೇ ಪ್ರಕಟಿಸುತ್ತಿಲ್ಲ

ದಂಡಯಾತ್ರೆಯನ್ನು ಎದುರಿಸಲು ಜರ್ಮನರ ಯೋಜನೆ

ಮಿತ್ರರ ದಂಡಯಾತ್ರೆಯನ್ನು ಎದುರಿಸಲು ಸೈನ್ಯಸೇವಾ ಶಾಖೆಯೊಂದನ್ನು ಜ|| ಅ| ರೀಡರ್ ಅವರ ನಾಯಕತ್ವದಲ್ಲಿ ರೂಪುಗೊಳಿಸಲಾಗಿದೆಯೆಂದು ಸ್ಟಾಕ್ ಹೋಂ ಪತ್ರಿಕೆಯೊಂದರಲ್ಲಿ ಪ್ರಕಟವಾಗಿದೆ. ಈ ಹೊಸ ಶಾಖೆಯಲ್ಲಿ ತೀರದ ಕಾವಲು, ಸಬ್‌ಮೆರೀನ್, ಚಿಕ್ಕ ನೌಕಾದಳ, ಭಾರಿ ನೌಕಾದಳ ಎಂಬುದಾಗಿ ನಾಲ್ಕು ಅಂಗಗಳಿರುವುದಂತೆ ರಕ್ಷಣೆಯ ಅಗತ್ಯವುಳ್ಳ, ತೀರಪ್ರದೇಶಗಳಲ್ಲಿ ಈ ಶಾಖೆ ಕೆಲಸ ಮಾಡುವುದೆಂದು ಆ ಪತ್ರಿಕೆಯು ತಿಳಿಸಿದೆ

ದಂಡಯಾತ್ರೆಗೆ ಹಾಲೆಂಡು ಅನುಕೂಲವಾಗಿದೆ

ನಾರ್ವೆಯಿಂದ ಸ್ಪೇನ್‌ವರೆಗಿನ ಯೂರೋಪು ತೀರದಲ್ಲಿ ಹಾಲೆಂಡು ತೀರವೇ ಮಿತ್ರರ ದಂಡಯಾತ್ರೆಗೆ ಅನುಕೂಲವಾದ ಮಾರ್ಗವೆಂದು ಸ್ವಿಟ್ಜರ್ಲೆಂಡಿನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಅಟ್ಲಾಂಟಿಕ್ ತೀರದ ಜರ್ಮನ್ ಕೋಟೆ ಕೊತ್ತಳಗಳ ಗುಟ್ಟೆಲ್ಲ ಡಚ್ಚರಿಗೆ ಗೊತ್ತಿದೆಯೆಂದೂ ಗುಪ್ತ ರೇಡಿಯೋಗಳು ಅವುಗಳನ್ನೆಲ್ಲ ಮಿತ್ರರಿಗೆ ಬ್ರಾಡ್‌ಕಾಸ್ಟ್ ಮಾಡಿ ತಿಳಿಸಿವೆಯೆಂದೂ ಪ್ರಕಟವಾಗಿದೆ

ರಷ್ಯಾದಲ್ಲಿ ಉಗ್ರಕದನ

೧೯೪೩ ರ ಬೇಸಿಗೆ ಧಾಳಿಯನ್ನು ಹಿಟ್ಲರನು ಆರಂಭಿಸಿದಂದಿನಿಂದ ೧೮೦ ಮೈಲಿ ಉದ್ದದ ರಣಮುಖದಲ್ಲಿ ಭೀಕರ ಕಾಳಗ ಒಂದೇ ಸಮನಾಗಿ ಸಾಗಿದೆ ಯುದ್ಧ ಚರಿತ್ರೆಯಲ್ಲೇ ಹಿಂದೆಂದೂ ನಡೆಯದಿರುವಂತಹ ಭೀಕರ ಟ್ಯಾಂಕು ಕಾಳಗ ಹತ್ತಿ ಬೇಯುತ್ತಿದೆ ಜರ್ಮನರು ಒಂದೆರಡು ಕಡೆ ರಷ್ಯನ್ ರಕ್ಷಣಾವ್ಯೂಹ ಭೇದಿಸಿದ್ದಾರಾದರೂ, ಜರ್ಮನರು ಹತ್ತು ಹೆಜ್ಜೆಯನ್ನೂ ಮುಂದಿಟ್ಟಂತಿಲ್ಲ ಗಾಯಗೊಂಡು ಹಿಂಭಾಗಕ್ಕೆ ಸಾಗಿಸಲ್ಪಟ್ಟವರನ್ನು ಬಿಟ್ಟು ೧೧,೦೦೦ ಮಂದಿ ಜರ್ಮನರು ನಷ್ಟವಾಗಿದಾರೆಂದು ಹೇಳಲಾಗಿದೆ

ಕುಲ ಕೊಲ್ಲಿಯಲ್ಲಿ ನೌಕಾ ಕಾಳಗ

ಕಳೆದ ವಾರ ಜಪಾನು ಯುದ್ಧ ನೌಕೆಗಳು, ವಿಲಾ ಮತ್ತು ಬೈರೋಕೋ ದ್ವೀಪಗಳನ್ನು ಹೆಲ್ಲುಮಾಡಲು ಬಂದ ಅಮೆರಿಕನ್ ನೌಕೆಗಳನ್ನು ತಡೆಯಲು ಯತ್ನಿಸಿದಾಗ ಆರಂಭವಾದ ನೌಕಾಕಾಳಗ ಕುಲಾ ಕೊಲ್ಲಿಯಲ್ಲಿ ಇನ್ನೂ ಮುಂದುವರಿಯುತ್ತಿದೆ. ಒಂದೊಂದೇ ದ್ವೀಪವಾಗಿ ಗೆಲ್ಲುತ್ತ ಹೋಗಬೇಕಾದ ಪ್ರಯಾಸವನ್ನು ತಪ್ಪಿಸಿಕೊಳ್ಳುವಸಲುವಾಗಿ ಅಮೆರಿಕನ್‌ನೌಕಾದಳವು ಜಪಾನಿನ ನೌಕಾದಳವನ್ನೆಲ್ಲ ಸಮುದ್ರ ಬಯಲಿಗೆಳೆದು ನಾಶಮಾಡಬೇಕೆಂದು ಪ್ರಯತ್ನಿಸುತ್ತಿದೆ. ಇತ್ತ ನೌಕಾ ಕಾಳಗ ಭೀಕರವಾಗಿ ಸಾಗುತ್ತಿರುವಂತೆ, ಆಕಾಶದಲ್ಲೂ ಘೋರ ವಿಮಾನ ಕಾಳಗವಾಗುತ್ತಿದೆ. ಈ ಕಾಳಗಗಳ ಫಲಿತಾಂಶವಾಗಿ ನ್ಯೂಜಾರ್ಜಿಯಾದಲ್ಲಿರುವ ಪ್ರಧಾನ ವಿಮಾನ ನಿಲ್ದಾಣ ಮುಂತಾದವು ಹಾಳಾದರೆ ಜಪಾನಿನ ಸರಬರಾಯಿ ಮಾರ್ಗ ಕತ್ತರಿಸಿ ಜಪಾನರನ್ನು ಸುತ್ತುವರಿಯಲು ಎಡೆದೊರಕುತ್ತದೆಯೆಂದು ಯೋಚಿಸಲಾಗಿದೆ

೧೪೦೦೦ ಮಂದಿ ಭಾರತೀಯರು ನಾಜಿಗಳ ಸೆರೆಯಲ್ಲಿದ್ದಾರೆ

ಒಟ್ಟು ೧೪೦೦೦ ಮಂದಿ ಭಾರತೀಯರು ಇಟಲಿ, ಮತ್ತು ಜರ್ಮನಿಗಳ ಸೆರೆಯಾಳುಗಳಾಗಿದಾರೆಂದು, ಲಂಡನ್ನಿನ ಭಾರತೀಯರ ಸೌಕರ್ಯ ನಿಧಿ ಸಂಸ್ಥೆಯ ವರದಿಯಲ್ಲಿ ಹೇಳಲಾಗಿದೆ ಫೆಬ್ರವರಿಯಿಂದ ಏಪ್ರಿಲ್ ವರೆಗಿನ ತ್ರೈಮಾಸಾವಧಿಯಲ್ಲಿ ೧೭೯೭೨ ಆಹಾರದ ಭರಣಿಗಳನ್ನು ಪ್ರತಿವಾರವೂ, ಅರ್ಧ ವರ್ಷಕ್ಕೊಮ್ಮೆ ಕಳಿಸುವ ೬೨೦೦ ಬಟ್ಟೆ ಗಂಟುಗಳನ್ನು ಈ ಸೆರೆಯಾಳುಗಳಿಗಾಗಿ ಕಳಿಸಿಕೊಡಲಾಗಿದೆ ಪುಸ್ತಕಗಳನ್ನೂ ಸಿಕ್ಕರಿಗೆ ಪ್ರತ್ಯೇಕವಸ್ತುಗಳನ್ನು ಕಳುಹಿಸಿರುವದಾಗಿ ಪ್ರಕಟವಾಗಿದೆ

ಯುಕ್ರೇನನ್ನು ಶಾಶ್ವತವಾಗಿ ಜರ್ಮನರದನ್ನಾಗಿಸುವ ಪ್ರಯತ್ನ

ಯುಕ್ರೇನನ್ನು ಶಾಶ್ವತವಾಗಿ ತಮ್ಮದಾಗಿಸಿಕೊಳ್ಳಬೇಕೆಂದು ಜರ್ಮನರು ಒಂದು ಯೋಜನೆ ಸಿದ್ಧಗೊಳಿಸಿ ಅದರಂತೆ ಕಾರ್ಯಸಾಗಿಸಿದ್ದಾರೆ ಈಗಾಗಲೆ ಜರ್ಮನ್ ಪ್ರಜೆಗಳು ಸ್ತ್ರೀ ಪುರುಷರು ಮಕ್ಕಳು ಬಂದು ಯುಕ್ರೇನಿನಲ್ಲಿ ನೆಲೆಸಿದಾರೆ ಜರ್ಮನ್ ಸ್ತ್ರೀಯರ ಶಿಸು ನಾರ್ಡಿಕ್ ಕುಲದ ಸಾಮರ್ಥ್ಯಗಳ ಫಲವಾಗಿ ಇನ್ನು ೪೦ ವರ್ಷಗಳಲ್ಲಿ ಯುಕ್ರೇನಿನಲ್ಲಿ ಜರ್ಮನರೇ ಬಹು ಸಂಖ್ಯಾತರಾಗುವರೆಂದು ಒಬ್ಬ ಜರ್ಮನ್ ಪ್ರೊಫೆಸರು ಕೀವ್‌ನಲ್ಲಿ ಭಾಷಣ ಮಾಡುತ್ತ ನುಡಿದರು

ಸುಭಾಸ್ ಬೋಸ್ ಸಿಂಗಪುರಕ್ಕೆ ಬಂದಿರುವರೇ ?

ಸುಭಾಸ್ ಬೋಸರು ಸಿಂಗಪುರದಲ್ಲಿ ಬಂದಿಳಿದರೆಂಬ ಸುದ್ದಿ ಬಂದಿದೆ ಇದರಿಂದ ಜಪಾನರೂ ಜರ್ಮನರೂ ದೊಡ್ಡ ದೊಡ್ಡ ಸಬ್‌ಮೆರೀನ್ನುಗಳನ್ನು ಬಳಸಿ ಸಾಮಾನು ಕಳಿಸಿ ತರಿಸಿಕೊಳ್ಳುತ್ತಿದ್ದಾರೆಂದೂ, ನಿಪುಣರನ್ನು ಜರ್ಮನರು ಜಪಾನಿಗೆ ಕಳುಹಿಸುತ್ತಿದ್ದಾರೆಂದೂ ಹೇಳುತ್ತಿದ್ದ ಸುದ್ದಿಗೆ ಸಾಕ್ಷ್ಯ ದೊರೆತಂತಾಗಿದೆ ಈ ಹಿಂದೆ ಮೆಡಗಾಸ್ಕರ್ ದ್ವೀಪವನ್ನು ಮಧ್ಯ ನಿಲ್ದಾಣವಾಗಿಟ್ಟುಕೊಂಡು ವಸ್ತುಗಳ ವಿನಿಮಯ ಮಾಡಿಕೊಳ್ಳುತ್ತಿದ್ದರು ವಿಮಾನಗಳ ನಿರ್ಮಾಣವನ್ನು ಉತ್ತಮಗೊಳಿಸುವ ಸಲುವಾಗಿ ಜರ್ಮನಿಯ ನಿಪುಣರು ಜಪಾನಿಗೆ ಬರುತ್ತಿದ್ದಾರೆಂದೂ ಜಪಾನು ಕ್ರೋಮಿಯಂ,ಆಂಟಿಮೊನಿ, ಟಿನ್, ರಬ್ಬರ್, ಟಂಗ್‌ಸ್ಟನ್ ಇತ್ಯಾದಿ ಮೂಲವಸ್ತುಗಳನ್ನು ಜರ್ಮನಿಗೆ ಕೊಡುತ್ತಿದೆಯೆಂದೂ ಊಹಿಸಲಾಗಿದೆ

ರಷ್ಯಾ ಜಪಾನ್ ಯುದ್ಧ ನಡೆಯುವುದೇ ?

ರಷ್ಯವು ಜಪಾನಿನಮೇಲೆ ಬಿದ್ದೀತೇ ಅಥವಾ ಜಪಾನೇ ರಷ್ಯದ ಮೇಲೆ ಬಿದ್ದೀತೇ ?

ಪೆಸಿಫಿಕ್ ಕ್ಷೇತ್ರವನ್ನು ರಷ್ಯ ಮರೆಯಲಾರದು. ಪಶ್ಚಿಮದಲ್ಲಿ ತನ್ನ ಸ್ಥಾನ ಭದ್ರವಾಯಿತೆಂದು ದೃಢಪಟ್ಟು ಪೆಸಿಫಿಕ್‌ನಲ್ಲಿ ಮಿತ್ರರು ಪೂರ್ಣ ಬಲರಾಗಿ ಯುದ್ಧ ಕೈಗೊಂಡೆಂದು ರಷ್ಯವು ಜಪಾನಿನ ಮೇಲೆ ಕಾಳಗ ಹೂಡಿಯೇ ತೀರೀತು, ಎಂಬೊಂದು ಅಭಿಪ್ರಾಯವಿದೆ. ಈಗ ಜಪಾನು ಮಂಚೂರಿಯದಲ್ಲಿ ದಳಗಳನ್ನು ಜಮಾಯಿಸುತ್ತಿದೆ. ಅಂದರೆ ಸೂಕ್ತ ಸಮಯ ನೋಡಿ ರಷ್ಯದಮೇಲೆ ಬೀಳುವದಕ್ಕೋ ಅಥವಾ ರಷ್ಯವೇನಾದರೂ ಮೇಲೆ ಬಿದ್ದರೆ ಎದುರಿಸಲು ಸಿದ್ಧತೆಯೊ ಹೇಳಬರುವಂತಿಲ್ಲ. ಹವದ ದೃಷ್ಟಿಯಿಂದ ಮಧ್ಯ ಬೇಸಿಗೆ ಅನುಕೂಲವಿದೆಯಾಗಿ ಆಗ ಜಪಾನು ಕೈಹಚ್ಚೀತೆಂದು ಒಂದೂಹೆ. ಜರ್ಮನಿ ಸ್ಟಾಲಿನ್‌ಗ್ರಾಡ್ ಮುತ್ತಿದ ಕಾಲ ತುಂಬ ಸೂಕ್ತಕಾಲವಾಗಿತ್ತು ಅಂತಹ ಸದವಕಾಶವನ್ನು ಜಪಾನು ಕಳೆದುಕೊಂಡಿತು ಎಂದು ಮಿಲಿಟರಿ ತಜ್ಞರ ಅಭಿಪ್ರಾಯ.

ಭಾರತದಲ್ಲಿ ಸೈನ್ಯಕ್ಕೆಸೇರಿರುವರ ಸಂಖ್ಯೆ

ಭಾರತದ ಪ್ರತಿ ಪ್ರಾಂತಗಳಿಂದಲೂ ಸೈನ್ಯಕ್ಕೆ ಈ ರೀತಿ ಆಯ್ಕೆ ನಡೆದಿದೆಯೆಂದು ಶ್ರೀ ಅಮೆರಿ ಕಾಮನ್ಸ್ ಸಭೆಯಲ್ಲಿ ತಿಳಿಸಿದರು ಪಂಜಾಬು ಶೇ ೫೦, ಸಂಯುಕ್ತ ಪ್ರಾಂತ್ಯ ಶೇ ೧೫, ಮದರಾಸು ಪ್ರಾಂತ್ಯ ೧೦, ಮುಂಬಯಿ ಪ್ರಾಂತ್ಯ ೧೦, ಗಡಿನಾಡು ೫, ಅಜ್ಮೀರ್ ಮಾರ್ವಾರ ೩, ಬಂಗಾಳಾ ೨, ನೇಪಾಳದಿಂದ ಶೇ ೮ ಭಾರತ ಸೇನೆಯಲ್ಲಿ ಶೇ ೩೪ ಮಂದಿ ಮುಸ್ಲಿಮರು, ಘೂರ್ಕರೂ ಸೇರಿ ಶೇ ೫೦ ಮಂದಿ ಹಿಂದೂಗಳೂ, ಶೇ ೧೦ ರಷ್ಟು ಸಿಕ್ಕರು ಇದ್ದಾರೆಂದು ತಿಳಿಸಿದರು

ಜಪಾನೀ ಸೈನ್ಯ ಶಿಬಿರಗಳ ಮೇಲೆ ದಾಳಿ

ಅರಕಾನ್ ತೀರದಲ್ಲಿ ಡಾಕೀಡಂಗಿಗೆ ೨೦ ಮೈಲಿ ಉತ್ತರದಲ್ಲಿರುವ ತಾಂಗ್‌ಡಾರಿಯಲ್ಲಿ ಜಪಾನರು ಕಟ್ಟಿಕೊಂಡಿದ್ದ ಮಳೆಗಾಲದ ಶಿಬಿರಗಳ ಮೇಲೆ ಆರ್ ಎ ಎಫ್ ವಿಮಾನಗಳೂ, ಡೈವ್ ಬಾಂಬರುಗಳೂ ಜೂನ್ ೭ ನೇ ತಾರೀಕು ಮಧ್ಯಾಹ್ನ ಪ್ರಬಲದಾಳಿ ನಡೆಸಿದುವು ಗುರಿ ಸ್ಥಾನಗಳಲ್ಲಿಯೂ, ಸೈನ್ಯ ಶಿಬಿರಗಳಲ್ಲಿಯೂ ಬೆಂಕಿ ಹತ್ತಿಕೊಂಡು ಉರಿಯಿತು ಯೇನಾಂಗ್ ಯಾಂಗ್ ಮತ್ತು ನಿಯಾಂಗ್‌ಲಾ ಎಂಬಲ್ಲಿದ್ದ ಎಣ್ಣೆ ಶೇಖರಣೆ ಸ್ಥಾನಗಳ ಮೇಲೆ ಬೋ ಫೈಟರುಗಳು ಅನೇಕಸಾರಿ ಧಾಳಿ ನಡೆಸಿ ಬಾಂಬು ಹಾಕಿದ ಕಾರಣ ಶೇಖರಿಸಿದ್ದ ಎಣ್ಣೆಯೆಲ್ಲವೂ ಬೆಂಕಿ ಹತ್ತಿ ಉರಿದುಹೋಯಿತು ಅಮೆರಿಕಾ ವೈಮಾನಿಕ ಪಡೆಯ ಮೀಡಿಯಂ ಬಾಂಬರುಗಳು ಉತ್ತರ ಮತ್ತು ಮಧ್ಯ ಬರ್ಮಾದಲ್ಲಿ ಶತ್ರು ಸರಬರಾಜುಗಳ ಮೇಲೆ ದಾಳಿನಡೆಸಿದುವು ಮಾಂಡಲೆ ಒಳ ಉಗ್ರಾಣಗಳ ಮೇಲೆಯೂ, ನದಿಯಲ್ಲಿದ್ದ ದೋಣಿಗಳ ಮೇಲೆಯೂ ಬಾಂಬುಹಾಕಿದವು

ಮರದ ಹಡಗುಗಳನ್ನು ಜಪಾನರು ನಿರ್ಮಿಸುತ್ತಿದಾರೆ

ಜಪಾನು ಮರದ ಹಡಗುಗಳನ್ನು ನಿರ್ಮಿಸುತ್ತಿದೆ. ಅವಕ್ಕೆ ಕಬ್ಬಿಣ ದೊರಕದೆ ಇರುವುದೇ ಇದಕ್ಕೆ ಕಾರಣ ಫಿಲಿಪೈನ್ಸಿನಲ್ಲಿ ಕಬ್ಬಿಣವಿದೆ ಅದರ ಅದಿರನ್ನು ಅಲ್ಲಿಂದ ಸಾಗಿಸಿಕೊಂಡು ಹೋಗಲು ಜಪಾನಿಗೆ ಸಾಧ್ಯವಿಲ್ಲವಾಗಿದೆ

ದಾವಣಗೆರೆ ಬಳಿ ಇರುವ ತೋಳ-ಹುಣಸೆ ರೈಲ್ವೆ ಸ್ಟೇಷನ್ ಮಾಸ್ಟರಾದ ಶ್ರೀಮಾನ್ ಎಂ ರಾಮಸ್ವಾಮಿ ಅಯ್ಯಂಗಾರ್ ಎಂಬುವರು ದಾವಣಗೆರೆಯಿಂದ ಮೇಲ್ ಟ್ರೈನಿನಲ್ಲಿ ಬರುತ್ತಾ ತೋಳಹುಣಸೆಯಲ್ಲಿ ರೈಲು ನಿಲ್ಲುವುದಿಲ್ಲವಾದ್ದರಿಂದ ಹಾಗೆಯೇ ಇಳಿದುಬಿಡುವ ಹುಚ್ಚು ಧೈರ್ಯದಿಂದ ಕೆಳಕ್ಕೆ ಧುಮುಕಿ, ಗಾಡಿಗೆ ಸಿಕ್ಕಿ, ಮಹಾ ಅಪಘಾತವುಂಟಾಗಿ ಮರಣಹೊಂದಿದರು ಮೃತರಿಗೆ ೩೭ ವಯಸ್ಸು ತಾಯಿ ತಂದೆಗಳೂ, ಇಬ್ಬರು ಮಡದಿಯರೂ, ಮೂವರು ಮಕ್ಕಳೂ ಇದ್ದಾರೆ

ಸ್ವೀಕಾರ

ಧಾರವಾಡ ಡಿ|| ಕಲಘಟಗಿ ತಾ|| ಬೇಲವಂತರ ಹಿರೇಮಠದ ಶ್ರೀ|| ಶ್ರೀ ಚನ್ನಬಸವೇಶ್ವರ ಶಿವಯೋಗಿಗಳ ಪುಣ್ಯತಿಥಿ ಸಮಾರಂಭ ಸಮಯದಲ್ಲಿ ಸದರಿ ಮಠಾಧ್ಯಕ್ಷರಾದ ಶ್ರೀ ಸಿದ್ಧರಾಮೇಶ್ವರಸ್ವಾಮಿಗಳವರು ಪ್ರಭಾ ಪೋಷಣಕ್ಕಾಗಿ ೧ ರೂಪಾಯಿಯನ್ನು ತೆಗೆದು ಕಳಿಸಿಕೊಟ್ಟಿರುತ್ತಾರೆ.

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಕೂಡ್ಲಮಠದ ಸಾ|| ಶ್ರೀ ಸಿದ್ದಯ್ಯನವರ ಸ್ತುತ್ಯಕಾರ್ಯ

ಧರ್ಮಸುಧಾರಣೆಗಾಗಿ ಅಹೋರಾತ್ರಿಗಳಲ್ಲಿಯೂ ಶ್ರಮಿಸುತ್ತಿರುವ, ಶ್ರೀಮದ್ಧಿ[illegible]ಪುರಮಠ ಬೆಂಗಳೂರು ಶ್ರೀ ಮಹಾಂತಿನಮಠಾಧ್ಯಕ್ಷ ಶ್ರೀ ಷ|| ಬ್ರ| ಗಂಗಾಧರ ಶಿವಾಚಾರ್ಯಸ್ವಾಮಿಗಳವರು ಹರ್ಲಾಪುರ ಸಮೀಪದಲ್ಲಿಯ ಲಕ್ಷ್ಮೇಶ್ವರ ರಸ್ತೆಯಲ್ಲಿ ಸ್ಥಾಪಿಸಿದ ಶ್ರೀ ಮುಕ್ತಿಮಂದಿರ ಗುರುಕುಲಕ್ಕೆ ಮಿರಜ ಸಂ|| ಲಕ್ಷ್ಮೇಶ್ವರ ತಾ ವನಸಿಗ್ಲಿ ನಿವಾಸಿಗಳಾದ ಕೂಡ್ಲಮಠದ ಸಾ|| ಶ್ರೀ ಸಿದ್ದಯ್ಯನವರು (೨೦೦) ಇಪತ್ತೈದ [illegible] ರೂಪಾಯಿಗಳ ಸೇವೆಯನ್ನು ಸಲ್ಲಿಸಲು ಚಿತ್ತಸಂತೋಷದಿಂದ ಒಪ್ಪಿಕೊಂಡಿರುತ್ತಾರೆಂದು ತಿಳಿಸಲು ಪರಮ ಸಂತೋಷವಾಗುತ್ತದೆ ಇತರ ಧನಿಕರು ಶ್ರೀ ಸಿದ್ದಯ್ಯನವರನ್ನು ಅನುಸರಿಸಿದರೆ ಗುರುಕುಲವು ಸ್ವಲ್ಪದರಲ್ಲಿ ಅಭಿವೃದ್ಧಿಯನ್ನು ಹೊಂದುವುದರಲ್ಲಿ ಸಂದೇಹವಿಲ್ಲ ಶ್ರೀಗ[illegible]ತರ [illegible] ಕರ್ತವ್ಯವಾಗಿದೆ

ಶಿವಧರ್ಮಾಭಿಮಾನಿ

ಮೈಸೂರು ವೀರಶೈವ ವಿದ್ಯಾವರ್ಧಕ ಸಂಘ, ಸ್ವೀಕಾರ

(1) ಬೆ[illegible] ಜ [illegible] ಜನ್ಮ [illegible] ನಡೆದ ವಿವಾಹ ಕಾಲದ [illegible] ಫಂಡಿಗಾಗಿ [illegible] ರೂಪಾಯಿಗಳು

(೨) ಅರಳೇಪೇಟೆ ದೇಶದ ಶೆಟ್ರು ಮ|| ರಾ|| ಬಿ ರುದ್ರಶೆಟ್ಟರ [illegible] ಚಿ| ಚಂದ್ರಶೇಖರಪ್ಪನೆಂಬ ವರನಿಗೂ ಮೂಡಬಿಳ್ಳಾಪುರದ ಮ| ರಾ| ನಂಜಪ್ಪನವರ ಕುಮಾರಿ ಚಿ|| ಸೌ| ಶಾರದಮ್ಮ ಎಂಬ ಕನ್ಯೆಗೂ ತಾ| [illegible] ರಲ್ಲಿ ನಡೆದ ವಿವಾಹ ಕಾಲದಲ್ಲಿ ವೇ ಎನ್ ರುದ್ರಯನವರ ಮೂಲಕ ಕಾಲೇಜ್ ಫಂಡಿಗಾಗಿ ಎರಡು ರೂಪಾಯಿಗಳು

(೩) ಬೆಂಗಳೂರು ಸಿಟಿ ದೇಶದ ದೊಡ್ಡಪೇಟೆ ರೇವಣ್ಣಶೆಟ್ಟರ ಸಹೋದರಿ ಚಿ| ಸೌ| ಶಾಂತಮ್ಮನೆಂಬ [illegible] ತುಮಕೂರು ಮ| ರಾ| ಒಳೆ ಸಿದ್ದಲಿಂಗಪ್ಪನವರ ದ್ವಿತೀಯಪುತ್ರ ಚಿ| ನಂದೀಶ್ವರನೆಂಬ ವರನಿಗೂ ತಾ [illegible] ರಲ್ಲಿ ಶ್ರೀರಾಂಪುರದಲ್ಲಿ ನಡೆದ ವಿವಾಹ ಕಾಲದಲ್ಲಿ ಶ್ರೀ ಜ|| ರೇ| ಪಂ| ಸಂ| ಶಾ| ಫಂಡಿಗಾಗಿ ಅರಳೇಪೇಟೆ ದೇಶದ ರುದ್ರಶೆಟ್ಟರ ಮೂಲಕ ಎರಡು ರೂಪಾಯಿಗಳು

ಪುಣ್ಯತಿಥಿ ಮಹೋತ್ಸವ

ಧಾರವಾಡ ಜಿಲ್ಲಾ ಕಲಘಟಗಿ ತಾಲೂಕ ಬೆಲವಂತರ ಹಿರೇಮಠದ ಲಿಂಗೈಕ್ಯ ಶ್ರೀ ಚೆನ್ನಬಸವೇಶ್ವರಶಿವಯೋಗಿಗಳವರ ಪುಣ್ಯತಿಥಿ ಮಹೋತ್ಸವವು ಸಮೀಪ ಮಠಾಧ್ಯಕ್ಷರಾದ ಶ್ರೀ ಸಿದ್ಧರಾಮೇಶ್ವರಸ್ವಾಮಿಗಳವರ ನೇತೃತ್ವದಲ್ಲಿ ಇದೇ ಜೇಷ್ಠ ಶು|| ೧೩ ಬುಧವಾರ ತಾ|| ೨೦-೬-೧೯೪೩ನೇ ದಿವಸ ಬಹು ವಿಜೃಂಭಣೆಯಿಂದ ಜರಗಿಸಲ್ಪಟ್ಟಿತು ಆ ದಿವಸ ಮಧ್ಯಾಹ್ನದಿಂದ ಸಾಯಂಕಾಲದವರೆಗೆ ಅಸಂಖ್ಯ ಜನರಿಗೆ ಅನ್ನ ಸಂತರ್ಪಣೆ ನಡೆಯಿತು ರಾತ್ರಿ ಇಂಗಳಗಿ ಹಿರೇಮಠ ವಿರುಪಾಕ್ಷಶಾಸ್ತ್ರಿಗಳವರು ಪಂಚಾಕ್ಷರಿ ಮಹಾತ್ಮೆ (ರಾಜಶೇಖರ ಕಥೆ) ಯನ್ನು ಸುಶ್ರಾವ್ಯವಾಗಿ ಕೀರ್ತನ ಮಾಡಿದರು ಇದಲ್ಲದ ಬ್ಯಾಡಗಿ ಮಠದ [illegible]ಯವರು ಚೆನ್ನಬಸವೇಶ್ವರಶಿವಯೋಗಿಗಳವರ ಸಂಕ್ಷಿಪ್ತ ಚರಿತ್ರೆ ಲಾವಣಿಯನ್ನು ಹಾಡಿದರು ಶ್ರೀಚೆನ್ನಬಸವೇಶ್ವರ ಭಜನಾ ಸಂಘದವರು ಚನ್ನಪ್ಪಸಾಲಿ ಇವರ ಬೃಂಗಿನಾಟ್ಯದೊಂದಿಗೆ ಇಂಪಾಗಿ ಭಜನ ಮಾಡಿದರು ಮರುದಿವಸ ವಿರುಪಾಕ್ಷಶಾಸ್ತ್ರಿಗಳವರಿಗೆ ಶ್ರೀಗಳವರು "ಕೀರ್ತನಪ್ರವೀಣ ವೆಂಬ ಪ್ರಶಸ್ತಿಯನ್ನು ದಯಪಾಲಿಸಿ ಬೆಳ್ಳಿಯ ಪದಕವನ್ನು ಬಹುಮಾನವಾಗಿ ಕೊಟ್ಟರು ಈ ಪುಣ್ಯತಿಥಿ ಮಹೋತ್ಸವಕ್ಕೆ ತೊನಿಶ್ಯಾಳ, ಹುಬ್ಬಳ್ಳಿ, ಹಾವೇರಿ, ಬ್ಯಾಡಗಿ, ತರ್ಲಘಟ್ಟ, ಶೀಲವಂತ, ಆಲದಕಟ್ಟಿ, ಮಳಲಿ ಗಂಜೀಗಟ್ಟಿ, ಹಾನಗಲ್ಲ, ಕಂಪಲಿಕೊಪ್ಪ, ಕಲಘಟಗಿ, ದೇವಿಕೊಪ್ಪ ಮೊದಲಾದ ಅನೇಕ ಊರುಗಳಿಂದ ಭಕ್ತ ಮಾಹೇಶ್ವರರು ಆಗಮಿಸಿದ್ದರು

ಶಿವಪ್ಪ ಅರಳೀಕಟ್ಟಿ

ರೈಲ್ವೇ ಅಪಘಾತ

ಬೆಜವಾಡದಿಂದ ಗುಂಟೂರಿಗೆ ಹೊರಟಿದ್ದ ಟಪಾಲು ರೈಲು ಸಂತಮಗಳೂರು ಸವಾಲಯ್ಯಪುರಗಳ ಮಧ್ಯೆ ಉರುಳಿತು ಗಾರ್ಡ್ ಗಾಡಿ ಒಂದು ಹೊರತು ಮಿಕ್ಕೆಲ್ಲ ಗಾಡಿಗಳೂ ಉರುಳಿದವು ಪರಿಣಾಮವಾಗಿ ೨೦ ಮಂದಿ ಸತ್ತರು [illegible] ಮಂದಿ ಗಾಯಗೊಂಡರು ಗಾಯಾಳುಗಳ ಪೈಕಿ ೫೬ ಮಂದಿ ಚಿಕಿತ್ಸೆ ಪಡೆದು ತಮ್ಮ ತಮ್ಮ ಊರಿಗೆ ತೆರಳಿದರು ಇಬ್ಬರು ಇನ್ನೂ ಆಸ್ಪತ್ರೆಯಲ್ಲಿದ್ದಾರೆ ಅನಾಹುತದಿಂದ ಅಪಾರ ನಷ್ಟವಾಗಿದೆಯೆಂದು ಹೇಳಲಾಗಿದೆ

ತುರ್ಕಿ ಗಡಿಯಲ್ಲಿ ಜರ್ಮನ್ ಸೇನೆ

ಗ್ರೀಕ್ ಥ್ರೇಸ್ ತೀರ ಕ್ಷೇತ್ರವನ್ನೂ ತುರ್ಕಿ ಗಡಿಯ ಪಟ್ಟಣಗಳನ್ನೂ ಜರ್ಮನ್ ದಳಗಳು ಆಕ್ರಮಿಸಿವೆ ಎಂಬುದಾಗಿ ಸುದ್ದಿ ಬಂದಿದೆ ಈ ಮುಂಚೆ ಈ ಪ್ರದೇಶದಲ್ಲಿ ಬಲ್ಗೇರಿಯಾ ದಳಗಳಿದ್ದವು

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸಂಪ್ರಶ್ನೆ ([illegible] ಆವೃತ್ತಿ)	೧ ಆಣೆ
ಸನ್ಯಾಸ[illegible] ([illegible] ಆವೃತ್ತಿ [illegible])	೧ ಆಣೆ
ಪಂಚ[illegible] ([illegible] ಆವೃತ್ತಿ)	೧ ಆಣೆ
ಶ್ರೀ[illegible] ([illegible] ಆವೃತ್ತಿ)	೧ ಆಣೆ
ಸಂಸ್ಕಾರ[illegible] ([illegible] ಆವೃತ್ತಿ)	೧ ಆಣೆ
ಶ್ರೀ[illegible] ನವಾವಳಿ (೨ನೆಯ ಆವೃತ್ತಿ)	೨ ಆಣೆ
ಬ[illegible] ([illegible] ಆವೃತ್ತಿ)	೩ ಆಣೆ
ಶ್ರೀ[illegible] ([illegible] ಆವೃತ್ತಿ)	೨ ಆಣೆ
ಪಂಚಾಚಾರ್ಯ ಪ್ರಭಾ[illegible]	[illegible] ಆಣೆ
ಶ್ರೀಗುರು [illegible]	೨ ಆಣೆ
ಶ್ರೀರುದ್ರನ [illegible]	[illegible] ಆಣೆ
ಪಂಚಾಚಾರ ಪ್ರದೀಪಿಕಾ	೩ ಆಣೆ
ಬಿಲ್ವಮಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೨ನಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನಯ ಆವೃತ್ತಿ)	೪ ಆಣೆ
ಶ್ರೀಪಂಡಿತಾರಾಧ್ಯರ [illegible]	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೬ ಆಣೆ
ಸನ್ಯಾಸಾಶ್ರಮವಿಮರ್ಶೆ ತತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ [illegible])	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
[illegible] ಹಾರಾವಳಿ (ಶ್ರೀಲೋಚನಶಿವಾಚಾರ್ಯ ಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಹಾ[illegible] ದೀಕ್ಷಾವಿಧಿ (೨ನಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನಯ ಆವೃತ್ತಿ)	೧ ರೂ
ವೀರಶೈವರತ್ನ ([illegible] ಆವೃತ್ತಿ [illegible])	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
[illegible]ಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾ[illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮುಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	[illegible] ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवानंद (मराठी)	१ रु
महानारायणोपनिषत् (वीरशैवभाष्य संस्कृत)	१ रु
सिद्धान्तशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ ೫ ರೂ ಗಳಿಗೆ ಮೇಲ್ಪಟ್ಟ ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

EGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಶಾನವಪಂಕಜಾತಪಸಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ
ಪಂಚಾಚಾರವಿಯಾಪಕರ್ ಪವಿಲಸತ್ಪಂಚಾಕ್ಷರೀಶೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ಪಾಲಿಪ್ಪುದೀಲೋಕವ.

ವವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೯ನೇ ಜುಲೈ ೧೯೪೩ [ಸಂಚಿಕೆ ೧೧

ಮಹತ್ವಾಕಾಂಕ್ಷೆ

ಲೇ॥ ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು [illegible]

ಸ್ವೋ ವಷ್ಟಿ ಶತಂ ಶತೀ ದಶಶತಂ ಲಕ್ಷಂ ಸಹಸ್ರಾಧಿಪೋ ।
ೇಶಃ ಕ್ಷಿತಿರಾಜತಾಂ ಕ್ಷಿತಿಪತಿಶ್ಚಕ್ರೇಶತಾಂ ವಾಂಛತಿ ॥
ೇಶಃ ಸುರರಾಜತಾಂ ಸುರಪತಿ ಬ್ರಹ್ಮಾಸ್ಪದಂ ವಾಂಛತಿ ।
ಷ್ಣುಪದಂ ಹರಿಃ ಶಿವಪದಂ ತ್ವಾಶಾವಧಿಂ ಕೋಗತಃ ॥

ಮಹತ್ವಾಕಾಂಕ್ಷೆಯೆಂದರೆ ಹೆಚ್ಚಿನ ಆಶೆಯೆಂದು ೇಳಬಹುದು ತಾವು ವಾಸವಾಗಿರುವ ದೇಶ ಜನಾಂಗ ವೆ ವ್ಯವಹಾರ ಮಾಡುವ ಜನಸಮುದಾಯದಲ್ಲಿ ಪ್ರಸಿದ್ಧರಾಗಬೇಕೆಂಬ ಉತ್ಕಟೇಚ್ಛೆಯು ಸಾಮಾನ್ಯ ಗಿ ಎಲ್ಲರಿಗೂ ಇದ್ದೇ ಇರುವುದು ಜಗತ್ತಿನಲ್ಲಿ ಾನವು ವೈಭವವು ತನಗೆ ಪ್ರಾಪ್ತವಾಗಬೇಕೆಂದು ತಿಯೊಬ್ಬನೂ (ಅತಿ ಕೀಳನು ಸಹ) ಇಚ್ಛಿಸುವುದು ಭಾವಿಕವು ತಾನೀಗ ತಾನಿರುವ ಸ್ಥಿತಿಗಿಂತಲೂ ೇಲಕ್ಕೇರಬೇಕೆಂಬ ಈ ಮಹತ್ತರದ ಅಪೇಕ್ಷೆಯು ನುಷ್ಯನ ಹುಟ್ಟುಗುಣವೆಂದು ಹೇಳಬಹುದು

ಈ ಮಹತ್ವಾಕಾಂಕ್ಷೆಯು ಬೇರೆ ಬೇರೆ ಜನರಲ್ಲಿ ರೆ ಬೇರೆ ರೂಪದಿಂದ ಕಂಡುಬರುತ್ತದೆ ಕೆಲವರಿಗೆ ಶ್ವಾಧೀಶರಾಗಿ ಧನಿಕಶ್ರೇಷ್ಠರೆನಿಸಿಕೊಳ್ಳಬೇಕೆಂಬ ಾಂಕ್ಷೆಯಿರುತ್ತದೆ ಕೆಲವರಿಗೆ ವಿದ್ವಾಂಸರಾಗುವ ಕಾಂಕ್ಷೆ ಯಿರುತ್ತದೆ ಕೆಲವರಿಗೆ ತಮ್ಮ ಧರ್ಮತತ್ವಗಳನ್ನು ಕಾಶಕ್ಕೆ ತರಬೇಕೆಂಬ ಕಾಂಕ್ಷೆಯಿರುತ್ತದೆ ಕೆಲವರಿಗೆ ತಿಕ ಧಾರ್ಮಿಕ ತತ್ವಗಳನ್ನು ಸಾರಿ ದುರಾಚಾರಿಗಳನ್ನು ದಾಚಾರಿಗಳನ್ನಾಗಿ ಮಾಡಬೇಕೆಂಬ ಕಾಂಕ್ಷೆಯಿರುತ್ತದೆ ಲವರಿಗೆ ಧನವನ್ನು ಸಂಪಾದಿಸಬೇಕು ಅದರಿಂದ ಣ್ಣಿಗೆ ಕಂಡ ಉತ್ತಮ ವಸ್ತ್ರಗಳನ್ನು ಧರಿಸಬೇಕು ಯಿಗೆ ಬೇಕಾದ್ದನ್ನು ತಿನ್ನಬೇಕು ಮನಸ್ವಿಯಾಗಿ ನಾ ಸ್ತ್ರೀಯರಲ್ಲಿ ಸುರತ ಸುಖವನ್ನು ಅನುಭವಿಸ ೇಕು ಇತ್ಯಾದಿ ಕಾಂಕ್ಷೆಗಳಿರುತ್ತವೆ ಕೆಲವರಿಗೆ “ಪರ ುಖಮೇವ ಹಿತಂ” ಎಂಬಂತೆ ಎರಡನೆಯವರಿಗೆ ುಖವನ್ನುಂಟುಮಾಡುವ ಕಾಂಕ್ಷೆಯಿರುತ್ತದೆ ಕೆಲವ ಹೆಚ್ಚಿನ ಅಧಿಕಾರ ದೊರಕಿಸುವ ಕಾಂಕ್ಷೆಯಿರುತ್ತದೆ ಲವರಿಗೆ ತಮ್ಮ ವಾರ್ತಾಕೀರ್ತಿಗಳು ಜಗತ್ತಿನಲ್ಲಿ ಅಜ ಮರವಾಗಿ ಝುಗಝುಗಿಸಬೇಕೆಂಬ ಇಚ್ಛೆಯಿರುತ್ತದೆ ಲವರಿಗೆ ರಾಷ್ಟ್ರೋನ್ನತಿಯ ಮಹತ್ವಾಕಾಂಕ್ಷೆಯಿರು ದೆ ಕೆಲವರಿಗೆ ಈಶಪ್ರಾಪ್ತಿಮಾಡಿಕೊಂಡು ಸದಾ ಪರ ಶಿವನ ಸನ್ನಿಧಿಯಲ್ಲಿರುವ ಕಾಂಕ್ಷೆಯಿರುತ್ತದೆ ಸಾರಾಂಶ ಾವ ಮನುಷ್ಯನೇ ಆಗಲಿ ತಾನು ಇರುವ ಸ್ಥಿತಿಗಿಂತಲೂ ತ್ತಮ ಸ್ಥಿತಿಗೆ ಬರಲು ಆಶಿಸುವುದಕ್ಕೆ ಮಹತ್ವಾಕಾಂಕ್ಷೆ ನ್ನುವರು

ಬಹುಶಃ ಎಲ್ಲರಲ್ಲಿಯೂ ಅವರವರ ಮನೋವೃತ್ತಿ ಂತೆ ಮಹತ್ವಾಕಾಂಕ್ಷೆಯು ಇದ್ದೇ ಇರುತ್ತದೆ, ಹೀಗಿ ವುದು ಸ್ವಾಭಾವಿಕವೂ ಯೋಗ್ಯವೂ ಆಗಿರುವುದು ರೆ ಇಷ್ಟರಮೇಲಿಂದ ಮಾತ್ರ ಸರ್ವರ ಆಶಾಪೂರ್ಣ ಗುತ್ತದೆಂದು ಹೇಳಲಿಕ್ಕಾಗುವುದಿಲ್ಲ ಅದರಲ್ಲಿ ಬಹು ಲ್ಪ ಜನರಿಗೆ ಮಾತ್ರ ಯಶಃಪ್ರಾಪ್ತಿಯಾಗುತ್ತದೆ ಹೀಗಾಗುವ ಕಾರಣವೇನು ? ಎಲ್ಲರಿಗೂ ಯಾಕೆ ಜಯವಾಗುವುದಿಲ್ಲ ? ಎಂಬ ಪ್ರಶ್ನೆಯು ಅತ್ಯಂತ ವಿಚಾರಣೀಯವಾದದ್ದಿರುತ್ತದೆ

ವಿಚಾರಮಾಡಿ ನೋಡಿದರೆ ಸ್ಪಷ್ಟವಾಗುವುದು ಮನಸ್ಸಿನಲ್ಲಿ ಮಹತ್ವಾಕಾಂಕ್ಷೆ ಮಾತ್ರ ಇದ್ದರೆ ಕಾರ್ಯವಾಗುವುದಿಲ್ಲ ಯಾವ ಪ್ರಕಾರ ಭತ್ತವನ್ನು ಕುಟ್ಟಿ ಅಕ್ಕಿಯನ್ನು ತಯಾರಿಸಿದರೂ ಅದು ಬೆಂಕಿ ಮತ್ತು ನೀರುಗಳಿಲ್ಲದೆ ಅನ್ನವಾಗುವುದಿಲ್ಲವೋ ಅದರಂತೆ ಮಹತ್ವಾಕಾಂಕ್ಷೆಗೆ ಅನುಕೂಲ ಪರಿಸ್ಥಿತಿ ಸತತೋದ್ಯೋಗ ಇವುಗಳ ಸೇರುವಿಕೆಯ ವಿನಹ ಇಷ್ಟ ಕಾರ್ಯವು ಸಫಲವಾಗುವುದಿಲ್ಲ

ಮಹತ್ವಾಕಾಂಕ್ಷೆಗಳಲ್ಲಿ ಸಾತ್ವಿಕ (ಶ್ರೇಷ್ಠ) ರಾಜಸ (ಮಧ್ಯಮ) ತಾಮಸ (ಕನಿಷ್ಠ) ಗಳೆಂದು ಮೂರು ವಿಧವುಂಟು ತನಗೆ ಅಕಲ್ಯಾಣವಾದರೂ ಚಿಂತೆಯಿಲ್ಲ ಕೊನೆಗೆ ಪ್ರಾಣಹರಣವಾದರೂ ಚಿಂತೆಯಿಲ್ಲ ಆದರೆ ಜೀವವಿರುವಪರ್ಯಂತರ ಪರರಿಗೆ ಕಲ್ಯಾಣಮಾಡುವೆನು ಹೀಗೆ ಯಾರು ಸತ್ಸಂಕಲ್ಪ ಮಾಡಿರುವರೋ ಅವರಿಗೆ ಸಾತ್ವಿಕ ಮಹತ್ವಾಕಾಂಕ್ಷಿಗಳೆನ್ನಬಹುದು ಇಂತಹ ಅನ್ಯಾದೃಶ ಮಹಿಮಾಶಾಲಿಗಳಿಂದ ರಾಷ್ಟ್ರೋನ್ನತಿಯೂ ಸಮಾಜೋನ್ನತಿಯೂ ಧರ್ಮೋನ್ನತಿಯೂ ವಿಶೇಷವಾಗಿ ಆಗುವುದು ಇಂತಹವರ ದೃಷ್ಟಿಗೆ ಸ್ವದೇಶವಲ್ಲಿಯ ಎಲ್ಲಾ ಧರ್ಮದವರು ಎಲ್ಲಾ ಪಂಥದವರು ಹಿಂದುಳಿದವರು ಮುಂದೆ ನುಗ್ಗಿದವರು ಎಲ್ಲರೂ ಸಮಾನಸ್ಕಂಧರಂತೆ ತೋರುವರು ಮತ್ತು ಅವರೆಲ್ಲರ ಹಿತಾಹಿತಗಳ ಬಗ್ಗೆ ಅಹೋರಾತ್ರಿ ಯೋಚಿಸಿ ಇಷ್ಟಕಾರ್ಯವನ್ನು ಸತ್ಪ್ರವರ್ತನದಿಂದ ಸಾಧಿಸುವರು ಮೊದಲು ತನ್ನ ಲಾಭ ಅನಂತರ ಅನ್ಯರ ಲಾಭ ಹೀಗೆ ಯಾರ ಇಚ್ಛೆಯಿರುತ್ತದೆಯೋ ಅವರಿಗೆ ರಾಜಸ ಮಹತ್ವಾಕಾಂಕ್ಷಿಗಳೆಂದು ಹೆಸರು ಇಂಥವರ ಕೃತಿಯಿಂದ ಎರಡನೆಯವರಿಗೆ ಹಿತವಾಗುತ್ತವೆಯೇ ಹೊರತು ಅಹಿತವೆಂದೂ ಆಗುವುದಿಲ್ಲ ಈ ತರದ ಮನುಷ್ಯರು ಬಹುತರ ಎಲ್ಲ ಕಡೆಗೂ ಕಂಡುಬರುತ್ತಾರೆ ತನಗೆ ಶುಭ ಅನ್ಯರಿಗೆ ಅಶುಭ ಈ ತರದ ದುಷ್ಟ ಆಶೆಯಿಂದ ಕೂಡಿದವರಿಗೆ ತಾಮಸೀ ಅಥವಾ ರಾಕ್ಷಸೀ ಮಹತ್ವಾಕಾಂಕ್ಷಿಗಳೆನ್ನುವರು ಇಂಥವರ ಕೇವಲ ಕಪಟಿಗಳು, ಆತ್ಮಘಾತಕರು, ವಿಶ್ವಾಸಘಾತಕರು, ಸ್ವಾರ್ಥಪರಾಯಣರು, ಜನರಲ್ಲಿ ಕುಟಿಲ ಕುತಂತ್ರಗಳಿಂದ ಒಡಕನ್ನುಂಟುಮಾಡುವವರು ಮತ್ತು ಪರರ ಏಳಿಗೆಯನ್ನು ನೋಡಿ ಹೊಟ್ಟೆಕಿಚ್ಚು ಪಡುವವರು ಇನ್ನೇ ಮೊದಲಾದ ದುರ್ಗುಣಗಳಿಂದ ಕೂಡಿದವರಿರುತ್ತಾರೆ ಈ ತರದ ರಾಕ್ಷಸೀ ಮಹತ್ವಾಕಾಂಕ್ಷೆಯ ಜನರು ಎಂತಹ ಹೀನ ದೀನ ಕೃತ್ಯಗಳನ್ನು ಮಾಡಲಿಕ್ಕೂ ಹೇಸುವುದಿಲ್ಲ ಈ ಮೂಢರು ಹಣದ ಸಲುವಾಗಿ ಪಣ್ಯಾಂಗನೆ (ವೇಶ್ಯೆ) ಯಂತೆ ತಮ್ಮ ದೇಹವನ್ನೇ ಇತರರಿಗೆ ಒಪ್ಪಿಸುವರು ಅಪಥ್ಯವೆನಿಸಿದ ಆಹಾರವನ್ನು ತಿನ್ನುವಾಗ ಎಷ್ಟೋ ಹಿತವಾಗಿ ತೋರಿದರೂ, ಕಾಲಾಂತರದಲ್ಲಿ ಅದರಿಂದ ರೋಗವು ಪ್ರಬಲಿಸದೆ ಇರಲಾರದು. ಅಂತೆಯೇ ಈ ರಾಕ್ಷಸರ ಸಮಾಗಮವು ಮೊದ ಮೊದಲು ಎಷ್ಟೋ ಮನೋಹರವಾಗಿ ತೋರಿದರೂ, ಎಂದಾದರೊಂದುದಿನ ದುರ್ಘಟ ಪ್ರಸಂಗದಿಂದ ದುಃಖವನ್ನು ತಂದೊಡ್ಡದಿರದು ಈ ಖೂಳರ ಮಾತು ಮುಗುಳ್ನಗೆಯಿಂದ ಕೂಡಿ ಪ್ರಿಯವಾಗಿದ್ದರೂ ಅಕಾಲ ಪುಷ್ಪದಂತೆ ಭಯಂಕರವಾದುದು ಈ ಮರುಳರು ಉನ್ನತಸ್ಥಾನದಲ್ಲಿದ್ದರೂ ತಮ್ಮ ಹೀನ ಸ್ವಭಾವವನ್ನು ಬಿಡುವುದಿಲ್ಲ ಪ್ರಾಣಿಗಳ ಸ್ವಭಾವವನ್ನು ಒದಲಾಯಿಸುವುದು ಯಾರಿಗೂ ಸಾಧ್ಯವಿಲ್ಲ ವಾಚಕರೇ ! ನಾಯಿಯ ಕೊರಳಿನಲ್ಲಿ ಮುತ್ತಿನ ಹಾರವನ್ನು ಹಾಕಿ ರತ್ನಸಿಂಹಾಸನದಲ್ಲಿ ಕುಳ್ಳಿರಿಸಿದರೆ ಅದು ಕಾಲಿನ ಮೆಟ್ಟನ್ನು ಕಡಿಯುವ ಸ್ವಾಭಾವವನ್ನು ಬಿಡುವುದೆ ? ಎಂದಿಗೂ ಇಲ್ಲ ! ಈ ನರರಾಕ್ಷಸರ ಸಂಸರ್ಗದಿಂದ ಎಷ್ಟೋ ಮನೆ ಮಠಗಳು ಹಾಳಾಗಿರುವುವು ಸದ್ಯಃ ಹಾಳಾಗುತ್ತಿರುವುವು ಈ ತಾಮಸಿ ಜನರ ಜನ್ಮಕ್ಕೆ ಧಿಕ್ಕಾರ ! ಧಿಕ್ಕಾರ !!

ಮಹತ್ವಾಕಾಂಕ್ಷೆಯು ಮನುಷ್ಯನನ್ನು ಸುಮ್ಮನೆ ಕೂಡ್ರಗೊಡುವುದಿಲ್ಲ ಅದು ಯಾವಾಗಲೂ ಅವನನ್ನು ಒಂದಿಲ್ಲೊಂದು ಕಾರ್ಯಕ್ಕೆ ಹಚ್ಚುತ್ತದೆ ಆದರೆ ಯಾವುದಾದರೊಂದು ವಸ್ತುವು ಸಜ್ಜನರ ಇಲ್ಲವೆ ದುರ್ಜನರ ಸಂಸರ್ಗದಿಂದ ರೂಪಾಂತರಗಳನ್ನು ಹೊಂದುವಂತೆ ಈ ಮಹತ್ವಾಕಾಂಕ್ಷೆಯಾದರೂ ಆಯಾಜನರ ಸಂಸರ್ಗದಿಂದ ಉತ್ತಮ ಇಲ್ಲವೆ ದುಷ್ಪರಿಣಾಮಗಳನ್ನುಂಟುಮಾಡುತ್ತದೆ ಉದಾಹರಣಾರ್ಥ—ಗುಂಬಳ (ಸೋರೆ) ಕಾಯಿಯನ್ನು ನೋಡಿರಿ ಯತಿಯು ಅದರಿಂದ ಕಮಂಡಲವನ್ನು ಮಾಡಿಕೊಳ್ಳುತ್ತಾನೆ ಗಾಯಕನು ತಂಬೂರಿಯನ್ನು ಮಾಡಿ ಅದರ ಯೋಗದಿಂದ ತನ್ನ ಗಾನಕ್ಕೆ ಮಾಧುರ್ಯವನ್ನುಂಟುಮಾಡಿಕೊಳ್ಳುತ್ತಾನೆ ಕೆಲವರು ಅದನ್ನು ಈ ಸುಗುಂಬಳಕಾಯಿಯನ್ನು ಮಾಡಿ ಅದರ ಸಹಾಯದಿಂದ ನೀರೊಳಗಿಂದ ಸುರಕ್ಷಿತವಾಗಿ ಈಸಿ ಪಾರಾಗುತ್ತಾರೆ

ಮಹತ್ವಾಕಾಂಕ್ಷೆಯು ಉದ್ಯೋಗದ ಮೂಲ ಸ್ಥಾನವೆಂತಲೂ, ಅದರ ಪರಿಣಾಮವು ಮನಸ್ಸಿನ ಮೇಲೆ ಆದಹಾಗೆ ಅವನು ಹೆಚ್ಚು ಇಲ್ಲವೆ ಕಡಿಮೆ ಉದ್ಯೋಗಿಯಾಗುವನೆಂತಲೂ ಕಂಡು ಬರುವುದು ಮನುಷ್ಯನಿಗೆ ಸ್ವಾಭಾವಿಕವಾಗಿರುವ ಈ ಮಹತ್ವಾಕಾಂಕ್ಷೆಯನ್ನು ಸತ್ಕಾರ್ಯಗಳಿಗೆ ಹಚ್ಚಿದರೆ ಅದರಿಂದ ವಿಶೇಷ ಲಾಭಗಳುಂಟಾಗುವವು ಕೇವಲ ಶ್ಲಾಘ್ಯವಾದ ಸತ್ಕರ್ಮವನ್ನಾಚರಿಸುವುದರಿಂದ ಹುಟ್ಟುವ ಆನಂದವೇ ಆ ಸತ್ಕರ್ಮಗಳ ಪ್ರತಿಫಲವಾಗಿರುವುದು ಹೀಗಿದ್ದರೂ ಅಂಥ ಅನೇಕ ಸತ್ಕರ್ಮಗಳನ್ನು ಮಾಡಿ ಕೀರ್ತಿಯನ್ನು ಪಡೆಯಬೇಕೆಂಬ ಆಶೆಯು ಸಜ್ಜನರಲ್ಲೂ ಇರುವುದು ಈ ಬಗೆಯ ಮಹತ್ವಾಕಾಂಕ್ಷೆಯು ಯೋಗ್ಯವಾದದ್ದೇ ಸರಿ ಅದರಿಂದ ಸದ್ಗುಣಕ್ಕೆ ಬಹು ಸಹಾಯವಾಗುತ್ತದೆ

ಗೌರವವು ಎಲ್ಲರಿಗೂ ಪ್ರಿಯವಾದದ್ದು ಜ್ಞಾನವನ್ನು ಸಂಪಾದಿಸಿ, ನ್ಯಾಯದಿಂದ ನಡೆದು, ಕೀರ್ತಿಯನ್ನು ಪಡೆಯುವುದು. ಮನುಷ್ಯನ ಕರ್ತವ್ಯವೇ ಸರಿ ಆದರೆ ಶರೀರ ಧನ ಜನ ಸಾಮರ್ಥ್ಯದಿಂದ ಪರರನ್ನು ಪೀಡಿಸಿ ಮಹತ್ವವನ್ನು ಪಡೆಯಬೇಕೆಂಬ ಆಶೆಯು ಗರ್ಹ್ಯವಾದದ್ದು

(೩ ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಜುಲೈ ತಾ॥ ೧೯ನೆಯ ಸೋಮವಾರ

ವೀರಶೈವ ಮಹಿಳೆಯರು

ಪ್ರಪಂಚದಲ್ಲಿ ಅವರವರ ಮತಧರ್ಮಗಳಾಗಲಿ ಸಾಮಾನ್ಯಧರ್ಮಗಳಾಗಲಿ ಪ್ರಕಾಶವನ್ನು ಹೊಂದಬೇಕಾದರೆ ಸ್ತ್ರೀಯರೇ ಮೂಲಕಾರಣೀಭೂತರೆಂದು ಹೇಳಬಹುದು ಸ್ತ್ರೀಯರು ಧರ್ಮಿಷ್ಠರಾದರೆ ಅವರ ಗರ್ಭದಲ್ಲಿ ಜನಿಸುವ ಪುತ್ರರೂ ಧರ್ಮಿಷ್ಠರಾಗುವರು ಅವರು ಅಧರ್ಮಿಗಳಾದರೆ, ಪುತ್ರರೂ ಅಧರ್ಮಿಗಳಾಗುವರು ಮಕ್ಕಳ ಬುದ್ಧಿಯು ಬಾಲ್ಯಾವಸ್ಥೆಯಲ್ಲಿ ಅತ್ಯಂತ ಕೋಮಲವಾಗಿರುವುದರಿಂದ ಯಾವಾಗಲೂ ಮಕ್ಕಳ ಹತ್ತಿರದಲ್ಲೇ ಇರುತ್ತಿರುವ ತಮ್ಮ ತಮ್ಮ ತಾಯಂದಿರುಗಳು ಯಾವ ರೀತಿಯಿಂದ ಶಿಕ್ಷಣವನ್ನು ಮಕ್ಕಳಿಗೆ ಕೊಡುತ್ತಾರೆಯೋ ಮತ್ತು ದಿನಚರ್ಯೆಯಲ್ಲಿ ತಾಯಿಯ ನಡೆನುಡಿಗಳು ಹೇಗೆ ಹೇಗೆ ಇರುತ್ತವೆಯೋ ಹಾಗೆಯೇ ಅನುಕರಣವನ್ನು ಮಾಡುವದು ಮಕ್ಕಳ ಸ್ವಭಾವವಾಗಿರುವದು ನವನವೋನ್ಮೇಷಶಾಲಿನಿಯಾದ ಮಕ್ಕಳ ಬುದ್ಧಿಯು ದುಃಶೀಲೆಯಾದ ತಾಯಿಯ ಸಂಸರ್ಗದಿಂದ ಕಲುಷಿತವಾಗುತ್ತದೆ ಸುಶೀಲೆಯಾದ ತಾಯಿಯ ಸಂಸರ್ಗದಿಂದ ನಿರ್ಮಲವಾಗುತ್ತದೆ ‘ಸಂಸರ್ಗಜಾ ದೋಷಗುಣಾ ಭವಂತಿ’ ಎಂಬಂತೆ ಯಾರಿಗೆ ಯಾವ ಸಂಸರ್ಗವು ವಿಶೇಷವಾಗಿರುವುದೋ ಅದಕ್ಕನುಗುಣವಾದ ಬುದ್ಧಿಯು ಹುಟ್ಟುವದು ಪ್ರಪಂಚದಲ್ಲಿ ಮಹಾವೀರರಾದ ಪುತ್ರರನ್ನು ಹೆತ್ತವರೂ ಸ್ತ್ರೀಯರೇ! ವಿದ್ವಾಂಸರನ್ನು ಹೆತ್ತವರೂ ಸ್ತ್ರೀಯರೇ! ಬ್ರಹ್ಮಸಾಕ್ಷಾತ್ಕಾರವುಳ್ಳ ಮಹಾಯೋಗಿಗಳನ್ನು ಹೆತ್ತವರೂ ಸ್ತ್ರೀಯರೇ! ಲೋಕಕಂಟಕರಾದ ಮಹಾದುಷ್ಟರನ್ನು ಹೆತ್ತವರೂ ಸ್ತ್ರೀಯರೇ! ಮಹಾಮೂರ್ಖರನ್ನು ಹೆತ್ತವರೂ ಸ್ತ್ರೀಯರೇ! ಹೀಗೆ ಸಕಲ ಮಾನವರ ಉತ್ಪತ್ತಿಗೂ ಸ್ತ್ರೀಯರೇ ಕಾರಣಭೂತರಾದ್ದರಿಂದ ಕಾರಣದಲ್ಲಿರುವ ಗುಣಗಳು ಕಾರ್ಯದಲ್ಲಿಯೂ ಬರಬೇಕಾಗುವುದರಿಂದ ಭಾರತೀಯರು ಧಾರ್ಮಿಕರಾಗಿ ಧೈರ್ಯಶೌರ್ಯ ವಿನಯಾದಿಗಳಿಂದ ಶೋಭಿಸಬೇಕಾದರೆ ಜನನಿಯರಾದ ಸ್ತ್ರೀಯರು ಧಾರ್ಮಿಕಾದಿ ಗುಣಸಂಪನ್ನರೇ ಆಗಿರಬೇಕು ತಾಯಿಯು ನೀತ್ಯಾಚಾರ ವಿಹೀನಳಾದರೆ ಮಕ್ಕಳೂ ಸಹ ನೀತ್ಯಾಚಾರಶೂನ್ಯರಾಗುತ್ತಾರೆಂಬುವಲ್ಲಿ ಸಂಶಯವೇ ಇಲ್ಲ ಆದ್ದರಿಂದ ಆರ್ಯಮಹಿಳೆಯರು ತಾವು ಯಾವ ಮತದಲ್ಲಿ ಜನ್ಮವನ್ನು ಧರಿಸಿರುತ್ತಾರೆಯೋ ಆ ಮತದ ಧರ್ಮಕರ್ಮಗಳ ಸ್ವಭಾವವನ್ನು ಚೆನ್ನಾಗಿ ತಿಳಿದು ಸಂಸ್ಕಾರವತಿಯರಾಗಿ ಅದರಂತೆಯೇ ಅನುಷ್ಠಿಸುತ್ತ ಬಂದರೆ ಅವರವರ ಮಕ್ಕಳೂ ಸಹ ತಮ್ಮ ತಮ್ಮ ಮತಧರ್ಮಗಳಲ್ಲಿ ಶ್ರದ್ಧೆಯುಳ್ಳವರಾಗುವುದರಿಂದ ಮೋಕ್ಷಸಂಪಾದನಾರ್ಥವಾಗಿ ಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟ ಆಯಾಯ ಮತಗಳು ಸಹ ಉಜ್ವಲಸ್ಥಿತಿಗೆ ಬರುವುವಲ್ಲದೆ, ಪ್ರಪಂಚವಿರುವವರೆಗೂ ಆಯಾಯಮತಗಳು ಅಭಿವೃದ್ಧಿಯನ್ನು ಹೊಂದುತ್ತಲೇ ಹೋಗುವವು ಆರ್ಯಮಹಿಳೆಯರು ತಮ್ಮ ಮತಧರ್ಮಗಳನ್ನು ತ್ಯಜಿಸುತ್ತ ಬಂದರೆ ಕ್ರಮಕ್ರಮವಾಗಿ ಆಯಾಯ ಧರ್ಮಗಳು ನಾಶವಾಗುವುದರಿಂದ ಮತಗಳು ನಾಮಾವಶೇಷವಾಗುವವು. ಪ್ರಕೃತದಲ್ಲಿ ವೀರಶೈವಮತವು ವೇದಾಗಮಸಮ್ಮತವಾಗಿ ಶ್ರೀರೇಣುಕಾದಿಮಹಾಚಾರ್ಯರಿಂದ ಸ್ಥಾಪಿಸಲ್ಪಟ್ಟಿದ್ದರೂ ನಮ್ಮ ವೀರಶೈವ ಆರ್ಯಮಹಿಳೆಯರಲ್ಲಿ ಪರಮಪವಿತ್ರವಾದ ವೀರಶೈವ ಧರ್ಮಾಚರಣೆಗಳು ಒರಬರುತ್ತ ಕಡಿಮೆಯಾದುದರಿಂದ ಅವರ ಪವಿತ್ರ ಗರ್ಭಾಂಬುಧಿಯಲ್ಲಿ ಹುಟ್ಟುವ ವೀರಶೈವ ಬಾಲಕರೂ ಸಹ ಸ್ವಧರ್ಮಶೂನ್ಯರಾಗುತ್ತ ಬಂದಿರುತ್ತಾರೆ ಅನೇಕ ಕಡೆಗಳಲ್ಲಿ ವೀರಶೈವ ಮಹಿಳೆಯರಲ್ಲಿ ಗುರುಲಿಂಗ ಪೂಜಾಧಿಕಾರವನ್ನುಂಟುಮಾಡುವ ಸ್ತ್ರೀಪುರುಷಸಾಮಾನ್ಯವಾದ ಶಿವದೀಕ್ಷೆಯೇ ನಡೆಯದೆ ಹುಟ್ಟಿದಂದಿನಿಂದಲೂ ಅಸಂಸ್ಕೃತರಾಗಿಯೇ ಇರುತ್ತಾರೆ. ಇಂಥ ಅಸಂಸ್ಕೃತರು ಶಿವಲಿಂಗವನ್ನು ಮುಟ್ಟುವುದಕ್ಕೂ ಪೂಜಿಸುವುದಕ್ಕೂ ಅಧಿಕಾರಿಗಳಾಗುವುದಿಲ್ಲ. ಯದ್ಯಪಿ ಲೋಕಾಭಿರಾಮವಾಗಿ ಪೂಜಿಸುತ್ತಿದ್ದರೂ ತಾವು ಹುಟ್ಟಿದಾಗ ಧರಿಸಿದ ಲಿಂಗವು ಕೇವಲ ಶಯನಾವಸ್ಥೆಯಲ್ಲಿರುವುದರಿಂದ ಅಂಥ ಲಿಂಗವನ್ನು ಪೂಜಿಸುವುದರಿಂದ ಯಾವ ಪ್ರಯೋಜನವೂ ಆಗಬಾರದು ಶಯನಾವಸ್ಥೆಯಲ್ಲಿದ್ದ ಆ ಶಿವಲಿಂಗವು ಅಭಿಮುಖವಾಗಬೇಕಾದರೆ ನಮ್ಮ ವೀರಶೈವ ಮಹಿಳೆಯರು ವಿವಾಹಪೂರ್ವದಲ್ಲಿಯೇ ತಮ್ಮ ತಮ್ಮ ಗೋತ್ರಗುರುವಿನಿಂದ ಮತಸಂಸ್ಕಾರವೆನಿಸಿದ ಶಿವದೀಕ್ಷೆಯನ್ನು ಪಡೆದು ಪರಿಶುದ್ಧರಾಗಿ ಶಿವಲಿಂಗನಿಷ್ಠದ ಮರ್ಮಸೂಕ್ಷ್ಮಗಳನ್ನು ತಿಳಿಯಬೇಕು ಸಂಸ್ಕಾರಶೂನ್ಯಳಾದ ಸ್ತ್ರೀಯಳು ಮಾಡಿದ ಪಾಕವಂತೂ ಶಿವಲಿಂಗಕ್ಕೆ ನಿಷೇಧವೆನಿಸುವುದು ದೀಕ್ಷಿತರಾದ ಜನಗಳು ಅಂಥ ಪಾಕವನ್ನು ಭುಂಜಿಸಲೇ ಕೂಡದೆಂದೂ ಒಂದುವೇಳೆ ಶಿವಲಿಂಗಕ್ಕೆ ಅರ್ಪಿಸಿ ಭುಂಜಿಸಿದ್ದಾದರೆ ಆ ಪಾಕಗ್ರಹಣದಿಂದ ಘೋರವಾದ ಪಾಪವೇ ಸಂಭವಿಸುವುದೆಂದೂ ಧರ್ಮಶಾಸ್ತ್ರಕಾರರು ನಿರ್ಣಯಗೊಳಿಸಿರುತ್ತಾರೆ ಆಯಾ ಮತಧರ್ಮಗಳು ಆಯಾಯ ಮತೀಯರ ಗೃಹಗಳಲ್ಲಿ ಪರಂಪರಾಕ್ರಮವಾಗಿ ನಡೆದುಕೊಂಡು ಬರಬೇಕಾದರೆ ಆರ್ಯಮಹಿಳೆಯರೇ ಮೂಲಭೂತರಾಗಿದ್ದಾರೆ ಪುರುಷರು ಒಂದು ಕಡೆಗೆ ನಿಯತರಾಗಿ ಇರದಿರೋಣದರಿಂದ ಮಕ್ಕಳ ಸುಧಾರಣೆಗೆ ಅಷ್ಟು ಕಾರಣಭೂತರಾಗುವುದಿಲ್ಲ ಮಹಿಳೆಯರಾದರೋ ಇಂಥ ಭಾವಿಪ್ರಜೆಗಳಾಗುತ್ತಿರುವ ಮಕ್ಕಳನ್ನು ನವಮಾಸವು ತುಂಬುವವರೆಗೂ ತಮ್ಮ ಗರ್ಭಕೋಶದಲ್ಲಿರಿಸಿ ತಮ್ಮ ಅನ್ನರಸದಿಂದ ಪೋಷಿಸುವುದಲ್ಲದೆ ಪ್ರಸವಿಸಿದಮೇಲೂ ಆ ತಾಯಿಯು ಲಾಲನಪಾಲನಾದಿಗಳು ಎಡಬಿಡದೆ ನಡೆಯುವುದರಿಂದ ತಾಯಿಯಲ್ಲಿ ಯಾವ ಯಾವ ನಡೆನುಡಿಗಳಿರುವುವೋ ಅವುಗಳೇ ಮಕ್ಕಳಿಗೆ ಪ್ರಯತ್ನವಿಲ್ಲದೆ ಸಂಬಂಧಿಸಿಕೊಂಡು ಬರುತ್ತವೆ ಅದರಿಂದ ಧರ್ಮ, ಅರ್ಥ, ಕಾಮ, ಮೋಕ್ಷವೆಂಬ ಚತುರ್ವಿಧ ಪುರುಷಾರ್ಥಗಳಿಗೂ ಸ್ತ್ರೀಯರೇ ಮೂಲಕಾರಣರಾಗಿದ್ದಾರೆ ‘ಭಾರ್ಯಾ ಮೂಲಂ ತ್ರಿವರ್ಗಸ್ಯ ಭಾರ್ಯಾ ಮೂಲಂ ತರಿಷ್ಯತಃ’ ಎಂದು ಧರ್ಮಶಾಸ್ತ್ರವೂ ಇದೇ ಅರ್ಥವನ್ನು ಸ್ಪಷ್ಟವಾಗಿ ಬೋಧಿಸುತ್ತದೆ ಹೀಗೆ ಐಹಿಕಾಮುಷ್ಮಿಕಫಲಪ್ರಾಪ್ತಿಗೆ ಮೂಲಕಾರಣರಾದ ವೀರಶೈವಮತದ ಮಹಿಳೆಯರಿಂದಲೇ ರೇಣುಕಾದಿ ಭಗವತ್ಪಾದರಿಂದ ಪ್ರತಿಷ್ಠಿತಗಳಾದ ವೀರಶೈವಧರ್ಮ ಕರ್ಮಗಳ ನಿಯಮಗಳು ನಿರ್ವಾಹವಾಗಬೇಕಾಗಿರುವುದರಿಂದ ಪ್ರತಿಯೊಬ್ಬ ಲಿಂಗಾಂಗಿನಿಯಾದ ಆರ್ಯಮಹಿಳೆಯೂ ತನ್ನ ಮತಧರ್ಮಗಳನ್ನು ಚೆನ್ನಾಗಿ ತಿಳಿದು ಅದರಂತೆ ತಾನು ನಡೆಯುವುದಲ್ಲದೆ ಉತ್ತರೋತ್ತರ ತನ್ನ ಪವಿತ್ರ ಗರ್ಭಾಂಬುಧಿಯಲ್ಲಿ ಹುಟ್ಟುವ ಮಕ್ಕಳಿಗೂ ತನ್ನ ನಡವಳಿಕೆಯನ್ನೇ ಬೋಧಿಸುತ್ತ ಒಂದಲ್ಲಿ ಭ್ರಮರ ಕೀಟ ನ್ಯಾಯದಂತೆ ಮಕ್ಕಳೂ ಸಹ ಸ್ವಧರ್ಮದಲ್ಲಿ ಶ್ರದ್ಧೆಯುಳ್ಳವರಾಗುವದರಿಂದ ಮಹಾಚಾರ್ಯರ ಉದ್ದೇಶವು ಫಲಿಸುವುದಲ್ಲದೆ “ಏಕೇನ ಜನ್ಮನಾ ಮುಕ್ತಿಃ’ ಎಂಬ ಆ ಮಹಾಚಾರ್ಯರ ವಾಕ್ಯವು ಅನ್ವರ್ಥವಾಗುವುದು ಆದ್ದರಿಂದ ಕೆಲವುಕಡೆ ವೀರಶೈವ ಮಹಿಳೆಯರಲ್ಲಿ ಬೇರೂರಿ ನಿಂತಿರುವ ದುಷ್ಟ ನಿಯಮಗಳು ಹೊರಟುಹೋಗಿ ಪರಮಪವಿತ್ರವಾದ ವೀರಶೈವಧರ್ಮ, ಕರ್ಮನಿಯಮಗಳು ಅವರ ಪವಿತ್ರಹೃದಯಕ್ಷೇತ್ರದಲ್ಲಿ ಅಂಕುರಿಸುವಂತೆ ಭಗವತ್ಪಾದರು ಅನುಗ್ರಹಿಸಲಿ

ಯುದ್ಧವಾರ್ತೆ.

ಯು-ಬೋಟ್ ಹಾವಳಿ

“ನಾವು, ಯು ಬೋಟ್ ಕದನದಲ್ಲಿ ಇತರ ಎಲ್ಲ ರಾಷ್ಟ್ರಗಳಿಗಿಂತಲೂ ಹೆಚ್ಚು ನಿಪುಣತೆಯನ್ನು ಪಡೆದಿರುವ ಶತ್ರುವಿನೊಂದಿಗೆ ಹೋರಾಡುತ್ತಿರುವೆವು. ಅವನ ಯು-ಬೋಟ್ ಕದನ ಕ್ರಮವು ಕುಶಲತೆಯಿಂದ ಕೂಡಿದೆ ನಮ್ಮ ಕೈಲಾಗುವ ಪ್ರಯತ್ನವನ್ನೆಲ್ಲ ಮಾಡಿ, ಅವನ ಹಾವಳಿಯನ್ನು ನಿರ್ಮೂಲಮಾಡುತ್ತಿರುವೆವು ಹೊಸ ಪ್ರದೇಶಗಳಲ್ಲಿ ಪ್ರಾಯಶಃ ಅವನ ಯು-ಬೋಟ್ ಹಾವಳಿ ಹೆಚ್ಚಿದರೂ ಹೆಚ್ಚಬಹುದು ಆದರೆ ಈಗ ಮಾತ್ರ ನಮ್ಮ ನೌಕಾ ನಷ್ಟವು ಹೆಚ್ಚಾಗಿ ಆಗದಂತೆ ನಾವು ಏರ್ಪಡಿಸಿದ್ದೇವೆ” ಎಂದು ಅಮೆರಿಕದ ನೌಕಾ ಶಾಖೆಯ ಸಚಿವರಾದ ಶ್ರೀ॥ ನಾಕ್ಸ್‌ರವರು ಹೇಳಿರುವರು

ಸಿಸಿಲಿಯನ್ನು ಪ್ರತ್ಯೇಕಿಸುವ ಪ್ರಯತ್ನ

ಸಿಸಿಲಿಗೆ ಯೂರೋಪಿನ ಸಂಬಂಧವೇ ತಪ್ಪಿಹೋಗುವಂತೆ ಮಾಡಲು ಸುತ್ತಲೂ ಮಿತ್ರಬಲಗಳು ಪ್ರಯತ್ನಿಸುತ್ತಿರುವುದರಿಂದ ಪರಿಸ್ಥಿತಿ ವಿಷಮವಾಗುತ್ತಿದೆ ಎಂದ ಬರ್ಲಿನ್ ವಾರ್ತೆ ತಿಳಿಸಿದೆ

ಸಿಸಿಲಿ ತ್ಯಜಿಸುವರೆ ?

ಆಕ್ಸಿಸ್ ಸೇನೆಗಳು ಸಿಸಿಲಿಯನ್ನು ತ್ಯಜಿಸಿಬಿಡಲು ಪ್ರಯತ್ನ ನಡುತ್ತಿರುವುದಾಗಿಯೂ, ಆಕ್ಸಿಸ್ ಸೇನೆಗ ಪ್ರತಿ ಗಜಕ್ಕೂ ಭೀಕರ ಕಾಳಗವನ್ನು ನಡೆಸುತ್ತಿವೆಯಾದರೂ ಮಿತ್ರವರ್ಗದ ಸರಬರಾಯಿಯು ತಡೆಯಿಲ್ಲದೆ ಒಂದು, ಮುಂದೆ ನುಗ್ಗುತ್ತಿರುವ ನಿಮಿತ್ತ ಕದನ ಸ್ಥಿತಿಯು ಭೀಕರ ರೂಪ ಹೊಂದಿದೆಯೆಂದೂ ಸಿಸಿಲಿಯ ಕದನ ಫಲಿತಾಂಶವು ಆಕ್ಸಿಸ್ ರಾಷ್ಟ್ರಗಳ ಮೇಲೆ ಬಹಳ ಪ್ರಭಾವವನ್ನುಂಟುಮಾಡಲಿದೆ ಎಂದು ಬರ್ಲಿನ್ ರೇಡಿಯೋ ತಿಳಿಸುತ್ತಿದೆ

ಸಿಸಿಲಿ ದೇಶದ ಒಳಭಾಗಕ್ಕೆ ಮಿತ್ರ ಸೈನ್ಯಗಳ ಮುಂದೋಟ

ಸಿಸಿಲಿಯ ತೀರಭಾಗದಲ್ಲಿ ಸಿರಾಕ್ಯೂಸ್ ಪಟ್ಟಣವನ್ನು ಬ್ರಿಟಿಷ್ ಸೈನ್ಯಗಳೂ ಲಿಕಾಟಾ ಪಟ್ಟಣವನ್ನು ಅಮೆರಿಕ ಸೈನ್ಯಗಳೂ ವಶಪಡಿಸಿಕೊಂಡವು ಈ ಮೇಲಿನ ಎರಡು ಪಟ್ಟಣಗಳೂ ಸೇರಿ ಒಟ್ಟು ೧೦ ಮುಖ್ಯ ಬಂದರುಗಳೂ ಪಟ್ಟಣಗಳೂ ಮಿತ್ರ ಸೈನ್ಯಗಳ ವಶವಾಗಿವೆ ಮಿತ್ರ ಸೈನ್ಯಗಳ ಮುಂದೋಟವು ಇನ್ನೂ ನಡೆಯುತ್ತಿದೆ ಸಿಸಿಲಿಯ ಸಮುದ್ರ ತೀರದಲ್ಲಿ ಸೈನ್ಯಗಳನ್ನೂ ಸಾಮಗ್ರಿಗಳನ್ನೂ ಹಡಗುಗಳ ಮೂಲಕ ಹಂಚಿಕೆ ಪ್ರಕಾರ ತಂದಿಳಿಸಲಾಗುತ್ತಿವೆ ಶತ್ರು ಸೈನ್ಯಗಳು ಅಧಿಕ ಸಂಖ್ಯೆಯಲ್ಲಿ ದೇಶದ ಒಳಭಾಗದಿಂದ ರಣಕ್ಷೇತ್ರದ ಕಡೆಗೆ ಬರುತ್ತಿವೆ ಶತ್ರು ಸೈನ್ಯಗಳು ನಡೆಸಿದ ಎಲ್ಲ ಪ್ರತಿ ಧಾಳಿಗಳನ್ನು ಹಿಮ್ಮೆಟ್ಟಿಸಿ ಈಗಿನವರೆಗೆ ಒಟ್ಟು ೨೦೦೦ ಶತ್ರು ಸೈನಿಕರನ್ನು ಕೈಸೆರೆ ಹಿಡಿಯಲಾಗಿದೆ. ಬ್ರಿಟಿಷ್ ಸೈನಿಕರು ಹಿಡಿದಿರುವ ಸಿರಾಕ್ಯೂಸ್ ಪಟ್ಟಣದಲ್ಲಿ ದೊಡ್ಡ ನೌಕಾ ನಿಲ್ದಾಣವಿದೆ ವೈಮಾನಿಕ ನಿಲ್ದಾಣವೂ ಇದೆ. ಇಟಲಿಯಲ್ಲೂ ಸಿಸಿಲಿಯಲ್ಲಿಯೂ ಇರುವ ಬಂದರುಗಳಲ್ಲೆಲ್ಲಾ ಸಿರಾಕ್ಯೂಸ್ ಬಂದರು ಅತ್ಯಂತ ಉತ್ತಮವಾದ ನೈಸರ್ಗಿಕವಾದ ಒಂದಾಗಿದೆ ಅಮೆರಿಕನ್ ಸೈನ್ಯಗಳು ಹಿಡಿದಿರುವ ಲಿಕಟಾ ಪಟ್ಟಣದಲ್ಲಿ ದೊಡ್ಡ ಬಂದರೂ ವೈಮಾನಿಕ ನಿಲ್ದಾಣವೂ ಇದೆ ಸಿಸಿಲಿಯ ಕಾರ್ಯಾಚರಣೆಯಲ್ಲಿ ೮ ನೇ ಬ್ರಿಟಿಷ್ ಸೈನ್ಯದ ಹಲವು ಪಡೆಗಳು ಭಾಗವಹಿಸುತ್ತಿವೆ ಈ ಸೈನ್ಯಗಳೇ ಸಿಸಿಲಿಯಲ್ಲಿ ಜರ್ಮ ಸೈನ್ಯಗಳನ್ನು ಮೊದಲು ಎದುರಿಸಿ ಕದನ ನಡೆಸಿದವು ಎಂದು ಹೇಳಲಾಗಿದೆ ಕಳೆದ ೧೦ ನೆಯ ತಾರೀಖು ೯ ಘಂಟೆಗೆ ಬ್ರಿಟಿಷ್ ಸೈನ್ಯಗಳು ಸಿರಾಕ್ಯೂಸ್ ಪ್ರವೇಶಿಸಿದಾಗಲೇ ಈ ಪಡೆಗಳು ಜರ್ಮನರೊಡನೆ ಕದನ ನಡೆಸಿದವು. ಭಾನುವಾರ ಬೆಳಗಿನ ಹೊತ್ತಿಗೆ ಶತ್ರುಗಳ ಪ್ರತಿಭಟನೆಯನ್ನೆಲ್ಲಾ ನಿಲ್ಲಿಸಲಾಯಿತು ಸಿರಾಕ್ಯೂಸನ್ನು ಹಿಡಿದ ಬ್ರಿಟಿಷ್ ಸೈನ್ಯಗಳು ಈಗ ದೇಶದೊಳಭಾಗಕ್ಕೆ ನುಗ್ಗಿ ಫ್ಲಾರೀಡಿಯಾ ಎಂಬ ಪಟ್ಟಣವನ್ನು ಹಿಡಿದವು. ಲಿಕಾಟಾ ಪಟ್ಟಣವನ್ನು ಹಿಡಿದ ಅಮೆರಿಕನ್ ಸೈನ್ಯಗಳೂ ಕೂಡ ಈಗ ದೇಶದೊಳಭಾಗಕ್ಕೆ ನುಗ್ಗಿವೆ. ಈಗಿನ ಸ್ಥಿತಿಯಲ್ಲಿ ಮಿತ್ರ ಸೈನ್ಯಗಳು ಕೇವಲ ಮುಂದಕ್ಕೆ ಹೋಗುತ್ತಿವೆಯೇ ಹೊರತು ಶತ್ರು ಸೈನ್ಯಗಳನ್ನೆದುರಿಸಿಲ್ಲ ಶತ್ರು ಸೈನ್ಯಗಳು ಬಂದು ಎದುರಿಸಿ ಕದನ ನಡೆಸಿದ ಮೇಲೆ ಮಾತ್ರ ಇಲ್ಲಿನ ಸ್ಥಿತಿಯನ್ನು ಸ್ಪಷ್ಟ ರೂಪದಲ್ಲಿ ತಿಳಿಸಲು ಸಾಧ್ಯವಾಗುವದು ಎಂದು ಹೇಳಲಾಗಿದೆ.

೫ ಲಕ್ಷ ಸೇನೆ ಹೋರಾಡುತ್ತಿದೆ

ಬೈಲ್‌ಗೊರಾಡ್ ವಿಭಾಗದಲ್ಲಿ ಜರ್ಮನರು ೫ ಲಕ್ಷ ಸೇನೆಯನ್ನು ರಣರಂಗದಲ್ಲಿ ಕದನಕ್ಕೆ ಇಳಿಸಿರುವರೆಂದೂ, ಆದರೂ ಅವರ ಕದನ ಪ್ರಯತ್ನವು ವಿಫಲವಾಗಿದೆಯೆಂದೂ ದೃಢಪಟ್ಟಿದೆ. ಈಗ ಕದನದ ಭೀಕರತೆ ಕಡಮೆಯಾಗಿದೆ. ವಿಮಾನದಾಳಿಯೂ ರಭಸವಿಳಿಸಿದೆ. ಆದರೂ ಈ ಕದನದ ಫಲಿತಾಂಶವನ್ನು ಈಗಲೇ ಹೇಳುವಂತಿಲ್ಲ.

ಗ್ರೀಸಿಗೆ ಮುಕ್ತಿಗೆಯೋ ?

ಸಿಸಿಲಿ ಕದನ ಮುಗಿದೊಡನೆಯೇ ಹೊಸ ದಂಡಯಾತ್ರೆಗಾಗಿ ಬ್ರಿಟನ್ ಮತ್ತು ಅಮೆರಿಕನ್ ಸೈನ್ಯಾಧಿಕಾರಿಗಳು ಶಸ್ತ್ರ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಗ್ರೀಸಿನ ಮುಕ್ತಿಗೆ ಪ್ರಥಮಸ್ಥಾನ ವಹಿಸಿದೆಯೆಂದು ಊಹಿಸಲಾಗಿದೆ ಜರ್ಮನ್ ಸೇನೆಗಳು ಪ್ರವಾಹದೋಪಾದಿಯಲ್ಲಿ ಗ್ರೀಸಿಗೆ ಬರುತ್ತಿವೆ ನಾಜಿ ಸೇನಾನಿಗಳಿಗೆ ಕೊಡಲಾಗಿದ್ದ ಜವನ್ನೆಲ್ಲ ರದ್ದುಗೊಳಿಸಲಾಗಿದೆ ಸಿಸಿಲಿಯಲ್ಲಿ ಜಯ ಂಡಿತನಂತರ ಕೋರಿದ ಕೂಡಲೆ ಗ್ರೀಸಿಗೆ ಮುಕ್ತಿ ಗೆ ಕಬಹುದೆಂದು ಭಾವಿಸಲಾಗಿದ

ಮಾರ್ಟಿನಿಕ್‌ಗೆ ಸ್ವತಂತ್ರ ಫ್ರೆಂಚ್ ಅಧಿಕಾರಿ

ಮಾರ್ಟಿನಿಕ್‌ನಲ್ಲಿ ವಿಚಿ ಹೈ ಕಮಿಷನರಾಗಿದ್ದ ಡ್ಮಿರಲ್ ರಾಬರ್ಟ್‌ರವರು ತಮ್ಮ ಹುದ್ದೆಯನ್ನು ತ್ಯಜಿಸಿದ್ದಾರೆ ಈಗ ಅಮೆರಿಕಾದಲ್ಲಿರುವ ಫ್ರೆಂಚ್ ಮಿಲಿಟರಿ ಮಂಡಲಿಯ ಸದಸ್ಯರೊಬ್ಬರನ್ನು ಇವರ ಸ್ಥಾನದಲ್ಲಿ ನೇಮಕ ಮಾಡಲಾಗಿದೆ ಇವರು ಬೇಗನೇ ತಮ್ಮ ಉದ್ದೇವಾರರೊಡನೆ ಮಾರ್ಟಿನಿಕ್‌ಗೆ ಬರಲಿರುವರು ಮಾರ್ಟಿನಿಕ್‌ನ ಸಂಪತ್ತನ್ನೆಲ್ಲಾ ಅಕ್ಸಿಸ್ ರಾಷ್ಟ್ರಗಳಿಗೆ ವಿರೋಧವಾಗಿ ಜಮಾಯಿಸಲಾಗುವುದು. ಫ್ರೆಂಚ್ ಯುದ್ಧ ಹಡಗುಗಳು ಮಿತ್ರ ರಾಷ್ಟ್ರಗಳ ಕಡೆ ಸೇರುವವು

ಜರ್ಮನ್ ವ್ಯೂಹ ಭೇದಿಸಿದೆ

ರಷ್ಯನರ ಸೇನೆಗಳು ಮಾರ್ಷಲ್ ಟೈಮೊಷೆಂಕೊರವರ ನಾಯಕತ್ವದಲ್ಲಿ ಬೈಲ್ ಗೊರಾಡ್ ಬಳಿಯಲ್ಲಿ ರ್ಮನ್ ವ್ಯೂಹವನ್ನು ಭೇದಿಸಿ ೩೭ ಮೈಲಿ ಮುಂದಕ್ಕೆ ುಗ್ಗಿವೆ ! ಇದರಿಂದ ಕರ್ಸ್ಕ್ ಬಳಿಯಲ್ಲಿ ಪೆಟ್ಟು ತಿಂದ ್ಯ ಸೇನೆ ಸುಧಾರಿಸಿಕೊಳ್ಳಲು ಅವಕಾಶ ಕಲ್ಪಿಸಿದಂತಾ ಒರೆಲ್ ಭಾಗದಿಂದ ರಷ್ಯನರ ಮತ್ತೊಂದು ಡು ನುಗ್ಗಿ ಜರ್ಮನರನ್ನು ಘಾತಿಸುತ್ತಿದೆ ಎಂದು ೇಳಲಾಗಿದೆ

ಜರ್ಮನರ ಹೊಸ ಯುದ್ಧ ಕ್ರಮ

ಕಳೆದ ವಾರದಲ್ಲಿ ರಷ್ಯದ ಬೈಲ್ ಗೊರಾಡ್ ರಣಗದಲ್ಲಿ ಜರ್ಮನರು ಅನುಸರಿಸಿದ ಕದನ ರೀತಿಯೇ ೆ, ಈಗ ಅನುಸರಿಸುತ್ತಿರುವ ಕದನ ರೀತಿಯೇ ಬೇರೆ ಂದು ವರದಿ ಬರುತ್ತಿವೆ

ಅಸಂಖ್ಯಾತ ಟ್ಯಾಂಕ್ ದಳಗಳನ್ನು ಮುಂದಕ್ಕೆ ುಗ್ಗಿಸಲು ಈಗ ಪ್ರಯತ್ನವಾಗುತ್ತಿಲ್ಲ ಮೊದಲು ಮಾನಗಳು ಗವ್ಯ ಸ್ಥಾನದಲ್ಲಿ ಶತ್ರು ತಲೆಯೇ ಉಳಿದಂತೆ ಮರ್ದನಕಾರ್ಯ ನಡೆಸುತ್ತವೆ ಅನಂತರ ುಂಚೂಣಿಯಲ್ಲಿ ಟೈಗರ್ ಟ್ಯಾಂಕ್‌ಗಳು ನುಗ್ಗುತ್ತವೆ, ನಂತರ ಸಣ್ಣ ಟ್ಯಾಂಕುಗಳು, ಅವುಗಳ ಹಿಂದೆ ಶಸ್ತ್ರ ತ ಮೋಟಾರ್ ಸೇನೆ, ಅನಂತರ ಪದಾತಿ ದಳ ಹೀಗೆ ಹವು ನಡೆಯುತ್ತದೆ. ಟೈಗರ್ ಟ್ಯಾಂಕುಗಳು ್ ಸ್ಪ್ರೇ ಒಳಸುತ್ತವೆ ಆಗ ಅವನ್ನು ದೂರದ ನೋಡಿದರೆ ಉರಿಯುತ್ತಿರುವಂತೆ ಭಾಸವಾಗು ೆ. ರಷ್ಯನರು ನಿಮಿಷವೂ ತಡಮಾಡದೆ ತಮ್ಮ ಪ್ರತೀರ ಮಾರ್ಗವನ್ನು ಕಂಡುಕೊಂಡರೆ ಸರಿ, ಇಲ್ಲವಾದರೆ, ್ರುದಾಳಿಯಿಂದ ಉಳಿಯುವುದೇ ಕಷ್ಟವಾಗುತ್ತದೆ ರೂ ಶತ್ರುವನ್ನು ಕಂಡು ರಷ್ಯನರು ಕೊಂಚವೂ ಲುಗೊಂಡಿಲ್ಲವೆಂದು ಹೇಳಲಾಗಿದೆ

ಜರ್ಮನರ ಆತ್ಮ ವಿಶ್ವಾಸ ಕುಗ್ಗಿಲ್ಲ

ಜರ್ಮನ್ ಪ್ರಜಾಕೋಟಿಯಲ್ಲಿ ಇನ್ನೂ ಆತ್ಮವಿಶ್ವಾ ಕುಗ್ಗಿಲ್ಲ, ವಿಜಯವಾಗುವುದೆಂಬ ಭರವಸೆಯಿನ್ನೂ ಳಿದಿದೆ, ಆದರೆ ಜರ್ಮನ್ ನಾಯಕರಿಗೆ ಮಾತ್ರ ೆ ಗತಿಯೇನು ಎಂಬ ದಿಗಿಲಿಗೆ ಆರಂಭವಾಗಿದೆ ಬುದಾಗಿ ಜನರಲ್ ಮಾಂಟಗೊಮರಿಯವರು ಹೇಳಿ ಂದು ಪ್ರಕಟವಾಗಿದೆ

ಮುಂಡಾದಲ್ಲಿ ಜಪಾನೀ ಸೈನ್ಯಗಳ ದುಃಸ್ಥಿತಿ

ನ್ಯೂ ಜಾರ್ಜಿಯಾದಲ್ಲಿ ಜಪಾನೀ ನಿಲ್ದಾಣವಾದ ಮುಂಡಾದಲ್ಲಿರುವ ಜಪಾನೀ ಸೈನ್ಯಗಳು ಪೂರ್ಣವಾಗಿ ನಾಶವಾಗಬೇಕು, ಇಲ್ಲದಿದ್ದರೆ ಅಮೆರಿಕನ್ನರಿಗೆ ಶರಣಾಗತವಾಗಬೇಕು ಈ ಸ್ಥಿತಿಯಲ್ಲಿ ಇದೆ. ಮುಂಡಾವು ಬೇಗನೇ ಬೀಳಬಹುದೆಂದು ನಿರೀಕ್ಷಿಸಬಹುದು ಆದರೆ ಅದಕ್ಕಾಗಿ ಭಾರಿ ಕದನನೇನೋ ನಡೆಯದೇ ಇರಲಾರದು. ಮುಂಡಾ ನಿಲ್ದಾಣವು ಮಿತ್ರರ ವಶವಾದರೆ ನ್ಯೂಗಿನಿಯಿಂದ ನ್ಯೂ ಜಾರ್ಜಿಯಾವರೆಗೆ ೭೦೦ ಮೈಲಿಗಳಷ್ಟು ದೂರದ ಸಮುದ್ರ ಭಾಗವು ಮಿತ್ರರ ಹತೋಟಿಯಲ್ಲಿರುವದು ಇದಾದ ಮೇಲೆ ಮಿತ್ರ ಸೈನ್ಯಗಳ ಗುರಿಯು ರಾಬೋಲ್ ನಿಲ್ದಾಣವೇ ಆಗಿರುವದು ಮುಂಡಾದಿಂದ ರಾಬೋಲ್‌ಗೆ ೪೦೦ ಮೈಲಿ ದೂರವಿದೆ

ಜಪಾನರನ್ನು ಸೋಲಿಸುವುದು ಸುಲಭವಲ್ಲ

ಜಪಾನಿನಲ್ಲಿ ಅಮೇರಿಕದ ರಾಯಭಾರಿಯಾಗಿದ್ದ ಜೋಸೆಫ್ ಗ್ರೂರವರು ಕೊಲಂಬಿಯ ವಿಶ್ವವಿದ್ಯಾನಿಲಯದಲ್ಲಿ ಭಾಷಣ ಮಾಡುತ್ತ ಜಪಾನರನ್ನು ಸದೆಬಡಿಯುವುದು ಸುಲಭಸಾಧ್ಯವಾದ ಕಾರ್ಯವೆಂದು ಭಾವಿಸಕೂಡದೆಂದು ಎಚ್ಚರಿಕೆಯಿತ್ತರು " ನಮ್ಮ ಬಲವನ್ನೆಲ್ಲ ಜಪಾನಿನ ಕಡೆ ತಿರುಗಿಸಿದರೂ ಸುಲಭವಾಗಿ ಜಪಾನರು ಶರಣು ಬರುವರೆಂದು ನಂಬಬಾರದು ಸ್ವತಂತ್ರವಾಗಿರಲು ರಾಷ್ಟ್ರವೊಂದಕ್ಕೆ ಆಧುನಿಕ ಅವಶ್ಯಕತೆಯ ದೃಷ್ಟಿಯಿಂದ ಏನೇನು ಪರಿಕರಗಳು ಬೇಕೋ ಎಲ್ಲವೂ ಈಗ ಜಪಾನಿಗೆ ದೊರೆಯುವಂತಿದೆ ಪೂರ್ವ ಏಷಿಯ ಮತ್ತು ಪೆಸಫಿಕ್‌ಗಳಲ್ಲಿ ಅವರು ಆಕ್ರಮಿಸಿರುವ ಪ್ರದೇಶಗಳು ವಸ್ತುಸಮೃದ್ಧವಾಗಿವೆ ಅಲ್ಲದೆ ವಿಶೇಷವಾಗಿ ಹಡಗುಗಳನ್ನು ನಿರ್ಮಿಸುವುದಕ್ಕೆ ಸಹ ಈ ಹೊಸಸ್ವಾಸ್ಥ್ಯಗಳಲ್ಲಿ ಜಪಾನರಿಗೆ ಬೇಕಾದ ಸೌಲಭ್ಯಗಳು ತುಂಬಿವೆ ಜಪಾನರು ವಿಜ್ಞಾನನೇತ್ತರು, ಕುಶಲಮತಿಗಳು, ಕಷ್ಟಪಟ್ಟು ಕೆಲಸ ಮಾಡುವ ಶ್ರದ್ಧಾಳುಗಳು, ಇವರು ಈ ಸ್ವಾಸ್ಥ್ಯಗಳಲ್ಲಿ ಪ್ರತಿಯೊಂದು ಪ್ರದೇಶದಲ್ಲಿಯೂ ಇರುವ ಕೈಗಾರಿಕೆ ಕಾರ್ಖಾನೆಗಳನ್ನು ಮರಮ್ಮತು ಮಾಡಿ ಉಪಯೋಗಕ್ಕೆ ಅಳವಡಿಸುವರು, ಇದಲ್ಲದೆ ಈಗ ತಾವು ಆಕ್ರಮಿಸಿರುವ ಪ್ರದೇಶಗಳನ್ನು ಹೊರಗಿನ ವಸ್ತುಗಳಿಗಾಗಿ ಕಾದುಕುಳ್ಳಿರುವಂತೆ ಇಡುವುದಿಲ್ಲ ಆದರೆ ಅವರ ನೌಕಾಬಲವು ಮಾತ್ರ ದುರ್ಭೇದ್ಯವಾಗಿಲ್ಲ , ಇದಕಾರಣ ಸರಬರಾಯಿ ನೌಕೆಗಳನ್ನು ಬಿಟ್ಟು ಬೇರೆದಾರಿ ಹುಡುಕಲು ಅವರು ಪ್ರಯತ್ನಿಸುತ್ತಿರಬಹುದು ಇದಕಾರಣ ಜಪಾನರನ್ನು ಸುಲಭವಾಗಿ ತುಳಿಯುವೆವೆಂದು ಭಾವಿಸುವುದ ಯೋಗ್ಯವಲ್ಲ ಅವರನ್ನು ಸೋಲಿಸಲು ಅರ್ಧಂಬರ್ಧ ಸಿದ್ಧತೆಯು ಪ್ರಯೋಜನವಾಗಲಾರದು ಎಂದು ಜೋಸಫ್ ಗ್ರೂರವರು ಹೇಳಿದರು.

ಮೈಸೂರು ಸಂಸ್ಥಾನದಲ್ಲಿ ಸ್ಥಳದಿಂದ ಸ್ಥಳಕ್ಕೆ ಲಗ್ಗೇಜು ರೂಪದಲ್ಲಿ ಪ್ರಯಾಣಿಕರು ೫|| ಮಣದವರೆಗೆ ಸಕ್ಕರೆಯನ್ನು ರಹದಾರಿಯಿಲ್ಲದೆ ಸಾಗಿಸಬಹುದೆಂದು ಸರ್ಕಾರವು ಅನುಮತಿಯಿತ್ತಿದೆ.

ಮೈಸೂರು ನಗರದಲ್ಲಿ ಆಗಸ್ಟ್ ತಿಂಗಳಿಂದ ರೇಷನಿಂಗ್ ಜಾರಿಗೆ ಬರುತ್ತದೆಯೆಂದು ಹೇಳಲಾಗುತ್ತಿದೆ ಆದರೆ ಪರಿಸ್ಥಿತಿಯನ್ನು ಗಮನಿಸಿದರೆ ಅಕ್ಟೋಬರ್ ಅಂತ್ಯದವರೆಗೆ ಮೈಸೂರಿನಲ್ಲಿ ರೇಷನಿಂಗ್ ಜಾರಿಗೆ ಬರುತ್ತದೆಯೆಂದು ಹೇಳುವಂತಿಲ್ಲ. ರೇಷನಿಂಗ್ ಜಾರಿಗೆ ಬಂದನಂತರ ಯಾವ ಲೋಪವೂ ಇಲ್ಲದಂತೆ ಅದು ನಡೆಯಬೇಕು ಅಲ್ಲದೆ ದಸರಾ ಉತ್ಸವ ಸಮಯದಲ್ಲಿ ಹೊರಗಿನಿಂದ ರಾಜಧಾನಿಗೆ ಬರುವ ಜನ ಸಂದಣಿಯಿರುತ್ತದೆ ವಸ್ತುಪ್ರದರ್ಶನವೇ ಮುಂತಾದುವಕ್ಕೆ ಸಹ ಜನರು ವಿಶೇಷವಾಗಿ ಬರಲಿರುವರು ಈಗಲೇ ರೇಷನಿಂಗ್ ಜಾರಿಗೆ ಬಂದರೆ, ಹೊರಗಿನಿಂದ ಬರತಕ್ಕವರಿಗೆ ತೊಂದರೆಯಾಗುತ್ತದೆ ಎಂಬ ಭಾವನೆಯೂ ರೇಷನಿಂಗ್ ಅಧಿಕಾರಿಗಳ ಗಮನದಲ್ಲಿರುವಹಾಗಿದೆ ಒಟ್ಟಿನಲ್ಲಿ ಬಹುಶಃ ಅಕ್ಟೋಬರ್ ಅಂತ್ಯದವರೆಗೆ ರಾಜಧಾನಿಯಲ್ಲಿ ರೇಷನಿಂಗ್ ಜಾರಿಗೆ ಬರುವುದಿಲ್ಲವೆಂದು ಊಹಿಸಲಾಗಿದೆ

(೧ನೆಯ ಪುಟದಿಂದ ಮುಂದುವರಿದುದು)

ದೇವರು ಮನುಷ್ಯನಿಗೆ ದೇಹಬಲ ಜನಬಲ-ಧನಬಲ ಕೊಟ್ಟಿದ್ದು ಪರಪೀಡೆಯ ಸಲುವಾಗಿ ಅಲ್ಲ ಅದರ ಪರೋಪಕಾರಕ್ಕಾಗಿರುವುದೆಂದು ತಿಳಿಯತಕ್ಕದ್ದು

ಮಹತ್ವಾಕಾಂಕ್ಷೆಯಿಂದ ಮನುಷ್ಯನು ಉದ್ಯೋಗಿಯಾಗಿರುತ್ತಾನೆಂಬುದು ನಿಜವು ಆದರೆ ಪರರ ಮನಸ್ಸನ್ನು ನೋಯಿಸದ ಹೊರತು ಪ್ರಾಪ್ತವಾಗದ ವಸ್ತುವನ್ನು ದೊರಕಿಸುವುದಕ್ಕೆ ಪ್ರಯತ್ನ ಮಾಡುವುದು ಯೋಗ್ಯವಲ್ಲ. ದೈವದಿಂದೊದಗಿದ ಸ್ಥಿತಿಯಲ್ಲಿ ಸುಖಿಯಾಗಿರದೆ ಎರಡನೆಯವರ ಉತ್ಕರ್ಷೆಯನ್ನು ನೋಡಿ ಸಹಿಸದೆ ಮನಸ್ಸಿನೊಳಗೆ ಯಾವಾಗಲೂ ಮತ್ಸರಪಡುವವನು ಎಂದೂ ಸುಖಿಯಾಗಲಾರನು ಯಾಕೆಂದರೆ ಈ ಜಗತ್ತಿನಲ್ಲಿ ಅಭ್ಯುದಯವನ್ನು ದೊರಕಿಸುವುದಕ್ಕಾಗಿ ಪ್ರತಿಯೊಬ್ಬನೂ ಪ್ರಯತ್ನ ಮಾಡುವುದುಂಟು ಅಂದಮೇಲೆ ಎಲ್ಲರಿಗಿಂತ ಅವನು ಹೇಗೆ ಶ್ರೇಷ್ಠನಾಗುವನು ? ಒಂದುವೇಳೆ ಎಲ್ಲರಿಗಿಂತಲೂ ಮಿಗಿಲಾದರೂ ಅವನ ಮನಸ್ಸು ತೃಪ್ತಿಯನ್ನು ಹೊಂದಲಾರದು ಉದಾಹರಣಾರ್ಥ, ಗ್ರೀಕರ ಅರಸನಾದ ಸಿಕಂದರನು ಎಲ್ಲ ದೇಶಗಳನ್ನು ಗೆದ್ದರೂ, ' ಇನ್ನು ಮುಂದ ಜಯಿಸಲಿಕ್ಕೆ ಯಾವ ದೇಶಗಳೂ ಉಳಿಯಲಿಲ್ಲವಲ್ಲ ! ' ' ಎಂದು ಉದ್ವಿಗ್ನನಾಗಿ, ಆಕಾಶದ ಕಡೆಗೆ ನೋಡಿ, ಕಂಬನಿಗಳನ್ನು ಸುರಿಸಿದನು ಸಾಮಾನ್ಯನಾದ ಮನುಷ್ಯನು ಅನ್ಯರನ್ನು ಪೀಡಿಸಿ ಧನವಂತನಾಗಬೇಕೆಂದು ಇಚ್ಛಿಸಿದರೂ, ಪೀಡಿಸುವುದಕ್ಕೆ ಬೇಕಾದ ಸಾಧನಗಳು ಅವನಲ್ಲಿರುವುದಿಲ್ಲವಾದ್ದರಿಂದ ಅವನಿಂದ ಜಗತ್ತಿಗೆ ಅಂತಹ ಹಾನಿಗಳೇನೂ ಉಂಟಾಗುವುದಿಲ್ಲ ಆದರೆ ರಾಜ್ಯಕಾರ್ಯ ಧುರಂಧರರು ಈ ಬಗೆಯಾಗಿ ಇಚ್ಛಿಸಿದರೆ, ದೇಶಕ್ಕೆ ಬಹು ಕಷ್ಟ ನಷ್ಟಗಳುಂಟಾಗುವುವು ರೋಮನ್ ಜನರು ದೇಶದಲ್ಲಿ ಎಲ್ಲಕ್ಕೂ ಹೆಚ್ಚಿನದಾದ ಪ್ರಭುತ್ವವನ್ನು ಕೊಟ್ಟರೂ ಸೀಝರನು ಅದರಿಂದ ತೃಪ್ತನಾಗದೆ, ಅರಸನಾಗಿ ಮನಬಂದಂತೆ ಮಾಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರಿಂದ, ಅವನ ಕೇವಲ ಮಿತ್ರನಾದವನೇ ಅವನನ್ನು ಕೊಂದನು ಇಡೀ ಯುರೋಪ್‌ಖಂಡವನ್ನು ತನ್ನ ಪರಾಕ್ರಮದಿಂದ ಗದಗನ ನಡುಗಿಸಿದ ಲೋಕೈಕವೀರನಾದ ನೆಪೋಲಿಯನ್ ಬೋನಾಪಾರ್ಟನ ಅವಸ್ಥೆಯಾದರೂ ಇದೇ ತರಹವಾಯಿತು

ಉಪಸಂಹಾರ — ಪರರ ಹಿತವನ್ನು ಎಣಿಸದೆ ಸ್ವಾರ್ಥಪರಾಯಣರಾಗಿಯೂ, ಎಲ್ಲರಿಗಿಂತಲೂ ತಾವೇ ಶ್ರೇಷ್ಠರಾಗಿಯೂ, ಧನಿಕ ಶ್ರೇಷ್ಠರಾಗಿಯೂ, ಲೋಕಪ್ರಿಯರಾಗಿಯೂ ಇರಬೇಕೆಂಬ ಆಕಾಂಕ್ಷೆಯುಳ್ಳವರು ಭಗ್ನಮನೋರಥರಾಗಿ ಮನಸ್ಸಿನ ಸ್ವಾಸ್ಥ್ಯವನ್ನು ಕಾಣದೆ ಎಲ್ಲರಿಂದ ತಿರಸ್ಕರಿಸಲ್ಪಟ್ಟು, ಲಘುತ್ವವನ್ನು ಹೊಂದುವರು ಆದರೆ ಶ್ಲಾಘ್ಯವಾದ ಕಾರ್ಯಗಳಲ್ಲಿ ದೃಷ್ಟಿಯನ್ನೀಯುವಂಥ, ಸ್ವಧರ್ಮಾಭಿಮಾನಿಯಾದಂಥ, ನೈತಿಕಧೈರ್ಯವುಳ್ಳಂಥ, ಸ್ವಾರ್ಥವನ್ನೂ ಪರಪ್ರಶಂಸೆಗಳನ್ನೂ ಲಕ್ಷಿಸದೆ ಸತ್ಕೀರ್ತಿಯನ್ನು ಹೊಂದಬೇಕೆಂಬುವಂಥ ಮತ್ತು ಪರಮಾತ್ಮನು ತಮ್ಮನ್ನು ಇಟ್ಟ ಸ್ಥಿತಿಯಲ್ಲಿಯೇ ಸಂತುಷ್ಟರಾಗಿ ಉದ್ಯೋಗ, ಉಚ್ಚಧ್ಯೇಯ, ದೀರ್ಘಪ್ರಯತ್ನ ಇತ್ಯಾದಿ ಪ್ರಶಂಸನೀಯ ಗುಣಸಂಚಯದ ಸಹಾಯದಿಂದ ತಮ್ಮ ಸ್ಥಿತಿಯನ್ನು ಸುಧಾರಿಸಿಕೊಳ್ಳುವಂಥ ಜನರು ಮಾನ್ಯರೂ, ಗಣ್ಯರೂ. ಪರಶಿವಪ್ರಿಯರೂ ಸುಖಿಗಳೂ ಆಗುವರು

ಲೋಕೇ ಗುರುತ್ವಂ ವಿಪರೀತತಾಂ ವಾ ।
ಸ್ವಚೇಷ್ಟಿತಾನ್ಯೇವ ನರಂ ನಯಂತಿ ॥

" ಮನುಷ್ಯನನ್ನು ಗುರುತ್ವಕ್ಕೋ ಲಘುತ್ವಕ್ಕೋ ನಡೆಸುವುದು ಅವನ ಕೃತ್ಯಗಳೇ '

ಸ್ವೀಕಾರ

ಬೆಳಗಾಂವ ಜಿಲ್ಲಾ ದೊಡ್ಡವಾಡಗ್ರಾಮದಲ್ಲಿರುವ ವೇ|| ಎರಗಂಬಳಿ ಮಠದ ಗುರು ಸಿದ್ಧಯ್ಯ ಇವರಿಗೆ ಪುತ್ರೋತ್ಸವವಾದ ಸಂತೋಷಕ್ಕಾಗಿ ಪ್ರಭಾಪೋಷಣೆಗೆ ಸಮರ್ಪಿಸಿದ 2 ರೂಪಾಯಿಗಳು ಶ್ರೀ ನೀಲಕಂಠ ಶಿವಾಚಾರ್ಯರು ಬೃಹನ್ಮಠ ಸವದತ್ತಿ ಇವರ ಮೂಲಕ ತಲ್ಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸ್ತ್ರೀ ಶಿಕ್ಷಣದ ಅವಶ್ಯಕತೆ

ಲೇ—ಶ್ರೀ ಕಟ್ಟಿಮಸ್ವಾಮಿಗಳು ಹಿರೇಮಠ ಕೊಣ್ಣೂರು

ಸ್ತ್ರೀ ಶಿಕ್ಷಣದ ಅವಶ್ಯಕತೆಯೆಂದರೆ ಸ್ತ್ರೀಯರಿಗೆ ವಿದ್ಯೆ ಕಲಿಸುವದು ಮುಖ್ಯವಾಗಿದೆಯೆಂದು ಇದರರ್ಥವಾಗುವದು

ಕಲಿಸುವದೆಂದರೆ ಈಗಿನ ಬರೀ ಓದು ಬರಹ ವಿದ್ಯೆಯಲ್ಲ ಇದರಿಂದ ಸ್ತ್ರೀಯರಿಗೆ ವಿಶೇಷ ಉಪಯೋಗವಾಗಲಾರದು ಈ ವಿದ್ಯೆಯ ಸಂಗಡ ನೂಲುವದು, ಹೊಲಿಯುವದು, ನೇಯುವದು, ಕುಟ್ಟುವದು ಬೀಸುವದು, ಹೈನಮಾಡುವದು, ಅಡಿಗೆಮಾಡುವದು, ಊಟಕ್ಕೆಡೆಮಾಡುವದು, ಶಿಶುಸಂರಕ್ಷಣೆಮಾಡುವದು, ಇವೇ ಮೊದಲಾದ ವಿದ್ಯೆಗಳನ್ನು ಕಲಿಸಬೇಕು ಅಂದರೆ ಪ್ರಪಂಚಕ್ಕೆ ಎಲ್ಲ ತರದಿಂದಲೂ ಒಳ್ಳೆ ಅನುಕೂಲವಾಗುವದು

ಪಕ್ಷಿಗಳಿಗೆ ಎರಡು ರೆಕ್ಕೆಗಳು ಸರಿಯಾಗಿದ್ದರೇನೇ ಅವರ ಸಂಚಾರಕಾರ್ಯವು ಸರಿಯಾಗಿ ನಡೆಯುವದಲ್ಲದೆ ಒಂದು ರೆಕ್ಕೆಯಿಂದ ಸರಿಯಾಗಿ ಹೇಗೆ ನಡೆಯುವದಿಲ್ಲವೋ ಅದರಂತೆಯೇ ಸೃಷ್ಟಿಯ ಕಾರ್ಯವು ಸರಿಯಾಗಿ ನಡೆಯಬೇಕಾದರೆ ಸತಿಪತಿಗಳಿಬ್ಬರೂ ಅವಶ್ಯಬೇಕು ಇಬ್ಬರೂ ಸಹಾಯಕರಾಗದಿದ್ದರ ಸೃಷ್ಟಿಕಾರ್ಯವು ನಿಂದಿರುವದಲ್ಲದೆ ಪ್ರಪಂಚವು ಸರಿಯಾಗಿ ನಡೆಯಲಾರದು

ಸ್ತ್ರೀಯರ ಕರ್ತವ್ಯ ಮನೆಯೊಳಗೆ ಅಡಿಗೆಮಾಡುವದು, ಊಟಕ್ಕೆಡೆಮಾಡುವದು ಶಿಶುಗಳನ್ನು ಚನ್ನಾಗಿ ಸಂರಕ್ಷಿಸುವದು, ಇವೇ ಮೊದಲಾದ ಗೃಹಕೃತ್ಯಗಳನ್ನು ಮಾಡುವದಲ್ಲದೆ ಗಂಡನ ಆಜ್ಞೆಯಂತೆ ನಡೆದುಕೊಳ್ಳುವದು ಪಾತಿವ್ರತ್ಯ ಧರ್ಮವನ್ನು ಕಾಯ್ದುಕೊಳ್ಳುವದು ಇತ್ಯಾದಿ ಕೆಲಸಗಳಾಗಿವೆ

ಪುರುಷರ ಕರ್ತವ್ಯ—ಯಾವದಾದರೊಂದು ನೌಕರಿಯಿಂದಾಗಲಿ, ವ್ಯಾಪಾರದಿಂದಾಗಲಿ ಒಕ್ಕಲತನದಿಂದಾಗಲಿ ಇವೇ ಮೊದಲಾದ ಯಾವುದಾದರೊಂದು ಧಂಧೆ ಮಾಡಿ ಅದರಿಂದ ಬಂದ ದುಡ್ಡಿನಿಂದ ತಮ್ಮ ಸಂಸಾರವನ್ನು ಸಾಗಿಸುವದು ಪುರುಷರ ಕೆಲಸವಾಗಿದೆ

ಸತಿಪತಿಗಳಿಬ್ಬರೂ ಸುಶಿಕ್ಷಿತರಾಗಿದ್ದರೆ ಎಲ್ಲಕ್ಕೂ ಮೇಲು, ಉತ್ತಮ ತರಗತಿಗಳಿಗೆ ಸೇರುವದು ಇವರಿಬ್ಬರೊಳಗೆ ಸತಿಯಾಗಲಿ, ಪತಿಯಾಗಲಿ ಅಶಿಕ್ಷಿತರಾಗಿದ್ದರೆ ಮಧ್ಯಮ ತರಗತಿಗೆ ಸೇರುವದು ಸತಿಪತಿಗಳಿಬ್ಬರೂ ಅಶಿಕ್ಷಿತರಾಗಿದ್ದರ ಇದು ಕನಿಷ್ಠ ತರಗತಿಗೆ ಸೇರುವದು ಯಾಕೆಂದರ ಸತಿಪತಿಗಳಿಬ್ಬರೂ ಸುಶಿಕ್ಷಿತರಿರುವದರಿಂದ ಪ್ರಪಂಚವು ಆತಂಕವಿಲ್ಲದ ನಡೆಯುವದು ಇಬ್ಬರೊಳಗೆ ಒಬ್ಬರು ಅಶಿಕ್ಷಿತರಿದ್ದು ಒಬ್ಬರು ಸುಶಿಕ್ಷಿತರಿದ್ದರೆ ಸ್ವಲ್ಪ ಆತಂಕವಾಗುವದು ಇಬ್ಬರೂ ಅಶಿಕ್ಷಿತರಿದ್ದರ ಸಂಪೂರ್ಣ ಅಡ್ಡಿಯಾಗುವದು ಜಾಣಜಾಣರಿಗೆ ಮೂರು ದಾರಿ, ಜಾಣ ಕೋಣರಿಗೆ ಎರಡು ದಾರಿ, ಕೋಣ ಕೋಣರಿಗೆ ದಾರಿಯೇ ಇಲ್ಲವೆಂಬಂತಾಗುವದು

ಸ್ತ್ರೀಯರು ಸುಶಿಕ್ಷಿತರಾದರೆ ಜಗತ್ತು ಉನ್ನತಾವಸ್ಥೆಯನ್ನು ಹೊಂದುವದು ಅಶಿಕ್ಷಿತರಾದರೆ ಜಗತ್ತು ಹೀನಾವಸ್ಥೆಯನ್ನು ಹೊಂದುವದು ಈ ಎರಡು ಅವಸ್ಥೆಗಳನ್ನು ಹೊಂದಿಸಲಿಕ್ಕೆ ಸ್ತ್ರೀಯರೇ ಮುಖ್ಯ ಕಾರಣರೆಂದು ಸ್ಪಷ್ಟವಾಗುತ್ತದ ಹ್ಯಾಗಂದರೆ- ಶಿಶುಗಳು ಹುಟ್ಟಿದಂದಿನಿಂದ ಮುಂದ ದೊಡ್ಡವಾಗುವವರೆಗೂ ತಾಯಿಯಲ್ಲಿಯೇ ಕೂಡಿಕೊಂಡಿರುವದರಿಂದ,ಅವುಗಳಲ್ಲಿ ತಾಯಿಯ ಗುಣಗಳೇ ವಿಶೇಷವಾಗಿ ಅಂಕುರಿಸುತ್ತವೆ. ತಾಯಿಯು ಧರ್ಮದಂತೆ ನಡೆಯುವವಳೂ, ನೀತಿವಂತಳೂ, ಸದಾಚಾರಸಂಪನ್ನಳೂ, ಆರೋಗ್ಯವಂತಳೂ, ಪರೋಪಕಾರ ನಿರತಳೂ, ಕರುಣಾಳುವೂ ಆಗಿರಬೇಕು ಈ ಗುಣಗಳು ಬರಬೇಕಾದರೆ ತಾಯಿಗೆ ಮೊದಲು ಸುವಿದ್ಯೆಬೇಕು ಪುರುಷರಿಗಿಂತಲೂ ಸ್ತ್ರೀಯಳಿಗೆ ಮೊದಲು ಒಳ್ಳೇ ವಿದ್ಯೆಯು ಬೇಕು "ಸಂಸರ್ಗಜಾ ದೋಷ ಗುಣಾ ಭವಂತಿ" ಎಂಬ ವಾಕ್ಯವು ಮೇಲಿನ ವಿಷಯವನ್ನು ಸ್ಪಷ್ಟಪಡಿಸುತ್ತವೆ ಮತ್ತು "೩ ವರ್ಷದ ಬುದ್ಧಿ ೧೦೦ ವರ್ಷದವರೆಗೆ" ಎಂಬಂತೆ ಚಿಕ್ಕಂದಿನಲ್ಲಿ ತಾಯಿ ಕಲಿಸಿದ ಬುದ್ಧಿಯೇ ಮುಂದ ಮುಪ್ಪಿಗೆ ಬರುವದು. ಸ್ತ್ರೀಯರು ಸುಶಿಕ್ಷಿತರಾಗುವದರಿಂದ ಮಕ್ಕಳು ಸುಶಿಕ್ಷಿತರಾಗುತ್ತಾರೆ. ಮಕ್ಕಳು ಸುಶಿಕ್ಷಿತರಾಗುವದರಿಂದ ಜನಾಂಗವು ಸುಧಾರಿಸುವದು "ಸ್ತ್ರೀಯರಿಗೆ ಕಲಿಸಿದರೆ ಜನಾಂಗಕ್ಕೆ ಕಲಿಸಿದಂತಾಗುವದು" ಎಂಬ ವಾಕ್ಯವು ಅಕ್ಷರಶಃ ನಿಜವಿರುತ್ತದೆ ಆದ್ದರಿಂದ ಮೊದಲು ತಾಯಿಯು ಬಹಳ ಜಾಗರೂಕಳಾಗಿರಬೇಕು ಆದ್ದರಿಂದ ಪ್ರತಿಯೊಬ್ಬರೂ ಸ್ತ್ರೀಯರಿಗೆ ವಿದ್ಯೆಯನ್ನು ಮುಖ್ಯವಾಗಿ ಕಲಿಸಬೇಕು ಇಲ್ಲಿ ಮತ್ತೊಂದು ಮಾತು ಹೇಳತಕ್ಕದ್ದೇನೆಂದರೆ—ನಮ್ಮ ಭಾರತೀಯ ಸ್ತ್ರೀಯರು ಆತ್ಮೋದ್ಧಾರಕ್ಕಾಗಲಿ, ದೇಶೋದ್ಧಾರಕ್ಕಾಗಲಿ, ಬೇಕಾದ ವಿದ್ಯೆಯನ್ನು ಕಲಿತು, ಉತ್ತೀರ್ಣರಾಗಿ ಡಿಗ್ರಿಯನ್ನು ಪಡೆದು ಬೇಕಾದಷ್ಟು ದುಡ್ಡನ್ನು ಸಂಪಾದಿಸಬಹುದು ಆದರೆ ಪರದೇಶದ ಸ್ತ್ರೀಯರ ಮೋಹಜಾಲಕ್ಕೊಳಗಾಗಿ ತಮ್ಮ ಧರ್ಮಕ್ಕೆ ತಿಲಾಂಜಲಿಯನ್ನು ಕೊಡಬಾರದು (ಧರ್ಮ ಬಿಡಬಾರದು) ನಮ್ಮ ದೇಶದ ಉಡಿಗೆಗಳನ್ನೇ ಧರಿಸಬೇಕು ಪಾತಿವ್ರತ್ಯಧರ್ಮಕ್ಕೆ ಚ್ಯುತಿಯನ್ನು ತಂದುಕೊಳ್ಳಬಾರದು ಪ್ರೌಢವಿವಾಹ, ವಿಧವಾವಿವಾಹ, ದಾಂಪತ್ಯವಿಚ್ಛೇದನ, ಸ್ತ್ರೀಸ್ವಾತಂತ್ರ್ಯ ಇವುಗಳಿಗೆ ಆಸ್ಪದ ಕೊಡಬಾರದು ಅಭಕ್ಷ್ಯಪದಾರ್ಥಗಳನ್ನು ಸೇವಿಸಬಾರದು ಇವೇ ಮೊದಲಾದ ನಿಯಮಗಳನ್ನು ಪಾಲಿಸುತ್ತ ಬಂದರೆ ಬಂಗಾರಕ್ಕೆ ಸುಗಂಧವನ್ನು ಕೂಡಿಸಿದಂತಾಗಿ ವಿದ್ಯೆಗೆ ಮತ್ತಷ್ಟು ಕಳೆಯೇರುವದು

ಮೊದಲಿನ ಸ್ತ್ರೀಯರು ಮೈಕಾಣದಹಾಗೆ ದಪ್ಪನ್ನ ವಸ್ತ್ರಗಳನ್ನುಡುತ್ತಿದ್ದರು ಮೊಣಕೈವರಗೆ ಕುಬಸವನ್ನು ತೊಡುತ್ತಿದ್ದರು ಎಡಕ್ಕೆ ಮೂಗನ್ನು ಚುಚ್ಚಿಕೊಳ್ಳುತ್ತಿದ್ದರು ಈ ಪದ್ಧತಿಯ ಸ್ತ್ರೀಯರು ಈಗಲೂ ಕೆಲವರಿದ್ದಾರೆ ಈಗಿನ ಕೆಲವು ಸ್ತ್ರೀಯರು ನಾಟಕ, ಸಿನೇಮಾ ನೋಡಿಯಾಗಲಿ ಇಲ್ಲವೆ ಪರದೇಶಿಯ ಸ್ತ್ರೀಯರನ್ನು ನೋಡಿಯಾಗಲಿ ಮೈಯೆಲ್ಲಾ ಕಾಣುವಂತೆ ಸೂಕ್ಷ್ಮವಸ್ತ್ರಗಳನ್ನುಡುತ್ತಿದ್ದಾರ ಮೊಣಕೈವರೆಗೆ ತೊಡುತ್ತಿದ್ದ ಕುಬಸವನ್ನು ಕೆಲವು ದಿವಸ ಅರ್ಧ ತೋಳಿನ ತೊಡಹತ್ತಿದ್ದರು ಈಗ ಅದನ್ನೂ ಬಿಟ್ಟು ಅರ್ಧತೋಳಿನ ಮೇಲೆ ಜಂಪರ್ ಅಂತ ತೊಡುತ್ತಿದ್ದಾರ ಇನ್ನು ಮುಂದ ಗಂಡಸರು ಜಾಕೇಟು ತೊಡುವಂತೆ ಹೆಗಲಮೇಲೆ ಬರುವಂತೆ ತೊಡುವರೋ ಏನೋ ನೋಡಬೇಕಾಗಿದೆ ಎಡಕ್ಕೆ ಸಾಲದ ಬಲಕ್ಕೂ ಮೂಗನ್ನು ಚುಚ್ಚಿಕೊಳ್ಳಹತ್ತಿದ್ದಾರೆ ಇಷ್ಟಾದರೂ ಇವರಿಗೆ ತೃಪ್ತಿಯೇ ಯಿಲ್ಲ ಈಗಿನ ಉಡುಗೆ ತೊಡುಗೆಗಳು ನಮ್ಮ ಭಾರತೀಯ ಸ್ತ್ರೀಯರಿಗೆ ಅತ್ಯಂತ ವಿರೋಧವೂ, ಹೇಯವೂ ಆಗಿವೆ

ಪ್ರಾಚೀನ ಸ್ತ್ರೀಯರು ತಮ್ಮ ಪತಿಯ ಸಂಗಡ ಭಕ್ತಿಯಿಂದ ನಡೆದುಕೊಳ್ಳುತ್ತಿದ್ದರು ಆತನಿಗೆ ಎದುರುವಾದಿಸದ ಸೌಮ್ಯತನದಿಂದ ನಡೆದುಕೊಳ್ಳುತ್ತಿದ್ದರು ಗಂಡನು ಹೊರಗಿನ ಕೆಲಸಗಳನ್ನು ತೀರಿಸಿಕೊಂಡು ಮನೆಗೆ ಬಂದ ಕೂಡಲೇ ನಗೆಮೋರೆಯಿಂದ ಆತನನ್ನು ಆದರಿಸುತ್ತಿದ್ದರು ಗಂಡನು ಉಣ್ಣುವದಕ್ಕಿಂತ ಮೊದಲು ತಾವು ಎಂದೂ ಉಣ್ಣುತ್ತಿದ್ದಿಲ್ಲ ಆತನಿಗೆ ಸೇರದ ಪದಾರ್ಥಗಳನ್ನು ಎಂದೂ ಮುಟ್ಟುತ್ತಿದ್ದಿಲ್ಲ ಮತ್ತು ಗಂಡನೇ ದೇವರೆಂದು ತಿಳಿದು ಅದರಂತೆ ನಡೆದುಕೊಳ್ಳುತ್ತಿದ್ದರು ಮಾವ, ಭಾವ ಅತ್ತೆ, ಮೈದುನ, ಅತಿಥಿಗಳ ಸಂಗಡ ವಿಶ್ವಾಸದಿಂದ ವರ್ತಿಸುತ್ತಿದ್ದರು ಪ್ರತಿಯೊಂದು ಮನೆಗೆಲಸವನ್ನೂ ಶಾಂತಮುದ್ರೆಯಿಂದಲೂ ಸ್ವಚ್ಛತೆಯಿಂದಲೂ ಮಾಡುತ್ತಿದ್ದರು

ಅರ್ವಾಚೀನದ ಕೆಲವು ಸ್ತ್ರೀಯರು ತಮ್ಮ ಗಂಡನ ಸಂಗಡ ಭಕ್ತಿಯಿಂದ ನಡೆದುಕೊಳ್ಳದ ಎದುರು ವಾದಿಸುತ್ತ, ಗಂಡನು ಹೊರಗಿನ ಕೆಲಸವನ್ನು ತೀರಿಸಿಕೊಂಡು ಮನೆಗೆ ಬಂದಕೂಡಲೇ ಮೋರೆಯನ್ನು ಬಿಗಿದುಕೊಂಡು ಉಪಚರಿಸುತ್ತ. ಗಂಡನು ಊಟಮಾಡುವದಕ್ಕಿಂತ ಮುಂಚೆಯೇ ಊಟಮಾಡಿಕೊಂಡು ಕೂಡ್ರುತ್ತ ಆತನಿಗೆ ಬೇಡದ ಪದಾರ್ಥಗಳನ್ನು ತಿಂದು, ಗಂಡನು ದೇವರೆಂದು ಭಾವಿಸದೆ, ಅತ್ತೆ, ಮಾವ, ಭಾವ, ಮೈದುನ ಅತಿಥಿಗಳ ಸಂಗಡ ಪ್ರೀತಿಯಿಂದ ನಡೆದುಕೊಳ್ಳದ, ಯಾವಾಗಲೂ ಅವರಿಗೆ ಎದುರುತ್ತರವನ್ನು ಕೊಡುತ್ತ, ಸಿಟ್ಟಿನಿಂದ ಮನೆಗೆಲಸವನ್ನು ಮಾಡುವಂಥವರಾಗಿರುತ್ತಾರೆ ಇಂಥ ಸ್ತ್ರೀಯರು ರಾಕ್ಷಸವರ್ಗಕ್ಕೆ ಸೇರಿದವರಲ್ಲದ, ಮನುಷ್ಯವರ್ಗಕ್ಕೆ ಸೇರಿದವರಲ್ಲ. ಹಾಗೂ ತನ್ನ ಪತಿಗೂ ಸತ್ಪುರುಷರಿಗೂ ಮಾನ್ಯಳಾಗಲಾರರು. ಇದು ಈಗಿನ ಸುಧಾರಿಸಿದ ಸ್ತ್ರೀಯರ ಪದ್ಧತಿಯಾಗಿದೆ ಸೃಷ್ಟಿಯನ್ನು ನಿರ್ಮಾಣ ಮಾಡಿದವನು ದೇವರು, ಪಂಚ ತತ್ವಗಳಲ್ಲೊಂದಾದ ಪೃಥ್ವಿ (ಭೂಮಿ) ಗೆ ಸ್ತ್ರೀಲಿಂಗದ ಹೆಸರನ್ನು ಕೊಟ್ಟಿದ್ದಾನೆ ಭೂಮಿಯ ಮೇಲಿನ ಪ್ರತಿಯೊಂದು ಪ್ರಾಣಿಗಳ ಉತ್ಪತ್ತಿಗೆ ತಾಯಿಯೇ ಮೂಲವಾಗಿರುವಳು. ಬ್ರಹ್ಮ ವಿಷ್ಣು ಮಹೇಶ್ವರ ಈ ತ್ರಿಮೂರ್ತಿಗಳಾದರೂ ಆದಿಮಾಯೆಯಿಂದ ಹುಟ್ಟಿರುವರು. ಅವಳಾದರೂ ಸ್ತ್ರೀಯಲ್ಲವೇ? ಭೂಮಿಯಮೇಲೆ ಹುಟ್ಟಿದ ಬಳಿಕ ವಿದ್ಯೆಯು ಬೇಕಾಗುತ್ತದೆ ಆ ವಿದ್ಯೆಯಾದರೂ ಸ್ತ್ರೀಯಳಾದ ಸರಸ್ವತಿಯೇ. ಇದಲ್ಲದೆ ಪ್ರಪಂಚಕ್ಕೆ ದುಡ್ಡು ಮುಖ್ಯವಾಗಿಬೇಕು ಅದಾದರೂ ಸ್ತ್ರೀಯಾದ ಲಕ್ಷ್ಮಿಯೇ, ಕಡೆಗೆ ಸಾಯಬೇಕಾದರೆ ಮೃತ್ಯುವೆಂಬ ಸ್ತ್ರೀಯಿಂದಲೇ, ಅಂದ ಬಳಿಕ ಇಡೀ ಜಗತ್ತೆಲ್ಲಾ ಸ್ತ್ರೀಮಯವಾಗಿರುವದು ಆದ್ದರಿಂದ ಸ್ತ್ರೀಯರನ್ನು ಉದಾಸೀನ ಮಾಡಬಾರದು , ಹಿಂಸಿಸಬಾರದು , ಶಕ್ತಿಯ ಅಂಶವೆಂದು ತಿಳಿದು ಪ್ರೀತಿಯಿಂದ ನಡೆದುಕೊಳ್ಳಬೇಕು ನಮ್ಮ ಭಾರತೀಯ ಸ್ತ್ರೀಯರು ಸಾಧಾರಣ ಬುದ್ಧಿವಂತರು ಅತಿಥಿಗಳಿಗೆ ಸತ್ಕಾರ ಮಾಡುವವರೂ, ಶಾಂತಸ್ವಭಾವದವರೂ, ಒಳ್ಳೇ ಸುಶೀಲರೂ, ಆಗಿರುವರು. ಮೊದಲು ಹಿಂದುಸ್ಥಾನವು ಸ್ತ್ರೀಶಿಕ್ಷಣದ ಬಗ್ಗೆ ಹೆಸರಾಗಿತ್ತು ಈಗ ಹಿಂದುಳಿದಿದೆ. ಪರರಾಷ್ಟ್ರದೊಳಗಿನ ಸ್ತ್ರೀಯರೆಲ್ಲರೂ ಕಲಿತವರಿರುವದರಿಂದ ಅಲ್ಲಿಯ ಜನಾಂಗವು ಸುಧಾರಿಸಿ ರಾಷ್ಟ್ರಗಳು ಉನ್ನತ ಸ್ಥಿತಿಗೆ ಬಂದಿವೆ ಇಂಗ್ಲೆಂಡ್, ಅಮೇರಿಕಾ, ಫ್ರಾನ್ಸ್. ಜರ್ಮನಿ, ಜಪಾನಮುಂತಾದ ರಾಷ್ಟ್ರಗಳೇ ಇದಕ್ಕೆ ಪ್ರಮಾಣಗಳಾಗಿವೆ. ಒಮ್ಮೆ ಫ್ರಾನ್ಸಿನ ರಾಣಿಯು ಹಿಂದೂಸ್ಥಾನದೊಳಗಿನ ಜನರಿಗೆಲ್ಲ ನೀವು ಕುರಿಗಳಂತೆ ಇರುವಿರೆಂದು ಅಂದಿದ್ದಾಳೆ

ಹಿಂದುಸ್ಥಾನದೊಳಗಿನ ಪುರುಷರು ಸ್ತ್ರೀಯರಿಗೆ ವಿದ್ಯೆಯನ್ನು ಕಲಿಸುವದರಿಂದ ಅವರು ಪ್ರವೀಣರಾದರೆ ಅವರು ಮಾಡತಕ್ಕ ಕಾರ್ಯವನ್ನು, ನಾವು ಮಾಡಬೇಕಾದೀತೆಂಬ ಭಯದಿಂದ ವಿದ್ಯೆ ಕಲಿಸುವದನ್ನು ಬಿಟ್ಟಂತೆ ಕಂಡುಬರುತ್ತದೆ ಇದು ಬಹಳ ತಪ್ಪು ಹೀಗಾಗಿಯೇ ನಮ್ಮ ದೇಶವು ಇಷ್ಟು ಹಿಂದುಳಿದಿದೆ ಆದ್ದರಿಂದ ಪ್ರತಿಯೊಬ್ಬರೂ ತಮ್ಮ ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸಿ ಅದನ್ನು ಒಳ್ಳೆಯ ಮಾರ್ಗದಲ್ಲಿ ಉಪಯೋಗಿಸಿಕೊಳ್ಳುವದನ್ನು ಕಲಿಸಿ ಅದರ ಲಾಭವನ್ನು ಹೊಂದಲೆಂದು ಕೋರುತ್ತೇನೆ

ಸಿದ್ಧಾಂತಶಿಖಾಮಣಿ

ವೀರಶೈವಮತದ ಜನ್ಮಸ್ಥಾನವಾಗಿದೆ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವದು ವೀರಶೈವಸ್ತೋಮದಲ್ಲಿ ನಮ್ಮ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವಾಗಿದೆಂದು ಮೆರೆಯುತ್ತಿರುವದು ಈ ಗ್ರಂಥವು ಈಗ್ಗೆ ಸುಮಾರು ೩ **ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಹಿಂದಿನವರಿಗೆ ಅನೇಕರು ಅನೇಕ ರೀತಿಯಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ಪರಿಹರಿಸುವದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾಠಕರಿಗೆ ವೇದ್ಯವಾಗುವದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಪಿಪ್ಪುದೀಲೋಕಮಂ ॥

ದವರಿಗೆ ೩ ರೂ. ಹಿಂಬಾಕಿದವರಿಗೆ ೩ ರೂ. ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೬ನೇ ಜುಲೈ ೧೯೪೩ [ಸಂಚಿಕೆ ೧೨

ಆತ್ಮ ಶಕ್ತಿಯ ಸೂಚನೆ

ಲೇ॥ ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವಕೀಲರು

ಮಾನವನು ಆತ್ಮ ಶಕ್ತಿಯನ್ನು ಬಾಹ್ಯವಿಷಯಗ ದ ಪಡೆಯಬೇಕಾಗಿಲ್ಲ ಕರುಣಾಮಯನಾದ ಪರ ನು ಪ್ರತಿಯೊಬ್ಬನಲ್ಲಿಯೂ ಆತ್ಮಶಕ್ತಿಯ ಬೀಜವನ್ನು ಟ್ಟಿರುತ್ತಾನೆ ಇಷ್ಟೇ ಅಲ್ಲ ಅದನ್ನು ಬೇಕಾದಾಗ ಕಾದಷ್ಟು ವೃದ್ಧಿಪಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ವನಿಗೆ ಕೊಟ್ಟಿರುವನು ಮನುಷ್ಯರಿಗೆ ಈ ಬಗೆಯ ತಂತ್ರ್ಯವನ್ನು ಕೊಡುವುದರಲ್ಲಿ ಪರಶಿವನಿಗೊಂದು ಉದ್ದೇಶವಿದೆ ಅದೇನೆಂದರೆ "ಭಗವಂತನು ಪ್ರಾಣಿವರ್ಗಕ್ಕೆಲ್ಲಾ ತಂದೆಯಂತೆ ಎಂಬಂಥವು ಜನಜನಿತ ಗಿದೆ ತಂದೆಯಾದವನು ತನ್ನ ಮಕ್ಕಳೆಲ್ಲರೂ ವಿವೇಕ ದ ವ್ಯವಹಾರಮಾಡಿ ಧನವಂತರಾಗಲೆಂಬ ಸದು ಶದಿಂದ ಮೂಲಧನವನ್ನು ಕೊಡುವಂತೆ ಮನುಷ್ಯ ರೂ ತಮ್ಮ ಆತ್ಮ ಶಕ್ತಿಯನ್ನು ರೂಢಿಸಿಕೊಂಡು ಧೀನ ಮುಕ್ತರಾಗಬೇಕೆಂಬ ಕುತೂಹಲದಿಂದ ಮಾತ್ಮನು ಪ್ರತಿಯೊಬ್ಬನ ಹೃದಯದಲ್ಲಿಯೂ ಆತ್ಮ ಯ ಬೀಜವನ್ನು ಮೂಲಧನವಾಗಿ ಇಟ್ಟಿರುವನು ಕ್ಕಳು ಅಲ್ಪಪ್ರಮಾಣದ ಮೂಲಧನವನ್ನು ಅಧಿಕ ಮಾಣಕ್ಕೇರಿಸುತ್ತ ಬಂದಷ್ಟೂ ತಂದೆಯು ಸಂತೋಷಿ ವಂತೆ, ಮನುಷ್ಯರು ಬೀಜರೂಪದಲ್ಲಿರುವ ಆತ್ಮ ಶಕ್ತಿ ನ್ನು ವೃಕ್ಷರೂಪಕ್ಕೆ ಬೆಳೆಸಿಕೊಳ್ಳುತ್ತ ಹೋದಷ್ಟೂ ಮಾತ್ಮನು ಸಂತೋಷಪಡುವನು ಸಂತುಷ್ಟನಾದ ದೆಯು ವ್ಯವಹಾರ ಚತುರನಾದ ಮಗನ ಮೂಲಧ ಮತ್ತಷ್ಟು ನೆರವಾಗುವಂತೆ ಸಂತುಷ್ಟನಾದ ಪರ ನು ಆತ್ಮ ಶಕ್ತಿಯನ್ನು ಬೆಳೆಸಿಕೊಳ್ಳುವವನ ಪ್ರಯ ಕ್ಕೆ ಇನ್ನಿಷ್ಟು ಬೆಂಬಲನಾಗುವನು. ವಿವೇಕದಿಂದಲೇ ವಹಾರವನ್ನು ಮಾಡುತ್ತಾ ಹೋದರೆ ಮಗನು ತಂದೆ ನ್ನು ಮರೆಸುವಂತೆ ಆತ್ಮ ಶಕ್ತಿಯನ್ನು ಸದುಪಯೋಗ ಸಿಕೊಳ್ಳುತ್ತಾ ಬಂದರೆ ಮನುಷ್ಯನು ಪರಮಾತ್ಮ ನ್ನು ಸಹ ಮರೆಸಬಹುದು. ಮಗನು ತಂದೆಯನ್ನು ಸುವದೆಂದರೇನು? ತಂದೆಯಂತೆ ಧನವಂತನಾಗಿ ನಂತೆ ಯಶಸ್ಸಂಪಾದಿಸುವದು ಮನುಷ್ಯನು ಪರ ತ್ಮನನ್ನು ಮರೆಸುವದೂ ಅದರಂತೆಯೇ ಪರಮಾ ನು ಬೀಜರೂಪವಾಗಿ ಕೊಟ್ಟ ಆತ್ಮಶಕ್ತಿಯನ್ನು ನ್ನಾಗಿ ಬೆಳೆಸಿಕೊಂಡರಾಯಿತು ಆ ಮನುಷ್ಯನನ್ನು ರು ದೇವರಂತೆ ಭಾವಿಸುವರು. ಏಕೆಂದರೆ ದೇವರು ಕಣ್ಣಿಗೆ ಕಾಣುವವನಲ್ಲ. ಆತ್ಮ ಶಕ್ತಿಯನ್ನು ಬೆಳೆಸಿ ಂಡವರಲ್ಲಿ ದೈವಸಂಪತ್ತು ಅಭಿವ್ಯಕ್ತವಾಗಿ ಕಾಣುತ್ತಿ ವದು ಆದ ಪ್ರಯುಕ್ತ ಆತ್ಮಶಕ್ತಿವಂತನಿಗೆ ಮನ್ನಣೆ ಚ್ಚು. ತನ್ನ ಪ್ರಜೆಯಾದ ಮನುಷ್ಯನು ಅಂತಹ ನ್ನಣೆಯನ್ನು ಸಂಪಾದಿಸಿದರೆ ಪರಮಾತ್ಮನು ಮೆಚ್ಚ ಂಬುದೇನು ದೊಡ್ಡ ಮಾತು? ಆತ್ಮ ಶಕ್ತಿಯ ಅಭಿ ಯೇ ಪರಮಾತ್ಮಸ್ವರೂಪದ ಅಭಿವ್ಯಕ್ತಿ. ಅದ್ದರಿಂದ ರು ಆತ್ಮಶಕ್ತಿಯನ್ನು ಮನ್ನಿಸಿದರೆ ಪ್ರಕಾರಾಂತರ ದ ಪರಮಾತ್ಮನನ್ನೇ ಮನ್ನಿಸಿದಹಾಗಾಯಿತು. ಮನ್ನಣೆಯನ್ನು ಪಡೆಯುವ ಸೌಲಭ್ಯವಿಲ್ಲದ ಅವ್ಯಕ್ತ ಸ್ವರೂಪದ ಪರಮಾತ್ಮನು ಆತ್ಮ ಶಕ್ತಿಯ ಅಭಿವೃದ್ಧಿಯ ಮೂಲಕ ತನಗೆ ಅಭಿವ್ಯಕ್ತಿಸ್ವರೂಪವನ್ನು ತಂದುಕೊಟ್ಟ ಮನುಷ್ಯನನ್ನು ಹೇಗೆ ಪ್ರೀತಿಸದೆ ಬಿಡುವನು? ತನ್ನ ಅವ್ಯಕ್ತಸ್ವರೂಪಕ್ಕೆ ಮನ್ನಣೆಯನ್ನು ತೋರಿಸಿದರೂ ಸಹ ಪರಮಾತ್ಮನಿಗೆ ಹೆಚ್ಚು ಮೆಚ್ಚಿಲ್ಲ ಆತ್ಮಶಕ್ತಿಗೆ ಮನ್ನಣೆಯನ್ನು ತೋರಿಸಿದರೆ ಪರಮಾನಂದವು ಈ ಆನಂದ ಪ್ರದರ್ಶನವಾಗಿ ಅವನು ಆ ಆತ್ಮಶಕ್ತಿವಂತರ ಸರ್ವೇಚ್ಛೆಗಳನ್ನೂ ಸಂಪೂರ್ಣಗೊಳಿಸುವನು ಹೀಗೆ ಮಾಡುವದರಿಂದಲೇ ಅವನಿಗೆ ಭಕ್ತಪರಾಧೀನನೆಂಬ ಹೆಸರು ಬಂದಿರುವದು ಭಕ್ತರೆಂದರೇನು? ಭಕ್ತಿಯ ಬಹಿರ್ವ್ಯಾಪಾರದವರಲ್ಲ, ಅಂತರ್ವ್ಯಾಪಾರದವರು ಎಂದರೆ ಆತ್ಮಶಕ್ತಿವಂತರು ಆತ್ಮಶಕ್ತಿಯನ್ನು ಕೈಗೂಡಿಸಿಕೊಳ್ಳುವದೆಂದರೂ ಒಂದೇ, ಶಿವತ್ವವನ್ನು ಕೈಗೂಡಿಸಿಕೊಳ್ಳುವದೆಂದರೂ ಒಂದೇ ಈ ರೀತಿ ಅವ್ಯಕ್ತಸ್ವರೂಪದಲ್ಲಿರುವ ತನ್ನನ್ನು ಹೃದಯದೊಳಗಿಟ್ಟುಕೊಂಡು ಬೆಳೆಸಿ, ತನ್ನ ಮಹಿಮೆಯನ್ನು ತಮ್ಮ ಮೂಲಕ ಪ್ರಕಟಗೊಳಿಸುವ ಮನುಷ್ಯರಿಗೆ ಪರಮಾತ್ಮನು ಅಧೀನನಾಗಿರುವದಲ್ಲದೆ ಮತ್ತೇನು? ಹೀಗೆ ಪರಮಾತ್ಮನು ಅಧೀನನಾದಮೇಲೆ ಅವರಿಗೆ ಅಸಾಧ್ಯವಾದುದೇನಿದೆ? ಹೀಗಾಗಿ ಆತ್ಮಶಕ್ತಿವಂತರಿಗೆ ಸಕಲೇಷ್ಟಾರ್ಥಗಳೂ ಕರತಲಾಮಲಕವಾಗುವವು ಪುಷ್ಪಿತವಾದ ವನವಂ ಭ್ರಮರನಿಕರದಂತೆ ಜನರು ಇವರಂ ಆಶ್ರಯಿಸುವರು ಮತ್ತು ಪುಷ್ಪವು ಇದ್ದಲ್ಲಿಯೇ ಇದ್ದರೂ ಅದರ ಪರಿಮಳವು ವನವನ್ನೆಲ್ಲಾ ವ್ಯಾಪಿಸುವಂತೆ ಈ ಮಹಾಪುರುಷರು ಇದ್ದಲ್ಲಿಯೇ ಇದ್ದರೂ ಅವರಿಂದ ಪ್ರತಿಕ್ಷಣವೂ ಲೋಕೋದ್ಧಾರವಾಗುತ್ತಲೇ ಇರುವದು

ಪರಮಾತ್ಮನು ಎಲ್ಲರಲ್ಲಿಯೂ ಆತ್ಮಶಕ್ತಿಯ ಬೀಜವನ್ನು ಇಟ್ಟಿದ್ದರೂ ಅದು ಎಲ್ಲರಲ್ಲಿಯೂ ಏಕಪ್ರಕಾರವಾಗಿ ಬೆಳೆಯುವದಿಲ್ಲ ಬಂಡೆಯ ಮೇಲೆ ಚೆಲ್ಲಿದ ಬೀಜವ ಮತ್ತು ಸಾಗುಮಾಡಿದ ಭೂಮಿಯ ಮೇಲೆ ಚೆಲ್ಲಿದ ಬೀಜದ ಬೆಳವಳಿಗೆಯು ಒಂದೇ ಆಗಿರುವದುಂಟೆ? ಬಂಡೆಯ ಮೇಲೆ ಬಿದ್ದ ಬೀಜವು ಬಿಸಿಲ ಬೇಗೆಯಿಂದ ಕಮರಿಹೋಗುವದು. ತದ್ವತ್ ಆತ್ಮಶಕ್ತಿಯ ಬೀಜದ ಬೆಳವಳಿಗೆಗೆ ಸದ್ವಂಶವೂ ಸತ್ಸಂಗತಿಯೂ ಸಹಕಾರಿಯಾಗುವವು. ತಂಪು ಗೊಬ್ಬರ ಮೊದಲಾದ ಸಹಾಯಸಂಪತ್ತುಗಳಿದ್ದರೆ ಸಣ್ಣದಾದ ಆಲದ ಬೀಜವು ಹೆಮ್ಮರವಾಗುವಂತೆ ಸದ್ವಂಶದ ಮತ್ತು ಭಗವದನುಗ್ರಹದ ಬೆಂಬಲವುಳ್ಳ ಆತ್ಮಶಕ್ತಿಯು ಸರ್ವತೋಮುಖದಿಂದ ವಿಸ್ತರಿಸಿಕೊಂಡು ಮುಂದೆ ಸರ್ವಾತಿಶಯವಾಗಿ ಪ್ರಕಟವಾಗುವದು ಬೆಳೆಯುವ ಪೈರಿನ ಲಕ್ಷಣವು ಮೊಳಕೆಯಲ್ಲಿಯೇ ಕಾಣುವಂತೆ ಆತ್ಮಶಕ್ತಿಯ ಬೀಜದ ಅಂಕುರವು ತನ್ನ ಭವಿಷ್ಯ ಲಕ್ಷಣವನ್ನು ಸೂಚಿಸುವುದು. ಲಕ್ಷ್ಯವಿಟ್ಟು ನೋಡಿದರೆ ಇದು ಎಲ್ಲರಲ್ಲಿಯೂ ಕಾಣುವದು. ಮಹಾರಾಷ್ಟ್ರದ ಸಾಧುವೆಂದು ಪ್ರಸಿದ್ಧನಾದ ತುಕಾರಾಮನಿಗೆ ಭಗವಂತನಲ್ಲಿ ಲಕ್ಷ್ಯವನ್ನಿಡುವ ಚಟವನ್ನು ಯಾರೂ ಕಲಿಸಲಿಲ್ಲ. ಆತನಿಗೆ ಪ್ರಪಂಚದ ಸಂಸ್ಕಾರವು ತಗಲುವದಕ್ಕೆ ಮೊದಲೇ ಅವರು ಸ್ವಭಾವವಾಗಿಯೇ ಏಕಾಂತಪ್ರಿಯರಾಗಿದ್ದರು ಒಡನಾಡಿಗಳು ಎಷ್ಟು ಪ್ರೋತ್ಸಾಹಮಾಡಿದರೂ ಅವರ ಮನಸ್ಸು ಆಟಪಾಟಗಳ ಕಡೆಗೆ ಒಲಿಯಲಿಲ್ಲ ಏನೋ ಒಂದು ಗಹನ ವಿಚಾರದಲ್ಲಿ ತೊಡಗಿರುವವರಂತೆ ಇತರರಿಂದ ಸಿಡಿದು ಬಿದ್ದು ವಿಚಾರ ಮಗ್ನರಾಗಿರುತ್ತಿದ್ದರು ಇತರರೊಡನೆ ಸೇರುವಾಗ ಅವರ ಆಟ ಪಾಟಗಳ ಸವಿಗೆ ಮನಸೋಲದೆ ತಾವು ರಚಿಸಿದ ನವೀನ ಕವನಗಳ ಮಾಧುರ್ಯಕ್ಕೆ ಇತರರು ಮನಸೋಲುವಂತೆ ಮಾಡಿ ಚಿಕ್ಕಂದಿನಲ್ಲಿಯೇ ಜನರನ್ನು ತಮ್ಮ ಭಕ್ತಿಪಂಥಕ್ಕೆ ಎಳೆಯುತ್ತಿದ್ದರು ಬುದ್ಧನಿಗೆ ಧ್ಯಾನೋಪದೇಶವನ್ನು ಮಾಡಿದವರಾರು? ಕುಸುಮಕೋಮಲಾಂಗಿಯಾದ, ನವಯವ್ವನವಿಲಾಸಿನಿಯಾದ, ಮೃದುಮಧುರಮಂಜುಳಭಾಷಿಣಿಯಾದ, ಪುತ್ರವತಿಯಾದ ಪ್ರಿಯ ಪತ್ನಿಯನ್ನೂ ರಾಜ್ಯಕೋಶಗಳನ್ನೂ ತೊರೆದು ಬುದ್ಧನು ತಾರುಣ್ಯದಲ್ಲಿಯೇ ಜಂಬೂವೃಕ್ಷದಡಿಯಲ್ಲಿ ಕುಳಿತು ಧ್ಯಾನಸ್ಥನಾಗುತ್ತಿದ್ದನಲ್ಲ! ಎಂತಹಧ್ಯಾನ! ನೋಡಿದವರೆಲ್ಲರೂ ಇವನು ಹುಚ್ಚನೆನ್ನುವಷ್ಟು ಪ್ರಬಲಧ್ಯಾನ!! ಈ ಧ್ಯಾನವು ಕಲಿಸಿದವರ ಬರತಕ್ಕದ್ದಲ್ಲ. ಶ್ರೀ ಸಮರ್ಥ ರಾಮದಾಸರು ಶಿಶುವಾಗಿದ್ದಾಗ ಅಳುತ್ತಲೇ ಇರಲಿಲ್ಲವಂತಲ್ಲ! ಏನು ವಿಲಕ್ಷಣ! ಸಾಮಾನ್ಯವಾಗಿ ಹೆದರುವದೇ ಮಕ್ಕಳ ಸ್ವಭಾವವಲ್ಲವೆ? ಎಂಥೆಂಥ ಭೀತಿಯ ಮಾತು ತೆಗೆದರೂ ರಾಮದಾಸರು ಭಯಗ್ರಸ್ತರಾಗುತ್ತಿರಲಿಲ್ಲವಲ್ಲ! ಇದಕ್ಕೇನು ಸಮಾಧಾನ? ಪೈಠಣದಲ್ಲಿದ್ದ ಏಕನಾಥನು ಬಾಲರ ಆಟಗಳನ್ನೆಲ್ಲಾ ಬಿಟ್ಟು ನದಿಯ ಕಲ್ಲುಗುಂಡುಗಳನ್ನು ತಂದು ದೇವರಾಗಿ ಮಾಡಿಕೊಂಡು ಆ ಆಟದಲ್ಲಿಯೇ ಏಕೆ ಮಗ್ನನಾದನು? ಝಾನ್ಸಿಯ ಲಕ್ಷ್ಮೀಬಾಯಿಯು ಕೇವಲ ಚಿಕ್ಕವಳಾಗಿದ್ದರೂ ಆನೆಯ ಮೇಲೆ ಕುಳಿತುಕೊಳ್ಳಬೇಕೆಂದು ಹಠವನ್ನು ಹಿಡಿದದ್ದಕ್ಕೆ ಆಧಾರವೇನಿರಬಹುದು? ಇವೆಲ್ಲಾ ಅವರ ಭವಿಷ್ಯತ್ತಿನ ಚಿಹ್ನೆಗಳು ಶ್ರೀಮಧ್ವಾಚಾರ್ಯರು ಕಂಕುಳೊಳಗಿನ ಕೂಸಾಗಿರುವಾಗಲೇ ಒಮ್ಮೆ ಬೆಂದ ಹುರುಳಿಯನ್ನು ತಿಂದು ಹಾಲುಕುಡಿದು ಜೀರ್ಣಿಸಿಕೊಂಡರಂತೆ. ಸಾಮಾನ್ಯವಾಗಿ ಈಗಿನ ಕಾಲದ ಮಕ್ಕಳು ಶುದ್ಧವಾದ ಹಾಲನ್ನೂ ಸಹ ಜೀರ್ಣಿಸಿಕೊಳ್ಳಲಾರರೆಂದು ಅದಕ್ಕೆ ನೀರು ಬೆರಸುವದಲ್ಲದೆ ಇನ್ನೂ ಸಾಲದೆಂದು ಸೋಡಾ ಹಾಕುವುದೂ ಉಂಟು ಹೀಗಿರುವಾಗ ಆಚಾರ್ಯರು ಹುರುಳಿಯನ್ನೂ ಹಾಲನ್ನೂ ಜೀರ್ಣಿಸಿಕೊಂಡಿರಬೇಕಾದರೆ ಅವರಲ್ಲಿ ಒಂದು ಬಗೆಯ ಶಕ್ತಿವಿಶೇಷವಿಲ್ಲದಿದ್ದರೆ ಹೇಗೆ ಸಾಧ್ಯವಾದೀತು? ದೂರದರ್ಶಿಗಳು ಈ ಶಕ್ತಿ ವಿಶೇಷಗಳನ್ನು ಪ್ರಕಾರಾಂತರಗಳಿಂದ ಕಂಡುಹಿಡಿಯುತ್ತಾರೆ. ಒಮ್ಮೆ ಒಂದು ಸಂಗತಿ ನಡೆಯಿತು. ಏನೆಂದರೆ, ಮೈಸೂರು ದೇಶದಲ್ಲಿ ಇಮ್ಮಡಿ ಕೃಷ್ಣರಾಜರ ಪತ್ನಿಯಾದ ಲಕ್ಷಮ್ಮಣ್ಣಿಯವರು ರಾಜಪೀಠಕ್ಕೆ ತಕ್ಕ ಒಬ್ಬ ಬಾಲಕನನ್ನು ದತ್ತಕನನ್ನಾಗಿ ಮಾಡಿಕೊಳ್ಳಬೇಕೆಂಬ ವಿಚಾರದಲ್ಲಿದ್ದರು. ಆದರೆ ಬಾಲಕನ ಯೋಗ್ಯತೆಯನ್ನು ಕಂಡುಹಿಡಿಯುವದು ಅಶಕ್ಯವಾಗಿತ್ತು. ಆಗ ಹೈದರನೆಂಬ ಅಧಿಕಾರಿಯು ಅದನ್ನು ಪರೀಕ್ಷಿಸುವ ಭಾರವನ್ನು

(೨ನೆಯ ಪುಟವನ್ನು ನೋಡಿ)

ಶ್ರೀಮನ್ಮಹಾರಾಜರವರ
೨೫ನೆಯ ವರ್ಧಂತೀಮಹೋತ್ಸವ.

ಶ್ರೀ ಜಯಚಾಮರಾಜೇಂದ್ರ ಒಡೆಯರ ಬಹದ್ದೂರ್
ಮಹಾಪ್ರಭುಗಳವರು.

ಪಂಚಾಚಾರ್ಯಪ್ರಭಾ.

೧೯೪೩ನೆಯ ಜುಲೈ ತಾ ೨೬ನೆಯ ಸೋಮವಾರ

ಶ್ರೀಮನ್ಮಹಾರಾಜರವರ
೨೫ ನೆಯ ವರ್ಧಂತೀ ಮಹೋತ್ಸವ

ಕರ್ನಾಟಕರತ್ನಸಿಂಹಾಸನಾಧೀಶ್ವರ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಮಹಾಪ್ರಭುಗಳವರ ೨೫ ನೆಯ ವರ್ಷದ ವರ್ಧಂತ್ಯುತ್ಸವವು ಇದೇ ತಿಂಗಳು ೨೨ ನೆಯ ತಾರೀಖು ಗುರುವಾರ ದಿವಸ ರಾಜಧಾನಿಯಲ್ಲಿ ಬಹು ವೈಭವದಿಂದ ನೆರವೇರಿತು ಪ್ರಾತಃಕಾಲ ಮಂಗಲಸ್ನಾನಾನಂತರ ಮಹಾಪ್ರಭುಗಳವರು ನಿತ್ಯಕರ್ಮಾನುಷ್ಠಾನವನ್ನಾಚರಿಸಿ ಆಯುಷ್ಯಹೋಮಾದಿಗಳು ನಡೆದನಂತರ ಶ್ರೀಗುರುದೇವತಾಪೂಜೆ ದರ್ಶನಾಶೀರ್ವಾದಗಳನ್ನು ಪಡೆದು ದಿವ್ಯವಸ್ತ್ರಾಲಂಕಾರಭೂಷಿತರಾಗಿ ಆಯುರ್ವರ್ಷಸೂಚಕಗಳಾದ ೨೫ ಕುಶಾಲು ತೋಪುಗಳು ಮೊಳಗುತ್ತಿರಲು ೧೧|| ಘಂಟೆಗೆ ಸರಿಯಾಗಿ ಸಭೆಗೆ ದಯಮಾಡಿಸಿ ಭದ್ರಪೀಠವನ್ನಲಂಕರಿಸಿದರು. ಅಖಿಲ ರಾಜಬಂಧುಗಳೂ ಸಚಿವೋಪಸಚಿವರೂ ಸರ್ಕಾರಿ ಉದ್ಯೋಗಿಗಳೂ ನಗರ ಪ್ರಮುಖರೂ ಮಹಾಪ್ರಭುಗಳಿಗೆ ಕ್ರಮದಿಂದ ಮುಜರೆಯನ್ನು ಮಾಡಿ ಅವರವರ ನಿಯಮಿತ ಸ್ಥಳಗಳಲ್ಲಿ ಕುಳಿತರು ಸುಶ್ರಾವ್ಯಗಳಾದ ವಾದ್ಯಧ್ವನಿಗಳೂ, ಗಾನಾಲಾಪಗಳೂ, ಜಯಧ್ವನಿಗಳೂ ಭೂಮ್ಯಂತರಿಕ್ಷಗಳನ್ನು ವ್ಯಾಪಿಸಿದ್ದುವು ಕ್ರಮದಿಂದ ಮಠಾಧಿಕಾರಿಗಳ ಮತ್ತು ವೈದಿಕೋತ್ತಮರ ಆಶೀರ್ವಾದಗಳು ನಡೆದ ಮೇಲೆ ಸಭಿಕರಿಗೆ ಪುಷ್ಪಹಾರಾದಿ ವಿನಿಯೋಗವಾಗಿ ಸಭೆಯು ಉಪಸಂಹೃತವಾಯಿತು.

ಸಾಯಂಕಾಲ ೬ ಘಂಟೆಗೆ ಮಹಾಪ್ರಭುಗಳವರು ದರ್ಶನೋತ್ಸುಕರಾಗಿ ನೆರೆದ ಪ್ರಜೆಗಳನ್ನು ತೃಪ್ತಿಪಡಿಸಲು ಚಾಮರಂಗಬಲದಿ ಮೂಡಗಡಿ ೨೧ ಕುಶಾಲು ತೋಪುಗಳು ಹಾರುತ್ತಿರಲು ಸರ್ವಾಲಂಕಾರಭೂಷಿತವಾಗಿ ರಜತನಿರ್ಮಿತವಾದ ಭವ್ಯರಥವನ್ನಾರೋಹಿಸಿದರು ಮಹೋತ್ಸವವು ಕೋಟೆಯ ಉತ್ತರದ್ವಾರದಿಂದ ಹೊರಟಿತು ಚತುರಂಗಸೈನ್ಯವು ಬಹಳ ಶಿಸ್ತಿನಿಂದ ಮುಂದುವರಿಯಿತು ಉಭಯಪಾರ್ಶ್ವಗಳಲ್ಲಿಯೂ ಅಂಜಲಿಬದ್ಧರಾಗಿ ನಿಂತಿದ್ದ ಪ್ರಜೆಗಳು ರಾಜಭಕ್ತ್ಯುದ್ರೇಕದಿಂದ ಜಯಜಯಶಬ್ದಗಳನ್ನುಚ್ಚರಿಸುತ್ತ ಕರತಾಡನ ಮಾಡುತ್ತಿದ್ದರು ಪ್ರಮುಖವರ್ತಕಮಹಾಶಯರು ದಾರಿಯುದ್ದಕ್ಕೂ ತಮ್ಮ ತಮ್ಮ ಅಂಗಡಿಗಳ ಮುಂಭಾಗದಲ್ಲಿ ಹಾರತುರಾಯಿಗಳನ್ನರ್ಪಿಸುವುದರ ಮೂಲಕ ತಮ್ಮ ರಾಜಭಕ್ತಿಯನ್ನು ಪ್ರದರ್ಶಿಸಿದರು ಸಯ್ಯಾಜಿರಾವ್ ರಸ್ತೆ, ಇರ್ವಿನ್‌ರಸ್ತೆಗಳ ಮೂಲಕ ಹಾಯ್ದು ಉತ್ಸವವು ಗೌರ್ನಮೆಂಟ್ ಹೌಸನ್ನು ತಲ್ಪಿತು ಪ್ರಭುಗಳು ಅಲ್ಲಿ ರಥದಿಂದಿಳಿದು ಅಶ್ವಾರೂಢರಾಗಿ ಸೈನಿಕರಿಂದ ಪ್ರದರ್ಶಿಸಲ್ಪಟ್ಟ ಮರ್ಯಾದೆಯನ್ನು ಸ್ವೀಕರಿಸಿದ ನಂತರ ವಿಶ್ರಾಂತಿಯನ್ನು ತೆಗೆದುಕೊಂಡರು ಬಂದ ಅಧಿತಿಗಳೆಲ್ಲಾ ಅಲ್ಪಾಹಾರದಿಂದ ತೃಪ್ತಿಗೊಂಡರು ಅನಂತರ ಮಹಾಪ್ರಭುಗಳವರು ಪುನಃ ದಿವ್ಯರಥದಲ್ಲಿ ಮಂಡಿಸಿದರು ಉತ್ಸವವು ಗೌರ್ನಮೆಂಟ್ ಹೌಸಿನ ಪಶ್ಚಿಮ ಭಾಗದಲ್ಲಿರುವ ಹೆಬ್ಬಾಗಿಲಿನಿಂದ ಹೊರಟು ನಕ್ಷತ್ರಮಾಲಿಕೆಗಳಂತೆ ಶೋಭಿಸುತ್ತಿರುವ ವಿದ್ಯುದ್ದೀಪಮಾಲಿಕೆಗಳಿಂದೊಡಗೂಡಿದ ದೊಡ್ಡಪೇಟೆಯಲ್ಲಿ ಹಾಯ್ದು ೧೧ ಘಂಟೆ ಸಮಯಕ್ಕೆ ಅರಮನೆಯನ್ನು ತಲ್ಪಿತು.

ಯದುಕುಲಸಂಭೂತರಾದ ನಮ್ಮ ಮಹಾಪ್ರಭುಗಳವರಿಗೆ ಇಂತಹ ವರ್ಧಂತೀಮಹೋತ್ಸವಗಳು ಅನೇಕಾನೇಕವಾಗಿ ನೆರವೇರಿ ಮೈಸೂರು ದೇಶದ ಪ್ರಜೆಗಳಿಗೆ ಮಹಾಪ್ರಭುಗಳಿಂದ ಅನೇಕವಿಧವಾದ ಸುಖಗಳುಂಟಾಗುವಂತೆ ಅನುಗ್ರಹಿಸಲೆಂದು ಜಗನ್ನಿಯಾಮಕನಾದ ಆ ಪರಮೇಶ್ವರನನ್ನು ಅನನ್ಯಸಾಧಾರಣಭಕ್ತಿಭಾವದಿಂ ಭಜಿಸುತ್ತೇವೆ.

ಯುದ್ಧವಾರ್ತೆ.

ರೋಮ್ ನಗರ ಖಾಲಿಯಾಗುತ್ತಿದೆ!

ರೋಮ್ ನಗರದಿಂದ, ವಿಶ್ರಾಂತಿ ಪಡೆಯಲ ಬಯಸುವ ಮತ್ತು ರೋಗಗ್ರಸ್ತರಾಗಿರುವ ಪ್ರಜೆಗಳನ್ನ ಬೇರೆಕಡೆ ವರ್ಗಾಯಿಸಲು ಏರ್ಪಾಡಾಗಿದೆಯೆಂದ ರೋಮ್ ರೇಡಿಯೋ ತಿಳಿಸಿದೆ

ಪೋಪರು ರೋಂ ನಗರವನ್ನು ಬಿಡುವುದಿಲ್ಲ

ಮಿತ್ರದಾಳಿಗಳು ರೋಮ್‌ನಗರದಮೇಲೆ ಸತತವಾ ನಡೆದರೂ ಸಹ ಪೋಪ್‌ರವರು ವೆಟಿಕನ್ ನಗರವನ ಬಿಡುವುದಿಲ್ಲವೆಂದು ಅಧಿಕಾರಯುತವಾಗಿ ತಿಳಿಸಲಾಗಿ ಈ ದಾಳಿಯನಿಮಿತ್ತ ಮಧ್ಯ ಇಟಲಿಯಲ್ಲಿ ಅವರು ವಾ ಸುವರೆಂದು ಹೇಳಿರುವ ಸುದ್ದಿಗೆ ಆಧಾರವಿಲ್ಲವೆಂದ ತಿಳಿಸಲಾಗಿದೆ

ಇಟಲಿಗೆ ಜಪಾನ್ ನಿಪುಣರು

ಜಪಾನ್ ಸರ್ಕಾರವು ಆಕ್ಸಿಸ್ ರಾಷ್ಟ್ರಗಳು ಮಿತ್ರ ದಾಳಿಯಿಂದ ಉಳಿಯಲು ರಕ್ಷಣಾಸ್ಥಾನಗಳನ್ನು ನಿರ್ಮಿಸಿರುವ ಕ್ರಮ ಮತ್ತು ಬ್ರಿಟಿಷರು ದಂಡಯಾತ್ರೆ ವಾ ನಡೆಸುವ ರೀತಿ ಇವುಗಳಲ್ಲಿ ವಿಶೇಷ ಅನುಭವವನ್ನು ಪಡೆದುಬರಲು ಪ್ರವೀಣರನ್ನು ಸಬ್‌ಮೆರೀನ್‌ಗಳ ಯೂರೋಪಿಗೆ ಕಳಿಸಿದೆಯೆಂದೂ ಅವರು ಇಟಲಿಯ ಪಾದ ಭಾಗವಾದ ಕೆಲೆಬ್ರಿಯದಲ್ಲಿ ಬಂದಿಳಿದರೆಂದು ತಿಳಿದುಬಂದಿದೆ

ಇಟಲಿ ಪ್ರಜೆಗಳಲ್ಲಿ ಬೇಡಿಕೆ!

“ ಶತ್ರುಗಳನ್ನು ಪ್ರತಿಭಟಿಸಿ ಹೊಡೆದಾಡಿ ಇದೇ ಇಟಲಿಯವರು ಈ ಅಳಿವು ಉಳಿವುಗಳ ಸಂಧಿಯಲ್ಲಿ ನಡೆಸಬೇಕಾದ ಕೆಲಸ ಶತ್ರುವಿನ ಏಟು ತಿಂದು ಉಳಿದರೆ ಸಾಕೆಂದರೆ ಸಾಲದು. ಏಟಿಗೆ ಏಟು ಕೊಡಬೇಕು. ದಾಳಿ ದಾಳಿ ಪ್ರತಿಮಾಡಬೇಕು ನಾಶಕ್ಕೆ ಪ್ರತೀಕಾರವಾಗಿ ನಾ ಮಾಡಲು ಸಿದ್ಧವಾಗಿರಬೇಕು ಇಟಲಿಯ ಇತಿಹಾ ದಲ್ಲಿ ಎಂದೂ ಇಂತಹ ದುರಂತ ಪ್ರಸಂಗವೊದಗಿರಲಿಲ್ಲ ಎರಡು ಭಾರಿ ಸಾಮ್ರಾಜ್ಯಗಳು ಇಟಲಿಯನ್ನು ತು ಯಲು ನುಗ್ಗುತ್ತಿವೆ ಈಗ ಇಟಲಿಯವರಿಗೆ ಒಂದೆ ಒಂದು ಆಜ್ಞೆ, ಶತ್ರುವನ್ನು ಪ್ರತಿಭಟಿಸಿರಿ ಇದೇ ಇಂದಿ ಸಮರ ಆಜ್ಞೆ ಎಂದು ಫೇಸಿಸ್ಟ್ ಪಕ್ಷದ ಸೆಕ್ರೆಟ ಯವರು ಪ್ರಚಾರಕ್ಕೆ ಆರಂಭಿಸಿದ್ದಾರೆ ”

ಇಟಲಿ ಗಡಿನಾಡಿನಲ್ಲಿ ಸಿದ್ಧತೆ

ಉತ್ತರ ಇಟಲಿ-ಆಸ್ಟ್ರಿಯ ಗಡಿನಾಡಿನಲ್ಲಿ ಜರ್ಮನರು ಮುಖ್ಯಸ್ಥಳಗಳಲ್ಲಿ ತಮ್ಮ ಸ್ಥಾನಗಳನ್ನು ಭದ್ರಗೊಳಿಸ ತ್ತಿರುವರು ಇಟಲಿಯನ್ನು ಮಿತ್ರ ಬಲಗಳು ಆಕ್ರಮಿ ಮುಂದೆ ನುಗ್ಗಿದರೆ, ಅವರನ್ನು ತಡೆಯಲು ಇಟಲಿಯ ಗಡಿನಾಡಿನಲ್ಲಿ ಜರ್ಮನರು, ಸಿದ್ಧವಾಗುತ್ತಿರುವರೆಂದ ಊಹಿಸಲಾಗಿದೆ

ಪೋಪ್‌ರವರ ಪ್ರತಿಭಟನೆ

ರೋಮ್ ನಗರದ ಮೇಲೆ ಮಿತ್ರ ವಿಮಾನ ಮುತ್ತಿ ನಡೆದ ವಿಚಾರವಾಗಿ ಪೋಪರು ಖಂಡನಾ ಪತ್ರವನ್ನು ಮಿತ್ರವರ್ಗಕ್ಕೆ ಕಳುಹಿಸಿರುವರೆಂದು ಆಕ್ಸಿಸ್ ಮೂ ಗಳಿಂದ ವರ್ತಮಾನ ಬಂದಿರುವುದಕ್ಕೆ ಸಮರ್ಥನೆ ಇ ವರೆಗೆ ದೊರೆತಿಲ್ಲ. ಆದರೆ ಪೋಪ್‌ರವರು ಹೀಗೆ ಹೇ ರುವರೆಂದು ಆಕ್ಸಿಸ್ ಪ್ರಕಟನೆ ತಿಳಿಸುತ್ತಿದೆ.

ವಿಮಾನದಾಳಿಯಿಂದ ರೋಮ್ ನಗರವನ್ನುಳಿಸಲು ಲಾದ ಪ್ರಯತ್ನವನ್ನೆಲ್ಲಾ ಮಾಡಿದೆವು. ರೋಮ್ ರ್ಧದಲ್ಲಿರುವ ತಟಸ್ಥ ರಾಷ್ಟ್ರವಾದ ವೆಟಿಕನ್ ನಗರವು ಗ ದಾಳಿ ಅನಾಹುತಕ್ಕೆ ಒಳಗಾಗಲಿದೆ ಅಲ್ಲಿ ಕ್ಯಾಥೊ ಜನಾಂಗದ ಪವಿತ್ರ ವಸ್ತುಗಳು ತುಂಬಿವೆ ಶ್ಚಿಯನ್ ಸಂಸ್ಕೃತಿಯ ಹೆಸರಿನಲ್ಲಿ ರೋಮ್ ನಗರನ್ನು ದಾಳಿಯಿಂದುಳಿಸಲು ಅನೇಕಾವರ್ತಿ ಕೇಳಿದೆವು ದಕ್ಕೆ ಅಂಗೀಕಾರ ದೊರೆಯುವುದೆಂದು ನಮಗೆ ನಂಬಿಕೆ ತ್ತು. ಆ ನಂಬಿಕೆ ಬಯಲಾಯಿತು ಶ್ರೇಷ್ಠ ಇತಿಸ ವಸ್ತುವಾದ ಸಾಂಕಲೋರೆಂಜೋ ಭವನದ ಬಹುಗ ನಾಶವಾಗಿದೆ. ಎಷ್ಟೇ ಎಚ್ಚರಿಕೆಯಿಂದ ದಾಳಿ ಡೆಸಿದರೂ ರೋಮ್ ನಗರದ ಪವಿತ್ರ ವಸ್ತುಗಳಿಗೆ ನಿ ತಪ್ಪದಿರಲಾರದು

ರಷ್ಯಾ ರಣರಂಗ

ಕ್ಯೂರ್ಬ್ ಪರ್ಯಾಯದ್ವೀಪದಿಂದ ಒರೆಲ್‌ವರೆಗೆ ಮಾರು ೨೦೦೦ ಮೈಲಿಯುದ್ದಕ್ಕೂ ರಷ್ಯನ್ ರಂಗಲ್ಲಿ ಭೀಕರ ಕದನ ನಡೆಯುತ್ತಿದೆ ಜರ್ಮನರ ರಕ್ಷಣಾಹಗಳನ್ನು ಭೇದಿಸಿ ಹಲವು ಪ್ರದೇಶಗಳಲ್ಲಿ ರಷ್ಯನರ ನೆಗಳು ಮುಂದೆ ನುಗ್ಗಿವೆ

ಒರೆಲ್‌ನಲ್ಲಿ ಶತ್ರು ಪ್ರತಿಭಟನೆ

ಒರೆಲ್ ರಂಗದಲ್ಲಿ ಜರ್ಮನರ ಪ್ರತಿಭಟನೆ ಬಲವಾದೆ, ಆದರಲ್ಲಿಯೂ ಜರ್ಮನರ ರಕ್ಷಣಾವ್ಯೂಹವನ್ನು ದಿಸಿರುವ ಪ್ರದೇಶದಲ್ಲಂತೂ ಜರ್ಮನರು ತೀವ್ರ ದನ ನಡೆಸುತ್ತಿರುವರು ಈ ಸಾಲಿನಲ್ಲಿ ಪ್ರಾಕೃತಿಕ ಕ್ಷಣಾವ್ಯವಸ್ಥೆಯಿದೆ ಅಲ್ಲಿ ಜರ್ಮನರು ನಿಂತು ದನ ನಡೆಸುತ್ತಿರುವರು ಈ ಭಾಗದಲ್ಲಿ ರಷ್ಯನರು ದನವನ್ನು ಬಲಪಡಿಸಿದ ನಿಮಿತ್ತ ಕರ್ಸ್ಕ್ ಭಾಗದಿಂದ ರ್ಮನ್ ಸೇನೆಯನ್ನು ಇಲ್ಲಿಗೆ ರವಾನಿಸಬೇಕಾಗಿ ಂದಿದೆ

ಜಪಾನ್ ಪ್ರತಿಭಟನೆ ಬಲವಾಗಿದೆ

ನ್ಯೂಗಿನಿಯಲ್ಲಿ ಸಾಲಮುವ ಕಡೆಗೆ ನುಗ್ಗಿರುವ ಮೆರಿಕದ ಸೇನೆಯೊಡನೆ ಜಪಾನರು ಭೀಕರ ಕದನಕ್ಕೆ ಂತಿರುವರು ಜಪಾನರ ಕೇಂದ್ರವನ್ನು ತಲಪಲು ಭಾಗದಲ್ಲಿ ತೀವ್ರ ಕದನ ನಡೆಯಬೇಕಾಗಿದೆ ಮುದ್ರ ತೀರದ ಮೂಲಕವಾಗಿ ನಡೆ ಮಿತ್ರದಳಗಳು ೇಗವಾಗಿ ಮುನ್ನುಗ್ಗುವಹಾಗಿಲ್ಲ ಆ ಭಾಗದಲ್ಲಿಯೂ ಕೈ ಕದನ ನಡೆಯುತ್ತಿದೆಯೆಂದು ತಿಳಿದುಬರುತ್ತದೆ

ಜಪಾನು ಸಿದ್ಧವಾಗಿದೆ

ಈಗ ಆಕ್ರಮಿಸಿರುವ ಆಯಕಟ್ಟಿನ ಪ್ರದೇಶಗಳ ಹಾಯದಿಂದ ಪೂರ್ವ ಏಷಿಯಾಕ್ಕೆ ನುಗ್ಗಲು ಯತ್ನಿಸುರುವ ಶತ್ರುವನ್ನು ತಡೆಯುವುದಲ್ಲದೆ ಯಾವಾಗ ೇಕಾದರೂ ಶತ್ರುವಿನ ಮೇಲೆ ಪರಿಣಾಮಕಾರಿಯಾದ ಳಿಯ ದಂಡಯಾತ್ರೆ ನಡೆಸಲು ಜಪಾನರ ದಳಗಳು ದ್ಧವಾಗಿವೆಯೆಂದು ಜ|| ಟೋಜೋರವರು ಹೇಳಿದಂದು ಜಪಾನ್ ರೇಡಿಯೋ ತಿಳಿಸಿದೆ

ರ್ಜ್ 'ಡಾಕ್' ಮೇಲಕ್ಕೆ ಎತ್ತಿದರು

ಸಿಂಗಪುರದ ಪತನಕಾಲದಲ್ಲಿ ಬ್ರಿಟಿಷರು ಮುಳುಗಿದ್ದ ಸಿಂಗಪುರದ ಕಿಂಗ್ ಜಾರ್ಜ್ ಡಾಕನ್ನು ಪುನಃ ಮೇಕ್ಕೆತ್ತಿ ಉಪಯೋಗಕ್ಕೆ ಅರ್ಹವಾಗಿ ಮಾಡಿದೆಯೆಂದು ಪಾನ್ ವಾರ್ತಾ ಸಂಸ್ಥೆ ತಿಳಿಸಿದೆ ಹಡಗುಗಳನ್ನು ಲ್ಲಿಸಲು ಸಮುದ್ರದಲ್ಲಿ ನಿರ್ಮಿಸಿರುವ ತೇಲುವ ಡಾಕ್ಳಲ್ಲಿ ಅತ್ಯಂತ ಭಾರಿಯಾದುದು ಕಿಂಗ್ ಜಾರ್ಜ್ ಕ್ ಎಂಬ ವಿಖ್ಯಾತಿಯಿತ್ತು.

೧೯೪೯ರವರೆಗೆ ಸಂಗ್ರಾಮವೇ?

ಕರ್ನಲ್ ನಾಕ್ಸರವರು ನಡೆಸಿದ ಪತ್ರಿಕಾ ಪ್ರತಿನಿಧಿಗಳ ೋಷ್ಠಿಯಲ್ಲಿ, ಯಾವಾಗ ಯುದ್ಧ ಮುಗಿಯುತ್ತದೆ? ಂದು ಕೇಳಿದ್ದಕ್ಕೆ ಅಮೆರಿಕದ ನೌಕಾ ಶಾಖೆಯ ಉಪನಾಯಕರಾದ ಅಡ್ಮಿರಲ್ ಫ್ರೆಡರಿಕ್ ಹಾರ್ನ್‌ರವರು "ಜಪಾನಿನ ಮೇಲೆ ಅಮೆರಿಕವು ಹೂಡಿರುವ ಸಂಗ್ರಾಮವು ೧೯೪೯ರ ವರೆಗೆ ಎಳೆಯಬಹುದು, ಹಡಗುಗಳನ್ನು ನಿರ್ಮಿಸುತ್ತಿರುವೆವು ೧೯೪೯ರ ವರೆಗೆ ಸಂಗ್ರಾಮ ನಡೆಯುವ ನಿರೀಕ್ಷೆಮೇಲೆಯೇ ನಿರ್ಮಾಣ ಕೆಲಸವಾಗುತ್ತಿದೆ" ಎಂದು ಹೇಳಿದರೆಂದು ಪ್ರಕಟವಾಗಿದೆ

೧೦ ದಿನಗಳಲ್ಲಿ ಇಟಲಿಯಲ್ಲಿರುವೆವು

ಸಿಸಿಲಿಯಲ್ಲಿರುವ ಕಟೇನಿಯ ಪತನವಾದ ಹತ್ತು ದಿನಗಳಲ್ಲಿ ಭಾರಿ ಬಲದೊಡನೆ ಇಟಲಿಯಲ್ಲಿ ನಾವು ಇಳಿಯುವುದು ಖಂಡಿತ ಎಂದು ಅಮೆರಿಕದ ಸೆನೆಟರ್ ಸ್ಕಾಟ್ ಲ್ಯೂಕಾಸ್‌ರವರು ಹೇಳಿದ್ದಾರೆ

೬೦೦ ಡಿವಿಜನ್ ಸೇನೆ ಕದನ ರಂಗದಲ್ಲಿ

ಯೂರೋಪಿನ ಪೂರ್ವ ರಣರಂಗಗಳಲ್ಲಿ ೬೦೦ ಡಿವಿಜನ್ ಸೇನೆಗಳು ಭೀಕರ ಕದನದಲ್ಲಿ ತೊಡಗಿದೆಯೆಂದು ಜರ್ಮನಿಯ ಅಧಿಕಾರಿಯೊಬ್ಬರು ಹೇಳಿರುವರು

ಯು-ಬೋಟ್ ಹಾವಳಿ ನಿಂತಿಲ್ಲ

ವ್ಯಾಪಾರ ನೌಕೆಗಳ ಕೆಲಸಗಾರರ ಸಭೆಯಲ್ಲಿ ಬ್ರಿಟನಿನ ಡೆಪ್ಯುಟಿ ಮಹಾಪ್ರಧಾನರಾದ ಮೇಜರ್ ಅಟ್ಲಿಯವರು ೨೦ ೭ ೪೩ ನೇ ದಿನ ಭಾಷಣಮಾಡುತ್ತ ಸಬ್‌ಮೆರೀನ್ ವಿಚಾರವೆತ್ತಿ "ಹಡಗುಗಳ ಪರಿಸ್ಥಿತಿಯನ್ನು ಕುರಿತು ಬ್ರಿಟಿಷ್ ಮಂತ್ರಿಮಂಡಲಕ್ಕೆ ವಿಶೇಷ ಯೋಚನೆಯಾಗಿದೆ ಈಚೆಗೆ ಶತ್ರುಗಳಿಂದ ಮುಳುಗಿಸಲ್ಪಡುತ್ತಿರುವ ನೌಕೆಗಳ ಸಂಖ್ಯೆ ಇಳಿದಿದೆ ಯು-ಬೋಟ್‌ಗಳ ಅಪಾಯವನ್ನು ಸಂಪೂರ್ಣವಾಗಿ ತೊಡೆಯಲು ಆಗಿಲ್ಲವಾದರೂ, ಹಡಗುಗಳ ಸ್ಥಿತಿಯು ನಿರಾಶಾಜನಕವಾಗಿಲ್ಲ ಸಬ್‌ಮೆರೀನ್ ಉಪಟಳ ನಿಲ್ಲಿಸಲು ಹೊಸಹೊಸ ಉಪಾಯಗಳನ್ನು ನಾವೂ ಅನುಸರಿಸುತ್ತಿರುವೆವು ಅದಕ್ಕೆ ಪ್ರತಿಯಾಗಿ ಶತ್ರುವೂ ಬೇರೆ ಮಾರ್ಗಗಳನ್ನು ಕಂಡುಹಿಡಿಯುತ್ತಿದ್ದಾನೆ " ಎಂದು ಹೇಳಿದರು

ತುರ್ಕಿಯು ಮುಂದೇನು ಮಾಡಲಿದೆ?

ತುರ್ಕಿಯ ಭವಿಷ್ಯ ಕುರಿತು ನಾನಾ ಊಹೆಗಳು ತೋರುತ್ತಿವೆ ತುರ್ಕಿ ಸಿರಿಯಾ ಗಡಿನಾಡಿನಲ್ಲಿ ಕಾವಲುಗಾರಿಗೆ ಪಡೆಗಳನ್ನು ಹೆಚ್ಚಿಸಿ, ಸಿರಿಯಾಕ್ಕೆ ಇತರ ದೇಶಗಳೊಡನೆ ಸಂಬಂಧವಿಲ್ಲದಂತೆ ಎಲ್ಲ ಸೌಕರ್ಯಗಳನ್ನೂ ತಪ್ಪಿಸಲಾಗಿದೆಯೆಂದು ರೋಂ ರೇಡಿಯೋ ಹೇಳಿದೆ ನಾಜಿಗಳು ಈ ಭಾಗದಿಂದ ವರ್ತಮಾನ ಪಡೆಯಲು ಮಾಡಿದ ಪ್ರಯತ್ನಗಳು ಫಲಕಾರಿಯಾಗಿಲ್ಲ ಬಾಲ್ಕನ್ನಿಗೆ ವಿಪತ್ತು ಖಂಡಿತವೆಂದು ಇಟಲಿ ನಿಟ್ಟುಸಿರು ಬಿಡುತ್ತಿದೆ ವಿಚಿ ರೇಡಿಯೋ ಪ್ರಕಟನೆಯ ಪ್ರಕಾರ ಜರ್ಮನರ ರಾಯಭಾರಿ ವಾನ್ ಪೇಪೆನರನ್ನು ಎಂ ಸರಡೋಗ್ಲು (ತುರ್ಕಿ ಮಹಾಪ್ರಧಾನ) ರವರನ್ನು ಸಂದರ್ಶಿಸಿದರು ಆ ಸಮಯದಲ್ಲಿ ತುರ್ಕಿ ವಿದೇಶಾಂಗ ಸಚಿವರೂ ಇದ್ದರು ಮುಂದಿನ ಒಂದೆರಡು ವಾರಗಳಲ್ಲಿ ಜರ್ಮನರು ಒರೆಲ್ ಭಾಗದಲ್ಲಿ ಸೋತುಹೋಗಬಹುದು ಆಗ ತುರ್ಕಿ ಬ್ರಿಟಿಷ್ ಸೇನೆಗಳು ಒಂದಾಗಿ ಬಾಲ್ಕನ್ ಮೇಲೆ ಬಿದ್ದರೆ ಜರ್ಮನರು ಬಹಳ ಕಷ್ಟಕ್ಕೆ ಗುರಿಯಾಗುವರೆಂದೂ ಹೇಳಲಾಗಿದೆ ಬಾಲ್ಕನಿನ ಪರಿಸ್ಥಿತಿ ಮಾತ್ರ ಅವನತಿಗಿಳಿಯುತ್ತಿದೆ

ಮಾರ್ಷಲ್ ವೇವೆಲ್‌ರವರಿಗೆ ನೂತನ ಹೆಸರು

ಮುಂದಿನ ವೈಸರಾಯರಾದ ಫೀಲ್ಡ್ ಮಾರ್ಷಲ್ ವೇವೆಲ್‌ರವರು ಇನ್ನು ಮುಂದೆ ವೈಕೌಂಟ್ ಆಫ್ ಸಿರಿನಿಕ ಅಂಡ್ ವಿಂಚೆಸ್ಟರ್ ಎಂದು ಕರೆಯಲ್ಪಡುವರೆಂದೂ; ಆಫ್ರಿಕದಲ್ಲಿ ಸರ್ ವೇವೆಲ್‌ರವರು ೧೯೪೧ರಲ್ಲಿ ಗಳಿಸಿದ ವಿಜಯದ ನೆನಪಿಗಾಗಿ ಈ ಪದವಿ ಕೊಡಲಾಗಿದೆಯೆಂದೂ ಹೇಳಲಾಗಿದೆ

ಸಿಸಿಲಿ ಯುದ್ಧರಂಗದ ಸ್ಥಿತಿ

ಸಿಸಿಲಿಯಲ್ಲಿ ಎನ್ನ ನಗರದ ಪತನಾನಂತರ ಆಕ್ಸಿಸ ಬಲಗಳು ಈಶಾನ್ಯದ ಕಡೆಗೆ ಹಿಮ್ಮೆಟ್ಟಲು ಆರಂಭ ಮಾಡಿವೆ ಹೆಚ್ಚು ಕಡಮೆ ಸಿಸಿಲಿಯ ಅರ್ಧಭಾಗವು ಮಿತ್ರ ವಶವಾಗಿದೆ ಮಿತ್ರ ಸೇನೆಯು ಎನ್ನ ನಗರದಿಂದ ಮುಂದೆ ನುಗ್ಗಿ ಇಟಲಿಯ ಬೆನ್ನು ಮೂಳೆಯಂತಿರುವ ಪರ್ವತ ಪಂಕ್ತಿಯವರೆಗೆ ಬಂದಿದೆ. ಇಲ್ಲಿ ಆಕ್ಸಿಸ್ ಸೇನೆಗಳು ಕದನ ಕೊಡುವ ನಿರೀಕ್ಷೆಯಿದೆ ಕಟೇನಿಯ ಮೈದಾನದಲ್ಲಿ ಇತರಲಗಳಲ್ಲಿಯೂ ಆಕ್ಸಿಸ್ ಸೇನೆಗಳಿಗೆ ಒತ್ತಡ ಬಲವಾಗಿದೆ ಶತ್ರುಗಳ ಪ್ರತಿಭಟನೆಯೂ ಅಪಾರವಾಗಿದೆ ಕೋನಿಯ ಹಿಡಿಯಲು ಈಗ ಮಿತ್ರವರ್ಗವು ಪ್ಯಾರಚ್ಯೂಟ್ ದಳಗಳನ್ನು ಇಳಿಸಲು ಆರಂಭಿಸಿವೆ ಗೋರಿಂಗ್ ಡಿವಿಜನು ಬಹಳ ನಷ್ಟಪಟ್ಟಿದ್ದರೂ ಕದನ ನಡೆಸಲು ಇನ್ನೂ ಶಕ್ತಿ ಹೊಂದಿವೆಯೆಂದು ನಂಬಲಾಗಿದೆ ಶತ್ರುಗಳು ನಿಂತಿರುವ ರಕ್ಷಣಾಸ್ಥಾನ ಬಲದಿಂದ ಸಿಸಿಲಿ ವಿಜಯ ತಡವಾಗಿದೆಯಾದರೂ ಮಿತ್ರರಿಗೆ ಶೀಘ್ರದಲ್ಲಿಯೇ ಶರಣಾಗತವಾಗುವುದು ಖಂಡಿತ ಎಂದು ಜನರಲ್ ಐಸೆನ್ ಹೋವರ್‌ರವರು ಹೇಳಿದ್ದಾರೆ

ಸಿಸಿಲಿಯಲ್ಲಿ ಸುಮಾರು ೪೦ ಮೈಲಿಗಳನ್ನು ಯಾವ ಅಡ್ಡಿಯೂ ಇಲ್ಲದೆ ಮುಂದೆ ನುಗ್ಗಿದ ಬ್ರಿಟಿಷರ ೮ ನೇ ಸೇನೆಯನ್ನು ಈಗ ಜರ್ಮನರ ಸೇನೆ ತಡೆದಿದೆ ಎಟ್ನ ಜ್ವಾಲಾಮುಖಿಯ ಬಳಿಯಲ್ಲಿ ಕದನವಾಗುತ್ತಿದೆ. ಜರ್ಮನರ ಸಂಖ್ಯೆ ಕಡಮೆಯಾಗಿದ್ದರೂ, ಕದನ ನಡೆಸುವ ಕ್ರಮದಿಂದ ಎರಡು ಕಡೆಯೂ ಕಷ್ಟ ನಷ್ಟಗಳುಂಟಾಗುತ್ತಿವೆ ಹಿಟ್ಲರನಿಂದ ಈ ಭಾಗಕ್ಕೆ ಹೊಸ ಸಹಾಯ ಬರುತ್ತಿಲ್ಲವಾದರೂ ನಿಶ್ಚಲ ಮನೋಭಾವನೆಯಿಂದ ಶತ್ರು ಯೋಧರು ಕಾದುತ್ತಿರುವರು ಫಿರಂಗಿಗಳ ಟ್ಯಾಂಕುಗಳ ಆರ್ಭಟದ ಜೊತೆಗೆ ಬಹುದಿನಗಳಿಂದ ತಣ್ಣಗಿದ್ದ ಜ್ವಾಲಾಮುಖಿಯೂ ಸಹ ಉರಿಯುಗುಳಲು ಆರಂಭಿಸಿದೆ ಸಿಸಿಲಿಯಲ್ಲಿ ಕಾಲಿಟ್ಟಾಗಿನಿಂದ ಇದುವರೆಗೆ ಬ್ರಿಟಿಷರ ೮ ನೇ ಸೇನೆಗೆ ಇಂತಹ ಪ್ರತಿಭಟನೆ ಯೊದಗಿರಲಿಲ್ಲ

'ಏರ್-ಕಂಡೀಷನ್ಡ್' ರೈಲುಗಳು

ಗಾಯಗೊಂಡ ಯೋಧರನ್ನು ಸಾಗಿಸಲು ಅಂಬ್ಯುಲೆನ್ಸ್ ರೈಲು ಡಬ್ಬಿಗಳಿಗೆ ಏರ್ ಕಂಡೀಷನ್ಡ್ ಅಂದರೆ ಆವಶ್ಯವಿದ್ದಷ್ಟು ಗಾಳಿಸಂಚಾರಕ್ಕೆ ಏರ್ಪಾಡು ಮಾಡಿಕೊಳ್ಳಲು ಅವಕಾಶವಿರುವ ರೈಲುಗಾಡಿಗಳನ್ನು ಸೇರಿಸಲು ಭಾರತದಲ್ಲಿ ಪ್ರಯತ್ನನಡೆದಿದೆ

ಸ್ವೀಕಾರ

ಬಳ್ಳಾರಿ ಡಿ|| ಗಂಗಲಾಪುರದ ಮ|| ರಾ|| ರೆಡ್ಡಿ ಮಲ್ಲನಗೌಡರು ಶ್ರೀ ಜಗದ್ಗುರು ಪಂಚಾಚಾರ್ಯರ ಕೃಪೆಯಿಂದ ತಮ್ಮ ಇಷ್ಟಾರ್ಥವು ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣೆಗೆ 5 ರೂಪಾಯಿಗಳನ್ನು ಸಮರ್ಪಿಸಿ ಕಳಿಸಿರುತ್ತಾರೆ.

ಗದಗಿನ ವೇ|| ಜ್ಯೋತಿಷಪಂಡಿತ ಟಿ ಎಂ ಕೋಟಿ ಪುಣ್ಯಶಾಸ್ತ್ರಿಗಳವರ ಪುತ್ರಿ ಚಿ|| ಸೌ|| ಕೊಟ್ರೂರಾಂಬಿಯನ್ನು ಬೆಳಗಾಂವಿನಲ್ಲಿರುವ ಪದವೀಧರ ಪಂಡಿತ ವೇ|| ಹಿರೇಮಠದ ಶ್ರೀ ಕೈಲಾಸಶಾಸ್ತ್ರಿಗಳವರ ಪುತ್ರ ಚಿ||ರಾ|| ಕಾಶೀನಾಥಶಾಸ್ತ್ರಿಎಂಬ ವರನಿಗೆ ಕೊಟ್ಟು ವಿವಾಹ ನಿಶ್ಚಯವು ನಡೆದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ವಧೂವರರ ಕಡೆಯಿಂದ ಸಮರ್ಪಿಸಲ್ಪಟ್ಟ 2 ರೂ ಗಳು ಶ್ರೀಮಂತ ಗುರ್ರಿಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಹೊಸದುರ್ಗ ತಾ|| ಸೋಮೇನಹಳ್ಳಿಯಲ್ಲಿರುವ ಮ|| ರಾ|| ಹಿರಿಯೂರು ಚನ್ನಬಸಪ್ಪಶೆಟ್ಟರ ಮಕ್ಕಳು ಪಟೇಲ್ ಮ|| ರಾ|| ಎಚ್. ಸಿ ಮರುಳಪ್ಪಶೆಟ್ಟರು ಶ್ರೀಮನ್ಮಹಾರಾಜರವರ ವರ್ಧಂತಿಗೆ ಮೈಸೂರಿಗೆ ಬಂದಿದ್ದ ಕಾಲದಲ್ಲಿ ಪ್ರಭಾಪೋಷಣಕ್ಕೋಸ್ಕರ 1 ರೂಪಾಯಿಯನ್ನು ಸಮರ್ಪಿಸಿರುತ್ತಾರೆ.

-ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು.)

ವಹಿಸಿದನು ಅವನ ಅನುಜ್ಞೆಯಂತೆ ಅನೇಕ ಬಾಲಕರ ಗುಂಪು ಒಂದು ಕಡೆ ಸೇರಿತು ಆಗ ಹೈದರನು ಹುಡುಗರ ಮನಸ್ಸನ್ನು ಆಕರ್ಷಿಸುವಂಥ ಅನೇಕ ವಸ್ತುಗಳನ್ನು ಅಲ್ಲಿಟ್ಟು ಅವುಗಳಲ್ಲಿ ತಮ್ಮ ಮನಸ್ಸಿಗೆ ಬೇಕಾದವುಗಳನ್ನು ತಕ್ಕೊಳ್ಳಬಹುದೆಂದು ಹೇಳಿ ತಾನು ಆ ಆಟವನ್ನು ನೋಡುತ್ತಾ ನಿಂತನು ಆಗ ಒಬ್ಬ ಹುಡುಗನು ಮಿಠಾಯಿಯ ಉಂಡೆಗೆ ಕೈನೀಡಿದನು, ಇನ್ನೊಬ್ಬನು ಒಂದು ಬಣ್ಣದ ಚೆಂಡನ್ನು ತಕ್ಕೊಂಡನು ಮತ್ತೊಬ್ಬನು ಒಂದು ನಾಯಿ ಪ್ರತಿಮೆಗೆ ಕೈನೀಡಿದನು, ಮಗದೊಬ್ಬನು ಒಂದು ಪುಸ್ತಕವನ್ನು ಹಿಡಿದುಕೊಂಡನು, ಬೇರೊಬ್ಬನು ಸುಮ್ಮನೆ ಬೆಪ್ಪಾಗಿ ನಿಂತುಕೊಂಡನು. ಚಾಮರಾಜನೆಂಬ ಬಾಲಕನು ಮುಂದೆ ನುಗ್ಗಿ ಒಂದು ಒಂದು ಕತ್ತಿಯನ್ನೂ ನಿಂಬೆಯ ಹಣ್ಣನ್ನೂ ತೆಗೆದುಕೊಂಡು ಆತ್ಮಾನಂದದಿಂದ ಕುಣಿದಾಡಿದನು. ಇದನ್ನು ನೋಡುತ್ತಲೇ ಹೈದರನು ಬಹು ಸಂಭ್ರಮದಿಂದ ಬಂದು ಚಾಮರಾಜನ ಬೆನ್ನುತಟ್ಟಿ ಈ ಬಾಲಕನೇ ಸಿಂಹಾಸನಕ್ಕೆ ತಕ್ಕವನೆಂದು ಲಕ್ಷ್ಮಮ್ಮಣ್ಣಿಯವರ ಮುಂದೆ ತಂದು ನಿಲ್ಲಿಸಿದನು ಮುಂದೆ ಆ ಬಾಲಕನೇ ಸರ್ವಸಮ್ಮತವಾಗಿ ಸಿಂಹಾಸನಾರೋಹಣವನ್ನು ಮಾಡಿ ಮೈಸೂರು ಇತಿಹಾಸದಲ್ಲಿ ತನ್ನ ಯಶಸ್ಸನ್ನು ಚಿರಸ್ಥಾಯಿಯಾಗಿ ಮಾಡಿರುವನು ಹೀಗೆ ಪ್ರತಿಯೊಬ್ಬರಲ್ಲಿಯೂ ಆತ್ಮಶಕ್ತಿಯು ಸ್ಥೂಲ ಪ್ರಮಾಣದಲ್ಲಿಯೋ, ಸೂಕ್ಷ್ಮ ಪ್ರಮಾಣದಲ್ಲಿಯೋ, ಅಂತೂ ಇದ್ದೇ ಇರುವದಲ್ಲದೆ ತನ್ನ ಇರುವಿಕೆಯನ್ನು ಪ್ರಕಾಶ ಮಾಡಿಯೂ ಮಾಡುವದು

ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಹೇಳಬೇಕಾಗಿದೆ ಅದೇನೆಂದರೆ ಹೈದರನ ಸಮ್ಮುಖದಲ್ಲಿ ಪರೀಕ್ಷೆಗೆ ನಿಂತವರಲ್ಲಿ ಬೆಪ್ಪಾಗಿ ನಿಂತ ಹುಡುಗನಂತೆ ಒಬ್ಬೊಬ್ಬರಲ್ಲಿ ಆತ್ಮಶಕ್ತಿಯು ಕಾಣದೆ ಹೋದರೂ ಹೋಗಬಹುದು ಆತ್ಮಶಕ್ತಿಯ ಅಂಕುರವು ಕಾಣುವದಕ್ಕೆ ಒಂದು ಪರಿಸ್ಥಿತಿಬೇಕು ಮಲ್ಲಿಗೆಯಲ್ಲಿ ಸ್ವಭಾವವಾಗಿ ಸುವಾಸನೆ ಇದ್ದರೂ ಕೇವಲ ಮೊಗ್ಗಾಗಿರುವಾಗ ಆ ವಾಸನೆ ಹೊರಬೀಳದಿದ್ದು ಅದು ಅರಳುವದಕ್ಕಾರಂಭವಾಗುತ್ತಲೇ ಅದರ ವಾಸನೆ ಹೊರಬೀಳುವಂತೆ ಹಾಗೆ ಆತ್ಮಶಕ್ತಿಯು ಎಷ್ಟಿದ್ದಾದರೂ ಬಲಿತ ಮೇಲೆ ಮಾತ್ರ ಅದರ ಭವಿಷ್ಯದ್ಯೋಗ್ಯತೆಯ ಸೂಚನೆ ತೋರಿಬರುವದು ಸೂಚನೆ ತೋರದಿರುವಾಗ ಸರ್ವಸಾಮಾನ್ಯವಾದ ಮತ್ತು ಸೂಚನೆ ತೋರಿದಾಗ ಲಕ್ಷ್ಯಾನುಗುಣವಾದ ಪರಿಸ್ಥಿತಿಗಳನ್ನು ಕಲ್ಪಿಸಿಕೊಳ್ಳ ಪ್ರತಿಯೊಬ್ಬನೂ ಅದನ್ನು [illegible] ಕಲ್ಪಿಸುವದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಬೇಕು

ವಾಚಕರೆ, "ಬೀಜಗಳಿಗೆ ಕಾಲಾನುಕಾಲದಲ್ಲಾದರೂ ಹುಟ್ಟುವದು ಸ್ವಾಭಾವಿಕವಲ್ಲವೆ ? ಎಂದರೆ ನಿಜ ಆದರೂ ಅವುಗಳಲ್ಲಿ ಯೋಗ್ಯತೆಯ ತಾರತಮ್ಯವುಂಟು ಕೆಲವು ಬೀಜಗಳು ಯಾರ ಪೋಷಣೆಯನ್ನೂ ನಿರೀಕ್ಷಿಸದೆ ಕಾಡುಗಳಲ್ಲಿ ತಾವೇ ಬೆಳೆದುಕೊಳ್ಳುವವು ಇನ್ನು ಕೆಲವನ್ನು ಹಸನಾದ ಭೂಮಿಯಲ್ಲಿ ಬಿತ್ತಬೇಕಾಗುವದು ಇನ್ನು ಕೆಲವಕ್ಕೆ ಬಿತ್ತಿದ ಮೇಲೆಯೂ ಹೆಚ್ಚು ಆರೈಕೆ ಮಾಡಬೇಕಾಗುವದು ಉದಾಹರಣೆಗೆ ನೋಡಿರಿ ಕಾಡಿನಲ್ಲಿ ನಾನಾ ಜಾತಿಯ ಎಷ್ಟೋ ಮರಗಳು ತಮಗೆ ತಾವೇ ಬೆಳೆದುಕೊಳ್ಳುವವು, ಆದರೂ ಅವುಗಳಿಗೆ ಅನುಕೂಲ ಪರಿಸ್ಥಿತಿಯನ್ನು ಕಲ್ಪಿಸಿದರೆ ಅವು ಮತ್ತಷ್ಟು ಹುಲುಸಾಗಿ ಬೆಳೆಯುವವು ಹುರುಳಿಯನ್ನು ಬಿತ್ತಬೇಕಾದರೆ ಸಾಮಾನ್ಯವಾಗಿ ಭೂಮಿಯು ಸ್ವಲ್ಪ ಮೆತ್ತಗಿದ್ದರೆ ಸಾಕು ಕಬ್ಬಿನ ಬೆಳೆಯನ್ನು ತೆಗೆಯಬೇಕಾದರೆ ಮಾತ್ರ ಅದನ್ನು ಬಹು ಪರಿಯಿಂದ ಪೋಷಿಸಬೇಕಾಗುವದು ಈ ನಿಯಮವನ್ನು ಆತ್ಮಶಕ್ತಿಯ ಬೀಜಕ್ಕೆ ಅನ್ವಯಿಸಿ ನೋಡೋಣ ಅದರ ಬೀಜತ್ವವೇನೂ ನಾಶವಾಗುವಂಥದ್ದಲ್ಲ ಅದು ಒಂದಿಲ್ಲೊಂದು ದಿನ ಮೈದುಂಬಿಕೊಳ್ಳುವಂಥದ್ದೇ ಸರಿ ಆದರೆ ಅದು ಎಂದಿಗೋ ಏನೋ! ಪ್ರತಿಯೊಬ್ಬ ಮನುಷ್ಯನೂ ತನ್ನ ಉನ್ನತಿಯನ್ನು ಆದಷ್ಟು ಜಾಗ್ರತೆಯಾಗಿ ಮಾಡಿಕೊಳ್ಳಬೇಕೆಂದು ಬಯಸುವದು ಸಹಜವಷ್ಟೆ ಜಗತ್ತಿನಲ್ಲಿ ಆತ್ಮಶಕ್ತಿಯ ಉನ್ನತಿಗಿಂತ ಹೆಚ್ಚಿನ ಉನ್ನತಿಯೇ ಇಲ್ಲ. ಒಬ್ಬನು ಉನ್ನತಿಯನ್ನು ಪಡೆದನೆಂಬ ಮಾತು ಅವನ ಆತ್ಮಶಕ್ತಿಯ ಬೆಳವಣಿಗೆಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಹೇಳಿದರೆ ಮಾತ್ರ ಒಪ್ಪುವದು ಒಂದು ಜನಾಂಗವು ಉನ್ನತಿಯನ್ನು ಪಡೆಯಿತೆಂಬ ಮಾತು ಆ ದೇಶದಲ್ಲಿ ಆತ್ಮಶಕ್ತಿಯ ಶಿಕ್ಷಣದ ಪ್ರಸಾರವಾಗಿದ್ದರೆ ಮಾತ್ರ ಅರ್ಥವತ್ತಾಗುವದು ಆತ್ಮಶಕ್ತಿಯಿಲ್ಲದೆ ಐಶ್ವರ್ಯವಿದ್ದರೂ ಅದು ತೃಣಕ್ಕಿಂತ ಕಡೆ ಒಂದು ದೇಶದಲ್ಲಿ ಅಗಣಿತ ಸೇನೆ ಧನಕನಕ ಪ್ರಜಾವೃದ್ಧಿ ಇರಬಹುದು ಆತ್ಮಶಕ್ತಿ ಇಲ್ಲದಿದ್ದರೆ ಅವುಗಳೆಲ್ಲಾ ಶವಾಲಂಕಾರಗಳಂತೆ ಸೇನೆಯಾಗಲಿ ಧನಕನಕಗಳಾಗಲಿ ಪ್ರಜಾವೃದ್ಧಿಯಾಗಲಿ ಆತ್ಮಶಕ್ತಿಯ ಸಂಸರ್ಗದಿಂದ ಬೆಲೆಯೇ ಹೊರತು ಬೇರೆಯಲ್ಲ ಆದ್ದರಿಂದ ಸರ್ವೋತ್ಕೃಷ್ಟವಾದ ಆತ್ಮಶಕ್ತಿಯನ್ನು ಪ್ರತಿಯೊಬ್ಬನೂ ಆದಷ್ಟು ಬೇಗ ಮೈಗೂಡಿಸಿಕೊಂಡು ತನ್ನ ಉನ್ನತಿಯನ್ನು ಮಾಡಿಕೊಳ್ಳುವದಕ್ಕೆ ಅವಶ್ಯ ಆತುರಪಡಬೇಕು

ಸ್ವರವ್ಯಾಯಾಮ

ನಮ್ಮ ಭಾರತ ವೈದ್ಯದಲ್ಲಿ ಹೇಳಿರುವ ಶಾರೀರಿಕ, ಮಾನಸಿಕ ಆಗಂತುಕಾದಿ ರೋಗಗಳಿಗೆ ಮಣಿ, ಮಂತ್ರ, ಔಷಧ ಚಿಕಿತ್ಸೆಗಳು ಹೇಳಲ್ಪಟ್ಟಿರುತ್ತವೆ ವಾತ, ಪಿತ್ತ, ಶ್ಲೇಷ್ಮಗಳೆಂಬ ಶಾರೀರಿಕ ದೋಷಗಳು, ರಜೋಗುಣ, ತಮೋಗುಣಗಳೆಂಬ ಮಾನಸಿಕ ದೋಷಗಳು, ಈ ಐದು ಶಾರೀರಿಕ ಮಾನಸಿಕರೋಗ ಕಾರಣಗಳಾಗಿರುತ್ತವೆ ಇವುಗಳಲ್ಲಿ ಮನೋದೋಷವಾದ ಈರ್ಷ್ಯ, ಭಯ, ಕ್ರೋಧ, ಲೋಭ, ದೈನ್ಯ, ದ್ವೇಷ ಮನಸ್ಸಿನಲ್ಲುಂಟಾದಲ್ಲಿ ಆಹಾರವು ಸರಿಯಾಗಿ ಪಚನವಾಗದೆ ಅನೇಕ ರೋಗಗಳುಂಟಾಗುತ್ತವೆ ಮಾನಸಿಕ ರೋಗಗಳಿಗೆ ಮಂತ್ರ ಚಿಕಿತ್ಸೆಯು ಫಲಕಾರಿಯಾದುದು ಪಂಡಿತ ಮದನಮೋಹನ ಮಾಲವೀಯರು ಪಡೆದ ರಸಾಯನ ಚಿಕಿತ್ಸೆಯನ್ನು ನೋಡಿ ಅಷ್ಟಾಂಗತಂತ್ರಗಳಲ್ಲಿ ಸೇರಿದ ರಸಾಯನ ತಂತ್ರದ ಕಡೆಗೆ ಅನೇಕ ವೈದ್ಯರು ಗಮನವಿತ್ತಿರುವರು ಈ ರಸಾಯನ ಚಿಕಿತ್ಸೆಗಿಂತಲೂ ಹೆಚ್ಚು ವ್ಯಾಪ್ತಿಯುಳ್ಳ ಮಂತ್ರ ಚಿಕಿತ್ಸೆಯನ್ನು ಯೋಗಿಗಳು ಹೆಚ್ಚು ಬಲ್ಲವರಾಗಿರುತ್ತಾರೆ ಕಾಯಚಿಕಿತ್ಸಾ ತಂತ್ರದಲ್ಲಿ ಪ್ರಧಾನ ರೋಗವಾದ ಜ್ವರ "ದೇಹೇಂದ್ರಿಯ ಮನಸ್ತಾಪೀ ಸರ್ವರೋಗಾಗ್ರಜೋಬಲೀ ಜ್ವರ ಪ್ರಧಾನೋ ರೋಗಾಣಾಂ ರೋಗೋಜ್ವರ ಪುರಸ್ಸರಃ' ಚಿಕಿತ್ಸೆಯಲ್ಲಿ ಮಂತ್ರ ಜಪ ಹೋಮ, ದಾನ, ಪೂಜಾದಿಗಳು ವಿಶೇಷವಾಗಿ ಹೇಳಿರುತ್ತಾರೆ ಮಂತ್ರ ಚಿಕಿತ್ಸೆಯಲ್ಲಿ ಭ್ರಮರ ಕೀಟಕ ನ್ಯಾಯ. ಅಂದರೆ ಭ್ರಮರವು ಕೀಟಕವನ್ನು ತಂದು ತನ್ನಂತೆಯೇ ಮಾಡುವಂತೆಯೇ ಸಂಕಲ್ಪಶಕ್ತಿಯು ಹೆಚ್ಚಿ ಸಫಲವುಂಟಾಗುತ್ತದೆ ಮತ್ತು ನಾವು ಮಾತನಾಡುವ ಸ್ವರಗಳು ಅ, ಕಾರದಿಂದ ಕ್ಷ, ಕಾರ ಪರ್ಯಂತವಿರುತ್ತವೆ ಯೋಗಶಾಸ್ತ್ರದ ಷಟ್ಚಕ್ರ ವಿಜ್ಞಾನದಲ್ಲಿ ಹೇಳಿರುವ— ಶರೀರಾಂತರ್ಗತವಾದಲ್ಲಿರುವ ಷಟ್ಚಕ್ರವಿವರ, ೧ ಮೂಲಾಧಾರ ಚಕ್ರದಿಂದಾ, ವ, ಶ, ಷ, ಸ, ೨ ಸ್ವಾಧಿಷ್ಠಾನ ಚಕ್ರದಿಂದಾ ಬ, ಭ, ಮ, ಯ, ರ, ಲ, ೩ ಮಣಿಪೂರ ಚಕ್ರದಿಂದಾ ಢ, ಡ, ಣ, ತ, ಥ, ದ, ದ ನ, ಪ, ಫ, ೪ ವಿಶುದ್ಧ ಚಕ್ರದಿಂದಾ, ಕ, ಖ, ಗ, ಘ, ಙ, ಚ ಛ, ಜ, ಝ, ಞ ಟ, ಠ, ೫ ಅನಾಹತ ಚಕ್ರದಿಂದಾ. ಅ, ಆ, ಇ, ಈ, ಉ, ಊ, ಋ, ೠ, ಒ, ಓ, ಎ, ಏ, ಐ, ಔ, ಅಂ, ಅಃ, ೬ ಆಜ್ಞಾ ಚಕ್ರದಿಂದಾ ಹಂ, ಕ್ಷಂ, ಈ ಸ್ವರಗಳು ಹೊರಡುತ್ತವೆ ಮನನಾತ್, ಮಂತ್ರ ಮಿತ್ಯಾಹುಃ ಆಯಾ ಚಕ್ರದಲ್ಲಿರುವ ಸ್ವರಗಳನ್ನು ಸರಿಯಾಗಿ ಮನನ ಮಾಡಿದಲ್ಲಿ ಚಕ್ರಗಳಲ್ಲಿರುವ ದಳಗಳು (ಅಂತರವಯವ) ಕದಲಿಸಲ್ಪಟ್ಟು ವ್ಯಾಯಾಮವಾಗುತ್ತದೆ ಪ್ರಣವಪೂರ್ವಕವಾದ ಮಂತ್ರ ಜಪದಿಂದ ಕೂಡಿದ ಈಶ್ವರೋಪಾಸನೆ ಚಿತ್ತನೈರ್ಮಲ್ಯಯಿಂದ ಉಂಟಾಗುತ್ತದೆ —"ಧೀಧೈರ್ಯಾತ್ಮಾದಿ ವಿಜ್ಞಾನಂ ಮನೋದೋಷೌಷಧಂಪರಮ್" ಹಿತಾಹಿತಗಳನ್ನು ವಿಭಜಿಸುವ ಬುದ್ಧಿ ದೃಢಚಿತ್ತ, ಯೋಗಾಭ್ಯಾಸಗಳಿಂದ ಪರಮಾತ್ಮಸ್ವರೂಪವನ್ನರಿಯುವುದು. ಇವು ಮನೋದೋಷಜ ರೋಗಗಳಿಗೆ ಔಷಧಗಳು.

ಸಂಗೀತದಿಂದ ಅನೇಕ ರೋಗಗಳು ಗುಣವಾಗುವುವೆಂಬುದಕ್ಕೆ ಸ, ರಿ, ಗ, ಮ, ಪ, ಧ, ನಿ, ಎಂಬ ಏಳು ಸ್ವರಗಳ ಮೂಲವು. ಇದು ನಾದಾನುಸಂಧಾನವನ್ನು ಮಾಡಿ, ದೇವರನ್ನು ಪ್ರಾರ್ಥಿಸಲು ಹೇಳಲ್ಪಟ್ಟುದು. ಈ ಸಪ್ತಸ್ವರಗಳ ಬದಲಾವಣೆಯಿಂದ ಅನೇಕ ರಾಗಗಳುಂಟಾದವು ಸಂಗೀತದಿಂದ ಶರೀರದ ಬಾಹ್ಯಾವಯವಗಳು ಕೆಲವು ಚಲಿಸಲ್ಪಡುವುದಲ್ಲದೆ ಸ್ವರ ಸ್ಥಾನಗಳಾದ ಚಕ್ರಗಳಲ್ಲಿನ ದಳಗಳು ಚಲಿಸಲ್ಪಟ್ಟು ಬಲವುಂಟಾಗಿ ಹಾಡುವಾಗ ಶ್ವಾಸವನ್ನು ಮಂದ್ರ, ಮಧ್ಯ, ತಾರ ಸ್ಥಾಯಿಗಳಿಗಾಗಿ ಪೂರಕ. ಕುಂಭಕ. ರೇಚಕಾದಿಗಳನ್ನು ಮಾಡುವುದರಿಂದ ಶ್ವಾಸಕೋಶಗಳಿಗೆ ವ್ಯಾಯಾಮವುಂಟಾಗಿ ಆರೋಗ್ಯ ಉಂಟಾಗುತ್ತದೆ ಈ ಸ್ವರೋಚ್ಚಾರಣೆಯಿಂದ ಪರರಿಗೆ ಸಹಾ ಸಂತೋಷ, ದುಃಖ, ಉತ್ಸಾಹ ಮೊದಲಾದವು ಉಂಟಾಗುತ್ತವೆ ಈ ರೀತಿಯಲ್ಲಿ ಅನೇಕ ರೋಗಗಳು ಗುಣವಾಗುತ್ತವೆ

ತ್ರಿಧಾತುಗಳಾದ ವಾತ, ಪಿತ್ತ, ಶ್ಲೇಷ್ಮಗಳ ವೃದ್ಧಿ, ಕ್ಷಯಗಳಿಂದುಂಟಾಗುವ ರೋಗಗಳಿಗೂ ಮಾನಸಿಕ ದೋಷ ಜನಿತರೋಗಹರಣಕ್ಕಾಗಿ ಕೆಲವು ರಾಗಗಳನ್ನು ಹಾಡಲು ಕಾಲಗಳನ್ನು ಸಹಾ ನಿರ್ಧರಿಸಿರುತ್ತಾರೆ

ನಮ್ಮ ಹಿರಿಯರು ಆರೋಗ್ಯದೃಷ್ಟಿಯಿಂದ ನಮಗುಪದೇಶಿಸಿರುವ ಮಂತ್ರಗಳನ್ನು ಸುಸ್ವರದಿಂದುಚ್ಚರಿಸಿ (ಜಪಿಸಿ) ದೇಹಾರೋಗ್ಯವನ್ನೂ ಮನೋದಾರ್ಢ್ಯವನ್ನೂ ಮಾನವಾತೀತ ಶಕ್ತಿಯನ್ನೂ ಹೊಂದಲು ಸಂಕಲ್ಪಿಸಬೇಕು

" ಸತ್ವಮಾತ್ಮಾ ಶರೀರಂಚ ಮನಃಪಾಲಯೇತ್ ।
ಸದ್ಯಾವೇಡ ಭುವನಾಂ ಸರ್ವಭೂತಾಃ ಶರೀರಿಣಾಂ " ॥

ಅ. ಕುಂ.

ಸರ್ಕಾರದ ಹೊಸ ಆಜ್ಞೆ

ಆಹಾರವಸ್ತುಗಳು, ಚಿನ್ನ ಬೆಳ್ಳಿ ಮುಂತಾದವುಗಳ ಮೇಲೆ ಯಾವ ಲೇವಾದೇವಿಗಾರರು ಸಾಲವನ್ನು ಕೊಡಬೇಕಾದರೂ ಇಂಡಿಯಾ ಸರ್ಕಾರದ ಅಥವಾ ಪ್ರಾಂತೀಯ ಸರ್ಕಾರದ ಅನುಮತಿಯನ್ನು ಬರೆದ ಮೂಲಕ ಪಡೆಯಬೇಕೆಂದು ಆಜ್ಞೆ ಮಾಡುವ ಅಧಿಕಾರವನ್ನು ಈಗ ಹೊಸದಾಗಿ ಡಿಫೆನ್ಸ್ ಶಾಸನಕ್ಕೆ ಸೇರಿಸಲಾಗಿದೆ

ಬಟ್ಟೆವ್ಯಾಪಾರಿಗಳ ಗೋಳು

ಮದರಾಸಿನಲ್ಲಿ ಬಟ್ಟೆಬರೆಗಳ ವ್ಯಾಪಾರಮಾಡುವವರಿಗೆ ಈಗ ಒದಗಿರುವಂತಹ ದುಸ್ಥಿತಿಯು ಯಾವಾಗಲೂ ಒದಗಿರಲಿಲ್ಲ ಆಗಸ್ಟ್ ೩೧ ರೊಳಗೆ ಹಳೆ ದಾಸ್ತಾನು ಮಾರಲು ನಿಯಮಿಸಿರುವ ಅವಧಿಯನ್ನು ಇಂಡಿಯಾ ಸರ್ಕಾರವು ಹೆಚ್ಚಿಸುವರೆಂದು ಆಶಿಸಿದ್ದ ನಿರೀಕ್ಷೆಯು ನಿಷ್ಫಲವಾಯಿತು ಆದಕಾರಣ ಮಾರಾಟಮಾಡುವವರ ಉತ್ಕಟವಾದ ಪ್ರಯತ್ನ ಬಲವಾಗಿದೆ. ಕೆಲವು ದಾಸ್ತಾನುಗಾರರು ಬಿಗಿಯಾಗಿ ಕುಳಿತಿದ್ದರೂ, ಒಂದೆರಡು ವಾರಗಳಲ್ಲಿ ಅವರಿಗೂ ಇದೇ ಪಾಡು ಖಂಡಿತ ಒದಗಲಿದೆ ಹಲವು ಬ್ಯಾಂಕುಗಳವರು ಬಟ್ಟೆ ಬರೆಗಳ ಆಧಾರದ ಮೇಲೆ ಕೊಟ್ಟಿರುವ ಸಾಲವನ್ನು ಆಗಸ್ಟ್ ಅಂತ್ಯದೊಳಗೆ ತೀರಿಸಿ, ಮಾಲನ್ನು ಒಯ್ಯಲು ನೋಟೀಸು ಕೊಡುತ್ತಿರುವುದೊಂದುಕಡೆ, ಮುಂಬಯಿನಿಂದ ಮಾಲು ಬೇಡವೆಂದರೂ ಬರುತ್ತಿರುವುದೊಂದುಕಡೆ ಇವುಗಳಿಂದ ಬೆಲೆಯು ಇನ್ನೂ ಇಳಿಯುವ ಸೂಚನೆಗಳಿವೆ ಈಗಾಗಲೇ ಮೇ ತಿಂಗಳಲ್ಲಿದ್ದ ಬೆಲೆಗಳಲ್ಲಿ ಶೇಕಡ ೪೦ ರಷ್ಟು ಇಳಿದಿದೆ ಇನ್ನೂ ಇಳಿಯುವ ಸೂಚನೆಗಳಿವೆ ಎಂದು ತಿಳಿದುಬರುತ್ತದೆ

ಚಾಮುಂಡಿ ಬೆಟ್ಟದಲ್ಲಿ ಚಿಕ್ಕ ಜಾತ್ರೆ

ಚಾಮುಂಡಿ ಬೆಟ್ಟದಲ್ಲಿ ಇನ್ನು ಮುಂದೆ ಜನ್ಮ ದಿನೋತ್ಸವ ಸಂಬಂಧವಾಗಿ ಚಿಕ್ಕ ಜಾತ್ರೆ ನಡೆಯಿಸಬೇಕೆಂದು ಆಳುವ ಮಹಾಸ್ವಾಮಿಯವರು ಅಪ್ಪಣೆ ಮಾಡಿರುವರೆಂದು ಗೊತ್ತಾಗಿದೆ ಈ ಜಾತ್ರೆಯು ಇನ್ನು ಮುಂದೆ ಶ್ರೀ ಚಾಮುಂಡೇಶ್ವರೀ ಅಮ್ಮನವರ ಜನ್ಮ ದಿನೋತ್ಸವದ ದಿನ ಪ್ರತಿ ವರ್ಷವೂ ನಡೆಯುತ್ತದೆ ಕಳೆದ ಶುಕ್ರವಾರದ ದಿನ ಶ್ರೀ ಚಾಮುಂಡೇಶ್ವರಿಯ ಜನ್ಮ ದಿನವಾದ ಕಾರಣ, ಸಕಲ ರಾಜಮರ್ಯಾದೆಗಳೊಂದಿಗೆ ಈ ಚಿಕ್ಕ ಜಾತ್ರೆಯು ವೈಭವದಿಂದ ನಡೆಯಿತು ಈ ಉತ್ಸವದ ಅಂಗವಾಗಿ ಅನ್ನದಾನ ಮುಂತಾದವುಗಳು ನಡೆದವು.

ಮೈಸೂರು [illegible] ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ [illegible] ಶ್ರೀ [illegible] ಶಾಸ್ತ್ರಿಗಳವರಿಂದ ಮುದ್ರಿಸಲ್ಪಟ್ಟಿತು.

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ದವರಿಗೆ ೩ ರೂ ಪರಸ್ಥಳದವರಿಗೆ ೩ ರೂ. ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨ನೇ ಆಗಸ್ಟ್ ೧೯೪೩ [ಸಂಚಿಕೆ ೧೩

ಏಕಾಗ್ರಧ್ಯಾನವು

ೀ —ಮಲ್ಲಿಕಾರ್ಜುನಾರಾಧ್ಯ, ರಾಣೀಬೆನ್ನೂರು, ವಾಣೀತಟ,
ಮುದೇನೂರು

ಇಂದ್ರಿಯನಿಗ್ರಹವನ್ನು ಸಂಪಾದಿಸಿ, ವಿಷಯವನ್ನು ಪರಿತ್ಯಜಿಸಿ, ದೈವಸಂಪತ್ತನ್ನು ಸಂಪಾದಿಸಿದ ನವನು ಜ್ಞಾನಿಯೆನಿಸಿಕೊಳ್ಳುವನು ಇಂತಹ ಪದವಿಯನ್ನು ಸಂಪಾದಿಸಲು ವಿವಿಧಮಾರ್ಗಗಳಿರು ಈ ಮಾರ್ಗಗಳಿಗೇ ಯೋಗವೆಂದು ಹೆಸರು ಗ್ರತೆಯೂ ಧ್ಯಾನವೂ ಸೇರಿದ ಯೋಗವನ್ನು ಜಯೋಗವೆನ್ನುವರು ಏಕಾಗ್ರತೆಯಿಂದ ಉಂಟಾವ ಶಕ್ತಿಗಿಂತ ಮಿಗಿಲಾದ ಶಕ್ತಿ ಬೇರಿಲ್ಲವು ಜಗತ್ತಿನಲ್ಲಿ ವಸ್ತೇ ಸರ್ವ ಶಕ್ತಿಯುಳ್ಳದೆಂದು ರಾಜಯೋಗವು ತಿಳಿಸುವುದು ಪ್ರಪಂಚದಲ್ಲಿ ನಾವು ನೋಡುವ ರ್ಥಗಳ ಆಕಾರಗಳು ಅವುಗಳ ನಿಜಸ್ವರೂಪ ಲ್ಲ ಮನಸ್ಸನ್ನು ಕ್ರಮವಾದ ಮಾರ್ಗದಲ್ಲಿ ನಿಗ್ರಹಿಸಿ ತ್ಯವನ್ನು ನೋಡಿದಲ್ಲಿ ಪದಾರ್ಥಗಳ ನಿಜ ಸ್ವರೂಪ ಆಗ ಹೊರಪಡುವುವು ವಿಶ್ವದಲ್ಲಿರುವ ಪದಾರ್ಥಗೆ ಆಧಾರವಾದ ನಿಯಮವೂ ಸಹ ಗೋಚರವಾಗುಮ ಅನೇಕ ಪದಾರ್ಥಗಳನ್ನು ಪ್ರಕಾಶಗೊಳಿಸುವ ಶಕ್ತಿ ದೀಪದಲ್ಲಿಯ ರಶ್ಮಿಯಂತೆ ನಮ್ಮ ಮನಸ್ಸಿನ ಯು ಚೆದರಿರುವುದು ದೀಪದ ರಶ್ಮಿಯನ್ನೆಲ್ಲಾ ದು ಕಿರಣವಾಗಿ ಸೇರಿಸಿ ಉಪಯೋಗಿಸಿದಲ್ಲಿ ರದ ಪದಾರ್ಥಗಳೂ ಸಹ ಸ್ಪಷ್ಟವಾಗಿ ಕಾಣುವುವು ಜಯೋಗಿಯ ಏಕಾಗ್ರವಾದ ಚಿತ್ತವನ್ನು ಕಿರನ್ನು ಯುವ 'ಲಾಂದರ'ಕ್ಕೆ ಹೋಲಿಸಬಹುದು ಗ್ರ ಚಿತ್ತದಿಂದ ಜಗತ್ತಿನಲ್ಲಿರುವ ಅದೃಶ್ಯವಾದ, ತವಾದ ಸೂಕ್ಷ್ಮ ಪದಾರ್ಥಗಳನ್ನು ಗ್ರಹಿಸದು. ಆತ್ಮಜ್ಞಾನವನ್ನೂ ಸಹ ಸಂಪಾದಿಸಬಹುದು

ಮನುಷ್ಯನಲ್ಲಿಯೂ ಏಕಾಗ್ರತೆಯಿರುವುದು ದೋ ತಿಳಿಯದೆಯೋ ನಿತ್ಯವೂ ಬಳಕೆಯಲ್ಲಿ ನ್ನು ಉಪಯೋಗಿಸುವನು ಸಾಮಾನ್ಯವಾಗಿ ಗ್ರತೆಯೆಂದರೆ ಗಮನವೆನ್ನಲ್ಪಡುವುದು ಕೇಳುವ ವ ಮೊದಲಾದ ವಿಷಯಗಳಲ್ಲಿ ಗಮನವನ್ನು ದಪಕ್ಷದಲ್ಲಿ ನಾವು ಆ ವಿಷಯವನ್ನು ಗ್ರಹಿಸಲಾರೆವು ದು ಪುಸ್ತಕವನ್ನು ಓದುತ್ತಿರುವಾಗ ಮತ್ತೊಂದರ ಲೆ ನಮ್ಮ ಗಮನವು ಹೋದರೆ ಓದಿದ ವಿಷಯವು ಸ್ಸಿನಲ್ಲಿ ನಾಟದ ನಮ್ಮೊಂದಿಗೆ ಯಾರಾದರೂ ತನಾಡುತ್ತಿರುವಾಗ ನಾವು ಆ ಮಾತುಗಳಿಗೆ ಗಮನ ಕದಿದ್ದರೆ ಅವನ್ನು ನಾವು ಕೇಳಲಾರೆವು ಹೀಗೆ ವಿಷಯಗಳನ್ನೂ ಗ್ರಹಿಸುವುದಕ್ಕೆ ಗಮನವು ವು ಇಲ್ಲದಿದ್ದರೆ ಗ್ರಹಿಸಲಾರೆವು ಕೆಲವರಿಗೆ ಗಮನಶಕ್ತಿಯು ಹೆಚ್ಚಾಗಿರುವುದು. ಕೆಲವರಿಗೆ ಮೆಯಾಗಿರುವುದು ಇದು ಮನಸ್ಸೊಂದಿಗೆ ಬೆರೆತರೆ ಗಮನವು ಜನ್ಮಾಂತರ ಫಲ ಜನ್ಯವಾಗುವುದು ಹ ಏಕಾಗ್ರವಾದ ಗಮನವು ಸಾಧಾರಣವಾಗಿ ಕೋಟಿಯಲ್ಲಿ ಕಾಣಲ್ಪಡುತ್ತಿರುವುದು. ಆದರೆ ಪರಿಮಿತಿಯಲ್ಲಿ ಹೆಚ್ಚು ಕಡಮೆಗಳಿರುವುವೇ ಹೊರತು ಆ ಭಾವದಲ್ಲಿ ಭೇದವಿಲ್ಲವು ಜಂತುಗಳೆಲ್ಲವೂ ತಮ್ಮ ಆಹಾರವನ್ನು ಹೊಂದುವುದಕ್ಕೋಸ್ಕರ ಗಮನವನ್ನು ಸಾಧಿಸುವುವು ಒಂದು ಹದ್ದು, ಕೋಳಿಯ ಮರಿಯನ್ನು ಗ್ರಹಿಸುವುದನ್ನೂ ಬಕವು ಮೀನನ್ನು ಹಿಡಿಯುವುದನ್ನೂ, ಬೆಕ್ಕು ಇಲಿಯನ್ನು ಹಿಡಿಯಲು ಹೊಂಚು ಹಾಕುತ್ತಿರುವುದನ್ನೂ ಪರೀಕ್ಷಿಸಿದರೆ ಅವುಗಳ ಏಕಾಗ್ರವಾದ ಗಮನವನ್ನು ಆಶ್ಚರ್ಯದಿಂದ ಗ್ರಹಿಸುವೆವು ಆ ಸಮಯದಲ್ಲಿ ಇತರ ಪದಾರ್ಥಗಳ ಸ್ಮರಣೆ ಇಲ್ಲದೆ ಆಹಾರ ವಿಷಯವನ್ನು ಮಾತ್ರ ಅವು ಗಮನಿಸಿ ಅದನ್ನು ಹೊಂದುವುವು ಹೀಗೆ ಜಂತುಗಳಲ್ಲಿಯೂ ಕೂಡ ಏಕಾಗ್ರತೆಯಿಂದಲೇ ಸರ್ವವೂ ಸಂಪಾದಿಸಲ್ಪಡುತ್ತಿರುವುದು ಹೀಗೆಯೇ ಮನುಷ್ಯರ 'ವಿಷಯದಲ್ಲಿಯೂ ಕೂಡ ಏಕಾಗ್ರವಾದ ಮನಸ್ಸಿನಿಂದ ಸಕಲ ಪುರುಷಾರ್ಥಗಳೂ ಸಂಪಾದಿಸಲ್ಪಡುತ್ತಿರುವುವೇ ಹೊರತು ದಿಕ್ಕು ದಿಕ್ಕುಗಳಿಗೆ ಮನೋ ಗಮನವನ್ನು ಹರಡುತ್ತಿದ್ದರೆ ಆವ ವಸ್ತುವನ್ನೂ ಹೊಂದಲು ಸಾಧ್ಯವಾಗಲಾರದು ಮನ ಶಕ್ತಿಯನ್ನು ಅನೇಕ ವಿಷಯ ಮಾರ್ಗಗಳಲ್ಲಿ ಬಿಡದೆ ಒಂದೇ ಒಂದು ರಾಜಮಾರ್ಗದಲ್ಲಿ ನಡೆಯಿಸಿದರೆ ಕೋರಿದುದನ್ನು ಸಾಧಿಸಬಹುದಾದ ಅಖಂಡವಾದ ಶಕ್ತಿಯುಂಟಾಗುವುದು ಕಮ್ಮಾರನು ಕೆಲಸ ಮಾಡುವುದು, ಮೋಟಾರು ನಡೆಯಿಸುವವನು ಮೋಟಾರನ್ನು ನಡೆಯಿಸುವುದು, ಕುದುರೆಯ ಸವಾರನು ಸವಾರಿ ಮಾಡುವುದು, ಹಾಡುವುದು, ನಾಟ್ಯವಾಡುವುದು ಚಿತ್ರ ಬರೆವುದು, ಕವನ ಮಾಡುವುದು. ಜಲಮಲಾದಿಗಳನ್ನು ವಿಸರ್ಜಿಸುವುದೇ ಮೊದಲಾದ ಮನುಷ್ಯನು ಮಾಡುವ ಸರ್ವಕಾರ್ಯಗಳೂ ಏಕಾಗ್ರವಾದ ಮನಸ್ಸಿನಿಂದ ಆಗುವುವೇ ಹೊರತು ಮತ್ತೆ ಬೇರೆಯಲ್ಲ ಬ್ರಹ್ಮಾಂಡದಲ್ಲಿರುವ ಜಗತ್ಸಂಚಾಲನವೂ, ಸಕಲ ಸಿದ್ಧಿಗಳೂ, ಆತ್ಮಜ್ಞಾನವೂ ಕೂಡ ಏಕಾಗ್ರವಾದ ಮನಸ್ಸಿನಿಂದ ಸಾಧಿಸಲ್ಪಡುವುವು ಇದು ಹೊರತು ಮತ್ತೇತರಿಂದಲೂ ಸಾಧಿಸಲ್ಪಡಲಾರವು ಆದಕಾರಣ ಪ್ರತಿ ಮನುಷ್ಯನಲ್ಲಿರುವ ಗಮನಗುಣವನ್ನು ತಿಳಿದು ಅದನ್ನು ವೃದ್ಧಿಮಾರ್ಗಗಳನ್ನನುಸರಿಸಿ ಅಭಿವೃದ್ಧಿ ಮಾಡಿದರೆ ಮನೋವಾಂಛೆಗಳೆಲ್ಲವೂ ತೀರುವುವೇ ಹೊರತು ಇತರ ಮಾರ್ಗಗಳಲ್ಲಿ ನಮ್ಮ ಕೋರಿಕೆ ಈಡೇರದು ಜಗತ್ತಿನಲ್ಲಿರುವ ಹೊಗೆಯಗಾಡಿ, ತಂತಿಯ ಸಮಾಚಾರ, ವಿವಿಧವಾದ್ಯಧ್ವನಿಗಳೇ ಮೊದಲಾದ ಅನೇಕ ವಿಚಿತ್ರ ಕಾರ್ಯಗಳು ಏಕಾಗ್ರವಾದ ಮನಸ್ಸಿನಿಂದ ಸೃಷ್ಟಿಸಲ್ಪಟ್ಟಿರುವುವೇ ಹೊರತು ಇತರ ಪದಾರ್ಥ ಸಂಚಯದಿಂದ ಉಂಟಾಗಲಿಲ್ಲವೆಂಬುದು ವಿಚಾರಪರರಿಗೆ ಸ್ಪಷ್ಟವೇ ಅಲ್ಲವೇ! ಈ ಗಮನವು ಸರಿಯಾಗಿಲ್ಲದುದರಿಂದಲೇ ಅಲ್ಲವೆ ನಮಗೆ ಅನೇಕ ಬಾಧೆಗಳೂ, ವ್ಯಾಧಿಗಳೂ ಉಂಟಾಗುತ್ತಿರುವುವು ಶಿಶುಗಳು ಬಾಲ್ಯದಲ್ಲಿ ಪ್ರಥಮತಃ ಪ್ರಯತ್ನವಿಲ್ಲದೆಯೇ ಪ್ರಕಾಶಮಾನವಾದ ವಸ್ತುಗಳ ಮೇಲೆಯೂ, ಬಳಿಕ ತಮ್ಮ ತಾಯಿಯ ಮುಖದ ಮೇಲೆಯೂ ಗಮನವನ್ನಿಡುವುವು. ಆ ಮೇಲೆ ತಮಗೆ ಆಹಾರವನ್ನೂ, ಸಂತೋಷವನ್ನೂ ಉಂಟುಮಾಡುವ ವಸ್ತುಗಳ ಮೇಲೆ ಅವರ ಗಮನವು ಪಸರಿಸುವುದು ಹೀಗೆ ಕ್ರಮಕ್ರಮವಾಗಿ ಪ್ರಪಂಚದ ವಸ್ತುಗಳ ಮೇಲೆ ಮನಃಪೂರ್ವಕವಾದ ಗಮನವು ಸುಖಸಾಧಕವಾದ ನೀತಿಗಳಲ್ಲಿಯೂ, ಸತ್ಕಾರ್ಯಗಳಲ್ಲಿಯೂ ನಿಂತಲ್ಲಿ ಮನುಷ್ಯನು ನೀತಿಪರನಾಗುವನು ಇಂತಹ ಸನ್ಮಾರ್ಗದಲ್ಲಿ ಮನಃಪೂರ್ವಕವಾಗಿ ನಡೆದರೆ ನಾವು ಸದ್ಗುಣಸಂಪನ್ನರಾಗಿ ಧಾರ್ಮಿಕರಾಗುವುದಲ್ಲದೆ ಆತ್ಮಜ್ಞಾನವೂ ಕೂಡ ವೃದ್ಧಿಯಾಗುವುದು ಹೀಗೆ ಸರ್ವಾಂತರ್ಯಾಮಿಯಾದ ಪರಮಾತ್ಮನ ಮೇಲೆ ಉತ್ತಮವಾದ ಗಮನವಿಟ್ಟರೆ ಉತ್ತಮವಾದ ಜ್ಞಾನವು ವೃದ್ಧಿಯಾಗದಿದ್ದೀತೆ? ಈ ಜ್ಞಾನದಿಂದ ಅಜ್ಞಾನ ಮಾಯಾಬಂಧಗಳು ತೊಲಗಿ ಅಪಾರವಾದ ಸುಖಪ್ರವೃತ್ತಿ ಪ್ರಾಪ್ತಿಯಾಗುವುದು ಈ ಅಖಂಡಾನಂದವೇ ಆತ್ಮಜ್ಞಾನವು ಅಥವಾ ದೈವಪ್ರಜ್ಞೆಯು ಈ ಕಾಲದಲ್ಲಿ ಮನುಷ್ಯನಿಗೆ ಉಂಟಾಗಿರುವ ಅಭಿವೃದ್ಧಿ, ನಾಗರಿಕತೆ, ಪ್ರಬಲತ್ವ, ಬುದ್ಧಿಕುಶಲತೆ, ಇಹ ಸುಖಸಾಧನಗಳು-ಇವೆಲ್ಲವೂ ಏಕಾಗ್ರ ಚಿತ್ತಜನ್ಯ ಫಲಗಳೇ ಹೊರತು ಬೇರೆಯಲ್ಲವು

"ಒಬ್ಬನ ಜೀವನವು ಅಮೋಘವಾಗುವುದು ಏಕಾಗ್ರತೆಯಿಂದ ಚಂಚಲ ಬುದ್ಧಿಯೇ ಆಪತ್ತು ರಾಜ್ಯಪಾಲನೆಯಲ್ಲಿಯೂ, ರಣದಲ್ಲಿಯೂ, ವ್ಯಾಪಾರದಲ್ಲಿಯೂ ಸರ್ವ ವ್ಯವಹಾರದಲ್ಲಿಯೂ ಜಯಕ್ಕೆ ಕಾರಣವಾದ ರಹಸ್ಯವು ಏಕಾಗ್ರತೆಯೇ" ಎಂದು ಒಬ್ಬ ತತ್ವವೇತ್ತರು ಹೇಳುವರು

ಆಹ! ಸರ್ವವನ್ನೂ ಲಭಿಸುವಂತೆ ಮಾಡಿಕೊಳ್ಳಲು ಇಂತಹ ಸುಲಭೋಪಾಯವು ನಮ್ಮಲ್ಲಿಯೇ ಇರುವಾಗ ಇದನ್ನು ತಿಳಿಯದೆ ನಮಗೆ ಅವುದೋ ಒಂದು ಬಾಹ್ಯ ಕಾರಣದಿಂದ ಸುಖದುಃಖಗಳು ಪ್ರಾಪ್ತವಾಗುವುವೆಂದು ಎಣಿಸುವುದು ಎಷ್ಟು ಮೂಢತ್ವವೋ ತಿಳಿಯದು ಈ ಧರ್ಮ ಸೂಕ್ಷ್ಮವನ್ನು ಗ್ರಹಿಸಿ ಮನಸ್ಸನ್ನು ಒಂದೇ ಮಾರ್ಗದಲ್ಲಿ ಪ್ರವರ್ತಿಸುವಂತೆ ಮಾಡಿದರೆ ಏಕಾಗ್ರತೆಯೆನಿಸಿಕೊಳ್ಳುವುದು ಇದನ್ನೇ ಧಾರಣವೆನ್ನುವರು ಧಾರಣವೆಂದರೆ, ಮನಸ್ಸು ಅನೇಕ ರೂಪಗಳನ್ನು ವಹಿಸದೆ ಅವುದೋ ಒಂದು ಪದಾರ್ಥವನ್ನು ಮಾತ್ರ ಗ್ರಹಿಸುವಿಕೆಯೆಂದು ಪತಂಜಲಿ ಋಷಿವರ್ಯರು ಹೇಳಿರುವರು. ಬಾಹ್ಯಾಂತರ ವಿಷಯಗಳ ಸ್ವಾಧೀನವು ಈ ಏಕಾಗ್ರತೆಯಿಂದುಂಟಾಗುವುದು ಕ್ರಮಕ್ರಮವಾಗಿ ಮನಸ್ಸಿನ ಚಲನಸ್ವಭಾವವು ಕಡಮೆಯಾಗುವಂತೆ ಮಾಡಿ ಒಂದು ಪದಾರ್ಥದ ಮೇಲೆಯೇ ಮನಸ್ಸನ್ನು ನಿಲ್ಲಿಸುವಿಕೆಯೇ ಧಾರಣವೆನ್ನಲ್ಪಡುವುದು. ಇಂತಹ ಏಕಾಗ್ರತೆಯ ಫಲವು ಅದಕ್ಕೆ ವಿಷಯವಾದ ಪದಾರ್ಥವನ್ನನುಸರಿಸಿರುವುದು ತನಗೆ ಲಭ್ಯವಾಗಬೇಕೆಂದು ಕೋರುವುದನ್ನು ವಿಶದವಾಗಿ ತಿಳಿಯುವಿಕೆ, ತನ್ನಲ್ಲಿ ನಂಬುಗೆ, ದೃಢವಾದ ಏಕಾಗ್ರತೆಗೆ ವಿಷಯವಾದ ಪದಾರ್ಥ ವಿವೇಕವೂ ಮತ್ತು ಪ್ರತಿಜ್ಞಾ ಸಾಹಸವು ಉಂಟಾಗಿರುವಿಕೆ, ಇವುಗಳು ಏಕಾಗ್ರತೆಗೆ ಬೇಕಾದ

(ಕಡೆಯ ಪುಟವನ್ನು ನೋಡಿ

ಪಂಚಾಚಾರ್ಯಪ್ರಭಾ.

೧೯೪೩ನೆಯ ಆಗಸ್ಟ್ ತಾ ೨ನೆಯ ಸೋಮವಾರ

ನವೀನವಿದ್ಯಾಭ್ಯಾಸದ ಪರಿಣಾಮ.

ಈಗಿನ ವಿದ್ಯಾಭ್ಯಾಸಕ್ರಮದಿಂದ ವಿದ್ಯಾರ್ಥಿಗಳ ಹೃದಯಕ್ಷೇತ್ರದಲ್ಲಿ ಧರ್ಮಬೀಜವು ಒಣಗುತ್ತಹೋಗಲುಪಕ್ರಮಿಸಿರುತ್ತದೆ. ಹಿಂದಿನ ವಿದ್ಯಾಭ್ಯಾಸಕ್ರಮವು ಎಂಥ ನಾಸ್ತಿಕಸ್ವಭಾವವುಳ್ಳ ವಿದ್ಯಾರ್ಥಿಗಳನ್ನಾದರೂ ಆಸ್ತಿಕರನ್ನಾಗಿ ಮಾಡುತ್ತಿತ್ತು. ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ಧರ್ಮಾಸಕ್ತರೂ ಆಸ್ತಿಕರೂ ಆಗುತ್ತ ಬರುವರೋ ಅಷ್ಟಷ್ಟು ಧರ್ಮವು ಪ್ರಪಂಚದಲ್ಲಿ ಹರಡಲು ಅವಕಾಶವಾಗುವುದು. ಈಗಿನ ವಿದ್ಯಾರ್ಥಿಗಳಲ್ಲಿ ಅನೇಕರು ತಮ್ಮ ಆಂಗ್ಲಭಾಷೆಯನ್ನು ಅಲ್ಪಸ್ವಲ್ಪ ಕಲಿತಮಾತ್ರದಿಂದಲೇ ತಮ್ಮ ನಡೆನುಡಿಗಳಲ್ಲಿ [illegible] ವರಾಗಿ ಅದರಲ್ಲೇನಿದೆ? ಇದರಲ್ಲೇನಿದೆ? ಎಂದು ಸ್ವೇಚ್ಛೆಯಾಗಿ ಮಾತನಾಡುತ್ತ ಯಾರ [illegible] ಗುರುಪೂಜೆ, ಮಾತೃಪೂಜೆ, ಪಿತೃಪೂಜೆ ಮೊದಲಾದ ಕಾರ್ಯಗಳನ್ನು ಮಾಡುತ್ತಿಲ್ಲ. ಅವರನ್ನು ನೋಡಿ ಇತರರೂ ಹಳೆತರಹದ ಮನುಷ್ಯರೆಂದು ಹಾಸ್ಯಮಾಡತೊಡಗುವರು. ಈ ತರನಾದ ಬದಲಾವಣೆ ನಮ್ಮ ಭಾರತವಿದ್ಯಾರ್ಥಿಗಳ ಹೃದಯದಲ್ಲುಂಟಾಗಲು ಕಾರಣವು ಈಗಿನ ಅಭ್ಯಾಸಕ್ರಮವೇ ಮುಖ್ಯ ಕಾರಣವಾಗಿದೆ. ಹೀಗೆ ವಿದ್ಯಾರ್ಥಿಗಳೆಲ್ಲರೂ [illegible] ಈ ವಿಧವಾದ ನಾಸ್ತಿಕಭಾವವನ್ನು ವಹಿಸುತ್ತ ಬಂದರೆ, ಭಾರತಧರ್ಮವು [illegible] ದಲ್ಲಿ ಸಂಶಯವಿಲ್ಲ. ಧರ್ಮವೃಕ್ಷವು ಪ್ರಪಂಚದಲ್ಲಿ ಅಚ್ಚಳಿಯದಂತೆ ಉಳಿಯಬೇಕಾದರೆ ನಮ್ಮ [illegible] ಕಾರಣೀಭೂತರಾಗಿದ್ದಾರೆ. ನವ್ಯವಿದ್ಯಾರ್ಥಿಗಳು ನಮ್ಮ [illegible] ವೃದು? ನಮ್ಮ [illegible] ವಲ್ಲಿ? ನಮ್ಮ ಹಿರಿಯರ ನಡೆನುಡಿಗಳು ಸ್ವಭಾವಸಂಪನ್ನವು? ನಮ್ಮ ಧರ್ಮವು ಏಕೆ? ಈ ಧರ್ಮವನ್ನನುಸರಿಸುವುದರಿಂದಾಗುವ ಫಲವೇನು? ನಾವು ನಮ್ಮ ಹಿರಿಯರ ಕರ್ಮವಿಚಾರಗಳನ್ನು ಮಾಡದೆಯೂ, ಅನುಷ್ಠಿಸದೆಯೂ ಇದ್ದರೆ ಅವರಿಂದಾಗುವ ಫಲವೇನಾದರೂ ಉಂಟೇ? ಎಂದು ಪ್ರತಿಕ್ಷಣವೂ ಪರ್ಯಾಲೋಚಿಸುತ್ತಿರಬೇಕು. ಬಾಲ್ಯದಶೆಯಲ್ಲಿ ವಿದ್ಯಾರ್ಥಿಗಳು ಇಹಪರಸುಖಸಾಧಕವಾದ ಧರ್ಮಶಿಕ್ಷಣವನ್ನು ಹೊಂದದೆ ತಮ್ಮ ಅಮೂಲ್ಯವಾದ ಬಾಲ್ಯವೆಲ್ಲವನ್ನೂ ಬಾಹ್ಯಾಡಂಬರದಲ್ಲಿಯೇ ಕಳೆದರೆ ಮುಂದೆ ಅವರ ಡೊಂಕಾದ ಮನೋಭಾವವನ್ನು ತಿದ್ದುವುದೇ ಕಷ್ಟವಾಗಿ ಪರಿಣಮಿಸುತ್ತದೆ. ವಿದ್ಯಾರ್ಥಿಗಳು ಈಗಿನಿಂದಲೇ ತಮ್ಮ ವಿದ್ಯಾಭ್ಯಾಸದ ಜತೆಗೆ ಬ್ರಹ್ಮಚರ್ಯಪಾಲನಕ್ರಮವನ್ನು ಕಲಿಯಬೇಕು. ಇಂದ್ರಿಯನಿಗ್ರಹವೇ ಬ್ರಹ್ಮಚರ್ಯವೆನಿಸುತ್ತದೆ. ಇಂಥ ಬ್ರಹ್ಮಚರ್ಯವನ್ನು ಕಾಪಾಡದೆ ಕಲಿಯಲ್ಪಡುವ ವಿದ್ಯೆಯಾದರೂ, ತೂತುಬಿದ್ದ ಮಡಿಕೆಯೊಳಗೆ ಹಾಕಿದ ನೀರಿನಂತೆ ವ್ಯರ್ಥವಾಗುತ್ತದೆ.

ಹಿಂದಿನಕಾಲದಲ್ಲಿ ನಡೆಯುತ್ತಿದ್ದ ವಿದ್ಯಾಭ್ಯಾಸಕಾಲದಲ್ಲಿ ವಿದ್ಯಾರ್ಥಿಗಳು ಇಂದ್ರಿಯಗಳನ್ನು ಬಹಳಮಟ್ಟಿಗೆ ತಮ್ಮ ಹತೋಟಿಯಲ್ಲಿಟ್ಟುಕೊಂಡು ಅಭ್ಯಾಸಮಾಡುತ್ತಲಿದ್ದುದರಿಂದ ದೃಢಕಾಯರೂ, ಪವಿತ್ರಾತ್ಮರೂ, ಪರಮಾಸ್ತಿಕರೂ ಆಗುತ್ತಿದ್ದರು. ಈಗ ನಡೆಯುತ್ತಿರುವ ವಿದ್ಯಾಭ್ಯಾಸಕ್ರಮದಲ್ಲಿ ವಿದ್ಯಾರ್ಥಿಗಳ ಆತ್ಮನು ಇಂದ್ರಿಯಗಳಿಗಧೀನನಾಗಿರುವನಲ್ಲದೆ ಇಂದ್ರಿಯಗಳು ಆತ್ಮನ ಅಧೀನಗಳಾಗಿರುವುದಿಲ್ಲ. ಹಿಂದಿನಕಾಲದ ಪಾಠಶಾಲೆಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿಗಳು ತಮ್ಮ ವಿದ್ಯಾಭ್ಯಾಸವು ಪೂರ್ಣವಾಗುವವರೆಗೂ ಮನಶ್ಚಾಂಚಲ್ಯಗೊಳಿಸುವ ಪ್ರಾಪಂಚಿಕವ್ಯವಹಾರದಲ್ಲಿ ಪ್ರವೃತ್ತರಾಗುತ್ತಿರಲಿಲ್ಲ. ವಿದ್ಯಾಭ್ಯಾಸವೆಂದರೆ, ಬ್ರಹ್ಮಚರ್ಯದಲ್ಲಿ ಮಾಡುತ್ತಿರುವ ಒಂದು ವಿಧವಾದ ಕಠಿನತರವಾದ ತಪಸ್ಸಾಗಿಯೇ ಪರಿಣಮಿಸುತ್ತಿತ್ತು. ಹೀಗೆ ಪರಿಶುದ್ಧವೃತ್ತಿಯಿಂದ ವಿದ್ಯಾಭ್ಯಾಸಮಾಡುತ್ತಿದ್ದುದರಿಂದ ಮುಂದೆ ಅವರು ಮಹಾಬಲಿಷ್ಠರಾಗಿಯೂ, ಸಾತ್ವಿಕಗುಣಿಗಳಾಗಿಯೂ, ದೈವಭಕ್ತಿಯುಳ್ಳವರಾಗಿಯೂ ಆಗುತ್ತಿದ್ದರು. ಈಗಿನ ಕಾಲದಲ್ಲಿ ವಿದ್ಯಾಭ್ಯಾಸಮಾಡುತ್ತಲಿರುವಾಗಲೇ ಅನೇಕ ವಿಧವಾದ ವಿಷಯಾಸಕ್ತಿಗಳಿಂದ ಚಂಚಲಸ್ವಭಾವವುಳ್ಳವರಾಗಿ ಬುದ್ಧಿಬಲವಾಗಲಿ, ಮನೋಬಲವಾಗಲಿ, ಆತ್ಮಬಲವಾಗಲಿ, ದೇಹಬಲವಾಗಲಿ ಎಲ್ಲವೂ ಅವರಲ್ಲಿ [illegible] ಹೋಗುತ್ತದೆ. ವಿದೇಶೀಯವಿದ್ಯಾಸಂಸ್ಕಾರವು ಬಗೆಬಗೆಯಾಗಿ ವ್ಯಾಪಿಸಿ ಸ್ವದೇಶ ಚಾರಸಂಸ್ಕಾರವು ನಶ್ಯೋನ್ಮುಖವಾಗುತ್ತ ವಿದೇಶೀಯರಂತೆ ತಾವೂ ನಟಿಸುತ್ತಿರುವರು. ವೇದಶಾಸ್ತ್ರಪುರಾಣಗಳಲ್ಲಿ ನಂಬಿಕೆಯೂ ಗುರುಹಿರಿಯರಲ್ಲಿ ಭಕ್ತಿಗೌರವ ಕಡಿಮೆಯಾಗುತ್ತ ಬಂದವು. "[illegible] ದೋಷಗುಣಾ ಜನಂತಿ" ಎಂಬಂತೆ ಈಗಿನ ವಿದ್ಯಾಸಂಸರ್ಗಾನುಸಾರವಾಗಿ ಬುದ್ಧಿಯು ವಿಪರೀತವಾಗುತ್ತ ನಡೆದಿದೆ. ನಮ್ಮ ನಮ್ಮ ಮತಧರ್ಮಗಳನ್ನು ಯಾರಾದರೂ ಶಾಸ್ತ್ರದೃಷ್ಟಿಯಿಂದ ಹೇಳುತ್ತಿದ್ದರೆ ಅದಕ್ಕೆ ಗಮನಕೊಡುವುದೇ ಇಲ್ಲ. ಹೀಗೆ ಮುಂದಿನ ಧರ್ಮವೃಕ್ಷಾಂಕುರವೆನಿಸಿದ ವಿದ್ಯಾರ್ಥಿಗಳ ಹೃದಯವು ಇಷ್ಟು ಸ್ವಧರ್ಮಶೂನ್ಯವಾಗಿರುವಲ್ಲಿ ಸನಾತನಧರ್ಮಾಭಿಮಾನಿಗಳಾದ ಅವರವರ ತಂದೆತಾಯಿಗಳು ಧರ್ಮಾಭಿವೃದ್ಧಿಗೆಂದು ಹತ್ತಿರುವ ಮಕ್ಕಳಿಂದ ಅವರ ಧರ್ಮಾಭಿವೃದ್ಧಿಯು ಪರಿಣಮಿಸುತ್ತಿರುವುದು ವಿಷಾದಾಸ್ಪದವೇ ಸರಿ. ಆದ್ದರಿಂದ ವಿದ್ಯಾಭ್ಯಾಸಕ್ತರಾದ ಬಾಲಕರು ತಮ್ಮ ತಂದೆತಾಯಿಗಳು ಅನುಸರಿಸಿದ [illegible] ಮತಧರ್ಮಕ್ಕೆ [illegible] ಐಹಿಕಸೌಖ್ಯಸಾಧಕವಾದ ವಿದ್ಯಾಭ್ಯಾಸದಲ್ಲಿ ನಿರತರಾಗುತ್ತ ಗುರುಹಿರಿಯರಲ್ಲಿ ನಂಬಿಕೆಯುಳ್ಳವರಾಗಿ ಆಚಾರ್ಯರು ನಡೆದುಬಂದ ವೇದಸಮ್ಮತವಾದ ಸನಾತನಧರ್ಮದಲ್ಲಿ ದೃಢತರವಾದ ನಂಬಿಕೆಯು ಹುಟ್ಟುವಂತೆ ಈಶ್ವರನು ಸಕಲವಿದ್ಯಾರ್ಥಿಗಳ ಹೃದಯದಲ್ಲಿ ಸದ್ಬುದ್ಧಿಯನ್ನುಂಟುಮಾಡಲೆಂದು ಕೋರುತ್ತೇನೆ.

ಯುದ್ಧವಾರ್ತೆ.

ಜರ್ಮನರ ಸೇನೆಗಳು ಬರುತ್ತಿವೆ

ಅಧಿಕ ಸಂಖ್ಯೆಯಲ್ಲಿ ಜರ್ಮನರ ಸೇನೆಗಳು ಬ್ರೆನ್ನರ್ ಕಣಿವೆಯ ಮೂಲಕ ಉತ್ತರ ಇಟಲಿಗೆ ಬರುತ್ತಿವೆಯೆಂದು ತಟಸ್ಥರಾಷ್ಟ್ರಗಳ ವರದಿಯಿಂದ ತಿಳಿದುಬಂದಿದೆ

೬೦,೦೦೦ ಯೋಧರ ಕೈಸೆರೆ

ಸಿಸಲಿಯಲ್ಲಿ ಮತ್ತೆರಡು ಮುಖ್ಯ ಸ್ಥಳಗಳು ಮಿತ್ರವಶವಾದವು ಸುಮಾರು ೬೦ ೭೦ ಸಾವಿರಗಳಿಗೆ ಮೇಲ್ಪಟ್ಟು ಶತ್ರುವರ್ಗದ ಯೋಧರು ಕೈಸೆರೆಯಾಗಿದ್ದಾರೆ ಯೆಂದು ಹೇಳಲಾಗಿದೆ

ಜರ್ಮನ್ ಸೇನೆಗಳು ಹಿಂದಕ್ಕೆ ಸಾಗುತ್ತಿವೆ

ಸಿಸಲಿ, ದಕ್ಷಿಣ ಇಟಲಿಗಳಿಂದ ಜರ್ಮನ್ ಸೇನೆಗಳು ಹಿಂದಕ್ಕೆ ಹೋಗಲು ಅವಕಾಶ ಕೊಟ್ಟುದೇ ಶಾಂತಿಸಂಧಾನ ಪ್ರಯತ್ನವು ತಡವಾಗಲು ಕಾರಣವೆಂದೂ, ಈಗಾಗಲೇ ಜರ್ಮನರ ಸೇನೆಗಳು ಹಿಂದಕ್ಕೆ ಹೋಗುತ್ತಿವೆ ಯೆಂದೂ ಹೇಳಲಾಗಿದೆ.

ಇಟಲಿ ಸರ್ಕಾರದ ಮನೋಭಾವ

ನೂತನ ಸರ್ಕಾರದ ವಿಚಾರವಾಗಿ ರೋಮ್ ರೇಡಿಯೊ ವ್ಯಾಖ್ಯಾನ ಮಾಡುತ್ತ "ಅದು ಯಾವ ರಾಜಕೀಯ ಪಕ್ಷದ ವಾಸನೆಗೂ ಅಂಟಿಕೊಂಡಿಲ್ಲ, ಇಟಲಿಯನ್ನು ಈ ಪರ್ವಕಾಲದಲ್ಲಿ ಉಳಿಸುವುದೇ ಅದರ ಗುರಿ ಇಟಲಿ ಜನರಿಗೆ ಸಹಾಯ ನೀಡಲು ಅಸಹಾಯ ಸ್ಥಿತಿಯುಳ್ಳಿದ್ದ ಫೇಸಿಸ್ಟ್ ನೀತಿಯನ್ನು ಶಿಕ್ಷಿಸಲಾಗಿದೆ" ಎಂದು ಹೇಳುತ್ತಿದೆ

ಜರ್ಮನರ ಪ್ರಯತ್ನ

ಏನಾದರೂ ಮಾಡಿ ಇಟಲಿಯು ಸಂಗ್ರಾಮ ರಂಗದಿಂದ ವಿಮುಖವಾಗದಂತೆ ಮಾಡಲು ಜರ್ಮನರು ತಮ್ಮ ಕೈಲಾದ ಪ್ರಯತ್ನವನ್ನೆಲ್ಲ ಮಾಡುತ್ತಿದ್ದಾರೆ. ಇಟಲಿಯು ಶಾಂತಿಗೆ ಒಪ್ಪಿದನಂತರವೂ ಸಮರರಂಗವಾಗದಂತಿರಲು ಏರ್ಪಡಿಸುವ ನಿಮಿತ್ತ ಬಡೋಗ್ಲಿಯೋರವರು ಜರ್ಮನರ ಸೇನೆಗಳನ್ನು ಇಟಲಿ ಬಿಡುವಂತೆ ಹೇಳಿದರೆಂದು ಹೇಳಲಾಗಿದೆ ಉತ್ತರ ಇಟಲಿಯ ಗಡಿನಾಡಿನಲ್ಲಿ ತಮ್ಮ ರಕ್ಷಣಾಸಾಲನ್ನು ಬಲಪಡಿಸಿಕೊಳ್ಳುವವರೆಗಾದರೂ ಇಟಲಿಯು ಶಸ್ತ್ರಾಸ್ತ್ರ ಕೆಳಗಿಡದಂತೆ ಏರ್ಪಡಿಸಲು ನಾಜಿ ಪ್ರಯತ್ನವಾಗುತ್ತಿರುವದಾಗಿದೆ

ಭೀಕರಕದನ ನಡೆಯುವ ಸೂಚನೆ

ಸಿಸಲಿಯಲ್ಲಿರುವ ಎಟ್ನಾ ನಗರದ ಕಡೆಯಿಂದ ಕೆನಡ ಸೇನೆಗಳು ಕೆಟೇನಿಯ ಕಡೆಗೆ ಎಟ್ನ ಜ್ವಾಲಾಮುಖಿ ಮೂಲಕ ಬರುತ್ತಿವೆ, ದಕ್ಷಿಣ ಭಾಗದಿಂದ ಬ್ರಿಟಿಷರ ೮ ನೇ ಸೇನೆ ಪ್ರಬಲ ಕಾರ್ಯಾಚರಣೆಗೆ ಸಿದ್ಧವಾಗಿದೆ! ಶತ್ರುಗಳೂ ಸಹ ಪ್ರಬಲ ಸಿದ್ಧತೆಗಳಲ್ಲಿ ತೊಡಗಿದ್ದಾರೆ ಆದಕಾರಣ ಇಲ್ಲಿರುವ ಸುಮಾರು ೬೦ ೭೦ ಮೈಲಿ ಉದ್ದವಾಗಿರುವ ಶತ್ರು ಸೇನಾ ಸಾಲಿನ ಬಳಿಯಲ್ಲಿ ಭೀಕರ ಕದನ ನಡೆಯುತ್ತಿರುವ ಸೂಚನೆಯಿದೆ ಜರ್ಮನರಿಗೆ ಸರಬರಾಯಿ ಯೋಧರು ವಿಮಾನಗಳ ಮೂಲಕ ಬರುತ್ತಿರುವರೆಂದು ಹೇಳಲಾಗಿದೆ

ಇಟಲಿಯ ಶಾಂತಿಪ್ರಯತ್ನ

ಇಟಲಿಯ ಹೊಸ ವಿದೇಶಾಂಗ ಸಚಿವರಾದ ಬ್ಯಾ ಗಾರಿಗ್ಲಿಯವರು ಇಸ್ತಾಂಬುಲ್ ನಗರದಲ್ಲಿ ತುರ್ಕಿಯ ವಿದೇಶಾಂಗ ಸಚಿವರೊಂದಿಗೆ ಮಿತ್ರವರ್ಗದೊಡನೆ ಇಟಲಿಯು ಶಾಂತಿಮಾಡಿಕೊಳ್ಳಲು ಯಾವ ಷರತ್ತುಗಳನ್ನು ಕೇಳುತ್ತವೆಯೆಂಬ ಬಗ್ಗೆ ಮಾತನಾಡುತ್ತಿರುವರೆಂದೂ ತುರ್ಕಿಯ ಅಧೀನದಲ್ಲಿರುವ ಸಮುದ್ರ ತೀರದಲ್ಲಿ ತು ವಿದೇಶಾಂಗ ಸಚಿವರೊಡನೆ ಮಾತುಕತೆ ನಡೆಸಿದರೆಂದೂ ಮಾರ್ಷಲ್ ಬಡೋಗ್ಲಿಯೋರವರು ಇಟಲಿ ಸಾರ್ವಜನಿಕ ಮುಖಂಡರಲ್ಲಿ ಕೆಲವರನ್ನು ವೆಟಿಕನ್ ನಗರದಲ್ಲಿರುವ ಬ್ರಿಟಿಷ್ ಅಮೆರಿಕ ರಾಯಭಾರಿಗಳ ಬಳಿಗೆ ಕಳುಹಿಸಿ ಶಾಂತಿಗೆ ಪ್ರಯತ್ನಿಸುತ್ತಿರುವರೆಂದೂ ಇಟಲಿಯಿಂದ ಜರ್ಮ ಸೇನೆಗಳು ಸ್ವದೇಶಕ್ಕೆ ಹಿಂತಿರುಗಲು ಸಹ ಅವಕಾಶ ಕಲ್ಪಿಸಿದೆಯೆಂದೂ ಇನ್ನೇನು ಒಂದೆರಡು ದಿನಗಳಲ್ಲಿಯೇ ಇಟಲಿಯು ಸಂಗ್ರಾಮ ನಿಲ್ಲಿಸುವ ಕಾಲ ಸನ್ನಿಹಿತವಾದಂತೆ ತೋರುತ್ತಿದೆ ಎಂದು ಸ್ವಿಸ್ ರೇಡಿಯೋ ತಿಳಿಸಿದೆ

ಮುಸಲನಿ ಅಧಿಕಾರ ತ್ಯಜಿಸಿದರು

ಇಟಲಿಯ ಸರ್ವಾಧಿಕಾರಿಯಾಗಿ ಸರಿಸುಮಾರು ಕಳೆದ ೨೧ ವರ್ಷಗಳಿಂದ ಆಡಳಿತ ನಡೆಯಿಸಿದ ಸಿಞೋರ್ ಮುಸಲಿನಿಯು ತಮ್ಮ ಅಧಿಕಾರಗಳಿಗೆಲ್ಲ ರಾಜೀನಾಮೆ ಇತ್ತರು ಇಟಲಿಯ ಅರಸರಾದ ವಿಕ್ಟರ್ ಇಮ್ಯಾನ್ಯುಯಲ್‌ರವರು ಮುಸಲನಿಯ ರಾಜೀನಾಮೆಯನ್ನು ಅಂಗೀಕರಿಸಿದರೆಂದು ರೋಮ್ ರೇಡಿಯೋ ಪ್ರಕಟಿಸಿದೆ. ಮಾರ್ಷಲ್ ಬಡೋಗ್ಲಿಯೊರವರನ್ನು ಇಟಲಿ ದೊ ಗಳು ತಮ್ಮ ಸರ್ಕಾರದ ಮತ್ತು ಸೇನೆಗಳ ಪ್ರಧಾ ಅಧಿಕಾರಿಗಳಾಗಿ ನೇಮಿಸಿರುವರು. ಮುಸಲನಿಯು ಪ ಚ್ಯುತರಾದನಂತರ ಸರ್ಕಾರದ ಅಥವಾ ಇತರ ಸರ್ಕಾ ಕೆಲಸ ಕಾರ್ಯಗಳ ಅಂತ್ಯದಲ್ಲಿ ಆಗುತ್ತಿದ್ದ ಫೇಸಿಸ್ ಗೀತೆಯ ಗಾಯನವೂ ನಿಂತು, ಇಟಲಿಯ ರಾಷ್ಟ್ರಗೀತೆಯ ಗಾಯನ ನಡೆಯಲು ಆರಂಭವಾಗಿದೆ. ಮು ಲನಿಯು ಅಧಿಕಾರದಿಂದ ನಿವೃತ್ತನಾಗಿರುವುದರಿಂ ಇಟಲಿಯಲ್ಲಿ ಫೇಸಿಸ್ಟ್ ಆಡಳಿತ ಮುಕ್ತಾಯವಾ ತಾಯಿತು ಎಂದು ಲಂಡನ್ನಿನಲ್ಲಿ ಅಭಿಪ್ರಾಯಪಡಲಾಗಿದೆ ಅಮೇರಿಕವೇ ಮುಂತಾದ ಮಿತ್ರರಾಷ್ಟ್ರಗಳ ಮುಸಲನಿಯ ಅಧಿಕಾರಚ್ಯುತಿಯ ಸುದ್ದಿಯನ್ನು ಉತ್ಸಾಹದಿಂದ ಸ್ವೀಕರಿಸಲಾಗಿದೆ ಆದರೆ ಮಿತ್ರ ಅಧಿಕಾರವೃ ಗಳು ಮಾತ್ರ ಮುಸಲನಿಯ ರಾಜೀನಾಮೆ ವಿಷ ವಾಗಿ ತಮ್ಮ ಅಭಿಮತವನ್ನು ಪ್ರಕಟಪಡಿಸಿಲ್ಲ. ಜರ್ಮ

ಡಿಯೋ ಮಾತ್ರ ಮುಸಲಿನಿಯ ರಾಜೀನಾಮೆಗೆ ರೋಗ್ಯವೇ ಕಾರಣವೆಂದು ಹೇಳಿದೆಯೆಂದು ತಿಳಿ ಬಂದಿದೆ. ಒಟ್ಟಿನಲ್ಲಿ ಮುಸಲಿನಿಯ ಪದಚ್ಯುತಿಯು ಯ ರಾಜಕಾರಣದಲ್ಲಲ್ಲದೆ, ಇಡೀ ಆಕ್ಸಿಸ್ ಕ್ಕೇ ಕಳವಳವನ್ನುಂಟುಮಾಡಿದೆ. ಮುಸಲಿನಿಯು ರಾಜ್ಯಕ್ಕೆ ರಾಜಿನಾಮೆ ಕೊಟ್ಟನಂತರ ತನ್ನ ಹಳ್ಳಿಗೆ ತೆರಳಿದನೆಂದು ಹೇಳಲಾಗಿದೆ. ಆದರೆ ಆತನು ರುವನೆಂಬ ವಿಚಾರವಾಗಿ ಖಚಿತವಾದ ಸುದ್ದಿಯನ್ನು ರೂ ಹೇಳುತ್ತಿಲ್ಲ

ಟೋಕಿಯೋದಲ್ಲಿ ವಿಮಾನದಾಳಿ ರಕ್ಷಣೆ ಏರ್ಪಾಡು

ಟೋಕಿಯೋ ನಗರದಲ್ಲಿ ವಿಮಾನ ಧಾಳಿ ರಕ್ಷಣಾ ವಸ್ಥೆಯನ್ನು ಬಲಗೊಳಿಸುತ್ತಿರುವರು. ಇದಕ್ಕಾಗಿಯೇ ಶಿಕ್ಷಿತ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ನೇಮಿಸಿದ ಂದು ಹೇಳಲಾಗಿದೆ

ಜಪಾನ್ ನಿರ್ಧಾರ

ಜಪಾನ್ ವಿದೇಶಾಂಗ ಸಚಿವರು ತಮ್ಮ ಮಂತ್ರಿಮಂ ಲಕ್ಕೆ ಮುಸಲಿನಿ ಅಧಿಕಾರತ್ಯಾಗದ ವಿಚಾರವಾಗಿ ವಿವರವನ್ನು ಒದಗಿಸಿದರಂತೆ, ಮುಸಲಿನಿಯ ರಾಜೀನಾಮೆಯಿಂದ ಆಕ್ಸಿಸ್ ತ್ರಿಕೂಟ ಒಪ್ಪಂದಕ್ಕೆ ಚ್ಯುತಿಯಾಗ ದು ನಿರ್ಧಾರವಾಗಿದೆಯೆಂದೂ ಜಪಾನ್ ವಾರ್ತಾ ಪ್ರಕಟಿಸಿದೆ. ಯುದ್ಧವನ್ನು ಮುಂದುವರಿಸಿ ತಮ್ಮ 'ಗ್ರೇ ರ್ ಏಷಿಯಾ' ರಚನೆ ಪ್ರಯತ್ನಕ್ಕೆ ಸಹ ಭಂಗ ವುದಿಲ್ಲವೆಂದು ಹೇಳಲಾಗಿದೆ. ಇದೇ ವಿಚಾರವನ್ನೇ ಟಲಿಯ ಬಡೋಗ್ಲಿಯೋ ಸರಕಾರವೂ ಸಹ ತನ್ನ ಯಭಾರಿ ಮೂಲಕ ಜಪಾನಿಗೆ ತಿಳಿಸಿದೆಯಂತೆ

ಜಪಾನ್ ಯುದ್ಧ ಸಮಿತಿ ಸಭೆ

ಜನರಲ್ ಟೋಜೋರವರು ಯುದ್ಧಸಮಿತಿ ವಿಶೇಷ ಯನ್ನು ಕರೆದಿದ್ದರಂತೆ, ಆದಕ್ಕೆ ಜಪಾನಿನ ಸಿದ್ಧ ನಿಪುಣರೆನಿಸಿಕೊಂಡ ಇತರ ನಾಯಕರೂ ಬಂದಿ ರಂತೆ. ಜನರಲ್ ಟೋಜೋರವರು ಯುದ್ಧದ ಗೆಗೆ, ಜಪಾನರು ನಡೆಸುತ್ತಿರುವ ಪ್ರಯತ್ನಗಳು, ತ್ತು ಅಂತರರಾಷ್ಟ್ರೀಯ ಯುದ್ಧ ಪರಿಸ್ಥಿತಿಗಳನ್ನು ರಿಸಿದರೆಂದೂ ಮುಖ್ಯವಾಗಿ ಅವರು ಸಿಂಗಪುರವೇ ಂತಾದ ದಕ್ಷಿಣ ಪ್ರದೇಶಗಳಿಗೆ ಭೇಟಿ ಕೊಟ್ಟಿದ್ದರ ತಾಂತವನ್ನು ವಿಮರ್ಶೆ ಮಾಡುವುದೇ ಈ ಸಭೆಯ ಖ್ಯ ಉದ್ದೇಶವೆಂದೂ ನಂಬಲಾಗಿದೆ

ಡಚ್ ಅಧಿಕಾರಿಗಳ ಅಭಿಮತ

ಹಿಂದೂಸಾಗರ ಪೆಸಿಫಿಕ್ ಸಾಗರಗಳಲ್ಲಿರುವ ಡಚ್ ಕೆಗಳ ನಾಯಕರಾದ ವೈಸ್ ಅಡ್ಮಿರಲ್ ಕೊನ್ರಾಡ್ ಲ್ಫ್ರಿಕ್ ಎಂಬುವರು ಜಪಾನರ ಆಕ್ರಮಣ ಶಕ್ತಿ ನ್ನು ಕುರಿತು ಮುಚ್ಚುಮರೆಯಿಲ್ಲದೇ ಹೇಳಿದ್ದಾರೆ ರ ಅಭಿಪ್ರಾಯದ ಪ್ರಕಾರ ಮಿತ್ರ ಮನೋರಥವು ಗಮವಾಗಿ ಬೇಗ ಈಡೇರುವುದೆಂದು ನಂಬಲು ಕಾಶವಿಲ್ಲ. ಅಟ್ಟು ದ್ವೀಪವನ್ನು ಅಮೆರಿಕನರು ಕ್ರಮಿಸಿದಾಗ ನಾಲ್ಕಾರೇ ನಾಲ್ಕಾರು ಜಪಾನರು ಸೆರೆ ದುದು ಜಪಾನರ ಯೋಧಮನೋಭಾವದ ಸುಕುತಾಗಿದೆ. ಸದ್ಯದಲ್ಲಿ ಜಪಾನರ ಮುಖ್ಯ ಗ್ರಾಮ ನೌಕೆಗಳು ಎಲ್ಲಿವೆಯೆಂಬುದು ಗೊತ್ತಿಲ್ಲ ದರೂ ಒಂದಲ್ಲ ಒಂದು ದಿನ ತನ್ನ ಸರ್ವನಾಶಕ್ಕಾಗಿ ರಕ್ಕೆ ಬರಲೇಬೇಕಾಗುತ್ತದೆ ಎಂದು ಅಭಿಪ್ರಾಯ ಟ್ಟಿದ್ದಾರೆ,

ಹಸಿವಿನಿಂದ ಸಾಯುತ್ತಿದ್ದಾರೆ

ಕಲ್ಕತ್ತೆಯಲ್ಲಿ ಈಗ ಜನರು ಆಹಾರವಿಲ್ಲದೆ ಉಪ ಸ ಸಾಯುತ್ತಿರುವರೆಂದು ಕಲ್ಕತ್ತಾ ಪೌರಸಭೆಯ ವಳಿಕೆಯಿಂದ ವ್ಯಕ್ತವಾಗಿದೆ. ನಗರದ ಬೀದಿಗಳಲ್ಲಿ ವಾಸದಿಂದ ಸತ್ತವರ ಶವಗಳನ್ನು ಸಾಗಿಸುವ ವ್ಯವ ಯೂ ಅಷ್ಟು ಸಮರ್ಪಕವಾಗಿಲ್ಲವೆಂದು ವ್ಯಕ್ತವಾಗಿದೆ. ನಿಜವಾಗಿಯೂ ಈ ಸುದ್ದಿ ಹೃದಯ ವಿದ್ರಾವಕವಾದದ್ದು

ಕಲ್ಕತ್ತಾ ನಗರದ ಬೀದಿಗಳಲ್ಲಿ ಬಿದ್ದಿರುವ ಮಾನವ ಶವಗಳನ್ನು ಬೇಗ ಬೇಗ ಸಂಸ್ಕಾರಕ್ಕಾಗಿ ಸಾಗಿಸುವ ಪ್ರಶ್ನೆಯನ್ನು ಕಲ್ಕತ್ತೆಯ ಪೌರಸಭೆಯು ಪರಿಶೀಲಿಸಿತು. ಆಲ್ಡರ್‌ಮನ್‌ರವರಾದ ಶ್ರೀ ಅಹ್ಮದ್‌ರವರ ಹೇಳಿಕೆಯ ಪ್ರಕಾರ ಒಂದು ಸಂಸ್ಥೆಯವರು ಒಂದೇ ದಿನದಲ್ಲಿ ಸುಮಾರು ೨೭ ಶವಗಳನ್ನು ಸಾಗಿಸಿದರಂತೆ, ಮತ್ತೊಂದು ಸಂಸ್ಥೆಯವರೂ ಸಹ ಅದೇ ದಿನ ಅನೇಕ ಶವಗಳನ್ನು ಸಾಗಿಸಿದರಂತೆ! ಈ ಬಗ್ಗೆ ಹೆಚ್ಚಿನ ಸೌಕರ್ಯ ಹೊಂದಲು ಪೋಲೀಸ್ ಕಮಿಷನರ ಅನುಮತಿ ಪಡೆಯಲು ಸಲಹೆ ಬಂದಿದೆಯೆಂದು ಹೇಳಲಾಗಿದೆ

ಸ್ವೀಕಾರ

ಕಾರ್ವಾರ ಡಿ॥ ಸಿರಸಿಯಲ್ಲಿರುವ ಮ॥ ರಾ॥ ಬಸಪ್ಪ ಈರಬಸಪ್ಪಗೌಡ ಇವರು ಸಮಾಜೋದ್ಧಾರಕ್ಕೆ ಸಹಾಯವಾಗಲೆಂದು ಪ್ರಭಾಪೋಷಣೆಗೆ 4 ರೂಪಾಯಿಗಳನ್ನು ಸಮರ್ಪಿಸಿ ಕಳಿಸಿರುತ್ತಾರೆ

ಬಳ್ಳಾರಿ ಡಿ॥ ಹೂವಿನಹಡಗಲಿ ತಾಲೂಕು ದೇವಗೊಂಡನಹಳ್ಳಿ ಗ್ರಾಮ ನಿವಾಸಿಗಳಾದ ವೇ॥ ಕಂಚೀಕರೆ ಮಠದ ಕೊಟ್ರಯ್ಯನವರು, ತಮ್ಮ ಮನಸ್ಸಂಕಲ್ಪವು ಶ್ರೀಜಗದಾಚಾರ್ಯರ ಕೃಪೆಯಿಂದ ನೆರವೇರಿದ ಸಂತೋಷಕ್ಕಾಗಿ ಪ್ರಭಾಪೋಷಣೆಗೋಸ್ಕರ ಯರೇಹಂಚಿನಾಳು ಹಿರೇಮಠದ ವೇ॥ ರುದ್ರಯ್ಯನವರ ಸೂಚನೆಯ ಮೇರೆ ಸಮರ್ಪಿಸಿದ 2 ರೂ ಗಳು ಹೂವಿನಹಡಗಲಿ ಗುರುಸೇವಾಕಿಂಕರ ಸೊ ಗುರುಲಿಂಗಪ್ಪನವರ ದ್ವಾರಾ ತಲ್ಪಿರುತ್ತವೆ

ಚೌಡದಾನಪುರದ ಮ॥ ರಾ॥ ಬಸಪ್ಪ ಆಸಿಶೆಟ್ರು ಇವರ ಪುತ್ರ ಚಿ॥ ರಾ॥ ವಿರೂಪಾಕ್ಷಪ್ಪನೆಂಬ ವರನಿಗೆ ಚಿ॥ ಸೌ॥ ಗಂಗಮ್ಮನೆಂಬ ಕನ್ಯೆಯನ್ನು ಕೊಟ್ಟು ಹುಬ್ಬಳ್ಳಿ ಹಿರೇಮಠದಲ್ಲಿ ನಡೆದ ವಿವಾಹ ಸಮಾರಂಭದಲ್ಲಿ ಪ್ರಭಾಪೋಷಣೆಗೋಸ್ಕರ ಸಮರ್ಪಿಸಲ್ಪಟ್ಟ 1 ರೂ ಯು ವೇ॥ ಸೋಮನಾಥಯ್ಯನವರು ಹಿರೇಮಠ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಮುಂದಿನ ಅಕ್ಟೋಬರ್ ತಿಂಗಳು ರಾಜಧಾನಿಯ ಜಗನ್ಮೋಹನಭವನದಲ್ಲಿ ನಡೆಯಲಿರುವ ಮೈಸೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಮಾರಂಭದಲ್ಲಿ ತಿರುವಾಂಕೂರು ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರ್‌ರವರು ಆಗಮಿಸಿ ಪದವೀಧರರಿಗೆ ಉಪದೇಶಭಾಷಣ ಮಾಡುವರೆಂದು ಹೇಳಲಾಗಿದೆ

ಚಿಲ್ಲರ ನಾಣ್ಯಗಳನ್ನು ತಮ್ಮ ಆವಶ್ಯಕತೆಗಿಂತ ಹೆಚ್ಚಿಗೆ ಶೇಖರಿಸುವುದು ಡಿಫೆನ್ಸ್ ಶಾಸನದ ೯೦ (೨) ನಿಯಮ ಪ್ರಕಾರ ಅಪರಾಧ. ಅಂಥಹವರ ಮೇಲೆ ಬರುವ ಮೊಕದ್ದಮೆಗಳನ್ನು ಸಮ್ಮರಿ ಟ್ರಯಲ್ ಮೂಲಕ ಇತ್ಯರ್ಥಪಡಿಸಲು ಆಜ್ಞೆಯಾಗಿದೆಯೆಂದು ಮೈಸೂರು ಪ್ರಭುತ್ವ ಪ್ರಕಟನಾಧಿಕಾರಿಗಳ ಪ್ರಕಟನೆಯು ತಿಳಿಸಿದೆ. ಚಿಲ್ಲರೆಗಾಗಿ ಕಮಿಷನ್ ಪಡೆಯುವಿಕೆಯೂ ಸಹ ಈ ವಿಧಿಯಂತೆಯೇ ಅಪರಾಧವಾಗಲಿದೆಯೆಂದೂ ಆ ಪ್ರಕಟನೆ ತಿಳಿಸಿದೆ

ಗುರುಭಜನೆ ಮತ್ತು ಪುರಾಣಶ್ರವಣ

ಅರಸೀಕೆರೆ ತಾಲ್ಲೋಕು ವೃಂದಾವನಹಳ್ಳಿ ಗ್ರಾಮದ ವೀರಶೈವ ಮಂಡಲಿಯವರು ತತ್ಕಾಲದಲ್ಲಿ ಪ್ರಾಪ್ತವಾಗಿರುವ ಶುಭ ಶ್ರಾವಣ ಮಾಸದಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯರ ಪವಿತ್ರ ಭಜನೆಯನ್ನು ಮತ್ತು ಶ್ರೀ ರೇಣುಕ ವಿಜಯ ಪುರಾಣ ಶ್ರವಣವನ್ನೂ ನಡೆಸುವಂತೆ ನಿರ್ಧರಿಸಿರುವುದು ಕೇವಲ ಸಂತೋಷವಾಗಿದೆ. ಇದರಂತೆ ಪ್ರತಿ ವೀರಶೈವರು ತಮ್ಮ ತಮ್ಮ ಗ್ರಾಮಗಳಲ್ಲಿ. ಗುರುಭಜನೆಯನ್ನು ಪುರಾಣ ಶ್ರವಣವನ್ನು ನಡಸಿ ಶ್ರೀಗುರು ಕಟಾಕ್ಷಕ್ಕೆ ಪಾತ್ರರಾಗುವರೆಂದು ಆಶಿಸುತ್ತೇನೆ.

ಒರ್ವ ಗುರುಭಕ್ತ

(ನೆಯ ಪುಟದಿಂದ ಮುಂದುವರಿದುದು)

ಮುಖ್ಯ ಸಾಧನೆಗಳು ಈ ಸಾಧನೆಗಳಿದ್ದಲ್ಲಿ ಶೀಘ್ರವಾಗಿ ನಮ್ಮ ಮನೋವಾಂಛೆಗಳೆಲ್ಲವೂ ಕೈಗೂಡುವುವು

ತನ್ನನ್ನು ತಾನು ತಿಳಿಮಕೊಳ್ಳುವುದೇ ಮನುಷ್ಯನಿಗೆ ಉತ್ಕೃಷ್ಟವಾದ ಕಾರ್ಯವು. ಆದಕಾರಣ ಯೋಗಿಯಾದವನು ಪ್ರಾಪಂಚಿಕ ಸುಖಗಳಮೇಲೆ ಏಕಾಗ್ರವಾದ ಮನಸ್ಸನ್ನಿಡನು. ಕ್ಷಣಕಾಲ ತನಗೆ ದುಃಖಕರವಾದ ಪದಾರ್ಥಗಳನ್ನು ನಿವಾರಿಸಿಕೊಳ್ಳುವುದಕ್ಕೂ ಕೂಡ ಮನೋಬಲವನ್ನು ವ್ಯರ್ಥಮಾಡಿಕೊಳ್ಳನು. ಲೌಕಿಕ ಭೋಗಗಳಿಗಾಗಲಿ, ಸ್ವಪ್ರಯೋಜನಕ್ಕೆ ಬೇಕಾದ ಪದಾರ್ಥಗಳಿಗಾಗಲಿ ಮನೋಬಲವನ್ನು ವ್ಯರ್ಥವಾಗಿ ಕಳೆದುಕೊಳ್ಳದೆ ಆಶಕ್ತಿಯನ್ನು ದೊಡ್ಡ ಸಾಹಸದೊಂದಿಗೆ ಸೇರಿಸದ ಹೊರತು ಜ್ಞಾನ ಸಾಧನೆಯುಂಟಾಗಲಾರದೆಂದು ಜ್ಞಾನವೃದ್ಧರು ಹೇಳುವರು. ಪ್ರಪಂಚ ವಾಸನೆಗಳು ಜ್ಞಾನಮಾರ್ಗಕ್ಕೆ ಆತಂಕಗಳು. ಸತ್ಯಾಸತ್ಯಗಳು ನಿತ್ಯಾನಿತ್ಯಗಳು, ಪುರುಷ ಪ್ರಕೃತಿಗಳು ಇವುಗಳ ವಿವೇಕವುಳ್ಳವನೇ ನಿಜವಾದ ಯೋಗಿ. ಇಂತಹನು ಪರಮಪದವಿಯನ್ನು ಸೇರಲು ಯತ್ನಿಸುವನಾದ ಕಾರಣ ಈತನ ಏಕಾಗ್ರತೆಯೇ ಸಮಾಧಿ ಯೆನ್ನಿಸಿಕೊಳ್ಳುವುದು. ಕ್ಷಿಪ್ತ, ಮೂಢ, ವಿಕ್ಷಿಪ್ತ, ಏಕಾಗ್ರ, ನಿರುದ್ಧ ವೆಂಬದಾಗಿ ಮನೋಗತಿಯು ಐದು ವಿಧವಾಗಿರುವುದೆಂದು ಹೇಳುವರು

(೧) ಕ್ಷಿಪ್ತವೆಂದರೆ— ಚಲಿಸುವುದು ಮನಶ್ಚಾಂಚಲ್ಯ ಹೆಚ್ಚಾಗಿರುವುದು. ಇಂತಹ ಚಿತ್ತಚಾಂಚಲ್ಯವುಳ್ಳವರಿಗೆ ಚಿತ್ತವನ್ನು ನಿಗ್ರಹಿಸಿರಿ ಎಂದು ಹೇಳಿದರೆ ಅವುದೋ ಪ್ರಮಾದವುಂಟಾಗುವುದೆಂದೂ, ಮರಣವುಂಟಾಗುವುದೆಂದೂ, ನಿದ್ರೆಯುಂಟಾಗುವುದೆಂದೂ ಹೇಳಿ ಉದಾಸೀನ ಭಾವವನ್ನು ವಹಿಸುವರೇ ಹೊರತು ಶ್ರೇಯಸ್ಕರವೆಂದು ಎಣಿಸಲಾರರು

(೨) ಮೂಢವೆಂದರೆ—ಮನೋವೈಕಲ್ಯವು ಬುದ್ಧಿ ಕೇವಲ ಮಬ್ಬಾಗಿಯೂ, ಮಂದವಾಗಿಯೂ ಇರುವಿಕೆ

(೩) ವಿಕ್ಷಿಪ್ತವೆಂದರೆ— ಕೆಲವುಕಾಲ ಕ್ಷಿಪ್ತತ್ವವನ್ನೂ ಕೆಲವುಕಾಲ ಮೂಢತ್ವವನ್ನೂ ಹೊಂದಿರುವ ಚಿತ್ತವು

(೪) ಏಕಾಗ್ರವೆಂದರೆ— ತೈಲಧಾರೆಯಂತೆ ಒಂದರಲ್ಲಿಯೇ ಮನಸ್ಸನ್ನಿಡುವುದು

(೫) ನಿರುದ್ಧವೆಂದರೆ—ನಿಯಮಿಸಲ್ಪಟ್ಟ ಮನಸ್ಸುಂಟಾಗಿರುವಿಕೆ

ಜ್ಞಾನಿಗೆ ಏಕಾಗ್ರವಾದ ನಿರುದ್ಧವಾದ ಮನಸ್ಸೇ ಸಾಧನವು. ಮನಸ್ಸೇಕಾಗ್ರವಾದರೆ ಪದಾರ್ಥಗಳ ನಿಜಸ್ವರೂಪಗಳು ತಿಳಿಯುವುವು. ದುಃಖವನ್ನುಂಟುಮಾಡುವ ಮನೋವಿಕಾರಗಳು ಕ್ಷಯಿಸುವುವು. ಇಂದ್ರಿಯ ಸುಖಗಳೂ, ಲೌಕಿಕ ಆಶಾಪಾಶಗಳೂ ತೊಲಗುವುವು. ಸಮಾಧಾನವು ವೃದ್ಧಿಯಾಗುವುದು. ಅನಂತರ ಮನಸ್ಸು ನಿರುದ್ಧ ಸ್ಥಿತಿಯನ್ನು ಹೊಂದಿ ನಿಗ್ರಹವಾಗುವುದು. ಆದಕಾರಣ ಮುಮುಕ್ಷುವು ಈ ಎರಡು ಸ್ಥಿತಿಗಳನ್ನೂ ವೃದ್ಧಿಮಾಡಿಕೊಳ್ಳಬೇಕು

ಮನಸ್ಸು ಸಂಪೂರ್ಣವಾಗಿ ನಿಗ್ರಹವಾಗದ ಹೊರತು ಆತ್ಮ ಸ್ಫುರಣಾನಂದವು ಗೋಚರವಾಗದು. ಕಡಮೆಯ ಸ್ಥಿತಿಗಳಲ್ಲಿರುವ ನಾವು ಮನೋವಿಕಾರಗಳನ್ನು ನಮ್ಮವೆಂದು ಅಭಿಮಾನಿಸುತ್ತಿರುವೆವು. ಈ ಅಭಿಮಾನವೇ ಸಂಸಾರಬಂಧವು ಮತ್ತು ದುಃಖಕ್ಕೂ ಕಾರಣವಾಗುವುದು. ನಾವು ಸುಖ ದುಃಖಗಳ ಆಕರ್ಷಣೆಗೆ ಒಳಬೀಳದಂತಹ ಯೋಗ್ಯತೆ ಯುಳ್ಳವರಾಗಿದ್ದರೂ ಅವುಗಳಲ್ಲಿರುವ ಅಭಿಮಾನದಿಂದ ಆ ಸುಖ ದುಃಖಗಳಿಗೆ ವಶರಾಗಿ ಅವುಗಳ ಫಲವನ್ನು ಅನುಭವಿಸುತ್ತಿರುವೆವು. ವಾಚಕರೇ! ಮೊದಲು ಅಭಿಮಾನವಂ ಬಿಡಬೇಕು. ಏಕೆಂದರೆ, ಅದು ಆತ್ಮಜ್ಞಾನ ಮಹೋದ್ಯಾನದಲ್ಲಿ ಕಂಟಕಾಕೀರ್ಣವಾದ ಸ್ಥೂಲವೃಕ್ಷ ಸ್ವರೂಪವಾಗಿರುವುದು. ಇದನ್ನು ಜ್ಞಾನರೂಪವಾದ ಕುಠಾರದಿಂದ ಮೂಲೋತ್ಪಾಟನ ಮಾಡಿಬಿಟ್ಟರೆ ಆಗ ಆತ್ಮ ಸಾಕ್ಷಾತ್ಕಾರವಾಗುವುದು.

ಬೆಂಕಿಯಲ್ಲಿ ಕಾದ ಕಬ್ಬಿಣದ ಮುದ್ದೆಯು ಕೆಂಪಗೂ ಬಿಸಿಯಾಗಿಯೂ ಇರುವುದಲ್ಲವೆ? ಅವಿವೇಕಿಯು ಅದನ್ನು ನೋಡಿ ಕೆಂಡವೆಂದು ಭಾವಿಸುವನು.

ಹಾಗೆಯೇ ಮನೋಬುದ್ಧಿಗಳ ಮೂಲಕ ದೇಹದ ಪ್ರತ್ಯಂಗಗಳಲ್ಲಿ ಪ್ರಜ್ಞೆ ಕಾಣಿಸಿಕೊಳ್ಳುವ ಅವಿವೇಕಿಯು ಆ ಅಂಗಗಳನ್ನೇ ಪ್ರಜ್ಞೆಯೆಂದು ಭಾವಿಸುವನು. ಕಬ್ಬಿಣದಿಂದ ಅಗ್ನಿಯನ್ನು ಬೇರೆಮಾಡಲು ಅದರ ಕಪ್ಪು (ಬೂದಿಯ) ವರ್ಣವು ಗೋಚರವಾಗುವಂತೆ ಸಮಾಧಿಯಲ್ಲಿ ದೇಹ ಮನೋಬುದ್ಧಿಗಳಿಂದ ಪ್ರಜ್ಞೆಯನ್ನು ಬೇರೆ ಮಾಡಲು ಈ ಮನೋಬುದ್ಧಿಗಳ ಅನುಪಯೋಗವು ನಮಗೆ ಸ್ಪಷ್ಟವಾಗಿ ತಿಳಿಯುವುದು. ಅಲ್ಲದೆ ಜ್ಞಾನಿಗಳು "ಕಬ್ಬಿಣ ಸಂಗದ ಅಗ್ನಿಗೆ ಪೆಟ್ಟಿಯು ಹತಿಯಲ್ಲದೆ ಸಂತತಲಾಕ್ಷ್ತ ಕಾಷ್ಠದ ವಹ್ನಿಗೆ ಸಂಬಂಧಿ ನಿರ್ಭೇದದಿ ಯಿರಲು ಅಂಟುವೆ ಸುಖದುಃಖಂಗಳ್ [illegible]" ಹೇಳಿರುವರು.

ಒಂದು ಸ್ಫಟಿಕ ಶಿಲೆಯ ಸಮೀಪದಲ್ಲಿ ಅಥವಾ ಕೊಂಡು ಬಣ್ಣದ ವಸ್ತುವನ್ನಿಟ್ಟರೆ ಸ್ಫಟಿಕದಲ್ಲಿ ಆ ರಂಗು ಇದ್ದಹಾಗೆ ಕಾಣಿಸುವುದು. ಆ ವಸ್ತುವನ್ನು ದೂರ ತೊಲಗಿಸಿದರೆ ಸ್ಫಟಿಕ ಶಿಲೆಯಲ್ಲಿ ಆ ರಂಗು ಕಾಣಿಸದು. ಹೀಗೆ ವಸ್ತು ಸ್ವಚ್ಛವಿರುವ ಸದ್ವಸ್ತು ಆತ್ಮನಲ್ಲಿಯೂ ಇದು ಇರುವಂತೆ ಕಾಣುವುದು. ನಿತ್ಯಾನಿತ್ಯ ವಿವೇಕದ ಬಲದಿಂದ ಆತ್ಮನ ಶುದ್ಧಸ್ವರೂಪವು ಗೋಚರವಾಗದು.

ಮನೋವೈಕಲ್ಯವನ್ನು ಬಿಟ್ಟು ಕ್ಷಣವಾದರೂ ಇಲ್ಲದಂತೆ ಮಾಡಿಕೊಂಡರೆ ಚಿತ್ತವು ಆ ಕ್ಷಣವೇ ಗೋಚರವಾಗುವುದು. ಈ ಅನುಭವವು ಸಿದ್ಧಾಂತವಾಗಬೇಕಾದರೆ ನಿರಂತರವಾಗಿ ಏಕಾಗ್ರತೆ ಮತ್ತು ಧ್ಯಾನಗಳು ಅವಶ್ಯಕಗಳು. ಇವುಗಳ ವಿಧಾನಗಳನ್ನೂ ಕಲಿಯಲು ಏರ್ಪಟ್ಟಿರುವ ಮಾರ್ಗಗಳನ್ನೂ ಗುರು ಮುಖಾಂತರವಾಗಿ ತಿಳಿದುಕೊಳ್ಳಬೇಕೇ ಹೊರತು ಪುಸ್ತಕಗಳ ಮೂಲಕವಾಗಲಿ ಅಲ್ಪಜ್ಞರಿಂದಾಗಲಿ ತಿಳಿಯಲಾರವು. ಈ ಸಾಧನೆಯ ವಿಷಯದಲ್ಲಿ ತುಂಬ ಜಾಗ್ರತೆಯನ್ನಿಟ್ಟಿರಬೇಕು. ಈ ಎರಡು ಇಲ್ಲದೆ ಯಾವನೂ ಜ್ಞಾನಿಯಾಗಲಾರನು. ಇದನ್ನು ಕಲಿತುಕೊಳ್ಳಬೇಕೆಂದು ನಾವು ದೃಢವಾದ ಸಂಕಲ್ಪವನ್ನು ಮಾಡಿದುದಾದರೆ ಗುರುವು ನಮಗೆ ತಪ್ಪದೇ ದೊರತು ಆ ವಿದ್ಯೆಯನ್ನು ನಮಗೆ ಲಭಿಸುವಂತೆ ಮಾಡುವನು. ಆದಕಾರಣ ನಾವು ಯೋಗ್ಯರಾದ ಶಿಷ್ಯರಾಗಲಿಕ್ಕೆ ಮಾತ್ರ ಪ್ರಯತ್ನಿಸುತ್ತಿರಬೇಕು. ಯೋಗ್ಯರಾದ ಶಿಷ್ಯರಾಗಲು ಏಕಾಗ್ರತೆ ಮತ್ತು ಧ್ಯಾನಗಳು ಅವಶ್ಯಕವಾಗಿ ಇದ್ದೇ ತೀರಬೇಕು. ಇಂತಹ ಉತ್ತಮೋತ್ತಮವಾದ ಮಾನಸಿಕ ಸದ್ಗುಣಗಳನ್ನು ಸಂಪಾದಿಸುವ ಚಿತ್ತವೃತ್ತಿಯನ್ನು ಚಿದಾನಂದನು ಸಕಲ ಸಹೋದರರಿಗೂ ಅನುಗ್ರಹಿಸಲಿ.

ವಾಚಕಮಹಾಶಯರೆ! ಹಿಂದಿನ ಕಾಲದಲ್ಲಿ ಇಂತಹ ಸದ್ವ್ಯಾಸಂಗದಲ್ಲಿ ಜನರಿಗೆ ವಿಶೇಷ ಲಕ್ಷ್ಯವಿದ್ದಿತು. ಸ್ವಚ್ಛಂದಪ್ರವೃತ್ತಿಗೆ ಮೆಚ್ಚಿದವರಾದ ಈಗಿನ ಕೆಲ ಜನರು ಪರರತಿಶಯವ ಸೈರಿಸದ ಪಿಸುಣತನ, ಪರಸ್ತ್ರೀಗಮನ, ಸುಳ್ಳು, ಕಳ್ಳತನ, ಮೋಸ, ಕುತಂತ್ರ ಇತ್ಯಾದಿ ಹೀನಕೃತ್ಯಗಳಿಂದ ಪರದ್ರವ್ಯಾಪಹಾರ ಮಾಡುವಿಕೆ ಈ ಕೃತ್ಯಗಳಲ್ಲಿಯೇ ಮನಸ್ಸನ್ನು ಏಕಾಗ್ರವಮಾಡುತ್ತಿರುವುದು ಕಾಣಬರುತ್ತದೆ. ಇಂತಹ ಮತಿಗೆಟ್ಟ ಮಾನವರನ್ನು ನೋಡಿ ಎಷ್ಟು ವಿಷಾದಪಟ್ಟರೂ ತೀರದು.

ಶ್ರೀಮನ್ಮಹಾರಾಜರವರ ವರ್ಧಂತೀ ಮಹೋತ್ಸವ

ಅಣ್ಣೆಗ್ರಾಮ

ತರೀಕೆರೆ ತಾ॥ ಅಣ್ಣೆಗ್ರಾಮದಲ್ಲಿ ಪುರಪ್ರಮುಖರಿಂದಲೂ ಶಾಲಾ ಮಾಸ್ತರ್ ಮ॥ ರಾ॥ ಕಲಪ್ಪನವರು ಮತ್ತು ಬಾಲಕಬಾಲಕಿಯರಿಂದ ಶ್ರೀಮನ್ಮಹಾರಾಜರವರ 25 ನೇ ವರ್ಧಂತ್ಯುತ್ಸವವು ತಾ॥ 22 7 43 ನೇ ದಿವಸ ಅತ್ಯಂತ ವೈಭವದಿಂದ ನೆರವೇರಿಸಲ್ಪಟ್ಟಿತು. ಈ ಗ್ರಾಮದ ಭಕ್ತಮಂಡಲಿಯ ಪ್ರಾರ್ಥನೆಯಂತೆ ಇಲ್ಲಿಗೆ ದಯಮಾಡಿಸಿರುವ ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಅಪ್ಪಣೆಯಮೇರೆ, ಶ್ರೀ ಮಹಾಸಂಸ್ಥಾನದ ಆನೆಯಮೇಲೆ ಸರ್ವಾಲಂಕಾರ ಭೂಷಿತವಾದ ಮಹಾಪ್ರಭುಗಳವರ ಭಾವಚಿತ್ರವನ್ನು ಇಟ್ಟು ಸಕಲ ಬಿರುದಾವಳಿಗಳೊಡನೆಯೂ ವಾದ್ಯ ವಿಶೇಷಗಳೊಡನೆಯೂ ಉತ್ಸವವನ್ನು ನಡೆಸಿದರು. ಅನಂತರ ಸಭೆ ಸೇರಿ ಎಲ್ಲರೂ ಪ್ರಭುಗಳಿಗೆ ಶ್ರೇಯಸ್ಸನ್ನು ಕೋರಿದರು. ವಿ. ಶಂಕ ವರ್ಮನ್ ಮತ್ತು ಪಟೇಲ್ ಮ॥ ರಾಮಯ್ಯನವರು, ಶ್ರೀಮಾನ್ ಸಂಜೀವಯ್ಯನವರು ಮಠದ ವೇ॥ ಚಂಪಯ್ಯನವರು ಮಾತನಾಡಿ ನಮ್ಮ ಪ್ರಭುಗಳ ರಾಜ್ಯದಲ್ಲಿ ನಾವು ಎಷ್ಟು ಸೌಖ್ಯವಾಗಿದ್ದೇವೆ. ಇತರ ರಾಜ್ಯಗಳಲ್ಲಿ ಅಸ್ವಾತಂತ್ರ್ಯದಿಂದ ಎಷ್ಟು ಕಷ್ಟಪಡುತ್ತಿದ್ದಾರೆ. ಪ್ರಭುಗಳಿಂದ ನಮಗೆ ಎಷ್ಟು ಅನುಕೂಲಗಳು ಒದಗುತ್ತಿವೆ ಮುಂತಾದ ವಿಷಯಗಳನ್ನು ಕುರಿತು ಉಪನ್ಯಾಸ ಮಾಡಿದರು. ಅನಂತರ ಅಲ್ಲಿ ನೆರೆದಿದ್ದ ಜನಗಳೆಲ್ಲಾ ಫಲಪುಷ್ಪತಾಂಬೂಲ ವಿನಿಯೋಗವಾಗಿ ಅಂದಿನ ಕಾರ್ಯವು ಸಮಾಪ್ತಿಗೊಂಡಿತು.

ಓರ್ವ ಪ್ರತ್ಯಕ್ಷದರ್ಶಿ

ಅಜ್ಜಂಪುರ

ತರೀಕೆರೆ ತಾ॥ ಅಜ್ಜಂಪುರ ಗ್ರಾಮದಲ್ಲಿ ಸದ್ಭಕ್ತಿಪ್ರಿಯರಾದ ಶ್ರೀಮನ್ಮಹಾರಾಜ ಶ್ರೀಜಯಚಾಮರಾಜೇಂದ್ರ ಒಡೆಯರ್ ಮಹಾಪ್ರಭುಗಳವರ 25 ನೆಯ ವರ್ಧಂತ್ಯುತ್ಸವವು ವೈಭವದೊಡನೆ ನಡೆಯಿತು. ಆ ದಿವಸ ಅಲ್ಲಿನ ಶಾಲಾ ಮೈದಾನದಲ್ಲಿ ಸಪ್ತ ರಾಷ್ಟ್ರ ಧ್ವಜವಂದನೆಯು ನಡೆಯಿತು. ಅನಂತರ ಅಂದವಾಗಿ ಶೃಂಗರಿಸಿದ ಮಹಾಪ್ರಭುಗಳವರ ಭಾವಚಿತ್ರದ ಉತ್ಸವವು ಮುನಿಸಿಪಲ್ ಆಫೀಸಿನ ನೌಕರರಿಂದ ಕೂಡಿ ವಾದ್ಯ ವೈಭವ ಸಹಿತ ನಡೆಯಿತು. ಉತ್ಸವವು ಮಾಧ್ಯಮಿಕ ಶಾಲಾ ಅಂಗಳಕ್ಕೆ ಬಂದಿರಗಿದ ಮೇಲೆ ಅಮಲ್ದಾರರಾದ ಶ್ರೀಮಾನ್ ಎಚ್ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಶಾಲಾ ಬಾಲಕ ಬಾಲಕಿಯರಿಂದಲೂ ಸಂಗೀತ ಅಧ್ಯಾಪಕರಾದ ಶ್ರೀಮಾನ್ ಬಿ ವೆಂಕಟಾಚಲಗುಪ್ತರವರಿಂದಲೂ ದೇವರ ಪ್ರಾರ್ಥನೆಯು ನಡೆದ ಮೇಲೆ ಅಜ್ಜಂಪುರ ಪ್ರಾಥಮಿಕ ಶಾಲೆ ಉಪಾಧ್ಯಾಯರಾದ ವೇ॥ ಎಂ ಎಸ್ ಮರುಳಸಿದ್ಧಯ್ಯನವರು ತಮ್ಮಿಂದಲೇ ರಚಿತವಾದ ಶ್ರೀಮನ್ಮಹಾರಾಜರ ವಿಷಯಿಕವಾದ ಅಭಿನಂದನ ಪದ್ಯಗಳನ್ನು ವಾಚಿಸಿದರು. ಅನಂತರ ಅಜ್ಜಂಪುರ ಮುನಿಸಿಪಲ್ ಪ್ರೆಸಿಡೆಂಟ್ ಶ್ರೀಮಾನ್ ಸೆಟ್ಟರ ಸಿದ್ಧಪ್ಪನವರ ಮೊದಲಾದವರ ಭಾಷಣಗಳೂ ಮಾಧ್ಯಮಿಕ ಶಾಲಾ ವಿದ್ಯಾರ್ಥಿನಿಯರಾದ ಎಂ ಕೃಷ್ಣಾಂಬಿಕೆ ಮತ್ತು ಎಸ್ ಸುಬ್ಬಲಕ್ಷ್ಮಮ್ಮ ಎಂಬ ಬಾಲಿಕೆಯರ ಲಾವಣಿ ಹಾಡುವಿಕೆಯೂ ನಡೆಯಿತು. ಅನಂತರ ಅಧ್ಯಕ್ಷರು ಪ್ರಜೆಗಳಿಗೂ ಪ್ರಭುಗಳಿಗೂ ಮಧ್ಯೆ ಇರುವ ಶ್ರದ್ಧಾಭಕ್ತಿ ಮೊದಲಾದ ವಿಷಯಗಳನ್ನು ಕುರಿತು ವಿವರಿಸಿ ಎಲ್ಲರನ್ನೂ ಆನಂದಗೊಳಿಸಿದರು. ಆ ಮೇಲೆ ಅಲ್ಲಿ ನೆರೆದ ಸರ್ವರಿಗೂ ಗಂಧ ಪುಷ್ಪ ತಾಂಬೂಲಗಳು ವಿನಿಯೋಗವಾಗಿ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯೊಡನೆ ಕಾರ್ಯವು ಮುಕ್ತಾಯಗೊಂಡಿತು.

ಓರ್ವ ಪ್ರೇಕ್ಷಕ

ಆರೋಗ್ಯ

'ಆರೋಗ್ಯ' ಈ ಶಬ್ದದ ಮೂಲ ಧಾತು 'ರುಜ' ಅಂದರೆ ಪೀಡೆ ಹೀಗಿದ್ದರೂ ಆದರಿಂದ 'ರೋಗ' ಅಂದರೆ ಪೀಡೆಕೊಡುವಿಕೆ. ಈ ಪ್ರಕಾರ ಶಬ್ದವಾಗಿರುತ್ತದೆ. ಅರ್ಥಾತ್ ರೋಗದ ಅಥವಾ ಪೀಡೆಯ ಅಭಾವವೆಂದರೆ ಆರೋಗ್ಯವೆಂದು ಮೂಲ ಶಬ್ದದ ಅರ್ಥವಾಗುತ್ತದೆ. 'ಪೀಡೆ' ಈ ಶಬ್ದದಿಂದ ಕೇವಲ ವೇದನೆಯೊಂದು ಅರ್ಥವಾಗದೆ ಶರೀರದಲ್ಲಿಯ ಯಾವದೇ ಕ್ರಿಯೆಯು ಸ್ವಲ್ಪ ಕೆಟ್ಟರೂ ಕೂಡ ಅದರಿಂದ ಮನಸ್ಸಿಗೆನಿಸುವ ಎಳ್ಳಷ್ಟು ಅಸ್ವಸ್ಥತೆಯೂ ಕೂಡ ಪೀಡೆಯೆಂಬರ್ಥವನ್ನು ಪ್ರಕಟಿಸುತ್ತದೆ. ಹಾಗೂ ಈ ಪರಿಸ್ಥಿತಿಯು ಪೂರ್ಣ ಆರೋಗ್ಯದಲ್ಲಿ ಬಾರದೆ ಇದ್ದುದರಿಂದ ಆಯುರ್ವೇದದಲ್ಲಿ ಸ್ವಸ್ಥ ಅಥವಾ ನಿರೋಗಿಯ ವ್ಯಾಖ್ಯೆಯು ಕೊಡುವಾಗ್ಗೆ ಎಲ್ಲ ಇಂದ್ರಿಯಗಳೂ, ಮನಸ್ಸೂ, ಆತ್ಮವೂ ಕೂಡ ಪ್ರಸನ್ನ ಹಾಗೂ ಹುರುಪುಳ್ಳದ್ದೂ ಇದ್ದರೇನೆ ಅವನು ನಿಜವಾದ ನಿರೋಗಿಯು ಎಂದು ಹೇಳಿರುತ್ತಾರೆ. ಇದರ ಮೇಲಿಂದ ಆರೋಗ್ಯ ಈ ಶಬ್ದದ ಸ್ಪಷ್ಟ ಅರ್ಥವು ಏನಿರುವದೆಂಬುದು ಕಂಡುಬರುತ್ತದೆ. ನಿರೋಗಿ ಮನುಷ್ಯನಿಗೆ ಸ್ವಸ್ಥವೆಂದು ಅಂದಿರುತ್ತಾರಲ್ಲದೆ ಆರೋಗ್ಯಕ್ಕೂ ಸ್ವಾಸ್ಥ್ಯವೆಂದು ಅಂದಿರುತ್ತಾರೆ. ಈ ಪ್ರಕಾರದ ಸ್ವಾಸ್ಥ್ಯ ಅಥವಾ ಆರೋಗ್ಯವು ನಮಗೆ ಸಿಗಬಹುದೋ?

'ಶತಾಯುರ್ವೈ ಪುರುಷಃ' ಅಂದರೆ ಮನುಷ್ಯನು ನೂರು ವರ್ಷ ಬಾಳುವ ಹಕ್ಕಿರುತ್ತದೆಂದು ಚರಕಾಚಾರ್ಯರು ಸಹ ಹೇಳಿರುತ್ತಾರೆಂಬುದು ಸಾಮಾನ್ಯ ನಿಯಮವಾಯಿತು. ಆದಾಗ್ಯೂ ಪ್ರತಿಯೊಬ್ಬ ಮನುಷ್ಯನಿಗೆ ಪ್ರಾಪ್ತವಾಗುವ ಆಯುರಾರೋಗ್ಯವು ಇವು ಅವನು ಹುಟ್ಟಿದ ದೇಶ, ಹಿರಿಯರಿರುವ ಪದ್ಧತಿ, ಅವರ ಆಹಾರ ವಿಹಾರಗಳ ರೂಢಿ ಇವುಗಳ ಮೇಲೆ ಸಹ ಅವಲಂಬಿಸಿರುತ್ತದೆ. ಆದ್ದರಿಂದ ಎಲ್ಲ ಜನರಿಗೆ ಸಮನಾದ ಆಯುಷ್ಯ ಸಿಗುವುದಿಲ್ಲ. ಆದರೆ ಮನುಷ್ಯನು ಜನ್ಮತಃ ಒಂದೇ ಆಯುಷ್ಯವನ್ನು ತನ್ನ ರೋಗ ಹಾಗೂ ಅಶಕ್ತತೆಯಿಂದ ಕಡಿಮೆ ಮಾಡಿಕೊಳ್ಳುತ್ತಾನೆ. ಆಯುಷ್ಯವನ್ನು ಹೆಚ್ಚಿಸಿಕೊಳ್ಳುವ ಉಪಾಯಗಳು ವೈದ್ಯಶಾಸ್ತ್ರದಲ್ಲಿ ಸಹ ಕೆಲವಿರುತ್ತವೆ. ಇದ್ದ ಆಯುಷ್ಯವನ್ನು ಬೇನೆ ಬೇಸರಿಕೆಗಳಿಲ್ಲದೆ ಪೂರ್ಣ ಸ್ವಾಸ್ಥ್ಯದಿಂದ ಹೇಗೆ ಉಪಯೋಗಿಸಲಿಕ್ಕೆ ಬರುವದೆಂಬುದನ್ನು ವಿಚಾರ ಮಾಡುವ ಶಾಸ್ತ್ರವೇ ವೈದ್ಯಶಾಸ್ತ್ರವು. ರೋಗದಿಂದಲೇ ಶರೀರದಲ್ಲಿಯ ಸತ್ವ ಹಾಗೂ ಪ್ರಾಣವು (Vitality) ಕಡಿಮೆಯಾಗುತ್ತದೆಂಬುದು ನಿಶ್ಚಿತವಿದ್ದ ಮೂಲಕ ರೋಗದಿ[illegible]ವಗಲಿಸುವ ವಿಚಾರವೇ ಆರೋಗ್ಯಶಾಸ್ತ್ರದಲ್ಲಿ ಮಾಡಲ್ಪಟ್ಟಿರುತ್ತದೆ.

ಈಗ ಹಿಂದೂಸ್ತಾನದಲ್ಲಿಯ ಜನರ ಆರೋಗ್ಯದ ಸಂಬಂಧವಾಗಿ ಸ್ವಲ್ಪ ವಿಚಾರ ಮಾಡುವಾ. ಈ ದೇಶದ ಉತ್ತರಭಾಗಕ್ಕೆ ಹೆಚ್ಚು ತಂಪು ದಕ್ಷಿಣ ಭಾಗಕ್ಕೆ ಹೆಚ್ಚು ಉಷ್ಣ ಇವೆರಡೂ ತುದಿಗಳನ್ನು ಬಿಟ್ಟರೆ ಸಾಧಾರಣವಾಗಿ ಈ ದೇಶದ ಹವೆಯು ಸಮಶೀತೋಷ್ಣವಿರುತ್ತದೆ. ಆದ್ದರಿಂದ ಇಲ್ಲಿಯ ಜನರು ರುಕ್ಷ, ಕಪ್ಪು ಕಡಿಮೆ ಬೆಳವಣಿಗೆಯುಳ್ಳವರು ಮತ್ತು ತಂಪು ಪ್ರದೇಶದ ಜನರ ಮಾನದಿಂದ ಶಕ್ತಿಯು ಸಹ ಕಡಿಮೆ. ಇವರಿಗೆ ಸ್ನಿಗ್ಧ ಹಾಗೂ ಸಾತ್ವಿಕ ಆಹಾರಗಳಷ್ಟೇ ತಡೆಯುತ್ತವೆ. ಹಾಗೂ ಇವರಿಗಾಗುವ ವಿಕಾರಗಳೂ ಕೂಡ ಉಷ್ಣತೆಯುಳ್ಳವುಗಳು (ಆಯುರ್ವೇದೀಯ ಭಾಷೆಯಲ್ಲಿ ಕಫ, ಪಿತ್ತಜನ್ಯ) ಇರುತ್ತವೆ. ಅಂದ ಮೇಲೆ ಈ ಜನರ ಆರೋಗ್ಯವನ್ನು ಹೇಳಬೇಕಾದಲ್ಲಿ ಈ ಎಲ್ಲ ಸಂಗತಿಗಳನ್ನು ಮನಸಿನಲ್ಲಿ ತಂದುಕೊಳ್ಳಬೇಕಾಗುತ್ತದೆ.

ಆರೋಗ್ಯದ ಸಲುವಾಗಿ ಎರಡು ವಿಭಾಗಗಳನ್ನು ಮಾಡೋಣ, ಒಂದು ವ್ಯಕ್ತಿಯ ವಿಷಯದ್ದು ಮತ್ತೊಂದು ಸಾರ್ವಜನಿಕದ ವಿಷಯದ್ದು. ಮೊದಲನೇದರಲ್ಲಿ ಮೂರು ಒಳಭೇದಗಳಿದ್ದು ಅವು ಆ ವ್ಯಕ್ತಿಯ, ಕುಟುಂಬದ ಹಾಗೂ ಅವನ ಎಡಬಲದಲ್ಲಿದ್ದ ವಸತಿಯ ಆರೋಗ್ಯವೆಂದಾಗುತ್ತವೆ. ನಮಗೆ ಈ ಮೂರು ಪ್ರಕಾರಗಳನ್ನಷ್ಟೆ ಪ್ರಾಮುಖ್ಯವಾಗಿ ವಿಚಾರಮಾಡುವದಿರುತ್ತದೆ. ಈ ಮೂರರ ಪರಿಪೋಷಣಾರ್ಥವಾಗಿ ಬೇಕಾದಷ್ಟು ಸಾರ್ವಜನಿಕ ಆರೋಗ್ಯದ ಸಹಾಯವೆಂದು ಉಪಯೋಗಮಾಡಿಕೊಳ್ಳಬಹುದು. ವ್ಯಕ್ತಿವಿಷಯದ ಆರೋಗ್ಯದಲ್ಲಿ ದಿನಚರ್ಯೆ ಹಾಗೂ ಋತುಚರ್ಯೆಯೆಂದು ಮುಖ್ಯ ಎರಡು ಭಾಗಗಳಿದ್ದು, ಸಾರ್ವಜನಿಕ ಆರೋಗ್ಯವೆಂದು ಮೂರನೆಯ ಪ್ರಕಾರವಿರುತ್ತದೆ. ದಿನಚರ್ಯೆಯಲ್ಲಿ ಪ್ರಾತಃಕಾಲ ಎದ್ದಾಗಿನಿಂದ ರಾತ್ರಿ ಮಲಗುವತನಕ ಆರೋಗ್ಯ ದೃಷ್ಟಿಯಿಂದ ಏನೇನು ಮಾಡಬೇಕು ಹಾಗೂ ಏನೇನು ಮಾಡಬಾರದೆಂಬದಿರುತ್ತದಲ್ಲದೆ ಋತುಮಾನದ ಪ್ರಕಾರ ಆದಂಥ ವ್ಯತ್ಯಾಸ ಶರೀರಕ್ಕೆ ತ್ರಾಸದಾಯಕವಾಗದಿರುವಂತೆ ಇದರಲ್ಲಿ ಮಾಡುವ ಆಚಾರಗಳ ಬಗ್ಗೆ ಮಾಹಿತಿಯು ಋತುಚರ್ಯೆಯಲ್ಲಿರುತ್ತದೆ. ಮನೆಯ ಹೊರಗೆ ಪಾಲಿಸಬೇಕಾದ ಆರೋಗ್ಯದ ನಿಯಮಗಳು ವ್ಯಕ್ತಿಯ ಸಾರ್ವಜನಿಕ ಆರೋಗ್ಯದಲ್ಲಿ ಬರುತ್ತವೆ. ಕುಟುಂಬದ ಆರೋಗ್ಯದಲ್ಲಿ ಚಿಕ್ಕ ಬಾಲಕರು ಸ್ತ್ರೀಯರ ಹಾಗೂ ವೃದ್ಧರ ಸಮಾವೇಶವಾಗುತ್ತದೆ. ಎಡಬಲದಲ್ಲಿದ್ದ ವಸತಿಯ ಆರೋಗ್ಯದ ವಿಚಾರ ಮಾಡುವಾಗ್ಗೆ ತನ್ನ ಮನೆ ಹಾಗೂ ತನ್ನ ಮನೆಯ ಪಕ್ಕದಲ್ಲಿದ್ದ ಮನೆಗಳ ಆರೋಗ್ಯವನ್ನಷ್ಟೇ ಸಾರ್ವಜನಿಕ ಆರೋಗ್ಯದಲ್ಲಿ ತೆಗೆದುಕೊಂಡಿರುತ್ತದೆ. ಇಲ್ಲದಿದ್ದರೆ ಸಾರ್ವಜನಿಕ ಆರೋಗ್ಯದ ಸಲುವಾಗಿ ನೂರಾರು ಪುಟಗಳುಳ್ಳ ಸ್ವತಂತ್ರ ಗ್ರಂಥವನ್ನು ಬರೆದರೂ ಕೂಡ ಅದು ಕಡಿಮೆಯೇ.

ಆ. ಮಂ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ[illegible]ಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

ISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಖ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪ್ರವಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೯ನೇ ಆಗಸ್ಟ್ ೧೯೪೩ [ಸಂಚಿಕೆ ೧

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ದಾಸನೂರ ಶ್ರೀಸಿದ್ಧಯ್ಯನವರು

ದಾಸನೂರರ ಸನ್ಯಾಸಸಮಾರಂಭ ಸಿದ್ಧಿ.

ಧರ್ಮವು ಜಗದಾಧಾರವಾಗಿದೆ ಎಂಬುದು 'ಧರ್ಮೋ ವಿಶ್ವಸ್ಯ ... ಪ್ರತಿಷ್ಠಾ' ಇತ್ಯಾದಿ ಪ್ರಮಾಣಗಳಿಂದ ಸ್ಪಷ್ಟವಾಗಿ ತಿಳಿದು ...ದೆ. ಸಮಸ್ತಪ್ರಪಂಚಕ್ಕೆ ಆಶ್ರಯವಾದ ಧರ್ಮವು ಸಕಲ ...ರಿಶ್ರೇಣಿಯಾದ ಮನುಷ್ಯನಿಗೆ ಅತ್ಯವಶ್ಯಕವಾಗಿ ...ಗಿದೆ. ಇಹಪರಸುಖಪ್ರಾಪ್ತಿಗೆ ಧರ್ಮವೇ ಮೂಲಕಾರಣ ...ದೆ. ವೇದ, ಆಗಮ, ಪುರಾಣ, ಇತಿಹಾಸ ಮೊದಲಾದವು ...ವೂ ಧರ್ಮದ ಮಹತ್ವವನ್ನೇ ಸಾರುತ್ತಿರುವವು. ಧರ್ಮ ...ನಿಗೆ ಯಾವ ವೇದಾಗಮಾದಿಗಳೂ ಬೇಕಾಗುವುದಿಲ್ಲ. ...ರ್ಮಹೀನನು ದ್ವಿಪಾದಪಶುವೆಂದು 'ಧರ್ಮೇಣ ಹೀನಾಃ ...ಭಿಃ ಸಮಾನಾಃ' ಎಂಬ ಪ್ರಮಾಣವು ಸಾರುತ್ತಲಿದೆ. ಚತು ...ರುಷಾರ್ಥಗಳಲ್ಲಿ ಧರ್ಮವು ಮೊದಲನೆಯದಾಗಿದೆ. ...ಸಹಾಯವಿಲ್ಲದಿದ್ದರೆ ಮುಂದಿನ ಮೂರು ಪುರುಷಾರ್ಥ ... ಸಿದ್ಧಿಸುವದಿಲ್ಲ. ಧರ್ಮವಿಲ್ಲದ ಸಂಪತ್ತು ಬರಿಕಾಲವಿರ ...ದು. "ಧರ್ಮವಾನರ್ಥಹೀನಸ್ತು ಸ್ವರ್ಗಂ ಗಚ್ಛತಿ ಮಾನವಃ । ...ವಾನ್ ಧರ್ಮಹೀನಸ್ತು ನರಕಂ ಪ್ರತಿಪದ್ಯತೇ" ಎಂಬ ...ಣವು ಅರ್ಥಹೀನನಾದರೂ ಧರ್ಮನಿಷ್ಠನಾದವನು ಸ್ವರ್ಗ ... ಪಡೆಯುವನೆಂದೂ ದ್ರವ್ಯಸಮೃದ್ಧಿಯುಳ್ಳವನು ಧರ್ಮ ...ನಾದರೆ ನರಕವನ್ನು ಹೊಂದುವನೆಂದೂ ಸ್ಪಷ್ಟವಾಗಿ ಸಾರು ...ಲಿದೆ. ಧನವುಳ್ಳವನೇ ಧಾರ್ಮಿಕನಾಗಬೇಕೆಂಬ ಅನಿವಾರ್ಯ ...ಮವೇನೂ ಇಲ್ಲ. ಧನಹೀನನಾದರೂ ಶ್ರದ್ಧಾಪ್ರಭಾವದಿಂದ ...ಕನಾಗಬಹುದು. ಆದರೆ ಧನಮದಾಂಧನಾಗಿ ಶ್ರುತಿ, ...ಸಂಪ್ರದಾಯ ವಿಪರೀತನಾದವನು ಧಾರ್ಮಿಕನಾಗಲಾರನು. ...ದ್ಧಯಾ ಸಹಿತಂ ಸರ್ವಂ ಶ್ರೇಯಸೇ ಭೂಯಸೇ ಭವೇತ್' ...ಬಂತೆ ಶ್ರದ್ಧೆಯಿಂದಲೇ ಸರ್ವಶ್ರೇಯಸ್ಸು ಪ್ರಾಪ್ತವಾಗುವುದು. ...ಶ್ರದ್ಧೆಯುಳ್ಳವ ಸಂಪತ್ತು ಎಷ್ಟು ಉನ್ನತವಾಗಿದ್ದರೂ ... ಪೋಷಕವಾಗುವದಲ್ಲದೆ ಕಾರಕವಾಗುವದಿಲ್ಲ. ಆದುದರಿಂದ ...ಸಂಪದವನ್ನು ಸರ್ವದಾ ಆದರದಿಂದ ಆರ್ಜಿಸಬೇಕಾಗಿದೆ. ...ಗ್ರಂಥಾದಿಗಳು ಅರ್ಥವನ್ನು ಬೋಧಿಸಿ ಧರ್ಮಮಾರ್ಗವನ್ನು ಬೋಧಿಸುತ್ತವೆ. ಭಾರತ, ರಾಮಾಯಣಗಳಂತಹ ಪ್ರಸಿದ್ಧ ಗ್ರಂಥಗಳೂ ಸಹ ಧರ್ಮಾರ್ಥವನ್ನು ಪ್ರತಿಪಾದಿಸುವ ಕಥೆಗಳನ್ನೇ ಪೋಷಿಸುವ ಗ್ರಂಥಗಳಾಗಿವೆ. ದೀರ್ಘಾಯುಷ್ಯ, ಅಪಾರ ಸಂಪತ್ತು, ಆಯುರಾರೋಗ್ಯ, ಕೀರ್ತಿ, ಸತ್ಸಂತಾನ, ವಿಜಯ, ಪರಾಕ್ರಮ, ಸ್ವರ್ಗ, ಮೋಕ್ಷಗಳು ಧರ್ಮದ ಫಲಗಳಾಗಿವೆ. ಇಂತಹ ಸರ್ವತ್ರ ಸ್ತುತವಾದ ಧರ್ಮವನ್ನು ಸಂಪಾದಿಸುವುದಕ್ಕೋಸ್ಕರವಾಗಿಯೇ ಪೂರ್ವಾಚಾರ್ಯರೂ ಮಹರ್ಷಿಗಳೂ ತಮ್ಮ ದೇಹಸುಖಕ್ಕೆ ತಿಲೋದಕವನ್ನಿತ್ತರು. ಇದಕ್ಕಾಗಿಯೇ ಪ್ರಾಚೀನ ರಾಜಾಧಿರಾಜರು ತಮ್ಮ ಸಂಪತ್ತನ್ನು ಧಾರೆಯೆರೆದು ರಾಜಭೋಗ... ಹರವಾದ ಶರೀರವನ್ನು ಧರ್ಮಕಾರ್ಯಾದಿಗಳಿಗೆ ಒಪ್ಪಿಸಿಕೊಟ್ಟಿರು ದೇಕ್ಕಾಗಿ ವಿವರಿಸುವುದೇನು? ಸಕಲಾಧಾರವಾದ ಧರ್ಮರಕ್ಷಣೆಗಾಗಿ ಶ್ರೀವಿಷ್ಣುವು ದಶಾವತಾರಗಳನ್ನು ತಾಳಬೇಕಾಯಿತು. ಅರ್ಜುನನಿಗೆ ಸಾರಥಿಯಾಗಬೇಕಾಯಿತು. ತ್ರಿಪುರಾಸುರಾದಿಗಳನ್ನು ಸಂಹರಿಸಲು ಸಚ್ಚಿದಾನಂದಸ್ವರೂಪನಾದ ಪರಶಿವನು ಸಹ ರಥಾರೂಢನಾಗಬೇಕಾಯಿತು. ಇದರಿಂದ ಧರ್ಮವು ಎಂತಹ ವಸ್ತುವು? ಅದರ ಮಹತ್ವವೇನು? ಎಂಬುದು ತಿಳಿಯುತ್ತದೆ. ಕಾಲಚಕ್ರಾನುಗಾಮಿಯಾದ ವಿಶಾಲಜಗತ್ತಿಗೆ ವೃದ್ಧಿ ಕ್ಷಯಗಳು ಅಂದಿನಿಂದ ಇಂದಿನವರೆಗೂ ಇದ್ದೇ ಇವೆ. ಅಂದರೆ ಧರ್ಮವು ವೃದ್ಧಿಹ್ರಾಸಗಳಿಗೆ ಗುರಿಯಾಗುತ್ತಲೇ ಬಂದಿದೆ ಎಂದರ್ಥವಾಗುತ್ತದೆ. ಆದರೆ ಧರ್ಮವು ಅವಿನಾಶಿಯಾದ ವಸ್ತುವಾಗಿರುವುದರಿಂದ ಅದಕ್ಕೆ ಕ್ಷಯವೃದ್ಧಿಗಳು? ಎಂದು ಸೂಕ್ಷ್ಮದೃಷ್ಟಿ ಸಂಶಯವು ಸಂಭವಿಸಬಹುದು. ಆ ವೃದ್ಧಿಹ್ರಾಸಗಳು ಪ್ರಾಣಿಗಳ ಪರಿಗ್ರಹಣ-ಪರಿತ್ಯಾಗರೂಪಗಳಲ್ಲದೇ ಧರ್ಮಕ್ಕೆ ಸ್ವಾಭಾವಿಕವಾದ ದಶಾಂತರಗಳಲ್ಲ. ಧರ್ಮವು ಯಾವಾಗಲೂ ಏಕಪ್ರಕಾರವಾಗಿಯೇ ಇರುತ್ತದೆ. ಎಲ್ಲರೂ ಧರ್ಮಹೀನರಾದರೆ ಧರ್ಮವೆಂಬುದೂ ನಷ್ಟವಾಗುವುದಿಲ್ಲ. ಧರ್ಮಾಚರಣರು ಹೆಚ್ಚಾಗಿ ಎಲ್ಲೆಡೆಯಲ್ಲಿಯೂ ಧರ್ಮದ ಅಂಗಾಂಗಗಳೆಲ್ಲವೂ ಅನುಷ್ಠಾನರೂಪವಾಗಿ ಕಂಡುಬರುವುದರಿಂದ ಆಗ ಧರ್ಮವೃದ್ಧಿಗೊಂಡಿದೆ ಎಂದು ಭಾಸವಾಗುತ್ತದೆ. ಅಧರ್ಮತತ್ಪರರು ಹೆಚ್ಚಿದಾಗ ಧರ್ಮನಿಯಮಗಳು ಸಂಕುಚಿತಸ್ವರೂಪದಲ್ಲಿದ್ದಂತಾಗಿರುವುದರಿಂದ ಧರ್ಮಗ್ಲಾನಿಯಾದ ಹಾಗೆ ತೋರುತ್ತದೆ. ಆದುದರಿಂದ ಧರ್ಮವು ಶಾಶ್ವತವಾಗಿ ಏಕಸ್ವರೂಪಾವಸ್ಥಿತವಾದರೂ ಜನರ ಪರಿಗ್ರಹಣ ಪರಿತ್ಯಾಗಯೋಗದಿಂದ, ಮೋಡಗಳ ಗಮನದಿಂದ ಚಂದ್ರಬಿಂಬದಲ್ಲಿ ಅನುಲೋಮ-ವಿಲೋಮಗತಿ ಭ್ರಾಂತಿಯಾದಂತೆ ಧರ್ಮದಲ್ಲಿ ಸಹ ವೃದ್ಧಿಹ್ರಾಸಗಳ ಕಲ್ಪನಾತರಂಗಗಳುದಯಿಸುತ್ತವೆ. ಕಲಿಯುಗದಲ್ಲಿ ಧರ್ಮಗ್ಲಾನಿಯಾಗಿದೆ ಯೆಂದರೆ ಧರ್ಮಾನುಷ್ಠಾನತತ್ಪರರು ವಿರಳರೆಂದರ್ಥವಾಗುತ್ತದೆ. ಇಂತಹ ಧರ್ಮವನ್ನುದ್ಧರಿಸುವುದೆಂದರೆ ಎಲ್ಲರೂ ಧರ್ಮಾಚರಣತತ್ಪರರಾಗಬೇಕು. ಧರ್ಮಪರಿತ್ಯಾಗದಿಂದುಂಟಾದ ದುಷ್ಪರಿಣಾಮವನ್ನು ಧರ್ಮಗ್ರಹಣದಿಂದಲೇ ಹೋಗಲಾಡಿಸಬೇಕು. ಧನಾಭಾವದಿಂದುಂಟಾದ ದಾರಿದ್ರ್ಯವನ್ನು ಧನಸಂಗ್ರಹದಿಂದಲೇ ಕಳೆಯಬೇಕಷ್ಟೇ? ಧರ್ಮನಿಯಮಗಳು ಇಂದ್ರಿಯಗಳೆಲ್ಲವನ್ನೂ ಸೀಮೋಲ್ಲಂಘನವಾಗದಂತೆ ನಿಯಮಗೊಳಿಸುತ್ತ ಸನ್ಮಾರ್ಗದಲ್ಲಿ ಸಾಗಿಸುತ್ತವೆ. ಧರ್ಮನಿಯಮಸಂಬಂಧವಿಲ್ಲದ ಇಂದ್ರಿಯಗಳು, ನಿಯಂತ್ರಣವಿಲ್ಲದ ಕುದುರೆಯಂತೆ ವಿಷಯಪದಾರ್ಥಗಳ ಕಡೆಗೆ ಧಾವಿಸಿ ಜೀವನನ್ನು ದುರಿತಕ್ಕೀಡುಮಾಡುತ್ತವೆ.

ಈಗಿನ ಕಾಲದಲ್ಲಿ ಧರ್ಮನಿಯಮೋಲ್ಲಂಘನವು ಭರದಿಂದ ಸಾಗಿದೆ. ಇದಕ್ಕೆಲ್ಲ ನಾಸ್ತಿಕರಾದ ಇಂದ್ರಿಯಲಂಪಟರ ಸಂಸರ್ಗದಿಂದುಂಟಾದ ಅನಾಚಾರದ ಬಿರುಗಾಳಿಯೇ ಕಾರಣವಾಗಿದೆ. ಈ ಚಕ್ರಂದದ ಚಕ್ರವಾಯುವು ಅಜ್ಞಾನಿಗಳನ್ನು ಹುರುಳಿಲ್ಲದ ಹುಲ್ಲಿನಂತೆ ಹಾರಿಸಿ ದಿಗ್ಭ್ರಾಂತರನ್ನಾಗಿ ಮಾಡಿ 'ಧರ್ಮವು ಜಗತ್ತಿನಲ್ಲಿಲ್ಲ" ಎನ್ನುವವರೆಗೆ ಕುಗ್ಗಿ ಹಿಡಿಸಿಬಿಟ್ಟಿದೆ. ಅಧರ್ಮಾಂಧಕಾರವು ಮಾಯವಾಗಬೇಕಾದರೆ ಧರ್ಮಪ್ರಕಾಶವು ಅಧ್ಯಯನ-ಅಧ್ಯಾಪನ-ಆಚರಣ ಪ್ರಚಾರರೂಪವಾಗಿ ಹರಡಬೇಕಾಗಿದೆ. ಧರ್ಮರಕ್ಷಕರಾದ ಗುರುಗಳ ಆಗಮನವು ಹೆಚ್ಚಾದ ಹಾಗೆಲ್ಲ ಸಾತ್ತ್ವಿಕವು ಪ್ರಚಾರಗೊಂಡು ಜನತೆಯು ಧೈರ್ಯಶಾಲಿಗಳಾಗುತ್ತದೆ. ಧರ್ಮಾಭ್ಯುದಯಕ್ಕೆ ಆಧಾರಸ್ಥಾನರಾದ ಗುರುಗಳು ಎಚ್ಚೆತ್ತು ತಮ್ಮ ಕಾರ್ಯಕ್ಷೇತ್ರವನ್ನು ಗುರುತಿಸಿ ಕ್ರಮಿಸಬೇಕಾಗಿದೆ. ಈಗ ಅನೇಕ ಗುರುಮೂರ್ತಿಗಳು ಜನತೆಯ ಹೀನಸ್ಥಿತಿಯನ್ನು ಕಂಡು ಕನಿಕರಪಟ್ಟು ನಷ್ಟವಾದ, ಶಿಷ್ಟಪರಂಪರೆಯನ್ನು ಸ್ಪಷ್ಟಪಡಿಸಲು ಕಷ್ಟಪಡುತ್ತಿರುವರು. ಇದು ಸಾಕ್ಷಾತ್ ಸೂರ್ಯೋದಯದ ಅರುಣೋದಯವೆಂದು ಭಾವಿಸಬೇಕಾಗಿದೆ. ಇದು ಅನೇಕ ಮುಖವಾಗಿ ವಿರುದ್ಧತ್ವವನ್ನು ಧರಿಸಬೇಕು. ಗುರುಮೂರ್ತಿಗಳು ಸರ್ವಸಹಿಷ್ಣುಗಳಾಗಿ ಸರ್ವಸ್ವತ್ಯಾಗಸಿದ್ಧರಾಗಬೇಕು. ಅಧರ್ಮನಿವಾರಣೆಗಾಗಿ ಯೋಗ್ಯವಾದ ಉಪಾಯಗಳನ್ನು ಯೋಚಿಸಬೇಕು. ಧರ್ಮವು ಸಾಮಾನ್ಯವಾದುದಾದರೂ ಮೋಕ್ಷಧರ್ಮವು ಆಯಾ ಮತಪ್ರವರ್ತಕರ ಸಿದ್ಧಾಂತಾನುಗುಣವಾಗಿ ಪೃಥಕ್ ಪೃಥಕ್ ಸ್ವರೂಪವುಳ್ಳದಾಗಿದೆ. ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾದಿಪಂಚಾಚಾರ್ಯರು ಪರಶಿವನ ಸದ್ಯೋಜಾತಾದಿ ಪಂಚಮುಖಗಳಿಂದವತರಿಸಿ, ಭೂಲೋಕದಲ್ಲಿ ಸೋಮನಾಥಾದಿ ಜ್ಯೋತಿರ್ಲಿಂಗಗಳಿಂದ ಪ್ರಾದುರ್ಭವಿಸಿದ ವಿಷಯವು ವೇದಾಗಮಾದಿ ಸಕಲಶಾಸ್ತ್ರ ಸುಪ್ರಸಿದ್ಧವೂ ಲೋಕಸಮ್ಮತವೂ ಆಗಿದೆ. ಆ ಮಹಾಚಾರ್ಯರ ಪಂಚಪೀಠಗಳ ಕೃಪಾಛತ್ರಛಾಯೆಯಲ್ಲಿಯೇ ವೀರಶೈವಮತೀಯರೆಲ್ಲರೂ ನೆಲೆಯಾಗಿ ನಿಂತುಕೊಂಡಿರುವುದು ಸೂರ್ಯಪ್ರಕಾಶದಂತೆ ಜಗತ್ಪ್ರಸಿದ್ಧವಾಗಿದೆ. ಅಗಾಧ ತಪಶ್ಶೀಲರಾದ ವ್ಯಾಸ, ಅಗಸ್ತ್ಯಾದಿ ಮಹರ್ಷಿಗಳಿಂದಲೂ ಅತುಲ ಪರಾಕ್ರಮಶಾಲಿಗಳಾದ ಚೋಳ ವಿಕ್ರಮಾದಿ ಚಕ್ರವರ್ತಿಗಳಿಂದಲೂ ಆಚರಿಸಲ್ಪಟ್ಟ ವೀರಶೈವಮತವನ್ನು ನಮ್ಮ ಪ್ರಾಚೀನರು ಪ್ರಾಣಧನಾದಿಸರ್ವಸ್ವವನ್ನೂ ಸೂರೆಮಾಡಿ ಪರಕೀಯ ಪ್ರಳಯಂಕರದ ದವಡೆಯಿಂದ ಬಿಡಿಸಿ ಕಾಪಾಡಿಕೊಂಡು ಬಂದರು. ಆದರೆ ಈಗ ಅಂತಹ ವೀರಶೈವಮತವನ್ನು ಸುಧಾರಕರೆಂದು ಹೋಗಿನಿಂದ ಹಾಳು ಮಾಡುವ ಕಂಟಕರನ್ನು ಕಾಣುವ ಕಾಲವು ಬಂದಿರುವುದನ್ನು ನೋಡಿದರೆ ಅಪಾರ ವ್ಯಸನವುಂಟಾಗುತ್ತದೆ.

ಅಧರ್ಮಪ್ರವೃತ್ತಿಗಳು ಬೇಕಾದ ಮೋಹಕ ಸಾಧನಸಾಮಗ್ರಿಗಳನ್ನು ಸಿದ್ಧಪಡಿಸಲು ಎಷ್ಟು ಶ್ರಮ-ಧನವ್ಯಯವಾಗಬೇಕೋ ಅವೇ ರೀತಿನೀತಿಗಳನ್ನು ಧರ್ಮಪ್ರಚಾರದಲ್ಲಿಯೂ ಅನುಸರಿಸಬೇಕಾಗಿದೆ. ಧರ್ಮಾಚರಣೆಗೆ ದ್ರವ್ಯದ ಅವಶ್ಯಕತೆಯಿಲ್ಲದಿದ್ದರೂ ಸಾಧನಗಳನ್ನೊದಗಿಸಲು ಮಾತ್ರ ದ್ರವ್ಯ ವ್ಯಯವು ಅನಿವಾರ್ಯವಾಗಿದೆ. ಯಾವ ಧರ್ಮಪ್ರಚಾರಕ್ಕೆ ಹೆಚ್ಚು ಧನಸಹಾಯವಿದೆಯೋ ಆ ಧರ್ಮವು ಬಹುಬೇಗನೇ ಪ್ರಚಾರದಲ್ಲಿ ಬರುತ್ತದೆಂಬುದು ಎಲ್ಲರಿಗೂ ಗೊತ್ತು. ಅದರಂತೆಯೇ ವೀರಶೈವಮತೋನ್ನತಿಗಾದರೂ ಧನಸಹಾಯವು ಅತ್ಯವಶ್ಯವಾಗಿ ಬೇಕಾಗಿದೆ. ಈಗಿನ ಕಾಲದಲ್ಲಿ ಧನಸಹಾಯವಿಲ್ಲದ ಧರ್ಮೋಪದೇಶವು ಯಾವ ಪ್ರಯೋಜನಕ್ಕೂ ಬರುವುದಿಲ್ಲ. ವೀರಶೈವಮತದ ಧರ್ಮಾಭ್ಯುದಯಕ್ಕಾಗಿ ಅನೇಕರು ಧಾರಾಳಹೃದಯದಿಂದ ಧನಸಹಾಯಮಾಡುತ್ತಿರುವರು. ಬಳ್ಳಾರಿಯ ಸಕ್ಕರೆ ಕರಿಬಸಪ್ಪನವರು, ಕೊಲ್ಲಾಪುರದ ವಾರದ ಮಲ್ಲಪ್ಪನವರು, ಮೈಸೂರು ವೀರಸಂಗಪ್ಪನವರು, ಯಾದಗಿರಿ ಚಂಕರಪ್ಪನವರು, ಬೆಂಗಳೂರಿನ ಗುಬ್ಬಿ ತೋಟದಪ್ಪನವರು, ಬುಳ್ಳಪ್ಪನವರು, ದುಬಲಗುಂಡಿ ಚರಬಸಪ್ಪನವರು, ಕೊಲ್ಹಾಪುರದ ಶ್ರೀಪತಿ ಶೋಲಾಪುರ ಸಿದ್ಧಪ್ಪನವರು ಇವರೇ ಮೊದಲಾದವರು ಧನಸಹಾಯವನ್ನಿತ್ತು ಧರ್ಮಸುಧಾರಣಕಾರ್ಯವನ್ನು ಮುಂದಕ್ಕೆ ಸಾಗಿಸುತ್ತ ಬಂದರು. ಇವರೆಲ್ಲರ ಉಪಕಾರವು ಸಮಾಜಕ್ಕೆ ಚಿರಸ್ಮರಣೀಯವಾಗಿದೆ. ಅನೇಕ ಉಪಾಯಗಳಲ್ಲಿ "ಗುರುಕುಲಸ್ಥಾಪನ"ವೆಂಬುದೊಂದು ಸರ್ವಪ್ರಥಮಸಾಧನವಾಗಿದೆ. ಆದರೆ ಪೂರ್ವಾಚಾರ್ಯಸಂಪ್ರದಾಯಾನುಗತವಾದ ಪಾಠಶಾಲೆಗಳು ಪ್ರತಿನಗರಗ್ರಾಮಗಳಲ್ಲಿಯೂ ಕಂಡುಬರುತ್ತಿರುವಾಗ ಇನ್ನೇಕೆ ಗುರುಕುಲಗಳು? ಎಂದು ಶಂಕಿಸಬಹುದು. ಮಾಸಿದ ವಸ್ತುಗಳನ್ನು ತೊಳೆಯಲು ಬೇರೊಂದು ಸಂಸ್ಕಾರವಿರಬೇಕಷ್ಟೇ? ಈಗ ಪ್ರಾಬಲ್ಯದಿಂದಲೂ ಉಪಕರಣಶಕ್ತಿಗಳಿಂದಲೂ, ಅನ್ಯಾಕ್ರಮಣ

(ಆರನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಆಗಸ್ಟ ತಾ|| ೯ನೆಯ ಸೋಮವಾರ

ದಾನಶೂರ ಶ್ರೀಸಿದ್ಧಯ್ಯನವರ ಉದಾರದಾನ.

ಶ್ರೀಜಗದ್ಗುರು ಪಂಚಾಚಾರ್ಯರಿಂದ ಸ್ಥಾಪಿತವಾದ **ವೀರಶೈವಮತಸಾಮ್ರಾಜ್ಯವು ಪೂರ್ವಕಾಲದಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ** ವ್ಯಾಪಿಸಿ ವಿಶೇಷ **ವೈಭವದೊಡನೆ** ಮೆರೆದ ವಿಷಯವು ಪ್ರಾಚೀನಗ್ರಂಥಗಳಿಂದ **ವೇದ್ಯವಾಗುವುದು** ಆದರೆ ಕಾಲಪ್ರಭಾವದಿಂದ **ಈ** ಸಾಮ್ರಾಜ್ಯವು ಕ್ಷೀಣೋನ್ಮುಖವಾಗುತ್ತ ಬಂದು **ಈಗೀಗಂತೂ ಅತ್ಯಂತ** ಹೀನಾವಸ್ಥೆಯೊಳಗಾಗಿರುವದು. **ಈ ಮತವು ಇಷ್ಟು** ಹೀನಾವಸ್ಥೆಗೆ ಬರಬೇಕಾದರೆ **ಧರ್ಮಾಧಿಕಾರಿಗಳಾದ** ಗುರುವರ್ಗದವರ ಅಜಾಗರೂ**ಕತೆಯೇ ಮೂಲಕಾರಣವೆಂದು** ನಿಸ್ಸಂಶಯವಾಗಿ ಹೇಳಬಹುದಾಗಿದೆ. ಪೂರ್ವಕಾಲದ ಗುರುವಂಶೀಯರು **ಧಾರ್ಮಿಕವಿದ್ಯಾಸಂಪನ್ನರಾಗಿ** ಸದಾಶಿಷ್ಯೋದ್ಧಾರಕಾರ್ಯದಲ್ಲಿ **ತೊಡಗಿರುತ್ತಿದ್ದರು** ಈ ಕಾಲದವರು ಅದಕ್ಕೆ **ತಿಲಾಂಜಲಿಯನ್ನಿತ್ತು** ಸ್ವೇಚ್ಛಾಚಾರಿಗಳಾಗಿ ವರ್ತಿಸಹತ್ತಿದುದರಿಂದ ಧರ್ಮದ ನಿಯಮಗಳೆಲ್ಲವೂ ನಾಶವಾಗಿ **ಸರ್ವತ್ರ ನಾಸ್ತಿಕ್ಯವು** ನರ್ತನಮಾಡಲಿಕ್ಕಾರಂಭಿಸಿತು ಕೇವಲ ಧರ್ಮಸುಧಾರಣೆಗಾಗಿಯೇ ಪಟ್ಟವನ್ನು ಕಟ್ಟಿ**ಕೊಂಡಿರುವ** ಶ್ರೀಪಟ್ಟಚರಮೂರ್ತಿಸ್ವಾಮಿಗಳವರು ಸಹ ವಿದ್ಯಾವಿಮುಖರಾಗಿ ಲೌಕಿಕಕಾರ್ಯಗಳಲ್ಲಿ ತೊಡಗಿ**ಬಿಟ್ಟರು**. ಗುರುವರ್ಗದವರು ಈ ರೀತಿಯಾಗಿ ವರ್ತಿಸಲಿಕ್ಕೆ ಹತ್ತಿದುದೇ ಅಧರ್ಮಾಭಿವೃದ್ಧಿಗೆ ಕಾರಣವಾಯಿತು ಧರ್ಮಸುಧಾರಣೆಯಾಗಬೇಕಾದರೆ ಪ್ರತಿಯೊಂದು ನಗರ ಗ್ರಾಮಗಳಲ್ಲಿರುವ ಗುರುವಂಶೀಯರೂ, **ಪಟ್ಟಚರಾಧಿಕಾರಿಗಳೂ** ಮುಖ್ಯವಾಗಿ ಧಾರ್ಮಿಕವಿದ್ಯೆಯನ್ನು ಕಲಿಯಬೇಕು. ಧರ್ಮಸುಧಾರಣೆಗೆ ಧಾರ್ಮಿಕವಿದ್ಯೆಯೇ ಮೂಲವಾಗಿರುವದು ಇತ್ತೀಚೆಗೆ ಈಶ್ವರಾನುಗ್ರಹದಿಂದ ಅಲ್ಲಲ್ಲಿ ಕೆಲಜನ ಪಟ್ಟಚರಮೂರ್ತಿಸ್ವಾಮಿಗಳವರು ಜನ್ಮವೆತ್ತಿ ಧಾರ್ಮಿಕವಿದ್ಯಾಪ್ರಚಾರಕ್ಕೋಸ್ಕರ ಕಾರ್ಯವನ್ನು ಮಾಡುತ್ತಿರುವದು ಅತ್ಯಂತ ಸ್ತೋತ್ರಾರ್ಹವಾಗಿದೆ ಅಸ್ತು!

ಸದ್ಯಃ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ|| ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರು ಧಾರವಾಡ ಡಿ|| ಪಂಚ ಪುರ ಗ್ರಾಮದ ಸಮೀಪದಲ್ಲಿ "ಮುಕ್ತಿಮಂದಿರ"ವೆಂಬ ಹೆಸರಿನಿಂದ ಒಂದು ಗುರುಕುಲವನ್ನು ಸ್ಥಾಪಿಸಿ ತನ್ಮೂಲಕ ಧರ್ಮಸುಧಾರಣೆಯ ಕಾರ್ಯವನ್ನು ಕೈಕೊಂಡಿರುವದು ಪರಮಾನಂದಕರವಾದ ವಿಷಯವಾಗಿದೆ ಇವರು ತಮ್ಮ ಶರೀರವನ್ನೆಲ್ಲಾ ಕೇವಲ ಧರ್ಮಾಭಿವೃದ್ಧಿಗಾಗಿಯೇ ಸವೆಸುತ್ತಿರುವ ವಿಷಯವು ಸರ್ವತ್ರ ಸುಪ್ರಸಿದ್ಧವೇ ಆದೆ ಇವರು ಕೈಗೊಂಡಿರುವ **ಈ ಮಹಾಕಾರ್ಯವನ್ನು** ಕಂಡು ಆ ಪ್ರಾಂತದ ಭಕ್ತ**ಮಾಹೇಶ್ವರರು** ಯಥಾಶಕ್ತಿ ಸಹಾಯಮಾಡುತ್ತಿರುವದು ಅತ್ಯಂತ ಸ್ತುತ್ಯವಾಗಿರುವದು. ಆದರಲ್ಲಿ ಲಕ್ಷ್ಮೇಶ್ವರ ತಾ|| ಸಿಗ್ಲಿಗ್ರಾಮದ ಶ್ರೀಮಂತ ಕೊಳ್ಳಮಠದ ಸಿದ್ಧಯ್ಯನವರು ಈ ಗುರುಕುಲಕ್ಕಾಗಿ **೨೫,೦೦೦** ರೂಪಾಯಿಗಳ ವಾಗ್ದಾನಮಾಡಿರುವದನ್ನು ಕೇಳಿದರೆ ಯಾವ ಧರ್ಮಾಭಿ**ಮಾನಿಗೆ ತಾನೇ ಸಂತೋಷವು ಉಕ್ಕೇರಲಿಕ್ಕಿಲ್ಲ? ಇಂತಹ ಧರ್ಮಾತ್ಮರಿಂದಲೇ ಧರ್ಮೋದ್ಧಾರವಾಗ ಬೇಕಾಗಿದೆ. ಯಾರ ಪ್ರೇರಣೆಯೂ ಇಲ್ಲದೆ ತಮ್ಮ ಅಂತರಾತ್ಮಪ್ರೇರಣೆಯಿಂದಲೇ ಇಷ್ಟು ದ್ರವ್ಯವನ್ನು ದಾನ ಮಾಡಬೇಕಾದರೆ ಇದು ಬಹು ಜನ್ಮಕೃತಪುಣ್ಯಪ್ರಭಾವವೆಂದೇ ಹೇಳಬೇಕಾಗಿದೆ. ಈ ದಾನಶೂರರು ಧರ್ಮಾಭಿವೃದ್ಧಿಗಾಗಿ ಮಾಡಿದ ಮಹಾದಾನದ ಸಂತೋಷಕ್ಕಾಗಿ ಆ ಪ್ರಾಂತದವರೆಲ್ಲರೂ ಸಭೆಸೇರಿ ಈ ಧರ್ಮಾತ್ಮರಿಗೆ ಸನ್ಮಾನವನ್ನುಂಟುಮಾಡಿದ ವಿಷಯವು** ನವಿಸ್ಮಾರದ ಪತ್ರಿಕೆಯಲ್ಲಿ ವಿಶದವಾಗಿ ಪ್ರಕಟವಾಗಿದೆ. ಅದನ್ನು ಓದಿನೋಡಿದರೆ ಈ ಧರ್ಮಮೂರ್ತಿಗಳ ಧರ್ಮಾಭಿಮಾನವೂ, **ಸತ್ಯಸಂಧತೆಯೂ**, ದಯಾಳುತ್ವವೂ, ಔದಾರ್ಯವೂ ಸ್ಪಷ್ಟವಾಗಿ ಕಂಡುಬರುತ್ತವೆ. ಈ ಧರ್ಮಾತ್ಮರಂತೆಯೇ ಆ ಪ್ರಾಂತದಲ್ಲಿರುವ ಇತರ ಧರ್ಮಾತ್ಮರೂ ಸಹ ಗುರುಕುಲದ ಅಭಿವೃದ್ಧಿಗಾಗಿ ನಾನಾರೀತಿಯಿಂದ ಸಹಾಯ ಮಾಡುತ್ತಿರುವದನ್ನು ನೋಡಿದರೆ ಆ ಪ್ರಾಂತವೇ ಧರ್ಮಭೂಮಿಯೆಂದು ನಿಸ್ಸಂಶಯವಾಗಿ **ಹೇಳಬಹುದಾಗಿದೆ** ಇಂತಹ ಧರ್ಮಭೂಮಿಯಲ್ಲಿ ಧರ್ಮಾಭಿವೃದ್ಧಿಗಾಗಿ ಸ್ಥಾಪಿತವಾಗಿರುವ ಧಾರ್ಮಿಕ ಗುರುಕುಲವು ಧರ್ಮಾತ್ಮರ ಸಹಾಯ ವಿಶೇಷದಿಂದ ಬಾಲಚಂದ್ರನಂತೆ ದಿನೇ ದಿನೇ ಅಭಿವೃದ್ಧಿಯನ್ನು ಹೊಂದಲೆಂದೂ, ಈ ಮಹಾಕಾರ್ಯಕ್ಕೆ ಧರ್ಮಾಭಿಮಾನಿಗಳೆಲ್ಲರೂ ತಮ್ಮ ತಮ್ಮ ಶಕ್ತ್ಯನುಸಾರವಾಗಿ ಸಹಾಯ ಮಾಡಿ ಕೀರ್ತಿಭಾಜನರಾಗಲೆಂದೂ, ಶ್ರೀಜಗದಾಚಾರ್ಯರ ಆಶೀರ್ವಾದಬಲದಿಂದ ದಾನಶೂರರಿಗೆ ಆಯುರಾರೋಗ್ಯಭಾಗ್ಯಾದಿ ಸಕಲಸಂಪತ್ಸಮೃದ್ಧಿಯುಂಟಾಗಿ ಇವರ ವಂಶವು ಧರಾತಲದಲ್ಲಿ ಧಾರ್ಮಿಕತೇಜಸ್ಸಿನಿಂದ ಸದಾ ಬೆಳಗಲೆಂದೂ, ಧರ್ಮಸುಧಾರಣೆಯೇ ಮಹಾತಪಸ್ಸೆಂಬ ಮಹಾ ಮಂತ್ರವನ್ನು ಜಪಿಸುತ್ತ ಸದಾ ಧರ್ಮೋದ್ಧಾರದಲ್ಲಿಯೇ ಕಾಲವನ್ನು ಕಳೆಯುತ್ತಿರುವ ಶ್ರೀ ಷ|| ಬ್ರ|| ಗಂಗಾಧರಶಿವಾಚಾರ್ಯಸ್ವಾಮಿಗಳವರ ಸತ್ಸಂಕಲ್ಪವು ನೆರವೇರಿ ಧರ್ಮಚಂದ್ರಿಕೆಯು ಸರ್ವತ್ರ ವ್ಯಾಪಿಸಿ ಸರ್ವರಿಗೂ ಆನಂದವನ್ನುಂಟುಮಾಡಲೆಂದೂ ಜಗನ್ನಿಯಾಮಕರಾದ ಶ್ರೀಜಗದ್ಗುರು ಪಂಚಾಚಾರ್ಯರನ್ನು ಅನನ್ಯಸಾಧಾರಣಭಕ್ತಿಭಾವದಿಂದ ಭಜಿಸುತ್ತೇವೆ

ಯುದ್ಧವಾರ್ತೆ.

ಇಟಲಿಯ ಮನೋಭಾವ

ಮುಸಲನಿಯ ಕೈಕೆಳಗೆ ಇಟಲಿಯ ಸೈನಿಕರು ಅರೆಮನಸ್ಸಿನಿಂದ ಹೋರಾಡುತ್ತಿದ್ದರು ಈಗ ಬಡೋಗ್ಲಿಯೋ ಮುಖಂಡತ್ವದಲ್ಲಿ ಸ್ಪಷ್ಟವಾದ ಬದಲಾವಣೆಗಳಾಗಿವೆ ಕೊನೆಯವರೆಗೂ ಕದನ ನಡೆಸಲು ಇಟಲಿ ಸೇನೆಯು ದೃಢ ನಿಶ್ಚಯವನ್ನು ಹೊಂದಿದೆ ಎಂದು ಹೇಳಲಾಗಿದೆ

ಎಂಟನೇ ಸೇನೆಯ ಪರಾಕ್ರಮ

ಬ್ರಿಟಿಷರ ಎಂಟನೇ ಸೇನೆಯು ಈಗ ಸಿಸಲಿಯಲ್ಲಿ ವೈರಿವರ್ಗವನ್ನು ಒರೆಸಿಬಿಡಲು ಭೈರವ ರೂಪತಾಳಿ ನುಗ್ಗಿದೆ ಶತ್ರುಗಳ ಪ್ರಬಲ ಪ್ರತಿಭಟನೆಯೂ ಪುಡಿಪುಡಿಯಾಗುತ್ತಿದೆ ಗೋರಿಂಗ್ ಡಿವಿಜ ಮತ್ತು ಜರ್ಮನ್ ಪ್ಯಾರಾಚ್ಯೂಟ್ ದಳಗಳೊಂದಿಗೆ ಈಗ ಘೋರ ಕದನ ನಡಸುತ್ತಿದೆ

ಮುಸೂಲಿನಿಯ ಬಂಧನ

ಇಟಲಿಯ ಫಾಸಿಸ್ಟ ಗ್ರಾಂಡ್ ಕೌನ್ಸಿಲ್ ಸಭೆಸೇರಿ, ಮುಸೂಲಿನಿ ರಾಜೀನಾಮೆಕೊಡಬೇಕೆಂದು ನಿರ್ಧರಿಸಿತು ಆದರೆ ಆತನು ರಾಜೀನಾಮೆಕೊಡದೆ ಯಾವುದೋ ಬಹುಮಾನವಿನಿಯೋಗ ಸಮಾರಂಭಕ್ಕೆ ಹೋದ ತಕ್ಷಣ ಬರಬೇಕೆಂದು ದೊರೆಗಳಿಂದ ಕರೆಬಂತು, ಮುಸೂಲಿನಿ ಬಂದು ದೊರೆಯ ಸಂಗಡ ಮಾತು ಮುಗಿಸಿದ ಕೂಡಲೇ ಸೇನಾಧಿಕಾರಿಗಳು ಆತನನ್ನು ದಸ್ತಗಿರಿಮಾಡಿದರು. ಮುಸೂಲಿನಿ, ಜ|| ಉಗೋಕ್ಯಾವೆಲಿರೋ ಮತ್ತು ಜ|| ಗಲ್ಲಿಯಟ್ಟಿ ಇವರನ್ನು ಬ್ರ್ಯಾಚ ಕೋಟೆಗೆ ಸಾಗಿಸಲಾಗಿದೆ ಫಾಸಿಸ್ಟ ವಿರೋಧಿಗಳನ್ನು ವೊಡಲು ಗಲ್ಲಿಗೇರಿಸುತ್ತಿದ್ದುದು ಅಲ್ಲಿ ಮುಸೂಲಿನಿಯ ಹೆಂಡತಿ ಡೊನ್ನಾರಾಕೇಲ್, ಆತನ ಮಗ ಪಿಟ್ಟೋರಿಯೋ, ಇನ್ನೊಬ್ಬ ಮಗನ ಹೆಂಡತಿ, ಆತನ ಮಗಳು ಎಡ್ಡಾ, ಆಕೆಯ ಗಂಡ ಕೌಂಟ್ ಸಿಯಾನ್ಸೋ ಇವರನ್ನೆಲ್ಲ ದಸ್ತಗಿರಿ ಮಾಡಲಾಗಿದೆ

ಇಟಲಿಗೆ ಎಚ್ಚರಿಕೆ

"ಮುಸಲಿನಿಯು ಅಧಿಕಾರ ಚ್ಯುತನಾಗಿ ಹಲವು ದಿನಗಳಾದವು ಈ ಕಾಲದಲ್ಲಿ ನೀವು ಬೇಕಾದನ್ನು ಮಾಡುತ್ತಿದ್ದೀರಿ, ಆದರೂ ಜರ್ಮನರಿನ್ನೇ ಇದ್ದಾರ ಬಡೋಗ್ಲಿಯೋ ಈಗ ಶಾಂತಿಗೆ ಬಂದರೆ ಜರ್ಮನರು ಬಲೆಗೆ ಸಿಕ್ಕಿ ಬೀಳುವರು. ಬಡೋಗ್ಲಿಯೋ ಸರ್ಕಾರ ಜಾಗ್ರತೆ ಕೆಲಸ **ಮಾಡಿದ್ದರೆ, ಜರ್ಮನರು ಇಟಲಿ**ಯಿಂದ ಓಡುತ್ತಿದ್ದರು ವಿಮಾನದಾಳಿ ನಿಲ್ಲಿಸಿದ್ದ **ಅವಧಿ** ಮುಗಿಯಿತು ಇನ್ನು ಹಗಲು **ರಾತ್ರಿ ದಾಳಿ** ನಡೆಯಲಿದೆ ರೈಲು ರಸ್ತೆಗಳೇ ಮುಂತಾದ **ಜರ್ಮನರಿರುವ** ಕ್ಷೇತ್ರಗಳಲ್ಲಿ ಯಾರೂ ಇರಲಾಗದು. ಜರ್ಮನಿಗಾಗಿ ನಿಮ್ಮ ಪ್ರಾಣವನ್ನು ಕಳೆದು **ಕೊಳ್ಳಬೇಡಿ**" ಎಂದು ಅಲ್ಜೀರಿಯಾ ರೇಡಿಯೋ ಇಟಲಿಯನ್ನು ಎಚ್ಚರಿಸಿದೆ

ಶರಣಾಗತರಾದರೆ ಶಾಂತಿ

ಜನರಲ್ ಐರ್ಸೆಹೋವರ್‌ರವರು ಇಟಲಿಗೆ "ಶರಣಾಗತರಾಗಿ ಬಂದರೆ ಶಾಂತಿಯ ಪ್ರಸ್ತಾಪ" ಎಂದು ತಿಳಿಸಿದ್ದರಷ್ಟೆ ಆದಕ್ಕೆ ಬಡೋಗ್ಲಿಯೋ **ಸರ್ಕಾರವು** ಕೆಲವು ಮಾರ್ಪಾಡುಗಳನ್ನು ಬೇಡಿ **ಶಾಂತಿ ಷರತ್ತುಗಳನ್ನು** ಕಳುಹಿಸಿತೆಂದೂ **ಬ್ರಿಟಿಷ್ ಸಂಗ್ರಾಮ ಮಂತ್ರಿ**ಮಂಡಲವು ಈ ಅಂಶವನ್ನು **ವಿಮರ್ಶಿಸಿ, ಜನರಲ್** ಐಸೆಹೋವರ್‌ರವರು ತಿಳಿಸಿರುವುದರಲ್ಲಿ **ಕೊಂಚವೂ** ಮಾರ್ಪಡಿಸಲು ಸಾಧ್ಯವಿಲ್ಲವೆಂದು **ನಿರ್ಧರಿಸಿದರೆಂದು** ಈ ವಿಚಾರವಾಗಿ ರೂಸ್‌ವೆಲ್ಟ್‌ರವರ **ಅಭಿಮತವನ್ನೂ** ಚರ್ಚಿಲ್‌ರವರು ಹೊಂದಿರುವರೆಂದೂ, **ಷರತ್ತಿಲ್ಲದೆ** ಸಂಪೂರ್ಣವಾಗಿ ಶರಣು ಬಂದರೆ ಸರಿ **ಇಲ್ಲವಾದರೆ** ತಮ್ಮ ದಂಡಯಾತ್ರೆ **ಪ್ರಯತ್ನವು ಕೊಂಚವೂ ಸಡಿಲ**ವಾಗಲಾರದು ತಡವೂ ಆಗದು ಎಂದು ಮಿತ್ರವರ್ಗವು ಘೋಷಿಸಿತೆಂದೂ ಹೇಳಲಾಗಿದೆ

ಬಡೋಗ್ಲಿಯೋ ಸರ್ಕಾರವೂ ಉರುಳುವುದಂತೆ!

ಇಟಲಿಯ ವಾತಾವರಣವು ಪ್ರತಿಕ್ಷಣ ಬದಲಾಯಿಸುತ್ತಿದೆ ಯಾವ ಕ್ಷಣ ಏನು ಪರಿವರ್ತನವಾಗುವುದೋ ಹೇಳುವಂತಿಲ್ಲ. ಬಡೋಗ್ಲಿಯೋರವರು ಸರ್ಕಾರ ಸ್ಥಾನ ವಹಿಸಿದ ಕೂಡಲೇ, ಶಾಂತಿಗಾಗಿ ರಾಯಭಾರಿಗಳನ್ನು ಕಳಿಸಿದಾರೆಂಬ ವಾರ್ತೆ ಹೊರಟ್ಟಿತು. ಆದರೆ **ಅದು** ನಿಜವಾಗಲಿಲ್ಲ ಮಿತ್ರದೇಶಗಳು ತಮ್ಮ **ಷರತ್ತುಗಳನ್ನು** ಸ್ಪಷ್ಟವಾಗಿ ತಿಳಿಸಿಬಿಟ್ಟಿವೆ ಅವುಗಳನ್ನು **ಸ್ವಲ್ಪವೂ ಮಾರ್ಪಡಿಸಲು** ಸಾಧ್ಯವಿಲ್ಲವೆಂದು **ಕೂಡ ಹೇಳಿಬಿಟ್ಟಿವೆ.**

ಬಡೋಗ್ಲಿಯೋರವರಿಗೆ **ಈ ಷರತ್ತುಗಳು ಒಪ್ಪಿಗೆ**ಯಾಗಿಲ್ಲವೆಂಬುದು ಸ್ಪಷ್ಟವಾಗಿದೆ ಆದಕ್ಕೇ ಅವರು ಸುಮ್ಮನೆ ಕಾಲ ತಳ್ಳುತ್ತಿದ್ದಾರೆ ಬ್ರಿಟಿಷ್ ಸೇನೆಗಳು ಇಟಲಿಯನ್ನು ಆಕ್ರಮಿಸದಂತಹ ರೀತಿಯಲ್ಲಿ **ಶಾಂತಿ** ಮಾಡಿಕೊಳ್ಳಬೇಕೆಂಬುದು ಅವರ **ಉದ್ದಿಷ್ಟವಿರುವಂತಿದೆ**. ಆದರೆ ಮಿತ್ರದೇಶಗಳು ತಮ್ಮ ಷರತ್ತುಗಳಿಂದ **ಸ್ವಲ್ಪವೂ** ಹಿಂದಟೆ ಹಾಕುವಂತಿಲ್ಲ ಬಡೋಗ್ಲಿಯೋ **ಅವುಗ**ಳನ್ನು ಅಂಗೀಕರಿಸಬೇಕು ಅದವಾ **ಮುಸೂಲಿನಿಯನ್ನೇ** ಹಿಂಬಾಲಿಸಬೇಕು ಇವೆರಡೇ ದಾರಿ. **ಈಗಾಗಲೇ** ಬಡೋಗ್ಲಿಯೋ ಬಲ **ಕಡಿಮೆಯಾಗುತ್ತಿದೆ. ಮಿತ್ರ**ದೇಶಗಳ ಷರತ್ತುಗಳನ್ನು **ಒಪ್ಪಿಕೊಳ್ಳುವಂತಹ ಬೇರೆ** ಸರ್ಕಾರ ಸ್ಥಾಪನೆಯಾದೀತೆಂಬ **ಭಾವನೆಯುಂಟಾಗಿದೆ** ಎಂದು ತಿಳಿದುಬರುತ್ತದೆ

ಸ್ಟಾಲಿನರೇ ಸೈನ್ಯ ನಡೆಸುತ್ತಿದ್ದಾರೆ

ರಷ್ಯಾ ರಣರಂಗದಲ್ಲಿ ಜರ್ಮನರ **ಪ್ರತಿದಾಳಿಯನ್ನು ಮುರಿಯಲು** ಸ್ಟಾಲಿನರೇ **ಸ್ವತಃ ಸೇನೆಯನ್ನು** ನಡೆಸುತ್ತಿರುವರೆಂದು ಹೇಳಲಾಗಿದೆ.

ಬಲವಾದ ಪೆಟ್ಟುಕೊಡಲು ಜರ್ಮನಿಯ ಪ್ರಯತ್ನ

ಹಿಟ್ಲರನು ಒರೆಲ್ ರಂಗದಲ್ಲಿ ತನ್ನ ಬಲವಾದ ಪಾಂಜರ್ ದಳಗಳಿಂದ ರಷ್ಯರ **ಮುನ್ನಡೆಯನ್ನು ತಡೆ**ಯಲು ಪ್ರಯತ್ನಿಸುತ್ತಿದ್ದಾನೆ ಆದರೆ **ಅದರಿಂದ ಅವನ** ನಷ್ಟ ಮಿತಿಮೀರಿದೆ! ಹಗಲು **ರಾತ್ರಿಯೆನ್ನದೆ ಒರೆಲ್** ರಂಗದಲ್ಲಿ ಕದನವಾಗುತ್ತಿದೆ **ಲೆನಿಗ್ರಾಡ್ ಬಳಿಯಲ್ಲಿ**ಯೂ ಕದನವಾಗುತ್ತಿದೆ **ವೊರೊಷಿಲೊವ್ ಗ್ರಾಡ್** ನಗರಕ್ಕೆ ನೈರುತ್ಯದಲ್ಲಿ **ಡೊನೆಟ್ಜ್ ಕ್ಷೇತ್ರದಲ್ಲಿಯೂ** ಸಹ ಜರ್ಮನರು ಅಧಿಕ ಪ್ರಮಾಣದಲ್ಲಿ **ಕಾರ್ಯಾಚರಣೆ** ಆರಂಭಿಸಿದ್ದಾರೆ

ಜರ್ಮನ್ ಸ್ತ್ರೀಯರ ಗೋಳು

ಯುದ್ಧದಲ್ಲಿ ಗಂಡಂದಿರನ್ನು ಕಳಕೊಂಡ ೧೦೦೦ ಜರ್ಮನ್ ವಿಧವೆಯರು ಶಾಂತಿಗಾಗಿ ಬರ್ಲಿನ್ನಿನಲ್ಲಿ ಸಂಗ್ರಾಮ ಕಚೇರಿ ಮುಂದೆ ಪ್ರದರ್ಶನ ನಡೆಸಿದರು. ತ್ರುಬಂಡಿಗಳ ಪಡೆ ಬಂದು ಇವರೆಲ್ಲರನ್ನೂ ಚದುರಿಸಿತು!

ಸಲಿ ದಂಡಯಾತ್ರೆಯಲ್ಲಿ ಭಾರತೀಯರ ಪಾತ್ರ

[illegible]ಯಲ್ಲಿ ಮೊದಲು ಮಿತ್ರರು ಬಂದಿಳಿದಾಗ ಭಾರತೀಯ ಪಡೆಗಳು ಪ್ರಮುಖಪಾತ್ರ ವಹಿಸಿದ್ದವೆಂದು ಈಗ ಮಿತ್ರ ಪ್ರಕಟನೆ ತಿಳಿಸಿದೆ. ಸಮುದ್ರ ದಂಡೆಯಲ್ಲಿ ನೌಕೆಗಳಿಂದ ಸರಪರಾಯಿ ಇಳಿಸುವುದು, ಪಡೆಗಳು ಇಳಿಯಲು ಸೌಕರ್ಯ ಕಲ್ಪಿಸವುದು; ಶತ್ರುದಾಳಿಗಳಿಂದ ಆತ್ಮರಕ್ಷಣೆ ಮಾಡಿಕೊಂಡು, ರಾತ್ರಿವೇಳೆ ಶತ್ರು ಪ್ಯಾರಚ್ಯೂಟ್ ದಳಗಳ ಕಾರ್ಯಾಚರಣೆಯನ್ನು ನಿರ್ಮೂಲಗೊಳಿಸುವುದು, ಇವೇ ಈ ಪಡೆಗಳು ಮಾಡಿದ ಬಹುಮುಖ್ಯ ಕೆಲಸವೆಂದು ಆ ಪ್ರಕಟನೆ ವಿವರಿಸಿದೆ.

ಟೋಜೋ-ಹಾಷಿಮೋಟೋ ಭಿನ್ನಾಭಿಪ್ರಾಯ

ಜಪಾನಿನ ಮುಖ್ಯಪ್ರಧಾನ ಟೋಜೋ ಮತ್ತು ತರುಣ ಚಳವಳಿ ನಾಯಕ ಹಾಷಿಮೋಟೋಗಳಿಗೆ ಭಿನ್ನಾಭಿಪ್ರಾಯವುಂಟಾಗಿದೆ ಜಪಾನ್ ಚಕ್ರವರ್ತಿಯನ್ನು ಬಿಟ್ಟರೆ ಅಧಿಕಾರಚಲಾಯಿಸುವುದರಲ್ಲಿ ಹಾಷಿಮೋಟೋ ಸ್ಥಾನವೇ ಎರಡನೆಯದು. ಟೋಜೋ ಸ್ಥಾನವೂ ಸಾಮಾನ್ಯವಾದುದಲ್ಲ. ಶ್ವೇತವರ್ಣೀಯರ ಕೊನೆಯ ಪಿಳ್ಳೆಯೂ ಇರಲಾಗದೆಂಬ ಚಳುವಳಿ ಆರಂಭಿಸಿದವನೇ ಹಾಷಿಮೋಟೋ ೧೯೩೬ರಲ್ಲಿ ಜಪಾನಿನಲ್ಲಿ ನಡೆದ ರಕ್ತಕ್ರಾಂತಿಗೆ ಇವನೇ ಸೂತ್ರಧಾರಿ ಕೊಲೆಯನ್ನು ಕ್ರೀಡೆಯಾಗಿ ಭಾವಿಸಲು ಯುವಕರ ಮನೋಭಾವವನ್ನು ತಿರುಗಿಸಿದ ಕೀರ್ತಿಯೂ ಇವನದೇ. ಇವನಿಗೂ ಯುದ್ಧಮಂತ್ರಿಯಾದ ಟೋಜೋವಿಗೂ ಮಧ್ಯೆ ಬಂದಿರುವ ಭಿನ್ನಾಭಿಪ್ರಾಯ ವೈಮನಸ್ಯಗಳಿಂದ ಜಪಾನಿನ ಭವಿಷ್ಯವು ಏನಾಗುವದೋ ಎಂದು ಜಪಾನರು ಕಳವಳಗೊಂಡಿರುವರೆಂದು ಹೇಳಲಾಗಿದೆ

ವೈಸರಾಯರ ಭಾಷಣ

ಭಾರತದ ವೈಸರಾಯರಾಗಿರುವ ಲಾರ್ಡ್ ಲಿನ್‌ಲಿತ್‌ಗೌರವರು ಕೇಂದ್ರ ಶಾಸನ ಸಭೆಗಳ ಸಂಯುಕ್ತ ಸಭೆಯಲ್ಲಿ ಮಾಡಿದ ಭಾಷಣದಲ್ಲಿ ‘‘ಭಾರತದ ಮುಖಂಡರು ಕಲೆತು ಯುದ್ಧಾನಂತರ ಭಾರತದ ರಾಜ್ಯಾಂಗ ಸ್ಥಿತಿ ಹೇಗಿರಬೇಕೆಂದು ಈಗಲೇ ನಿಶ್ಚೈಯಿಸಬೇಕು ಭಾರತೀಯರ ಮುಂದಿರುವ ರಾಜಕೀಯ ಕ್ಷೇತ್ರವು ವಿಶಾಲವಾಗಿದೆ. ಬ್ರಿಟಿಷ್ ಸರ್ಕಾರವು ಮುಂದಿಡುವ ಸಲಹೆಗಳು ಅಂಗೀಕಾರಕ್ಕೆ ಸಾಧ್ಯವಾದುವಲ್ಲವೆಂದು ತೋರಿದರೆ, ಭಾರತೀಯರೇ ಸೇರಿ ಬೇರೊಂದು ಯೋಜನೆಯನ್ನು ಬ್ರಿಟಿಷ್ ಸರ್ಕಾರದ ಮುಂದಿಡಲು ಯಾವ ಅಭ್ಯಂತರವೂ ಇರುವುದಿಲ್ಲ. ತಮ್ಮ ಒಳ ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಳ್ಳುವ ಜವಾಬ್ದಾರಿ ಭಾರತೀಯರಿಗೇ ಸೇರಿದ್ದು. ಸಮ್ರಾಟ ಸರ್ಕಾರವು ಈ ಬಗ್ಗೆ ತನ್ನ ಸಂಪೂರ್ಣ ಸಹಾಯವನ್ನು ನೀಡಲು ಸಿದ್ಧವಾಗಿದೆ'' ಎಂದು ಹೇಳಿದರು.

ಬಟ್ಟೆದಾಸ್ತಾನಿನ ಮೇಲೆ ಸರ್ಕಾರದ ಆಜ್ಞೆ

“ಇಂಡಿಯಾ ಸರ್ಕಾರದವರು ಆಕ್ಟೋಬರ್ ೩೧ ರೊಳಗಾಗಿ ಬಟ್ಟೆಯ ಹಳೆಮಾಲನ್ನು ಮಾರಿಬಿಡಬೇಕೆಂದು ಮಾಡಿರುವ ಆಜ್ಞೆಯನ್ನು ಬದಲಾಯಿಸಲು ಸಾಧ್ಯವಿಲ್ಲ; ಈ ಅವಧಿಯನಂತರವೂ ದಾಸ್ತಾನಿರುವ ಹಳೆಯ ಮಾಲನ್ನು ಅಂದರೆ ಆಗಸ್ಟ್ ೧ ಕ್ಕಿಂತ ಹಿಂದೆ ತಯಾರಾದ ಮಾಲನ್ನು--ಸರ್ಕಾರದವರು ವಶಪಡಿಸಿಕೊಳ್ಳಬಹುದು. ಅಲ್ಲದೆ ಹಾಗೆ ದಾಸ್ತಾನು ಮಾಡಿದವರ ಮೇಲೆ ಕಾನೂನು ಬದ್ಧವಾದ ರೀತಿಯಿಂದ ಕೋರ್ಟು ನಡವಳಿಕೆಯನ್ನೂ ನಡೆಸಲು ಅವಕಾಶವಿದೆ” ಎಂಬುದಾಗಿ ಕೇಂದ್ರ ಸರ್ಕಾರದ ಸರಪರಾಯಿ ಶಾಖೆಯು ಜಬ್ಬಲ್‌ಪುರದ ವರ್ತಕರ ಸಂಘದವರಿಗೆ ಬರೆಹ ಮೂಲಕ ತಿಳಿಸಿದೆಯೆಂದು ಹೇಳಲಾಗಿದೆ.

ಆಫ್ರಿಕಾ ದಂಡಯಾತ್ರೆಯಲ್ಲಿ ಭಾರತೀಯ ಸೈನಿಕರ ಸಾಹಸಗಳು

ಮೂರು ವರ್ಷಗಳಕಾಲ ಆಫ್ರಿಕದ ರಣಕ್ಷೇತ್ರಗಳಲ್ಲಿ ಕಾದಿ ಭಾರತದ ನಾಲ್ಕನೆಯ ದಳವು ಇಂದು ಅಭೂತಪೂರ್ವವಾದ ವಿಜಯವನ್ನು ಸಾಧಿಸಿದೆ ಇಷ್ಟು ದೀರ್ಘಕಾಲ ಭಾರತದ ಇನ್ನು ಯಾವ ದಳವೂ ಸಹ ಇಂತಹ ಕಠಿಣ ಸನ್ನಿವೇಶದಲ್ಲಿ ಕಾದಾಡಿ ಇಂತಹ ಕೀರ್ತಿಯನ್ನು ಗಳಿಸಿಲ್ಲ. ಈ ಸೈನ್ಯವು ಮಹಾ ಸಾಹಸದಿಂದ ಮಹಾ ಶಕ್ತಿಯುತವಾದ ಶತ್ರುಗಳೊಂದಿಗೆ ಹಲವಾರು ಪ್ರತಿಕೂಲ ಸನ್ನಿವೇಶಗಳಲ್ಲಿ ಕಾದಿ ವಿಜಯವನ್ನು ಗಳಿಸಿದುತ್ತಾರೆ ಇವರ ವಿಜಯದ ಮಹತ್ವವನ್ನು ಮನಗಾಣಲು ಇಟಲಿಯು ಲಿಬಿಯಾದಲ್ಲಿ ಹಲವು ವರ್ಷಗಳಿಂದಲೂ ಯುದ್ಧ ಸಿದ್ಧತೆಗಳನ್ನು ಮಾಡುತ್ತಿದ್ದುದು, ಅನಿರೀಕ್ಷಿತವಾಗಿ ಫ್ರಾನ್ಸದೇಶದ ಪತನ ಮತ್ತು ಇಟಲಿಯವರು ಹಠಾತ್ತಾಗಿ ಫ್ರಾನ್ಸಿನ ಮೇಲೆ ಯುದ್ಧ ಹೂಡಿದುದು, ಇವೇ ಮೊದಲಾದುವುಗಳ ಹಿನ್ನೆಲೆಯಲ್ಲಿ ಈ ದಂಡಯಾತ್ರೆಯನ್ನು ಗಮನಿಸಬೇಕು ಮೊದಲು ಈಜಿಪ್ಟಿಗೆ ಭಾರತೀಯದಳಗಳನ್ನು ಕಳುಹಿಸಿದಾಗ ಹೀಗೆಲ್ಲ ಆಗುವುದೆಂದು ಯಾರೂ ಅರಿತಿರಲಿಲ್ಲ

ಆದರೆ ಮಿತ್ರಪಕ್ಷದವರು ಮನುಷ್ಯ ಪ್ರಯತ್ನಗಳೆಲ್ಲವನ್ನು ಬಿಡದೆ ಮಾಡಿದ್ದರು 1940 ನೇ ಇಸವಿಯ ಪ್ರಾರಂಭದಲ್ಲಿಯೇ ಭಾರತೀಯ ಸೇನೆಗಳು ಸುಸಜ್ಜಿತವಾಗಿದ್ದುವು ಆಫ್ರಿಕಕ್ಕೆ ಹೋಗಿ ಇಳಿದೊಡನೆಯೇ ಯುದ್ಧಕ್ಕೆ ಸಿದ್ಧವಾಗಿದ್ದುವು ಇಟಲಿಯವರು ಈಜಿಪ್ಟಿನ ಮೇಲೆ ದಂಡೆತ್ತುವರೆಂಬ ಸೂಚನೆಯು ಕಂಡೊಡನೆಯೇ ಭಾರತೀಯ ನಾಲ್ಕನೆ ಸೇನೆಯನ್ನು ಪಶ್ಚಿಮದ ಮರಳುಗಾಡಿನ ಕಡೆಗೆ ಸಾಗಿಸಲಾಯಿತು. ಯುದ್ಧವಾರಂಭವಾಗಿ ಸರಿಯಾಗಿ ಒಂದು ವರ್ಷಕ್ಕೆ ಇಟಲಿಯ ದಂಡನಾಯಕನು ಈಜಿಪ್ಟಿನಮೇಲೆ ನುಗ್ಗಿದನು ಆದರೆ ಈಜಿಪ್ಟಿನೊಳಗೆ 60 ಮೈಲಿ ದೂರದಲ್ಲಿರುವ ಸಿಡಿಬರಾನಿ ಎಂಬಲ್ಲಿಗೆ ನಿಂತುಬಿಟ್ಟನು. ಆದರೆ ಜನರಲ್ ವೇವೆಲ್‌ನು ಅದ್ಭುತವಾದ ರೀತಿಯಲ್ಲಿ ಪ್ರತಿದಾಳಿಯನ್ನು ನಡೆಯಿಸಿ ಶತ್ರುವನ್ನು ಸೋಲಿಸಿ ಓಡಿಸಿದನು. ಭಾರತೀಯರು ೩೦,೦೦೦ ಶತ್ರು ಖೈದಿಗಳನ್ನು ಹಿಡಿದು ಜಗತ್ತನ್ನೇ ಬೆರಗುಗೊಳಿಸಿದರು ಆಸ್ಟ್ರೇಲಿಯನರು ಸಿಡಿಬರಾನಿ ಕೋಟೆಯನ್ನೇ ಹಿಡಿದು ಬಿಟ್ಟರು. ಇಷ್ಟಕ್ಕೆ ನಿಲ್ಲದೆ ಮಿತ್ರಸೇನೆಗಳು ಸಿರೆನೈಕಾವನ್ನೇ ಗೆದ್ದುಬಿಟ್ಟರು

ಪೂರ್ವ ಆಫ್ರಿಕಾ

ನಾಲ್ಕನೇ ಸೇನೆಯನ್ನು ಈ ಮಧ್ಯೆ ಪೂರ್ವ ಆಫ್ರಿಕಾದಲ್ಲಿರುವ ೫ ನೇ ಸೇನೆ ಮತ್ತು ಬ್ರಿಟಿಷ್ ದಳಗಳ ಸಹಾಯಕ್ಕೆ ಕಳುಹಿಸಲಾಯಿತು ೧೯೪೧ ನೇ ಇಸವಿ ಜನವರಿ ೧೯ನೇ ತಾರೀಖಿನ ದಿನ ಎರಡು ಡಿವಿಜನುಗಳೂ ಏಕಕಾಲದಲ್ಲಿ ದಾಳಿಯನ್ನಾರಂಭಿಸಿ ಎಂತ್ರಿಯದಲ್ಲಿ ಶತ್ರು ಸೇನೆಗಳನ್ನು ಸದೆಬಡೆದು ಅಗರ್ಡತ್ ಮತ್ತು ಬರೆಂಟವನ್ನು ಹಿಡಿದರು. ಈ ಎರಡು ಪ್ರದೇಶದಲ್ಲಿಯೂ ಬಲವಾದ ಯುದ್ಧವಾಯಿತು. ಈ ಯುದ್ಧದಲ್ಲಿ ಭಾರತೀಯ ಸೇನೆಗಳು ಅದ್ಭುತವಾದ ಶೌರ್ಯಸಾಹಸಗಳನ್ನು ಪ್ರದರ್ಶಿಸಿದವು ಆದರೆ ಶತ್ರು ಸೇನೆಗಳು ಕೆರೆನ್ ಕೋಟೆಯನ್ನು ಸೇರಿಬಿಟ್ಟುವು ಅಲ್ಲಿ ಘೋರವಾದ ಯುದ್ಧವನ್ನು ಮಾಡಿ ಅವರನ್ನು ಸಂಪೂರ್ಣವಾಗಿ ಸೋಲಿಸಲಾಯಿತು. ಇದರಿಂದ ಇಟಲಿಯ ಆಫ್ರಿಕದ ಚಕ್ರಾಧಿಪತ್ಯದ ಅಂತ್ಯಕಾಲವು ಸಮಿಪಿಸಿದಂತಾಯಿತು. ಅನಂತರ ವಿಜಯದ ಮೇಲೆ ವಿಜಯಗಳು. ಪಂಜಾಬಿ ಸೇನೆಗಳು ಬ್ರಿಟಿಷ್ ಸೋಮಾಲಿಲ್ಯಾಂಡನ್ನು ಪುನಃ ವಶಮಾಡಿಕೊಂಡುವು ಅಲ್ಲಿಂದ ಇನ್ನೊಂದು ಪಡೆಯು ಇಟಾಲಿಯನ್ ಸೋಮಾಲಿಲ್ಯಾಂಡನ್ನು ಆಕ್ರಮಿಸಿಬಿಟ್ಟುವು. ಅಲ್ಲಿಂದ ಸೇನೆಗಳು ಅಬಿಸೀನಿಯಾ ಮೇಲೆ ಉತ್ತರ ಮತ್ತು ದಕ್ಷಿಣ ದಿಕ್ಕಿನಿಂದ ದಾಳಿಯನ್ನಾರಂಭಿಸಿದುವು. ಇಟಲಿಯ ದಂಡನಾಯಕರಾದ ಡ್ಯೂಕ್ ಆಫ್ ಆಯೋಸ್ಟಾನು ಅಂಬಾಅಲಗಿಯಲ್ಲಿ ಶರಣಾಗತನಾದನು.

ಇದಾದಮೇಲೆ ಭಾರತದ ಸೇನೆಗಳು ಎಲ್ ಮಿಚೇಲಿ ಬಳಿ ಶತ್ರುವನ್ನು ಮಹಾ ಶಕ್ತಿಯಿಂದ ತಡೆದು ನಿಲ್ಲಿಸಿ ಬ್ರಿಟಿಷ್ ಸೇನೆಗಳು ಟೊಬ್ರೂಕನ್ನು ಸೇರಲು ಸಹಾಯ ಮಾಡಿದುವು.

1941 ನೇ ಅಕ್ಟೋಬರಿನಲ್ಲಿ ಮಿತ್ರ ಸೇನೆಗಳು ಮೊದಲಿನ ಸ್ಥಾನಗಳಿಗೆ ಬಂದಿದ್ದುವು. ಶತ್ರುಗಳು ಅಗಾಧವಾದ ಸಿದ್ಧತೆಗಳನ್ನು ಮಾಡಿದರು. ಶತ್ರುಗಳು ಟೊಬ್ರೂಕಿನಮೇಲೆ ದಾಳಿಯಿಡುವರೆಂದು ತಿಳಿದು ಭಾರತೀಯ ಸೇನೆಗಳು ಜೇಲೊ ಓಯಸಸ್ಸಿನ ಮಾರ್ಗವಾಗಿ ಶತ್ರುಗಳ ಮೇಲೆ ದಾಳಿಯನ್ನು ನಡೆಯಿಸಿ ಅವರನ್ನು ಡಿಸೆಂಬರಿನ ವೇಳೆಗೆ ಹಿಂದಕ್ಕಟ್ಟಿದವು.

ಟ್ಯೂನಿಸ್ಸು ನಗರದ ಪತನ.

ಟ್ಯೂನಿಸು ಮತ್ತು ಆಫ್ರಿಕಾ ಪತನದಿಂದ ಆಫ್ರಿಕಾದಲ್ಲಿ ಶತ್ರುಗಳ ಕೈವಾಡವೆಲ್ಲವೂ ಅಳಿಸಿದಂತಾಯಿತು. ಈ ಸಂಬಂಧದಲ್ಲಿ ನಡೆಯಿಸಿದ ದಾಳಿಯಲ್ಲಿ ಒಮ್ಮೆಯಾದರೂ ಭಾರತೀಯ ಸೇನೆಗಳು ಮುಂದಿಟ್ಟ ಹೆಜ್ಜೆಯನ್ನು ಹಿಂದಕ್ಕಿಡಲಿಲ್ಲ ಇಲ್ಲಿ ಪ್ರದರ್ಶಿಸಿದ ಧೈರ್ಯ ಸಾಹಸಗಳಿಂದ ಭಾರತೀಯ ಯೋಧರು ಜಪಾನಿನವರ ಮೇಲೂ ಸಹ ಅದೇರೀತಿ ವಿಜಯವನ್ನು ಗಳಿಸಬಹುದೆಂಬ ಭರವಸೆಯು ನಿಸ್ಸಂದೇಹವಾಗಿ ಮೂಡಿದೆ. ಈ ಯೋಧರ ಕೆಚ್ಚೆದೆಯೂ ಕಷ್ಟ ಸಹಿಷ್ಣುತೆಯೂ ಭಾರತದಲ್ಲಿ ಸಜ್ಜಾಗುತ್ತಿರುವ ಸೈನಿಕರಿಗೆ ಆದರ್ಶಪ್ರಾಯವಾಗಿರುತ್ತವೆ ಬರ್ಮಾ ಹಾಂಕಾಂಗು, ಮಲಯಾಗಳಲ್ಲಿ ಶತ್ರುಗಳ ಮೇಲಣ ಸೇಡನ್ನು ತೀರಿಸಿಕೊಳ್ಳಬೇಕಾಗಿದೆ ೪ನೇ ದಳದ ಸಾಹಸಗಳು ಎಂದೆಂದಿಗೂ ಭಾರತೀಯ ದಳಗಳವರಿಗೆ ಆದರ್ಶವಾಗಿರುವುವು. ಜರ್ಮನ್ ಯೋಧನು ಅಜೇಯನೆಂಬ ಮಾತನ್ನು ಭಾರತೀಯ ೪ನೇ ದಳದವರು ಅಳಿಸಿಬಿಟ್ಟರು ಇದೇರೀತಿ ಮೋಸಗಾರರಾದ ಜಪಾನರ ಸಿಪಾಯಿಯು ಅಜೇಯನೆಂಬ ಮಾತನ್ನಾದರೂ ಸಹ ಭಾರತೀಯ ಯೋಧರು ಅಳಿಸಿಬಿಡುವುದರಲ್ಲಿ ಸಂದೇಹವಿಲ್ಲ.

ಸ್ವೀಕಾರ

ಶಿವಮೊಗ್ಗ ಜಿ|| ಕುಬಟೂರು ಗ್ರಾಮದ ಪಟೇಲ್ ವೇ|| ವೀರಬಸಯ್ಯನವರ ಪುತ್ರ ಚಿ|| ಬಂಗಾರಸ್ವಾಮಿ ಮತ್ತು ಪುತ್ರಿ ಚಿ|| ಸೌ|| ಅನ್ನಪೂರ್ಣಾಬಾಯಿ ಇವರ ದೀಕ್ಷಾ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿ ಮತ್ತು ಸದರಿಯವರ ದ್ವಿತೀಯ ಪುತ್ರ ಚಿ|| ಚನ್ನಬಸವಯ್ಯ ತೃತೀಯ ಪುತ್ರ ಚಿ|| ಬಂಗಾರಸ್ವಾಮಿ ಇವರುಗಳ ವಿವಾಹ ಸಮಾರಂಭದಲ್ಲಿ ಸಮರ್ಪಿಸಿದ 3 ರೂಪಾಯಿಗಳು ಮತ್ತು ಶಿಕಾರಿಪುರ ತಾ|| ಕಲ್ಮನೆ ಗ್ರಾಮದ ಮ|| ರಾ|| ಗಬ್ಬೂರು ವೀರಪ್ಪನವರ ಜೇಷ್ಠ ಪುತ್ರ ಚಿ|| ಸಿದ್ದಪ್ಪನಿಗೆ ಕುಬಟೂರು ಗ್ರಾಮದ ಮ|| ರಾ|| ಮುಷ್ಟಣ್ಣನವರ ಸಿದ್ದಪ್ಪನವರ ಪುತ್ರಿ ಚಿ|| ಸೌ|| ಚನ್ನಮ್ಮನನ್ನು ಕೊಟ್ಟು ನಡೆದ ವಿವಾಹ ಸಮಯದಲ್ಲಿ ಸಮರ್ಪಿಸಿದ 1 ರೂಪಾಯಿ ಒಟ್ಟು 5 ರೂಪಾಯಿಗಳು ವೇ|| ವೀರಬಸಯ್ಯನವರು ಪಟೇಲ್ ಇವರ ದ್ವಾರಾ ತಲ್ಪಿರುತ್ತವೆ.

ಲಕ್ಷ್ಮೇಶ್ವರ ತಾ|| ಸಿಗ್ಲಿ ಗ್ರಾಮದಲ್ಲಿರುವ ವೇ|| ಕೊಡ್ಲಮಠದ ದಾನಶೂರ ಸಿದ್ಧಯ್ಯನವರ ಸಮ್ಮಾನ ಸಮಾರಂಭದಲ್ಲಿ ಪ್ರಭಾಪೋಷಣಕ್ಕೋಸ್ಕರ ತೆಗೆಯಿಸಿದ 4 ರೂ. ಗಳು ವೇ|| ಸಿ. ಯಂ. ಗಂಗಾಧರಶರ್ಮರ ದ್ವಾರಾ ತಲ್ಪಿರುತ್ತವೆ

ಧಾರವಾಡ ಜಿ|| ಕಲಾದಗಿ ಬ್ರಹನ್ಮಠದಲ್ಲಿ ನೆರವೇರಿದ ಶ್ರೀ ಗುರುಲಿಂಗೇಶ್ವರ ಸ್ಮಾರಕೋತ್ಸವ ಸಮಾರಂಭದಲ್ಲಿ ಪ್ರಭಾ ಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಶ್ರೀ ರೇವಣಸಿದ್ಧಶಿವಾಚಾರ್ಯಪಟ್ಟದಸ್ವಾಮಿಗಳು ಚಿಕ್ಕಮುಣ್ಣೂರು ಇವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಸುಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

(೧ನೆಯ ಪುಟದಿಂದ ಮುಂದುವರಿದುದು)

ಪ್ರಕಾರಗಳಿಂದಲೂ ಕಳೆಗುಂದಿದ ಮಠೀಯದನ್ನು ಬೆಳಗಲು ಬೇರೊಂದು ಸಾಧನಶಾಲೆಯು ಬೇಕೇಬೇಕು. ಈಗ ಅಲ್ಲಲ್ಲಿ ಕೆಲವು ಗುರುಕುಲಗಳು ಆಗೊಳಿಸುತ್ತಿದ್ದರೂ ವಿಶಾಲವಾದ ವೀರಶೈವಪ್ರಪಂಚಕ್ಕೆ ಅವುಗಳಷ್ಟರಿಂದಲೇ ಪೂರ್ಣಫಲಸಿದ್ಧಿಯಾಗಲಾರದು. ಅಲ್ಲಲ್ಲಿ ಅನೇಕ ಗುರುಕುಲಗಳು ಸ್ಥಾಪಿತವಾಗಿ ಸರಿಯಾದ ಸಾಧನಸಂಪತ್ತಿಯೊಡನೆ ಸಾಮಾಜಿಕರಿಗೆ ಆಶ್ರಯ ದೊರೆತರೆ ಬಹಳ ಅನುಕೂಲವಾಗಬಹುದು. ಸಮಾಜಸುಧಾರಣಾ ಸಂಕಲ್ಪರಾದ ಪೂಜ್ಯ ಗುರುಮೂರ್ತಿಗಳಲ್ಲಿ ಒಬ್ಬರಾದ ಬೆಂಗಳೂರು ಶ್ರೀ [illegible] ಧರ್ಮಾಚಾರ್ಯಸ್ವಾಮಿಗಳವರು ಧರ್ಮಸುಧಾರಣೆಗಾಗಿ, ಧಾರವಾಡ ಜಿಲ್ಲೆಯಲ್ಲಿರುವ, ಪರಲಾಪುರ ಸಮೀಪದಲ್ಲಿ ಮಿರಜಸಂಸ್ಥಾನ, ಲಕ್ಷ್ಮೇಶ್ವರ ಸೀಮೆಯಲ್ಲಿ ಈಗೆರಡುವರ್ಷಗಳ ಹಿಂದೆ "ಶ್ರೀಮುಕ್ತಿಮಂದಿರಗುರುಕುಲ"ವನ್ನು ಸ್ಥಾಪಿಸಿದುದು ಸರಿಯಷ್ಟೆ? ಅಲ್ಲಿ ಅನೇಕಬಗೆಯ ಅನುಕೂಲತೆಗಳಾಗಬೇಕಾಗಿವೆ. ಕಾಲಮಾನವು ಕಠಿನವಾದುದರಿಂದ ಗುರುಕುಲದ ಕಾರ್ಯಗಳು [illegible] ಮಂದಗತಿಯಲ್ಲಿಯೇ ಸಾಗಿವೆ. ಭೂಪ್ರದೇಶವು ಗುರುಕುಲಕ್ಕೆ ಯೋಗ್ಯವಾಗಿಯೇ ಇದೆ. ಅಲ್ಲಿಯ ಹವಾಗುಣವು ಅತ್ಯುತ್ತಮವಾಗಿದೆ. ಸ್ವಲ್ಪ ಪ್ರಯತ್ನದಲ್ಲಿಯೇ ನೀರಿನ ಸಮೃದ್ಧಿಯು ಸಾಧ್ಯವಾಗುವಂತಿದೆ. ಈಗೊಂದು ಬಾವಿಯಲ್ಲಿ ನೀರು ಬಿದ್ದಿದೆ. ಮತ್ತೊಂದು ವಿಶಾಲಕಟ್ಟಡದ ಕಾರ್ಯವು ನಡೆದಿದೆ.

ಪರಲಾಪುರದ ಶ್ರೀಮಾನ್ ಭಂಡಿವಾಡ ಕೆಂಚಪ್ಪನವರು ಶ್ರೀಗಳ ಸಾನಿಧ್ಯದಲ್ಲಿ ೩ ಸಾವಿರ ರೂಪಾಯಿಗಳ ವ್ಯಯದಿಂದ ಒಂದು ಶಿಲಾ ಮಂದಿರವನ್ನು ರಚಿಸುತ್ತಿರುವರು. ಪಸುಪತಿಹಾಳದ ಶ್ರೀಮಾನ ಪಡಕಣ್ಣನವರ ಬಸಪ್ಪನವರು ೭೮ ಸಾವಿರ ರೂಪಾಯಿಗಳ ವ್ಯಯದಿಂದ ಒಂದು ಪಾಠಶಾಲೆಗೆ ತಕ್ಕ ಮಂದಿರವನ್ನು ನಿರ್ಮಿಸುತ್ತಿದ್ದಾರೆ. ಮುಂದೆ ಅನೇಕ ಅನುಕೂಲತೆಗಳಾಗಬೇಕೆಂಬ ಶ್ರೀಗಳ ಸಂಕಲ್ಪವಿರುವುದನ್ನು ತಿಳಿದು ಅನೇಕರು ಶಕ್ತ್ಯನುಸಾರವಾಗಿ ಸಹಾಯಸೇವೆಯನ್ನು ಸಲ್ಲಿಸಲು ಅಪೇಕ್ಷಿಸುತ್ತಿದ್ದಾರೆ. ಶ್ರೀಮಾನ್ ಕೊರದೂರ ಎಲ್ಲಪ್ಪ (ಭೂದಾನ ಮಾಡಿದವರು) ಯಲ್ಲಪ್ಪ ದೊಡ್ಡಲ್ಲಪ ಗದಿಗಪ್ಪ ಈ ಧರ್ಮಾಭಿಮಾನಿಗಳು ಸುಮಾರು ೫ ಸಾವಿರ ರೂಪಾಯಿ ಬೆಲೆಬಾಳುವ ಒಂದು ಶಿಲಾಮಂದಿರವನ್ನು ರಚಿಸಲು ಒಪ್ಪಿಕೊಂಡಿದ್ದಾರೆ. ಈ ಗುರುಕುಲದ ಮಹತ್ವವನ್ನು ತಿಳಿದು ಶಿಗ್ಗಲಿ [illegible]ಗಳಾದ ಶಿಗ್ಗಲ್ಲಿ ಮಠದ ಶ್ರೀ ಸಿದ್ಧಯ್ಯನವರು ಶ್ರೀಗಳನ್ನು ಉತ್ಸವದೊಡನೆ ತಮ್ಮ ಮನೆಗೆ ವಾಸ ಮಾಡಿಸಿಕೊಂಡು ಬಂದರು. ತಮ್ಮ ನಿವಾಸ ಗೃಹವನ್ನು ಶ್ರೀಗಳವರ ಪೂಜಾದಿಗಳಿಗಾಗಿ ಬಿಟ್ಟು ತಾವು ಬೇರೆ ಮನೆಯಲ್ಲಿರುವರು. ಇವರು ಶ್ರೀಮಂತರಾದರೂ ವಿನಯಪರರು. ೬೦ ವರ್ಷದ ವೃದ್ಧರಾದರೂ ಶಿವಪೂಜೆಯಲ್ಲಿ ತರುಣರಾಗಿರುವರು. ವ್ಯಾಪಾರ ಒಕ್ಕಲತನಕ್ಕೆ ದೊಡ್ಡ ಆಶ್ರಯವನ್ನಿತ್ತು ಅನೇಕರನ್ನು ಸಾಗಿಸುತ್ತಿರುವರು. ಇವರ ಸತ್ಯಪ್ರಿಯತೆಯು ಶ್ಲಾಘನೀಯವಾಗಿದೆ. ಸದಾಚಾರವು ಇವರ ಪ್ರಾಣಸ್ವರೂಪವಾಗಿದೆ. ಅಂಗಡಿಯಲ್ಲಿ ಕೆಲಸ ಮಾಡುವವರಿಗೆ ಈ ಮಹಾಶಯರು ಸರಿಯಾದ ವೇತನವನ್ನು ಕೊಡುತ್ತಿದ್ದರೂ ಅವರಿಗೆ ಸಾವಿರಗಟ್ಟಲೆ ರೂಪಾಯಿಗಳನ್ನು ಮನೆ ಭೂಮಿ ಮೊದಲಾದ ಸ್ಥಿರವಸ್ತುಗಳನ್ನು ಪಾರಿತೋಷಿಕವಾಗಿ ಕೊಡುವುದಲ್ಲದೆ ವಿಶ್ರಾಂತಿವೇತನ (ಪೆನ್‌ಷನ್) ವನ್ನು ಸಹ ಕೊಡುತ್ತಿರುವರು. ಇದು ಅನುಕರಣೀಯವಾದುದು. ಶಿವಪೂಜಾನಿಷ್ಠರ ಪೂಜಾದಿಗಳು ನಿರ್ವಿಘ್ನವಾಗಿ ನೆರವೇರಲೆಂದು ಅವರಿಗೆ ಭೂದಾನಾದಿ ಸೇವೆಯನ್ನು ಸಲ್ಲಿಸುವರು. ಶಿವಪೂಜಾಧುರಂಧರರಾದ ಅತಳಲೆ ಮಠದ ಶ್ರೀ॥ ಷ॥ ಬ್ರ॥ ಪಟ್ಟಾಧ್ಯಕ್ಷರವರಿಗೆ ೫ ಸಾವಿರ ರೂ ಬೆಲೆಯುಳ್ಳ ಗದ್ದೆಯನ್ನು ಸಲ್ಲಿಸಿದುದೇ ಇದಕ್ಕೆ ಸಾಕ್ಷಿಯಾಗಿದೆ. ಸಾಲಗಾರರಲ್ಲಿ ಸಹ ಇವರು ದಯೆತೋರುವರು. ಕಾಯ ವಾಕ್ ಮನ ಧನರೂಪಗಳಾದ ಚತುರ್ವಿಧ ಸೇವೆಯನ್ನು ಸಲ್ಲಿಸುವ ಸುಶೀಲ ಶಿರೋಮಣಿಗಳಾಗಿರುವರು. ಈ ಮಹಾಶಯರು ಶ್ರೀಮುಕ್ತಿಮಂದಿರ ಗುರುಕುಲದ ಬಯಕೆಗಳು ಈಡೇರಲು ಯಾವಾಗಲೂ ಆಲೋಚಿಸುತ್ತಿರುವರು. ಈ ಉದಾರಿಗಳು ಗುರುಕುಲದ ವೃದ್ಧಿಗಾಗಿ ಯಾರ ಪ್ರೇರಣೆಯೂ ಇಲ್ಲದೆ (೨೫,೦೦೦) ಇಪ್ಪತ್ತೈದು ಸಹಸ್ರರೂಪಾಯಿಗಳ ಸೇವೆಯನ್ನು ಸಲ್ಲಿಸಲು ಅತ್ಯಂತ ಸಂತೋಷದಿಂದ ಒಪ್ಪಿಕೊಂಡಿರುವರು. ನಿಜವಾದ ಧರ್ಮಾಭಿಮಾನಿಗಳಿಗೆ ಔದಾರ್ಯವು ಸ್ವಾಭಾವಿಕವಾದುದೇ ಆಗಿರುತ್ತದೆ. ಇವರ ದ್ವಿತೀಯ ಕುಮಾರರಾದ ಮುರಿಗಯ್ಯನವರು ಚಿಕ್ಕವರಾದರೂ ಜನಕರಂತೆಯೇ ಸದಾಚಾರ, ಔದಾರ್ಯಾದಿಗಳಿಂದ ವಿರಾಜಿಸುತ್ತಿರುವರು. ಶ್ರೀ ಸಿದ್ಧಯ್ಯನವರ ದಾನದ ವಾರ್ತೆಯು ತಿಳಿದೊಡನೆಯೇ ಇವರ ಧರ್ಮಾಭಿಮಾನವನ್ನೂ ಔದಾರ್ಯವನ್ನೂ ಪ್ರಕಾಶಪಡಿಸಲು ಊರಜನರೆಲ್ಲರೂ ಶ್ರೀಗಳವರ ಸನ್ನಿಧಿಯಲ್ಲಿಯೇ ಒಂದು ಸಮ್ಮಾನಸಮಾರಂಭವನ್ನು ಏರ್ಪಡಿಸಬೇಕೆಂದಾಲೋಚಿಸಿ [illegible] ಅನುಮತಿ ಪಡೆದರು. ಆಡಂಬರಪ್ರಿಯರಲ್ಲದ "ದಾನಶೂರ" ಸಿದ್ಧಯ್ಯನವರು ಅದನ್ನನುಮೋದಿಸದಿದ್ದರೂ ಇತರರಿಗೆ ಧರ್ಮಾಭಿಮಾನವು ಜನಿಸುವುದಕ್ಕಾದರೂ ಒಪ್ಪಬೇಕೆಂದು ಶ್ರೀಗಳು ಆಜ್ಞಾಪಿಸಲು ದಾನಶೂರರು ಸಮ್ಮತಿಸಿದರು. ಸಮ್ಮಾನ ಸಭಾಕಾರ್ಯವು ತಾ॥ ೧೨-೭-೪೩ ನೇ ಸೋಮವಾರ ಶಿಗ್ಲಿಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಲಕ್ಷ್ಮೇಶ್ವರ ನಿವಾಸಿಗಳಾದ ಸುಪ್ರಸಿದ್ಧ ಶ್ರೀಮಂತರೂ ಉದಾರಿಗಳೂ ದಕ್ಷಿಣ ಪ್ರೇಮಿಗಳೂ ಪ್ರಜಾ ಸಭೆಗಳೂ ಮಿರಜ ಸಂಸ್ಥಾನದ ನೂತನ ರಾಜ್ಯಾಂಗರಚನಾಸಮಿತಿಯ ಸದಸ್ಯರೂ ಆದ ಶ್ರೀಮಾನ್ ತಟ್ಟಿ ಬಸಪ್ಪನವರು ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಸಭಾಸ್ಥಾನವು ರಂಭಾಸ್ತಂಭಾದಿಗಳಿಂದ ಅಲಂಕರಿಸಲ್ಪಟ್ಟಿತ್ತು. ಶ್ರೀಗಳು ಅಧ್ಯಕ್ಷರು ದಾನಶೂರ ಸಿದ್ಧಯ್ಯನವರೇ ಮೊದಲಾದ ಪ್ರಮುಖರು [illegible] ಉತ್ತಮಗಾಯನದಿಂದ ಸಭಾಸ್ಥಳವು [illegible] ಮಂದಿರಕ್ಕೆ [illegible] ಸಭಾಕಾರ್ಯವು ಪ್ರಾರಂಭವಾಯಿತು. [illegible] ಆದಿಯಲ್ಲಿ [illegible] ಶ್ರೀಮದ್ [illegible] ಗುರುಸ್ವಾಮಿ [illegible] ಅಧ್ಯಕ್ಷರೂ ಆದ ಶ್ರೀಮಾನ್ ಮಲಗೂರ ಅಮರಪ್ಪನವರು ಅಪೇಕ್ಷಿತವಾದ ಭಾಷಣವನ್ನು ಮಾಡಿ ಸರ್ವರನ್ನು ಸ್ವಾಗತಿಸಿದರು. ತರುವಾಯ ಶ್ರೀಮಾನ ಭೋಗಣ್ಣನವರ ಮಹಾಜನಶೆಟ್ಟಿ, ವೇ॥ ಮ ರೇವಣಸಿದ್ಧಯ್ಯ ವಕೀಲರು, ಬಂಗ್ಗ ಸಂಸ್ಥಾನದ ಕಾಯದೆ ಕೌನ್ಸಿಲ್ ಮೆಂಬರರಾದ ಪರಲಾಪುರದ ಶ್ರೀಮಾನ್ ಕೊರದೂರ ಎಲ್ಲಪ್ಪನವರು, ಜೈನ ಸಮಾಜದ ಮುಂದಾಳುಗಳಾದ ನಗರ ಜಪ್ಪನವರು, ಶ್ರೀಮಾನ್ ಗಾದಗೂರ ವಕೀಲರು, ಪರೋಪಕಾರಧುರೀಣರಾದ ಗದಗಿನ ಬಸರಿಕರವರ ವೀರಪ್ಪನವರೇ ಮೊದಲಾದವರು ಗತ ಧರ್ಮ, ಗುರುಕುಲ, ದಾನಶೂರರ ಔದಾರ್ಯಾದಿ ವಿಷಯಗಳಲ್ಲಿ ಸ್ಫೂರ್ತಿದಾಯಕಗಳಾದ ಭಾಷಣಗಳನ್ನು ಮಾಡಿದರು. ಶ್ರೀಗಳವರು ಗುರುಕುಲ ಮತ್ತು "ದಾನಶೂರ" ಸಿದ್ಧಯ್ಯನವರ ಔದಾರ್ಯ ಎಂಬ ವಿಷಯದಲ್ಲಿ ದೀರ್ಘಕಾಲದವರೆಗೆ ಅನೋಪಮವಾದ ಭಾಷಣವನ್ನು ಮಾಡಿದರು. ಅಧ್ಯಕ್ಷರು ಧರ್ಮಜಾಗೃತಿಗಾಗಿ ಪ್ರಾರಂಭಿಸಲ್ಪಟ್ಟಿರುವ ಶ್ರೀಗಳವರ ಪ್ರಯತ್ನ ದಾನಶೂರರ ಔದಾರ್ಯ ಧರ್ಮಾಭಿಮಾನಿಗಳ ಕರ್ತವ್ಯ ಮೊದಲಾದ ಅಂಶಗಳನ್ನು ಕುರಿತು ಆಕರ್ಷಕವಾಗಿ ಉಪನ್ಯಾಸವನ್ನು ಮಾಡಿದರು. ಶ್ರೀಗಳು ದಾನಶೂರರಿಗೂ ಅವರ ಮಕ್ಕಳು ಮೊಮ್ಮಕ್ಕಳುಗಳಿಗೂ ಕುಶಲವನ್ನು ಕೋರಿ ಶ್ರೀ ಜಗದ್ಗುರು ವಿಶ್ವಾರಾಧ್ಯರ ರಜತವಿಗ್ರಹ, ಪುಷ್ಪಹಾರ, ಫಲಮಂತ್ರಾಕ್ಷತೆಗಳನ್ನಾಶೀರ್ವದಿಸಿದರು. ಈ ಸಮಯದಲ್ಲಿ ಲಕ್ಷ್ಮೇಶ್ವರ ಮೊದಲಾದ ಗ್ರಾಮದ ಜನಗಳು ದಾನಶೂರರ ಅಭಿನಂದನಪೂರ್ವವಾಗಿ ಅವರಿಗೆ ಪುಷ್ಪಮಾಲೆಗಳನ್ನರ್ಪಿಸಿದರು. ಅಧ್ಯಕ್ಷರಾದಿಯಾಗಿ ಸಮಸ್ತ ಮಾನ್ಯಮಹನೀಯರಿಗೆ ಫಲತಾಂಬೂಲಾದಿಗಳು ಅರ್ಪಿಸಲ್ಪಟ್ಟು ಸಭಿಕರೆಲ್ಲ ಪ್ರಸಾದ ಪ್ರದಾನವಾಯಿತು. ಪರಶಿವನ ಜಯಘೋಷದೊಡನೆ ಆ ದಿನದ ಕಾರ್ಯಗಳೆಲ್ಲವೂ ಸರ್ವಾಂಗಸುಂದರವಾಗಿ ನೆರವೇರಿದವು. ಅಂದಿನ ಕಾರ್ಯದಲ್ಲಿ ಶಿಗಲಿ ನಿವಾಸಿಗಳಾದ ಸಮಸ್ತ ಮಹನೀಯರೂ ಸ್ವಾಭಾವಿಕವಾದ ಸೌಹಾರ್ದದಿಂದ ಪರಿಶ್ರಮಿಸಿ ಕಾರ್ಯವನ್ನು ನಿರ್ವಹಿಸಿದರು. ದಾನಶೂರರಿಗೆ ಶ್ರೀ ಪರಮಾತ್ಮನು ದೀರ್ಘಾಯುರಾರೋಗ್ಯಾದಿ ಸಕಲ ಸಂಪತ್ಸಮೃದ್ಧಿಯನ್ನಿತ್ತು ಇತರರಿಗೆ ದಾನಶೂರರಂತಹ ಮಹೌದಾರ್ಯವನ್ನು ಕೊಡಲೆಂದೂ "ಶ್ರೀ ಮುಕ್ತಿಮಂದಿರ ಗುರುಕುಲವು ಇಂತಹ ಅನೇಕ ಸಹಾಯಗಳನ್ನು ಹೊಂದಿ ತನ್ನ ಗುರಿಯನ್ನು ಶೀಘ್ರದಲ್ಲಿಯೇ ಸಾಧಿಸಲೆಂದೂ ಅನನ್ಯ ಭಾವದಿಂದ ಪ್ರಾರ್ಥಿಸುತ್ತೇನೆ.

ಗುರವೇ [illegible] ಶಿವಧರ್ಮಾಯ ಭಕ್ತಿತಃ ।
ಯದ್ದಾನಂ [illegible] ಶೀಲಮುಚ್ಯತೇ ।

(ಚಂದ್ರಜ್ಞಾನಾಗಮ)

ಪಿ ಎಂ ಗಂಗಾದರಶರ್ಮಾ,
ಅಧ್ಯಾಪಕ,
ಶ್ರೀ ಮುಕ್ತಿಮಂದಿರ ಗುರುಕುಲ

ದೀಕ್ಷಾ, ವಿವಾಹ ಸಮಾರಂಭ

ಶಿವಮೊಗ್ಗ ಡಿ॥ ಆನವಟ್ಟಿ ಹೋಬಳಿ ಕುಬಟೂರು ಪಟೇಲ್ ವೇ॥ ವೀರಬಸಯ್ಯನವರ ತೃತೀಯ ಪುತ್ರ ಚಿ॥ ಬಂಗಾರಸ್ವಾಮಿಗೂ ಮತ್ತು ಅವರ ಪುತ್ರಿ ಚಿ॥ ಸೌ॥ ಅನ್ನಪೂರ್ಣಮ್ಮನಿಗೂ ಕಳೆದ ಫಾಲ್ಗುನ ಶು॥ ೧೧ ಈ ಶುಭದಿವದ ಗೌರಿಕೇರಿ ಮಠದ ಶ್ರೀ ವೀರರಾಜೇಂದ್ರ ಸ್ವಾಮಿಗಳ ನೇತೃತ್ವದಲ್ಲಿ ಶಿವದೀಕ್ಷಾ ಸಮಾರಂಭವು ನಡೆಯಿತು ಮತ್ತು ಸದರಿ ವೇ॥ ವೀರಬಸಯ್ಯನವರ ದ್ವಿತೀಯ ಪುತ್ರ ಚಿ॥ ಚನ್ನಬಸವಯ್ಯನಿಗೆ ಕಿತ್ತೂರು ಹಿರೇಮಠದ ವೇ॥ ಸಂಗಯ್ಯನವರ ಪುತ್ರಿ ಚಿ ಸೌ॥ ಚನ್ನಬಸಮ್ಮನನ್ನು ಅವರ ತೃತೀಯ ಪುತ್ರ ಚಿ॥ ಬಂಗಾರ ಸ್ವಾಮಿಗೆ ವೇ॥ ಶ್ರೀ ಚನ್ನವೀರಸ್ವಾಮಿ ಚಿಕ್ಕಮಠ ಬಿ ಎ ಎಲ್ ಎಲ್ ಬಿ ಹಾವೇರಿ ಇವರ ಪುತ್ರಿ ಚಿ॥ ಸೌ॥ ಸುಶೀಲಾಬಾಯಿಯನ್ನು ಕೊಟ್ಟು ವಿವಾಹವು ಇದೇ ವೈಶಾಖ ಶುದ್ಧ ೯ ಗುರುವಾರದ ದಿವಸ ಅತ್ಯಂತ ವೈಭವದೊಡನೆ ನೆರವೇರಿತು, ಈ ಮಹೋತ್ಸವಕ್ಕೆ ಅನೇಕ ಜನ ಬಂಧುಗಳೂ, ಗುರುವರ್ಗದವರೂ ಆಗಮಿಸಿ ವಧೂವರರಿಗೆ ಶ್ರೇಯೋಭಿವೃದ್ಧಿಯನ್ನು ಕೋರಿದರು. ಅನ್ನ ಸಂತರ್ಪಣಾದಿಗಳಿಂದ ಕೂಡಿ ವಿವಾಹ ಕಾರ್ಯವು ಸಾಂಗವಾಗಿ ನೆರವೇರಿಸಲ್ಪಟ್ಟಿತು.

ಉತ್ಸವಭಾಗಿ

ಶ್ರೀ ಗುರುಲಿಂಗೇಶ್ವರ ಸ್ಮಾರಕೋತ್ಸವ

(ಕಲಾದಿಗಿ)

ಪ್ರತಿವರ್ಷ ಪದ್ಧತಿಯಂತೆ ಈ ವರ್ಷವಾದರೂ ಶ್ರೀ ಜಗದ್ಗುರು ರಂಭಾಪುರಿ ಪೀಠದ ಶಾಖಾನುವರ್ತಿ ಕಲಾದಿಗಿ ಬೃಹನ್ಮಠದಲ್ಲಿ ಆಷಾಢ ಬ॥ ೧೧ ತಾ॥ ೨೭-೭-೪೩ ಮಂಗಳವಾರದಿಂದ ತಾ॥ ೩೧-೭-೪೩ ಶನಿವಾರದವರೆಗೆ ಶ್ರೀ ಗುಲಬುರ್ಗ ಶರಣಬಸವೇಶ್ವರಪುರಾಣವನ್ನು ಪುರಾಣರತ್ನ ಶ್ರೀ॥ ವೇ॥ ಪಂ॥ ಶಿವಶಾಸ್ತ್ರಿಗಳು ಹುಬಳಿ ಇವರು ತಮ್ಮ ಸರಳಶೈಲಿಯಿಂದ ಹೇಳುತ್ತಿರುವದನ್ನು ಕೇಳುವದಕ್ಕೆ ಸುತ್ತುಮುತ್ತಿನ ಹಳ್ಳಿಗಳಿಂದ ಹಾಗೂ ಬಾಗಲಕೋಟೆ ಭಕ್ತಮಾಹೇಶ್ವರರು ಪ್ರತಿ ದಿವಸ ಸಾವಿರಾರು ಜನರು ಬಂದು ಕೂಡುತ್ತಿದ್ದರು. ಮಹಾಪಾದ ಪೂಜೆ ತೀರ್ಥಪ್ರಸಾದವಾದನಂತರ ದಾಸೋಹ ನಡೆಯುತ್ತಿದ್ದಿತು. ಇಂಥ ಗುರುಮಹೋತ್ಸವಕಾರ್ಯವನ್ನು ಯಾವ ಪಕ್ಷಪಂಗಡವಿಲ್ಲದೆ ಎಲ್ಲ ಮತಸ್ಥರೂ ಏಕಮತ್ಯದಿಂದ ನಡಿಸುವದು ಬಹು ಸ್ತುತ್ಯವಾಗಿತ್ತು ಅಸ್ತು! ಈ ಮಹೋತ್ಸವಕ್ಕೆ ವೇ॥ಷ॥ ಬ್ರ॥ ಪಂ॥ ರೇವಣಸಿದ್ಧ ಶಿವಾಚಾರ್ಯ ಪಟ್ಟದಸ್ವಾಮಿಗಳು ಗುರುಸಂಸ್ಥಾನ ಬೃಹನ್ಮಠ ಚಿಕ್ಕಮಣ್ಣೂರು ಹಾಗೂ ಷ॥ ಬ್ರ॥ ಶ್ರೀ॥ ಬೀಳಗಿ ಪಟ್ಟದ ಸ್ವಾಮಿಗಳು ಶ್ರೀ ಸತ್ತಿಗೇರಿ ಪಟ್ಟದ ಸ್ವಾಮಿಗಳು, ಶ್ರೀ ರಾಮದುರ್ಗಪಟ್ಟದ ಸ್ವಾಮಿಗಳು ಶ್ರೀ॥ ಗಿರಿಸಾಗರ ಪಟ್ಟದ ಸ್ವಾಮಿಗಳು ಶ್ರೀ॥ ಷ॥ ಬ್ರ॥ ಜಮಖಂಡಿ ಚರಮೂರ್ತಿಸ್ವಾಮಿಗಳು ಶ್ರೀ॥ ಯಾದವಾಡ ಪಟ್ಟದ ಸ್ವಾಮಿಗಳು, ಶ್ರೀ॥ ಲೋಕಾಪುರ ಪಟ್ಟದ ಸ್ವಾಮಿಗಳು, ಶ್ರೀ ಮುಧೋಳ ಚರಮೂರ್ತಿಗಳು ಕೆಲಜನ ಕೀರ್ತನ ಮಾಡುವ ಶಾಸ್ತ್ರಿಗಳು ಆಗಮಿಸಿದ್ದರು. ತಾ॥ ೩೧-೭-೪೩ ಶನಿವಾರ ದಿವಸ ಪ್ರಾತಃಕಾಲ ಗುರುಲಿಂಗೇಶ್ವರ ಗದ್ದಿಗೆಗೆ ಶ್ರೀ। ರುದ್ರಾಭಿಷೇಕ ಮಹಾಪಾದ ಪೂಜೆಯನ್ನು ವೇದಘೋಷ ಮಂಗಲಸ್ತೋತ್ರಗಳೊಡನೆ ನಡೆಸಿದ ನಂತರ ೩೦ ಸಾವಿರ ಜನರಿಗೆ ಅನ್ನಸಂತರ್ಪಣೆ ನಡೆಯಿತು. ಸಾಯಂಕಾಲ ೮ ಘಂಟೆಗೆ ಶ್ರೀ ಜಮಖಂಡಿ ಚರಮೂರ್ತಿಸ್ವಾಮಿಗಳವರನ್ನು ಪಾಲಕಿಯಲ್ಲಿ ಮೂರ್ತಗೊಳಿಸಿ ಶ್ರೀ ಪೂಜ್ಯ ಗುರುಲಿಂಗೇಶ್ವರ ಫೋಟೊ ಶರಣಬಸವೇಶ್ವರ ಪುರಾಣಸಹಿತ ಒಳ್ಳೆ ಗುರುಭಕ್ತಿಯುತರಾಗಿ ಬಾಜಾ ಭಜಂತ್ರಿ ಮೊದಲಾದ ವಾದ್ಯಗಳೊಂದೊಡಗೂಡಿ ಉತ್ಸವವನ್ನು ಜರಗಿಸಿದರು. ಗುರುಮಠಕ್ಕೆ ಉತ್ಸವವು ಬಂದ ಬಳಿಕ ಶ್ರೀ॥ ಶಿವಶಾಸ್ತ್ರಿಗಳು ಪುರಾಣವನ್ನು ಹೇಳಿ ಸಮಾಪ್ತಗೊಳಿಸಿದ ಬಳಿಕ ಶ್ರೀ॥ ಚಿಕ್ಕಮಣ್ಣೂರು ಶ್ರೀ॥ ರೇವಣಸಿದ್ಧ ಶಿವಾಚಾರ್ಯಸ್ವಾಮಿಗಳು ಗುರುಭಕ್ತಿ ಶಿವಭಕ್ತಿಯುತರಾಗಿ ಧರ್ಮಕಾರ್ಯಗಳನ್ನು ಮಾಡುತ್ತಿರಬೇಕೆಂದು ಶಾಸ್ತ್ರೀಯ ಅನೇಕ ಉದಾಹರಣೆಗಳೊಡನೆ ತಮ್ಮ ಅಮೃತಮಯವಾಣಿಯಿಂದ ಬೋಧಮಾಡಿದರು. ಶ್ರೀ॥ ವೇ॥ ವೀರಸಂಗಯ್ಯನವರು ಕೀರ್ತನಕಾರ ಹಿರೇಮಠ ಬನಹಟ್ಟಿ ಇವರು ಅನ್ನದಾನದ ಮಹಿಮೆ ವಿಷಯವಾಗಿ ವ್ಯಾಖ್ಯಾನ ಮಾಡಿದರು. ಗುರುವರ್ಗ ಶಿಖಾಮಣಿಯಂತೆ ಇರುವ ಶ್ರೀ॥ ಷ॥ ಬ್ರ॥ ಪಟ್ಟದಸ್ವಾಮಿಗಳು ಬೃಹನ್ಮಠ ಸಂಸ್ಥಾನ ಕಲಾದಿಗಿ ಈ ಮಹೋದಯರು ಧರ್ಮವಂತರಿದ್ದು ತಪಸ್ವಿಗಳಾದರೂ ಈ ಬರಗಾಲದಲ್ಲಿ ಯಾರಿಗೂ ಸಾಧ್ಯವಾಗದೇ ಇರತಕ್ಕ ಕಾರ್ಯಮಾಡಿದ್ದು ಬಹಳ ಆಶ್ಚರ್ಯ. ಇಂತಹ ಸಮಾಜದ ಏಳಿಗೆಗಾಗಿ ದುಡಿಯುವ ಅಧಿಕಾರಿಗಳಿಗೆ ಶ್ರೀ॥ ಗುರುಲಿಂಗೇಶ್ವರನು ಆಯುರಾರೋಗ್ಯವನ್ನೀಯಲೆಂದು ಹಾರೈಸುತ್ತೇವೆ.

ಶ್ರೀ॥ ವೇ॥ ಚಂದ್ರಶೇಖರಯ್ಯನವರು
ಗುರುಸಂಸ್ಥಾನ ಏಜಂಟ್ ಚಿಕ್ಕಮಣ್ಣೂರು

ಪೆಟ್ರೋಲಿಗೆ ಬಣ್ಣ

ಸರಕಾರದ ಪೆಟ್ರೋಲು ದಾಸ್ತಾನು ದುರುಪಯೋಗವಾಗುತ್ತಿರುವುದನ್ನು ತಪ್ಪಿಸಲು ಪೆಟ್ರೋಲಿಗೆ ಬಣ್ಣ ಹಾಕುವ ಯೋಚನೆ ಮಾಡಲಾಗಿದೆ. ಬಣ್ಣದ ಪೆಟ್ರೋಲನ್ನು ಯಾರು ಇಟ್ಟುಕೊಂಡಿದ್ದರೂ ಅವರು ತಪ್ಪಿತಸ್ಥರೆಂದು ಪರಿಗಣಿಸಲ್ಪಡುವರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿಪ್ರಕಟಿಸಲ್ಪಟ್ಟಿತು

EGISTERED No M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ | ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ||
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ | ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ||

ಊರವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೬ನೇ ಆಗಸ್ಟ್ ೧೯೪೩ [ಸಂಚಿಕೆ ೧೫

ಜ್ಞಾನಸಾಧನ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಹುಳೀಮಠ,
ಮುದೇನೂರು

“ನಹಿಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ’ ಂಬ ವಾಕ್ಯದಂತೆ ಜ್ಞಾನಕ್ಕೆ ಸಮಾನವಾದ ಪವಿತ್ರ ಸ್ತು ಈ ಜಗತ್ತಿನಲ್ಲಿರುವುದಿಲ್ಲ ಏಕೆಂದರೆ ‘ಜ್ಞಾನಾಗ್ನಿಃ ರ್ವಕರ್ಮಾಣಿ ಭಸ್ಮಸಾತ್ಕುರುತೇ ’ ಎಂಬಂತೆ ಜ್ಞಾನವೆಂಬ ಂಕಿಯು ಸರ್ವಕರ್ಮಗಳನ್ನು ಸುಟ್ಟು ಭಸ್ಮಮಾಡತಕ್ಕದ್ದಾಗಿರುವುದು “ಜ್ಞಾನೇನ ಹೀನಃ ಪಶುಭಿಃ ಸಮಾನಃ ” ಎಂಬ ವಾಕ್ಯವೂ ಜ್ಞಾನದ ಹೆಚ್ಚುಗಾರಿಕೆಯನ್ನೇ ಬೋಧಿಸುವುದು “ಆಯುರ್ವೈ ಘೃತಂ ” ಎಂಬ ಶ್ರುತಿಯು ಆಯುರ್ವರ್ಧಕವಾದ ತುಪ್ಪವನ್ನೇ ಆಯುಸ್ಸೆಂದು ಕರೆದಂತೆ “ಏತಜ್ಞಾನಮಿತಿಪ್ರೋಕ್ತಂ ’ ಎಂಬ ವಾಕ್ಯದಿಂದ ಗೀತೆಯು ಜ್ಞಾನಸಾಧನಗಳನ್ನೇ ಜ್ಞಾನವೆಂದು ಹೇಳುತ್ತದೆ ಜ್ಞಾನಸಾಧನಗಳಿಗೆ ಇಷ್ಟು ಮಹತ್ವವಿರುವುದರಿಂದ ಮೋಕ್ಷಾರ್ಥಿಯಾದವನು ಸಾಧನಗಳನ್ನು ಅವಶ್ಯಕವಾಗಿ ಮಾಡಬೇಕು ಸಾಧನಗಳನ್ನು ಮಾಡುವದು ಕಷ್ಟವಾಗಬಹುದು ಬೇರೆ ಉಪಾಯವಿಲ್ಲ

“ಪುಣ್ಯಸ್ಯ ಫಲಮಿಚ್ಛಂತಿ ಪುಣ್ಯಂ ನೇಚ್ಛಂತಿ ಮಾನವಾಃ |
ನ ಪಾಪ ಫಲಮಿಚ್ಛಂತಿ ಪಾಪಂ ಕುರ್ವಂತಿ ಯತ್ನತಃ ” ||

ಎಂಬಂತೆ ಪುಣ್ಯವನ್ನು ಮಾಡಲಿಚ್ಛಿಸದೆ ಪುಣ್ಯದ ಫಲವನ್ನು ಬಯಸಿದರೆ ಪ್ರಾಪ್ತವಾದೀತೆ ? ಮತ್ತು ಪಾಪವನ್ನು ಮಾಡುತ್ತ ಪಾಪದ ಫಲವನ್ನು ಬೇಡವೆಂದರೆ ಬಿಟ್ಟೀತೆ ? ಅಂದಮೇಲೆ ಜ್ಞಾನಾರ್ಜನೆಗೆ ಸಾಧನಗಳು ಸೋಪಾನಗಳೆಂದಂತಾಯಿತು ಅವುಗಳನ್ನು ಕೆಳಗೆ ವಿವರಿಸಲಾಗಿದೆ

ಅಮಾನಿತ್ವ —ತಾನೇ ದೊಡ್ಡವನೆಂಬ ಹೆಮ್ಮೆ ಇಲ್ಲದಿರುವಿಕೆ ತಮ್ಮ ಶರೀರದ, ಬುದ್ಧಿಯ, ಇಲ್ಲವೆ ಹಣದ ಯಾವದೋ ಗುಣವನ್ನು ಲಕ್ಷ್ಯದಲ್ಲಿಟ್ಟುಕೊಂಡವರು ಇತರರಿಗಿಂತ ತಾವು ದೊಡ್ಡವರೆಂದು ತಿಳಿಯುತ್ತಾರೆ ಅವುಗಳನ್ನೆಲ್ಲ ಅನಾತ್ಮಗಳೆಂದು ತಿಳಿದವರು ಹಾಗೆ ಮಾಡುವುದಿಲ್ಲ ಸಾಧಕರಂತು ಈ ಗುಣವನ್ನೆಂದೂ ಆರೋಪಮಾಡಿಕೊಳ್ಳಬಾರದು ವೇದವ್ಯಾಸರು ತಮ್ಮ ಮಕ್ಕಳಾದ ಶುಕಾಚಾರ್ಯರನ್ನು ಪರೀಕ್ಷೆಗಾಗಿ ಜನಕರಾಜನ ಬಳಿಗೆ ಕಳುಹಿಸಿದಾಗ ಅವನು ಇವರ ಅಮಾನಿತ್ವವನ್ನು ನೋಡಬೇಕೆಂದು ಇಪ್ಪತ್ತೊಂದು ದಿವಸ ಅವರನ್ನು ತನ್ನಲ್ಲಿಗೆ ಬರಮಾಡಿಕೊಳ್ಳದೆ ಇದ್ದು ಅವರ ಸಮತ್ವವನ್ನು ಕಂಡುಕೊಂಡು ಸಂತುಷ್ಟನಾದನಂತರ ಅವರು ಬಂದ ಉದ್ದೇಶವನ್ನು ಈಡೇರಿಸಿ ಕಳುಹಿಸಿದ್ದಾನೆ

ಅದಂಭಿತ್ವ —ಒಳಗಿರದ ಯೋಗ್ಯತೆಯನ್ನು ಹೊರಗೆ ತೋರಿಸಿಕೊಳ್ಳುವದು ದಂಭ ಈ ವಿಷಯವಲ್ಲಿ ಸರ್ಪಭೂಷಣ ಶಿವಯೋಗಿಗಳು—ಬಿಡು ಬಾಹ್ಯಪೊಳು ದಂಭವ | ಮಾನಸದೊಳಗೆಡಬಿಡದಿರು ಶಂಭುವ | ಒಡಲೊಳು ವಂಚಿಸಿ ಹೊರಗೆ ನೀ ಕೀರ್ತಿಯ | ಪಡೆವರೆ ಶಿವನಿನಗೊಲಿವನೆ ಮರುಳೆ || ಜನರಲ್ಲಿ ನಿನ್ನನ್ನು ದೊಡ್ಡಾತನೆಂದರೆ ಚಿನುಮಯ ಶಿವನೇನಲ್ಲಿಯನೆ ಮರುಳೆ || ಎಂದು ಹೇಳಿರುವರು

ಅಹಿಂಸಾ—ಶರೀರ, ವಾಕ್ಕು, ಮನಸ್ಸು ಈ ಮೂರು ಕರಣಗಳೂ ಹಿಂಸೆಯ ಕಡೆಗೆ ತಿರುಗದಿರುವದು ಈ ಸಂದರ್ಭದಲ್ಲಿ ಶ್ರೀ ನಿಜಗುಣಶಿವಯೋಗಿಗಳು—ಎಂತೊಲಿವನೋ ತನಗೆನ್ನೆಂತೊಲಿವನೋ, ಎಂತೊಲಿವನೋ ಕರಣತ್ರಯದ ದೋಷಮಿರೆ | ಕಂತುಕಾಲ ಪುರವೈರಿ ಗುರು ಶಂಭುಲಿಂಗ || ಎಂದು ಹೇಳಿರುವರು

ಕ್ಷಾಂತಿ —‘ತಾಳಿದವಬಾಳ್ಯಾನು ’ ಮತ್ತು ‘ಸ್ಮರಣೆ ತಪ್ಪಿದರೂ ಸೈರಣೆ ಇರಬೇಕು ’ ಎಂಬಂತೆ ಸಹನ ಗುಣಶೀಲನಾಗಿರಬೇಕು ಕುಶಿಕರಾಜನು ಚ್ಯವನಋಷಿಯ ಸೇವೆಯನ್ನು ಕೈಕೊಂಡಾಗ ಇಪ್ಪತ್ತೊಂದು ದಿವಸ ಅಹೋರಾತ್ರಿ ಅವನನ್ನು ಉಪಚರಿಸಿದ್ದಲ್ಲದೆ ಅವನಪ್ಪಣೆಯಂತೆ ತಾನೂ ತನ್ನ ಹೆಂಡತಿಯೂ ಅವನನ್ನು ರಥದಲ್ಲಿ ಕೂಡಿಸಿಕೊಂಡು ರಾಜಬೀದಿಯಲ್ಲಿ ಎಳೆದುಕೊಂಡು ಹೋಗಿ ತನ್ನ ಸಹನ ಗುಣವನ್ನು ವ್ಯಕ್ತಗೊಳಿಸಿದ್ದಾನೆ

ಆರ್ಜವ —ಒಳಗೂ ಹೊರಗೂ ಏಕಪ್ರಕಾರವಾಗಿರುವ ಸರಳತನ

“ತೇಷಾಮಸೌ ವಿರಜೋ ಬ್ರಹ್ಮಲೋಕೋ ನ ಯೇಷು ಜಿಹ್ಮ ಮನೃತಂ ನ ಮಾಯಾ |

ಎಂದು ಶ್ರುತಿಯಿದೆ ಯಾರಲ್ಲಿ ವಕ್ರಭಾವವೂ ಮತ್ತು ಇಲ್ಲದ್ದನ್ನು ತೋರಿಸಿಕೊಳ್ಳುವದೂ ಇಲ್ಲವೋ ಅವರಿಗೇ ರಜೋಗುಣರಹಿತವಾದ ಬ್ರಹ್ಮಲೋಕವೆಂದರ್ಥ ವ್ಯವಹಾರ ಪ್ರಧಾನರು ಸರಳರಾಗಿರುವದಕ್ಕೆ ಬರುವದಿಲ್ಲ ಮೋಕ್ಷಾರ್ಥಿಗಳು ವ್ಯವಹಾರ ಪ್ರಧಾನರಾಗದೆ ಸರಳರಾಗಿರಬೇಕು

ಆಚಾರ್ಯೋಪಾಸನ — ಸದ್ಗುರುಗಳನ್ನಾಶ್ರಯಿಸುವದು

ಶೌಚಂ —ಪರಶಿವನು ಅಶುಚಿಯಾದ ಸ್ಥಳಕ್ಕೆ ಬರಲಾರನಾದ್ದರಿಂದ ಒಳಗೂ ಹೊರಗೂ ಶುಚಿಯಾಗಿರಬೇಕು

ಸ್ಥೈರ್ಯ —ಎಡೆಬಿಡದ ಪ್ರಯತ್ನ ನಡುನಡುವೆ ಬಿಟ್ಟು ಬಿಟ್ಟು ಕಡೆದರೆ ಬೆಣ್ಣೆ ಸಹಾ ಸರಿಯಾಗಿ ಬರುವದಿಲ್ಲ ಆದ್ದರಿಂದ ಸತತ ಪ್ರಯತ್ನಿಸಬೇಕು ಅಮೃತಕ್ಕಾಗಿ ಸಮುದ್ರವನ್ನು ಮಥಿಸಿದಾಗ ಮೊದಲು ವಿಷವು ಬಂದರೂ ನಿರಾಶರಾಗದೆ ಮುಂದರಿಸಿದಂತೆ ಜ್ಞಾನಕ್ಕಾಗಿ ಪ್ರಯತ್ನಿಸುವಾಗ ಎಷ್ಟು ಎಡರುಗಳು ಬಂದರೂ ನಿರುತ್ಸಾಹರಾಗಬಾರದು

ಆತ್ಮನಿಗ್ರಹ —ಮನಸ್ಸಿನ ಹಂದಾಟವನ್ನು ನಿಲ್ಲಿಸುವದು

ವೈರಾಗ್ಯ —ಇಂದ್ರಿಯಗಳ ಇಚ್ಛೆಯನ್ನು ಈಡೇರಿಸದಿರುವದು ಯಾಜ್ಞವಲ್ಕ್ಯರು ತಮ್ಮ ಇಬ್ಬರು ಹೆಂಡಂದಿರಿಗೆ ತಮ್ಮ ಆಸ್ತಿಯನ್ನೆಲ್ಲಾ ವಿಭಾಗಿಸಿಕೊಟ್ಟು ತಾವು ಸನ್ಯಾಸಿಗಳಾಗುತ್ತೇವೆಂದರು ಆಗ ಕಿರಿಯ ಹೆಂಡತಿಯಾದ ಮೈತ್ರೇಯಿಯು ಪತಿಯನ್ನು ಕುರಿತು—“ಭಗವನ್, ತಮ್ಮ ಮನೆಯಲ್ಲಿ ಧನವೇನಿರುತ್ತದೆಂಬುದು ನಮಗೆ ಗೊತ್ತೇ ಇರುತ್ತದೆ, ಆದರೆ ಆ ಧನದಿಂದ ನಮಗೆ ಅಮರರಾಗಲಿಕ್ಕೆ ಬರಬಹುದೋ ?

ಯಾಜ್ಞವಲ್ಕ್ಯ—ಛೀ, ಛೀ, ಹೀಗೇಕೆ ಕೇಳುವಿ ? ಎಲ್ಲಿಯಾದರೂ ಧನದಿಂದ ಅಮರತ್ವವು ಪ್ರಾಪ್ತವಾಗಬಹುದೆ ? ಧನವಂತರಿಗೆ ಆಗುವ ಸುಖವು ಮಾತ್ರ ನಿಮಗೆ ಧನದಿಂದ ಆಗಬಹುದು ಧನವು ಜಡವಿರುವುದರಿಂದ ಬಹಳವಾದರೆ ಅದು ಈ ಜಡದೇಹದ ಪೋಷಣೆಯನ್ನು ಮಾಡೀತು ಧನವಿಲ್ಲದೆ ಸಂಸಾರಯಾತ್ರೆಯು ನಡೆಯಲಾರದು ಸಂಸಾರದಲ್ಲಿ ವಿರಕ್ತಿಯು ಹೆಸರನ್ನೆತ್ತಲಾಗದು ಕಾತ್ಯಾಯನಿ—ಮಹಾರಾಜ, ಶರೀರವು ಪುಷ್ಟವಾದ ಮಾತ್ರದಿಂದ ನಮ್ಮ ಕರ್ತವ್ಯವು ಮುಗಿದಂತಾಗಲಿಲ್ಲ ಅಮರತ್ವವನ್ನು ದೊರಕಿಸಿಕೊಡದೆಯಿದ್ದ ಧನವನ್ನು ತಕ್ಕೊಂಡು ನಾವು ಮಾಡುವದೇನು ? ಅದರಿಂದ ನಮಗಾಗುವ ಹಿತವೇನು ?

ಮೈತ್ರೇಯಿ——ಗುರುವೆ, ಅಮರತ್ವದ ಪ್ರಾಪ್ತಿಗೆ ಬೇಕಾದದ್ದನ್ನಷ್ಟು ನಮಗೆ ಕೊಟ್ಟು ಹೋಗಬೇಕು ಮಿಕ್ಕದ್ದೇನೂ ನಮಗೆ ಬೇಡ, ಜನನ ಮರಣಗಳ ಘರ್ಷಣದಿಂದ, ಹಾಗು ತಾಪತ್ರಯಾಗ್ನಿಗಳ ತಾಪದಿಂದ ಬೇಯುವ ನಮ್ಮನ್ನು ಭವಸಾಗರದಿಂದ ಮುಕ್ತನಾಗ ಮಾಡಿರಿ ನಮಗೆ ಶಾಂತಿಯನ್ನು ಕೊಡುವವರು ತಮ್ಮ ಹೊರತು ತ್ರೈಲೋಕ್ಯದಲ್ಲಿ ಮತ್ತೆ ಯಾರೂ ನಮಗೆ ಕಾಣುವದಿಲ್ಲ

ಈ ಮಾತುಗಳನ್ನು ಕೇಳಿ ಯಾಜ್ಞವಲ್ಕ್ಯರಿಗೆ ಪರಮಾನಂದವಾಯಿತು ಅವರು ತಮ್ಮ ಪತ್ನಿಯನ್ನು ಕುರಿತು ‘ನೀವಿರ್ವರೂ ನನಗೆ ಅತ್ಯಂತ ಪ್ರಿಯರಾಗಿರುವಿರಿ ನನಗೆ ಪ್ರಿಯವಾದ ಮಾತುಗಳನ್ನೇ ಆಡಿದಿರಿ ನಾನು ನಿಮಗೆ ಅಮರತ್ವವು ಪ್ರಾಪ್ತವಾಗುವುದಕ್ಕಾಗಿ ಹೇಳುವ ಮಾತುಗಳನ್ನು ಲಕ್ಷ್ಯಪೂರ್ವಕವಾಗಿ ಕೇಳಿರಿ ಈವರೆಗೆ ಗೃಹಸ್ಥಾಶ್ರಮದ ಧರ್ಮಗಳಂತೆ ಆಚರಿಸಿ ಧನ್ಯರಾಗಿರುವಿರಿ ನಿಮಗೆ ಮೋಕ್ಷೋಪಾಯಗಳನ್ನು ಕುರಿತು ಸಾಮಾನ್ಯವಾಗಿ ಇಂದು ನಿಮ್ಮನ್ನು ಬೋಧಿಸುವೆನು ನಿಮಗೆ ಶಾಶ್ವತ ಶಾಂತಿಯ ಪ್ರಶಸ್ತವಾದ ಮಾರ್ಗವನ್ನು ತೋರಿಸಿಯೇ ನಾನು ಚತುರ್ಥಾಶ್ರಮವನ್ನು ಸ್ವೀಕರಿಸುವೆನು, ಮುಂದೆ ತಪಶ್ಚರ್ಯದಿಂದ ಆ ಮಾರ್ಗವನ್ನು ಕ್ರಮಿಸಿ, ನಿತ್ಯ ಸುಖದ ಸಾಮ್ರಾಜ್ಯವನ್ನು ಸೇರುವ ಕಾರ್ಯವನ್ನು ನೀವೇ ಮಾಡಬೇಕಾಗುವುದು, ಅಲ್ಲಿ ಅನ್ಯರ ಸಹಾಯವು ಬೇಕಾಗಿರುವುದಿಲ್ಲ ಅಧಿಕಾರ ಸಂಪನ್ನರೂ ಆಜ್ಞಾಪಾಲನ ಧುರೀಣರೂ ಆದ ನಿಮಗೆ ಸವಿಸ್ತರ ಬೋಧವು ಅನವಶ್ಯಕವಾದ್ದರಿಂದ ಸಂಕ್ಷೇಪವಾಗಿಯೇ ಹೇಳುವುದನ್ನು ಹೇಳುವೆನು ಸತಿಯರ ಮುಖ್ಯ ಧರ್ಮವು ಪತಿಯ ಅನುಸರಣವು ಸತಿಗೆ ಪತಿಯೇ ದೈವವು ಆತನೇ ಸದ್ಗುರುವು ಆತನ ವೇದೋಕ್ತ ಕರ್ಮಾಚರಣೆಯ ಅನುಸರಣದಿಂದ ಚಿತ್ತಶುದ್ಧಿಯೂ, ಆಜ್ಞಾಪಾಲನರೂಪವಾದ ಉಪಾಸನೆಯಿಂದ ಚಿತ್ತೈಕಾಗ್ರತೆಯೂ ಆಗುವುವು ಇವೇ ಬ್ರಹ್ಮಜ್ಞಾನದ, ಅಥವಾ ಸ್ವಾನಂದ ಸಾಮ್ರಾಜ್ಯದ ಪ್ರಾಪ್ತಿಗೆ

(ಒಳಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಆಗಸ್ಟ್ ತಾ। ೧೬ನೆಯ ಸೋಮವಾರ

ಇಂದ್ರಿಯವಿಜಯ.

ಜಗಜ್ಜನ್ಮಾದಿಗಳಿಗೆ ಕಾರಣೀಭೂತನಾದ ಪರಮೇಶ್ವರನು ಕಣ್ಣು ಮೂಗು ಕಿವಿ ಮೊದಲಾದ ಇಂದ್ರಿಯಗಳನ್ನು ಹೊರಗಿರುವ ಪದಾರ್ಥಗಳ ಮೇಲೆ ಹರಿಯುವ ಸ್ವಭಾವವುಳ್ಳವುಗಳನ್ನಾಗಿ ಮಾಡಿರುವುದರಿಂದ ಈ ಚಕ್ಷುರಾದಿ ಪಂಚಜ್ಞಾನೇಂದ್ರಿಗಳು ಒಳಗಿರುವ ನಿತ್ಯಸುಖಸ್ವರೂಪನಾದ ಪರಮಾತ್ಮನ ಕಡೆಗೆ ತಿರುಗಿ ನೋಡದೆ ಅನಿತ್ಯಸುಖದಾಯಕಗಳಾದ ಬಾಹ್ಯವಿಷಯಗಳನೆರಗಿ ಬೇಸತ್ತು ಆತ್ಮನನ್ನು ದುಃಖಕ್ಕೀಡುಮಾಡಿವೆ. ಲಕ್ಷಕ್ಕೊಬ್ಬ ಧೀರನು ಮಾತ್ರ ಚಂಚಲಸ್ವಭಾವದ ಆ ಇಂದ್ರಿಯಗಳನ್ನು ಹೊರಗಣ ವಿಷಯಕ್ಕೆ ಎರಗದಂತೆ ತಡೆದು ಅಂತರಾತ್ಮನ ಕಡೆಗೆ ತಿರುಗಿಸಿ ಮುಕ್ತಿಸುಖವನ್ನು ಅನುಭವಿಸುವನು. ಆದುದರಿಂದ ಬಾಹ್ಯವಿಷಯಗಳಲ್ಲಿ ಆಶೆಯನ್ನು ಬಿಟ್ಟು ಮುಕ್ತಿಸಾಮ್ರಾಜ್ಯವೆಂಬ ಸ್ಥಿರಪದವಿಯನ್ನು ಅನುಭವಿಸುವದೇ ವಿವೇಕಿಗಳ ಕಾರ್ಯವಾಗಿದೆ. ಇವರೇ ವೀರರು, ಜಿತೇಂದ್ರಿಯರು. ಇಂತಹ ಪರಮಪವಿತ್ರಸ್ಥಿತಿಯನ್ನು ಹೊಂದಬೇಕಾದರೆ ಮಾನವನು ಮುಕ್ತಿಪ್ರತಿಬಂಧಕವಾದ ಆಸುರೀಸಂಪತ್ತನ್ನು ಘೋರವಿಷದಂತೆ ದೂರೀಕರಿಸಿ ಮುಕ್ತಿಸಾಧಕವಾದ ದೈವೀಸಂಪತ್ತನ್ನು ಸಂಗ್ರಹಿಸಬೇಕು. "ದೈವೀಸಂಪದ್ವಿಮೋಕ್ಷಾಯ ನಿಬಂಧಾಯಾಸುರೀ ಮತಾ" ದೈವೀಸಂಪತ್ತು ಮೋಕ್ಷಸೌಖ್ಯವನ್ನೂ, ಆಸುರೀಸಂಪತ್ತು ಬಂಧವನ್ನೂ ಉಂಟುಮಾಡುವವು. ದೈವೀಸಂಪತ್ತೆಂಬುದು ಪರಮೇಶ್ವರನ ಕೃಪಾಕಟಾಕ್ಷದ ಬಳಿಯಲ್ಲಿರುವದು. ಆಸುರೀಸಂಪತ್ತು ಆ ಪರಮೇಶ್ವರನನ್ನು ಬಿಟ್ಟು ಬಹು ದೂರವಾಗಿ ಇರುತ್ತದೆ. ಆಸುರೀಸಂಪತ್ತಿಗೂ ಪರಮೇಶ್ವರನ ಕೃಪೆಗೂ ಪರಸ್ಪರ ವೈಯ್ಯಧಿಕರಣ್ಯವಲ್ಲದೆ ಹೊರತು ಸಾಮಾನಾಧಿಕರಣ್ಯವಿರುವದಿಲ್ಲ. ಯಾರು ಆಸುರೀಸಂಪತ್ತನ್ನು ಆರ್ಜಿಸುವರೋ ಅವರನ್ನು ಪರಶಿವನು ಉದಾಸೀನ ದೃಷ್ಟಿಯಿಂದ ನೋಡುವನು. ಯಾರು ದೈವೀಸಂಪತ್ತಿನಲ್ಲಿ ಅಭಿಮುಖರಾಗುತ್ತಾರೆಯೋ ಅವರ ಯೋಗಕ್ಷೇಮಗಳನ್ನೆಲ್ಲ ಆ ಪರಮೇಶ್ವರನೇ ವಹಿಸಿರುವನು. [illegible] ವಿಷಯಸುಖವನ್ನು [illegible] ಭ್ರಮಿಸಿ ವಿಷಯಪಂಕದಲ್ಲಿ [illegible] ಬಿದ್ದಿವೆ. ಈ ವಿಷಯಪಂಕವನ್ನು ತಪ್ಪಿಸಿಕೊಳ್ಳುವವರಿಗೂ ಮುಕ್ತಿ [illegible] ಯಾಗುವದಕ್ಕೆ ಇಲ್ಲವೆ ದೈವೀಸಂಪತ್ತೆಂಬ ಅವಲಂಬನೆಯನ್ನು ಕೊಟ್ಟು ಇಂತಹ ವಿಷಯಪಂಕ [illegible] ದಿಂದ ಮಾನವರನ್ನು ದಾಟಿಸುವುದಕ್ಕಾಗಿಯೇ ಮಹಾತ್ಮರಾದ ಆಚಾರ್ಯರು ಭೂಲೋಕದಲ್ಲಿ ಅವತರಿಸಿದರು. ಗುರುನಿಂದೆ, ಅಜ್ಞಾನ, ಪ್ರಾಣಿಹಿಂಸೆ, ಅಶುಚಿತ್ವ, ಕಾಠಿಣ್ಯ, ಕ್ರೋಧ, ನಿರ್ದಯೆ, ಲೋಭ, ಮಾತ್ಸರ್ಯ, ದರ್ಪ, ದುರಾಚಾರ, ವೇದದ್ರೋಹ ಮೊದಲಾದವುಗಳೇ ಆಸುರೀಸಂಪತ್ತುಗಳು. ಗುರುಭಕ್ತಿ, ಅಂತಃಕರಣಶುದ್ಧಿ, ಆತ್ಮಜ್ಞಾನ, ಯೋಗ, ಧ್ಯಾನ, ಬಹಿರಂತರಿಂದ್ರಿಯನಿಗ್ರಹ, ಶಿವಪೂಜೆ, ಶಾಸ್ತ್ರಾಧ್ಯಯನ, ಋಜುತೆ, ಅಹಿಂಸೆ, ಸತ್ಯ, ಅಕ್ರೋಧ, ಶಾಂತಿ, ಭೂತದಯೆ, ಧೃತಿ, ಶೌಚ, ಅದ್ರೋಹ ಮೊದಲಾದುವುಗಳೇ ದೈವೀಸಂಪತ್ತುಗಳೆನಿಸುವವು. ಪ್ರಪಂಚದಲ್ಲಿ ಆಯಾ ಮತಸ್ಥಾಪಕರಾದ ಆಚಾರ್ಯರು ಪರಮಾತ್ಮನ ಆರಾಧನೆಯನ್ನು ಮಾಡುವ ಒಂದೊಂದು ಮಾರ್ಗವನ್ನು ಪ್ರವೇಶಿಸಿ, ಸಕಲ ಮಾನವರ ಹೃದಯಕ್ಷೇತ್ರದಲ್ಲಿ ಮೋಕ್ಷಹೇತುವಾದ ದೈವೀಸಂಪತ್ತೆಂಬ ಅಮೃತಬೀಜವನ್ನು ಬಿತ್ತಿ, ಅವುಗಳಿಗನುಕೂಲವಾದ ಸಿದ್ಧಾಂತವೆಂಬ ಬೇಲಿಯನ್ನು ಕಟ್ಟಿ, ಈ ಆಸುರೀಸಂಪತ್ತುಗಳೆಂಬ ಪಶುಗಳಿಗೆ ಅವಕಾಶವಿಲ್ಲದಂತೆ ಮಾಡಿ, ಮತಸ್ಥಾಪನಾಚಾರ್ಯರೆಂಬ ಹೆಸರನ್ನು ಪಡೆದರು. ಅಂತಹ ಆಚಾರ್ಯರೊಳಗೆ ಶ್ರೀರೇಣುಕಾದಿ ಪಂಚಾಚಾರ್ಯರೆಂಬವರೇ ವೀರಶೈವಮತಸ್ಥಾಪಕರಾಗಿರುತ್ತಾರೆ. ದೈವೀಸಂಪತ್ತಿನ ಆಧಾರದಲ್ಲಿಯೇ ಈ ವೀರಶೈವಮತವು ನಿಂತಿರುತ್ತದೆ. ದೈವೀಸಂಪತ್ತನ್ನು ಎಂದು ಇವರು ಕಳೆದುಕೊಳ್ಳುತ್ತಾರೆಯೋ ಅಂದೇ ಈ ಮತದ ಸ್ವರೂಪವು [illegible] ದಂತೆಯೇ ಸರಿ! ಮಾನವನ [illegible] ಕೇವಲ ಬಾಹ್ಯವಿಷಯದಲ್ಲಿ [illegible] ಕುಮಾರರು [illegible] ಉತ್ತಮವಾಗ [illegible] ವನ್ನು [illegible] ವಿಷಯಗಳ ಕಡೆಗೆ ಹೋಗದಂತೆ ಇಂದ್ರಿಯಗಳನ್ನು ನಿರೋಧಿಸಿ [illegible] ಸಾಧನವಾಗಿದೆ [illegible] ದೈವೀಸಂಪತ್ತನ್ನು [illegible] ದೈವೀಸಂಪತ್ತನ್ನು [illegible] ತಮ್ಮ ಮೂಲಧನವಾದ ದೈವೀಸಂಪತ್ತಿನ [illegible] ವಿದ್ಯಾರ್ಥಿಗಳು [illegible] ತಮ್ಮ ಸ್ವಭಾವವನ್ನು [illegible] ಪ್ರಾರಂಭಿಸಿದ್ದಾರೆ [illegible] ಇಂಥವರು [illegible] ದೋರುವುದು [illegible] ಧರ್ಮವನ್ನು [illegible] ಸೂಚಿಸುವುದೂ [illegible] ಇಂತಹ ವಿಪರೀತ ಧರ್ಮದ [illegible] ಕಲಿಸ್ವರೂಪ [illegible] ವನ್ನು ಬಿಟ್ಟು ಮುಕ್ತಿ [illegible] ಮಹಾಚಾರ್ಯರಿಂದ ಅನುಗ್ರಹಿತವಾದ ಅಷ್ಟಾವರಣ ಪಂಚಾಚಾರಗಳನ್ನು ಬಿಡದೆ ತಮ್ಮ ಇಂದ್ರಿಯಗಳನ್ನು ಅನಿತ್ಯವಾದ ವಿಷಯಗಳಲ್ಲಿ ಪ್ರವೇಶಿಸದ ಇಂದ್ರಿಯಜಯವನ್ನು ಹೊಂದಿ ಆ ಇಂದ್ರಿಯಗಳನ್ನು ನಿತ್ಯನಾದ ಪರಮಾತ್ಮನ ಕಡೆಗೆ ಸಮ್ಮುಖಗೊಳಿಸಿ [illegible] ರುವ ಅನರ್ಥಕಾರಿಯಾದ ಕಿಂಚಿಜ್ಞತ್ವವನ್ನು ಪರಿಹರಿಸಿಕೊಂಡು ಪರಮಾತ್ಮನ ಸರ್ವಜ್ಞತ್ವಾದಿ ಗುಣಗಳನ್ನು ಪಡೆದು ಶ್ರೀರೇಣುಕಾದಿ ಪಂಚಾಚಾರ್ಯರಿಂದ [illegible] ವಾದ ಲಿಂಗಾಂಗ ಸಾಮರಸ್ಯ ಜ್ಞಾನವನ್ನು ಹೊಂದಿ "ಕಶ್ಚಿದ್ವೀರಃ ಪ್ರತ್ಯಗಾತ್ಮಾನಮೈಕ್ಷತ" ಎಂಬ ಶ್ರುತ್ಯರ್ಥಕ್ಕನುಸಾರವಾಗಿ ತಮಗೆ ರೂಢನಾಮವಾಗಿ ಬಂದಿರುವ "ವೀರಶೈವ" ಎಂಬ ಹೆಸರನ್ನು ಅನ್ವರ್ಥವಾಡಿಕೊಂಡು ಮತಸ್ಥಾಪಕರಾದ ಶ್ರೀಜಗದ್ಗುರು ಪಂಚಾಚಾರ್ಯರ ಕೃಪೆಗೆ ಪಾತ್ರರಾಗಬೇಕೆಂದು ಹಾರೈಸುತ್ತೇವೆ.

ನಿಜಸ್ಥಿತಿಯನ್ನು ಮರೆಮಾಚಿ ಬಚ್ಚಿಟ್ಟಿರುವ ಆಹಾರ ಪದಾರ್ಥಗಳ ಬಗ್ಗೆ ವರ್ತಮಾನ ಕೊಟ್ಟವರಿಗೆ ಬಚ್ಚಿಟ್ಟಿರುವ ಸಾಮಾನಿನ ಅರ್ಧ ಬೆಲೆಯನ್ನು ೫೦೦ ರೂ ಗೆ ಮೀರದಂತೆ ಬಹುಮಾನವಾಗಿ ಕೊಡಲು ಮೈಸೂರು ಸರ್ಕಾರ ಏರ್ಪಡಿಸುವುದಾಗಿದೆ

ಯುದ್ಧವಾರ್ತೆ.

ಸಿಸಿಲಿಯಲ್ಲಿ ಹೊಡೆದಾಟ

[illegible]ದಿಂದ ಮುಂದೆ ನುಗ್ಗುತ್ತಿರುವ ಅಮೆರಿಕನರು ರಾಂಡಜೋ ಕಡೆಗೆ ಧಾವಿಸುತ್ತಿದ್ದಾರೆ. ಅವರು ಆ ನಗರದಿಂದ ಕೇವಲ ೨ ಮೈಲಿ ದೂರದಲ್ಲಿದ್ದಾರೆ. ಜರ್ಮನರ ಪ್ರತಿಭಟನೆ ತೀರ ಉಗ್ರವಾಗುತ್ತಿದೆ. ಆದರೆ ಯುದ್ಧ ಮಾಡುತ್ತ ಹಿಂದೆ ಹೋಗುವುದೆ ಅವರ ಉದ್ದೇಶವಾಗಿರುವಂತಿದೆ. ಸಿಸಿಲಿಯಲ್ಲಿ ಸರೆಸಿಕ್ಕಿರುವ ಜರ್ಮನ ಯೋಧರ ಸಂಖ್ಯೆ ಅಲ್ಪ. ಕೈಗೆ ಸಿಕ್ಕದೆ ತಪ್ಪಿಸಿಕೊಳ್ಳುವುದರಲ್ಲಿ ಅವರು ನಿಪುಣರೆಂದು ಹೇಳಲಾಗಿದೆ.

ಮೆಸ್ಸೀನಾ ಕದನ

ಮಿತ್ರ ಸೇನೆಗಳು ಈಗ ಸಿಸಿಲಿಯಲ್ಲಿ ಮೆಸ್ಸೀನ ನಗರವನ್ನು ಮುತ್ತಿಗೆ ಹಾಕಿದೆ. ಅವನ್ನು ಜರ್ಮನ ಸೇನೆಗಳು ತಡೆದು ಭೀಕರ ಕದನ ನಡೆಸುತ್ತಿವೆ. ಎಟ್ನಾ ಜ್ವಾಲಾಮುಖಿಯ ಸುತ್ತಲೂ ಪ್ರಮುಖ ಸ್ಥಾನಗಳು ಮಿತ್ರರ ವಶವಾಗಿವೆ. ಮೆಸ್ಸೀನಾ ಕಡೆಗೆ ಬರುತ್ತಿರುವ ಜರ್ಮನರ ಟ್ರಾನ್ಸ್‌ಪೋರ್ಟ್ ವಿಮಾನಗಳು ಮತ್ತು ನೌಕೆಗಳ ಮೇಲೆ ಭೀಕರ ದಾಳಿಯಾಗುತ್ತಿದೆ. [illegible] ತೀರದ ರಕ್ಷಣಾ ಭಾಗಗಳ ಮೇಲೆ ಮಿತ್ರ ನೌಕೆಗಳು ದಾಳಿ ನಡೆಸುತ್ತಿವೆ.

ಶತ್ರುಗಳು ಸಿಸಿಲಿಯಿಂದ ಓಡುತ್ತಿದ್ದಾರೆ

ಸಿಸಿಲಿಯಲ್ಲಿ ಕದನ ನಡೆಸುತ್ತಿರುವ ಜರ್ಮನ [illegible] ಕಡೆಗೆ ಸಿಸಿಲಿಯನ್ನು ಬಿಡಲು [illegible] ಮೂಲಕ ಆಜ್ಞೆ ಬಂದಿದೆಯೆಂದು ಮಿತ್ರರ ಕೈಗೆ ಸಿಕ್ಕಿದ [illegible]ದಿಂದ ವ್ಯಕ್ತವಾಗಿದೆ. ಸಿಸಿಲಿಯನ್ನು ಬಿಡುವಾಗ ಶಸ್ತ್ರಾಸ್ತ್ರಗಳಾವುದನ್ನೂ ಬಿಟ್ಟು ಬರಕೂಡದೆಂದೂ ಹಾಗೆ ಬಿಟ್ಟು ಬಂದವರನ್ನು ಮರಣದಂಡನೆಗೆ ಗುರಿಮಾಡಲಾಗುವುದೆಂದೂ ಅದರಲ್ಲಿ ತಿಳಿಸಿದೆ.

ಜರ್ಮನರು [illegible] ಸಿಸಿಲಿಯಿಂದ ಇಟಲಿಗೆ ಆಪ್ಸಿನ್ ಸೇನೆಗಳನ್ನು ಎಡಬಿಡದೆ ಸಾಗಿಸುತ್ತಿದ್ದಾರೆಂದು ಹೇಳಲಾಗಿದೆ. "ಸಿಸಿಲಿಯಲ್ಲಿ ಆಂಗ್ಲೊ ಅಮೆರಿಕನ್ ಬಲಗಳು ಹಿಡಿದಿರುವ ಕ್ಷೇತ್ರಗಳನ್ನು ಪುನರಾಕ್ರಮಿಸುವ ಉದ್ದೇಶ ನಮಗಿಲ್ಲ, ಇಟಲಿಯನ್ನು ಶತ್ರುಬಲವು ಸಮೀಪಿಸದಂತೆ ತಡೆಯುವುದೇ ನಮ್ಮ [illegible]" ಎಂದು ಜರ್ಮನ್ ರೇಡಿಯೊ [illegible] ಕಾರರು ಹೇಳಲು ಪ್ರಾರಂಭಿಸಿದ್ದಾರೆ.

ಇಟಲಿಯ ಮುಂದಿಟ್ಟಿರುವ ಷರತ್ತು ಸರಿಯಲ್ಲ

'ವತನ್' ಎಂಬ ತುರ್ಕಿ ಪತ್ರಿಕೆಯ ಸಂಪಾದಕರಾದ ಎಮಿನ್ ಯಾಲ್ಮನ್ ಎಂಬುವರು ರೂಜ್‌ವೆಲ್ಟರಿಗೆ ಬಹಿರಂಗ ಪತ್ರವೊಂದನ್ನು ಬರೆದು, "ಇಟಲಿಯನ್ನು ಯಾವ ಷರತ್ತೂ ಇಲ್ಲದೆ ಶರಣಾಗತವಾಗಬೇಕೆಂಬ ತತ್ವವನ್ನೇ ಭಟ್ಟಿಯಾಗಿ ಹಿಡಿದು ಕೂರಬಾರದು. ನೀವು ವಿಜಯಿಗಳು. ಆದ್ದರಿಂದ ಸೋತವರ ವೇದನೆ ನಿಮಗೆ ಹೇಗೆ ಅರ್ಥವಾಗಬೇಕು? ಕಳೆದ ಯುದ್ಧದಲ್ಲಿ ತುರ್ಕಿಯವರಾದ ನಾವು ಸೋತವರ ಗುಂಪಿಗೆ ಸೇರಿದ್ದೆವು. ಸೋಲಿನ ಅನುಭವ ನಮಗೆ ಗೊತ್ತು. ಹೊಸ ವಿಶ್ವದ ಸೃಷ್ಟಿಗೆ ಯಾವ ಷರತ್ತೂ ಇಲ್ಲದೆ ಶರಣಾಗತವಾಗಬೇಕೆಂಬ ನೀತಿ ಅನುಕೂಲವಾಗಿಲ್ಲ. ಅದನ್ನು ಗಟ್ಟಿಯಾಗಿ ಹಿಡಿದುಕೂತರೆ ಸೇಡು ತೀರಿಸಿಕೊಳ್ಳುವ ದಾರಿ ಹಿಡಿದಂತಾಯಿತು. ಆ ದಾರಿ ಬಿಟ್ಟು ನ್ಯಾಯ ತರ್ಕದ ಸನ್ಮಾರ್ಗ ಹಿಡಿಯುವುದು ಬಿಡುವುದು ನಿಮಗೆ ಸೇರಿದೆ. ಮಾರ್ಷಲ್ ಬಡೋಗ್ಲಿಯೊ ಇರುವವರಂತಹ ನಿರಾಪದ ದೇಶಪ್ರೇಮಿಗಳೊಡನೆ ವ್ಯವಹರಿಸಲು ತಿರಸ್ಕರಿಸಿದ ಪಕ್ಷದಲ್ಲಿ ಇಟಲಿಯಲ್ಲಿ ಅರಾಜಕತೆ ತಲೆ ಹಾಕೀತು, ಅದಿಲ್ಲದಿದ್ದರೆ ಮಿತ್ರದೇಶಗಳ ಕೈಗೊಂಬೆಯೆನಿಸಿ

ಮಂತ್ರಿಮಂಡಲ ಸ್ಥಾಪನೆಯಾದೀತು ಅದರಿಂದೇನು ಫಲ ಅಂಥ ಮಂತ್ರಿಮಂಡಲಕ್ಕೆ ಜನತೆಯ ಬೆಂಬಲ ಇರುವುದಿಲ್ಲ ' ಎಂದು ತಿಳಿಸಿದಾರೆ

ಅಗತ್ಯಬಿದ್ದರೆ ತುರ್ಕಿಯೂ ಯುದ್ಧಕ್ಕೆ ಇಳಿಯುವುದು

ತುರ್ಕಿಯ ಪತ್ರಿಕಾ ಸಂಪಾದಕರಾದ ಶ್ರೀ ಹುಸೇನ್ ಯಾಲ್ಚಿನ್‌ರವರು ಲೇಖನವೊಂದರಲ್ಲಿ " ಬ್ರಿಟನ್ನಿಗೂ ತುರ್ಕಿಗೂ ಆಗಿರುವ ಒಪ್ಪಂದದ ಪ್ರಕಾರ ನಮ್ಮ ಕರ್ತವ್ಯವನ್ನು ನಿರ್ವಹಿಸಬೇಕಾಗಿ ಬಂದಾಗ ತುರ್ಕಿಯು ಸಂಗ್ರಾಮಕ್ಕೆ ಕಾಲಿಡಲು ಸಿದ್ಧವಾಗಿದೆ ಮೆಡಿಟರೇನಿಯನ್ನಿನಲ್ಲಿ ಹಲವು ಪರಿಸ್ಥಿತಿಗಳು ತಲೆದೋರಿದಾಗ ತುರ್ಕಿ ಯುದ್ಧದಲ್ಲಿ ಭಾಗವಹಿಸುವುದೆಂದು ಬ್ರಿಟನ್ನಿಗೆ ಮಾತು ಕೊಡಲಾಗಿದೆ ಅಂತಹ ಪರಿಸ್ಥಿತಿ ಇನ್ನೂ ತಲೆದೋರಿಲ್ಲ ಒಪ್ಪಂದದ ಪ್ರಕಾರ ನಾವು ಸಂಗ್ರಾಮದಲ್ಲಿ ಭಾಗವಹಿಸುವ ಸಂದರ್ಭವೊದಗಿದರೆ ನನಗೆ ನಾವೇ ಯುದ್ಧಕ್ಕಿಳಿಯುತ್ತೇವೆ, ಯಾರ ಒತ್ತಾಯವೂ ಬೇಡ ಎಂದು ತಿಳಿಸಿದಾರೆ

ಖಾರಕೋವ್‌ರಂಗ

ಓರೆಲ್ ಬ್ರಿಯಾನ್ಸ್ಕ್ ರೈಲ್ವೆ ಮಾರ್ಗದಲ್ಲಿರುವ ಬಹು ಮುಖ್ಯ ಸ್ಟೇಷನ್ನಾದ ಖೋಟಿನೆಟ್ಸ್ ಎಂಬುದು ರಷ್ಯನರ ವಶವಾಯಿತು ಇದರ ದೆಸೆಯಿಂದ ಜರ್ಮನ್ ಸೈನಿಕರು ಹಿಂದಕ್ಕೆ ಓಡಿಹೋಗಲು ಬಹಳ ಅಡಚಣೆಯಾಗಿ, ಅನೇಕರು ರಷ್ಯನರ ಕೈಗೆ ಸಿಕ್ಕಿ ಬೀಳುವ ಸ್ಥಿತಿ ಒದಗಿದೆ ಇಷ್ಟರಲ್ಲೇ ರಷ್ಯನರು ಖಾರಕೋವ್ ಹಿಡಿಯುವರೆಂದು ಮಿಲಿಟರಿ ವಿಮರ್ಶಕರು ಹೇಳುತ್ತಿದ್ದಾರೆ ಪಶ್ಚಿಮ ಕಡೆಯಿಂದ ರಷ್ಯನರು ನಗರವನ್ನು ಆವರಿಸುತ್ತಿದ್ದಾರೆ ಹಿಂದಕ್ಕೆ ಓಡಿಹೋಗಲು ಇರುವ ಮಾರ್ಗವು ಕಡಿದುಹಾಕಲ್ಪಡುವ ಭಯ ಒದಗಿರುವುದರಿಂದ ಜರ್ಮನರು ಖಾರಕೋವ್ ಬಿಡುತ್ತಿದ್ದಾರೆ

ಜರ್ಮನಿಯಸ್ಥಿತಿ ಕೆಡುತ್ತಿದೆ

ಜರ್ಮನಿಯ ಒಳಗಿನ ಸ್ಥಿತಿಯು ಕೆಡುತ್ತಿದೆ ಶೀಘ್ರದಲ್ಲಿಯೇ ಹಿಟ್ಲರನನ್ನುರುಳಿಸಲು ಪ್ರಯತ್ನವಾಗಬಹುದು ಎಂದು ವರದಿಯಮೇಲೆ ವರದಿ ಅಮೇರಿಕಕ್ಕೆ ಬರುತ್ತಿದೆ ತಟಸ್ಥ ಮೂಲಗಳಿಂದ ಬರುತ್ತಿರುವ ಸುದ್ದಿಗಳ ಪ್ರಕಾರ ಜರ್ಮನಿಯ ಮಧ್ಯಮ ಮತ್ತು ಕನಿಷ್ಟ ವರ್ಗದ ಪ್ರಜೆಗಳಲ್ಲಿ ನಾಜಿ ಸರಕಾರ ಕಂಡು ಬೇಸರ ಬಹಳವಾಗಿರುವ ಹಾಗಿದೆ "ಮಿಲಿಟರಿ ತ್ರಿಕೂಟ ಸಮಿತಿಯೊಂದನ್ನು ರಚಿಸಿ ಜರ್ಮನಿಯ ಆಡಳಿತವನ್ನು ತನ್ನ ಕೈಲಿಡುವ ಪ್ರಯತ್ನವಾಗಿದೆ ಈ ತ್ರಿಕೂಟದಲ್ಲಿ ಗೋರಿಂಗ್, ಡೆನೆಟ್ಸ್ ಮತ್ತು ಕೀಟಲ್ ಇರುವ ನಿರೀಕ್ಷೆಯಿದೆ! ಈ ನಾಯಕರ ನೇತೃತ್ವದಲ್ಲಿ ಜರ್ಮನಿಯು ರಕ್ಷಣೆಗೆ ಯತ್ನಿಸಿ, ಅನುಕೂಲ ಸಮಯ ಬಂದಾಗ ಹಿಟ್ಲರನನ್ನು ಹಿಂದಕ್ಕೆ ತಳ್ಳಿ ಶಾಂತಿಗೆ ಬರಲು ಪ್ರಯತ್ನವಾಗುತ್ತಿರುವ ಹಾಗಿದೆ ಎಂದು ಹೇಳಲಾಗುತ್ತಿದೆ

ಆಸ್ಟ್ರೇಲಿಯದ ಸಮರಶಕ್ತಿ

ಆಸ್ಟ್ರೇಲಿಯದ ಜನಬಲ ಹೆಚ್ಚು ಕಡಮೆ ಮೈಸೂರಿನಷ್ಟೇ ಇದೆ ಅವರಲ್ಲಿ ೧೫,೨೨,೦೦೦ ಗಂಡಸರೂ, ೨ ಲಕ್ಷ ಹೆಂಗಸರೂ ಯುದ್ಧಕಾರ್ಯದಲ್ಲಿ ನೇರವಾಗಿ ನಿರತರಾಗಿ, ಕೆಲವರು ರಣರಂಗದಲ್ಲಿದ್ದಾರೆ, ಕೆಲವರು ಯುದ್ಧ ಕಾರ್ಖಾನೆಗಳಲ್ಲಿ ದುಡಿಯುತ್ತಿದ್ದಾರೆ ಜಪಾನರು ಸಮರಕ್ಕೆ ನಿಂತಾಗ ಕೇವಲ ೫,೪೪,೦೦೦ ಗಂಡಸರೂ, ೧೦೦೦೦೦ ಹೆಂಗಸರೂ ಸಮರಸೇವೆಯಲ್ಲಿದ್ದರು ಈಗ ಸುಮಾರು ಆಸ್ಟ್ರೇಲಿಯ ಜನ ಸಂಖ್ಯೆಯಲ್ಲಿ ಶೇಕಡ ೬೦ ರಷ್ಟು ಜನರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಸಮರಸೇವೆಗೆ ಸಹಾಯ ನೀಡುತ್ತಿರುವರು ೫೫೦೦೦ ಸ್ತ್ರೀಯರು ಸಿವಿಲ್ ಶಾಖೆಯಲ್ಲಿದ್ದ ಗಂಡಸರಿಗೆ ಸಮರ ರಂಗಕ್ಕೆ ಹೋಗಲು ಅವಕಾಶ ಕಲ್ಪಿಸಿ ಸೇವೆ ಮಾಡುತ್ತಿದ್ದಾರೆ ಮತ್ತು ೫೫೦೦೦ ಮಂದಿ ಸ್ತ್ರೀಯರು ಗ್ರಾಮಪುನರುಜ್ಜೀವನ ಕಾರ್ಯದಲ್ಲಿ ನಿರತರಾಗಿರುವರು

ಜಪಾನ್ ರಾಯಭಾರಿಗಳ ಸಭೆ

ಯೂರೋಪಿನ ರಾಷ್ಟ್ರಗಳಲ್ಲಿರುವ ಜಪಾನ್ ರಾಯಭಾರಿಗಳನ್ನೆಲ್ಲ ಕರೆಸಿ, ಜಪಾನ್ ಮಿಲಿಟರಿ ಅಧಿಕಾರಿಗಳು ಮಾತುಕತೆ ನಡೆಸುವರೆಂದು ಗೊತ್ತಾಗಿದೆ ಯೂರೋಪಿನ ಮಿಲಿಟರಿ ಮತ್ತು ರಾಜಕೀಯ ಪರಿಸ್ಥಿತಿ ಕುರಿತು ಚರ್ಚೆ ನಡೆಸುವುದೇ ಇದರ ಉದ್ದೇಶವೆಂದು ನಂಬಲಾಗಿದೆ ಈ ಸಮ್ಮೇಳನವು ಮುಗಿದನಂತರ ಬರ್ಲಿನ್ ನಗರದಲ್ಲಿರುವ ಜಪಾನ್ ರಾಯಭಾರಿ ಜನರಲ್ ಒಷಿಮರವರು ಟೋಕಿಯೋ ನಗರಕ್ಕೆ ಹೋಗಿ ಸ್ಥಿತಿಗತಿಗಳನ್ನು ಸ್ವತಃ ಜಪಾನ್ ಮಂತ್ರಿಗಳಿಗೆ ವರದಿ ಮಾಡುವರಂತೆ ಜನರಲ್ ಟೋಜೋರವರು ಸ್ವತಃ ಇಟಲಿಯ ರಾಜಕೀಯ ಸ್ಥಿತಿ ಮತ್ತು ರಷ್ಯಾ ಯುದ್ಧ ಸ್ಥಿತಿಯನ್ನು ತಿಳಿಯಲು ಕಾತುರರಾಗಿರುವ ಹಾಗಿದೆ ರಷ್ಯದಲ್ಲಿ ಜರ್ಮನರಿಗೆ ಆಗುತ್ತಿರುವ ಪರಾಭವ ಮತ್ತು ಇಟಲಿಯಲ್ಲಿ ಮುಸೋಲಿನಿ ಪತನಗಳು ಟೋಕಿಯೋದಲ್ಲಿ ಅನಿರೀಕ್ಷಿತವಾಗಿ ಪ್ರಕಟಗೊಂಡವು ಹಂಗೇರಿ, ಬಲ್ಗೇರಿಯಗಳಿಂದ ಶಾಂತಿ ಸಂಧಾನದ ಸುದ್ದಿ ಬರುತ್ತಿರುವುದರಿಂದ ಅಲ್ಲಿನ ನೈಜಸ್ಥಿತಿಯನ್ನು ತಿಳಿಯಲು ಜಪಾನ್ ಕುತೂಹಲದಿಂದ ಕೂಡಿದೆ ಜಪಾನರು ಯೂರೋಪಿನಿಂದ ಸ್ವದೇಶಕ್ಕೆ ಹಿಂತಿರುಗಲು ಈಗಿನ ಮಿಲಿಟರಿ ಪರಿಸ್ಥಿತಿಯಿಂದ ಪ್ರಯತ್ನಿಸುತ್ತಿರುವಂತೆ ಗೊತ್ತಾಗಿದೆ ಯೂರೋಪಿನಲ್ಲಿದ್ದ ಜಪಾನ್ ಪ್ರಚಾರಕರನ್ನೆಲ್ಲಾ ವಾಪಸು ಬರಲು ಕೇಳಿದೆ ಮತ್ತು ರೋಮ್ ನಗರದಲ್ಲಿದ್ದ ಜಪಾನ್‌ಪ್ರಚಾರ ಕಛೇರಿಯನ್ನು ಬರ್ಲಿನಿಗೆ ವರ್ಗಾಯಿಸಿದೆ ಎಂದು ಹೇಳಲಾಗಿದೆ

ಜಪಾನರ ವಿಚಿತ್ರ ಯುದ್ಧಕ್ರಮ

ನ್ಯೂಗಿನಿಯಲ್ಲಿರುವ ಮ್ಯುಬೋ ಕಣಿವೆಯನ್ನು ಜಪಾನರು ಆಕ್ರಮಿಸಿ ಸುಮಾರು ೯ ತಿಂಗಳಾಗಿತ್ತು ಈ ಅವಧಿಯಲ್ಲಿ ಅವರು ತಮ್ಮ ಕುಶಲತೆಗೆ ಅನುಗುಣವಾಗಿ ಕಂದಕಗಳನ್ನು ಸುರಂಗಗಳನ್ನು ನಿರ್ಮಿಸಿ ತಮ್ಮ ರಕ್ಷಣಾ ಸ್ಥಾನಗಳನ್ನು ಭದ್ರಗೊಳಿಸಿದ್ದರು ಅವರ ಮೇಲೆ ಸುತ್ತುಮುತ್ತಿನ ಪ್ರಾಕೃತಿಕ ಸನ್ನಿವೇಶಕ್ಕೆ ಅನುಗುಣವಾಗಿ 'ಕ್ಯಾಮಫ್ಲೇಜ್" ವ್ಯವಸ್ಥೆ ನಡೆದಿತ್ತು ಪರ್ವತ ಪಂಕ್ತಿಯಲ್ಲಿ ಅವರು ವಿಶೇಷವಾಗಿ ಸುರಂಗಗಳನ್ನು ರಚಿಸಿ, ಒಂದು ಸುರಂಗದಿಂದ ಮತ್ತೊಂದಕ್ಕೆ ತೆವಳಿಕೊಂಡು ಹೋಗಲು ಎಡೆ ಅವಕಾಶ ಕಲ್ಪಿಸಿಕೊಂಡಿದ್ದರು ಕೂ ಮಿಯಗಾಟಮುನಿಂದ ಅವರಿಗೆ ಸರಬರಾಯ ಬರುವಂತೆ ಮಿತ್ರವರ್ಗವು ತಡೆಯದೆ ಹೋಗಿದ್ದರೆ, ಈ ಕ್ಷೇತ್ರದಿಂದ ಅವರನ್ನು ಹೊರಡಿಸಲು ಬಹಳ ಕಷ್ಟನಷ್ಟಗಳನ್ನು ಅನುಭವಿಸಬೇಕಾಗುತ್ತಿತ್ತು ಈ ಪ್ರಾಂತದಲ್ಲಿ ಜಪಾನರು ಸಂಗ್ರಾಮ ನಡೆಸಿದ ಕ್ರಮ ಬಹಳ ವಿಚಿತ್ರವಾಗಿಯೇ ಇತ್ತು ದಟ್ಟವಾಗಿ ಬೆಳೆದಿರುವ ಅರಣ್ಯದಲ್ಲಿ ಪೊದೆಯಿಂದ ಪೊದೆಗೆ ಹಗ್ಗಗಳನ್ನು ಬಿಗಿಯುವದು ಹತ್ತಿರದಲ್ಲಿಯೇ ಅಡಗಿಕೊಂಡು ಎಲೆಗಳು ಶಬ್ದವಾಗುವಂತೆ ಆಗಾಗ ಹಗ್ಗವನ್ನೆಳೆಯುವದು ಶತ್ರು ಬಂದಾಗ ಅವರನ್ನು ನಾಶಪಡಿಸಲು ಯತ್ನಿಸುವದು ಮತ್ತೆ ಕೆಲವರು ನೆಲದಲ್ಲಿ ಗುಳ್ಳೆಗಳಿಗೂ ಅಡಗುವ ಕ್ರಮದಲ್ಲಿ ಅಡಗಿ ಶಬ್ದಮಾಡುವದು, ಶತ್ರುವಿನ ಗಮನವು ಅತ್ತ ತಿರುಗಿದಾಗ ಹಿಂದಿನಿಂದ ಮೇಲೆ ಬೀಳುವದು ಇವೇ ಮೊದಲಾದ ಧ್ವನಿಯು ಮಾನವನ ಮೇಲೆ ನಡೆಸಬಹುದಾದ ಪರಿಣಾಮವನ್ನು ಶಾಸ್ತ್ರೀಯ ರೀತಿಯಿಂದ ಅರಿತು, ಅದರ ಪ್ರಯೋಗವನ್ನು ಈ ಸಂಗ್ರಾಮದಲ್ಲಿ ಬಳಸಲು ಜಪಾನರು ಯತ್ನಿಸಿದರು ಅದರ ಫಲ ಕಾರಿಯಾಗಲಿಲ್ಲ ಜಪಾನರ ರೀತಿಯನ್ನು ಅರಿತ ಮಿತ್ರಬಲಗಳು ಅವರ ಬಲೆಯಿಂದ ಅವರನ್ನೇ ಬಂಧಿಸಿದರು

ಭಾರತ ಸಮಸ್ಯೆ ಪರಿಹರಿಸಲು ಲೂಯಿಫಿಷರ್‌ರವರ ಸಲಹೆ

ಅಮೇರಿಕದ ಇಂಡಿಯಾ ಲೀಗಿನ ಆಶ್ರಯದಲ್ಲಿ ನಡೆದ ಆಗಸ್ಟ್ ೯ ರ ವಾರ್ಷಿಕೋತ್ಸವದ ದಿನಾಚರಣೆಯ ಸಂದರ್ಭದಲ್ಲಿ ಮಾತನಾಡುತ್ತ, ಅಮೇರಿಕದ ಸುಪ್ರಸಿದ್ಧ ಲೇಖಕರೂ, ಪತ್ರಿಕೋದ್ಯೋಗಿಗಳೂ ಆದ ಶ್ರೀ ಲೂಯಿಫಿಷರ್‌ರವರು " ಅಕ್ಟೋಬರ್ ತಿಂಗಳಲ್ಲಿ ವೇವೆಲ್ಲರು ವೈಸರಾಯ್ ಪದವಿಯನ್ನು ಸ್ವೀಕರಿಸುವರು. ಈ ಸಂದರ್ಭವನ್ನು ಭಾರತ ಸಮಸ್ಯೆಯ ಪರಿಹಾರಕ್ಕಾಗಿ ಸುಖವಾಗಿ ಉಪಯೋಗಿಸಿಕೊಳ್ಳಬಹುದು ಭಾರತದ ಜನರು, ಮುಖಂಡರು ಬೇಡುತ್ತಿರುವುದು ಪರಿಮಿತಾಧಿಕಾರವುಳ್ಳ ರಾಷ್ಟ್ರೀಯ ಸರಕಾರವನ್ನು ಯುದ್ಧಕಾಲದಲ್ಲಿ ಬ್ರಿಟಿಷರು ಭಾರತವನ್ನು ಬಿಟ್ಟು ಹೊರಡಬೇಕೆಂಬುದಲ್ಲ ಅವರ ಬೇಡಿಕೆ ಅವರೂ ಸಂಯುಕ್ತರಾಷ್ಟ್ರಗಳೊಂದಿಗೆ ಸೇರಿ ಯುದ್ಧವನ್ನು ಗೆಲ್ಲಲು ಯತ್ನಿಸಲಿಚ್ಛಿಸುತ್ತಾರೆ ಸ್ವಕೃತ ಸಹಾಯದಿಂದಲೇ ಬೀಳುವನು ಏಷಿಯದ ಅರಸಾಗಿರುವ ಕಾಲ ಮುಗಿದುಹೋಯಿತು. ಇನ್ನು ಅವರು ಅಲ್ಲಿರಬೇಕೆಂದರೆ ಅದು ಮಿತ್ರನಂತೆ ಮಾತ್ರ ಸಾಧ್ಯ ಗೆಳೆಯನಾಗಲು ಭಾರತನೊಂದಿಗೆ ಒಪ್ಪಂದ ಅತ್ಯಗತ್ಯ ಒಪ್ಪಂದವಾಗಲು ಮೊದಲನೆಯದಾಗಿ, ಗಾಂಧೀಜಿ, ಜವಹರಲಾಲ್ ನೆಹರು ಮೊದಲಾದ ನಾಯಕರನ್ನು ಅವರು ಸತ್ಯಾಗ್ರಹ ಚಳುವಳಿಯನ್ನು ಉಪಸಂಹರಿಸಬೇಕೆಂಬ ಷರತ್ತು ಹಾಕಿ, ಬಿಡುಗಡೆ ಮಾಡುವುದು ಎರಡನೆಯದಾಗಿ ಬ್ರಿಟನ್ನಿನ ಯುದ್ಧ ಕಾರ್ಯಗಳಿಗೆ ಸಹಾಯ ಮಾಡುವಂಥ ತಾತ್ಕಾಲಿಕ ಭಾರತೀಯ ಸರಕಾರವನ್ನು ಸ್ಥಾಪಿಸಲು ಸಹಾಯ ಮಾಡುವುದಾಗಿ ಘೋಷಿಸುವುದು ಮೂರನೆಯದು ಸೈನ್ಯದ ಚಲನವಲನದ ವಿಚಾರವಾಗಿ, ಭಾರತ ಮತ್ತು ಸಂಯುಕ್ತ ರಾಷ್ಟ್ರಗಳಲ್ಲಿ ಒಪ್ಪಂದ ಮಾಡಿಕೊಳ್ಳುವದು ಮತ್ತು ಜಪಾನು ಪೂರ್ತಿಯಾಗಿ ಶರಣಾಗತವಾದ ಒಂದು ವರ್ಷದಲ್ಲಿ ಭಾರತದಿಂದ ಪೂರಾ ಸೈನ್ಯವನ್ನು ತೆಗೆದುಬಿಟ್ಟು ಅದಕ್ಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತೇವೆಂದು ಸಂಯುಕ್ತರಾಷ್ಟ್ರಗಳು ವಚನ ಕೊಡುವದು ಈ ಸೂತ್ರಗಳ ಮೇಲೆ ಸಂಧಾನ ನಡೆದರೆ ಸಂಧಾನವಾದೀತು, ಭಾರತ ಸಮಸ್ಯೆ ಪರಿಹಾರವಾಗಿ ಎಲ್ಲರಿಗೂ ಒಳಿತಾದೀತು ' ಎಂದು ಸಾರಿದರು

ಪುರಾಣಶ್ರವಣ ಮತ್ತು ಅನುಷ್ಠಾನ ಪ್ರಾರಂಭ ಭೂಸನೂರು

ಶ್ರೀ|| ಷ|| ಬ್ರ| ಗುರು ಸಿದ್ಧಶಿವಾಚಾರ್ಯ ಹಿರೇಮಠ ಸಂಸ್ಥಾನ ಭೂಸನೂರ ಈ ಶಿವಯೋಗಿಗಳ ಮಂಗಲ ನಾಮವನ್ನು ಕೇಳದ ಸ್ಥಳವು ಕರ್ನಾಟಕದಲ್ಲಿಲ್ಲವೆಂದು ಹೇಳಿದರೂ ಅತಿಶಯೋಕ್ತಿಯಾಗಲಾರದು ಶಿಷ್ಯಸುಖವೇ ನಮ್ಮ ಸುಖವೆಂದು ತಿಳಿಯುವ ಈ ಮಹನೀಯರು, ವರ್ಷದ ಪದ್ಧತಿಯಂತೆ ತಮ್ಮ ಮಠದಲ್ಲಿಯೇ ಕ್ಷೀರಾಹಾರಿಯಾಗಿದ್ದು ಅನುಷ್ಠಾನವನ್ನು ಕೈಕೊಂಡಿರುವರಲ್ಲದೆ ಭಕ್ತರೂ ಸಹ ಸದುಪದೇಶದಿಂದ ಧನ್ಯರಾಗಲೆಂಬ ಸದುದ್ದೇಶದಿಂದ ಜಗದ್ಗುರು ರೇಣುಕವಿಜಯ ಮಹಾಪುರಾಣ ಪಠನವನ್ನು ಶ್ರೀಸಿದ್ಧವೀರಶರ್ಮಾ ಹಿರೇಮಠ ಜೈನಾಪುರ ಇವರಿಂದ ಇದೇ ಶ್ರಾವಣಮಾಸ ಶುದ್ಧ ಪ್ರತಿಪದೆ (ತಾ|| ೨ ೮ ೪೩) ದಿವಸ ಪ್ರಾರಂಭಿಸಿದ್ದಾರೆ ನಿತ್ಯದಲ್ಲಿ ಪುರಾಣ ಶ್ರವಣಕ್ಕೆ ಜಳಕಿ, ಸರಸಂಬಿ ಭೂಸನೂರ ಈ ಹಳ್ಳಿಕಡೆಯಿಂದ ಜನರು ತಂಡೋಪತಂಡವಾಗಿ ಬಂದು ಶ್ರೀ ಜಗದ್ಗುರು ರೇಣುಕನ ಕೃಪೆಗೆ ಪಾತ್ರರಾಗುತ್ತಿದ್ದಾರೆ

ಸಿದ್ದಪ್ಪ ಅಂಕಲಕೋಟೆ ಜಳಕೀ

ಶ್ರೀಮದ್ರಂಭಾಪುರೀ ಜಗದ್ಗುರುಗಳ ಮಹೋತ್ಸವ, ಅಜ್ಜಂಪುರ.

ಶ್ರೀಮಜ್ಜಗದ್ಗುರುರಂಭಾಪುರೀ ಮಹಾಸ್ವಾಮಿಗಳವರು ಕಡೂರು ಡಿ|| ಅಜ್ಜಂಪುರದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಇದೇ ತಿಂಗಳು ೧೦ ನೇಯ ತಾರೀಖು ಸಕಲ ಬಿರುದಾವಳಿಗಳೊಡನೆಯೂ ಚತುರಂಗ ಬಲಸಹಿತವಾಗಿಯೂ ಅಜ್ಜಂಪುರ ಗ್ರಾಮಕ್ಕೆ ದಯಮಾಡಿಸುವರು ಆ ಸಮಯದಲ್ಲಿ ನಡೆಯಲಿರುವ ಶ್ರೀ ಜಗದ್ಗುರುಗಳವರ ಸುವರ್ಣ ರಜತಾಂದೋಲಿಕಾಮಹೋತ್ಸವದಲ್ಲಿ ಸಕಲರೂ ಭಾಗವಹಿಸಿ ಶ್ರೀ ಗುರು ದರ್ಶನ ಆಶೀರ್ವಾದಗಳನ್ನು ಪಡೆದು ಕೃತಾರ್ಥರಾಗಬೇಕೆಂದು ಕೋರುತ್ತೇವೆ

ಅಜ್ಜಂಪುರದ ಭಕ್ತಮಂಡಳಿ

(೧ನೆಯ ಪುಟದಿಂದ ಮುಂದುವರಿದುದು.)

ಮುಖ್ಯ ಸಾಧನಗಳಾಗಿರುವವು. ಸದ್ಗುರು ಉಪಾಸನಾ ಪತಿಯ ಕೃಪಾಸಂಧಾನವೇ ಬ್ರಹ್ಮಜ್ಞಾನ ಪ್ರಾಪ್ತಿಯು. ಹೀಗೆ ಸತಿಗೆ ಪತಿಯ ಹೊರತು ಅನ್ಯಗತಿಯಿಲ್ಲ. ಸತಿಯು ಸತ್ಯ, ಶಾಂತಿ, ಕ್ಷಮಾ, ಧೈರ್ಯ, ಸಂತೋಷ, ಅಕ್ರೋಧ, ನಿರಭಿಮಾನ, ನಿರ್ಮಾತ್ಸರ್ಯ, ಪ್ರಾಣಿಜಾತಗಳಲ್ಲಿ ಭಗವದ್ರೂಪಭಾವನೆ, ಆರ್ಜವ ಈ ಗುಣಗಳನ್ನು ಪ್ರಯತ್ನ ಪೂರ್ವಕ ಸಂಪಾದಿಸಬೇಕು. ಮೋಕ್ಷಾಪೇಕ್ಷೆಯು ಈ ಜಗತ್ತು, ಬಹಳ ಹೇಳುವುದೇನು, ಈ ದೇಹವೂ ಸಹ ನನ್ನದಲ್ಲವೆಂದು ಭಾವಿಸಬೇಕು. ಇದಕ್ಕೆ ಆರ್ಯರು ತ್ಯಾಗವೆನ್ನುವರು. ದೇಹ ಬುದ್ಧಿಯವರಿಗೆ ಈ ತ್ಯಾಗವು ದುಷ್ಕರವಾಗಿರುವುದು. ಯಾವತ್ತೂ ವಿಷಯಜಾತವನ್ನು ವಮನದಂತೆ ತಿಳಿಯುವವರೆಗೇ ವೈರಾಗ್ಯವು ಪ್ರಾಪ್ತವಾಗದು. ವಿರಾಗಿಯೇ ಮೋಕ್ಷಾಧಿಕಾರಿಯು. ಆತ್ಮನು ಸರ್ವತ್ರ ವ್ಯಾಪಕನಾಗಿದ್ದು, ಸ್ತ್ರೀಪುತ್ರ ಧನಾದಿಗಳಿಗಿಂತ ಅತ್ಯಂತ ಪ್ರಿಯನಾಗಿರುವನು. ಪತಿ ಪುತ್ರಾದಿಗಳನ್ನು ಪ್ರೀತಿಸುವದು ಅವರ ಸಲುವಾಗಿಯಲ್ಲ, ತನ್ನ ಸಲುವಾಗಿ! ಇದೇ ಮಾತು ಶರೀರ, ಪಶು, ದೇವತೆಗಳು ಎಲ್ಲ ಪ್ರಾಣಿಜಾತಗಳು ಇವುಗಳ ವಿಷಯದ ಪ್ರೇಮ ಭಕ್ತಿಗಳಿಗೂ ಸಂಬಂಧಿಸುವುದು, ಆದರೂ ಆತ್ಮನು ಅಭೇದ್ಯನೆಂದು ನಿಃಸಂಶಯದಿಂದ ತಿಳಿಯಲಿಕ್ಕೆ ಈ ಪತಿ ಪುತ್ರಾದಿಗಳೇ ಸಾಧನಗಳಾಗಿರುವರು. ಸಮುದ್ರವು ಯಾವತ್ತು ಜಲಗಳ ಆಧಾರವಾಗಿರುವಂತೆ ಆತ್ಮನು ಯಾವತ್ತು ಜಗತ್ತಿನ ಆಧಾರವಾಗಿರುವನು.

ಬ್ರಹ್ಮದೇವನಿಂದ ಕ್ರಿಮಿಕೀಟಾದಿ ಕ್ಷುದ್ರ ಜಂತುಗಳವರೆಗೆ ಒಬ್ಬನೇ ಆತ್ಮನು ವ್ಯಾಪಕನಾಗಿರುವನೆಂಬ ಅನುಭವವನ್ನು ಪಡೆಯುವುದೇ ಜ್ಞಾನವು. ಹಸಿ ಕಟ್ಟಿಗೆಯು ಸುಡುವಾಗ ಬೆಂಕಿ ಹೊಗೆಗಳು ಬಿನ್ನ ಭಿನ್ನವಾಗಿ ತೋರುವಂತೆ ಆತ್ಮನು ಸಂಕಲ್ಪಯುಕ್ತನಾದರೆ ಈ ಜಗತ್ತು ಭಿನ್ನವಾಗಿ ತೋರುವುದು. ಸುಮಂಗಲೆಯರೇ, ಅಜ್ಞಾನ ಮೂಲವಾದ ದ್ವೈತವು ದುಃಖಕ್ಕೆ ಕಾರಣವು. ನಿಮಗೆ ದ್ವೈತದ ಭಾಸವಾಗಲಿಕ್ಕೆ ನಿಮ್ಮ ಸಂಕಲ್ಪವೇ ಕಾರಣವು. ನೀವು ಸಂಕಲ್ಪಾತೀತರಾದರೆ ಆತ್ಮನ ಸ್ವರೂಪವೇ ಇರುವೆವೆಂಬ ಅನುಭವವು ನಿಮಗಾಗುವುದು, ಆದ್ದರಿಂದ ಯಾವತ್ತು ಸಂಕಲ್ಪಗಳ ನಿರೋಧ ಮಾಡಿ, ನಾವೇ ಆತ್ಮ ಸ್ವರೂಪರೆಂಬ ಅಖಂಡ ಭಾವನೆಯನ್ನು ಹೃದಯದಲ್ಲಿ ಧಾರಣ ಮಾಡಿರಿ; ಅಂದರೆ ಆಯುಷ್ಯವಿರುವವರೆಗೆ ಜೀವನ್ಮುಕ್ತಿದಶೆಯು ಪ್ರಾಪ್ತವಾಗಿ ಕಡೆಗೆ ಆತ್ಮಸ್ವರೂಪದಲ್ಲಿ ನೀವು ಕೂಡಿ ಹೋಗುವಿರಿ. ಸ್ವಪ್ನಕ್ಕೆ ಸಂಕಲ್ಪವು ಕಾರಣವಾಗಿರುವಂತೆ, ಜಾಗ್ರತೆಗೂ ಸಂಕಲ್ಪವೇ ಕಾರಣವಾಗಿರುವುದು. ಸ್ವಪ್ನದಲ್ಲಿ ಸಂಕಲ್ಪದ ನಾಶವಾದಕೂಡಲೆ ಗಾಢನಿದ್ರೆಯು ಹತ್ತುವಂತೆ, ಜಾಗ್ರತಿಯಲ್ಲಿ ಸಂಕಲ್ಪದ ನಾಶವಾದರೆ ಸಮ್ಯದ್ಧಿಯು ಲಭಿಸುವುದು. ಆತ್ಮನು ಸಂಗರಹಿತನಾಗಿದ್ದು ಎಲ್ಲವನ್ನು ನೋಡುವನು, ಆದರೆ ಆತ್ಮನನ್ನು ಮಾತ್ರ ಯಾರೂ ನೋಡಲಾರರು. ಆತ್ಮನು ಅವಸ್ಥಾತ್ರಯದಲ್ಲಿಯೂ ಸಾಕ್ಷೀಭೂತನಾಗಿದ್ದು, ಸ್ವಯಂಪ್ರಕಾಶನಾಗಿರುವನು. ಈ ಆತ್ಮನೇ ಅಜ್ಞಾನಾವೇಷ್ಟಿತನಾಗಿ ನಾನು ಕರ್ತೃವೆಂದು ಭಾವಿಸಿ ಬದ್ಧನಾಗುವನು. ಅದೇ ಆತ್ಮನೇ ತಾನು ಅಸಂಗನೂ, ಅಕರ್ತೃವೂ ಎಂದು ತಿಳಿದರೆ ಮುಕ್ತನಾಗುವನು. ಕನ್ನಡಿಯಲ್ಲಿ ಪ್ರತಿಬಿಂಬಿಸಿರುವ ತನ್ನ ಸ್ವರೂಪವನ್ನೆ ಬಾಲಕನು ಭಿನ್ನವಾಗಿ ಕಲ್ಪಿಸುವಂತೆ, ಮಾಯಾಮೋಹಿತನಾದ ಆತ್ಮನು ವಿಷಯಗಳನ್ನು ತನ್ನಿಂದ ಭಿನ್ನವಾಗಿ ಕಲ್ಪಿಸುವನು. ಸುಮಂಗಲೆಯರೇ, ನೀವು ಶಾಂತವೃತ್ತಿಯವರಾಗಿ ಆತ್ಮನ ಹೊರತು ಬೇರೆ ಯಾವುದರ ವಿಚಾರವನ್ನು ಮಾಡದೆ ಜೀವನ್ಮುಕ್ತರಾಗಿ ಪ್ರಾರಬ್ಧಕ್ಷಯವಾಗುವವರೆಗೆ ಸುಖಿಗಳಾಗಿ ಇರಿ. ಈ ಆತ್ಮಬೋಧಕ್ಕಾಗಿಯೇ ಎಷ್ಟೋಜನರು ಸರ್ವಸಂಗಪರಿತ್ಯಾಗಮಾಡಿ ಭಿಕ್ಷಾವೃತ್ತಿಯಿಂದ ತಿರುಗುತ್ತಿರುವರು, ಆದ್ದರಿಂದ ನೀವು ನಿರಿಚ್ಛರಾಗಿ ಆತ್ಮನಿಷ್ಠರಾಗಿರಿ. ಮಾಡಿದ ಕರ್ಮಗಳನ್ನು ಸ್ಮರಿಸಬೇಡಿರಿ. ಪ್ರಾರಬ್ಧಾನುಸಾರವಾಗಿ ಮಾಡಬೇಕಾದ ಕರ್ಮಗಳನ್ನು ನೀವು ಅನಾಸಕ್ತರಾಗಿ ಮಾಡಿರಿ; ಆದರೆ ಕರ್ತೃತ್ವದ ಅಹಂಕಾರಕ್ಕೆ ಹೃದಯದಲ್ಲಿ ಸರ್ವಥಾ ಆಸ್ಪದ ಕೊಡಬೇಡಿರಿ. ಎಷ್ಟು ಹೇಳಿದರೂ ಅಷ್ಟೇ, ಪ್ರಿಯತಮೆಯರೇ, ಸದ್ಗುರುವಿಗೆ ಶರಣು ಹೋಗಿ, ಆತನನ್ನು ಏಕನಿಷ್ಠೆಯಿಂದ ಸೇವಿಸಿ ಆತನ ಅನುಗ್ರಹ ಸಂಪಾದಿಸದ ಹೊರತು ಮೋಕ್ಷವು ಸಾಧಿಸದು. ನೀವು ಪರಮಧನ್ಯರಾದ್ದರಿಂದಲೇ ಪತಿರೂಪ ಸದ್ಗುರುವನ್ನು ಸೇವಿಸಿ, ಆತನ ಅನುಗ್ರಹಕ್ಕೆ ಪಾತ್ರರಾಗಿರುವಿರಿ! ಎಂದು ಹೇಳಲು, ಅವರಿಂದ ಜ್ಞಾನಮಾರ್ಗದ ಉಪದೇಶವನ್ನು ಹೊಂದಿ ಧನ್ಯರಾದರು.

ವಾಚಕರೇ, ಜಗತ್ತಿನಲ್ಲಿ ಮೂರು ಬಗೆಯ ವೈರಾಗ್ಯಗಳಿವೆ. ಪುರಾಣ ಪುಣ್ಯಕಥೆಗಳನ್ನು ಕೇಳುವಾಗಿನ ವೈರಾಗ್ಯವು ಪುರಾಣ ವೈರಾಗ್ಯ. ಪ್ರಸೂತಿಯಾಗುವಾಗಿನ ನೋವನ್ನು ತಡೆಯಲಾರದೆ ಮುಂದೆ ವಿಷಯಸುಖವನ್ನು ಬಯುಸುವದಿಲ್ಲವೆಂಬ ವೈರಾಗ್ಯವು ಪ್ರಸೂತಿ ವೈರಾಗ್ಯ; ಯಾರಾದರೂ ಸತ್ತಾಗ್ಯೆ ದಿಕ್ಕುಗಳೆಲ್ಲಾ ಶೂನ್ಯವಾಗಿ ಕಾಣುವ ವೈರಾಗ್ಯವು ಶ್ಮಶಾನ ವೈರಾಗ್ಯ. ಈ ಮೂರು ಆಭಾಸ ವೈರಾಗ್ಯಗಳು. ಇವುಗಳನ್ನು ನಂಬಬಾರದು. ತನ್ನ ವಿಚಾರದಿಂದ ತನಗೆ ಬರುವ ವೈರಾಗ್ಯವೇ ನಿಜವಾದ ವೈರಾಗ್ಯ.

ಅನಹಂಕಾರ —ನಾನೆಂಬ ಹೆಮ್ಮೆ ಇಲ್ಲದಿರುವಿಕೆ. ಅಹಂಕಾರವೆಂಬುದು ಕಣ್ಣಿಗೊಂದು ಪರ ಅವರಿಗೆ ಪರಮಾತ್ಮನು ಕಾಣುವದಿಲ್ಲ. ದೇವದಾನವರಿಗೆ ಯುದ್ಧವು ನಡೆದಾಗ ಅಗ್ನಿಯೂ ವಾಯುವೂ ಅಹಂಕಾರಯುಕ್ತರಾದುದರಿಂದ ಪರಶಿವನು ಅವರಿಗೆ ಕಾಣದೆ ವಿನೀತನಾದ ಇಂದ್ರನಿಗೆ ಮಾತ್ರ ಕಂಡನೆಂದು ಕೇನೋಪನಿಷತ್ತಿನಲ್ಲಿ ಒಂದು ಕಥೆಯಿದೆ. 'ನಾನು ನಾನೆಂದು ಗರ್ವದಲಿ ಮೆರೆಯದ ನೀನು ನೀನೆಂದು ಶಿರಬಾಗಿ ನಡೆಯೊ ಜಾವಲಂಗದೊಳಗೆ' ಎಂದು ನೀತಿಕಾರರು ಹೇಳುವರು. 'ನಾ ಸತ್ತರೆ ಸ್ವರ್ಗ' ಎಂಬದೊಂದು ಕನಕದಾಸರ ಮುಂಡಿಗೆಯ ಮಾತಿದೆ. ಇಲ್ಲಿ 'ನಾ ಸತ್ತರೆ' ಎಂದರೆ ಅಹಂಕಾರವು ಹೋದಮೇಲೆಂದರ್ಥ. ಅಹಂಕಾರವು ಅಳಿದ ಮೇಲೆ ಉಳಿದಿಪ್ಪಾಗಲೇ ದೇವರು ಕಾಣುವನು. ಪರಮಾರ್ಥಕ್ಕೆ ಅಹಂಕಾರವೇ ಬೆಲೆಯೆಂಬ ವಿಷಯಕ್ಕೆ ಸ್ವಾಮಿ ರಾಮತೀರ್ಥರು ಒಂದು ಕಥೆಯನ್ನು ಹೇಳಿದ್ದಾರೆ. ಒಬ್ಬ ಸಾಧುವು ಭಿಕ್ಷಕ್ಕಾಗಿ ಬೀದಿಯಲ್ಲಿ ತಿರುಗುತ್ತ, ತನ್ನಲ್ಲೊಂದು ರತ್ನವಿರುವದೆಂದೂ ಯಾರಾದರೂ ಕೊಂಡುಕೊಳ್ಳಬಹುದೆಂದೂ ಒಂದು ಹಾಡನ್ನು ಹೇಳಿಕೊಂಡು ಹೋದನು. ರತ್ನ ವ್ಯಾಪಾರವನ್ನು ಪ್ರಚಲಿಸುತ್ತಿದ್ದ ಓರ್ವ ವರ್ತಕನಿಗೆ ಈ ಭಿಕ್ಷುಕನಿಂದ ಅಗ್ಗವಾಗಿ ರತ್ನವನ್ನು ತಕ್ಕೊಂಡು ಹೆಚ್ಚಿನ ಬೆಲೆಗೆ ಮಾರಿ ಲಾಭವನ್ನು ಪಡೆಯಬಹುದೆಂದು ತೋರಿತು. ಆವರಿವರಿಗೆ ಹೇಳಿದರೆ ಎಲ್ಲರೂ ರತ್ನದ ಬೆಲೆಯನ್ನೇರಿಸಬಹುದೆಂದು ತಾನೊಬ್ಬನೇ ಆ ಸಾಧುವಿನ ಮನೆಗೆ ಹೋದನು. ಸಾಧುವು ಮನೆಯಲ್ಲಿರಲಿಲ್ಲ. ಅವನ ಮಗಳಿದ್ದಳು. ವರ್ತಕನು ತಾನು ಬಂದ ಉದ್ದೇಶವನ್ನು ತಿಳಿಸಿದನು. ಆ ಹುಡುಗಿಯು ಆತನನ್ನು ಉಪಚಾರದಿಂದ ಕೂಡಿಸಿ ಆ ರತ್ನದಬೆಲೆ ತನಗೆ ಗೊತ್ತಿರುವುದಾಗಿಯೂ ಬೆಲೆಯನ್ನು ಕೊಟ್ಟರೆ ತಾನೇ ಅದನ್ನು ಕೊಡುವುದಾಗಿಯೂ ಹೇಳಿದಳು. ಸಾಧುವು ಬರುವುದಕ್ಕೆ ಮೊದಲು ಈ ಹುಡುಗಿಗೇ ಮುಂಕುಬೂದಿಯನ್ನು ತಳ್ಳಿ ಬಹು ಅಗ್ಗವಾಗಿ ರತ್ನವನ್ನು ಎತ್ತಿಹಾಕಬೇಕೆಂದು ಯೋಚಿಸಿ ಆ ವರ್ತಕನು ಆದರೆ ಅದರ ಬೆಲೆಯನ್ನು ಮುಂದಾಗಿ ತೆಗೆದುಕೊಳ್ಳಬಹುದೆಂದನು. ಕೂಡಲೆ ಆ ಹುಡುಗಿಯು ಅದನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧವಾಗಿ ಬರುತ್ತೇನೆಂದು ಒಳಕ್ಕೆ ಹೋಗಿ ಒಂದು ಖಡ್ಗವನ್ನು ಹಿಡಿದುಕೊಂಡು ಅದನ್ನು ಝಳಪಿಸುತ್ತ ವರ್ತಕನ ಎದುರಿಗೆ ಬಂದು ನಿಂತಳು. ಆಕೆಯ ಭೀಷಣಾಕಾರವನ್ನು ನೋಡುತ್ತಲೇ ವರ್ತಕನು ಹೆದರಿ ಕೂಗಿಕೊಂಡನು. ನೆರೆಹೊರೆಯವರು ಸೇರಿ ಇದೇನೆಂದು ಕೇಳಿದರು. "ನಮ್ಮಲ್ಲಿರುವದು ಪರಮಾತ್ಮನ ನಾಮರತ್ನ. ಅದರ ಬೆಲೆಯು ಅಹಂಕಾರರೂಪವಾದ ತಲೆ. ಈ ವರ್ತಕನು ಆ ಬೆಲೆಯನ್ನು ಕೊಡುತ್ತೇನೆಂದು ಹೇಳಿ ಈಗ ಹೀಗೆ ಹೀಗೆಂದು ಕೂಗಿಕೊಳ್ಳುತ್ತಾನೆ" ಎಂದು ಹೇಳಲು ಎಲ್ಲರೂ ಆ ಸಾಧುವಿನ ಸಾಧುತ್ವವನ್ನು ಬಲ್ಲವರಾದ್ದರಿಂದ ವರ್ತಕನ ದುರಾಶೆಗೆ ಕೈಹೊಡೆದು ನಕ್ಕು ಗದ್ದಲವನ್ನು ನಿಲ್ಲಿಸಿದರಂತೆ. ಪರಮಾತ್ಮ ಪ್ರಾಪ್ತಿಯಾಗಬೇಕಾದರೆ ಅಹಂಕಾರವನ್ನು ಅಳಿಯಬೇಕು.

ಅನಾಸಕ್ತಿ :—ವಿಷಯಗಳಮೇಲೆ ಪ್ರೀತಿಯಿಲ್ಲದಿರುವುದು. ಶ್ರೀಮನ್ನಿಜಗುಣಶಿವಯೋಗಿಗಳು:—ಬೇಡ ಬೇಡವಲ ಮನವೆ ವಿಷಯದಾಸೆ | ಮಾಡಿ ಕೆಡದಿರು ಸಾರಿದೆ || ಕಾಸಿದ ಪೊಂದೊಡಿಗೆ ನಂಜಿನ | ಬೀಸ ಹೂರಿಗೆ ಜಾತಿಯ || ಲೇಸಿವನನುಕರಿಸೆ ಕಡೆಯೊಳು | ಘಾಸಿಯಾಗುವೆ ತಪ್ಪದು || ಎಂದಿರುವರು.

ಅನಭಿಷ್ವಂಗ:—ಪತಿ-ಪುತ್ರರ ಮೇಲಿನ ಅತಿ ಪ್ರೀತಿಯಿರದಿರುವದು. ಶ್ರೀಮನ್ನಿಜಗುಣ ಶಿವಯೋಗಿಗ 'ಮಮಕಾರದಿಂದೆ ಮಿಕ್ಕಿನ ಬಂಧವುಂಟೆ' ಎಂದು ಹೇಳಿರುವರು.

ಸಮಚಿತ್ತತ್ವ.—ಹರ್ಷಾನುಮರ್ಷಗಳಿಂದ ಹಿಗ್ಗದ ತಗ್ಗದೆ ಇರುವದು. ಈ ಸ್ಥಿತಿಯೊಂದುಂಟಾದರೆ "ಇಹೈವ ತೈರ್ಜಿತಸ್ಸರ್ಗೋ ಯೇಷಾಂ ಸಾಮ್ಯೇ ಸ್ಥಿತಂ ಮನಃ" ಎಂಬ ಗೀತೋಕ್ತಿಯಂತೆ ಈ ಲೋಕದಲ್ಲಿದ್ದೇ ಪ್ರಪಂಚವನ್ನು ಜಯಿಸಿದಂತಾಯಿತು. ಇದರ ವಿಷಯದಲ್ಲಿ ಒಂದು ನೀತಿ ಶಾಸ್ತ್ರವು ಹೇಳುವದೇನೆಂದರೆ—"ಹಳಿವಾವುದು ಕುಲಭಂಗಂ | ತಿಳಿವಾವುದು ಸಮತೆ, ಬಂಧವಾವುದು ಮೋಹಂ || ಕಳವಾವುದನ್ಯಸವೆಡರಿಂ | ದಾವಾವುದು ವೃತಿವಿವೇಕಚೂಡಾರತ್ನ ||"

ಭಕ್ತಿ.—ಪರಮಾತ್ಮನ ಮೇಲೆ ಪ್ರೇಮ. ಇದು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ ಹೀಗೆ ನವವಿಧವಾಗಿರುವದು. ಈ ಒಂಭತ್ತು ಭಕ್ತಿಗಳನ್ನು ಕ್ರಮವಾಗಿ ಪರೀಕ್ಷಿತ, ಶುಕ, ಪ್ರಹ್ಲಾದ, ಲಕ್ಷ್ಮಿ, ಪೃಥು, ಅಕ್ರೂರ, ಮಾರುತಿ, ಅರ್ಜುನ ಮತ್ತು ಬಲಿ ಇವರು ಸಾಧಿಸಿ ಪ್ರಸಿದ್ಧರಾಗಿರುವರೆಂದು ಸ್ಮೃತಿಯು ಹೇಳುವುದು.

ವಿವಿಕ್ತದೇಶಸೇವಿತ್ವ.—ಜನಸಂಚಾರವಿಲ್ಲದಕಡೆ ಇರುವದು. ಈ ವಿಷಯದಲ್ಲಿ ಶ್ರೀರಾಮಕೃಷ್ಣ ಪರಮಹಂಸರು ಆದೆಷ್ಟು ಭಕ್ತಿಸಾಧನಗಳನ್ನು ಸಾಧಿಸಿಕೊಂಡ ಕೆಲವುಕಾಲ ಯಾವದಾದರೊಂದು ಏಕಾಂತಸ್ಥಲದಲ್ಲಿ ವಾಸಮಾಡಬೇಕು. ಭಕ್ತಿಜ್ಞಾನಗಳನ್ನು ಸಾಧಿಸಿಕೊಂಡಮೇಲೆ ಪ್ರಪಂಚವ್ಯವಹಾರದಲ್ಲಿ ಬೀಳಬಹುದು. ಹಾಲನ್ನು ಅಲ್ಲಾಡಿಸದೆ ಹಾಗೆಯೇ ಬಿಟ್ಟಿದ್ದರೆ ಉತ್ತಮ ಮೊಸರಾಗುವದು. ಪಾತ್ರೆಯನ್ನು ಬದಲಾಯಿಸಿದರೆ ಅಥವಾ ಅಲ್ಲಾಡಿಸಿದರೆ ಅದು ಕೆಡುವದು. ಜನಕನು ಅನಾಸಕ್ತನಾಗಿದ್ದನು. ಆದ್ದರಿಂದ ಅವನಿಗೆ 'ವಿದೇಹ' ಎಂದರೆ 'ದೇಹವಿಲ್ಲದವನು' ಎಂಬ ಒಂದು ವಿಶೇಷಣವು ಇರುವದು. ಅವನು ಜೀವನ್ಮುಕ್ತನಾಗಿ ವ್ಯವಹರಿಸಿದನು. ದೇಹಭಾವವನ್ನು ಮರೆತಿರುವ ಸ್ಥಿತಿಯನ್ನು ಸಾಧಿಸುವದು ಬಹುಕಷ್ಟ. ನಿಜವಾಗಿ ಜನಕನ ಮಹಾಧೀರನು. ಅವನು ಜ್ಞಾನ ಮತ್ತು ಕರ್ಮ ಎಂಬ ಎರಡು ಕತ್ತಿಗಳನ್ನೂ ಏಕಕಾಲದಲ್ಲಿ ಬಳಸುತ್ತಿದ್ದನೆಂದು ಹೇಳಿರುವರು. ಆದ್ದರಿಂದ ಕೆಲವು ಕಾಲ ಏಕಾಂತವಾಸದಲ್ಲಿ ಅಖಂಡಧ್ಯಾನನಿರತರಾಗಿ ಭಕ್ತಿಯನ್ನು ಒದಗಿಸಿ ಭಗವಂತನನ್ನು ಪ್ರಾರ್ಥಿಸಬೇಕು.

ಅಧ್ಯಾತ್ಮಜ್ಞಾನನಿತ್ಯತ್ವ:—ಜಗತ್ತು [illegible]ದಂತೆ ಯಾವಾಗಲೂ ಕ್ರಮವಾಗಿಯೇ ತೋರುತ್ತ ಪ್ರತಿಕ್ಷಣವೂ ನಾಶವಾಗುತ್ತಿರುವ ಸ್ವಭಾವದ್ದಾಗಿರುವದೆಂದೂ ಆತ್ಮಜ್ಞಾನವು ಮಾತ್ರ ಯಾವಾಗಲೂ ಏಕರೂಪವಾಗಿರುವದೆಂದೂ ಭಾವಿಸುವದು. ಶ್ರೀಮನ್ನಿಜಗುಣ ಶಿವಯೋಗಿಗಳು—ಮನುಜನೀನಖಿಳಭೋಗಾಶ್ರಯಂಗಳಮುಗಿಲ | ನನುಕರಿಸಿನೋಡಿ ಮತ್ತೀನೆಲದೊಳು | ಘನ ದುರಾಶೆಯನು ಮಾಡಿದರೆ ನಿನ್ನಂತೆ ಜಡ | ರೆನಿಸುವ[illegible]ದುಂಟೆ ಭಾವಿಸಿನೋಡಲು || ಎಂದು ಹೇಳಿರುವರು.

ತತ್ತ್ವಜ್ಞಾನಾರ್ಥದರ್ಶನ :—ತತ್ವಜ್ಞಾನದಿಂದಾಗುವ ಪರಿಣಾಮದ ವೈಭವವನ್ನು ಮನಸ್ಸಿನಲ್ಲಿ ಎಡೆಬಿಡದೆ ಆಲೋಚಿಸುತ್ತಿರುವದು.

ಹೀಗೆ ಎಷ್ಟೋ ಸಾಧನಗಳಿರುವವು. ಇವುಗಳನ್ನೆಲ್ಲಾ ಒಟ್ಟುಗೂಡಿಸಿ ಸಂಕ್ಷೇಪವಾಗಿ ನಾಲ್ಕೇ ಮಾತಿನಲ್ಲಿಯೂ ಹೇಳಬಹುದು. ಅದು ಹೇಗೆಂದರೆ ಒಂದನೇದು ಜಗತ್ತು ಮೂರು ದಿನದ ಬಾಳಿನದೆಂದೂ ಆತ್ಮನು ಅವಿನಾಶಿಯೆಂದೂ ತಿಳಿಯುವ ವಿವೇಕ; ಎರಡನೇದು ಮೂರುದಿನದ ಬಾಳಿನ ಲೌಕಿಕವಿಷಯಗಳನ್ನು ಬಯುಸದಿರುವ ವೈರಾಗ್ಯ; ಮೂರನೇದು ಬಯಕೆಗಳನ್ನೆಲ್ಲ ಬಿಡುವದರಿಂದ ಮನಸ್ಸಿನಲ್ಲಿ ಶಮದಮಾದಿಗಳು ನೆಲೆಯೂರುವದು, ನಾಲ್ಕನೇದು ಅವಿನಾಶಿಯಾದ ಆತ್ಮನ ಸಾಕ್ಷಾತ್ಕಾರದ ಬಯಕೆ. ಈ ನಾಲ್ಕನ್ನು ಶಾಸ್ತ್ರಕೋವಿದರು ಸಾಧನಚತುಷ್ಟಯವೆಂದು ಕರೆಯುತ್ತಾರೆ.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಲೆಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಳದವರಿಗೆ ೨ ರೂ. ಪರಸ್ಥಳದವರಿಗೆ ೨ ರೂ. ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ,-ಸೋಮವಾರ ತಾ|| ೨೩ನೇ ಆಗಸ್ಟ್ ೧೯೪೩ [ಸಂಚಿಕೆ ೧೬

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಶ್ರೀ ರೇಣುಕವಿಜಯ ಮಹಾಪುರಾಣ ಶ್ರವಣ ಸಮಾಪ್ತಿ

ಅರಸೀಕೆರೆ ತಾಲ್ಲೂಕು ವೃಂದಾವನಹಳ್ಳಿ ಗ್ರಾಮದ ವೀರಶೈವ ಮಂಡಲಿಯವರು ಶ್ರೀ ಜಗದ್ಗುರುಪಂಚಾಚಾರ್ಯರ ಭಜನೆಯನ್ನು ಮತ್ತು ಶ್ರೀ ರೇಣುಕವಿಜಯ ಪುರಾಣ ಶ್ರವಣವನ್ನು ಇದೇ ಮಾಹೆ ತಾ|| ೫-೮-೪೩ ಲಾಗಾಯತು ತಾ|| ೧೬-೮-೪೩ ರ ವರೆಗೆ ಒಳ್ಳೇ ಉತ್ಸಾಹದಿಂದಲೂ ಅತ್ಯಂತ ಭಕ್ತಿಯಿಂದಲೂ ನಡೆಸಿದರು. ಗ್ರಾಮಸ್ಥರಲ್ಲದೇ ಭಜನಾ ಪ್ರಾರಂಭದ ದಿನ ಮುಂಚಿತವಾಗಿಯೇ ಗ್ರಾಮವನ್ನು ಸ್ವಚ್ಛಮಾಡಿಕೊಂಡು ಮ|| ರಾ|| ಬಿ ವೀರಪ್ಪಗೌಡರ ವಿಶಾಲವಾದ ಹೊಸ ಮನೆಯಲ್ಲಿ ರಂಭಾಸ್ತಂಭ ಮೊದಲಾದ ಅಲಂಕಾರದಿಂದ ಮಂಟಪವನ್ನು ರಚಿಸಿ ಎತ್ತರವಾದ ಪೀಠದಲ್ಲಿ ಶ್ರೀಮಜ್ಜಗದ್ಗುರು ಪಂಚಾಚಾರ್ಯ ಭಗವತ್ಪಾದರ ಭಾವಚಿತ್ರಪಟವನ್ನು ಇಟ್ಟು ಪುಷ್ಪಹಾರದಿಂದ ಅಲಂಕರಿಸಿ ವಿಧ್ಯುಕ್ತವಾಗಿ ಪೂಜಯಾದಮೇಲೆ ಆಚಾರ್ಯರ ಫೋಟೋವನ್ನು ಹಿಡಿದುಕೊಂಡು ಗ್ರಾಮಸ್ಥರು ಮತ್ತು ಪಾಠಶಾಲಾ ವಿದ್ಯಾರ್ಥಿಗಳು ತಾಳ ಮೇಳಗಳಿಂದ ಶ್ರೀ ಪಂಚಾಚಾರ್ಯರ ಪವಿತ್ರ ಭಜನಪದ್ಯಗಳನ್ನು ಹಾಡುತ್ತ ಗ್ರಾಮದ ಬೀದಿಗಳಲ್ಲಿ ಬರುತ್ತಿರುವಾಗ ಪ್ರತಿಯೊಂದು ಮನೆಯ ವೀರಶೈವ ಸ್ತ್ರೀ ಪುರುಷರು ಆಚಾರ್ಯರ ಭಾವಚಿತ್ರಕ್ಕೆ ಫಲ ಪುಷ್ಪಗಳನ್ನು ಅರ್ಪಿಸಿ ತಮ್ಮ ನೈಜವಾದ ಗುರುಭಕ್ತಿಯನ್ನು ಪ್ರದರ್ಶಿಸುತ್ತಿದ್ದರು. ಈ ರೀತಿಯಾಗಿ ಉತ್ಸವವು ವಿಜೃಂಭಣೆಯಿಂದ ನೆರವೇರಿ ಸ್ವಸ್ಥಾನಕ್ಕೆ ತಲಪಿದಮೇಲೆ ಸರ್ವರೂ ಜಯಘೋಷವನ್ನು ಮಾಡಿ ತಮ್ಮ ತಮ್ಮ ಮನೆಗಳಿಗೆ ಹೋಗಿ ನಿತ್ಯಕರ್ಮಗಳನ್ನೂ ಊಟೋಪಚಾರಗಳನ್ನೂ ಪೂರೈಸಿಕೊಂಡು ಮತ್ತೆ ರಾತ್ರಿ ೮ ಘಂಟೆಗೆ ಸರಿಯಾಗಿ ಭಜನಮಂದಿರಕ್ಕೆ ಆಗಮಿಸಿದರು. ಆಗ್ಗೆ ಅಲ್ಲಿ ನಡೆಯುತ್ತಿರುವ ಗುರು ಸಾರ್ವಭೌಮನಾದ ಶ್ರೀರೇಣುಕನ ಅಗಾಧ ಲೀಲೆಗಳ ವಿವರಣದಿಂದ ಕೂಡಿದ ಶ್ರೀ ರೇಣುಕ ವಿಜಯ ಪುರಾಣ ಶ್ರವಣದಿಂದ ಕರ್ಣಾನಂದವನ್ನು ಹೊಂದುತ್ತ ಕ್ಷಣ ಕ್ಷಣಕ್ಕೂ ಜೈ ಜಗದ್ಗುರು ರೇಣುಕ ಮಹಾರಾಜಕೀ ಜೈ ಎಂಬುದಾಗಿ ಜಯಘೋಷವನ್ನು ಮಾಡುತ್ತಿದ್ದರು. ಈ ರೀತಿ ಪುರಾಣ ಪ್ರವಚನವು ರಾತ್ರಿ ೧೧-೧೨ ಘಂಟೆ ವರೆಗೆ ನಡೆದು ಮಂಗಳಾರತಿಯಾದನಂತರ ಸರ್ವರಿಗೂ ಪ್ರಸಾದವು ಹಂಚಲ್ಪಟ್ಟು ಸಭೆಯು ವಿಸರ್ಜಿಸಲ್ಪಟ್ಟಿತು. ಇದೇ ರೀತಿಯಾಗಿ ಪ್ರತಿ ದಿವಸವೂ ಗುರು ಭಜನೆಯನ್ನೂ ಪುರಾಣ ಶ್ರವಣವನ್ನೂ ಭಕ್ತಿಯಿಂದ ನಡೆಯಿಸಿ ಕಡೆಯದಿನ ಸಮಸ್ತ ವೀರಶೈವರು ದೊಡ್ಡ ಹಬ್ಬದಂತೆ ಆಚರಿಸಿ ರಾತ್ರಿ ೮ ಘಂಟೆಗೆ ಸರಿಯಾಗಿ ಶ್ರೀ ಜಗದ್ಗುರು ಪಂಚಾಚಾರ್ಯರ ಭಾವಚಿತ್ರಪಟವನ್ನೂ ಶ್ರೀ ಮಲ್ಲಿಕಾರ್ಜುನಸ್ವಾಮಿಯವರನ್ನೂ ಪುಷ್ಪ ಮಾಲಿಕೆಯಿಂದ ಅಲಂಕರಿಸಿ ಪಲ್ಲಕ್ಕಿಯಲ್ಲಿ ಮೂರ್ತಮಾಡಿಸಿ ನಾನಾವಿಧ ಮಂಗಲವಾದ್ಯಗಳಿಂದಲೂ ಆಚಾರ್ಯರ ಪವಿತ್ರ ಸ್ತೋತ್ರಗಳಿಂದಲೂ ಪಾಠಶಾಲೆಯ ವಿದ್ಯಾರ್ಥಿಗಳ ಜಯ ಜಯಧ್ವನಿಯಿಂದಲೂ ಮೆರವಣಿಗೆ ಮಹೋತ್ಸವವು ಅನೇಕ ಜನಸಂದಣಿಯಿಂದಲೂ ಪುರಸ್ತ್ರೀಯರ ಆರತಿ ಮೊದಲಾದ ವೈಭವಗಳಿಂದಲೂ ನೇತ್ರಾನಂದಕರವಾಗಿ ನೆರವೇರಿ ಸ್ವಸ್ಥಾನಕ್ಕೆ ಬಿಜಮಾಡಿದನಂತರ ಜಗದ್ಗುರು ಪಂಚಾಚಾರ್ಯರ ಜಯಧ್ವನಿಯಿಂದ ಸರ್ವರೂ ಕರತಾಡನ ಮಾಡಿ ಮಂಗಳಾರತಿ ಆದನಂತರ ಪ್ರಸಾದ ವಿನಿಯೋಗವಾಗಿ ಸಮಾರಂಭವು ಮುಕ್ತಾಯಗೊಂಡಿತು.

ಓರ್ವ ಗುರುಭಕ್ತ

ಮಾನವನು ಅನುಸರಿಸಬೇಕಾದ ದಿನಚರ್ಯೆ

ಲೇಖಕರು:—ವೈ. ಪಟ್ಟದಸ್ವಾಮಿಗಳು ಬೃಹನ್ಮಠ ಹುಣಶೀಕಟ್ಟಿ.
ಕಾವ್ಯತೀರ್ಥ ಎ ಬಿ. ಜಿ. (ಲಾಹೋರ)

ಪ್ರತಿ ಮನುಷ್ಯನೂ ತಾನು ನಿರೋಗಿಯಾಗಿರಬೇಕೆಂದು ಬಯಸುವನೇನೋ ನಿಜ. ಹೀಗಿದ್ದರೂ ತಾನು ನಿರೋಗಿಯಾಗಿರಬೇಕಾದರೆ ಹಿಂದಿನ ಮಹಾಚಾರ್ಯರು ಹಾಕಿಕೊಟ್ಟ ಮಾರ್ಗಗಳನ್ನು ಬಿಟ್ಟು ನಡೆದರೆ ನಿರೋಗಿಯಾಗಿರುವದು ಹೇಗೆ ಸಾಧ್ಯವಾದೀತು! ಧರ್ಮಶಾಸ್ತ್ರಗಳು ಮತ್ತು ಆಯುರ್ವೇದ ಗ್ರಂಥಗಳು—

ಬ್ರಾಹ್ಮೇಮುಹೂರ್ತೇ ಉತ್ತಿಷ್ಠೇತ್ ಸ್ವಸ್ಥೋ ರಕ್ಷಾರ್ಥಮಾಯುಷಃ।
ಶರೀರಚಿಂತಾಂ ನಿರ್ವರ್ತ್ಯ ಕೃತಶೌಚ ವಿಧಿಸ್ತತಃ ॥ "ವಾಗ್ಭಟ"

ನಿರೋಗಿಯಾದ ಮನುಷ್ಯನು ತನ್ನ ಆಯುಸ್ಸಿನ ರಕ್ಷಣೆಯ ಸಲುವಾಗಿ ಬ್ರಾಹ್ಮೀಮುಹೂರ್ತ (ಬೆಳಗು ಮುಂಜಾನೆ ೪||-೫-ಘಂಟೆ) ದಲ್ಲಿ ಎಚ್ಚತ್ತೆದ್ದು ಆ ಮೇಲೆ ತನ್ನ ಪ್ರಾಪಂಚಿಕದ ಯಾವದೇ ತರಹದ ಚಿಂತೆಯನ್ನು ಮನಸ್ಸಿನಲ್ಲಿ ತಾರದೆ ಶೌಚಕ್ರಿಯೆಯನ್ನು ತೀರಿಸಿಕೊಳ್ಳಬೇಕೆಂದು ಹೇಳುತ್ತವೆ. ಇದರಿಂದ ನಮ್ಮ ಶರೀರದಲ್ಲಿಯ ಇಂದ್ರಿಯಗಳು ಸ್ವಸ್ಥವಾಗಿದ್ದು ನಮ್ಮ ಮನಸ್ಸು ಅನೇಕ ವಿಷಯಗಳಲ್ಲಿ ಲೀನವಾಗದೆ ಇಂದ್ರಿಯಗಳ ಕ್ರಿಯೆಗಳು, ಒಂದೇ ಪ್ರಕಾರವಾಗಿ ಸಾಗುತ್ತವೆ. ಅದರಿಂದ ಆಯುಷ್ಯವು ಬೆಳೆಯುವದಂತು ಸಹಜವೇ ಅಲ್ಲದೆ ಮನುಷ್ಯನಲ್ಲಿ ಕಾಂತಿಯೂ ಬೆಳೆಯಹತ್ತುತ್ತದೆ. ಓಜಶ್ಶಕ್ತಿಯು ಶರೀರದ ಕಾಂತಿಗೆ ಮೂಲ ಕಾರಣವಾಗಿದೆ. ಓಜಶ್ಶಕ್ತಿಯು ಬೆಳೆದಮೇಲೆ ಶರೀರವು ಬಲಾಢ್ಯವಾಗುವದರಲ್ಲಿ ಯಾವ ಸಂದೇಹ? ಅನಂತರ ಮನುಷ್ಯನು ಹಲ್ಲುಗಳನ್ನು ಉಜ್ಜತಕ್ಕದ್ದು. ಹಲ್ಲುಗಳನ್ನು ಉಜ್ಜಬೇಕಾದರೆ ಬೇವು ಉತ್ತರಾಣಿ ಜೇರು. ಮುಳಗಲ ಜಾಲಿಯ ಕಡ್ಡಿಗಳೇ ಮೊದಲಾದ ಕಡ್ಡಿಗಳಿಂದ ಸ್ವಚ್ಛವಾಗಿ ಉಜ್ಜಿ ತೊಳೆಯಬೇಕು. ಅದರಿಂದ ನಮ್ಮ ಹಲ್ಲುಗಳಲ್ಲಿರುವ ಹೊಲಸು ಹೋಗಿ ಹಲ್ಲುಗಳು ಸ್ವಚ್ಛವಾಗುವವಲ್ಲದೇ ಅಲ್ಲಿರುವ ನಾವು ಚರ್ವಿಸಿದ ಆಹಾರದ ಕಣಗಳು ಹಲ್ಲುಗಳಲ್ಲಿ ಕೊಳೆತದ್ದು ಕೂಡ ಇಲ್ಲದಾಗಿ ಬಾಯಿಯೊಳಗೆ ಒಂದು ತರಹದ ರುಚಿಯು ಬರಹತ್ತುತ್ತದೆ. ಹಲ್ಲುಗಳನ್ನು ಉಜ್ಜದಿದ್ದರೆ ಬಾಯಿಗೆ ರುಚಿಯಂತು ಬರುವದೇ ಇಲ್ಲ. ಅಲ್ಲದೆ ಬಾಯಿಯು ಹೊಲಸುನಾರುವದಲ್ಲದೆ ಅದರಿಂದ ಅನೇಕ ತರಹದ ರೋಗಗಳು ಹುಟ್ಟುತ್ತವೆ. ಪಾಶ್ಚಾತ್ಯ ಶಾಸ್ತ್ರಜ್ಞರು ಹಲ್ಲುಗಳನ್ನು ಉಜ್ಜದ ಮನುಷ್ಯನಿಗೆ ಅನೇಕ ತರಹದ ರೋಗಗಳು ಹುಟ್ಟುವವೆಂದು ಹೇಳುವಂತೆ ಆಯುರ್ವೇದ ಶಾಸ್ತ್ರವಾದರೂ ಅದರಂತೆ ಹೇಳುತ್ತಿರುತ್ತದೆ. ಈಗಿನ ಆಧುನಿಕ ವ್ಯಕ್ತಿಗಳಲ್ಲಿ ಈ ಮೇಲೆ ಕಾಣಿಸಿದ ಕೆಲವು ತತ್ವಗಳು ಕೆಟ್ಟು ಅದರಿಂದ ಸಮಾಜಕ್ಕೇ ಅಲ್ಲದೇ ದೇಶವೇ ರೋಗಮಯವಾಗಿಹೋಗಿದೆ. ಅದು ಏನೆಂದರೆ ಪ್ರತಿಯೊಬ್ಬ ಶಹರ ನಿವಾಸಿ ಮನುಷ್ಯನು ದವಾಖಾನೆಗೆ ಹೋದ ಮಾತ್ರದಲ್ಲಿ ತನಗೆ ಶೌಚವೇ ಸಾಫ ಆಗುವದಿಲ್ಲವೆಂದು ಹೇಳುವ ಸಂಪ್ರದಾಯವು ಕಂಡು ಬರಲಿಕ್ಕೆ ಹತ್ತಿದೆ. ಇದರ ಪರಿಣಾಮವೆಂದರೆ ಸೂರ್ಯೋದಯದ ನಂತರ ಏಳುವಿಕೆ. ಮತ್ತು ಎದ್ದಮಾತ್ರದಿಂದ ಹಾಸಿಗೆಯಲ್ಲಿಯೇ ಚಹಾ ಕುಡಿದು ಬಾಯಿಯಲ್ಲಿ ಚುಟ್ಟಾ ಇಲ್ಲವೆ, ಸಿಗರೇಟ ಹಿಡಿದುಕೊಂಡು ಸೇದುತ್ತಾ ಶೌಚಕ್ಕೆ ಹೋಗುವಿಕೆ ಇದರಿಂದ ಎಷ್ಟೋಜನರಿಗೆ ಮಲಬದ್ಧತೆಯಾಗಿ ನಿತ್ಯವೂ ಜುಲಾಬು ಇಲ್ಲವೆ ಇನೆಮಾ ತೆಗೆದುಕೊಳ್ಳುವಂಥ ಸಂದರ್ಭವಂತೂ ಎಷ್ಟೋ ಕಂಡು ಬರಲಿಕ್ಕೆ ಹತ್ತಿದೆ. ಎಷ್ಟೋಜನರಿಗೆ ಚಹಾ ಚುಟ್ಟಗಳಿಲ್ಲದೆ ನೈಸರ್ಗಿಕವಾಗಿ ಶೌಚವಾಗುವಂತೆ ಮಾಡಿಕೊಳ್ಳಿರೆಂದು ಹೇಳಿದರೆ, ಅವುಗಳಿಲ್ಲದೆ ನಮ್ಮ ಶೌಚವೇ ಆಗುವದಿಲ್ಲವೆಂದು ಹೇಳುತ್ತಾರೆ. ಅದರಿಂದ ನೈಸರ್ಗಿಕವಾಗಿ ಆಗುವ ಕ್ರಿಯೆಗಳು ಎರಡನೇ ವಸ್ತುವನ್ನು ಆಶ್ರಯ ಮಾಡಿಕೊಂಡಂತೆಯೇ ಆಗಿದೆ. ಅದರಿಂದ ಶರೀರದ ನೈಸರ್ಗಿಕ ಕ್ರಿಯೆಗಳಿಗೆ ಧಕ್ಕೆ ತಗಲಿ ಧೂಮಪಾನ ಮೊದಲಾದವುಗಳಿಂದ ಮಲವು ಹಿಕ್ಕೆಯಂತೆ ಗಟ್ಟಿಯಾಗಿ ಕರುಳಿನ ಭಿತ್ತಿಗಳಲ್ಲಿ ನಿಂತುಕೊಂಡು ನೈಸರ್ಗಿಕದಂತೆ ಸಾಫವಾಗಲಾರದೆ ಅಲ್ಲಿಯೇ ಕೊಳೆತುಕೆಟ್ಟು ಅನೇಕ ರೋಗಗಳು ಉತ್ಪತ್ತಿಯಾಗಲು ಆಸ್ಪದ ದೊರೆಯುವದು ಸಹಜವಲ್ಲವೇ? ನಿತ್ಯದಲ್ಲಿಯೂ ಇನೇಮಾ ಜುಲಾಬುಗಳನ್ನು ತೆಗೆದುಕೊಳ್ಳುವದೆಂದರೆ ಸ್ವಲ್ಪ ದಿವಸಗಳಲ್ಲಿ ಅದೂ ಶರೀರದಲ್ಲಿ ಆಹಾರದಂತೆ ಪರಿಣಮಿಸಲು ಹತ್ತಲಾಗಿ ಕರುಳಿನಲ್ಲಿರುವ ಮಲವು ಹಾಗೆಯೇ ಉಳಿದು ಆಧ್ಮಾನ ಮೊದಲಾದ ಅನೇಕ ಕೆಟ್ಟರೋಗಗಳು ಹುಟ್ಟಿಕೊಂಡು ಮನುಷ್ಯನ ಜೀವನವನ್ನೇ ನರಕಸದೃಶವಾಗಿ ಮಾಡಿಬಿಡಬಹುದಾದ್ದರಿಂದ ಆರೋಗ್ಯಾಕಾಂಕ್ಷಿಯಾದ ಪ್ರತಿಯೊಬ್ಬರೂ ತಮ್ಮ ದಿನಚರ್ಯದಲ್ಲಿ ಉಷಃ ಕಾಲಕ್ಕೆ ಎದ್ದು ಶೌಚವಿಧಿಗಳನ್ನು ತೀರಿಸುವದನ್ನು ಮೊದಲನೆಯದಾಗಿ ಅಭ್ಯಸಿಸಬೇಕು.

ಪಂಡಿತರ ಆಗಮನ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಮೆದ್ರಾಸಿನಿಂದ ನಿನ್ನೆ ದಿವಸ ರಾಜಧಾನಿಗೆ ಆಗಮಿಸಿದರು.

ಪಂಚಾಚಾರ್ಯಪ್ರಭಾ.

೧೯೪೩ನೆಯ ಆಗಸ್ಟ ತಾ|| ೨೩ನೆಯ ಸೋಮವಾರ

ಶ್ರೀಗುರುವಿನ ಶ್ರೇಷ್ಠತೆ.

ಜೀವನು ಅನಾದಿಕಾಲದಿಂದ ಅವಿದ್ಯೆಯಿಂದ ಆವರಿಸಲ್ಪಟ್ಟವನಾದುದರಿಂದ, ತಂದೆತಾಯಿಗಳಿಗಿಂತಲೂ ಸಾವಿರಪಾಲಾಗಿ ವಾತ್ಸಲ್ಯವುಳ್ಳವನಾದ ಪರಮಾತ್ಮನನ್ನು ಮರೆತು ಜನನಮರಣರೂಪ ದುಃಖಗಳಿಗೊಳಗಾಗಿರುವನು ಇದರಿಂದ ಪರಮಾತ್ಮನಿಗೂ, ಜೀವಾತ್ಮನಿಗೂ ಇರುವ ಪ್ರೇಮಬಂಧವು ತಪ್ಪಿಹೋಗಿರುತ್ತದೆ ತಂದೆಯು ಮಗನನ್ನು ಉದ್ಧರಿಸಬೇಕೆಂಬ ನಿರ್ವ್ಯಾಜಪ್ರೇಮವುಳ್ಳವನಾಗಿದ್ದರೂ ತಂದೆಯನ್ನೇ ಮರೆತು ದುಸ್ಸಹವಾಸದಲ್ಲಿರುವ ಮಗನ ವಿಷಯದಲ್ಲಿ ತಂದೆಯ ಪ್ರೇಮಬಂಧವು ಕಡಿಮೆಯಾಗುತ್ತ ಬರುವಲ್ಲಿ, ಆಪ್ತನಾದ ವಿವೇಕಿಪುರುಷನು ಆ ತಂದೆಮಕ್ಕಳಿಗೆ ಪರಸ್ಪರ ಉಂಟಾಗಿರುವ ವಿಯೋಗದುಃಖವನ್ನು ತಪ್ಪಿಸುವುದಕ್ಕಾಗಿ ಆ ಮಗನಿಗೆ ಹಿತೋಕ್ತಿಗಳನ್ನು ಬೋಧಿಸಿ ಆತನ ದುರ್ವೃತ್ತಿಗಳನ್ನು ತಪ್ಪಿಸಿ ಆ ಮಗನನ್ನು ತಂದೆಯಬಳಿಗೆ ಕರೆದುಕೊಂಡು ಹೋಗಿ ತಂದೆಮಕ್ಕಳನ್ನೊಟ್ಟುಗೂಡಿಸುತ್ತಾನೆ ಇದರಿಂದ ತಂದೆಯ ಸುಖಸಂಪತ್ತುಗಳು ಮಗನಿಗೂ ದೊರೆತು ತಂದೆಯಂತೆ ಮಗನೂ ಅಭ್ಯುದಯಾವಸ್ಥೆಗೆ ಬರುತ್ತಾನೆ ಅದರಂತೆ ಪರಮಾತ್ಮನಿಂದ ಉತ್ಪನ್ನನಾದ ಈ ಜೀವಾತ್ಮನು ಮಧ್ಯಕಾಲದಲ್ಲಿ ಅವಿದ್ಯೆಯೆಂಬ ಮಹಾಮಾಯೆಗಳ ಕೈಗೆ ಸಿಕ್ಕಿ ಪರವಶನಾಗಿ ಆ ತನ್ನ ಸುಖಸ್ಥಾನವಾದ ಪರಶಿವನ ಸ್ಥಾನವನ್ನೇ ಬಿಟ್ಟು ಸ್ವೇಚ್ಛೆಯಾಗಿ ಅಲೆಯುತ್ತ ಬಹು ಹೀನಾವಸ್ಥೆಯನ್ನು ಅನುಭವಿಸುತ್ತ ಬಂದಿರುತ್ತಾನೆ ಹೀಗಿರಲು ಆ ಜೀವಾತ್ಮನೆಂಬ ಪುತ್ರನು ಅಕಸ್ಮಾತ್ತಾಗಿ ಪರಮಾತ್ಮನ ಆಪ್ತದೂತನಂತಿರುವ ಗುರುವಿನ ಬಳಿಗೆ ಬರುತ್ತಾನೆ ದಯಾಳುವಾದ ಶ್ರೀಗುರುವು ಈತನ ದುರ್ದಶೆಯನ್ನು ನೋಡಿ ಮರುಮರುಗಿ, ಈತನು ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನೂ ಅಣಿಮಾದ್ಯಖಿಲೈಶ್ವರ್ಯಸಂಪನ್ನನೂ ಆದ ನಮ್ಮ ಪರಶಿವನ ಅಂಶಸಂಜಾತನಾಗಿದ್ದುದರಿಂದ ಆ ಪರಶಿವನ ನಿತ್ಯಾನಂದತ್ವಾದ್ಯಖಿಲ ಸಾಮ್ರಾಜ್ಯಕ್ಕೂ ಈತನೇ ಬಾಧ್ಯನಾಗಿದ್ದರೂ ಮಹಾಮೋಹವೆಂಬ ಪಿಶಾಚಿಯಿಂದ ಹಿಡಿಯಲ್ಪಟ್ಟು ಪರವಶನಾಗಿ ಜನನಮರಣಗಳೆಂಬ ಸಮುದ್ರದ ಸುಳಿಯಲ್ಲಿ ಸುತ್ತುತ್ತಿರುವನಲ್ಲ! ಎಂದು ದಯಾಪೂರಿತ ಹೃದಯನಾಗಿ ಆತನಿಗೆ ಹಿಡಿದಿರುವ ಮೋಹಪಿಶಾಚಿಯನ್ನು ಓಡಿಸುವುದಕ್ಕೆ ಶಿವದೀಕ್ಷೆಯೆಂಬ ಮಹಾಯಂತ್ರವನ್ನು ಧರಿಸಿ ಆ ಪಿಶಾಚಿಯನ್ನೋಡಿಸಿ ಶಿವಲಿಂಗಸಂಬಂಧ ದ್ವಾರಾ ಮಹಾಮಂತ್ರೋಪದೇಶವನ್ನು ಮಾಡಿ ಶಿವನಿಗೂ ಈತನಿಗೂ ಇರುವ ಸಂಬಂಧವನ್ನು ವೇದಾಂತವಾಕ್ಯಗಳಿಂದ ಬೋಧಿಸಿ ವಿವೇಕವನ್ನುಂಟುಮಾಡಿ ಪರಮಾತ್ಮನ ಬಳಿಗೆ ಸೇರಿಸುತ್ತಾನೆ ಹೀಗೆ ಪರಮಾತ್ಮನ ವಿಷಯದಲ್ಲಿ ಅವಿವೇಕದಿಂದ ಜೀವಾತ್ಮನಿಗುಂಟಾಗಿರುವ ದೋಷವನ್ನು ಪರಿಹರಿಸಿ, ಪರಮಾತ್ಮನ ಪ್ರೇಮವುಂಟಾಗುವಂತೆ ಮಾಡುವ ಶಕ್ತಿಯನ್ನು ಪಡೆದಿರುವ ಗುರುಗಳ ಮಹೋಪಕಾರವನ್ನು ಯಾರೂ ಮರೆಯುವಂತೆ ಇಲ್ಲವು

ಸೂರ್ಯನು ಉದಯಿಸಿದ ಹೊರತು ಜಗತ್ತನ್ನಾವರಿಸಿದ **ಅಂಧಕಾರವು** ಹೇಗೆ ತೊಲಗುವುದಿಲ್ಲವೋ, ರೋಗ**ನಿದಾನವನ್ನು** ತಿಳಿದ ವೈದ್ಯನಿಲ್ಲದ ರೋಗವು ಹೇಗೆ **ನಿವೃತ್ತಿಯಾಗುವುದಿಲ್ಲವೋ**, ಹಾಗೆ ಗುರುವಿಲ್ಲದೆ ಜನನ**ಮರಣರೂಪವಾದ** ದುಃಖವು ಶಾಂತವಾಗುವುದಿಲ್ಲ **ಗುರುವೇ ನಿಜತತ್ತ್ವವನ್ನು** ಪ್ರಕಾಶಗೊಳಿಸುತ್ತಾನಲ್ಲದೆ, ಇತರರು ಪ್ರಕಾಶಗೊಳಿಸಲಾರರು ಗುರುವಿನ ಅನುಗ್ರಹವನ್ನು ಪಡೆದವನಿಗೆ ಯಾವುದು ತಾನೇ ದುರ್ಲಭವು? ಸಮುದ್ರಗಳೊಳಗೆ ಕ್ಷೀರಸಮುದ್ರವೂ ಗಿರಿಗಳೊಳಗೆ ಮೇರುಗಿರಿಯೂ ಗ್ರಹಗಳೊಳಗೆ ಸೂರ್ಯಗ್ರಹವೂ ರತ್ನಗಳೊಳಗೆ ಕೌಸ್ತುಭರತ್ನವೂ ಶ್ರೇಷ್ಠಗಳಾಗಿರುವಂತೆ ಎಲ್ಲಕ್ಕೂ ಗುರುವೇ ಶ್ರೇಷ್ಠನಾಗಿರುತ್ತಾನೆಂದು ಗುರುಮಹತ್ವವನ್ನು ಬಹಳವಾಗಿ ಕೊಂಡಾಡಿರುತ್ತಾರೆ ಆದುದರಿಂದ ಜೀವಾತ್ಮನಿಗೂ ಪರಮಾತ್ಮನಿಗೂ ನಿಕಟಸಂಬಂಧವಿದ್ದರೂ ಆ ಸಂಬಂಧವನ್ನು ಜೀವಾತ್ಮನು ಮರೆತಿರುವುದರಿಂದ ಗುರುವೆಂಬ ಪರಮಾಪ್ತನು ಜೀವಾತ್ಮಪರಮಾತ್ಮರಿಗಿರುವ ಸಂಬಂಧವನ್ನರುಹಿ ಜೀವಾತ್ಮನನ್ನು ಬಂಧನದಿಂದ ನಿವೃತ್ತಿಗೊಳಿಸುವ ಉಪಾಯವನ್ನು ತಿಳಿಸಿರುವುದರಿಂದಲೇ ವೇದಾಗಮಾದಿಗಳು ಸಹ ಆ ಶ್ರೀಗುರುವನ್ನು ಮುಕ್ತಕಂಠದಿಂದ ಹೊಗಳಿರುತ್ತವೆ ಘಟಾದಿ ಪದಾರ್ಥಗಳನ್ನು ನೋಡುವುದಕ್ಕೆ ದೀಪವು ಹೇಗೆ ಸಹಾಯಭೂತವಾಗಿದೆಯೋ ಹಾಗೆ ಆ ಪರಮಾತ್ಮತತ್ತ್ವವನ್ನು ಪ್ರತ್ಯಕ್ಷೀಕರಿಸಲು ಗುರುವೇ ಸಂಪೂರ್ಣ ಸಹಾಯಕನಾಗಿರುವನು ಹೀಗಿದ್ದರೂ ಐಹಿಕಸೌಖ್ಯವೇ ಪರಮಧ್ಯೇಯವಾಗಿರುವ ಈಗಿನಕಾಲದಲ್ಲಿ ಕೆಲವರು ಭವರೋಗನಿವಾರಕ ವೈದ್ಯನಾದ ಗುರುವಿನ ವಿಷಯದಲ್ಲಿ ಅಲಕ್ಷ್ಯವುಳ್ಳವರಾಗಿರುವುದಲ್ಲದೆ ತಮ್ಮ ತಮ್ಮ ಸ್ವೇಚ್ಛಾವಿಹಾರಿತ್ವಕ್ಕೆ ಗುರುಗಳೆಂಬುವರು ಪ್ರತಿಬಂಧಕವನ್ನುಂಟುಮಾಡುತ್ತಾರೆಂಬ ದ್ವೇಷಬುದ್ಧಿಯಿಂದ ಗುರುಗಳಮೇಲೆಯೇ ಟೀಕೆಟಿಪ್ಪಣಿಗಳಿಗೆ ಪ್ರಾರಂಭಮಾಡಿದ್ದಾರೆ ಇಂಥ ಗುರುದೂಷಕರಾದ ಪರಮನಾಸ್ತಿಕರು ಮರದಮೇಲೆ ಕುಳಿತುಕೊಂಡು ಬುಡವನ್ನು ಕಡಿಯಲು ಹೊರಟ ಮಹಾಪಂಡಿತನಿಗೆ ಸಮಾನರಾಗುವರು ಇಂಥವರು ಎಂದೂ ಆ ಪರಮಾತ್ಮನ ಅನುಗ್ರಹಕ್ಕೆ ಭಾಗಿಗಳಾಗಲಾರರು

ಪರಮಾತ್ಮನ ಸಹಜಪ್ರೇಮವುಳ್ಳವರು ಎಂದೂ ಯಾವಾಗಲೂ ಗುರುದೂಷಣೆ ಮಾಡುವುದಿಲ್ಲ ಯಾರು ಗುರುದೂಷಕರೋ ಅವರು ಪರಮಾತ್ಮದೂಷಕರೆಂದೂ ಯಾರು ಗುರುಪ್ರೇಮಿಗಳೋ ಅವರು ಪರಮಾತ್ಮಪ್ರೇಮಿಗಳೆಂದೂ ಶಾಸ್ತ್ರವು ಸಾರುತ್ತಿರುವುದು ಗುರುವಿನ ವಿಷಯದಲ್ಲಿ ತೋರಿಸುತ್ತಿರುವ ಪ್ರೀತಿದ್ವೇಷಗಳೇ ಪರಮಾತ್ಮನ ಪ್ರೀತಿದ್ವೇಷಗಳ ಬಾಹ್ಯಚಿಹ್ನೆಗಳಾಗಿರುತ್ತವೆ

ಯಾವನು ಗುರುಪೂಜೆ ವಂದನಾದಿಗಳನ್ನು ತಿರಸ್ಕರಿಸಿ ಶಿವಲಿಂಗವನ್ನು ಮಾತ್ರ ಪುರಸ್ಕರಿಸಲಿಕ್ಕೆ ಹೊರಡುತ್ತಾನೆಯೋ, ಅಂದವನು ತನ್ನ ಅಂಗೈಯಲ್ಲಿ ಸಿದ್ಧವಾಗಿರುವ ಪಾಯಸವನ್ನು ಸೇವಿಸದೆ ಮೊಣಕೈಯನ್ನು ನೆಕ್ಕಲಿಕ್ಕೆ ಹೋಗುವ ಮೂಢನಂತೆ ಹಾಸ್ಯಾಸ್ಪದನಾಗುವನಲ್ಲದೆ ಅಂಥವನ ವಿಷಯದಲ್ಲಿ ಶಿವನು ಸಹ ವಿಮುಖನಾಗಿ ನರಕವನ್ನು ಕೊಡುತ್ತಾನೆ ಇದಲ್ಲವನ್ನೂ ತಿಳಿದು ಗುರುಪೂಜಾವಂದನಾದಿಗಳಲ್ಲಿ ಆಸಕ್ತನಾದರೆ ಶಿವನು ಆತನ ವಿಷಯದಲ್ಲಿ ಸಂತುಷ್ಟನಾಗಿ ತನ್ನಲ್ಲಿ ಸೇರಲು ಅವಕಾಶಕೊಡುತ್ತಾನೆ

ಎಂದು ಬೋಧಿಸುವ ಶಿವಾಗಮವಾಕ್ಯಗಳನ್ನು ಪರಿಶೀಲಿಸಿ ತಮ್ಮ ಹಾನಿಗೆ ಕಾರಣೀಭೂತವಾದ ಗುರುದ್ರೋಹಬುದ್ಧಿಯನ್ನು ದೂರಮಾಡಿ ಗುರುಗಳಲ್ಲಿ ಶರಣಾಗತರಾಗಿ ಪೂಜಾವಂದನಾದಿಗಳಿಂದ ಗುರುಗಳನ್ನು ಸಂತೋಷಗೊಳಿಸಿ, ಆ ಗುರುಗಳ ಮೂಲಕವಾಗಿ ಪರಮಾತ್ಮನಿಗೂ ತಮಗೂ ಇರುವ ನಿತ್ಯಸಂಬಂಧವನ್ನು ತಿಳಿದುಕೊಂಡು ಬಂಧನದಿಂದ ನಿವೃತ್ತರಾಗಿ ಮಾನವಜನ್ಮವನ್ನು ಸಾರ್ಥಕಗೊಳಿಸುವುದೇ ಪ್ರತಿಯೊಬ್ಬ ಆಸ್ತಿಕನ ಕರ್ತವ್ಯವಾಗಿದೆಯಲ್ಲವೆ?

ಯುದ್ಧವಾರ್ತೆ.

ಸಿಸಿಲಿ ಕದನ ಮುಗಿಯಿತು

ಮೆಸ್ಸಿನಾ ನಗರವು ಮಿತ್ರಸೇನೆಗಳ ವಶವಾಯಿತೆಂದೂ ಸಿಸಿಲಿ ಕದನ ಕೊನೆಗಂಡಿತೆಂದೂ ಅಧಿಕಾರಯುತವಾಗಿ ತಿಳಿಸಲಾಗಿದೆ ಶತ್ರುಗಳು ಈಗ ಇಟಲಿ ಮೂಲ ಭೂಮಿಯಿಂದ ಮೆಸ್ಸಿನಾ ಮೇಲೆ ಶೆಲ್ ಹಾರಿಸುತ್ತಿದ್ದಾರೆ. ಸಿಸಿಲಿಯನ್ನು ರಕ್ಷಿಸಿಕೊಳ್ಳುವ ನಿಷ್ಫಲ ಪ್ರಯತ್ನದಲ್ಲಿ ಶತ್ರುಗಳು ೨೦೦೦ ವಿಮಾನಗಳನ್ನು ಹಾಳುಮಾಡಿಕೊಂಡರೆಂದು ಹೇಳಲಾಗಿದೆ.

ಮುಸೋಲಿನಿ ಮೃತನಾದನೇ?

ಲೆಗ್‌ಹಾರ್ನ್‌ನಿಂದ ಹೊರಟ ಇಟಲಿ ಸಬ್‌ಮೆರೀನ್ ಒಂದರಲ್ಲಿ ಮುಸೋಲಿನಿ ಇದ್ದನೆಂದೂ, ಮಿತ್ರವಿಮಾನಗಳು ಅದರ ಮೇಲೆ ಮುತ್ತಿಗೆ ನಡೆಸಿದುದರಿಂದ ಸಬ್‌ಮೆರೀನ್ ಜೊತೆಯಲ್ಲಿ ಮುಸೋಲಿನಿ ಸಹ ಮುಳುಗಿಹೋದನೆಂದೂ ನ್ಯೂಯಾರ್ಕ್ ಪೋಸ್ಟ್ ಪತ್ರಿಕೆ ನಂ ಕೆಗರ್ಹವಾದ ಕಡೆಯಿಂದ ಸುದ್ದಿ ಬಂದಿದೆಯೆಂ ತಿಳಿಸಿದೆ ಆದರೆ ಈ ಸುದ್ದಿ ಸ್ಥಿರಪಟ್ಟಿಲ್ಲ

ಉತ್ತರ ಇಟಲಿಯಲ್ಲಿ ಮಾರ್ಷಿಯಲ್ ಲಾ

ಬಡೋಗ್ಲಿಯೋ ಸರಕಾರ ಏನೇ ಮಾಡಲಿ, ಬಿ ಇಟಲಿಯನ್ನು ರಕ್ಷಿಸಿಕೊಳ್ಳಲು ಜರ್ಮನರು ತ ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ ಇಟಲಿಯಲ್ಲಿ ೧೫ ನಾಜಿ ಡಿವಿಜನ್‌ಗಳಿವೆ

ಉತ್ತರ ಇಟಲಿಯಲ್ಲಿ ಶಿಸ್ತನ್ನು ನೆಲೆಗೊಳಿಸ ಇಟಾಲಿಯನರು ಅಶಕ್ತರಾಗಿದ್ದಾರೆ ಮಾರ್ಷಿಯ ಲಾ ಆಚರಣೆಗೆ ಬಂದು, ಜರ್ಮನರೇ ಆಡಳಿತ ವ ದಾರೆ ಮಿಲಾನ್ ಮುಂತಾದ ನಗರಗಳ ಪೌರಾಧ್ಯಕ್ಷರು ಇದನ್ನು ಪ್ರತಿಭಟಿಸಿ, ರಾಜೀನಾಮೆಯಿತ್ತ ರೆಂದು ಹೇಳಲಾಗಿದೆ

ಉತ್ತರ ಇಟಲಿಯಲ್ಲಿ ನಾಜಿಗಳ ಸಿದ್ಧತೆ

ಇಟಾಲಿಯನ್ ಪಡೆಗಳು ವೆರೋನಾ ನಗರವ ತ್ಯಜಿಸಿವೆ ಇಲ್ಲೀಗ ಜರ್ಮನ್ ಮುಖ್ಯ ಕಛೇರಿ ಸ್ಥಾ ವಾಗಿದೆ ಬೇಗ ಉತ್ತರ ಇಟಲಿಯನ್ನೆಲ್ಲ ಇಟಲಿ ಕರು ತ್ಯಜಿಸುವರೆಂದು ನಿರೀಕ್ಷಿಸಲಾಗಿದೆ ಪೋ ನ ತೀರದಲ್ಲಿ ಜರ್ಮನರು ಆತುರಾತುರವಾಗಿ ಕೋ ಕೊತ್ತಲುಗಳನ್ನು ನಿರ್ಮಿಸುತ್ತಿದ್ದಾರೆ ಅನೇಕ ಗಳು ಯೋಧರನ್ನೂ ಸಂಗ್ರಾಮ ವಸ್ತುಗಳನ್ನೂ ಹೊ ಬ್ರೆನ್ನರ್ ಕಣಿವೆ ದಾಟಿ ಇಟಲಿಗೆ ಬರುತ್ತಿವೆಯೆಂ ಹೇಳಲಾಗಿದೆ

ಕೋಟೆ ಬಲವಾಗಿದೆ

ಯೂರೋಪಿನ ಸುತ್ತ ಹರ್ ಹಿಟ್ಲರನು ನಿರ್ಮಿ ರುವ ಕೋಟೆ ಬಹಳ ಬಲಯುತವಾಗಿದೆ ಫಿರಂಗಿ ವಿಮಾನಗಳು, ಮಾನವಶಕ್ತಿ ಅದನ್ನು ಎಷ್ಟು ಬಲಪ ಬಹುದೋ ಅಷ್ಟು ಬಲಪಡಿಸಲಾಗಿದೆ ಹಿಟ್ಲರನೇನೆ ತನ್ನ ಕೋಟೆ ದುರ್ಭೇದ್ಯವಾದುದೆಂದು ನಂಬಿದ ಆದರ ಕೃತ ಸಂಕಲ್ಪದಿಂದ ಕೂಡಿದ ಶತ್ರುವಿನ ಏ ಜಗ್ಗದೆ ನಿಂತಿರುವ ಕೋಟೆಯೊಂದೂ ಇತಿಹಾಸದಲ್ಲಿ ಎಂದು ಮಿತ್ರದಳಪತಿಗಳು ಹೇಳುತ್ತಿದ್ದಾರೆ.

ಜಪಾನರ ಎಚ್ಚರಿಕೆ

ಜಪಾನ್ ಮೂಲಭೂಮಿಯ ಒಂದು ಭಾಗವ ಕರಿಲೀ ದ್ವೀಪದಲ್ಲೂ ಮತ್ತು ಜಪಾನಿನ ಇತರ ಪ್ರದೇಶಗಳಲ್ಲಿಯೂ ಅಮೆರಿಕನ್ ಸೇನೆಗಳು ಏಕಾ ಬಂದಿಳಿಯಬಹುದೆಂದು ಜಪಾನ್ ಸರ್ಕಾರವು ಎಚ್ಚರಿ ಅದಕ್ಕೆ ತಕ್ಕ ಆತ್ಮರಕ್ಷಣೆ ಕಾರ್ಯಕ್ರಮ ಕೈಗೊಳ್ಳ ಕೆಂದು ಅಲ್ಲಿನ ನಿವಾಸಿಗಳಿಗೆ ತಿಳಿಸಿದೆ

ಖಾರ್‌ಕೋವ್ ಕದನ

ಖಾರ್‌ಕೋವ್ ಸುತ್ತ ರಷ್ಯನರ ಮುಂದೊ ವನ್ನು ತಡೆಯಲು ನಾಜಿಗಳು ತಮ್ಮ ಬಳಿಇದ್ದ ಅಸ ಶಸ್ತ್ರ ಬಂಡಿ ಪಡೆಯನ್ನು, ವಿಮಾನ ಬಲವನ್ನು ರಂಗಕ್ಕೆ ಕಳಿಸಿದ್ದಾರೆ ನೀಪರ್ ನದಿ ಪೂರ್ವದಲ್ಲಿ ಜರ್ಮನ್ ಡಿವಿಜನ್‌ಗಳು ಸುತ್ತುವರಿಯಲ್ಪಡ ಭಯವುಂಟಾಗಿದೆ ಖಾರ್‌ಕೋವ್ ನೈಋತ್ಯ ಜರ್ಮನರು ಹಂಗು ತೊರೆದು ಪ್ರತಿ ಮುತ್ತಿಗೆ ನಡೆ ತ್ತಿದ್ದಾರೆ ಇದರಿಂದ ರಷ್ಯನರ ಮುಂದೋಟ ಕೊ ನಿಧಾನವಾಗಿದೆ. ಆದರೆ ನಿಂತಿಲ್ಲ ಕೆಂಪು ಸೇನೆ ಮುಂಗಾವಲು ಪಡೆಯವರು ಈಗ ಬ್ರಿಯಾನ್ಸ್ ನಗರದಿಂದ ಕೇವಲ ೧೫ ಮೈಲಿ ದೂರದಲ್ಲಿದ್ದಾ ಬ್ರಿಯಾನ್ಸ್‌ಕ್ ಸ್ಮೊಲೆನ್ಸ್‌ಕ್ ಮಧ್ಯೆ ಕೆಂಪು ಸೇನೆ ನೈಋತ್ಯದ ಕಡೆಗೆ ನುಗ್ಗುತ್ತಿದೆ. ಜರ್ಮನರು ಹೆ ಹೆಚ್ಚಾಗಿ 'ಟೈಗರ್ ಟ್ಯಾಂಕ್'ಗಳನ್ನು ಯುದ್ಧ ಕಳಿಸುತ್ತಿದ್ದಾರೆ

ರಷ್ಯವು ಜಪಾನ್‌ಮೇಲೆ ಯುದ್ಧ ಹೂಡುವುದೇ ?

ಇಟಲಿಯನ್ನು ಮಿತ್ರದೇಶಗಳು ಸೋಲಿಸಿ ಪಶ್ಚಿಮ ಯುರೋಪಿಗೆ ಮುತ್ತಿಗೆ ಹಾಕಿದೊಡನೆಯೇ ರಷ್ಯವು ಜಪಾನ್‌ಮೇಲೆ ಯುದ್ಧ ಹೂಡುವುದೆಂದೂ ಆಗ ಕಮ್ಚಾಟ್ಕಾದಲ್ಲಿ ರಷ್ಯವು ಮಿತ್ರದೇಶಗಳಿಗೆ ವಿಮಾನ ನೆಲೆಗಳನ್ನು ಬಿಟ್ಟುಕೊಡಬಹುದೆಂದೂ ಊಹಿಸಲಾಗಿದೆ

ಜಪಾನ್ ವಿಮಾನಬಲದ ಮೇಲೆ ಮುತ್ತಿಗೆ

ನ್ಯೂಗಿನಿಯದ ವೆವೆಕ್‌ಕ್ಷೇತ್ರದಲ್ಲಿ ಜಪಾನರು ಕೇಂದ್ರೀಕರಿಸಿದ್ದ ಅಪಾರ ವಿಮಾನಬಲದ ಮೇಲೆ ಮುತ್ತಿಗೆ ನಡೆಸಲಾಯಿತು ನೆಲದಮೇಲೆ ೨೦೦ಕ್ಕಿಂತ ಹೆಚ್ಚು ಜಪಾನ್ ವಿಮಾನಗಳಿದ್ದವು ೧೦೦೦ಕ್ಕಿಂತ ಹೆಚ್ಚು ಬಾಂಬುಗಳನ್ನು ಸುರಿಸಿ, ಅನರ್ಥವುಂಟುಮಾಡಲಾಯಿತು ೨೦ ಜಪಾನ್ ವಿಮಾನಗಳು ನಾಶವಾದವೆಂದೂ, ೦ಕ್ಕೆ ಬಹಳ ನಷ್ಟವಾಗಿದೆಯೆಂದೂ ಗೊತ್ತಾಗಿದೆ

ಭಾರತೀಯ ಬಂದಿಗಳ ವಿಚಾರ ಗೊತ್ತಾಗಿಲ್ಲ

ಜಪಾನರ ಕೈಗೆ ಸಿಕ್ಕಿರುವ ಸಂಗ್ರಾಮ ಬಂದಿಗಳಲ್ಲಿ ಶೇಕಡ ೬೫ ಮಂದಿಯ ಹೆಸರುಗಳನ್ನು ಮಾತ್ರ ಅವರು ಕೊಟ್ಟಿದ್ದಾರೆ ಜಪಾನರು ೧ ಲಕ್ಷ ಬ್ರಿಟಿಷರನ್ನೂ ೫೦೦೦ ಭಾರತೀಯರನ್ನೂ, ೨೦೦೦೦ ಆಸ್ಟ್ರೇಲಿಯನ್ನರನ್ನೂ ೩೫೦೦೦ ಅಮೆರಿಕನ್ನರನ್ನೂ ೧ ಲಕ್ಷ ಡಚ್ಚರನ್ನೂ, ೨೦೦೦ ಕೆನಡಿಯನರನ್ನೂ ಸೆರೆ ಹಿಡಿದಿದ್ದಾರೆಂದು ತಿಳಿದುಬಂದಿದೆ ಭಾರತೀಯ ಬಂದಿಗಳ ವಿಚಾರವಾಗಿ ಯಾವ ವರ್ತಮಾನವೂ ಇದುವರೆಗೆ ಬಂದಿಲ್ಲ ಬ್ರಿಟಿಷ್ ಸರಕಾರದವರೂ ಇಂಡಿಯಾ ಸರಕಾರದವರೂ ಎಷ್ಟೇ ಕಷ್ಟಪಟ್ಟರೂ ಜಪಾನ್ ಸರಕಾರದವರು ಭಾರತೀಯ ಬಂದಿಗಳ ಪಟ್ಟಿಯನ್ನು ಒದಗಿಸಿಲ್ಲ ಈ ವರ್ಷ ಭಾರತೀಯ ಬಂದಿಗಳಿಂದ ಕೇವಲ ೫೨ ಪತ್ರಗಳು ಬಂದಿವೆ. ವಾರವಾರ ಭಾರತದಿಂದ ಭಾರತೀಯ ಬಂದಿಗಳಿಗೆ ಸರಾಸರಿ ೩೦೦೦ ಕಾಗದಗಳು ಹೋಗುತ್ತಿವೆ ಜಪಾನರು ಭಾರತೀಯ ಬಂದಿಗಳನ್ನು ಇಟ್ಟಿರುವ ಶಿಬಿರಗಳಿಗೆ ರೆಡ್‌ಕ್ರಾಸ್ ಸಂಸ್ಥೆಯವರನ್ನೂ ಬಿಡುತ್ತಿಲ್ಲವೆಂದು ಹೇಳಲಾಗಿದೆ

ಕಲ್ಕತ್ತಾ ಸ್ತ್ರೀ ಸಮ್ಮೇಳನದ ಕುತೂಹಲ

ಅಖಿಲಭಾರತ ಸ್ತ್ರೀ ಸಮ್ಮೇಳನದ ಕಲ್ಕತ್ತಾ ಶಾಖೆ ಒಂದು ಹೇಳಿಕೆ ಕೊಡುತ್ತಾ 'ನಿರಾಶ್ರಿತರಾಗಿ, ಮನೆ ಮಠಗಳಿಲ್ಲದವರು, ಅದರಲ್ಲೂ ಹೆಂಗಸರು ಮಕ್ಕಳ ಸ್ಥಿತಿ ಭೀಕರ ಕ್ಷಾಮದಿಂದ ಚಿಂತಾಜನಕವಾಗಿದೆ ಇದಕ್ಕೆ ಬಲಿಯಾದವರಲ್ಲಿ ಹೆಂಗಸರು ಮಕ್ಕಳು ಹೆಚ್ಚಾಗಿದ್ದಾರೆ ಅಸಹಾಯಕರಾಗಿ, ಹೊಟ್ಟೆಗಿಲ್ಲದೆ ಕೆಟ್ಟ ಆಹಾರ ಸೇವನೆಯಿಂದ ಇವರು ಬೀದಿ ಬೀದಿಯನ್ನು ಅಲೆಯುತ್ತಾ ತಮ್ಮ ಕಾಲವನ್ನು ನೋಡಿಕೊಳ್ಳಬೇಕಾಗಿದೆ ಪೋಲೀಸು ಕಮಿಷನರು ಇತ್ತೀಚಿನ ತಮ್ಮ ಪ್ರಕಟಣೆಗಳಲ್ಲಿ ಬೀದಿಯಲ್ಲಿ ಉಪವಾಸದಿಂದ ನರಳಿ ಬೀಳುತ್ತಿರುವ ಹೆಣಗಳನ್ನು ಬೇಗನೆ ಸಾಗಿಸುವುದಕ್ಕೆ ತಕ್ಕ ಕ್ರಮಗಳನ್ನು ಕೈಗೊಂಡಿದೆವೆಂದು ತಿಳಿಸಿದ್ದಾರೆ. ಅಲ್ಲದೆ ಅನೇಕ ತಂದೆತಾಯಿಗಳು ಮಕ್ಕಳಿಗೆ ಅನ್ನ ಹಾಕಲಾರದೆ ಅವರನ್ನು ಬೀದಿಗಟ್ಟಿದ್ದಾರೆಂದು ಸಹ ತಿಳಿಸಿದ್ದಾರೆ ಇದು ಹೊಸ ಸಾಮಾಜಿಕ ಸಮಸ್ಯೆ. ಸಾರ್ವಜನಿಕರ ಗಮನವನ್ನು ತಕ್ಷಣ ಎಳೆಯುವಂತಹುದು ಆಹಾರ ಸಚಿವರೂ, ಕೂಡ ಬರುವ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ಗಳಲ್ಲಿ ಪರಿಸ್ಥಿತಿಯು ಇನ್ನೂ ವಿಷಮವಾಗುವುದೆಂದು ತಿಳಿಸಿದ್ದಾರೆ ಇದಕ್ಕೆ ತಕ್ಕ ಪರಿಹಾರೋಪಾಯವನ್ನು ಕೂಡಲೆ ಕೈಕೊಳ್ಳಬೇಕಾಗಿದೆ ಎಂದು ತಿಳಿಸಿದೆ

ಯೂರೋಪಿನ ದಂಡಯಾತ್ರೆ ಎಲ್ಲಿ ಪ್ರಾರಂಭವಾಗಬಹುದು?

ಸಿಸಿಲಿಯನ್ನು ಆಕ್ರಮಿಸಿದ್ದಾಯಿತು ! ಇನ್ನು ಯೂರೋಪಿಗೆ ಮಿತ್ರದೇಶಗಳು ಮುತ್ತಿಗೆ ಹಾಕುವುದು ಖಂಡಿತ ಆಫ್ರಿಕಾದಲ್ಲಿ ಮಿತ್ರಸೇನೆಗಳು ಆಹಾರ ಮತ್ತು ಸಂಗ್ರಾಮ ವಸ್ತುಗಳನ್ನು ಕೂಡಿಹಾಕಿವೆ ಹಿಟ್ಲರನು ಯೂರೋಪಿನ ಕೋಟೆಯನ್ನು ಈಗ ಬಲಪಡಿಸುತ್ತಿದ್ದಾನೆ. ಎಷ್ಟು ಬೇಗ ಏಟು ಹಾಕಿದರೆ ಅಷ್ಟು ಮೇಲು ಸೈನಿಕರನ್ನು ಇಳಿಸಲು ಈಗಿನ ಹವಾಮಾನಕೂಡ ಬಲು ಅನುಕೂಲವಾಗಿದೆ

ಮಿತ್ರರು ಒಂದುಕಡೆ ಏಟುಹಾಕುವುದಿಲ್ಲ ಹಲವು ಕಡೆಗಳಲ್ಲಿ ಏಕಕಾಲದಲ್ಲಿ ಸೇನೆಗಳನ್ನಿಳಿಸುವರು. ಇದು ಎಲ್ಲ ಮಿಲಿಟರಿ ವಿಮರ್ಶಕರ ಅಭಿಪ್ರಾಯ ತತ್ತರಿಸುತ್ತಿರುವ ಇಟಲಿಗೂ ದಕ್ಷಿಣ ಫ್ರಾನ್ಸಿಗೂ ಮುತ್ತಿಗೆ ಹಾಕಬಹುದು ಮಧ್ಯ ಪೂರ್ವದಲ್ಲಿರುವ ಬ್ರಿಟಿಷ್ ಸೇನೆ ಬಾಲ್ಕನ್ಸ್ ಪ್ರದೇಶಕ್ಕೆ ಧುಮುಕಬಹುದು ಇಂಗ್ಲಿಷ್ ಕಾಲುವೆದಾಟಿ ಫ್ರಾನ್ಸಿಗೋ, ಹಾಲೆಂಡಿಗೋ ಕಾಲಿಡಬಹುದು ಇದೇ ಕಾಲದಲ್ಲಿ ನಾರ್ವೆಯ ಮೇಲೆ ಸಹ ಮುತ್ತಿಗೆ ನಡಸಲು ಅವಕಾಶವಿದೆ

ಇತ್ತ ಮಿತ್ರದೇಶಗಳು ಸಿಸಿಲಿಗೆ ಏಟು ಹಾಕಿದಾಗಲೇ ಅತ್ತ ರಷ್ಯನರು ಜರ್ಮನರಿಗೆ ಚೆನ್ನಾಗಿ ಬಿಸಿತೋರಿಸಿದರು ಸಿಸಿಲಿಯಲ್ಲಿ ಮಿತ್ರರಿಗೆ ಜಯವಾದ್ದರಿಂದ ರಷ್ಯನರ ಮುತ್ತಿಗೆಯ ಬಲ ಹೆಚ್ಚಿತು. ಆಫ್ರಿಕಾ ಮತ್ತು ಸಿಸಿಲಿಗಳು ಮಿತ್ರರ ವಶವಾದ್ದರಿಂದ ರಷ್ಯದ ಸರಬರಾಯಿ ಮಾರ್ಗ ೫೦೦೦ ಮೈಲಿಗಳಷ್ಟು ಹತ್ತಿರವಾಯಿತು ರಷ್ಯಕ್ಕೆ ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಾಮ ವಸ್ತುಗಳು ಹೋದರೆ ಅವರು ಅಷ್ಟು ಫಲಕಾರಿಯಾಗಿ ಯೂರೋಪಿನ ಕಟ್ಟ ಕಡೆ ದಂಡಯಾತ್ರೆಗೆ ಸಹಾಯಕರಾಗುವರು ಯೂರೋಪಿನ ದಂಡಯಾತ್ರೆ ಸಾಮಾನ್ಯವಾದ್ದಲ್ಲ ರಷ್ಯದ ಸಹಾಯವಿಲ್ಲದೆ ಈ ಕಾರ್ಯ ಅಸಾಧ್ಯ ರಷ್ಯನರೀಗ ೪೦ ಲಕ್ಷ ನಾಜಿ ಸೈನಿಕರನ್ನು ಎದುರಿಸಿ, ಹೋರಾಡುತ್ತಿದ್ದಾರೆ ಈ ಹೋರಾಟ ಇಲ್ಲದಿದ್ದರೆ ಅವರೆಲ್ಲ ಪಶ್ಚಿಮ ಯೂರೋಪಿನ ಮೆಡಿಟರೇನಿಯನ್ ತೀರದ ಕಾವಲಿಗೆ ನಿಲ್ಲುತ್ತಿದ್ದರು

ಹಿಟ್ಲರನ ಉಳಿದ ಸೇನೆಯನ್ನು ಸುಮಾರು ೩೦ ಲಕ್ಷ ಸೈನಿಕರು ಈಗ ಪಶ್ಚಿಮದಲ್ಲಿಯೂ ಇತರ ರಂಗಗಳಲ್ಲೂ ಇಡಲಾಗಿದೆ

ನಾರ್ವೆಯಲ್ಲಿ ನಾರ್ವಿಕ್‌ನಗರ ನಾಜಿಗಳ ದಂಡಯಾತ್ರೆ ನಡೆಯಲು ತಕ್ಕ ಸಿದ್ಧತೆ ಮಾಡಿಕೊಂಡಿದ್ದಾರೆ ನಾರ್ವೆಯಲ್ಲಿ ೧,೭೪೦೦೦ ನಾಜಿ ಯೋಧರಿದ್ದಾರೆ ನಾರ್ವೆತೀರದ ಉದ್ದಕ್ಕೂ ವಿಮಾನ ನೆಲೆಗಳಿವೆ ಟ್ರಾಂಡ್‌ಹೇಂ ಮುಂತಾದ ಕಡೆ ಜರ್ಮನಿಯ ಬಹುಮಟ್ಟಿನ ನೌಕಾಬಲವಿದೆ ಶತ್ರುಗಳು ಫ್ರಾನ್ಸ್ ತೀರದಲ್ಲಿ ಮಾಡಿಕೊಂಡಿರುವಷ್ಟು ರಕ್ಷಣೆ ಏರ್ಪಾಟನ್ನು ಮತ್ತೆಲ್ಲೂ ಮಾಡಿಕೊಂಡಿಲ್ಲ ಇಂದು ಫ್ರಾನ್ಸಿನಲ್ಲೆಲ್ಲ ಒಟ್ಟು ೧೦ ಲಕ್ಷದಿಂದ ೧೩,೭೦,೦೦೦ ಜರ್ಮನ್ ಯೋಧರಿರಬಹುದೆಂದು ಅಂದಾಜು ಹಾಕಲಾಗಿದೆ ಈಗ ಮೆಡಿಟರೇನಿಯನ್ ಕಡೆಗಿರುವ ಫ್ರಾನ್ಸ್ ತೀರವನ್ನು ಹಗಲೂ ರಾತ್ರಿ ಬಲಪಡಿಸುತ್ತಿದ್ದಾರೆ ಮಿತ್ರರು ಅಲ್ಲಿ ಏಟು ಹಾಕುವರೆಂಬ ಭೀತಿ ಬಲವಾಗಿದೆ ಸ್ಪೇಯಿನ್ ಗಡಿಯಲ್ಲಿ ಪಿರಿನೀಸ್ ಪರ್ವತದ ಬಳಿ (ಫ್ರಾನ್ಸಿನ ಕಡೆ) ಅನೇಕ ನಾಜಿ ಡಿವಿಜನ್‌ಗಳನ್ನು ಇಡಲಾಗಿದೆ

ಇಟಲಿ ಮತ್ತು ಸಿಸಿಲಿ ಇವೆರಡರಲ್ಲೂ ಒಟ್ಟು ೫ ಲಕ್ಷಕ್ಕಿಂತ ಹೆಚ್ಚು ನಾಜಿ ಯೋಧರಿರಬಹುದು ಬಾಲ್ಕನ್ಸ್‌ನಲ್ಲಂತೂ ಇದ್ದ ಬದ್ದ ಜರ್ಮನ್ ಸೈನಿಕರನ್ನೆಲ್ಲ ನಿಲ್ಲಿಸಿದ್ದಾರೆ ಮಿತ್ರಸೇನೆಗಳು ಅಲ್ಲಿ ಏಟು ಹಾಕುವ ಸಂಭವ ಬಹು ಹೆಚ್ಚಾಗಿದೆ

ರಷ್ಯಾರಂಗವಿನ್ನು ಬಿಟ್ಟರೆ, ಉಳಿದ ಅತ್ಯಂತ ಬಲಯುತ ಜರ್ಮನ್ ಪಡೆಗಳು ಫ್ರಾನ್ಸಿನಲ್ಲೂ ಇಟಲಿಯಲ್ಲೂ ಇವೆ ಟ್ಯುನೀಸಿಯಾ, ಸಿಸಿಲಿ ಹಿಂದೋಟಗಳಲ್ಲಿ ಹಿಟ್ಲರನು ಒಂದು ವಿಮಾನವನ್ನೂ ಹಾಳುಮಾಡಿಕೊಂಡಿಲ್ಲ ಯೂರೋಪಿನ ಕದನಕ್ಕಾಗಿ ಅವುಗಳನ್ನು ಮೀಸಲು ಮಾಡಿದ್ದಾನೆ ಎಂದು ಹೇಳಲಾಗಿದೆ.

ಆತ್ಮಶಕ್ತಿಯ ಪ್ರಾಶಸ್ತ್ಯ

ಲೇ—ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ಮಠೀಯರು, ಹುಡೇನೂರು

ಈ ಸೃಷ್ಟಿಯಲ್ಲಿ ಮನುಷ್ಯನು ಹೊರಗಣ ಸಮಸ್ತ ವಸ್ತುಗಳ ಮೇಲೆಯೂ ತನ್ನಧಿಕಾರವನ್ನು ನಡೆಸಬಲ್ಲನು ನೋಡಿರಿ! ತಾನು ಸ್ವಪ್ನದಲ್ಲಿ ನೋಡಿದರೆ ಗಡಗಡ ನಡುಗಿ ಹೇಡಿಯಾಗಿ ಅಪಸ್ವರದಿಂದ ಆರ್ತಧ್ವನಿಯನ್ನು ಮಾಡುವಂಥ ಹುಲಿ, ಸಿಂಹ ಮೊದಲಾದ ಮಹಾ ಪರಾಕ್ರಮಶಾಲಿಗಳಾದ ಕ್ರೂರಮೃಗಗಳನ್ನು ತನ್ನ ಆಟದ ಮೃಗವಾಗಿ ಮಾಡಿಕೊಂಡಿರುವದನ್ನು ನಾವು ಸರ್ಕಸ್ ಆಟದಲ್ಲಿ ನೋಡುತ್ತೇವೆ ಬರೀ ಪ್ರಾಣಿವರ್ಗದ ಮೇಲಷ್ಟೇ ಏಕೆ ? ಮನುಷ್ಯನ ದರ್ಪವು ಪಂಚಭೂತಗಳ ಮೇಲೆಯೂ ಇರುವುದು ಜಲಪ್ರವಾಹವು ತನ್ನ ಸಾಹಸದಿಂದ ಮನುಷ್ಯನಿಗಾಗಿ ವಿದ್ಯುಚ್ಛಕ್ತಿಯನ್ನು ಸಂಗ್ರಹಿಸಿ ಕೊಡಬೇಕು ಆ ವಿದ್ಯುಚ್ಛಕ್ತಿಯು ಮನುಷ್ಯನ ಓಲೆಕಾರನಾಗಿ ಇಲ್ಲಿಂದಲ್ಲಿಗೆ ವರ್ತಮಾನಗಳನ್ನು ಮುಟ್ಟಿಸಬೇಕು ಗಾಳಿಯು ತನ್ನ ವೇಗದಿಂದ ಯಂತ್ರಗಳನ್ನು ತಿರುಗಿಸಿ ಮನುಷ್ಯನ ಕೈಂಕರ್ಯವನ್ನು ಮಾಡಬೇಕು ಮನುಷ್ಯನು ಶಾಸನ ಮಾಡಿದರೆ ಒಮ್ಮೊಮ್ಮೆ ಸೂರ್ಯನು ಸಹ ತನ್ನ ಪ್ರಖರತ್ವವನ್ನು ಮುದುರಿಟ್ಟುಕೊಳ್ಳಬೇಕಾದೀತು ಹೀಗೆ ಮನುಷ್ಯನ ನಿಯಾಮಕತ್ವವು ಸಂಕೋಲೆಯನ್ನು ಮುರಿದೊಗೆದ ಆನೆಯಂತೆ ಎಲ್ಲೆಲ್ಲಿಯೂ ನಿರಾತಂಕವಾಗಿ ಮುಂದುವರಿಯುವದು ಆದರೆ ಅದರ ಮಹಿಮೆಯು ಒಂದುಕಡೆ ಮಾತ್ರ ಸಾಗುವದಿಲ್ಲ ಅದಾವುದೆಂದರೆ ಮನಸ್ಸು ಈ ಮನಸ್ಸಿನ ವೇಗವು ವಾಯುವೇಗ ವಿದ್ಯುದ್ವೇಗಗಳಿಗಿಂತ ಸಹಸ್ರಾಂಶ ಅಧಿಕವಾಗಿರುವುದು ವಾಚಕರೇ, ಮನಸ್ಸು ಇಷ್ಟು ವೇಗಶಾಲಿಯಾಗಿಯೂ, ಬಲಿಷ್ಠವಾಗಿಯೂ, ಅತಿಚಪಲವಾಗಿಯೂ ಇದ್ದರೂ ಸಹ ಬೆದರಿಸಿದರೆ ಹಿಡಿತಕ್ಕೆ ಒಳಗಾಗುವಂಥದ್ದು ಅದನ್ನೇ ಮುದ್ದು ಮಾಡುತ್ತ ಅದನ್ನು ಹಿಂಬಾಲಿಸಿದರೆ ಅದು ನಮ್ಮನ್ನು ಹಳ್ಳಕ್ಕೆ ತಳ್ಳದೆ ಬಿಡುವುದಿಲ್ಲ ಈ ರೀತಿಯಲ್ಲಿ ನಾವು ಅದರ ವಶರಾದರೆ ಅದು ನಮಗೆ ಹಾನಿಯನ್ನು ಮಾಡುವಂತೆ ಅದನ್ನು ನಮ್ಮ ಅಂಕಿತದಲ್ಲಿಟ್ಟುಕೊಂಡರೆ ಅದೇ ನಮ್ಮ ಉನ್ನತಿಯನ್ನು ಮಾಡುವುದು ಬಾಹ್ಯಸರ್ವಸೃಷ್ಟಿಯನ್ನೂ ಸಂಜ್ಞಾ ಮಾತ್ರದಿಂದ ಕೂಡ ಬಗ್ಗಿಸಬಹುದು ಮನಸ್ಸಿನ ಮೇಲೆ ನಮ್ಮ ಸ್ವಾಮಿತ್ವವನ್ನು ನಡೆಸುವದೆಂದರೆ ಬಹು ಸಾಹಸದ ಮಾತು ಈ ಬ್ರಹ್ಮಾಂಡದಲ್ಲಿ ಬಾಹ್ಯ ಸೃಷ್ಟಿಯನ್ನೆಲ್ಲ ತಮ್ಮ ವಶವರ್ತಿಯಾಗಿ ಮಾಡಿಕೊಂಡವರೆಷ್ಟೋಜನರುಂಟು ಮನಸ್ಸನ್ನು ವಶವರ್ತಿಯಾಗಿ ಮಾಡಿಕೊಂಡವರ ಲೆಕ್ಕವನ್ನು ಮಾಡಬೇಕಾದರೆ ಕೈಬೆರಳುಗಳನ್ನಷ್ಟೇ ಎಣಿಸಬೇಕಾಗುವುದು. ಅದ್ದರಿಂದ ಬಾಹ್ಯ ಬ್ರಹ್ಮಾಂಡವನ್ನು ಗೆದ್ದವರ ಬೆಲೆಗಿಂತ ಮನಸ್ಸನ್ನು ಗೆದ್ದವರ ಬೆಲೆ ಹೆಚ್ಚು ಬಾಹ್ಯ ಬ್ರಹ್ಮಾಂಡವನ್ನು ಗೆದ್ದವರು ಏಕಚ್ಛತ್ರಾಧಿಪತಿಗಳೆನಿಸಿಕೊಂಡು ನಿರಂಕುಶರಾಗಿ ಐಹಿಕಸೌಖ್ಯದ ಪರಮಾವಧಿಯನ್ನು ಉಪಭೋಗಮಾಡಬಹುದು ಆದರೆ ಅವರಿಗೆ ಈಶ್ವರಪ್ರಾಪ್ತಿಯ ಯೋಗವು ದಕ್ಕುವುದಿಲ್ಲ ವಾಚಕರೇ, ರಾಜಭೋಗವಾದರೂ ವಿಷಮಿಶ್ರಿತವಾದ ಮಧುವಿನಂತಿರುವುದು. ಅರ್ಥಾತ್ ದುಃಖಮಿಶ್ರಿತವಾಗಿರುವುದು ಈ ಬಗ್ಗೆ ಒಂದು ಕಥೆಯುಂಟು ಮನುಷ್ಯಾನಂದದ ಪರಮಾವಧಿಯಾದ ರಾಜನ ಆನಂದವು ಬಹು ಸ್ಪೃಹಣೀಯವೆಂದು ತಿಳಿದಿದ್ದ ಒಬ್ಬ ಬ್ರಾಹ್ಮಣನಿಗೆ ಅದರ ರಹಸ್ಯವನ್ನು ತಿಳಿಸುವುದಕ್ಕಾಗಿ ಒಬ್ಬ ರಾಜನು ತಮ್ಮ ಮನೆಗೆ ಊಟಕ್ಕೆ ಬರಬೇಕೆಂದು ಆ ಬ್ರಾಹ್ಮಣನಿಗೆ ಆಮಂತ್ರಣವನ್ನು ಕೊಟ್ಟನು ಆ ಬ್ರಾಹ್ಮಣನು ಬರುವುದರೊಳಗೇ ಅವನಿಗಾಗಿ ರತ್ನಖಚಿತವಾದ ಪೀಠವನ್ನು ಹಾಕಿಸಿ ಚಿನ್ನದ ತಟ್ಟೆ ಬಟ್ಟಲುಗಳಲ್ಲಿ ಘಮಘಮಿಸುವ ಷಡ್ರಸೋಪೇತವಾದ ಮೃಷ್ಟಾನ್ನಗಳನ್ನು ಬಡಿಸಿಟ್ಟಿದ್ದರಲ್ಲದೆ ನೆಟ್ಟಗೆ ನಡುನೆತ್ತಿಗೆ ಗುರಿಯಿಟ್ಟಂತೆ ಒಳ್ಳೇ ಹರಿತವಾದ ಒಂದು ಕತ್ತಿಯನ್ನು ಸಣ್ಣದಾದ ಒಂದು ಹೊಂದಾರದಿಂದ ಜಂತೆಗೆ ಕಟ್ಟಿ ಆ ಜಂತೆಯ ಮೇಲೊಂದು ಇಲಿಯನ್ನು ಓಡಾಡಬಿಟ್ಟಿದ್ದರು ಇಷ್ಟರಲ್ಲಿ ಊಟದ ಶ್ರವಣಮಾತ್ರದಿಂದಲೇ ರಾಜಭೋಜನವು ಲಭ್ಯವಾದ ಆ ಸುದಿನವನ್ನೇ ತನ್ನ ಜನ್ಮದಿವಸವೆಂದು ತಿಳಿದುಕೊಂಡು ಬಂದ ಆ ಬ್ರಾಹ್ಮಣನು ತನಗೆ ದೊರೆತ ವೈಭವದಿಂದ ಮೈಮರೆತು

ಆ ಸುವಾಸನೆಯುಳ್ಳ ಮೃಷ್ಟಾನ್ನಗಳಿಗೆ ಬಾಯಿ ನೀರು ಸುರಿದು ನೋಟದಿಂದ ಕಣ್ಣುಗಳಿಗೆ ಹಬ್ಬವನ್ನು ಮಾಡಿಕೊಂಡು ಉತ್ಕಟವಾದ ಇಚ್ಛೆಯಿಂದ ಅದಕ್ಕೆ ಕೈನೀಡುವುದರೊಳಗೇ ಮೇಲೆ ಇಲಿಯು ದಡದಡನೆ ಓಡಿತು. ಆಗ ಅವನು ಸ್ವಭಾವಸಿದ್ಧವಾದ ಭಯದಿಂದ ಅತ್ತಿತ್ತ ನೋಡುತ್ತಲೇ ತೂಗಾಡುತ್ತಿದ್ದ ಕತ್ತಿ ಕಾಣಿಸಿತು. ಒಡನೆ ಅವನು ತನ್ನ ತಲೆಯ ಮೇಲೆ ಅದು ಬಿದ್ದು ತನ್ನ ತಲೆಯನ್ನು ಸೀಳಿಬಿಡುವದೆಂದು ಗಾಬರಿಗೊಂಡು ಊಟವನ್ನು ಬಿಟ್ಟು ಅಲ್ಲಿಂದ ಚಟಕ್ಕನೆ ದೂರಕ್ಕೆ ಸರಿದನು. ತನ್ನ ಪ್ರಾಣವೇ ಹೋಗುತ್ತಿತ್ತೆಂದು ಮುಖವೆಲ್ಲ ವಿವರ್ಣವಾಗಿ ಕಟ್ಟುಬೆವರಿಟ್ಟಿದ್ದ ಆ ಬ್ರಾಹ್ಮಣನನ್ನು ಸಂತೈಸಿ ರಾಜನು ಇದೇ ರಾಜಭೋಗದ ಸ್ವರೂಪವೆಂದು ಹೇಳಿದನಂತೆ. ಮನಸ್ಸು ಜಯಿಸಿದವರಿಗೆ ಐಹಿಕಸುಖವೆಂಬುದು ಚಿತ್ರದಲ್ಲಿ ಬರೆದ ನಿಕ್ಷೇಪದಂತೆ ಬರೀ ಭಾವನಾಮಯವಾಗಿ ತೋರುವದಲ್ಲದೆ, ಪರಮಾನಂದಸ್ವರೂಪನಾದ ಪರಮಾತ್ಮನೇ ಅವರನ್ನು ಅನುವರ್ತಿಸುವವನಾಗಿ ಭಕ್ತಪರಾಧೀನನೆನಿಸಿಕೊಳ್ಳುವುದರಿಂದ ಅವರ ನಿಜಾನಂದವು ಮೇರೆಯಿಲ್ಲದ್ದಾಗುವದು. ಆದ್ದರಿಂದ ಮನಸ್ಸಿನ ಮೇಲೆ ಸ್ವಾಮಿತ್ವವನ್ನು ನಡೆಸುವುದೇ ನಿಜವಾದ ಸಾಹಸವು. ಮನಸ್ಸಿನ ಮೇಲೆ ಸ್ವಾಮಿತ್ವವನ್ನಿಟ್ಟುಕೊಳ್ಳದೆ, ಮನಸ್ಸಿನ ಸೆಳೆತಕ್ಕೆ ಸಿಕ್ಕಿ ಅದು ಕರೆದ ಕಡೆಗೆ ಅದರ ಬಾಲವನ್ನು ಹಿಡಿದು ಹೋಗಿ, ಅದು ಆಜ್ಞಾಪಿಸಿದ ಕಾರ್ಯಗಳನ್ನು ಮಾಡುವದರಿಂದ, ಸ್ಥೂಲದೃಷ್ಟಿಯಿಂದ ನೋಡಿದಾಗ, ಅವನಿಗೆ ಸರ್ವೇಶ್ವರತ್ವವು ಬಂದರೂ, ಸೂಕ್ಷ್ಮದೃಷ್ಟಿಯಿಂದ ನೋಡಿದಾಗ ಅವನು ಮನಸ್ಸಿನ ದಾಸನಾಗಿರುವಿಕೆಯು ಎದ್ದು ಕಾಣದೆ ಹೋಗುವದಿಲ್ಲ. ಮನಸ್ಸಿನ ಮೇಲೆ ನಿಯಮವನ್ನು ವಿಧಿಸುವವರಲ್ಲಿ ದಾಸತ್ವದ ವಾಸನೆ ಕೂಡ ಇರುವದಿಲ್ಲ. ಆದ್ದರಿಂದ ಹೊರಗಣ ಪ್ರಪಂಚವನ್ನು ಎಷ್ಟೇ ಗೆದ್ದರೂ ದಾಸತ್ವದ ಕಿಲುಬು ತಪ್ಪುವದಿಲ್ಲ. ದಾಸತ್ವದಿಂದ ಕೂಡಿದ ಪ್ರಭುತ್ವದ್ದೇನು ಹೆಚ್ಚುಗಾರಿಕೆ? ಹುಳಿಬೆಲ್ಲವನ್ನು ಯಾರು ಹೊಗಳುತ್ತಾರೆ? ಆದ್ದರಿಂದ ಮನಸ್ಸನ್ನು ಗೆಲ್ಲುವದೇ ಗೆಲುವು. ಇದೇ ಶೂರತನವು. ಶ್ರೀ ನಿಜಗುಣಶಿವಯೋಗಿಗಳೂ ಸಹ "ಕರಣವಿಜಯದಿಂದೆ ಕಲಿತನವುಂಟೆ" ಎಂದು ಹೇಳಿರುವರು.

ಬಾಹ್ಯ ಪ್ರಪಂಚವನ್ನು ಗೆಲ್ಲುವದರಲ್ಲಿಯೂ ಮನಸ್ಸನ್ನು ಗೆಲ್ಲುವದರಲ್ಲಿಯೂ ಪರಿಣಾಮದಲ್ಲಿ ಒಂದು ವಿಶೇಷವುಂಟು. ಹಿಡಿತಕ್ಕೆ ಸಿಕ್ಕಿದ ಬಾಹ್ಯ ಪ್ರಪಂಚವು ತನ್ನೊಡೆಯನಿಗೆ ಉಪಭೋಗ ಸಾಧನವಾದೀತೇ ಹೊರತು ಆ ತನ್ನ ಸ್ವಾಮಿಯನ್ನು ಮನಸ್ಸಿನ ದಾಸ್ಯವೆಂಬ ಸಂಕೋಲೆಯಿಂದ ತಪ್ಪಿಸಲಾರದು. ಮನಸ್ಸು ಹಿಡಿತಕ್ಕೆ ಸಿಕ್ಕಿದರೆ ಅದು ತನ್ನೊಡೆಯನಿಗೆ ಉಪಭೋಗ ಸಾಧನವಾಗುವದೂ ಅಲ್ಲದೆ ಬಾಹ್ಯ ಪ್ರಪಂಚವನ್ನೆಲ್ಲಾ ಲೀಲಾಜಾಲವಾಗಿ ತನ್ನ ಯಜಮಾನನ ಹಸ್ತರೇಖೆಯಲ್ಲಿ ಅಡಗಿಸುವದು. ಪೂರ್ವದಲ್ಲಿ ಋಷ್ಯಾಶ್ರಮಗಳಲ್ಲಿ ಗೋವ್ಯಾಘ್ರಗಳು, ಗಂಡಭೇರುಂಡ ಶರಭಗಳು, ಗಜಕೇಸರಿಗಳು, ನವಿಲು ಮುಂಗಿಸಿ ಸರ್ಪಗಳು ಇತ್ಯಾದಿ ಪ್ರಾಣಿಗಳೆಲ್ಲಾ ಪರಸ್ಪರ ವೈರವನ್ನು ತೊರೆದು ವರ್ತಿಸುತ್ತಿದ್ದವೆಂದು ಉಲ್ಲೇಖಗಳುಂಟಷ್ಟೆ. ಅವೇನೂ ಅತ್ಯುಕ್ತಿಯಲ್ಲ. ಋಷಿವರ್ಯರು ಮನಸ್ಸೆಂಬ ದರ್ಪಣವನ್ನು ತಮ್ಮ ಹಸ್ತದಲ್ಲಿಟ್ಟುಕೊಂಡು ಅದರಲ್ಲಿರುವ ವೈರಭಾವವೆಂಬ ಕಲೆಗಳನ್ನೆಲ್ಲಾ ಹೋಗಲಾಡಿಸಿ ಅದು ಚೆನ್ನಾಗಿ ಮಿರುಗುವಂತೆ ಮಾಡಿರುತ್ತಿದ್ದರು. ಆದ್ದರಿಂದ ಅವರ ಸಾನ್ನಿಧ್ಯಕ್ಕೆ ಇತರ ಪ್ರಾಣಿಗಳು ಬಂದಾಗ ಆ ಪ್ರಾಣಿಗಳ ಮನಸ್ಸಿನಲ್ಲಿ ವೈರತ್ವದ ಕಲೆ ಇದ್ದರೂ ಋಷಿಗಳ ಮನಸ್ಸಿನ ನಿರ್ವೈರತ್ವ ಪ್ರಧಾನವಾದ ಪ್ರತಿಭೆಯ ಪ್ರಭಾವಾತಿಶಯವು ಆ ಪ್ರಾಣಿಗಳ ಮನಸ್ಸಿನ ಮೇಲೆ ಬಿದ್ದು ಝಗಝಗಿಸಿ ಅಲ್ಲಿದ್ದ ವೈರತ್ವದ ಕಲೆಗಳನ್ನು ಎದ್ದು ಕಾಣದಂತೆ ಮಾಡುತ್ತಿದ್ದಿತು. ಈ ಕಾರಣದಿಂದ ಆ ಪ್ರಾಣಿಗಳು ತಮಗೆ ಅರಿವಿಲ್ಲದೆ ನಿರ್ವೈರದಿಂದಿರುತ್ತಿದ್ದವು. ಆತ್ಮಶಕ್ತಿಯ ಪ್ರಾಶಸ್ತ್ಯವನ್ನು ಈ ಉದಾಹರಣೆಯು ಬಹು ಚೆನ್ನಾಗಿ ವ್ಯಕ್ತಗೊಳಿಸುವದು. ವಿಚಾರಮಾಡಿರಿ. ಅಖಂಡ ಬ್ರಹ್ಮಾಂಡವನ್ನೂ ಒಂದು ಭ್ರೂಕ್ಷೇಪದಿಂದ ತನ್ನ ಇಚ್ಛಾನುಗುಣವಾಗಿ ಮಾಡಿಕೊಳ್ಳುವಂಥವನಿಗಾದರೂ ಇತರ ಪ್ರಾಣಿಗಳ ವೈರಬುದ್ಧಿಯನ್ನ ನಿರ್ಮೂಲಮಾಡುವದು ಶಕ್ಯವಿದೆಯೆ? ಎಂದಿಗೂ ಇಲ್ಲ. ಯಾರಿಗೆ ತನ್ನ ಮನಸ್ಸಿನಮೇಲೆಯೇ ನಿಯಾಮಕತ್ವವು ನಡೆಯುವದಿಲ್ಲವೋ ಅಂಥವನಿಗೆ ಇತರರ ಮನಸ್ಸಿನಮೇಲೆ ಕೈಮಾಡುವ ಯೋಗ್ಯತೆ ಎಲ್ಲಿಯದು? ಆದ್ದರಿಂದ ಯಾವ ಉಪಕರಣಗಳ ಅಟ್ಟಹಾಸವೂ ಇಲ್ಲದೆ, ಜಯಶ್ರೀಯ ಮುಡಿಯನ್ನ ಹಿಡಿದೆಳೆತರುವಂಥ ಆತ್ಮಶಕ್ತಿಯ ಜಯವೇ ಜಯ. ಪರಾಕ್ರಮವಂತರು ಬೇಕಾದಷ್ಟು ರಾಜ್ಯಗಳನ್ನು ಗೆ ಬಹುದು, ಆ ದೇಶದ ಭಂಡಾರವನ್ನೆಲ್ಲಾ ರಾಜದಂಡದಿಂದ ತಕ್ಕೊಳ್ಳಬಹುದು, ಮಾತಾಡಿದವರ ಮುಂ ತಮ್ಮ ರಾಜದಂಡವನ್ನು ಝಳಪಿಸಬಹುದು. ಆ ರಾ ದಂಡದ ಸಹಾಯದಿಂದ ತಮ್ಮನ್ನು ತಾವು ರಾಜರೆಂ ಕೊಳ್ಳಬಹುದು. ಆದರೆ "ರಾಜಾ ಪ್ರಕೃತಿ ರಂಜನಾ ಎಂಬ ವಾಕ್ಯದಂತೆ ಜನಾನುರಾಗಕ್ಕೆ ಪಾತ್ರನಾಗಿ ಜ ಮನಸ್ಸನ್ನು ತನ್ನ ವಶಮಾಡಿಕೊಳ್ಳದೆ ಇರುವವರಿಗೆ ಅವನ ರಾಜತ್ವವು ಶೋಭಿಸುವದಿಲ್ಲ. ಹೀಗೆ, ನಿಜವಾ ರಾಜತ್ವವನ್ನು ತಂದುಕೊಡುವ ಸಾಮರ್ಥ್ಯವು ಆತ್ಮಶ ಯಲ್ಲಿರುವುದರಿಂದ, ಆತ್ಮಶಕ್ತಿಯ ಪ್ರಾಶಸ್ತ್ಯವು ಹೇ ನದು

(ಸಶೇ

ರಿಜರ್ವ್ ಬ್ಯಾಂಕ್ ಗವರ್ನರ್ ಪದ

ಶ್ರೀ ಸಿ. ಡಿ. ದೇಶಮುಖ್‌ರವರನ್ನು ಭಾ ರಿಜರ್ವ್ ಬ್ಯಾಂಕ್ ಗವರ್ನರರನ್ನಾಗಿಯೂ ಶ್ರೀ ಪ ಹತ್ ಹುಸೇನ್ ಮತ್ತು ಶ್ರೀ ಸಿ. ಆರ್. ಟ್ರಿವೇ ರನ್ನು ಡೆಪ್ಯುಟಿ ಗವರ್ನರರನ್ನಾಗಿ ಚುನಾಯಿಸಿದ್ದಾ ಅಧಿಕಾರಿಯುತವಾದ ಪ್ರಕಟಣೆ ಹೊರಟಿದೆ.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಸಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಶನ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೩ ಆಣೆ
ಪಂಚಾಚಾರ್ಯಪ್ರಭಾಕರ	೩ ಆಣೆ
ಶ್ರೀಗುರುತತ್ತ್ವಪರಾಗ	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿದಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೫ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಪಷ್ಟೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿದಿ	೬ ಆಣೆ
ವೀರಶೈವಮಹಾತ್ಮ್ಯೆ	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸಮ್ಯೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨
ಮಾಹೇಶ್ವರ ದೀಕ್ಷಾವಿದಿ (೨ನಯ ಆವೃತ್ತಿ)	೧೨
ಶಿವಸೂತ್ರಸಿದ್ಧಾಂತದರ್ಪಣ	೧೨
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರು
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರು
ವೀರಶೈವರತ್ನ (೫ನೆಯ ಆವೃತ್ತಿ, ೬೦ ಮಹತ್ವದ ಫೋಟೋಗಳಿರುವವು)	೧॥ ರು
ಸಿದ್ಧಾಂತ ಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರು
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಪಟ್ಟದು)	೧ ರು
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರು
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರು
ವೀರಶೈವಸಿದ್ಧಾಂತಸುಧಾಕರ	೩ ರು
ಶಿವಾನುಭವಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರು
A brief life sketch of Pandit Sri Kashinatha Shastriji (*English*)	**4 A**
The Philosophical Aspect of Virasaivism (*English*)	**8 A**
Speeches by Pandit Shri Kashinatha Shastriji (*English*)	**12 A**
लिंगधारणचन्द्रिका (संस्कृत)	३
वीरशैवरत्न (मराठी)	१
महानारायणोपनिषत् (वीरशैवभाष्य–संस्कृत)	१
सिद्धान्तशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४
नन्दिकेश्वरकारिका (संस्कृत)	२

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ. ಗಳಿಗೆ ಮೇಲ್ಪ

ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ. ಗೆ ೪ ಆಣೆಯಂತೆ ಕಮೀಷನ್ ಕೊಡಲಾಗುವ

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

HISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೩೦ನೇ ಆಗಸ್ಟ್ ೧೯೪೩ [ಸಂಚಿಕೆ ೧೭

ದಾನಶೂರ ಶ್ರೀ ಸಿದ್ಧಯ್ಯನವರ ಸನ್ಮಾನ ಸಮಾರಂಭ ಹರಲಾಪುರ

ಸಿಗ್ಲಿ ನಿವಾಸಿಗಳಾದ ಕೂಡ್ಲಮಠದ ವೇ| ಸಿದ್ಧಯ್ಯ ರು ಪ|| ಬ್ರ|| ಶ್ರೀ ಗಂಗಾಧರಶಿವಾಚಾರ್ಯ ಯೋಗಿಗಳವರಿಂದ ಸ್ಥಾಪಿಸಲ್ಪಟ್ಟ ಶ್ರೀ ಮುಕ್ತಿ ದಿರ ಗುರುಕುಲಾಭಿವೃದ್ಧಿಗಾಗಿ ಇಪ್ಪತ್ತೈದು ೦೦೦) ಸಹಸ್ರ ರೂಪಾಯಿಗಳನ್ನು ಸಲ್ಲಿಸಿದ ತೋಷಕ್ಕಾಗಿ ಹರಲಾಪುರದ ನಿವಾಸಿಗಳು ಸದರಿ ನಶೂರರಿಗೆ ತಾ|| ೧೯ ೭ ೪೩ ನೇ ಸೋಮವಾರ ಕ್ಷ್ಮೇಶ್ವರ ನಿವಾಸಿಗಳಾದ ಶ್ರೀಮಂತ ಶಂಕರ ಗೌಡರು ಸಗೌಡರು ಬಹದ್ದೂರ ದೇಸಾಯಿ ಇವರ ಅಧ್ಯಕ್ಷತೆ ಲ್ಲಿ ಸನ್ಮಾನ ಸಮಾರಂಭವನ್ನು ನೆರವೇರಿಸಿದರು ಸ ಗ್ರಾಮವೆಲ್ಲವೂ ತಳಿರು ತೋರಣಗಳಿಂದಲಂಕರಿ ಟ್ಟಿದ್ದಿತಲ್ಲದೆ ಸಭಾಕಾರ್ಯಕ್ಕೋಸ್ಕರ ಸಭಾ ಂಟಪವು ಬಹಳ ಮನೋಹರವಾಗಿ ರಚಿಸಲ್ಪಟ್ಟಿದ್ದಿತು. ಗಳವರ ಮತ್ತು ಅಧ್ಯಕ್ಷರ ಹಾಗೂ ದಾನಶೂರರ ಗತ ಮೆರವಣಿಗೆಯು ವಾದ್ಯವೈಭವದೊಡನೆ ನೆರವೇ ಉತ್ಸವಾನಂತರ ಸಭೆಯು ಆರಂಭಿಸಲ್ಪಟ್ಟಿತು ದಿನ ಸಭೆಯ ಸ್ವಾಗತಾಧ್ಯಕ್ಷರಾದ ಮ| ರಾ|| ಚಪ್ಪ ಭಂಡಿವಾಡ ಇವರ ಸೂಚನೆಯ ಮೇರೆಗೆ ಕ್ಷರು ಅಧ್ಯಕ್ಷಸ್ಥಾನವನ್ನಲಂಕರಿಸಿದರು ಅನಂತರ ದಘೋಷಸ್ತೋತ್ರವಾದಮೇಲೆ ಪ್ರಮುಖರ ಭಾಷಣ ಮವು ಅನಂತರ ಅಧ್ಯಕ್ಷರ ಭಾಷಣವಾಯಿತು ಕೀಲಿ ಶ್ರೀಗಳವರು ಅನೇಕ ಶಾಸ್ತ್ರ ಪ್ರಮಾಣ ಂದಲೂ ಲೌಕಿಕ ಉದಾಹರಣೆಗಳಿಂದಲೂ ಸಮಯ ನುಸಾರವಾಗಿ ಉಪದೇಶಮಾಡಿದರು ಅನಂತರ ದಾನ ರರಿಗೆ ಹಾರ ತುರಾಯಿಗಳು ಸಮರ್ಪಿಸಲ್ಪಟ್ಟವು ದಿನ ಸಭಾಕಾರ್ಯಕ್ಕಾಗಿ ಆಗಮಿಸಿದ್ದ ಸರ್ಕಾರಿ ಕಾರಿಗಳಿಗೂ, ಸಭೆಯ ಪ್ರಮುಖರಿಗೂ ಸರ್ವರಿಗೂ ಪ್ರಹಾರಗಳು ಅರ್ಪಿಸಲ್ಪಟ್ಟನಂತರ ಮಹಾಮಂಗ ರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ

ದಾನಶೂರ ಶ್ರೀ ಸಿದ್ಧಯ್ಯನವರ ಸನ್ಮಾನ ಸಮಾರಂಭ ಚಂಚಲಿ

ಧಾರವಾಡ ಡಿ|| ವನಸಿಗ್ಲಿ ನಿವಾಸಿಗಳಾದ ಕೂಡ್ಲ ದ ವೇ|| ಶ್ರೀ ಸಿದ್ಧಯ್ಯನವರು ಶ್ರೀ ಮುಕ್ತಿ ಂದಿರ ಗುರುಕುಲಕ್ಕಾಗಿ ಪ|| ಬ್ರ|| ಶ್ರೀ ಗಂಗಾಧರ ಚಾರ್ಯಶಿವಯೋಗಿಗಳವರಿಗೆ ಇಪ್ಪತ್ತೈದು ೦೦೦) ಸಾವಿರ ರೂಪಾಯಿಗಳನ್ನು ಅತ್ಯಸಂತೋಷ ದ ಅರ್ಪಿಸಿದುದಕ್ಕಾಗಿ ಗದಗ ತಾ|| ಚಂಚಲಿ ಮದವರು ಸದರಿ ದಾನಶೂರರಿಗೆ (ತಾ||೧೫-೮-೪೩) ಭಾನುವಾರ ಮ|| ರಾ|| ಲಿಂಗಪ್ಪ ನೀಲಪ್ಪ ಶೆಟ್ಟಿ ಸುಕಾರ್ ಇವರ ಅಧ್ಯಕ್ಷತೆಯಲ್ಲಿ ಸನ್ಮಾನ ಸಭೆ ನ್ನು ನೆರವೇರಿಸಿದರು. ಅದಿನ ಸಭಾ ಮಂಟಪವು ತಳಿರು ತೋರಣಗಳಿಂದಲೂ, ಶ್ರೀ ಪಂಚಾಚಾರ್ಯರ ವಿಜಯ ಪತಾಕೆಗಳಿಂದಲೂ, ಮನೋಹರವಾಗಿ ಅಲಂಕರಿಸಲ್ಪಟ್ಟಿದ್ದಿತು ಮೊದಲು ಶ್ರೀ ದಾನಶೂರರ ಸ್ವಾಗತವಾಯಿತು ಅನಂತರ ಮುಕ್ತಿಮಂದಿರ ಗುರುಕುಲದ ವೈದಿಕ ವಿದ್ಯಾರ್ಥಿಗಳಿಂದ ವೇದಘೋಷವೂ, ಬಾಲಕರಿಂದ ದಾನಶೂರರ ಮನೋಹರವಾದ ಸ್ವಾಗತ ಪದ್ಯಪಠನವೂ ಆಯಿತು ಅಂದಿನ ಸಭೆಯ ಸ್ವಾಗತಾಧ್ಯಕ್ಷರಾದ ಶ್ರೀ ಪಟ್ಟಾಧ್ಯಕ್ಷ ತೊಟ್ಟಿಗವಾಡ ಇವರ ಸೂಚನೆ ಮೇರೆಗೆ ಅಧ್ಯಕ್ಷರು ಅಧ್ಯಕ್ಷಸ್ಥಾನವನ್ನಲಂಕರಿಸಿದರು ಅನಂತರ ರಿಟೈರ್ಡ್ ಜಮೇದಾರರೂ, ಸದರಿ ಗ್ರಾಮದ ಸ್ಕೂಲ್ ಮಾಸ್ತರರೂ, ವೇದ ಪಾಠಶಾಲಾಧ್ಯಾಪಕರಾದ ವೇ|| ಪಿ ಎಂ ಗಂಗಾಧರಶರ್ಮರವರೂ, ವೇ|| ಪಂ|| ಹರೀಶ್ವರಶಾಸ್ತ್ರಿಗಳವರೂ, ಹರಲಾಪುರದ ಸಾಮಬಾರ ಯಲ್ಲಪ್ಪನವರೂ, ಲಕ್ಷ್ಮೇಶ್ವರದ ಮಾಜಿನಶೆಟ್ಟಿ ಜೋಗಪ್ಪನವರೂ, ಇವರೇ ಮೊದಲಾದವರ ಭಾಷಣಗಳು ಒಂದೊಂದು ವಿಷಯದಲ್ಲಿ ಸ್ಫೂರ್ತಿದಾಯಕವಾಗಿ ಆದವು ಬಳಿಕ ಅಧ್ಯಕ್ಷರ ಭಾಷಣವಾಯಿತು ಆಮೇಲೆ ಶ್ರೀಗಳವರು ತಮ್ಮ ಅಮೋಘವಾಣಿಯಿಂದ ಧರ್ಮವೆಂದರೇನು? ದಾನವನ್ನು ಏಕೆ ಮಾಡಬೇಕು? ಧರ್ಮಕ್ಕೂ ಜನಗಳಿಗೂ ಇರತಕ್ಕ ಸಂಬಂಧವೇನು? ಎಂಬ ವಿಷಯದಲ್ಲಿ ಸರ್ವರಿಗೂ ಸಂತೋಷವಾಗುವಂತೆ ಶುಭ ಸಂದೇಶವನ್ನಿತ್ತರು ಅನಂತರ ದಾನಶೂರರಿಗೆ ಸನ್ಮಾನವು ಸಭೆಯ ಪರವಾಗಿ ಮಾಡಲ್ಪಟ್ಟಿತು ಅಂದಿನ ಸಭೆಗೆ ಗದಗ ತಾ|| ಮೆಹರ್ಬಾನ್ ಅಮಲ್ದಾರ್ ಸಾಹೇಬರವರೂ, ಶಿರಸ್ತೇದಾರರೂ ಇನ್ನೂ ಇತರ ಪ್ರಮುಖರೂ ಆಗಮಿಸಿದ್ದರು ಸರ್ವರಿಗೂ, ಗಂಧ ಪುಷ್ಪ ಪ್ರಸಾದ ವಿನಿಯೋಗವಾದನಂತರ ಮಹಾಮಂಗಳಾರತಿಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು

ಓರ್ವ ಪ್ರತ್ಯಕ್ಷದರ್ಶಿ

ಗುರುಮಹತ್ತ್ವ

ಸೊಲ್ಲಾಪುರದಲ್ಲಿರುವ ವೇ|| ವೀರಂತಯ್ಯಶಾಸ್ತ್ರಿಗಳ ಧರ್ಮಪತ್ನಿಯವರಾದ ಸೌ|| ದಾನಮ್ಮನವರು ಕಾಲರಾ ರೋಗದ ಬಾಧೆಯಿಂದ ಅತ್ಯಂತ ಪೀಡಿತರಾಗಿ ಅಂತ್ಯಾವಸ್ಥೆಯ ಚಿನ್ಹೆಗಳು ಕಂಡುಬಂದವು ಪರಸ್ಥಳದಲ್ಲಿದ್ದ ಅವರ ಅಣ್ಣ ಮತ್ತು ತಾಯಿಗೆ ತಂತಿಮಾಡಿ ಕರೆಯಿಸಿಕೊಂಡರು ಡಾಕ್ಟರ್ ಚಿಕಿತ್ಸೆಗಳು ಒತ್ತಾಯದಿಂದ ನಡೆದವು ಸ್ವಲ್ಪ ಎಚ್ಚರವಾದ ಮೇಲೆ ಸದರಿಯವರು ನಮ್ಮ ಗುರುಗಳಾದ ಶ್ರೀಬಾಲತಪಸ್ವಿಗಳ ಪಾದಾಂಬುವನ್ನು ತರಿಸಿ ನನಗೆ ಕುಡಿಸಿರೆಂದು ಆಗ್ರಹದಿಂದ ಹೇಳಿದ್ದನ್ನು ಕೇಳಿ ಅವರ ಪತಿಯು ಅದರಂತೆ ಮಾಡಲು ಸ್ವಲ್ಪಸ್ವಲ್ಪ ಚೇತರಿಸಿ ಗುಣೋನ್ಮುಖ ಚಿನ್ಹೆಗಳು ಕಂಡುಬಂದವು ಹಾಸ್ಪಿಟಲ್ಲಿನಲ್ಲಿ ಹಾಕಲು ಪೋಲೀಸರು ಬಂದರು ಸದರಿ ಬಾಯಿಯವರು " ನನಗೆ ಏನೂ ಆಗಿಲ್ಲ ನೀವು ಒಳಗೆ ಬರುವ ಕಾರಣವಿಲ್ಲವೆಂದು ಹಾಸಿಗೆಯಿಂದ ಎದ್ದು ಕುಳಿತುಕೊಂಡರು ಆಗ್ಗೆ ಅವರ ಮನೆಯವರು ಆನಂದಚಿತ್ತರಾಗಿ ಬಂದಂಥ ಪೋಲೀಸರನ್ನು ತಿರುಗಿ ಕಳುಹಿಸಿದರು 27 ನೆಯ ದಿವಸ ನಡೆಯುವದಕ್ಕೆ ಶಕ್ತಿ ಇಲ್ಲದಿದ್ದರೂ ವಾಹನದಲ್ಲಿ ಕುಳಿತು ಬಂದು ಅನುಷ್ಠಾನದ ಶಾಂತಿಸಮಾರಾಧನೆಯನ್ನು ಮಾಡಿಸಿದರು ಇದಲ್ಲವೇ ಪಾದಾಂಬುವಿನ ಮಹತ್ವ? ಅನುಷ್ಠಾನಶಾಂತಿಯ ದಿವಸ ಬೆಳಗ್ಗೆ 7 ಘಂಟೆಗೆ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕಗಣಾರಾಧನೆಯಾಯಿತು. ವೇ|| ವೀರಂತಯ್ಯನವರು ತಮಗಾದ ಸಂತೋಷಕ್ಕಾಗಿ ಪಂಚಾಚಾರ್ಯಪ್ರಭಾಪತ್ರಿಕೆಗೆ ಒಂದು ರೂಪಾಯಿಯನ್ನು ಸಮರ್ಪಿಸಿದರು

ಓರ್ವ ಗುರುಭಕ್ತ

ವೇ|| ಮಲ್ಲಿಕಾರ್ಜುನಾರಾಧ್ಯರ ಅಭಿನಂದನ

ಮೇಲ್ಕಂಡ ಮಹಾಶಯರು ಈ ಮೊದಲು ಲೋಕಮಾನ್ಯವಾದ ಶ್ರೀ ಪಂಚಾಚಾರ್ಯಪ್ರಭಾಪತ್ರಿಕೆಯಲ್ಲಿ ಲೌಕಿಕ ಹಾಗೂ ಪಾರಮಾರ್ಥಿಕ ವಿಷಯಗಳಿಂದ ಕೂಡಿದ ಮಹನೀಯರ ಹಿತೋಕ್ತಿಗಳೆಂಬ ಅಮೂಲ್ಯವಾದ ಲೇಖನಗಳನ್ನು ಮತ್ತು ಪ್ರಶ್ನೋತ್ತರರತ್ನಮಾಲಿಕೆ ಎಂಬ ಲೇಖನಗಳನ್ನು ಪ್ರಕಟಮಾಡುತ್ತಿದ್ದ ವಿಚಾರ ಪ್ರಭಾಪತ್ರಿಕೆಯ ವಾಚಕಮಹಾಶಯರಿಗೆಲ್ಲ ವೇದ್ಯವೇ ಇರುತ್ತದ

ಇವರು ಮಹನೀಯರ ಹಿತೋಕ್ತಿಗಳೆಂಬ ಲೇಖನಗಳನ್ನೆಲ್ಲ ಒಟ್ಟುಗೂಡಿಸಿ ಅದಕ್ಕೆ ಸದ್ಬೋಧರತ್ನಾವಳಿ ಎಂಬ ಪವಿತ್ರನಾಮವನ್ನಿಟ್ಟು ಪ್ರಕಾಶಪಡಿಸಿದ್ದಾರೆ ಸದರಿ ಪುಸ್ತಕವನ್ನು ವಾಚಕರು ಸಂಪೂರ್ಣವಾಗಿ ಓದಿನೋಡಿದರೆ ಎಂತಹ ಅಜ್ಞಾನಿಯು ಕೂಡ ಜ್ಞಾನಿಯಾಗುವುದರಲ್ಲಿ ಸಂಶಯವಿಲ್ಲ ಇವರು ಕಾರಣಾಂತರದಿಂದ ಕೆಲವು ಕಾಲ ಯಾವ ಲೇಖನಗಳನ್ನು ಪ್ರಕಟಮಾಡದೆ ಮೌನವಾಗಿದ್ದು ಈಗ ಪುನಃ ಲೇಖನಗಳನ್ನು ಪ್ರಕಟಮಾಡುತ್ತಿರುವುದು ಅತ್ಯಂತ ಸಂತೋಷವಾಗಿರುತ್ತದೆ ಇವರ ಯಥಾರ್ಥವಾದ ಲೇಖನಗಳನ್ನು ಪ್ರತಿಯೊಬ್ಬ ಮಾನವನು ಮನನಮಾಡಿಕೊಂಡು ಧನ್ಯರಾಗಬೇಕೆಂದಾಶಿಸುವ,

ಓರ್ವ ಲೇಖನಪ್ರೇಮಿ

ಪಾದಪೂಜಾಸಮಾರಂಭ

ಧಾರವಾಡ ಡಿ|| ಚಿಕ್ಕನರಗುಂದಗ್ರಾಮದಲ್ಲಿರುವ ಮ|| ರಾ|| ಸಪ್ಪಶೆಟ್ಟಿ ಬಸಪ್ಪನವರು ತಮ್ಮ ಗೃಹದಲ್ಲಿ ವಾರ್ಷಿಕ ಪದ್ಧತಿಯಂತೆ ಶ್ರಾವಣ ಶುದ್ಧ ಪ್ರತಿಪದದಿಂದ ಪಂಚಮಿಯವರೆಗೆ ಶ್ರೀ ಕೊಣ್ಣೂರು ಹಿರಿಯ ಮಠದ ಪಟ್ಟದಸ್ವಾಮಿಗಳವರ ಪಾದಪೂಜೆಯನ್ನು ವೈಭವದಿಂದ ನೆರವೇರಿಸಿದರು ಆ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೧ ರೂಪಾಯನ್ನು ಸಮರ್ಪಿಸಿದರು. ಶ್ರೀ ಜಗದಾಚಾರ್ಯರು ಸದರಿ ಬಸಪ್ಪನವರಿಗೆ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಹಾರೈಸುವ,

ಸಿದ್ದಪ್ಪ ಉಪ್ಪಿನ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಆಗಸ್ಟ್ ತಾ॥ ೩೦ನೆಯ ಸೋಮವಾರ

ಭಾರತೀಯರ ಅಧ್ಯಾತ್ಮಶಕ್ತಿ

ಪಾಶ್ಚಾತ್ಯದೇಶಗಳಲ್ಲಿ ಅಧ್ಯಾತ್ಮವಿಚಾರವು ಸಂಪೂರ್ಣವಾಗಿ ಕಂಡುಬರುವುದಿಲ್ಲ ಅಲ್ಲಿಯವರು ಉಳಿದ ಐಹಿಕಸುಖಸಾಧಕಗಳಾದ ವಿಚಾರಗಳಲ್ಲಿ ಪರಾಕಾಷ್ಠ ದಶೆಯನ್ನು ಹೊಂದಿರುತ್ತಾರೆ ಇವರಲ್ಲಿ ರೂಢಮೂಲವಾಗಿ ಬಂದಿರುವ ಕಲಾಕೌಶಲ್ಯಾದಿ ವಿದ್ಯೆಗಳನ್ನು ನಮ್ಮ ಭಾರತೀಯರು ನೂರಾರು ವರ್ಷಗಳವರೆಗೆ ಕಲಿತರೂ ಇವರಿಗಿರುವಷ್ಟು ಜ್ಞಾನವನ್ನು ಎಂದೂ ಸಂಪಾದಿಸಲಾರರು ಭಾರತೀಯರು ಇವರ ಅದ್ಭುತ ಕಾರ್ಯಗಳನ್ನು ನೋಡಿ ಆಶ್ಚರ್ಯಪಡಬೇಕಾಗಿದೆ ಇವರ ಇಹಲೋಕ ಸುಖಸಾಧನವಾದ ಕಾರ್ಯಕರಣಶಕ್ತಿಗೆ ಸಮಾನವಾದ ಶಕ್ತಿಯನ್ನಾಗಲಿ, ವಿಮಾಂಸುವ ಶಕ್ತಿಯನ್ನಾಗಲಿ ನಮ್ಮ ಭಾರತೀಯರು ಪಡೆಯುವರೆಂಬುದು ಗಗನಕುಸುಮಾಯಮಾನವೇ ಸರಿ! ಈ ವಿಷಯದಲ್ಲಿ ಭಾರತೀಯರು ಪಾಶ್ಚಾತ್ಯರ ಮೇಲ್ಪಂಕ್ತಿಯನ್ನು ಅನುಸರಿಸಬೇಕು ಇಂಥ ಐಹಿಕಸುಖಗಳನ್ನು ಪಡೆಯುವುದೊಂದೇ ಮಾನವ ಜನ್ಮದ ಗುರಿಯಲ್ಲ ಇವುಗಳೆಲ್ಲವೂ ಜಡಪದಾರ್ಥಗಳನ್ನು ಕುರಿತು ಪ್ರವರ್ತಿಸುವುವಲ್ಲದೆ ನಿತ್ಯಪದಾರ್ಥವಿಷಯಿಕವಾದ ಜ್ಞಾನವನ್ನು ಸಂಪಾದಿಸಬೇಕಾದರೆ ಅಧ್ಯಾತ್ಮಶಕ್ತಿಯನ್ನು ಪಡೆಯಬೇಕು ಜೀವಾತ್ಮನು ಜಗಚ್ಚಾಲಕನಾದ ಪರಮಾತ್ಮನಂತೆ ನಿತ್ಯನೂ ಅನಂತನೂ ಅನಾದಿಯೂ ಆಗಿದ್ದರೂ ಪಾಪಪುಣ್ಯಗಳಲ್ಲಾಸಕ್ತನಾಗಿ ಜಡದಲ್ಲಿ ಸಿಕ್ಕಿಬಿದ್ದ ಶಾಡಳಹುಳದಂತೆ ಕರ್ಮಬಂಧದಲ್ಲಿ ಸಿಕ್ಕಿಬಿದ್ದು ಅನಂತ ದುಃಖಗಳನ್ನನುಭವಿಸುತ್ತಿರುವನು

ಅಶ್ವ ಇವ ರೋಮಾಣಿ ವಿಧೂಯ ಪಾಪಂ ಚಂದ್ರ ಇವ ರಾಹೋರ್ಮುಖಾತ್ ಪ್ರಮುಚ್ಯ ಧೂತ್ವಾ ಶರೀರಂ ಅಕೃತಂ ಕೃತಾತ್ಮಾ ಬ್ರಹ್ಮಲೋಕಮಭಿಸಂಭವಾಮಿ ॥

ಕುದುರೆಗಳು ಕೂದಲನ್ನು ಕೊಡುವುವಂತೆ ಪಾಪರಾಶಿಯನ್ನೆಲ್ಲ ಒತ್ತರಿಸಿ ರಾಹುವಿನ ಬಾಯಿಯಿಂದ ತಪ್ಪಿಸಿಕೊಂಡ ಚಂದ್ರನಂತೆ ಜಡವಾದ ಶರೀರಸಂಬಂಧವನ್ನು ಆತ್ಯಂತಿಕವಾಗಿ ತಪ್ಪಿಸಿಕೊಂಡು ಹಾಲಿನಲ್ಲಿ ಹಾಲು ಬೆರೆದಂತೆ ಪರಮಾತ್ಮನ ಅಂಶಭೂತವಾದ ಜೀವನು ಆ ಪರಮಾತ್ಮನಲ್ಲಿಯೇ ಸೇರಿ ನಿತ್ಯಸುಖವನ್ನು ಪಡೆಯುವನು ಇದನ್ನೇ ಆಮುಷ್ಮಿಕ ಸುಖವೆಂದು ಹೇಳುತ್ತಾರೆ ಐಹಿಕಸುಖಕ್ಕೂ, ಆಮುಷ್ಮಿಕಸುಖಕ್ಕೂ, ಮೇರುಸರ್ಷಪದಷ್ಟು ವ್ಯತ್ಯಾಸವುಂಟು ಆಮುಷ್ಮಿಕಸುಖವು ನಿತ್ಯವಾದುದರಿಂದ ಅವಿನಾಶಿಯು ಪ್ರತಿಯೊಬ್ಬ ಮನುಷ್ಯನು ಹೊರಗಿರುವ ವಸ್ತುಸೌಂದರ್ಯವನ್ನು ನೋಡಿ ಮೋಹಿಸುತ್ತಾನಲ್ಲದೆ ಒಳಗೇನಿದೆಯೆಂಬ ಗುಟ್ಟನ್ನೇ ಅರಿಯನು ಅದರಲ್ಲಿ ಪಾಶ್ಚಾತ್ಯರಂತೂ ಹೊರಗಿರುವ ಜಡಪದಾರ್ಥಗಳ ರಹಸ್ಯವನ್ನು ಆಮೂಲಾಗ್ರವಾಗಿ ತಿಳಿದು ಕೈವಶಮಾಡಿಕೊಂಡು ಸುಖವಾಗಿ ಪ್ರಪಂಚದಲ್ಲಿ ಜೀವನಯಾತ್ರೆಯನ್ನು ಮಾಡುವುದರಲ್ಲಿ ಬಹುಗಟ್ಟಿಗರಾಗಿರುತ್ತಾರೆ ನಮ್ಮ ಭಾರತೀಯರು ಇದರಲ್ಲಿ ಹಿಂದುಳಿದಿದ್ದರೂ ಆತ್ಮನ ಗುಣಕರ್ಮಸ್ವಭಾವಾದಿಜ್ಞಾನಶಕ್ತಿರೂಪವಾದ ಅಧ್ಯಾತ್ಮಶಕ್ತಿಯನ್ನು ಪಡೆಯುವುದರಲ್ಲಿ ಬಲ್ಲಿದವರಾಗಿರುತ್ತಾರೆ. ಈ ವಿಷಯದಲ್ಲಿ ಪಾಶ್ಚಾತ್ಯರು ಭಾರತೀಯರನ್ನು ಜಯಿಸಲಾರರು ಇತ್ತೀಚೆಗೆ ನಮ್ಮ ಭರತಖಂಡದಲ್ಲಿ ನೆಲೆಯಾಗಿ ನಿಂತಿರುವ ಅಧ್ಯಾತ್ಮಶಕ್ತಿಯನ್ನು ಪಾಶ್ಚಾತ್ಯರು ಹೊಗಳುತ್ತ ಅದನ್ನು ಪ್ರಚಾರಮಾಡಲುದ್ಯುಕ್ತರಾಗಿದ್ದಾರೆ. ಪ್ರತಿಯೊಬ್ಬ ಜೀವನೂ ದುಃಖದಿಂದ ಬಿಡುಗಡೆಯಾಗಬೇಕೆಂದೂ ಸುಖವನ್ನು ಪಡೆಯಬೇಕೆಂದೂ ಹಂಬಲಿಸುತ್ತಾನೆ ನಾವು ಪ್ರಪಂಚದ ಪದಾರ್ಥಗಳನ್ನು ಹೇಗೆ ಹೇಗೆ ಬಯಸುತ್ತ ಹೋಗುವೆವೋ ಹಾಗೆ ಹಾಗೆ ದುಃಖವು ಹೆಚ್ಚುತ್ತ ಹೋಗುವುದು ಹೇಗೆ ಹೇಗೆ ಎಲ್ಲಾ ಪದಾರ್ಥಗಳಲ್ಲಿಯೂ ಜಿಹಾಸೆಹುಟ್ಟುವುದೋ ಹಾಗೆ ಹಾಗೆ ಸುಖವು ಪ್ರಾಪ್ತಿಯಾಗುವುದು ಇಂಥ ಸುಖವೇ ಪರಮಾನಂದರೂಪವಾದುದು. ಇಂಥ ನಿತ್ಯಸುಖರೂಪವಾದ ಮುಕ್ತಿಯು ವೈರಾಗ್ಯಬುದ್ಧಿಯಿಂದಲೇ ಜನಿಸುವದು ಸಮುದ್ರೋಪಮಾನವಾದ ವಿಷಯವಸ್ತುಗಳಲ್ಲಿ ಒಂದು ಪಸಿಯಷ್ಟು ಇಚ್ಛೆಯಂಕುರಿಸಿದರೂ ಮುಕ್ತಿಯು ದೂರವಾಗುವದು ಆದುದರಿಂದ ಮೋಕ್ಷಾಪೇಕ್ಷೆಯು ಮೊದಲು ಇಚ್ಛಾರಾಗದ್ವೇಷಾದಿಗಳನ್ನು ತ್ಯಜಿಸಬೇಕು ಇಂಥ ಶಕ್ತಿಯನ್ನು ಸಂಪಾದಿಸುವದಕ್ಕಾಗಿ ಭರತಖಂಡದಲ್ಲಿ ಜನ್ಮವೆತ್ತಿದ ಮಹಾಚಾರ್ಯರು ಬ್ರಹ್ಮಚರ್ಯಾದ್ಯಾಶ್ರಮಗಳನ್ನು ಕಲ್ಪಿಸಿರುವರು ಭಾರತೀಯರು ಪತ್ನೀಪುತ್ರಾದಿಗಳಲ್ಲಿಟ್ಟಿರುವ ವ್ಯಾಮೋಹವನ್ನು ಆಧ್ಯಾತ್ಮಿಕಶಕ್ತಿಬಲದಿಂದ ದೂರಮಾಡುವುದಕ್ಕಾಗಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಕಾಮಕ್ರೋಧಾದಿದುರ್ಗುಣಗಳಿಂದ ದೂರರಾಗಿ ಪರಶಿವನ ಉಪಾಸನೆಯಲ್ಲಿ ಆಸಕ್ತರಾಗಿ ಈ ಮಾಯಿಕವಾದ ದೇಹವನ್ನು ತ್ಯಜಿಸಿ ಪುನಃ ಬರದಂತೆ ಮಾಡಿಕೊಂಡರು. ಅನಂತಋಷಿಗಳು ನಿರ್ಜನಪ್ರದೇಶದಲ್ಲಿದ್ದು ತರಗೆಲೆಯನ್ನು ತಿಂದು ಜೀವಿಸುತ್ತ ಕಠಿನತರಗಳಾದ ತಪಸ್ಸನ್ನಾಚರಿಸಿದರು ಅನಂತ ರಾಜಾಧಿರಾಜರು ಧರ್ಮದಿಂದ ರಾಜ್ಯಭಾರಮಾಡಿ ರಾಜಭೋಗವನ್ನೆಲ್ಲಾ ಲೋಷ್ಟದಂತೆ ತ್ಯಜಿಸಿ ಪರಮಾತ್ಮಧ್ಯಾನಾಸಕ್ತರಾದರು ಇಂಥ ಇತಿಹಾಸಗಳು ನಮ್ಮ ಭರತಖಂಡದಲ್ಲಿ ಅಪರಿಮಿತಗಳಾಗಿರುತ್ತವೆ ಮುಕ್ತಿಸುಖವೇ ದೊಡ್ಡದೆಂದು ತೋರಿಸುವುದಕ್ಕಾಗಿ ಮೈತ್ರೇಯ್ಯುಪನಿಷತ್ತಿನಲ್ಲಿ ಒಂದು ದೊಡ್ಡ ಇತಿಹಾಸವು ಉಕ್ತವಾಗಿದೆ

ಬೃಹದ್ರಥೋ ವೈ ನಾಮ ರಾಜಾ ರಾಜ್ಯೇ ಜ್ಯೇಷ್ಠಂ ಪುತ್ರಂ ನಿಧಾಪಯಿತ್ವೇದಮಶಾಶ್ವತಂ ಮನ್ಯಮಾನಃ ಶರೀರಂ ವೈರಾಗ್ಯಮುಪೇತೋಽರಣ್ಯಂ ನಿರ್ಜಗಾಮ । ಸ ತತ್ರ ಪರಮಂ ತಪ ಆಸ್ಥಾಯಾದಿತ್ಯಮೀಕ್ಷಮಾಣ ಊರ್ಧ್ವಬಾಹುಸ್ತಿಷ್ಠತಿ ॥

ಬೃಹದ್ರಥನೆಂಬ ರಾಜನು ತನ್ನ ರಾಜ್ಯದಲ್ಲಿ ಜಿಹಾಸೆಯುಳ್ಳವನಾಗಿ ಪತ್ನೀಪುತ್ರಾದಿಗಳನ್ನೆಲ್ಲಾ ಅಸ್ಥಿರವಾದವುಗಳನ್ನಾಗಿ ಭಾವಿಸಿ ರಾಜ್ಯಕೋಶಗಳನ್ನು ತ್ಯಜಿಸಿ ಅರಣ್ಯವನ್ನು ಪ್ರವೇಶಿಸಿ ಅಲ್ಲಿ ತೀಕ್ಷ್ಣವಾದ ತಪಸ್ಸನ್ನಾಚರಿಸಿದನು. ಶಾಕಾಯನ್ಯ ಋಷಿಯು ಆತನ ತಪಸ್ಸಿಗೆ ಮೆಚ್ಚಿ ಪ್ರತ್ಯಕ್ಷನಾಗಿ ಆತನ ಇಷ್ಟಾರ್ಥವನ್ನು ಕೇಳಲು ಒಣಗಿದ ನೀರುಳ್ಳ ಭಾವಿಯೊಳಗೆ ಬಿದ್ದಿರುವ ಕಪ್ಪೆಯಂತೆ ಈ ಮಿಥ್ಯಸಂಸಾರದಲ್ಲಿ ನರಳುತ್ತಲಿದ್ದೇನೆ ನನ್ನನ್ನು ಉದ್ಧರಿಸು ನೀನೇ ನನಗೆ ಗತಿಯಲ್ಲದೆ ಮತ್ತಾರೂ ಇಲ್ಲವೆಂದು ಕೇಳಲಾಗಿ, ಆತನ ಭಕ್ತಿಗೆ ಮೆಚ್ಚಿ ಶಾಕಾಯನ ಋಷಿಯು ಸರ್ವದುಃಖದಿಂದ ತಪ್ಪಿಸಿ ಮುಕ್ತಿಯನ್ನು ಅನುಗ್ರಹಿಸಿದನು ಇವನ್ನೆಲ್ಲಾ ಪರಿಶೀಲಿಸಿದರೆ ಕ್ಷಣಿಕವಾದ ರಾಗದ್ವೇಷಾದಿಗಳಿಂದ ಭೂಯಿಷ್ಠವಾದ ಐಹಿಕ ಸೌಖ್ಯದಲ್ಲಿ ಮಗ್ನನಾಗಿ ದುಃಖಿಯಾಗುವದಕ್ಕಿಂತಲೂ ಪುನಃ ಮುಪ್ಪುಸಾವುಗಳಿಂದೊಡಗೂಡಿದ ಈ ದೇಹಸಂಬಂಧವನ್ನು ಸಂಪೂರ್ಣವಾಗಿ ತೊಲಗಿಸಿಕೊಂಡು ಪರಮಾತ್ಮನಲ್ಲಿ ಬೆರೆತು ನಿತ್ಯಾನಂದದಿಂದಿರುವದೇ ಜೀವಾತ್ಮನ ಪರಮಧ್ಯೇಯವಾಗಿದೆ ಆದುದರಿಂದ ಭಾರತೀಯರು ವಿಶೇಷವಾಗಿ ಐಹಿಕಸುಖಸಾಧನೆಯಲ್ಲಿ ಪ್ರಯತ್ನಪಡದೆ ಆಧ್ಯಾತ್ಮಿಕಶಕ್ತಿಸಂಪಾದನೆಯಲ್ಲಿಯೇ ತಮ್ಮ ಜೀವಮಾನವನ್ನೆಲ್ಲ ಕಳೆದಿರುತ್ತಾರೆ. ಇದು ಕೇವಲ ಬಾಹ್ಯಸುಖಾಪೇಕ್ಷಿಗಳಿಗೆ ವಿರುದ್ಧವಾಗಿ ಕಂಡರೂ ಜ್ಞಾನಿಗಳಿಗೆ ಮನೋಹರವಾಗಿಯೇ ಕಾಣುವುದರಲ್ಲಿ ಸಂಶಯವಿಲ್ಲ.

ಯುದ್ಧವಾರ್ತೆ.

ಶ್ರೀ ಚರ್ಚಿಲ್ಲರು ವಾಷಿಂಗ್‌ಟನ್ನಿಗೆ ಭೇಟಿಕೊಡುವರು

ರೂಜ್‌ವೆಲ್ಟರು ಒಟ್ಟಾವಾಕ್ಕೆ ತೆರಳಿದ ಮಾತ್ರಕ್ಕೇ ಬ್ರಿಟನ್-ಅಮೆರಿಕಾ ಸಂಗ್ರಾಮ ಸಮ್ಮೇಳನ ಮುಗಿದಂತಾಗಲಿಲ್ಲ. ಕೆನಡಾದಲ್ಲಿ ನಡೆಯುತ್ತಿದ್ದ ಮಾತುಕತೆ ಮುಗಿದಂತಾಯಿತು ಅಷ್ಟೆ. ಬ್ರಿಟನ್ನಿಗೆ ಹಿಂತಿರುಗುವ ಮುನ್ನ ಶ್ರೀ ಚರ್ಚಿಲ್ಲರು ರೂಜ್‌ವೆಲ್ಟರನ್ನು ವಾಷಿಂಗ್‌ಟನ್ನಿನಲ್ಲಿ ಮತ್ತೆ ಸಂಧಿಸುವ ಸಂಭವ ಹೆಚ್ಚಾಗಿದೆ. ಸಮ್ಮೇಳನವನ್ನು ಮುಂದುವರಿಸುವ ಸಿದ್ಧತೆಗಾಗಿ ವರ್ತಮಾನ ಶಾಖಾ ಸಚಿವರಾದ ಶ್ರೀ ಬ್ರೆಂಡನ್ ಬೇಕನ್‌ರವರು ಆಗಲೇ ತೆರಳಿದ್ದಾರೆ

ಇಟಲಿಯಲ್ಲಿ ಜರ್ಮನರ ೪ ಲಕ್ಷ ಸೈನಿಕರಿದ್ದಾರೆ

ಇಟಲಿಯಲ್ಲಿ ಈಗ ೪ ಲಕ್ಷ ಜರ್ಮನ್ ಯೋ
ದ್ಧಾರೆಂಬುದಾಗಿ ಸ್ವಿಸ್ ಸುದ್ದಿಗಾರರೊಬ್ಬರು ಅಂದಾ
ಹಾಕಿದ್ದಾರೆ

ರೂಜ್‌ವೆಲ್ಟ್-ಚರ್ಚಿಲ್‌ರಿಗೆ ತಂ

ಕಲ್ಕತ್ತ ಪೌರಸಭಾಧ್ಯಕ್ಷರಾದ ಶ್ರೀ ಸಯ್ಯ
ಬದ್ರುದ್ದೋ ಜಾಫರವರು ಕ್ವಿಬೆಕ್ ಸಮ್ಮೇಳನದಲ್ಲಿ
ರಾಗಿರುವ ಶ್ರೀಗಳಾದ ರೂಜ್‌ವೆಲ್ಟ್-ಚರ್ಚಿಲ್‌ರಿಗೆ
ಕೆಳಕಂಡ ತಂತಿಯನ್ನು ಹೊಡೆದಿದ್ದಾರೆ. "ವರ್ಣ
ಲಸಾಧ್ಯವಾದ ಆಹಾರ ಅಭಾವವು ಬಂಗಾಳ ಜಿಲ್ಲೆ
ತಲೆದೋರಿದೆ ಪ್ರಜಾಕೋಟಿಯು ದಿನೇ ದಿನೇ ಕ್ಷೀ
ವಾಗುತ್ತಾ ಬಂದು ಉಪವಾಸದಿಂದ ಸಾಯುತ್ತಿದ್ದಾ
ಮಾನವ ಕೋಟಿಯ ಹೆಸರಿನಲ್ಲಿ ಅಮೇರಿಕಾ, ಆಸ್ಟ್ರೇ
ಲಿಯಾ ಮತ್ತು ಇತರ ದೇಶಗಳಿಂದ ಆಹಾರ ದಿನ್ನಿ
ಯನ್ನು ತಕ್ಷಣ ರವಾನಿಸಿರಿ."

ಯೂರೋಪು ದಂಡಯಾತ್ರೆಗೆ ಸಿದ್ಧ

ಯೂರೋಪಿನ ಬೇರೆ ಬೇರೆ ಕಡೆಗಳಲ್ಲಿ ದಂಡಯಾ
ತ್ರೆ ನಡೆಸಲು ದಂಡನಾಯಕರನ್ನು ರೂಜ್‌ವೆಲ್ಟ
ಚರ್ಚಿಲ್ಲರೂ ಗೊತ್ತುಮಾಡಿದ್ದಾರೆ. ಬಾಲ್ಕನ್ಸ್‌ಗೆ ಪ
ತ್ತಿಗೆ ಹಾಕಲಿರುವ ಮಿತ್ರಸೇನೆಗೆ ಜ॥ ಐಸನ್ ಹವ
ದಂಡನಾಯಕರಾಗಿರಬಹುದು ಫ್ರಾನ್ಸ್ ಅಥ
ಹಾಲಂಡ್ ಮೇಲೆ ದಂಡಯಾತ್ರೆ ಹೋಗಲು ಬ್ರಿಟನ್ನಿ
ಬೇರೆ ಬೇರೆ ಸೇನಾನಿಗಳನ್ನು ಗೊತ್ತುಮಾಡಲಾಗಿ
ದ್ವಿತೀಯ ರಂಗ ಸ್ಥಾಪಿಸಬೇಕೆಂದು ಕೇಳುತ್ತಿರುವ ಎ
ಸ್ಟಾಲಿನ್ನರಿಗೆ ಮಿತ್ರದೇಶಗಳ ಕಾರ್ಯಕ್ರಮದಿಂದ ಖಂಡಿ
ತೃಪ್ತಿಯಾದೀತೆಂಬ ಭರವಸೆ ಇದೆ. ಫ್ರಾನ್ಸ್ ಅಥ
ಹಾಲೆಂಡ್ ಮೂಲಕ ಏಟುಹಾಕಲು ಮೊದಲು ಸಮು
ತೀರದ ಮೇಲೆ ಉಗ್ರವಾಗಿ ಬಾಂಬುಗಳನ್ನು ಸುರಿ
ಶತ್ರುಗಳನ್ನು ಹಣ್ಣು ಮಾಡಲಾಗುತ್ತದೆಂದೂ ಆಮೇ
ಸೈನಿಕರನ್ನು ತಂದಿಳಿಸಲಾಗುವದೆಂದೂ ಹೇಳಲಾಗಿದೆ

ದಂಡಯಾತ್ರೆಯ ಕಾಲ ಸಮೀಪಿಸಿದ

ಜಿಬ್ರಾಲ್ಟರಿನಲ್ಲಿ ಹಡಗುಗಳ ಓಡಾಟ ಅಸಾಧ್ಯವಾಗಿ
ಯೆಂದು ಜರ್ಮನ್ ರೇಡಿಯೋ ತಿಳಿಸಿತು ನಾ
ಭಾರಿ ನೌಕೆಗಳು ಸೈನಿಕರನ್ನು ತುಂಬಿಕೊಂಡು ಬಂ
ತೆರಳಿದವು ಇಟಲಿ ಮುತ್ತಿಗೆಯ ಮುಹೂರ್ತ ಇನ್ನೇ
ಹತ್ತಿರವಾದಂತೆಯೆ ಸಿಸಲಿ ಮುತ್ತಿಗೆಯ ವಿಧಾನ
ಲ್ಲಿಯೇ ಇಟಲಿ ಮುತ್ತಿಗೆಯೂ ನಡೆದೀತು, ಆ
ಹೆಚ್ಚು ಸೇನೆಗಳು ಭಾಗವಹಿಸುವುವು. ಇಟ
ಮುತ್ತಿಗೆಯನ್ನು ಉತ್ತರ ಆಫ್ರಿಕಾ ಮುತ್ತಿಗೆಗೆ ಹೋ
ಸಬಹುದು. ಮಿತ್ರಸೇನೆಗಳು ನೇರವಾಗಿ ಟೈಬರ್
ಮುಖದಲ್ಲಿಯೇ ಬಂದಿಳಿಯಬಹುದೆಂದೂ ಅಲ್ಲಿ
ರೋಂ ಕೇವಲ ೩೦ ಮೈಲಿ ಇದೆಯೆಂದೂ ಹೇಳ
ಗಿದೆ ಇಟಲಿಯನ್ನು ಮುತ್ತಿದಾಗಲೇ ಕಾರ್ಸಿಕಾ ಸಾ
ನಿಯಾಗಳ ಮೇಲೆ ಸಹ ಬೀಳಬಹುದು. ಅಲ್ಲಿಂ
ಶತ್ರುಪಡೆಗಳು ಇಟಲಿ ಮುತ್ತಿಗೆಗೆ ಅಡ್ಡಿ ಬರದ
ಮಾಡುವುದೇ ಇದರ ಉದ್ದಿಷ್ಟ ಕಾರ್ಸಿಕಾ ವಶವಾ
ಫ್ರಾನ್ಸಿನ ಪಶ್ಚಿಮ ತೀರದ ಮೇಲೆ ಸಹ ಮಿತ್ರಸೇ
ಗಳು ಸುಲಭವಾಗಿ ಬೀಳಬಹುದು. ಇಟಲಿ ಬ
ಇಕ್ಕಟ್ಟಾದ ನೇರವಾದ್ದರಿಂದ ಮಿತ್ರಸೇನೆಗಳು ಆ
ಮಾರ್ಗಸೌಕರ್ಯಗಳನ್ನು ಸುಲಭವಾಗಿ ಕತ್ತರಿಸಬ
ಮ ಉತ್ತರ-ದಕ್ಷಿಣಗಳಿಗೆ ಶತ್ರುಸೇನೆ ಓಡಾಡದ
ಮಾಡಬಹುದು. ಅಂತೂ ಈಗ ತೋರುವಂತೆ ಇಟ
ತೀರದಲ್ಲಿ ಒಂದೇ ಕಡೆ ಮಿತ್ರ ಸೈನಿಕರು ಇಳಿಯು
ದಿಲ್ಲ, ಹಲವು ಕಡೆಗಳಲ್ಲಿ ಇಳಿಯುವರು

ಇಟಲಿಯ ಪರಿಸ್ಥಿತಿ

ಇಟಲಿಯಲ್ಲಿ ಮಾ॥ ಬಡೊಗ್ಲಿಯೋ ಸರಕಾರ ದಿ
ದಿನಕ್ಕೆ ಪ್ರಜೆಗಳ ಪ್ರೀತಿ ವಿಶ್ವಾಸವನ್ನು ಕಳೆದುಕೊ
ತ್ತಿದೆ. ದೊಡ್ಡ ದೊಡ್ಡ ನಗರಗಳಲ್ಲಿ ಬಿಡಾ

ನೊಂದು ನಗರಕ್ಕೂ ಸಂಬಂಧವೇ ತಪ್ಪಿ ಹೋಗಿದು ರಿಂದ ಬಡೋಗ್ಲಿಯೋ ಸರಕಾರವನ್ನು ವಿರೋಧಿಸಲು ನನ್ನು ಒಂದುಗೂಡಿಸುವುದು ಅಸಾಧ್ಯವಾಗಿದೆ. ದೇಶ ಹದಗೆಟ್ಟಿದೆ! ಅವ್ಯವಸ್ಥೆ ಅಸಾಧ್ಯವಾಗಿದೆ. ಲಿಯ ಸಾವಿರಾರು ಜನ ಶಾಂತಿಗಾಗಿ ಕೂಗುತ್ತಿ ರೆ ಆದರೆ ಅವರೇನೂ ಮಾಡಲಾರದವರಾಗಿದ್ದಾರೆ ರ್ಮನ್ ಸೈನಿಕರು ಇಟಲಿಗೆ ಬಂದು ಧುಮುಕುತ್ತಲೇ ತ್ತರ ಪೋ ನದಿ ಉದ್ದಕ್ಕೂ ಅವರು ರಕ್ಷಣೆ ಏರ್ಪಾ ನನ್ನು ಪೂರ್ಣಗೊಳಿಸುತ್ತಿದಾರೆಂದು ಹೇಳಲಾಗಿದೆ

ಇಟಲಿ ಮೇಲೆ ಬಾಂಬು

ಕಳೆದವಾರ ಇಟಲಿಯ ರೈಲ್ವೆ ವ್ಯವಸ್ಥೆಯ ಮೇಲೆ ಗ್ರವಾದ ಮುತ್ತಿಗೆ ನಡೆಸಲಾಯಿತು ನೇಪಲ್ಸ್‌ನ ಮತ್ತು ಪೂರ್ವ ರೈಲ್ವೆ ಮಾರ್ಗಗಳೆರಡೂ ಕತ್ತ ರೋಗಿವೆ ಶತ್ರು ಫೈಟರುಗಳ ಪ್ರತಿಭಟನೆ ಅಸಾಧ್ಯ ತ್ತು ೨೫ ಶತ್ರುಫೈಟರುಗಳನ್ನು ಕೆಡವಲಾಯಿತು ಗಂಟೆಕಾಲ ಅತ್ಯುಗ್ರದ ಕದನ ನಡೆಯಿತು ಎಂದು ಳಲಾಗಿದೆ.

ರಷ್ಯಾ ಯುದ್ಧರಂಗ

ರಷ್ಯನರ ಬೇಸಿಗೆ ಮುತ್ತಿಗೆ ದಿನದಿನಕ್ಕೆ ಜೋರಾಗು ಖಾರಕೋವ್-ಡೊನೆಟ್ಸ್ ಬೇಸಿನ್‌ಗಳ ಮಧ್ಯೆ ಗ್ಗುತ್ತಿರುವ ರಷ್ಯನ್ ದಳಗಳು ೭,೫೦,೦೦೦ ಜರ್ಮ ಕರಿಗೆ ವಿಪತ್ತನ್ನುಂಟುಮಾಡಿವೆ ಸ್ಟಾಲಿನೋಗೆ ತ್ತು ಅಧಿಕವಾಗುತ್ತಿದೆ ಖಾರಕೋವ್ ಪಶ್ಚಿಮದಲ್ಲಿ ಕದನವಾಗುತ್ತಿದೆ ರಷ್ಯನ್ ವಿಮಾನಗಳು ಶತ್ರು ಕರ ಮೇಲೆ ಬಾಂಬಿನ ಮಳೆಗರೆಯುತ್ತಿವೆ ಮೊನ್ನೆ ರಾದ ಖಾರಕೋವ್ ಆಗಲೇ ರಷ್ಯನ್ ಮಿಲಿಟರಿ ದ್ರವಾಯಿತು. ಕೆಂಪು ಯೋಧರು ನಗರಗಮೂಲಕ ಂಗಕ್ಕೆ ಸೇರುತ್ತಿದಾರೆ ಅಂತೂ ಡೊನೆಟ್ಸ್ ನ್ ಕದನ ಚುರುಕಿನಿಂದ ಆರಂಭವಾಗಿದೆ

ಜರ್ಮನರು ಕೋಪರ್ನಹೇಗರ್ ಆಕ್ರಮಿಸಿದರು

ಜರ್ಮನರು ಡೆನ್ಮಾರ್ಕ್ ರಾಜಧಾನಿಯಾದ ಕೋಪ ಹೇಗನ್ ನಗರವನ್ನು ಸಂಪೂರ್ಣವಾಗಿ ಆಕ್ರಮಿಸಿ ಡೆನ್ಮಾರ್ಕಿನಲ್ಲಿ ಅತ್ಯಂತ ದೊಡ್ಡ ಅಲ್ಯೂಮಿನಂ ರ್ಖಾನೆಯನ್ನು ಹಲವರು ಸಂಚು ನಡೆಸಿ, ಕಳೆದ ನಾಶಮಾಡಿಬಿಟ್ಟರು ಆರುಮಂದಿ ಕ್ರಾಂತಿಕಾರರು ರ್ಖಾನೆಯನ್ನು ಪ್ರವೇಶಿಸಿ ಸಿಡಿಮದ್ದನ್ನು ಹಚ್ಚಿಬಿಟ್ಟ ದರಂತೆ ಅದರ ಸ್ಫೋಟನ ಇಡೀ ಜಿಲ್ಲೆಯನ್ನೇ ರಿಸಿತು ಅದೇರಾತ್ರಿ ಸೈನ್ಯಕ್ಕೆ ಬೇಕಾದ ಬಲೆ ನ್ನು ಮಾಡುವ ಇನ್ನೊಂದು ಕಾರ್ಖಾನೆ ನಾಶ ಯಿತು. ಜರ್ಮನಿಯ ಹಡಗೊಂದರಲ್ಲಿ ಸ್ಫೋಟನ ಅದು ನೀರುಪಾಲಾಯಿತು ಈ ಘಟನೆಗಳು ದ ಮೇಲೆ ಜರ್ಮನರು ತಮ್ಮ ಹಿಡಿತವನ್ನು ಬಲ ಸಿದ್ದಾರ

ಬರ್ಲಿನ ಮೇಲೆ ಭಾರಿ ಮುತ್ತಿಗೆ

ಕಳೆದ ೨೩ ನೆಯ ತಾರೀಖು ಅರ್ಧ ರಾತ್ರಿಗೆ ಸ್ವಲ್ಪ ಂಚೆ ಆರ್. ಎ ಎಫ್ ವಿಮಾನಗಳು ಬರ್ಲಿನ್ ಲೆ ಅತ್ಯುಗ್ರ ಧಾಳಿ ನಡೆಸಿದವೆಂದೂ, ೫೮ ಬಾಂಬರು ತ ಒಂದು ಫೈಟರೂ ಹಿಂತಿರುಗಲಿಲ್ಲವೆಂದೂ ಅಧಿ ಯುತವಾಗಿ ತಿಳಿಸಲಾಗಿದೆ ಬರ್ಲಿನ್ನಿನ ಕೇಂದ್ರ ಗದ ಮೇಲೆಯೇ ಮುತ್ತಿಗೆಯನ್ನು ಕೇಂದ್ರೀಕರಿಸ ತ್ತು. ೧೫ ನಿಮಿಷಗಳೊಳಗಾಗಿ ೭೦೦ ಟನ್ನಿಗಿಂತ ಬಾಂಬುಗಳನ್ನು ಹಾಕಲಾಯಿತು ಮುತ್ತಿಗೆ ಗಿಯುವ ವೇಳೆಗೆ ಹಲವು ಕಾರ್ಖಾನೆಗಳು ಭಯಂ ರಾಗಿ ಉರಿಯುತ್ತಿದ್ದವು ಒಂದು ಕ್ಷೇತ್ರದಲ್ಲಿ ಅಗ್ನಿ ಲೆ ಹೊರತು ಮತ್ತೇನೂ ಕಾಣುತ್ತಿರಲಿಲ್ಲ ಹಿಂತಿರು ಬ್ರಿಟಿಷ್ ವೈಮಾನಿಕರು ೨೦೦ ಮೈಲಿ ದೂರದಲ್ಲಿ ಬರ್ಲಿನ್ನಿನ ಜ್ವಾಲೆಯನ್ನು ಕಂಡರು ಸಂಗ್ರಾಮವು ಭವಾದಮೇಲೆ ಇಂತಹ ಉಗ್ರ ಮುತ್ತಿಗೆ ಎಂದೂ ದಿರಲಿಲ್ಲ. ಇಂತಹ ಮುತ್ತಿಗೆ ನಡೆದೀತೆಂದು ಈಗ ವು ವಾರಗಳಿಂದ ಜರ್ಮನರು ಸಿದ್ಧತೆ ಮಾಡಿಕೊಳ್ಳುತ್ತಲೇ ಇದ್ದರು ಹ್ಯಾಂಬರ್ಗಿನ ನೆನಪಾಗಿ ಬರ್ಲಿನ್ ನಿವಾಸಿಗಳೆಲ್ಲ ಕಂಗೆಟ್ಟರು ೭ ದಿನ ಹಗಲು ರಾತ್ರಿ ಹ್ಯಾಂಬರ್ಗ್ ಮೇಲೆ ಆರ್ ಎ ಎಫ್. ವಿಮಾನಗಳು ಮುತ್ತಿಗೆ ನಡೆಸಿ, ನಗರವನ್ನೆಲ್ಲ ನಾಶ ಮಾಡಿದ್ದವು

೧೫ನೇ ವಯಸ್ಸಿನಲ್ಲಿ ಪದವೀಧರಳಾದ ಮಹಿಳೆ

ತ್ರಿಪುರಿ ಸಂಸ್ಥಾನದ ಪ್ರಧಾನ ಆರೋಗ್ಯ ಅಧಿಕಾರಿ ಕ್ಯಾಪ್ಟನ್ ಜೆ ಎಂ ಘೋಷ್‌ರ ಪುತ್ರಿ ಶ್ರೀಮತಿ ಮಣಿಘೋಷ್ ಎಂಬ ಮಹಿಳೆಯು ತನ್ನ ೧೫ನೆ ವರ್ಷದಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯದಲ್ಲಿ ಬಿ ಎ ಡಿಗ್ರಿಯನ್ನು ಪಡೆದಳು ಇದುವರೆವಿಗೂ ಯಾರೂ ಮಾಡದಂತಹ ಅಪ್ರತಿಮ ಕಾರ್ಯವನ್ನು ಈಕೆ ಮಾಡಿದ್ದಾಳೆ

ಕಲ್ಕತ್ತೆಯ ಅನ್ನಕ್ಷಾಮದ ದುರಂತ ದೃಶ್ಯ

ಕಲ್ಕತ್ತೆಯಲ್ಲಿ ಅನ್ನವಿಲ್ಲದೆ ನೂರಾರು ಜನ ಹಸಿದು ಬೀದಿಗಳಲ್ಲಿ ಬಿದ್ದು ಸಾಯುತ್ತಿದಾರೆ ಮಾನವನಿರ್ಮಿತ ಕ್ಷಾಮ ದಿನಕ್ಕೆ ನೂರು ಜನರ ಬಲಿ ತೆಗೆದುಕೊಳ್ಳುತ್ತಿದೆ ಹಾಗೆ ಸತ್ತವರ ಎಲುಬು ಬೀದಿಗಳಲ್ಲೇ ಬಿದ್ದು ಒಣಗುತ್ತಿದೆ ಕನಸಿನಲ್ಲೂ ಕಾಣಲಾಗದ ಘೋರದೃಶ್ಯ ಕಲ್ಕತ್ತೆಯಲ್ಲಿ ದಿನದಿನವೂ ಕಾಣುತ್ತಿದೆ ಕರಾಳ ಕಾಲನ್ನು ತನ್ನ ನಾಟಕ ವಾಡುತ್ತಿದಾನೆ ಆ ರುದ್ರನಾಟಕದ ಒಂದೊಂದು ದೃಶ್ಯವಿದು:

ವಿಶಾಲವಾದ ರಸ್ತೆಯಲ್ಲಿ ಯಾರೋ ಒಂದು ಎಂಜಲು ಎಲೆ ಬಿಸಾಡಿದರು ಎಲೆಗೆ ನಾಲ್ಕು ಅಗುಳು ಅನ್ನ ಮೆತ್ತಿಕೊಂಡಿತ್ತು ಹಸಿದು ಮಲಗಿದ್ದ ಹುಡುಗನೊಬ್ಬ ಗಬಕ್ಕೆಂದು ಅದಕ್ಕೆ ಕೈಹಾಕಿದ ಅಷ್ಟರಲ್ಲೇ ಹಸಿದ ನಾಯಿಯೊಂದು ತನ್ನ ಪಾಲಿಗೆ ಇವನು ಕೈಹಾಕಿದನಲ್ಲಾ ಎಂದು ಹುಲಿಯಂತೆ ಇವನ ಮೇಲೆ ಹಾರಿಬಿತ್ತು ಸರಿ, ಹಸಿದ ಹುಡುಗನಿಗೂ ಹಸಿದ ನಾಯಿಗೂ ಎಂಜಲೆಲೆಯ ಅನ್ನಕ್ಕಾಗಿ ಹೋರಾಟವಾರಂಭವಾಯಿತು ಹುಡುಗ ಸೋತು ನೆಲಕ್ಕುರುಳಿದ ಗೆದ್ದ ನಾಯಿ ಅನ್ನ ತಿಂದು ಹೋಯಿತು ಯಾರೋ ಗಾಯಗೊಂಡ ಇವನನ್ನು ಆಸ್ಪತ್ರೆಗೆ ಸೇರಿಸಿದರು. ಇವನ ಸ್ಥಿತಿ ವಿಷಮವಾಗಿದೆ ನಮ್ಮಂಥ ಹಾಲು ತುಪ್ಪದ ಹೊಳೆ ಹರಿವ ನಾಡ!

ಆಹಾರ ಶಾಖಾಧಿಕಾರಿಗಳ ಭಾಷಣ

೨೪ನೆಯ ತಾರೀಖಿನ ದಿವಸ ಬೆಂಗಳೂರಲ್ಲಿ ಆಹಾರ ಶಾಖಾಧಿಕಾರಿಗಳಾದ ಶ್ರೀ ಎಸ್ ನಾರಾಯಣರಾಯರು 'ಇಂದಿನ ಆಹಾರ ಪರಿಸ್ಥಿತಿ'ಯ ಬಗ್ಗೆ ಭಾಷಣ ಮಾಡಿದರು ಅವರು ತಮ್ಮ ಭಾಷಣದಲ್ಲಿ ಯುದ್ಧಾರಂಭವಾದಾಗಿನಿಂದ ಆಹಾರ ಪರಿಸ್ಥಿತಿ ಹೇಗೆ ಮಾರ್ಪಾಡಾಗುತ್ತಾ ಬಂದಿತೆಂಬುದನ್ನು ವಿವರಿಸಿದರು ಸಂಸ್ಥಾನದಲ್ಲಿ ಸಾಕಾದಷ್ಟು ರಾಗಿ ಬೆಳೆಯುತ್ತಿದೆಯೆಂದೂ ಆದರೆ ಅಕ್ಕಿಗೆ ಅಭಾವವಿದೆಯೆಂದೂ ಸರಕಾರದವರು ಸರಬರಾಜು ಕ್ಷೇತ್ರಗಳನ್ನು ಮುಂಚೆ ವಿಂಗಡಿಸಿದರೆಂದೂ ಆ ನಂತರ ಹೊರಗೆ ಕಳ್ಳತನದಿಂದ ಹೋಗುತ್ತಿದ್ದುದನ್ನು ತಡೆಯಲು ನಿಖರ ಕಾರ್ಯಕ್ರಮ ಕೈಗೊಂಡರೆಂದೂ ಹೇಳಿ ೫೦ ೬೦ ಸಾವಿರ ಪಲ್ಲ ಜೋಳವನ್ನು ಚಿತ್ರದುರ್ಗದಿಂದ ಮೈಸೂರಿಗೆ ಸಾಗಿಸಿಕೊಂಡು ಹೋಗಿ ಅದನ್ನು ಒಬ್ಬರು ಕೊಳೆಯುಂತಹಟ್ಟಿಗೆ ಒಯ್ದರೆಂಬ ಸಂಗತಿಯನ್ನು ತಿಳಿಸಿದರು ಬೆಂಗಳೂರಿಗೆ ೧೨,೦೦೦ ಪಲ್ಲ ಅಕ್ಕಿ ಬೇಕೆಂದೂ, ಕೋಲಾರಕ್ಕೆ ೨೨,೦೦೦ ಪಲ್ಲ ಅಕ್ಕಿ ಬೇಕೆಂದೂ ಹೋದ ತಿಂಗಳು ಕೊಟ್ಟಷ್ಟು ಅಕ್ಕಿಯನ್ನು ಯಾವ ತಿಂಗಳಲ್ಲೂ ಕೊಡದಿದ್ದರೂ ಜನರ ಹಾಹಾಕಾರ ವಿಪರೀತವಾಗಿತ್ತೆಂದೂ, ಸೊಸೈಟಿಯವರು ವರ್ತಕರು ಅನ್ಯಾಯ ಮಾಡಿದ್ದಾರೆಂಬ ದೂರ ಬಲವಾಗಿದೆ ವರ್ತಕರ ಮೇಲೆ ತಮಗೆ ನಂಬಿಕೆಯಿಲ್ಲವೆಂದೂ, ಸರ್ಕಾರವೇ ಡಿಪೋಗಳ ಮೂಲಕ ಜನರಿಗೆ ಆಹಾರ ಒದಗಿಸಬೇಕೆಂದೂ ಹೇಳಿದ್ದರ ಮೇಲೆ ಸರ್ಕಾರಿ ಡಿಪೋಗಳನ್ನು ಹೆಚ್ಚಾಗಿ ತೆರೆಯಲು ಪ್ರಾರಂಭಿಸಿದುದಾಯಿತೆಂದೂ ಈಗ ೨೬ ಸೊಸೈಟಿ, ೫೫ ಸರ್ಕಾರಿ ಡಿಪೋ ಬೆಂಗಳೂರಲ್ಲಿವೆಯೆಂದೂ, ಇನ್ನೂ ೬೦ ಡಿಪೋಗಳವರೆಗೂ ಸ್ಥಾಪಿಸಿ ನೂಕಲು ನುಗ್ಗಾಟವನ್ನು ನಿವಾರಿಸಲು ಒಂದೊಂದು ಡಿಪೋಕ್ಕೆ ೪೦೦ ೫೦೦ ರೇಷನ್ ಕಾರ್ಡುಗಳನ್ನು ಹಂಚಿ ಅಲ್ಲಿ ಜನಗಳಿಗೆ ಅವಶ್ಯಕವಾದಂಥ ಬೇಳೆ, ಸಕ್ಕರೆ, ಅಕ್ಕಿ, ರಾಗಿ, ಸೀಮೆಎಣ್ಣೆ ಮಾರಲು ಅನುಕೂಲಪಡಿಸಲಾಗುವುದೆಂದೂ ಒಳ್ಳೆ ಅಕ್ಕಿ ಸಿಗುವದಿಲ್ಲವೆಂದು ದೂರು ಬಂದಿದೆ ವಾಸ್ತವವಾಗಿ ಒಳ್ಳೆ ಅಕ್ಕಿ ಶೇಕಡಾ ೬೮ ರಷ್ಟು ಮಾರಾಟವಾಗುತ್ತಿದೆಯೆಂದೂ ಶೇಕಡಾ ೩೨ ಮಾತ್ರ ಸಾಧಾರಣವಾದುದೆಂದೂ ನುಡಿದರು ಬೇಳೆ ಶೇಕಡ ೬೦ ರಷ್ಟು ಮಾತ್ರ ಸಂಸ್ಥಾನದಲ್ಲಿ ಬೆಳೆಯುವುದೆಂದೂ ಉಳಿದುದು ಹೊರಗಿನಿಂದಲೇ ಬರಬೇಕೆಂದೂ ಗೋಧಿಹಿಟ್ಟು, ರವೆ ಹೊರಗಿನಿಂದಲೇ ಬರಬೇಕೆಂದೂ ಸರಕಾರವು ಎಲ್ಲವನ್ನೂ ಪರ್ಯಾಲೋಚಿಸಿದೆಯೆಂದೂ ಬಟ್ಟೆಯ ಹಕೋಟೆಯಲ್ಲಿಯೂ ಪ್ರಜೆಗಳು ಭ್ರಾತೃಭಾವದಿಂದ ವರ್ತಿಸಬೇಕೆಂದೂ ಸರಕಾರ ಏನು ಯೋಜನೆ ಮಾಡಿದರೂ ಸಾರ್ವಜನಿಕರ ಸಹಕಾರವಿಲ್ಲದಿದ್ದರೆ ಅದು ಫಲಕಾರಿಯಾಗುವುದಿಲ್ಲವೆಂದೂ ಹೇಳಿದರು ಅನಕ್ಷರಸ್ಥರ ಕಾರ್ಡಿನಲ್ಲಿ ೧೫ ಸೇರು ಇದ್ದರೆ ವರ್ತಕರು ಕೆಲವರು ೯ ಸೇರು ಕೊಟ್ಟು ಮಿಕ್ಕಿದ್ದನ್ನು ದಾಸ್ತಾನು ಮಾಡುತ್ತಿರುವುದನ್ನು ಕೆಲವರು ಭಯದಿಂದ ೧೨ ಆಣೆ ೧ ಬಾಗೆ ೧ ಸೇರಿನಂತೆ ಅಕ್ಕಿಕೊಂಡು ಕೂಡಿಟ್ಟು ಇರುವುದನ್ನು ವರ್ಣಿಸಿದರು ಸರಕಾರವು ಎಲ್ಲ ತರವಾದ ಪರಿಸ್ಥಿತಿಗೂ ಸಿದ್ಧವಿರುವುದೆಂದೂ ಭಯಪಡಬೇಕಾದ ಅವಶ್ಯಕತೆ ಏನೂ ಇಲ್ಲವೆಂದೂ ಎಲ್ಲವನ್ನೂ ಕೂಲಂಕಷವಾಗಿ ಸರಕಾರ ವಿಮರ್ಶಿಸುತ್ತಿರುವುದೆಂದೂ ಹೇಳಿದರು

ಕಲ್ಕತ್ತಾ ಸಂಸ್ಕೃತ ಪರೀಕ್ಷೆಯಲ್ಲಿ ಉತ್ತೀರ್ಣರಾದ ಸೊಲ್ಲಾಪುರಮಠದ ಸಂಸ್ಕೃತ ಪಾಠಶಾಲೆಯ ವಿದ್ಯಾರ್ಥಿಗಳು

ಕಾವ್ಯತೀರ್ಥಪರೀಕ್ಷೆಯಲ್ಲಿ

ಗುರುಪಾದಶಿವಾಚಾರ್ಯ ಮುಲ್ಲೂರು.
ಸಿದ್ಧರಾಮಶಿವಾಚಾರ್ಯ ರೌಡಕುಂದಿ
ಮೃತ್ಯುಂಜಯಶಿವಾಚಾರ್ಯ ಕುರವತ್ತಿ
ವೀರೇಶ್ವರಶರ್ಮಾ ಕೋರವಾರ
ಕಾಶೀನಾಥಶರ್ಮಾ ಗೊಡಚಿ

ಕಾವ್ಯ ಮಧ್ಯಮದಲ್ಲಿ

ಗುರುಪಾದಶರ್ಮಾ ಸೂರಕೋಡ

ಕಾವ್ಯ ಆದ್ಯದಲ್ಲಿ

ಚನ್ನಬಸವಶರ್ಮಾ ಅಲಗಿ
ಚನ್ನವೀರಶರ್ಮಾ ನಾಗಣಸೂರು
ಗಂಗಾಧರಶರ್ಮಾ ನೀಲಗುಂದ

ಸ್ವೀಕಾರ

ಕೊಡಗಿನಲ್ಲಿರುವ ನೂರಂಬಾಡಿ ಮಠದ ಶ್ರೀಮಾನ್ ಶಾಂತಮಲ್ಲಪ್ಪನವರು ಪ್ರಭಾಪ್ರೋತ್ಸಾಹಕ್ಕಾಗಿ 10 ರೂಪಾಯಿಗಳನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಧಾರವಾಡ ಜಿ॥ ಚಿಕ್ಕನರಗುಂದಗ್ರಾಮದಲ್ಲಿರುವ ಮ॥ ರಾ॥ ಸಪ್ಪಣ್ಣ ಬಸಪ್ಪನವರು ತಮ್ಮ ಗೃಹದಲ್ಲಿ ನೆರವೇರಿದ ಪಾದಪೂಜಾ ಸಮಾರಂಭದಲ್ಲಿ ಸಮರ್ಪಿಸಿದ 1 ರೂಪಾಯಿಯು ಕೊಣ್ಣೂರು ಹಿರಿಯಮಠದ ಪಟ್ಟದ ಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಸೊಲ್ಲಾಪುರದಲ್ಲಿರುವ ವೇ॥ ನೀಲಕಂಠಯ್ಯಶಾಸ್ತ್ರಿಗಳ ಧರ್ಮಪತ್ನಿ ಸೌ॥ ದಾನಮ್ಮನವರಿಗೆ ಪ್ರಾಪ್ತವಾಗಿದ್ದ ಕಾಲರಾ ರೋಗವು ಶ್ರೀಗುರುವಿನ ಅನುಗ್ರಹದಿಂದ ಗುಣವಾದ ಸಂತೋಷಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಸೌ॥ ಬಾಗೀರಥೀಬಾಯಿಯವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಆತ್ಮಶಕ್ತಿಯ ಪ್ರಾಶಸ್ತ್ಯ

ಲೇ — ಮಲ್ಲಿಕಾರ್ಜುನಾರಾಧ್ಯ ರಾಣೇಬೆನ್ನೂರು ವಕೇಮಠ,
ಮುದೇನೂರು.

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಆತ್ಮಶಕ್ತಿಯೆಂದರೇನು? ಆತ್ಮ ಶಬ್ದಕ್ಕೆ ದೇಹವೆಂದೂ ಅರ್ಥವನ್ನು ಮಾಡಬಹುದಾದರೂ ಇಲ್ಲಿ ಆ ಅರ್ಥಕ್ಕೆ ಪ್ರಾಧಾನ್ಯವಿಲ್ಲ ಏಕೆಂದರೆ ದೇಹವು ಮನಸ್ಸಿಗೆ ಅಧೀನವಾದದ್ದು, ಅಂದರೆ ಮನಸ್ಸಿನ ಆಜ್ಞೆಯಾದಮೇಲೆಯೇ ಶರೀರವು ಕಾರ್ಯೋನ್ಮುಖವಾಗುವದು ಸ್ವತಂತ್ರವಾಗಿ ಪ್ರವರ್ತಿಸುವ ಯೋಗ್ಯತೆ ಅದಕ್ಕೆ ಇಲ್ಲದ್ದರಿಂದ ದೇಹದ್ದೇನೂ ಮಹತ್ವವಲ್ಲ ಆದ್ದರಿಂದ ಇಲ್ಲಿ ಆತ್ಮಶಬ್ದಕ್ಕೆ ಮನಸ್ಸಂಬಂಧವನ್ನು ಮಾಡಿಕೊಳ್ಳುವದು ವಿಹಿತವು ಆತ್ಮಶಕ್ತಿಯೆಂದರೆ ಮನಸ್ಸಿನ ಅಥವಾ ಬುದ್ಧಿಯ ಶಕ್ತಿಯೆಂದರ್ಥವು ಚಂಚಲವಾಗಿರುವದೇ ಮನಸ್ಸಿನ ಸ್ವಭಾವ ಆ ಚಾಂಚಲ್ಯವನ್ನು ತಪ್ಪಿಸಿ ಯುಕ್ತಾಯುಕ್ತ ವಿವೇಕ ಸ್ವರೂಪವಾದ ಬುದ್ಧಿಯ ಆಜ್ಞೆಯೊಳಗೆ ಮನಸ್ಸನ್ನಿಟ್ಟು ಅದನ್ನು ಏಕಮುಖವಾಗಿ ಮಾಡಿದರೆ ಆಗ ಆ ಮನಸ್ಸಿಗೊಂದು ಬಗೆಯ ವಿಲಕ್ಷಣ ಸಾಮರ್ಥ್ಯವು ಬರುವದು ಉಳಿದ ಎಲ್ಲರೂ ಕೈಸೋತು ಬಿಟ್ಟ ಕಾರ್ಯಗಳಾದರೂ ಆ ಮನಸ್ಸಿಗೆ ಕರತಲಾಮಲಕವಾಗುವವು ಒಮ್ಮೆ ವಿಚಾರ ಪೂರ್ವಕವಾಗಿ ಯೋಗ್ಯವೆಂದು ನಿಶ್ಚಯಿಸಿ ಹಿಡಿದ ಕೆಲಸಕ್ಕೆ ಸ್ಥಿರ ಮನಸ್ಸನ್ನು ನಿಯೋಗಿಸಿದರೆ ಅರುಣೋದಯದಿಂ ಅಂಧಕಾರದಂತೆ ಸ್ಥಿರ ಮನಸ್ಸಿನ ಪ್ರಭಾವದಿಂದಲೇ ಅಡಚಣೆಗಳೆಲ್ಲಾ ಅಡ್ಡದಾರಿಯನ್ನು ಹಿಡಿದು ಹೋಗುವವು ಆತ್ಮಶಕ್ತಿ ಪ್ರಭಾವವುಳ್ಳವರ ಜಾಜ್ವಲ್ಯಮಾನವಾದ ನೇತ್ರದೀಪ್ತಿಯ ಮುಂದೆ ಶರೀರ ಶಕ್ತಿಯು ಮತ್ತು ಇತರ ಉಪಕರಣ ಶಕ್ತಿಗಳ ಬಿನ್ನಾಣವೆಲ್ಲಾ ಬಿರುಗಾಳಿಯಿಂದ ತರಗೆಲೆಗಳಂತೆ ಹಾರಿ ಹೋಗುವದು ಕೆಚ್ಚೆದೆಯವರ ಮುಂದೆ ಬರೀ ಶರೀರದ ಪುಷ್ಟಿಯವರೆಲ್ಲಾ ಎದೆಯೊಡೆದು ಬೀಳುವರು ಆದಕಾರಣ ಆತ್ಮಶಕ್ತಿಗೆ ಪ್ರಾಶಸ್ತ್ಯವು ಹೆಚ್ಚು

ಆತ್ಮಶಬ್ದಕ್ಕೆ ಇನ್ನೂ ಹೆಚ್ಚಿನ ಅರ್ಥವನ್ನು ಮಾಡುವದಕ್ಕೂ ಅವಕಾಶವುಂಟು ಅದೇನೆಂದರೆ, ನಮ್ಮ ಮನಸ್ಸಿಗೂ ಬುದ್ಧಿಗೂ ಸಹ ಸಾಮರ್ಥ್ಯವನ್ನು ಕೊಡುವಂಥ ನಮ್ಮ ಜೀವಕಳೆಯೆಂದೂ ಆತ್ಮಶಬ್ದಕ್ಕೆ ಅರ್ಥವಾಗುವದು ಆದ್ದರಿಂದ ಆತ್ಮಶಕ್ತಿಯೆಂದರೆ ಜೀವದ ಸಾಮರ್ಥ್ಯ ಅದನ್ನು ನಾವು ಹೆಚ್ಚಿಸಿಕೊಳ್ಳುವದು ಅತ್ಯಂತ ಶ್ರೇಯಸ್ಕರವಾದದ್ದು ಜೀವಶಕ್ತಿಯ ಪರಿಪುಷ್ಟತೆಗೆ ಒಂದೇ ಒಂದುಪಾಯವಿರುವದು ಅದಾವುದೆಂದರೆ ಪರಮಾತ್ಮನ ಧ್ಯಾನ ಪರಮಾತ್ಮನು ಜೀವಸ್ವರೂಪಕ್ಕೆ ಕೂಡ ಆಧಾರಭೂತನಾದಂಥವನು ಜೀವನಿಗೇನಾದರೂ ಸಾಮರ್ಥ್ಯವು ಬಂದಿದ್ದರೆ ಅದು ಈಶ್ವರಾನುಗ್ರಹದಿಂದಲೇ ಹೊರತು ಬೇರೆ ಅಲ್ಲ ಪರಮಾತ್ಮನು ಸರ್ವಸಮರ್ಥನೆಂದು ಶಾಸ್ತ್ರಗಳು ಉದ್ಘೋಷಿಸುವವು ಲೀಲಾಮಾತ್ರದಿಂದ ಅಖಂಡ ಬ್ರಹ್ಮಾಂಡದ ಸೃಷ್ಟಿ ಸ್ಥಿತಿ ಸಂಹಾರಗಳನ್ನು ಮಾಡುವಂಥ ಪರಮಾತ್ಮನ ಶಕ್ತಿಯನ್ನು ಹೇಳತಕ್ಕದ್ದೇನಿರುವದು? ಜೀವನು ಎಷ್ಟೆಷ್ಟು ಪ್ರೇಮವಿಶೇಷದಿಂದ ಆ ಪರಮಾತ್ಮನನ್ನು ಧ್ಯಾನಿಸುವನೋ ಅಷ್ಟಷ್ಟು ಪರಮಾತ್ಮನ ಸಾಮರ್ಥ್ಯವು ಜೀವನೊಳಗೆ ಒಡೆದು ಮೂಡುವದು ಪರಮಾತ್ಮನು ಪರಮ ಕರುಣಾಸಾಗರನು ಮತ್ತು ಯಾರು ಏನನ್ನು ಬೇಡಿದರೂ ಕೊಡತಕ್ಕ ಸ್ವಭಾವದವನು ಆದ್ದರಿಂದ ನಾವು ಅವನನ್ನು ಬೇಡುವದೊಂದೇ ತಡ, ಅವನು ಅದನ್ನು ನೀಡುವನು ತಂದೆಯು ತನ್ನ ಸರ್ವಸ್ವವನ್ನೂ ಮಕ್ಕಳಿಗೆ ಕೊಡುವಂತೆ, ಸರ್ವಲೋಕಕ್ಕೂ ಮಾತಾಪಿತೃಸ್ವರೂಪನಾದ ಅವನು ತನ್ನ ಭಕ್ತರಿಗೆ ಬೇಕಾದಷ್ಟು ಕೊಡುವನು ಆದ್ದರಿಂದ ನಾವು ನಮ್ಮ ಮನಸ್ಸನ್ನು ನಿರ್ವಂಚನೆಯಿಂದ ಪರಮಾತ್ಮನ ಮೇಲಿಟ್ಟರೆ ಒಡನೆ ಪರಮಾತ್ಮನು ನಮ್ಮ ಮೇಲಿನ ಅನುಗ್ರಹದಿಂದ ನಮಗೋಸ್ಕರ ಆ ಮನಸ್ಸಿನಲ್ಲಿ ತನ್ನ ಸಾಮರ್ಥ್ಯವನ್ನು ತುಂಬಿಯೇ ತುಂಬುವನು ಈ ಸಾಮರ್ಥ್ಯವು ಮನಸ್ಸಿಗೆ ಬಂದಿತೆಂದರೆ ಆ ಮನಸ್ಸಿಗೆ ಅಸಾಧ್ಯವಾದ ಕಾರ್ಯವೇ ಈ ಜಗತ್ತಿನಲ್ಲಿಲ್ಲ ಲೋಕದಲ್ಲಿ ಮನಶ್ಶಕ್ತಿಯನ್ನು ಉಪಯೋಗಮಾಡುತ್ತಿರುವ ಎಷ್ಟೋ ಜನಗಳ ಕಾರ್ಯವು ಸರಾಗವಾಗಿ ಸಾಗದೆ ಇರುವದಕ್ಕೆ ಈ ದೈವಿಕಶಕ್ತಿಯ ಅಭಾವವೇ ಕಾರಣವು ಆದ್ದರಿಂದ ಆತ್ಮಶಕ್ತಿಯ ಪರಮಾವಧಿಯನ್ನು ಪಡೆಯಬೇಕೆನ್ನುವವರು ತಮ್ಮ ಇಷ್ಟದೈವವನ್ನು ಉಪಾಸನೆಮಾಡುವ ಅಭ್ಯಾಸವನ್ನಿಟ್ಟು ಆ ಪ್ರಯೋಜನವನ್ನು ಹೊಂದಬೇಕು

ಮುಖ್ಯತಿ ಸ್ಪಷ್ಟವೇನೆಂದರೆ, ಆತ್ಮಶಕ್ತಿಯ ತಿರೋಭಾವವೇ ನಮ್ಮನ್ನು ಇತರರ ಅಡಿಯಾಳಾಗಿ ಮಾಡುವದು ಆವಿರ್ಭಾವವೇ ನಮ್ಮನ್ನು ಸಮಸ್ತಜನರ ಶಿರೋಭೂಷಣವಾಗಿ ಮಾಡುವದು ಆದ್ದರಿಂದ ನಾವು ನಮ್ಮ ಉನ್ನತಿಗಾಗಿ ಇತರರ ಮುಂದೆ ದೈನ್ಯತೆಯಿಂದ ಕಣ್ಣುಕಣ್ಣು ಬಾಯಿಬಾಯಿ ಬಿಡಬೇಕಾದ್ದಿಲ್ಲ ನಮ್ಮಲ್ಲಿ ನಾವು ನಮ್ಮ ಆತ್ಮಶಕ್ತಿಯನ್ನು ಬೆಳೆಸಿಕೊಂಡರೆ ಸರಿ, ಸಮಸ್ತ ಸಂಪತ್ತುಗಳೂ ತಾವಾಗಿಯೇ ನಮ್ಮನ್ನು ಹುಡುಕಿಕೊಂಡು ಬರುವವು ಯಾರ ಸಂರಕ್ಷಣೆಯ ಭಾರವನ್ನು ನಾವು ವಹಿಸುತ್ತೇವೋ ಅಂಥವರ ಜೀವವನ್ನು ಉಳಿಸುವದಕ್ಕಾಗಿ ನಮ್ಮ ಜೀವಜ್ಯೋತಿಯನ್ನು ನಿವಾಳಿಸಿ ಹಾಕುವದು, ಭೌತಿಕ ಸುಖಸಾಧನಗಳು ನಮ್ಮ ದೇಹೇಂದ್ರಿಯಾದಿಗಳಿಗೆ ಉಪಭೋಗವನ್ನು ಕೊಡಬೇಕೆಂದು, ನಾನು ಮುಂದು ತಾನು ಮುಂದೆಂದು ಬಂದರೂ ಅವುಗಳ ಉಪಟಳವನ್ನು ತನ್ನ ಮೇಲೆ ನಡೆಯಗೊಡದಿರುವದು, ಯೋಗ್ಯಕಾರ್ಯವನ್ನು ಕೈಗೊಂಡಿರುವಾಗ ಅದರ ಮಾರ್ಗದಲ್ಲಿ ಎಷ್ಟು ಕಷ್ಟಗಳೊದಗಿದರೂ ಅವುಗಳಿಗೆ ತಾಳ್ಮೆಯಿಂದ ಮೈಗೊಡುವದು, ತನ್ನ ದೇಹದಿಂದ ಪಂಚಪ್ರಾಣಗಳೂ ಹೊರಬೀಳುವಂಥ ಸಂಭವವು ಸಂಭವಿಸಿದರೂ ಧರ್ಮಮಾರ್ಗವನ್ನು ಬಿಟ್ಟು ಒಂದು ಕೂದಲೆಳೆಯಷ್ಟೂ ಕದಲದಿರುವದು, ಬ್ರಹ್ಮಾಸ್ತ್ರಕ್ಕೆ ಸಹ ಹೆದರದಂಥ ಧೈರ್ಯವಿದ್ದರೂ ಪಾಪಕ್ಕೆ ಮಾತ್ರ ಹೆದರುವದು, ಹಿಡಿದ ಛಲವನ್ನು ಬಿಡದಿರುವ ಗುಣದೊಂದಿಗೆ ತನ್ನ ದೋಷವನ್ನು ತಾನು ತಿಳಿದು ತಿದ್ದಿಕೊಳ್ಳುವ ಗುಣವನ್ನು ಹೊಂದಿರುವದು ಮತ್ತು ಜಗತ್ತೆಲ್ಲಾ ಪ್ರಾಪಂಚಿಕ ಸುಖಸಾಧನಗಳ ಬಯಕೆಯೆಂಬ ಆವೇಶದಲ್ಲಿ ಮೈಮರೆತಿರುವಾಗ, ತಾನು ಪರಮಾತ್ಮ ಪ್ರೇಮವೆಂಬ ಆವೇಶದಲ್ಲಿ ದೇಹಭಾನವನ್ನು ಕಳೆದುಕೊಳ್ಳುವದು ಇಂಥವುಗಳೆಲ್ಲಾ ಆತ್ಮಶಕ್ತಿಯ ಒಂದೊಂದು ಚಿಹ್ನಗಳು ಈ ಲಕ್ಷಣಗಳು ಹೊರಗಣ ಉಪಕರಣಗಳಿಂದ ಆವಿರ್ಭವಿಸುವಂಥವುಗಳಲ್ಲ ಇಂತಹ ಅಸಾಧಾರಣ ಪ್ರತಿಭೆಗಳನ್ನು ತಂದುಕೊಡುವ ಸಾಮರ್ಥ್ಯವು ಆತ್ಮಶಕ್ತಿಗೆ ಮಾತ್ರ ಉಂಟು ಆತ್ಮಶಕ್ತಿಯೆಂಬ ಚಂದ್ರಹಾಸದ ಮೊನೆಯ ಮುಂದೆ ಉಕ್ಕಿನ ಶಕ್ತಿಗಳ ಮೊನೆಯು ಒನಕೆಯ ತುದಿಯೇ ಸರಿ ಭೌತಿಕಪ್ರಭಾಮಂಡಲಗಳ ಕಿರಣಗಳು ಕೆಲವು ವಸ್ತುಗಳೊಳಗೆ ತೂರಲಾರದೆ ಕೆಲವು ಕಡೆ ನೆರಳನ್ನು ಬಿಡುವವು ಆತ್ಮಶಕ್ತಿಪ್ರಭಾಮಂಡಲದ ಕಿರಣಗಳಿಗೆ ಎಲ್ಲಿಯೂ ತಡೆಯುಲ್ಲ, ನೆರಳಿಗೆ ಅವಕಾಶವಿರದಂತೆ ಅವು ಎಲ್ಲೆಲ್ಲಿಯೂ ಬೆಳಗುವವು ಆತ್ಮಶಕ್ತಿಯ ಬಲದಮುಂದೆ ಅಖಂಡ ಭೂಮಂಡಲವೂ ಒಂದು ತೃಣಸಮಾನವಾಗುವದು ಮನುಷ್ಯನ ಮುಖ್ಯ ಜೀವಾಳವೇ ಆತ್ಮಶಕ್ತಿ ಆತ್ಮಶಕ್ತಿಯ ತೇಜಸ್ಸನ್ನು ತಗ್ಗಿಸುವಂಥ ಬೇರೊಂದು ವಸ್ತುವು ಇದುವರೆಗೂ ಸೃಷ್ಟಿಯಾಗಿಲ್ಲ ಮುಂದೆಯೂ ಆಗುವದಿಲ್ಲ ಇಂತಹ ಆತ್ಮಶಕ್ತಿಯ ತೇಜಸ್ಸಿನ ಮುಂದೆ ಉಳಿದ ಸರ್ವತೇಜೋರಾಶಿಗಳೂ ಸೂರ್ಯನ ಮುಂದಿನ ಮಿಣುಕು ಹುಳದಂತೆ ಆದಪ್ರಯುಕ್ತ ಆತ್ಮಶಕ್ತಿಯ ಪ್ರಾಶಸ್ತ್ಯವು ಬೇರೆ ಯಾವದಕ್ಕೂ ಇಲ್ಲ ನೀತಿಕಾರರ ಅಭಿಪ್ರಾಯವಾದರೂ

ಗ[illegible]ವತಿ ಪವೇಂ ಯತ್ನವೆ ।
ಕ್ಷಣೇಶಾದಂಬರವೆ ಗೌರವ ಬರ್ಧವೆ ಪೇಳ ।
ಇವಪಾಲಿರವಿತೆ [illegible]ಟಿಯು ।
ಗೊಂಡಿಕಾಕಳಿನ ಬೆಸಯು ಹೆಚ್ಚು ವಮಾಟಿ? ।

ಈರೀತಿಯಾಗಿರುವದು

ಪ್ರಿಯಪಾಠಕರೇ! ಒಂದು ಸಾರೆ ಬ್ರಹ್ಮತೇಜಸ್ಸಿನಲ್ಲಿ ಹೆಸರುವಾಸಿಯಾದ ವಸಿಷ್ಠರ ಆಶ್ರಮಕ್ಕೆ ರಾಜನಾದ ವಿಶ್ವಾಮಿತ್ರನು ಹೋದಾಗ ಅವನ ಸರ್ವಪರಿವಾರಕ್ಕೂ ಯಥಾ ಯೋಗ್ಯವಾಗಿ ವಸಿಷ್ಠರು ತಮ್ಮ ಕಾಮಧೇನುವಿನ ಪ್ರಭಾವದಿಂದ ಆತಿಥ್ಯವನ್ನು ಮಾಡಿದರು ಆ ಕಾಮಧೇನುವನ್ನು ತಾನು ಅಪಹರಿಸಬೇಕೆಂದು ವಿಶ್ವಾಮಿತ್ರನು ಕುಕಲ್ಪನೆಯನ್ನು ತಂದುಕೊಂಡು ಪ್ರಯತ್ನವನ್ನು ನಡೆಸಿದನು ಕೊನೆಗೂ ವಸಿಷ್ಠ ವಿಶ್ವಾಮಿತ್ರರಿಗೆ ಯುದ್ಧವೇ ಆಯಿತು ವಸಿಷ್ಠರು ತಮ್ಮ ಮುಂದೊಂದು ಬ್ರಹ್ಮದಂಡವನ್ನಿಟ್ಟುಕೊಂ ಸ್ವಸ್ಥವಾಗಿ ಕುಳಿತಿದ್ದರು ವಿಶ್ವಾಮಿತ್ರನು ಅವರ ಮೇ ಬಾಣಗಳ ಮಳೆಯನ್ನು ಸುರಿಸಿದನು ಅವರೇನು ಬಂದ ಬಾಣಗಳನ್ನೆಲ್ಲಾ ಆ ಬ್ರಹ್ಮದಂಡವು ತನ್ನ ಕಡೆ ಸೆಳೆದುಕೊಂಡು ಅವುಗಳನ್ನು ಮುರಿದುಹಾಕಿಬಿಡುತ್ತಿತ್ತು ಆಗ ವಿಶ್ವಾಮಿತ್ರನು

" ಧಿಗ್ಬಲಂ ಕ್ಷತ್ರಿಯಬಲಂ ಬ್ರಹ್ಮತೇಜೋಬಲಂ ಬಲಂ ।
ಏಕೇನ ಬ್ರಹ್ಮದಂಡೇನ ಸರ್ವಾಸ್ತ್ರಾಣಿ ಹತಾನಿ ಮೇ ॥

"ಕ್ಷತ್ರಿಯ ಬಲಕ್ಕೆ ಧಿಕ್ಕಾರವಿರಲಿ, ಬ್ರಹ್ಮತೇಜಸ್ಸಿ ಬಲವೇ ಬಲ ಒಂದು ಬ್ರಹ್ಮದಂಡವು ನನ್ನ ಸರ್ವಾಸ್ತ್ರಗಳನ್ನೂ ನುಂಗಿ ನೀರು ಕುಡಿಯಿತಲ್ಲ!" ಎಂದು ಹೇ ಸೋತು ಅಂದೇ ಅವನು ರಾಜ್ಯಕೋಶಗಳನ್ನು ತೊರೆ ಬ್ರಹ್ಮ (ಆತ್ಮಶಕ್ತಿಯ) ತೇಜಸ್ಸನ್ನು ಪಡೆದುಕೊಳ್ಳಲೋಸುಗ ತಪಸ್ಸಿಗೆ ಹೋದನೆಂಬ ಚರಿತ್ರೆ ಇದೆ

ಮತ್ತು ಒಂದುಸಾರೆ ನಚಿಕೇತನಿಗೆ ಸುಪ್ರಸನ್ನನಾ ಯಮನು ಮಗೂ 'ಏನಾದರೂ ವರವನ್ನು ಬೇ ಕೊಡುತ್ತೇನೆಂದನು ಆ ನಚಿಕೇತನು ಸ್ವಾಮಿ! ಆತ್ಮ ಸ್ವರೂಪದ ವಿಚಾರವನ್ನು ಹೇಳಬೇಕೆಂದನು ಆ "ಯಮನು ನಚಿಕೇತಾ, ಅದು ಬಹು ಸೂಕ್ಷ್ಮತ್ವ ಅತಿ ಗಹನವೂ ಆದ ವಿಷಯ ಅದನ್ನು ಬಿಟ್ಟು ಇನ್ನ ನಾದರೂ ಕೇಳು ನಿನಗೆ ನೂರಾರು ವರ್ಷಗಳ ಆಯ ಸ್ಸುಬೇಕೇ? ಮಕ್ಕಳು ಬೇಕೆ? ಪುಷ್ಕಳವಾದ ದ ಸಂಪತ್ತು ಬೇಕೆ? ವಿಸ್ತಾರವಾದ ರಾಜ್ಯಬೇಕೆ? ನಿ ನಗೆ ಚಿರಜೀವಿತ್ವವು ಬೇಕಾದರೆ ಬೇಡು" ಎಂದು ಕೇ ಳಲು ನಚಿಕೇತನು "ದೇವಾ! ನೀನು ಕೊಡುವ ಸ ಸುಖಸೌಕರ್ಯಗಳೆಲ್ಲವೂ ಇಂದಿಲ್ಲದಿದ್ದರೆ ನಾಳೆಯಾದ ಹೋಗತಕ್ಕವುಗಳು ನೀನು ಚಿರಜೀವಿತ್ವವನ್ನು ಕೊ ಟ್ಟರೂ ನನ್ನ ಪ್ರಶ್ನೆಯ ವಿಷಯದೊಡನೆ ಹೋಲಿಸಿ ಅದು ಅಲ್ಪವೆ ನಿನ್ನ ರಾಜ್ಯಕೋಶಗಳೂ ಹಣಕಾ ಗಳೂ ನಿನಗೇ ಇರಲಿ ಇವುಗಳನ್ನೆಲ್ಲಾ ನೀನು ಕೊ ವುದೇನು? ನಿನ್ನ ದರ್ಶನದಿಂದ ಇವೆಲ್ಲವೂ ತ ಯೇ ನನ್ನ ಮನೆಯ ಬಾಗಿಲಲ್ಲಿ ಉರುಳಾಡುವ ನೀನು ಯಮಾಧಿಪತ್ಯದಲ್ಲಿರುವವರೆಗೂ ನನಗೆ ಜೀವಿತ್ವವೇ ಅದನ್ನು ನೀನು ಹೊಸದಾಗಿ ಕೊಡು ದೇನು? ನನಗೆ ಆ ವಿಚಾರವೇ ಬೇಕು" ಎಂದು ನ್ನೇ ಸಾಧಿಸಿದನು ಇದರಿಂದ ಸಂತುಷ್ಟನಾದ ಯಮ ನಚಿಕೇತನನ್ನು ಉತ್ತಮಾಧಿಕಾರಿಯನ್ನಾಗಿ ಭಾ ಅವನಿಗೆ ಭಗವತ್ತತ್ವವನ್ನು ಮನಗಾಣಿಸಿದನೆಂಬ ಉ ಖವಿರುವುದು

ತುಳಸೀದಾಸನು ಹೆಂಡತಿಯಲ್ಲಿ ಅತ್ಯಂತಾಸಕ್ತನಾ ದ್ದನು ಒಮ್ಮೆ ಅವನಿಲ್ಲದಾಗ ಅವನ ಹೆಂಡತಿ ತವರುಮನೆಗೆ ಹೋದಳು ತುಳಸೀದಾಸನು ಮನೆ ಬಂದಾಗ ಪ್ರಿಯಪತ್ನಿಯ ಮುಖಕಮಲವನ್ನು ಕಾ ಕಂಗೆಟ್ಟು ದಿಕ್ಕು ತೋಚದವನಾಗಿ ಕಡುಬಿಸಲಿನಲ್ಲಿ ಮಾವನ ಮನೆಗೆ ಹೋಗಿ ಕಾಣಿಸಿಕೊಂಡನು, ಆ ತಾಯಾಸದಿಂದ ಬಳಲಿ ಬೆಂಡಾಗಿದ್ದೂ ತನ್ನನ್ನು ನೋ ಸಂತುಷ್ಟನಾದ ಪತಿಯನ್ನು ನೋಡಿ ಆಶ್ಚರ್ಯಪಟ್ಟವ ಅವನ ಪತ್ನಿಯು "ಇಷ್ಟು ಪ್ರೇಮವು ಪರಮಾ ಮೇಲೆ ಮಾತ್ರ ಇದ್ದರೆ ..." ಎನ್ನುವಷ್ಟರಲ್ಲಿ ಅವನು ಏನನ್ನೋ ನೆನೆಸಿಕೊಂಡವನಾಗಿ ತನ್ನಲ್ಲಿ ತಾ ವಿಚಾರಮಾಡಿಕೊಂಡು ಸ್ವಲ್ಪ ಹೊತ್ತಿನಲ್ಲಿಯೇ ಪ ತಿಯ ಮೇಲಿನ ಅಭಿಮಾನವನ್ನು ಕಿತ್ತೊಗೆದು ಹೊ ಕಾಲ್ದೆಗೆದೇ ಬಿಟ್ಟನು ಒಮ್ಮೆ ಮುಂದಡಿಯಿಟ್ಟವ ಹಿಂದಿರುಗಲಿಲ್ಲ ಯಾರಿಗೆ ವಿಚಾರಪೂರ್ವಕವಾದ ರಾಗ್ಯ ಹುಟ್ಟುವದೋ ಅವರು ಹೇಳದೆ ಹಿಂದುಮು ನೋಡದೆ ಬೆಂಕಿಹತ್ತಿರುವ ಮನೆಯಲ್ಲಿರುವ ಮನುಷ್ಯ ಅವಸರದಿಂದ ಹೊರಬೀಳುವಂತೆ ಪತ್ನೀಪುತ್ರಾದಿಗಳ ಬಿಟ್ಟು ಹೊರಗೆ ನಿಲ್ಲುವರು ಇವೆಲ್ಲವೂ ಆತ್ಮಶಕ್ತಿ ಹೆಚ್ಚುಗಾರಿಕೆಯನ್ನೇ ಸೂಚಿಸುತ್ತವೆ, ಆದ್ದ "ನಮೋಮಹದ್ಭ್ಯಃ' ಎಂಬ ಗೌರವೋಕ್ತಿಗೆ ಯರಾಗುವಂಥ ಈ ಪದವಿಯನ್ನು ಪಡೆದು ಚಿರಜೀ ಗಳಾಗುವಂತೆ ಸರ್ವರೂ ತಮ್ಮ ಆತ್ಮಶಕ್ತಿಯನ್ನು ಯೋಗಿಸುವದು ಸರ್ವೋತ್ತಮವು

ಮೈಸೂರು ಡಿಸ್ಟ್ರಿಕ್ಟಿನ ಕಡೆಯಿಂದ ಮೈಸೂ ಲೆಜಿಸ್‌ಲೇಟಿವ್ ಕೌನ್ಸಿಲ್ಲಿಗೆ ಮ|| ರಾ|| ಕೆ ಸುಬ್ಬಣ್ಣನವರು ಜಯಶೀಲರಾಗಿ ಆರಿಸಿ ಬಂದರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ.

ಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೬ನೇ ಸೆಪ್ಟೆಂಬರ್ ೧೯೪೩ [ಸಂಚಿಕೆ ೧೮

್ರೀಮದ್ರಂಭಾಪುರೀ ಜಗದ್ಗುರುಗಳವರ ಮಹೋತ್ಸವ, ಅಜ್ಜಂಪುರ

ಮಹಾಗುರುಸಾರ್ವಭೌಮರು ತರೀಕರೆ ತಾ|| ಂಪುರದ ಸಾಹುಕಾರರೂ ಮತ್ತು ಮುನಿಸಿಪಲ್ ಪ್ರೆಸಿಡೆಂಟರೂ ಆದ ಸಟ್ರಿ ಸಿದ್ದಪ್ಪನವರ ಮತ್ತು ಂಪುರದ ಗುರು ಭಕ್ತರ ಪ್ರಾರ್ಥನೆಯ ಮೇರೆಗೆ ೨೯ ೮ ೪೩ ನೇ ಭಾನುವಾರ ದಿನ ಚತುರಂಗ ಸಮೇತರಾಗಿ ಸಕಲ ಬಿರುದುಗಳೊಡನೆ ದಯ ಚಿಸಿದರು ಪುರವು ಅಂದವಾಗಿ ಅಲಂಕರಿಸಲ್ಪಟ್ಟಿತ್ತು ಸ್ತಂಭಾಮ್ರಪಲ್ಲವಗಳಿಂದಲಂಕರಿಸಲ್ಪಟ್ಟ ಸುಂದರ ಪಗಳ ಸಾಲುಗಳಿಂದಲೂ, ಶ್ರೀ ಜಗದ್ಗುರುಗಳವ ಸುಖಾಗಮನದ ಅನೇಕ ಬೋರ್ಡುಗಳಿಂದಲೂ ಸಕಲ ಕೋಮಿನವರ ಬೀದಿಗಳೂ ಶೋಭಿಸು ತ್ತ ಮೈಸೂರು ದೇಶವಲ್ಲದೆ ಧಾರ್ವಾಡ ಜಿಲ್ಲಾ ಅನೇಕ ಗುರು ಭಕ್ತರು ಆಗಮಿಸಿದ್ದರು ಜನ ದಾಯ ಸುಮಾರು ಹತ್ತು ಹನ್ನೆರಡು (೧೦ ೧೨) ರವರೆಗೆ ಇದ್ದಿತು ಶ್ರೀ ಜಗದ್ಗುರುಗಳವರ ವವನ್ನು ನೋಡಿದ ಪ್ರತಿಯೊಬ್ಬರೂ ಅಜ್ಜಂಪುರ ಯಾವಾಗಲೂ ಇಂತಹ ಉತ್ಸವ ನಡೆದಿರಲಿಲ್ಲ ಎ ಕೊಂಡಾಡುತ್ತಿದ್ದರು

ದಿವಸ ಬೆಳಗ್ಗೆ ೧೦ ಘಂಟೆಗೆ ಶ್ರೀಯುತ ಸಟ್ರಿ ಪ್ಪನವರು ಈ ಕಾರ್ಯಕ್ಕೆ ದಯಮಾಡಿಸಿದ್ದ ತರೀಕೆರೆ ಹೆಚ್ ಅಮಲ್ದಾರ್‌ರವರಿಂದಲೂ ಪೋಲೀಸ್ ಕ್ಟರ್, ಸಬ್ ಇನ್ಸ್‌ಪೆಕ್ಟರ್, ಡಾಕ್ಟರ್, ಪೋಸ್ಟ ಸ್ಟರ್ ಮಿಡಲ್ ಸ್ಕೂಲ್ ಹೆಡ್‌ಮಾಸ್ಟರ್, ಮತ್ತು ರ್‌ಪಡೆ, ಪ್ರೈಮರಿಸ್ಕೂಲ್ ಹೆಡ್‌ಮಾಸ್ಟರ್ ಂಪುರದಲ್ಲಿ ಶ್ರೀಮಂತರಾದ ವೀರಶೈವ ವರ್ತಕರು, ರು, ಬುದ್ಧಿವಂತರು, ಜೋಗಿ ತಿಮ್ಮಯ್ಯನವರು, ನಿಸಿಪಲ್ ಮೆಂಬರುಗಳು ಅಲ್ಲದೆ ಶ್ರೀಮಾನ್ ಶಂಕರ ರು, ನರಸಿಂಹಭಟ್ಟರು, ನಾರಾಯಣಭಟ್ಟರು ಭಟ್ಟರು, ಬೈರಾಭಟ್ಟರು, ನಾಡಿಗರಾದ ಅಂತರ ಕೃಷ್ಣಪ್ಪನವರು ಈ ಗ್ರಾಮದ ಶಾನುಭೋಗ ಟೇಶಯ್ಯನವರು ಕಾಟಿಗಗೆರೆ ಶಾನುಭೋಗ ವಾಸರಾಯರು, ಸೊಕ್ಕೆ ನಾಡಿಗ ಗಿರಿಯಪ್ಪನವರು ಮುಂತಾದ ಬ್ರಾಹ್ಮಣರಿಂದಲೂ, ಈ ಉತ್ಸವಕ್ಕೆ ಸಿದ್ದ ಅಣ್ಣೆ ಪಟ್ಟಾಧ್ಯಕ್ಷರು, ನಂದೀಪುರದ ಧ್ಯಕ್ಷರು, ಬಾಗೂರು ಚರಮೂರ್ತಿಗಳು ಮುಂತಾ ಂದಲೂ ಮತ್ತು ಈಗ ಕೊಂಚ ದಿನಗಳ ಹಿಂದೆ ಾಲಯದ ಸಂಚಾರ ಮುಗಿಸಿಕೊಂಡು ದಯಮಾಡಿ ನ ಶ್ರೀಸಾಧು ಶಂಕರಾನಂದಸ್ವಾಮಿಗಳವರಿಂದಲೂ ಪ್ಪಂಬುಧಿ, ದುರ್ವಿಗೆರೆ, ಚಿಕ್ಕಗಂಗಲ ಮುಂತಾದ ಾ ಸಂಘಗಳಿಂದಲೂ ಸ್ಥಳ ಪರಸ್ಥಳದ ಅನೇಕ ಂಡರಿಂದಲೂ ಕೂಡಿ ಇಸ್ತ್ರಕಪಾಲ ಸಮೇತರಾಗಿ ಣದಲ್ಲಿ ಶ್ರೀ ಜಗದ್ಗುರುಗಳನ್ನು ಸಂದರ್ಶಿಸಿ ನ ಕಾಣಿಕೆಯನ್ನರ್ಪಿಸಿ ಪ್ರಮುಖ ಮಹಾಶಯರ ಯವನ್ನು ಮಾಡಿಸಿ ಪ್ರಾರ್ಥನಾ ಮಾಡಿಕೊಂಡರು ಆಗ್ಗೆ ಶ್ರೀಗಳವರು ಸುವರ್ಣ ರಜತಾಂದೋಲಿಕೆಯನ್ನು ಆರೋಹಣ ಮಾಡಿದರು ಆ ವೇಳೆ ಅಜ್ಜಂಪುರದ ಶಾಲಾ ಬೋಧಕ ವೇ|| ಮರುಳಸಿದ್ದಯ್ಯ ಮೇಲಿನ ವ ರ ಮುತ್ತೇನಹಳ್ಳಿ ಇವರಿಂದ ರಚಿತವಾದ ಆಚಾರ್ಯರ ಮಂಗಳಪದ್ಯ ಅವರ ಪುತ್ರಿಯರಾದ ಚಿ|| ಎಂ ಪುಷ್ಪಾಂಬಿಕ ಮತ್ತು ಎಂ ನಿತ್ಯಾನಂದಕುಮಾರಿ ಇವರು ಹಾಡಿದರು ಅನಂತರ, ಉತ್ಸವವು ಆರಂಭ ವಾಯಿತು ಈ ಉತ್ಸವ ಕಾರ್ಯಕ್ಕೆ ಬೀರೂರಿನ ಪ್ರಮುಖರೂ ಮಹಸ್ತರೂ ವೇ|| ಮುದ್ದೀರಯ್ಯನವರು ನಾಳಿಗೆ ರುದ್ರಯ್ಯನವರು ಸೋಮನಾಥಾರಾಧ್ಯರು. ಶ್ರೀಯುತ ದೊಡ್ಡಮನೆ ಹಾಲಪ್ಪನವರು ಶ್ರೀಯುತ ಕಲ್ಲಪ್ಪಶೆಟ್ಟರು ವಗೈರೆಯವರು ಆಗಮಿಸಿ ವಿಶೇಷವಾಗಿ ಸಲಹೆಗಳನ್ನಿತ್ತರು ಉತ್ಸವ ಆರಂಭವಾದ ಕೂಡಲೇ ಸಕಲ ವಾದ್ಯಗಳು ಬೋರ್ಗರೆದುವು ವೈದಿಕರ ಮಂಜುಳ ವೇದಘೋಷವು ಒಂದೇ ಸಮನೆ ನಡೆದಿತ್ತು ಸಕಲ ಮತೀಯರೂ ಈ ಮಹೋತ್ಸವದಲ್ಲಿ ಭಾಗಿಯಾದುದನ್ನು ನೋಡಿದರೆ ಸನಾತನ ಧರ್ಮದ ಅಭ್ಯುದಯ ಕಾಲವೆಂದು ಹೇಳಲು ಅಡ್ಡಿಯಿಲ್ಲ ಈ ಪ್ರಕಾರ ಉತ್ಸವವು ಪ್ರಥಮದಲ್ಲಿ ಅಜ್ಜಂಪುರದ ಕೋಟೆಯಲ್ಲಿರುವ ಬ್ರಾಹ್ಮಣರ ಬೀದಿಯಲ್ಲಿ ಪ್ರಮುಖ ಮಹಾಶಯರುಗಳು ಒಟ್ಟು ಸೇರಿ ತಯಾರು ಮಾಡಿದ್ದ ಭವ್ಯ ಪೆಂಡಾಲಿಗೆ ಅತ್ಯಂತ ವೈಭವದಿಂದ ತಲಪಿದಕೂಡಲೇ ಅಲ್ಲಿಯ ವೈದಿಕರಾದ ಶ್ರೀಮಾನ್ ಶಂಕರಭಟ್ಟರು, ರಾಮಭಟ್ಟರು, ಭೈರಾಭಟ್ಟರು, ಟಿ ರಾಮಾವಧಾನಿಗಳೂ ವೇದಘೋಷ ಮೊಡನೆಯೂ ಅಲ್ಲಿಯ ಪ್ರಮುಖ ಶಾನುಭೋಗರು ಶ್ರೀಯುತ ವೆಂಕಟೇಶಯ್ಯನವರು, ಕಾ|| ಶ್ರೀನಿವಾಸ ರಾಯರು ಶ್ರೀ ರಾಮಚಂದ್ರರಾಯರು, ಸೊ|| ನಾಡಿಗರಾದ ಗಿರಿಯಪ್ಪನವರು, ಅಂತರಗಟ್ಟೆ ನಾಡಿಗ ಕೃಷ್ಣಪ್ಪನವರು ಸರ್ವರೂ ಶ್ರೀ ಜಗದ್ಗುರುಗಳವರಿಗೆ ಪುಷ್ಪಹಾರ ಫಲಾದಿಗಳನ್ನು ಒಪ್ಪಿಸಿದರು ಬ್ರಾಹ್ಮಣ ಸುವಾಸಿನಿಯರು ಮಂಗಲವನ್ನು ಹಾಡಿ ಆರತಿ ಎತ್ತಿದರು ಅನಂತರ ಸರ್ವರಿಗೂ ಜಗದ್ಗುರುಗಳು ಫಲಮಂತ್ರಾಕ್ಷತೆಗಳನ್ನು ಆಶೀರ್ವಾದಪೂರ್ವಕ ದಯಪಾಲಿಸಿದರು ಅಲ್ಲಿಂದ ಮುಂದೆ ಈಶ್ವರ ದೇವಸ್ಥಾನ, ಆಂಜನೇಯ ದೇವಸ್ಥಾನಗಳಲ್ಲಿ ಮಂಗಲಾರತಿಯಾಗಿ ಮುಂದೆ ಮುನಿಸಿಪಲ್ ಪೆಂಡಾಲಿಗೆ ಉತ್ಸವವು ತಲಪಿದೊಡನೆಯೇ ಮುನಿಸಿಪಲ್ ಅಧ್ಯಕ್ಷರೂ, ತರೀಕೆರೆ ತಾಲ್ಲೂಕು ಅಮಲ್ದಾರರೂ ಆದ ಶ್ರೀಮಾನ್ ಹೆಚ್ ಹಾಲಪ್ಪ ಬಿ ಎ ಯವರೂ ವೈಸ್ ಪ್ರೆಸಿಡೆಂಟ್ ಸಟ್ರಿ ಸಿದ್ದಪ್ಪನವರೂ ಮುನಿಸಿಪಲ್ ಕೌನ್ಸಿಲ್ ಮೆಂಬರುಗಳೂ ಸಹ ಹಾರ ತುರಾಯಿ ಫಲಾದಿಗಳನ್ನು ಒಪ್ಪಿಸಿ ಆಶೀರ್ವಾದ ಪಡೆದರು ಮಸೀತಿ ಮುಂದೆ ಮುಸಲ್ಮಾನ್ ಖಾಜಿಗಳು ಹಾರ ತುರಾಯಿ ಅರ್ಪಿಸಿದರು ಶ್ರೀಗಳು ಉರ್ದು ಭಾಷೆಯಲ್ಲಿ ಆಶೀರ್ವಾದ ವಾಕ್ಯಗಳನ್ನು ಅಪ್ಪಣೆಯಿತ್ತರು ಆಮೇಲೆ ವೈಶ್ಯರ ನಾಗಣ್ಣನವರು ಹಾರ ತುರಾಯಿ ಫಲಾದಿಗಳನ್ನುಒಪ್ಪಿಸಿ ಆಶೀರ್ವಾದ ಪಡೆದರು ಅನಂತರ ಪೇಟೆ ಮಾರ್ಗದಲ್ಲಿ ಉತ್ಸವ ಸಾಗಿತು ಮುಂದೆ ಮಿತ್ರ ಸಮಾಜದ ಅಧ್ಯಕ್ಷರೂ ಪ್ರಸಿದ್ಧ ವರ್ತಕರೂ ಕಾಂಗ್ರೆಸ್ ಭಕ್ತರೂ ಆದ ಶ್ರೀಯುತ ಸುಬ್ರಹ್ಮಣ್ಯ ಸೆಟ್ಟರು ವಗೈರೆಯವರು ಶ್ರೀ ಜಗದ್ಗುರುಗಳಿಗೆ ಹಾರ ತುರಾಯಿ ಫಲಾದಿಗಳನ್ನು ಒಪ್ಪಿಸಿದರು ಮುಂದೆ ಪೇಟೆಯಲ್ಲಿ ಉದ್ದಕ್ಕೂ ಪ್ರತಿ ವೀರಶೈವ ವರ್ತಕರ ಗೃಹದಲ್ಲೂ ಮಂಗಳಾರತಿ, ಫಲಾದಿಗಳನ್ನು ಒಪ್ಪಿಸಿ ಆಶೀರ್ವಾದ ಪಡೆದರು. ಸುಮಂಗಲಿಯರು ಆರತಿಗಳನ್ನು ಒಪ್ಪಿಸಿದರು ಆಚಾರ್ಯರ ಮಂಗಲಗಳು ಪ್ರತಿ ಗೃಹದಲ್ಲೂ ಆಗುತ್ತಲೇ ಇದ್ದುವು ಉತ್ಸವವು ಮುಂದೆ ಸಾಗಿ ಇಲ್ಲಿಯ ಪ್ರಸಿದ್ಧ ವರ್ತಕರೂ ಶ್ರೀಮನ್ಮಹಾರಾಜರವರಿಂದ ಪಬ್ಲಿಕ್ ಸರ್ವಿಸ್ ಮೆಡಲನ್ನು ಪಡೆದಿರುವವರೂ ಈಗಾಗಲೇ ಸುಮಾರು ೨೫ ಸಾವಿರ ರೂಗಳನ್ನು ಖರ್ಚುಮಾಡಿ ಅನೇಕ ಸಂಸ್ಥೆಗಳನ್ನು ನಿರ್ಮಾಣ ಮಾಡಿರುವವರೂ ಆದ ಮ|| ರಾ|| ಶ್ರೀ ಜೋಗಿ ತಿಮ್ಮಯ್ಯನವರು ತಮ್ಮ ಹಾಲುಮತ ಮಂಡಲಿಯೊಂದಿಗೆ ಜಗದ್ಗುರುಗಳವರಿಂದ ಆಶೀರ್ವಾದ ಪಡೆದರು ಅಲ್ಲಿಂದ ಮುಂದೆ ದೇವಾಂಗ ಮಂಡಲಿಯವರು ಮಹಾರಾಷ್ಟ್ರ ಮಂಡಲಿಯವರು ಹಾರ ತುರಾಯಿ ಫಲಾದಿಗಳನ್ನು ಒಪ್ಪಿಸಿದರು ಮಹಾರಾಷ್ಟ್ರ ಮಂಡಲಿಯ ಗೌಡರೂ ಯಜಮಾನರೂ ಆದ ರಿಟೈರ್ಡ್ ಮುನಿಸಿಪಲ್ ಕ್ಲಾರ್ಕ್ ಶ್ರೀಯುತ ಆನಂದ ರಾಯರು ತಮ್ಮ ಗೃಹದಲ್ಲಿ ವಿಜ್ಞಾಪನಾ ಪತ್ರ ಒಪ್ಪಿಸಿ ಆಶೀರ್ವಾದ ಪಡೆದರು ಅಲ್ಲಿಂದ ಮುಂದೆ ಲಿಂಗಾಯಿತರ ಬೀದಿಯಲ್ಲಿರುವ ಗುರು ಭಕ್ತರಿಂದ ಫಲ ಪುಷ್ಪಾದಿಗಳನ್ನು ಒಪ್ಪಿಸಿಕೊಂಡು ಅವರಿಗೆಲ್ಲಾ ಆಶೀರ್ವಾದವಿತ್ತು ಮುಂದೆ ಇಲ್ಲಿಯ ಪ್ರಸಿದ್ಧ ಹೋಟೆಲ್ ಮಾಲೀಕರಾದ ಶ್ರೀಯುತ ಸುಬ್ಬರಾಯರ ಗೃಹದ ಮುಂಭಾಗದಲ್ಲಿ ಅಂದವಾಗಿ ರಚಿತವಾಗಿದ್ದ ಪೆಂಡಾಲಿಗೆ ಉತ್ಸವ ತಲಪಿತು ಸದರಿ ರಾಯರು ಪತ್ನಿ ಪುತ್ರಿಯರೊಡನೆ ಜಗದ್ಗುರುಗಳಿಗೆ ಫಲಹಾರ ತುರಾಯಿಗಳನ್ನು ಅರ್ಪಿಸಿದರು ಶ್ರೀಗಳವರು ಅದನ್ನೆಲ್ಲಾ ಸ್ವೀಕರಿಸಿ ರೈಲ್ವೆ ಸ್ಟೇಷನ್ ಮುಂಭಾಗದಲ್ಲಿರುವ ಸಟ್ರಿ ಸಿದ್ದಪ್ಪನವರ ಬಂಗಲೆಗೆ ಉತ್ಸವವು ದಯಮಾಡಿಸಿ ಸೆಟ್ಟರ ಕುಟುಂಬದವರಿಂದ ಮಂಗಲ ಹಾರ ತುರಾಯಿ ಫಲಾದಿಗಳನ್ನು ಸ್ವೀಕರಿಸಿ ವಿಶಾಲವಾದ ಪೆಂಡಾಲಿಗೆ ದಯಮಾಡಿಸಿ ಆಸನದಲ್ಲಿ ಮಂಡಿಸಿದರು ಅಮಲ್ದಾರ್ ಹೆಚ್ ಹಾಲಪ್ಪನವರು ಶ್ರೀ ಜಗದ್ಗುರುಗಳನ್ನು ಸ್ವಾಗತಿಸಿ ಸಭೆಯ ಪರವಾಗಿ ವಂದಿಸಿದರು ಅನಂತರ ಶ್ರೀಗಳು ಮಿತ ಭಾಷಣದಿಂದ ಸರ್ವರನ್ನು ಆನಂದ ಸಾಗರದಲ್ಲಿ ಲೋಲಾಡಿಸಿ ಸಭಾ ವಿಸರ್ಜನಗೊಳಿಸಿದರು. ಅನಂತರ ನೆರೆದ ಜನ ಸಮೂಹಕ್ಕೆಲ್ಲಾ ಅಜ್ಜಂಪುರದ ಸಟ್ರಿ ಸಿದ್ದಪ್ಪನವರ ಗೃಹದಲ್ಲೇ ಅನ್ನ ದಾನ ನಡೆಯಿತು ಸಾಯಂಕಾಲ ೭ ಘಂಟೆಗೆ ಸಭೆ ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಸೇರಿತು ಆಗ ಸುಮಾರು ೪ ೫ ಸಾವಿರ ಜನ ಸೇರಿದರು ಪ್ರಥಮದಲ್ಲಿ ಚಿ|| ಎಂ ಪುಷ್ಪಾಂಬಿಕ ಎಂ ನಿತ್ಯಾನಂದ ಕುಮಾರಿಯವರಿಂದ ಆಚಾರ್ಯ ಸ್ತೋತ್ರವು ಬಹು ಮನೋಹರವಾಗಿ ನಡೆಯಿತು

(೮ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಸೆಪ್ಟೆಂಬರ್ ತಾ॥ ೬ ನೆಯ ಸೋಮವಾರ

ಮೂರ್ತಿಪೂಜೆ.

ಈ ಪ್ರಪಂಚದಲ್ಲಿರುವ ಪ್ರತಿಯೊಬ್ಬರೂ ಯಾವ ಕೆಲಸವನ್ನು ಮಾಡಬೇಕಾದರೂ ದೇವರೊಬ್ಬನು ಇದ್ದಾನೆ, ಆತನು ನಾವು ಮಾಡುವ ಕಾರ್ಯಗಳ ಬಲಾಬಲವನ್ನು ನೋಡಿ ಫಲಗಳನ್ನು ಕೊಡುತ್ತಾನೆಂಬ ದೃಢವಾದ ನಂಬಿಕೆಯನ್ನಿಟ್ಟುಕೊಂಡೇ ಕೆಲಸ ಮಾಡಬೇಕು ಸರ್ವಸಾಕ್ಷಿಯಾದ ದೇವರನ್ನೇ ಮರೆತು ಕೆಲಸಮಾಡುವವನಿಗೆ ಯಾವ ಕೆಲಸಗಳೂ ಕೈಗೂಡುವುದಿಲ್ಲ. ದೇವರು ನಮ್ಮನ್ನು ಸೃಷ್ಟಿಮಾಡಿ, ಸಕಲವಾದ ಐಹಿಕಸೌಖ್ಯವನ್ನು ಹೊಂದಿ ಪುನಃ ತನ್ನಲ್ಲಿಯೇ ಸೇರಿ ನಿತ್ಯಸುಖ ಪಡೆಯಲೆಂಬ ಸಂಕಲ್ಪದಿಂದ ನಮಗೆ ಬುದ್ಧಿ ಜ್ಞಾನೇಂದ್ರಿಯಾದಿ ಸಕಲ ಸಾಮಗ್ರಿಯನ್ನು ದಯಪಾಲಿಸಿದ ಮೇಲೆ, ಅಂಥ ದೇವರನ್ನೇ ಮರೆತು ದೇವರ ಸಂಕಲ್ಪಕ್ಕೆ ವಿರುದ್ಧವಾಗಿ ನಡೆಯುವುದು ಮಾನವನ ಕರ್ತವ್ಯವಲ್ಲವೆಂಬುದನ್ನು ಎಲ್ಲರೂ ತಿಳಿದೇ ಇರುತ್ತಾರೆ. ಇಂಥ ದೇವರು ನಮ್ಮ ಕಣ್ಣಿಗೆ ಗೋಚರನಲ್ಲದಿದ್ದರೂ ಆ ದೇವರನ್ನು ನಿಶ್ಚಯಿಸುವುದಕ್ಕಾಗಿ ಸರ್ವಜ್ಞರಾದ ನಮ್ಮ ಪೂರ್ವ ಋಷಿಗಳು ನಾಲ್ಕು ಪ್ರಮಾಣಗಳನ್ನು ಹೇಳಿರುತ್ತಾರೆ. ಅವುಗಳೇ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದಪ್ರಮಾಣಗಳೆಂದು ಹೇಳಿಸಿಕೊಳ್ಳುತ್ತವೆ. ಅವುಗಳಲ್ಲಿ ಚಕ್ಷುರಾದೀಂದ್ರಿಯ ಸಹಾಯದಿಂದ ಉಂಟಾಗುವ ಜ್ಞಾನವೇ ಪ್ರತ್ಯಕ್ಷಪ್ರಮಾಣವು. ಕಣ್ಣಿಗೆ ಕಾಣದ ವಸ್ತುವನ್ನು ಯುಕ್ತಿಯಿಂದ ಊಹಿಸಿ ತಿಳಿಯುವುದೇ ಅನುಮಾನಪ್ರಮಾಣವು. ಯಾವುದಾದರೊಂದು ಹೋಲಿಕೆಯಿಂದ ವಸ್ತುಜ್ಞಾನವನ್ನು ಪಡೆಯುವುದೇ ಉಪಮಾನಪ್ರಮಾಣವು. ಆಪ್ತವಾಕ್ಯವೇ ಶಬ್ದಪ್ರಮಾಣವು. ಈ ನಾಲ್ಕು ಪ್ರಮಾಣಗಳ ಸಹಾಯದಿಂದಲೇ ದೇವರಿದ್ದಾನೆಂಬುದನ್ನು ನಾವು ನಿಶ್ಚಯಿಸಿಕೊಳ್ಳಬೇಕಾಗಿದೆ. ಯಥಾರ್ಥವಾದ ಜ್ಞಾನವನ್ನುಂಟುಮಾಡಿಕೊಡುವುದಕ್ಕೆ ಸಾಧನವಾದುದರಿಂದಲೇ ಇದಕ್ಕೆ ಪ್ರಮಾಣವೆಂಬ ಹೆಸರು ಬಂದಿರುತ್ತದೆ. ಲೋಕದಲ್ಲಿ ಅನಂತ ರಾಜರೂ ಅನೇಕ ಧನಿಕರೂ ಇದ್ದಾರೆ. ಇಂಥವರಿಗೆ ಧನಕನಕಾದಿ ಸಾಮಗ್ರಿಗಳು ಬೇಕಾದಷ್ಟು ಇದ್ದರೂ ಅವರ ಇಷ್ಟದಂತೆ ಎಲ್ಲ ಕಾರ್ಯಗಳೂ ನಡೆಯದಿರುವ ನಾವು ಕಣ್ಣಿನಿಂದ ನೋಡುತ್ತಲಿದ್ದೇವೆ. ಯಾವುದೊಂದು ಸಹಾಯಸಂಪತ್ತನ್ನು ಪಡೆಯದ ದರಿದ್ರನು ಆಕಸ್ಮಿಕವಾಗಿ ತನ್ನ ಬಯಕೆಗಳನ್ನೆಲ್ಲಾ ಪಡೆದುದನ್ನು ನಾವು ನೋಡುತ್ತಲಿದ್ದೇವೆ. ಇದರಿಂದ ದೇವರಿದ್ದಾನೆಂಬುದು ಪ್ರತ್ಯಕ್ಷಪ್ರಮಾಣದಿಂದ ಸಿದ್ಧವಾಗುತ್ತದೆ. ಕೋಟೆ ಕೆಂದುಕ ಗೋಪುರ ಪ್ರಾಸಾದ ಮೊದಲಾದವುಗಳನ್ನು ನೋಡಿ ಇವು ಯಾವನೋ ಒಬ್ಬ ಉತ್ತಮ ಶಿಲ್ಪಿಯಿಂದ ರಚಿಸಲ್ಪಟ್ಟಿರಬಹುದೆಂದು ಊಹಿಸಿ ನಿಶ್ಚಯಿಸುವಂತೆ, ಅದ್ಭುತವಾದ ಈ ಚರಾಚರಾತ್ಮಕವಾದ ಪ್ರಪಂಚವನ್ನು ನೋಡಿ ಈ ಪ್ರಪಂಚವನ್ನು ಸೃಷ್ಟಿಸಿದ ಕರ್ತನೊಬ್ಬನಿದ್ದಾನೆಂದು ತಿಳಿಯುವುದೇ ಅನುಮಾನ ಪ್ರಮಾಣವೆನಿಸುತ್ತದೆ ಇನ್ನು ಸೃಷ್ಟಿಕರ್ತನಾದ ದೇವರು ಆಕಾಶಾದಿಗಳಂತೆ ವ್ಯಾಪ್ತನೂ ಪದ್ಮಪತ್ರದಂತೆ ನಿರ್ಲಿಪ್ತನೂ ಎಂದು ಅನೇಕ ಪದಾರ್ಥಗಳೊಡನೆ ಹೋಲಿಸಿ ದೇವರ ಸ್ವರೂಪವನ್ನು ತಿಳಿಯುವುದೇ ಉಪಮಾನ ಪ್ರಮಾಣವೆನಿಸುವದು ದೇವರು ತಾನು ಸೃಷ್ಟಿಸಿದ ಪ್ರಪಂಚಕ್ಕೆ ಹಿತಾಹಿತ ಬೋಧೆಗಳನ್ನು ಮಾಡಿ ತನ್ನ ಸ್ವರೂಪವನ್ನು ವಿವರಿಸಿರುವ ವೇದವೇ ಶಬ್ದಪ್ರಮಾಣವು. ಈ ನಾಲ್ಕು ಪ್ರಮಾಣಗಳ ಸಹಾಯದಿಂದ ದೇವರುಂಟು ಪರಲೋಕವುಂಟು, ಪುಣ್ಯಪಾಪಗಳುಂಟು ಎಂಬುದಾಗಿ ನಿಶ್ಚಯಿಸಿ, ಪ್ರತಿಯೊಬ್ಬ ಮಾನವನು ದೇವರ ಆಜ್ಞೆಗೆ ವಿರೋಧವಿಲ್ಲದಂತೆ ಈ ಪ್ರಪಂಚವೆಂಬ ರಂಗಸ್ಥಲದಲ್ಲಿ ನಿಯಮದಿಂದಲೂ ಭಯದಿಂದಲೂ ವ್ಯವಹರಿಸಬೇಕಲ್ಲದೆ ಪ್ರಪಂಚ ನಾಟಕಕರ್ತನೂ ಸೂತ್ರಧಾರಿಯೂ ಆದ ದೇವರನ್ನೇ ಮರೆತು ಸ್ವೇಚ್ಛೆಯಾಗಿ ವ್ಯವಹರಿಸಬಾರದು. ಅಂಥ ಸ್ವೇಚ್ಛಾವಿಹಾರಿಗಳನ್ನು ನೋಡಿ ದೇವರು ಕರುಣಿಸಿಕೊಳ್ಳುವನಲ್ಲದೆ ಪ್ರೀತಿಪಡುವುದಿಲ್ಲ. ಬೇರು ಹೇಗೆ ಹೇಗೆ ಕೆಳಗೆ ಇಳಿಯುತ್ತ ಹೋಗುವುದೋ ಹಾಗೆ ಹಾಗೆ ಮರವು ಗಟ್ಟಿಗೊಳ್ಳುವಂತೆ, ದೇವರುಂಟೆಂಬ ನಂಬಿಕೆಯು ಹೇಗೆ ಹೇಗೆ ದೃಢಪಡುತ್ತ ಹೋಗುವುದೋ ಹಾಗೆ ಹಾಗೆ ಮನುಷ್ಯನು ಶಮದಮಾದಿಗುಣಗಳಿಗಾಕರನಾಗುತ್ತ ಬರುವನು. ಹಿಂದಿನ ಮಹರ್ಷಿಗಳು ಅಂಥ ದೇವರ ಸ್ವರೂಪವನ್ನು ಪಂಡಿತಪಾಮರರೆಲ್ಲರಿಗೂ ತಿಳಿಯಪಡಿಸುವುದಕ್ಕಾಗಿಯೇ ಕಾಶೀ ರಾಮೇಶ್ವರಾದಿ ಪವಿತ್ರ ಕ್ಷೇತ್ರಗಳಲ್ಲಿ ದೇವರ ವಿಗ್ರಹಗಳನ್ನು ಸ್ಥಾಪಿಸಿರುತ್ತಾರೆ. ಆ ವಿಗ್ರಹಗಳನ್ನು ನೋಡಿದವರಿಗೆ ದೇವರ ಗುಣಗಳು ದೇವರ ರೂಪವೂ ಪ್ರತಿಯೊಬ್ಬರ ಸ್ಮರಣಕ್ಕೆ ಬರಲೆಂಬುದೇ ಅವರ ಮುಖ್ಯ ಉದ್ದೇಶವು. ಸಾಮಾನ್ಯವಾಗಿ ದೇವರಿದ್ದನೆಂದು ನಂಬಿಕೊಂಡಿದ್ದರೂ ಆ ದೇವರ ಸ್ವರೂಪ ಸಾಕ್ಷಾತ್ಕಾರವು ಸ್ಥೂಲೋಪಾಸನೆಯಿಲ್ಲದೆ ಬೇರೆ ಮಾರ್ಗದಿಂದ ಯಾರಿಗೂ ಆಗುವುದಿಲ್ಲ. ಹಿಂದೆ ಯಾವ ಋಷಿಗಳೂ ವಿಗ್ರಹಾರಾಧನೆಯಿಲ್ಲದೆ ದೇವ ಸಾಕ್ಷಾತ್ಕಾರವನ್ನು ಪಡೆದಿರುವುದಿಲ್ಲ. ಆ ಋಷಿಗಳು ತಮ್ಮ ಹೃದಯಾಕಾಶದಲ್ಲಿರುವ ಭಗವಂತನ ಸ್ಮರಣೆಯನ್ನೇ ಸ್ಥಿರಪಡಿಸಿಕೊಳ್ಳುವುದಕ್ಕಾಗಿ ಸುಮುಹೂರ್ತದಲ್ಲಿ ವಿಧ್ಯುಕ್ತವಾಗಿ ಒಂದೊಂದು ವಿಗ್ರಹಗಳನ್ನು ನವ ತಮ್ಮ ಹಸ್ತದಿಂದಲೇ ಸ್ಥಾಪಿಸಿ ಷೋಡಶೋಪಚಾರಗಳಿಂದ ಪೂಜಿಸಿ ಜನಗಳಿಗೆ ದೇವರನ್ನು ಕಾಣುವ ಮಾರ್ಗವನ್ನು ತೋರಿಸಿರುತ್ತಾರೆ. ವೇದಶಾಸ್ತ್ರಪುರಾಣಗಳಿಂದಲೂ ದೇವರ ಸ್ವರೂಪದಲ್ಲಿ ದೇವತಾ ವಿಗ್ರಹವನ್ನು ಆರಾಧಿಸುವವರಿಗೆ ಭಗವಂತನ ಸಾಕ್ಷಾತ್ಕಾರವಾಗಿಯೂ ಆಗಲಾರದೆಂದು ಹೇಳುತ್ತಲೇ ಇವೆ. ದೇವರ ಸ್ವರೂಪವನ್ನು ಗೋಪಿಸಿದ ಶರೀರದಲ್ಲಿ ಹಾಲು ವ್ಯಾಪಿಸಿಕೊಂಡಿರುವಂತೆ ಎಲ್ಲೆಲ್ಲಿಯೂ ವ್ಯಾಪಿಸಿದ್ದರೂ ಆದರಿಂದ ಕರೆಯಲು ಪ್ರಯೋಜನವಾಗಲಾರದು. ಕೆಚ್ಚಲಿನ ದ್ವಾರಾ ಹಾಲು ಪ್ರತ್ಯಕ್ಷವಾಗುವಂತೆ ವಿಗ್ರಹಾರಾಧನೆಯ ದ್ವಾರಾ ದೇವರು ಪ್ರತ್ಯಕ್ಷವಾಗಬೇಕಾಗಿದೆ. ಲೋಕದಲ್ಲಿ ಯಾವ ಕಾರ್ಯವನ್ನಾದರೂ ಸ್ಥೂಲಶರೀರದಿಂದ ಮಾಡದೆ ಕೇವಲ ಮನಸ್ಸಿನಲ್ಲಿ ಸ್ಮರಿಸುತ್ತಿದ್ದರೆ ಆ ಕಾರ್ಯವು ಕೈಗೂಡುವುದಿಲ್ಲ. ದೇವರು ಸಾಮಾನ್ಯವಾಗಿ ಎಲ್ಲಾ ಕಡೆಯಲ್ಲಿದ್ದರೂ ಮಂತ್ರಪೂತವಾದ ವಿಗ್ರಹದಲ್ಲಿ ವಿಶೇಷಾಕಾರನಾಗಿರುವನೆಂಬುದೇ ವೇದಾನುಯಾಯಿಗಳ ನಂಬಿಕೆಯಾಗಿದೆ. ಇದರಿಂದ ಅಮೂರ್ತನಾದ ದೇವರನ್ನು ನಾವು ತಿಳಿಯಬೇಕಾದರೆ ಮೂರ್ತನಾದ ವಿಗ್ರಹಾರಾಧನೆಯನ್ನು ಮಾಡಬೇಕೆಂಬುದು ಸಿದ್ಧವಾಗುತ್ತದೆ. ಇಂಥ ವಿಗ್ರಹಾರಾಧನೆಯನ್ನು ತಿರಸ್ಕರಿಸುವಂಥ ಕೆಲ ನಾಗರಿಕರು ಈಗ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಲಿದ್ದಾರೆ. ದೇವರು ರೂಪ ಶೂನ್ಯನಾದಮೇಲೆ ಜಡವಾದ ಕಲ್ಲುಮಣ್ಣಿನಲ್ಲಿ ಮಾಡಿದ ವಿಗ್ರಹವನ್ನೇಕೆ ಪೂಜೆಮಾಡಬೇಕೆಂಬುದೇ ಇವರ ಉದ್ಗಾರವಾಗಿದೆ.

ಹೀಗೆ ಹೇಳುವ ಈಗಿನ ನವನಾಗರಿಕರು ತಾವು ಮಾತ್ರ ತಮ್ಮ ಮತಸ್ಥಾಪಕರಾದ ಮೂಲಪುರುಷರ ಪ್ರತಿಕೃತಿಗಳನ್ನೂ ಪುಸ್ತಕಗಳನ್ನೂ ಇಟ್ಟು ಪೂಜಿಸುತ್ತಿರುವದನ್ನು ನೋಡಿದರೆ ಇದು ವಿಗ್ರಹಾರಾಧನೆಗೆ ಸೇರುವುದಿಲ್ಲವೇ? ಬಾಯಿಯಲ್ಲಿ ವಿಗ್ರಹಾರಾಧನೆ ಮಾಡಬಾರದೆಂದು ಹೇಳುತ್ತ ತಾವು ಯಾವಾಗಲೂ ವಿಗ್ರಹಾರಾಧನೆಯನ್ನೇ ಮಾಡುತ್ತಿರುವುದು ಉತ್ತಮಲಕ್ಷಣವೇ? ಲೋಕದಲ್ಲಿ ಪ್ರಸಿದ್ಧಪುರುಷರ ಫೋಟೋಗಳಲ್ಲಿ ಆ ಪ್ರಸಿದ್ಧಪುರುಷರ ಹಸ್ತಪಾದಾದಿ ನಿಜಸ್ವರೂಪವು ಒಂದೂ ಇಲ್ಲದಿದ್ದರೂ ಆ ಭಾವಚಿತ್ರವು ಆ ಪುರುಷರ ಸ್ಮಾರಕವಾಗುವಂತೆ, ದೇವವಿಗ್ರಹಗಳು ದೇವರ ಸ್ಮಾರಕವನ್ನುಂಟುಮಾಡುವುದರಿಂದ ವಿಗ್ರಹದಲ್ಲಿ ದೇವತಾಶಕ್ತಿಯಿದೆ ಎಂದು ಎಲ್ಲರ ಅನುಭವಕ್ಕೂ ಬಂದೇ ಬರುತ್ತದೆ. ಲೋಕದಲ್ಲಿ ತಮ್ಮ ತಂದೆತಾಯಿಗಳ ಫೋಟೋಗಳನ್ನು ನೋಡಿ ಪೂಜ್ಯಬುದ್ಧಿಯಿಂದ ಪೂಜಿಸುವಂತೆ ಈಶ್ವರನ ವಿಗ್ರಹದಲ್ಲಿ ಇದು ಕಲ್ಲು ಇದು ಮಣ್ಣು ಎಂಬ ದುಷ್ಟ ಭಾವನೆ ಮಾಡದೆ ಈಶ್ವರಬುದ್ಧಿಯಿಂದ ಅರ್ಚಿಸುತ್ತಲೂ ಧ್ಯಾನಿಸುತ್ತಲೂ, ಸ್ಮರಿಸುತ್ತಲೂ ಬಂದರೆ ಆ ವಿಗ್ರಹಾರಾಧನದ್ವಾರಾ ಪರಮೇಶ್ವರನು ಸಾಕ್ಷಾತ್ಕಾರನಾಗಿ ಮುಕ್ತಿಯನ್ನೀಯುವನೆಂದು ತಿಳಿಯುವುದೇ ಸನಾತನ ಧರ್ಮಾನುಯಾಯಿಗಳ ಕರ್ತವ್ಯವಾಗಿರುತ್ತದೆ.

ಯುದ್ಧವಾರ್ತೆ.

ಹಿಟ್ಲರನ ಕಚೇರಿಗೇ ಬಾಂಬಿನೇಟು

ಕಳೆದ ಸೋಮವಾರ ರಾತ್ರಿ ಬ್ರಿಟಿಷ್ ವಿಮಾನಗಳು ಬರ್ಲಿನ್ ಮೇಲೆ ಮುತ್ತಿಗೆ ನಡೆಸಿದಾಗ ಹರ್ ಹಿಟ್ಲರನ ಮುಖ್ಯ ಕಚೇರಿಗೆ ಏಟು ಬಿತ್ತೆಂದು ಬರ್ಲಿನ್ನಿನಿಂದ ಸ್ಟಾಕ್‌ಹೋಮಿಗೆ ಬಂದ ಪ್ರವಾಸಿಯೊಬ್ಬನು ತಿಳಿಸಿದಾನೆ. ಈಗ ಹಿಟ್ಲರ್ ಮುಖ್ಯಕಚೇರಿ ಬಳಿಗೆ ಯಾರೂ ಬರದಂತೆ ಕಾವಲು ಹಾಕಿದ್ದಾರೆಂದು ಹೇಳಲಾಗಿದೆ.

೬ ದಿನಗಳಲ್ಲಿ ೧೫,೦೦೦ ಜರ್ಮನರ ಸಾವು

ಸ್ಮೊಲೆನ್ಸ್ಕ್ ಮತ್ತು ಸೆವಸ್ಕ್ ರಂಗಗಳಲ್ಲಿ ಶತ್ರುಗಳಿಂದ ಪ್ರತಿಭಟನೆ ಜೋರಾಗಿದ್ದರೂ ರಷ್ಯನರು ಮುಂದೆ ನುಗ್ಗುತ್ತಿದ್ದಾರೆ. ರಷ್ಯನ್ ವಿಮಾನಗಳ ಚಟುವಟಿಕೆ ಅಸಾಧ್ಯವಾಗಿದೆ. ಟಾಗನ್‌ರಾಗ್ ಬಿದ್ದ ಮೇಲೆ ಸಮುದ್ರದ ಕಡೆಗೆ ರಷ್ಯನರ ಓಟ ಬಿರುಸಿನಿಂದ ಸಾಗಿದೆ. ಟಾಗನ್‌ರಾಗ್ ಕದನದಲ್ಲಿ ನಾಶವಾಗದೆ ಉಳಿದು, ಹಿಂದೋಡುತ್ತಿರುವ ನಾಜಿಗಳ ಅಲ್ಪ ಸೇನೆಯನ್ನು ರಷ್ಯನರು ನಾಶಮಾಡುತ್ತಿದ್ದಾರೆ. ೬ ದಿನಗಳ ಕದನದಲ್ಲಿ ಟಾಗನ್‌ರಾಗ್ ಬಳಿ ೧೫,೦೦೦ ಜರ್ಮನರು ಹತರಾದರು. ಉತ್ತರದಲ್ಲಿ ಡೊನೆಟ್ಸ್ ಕೇಂದ್ರಸ್ಥಾನದಲ್ಲಿರುವ ಸ್ಟಾಲಿನೋ ನಗರದಿಂದ ರಷ್ಯನರು ಕೇವಲ ೩೬ ಮೈಲಿ ದೂರದಲ್ಲಿದ್ದಾರೆ.

ಬೋರಿಸ್ ದೊರೆಗಳ ನಿಧನ

ಬಲ್ಗೇರಿಯದ ದೊರೆಗಳಾಗಿದ್ದ ಬೋರಿಸರು ಕಳೆದ 28ನೆಯ ತಾರೀಖು ೬ ೩೦ಕ್ಕೆ ನಿಧನರಾದರೆಂದು ಇಟಾಲಿಯನ್ ವಾರ್ತಾಸಂಸ್ಥೆ ತಿಳಿಸುತ್ತದೆ. ಹೃದಯ ಮತ್ತು ಮಿದುಳಿನ ತೊಂದರೆಯಿಂದ ಅವರು ಸತ್ತರೆಂದು ಜರ್ಮನ್ ವಾರ್ತಾಸಂಸ್ಥೆ ತಿಳಿಸುತ್ತದೆ. ಆದರೆ- ಹರ್ ಹಿಟ್ಲರನೊಂದಿಗೆ ಮಾತನಾಡಿಕೊಂಡು ಹಿಂತಿರುಗಿದ ಮೇಲೆ ಮಂಗಳವಾರ ರಾತ್ರಿ ಬೋರಿಸ್ ದೊರೆಯನ್ನು ಯಾರೋ ಗುಂಡಿನಿಂದ ಹೊಡೆದರೆಂದೂ ತೀವ್ರ ಗಾಯವಾಯಿತೆಂದೂ ದೊರೆಯ ಎದೆಗೆ 3 ಗುಂಡುಗಳು ತಗುಲಿದ್ದವೆಂದೂ ಸೋಫಿಯಾ ಹೊರಗಡೆ ಇರುವ ರೈಲ್ವೆ ಸ್ಟೇಷನ್ನಿನಲ್ಲಿ ಇಳಿದು ತಮ್ಮ ಕಾರನ್ನು ಹತ್ತಿದಾಗ ಈ ಹತ್ಯಾಕಾಂಡ ಜರುಗಿತೆಂದೂ ಪೋಲೀಸ್ ಇನ್‌ಸ್ಪೆಕ್ಟರೊಬ್ಬನು ಗುಂಡು ಹಾರಿಸಿದನೆಂದೂ ಹೇಳಲಾಗಿದೆ.

ಡೆನ್ಮಾರ್ಕಿನಲ್ಲಿ ಜರ್ಮನ್ ದಂಡನಾಯಕರ ಆಜ್ಞೆ

“ಯಾವ ಅಧಿಕಾರಿಯೂ ತನ್ನ ಸ್ಥಾನ ಬಿಡಕೂಡದು ಎಲ್ಲರೂ ಜರ್ಮನ್ ಅಧಿಕಾರಿಗಳ ನೀತಿನಂತೆ ನಡೆಯಬೇಕು ೫ ಮಂದಿಗಿಂತ ಹೆಚ್ಚಾಗಿ ಒಂದು ಕಡೆ ಜನವು ಸೇರಲಾಗದು ಕತ್ತಲಾದೊಡನೆಯೇ ಸಿನಿಮಾ ಮಂದಿರಗಳು ಮುಚ್ಚಲ್ಪಡಬೇಕು ರಾತ್ರಿ ಯಾವ ರಸ್ತೆಯಲ್ಲೂ ಸಂಚಾರ ಇರಕೂಡದು. ಮುಂದೆ ತಿಳಿಸುವವರೆಗೆ ಯಾರೂ ಟೆಲಿಗ್ರಾಫ್, ಟೆಲಿಫೋನ್‌ಗಳನ್ನು ಉಪಯೋಗಿಸಲಾಗದು. ಮುಷ್ಕರ ನಿಷೇಧ ಮುಷ್ಕರಕ್ಕೆ ‘ಉತ್ತೇಜನ ಕೊಡುವವರಿಗೆ ಸಾವು ಸಿದ್ಧ ಈ ಆಜ್ಞೆಯಂತೆ ನಡೆದುಕೊಳ್ಳುವ ಡೇನರ ಪ್ರಾಣ ಮತ್ತು ಆಸ್ತಿಗಳಿಗೆ ನಾಜಿ ಸರ್ಕಾರ ಹೊಣೆ” ಎಂಬದಾಗಿ ಡೆನ್ಮಾರ್ಕಿನಲ್ಲಿ ನಾಜಿ ಅಧಿಕಾರಿಗಳು ಆಜ್ಞೆ ಹೊರಡಿಸಿದ್ದಾರೆ

ಡೆನ್ಮಾರ್ಕ್ ರಾಜದಂಪತಿಗಳ ಬಂಧ

ಡೆನ್ಮಾರ್ಕಿನ ದೊರೆಯಾದ ಕ್ರಿಶ್ಚಿಯನರನ್ನು ಮತ್ತು ರಾಣಿಯವರನ್ನು ಜರ್ಮನರು ದಸ್ತಗಿರಿ ಮಾಡಿದ್ದಾರೆ ಕಳೆದ ಜೂನ್ ತಾರೀಖು ಭಾನುವಾರ ಬೆಳಗ್ಗೆ ೨೦೦ ಮಂದಿ ಜರ್ಮನ್ ಯೋಧರು ಸಾರ್ಗೆನ್‌ಫ್ರಿ ಕೋಟೆಗೆ ಬಂದು ರಾಜದಂಪತಿಗಳು ಸೆರೆಯಾಗಿದ್ದಾರೆಂದು ಪ್ರಕಟಿಸಿದರು. ರಾಜಕುಮಾರ, ಆತನ ಹೆಂಡತಿ ಸಹ

ಜಕುಟುಂಬಕ್ಕೆ ಸೇರಿದ ಇತರರನ್ನು ಜೇರಿ ಕಡಿ ಂಧಿಸಲಾಗಿದೆ. ಅಮೆಲೀನ್ ಬರ್ಗ್ ಮತ್ತು ರೋಸೆ ಬರ್ಗ್ ಕೋಟೆಗಳನ್ನು ಜರ್ಮನರು ಹಿಡಿಯಲು ಯತ್ನಿಸಿದಾಗ ರಾಜಭಟರು ಉಗ್ರಪ್ರತಿಭಟನೆ ತೋರಿ ದರು, ಗುಂಡು ಹಾರಿಸಿದರು ಇದರ ಫಲವಾಗಿ ನೂರಾ ರು ಜರ್ಮನರು ಹತರಾದರು ಕ್ರಿಶ್ಚಿಯನ್ ದೊರೆಗಳೇ ಪ್ರತಿಭಟನೆ ನಿಲ್ಲಿಸಬೇಕೆಂದು ಆಜ್ಞೆ ಮಾಡುವವರೆಗೆ ರಾಜಭಟರು ಸುಮ್ಮನಾಗಲಿಲ್ಲ ಸುಮಾರು ೫೦೦ ಮಂದಿ ಡೇನರು—ಮುಖ್ಯವಾಗಿ ನೌಕಾ ಬಲದವರು ಮತ್ತು ಪೋಲೀಸರು ರಾತ್ರಿ ಸಂಗ್ರಾಮನೌಕೆಗಳಲ್ಲಿ ಸ್ವೀಡನ್ನಿಗೆ ಓಡಿಹೋಗಿದ್ದಾರೆ ಇನ್ನೂ ಡೇನಿಶರು ದೋಣಿಗಳಲ್ಲಿ ಸ್ವೀಡನ್ನಿಗೆ ತಪ್ಪಿಸಿಕೊಂಡು ಬರುತ್ತಲೇ ಇದ್ದಾರೆ

ಬ್ರಿಟಿಷ್ ಮಹಾಪ್ರಧಾನರ ಭಾಷಣ

ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್ಲರು ರೇಡಿಯೋ ಮೂಲಕ ಕೆಳಗೆ ಕಂಡಂತೆ ಭಾಷಣ ಮಾಡಿ ರು

“ಕೆನಡಾ ದೇಶವು ಬ್ರಿಟನ್ನಿಗೆ ನೀಡಿರುವ ಸಹಾಯ ಪಾರವಾದುದು ಬ್ರಿಟನ್ನಿನ ತೀರವನ್ನು ಶತ್ರುಗಳು ಮುತ್ತದಂತೆ ರಕ್ಷಿಸುವುದರಲ್ಲಿ ಕೆನಡಾ ಸೇನೆಯು ಮೊದಲಿಂದಲೂ ಪ್ರಥಮ ಪಾತ್ರ ವಹಿಸಿದೆ ಆ ದೇಶದ ನಿಕರು ನಾನಾ ರಂಗಗಳಲ್ಲಿ ವಿಶೇಷ ಧೈರ್ಯದಿಂದ ಹೋರಾಡುತ್ತಿದ್ದಾರೆ ಕೆನಡಾದಲ್ಲಿ ಭಾರಿ ವೈಮಾನಿಕ ಕ್ಷಣ ಕೇಂದ್ರವಿದೆ ಬ್ರಿಟನ್, ಆಸ್ಟ್ರೇಲಿಯಾ, ನ್ಯೂಜೀ ಲೆಂಡ್ ತರುಣರೆಲ್ಲ ಅಲ್ಲಿಗೆ ಹೋಗಿ ವಿಮಾನ ಶಿಕ್ಷಣ ವನ್ನು ಪಡೆದು ಬರುತ್ತಿದ್ದಾರೆ ಕೆನಡದ ಕಾರ್ಯ ಇಷ್ಟ ಕ್ಕೇ ಮುಗಿಯಲಿಲ್ಲ ಹಡಗು ನಿರ್ಮಾಣ ಕಾರ್ಯದಲ್ಲಿ ಅದು ಕೀರ್ತಿಗಳಿಸಿದೆ ಅಟ್ಲಾಂಟಿಕ್‌ನಲ್ಲೂ ಇತರ ಸಮುದ್ರಗಳಲ್ಲೂ ಈ ಹಡಗುಗಳು ಜಲಮಾರ್ಗಗಳನ್ನು ಕಾಯುತ್ತಿವೆ

ಕೆನಡದ ಸಂಗ್ರಾಮ ವಸ್ತು ನಿರ್ಮಾಣ ಕಾರ್ಖಾನೆ ಳು ಈ ಸಂಗ್ರಾಮದಲ್ಲಿ ಬಹು ಮುಖ್ಯ ಪಾತ್ರವಹಿಸಿವೆ ಸುಮಾರು ೨೦೦೦ ಮಿಲಿಯನ್ ಡಾಲರುಗಳಷ್ಟು ಸಂಗ್ರಾಮ ವಸ್ತುಗಳನ್ನು ಕನಡಾ ದೇಶವು ಬ್ರಿಟನ್ನಿಗೆ ದಾನ ಮಾಡಿದೆ. ಹಾಗೆ ಮಾಡಬೇಕೆಂಬ ನಿರ್ಬಂಧವೇನೂ ಇರಲಿಲ್ಲ ಕೆನಡವು ಈ ರೀತಿ ಔದಾರ್ಯ ತೋರಿಸದೆ ಇದ್ದಿದ್ದರೆ ಭಾರಿ ಸಾಲವು ಇಂದು ಬ್ರಿಟನ್ನಿನ ಮೇಲೆ ಬೀಳುತ್ತಿತ್ತು ಮುಂದಿನ ಮಾನವ ಸಂಕಟವನ್ನು ನಿವಾರಿಸಬೇಕೆಂಬ ಆಕಾಂಕ್ಷೆಯೇ ಈ ಔದಾರ್ಯಕ್ಕೆ ಕಾರಣವಾಯಿತು

ಫ್ರಾನ್ಸ್ ಬಿಟ್ಟರೆ ಇನ್ನೊಂದು ಮಹಾ ಜನಾಂಗ ದೊಂದಿಗೆ ನಾವು ಒಪ್ಪಂದ ಮಾಡಿಕೊಂಡಿದ್ದೇವೆ ಅದೇ ರಷ್ಯಾ ಪರಸ್ಪರ ಸೌಹಾರ್ದದಿಂದಿರುವ ಮತ್ತು ಪರ ರ ಸಹಾಯ ನೀಡುವ ಒಪ್ಪಂದವನ್ನು ಬ್ರಿಟನ್ನು ರಷ್ಯಾದೊಂದಿಗೆ ಮಾಡಿಕೊಂಡಿದೆ. ಇದರ ಅವಧಿ ೨೦ ವರ್ಷ ಅದನ್ನು ಪಾಲಿಸಲು ನಾವು ಸರ್ವ ಪ್ರಯತ್ನ ವನ್ನೂ ಮಾಡುವೆವು ಜಪಾನಿನ ಮೇಲೆ ಕದನವನ್ನು ನಡಿಸುವುದು ಸಹ ಕ್ವಿಬೆಕ್ ಸಮ್ಮೇಳನದ ಉದ್ದೇಶ ವಾಗಿತ್ತು. ಪರಸ್ಪರ ಹೋರಾಡುವುದಿಲ್ಲವೆಂದು ರಷ್ಯವು ಜಪಾನಿನೊಂದಿಗೆ ೫ ವರ್ಷ ಅವಧಿಯ ಒಪ್ಪಂದಮಾಡಿಕೊಂಡಿದೆ ಆದ್ದರಿಂದ ರಷ್ಯವು ಕ್ವಿಬೆಕ್ ಸಮ್ಮೇಳನದಲ್ಲಿ ಪಾತ್ರವಹಿಸಿದರೆ ಅದಕ್ಕೆ ಅನಾನುಕೂಲವಾದೀತೆಂದು ಪರಿಗಣಿಸಲಾಯಿತು ಹಾಗೆ ಬರ ಬೇಕೆಂದು ನಾವು ಆಹ್ವಾನಿಸುವುದುಕೂಡ ಉಚಿತವಾಗಿ ಇರಲಿಲ್ಲ ಆದರೆ ಸ್ಟಾಲಿನ್ನರೊಂದಿಗೆ ಭೇಟಿಯಾಗಿ ಮಾತನಾಡಬೇಕೆಂಬ ಆಸೆ ನನಗೂ ರೂಜ್‌ವೆಲ್ಟರಿಗೂ

ಅದು ಇನ್ನೂ ನೆರವೇರದೇ ಇರುವುದಕ್ಕೆ ನಾವು ರ್ವ ಪ್ರಯತ್ನ ನಡೆಸದೇ ಇರುವುದಾಗಲಿ, ಬಹಳ ದೂರದ ಪ್ರಯಾಣವನ್ನು ಕೈಗೊಳ್ಳಲು ನಾವು ಸಿದ್ಧ ರಿಲ್ಲದುದಾಗಲಿ ಕಾರಣವಲ್ಲ, ರಣರಂಗದಲ್ಲಿ ದಂಡ ನಾಯಕರಾಗಿ ನಿಂತು ರಷ್ಯ ಸೇನೆಗಳನ್ನು ವಿಜಯದ ಮಾರ್ಗದಲ್ಲಿ ಒಯ್ಯುತ್ತಿರುವ ಸ್ಟಾಲಿನ್ನರು ರಣರಂಗ ದಿಂದ ಬರಲಾರದವರಾಗಿರುವುದೇ ಇದಕ್ಕೆ ಕಾರಣ

ರಷ್ಯಾ ರಂಗದಿಂದ ಬಂದಿರುವ ಇತ್ತೀಚಿನ ಸುದ್ದಿಗಳನ್ನು ನೋಡಿದರೆ ಸ್ಟಾಲಿನ್ನರು ಒಂದು ಕ್ಷಣವನ್ನೂ ವ್ಯರ್ಥಮಾಡುವುದಿಲ್ಲ ರಷ್ಯನರು ಪ್ರಚಂಡವಾದ ಜೇಸಿಗೆ ಮುತ್ತಿಗೆಯನ್ನಾರಂಭಿಸಿ. ಖಾರಕೋವ್, ಟಾಗನ್‌ರಾಗ್‌ಗಳನ್ನೂ ನೂರಾರು ನಗರಗಳನ್ನೂ ಹಳ್ಳಿಗಳನ್ನೂ ನಾಜಿಗಳ ಹಿಡಿತದಿಂದ ಬಿಡುಗಡೆ ಮಾಡಿದ್ದಕ್ಕಾಗಿ ರಷ್ಯಕ್ಕೆ ನಮ್ಮ ಅಭಿನಂದನೆಗಳನ್ನರ್ಪಿಸುವೆವು ಸ್ಟಾಲಿನ್ನರನ್ನು ಭೇಟಿಮಾಡುವ ಗುರಿ ಸದಾ ನಮ್ಮ ಮುಂದೆ ಇದ್ದೇ ಇದೆ ಆದರೆ ಈ ಮಧ್ಯೆ ಬ್ರಿಟನ್, ಅಮೆರಿಕಾ ಮತ್ತು ರಷ್ಯ ಈ ಮೂರು ದೇಶಗಳ ವಿದೇಶಾಂಗ ಸಚಿವರಾಗಲಿ ಅವರ ಪ್ರತಿನಿಧಿಗಳಾಗಲಿ, ಅನುಕೂಲವಾದ ಕಡೆ ಸೇರಿ ಸಂಗ್ರಾಮ ಮುಗಿದ ಮೇಲೆ ವಿಶ್ವದ ಭದ್ರತೆಗೆ ಕೈಗೊಳ್ಳಬೇಕಾದ ಕಾರ್ಯಕ್ರಮಗಳನ್ನು ಕುರಿತು ಚರ್ಚಿಸಬೇಕಾಗಿದೆ, ಅಲ್ಲದೆ ಮೂರು ದೇಶಗಳ ಪ್ರಮುಖರು ಸೇರಿ ಮಾತನಾಡುವವರೆಗೆ ಪೂರ್ವಭಾವಿ ಮಾತುಕತೆಗಳನ್ನು ಮುಂದುವರಿಸಬೇಕಾಗಿದೆ ಇಷ್ಟವನ್ನು ಬಿಟ್ಟರೆ ನಾವು ಕಾರ್ಯಕ್ರಮವನ್ನು ಕೈಗೊಳ್ಳುವದಿಲ್ಲ

ಪಶ್ಚಿಮ ಫ್ರಾನ್ಸಿಗೆ ನುಗ್ಗಿ ದ್ವಿತೀಯ ರಂಗ ಸ್ಥಾಪಿಸುವ ವಿಚಾರದಲ್ಲಿ ಕಳೆದ ಎರಡು ವರ್ಷಗಳಿಂದ ನಾವು ನಾನಾ ಸುದ್ದಿಗಳನ್ನು ಕೇಳಿದ್ದೇವೆ. ಅಂತಹ ಮಿಲಿಟರಿ ಕಾರ್ಯಕ್ರಮವು ಎಷ್ಟು ಅಪೇಕ್ಷಣೀಯವಾದುದೆಂಬುದು ಯಾರಿಗಾದರೂ ತಿಳಿಯದೇ ಇರದು ಜರ್ಮನ್ ಸೇನೆಯ ಪ್ರಹಾರವೆಲ್ಲ ಮುಖ್ಯವಾಗಿ ರಷ್ಯನರ ಮೇಲೆ ಬೀಳುತ್ತಿದೆ ಆದ್ದರಿಂದ, ದ್ವಿತೀಯರಂಗವನ್ನು ಸ್ಥಾಪಿಸಿ ತಮ್ಮ ಮೇಲಿನ ಭಾರವನ್ನಿಳಿಸಬೇಕೆಂದು ರಷ್ಯನರು ಒತ್ತಾಯಪಡಿಸುವುದು ಸ್ವಾಭಾವಿಕವಾಗಿಯೇ ಇದೆ ಆದರೂ ಅವರು ಜರ್ಮನ್ ಮಿಲಿಟರಿ ಯಂತ್ರವನ್ನು ಪುಡಿ ಪುಡಿ ಮಾಡಿದ್ದಾರೆ ಅವರ ಧೈರ್ಯ ಅಸಮಾನವಾದುದು ಒಂದಾನೊಂದು ಕಾಲದಲ್ಲಿ ಫ್ರಾನ್ಸಿನಲ್ಲಿ ನಾವು ಅತ್ಯುತ್ತಮ ವ್ಯೂಹವನ್ನು ಸ್ಥಾಪಿಸಿದ್ದೆವು ಅದನ್ನು ಕಡಿದುಹಾಕಲಾಯಿತು ಬ್ರಿಟಿಷ್ ಮತ್ತು ಅಮೆರಿಕನ್ ಸೇನೆಗಳು ಕಡಲ್ಗಾಲುವೆಯನ್ನು ದಾಟಿ, ಫ್ರಾನ್ಸಿನಲ್ಲಿ ಜರ್ಮನರನ್ನು ಎದುರಿಸುವ ಕಾಲ ಎಂದು ಬಂದೀತೋ ಎಂದು ನಾನು ಎದುರು ನೋಡುತ್ತಿದ್ದೇನೆ ಇದು ಯಾವಾಗ ನಡೆದೀತೆಂಬುವನ್ನು ನಾನ ಹೇಳಲಾರ ಬೇಗನೆ ಸಂಭವಿಸಬಹುದೋ ಇನ್ನೂ ಬಹುಕಾಲವಾದೀತೋ ಎಂಬುದನ್ನು ತಿಳಿಸಲು ಅಶಕ್ತನಾಗಿದ್ದೇನೆ ಆದರೆ ಇಷ್ಟು ಖಚಿತ ಎಡು ಹಾಗಿದಾಗ ತಕ್ಕ ಪ್ರತಿಫಲ ದೊರೆಯುವುದೆಂಬ ನಂಬಿಕೆಯಿಂದ ನಾವು ಹಾಗೆ ಮಾಡಿದ್ದೇವೆಂದು ಭಾವಿಸಬೇಡಿರಿ

ಬ್ರಿಟನ್ನೂ ಮತ್ತು ಅಮೇರಿಕವೂ ಈಗ ಕೈಗೊಂಡಿರುವ ಮಿಲಿಟರಿ ಕಾರ್ಯಕ್ರಮಗಳೇ ಅತ್ಯುತ್ತಮವಾದುವೆಂಬುದು ನನ್ನ ಮತ ಸ್ವತಃ ನಾನು ಬರೀ ದ್ವಿತೀಯ ರಂಗವಲ್ಲ ತೃತೀಯರಂಗವನ್ನೂ ಸ್ಥಾಪಿಸಬೇಕೆಂದು ಬಯಸುತ್ತೇನೆ ಪಶ್ಚಿಮ ರಾಷ್ಟ್ರಗಳು ಎರಡು ಕೈಗಳಿಂದಲೂ ಹೋರಾಡುತ್ತಿರಬೇಕು ಅಮೇರಿಕನ್ ಮತ್ತು ಬ್ರಿಟಿಷ್ ಸೇನೆಗಳು ಆಫ್ರಿಕದ ಮೇಲೆ ದಂಡಯಾತ್ರೆ ಹೋಗಿ ಅಲ್ಲಿ ಶತ್ರುಗಳ ಹೆಸರಿಲ್ಲದಂತೆ ಮಾಡಿದವು ಆಫ್ರಿಕಾದಲ್ಲಿದ್ದ ಜರ್ಮನ್ ಮತ್ತು ಇಟಾಲಿಯನ್ ಸೇನೆಗಳು ನಾಶವಾದವು ಕನಿಷ್ಠಪಕ್ಷ ಐದು ಲಕ್ಷ ಮಂದಿ ಶತ್ರುಗಳು ಸೆರೆ ಸಿಕ್ಕಿದಾರೆ ಕೇವಲ ೩೮ ದಿನಗಳಲ್ಲಿ ೪ ಲಕ್ಷ ಶತ್ರುಯೋಧರನ್ನು ಎದುರಿಸಿ ಸಿಸಿಲಿಯನ್ನು ಜಯಿಸಿದೆವು ಮುಸೊಲಿನಿ ಅಧಿಕಾರ ಪೀಠದಿಂದ ಉರುಳಿಬಿದ್ದ ಕೆಟ್ಟವರ ರಂಗ ಮಾಡಿದ್ದಕ್ಕಾಗಿ ಇಟಲಿ ಇಂದು ಕಷ್ಟ ಅನುಭವಿಸುತ್ತಿದೆ ಇಟಲಿಯನ್ನು ರಣಭೂಮಿಯನ್ನಾಗಿಮಾಡಿ, ಜರ್ಮನ್ ಭೂಮಿಯನ್ನು ಸಂಗ್ರಾಮದಿಂದ ದೂರ ಮಾಡಲು ಹಲವು ನಾಜಿಪಡೆಗಳನ್ನು ಇಟಲಿಗೆ ಬಂದುಮಾಡಿಕೊಳ್ಳಲಾಗಿದೆ

ರಷ್ಯನರ ಜಯದ ಸಲವಾಗಿ ಬಾಲ್ಕನ್ಸ್ ಕ್ಷೇತ್ರದಲ್ಲಿ ಬಹಳ ಮುಖ್ಯವಾದ ರಾಜಕೀಯ ಘಟನೆಗಳು ನಡೆಯುತ್ತಿವೆ ಕಳೆದ ೩೦ ವರ್ಷಗಳಲ್ಲಿ ಬಲ್ಗೇರಿಯನರ ಸ್ವಾತಂತ್ರ್ಯವನ್ನು ಎರಡುಸಾರೆ ರಷ್ಯನರು ಉಳಿಸಿದರು ಹೀಗಿದ್ದರೂ ದೊರೆಗಳು ಕೆಟ್ಟಸಾರಿಯಲ್ಲಿ ಬಿದ್ದು ಪ್ರಜೆಗಳ ಇಷ್ಟಕ್ಕೆ ವಿರುದ್ಧವಾಗಿ ವರ್ತಿಸಿದರು ಅವರ ಪಾಪವೇ ಅವರಿಗೆ ಸಾವನ್ನು ತಂದಿತು! ಬಾಲ್ಕನ್ಸ್ ಕ್ಷೇತ್ರದಲ್ಲಿ ಇಂದು ಬೇಗೆ ಹತ್ತಿಕೊಂಡಿದೆ ಇಟಲಿ ತತ್ತರಿಸುತ್ತಿದೆ ಅದರ ಹಿಂದೆ ಇನ್ನೂ ಸಾಲು ಸಾಲಾ ಗಳು ಶಾಂತಿಯ ಪಥವನ್ನು ತುಳಿದಾವೆಂಬ ನಿರೀಕ್ಷೆ ಇದೆ.

ಜಪಾನಿನ ಮೇಲೆ ಯುದ್ಧವನ್ನು ಎಳಸಡಿಸುವ ವಿಚಾರಕ್ಕೆ ಕ್ವಿಬೆಕ್ ಸಮ್ಮೇಳನದ ಬಹು ಕಾಲವನ್ನು ವಿನಿಯೋಗಿಸಲಾಯಿತು ಅಮೇರಿಕದ ಮೂಲ ಸೇನೆಗಳೂ ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್ ಪಡೆಗಳೂ ಪೆಸಿಫಿಕ್‌ನಲ್ಲಿ ಜಪಾನರನ್ನು ಎದುರಿಸುವ ಜವಾಬ್ದಾರಿ ಹೊತ್ತಿವೆ ಆಗ್ನೇಯ ಏಷ್ಯಾಕ್ಕೊಬ್ಬ ದಂಡನಾಯಕರನ್ನು ಆರಿಸಿದ್ದಾಯಿತು ಅವರು ಮಾರ್ಷಲ್ ಚಿಯಾಂಗ್ ಕೈ ಶೇಕರೊಂದಿಗೆ ಸಹಕರಿಸಿ, ಕೆಲಸ ಮಾಡುವರು

ಲಾರ್ಡ್ ಲೂಯಿಮೌಂಟ್ ಬೇಟನರವರಿಗೆ ಇನ್ನೂ ೪೩ ವರ್ಷ. ಇವರು ಭೂ, ಜಲ, ವಾಯು ಈ ಮೂರು ಕದನಗಳಲ್ಲೂ ನಿಷ್ಣಾತರು.

ಜರ್ಮನರ ಪತನವು ಈ ವರ್ಷವೇ ಆಗುವದೇ ಅಥವಾ ಇನ್ನೊಂದು ವರ್ಷ ತಡೆಯುವುದೇ? ಎಂಬ ಪ್ರಶ್ನೆಯನ್ನು ಅನೇಕರು ನನಗೆ ಹಾಕಿದರು ಈ ವರ್ಷ ಯೂರೋಪು ಹಿಟ್ಲರನ ಮೇಲೆ ದಂಗೆಯೇಳುವುದು ಖಂಡಿತ ಡೆನ್ಮಾರ್ಕಿನಲ್ಲಿ ಆಗುತ್ತಿರುವುದು ಇದಕ್ಕೆ ಮತ್ತೊಂದು ಉದಾಹರಣೆ. ಮಾನವನ ಇತಿಹಾಸದಲ್ಲೇ ಕಾಣದಂತಹ ದ್ವೇಷಕ್ಕೆ ಜರ್ಮನರು ಗುರಿಯಾಗುವರು. ಆದರೂ ಜರ್ಮನಿ ಯಾವ ಕಾಲಕ್ಕೆ ಸೋಲುವುದೆಂದು ನಿಕರವಾಗಿ ಹೇಳುವಂತಿಲ್ಲ. ಮಿತ್ರದೇಶಗಳ ಪ್ರಹಾರ ವೇನೋ ದಿನದಿನಕ್ಕೆ ಜೋರಾಗುತ್ತಿದೆ ಸಂಗ್ರಾಮದ ಬೇಗೆ ಬರ್ಲಿನ್ನಿಗೆ ತಾಕುತ್ತಿದೆ ಎಂದು ತಿಳಿಸಿದರು

ಸ್ವೀಕಾರ

ಕೊಲ್ಲಾಪುರದಲ್ಲಿರುವ ಶ್ರೀಮತಿ ಥೋಬಡೆ ಸಿದ್ಧವ್ವಬಾಯಿಯವರ ದ್ವಿತೀಯ ಪುತ್ರ ಚಿ॥ ಶಿವಶಂಕರಪ್ಪನ ವರ್ಧಂತ್ಯುತ್ಸವದಲ್ಲಿ ಪ್ರಭಾಪೋಷಣ ಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ಸೌ॥ ಕಿ ಗೀರದೀಬಾಯಿ ಕಟಾಪ ಇವರ ದ್ವಾರಾ ತಲ್ಪಿರುತ್ತವೆ

ವಿಜಾಪುರ ಜಿ॥ ಜೈನಾಪುರಗ್ರಾಮದಲ್ಲಿರುವ ಮ॥ ರಾ॥ ಶಿವಶಿಂಪಿ ಚನ್ನಪ್ಪನವರ ಪುತ್ರ ಚಿ॥ ಸಂಗಪ್ಪನ ಶೋಭನ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ತೆಗೆಯಿಸಿದ 1 ರೂಪಾಯಿಯು ಶ್ರೀಜೈನಾಪುರ ಹಿರೇಮಠದ ಚರಮೂರ್ತಿಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಅರಸೀಕೆರೆ ತಾ॥ ವೃಂದಾವನಹಳ್ಳಿಗ್ರಾಮದ ವೀರಶೈವರು ನಡೆಯಿಸಿದ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆ ಮತ್ತು ಶ್ರೀ ರೇಣುಕ ವಿಜಯ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂಪಾಯಿಯು ಮ॥ ರಾ॥ ಎ. ಚನ್ನಪ್ಪನವರ ದ್ವಾರಾ ತಲ್ಪಿರುತ್ತದೆ

ಗದಗ ಬೆಟಗೇರಿ ಹಿರೇಮಠದ ವೇ॥ ನೀಲಕಂಠಯ್ಯನವರ ಪುತ್ರಿ ಚಿ॥ ಸೌ॥ ಅನ್ನಪೂರ್ಣಾದೇವಿಯನ್ನು ಹುಬ್ಬಳ್ಳಿ ತಾಲೂಕು ಬುನಕಲ್ಲು ಹಿರೇಮಠದ ಚಿ॥ ಗಂಗಾಧರಯ್ಯ ಶಾಂತಯ್ಯನೆಂಬ ವರನಿಗೆ ಕೊಟ್ಟು ನೆರವೇರಿದ ವಿವಾಹ ಸಮಯದಲ್ಲಿ ವಧೂವರರಿಂದ ತೆಗೆಯಿಸಿದ 1-8-0 ರೂ ಗಳು ಮ॥ ರಾ॥ ಪಂಚೆನಾಳು ಮುರಗಪ್ಪನವರ ದ್ವಾರಾ ತಲ್ಪಿರುತ್ತವೆ

ಕಡೂರು ಜಿ॥ ಅಜ್ಜಂಪುರಗ್ರಾಮದಲ್ಲಿರುವ ಮ॥ ರಾ॥ ಸೆಟ್ಟರ ಸಿದ್ದಪ್ಪನವರು ತಮ್ಮ ಗೃಹದಲ್ಲಿ ಒಂದು ವರ್ಷದಿಂದ ಸಿದ್ಧಾಂತ ಶಿಖಾಮಣಿಯ ಪಾರಾಯಣವನ್ನು ಮಾಡಿಸಿ ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪಾರಾಯಣವನ್ನು ಪೂರ್ತಿಗೊಳಿಸಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 1 ರೂ ವೇ॥ ಎಂ ಎ ಮರುಳಸಿದ್ಧಯ್ಯನವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು

(೧ನೆಯ ಪುಟದಿಂದ ಮುಂದುವರಿದುದು)

ಸರ್ವರೂ ಸಂತೋಷಪಟ್ಟರು ಅನಂತರ ಸ್ವಾಗತ ಕಮಿಟಿಯ ಮೆಂಬರಾದ ಎಂ ಎನ್ ಮುರುಳಸಿದ್ದಯ್ಯ ಮಾಸ್ತರ್ ಇವರಿಂದ ರಚಿತವಾದ ಸ್ವಾಗತ ಪದ್ಯ ಪಂಚಕವು ಶ್ರೀಮಾನ್ ಸಂಗೀತ ಬೋಧಕರಾದ ವೆಂಕಟಾಚಲ ಗುಪ್ತರಿಂದ ಬಹು ಸ್ವಾರಸ್ಯವಾಗಿ ಪಠಿಸಲ್ಪಟ್ಟಿತು. ಅನಂತರ ವೇ|| ಎಂ ಎಸ್ ಮುರುಳಸಿದ್ದಯ್ಯನವರು ಸ್ವಂತವಾಗಿ ರಚಿಸಿದ ವೀರ ಪೀಠದ ಚಾರಿತ್ರಿಕ ಲಾವಣಿಯನ್ನು ತಾವೇ ಹಾಡಿ ಶ್ರೀ ಜಗದ್ಗುರುಗಳವರ ಸನ್ನಿಧಾನಂಗಳಿಗೆ ಒಪ್ಪಿಸಿದರು ಸಭಿಕರಿಗೂ ಈ ಸಣ್ಣ ಪುಸ್ತಕಗಳನ್ನು ಹಂಚಿದರು ಶ್ರೀಗಳವರು ಲಾವಣಿಯನ್ನು ಕೇಳಿ ಸಂತೋಷಪಟ್ಟರು ಅಮಲ್ದಾರ್ ಸಾಹೇಬರವರಾದ ಹೆಚ್ ಹಾಲಪ್ಪನವರು ಬಹು ಮನೋಹರವಾಗಿ ಈಗಿನ ಕಾಲದ ಪರಿಸ್ಥಿತಿಯೂ ಅದಕ್ಕೆ ಶಾಂತಿಯೂ, ಅರಮನೆ ಗುರುಮನೆಗಳಲ್ಲಿ ನಾವು ಹೇಗಿರಬೇಕು ಎಂಬಬಗ್ಗೆ ಭಾಷಣ ಮಾಡಿದರು ಅನಂತರ ಅಜ್ಜಂಪುರದ ವೃದ್ಧ ಪಿತಾಮಹರಾದ ಶ್ರೀಯುತ ಸೆಟ್ರು ಸಿದ್ದಪ್ಪನವರು ಅಜ್ಜಂಪುರದ ವೀರಶೈವ ಮಂಡಲಿಯವರ ಬಿನ್ನವತ್ತಳೆಯನ್ನು ಬಹು ಗಂಭೀರವಾಗಿ ಸಭೆಯಲ್ಲಿ ಓದಿ ಶ್ರೀ ಜಗದ್ಗುರುಗಳವರ ದಿವ್ಯ ಸನ್ನಿಧಿಗೆ ಒಪ್ಪಿಸಿದರು. ಅನಂತರ ಶ್ರೀ ಸಾಧು ಶಂಕರಾನಂದಸ್ವಾಮಿಗಳವರು ಮತಸ್ಥಾಪಕರು ಯಾರು? ಗುರುಗಳು ಯಾರು? ಆಚಾರ್ಯರೇ ಪ್ರಥಮ, ಎಂಬ ವಿಚಾರ ಸಮರ್ಥಿಸಿ ಮತದ ತತ್ವಗಳನ್ನು ಆಚಾರ್ಯರಿಂದ ಸರ್ವರೂ ತಿಳಿಯಿರಿ ಸೂರ್ಯನೇ ಇರುವಾಗ ಬೆಳಕಿಗೇನು ಕಡಿಮೆ ಎಂಬುದಾಗಿ ತಿಳಿಸಿದರು ಸಂಸ್ಕೃತ ಅಭ್ಯಾಸಕ್ಕಾಗಿ ಈ ಅಜ್ಜಂಪುರದಲ್ಲಿ ಒಂದು ಶಾಲಾ ಆಗಬೇಕು ಸನ್ನಿಧಿಯ ಸ್ಮಾರಕವಿರಬೇಕು ಎಂದು ಭಾಷಣ ಮಾಡಿದರು ಬಳಿಕ ಶ್ರೀ ಮಹಾಸನ್ನಿಧಿಯವರು ಸರ್ವ ಮತಗಳ ಸಾರವನ್ನು, ಪ್ರತಿಯೊಬ್ಬರೂ ಪರಸ್ಪರ ಹೇಗಿರಬೇಕು ಎಂಬುದನ್ನು ಸಂಸ್ಕೃತ ಶಾಲಾ ನಡೆಸುವ ನಿಮ್ಮಂಥ ಸಾಧುಗಳಿರುವಾಗ ನಾವು ನಡೆಸಲು ತಯಾರಿದ್ದೇವೆಂದು ಅಪ್ಪಣೆಯಿತ್ತು ಸರ್ವರಿಗೂ ಆಶೀರ್ವದಿಸಿ ಅನುಷ್ಠಾನಕ್ಕೆ ದಯಮಾಡಿಸಿದರು

ಶ್ರೀ ಸಿದ್ಧಾಂತ ಶಿಖಾಮಣಿ ಪುರಾಣ ಸಮಾಪ್ತಿ

ತಾ|| ೩೦-೮-೪೩ ರ ಕಾರ್ಯ

ಕಳೆದ ವರ್ಷ ಶ್ರೀ ಚಿತ್ರಭಾನುಸಂವತ್ಸರದ ಶ್ರಾವಣ ಮಾಸದಲ್ಲಿ ವೇ|| ಎಂ. ಎನ್ ಮರುಳಸಿದ್ದಯ್ಯ ಮೇಲಿನ ಮುರ ಮುದ್ದೇನಹಳ್ಳಿ ಇವರಿಂದ ಅಜ್ಜಂಪುರದ ಶ್ರೀಯುತ ಸೆಟ್ರು ಸಿದ್ದಪ್ಪನವರ ಗೃಹದಲ್ಲಿ ಸಿದ್ಧಾಂತ ಶಿಖಾಮಣಿ ಪಾರಾಯಣವು ಪ್ರಾರಂಭವಾಗಿ ಇದೇ ಸ್ವಭಾನು ಸಂವತ್ಸರ ಶ್ರಾವಣ ಬಹುಳ ಸೋಮವಾರ ದಿವಸ ಶ್ರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಪೂರ್ಣವಾಯಿತು ಶ್ರೀಗಳವರು ಶಿವಾನುಭವಿಗಳಲ್ಲಿ ಮುಖ್ಯರಾದ ಶ್ರೀಮತಿ ಮರಿಶಾಂತಮ್ಮನವರಿಗೂ ಸೆಟ್ರು ಸಿದ್ದಪ್ಪನವರಿಗೂ ಆಶೀರ್ವದಿಸಿದರು ಈ ಮಹಾ ಕಾರ್ಯಕ್ಕೆ ಅಜ್ಜಂಪುರದ ತಾತಂದಿರಾದ ಶ್ರೀಯುತ ಸೆಟ್ರು ಸಿದ್ದಪ್ಪನವರೇ ಮುಖ್ಯ ಕಾರಣರು ಮತ್ತು ಧನ್ಯರು ಮತ್ತು ಆಚಾರ್ಯ ಭಕ್ತಿ ಧುರೀಣರು ಮಳೆಯು ಈ ಸಾಯಂಕಾಲ ಚೆನ್ನಾಗಿ ಆಯಿತು. ಇಂಥ ಮಳೆಯಿಲ್ಲದ ಕಾಲದಲ್ಲಿ ಅಜ್ಜಂಪುರಕ್ಕೆ ಶ್ರೀ ಜಗದ್ಗುರುಗಳು ದಯಮಾಡಿಸಿದ ಕೂಡಲೇ ಮೇಘರಾಜನೂ ಕೂಡ ಸಂತೋಷಪಟ್ಟು ಮಳೆ ಸುರಿಸಿದನು. ಆ ದಿವಸ ಅಜ್ಜಂಪುರದ ಹೋಬಳಿಯೇ ಆನಂದ ಸಾಗರದಲ್ಲಿ ಮುಳುಗಿತ್ತು

ಓರ್ವ ಗುರುಭಕ್ತ

ವರ್ಧಂತ್ಯುತ್ಸವ

ಸೊಲ್ಲಾಪುರ ನಗರದಲ್ಲಿರುವ ವೀರಶೈವ ಗುರುಕುಲಕ್ಕೆ ಒಳ್ಳೇ ಉದಾರ ಮನಸ್ಸಿನಿಂದ ಪ್ರತಿ ತಿಂಗಳೂ 75 0 0 ರೂಪಾಯಿಗಳನ್ನು ಸಲ್ಲಿಸುತ್ತಿರುವ ಶ್ರೀಮತಿ ಸಿದ್ದವ್ವಾಬಾಯಿ ಧೋಬಡೆ ಇವರ ದ್ವಿತೀಯ ಪುತ್ರ ಚಿ|| ಶಿವಶಂಕರಪ್ಪನಿಗೆ 10 ವರ್ಷಗಳು ತುಂಬಿ 11 ನೆಯ ವರ್ಷವು ಪ್ರಾರಂಭವಾದ ಸಂತೋಷಕ್ಕಾಗಿ ತಾ|| 16-8-43 ನೆಯ ಸೋಮವಾರ ದಿವಸ ಶ್ರೀ ವೀರಶೈವ ಗುರುಕುಲದಲ್ಲಿ ವರ್ಧಂತ್ಯುತ್ಸವವು ವಿಶೇಷ ವೈಭವದೊಡನೆ ಮಾಡಲ್ಪಟ್ಟಿತು ಆದಿನ ಬೆಳಿಗ್ಗೆ ಜಗದಾಚಾರ್ಯರ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕವಾಗಿ ಗಣಾರಾಧನೆಯು ನೆರವೇರಿತು ಮಧ್ಯಾಹ್ನ ೩ ಘಂಟೆಗೆ ಸಾಹಿತ್ಯ ರತ್ನ ಶ್ರೀ ಜಗದೀಶ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಸಭೆಗೂಡಿತು ಆಗ್ಗೆ ಶ್ರೀ ವೀರಸಂಗಸ್ವಾಮಿಗಳು ಶೈವಗಿರಿ ಶ್ರೀ ವಿರೂಪಾಕ್ಷ ಸ್ವಾಮಿಗಳು ಮಾನೂರು ವೇ|| ಅಲ್ಲಮಪ್ರಭು ಆಲೂರು ವೇ|| ಬಸವಲಿಂಗಶಾಸ್ತ್ರಿಗಳು ಗಂಹಾರ ಡಾ|| ದೇಶಮುಖ ಸೌ|| ಭಾಗೀರಥೀಬಾಯಿ ಕಟಾಪ, ಶ್ರೀ ಚನ್ನವೀರ ಶಿವಾಚಾರ್ಯ ಸ್ವಾಮಿಗಳು ಹೋಟಗಿ ಇವರೆಲ್ಲರೂ ಸದರಿ ಬಾಲಕನಿಗೆ ಮಂಗಲವನ್ನು ಕೋರಿ ಅವರ ತಾಯಿಯಾದ ಶ್ರೀಮತಿ ಸಿದ್ಧಮ್ಮನವರ ಧರ್ಮಬುದ್ಧಿಯನ್ನು ವರ್ಣಿಸಿ ಭಾಷಣ ಮಾಡಿದರು, ಆಮೇಲೆ ಅಧ್ಯಕ್ಷರು ವರ್ಧಂತಿ ಎಂದರೇನು, ವರ್ಧಂತಿಯು ಎಲ್ಲ ಯುಗಗಳಲ್ಲಿಯೂ ಆಚರಣೆಯಲ್ಲಿರುವದು ಎಂಬ ವಿಷಯವನ್ನು ಪ್ರಮಾಣ ಪುರಸ್ಸರವಾಗಿ ಪ್ರತಿಪಾದಿಸಿದರು ಬಳಿಕ ಬಾಲತಪಸ್ವಿಗಳಿಂದ ಚಿ|| ಶಿವಶಂಕರಪ್ಪನಿಗೆ ಪುಷ್ಪಹಾರ ಫಲಮಂತ್ರಾಕ್ಷತೆಗಳು ಆಶೀರ್ವದಿಸಲ್ಪಟ್ಟವು ಬಳಿಕ ಶ್ರೀ ಜಗದಾಚಾರ್ಯರ ಜಯ ಘೋಷದೊಡನೆ, ಸಭೆಯು ವಿಸರ್ಜಿಸಲ್ಪಟ್ಟಿತು

ಚನ್ನಮಲ್ಲಿಕಾರ್ಜುನಶರ್ಮಾ
ಸೆಕ್ರೆಟರಿ, ವೀರಶೈವಗುರುಕುಲ ಸೊಲ್ಲಾಪುರ

ರೇವಣ ಸಿದ್ಧೇಶ್ವರನ ಮಹಿಮೆ

ವೀರಶೈವಮತಸ್ಥಾಪಕರಾದ ಶ್ರೀಜಗದ್ಗುರು ರೇಣುಕಾಚಾರ್ಯರು ಪರಶಿವನ ಅಪ್ಪಣೆ ಮೇರೆಗೆ ಕುಲ್ಯಪಾಕ ಕ್ಷೇತ್ರದಲ್ಲಿ ರಾರಾಜಿಸುತ್ತಿರುವ ಶ್ರೀ ಸೋಮನಾಥ ಲಿಂಗದಿಂದವತರಿಸಿ ಭೂಮಂಡಲವೆಲ್ಲಾ ಸಂಚರಿಸಿ ಅನೇಕ ಮಹಿಮೆಗಳನ್ನು ತೋರ್ಪಡಿಸಿ ಸಮಸ್ತ ಭಾರತ ಭೂಮಿಯನ್ನು ಪವಿತ್ರಗೊಳಿಸಿರುವ ವಿಷಯವು ಜಗತ್ಪ್ರಸಿದ್ಧವಿದೆ ಈ ಮಹಾತ್ಮರು ಪಾದವಿಟ್ಟ ಸ್ಥಳಗಳಲ್ಲೆಲ್ಲಾ ಇವರ ಪವಿತ್ರಾಭಿಧಾನದಿಂದ ಅನೇಕ ದೇವಾಲಯಗಳೂ ತೀರ್ಥಗಳೂ ನಿರ್ಮಿತಗಳಾಗಿ ಅನಾದಿ ಕಾಲದಿಂದ ಈ ವರೆಗೂ ವಿರಾಜಿಸುತ್ತಿರುವವು ನಿಜಾಮ ಇಲಾಖಾ ಬೀದರ್ ಜಿ|| ಮನ್ನಳ್ಳಿ ಗ್ರಾಮಕ್ಕೆ ಒಂದು ಮೈಲು ದೂರದಲ್ಲಿ ಶ್ರೀ ರೇವಣ ಸಿದ್ಧೇಶ್ವರನ ಬೆಟ್ಟವಿರುವದು ಪೂರ್ವಕಾಲದಲ್ಲಿ ಗುರುಸಾರ್ವಭೌಮರು ಈ ಬೆಟ್ಟದಲ್ಲಿ ಕೆಲವುಕಾಲ ವಾಸಮಾಡಿದ್ದರೆಂದು ಐತಿಹ್ಯವಿದೆ ಶ್ರೀ ರೇವಣ ಸಿದ್ಧೇಶ್ವರನ ಸಮ್ಮುಖದಲ್ಲಿ ಒಂದು ತೀರ್ಥವಿರುವದು ಅನೇಕ ಜನರು ಆ ತೀರ್ಥವನ್ನು ಸ್ವೀಕರಿಸಿ ನಾನಾವಿಧ ರೋಗಗಳಿಂದ ಮುಕ್ತರಾಗುತ್ತಿರುವರು ಆ ಬೆಟ್ಟಕ್ಕೆ 2 ಫರ್ಲಾಂಗು ದೂರದಲ್ಲಿ ಸೇಕವೀನದಾಂಬರಂಬ ಮುಸಲ್ಮಾನರ ತೋಟವಿರುವದು ಆ ಮುಸಲ್ಮಾನರು ಶ್ರೀರೇವಣಸಿದ್ಧೇಶ್ವರನಲ್ಲಿ ಮಹಾಭಕ್ತಿಯನ್ನಿಟ್ಟು ನಡೆದು ಕೊಳ್ಳುತ್ತಿರುವರು ಆ ತೋಟದಲ್ಲಿ ಬೆಳೆದ ಪೈರುಗಳನ್ನು ರೇವಣಸಿದ್ಧೇಶ್ವರನಿಗೆ ಸಮರ್ಪಿಸದೆ ಅವರು ಸ್ವೀಕರಿಸುವುದಿಲ್ಲ ಕಬ್ಬಿನ ಗಾಣವು ಪ್ರಾರಂಭವಾದಾಗ್ಗೆ ಮೊದಲು ಆ ಕಬ್ಬಿನ ಹಾಲನ್ನು ಶ್ರೀರೇವಣಸಿದ್ಧೇಶ್ವರನಿಗೆ ಅಭಿಷೇಕಮಾಡಿಸಿ, ಜಂಗಮಾರಾಧನೆಯನ್ನು ಮಾಡಿಸುವ ರೂಢಿಯು ಬಹುಕಾಲದಿಂದಲೂ ಬಂದಿರುವದು, ಆದರೆ ಈಗ ಕೆಲವು ದಿವಸಗಳ ಪೂರ್ವದಲ್ಲಿ ಈ ನಿಯಮವನ್ನು ಪಾಲಿಸದೆ ಕಬ್ಬಿನ ಗಾಣವನ್ನು ಹೂಡಿದರು, ಕಬ್ಬಿನಲ್ಲಿ ಹಾಲು ಸರಿಯಾಗಿ ಹೊರಡಲಿಲ್ಲ, ಬೆಲ್ಲ ಮಾಡುವ ಹದವೂ ಬರಲಿಲ್ಲ ಆಗ್ಗೆ ಆ ತೋಟದ ಮಾಲಿಕನು ಪ್ರಾರ್ಥನೆಮಾಡಿಕೊಂಡು ರೇವಣಸಿದ್ಧೇಶ್ವರಮೂರ್ತಿಗೆ ಅಭಿಷೇಕಮಾಡಿಸಲು ಬೆಲ್ಲವು ಸರಿಯಾಗಿ ಆಯಿತು ಈ ವಿಧವಾದ ಅಗಾಧ ಮಹಿಮೆಯನ್ನು ಆ ತೋಟದ ಮಾಲೀಕರಾದ ಮುಸಲ್ಮಾನರೇ ಸರ್ವತ್ರ ಪ್ರಕಾಶಪಡಿಸುತ್ತಿದ್ದಾರೆ. ಇದೇ ರೀತಿಯಾಗಿ ಅನೇಕ ಸ್ಥಳಗಳಲ್ಲಿ ಈ ಮಹಾತ್ಮರ ಮಹಿಮೆಯು ಪ್ರತ್ಯಕ್ಷವಾಗಿ ತೋರುತ್ತಿರುವದು. ಅನಂತಾನಂತ ಮಹಿಮಾನ್ವಿತರಾದ ಜಗದಾಚಾರ್ಯರಲ್ಲಿ ಸರ್ವರೂ ಭಕ್ತಿಯನ್ನಿಟ್ಟು ಮುಕ್ತಿಭಾಗಿಗಳಾಗಬೇಕೆಂದು ಆಶಿಸುವ,

ಸಿದ್ಧಲಿಂಗಸ್ವಾಮಿ ಹಾರುಕಶಾಖಾಮಠ,
ಹೇಣರಂಜೇರಿ.

ವೇದಾಧ್ಯಯನಶಾಲಾ ಪ್ರಾರಂಭ
ಸೊಲ್ಲಾಪುರ

ಸೊಲ್ಲಾಪುರದಲ್ಲಿರುವ ಶ್ರೀ ಬಾಲತಪಸ್ವಿ ಚನ್ನವೀರ ಶಿವಾಚಾರ್ಯಸ್ವಾಮಿಗಳವರು ತಮ್ಮಿಂದ ಸ್ಥಾಪಿಸಲ್ಪಟ್ಟಿರುವ ವೀರಶೈವಗುರುಕುಲದಲ್ಲಿ ಶ್ರಾವಣ ಬಹುಳ ೬ ದಿವಸ ವೇದಾಧ್ಯಯನಶಾಲೆಯನ್ನು ಪ್ರಾರಂಭಿಸಿದರು. ಇದರ ಪ್ರಾರಂಭೋತ್ಸವವು ಇಲ್ಲಿಯ ಸುಪ್ರಸಿದ್ಧ ಮಿಲ್ಲಿ ತನದವರಾದ ಶ್ರೀಮಂತ ಶಿವಪ್ಪಣ್ಣಾ ಚಿಂಚೋಳಿ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಆಗ್ಗೆ ವೇ|| ಪಂ|| ಜಗದೀಶಶಾಸ್ತ್ರಿಗಳವರು, ವೇ|| ಪಂ|| ಬಸವಲಿಂಗಶಾಸ್ತ್ರಿಗಳವರು, ಶ್ರೀ ವೀರಸಂಗಮದೇವರು ಮೈಂದರಿಗಿ ಇವರೇ ಮೊದಲಾದವರು ವೇದಾಧ್ಯಯನದ ಮಹತ್ವವನ್ನು ಈ ವೇದಾಧ್ಯಯನಕ್ಕಾಗಿ ಗೋಪ್ಯವಾಗಿ ದ್ರವ್ಯ ಸಹಾಯಮಾಡುತ್ತಿರುವ ಮಹಾಶಯರ ವಿಷಯವನ್ನೂ ಸಂನಾವಿದವಾಗಿ ಕೊಂಡಾಡಿದರು ಜಗತ್ತಿನಲ್ಲಿ ಸರ್ವರೂ ತಮ್ಮ ಕೀರ್ತಿಗಾಗಿ ಪ್ರಯತ್ನಪಡುತ್ತಿರುವಾಗ್ಗೆ ಈ ಗುಪ್ತದಾನಿಗಳು ಕೀರ್ತಿಯ ಲೇಶವನ್ನೂ ಅಪೇಕ್ಷಿಸದಿರುವದು ಆಶ್ಚರ್ಯಕರವಾದುದು ಜಗತ್ತಿನಲ್ಲಿ ಇಂತಹ ಸಹಜ ದಾನಿಗಳು ಹುಟ್ಟುವದು ಬಹು ವಿರಳ ಈ ರೀತಿ ಸಹಜ ದಾನಪರಾಯಣರಾಗಿರುವ ಮಹಾಪುರುಷರಿಗೆ ಶ್ರೀಜಗದೀಶ್ವರನು ಸನ್ಮಂಗಲಪರಂಪರೆಯನ್ನೀಯಲೆಂದು ಪ್ರಾರ್ಥಿಸುವ,

ಕಾಶೀನಾಥಶರ್ಮಾ
ವೀರಶೈವ ಗುರುಕುಲ ವಿದ್ಯಾರ್ಥಿ

ಪುರಾಣಪ್ರಾರಂಭ

ನವಲಗುಂದ ತಾ|| ಬೆಳವಟಗಿ ಗ್ರಾಮದ ಭಕ್ತರ ಪ್ರಾರ್ಥನೆಯಮೇರೆಗೆ ಚಿಕ್ಕಮಣ್ಣೂರು ಬೃಹನ್ಮಠಾಧ್ಯಕ್ಷರಾದ ಶ್ರೀಗುರುದೇವಶಿವಾಚಾರ್ಯರು ಆಯುರ್ವೇದವಿಶಾರದ ವೈದ್ಯವಾಚಸ್ಪತಿ ಇವರು ತಾ|| 6-8-43ನೆಯ ದಿವಸ ಮಂಗಲವಾದ್ಯ ವೈಭವದೊಡನೆ ಇಲ್ಲಿಗೆ ಆಗಮಿಸಿದರು ಈ ಗ್ರಾಮದ ಭಕ್ತರ ಇಚ್ಛೆಯ ಮೇರೆ ಶ್ರಾವಣ ಶು|| ಪೌರ್ಣಿಮೆಯಿಂದ ಶ್ರೀ ಕೊಟ್ಟೂರ ವೃಷಭೇಶ್ವರನ ಪುರಾಣವನ್ನು ಬಹು ಮನೋಹರವಾಗಿ ಬೋಧಿಸುತ್ತಿರುವರು ಈ ಪುರಾಣವನ್ನು ಕೇಳುವದಕ್ಕಾಗಿ ಸುತ್ತಮುತ್ತಲಿನ ಗ್ರಾಮದ ಜನರು, ವಿಶೇಷವಾಗಿ ಆಗಮಿಸುತ್ತಿರುವರು ಬಂದ ಜನರಿಗೆಲ್ಲಾ ಇಲ್ಲಿಯ ಜನರೇ ಅನ್ನದ ವ್ಯವಸ್ಥೆಯನ್ನು ಮಾಡಿರುವರು ಇಂತಹ ಕ್ಷಾಮಕಾಲದಲ್ಲಿಯೂ ಕೂಡ ತನುಮನಧನಗಳಿಂದ ಈಶ್ವರಸೇವೆಯನ್ನು ಮಾಡುತ್ತಿರುವ ಬೆಳವಟಗೆಯ ಸಕಲ ಸದ್ಭಕ್ತರಿಗೆ ಪರಮಾತ್ಮನು ಶುಭಪರಂಪರೆಯನ್ನೀಯಲೆಂದು ಪ್ರಾರ್ಥಿಸುತ್ತೇನೆ

ಚನ್ನಪ್ಪಗೌಡ ಮುನ್ಸಿ ಪಾಟೀಲ

ಶೋಭನಸಮಾರಂಭ ಜೈನಾಪುರ

ವಿಜಾಪುರ ಜಿ|| ಜೈನಾಪುರಗ್ರಾಮದಲ್ಲಿರುವ ಮ ರಾ|| ಚನ್ನಪ್ಪ ಶಿವಶಿಂಪಿ ಇವರ ಪುತ್ರ ಚಿ|| ಸಂಗಪ್ಪನಿಗೂ ಧರ್ಮಪತ್ನಿ ಗುರುದೇವಿಗೂ ಸನಾತನ ಪದ್ಧ ಪ್ರಕಾರ ಶೋಭನ ಸಮಾರಂಭವು ನೆರವೇರಿತು. ತಾ ೨೬-೮-೪೩ ನೇ ದಿವಸ ಗುರುಸ್ವಾಮಿ ಹಿರೇಮಠ ವೇ|| ಉಮಾಪತಿಸ್ವಾಮಿಗಳ ಪಾದಪೂಜೆಯಾಗಿ ತೀರ್ಥ ಪ್ರಸಾದವು ಕೊಡಲ್ಪಟ್ಟಿತು ಆಮೇಲೆ ಪ್ರಮುಖರಿಗೆ ಭೋಜನ ಸಮಾರಂಭವು ನೆರವೇರಿತು. ರಾತ್ರಿ ಘಂಟೆಗೆ ಗ್ರಾಮದ ದೈವದವರೆಲ್ಲರೂ ಕೂಡಿ ಗ್ರಾಮ ವೀರಭದ್ರ ದೇವರಿಗೂ ಗುರುಗಳ ಮೂಲ ಗದ್ದಿಗೆಗೆ ಕಾಯಿ ಕರ್ಪೂರವನ್ನು ಮಾಡಿಸಿ ಆಶೀರ್ವಾದವನ್ನು ಪಡೆದು ಕೊಂಡರು ಈ ಸಮಾರಂಭದಲ್ಲಿ ಗುರುಗಳ ಆಜ್ಞೆಯ ಮೇರೆಗೆ ಪ್ರಭಾಪೋಷಣಕ್ಕೋಸ್ಕರ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು

ಶಂಕರಯ್ಯ ಮಠಪ

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರಶಿವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಾನಕರ್ ಪರಿಶಿವತತ್ವಾಚಾರಸಂಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಸೆಪ್ಟೆಂಬರ್ ೧೯೪೩ [ಸಂಚಿಕೆ ೧೯

॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥

ಅನುಷ್ಠಾನ ಸಮಾಪ್ತಿ ಮತ್ತು ರಥೋತ್ಸವ ಮಹೋತ್ಸವ, ಮಂತ್ರವಾಡಿ

ಧಾರವಾಡ ಜಿ|| ಶಿಗ್ಗಾಂವಿ ತಾಲೂಕ ಮಂತ್ರವಾಡಿ ಗ್ರಾಮದಲ್ಲಿ ಶ್ರೀ ರೇವಣಸಿದ್ಧೇಶ್ವರ ದೇವಸ್ಥಾನದಲ್ಲಿ ಸದರೀ ಗ್ರಾಮದ ಬೃಹನ್ಮಠಾಧ್ಯಕ್ಷ ಶ್ರೀ ಕೆಂಜಡೆ ಸ್ವಾಮಿಗಳವರು ಜಗತ್ಕಲ್ಯಾಣಕ್ಕಾಗಿ ಕ್ಷೀರಾಹಾರಿಗಳಾಗಿ ಶ್ರಾವಣ ಶು|| ೧ ಸೋಮವಾರದಿಂದ ಅನುಷ್ಠಾನವನ್ನು ಪ್ರಾರಂಭಿಸಿ ಶ್ರಾವಣ ಬ|| ೩೦ ಸೋಮವಾರ ದಿವಸ ಸಮಾಪ್ತಿಗೊಳಿಸಿದರು ಅಂದು ಮುಂಜಾನೆ ಮಹಾಲಿಂಗಮೂರ್ತಿಗೆ ರುದ್ರಾಭಿಷೇಕ, ಷೋಡಶೋಪಚಾರಗಳು ನಡೆದುವು ಆಮೇಲೆ ೧೦ ಘಂಟೆಗೆ ಶ್ರೀಗಳವರ ಪಾದಪೂಜೆಯು ಒಳ್ಳೇ ವಿಜೃಂಭಣೆಯಿಂದ ನಡೆಯಿತು ಆಗ್ಗೆ ಸ್ಥಳಪರಸ್ಥಳದಿಂದ ಅಸಂಖ್ಯಾತ ಜನರು ನೆರೆದಿದ್ದರು ಪಾದಪೂಜೆ ಸಮಾಪ್ತಿಗೊಂಡಮೇಲೆ ಸಭೆ ಸೇರಿತು. ತರುವಾಯ ವೇ|| ಚನ್ನಬಸವಯ್ಯನವರು ಕಂಠಿಮಠ ಸವಣೂರ ಇವರು ಅನುಷ್ಠಾನದ ಮಹತ್ವವನ್ನು ಶ್ರೀರೇಣುಕ ಗಣಾಧೀಶರ ಅವತಾರದ ವಿಷಯವನ್ನು ಜನರಲ್ಲಿ ಒಳ್ಳೇ ಪರಿಣಾಮವಾಗುವಂತೆ ಭಾಷಣ ಮಾಡಿದರು ಆಮೇಲೆ ಜಗದಾಚಾರ್ಯರ ಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು ೧-೨ ಸಾವಿರ ಜನರಿಗೆ ಮೃಷ್ಟಾನ್ನ ಭೋಜನವಾಯಿತು ಸಾಯಂಕಾಲ ೫ ಘಂಟೆಗೆ ಆ ಊರ ಹತ್ತಿರವಿರುವ ತೋಂಟದಲ್ಲಿ ಶ್ರೀ ರೇವಣಸಿದ್ಧೇಶ್ವರ ತೆಪ್ಪದ ರಥೋತ್ಸವವು ಒಳ್ಳೇ ವಿಜೃಂಭಣೆಯಿಂದ ನೆರವೇರಿತು ಈ ಮಹಾಕಾರ್ಯಕ್ಕೆ ಸವಣೂರ, ಬ್ಯಾಡಗಿ, ಹಾವೇರಿ, ಕಲ್ಲಾಪೂರ, ಹುಳ್ಳೀಕುಪ್ಪಿ, ಮಾವರ, ದೇಶಿನಕಟ್ಟೆ, ರಡಗಿ, ಮಲ್ಲೂರ ಮೊದಲಾದ ಅನೇಕ ಪರಸ್ಥಳದ ಜನರು ಆಗಮಿಸಿದ್ದರು. ವೇ|| ಚನ್ನಬಸವಯ್ಯನವರು ಕಂಠಿಮಠ ಸವಣೂರ, ರುದ್ರಗೌಡರು ಹುಳ್ಳೀಕುಪ್ಪಿ ಮತ್ತು ಈ ಊರ ವೀರಶೈವ ಮಂಡಲಿಯವರು ಒಳ್ಳೇ ಕಂಕಣಬದ್ಧರಾಗಿ ಈ ಕಾರ್ಯವನ್ನು ನೆರವೇರಿಸಿದರು. ಇಲ್ಲಿಯವರೆಗೂ ಮಳೆಯಿಲ್ಲದೆ ಜನರಲ್ಲಿ ಹಾಹಾಕಾರವಿದ್ದಿತ್ತು. ಆ ದಿವಸ ಮೇಘರಾಜನು ಕಣ್ದೆರೆದು ಸರ್ವರನ್ನು ಆನಂದಸಾಗರದಲ್ಲಿ ಮುಳುಗಿಸಿಬಿಟ್ಟನು. ಇದು ರೇವಣಸಿದ್ಧೇಶ್ವರನ ಮಹಿಮೆಯೆಂದೇ ಹೇಳಬೇಕಾಗಿದೆ. ಶ್ರೀಗಳಾದರೂ ಇಂಥಾ ಪವಿತ್ರಸ್ಥಾನದಲ್ಲಿ ಅನುಷ್ಠಾನವನ್ನು ಕೈಕೊಂಡು ಸಮಾಪ್ತಿಗೊಳಿಸಿದ್ದು ಪರಮಸಂತೋಷದ ಸಂಗತಿಯಾಗಿದೆ. ಇಂಥಾ ಧರ್ಮಪ್ರಕಾಶಕರತ್ನಗಳು ಅಲ್ಲಲ್ಲಿ ಪ್ರಕಾಶಿಸುತ್ತಿರುವದು ನಮ್ಮ ಮತದ ಭಾಗ್ಯೋದಯವೆಂದೇ ಹೇಳಬೇಕಾಗಿದೆ. ಜಗದಾಚಾರ್ಯರು ಇಂಥಾ ಧರ್ಮರತ್ನಗಳಿಗೆ ಸದಾ ಸುಖಶಾಂತಿಯನ್ನೀಯಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ

ಓರ್ವ ಪ್ರತ್ಯಕ್ಷದರ್ಶಿ.

ಪುರಾಣ ಶ್ರವಣ

ಧಾರವಾಡ ಡಿಸ್ಟ್ರಿಕ್ಟ ಕಲಘಟಗಿ ತಾಲೂಕ ಬೆಲವಂತರ ಹಿರೇಮಠದಲ್ಲಿ ಶ್ರೀ ಗುರುಮೂರ್ತಿ ದೊಡ್ಡಬಸವೇಶ್ವರ ಪುರಾಣ ಶ್ರವಣವು ಇದೇ ಶ್ರಾವಣದಲ್ಲಿ ನಡೆದು ಸದರಿ ಮಠಾಧ್ಯಕ್ಷರಾದ ಶ್ರೀ ಸಿದ್ಧರಾಮೇಶ್ವರಸ್ವಾಮಿಗಳಿಂದ ಸಮಾಪ್ತಿ ಮಾಡಲ್ಪಟ್ಟಿತು

ಗುರುಭಕ್ತ

ಶ್ರೀ ಗುರುಭಜನ ಮತ್ತು ಶಿವಭಜನ ಸಮಾಪ್ತಿ ಮಹಾಮಂಗಳ

ಶಿವಮೊಗ್ಗ ಜಿ|| ಚನ್ನಗಿರಿ ತಾ|| ಬಸವಾಪಟ್ಟಣದ ವೀರಶೈವ ಮಂಡಳಿಯವರು ಶ್ರಾವಣ ಮಾಸದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಮತ್ತು ಪರಮಾತ್ಮನ ಭಜನೆಯನ್ನು ಅತಿ ಉತ್ಸಾಹದಿಂದಲೂ, ಭಕ್ತಿಯಿಂದಲೂ ನಡೆಸಿದರು ವೇ|| ಹಾಲಸ್ವಾಮಿ ಮಠದ ಶಿವಲಿಂಗಯ್ಯನವರ ಮನೆಯಲ್ಲಿ ಒಂದು ಮಂಟಪವನ್ನು ರಚಿಸಿ ಎತ್ತರವಾದ ಪೀಠದಲ್ಲಿ ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗೋದ್ಭವ ಭಾವಚಿತ್ರವನ್ನೂ ಪರಮಾತ್ಮನ ಭಾವಚಿತ್ರಪಟವನ್ನು ಮೂರ್ತಗೊಳಿಸಿ ಪುಷ್ಪಹಾರಗಳಿಂದ ಅಲಂಕರಿಸಿ ಷೋಡಶೋಪಚಾರದಿಂದ ಪೂಜೆಯಾದ ಮೇಲೆ ಸದರಿ ಗ್ರಾಮದ ಶ್ರೀ ಜಗದ್ಗುರು ಪಂಚಾಚಾರ್ಯರ ಜೈಘೋಷಕ ಸಂಘದವರು ಶ್ರೀ ಜಗದಾಚಾರ್ಯರ ಪವಿತ್ರ ಲೀಲಾ ಭಜನಾ ಪದ್ಯಗಳನ್ನೂ ಮತ್ತು ಶ್ರೀ ಜಗದ್ಗುರು ಪಂಚಾಚಾರ್ಯ ಜೈಘೋಷಕ ಸಂಘದ ಮ್ಯಾನೇಜರ್‌ರವರಾದ ಮ|| ರಾ|| ದಾನಪ್ಪಳ ಬಸಪ್ಪನವರು ಪರಮಾತ್ಮನ ಮತ್ತು ಶ್ರೀ ರೇಣುಕನ ಲೀಲಾ ಮಹಿಮಾ ಪದ್ಯಗಳನ್ನೂ ಹಾಡಿ ಸರ್ವರಿಗೂ ಆನಂದವನ್ನುಂಟುಮಾಡುತ್ತಿದ್ದರು. ಆಮೇಲೆ ಮಂಗಳಾರತಿಯಾಗಿ ಸರ್ವರಿಗೂ ಜಗದ್ಗುರುಗಳ ಪ್ರಸಾದವು ಹಂಚಲ್ಪಡುತ್ತಿತ್ತು ಇದೇರೀತಿಯಾಗಿ ಪ್ರತಿದಿನವೂ ಗುರುಭಜನ ಶಿವಭಜನೆಯನ್ನು ಭಕ್ತಿಯಿಂದಲೂ ಉಲ್ಲಾಸದಿಂದೂ ಮಾಡುತ್ತಿದ್ದರು ಆದರೆ ನಮ್ಮ ಸುದೈವದಿಂದ (ತಾ|| ೨೯-೮-೪೩) ನೇ ಸೋಮವಾರ ದಿವಸ ರಾಂಪುರದಿಂದ ಶ್ರೀ ಚಿಕ್ಕಹಾಲಸ್ವಾಮಿಗಳು ಜಯ ಮಾಡಿಸಲು ಸದರಿ ಗ್ರಾಮದ ಭಜನಾ ಸಂಘದವರು ಅವರನ್ನು ಊರಿಗೆ ೧ ಮೈಲಿ ದೂರದ ಬೆಟ್ಟದಲ್ಲಿರುವ ಶ್ರೀ ಹಾಲೇಶನ ಗವಿಗೆ ಶ್ರೀ ಜಗದಾಚಾರ್ಯರ ಭಜನೆಯಿಂದ ಕರೆದೊಯ್ದು ಬೆಟ್ಟದಮೇಲೆ ಅರ್ಧಘಂಟೆ ಕಾಲ ಭಜನೆ ಮಾಡಲು ಆಗ್ಗೆ ಅವರು "ಗುರು ಸರ್ವೋತ್ತಮತ್ವ" ಎಂಬ ವಿಷಯವನ್ನು ಹೇಳಿ ಎಲ್ಲರಿಗೂ ಸಂತೋಷಪಡಿಸಿದರು

ಈ ಶುಭ ಮಾಸದಲ್ಲಿ ಗುರು ಶಿವ ಭಜನೆಯನ್ನು ಮಾಡಲು ಉತ್ತೇಜನಕೊಟ್ಟ ವೇ|| ಹಾಲಸ್ವಾಮಿ ಮಠದ ನಂಜುಂಡಯ್ಯನವರು ವೇ|| ಅನುಗೋಡು ಮಠದ ಸಂಗಪ್ಪಯ್ಯನವರು ಮ|| ರಾ|| ಪಟೇಲ್ ಹಾಲಪ್ಪನವರೂ ಮ|| ರಾ|| ಶೃಂಗಾರ್‌ಬಾಗ್ ಪಟೇಲ್ ಹಾಲಪ್ಪನವರೂ ಮ|| ರಾ|| ಮಚ್ಚೀ ಮಹಾದೇವಪ್ಪನವರೂ ಮ|| ರಾ|| ಮೂಲೆಮನೆ ನಂಜಪ್ಪನವರೂ ಮ|| ರಾ|| ಮುನಿಯಪ್ಪಳ ಸಿದ್ದಪ್ಪನವರೂ ಮ|| ರಾ|| ಎಲಿಗಾರ ಶಿವಲಿಂಗಪ್ಪನವರೂ ಮತ್ತು ಮಹಾದೇವಪ್ಪನವರೂ ಇವರಿಗೂ ಇನ್ನುಳಿದ ಭಕ್ತಾದಿಗಳಿಗೂ ಜಗದಾಚಾರ್ಯರು ಆಯುರಾರೋಗ್ಯಭಾಗ್ಯವನ್ನೀಯಲೆಂದು ಕೋರುತ್ತೇವೆ

ಶ್ರೀಜಗದ್ಗುರು ಪಂಚಾಚಾರ್ಯ ಜೈಘೋಷಕಸಂಘದ
ಮ್ಯಾನೇಜರ್ ದಾನಪ್ಪಳ ಬಸಪ್ಪ ಮತ್ತು
ಎ. ಎಂ. ಹಾಲಸಿದ್ದಯ್ಯ ಬಸವಾಪಟ್ಟಣ

ಮಹಾಗುರುಭಕ್ತಳ ನಿಧನ

ಧಾರವಾಡ ಜಿ|| ಶಿರುವಿನಹಳ್ಳಿ ಹಿರೇಮಠದ ವೇ|| ಗಂಗಾಧರಯ್ಯನವರ ಧರ್ಮಪತ್ನಿಯವರಾದ ಶ್ರೀಮತಿ ಸೋಮವ್ವನವರು ಇದೇ ಭಾದ್ರಪದ ಶು|| ೫ ದಿವಸ ಹುಬ್ಬಳ್ಳಿಯಲ್ಲಿ ಶಿವಾಧೀನರಾದರು ಆ ಸಮಯಕ್ಕೆ ೪-೫ ನೂರು ಜನರು ನೆರೆದಿದ್ದರು ವಿಧ್ಯುಕ್ತಪ್ರಕಾರ ಅಂತ್ಯೇಷ್ಟಿವಿಧಿಯು ನೆರವೇರಿಸಲ್ಪಟ್ಟಿತು ಇವರು ಸದಾಚಾರಸಂಪನ್ನರೂ ಗುರುಭಕ್ತಿತತ್ಪರರೂ ಶಿವಪೂಜಾನಿಷ್ಠರೂ ಆಗಿದ್ದು ತಮ್ಮ ಧನರಾಶಿಯನ್ನು ಶುದ್ಧಭಕ್ತಿಯಿಂದ ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಗೆ ಅರ್ಪಿಸಿ ಗುರುಕೃಪೆಗೆ ಪಾತ್ರರಾದರು ಇವರಿಗೆ ಪ್ರತಿ ದಿವಸ ಪುರಾಣ, ಪುಣ್ಯಕಥಾಶ್ರವಣದಲ್ಲಿ ಕಾಲಕ್ಷೇಪ ಮಾಡಲು ಅತ್ಯುತ್ಸುಕತೆಯಿದ್ದಿತು—ಇದಲ್ಲದೆ ಶ್ರೀಜಗದ್ಗುರು ಪಂಚಾಚಾರ್ಯ ಗುರುಸಾರ್ವಭೌಮರಲ್ಲಿ ಅನನ್ಯಭಕ್ತಿಯಿಂದ ಅವರ ಭಜನ ಪೂಜಾ-ಧ್ಯಾನಾಸಕ್ತರಾಗಿ ಮಹಾಗುರುಗಳವರ ಭಾವಪಟಗಳನ್ನೂ ಪುಸ್ತಕಗಳನ್ನೂ ಮನೆಮನೆಗೆ ಹೋಗಿ ಉಚಿತವಾಗಿ ಕೊಟ್ಟು ಪೂಜಾ ಮಾಡಿರಿ ಗುರುಭಕ್ತಿತತ್ಪರರಾಗಿರಿ "ಹರಮುನಿದರೂ ಗುರುಕಾಯುವನು" ಎಂದು ಹೇಳುತ್ತ ವೀರಶೈವ ಸ್ತ್ರೀಯರ ನಿತ್ಯಾಚಾರವಿಚಾರಗಳನ್ನು ಅವರಿಗೆ ಚನ್ನಾಗಿ ತಿಳಿಸುತ್ತಿದ್ದರು ಇವರಿಗೆ ಪಂಚಾಚಾರ್ಯಪ್ರಭಾಪತ್ರಿಕೆ ಓದುವದರಲ್ಲಿ ಅತ್ಯಂತ ಪ್ರೇಮ ಪ್ರತಿ ಮಂಗಳವಾರ ಪ್ರಭಾಪತ್ರಿಕೆ ಬರುವ ಮಾರ್ಗವನ್ನೇ ನಿರೀಕ್ಷಿಸುತ್ತಿದ್ದರು. ಶ್ರೀಶೈಲ ಕಾಶೀರಾಮೇಶ್ವರ ಉಜ್ಜಯಿನೀ ಮುಂತಾದ ಕ್ಷೇತ್ರಯಾತ್ರೆಗಳನ್ನು ಮಾಡಿ ಪುಣ್ಯಶರೀರಿಗಳಾಗಿದ್ದರು. ಇಂತಹ ಸದ್ಗುಣಮೂರ್ತಿಯನ್ನು ಕಳೆದುಕೊಂಡದ್ದು ಹುಬ್ಬಳ್ಳಿ ವೀರಶೈವ ಮಹಾಮಂಡಲಿಗೆ ದೊಡ್ಡ ಕೊರತೆಯಾಯಿತು. ಶ್ರೀಪರಶಿವನು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಹಾರೈಸುತ್ತೇನೆ.

ದುಃಖಿತಾಗಿ

ಂಡವ್ವ ಹಿರೇಮಠ, ಹುಬ್ಬಳ್ಳಿ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಸೆಪ್ಟೆಂಬರ್ ತಾ|| ೧೩ ನೇ ಸೋಮವಾರ

ಆತ್ಮವಿದ್ಯೆಯೇ ವೀರಶೈವ ಮತದ ವೃದ್ಧಿಯು.

ವೀರಶೈವಮತದ ಅಭಿವೃದ್ಧಿಯೆಂದರೇನು? ವೀರಶೈವಜನಾಂಗವು ಸಂಖ್ಯೆಯಲ್ಲಿ ಕಡಿಮೆಯಾಗಿದ್ದು ಪ್ರಾಣಲಿಂಗವನ್ನು ಧರಿಸಿ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಬೇಕೆಂಬ ಅಭಿಪ್ರಾಯವೋ ಅಥವಾ ರಾಜಕೀಯಭಾಷೆಯಲ್ಲಿ ಹಿಂದುಳಿದ ವೀರಜನಾಂಗವನ್ನೆಲ್ಲಾ ಆಂಗ್ಲಭಾಷಾಮಯವನ್ನಾಗಿ ಮಾಡುವುದೆಂಬ ಅಭಿಪ್ರಾಯವೋ? ಒಂದು ವೇಳೆ ವೇದವೇದಾಂಗಾದಿ ಆಧ್ಯಾತ್ಮಿಕ ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಅವುಗಳಲ್ಲಿ ಪ್ರವೀಣರನ್ನಾಗಿ ಮಾಡಿ ಆತ್ಮಶಕ್ತಿಯನ್ನು ಬಲಪಡಿಸುವುದೆಂಬ ಅಭಿಪ್ರಾಯವೋ ಎಂಬ ಮೂರು ವಿಧವಾದ ಸಂಶಯಗಳು [illegible] ಸ್ಪಷ್ಟವಾಗುತ್ತವೆ. ಅವರವರ ಇಚ್ಛಾನುಸಾರವಾಗಿ ವೀರಶೈವಮತದ ಅಭಿವೃದ್ಧಿಗೆ ಒಂದೊಂದನ್ನು ಕಾರಣವನ್ನಾಗಿ ಹೇಳಬಹುದು. ಆದರೆ ತಾತ್ವಿಕ ದೃಷ್ಟಿಯಿಂದ ವಿಚಾರಮಾಡಿನೋಡಿದರೆ ಸಂಖ್ಯಾಬಾಹುಳ್ಯವಾಗಲಿ ರಾಜಕೀಯಭಾಷಾಪ್ರಾವೀಣ್ಯತೆಯಾಗಲಿ ಮತಾಭಿವೃದ್ಧಿಗೆ ಸಾಧಕಗಳಾಗುವುದಿಲ್ಲ. ಅಂತಸ್ಸತ್ವವಿಲ್ಲದ [illegible] ಬರಿ ಸಂಖ್ಯೆಯು ಯಾವ ಪ್ರಯೋಜನಕ್ಕೂ [illegible] ರಾಜಕೀಯ ಭಾಷೆಯಾದರೂ [illegible] ವಾದ ರಾಜ್ಯಕಾರ್ಯಾರ್ಥಗಳಿಗೂ ಜೀವನ [illegible] ವೀರಶೈವರು ಸಂಖ್ಯೆಯಲ್ಲಿ [illegible] ಮತ್ತು ರಾಜಕೀಯಭಾಷೆಯಲ್ಲಿ [illegible] ಲಿದ್ದಾರೆ ಮತ್ತು ಆ [illegible] ದೊಡ್ಡ ನಗರಗಳಲ್ಲಿ ಅನ್ನವಸತಿ [illegible] ಕಲ್ಪಿಸಲ್ಪಟ್ಟಿರುತ್ತವೆ [illegible] ಮುಂತಾಗಿ ಡಿಗ್ರಿಯನ್ನು [illegible] ಕೊಟ್ಟಿದ್ದರೆ ಅಂಥವರಲ್ಲಿ [illegible] ಸಮವಿಗೇರಿದರೆ ರಾಜಾಜ್ಞೆಯಿಂದ [illegible] ಕಾಪಾಡಿಕೊಳ್ಳುವುದರಲ್ಲಿಯೇ ಅವರ ಜೀವನವಾರ್ತೆಲ್ಲಾ ಕಳೆದುಹೋಗುತ್ತದೆ. ಇಂಥ ರಾಜಕೀಯಭಾಷಾಭಿಜ್ಞರು ಎಲ್ಲ ಮತದವರಲ್ಲಿಯೂ ಇರುತ್ತಾರೆ. ಅಷ್ಟುಮಾತ್ರದಿಂದ ಆಯಾಯ ಮತಗಳು ಅಭಿವೃದ್ಧಿಹೊಂದಿರುತ್ತವೆಯೆಂದು ಹೇಳಲವಕಾಶವಿಲ್ಲ. ಇನ್ನು ವೇದವೇದಾಂಗಾದಿ ವಿದ್ಯೆಯನ್ನು ಅಭ್ಯಾಸಮಾಡುವ ಮೂಲಕ ಜ್ಞಾನಾರ್ಜನೆ ಮಾಡಿಕೊಂಡು ತಮ್ಮ ತಮ್ಮ ಪೂರ್ವಾಚಾರ್ಯಪ್ರಣೀತವಾದ ಆಯಾಯ ತತ್ವಶಾಸ್ತ್ರದ ಅನುಭವವನ್ನು ಹೊಂದಿ ಯೋಗಬಲದಿಂದ ಮನಸ್ಸಂಯಮನಮಾಡಿ ಆತ್ಮಶಕ್ತಿಯನ್ನು ಪಡೆದು ತಾವು ಅಭ್ಯಾಸಮಾಡಿದ **ಧರ್ಮಮಾರ್ಗವನ್ನು** ಇತರರಿಗೆ ಉಪದೇಶಮಾಡುತ್ತ **ಎಲ್ಲರೂ ಪಾರಮಾರ್ಥಿಕಶಕ್ತಿಯನ್ನು** ಪಡೆಯುವುದೇ **ಮತಾಭಿವೃದ್ಧಿ** ಎಂಬ ಪದಕ್ಕೆ ಅರ್ಥಮಾಡಬೇಕೇ **ಹೊರತು ದೇಶಕಾಲಾನುಸಾರವಾಗಿ** ಬದಲಾವಣೆ **ಹೊಂದಬಹುದಾದ ಕೇವಲ ಇಹಲೋಕಯಾತ್ರಾಸಾಧನವಾದ ರಾಜಕೀಯಭಾಷೆಯಾಗಲಿ** ಜನಸಂಖ್ಯೆಯಾ**ಗಲಿ ಒಂದೂ ಮತಾಭಿವೃದ್ಧಿಗೆ** ಸಾಧನಗಳಲ್ಲ. ಮತ**ವೆಂದರೆ ಮೋಕ್ಷವನ್ನು** ಸಂಪಾದಿಸುವ ಮಾರ್ಗವು. ಈ **ಮಾರ್ಗವು ಶೈವ, ವೈಷ್ಣವ,** ಗಾಣಪತ, ಕಾಪಾಲಿ, **ಶಾಕ್ತೇಯ ಸೌರ, ಜೈನ,** ಬೌದ್ಧ ಎಂದು ಅನಂತ**ವಿಧವಾಗಿರುತ್ತವೆ.** ಜಗತ್ಸೃಷ್ಟಿಕರ್ತನಾದ ದೇವ**ರನ್ನು ಶಿವನೆಂದು ಆರಾಧಿಸುವವರೇ** ಶೈವರು, ವಿಷ್ಣು**ವೆಂದು ಆರಾಧಿಸುವವರೇ** ವೈಷ್ಣವರು ಗಣಪತಿಯೆಂದು **ಆರಾಧಿಸುವವರೇ** ಗಾಣಪತರು, ಕಪಾಲಿಯೆಂದು ಆರಾ**ಧಿಸುವವರೇ ಕಾಪಾಲಿಕರು,** ಶಕ್ತಿಯೆಂದು ಆರಾಧಿಸು**ವವರೇ ಶಾಕ್ತೇಯರು** ಸೂರ್ಯನೆಂದು ಆರಾಧಿಸುವವರೇ **ಸೌರರು, ಜಿನನೆಂದು** ಆರಾಧಿಸುವವರೇ ಜೈನರು, ಬುದ್ಧ**ನೆಂದು ಆರಾಧಿಸುವವರೇ** ಬೌದ್ಧರು ಹೀಗೆ ಒಬ್ಬ ದೇವ**ರನ್ನು ಆಯಾಯ ಮತಸ್ಥಾಪನಾಚಾರ್ಯರು** ಒಂದೊಂದು **ನಾಮದಿಂದ ಆರಾಧಿಸಿ** ಒಂದೊಂದು ಮುಕ್ತಿಮಾರ್ಗ**ವನ್ನು ಸ್ಥಾಪಿಸಿರುತ್ತಾರೆ. ಈ ಮಾರ್ಗಗಳಿಗೆ ಮತ**ಗಳೆಂದು ಹೇಳುತ್ತಾರೆ. ಅಭಿವೃದ್ಧಿಯೆಂದರೆ ಆಯಾಯ ಮತಗಳಲ್ಲಿ ಜನ್ಮವೆತ್ತಿದ ಜೀವಾತ್ಮರು ಆಯಾಯ ಮತಾಚಾರ್ಯರಿಂದ [illegible] ಸದ್ಗುರೂಪದೇಶಗಳನ್ನು ಪಡೆದು ವೇದವೇದಾಂಗಾದಿವಿದ್ಯೆಗಳನ್ನು ಕಲಿತು ಆಯಾಯ ಮತದ ಯೋಗಮಾರ್ಗ ಜ್ಞಾನಮಾರ್ಗಗಳಲ್ಲಿ ಕಾಲಿಡುತ್ತ [illegible] ಅಂತಃಕರಣರಾಗಿ ಸಂಸಾರಮಹಾರೋಗವನ್ನು ಪರಿಹರಿಸುವ ಮಹಾವೈದ್ಯನಾದ ಆ ಪರಮಾತ್ಮನಿಗೆ ಶರಣಾಗತರಾಗಿ ತಮ್ಮಲ್ಲಿರುವ ಅಜ್ಞಾನವನ್ನು ನಾಶಗೊಳಿಸಿ ಮುಕ್ತತ್ವವನ್ನು ಪಡೆಯುವುದೆಂದರ್ಥವು. ಈ ವಿಷಯದಲ್ಲಿ ವೀರಶೈವಮತವು ಬಹು ಹಿಂದುಳಿದಿದೆಯೆಂದು ಹೇಳಬೇಕಾಗಿದೆ. ವೀರಶೈವಮತದಲ್ಲಿ ಇಂಥ ಆತ್ಮಜ್ಞಾನಸಾಧಕವಾದ ವೇದವೇದಾಂಗಾದಿ ಪ್ರಾಚೀನ ವಿದ್ಯೆಯನ್ನು ಕಲಿತ ಪಂಡಿತರ ಸಂಖ್ಯೆಯಂತೂ ಬಹಳ ಕಡಿಮೆ. ಕಲಿಯುವವರಂತೂ ಇಲ್ಲವೇ ಇಲ್ಲ. ಎಲ್ಲಿ ನೋಡಿದರೂ ಇಂಗ್ಲೀಷ್ ಕಲಿಯುತ್ತೇವೆಂದು ಹೊರಡುವರೇ ಹೊರತು ತತ್ವಶಾಸ್ತ್ರವನ್ನು ಕಲಿಯುತ್ತೇವೆಂದು ಹೇಳುವವರೇ ಇಲ್ಲ. ಹಳ್ಳಿಹಳ್ಳಿಗೂ ಒಂದೆರಡು ಶಾಲೆಗಳ [illegible] ತಂದೆತಾಯಿಗಳು ತಮ್ಮ ಮಕ್ಕಳಿಗೆ ಇಂಗ್ಲೀಷ್ ಕಲಿಸುವುದಕ್ಕಾಗಿ ಮನೆಮಠಗಳನ್ನಾದರೂ ಮಾರಲಿಕ್ಕೆ ಸಿದ್ಧರಾಗಿರುತ್ತಾರಲ್ಲದೆ ವೇದವೇದಾಂಗಾದಿ ತತ್ವಶಾಸ್ತ್ರವನ್ನು ಓದಿಸಲಿಕ್ಕೆ ಮನಸ್ಸನ್ನೇ ಮಾಡುವುದಿಲ್ಲ. ಕೆಲವರು ಅಲ್ಪಸ್ವಲ್ಪ ಇಂಗ್ಲೀಷಭಾಷೆಯನ್ನು ಓದಿದಂತೂ ಅವರ ವೇಷ, ಭಾಷೆ ಅವರ ನಡೆ ಅವರ ನುಡಿಗಳೆಲ್ಲಾ ಬದಲಾಯಿಸಿ ಹೋಗಿರುತ್ತವೆ. [illegible] ಜಾತಿಕಲಾಂಛನಗಳ [illegible] ಹೋಟಲಿಗೆ ಹೋಗಿ ತಿಂದಿ[illegible] ಕುಡಿ [illegible] ಇಲ್ಲ ಮತ್ತು [illegible] ಭಾರತೀಯ ಧರ್ಮ [illegible] ಬಿಡಿಸಿ [illegible] ಸಿಗರೇಟನ್ನು ಕಚ್ಚಿಕೊಂಡು [illegible] ಹ್ಯಾಟನ್ನು ಹಿಡಿದುಕೊಂಡ [illegible] ಅವರ ಜೀವನವಾರ್ತೆ ಸಲವಾಗಿದೆ. ಅಂದ ಪೂರ್ಣ ವಿಧ್ವಂಸನಾಗಿ ಅಧಿಕಾರಿಯುಕ್ತನಾ [illegible] ಆಗಲಿಲ್ಲ [illegible] ಅವಸ್ಥೆಯು ಹೀಗಾದ ಮೇಲೆ [illegible] ಹೊಂದುವುದೆಂತು? ತಂದೆತಾಯಿಗಳು ಈಗಿನಿಂದಲೇ ತಮ್ಮ ಮಕ್ಕಳು ಅಂಥ ದುರ್ಮಾರ್ಗಕ್ಕೆ ಹೋಗುವುದನ್ನು ತಪ್ಪಿಸಿ ಆತ್ಮಶಕ್ತಿಯನ್ನು ಹೆಚ್ಚಿಸುವ ವಿದ್ಯೆಯನ್ನು ಕಲಿಯುವಂತೆ ಪ್ರೇರಿಸುವುದು ಒಂದರೆ [illegible] ಸತ್ಯಮಾರ್ಗವು ನಿರ್ಮೂಲವಾಗಿ ಬಹುದಿವಸದಿಂದ ಶಿಥಿಲವಾದ ವೀರಶೈವಮತವು ಇಂಥ ಧಾರ್ಮಿಕಬುದ್ಧಿಯುಳ್ಳ ನವತರುಣರ ಸಮಾವೇಶದಿಂದ ಮತದ ಶೈಥಿಲ್ಯವೆಲ್ಲ ನಾಶವಾಗಿ ಸರ್ವಾಂಗ ಸಮೃದ್ಧಿಯನ್ನೈದುವದು. ಹಾಗಿಲ್ಲದಿದ್ದರೆ ಧರ್ಮವಿರೋಧವಾದ ಮಾರ್ಗದಲ್ಲಿದ್ದು ಎಷ್ಟು ಬುದ್ಧಿಶಾಲಿಗಳಾದರೇನು? ಅವರಿಂದ ಜಂಪ್ರನು(?) ಕಳಂಕಿಯೆನಿಸಿಕೊಂಡಿರುವಂತೆ ವೀರಶೈವಮತಕ್ಕೊಂದು ವಿಧವಾದ ಕಳಂಕವೇ ಸರಿ. ಆಧ್ಯಾತ್ಮಿಕಶಕ್ತಿಯನ್ನು ಪಡೆದ ಮತವು ಸಂಖ್ಯೆಯಲ್ಲಿ ಅಲ್ಪವಾಗಿದ್ದರೂ ಔಷಧಿಯೋಪಾದಿ ಭವರೋಗವನ್ನು ನಾಶಮಾಡುವುದು. ವೀರಶೈವಮತಕ್ಕೆ ಅಂಥ ಆಧ್ಯಾತ್ಮಿಕಶಾಸ್ತ್ರದ (ಲಿಂಗಾಂಗಸಾಮರಸ್ಯವಿದ್ಯೆಯ) ಬಲವು ಕುಂದಿಹೋದುದರಿಂದ ವೀರಶೈವ ಎಂಬ ಶಬ್ದವು ವ್ಯಾವಹಾರಿಕಶಬ್ದವಾಗಿ ಪರಿಣಮಿಸಿತು. ಆದ್ದರಿಂದ ವೀರಶೈವ ತರುಣರು ಇತರ ವಿದ್ಯೆಗಳಲ್ಲಿ ಮನಸ್ಸಿಟ್ಟಿರುವಂತೆ ಆತ್ಮಬಲವನ್ನುಂಟುಮಾಡುವ ವೇದವೇದಾಂಗಾದಿ ಆಧ್ಯಾತ್ಮಿಕ ವಿದ್ಯಾಭ್ಯಾಸದಲ್ಲಿ ಮನಸ್ಸಿಟ್ಟರೆ ಜನ್ಮಸಾರ್ಥಕವಾಗುವದು.

ಭಾರತಕ್ಕೆ ಪೂರ್ವ ಆಫ್ರಿಕಾ ಸೇನೆ

ಜಪಾನಿನಮೇಲೆ ಯುದ್ಧನಡೆಸಲು ಭರತಖಂಡದಲ್ಲಿ ನೆರೆದಿರುವ ಸೇನೆಯ ಜೊತೆಗೆ ಪೂರ್ವ ಆಫ್ರಿಕಾಪಡೆಯೊಂದು ಇತ್ತೀಚೆಗೆ ಬಂದು ಸೇರಿತು. ಈ ಪಡೆಯನ್ನು ಸದ್ಯಕ್ಕೆ ಸಿಲೋನಿನಲ್ಲೂ ಭರತಖಂಡದಲ್ಲೂ ಇಡಲಾಗಿದೆ.

ಯುದ್ಧವಾರ್ತೆ.

ಇಟಲಿಯು ಶರಣಾಗತವಾಯಿತು

ಇಟಲಿ ಸೇನೆಯೆಲ್ಲ ಯಾವ ಷರತ್ತೂ ಇಲ್ಲದೆ ಶರಣಾಗತವಾಯಿತೆಂದು ಉತ್ತರ ಆಫ್ರಿಕಾ ಮುಖ್ಯ ಕಚೇರಿಯ ಪ್ರಕಟನೆಯು ತಿಳಿಸುತ್ತದೆ.

ದಂಡನಾಯಕ ಐಸೆನ್ ಹೌವರ್ ಈ ಸಂಬಂಧವಾಗಿ ಪ್ರಕಟಿಸುತ್ತ "ಮಿತ್ರದೇಶಗಳೊಡನೆ ಒಪ್ಪಂದಕ್ಕೆ ಬರಲು ಇಟಲಿಗೆ ನಾನು ಅವಕಾಶಕೊಟ್ಟಿದ್ದೇನೆ. ಅಮೆರಿಕ, ಬ್ರಿಟನ್ ಮತ್ತು ರಷ್ಯ-ಇವು ಮೂರು ಸರಕಾರಗಳೂ ಒಪ್ಪಂದದ ಷರತ್ತುಗಳನ್ನು ಅಂಗೀಕರಿಸಿವೆ. ಅದರಿಂದ ನಾನು ಸಂಯುಕ್ತ ದೇಶಗಳ ಹಿತಕ್ಕೆ ಅನುಗುಣವಾಗಿಯೇ ವರ್ತಿಸುತ್ತಿದ್ದೇನೆ. ಈ ಷರತ್ತುಗಳನ್ನು ಪೂರ್ಣವಾಗಿ ಪಾಲಿಸುವುದಾಗಿ ಇಟಲಿ ಸರ್ಕಾರ ಒಪ್ಪಿಕೊಂಡಿದೆ ಎಂದು ತಿಳಿಸಿದ್ದಾರೆ. ಆರ್ಮಿಸ್ಟಿಸ್ ಒಪ್ಪಂದಕ್ಕೆ ಐಸೆನ್ ಹವರ್‌ರವರ ಪ್ರತಿನಿಧಿಯೊಬ್ಬರೂ ಬಡೋಗ್ಲಿಯೊರವರ ಪ್ರತಿನಿಧಿಯೊಬ್ಬರೂ ಸಹಿಹಾಕಿದರು. ತಕ್ಷಣ ಅದು ಆಚರಣೆಗೆ ಬಂತು. ಮಿತ್ರದೇಶಗಳ ಸೇನೆಗಳಿಗೂ ಇಟಲಿಸೇನೆಗಳಿಗೂ ಹೊಡೆದಾಟ ನಿಂತಿತು. ಇಟಲಿ ಭೂಮಿಯಿಂದ ಜರ್ಮನರನ್ನು ಓಡಿಸಲು ಯತ್ನಿಸುವ ಪ್ರತಿಯೊಬ್ಬ ಇಟಾಲಿಯನನಿಗೂ ಸಂಯುಕ್ತ ದೇಶಗಳ ಬೆಂಬಲವಿದೆ.

ಡೌನಿಂಗ್ ಬೀದಿಯ ಮಹಾಪ್ರಧಾನರ ಕಚೇರಿಯಿಂದ ಕೆಳಗೆ ಕಂಡ ಪ್ರಕಟನೆ ಹೊರಟಿತು "ಇಟಲಿ ಸರ್ಕಾರವು ಯಾವ ಷರತ್ತೂ ಇಲ್ಲದೆ ಶರಣಾಗತವಾಗಿದೆ. ಇದರ ಫಲವಾಗಿ ಆಕ್ಸಿಸ್ ಬಲವು ಮತ್ತಷ್ಟು ಕಡಿಮೆಯಾಯಿತೆಂಬುದನ್ನು ಸಂಯುಕ್ತ ಪ್ರಾಂತ್ಯಗಳು ಗ್ರಹಿಸಿವೆ. ಈಗಾಗಿರುವ ಒಪ್ಪಂದ ಪೂರ್ಣವಾಗಿ ಮಿಲಿಟರಿ ಅಂಶಗಳಿಂದ ಕೂಡಿದೆ. ಇದರಲ್ಲಿ ರಾಜಕೀಯ, ಆರ್ಥಿಕ ಷರತ್ತುಗಳಿಲ್ಲ. ಅನಂತರ ಅವುಗಳನ್ನು ಹಾಕಲಾಗುತ್ತದೆ. ಈಗಿನ ಸ್ಥಿತಿಯಲ್ಲಿ ಒಪ್ಪಂದದ ಷರತ್ತುಗಳನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ಇಟಲಿ ಶರಣಾಗತವಾದ ಸುದ್ದಿ ಲಂಡನ್ನಿಗೆ ಬಂದೊಡನೆಯೇ ಅದನ್ನು ದೊರೆಗಳಿಗೆ ತಿಳಿಸಲಾಯಿತು.

ಬಡೋಗ್ಲಿಯೋ ಪ್ರಕಟಣೆ

ಇಟಲಿ ಸರಕಾರವು ರಾಜೀನಾಮೆಯಿತ್ತಿರುವ ವಿಚಾರವನ್ನು ರೇಡಿಯೋ ಮೂಲಕವೂ ಮತ್ತು ದಿನಪತ್ರಿಕೆಗಳ ಮೂಲಕವೂ ಇಟಾಲಿಯನರಿಗೆ ತಿಳಿಸಲಾಗುತ್ತಿದೆ. ಇಟಲಿ ಮಹಾಪ್ರಧಾನರಾದ ಬಡೋಗ್ಲಿಯೋರವರು ಒಂದು ಪ್ರಕಟನೆ ಹೊರಡಿಸಿದ್ದಾರೆ. ಸಂಯುಕ್ತ ರಾಷ್ಟ್ರಗಳ ವಿಚಾರವನ್ನು ತಿಳಿಸಿ, ಇತರ ಯಾವುದೇ ದೇಶ ಮೇಲೆ ಬಿದ್ದರೂ ಇಟಲಿ ಪ್ರತಿಭಟಿಸುವುದಾಗಿ ಸೂಚಿಸಿದಾರೆ. "ಶತ್ರುಗಳ ಬಲ ಅಪಾರವಾಗಿದ್ದುದರಿಂದ ಕದನವನ್ನು ಮುಂದುವರಿಸುವುದು ಅಸಾಧ್ಯವೆಂಬುದನ್ನು ಇಟಲಿ ಅರಿತು ಇಟಲಿ ಜನಾಂಗಕ್ಕೆ ಹೆಚ್ಚು ಆಘಾತವಾಗುವುದನ್ನು ತಪ್ಪಿಸಲು ಮಿತ್ರದೇಶಗಳೊಡನೆ ಒಪ್ಪಂದಕ್ಕೆ ಬರಲಾಯಿತು. ಆದ್ದರಿಂದ ಇಟಲಿ ಸೈನಿಕರು ಬ್ರಿಟಿಷ್ ಮತ್ತು ಅಮೆರಿಕನ್ ಪಡೆಗಳು ಎಲ್ಲೇ ಇರಲಿ ಅವುಗಳೊಂದಿಗೆ ಹೊಡೆದಾಡಕೂಡದು' ಎಂದು ಬಡೋಗ್ಲಿಯೊರವರು ರೇಡಿಯೋ ಮೂಲಕ ತಿಳಿಸಿದರು.

ಇಟಲಿ ಹಡಗುಗಳಿಗೆ ಆಜ್ಞೆ

ಅಡ್ಮಿರಲ್ ಕನ್ನಿಂಗ್ ಹ್ಯಾಮರ ಹೇಳಿಕೆಯೊಂದನ್ನು ಆಲ್ಜೀರ್ಸ್ ರೇಡಿಯೋ ಪ್ರಕಟಿಸಿತು. ಮೆಡಿಟರೇನಿಯನ್ನಿನಲ್ಲಿರುವ ಇಟಲಿ ಹಡಗುಗಳು ತಕ್ಷಣ ಜಿಬ್ರಾಲ್ಟರ್ ಟ್ರಿಪೋಲಿ, ಹಾಲ್ಟಾ, ಅಥವಾ ಅಲೆಗ್ಜಾಂಡ್ರಿಯಾಕ್ಕೆ ತೆರಳಬೇಕು. ಕಪ್ಪು ಕಡಲಲ್ಲಿರುವ ಇಟಲಿ ಹಡಗುಗಳು ರಷ್ಯನ್ ಬಂದರುಗಳನ್ನು ಸೇರಬೇಕು. ಏಜಿಯನ್ ಅಥವಾ ಕಪ್ಪು ಕಡಲಲ್ಲಿರುವ ವ್ಯಾಪಾರ ಹಡಗುಗಳು ಜರ್ಮನರ ಕೈಗೆ ಬೀಳುವ ಪರಿಸ್ಥಿತಿಯೊದಗಿದರೆ ಅವುಗಳನ್ನು ನಾವಿಕರೇ ಮುಳುಗಿಸಿಬಿಡಬೇಕು-ಎಂದು ಅದು ತಿಳಿಸುತ್ತವೆ. ಹಲವು ವಿಮಾನ ಅಧಿಕಾರಿಗಳನ್ನಾಗಲೇ ಇಟಲಿ ಸರ್ಕಾರ ಮನೆಗೆ ಕಳಿಸಿದೆ. ಅಂದರೆ ಸೇನೆಯನ್ನು

ಚದುರಿಸುವ ಕಾರ್ಯವನ್ನು ಇಟಲಿ ಆರಂಭಿಸಿರುವಂತೆ ತೋರುತ್ತದೆ. ಸ್ವಿಸ್ ಮುಂತಾದ ಜಿಲ್ಲೆಗಳಿಂದ ಇಟಾಲಿಯನರು ಹಿಂದೆ ಸರಿಯುತ್ತಿದ್ದರೆ ಜರ್ಮನರು ಅವರ ಸ್ಥಾನಗಳಿಗೆ ಬರುತ್ತಿದ್ದಾರೆ.

ಜರ್ಮನರ ಹಣೋಟಿಯಲ್ಲಿದೆ

ಇಟಲಿ ಸರಕಾರ ಶರಣಾಗತವಾಗಿದ್ದರೂ ಇಟಲಿ ರಣಭೂಮಿಯಾಗುವುದು ತಪ್ಪಿದ್ದಲ್ಲ. ಇಟಲಿಯಲ್ಲಿ ಬಲಯುತ ಜರ್ಮನ್ ಸೇನೆಯಿದೆ. ಉತ್ತರ ಇಟಲಿಯನ್ನು ಜರ್ಮನರು ಉಗ್ರವಾಗಿ ರಕ್ಷಿಸಿಕೊಳ್ಳುವ ಪ್ರಯತ್ನ ಮಾಡಬಹುದೆಂದು ಮಿಲಿಟರಿ ವಿಮರ್ಶಕರು ತಿಳಿಸುತ್ತಾರೆ. ಪೋ ನದಿ ಹತ್ತಿರ ಅವರು ನಿಂತು ಹೊಡೆದಾಡಬಹುದು. ಅಲ್ಲಿ ೧೫-೨೦ ಜರ್ಮನ್ ಡಿವಿಜನ್‌ಗಳಿವೆಯೆಂದು ಊಹಿಸಲಾಗಿದೆ. ನಾಜಿಗಳು ಅಪೇಕ್ಷೆಯ(?) ಬಲವನ್ನು ಕಳೆದುಕೊಳ್ಳಬೇಕಾಗಿ ಬಂದರೂ ಬ್ರೆನ್ನರ್ ಕಣಿವೆ ದ್ವಾರವನ್ನು ಅವರು ಸುಲಭವಾಗಿ ಬಿಟ್ಟುಕೊಡಲಾರರು.

ಇಟಲಿಯಲ್ಲಿರುವ ಬ್ರಿಟಿಷ್ ಸಂಗ್ರಾಮ ಬಂದಿಗಳು

ಇಟಲಿಯಲ್ಲಿರುವ ೮೦೦೦೦ ಸಂಗ್ರಾಮ ಬಂದಿಗಳನ್ನು ತಕ್ಷಣ ಬಿಡುಗಡೆ ಮಾಡಲಾಗುವುದೆಂದು ತಿಳಿದುಬಂದಿದೆ. ಜರ್ಮನರು ಇಟಲಿ ಸರಕಾರಕ್ಕೆ ತಿಳಿಯದಂತೆ ಸುಮಾರು ೨೦೦೦೦ ಬ್ರಿಟಿಷ್ ಬಂದಿಗಳನ್ನು ಜರ್ಮನಿಗೆ ಸಾಗಿಸಿದರು. ಬ್ರಿಟಿಷ್ ವಿಮಾನಗಳು ಮುತ್ತಿಗೆಯ ಫಲವಾಗಿ ಇಟಲಿ ರೈಲ್ವೆ ಮಾರ್ಗಗಳು ಅವ್ಯವಸ್ಥೆ ಹೊಂದಿದುದರಿಂದ ಈ ಕಾರ್ಯವನ್ನು ಮುಂದುವರಿಸಲು ಆಗಲಿಲ್ಲ.

ಡೊಡಕನೀಸ್‌ದಲ್ಲಿರುವ ಇಟಾಲಿಯನರಿಗೆ ಸೂಚನೆ

ಮಧ್ಯ ಪೂರ್ವದ ದಂಡನಾಯಕರಾದ ಸರ್ ಹೆನ್ರಿ ಮೈಟ್‌ಲ್ಯಾಂಡ್ ವಿಲ್ಸನರು ಬ್ರಾಡ್‌ಕ್ಯಾಸ್ಟ್ ಮಾಡುತ್ತ ಬಾಲ್ಕನ್ಸ್ ಮತ್ತು ಏಜಿಯನ್ ಸಮುದ್ರ ಕ್ಷೇತ್ರದಲ್ಲಿರುವ ಇಟಲಿ ಸೈನಿಕರೆಲ್ಲ ಜರ್ಮನರನ್ನು [illegible] ಡೊಡಕನೀಸ್‌ನಲ್ಲಿ ಜರ್ಮನರು ಆಕ್ರಮಿಸಿರುವ ಸ್ಥಾನಗಳನ್ನೆಲ್ಲ ಬಲವಂತದಿಂದ ಕಿತ್ತುಕೊಳ್ಳಬೇಕು' ಎಂದು ತಿಳಿಸಿದರು.

ಇಟಲಿಯಲ್ಲಿ ಹೆಚ್ಚು ಪ್ರತಿಭಟನೆಯಿಲ್ಲ

ದಕ್ಷಿಣ ಇಟಲಿಯಲ್ಲಿ ಮಿತ್ರಸೇನೆಗಳ ಮುಂದುವರಿಯುವಿಕೆ ತೃಪ್ತಿಕರವಾಗಿದೆಯೆಂದೂ ಬ್ರಿಟಿಷ್ ಮತ್ತು ಕೆನಡಿಯನ್ ಯೋಧರು ಪಾಲ್ಮಿ ಮತ್ತು ಡೆಲಿಯಾನೋ ನಗರಗಳನ್ನು ಹಿಡಿದ ಮೇಲೆ ಉತ್ತರಾಭಿಮುಖವಾಗಿ ಸೇರುತ್ತಿದ್ದಾರೆಂದೂ ರೆಗ್ಗಿಯೋ ಬಳಿ ಮಿತ್ರಸೇನೆಗಳು ಬಂದಿಳಿದ ಕಾಲದಿಂದ ಇದುವರೆಗೆ ಶತ್ರು ಪ್ರತಿಭಟನೆಯೇನೂ ಹೆಚ್ಚಾಗಿಲ್ಲವೆಂದೂ ಹೇಳಲಾಗಿದೆ.

ಜರ್ಮನಿಯ ಹೃದಯಕೇಂದ್ರ ಹತ್ತಿರವಾಯಿತು

ಇಟಲಿಯು ಯಾವ ಷರತ್ತೂ ಇಲ್ಲದೆ ಶರಣಾಗತವಾದ್ದರಿಂದ **ಸಂಗ್ರಾಮದ** ವಿಧಾನದಲ್ಲಿ ಭಾರಿ ಬದಲಾ**ವಣೆಯಾಗಲಿದೆ. ಇದರ** ಫಲವಾಗಿ ಜರ್ಮನಿಯ ಹೃದಯ**ಕೇಂದ್ರಕ್ಕೆ** ೪೦೦ ರಿಂದ ೬೦೦ ಮೈಲಿ ಹತ್ತಿರ ಇರುವ **ವಿಮಾನ** ನಿಲ್ದಾಣಗಳೂ ನೌಕಾನೆಲೆಗಳೂ ಮಿತ್ರಸೇನೆಗಳಿಗೆ ದೊರಕಿದಂತಾಗಿವೆ. ಅಮೆರಿಕನರೂ ಮತ್ತು **ಬ್ರಿಟಿಷರೂ** ಈಗ ಜರ್ಮನಿಯ ಬಾಗಿಲಿಗೇ ಎಂದು **ನಿಂತಿದ್ದಾರೆ.** ಇಟಲಿಯ ಶರಣಾಗತಿಯಿಂದ ಮಿತ್ರ **ನೌಕೆಗಳಿಗೆ** ಏಡ್ರಿಯಾಟಿಕ್ ಸಮುದ್ರ ತೆರೆದಂತಾಯಿತು. **ಆಸ್ಟ್ರಿಯಾ** ಹಂಗೇರಿ ಮತ್ತು ಜೆಕೋಸ್ಲೊವೇಕಿಯಾ ಇವು **ಮೂರೂ** ಮಿತ್ರ ಬಾಂಬರುಗಳ ಕಾರ್ಯವಲಯಕ್ಕೆ **ಒಳಪಟ್ಟಂತಾಗಿದೆ.** ಕಾರ್ಸಿಕಾವನ್ನು ಸ್ವತಂತ್ರ ಫ್ರಾನ್ಸಿಗೆ **ಬಿಟ್ಟುಕೊಡಬೇಕೆಂದು** ತಿಳಿದುಕೊಳ್ಳಲಾಗುವುದೆಂದೂ, ದೀಗಾಲೆಯವರು ತಮ್ಮ ಮುಂಗಾವಲು ಸ್ಥಾನವನ್ನು ಅಲ್ಲಿ ಸ್ಥಾಪಿಸಿ ಫ್ರಾನ್ಸಿನ ಮುತ್ತಿಗೆಗೆ ಯತ್ನಿಸುವರೆಂದೂ ತಿಳಿದುಬಂದಿದೆ.

ಕರ್ನಲ್ ನಾಕ್ಸರ ಎಚ್ಚರಿಕೆ

"ಮಿತ್ರ ನಾವಾನು ಹಡಗುಗಳ ಮೇಲೆ ಮತ್ತೆ ಯೂ-ಬೋಟ್‌ಗಳು ಮುತ್ತಿಗೆ ನಡೆಸುವುದು ಖಂಡಿತ. ಅವುಗಳಲ್ಲಿ ಹೆಚ್ಚು ಬಲಯುತವಾದ ಪಿರಂಗಿಗಳನ್ನಿಡಲು ಯೂ-ಬೋಟುಗಳನ್ನೆಲ್ಲ ಜರ್ಮನರು ಈಗ ಹಿಂದಕ್ಕೆ ಕರೆಸಿರುವಂತಿದೆ. ನಾವು ಸಬ್‌ಮೆರೀನ್ ಅಪಾಂತರವನ್ನೇ(?) ನಮ್ಮ ನಾಶಮಾಡಿಲ್ಲ" ಎಂದು ಅಮೆರಿಕದ ನೌಕಾಶಾಖೆಯ ಕಾರ್ಯದರ್ಶಿಗಳಾದ ಕ|| ನಾಕ್ಸರವರು ಎಚ್ಚರಿಕೆ ಇತ್ತಿದ್ದಾರೆ.

ಇತರ ಕಡೆಗಳಲ್ಲಿ ದಂಡಯಾತ್ರೆ

ರೋಂ ನಗರದ ಉತ್ತರ ಮತ್ತು ದಕ್ಷಿಣಗಳಲ್ಲಿ ಗೇಟಾ, ಸಿವಿಟಾ, ವೆಚಿಯಾ ಮತ್ತು ಫೈಸಾ ಮರೀನಾಗಳಲ್ಲಿ ಮಿತ್ರಸೇನೆಗಳು ಬಂದಿಳಿದಿವೆಯೆಂದು ಸ್ಟ್ರೈಕ್ ಹೋಂ ವಾರ್ತೆ ತಿಳಿಸುತ್ತದೆ.

ಇಟಲಿಯ ಟೈರೇನಿಯನ್ ತೀರದಲ್ಲೂ ಲೆಗ್‌ಹಾರನ್ ತೀರದಲ್ಲೂ ಅಮೆರಿಕನ್ ಸಪ್ತಮಸೇನೆಯ ಅನೇಕ ಸೈನಿಕರು ಬಂದಿಳಿದರೆಂದು ಸ್ವಿಸ್ ರೇಡಿಯೋ ತಿಳಿಸಿತು. ಇಟಲಿ ವಿಮಾನ ನಿಲ್ದಾಣಗಳಲ್ಲಿ ನೂರಾರು ಮಿತ್ರ ವಿಮಾನಗಳು ಬಂದಿಳಿಯುವುದರಲ್ಲಿವೆಯೆಂದು ಅದು ತಿಳಿಸಿತು.

ಅಮೆರಿಕನ್ ಮತ್ತು ಕೆನಡಿಯನ್ ಸೇನೆಗಳು ಇಟಲಿಯ ಮಧ್ಯಭಾಗದಲ್ಲಿಯೇ ಬಂದಿಳಿಯುತ್ತಿವೆಯೆಂದು ಟ್ಯೂನಿಸ್ ರೇಡಿಯೋ ತಿಳಿಸಿತು.

ಮಿತ್ರಸೇನೆಗಳು ನೇಪಲ್ಸ್‌ಬಳಿ ಎರಡು ವಿಮಾನನಿಲ್ದಾಣಗಳನ್ನು ಹಿಡಿದಿವೆ. ನೇಪಲ್ಸ್ ಬಳಿ ಮಿತ್ರಸೇನೆ ಬಂದಿಳಿದು ಮುಂದೆ ಸಾಗುತ್ತಿದೆ. ಇಟಲಿಯಲ್ಲಿರುವ ಜರ್ಮನ್ ಸೇನೆಗಳನ್ನು ಬೇರೆಬೇರೆ ಕ್ಷೇತ್ರಗಳಲ್ಲಿ ಸಿಕ್ಕಿಸಿಕೊಳ್ಳುವ ಪ್ರಯತ್ನ ನಡೆಯುತ್ತಿದೆ.

ಮೆಡಿಟರೇನಿಯನ್ ಸಮುದ್ರದಲ್ಲಿ ಯುದ್ಧ ನಿಂತಿಲ್ಲ

ಅಮೆರಿಕದ ಅಧ್ಯಕ್ಷ ರೂಸ್‌ವೆಲ್ಟರು ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡುತ್ತ "ಈ ಸಂಗ್ರಾಮದಲ್ಲಿ ಬರ್ಲಿನ್ ಟೋಕಿಯೋ ನಗರಗಳೇ ಇನ್ನೂ ನಮ್ಮ ಕಟ್ಟಕಡೆ ಗುರಿಯಾಗಿವೆ. ಇಟಲಿಯೊಡನೆ ಒಪ್ಪಂದವಾದ ಮಾತ್ರಕ್ಕೆ ಮೆಡಿಟರೇನಿಯನ್ ಕದನ ನಿಂತಿಲ್ಲ' ಎಂಬುದಾಗಿ ತಿಳಿಸಿದರು.

ರಷ್ಯದಲ್ಲಿ ಜರ್ಮನರ ಹಿಂದೋಟ

ಸ್ಟಾಲಿನೋ ನಗರವನ್ನು ತ್ಯಜಿಸಲಾಯಿತೆಂದು ಜರ್ಮನ್ ಸುದ್ದಿ ತಿಳಿಸಿದೆ. ಡೋನಾಸ್ ಕ್ಷೇತ್ರದಲ್ಲಿ ಮೂರನೇ ಎರಡು ಭಾಗದಷ್ಟು ಕ್ಷೇತ್ರವೆಲ್ಲ ಈಗ ರಷ್ಯನರ ವಶವಾಗಿದೆ. ಅವರು ದಿನಕ್ಕೆ ೧೦-೧೨ ಮೈಲಿಗಳಂತೆ ಪಶ್ಚಿಮಕ್ಕೆ ನುಗ್ಗುತ್ತಿದ್ದಾರೆ. ರಷ್ಯದ ಕಲ್ಲಿದ್ದಲು ಭಂಡಾರವೆನಿಸಿದ ಆ ಕ್ಷೇತ್ರವೆಲ್ಲ ಬೇಗನೆ ವಶವಾದೀತೆಂದು ನಿರೀಕ್ಷಿಸಲಾಗಿದೆ. ಡೋನೆಟ್ಸ್ ಕ್ಷೇತ್ರದಲ್ಲಿ ೧೦ ಸ್ಥಳಗಳನ್ನು ರಷ್ಯನರು ಹಿಡಿದಿದ್ದಾರೆ. ರಷ್ಯನರು ಕೈಗೊಂಡ ಬೇಸಿಗೆ ಮುತ್ತಿಗೆಯಲ್ಲಿ ಇದುವರೆಗೆ ನಾಲ್ಕು ಲಕ್ಷ ಜರ್ಮನರು ನಾಶರಾಗಿದ್ದಾರೆ. ಡೊನೆಟ್ಸ್ ಬೇಸಿನ್ನಿನಲ್ಲಿ ತೀರ ಅವ್ಯವಸ್ಥೆಯುಂಟಾಗಿದೆ. ಅಲ್ಲಲ್ಲಿ ಸಿಕ್ಕಿಬಿದ್ದಿರುವ ತಮ್ಮ ಪಡೆಗಳನ್ನು ಉಳಿಸಿಕೊಳ್ಳಲು ನಾಜಿಗಳು ವಿಫಲಪ್ರಯತ್ನ ಮಾಡುತ್ತಿದ್ದಾರೆ. ಉತ್ತರ ಉಕ್ರೇನಿನಲ್ಲಿ ರಷ್ಯನರು ಕೀವ್ ಕಡೆ ನುಗ್ಗುತ್ತಿದ್ದಾರೆ. ಕೊನೊಟಾಪ್ ರಷ್ಯನರ ವಶವಾದ್ದರಿಂದ ಹಿಟ್ಲರನ ಸೇನೆಯನ್ನು ಎರಡಾಗಿ ಸೀಳಿದಂತಾಗಿದೆ! ಮಧ್ಯ ರಷ್ಯಾದಲ್ಲಿರುವ ಮತ್ತು ದಕ್ಷಿಣ ರಷ್ಯದಲ್ಲಿರುವ ನಾಜಿಪಡೆಗಳಿಗೆ ಯಾವ ಸಂಬಂಧವೂ ಇಲ್ಲದಂತಾಗಿದೆ. ಎಲ್ಲ ಕಡೆಯಿಂದಲೂ ಜರ್ಮನರು ಹಿಮ್ಮೆಟ್ಟುತ್ತಿದ್ದಾರೆ.

ಸಾವಿರಾರು ಜರ್ಮನರ ಹೆಣಗಳು ಬಿದ್ದಿವೆ

ಉಕ್ರೇನಿನಲ್ಲೂ ಮತ್ತು ಡೊನೆಟ್ಸ್ ಕ್ಷೇತ್ರದಲ್ಲೂ ಸಾವಿರಾರು ಜರ್ಮನ್ ಶವಗಳು ಬಿದ್ದಿವೆ. ಸಂಗ್ರಾಮ ವಸ್ತುಗಳು ರಾಶಿ ರಾಶಿಯಾಗಿ ಬಿದ್ದಿವೆ. ಸ್ಮೊಲೆನ್ಸ್ಕ್ ರೈಲ್ವೆಯಿಂದ ಹಿಡಿದು ಟಾಗನ್‌ರಾಗ್‌ವರೆಗೆ ಏಕಪ್ರಕಾರವಾಗಿ ಹೋರಾಟ ನಡೆಯುತ್ತಿದೆ. ಅದರ ಉತ್ತರ ಉಕ್ರೇನಿನಲ್ಲೂ ಡೊನ್‌ಬಾಸ್ ಕ್ಷೇತ್ರದ ಮಧ್ಯಭಾಗದಲ್ಲೂ ಅತ್ಯುಗ್ರ ಕದನ ನಡೆಯುತ್ತಿದೆ. ಜರ್ಮನ್ ವ್ಯೂಹವನ್ನು ಆದೇ ಕಡೆ ಛೇದಿಸಿ ಬಗ್ಗಿಸಿ ಹಿಂದಕ್ಕೆ ಒತ್ತಿದ್ದರೂ ಬಹಳ ಎಚ್ಚರಿಕೆಯಿಂದ ಸಿದ್ಧಮಾಡಿರುವ ಹೊಸ ಹೊಸ ನಾಜಿವ್ಯೂಹಗಳು ಸಿಕ್ಕುತ್ತಲೇ ಇವೆ ಎಂದು ಹೇಳಲಾಗಿದೆ.

ಮಣಸಿಗಿ

ರಾಮದುರ್ಗ ಸಂಸ್ಥಾನ ಮಣಸಿಗಿ ಗ್ರಾಮದ ವೇ|| ಹಿರೇಮಠದ ಮುದಿಯಯ್ಯನವರು ಪ್ರತಿವರ್ಷ ಪದ್ಧತಿಯಂತೆ ಶ್ರಾವಣ ಬ|| ೧೧ ಗುರುವಾರ ದಿವಸ ಶ್ರೀ ಕೊಣ್ಣೂರು ಹಿರೇಮಠದ ಪಟ್ಟದಸ್ವಾಮಿಗಳವರ ನೇತೃತ್ವದಲ್ಲಿಯೂ ವೇ|| ಮಣಸಿಗಿ ಸಾಲಿಮಠದ ಮುರಗಯ್ಯನವರ ವೈದಿಕತ್ವದಲ್ಲಿಯೂ ಮಹಾ ಮಹಿಮರಾದ ಶ್ರೀ ಲಿಂಗಬಸವಸ್ವಾಮಿಗಳವರ ಗದ್ದುಗೆಗೆ ಮಹಾರುದ್ರಾಭಿಷೇಕವನ್ನು ನೆರವೇರಿಸಿದರು. ಆಗ್ಗೆ ಗ್ರಾಮವೂ ಮಠವೂ ರಂಭಾಸ್ತಂಭಾದಿಗಳಿಂದ ಅಲಂಕರಿಸಲ್ಪಟ್ಟಿದ್ದವು. ಮೂಲಸ್ವಾಮಿಗಳವರ ರಜತ ಮೂರ್ತಿಯ ಉತ್ಸವವು ಒಳ್ಳೇ ವೈಭವದಿಂದ ನೆರವೇರಿತು. ಬರಗಾಲವಾಗಿದ್ದರೂ ೩ ೪ ಸಾವಿರ ಜನರಿಗೆ ಅನ್ನ ಸಂತರ್ಪಣೆಯು ಮಾಡಲ್ಪಟ್ಟಿತು. ಶ್ರೀ ಜಗದ್ಗುರು ಪಂಚಾಚಾರ್ಯರು ವೇ|| ಮುದಿಯಯ್ಯನವರಿಗೂ ಇವರ ಭಕ್ತಮಂಡಳಿಗೂ ಆಯುರಾರೋಗ್ಯಭಾಗ್ಯಾದಿಗಳನ್ನೀಯಲೆಂದು ಪ್ರಾರ್ಥಿಸುತ್ತೇನೆ.

ಚನ್ನಬಸಪ್ಪ, ಕಲ್ಯಾಣಿ

ಸ್ವೀಕಾರ

ಗದಗ ಟಿಸನ್ನಿನಲ್ಲಿರುವ ಶ್ರೀಮುಕ್ತಿಯ(?) ಬಸವೇಶ್ವರ ದೇವಸ್ಥಾನದಲ್ಲಿ ನೆರವೇರಿದ ಪುರಾಣ ಸಮಾಪ್ತಿ ಸಮಯದಲ್ಲಿ ಸದರಿ ದೇವಸ್ಥಾನದ ಮೆಂಬರರಾದ ದಿ|| ಬ|| ಮಾಸ್ತಿ ವಿರುಪಣ್ಣನವರು, ಅಬ್ಬಿಗೇರಿ ಬಸಪ್ಪನವರು, ಕಾಸಣ್ಣನವರ ಸೋಮಪ್ಪನವರು, ಪಟ್ಟಣಶೆಟ್ಟಿ ಕೊಟ್ರಪ್ಪನವರು, ಪುರೋಹಿತ್ ರಂಗಿಲದಾಸರು ಇವರಿಂದ ಪ್ರಚಾರೋಪಣಕ್ಕೋಸ್ಕರ ಸಮರ್ಪಿಸಲ್ಪಟ್ಟ 2 ರೂಪಾಯಿಗಳು ಮತ್ತು ಗದಗಿನ ಶ್ರೀರಾಚೋಟಿ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ವೇ|| ನರೇಂದ್ರಮಠದ ವೀರಯ್ಯನವರಿಂದ ನಡೆದ ಕೀರ್ತನಸಮಾಪ್ತಿಕಾಲದಲ್ಲಿ ಸದರಿ ದೇವಸ್ಥಾನದ ಪಂಚರು ಸಮರ್ಪಿಸಿದ 1 ರೂಪಾಯಿ ಒಟ್ಟು 3 ರೂಪಾಯಿಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ನವಲಗುಂದ ತಾಲೂಕು ಶಿಶುವಿನಹಳ್ಳಿ ಹಿರೇಮಠದ ವೇ|| ಗಂಗಾಧರಯ್ಯನವರ ಧರ್ಮಪತ್ನಿಯವರಾದ ಶ್ರೀ ಸೋಮವ್ವನವರು ಶಿವಾಧೀನರಾದ ಸಮಯದಲ್ಲಿ ವೇ|| ಹುಬ್ಬಳ್ಳಿ ಹಿರೇಮಠದ ಸೋಮನಾಥಯ್ಯನವರ ಸೂಚನೆಯ ಮೇರೆಗೆ ಪ್ರಚಾರೋಪಣಕ್ಕೋಸ್ಕರ ತೆಗೆಯಿಸಿದ 2 ರೂಪಾಯಿಗಳು ವೇ|| ನಂದಿಕೇಶ್ವರಮಠದ ವಿರೂಪಾಕ್ಷಯ್ಯನವರ ದ್ವಾರಾ ತಲ್ಪಿರುತ್ತವೆ.

ರಾಮದುರ್ಗ ಸಂಸ್ಥಾನಕ್ಕೆ ಸೇರಿದ ಮಣಸಿಗಿ ಗ್ರಾಮದ ಹಿರೇಮಠದಲ್ಲಿ ನೆರವೇರಿದ ರುದ್ರಾಭಿಷೇಕ ಸಮಯದಲ್ಲಿ ಪ್ರಚಾರೋಪಣಕ್ಕೋಸ್ಕರ ತೆಗೆಯಿಸಿದ 1 ರೂಪಾಯಿಯು ಶ್ರೀ ಕೊಣ್ಣೂರು ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಳವನ್ನೀಯಲೆಂದು ಪ್ರಾರ್ಥಿಸುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಹದಿನೆಂಟು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೩—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೧—೬
ಸದ್ಯಃ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೧—೬
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೦—೯
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೦—೯
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೦—೯
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೦—೯
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೦—೯
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೦—೯
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೦—೯
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೦—೯
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೦—೯
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೦—೯
ಹಿಮವತ್ಪರ್ವತದ ಮಧ್ಯದಲ್ಲಿ ತೋರುವ ಶ್ರೀ ಕೇದಾರನಾಥಸ್ವಾಮಿಯ ಗುಡಿಯ ಸುಂದರ ಫೋಟೋ	೦—೦—೯
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೦—೯
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೦—೯

ಸೂಚನೆ— ಒಂದು ರೂಪಾಯಿಗಿಂತಲೂ ಕಡಿಮೆ ಆರ್ಡರುಗಳಿಗೆ ವಿ. ಪಿ. ಕಳುಹಿಸುವುದಕ್ಕಾಗುವುದಿಲ್ಲ. ೫ ರೂಪಾಯಿಗಳ ಮೇಲೆ ತರಿಸಿಕೊಳ್ಳುವವರಿಗೂ, ಫೋಟೋ ವ್ಯಾಪಾರಿಗಳಿಗೂ ೧ ರೂಪಾಯಿಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವದು

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಲಿಂಗಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳಲ್ಲೆಲ್ಲ ಇದು ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಪ್ರಕರಣಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಃಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುವು)	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಿಸಲ್ಪಟ್ಟದ್ದು)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	**೨ ರೂ.**
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	**३ रु.**
वीरशैवरत्न (मराठी)	**१ रु.**
महानारायणोपनिषत् (वीरशैवभाष्य-संस्कृत)	**१ रु.**
सिद्धांतशिखामणि (मूल)	**६ आ**
पुरुषसूक्तम् (वीरशैवप्राचीनभाष्योपेतम्)	**४ आ.**
नंदिकेश्वरकारिका (संस्कृत)	**२ आ.**

೧ ರೂಪಾಯಿಗಿಂತಲೂ ಕಡಿಮೆ ಬೆಲೆಗೆ ವಿ. ಪಿ. ಕಳುಹಿಸುವುದಿಲ್ಲ. ೫ ರೂ ಗಳಿಗೆ ಮೇಲ್ಪಟ್ಟು ಪುಸ್ತಕಗಳನ್ನು ತರಿಸಿಕೊಳ್ಳುವವರಿಗೆ ೧ ರೂ ಗೆ ೪ ಆಣೆಯಂತೆ ಕಮಿಷನ್ ಕೊಡಲಾಗುವುದು.

ಮ್ಯಾನೇಜರ್ —**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ।
ಪಂಚಾಚಾರನಿಜೋಪದೇಶಕರ್ ಸಂಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ।

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ. ಪಿ. ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೦ನೇ ಸೆಪ್ಟೆಂಬರ್ ೧೯೪೩ [ಸಂಚಿಕೆ ೨೦

ಸಿದ್ಧಾಂತಶಿಖಾಮಣಿ ಪ್ರವಚನ ಸಮಾಪ್ತಿ

ಮುಸಿಗಿ

ಭಾರತ ಜನಾಂಗಗಳಲ್ಲಿ ವೀರಶೈವ ಮತವು ಶಿವನ ವಿಷಯದಲ್ಲಿ ಅತಿಶಯವಾದ ಭಕ್ತಿಯನ್ನಿಟ್ಟು ಶಿವನ ಸಂಬಂಧವಾದ ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತವನ್ನು ಪಡೆದು ಅದರಂತೆ ನಡೆನುಡಿಗಳನ್ನು ಶುದ್ಧೀಕರಿಸಿಕೊಂಡು ಪಾರಂಗತವಾಗಿ ವರ್ತಿಸುತ್ತ ಬಂದಿರುವುದು "ನ ವೀರಶೈವ ಸದೃಶಂ ಮತಮಸ್ತಿ ಜಗತ್ತ್ರಯೇ" ಎಂಬ ಉಕ್ತಿಯು ಸಾರ್ಥಕವಾದುದು

ಅನಾದಿಯಿಂದಲೇ ನಮ್ಮ ವೀರಶೈವ ಮತಬಾಂಧವರು ಮಠಮಂದಿರಗಳಲ್ಲಿ ಶಿವನ ಸಂಬಂಧವಾದ ಭಜನೆ ಕೀರ್ತನೆ ಪುರಾಣ ಪ್ರವಚನ ಮೊದಲಾದವುಗಳನ್ನು ಜರುಗಿಸುತ್ತ ಬಂದಿರುವುದು ಶಿಷ್ಟ ಸಂಪ್ರದಾಯವಾಗಿರುವದು ಇದು ಅಲ್ಲದೆ ಶಿವಪೂಜಾ ಗುರುಪಾದಪೂಜಾ ರುದ್ರಾಭಿಷೇಕ ಪೂಜಾವೈಭವಗಳು ಮಹಾ ಗಣಾರಾಧನೆಗಳು ಶಿವನ ಪ್ರೀತ್ಯರ್ಥವಾಗಿ ಜರುಗುತ್ತಿರುವವು ಯಾವ ವಿಧದಿಂದಾದರೂ ಶಿವನನ್ನು ಆರಾಧಿಸಿ ಸದ್ಗತಿಯನ್ನು ಪಡೆಯುವುದೇ ಮುಖ್ಯ ಧ್ಯೇಯವಾಗಿರುತ್ತದೆ ಬಹುಶಃ ಲೋಕದಲ್ಲಿ ಹೊಟ್ಟೆಗಾಗಿ ಅನ್ನವನ್ನಿಟ್ಟು ತತ್ಸನನ್ನು ತೃಪ್ತಿಪಡಿಸುವುದುಂಟು ಹಾಗೂ ಜ್ಞಾನಭಕ್ತಿಯನ್ನಿಟ್ಟು ಆತ್ಮನನ್ನು ತೃಪ್ತಿಪಡಿಸುವುದೂ ಉಂಟು ಇದರ ಅನ್ನರೂಪ ಪ್ರಸಾದವು ಕ್ಷಣಿಕಾನಂದವನ್ನು ಕೊಡುತ್ತದೆ ಜ್ಞಾನರೂಪ ಪ್ರಸಾದವು ನಿತ್ಯಾನಂದವನ್ನು ಕೊಡುತ್ತದೆ ಆದುದರಿಂದ ಪೂರ್ವಸಂಪ್ರದಾಯದಿಂದ ಬಂದ ಉಪದೇಶಾಮೃತವನ್ನು ನಿತ್ಯದಲ್ಲಿಯೂ ತತ್ವಸಾಕ್ಷಾತ್ಕಾರಕ್ಕಾಗಿ ಪಡೆಯುವುದು ಪ್ರತಿಯೊಬ್ಬ ಮಾನವನ ಧರ್ಮವಾಗಿರುತ್ತದೆ "ಪ್ರಸಾದಮೂಲಾ ಸರ್ವೇಷಾಂ ಭಕ್ತಿರವ್ಯಭಿಚಾರಿಣೀ ಶಿವಪ್ರಸಾದಹೀನಸ್ಯ ಭಕ್ತಿಶ್ಚಾಪಿ ನ ಸಿದ್ಧ್ಯತಿ" ಕೇವಲ ಶಿವನಲ್ಲಿ ಮಾತ್ರ ಅತ್ಯಂತ ಭಕ್ತಿಯನ್ನು ಸಲ್ಲಿಸಬೇಕೆಂಬ ತದೇಕಭಾವನೆಯು ಹುಟ್ಟಬೇಕಾದರೆ ಸಕಲರಿಗೂ ಆ ಶಿವನ ಅನುಗ್ರಹವು ಮೂಲಕಾರಣವಾದುದಾಗಿರುತ್ತದೆ ಈ ತದೇಕಭಾವನೆಯುಳ್ಳ ಭಕ್ತಿಯೊಂದಿಲ್ಲದಿದ್ದರೆ ಅವನ ಕರ್ಮಗಳೆಲ್ಲವೂ ದಕ್ಷಬ್ರಹ್ಮನ ಯಾಗದಂತೆ ನಿಷ್ಫಲವಾದವುಗಳೇ ಸರಿ ಆದುದರಿಂದ ಭಕ್ತಿಸಂಪನ್ನರಾಗಿ ಶಿವನ ಮಹೋತ್ಸವಗಳನ್ನು ಜರುಗಿಸತಕ್ಕದ್ದಾಗಿದೆ ಹೀಗೆ ಉಪದೇಶವನ್ನು ಭಕ್ತಿಯಿಂದ ಪಡೆದುಕೊಳ್ಳುವ ಸಂಪ್ರದಾಯವು ಬಂದಂತೆ ನಮ್ಮ ಗ್ರಾಮದಲ್ಲಿ ನಮ್ಮ ಭಕ್ತರ ಅಪೇಕ್ಷೆಯಂತೆ ಪಟ್ಟದಸ್ವಾಮಿಗಳಾದ ಷಡಕ್ಷರ ಶಿವಾಚಾರ್ಯರು ತಮ್ಮ ಮಠದಲ್ಲಿ ಪ್ರತಿವರ್ಷದಂತೆ ಶ್ರಾವಣಮಾಸದ ಶ್ರವಣಕ್ಕಾಗಿ ಈ ವರ್ಷ ಸಿದ್ಧಾಂತ ಶಿಖಾಮಣಿ ಎಂಬ ಗ್ರಂಥವನ್ನು ಉಪದೇಶಿಸಲು ಪ್ರಾರಂಭಿಸಿ ಶ್ರಾವಣಮಾಸ ಆದಿಯಾಗಿ ಭಾದ್ರಪದ ಶು|| ೫ ವರೆವಿಗೂ ಸವಿಸ್ತಾರವಾಗಿ ಬೋಧಿಸುತ್ತಾ ಬಂದು ಗಣಾರಾಧನೆಯ ಪೂರ್ವಕ ತಮ್ಮ ಅನುಷ್ಠಾನ ಕಾರ್ಯವನ್ನೂ ಈ ಉಪದೇಶ ಕಾರ್ಯವನ್ನೂ ಪೂರ್ತಿಗೊಳಿಸಿದರು

ಜಗದ್ಗುರು ರೇಣುಕಾರ್ಯರಿಂದ ಉಪದಿಷ್ಟವಾದ ಈ ಪವಿತ್ರ ಸಿದ್ಧಾಂತ ಗ್ರಂಥಕ್ಕೆ ಪಂಡಿತ ಶ್ರೀಕಾಶೀನಾಥ ಶಾಸ್ತ್ರೀಜೀಯವರ ಭಾವಪ್ರಕಾಶವೆಂಬ ವ್ಯಾಖ್ಯಾನವನ್ನು ವಿಮರ್ಶಾತ್ಮಕ ದೃಷ್ಟಿಯಿಂದಲೂ ಸುಲಭ ಶೈಲಿಯಿಂದಲೂ ಸಕಲರಿಗೂ ತಿಳಿಯುವಹಾಗೆ ಬಹು ಸುಂದರವಾಗಿ ಅಚ್ಚುಗೊಳಿಸಿ ಪ್ರಕಾಶಪಡಿಸಿದ್ದು ಇದೇ ಸಮಾಜಕ್ಕೆ ಮಹೋಪಕಾರವಾಗಿದೆ ಆದುದರಿಂದ ಸಮಾಜವು ಪಂಡಿತರ ಪಾದಕ್ಕೆ ಚಿರಋಣಿಯಾಗಿರುವದು ಅನುಭವಸ್ಥರೂ ಮತ್ತು ಧರ್ಮಶ್ರದ್ಧೆಯುಳ್ಳ ಪಂಡಿತರೂ ಆಚಾರ್ಯರೂ ಈ ಮಹಾ ಧರ್ಮಗ್ರಂಥವನ್ನೇ ಶ್ರಾವಣಮಾಸಾದಿಗಳಲ್ಲಿ ಬೋಧಿಸುವ ರೂಢಿಯನ್ನು ಬಳಕೆಯಲ್ಲಿತಂದು ಮತತತ್ತ್ವಗಳನ್ನು ಸಕಲರಿಗೂ ತಿಳಿಯಪಡಿಸುವುದು ಮಹಾ ಪುಣ್ಯಕಾರ್ಯವಾಗಿರುತ್ತದೆಂದು ಬೇಡಿಕೊಳ್ಳುತ್ತೇವೆ

ಕಾರ್ಯದರ್ಶಿಗಳು
ಮರುಳ ರುದ್ರಪ್ಪ
ಒಳಿ ಗಂಗಾಧರಪ್ಪ
ಮು ಗಿ

ಪುರಾಣ ಸಮಾಪ್ತಿ ಸಮಾರಂಭ

ಬೆಳಗಾವಿಯಲ್ಲಿ ಪ್ರತಿವರ್ಷದಂತೆ ಈ ವರ್ಷವಾದರೂ ಶ್ರೀ ಷ ಬ್ರ ಗುರುವರ್ಯ ಶಿವಾಚಾರ್ಯರು ಬೃಹನ್ಮಠ ಸುತ್ತಗಟ್ಟಿಯವರ ಅನುಷ್ಠಾನವು ಕೊತವಾಲ ಓಣಿಯಲ್ಲಿರುವ ವೇ|| ಶಿವರುದ್ರಯ್ಯನವರು ಹಿರೇಮಠ ಇವರ ಮನೆಯಲ್ಲಿ ನಡೆಯಿತು ಮತ್ತು ಪಾದಪೂಜೆಯು ನಿತ್ಯದಲ್ಲಿಯೂ ನಡೆಯುತಿತ್ತು ಸ್ವಾಮಿಗಳ ಅನುಷ್ಠಾನವಾದನಂತರ ನಡೆಯುವ ಶ್ರೀ ರುದ್ರಾಭಿಷೇಕಕ್ಕೆ ನಿತ್ಯದಲ್ಲಿಯೂ ಭಕ್ತರು ವಿಶೇಷವಾಗಿ ಬಂದು ಶ್ರೀಗಳವರ ದರ್ಶನಾಶೀರ್ವಾದಕ್ಕೆ ಪಾತ್ರರಾಗುತ್ತಿದ್ದರು ಈ ಸುಯೋಗವು ದೊರೆತಿದ್ದು ಬೆಳಗಾವಿ ಭಕ್ತರಾದ ನಮ್ಮ ಸುದೈವವೆಂದು ಅನ್ನುತ್ತಿದ್ದರು ಅಲ್ಲದೆ ಪ್ರತಿನಿತ್ಯದಲ್ಲಿಯೂ ಅದೇ ಕೊತವಾಲ ಓಣಿಯಲ್ಲಿರುವ ಶ್ರೀರಾಮಲಿಂಗೇಶ್ವರ ದೇವಾಲಯದಲ್ಲಿ ಸುತ್ತಗಟ್ಟಿ ಶ್ರೀಗಳು **ಶ್ರೀ ಶಿವಮಹಾಪುರಾಣವನ್ನು** ಪ್ರವಚನರೂಪವಾಗಿ ಹೇಳುತ್ತಿದ್ದರು ದೇವಾಲಯವು ಬಹಳ ವಿಶಾಲವಾಗಿದ್ದರೂ ಪ್ರವಚನಕ್ಕೆ ಬರುವ ಜನರಿಗೆ ಸ್ಥಲವು ಸಾಲದಾಗುತ್ತಿತ್ತು ಪರಮಾತ್ಮನ ಪಂಚವಿಂಶತಿ ಲೀಲೆಗಳನ್ನು ಸ್ವಾಮಿಗಳು ಒಳ್ಳೇ ಮನೋಹರವಾಗಿ ಹೇಳುತ್ತಿದ್ದರು ಈ ರೀತಿಯಾಗಿ ಶ್ರಾವಣಮಾಸದ ಸತ್ಕಾರ್ಯವು ಸರಿಯಾಗಿ ನಿರ್ವಿಘ್ನವಾಗಿ ನಡೆಯಿತು ಸುತ್ತಗಟ್ಟಿ ಶ್ರೀಗಳು ಈಗ ೪ ವರ್ಷಗಳಿಂದಲೂ ಬೆಳಗಾವಿಯಲ್ಲಿ ಅವ್ಯಾಹತವಾಗಿ ಧರ್ಮಜಾಗ್ರತಿಯ ಕಾರ್ಯವನ್ನು ಕೈಕೊಂಡು ಇಲ್ಲಿಯವರೆಗೆ ಜನತೆಯಲ್ಲಿ ಆಚಾರ್ಯರ ತತ್ವವನ್ನು ಪ್ರತಿಪಾದಿಸಿ ಭಕ್ತರನ್ನು ಉದ್ಧರಿಸಿದ್ದಕ್ಕಾಗಿ ನಾವು ಅವರಿಗೆ ಪರಮ ಋಣಿಯಾಗಿದ್ದೇವೆ

ಈ ವರ್ಷ ಸ್ವಾಮಿಗಳ ಅನುಷ್ಠಾನವನ್ನು ತಮ್ಮ ಮನೆಯಲ್ಲಿಯೇ ನೆರವೇರುವಂತೆ ಸ್ವಾಮಿಗಳಿಗೆ ಪ್ರಾರ್ಥಿಸಿಕೊಂಡು ಅನುಷ್ಠಾನ ಪಾದಪೂಜೆಗಳು ಅವ್ಯಾಹತವಾಗಿ ನಡೆಯುವಂತೆ ವ್ಯವಸ್ಥೆಯನ್ನು ಮಾಡಿದ ವೇ|| ಶಿವರುದ್ರಯ್ಯನವರು ಹಿರೇಮಠ ಕಣಬರಗಿಯವರ ಭಕ್ತಿಯು ಅತಿಶಯವಾಗಿದೆ ಇವರು ವಯೋವೃದ್ಧರಾಗಿದ್ದರೂ ಗುರುಭಕ್ತಿಯಲ್ಲಿ ತರುಣರಾಗಿದ್ದಾರೆ ಇವರಿಗೆ ಐದು ಮಂದಿ ಮಕ್ಕಳಿದ್ದಾರೆ ತಂದೆಯಂತೆ ಅವರಾದರೂ ಭಕ್ತಿಯುಳ್ಳವರಾಗಿದ್ದಾರೆ ಈ ವರ್ಷ ಪಾದಪೂಜಾ ಸಮಾಪ್ತಿಯ ಸಮಯದಲ್ಲಿ ೨೫ ಜನರಿಗೆ ದೀಕ್ಷೆಯನ್ನು ಮಾಡಿಸಿದರು

ಪುರಾಣವು ಭಾದ್ರಪದ ಶು|| ಸೋಮವಾರದಿವಸ ಸಮಾಪ್ತಿಯಾಯಿತು ಸಮಾಪ್ತಿಗೆ ಹೂಲೀ ಬಾಲಲೀಲಾ ಸ್ವಾಮಿಗಳೂ ಹುಣಸೀಕಟ್ಟಿ ಪಟ್ಟದಸ್ವಾಮಿಗಳೂ ದಯಮಾಡಿಸಿದ್ದರು ಆದಿವಸ ಅವರ ವ್ಯಾಖ್ಯಾನಗಳಾದವು ಮತ್ತು ಸೌ|| ಉಮಾದೇವಿ ಪಾಟೀಲ, ಸೌ|| ಸುಮಂಗಲಾದೇವಿ ಹಿರೇಮಠ ಮತ್ತು ಕುಂ ನಾಗವ್ವಾ ಹಲಿಗೇಯವರು ಸ್ತ್ರೀನೀತಿ ದೀಕ್ಷಾ, ಶಿಕ್ಷಣ, ಈ ವಿಷಯಗಳಲ್ಲಿ ಭಾಷಣಮಾಡಿದರು ಆಮೇಲೆ ಹಿರೇಮಠ ಮಾಸ್ತರರು ಭಾಷಣಮಾಡುವಾಗ್ಗೆ "ಈ ವರ್ಷ ಇಲ್ಲಿ ನಡೆದ ಈ ಕಾರ್ಯವನ್ನು ನೋಡಿ ಬಹಳ ಸಂತೋಷವಾಗುತ್ತದೆ ಈ ಬೆಳಗಾವಿಯಲ್ಲಿ ಧರ್ಮಜಾಗ್ರತಿಯಾಗಬೇಕಾದರೆ ಸುತ್ತಗಟ್ಟಿ ಶ್ರೀಗಳವರು, ನಿರಂತರವಾಗಿ ಮಾಡಿದ ಧರ್ಮಪ್ರಚಾರವೇ ಮೂಲಕಾರಣವಾಗಿದೆ ಈ ಕಾರ್ಯಕ್ಕೆ ಸ್ವಾಮಿಗಳನ್ನು ಕರೆದುಕೊಂಡು ಬಂದು ಅವರ ಸೇವೆಯನ್ನು ಮಾಡಿ ಸಕಲರನ್ನೂ ಪುನೀತರನ್ನಾಗಿಮಾಡಿದ ರಾ|| ರಾ|| ಲಿಂಗಪ್ಪಅಣ್ಣಾ ಅಂಕಲಗಿಯವರ ಉಪಕಾರವನ್ನು ಎಷ್ಟು ಸ್ಮರಿಸಿದರೂ ತೀರದಾಗಿದೆ ಈ ವರ್ಷ ಬೆಳಗಾವಿಯಲ್ಲಿ ನಾಲ್ಕು ಭಾಗದಲ್ಲಿ ಪುರಾಣಗಳು ನಡೆದವು ಮೊದಲು ಈ ಊರಲ್ಲಿ ಪುರಾಣ ಪುಣ್ಯಕಥೆಗಳ ಶ್ರವಣದ ವಿಚಾರವು ನಮ್ಮ ವೀರಶೈವ ಜನತೆಯಲ್ಲಿ ಇದ್ದಿಲ್ಲ ಈಗ ಈ ಸ್ವಾಮಿಗಳ ಆಶೀರ್ವಾದದಿಂದ ಅಲ್ಲಲ್ಲಿ ಮೇಲಿಂದ ಮೇಲೆ ವೀರಶೈವರಲ್ಲಿ ಸತ್ಕಾರ್ಯಗಳು ನಡೆಯಲಿಕ್ಕೆ ಹತ್ತಿವೆಯೆಂದು ಹೇಳಲಿಕ್ಕೆ ಬಹಳ ಸಂತೋಷವಾಗುತ್ತದೆ" ಎಂದು ಮಾತನಾಡಿದರು ಆಮೇಲೆ ಮಹಾಮಂಗಳಾರತಿಯಾಗಿ ಪುರಾಣವು ಸಮಾಪ್ತಿಗೊಂಡಿತು ಇದೇರೀತಿಯಾಗಿ ಇಂಥಾ ಸ್ವಾಮಿಗಳನ್ನು ಶ್ರೀ ಜಗದ್ಗುರು ಆಚಾರ್ಯ ಭಗವತ್ಪಾದರು ಮೇಲಿಂದ ಮೇಲೆ ಒದಗಿಸಿಕೊಡಲೆಂದು ಪರಮಾತ್ಮನಲ್ಲಿ ಪ್ರಾರ್ಥನೆ ಕೊತವಾಲ ಓಣಿಯ ದೈವಮಂಡಳಿಯು ಈ ಸತ್ಕಾರ್ಯಕ್ಕೆ ಸಹಾಯಮಾಡಿದ್ದಕ್ಕಾಗಿ ಅವರ ಉಪಕಾರವು ಸ್ಮರಣೀಯವಾಗಿದೆ.

ಎಸ್. ಪಾಟೀಲ
ರಾಜಾ ಗಲ್ಲೀ ಬೆಳಗಾವಿ

ಪಂಚಾಚಾರ್ಯಪ್ರಭಾ.

೧೯೪೩ನೆಯ ಸೆಪ್ಟೆಂಬರ್ ತಾ॥ ೨೦ ನೇ ಸೋಮವಾರ

ರಾಜಗುರು ಕರ್ತವ್ಯ.

ಪರಮ ಕೃಪಾಳುವಾದ ಪರಮೇಶ್ವರನು ಸ್ಥಾವರ ಜಂಗಮರೂಪವಾದ ಪ್ರಪಂಚವನ್ನು ಸೃಷ್ಟಿಮಾಡಿ ಪ್ರಪಂಚವು ಅವ್ಯಾಹತವಾಗಿ ನಡೆದು ಸಕಲಪ್ರಾಣಿಗಳೂ ದುಷ್ಟಮಾರ್ಗಗಳಲ್ಲಿ ಪ್ರವೇಶಿಸದೆ ಸನ್ಮಾರ್ಗಪ್ರವಿಷ್ಟರಾಗಿ ತಮ್ಮ ತಮ್ಮ ಪವಿತ್ರಧ್ಯೇಯಗಳನ್ನು ಪಡೆಯಲೆಂಬ ಮಹಾಸಂಕಲ್ಪದಿಂದ ರಾಜರನ್ನೂ ಗುರುಗಳನ್ನೂ ನಿಯಮಿಸಿರುತ್ತಾನೆ. ಈಶ್ವರನು ಇಂಥ ರಾಜರ ಮತ್ತು ಗುರುಗಳ ದ್ವಾರಾ ಪ್ರಪಂಚದ ಯೋಗಕ್ಷೇಮಗಳನ್ನು ನೋಡುತ್ತಾನಲ್ಲದೆ ಪ್ರತ್ಯಕ್ಷವಾಗಿ ತಾನೇ ನೋಡುವುದಿಲ್ಲವು. ಆದ್ದರಿಂದ ಪ್ರಜೆಗಳು ರಾಜಾಜ್ಞೆಯನ್ನೂ, ಶಿಷ್ಯರು ಗುರುವಿನಾಜ್ಞೆಯನ್ನೂ ಈಶ್ವರಾಜ್ಞೆಯೆಂದು ಭಾವಿಸಿ ವರ್ತಿಸಬೇಕಾಗಿದೆ ರಾಜನಾದರೂ ತನಗೆ ಪ್ರಾಪ್ತವಾದ ಪ್ರಜಾಪಾಲನೆಯ ಭಾರವು ಪರಮೇಶ್ವರನಿಂದ ಅನುಗ್ರಹೀತವಾದುದೆಂದು ತಿಳಿದು ಅಹೋರಾತ್ರಿಯಲ್ಲಿ ಈಶ್ವರೇಚ್ಛೆಗೆ ವಿರೋಧವಿಲ್ಲದಂತ ನ್ಯಾಯ ಮಾರ್ಗದಿಂದ ಪ್ರಜೆಗಳ ಕಷ್ಟನಷ್ಟಗಳನ್ನು ವಿಚಾರಿಸುತ್ತಿರಬೇಕಾಗಿದೆ. ಮಹಾರಾಜನಿಗೆ ತಾನು ಆಚರಿಸುವ ಪ್ರಜಾರಕ್ಷಣೆಯೇ ಪರಮ ತಪಸ್ಸಾಗಿದೆ ತನ್ನ ರಾಜ್ಯದಲ್ಲಿರುವ ಸಕಲ ಪ್ರಜೆಗಳೂ ಈತಿಬಾಧೆಗಳಿಗೊಳಗಾಗದ ಸೌಖ್ಯವನ್ನು ಅನುಭವಿಸುವಂತೆ ಯಾವ ರಾಜನು ನೋಡಿಕೊಳ್ಳುತ್ತಾನೆಯೋ ಆ ರಾಜನು ತನ್ನ ಕರ್ತವ್ಯವನ್ನು ಪರಿಪೂರ್ಣ ಮಾಡಿದಂತಾಗುವುದಲ್ಲದೆ ರಾಜಶಾಸನದಿಂದ ಶಿಕ್ಷಿತರಾದ ಪ್ರಜೆಗಳು ನೀತಿಕುಶಲರಾಗಿಯೂ ಪ್ರತಿಷ್ಠಿತರಾಗಿಯೂ ಬಾಳುವರು ಮಾನವಜನ್ಮವನ್ನು ಧರಿಸಿದ ಮೇಲೆ ಕೀರ್ತಿಪ್ರತಿಷ್ಠೆಗಳನ್ನು ಪಡೆದು ಸೌಖ್ಯದಿಂದಿರುವುದೊಂದೇ ಮುಖ್ಯಕರ್ತವ್ಯವಲ್ಲ ಆತ್ಮರೂ ಸಹ ಪವಿತ್ರರಾಗಬೇಕಾಗಿದೆ ಮಾನವನು ಲೌಕಿಕಪ್ರತಿಷ್ಠೆಗಳನ್ನು ಪಡೆದ ಮಾತ್ರದಿಂದ ಸೃಷ್ಟಿಕರ್ತನಾದ ಈಶ್ವರನ ಸಂಕಲ್ಪವನ್ನು ನೆರವೇರಿಸಿದಂತಾಗುವುದಿಲ್ಲ ಈಶ್ವರನ ಸಂಕಲ್ಪವನ್ನು ನೆರವೇರಿಸಬೇಕಾದರೆ ಲೌಕಿಕ ಜ್ಞಾನದಂತೆ ಆಧ್ಯಾತ್ಮಿಕಜ್ಞಾನವೂ ಅವಶ್ಯಕವಾಗಿರುತ್ತದೆ ಆತ್ಮರಿಗೆ ಇಂಥ ಆಧ್ಯಾತ್ಮಿಕಜ್ಞಾನವನ್ನು ಬೋಧಿಸಿ ಧರ್ಮಾಧರ್ಮಗಳ ಜ್ಞಾನವನ್ನುಂಟುಮಾಡಿಕೊಡುವುದಕ್ಕಾಗಿಯೇ ಗುರುಗಳು ನಿರ್ಮಿಸಲ್ಪಟ್ಟಿರುತ್ತಾರೆ ಗುರುಗಳು ನಿವೃತ್ತಿಮಾರ್ಗವನ್ನು ಬೋಧಿಸುವುದರಿಂದ ವೈದಿಕ ರಾಜ್ಯವನ್ನಾಳುವರು ರಾಜರು ಐಹಿಕಸುಖಸಾಧಕವಾದ ಪ್ರವೃತ್ತಿಮಾರ್ಗವನ್ನು ಬೋಧಿಸುವುದರಿಂದ ಲೌಕಿಕ ರಾಜ್ಯವನ್ನಾಳುವರು ಪ್ರತಿಯೊಬ್ಬ ಆಸ್ತಿಕನೂ ಲೌಕಿಕ ಮಾರ್ಗದಲ್ಲಿ ಎಷ್ಟು ಆದರಬುದ್ಧಿಯುಳ್ಳವನಾಗಿರುತ್ತಾನೆಯೋ ವೈದಿಕಮಾರ್ಗದಲ್ಲಿಯೂ ಅಷ್ಟೇ ಆದರವುಳ್ಳವನಾಗಿರಬೇಕಾಗಿದೆ ಗುರುಗಳು ರಾಜರು ಪ್ರಜೆಗಳಿಗೆ ಎರಡು ಕಣ್ಣುಗಳಂತಿರುತ್ತಾರೆ. ಪ್ರತಿಯೊಬ್ಬನಿಗೂ ಒಂದು ಕಣ್ಣಿದ್ದು ಒಂದು ಕಣ್ಣಿಲ್ಲದಿದ್ದರೆ ಕಾರ್ಯವನ್ನು ಮಾಡುವ ಸಾಮರ್ಥ್ಯವು ಕುಂಠಿತವಾಗಿ ಹೋಗುವಂತೆ ರಾಜನಿಲ್ಲದಿದ್ದರೆ ಪ್ರಜೆಗಳಿಗೆ ನೆಮ್ಮದಿಯುಂಟಾಗುವುದಿಲ್ಲ ಜ್ಞಾನಿಗಳಾದ ಗುರುಗಳು ನೆಮ್ಮದಿ ಇಲ್ಲದ ಅಂಥ ಕಲುಷಿತಾತ್ಮರಾದ ಪ್ರಜೆಗಳಿಗೆ ಉಪದೇಶಿಸಿದ ಜ್ಞಾನವು ಸಹ ಬೂದಿಯಲ್ಲಿ ಮಾಡಿದ ಹೋಮದಂತೆ ವ್ಯರ್ಥವಾಗುವುದು ಆದ್ದರಿಂದ ರಾಜರಾಗಲಿ ಗುರುಗಳಾಗಲಿ ಈರ್ವರೂ ಪ್ರಪಂಚಕ್ಕೆ ಕಲ್ಯಾಣವನ್ನುಂಟುಮಾಡುವ ಮಹಾಭಾರವನ್ನು ಹೊತ್ತಿರುವುದರಿಂದ ತಮ್ಮ ತಮ್ಮ ಕರ್ತವ್ಯಗಳನ್ನು ನಡೆಯಿಸಿ ಪ್ರಜೆಗಳ ದೇಹಸಂರಕ್ಷಣೆಯನ್ನೂ ಆತ್ಮಸಂರಕ್ಷಣೆಯನ್ನೂ ಮಾಡಲೇಬೇಕು. ರಾಷ್ಟ್ರವನ್ನುದ್ಧರಿಸದ ರಾಜನು ರಾಜನಲ್ಲ. ಆತ್ಮರನ್ನುದ್ಧರಿಸದ ಗುರುವು ಗುರುವಲ್ಲ. `ರಾಜನಲ್ಲಿ ಭಕ್ತಿಯಿಂದ ನಡೆಯುದ ಮನುಷ್ಯನು ಪ್ರಜೆಯಲ್ಲ ಗುರುವಿನಲ್ಲಿ ಭಕ್ತಿಯೆನ್ನಿಡದ ಮಾನವನು ಶಿಷ್ಯನಲ್ಲ ಪೂರ್ವಕಾಲದಲ್ಲಿ ಇಂಥ ಮಹಾಧರ್ಮಿಷ್ಠರಾದ ಮಹಾರಾಜರೂ ಗುರುಗಳೂ ಇದ್ದುದರಿಂದಲೇ ಪ್ರಜೆಗಳು ತಾವಿರುವವರೆಗೂ ಸೌಖ್ಯವಾಗಿ ಬಾಳಿ ಕೊನೆಕ್ಕೆ ಸಂಸಾರಸಾಗರದಲ್ಲಿ ಬೀಳದೆ ಮುಕ್ತಿಸಾಮ್ರಾಜ್ಯಸೌಖ್ಯವನ್ನನುಭವಿಸುತ್ತಿದ್ದರು ಇತ್ತೀಚೆಗೆ ಕಲಿ ರಾಜರು ಮತ್ತು ಗುರುಗಳು ತಮ್ಮ ತಮ್ಮ ಕರ್ತವ್ಯಪರಾಙ್ಮುಖರಾಗಿ ಹಸ್ತಿ ಅಶ್ವರಥ ಪದಾತಿ ಎಂಬ ಚತುರಂಗಸೈನ್ಯದಿಂದೊಡಗೂಡಿ ಹಿಂದೆ ಧೈವಾನುಗ್ರಹದಿಂದ ಬರಿದ ಬಿರುದುಗಳನ್ನು ಹಿಡಿದುಕೊಂಡು ಹೆಗ್ಗಳಿಸಿಕೊಳ್ಳುವುದೊಂದನ್ನೇ ಪರಮಾವಧಿಯಾಗಿಟ್ಟುಕೊಂಡಿರುವುದರಿಂದಲೂ ರಾಜರು ಪ್ರಜೆಗಳಿಂದ ಕಂದಾಯವನ್ನೂ ಗುರುಗಳು ಶಿಷ್ಯರಿಂದ ಕಾಣಿಕೆಯನ್ನೂ ಎತ್ತಿ ತಮ್ಮ ಬಂಧುಬಾಂಧವರನ್ನು ಪೋಷಿಸಿಕೊಳ್ಳುತ್ತಲಿರುವುದರಿಂದಲೂ ಪ್ರಜೆಗಳಲ್ಲಿ ರಾಜಭಕ್ತಿಯೂ ಶಿಷ್ಯರಲ್ಲಿ ಗುರುಭಕ್ತಿಯೂ ಕಡಿಮೆಯಾಗಿ ರಾಜರೆಂದರೇನು? ಗುರುಗಳೆಂದರೇನು? ಎಂಬ ದುರ್ಭಾವವು ಹೆಚ್ಚಲು ಕಾರಣವಾಯಿತು ಕಳೆಯನ್ನು ತೆಗೆದು ಹಸನುಮಾಡಿದ ಹೊಲದಲ್ಲಿ ಬೀಜಬಿತ್ತಿದರೆ ಆ ಹೊಲದಲ್ಲಿ ಆ ಬೀಜವು ಚನ್ನಾಗಿ ಬೆಳೆಯುತ್ತದೆ ಹಸನಿಲ್ಲದ ಹೊಲದಲ್ಲಿ ಬಿತ್ತಿದ ಬೀಜವು ಅಲ್ಲಿಯೇ ನಿರ್ನಾಮವಾಗುತ್ತದೆ ಅದರಂತೆ ರಾಜನು ತಾನು ಧೈವನಿಷ್ಠನಾಗಿ ತನ್ನ ಆಳ್ವಿಕೆಯಲ್ಲಿರುವ ಪ್ರಜೆಗಳನ್ನು ದುರಾಚಾರ, ದುರಾಹಾರ ದುರ್ನೀತಿ ಮುಂತಾದ ದುರ್ಮಾರ್ಗಕ್ಕೆ ಕಾಲಿಡದಂತೆ ಶಿಕ್ಷಿಸಿ ಸದಾಚಾರ, ಸುನೀತಿ, ವಿದ್ಯಾಕೌಶಲಾದಿಗಳಿಂದ ಸನ್ಮಾರ್ಗಿಗಳನ್ನಾಗಿ ಮಾಡುತ್ತ ಬಂದರೆ ಅಂದ ಪವಿತ್ರವಾದ ಪ್ರಜಾಕ್ಷೇತ್ರದಲ್ಲಿ ಈಶ್ವರಸ್ವರೂಪಿಗಳಾದ ಗುರುಗಳು ಆಧ್ಯಾತ್ಮಿಕಜ್ಞಾನವೆಂಬ ಅಮೃತಬೀಜವನ್ನು ಬಿತ್ತಿ ಪ್ರತ್ಯಕವರ್ಣಾನುಷ್ಠಾನವೆಂಬ ಬೇಲಿಯನ್ನು ಹಾಕಿ ನರಕಕ್ಕೆ ಎಳೆಯುವ ಕಾಮ ಕ್ರೋಧಾದಿಗಳೆಂಬ ದುಷ್ಟಪಶುಗಳನ್ನು ಹೊಡೆದೋಡಿಸಿ ಪರಮಾತ್ಮೈಕ್ಯವೆಂಬ ಮಹಾ ಫಲವು ಕೈಸೇರುವಂತೆ ಮಾಡುವರು ಇದರಿಂದ ದೇಹಸಂರಕ್ಷಣೆಯೂ ಆತ್ಮಸಂರಕ್ಷಣೆಯೂ ಆಗಿ ಲೋಕವು ಸಂಪೂರ್ಣ ತಮ್ಮ ಕರ್ತವ್ಯವನ್ನು ಮುಗಿಸಿದಂತಾಗಿ ಈಶ್ವರಸಂಕಲ್ಪವನ್ನು ನೆರವೇರಿಸಿದಂತಾಗುವುದು ಹಾಗಿಲ್ಲದೆ ರಾಜನು ತನ್ನ ಕರ್ತವ್ಯನಿಷ್ಠನಾಗಿ ಗುರುಗಳು ತಮ್ಮ ಕರ್ತವ್ಯನಿಷ್ಠರಾಗದಿದ್ದರೆ ಪ್ರಜೆಗಳಿಗೆ ಪಾರಮಾರ್ಥಿಕಸೌಖ್ಯವಿಲ್ಲದಂತಾಗುವುದು ಗುರುವು ತನ್ನ ಕರ್ತವ್ಯನಿಷ್ಠನಾಗಿ ರಾಜನು ತನ್ನ ಕರ್ತವ್ಯನಿಷ್ಠನಾಗದಿದ್ದರೆ ಪ್ರಜೆಗಳಿಗೆ ಐಹಿಕಸುಖವಿಲ್ಲದಂತಾಗುವುದು ಆದ್ದರಿಂದ ಮನುಷ್ಯಜನ್ಮವನ್ನು ಧರಿಸಿದ ಮೇಲೆ ಇಹಪರಸುಖಗಳೆರಡನ್ನೂ ಪಡೆಯಲೇಬೇಕು ಆದ್ದರಿಂದ ಪ್ರಜೆಗಳ ಇಹಸುಖಕ್ಕೆ ಸಾಧಕರಾದ ರಾಜರೂ ಅವರ ಪರಸುಖಕ್ಕೆ ಸಾಧಕರಾದ ಗುರುಗಳೂ ಸ್ವಾರ್ಥಪರರಾಗದೆ ಈಶ್ವರಾಯತ್ತವಾದ ತಮ್ಮ ಅಧಿಕಾರವನ್ನು ನಡೆಯಿಸಿ ಪ್ರಜೆಗಳನ್ನೂ ಶಿಷ್ಯರನ್ನೂ ಉದ್ಧರಿಸಿ "ರಂಜನಾದ್ರಾಜಾ" ಎಂಬ ವ್ಯುತ್ಪತ್ತಿಯಿಂದ ಬಂದ ರಾಜಶಬ್ದವನ್ನೂ, "ಗೃಣಾತೀತಿಗುರುಃ" ಎಂಬ ವ್ಯುತ್ಪತ್ತಿಯಿಂದ ಬಂದ ಗುರುಶಬ್ದವನ್ನೂ ಉಭಯರೂ ಅಂಕಿತನಾಮಗಳನ್ನಾಗಿ ಮಾಡಿಕೊಳ್ಳದೆ ಅನ್ವರ್ಥಕಗಳನ್ನಾಗಿ ಮಾಡಿಕೊಳ್ಳುವಂತೆ ಜಗತ್ಪಾಲಕನಾದ ಈಶ್ವರನು ಪ್ರೇರಿಸಲಿ

ಯುದ್ಧವಾರ್ತೆ.

ಜಪಾನರಿಂದ ಭಯವಿಲ್ಲ

"ಬರ್ಮಾದಲ್ಲಿರುವ ಜಪಾನರು ಇನ್ನು ನಮ್ಮನ್ನು ಹೆದರಿಸುವಂತಿಲ್ಲ' ಎಂಬುದಾಗಿ ಜ॥ ಕಾಲೆಬ್ ವಿ ಹೇನ್ಸ್‌ರವರು ತಿಳಿಸಿದ್ದಾರೆ. ಈ ವರ್ಷ ಜೂನ್‌ವರೆಗೆ ಅವರು ಬರ್ಮಾದಲ್ಲಿ ಹೊಡೆದಾಡುತ್ತಿದ್ದ ಭಾರತೀಯ ಪಡೆಯೊಂದಿಗಿದ್ದರು.

ಸ್ವಿಟ್ಜರ್ಲೆಂಡಿಗೆ ದಿಗ್‌ಬಂಧನ

ಜರ್ಮನರು ಸ್ವಿಟ್ಜರ್ಲೆಂಡಿನ ನಾಲ್ಕು ಗಡಿಗಳನ್ನೂ ಮುಚ್ಚಿ, ಆ ದೇಶಕ್ಕೆ ಹೊರಗಿನಿಂದ ಯಾವ ಸಂಬಂಧವೂ ಇಲ್ಲದಂತೆ ತಡೆದಿರುವರೆಂದು ನ್ಯೂಯಾರ್ಕಿಗೆ ಸ್ವಿಸ್ ರೇಡಿಯೊ ಬೇಹುಕೆ ಕಳುಹಿಸಿತೆಂದು ವರದಿ ಬಂದಿದೆ.

ಉತ್ತರ ಇಟಲಿಯೆಲ್ಲ ಜ॥ ರಾಮೆಲ್‌ನ ಅಧೀನದಲ್ಲಿದೆ

ಬೊಲೋನ್ ವರೆಗೆ ಉತ್ತರ ಇಟಲಿಯೆಲ್ಲ ಜನರಲ್ ರಾಮೆಲ್ಲನ ವಶದಲ್ಲಿದೆಯೆಂದು ಸ್ವಿಸ್ ರೇಡಿಯೋ ತಿಳಿಸಿದ ಕೋಮೋ ನಗರವನ್ನು ಜರ್ಮನರು ಆಕ್ರಮಿಸಿದರೆಂಬ ವರ್ತಮಾನ ಬಂದಿದೆ

ಬ್ರಿಟನ್‌ಮೇಲೆ ದಾಳಿಗೆ ಜಪಾನರು

೧೦೦೦೦ ಸುಶಿಕ್ಷಿತ ಜಪಾನ್ ವೈಮಾನಿಕರು ತಮ್ಮ ಶಸ್ತ್ರಾಸ್ತ್ರಗಳೊಡನೆ ಬ್ರಿಟನ್ನಿನ ಮೇಲೆ ಜರ್ಮನರು ನಡೆಸುವ ದಾಳಿಯಲ್ಲಿ ಭಾಗವಹಿಸಲು ಬರ್ಲಿನಿಗೆ ಬಂದಿರುವರೆಂದು ಲಂಡನಿಗೆ ವರ್ತಮಾನ ಬಂದಿದೆ ಆದರೆ ಈ ಸುದ್ದಿಯು ಜರ್ಮನರ ಪ್ರಚಾರವೆಂದು ನಂಬಲಾಗಿದೆ

ಮುಸೋಲಿನಿ ಮುಖ್ಯ ಕಚೇರಿ ಎಲ್ಲಿ!

ಮುಸೋಲಿನಿಯೂ ಮರ್ಮ್ಯಾನಿಲ್‌ನಲ್ಲೋ ಅಥವಾ ಇನ್ಸ್‌ಬ್ರುಕ್‌ನಲ್ಲೋ ತನ್ನ ಮುಖ್ಯ ಕಚೇರಿಯನ್ನು ಸ್ಥಾಪಿಸಬಹುದೆಂದು 'ಡೈಲಿ ಮೇಲ್' ಸುದ್ದಿಗಾರರು ತಿಳಿಸುತ್ತಾರೆ ಹೊಸ ಫಾಸಿಸ್ಟ್ ಸರಕಾರ ಇಟಲಿ ಭೂಮಿಯಲ್ಲಿಯೇ ಇದೆಯೆಂಬ ಭ್ರಾಂತಿ ಇಟಲಿಯವರಿಗೆ ಉಂಟಾಗಲೆಂಬ ಉದ್ದೇಶದಿಂದ ಮುಸೊಲಿನಿ ಸಿಬ್ಬಂದಿ ಇಟಲಿಯಲ್ಲೇ ಇರಬಹುದೆಂದು ಊಹಿಸಲಾಗಿದೆ

ಜಪಾನ್-ಜರ್ಮನಿ ಘೋಷಣೆ

ಜರ್ಮನಿ ಮತ್ತು ಜಪಾನ್‌ಗಳು ಈ ರೀತಿ ಜಂಟಿ ಹೇಳಿಕೆ ಕೊಡುತ್ತಾ "ಮಾರ್ಷಲ್ ಬಡೋಗ್ಲಿಯೋ ಸರ್ಕಾರದ ವಂಚಕತನದಿಂದ ಮೂರು ದೇಶಗಳ ಒಪ್ಪಂದಕ್ಕೆ ಏನೂ ಚ್ಯುತಿ ಬಂದಿಲ್ಲ ಅದು ಈಗಲೂ ಆಚರಣೆಯಲ್ಲಿದೆ ವಿಜಯ ದೊರಕುವವರೆಗೆ ಸಂಗ್ರಾಮವನ್ನು ಮುಂದುವರಿಸಬೇಕೆಂದು, ಜರ್ಮನಿ, ಜಪಾನ್ ಸರ್ಕಾರಗಳು ನಿರ್ಧರಿಸಿವೆ' ಎಂದು ತಿಳಿಸಿವೆ.

ನಾಜಿಗಳ ನಿರೀಕ್ಷೆ

ಏಡ್ರಿಯಾಟಿಕ್ ಸಮುದ್ರ ಇನ್ನೂ ಹೊಡೆದಾಟದ ಕೇಂದ್ರವಾಗಬಹುದೆಂದು ಜರ್ಮನ್ ಸೈನ್ಯಾಧಿಕಾರಿಗಳು ಭಾವಿಸಿದ್ದಾರೆ ರಷ್ಯಾ ರಂಗದಲ್ಲಿದ್ದ ಅನೇಕ ಪಡೆಗಳನ್ನು ಬಾಲ್ಕನ್ಸ್ ಪ್ರದೇಶಕ್ಕೆ ನಾಜಿಗಳು ವರ್ಗಾಯಿಸಿದ್ದಾರೆ ಮಿತ್ರಸೇನೆಗಳು ಇಟಲಿಯಿಂದ ಬಾಲ್ಕನ್ಸ್ ಪ್ರದೇಶಕ್ಕೆ ಕಾಲಿಟ್ಟರೆ ದಕ್ಷಿಣ ಯೂರೋಪಿನ ಅನೇಕ ರಾಷ್ಟ್ರಗಳು ಬೇಗನೆ ಯುದ್ಧದಿಂದ ಹೊರಗಾಗುವುದರಲ್ಲಿ ಏನೇನೂ ಸಂದೇಹವಿಲ್ಲವೆಂದು ಜರ್ಮನರು ಭಾವಿಸಿರುವಂತಿದೆ.

ಡೊಡಕನೀಸ್ ದ್ವೀಪ ಜರ್ಮನರ ವಶ

ಎರಡು ದಿನಗಳ ಕಾಲ ಹೋರಾಡಿ ಜರ್ಮನರು ಡೊಡಕನೀಸ್ ದ್ವೀಪವನ್ನು ಹಿಡಿದಿದ್ದಾರೆ. ಜರ್ಮನರು ಉಗ್ರ ಡೈವ್ ಬಾಂಬ್ ನಡೆಸಿದುದರಿಂದ ಅಲ್ಲಿನ ಇಟಲಿ ದಂಡನಾಯಕ ಎದೆಗೆಟ್ಟು ಶರಣಾಗತನಾದ. ಜರ್ಮನರಿಗಿಂತ ಇಟಾಲಿಯನರ ಸಂಖ್ಯೆ ಐದರಷ್ಟಿತ್ತು. ಇಟಾಲಿಯನರೊಡನೆ ಇದ್ದ ಕಪ್ಪು ಕವಚಧಾರಿಗಳು ಜರ್ಮನರಿಗೆ ಸಹಾಯ ಮಾಡಿದರೆಂದು ತಿಳಿದುಬಂದಿದೆ.

ಇಟಲಿಯಲ್ಲಿ ಮಾರ್ಷಿಯಲ್ ಲಾ

ದಕ್ಷಿಣ ಇಟಲಿಯ ಜರ್ಮನ್ ದಂಡನಾಯಕರಾದ ಮಾ॥ ಕೆಸೆಲ್ ರಿಂಗ್‌ರವರು ತಮ್ಮ ಅಧಿಕಾರಕ್ಕೊಳಪಟ್ಟಿರುವ ಇಟಲಿ ಕ್ಷೇತ್ರದಲ್ಲಿ ಮಾರ್ಷಿಯಲ್‌ಲಾ ಆಚರಣೆಗೆ ತಂದಿದ್ದಾರೆಂದು ಜರ್ಮನ್ ಹತೋಟಿಯಲ್ಲಿರುವ ಇಟಾಲಿಯನ್ ರೇಡಿಯೋ ತಿಳಿಸಿತು. ಯಾರೂ ಮುಷ್ಕರ ಹಿಡಿಯಲಾಗದು. ಮುಷ್ಕರಕ್ಕೆ ಉತ್ತೇಜನ ಕೊಡುವರನ್ನೆಲ್ಲ ಸಾಲಾಗಿ ನಿಲ್ಲಿಸಿ ಗುಂಡಿಟ್ಟು ಕೊಲ್ಲಲಾಗುತ್ತದೆ. ಮುಂದೆ ತಿಳಿಸುವವರೆಗೆ ಯಾರೂ ಯಾರಿಗೂ ಖಾಸಗಿಪತ್ರ ಬರೆಯಲಾಗದು ಎಂದು ತಿಳಿಸಲಾಗಿದೆ.

ಶ್ರೀ ವಿಲಿಯಂ ಫಿಲಿಪ್ಸ್‌ರಿಗೆ ರಾಯಭಾರಿಯ ಸ್ಥಾನಮಾನ

ಭರತ ಖಂಡದಲ್ಲಿ ರೂಜ್‌ವೆಲ್ಟರ ಖಾಸಗಿ ರಾಯಭಾರಿಯಾಗಿ ಕೆಲಸಮಾಡಿ ಮೆಚ್ಚಿಕೆ ಪಡೆದ ಶ್ರೀ ವಿಲಿಯಂ ಫಿಲಿಪ್ಸ್‌ರವರಿಗೆ ರಾಯಭಾರಿಯ ಸ್ಥಾನಮಾನ ಕೊಡಲಾಗಿದೆಯೆಂದು ಶ್ವೇತಭವನದ ಪ್ರಕಟನೆ ತಿಳಿಸುತ್ತದೆ. ಲಂಡನ್ನಿಗೆ ತೆರಳುವ ಮುನ್ನ ಫಿಲಿಪ್ಸರು ರೂಜ್‌ವೆಲ್ಟರೊಂದಿಗೆ ಮಾತನಾಡಿದರು. ಭಾರತಕ್ಕೆ ಹಿಂತಿರುಗುವ ವಿಚಾರದಲ್ಲಿ ಈಗ ಯಾವೇನೂ ಕಾರ್ಯಕ್ರಮ ಇಟ್ಟುಕೊಂಡಿಲ್ಲವೆಂದೂ, ಲಂಡನ್ನಿನಲ್ಲಿಯೇ ತಾವು ಹಲವು ತಿಂಗಳು ಇರಬೇಕಾಗಬಹುದೆಂದೂ ಆದರೂ ಭಾರತದಲ್ಲಿ ಅಮೇರಿಕದ ಪ್ರತಿನಿಧಿಯೆಂದೇ ತಮ್ಮನ್ನು ಪರಿಗಣಿಸಲಾಗುವುದೆಂದೂ ಫಿಲಿಪ್ಸರು ಸುದ್ದಿಗಾರರಿಗೆ ತಿಳಿಸಿದರು

ಇಟಲಿ ಹಡಗುಗಳನ್ನೆಲ್ಲ ಜಪಾನರು ಹಿಡಿದರು

ಪೂರ್ವ ಏಷ್ಯಾದಲ್ಲಿದ್ದ ಎಲ್ಲ ಇಟಲಿ ಸೈನಿಕರನ್ನು ಜಪಾನರು ನಿರಸ್ತ್ರರನ್ನಾಗಿ ಮಾಡಿ, ಇಟಲಿ ಸಂಗ್ರಾಮ ನೌಕೆಗಳು ಮತ್ತು ಹಡಗುಗಳನ್ನೆಲ್ಲ ನಿಲ್ಲಿಸಿದ್ದಾರೆ. ಜಪಾನರು ಆಕ್ರಮಿಸಿರುವ ಕ್ಷೇತ್ರಗಳಲ್ಲಿರುವ ಇಟಾಲಿಯನರ ಆಸ್ತಿಪಾಸ್ತಿಗಳನ್ನೆಲ್ಲ ಜಪಾನ್ ಸರ್ಕಾರ ವಹಿಸಿಕೊಂಡಿದೆ. ಸೈನಿಕರಲ್ಲದ ಇಟಲಿಯನರ ಮೇಲೆ ಸದಾ ಕಣ್ಣಿಟ್ಟಿರಲಾಗಿದೆ. ಜಪಾನರ ಕೈಗೆ ಸಿಕ್ಕದಂತೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ, ೧೭ ಇಟಲಿ ಹಡಗುಗಳು ನಷ್ಟಹೊಂದಿದವೆಂದು ಜಪಾನ್ ವಾರ್ತಾ ಸಂಸ್ಥೆ ತಿಳಿಸಿದೆ

ರೇಡಿಯೋಗಳನ್ನೆಲ್ಲ ಜಪಾನರು ಕಿತ್ತುಕೊಂಡರು

ಬರ್ಮಾ ಜನರ ಬಳಿ ಇರುವ ರೇಡಿಯೋಗಳನ್ನೆಲ್ಲ ಜಪಾನರು ಕಿತ್ತುಕೊಳ್ಳುತ್ತಿದ್ದಾರೆಂದು ಪ್ರಕಟನೆಯೊಂದು ಹೊರಟಿದೆ. ಎಲ್ಲೋ ಕೆಲವರ ಬಳಿ ಮಾತ್ರ ರೇಡಿಯೋಗಳನ್ನು ಬಿಡಲಾಗಿದೆ. ರಂಗೂನ್ ಮುಂತಾದ ದೊಡ್ಡ ನಗರಗಳ ಬೀದಿಗಳಲ್ಲಿ 'ಲೌಡ್‌ಸ್ಪೀಕರ್' ಗಳನ್ನು ಹಾಕಲಾಗಿದೆ. ಅವುಗಳ ಮೂಲಕ ಜಪಾನರ ಪ್ರಚಾರ ನಡೆಸುವರೆಂದೂ ಮೊದಲು ಜರ್ಮನರ ಬಳಿ ಇರುವ ರೇಡಿಯೋ ಸೆಟ್‌ಗಳನ್ನೆಲ್ಲ ಜಪಾನರು ತೆಗೆದುಕೊಂಡು, ಅವುಗಳ ಯಂತ್ರ ವ್ಯವಸ್ಥೆಯನ್ನು ಬದಲಾಯಿಸಿ, ಮಿತ್ರ ರೇಡಿಯೋ ಸ್ಟೇಷನ್‌ಗಳ ವಾರ್ತೆ ಕೇಳದಂತೆ ಮಾಡಿ ರೇಡಿಯೋಗಳನ್ನು ಹಿಂತಿರುಗಿಸಿಕೊಟ್ಟರೆಂದೂ ಆದರೆ ಬರ್ಮನರು ಯಂತ್ರಗಳನ್ನು ಮತ್ತೆ ಸರಿಪಡಿಸಿ ಮಿತ್ರ ರೇಡಿಯೋ ಸ್ಟೇಷನ್‌ಗಳಿಗೆ ತಿರುಗಿಸುತ್ತಾ ಬಂದರೆಂದೂ ಇದನ್ನು ಕಂಡ ಜಪಾನರು ಈಗ ರೇಡಿಯೋ ಸೆಟ್‌ಗಳನ್ನೇ ಕಿತ್ತುಕೊಳ್ಳುತ್ತಿದ್ದಾರೆಂದೂ ಹೇಳಲಾಗಿದೆ.

ಜಪಾನ್ ಮೇಲೆ ಇಟಲಿ ನೌಕೆಗಳನ್ನು ಉಪಯೋಗಿಸಲು ಸಾಧ್ಯವಿಲ್ಲ

ಜಪಾನ್ ಮೇಲೆ ಯುದ್ಧ ನಡೆಸಲು ಇಟಲಿ ನೌಕೆಗಳನ್ನು ಉಪಯೋಗಿಸುವಂತಿಲ್ಲ. ಇಟಲಿ ನಾವಿಕರೊಂದಿಗೆ ನೌಕೆಗಳನ್ನು ಪೂರ್ವಕ್ಕೆ ಕಳಿಸಲು ಇಟಲಿ ಒಪ್ಪಿಲ್ಲ. ಮಿತ್ರದೇಶಗಳ ನಾವಿಕರೊಂದಿಗೆ ಇಟಲಿ ಹಡಗುಗಳನ್ನು ಕಳುಹಿಸುವುದು ಯಾಂತ್ರಿಕ ದೃಷ್ಟಿಯಿಂದ ಸಾಧ್ಯವಿಲ್ಲ. ಹೆಚ್ಚು ವಿಸ್ತಾರವಿಲ್ಲದ ಮೆಡಿಟರೇನಿಯನ್ ಕ್ಷೇತ್ರದಲ್ಲಿ ಶೀಘ್ರವಾಗಿ ಚಲಿಸುವಂತೆ ಇಟಲಿಯು ತನ್ನ ನೌಕೆಗಳನ್ನು ಕಟ್ಟಿದೆ. ಹೆಚ್ಚು ಕಲ್ಲಿದ್ದಲನ್ನು ತುಂಬಿಕೊಳ್ಳಲು ಸ್ಥಳವಿಲ್ಲ. ಆದ್ದರಿಂದ ವಿಶಾಲವಾದ ಪೆಸಿಫಿಕ್ ಸಾಗರದಲ್ಲಿ ಅವು ಚಲಿಸಲಾರವು. ಇದಲ್ಲದೆ ಇಟಲಿ ನೌಕೆಗಳ ಯಾಂತ್ರಿಕ ವ್ಯವಸ್ಥೆಯೇ ಬೇರೆ. ಅವುಗಳನ್ನು ಮಿತ್ರದೇಶಗಳ ಯಂತ್ರಕರ್ಮಿಗಳು ಸುಲಭವಾಗಿ ನಡೆಸಲಾರರು, ಆದರೆ ಸಣ್ಣಪುಟ್ಟ ಸಬ್‌ಮೆರೀನ್ ವಿರುದ್ಧ ನೌಕೆಗಳನ್ನೂ ತೋಟಾ ಹಡಗುಗಳನ್ನೂ ಬೇಗನೆ ಉಪಯೋಗಿಸಲು ಸಾಧ್ಯವಾದೀತು ಎಂದು ಹೇಳಲಾಗಿದೆ

ಕೌಂಟ್ ಸಿಯಾನೋ ಮುಕ್ತನಾಗಿಲ್ಲ

“ಈಗ ಬಿಡುಗಡೆ ಹೊಂದಿರುವ ಫ್ಯಾಸಿಸ್ಟ ನಾಯಕರಲ್ಲಿ ಸಿಯಾನೋ ಪತ್ತೆಯಿಲ್ಲವೆಂಬುದು ಖಂಡಿತ. ಅನೇಕ ದಿನಗಳಿಂದ ಸಿಯಾನೋ ಪತ್ತೆ ಇಲ್ಲ. ಮಾ॥ ಬಡೊಗ್ಲಿಯೋ ಸಿಸಿಲಿಗೆ ಓಡಿಹೋದಾಗ ಸಿಯಾನೋ ಕೂಡ ಜೆನ್ನು ಪತ್ತೆಯಿಲ್ಲವೇ ಎಂಬುದು ಸಹ ನಿರ್ಧಾರವಾಗಿಲ್ಲ. ಕಳೆದ ಸಾರಿ ಫ್ಯಾಸಿಸ್ಟ್ ಗ್ರಾಂಡ್ ಕೌನ್ಸಿಲ್ ಸೇರಿದ್ದಾಗ ಸಿಯಾನೋ ತೋರಿಸಿದ ವರ್ತನೆಯನ್ನು ಕಂಡರೆ ಅವನು ಇನ್ನು ಮುಂದೆ ಫ್ಯಾಸಿಸ್ಟ್ ಪಕ್ಷದಲ್ಲಿ ಯಾವ ಪಾತ್ರವನ್ನೂ ವಹಿಸುವ ಅವಕಾಶವೇ ಇಲ್ಲ. ಕೌಂಟೆಸ್ ಎಡ್ಡಾ ಸಿಯಾನೋ ಮತ್ತು ಆಕೆಯ ಮಕ್ಕಳು ಮುಸೋಲಿನಿಯ ಸಂಸಾರದೊಂದಿಗಿದ್ದಾರೆಂದು ಜರ್ಮನ್ ರೇಡಿಯೋ ತಿಳಿಸಿತು

ಒಂಭತ್ತನೆ ಸೇನೆಯ ಚಲನ

ಒಂಬತ್ತನೇ ಸೇನೆ ಆಪೆನ್ನಿಗೋ ಹೊರಟಿತೆಂದು ಅಂಕಾರದಿಂದ ಸುದ್ದಿ ಬಂದಿದೆ. ಸಿರಿಯಾ ಮತ್ತು ಪ್ಯಾಲೆಸ್ಟೈನ್ ತೀರದಾಚೆ ಈಗ ಹಲವು ದಿನಗಳಿಂದ ಹಡಗುಗಳ ಚಟುವಟಿಕೆ ಅಸಾಧ್ಯವಾಗಿ ಕಾಣಬರುತ್ತಿದೆ. ೯ ನೇ ಸೇನೆ ಸಿರಿಯಾ ಮತ್ತು ಟ್ರಾನ್ಸ್ ಜೋರ್ಡೇನಿಯಾಗಳಲ್ಲಿ ಕೊಂಚ ಕಾಲದಿಂದ ಇತ್ತು. ಅದರಲ್ಲಿ ಎಷ್ಟು ಪಡೆಗಳಿವೆ, ಎಂಥೆಂಥ ಶಸ್ತ್ರಾಸ್ತ್ರಗಳನ್ನು ಹೊಂದಿದೆ ಎಂಬುದೇನೂ ಗೊತ್ತಿಲ್ಲ. ಮೆಡಿಟರೇನಿಯನ್ನಿನಲ್ಲಿ ಇಟಲಿ ಶರಣಾಗತವಾದ್ದರಿಂದ ಆಗ್ನೇಯ ಯೂರೋಪಿನ ಅನೇಕ ಕಡೆ ಶತ್ರುಗಳ ಮೇಲೆ ಸುಲಭವಾಗಿ ಬೀಳಬಹುದಾಗಿದೆ. ಡೋಡೆಕನೀಸ್ ಕ್ರೀಟ್ ಮತ್ತು ಗ್ರೀಸ್ ಮೂಲಭೂಮಿ ಇವು ಸಿರಿಯಾ ತೀರದ ಎದುರಿಗೇ ಇವೆ. ಏಡ್ರಿಯಾಟಿಕ್ ತೀರಕ್ಕೆ ಸಹ ಆಗ್ನೇಯದಿಂದ ನುಗ್ಗಬಹುದು. ಅಲ್ಲಿ ಜರ್ಮನರು ಬಲವಾದ ರಕ್ಷಣೆ ಏರ್ಪಾಡುಗಳನ್ನು ಮಾಡಿಕೊಂಡಿದ್ದಾರೆಂದು ಇತ್ತೀಚೆಗೆ ತಿಳಿಸಲಾಯಿತು. ಸಂಗ್ರಾಮವು ಬಾಲ್ಕನ್ಸ್ ಪ್ರದೇಶಕ್ಕೆ ಹತ್ತಿರವಾಗುತ್ತಿದೆ. ಹರ್ ಹಿಟ್ಲರನು ತನ್ನ ಯೂರೋಪಿನ ಕೋಟೆಯ ಹಿತ್ತಲ ಬಾಗಿಲನ್ನು ಆತುರಾತುರವಾಗಿ ಭದ್ರಪಡಿಸುತ್ತಿದ್ದಾನೆ. ಸೈನ್ಯಕ್ಕೆ ಜನರನ್ನು ಸೇರಿಸುವ ಕಾರ್ಯ, ಯುಗೋಸ್ಲೇವಿಯಾದಲ್ಲಿ ಭರದಿಂದ ನಡೆದಿದೆ. ಎಡ್ರಿಯಾಟಿಕ್ ಜರ್ಮನ್ ಸೇನೆಗಳ ಪ್ರವಾಸ ಏರ್ಪಾಡಿನಲ್ಲಿ ಬದಲಾತಿ ಇದೆ

ನೆಜಿನ್ ರಷ್ಯನರ ವಶವಾಯಿತು

ಕೀವ್ ನಗರದ ಪೂರ್ವಕ್ಕೆ ೭೮ ಮೈಲಿ ದೂರದಲ್ಲಿರುವ ನೆಜಿನ್ ೧೦೦ ಮುಖ್ಯ ರೈಲ್ವೆ ಜಂಕ್ಷನ್ ರಷ್ಯನರ ವಶವಾಯಿತು. ಬ್ರಿಯಾನ್ಸ್ಕ್ ಎದುರಿಗೆ ರಷ್ಯನರು ಜರ್ಮನ್ ವ್ಯೂಹವನ್ನು ಭೇದಿಸಿ ಹಿಮ್ಮೆಟ್ಟುತ್ತಿರುವ ನಾಜಿಗಳನ್ನು ಬೆನ್ನಟ್ಟುತ್ತಿದ್ದಾರೆ. ಬ್ರಿಯಾನ್ಸ್ಕ್ ನಗರವನ್ನು ಉಳಿಸಿಕೊಳ್ಳಲು ಜರ್ಮನರು ರಕ್ಷಕ ಕಾಲಾಳುಗಳನ್ನು ಮತ್ತು ಕಟ್ಟೆರ ಗುಂಪುಗಳನ್ನು ಸಹ ಕದನಕ್ಕೆ ಅಟ್ಟಿದರು. ಆದರೂ ಪ್ರಯೋಜನವಾಗಲಿಲ್ಲ. ಉತ್ತರ ಉಕ್ರೇನಿನಲ್ಲಿ ಕೊನೊಟೋಪಿನ ವೀಧಿಗಳಲ್ಲಿ ಹೋರಾಟವಾಗುತ್ತಿದೆ. ದಕ್ಷಿಣ ಉಕ್ರೇನಿನಲ್ಲಿ ರಷ್ಯನ್ ಸೇನೆಯು ಕ್ರಾಸ್ನೋಗ್ರಾಡ್-ಪಾವ್ಲೋಗ್ರಾಡ್-ಲೋಜೋವಾಯಾ ತ್ರಿಕೋಣದ ಕಡೆಗೆ ನುಗ್ಗುತ್ತಿದೆ. ಸಮುದ್ರ ತೀರದಲ್ಲಿ ನುಗ್ಗುತ್ತಿರುವ ರಷ್ಯನರು ಈಗ ಬರ್ಡಿಯಾನ್ಸ್ಕ್ ಎಂಬುದರ ಸಮೀಪದಲ್ಲಿದ್ದಾರೆ. ನೀಪರ್ ಕಡೆಗೆ ನುಗ್ಗುತ್ತಿರುವ ರಷ್ಯನರು ನೂರಾರು ಮೈಲಿಗಳಷ್ಟು ಭೂಮಿಯನ್ನು ನಾಜಿಗಳಿಂದ ಬಿಡಿಸಿದ್ದಾರೆ. ಕಪ್ಪುಕಡಲಿನ ಬಂದರಾದ ನೋವರೋಸಿಸ್ಕ್‌ನ ಪೂರ್ವಭಾಗವನ್ನು ರಷ್ಯನ್ ಸೈನಿಕರು ಪ್ರವೇಶಿಸಿದ್ದಾರೆಂದು ಜರ್ಮನ್ ರೇಡಿಯೋ ತಿಳಿಸಿದೆ

ಇಟಲಿ ರಂಗ

ಮಿತ್ರಸೇನೆಗಳು ಸಾಲೆರ್ನೋದಲ್ಲಿ ಕೊಂಚ ಸ್ಥಾನವನ್ನು ಬಿಟ್ಟುಕೊಡಬೇಕಾಯಿತು. ಆದರೆ ಕೆಲವು ಕಡೆ ಶತ್ರುಸ್ಥಾನಗಳನ್ನು ಗೆದ್ದುದರಿಂದ ಈ ಲೋಪ ಸರಿಹೋಯಿತು. “ಸಾಲೆರ್ನೋಗೆ ದಕ್ಷಿಣದಲ್ಲಿ ಜರ್ಮನರು ಎಡಬಿಡದೆ ಮುತ್ತಿಗೆ ನಡೆಸುತ್ತಿದ್ದಾರೆ. ಅನೇಕ ಜರ್ಮನ್ ಟ್ಯಾಂಕುಗಳನ್ನು ನಾಶಮಾಡಲಾಯಿತು. ಒಂದೇ ಒಂದು ಅಮೇರಿಕನ್ ಪಡೆ ೨೪ ಗಂಟೆಗಳಲ್ಲಿ ೧೯ ಟ್ಯಾಂಕುಗಳನ್ನು ನಾಶಮಾಡಿದೆ. ಈಗ ಅಷ್ಟಮ ಸೇನೆಗೂ ಪಂಚಮ ಸೇನೆಗೂ ನಡುವೆ ಇರುವ ಅಂತರವು ೬೭ ಮೈಲಿಗಳಿವೆ. ಪರಿಸ್ಥಿತಿ ಕೊಂಚ ಮಿತ್ರ ದೇಶಗಳಿಗೆ ಅನುಕೂಲವಾಗಿದೆಯೆಂದು ಮಿತ್ರ ಅಧಿಕಾರಿಗಳೊಬ್ಬರು ತಿಳಿಸಿದ್ದಾರೆ. ಮಿತ್ರ ಯೋಧರು [illegible] ವಶಪಡಿಸಿಕೊಂಡಿದ್ದಾರೆ. ಇದರ ಉದ್ದ ೪ ಮೈಲಿ ಅಗಲ ೨ ಮೈಲಿ. ನೇಪಲ್ಸ್ ನಗರದ ನೈರುತ್ಯಕ್ಕೆ ೨೦ ಮೈಲಿ ದೂರದಲ್ಲಿದೆ. ಸಾಲೆರ್ನೋ ಪಶ್ಚಿಮಕ್ಕೆ ೩೦ ಮೈಲಿಯಲ್ಲಿದೆ. ಸಾಲೆರ್ನೋ ಕದನ ತೀರ ಉಗ್ರಸ್ಥಿತಿಯನ್ನು ಮುಟ್ಟಿದೆ. ಎರಡು ಕಡೆಯವರೂ ಅಪಾರವಾಗಿ ಸೈನ್ಯ ಸಹಾಯ ತರುತ್ತಿದ್ದಾರೆ. ಇಟಲಿಯಲ್ಲಿ ಮಿತ್ರ ದೇಶಗಳು ಈಗ ರಂಗಗಳನ್ನು ಸ್ಥಾಪಿಸಿವೆ. ಇಷ್ಟರಲ್ಲೇ ಈ ಮೂರು ರಂಗಗಳೂ ಒಂದಾಗುವ ಸಂಭವವಿದೆ. ಅಂತೂ ಮುಂದೆ ಬಹಳ ಉಗ್ರವಾದ ಪರಿಸ್ಥಿತಿಯುಂಟಾಗಲಿದೆ. ನಾವಾಗಿ ಮುಂದೆ ನುಗ್ಗಿ ಹೋರಾಡುವ ಶಕ್ತಿಯನ್ನು ನಾವೀಗ ಕಳೆದುಕೊಂಡಿರಬಹುದು. ಸಾಲೆರ್ನೋದಲ್ಲಿ ನಡೆದ ಕದನದಲ್ಲಿ ಎರಡು ಕಡೆಯೂ ಬಹಳ ಹಾನಿಯಾಗಿದೆಯೆಂದು ಹೇಳಲಾಗಿದೆ

ಜಪಾನ್ ಮೇಲಿನ ಕದನ

ಇಟಲಿಯು ಶರಣಾಗತವಾದ್ದರಿಂದ ಮೆಡಿಟರೇನಿಯನ್ನಿನಲ್ಲಿ ಹಡಗುಗಳ ಸಂಚಾರಕ್ಕೆ ಅನುಕೂಲವಾಗುವುದೆಂದು ವಾಷಿಂಗ್‌ಟನ್ನಿನಲ್ಲಿ ಭಾವಿಸಲಾಗಿದೆ. ಇಟಲಿ ಹಡಗುಗಳನ್ನು ಮಿತ್ರದೇಶಗಳು ಉಪಯೋಗಿಸುವುವೆಂದು ಜ॥ ಐಸೆನ್ ಹೊವರ್ ತಿಳಿಸಿರುವುದನ್ನು ಗಮನಿಸಲಾಗಿದೆ. ಮಿತ್ರ ನೌಕಾಬಲ ಈಗ ಹಿಂದೂಸಾಗರದಲ್ಲಿದೆಯೆಂದು ತಿಳಿದು ಬಂದಿದೆ. ಬರ್ಮಾ ರಸ್ತೆಯನ್ನು ತೆರೆಯಲು ಬೇಗನೆ ಕಾರ್ಯಕ್ರಮ ಆರಂಭವಾದೀತೆಂದು ಊಹಿಸಲಾಗಿದೆ. ಇಟಲಿ ಶರಣಾಗತವಾದ್ದರಿಂದ ಜಪಾನ್ ಮೇಲಿನ ಕದನವನ್ನು ಮಿತ್ರದೇಶಗಳು ಬಲಪಡಿಸಲು ಸಾಧ್ಯವಾಗಿದೆ. ಈಗ ಮಿತ್ರದೇಶಗಳ ನೌಕಾಬಲದ ಬಹುಭಾಗ ಪೂರ್ವಕ್ಕೆ ತೆರಳಲು ಸಾಧ್ಯವಾಗಿದೆ. ಆಗ್ನೇಯ ಏಷ್ಯರಂಗಕ್ಕೆ ಸಂಗ್ರಾಮ ವಸ್ತುಗಳನ್ನು ಒಯ್ಯಲು ಹೆಚ್ಚು ಹಡಗು ಸೌಕರ್ಯ ದೊರೆತಂತೆ ಆಯಿತು. ಪ್ರಮಾಣಕ್ಕೆ ಬಹು ವಿಪತ್ಕಾರಕವಾಗಿದ್ದ ಮೆಡಿಟರೇನಿಯನ್ ಸುರಕ್ಷಿತ ಕ್ಷೇತ್ರವಾಯಿತು. ಸಂಗ್ರಾಮ ವಸ್ತುಗಳನ್ನು ಹೊತ್ತು ಪೂರ್ವಕ್ಕೆ ತೆರಳುವ ಹಡಗುಗಳು ಈಗ ಗುಡ್‌ಹೋಪ್ ಭೂಶಿರವನ್ನು ಬಳಸಿಕೊಂಡು ಹೋಗಬೇಕಾಗಿಲ್ಲ. ಕೆಂಪು ಕಡಲಿನ ಎರಡು ಪಾರ್ಶ್ವಗಳೂ ಈಗ ಸುರಕ್ಷಿತವಾಗಿರುವುದರಿಂದ ಇನ್ನು ಮುಂದೆ ಸೂಯೆಜ್ ಕಾಲುವೆಯಲ್ಲಿ ಹಡಗುಗಳು ಚಲಿಸಲು ಸಾಧ್ಯವಾಗಬಹುದೆಂದು ಹೇಳಲಾಗಿದೆ

ಸ್ವೀಕಾರ

ಬೆಳಗಾವಿ ನಗರದಲ್ಲಿ ನೆರವೇರಿದ ಶ್ರೀ ಶಿವಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಶ್ರೀ ಸುತ್ತಗಟ್ಟಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ಗುಲ್ಬರ್ಗಾ ಜಿ॥ ಬೂಸನೂರು ಗ್ರಾಮದಲ್ಲಿ ನೆರವೇರಿದ ರೇಣುಕ ವಿಜಯ ಮಹಾಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂಪಾಯಿಯು ಶ್ರೀ ಚೇವರಗಿ ಪಟ್ಟದಸ್ವಾಮಿಗಳವರ ದ್ವಾರಾ ತಲ್ಪಿರುತ್ತದೆ

ನವಲಗುಂದ ತಾಲೂಕು ದಾಟನಾಳು ಗ್ರಾಮದಲ್ಲಿ ನೆರವೇರಿದ ಶರಣ ಬಸವೇಶ್ವರ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೧ ರೂಪಾಯಿಯು ವೇ॥ ಗುರುದೇವಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಶ್ರೀಮಜ್ಜಗದ್ಗುರು ಪಂಚಾಚಾರ್ಯ ಸ[illegible]

ಪುರಾಣ ಮತ್ತು ಅನುಷ್ಠಾನ ಸಮಾಪ್ತಿ,

ಜೊಸವೂರು

ಶ್ರಾವಣ ಶುದ್ಧ ಪ್ರತಿಪದ ದಿವಸ ಶ್ರೀ [illegible] ಗುರುಸಿದ್ಧ ಶಿವಾಚಾರ್ಯ ಸ್ವಾಮಿಗಳ ಮಠದ [illegible] ಅನುಷ್ಠಾನ ಸಹಿತ ಶ್ರೀ ರೇಣುಕವಿಜಯ ಪುರಾಣ ಪ್ರಾರಂಭವಾಗಿ ಸಪ್ಟೆಂಬರ್ [illegible] ಸೋಮವಾರ ಸಮಾಪ್ತಿಗೊಂಡಿತು ಆ ದಿವಸ ಪ್ರಾತಃಕಾಲ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಗಳಿಗೆ ಮತ್ತು ಗ್ರಾಮದೇವತೆಗಳಿಗೂ ಶ್ರೀ ಸಿದ್ಧವೀರಶಿವಾ[illegible] ಹಿರೇಮಠ ಜೈನಾಪುರ ಇವರ ವೈದಿಕತ್ವದಲ್ಲಿ ರುದ್ರಾಭಿಷೇಕವು ನಡೆಯಿತು [illegible] ಗಂಟೆಯವರೆಗೆ [illegible] ನಡೆದನಂತರ ೪ ಗಂಟೆಯಿಂದ ೬ ರವರೆಗೆ ಶ್ರೀ ಜಗದ್ಗುರು ರೇಣುಕಾಚಾರ್ಯರ ಲಿಂಗೋದ್ಭವ ಮೂರ್ತಿಯಿಂದೊಡಗೂಡಿದ ರೇಣುಕವಿಜಯ ಪುರಾಣದ ಮೆರವಣಿಗೆಯು ವಾದ್ಯ ವೈಭವದೊಡನೆ ನಡೆಯಿತು ಮೆರವಣಿಗೆಯಲ್ಲಿ ಮಲ್ಲಿಕಾರ್ಜುನ ಭಜನಾಸಂಘ ಜಂಗಮಲಿಂಗ ಭಜನಾಸಂಘ ರೇಣುಕ ಭಜನಾಸಂಘ ಪಂಚಾಚಾರ್ಯ ಭಜನಾಸಂಘದ ಜನರು ಭಕ್ತಿಯಿಂದ ಭಜನೆಯನ್ನು ಮಾಡುತ್ತಾ ಭಾಗಿಗಳಾಗಿದ್ದರು ಉತ್ಸವವು ಮಠಕ್ಕೆ ತಲ್ಪಿದನಂತರ ಶ್ರೀ|| ಷ|| ಬ್ರ|| ಗುರುಸಿದ್ಧ ಶಿವಾಚಾರ್ಯರು ತಮ್ಮ ಅಮೃತವಾಣಿಯಿಂದ ಉಪದೇಶಿಸಿ ಸಭಿಕರನ್ನು ಆನಂದಗೊಳಿಸಿದರು ಅನಂತರ ಶ್ರೀ ಸಿದ್ಧವೀರಶಿವಾ[illegible] ಹಿರೇಮಠ ಜೈನಾಪುರ ಇವರು ತಮ್ಮ ವ್ಯಾಖ್ಯಾನದಿಂದ ಸಭಿಕರನ್ನು ಆನಂದಗೊಳಿಸಿದರು ಪುರಾಣವನ್ನು ಸಮಾಪ್ತಿಗೊಳಿಸಿದನಂತರ ಶ್ರೀ ಜಗದ್ಗುರು ಪಂಚಾಚಾರ್ಯ ಭಜನಾಸಂಘದ ಚಿಕ್ಕಬಾಲಕರು "ಕೊಟ್ಟೂರು ಕೊಡಗೂಸು" ಎಂಬ ಚಿಕ್ಕನಾಟಕವನ್ನು ಅಭಿನಯಿಸಿ ಸಭಿಕರ ಮನಸ್ಸನ್ನು ಆನಂದಗೊಳಿಸಿದರು ಅನಂತರ ಸಭೆಯು ಮುಕ್ತಾಯವಾಯಿತು ಇಂದಿನ ಶುಭ ಸಮಯದಲ್ಲಿ ಪಂಚಾಚಾರ್ಯ ಭಜನಾಸಂಘದ ಚಿಕ್ಕ ಬಾಲಕರು ಪ್ರಭಾಪೋಷಣಕ್ಕೋಸ್ಕರ ೧ ರೂಪಾಯಿಯನ್ನು ಸಮರ್ಪಿಸಿದರು

ಪ್ರತ್ಯಕ್ಷದರ್ಶಿ

ಪುರಾಣಸಮಾಪ್ತಿ ಸಮಾರಂಭ, ದಾಟನಾಳ

ನವಲಗುಂದ ತಾಲೂಕ ದಾಟನಾಳ ಗ್ರಾಮದಲ್ಲಿ ಶರಣ ಬಸವೇಶ್ವರ ಪುರಾಣವು ಶ್ರಾವಣ ಶು|| ೭ ಸೋಮವಾರ ಪ್ರಾರಂಭವಾಗಿ ಭಾದ್ರಪದ ಶು|| ೭ ಸೋಮವಾರ ಸಮಾಪ್ತಿಮಾಡಲ್ಪಟ್ಟಿತು ಸದರಿ ಪುರಾಣವನ್ನು ರೋಣ ತಾಲೂಕ ಬೆಳವಣಿಕಿ ಬೃಹನ್ಮಠಾಧ್ಯಕ್ಷರಾದ ವೇ|| ಗುರುದೇವಶಾಸ್ತ್ರಿಗಳು ಉತ್ತಮರೀತಿಯಿಂದ ಶ್ರೋತೃವೃಂದಕ್ಕೆ ಆನಂದವಾಗುವಂತೆ ಹೇಳುತ್ತಿದ್ದರು ಮತ್ತು ಸದರಿ ಪುರಾಣವನ್ನು ಶಂಭುಲಿಂಗಯ್ಯ ಸಲವಡಿ ಬೆಣವಣಿಕಿ ಇವರು ತಮ್ಮ ಅಮೋಘವಾದ ಗಾನವಾಣಿಯಿಂದ ಓದುತ್ತಿದ್ದರು ಪುರಾಣವನ್ನು ಕೇಳಲಿಕ್ಕೆ ಸದರಿ ಗ್ರಾಮದ ಸದ್ಭಕ್ತರು ಮತ್ತು ಸುತ್ತಮುತ್ತಲಿನ ಹಳ್ಳಿಯ ಜನರು ತಂಡೋಪತಂಡವಾಗಿ ಬರುತ್ತಿದ್ದರು ವೇ|| ಗುರುದೇವ ಶಾಸ್ತ್ರಿಗಳು ಪುರಾಣದಲ್ಲಿ ನಡುನಡುವೆ ವೀರಶೈವಧರ್ಮವೆಂದರೇನು? ವೀರಶೈವಮತಸ್ಥಾಪನಾಚಾರ್ಯರು ಯಾರು? ಮತ್ತು ಪಂಚಾಚಾರ್ಯರು ಮಾಡಿದ ದಿವ್ಯ ಲೀಲಾವಳಿಗಳು ಯಾವವು? ಎಂಬುದರ ಬಗ್ಗೆ ಶ್ರೋತೃ ಜನರು ತಲೆದೂಗುವಂತೆ ಹೇಳುತ್ತಿದ್ದರು ಮತ್ತು ಕಲಿಯುಗದ ಪ್ರಭಾವದಂತೆ ನಮ್ಮ ಸಮಾಜದಲ್ಲಿ ಗುರುನಿಂದಕರಾದ ಸಂಕರರು ಒಡ್ಡಿದ ಜಾಲವನ್ನು ವೇ|| ಪಂ|| ಶ್ರೀ ಕಾಶೀನಾಥಶಾಸ್ತ್ರಿಗಳವರು ಹೇಗೆ ಕಿತ್ತೊಗೆದರು ಎಂದು ಹೇಳುತ್ತಿರುವಾಗ್ಗೆ ಸಭಿಕರು ಕರತಾಡನಮಾಡುತ್ತಿದ್ದರು ಈ ಗ್ರಾಮದ ಜನರು ಮಹಾಪುರಾಣಸೇವೆ ಹಾಗೂ ಗುರುಸೇವೆಯನ್ನು ತನುಮನಧನಧಾನ್ಯಗಳಿಂದ ಮಾಡಿ ಕೀರ್ತಿಭಾಜಕರಾದರು ಮತ್ತು ಸಹಸ್ರಜನರಿಗೆ ಸಂತರ್ಪಣೆಯಾದನಂತರ ಸದರಿ ಪುರಾಣವನ್ನು ಮತ್ತು ಭಗವತ್ಸ್ವರೂಪರಾದ ಪಂಚಾಚಾರ್ಯರ ಫೋಟೋವನ್ನು ಪಲ್ಲಕ್ಕಿಯಲ್ಲಿರಿಸಿ ಪಂಚಾಚಾರ್ಯರ ಮಂಗಲಗೀತೆಗಳಿಂದ ಭಜನೆಮಾಡುತ್ತ ಭಕ್ತವೃಂದವು—ಸಂಭ್ರಮದಿಂದ [illegible] ಗ್ರಾಮ [illegible] ಶಿವ್ವರ [illegible] ಪ್ರದಕ್ಷಿ[illegible] ತಲ್ಪಿತು ಆಮೇಲೆ ಸಭೆ [illegible] ಮಂಗಲ [illegible]

ಓರ್ವ ಉತ್ಸವಭಾಗಿ

ಶ್ರೀವಿದ್ಯಾಗಣಪತಿ ಮಹೋತ್ಸವ

ಬೆಂಗಳೂರು ಸಿಟಿ

ಬೆಂಗಳೂರು ಸಿಟಿ [illegible] ಪೇಟೆಯಲ್ಲಿರುವ ಶ್ರೀ [illegible] ದಲ್ಲಿ ಶ್ರೀ ಜಗದ್ಗುರು ರೇಣುಕ [illegible] ವಿದ್ಯಾರ್ಥಿ [illegible] ಸಂಸ್ಕೃತ [illegible] ಶ್ರೀ ವಿದ್ಯಾಗಣಪತಿ ಮಹೋತ್ಸವವನ್ನು ವೈಭವದಿಂದ ಆಚರಿಸಲು [illegible] ಪ್ರತಿದಿನ ಸಾಯಂಕಾಲ [illegible] ವೇದ ಮಂತ್ರ ಪಠನ ಪೂರ್ವಕ ಶ್ರೀ ವಿದ್ಯಾಗಣಪತಿಯ ಪೂಜಾ ಸಮಾರಂಭವು ನಡೆಸಲ್ಪಡುತ್ತಿದ್ದಿತು ತಾ|| [illegible] ನೇ ಭಾನುವಾರ ಸಾಯಂಕಾಲ ೬|| ಘಂಟೆಗೆ ಸರಿಯಾಗಿ ಶ್ರೀ ಮಹಾಂತಿನಮಠದಲ್ಲಿ ಶ್ರೀ ವಿದ್ಯಾಗಣಪತಿ ಮಹಾ ಮಂಗಳಾರತಿ ಮಹೋತ್ಸವವು ಶ್ರೀಮಾನ್ ಹೆಚ್. ಕೆ. ವೀರಬಸವಯ್ಯನವರು ರಿಟೈರ್ಡ್ ಡಿಸ್ಟ್ರಿಕ್ಟ್ ಜಡ್ಜ್ ಇವರ ಅಧ್ಯಕ್ಷತೆಯಲ್ಲಿ ನಡೆಸಲ್ಪಟ್ಟಿತು ಈ ಸಭೆಗೆ ಅನೇಕ ಜನ ನಗರದ ಪ್ರಮುಖರು ಆಗಮಿಸಿದ್ದರು ಪ್ರಥಮತಃ ಸಭೆಯಲ್ಲಿ ವಿದ್ಯಾರ್ಥಿಗಳಿಂದ ವೇದ ಪಾರಾಯಣ ಶ್ರೀ ವಿದ್ಯಾಗಣಪತಿ ಮತ್ತು ಆಚಾರ್ಯರ [illegible] ಪ್ರಾರ್ಥನೆಗಳು ನಡೆದಬಳಿಕ ಶ್ರೀಮತಿ ಕುಮಾರಿ ಶಕುಂತಳಾದೇವಿ ಮತ್ತು [illegible] ಕುಮಾರಿ ದೇವಿಯವರಿಂದ ವ್ಯಾಖ್ಯಾನ ಮತ್ತು ಸಂಗೀತಗಳು ನೆರವೇರಿದವು ತರುವಾಯ ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾದ [illegible] ಎಸ್. ಧರಣೇಂದ್ರಯ್ಯನವರು ಎಂ. ಎ. ಬಿ. ಟಿ. ಅವರು ವಿದ್ಯಾರ್ಥಿಗಳ ಬಗ್ಗೆ ವಿಷಯವನ್ನು ಕುರಿತು ಮನೋಜ್ಞವಾದ ಉಪನ್ಯಾಸವನ್ನು ಮಾಡಿದರು ಅನಂತರ ಶ್ರೀ ವೇ|| ಬ್ರ|| ಪಂ|| ಗಂಗಾಧರಶಿವಾಚಾರ್ಯರು ಮೊದಲಾದವರು ಪ್ರಕೃತ ಉತ್ಸವದ ವಿಷಯವನ್ನು ಕುರಿತು ಭಾಷಣ ಮಾಡಿದರು ಬಳಿಕ ಅಧ್ಯಕ್ಷ ಮಹೋದಯರು ಮೇಲ್ಕಂಡ ಭಾಷಣಗಳನ್ನು ಕ್ರೋಢೀಕರಿಸಿ ಉಪಸಂಹಾರಾತ್ಮಕ ಭಾಷಣವನ್ನು ಮಾಡಿದರು ಅನಂತರ ಪಾಠಶಾಲಾ ಸೆಕ್ರೆಟರಿಗಳಾದ [illegible] ರುದ್ರಯ್ಯನವರು ಸಭಾಧ್ಯಕ್ಷರ ಮತ್ತು ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರ ಅಭಿನಂದನೆಯನ್ನು ಮತ್ತು ಉಳಿದ ಸಜ್ಜನರ ಅಭಿನಂದನೆಯನ್ನು ಮಾಡಿದರು ತರುವಾಯ ಶ್ರೀವಿದ್ಯಾಗಣಪತಿ ಮಹಾ ಮಂಗಳಾರತಿ ರಾಜಾಶೀರ್ವಾದ ಪ್ರಸಾದ ವಿನಿಯೋಗಗಳು ಆಚರಿಸಲ್ಪಟ್ಟವು

ಪ್ರತ್ಯಕ್ಷದರ್ಶಿ

ವಿನಾಯಕ ಮಹೋತ್ಸವ

ಶಿವಮೊಗ್ಗಾ ಡಿ|| ಹಾರನಹಳ್ಳಿ ಗ್ರಾಮದಲ್ಲಿರುವ ವೀರಶೈವ ತರುಣ ಸಂಘದವರು ಶ್ರೀ ಬಸವೇಶ್ವರ ದೇವಾಲಯದಲ್ಲಿ ಇದೇ ಭಾದ್ರಪದ ಶುದ್ಧ ೩ ಹಾಗೂ ೪ ದಿವಸಗಳಲ್ಲಿ ಶ್ರೀ ಗೌರೀ ಗಣೇಶ್ವರರನ್ನು ಭವ್ಯವಾದ ಮಂಟಪದಲ್ಲಿ ಮೂರ್ತಗೊಳಿಸಿ ಪ್ರತಿನಿತ್ಯವೂ ಅಷ್ಟವಿಧಾರ್ಚನೆಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಯಿಂದಲೂ ತಮ್ಮ ಅನನ್ಯ ಭಕ್ತಿಭಾವವನ್ನು ಪ್ರದರ್ಶನಗೊಳಿಸಿದ ಬಳಿಕ ತತ್ಸಂಬಂಧವಾಗಿ ತಾ|| ೧೧-೯-೪೩ ನೇ ಶನಿವಾರ ಮಹಾಗಣಾರಾಧನೆಯು ೧ ತಾ|| ೧೨-೯-೪೩ ನೇ ಭಾನುವಾರ ಸಾಯಂಕಾಲ ಶ್ರೀಮಾನ್ ಗಾಜನೂರು ಸಾ|| ಬೂದಿಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆಯು ಸೇರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರಿಂದ ಶಿವಸಂಕೀರ್ತನೆಯು ನಡೆಸಲ್ಪಟ್ಟಿತು ಸೋಮವಾರ ಸಾಯಂಕಾಲ ೫ ಘಂಟೆಯಿಂದ ಶ್ರೀ ಗೌರೀ ಗಣೇಶ್ವರರನ್ನು ಅತಿ ಮನೋಹರವಾದ ಪುಷ್ಪರಥದಲ್ಲಿಯೂ ಶ್ರೀ ವೀರಭದ್ರ ಬಸವೇಶ್ವರಮೂರ್ತಿಗಳನ್ನು ಅಂದವಾದ ಪಲ್ಲಕ್ಕಿಗಳಲ್ಲಿಯೂ ಮೂರ್ತಗೊಳಿಸಿ ತಳಿರು ತೋರಣಾದಿಗಳಿಂದಲಂಕೃತವಾದ ರಾಜವೀಧಿಗಳಲ್ಲಿ ವಿವಿಧವಾದ್ಯಗಳಿಂದಲೂ ಇಂಪಾದ ಶಿವಗುರು ಭಜನೆಯಿಂದಲೂ ಮಹೋತ್ಸವವು ನಡೆಯಿತು ಎತ್ತ ನೋಡಿದರತ್ತ ಶ್ರೀ ಜಗದ್ಗುರು ಪಂಚಾಚಾರ್ಯರ ಜಯಜಯಕಾರವೇ ವ್ಯಾಪಿಸಿತ್ತು ಈ ಮಹೋತ್ಸವಕ್ಕಾಗಿ ತಾಲ್ಲೂಕು ಪ್ರಥಮಾಧಿಕಾರಿಗಳೂ ಸ್ಥಳೀಯಾಧಿಕಾರಿಗಳೂ ಮತ್ತು ಬಂಧುಮಿತ್ರರೂ ಸುತ್ತುಮುತ್ತಣ ಗ್ರಾಮದ ಮಹಾಜನರೂ ವಿಶೇಷವಾಗಿ ಆಗಮಿಸಿದ್ದರು ಈ ಗ್ರಾಮದ ವೀರಶೈವ ತರುಣ ಸಂಘದವರ ವಿಚಕ್ಷಣತೆಯೂ ಕಾರ್ಯದಕ್ಷತೆಯೂ ಶ್ಲಾಘನೀಯವಾಗಿತ್ತು ಇವರ ಈ ದೇವತಾ ಕಾರ್ಯಕ್ಕೆ ಊರಿನ ಹಿರಿಯರು ನೆರವಾಗಿ ಸರ್ವತೋಮುಖವಾಗಿ ಸಹಾಯವನ್ನು ನೀಡಿರುವುದು ಸಂತೋಷಾಸ್ಪದವೂ ತರುಣರ ಧಾರ್ಮಿಕ ವಿಚಾರದ ಬೆಳವಣಿಗೆಗೆ ಉತ್ತೇಜಕವೂ ಆಗಿದೆ

ಓರ್ವ ಉತ್ಸವಭಾಗಿ

ಬಂಗಾಳದ ಬೀದಿಗಳಲ್ಲಿ ಅನಾಥರು

ಬಂಗಾಳದಲ್ಲಿ ದಿನದಿನಕ್ಕೂ ಸಾವಿನ ಸಂಖ್ಯೆ ಜಾಸ್ತಿಯಾಗುತ್ತಿದೆ ಢಕ್ಕಾ, ನೌಕಾಲಿ, ಕಲ್ಕತ್ತ ಬೀದಿಗಳಲ್ಲಿ ಶವಗಳು ಬಿದ್ದಿವೆ ಅನಾಥ ಹೆಂಗಸರ ಮಕ್ಕಳ ರೋದನವು ಹೃದಯವನ್ನು ಕರಗಿಸುತ್ತದೆ ಪೌರಸಭೆ ಇತರ ಪರಿಹಾರ ಸಮಿತಿಯವರು ಅನಾಥರ ಶವ ಸಂಸ್ಕಾರವನ್ನು ಕೈಗೊಂಡಿದ್ದಾರೆ ನೌಕಲಿಯಲ್ಲಿ ಜಿಲ್ಲಾಧಿಕಾರಿಗಳು ಪ್ರತಿ ಮನೆಮನೆಗೂ, ಅಂಗಡಿ ಅಂಗಡಿಗೂ ಹೋಗಿ ಏನಾದರೂ ದವಸ ಧಾನ್ಯಗಳನ್ನು ಸಂಗ್ರಹಿಸಿದ್ದಾರೆಯೇ ಎಂಬುದನ್ನು ಶೋಧನೆ ನಡೆಸುತ್ತಿದ್ದಾರೆ ಸುಮಾರು ೩೦೦ ಮಂದಿ ಮಧ್ಯ ತರಗತಿಯವರ ಸಂಕಟವು ಅಸಹನೀಯವಾಗಿದೆ ಬಾಗಿಲ ಮರೆಯಲ್ಲಿ ಆರ್ತನಾದವಿಡುತ್ತ ಬೇಗ ಸ್ವರ್ಗವಾಸಿಗಳನ್ನಾಗಿ ಮಾಡಲೆಂದು ಭಗವಂತನಲ್ಲಿ ಮೊರೆಯಿಡುತ್ತಿದ್ದಾರೆ ಕ್ಷಾಮವು ಭೀಕರಾಕೃತಿಯನ್ನು ತಳೆದಿದೆ ಕೆಲವರು ಭಿಕ್ಷಾಟನೆಯಲ್ಲಿ ಜೀವಿಸಲು ಉಪಕ್ರಮಿಸಿದರು ಭಿಕ್ಷವೂ ಸಿಕ್ಕದಂತಾಗಲು ಎಲೆ ಸೊಪ್ಪನ್ನು ತಿನ್ನಲು ಪ್ರಾರಂಭಿಸಿದರು ತತ್ಫಲವಾಗಿ ಕಾಲರ, ಮುಂತಾದ ವ್ಯಾಧಿಗಳು ಪ್ರಬಲಿಸಿದುವು ವೈದ್ಯಕೀಯ ಪರಿಹಾರವ ದೊರಕಿಸುವುದೇ ದುರ್ಲಭ ಪುರುಷರು ಸ್ತ್ರೀಯರು. ಮಕ್ಕಳು ಬೀದಿಗಳಲ್ಲಿ ಸಾರ್ವಜನಿಕ ಪ್ರದೇಶಗಳಲ್ಲಿ ಕಂಗೆಟ್ಟು ಬಿದ್ದಿರುತ್ತಾರೆ ಶವಗಳನ್ನು ಕೆಲವು ಸಂದರ್ಭಗಳಲ್ಲಿ ನದಿಯೊಳಕ್ಕೆ ಬಿಸಾಡುತ್ತಾರೆ ಶವಸಂಸ್ಕಾರವು ಹೇಗೆ ಎಂಬುದೇ ಒಂದು ಸಮಸ್ಯೆಯಾಗಿದೆ ಅಕ್ಕಿ ಬೆಲೆ ಏರಿರುವುದರಿಂದ ಬಹು ಸಂಖ್ಯಾತರು ಕೊಳ್ಳುವಹಾಗೇ ಇಲ್ಲ. ಹೀಗೆಂಬುದಾಗಿ ಬಂಗಾಳ ಪರಿಹಾರ ಸಮಿತಿ ತಿಳಿಸುತ್ತದೆ.

ಬಟ್ಟೆವ್ಯಾಪಾರಿಗಳ ದಸ್ತಗಿರಿ

ಮುಂಬಯಿ ಶೇಕಾ ಬಜಾರಿನಲ್ಲಿ ಪೋಲೀಸರು ಜವಳಿ ಅಂಗಡಿಗಳನ್ನು ಶೋಧಿಸಿ, ಆಗಸ್ಟ್ ೧ ರ ನಂತರವೂ ಆಜ್ಞೆಯ ಪ್ರಕಾರ ಒಡೆಯದಿರುವ ಬಟ್ಟೆಯ ಬೇಲುಗಳನ್ನು ದಾಸ್ತಾನು ಮಾಡಿದ್ದ ೯ ವರ್ತಕರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿರುವರು

೧೦೦ ಇಟಲಿ ಹಡಗುಗಳು ಮಿತ್ರ ದೇಶಗಳ ವಶವಾಗಿವೆ

೧೦೦ಕ್ಕಿಂತ ಹೆಚ್ಚು ಇಟಾಲಿಯ ಸಂಗ್ರಾಮ ನೌಕೆಗಳೂ ಹಡಗುಗಳೂ ಮಿತ್ರ ದೇಶಗಳ ವಶವಾಗಿವೆ ಅವು ಮಾಲ್ಟಾಕ್ಕೂ ಇತರ ಬಂದರುಗಳಿಗೂ ಬಂದು ಸೇರಿವೆ ಇಟಲಿ ಸಾಮಾನು ಹಡಗುಗಳು ಇನ್ನೂ ಬೇರೆ ಬೇರೆ ಮಿತ್ರ ಬಂದರುಗಳಿಗೆ ಬರುತ್ತಲೇ ಇವೆ ಬಡೊಗ್ಲಿಯೋ ಸರಕಾರ ಮಾಡಿಕೊಂಡ ಒಪ್ಪಂದವನ್ನು ಇಟಾಲಿಯನ್ ನೌಕಾ ಬಲದವರು ಸಂಪೂರ್ಣವಾಗಿ ಪಾಲಿಸಿದ್ದಾರೆ. ಎಂದು ಹೇಳಲಾಗಿದೆ

ಮೈಸೂರು ನಜರ್‌ಬಾದ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯೋಗದ ಕಲ್ ಪಟಿಸಿಸತ್ಪಾಂಪ್ರಾಸ್ತಿಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರಿವರ್ ಶಿಷ್ಯಾವಲೋಕನದಿಂ ।

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೭ನೇ ಸೆಪ್ಟೆಂಬರ್ ೧೯೪೩ [ಸಂಚಿಕೆ ೨೧

ಶ್ರೀ ಜಗದ್ಗುರು ರೇಣುಕವಿಜಯ ಪುರಾಣ ಸಮಾಪ್ತಿ ಮಹೋತ್ಸವ ಸೊಲ್ಲಾಪುರ

ತಾ|| ೯-೯-೪೩ ನೇ ಗುರುವಾರ ಶ್ರೀ ಜಗದ್ಗುರು ರೇಣುಕವಿಜಯ ಪುರಾಣ ಸಮಾಪ್ತಿ ಸೋಲಾಪುರ ಜೋಡಬಾವಿ ಪೇಟೆಯಲ್ಲಿರುವ ಹುಬ್ಬಳ್ಳಿ ಬೃಹನ್ಮಠದಲ್ಲಿ ಶ್ರೀ ಷ|| ಬ್ರ|| ಧೇನುಕರ್ಣ ಶಿವಾಚಾರ್ಯರ ನೇತೃತ್ವದಲ್ಲಿ ಬಹಳ ವೈಭವದಿಂದ ಮಾಡಲ್ಪಟ್ಟಿತು. ಗುರುವಾರ ಬೆಳಿಗ್ಗೆ ಶ್ರೀ ಲಿಂಗೋದ್ಭವಮೂರ್ತಿಗೆ ರುದ್ರಾಭಿಷೇಕ ಗಣಾರಾಧನೆಯಾಗಿ ಸಾಯಂಕಾಲ ಪುರಾಣ ಸಮಾಪ್ತಿ ಪ್ರೀತ್ಯರ್ಥವಾಗಿ ಜನರ ಸಮುದಾಯವು ಪ್ರಚಂಡವಾಗಿ ಸೇರಿತು. ಶ್ರೀ ವೇ|| ಪುರಾಣ ಪಟಗಳ ಪ ಅಲ್ಲಮಪ್ರಭು ಇವರಿಂದ ಪುರಾಣ ಪ್ರವಚನವು ನಡದು ಕೊನೆಗೆ ಶ್ರೀವೀರಶೈವಸ್ತ್ರೀಸದಾಚಾರಸಮಾಜದ ಕುಮಾರಿಯರಿಂದ ಜಗದಾಚಾರ್ಯರ ಸ್ತೋತ್ರ ಪದಗಳು ಜರುಗಿ ಸೌ|| ಭಾಗೀರಥಿಬಾಯಿ, ಶ್ರೀ ಗುರವ್ವ ಮಠಪತಿ ಇವರ ಸಮಯೋಚಿತ ಭಾಷಣಗಳಾದವು. ಸದರೀ ಮಠಾಧ್ಯಕ್ಷ ಶ್ರೀಗಳು ಸದ್ಭಕ್ತರನ್ನು ಉಪದೇಶಿಸಿ ಇಂಥ ಗುರು ಕಾರ್ಯಗಳನ್ನು ಒಳ್ಳೆಯ ವೈಭವದಿಂದ ಮಾಡಿಸುವುದು ಸ್ತುತ್ಯವಾಗಿದೆ. ಸಮಾರಂಭಕ್ಕೆ ಆ ಪೇಟೆಯ ಪ್ರಮುಖರು ಒಳ್ಳೆಯ ಉತ್ಸುಕತೆಯಿಂದ ಕಾರ್ಯಭಾಗಿಗಳಾಗಿದ್ದರು. ಜಗದಾಚಾರ್ಯರು ಇವರಿಗೆಲ್ಲ ಕಲ್ಯಾಣವನ್ನುಂಟುಮಾಡಲೆಂದು ಪ್ರಾರ್ಥಿಸುವ

ಶ್ರೀ ರೇವಣಸಿದ್ದಪ್ಪ ಪಸರೆ

ಕಲುಕೋಟಿ

ಧಾರವಾಡ ಜಿಲ್ಲಾ, ಕರ್ಜಗಿ ತಾಲೂಕು ಕಲುಕೋಟಿ ಗ್ರಾಮದಲ್ಲಿ ಶ್ರೀ ಶಿವಯೋಗಿ ಹಾಲಮಳೀಸ್ವಾಮಿ ವೃಷಲಿಂಗಶಿವಾಚಾರ್ಯರ ಉಪದೇಶದಿಂದಲೂ ವೇ|| ಏರೀಮಠದ ವೀರಭದ್ರಶಾಸ್ತ್ರಿಗಳವರ ಪ್ರೋತ್ಸಾಹದಿಂದಲೂ, ಶ್ರೀಜಗದ್ಗುರು ಪಂಚಾಚಾರ್ಯ ಪ್ರಸಾದಿಕ ಸಜ್ಜನ ಸಂಘದವರಿಂದ ಪೋಲ್ಯಂಥ ಮಹಾಪುರಾಣವು ಪ್ರಾರಂಭಿಸಲ್ಪಟ್ಟಿತು. ಸದರಿ ಪುರಾಣವು ವೇ|| ಯರೆನಾರಾಯಣಪುರದ ಬಸಪ್ಪಯ್ಯ ಶಾಸ್ತ್ರಿಗಳವರಿಂದ ಹೇಳಲ್ಪಡುತ್ತಿದ್ದಿತು. ವೇ|| ವೀರಭದ್ರಯ್ಯ ಶಾಸ್ತ್ರಿಗಳು, ವೇ|| ಹಿರೇಮಠದ ಹೇಮಯ್ಯನವರು ಕರಜಗಿ, ಸಂಗೀತ ವಿಶಾರದರಾದ ಶೆಟ್ರು ಬಸಪ್ಪನವರು ಫಕೀರಪ್ಪನವರು ಮತ್ತು ಸಜ್ಜನಸಂಘದವರು, ಇವರ ಮನೋಹರವಾದ ಗಾನದಿಂದ ಸಾಗುತ್ತಿದ್ದಿತು. ಪುರಾಣಶ್ರವಣಕ್ಕಾಗಿ ಸುತ್ತುಮುತ್ತಿನ ಗ್ರಾಮದ ಜನರು ಬಂದು ಕೇಳಿ ಧನ್ಯರಾಗುತ್ತಿದ್ದರು. ಈ ರೀತಿಯ ಪುರಾಣವು ಶ್ರಾವಣ ಶು|| ಪ್ರತಿಪದೆಯಿಂದ ಭಾದ್ರಪದ ಶು|| ಸಪ್ತಮಿಯವರೆಗೆ ನಡೆದು ಸಮಾಪ್ತಿಗೊಂಡಿತು. ಆ ದಿವಸ ಗಣಾರಾಧನೆಯು ವಿಶೇಷವಾಗಿ ನೆರವೇರಿತು. ಅದನ್ನು ನೋಡಿ ಪ್ರತಿಯೊಬ್ಬರಿಗೂ [illegible] ತ್ತು. ಬಳಿಕ ಅಂದವಾಗಿ ಶೃಂಗರಿಸಿದ ಪಲ್ಲಕ್ಕಿಯಲ್ಲಿ ಜಗದಾಚಾರ್ಯರ ಭಾವಚಿತ್ರವನ್ನಿಟ್ಟು ಶ್ರೀ ಹಾಲಮಳೀಸ್ವಾಮಿಗಳವರು ಪೂಜೆಮಾಡಿದ ಮೇಲೆ ಶೃಂಗರಿಸಿದ ಬೀದಿಯಲ್ಲಿ ಉತ್ಸವವು ಬಹು ಆಡಂಬರದಿಂದ ನೆರವೇರಿತು. ಆ ಉತ್ಸವವನ್ನು ನೋಡಿದ ಕಣ್ಣುಗಳೇ ಧನ್ಯವೆಂದು ಹೇಳಿದರೆ ಅತಿಶಯೋಕ್ತಿಯೆನಿಸದು. ಈ ರೀತಿ ಉತ್ಸವವು ಸಾಗಿ ದೇವೀಗುಡಿಗೆ ಬಂದ ಮೇಲೆ ಸಭೆಯು ಪ್ರಾರಂಭವಾಯಿತು. ಪೌರಾಣಿಕರು 'ಅನುಸೂಯಾ' ಚರಿತ್ರೆಯನ್ನು ಕೀರ್ತನರೂಪವಾಗಿ ಹೇಳಿದರು. ಬಳಿಕ ಮಹಾಮಂಗಳಾರತಿಯಾಗಿ ಸಭೆಯು ವಿಸರ್ಜಿಸಲ್ಪಟ್ಟಿತು. ಈ ಮಹಾಕಾರ್ಯಕ್ಕೆ ಕೆಲಜನ ಗುರುಭಕ್ತಿ ಹೀನರು ತೊಂದರೆಯನ್ನುಂಟ ಮಾಡಿದ್ದರು. ಆದರೂ ಈ ಗ್ರಾಮದ ವೀರಗುರುಭಕ್ತರು ಅದನ್ನು ತೃಣೀಕರಿಸಿ ಜಗದಾಚಾರ್ಯರ ವಿಜಯಧ್ವಜವನ್ನು ಹಾರಿಸಿದರು. ಈ ವೀರಗುರುಭಕ್ತರಿಗೆಲ್ಲಾ ಜಗದಾಚಾರ್ಯರು ಸಕಲ ಸಂಪದಗಳನ್ನೂ ಈಯಲೆಂದು ಪ್ರಾರ್ಥಿಸುತ್ತೇನೆ.

ಓರ್ವ ಗುರುಭಕ್ತ

ಶ್ರೀ ಶಿವಮಹಾಪುರಾಣ ಸಮಾಪ್ತಿ ಮಂಗಲ ಮಹೋತ್ಸವ ಚಿಂಚಲಿ

ಗದಗ ತಾಲ್ಲೂಕು ಚಿಂಚಲಿಗ್ರಾಮದ ಸದ್ಭಕ್ತರ ಪ್ರಾರ್ಥನೆಯ ಮೇರೆಗೆ ಬೆಂಗಳೂರು ಮಹಾಂತಿನ ಮಠಾಧ್ಯಕ್ಷ ಷ|| ಬ್ರ|| ಶ್ರೀ ಗಂಗಾಧರ ಶಿವಾಚಾರ್ಯ ಶಿವಯೋಗಿಗಳವರು ಸಪರಿವಾರ ಸಮೇತ ದಯಮಾಡಿ ಶ್ರಾವಣ ಮಾಸ ಮೊದಲ್ಗೊಂಡು ವೇ|| ಪಂ|| ಧರ್ಮಭೂಷಣ ಹರಿಹರಶಾಸ್ತ್ರಿಗಳವರು ಸುಣ್ಣಕಲ್ಲು ಬಿದರಿ ಆರಾಧ್ಯಮಠ ಇವರಿಂದ ಶಿವ ಪುರಾಣ ಶ್ರವಣವೂ ಹಾಗೂ ಶ್ರೀಗಳವರಿಂದ ಅನುಷ್ಠಾನ ಉಪನ್ಯಾಸಾದಿಗಳೂ ನಡೆಯುತ್ತಲಿದ್ದುದು ಸುಪ್ರಸಿದ್ಧವಷ್ಟೆ ? ತತ್ಸಂಬಂಧ ಸಮಾಪ್ತಿ ಸೂಚಕ ಮಂಗಲಮಹೋತ್ಸವ ಕಾರ್ಯವು ಭಾದ್ರಪದ ಶುದ್ಧ ಹುಣ್ಣಿಮೆ (ತಾ|| ೧೩-೯-೪೩) ನೇ ಸೋಮವಾರ ಅತ್ಯಂತ ವೈಭವದಿಂದ ಆಚರಿಸಲ್ಪಟ್ಟಿತು. ಅಂದು ಯಥಾರೀತಿ ಶ್ರೀಗಳವರ ಸನ್ನಿಧಿಯಲ್ಲಿ ಶ್ರೀ ರುದ್ರಾಭಿಷೇಕಾದಿ ಪೂಜಾ ಕಾರ್ಯಗಳು ನಡೆಯಿಸಲ್ಪಟ್ಟವು. ಅನಂತರ ೪ ೬ ಸಾವಿರ ಜನಗಳಿಗೆ ಅನ್ನ ಸಂತರ್ಪಣೆಯು ನಡೆಯಿಸಲ್ಪಟ್ಟಿತು. ಸಾಯಂಕಾಲ ೪ ಘಂಟೆಯಿಂದ ಶ್ರೀಗಳವರ ಹಾಗೂ ಶ್ರೀ ಶಿವಮಹಾಪುರಾಣದ ಪಲ್ಲಕ್ಕೀ ಮಹೋತ್ಸವವು ವಾದ್ಯ ವೈಭವದೊಡನೆಯೂ ಅನೇಕ ಗ್ರಾಮಗಳಿಂದ ಬಂದ ಭಜನಾ ಸಂಘಗಳಿಂದಲೂ ಮನೋಹರವಾಗಿ ಅಲಂಕರಿಸಲ್ಪಟ್ಟ ಗ್ರಾಮದ ಮುಖ್ಯ ಬೀದಿಗಳಲ್ಲಿ ನಡೆಯಿಸಲ್ಪಟ್ಟಿತು. ಉತ್ಸವಾನಂತರ ಸಭೆಯು ಆರಂಭವಾಯಿತು. ಕೆಲವು ವ್ಯಾಖ್ಯಾತೃಗಳಿಂದ ಉಪನ್ಯಾಸಗಳು ಮಾಡಲ್ಪಟ್ಟವು. ಆ ಮೇಲೆ ಶ್ರೀಗಳವರಿಂದ ಸಮಯೋಚಿತವಾಗಿ ಸರ್ವ ವಿಷಯಗಳ ಸಮನ್ವಯದೊಡನೆ ಸಾಮಾನ್ಯ ಜನಗಳ ಮನಸ್ಸಿನ ಮೇಲೆ ಪರಿಣಾಮವಾಗುವಂತೆ ಸ್ಫೂರ್ತಿದಾಯಕವಾದ ಭಾಷಣವು ಮಾಡಲ್ಪಟ್ಟಿತು. ಅನಂತರ ಮಹಾ ಮಂಗಳಾರತಿಯೊಡನೆ ಸಭೆಯು ವಿಸರ್ಜಿಸಲ್ಪಟ್ಟಿತು.

ಓರ್ವ ಉತ್ಸವಭಾಗಿ

ಶುಭಾಗಮನ ಮುಳುಗುಂದ

ಗದಗ ತಾಲ್ಲೂಕು ಮುಳುಗುಂದದ ವೀರಶೈವ ಸದ್ಭಕ್ತ ಮಂಡಳಿಯ ಪ್ರಾರ್ಥನೆಯ ಮೇರೆಗೆ ಷ|| ಬ್ರ|| ಶ್ರೀ ಗಂಗಾಧರ ಶಿವಾಚಾರ್ಯ ಶಿವಯೋಗಿಗಳವರು ಚಿಂಚಲಿಯಿಂದ ತಾ|| 16-9-43 ನೇ ಗುರುವಾರ ದಿವಸ ಇಲ್ಲಿಗೆ ಆಗಮಿಸಿದರು. ಗ್ರಾಮದ ಪ್ರಮುಖರೆಲ್ಲರೂ ಫಲಪುಷ್ಪ ಹಾರಾದಿಗಳೊಡನೆ ಶ್ರೀಗಳವರನ್ನು ಎದುರುಗೊಂಡು ಆಶೀರ್ವಾದವನ್ನು ಹೊಂದಿ ಉತ್ಸವಪೂರ್ವಕವಾಗಿ ಅತ್ಯಂತ ವಿಜೃಂಭಣೆಯಿಂದ ದಯಮಾಡಿಸಿಕೊಂಡು ಬಂದರು. ಉತ್ಸವ ಕಾರ್ಯದಲ್ಲಿ ಅತ್ಯಂತ ಭಕ್ತಿ ಶ್ರದ್ಧೆಗಳೊಡನೆ ಗ್ರಾಮದ ಪ್ರಮುಖ ಸ್ವಮತ ಪರಮತೀಯರು ಭಾಗವಹಿಸಿದ್ದರು. ಉತ್ಸವಾನಂತರ ತಗಡಿಕೇರಿ ನಂದೀಶ್ವರ ದೇವಸ್ಥಾನದಲ್ಲಿ ಸಭಾಕಾರ್ಯವು ಆರಂಭವಾಯಿತು. ಅಂದಿನ ಸಭಾಕಾರ್ಯವು ಪ್ರಾಸ್ತಾವಿಕ ಉಪನ್ಯಾಸದೊಡನೆ ಸಮಾಪ್ತಿಯಾಯಿತು. ಶುಕ್ರವಾರ, ಶನಿವಾರಗಳಲ್ಲಿ ಸ್ತ್ರೀಯರಿಗೋಸ್ಕರ, ಪಾತಿವ್ರತ್ಯದ ವಿಷಯದಮೇಲೆಯೂ, ಪುರುಷರಿಗೋಸ್ಕರ ಬ್ರಹ್ಮಚರ್ಯ ವಿಷಯದಮೇಲೆಯೂ, ಶ್ರೀಗಳವರಿಂದ ಅನೇಕ ಭಾಷಣವು ಮಾಡಲ್ಪಟ್ಟಿತು. ಆದಿತ್ಯವಾರ ಶ್ರೀಗಳವರು ಮುಳುಗುಂದದಿಂದ ಪುನಃ ಚಿಂಚಲಿಗೆ ದಯಮಾಡಿಸಿದರು.

ಓರ್ವ ಗುರುಭಕ್ತ

ಅಭಿಪ್ರಾಯ ವಿಮರ್ಶೆ

ಲೇಖಕರು

ಬ್ರ|| ಶ್ರೀ|| ವೇ|| ಶಿವಕಥಾಪ ದಿ ಕ ಜಿ ನಂಜುಂಡಾರಾಧ್ಯಶಾಸ್ತ್ರಿ.

ಶ್ರೀಮಾನ್ ಎಂ ಎಲ್ ನಾಗಣ್ಣನವರು ವಾಣೀವಿಲಾಸ ರೋಡ್, ಮೈಸೂರು ಇವರು ವೀರಶೈವ ಮತದಲ್ಲಿರುವ ಅನೈಕ್ಯಮತ್ಯವನ್ನು ಹೋಗಲಾಡಿಸಲು ಈಚೆಗೆ "ವೀರಶೈವ ಸಮಾಜ ಮತ್ತು ಇದರ ಸುಧಾರಣೆ, ವೇದ ಮತ್ತು ವೀರಶೈವಮತ" ಎಂಬ ಎರಡು ಪುಸ್ತಕಗಳನ್ನು ಬರೆದು ಸಮಾಜಬಾಂಧವರ ಅವಗಾಹನೆಗೋಸ್ಕರ ಪ್ರಚಾರ ಮಾಡಿರುವರು. ಆಗಲೇ ಇವರ ಅಭಿಪ್ರಾಯವು ಬೆಳಕಿಗೆ ಬಂದು 3 ಮಾಸಗಳಾದವು. ಬೆಳಗಾವಿಯಲ್ಲಿರುವ ಲಿಂಗರಾಜ ಕಾಲೇಜ್ ಪ್ರೊಫೆಸರ್ ಆದ ಎಂ. ಆರ್ ಸಾಖರೇಯವರು ಶ್ರೀಜಗದ್ಗುರು ರೇಣುಕಾಚಾರ್ಯರು ಮತಸ್ಥಾಪಕರಲ್ಲವೆಂಬ ಅಸಂಬದ್ಧವಾದ 10 ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಬರೆದಿರುವರು. ವೀರಶೈವಮತಕ್ಕೆ ವೇದಾಗಮೋಪನಿಷತ್ ಪ್ರಮಾಣಗಳೇ ಆಧಾರವೆಂಬಲೂ ಸಿದ್ಧಾಂತಶಿಖಾಮಣಿ

(೨ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಸೆಪ್ಟೆಂಬರ್ ತಾ ೨೭ ನೇ ಸೋಮವಾರ

ವಿವಿಧದೇವತೋಪಾಸನೆಯ ಫಲ.

ವೈದಿಕಮತಾನುಯಾಯಿಗಳಾದ, ಸ್ಮಾರ್ತರಾಗಲಿ ವೀರಶೈವರಾಗಲಿ, ವೈಷ್ಣವರಾಗಲಿ, ಶ್ರೀವೈಷ್ಣವರಾಗಲಿ, ವೇದೋಕ್ತ ಕರ್ಮಗಳೆಲ್ಲವನ್ನೂ ಅನುಷ್ಠಿಸಲಾರರು. ವೇದಗಳು ವಿಷ್ಣು, ಬ್ರಹ್ಮ, ಶಿವ, ಗಣಪತಿ, ಶಕ್ತಿ, ಇಂದ್ರ, ಅಗ್ನಿ, ಯಮಾದಿ ಸಕಲದೇವತೆಗಳನ್ನೂ ಸ್ತುತಿಸಿರುತ್ತವೆ. ಆಯಾಯ ಪ್ರಕರಣಾನುಸಾರವಾಗಿ ವಿಷ್ಣುವೇ ಮುಖ್ಯದೇವರೆಂದೂ ಶಿವನೇ ಮುಖ್ಯದೇವನೆಂದೂ ಶಕ್ತಿಯೇ ಮುಖ್ಯದೇವತೆಯೆಂದೂ ಹೀಗೆ ಆಯಾಯ ದೇವತೆಗಳ ಮಹತ್ವವನ್ನು ವರ್ಣಿಸಿರುತ್ತವೆ. ಶಿವನನ್ನು ಆರಾಧಿಸುವವರಿಗೆ ವಿಷ್ಣುವಿನಲ್ಲಿ ಪ್ರವೃತ್ತಿ ಹುಟ್ಟುವುದಿಲ್ಲ. ವಿಷ್ಣುವನ್ನು ಆರಾಧಿಸುವವರಿಗೆ ಶಿವನಲ್ಲಿ ಪ್ರವೃತ್ತಿ ಹುಟ್ಟುವುದಿಲ್ಲ. ಶಕ್ತಿಯನ್ನಾರಾಧಿಸುವವರಿಗೆ ಶಿವ ವಿಷ್ಣುಗಳೀರ್ವರಲ್ಲಿಯೂ ಪ್ರವೃತ್ತಿ ಹುಟ್ಟುವುದಿಲ್ಲ. ಅನೂಚಾನವಾಗಿ ಒಂದೊಂದು ಮತೀಯರಿಗೆ ಒಬ್ಬೊಬ್ಬ ದೇವರಲ್ಲಿ ವಿಶೇಷವಾದ ಭಕ್ತಿಯು ನೆಲೆಗೊಂಡಿರುವುದರಿಂದ ಸರ್ವಸಾಕ್ಷಿಯಾದ ದೇವರೊಬ್ಬನೇ ಆಯಾಯ ಉಪಾಸಕರ ಇಚ್ಛಾನುಸಾರವಾಗಿ ನಾಮರೂಪಕ್ರಿಯಾಭೇದಗಳನ್ನು ಹೊಂದಿ ಅವರವರ ಧ್ಯೇಯಾಕಾರವಾಗಿ ಪರಿಣಮಿಸಿ ಜೀವರಿಗುಂಟಾದ ಮಹಾಬಂಧವನ್ನು ನಿವೃತ್ತಿಗೊಳಿಸುವನು. ದೇವರ ಸಂಕಲ್ಪಮಾತ್ರದಿಂದ ಶೈವರಿಗೆ ಶಿವಾಕಾರನಾಗಿಯೂ ವೀರಶೈವರಿಗೆ ಲಿಂಗಾಕಾರನಾಗಿಯೂ ವೈಷ್ಣವರಿಗೆ ವಿಷ್ಣ್ವಾಕಾರನಾಗಿಯೂ ಶಾಕ್ತೇಯರಿಗೆ ಶಕ್ತ್ಯಾಕಾರನಾಗಿಯೂ ಕಾಣಿಸುವುದೊಂದು ಪರಮಕಾರುಣಿಕನಾದ ಅನುಪಮಮಹಿಮನಾದ ಚಿದುಜ್ಜ್ವಲರೂಪನಾದ ಆ ಪರಮಾತ್ಮನ ಕಲ್ಯಾಣಗುಣವಾಗಿರುತ್ತದೆ. ಆದುದರಿಂದ ಆ ಪರಮಾತ್ಮನನ್ನು ಲಿಂಗಾಕಾರದಿಂದ ಪೂಜಿಸುವವರಿಗೂ ವಿಷ್ಣ್ವಾಕಾರದಿಂದ ಪೂಜಿಸುವವರಿಗೂ ಶಕ್ತ್ಯಾಕಾರದಿಂದ ಪೂಜಿಸುವವರಿಗೂ ಕಲ್ಪವೃಕ್ಷ ಚಿಂತಾಮಣಿಗಳಂತಿರುವ ದೇವರು ಆಯಾಯ ರೂಪದಿಂದವತರಿಸಿ ಅವರವರ ಕರ್ಮಾನುಸಾರವಾಗಿ ಫಲಗಳನ್ನೀಯುತ್ತಾನೆಂಬುದರಲ್ಲಿ ಸಂಶಯವೇನೂ ಇಲ್ಲ.

ಸ್ವಕರ್ಮಣಾ ತಮಭ್ಯರ್ಚ್ಯ ಸಿದ್ಧಿಂ ವಿಂದತಿ ಮಾನವಃ ।

ಗಂಗಾ, ಗೋದಾವರಿ, ಯಮುನಾ ಮುಂತಾದ ನದಿಗಳು ಒಂದೊಂದು ಸ್ಥಾನದಲ್ಲಿ ಹುಟ್ಟಿ ಒಂದೊಂದು ದಿಕ್ಕುಗಳಲ್ಲಿ ಹರಿದು ಕೊನೆಯಲ್ಲಿ ಸಮುದ್ರದಲ್ಲಿ ಸಮರಸವಾಗಿ ಹೋಗುವಂತೆ ಸ್ವಸ್ವಪಕ್ಷವಾದಿಸಕಲಮತೀಯರೂ ತಮ್ಮ ಮತಾಚಾರ್ಯರ ಉಪದೇಶಾನುಸಾರವಾಗಿ ಸಂಸ್ಕಾರಗಳನ್ನು ಪಡೆದು ಆಯಾಯ ಮತದ ಧ್ಯೇಯವಸ್ತುವನ್ನಾರಾಧಿಸಿದರೆ ಇವೆಲ್ಲಕ್ಕೂ ಆಧಾರನಾದ ಪರಮೇಶ್ವರನಲ್ಲಿ ಸೇರಿಯೇ ಸೇರುತ್ತಾರೆ. ಆದುದರಿಂದ ದೇವರಿಲ್ಲ, ಪರಲೋಕವಿಲ್ಲ, ಬಂಧಮೋಕ್ಷಗಳಿಲ್ಲ ಅವರವರ ಬಲಾಬಲಗಳೇ ಸುಖದುಃಖಗಳನ್ನೀಯುತ್ತವೆಯೆಂಬ ನಾಸ್ತಿಕಮತಗಳನ್ನು ಮಾತ್ರ ಬಿಟ್ಟು ಉಳಿದ ಆಸ್ತಿಕಮತಗಳೆಲ್ಲವೂ ವಿವೇಕಶಾಲಿಗಳಿಗೆಲ್ಲ ಸುಖಪ್ರದಗಳೇ ಆಗಿವೆ. ವಿವೇಕಶೂನ್ಯರು ಮಾತ್ರ ಈ ಮತದಲ್ಲಿ ಸ್ವಾರಸ್ಯವುಂಟು ಆ ಮತದಲ್ಲಿ ಸ್ವಾರಸ್ಯವಿಲ್ಲವೆಂದು ಒಂದು ಮತವನ್ನು ಬಿಟ್ಟು ಮತ್ತೊಂದು ಮತವನ್ನು ಅವಲಂಬಿಸಲು ಹವಣಿಸುತ್ತಾರೆ. ಅಂಥವರು ಯಾವ ಮತದಲ್ಲೂ ಸ್ಥಿರವಾಗಿ ನಿಲ್ಲದೆ ತ್ರಿಶಂಕುಸ್ವರ್ಗದಂತೆ ನಿರಾಧಾರಿಗಳಾಗಿ ಅಲೆಯಬೇಕಾಗುತ್ತದೆ. ಆದುದರಿಂದಲೇ ಗೀತಾಕಾರರು,

ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ।

ಕಷ್ಟಪಟ್ಟರೂ ತಾನು ಪೂರ್ವದಲ್ಲಿ ಹಿಡಿದ ಮತಧರ್ಮವೇ ಶ್ರೇಷ್ಠವಾದುದು. ಪರಧರ್ಮಕ್ಕೆ ಕೈಯೊಡ್ಡುವುದು ಸರಿಯಲ್ಲವೆಂದು ಹೇಳಿರುತ್ತಾರೆ.

ಹೀಗಿದ್ದರೂ ಅನೇಕರಿಗೆ ಈಗಿನ ನೂತನ ವಾತಾವರಣದಲ್ಲಿ ಒಂದು ಮತವನ್ನು ಬಿಟ್ಟು ಮತ್ತೊಂದು ಮತಕ್ಕೆ ಪ್ರವೇಶಮಾಡಲಿಚ್ಛೆಯು ಬಹಳವಾಗಿ ಹಾತೊರೆಯುತ್ತಲಿದೆ. ಅನೇಕರು ಅದಕ್ಕೆ ಬದ್ಧಕಂಕಣರಾಗಿ ಹಣದ ಆಸೆಯನ್ನೂ ಇತರ ಭೋಗ್ಯವಸ್ತುಗಳ ಆಸೆಯನ್ನೂ ತೋರಿಸಿ ವಿವೇಕಶೂನ್ಯರಾದ ಮೂಢರನ್ನು ತಮ್ಮ ಮತಕ್ಕೆ ಸೆಳೆಯೊಯ್ಯುತ್ತಿದ್ದಾರೆ. ಇದನ್ನು ನೋಡಿ ಸ್ವಮತೀಯರು ಸಹಿಸದೆ ಆ ಮೂಢನ ಬಳಿಗೆ ಹೋಗಿ ಪುನಃ ತಮ್ಮ ಮತಕ್ಕೆ ಎಳೆಯಹತ್ತಿರುತ್ತಾರೆ. ಆ ಮತದಲ್ಲಿರುವ ಸ್ವಾರಸ್ಯವೇನು? ಈ ಮತದಲ್ಲಿರುವ ಅಸ್ವಾರಸ್ಯವೇನು? ಎಂಬ ವಿಚಾರಶಕ್ತಿಯು ಆ ಮೂಢರಿಗೆ ಹುಟ್ಟುವಂತಿಲ್ಲ. ಯಾರ ಬೋಧೆಯು ಹೇಗೆ ಆಗುತ್ತದೆಯೊ, ಹಾಗೆ ಅವನ ಬುದ್ಧಿಯು ಸುತ್ತಲಿಕ್ಕೆ ಹತ್ತುವದು. ಇದರಿಂದ ಪರಸ್ಪರ ಮತಗಳಿಗೆ ವೈಷಮ್ಯವು ಪ್ರಾಪ್ತವಾಗಿ ಕಾಮಕ್ರೋಧಾದಿಗಳಿಂದ ಪೀಡಿತರಾಗಿ ವಿರೋಧದಲ್ಲಿ ಪರಿಣಮಿಸುವುದೊಂದೇ ಫಲವಲ್ಲದೆ, ಇನ್ನಾವ ಫಲವೂ ಕಂಡುಬರುವುದಿಲ್ಲ. ಮತವು ಯಾವಾಗಲೂ ಮೋಕ್ಷವೆಂಬ ಮಹಾಸೌಖ್ಯವನ್ನು ಹೊಂದುವುದಕ್ಕಾಗಿಯೇ ಇರುವುದಲ್ಲದೆ, ವೈಷಯಿಕ ಆನಂದಕ್ಕಾಗಿ ಇರುವುದಿಲ್ಲ. ಕ್ರಮತಪ್ಪದೆ ಇಂದ್ರಿಯ ಸಂಯಮನಮಾಡಿ ಆಯಾಯ ಮತದ ರೀತಿಯಾಗಿ ಆಯಾಯ ದೇವರನ್ನು ಆರಾಧಿಸುವವನಿಗೆ ದೇವರು ಅಭಯ ಹಸ್ತವನ್ನು ನೀಡಿರುವಲ್ಲಿ ಮತ್ತೊಂದು ಮತಕ್ಕೆ ಹೋಗಿ ಮುಕ್ತಿ ಪಡೆಯುತ್ತೇನೆಂಬುವನು ತನ್ನ ಮನಸ್ಸಿನ ದೌರ್ಬಲ್ಯವನ್ನು ವ್ಯಕ್ತಪಡಿಸುವದಕ್ಕಾಗಿಯೇ ಹೊರತು ಬೇರೆ ಯಾವುದಕ್ಕೂ ಅಲ್ಲವೆಂಬುದು ಸ್ಪಷ್ಟವಾಗಿ ತೋರುತ್ತದೆ. ಈಗ ಪ್ರಪಂಚದಲ್ಲಿ ಕೆಲ ಕಾಮಿ ಪುರುಷರು ಸ್ತ್ರೀಯರಿಗಾಗಿ ತಮ್ಮ ಮತವನ್ನು ಬಿಟ್ಟು ಬೇರೆ ಮತವನ್ನು ಪ್ರವೇಶಿಸುವುದುಂಟು. ಕೆಲ ಕಾಮಿನಿಯರು ಪುರುಷರಿಗಾಗಿ ತಮ್ಮ ಮತವನ್ನು ಬಿಟ್ಟು ಬೇರೆ ಮತವನ್ನು ಪ್ರವೇಶಿಸುವುದುಂಟು. ಕೆಲವು ಸ್ತ್ರೀಪುರುಷರೀರ್ವರೂ ಎಲ್ಲಿಯಾದರೂ ದೊಡ್ಡ ಅಧಿಕಾರವಾಗಲಿ ವಿಶೇಷವಾದ ಸೌಕರ್ಯವಾಗಲಿ ಸಿಗುತ್ತದೆಯೆಂದರೆ ಈರ್ವರೂ ತಮ್ಮ ಮತವನ್ನು ತ್ಯಜಿಸಿ ಆ ಮತದ ಸಂಸ್ಕಾರಪಡೆಯಲು ಹೊರಡುತ್ತಾರೆ. ಹೀಗೆ ಕ್ಷಣಿಕವಾದ ಲೌಕಿಕವಾದ ವಿಷಯಭೋಗಗಳಲ್ಲಿ ಲಾಲಸರಾಗಿ ತಾವೇ ಉತ್ಕೃಷ್ಟ ನಿತ್ಯಾನಂದವನ್ನುಂಟುಮಾಡುವ, ತಮ್ಮ ಮತಗುರುಗಳ ಪರಂಪರಾಗತವಾಗಿ ಅಭ್ಯಾಸಕ್ಕೆ ಬಂದಿರುವ ಧ್ಯೇಯವಸ್ತುವಿನ ಸ್ವರೂಪವನ್ನೇ ಹಾಳುಮಾಡಿ ಬೆಂಕಿಯಿಂದ ಎದ್ದ ಕಿಡಿಗಳಂತೆ ಪರಮಾತ್ಮನ ಅಂಶಭೂತರಾದ ಜೀವಾತ್ಮರನ್ನು ತಿರುತಿರುಗಿ ಹೀನಾವಸ್ಥೆಗೆ ತರುತ್ತಿರುವರು. ಒಂದುವೇಳೆ ವೈಷಯಿಕ ಸುಖಗಳನ್ನೇ ತ್ಯಜಿಸಿ ಪರಮಾತ್ಮ ಸಾಕ್ಷಾತ್ಕಾರಪಡೆದ ಮಹಾನುಭಾವರಿರುವರೆಂದರೆ ಅಂಥವರು ಈ ಕಲಿಯುಗದಲ್ಲಿ ವಿರಳರೇ ಸರಿ. ತಮ್ಮ ಮತಕ್ಕೆ ಇತರರನ್ನು ಸೇರಿಸಿಕೊಳ್ಳಬೇಕೆಂಬುವವರಿಲ್ಲ. ಪ್ರಾಯಶಃ ತಮ್ಮ ತಮ್ಮ ಜೀವನವ್ಯಾಪಾರವನ್ನು ನಡೆಸಿಕೊಳ್ಳುವ ಧ್ಯೇಯವುಳ್ಳವರಾಗಿರುವರಲ್ಲದೆ ಪತಿತರಾದ ಆತ್ಮರನ್ನುದ್ಧರಿಸಬೇಕೆಂಬ ಸಂಕಲ್ಪವುಳ್ಳವರಾಗಿಲ್ಲ. ಗೋಮುಖವ್ಯಾಘ್ರನಂತೆ ಮೇಲೆ ಮಾತ್ರ ಪಾರಮಾರ್ಥಿಕ ವೇಷಭಾಷೆಗಳನ್ನು ಅಭಿನಯಿಸುತ್ತಾರೆ. ಅಂಥವರ ಮಾತನ್ನು ಕೇಳಿ ನಮ್ಮ ಮಾತಾಪಿತೃಗಳ ವಂಶಪರಂಪರಾಗತವಾಗಿ ಬಂದ ಮತಗಳನ್ನು ಬಿಟ್ಟು ಕ್ಷಣಿಕವಾದ ಪ್ರಾಪಂಚಿಕ ಸುಖಕ್ಕಾಗಿ ಮತ್ತೊಂದು ಮತಕ್ಕೆ ಹೋಗಿ ಪರಿಣಾಮದಲ್ಲಿ ದುಃಖಪಡುವುದಕ್ಕಿಂತಲೂ ತಮ್ಮ ಮತದಲ್ಲಿಯೇ ಇದ್ದು ಸುಖಪಡುವುದು ಮೇಲು. ವೇದದಲ್ಲಿ ಸಕಲ ದೇವತೆಗಳೂ ಉಕ್ತವಾಗಿರುವುದರಿಂದ ಯಾವ ಹೆಸರಿನ ದೇವರನ್ನು ಧ್ಯಾನಿಸಿದರೂ ಆ ಹೆಸರಿನಿಂದಲೇ ಆ ದೇವರು ಪ್ರತ್ಯಕ್ಷನಾಗಿ ಜೀವನ ಕೊರಳಿಗೆ ಬಿದ್ದಿರುವ ಮಾಯಾಪಾಶವನ್ನು ಹರಿದುಹಾಕಿ ಆತನನ್ನು ತನ್ನಂತೆ ಸರ್ವ ಸ್ವತಂತ್ರನನ್ನಾಗಿ ಮಾಡಿಕೊಡುತ್ತೇನೆಂದು ಭಗವಂತನ ಆಜ್ಞಾರೂಪವಾದ ವೇದವೇ ಘೋಷಿಸುತ್ತಿರುವಲ್ಲಿ ತನ್ನ ವಂಶಾನುಕ್ರಮವಾಗಿ ಬಂದ ತನ್ನ ಅಭ್ಯಾಸದಲ್ಲಿರುವ ತನ್ನ ಮತದ ದೇವರನ್ನು ಬಿಟ್ಟು ಅನಭ್ಯಸ್ತವಾದ ಮತ್ತೊಂದು ದೇವರನ್ನು ಆರಾಧಿಸುವ ಮತಕ್ಕೆ ಹೋಗಿ ಬಳಲುವದು ಕೇವಲ ಮಂದಮತಿಗಳ ಲಕ್ಷಣವಲ್ಲದೆ ವಿವೇಕಶಾಲಿಗಳ ಲಕ್ಷಣವಲ್ಲ. ಆದುದರಿಂದ ಅನೂಚಾನವಾಗಿ ಬಂದ ತಮ್ಮ ತಮ್ಮ ಮತಗಳಲ್ಲಿದ್ದು ಭಗವಂತನನ್ನಾರಾಧಿಸಿ ಮುಕ್ತಿ ಪಡೆವುದು ಸತ್ಪುರುಷರ ಮಾರ್ಗವಾಗಿದೆ.

ಸೂಚನೆ

ಪ್ರತಿ ವರ್ಷ ಪದ್ಧತಿಯಂತೆ ನವ ಮಹೋತ್ಸವ ನಿಮಿತ್ತವಾಗಿ ಮುಂ ವಾರದ (ತಾ|| ೪-೧೦-೧೯೪೩ ನೆಯ) ಕೆಯು ಹೊರಡುವುದಿಲ್ಲವೆಂಬ ವಿಷ ವನ್ನು ಚಂದಾದಾರರು ಗಮನಿಸಬೇಕು.

ಮ್ಯಾ

ಯುದ್ಧವಾರ್ತೆ

ಪೋಪರಿಗೆ ಜರ್ಮನರ ಬೆದರಿಕೆ

ಜರ್ಮನಿ ಮತ್ತು ಇಟಾಲಿಯನ್ ಫ್ಯಾಸಿಸ್ಟ್ ಸರ್ಕಾರದ ವಿಚಾರದಲ್ಲಿ ಸಹಾನುಭೂತಿ ತೋರಿಸದಿದ್ದ ಬಲಪ್ರಯೋಗ ಮಾಡಬೇಕಾದೀತೆಂದು ಜರ್ಮನ್ ರೇಡಿಯೋ ಪೋಪರಿಗೆ ಎಚ್ಚರಿಕೆ ಇತ್ತಿದೆ. ವೆಟಿಕಾನ ನಗರವು ಜರ್ಮನ್ ವಿರುದ್ಧ ಭಾವನೆಗಳನ್ನು ಹರ ತ್ತಿರುವುದಾಗಿ ಫ್ಯಾಸಿಸ್ಟ್ ಸರಕಾರದ ರೇಡಿಯೋ ಪ್ರಾ ಮಾಡಿದೆ.

ಮುಸೋಲಿನಿ ಇಟಲಿ ಜನರನ್ನು ಯುದ್ಧಕ್ಕೆಳೆದನು

ಮಾರ್ಷಲ್ ಬಡೋಗ್ಲಿಯೋ ರೇಡಿಯೋ ಮೂಲ ಮಾತನಾಡುತ್ತ 'ಮುಸೋಲಿನಿ ಇಟಲಿಯನ್ನು ಹೊ ಹೊಸ ಯುದ್ಧಕ್ಕೆ ಎಳೆದನು. ಇಟಲಿ ಜನರಿಗೆ ಅದ ಬೇಕಿರಲಿಲ್ಲ. ನಾವು ಕೀಳು ಜನವೆಂದೇ ಜರ್ಮನಿ ಮೊದಲಿಂದ ಭಾವಿಸಿದೆ. ಜರ್ಮನರು ತಿನ್ನುವ ಆಹಾರವೇ ಬೇರೆ, ಇಟಾಲಿಯನರಿಗೆ ಕೊಟ್ಟಿರುವ ಆಹಾರವೇ ಬೇರೆ' ಎಂದರು.

ಕಾರ್ಸಿಕಾ ಮುಕ್ತಿಗೆ

ಕಾರ್ಸಿಕಾ ದ್ವೀಪವು ಇಟಲಿ ಮೂಲಭೂಮಿಯಿಂದ ೬೦ ಮೈಲಿಯಲ್ಲಿದೆ. ಫ್ರೆಂಚ್ ರೇವಿನಿಂದ ೧೦೦ ಮೈಲಿಯೊಳಗಿದೆ. ಇಟಲಿಯ ನೌಕಾಮೂಲಗಳಾದ ಜೆನೋವಾ ಮತ್ತು ಲಾ ಸ್ಪೆಜಿಯಾಗಳಿಗೆ ಕಾರ್ಸಿಕಾ ದ್ವೀಪ ಹೆಬ್ಬಾಗಿಲಂತಿದೆ.

ಸ್ವತಂತ್ರ ಫ್ರೆಂಚ್ ಯೋಧರ ಪಡೆಗಳು ಕಾರ್ಸಿಕಾ ದ್ವೀಪದಲ್ಲಿ ಬಂದಿಳಿದಿವೆಯೆಂದು ಆಲ್ಜೀರ್ಸ್ ರೇಡಿಯೋ ತಿಳಿಸಿದೆ. ಇಟಲಿಯು ಒಪ್ಪಂದಕ್ಕೆ ಬಂದೊಡನೆಯೇ ಕಾರ್ಸಿಕಾದಲ್ಲಿನ ದೇಶಭಕ್ತರು ಜರ್ಮನರನ್ನು ಎದುರಿಸಿದರು. ಇವರಿಗೆ ಸಹಾಯ ಮಾಡಲು ಅಲ್ಲಲ್ಲಿ ಫ್ರೆಂಚ್ ಯೋಧರ ಪಡೆಗಳನ್ನು ತಂದು ಇಳಿಸಲಾಯಿತು. ಈಗ ಅನುಕೂಲವಾದ ಪರಿಸ್ಥಿತಿಯುಂಟಾಗಿದೆ ಎಂದು ಫ್ರೆಂಚ್ ಕಚೇರಿಯಿಂದ ಪ್ರಕಟನೆ ಹೊರಟಿದೆ.

ನೇಪಲ್ಸ್ ಕದನ

ಇಟಲಿಯಲ್ಲಿ ನೇಪಲ್ಸ್ ಬಳಿ ಇರುವ ಎತ್ತರವಾ ಪ್ರದೇಶಗಳನ್ನೆಲ್ಲ ಐದನೇ ಸೇನೆ ಹಿಡಿದಿದೆ. ಸಾರೆಂಟೊ ಪ್ರಸ್ಥಭೂಮಿಯೆಲ್ಲ ಮಿತ್ರ ಸೈನಿಕರ ವಶವಾಗಿದೆ. ಅಮೆರಿಕನ್ ಫಿರಂಗಿಗಳೀಗ ನೇಪಲ್ಸ್ ನಗರದ ಮೇಲೆ ಷೆಲ್ ಹಾರಿಸುತ್ತಿವೆ. ನೇಪಲ್ಸ್ ಮುಂದೆ ಅಷ್ಟಮ ಸೇನೆ ಬಂದು ನಿಂತಿದೆ. ಶತ್ರು ವ್ಯೂಹದ ಹಿಂದೆ ತೆರಳಿ ಅಮೆರಿಕನ್ ವಿಮಾನಗಳು ೫೦ ಶತ್ರು ವಾಹನಗಳನ್ನು ನಾ ಮಾಡಿದವು. ಸಾಲೆರ್ನೋ ಕದನದಲ್ಲಿ ಮಿತ್ರಸೇನೆಗಾದ ನಷ್ಟವೆಷ್ಟೆಂಬುದು ಇನ್ನೂ ಗೊತ್ತಾಗಿಲ್ಲ. ಆದರೆ ಅಮೆರಿಕವು ೫೦,೦೦೦ ಯೋಧರನ್ನು ಕಳೆದುಕೊಂಡಿತೆಂದು ಜರ್ಮನಿ ತಿಳಿಸಿರುವುದು ಶುದ್ಧ ಸುಳ್ಳೆಂದು ತಿಳಿಸಲಾಗಿದೆ. ಐದನೇ ಮತ್ತು ಎಂಟನೇ ಸೇನೆ ಏಕಪ್ರಕಾರವಾಗಿ ಉತ್ತರಕ್ಕೆ ನುಗ್ಗುತ್ತಿರುವುದರಿಂದ ಇಟಲಿ ಕದನದಲ್ಲಿ ಹೊಸ ಘಟನಾವಳಿಯನ್ನು ನಾವು ನಿರೀಕ್ಷಿ

ಮುದಾಗಿದೆ ಸಾಲೆರ್ನೋ ರಂಗದಿಂದ ಜರ್ಮನ್ ಸೇನಾನಾಯಕನು ತನ್ನ ಸೇನೆಯನ್ನು ಹಿಂಪಕ್ಕೆ ಕರೆಸಿದಾನೆ. ನೇಪಲ್ಸ್‌ನಲ್ಲಿ ನಿಂತು ಹೋರಾಡುವ ಉದ್ದೇಶ ನಾಜಿಗಳಿಗಿಲ್ಲವೆಂದೂ ನೇಪಲ್ಸ್ ಉತ್ತರದಲ್ಲಿರುವ ರಕ್ಷಣೆ ವ್ಯೂಹಕ್ಕೆ ಅವರು ಸರಿಯುವರೆಂದೂ ಸುದ್ದಿ ಬಂದಿದೆ

ನೇಪಲ್ಸ್ ನಾಶ

ಇಟಲಿಯಲ್ಲಿ ಅಷ್ಟಮ ಸೇನೆ ಮುಂದೆ ನುಗ್ಗುತ್ತಲಿದೆ ಸಾಲೆರ್ನೋ ರಂಗದಲ್ಲಿ ಐದನೆ ಸೇನೆ ಮುಂದೆ ನುಗ್ಗಿ ಇಬೋಲಿ ಎಂಬ ಊರನ್ನು ಹಿಡಿದಿದೆ ದಕ್ಷಿಣ ಇಟಲಿ ದಂಡಯಾತ್ರೆ ಕುರಿತು ತಮಗೆ ಪೂರ್ಣ ತೃಪ್ತಿ ಉಂಟಾಗಿದೆಯೆಂದು ಜನರಲ್ ಐಸೆನ್ ಹವರ್ ತಿಳಿಸಿದ್ದಾರೆ ಸಾಲೆರ್ನೋ ರಂಗದಲ್ಲಿ ಬ್ರಿಟಿಷ್ ಎಂಟನೇ ಸೇನೆ ಎಂತಹ ಏಟು ಹಾಕುವುದೋ ಎಂಬ ಭೀತಿ ನಾಜಿಗಳಿಗೆ ಉಂಟಾಗಿದೆ ನೇಪಲ್ಸ್ ನಗರವನ್ನೆಲ್ಲ ಜರ್ಮನರು ಧ್ವಂಸಮಾಡುತ್ತಿದ್ದಾರೆ ನಗರವನ್ನೆಲ್ಲ ಬೆಂಕಿ ಹೊಗೆ ಆವರಿಸಿದೆ ಅಲ್ಲಿ ದೋಣಿಗಬೇಕೆ ತಲೆ ನಾಕಿದೆಯಂತೆ ಇಟಾಲಿಯ ನಾಗರಿಕರಿಗೆ ಚಿತ್ರಹಿಂಸೆ ಕೊಡುತ್ತಿರಲಾಗಿದೆಯೆಂದು ಹೇಳಲಾಗಿದೆ

ಜಪಾನಿನ ಗೃಹರಂಗದಲ್ಲಿ ತೀವ್ರ ಬದಲಾವಣೆ

ಜಪಾನ್ ಮಂತ್ರಿಮಂಡಲದ ವಿಶೇಷ ಸಭೆಯು ಸೇರಿ. ಈಗಿನ ಉಗ್ರ ಸಂಗ್ರಾಮ ಪರಿಸ್ಥಿತಿಯನ್ನು ಎದುರಿಸಲು ಜಪಾನಿನಲ್ಲಿ ಉಗ್ರ ಕಾರ್ಯಕ್ರಮಗಳನ್ನೂ ಬದಲಾವಣೆಗಳನ್ನೂ ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತೆಂದೂ ಈಗಿನ ಸಂಗ್ರಾಮದ ಆವಶ್ಯಕತೆಯನ್ನು ಪೂರೈಸಲು ಜ|| ಟೋಜೋರವರು ಸಿದ್ಧಪಡಿಸಿರುವ ರಾಷ್ಟ್ರೀಯ ಮತ್ತು ಆಡಳಿತಸಂಬಂಧವಾದ ಕಾರ್ಯಕ್ರಮವನ್ನು ಮಂತ್ರಿಮಂಡಲ ಒಪ್ಪಿತೆಂದು ಒಂದು ವಾರದೊಳಗಾಗಿ ತಕ್ಕ ವ್ಯವಸ್ಥೆಗಳನ್ನು ಸಿದ್ಧಮಾಡಿ ಸರಕಾರಕ್ಕೆ ಒಪ್ಪಿಸಬೇಕೆಂದು ಆಯಾ ಮಂತ್ರಿಮಂಡಲಗಳಿಗೆ ಸೂಚನೆ ಕೊಡಲಾಯಿತೆಂದೂ ಜರ್ಮನ್ ವಾರ್ತಾಸಂಸ್ಥೆ ತಿಳಿಸಿದೆ

ಐಕಮತ್ಯಕ್ಕಾಗಿ ಟೋಜೋ ಪ್ರಾರ್ಥನೆ

ಜಪಾನಿನ ಪ್ರಜೆಗಳು ಹೆಚ್ಚು ಐಕಮತ್ಯ ತೋರಿಸಬೇಕೆಂದು ಮಹಾಪ್ರಧಾನ ಟೋಜೋ ಪ್ರಾರ್ಥಿಸುತ್ತ ಜಪಾನಿನ ಮೂಲಭೂಮಿಯ ಮೇಲೆ ಮುತ್ತಿಗೆಯನ್ನು ನಿರೀಕ್ಷಿಸಬೇಕೆಂದು ಎಚ್ಚರಿಸಿದರು ಶತ್ರುವಿಮಾನ ಮುತ್ತಿಗೆ ಜೋರಾದರೆ ಜಪಾನ್ ಸರಕಾರದ ಕಛೇರಿಗಳನ್ನು ಕೈಗಾರಿಕೆಗಳನ್ನೂ ಬೇರೆ ಬೇರೆ ಕಡೆಗೆ ವರ್ಗಾಯಿಸಲು ತಕ್ಕ ಸಿದ್ಧತೆಯನ್ನು ಮಾಡಿಕೊಳ್ಳಲಾಗಿದೆ ಜಪಾನಿನಲ್ಲೂ ಹೊರಗ ಉಂಟಾಗಿರುವ ಉಗ್ರಪರಿಸ್ಥಿತಿಯನ್ನು ಎಲ್ಲ ವರ್ಗದ ಜನರೂ ಅರಿಯಬೇಕು ಜನಾಂಗದ ಬಲವೆಲ್ಲ ಸಂಗ್ರಾಮ ವಸ್ತು ಕೈಗಾರಿಕೆಗಳಲ್ಲಿ ಕೇಂದ್ರೀಕೃತವಾಗಬೇಕು ಮುಖ್ಯವಾಗಿ ಜಪಾನ್ ವಿಮಾನ ಬಲವನ್ನು ವಿಸ್ತರಿಸಿ ಬಲಪಡಿಸಬೇಕು ಜಪಾನ್ ಮಂಚುಕೋಗಳಿಗೆ ಬೇಕಾದ ಆಹಾರವನ್ನೆಲ್ಲ ಇಲ್ಲೇ ಒದಗಿಸಿಕೊಳ್ಳಬೇಕು ಜಪಾನ್ ಮಾತೃಭೂಮಿಯ ರಕ್ಷಣೆ ಏರ್ಪಾಡುಗಳನ್ನೂ ತಕ್ಷಣ ಬಲಪಡಿಸಬೇಕು ಜಪಾನಿನ ಜನ ಬಲವನ್ನೆಲ್ಲ ಸಂಗ್ರಾಮ ಪ್ರಯತ್ನಕ್ಕೆ ತೊಡಗಿಸಿಕೊಳ್ಳಲಾಗುತ್ತದೆ ಸ್ತ್ರೀಯರನ್ನು ಸಹ ಹೆಚ್ಚು ಹೆಚ್ಚಾಗಿ ಕೆಲಸಕ್ಕೆ ತೆಗೆದುಕೊಳ್ಳಲಾಗುತ್ತದೆ ಕೈಗಾರಿಕೆ ಕ್ಷೇತ್ರಗಳಲ್ಲೆಲ್ಲ ವಿಮಾನ ಮುತ್ತಿಗೆ ರಕ್ಷಣೆಯನ್ನು ಬಲಪಡಿಸಬೇಕಾಗುವುದು ಎಂದು ತಿಳಿಸಿದರು

ರಷ್ಯರಂಗ

ನೋವೊರೋಸಿಸ್ಕ ವಾಯವ್ಯದಲ್ಲಿ ಉಗ್ರ ಹೊಡೆದಾಟವಾದ ಮೇಲೆ ರಷ್ಯನರು ಅನಪಾ ಬಂದರನ್ನೂ ಇನ್ನೂ ಹಲವು ಸ್ಥಾನಗಳನ್ನೂ ಹಿಡಿದರು ನೋವೊರೋಸಿಸ್ಕ ಪಶ್ಚಿಮಕ್ಕೆ ೪೦ ಮೈಲಿ ದೂರದಲ್ಲಿದೆ ಅನಪಾ ಬಂದರು. ಜಪೋರೋಜೇ, ಪೋಲ್ಟಾವಾ, ಕೀವ್, ಗೋಮೆಲ್, ಸ್ಮೋಲೆನ್ಸ್ಕ್ ಕಡೆ ನುಗ್ಗುತ್ತಿರುವ ರಷ್ಯನ್ ಸೇನೆಗಳು ಇನ್ನಷ್ಟು ದೂರ ಮುಂದೆ ಸರಿದಿವೆ ಸ್ಮೋಲೆನ್ಸ್ಕ್, ರಷ್ಯದಲ್ಲಿ ಜರ್ಮನರ ಅತಿ ದೊಡ್ಡ ಬಲ ಮೂಲ ಅದನ್ನೀಗ ಹಲವು ಕಡೆಯಿಂದ ರಷ್ಯನರು ಮುತ್ತಿದ್ದಾರೆ ನಗರವನ್ನು ಬಳಸಿ ಬರುವ ಉಗ್ರ ಪ್ರಯತ್ನದಲ್ಲಿ ರಷ್ಯನರು ನಿರತರಾಗಿದ್ದಾರೆ ಖಾರಕೋವ್ ದಕ್ಷಿಣಕ್ಕೆ ೪೦ ಮೈಲಿ ದೂರದಲ್ಲಿರುವ ಪೋಲ್ಟಾವಾ ನಗರ ಶತ್ರುವಶವಾಯಿತೆಂದು ಜರ್ಮನ್ ಪ್ರಕಟನೆಯು ತಿಳಿಸುತ್ತದೆ ರಷ್ಯನರು ಪ್ರಕಟಿಸಿಲ್ಲ

ಬರ್ಮಾ ವಿಜಯ ಮುಂದಿನ ವರ್ಷ

ಮುಂದಿನ ವರ್ಷ ಅಕ್ಟೋಬರ್ ಒಳಗಾಗಿ ಬರ್ಮವನ್ನು ಮಿತ್ರ ದೇಶಗಳು ಗೆಲ್ಲುವುದಾಗಿ ತಮ್ಮ ನಿರೀಕ್ಷೆಯಿದೆಯೆಂದು ಶ್ರೀ ಎಮ್ಸ್‌ರ್ಸಸ್ಸ್‌ರವರು ತಿಳಿಸಿದ್ದಾರೆ ಬರ್ಮದ ಇನ್ನೂ ಮುಂಚೆಯೇ ಅದು ಜಯಿಸಲ್ಪಡಬಹುದು ಆಗ್ನೇಯ ಏಷ್ಯದಲ್ಲಿ ಬಹು ದೀರ್ಘಕಾಲ ಹೋರಾಟ ನಡೆಯಬಹುದು ಜಪಾನರು ಬಹುಶಃ ಮುಂದಿನ ವರ್ಷ ದಕ್ಷಿಣ ಯುನಾನ್ ಪ್ರಾಂತ್ಯದ ಮೇಲೆ ಬೀಳಬಹುದು ಎಂದೂ ಅವರು ಸೂಚಿಸಿದ್ದಾರೆ

ಶ್ರೀ ಚರ್ಚಿಲ್ಲರ ಭಾಷಣ

ಬ್ರಿಟಿಷ್ ಮಹಾಪ್ರಧಾನರಾದ ಶ್ರೀ ಚರ್ಚಿಲ್‌ರವರು ಕಾಮನ್ಸ್ ಸಭೆಯಲ್ಲಿ ಸಂಗ್ರಾಮ ವಿಮರ್ಶೆಮಾಡುತ್ತ 'ಇಂಗ್ಲಿಷ್ ಕಡಲ್ಗಾಲುವೆ ದಾಟಿ ಜರ್ಮನರ ಮೇಲೆ ಬೀಳುವುದಕ್ಕೆ ಪ್ರತಿಯಾದ ಕಾರ್ಯಕ್ರಮ. ಆಫ್ರಿಕಾ ಕದನವೆಂದು ನಾನಾ [illegible] ಭಾವಿಸಲಿಲ್ಲ ಸಪ್ಟೆಂಬರ್ ೧೦ನೇ ತಾ|| ಸುರಿದ ಸಾಲೆರ್ನೋ ಕೊಂಗದಲ್ಲಿ ಉತ್ತರ ಆಫ್ರಿಕಾದಲ್ಲಿ ಶತ್ರುಗಳು ಎಂದು [illegible] [illegible] ಎರಡು [illegible] ಪ್ರಪಂಚದ ಯಾವ ಕಡೆಯಲ್ಲೂ ಮಿತ್ರ [illegible] ಅನಂತರಕ್ಕೆ [illegible] ಆದರ [illegible] ಟನ್ ಬೋಟುಗಳ ಚಟುವಟಿಕೆ [illegible] ಗುಂಪುಗಳಾದ [illegible] ಬೋಟುಗಳ [illegible] ಜಪಾನ್ ಕದನದ [illegible] 'ಜಪಾನು ಆಹಾರ [illegible] ತಾವು [illegible] ಹೆಚ್ಚು [illegible] ಜಪಾನರು [illegible] ಇದ [illegible]

ಇಟಲಿಯ ವಿಜಾಯವತ್ತಿ "ಮಸೊಲಿನಿ ತಪ್ಪಿಸಿಕೊಳ್ಳ [illegible] ಬಡೋಗ್ಲಿಯೋ [illegible] ತಾನು ಕೂಡಿತ್ತು ಅದು [illegible] ಮಾಡಿ ಶತ್ರುಗಳ [illegible] ಅವರನ್ನು [illegible] ನಿರೀಕ್ಷೆ [illegible] ಪ್ರಯತ್ನ [illegible] ಅವನನ್ನು [illegible] ಮಾಡಿದ. [illegible] ಆಕ್ಷಿ ಮಾಡಲಾಗಿ [illegible] ಅವರು ತಮ್ಮ ಕರ್ತವ್ಯವನ್ನು ಮಾಡಲಿಲ್ಲ ಎಂದರು ಬ್ರಿಟನ್ ಅಮೆರಿಕಾ ಮತ್ತು ರಷ್ಯಾ [illegible] ಸೇನೆಗಳ [illegible] [illegible] ನಡೆಯುವುದೆಂದು ಅವರು ತಿಳಿಸಿದರು

ಭಾರತವನ್ನು ಭಾರತವೇ ಆಳುತ್ತಿದೆ

'ನ್ಯಾಷನಲ್ ಜಿಯಾಗ್ರಾಫಿಕ್ ಮ್ಯಾಗಿಜೈನ್' ನಲ್ಲಿ ಲಾರ್ಡ್ ಹ್ಯಾಲಿಫಾಕ್ಸರು ಪ್ರಸಿದ್ಧಿಸಿದ ಲೇಖನದಲ್ಲಿ ಭಾರತದ ವಿಷಯವಾಗಿ ಬರೆಯುತ್ತ "ಭಾರತ ಸಮಸ್ಯೆ ಬಿಡಿಸಲು ತೊಡಕಿನದು ಅದೊಂದು ರಾಜಕೀಯ ಚಕ್ರಬಂಧದಂತಿದೆ ಮನುಷ್ಯನ ಮುಂದೆ ಇಷ್ಟು ಕಠಿಣವಾದ ಸಮಸ್ಯೆ ಎಂದಾದರೂ ಎದ್ದು ನಿಂತಿತ್ತೋ ಎಂದು ನಾನು ಶಂಕಿಸುತ್ತೇನೆ ಕಟ್ಟಕಡೆಗೆ ತಮ್ಮ ಸರಕಾರದ ಸ್ವರೂಪವನ್ನು ನಿರ್ಧರಿಸುವವರು ಭಾರತೀಯರೇ ಕಾರ್ಯಕಾರಿಯಾದ ಸರ್ವಸಮ್ಮತ ಮಾರ್ಗವನ್ನು ಅವರು ಕಂಡು ಹಿಡಿಯಬೇಕು ಅಲ್ಲಿಯವರೆಗೆ ನಾವು ನಮ್ಮ ಜವಾಬ್ದಾರಿಯನ್ನು ಬಿಡಲು ಸಾಧ್ಯವಿಲ್ಲ ಹಾಗೆಂದು ವೇಳೆ ಮಾಡಿದರೆ ಭಾರತವನ್ನು ವಿಪತ್ತಿಗೆ ಗುರಿಮಾಡಿದಂತಾಗುತ್ತದೆ. ಭಾರತವು ಆಸಹನೆಯಿಂದ ಬೇಯುತ್ತಿದೆ ಎಂದು ಭಾವಿಸುವ ಜನ ಹಲವರಿದ್ದಾರೆ ಆದರೆ ಅವರು ತಮ್ಮ ಮನಸ್ಸಿನಲ್ಲೇ ಒಂದು ಪ್ರಶ್ನೆ ಹಾಕಿಕೊಂಡು ವಿಚಾರ ಮಾಡಲಿ ಶಾಂತಿ ಕಾಲದಲ್ಲಿದ್ದಕ್ಕಿಂತ ತಹ ೬೦೦೦೦ ಸೈನಿಕರ ಸೇನೆ ೪೦ ಕೋಟಿ ಪ್ರಜೆಗಳನ್ನು ಹತೋಟಿಯಲ್ಲಿಡಲು ಸಾಧ್ಯವೇ ? ಎಂದು. ನಿಜ ಹೇಳುವುದಾದರೆ ಈಗ ಭಾರತವನ್ನು ಬಹುಮಟ್ಟಿಗೆ ಭಾರತೀಯರೇ ಆಳುತ್ತಿದ್ದಾರೆ ಅವರೇ ಸಂರಕ್ಷಿಸುತ್ತಿದ್ದಾರೆ ಇಂಡಿಯಾ ಸರಕಾರವು ಉಗ್ರಟೀಕೆಗೆ ಗುರಿಯಾಗುತ್ತಿದ್ದರೂ ಬಹುಮಟ್ಟಿಗೆ ಜನಸಾಮಾನ್ಯರ ಒಪ್ಪಿಗೆಯ ತಳಹದಿಯ ಮೇಲೆಯೇ ಅದು ಸ್ಥಾಪಿತವಾಗಿದೆ" ಎಂದು ತಿಳಿಸಿದ್ದಾರೆ

ಬಂಗಾಳ ಕ್ಷಾಮ ಕುರಿತು ಬ್ರಿಟನ್ನಿನಲ್ಲಿ ಕಳವಳ

ಬಂಗಾಲಾ ಬರಗಾಲವು ಇಷ್ಟು ದಿನಗಳ ನಂತರ ಬ್ರಿಟಿಷ್ ಪತ್ರಿಕಾ ಸಂಪಾದಕರ ಮನಸ್ಸಿಗೆ ಹಿಡಿಯಿತು. ಪತ್ರಿಕೆಗಳಲ್ಲ ಕಲಕತ್ತಾ ಶಾಸನಸಭೆಯಲ್ಲಿ ಹೊರಪಡಿಸಿದ ವಿಚಾರಗಳಿಗೆ ಹೆಚ್ಚು ಪ್ರಾಮುಖ್ಯತೆ ಕೊಟ್ಟಿವೆ ಆಸ್ಟ್ರೇಲಿಯಾ ಮತ್ತು ದಕ್ಷಿಣ ಅಮೆರಿಕಾದಿಂದ ಭಾರತಕ್ಕೆ ದವಸ ಕೊಡಲು ಹಡಗುಗಳ ಸೌಕರ್ಯವನ್ನು ಒದಗಿಸುವ ವಿಚಾರದಲ್ಲಿ ಈ ವಾರ ಲಂಡನ್ನಿನಲ್ಲಿ ಸಮ್ಮೇಳನ ನಡೆಯಲಿದೆ ಬಂಗಾಲಾ ಪರಿಸ್ಥಿತಿ ದಿಕ್ಕುಗೆಟ್ಟಂತಾಗಿದೆಯೆಂದು ಲಂಡನ್ನಿನಲ್ಲಿ ಭಾವಿಸಲಾಗಿದೆ ಆದರೆ ಕಳೆದ ೧೦ ದಿವಸಗಳಿಂದ ಇಂಡಿಯಾ ಸರಕಾರದವರೂ ಪ್ರಾಂತೀಯ ಸರಕಾರವೂ ಇಂಡಿಯಾ ಕಚೇರಿಯ ಸಲಹೆಯಂತೆ ಕೈಗೊಂಡಿರುವ ಕಾರ್ಯಕ್ರಮಗಳ ಫಲವಾಗಿ ಇನ್ನು ಒಂದೆರಡು ವಾರಗಳಲ್ಲಿ ಪರಿಸ್ಥಿತಿ ಸುಧಾರಿಸೀತೆಂದು ನಂಬಲಾಗಿದೆ

ಶ್ರೀ ರಂಭಾಪುರೀ ಜಗದ್ಗುರುಗಳವರ ದಸರಾ ಮಹೋತ್ಸವ

ಪ್ರತಿವರ್ಷ ಪದ್ಧತಿಯಂತೆ ಶ್ರೀ ರಂಭಾಪುರೀ ಜಗದ್ಗುರುಗಳವರ ದಸರಾ ಮಹೋತ್ಸವವು ಕಡೂರು ಜಿ|| ಅಜ್ಜಂಪುರಗ್ರಾಮದ ಭಕ್ತರ ಪ್ರಾರ್ಥನೆಯಂತೆ ಅಲ್ಲಿಯೇ ನೆರವೇರುವದೆಂದು ಮಠದ ಸಂಸ್ಥಾನದ ಏಜಂಟರವರು ತಿಳಿಸುತ್ತಾರೆ

* * *

ಸ್ವೀಕಾರ

ಸೊಲ್ಲಾಪುರದಲ್ಲಿ ನೆರವೇರಿದ ಶ್ರೀ ರೇಣುಕವಿಜಯ ಮಹಾ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಸೌ|| ಭಾಗೀರಥೀಬಾಯಿ ಕಟಾವ ಇವರ ದ್ವಾರಾ ತಲ್ಪಿರುತ್ತದೆ

ಧಾರವಾಡ ಜಿ| ಕಲಕೋಟಿಗ್ರಾಮದಲ್ಲಿ ನೆರವೇರಿದ ಶ್ರೀ ರೇಣುಕವಿಜಯ ಪುರಾಣ ಸಮಾಪ್ತಿ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ವೇ|| ಹಿರೇಮಠ ವೀರಭದ್ರಶಾಸ್ತ್ರಿಗಳವರ ದ್ವಾರಾ ತಲ್ಪಿರುತ್ತದೆ

ಗದಗ ತಾ|| ಮುಳಗುಂದ ಗ್ರಾಮಕ್ಕೆ ಬೆಂಗಳೂರು ಮಹಾಂತಿನ ಮಠಾಧ್ಯಕ್ಷರಾದ ಶ್ರೀ ಗಂಗಾಧರ ಶಿವಾಚಾರ್ಯರವರು ದಯಮಾಡಿಸಿ ನಡೆಯಿಸಿದ ಕಾರ್ಯಕ್ರಮದ ಸಂತೋಷಕ್ಕಾಗಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ ೧ ರೂಪಾಯಿಯು ಮ|| ರಾ|| ವಿರೂಪಾಕ್ಷಪ್ಪ ಗೋಣಿ ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರು ಒಂದೆರಡು ದಿವಸಗಳಲ್ಲಿ ವಿಶ್ರಾಂತಿಗಾಗಿ ಪರಸ್ಥಳಕ್ಕೆ ಪ್ರಯಾಣ ಮಾಡುವವರಾಗಿದ್ದಾರೆ

(೧ನೆಯ ಪುಟದಿಂದ ಮುಂದುವರಿದುದು)

ಯು ಶ್ರೀಮದಾಚಾರ್ಯರಿಂದ ಅಗಸ್ತ್ಯರಿಗೆ ಉಪದೇಶಿಸಲ್ಪಟ್ಟ ಗ್ರಂಥವಾದ್ದರಿಂದ ಇದು ವೀರಶೈವರಿಗೆ ಮುಖ್ಯ ಪ್ರಮಾಣಗ್ರಂಥವಾಗಿದೆ ಎಂಬುದೂ ಬಹುಮಟ್ಟಿಗೆ ವಿಶದೀಕರಿಸಲ್ಪಟ್ಟಿರುತ್ತದೆ. ಇವರು ರಾಜಪಥ ನಿಯಲ್ಲಿ ಆತ್ಮವಿಚಾರಮಂದಿರವನ್ನು ಸ್ಥಾಪಿಸಿರುವುದಲ್ಲದೆ ಮುಂದೆ ಸುಂದರವಾದ ಕಟ್ಟಡವನ್ನು ಕಟ್ಟಿಸಲು ೧೦ ಸಾವಿರ ರೂಪಾಯಿಗಳನ್ನು ಮೊದಲೆ ದಾನ ಮಾಡಿರುತ್ತಾರೆ. ವೇದ ಮತ್ತು ವೀರಶೈವಮತ ಎಂಬ ಗ್ರಂಥವು ಆತ್ಮವಿಚಾರ ಗ್ರಂಥಮಾಲೆಯ ಪ್ರಥಮ ಪುಷ್ಪವಾಗಿದೆ. ಈ ಪುಸ್ತಕದಲ್ಲಿ ಪ್ರಥಮದಲ್ಲಿಯೇ ಶ್ರೀಮಂತರಿಗೆ ಎಚ್ಚರಿಕೆ ಎಂಬ ಶೀರ್ಷಿಕೆಯು ಓದುವವರಿಗೆ ಸ್ಫೂರ್ತಿ ಕಲ್ಪಿಸತಕ್ಕದ್ದಾಗಿದೆ. ಪ್ರಸ್ತಾವನೆಯನ್ನು ನೋಡಿದರೆ ಶ್ರೀಮಾನ್ ನಾಗಣ್ಣನವರ ಪ್ರತಿಭೆಯು ಚೆನ್ನಾಗಿ ವ್ಯಕ್ತವಾಗುತ್ತದೆ. ವೇದ ಮತ್ತು ವೀರಶೈವಮತ ಎಂಬ ವಿಷಯವನ್ನು ಬಹಳ ಯುಕ್ತಿಯುಕ್ತವಾಗಿ ಪ್ರತಿಪಾದಿಸಿರುತ್ತಾರೆ. ಮೋಕ್ಷಸ್ವರೂಪ, ಅದನ್ನು ಹೊಂದುವ ಸುಲಭೋಪಾಯ ಎಂಬ ಲೇಖನಾವಲೋಕನದಿಂದ ಇವರು ಒಬ್ಬ ಮಹಾಪುರುಷರು ಎಂದು ವ್ಯಕ್ತವಾಗುತ್ತದೆ. ಇವರ ಗ್ರಂಥಗಳು ಶಿವಮೊಗ್ಗದಲ್ಲಿ ನಡೆದ ಮೈಸೂರು ಪ್ರಥಮ ವೀರಶೈವ ಸಮ್ಮೇಳನದಲ್ಲಿ ಅಧ್ಯಕ್ಷರಿಗೂ ಕಾಣಿಕೆಯಾಗಿ ಒಪ್ಪಿಸಲ್ಪಟ್ಟು ಸಭೆಯಲ್ಲಿ ಪ್ರಚಾರಮಾಡಲ್ಪಟ್ಟವು. ಇವರ ಗ್ರಂಥಗಳು ಸರ್ವತ್ರ ಪ್ರಚಾರವಾಗಿ ವೀರಶೈವ ಮತವು ಸುವ್ಯವಸ್ಥಿತಿಯನ್ನು ಹೊಂದುವಂತಾಗಲಿ. ಶ್ರೀಮಾನ್ ನಾಗಣ್ಣನವರು ವೀರಶೈವ ಸಮಾಜದ ಮೇಲೆ ಅಭಿಮಾನವಿಟ್ಟು ಸ್ವಂತ ದ್ರವ್ಯವೆಚ್ಚ ಮಾಡಿ ಗ್ರಂಥಪ್ರಸಾರ ಮುಖೇನ ವೀರಶೈವರಲ್ಲಿ ತತ್ವಪ್ರಚಾರವಾಗುವಂತೆ ಪ್ರಯತ್ನಿಸಿದ್ದಕ್ಕಾಗಿ ಅವರನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ವೀರಶೈವರು ಅವರ ಗ್ರಂಥಗಳನ್ನು ಓದಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟು ಅವರು ಕೈಕೊಂಡಿರುವ ಮತಸೇವೆಗೆ ಸಹಾಯಕರಾಗುವರೆಂದು ನಂಬುತ್ತೇನೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ವಶಿಷ್ಠ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೨—೦
[illegible] ಐವರು ಆಚಾರ್ಯರು ಒಂದೆಡೆಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦ × ೮ ಬೆಲೆ ೧ಕ್ಕೆ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ [illegible] ಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × ೧೦	೦—೬—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ ([illegible]ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨| ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ [illegible])	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಟಿಪ್ಪಣಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ–ಕಾರಣಾಗಮ–ಮಕುಟಾಗಮ–ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ.
नन्दिकेश्वरकारिका (संस्कृत)	२ आ.

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿತ ಪ್ರಕಾಶಿತವಾಯಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ವರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರವಿಧಿಯಾವಹರ್ ಪರಶಿವತತ್ವೈಕ್ಯಾನುಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೩ ಆ ವಿ ಪಿ ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೧ನೇ ಅಕ್ಟೋಬರ್ ೧೯೪೩ [ಸಂಚಿಕೆ ೨೩

ದಾಂಪತ್ಯ ಧರ್ಮ

ಲೇ॥ [illegible]

ಜಗಚ್ಚಕ್ರವು ಸುಗಮವಾಗಿ ನಡೆಯುವುದಕ್ಕಾಗಿ ಮಹಾಪುರುಷರ ಅವಶ್ಯಕತೆಯುಂಟು ಜಗದೀಶ್ವರನ ಪ್ರತಿನಿಧಿಗಳಾದ ಮಹಾಪುರುಷರ ಅವತಾರವು ಸರ್ವಾಂಶದಲ್ಲಿ ಮಾತ್ರ ಆಗುವುದು ಅಂತಹ ಮಹಾಪುರುಷರ ಉಪಯುಕ್ತಾಗಿ ಪ್ರಜಾ ಕಾಮನಾದಂಥ ಈಶ್ವರನು ಸ್ತ್ರೀ ಪುರುಷರನ್ನು ಸೃಷ್ಟಿಸಿದನು ಆ ಪರಶಿವನ ಈ ಸತ್ಸಂಕಲ್ಪವನ್ನು ತಿಳಿದ ತ್ರಿಕಾಲಜ್ಞಾನಿಗಳಾದ ಪೂರ್ವಿಕರು ಪವಿತ್ರವಾದ ವಿವಾಹವೆಂಬ ಕರ್ಮವನ್ನು ವಿಧಿಸಿದರು ಸ್ತ್ರೀ ಪುರುಷರಿರ್ವರೂ ಪರಮ ಹಿತನಾದ ಪರಮೇಶ್ವರನ ಪ್ರೇಮಾಶೀರ್ವಾದಗಳಂ ಹೊಂದುವುದರಲ್ಲಿ ಸರಿಸಮಾನರಾಗಿರುವರು ಶ್ರೇಷ್ಠವಾದ ಈ ಸಂಸಾರವನ್ನು ಹೊಂದಿ ಯಾವನಿಗೆ ಯಾವ ವಿಧವಾಗಿ ಕಾರ್ಯಭಾರವಂ ವಹಿಸತಕ್ಕದ್ದೋ, ಆ ವಿಧವಾಗಿಯೇ ಸರ್ವದರ್ಶಿಯೂ ಮಂಗಳಸ್ವರೂಪಿಯೂ ಆದ ಆ ಪರಮಾತ್ಮನು ಅವನಿಗೋಸ್ಕರವಾಗಿ ಶರೀರ—ಮನಸ್ಸು—ಜ್ಞಾನ—ಅಭಿಪ್ರಾಯ—ಧರ್ಮ—ಅಲಂಕಾರ ಇತ್ಯಾದಿಗಳನ್ನೂ, ಶರೀರ ಪೋಷಣೆಗೆ ಬೇಕಾದ ವಸ್ತುಗಳನ್ನೂ ಕೊಟ್ಟಿರುವನು ಸ್ತ್ರೀಯರು ಗರ್ಭಧಾರಣ, ಶಿಶುಪೋಷಣ ಗೃಹಕಾರ್ಯಗಳನ್ನು ಮಾಡಬಲ್ಲರು ಅದುಕಾರಣವೇ ಸರ್ವಮಾತೃವಾದ ಆ ಪರಶಿವನಿಂದ ಸ್ವಕೀಯವಾದಂಥ ಮಹಾ ಮೃದು ಮಾಧುರ್ಯವುಳ್ಳ ಮಾತೃಭಾವಗಳಿಂದ ಆ ಸ್ತ್ರೀಯರು ಸೃಷ್ಟಿಸಲ್ಪಟ್ಟು, ಗೃಹಸಂಪತ್ತು ಶೋಭಾಯಮಾನವಾಗಿರುವಂತೆ ಏರ್ಪಡಿಸಲ್ಪಟ್ಟಿರುವರು ಅದುದರಿಂದಲೇ "ಗೃಹಿಣೀ ಗೃಹಮುಚ್ಯತೇ" ಎಂದು ಪೂರ್ವಿಕರು ಹೇಳಿರುವರು

ಭಾರ್ಯಾಭರ್ತರಾದವರು ಸದ್ಧರ್ಮವಾದ ಸಾಂಸಾರಿಕ ಕಾರ್ಯಂಗಳಲ್ಲಿಯೂ ಭೋಗಂಗಳಲ್ಲಿಯೂ ಪರಸ್ಪರವಾಗಿ ಅತಿಕ್ರಮಿಸದ ಹಾಗೆ ನಡೆದುಕೊಳ್ಳಬೇಕು ಪತ್ನಿಯಾದವಳು ಪತಿಗೆ ಸಹಧರ್ಮಿಣಿಯೂ, ಸಹಕರ್ಮಿಣಿಯೂ, ಸಹಭೋಗಿನಿಯೂ ಆಗಿ ನಡೆಯಬೇಕು ಇರ್ವರ ದೇಹವೆರಡಾದರೂ ಮನಸ್ಸು ಒಂದೇ ಆಗಿ ಚಕ್ರವಾಕಪಕ್ಷಿಗಳೋಪಾದಿಯಲ್ಲಿ ಪರಸ್ಪರ ಅನ್ಯೋನ್ಯಾನುರಾಗವುಳ್ಳ ದಾಂಪತ್ಯವಿರಬೇಕು ಧರ್ಮಕಾರ್ಯದಲ್ಲಿ ಅನ್ಯೋನ್ಯ ಪೃಥಗ್ಭಾವವೇ ಧರ್ಮ ವಿಷಯಕವಾದ ವ್ಯಭಿಚಾರವೆನಿಸುವುದು ಸಂಸಾರ ಸಂಬಂಧವಾದ ಕಾರ್ಯದಲ್ಲಿ ಅನ್ಯೋನ್ಯ ಬೇರೆಯಾದ ಅಭೀಷ್ಟವಾದುದು ಅರ್ಥವಿಷಯಕವಾದ ವ್ಯಭಿಚಾರವೆನಿಸುವುದು ಇದರಿಂದ ಅನೇಕ ಅನಿಷ್ಟ ಘಟನೆಗಳುಂಟಾಗುತ್ತವೆ ಪತಿಯು ಪರ ಸ್ತ್ರೀಯಲ್ಲಿಯೂ, ಸತಿಯು ಪರ ಪುರುಷನಲ್ಲಿಯೂ ವಿಷಯಾಭಿಲಾಷೆಯುಳ್ಳವರಾದರೆ, ಆಗ ಇರ್ವರೂ ಭೋಗವಿಷಯಕವಾದ ವ್ಯಭಿಚಾರದೋಷವುಳ್ಳವರಾಗುತ್ತಾರೆ. ಭೋಗವಿಷಯಕವಾದ ವ್ಯಭಿಚಾರವೇ ಎಲ್ಲವುಗಳಿಗಿಂತ ನಿಂದ್ಯವಾದುದು ಇದರಿಂದಲೇ ಪಾಪವೂ ಅಪವಿತ್ರತೆಯೂ ವರ್ಣಸಾಂಕರ್ಯವೂ ಹುಟ್ಟಿ, ವ್ಯಭಿಚಾರವು ವರನ್ನು ಧರ್ಮವಿಯೋಗಪ್ರವೃತ್ತರನ್ನಾಗಿ ಮಾಡುವದು ಪುರುಷನು ಪರ ಸ್ತ್ರೀಯನ್ನೂ ಸ್ತ್ರೀಯು ಪರ ಪುರುಷನನ್ನೂ ನೋಡಿ ಮನದಲ್ಲಿ 'ಇವಳೆನಗೆ, ಇವನೆನಗೆ' ಸುಖವಾಗಿ ಚಿಂತಿಸಿದ್ದಾದರೆ, ಆಗ ಉಭಯರೂ ಮಾನಸ ವ್ಯಭಿಚಾರ ದೋಷದಿಂದ ಕಲುಷಿತರಾಗುವರು ಆದಕಾರಣ ಸ್ತ್ರೀ ಪುರುಷರಿಗೆ ಸಂಕ್ಷೇಪವಾಗಿ ಹೇಳಲ್ಪಟ್ಟ ಈ ಉಪದೇಶವು ಧರ್ಮಾರ್ಥಕಾಮ್ಯ ವಿಷಯಗಳಲ್ಲಿ ಪರಸ್ಪರ ಅತಿಕ್ರಮಿಸದ ಇರಬೇಕು ಮುಖ್ಯವಾಗಿ ಮನೋವಾಕ್ಕಾಯಗಳಿಂದಲೂ ದಾಂಪತ್ಯ ಸಂಬಂಧವನ್ನು ಪಾಲನಮಾಡಿಕೊಳ್ಳಬೇಕು ವಾಚಕರೇ ಸತಿಯು ಪರಪುರುಷನ ಅಂಗ ಸ್ಪರ್ಶಸುಖದಿಂದ ದೂರವಾದ ಮಾತ್ರಕ್ಕೆ ಪತಿವ್ರತೆಯಾಗಲಾರಳು ಅವಳು "ಪಾಲಿಗೆ ಬಂದದ್ದು ಪ್ರಭುದತ್ತ ಪಂಚಾಮೃತ' ವೆಂದು ತಿಳಿದು ತನ್ನ ಪತಿಯನ್ನು ನಿಜದೈವವೆಂದು ಪೂಜಿಸುವಳೋ, ಅವಳು ತನ್ನ ಗಂಡನನ್ನು ಏಕಾಗ್ರಚಿತ್ತದಿಂದ ಸೇವಿಸುವಳೋ, ಅನ್ಯಪುರುಷರನ್ನು ಅವಳು ತನ್ನ ಸೋದರರೆಂದು ಭಾವಿಸುವಳೋ ಅವಳು ಪರಪುರುಷನ ಅಂಗಸಂಗ ಸುಖವನ್ನು ಸ್ವಪ್ನದಲ್ಲಿಯೂ ಸಹ ಬಯಸಳೋ, ಅವಳು ತನ್ನ ಗಂಡನಿಗೆ ಇದಿರುತ್ತರಗಳನ್ನಾಡದ ಆತನ ಮನಸ್ಸು ಸ್ವಭಾವ—ಸಮಯಗಳನ್ನರಿತು ವಿವೇಕದಿಂದ ನಡೆಯುವಳೋ, ಅಕಪಟವಾದ ಪತಿಭಕ್ತಿ ಮತ್ತು ದೈವಭಕ್ತಿಗಳಿಂದ ಅವಳ ಹೃದಯವು ತುಂಬಿ ತುಳುಕಾಡುವುದೋ, ಅವಳ ಸುಂದರ ಶರೀರವು ಶಾಂತಿ ದಾಂತಿ ಸತ್ಯ ಭೂತದಯೆ ಇತ್ಯಾದಿ ಸದ್ಗುಣಗಳಿಗೆ ಮಾತೃಸ್ಥಾನವಾಗಿರುವುದೋ ಅವಳೇ ಪತಿವ್ರತೆ ಇಂತಹ ಸಾಧ್ವೀಮಣಿಯನ್ನು ಹೆತ್ತ ತಂದೆ ತಾಯಿಗಳೂ ಕೈಹಿಡಿದ ಪುರುಷನೂ ಧನ್ಯರು! ಪರಮ ಧನ್ಯರು!!

ಅಲ್ಲದೆ ಸ್ತ್ರೀಯು ಧರ್ಮಾರ್ಥಭೋಗ ವಿಷಯಗಳಲ್ಲಿ ಕರ್ತನಾದ ತನ್ನ ನಿಯಾಮಕನಂ ಪ್ರಕೃತಿಸಿದ್ಧವಾದ ನೆರಳಿನಂತೆ ಅನುಸರಿಸಿ ನಡೆಯಬೇಕು, ತನ್ನ ಪುರುಷನನ್ನು ವೃಕ್ಷವಂ ಆಶ್ರಯಿಸುವ ಬಳ್ಳಿಯಂತೆ ಹೊಂದಿರಬೇಕು ತನ್ನ ಪುರುಷನಿಗೆ ಭ್ರಮ ವಿಷಯೋಪೇಕ್ಷೆ ಪ್ರಮಾದಗಳಿಂದ ಅಂಧಕಳಾಗಿ ಕಾಲವಂ ಕಳೆಯಕೂಡದು ಯಾವ ಕಾರಣದಿಂದ ಈಶ್ವರನು ಆ ಹೆಂಗಸಿಗೋಸ್ಕರ ಯಥೇಚ್ಛವಾದ ವಿಮರ್ಶನೆಯುಳ್ಳ ಬುದ್ಧಿಯಂ ಕೊಟ್ಟಿರುವನೋ, ಆ ಕಾರಣದಿಂದಲೇ ತನ್ನ ಪುರುಷನಿಗೆ ಪ್ರಿಯವಂ ಮಾಡುವವಳಾಗಿ, ಅಹಿತ ವಿಷಯದಿಂದ ತಿರುಗಿಸುವವಳಾಗಬೇಕು ಸತ್ಕರ್ಮಸಾಧನದಲ್ಲಿ ಮಂತ್ರಿಯಾಗಿರಬೇಕು ಅಲ್ಲದೆ ಸದ್ಯಃ ಫಲವನ್ನು ಕೊಡತಕ್ಕ ಮಾತನಾಡುವ ದೇವರಾದ ತನ್ನ ಪುರುಷನ ಶರೀರ-ಮಾನ-ಮನಸ್ಸುಗಳನ್ನು ಸಂರಕ್ಷಿಸುವುದಕ್ಕಾಗಿ ಯತ್ನಿಸುತ್ತಿರಬೇಕು ಹೆಚ್ಚೇಕೆ? ಗಂಡನ ಕ್ಷೇಮ ಚಿಂತನೆಯ ವಿಷಯದಲ್ಲಿ ತನ್ನ ಪ್ರಾಣವನ್ನೂ ಸಹ ಲಕ್ಷಿಸಬಾರದು ತಾನೂ ಶರೀರಾಚ್ಛಾದನೆಗಳಿಂದಲೂ ಅಂತಃಕರಣದಿಂದಲೂ ನಿರ್ಮಲವಾಗಿರಬೇಕು. ವಿಕಸಿತ ಹೃದಯವುಳ್ಳವಳಾಗಿ ಗೃಹಕೃತ್ಯಂಗಳಂ ಜಾಣತನದಿಂ ನಡೆಸುವುದರಲ್ಲಿ ವ್ಯಾಪಕವುಳ್ಳವಳಾಗಿರಬೇಕು

ದಾಂಪತ್ಯ ಧರ್ಮಪಾಲನೆಯ ವಿಷಯದಲ್ಲಿ ಸ್ತ್ರೀ ಪುರುಷರಿಗೆ ಚಂಚಲ ಮನಸ್ಸೇ ಒಂದು ದೊಡ್ಡ ಶತ್ರುವಾಗಿರುವುದು ಆದಕಾರಣ ಉಭಯತರೂ ವ್ಯಭಿಚಾರ ವಿಮುಖರಾಗಿ ತಮ್ಮ ಮನಸ್ಸನ್ನು ತಮ್ಮಾಧೀನದಲ್ಲಿಟ್ಟುಕೊಂಡು ತಮ್ಮನ್ನು ತಾವೇ ಅತ್ಯಂತ ಯತ್ನದೊಡನೆ ಕಾಪಾಡಿಕೊಳ್ಳಬೇಕು ಭಗವಂತನು ಯಾವ ಸಂಕಲ್ಪದಿಂದ ಅನ್ಯೋನ್ಯವನ್ನು ಅಧಿಕವಾಗಿ ಯಾವ ಸಂಬಂಧದೊಡನೆ ಕೂಡಿಸಿದನೋ, ಅದನ್ನು ಪ್ರತಿ ಕ್ಷಣವೂ ಅಂತರ್ಯದಲ್ಲಿ ಜಾಗ್ರತವಾಗಿರಿಸಬೇಕು ದಂಪತಿಗಳಿಗೆ ಪರಿಶುದ್ಧವಾದ ಪ್ರೇಮವಿರಬೇಕೆಂಬುದು ಪರಮಾತ್ಮನಿಗೂ ಜಗತ್ಸರ್ವಕ್ಕೂ ಇಷ್ಟವು ಈ ಪ್ರಕಾರವಾಗಿದ್ದರೆ, ದಂಪತಿಗಳಿಗೆ ಮಂಗಳಕರವು, ಇದು ವಂಶಕ್ಕೂ ಕಲ್ಯಾಣಕರವಾದುದು ಈ ವಿಷಯದಲ್ಲಿ ಇರ್ವರಿಗೂ ತುಂಬಾ ಗಮನವಿರಬೇಕು ಸತಿಪತಿಗಳ ಮನಸ್ಸೂ, ಲಕ್ಷ್ಯವೂ, ಸುಖವೂ, ದುಃಖವೂ ಒಂದಾಗಿಯೇ ಇರಬೇಕು ಮತ್ತು ಈ ಎರಡಾತ್ಮಂಗಳು ಪರಶಿವನೊಡನೆ ಬೆರೆತಿರುವ ದಾಸ್ಯಭಾವಂಗಳಂ ವಿವೇಕದಿಂದಾಲೋಚಿಸಿ ಸರ್ವಾಂತಃಕರಣದಿಂದ ಆ ಪರಮಾತ್ಮ ಸಂಬಂಧವಾದ ಆಜ್ಞೆಯಂ ಪರಿಪಾಲಿಸುವುದಕ್ಕೋಸ್ಕರ ಒಮ್ಮೆಕಾಲ ವ್ರತದೊಡನೆ ಕೂಡಿಕೊಂಡವರಾಗಿರಬೇಕು ಸತಿಪತಿಗಳು ಈಶ್ವರಾರಾಧನೆಯನ್ನೂ ಸಾಂಸಾರಿಕ ಕಾರ್ಯವನ್ನೂ ಬಿಟ್ಟು ಪಶುಗಳಂತೆ ನಿದ್ರಾಹಾರ ಮೈಥುನಾದಿಗಳಲ್ಲಿ ಮಗ್ನರಾಗಬಾರದು ವಿಷಯಸುಖವು ತುಚ್ಛವೂ, ಕ್ಷಣಿಕವೂ ದುಃಖಕರವೂ ಎಂದು ತಿಳಿಯಬೇಕು ಆದರೆ ಸತ್ಸಂತತಿಯ ಪ್ರಾಪ್ತಿಗಾಗಿ ಮಾತ್ರ ಇರಬೇಕು ವಾಚಕರೇ, ವಿಷಯಸುಖವು ಮನುಷ್ಯರಿಗೋಸ್ಕರವಾಗಿ ಸೃಷ್ಟಿಸಲ್ಪಟ್ಟಿವೆ ಆದರೆ ಮನುಷ್ಯನು ವಿಷಯಸುಖಂಗಳಿಗಾಗಿ ಆದವನಲ್ಲ ಮನುಷ್ಯ ಜೀವನೋದ್ದೇಶವು ಮಹಾ ಘನವಾದುದು ಕಾರ್ಯಾಧೀನದಿಂದ ಒಂದಾನೊಂದು ಸಮಯದಲ್ಲಿ ಅನ್ಯೋನ್ಯ ವಿಯೋಗವಂ ಹೊಂದಿ ದೇಶಾಂತರಗಳಲ್ಲಿ ಇರುವಾಗಲೂ ದಂಪತಿಗಳಿರ್ವರೂ ಪ್ರಯತ್ನದಿಂದ ಈ ಪವಿತ್ರವಾದ ದಾಂಪತ್ಯ ವ್ರತವನ್ನು ಕಾಪಾಡಿಕೊಳ್ಳಬೇಕು

ಸತಿಪತಿಗಳಿಬ್ಬರೂ ಪರಸ್ಪರ ಕೂಡಿಕೊಂಡ ಪ್ರೇಮವಂ ದೃಢಪಡಿಸುವುದಕ್ಕಾಗಿ ನಿರಂತರ ಪ್ರಯತ್ನಶೀಲರಾಗಿರಬೇಕು ಈ ಅನ್ಯೋನ್ಯವು ದೂಷಣೆಗಾಗಿಯೂ, ವಿರಕ್ತಿಗಾಗಿಯೂ ಸಂಭವಿಸದಂತೆ ಜಾಗರೂಕರಾಗಿರಬೇಕು. ಅನ್ಯೋನ್ಯದಲ್ಲಿ ಕ್ರೋಧವಂ ತೋರಿಸಬಾರದು ಒಬ್ಬರು ಮತ್ತೊಬ್ಬರನ್ನು ಹೀನರನ್ನಾಗಿ ಎಣಿಸಕೂಡದು ಮತ್ತು ಹಿಂಸೆಯಂ ಮಾಡಬಾರದು ಅನ್ಯೋನ್ಯ ಪ್ರೇಮವಂ ಉಪಯೋಗಿಸಬೇಕು ಅನ್ಯೋನ್ಯ ಹಿತವಂ ಅನುಷ್ಠಿಸಬೇಕು ಅನ್ಯೋನ್ಯ ಕ್ಷಮೆಯಂ ಅವಲಂಬಿಸಬೇಕು. ಸಂಸಾರಕ್ಕೆ ಯಾವ ಹಿತಚಿಂತನೆಯನ್ನಾಗಲಿ ಉನ್ನತ ಸಾಧನೆಯನ್ನಾಗಲಿ ಇರ್ವರೂ ಮಾಡಬೇಕು. ಯಾವ

(೩ನೇ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಅಕ್ಟೋಬರ್ ೧೧ನೇ ಸೋಮವಾರ

ರಾಜಧಾನಿಯಲ್ಲಿ ನವರಾತ್ರಮಹೋತ್ಸವ

ಭರತಖಂಡದಲ್ಲಿರುವ ಸನಾತನಮತಾನುಯಾಯಿಗಳೆಲ್ಲರೂ ನವರಾತ್ರಮಹೋತ್ಸವವನ್ನು ಅಸಾಧಾರಣ ವೈಭವದಿಂದ ನೆರವೇರಿಸುತ್ತಿರುವ ವಿಷಯವು ಸುಪ್ರಸಿದ್ಧವೇ ಆಗಿದೆ. ಈ ನಾಡಹಬ್ಬವು ಸರ್ವತ್ರ ಆಚರಿಸಲ್ಪಡುತ್ತಿದ್ದರೂ, ಇದಕ್ಕೆ ಮೈಸೂರು ರಾಜಧಾನಿಯು ಮುಖ್ಯಸ್ಥಾನವಾಗಿ ಮೆರೆಯುತ್ತಿರುವುದು. ಕರ್ನಾಟಕರತ್ನ ಸಿಂಹಾಸನಾಧೀಶರಾದ ಶ್ರೀ ಮೈಸೂರು ಮಹಾಪ್ರಭುಗಳು ಈ ಹಬ್ಬವನ್ನು ಬಹು ಪುರಾತನ ಕಾಲದಿಂದಲೂ ಬಹು ಭಕ್ತಿಯಿಂದಲೂ ಅಸಾಧಾರಣವಾದ ವೈಭವದಿಂದಲೂ ನೆರವೇರಿಸುತ್ತಿರುವುದೇ ಇದಕ್ಕೆ ಮೂಲಕಾರಣವಾಗಿದೆ. ಇಂತಹ ವೈಭವವು ಭರತಖಂಡದ ಯಾವ ಭಾಗದಲ್ಲಿಯೂ ನೆರವೇರುವುದಿಲ್ಲವೆಂದು ಬರೆದರೆ ಅತಿಶಯೋಕ್ತಿಯೆನಿಸದು. ಆದುದರಿಂದಲೇ ಪ್ರತಿ ವರ್ಷವೂ ಭರತಖಂಡದ ಮೂಲೆಮೂಲೆಗಳಿಂದ ಲಕ್ಷಾಂತರ ಜನರು ಈ ಹಬ್ಬದ ವೈಭವವನ್ನು ನೋಡುವುದಕ್ಕಾಗಿ ಮೈಸೂರು ರಾಜಧಾನಿಗೆ ಆಗಮಿಸಿ, ಇಲ್ಲಿ ನಡೆಯುತ್ತಿರುವ ಅನ್ಯಾದೃಶ ವೈಭವಗಳನ್ನು ನೋಡಿ ತಮ್ಮ ನೇತ್ರಗಳನ್ನು ಸಫಲಮಾಡಿಕೊಳ್ಳುತ್ತಿರುವರು.

ಈ ಹಬ್ಬವು ಮುಖ್ಯವಾಗಿ ದೇವಿಯ ಹಬ್ಬವಾಗಿರುವುದು. ಮೈಸೂರು ನಗರದ ಶ್ರೀಚಾಮುಂಡೇಶ್ವರೀದೇವಿಯು ಮುಖ್ಯಕುಲದೇವತೆಯಾಗಿರುವುದರಿಂದ ಮೈಸೂರಿನ ಪ್ರಭುಗಳು ಬಹುಕಾಲದಿಂದ ಈ ಹಬ್ಬವನ್ನು ಮಹಾವೈಭವದಿಂದ ನೆರವೇರಿಸುತ್ತ ಬಂದಿರುವರು. ನಾಲ್ವಡಿ ಶ್ರೀಕೃಷ್ಣರಾಜೇಂದ್ರ ಪ್ರಭುಗಳ ಕಾಲದಲ್ಲಿ ಈ ಹಬ್ಬದ ವೈಭವವು ದಿಗಂತವ್ಯಾಪಿಯಾಗಿತ್ತು. ಆ ಪರಮಾತ್ಮರ ಕಾಲದಲ್ಲಿ ಇದರ ವೈಭವವು ನವವೃದ್ಧಿಯಾಯಿತು. ಪ್ರತಿವರ್ಷದಂತೆ ಈ ವರ್ಷವೂ ಸಹ ಈ ಮಹೋತ್ಸವವು ವಿಶೇಷ ವೈಭವದಿಂದ ನೆರವೇರಿತು. ಈ ಮಹೋತ್ಸವವನ್ನು ನೋಡುವುದಕ್ಕೂ ಮಹಾಪ್ರಭುಗಳಾದ ಶ್ರೀಜಯಚಾಮರಾಜ ಒಡೆಯರ್ ಬಹದ್ದೂರ್‌ರವರ ದರ್ಶನವನ್ನು ಪಡೆಯುವುದಕ್ಕಾಗಿಯೂ ದೂರದೂರದೇಶಗಳಿಂದ ಲಕ್ಷಾಂತರ ಜನರು ಆಗಮಿಸಿದ್ದರು.

ಪ್ರತಿ ವರ್ಷ ಪದ್ಧತಿಯಂತೆ ಆಶ್ವಯುಜ ಶುದ್ಧ ಪ್ರತಿಪದೆಯಿಂದ ನವಮಿಯ ವರೆಗೆ ಅರಮನೆಯಲ್ಲಿ ದರ್ಬಾರು ನಡೆಯುತ್ತಿತ್ತು. ಶ್ರೀಮನ್ಮಹಾರಾಜರವರು ರತ್ನಸಿಂಹಾಸನವನ್ನಾರೋಹಣಮಾಡುತ್ತಿದ್ದರು. ಆಯಾ ದಿನದ ಕಾರ್ಯಕ್ರಮದಂತೆ ಅರಸುಮನೆತನದವರೂ, ಸರಕಾರಿ ಅಧಿಕಾರಿಗಳೂ, ಪ್ರಜಾಪ್ರಮುಖರೂ ಮಹಾಪ್ರಭುಗಳವರಿಗೆ ನಜರನ್ನೊಪ್ಪಿಸುತ್ತಿದ್ದರು. ಅರಮನೆಯು ಪ್ರತಿದಿನವೂ ಲಕ್ಷಗಟ್ಟಲೆ ವಿದ್ಯುದ್ದೀಪಗಳಿಂದ ಬೆಳಗುತ್ತಿತ್ತು. ನವಮಿಯ ದಿವಸ ಯೂರೋಪಿಯನ್ ದರ್ಬಾರು ನಡೆಯಿತು. ಆ ದಿವಸ ಪದ್ಧತಿ ಪ್ರಕಾರ ಬ್ರಿಟಿಷ್ ರೆಸಿಡೆಂಟರು ಆಗಮಿಸಿದ್ದರು. ಅಂದಿನ ಶೋಭೆಯು ವರ್ಣನಾತೀತವಾದುದು ಅಸ್ತು!

ವಿಜಯದಶಮಿ ಶನಿವಾರದ ದಿವಸ ಮಧ್ಯಾಹ್ನ ೫ ಘಂಟೆಗೆ ಜಂಬೂಸವಾರಿಯು ಹೊರಟಿತು. ಆ ಸಮಯದಲ್ಲಿ ಗೌರವಾರ್ಥವಾಗಿ ೨೧ ತೋಪುಗಳು ಹಾರಿಸಲ್ಪಟ್ಟವು. ಮಹಾಪ್ರಭುಗಳವರು ದಿವ್ಯವಸ್ತ್ರಾಭರಣಗಳನ್ನು ಧರಿಸಿಕೊಂಡು, ಆನೆಯ ಮೇಲೆ ಸುಸಜ್ಜಿತವಾಗಿದ್ದ ಸುವರ್ಣದ ಅಂಬಾರಿಯಲ್ಲಿ ಮೂರ್ತಮಾಡಿದರು. ದಾರಿಯುದ್ದಕ್ಕೂ ಲಕ್ಷಾಂತರ ಪ್ರಜೆಗಳು ಸೇರಿ ಈ ಮಂಗಳ ಮಹೋತ್ಸವವನ್ನು ನೋಡಿ ಪರಮಾನಂದಭರಿತರಾದರು. ಉತ್ಸವವು ಅರಮನೆಯ ಉತ್ತರದ್ವಾರದಿಂದ ಚತುರಂಗ ಬಲದೊಡನೆಯೂ, ಸಮಸ್ತ ರಾಜಬಿರುದ್ಧಾವಳಿಗಳೊಡನೆಯೂ, ಸಮಸ್ತ ಸೈನ್ಯದೊಡನೆಯೂ ಹೊರಟು ಸಯ್ಯಾಜಿರಾವ್ ರೋಡ್, ಇರ್ವಿನ್ ರೋಡ್, ದೊಡ್ಡಪೇಟೆ ಚೌಕಗಳ ಮೂಲಕವಾಗಿ ಬನ್ನಿಮಂಟಪಕ್ಕೆ ಬಂದು ತಲಪಿತು. ಮಹಾಪ್ರಭುಗಳವರು ಅಲ್ಲಿ ಯಥಾವಿಧಿಯಾಗಿ ಶಮೀಪೂಜೆಯನ್ನು ನೆರವೇರಿಸಿ ದಿವಾನರೇ ಮೊದಲಾದ ಮುಖ್ಯ ಸರಕಾರಿ ಅಧಿಕಾರಿಗಳಿಗೆ ಶಮಿಯನ್ನು ಅನುಗ್ರಹಿಸಿದರು.

ಮೆರವಣಿಗೆಯು ರಾತ್ರಿ ಪುನಃ ಬನ್ನಿಮಂಟಪದಿಂದ ಹೊರಟಿತು. ರಾಜಮಾರ್ಗವು ವಿದ್ಯುದ್ದೀಪಮಾಲೆಗಳಿಂದ ಅಲಂಕೃತವಾಗಿತ್ತು. ನೆರೆದಿದ್ದ ಪ್ರಜಾಸಮುದಾಯವೆಲ್ಲವೂ ರಾತ್ರಿಯುತ್ಸವದ ಮಹಾವೈಭವವನ್ನು ನೋಡಿ ಆನಂದಸಾಗರದಲ್ಲಿ ಮುಳುಗಿತು. ಮಹಾಪ್ರಭುಗಳವರ ಗಾಂಭೀರ್ಯವೂ ಶಾಂತಮುಖಮುದ್ರೆಯೂ ಸರ್ವರನ್ನೂ ಮುಗ್ಧರನ್ನಾಗಿ ಮಾಡಿದವು. ಸಕಲ ಸದ್ಗುಣಮಂಡಿತರಾದ ನಮ್ಮ ಮಹಾಪ್ರಭುಗಳವರ ಕಾಲದಲ್ಲಿ ಮೈಸೂರು ದೇಶವು ಮೊದಲಿಗಿಂತಲೂ ಅಧಿಕವಾದ ಕೀರ್ತಿಯನ್ನು ಪಡೆದು ಮೆರೆಯುವಂತಾಗಲೆಂದೂ ಶ್ರೀಜಗದೀಶ್ವರನ ಅನುಗ್ರಹದಿಂದ ಇವರ ಧವಳಕೀರ್ತಿಯು ಸರ್ವತ್ರ ಬೆಳಗಲೆಂದೂ ಆ ಜಗನ್ನಿಯಾಮಕನನ್ನು ಅನನ್ಯಸಾಧಾರಣ ಭಕ್ತಿಭಾವದಿಂದ ಭಜಿಸುತ್ತೇವೆ.

ಯುದ್ಧವಾರ್ತೆ

ಇಟಲಿ ಡಿವಿಜನ್‌ಗಳ ಗತಿ

ಇಟಲಿಗೂ ಮಿತ್ರದೇಶಗಳಿಗೂ ಒಪ್ಪಂದವಾದಾಗ ೪೨ ಇಟಲಿ ಡಿವಿಜನ್‌ಗಳು ಹೊರಗೆ ನಾನಾ ದೇಶಗಳಲ್ಲಿದ್ದವು. ೧೭ ಡಿವಿಜನ್‌ಗಳು ಫ್ರಾನ್ಸಿನಲ್ಲೂ ೩೦ ಡಿವಿಜನ್‌ಗಳು ಬಾಲ್ಕನ್ಸ್‌ನಲ್ಲೂ ಇದ್ದವು. ಜರ್ಮನರು ಆ ಇಟಲಿ ಸೈನಿಕರನ್ನೆಲ್ಲ ಈಗ ಗುಲಾಮರಂತೆ ದುಡಿಸಲು ಇಟಲಿಗೆ ಅಟ್ಟುತ್ತಿದ್ದಾರೆ.

ಫಿನ್‌ಶಾಫೆನ್ ಮಿತ್ರರ ಕೈಸೇರಿತು

ಜಪಾನರ ಬಲಮೂಲವಾದ ಫಿನ್‌ಶಾಫೆನ್ ಎಂಬುದು ಮಿತ್ರರ ವಶವಾಯಿತೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ. ಮಿತ್ರರಿಗೆ ಉತ್ತರ ನ್ಯೂಗಿನಿಯಾದಲ್ಲಿರುವ ಮುಖ್ಯಬಲದ ಸ್ಥಲವೊಂದು ಸಿಕ್ಕಿದಂತಾಯಿತು. ಮದಾಂಗ್ ಮತ್ತು ಬಿಸ್ಮಾರ್ಕ್ ಕ್ಷೇತ್ರಗಳಲ್ಲಿರುವ ಜಪಾನರನ್ನು ಸದೆಬಡಿಯಲು ಇದರಿಂದ ಬಹಳ ಅನುಕೂಲವಾಗಿದೆ.

ಕರ್ನಲ್ ನಾಕ್ಸರ ಅಭಿಪ್ರಾಯ

ಕ್ರಿಸ್‌ಮಸ್‌ಗೆ ಮುಂಚೆ ಯುದ್ಧ ಮುಗಿಯುವುದೆಂಬ ಅಭಿಪ್ರಾಯಕ್ಕೆ ಸ್ವಲ್ಪವೂ ಬುಡವಿಲ್ಲ ಎಂಬುದಾಗಿ ಅಮೇರಿಕಾದ ನೌಕಾ ಶಾಖೆಯ ಕಾರ್ಯದರ್ಶಿಗಳಾದ ಕ॥ ನಾಕ್ಸ್ ಅಲ್ಜಿಯರ್ಸಿನಿಂದ ಅಮೇರಿಕಾಕ್ಕೆ ತೆರಳುವ ಮುನ್ನ ಸುದ್ದಿಗಾರರಿಗೆ ತಿಳಿಸುತ್ತ ಯೂರೋಪಿನ ಕೋಟೆಯ ಮೇಲೆ ಈಗತಾನೇ ಹಲ್ಲಾ ಆರಂಭವಾಗಿದೆ. ಅಟ್ಲಾಂಟಿಕ್‌ನಲ್ಲಿ ಯು ಬೋಟ್‌ಗಳ ಅವಾಂತರ ಮತ್ತೆ ಜೋರಾಗಿದೆ. ನಾವಿನ್ನೂ ಯೂರೋಪಿನ ಕೋಟೆಯನ್ನು ಗೆದ್ದಿಲ್ಲ. ನಾವು ಯೂರೋಪಿಗೆ ಕಾಲಿಟ್ಟಿದ್ದೇವೆ ಅಷ್ಟೆ. ಬಹಳ ಉಗ್ರವೂ ಹಾನಿಕರವೂ ಆದ ಕದನವು ನಮ್ಮ ಮುಂದಿದೆ” ಎಂದು ತಿಳಿಸಿದರು.

ನೇಪಲ್ಸ್ ಹೋಟೆಲಲ್ಲಿ ಸ್ಫೋಟಕ ವಸ್ತು

ನೇಪಲ್ಸ್ ನಗರದ ಹೋಟೆಲೊಂದರಲ್ಲಿ ಜರ್ಮನರು ೭೦೦೦ ಪೌಂಡು ತೂಕದ ಸ್ಫೋಟಕ ವಸ್ತುಗಳನ್ನು ಒಂದು ಕಡೆ ಬಚ್ಚಿಟ್ಟು ಹೋಗಿದ್ದರು. ಇದು ಪತ್ತೆಯಾಯಿತು. ಇದರಿಂದ ಅಮೆರಿಕನ್ ಐದನೆಯ ಸೇನೆಯ ದಂಡನಾಯಕರಾದ ಮಾರ್ಕ್ ಕ್ಲಾರ್ಕ್ ಮುಂತಾದ ದೊಡ್ಡ ಅಧಿಕಾರಿಗಳ ಪ್ರಾಣಗಳು ಉಳಿದವೆಂದು ಹೇಳಬಹುದು. ಜ॥ ಕ್ಲಾರ್ಕ್‌ರವರು ತಮ್ಮ ಮುಖ್ಯ ಕಚೇರಿಯನ್ನು ಅಲ್ಲಿ ಸ್ಥಾಪಿಸುವ ಉದ್ದೇಶದಿಂದ ಎಂಜನಿಯರುಗಳನ್ನು ಭವನದ ಪರೀಕ್ಷೆಗೆ ಕಳುಹಿಸಿದ್ದರು. ಆಗ ಇದು ಗೊತ್ತಾಯಿತು.

ಚೀಣಾದಲ್ಲಿ ಜಪಾನರ ಮುಂದೋಟ

ಪೂರ್ವ ಚೀಣಾ ಪ್ರಾಂತ್ಯವಾದ ಕಿಯಾಂಗ್ಸುವಿನ ಉಗ್ರವಾದ ಹೋರಾಟ ನಡೆಯುತ್ತಿದೆ. ಚೆಕಿಯಾಂಗ ಮತ್ತು ಅನ್ವೆ ಎಂಬಲ್ಲಿಗೆ ಜಪಾನರು ಹೆಚ್ಚಿನ ಸೈನ್ಯಬ ತಂದು ಮುಂದುವರಿಯುತ್ತಿದ್ದಾರೆ ಎಂದು ಚೀಣಾ ಪ್ರ ಟನೆ ಹೇಳುತ್ತದೆ. ದಕ್ಷಿಣ ಚೀಣಾದಲ್ಲಿ ಜಪಾನು ತನ ವಿಮಾನ ಬಲವನ್ನು ಶೇ॥ ೨೦೦ ೩೦೦ ರಷ್ಟು ಹೆಚ್ಚಿಸಿ ಯೆಂದು ಚೀಣಾದಲ್ಲಿರುವ ಅಮೆರಿಕನ್ ವಿಮಾನ ಬಲ ನಾಯಕರು ತಿಳಿಸಿದ್ದಾರೆ. ಹೊಸ ಜಪಾನ ವಿಮಾನಗಳ ಚೆನ್ನಾಗಿ ಕೆಲಸ ಮಾಡುತ್ತಿವೆ. ವೈಮಾನಿಕರು ಸ ಉತ್ತಮ ಬಗೆಯ ಶಿಕ್ಷಣ ಪಡೆದಿದ್ದಾರೆ.

ಯುದ್ಧದ ಪರಿಸ್ಥಿತಿ ಕುರಿತು ಡಾ॥ ಗೋಬೆಲ್ಸ್‌ರ ವಿವರಣೆ

ಡಾ॥ ಗೋಬೆಲ್ಸ್‌ರವರು ಯುದ್ಧ ಸ್ಥಿತಿಯನ್ನು ವಿವ ಸುತ್ತಾ ನಾವು ಕೀರ್ತಿಯ ಶಿಖರವೇರಬೇಕಾಗಿದ್ದ ಕಷ್ಟತಮವಾದ ಮತ್ತು ತೊಂದರೆಗಳಿಂದ ಕೂಡಿದ ತ ಲನ್ನು ದಾಟಲೇಬೇಕು. ರಕ್ಷಣೆಯ ಏರ್ಪಾಡುಗಳ ಉತ್ತಮಗೊಂಡಿರುವುದರಿಂದ ಶತ್ರುವಿಮಾನಗಳು ಬಹ ಹಾನಿಯಾಗುತ್ತಿವೆ. ಅಮೇರಿಕದ ‘ಹಾರಾಡುವ ಕೋಟೆ ಗಳು ಹಾರಾಡುವ ‘ಶವದ ಪೆಟ್ಟಿಗೆ’ ಗಳಾದುವು! ನಾ ಸಂಗ್ರಾಮವನ್ನು ಜಯಪ್ರದವಾಗಿ ಮುಂದುವರಿಸ ಅಡಚಣೆಯುಂಟುಮಾಡುವಂತಹ ರೀತಿಯಲ್ಲಿ ಶತ ಗಳು ನಮ್ಮ ಸಂಗ್ರಾಮವನ್ನು ಸೃಷ್ಟಿಕಾರ್ಯಕ್ಕೆ ತೊಂ ರೆಯುಂಟುಮಾಡಿಲ್ಲ ಎಂದು ಹೇಳಿದರೆಂದು ಜರ್ಮನ ರೇಡಿಯೋ ತಿಳಿಸಿದೆ.

ಇಟಲಿಯ ಯುದ್ಧರಂಗ

ಮಿತ್ರ ಟ್ಯಾಂಕ್ ಪಡೆಗಳೂ ಸೈನಿಕರೂ ನೇಪಲ ವಾಟೆ ಉತ್ತರದಲ್ಲಿರುವ ಮೈದಾನ ಪ್ರದೇಶದಲ್ಲಿ ಮುಂ ದರಿಯುತ್ತಿದ್ದಾರೆ. ನಗರದಿಂದ ತಪ್ಪಿಸಿಕೊಂಡುಹೋ ಐದು ಜರ್ಮನ್ ಡಿವಿಜನ್‌ಗಳನ್ನು ಬೆನ್ನಟ್ಟಿ ಹೋ ತ್ತಿದ್ದಾರೆ. ಅಲ್ಲಿಂದ ಉತ್ತರಕ್ಕೆ ೨೦ ಮೈಲಿ ದೂರದಲ್ಲಿರು ವಾಲ್ಟರ್ನೋ ನದಿಯ ಬಳಿ ನಾಜಿಗಳು ಆತುರಾತುರವಾ ರಕ್ಷಣೆಯ ಏರ್ಪಾಡುಗಳನ್ನು ಮಾಡಿಕೊಳ್ಳುತ್ತಿದ್ದಾ ಬನೆವೆಂಟೋ ಕಡೆಗೆ ಜ॥ ಕ್ಲಾರ್ಕ್‌ರವರ ಪಡೆಗ ಮುಂದುವರಿಯುತ್ತಿವೆ. ನೇಪಲ್ಸ್‌ನಿಂದ ತಪ್ಪಿಸಿಕೊಂ ಓಡುತ್ತಿರುವ ೫ ನಾಜಿ ಪಡೆಗಳಿಗೆ ವಾಲ್ಟರ್ನೋ ನ ಯನ್ನು ಮುಟ್ಟಲು ಎರಡು ಮಾರ್ಗಗಳಿವೆ. ಅವುಗ ಮೇಲೆ ಮಿತ್ರ ವಿಮಾನಗಳು ಬಾಂಬುಗಳನ್ನು ಸುರಿ ತ್ತಿವೆ.

ಇಟಲಿಯ ಸೈನಿಕರನ್ನು ಜರ್ಮನಿಗೆ ಸಾಗಿಸಿದರು

ಕಳೆದ ವಾರವೆಲ್ಲ ಸಾವಿರಗಟ್ಟಲೆ ಇಟಲಿ ಯೋಧರನ ಜರ್ಮನಿಗೆ ಸಾಗಿಸಿಕೊಂಡು ಹೋದರೆಂಬ ಹೃದಂ ವಿದ್ರಾವಕ ದೃಶ್ಯವನ್ನು ಸೋಫಿಯಾ ಪ್ರಜೆಗಳು ಕಂಡರ ಇಟಾಲಿಯನರ ಕಾಲಲ್ಲಿ ಬೂಟ್ಸುಗಳಿರಲಿಲ್ಲ. ಅವ ತಪ್ಪಿಸಿಕೊಂಡಾರೆಂಬ ಭಯದಿಂದ ಜರ್ಮನರು ಬೂಟ ಗಳನ್ನೆಲ್ಲ ಕಿತ್ತುಕೊಂಡಿದ್ದರು. ಅನೇಕರು ಅಂಗಾಲ ಹರಕು ಬಟ್ಟೆಗಳನ್ನೂ ಮಫ್ಲರನ್ನೂ ಸುತ್ತಿದ್ದರು. ಜರ ನಿಗೆ ಕೊಂಡೊಯ್ಯಲು ಅವರನ್ನು ಗೂಡ್ಸ್‌ಗಾಡಿಗಳಿಗ ಮತ್ತು ಮುಚ್ಚಳವಿಲ್ಲದ ದನಕರುಗಳನ್ನು ತುಂಬು ವ್ಯಾಗನ್ನುಗಳಿಗೂ ತುಂಬಲಾಯಿತು. ಯುಗೊಸ್ಲೇವಿಯ ಆಲ್ಬೇನಿಯಾ, ಗ್ರೀಸ್ ಮುಂತಾದ ಕಡೆ ಇದ್ದ ೩ ಇಟಾಲಿಯನ್ ಡಿವಿಜನ್‌ಗಳನ್ನು ನಿಶ್ಶಸ್ತ್ರರನ್ನಾ ಮಾಡಿ ಸೈನಿಕರನ್ನೆಲ್ಲ ಜರ್ಮನಿಗೆ ಕರೆದೊಯ್ಯುತ್ತಿದ್ದಾ

ಬಿಳಿರಷ್ಯಾದಲ್ಲಿ ಉಗ್ರಸಂಗ್ರಾಮ

ನೀವ್ಹೋ ಪೆಟ್ರೋವಿಸ್ಕನಿಂದ ಹಿಡಿದು ಕೀವ್‌ವ ನೀಪರ್ ನದಿಯ ಎರಡುಕಡೆಗಳಲ್ಲಿಯೂ ಸಾವಿರಾ ಜರ್ಮನ್ ಮತ್ತು ರಷ್ಯನ್ ಫಿರಂಗಿಗಳು ಸಂಗ್ರಾ

ನಡೆಸುತ್ತಿವೆ ಕೀವ್ ಮತ್ತು ನೀಪ್ರೋಪೆಟ್ರೋವಿಸ್ಕ್ ನಗರಗಳ ಬಾಗಿಲುಗಳಲ್ಲಿ ಉಗ್ರವಾಗಿ ಹೋರಾಟವಾಗುತ್ತಿದೆ ಕೀವ್ ಮೇಲೆ ಬಿಳಿಯ ರಷ್ಯದಲ್ಲಿ ೨೦೦ ಮೈಲಿ ಅಗಲದಲ್ಲಿ ಮತ್ತೊಂದು ಉಗ್ರಕದನ ನಡೆಯುತ್ತಿದೆ ವೈಟೆಬ್ಸ್ಕ ಕಡೆಗೆ ರಷ್ಯನ್ ಸೇನೆಗಳು ಬಿರುಸಿನಿಂದ ನುಗ್ಗುತ್ತಿವೆ ೧೧ ದಿನಗಳಿಂದ ರಷ್ಯನರು ಏಕಪ್ರಕಾರವಾಗಿ ಹೋರಾಡುತ್ತಿದ್ದಾರೆ ೯ ರಂಗಗಳಲ್ಲಿ ಮುಂದೆ ನುಗ್ಗಿದ್ದಾರೆ ಹವಾಮಾನವು ಕೆಟ್ಟು, ಹೊಡೆದಾಟಕ್ಕೆ ತಡೆಯಾಗುವ ಮುನ್ನ, ಮುಂದೆ ನುಗ್ಗಬೇಕೆಂಬುದು ರಷ್ಯನರ ಸಂಕಲ್ಪವಾಗಿದೆ

ಮಿತ್ರ ಜನಾಂಗಗಳಲ್ಲಿ ಭೇದಹುಟ್ಟಿಸುವ ಯತ್ನ

ಮುಂದೆ ನಡೆಯಲಿರುವ ಮೂರು ದೇಶಗಳ ಸಮ್ಮೇಳನವನ್ನು ಮುರಿಯಲು ಅಥವಾ ಮಿತ್ರ ದೇಶಗಳಲ್ಲಿರುವ ಪರಸ್ಪರ ಅನುಮಾನ ಶಂಕೆಗಳನ್ನು ಬಲಪಡಿಸಲು ಜರ್ಮನರು ಎರಡು ಬಗೆಯ ಪ್ರಚಾರ ನಡೆಸುತ್ತಿದ್ದಾರೆ ನಾಜಿಗಳು ೧೯೩೯ ರಲ್ಲಿ ಗಡಿಗೆ ಹಿಮ್ಮೆಟ್ಟುವರೆಂದೂ ಅನಂತರ ಜರ್ಮನಿ ರಷ್ಯಾ ಶಾಂತಿ ಒಪ್ಪಂದವಾಗುವುದೆಂದೂ ಮೊದಲು ಗೊಬೆಲ್ಸ್ ಸುದ್ದಿ ಹರಡಿದ್ದ ಈಗ ನಾಜಿಗಳು ತಟಸ್ಥದೇಶವೊಂದರ ಮೂಲಕ ಸಂಧಾನ ನಡೆಸುತ್ತಿರುವರೆಂದು ಸುದ್ದಿ ಹರಡಲಾಗಿದೆ ಇಷ್ಟೇ ಅಲ್ಲ ಇಟಲಿಯು ಯಾವ ಮೂಲದ ಸಹಾಯದಿಂದ ಶಾಂತಿ ಸಂಧಾನ ನಡೆಸುತ್ತಿದೆಯೋ ಅದೇ ಮೂಲದಲ್ಲಿಯೇ ಜರ್ಮನರೂ ಸಹ ಸಂಧಾನವಾರಂಭಿಸಿದ್ದಾರೆ ಅದು ಹೇಗೇ ಇರಲಿ ಜರ್ಮನಿಯು ಯಾವ ಷರತ್ತೂ ಇಲ್ಲದ ಶರಣಾಗತವಾದ ಹೊರತು ಮಿತ್ರ ದೇಶಗಳು ಸಂಧಾನ ಮಾಡಲಾರವು

ನೀಪರ್ ವ್ಯೂಹವನ್ನು ನಾಜಿಗಳು ರಕ್ಷಿಸುವರು

ಮಳೆ ಬೀಳುತ್ತಿರುವುದರಿಂದ ಪಶ್ಚಿಮಕ್ಕೆ ರಷ್ಯನರ ಓಟ ಸ್ವಲ್ಪ ನಿಧಾನವಾಗಿದೆ ಬಿಳಿ ರಷ್ಯದಲ್ಲಿ ಜರ್ಮನರ ವ್ಯೂಹಕ್ಕೆ ರಷ್ಯನರು ಮೂರು ಕಡೆ ಪೆಟ್ಟು ಹಾಕಿದ್ದಾರೆ ಗೋಮೆಲ್, ಮೊಗಿಲೇವ್ ಮತ್ತು ವೈಟೆಬ್ಸ್ಕಗಳಿಗೆ ವಿಪತ್ತುಂಟಾಗಿವೆ ಎರಡು ಕಡೆಯವರೂ ಬಲಯುತ ಟ್ಯಾಂಕ್ ಮತ್ತು ಕಾಲಾಳು ದಳಗಳನ್ನು ಯುದ್ಧಕ್ಕೆ ಕಳುಹಿಸುತ್ತಿದ್ದಾರೆ ರಷ್ಯಾದಲ್ಲಿ ಜರ್ಮನರು ರಚಿಸಿಕೊಂಡಿರುವ ಅತ್ಯಂತ ಬಲಯುತವಾದ ವ್ಯೂಹದ ಹೊರಭಾಗದಲ್ಲೀಗ ಅವರು ಹೋರಾಡುತ್ತಿದ್ದಾರೆ ರಷ್ಯನರಿಂದ ಆವರಿಸಲ್ಪಡುವ ಭೀತಿ ಅಷ್ಟಾಗಿ ಇಲ್ಲ ಈಗ ನಾಜಿಗಳು ರಷ್ಯನರ ಮೇಲೆ ಉಗ್ರವಾಗಿ ಬೀಳುತ್ತಿದ್ದಾರೆ ವೈಟೆಬ್ಸ್ಕರಂಗದಲ್ಲಿ ಮೂರು ಕಡೆ ರಷ್ಯನರು ನಾಜಿ ವ್ಯೂಹವನ್ನೊಡೆದು ನುಗ್ಗಿದ್ದಾರೆ ಎಷ್ಟು ನಷ್ಟವಾದರೂ ನೀಪರ್ ನದಿಯನ್ನು ರಕ್ಷಿಸಿಕೊಳ್ಳಬೇಕೆಂದು ಜರ್ಮನರು ನಿರ್ಧರಿಸಿದ್ದಾರೆಂಬುದಾಗಿ ಜರ್ಮನ್ ರೇಡಿಯೋ ಒಸಿದೆ

ಬಾಲ್ಕನ್ ಮುತ್ತಿಗೆಗೆ ಸಿದ್ಧತೆ

ಇಟಲಿಯ ಪೂರ್ವ ತೀರದಿಂದ ಬಾಲ್ಕನ್ಸ್ ಕ್ಷೇತ್ರಕ್ಕೆ ಮುತ್ತಿಗೆ ಹಾಕಲು ಸಿದ್ಧತೆ ನಡೆದಿದೆಯೆಂದು ಗೊತ್ತಾಗಿದೆ ಅಮೇರಿಕದ ಏಳನೇ ಸೇನೆಯಲ್ಲಿದ್ದ ಹೊಸದಾಗಿ ಬಂದಿರುವ ಅನೇಕ ಮಂದಿ ಯೋಧರು ಇಟಲಿಯ ಏಡ್ರಿಯಾಟಿಕ್ ತೀರದುದ್ದಕ್ಕೂ ನೆರೆದಿದ್ದಾರೆ ಈ ಸೇನೆ ಬಾರಿಯಿಂದ ಫಾಗ್ಗಿಯಾವರೆಗೆ ವ್ಯಾಪಿಸಿದೆಯಂತೆ ಅದರ ಉಪಯೋಗಕ್ಕೆ ೬ ಉತ್ತಮ ವಿಮಾನ ನಿಲ್ದಾಣಗಳು ದೊರೆತಿವೆ ಮೂರು ದೇಶಗಳ ಸಮ್ಮೇಳನ ನಡೆದ ಮೇಲೆ ಬಾಲ್ಕನ್ಸ್ ಮುತ್ತಿಗೆ ಆರಂಭವಾಗಲಿದೆ ಡಾಲ್ಮೇಷಿಯನ್ ತೀರದಲ್ಲಿ ರಾತ್ರಿ ಕಾಲಗಳಲ್ಲಿ ಮಿತ್ರ ದೇಶಗಳು ರಹಸ್ಯವಾಗಿ ಲಾರಿಗಳನ್ನೂ ಸಂಗ್ರಾಮ ವಸ್ತುಗಳನ್ನೂ ತಂದಿಳಿಸಿ, ಯುಗೋಸ್ಲೇವಿಯಾದ ದೇಶಭಕ್ತರಿಗೆ ಕಳುಹಿಸುತ್ತಿದ್ದಾರೆ ಬಾಲ್ಕನ್ಸಿಗೆ ಜರ್ಮನರು ಮತ್ತೆ ಬಲಯುತ ಸೇನೆಗಳನ್ನು ಕಳುಹಿಸಿದ್ದಾರೆ ಸೆಪ್ಟೆಂಬರ್ ೨೯ರಿಂದೀಚೆಗೆ ಸೈನಿಕರ ಓಡಾಟಕ್ಕೆ ಅವಕಾಶ ಮಾಡಿಕೊಡಲು ಸೋಫಿಯಾದಿಂದ ಸಾಲೋನಿಕಾಕ್ಕೆ ಎಲ್ಲ ಸಿವಿಲಿಯನ್ ರೈಲ್ವೆ ಪ್ರಯಾಣವನ್ನು ನಿಲ್ಲಿಸಲಾಗಿತ್ತೆಂದು ಹೇಳಲಾಗಿದೆ.

ರಷ್ಯನರ ಹೊಸವಿಜಯ

ರಷ್ಯನರು ಹೊಸ ಮುತ್ತಿಗೆಯನ್ನು ಆರಂಭಿಸಿದ್ದಾರೆ ನೀಪರ್ ನದಿಯ ಪ್ರದೇಶದಲ್ಲಿ ನಾಜಿವ್ಯೂಹವನ್ನೊಡೆದಿದ್ದಾರೆ ಟೌಮನ್ಸ್ ನಗರ ವಶವಾಯಿತು ಕಾಲಿನಿನ್ ರಂಗದಲ್ಲಿ ರಷ್ಯನರು ಎರಡು ದಿನಗಳ ಕಾಲ ಉಗ್ರವಾಗಿ ಹೋರಾಡಿ ನೆವೆಲ್ ಎಂಬ ಮುಖ್ಯವಾದ ನಗರವನ್ನು ಹಿಡಿದರು. ಲೆನಿನ್‌ಗ್ರಾಡಿಗೂ ವಾರ್ಸಾಕಡೆಗೂ ಹೋಗುವ ರೈಲ್ವೆ ಮಾರ್ಗಗಳನ್ನು ಇದು ಹತೋಟಿಯಲ್ಲಿಡುತ್ತದೆ

ಮಾಸ್ಕೋವಿಗೆ ಏಡನ್ನರ ಪ್ರಯಾಣ

ಮಾಸ್ಕೋದಲ್ಲಿ ನಡೆಯಲಿರುವ ಮೂರು ದೇಶಗಳ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಭಾಗವಹಿಸಲು ಶ್ರೀ ಆಂಥೋನಿ ಏಡನ್ನರು ಇನ್ನು ಕೆಲವು ದಿನಗಳಲ್ಲೇ ಮಾಸ್ಕೋವಿಗೆ ಹೋಗುವ ನಿರೀಕ್ಷೆ ಇದೆ ಇಟಲಿ ಮತ್ತು ಬಾಲ್ಕನ್ ದೇಶಗಳ ರಾಜಕೀಯ ಪರಿಸ್ಥಿತಿ, ಯುದ್ಧಾನಂತರ ಬ್ರಿಟನ್ ಅಮೆರಿಕಾ ರಷ್ಯಾಗಳ ಸಹಕಾರಕ್ಕೆ ಒಂದು ವ್ಯವಸ್ಥೆ ಏರ್ಪಡಿಸುವುದು, ಜರ್ಮನಿಯನ್ನೂ ಅದರ ಕಡೆ ನಿಂತು ಹೋರಾಡಿದ ದೇಶಗಳನ್ನೂ ಹೇಗೆ ನಿಭಾಯಿಸಬೇಕೆಂಬ ವಿಚಾರ —ಇವುಗಳು ವಿಮರ್ಶೆಯಾಗುವುವು ಕಟ್ಟಕಡೆಗೆ ಚರ್ಚಿಲ್ ರೂಜ್‌ವೆಲ್ಟ್ ಮತ್ತು ಸ್ಟಾಲಿನ್ನರ ಒಪ್ಪಿಗಾಗಿ ವಿವರವಾದ ವ್ಯವಸ್ಥೆಯನ್ನು ಸಚಿವರು ಸಿದ್ಧಗೊಳಿಸುವರೆಂದು ಹೇ ಹೇಳಲಾಗಿದೆ

ಇಟಲಿ ಯುದ್ಧರಂಗ

ಇಟಲಿಯಲ್ಲಿ ಬಹುಮಟ್ಟಿಗೆ ಜರ್ಮನ್ ಸೇನೆಯೆಲ್ಲ ವಾಲ್ಟರ್ನೋ ವ್ಯೂಹವನ್ನು ಬಿಟ್ಟು ಉತ್ತರಕ್ಕೆ ತೆರಳಿವೆಯೆಂದು ವಿಚಿ ರೇಡಿಯೋ ತಿಳಿಸಿತು ಏಡ್ರಿಯಾಟಿಕ್ ತೀರದಲ್ಲಿರುವ ಟರ್ಮೋಲಿ ಎಂಬಲ್ಲಿಗೆ ಎಂಟನೆಯ ಸೇನೆಯ ಸೈನಿಕರು ಬಂದಿಳಿದಿದ್ದಾರೆಂದು ಅಧಿಕಾರಯುತವಾಗಿ ತಿಳಿಸಲಾಗಿದೆ ಮಿತ್ರ ಸೇನಾನಿಗಳ ಚಮತ್ಕಾರಪೂರ್ಣವಾದ ಕಾರ್ಯವನ್ನು ನಾವಿಲ್ಲ ಇಟಲಿಯಲ್ಲಿ ನೋಡಬಹುದಾಗಿದೆ ಜರ್ಮನರ ನೆಲೆ ರೋಂ ಕಡೆಗೆ ಹಿಂದೆ ಸರಿಯುತ್ತಿದ್ದ ಮಿತ್ರಸೇನೆ ಮುಂದೆ ನುಗ್ಗುತ್ತಿದೆ ಶತ್ರು ಸೈನಿಕರ ಹಿಂದುಗಡೆ ಮಿತ್ರ ಸೈನಿಕರು ಇಳಿಯುತ್ತಿದ್ದಾರೆ ವಾಲ್ಟರ್ನೋ ನದೀ ವ್ಯೂಹದಲ್ಲಿ ನಿಂತು ಹೋರಾಡಬೇಕೆಂಬ ಜರ್ಮನರ ಆಸೆ ನಿಷ್ಫಲವಾಯಿತು ಶತ್ರುಗಳ ಪ್ರತಿಭಟನೆ ಜೋರಾಗಿದೆ ಇದೆ ಎಷ್ಟನೆ ಸೇನೆಯ ಸೈನಿಕರು ಟರ್ಮೋಲಿಯಲ್ಲಿ ಇಳಿಯುತ್ತಲೇ ಅವರನ್ನು ಸೇರಲು ಭೂಸೇನೆ ಮುಂದೆ ಹೊರಟಿತು ಅದು ಅಲ್ಲಿಗೆ ಹೋಗುವ ವೇಳೆಗೆ ಜರ್ಮನರ ಪ್ರತಿಮುತ್ತಿಗೆಗಳನ್ನೆಲ್ಲ ಹಿಮ್ಮೆಟ್ಟಿಸಿ ಮಿತ್ರ ಸೈನಿಕರು ಪರಿಸ್ಥಿತಿಯನ್ನು ಪೂರ್ಣವಾಗಿ ಹತೋಟಿಗೆ ತಂದಿದ್ದರು ಕೆಲವು ಶತ್ರುಗಳು ಸೆರೆಸಿಕ್ಕಿದರು ಬೆನೆವೆಂಟೋ ನದಿಯ ಉತ್ತರದಲ್ಲಿರುವ ಕಾಲೋರ್ ನದಿಯನ್ನು ಮಿತ್ರ ಸೈನಿಕರು ದಾಟಿದ್ದಾರೆ ಜನರಲ್ ಅಲೆಕ್ಸಾಂಡರ್‌ರವರ ಸೇನೆಯ ಪಶ್ಚಿಮ ಮತ್ತು ಪೂರ್ವ ಭಾಗಗಳು ರೋಂ ನಗರದಿಂದ ಕ್ರಮವಾಗಿ ೧೨೦ ೧೫೦ ಮೈಲಿ ದೂರದಲ್ಲಿವೆ ಕೇಂದ್ರರಂಗದಲ್ಲಿ ರೋಂ ಕಡೆಗೆ ಶತ್ರುಸೇನೆ ಚಲಿಸುತ್ತಿರುವುದು ವಿಮಾನ ಪರಿಶೀಲನೆಯಿಂದ ಕಂಡುಬಂದಿದೆ ಬೆನೆವೆಂಟೋ ಹಿಡಿದ ಅಮೆರಿಕನರಾಗಲೇ ಮುಂದೆ ನುಗ್ಗುತ್ತಿದ್ದಾರೆ ಆದರೆ ರಸ್ತೆಗಳನ್ನೂ ಸೇತುವೆಗಳನ್ನೂ ಶತ್ರುಗಳು ಪೂರ್ಣವಾಗಿ ನಾಶಮಾಡಿದ್ದಾರೆ ಮಿತ್ರಪಡೆಗಳ ಎಂಜನಿಯರುಗಳು ೨೪ ಗಂಟೆಯೂ ಅವುಗಳ ಪುನರ್ನಿರ್ಮಾಣ ಕಾರ್ಯದಲ್ಲಿ ತೊಡಗಿದ್ದಾರೆ ಐದನೆಯ ಸೇನೆಯ ರಂಗದಲ್ಲಿ ಜಡಿ ಮಳೆ ಬೀಳುತ್ತಿದೆ ಉತ್ತರ ಇಟಲಿಯಲ್ಲಿ ಮೈದಾನದ ಕಡೆಗೆ ನುಗ್ಗುತ್ತಿರುವ ಎಂಟನೆಯ ಸೇನೆ ಈಗ ಏಡ್ರಿಯಾಟಿಕ್ ತೀರದಲ್ಲಿ ಅರ್ಧದೂರದ ಮೇಲೆ ಬಂದಿದೆ

ಮಲಯಾದಲ್ಲಿ ನಿವಾಸಿಗಳಾದ ನಾಲ್ಕುಮಂದಿ ಭಾರತೀಯರು ಜಪಾನರಿಂದ ಹಣಪಡೆದು ಭಾರತದಲ್ಲಿ ಶತ್ರು ಪರವಾಗಿ ಪ್ರಚಾರಮಾಡುತ್ತಿದ್ದರೆಂದು ಅವರಿಗೆ ಮರಣದಂಡನೆ ವಿಧಿಸಲಾಯಿತು

(೨ನೆಯ ಪುಟದಿಂದ ಮುಂದುವರಿದಿದೆ)

ಸಂಸಾರಸ್ಥರನ್ನಾಗಲಿ ಪರಸ್ಪರರು ಮಾತಾಪಿತೃ ಭಾವನೆಯಿಂದಲೂ, ಸೋದರ ಸೋದರೀ ಭಾವದಿಂದಲೂ, ಭ್ರಾತೃತ್ವಭಗಿನೀತ್ವ ಭಾವನೆಯಿಂದಲೂ ಸ್ನೇಹಿಸತಕ್ಕದ್ದು ಉಭಯತರು ಸಂಪದ್ವಿಪತ್ತುಗಳಲ್ಲಿ ಚಲನೆಯಿಲ್ಲದೆ ಸಂಸಾರಾಭಿವೃದ್ಧಿಯ ಕಡೆಗೆ ಪೂರ್ಣದೃಷ್ಟಿಯುಳ್ಳವರಾಗಿರಬೇಕು ಇದಲ್ಲದೆ ದಂಪತಿಗಳಿಬ್ಬರೂ ಪವಿತ್ರವಾದ ಶಾಂತಿಯೂ, ಶುಭ್ರವಾದ ಬುದ್ಧಿಯೂ, ಧರ್ಮವೂ, ಸತ್ಸಂತತಿಯೂ, ಆಧ್ಯಾತ್ಮಬಲವೂ ಪ್ರಾಪ್ತಿಯಾಗುವುದಕ್ಕೋಸ್ಕರ ಆ ಮಂಗಳಸ್ವರೂಪನಾದ ಪರಮಾತ್ಮನಂ ಶರಣುಹೊಂದಬೇಕು ಯಾವ ಸ್ಥಳದಲ್ಲಿ, ಯಾವ ಸಮುದಾಯದಲ್ಲಿ ಇಂತಹ ದಂಪತಿಗಳಿರುವರೋ ಅಲ್ಲಿ ಸುಖವೂ, ಶಾಂತಿಯೂ, ಶುಭಪರಂಪರೆಯೂ ನಿರಂತರವಾಗಿ ಅಭಿವೃದ್ಧಿಹೊಂದುವುವು

ರೋಗಿಯ ಉಪಚಾರ

[illegible] ಪಟ್ಟದಸ್ವಾಮಿಗಳು, ಬೃಹನ್ಮಠ
[illegible]

ಮನುಷ್ಯನಿಗೆ ರೋಗಬಾಧೆಯಾಗಬೇಕಾದರೆ ಎರಡು ಪ್ರಕಾರವಾಗಿ ಆಗುವುದೆಂದು ಹಿಂದಿನ ಋಷಿವರ್ಯರು ಅನುಭವದಿಂದ ಬರೆದಿಟ್ಟಿದ್ದಾರೆ ಹೇಗೆಂದರೆ ಕೊಳಕ ನೀರು ಇಲ್ಲವೆ ಒಳ್ಳೇ ರೀತಿಯಿಂದ ಹುಳಿ ಮೊದಲಾದ ಪದಾರ್ಥಗಳನ್ನು ಸೇವಿಸುವುದರಿಂದಲೂ ಜಾಗರಣೆಯನ್ನು ಅತಿಯಾಗಿ ಮಾಡುವುದರಿಂದ ಪಚನಕ್ರಿಯೆಯು ಸರಿಯಾಗಿ ಆಗದಿರುವುದರಿಂದಲೂ ಜ್ವರವು ಬರುತ್ತದೆ ಇವು ಕೇವಲ ಆಹಾರವಿಹಾರದಿಂದಾಗುವ ರೋಗಗಳು ಇನ್ನೊಂದು ಬಗೆಯ ಬೇನೆಯೆಂದರೆ ಕರ್ಮಜನ್ಯವೆಂದು ಕರೆಯಬಹುದು ಮಹಾರೋಗ, ಬಿಳುಪು ಇತ್ಯಾದಿರೋಗಗಳು ಇವುಗಳಲ್ಲಿ ಆಹಾರವಿಹಾರದಿಂದುಂಟಾಗುವ ರೋಗಗಳು ಬಹುತರವಾಗಿ ಎಲ್ಲರಿಗೂ ಆಗುವ ಸಂಭವವಿದೆ ಆಗ ನಾವು ಅವುಗಳ ಪರೀಕ್ಷೆಮಾಡಿ ಆ ರೋಗದ ನಿವಾರಣೆಗಾಗಿ ಔಷಧವನ್ನು ತೆಗೆದುಕೊಳ್ಳಬೇಕಾಗುತ್ತದೆ ಔಷಧದ ಜೊತೆಗೆ ಉಪಚಾರದ ಮಹತ್ವವು ಬಹಳವಿರುತ್ತದೆ ಯದ್ಯಪಿ ಔಷಧದ ಯೋಜನೆಯು ಸರಿಯಾಗಿದ್ದರೂ ಆಹಾರವಿಹಾರಗಳಲ್ಲಿ ವ್ಯತ್ಯಯವಾಗುತ್ತಿದ್ದರೆ ಆ ರೋಗವು ನಷ್ಟವಾಗಲಾರದು ಹೇಗೆಂದರೆ ಕಫಜನ್ಯಸನ್ನಿಪಾತದಲ್ಲಿ ನೆಲವು ತೇವವಾಗಿದ್ದು ಮಲಗಿಕೊಳ್ಳಲಿಕ್ಕೆ ಜಾಗೆಯಿಲ್ಲದಿದ್ದರೆ ಆ ರೋಗಿಯು ನೆಟ್ಟಗಾಗುವ ಬಗೆ ಹೇಗೆ? ಇಲ್ಲವೆ ಅಂತಹ ಪ್ರಸಂಗದಲ್ಲಿ ಮೋಸಂಬಿಯಂಥ ಕಫವಾಗುವ ಹಣ್ಣುಕೊಟ್ಟರೆ ಮತ್ತಷ್ಟು ಕಫವಾಗಿ ರೋಗಿಯು ಶೀಘ್ರವಾಗಿ ಯಮಸದನಕ್ಕೆ ಹೋಗುವ ಪಾಳಿ ಬರಬಹುದು ಆದಕಾರಣ ಯಾವಾಗಲೂ ರೋಗಿಯ ಹಾಸಿಗೆಯು ಸ್ವಚ್ಛವಾಗಿ ಇರಬೇಕು ಆತನ ಅರಿವೆಗಳನ್ನು ದಿನದಿನವೂ ಬದಲಾಯಿಸಬೇಕು ರೋಗಿಯು ಮಲಗಿರುವ ಕೋಣೆಯನ್ನು ಯಾವಾಗಲೂ ಸ್ವಚ್ಛವಾಗಿಡಬೇಕು ಮತ್ತು ಆದಷ್ಟು ಬೆಚ್ಚಗೆ ಇರುವ ವ್ಯವಸ್ಥೆಯನ್ನು ಮಾಡಿಟ್ಟಿರಬೇಕು ಆಗಾಗ ಕೋಣೆಯಲ್ಲಿ ದಶಾಂಗವೇ ಮೊದಲಾದ ಸುಗಂಧ ದ್ರವ್ಯಗಳ ಹೊಗೆಯನ್ನು ಹಾಕಬೇಕು ಅದರಿಂದ ಅಲ್ಲಿರುವ ಕ್ರಿಮಿಗಳು ನಾಶವಾಗಿ ಆರೋಗ್ಯವು ಹೆಚ್ಚುತ್ತ ಹೋಗುತ್ತದೆ

ಆಹಾರದ ವಿಷಯಕವಾದ ನಮ್ಮ ಹಿಂದಿನ ವಾಗ್ಭಟ, ಚರಕ, ಸುಶ್ರುತ ಮೊದಲಾದ ಆಚಾರ್ಯರು ಒಳ್ಳೆಯ ಅನುಭವದ ಸಂಗತಿಗಳನ್ನು ಬರೆದಿದ್ದು ಅವುಗಳ ಅನುಭವವು ನಮಗೆ ಈಗ ಎಷ್ಟೋ ರೀತಿಯಿಂದ ಕಂಡು ಬರುತ್ತಿದೆ ಪಿತ್ತಜ್ವರವು ಬಂದಾಗ ಮನುಷ್ಯನಿಗೆ ದಾಹವಾಗುವ ಸಂಭವವಿದೆ ಏಕೆಂದರೆ ಪಿತ್ತದ ಹೊರತು ಉಷ್ಣತೆಯಿಲ್ಲ, ಉಷ್ಣತೆಯನ್ನು ಬಿಟ್ಟು ಜ್ವರವಿಲ್ಲ ಆದುದರಿಂದ ಅಂತಹ ಪ್ರಸಂಗದಲ್ಲಿ ಕೇವಲ ನೀರು ಕೊಡದೆ ಒಂದು ಸೇರು ನೀರಲ್ಲಿ ಜೀರು, ಚಂದನ, ಶುಂಠಿ, ಕಲ್ಲ ಸಬ್ಬಸಿಗೆ, ಬಾಳದ ಬೇರು ಇವುಗಳ ಚೂರ್ಣ ಒಂದು ಹಿಡಿಯಷ್ಟು ಹಾಕಿ ನೀರು ಕುದಿಸಿ ಸೋಸಿ ಕುಡಿಯಲು ಕೊಟ್ಟರೆ ಜ್ವರ, ನೀರಡಿಕೆಗಳೆರಡೂ ದೂರವಾಗುತ್ತವೆ ಜ್ವರದೊಳಗೆ ಅತಿಸಾರವಿದ್ದ ಪಕ್ಷದಲ್ಲಿ ಪೃಶ್ನಿಪರ್ಣಿ, ಬಲಾ, ಬಿಲ್ವ, ಶುಂಠಿ, ನೀಲಿ, ಕಮಲ, ಕೊತ್ತುಂ

ಬಳಿಕಾಳು ಇವುಗಳ ಚೂರ್ಣವನ್ನು ಗಂಜಿಯೊಳಗೆ ಹಾಕಿ ಕುದಿಸಿ ಕುಡಿಯಲು ಕೊಡಬೇಕು ಇದರಿಂದ ಜಠರಾಗ್ನಿಯು ಪ್ರದೀಪ್ತವಾಗುವುದಲ್ಲದೆ ಅತಿಸಾರವು ಕಡಿಮೆಯಾಗಿ ಜ್ವರಬಾಧೆಯೂ ಆಯಾಸವೂ ಇಲ್ಲದಂತಾಗುತ್ತದೆ ಜ್ವರದಲ್ಲಿ ಬಿಕ್ಕು, ಶೂಲೆ, ದಮ್ಮು ಕೆಮ್ಮು ಈ ಉಪದ್ರವಗಳು ಇದ್ದರೆ, ಲಘುಪಂಚಮೂಲ ಒಂದೆಲೆಹೊನ್ನೆ ಮೂರೆಲೆಹೊನ್ನೆ ಗುಳ್ಳ ಹೆಗ್ಗುಳ್ಳ ನೆಲ ಇವುಗಳ ಬೇರಿನ ಚೂರ್ಣವನ್ನು ಹಾಕಿ ಗಂಜಿ ತಯಾರುಮಾಡಿಕೊಡಬೇಕು ವಿಶೇಷವಾಗಿ ಕಫವಿಕಾರವಿದ್ದರೆ ಬೃಹತ್ಪಂಚಮೂಲಬಿಲ್ವ, ಶಿವನಿ, ಸರುವಲ ಪಾದರಿ ಟೊಕಲಿ ಇವುಗಳ ಬೇರಿನ ಚೂರ್ಣ ಶುಂಠಿ ಹಿಪ್ಪಲಿ ಇವುಗಳ ಚೂರ್ಣದಲ್ಲಿ ಗಂಜಿ ತಯಾರಿಸಿಕೊಡಬೇಕು ಜ್ವರದಲ್ಲಿ ಮಲಾವರೋಧವಿದ್ದರೆ ಹಿಪ್ಪಲಿ ನೆಲ್ಲಿಕಾಯಿ, ಅಳಲೆಯಕಾಯಿ ಇವುಗಳ ಚೂರ್ಣವನ್ನು ತುಪ್ಪದಲ್ಲಿ ಹುರಿದು ಗಂಜಿಯಲ್ಲಿ ಹಾಕಿ ಕುದಿಸಿ ಕುಡಿಯಲು ಕೊಡಬೇಕು ಇದರಿಂದ ಶೌಚವು ಸಾಫಾಗಿ ಆಗುತ್ತದೆ ಅಥವಾ ಚವಕ, ಹಿಪ್ಪಲಿ, ಮೂಲ ಕರಿದ್ರಾಕ್ಷೆ, ನೆಲ್ಲಿಕಾಯಿ, ಶುಂಠಿ ಇವುಗಳಲ್ಲಿ ತಯಾರಿಸಿದ ಗಂಜಿಯನ್ನು ಕೊಡಬೇಕು ಮತ್ತು ಗುಳ್ಳ ಹೆಗ್ಗುಳ್ಳ ನೆಲ್ಲಿಕಾಯಿ, ಅಳಲೆಯಕಾಯಿಗಳಲ್ಲಿ ತಯಾರಿಸಿದ ಗಂಜಿಯನ್ನು ಕೊಟ್ಟರೂ ಅಡ್ಡಿಯಿಲ್ಲ ಜ್ವರವು ಬಂದಾಗ ಬೆವರು ಬರುವುದು ಹಿತಕರವಾಗಿರುತ್ತದೆ ಅದರಲ್ಲಿ ಹೆಚ್ಚು ಪ್ರಮಾಣದಿಂದ ಬೆವರು ಬರುತ್ತಿದ್ದರೆ ಅದು ಮೂತ್ರದ ಅಶಕ್ತತೆಯನ್ನು ತಂದುಕೊಡುತ್ತದೆ ಬೆವರು ಏನೂ ಬಾರದಿದ್ದು ನಿದ್ರೆಯಿಲ್ಲದ ಪಕ್ಷದಲ್ಲಿಯೂ ನೀರಡಿಕೆ ಅತಿಯಾಗಿದ್ದಲ್ಲಿಯೂ ಜ್ವರರೋಗಿಗೆ ಕಲ್ಲುಸಕ್ಕರೆ ನೆಲ್ಲಿಕಾಯಿ, ಶುಂಠಿ ಇವುಗಳಲ್ಲಿ ತಯಾರಿಸಿದ ಗಂಜಿಯನ್ನು ಕೊಡಬೇಕು ಜ್ವರದಲ್ಲಿ ನೀರಡಿಕೆ, ವಾಂತಿ ದಾಹ ಇವು ಇದ್ದರೆ ಕಲ್ಲುಸಕ್ಕರೆ, ಜೋರಿತಪ್ಪಲು, ದ್ರಾಕ್ಷಿ, ಸಾರಿವಾ (ಉಪಳಸರಿ), ಜೇರು, ಚಂದನ ಇವುಗಳಿಂದ ತಯಾರಿಸಿದ ಗಂಜಿಯನ್ನು ಕೊಡಬೇಕು

ಶ್ರೀಗಂಗಾಮಹಾಮಾತೆಯ ಕೈಲಾಸಗಮನ ಚರಮಶ್ಲೋಕಾವಳಿ

ಆವಳ್ತಾಂ ನಿಜಧರ್ಮಕರ್ಮಕನಿಶಂ ಪ್ರಾಣಂಗಳಿಂ
ತೆತ್ತಳ್ ಆವಳ್ತಾಂ ಸತತಂ ದರಿದ್ರಜನಕಂ ಸೌಕರ್ಯ
ಮಂ ಕೊಟ್ಟಳ್ ಆವಳ್ತಾಂ ಪರಮಾನುಭಾವ ರಸ
ದೊಳ್ ಸತ್ಕಾಲಮಂ ನೀಗಿದಳ್ ಆವ ಳ್ತಾನಿರ ಲೋಕ
ದ್ಧನಮವಳೀ ಗಂಗಾಮಹಾಮಾತೆ ತಾಂ ೧

ಪರನಂ ಸರ್ವೇಶನಂ ಪಂಚಾಕ್ಷರಿಯಿಂ ಪರಿಸುತ್ತ
ಲನ್ಯವಿಷಯಭ್ರಮೆಯಂ ತೊರೆದು ಪತಿ ಮಡಿಯಲ್
ನಿಸ್ಸಿಂ ಶರಣರ್ಕಳಿರವು ಮರಣಮೋಹಂಬಡದೆಡೆ ೨

ಸೋಮಸಮಾನದೀನ ಜನರ್ಕ್ಕೆ ಸದ್ಗುರುಸನ್ನಿಧಾ
ನದೊಳ್ ಸೋಮಧರಾರ್ಚಿತರ್ ನಲಿದೊಡಂಬಡ
ವೇದವಶಾಸುಸಾರದಿಂ ಸೋಮವಿಭೂಷದೀಕ್ಷೆಯನೆ
ತಾಳು ಸದಾಚರಣಂಗಳೆ ನೀಂ ಸೋಮನ ಪಾದ
ಮೊಳ್ ಮತಿಯನ್ನಿರಿಸು ನಿನ್ನಯ ಪುಣ್ಯ ಕೆಲ್ಲೆಯೋಂ ೩

ಎಲ್ಲಿಯ ಪವಮಾನಾಶನ ನಲ್ಲಿಯ ಗಮನಮದ
ದಲ್ಲಿಯ ಕೆಳೆಕಂ ಮೋ ಕಲ್ಲಿಯ ಕ್ಷೇತ್ರದ ದರ್ಶನ
ಮೆಲ್ಲಿಯ ಮೃತಿನಿನಗೆ ಒಂದೊದಗಿತೆಲೆ ಜನನೀ ೪

ಎಪ್ಪತ್ತುಮೂರು ಒರಿಸಕ್ಕೆ | ಮುಪ್ಪಿನೊಡಲೊಂದ
ನುಪಮಗಿರಿಜಾ ವ್ರತದಿಂ ಮುಪ್ಪುರಹರ ಸೇವೆಯ
ಪ್ಪೋಲ್ ತಪ್ಪದೆಸಗಿದೌ ಸಮಸ್ತ ಕಾಯ [illegible] ನೀಂ ೫

ಗುರುಮಾರ್ಗಾಚರಣಾನ್ವಿತೆ ವರಗಂಗಾಂಬಿಕೆ
ಸುಸ್ಥಿತೆ ಪ್ರಾಣೆಯು ಮೋಡೇಂ ಪುರಹರನಿರ್ಮನ್ನ [illegible]
ಧರಣಿಯೊಳ್ ಪೂರ್ವಮುಳಿತರ ಜನಮಂಡಲವಕಂ ೬

ಪಂಚತೆಯಿಂದಿದ ಪಾವನ ಪಂಚಮ ಪಾಚಕನ
ವಿಲೀನ ಭವದಾತ್ಮನಿಗಂ ಪಂಚಕ್ಲೇಶ ವಿನಾಶಕ
ಪಂಚಪ್ರಭುಗಳ್ ಸಮಂದು ನೀಡುಗೆ ಸುಖಮಂ ೭

ಸಿದ್ಧಾಂತಶಿಖಾಮಣಿ

ವೀರಶೈವಮತಪ್ರವರ್ತಕರು ಜಗದ್ಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದವರಿಗೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಗೋಚರವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಗೊಳಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ ಈ ಗ್ರಂಥವು ಒಟ್ಟು ೪೪೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ **ಲೀಲಾತ್ಮಕವಾದ** ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೨ ರೂಪಾಯಿ.**

ಮ್ಯಾನೇಜರ್ **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ಕೃಷ್ಟವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೨ನೆಯ ಆವೃತ್ತಿ ಸಂಕ್ಷೇಪ)	೧ ಆಣೆ
ಪಂಚಪಿಂಡ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಾಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ–ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೭ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯ ಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩| ಆಣೆ
ಮಾಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೨ ಆಣೆ
ಶಿವಾನಂದಸಿದ್ಧಾಂತದರ್ಪಣ	೧೨ ಆಣೆ
ಶ್ರೀಕಂಠಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ ೩೦ [illegible] ಫೋಟೊ [illegible])	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ–ಕಾರಣಾಗಮ [illegible] ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	२ रु.
वीरशैवरत्न (मराठी)	१ रु
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ.
षट्स्थलकारिका (संस्कृत)	२ आ

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮರವರ್ಗಳ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೮ನೇ ಅಕ್ಟೋಬರ್ ೧೯೪೩ [ಸಂಚಿಕೆ ೩೪

ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಪಲ್ಲಕ್ಕಿಮಹೋತ್ಸವ, ಅಜ್ಜಂಪುರ

ಪದ್ಧತಿ ಪ್ರಕಾರ ಇದೇ ಸ್ವಭಾನು ನಾಮ ಸಂ|| ಆಶ್ವಯುಜ ಶುದ್ಧ ೧ ಗುರುವಾರದಿಂದ ಶುದ್ಧ ೯ ಗುರುವಾರದವರೆಗೆ ಈ ಗ್ರಾಮದಲ್ಲಿ ಪ್ರತಿದಿವಸವೂ ಪ್ರಾತಃಕಾಲ ಗಜಾಶ್ವಾದಿಗಳ ಪೂಜೆಯೂ ಅಗ್ರೋದಕಾಸನವನವೂ ಸಾಯಂಕಾಲ ೭ ಘಂಟೆಗೆ ಸರಿಯಾಗಿ ದರ್ಬಾರ್ ಮಂಟಪದಲ್ಲಿ ಶ್ರೀ ಜಗದ್ಗುರುಗಳವರ ಸಿಂಹಾಸನಾರೋಹಣವೂ ವೈದಿಕರ ವೇದಪಠನವೂ ಬಾಲಕಿಯರ ಮಂಗಲಗೀತೆಯೂ ಭಾಷಣಕಾರರ ಭಾಷಣಗಳೂ ನಡೆದು ನೆರೆದು ಮುಜರೆಗಳಾಗಿ ಜಯಘೋಷದೊಡನೆ ಸಭೆಯು ವಿರಮಿಸಲ್ಪಡುತ್ತಿದ್ದಿತು ಸರ್ಕಾರಾಧಿಕಾರಿಗಳಿಂದಲೂ ಪಂಡಿತರಿಂದಲೂ ಕವಿಗಳಿಂದಲೂ ಪ್ರಸಿದ್ಧ ಕೀರ್ತನಕಾರರಿಂದಲೂ ಲೌಕಿಕ ಪದವೀಪ್ರತಿಷ್ಠಿತರಿಂದಲೂ ಆಸ್ಥಾನವು ಶೋಭಿಸುತ್ತಿದ್ದಿತು ಸ್ಥಳಪರಸ್ಥಳಗಳಲ್ಲಿರುವ ಸ್ವಮತ ಪರಮತಗಳ ಸ್ತ್ರೀ ಪುರುಷರಾದಿಯಾಗಿ ಸಾವಿರಾರು ಜನರು ಸಭೆಗೆ ಬಂದು ಶ್ರವಣಾನಂದ ತುಂದಿಲರಾಗಿ ಮಹಾಗುರು ಸಂದರ್ಶನವನ್ನು ಹೊಂದಿ ಧನ್ಯರಾಗುತ್ತಿದ್ದರು. ಮೊದಲದ ಶ್ರೀ ಗಂಗಾಧರ ಶಿವಾಚಾರ್ಯರು, ಬೆಟ್ಟದಹಳ್ಳಿ ಶ್ರೀ ಚೆನ್ನವೀರದೇವರು, ಸ್ಕೂಲ್ ಮಾಸ್ಟರ್ ಶ್ರೀ ಮರುಳಸಿದ್ದಯ್ಯನವರು, ಮುದ್ದೇನಹಳ್ಳಿ ಮೇಲಿನಮಠ ಇವರುಗಳ ಸರಸ ಭಾಷಣಗಳೂ ಕೀರ್ತನಕೇಸರಿ ಶ್ರೀ ಗುಬ್ಬಿ ಶಿವರುದ್ರಶಾಸ್ತ್ರಿಗಳವರ ಮತ್ತು ಕೀರ್ತನ ಕಂಠೀರವ ಶ್ರೀ ದೊಡ್ಡಬಳ್ಳಾಪುರದ ಶಿವದೇವಶಾಸ್ತ್ರಿಗಳ ಸುಶ್ರಾವ್ಯ ಸಂಕೀರ್ತನೆಗಳೂ ಅಜ್ಜಂಪುರದ ಎಸ್ ಪಿ ವೆಂಕಟಾಚಲ ಗುಪ್ತರ ಇಂಪಾದ ಗಾಯನವೂ ಸುಬ್ರಹ್ಮಣ್ಯಶೆಟ್ಟರವರ ಹಾರ್ಮೋನಿಯಂ ವಾದನ ಕೌಶಲ್ಯವೂ ಸಹ ಸಮಸ್ತ ಜನರ ಚಿತ್ತಾಕರ್ಷಣೀಯಗಳಾಗಿದ್ದವು ವಿಜಯದಶಮಿ (ತಾ|| ೮-೧೦-೪೩ ನೆಯ) ಶುಕ್ರವಾರ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಶ್ರೀ ಜಗದ್ಗುರುಗಳವರ ರತ್ನ ಖಚಿತ ಕಿರೀಟಧಾರಣ ಪೂರ್ವಕ ಸುವರ್ಣ ರಜತಾಂದೋಳಿಕಾ ಮಹೋತ್ಸವವು ಸಕಲ ಬಿರುದಾವಳಿಗಳೊಡನೆ ವಿವಿಧ ವಾದ್ಯಗಳಿಂದಲೂ ಶ್ರೀ ಜಗದ್ಗುರು ಪಂಚಾಚಾರ್ಯರ ಭಜನೆಗಳಿಂದಲೂ ಜಯಘೋಷದಿಂದಲೂ ತಳಿರುತೋರಣಗಳಿಂದಲಂಕೃತವಾಗಿದ್ದ ರಾಜವೀಧಿಗಳಲ್ಲಿ ಹೊರಟು ಬನ್ನಿಯ ಮಂಟಪಕ್ಕೆ ಚಿತ್ತೈಸಿ ವಿಧ್ಯುಕ್ತವಾಗಿ ಪೂಜಾಕಾರ್ಯಗಳು ನಡೆಯಲ್ಪಟ್ಟನಂತರ ಮಹೋತ್ಸವವು ದರ್ಬಾರ್ ಮಂಟಪಕ್ಕೆ ಆಗಮಿಸಿದೊಡನೆಯೇ ಶ್ರೀ ಜಗದ್ಗುರುಗಳವರು ಸಿಂಹಾಸನಾರೋಹಣಮಾಡಿ ತಮ್ಮ ದಿವ್ಯ ಕೃಪಾಕಟಾಕ್ಷದಿಂದ ಧರ್ಮತತ್ವಪ್ರಬೋಧಾಮೃತವನ್ನು ಸರ್ವರಿಗೂ ದಾನಮಾಡಿಸಿ ಪುನೀತರನ್ನಾಗಿ ಮಾಡಿದರು. ಈ ಸಮಯದಲ್ಲಿ ಸ್ಥಳಪರಸ್ಥಳಗಳ ಭಕ್ತಮಹಾಶಯರು ತಮ್ಮ ತಮ್ಮ ಶಕ್ತ್ಯನುಸಾರವಾಗಿ ಗುರುಕಾಣಿಕೆಯನ್ನರ್ಪಿಸಿ ಕೃತಾರ್ಥರಾದರು.

ಸ್ಥಳೀಕ ವ್ಯವಸ್ಥಾಪಕ ಸಮಿತಿಯ ಅಧ್ಯಕ್ಷರಾದ ಪಟ್ಟೇರ ಸಿದ್ದಪ್ಪನವರು ಸಮಯೋಚಿತ ಭಾಷಣವನ್ನು ಮಾಡಿದ ತರುವಾಯ ಜನಾಬ್ ಖಾಜೀ ಸಾಹೇಬರವರು ಗುರುಭಕ್ತಿ ವಿಷಯಕವಾಗಿ ಕನ್ನಡ ಉರ್ದು ಭಾಷೆಗಳಲ್ಲಿ ಸ್ವಾರಸ್ಯವಾಗಿ ಭಾಷಣ ಮಾಡಿದರು. ಅನಂತರ ಹೊಳಲ್ಕೆರೆ ಶ್ರೀ ಗುರುಬಸವಶಾಸ್ತ್ರಿಗಳಿಂದ ಶಿವಸಂಕೀರ್ತನೆಯು ಅನುವಾದ ಮಾಡಲ್ಪಟ್ಟಿತು

ಶ್ರೀ ಗುರು ಸಾರ್ವಭೌಮರವರು ಈ ಶುಭದಿವಸದಲ್ಲಿ ಹೊನ್ನಾಳಿ ತಾಲ್ಲೂಕು ಚಿನ್ನಿಕಟ್ಟೆ ಗ್ರಾಮದ ಪಟೇಲ್ ಈಶ್ವರಪ್ಪಗೌಡರವರಿಗೆ "ಗುರುಭಕ್ತಕೇಸರಿ" ಎಂಬ ಪ್ರಶಸ್ತಿಯನ್ನು ಸುವರ್ಣಪದಕ ಶಾಲಜೋಡಿಗಳೊಡನೆ ಫಲಮಂತ್ರಾಕ್ಷತಾಪೂರ್ವಕ ದಯಪಾಲಿಸಿದರು ಹಾಗೂ ಮರ್ವೇಗಟೆ ಬುಕ್ಕಾಂಬುಧಿ ಚಿಕ್ಕಾನಂಗಲ ಈ ಗ್ರಾಮಗಳ ಭಜನ ಸಂಘಗಳಿಗೆ ರಜತ ಪದಕಗಳನ್ನು ಆಶೀರ್ವದಿಸಿದರು. ಮತ್ತು ಆಸ್ಥಾನ ವಿದ್ವಾಂಸ ವೇ|| ಪಂಡಿತ ಶಂಕರಶಾಸ್ತ್ರಿಗಳವರಿಗೂ ಭಾಷಣಕಾರರಿಗೂ ಕೀರ್ತನಕಾರರಿಗೂ ಸಂಗೀತಗಾರರಿಗೂ ದ್ರವ್ಯರೂಪ ಸಂಭಾವನೆಗಳನ್ನು ಶಾಲುಗಳನ್ನೂ ಅನುಗ್ರಹಿಸಿದರು

ಈ ಮಹೋತ್ಸವಕ್ಕಾಗಿ ನಾನಾಭಾಗಗಳಿಂದ ಸುಮಾರು ೧೦ ೧೫ ಸಾವಿರದವರೆಗೆ ಜನರು ಸೇರಿ ಜಗದಾಚಾರ್ಯರ ದರ್ಶನಭಾಗ್ಯವನ್ನು ಹೊಂದಿ ಬಗೆಬಗೆಯಾಗಿ ಸ್ತುತಿಸಿ ನಲಿದಾಡಿದರು ಪೋಲೀಸ್ ಉಸ್ತುವಾರಿಯೂ ಸ್ವಯಂಸೇವಕರ ಸಿಸ್ತೂ ಸಮರ್ಪಕವಾಗಿದ್ದವು ಪಟ್ಟೇರ ಸಿದ್ದಪ್ಪನವರು ಹೋಗಿ ತಿಪ್ಪಯ್ಯನವರು ಆನಂದರಾವ್‌ರವರು ([illegible]) ಇನ್ನೂ ಮುಂತಾದವರೂ ಸಹ ಅತ್ಯಂತವಾಗಿ ತೋರಿಸಿದ ದಕ್ಷತೆಯೂ, ವಿಚಕ್ಷಣೆಯೂ ಶ್ಲಾಘನೀಯವಾಗಿದ್ದುವು ಈ ಗ್ರಾಮವು ಪ್ರಾಚೀನ ರೀತಿಧರ್ಮಗಳ ನೆಲೆಮನೆಯಾಗಿ ಸಕಲ ಮತೀಯರೂ ಪರಸ್ಪರ ಸೌಹಾರ್ದಭಾವದಿಂದ ಕೂಡಿ ಪ್ರತಿಯೊಂದು ಕಾರ್ಯಕ್ಕೂ ಸಹಕರಿಸುತ್ತಿರುವುದನ್ನು ನೋಡಿದರೆ ಅಜ್ಜಂಪುರ (ಆಜ್ಞಾಪುರ) ಎಂಬ ನಾಮವು ಅನ್ವರ್ಥವಾಗಿರುವುದು ಸಹಜವೇ ಆಗಿದೆ ಇಂತಹ ಕಠಿನಕಾಲದಲ್ಲೂ ಯಾವುದಕ್ಕೂ ಕೊರತೆಯಿಲ್ಲದಂತೆ ಮಹೋತ್ಸವವು ವಿಶೇಷ ವೈಭವದಿಂದ ನಡೆಯಬೇಕಾದರೆ ಗುರುಕೃಪಾಲಬ್ಧವಾದ ಭಕ್ತರ ದೃಢಭಕ್ತಿಪೂರಿತ ಕಾರ್ಯಾಸಕ್ತಿಯೇ ಕಾರಣವೆನ್ನಬೇಕಾಗಿದೆ ಮಹಾಪೀಠದ ಜೀರ್ಣೋದ್ಧಾರಕ್ಕಾಗಿ ವಾಗ್ದಾನ ಮಾಡಿದ್ದವರಲ್ಲಿ ಕೆಲವರು ಸ್ವಲ್ಪಭಾಗ ಹಣವನ್ನು ಕಂಡೊಪ್ಪಿಸಿದರು ಮಹಾಸನ್ನಿಧಾನದ ಮೊಕ್ಕಾಂ ಇನ್ನೂ ಸ್ವಲ್ಪದಿವಸ ಇಲ್ಲಿಯೇ ಇರುವುದಾಗಿದೆ.

ಸನಾತನಧರ್ಮಾಭಿಮಾನಿ

ಶ್ರೀ ಸಿದ್ಧಿವಿನಾಯಕ ಪೂಜಾಮಹೋತ್ಸವ

ಶಿವಮೊಗ್ಗ ಜಿಲ್ಲೆ ಶಿಕಾರಿಪುರದ ತಾಲ್ಲೂಕು ಸಾಲೂರು ಗ್ರಾಮದ ಕೆಂಚಪ್ಪನವರ ಶಿವಲಿಂಗಪ್ಪಶೆಟ್ಟರು ತಮ್ಮ ಮನೆಯಲ್ಲಿ ಪದ್ಧತಿಯ ಮೇರೆಗೆ ತಾ|| ೩-೯-೧೯೪೩ ರಲ್ಲಿ ಶ್ರೀ ಸಿದ್ಧಿವಿನಾಯಕನನ್ನು ಸ್ಥಾಪಿಸಿ ಮಂಗಳಾರತಿ ಫಲಸ್ನೈವೇದ್ಯಾದಿಗಳಿಂದ ಪೂಜಿಸಿ ಗಣಾರಾಧನೆಯನ್ನು ನಡಸಿ ಬಡಬಗ್ಗರಿಗೂ ಅತಿಥಿ ಅಭ್ಯಾಗತರಿಗೂ ಅನ್ನದಾನಾದಿಗಳಿಂದ ತೃಪ್ತಿಪಡಿಸಿದರು ತಾ|| ೨೭-೯-೪೩ ದಿವಸ ಸಾಯಂಕಾಲ ಶಿಕಾರಿಪುರದ ಪಂಚಾಚಾರ್ಯ ಭಜನ ಸಂಘದವರಿಂದಲೂ ಸಾಲೂರು ಶ್ರೀ ಹಿಂದುಗ ಶಿವಾಲಯ ಭಜನ ಸಂಘ ಮತ್ತು ದೇವಾಂಗ ಭಜನ ಸಂಘದವರಿಂದಲೂ, ಕಡತಿ ಮೃದಲು, ಸಾಲೂರು ಕಾವೇರಿ ಬಸವಪ್ಪನವರ ಕೋಲುಮೇಳ ಮತ್ತು ಇತರ ಡೊಳ್ಳು ಬಾಜಾಬಜಂತ್ರಿ ವಾದ್ಯ ಇವುಗಳಿಂದಲೂ ಕೂಡಿ ಗ್ರಾಮದ ಎಲ್ಲಾ ಬೀದಿಗಳಲ್ಲೂ ಬಹು ವಿಜೃಂಭಣೆಯಿಂದ ಉತ್ಸವ ನಡೆಯಿಸಿ ಮರುದಿವಸ ಪ್ರಾತಃಕಾಲ ಶ್ರೀಸಿದ್ಧಿವಿನಾಯಕನನ್ನು ವಿಸರ್ಜಿಸಿದರು

ಈ ಉತ್ಸವದಲ್ಲಿ ಭಾಗವಹಿಸಿದ ಭಜನ ಸಂಘದವರನ್ನು ಬಹುಮಾನಿಸಲು ಮಂಗಳವಾರ ೯ ಘಂಟೆಗೆ ಸಭೆ ಸೇರಿತು ಆ ಸಭೆಗೆ ವೇ|| ಹಿರೇಮಠದ ಚೆನ್ನವೀರಸ್ವಾಮಿಗಳವರನ್ನು ಅಧ್ಯಕ್ಷರನ್ನಾಗಿಯೂ, ಮ|| ರಾ|| ನಾಡಿಗ ಭವಾನಿರಾಯರನ್ನು ಉಪಾಧ್ಯಕ್ಷರನ್ನಾಗಿಯೂ, ಮ|| ರಾ|| ಬಿ ಪಿ ಚೇರ್ಮನ್ ಹೊಸಕೊಪ್ಪದ ಗಣ್ಣಪ್ಪಗೌಡರು ಆರಿಸಿದರು ಅನಂತರ ಶ್ರೀ ಸಿದ್ಧಿವಿನಾಯಕ ಪೂಜಾ ವಿಚಾರವಾಗಿ ಮ|| ರಾ|| ನಾಡಿಗ ಭವಾನಿರಾಯರು ಎಂ ಆರ್ ಪಡ್ಡಿಯವರು ಹೆಡ್ ಮಾಸ್ಟರ್ ರಂಗಸ್ವಾಮಯ್ಯಂಗಾರ್‌ರವರು ಬಹು ಸ್ವಾರಸ್ಯವಾಗಿ ಭಾಷಣಮಾಡಿದರು ಇದೇ ವಿಷಯವನ್ನೇ ಅಧ್ಯಕ್ಷರು ಪುಷ್ಟೀಕರಿಸಿ ಮಾತನಾಡಿದರು ಅನಂತರ ಮ|| ರಾ|| ಶಿವಲಿಂಗಪ್ಪಶೆಟ್ಟರು ಈ ಉತ್ಸವವು ಸಾಂಗವಾಗಿ ನೆರವೇರಿದ ಸಂತೋಷಾರ್ಥವಾಗಿ ಶ್ರೀ ಪಂಚಾಚಾರ್ಯ ಪ್ರಭಾ ಪೋಷಣಾರ್ಥವಾಗಿ ಮ|| ರಾ|| ಹೊಸಕೊಪ್ಪದ ಗಣ್ಣಪ್ಪಗೌಡರ ಕಡೆಗೆ ಎರಡು ರೂಪಾಯಿಗಳನ್ನು ಸಮರ್ಪಿಸಿದರು ಈ ಉತ್ಸವಕ್ಕೆ ಭಾಗಿಗಳಾದ ಮೇಲ್ಕಂಡ ಸಂಘದವರ ವಿದ್ವತ್ತಿಗೆ ಸರಿಯಾಗಿ ಸಂಭಾವನೆಯನ್ನು ಕೊಟ್ಟು ಫಲತಾಂಬೂಲಾದಿಗಳನ್ನು ಸರ್ವ ಸಭಿಕರಿಗೂ ಹಂಚಿದರು ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯೊಂದಿಗೆ ಸಭೆಯು ಮುಕ್ತಾಯಗೊಳಿಸಲ್ಪಟ್ಟಿತು

ಪ್ರತ್ಯಕ್ಷದರ್ಶಿ.

ಗುರುಭಕ್ತಿಯ ಲಕ್ಷಣವೂ, ದುಷ್ಕೃತ ಪ್ರಭಾವವೂ

(ವೇ|| ಶ್ರೀ ಪಟ್ಟದಸ್ವಾಮಿಗಳು, ಹಿರೇಮಠ, ಕೊಟ್ಟೂರು.)

ಪ್ರಾಚೀನ ಕಾಲದಲ್ಲಿ ರಾಜಾಧಿರಾಜರೂ, ಶ್ರೀಮಂತರೂ ತಮ್ಮ ವಂಶೋದ್ಧಾರಕ್ಕಾಗಿಯೂ, ಇಹಪರ ಕಲ್ಯಾಣ ಹೊಂದುವುದಕ್ಕಾಗಿಯೂ, ಮೋಕ್ಷಪ್ರಾಪ್ತಿ

(ಇನ್ನೂ ಮುಂದಕ್ಕೆ ಇದೆ)

ಪಂಚಾಚಾರ್ಯಪ್ರಭಾ.

೧೯೪೪ನೆಯ ಅಕ್ಟೋಬರ್ ತಾ॥ ೧೬ನೇ ಸೋಮವಾರ

ವೀರಶೈವಸಿದ್ಧಾಂತ.

ವೀರಶೈವಸಿದ್ಧಾಂತವು ಯಾವಾಗಲೂ ಮೋಕ್ಷಸುಖವನ್ನಧಿಕರಿಸಿರುತ್ತದೆಯೇ ಹೊರತು ಸ್ವರ್ಗಾದ್ಯಾಮುಷ್ಮಿಕ ಸೌಖ್ಯವನ್ನಧಿಕರಿಸಿಲ್ಲವು ವೈದಿಕಮತಗಳಿಗೆಲ್ಲ ಮೂಲಾಧಾರವಾದ ವೇದವು ಕರ್ಮಕಾಂಡ, ಜ್ಞಾನಕಾಂಡವೆಂಬ ಎರಡು ಭಾಗಗಳಿಂದೊಡಗೂಡಿರುತ್ತದೆ ಕರ್ಮಕಾಂಡವು ಜ್ಯೋತಿಷ್ಟೋಮಾದಿ ಕರ್ಮಗಳನ್ನು ವಿಧಿಸುವುದು ಈ ಕರ್ಮಗಳನ್ನು ಅನುಷ್ಠಿಸುವುದರಿಂದ ವಸ್ತ್ರದಲ್ಲಿ ಗಂಧವು ವ್ಯಾಪಿಸಿಕೊಂಡಿರುವಂತೆ ಆತ್ಮನಲ್ಲಿ ಒಂದು ವಿಧವಾದ ಸಂಸ್ಕಾರ (ಅಪೂರ್ವ)ವು ಸಂಬಂಧಿಸಿದ್ದು ದೇಹವನ್ನು ಬಿಟ್ಟ ಅನಂತರದಲ್ಲಿ ಆ ಕರ್ಮಜನ್ಯವಾದ ಅಪೂರ್ವವು ಆತ್ಮನಿಗೆ ಸ್ವರ್ಗಸುಖವನ್ನುಂಟುಮಾಡುವುದು ಆ ಪುಣ್ಯಬಲವಿರುವವರೆಗೂ ಸ್ವರ್ಗಸುಖಾನುಭವಮಾಡುತ್ತ ಪುಣ್ಯ ತೀರಿದೊಡನೆಯೇ ಪುನಃ ಆ ಆತ್ಮವು ಜನ್ಮವೆತ್ತಬೇಕಾಗುವುದು ಈ ವಿಷಯದಲ್ಲಿ " ಕ್ಷೀಣೇ ಪುಣ್ಯೇ ಮರ್ತ್ಯಲೋಕಂ ವಿಶಂತಿ ' ಇತ್ಯಾದ್ಯನಂತಪ್ರಮಾಣವಾಕ್ಯಗಳಿರುತ್ತವೆ ನಕರ್ಮಣಾ" ನಾಸ್ತ್ಯಕೃತಃ ಕೃತೇನ ಇತ್ಯಾದಿ ಶ್ರುತಿಪ್ರಮಾಣಾನುಸಾರವಾಗಿ ಮೋಕ್ಷವೆಂಬ ಮಹಾಪುರುಷಾರ್ಥವು ಅಂಥ ಕರ್ಮಗಳಿಂದುಂಟಾಗುವುದಿಲ್ಲ

" ಆತ್ಯಂತಿಕದುಃಖನಿವೃತ್ತಿಪೂರ್ವ ' ಪರಶಿವಪ್ರಾಪ್ತಿರೇವಮೋಕ್ಷಃ '

ಅಸ್ವತಂತ್ರತೆ-ಅಲ್ಪಜ್ಞತೆ ಅಪೂರ್ಣತೆ ಮುಂತಾದ ದುಃಖಹೇತುಭೂತಜೀವಧರ್ಮಗಳು ಸಂಪೂರ್ಣ ನಾಶವಾಗಿ ಸರ್ವಜ್ಞನೂ, ಪರಿಪೂರ್ಣನೂ, ಸ್ವತಂತ್ರನೂ ಹೇಯಪ್ರತ್ಯನೀಕನೂ ಆನಂದಮಯನೂ ಆದ ಪರಶಿವನ ಸ್ವರೂಪವನ್ನು ಪಡೆಯುವುದೇ ಮೋಕ್ಷವು ಇಂತಹ ಮೋಕ್ಷಸಾಮ್ರಾಜ್ಯವನ್ನು ಸಂಪಾದಿಸುವುದೇ ವೀರಶೈವನ ಪರಮಧ್ಯೇಯವೆಂದು ಭಾಷ್ಯಕಾರರು ಅಭಿಪ್ರಾಯಪಟ್ಟಿರುತ್ತಾರೆ

ವಿಶಬ್ದೇನೋಚ್ಯತೇ ವಿದ್ಯಾ ಶಿವಜೀವೈಕ್ಯಬೋಧಿನೀ |
ತಸ್ಯಾಂ ರಮಂತೇ ಯೇ ಶೈವಾ ವೀರಶೈವಾಃ ಪ್ರಕೀರ್ತಿತಾಃ |

ಈ ರೀತಿ ಶಿವಾಗಮಗಳೂ ಸಹ ' ವೀರಶೈವ ' ಎಂಬ ಪದದ ನಿರ್ವಚನವನ್ನು ಮಾಡಿ ಇದೇ ಅರ್ಥವನ್ನೇ ಪ್ರಕಾಶಪಡಿಸಿರುವುವಲ್ಲದೆ—

' ಬಾಹ್ಯಕ್ರಿಯಾಪರಂ [illegible] ಯಃ ಪೂಜಯೇಲ್ಲಿಂಗಂ
ಸ ವೀರಶೈವಃ '

ಎಂದು ಸ್ಕಾಂದಾದಿ ಪುರಾಣಗಳು ಕೂಡ ಸ್ವರ್ಗಸ್ವಾರಾಜ್ಯಾದಿಸಾಧನವಾದ ಜ್ಯೋತಿಷ್ಟೋಮಾದಿಕರ್ಮಗಳನ್ನು ನಿಷೇಧಿಸಿ ಮೋಕ್ಷವನ್ನೇ ಸಮರ್ಥಿಸಿರುತ್ತವೆ, ಇಂತಹ ಮುಕ್ತಿಸುಖವಾದರೋ ವೇದದ ಜ್ಞಾನಕಾಂಡೋಕ್ತಗಳಾದ ಧರ್ಮಾನುಷ್ಠಾನಗಳಿಂದಲೇ ಸಿದ್ಧಿಸುತ್ತದೆಯಲ್ಲದೆ ಕರ್ಮಕಾಂಡೋಕ್ತವಾದ ಧರ್ಮಾನುಷ್ಠಾನಗಳಿಂದ ಸಿದ್ಧಿಸುವುದಿಲ್ಲ ಇದಕ್ಕಾಗಿ ಭಾಷ್ಯಕಾರರು ಪಶುಕರ್ಮವೆಂದೂ ಪತಿಕರ್ಮವೆಂದೂ ಎರಡುಭಾಗಗಳನ್ನು ಮಾಡಿರುವರು ಜೀವಭಾವನಿವೃತ್ತಿಯನ್ನು ಮಾಡದಿರುವುದರಿಂದ ಪಶುಕರ್ಮಗಳೆಂತಲೂ ಜೀವಭಾವನಿವೃತ್ತಿಮಾಡುವುದರಿಂದ ಪತಿಕರ್ಮಗಳೆಂತಲೂ ಹೆಸರುಂಟಾಗಿದೆ ಈ ಪತಿಕರ್ಮಗಳೆಲ್ಲವೂ ಜ್ಞಾನಕಾಂಡದಲ್ಲಿ ಹೇಳಲ್ಪಟ್ಟ ಧರ್ಮಗಳಾಗಿರುತ್ತವೆ ಪ್ರಪಂಚದಲ್ಲಿ ಯಾವನು ಯಾವ ಫಲವನ್ನಪೇಕ್ಷಿಸುತ್ತಾನೆಯೋ ಆ ಫಲಾನುಗುಣವಾದ ಕರ್ಮಗಳನ್ನೇ ಮಾಡಬೇಕು ಮಾವಿನಹಣ್ಣನ್ನು ಅಪೇಕ್ಷಿಸುವವನು ಮಾವಿನ ಬೀಜವನ್ನೇ ಬಿತ್ತಿ ವ್ಯವಸಾಯ ಮಾಡಬೇಕು ಅದಕ್ಕೆ ವಿರುದ್ಧವಾಗಿ ಹಲಸಿನ ಬೀಜವನ್ನು ಬಿತ್ತಿ ಮಾವಿನ ಹಣ್ಣನ್ನು ಪಡೆಯುವುದೆಂದರೆ ಅದು ಕಾರಣವಿರುದ್ಧಕಾರ್ಯೋತ್ಪತ್ತಿಯಾಗುವುದರಿಂದ ಅನುಭವವಿರೋಧವುಂಟಾಗುವುದು ಆದುದರಿಂದ ಮೋಕ್ಷಾಪೇಕ್ಷಿಯಾದವನು ಪತಿಕರ್ಮವನ್ನೇ ಆಚರಿಸಬೇಕು ಸ್ವರ್ಗಾದಿಫಲವನ್ನು ಅಪೇಕ್ಷಿಸುವವನು ಅವುಗಳಿಗೆ ಸಾಧನವಾದ ಪಶುಕರ್ಮಗಳನ್ನೇ ಅನುಷ್ಠಿಸಬೇಕು ಪರಮಾತ್ಮನು ಅವರವರ ಅಧಿಕಾರಕ್ಕನುಗುಣವಾಗಿ ಒಂದೇ ವೇದವನ್ನು ಎರಡೆರಡು ಭಾಗವಾಗಿ ಮಾಡಿದನು ಆಮೇಲೆ ಜೈಮಿನ್ಯಾಚಾರ್ಯರು ಕೇವಲ ಕರ್ಮಕಾಂಡವನ್ನವಲಂಬಿಸಿ ಪೂರ್ವಮೀಮಾಂಸೆಯನ್ನು ಒರೆದರು ಶ್ರೀವ್ಯಾಸರು ಜ್ಞಾನಕಾಂಡವನ್ನವಲಂಬಿಸಿ ಉತ್ತರಮೀಮಾಂಸೆಯನ್ನು ಬರೆದರು ಇವುಗಳಲ್ಲಿ ಉತ್ತರಮೀಮಾಂಸೆಯೇ ಮೋಕ್ಷವೆಂಬ ಮಹಾಪುರುಷಾರ್ಥಕ್ಕೆ ಮುಖ್ಯಕಾರಣವಾದುದರಿಂದ ಪರಮಾತ್ಮನಾಜ್ಞಾನುಸಾರ ಮಾರ್ಗವನ್ನನುಸರಿಸಿದ ಶ್ರೀವ್ಯಾಸಮಹರ್ಷಿಗಳನ್ನು—

ಅಚತುರ್ವದನೋ ಬ್ರಹ್ಮಾ ದ್ವಿಬಾಹುರಪರೋ ಹರಿಃ |
ಅಫಾಲಲೋಚನಶ್ಶಂಭುರ್ಭಗವಾನ್ ಬಾದರಾಯಣಃ

ಎಂದು ಅನೇಕ ಕವಿಗಳು ತ್ರಿಮೂರ್ತಿಗಳಿಗೆ ಹೋಲಿಸಿರುತ್ತಾರೆ ಸ್ವರ್ಗಾದ್ಯನಿತ್ಯಫಲಗಳನ್ನಪೇಕ್ಷಿಸದ ವೀರಶೈವಭಾಷ್ಯಕಾರರು ಪೂರ್ವಮೀಮಾಂಸೆಯೆಂಬ ಮಹಾಕಾಂತಾರವನ್ನು ಪ್ರವೇಶಿಸದೆ ನಿತ್ಯಫಲಪ್ರದವಾದ ವೇದದ ಜ್ಞಾನಕಾಂಡದಮೇಲೆ ಹುಟ್ಟಿರುವ ಉತ್ತರಮೀಮಾಂಸೆಯೆಂಬ ನಂದನವನವನ್ನು ಪ್ರವೇಶಿಸಿ ಶಿವ ಏಕೋ ಧ್ಯೇಯಶ್ಶಿವಂಕರಃ ಸರ್ವಮನ್ಯತ್ಪರಿತ್ಯಜ್ಯ ಅಮೃತಸ್ಯ ದೇವಧಾರಣೋ ಭೂಯಾಸಂ ಸರ್ವಲಿಂಗಂ ಸ್ಥಾಪಯತಿ ಪಾಣಿಮಂತಂ ಪವಿತ್ರಂ " ಜ್ಞಾತ್ವಾದೇವಂ ಮುಚ್ಯತೇ ಸರ್ವಪಾಶೈಃ ಜ್ಞಾತ್ವಾ ಶಿವಂ ಶಾಂತಿಮತ್ಯಂತಮೇತಿ " ಇತ್ಯಾದ್ಯನಂತಶ್ರುತಿವಾಕ್ಯಗಳಿಂದ ಪರಶಿವಬ್ರಹ್ಮಜ್ಞಾನಪೂರ್ವಕದಿಂದಲೇ ದುಃಖನಿವೃತ್ತಿಯಾಗಿ ಮಹಾಪುರುಷಾರ್ಥವೆನಿಸಿದ ಪರಶಿವತ್ವಪ್ರಾಪ್ತಿಯೇ ವೀರಶೈವಮತದ ಮುಖ್ಯೋದ್ದೇಶವೆಂದು ಸ್ಪಷ್ಟಪಡಿಸಿ, ಅದಕ್ಕೆ ಅಂಗಭೂತವಾದ ಪತಿಕರ್ಮಾಚರಣೆಯಲ್ಲಿ ಪ್ರವೃತ್ತಿಯನ್ನುಂಟುಮಾಡಿರುತ್ತಾರೆ ವೇದದಲ್ಲಿ ಹೇಳಿರುವ ಸಮಸ್ತಕರ್ಮೋಪಾಸನೆಗಳನ್ನಾಗಲಿ ಸಮಸ್ತ ಜ್ಞಾನೋಪಾಸನೆಗಳನ್ನಾಗಲಿ ಒಂದು ಮತೀಯರಾಗಲಿ ಒಬ್ಬರಾಗಲಿ ಅನುಷ್ಠಿಸಲಾರರು ವೀರಶೈವಭಾಷ್ಯಕಾರರಲ್ಲಿ ಒಬ್ಬರಾದ ಶ್ರೀನೀಲಕಂಠಶಿವಾಚಾರ್ಯರು ವೇದವನ್ನು ಒಂದು ವಿಶಾಲವಾದ ರತ್ನದ ಅಂಗಡಿಗೆ ಹೋಲಿಸಿದ್ದಾರೆ ರತ್ನದ ಅಂಗಡಿಗೆ ಹೋದ ಮನುಷ್ಯನು ತನ್ನಲ್ಲಿ ಎಷ್ಟು ಯೋಗ್ಯತೆಯೋ ಅದಕ್ಕನುಗುಣವಾಗಿ ತನಗೆ ಬೇಕಾದ ರತ್ನಗಳನ್ನು ವಿಕ್ರಯಕ್ಕೆ ತೆಗದುಕೊಳ್ಳುತ್ತಾನಲ್ಲದ ಅಲ್ಲಿರುವ ರತ್ನಗಳನ್ನೆಲ್ಲಾ ತೆಗೆದುಕೊಳ್ಳುವುದಿಲ್ಲ ಇದರಿಂದ ತಾನು ತೆಗೆದುಕೊಂಡ ರತ್ನಗಳು ಮಾತ್ರ ಉತ್ತಮಗಳು ಉಳಿದ ರತ್ನಗಳು ಉತ್ತಮರತ್ನಗಳಲ್ಲವೆಂದು ಯಾರೂ ಹೇಳಲಾರರು ಮತ್ತೊಬ್ಬನಿಗೆ ಆ ಉಳಿದ ರತ್ನಗಳೇ ಉತ್ತಮಗಳಾಗಿ ತೋರುವುವು ಅದರಂತೆ ವೇದವೆಂಬ ಮಹಾರತ್ನಪಟದಲ್ಲಿ ವೀರಶೈವರು ತಮತಮಗೆ ಬೇಕಾದ ಮುಕ್ತಿಸಾಧನಗಳಾದ ಶಿವಧ್ಯಾನ ಶಿವಭಕ್ತಿ ಶಿವಜ್ಞಾನ ಶಿವವ್ರತ ಶಿವಪೂಜಾ ಭಸ್ಮ ರುದ್ರಾಕ್ಷ ಶಿವಪಂಚಾಕ್ಷರ-ಶಿವಲಿಂಗ ಗುರು ಜಂಗಮ ಪಾದೋದಕ ಪ್ರಸಾದಾದಿಗಳನ್ನು ಸ್ವೀಕರಿಸಿ ಉಳಿದವುಗಳನ್ನು ಬಿಟ್ಟಿರುತ್ತಾರೆ ಹೀಗೆ ವೈದಿಕಮತಗಳೆನಿಸಿದ ಶೈವವೈಷ್ಣವಾದಿ ಮತಗಳೆಲ್ಲವೂ ಇದರಂತೆಯೇ ಇರುತ್ತವೆಯಲ್ಲದೆ ವೇದದಲ್ಲಿರುವ ಎಲ್ಲ ಭಾಗಗಳನ್ನನುಷ್ಠಿಸುವವರೊಬ್ಬರೂ ಕಾಣುವುದಿಲ್ಲ ಇದೇ ಅಭಿಪ್ರಾಯವನ್ನು ವೀರಶೈವ ಭಾಷ್ಯಕಾರರಾದ ,ಅದೇ ನೀಲಕಂಠಶಿವಾಚಾರ್ಯರು,

" ಯಾವತಾಂ [illegible] ಸಪ್ತಸಾಗರಶೋಷಣಂ "

ವೇದದಲ್ಲಿ ಹೇಳಿರುವ ಎಲ್ಲ ಕರ್ಮಗಳನ್ನೂ ನಾನೊಬ್ಬನೇ ಅನುಷ್ಠಿಸುವೆನೆಂದು ಯಾರು ಹೇಳುವರೋ ಅವರು ಏಳು ಸಮುದ್ರಗಳನ್ನೇ ಒಣಗಿಸಿ ಬಿಡುವೆನೆಂದು ಹೇಳುವವನಿಗೆ ಸಮಾನವೆಂದು ವಿಡಂಬನೆ ಮಾಡಿರುವರು ಆದುದರಿಂದ ವೀರಶೈವ ಮತಾಚಾರ್ಯರು ವೇದದ ಕರ್ಮಕಾಂಡದಲ್ಲಿ ಹೇಳಿರುವ ನಶ್ವರಫಲಪ್ರದವಾದ ಶ್ರುತಿಗಳಿಗಿಂತಲೂ ಬ್ರಹ್ಮಪ್ರಕರಣದಲ್ಲಿ ಹೇಳಿದ ನಿತ್ಯಫಲಪ್ರದವಾದ ಶ್ರುತಿಗಳಿಗೆ ಪ್ರಾಬಲ್ಯವನ್ನು ಒಪ್ಪುವುದರಿಂದಲೂ, ಅಲ್ಲದೆ ಅಹಿಂಸಾವ್ರತವನ್ನು ಪಾಲಿಸುವುದರಲ್ಲಿ ಅಗ್ರಗಣ್ಯರೆಂಬ ಖ್ಯಾತಿ ಪಡೆದಿರುವುದರಿಂದಲೂ ವೀರಶೈವ ಸಿದ್ಧಾಂತವು ಸ್ವರ್ಗಾದಿಸಾಧನವಾದ ವೇದದ ಕರ್ಮಕಾಂಡದಲ್ಲಿ ಹೇಳಿದ ಪಶುವಿಶಸನಾದಿ ಕರ್ಮಗಳನ್ನು ಅನುಷ್ಠಿಸಕೂಡದೆಂದೂ ಜ್ಞಾನಕಾಂಡೋಕ್ತವಾದ ಲಿಂಗಧಾರಣ ಲಿಂಗಪೂಜಾದಿ ಪತಿಕರ್ಮಗಳನ್ನೇ ಅನುಷ್ಠಿಸಬೇಕೆಂದೂ ನಿಯಮನ ಮಾಡುತ್ತಿರುವುದು.

ಯುದ್ಧವಾರ್ತೆ.

ಮಿಲಿಟರಿ ಆಡಳಿತವು ಕೊನೆಗೊಂಡಿತು

ಫಿಲಿಪ್ಪೈನ್ ದ್ವೀಪದಲ್ಲಿ ಈ ತಿಂಗಳು ತಾ॥ ೧೩. ರಿಂ ಜಪಾನರು ಮಿಲಿಟರಿ ಆಡಳಿತವನ್ನು ಕೊನೆಗೊಳಿಸಿ ರೆಂದು ಜಪಾನ್ ಅಧಿಕಾರಿಗಳ ಪ್ರಕಟನೆಯೊಂದು ಹೊರಟಿದೆ

ಮಿತ್ರರು ವಿಲಾ ಹಿಡಿದರು

ಸಾಲೋಮನ್ಸ್ ದ್ವೀಪಸ್ತೋಮಕ್ಕೆ ಸೇರಿದ ಕೋಲ ಬಂಗಾರಾದ್ವೀಪದ ನೌಕಾಮೂಲವಾದ ವಿಲಾ ಎಂಬುದನ್ನು ಮಿತ್ರರು ಹಿಡಿದಿದ್ದಾರೆ ದ್ವೀಪದಲ್ಲಿ ಸುವ್ಯವಸ್ಥಿತ ಪ್ರತಿಭಟನೆಯೇನೂ ಇರಲಿಲ್ಲವೆಂದು ಹೇಳಲಾಗಿದೆ

ಲೂಯಿಮೌಂಟ್ ಬೇಟನ್

ಆಗ್ನೇಯ ಏಷ್ಯದ ಮಹಾ ದಂಡನಾಯಕರಾದ ಲೂಯಿಮೌಂಟ್ ಬೇಟನ್ನರು ಭಾರತದ ದಂಡನಾಯಕರಾದ ಸರ್ ಕ್ಲಾಡ್ ಓಚಿನ್ ಲೆಕ್‌ರವರೊಂದಿಗೆ ಸಮ್ಮೇಳನ ನಡೆಯಿಸಿದರು

೧೦೨ ಜರ್ಮನ್ ವಿಮಾನಗಳನ್ನು ಕೆಡವಲಾಯಿತು

ಅಮೆರಿಕನ್ ಬಾಂಬರುಗಳು ಪಶ್ಚಿಮ ಜರ್ಮನಿಯ ಮೇಲೆ ಮುತ್ತಿಗೆ ನಡೆಸಿದಾಗ ೧೦೨ ಜರ್ಮನ್ ವಿಮಾನಗಳನ್ನು ಹೊಡೆದು ನೆಲಕ್ಕೆ ಕೆಡವಲಾಯಿತೆಂದು ಹೇಳಲಾಗಿದೆ

ಜಪಾನನ್ನು ಸಂಪೂರ್ಣವಾಗಿ ಸೋಲಿಸಬೇಕು

ಮಾ॥ ಚಿಯಾಂಗ್ ಕೈಷೇಕರು ರಾಜಭಕ್ತಿ ಪ್ರಮಾಣ ಸಲ್ಲಿಸಿ, ಚೀಣಾ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು ಆಗ ಅವರು ಮಾತನಾಡುತ್ತ ಜಪಾನನ್ನು ಸಂಪೂರ್ಣವಾಗಿ ಸೋಲಿಸಿ ಚೀಣವು ಕಳೆದುಕೊಂಡಿರುವ ಎಲ್ಲಾ ಪ್ರದೇಶಗಳನ್ನೂ ಹಿಂದಕ್ಕೆ ಪಡೆಯುವುದೇ ತಮ್ಮ ಸಂಕಲ್ಪವೆಂದು ಸ್ಪಷ್ಟಪಡಿಸಿದರು

ಅಜೋರ್ಸ್ ದ್ವೀಪ

ವ್ಯಾಪಾರದ ಹಡಗುಗಳಿಗೆ ಹೆಚ್ಚಿನ ರಕ್ಷಣೆ ನೀಡಲು ಸಹಕಾರಿಯಾಗುವಂತೆ ಪೋರ್ಚುಗಲ್ಲು ಬ್ರಿಟನ್ನಿ ಅಜೋರ್ಸ್ ದ್ವೀಪದಲ್ಲಿ ಕೆಲವು ಸೌಕರ್ಯಗಳನ್ನು ಕೊಟ್ಟಿದೆಯೆಂದು ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು ಆದರೆ "ಯೂರೋಪಿನ ಮೂಲಭೂಮಿಯಲ್ಲಿ ಪೋರ್ಚುಗಲ್ ಅನುಸರಿಸುತ್ತಿರುವ ತಾಟಸ್ಥ್ಯದ ನೀ ಇದರಿಂದೇನೂ ಭಂಗವುಂಟಾಗಿಲ್ಲ ಮೆಡಿಟರೇನಿಯ ನಲ್ಲಿ ಮಾಲ್ಟಾ ಇದ್ದಂತೆ ಪೆಸಿಫಿಕ್‌ನಲ್ಲಿ ಅಜೋರ್ ದ್ವೀಪವಿದೆ " ಎಂದು ಹೇಳಲಾಗಿದೆ

ರಷ್ಯನರು ಗೋಮೆಲ್ಲಿಗೆ ನುಗ್ಗಿದ್ದಾ

ರಷ್ಯನ್ ಯೋಧರು ಗೋಮೆಲ್ ನಗರದ ಒ ವಣಿಗೆ ಪ್ರವೇಶಿಸಿದ್ದಾರೆ ನೀಪರ್ ನದಿ ದಾಟುವ ಸ್ಥ ಗಳಲ್ಲಿ ಇನ್ನೂ ಉಗ್ರವಾದ ಹೋರಾಟ ನಡೆಯುತ್ತಿ ನದಿಯ ಪಕ್ಕದಲ್ಲಿರುವ ಎತ್ತರವಾದ ಪ್ರದೇಶಗ ಕೆಂಪುಸೇನೆ ಶತ್ರುಗಳನ್ನು ಓಡಿಸುತ್ತಿದೆ ಎರಡು ಯೂ ಬಹಳ ಹಾನಿಯಾಗಿದೆ. ಒಂದು ಕಡೆ ಶತ್ರುಗ ಎಂಟು ಸಾರಿ ಪ್ರತಿಮುತ್ತಿಗೆ ನಡೆಸಿದರು. ಆದರೆ ವಿಫಲವಾಯಿತು ನೈಟ್‌ಸ್ಟಾಕ್ ಬಳಿ ಸಹ ಉಗ್ರ ಹೋರಾಟವಾಗುತ್ತಿದೆಯೆಂದು ಹೇಳಲಾಗಿದೆ.

ಇಟಲಿಯಲ್ಲಿ ನಾಜಿಗಳ ಹಿಂದೋಟ

ಪಶ್ಚಿಮತೀರದಿಂದ ಒಳದೇಶಕ್ಕೆ ೪೫ ಮೈಲಿಯ ದೂರದವರೆಗೆ ಐದನೆಯ ಸೇನೆ ಜರ್ಮನರನ್ನು ಒಂದೇ ಸಮನಾಗಿ ಒತ್ತಾಯಕ್ಕೆ ಗುರಿಮಾಡಿದೆ ವಾಲ್ಟರ್ನೋ ನದಿಯ ಆಚೆ ದಡದಲ್ಲಿ ಬಲಯುತ ಶತ್ರುಸೇನೆ ನೆರೆದಿದೆ ಎಂಟನೆಯ ಸೇನೆ ಹೊಡೆದಾಡುತ್ತ ಪಶ್ಚಿಮಕ್ಕೆ ಮತ್ತೆ ನಾಲ್ಕು ಮೈಲಿ ನುಗ್ಗಿದ

ಐದನೇ ಸೇನೆ ಇಟಲಿಯಲ್ಲಿ ವಾಲ್ಟರ್ನೋ ನದಿ ದಾಟಿ ಭಾರಿ ಮುತ್ತಿಗೆಯನ್ನು ಆರಂಭಿಸಿದೆ ಅನೇಕಮಂದಿ ಮಿತ್ರಸೈನಿಕರು ಈಜಿಕೊಂಡೇ ನದಿ ದಾಟಿದರು ಅಪಾರ ಸಂಗ್ರಾಮ ವಸ್ತುಗಳನ್ನು ನದಿ ದಾಟಿದರು ಭಾರಿ ಫಿರಂಗಿಗಳನ್ನು ತಂದಿದ್ದಾರೆ ವಾಯುಪಥದಲ್ಲಿ ಮಿತ್ರವಿಮಾನಗಳಿಗೆ ಎದುರೇ ಇಲ್ಲ ವಾಲ್ಟರ್ನೋ ನದಿ ಬಳಿ ಜರ್ಮನರ ವ್ಯೂಹವನ್ನು ಒಡೆದುಕೊಂಡು ಮಿತ್ರ ಟ್ಯಾಂಕುಗಳು ನುಗ್ಗಿವೆ ರೋಂ ಕದನದ ಎರಡನೇ ಘಟ್ಟ ಆರಂಭವಾಗಿದೆ ಅಂತೂ ಮಿತ್ರ ಫಿರಂಗಿಗಳೂ ಟ್ಯಾಂಕುಗಳೂ ರೋಂ ಕಡೆಗೆ ಹೊರಟಿವೆ ಶತ್ರುಗಳ ಪ್ರತಿಭಟನೆ ಉಗ್ರವಾಗಿದೆ ವಾಲ್ಟರ್ನೋ ನದಿಯ ಉತ್ತರ ಭಾಗದಲ್ಲಿ ಕಾವುವಾ ಉತ್ತರದಲ್ಲಿ ರೋಂಗೆ ಹೋಗುವ ರಸ್ತೆಯನ್ನಾಗಲೇ ಮಿತ್ರಸೇನೆಗಳು ಕತ್ತರಿಸಿವೆ ಜರ್ಮನ್ ವ್ಯೂಹದ ಂವೆ ಮಿತ್ರವಿಮಾನಗಳ ಚಟುವಟಿಕೆ ಬಹಳ ಜೋರಾಗಿದೆ ಎಂದು ಹೇಳಲಾಗಿದೆ

ಜರ್ಮನ್ ನೌಕೆಗಳ ಚಲನ

ಜರ್ಮನಿಗೆ ಸೇರಿದ ಷಿಯರ್ ಮತ್ತು ಉಜೋವ್ ಎಂಬ ಭೂತಾಕಾರದ ಯುದ್ಧನೌಕೆಗಳೂ, ೮ ಅಂಗುಲ ವ್ಯಾಸದ ಫಿರಂಗಿಗಳುಳ್ಳ ಕೂಡಿ ಹಿಪ್ಪರ್ ಎಂಬ ಡಿಸ್ಟ್ರಾಯರೂ, ಮತ್ತೆ ೨೦ ಡಿಸ್ಟ್ರಾಯರುಗಳೂ ಈಗ ಅನಿರ್ದಿಷ್ಟಸ್ಥಾನಕ್ಕೆ ಹೊರಟಿರುವುವೆಂದು ವರ್ತಮಾನ ಬಂದಿರುವುದಾಗಿ ಬೊಂಬಾಯಿನ ಟೈಮ್ಸ್ ಆಫ್ ಇಂಡಿಯಾ ಪತ್ರಿಕೆ ತಿಳಿಸಿದೆ ಅವನ್ನು ನಾಶಪಡಿಸಲು ಪ್ರಯತ್ನವಾಗುತ್ತಿದೆಯೆಂದೂ ಟರ್ಪಿಟ್ಜ್ ನೌಕೆಗೆ ಪೆಟ್ಟು ಬಿದ್ದುದು ಇದರ ಫಲವಾಗಿಯೇ ಎಂದೂ ಹೇಳಲಾಗಿದೆ

ವೇಕ್ ದ್ವೀಪದ ಮೇಲೆ ಉಗ್ರವಾದ ಮುತ್ತಿಗೆ

ವೇಕ್ ದ್ವೀಪದಲ್ಲಿ ಜಪಾನರು ಮಾಡಿಕೊಂಡಿರುವ ರಕ್ಷಣೆಯ ಏರ್ಪಾಟಿಗೆ ಭಾರಿ ಪೆಟ್ಟು ಹಾಕಲಾಯಿತು ೩೨೦ ಟನ್ನುಗಳಷ್ಟು ಬಾಂಬುಗಳನ್ನು ಸುರಿಸಲಾಯಿತು ಎರಡು ಸಣ್ಣ ಜಪಾನ್ ಹಡಗುಗಳನ್ನು (ಅದರಲ್ಲೊಂದು ಪೆಟ್ರೋಲಿನಿಂದ ತುಂಬಿತ್ತು) ಮುಳುಗಿಸಲಾಯಿತು ನೆಲದ ಮೇಲೂ ವಾಯುವಿನಲ್ಲೂ ಕನಿಷ್ಠಪಕ್ಷ ೩೧ ಜಪಾನ್ ವಿಮಾನಗಳನ್ನು ನಾಶಮಾಡಲಾಯಿತು ೧೫ ಅಮೇರಿಕನ್ ವಿಮಾನಗಳು ಹಿಂತಿರುಗಲಿಲ್ಲವೆಂಬುದಾಗಿ ಲಂಡನ್ ಪ್ರಕಟನೆ ತಿಳಿಸಿದೆ

ಜರ್ಮನಿಯ ಮೇಲೆ ಇಟಲಿಯ ಸಂಗ್ರಾಮ ಘೋಷಣೆ

ಮಾ॥ ಬಡೋಗ್ಲಿಯೋ ಸರಕಾರವು ಜರ್ಮನಿಯ ಮೇಲೆ ಸಂಗ್ರಾಮ ಹೂಡಿದೆ ಈ ಯುದ್ಧ ಘೋಷಣೆಯನ್ನು ಮೆಡ್ರಿಡ್‌ನಲ್ಲಿರುವ ಇಟಲಿ ರಾಯಭಾರಿಯ ಮೂಲಕ ಜರ್ಮನಿಗೆ ತಲುಪಿಸಲಾಯಿತು ಮಾ॥ ಬಡೋಗ್ಲಿಯೋರವರು ಇಟಾಲಿಯನರನ್ನು ಕುರಿತು ರೇಡಿಯೋ ಮೂಲಕ ಮಾತನಾಡುತ್ತ ಇಟಲಿಯಲ್ಲಿ ನಾಜಿಗಳು ನಡೆಸಿದ ದುರಾಚಾರವನ್ನು ವರ್ಣಿಸಿ ಇಟಲಿ ಭೂಮಿಯಲ್ಲಿ ಜರ್ಮನನೊಬ್ಬನೂ ಇಲ್ಲದಿರುವವರೆಗೆ ಮಿತ್ರಸೇನೆಗಳೊಡನೆ ನಿಂತು ಕಾದಲಾಗುವುದೆಂದರು ಇಟಲಿಯು ಮಿತ್ರ ದೇಶಗಳ ಕಡೆ ನಿಂತು ಹೊಡೆದಾಡಲು ಸಿದ್ಧವಾಗಿದೆ ಎಂದು ಮಾ॥ ಬಡೋಗ್ಲಿಯೋರವರು ಮಿತ್ರಸೇನೆಗಳ ದಂಡನಾಯಕರಾದ ಜ॥ ಐಸನ್‌ಹೋವರ್‌ರವರಿಗೆ ತಂತಿ ಕಳುಹಿಸಿದ್ದಾರೆಂದು ಹೇಳಲಾಗಿದೆ

ಜರ್ಮನಿ ನಾಯಕರಲ್ಲಿ ಭಿನ್ನಾಭಿಪ್ರಾಯ

ಬ್ರಿಟನ್ ಮತ್ತು ಅಮೆರಿಕಾಗಳೊಂದಿಗೆ ಪ್ರತ್ಯೇಕ ಶಾಂತಿ ಮಾಡಿಕೊಳ್ಳಬೇಕೆಂಬುದಾಗಿ ಡಾ॥ ಗೊಬೆಲ್ಸ್ ಮತ್ತು ಹರ್ ಹಿಟ್ಲರ್ ಒತ್ತಾಯಪಡಿಸಿದುದರಿಂದ ಇತ್ತೀಚೆಗೆ ಸೇರಿದ್ದ ನಾಜಿ ನಾಯಕರ ಸಮ್ಮೇಳನದಲ್ಲಿ ಭಿನ್ನಾಭಿಪ್ರಾಯವು ಕಾಣಬಂದು ರಷ್ಯದೊಂದಿಗೆ ಪ್ರತ್ಯೇಕವಾಗಿ ಶಾಂತಿ ಮಾಡಿಕೊಳ್ಳಬೇಕೆಂದು ಮಾ॥ ಗೋರಿಂಗರೂ ಸೈನ್ಯಾಧಿಕಾರಿಗಳೂ ವಾದಿಸಿದರೆಂದೂ ಪೂರ್ವ ರಂಗದಲ್ಲಿ ಜರ್ಮನಿಯ ಸ್ಥಾನವನ್ನು ಭದ್ರಪಡಿಸಿಕೊಂಡ ಹೊರತು ಯಾವ ರಾಜಿ ಸಂಧಾನವೂ ಅಸಾಧ್ಯವೆಂದು ಹಿಟ್ಲರನು ತೀರ್ಮಾನಿಸಿದನೆಂದೂ ಹೇಳಲಾಗಿದೆ

ಜಪಾನ್ ಮೇಲೆ ಬೀಳುವಂತೆ ರಷ್ಯವನ್ನು ಕೇಳಲಾಗದು

ರಷ್ಯವು ಜಪಾನಿನ ಮೇಲೆ ಯುದ್ಧಹೂಡುವಂತೆ ಮಾಡಲು ಅಮೆರಿಕಾಕ್ಕೆ ಸಾಧ್ಯವಿಲ್ಲವೆಂದು ರೂಜ್‌ವೆಲ್ಟರು ತಿಳಿಸಿದರು ಸೆನೆಟ್ ಸಭೆಯ ರಹಸ್ಯಾಧಿವೇಶನದಲ್ಲಿ ಮಾಡಲ್ಪಟ್ಟ ಆಪಾದನೆಗೆ ಉತ್ತರವಾಗಿಯೇ ಅವರು ಹಾಗೆಂದುದು ಈಗ ಅಮೆರಿಕವು ಸೈಬೀರಿಯಾ ಬಲಮೂಲಗಳನ್ನು ಉಪಯೋಗಿಸುವಂತಾದರೆ ೧೦ ಲಕ್ಷ ಅಮೆರಿಕನರ ಪ್ರಾಣಗಳನ್ನು ಉಳಿಸಬಹುದೆಂದು ಸೆನೆಟರ್ ಲಾಡ್ಜ್‌ರವರು ಕೊಟ್ಟ ಹೇಳಿಕೆಗೆ ಪ್ರತ್ಯುತ್ತರವಿದು ಸೈಬೀರಿಯಾ ಮೂಲಗಳನ್ನು ಮಿತ್ರದೇಶಗಳ ಬಳಕೆಗೆ ರಷ್ಯವು ಬಿಟ್ಟುಕೊಟ್ಟರೆ ಜಪಾನು ರಷ್ಯನರ ಮೇಲೆ ಬೀಳುವುದು ಖಂಡಿತವೆಂದು ರೂಜ್‌ವೆಲ್ಟರು ಎಚ್ಚರಿಸಿದರು ಪ್ರತಿತಿಂಗಳೂ ಅಮೆರಿಕನ್ ಸಬ್‌ಮೆರೀನ್‌ಗಳು ಹೆಚ್ಚುಕಡಿಮೆಯಾಗಿ ೧,೩೦,೦೦೦ ಟನ್ನುಗಳಷ್ಟು ಜಪಾನ್ ಹಡಗುಗಳನ್ನು ಮುಳುಗಿಸುತ್ತಿವೆಯೆಂದು ತಿಳಿಸಿದರು

ಮಾಸ್ಕೋ ಸಮ್ಮೇಳನದ ಪ್ರಶ್ನೆಗಳು

ಮೆಡಿಟರೇನಿಯನ್ ಕಮಿಷನ್ನಿನ ಪ್ರಥಮ ಸಭೆಗೆ ಸಿದ್ಧತೆ ನಡೆದಿದೆ ಇನ್ನು ಕೆಲವು ಕಾಲದೊಳಗಾಗಿ ಬ್ರಿಟನ್ ಅಮೆರಿಕ, ರಷ್ಯಾ ಮತ್ತು ರಾಷ್ಟ್ರೀಯ ಫ್ರೆಂಚ್ ಸಮಿತಿಯ ಪ್ರತಿನಿಧಿಗಳು ಆಲ್ಜಿಯರ್ಸ್‌ನಲ್ಲಿ ಕಾರ್ಯಾರಂಭಮಾಡುವರು ಆದರೆ ಮಾಸ್ಕೋದಲ್ಲಿ ಸೇರಲಿರುವ ಮೂರು ದೇಶಗಳ ವಿದೇಶ ಖಾತಾ ಮಂತ್ರಿಗಳ ಸಭೆ ಅತಿ ಪ್ರಮುಖವಾದುದು ಸಂಯುಕ್ತ ದೇಶಗಳ ನೀತಿಗೆ ಸಂಬಂಧಪಟ್ಟ ಮೂಲ ಪ್ರಶ್ನೆಗಳು ಅಲ್ಲಿ ಇತ್ಯರ್ಥವಾಗುವುವು ಮಾಸ್ಕೋ ಸಮ್ಮೇಳನವು ಈ ತಿಂಗಳ ಮಧ್ಯಭಾಗದಲ್ಲಿ ಆರಂಭವಾಗಿದೆ ಅದು ಒಂದೆರಡುವಾರ ನಡೆಯಬಹುದು ಸ್ಟಾಲಿನ್, ರೂಜ್‌ವೆಲ್ಟ್ ಮತ್ತು ಚರ್ಚಿಲ್ಲರ ಸಮ್ಮೇಳನಕ್ಕಿದು ಮೊದಲನೆಯ ಹೆಜ್ಜೆ ಫಿನ್‌ಲೆಂಡ್ ಮತ್ತು ಬಾಲ್ಟಿಕ್ ದೇಶಗಳ ಮತ್ತು ಪೋಲೆಂಡ್ ಗಡಿಯ ಪ್ರಶ್ನೆಯನ್ನು ಅಮೆರಿಕಾ ಪ್ರತಿನಿಧಿಗಳೆತ್ತುವುದು ಖಂಡಿತ ಬಾಲ್ಕನ್ಸ್ ಮತ್ತು ಮಧ್ಯಯೂರೋಪಿನಲ್ಲಿ ಮಿತ್ರದೇಶಗಳ ಉದ್ದೇಶವೇನೆಂದು ರಷ್ಯವು ಕೇಳುವುದರಲ್ಲಿ ಆಶ್ಚರ್ಯವೇನಿಲ್ಲ ಜರ್ಮನಿ ಮತ್ತು ಫ್ರಾನ್ಸ್‌ಗಳ ಭವಿಷ್ಯ ಕುರಿತ ರಷ್ಯದ ಅಭಿಪ್ರಾಯವನ್ನು ತಿಳಿಯಲು ಕಾರ್ಡೆಲ್ ಹಲ್ಲರೂ ಏಡನ್ನರೂ ಯತ್ನಿಸುವುದು ನಿಶ್ಚಯ ಸಾಮಾನ್ಯವಾಗಿ ಯೂರೋಪಿಗೆ ಅನ್ವಯಿಸುವ ನೀತಿಯನ್ನು ಮಿತ್ರ ಜನಾಂಗಗಳೊಂದಿಗೆ ಚರ್ಚಿಸಲು ರಷ್ಯಾ ಸಿದ್ಧವಿದೆ ಆದರೆ ಗಡಿ ವಿಚಾರದಲ್ಲಿ ಮಾತ್ರ ನೆರೆಯವರೊಂದಿಗಲ್ಲದ ಇತರರ ಸಂಗಡ ವ್ಯವಹರಿಸುವ ಇಷ್ಟವು ಅದಕ್ಕಿದ್ದಂತೆ ಕಾಣುವುದಿಲ್ಲ ಪೋಲಂಡಿನ ಪ್ರಶ್ನೆಯನ್ನಂತೂ ತತ್‌ಕ್ಷಣ ಬಿಡಿಸುವುದು ಅಗತ್ಯವಾಗಿದೆ ಏಕೆಂದರೆ ರಹಸ್ಯವಾಗಿ ಕೆಲಸಮಾಡುತ್ತಿರುವ ಪೋಲೆಂಡಿನ ಮಿಲಿಟರಿ ದಳದವರಿಗೂ, ರಷ್ಯಾ ಸಹಾನುಭೂತಿಗಾರರಿಗೂ ವಿದ್ವೇಷವು ತುಂಬಾ ಬೆಳೆದಿದೆ ರಷ್ಯನ್ ಸೇನೆ ಪೋಲೆಂಡ್ ಹೊಕ್ಕರೆ ಅಡಗಿ ಕುಳಿತಿರುವ ಈ ಪೋಲೆಂಡ್ ಸೈನ್ಯವು ರಷ್ಯನರ ಮೇಲೆ ಬೀಳಬಹುದೆಂಬ ಶಂಕೆ ಬಲವಾಗಿದೆ ಎಂದು ಹೇಳಲಾಗಿದೆ

ಶತ್ರುವಿನ ಏಜೆಂಟರುಗಳು

ಈಚೆಗೆ ಇಂಡಿಯದ ಒಂದಾನೊಂದು ಸಂಸ್ಥಾನದ ತೀರಪ್ರದೇಶದಲ್ಲಿ ಶತ್ರುವಿನ ಒಂದು ಸಬ್‌ಮೆರೈನ್ ಮೂಲಕ ಹಲವು ಮಂದಿ ಶತ್ರು ಏಜಂಟರುಗಳು ಬಂದಿಳಿದರೆಂದೂ ಅವರನ್ನೆಲ್ಲ ಬಂಧಿಸಲಾಯಿತೆಂದೂ ವೈಸರಾಯ್ ಲಾರ್ಡ್ ಲಿನ್‌ಲಿತ್‌ಗೋರವರು ನರೇಂದ್ರ ಮಂಡಲದಲ್ಲಿ ಭಾಷಣಮಾಡಿದಾಗ ತಿಳಿಸಿದರು

ಮದರಾಸು ಮುತ್ತಿಗೆ

ಮದರಾಸಿನ ಮೇಲೆ ಬಾಂಬು ಹಾಕಿದ್ದು ಒಂದೇ ಒಂದು ವಿಮಾನ ಸಿವಿಲಿಯನರಲ್ಲಿ ಅಲ್ಪಮಂದಿ ಅಪಾಯಕ್ಕೆ ಒಳಗಾದರು. ಪುರಜನರು ಇದರಿಂದ ಸ್ವಲ್ಪವೂ ಎದೆಗೆಟ್ಟಿಲ್ಲ ನಗರದಲ್ಲಿ ವ್ಯಾಪಾರೋದ್ಯಮವು ಎಂದಿನಂತೆ ನಡೆಯುತ್ತಿದೆ ನಗರವನ್ನು ಬಿಟ್ಟುಹೋಗುವ ಮನಸ್ಸು ಯಾರಿಗೂ ಇಲ್ಲವೆಂದು ಪ್ರಕಟವಾಗಿದೆ

ಮದರಾಸಿನಲ್ಲಿ ಪ್ರವಾಹ

ಇತ್ತೀಚೆಗೆ ಬಂದ ಪ್ರವಾಹದ ಹೊಡೆದಾಟದಿಂದ ಮದರಾಸು ಈಗತಾನೆ ಎಚ್ಚೆತ್ತುಕೊಳ್ಳುತ್ತಿದೆ ಕೆರೆಗಳು ಒಡೆಯಲು ಕಾರಣವೇನೆಂಬುದನ್ನು ವಿಚಾರಮಾಡಬೇಕೆಂದು ಸರಕಾರವು ಆಜ್ಞೆಮಾಡಿದೆ ಜನರಿಗೆ ನೀಡುವ ಕಾರ್ಯನಡೆದಿದೆ ೬ ದಿನಗಳಲ್ಲಿ ಮದರಾಸು ನಗರದಲ್ಲಿ ೩೦ ಅಂಗುಲ ಮಳೆ ಆಯಿತು ! ಕಳೆದವಾರ ಮದರಾಸಿನ ದೃಶ್ಯವನ್ನು ನೆನಸಿಕೊಂಡರೆ ಮೈ ಜುಂ ಎನ್ನುತ್ತದೆ ಆದರೆ ಪ್ರಾಣಹಾನಿಯೇನೂ ಅಷ್ಟಾಗದಿರುವುದು ಅದೃಷ್ಟವೇ ಸರಿ ಪೌರಸಭೆಯ ಶಾಲೆಗಳನ್ನೆಲ್ಲ ಒಂದು ವಾರ ಮುಚ್ಚಲಾಗಿದೆ ಪ್ರವಾಹದಿಂದ ನಿಲ್ಲಲು ಸ್ಥಳವಿಲ್ಲದವರಿಗೆ ಈ ಶಾಲೆಗಳಲ್ಲಿ ಬಿಡಾರ ಏರ್ಪಡಿಸಿದೆಯೆಂದು ಪ್ರಕಟವಾಗಿದೆ

ಸನ್ಮಾನ ಸಭೆ

ವೀರಶೈವಸಮಾಜೋದ್ಧಾರ ಮತ್ತು ಇತರ ಸಾರ್ವಜನಿಕ ಸಹಾಯಕ್ಕಾಗಿ ೮೦,೦೦೦ ರೂ ನ್ನು ಉದಾರವಾಗಿ ದಾನಮಾಡಿರುವ ಡಾ॥ ಟಿ ಎಸ್ ಸಿದ್ದಪ್ಪನವರಿಗೆ ತಾ ೧೩ ೧೦ ೪೩ ರಲ್ಲಿ ಮೈಸೂರು ಸಂಸ್ಥಾನದ ವೀರಶೈವ ಸಂಘದವರು ಬಿನ್ನವತ್ತಳೆಯನ್ನು ಅರ್ಪಿಸಿ ಗೌರವಿಸಿದರು ಶಿಕ್ಷಣ ಸಚಿವರಾದ ಶ್ರೀ ಜೆ ಅಪ್ಪಾಜಿಗೌಡರು ಆಕಾಲದಲ್ಲಿ ಸಭಾಧ್ಯಕ್ಷತೆಯನ್ನು ವಹಿಸಿದ್ದರು

ಗೋವಧೆ ನಿಲ್ಲಿಸಬೇಕು

ಮೈಸೂರು ಸಂಸ್ಥಾನದಲ್ಲಿ ಗೋವಧೆಯನ್ನು ನಿರೋಧಿಸಿ, ಒಂದು ಕಾನೂನು ತರಬೇಕೆಂಬ ನಿರ್ಣಯವು ಈ ಸಲದ ಪ್ರ ಪ್ರ ಸಭೆಯಲ್ಲಿ ೨೦೯ ವೋಟುಗಳಿಂದ ಅಂಗೀಕೃತವಾಯಿತು ವಿರುದ್ಧವಾಗಿ ೩೭ ಮಂದಿ ವೋಟು ಮಾಡಿದ್ದರು

ಸ್ವೀಕಾರ

ಧಾರವಾಡ ಡಿ॥ ನರಗುಂದಪೇಟಾ ಸುರಕೋಡ ಹಿರಿಯಮಠದ ವೇ॥ ಚನ್ನಕವಿಗಳು ತಮ್ಮ ತಾಯಿಯವರು ಮೃತರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ೧ ರೂ ಯನ್ನು ಸಮರ್ಪಿಸಿ ಕಳುಹಿಸಿರುತ್ತಾರೆ

ಶಿವಮೊಗ್ಗ ಡಿ॥ ಶಿಕಾರಿಪುರ ತಾ॥ ಸಾಲೂರು ಗ್ರಾಮದ ಮ॥ ರಾ॥ ನೇಮತಿ ಹಕ್ಲೂರ ಶಿವಲಿಂಗಪ್ಪಶೆಟ್ಟರು ತಮ್ಮ ಮನೆಯಲ್ಲಿ ನೆರವೇರಿಸಿದ ಶ್ರೀಸಿದ್ಧಿವಿನಾಯಕಪೂಜಾ ಮಹೋತ್ಸವ ಸಮಾರಂಭಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ ೨ ರೂ ಗಳು ಮ॥ ರಾ॥ ಹೊಸಕೊಪ್ಪದ ಗಿಡ್ಡಪ್ಪಗೌಡರ ದ್ವಾರಾ ತಲಪಿರುತ್ತವೆ

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

(೧ನೇಯ ಪುಟದಿಂದ ಮುಂದುವರಿದುದು.)

ಗಾಗಿಯೂ, ಗುರುಸ್ಥಾನಗಳನ್ನು ಕಟ್ಟಿಸಿರುತ್ತಾರಲ್ಲದೆ, ಅವುಗಳ ಪೂಜೋಪಚಾರಗಳು ಆತಂಕವಿಲ್ಲದೆ ನಿರಂತರ ನಡೆಯಲೆಂಬುದ್ದೇಶದಿಂದ, ತಮ್ಮ ಮನಸ್ಸಿಗೆ ಬಂದಷ್ಟು ಜಹಗೀರುಗಳನ್ನೂ, ಜಮೀನುಗಳನ್ನೂ ಹಾಕಿಕೊಟ್ಟಿರುತ್ತಾರೆ ಇದು ಎಲ್ಲಾ ಮತಸ್ಥರಲ್ಲಿಯೂ ಕಂಡುಬರುತ್ತದೆ ವೀರಶೈವ ಮತದ ಗುರುಸ್ಥಾನಗಳಿಗೆ ಸ್ವಮತದವರಲ್ಲದ, ಪರಮತೀಯರಾದ ಮುಸಲ್ಮಾನ ರಾಜರು ಸಹ ಶಾಸನಗಳನ್ನು ಬರಸಿಕೊಟ್ಟಿರುತ್ತಾರೆ ಆ ಶಾಸನಗಳು ನಮ್ಮ ಪಂಚಪೀಠಗಳಲ್ಲಿಯೂ, ಮಠಗಳಲ್ಲಿಯೂ ಈಗಲೂ ಕಂಗೊಳಿಸುತ್ತಿವೆ ವಾಚಕರ ಅವಗಾಹನೆಗಾಗಿ ಕೆಲವರ ಹೆಸರನ್ನು ಕೆಳಗೆ ಉದಾಹರಿಸುತ್ತೇವೆ ಬಾಣಾಸುರನ ಮಗಳಾದ ಉಷಾದೇವಿಯು ಕೇದಾರಪೀಠದ ಮಠವನ್ನು ಕಟ್ಟಿಸಿರುತ್ತಾಳೆ ಈಗ್ಗೆ ೫॥ ಸಾವಿರ ವರ್ಷಗಳ ಪೂರ್ವದಲ್ಲಿದ್ದ ಜನಮೇಜಯ ಭೂಪಾಲನು ೧೦೦೦ ಗ್ರಾಮಗಳನ್ನು ದಾನ ಮಾಡಿರುತ್ತಾನೆ ಟೆಹರಿ ಮಹಾರಾಜರವರು ಈ ಪೀಠದ ಶಿಷ್ಯರಾಗಿದ್ದಾರಲ್ಲದೆ ಉದಯಪುರ, ಕಾಶ್ಮೀರ, ನೇಪಾಳ ಮೊದಲಾದ ಹದಿಮೂರು ಜನ ಮಹಾರಾಜರು ಈ ಪೀಠಕ್ಕೆ ಪ್ರತಿ ವರ್ಷವೂ ತಪ್ಪದೆ ಕಾಣಿಕೆಯನ್ನು ಸಮರ್ಪಿಸುತ್ತಿರುವರು ಮೊಗಲ ಚಕ್ರವರ್ತಿಗಳಾದ ಬಾಬರ್, ಅಕ್ಬರ್, ಹುಮಾಯೂನ್, ಔರಂಗಜೇಬ್ ಮೊದಲಾದ ಮಹಾರಾಜರು ಸಹ ಪೀಠಾಚಾರ್ಯರಲ್ಲಿ ಅಸಾಧಾರಣವಾದ ಭಕ್ತಿಯನ್ನಿಟ್ಟು, ಕಾಶೀಪೀಠಕ್ಕೆ ಅನೇಕ ಜಹಗೀರುಗಳನ್ನು ದಾನವಾಗಿ ಕೊಟ್ಟಿದ್ದಾರೆ ಇದರ ಬಗ್ಗೆ ಇನ್ನೂ ಹೆಚ್ಚಿಗೆ ತಿಳಿದುಕೊಳ್ಳಬೇಕಾದರೆ ವೇ॥ ಪಂ॥ ಕಾಶೀನಾಥಶಾಸ್ತ್ರಿಗಳವರಿಂದ ವಿರಚಿತವಾದ "ವೀರಶೈವರತ್ನ" ಎಂಬ ಗ್ರಂಥವನ್ನು ಓದಿ ನೋಡಿಕೊಳ್ಳಬೇಕು

ಇನ್ನು ಕೆಲವರು ತಮ್ಮ ಸ್ಥಾನಗಳಿಗೆ ವರ್ಷಕ್ಕೊಮ್ಮೆ ತಮ್ಮ ಗುರುಗಳನ್ನು ಕರೆಯಿಸಿಕೊಂಡಾಗಲಿ ಇಲ್ಲವೆ ತಾವೇ ಅವರ ಪೀಠಕ್ಕೆ ಹೋಗಿಯಾಗಲಿ ಷೋಡಶೋಪಚಾರದಿಂದ ಪೂಜಿಸಿ, ತೀರ್ಥಪ್ರಸಾದವನ್ನು ಸ್ವೀಕರಿಸಿ, ತಮ್ಮ ಶಕ್ತ್ಯನುಸಾರವಾಗಿ ಕಾಣಿಕೆಯನ್ನು ಕೊಟ್ಟು ಅವರ ಉಪದೇಶವನ್ನು ಕೇಳಿ ಪುನೀತರಾಗಿದ್ದಾರೆ ಈ ಪದ್ಧತಿಯು ಕೆಲವರಲ್ಲಿ ಈಗಲೂ ನಡೆಯುತ್ತಿದೆ ವೀರಶೈವ ಮತದಲ್ಲಿಯ ಕೆಲವು ಜನ ನಾಸ್ತಿಕರು ಮಾತ್ರ ಇವರಿಗೆ ಕಾಣಿಕೆಯನ್ನು ಕೊಡಬೇಕೇಕೆ? ಇವರು ಕೈಲಾಸದಿಂದ ಇಳಿದು ಬಂದಿರುವರೇ? ಅವರಿಗೂ ನಮಗೂ ವ್ಯತ್ಯಾಸವೇನು? ಅವರಿಗಿದ್ದ ಅವಯವಗಳು ನಮಗೂ ಇವೆ ಹುಟ್ಟಿದಂದಿನಿಂದ ಸಾಯುವತನಕ ನಡೆಯತಕ್ಕ ಶುಭಾಶುಭ ಕಾರ್ಯಗಳನ್ನು ನಾವೇ ಏಕೆ ಸ್ವತಂತ್ರವಾಗಿ ಮಾಡಬಾರದು? ಅವರಿಗೆ ಮಾತ್ರವೇ ಬರೆದು ಕೊಟ್ಟಿದೆಯೋ? ಎಂದು ಮಾತಾಡುತ್ತಿರುವರು ಗುಣಧರ್ಮವನ್ನರಿಯದೆ ತಾರತಮ್ಯಭಾವವಿಲ್ಲದೆ ಸ್ವರೂಪವು ಒಂದೇ ಆದಮಾತ್ರದಿಂದ ಎಲ್ಲವೂ ಒಂದೇ ಆದೀತೇ? ಮತ್ತೆ ಕೆಲವರು ಗುರುಗಳಿಗೆ ತಾವೂ ಕೊಡುವಂತಿಲ್ಲ, ಕೊಟ್ಟವರಿಗೂ ಸೇರುವಂತಿಲ್ಲ, ಕೊಡುವವರಿಗೂ ಕೊಡಬೇಡವೆಂದು ಉಪದೇಶ ಮಾಡುವರು ಇವರ ಯಜಮಾನರು ಕಟ್ಟಿಸಿಕೊಟ್ಟ ಮಠವನ್ನೂ, ಇನಾಂ ಹಾಕಿಕೊಟ್ಟ ಜಮೀನನ್ನೂ ತಾವೇ ಕಸಿದುಕೊಂಡು ತಮ್ಮ ಅನುಕೂಲವಿದ್ದ ಸ್ಥಾನಕ್ಕೆ ಕೊಡಬೇಕೆಂದು ದುರಾಲೋಚನೆಯನ್ನು ಮಾಡುತ್ತಿರುವರು

ದುಡ್ಡಿನ ಸಪ್ಪಳವಾದ ಕೂಡಲೆ, ಅಳುತ್ತಿರುವ ಸಣ್ಣ ಮಕ್ಕಳೂ ನಗುವರು ಎಂದ ಬಳಿಕ ಅಳುವವರನ್ನು ನಗಿಸುವ ಗುಣವು ದುಡ್ಡಿನಲ್ಲಿದೆ ಎಂಬುದು ಸ್ಪಷ್ಟವಾಗುತ್ತದೆ 'ದುಡ್ಡೇ ದೊಡ್ಡಪ್ಪ' ಎಂದು ಹಿರಿಯರು ಹೇಳುವ ಮಾತು ಸುಳ್ಳಲ್ಲ ಯಾರೇ ಆಗಲಿ ದುಡ್ಡನ್ನು ನೋಡಿದಾಕ್ಷಣವೇ ಸಾತ್ವಿಕ ಮನುಷ್ಯನ ಸ್ಥಿತಿಯು ಸಹ ಬದಲಾಯಿಸುವುದು ದುಡ್ಡು ಕೊಟ್ಟಮಾತ್ರದಿಂದಲೇ ಕುಲಗೇಡಿ ಕುಲವಂತನಾಗಿಯೂ, ನೀಚನು ಉತ್ತಮನಾಗಿಯೂ, ಮೋಸಗಾರನು ಸಾತ್ವಿಕನಾಗಿಯೂ, ಅನ್ಯಾಯ ಮಾಡುವವನು ನ್ಯಾಯವಂತನಾಗಿಯೂ, ಅಸತ್ಯವುಳ್ಳವನು ಸತ್ಯವುಳ್ಳವನಾಗಿಯೂ, ಮೂರ್ಖನು ಪಂಡಿತನಾಗಿಯೂ ಒಟ್ಟಿನಮೇಲೆ ದುರ್ಗುಣಿಯು ಸದ್ಗುಣಿಯಾಗಿಯೂ ತೋರುವನು. ಹಣ ಕೊಡದಿದ್ದರೆ ದೇವರನ್ನೂ, ಗುರುಗಳನ್ನೂ ಸಹ ಲಕ್ಷ್ಯಕ್ಕೆ ತಾರದೆ ಅವರ ಮೇಲೆ ವಕ್ರದೃಷ್ಟಿಯನ್ನಿಟ್ಟು ಆಡಬಾರದ ಮಾತುಗಳನ್ನಾಡುತ್ತ, ಮಾಡಬಾರದ ಕೃತಿಗಳನ್ನು ಮಾಡುತ್ತ ನಾನಾ ಬಗೆಯಿಂದ ಟೀಕಿಸುತ್ತ, ಅವರ ಪ್ರತಿಯೊಂದು ಕಾರ್ಯದಲ್ಲಿ ವಿಘ್ನವನ್ನು ತಂದು ತಾವೂ ಅದಕ್ಕೆ ವಿರುದ್ಧವಾಗಿ ನಿಲ್ಲುತ್ತಾರೆ

ದುಷ್ಟರ ಪ್ರಾಬಲ್ಯವು ಹೆಚ್ಚಾದಾಗ ಅವರನ್ನು ನಾಶಮಾಡುವುದಕ್ಕಾಗಲಿ, ಇಲ್ಲವೆ ಅವರನ್ನು ಶಿಕ್ಷಿಸಿ ಶಿಷ್ಟರನ್ನು ಪಾಡುವುದಕ್ಕಾಗಲಿ, ಬೇರೊಂದು ವ್ಯಕ್ತಿಯನ್ನು ನಿರ್ಮಾಣ ಮಾಡುವುದು ಪರಮಾತ್ಮನ ಸಂಕಲ್ಪವಾಗಿದೆ ಇದರ ಬಗ್ಗೆ ಎಲ್ಲರಿಗೂ ಗೊತ್ತಿದ್ದ ಒಂದು ದೃಷ್ಟಾಂತವನ್ನು ಕೊಡುತ್ತೇನೆ ಈಗ್ಗೆ ಕೆಲವು ವರ್ಷಗಳ ಹಿಂದೆ ರೈತರು ತಮ್ಮ ಹೊಲದ ರಕ್ಷಣೆಗಾಗಿ ಮುಳ್ಳುಗಳ್ಳಿಯನ್ನು ತಮ್ಮ ಹೊಲದ ಬದುವಿಗೆ ಹಚ್ಚುತ್ತಿದ್ದರು ಬರುಬರುತ್ತ ಅದು ಹೊಲವನ್ನು ಆಕ್ರಮಿಸಿ, ಹಚ್ಚಿದ ರೈತನಿಗೇ ನಷ್ಟವನ್ನುಂಟುಮಾಡಲಿಕ್ಕೆ ಹತ್ತಿತು ರೂಪಾಯಿ ಖರ್ಚು ಮಾಡಿ ಕಡಿಸಿದರೂ ಆಗಿನಮಟ್ಟಿಗೆ ನಾಶವಾಗಿ, ವರ್ಷಾರು ತಿಂಗಳಲ್ಲಿ ಮತ್ತೆ ಮೊದಲಿನಂತೆ ಬೆಳೆದುಬಿಡುತ್ತಿತ್ತು ಏನು ಮಾಡಿದರೂ ಅದು ನಾಶವಾಗಲಿಲ್ಲ ಆಗ ಪರಮಾತ್ಮನು ರೈತರ ಮೊರೆಯನ್ನು ಲಾಲಿಸಿ, ಅದರ ಸಂಹರಕ್ಕಾಗಿ ಅಣುವಿನಷ್ಟು ಸೂಕ್ಷ್ಮವಾದ ಒಂದು ಕ್ರಿಮಿಯನ್ನು ನಿರ್ಮಾಣ ಮಾಡಿದನು ಕ್ಷಯರೋಗ ಹತ್ತಿದ ಮನುಷ್ಯನು ಬದುಕುವುದು ಹೇಗೆ ಅಸಾಧ್ಯವೋ ಹಾಗೆಯೇ ಆ ಕ್ರಿಮಿ ಹತ್ತಿದ ಮುಳ್ಳುಗಳ್ಳಿಯ ವಂಶವು ನಿರ್ಮೂಲವಾಗಿ ಹೋಯಿತು, ಸದ್ಯಃ ಸತ್ಪುರುಷರಿಗೆ ವಿಶೇಷ ತ್ರಾಸನ್ನು ಕೊಡುತ್ತಿರುವ ಜನರನ್ನು ನಾಶಮಾಡುವುದಕ್ಕಾಗಲಿ, ಇಲ್ಲವೆ ಶಿಕ್ಷಿಸುವುದಕ್ಕಾಗಲಿ ಪರಶಿವನು ಒಂದು ವ್ಯಕ್ತಿಯನ್ನು ನಿರ್ಮಾಣ ಮಾಡದೆ ಇರಲಾರನು

'ಹರಮುನಿದರೆ ಗುರುಕಾಯ್ವನು' 'ಗುರುಮುನಿದರೆ ಹರಕಾಯಲರಿಯನು' ಎಂಬ ಉಕ್ತಿಯು ಪ್ರಸಿದ್ಧವೇ ಇದೆ "ಗುರುಭಕ್ತಿವಿಹೀನಸ್ಯ ಶಿವಭಕ್ತಿರ್ನಜಾಯತೇ" ಎಂದರೆ ಗುರುಭಕ್ತಿ ಇಲ್ಲದವನಿಗೆ ಶಿವಭಕ್ತಿಯು ಹುಟ್ಟಲಾರದೆಂದು ರೇಣುಕರು ಅಗಸ್ತ್ಯಮಹರ್ಷಿಗೆ ಉಪದೇಶ ಮಾಡಿರುತ್ತಾರೆ

ಧ್ಯಾನಮೂಲಂ ಗುರೋರ್ಮೂರ್ತಿಃ ಪೂಜಾಮೂಲಂ
ಗುರೋಃಪದಂ ।
ಮಂತ್ರಮೂಲಂ ಗುರೋರ್ವಾಕ್ಯಂ ಮುಕ್ತಿಮೂಲಂ
ಗುರೋಃಕೃಪಾ ॥

ಗುರುವಿಗೆ ದ್ರೋಹವೆಣಿಸುವವನು ಇಹಪರ ಸೌಖ್ಯಗಳೆರಡನ್ನೂ ಕಳೆದುಕೊಂಡು ಭೀಕರ ಕಷ್ಟಗಳಿಗೆ ಗುರಿಯಾಗುವುದಲ್ಲದೆ ಶ್ರೀ ಪರಶಿವನ ಕೋಪಕ್ಕೆ ಪಾತ್ರನಾಗುವನು ಆದುದರಿಂದ ಸರ್ವರೂ ಗುರುಭಕ್ತಿಯುಕ್ತರಾಗಿ ಕಾಯೇನ-ವಾಚಾ ಮನಸಾ ಗುರುಸೇವೆಯನ್ನು ಮಾಡುವುದರ ಮೂಲಕ ಹರಗುರುಕೃಪೆಗೆ ಪಾತ್ರರಾಗಿ ಮುಕ್ತರಾಗಬೇಕು

ಯುದ್ಧಾನಂತರದ ಪುನರ್ವ್ಯವಸ್ಥೆ

ಮೈಸೂರು ನಗರದಲ್ಲಿ ರಾಷ್ಟ್ರೀಯ ರಕ್ಷಣಾಬಲ ವ್ಯವಸ್ಥೆಯ ವಾರ್ಷಿಕೋತ್ಸವದ ಸಂಬಂಧದಲ್ಲಿ, ಕೈಗಾರಿಕೆ ಮತ್ತು ಸರಬರಾಯಿ ಸಚಿವರಾದ ಶ್ರೀ ಎಂ ಎ ಶ್ರೀನಿವಾಸನ್ ಅವರು ಭಾಷಣಮಾಡುತ್ತ—ಯುದ್ಧದಿಂದ ನಾವು ಹಲವು ವಸ್ತುಗಳನ್ನು ಕಳೆದುಕೊಂಡಿರುತ್ತೇವೆ. ಕೆಲವು ವಸ್ತುಗಳು ನಮಗೆ ದೊರೆತೂ ಇವೆ ನಮಗೆ ಯುದ್ಧವು ಹೊಸ ಹೊಸ ಭಾವನೆಗಳನ್ನೂ ಕೊಟ್ಟಿವೆ. ಇವುಗಳಲ್ಲಿ ಹಲವು ಬಹಳ ಸ್ವಾರಸ್ಯವಾಗಿರುವುವೂ ಅಲ್ಲದೆ ಬಹಳ ಎಚ್ಚರಿಕೆಯಿಂದ ಯೋಜನೆ ಮಾಡುವಂತಹವುಗಳಾಗಿವೆ ಇವುಗಳಲ್ಲಿ ಯುದ್ಧಾನಂತರ ನಾಡಿನ ಪುನರ್ವ್ಯವಸ್ಥೆಯೂ ಸಹ ಒಂದು. ಅದೇ ಅತ್ಯಂತ ಮುಖ್ಯವಾದ ಮತ್ತು ಜನಾದರಣೀಯವಾದ ಸಮಸ್ಯೆಯಾಗಿದೆ. ಅದಕ್ಕೆ ನಾವು ಬಹಳ ಗಾಢವಾಗಿ ಮುಂದಿನ ಸ್ಥಿತಿಗತಿಗಳ ಬಗ್ಗೆ ಪರ್ಯಾಲೋಚಿಸಬೇಕಾಗಿದೆ. ಆದರೆ ಕೇವಲ ಆಕರ್ಷಣೀಯವಾದ ಹೆಸರುಗಳಿಂದ ನಾವು ಮೋಸಹೋಗಕೂಡದು ಉದಾಹರಣೆಗೆ ಮದರಾಸಿನ ಹಿಂದೂ ಪತ್ರಿಕೆಯಲ್ಲಿ, "ಪ್ರಪಂಚದ ಪುನರ್ವ್ಯವಸ್ಥೆಗೆ ಹಿಂದೂ ವ್ಯವಸ್ಥೆ" ಎಂಬ ಜಾಹೀರಾತು ಪ್ರಕಟವಾಗಿರುವುದನ್ನು ನಿಮ್ಮ ಗಮನಕ್ಕೆ ತರುತ್ತೇನೆ.

ಮೈಸೂರಿನ ಸಮಸ್ಯೆಗಳು

ಇಂಗ್ಲೆಂಡು ಅಥವಾ ಯೂರೋಪಿನ ಇತರ ದೇಶಗಳಲ್ಲಿ ಪುನರ್ವ್ಯವಸ್ಥೆಯ ಕ್ರಮಕ್ಕೂ ನಮ್ಮ ನಾಡಿನ ಪುನರ್ವ್ಯವಸ್ಥಾ ಕ್ರಮಕ್ಕೂ ವ್ಯತ್ಯಾಸವಿಲ್ಲ. ಯುದ್ಧಾನಂತರ ಪುನರ್ವ್ಯವಸ್ಥೆಯಲ್ಲಿ ನಾವು ಇತರ ಪ್ರದೇಶಗಳಂತೆ ಕೆಲವು ಏರ್ಪಾಡುಗಳನ್ನು ನಾಶಮಾಡಬೇಕಾದ ಪ್ರಸಂಗವು ಬರುವುದಿಲ್ಲ. ನಾವು ಪುನರ್ವ್ಯವಸ್ಥೆಗಿಂತ ವ್ಯವಸ್ಥೆಯನ್ನೇ ಹೆಚ್ಚಾಗಿ ಮಾಡಬೇಕಾಗಿದೆ ಹೆಚ್ಚು ವೇಗದಲ್ಲಿ ನಮ್ಮ ಪ್ರಗತಿಯನ್ನು ಸಾಧಿಸಿಕೊಳ್ಳಬೇಕಾಗಿದೆ ಯುದ್ಧದಿಂದ ದೊರೆತ ಅನುಭವವನ್ನೂ ಯುದ್ಧಾನಂತರ ಈಗಿನ ಕೆಲವು ಪ್ರತಿಬಂಧಕಗಳು ನಿವಾರಣೆಯಾಗಿ ಕಾರ್ಯಾಚರಣೆಗೆ ಹೆಚ್ಚಿನ ಅನುಕೂಲವಿರುವ ಸನ್ನಿವೇಶವನ್ನೂ ಸಹ ಉಪಯೋಗಿಸಿಕೊಳ್ಳಬೇಕಾಗಿದೆ. ಆದುದರಿಂದ ನಾವು ಪುನರ್ವ್ಯವಸ್ಥೆ ಎಂದರೇನು ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಂಡು, ಈಗಿನಿಂದಲೇ ಆ ವ್ಯವಸ್ಥಾಕ್ರಮದ ರೂಪರೇಷೆಯನ್ನೇ ತಯಾರಿಸಿಕೊಳ್ಳಬೇಕು ಪುನರ್ವ್ಯವಸ್ಥಾಕ್ರಮದ ಬಗ್ಗೆ ಹಲವು ಯೋಜನೆಗಳು ನಮ್ಮ ಪರ್ಯಾಲೋಚನೆಗೆ ಬರುತ್ತವೆ ಅವರಲ್ಲಿ ರಾಜಕೀಯ ವ್ಯವಸ್ಥೆಯು ಬಹಳ ಮುಖ್ಯವಾಗಿದೆ. ಆದರೆ ರಾಜಕೀಯ ವಿಷಯದಲ್ಲಿ ಸ್ವರ್ಣಾಕ್ಷರದಲ್ಲಿ ಬರೆಯುವಂತಹ ಸನ್ನಿವೇಶವೊದಗಲೆಂದು ನಾನು ಹಾರೈಸುತ್ತೇನೆ.

ನಿಮಗೆಲ್ಲರಿಗೂ ತಿಳಿದಿರುವಂತೆ, ಯುದ್ಧಾನಂತರ ಭಾರತಕ್ಕೆ ಸ್ವಾತಂತ್ರ್ಯವು ದೊರೆಯಬಹುದೆಂಬ ಭರವಸೆಯು ದೊರೆತಿದೆ ನಾವು ಈಗ ನಮ್ಮಲ್ಲಿರುವ ಪರಸ್ಪರ ಭಿನ್ನಾಭಿಪ್ರಾಯಗಳನ್ನು ನಿವಾರಿಸಿಕೊಂಡು ಐಕಮತ್ಯವನ್ನು ಸಾಧಿಸಿ ಶಕ್ತರಾಗಬೇಕು. ಮುಂದೆ ಬರುವ ಸ್ವಾತಂತ್ರ್ಯವನ್ನು ಪಡೆಯಲು ತಕ್ಕ ಅಸ್ತಿಭಾರವನ್ನು ಹಾಕಬೇಕು. ಆರ್ಥಿಕ ವಿಷಯದಲ್ಲಿ ನಮ್ಮ ನಾಡಿನ ಕೈಗಾರಿಕೆಗಳು ಬೆಳೆಯಬೇಕಾಗಿವೆ ಹೊಸದಾಗಿ ಕೆಲವು ಮೂಲ ಕೈಗಾರಿಕೆಗಳು ಸ್ಥಾಪಿತವಾಗಬೇಕಾಗಿವೆ ವ್ಯವಸಾಯಾಭಿವೃದ್ಧಿ, ವಿದ್ಯಾಭ್ಯಾಸ, ಸಮಾಜದ ಹಿತರಕ್ಷಣೆಗಳಿಗೆ ಸಹ ಹೊಸ ಯೋಜನೆಗಳನ್ನು ತಯಾರಿಸಬೇಕಾಗಿದೆ ಈ ಯೋಜನೆಗಳನ್ನು ತಯಾರಿಸುವುದು ಎಷ್ಟು ಹಿತಕರವೋ ಅಷ್ಟು ಕಷ್ಟಕರವೂ ಆಗಿ ಇದಕ್ಕೆ ನಮ್ಮ ಬುದ್ಧಿಶಕ್ತಿಗಳೆಲ್ಲವನ್ನೂ ವಿನಿಯೋಗಿಸಬೇಕಾಗಿದೆ ಎಂದು ತಿಳಿಸಿದರು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣದಂತಿರುವುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ದ್ವಿಜ್ಞಾನಿಗಳಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯ ಇದರಂತೆ ಗ್ರಂಥಗಳಿಲ್ಲ ಇದು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸವಾ ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ ಶ್ರೀಶಿವಯೋಗಿಶಿವಾಚಾರ್ಯರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮಾತ್ರಕ್ಕೆ ಇತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ಇತರರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೪೪೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ರೇಖಾಚಿತ್ರವೂ ಮನೋಹರವಾದ ಭಾವಚಿತ್ರಗಳೂ ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್
ಮೈಸೂರು.

ಮೈಸೂರು ಸಯ್ಯಾಜಿ ರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

EGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತಾಃ ಪಂಚಾಸ್ಯಪೀಠಾಧಿಪಾಃ । ಪಂಚಕ್ಲೇಶವಿನಾಶಕಾಃ ಪರಶಿವಶ್ರೀಪಂಚಲಿಂಗೋದ್ಭವಾಃ ॥
ಪಂಚಾಚಾರನಿಯಾಮಕಾಃ ಪರಿಲಸತ್ಪಂಚಾಕ್ಷರೀಬೋಧಕಾಃ । ಪಂಚಾಚಾರ್ಯಜಗದ್ಗುರೂತ್ತಮವರಾಃ ಪಾಲಿಂತ್ವಿದಂ ಲೋಕಕಂ ॥

ಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ.

ಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೫ನೇ ಅಕ್ಟೋಬರ್ ೧೯೪೩ [ಸಂಚಿಕೆ ೨೫

ಶ್ರೀ ಶಾರದಾಮಹೋತ್ಸವ ಸಮಾರಂಭ ಸೊಲ್ಲಾಪುರ

ತಾ॥ ೧೧-೧೦-೪೩ ನೆಯ ದಿವಸ ಸೊಲ್ಲಾಪುರದ ಶ್ರೀಮದ್ವೀರಶೈವ ಗುರುಕುಲದಲ್ಲಿ ಸಾಯಂಕಾಲ ೬ ಗಂಟೆಗೆ ಡಾ॥ ಜಗದೇವರಾವ ದೇಶಮುಖ ಇವರ ಅಧ್ಯಕ್ಷತೆಯಲ್ಲಿ ಶ್ರೀ॥ ಷ॥ ಬ್ರ॥ ಸಂಬಿಮಠದ ಶ್ರೀಗಳವರು ಶ್ರೀ॥ ಷ॥ ಬ್ರ॥ ಜೈನಾಪುರ, ವೇ॥ ಶಂ॥ ಮಣೂರ ಶಾಸ್ತ್ರಿ, ಶ್ರೀ ಮಾನ್ಯರುಗಳಾದ ಮುತ್ತಪ್ಪ ಮೆಂಗಾಣೆ, ಚಂದ್ರಶೇಖರಪ್ಪ ವಾಕಳೆ, ರೇವಣಸಿದ್ದಪ್ಪ ಹಿರೆಹಬ್ಬು, ಬಾಬು ದಗೊಂಡಪಾಟೀಲ, ಶಿವಲಿಂಗಪ್ಪ ಮಾಳಿಗೆ, ಚನ್ನಬಸಪ್ಪ ಗಾಣಾಪುರ, ಇವರೇ ಮೊದಲಾದ ಪುರಪ್ರಮುಖರು ಸಭೆಯಲ್ಲಿ ಸೇರಿದ್ದ ಮೊದಲು ಗುರುಕುಲದ ಹಿರಿಯ ವಿದ್ಯಾರ್ಥಿಗಳಾದ ಶ್ರೀ ರುದ್ರಮುನಿ ಶಿವಾಚಾರ್ಯ, ಅಣ್ಣಿಗೇರಿ ಇವರಿಂದ "ರಮೆಯು ನೆಲೆಸುವಳೋ?" ಮತ್ತು ಶ್ರೀಸ್ವಾಮಿ ಪಟ್ಟದ ಕುಣಸಿಗಿ ಇವರಿಂದ "ಶಾರದೆಯು ಮೆಚ್ಚುವಳೋ?" ಇಂತಹ ಚಮತ್ಕಾರಿಕವಾದ ರಮಾ ಶಾರದೆಯರ ಕೀರ್ತಿಲಕ್ಷ್ಮಿಯ ವಿಷಯವಾಗಿ ದೇವ ಭಾಷೆಯಲ್ಲಿ ಭಾಷಣವಾದಮೇಲೆ ಗುರುಕುಲದ ನಾಯಕರಾದ ಶ್ರೀ ಬಾಲಶಾಸ್ತ್ರಿಗಳು ಆವರಿರ್ವರ ಭಾಷಣವನ್ನು ಮತ್ತು ಸೋಮಶೇಖರ ದಿಂಡೂರು ಇವರ ಭಾಷಣವನ್ನು ತಿಳಿಯದವರಿಗೆ ತಿಳಿಗನ್ನಡದಿಂದ ಸುಲಭವಾಗಿ ತಿಳಿಯುವಂತೆ ತಿಳಿಸಿದ ಮೇಲೆ ಕೆ ಎಲ್ ಇ ಎಸ್ ಹೈಸ್ಕೂಲಿನ ಪ್ರಿನ್ಸಿಪಾಲರಾದ ಶ್ರೀ ಮಾನ್ಯ ಎಚ್ ಎಫ್ ಕಟ್ಟೀಮನಿ ಬಿ ಎ ಇವರು ತಮ್ಮ ಭಾಷಣದಲ್ಲಿ ಶಕ್ತಿತ್ರಯಿಯರ ವಿಷಯವಾಗಿ ಆದಿಶಕ್ತಿಯನ್ನೇ ಸದಾಚಾರತ್ವದ ಹಿರಿದಾದ ಸ್ಥಾನದಲ್ಲಿರಿಸಿದರು

ಅದೇ ಶಾಲೆಯ [illegible] ಅಧ್ಯಕ್ಷರಾದ ಎ ಎಮ್. ಎಲೇಝಾ ಬಿ. ಎ. ಬಿ. ಟಿ. ಇವರ ಭಾಷಣವಾದೊಡನೆಯೇ ನಮ್ಮ ದೊಡ್ಡ ಗುರುಗಳ ಉದಾತ್ತ ಉಚ್ಚತಮಗಳಾದ ವಿಷಯಗಳಿಂದ ಕೂಡಿದ ಸಂಸ್ಕೃತ ಪ್ರಾಶಸ್ತ್ಯ ವಿಷಯವನ್ನು ಕೇಳಲು ಜನರು ಕಿಕ್ಕಿರಿದು ನೆರೆದು ಕುಳಿತಿದ್ದರು ಅನಂತರ ಅಧ್ಯಕ್ಷರು ತಮ್ಮ ಮಹಾರಾಷ್ಟ್ರೀಯ ಉಜ್ವಲವಾದ ಭಾಷಣದಲ್ಲಿ ಬಂಗಾರದ ಅಚ್ಚುಗಳನ್ನು ಹಾಕಿಸುವಂತೆ ಇರುವ ವಾಕ್ಯಗಳ ಸರಣಿಯೊಂದೊಂದನ್ನು ತಮ್ಮ ಅಮೋಘವಾದ ವಾಗ್ಝರಿಯಿಂದ ಹೊರಸೂಸುತ್ತ ಪಟುಗಳ ಸಂಕುಲದ ಸೃಷ್ಟಿ ಅಲ್ಲದೆ ನೆರೆದ ಜನವನ್ನು ಕೂಡ ಆನಂದಾರ್ಣವದಲ್ಲಿ ಮುಳುಗಿಸಲು ಅವರಿಗೂ ಇನ್ನಿತರಗೂ ಗುರುಕುಲದ ಕಡೆಯಿಂದ ಫಲ, ಹಾಗೂ ತಾಂಬೂಲ ಹೂ ಗಂಧಗಳ ವಿನಿಯೋಗವಾಗಿ ಆಚಾರ್ಯರ ಮಂಗಲ ಜಯಘೋಷಗಳೊಡನೆ ಅಂದಿನ ಕೂಟವು ಮುಗಿಯಿತು

ಈ ಕಾರ್ಯಕ್ಕೆ ಶ್ರೀ ಮಲ್ಲಿಕಾರ್ಜುನಪ್ಪ ಭೋಗಡೇ ಪಾಟೀಲರೂ ಶೇಟೆ ಅಣ್ಣಾರಾವ ಇವರೂ ವಿಶೇಷ ಸಹಾಯವನ್ನಿತ್ತರು.

ಶ್ರೀ ಸ್ವಾಮಿ ಪಟ್ಟದ ಹಿರೇಮಠ ಕುಣಸಿಗಿ

ಒಕ್ಕಟ್ಟಿನ ಮೇಲ್ಮೆ

(ವೇ॥ ಶ್ರೀ ಪಟ್ಟದಸ್ವಾಮಿಗಳು, ಹಿರೇಮಠ, ಕೊಣ್ಣೂರು)

ಒಕ್ಕಟ್ಟೆಂದರೇನು? ಸರ್ವ ಜನರ ಸಮ್ಮತಿಯಿಂದ ಕೈಕೊಂಡ ಯೋಗ್ಯವಾದ ಕಾರ್ಯವನ್ನು ಒಮ್ಮನಸ್ಸಿನಿಂದ ಮಾಡುವುದಕ್ಕೆ ಒಕ್ಕಟ್ಟೆನ್ನುವರು

ಒಕ್ಕಟ್ಟಿನ ಮಹತ್ವ —ಯಾವುದಾದರೊಂದು ರಾಷ್ಟ್ರವಾಗಲಿ, ದೇಶವಾಗಲಿ, ಗ್ರಾಮವಾಗಲಿ, ಮತವಾಗಲಿ, ಧರ್ಮವಾಗಲಿ, ಉನ್ನತಸ್ಥಿತಿಗೆ ಬರಬೇಕಾದರೆ ಸರಳವಾಗಿ ನಡೆಯಬೇಕಾದರೆ ಒಕ್ಕಟ್ಟೇ ಮೂಲ ಕಾರಣವು ಒಕ್ಕಟ್ಟಿನಿಂದ ದೇವಾಲಯ ಮಠ. ಪಾಠಶಾಲೆ ವಾಚನಾಲಯ, ಔಷಧಾಲಯ, ಆಸ್ಪತ್ರೆ, ಕೆರೆ, ಬಾವಿ ಕಾಲುವೆ, ಅನ್ನಛತ್ರ ಇವೇ ಮೊದಲಾದ ದೊಡ್ಡ ದೊಡ್ಡ ಕಾರ್ಯಗಳು ಒಬ್ಬರಿಗೂ ತೊಂದರೆಯಿಲ್ಲದೆ ಸಹಜವಾಗಿ ನಡೆಯುವವು ಒಬ್ಬರಿಗೊಬ್ಬರಿಗೆ ಪ್ರೇಮವು ಬೆಳೆಯುವುದು ಅಸಾಧ್ಯವಾದ ಕಾರ್ಯವು ಕೂಡ ಸಾಧ್ಯವಾಗುವುದು ಒಕ್ಕಟ್ಟೊಂದಿಲ್ಲದಿದ್ದರೆ ಮೇಲೆ ಬರೆದ ಯಾವ ಕಾರ್ಯವೂ ಸರಿಯಾಗಿ ನಡೆಯಲಾರದು ಏಕೆಂದರೆ ಒಂದು ಕಕ್ಷಿಯ ಜನರು ಯಾವುದಾದರೊಂದು ಸತ್ಕಾರ್ಯವನ್ನು ಮಾಡಬೇಕೆಂದರೆ, ಮತ್ತೊಂದು ಕಕ್ಷಿಯ ಜನರು ಆ ಕಾರ್ಯಕ್ಕೆ ಅಡ್ಡಿಯನ್ನುಂಟುಮಾಡುವರು ಹೀಗಾಗಿ ಯಾವ ಕೆಲಸವೂ ಪೂರ್ತಿಯಾಗಲಾರದು ದ್ವೇಷವು ಮಾತ್ರ ದಿನಕ್ರಮೇಣ ಬೆಳೆಯುತ್ತ ಪರಸ್ಪರ ಪ್ರೇಮವು ದೂರವಾಗುತ್ತ ಅನೇಕ ವಿಧವಾದ ಕಷ್ಟನಷ್ಟಗಳನ್ನು ಹೊಂದುವ ಪ್ರಸಂಗವು ಬರುವುದು. ಇಂಗ್ಲೆಂಡು, ಅಮೆರಿಕ, ಜಪಾನ್, ಜರ್ಮನಿ ಮೊದಲಾದ ರಾಷ್ಟ್ರಗಳು ಉನ್ನತಸ್ಥಿತಿಗೆ ಬರಬೇಕಾದರೆ, ರಾಜಕೀಯ, ಸಾಮಾಜಿಕ, ಧಾರ್ಮಿಕ ಕಾರ್ಯಗಳು ಸರಳವಾಗಿ ನಡೆಯಬೇಕಾದರೆ, ಅಲ್ಲಿಯ ಜನರು ಒಕ್ಕಟ್ಟಿನಿಂದಿರುವುದೇ ಮೂಲವು ನಮ್ಮ ಹಿಂದುಸ್ಥಾನವು ಇಷ್ಟು ಹೀನಾವಸ್ಥೆಗೆ ಬರಬೇಕಾದರೆ ಒಕ್ಕಟ್ಟಿಲ್ಲದಿರುವುದೇ ಕಾರಣ ಕೆಲವರು ಹೀಗೆ ಆಕ್ಷೇಪಿಸುವರು — ಪರರಾಷ್ಟ್ರಗಳಲ್ಲಿ ಅನೇಕ ಮತಗಳೂ, ಜಾತಿಗಳೂ ಇಲ್ಲದೆ ಒಂದೇ ಮತವಿರುವುದರಿಂದ, ಅಲ್ಲಿ ಒಕ್ಕಟ್ಟು ಸರಳವಾಗಿ ನಡೆಯುತ್ತದೆ ನಮ್ಮಲ್ಲಿ ಬಹು ವಿಧ ಮತಗಳೂ ಜಾತಿಗಳೂ ಇರುವುದರಿಂದ ಒಕ್ಕಟ್ಟು ಸರಿಯಾಗಿ ನಡೆಯುವುದಿಲ್ಲ ಎನ್ನುವರು ಹೀಗೆ ಮಾತಾಡುವುದು ಮೂರ್ಖತನವಲ್ಲದೆ ಬೇರೊಂದಲ್ಲ ಏಕೆಂದರೆ ಜಾತಿ ಮತಗಳು ಅಸಂಖ್ಯಾತವಿದ್ದರೂ ತಮ್ಮ ತಮ್ಮ ಧರ್ಮದಂತೆ ನಡೆಯಬೇಕು ನಿಮ್ಮ ನಿಮ್ಮ ಜಾತಿ ಧರ್ಮಗಳನ್ನು ಬಿಡಿರೆಂದು ಯಾರೂ ಹೇಳುವುದಿಲ್ಲ. ಅವು ಒಕ್ಕಟ್ಟಿನಿಂದ ಸಾರ್ವಜನಿಕ ಹಿತದ ಕಾರ್ಯವನ್ನು ಮಾಡಲಿಕ್ಕೆ ಯಾವ ತರದ ಅಡ್ಡಿಯನ್ನೂ ಉಂಟುಮಾಡುವುದಿಲ್ಲ ಪ್ರತಿಯೊಬ್ಬರೂ ತಮ್ಮ ತಮ್ಮ ಧರ್ಮದಂತೆ ನಡೆದು ಸಾರ್ವಜನಿಕ ಹಿತದ ಕಾರ್ಯದಲ್ಲಿ ಮನಸ್ಸುಕೊಟ್ಟು ಹುರುಪಿನಿಂದ ಕೆಲಸ ಮಾಡಿದರೆ ಯಾವ ಕಾರ್ಯವಾದರೂ ಸರಳವಾಗಿ ನಡೆದು ಉನ್ನತಸ್ಥಿತಿಯನ್ನು ಹೊಂದಲಿಕ್ಕೆ ಅಡ್ಡಿಯಿಲ್ಲ ಹೀಗೆ ಮಾಡುವುದನ್ನು ಬಿಟ್ಟು ತಮ್ಮ ಗೌರವ ಪ್ರತಿಷ್ಠೆಗಾಗಿಯೂ, ಸ್ವಾರ್ಥಸಾಧನೆಗಾಗಿಯೂ, ತಮ್ಮ ವ್ಯಕ್ತಿ ದ್ವೇಷಗಳನ್ನು ಸಾಧಿಸುವುದಕ್ಕಾಗಿಯೂ ಕಾರ್ಯದಲ್ಲಿ ಒಡಕನ್ನು ಹುಟ್ಟಿಸುತ್ತಾರೆ "ಕುಣಿಯಲಿಕ್ಕೆ ಬಾರದವಳು ಅಂಗಳ ಡೊಂಕು" ಎಂಬಂತೆ ಒಕ್ಕಟ್ಟಿನಿಂದಿರಲಿಕ್ಕೆ ತಮಗೆ ಬಾರದಿದ್ದರೆ ಆ ನಿರಾಪರಾಧಿಗಳಾದ ಜಾತಿ ಧರ್ಮಗಳೇನು ಮಾಡಿಯಾವು?

ಸರ್ವ ಜನರೂ ಒಕ್ಕಟ್ಟಾಗಿ ಸಾರ್ವಜನಿಕ ಹಿತದ ಕಾರ್ಯದಲ್ಲಿಯೇ ಹಗಲಿರುಳೂ ಆಲೋಚಿಸುತ್ತ ಪ್ರಯತ್ನಶೀಲರಾದರೆ ಹಿಡಿದ ಪ್ರತಿಯೊಂದು ಕಾರ್ಯವೂ ಪೂರ್ತಿಯಾಗಿ ನಮ್ಮೆಲ್ಲರಿಗೆ ಸುಖವೂ ಲಾಭವೂ ಆಗುವುದು. ದೇವರು ನಮಗೆ ಕೊಟ್ಟ ಜ್ಞಾನಬಲವನ್ನೂ, ಜನಬಲವನ್ನೂ, ಶರೀರ ಬಲವನ್ನೂ ಧನ ಬಲವನ್ನೂ ಸ್ವಹಿತಕ್ಕಾಗಲಿ, ಸಾರ್ವಜನಿಕ ಹಿತಕ್ಕಾಗಲಿ ಉಪಯೋಗಿಸಬೇಕು ಇದೇ ನಿಜವಾದ ಮಾನವನ ಲಕ್ಷಣವು ಇವನ್ನು ಎಂದೂ ದುರುಪಯೋಗಪಡಿಸಿಕೊಳ್ಳಬಾರದು

ಕೆಲವು ಜನರು ಕೂಡಿಕೊಂಡು ತಂತಮ್ಮ ಸ್ವಂತ ಹಿತಕ್ಕಾಗಿಯೂ, ವ್ಯಕ್ತಿ ಹಿತಕ್ಕಾಗಿಯೂ ದರೋಡೆ ಮಾಡುವುದು, ಲೂಟಿಮಾಡುವುದು, ಕೊಲೆ ಮಾಡುವುದು, ಪರಸ್ತ್ರೀಯರನ್ನು ಬಲಾತ್ಕಾರದಿಂದ ಅಪಹರಿಸುವುದು ಇವೇ ಮೊದಲಾದ ನೀಚಕೃತ್ಯಗಳನ್ನು ಮಾಡುತ್ತ ಜನರಿಗೆ ಕಷ್ಟ ನಷ್ಟಗಳನ್ನುಂಟುಮಾಡುವುದು ರಾಕ್ಷಸ ಕೃತ್ಯವಲ್ಲದೆ ಮಾನವನ ಲಕ್ಷಣವಲ್ಲ

ಹಿಂದಕ್ಕೆ ರಾಕ್ಷಸರಾದವರೂ ಒಕ್ಕಟ್ಟಾಗಿ ದೇವತೆಗಳಿಗೆ ವಿಶೇಷ ಹಿಂಸೆಕೊಡುತ್ತಿದ್ದರು ಇವರು ಮಾಡುವ ಉದ್ಧಟತನವನ್ನು ಕಂಡು ಪರಮಾತ್ಮನು ಸಹಿಸಲಾರದೆ ಕೋಪಿತನಾಗಿ ಅವರಿಗೆ ತಕ್ಕ ಶಿಕ್ಷೆಯನ್ನು ಮಾಡುತ್ತ ಬಂದಿರುವನೆಂದು ಪುರಾಣೇತಿಹಾಸಗಳಿಂದ ಕೇಳುತ್ತೇವೆ ಧರ್ಮ ವಿರೋಧಕಾರ್ಯವು ಯಾವ ಕಾಲದಲ್ಲಿಯಾದರೂ ಪ್ರಾಯಶ್ಚಿತ್ತವನ್ನುಂಟುಮಾಡದಿರಲಾರದು ಉದಾಹರಣಾರ್ಥವಾಗಿ ರಾಕ್ಷಸರಲ್ಲಿ ಅಗ್ರಗಣ್ಯನೂ ಶಿವಭಕ್ತರಲ್ಲಿ ಶಿಖಾಮಣಿಯೂ, ಆಸ್ತಿಕನೂ, ದಶಮುಖವುಳ್ಳವನೂ ಆದ ರಾವಣನು ೯ ಕೋಟಿ ಶಿವಲಿಂಗಗಳನ್ನು ಸ್ಥಾಪಿಸಬೇಕೆಂದು ಮನದಲ್ಲಿ ಸಂಕಲ್ಪಿಸಿದ್ದನು ತನ್ನ ಕೋರಿಕೆಯಂತೆ ೬ ಕೋಟಿ ಶಿವಲಿಂಗಗಳನ್ನು ತನ್ನ ಜೀವಿತಕಾಲದಲ್ಲಿಯೇ ಸ್ಥಾಪಿಸಿದನು ಇಂತಹ ಪುಣ್ಯಾತ್ಮನು ಧರ್ಮ ವಿರುದ್ಧವಾದ ಒಂದೇ ಒಂದು ಅತ್ಯಾಚಾರಕ್ಕೆ ಮನಸ್ಸು ಹಾಕಿ ಹೇಳಲಿಕ್ಕೆ ಹೆಸರಿಲ್ಲದಂತೆ ನಾಶವಾದನು. ಅಂತಹ ಬಲಿಷ್ಠನಾದ ರಾವಣನ ಗತಿಯೇ ಹೀಗಾದ ಬಳಿಕ ಮನುಷ್ಯರಲ್ಲಿ ಕ್ಷುಲ್ಲಕರೂ ಶಿವಭಕ್ತಿಗೆ ದೂರರೂ, ನಾಸ್ತಿಕರೂ, ಹಗಲಿರುಳೂ ದುರಾಲೋಚನೆಯನ್ನೇ ಮಾಡುತ್ತಿರುವವರೂ ಆದ ನರಕುರಿಗಳ ಪಾಡೇನು? ನಾವು ಮಾಡತಕ್ಕ

(೩ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಅಕ್ಟೋಬರ್ ತಾ|| ೨೫ನೇ ಸೋಮವಾರ

ಭಾರತೀಯಧರ್ಮ.

ನಮ್ಮ ಭಾರತಭೂಮಿಯಲ್ಲಿ ಜನ್ಮಧಾರಣಮಾಡಿದ ಜನಗಳು ದೇವರಲ್ಲಿಯೂ ಗುರುಜನಗಳಲ್ಲಿಯೂ ಮಾತಾಪಿತೃಗಳಲ್ಲಿಯೂ ವೇದಶಾಸ್ತ್ರಪುರಾಣಾದಿಗಳಲ್ಲಿಯೂ ಶ್ರದ್ಧೆಯುಳ್ಳವರಾಗಿದ್ದಾರೆ ಅಲ್ಲದೆ ಪುಣ್ಯಪಾಪಕಾರ್ಯಗಳ ಪರಿಶೀಲನೆಯುಳ್ಳವರಾಗಿ ಪಾಪಕಾರ್ಯದಿಂದ ನಿವೃತ್ತರಾಗಿ ಪುಣ್ಯಕಾರ್ಯಗಳಲ್ಲಿ ಸ್ವಭಾವತಃ ಪ್ರವೃತ್ತಿಯುಳ್ಳವರೂ ಆಗಿದ್ದಾರೆ ಮತ್ತು ದಾನಪರ ಸುಧಾರಣೆಯ ಶಿಖರವನ್ನೇರಬೇಕಾಗಿದ್ದರೂ ಗುರುದೇವರಿಗೆ ಪುರಸ್ಕಾರವನ್ನಿತ್ತೇ ದಾನ ಮುಂದುವರಿಯುವ ಸ್ವಭಾವವುಳ್ಳವರೂ ಆಗಿದ್ದಾರೆ ಇವರು ಯಾವ ಕಾರ್ಯವನ್ನು ಮಾಡಬೇಕಾಗಿದ್ದರೂ ಪ್ರಥಮತಃ ತಮ್ಮ ಕುಲದೇವರನ್ನೂ ಗುರುಗಳನ್ನೂ ಸ್ಮರಿಸಿಯೇ ಕಾರ್ಯವನ್ನು ಮಾಡುತ್ತಾರೆ ಪ್ರಜಾಪಾಲಕನಾದ ಮಹಾರಾಜನನ್ನು ಸಾಕ್ಷಾತ್ ದೈವಾಂಶೀಪುರುಷನೆಂದೇ ತ್ರಿಕರಣದಲ್ಲಿ ಭಾವಿಸುತ್ತ, ಪ್ರಭುಗಳ ಆಜ್ಞೆಯನ್ನು ಪುಷ್ಪಮಾಲಿಕೆಯಂತೆ ಬಹು ಪೂಜ್ಯಬುದ್ಧಿಯಿಂದ ಶಿರಸಾಧಾರಣಮಾಡುತ್ತ, ರಾಜಭಕ್ತಿಯುಳ್ಳವರೂ ಆಗಿದ್ದಾರೆ ಭಾರತೀಯ ಸ್ತ್ರೀಯರು ಮಾನವತಿಯರಾಗಿ, ಬೀದಿಬೀದಿಗಳಲ್ಲಿ ಸ್ವತಂತ್ರರಾಗಿ ಅಲೆಯದೆ, ತಮ್ಮ ತಮ್ಮ ಪತಿಗಳನ್ನೇ ದೇವರೆಂದು ಭಾವಿಸುತ್ತ, ಪತಿಗಳ ಸುಖದುಃಖಗಳಲ್ಲಿ ತಾವೂ ಭಾಗಿಗಳಾಗಿ ಸಂಸಾರವೆಂಬ ಮಹಾಭಾರವನ್ನು ವಹಿಸುತ್ತಲಿದ್ದಾರೆ ಭಾರತೀಯರ ಧರ್ಮಶಾಸ್ತ್ರವಾದರೂ ಹೀಗಿರಬೇಕೆಂಬುದನ್ನೇ ವಿಧಿಸುತ್ತದೆ ಸೃಷ್ಟಿಕಾಲದಿಂದಲೂ ರೂಢಮೂಲವಾಗಿ ಬಂದಿರುವ ಈ ಪರಿಶುದ್ಧಗಳಾದ ಸಂಪ್ರದಾಯಗಳು ಈಗ ಬದಲಾವಣೆಹೊಂದುವುದಕ್ಕೆ ಉಪಕ್ರಮವಾಗಿವೆ ಅನಾದಿಕಾಲದಿಂದ ಜನಗಳ ಹೃದಯಭೂಮಿಯಲ್ಲಿ ನಾಟಿದ್ದ ಆರ್ಯಸಂಸ್ಕೃತಿಯ ವೃಕ್ಷವನ್ನು ಕೆಡವಿ ನಾಸ್ತಿಕಬೀಜಾವಾಪನೆ ಮಾಡಲು ಕೆಲವರು ಟೊಂಕ ಕಟ್ಟಿದ್ದಾರೆ ಈ ವಿಷಬೀಜದ ವ್ಯಾಪನೆಯಿಂದ ಸನಾತನಧರ್ಮವೃಕ್ಷವು ಒಣಗಿಹೋಗಲುಪಕ್ರಮವಾಗುತ್ತ ಬಂದಿದೆ ಎಲ್ಲಿನೋಡಿದರೂ ಧರ್ಮವಿರುದ್ಧಕಾರ್ಯಗಳೇ ಕಂಡುಬರುತ್ತಲಿವೆ ಪ್ರಜೆಗಳು ಪ್ರಜಾಸತ್ತಾತ್ಮಕ ರಾಜ್ಯವನ್ನು ಬಯಸುತ್ತ ಪ್ರಭುತ್ವದವರಮೇಲೆ ಹೋರಾಡುತ್ತಲಿರುವರು ಆರ್ಯಮಹಿಳೆಯರು ಪುರುಷರಂತೆ ಸ್ವತಂತ್ರರಾಗಬಯಸುವರು ಶಿಷ್ಯವರ್ಗವು ಗುರುಗಳನ್ನು ಓಡಿಸಲು ಪ್ರಯತ್ನಪಡುವುದು ಒಟ್ಟಿಗೆ ಇದು ಪುಣ್ಯಕರ್ಮ, ಇದು ಪಾಪಕರ್ಮವೆಂಬ ಭಯವೇ ತಪ್ಪಿಹೋಗುತ್ತಲಿದೆ ಮಹರ್ಷಿಪ್ರಣೀತಗಳಾದ ಶಾಸ್ತ್ರಗಳನ್ನು ಹುಲ್ಲಿಗಿಂತಲೂ ಹಗುರಾಗಿ ಕಾಣುತ್ತಿರುವರು ದೇವತಾರಾಧನ ಗುರುಪೂಜೆ ಮುಂತಾದ ಸತ್ಕಾಲಕ್ಷೇಪವೆಂದರೆ ಇವರಿಗೆ ಘೋರರೂಪವಾಗಿ ಕಾಣಿಸಹತ್ತಿದೆ

ನಮ್ಮ ಭಾರತಭೂಮಿಯಲ್ಲಿ ಇಂಥ ವಿಷಮಾಚರಣೆಗಳು ಕಾಲಿಡಲು ಕಾರಣವೇನೆಂದು ನಾವು ವಿಚಾರಮಾಡಿನೋಡಿದರೆ ಈಗಿನ ವಿದ್ಯಾಭ್ಯಾಸಕ್ರಮವೂ, ವಿದೇಶೀಯರ ಒಡನಾಟವೂ, ವಿಷಯಾಭಿಲಾಷೆಯ ಪರಾಕಾಷ್ಠತೆಯೂ, ಜನ್ಮಾಂತರ ಭೀತಿಶೂನ್ಯತೆಯೂ, ದೈವಪ್ರೇಮರಾಹಿತ್ಯವೂ ಇವೇ ಕಾರಣಗಳಾಗಿರುವುವೆಂದು ಹೇಳಬಹುದಾಗಿದೆ ಪೂರ್ವಕಾಲದಲ್ಲಿ ನಮ್ಮ ಭಾರತೀಯರ ಯಾವ ವಿಧವಾದ ವಿದ್ಯಾಭ್ಯಾಸಗಳಾದರೂ ಆಧ್ಯಾತ್ಮವಿದ್ಯೆಯೆಂಬ ತಳಹದಿಯಮೇಲೆಯೇ ನಡೆಯುತ್ತಿದ್ದವು ಎಂಥ ಉಚ್ಚವಾದ ನಾಗರಿಕತೆಯಾದರೂ ದೈವಗುರುಗಳನ್ನವಲಂಬಿಸಿಯೇ ಮುಂದುವರೆಯುತ್ತಿದ್ದಿತು ಶೂರತನವನ್ನು ಮಾಡುವವರೂ ಕಲಾಕೌಶಲದಲ್ಲಿ ನಿಪುಣರಾದವರೂ ವ್ಯಾಪಾರೋದ್ಯೋಗಗಳಲ್ಲಿ ನಿರತರಾಗಿರುವವರೂ ಯುದ್ಧೋತ್ಸವಗಳಲ್ಲಿ ಭಾಗಿಗಳಾದವರೂ ಎಲ್ಲರೂ ಪಾರಮಾರ್ಥಿಕದೃಷ್ಟಿಯನ್ನು ಮುಂದಿರಿಸಿಯೇ ಕೆಲಸಮಾಡುತ್ತಿದ್ದರಲ್ಲದೆ ಗುರುದೈವವಿಮುಖರಾಗಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ ಆದ್ದರಿಂದಲೇ ದೈವಶಕ್ತಿಯು ಇವರ ಕಾರ್ಯಗಳನ್ನೆಲ್ಲಾ ಈಡೇರಿಸುತ್ತಿದ್ದಿತು. ದೈವಶಕ್ತಿಯ ಮುಂದೆ ಬುದ್ಧಿಶಕ್ತಿಯಾಗಲಿ ವಿದ್ಯಾಶಕ್ತಿಯಾಗಲಿ ದ್ರವ್ಯಶಕ್ತಿಯಾಗಲಿ ಪ್ರಭುಶಕ್ತಿಯಾಗಲಿ ಒಂದೂ ನಿಲ್ಲಲಾರವು ಅಂಥ ಪ್ರಬಲವಾದ ದೈವಶಕ್ತಿಯೊಂದಿಗೆ ಇನ್ನುಳಿದ ಶಕ್ತಿಗಳೊಂದುಗೂಡಿದರೆ ಚಿನ್ನಕ್ಕೆ ಪರಿಮಳ ಬಂದಂತೆ ಮತ್ತಷ್ಟು ಉಜ್ವಲಸ್ಥಿತಿಯನ್ನು ಕೊಡುತ್ತದೆ ನಮ್ಮ ಭಾರತೀಯರು ಯಾವಾಗಲೂ ದೈವಶಕ್ತಿಯ ಆಧಾರದಲ್ಲಿಯೇ ಇತರ ಶಕ್ತಿಗಳನ್ನು ಆರ್ಜಿಸುವ ಸ್ವಭಾವವುಳ್ಳವರೆಂಬುದು ಹಿಂದಿನ ಇತಿಹಾಸಾದಿಗಳಿಂದ ಗೊತ್ತಾಗುವುದು ನಲ ನಹುಷ ಮಾಂಧಾತೃ ಪಾಂಡವರಾಮಾದಿಮಹಾಪುರುಷರು ತಾವು ಅಖಂಡೈಕಚ್ಛತ್ರಾಧಿಪತ್ಯವನ್ನು ಮಾಡುತ್ತಿದ್ದರೂ ಒಂದು ನಿಮಿಷಾರ್ಧದಲ್ಲಿಯೇ ಪ್ರಪಂಚವನ್ನೆಲ್ಲಾ ಪ್ರಳಯಗೊಳಿಸುವ ಮಹಾಶಕ್ತಿಯನ್ನು ಪಡೆದಿದ್ದರೂ ಒಂದು ಹೆಜ್ಜೆಯನ್ನಾದರೂ ಧರ್ಮಶಾಸ್ತ್ರದ ಹದ್ದನ್ನು ಮೀರಿ ನಡೆಯುತ್ತಿರಲಿಲ್ಲ ದೇವರಲ್ಲಿ ಶರಣಾಗತರಾಗಿದ್ದರೂ ಗುರುಜನಗಳ ವಚನವನ್ನು ಅತಿಕ್ರಮಿಸುತ್ತಿರಲಿಲ್ಲ ಇಂಥ ಸಚ್ಚರಿತ್ರವುಳ್ಳವರಾದುದರಿಂದಲೇ ಅವರ ಯಶೋವಲ್ಲರಿಯು ದಿಕ್ತಟಗಳಲ್ಲಿ ಹಬ್ಬುತ್ತಲೇ ಬಂದಿದೆ ಅವರ ಆಳ್ವಿಕೆಯಲ್ಲಿರುವ ಪ್ರಜೆಗಳಾದರೂ "ನಾವಿಷ್ಣುಃ ಪೃಥಿವೀಪತಿಃ" ಎಂಬ ಆರ್ಯೋಕ್ತಿಯಂತೆ ರಾಜ್ಯಪಾಲಕರಾದ ಮಹಾರಾಜರನ್ನು ಸಾಕ್ಷಾತ್ ವಿಷ್ಣುವನ್ನಾಗಿ ಭಾವಿಸುತ್ತಿದ್ದರು ಗುರುಜನಗಳ ವಚನವೆಂದರೆ ಶಿಷ್ಯರು ಪ್ರತ್ಯಕ್ಷ ಈಶ್ವರನ ವಚನವನ್ನಾಗಿಯೇ ಪೂಜ್ಯಬುದ್ಧಿಯಿಂದ ಆದರಿಸುತ್ತಿದ್ದರು ಗೃಹಭಾಗ್ಯದೇವತೆಯಂತಿರುವ ಸತಿಯರಾದರೂ ತಮ್ಮ ತಮ್ಮ ಪತಿಗಳೊಡನೆ ಪ್ರಾಣ ಕೊಡಲಿಕ್ಕೂ ಸಿದ್ಧರಾಗಿದ್ದರು ಹೀಗಿದ್ದುದರಿಂದಲೇ ಅವರ ಯೋಗಕ್ಷೇಮಗಳನ್ನೆಲ್ಲಾ ದೇವರೇ ಸ್ವತಃ ವಹಿಸಿದ್ದನು ಈಗಿನ ವಿಪರೀತ ವರ್ತನೆಗಳನ್ನು ನೋಡಿದರೆ, ಇವರ ಪಾಲಿಗೆ ದೇವರು ಕಣ್ಣುಮುಚ್ಚಿದ್ದಾನೆಂದು ಹೇಳಬಹುದು ದೈವಾಯತ್ತವಾದ ರಾಜ್ಯಭಾರವನ್ನು ಮಾಡುವ ಮಹಾರಾಜರ ಮೇಲೆ ಪ್ರಜೆಗಳ ಟೀಕೆ ದೇವಾಂಶಪುರುಷರಾದ ಗುರುಗಳ ಮೇಲೆ ಶಿಷ್ಯರ ಟೀಕೆ ಪೂಜ್ಯನಾದ ಪಿತೃವಿನಮೇಲೆ ಪುತ್ರನ ಟೀಕೆ, ಹೀಗೆ ಎಲ್ಲೆಲ್ಲಿಯೂ ರಾಜದ್ರೋಹ, ಗುರುದ್ರೋಹ, ಪಿತೃದ್ರೋಹ, ಪತಿದ್ರೋಹ ಕಾರ್ಯಗಳು ಹೇಳಲಸದಳವಾಗಿವೆ ಆದರೆ ಭಾರತದೇವಿಯ ಅನುಗ್ರಹದಿಂದ ಅಂಥ ಪೂರ್ವದ ಸಚ್ಚರಿತ್ರೆಯು ಈ ಭಾರತಭೂಮಿಯಲ್ಲಿ ಗಟ್ಟಿಗೊಂಡಿರುವುದರಿಂದ ಇವರು ಎಷ್ಟು ಸಾಹಸಪಟ್ಟರೂ ಪವಿತ್ರ ಸನಾತನಧರ್ಮವು ಒಂದಿಲ್ಲೊಂದು ಕಡೆಗೆ ಅಪ್ರಕಂಪ್ಯವಾಗಿ ನಿಂತುಕೊಂಡಿರುತ್ತದಲ್ಲದೆ ಎಂದೂ ನಿಶ್ಶೇಷವಾಗಲಾರದು ಇವರೆ ಟೀಕೆಯನ್ನು ಮಾಡುವವರಾರೋ, ಅವರು ಒಳ್ಳೇ ವರ್ತನವುಳ್ಳವರೂ ಗುಣಾಢ್ಯರೂ, ಲೋಕೋಪಕಾರಿಗಳೂ, ಸ್ವಾರ್ಥರಹಿತರೂ ಪವಿತ್ರಚರಿತ್ರರೂ ಮಹಾಮೇಧಾವಿಗಳೂ ಪುಣ್ಯಪಾಪಭೀರುಗಳೂ ಆಗಿರಬೇಕಲ್ಲವೆ? 'ಯುಕ್ತಿಯುಕ್ತಂವಚೋಗ್ರಾಹ್ಯಂ ಬಾಲಾದಪಿಶುಕಾದಪಿ' ಎಂಬ ನೀತಿಯಂತೆ ಅಂಥವರ ಮಾತನ್ನಾದರೂ ಗ್ರಹಿಸಬಹುದು ಹಾಗಿಲ್ಲದೆ ಮಧುಪಾನಮತ್ತರಾದ ಜನಗಳಂತೆ ಸ್ವಪ್ರತಿಷ್ಠೆಗಾಗಿ ಪ್ರಭುತ್ವದಮೇಲೂ ಗುರುತ್ವದಮೇಲೂ ದಾಳಿಯಿಡುವ ನವತರುಣರು ನಮ್ಮ ಭಾರತಭೂಮಿಯಲ್ಲಿ ಈಗೀಗ ಒಡಮೂಡುತ್ತಲಿದ್ದಾರೆ ಇವರ ವರ್ತನವಾದರೋ ಅತಿ ಹೇಯವಾಗಿದೆ ಅದರಲ್ಲಿ ಒಂದೆರಡು ಡಿಗ್ರಿಗಳನ್ನು ಪಡೆದರಂತೂ ಇವರನ್ನು ಹಿಡಿದು ನಿಲ್ಲಿಸುವವರೇ ಇಲ್ಲ ಅದರಲ್ಲೂ ಇಂಗ್ಲೆಂಡ್ ಅಮೇರಿಕಾ ಮುಂತಾದ ಸ್ಥಲಗಳಿಗೆ ಹೋಗಿ ಬಂದರಂತೂ ಕಪಿಗೆ ಸುರಾಪಾನಮಾಡಿಸಿದಂತೆ ಹುಚ್ಚುಹುಚ್ಚಾಗಿ ಕುಣಿಯಹತ್ತುವರು ಅಷ್ಟರಲ್ಲಿ ಪ್ರಭುತ್ವದವರಾಗಲಿ ಗುರುತ್ವದವರಾಗಲಿ 'ಯಾವುದಾದರೂ ಒಂದು ದ್ರವ್ಯಸಹಾಯವನ್ನು ಒದಗಿಸಿಕೊಟ್ಟರೆ ತಣ್ಣಗಾಗಿ ಕುಳಿತುಕೊಳ್ಳುವರು ಇಲ್ಲವಾದರೆ ಪ್ರಭುತ್ವದಮೇಲೂ ಗುರುತ್ವದಮೇಲೂ ಹಾರಿ ಹಾರಿ ಬೀಳುವರು ಇವರಿಷ್ಟದಂತೆ ಪ್ರಭುತ್ವದವರು ಇವರಿಗೆಲ್ಲಾ ಕೆಲಸಕೊಡಲು ಸಾಧ್ಯವೇ' ಗುರುತ್ವದವರು ದುಡ್ಡುಕೊಡಲು ಶಕ್ಯವೇ? ತಾವು ಓದಿಬಂದು ತಮ್ಮ ಪೂರ್ವಿಕರು ಮಾಡುವ ಕೆಲಸಕಾರ್ಯಗಳಲ್ಲಿ ತೊಡಗಿ ತಮ್ಮ ಪೂರ್ವಿಕರ ಆಚರಣೆಯನ್ನು ಬಿಡದೆ ತಮ್ಮ ಧರ್ಮವನ್ನು ಕಾಪಾಡುತ್ತ ಪ್ರಭುಭಕ್ತಿ ಗುರುಭಕ್ತಿ ದೈವಭಕ್ತಿ ಸಂಪನ್ನರಾಗಿದ್ದು ಖ್ಯಾತಿಪಡೆಯಬೇಕಲ್ಲವೆ ಅದಕ್ಕೆ ವಿರುದ್ಧವಾಗಿ ನಡೆದು ಧರ್ಮಲಂಡರೆನಿಸಿ ಅಧೋಗತಿಗೀಡಾಗಬಾರದೆಂದಾಶಿಸುತ್ತೇವೆ.

ಯುದ್ಧವಾರ್ತೆ.

ಮುಸೋಲಿನಿ ಆಸ್ಪತ್ರೆಯಲ್ಲಿದ್ದಾನೆ

ಉತ್ತರ ಇಟಲಿಯ ನಗರವೊಂದರಲ್ಲಿರುವ ಆಸ್ಪತ್ರೆಯಲ್ಲಿ ಮುಸೋಲಿನಿ ಚಿಕಿತ್ಸೆ ಪಡೆಯುತ್ತಿದ್ದಾನೆಂದೂ ಬಂಧನದಿಂದ ಅವನು ತಪ್ಪಿಸಿಕೊಂಡಾಗ ಒಂದು ಕೈಗೆ ತುಂಬಾ ಗಾಯವಾಗಿತ್ತೆಂದೂ ಹೇಳಲಾಗಿದೆ

ಬರ್ಲಿನ್ ಮೇಲೆ ಮುತ್ತಿಗೆ

ಮಿತ್ರಪಕ್ಷದವರು ಬರ್ಲಿನ್ ಮೇಲೂ ಪಶ್ಚಿಮ ಜರ್ಮನಿಯ ಮೇಲೂ ಮುತ್ತಿಗೆ ನಡೆಸಿದರು ವಿಮಾನ ನಿಲ್ದಾಣಗಳ ಮೇಲೂ ರೈಲ್ವೆ ಸ್ಟೇಷನ್ನುಗಳ ಮೇಲೂ ಬಾಂಬುಗಳನ್ನು ಸುರಿಸಿ ಅನಾಹುತವುಂಟುಮಾಡಲಾಯಿತೆಂದು ಹೇಳಲಾಗಿದೆ

ಬಾಲ್ಕನ್ಸಿನಲ್ಲಿನ ಸ್ಥಿತಿ

ಬಾಲ್ಕನ್ಸಿನಲ್ಲಿಯ ಹೊಸ ರಂಗವೊಂದು ರೂಪುಗೊಳ್ಳುತ್ತಿದೆಯೆಂಬುದಾಗಿ 'ನ್ಯೂ ಯಾರ್ಕ್ ಟೈಮ್ಸ್' ತಿಳಿಸುತ್ತದೆ ರಾಮೆಲ್ಲರನ್ನು ಹಿಟ್ಲರನು ಬೆಲ್‌ಗ್ರೇಡಿಗೆ ಕಳುಹಿಸಿರುವುದನ್ನು ನೋಡಿದರೆ ಬಾಲ್ಕನ್ಸ್ ಪ್ರದೇಶದಲ್ಲಿ ಪರಿಸ್ಥಿತಿ ಕ್ರೂರವಾಗಿದೆಯೆಂದು ಒಪ್ಪಿಕೊಂಡಂತೆಯೂ ಆಗಿದೆ ಅಲ್ಲಿನ ದೇಶಭಕ್ತರು ನಡೆಸುತ್ತಿರುವ ಕದನವು ಉಗ್ರವಾಗುತ್ತಿದೆ ಮಿತ್ರದೇಶಗಳು ಬಾಲ್ಕನ್ಸಿಗೆ ಮುತ್ತಿಗೆ ಹಾಕಿಯಾವೆಂಬ ಭಯದಿಂದ ನಾಜಿಗಳು ಆತುರಾತುರವಾಗಿ ಅಲ್ಲಿಗೆ ಸೇನೆಯನ್ನು ಕಳುಹಿಸುತ್ತಿದ್ದಾರೆಂದು ಪ್ರಕಟವಾಗಿದೆ

ಇಟಲಿಯಲ್ಲಿ ಮಿತ್ರ ಸೈನ್ಯಗಳ ಮುನ್ನಡೆ

ಇಟಲಿಯಲ್ಲಿ ಮತ್ತಷ್ಟು ಪ್ರದೇಶವು ಮಿತ್ರಸೇನೆಗಳ ವಶವಾಗಿದೆ ವಾಲ್ಟರ್ನೋ ಕ್ಷೇತ್ರದಲ್ಲಿ ಕಾಪುವಾಕ್ಕೆ ಉತ್ತರದಲ್ಲಿ ಹಿಂಮೋಡುತ್ತಿರುವ ಶತ್ರು ಸೇನೆಯನ್ನು ಮಿತ್ರಯೋಧರು ಬೆನ್ನಟ್ಟಿ ಕೆಲವು ಸ್ಥಾನಗಳನ್ನು ಹಿಡಿದಿದ್ದಾರೆ ನದಿಯ ಉತ್ತರ ತೀರದಲ್ಲೆಲ್ಲೂ ಈಗ ಶತ್ರುಗಳ ತಲೆಯಿಲ್ಲ ಅದರ ಸಮೀಪದಲ್ಲಿರುವ ಗುಡ್ಡಗಾಡುಗಳಲ್ಲೀಗ ತೀವ್ರ ಕದನ ನಡೆಯುತ್ತಿದೆ ಈ ಗುಡ್ಡಗಾಡು ಮಿಲಿಟರಿ ದೃಷ್ಟಿಯಿಂದ ಬಹಳ ಪ್ರಾಮುಖ್ಯವೆಂದು ಭಾವಿಸಿ ಅದನ್ನು ರಕ್ಷಿಸಲೋಸುಗ ಜರ್ಮನರು ಸೈನ್ಯಸಹಾಯವನ್ನು ಕಳುಹಿಸುತ್ತಿದ್ದಾರೆ ಐದನೆಯ ಸೇನೆ ಹಲವು ಕಡೆ ೩ ಮೈಲಿ ಮುಂದುವರಿದಿದೆ ಕಾಪ್ರವಾ ಗುಡ್ಡವನ್ನು ಹಿಡಿಯಬೇಕಾದರೆ ಮಿತ್ರಸೇನೆಗಳು ತೀವ್ರ ಕದನ ನಡೆಸಬೇಕಾಗುವುದು ಈ ಸ್ಥಾನವು ಮಿತ್ರರ ವಶವಾದರೆ ತಮ್ಮ ಸ್ಥಿತಿ ತೀರ ಕೆಡುವುದೆಂಬುದನ್ನು ಮಾ|| ಕೆಸೆಲ್‌ರಿಂಗರು ಬಲ್ಲರು ವಾಲ್ಟರ್ನೋ ನದಿಯ ಮೇಲಿರುವ ಕ್ಯಾನ್‌ಸೆಲೋ ನಗರ ೫ ನೇ ಸೇನೆಯ ವಶವಾಗಿದೆ ನದೀ ಮುಖದಿಂದ ೧೦ ಮೈಲಿ ದೂರದಲ್ಲಿ ನದಿಯ ಉತ್ತರಕ್ಕೆ ಈ ನಗರವಿದೆ ಪೆರೋನ್ ಮತ್ತು ಹಡಿಯಾನೋ ಎಂಬ ಊರುಗಳು ಕೂಡ ವಶವಾಗಿವೆ ಎಂಟನೆಯ ಸೇನೆಯ ಮುಂಗಾವಲ ಸೈನಿಕರು ಮಾಂಟಿಸಿಲ್‌ಫೋವನ್ನು ಹೊಕ್ಕಿದ್ದಾರೆ ರೋಂ ನಗರಕ್ಕೆ ಅಪಾಯ ಒದಗುವ ಸ್ಥಿತಿಯು ಕಂಡುಬಂದ ಕಾರಣ ಶತ್ರುಗಳು ಆ ನಗರವನ್ನು ತ್ಯಜಿಸಿ ಉತ್ತರದ ಕಡೆಗೆ ಹಿಮ್ಮೆಟ್ಟಲು ಎಲ್ಲ ಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ ಆಗಲೇ ಬಹು ಭಾಗ ಜರ್ಮನರು ರೋಂ ಪಟ್ಟಣವನ್ನು ಬಿಟ್ಟು ಹೋಗಿದ್ದಾರೆಂದು ಹೇಳಲಾಗಿದೆ

ರಷ್ಯಾದಲ್ಲಿ ನಾಜಿಗಳ ದುಸ್ಥಿತಿ

ಒಂದು ಹೆಜ್ಜೆಯನ್ನು ಕೂಡ ಹಿಂದಿಡಲಾಗದೆಂದು ಹೆರ್ ಹಿಟ್ಲರನು ಕ್ರೆಮೆಂಚುಗ್ ಆಗ್ನೇಯದಲ್ಲಿರುವ ಜರ್ಮನ್ ಸೈನಿಕರಿಗೆ ಆಜ್ಞೆ ಮಾಡಿದ್ದಾನೆಂದು ಸೆರೆಸಿಕ್ಕಿದ ನಾಜಿ ಸೈನಿಕರು ತಿಳಿಸುತ್ತಾರೆ ಕ್ರೆಮೆಂಚುಗಿನ ಆಗ್ನೇಯದಲ್ಲಿ ನಾಜಿ ವ್ಯೂಹವು ಭೇದಿಸಲ್ಪಟ್ಟಿದೆ. ರಷ್ಯ

ನ್ ಫಿರಂಗಿಗಳೂ ಟ್ಯಾಂಕುಗಳೂ ಬಿರುಸಿನಿಂದ ನುಗ್ಗುತ್ತಿವೆ. ಯೂರೋಪಿನ ಎಲ್ಲ ಕಡೆಯಲ್ಲಿಯೂ ಜರ್ಮನರು ಈ ರಂಗಕ್ಕೆ ಸೈನ್ಯವನ್ನು ಕಳಿಸುತ್ತಿದ್ದಾರೆ. ದಕ್ಷಿಣ ರಷ್ಯಾ ರಣರಂಗದಲ್ಲೆಲ್ಲಾ ತಮ್ಮ ಸ್ಥಿತಿ ಉಗ್ರವಾಗಿದೆಯೆಂದು ಜರ್ಮನರೇ ಒಪ್ಪಿಕೊಂಡಿರುತ್ತಾರೆ. ಜಪೋರ್ಜೆ ದಕ್ಷಿಣದಲ್ಲಿ ನಾಜಿಗಳು ಬಿರುಸಿನಿಂದ ಹಿಂದೋಡುತ್ತಿದ್ದಾರೆ. ರಷ್ಯನರಾಗಲೇ ಜಪೋರ್ಜೆ ಬಿಟ್ಟು ಕ್ರೈಕ್ವೆ ಮಾರ್ಗದಲ್ಲಿ ೩೦ ಮೈಲಿ ಮುಂದೆ ಬಂದಿದ್ದಾರೆ. ಕೀವ್ ಮಾರ್ಗದಲ್ಲಿ ಉಗ್ರ ಕದನವಾಗುತ್ತಿದೆ. ನಾಜಿಗಳು ಬಲಯುತವಾದ ಪ್ರತಿಮುತ್ತಿಗೆಗಳನ್ನು ನಡೆಸುತ್ತಿದ್ದರೂ ರಷ್ಯನರು ಮೆಲ್ಲಮೆಲ್ಲಗೆ ಸ್ಥಾನಗಳನ್ನು ಹಿಡಿಯುತ್ತಿದ್ದಾರೆ. ಮೆಲಿಟೋಪಾಲ್‌ನಲ್ಲಿ ಕೂಡ ಭಯಂಕರವಾದ ಕಡಿದಾಟವಾಗುತ್ತಿದೆ. ಅನೇಕ ನಾಜಿ ಸೈನಿಕರು ಜೀವ ಬಿಡುತ್ತಿದ್ದಾರೆ. ಆ ನಗರವು ಜರ್ಮನರ ದೊಡ್ಡ ಸಮಾಧಿಯಾಗಿದೆಯೆಂದು 'ಪ್ರವಾಡ' ಪತ್ರಿಕೆಯು ತಿಳಿಸುತ್ತದೆ. ನಗರ ಮಧ್ಯದಲ್ಲಿಯೇ ಹೊಡೆದಾಟವು ನಡೆಯುತ್ತಿದೆ. ಹಿಂದೆ ಓಡಲು ಅವಕಾಶವಿಲ್ಲದೆ ನಾಜಿಗಳು ಜೀವದ ಹಂಗು ತೊರೆದು ಹೋರಾಡುತ್ತಿದ್ದಾರೆ. ಲಟ್ವಿಯನ್ ಗಡಿಯಿಂದ ೫೦ ಮೈಲಿ ದೂರದಲ್ಲಿರುವ ನೆವಲ್ ಎಂಬ ಊರಿನ ಬಳಿ ರಷ್ಯನರು ಜರ್ಮನ್ ವ್ಯೂಹವನ್ನು ಒಡೆದುಕೊಂಡು ನುಗ್ಗಿದ್ದಾರೆಂದು ಜರ್ಮನ್ ವಾರ್ತಾ ಸಂಸ್ಥೆಯೇ ತಿಳಿಸುತ್ತದೆ.

ನಾಜಿಗಳಿಗೆ ಸುತ್ತುವರಿಯಲ್ಪಡುವ ಭೀತಿ

ಕ್ರಿಮೆಂಚಂಗ್ ದಕ್ಷಿಣದಲ್ಲಿ ರಷ್ಯನರು ನಾಜಿ ವ್ಯೂಹವನ್ನು ಕತ್ತರಿಸಿ ಬಿರುಸಿನಿಂದ ನುಗ್ಗುತ್ತಿರುವಂತೆಯೇ ಇತ್ತೀಚೆಗೆ ಬಂದಿರುವ ಸುದ್ದಿಯಂತೆ ಕ್ರಿಮಿಯಾವನ್ನು ತ್ಯಜಿಸಲು ನಾಜಿಗಳು ಅಗಾಧ ಕಾರ್ಯಕ್ರಮ ಕೈಗೊಂಡಂತಿದೆ. ಅವರು ಆತುರದಿಂದ ಕ್ರಿಮಿಯಾವನ್ನು ಬಿಟ್ಟೋಡುತ್ತಿದ್ದಾರೆಂದೂ, ಕಪ್ಪು ಕಡಲಿನ ತೀರದಲ್ಲಿರುವ ಆರೋಗ್ಯ ವಸತಿಗಳಲ್ಲಿ ಸುಖಲೋಲುಪ್ತರಾಗಿದ್ದ ನೂರಾರು ಜರ್ಮನ್ ಅಧಿಕಾರಿಗಳು ಆತುರರಾಗಿ ಗಂಟುಮೂಟೆ ಕಟ್ಟಿ ಓಡಿಹೋಗುತ್ತಿದ್ದಾರೆಂದೂ, ರಷ್ಯನ್ ಕಾಲಾಳುಗಳು ಲಾರಿಗಳಲ್ಲಿ ಕೂತು ಜನನಿಕಾ–ನಿನ್ಪ್ರೋಪೆಟ್ರೋವಿಸ್ಕ ರೈಲ್ವೆಯ ಬಳಿ ಏರಿಬಿದ್ದರೆಂದೂ ಈ ರೈಲ್ವೆಯನ್ನು ಒಂದು ಮೈಲಿ ಅಗಲದಲ್ಲಿ ಕತ್ತರಿಸಿ ಹಾಕಲಾಗಿದೆಯೆಂದೂ ಮೆಲಿಟೋಪೋಲ್–ಸಬಾಸ್ತಪೋಲ್ ರೈಲ್ವೆಯನ್ನು ಕತ್ತರಿಸಿದ ಮೇಲೆ ರಷ್ಯನರು ಮಿಲಿಟೋಪೋಲ್ ಕ್ರಿಮಿಯಾ ರೈಲ್ವೆಯನ್ನು ಕಡಿದುಹಾಕಿದ್ದಾರೆಂದೂ, ಅಜೋವ್ ಸಮುದ್ರದ ಉತ್ತರದಲ್ಲಿ ರಷ್ಯನರು ಮುತ್ತಿಗೆಯನ್ನು ಮತ್ತೆ ಆರಂಭಿಸಿದ್ದಾರೆಂದೂ, ಜರ್ಮನರು ಅಪಾರ ನಷ್ಟವನ್ನು ಅನುಭವಿಸುತ್ತಿದ್ದಾರೆಂದೂ, ಕೀವ್ ಮೇಲೆ ಕಟ್ಟಕಡೆ ಮುತ್ತಿಗೆ ಆರಂಭವಾಗಿ ರಷ್ಯನರು ನಗರದ ಹೊರಭಾಗವನ್ನು ತಲಪಿದ್ದಾರೆಂದೂ ಹೇಳಲಾಗಿದೆ.

ಮಾಸ್ಕೋ ಸಮ್ಮೇಳನ

ಸಂಗ್ರಾಮದ ಅವಧಿ ಕುರಿತು ಮಾತನಾಡಲು ಇಂಗ್ಲೆಂಡ್, ಅಮೇರಿಕಾ ಪ್ರತಿನಿಧಿಗಳಿಗೆ ಅಧಿಕಾರ ಕೊಡಲಾಗಿದೆಯೋ ಎಂಬುದರ ಮೇಲೆ ಸಮ್ಮೇಳನದ ಫಲಿತಾಂಶವು ನಿಂತಿದೆ. ರಷ್ಯದ ವಾದ ಸ್ಪಷ್ಟವಾಗಿದೆ. ಕಳೆದ ಎರಡು ವರ್ಷಗಳಿಂದ ಯುದ್ಧದ ಭಾರವನ್ನೆಲ್ಲ ರಷ್ಯವೇ ಹೊತ್ತಿದೆ. ೩ನೇ ಎರಡರಷ್ಟು ದಸ್ತು ಬಲವು ಗಲೇ ರಷ್ಯನ್ ಯೋಧರ ಏಟನ್ನು ತಾಳಲಾರದೆ ತಲ್ಲಣಿಸಿ ಹೋಗಿದೆ. ಈ ವರ್ಷವೇ ಯುದ್ಧವನ್ನು ಮುಗಿಸಬಹುದು. ೧೯೪೩ ರಿಂದಾಚೆ ಸಂಗ್ರಾಮವನ್ನು ಮುಂದುವರಿಸುವುದಾದರೆ ಮತ್ತೆ ನೂರಾರು ಸಾವಿರಾರು ರಷ್ಯನರು ಪ್ರಾಣ ತೆರಬೇಕಾಗುವುದು. ಮತ್ತು ರಷ್ಯದ ಪಶ್ಚಿಮ ಭಾಗವೆಲ್ಲ ನಿರ್ನಾಮವಾಗುವುದು. ಇದೂ ಅಲ್ಲದೆ ಪಶ್ಚಿಮ ಯೂರೋಪಿನ ಮೇಲೂ ಮಿತ್ರ ಸೇನೆಗಳು ಭಾರಿ ದಂಡಯಾತ್ರೆ ನಡೆಸಿದರೆ ಲೆಕ್ಕವಿಲ್ಲದಷ್ಟು ಬ್ರಿಟಿಷ್ ಮತ್ತು ಅಮೇರಿಕನ್ ಸೈನಿಕರು ಸಾಯುವುದನ್ನು ಸಹ ತಪ್ಪಿಸಿದ ಹಾಗಾಗುವುದೆಂದು ರಷ್ಯನರು ಹೇಳುತ್ತಾರೆ. ಮಿತ್ರದೇಶಗಳು ದ್ವಿತೀಯರಂಗ ಸ್ಥಾಪನೆ ಕಾರ್ಯವನ್ನು ಸಾವಕಾಶ ಮಾಡುವುದಾದರೆ, ಈಗ ನಾಜಿಗಳು ಒಂದುವೇಳೆ ತಮ್ಮ ವ್ಯೂಹವನ್ನು ಸಣ್ಣದು ಮಾಡಿಕೊಂಡು ಒಳಗಳಮಟ್ಟಿನ ಬಲವನ್ನು ಪಶ್ಚಿಮ ರಂಗಕ್ಕೆ ಕಳಿಸಲು ಶಕ್ತರಾಗಬಹುದು. "ಶಿಪ್‌ಸ್ಟರ್ಡ್" ಪತ್ರಿಕೆಯು ಟೀಕಿಸುತ್ತ "ಇಟಲಿಯಲ್ಲಿ ಮಿತ್ರದೇಶಗಳು ಕೈಕೊಂಡ ಕಾರ್ಯಕ್ರಮ, ಹಿಟ್ಲರನಿಗೆ ಬಹಳ ಅನುಕೂಲವಾಗಿದೆ. ಸಂಗ್ರಾಮವು ದೀರ್ಘಕಾಲ ನಡೆಯುವಂತೆ ಮಾಡುವುದರಲ್ಲಿ ಜರ್ಮನಿ ಮಗ್ನವಾಗಿದೆ. ಆದ್ದರಿಂದ ದ್ವಿತೀಯ ರಂಗದ ಪ್ರಶ್ನೆಯೂ, ಪೂರ್ವ ಮತ್ತು ಪಶ್ಚಿಮದಲ್ಲಿ ಈಗಿನಂತೆ ಪ್ರತ್ಯೇಕವಾದ ಮಿಲಿಟರಿ ಕಾರ್ಯಕ್ರಮಗಳು ನಡೆಯುವುದಕ್ಕೆ ಬದಲು ಜಂಟಿ ಮಿಲಿಟರಿ ಕಾರ್ಯ ನಡೆಯುವಂತೆ ಮಾಡುವ ಪ್ರಶ್ನೆಯು ಮಾಸ್ಕೋ ಸಮ್ಮೇಳನದ ಮುಂದೆ ಬರಲಿದೆಯೆಂದು ಹೇಳಲಾಗಿದೆ.

ಪೆಸಿಫಿಕ್ ಕದನ ಐದು ವರ್ಷ ಕಾಲ ನಡೆಯಬಹುದು

ಜಪಾನರು ಜರ್ಮನರನ್ನು ಪ್ರೀತಿಸುವುದಿಲ್ಲವೆಂಬುದಾಗಿ ಚಿಲಿಯನ್ ಪತ್ರಿಕಾ ಸುದ್ದಿಗಾರರೊಬ್ಬರು ತಿಳಿಸುತ್ತಾರೆ. ಇವರು ಎರಡು ವರ್ಷದಿಂದ ಜಪಾನಿನಲ್ಲಿದ್ದು ಈಗ ಅಲ್ಲಿಂದ ಹೊರಗೆ ಕಳುಹಿಸಲ್ಪಟ್ಟಿದ್ದಾರೆ. ಜಪಾನರು ಅನುಕೂಲಕ್ಕಾಗಿ ಜರ್ಮನಿಯ ಸಂಬಂಧವನ್ನು ಕಟ್ಟಿಕೊಂಡಿದ್ದಾರೆಂದೂ ಜಪಾನರಿಗೆ ಇಟಾಲಿಯನರನ್ನು ಕಂಡರೆ ಹೆಚ್ಚು ಪ್ರೀತಿಯೆಂದೂ ಅವರ ಅಭಿಮತ. ಯೂರೋಪಿನಲ್ಲಿ ಜರ್ಮನಿಗೆ ಬೀಳುತ್ತಿರುವ ಏಟುಗಳನ್ನು ಕಂಡು ಜಪಾನರು ಸ್ವಲ್ಪವೂ ಎದೆಗುಂದಿಲ್ಲ. ಜರ್ಮನಿಗೆ ಜಪಾನಿನ ಸಹಕಾರವೇನೋ ಬೇಕು. ಆದರೆ ಯೂರೋಪಿನಲ್ಲಿ ಜರ್ಮನಿಗೆ ಏನೇ ಆಗಲಿ ಜಪಾನು ತನ್ನ ಕೆಲಸವನ್ನು ಮುಂದುವರಿಸಬಲ್ಲದು ಎಂಬ ಅಭಿಪ್ರಾಯವು ಜಪಾನರಿಗಿದ್ದಂತಿದೆ. ಪೆಸಿಫಿಕ್ ಕದನವು ಇನ್ನೂ ಐದು ವರ್ಷ ನಡೆದೀತೆಂದು ಜಪಾನರು ನಿರೀಕ್ಷಿಸಿ, ಅದಕ್ಕೆ ತಕ್ಕಂತೆ ಅಣಿಮಾಡುತ್ತಿದ್ದಾರೆಂದು ತಿಳಿಸಿದ್ದಾರೆ.

ಸರಕಾರದ ಬತ್ತಳಿಕೆಯಲ್ಲಿ ಬ್ರಹ್ಮಾಸ್ತ್ರ

ಬುಡಮೇಲು ಮಾಡುವ ಚಳವಳಿಯಲ್ಲಿ ಭಾಗಿಗಳಾದವರನ್ನು ಶಿಕ್ಷಿಸಲು ಕೇಂದ್ರ ಸರಕಾರ ಹೊಸ ಕಾಯಿದೆಯೊಂದನ್ನು ಘೋಷಿಸಿದೆ. ಈ ಕಾಯಿದೆ ಪ್ರಕಾರ ಯಾರೇ ಆಗಲಿ ಬುಡಮೇಲು ಮಾಡುವ ಕೃತ್ಯವನ್ನೇ ಆಗಲಿ, ಅದಕ್ಕಾಗಿ ನುಡಿಯಲಿ ಅದನ್ನಾ ಮುದ್ರಣಗಳನ್ನು ನೋಡುವುದು ಮುದ್ರಿಸುವುದು, ಹಂಚುವುದು ಅಥವಾ ಅಪ್ರಕಾಶಿತ ದೋಷಾರ್ಹವಾದ ಪತ್ರಗಳನ್ನು ಪ್ರಚುರಿಸುವುದು ಮಾಡಿದ್ದಲ್ಲಿ ಅವನಿಗೆ ಜೀವಾವಧಿ ಶಿಕ್ಷೆ ಅಥವಾ ಹತ್ತು ವರ್ಷ ಕಾರಾಗೃಹ ಮತ್ತು ದಂಡವನ್ನೂ, ಅಷ್ಟೇ ಅಲ್ಲದೆ ಯಾರಾದರೂ ದೋಷಾರ್ಹವಾದ ಪತ್ರ ಹೊಂದಿದ್ದಲ್ಲಿ ಅವರಿಗೆ ಹತ್ತು ವರ್ಷ ಶಿಕ್ಷೆ ಮತ್ತು ದಂಡವನ್ನೂ ವಿಧಿಸಲಾಗುವುದು.

ಒರಿಸ್ಸಾ ಬಾಲಕ ಬಾಲಿಕೆಯರು ಬೆತ್ತಲೆಯಿದ್ದಾರೆ

ಬಂಗಾಳ, ಒರಿಸ್ಸಾ, ಪರಿಹಾರ ಸಮಿತಿಗಳ ಪರವಾಗಿ ವಿಶೇಷವಾಗಿ ಕ್ಷಾಮ ಪ್ರದೇಶಗಳಲ್ಲಿ ಸಂಚರಿಸಿ ಒರಿಸ್ಸಾ ಕ್ಷಾಮದ ಬಗ್ಗೆ ಮಾಲ್ತಿಚೌಧಾರವರು ಈ ಕೆಳಕಂಡ ಹೇಳಿಕೆಯಿತ್ತಿದ್ದಾರೆ —

ಒರಿಸ್ಸಾ ಬೀದಿಯಲ್ಲಿ ತಿರುಕಾಡಲೂ ಕೂಡ ತ್ರಾಣವಿಲ್ಲದ ಜನರು ಸೊಕ್ಕಿ ಬೀಳುತ್ತಿದ್ದುದು ನನ್ನ ಸ್ವಾನುಭವ, ದಿನವೂ ಕತೆಯ. ಪಕ್ಷಿ ದಸ್ತು ಜನರು ಸಾಯುತ್ತಿರುವರು. ಬೇಗನೆ ಪರಿಹಾರ ಕಳಿಸಲಾಗದಿದ್ದಲ್ಲಿ ಒಂದು ವಾರದೊಳಗ ಇನ್ನೂ ಅನೇಕ ಜನರು ಮಡಿಯುವರೆಂದು ಖಚಿತವಾಗಿ ಹೇಳಬಹುದು. ಬಟ್ಟೆಗಳಿಲ್ಲದೆ ಬೀದಿಯಲ್ಲಿ ೧೨ ವರ್ಷದ ಬಾಲಕಿಯರು ಅಲೆದಾಡುತ್ತಿರುವುದು ಹೃದಯ ವಿದ್ರಾವಕ ದೃಶ್ಯ. ಬಂಗಾಳದಷ್ಟೇ ಭಯಂಕರವಾಗಿದೆ, ಒರಿಸ್ಸಾಕ್ಷಾಮ" ಎಂದು ತಿಳಿಸಿದ್ದಾರೆ.

ನೂತನ ವೈಸರಾಯರ ಆಗಮನ

ನೂತನ ವೈಸರಾಯರಾದ ಲಾರ್ಡ್ ವೇವೆಲ್ಲರು ಪತ್ನೀಪರಿವಾರಸಮೇತರಾಗಿ ತಾ|| ೧೮ ರಲ್ಲಿ ನವದೆಹಲಿಗೆ ಬಂದರು. ಅವರು ಕೆಲವು ದಿನಗಳ ಹಿಂದೆ ಇಂಗ್ಲೆಂಡನ್ನು ಬಿಟ್ಟು ವಿಮಾನದಲ್ಲಿ ಆಗಮಿಸಿದರು. ಭಾರತದ ವೈಸರಾಯರು ಇಂಗ್ಲೆಂಡಿನಿಂದ ವಿಮಾನದಲ್ಲಿ ಬಂದು ಅಧಿಕಾರ ವಹಿಸುತ್ತಿರುವುದು ಇದೇ ಮೊದಲು. ಹೊಸ ವೈಸರಾಯರು ಸದ್ಯದಲ್ಲಿ ಯಾವ ಭಾಷಣವನ್ನೂ ಮಾಡುವುದಿಲ್ಲ. ಭಾರತದ ಪರಿಸ್ಥಿತಿಯನ್ನು ಸಂಪೂರ್ಣವಾಗಿ ಮನವರಿಕೆಮಾಡಿಕೊಂಡೇ ಅವರು ಮಾತನಾಡುವ ಲಕ್ಷಣಗಳಿವೆ. ಈ ಮಧ್ಯೆ ಅವರು ಮುಂದಿನ ತಿಂಗಳು ನಡೆಯುವ ಕೇಂದ್ರ ಶಾಸನ ಸಭೆಯಲ್ಲಿಯೂ ಮಾತನಾಡುವಂತೆ ತೋರುವುದಿಲ್ಲವೆಂದು ಹೇಳಲಾಗಿದೆ.

ಲಾಭ ವಿರೋಧ ಮತ್ತು ದಾಸ್ತಾನು ವಿರೋಧದ ಹೊಸ ಕಾಯಿದೆ

ದೆಹಲಿಯಲ್ಲಿ ಕೇಂದ್ರ ಸರಕಾರವು ಲಾಭ ವಿರೋಧ ಮತ್ತು ದಾಸ್ತಾನು ವಿರೋಧದ ಬಗ್ಗೆ ನೂತನ ಕಾಯಿದೆಯನ್ನು ಘೋಷಿಸಿದೆ. ಇದು ಆಹಾರ ಸಾಮಗ್ರಿಗಳ ವಿನಹ ಮಿಕ್ಕ ಎಲ್ಲ ಸಾಮಾನುಗಳಿಗೂ ಅನ್ವಯಿಸುವುದು. ಈ ಕಾಯಿದೆ ಪ್ರಕಾರ ಯಾವ ಸಾಮಾನೇ ಆಗಲಿ ಅದರ ಮೂಲ ಬೆಲೆ ಮೇಲೆ ಶೇಕಡ ೨೦ ಕ್ಕೆ ಹೆಚ್ಚಾಗಿ ಮಾರಿದ್ದಾದರೆ ೩ ವರ್ಷ ಸೆರೆಮನೆ ಅಥವಾ ದಂಡ ಅಥವಾ ಎರಡನ್ನೂ ವಿಧಿಸಬಹುದು. ಈ ಕಾಯಿದೆಯನ್ನು ಕೇಂದ್ರ ಸರಕಾರದ ಸಚಿವ ಶ್ರೀ ಹಕ್‌ರು ವಿವರಿಸಿ, ಇದು ಅತ್ಯಧಿಕ ಲಾಭ ಹೊಂದುತ್ತಿರುವವರನ್ನು ಅಡಗಿಸಲು ಕೈಕೊಂಡ ಯೋಜನೆಯೇ ಹೊರತು ಸಣ್ಣ ಪುಟ್ಟ ವರ್ತಕರ ವ್ಯವಹಾರವನ್ನು ಹದೆಬಡಿಯಲಿಕ್ಕಲ್ಲ ಎಂದು ನುಡಿದರು. ಸಾಮಾನುಗಳನ್ನು ತಯಾರಿಸುವವನೇ ಆಗಲಿ, ಮಾರುವವನೇ ಆಗಲಿ ಬೆಲೆಯನ್ನು ಆ ಸಾಮಾನಿನ ಮೇಲೆ ಗುರ್ತಿಸಬೇಕು. ಇದನ್ನು ಕಾಯಿದೆರೂಪಕ್ಕೆ ತರಲು ಒಂದು ಹೊಸಶಾಖೆಯನ್ನು ತೆರೆದು 'ಕಂಟ್ರೋಲರ್ ಜನರಲ್' ರನ್ನು ನೇಮಿಸಲಾಗಿದೆ. ಈ ಅಧಿಕಾರಿಯು ಎಲ್ಲ ಪ್ರಾಂತ್ಯಗಳಲ್ಲೂ ಸಂಚರಿಸಿ ವ್ಯವಧಾನ ಸೂತ್ರಗಳನ್ನು ಸಫಲಗೊಳಿಸುವರು. ಈ ಯೋಜನೆಯಲ್ಲಿ ದೇಶೀಯ ಸಂಸ್ಥಾನಗಳು ಸಂಪೂರ್ಣ ಸಹಕರಿಸುವದಾಗಿ ತಮಗೆ ಭರವಸೆ ಇತ್ತಿರುವರೆಂದು ಶ್ರೀ ಹಕ್‌ರು ತಿಳಿಸಿದ್ದಾರೆ.

(ನೆಯ ಪುಟದಿಂದ ಮುಂದುವರಿದುದು)

ದುರಾಲೋಚನೆಯು ನಮಗೇ ವ್ಯಕ್ತವಾಗುವುದು. 'ಉಪ್ಪವಾದವನ್ನು ಮೆಂದೀತು ಆಗಲಾದದ್ದು ಹರಿದೀತು" ಎಂಬ ನಾಣ್ಣುಡಿಯನ್ನು ನೆನಪಿನಲ್ಲಿಡತಕ್ಕದ್ದು. ಯಾವಾಗಲೂ ಸತ್ಕಾರ್ಯವನ್ನು ಮಾಡಿ ಕೀರ್ತಿಯನ್ನು ಪಡೆಯುವುದು ಕಠಿನ. ಆದರೆ ದುಷ್ಕಾರ್ಯವನ್ನು ಮಾಡಿ ಅಪಕೀರ್ತಿಯನ್ನು ಹೊಂದುವುದು ಬಹಳ ಸುಲಭವಾಗಿದೆ. ಇರಲಿ, ಒಕ್ಕಟ್ಟಿನಿಂದ ಯಾವಾಗಲೂ ಸತ್ಕಾರ್ಯವನ್ನೇ ಮಾಡಬೇಕಲ್ಲದೆ ದುಷ್ಕಾರ್ಯವನ್ನು ಎಳ್ಳಷ್ಟೂ ಮಾಡಬಾರದೆಂಬುದೇ ವಿಶೇಷ ಸೂಚನೆ.

ಒಕ್ಕಟ್ಟಿನ ಉದಾಹರಣೆಗಳು.— ಒಂದೇ ಇರುವ ಕಟ್ಟಿಗೆಯನ್ನು ಕೈಯಿಂದ ಯಾರಾದರೂ ಸಹಜವಾಗಿ ಮುರಿದು ತುಂಡುಮಾಡಬಹುದು. ಇಂಥ ಅನೇಕ ಕಟ್ಟಿಗೆಗಳನ್ನು ಕೂಡಿಸಿ ಒಂದು ಹೊರೆ (ಕಟ್ಟು) ಮಾಡಿದರೆ ಅದನ್ನು ಮುರಿಯಲಿಕ್ಕೆ ಯಾರಿಗೂ ಸಾಧ್ಯವಾಗಲಾರದು. ಇದಲ್ಲದೆ ಎಲ್ಲಕ್ಕೂ ಸಣ್ಣ ಪ್ರಾಣಿಯು ಎಳೆದುಕೊಂಡು ಹೋಗತಕ್ಕ ನೂಲಿನ ಅಥವಾ ನಾರಿನ ಅಸಂಖ್ಯಾತ ಎಳೆಗಳನ್ನು ಕೂಡಿಸಿ ಒಂದು ಹಗ್ಗವನ್ನು ಮಾಡಿ ೮೪ ಲಕ್ಷ ಜೀವರಾಶಿಗಳಲ್ಲಿ ಬಲಿಷ್ಠವೂ ಎಲ್ಲಕ್ಕೂ ದೊಡ್ಡದೂ ಆದ ಆನೆಗೆ ಕಟ್ಟಿ ನಿಂತಲ್ಲಿಯೇ ನಿಲ್ಲಿಸಬಹುದು. ಈ ಕಾರಣ ಪ್ರತಿಯೊಂದು ಗ್ರಾಮದವರೂ ಒಕ್ಕಟ್ಟಾಗಿ ಸಾರ್ವಜನಿಕರಿಗೆ ಹಿತವಾಗುವಂತಹ ಧಾರ್ಮಿಕ, ಸಾಮಾಜಿಕ, ರಾಜಕೀಯ ಕಾರ್ಯಗಳನ್ನು ಮಾಡಿ ಅದರ ಲಾಭವನ್ನು ಹೊಂದಬೇಕೆಂದು ಕೋರುತ್ತೇವೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅದ್ಭುತಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೩—೦
ಶ್ರೀ ಪೀಠಾರೋಹಣಮಾಡಿರತಕ್ಕ ಐವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦ ೧ ೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦ ೧ ೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೬—೦
ಶ್ರೀಉಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಉಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರುರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೩ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಅವರೊಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವೆನಿಸುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು **ಬೆಲೆ ೩ ರೂಪಾಯಿ.**

ಮ್ಯಾನೇಜರ್—**ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸ್ವದ್ಯೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ.
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Viraśaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	**१ रु**
वीरशैवरत्न (मराठी)	**१ रु.**
महानारायणोपनिषत् (वीरशैवभाष्य—संस्कृत)	**१ रु.**
सिद्धांतशिखामणि (मूल)	**६ आ.**
पुरुषसूक्तम् (वीरशैवप्राचीनभाष्योपेतम्)	**४ आ.**
नंदिकेश्वरकारिका (संस्कृत)	**२ आ.**

ಮ್ಯಾನೇಜರ್—**ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚ ಪ್ರಾಸಾದ ಪಂಕಜಾತ ಜನಿತರ್ ಪಂಚಾಸ್ಯಸಿಂಹಾಸನರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ ಪಂಚಾಚಾರ್ಯಜಗದ್ಗುರೂತ್ತಮವರರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧ನೇ ನವಂಬರ್ ೧೯೪೩ [ಸಂಚಿಕೆ ೨೬

ದೇವರ ಶುಭಸಂದೇಶ

ಲೇ — ವಿರೂಪಾಕ್ಷಶರ್ಮ ಅಂ ಪ್ಪನವರು

ಒಕ್ಕಲಿಗರು ತಮ್ಮ ಹೊಲದಲ್ಲಿ ಯಾವ ಜಾತಿಯ ಬೀಜವನ್ನು ಬಿತ್ತುವರೋ ಅದೇ ಜಾತಿಯ ಬೆಳೆಯೇ ಆಗುವುದು ಗೋದಿ ಬಿತ್ತಿದ ಹೊಲದಲ್ಲಿ ಗೋದಿ, ಭತ್ತ ಬಿತ್ತಿದ ಹೊಲದಲ್ಲಿ ಭತ್ತ ಬೆಳೆಯುತ್ತವೆ ಮಾವಿನ ಬೀಜದಿಂದ ಬೇವಿನಗಿಡ, ಬೇವಿನ ಬೀಜದಿಂದ ಮಾವಿನ ಗಿಡ ಹುಟ್ಟಲಾರದು ಇದರಂತೆ ನಾವು ಮಾಡುವ ಕೃತ್ಯಗಳು ಬೀಜದಂತಾಗಿವೆ ನಮ್ಮ ಕ್ರಿಯೆಗಳೂ ಫಲವನ್ನು ಕೊಡುತ್ತವೆ ಕೆಟ್ಟ ಕೃತ್ಯಕ್ಕೆ ಕೆಟ್ಟ ಫಲ ಸತ್ಕೃತ್ಯಕ್ಕೆ ಸತ್ಫಲ ಇದಕ್ಕಾಗಿ 'ಬೀಜದಂತೆ ಫಲ' ಎನ್ನುವುದು ಲೋಕಪ್ರಸಿದ್ಧ ಕರ್ಮಕ್ಕೆ ತಕ್ಕ ಫಲ ಉಣ್ಣಲೇಬೇಕು ದುಷ್ಕೃತ್ಯಕ್ಕೆ ದಂಡನೆ, ಸತ್ಕರ್ಮಕ್ಕೆ ಸತ್ಫಲವೆನ್ನುವುದನ್ನು ಎಲ್ಲರೂ ನಂಬುವರು ಸೃಷ್ಟಿಯಲ್ಲಿ ಅಕ್ರಮದಂತೆ ತೋರುವ ಕೆಲವೂ ಇವೆ ಪುಣ್ಯಾತ್ಮರಿಗೆ ಯಾವಾಗಲೂ ಸುಖವಿಲ್ಲ ಪಾಪಿಗಳು ಎಷ್ಟು ನೀಚ ಕಾರ್ಯವಮಾಡಿದರೂ ಅವರಿಗೆ ಸುಖವು ತಪ್ಪುವುದಿಲ್ಲ ಹಾಗಾದರೆ ಸಜ್ಜನರ ಕಷ್ಟಕ್ಕೂ ದುರ್ಜನರ ಸುಖಕ್ಕೂ ಕಾರಣವೇನು? ಇದು ಸೃಷ್ಟಿಕರ್ತನ ನಿಯಮವೋ? ಆತನು ಕಾರಣವಿಲ್ಲದೆ ಒಬ್ಬರಸುಖಕ್ಕೂ ಮತ್ತೊಬ್ಬರ ಕಷ್ಟಕ್ಕೂ ಹೊಣೆಯಾಗಬಲ್ಲನು ದೇವರೇ ಹೀಗೆ ಮಾಡಿದರೆ ಪುಣ್ಯಮಾಡಿ ಫಲವೇನು? ಇದೇ ನಮ್ಮ ಪೂರ್ವಜರ ವಿಚಾರಕ್ಕೊಳಗೆ ಹೀಗೆ ನಿರ್ಣಯಿಸಿದರು ದುಷ್ಕರ್ಮಕ್ಕೆ ದಂಡನೆ, ಸತ್ಕರ್ಮಕ್ಕೆ ಸತ್ಫಲ ಎಂಬ ಈಶ್ವರನ ಶಾಸನವು ಸತ್ಯವೇ ಅವನ ಶಾಸನಕ್ಕೆ ಎಂದೂ ಚ್ಯುತಿಯಿಲ್ಲ ಹಾಗಾದರೆ ಪುಣ್ಯಾತ್ಮರ ಕಷ್ಟಕ್ಕೂ ಪಾಪಾತ್ಮರ ಸುಖಕ್ಕೂ ಕಾರಣ ಜನ್ಮಾಂತರವೆಂದು ಕಂಡುಹಿಡಿದರು ಪೂರ್ವಕೃತ ಪುಣ್ಯದ ಫಲವನ್ನು ಇಹಜನ್ಮದಲ್ಲೂ, ಇಹಜನ್ಮಕೃತ ಕರ್ಮಫಲವನ್ನು ಅನ್ಯ ಜನ್ಮದಲ್ಲೂ ಅನುಭವಿಸುತ್ತ ಬಂದಿರುವುದರಿಂದ ಫಲಗಳ ವಿಷಯದಲ್ಲಿ ವ್ಯತ್ಯಾಸವು ಕಾಣುವುದು ಸಹಜವೇ ಆಗಿದೆ ಇದರಿಂದ ಪುನರ್ಜನ್ಮವು ಉಂಟೆಂಬ ಮಾತು ಸತ್ಯ ಶಂಕರಾಚಾರ್ಯರಾದವರೂ "ಪುನರಪಿ ಜನನಂ ಪುನರಪಿ ಮರಣಂ" ಎಂದು ಸಾರಿರುವರು ಕೆಲವು ನಾಸ್ತಿಕ ವಾದಿಗಳು ಪುನರ್ಜನ್ಮವನ್ನು ಒಪ್ಪುವುದಿಲ್ಲ ಅವರ ಮಾತು ಸತ್ಯವೆಂದು ಒಪ್ಪಿದರೆ ಜಗತ್ತಿನ ಬೆಳವಣಿಗೆಯೇ ನಿಲ್ಲಬೇಕಾಗುವುದು ನಮ್ಮ ಆರ್ಯರು ಕಂಡುಹಿಡಿದ ವಿಚಾರವು ಸತ್ಯವೆಂದು ಒಪ್ಪಲೇ ಬೇಕು ಪುನರ್ಜನ್ಮವನ್ನು ತಪ್ಪಿಸಿಕೊಳ್ಳಲಿಕ್ಕೂ ಕೆಲವು ಸಾಧನಗಳನ್ನು ದೇವರು ರಚಿಸಿರುವನು. ಆ ಸಾಧನಗಳನ್ನು ಮಾನವನು ಸಾಧಿಸಬೇಕು ಗರ್ಭದಲ್ಲಿರುವ ಕೂಸಿನ ಜೀವನಕ್ಕೆ ತಾಯಿ ಹೇಗೆ ಆಧಾರಳೋ ಹಾಗೆಯೇ ನಮ್ಮ ಸುಖ ಜೀವನಕ್ಕೆ ದೇವರು ಆಧಾರ ಸೃಷ್ಟಿಕರ್ತ ದೇವರು, ನಮ್ಮನ್ನಾಳುವ ಅರಸು ದೇವರು ಕರ್ಮಕ್ಕೆ ಫಲಕೊಡುವವನು ದೇವರು ನಮ್ಮ ಸುಖ ದುಃಖಗಳ ವಿಚಾರಕನು ದೇವರು ಅವನನ್ನು ಬಿಟ್ಟರೆ ನಮಗಿನ್ನಾರೂ ಗತಿಯಿಲ್ಲ ಜನ್ಮಜರಾಮರಣಗಳೆಂಬ ವ್ಯಾಧಿಗಳು ನಮ್ಮನ್ನು ನುಂಗಲು ಹವಣಿಸುತ್ತಿವೆ ಆದರೂ ಹೊನ್ನು ಹೆಣ್ಣುಗಳ ಬಲೆಗೆ ಸಿಲ್ಕಿ ಉನ್ಮತ್ತರಾಗಿ ಕ್ಷಣಿಕ ಸುಖವನ್ನೇ ಪರಮ ಸಾಮ್ರಾಜ್ಯವೆಂದು ನಂಬಿ ಶ್ರೇಯಸ್ಸನ್ನು ಹಾಳುಮಾಡಿಕೊಳ್ಳುತ್ತೇವೆ ರೂಪ ಯೌವನ ಸಂಪತ್ತುಗಳನ್ನು ಕುಗ್ಗಿಸಿ ನಾಶಗೊಳಿಸುವ ಮುಪ್ಪಿನ ಹಾವಳಿಗೆ ಪ್ರತ್ಯಕ್ಷ ನಿದರ್ಶನಗಳಿದ್ದರೂ ಲೇಶಮಾತ್ರವೂ ಉದ್ವೇಗ ಹೊಂದದೆ ನಿರಾತಂಕರಾಗಿರುವೆವು ಮಾನವನ ನಿತ್ಯಸುಖಕ್ಕೆ ಅನೇಕ ಸುಲಭೋಪಾಯಗಳನ್ನು ದೇವರು ಕಲ್ಪಿಸಿದ್ದರೂ ತಾಯಿಯಿಲ್ಲದ ಮಕ್ಕಳಂತೆ ಭಿಕಾರಿಯಾಗಿ ತಿರುಗುತ್ತಿದ್ದೇವೆ

ನಾವು ದೇವರ ತತ್ತ್ವವನ್ನೂ ಮರೆತಿದ್ದೇವೆ ಅವನನ್ನೂ ಮರೆತಿದ್ದೇವೆ ನಾವು ಮರೆತಿದ್ದರೂ ದೇವರು ನಮ್ಮನ್ನು ಮರೆತಿಲ್ಲ ನಾವು ನಿತ್ಯಸುಖಿಗಳಾಗಿ ತನ್ನ ಸಾನ್ನಿಧ್ಯದಲ್ಲಿಯೇ ಇರಬೇಕೆಂಬ ಆಶಯ ದೇವರಿಗಿದ್ದೇ ಇದೆ ಕುಮಾರ್ಗಗಾಮಿಗಳಾದ ನಾವುಗಳು ತಂದೆಯ ಇಚ್ಛೆಯನ್ನು ಪೂರೈಸಿಕೊಳ್ಳುವ ಶಕ್ತರಾಗಿಲ್ಲ ಆದರೂ ಮಕ್ಕಳಲ್ಲಿ ಪ್ರೇಮವನ್ನು ಬಿಡದೆ ಮಹಾತ್ಮರ ಮೂಲಕ ಪುನಃ ಪುನಃ ಜಗತ್ತಿಗೆ ಎಚ್ಚರಿಕೆಯ ಸಂದೇಶವನ್ನು ಕಳುಹಿಸುತ್ತಿರುವನು ಏನೆಂದರೆ—

ಜನ್ಮದುಃಖಂ ಜರಾದುಃಖಂ ಜಾಯಾದುಃಖಂ ಪುನಃ ಪುನಃ ।
ಸಂಸಾರಸಾಗರಂ ದುಃಖಂ ತಸ್ಮಾತ್ ಜಾಗ್ರತ ಜಾಗ್ರತ ॥

ಎಲೈ ಮಕ್ಕಳಿರಾ! ಕರ್ತವ್ಯಶೂನ್ಯರಾದ ನಿಮ್ಮನ್ನು ಜನ್ಮ, ಜರಾ, ಜಾಯಾದಿ ದುಃಖಗಳು ಪುನಃ ಪುನಃ ಮುತ್ತುತ್ತವೆ ಈ ಸಂಸಾರಸಾಗರವೇ ದುಃಖಮಯವಾಗಿದೆ, ಎಚ್ಚರಾಗಿ, ಎಚ್ಚರಾಗಿ

ಅನಿತ್ಯಾನಿ ಶರೀರಾಣಿ ವಿಭವೋ ನೈವ ಶಾಶ್ವತಃ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥

ಹುಟ್ಟುವುದು, ವೃದ್ಧರಾಗುವುದು, ಸತೀ ಸುತರ ವಿಷಯವಾಗಿ ದುಃಖಪಡುವುದು, ಹೀಗೆ ತಿರುತಿರುಗಿ ಒದಗುತ್ತಿರುವ ಈ ಸಂಸಾರ ಸಮುದ್ರವೇ ದುಃಖಪೂರ್ಣವಾದುದು ಆದುದರಿಂದ ಎಚ್ಚರಾಗಿರಿ ಪಂಚಭೂತಾತ್ಮಕವಾದ ಈ ಶರೀರವು ಅನಿತ್ಯ ನೀವು ಗಳಿಸಿದ ಐಶ್ವರ್ಯವೂ ಅನಿತ್ಯ ಪ್ರತಿದಿನವೂ ಮೃತ್ಯುವು ಸಮೀಪಿಸುತ್ತಲಿದೆ ಕಾರಣ ಶಾಶ್ವತವಾದ ಧರ್ಮವನ್ನು ಸಂಗ್ರಹಿಸಿರಿ

ಮೃತಂ ಶರೀರಮುತ್ಸೃಜ್ಯ ಕಾಷ್ಠಲೋಷ್ಟಸಮಂ ಕ್ಷಿತೌ ।
ವಿಮುಖಾ ಬಾಂಧವಾ ಯಾಂತಿ ಧರ್ಮಸ್ತಮನುಗಚ್ಛತಿ ॥

ಮೃತವಾದ ಪಂಚಭೂತಾತ್ಮಕ ಶರೀರವನ್ನು ಪ್ರೇಮಿಗಳಾದ ಬಾಂಧವರೂ ಸಹ ಕಟ್ಟಿಗೆ ಹೆಂಟೆಗಳಂತೆ ಹೂಳಿಟ್ಟು ಹೊರಟುಹೋಗುವರು ಧರ್ಮವು ಮಾತ್ರ ನಿನ್ನನ್ನು ಅನುಸರಿಸುತ್ತದೆ ಆದುದರಿಂದ ಇಂದು ನಾಳೆಯೆನ್ನದೆ ಶೀಘ್ರವಾಗಿ ಧರ್ಮವನ್ನು ಸಂಗ್ರಹಿಸು. ಅನಂತರ ನನ್ನ ಸಾನ್ನಿಧ್ಯವು ಅತಿ ಸುಲಭ ಎಂಬುದೇ ಈಶ್ವರನ ಸಂದೇಶ ದೇವರ ಸಂದೇಶವನ್ನು ಆತ್ಮಾದರದಿಂದ ಸ್ವೀಕರಿಸಬೇಕು ಪ್ರಾಣಕ್ಕಿಂತಲೂ ಅಧಿಕವಾಗಿ ಪಾಲಿಸಬೇಕು ಆಗ ಇಹಪರಗಳಲ್ಲಿ ನಮಗೆ ಸುಖ ದೇವರ ಆಜ್ಞೆಯನ್ನು ತಿಲಮಾತ್ರವೂ ಮೀರಬಾರದು ಜಗದೊಡೆಯನ ಆಜ್ಞೆಯನ್ನು ಸೂರ್ಯ, ಚಂದ್ರ, ನಕ್ಷತ್ರಾದಿ ದೇವತೆಗಳೂ ಸಹ ಶಿರಸಾವಹಿಸಿ ಆತ್ಮಾದರದಿಂದ ಆಚರಿಸುತ್ತಾರೆ ಅಚೇತನಗಳಾದ ಗಿಡ ಮರಗಳೂ ಸಹ ಆತನ ಆಜ್ಞೆಯಂತೆ ಬೆಳೆದು ಮಾನವನಿಗೆ ಫಲಕೊಡುತ್ತವೆ ದುಷ್ಟನಿಗ್ರಹ ಶಿಷ್ಟಪರಿಪಾಲನಶೀಲನಾದ ದೇವರಿಗೆ ಬಡವರು ಬಲ್ಲಿದರು ಎಂಬ ಭೇದವಿಲ್ಲ. ಎಲ್ಲರನ್ನೂ ಸಮಾನವಾಗಿ ರಕ್ಷಿಸುವನು ಯಾರೇ ಆಗಲಿ ಆತನ ಆಜ್ಞೆಯನ್ನು ಮೀರಿ ಕುಮಾರ್ಗಗಾಮಿಗಳಾದರೆ ಶ್ರೀ ಗುರುವೇ ಮೊದಲಾದ ಹಿರಿಯರ ಉಪದೇಶದ ಮೂಲಕ ಅವರುಗಳನ್ನು ಸನ್ಮಾರ್ಗಕ್ಕೆ ತರಲು ಪ್ರಯತ್ನಿಸುವನು ತಮ್ಮ ಕರ್ಮ ಬಲದಿಂದ ಹಾದಿಗೆ ಬಾರದೆ ಇದ್ದರೆ ಪುನಃಪುನಃ ಜನ್ಮಜರಾಮರಣಾದಿಗಳ ಬಲೆಗೆ ತುತ್ತಾಗಿ ದುಃಖಕ್ಕೆ ಗುರಿಯಾಗಿ ಕಷ್ಟಪಡುವರು ಈಶ್ವರನ ಸಾನ್ನಿಧ್ಯದಲ್ಲಿದ್ದು ಪುನರ್ಜನ್ಮವಿಲ್ಲದೆ ಆತನ ಸೇವೆಗೈಯುವುದೇ ಶಿಷ್ಟರ ಪುಣ್ಯಕರ್ಮಗಳ ಫಲ

ಸಂಸಾರವೇ ದುಃಖಮಯ ಇಂದ ಕಷ್ಟಗಳ ಪರಂಪರೆಗಳು ಶಿವಭಕ್ತರಿಗೇ ಹೆಚ್ಚು ಕೆಲವರು ಸದಾ ರೋಗಿಗಳು, ಹೀಗಾಗುವುದೆಲ್ಲ ಈಶ್ವರನ ಅನುಗ್ರಹವೆಂದು ಭಾವಿಸಬೇಕು ತನ್ನ ಸಾನ್ನಿಧ್ಯಕ್ಕೆ ಒಪ್ಪಿಯಾದರೂ ಆಗಲೆಂಬ ಉದ್ದೇಶದಿಂದ ತನ್ನ ಮಕ್ಕಳಿಗೆ ಒಮ್ಮೊಮ್ಮೆ ಕಷ್ಟಕೊಡುವನು ಆಗ ನಾವು ಎದೆಗುಂದ ಬಾರದು ತಾಯಿಯು ಮಕ್ಕಳನ್ನು ಪ್ರೀತಿ ಮಾಡಿ ಅವರ ಸುಖವನ್ನು ಚಿಂತಿಸುವುದರಿಂದಲೇ ಮಕ್ಕಳನ್ನು ಶಿಕ್ಷಿಸುವಳು ಹಾಗೆಯೇ ದೇವರು ತನ್ನ ಮಕ್ಕಳನ್ನು ನಡೆಸುತ್ತಾನೆ ನಮ್ಮ ಹಿತಕ್ಕಾಗಿಯೇ ಒಮ್ಮೊಮ್ಮೆ ಕಷ್ಟಪಡಿಸುವನು ಆಗ ನಾವು ದೇವರನ್ನು ನಿಂದಿಸಬಾರದು ಅವನ ನಾಮಸ್ಮರಣೆಯಿಂದ ಆನಂದಿಸಬೇಕು

ಈಶ್ವರನು ದೀನಬಂಧು, ಭಕ್ತವತ್ಸಲ ದೀನಭಕ್ತರೆಂದರೆ ಅವನಿಗೆ ಬಹು ಪ್ರೀತಿ ಅವರ ರಕ್ಷಣೆಯ ಭಾರವು ಈಶ್ವರನ ಮೇಲೆ ಹೆಚ್ಚಾಗಿದೆ ದೀನರಿಗೋಸ್ಕರ ದೇವರ ಸಂದೇಶವು ಹೀಗಿದೆ:—

ಯಸ್ಯಾನುಗ್ರಹಮಿಚ್ಛಾಮಿ ತಸ್ಯ ವಿತ್ತಂ ಹರಾಮ್ಯಹಂ ।
ಯನ್ಮದಃ ಪುರುಷಃ ಸ್ತಬ್ಧೋ ಲೋಕಂ ಮಾಂ ಚಾವಮನ್ಯತೇ ॥

ಧನ ಯೌವನಾದಿ ಮದಗಳಿಂದ ಮದೋನ್ಮತ್ತನಾದ ಪುರುಷನು ಲೋಕವನ್ನೂ ನನ್ನನ್ನೂ ಲಕ್ಷಿಸುವುದಿಲ್ಲವಾದ ಕಾರಣ ನನ್ನ ಕೃಪಾಕಟಾಕ್ಷವು ಯಾರ ಮೇಲೆ ಬೀಳಬೇಕೆಂದು ಇಚ್ಛಿಸುವೆನೋ ಅವರ ಉನ್ಮಾದಕ್ಕೆ ಮೂಲವಾದ ಧನವನ್ನು ಅಪಹರಿಸುವೆನು. ಬಡತನವು ನನ್ನನ್ನು ಅವರ ನೆನಪಿಗೆ ತರುವುದು ಆ ಮೇಲೆ ನನ್ನ ಅನುಗ್ರಹವು ಅವರಿಗೆ ಸುಲಭವಾಗಿ ಲಭಿಸುವುದು. ಶಿವಭಕ್ತರು ಕೂಡ ದೇವರನ್ನು ಹೀಗೆ ಬೇಡುವರು—

(ಇನ್ನೂ ಇರುವುದು)

ಪಂಚಾಚಾರ್ಯಪ್ರಭಾ

೧೯೪೩ನೆಯ ನವಂಬರ ತಾ ೧ನ ಸೋಮವಾರ

ಬಾಹ್ಯಾಭ್ಯಂತರೋಪಾಸನೆ

ಈ ಪ್ರಪಂಚದಲ್ಲಿರುವ ಮಾನವರೆಲ್ಲರಿಗೂ ಸೃಷ್ಟಿಕರ್ತನಾದ ಈಶ್ವರನೊಬ್ಬನು ಇರುವನೆಂದ ಸಾಮಾನ್ಯತಃ ಗೊತ್ತಿರಬೇಕು! ಆದರೆ ಇಂತಹ ಸರ್ವಕರ್ತನಾದ ಈಶ್ವರನ ಅನುಗ್ರಹವಾಗುವವರೆಗೂ ಮಾನವರಿಗೆ ಉಂಟಾಗಿರುವ ಭವ ಎಂದೂ ಪರಿಹಾರವಾಗುವಂತಿಲ್ಲ. ಈಶ್ವರನ ಅನುಗ್ರಹವನ್ನಪೇಕ್ಷಿಸುವವರ ಯಾವಾಗಲೂ ಯಾವ ರೂಪದಿಂದಾದರೂ ಆತನ ಉಪಾಸನೆಯನ್ನು ಮಾಡತಕ್ಕದ್ದು. ಈಶ್ವರನ ಉಪಾಸನೆಯನ್ನು ಅವರವರ ಇಚ್ಛಾನುಸಾರವಾಗಿ ಒಬ್ಬೊಬ್ಬರು ಅನೇಕವಿಧವಾಗಿ ಆಚರಿಸುತ್ತಾರೆ. ಕೆಲವರು ಬಾಹ್ಯೋಪಾಸನೆಯಿಂದಲೇ ಈಶ್ವರನು ಒಲಿಯುವನೆಂದು ಹೇಳುತ್ತಾರೆ. ಇನ್ನು ಕೆಲವರು ಅಭ್ಯಂತರೋಪಾಸನೆಯಿಂದಲೇ ಈಶ್ವರನು ಪ್ರಸನ್ನನಾಗುತ್ತಾನೆಂದು ಹೇಳುತ್ತಾರೆ.

ಮನಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ
ಯಥಾಽಲಿಂಗಿತಃ ಪುತ್ರ್ಯಾ ತಥಾಽಲಿಂಗಿತಃ ಪತಿಃ ।

ಎಂದರೆ ಮನುಷ್ಯನ ಬಂಧಕ್ಕಾಗಲಿ ಮೋಕ್ಷಕ್ಕಾಗಲಿ ಅವರವರ ಮನಸ್ಸೇ ಕಾರಣವಾಗಿರುವುದು. ಯಾವಳು ಪುತ್ರನನ್ನು ಆಲಿಂಗಿಸುವಳೋ ಅವಳೇ ಗಂಡನನ್ನೂ ಆಲಿಂಗಿಸುವಳು. ಆಲಿಂಗನರೂಪವಾದ ಬಾಹ್ಯಧರ್ಮವೇನೋ ಒಂದೇ ಆಗಿದ್ದರೂ ಮನೋಭಾವವೇ ಬೇರೆಯಾಗಿರುವಂತೆ, ಪರಮೇಶ್ವರನ ಪ್ರೀತಿಗೆ ಮಾನಸಿಕವಾದ ಅಂತರಾರಾಧನೆಯೇ ಸಾಕಾಗಿವೆಯಲ್ಲದೆ ಕಾಯಿಕವಾದ ಬಾಹ್ಯ ಆರಾಧನೆಯ ಆವಶ್ಯಕತೆಯಿಲ್ಲವೆಂದು ತಿಳಿದುಬರುತ್ತದೆ. ಆದರೆ —

ಗವಾಂ ಸರ್ಪಿಃ ಶರೀರಸ್ಥಂ ನಕರೋತ್ಯಾತ್ಮಪೋಷಣಂ
ನಿಸ್ಸೃತಂ ಕರ್ಮಚರಿತಂ ಪುನಸ್ತಾಸಾಂ ತದ್ಭೇಷಜಂ ।
ಏವಮಂತಃ ಶರೀರಸ್ಥಃ ಸರ್ಪಿರ್ವತ್ಪರಮೇಶ್ವರಃ
ವಿನಾ ಚೋಪಾಸನಂ ದೇವೋ ನಕರೋತಿ ಹಿತಂ ನೃಣಾಂ ।

ಗೋವುಗಳ ಶರೀರದಲ್ಲಿ ತುಪ್ಪವಿದ್ದರೂ ಆ ತುಪ್ಪವು ಆ ಗೋವಿನ ಆತ್ಮವನ್ನು ರಕ್ಷಿಸಲಾರದು. ಆ ಶರೀರದಲ್ಲಿರುವ ತುಪ್ಪವನ್ನು ಹೊರಗೆ ಕಾಣಿಸುವಂತೆ ಮಾಡಬೇಕಾದರೆ, ಹಾಲು ಕರೆಯುವುದೂ, ಕಾಸುವುದೂ, ಹೆಪ್ಪು ಹಾಕುವುದೂ, ಕಡೆಯುವುದೂ ಮೊದಲಾದ ಹೊರಗಿನ ಕ್ರಿಯೆಗಳನ್ನು ಆಚರಿಸಬೇಕಾಗುವುದು. ಆಗ ಆ ತುಪ್ಪವು ಕಾಣಿಸಿಕೊಂಡು ಆ ಗೋವುಗಳ ರೋಗಕ್ಕೆ ಉಪಯೋಗವಾಗುತ್ತದೆ. ಇಲ್ಲಿ ಪರಮೇಶ್ವರನು ಗೋವಿನ ದೇಹದಲ್ಲಿರುವ ತುಪ್ಪದಂತೆ ಎಲ್ಲ ಶರೀರಗಳಲ್ಲಿ ಸೂಕ್ಷ್ಮವಾಗಿದ್ದರೂ ಬಾಹ್ಯವಾದ ಸ್ಥೂಲಾರಾಧನೆಯ ಹೊರತು ಆ ಪರಮೇಶ್ವರನು ಪ್ರಸನ್ನನಾಗುವುದಿಲ್ಲ. ಪ್ರಸನ್ನನಾದ ಹೊರತು ಭವರೋಗವು ನಾಶವಾಗಲಾರದು. ಎಂಬ ಪ್ರಮಾಣಪರ್ಯಾಲೋಚನೆಯಿಂದ ಪರಮೇಶ್ವರನ ಪ್ರೀತಿಗೆ ಬಾಹ್ಯ ಆರಾಧನೆಯೇ ಸಾಕಾಗಿದೆ. ಅಭ್ಯಂತರ ಉಪಾಸನೆಗಳೊಂದೂ ಬೇಕಿಲ್ಲವೆಂದು ಅರ್ಥವಾಗುತ್ತದೆ. ಹೀಗೆ ಕೆಲವರು ಬಾಹ್ಯಾರಾಧನೆಯಲ್ಲಿಯೇ ವಿಶ್ರಾಂತರೂ, ಕೆಲವರು ಅಭ್ಯಂತರಾರಾಧನೆಯಲ್ಲಿಯೇ ವಿಶ್ರಾಂತರೂ ಆಗಿದ್ದಾರೆ. ಬಾಹ್ಯಾರಾಧನೆಯನ್ನು ಬಿಟ್ಟು ಕೇವಲ ಮಾನಸಿಕವಾದ ಆರಾಧನೆಯಿಂದಾಗಲಿ, ಮಾನಸಿಕವಾದ ಆರಾಧನೆಯನ್ನು ಬಿಟ್ಟು ಕೇವಲ ಬಾಹ್ಯಾರಾಧನೆಯಿಂದಾಗಲಿ ಈಶ್ವರನು ಪ್ರಸನ್ನನಾಗುವುದಿಲ್ಲ — ಎಂಬುದೇ ವೀರಶೈವಸಿದ್ಧಾಂತದ ರಹಸ್ಯವು. ಬಾಹ್ಯ ಮತ್ತು ಅಭ್ಯಂತರ ಉಪಾಸನೆಗಳೆರಡರಿಂದಲೇ ಮಾನವನು ಈಶ್ವರನ ಪ್ರಸನ್ನತೆಯನ್ನು ಹೊಂದಿ ಭವರೋಗದಿಂದ ಬಿಡುಗಡೆಯನ್ನು ಹೊಂದುತ್ತಾನೆಂಬ ವಿಷಯದಲ್ಲಿ—

ತಥಾಂತರ್ಯಜನಂ ಶಿಷ್ಯಂ ಬಹಿರ್ಯಜನಪೂರ್ವಕಂ ।
ಕರ್ತವ್ಯಂ ಸ್ವೇಷ್ಟಲಿಂಗಸ್ಯ ಚಾರ್ಚನಂ ತನ್ಮನೀಷಿಭಿಃ ॥

ಬಾಹ್ಯ, ಅಭ್ಯಂತರ ಉಪಾಸನೆಗಳೆರಡೂ ಮುಮುಕ್ಷುವಿಗೆ ಉಪಾದೇಯವೆಂದು ಶಿವಾಗಮಗಳು ಸ್ಪಷ್ಟವಾಗಿ ಹೇಳುತ್ತವೆ. ಆದುದರಿಂದ ತನ್ನ ಸಂಪ್ರದಾಯಾನುಸಾರವಾಗಿ ವೀರಶೈವನಾದವನು ಲಿಂಗರೂಪನಾದ ಈಶ್ವರನ ಬಹಿರಾಕಾರವನ್ನು ಹೊರಗೆ ಪೂಜಿಸುತ್ತಲೂ ಪೂಜಿಸಿದ ಆ ಮೂರ್ತಿಯನ್ನು ತದಾಕಾರವಾಗಿ ಮನಸ್ಸಿನಲ್ಲಿ ಧ್ಯಾನಿಸುತ್ತಲೂ ಇರುವವನಾವನೋ ಅಂತಹವನಿಗೆ ಮಾತ್ರ ಈಶ್ವರನೊಲಿಮೆಯುಂಟಾಗುವುದು. ಅದಿಲ್ಲವೆ ಮನಸ್ಸಿನಲ್ಲಿ ಯಾವುದೊಂದೂ ಮೂರ್ತಿಯ ಧ್ಯಾನಸ್ಮರಣೆಗಳಿಲ್ಲದ ಶೂನ್ಯಹೃದಯನಾಗಿ ಹೊರಗೆ ಮಾತ್ರ ಪೂಜಾಡಂಬರಗಳನ್ನು ಅಭಿನಯಿಸಿದರೂ ಪ್ರಯೋಜನವಿಲ್ಲ. ಒಳಗೆ ಮಾತ್ರ ಧ್ಯಾನಿಸುತ್ತಲೂ ಸ್ಮರಿಸುತ್ತಲೂ ಇದ್ದು ಹೊರಗೆ ಕೇವಲ ವ್ರಾತ್ಯನಾಗಿಯೂ ಕ್ರಿಯಾಭ್ರಷ್ಟನಾಗಿಯೂ ಇರುವವನಿಗೂ ಸಹ ಈ ಭವದ ಸಂಕೋಲೆಯು ತಪ್ಪಲಾರದು. ಆದುದರಿಂದ—

ಇಷ್ಟಲಿಂಗಂ ಪ್ರಾಣಲಿಂಗಮೇಕೀಕೃತ್ಯ ಸಮರ್ಚಯೇತ್
ಮಣಿಮಾಲಾಂ ಮಂತ್ರಮಾಲಾಮೇಕೀಕೃತ್ಯ ಜಪೇತ್ಸದಾ ।

ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನೂ, ಹೃದಯದಲ್ಲಿ ವಿರಾಜಮಾನವಾದ ಪ್ರಾಣಲಿಂಗವನ್ನೂ, ರುದ್ರಾಕ್ಷಮಾಲೆಯನ್ನೂ, ಮಂತ್ರಮಾಲೆಯನ್ನೂ ಒಂದು ಮಾಡಿ ಪೂಜಿಸುತ್ತಲೂ, ಜಪಿಸುತ್ತಲೂ ಇರುವವನೇ ವೀರಶೈವನೆಂದು ಶಿವಾಗಮಗಳು ಎರಡು ಉಪಾಸನೆಗಳಿಗೂ ಅವಕಾಶವನ್ನು ಕೊಟ್ಟಿರುತ್ತವೆ. ಗುರುವಿನಿಂದ ಅನುಗ್ರಹೀತವಾದ ಇಷ್ಟಲಿಂಗವನ್ನು ಯಾವಾಗಲೂ ಆರಾಧಿಸುತ್ತಿರುವುದೇ ಬಹಿರುಪಾಸನೆಯು. ಹೃದಯಾಕಾಶದಲ್ಲಿ ಪ್ರಾಣಲಿಂಗವನ್ನು ಆರಾಧಿಸುತ್ತಿರುವುದೇ ಅಂತರುಪಾಸನೆಯು. ಮನಸ್ಸಿನಲ್ಲಿ ಯಾವವಿಧವಾದ ಜ್ಞಾನವಿರುವುದೋ ಆ ಜ್ಞಾನಾನುಗುಣವಾದ ಫಲವು ಕೈಸೇರಬೇಕಾದರೆ ಆ ಜ್ಞಾನವು ಕ್ರಿಯಾರೂಪದಿಂದ ಪರಿಣಮಿಸಲೇಬೇಕು. ಲೋಕದಲ್ಲಿ ಒಬ್ಬನು ಧನಾರ್ಜನೆಯನ್ನು ಮಾಡಿ ಸುಖವನ್ನು ಸಂಪಾದಿಸಬೇಕೆಂಬ ಜ್ಞಾನವಿದ್ದು ಅದಕ್ಕನುಗುಣವಾದ ಬಹಿರ್ವ್ಯಾಪಾರದಲ್ಲಿ ತೊಡಗಿ ಜನಾನುರಾಗಿಯಾಗಿಯೂ, ಸತ್ಯಶೀಲನಾಗಿಯೂ ವರ್ತಿಸಬೇಕಾಗುವಂತೆ ಮನಸ್ಸಿನಲ್ಲಿ ಲಿಂಗರೂಪನಾದ ಈಶ್ವರನ ಜ್ಞಾನವೊಂದಿದ್ದರೆ ಅಷ್ಟುಮಾತ್ರದಿಂದ ಇವನು ಭವಸಮುದ್ರದಿಂದದ್ದು ಸುಖಪಡೆಯಲಾರನು. ಅಂತರ್ವ್ಯಾಪ್ತವಾದ ಆ ಈಶ್ವರಜ್ಞಾನಕ್ಕನುಗುಣವಾಗಿ ಸತ್ಯ, ಆಚಾರಾದಿ ವ್ರತಗಳನ್ನು ಪಾಲಿಸುತ್ತ ಗುರುವಿನ ಅನುಜ್ಞೆಯನ್ನು ಸ್ವಲ್ಪವೂ ಮೀರದಂತೆ ಲಿಂಗಮೂರ್ತಿಯನ್ನು ಧೂಪದೀಪಾದಿಗಳಿಂದ ಅರ್ಚಿಸುತ್ತ ಬರುವುದರಿಂದ ಕ್ರಿಯಾಜ್ಞಾನವು ಏಕತ್ರ ಸಮ್ಮಿಳಿತವಾಗಿ ಈ ಕ್ರಿಯಾಜ್ಞಾನಾಶ್ರಯನಾದ ಈಶ್ವರನು ಪ್ರಸನ್ನನಾಗುತ್ತಾನೆ. ಹಾಗಿಲ್ಲದೆ ತಿಳಿವಳಿಕೆಯಿಲ್ಲದೆ, ಬಹಿರಾಡಂಬರದಿಂದ ವ್ಯಾಪಾರಮಾಡುವವನಾಗಲಿ ಬಹಿರ್ವ್ಯಾಪಾರವನ್ನೇ ಮಾಡದೆ ಸೋಮಾರಿಯಾಗಿ ಕುಳಿತುಕೊಂಡು ಮನಸ್ಸಿನಲ್ಲಿಯೇ ಕೇವಲ ಸುಖವನ್ನು ನೆನೆಸುವವನಾಗಲಿ ಇಬ್ಬರಿಗೂ ಧನಾರ್ಜನೆಯಾಗದೆ ದುಃಖಪಡುವಂತೆ ಮನಸಾ ಪರಮಾತ್ಮನನ್ನು ಸ್ಮರಿಸುತ್ತಿರುವವನಾಗಲಿ ಅಥವಾ ಜ್ಞಾನವಿಲ್ಲದೆ ಹೊರಗೆ ಈಶ್ವರಪೂಜಾದಿಕ್ರಿಯೆಗಳನ್ನು ಮಾಡುವವನಾಗಲಿ ಇಬ್ಬರೂ ಮುಕ್ತಿಸಾಮ್ರಾಜ್ಯ ಸೌಖ್ಯವನ್ನು ಪಡೆಯದೆ ದುಃಖಿಗಳಾಗಬೇಕಾಗುವುದು. ಆದ್ದರಿಂದ ಮೋಕ್ಷಸೌಖ್ಯವನ್ನು ಅಪೇಕ್ಷಿಸುವ ಮನುಷ್ಯನಿಗೆ ಪರಮಾತ್ಮ ಸಂಬಂಧವಾದ ಕ್ರಿಯೆಯೂ, ಒಳಗೆ ಪರಮಾತ್ಮ ಸಂಬಂಧವಾದ ಜ್ಞಾನವೂ ಇವೆರಡೂ ಹಾರುವ ಪಕ್ಷಿಗೆ ಸಹಾಯವಾಗಿರುವ ಎರಡು ರೆಕ್ಕೆಗಳಂತೆ ಸಹಾಯಕಗಳಾಗಿವೆಯೆಂದು ಭಗವತ್ಪಾದ ರೇಣುಕಾಚಾರ್ಯರು ಜ್ಞಾನಕ್ರಿಯೆಗಳಿಗೆ ಸಮಸಮುಚ್ಚಯವನ್ನು ಬೋಧಿಸಿರುತ್ತಾರೆ. ಆದುದರಿಂದ ಮೋಕ್ಷಾಪೇಕ್ಷಿಗಳಾದ ಮಾನವರು ಬಾಹ್ಯಾಭ್ಯಂತರೋಪಾಸನೆಗಳೆರಡನ್ನೂ ಮಾಡಿ ಧನ್ಯಾತ್ಮರಾಗಬೇಕೆಂದಾಶಿಸುತ್ತೇನೆ.

ಹಡಗು ಕಟ್ಟಲು ಬೊಂಬಿನ ಉಪಯೋಗ

ಜಪಾನರು ಹಡಗು ನಿರ್ಮಾಣಕ್ಕೆ ತಕ್ಕ ವಸ್ತುಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆಂದೂ, ೩೫೦ ಟನ್ ತೂಕವಿರುವ ಒಂದು ಬಗೆಯ ಹಡಗನ್ನು ಅಧಿಕ ಸಂಖ್ಯೆಯಲ್ಲಿ ಕಟ್ಟುವ ಯತ್ನ ಮಾಡುತ್ತಿದ್ದಾರೆಂದೂ, ಇದರಲ್ಲಿ ಶೇಕಡ ೨೦ ರಷ್ಟು ಮರ ಮತ್ತು ಕಬ್ಬಿಣಕ್ಕೆ ಬದಲು ಬೊಂಬನ್ನು ಉಪಯೋಗಿಸುತ್ತಿದ್ದಾರೆಂದೂ ಹೇಳಲಾಗಿದೆ

ಯುದ್ಧವಾರ್ತೆ.

೧೨೩ ಜಪಾನ್ ವಿಮಾನಗಳ ನಾಶ

ರಾಬೂಲ್ ಮೇಲೆ ಮಿತ್ರ ವೈಮಾನಿಕರು ಮುತ್ತಿಗೆ ನಡೆಸಿ, ೧೨೪ ಜಪಾನ್ ವಿಮಾನಗಳನ್ನು ನಾಶಮಾಡಿದರೆಂಬುದಾಗಿ ಅಧಿಕಾರಯುತವಾಗಿ ತಿಳಿಸಲಾಗಿದೆ. ರಾಬೂಲ್ ಬಳಿ ಒಂದು ಜಪಾನ್ ಡಿಸ್ಟ್ರಾಯರನ್ನೂ ೫ ಹಡಗುಗಳನ್ನೂ ಮುಳುಗಿಸಲಾಯಿತು. ಇದಲ್ಲದೆ ೨೦ ಜಪಾನ್ ವಿಮಾನಗಳು ಸಹ ಹಾಳಾದವು ಎಂದು ಹೇಳಲಾಗಿದೆ.

ಫ್ರೆಂಚ್ ತೀರದಲ್ಲಿ ನೌಕಾ ಯುದ್ಧ

ಕಳೆದ ಶನಿವಾರ ಇಂಗ್ಲೀಷ್ ಕಡಲ್ಗಾಲುವೆಯಲ್ಲಿ ಸಣ್ಣ ನೌಕಾ ಕದನ ನಡೆದು ಒಂದು ಬ್ರಿಟಿಷ್ ಕ್ರೂಯಿಜರು ಮುಳುಗಿಸಲ್ಪಟ್ಟಿತು. ಒಂದು ಡಿಸ್ಟ್ರಾಯರಿಗೆ ನಷ್ಟವಾಗಿದ್ದು ಅದನ್ನು ನಾವೇ ಮುಳುಗಿಸಬೇಕಾಯಿತು. ಫ್ರೆಂಚ್ ತೀರದಲ್ಲಿ ಶತ್ರುಗಳೊಂದಿಗೆ ನಡೆಸಿದ ಸಂಗ್ರಾಮದಲ್ಲಿ ಅವೆರಡಕ್ಕೂ ಟಾರ್ಪೆಡೋ ಬಡಿದು ನಷ್ಟ ಹೊಂದಿದವು—ಎಂದು ಬ್ರಿಟನ್ ನೌಕಾ ಕಚೇರಿಯು ಪ್ರಕಟಿಸಿದೆ

ಜಪಾನರ ಪ್ರತಿಭಟನೆ ಜೋರಾಗಿದೆ

ಅಮೆರಿಕವು ಪೆಸಿಫಿಕ್‌ನಲ್ಲಿ ದೀರ್ಘಕಾಲ ವಿಶೇಷ ವೆಚ್ಚದಿಂದ ಯುದ್ಧವನ್ನು ನಡೆಸಬೇಕಾಗಿದೆಯೆಂದು ಅಮೆರಿಕನ್ ನೌಕಾಶಾಖೆಯ ಅಧಿಕಾರಿಗಳಾದ ಡಾ॥ ಡೇನಿಯಲ್ ತಿಳಿಸಿದ್ದಾರೆ 'ನಾವಿನ್ನೂ ಶತ್ರುವಿಗೆ ನಷ್ಟವನ್ನುಂಟುಮಾಡಿಲ್ಲ. ನಾವು ಆತನ ಬಳಿಗೆ ಹೋದಂತೆಲ್ಲ ಆತನು ಜೋರಾಗುತ್ತಿದ್ದಾನೆ. ಜಪಾನರು ಬಹಳ ದೂರ ಮುಂದೆ ನುಗ್ಗಿ ಬಂದಿದ್ದಾರೆ. ಅವರನ್ನೀಗ ಹಿಂದಕ್ಕೆ ಅಟ್ಟಬೇಕಾಗಿದೆ. ನಾವು ಶತ್ರುಗಳನ್ನು ಹಿಂದೊತ್ತಿ, ಅವರ ಬಲಮೂಲಗಳನ್ನು ಸಮೀಪಿಸಿದಂತೆಲ್ಲ ಅವರ ಶಕ್ತಿ ಅಧಿಕವಾಗುವುದೆಂಬುದನ್ನು ನಾವು ಮರೆಯಬಾರದು' ಎಂದು ಸೂಚಿಸಿದ್ದಾರೆ

ರಷ್ಯದ ವಿದೇಶನೀತಿಯೇನು ?

ಮಾಸ್ಕೋ ಮಾತುಕತೆಗಳು ಬಹಳ ರಹಸ್ಯಮಾಡಲ್ಪಟ್ಟಿದ್ದರೂ ಅದರ ಫಲಿತಾಂಶ ಕುರಿತು ನಂಬಿಕೆಯಿಂದ ಇರಬಹುದಾಗಿದೆ. ರಕ್ಷಣೆಗೆ ಅನುಕೂಲವಾದ ಗಡಿಯನ್ನು ರೂಪಿಸಿಕೊಳ್ಳಬೇಕು. ಯೂರೋಪಿನಲ್ಲಿ ರಷ್ಯಕ್ಕೆ ವಿರುದ್ಧವಾಗಿ ನಾನಾ ದೇಶಗಳು ಒಂದಾಗದಂತೆ ನೋಡಿಕೊಳ್ಳಬೇಕು. ಇದೇ ರಷ್ಯದ ವಿದೇಶಾಂಗ ನೀತಿಯ ಮುಖ್ಯ ಗುರಿ. ಯೂರೋಪನ್ನು ಭಾಗಗಳಾಗಿ ಮಾಡಿ, ಇಂತಹ ಪ್ರದೇಶಗಳಲ್ಲಿ ಇಂಥವರ ಪ್ರಭಾವವಿರತಕ್ಕದ್ದು ಎಂದು ನಿರ್ಧರಿಸಲು ರಷ್ಯಾ ಒಪ್ಪುವುದಿಲ್ಲ. ಯೂರೋಪನ್ನು ಈರೀತಿ ವಿಭಾಗಿಸಲು ಬ್ರಿಟಿಷ್ ಮತ್ತು ಅಮೇರಿಕಗಳೂ ಒಪ್ಪುವುದಿಲ್ಲವೆಂದು ತಿಳಿದುಬಂದಿದೆ. ಆದರೆ ಯುದ್ಧಾನಂತರ ಪುನರ್ನಿರ್ಮಾಣಕ್ಕೆ ರಷ್ಯದ ಪೂರ್ಣ ಬೆಂಬಲ ಪಡೆಯಬೇಕೆಂಬುದು ಅವುಗಳ ಉದ್ದಿಶ್ಯವೆಂದು ಹೇಳಲಾಗಿದೆ

ಇಟಲಿಯ ಕದನ

ಇಟಲಿಯಲ್ಲಿಯೂ ಮತ್ತು ಬಾಲ್ಕನ್ಸ್‌ನಲ್ಲಿಯೂ ೩೫-೪೦ ಡಿವಿಜನ್ನಷ್ಟು ನಾಜಿ ಸೈನ್ಯ ಇರಬಹುದೆಂದು ಜ॥ ಅಲೆಗ್ಝಾಂಡರ್‌ರವರು ಅಂದಾಜು ಹಾಕಿದ್ದಾರೆ. ಎಂಟು ಮತ್ತು ಐದನೇ ಸೇನೆಗಳಿಂದ ಇಂದು ಕದನಕ್ಕೆ ಎಳೆಯಲ್ಪಟ್ಟಿರುವ ಶತ್ರು ಪಡೆಗಳು ಈ ಕದನವಿಲ್ಲದೆ ಇದ್ದಿದ್ದರೆ ರಷ್ಯ ರಂಗದ ಹೋರಾಟದಲ್ಲಿ ತೊಡಗುತ್ತಿದ್ದುವೆಂದು ಧಾರಾಳವಾಗಿ ಹೇಳಬಹುದಾಗಿದೆ. ಇಟಲಿ ಕದನ ಸುಮುಖವಾಗಿ ನಡೆಯುತ್ತಿದೆ. ಆದರೆ ನಾವು ನಿರೀಕ್ಷಿಸುವಷ್ಟು ಶೀಘ್ರವಾಗಿ ಅದು ನಡೆಯುತ್ತಿಲ್ಲ. ಅದಷ್ಟು ಬೇಗ ರೋಂ ನಗರವನ್ನು ಹಿಡಿಯುವುದೇ ಈಗಿನ ಗುರಿ. ರೋಮಿನ ರಸ್ತೆಗಳಲ್ಲೆಲ್ಲ ಶತ್ರುಗಳು ಸ್ಫೋಟಕ ವಸ್ತುಗಳನ್ನು ತುಂಬಿದ್ದಾರೆ. ಇನ್ನೂ ಬಹಳ ಕಷ್ಟತಮವಾದ

ಕ್ಷೇತ್ರದಲ್ಲಿ ಅಡಿಯಿಡಬೇಕಾಗಿರುವುದರಿಂದ ಮುಂದೋಟವು ನಿಧಾನವಾಗಬೇಕಾಗುತ್ತದೆ ಪೂರ್ವತೀರದಲ್ಲಿ ಜ|| ಮಾಂಟ್ಗೋಮರಿಯವರು ಹೊಸಕದನವನ್ನು ಆರಂಭಿಸಿದ್ದಾರೆ ಟ್ರಿಗ್ನೋನದಿಯ ಉತ್ತರಕ್ಕೆ ಮಿತ್ರ ಸೈನಿಕರು ನುಗ್ಗುತ್ತಿದ್ದಾರೆ ಪಶ್ಚಿಮತೀರದಲ್ಲಿ ಜ|| ಕ್ಲೇರ್ಕರವರ ಸೇನೆ ವೆನಾಫ್ರೋ ಕಡೆಗೆ ನುಗ್ಗುತ್ತ ಹೊಸ ಜಯಗಳಿಸಿದೆ ಕೇಂದ್ರ ರಂಗದಲ್ಲಿ ಕೆನಡಿಯನ್ ಸೈನ್ಯವು ಗಜ ಗಜವಾಗಿ ಅಪೆನೈನ್ ಶ್ರೇಣಿಯಲ್ಲಿ ಮುಂದೆ ತೆರಳುತ್ತಿದೆ ಸುಮಾರು ೨೦೦೦ ಅಡಿ ಎತ್ತರದಲ್ಲಿ ಆ ಸೈನ್ಯವು ಹೊಡೆದಾಡಬೇಕಾಗಿದೆ

ರೋಂ ಕಡೆಗೆ ಮುಂದೋಟ

ಜ|| ಕ್ಲೇರ್ಕರವರ ಐದನೇಸೇನೆ ಕೇಂದ್ರರಂಗದಲ್ಲಿ ಹೊಸ ಮುತ್ತಿಗೆಯನ್ನು ಆರಂಭಿಸಿ, ನೇಪಲ್ಸ್ ರೋಂ ರೈಲ್ವೆ ಮಾರ್ಗದಲ್ಲಿರುವ ಸ್ಪಾರಿನೈಜ್ ಎಂಬ ನಗರವನ್ನು ಹಿಡಿದಿದೆ ಕಾಪುವಾ ನಗರದ ವಾಯುವ್ಯಕ್ಕೆ ಇದು ಎಂಟು ಮೈಲಿ ದೂರದಲ್ಲಿದೆ ಶತ್ರುಗಳ ಅನೇಕ ಪ್ರತಿಮುತ್ತಿಗೆಗಳನ್ನು ಐದನೇ ಸೇನೆ ಅಡಗಿಸಿದೆ ಎಂಟನೇ ಸೇನೆಯ ರಂಗದಲ್ಲಿ ಬ್ರಿಟಿಷ್ ಸೈನಿಕರು ಟ್ರಿಗ್ನೋನದಿಯ ಪಶ್ಚಿಮ ದಡದಲ್ಲಿ ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದ್ದಾರೆ ಸಮುದ್ರ ತೀರದ ಮಾರ್ಗವು ಟ್ರಿಗ್ನೋ ನದಿಯನ್ನು ದಾಟುವ ಸ್ಥಳದಲ್ಲಿರುವ ಸೇತುವೆಯನ್ನು ಎಂಟನೇಸೇನೆ ಹಿಡಿದಿದೆ ಇನ್ನೂ ನಾಲ್ಕು ಮೈಲಿ ಮುಂದುವರಿದರೆ ರೋಮನ್ ಚಕ್ರಾಧಿಪತ್ಯದ ಮಾರ್ಗಗಳಲ್ಲಿ ಅತಿಮುಖ್ಯವಾದುದು ವಶವಾಗುವುದು ಇದು ದಕ್ಷಿಣ ಇಟಲಿಗೆಲ್ಲ ಸಂಬಂಧವುಂಟುಮಾಡುವುದಾಗಿದೆ ಇಟಲಿಯಲ್ಲಿ ಜರ್ಮನರು ಅನೇಕ ವಿಮಾನಗಳನ್ನು ಬಿಟ್ಟು ಓಡುತ್ತಿದ್ದಾರೆ ನಾಜಿ ದಳದವರ ಆಲಸ್ಯವನ್ನಿದು ಸೂಚಿಸುತ್ತದೆ ನೇಪಲ್ಸ್ ನಗರದ ದ್ವಾರದಲ್ಲಿ ಪೋಲೀಸರು ಪೆಟ್ಟಿನ ಎಚ್ಚರಿಕೆ ತೋರಿಸುತ್ತಿದ್ದಾರೆ ನಗರದೊಳಗೆ ಬರುವವರನ್ನೆಲ್ಲ ಪರೀಕ್ಷಿಸುತ್ತಿರಲಾಗಿದೆ ಯಾವ ಕೆಲಸವೂ ಇಲ್ಲದ ಕೇವಲ ಮನೋರಂಜನೆಗಾಗಿ ಯಾರೂ ಒಳಗೆ ಬರಲು ಸಾಧ್ಯವಿಲ್ಲವೆಂದು ಜರ್ಮನ್ ರೇಡಿಯೋ ತಿಳಿಸಿದೆ

ಜರ್ಮನಿಯಲ್ಲಿ ಭಯ

ಬರುವ ಕ್ರಿಸ್‌ಮಸ್ ಒಳಗಾಗಿ ಜರ್ಮನಿಯನ್ನು ಅಮೇರಿಕ ಮತ್ತು ಬ್ರಿಟನ್‌ಗಳು ಸೋಲಿಸುವುವೆಂಬುದಾಗಿ ಜರ್ಮನರು ನಿರೀಕ್ಷಿಸಿದ್ದಾರೆಂದೂ ಅನೇಕರು ಹಾಗಾಗುವುದೆಂದು ನಂಬಿದ್ದಾರೆಂದೂ ಜರ್ಮನಿಯಿಂದ ಹಿಂದಿರುಗಿದ ಬ್ರಿಟಿಷ್ ಬಂದಿಗಳು ತಿಳಿಸಿದ್ದಾರೆ ಜರ್ಮನರಿಗಿರುವ ಮುಖ್ಯ ಭಯವೆಂದರೆ ಸೋವಿಯಟ್ ಸೇನೆ ಮತ್ತು ವಿಮಾನ ಮುತ್ತಿಗೆ ಇತ್ತೀಚೆಗೆ ಮಿತ್ರದೇಶಗಳ ವಿಮಾನ ಮುತ್ತಿಗೆಯಿಂದ ಜರ್ಮನಿಯಲ್ಲಿ ಆಗಿರುವ ಅಪಾರ ನಷ್ಟವನ್ನು ಹಿಂದಿರುಗಿದ ಬಂದಿಗಳು ಕಣ್ಣಾರೆ ಕಂಡಿದ್ದಾರೆ ರಷ್ಯನರಿಗಿಂತ ಮುಂಚೆ ಅಮೇರಿಕನ್ ಮತ್ತು ಬ್ರಿಟಿಷ್ ಸೈನಿಕರು ಬರ್ಲಿನ್ ಪ್ರವೇಶಿಸುವರೆಂಬುದಾಗಿ ಜರ್ಮನರು ನಂಬಿದ್ದಾರೆಂದೂ, ಸಂಗ್ರಾಮದ ಬಂದಿಗಳಿಂದ ಕಲ್ಲಿದ್ದಲು ಮತ್ತು ಉಪ್ಪಿನ ಗಣಿಗಳಲ್ಲಿ ನಿರ್ಬಂಧವಾಗಿ ಕೆಲಸ ತೆಗೆಯುತ್ತಿದ್ದಾರೆಂದೂ, ಸರಿಯಾಗಿ ಒಳ್ಳೆ ಆಹಾರಗಳನ್ನು ಕೊಡುತ್ತಿರಲಿಲ್ಲವೆಂದೂ ಹೇಳಲಾಗಿದೆ

ಉಕ್ರೇನಿನಲ್ಲಿ ರಷ್ಯನರ ಜಯ

ನಿಪ್ರೋಪೆಟ್ರೋವಿಸ್ಕ ನಗರವನ್ನೂ ಮತ್ತು ನೀಪರ್ ತಿರುವಿನಲ್ಲಿರುವ ಹಲವು ಮುಖ್ಯ ನಗರಗಳನ್ನೂ ರಷ್ಯನರು ಹಿಡಿದಿದ್ದಾರೆ ರಷ್ಯನರು ಈಗ ಕ್ರಿವಾಯ್‌ರಾಗ್ ಕಡೆಗೆ ನುಗ್ಗುತ್ತಿದ್ದಾರೆ ನಗರದಿಂದ ಏಳು ಮೈಲಿಯೊಳಗೇ ಸೋವಿಯಟ್ ಪಡೆ ಇದೆ ಜರ್ಮನರಿಗೆ ಬಹಳವಾದ ಹಾನಿಯಾಗಿದೆ ಕ್ರಿವಾಯ್‌ರಾಗ್ ಸ್ಟೇಷನ್ ಮೇಲೆ ರಷ್ಯನರುಗಳೇ ಷೆಲ್ ಹಾರಿಸುತ್ತಿದ್ದಾರೆ ಜರ್ಮನರು ರಣರಂಗಕ್ಕೆ ಹೆಚ್ಚು ಹೆಚ್ಚು ಸೈನಿಕರನ್ನು ಕರೆತರುತ್ತಿದ್ದಾರೆ ಆದರೂ ಸಾರ್ಥಕವಿಲ್ಲವಾಗಿದೆ ರಷ್ಯನ್ ಬಾಂಬರುಗಳ ಚಟುವಟಿಕೆ ಅಸಾಧ್ಯವಾಗಿದೆ ನೀಪ್ರೋಪೆಟ್ರೋವಿಸ್ಕ ಎಂಬುದು ಬಹಳ ಮುಖ್ಯವಾದ ಉಕ್ಕು ಮತ್ತು ಕಬ್ಬಿಣ ಕೈಗಾರಿಕೆ ಕೇಂದ್ರ ಈ ನಗರಕ್ಕೂ ಮತ್ತು ಜಪೋರೋಜ್‌ಗೂ ಮಧ್ಯೆ ನೀಪರ್ ಅಣೆಕಟ್ಟು ಮತ್ತು ವಿದ್ಯುಚ್ಛಕ್ತಿ ಸ್ಟೇಷನ್ ಇದೆ ದಕ್ಷಿಣ ರಷ್ಯದ ಕೈಗಾರಿಕೆಗಳಿಗೆಲ್ಲ ವಿದ್ಯುತ್ತಿನ ಶಕ್ತಿ ಒದಗುವುದು ಇಲ್ಲಿಂದಲೇ ಎಂದು ಹೇಳಲಾಗಿದೆ

ಹಿಟ್ಲರನನ್ನು ಶತ್ರುವಶ ಮಾಡುವ ಹಂಚಿಕೆ ನಡೆದಿತ್ತೇ!

ಇಟಲಿ ಪತನಕ್ಕೆ ಸ್ವಲ್ಪ ಮುಂಚಿತವಾಗಿ ಹಿಟ್ಲರನನ್ನು ಹಾರಿಸಿಕೊಂಡು ಹೋಗಿ ಬ್ರಿಟಿಷ್ ಸರಕಾರಕ್ಕೆ ಒಪ್ಪಿಸುವ ಒಳಸಂಚನ್ನು ಬಡೋಗ್ಲಿಯೋ ಸರಕಾರವು ನಡೆಸಿತೆಂಬುದಾಗಿ ಜರ್ಮನ್ ವರ್ತಮಾನ ಸಂಸ್ಥೆ ತಿಳಿಸುತ್ತದೆ ಶತ್ರುವನ್ನು ವಿರೋಧಿಸುವ ವಿಚಾರ ಕುರಿತು ಇಟಲಿ ದೊರೆಗಳೊಂದಿಗೂ ಮತ್ತು ಮಾ|| ಬಡೋಗ್ಲಿಯೋರೊಂದಿಗೂ ಚರ್ಚಿಸಲು ಇಟಲಿಗೆ ತೆರಳಬೇಕೆಂದೂ, ಬರ್ಲಿನ್‌ನಲ್ಲಿರುವ ಇಟಲಿ ಪ್ರತಿನಿಧಿಗಳು ಹಿಟ್ಲರನನ್ನು ಪ್ರಾರ್ಥಿಸಿಕೊಂಡರೆಂದೂ, ಆ ವೇಳೆಗಾಗಲೇ ಮುಸೋಲಿನಿಯನ್ನು ಮಿತ್ರದೇಶಗಳಿಗೆ ಒಪ್ಪಿಸುವ ನಿರ್ಧಾರವಾಗಿ ಹೋಗಿತ್ತೆಂದೂ, ಹಿಟ್ಲರನನ್ನೂ ಸಹ ಬ್ರಿಟಿಷ್ ಮತ್ತು ಅಮೇರಿಕನ್ನರಿಗೆ ಒಪ್ಪಿಸಲು ಹಂಚಿಕೆ ಮಾಡಲಾಗಿತ್ತೆಂದೂ ಈ ವಿಧವಾದ ಮೋಸವು ಜರ್ಮನರಿಗೆ ತಿಳಿದಿದ್ದುದರಿಂದ ಹಿಟ್ಲರನು ಇಟಲಿಗೆ ಹೋಗಲಿಲ್ಲವೆಂದೂ ತಿಳಿಸಲಾಗಿದೆ

ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಬದಲಾವಣೆ

ಸರ್ ಕಿಂಗ್‌ಸ್ಲಿವುಡ್‌ರವರ ನಿಧನಕಾಲದಲ್ಲಿ ಬ್ರಿಟಿಷ್ ಮಂತ್ರಿ ಮಂಡಲದಲ್ಲಿ ಮಾಡಬೇಕೆಂದಿದ್ದ ಪೂರ್ಣ ಬದಲಾವಣೆಗಳನ್ನು ಪಾರ್ಲಿಮೆಂಟಿನ ಹೊಸ ಅಧಿವೇಶನ ಸೇರುವ ಮುನ್ನ ಆಚರಣೆಗೆ ತರಲಾಗುವುದೆಂಬ ನಿರೀಕ್ಷೆ ಇದೆ ಪುನರ್ವಿಧಾನ ಶಾಖೆಗೊಬ್ಬ ಹೊಸ ಸಚಿವರನ್ನು ನೇಮಿಸಬಹುದು ಸಂಗ್ರಾಮ ಸಚಿವರಾದ ಸರ್ ಜೇಮ್ಸ್ ಗ್ರಿಗ್ ಉಗ್ರಟೀಕೆಗೆ ಒಳಗಾಗಿದ್ದಾರೆ ಆದ್ದರಿಂದ ಅವರನ್ನು ಮಂತ್ರಿಸ್ಥಾನದಿಂದ ತಪ್ಪಿಸಿ ಮತ್ತೇನಾದರೂ ಕೆಲಸ ಕೊಡಬಹುದು ತುಂಬಾ ಅತೃಪ್ತಿಯುಂಟು ಮಾಡಿರುವ ಮತ್ತೊಬ್ಬ ಸಚಿವರೆಂದರೆ ಶ್ರೀ ಅಮೆರಿ ಅವರು ರಾಜೀನಾಮೆ ಕೊಡಬೇಕೆಂಬ ಕೂಗು ನಾನಾ ಕಡೆಗಳಿಂದ ಬಂದಿದೆ ಬಂಗಾಳಾ ಗವರ್ನರು ಶ್ರೀ ಹಕ್ಸರ ಮುಖಕ್ಕೆ ರಾಜೀನಾಮೆ ಪತ್ರಹಿಡಿದ ಸುದ್ದಿ ಕೇಳಿ ಜನರು ತುಂಬಾ ಕೆರಳಿದ್ದಾರೆ ಈಗಿನ ಪರಿಸ್ಥಿತಿಯಲ್ಲಿ ಶ್ರೀ ಅಮೆರಿ ರಾಜೀನಾಮೆ ಕೊಡಬಹುದೆಂದು ತೋರುತ್ತಿದೆ

ಸಂಗ್ರಾಮದ ಕೊನೆಯ ಹಂತ

ಶೀಘ್ರದಲ್ಲಿಯೇ ಈಗಿನ ಯುದ್ಧವು ಕೊನೆಯ ಘಟ್ಟ ಸೇರಲಿದೆ ಕೊನೆಯ ಹಂತವು ಎಷ್ಟುಕಾಲ ನಡೆಯಲಿದೆಯೆಂಬುದನ್ನು ಹೇಳಲು ಸಾಧ್ಯವಿಲ್ಲ ಎಂದು ಜನರಲ್ ಮಾಂಟಗಾಮರಿಯವರು ಹೇಳುತ್ತಿದ್ದಾರೆ

ಬಂಗಾಳದಲ್ಲಿ ಹಳ್ಳಿಗಳೇ ನಾಶವಾಗಿವೆ

ಕಲ್ಕತ್ತೆಯ ಮೇಯರಾದ ಬದ್ರುಜಾದವರು ಬಂಗಾಳದ ಕೆಲವು ಹಳ್ಳಿಗಳಿಗೆ ಭೇಟಿಯಿತ್ತು ನೋಡಿದ ನೋಟದ ವಿವರಣೆಯು ಈ ರೀತಿಯಿದೆ —

ಹಳ್ಳಿಯವರ ಶೋಚನೀಯ ಸ್ಥಿತಿಯು ವರ್ಣನಾತೀತವಾಗಿದೆ ತಮಗಿದ್ದುದನ್ನೆಲ್ಲ ಮಾರಿದರೂ ಜೀವನ [illegible] ಒಂದೆರಡು ತುತ್ತು ಅನ್ನಕ್ಕಾಗಿ ತಪಿಸಿ ಹೋಗುತ್ತಿರುವ ದೃಶ್ಯವೇ ಎಲ್ಲೆಲ್ಲಿಯೂ ಕಾಣುತ್ತಿದೆ ತಾಯಿಯೊಬ್ಬಳು ಹಿಡಿ ಕೂಳಿಗಾಗಿ ತನ್ನ ಮಗುವನ್ನು ಮಾರಲು ಬರ್ಹಾಂಪೂರ್ ನಗರಕ್ಕೆ ಬಂದಿದ್ದಳು ಆದರೆ ಯಾರೋ ಆ ಮರಣಸ್ಥಿತಿಯನ್ನು ತಪ್ಪಿಸಿದರು ರೈತರ ವ್ಯವಸ್ಥೆಯೆಲ್ಲ ಈಗ ನಾಶವಾಗಿ ಹೋಗಿದೆ ಅವರಲ್ಲಿ ಎಷ್ಟೋ ಮಂದಿ ಯಮನಗರಕ್ಕೆ ಸಾಗಿದ್ದಾರೆ ಈಗ ಬಂಗಾಳದ ಹಳ್ಳಿಗಾಡಿಗೆ ಬೇಕಾಗಿರುವುದು ಕೇವಲ ಆಹಾರವೇ ಅಲ್ಲ, ವಾಂತಿಭೇದಿ ರೋಗದಿಂದ ಅವರನ್ನು ಉಳಿಸುವ ಔಷಧಸಾಮಗ್ರಿಗಳೂ ಬೇಕು ಎಂದವರು ಹೇಳಿದ್ದಾರೆ

ರಂಗೂನ್ ಮೇಲೆ ಮುತ್ತಿಗೆ

ರಂಗೂನ್ ಸೆಂಟ್ರಲ್ ಸ್ಟೇಷನ್ ಮೇಲೂ ಮತ್ತು ಅಕ್ಯಾಬ್ ಮೇಲೂ ಬ್ರಿಟಿಷ್ ವಿಮಾನಗಳು ಮುತ್ತಿಗೆ ನಡೆಸಿದವು ರಂಗೂನಿನೊಳಗೆ ಬಂದು ಬಾಂಬು ಒಡೆದು ಬೆಂಕಿ ಹತ್ತಿಕೊಂಡಿದ್ದುದು ಕಾಣಬಂದಿತ್ತೆಂದು ಹೇಳಲಾಗಿದೆ

ವಿಶ್ವವಿದ್ಯಾನಿಲಯವನ್ನು ವರ್ಗಾಯಿಸುವ ಪ್ರಯತ್ನ

ಆಹಾರ ಧಾನ್ಯದ ಅಭಾವದಿಂದ ಢಾಕಾ ನಗರದಲ್ಲಿ ವಿದ್ಯಾರ್ಥಿಗಳಿಗೆ ಅನ್ನ ಒದಗಿಸಲು ಕಷ್ಟವಾಗಿದೆ. ಆದಕಾರಣ ಢಾಕಾ ವಿಶ್ವವಿದ್ಯಾನಿಲಯವನ್ನು ತಾತ್ಕಾಲಿಕವಾಗಿ ಬೇರೆ ಕಡೆಗೆ ವರ್ಗಾಯಿಸುವ ಪ್ರಯತ್ನವಾಗುತ್ತಿದೆ. ಢಾಕಾ ವಿಶ್ವವಿದ್ಯಾನಿಲಯದ ಹಾಸ್ಟಲಿನಲ್ಲಿರುವ ವಿದ್ಯಾರ್ಥಿಗಳು ತಮ್ಮ ತಮ್ಮ ಊರುಗಳಿಂದ ಪೂಜಾರಜ ಮುಗಿದನಂತರ ಬರುವಾಗ ಸಾಧ್ಯವಾದಷ್ಟು ಅಕ್ಕಿಯನ್ನು ಹೊಂದಿಸಿಕೊಂಡು ಬರಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ

ಭಾರತ ರಾಜಕೀಯ ಪರಿಸ್ಥಿತಿಯು ವಿಮರ್ಶೆಗೆ ಬರಲಿದೆಯಂತೆ!

ವೈಸರಾಯರು ಬಂಗಾಳಾ ಪ್ರವಾಸವನ್ನು ಮುಗಿಸಿಕೊಂಡು ಹಿಂದಿರುಗಿದೊಡನೆಯೇ ಪ್ರಾಂತೀಯ ಗವರ್ನರುಗಳೆಲ್ಲ ಡೆಹಲಿಗೆ ತೆರಳಿ ವೈಸರಾಯರನ್ನು ಭೇಟಿ ಮಾಡುವರೆಂದು ಮುಂಬಯಿಗೆ ಸುದ್ದಿ ಬಂದಿದೆ ಈಗ ಅನೇಕ ಮುಖ್ಯ ಸಮಸ್ಯೆಗಳು ಎದ್ದಿರುವುದರಿಂದ ಇದಿರುಬದಿರಿಗೆ ಕುಳಿತು ಮಾತನಾಡುವುದು ಅಗತ್ಯವಾಗಿದೆ ಹೊಸ ವೈಸರಾಯರನ್ನು ಭೇಟಿ ಮಾಡುವುದರಿಂದ ಅಂತಹ ಚರ್ಚೆಗೆ ಅವಕಾಶವಾಗುತ್ತದೆ ಆಹಾರ, ರಾಜಕೀಯ ಪರಿಸ್ಥಿತಿ, ನೈಋತ್ಯ ಏಷ್ಯಾ ಕಮ್ಯಾಂಡಿನ ಮೂಲವೆನಿಸಿದ ಭರತಖಂಡವು ಮಾಡಬೇಕಾದ ಕೆಲಸ ಇವೆಲ್ಲ ವಿಮರ್ಶೆಗೆ ಬರಲಿವೆ ಇದಲ್ಲದೆ ಗವರ್ನರುಗಳು ವೈಸರಾಯರ ಭೇಟಿ ಮಾಡಿದಾಗ ಚರ್ಚಿಸಬೇಕಾದ ಆಡಳಿತ ವಿಚಾರಗಳೆಷ್ಟೋ ಇವೆ ಎಂದು ಹೇಳಲಾಗಿದೆ

ಚಂದಾದಾರರಲ್ಲಿ ವಿಜ್ಞಾಪನೆ

ಈಗ ಕಾಗದದ ಧಾರಣೆ ವಿಶೇಷವೆಚ್ಚಿರುವ ನಿಮಿತ್ತ ಪ್ರಭಾಪತ್ರಿಕೆ ಚಂದಾವನ್ನು ವರ್ಷಕ್ಕೆ **0-4-0** ಆಣೆ ಮಾತ್ರ ಹೆಚ್ಚಿಸಿ **2-12-0** ರೂಪಾಯಿಗಳನ್ನು ಕಳುಹಿಸಿಕೊಡಬೇಕೆಂದು ಹಿಂದೆಯೇ ಪ್ರಕಟಿಸಲಾಗಿತ್ತು. ಆದಾಗ್ಯೂ ಇನ್ನೂ ಅನೇಕ ಕಡೆಗಳಿಂದ **2-8-0** ಮಾತ್ರ ಮನಿಯಾರ್ಡರು ಬರುತ್ತಿರುವ ಕಾರಣ ದಯವಿಟ್ಟು ಮುಂದೆ ಮನಿಯಾರ್ಡರು ಕಳುಹಿಸುವವರು **2-12-0** ಕಳುಹಿಸಿಕೊಡಬೇಕು **2-8-0** ಕಳುಹಿಸಿದವರು ಮತ್ತೆ **0-4-0** ಆಣೆ ಪೋಸ್ಟು ಸ್ಟಾಂಪನ್ನು ಕಳುಹಿಸಿಕೊಡಬೇಕು ಇಲ್ಲದಿದ್ದರೆ ಅಂಥವರಿಗೆ 11 ತಿಂಗಳವರೆಗೆ ಮಾತ್ರ ಪತ್ರಿಕೆ ಕಳುಹಿಸಲಾಗುವದು

ಮ್ಯಾ—

ಸ್ವೀಕಾರ

ವಿಜಾಪುರ ಜಿಲ್ಲಾ ಬದಾಮಿ ತಾ|| ಜಕನೂರು ಗ್ರಾಮದ ಶ್ರೀಮಂತ ಭದ್ರಗೌಡ ಪಾಟೀಲ ಇವರ ಪುತ್ರ ಮುದಿಮಾಗೌಡ ಪಾಟೀಲ, ಬಿ.ಎ., ಎಲ್‌ಎಲ್.ಬಿ. ಇವರು ಶಿವಾಧೀನರಾದ ಕಾಲದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 1 ರೂಪಾಯಿಯು ಶ್ರೀಸಿದ್ಧಸ್ವಾಮಿಗಳು ಹಿರೇಮಠ ಕೊಣ್ಣೂರು ಇವರ ದ್ವಾರಾ ತಲ್ಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯುವರೆಂದು ಹಾರೈಸುತ್ತೇವೆ

(೧ನೆ ಪುಟದಿಂದ ಮುಂದುವರಿದುದು)

[illegible] ಸುಖದುಃಖ [illegible] ಸಕೇತ [illegible]

ಪರಸುಕರುಣ ಸಿಥಿಯೋ, ನಿನ್ನ ಅನುಗ್ರಹಕ್ಕೆ ಕಾರಣವಾದ ಆಸಕ್ತಿ ಹೆಚ್ಚಾಗಿರಲಿ ಅದೇ ನಮ್ಮ ಸುಖಕ್ಕೂ ನಿನ್ನ ನಿಸ್ಸೀಮ ದಯೆ ದಕ ಸಕ್ಯ ಸಾಧನ— ಎಂದು ಶಿವಭಕ್ತರೂ ಬೇಡುವರು [illegible]? ಶುಭ ದಕ [illegible] ಸರ್ವೇಶ್ವರನ ಈ ವಾಕ್ಯವನ್ನು ಸತತವೂ ಮನದಲ್ಲಿ ಚಿಂತಿಸುತ್ತ ಕಷ್ಟಸುಖಗಳೆರಡನ್ನೂ ಏಕರೂಪವಾಗಿ ಭಾವಿಸುತ್ತ, ಕಷ್ಟವು ಹೆಚ್ಚಿದಷ್ಟೂ ಈಶ್ವರ ಕೃಪೆಯು ಸಮೀಪವಾಯಿತೆಂದು ತಿಳಿದು ಹರನ ಸೇವಾತತ್ಪರನಾಗಿ ಪುಣ್ಯವನ್ನಾರ್ಜಿಸಿ ಮೋಕ್ಷಭಾಗಿಯಾಗಬೇಕೆಂಬುದೇ ಪ್ರತಿಯೊಬ್ಬ ಮಾನವನ ಕರ್ತವ್ಯವಾಗಿದೆ

ದುಃಖವಾರ್ತೆ

ವಿಜಾಪುರ ಜಿಲ್ಲಾ ಬದಾಮಿ ತಾ|| ಜಕನೂರ ಗ್ರಾಮದಲ್ಲಿರುವ ಶ್ರೀಯುತ ಭದ್ರಗೌಡರು ಪಾಟೀಲ ಇವರ ಪುತ್ರ ಮಡಿವಾಳಗೌಡ ಪಾಟೀಲ ಬಿ.ಎ. ಎಲ್‌ಎಲ್.ಬಿ. ವಕೀಲ ಇವರು ಕ್ಷಯರೋಗದಿಂದ ತಾ|| 1೯ 10 4೩ನೇ ಆದಿತ್ಯವಾರ ಶಿವಾಧೀನರಾದರೆಂಬ ವಿಷಯವನ್ನು ತಿಳಿಸಲು ಅತ್ಯಂತ ವಿಷಾದವೆನಿಸುತ್ತದೆ ಮೃತರಿಗೆ ಸುಮಾರು 40 ವರ್ಷ ವಯಸ್ಸಾಗಿತ್ತು ಇವರಿಗೆ ಇಬ್ಬರು ಗಂಡುಮಕ್ಕಳು ಇದ್ದಾರೆ ಚಿಕ್ಕ ವಯಸ್ಸಿನಲ್ಲಿಯೇ ಇವರು ಇಂಗ್ಲಿಷ್ ವಿದ್ಯೆಯನ್ನು ಕಲಿತು ಲಾ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದರು ೩ ವರ್ಷಗಳ ತನಕ ವಕೀಲ ಕೆಲಸವನ್ನು ಮಾಡಿದರು ಇವರು ಒಳ್ಳೆ ಶಾಂತಸ್ವಭಾವದವರೂ ಮಾತಾಪಿತೃಗಳಲ್ಲಿ ಭಕ್ತಿಯುಳ್ಳವರೂ ಬಂಧುಬಾಂಧವರ ಮೇಲೆ ಮಮತೆಯುಳ್ಳವರೂ ಆಗಿದ್ದರಲ್ಲದೆ ಸರ್ವಜನಪ್ರಿಯರೂ ಆಗಿದ್ದರು [illegible] ಕಮಲ [illegible] ಶ್ರೀಪಟ್ಟದ್ದೇವರು [illegible] ಇವರ [illegible] ಕೃಪೆಗೆ ಪಾತ್ರ [illegible] 1ರ [illegible] ಪಟ್ಟಿತು [illegible] ತಿಯನ್ನೂ [illegible] ಎಂಬನ್ನು ಉಂಟುಮಾಡಲೆಂದು ಪ್ರಾರ್ಥಿಸುತ್ತ

[illegible]

ಚಳಿ-ಜ್ವರದ ಮೇಲೆ ಗಜುಗದ ಉಪಯೋಗ

ಲೇ — [illegible] ಜಗಲಿ

ವೈದ್ಯ [illegible]

ಗಜುಗವು [illegible] ನಿಗೆ [illegible] ಔಷಧವೆಂದು ನನ್ನ ಮತ ಆದರೂ ಅದಕ್ಕಿಂತಲೂ ಹೆಚ್ಚು ಗುಣಕಾರಿಯಾದ ಔಷಧವೆಂದು ಹೇಳಲು ಹಿಂಜರಿಯ [illegible] ಇದರ ಗುಣಧರ್ಮ [illegible] ಅನುಭವದ ಮೇಲಿಂದ ಇದೊಂದು ಜ್ವರನಾಶಕ [illegible] ಔಷಧವೆಂದು [illegible]

ಇದರ ೨-೩ ಗುಳಿಗೆ ಸೇವನೆ ಮಾಡಿದ ಮಾತ್ರಕ್ಕೆ ಚಳಿ ಜ್ವರಗಳು ಕಡಿಯಾಗುವವು ಕ್ವಿನೈನಿನಿಂದ ಬಂದ ಗುಣವು ಸ್ವಲ್ಪ ಕಾಲವಿರುವುದು ಮುಂದೆ ಪುನಃ ರೋಗಬರುವುದು ಸಮೂಲನಾಶವಾಗುವುದಿಲ್ಲ ಗಜುಗವು ಮಾತ್ರ ರೋಗವನ್ನು ಪೂರ್ಣ ವಾಸಿಮಾಡುವ ಕಲಸವನ್ನು ತಪ್ಪದೆ ಮಾಡುವುದು ಇದು ಹಿಂದುಸ್ತಾನದ ಎಲ್ಲ ಪ್ರದೇಶಗಳಲ್ಲಿಯೂ ಬೆಳೆಯುವುದು ಹಳ್ಳಿಯ ಚಿಕ್ಕ ಅಂಗಡಿಗಳಲ್ಲಿಯೂ ದೊರೆಯುವುದು

ಗಜುಗದ ಬೀಜದ ಒಳಗಿನ ಪಪ್ಪು [illegible] ಗುಂಜಿಯಷ್ಟನ್ನು ಸೇವಿಸಿದರೆ ಅದೇ ದಿನ ಜ್ವರದ ವೇಗ ನಿಲ್ಲುವುದು ಮೂರು ದಿನ ಇದನ್ನು ಸೇವಿಸಿದರೆ ಮುಂದೆ ಸೇವಿಸುವ ಅಗತ್ಯವೇ ಬೀಳುವುದಿಲ್ಲ

ಗುಳಿಗೆ ಮಾಡುವ [illegible] ಮತ್ತು ಸೇವಿಸುವ ವಿಧಾನ—

[illegible] ೨೦೦ ಮುಳ್ಳುಗಳಿಂದ [illegible] ಬಿರು [illegible] ಒಣ್ಣವು ಹಸುರು [illegible] ಮಿಶ್ರಿತ ಬೂದಿಬಣ್ಣದ್ದಾಗು [illegible] ಅಂಗಡಿಗಳಲ್ಲಿ ೨ ಬೀಜಗಳು [illegible] ಬೀಜದ ಸಿಪ್ಪೆಯು [illegible] ಅದನ್ನು ಒಡೆದು ಒಳಗಿನ ಪಪ್ಪನ್ನು ತೆಗೆದು ಬಿಸಿಲಲ್ಲಿ ಒಣಗಿಸಿ [illegible] ಮಾಡಿ ಮೂರರಷ್ಟು [illegible] ಅದಕ್ಕೆ ಹಿಪ್ಪಲಿಯ ಚೂರ್ಣವನ್ನು ಬೆರಸಿ [illegible] ಕಟ್ಟಬೇಕು ಈ ಗುಳಿಗೆಗಳು [illegible] ನೆರಳಿನಲ್ಲಿ ತೆಯ ದಾಗಲಿ ಪುಡಿಮಾಡಿ [illegible] ನುಣುಪಾಗಲಿ ಕೊಡಬೇಕು

ಶೀತದಿಂದ [illegible] ಚಳಿಜ್ವರ ತಲೆನೋವು [illegible] ಕಾಲು [illegible] ಹರಿಯುವುದು ಇವುಗಳಿಗೆ ಕೊಡಬೇಕು ಜ್ವರವು ಹೆಚ್ಚಾಗಿ ಜಾಸ್ತಿ ಇದ್ದಾಗ ಕಡಿಮೆ ಆದ ಮೇಲೆ ಕೂಡಬೇಕು ಗುಳಿಗೆ ತೆಗೆದುಕೊಳ್ಳುವ ದಕ್ಕೆ ಮುಂಚೆ ಸ್ವಲ್ಪ ಹಾಲು ತೆಗೆದುಕೊಳ್ಳಬೇಕು ಖಾಲಿ ಹೊಟ್ಟೆಯಲ್ಲಿ ಇದನ್ನು ತೆಗೆದುಕೊಂಡರೆ ವಾಂತಿ ಮಾಡಿಸುವುದು ಗರ್ಭಿಣಿಯರಿಗೂ ಇದನ್ನು ಕೊಡಲು ಬರುವದು ಉದರ ಶೂಲೆ ಮುಂತಾದ ವಿಕಾರಗಳಲ್ಲಿಯೂ ಇದು ಗುಣಕೊಡುವುದು ಅಜೀರ್ಣ ಜ್ವರದಲ್ಲಿ ಒಳ್ಳೆ ಗುಣಕಾರಿ

ಗಜುಗದ ಬೀಜವು [illegible] ಆಕ್ರಮಕ್ಕೂ ಕೃಮಿಗಳ ನಾಶಕ್ಕೂ ಉಪಯೋಗವಾಗುವುದು ಅದರ ಎಣ್ಣೆ [illegible] ರೋಗಕ್ಕೆ ಒಳ್ಳೆಯದು ಗಜುಗದ ಬೇರು [illegible] ಅಗ್ನಿದೀಪನ ಮಾಡುವುದು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೬ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ವದರ್ಶನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯ ಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯೆ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಟೈಪು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು ..	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತ ಸಾರಾವಳಿ (ಶಿವಯೋಗಿ ಶಿವಾಚಾರ್ಯ ಕೃತ)	೧೨ ಆಣೆ
ಶ್ರೀ ಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨| ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೦ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (೨ನೆಯ ಆವೃತ್ತಿ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ ೩೦ ಪುಟಗಳ ಫೋಟೋ ಸಹಿತ)	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೆನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಪಟ್ಟಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೬೪ ಪುಟ)	೫ ರೂ
A brief life-sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु
वीरशैवधर्म (मराठी)	१ रु
महानारायणोपनिषत् (वीरशैवभाष्य-संस्कृत) ...	१ रु
सिद्धान्तशिखामणि (मूल)	६ आ
शुकाष्टकम् (वीरशैवप्रायश्चित्तभाष्योपेतम्) ...	४ आ
[illegible]कारिका (संस्कृत)	२ आ

ಮ್ಯಾನೇಜರ್—ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ [illegible] ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಚಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೮ನೇ ನವೆಂಬರ್ ೧೯೪೩ [ಸಂಚಿಕೆ ೨೭

ಮನೋಬೋಧೆ

ಲೇ। ಮಲ್ಲಿಕಾರ್ಜುನಾರಾಧ್ಯ [illegible]
[illegible]

—

ಮನ ಏವ ಮನುಷ್ಯಾಣಾಂ । ಕಾರಣಂ ಬಂಧಮೋಕ್ಷಯೋಃ ।
ಬಂಧಾಯ ವಿಷಯಾಸಕ್ತಂ । ಮುಕ್ತ್ಯೈ ನಿರ್ವಿಷಯಂ ಸ್ಮೃತಂ ॥

ಸೃಷ್ಟಪದಾರ್ಥಗಳಲ್ಲಿ ಮನಸ್ಸೆಂಬ ತತ್ತ್ವವು ಮಹತ್ತರವಾದುದು ಮೇಲಿನ ಅಮೃತಬಿಂದೂಪನಿಷದ್ವಾಕ್ಯದಂತೆ ಅದು ಮಾನವನ ಉನ್ನತ್ಯವನತಿಗಳಿಗೆ ಕಾರಣವಾಗಿರುವುದರಿಂದ ಅದರ ಗೌರವವು ಚೆನ್ನಾಗಿ ವ್ಯಕ್ತವಾಗುವುದು ಮನುಷ್ಯಮಾತ್ರರಲ್ಲಿ ಮನೋವ್ಯಾಪಾರದ ಪ್ರಭಾವವನ್ನರಿಯದವರು ಯಾರೂ ಇಲ್ಲ ಪಂಡಿತರಾದಿಯಾಗಿ ಪಾಮರರವರೆಗೆ ಎಲ್ಲರೂ ಮನಸ್ಸಿನ ಆಡಳಿತಕ್ಕೆ ಒಳಗಾಗಿರುವರು ಆದರೆ ಜ್ಞಾನಿಗಳು ಮಾತ್ರ ಮನಸ್ಸಿನ ಸ್ವರೂಪವನ್ನು ವಿಚಾರಿಸಿ, ಅದನ್ನು ಸ್ವಾಧೀನಪಡಿಸಿಕೊಂಡಿರುವರು, ಅಲ್ಲದೆ ಮನಸ್ಸು ಯಾವ ರೀತಿಯಲ್ಲಿ ಬಂಧಕ್ಕೆ ಕಾರಣವಾಗುವುದು, ಯಾವ ರೀತಿಯಲ್ಲಿ ಮೋಕ್ಷಕ್ಕೆ ಕಾರಣವಾಗುವುದು ಎಂಬುದನ್ನು ಕುರಿತು ಸ್ವಾನುಭವದಿಂದ ಹೇಳಿರುವರು ಅವರ ಅನುಭವದ ವಾಕ್ಯಗಳನ್ನೇ ಬೋಧರೂಪವಾಗಿ ಮನಸ್ಸನ್ನು ಕುರಿತು ಶಾಸ್ತ್ರಸಮ್ಮತವಾಗಿ ಯಥಾಮತಿ ಬರೆಯಲುಪಕ್ರಮಿಸುತ್ತೇನೆ

ಎಲೈ ಮನಸ್ಸೆಂಬ ದುಂಬಿಯೇ! ಯಾವ ಪುಷ್ಪದ ಮಕರಂದವೂ ಇಲ್ಲದ ಈ ಸಂಸಾರವೆಂಬ ಮರಳ್ಗಾಡಿನಲ್ಲಿ ಸುಮ್ಮನೆ ತೊಳಲಿ ಬಳಲುತ್ತಿರುವೆಯಲ್ಲ! ನೀನು ಪುಷ್ಪಪರಾಗವನ್ನು ಹುಡುಕಿಕೊಂಡು ಝೇಂಕರಿಸುತ್ತಿರುವ ಮಧುಮಕ್ಷಿಕದಂತೆ ಚರಿಸುತ್ತಿರುವೆ ಹೂವಿನಲ್ಲಿ ರಸವಿರಲಿ ಇಲ್ಲದಿರಲಿ, ಅದರ ಮೇಲೆ ಕುಳಿತುಕೊಂಡೇ ನೋಡುವ ಅವಿವೇಕಿಯಾದ ಭ್ರಮರದಂತೆ ಈ ಸಂಸಾರದಲ್ಲಿ ಒಂದಾಗುತ್ತಲೊಂದು ವಿಷಯದ ಕಡೆಗೆ ಹರಿಯುತ್ತಿರುವೆ ಇದು ನಿನ್ನ ಗೌರವಕ್ಕೆ ತಕ್ಕುದುದಲ್ಲ ಅಲ್ಲದೆ ಅನುಭವಿಗಳು "ಎಲೈ ಚಿತ್ತವೆಂಬ ದುಂಬಿಯೇ, ನೀನು ಸಂಚರಿಸುತ್ತಿರುವುದು ಪೂದೋಟವಲ್ಲ, ಯಾವ ಗಿಡ ಮರ ಬಳ್ಳಿಗಳೂ ಇಲ್ಲದ ಮರುಭೂಮಿ ದೂರ ದೂರಕ್ಕೆ ನಿನಗೆ ಪುಷ್ಪಗಳಂತೆ ಭಾಸವಾಗುತ್ತಿರುವ ವಿಷಯಗಳು ನಿಜವಾದ ಪುಷ್ಪಗಳಲ್ಲ, ಅವು ಈ ಮರಳ್ಗಾಡಿನಲ್ಲಿರುವ ಮರೀಚಿಕಾ ಜಲದಲ್ಲಿ ಭ್ರಾಂತಿಗೆ ಹೊಳೆದಿರುವ ಪುಷ್ಪಚ್ಛಾಯೆಗಳು ಮಾತ್ರ ಅಲ್ಲಿ ಯಾವ ಪುಷ್ಪವೂ ನಿಜವಾಗಿಯೂ ಇಲ್ಲ ಇನ್ನು ರಸವೆಲ್ಲಿಂದ ಬಂತು? ಆದುದರಿಂದ ಅಲ್ಲಿ ಸುಮ್ಮಸುಮ್ಮನೆ ಹಾರಾಡಿ ಆಯಾಸ ಪಡಬೇಡ ಪಾರ್ವತೀಪತಿಯಾದ ಪರಶಿವನ ಪಾದಕಮಲದಲ್ಲಿರುವ ದಿವ್ಯ ಮಕರಂದವನ್ನೇ ಸೇವಿಸು ಅದೇ ನಿನ್ನ ಬಾಯಾರಿಕೆಯನ್ನು ಹೋಗಲಾಡಿಸಿ ಆಯಾಸವನ್ನು ಪರಿಹರಿಸಿ ಶಾಂತಿಯನ್ನು ಕೊಡುವ ನಿಜವಾದ ರಸವು" ಎಂದು ಬೋಧಿಸಿರುವರು ಕನಕದಾಸರು ಕೂಡ 'ಈಶನ ಕರುಣೆಯ ಗಳಿಸು ವಿಷಯದಿ ವಾಸನೆ ಹಾಗೆಯ ಫೀ ಮನವೇ॥ ಕ್ಲೇಶದ ವಿಧವಿಧ ಪಾಶವ ಹರಿದು ವಿಲಾಸದಿ ಸತತ ಸ [illegible] ಮನವೇ' ಎಂದು ಬೋಧಿಸಿರುವರು

ಛೇ! ಮನವೇ ನಿನಗೆ ಜೀವಾತ್ಮನೇ ಒಡೆಯನಷ್ಟೆ? ಅವನು ಸರ್ವವಿಧದಿಂದಲೂ ಸ್ವತಂತ್ರನೆಂದೂ ತನಗಿಷ್ಟವಾದ ಕರ್ಮಗಳನ್ನು ಮಾಡಿ ತತ್ಫಲಗಳನ್ನು ತಾನೇ ಹೊಂದುವವನೆಂದೂ ನಿನ್ನ ಭಾವನೆ ಇರುವುದಲ್ಲವೇ? ಛೀ! ಛೀ!! ಅದು ಕೇವಲ ಭಾವನೆ ಈ ಜೀವಾತ್ಮನು ಅಸ್ವತಂತ್ರನು ಆದರೆ ಸರ್ವತಂತ್ರ ಸ್ವತಂತ್ರನೂ ನಿರ್ಲೇಪನೂ ಸರ್ವಸಾಕ್ಷೀಭೂತನೂ ಆದ ಪರಮಾತ್ಮನೊಬ್ಬನಿರುವನು ಆತನ ಸಾನ್ನಿಧ್ಯದಿಂದಲೇ ಜೀವಾತ್ಮನು ಕರ್ಮದಲ್ಲಿ ಪ್ರವರ್ತಕನಾಗುವನು ವಿಚಾರ ಮಾಡಿ ನೋಡಿದರೆ ಪರಮಾತ್ಮನು ಬಿಂಬದಂತೆಯೂ, ಜೀವಾತ್ಮನು ಪ್ರತಿಬಿಂಬದಂತೆಯೂ ಇರುವರು ಒಬ್ಬಾನೊಬ್ಬ ಮನುಷ್ಯನು ಕನ್ನಡಿಯಲ್ಲಿ ಪ್ರತಿಬಿಂಬಿಸುವ ತನ್ನ ಮುಖದ ಪ್ರತಿಬಿಂಬದ ಅಲಂಕಾರದಲ್ಲಿ ಏನಾದರೂ ನ್ಯೂನತೆ ಕಂಡುಬಂದರೆ ಪ್ರತಿಬಿಂಬಕ್ಕೆ ಅಲಂಕಾರ ಮಾಡದೆ ಬಿಂಬವಾಗಿರುವ ತನ್ನ ಮುಖಕ್ಕೆ ಬೇಕಾದ ಅಲಂಕಾರ ಮಾಡಿಕೊಳ್ಳುತ್ತಾನಲ್ಲವೇ? ತದ್ವತ್ ನಿನ್ನ ಸೂತ್ರಧಾರನಾಗಿರುವ ಜೀವಾತ್ಮನಿಗೇನಾದರೂ ಹಿತವಾಗಬೇಕೆಂಬ ಇಚ್ಛೆ ನಿನಗಿದ್ದರೆ ಅವನ ಬಿಂಬದಂತಿರುವ ಪರಮಾತ್ಮನ ಸೇವೆಗಾಗಿ ಸಿದ್ಧವಾಗು ನೀನು ಅನಂತಕಾಲದಿಂದಲೂ ಪ್ರತಿಕ್ಷಣದಲ್ಲಿಯೂ ಮಾಡುತ್ತಿರುವ ವಿಷಯೇಂದ್ರಿಯ ಸೇವೆಯಿಂದ ವಿಷಯಗಳ ಮಾಲಿನ್ಯವು ನಿನ್ನ ಮುಖೇನ ಜೀವನಿಗೂ ವಜ್ರಲೇಪದಂತೆ ಅಂಟಿಕೊಳ್ಳುತ್ತ ಬಂದಿರುವುದು ಅದಪ್ರಯುಕ್ತ ಪರಶಿವನ ಧ್ಯಾನಪೂಜಾದಿಗಳಲ್ಲಿ ತೈಲಧಾರೆಯಂತೆ ಮಗ್ನನಾಗು ಈ ಮಹತ್ಕಾರ್ಯದಲ್ಲಿ ನಿರತನಾದರೆ ಕನ್ನಡಿಯ ಸ್ಥಾನದಲ್ಲಿರುವ ನೀನೂ ಶುದ್ಧನಾಗುವೆ ತದನಂತರ ನಿನ್ನಲ್ಲಿ ಹೊಳೆದಿರುವ ಪ್ರತಿಬಿಂಬದಂತಿರುವ ನಿನ್ನ ಸ್ವಾಮಿಯಾದ ಜೀವನಿಗೂ ಉನ್ನತಿಯಾಗುವುದು

ಎಲೈ ಮನವೇ! ಈ ಸಂಸಾರದಲ್ಲಿ ನಿನಗೆ ತೋರುವ ಶಬ್ದ ಸ್ಪರ್ಶ ರೂಪ-ರಸ-ಗಂಧಗಳೆಂಬೈದು ವಿಷಯಗಳುಂಟು ಅವುಗಳನ್ನು ಇಂದ್ರಿಯಗಳ ಮೂಲಕ ಭೋಗಿಸಿ ಸುಖಪಡಬೇಕೆಂದು ಹೊರಟು ಸುಮ್ಮನೆ ಪೇಚಾಡುತ್ತಿರುವೆ ಆದರೆ ವಿಚಾರಮಾಡಿ ನೋಡು, ಈ ವಿಷಯಗಳಲ್ಲಿ ಬಿಡುವಿಲ್ಲದೆ ಬದಲಾವಣೆಗಳು ಆಗುತ್ತಲೇ ಇರುವುವು ಇವುಗಳನ್ನು ಹೊಂದಿ ಸುಖವನ್ನು ತಂದುಕೊಡುವವೆಂದು ನೀನು ಭಾವಿಸಿರುವ ಇಂದ್ರಿಯಗಳೂ ಕ್ಷಣಕ್ಕೊಂದು ಬದಲಾವಣೆಯನ್ನು ಹೊಂದುತ್ತಿರುವುವು ಹೀಗೆ ಪ್ರತಿ ಕ್ಷಣದಲ್ಲಿಯೂ ಬದಲಾಗುತ್ತಿರುವ ವಿಷಯೇಂದ್ರಿಯಗಳ ಸಂಯೋಗದಿಂದ ನಿಶ್ಚಿತವಾದ ಸುಖವು ಪ್ರಾಪ್ತಿಯಾಗುವುದೆಂದು ನೀನು ನಂಬಿದ್ದರೂ ಆಯಾ ವಿಷಯಗಳು ಒದಗುವುದರೊಳಗಾಗಿ ಅವುಗಳಿಂದ ಸುಖವು ಲಭಿಸೀತೆಂಬ ನಿನ್ನ ಅಭಿಪ್ರಾಯವೆಲ್ಲ ಅನೇಕವೇಳೆ ಬದಲಾಗಿಯೂ ಬಿಟ್ಟಿರುವುದು ನಿನ್ನ ಅನುಭವದಲ್ಲಿದೆ ಅಲ್ಲದೆ ಈ ಸಂಸಾರದಲ್ಲಿ ವಿಷಯಗಳಿಂದ ಸುಖವಾಗುವುದೆಂದೇ ನಿನಗೆ ಎಷ್ಟೋ ಸಲ ತೋರುವುದು ಆದರೆ ಅದು ದುಃಖದಲ್ಲಿಯೇ ಕೊನೆಗಾಣುವುದಾದುದರಿಂದ ಸಂಸಾರವು ನಿಜವಾಗಿ ದುಃಖಪರಂಪರೆಯೇ ಆಗಿರುವುದು ಈ ನಿಜಾಂಶವನ್ನು ತಿಳಿಯಲಾರದೆ ಪುನಃ ಪುನಃ ಮೋಸಹೋಗುತ್ತ, ಮರುಮರೀಚಿಕಾಜಲದ ಆಸೆಯಿಂದ ಓಡುತ್ತಿರುವ ಜಿಂಕೆಯಂತೆ ಈ ಸಂಸಾರದಲ್ಲಿ ಸುಖವು ಈಗ ಸಿಕ್ಕುವುದು, ನಾಳೆ ಸಿಕ್ಕುವುದು ಎಂದು ಬಾಯಿನೀರು ಸುರಿಸುತ್ತ ಕಾದುಕೊಂಡಿರುವೆಯಲ್ಲ! ಅಲ್ಲದೆ ಸಂಸಾರವು ನಿಸ್ಸಾರವಾದುದೆಂದು ವಿಚಾರದಲ್ಲಿ ಎಷ್ಟು ಬಗೆಯಿಂದ ಕಂಡುಬಂದರೂ ಮತ್ತೆಮತ್ತೆ ನೀನು ವಿಷಯಗಳ ಕಡೆಗೆ ಹರಿಯುವುದನ್ನು ಬಿಡುವುದಿಲ್ಲ ವಿಷಯಗಳಲ್ಲಿ ಸುಖವನ್ನು ಕೊಡುವ ಶಕ್ತಿಯಿದೆಯೆಂಬ ಭ್ರಾಂತಿ ಇರುವವರೆಗೂ ನಿನಗೆ ಪರಶಿವನ ಕಡೆಗೆ ಒಲಿಯುವುದು ಕಷ್ಟವಾಗುವುದು, ಪರಶಿವನ ಕಡೆಗೆ ಒಲಿದ ಹೊರತು ನಿಜವಾದ ಸುಖದ ರುಚಿಯು ತೋರುವುದಿಲ್ಲ ನಿಜವಾದ ಸುಖವನ್ನು ಅನುಭವಕ್ಕೆ ತಂದುಕೊಂಡ ಹೊರತು ಸಂಸಾರದಲ್ಲಿ ಹೇಯಬುದ್ಧಿಯುಂಟಾಗುವುದಿಲ್ಲ ಆದುದರಿಂದ ಪರಶಿವನ ಸೇವೆಯಿಂದಾಗುವ ಸುಖಾನಂದವನ್ನು ಕಾಣುವ ಮೊದಲೇ ವಿಷಯಗಳನ್ನು ಕಡೆಗಾಣುವುದಕ್ಕೆ ಯತ್ನಮಾಡು ಶ್ರೀ ನಿಜಗುಣಶಿವಯೋಗಿಗಳು ಕೈವಲ್ಯಪದ್ಧತಿಯಲ್ಲಿ —

> [illegible] ವಿಷಯುವ [illegible] । [illegible]
> [illegible] ಗರ್ವ [illegible] । [illegible]
> [illegible] ಬಳಸಿರ್ದಿಂದ್ರಿಯ [illegible]
> [illegible] । [illegible]
> [illegible] । [illegible]
> [illegible] । [illegible]
> [illegible] । ಸಿಲ್ಲ ಸುಖವ
> ನೈದವೆ ॥೩॥ [illegible]

ಎಲೈ ಮನವೇ! ದುಂಬಿಯು ಹೂಗಳೆಲ್ಲವೂ ತನಗೆ ಮಕರಂದವನ್ನು ಕೊಡುವುವೆಂದು ಸುಮ್ಮನೆ ಹಾರಾಡಿ ಆಯಾಸ ಪಡುವುದಲ್ಲದೆ ವಾಸನೆಯ ವೇಗವು ಬಲವಾಗಿರುವ ಚಂಪಕವನಕ್ಕೂ ನುಗ್ಗುವುದುಂಟು ಆಗ ಅದರ ಕಟುತರವಾದ ಪರಿಮಳವನ್ನು ತಡೆಯಲಾರದೆ ಅಲ್ಲಿಯೇ ಮೃತಿಯನ್ನೈದುವುದು ವಿಷಯಗಳೂ ಸಹ ನಿನ್ನ ಪಾಲಿಗೆ ಸಂಪಗೆಯ ಮೊಗ್ಗುಗಳಂತೆಯೇ ಸರಿಯೆಂದು ತಿಳಿ ಅವು ಪ್ರಾರಂಭದಲ್ಲಿ ಸುಖದ ವಾಸನೆಯನ್ನು ನಿನಗೆ ಬಲವಾಗಿ ಬೀರಿದರೂ ಕೊನೆಗೆ ನಿನ್ನ ನಾಶಕ್ಕೇ ಕಾರಣವೆಂಬುದನ್ನು ಮರೆಯಬೇಡ ಕಂಡೆಯಾ! ಈ ವಿಷಯಗಳನ್ನು ನಿದಾನ ಮಾಡುತ್ತಿದ್ದರೆ, ಅವುಗಳಲ್ಲಿಯೇ ಅತ್ಯಾಸಕ್ತಿಯುಂಟಾಗುತ್ತದೆ. ಆಸೆಯು ಈಡೇರದಿದ್ದರೆ ಕೋಪವುಂಟಾಗುತ್ತದೆ ಕೋಪದಿಂದ ಬುದ್ಧಿಮೋಹವಾಗುತ್ತದೆ ಆಮೇಲೆ ಕೇಳಬೇಕೇ? ಸರ್ವನಾಶ! ಆದಕಾರಣ ವಿಷಯಗಳ ಸ್ವರೂಪದಲ್ಲಿರುವ ದೋಷವನ್ನೂ ಅವುಗಳ ಮೇಲಿರುವ ಆಸಕ್ತಿಯಿಂದಾಗುವ ದೋಷಗಳನ್ನೂ, ಅವುಗಳ ಉಪಭೋಗದಿಂದಾಗುವ ದುಃಖದೋಷಗಳನ್ನೂ ಪದೇ ಪದೇ ಧ್ಯಾನಿಸಿಕೊಳ್ಳುತ್ತಿದ್ದರೆ ಅವುಗಳಲ್ಲಿ ನಿನಗೆ ತುಚ್ಛಬುದ್ಧಿಯು

(ಕಡೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ನವಂಬರ್ ತಾ॥ ೮ ನೇ ಸೋಮವಾರ

ಭಕ್ತಿಯ ಪ್ರಭಾವ.

"ಪೂಜ್ಯೇಷ್ವನುರಾಗೋಭಕ್ತಿಃ" ಎಂಬ ಉಕ್ತಿಯಂತೆ ಪೂಜ್ಯವಸ್ತುಗಳಲ್ಲಿ ಸಹಜಪ್ರೇಮವನ್ನು ತೋರಿಸುವುದೇ ಭಕ್ತಿಯೆನಿಸುವದು ಅಂಥ ಪೂಜ್ಯವಸ್ತುಗಳಾವುವೆಂದರೆ ಸರ್ವಜ್ಞತ್ವಾದ್ಯನಂತಕಲ್ಯಾಣಗುಣವಿಶಿಷ್ಟನಾದ ಪರಮಾತ್ಮನೊಬ್ಬನು ಇಂಥ ಪರಮಾತ್ಮನ ನಿಜಸ್ವರೂಪವನ್ನು ಬೋಧಿಸುವ ಗುರುವೊಬ್ಬನು ಇವೆರಡು ವಸ್ತುಗಳೇ ಪರಮಾರ್ಥತಃ ಪೂಜ್ಯವಸ್ತುಗಳಲ್ಲದ ಇತರ ಯಾವ ವಸ್ತುಗಳೂ ಪೂಜ್ಯವಸ್ತುಗಳಾಗಲಾರವು ಐಹಿಕಸೌಖ್ಯ ಲಾಭದ ದೃಷ್ಟಿಯಲ್ಲಿ ಇತರರೂ ಸಹ ಪೂಜ್ಯರೆಂದು ಹೇಳಿಸಿಕೊಳ್ಳಲ್ಪಟ್ಟರೂ ಆ ಐಹಿಕವಸ್ತುಗಳು ನಿತ್ಯ ಸೌಖ್ಯವನ್ನು ಕೊಡದೆ ಕ್ಷಣಿಕಸೌಖ್ಯವನ್ನು ಕೊಡುವುದರಿಂದ ಐಹಿಕಸುಖಸಾಧನಗಳಾದ ಉಪದೇಶಗಳನ್ನು ಮಾಡುವವರಾಗಲಿ ಐಹಿಕಸುಖಾನುಭವವಾಗಲಿ ಪೂಜ್ಯ ಕೋಟಿಯಲ್ಲಿ ಸೇರುವುದಿಲ್ಲ ಆದುದರಿಂದ ಮುಖ್ಯವಾಗಿ ಗುರುದೇವರಲ್ಲಿ ಭಕ್ತಿಯನ್ನಿಟ್ಟು ವರ್ತಿಸಬೇಕು ಪೂರ್ವಾಚಾರ್ಯರು ಭಕ್ತಿಯನ್ನು ಒಂದು ದೊಡ್ಡ ಹಡಗಿಗೆ ಹೋಲಿಸಿರುವುದನ್ನು ನೋಡಿದರೆ ಈ ಸಾಧರ್ಮ್ಯದಿಂದ ಹಡಗು ಅಪಾರವಾದ ಸಮುದ್ರವನ್ನು ದಾಟಿಸುವುದಕ್ಕೆ ಸಾಧನವಾಗಿರುವಂತೆ ಭಕ್ತಿಯು ಸಂಸಾರವೆಂಬ ಸಮುದ್ರವನ್ನು ದಾಟಿಸಲು ಸಾಧನವಾಗಿರುವುದೆಂದು ಸ್ಪಷ್ಟವಾಗಿ ತೋರುವುದು ಈ ಭಕ್ತಿಯೆಂಬ ಹಡಗನ್ನು ನಡೆಯಿಸುವವನೊಬ್ಬನಿಲ್ಲದಿದ್ದರೆ ಇದು ಮುಂದೆ ಸಾಗುವುದಿಲ್ಲ ಇದಕ್ಕೆ ಪ್ರೇರಕನೊಬ್ಬನಿರಬೇಕಾಗುವುದು ನಾವಿಕನಿಲ್ಲದಿದ್ದ ಹಡಗು ಸ್ವೇಚ್ಛೆಯಾಗಿ ಸಮುದ್ರದಲ್ಲಿ ಪ್ರವೇಶಿಸಿದರೆ ಗಾಳಿ ಬೆಟ್ಟ ಮುಂತಾದ ಯಾವುದಾದರೊಂದು ಉಪಹತಿಯಿಂದ ಭಗ್ನವಾಗದಿರಲಾರದು ಆದ್ದರಿಂದ ಆ ದಾರಿಯ ರಹಸ್ಯವನ್ನೆಲ್ಲ ತಿಳಿದ ನಾವಿಕನ ಚಾತುರ್ಯದಿಂದ ದಾರಿಯಲ್ಲಿ ಒದಗಬಹುದಾದ ತೊಂದರೆಗಳನ್ನೆಲ್ಲ ಪರಿಹರಿಸಿ ತೀರವನ್ನು ಕಾಣಿಸುವಂತೆ ಜೀವಾತ್ಮನು ಅನೇಕಜನ್ಮಗಳಲ್ಲಿ ಪಾಪಕರ್ಮಗಳನ್ನು ಮಾಡಿ ಘೋರಬಾಧೆಗಳೆಂಬ ಕ್ರೂರತರಂಗಗಳಿಂದಲೂ, ಕಾಮಕ್ರೋಧಾದಿಗಳೆಂಬ ಮಕರಮತ್ಸ್ಯಾದಿಗಳಿಂದಲೂ ಶೋಕಮೋಹಾದಿಗಳೆಂಬ ಬುದ್ಬುದಗಳಿಂದಲೂ ಭರಿತವಾಗಿರುವ ಈ ಸಂಸಾರವೆಂಬ ಮಹಾಸಮುದ್ರವನ್ನು ದಾಟಬೇಕಾದರೆ ದೃಢತರವಾದ ಭಕ್ತಿಯೆಂಬ ಹಡಗನ್ನೂ ಅದರ ಇಂಗಿತವನ್ನೆಲ್ಲ ಅರಿತ ಗುರುವನ್ನೂ ಆಶ್ರಯಿಸಬೇಕು ಇವೆರಡರ ಸೌಕರ್ಯವಿದ್ದವನು ದುರ್ಭೇದ್ಯವಾದ ಹಡಗನ್ನೂ ವಿಚಕ್ಷಣನಾದ ಚಾಲಕನನ್ನೂ ಪಡೆದ ಪ್ರಯಾಣಿಕನಂತೆ ನಿರಾಯಾಸವಾಗಿ ಭವಸಮುದ್ರದ ಆಚೆ ಇರುವ ಸುಖಸ್ಥಾನವನ್ನು ಸೇರಿ ನಿತ್ಯಾನಂದವನ್ನು ಅನುಭವಿಸುವನು.

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದ
ಮಾಯಾನ್ನಾಸ್ತ್ಯಕೃತಃಕೃತೇನ । ತದ್ವಿಜ್ಞಾನಾರ್ಥಂ ಸ ಗುರು
ಮೇವಾಭಿಗಚ್ಛೇತ್ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಂ ॥

ಬ್ರಹ್ಮವನ್ನೇ ಹೊಂದಬೇಕೆಂಬಿಚ್ಛೆಯುಳ್ಳ ಅಧಿಕಾರಿಪುರುಷನು ಕರ್ಮದಿಂದುಂಟಾದ ಫಲವು ನಶ್ವರವೆಂದೂ ಅದು ಮುಕ್ತಿಯನ್ನೀಯಲಾರದೆಂದೂ ನಿಶ್ಚಯಿಸಿ ದೇವರನ್ನು ಕಾಣಲು ಉಪಾಯವನ್ನು ತಿಳಿಯುವುದಕ್ಕಾಗಿ ಭವಸಮುದ್ರವನ್ನು ದಾಟಿಸಬಲ್ಲ (ಶಾಸ್ತ್ರಜ್ಞ) ಬ್ರಹ್ಮಜ್ಞನಾದ ಗುರುವಿನ ಬಳಿಯನ್ನು ಸಮಿತ್ಪಾಣಿಯಾಗಿ ಸೇರಬೇಕೆಂದು ಮುಂಡಕೋಪನಿಷತ್ತಿನಲ್ಲಿ ಉಪದೇಶಿಸಿರುವುದರಿಂದ ದೇವರಲ್ಲಿ ಭಕ್ತಿಯು ದೃಢಗೊಳ್ಳಬೇಕಾದರೆ ಮೊದಲು ಗುರುಗಳಲ್ಲಿ ಭಕ್ತಿಯಿಂದ ವರ್ತಿಸಬೇಕು. ಗುರುಭಕ್ತಿಯಿಲ್ಲದವನಿಗೆ ದೈವಭಕ್ತಿಯು ಅಂಕುರಿಸುವುದಿಲ್ಲ. ಗುರುಭಕ್ತಿಯು ಪ್ರತ್ಯಕ್ಷವಾದುದು ದೈವಭಕ್ತಿಯು ಅಪ್ರತ್ಯಕ್ಷವಾದುದು ಪ್ರತ್ಯಕ್ಷವಾದ ಹೊಗೆಯನ್ನು ನೋಡಿ ದೂರದಲ್ಲಿರುವ ಬೆಟ್ಟದಲ್ಲಿ ಬೆಂಕಿಯಿರುವುದೆಂದು ಊಹಿಸುವಂತೆ ಪ್ರತ್ಯಕ್ಷವಾದ ಗುರುಭಕ್ತಿಯಿರುವ ಪುರುಷನನ್ನು ನೋಡಿ ಈ ಮನುಷ್ಯನು ದೈವಭಕ್ತಿಯುಳ್ಳವನೆಂದೂಹಿಸಿ ತಿಳಿದುಕೊಳ್ಳಬೇಕಾಗಿರುವುದರಿಂದ ಶಿವಭಕ್ತಿಯುಳ್ಳವನಾವನುಂಟೋ ಅವನು ಮೊದಲು ಗುರುಭಕ್ತಿಯನ್ನು ತೋರ್ಪಡಿಸಬೇಕು ವೀರಶೈವನು ಮೊದಲು ತನ್ನ ಕುಲಗುರುವಿಗೆ ಶರಣಾಗತನಾಗಿ ಅವನಿಂದ ತನ್ನ ಶಕ್ತಿಪಾತಾನುಸಾರ ಶಿವದೀಕ್ಷೆಯನ್ನು ಪಡೆದು ಪರಿಶುದ್ಧನಾಗಿ ಧ್ಯೇಯವಾದ ಶಿವಲಿಂಗವನ್ನು ಶರೀರದಲ್ಲಿ ಧರಿಸಿಕೊಂಡು ಗುರುಗಳ ಉಪದೇಶದಂತೆ ಚಿತ್ತಶುದ್ಧಿ ಸ್ಥಾನಶುದ್ಧಿ, ದ್ರವ್ಯಶುದ್ಧಿ, ಮಂತ್ರಶುದ್ಧಿ ಅಂಗನ್ಯಾಸ, ಕರನ್ಯಾಸ, ದೇಹನ್ಯಾಸ, ರೇಚಕ, ಪೂರಕ, ಕುಂಭಕ, ಜಠರಾಕುಂಚನ, ಪ್ರಾಚೀವೀಕ್ಷಣ, ಮೌನಮುದ್ರಾ, ದೃಗುನ್ಮೀಲನ ಮುಂತಾದ ಬಾಹ್ಯಭಕ್ತಿಯ ಲಕ್ಷಣಗಳನ್ನೆಲ್ಲ ಅರಿಯಬೇಕು ಅನಂತರದಲ್ಲಿ ಆಭ್ಯಂತರಭಕ್ತಿಯು ತಾನಾಗಿಯೇ ಸಿದ್ಧಿಸುವುದು

ಸಿಂಹಾಸನೇ ಶುದ್ಧದೇಶೇ ಸುರಮ್ಯೇ ರತ್ನಚಿತ್ರಿತೇ
ಶಿವಲಿಂಗಸ್ಯ ಪೂಜಾ ಯಾ ಸಾ ಬಾಹ್ಯಾ ಭಕ್ತಿರುಚ್ಯತೇ ॥

ರತ್ನಖಚಿತವೂ, ಪರಿಶುದ್ಧವೂ ಆಗಿರುವ ಸಿಂಹಾಸನದ ಮೇಲೆ ಶಿವಲಿಂಗವನ್ನಿರಿಸಿ ಅತ್ಯಾದರದಿಂದ ಗಂಧಪುಷ್ಪಾಕ್ಷತ ಧೂಪದೀಪಾದಿಗಳಿಂದುಪಚರಿಸುವುದೇ ಬಾಹ್ಯಭಕ್ತಿಯೆನಿಸುವುದು

ಲಿಂಗೇ ಪ್ರಾಣಂ ಸಮಾಧಾಯ ಪ್ರಾಣೇ ಲಿಂಗಂ ತು ಶಾಂಭವಂ
ಸಶರೀರಂ ಮನಃ ಕೃತ್ವಾ ನ ಕಿಂಚಿಚ್ಚಿಂತಯೇದ್ಬುಧಃ ।
ಸಾಭ್ಯಂತರಾಭಕ್ತಿರಿತಿ ಪ್ರೋಚ್ಯತೇ ಶಿವಯೋಗಿಭಿಃ ।

ಶಿವಲಿಂಗದಲ್ಲಿ ಪ್ರಾಣವನ್ನೂ, ಪ್ರಾಣದಲ್ಲಿ ಶಿವಲಿಂಗವನ್ನೂ ಯೋಜಿಸಿ ಶರೀರವನ್ನೂ, ಮನಸ್ಸನ್ನೂ ಶಿವಲಿಂಗದಲ್ಲಿ ಲಯಗೊಳಿಸಿ ಶಿವೇತರಗಳಾದ ಯಾವ ಲೌಕಿಕಪದಾರ್ಥಗಳನ್ನೂ ಸ್ಮರಿಸದೆ ಯಾವಾಗಲೂ ಶಿವಾಕಾರಬುದ್ಧಿಯಿಂದಿರುವುದೇ ಆಭ್ಯಂತರ ಭಕ್ತಿಯೆನಿಸುವುದು ಪರಮಾತ್ಮಸಾಕ್ಷಾತ್ಕಾರವನ್ನು ಪಡೆದು ದುಃಖಹೇತುವಾದ ಜನನಮರಣರೂಪಘೋರಾರಣ್ಯವನ್ನು ದಾಟಬೇಕೆಂಬಿಚ್ಛೆಯುಳ್ಳವನು ಈ ಎರಡು ವಿಧವಾದ ಭಕ್ತಿಲಕ್ಷಣವನ್ನೂ ಅಭ್ಯಾಸಮಾಡಬೇಕು. ಬಾಹ್ಯಭಕ್ತಿಯ ಲಕ್ಷಣವನ್ನು ಅಭ್ಯಾಸಮಾಡದಿದ್ದವನಿಗೆ ಅತಿಸೂಕ್ಷ್ಮವಾದ ಆಭ್ಯಂತರ ಭಕ್ತಿಯು ಸಿದ್ಧಿಸುವುದಿಲ್ಲ

ಗವಾಂ ಸರ್ಪಿಶ್ಶರೀರಸ್ಥಂ ನ ಕರೋತ್ಯಾತ್ಮಪೋಷಣಂ ।
ನಿಸ್ಸೃತಂ ಕರ್ಮರಚಿತಂ ಪುನಸ್ತಾಸಾಂ ತು ಭೇಷಜಂ ॥
ಏವಮಂತಶ್ಶರೀರಸ್ಥಸ್ಸರ್ಪಿವತ್ಪರಮೇಶ್ವರಃ
ವಿನಾ ಚೋಪಾಸನಾಂ ದೇವೋ ನ ಕರೋತಿ ಹಿತಂ ನೃಣಾಂ ॥

ಗೋವುಗಳ ಶರೀರದಲ್ಲಿ ತುಪ್ಪವಿದ್ದರೂ ಪೋಷಣಾದಿ ಕ್ರಿಯೆಯಿಂದ ಹೊರಗೆ ಬಂದ ಹೊರತು ಆ ಗೋವಿಗೆ ಉಂಟಾದ ರೋಗವನ್ನು ಪರಿಹರಿಸದಂತೆ, ಪರಮೇಶ್ವರನು ಎಲ್ಲರ ದೇಹದೊಳಗಿದ್ದರೂ ಬಹಿರುಪಾಸನೆಯಿಲ್ಲದ ಹೊರತು ಭವರೋಗವು ನಾಶವಾಗಲಾರದೆಂದು ಶಿವಾಗಮಗಳು ಉದ್ಘೋಷಿಸುವುದರಿಂದ ಪ್ರತಿಯೊಬ್ಬನೂ ಗುರುಗಳಿಂದ ಇಷ್ಟಲಿಂಗವನ್ನು ಪಡೆದು ಅದರ ಪೂಜೆಯನ್ನು ವಿಧ್ಯುಕ್ತವಾಗಿ ಮಾಡುತ್ತ ಇಷ್ಟಲಿಂಗವನ್ನು ಅನುಗ್ರಹಿಸಿದ ಗುರುವಿನಲ್ಲಿಯೂ ಶಿವಲಿಂಗದಲ್ಲಿಯೂ ಭಕ್ತಿಯನ್ನಿರಿಸಬೇಕು ಈ ಭಕ್ತಿಯು ಭೂಮಿಯಲ್ಲಿ ಬಿತ್ತಿದ ಬೀಜವು ವ್ಯವಸಾಯಾದಿಪೋಷಣಕ್ರಿಯೆಗಳಿಂದ ಮೆಲ್ಲಮೆಲ್ಲನೆ ಅಂಕುರಿಸಿ ಪಲ್ಲವಿಸಿ ಫಲಿತವಾಗುವಂತೆ ಶರೀರ ಮನಸ್ಸು ಇಂದ್ರಿಯ ಜೀವಾತ್ಮರುಗಳನ್ನು ಪರಿಶುದ್ಧಿಯನ್ನು ಹೊಂದಿಸುವ ಮೂಲ ಆಭ್ಯಂತರ ಭಕ್ತಿಯನ್ನುಂಟುಮಾಡಿ ಭವಸಮುದ್ರವನ್ನು ಸುಖವಾಗಿ ದಾಟಿಸಿ ಆತ್ಮನನ್ನು ವಿಶ್ರಾಂತಿಗೊಳಿಸುವುದು.

ಯುದ್ಧವಾರ್ತೆ.

ಇಟಲಿ ಯುದ್ಧರಂಗ

ರೋಂ ಕಡೆಗೆ ತೆರಳುವ ಏಪಿಯನ್ ಮಾರ್ಗವು ಈಗ ಸಂಪೂರ್ಣವಾಗಿ ಮಿತ್ರಸೈನಿಕರ ವಶವಾಗಿದೆ. ಕಾರೋಲಿನಾ ಮಿತ್ರಸೈನಿಕರ ಕೈಗೆಬಿತ್ತು. ಐದನೆಯ ಸೇನೆಯ ಎಡಭಾಗದಲ್ಲಿ ಬಹಳ ಕಾಲದಿಂದ ನಿರೀಕ್ಷಿಸಿದ್ದ ಮುತ್ತಿಗೆ ಈಗ ಆರಂಭವಾಗಿದೆಯೆಂದು ಜರ್ಮನ್ ಅಧಿಕಾರಿಗಳು ತಿಳಿಸಿದ್ದಾರೆ. ಐದನೆಯ ಸೇನೆಯ ಯೋಧರು ಬೆಟ್ಟಗುಡ್ಡಗಳಲ್ಲಿ ಮುಂದೆನುಗ್ಗಿ ಕೆಲವು ಮುಖ್ಯಸ್ಥಾನಗಳಿಂದ ಜರ್ಮನರನ್ನು ಹಿಂದಕ್ಕೆ ಅಟ್ಟಿದ್ದಾರೆ. ರೋಂಗೆ ಅಡ್ಡಲಾಗಿರುವ ಪರ್ವತ ಶ್ರೇಣಿಯನ್ನು ಭೇದಿಸಿಕೊಂಡು ಮಿತ್ರ ಸೇನೆ ನುಗ್ಗುವ ಭೀತಿಯುಂಟಾಗಿದೆ ಎಂಟನೆಯ ಸೇನೆಯು ಏಕಪ್ರಕಾರವಾಗಿ ಶತ್ರುಗಳನ್ನು ಒತ್ತಾಯಕ್ಕೆ ಗುರಿಮಾಡುತ್ತಿದೆ ಶತ್ರುಗಳ ಪ್ರತಿಭಟನೆಯೂ ಜೋರಾಗಿದೆ ಶತ್ರುಸ್ಥಾನಗಳ ಮೇಲೆ ಮಿತ್ರ ಬಾಂಬರುಗಳು ಬಾಂಬುಗಳನ್ನು ಸುರಿಸುತ್ತವೆ ಮಾಲ್ಟಾ ಸರಕಾರವು ವಲೆಟ್ಟಾಕ್ಕೆ ಹಿಂತಿರುಗಲಿದೆಯೆಂದು ಗವರ್ನರಾದ ಲಾರ್ಡ್ ಗೋರ್ಟ್‌ರವರು ತಿಳಿಸಿದರೆಂಬುದಾಗಿ ಹೇಳಲಾಗಿದೆ

ಇಟಲಿಯಲ್ಲಿ ತಾತ್ಕಾಲಿಕ ಸರಕಾರ

ಸ್ಯಾ॥ ಬಡೋಗ್ಲಿಯೋರವರು ಇಟಲಿ ದೊರೆಗಳಾದ ವಿಕ್ಟರ್ ಇಮ್ಯಾನುಯಲ್‌ರನ್ನು ಭೇಟಿ ಮಾಡಿದ್ದರು. ದೊರೆಗಳು ಅಧಿಕಾರದಲ್ಲಿರುವವರೆಗೆ ಪ್ರಜಾಪ್ರತಿನಿಧಿಗಳುಳ್ಳ ಸರಕಾರವನ್ನು ರಚಿಸಲು ತಮಗೆ ಸಾಧ್ಯವಿಲ್ಲವೆಂದು ಅವರು ಹೇಳಿದರೆಂದು ತಿಳಿದು ಬಂದಿದೆ

ಜರ್ಮನಿಯಲ್ಲಿ ಸೋಲಿನ ಮನೋಭಾವ

ಜರ್ಮನ್ ಪ್ರಜೆಗಳಿಗೆ ಧೈರ್ಯತುಂಬಲೋಸು ಜರ್ಮನ್ ಬಿಷಪ್ಪುಗಳೂ, ಮಠಾಧಿಪತಿಗಳೂ ನಾ ಸರಕಾರಕ್ಕೆ ಬೆಂಬಲರಾಗಿ ನಿಂತಿದ್ದಾರೆಂದು ಬರ್ಲಿನ್ ರೇಡಿಯೋ ತಿಳಿಸಿತು ಜರ್ಮನಿಯಲ್ಲಿ ಅಂಧಕಾರ ಕ ಯುತ್ತಿದೆ ಇಂದಿನಷ್ಟು ನಿರುತ್ಸಾಹವು ಯಾವಾಗಲೂ ಇರಲಿಲ್ಲ ದೇಶದಲ್ಲಿ ಅಧೈರ್ಯವು ಹೆಚ್ಚುತ್ತಿದೆ ಗೃ ರಂಗವೇ ಕುಸಿದು ಬೀಳುತ್ತಿದೆ ಹರ್ ಹಿಟ್ಲರರು ನಾ ಯುವಕರಿಗೆ ಒಂದು ಮನವಿಯನ್ನು ಹೊರಡಿಸಿ, ಗಟ್ಟಿ ಮುಟ್ಟಾದ ಯೋಧರನ್ನು ಯುವಜನರಿಂದ ಒದಗಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಅಂಡಮಾನ್ ಮೇಲೆ ಮುತ್ತಿಗೆ

ಕಳೆದ ತಿಂಗಳು ೨೮ ನೇ ತಾ॥ ದಿನ ಅಮೆರಿಕನ ಬಾಂಬರುಗಳು ಪೋರ್ಟ್‌ಬ್ಲೇರ್ ಬಳಿ ಇರುವ ಜಪಾನ ಸೈನ್ಯ ಶಿಬಿರಗಳ ಮೇಲೆ ಮುತ್ತಿಗೆ ನಡೆಸಿ, ತುಂಬಾ ನಷ್ಟವುಂಟುಮಾಡಿದವು ಚೀಣದ ನಾನಾ ರಂಗಗಳಲ್ಲಿ ಸ ಮಿತ್ರ ವಿಮಾನಗಳ ಚಟುವಟಿಕೆ ಜೋರಾಗಿತ್ತೆಂದು ಪ್ರಕಟವಾಗಿದೆ

ನಾನ್‌ಕಿಂಗ್ ಜಪಾನ್ ಸರ್ಕಾರಗಳ ಒಪ್ಪಂದ

ಜಪಾನಿಗೂ ನಾನ್‌ಕಿಂಗ್ ಸರ್ಕಾರಕ್ಕೂ ಒಂದ ಒಪ್ಪಂದವಾಗಿದೆ—ಎಂಬುದಾಗಿ ಜಪಾನ್ ವಾರ್ತಾ ಸಂಸ್ಥೆಯು ತಿಳಿಸುತ್ತದೆ ಜಪಾನ್ ಮಹಾಪ್ರಧಾನರ ಮಾತನಾಡುತ್ತ ಇನ್ನು ಮುಂದೆ ಹೊಸ ಚೀಣವನ್ ರೂಪುಗೊಳಿಸುವುದರಲ್ಲಿ ಜಪಾನು ತನ್ನ ಕೈಯಲ್ಲಾ ಸಹಾಯವನ್ನೆಲ್ಲ ನೀಡುತ್ತದೆ ಪೂರ್ವ ಏಷ್ಯಾದ ಕದನವನ್ನು ಜಯಪ್ರದವಾಗಿ ಮಾಡಲು ಜಪಾನ್ ಚೀಣದೊಂದಿಗೆ ಕೈ ಜೋಡಿಸಿ ನಡೆಯುವುದು. ಎಂದರ ಚೀನಾ-ಜಪಾನುಗಳ ಅವಿಚಲವಾದ ಮೈತ್ರಿಗೂ ಮಹ ಬೃಹದ್ ಏಷ್ಯಾದರಚನೆಗೂ ಈ ಒಪ್ಪಂದವು ಹೆಗ್ಗು ತಾಗಿದೆಯೆಂಬುದಾಗಿ ನಾನ್‌ಕಿಂಗ್ ಪ್ರಭುತ್ವದ ಅಧ್ಯ ರಾದ ಡಾ॥ ವಾಂಗ್ ಚಿಂಗ್ ವೀಯರವರು ತಿಳಿಸಿದರ

ಮಾಸ್ಕೋ ಸಮ್ಮೇಳನದ ಫಲಿತಾಂಶ

ಬ್ರಿಟನ್, ಅಮೇರಿಕ ಮತ್ತು ರಷ್ಯಾ ವಿದೇಶಾಂ ಸಚಿವರ ಸಮ್ಮೇಳನ ಮುಕ್ತಾಯವಾಯಿತು. ಯುದ್ಧ ಮುಂದುವರಿದಂತೆಲ್ಲ ಯೂರೋಪಿನಲ್ಲಿ ನಾನಾ ಪ್ರ ಗಳು ಏಳುವುವಷ್ಟೆ? ಅವುಗಳ ಚರ್ಚೆಯಲ್ಲಿ ಈ ಮೂ ಸರಕಾರಗಳು ಒಂದೇ ವಿಧವಾದ ಮಾರ್ಗವನ್ನು ಅ ಸರಿಸುವಂತೆ ಮಾಡಲು ಒಂದು ವ್ಯವಸ್ಥೆಯನ್ನು ಏ ಡಿಸಬೇಕೆಂದು ಸಮ್ಮೇಳನವು ತೀರ್ಮಾನಿಸಿತು. ಏ ಭವಿಸಿ ಅಭಿಪ್ರಾಯಗಳನ್ನು ತಿಳಿಸಲು ಲಂಡನ್ನಿನಲ್ಲಿ ರೋಪ್ಯ ಮಂತ್ರಾಲೋಚನ ಸಮಿತಿಯೊಂದನ್ನು ನೇ ಸಲು ನಿಶ್ಚಯಿಸಲಾಗಿದೆ. ಯುದ್ಧ ಮುಗಿದ ಮೇಲೆಯು

ಈಗಿನಂತೆ ಈ ಮೂರು ಸರಕಾರಗಳೂ ಏಕಮತ್ಯದಿಂದ ನಡೆದುಕೊಳ್ಳುವುದು ಅಗತ್ಯವೆಂಬುದನ್ನು ಒಪ್ಪಿಕೊಳ್ಳಲಾಗಿದೆ. ಸಮ್ಮೇಳನದ ವಿಚಾರವಾಗಿ ಪ್ರಕಟವಾದ ಹೇಳಿಕೆಯಲ್ಲಿ " ಶತ್ರುಗಳು ತಾವಾಗಿ ಶರಣಾಗತರಾಗುವವರೆಗೆ ಯುದ್ಧವನ್ನು ಮುಂದುವರಿಸಲಾಗುವುದೆಂದು ಸಮ್ಮೇಳನವು ಮತ್ತೊಮ್ಮೆ ದೃಢಪಡಿಸಿತು ರೂಜ್‌ವೆಲ್ಟ್, ಚರ್ಚಿಲ್ ಮತ್ತು ಸ್ಟಾಲಿನ್ ಇವರು ಹೊರಡಿಸಿದ ಘೋಷಣೆಯೊಂದನ್ನು ಸಮ್ಮೇಳನದಲ್ಲಿ ತಿಳಿಸಲಾಯಿತು ಯಾವುದೇ ಜರ್ಮನಿ ಸರಕಾರದೊಂದಿಗೆ ಒಪ್ಪಂದ ಮಾಡಿಕೊಳ್ಳುವಾಗ ಒಂದು ಷರತ್ತು ಹಾಕಲೇಬೇಕು. ಈಗ ಜರ್ಮನರು ಆಕ್ರಮಿಸಿರುವ ದೇಶಗಳಲ್ಲಿ ವಧೆ ಮುಂತಾದ ಕ್ರೂರಕೃತ್ಯಗಳನ್ನು ನಡೆಸಿರುವ ಜರ್ಮನರ ವಿಚಾರಣೆ ನಡೆಸಿ ತಕ್ಕ ದಂಡನೆಯನ್ನು ವಿಧಿಸಲು ಆಯಾ ದೇಶಗಳಿಗೆ ಅವರನ್ನು ಕಳುಹಿಸತಕ್ಕದ್ದೆಂದು ನಿರ್ಧರಿಸಬೇಕು—ಎಂಬುದೇ ಆ ಘೋಷಣೆ

ಆಸ್ಟ್ರಿಯದ ಸ್ವಾತಂತ್ರ್ಯವನ್ನು ದೊರಕಿಸಿಕೊಡುವುದು ತಮ್ಮ ದೇಶಗಳ ಕರ್ತವ್ಯವೆಂದು ಮೂವರು ವಿದೇಶಾಂಗ ಸಚಿವರೂ ಸಾರಿದರು ಇಟಲಿಗೆ ಸಂಬಂಧಿಸಿದ ವಿಚಾರವನ್ನು ಚರ್ಚಿಸಲು ಒಂದು ಸಮಿತಿಯನ್ನು ನೇಮಿಸುವ ನಿಶ್ಚಯವಾಯಿತು ಈ ಮೂರು ದೇಶಗಳ ಮತ್ತು ಫ್ರೆಂಚ್ ನ್ಯಾಷನಲ್ ಕಮಿಟಿಯ ಪ್ರತಿನಿಧಿಗಳು–ಸದ್ಯಕ್ಕೆ ಅದರಲ್ಲಿರುವರು–ಫ್ಯಾಸಿಜಮನ್ನು ಸಂಪೂರ್ಣವಾಗಿ ನಿರ್ನಾಮ ಮಾಡುವುದೇ ಇಟಲಿಯ ವಿಚಾರದಲ್ಲಿ ತೋರಿಸಬೇಕಾದ ನೀತಿಗೆ ಆಧಾರವಾಗಿರಬೇಕೆಂದು ನಿರ್ಧರಿಸಿದ್ದಾರೆ ಅಂತರ ರಾಷ್ಟ್ರೀಯ ಸಂಸ್ಥೆಯೊಂದನ್ನು ಸ್ಥಾಪಿಸಬೇಕಾದುದು ಅಗತ್ಯವೆಂದು ಸಮ್ಮೇಳನವು ತಿಳಿಸಿತು ಶಸ್ತ್ರಸಂಗ್ರಹವನ್ನು ಮಿತಿಗೊಳಿಸುವ ವಿಚಾರವಾಗಿ ಈ ಮೂರು ದೇಶಗಳೂ ಇತರ ಮಿತ್ರದೇಶಗಳೊಂದಿಗೆ ಸಹಕರಿಸುವುದಾಗಿ ಭರವಸೆ ಕೊಡಲಾಯ್ತು

ಬರ್ಮಾದಲ್ಲಿ ಅಪಾರ ಜಪಾನ್ ಸೇನೆ

ಯುನಾನ್ ಪ್ರಾಂತ್ಯದಲ್ಲಿ ಮಹಾಕದನವೊಂದು ನಡೆಯುತ್ತಿದೆ ಕಳೆದ ವಾರದಿಂದಲಂತೂ ಹೊಡೆದಾಟವು ಬಹಳ ಜೋರಾಗಿದ ಈ ಕದನಕ್ಕೆ ಹೆಚ್ಚು ಪ್ರಾಮುಖ್ಯ ಕೊಡಲಾಗಿದೆ ಯೂನಾನ್ ಮೇಲೆ ಅಥವಾ ಬರ್ಮದ ಮೇಲೆ ಕದನವಾರಂಭಿಸಲೋಸುಗ ಜಪಾನರು ಬರ್ಮಾದಲ್ಲಿ ತಮ್ಮ ಸೇನೆಯನ್ನು ಇತ್ತೀಚೆಗೆ ಬಲಪಡಿಸಿದರೆಂಬುದಾಗಿ ಚೀಣದ ಹೊಸ ವರ್ತಮಾನ ಶಾಖಾ ಮಂತ್ರಿಗಳಾದ ಡಾ|| ಎಚ್ ಸಿ ಆಯಾಂಗ್‌ರವರು ತಿಳಿಸಿದರು ಬರ್ಮಾದಲ್ಲಿ ನೆರೆದಿರುವ ಅಷ್ಟು ದೊಡ್ಡ ಸೇನೆಯನ್ನು ಜಪಾನರು ಭಾರತದ ಕಡೆ ತಿರುಗಿಸುವ ಸಂಭವವಿದೆಯೆಂಬುದನ್ನು ಮಿತ್ರ ದೇಶಗಳು ಮರೆಯಬಾರದೆಂದು ಅವರು ಎಚ್ಚರಿಸಿದರು. ಸಂಗ್ರಾಮವಸ್ತು ನಿರ್ಮಾಣ ಕಾರ್ಯವನ್ನು ತ್ವರೆಗೊಳಿಸಲು ಜಪಾನು ಒಬ್ಬ ಮಂತ್ರಿಯನ್ನೇ ನೇಮಿಸಿದೆ ಮದ್ದು ಗುಂಡುಗಳ ಕಾರ್ಖಾನೆಗಳಲ್ಲಿ ಅನೇಕ ಭಾರತೀಯರು ಕೆಲಸಮಾಡುತ್ತಿದ್ದಾರೆ ಸಿಂಗಪುರದಲ್ಲಿ ಜಪಾನು ಭಾರತೀಯರ ಕೈಗೊಂಬೆ ಸರಕಾರವೊಂದನ್ನು ಸ್ಥಾಪಿಸಿದೆ ಭಾರತೀಯ ಸಾಲ್ವೇರ್ಷ ಸೇನೆಯಲ್ಲಿ ಭಾರತೀಯ ಸ್ತ್ರೀಯರನ್ನೂ ಸಹ ಸೇರಿಸಿಕೊಂಡಿದ್ದಾರೆ ಇವುಗಳನ್ನೆಲ್ಲ ಮರೆಯಲು ಸಾಧ್ಯವಿಲ್ಲವೆಂದು ಹೇಳಲಾಗಿದೆ

ಜರ್ಮನಿಗೆ ಭಾರಿಪೆಟ್ಟು

ಜರ್ಮನರು ಉತ್ತರ ಇಟಲಿಯಲ್ಲಿರುವ ಸೈನ್ಯವನ್ನು ಹಿಂದಕ್ಕೆ ಕರೆಸಿ ರಷ್ಯಾ ರಂಗಕ್ಕೆ ಕಳುಹಿಸುತ್ತಿದ್ದಾರೆಂದು ಬರ್ನ್ ಸುದ್ದಿಗಾರರು ತಿಳಿಸುತ್ತಾರೆ ನಾಜಿ ಸೈನಿಕರು ಕಿಕ್ಕಿರಿದು ತುಂಬಿದ್ದ ಎಂಟು ರೈಲುಗಳು (ಒಟ್ಟು ೬೦ ವ್ಯಾಗನ್ನುಗಳು) ಮಿಲಾನಿನಿಂದ ಬ್ರೆನ್ನರ್ ಕಣಿವೆಯ ಮೂಲಕ ರಷ್ಯಕ್ಕೆ ತೆರಳಿದವು ಕ್ರಿಮಿಯಾವನ್ನು ತ್ಯಜಿಸಲು ಜರ್ಮನರಾಗಲೇ ಆರಂಭಿಸಿದ್ದಾರೆ ಸೆಬಾಸ್ಟೊಪೊಲ್ ವಶವಾದಮೇಲೆ ಜರ್ಮನರು ಗಾಯಗೊಂಡವರನ್ನು ಉಪಚರಿಸಲು ಕ್ರಿಮಿಯಾದಲ್ಲಿ ಅನೇಕ ಆಸ್ಪತ್ರೆಗಳನ್ನು ಸ್ಥಾಪಿಸಿದ್ದರು. ಈಗ ಅಲ್ಲಿ ಗಾಯಗೊಂಡವರನ್ನೆಲ್ಲ ನಾಜಿಗಳು ಬೇರೆ ಕಡೆಗೆ ಸಾಗಿಸಬೇಕಾಗಿದೆ ರಷ್ಯದಲ್ಲಿ ಜರ್ಮನ್ ಪ್ರತಿಭಟನೆ ಜೋರಾಗುತ್ತಿದೆಯೆಂದು ಜರ್ಮನ್ ಅಧಿಕಾರಿಗಳು ತಿಳಿಸುತ್ತಾರೆ ದಕ್ಷಿಣರಂಗದಲ್ಲಿರುವ ಜರ್ಮನ್ ಸೇನೆಯನ್ನೆಲ್ಲ ರಷ್ಯನರು ಸುತ್ತುವರಿದು ಆಗ್ನೇಯ ಯೂರೋಪಿಗೆ ನುಗ್ಗುವ ಭೀತಿಯುಂಟಾಗಿದೆಯೆಂದು ಸುದ್ದಿಗಾರರೊಬ್ಬರು ತಿಳಿಸುತ್ತಾರೆ ೧೮೨೦೦ ಯೋಧರುಳ್ಳ ನಾಜಿ ಪಡೆಯೊಂದು ನಾರ್ವೆಯಿಂದ ರಷ್ಯಕ್ಕೆ ತೆರಳಲು ಡೆನ್ಮಾರ್ಕಿಗೆ ಬಂದಿದೆಯೆಂದು ಸ್ಟಾಕ್‌ಹೋಂ ವಾರ್ತೆ ತಿಳಿಸುತ್ತದೆ

ರಷ್ಯನರು ಬಹುಶೀಘ್ರವಾಗಿ ಕ್ರಿಮಿಯಾವನ್ನು ಆವರಿಸುತ್ತಿದ್ದಾರೆ ಕ್ರಿಮಿಯಾಬಳಿ ಇರುವ ಕಟ್ಟಕಡೆಯ ಮುಖ್ಯಸ್ಥಾನವಾದ ಜೆನಿಚೆಸ್ಕ ನಗರದಮೇಲೆ ರಷ್ಯನರು ಬಿಪ್ಪು ಹಿಡಿದರು ಮೆಲಿಟೊಪೋಲ್‌ನಿಂದ ಕ್ರಿಮಿಯಾಕ್ಕೆ ಹೋಗುವ ರೈಲ್ವೆ ಮಾರ್ಗಕ್ಕೆ ಇದು ಬೀಗದಕೈಯಂತಿದೆ ಕ್ರಿಮಿಯದ ಪಶ್ಚಿಮ ದ್ವಾರವಾದ ಪೆರೆಕೋಪ್‌ಬಳಿ ಬಲಯುತ ಜರ್ಮನ್ ಸೇನೆ ನೆರೆದಿದೆ ರಷ್ಯದಲ್ಲಿ ಜರ್ಮನರ ಕಷ್ಟಗಳನ್ನು ಜರ್ಮನ್ ವಾರ್ತಾ ಸಂಸ್ಥೆಯು ವಿವರಿಸುತ್ತ ಐದು ತಿಂಗಳಿಂದ ಜರ್ಮನ್ ಯೋಧರ ಪ್ರಾಕಾರವು ರಷ್ಯನರ ಪ್ರಚಂಡ ಪ್ರಹಾರವನ್ನು ಎದುರಿಸುತ್ತಿದೆ ಜರ್ಮನರ ಕಷ್ಟವು ವರ್ಣಿಸಲಸಾಧ್ಯವಾದುದು ದಕ್ಷಿಣರಂಗದಲ್ಲಿ ೧೩೦೦೦ ಟಾಂಕುಗಳು ನಾಶವಾದುವೆಂದರೆ ಎಂತಹ ಘೋರಕದನ ನಡೆದಿರಬಹುದೆಂಬುದನ್ನು ಊಹಿಸಬಹುದು ಎಂದು ತಿಳಿಸಿದೆ

ವೈಸರಾಯರು ರಾಜಕೀಯ ಪರಿಸ್ಥಿತಿ ವಿಮರ್ಶಿಸುವರೇ ?

ವೈಸ್‌ರಾಯ್ ವೇವಲ್ಲರು ಭಾರತದಲ್ಲೆಲ್ಲ ಸಂಚರಿಸಿ ಆಹಾರಪರಿಸ್ಥಿತಿಯನ್ನು ಕೂಲಂಕಷವಾಗಿ ವಿಮರ್ಶಿಸುವರೆಂದು ತಿಳಿದು ಬಂದಿದೆ ಕ್ಷಾಮವನ್ನು ಬೇಗನೆ ನಿವಾರಿಸಬೇಕೆಂಬ ಆಕಾಂಕ್ಷೆಯು ವೈಸರಾಯರಿಗೆ ಇರುತ್ತದೆ ಅದಕ್ಕೋಸ್ಕರ ಗವರ್ನರುಗಳನ್ನೆಲ್ಲ ಆಹ್ವಾನಿಸಿರುವರೆಂದೂ, ಈ ಸಂದರ್ಭದಲ್ಲಿ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸುವರೆಂದೂ ಹೇಳಲಾಗಿದ ಮುಂದಿನ ಕೆಲವು ತಿಂಗಳುಗಳಲ್ಲಿ ಏನೇನಾಗಬಹುದೆಂದು ಹೇಳಲು ಸಾಧ್ಯವಿಲ್ಲವಾಗಿದೆ

ಭಾರತ-ಚೀಣಾ ರಸ್ತೆ

ಭಾರತ ಮುಖಾಂತರ ಚೀಣಾಕ್ಕೆ ಸರಬರಾಜು ಹೋಗಲು ಅಸ್ಸಾಮಿನಿಂದ ಬರ್ಮಾರಸ್ತೆಗೆ ಸಂಧಿಸುವ ಹೊಸ ರಸ್ತೆಯನ್ನು ರಕ್ಷಿಸಲು ಚೀಣಾ ಯೋಧರು ಕೆಲವು ದೂರ ಮುನ್ನುಗ್ಗಿ ೫೦ ಮಂದಿ ಜಪಾನ್ ಸೇನೆಯೊಂದಿಗೆ ಕಾದಾಡಿ ಒಬ್ಬ ಅಧಿಕಾರಿಯನ್ನು ಸಂಹರಿಸಿ ೨೦ ಯೋಧರಿಗೆ ಗಾಯವುಂಟುಮಾಡಿದರೆಂದು ಅಧಿಕಾರಿ ಪ್ರಕಟಣೆ ತಿಳಿಸಿದೆ

ಬಂಗಾಳ ಕ್ಷಾಮಕ್ಕೆ ಯಾರು ಹೊಣೆ ?

ಕಲ್ಕತ್ತ ಪೌರಸಭೆಯಲ್ಲಿ ಈ ಕೆಳಕಂಡ ನಿರ್ಣಯವು ಅಂಗೀಕೃತವಾಯಿತು 'ಬಂಗಾಳದ ಹಸುಗೂಸುಗಳು ನಾರೀಮಣಿಯರು ಪುರುಷರು ಒಂದು ತುತ್ತು ಅನ್ನಕ್ಕಾಗಿ ಅಲೆದು, ಭಾರತ ಪುತ್ರರ ಅಸಾಧಾರಣ ಪ್ರಯತ್ನಗಳೆಲ್ಲಾ ವಿಫಲವಾಗಿ ಸಾವಿರಾರು ಮಂದಿ ಸ್ವರ್ಗವಾಸಿಗಳಾದ ಬಗ್ಗೆ ಈ ಸಭೆಯು ಅನುತಾಪ, ಅವಮಾನ, ಸಂಕಟಗಳನ್ನು ವ್ಯಕ್ತಪಡಿಸುತ್ತದೆ" 'ಬ್ರಿಟಿಷ್ ಸಾರ್ವಭೌಮರ ವಿಚಾರದಲ್ಲಿ ರಾಜಭಕ್ತಿ ಸೂಚಿಸಿರುವ ಈ ಸಭೆಯು ಸಾರ್ವಭೌಮರು ಕೂಡಲೆ ಒಂದು 'ರಾಯಲ್ ಕಮಿಷನ್' ಏರ್ಪಡಿಸಿ ಈ ದುರಂತಕ್ಕೆ ಕಾರಣರಾರೆಂಬುದನ್ನು ವಿಮರ್ಶಿಸಬೇಕೆಂದು ಮನವಿ ಮಾಡುತ್ತದೆ" "ಪರಲೋಕವಾಸಿಗಳಾದವರ ಗೌರವಾರ್ಥವಾಗಿ ಪೌರಸಭೆಯು ಏನೊಂದು ಕಾರ್ಯಕ್ರಮವನ್ನೂ ನಡೆಸದೆ ಸಭೆಯನ್ನು ಮುಂದೆ ಹಾಕಲಾಯಿತು.'

ಬಂಗಾಳದ ದುರಂತ

ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ನೆಹ್ರು ಸಹೋದರಿಯರಾದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಈ ಕೆಳಗೆ ಕಂಡ ಹೇಳಿಕೆಯಿತ್ತಿದ್ದಾರೆ

" ಬಂಗಾಳದ ದುರಂತವು ಎಲ್ಲೆ ಮೀರಿ ವರ್ಣಿಸಲು ಕೂಡ ಅಸಾಧ್ಯವಾಗಿದೆ ಇದನ್ನು ನಂಬಲು ಯಾರಾದರೂ ಈಗ ಬಂಗಾಳಕ್ಕೆ ತಾವೇ ಹೋಗಿ ನೋಡಬೇಕು ಪುರುಷರೂ, ಸ್ತ್ರೀಯರೂ, ಮಕ್ಕಳೂ ಬೆಂದು ಒಳಲಿ ಜೀವಾತ್ಮವು ಕೊನೆಯ ಹಂತವನ್ನು ಮುಟ್ಟುವಂತಿದೆಯೋ ಎನ್ನುವಂತಿರುವುದು ಜನರು ಹಳ್ಳಿಹಳ್ಳಿಗಳಲ್ಲಿ ಅಸಂಖ್ಯಾತ ಸಂಖ್ಯೆಯಲ್ಲಿ ಬಂದು ತಂಗುತ್ತಿರುವರು ಪರಿಹಾರ ನಿಲಯಗಳ ಮುಂದೆ ನಿಂತು ಯಾರಾದರೂ ಈ ಬಡಪಾಯಿಗಳಾದ ನಾರೀ ರತ್ನಗಳು ಅರೆಬತ್ತಲೆಯಿಂದ, ಅಸ್ಥಿಪಂಜರವೊಂದು ಮಾತ್ರ ಉಳಿದಿರುವ ಹಸುಗೂಸುಗಳನ್ನು ಕೈಯಲ್ಲಿ ಇರುಕಿಕೊಂಡು ಮುಖಗಳು ಬಾಡಿ ಹೋಗಿರುವುದನ್ನು ನೋಡಿದರೆ ಎಂತಹವರ ಹೃದಯವೂ ತಲ್ಲಣಗೊಳ್ಳುತ್ತದೆ, ಎಳೆಯ ಮಕ್ಕಳು ಮೂಳೆಗಳನ್ನು ಬಿಟ್ಟುಕೊಂಡು, ರಕ್ತಮಾಂಸಗಳಿಲ್ಲದೆ ಬಣಗಿಹೋಗಿರುವ ಒಂದೇ ಒಂದು ಎಲುಬಿನ ಕಾಲುಗಳ ಆಧಾರದ ಮೇಲೆ ನಿಂತಿರುವುದು ಮಾನವಕೋಟಿಗೇ ಧಿಕ್ಕಾರವಾಗಿರುವುದು , ಎಲ್ಲಾ ವಯಸ್ಸಿನ ಪುರುಷರು ದೇಹದಲ್ಲಿ ಏನೂ ಪ್ರಾಣವಿಲ್ಲದೆ ಬೀದಿಬೀದಿ ತಿರುಗುತ್ತಿರುತ್ತಾರೆ ಗಂಟೆಗಟ್ಟಳೆ ಈ ಅನ್ನಛತ್ರಗಳ ಮುಂದ ಒಂದು ಹಿಡಿಕೂಳಿಗಾಗಿ ಜನರು ಗೋಳಿಡುತ್ತಿರುತ್ತಾರೆ ಹೆಂಗಸರ ಮೈಮೇಲೆ ಬಟ್ಟೆಗಳಿಲ್ಲದೆ ಅವರು ನಾಚಿಕೆಗೊಂಡು ಈ ಛತ್ರಗಳಿಗೆ ಬರಲುಕೂಡ ಸಾಧ್ಯವಿಲ್ಲವಾಗಿದೆ ಬಟ್ಟೆಯ ಅಭಾವವು ವೈಪರೀತ್ಯಕ್ಕೆ ಹೆಚ್ಚಿಕೊಂಡು ಆಹಾರಕ್ಷಾಮದಷ್ಟೇ ಭೀಕರವಾಗಿರುತ್ತದೆ."

ಜಹಗೀರುದಾರರೂ ದವಸವನ್ನು ಒಪ್ಪಿಸಬೇಕು

ಕಾಶ್ಮೀರ್ ಸಂಸ್ಥಾನದಲ್ಲಿರುವ ಜಹಗೀರುದಾರರೆಲ್ಲಾ ಇತರ ಪ್ರಜೆಗಳಂತೆ ತಮ್ಮ ದವಸವನ್ನು ಸರ್ಕಾರಕ್ಕೆ ಒಪ್ಪಿಸಬೇಕೆಂದು ಅವರಿಗೂ ಇತರರಂತೆ ರೇಷನಿಂಗ್ ಪದ್ಧತಿ ಮೇಲೆ ಪಡಿಯೀಯಲಾಗುವುದೆಂದು ಆಜ್ಞೆಯಾಗಿದೆ

ಸ್ವೀಕಾರ

ಬಳ್ಳಾರಿ ಡಿ| ಹರಪನಹಳ್ಳಿ ತಾ|| ಮಾನ್ಯರ ಮಸಲ್ವಾಡ ಗ್ರಾಮದ ಸುರಗಿಮಠದ ವೇ| ಬಸಯ್ಯನವರ ಪುತ್ರಿ ಚಿ| ಸೌ|| ಚೆನ್ನವೀರಮ್ಮ ಉರುಫ್ ದಾಕ್ಷಾಯಣೀದೇವಿಯನ್ನು ಕೌಡೂರು ಗ್ರಾಮದ ನುಗ್ಗಿಹಳ್ಳಿಪುರ ವರ್ಗ ಮಠದ ವೇ|| ಸಿದ್ಧಯ್ಯನವರ ಪುತ್ರ ಚಿ|| ಶಿವಯೋಗಯ್ಯನಿಗೆ ಕೊಟ್ಟು ತಾ|| ೬-೧೦-೪೩ ರಲ್ಲಿ ನಡೆದ ನಿಶ್ಚಯಪ್ರಸ್ತ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ 2 ರೂಪಾಯಿ ಮತ್ತು ಹೂವಿನಹಡಗಲಿ ಗ್ರಾಮದ ಶ್ರೀಮಂತ ಅಗಡಿ ಕುರುಗೋಡಪ್ಪನವರು ಅದೇಊರಲ್ಲಿರುವ ತಮ್ಮ ಸ್ವಂತ ಗೃಹದಲ್ಲಿ ತಾ|| ೨೩-೧೦-೪೩ ರಲ್ಲಿ ಶಿವಾಧೀನರಾದ ಸಮಯದಲ್ಲಿ ಸಮರ್ಪಿಸಲ್ಪಟ್ಟ 2 ರೂಪಾಯಿ ಒಟ್ಟು 4 ರೂಪಾಯಿಗಳು ಶ್ರೀಮಾನ್ ಗುಗ್ರಿ ಮುಚ್ಚಪ್ಪನವರ ದ್ವಾರಾ ತಲಪಿರುತ್ತವೆ.

ಕುಂಸಿ ಸಬ್ ತಾಲ್ಲೂಕು ಚಾವೇನಹಳ್ಳಿಗ್ರಾಮದ ಗುರುದೇವರ ಮಠದ ವೇ|| ಆರಾಧ್ಯ ಸಿದ್ದಪ್ಪಯ್ಯನವರು ಶಿವೈಕ್ಯರಾದ ಸಂಬಂಧವಾಗಿ ನಡೆದ ಗಣಾರಾಧನಾ ಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ಗುಬ್ಬಿ ಶಿವಕಥಾಪಂಡಿತ ಶಿವರುದ್ರಶಾಸ್ತ್ರಿಗಳ ದ್ವಾರಾ ತಲಪಿರುತ್ತದೆ

ಈ ಮೇಲ್ಕಂಡ ಮಹಾಶಯರಿಗೆ ಶ್ರೀ ಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

ಪಂಡಿತರ ಪ್ರವಾಸ

ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು ಆರೋಗ್ಯಲಾಭಕ್ಕಾಗಿ ಈವರೆಗೆ ಮದ್ರಾಸಿನಲ್ಲಿದ್ದು ಅಲ್ಲಿಂದ ಈಗ ಸೊಲ್ಲಾಪುರಕ್ಕೆ ಪ್ರಯಾಣ ಮಾಡಿರುವರು ಅಲ್ಲಿ ಒಂದೆರಡು ತಿಂಗಳು ಇರುವ ಸಂಭವವಿದೆ.

(೧ನೆಯ ಪುಟದಿಂದ ಮುಂದುವರಿದುದು.)

ಹುಟ್ಟುವುದು ಇಷ್ಟಾದರೆ ನೀನು ನಾಣಿಗೆ ಕೊಟ್ಟ ಶಕ್ತಿಯಂತೆ ಕಾರ್ಯಕ್ಕೆ ಉಪಯೋಗವಾಗುವೆ. ಶ್ರೀನಿಜಗುಣಶಿವಯೋಗಿಗಳು :—

"ಏಳಿವಿಡಿತಿಯುನಾಳಿವ ಹೀನವಿಷಯುವ ನೋಲಿವೆ | ಶಾಶ್ವತಸುಖವೆ ನಿನಗವರೊಳೇನುಂಟು ? " ಎಂಬೂ "ಈತೆರದಿಂದಖಿಳದ ನಿರಸವನು ತಿಳಿದು | ಭೀತಿಕದವರಳಿಯೂಸಿಗಳನುವಿಂಗೆ ಪಳಿದು || ಬ್ಯಲಿವಿಂಗಿಲು ಶಂಭುಲಿಂಗದ ನಿಜವಾಗುಳಿದು | ನೀತಿಗಳೆಚುಡಾನಾವದೊಳಿರು ಮೋಹವಳಿದು ||" ಎಂದು 'ಕೈವಲ್ಯಪದ್ಧತಿ' ಯಲ್ಲಿ ಹಾಡಿರುವರು

ಹೇ ಮನವೇ! ಮುಖ್ಯವಾಗಿ ವಿಷಯಾದಿಗಳಲ್ಲಿ ಏನೂ ಹುರುಳಿಲ್ಲ. ಕದಾಚಿತ್ ನೀನು ಇಚ್ಛಿಸಿದ ವಿಷಯವು ದೊರೆತು ನಿನ್ನ ಇಚ್ಛೆಯು ಪೂರೈಸಿ ನಿನಗೆ ಸುಖವು ತೋರಿದರೂ ಅದು ಸುಖವಲ್ಲ! ಇಚ್ಛೆಯ ಪ್ರಕಾರ ಮಾತ್ರವೆಂದು ತಿಳಿ! ಆದಪ್ರಯುಕ್ತ ಈ ಬಳಲಿಕೆಯನ್ನು ಬಿಟ್ಟು ಪರಶಿವನ ಧ್ಯಾನದಲ್ಲಿ ಮಗ್ನವಾಗುವೆಯಾದರೆ "ಕೀಟಭ್ರಮರನ್ಯಾಯ" ದಂತೆ ಪರಶಿವನ ಪಾದಾರವಿಂದದಲ್ಲಿ ಸೇರಿ ನಿತ್ಯಸುಖಿಯಾಗುವೆ !

ಗಣಸಂತರ್ಪಣೆ

ಕುಂಸಿ ಸಬ್ ತಾಲ್ಲೂಕು ಶಾಮೇನಹಳ್ಳಿ ಗ್ರಾಮದಲ್ಲಿರುವ ಗುರುದೇವರ ಮಠದ ವೇ|| ಆರಾಧ್ಯಸಿದ್ಧಪ್ಪಯ್ಯನವರು ಕಳೆದ ಆಶ್ವಯುಜ ಶುದ್ಧ|| ೧ ಗುರುವಾರ ರಾತ್ರಿ ಶಿವೈಕ್ಯರಾದರು. ತತ್ಸಂಬಂಧವಾಗಿ ತಾ|| ೨೭-೧೦-೧೯೪೩ನೆಯ ಬುಧವಾರ ಪ್ರಾತಃಕಾಲ ಶ್ರೀರುದ್ರಾಭಿಷೇಕ ಅಷ್ಟವಿಧಾರ್ಚನೆ ಷೋಡಶ ಪೂಜೆಯೂ ಮಧ್ಯಾಹ್ನ ಗುರುಪಾದಪೂಜಾ ತೀರ್ಥಪ್ರಸಾದ ಸೇವನೆಯೂ ಮಹಾಗಣಾರಾಧನೆಯೂ ನಡೆದುವು. ಸಾಯಂಕಾಲ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರ ಶಾಸ್ತ್ರಿಗಳವರಿಂದ "ಮೃತ್ಯುಪರೀಕ್ಷೆ" ಎಂಬ ನವರಸಭರಿತವಾದ ಶಿವಸಂಕೀರ್ತನೆಯು ನೆರವೇರಿತು. ಈ ಸಮಾರಂಭದಲ್ಲಿ ಪ್ರಭಾಪೋಷಣಕ್ಕೆ ೧ ರೂ. ಸಮರ್ಪಿಸಲ್ಪಟ್ಟಿತು. ಪರಹಿತಚಿಂತಕರೂ ಪ್ರಶಾಂತಹೃದಯರೂ ಪರಮಾರ್ಥಜ್ಞಾನಭರಿತರೂ ಸ್ವಧರ್ಮನಿಷ್ಠರೂ ಆದ ಸಿದ್ಧಪ್ಪಯ್ಯನವರ ಮರಣವಾದರೂ ಆಶ್ಚರ್ಯಕರವಾದದ್ದು. ವೃದ್ಧರಾಗಿದ್ದರೂ ಕಾಯಪುಷ್ಟಿಯುಳ್ಳವರಾಗಿದ್ದ ಇವರಿಗೆ ಎರಡೇ ಎರಡು ದಿವಸ ಹೃದಯ ಪಾರ್ಶ್ವವೇಧೆಯುಂಟಾಗಿ "ಶರಣರ ಮರಣದಲಿ ಪರಿಕಿಸಬೇಕೆಂಬ" ಆರ್ಯೋಕ್ತಿಯಂತೆ ಕಂದದೆ ಕುಂದದೆ ಜ್ಞಾನಪಲ್ಲಟವಾಗದೆ ಔಷಧಿ ಪ್ರಯೋಗವನ್ನೂ ಹೊಂದದೆ ಶಿವಸ್ಮರಣಪೂರ್ವಕ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿದರು. ಇವರ ಪುತ್ರಿ ಪುತ್ರ ಮಿತ್ರ ಬಾಂಧವ ಶಿಷ್ಯಸಮೂಹಕ್ಕೆಲ್ಲ ವಿಯೋಗದುಃಖೋಪಶಮನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ದಯಾಮಯನಾದ ಸದಾಶಿವಮೂರ್ತಿಯನ್ನು ಪ್ರಾರ್ಥಿಸುವ,

ಗುರುಚರಣಸೇವಕ

ಹೊಸ ಗಾದೆಗಳು

ಲೇ — ಪಿ. ಶ್ರೀಕಂಠಯ್ಯ, ಮೈಸೂರು

ಕೆಂಡಕ್ಕೆ ನೊಣ ಮುತ್ತೀತೆ?
ಕುಂಬಾರ ಕಂಚುಗಾರನ ವೈರಿ
ಗಂಟುಸೌದೆಯದು ತುಂಟ ಕೆಂಡ
ತಾನೆಂದುದೇ ಚಂದ ಮಂದಮತಿಗೆ
ದೊಡ್ಡಬಳ್ಳಾಪುರದ್ದು ಚಿಕ್ಕಬಳ್ಳವೇ?
ದುಷ್ಟತನಕ್ಕೆ ಎಷ್ಟೋ ನೆವಗಳು.
ಕತ್ತರಿ ಹುಟ್ಟಿದ್ದು ಕೆಟ್ಟನಾಲಗೆಗಾಗಿ
ವಿವಾದದ ವಿತ್ತಕ್ಕೆ ಹತ್ತಾರು ವೆಚ್ಚ
ಕಳ್ಳನನ್ನು ಬಿಟ್ಟು ಮುಳ್ಳುಬೇಲಿಯನ್ನು ತಬ್ಬುವುದೇ?
ಬಿಲಕ್ಕೆ ಒಂಟಿ ಬಾಯಿಯಾದರೆ ಇಲಿಗೆ ತಂಟೆ
ಕತ್ತೆಯ ಗತ್ತು ಕತ್ತೆಗೇ ಗೊತ್ತು.
ಅನ್ನಹಾಕದವ ಕುನ್ನಿ ಸಾಕಲೇಕೆ?
ಗಳಿಸಿದ ಪಿತನಿಗೆ ಉಳಿಸದ ಸುತರು
ಒಕ್ಕಲಿಗನನ್ನು ಒಕ್ಕಲಿಕ್ಕುವನು ವಕೀಲ.
ಗುರು ಹಿತನಿದ್ದರೆ ಬೋಧೆಯೂ ಹಿತಕರ.

ಸಟಿ ಮುದ್ದು, ದಿಟ ಕೆಸ.
ನಿನಗೆ ಸೇರದುದನ್ನು ಪರನಿಗೆ ಕೋರದಿರು.
ವಿವೇಕಿ ಕಾಣದ್ದನ್ನು ಅವಿವೇಕಿ ಬಲ್ಲನಂತೆ!
ಮೊಳೆ ಮುರಿಯೆ ಮೆಟ್ಟಿದ್ದ ಲಾಳ ಅಳಗುಟ್ಟುವುದು
ರಸನೆ ರಸವ ತಿಳಿವುದು, ವಿವೇಕ ರಸನೆಯ ಹಳಿವುದು.

ದೇಶಮೆಚ್ಚಿಸುವಗೆ ಗಾಸಿ ಹೆಚ್ಚು
ಕದ್ದ ಒಡವೆಯು ಕೊಳ್ಳದಲ್ಲಿ ಕಳ್ಳರಿಲ್ಲ
ಎಲ್ಲರ ರೊಕ್ಕಕ್ಕೂ ಕಳ್ಳನಿಗೆ ಹಕ್ಕಂತೆ!
ಊರಿನ ಕೆಲಸಕ್ಕೆ ಎಲ್ಲರಿಗೂ ಆಲಸಿಕೆ.
ತುಂಬಿದ ಕೆಳೆಗಿಂತ ಒಂಟಿಬಾಳು ಲೇಸು

ನೀಚನಿಗೆ ಸತಿ ಮುತ್ತು, ಪೆತ್ತವಳು ತೊತ್ತು!
ಸತಿಗೆ ಬೆರೆತವನು ಮಾತಾಪಿತರ ಮರೆಯುವನು.
ಕೆಟ್ಟನೆಟ್ಟಸಸಿ ಹಸನಲ್ಲ; ಸತ್ತುಹುಟ್ಟಿದವ ಪುಟವಿಲ್ಲ.
ಕುಟುಂಬವೆಂಬ ಹಾಲು ತಂಬಿಗೆಗೆ ರಂಭೆ ನಿಂಬೇಹುಳಿ!
ಅತ್ತೆ ಸೈ ಎಂದ ಸೊಸೆಯನ್ನು ಜಗತ್ತೇ ಜೈ ಎನ್ನುವುದು.

ಬಂಗಾಳಕ್ಕೆ ಚೀಣಾರ ಸಹಾಯ

ಚೀಣಾರು ಕಲ್ಕತ್ತಾ ಕ್ಷಾಮವಾರ್ತೆ ಕೇಳಿ ಕಣ್ಣೀರಿಟ್ಟದ್ದಾರೆ ಕೂಡಲೆ ೧೨,೦೦,೦೦೦ ಡಾಲರುಗಳ ನಿಧಿಯನ್ನು ಕಲ್ಕತ್ತಕ್ಕೆ ಕಳುಹಿಸಬೇಕೆಂದು ಶ್ರೀಮತಿ ಚಾಂಗ್ ಕೈ ಷೇಕರ ಅಧ್ಯಕ್ಷತೆಯಲ್ಲಿ ನಡೆದ ಸಭೆಯೊಂದರಲ್ಲಿ ತೀರ್ಮಾನಿಸಲಾಯಿತು. ಅಲ್ಲದೆ ಭಾರತ ಕ್ಷಾಮ ಪರಿಹಾರ ಸಮಿತಿಯನ್ನು ಚೀಣಾದಲ್ಲಿ ಸ್ಥಾಪಿಸಲಾಯಿತು

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ. ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಸಂಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨| ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳುಳ್ಳ)	೧|| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾ[illegible])	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ.
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As.**
Speeches by Pandit Shri Kashinatha Shastriji (*English*)	**12 As.**
लिंगधारणचंद्रिका (संस्कृत)	१ रु.
वीरशैवरत्न (मराठी)	१ रु.
महानारायणोपनिषत् (वीरशैवभाष्य–संस्कृत)	१ रु.
सिद्धांतशिखामणि (मूल)	६ आ.
पुष्पमन्त्रकम् (वीरशैवप्राचीनसांप्रदायोपेतम्)	४ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್—**ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಷೇತ್ರವಿಸಾರಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಕಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ. ೧೨ ಆಣೆ. ವಿ ಪಿ ಖರ್ಚು ಸೇರಿ ೪ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೧೫ನೇ ನವಂಬರ್ ೧೯೪೩ [ಸಂಚಿಕೆ ೨೮

ಕರ್ಮ

ಲೇ॥ ಪಂಡಿತಾರ್ಜುನಾರಾಧ್ಯ ರಾಣೇಬೆನ್ನೂರು ಮಠಪತಿ
ಮಾವೇಸೂರು

ಕರ್ಮವೆಂದರೆ ಮಾಡಲ್ಪಡತಕ್ಕದ್ದು. ಮನುಷ್ಯನು ಮನಸ್ಸಿನಿಂದಲೂ ವಾಕ್ ಮೊದಲಾದ ಇಂದ್ರಿಯಗಳಿಂದಲೂ ಶರೀರದಿಂದಲೂ ಮಾಡುವುದೆಲ್ಲವೂ ಕರ್ಮವೆನ್ನಲ್ಪಡುವುದು ಅಂತಹ ಕರ್ಮಗಳೆಲ್ಲವೂ ತದನುಗುಣವಾದ ಫಲಗಳನ್ನು ಕೊಡುತ್ತಿರುವುವು. ಆದುದರಿಂದ ಮಾಡುವ ಕಾರ್ಯವೂ ಅದರ ಫಲವೂ ಸಹ ಕರ್ಮವೆಂದೇ ಕರೆಯಲ್ಪಡುವುವು. ನಿಜವಾಗಿಯೂ ವಿಚಾರ ಮಾಡಿದರೆ ಮಾಡುವ ಕಾರ್ಯವೂ ಅದರ ಫಲವೂ ಒಂದೇ ಎಂದು ಭಾವಿಸಲ್ಪಡಬೇಕು.

ಭೂಮಿಯಲ್ಲಿ ಬೀಜವನ್ನು ಬಿತ್ತಿದರೆ ಅದರಿಂದ ವೃಕ್ಷವು ಹುಟ್ಟಿ ಸಕಾಲದಲ್ಲಿ ಪುಷ್ಪಗಳೂ ಫಲಗಳೂ ಉಂಟಾಗಿ ಆ ಫಲಗಳಿಂದ ಪುನಃ ಬೀಜಗಳು ಉತ್ಪತ್ತಿಯಾಗಿ ಅವುಗಳಲ್ಲಿ ಒಂದೊಂದು ಬೀಜವೂ ಪುನಃ ವೃಕ್ಷಗಳಿಗೂ ಫಲಗಳಿಗೂ ಹೇತುವಾಗುತ್ತದೆ. ಯಾವ ವಿಧವಾದ ಬೀಜವನ್ನು ಬಿತ್ತಿದರೆ ಆ ವಿಧವಾದ ವೃಕ್ಷಗಳೂ ಫಲಗಳೂ ಉತ್ಪತ್ತಿಯಾಗುವುವು ಬೇವಿನ ಬೀಜವನ್ನು ಬಿತ್ತಿ ಮಾವಿನ ಹಣ್ಣು ಬೇಕೆಂದರೆ ಸಿಕ್ಕುವುದೇ? ಕರ್ಮವೆಂದರೆ ಇಂತಹುದೇ. ಆದ ಪ್ರಯುಕ್ತ ಮನುಷ್ಯನು ಎಂತೆಂತಹ ಫಲಗಳನ್ನು ಕೋರುವನೋ ಅಂತಹ ಫಲಗಳನ್ನು ಕೊಡತಕ್ಕ ಕರ್ಮಗಳನ್ನೇ ಮಾಡಬೇಕು. ಮಾಡುವ ಕರ್ಮಗಳು ಫಲಗಳನ್ನು ಕೊಡಲಾಗಿ ಆ ಫಲಗಳು ಹೊಸ ಕರ್ಮಗಳಿಗೆ ಕಾರಣಗಳಾಗುತ್ತಿರುವುವು. ಈ ರೀತಿಯಲ್ಲಿ ಕರ್ಮಗಳೂ ಫಲಗಳೂ ಪುನಃ ಕರ್ಮಗಳೂ ಫಲಗಳೂ ಪರಸ್ಪರ ಸಂಬಂಧವನ್ನು ಹೊಂದಿರುವುವು. ಈ ಸಂಬಂಧವು ಕಾರ್ಯಕಾರಣ ರೂಪವಾದುದು. ಕಾರಣವಿಲ್ಲದೆಯೇ ಕಾರ್ಯವು ಉಂಟಾಗಲಾರದು.

ಈ ವಿಷಯವಲ್ಲಿ:—

“ ಅಕಾರಣಂ ಕಥಂ ಕಾರ್ಯಂ ಸಂಸಾರೇಽತ್ರ ಭವಿಷ್ಯತಿ ”
(ದೇವೀಭಾಗವತ)

“ ನಹಿ ಕಾರಣಂ ವಿನಾ ಕಾರ್ಯಸ್ಯೋತ್ಪತ್ತಿಃ ”

ಎಂಬುದಾಗಿ ಪ್ರಾಚೀನ ಸೂಕ್ತಿಯೂ ಇದೆ.

ಮನುಷ್ಯನು ಅನುಭವಿಸುವ ಸುಖದುಃಖಗಳೆಲ್ಲಕ್ಕೂ ಹೇತುವಾಗಿ ಕಾರಣಗಳಿದ್ದೇ ಇರಬೇಕಷ್ಟೆ? ಕಾರಣವಾದ ಪೂರ್ವ ಕರ್ಮಗಳನ್ನು ತಿಳಿಯದೇ ಈಗಿನ ಸುಖದುಃಖಾನುಭವಗಳು ವಿಧಿಕೃತಗಳೆಂದೂ ದೈವಿಕಗಳೆಂದೂ, ತಾವು ಅಸ್ವತಂತ್ರರೆಂದೂ, ಮನುಷ್ಯರು ವಿಧಿಯನ್ನು ದೂರುವರು. ಹಾಗೆ ದೂರುವುದು ಅಜ್ಞಾನವಲ್ಲದೆ ಮತ್ತೆ ಬೇರೆ ಅಲ್ಲ. ಪ್ರಪಂಚವೆಲ್ಲವೂ ಕಾರಣವಿಲ್ಲದೆ ಕಾರ್ಯವು ಸಂಭವಿಸುವುದಿಲ್ಲವೆಂಬ ನ್ಯಾಯಕ್ಕೆ ಒಳಪಟ್ಟೇ ಇದೆ. ಆದುದರಿಂದ ಕಾರಣಗಳನ್ನು ಉಂಟುಮಾಡಿದ ಮೇಲೆ ಅವುಗಳ ಫಲಗಳನ್ನು ಅನುಭವಿಸದಿದ್ದರೆ ತೀರದಿದ್ದರೂ ಕಾರಣಗಳನ್ನು ಉಂಟುಮಾಡುವುದರಲ್ಲಿ ಮನುಷ್ಯರು ಸ್ವತಂತ್ರರು. ಈ ವಿಷಯದಲ್ಲಿ ಮನುಷ್ಯರಿಗಿರುವ ಸ್ವತಂತ್ರತ್ವ ಪರತಂತ್ರತ್ವಗಳನ್ನು ಕುರಿತು ಒಂದು ಸಾಮ್ಯವನ್ನು ಕೊಡೋಣ:—ಪ್ರಪಂಚವೆಲ್ಲವೂ ಭಗವದಾಜ್ಞೆಗೆ ಒಳಪಟ್ಟಿರುವುದೆಂಬುದಕ್ಕೆ ಸಂದೇಹವೇ ಇಲ್ಲ. ಬೆಂಕಿಯನ್ನು ಮುಟ್ಟಿದರೆ ಕೈ ಸುಡುವುದೆಂಬುದು ಭಗವಂತನ ಕಟ್ಟಳೆಯೇ ಆದಾಗ್ಗೂ ಯಾರಾದರೂ ಬೆಂಕಿಯನ್ನು ಮುಟ್ಟಲೇಬೇಕೆಂಬುದು ಸ್ವಲ್ಪವಾದರೂ ನಿರ್ಬಂಧವಿಲ್ಲ. ಬೆಂಕಿಯನ್ನು ಮುಟ್ಟುವುದಕ್ಕಾಗಲಿ ಮುಟ್ಟದೆ ಇರುವುದಕ್ಕಾಗಲಿ ಮನುಷ್ಯನು ಸ್ವತಂತ್ರನಾಗಿದ್ದಾಗ್ಗೂ ಅದನ್ನು ಮುಟ್ಟಿದ ಮೇಲೆ ಅದರ ಫಲವನ್ನು ಅನುಭವಿಸಿದಲ್ಲದೆ ತೀರದು ಹಾಗೆಯೇ ಶ್ರುತಿ ಸ್ಮೃತಿಗಳಲ್ಲಿ ಕೆಲವು ಕಾರ್ಯಗಳು ಮಾಡಬಹುದಾದವುಗಳೆಂದೂ, ಕೆಲವು ಮಾಡಬಾರದವುಗಳೆಂದೂ ಹೇಳಲ್ಪಟ್ಟವೆಯಷ್ಟೆ? ಶ್ರುತಿ ಸ್ಮೃತಿಗಳು ಭಗವದಾಜ್ಞೆಯನ್ನು ಸೂಚಿಸುತ್ತಿವೆಯಲ್ಲವೆ?

“ ಶ್ರುತಿ ಸ್ಮೃತಿರ್ಮಮೈವಾಜ್ಞಾ, ಯಸ್ತಾಮುಲ್ಲಂಘ್ಯ ವರ್ತತೇ ”
“ ಆಜ್ಞಾಚ್ಛೇದೀ ಮನುಷ್ಯೇಷ್ವಸ್ಸಮೇ ವಧ್ಯ ತಮೋ ಮತಃ ”
(ಮಹಾಭಾರತ)

ಇದರಲ್ಲಿ ನಿಷೇಧಿಸಲ್ಪಟ್ಟಿರುವ ಕಾರ್ಯಗಳನ್ನು ಮಾಡಿದರೆ ದುಃಖ ಹೇತುವಾಗುವುದರಿಂದ ಅವುಗಳನ್ನು ಮಾಡಕೂಡದೆಂದೂ ಸುಖವನ್ನುಂಟುಮಾಡತಕ್ಕ ಕಾರ್ಯಗಳೆಲ್ಲವೂ ಮಾಡಲ್ಪಡುತಕ್ಕವುಗಳು ಎಂಬುದಾಗಿಯೂ ವಿಧಿಸಲ್ಪಟ್ಟಿದೆ. ತಿಳುವಳಿಕೆಯಿಲ್ಲದ ಕೂಸಿಗೆ ಬೆಂಕಿಯನ್ನು ಮುಟ್ಟಕೂಡದೆಂದು ತಂದೆಯು ಹೇಳಿರುತ್ತಾನೆ. ಅಂತಹ ಅಪ್ಪಣೆಯನ್ನು ಮೀರುವುದರಿಂದ ಮಗುವು ಬಾಧೆಪಡತಕ್ಕದ್ದು ತಾನು ಮಾಡಿದ ಕಾರ್ಯಕ್ಕೆ ತಕ್ಕ ಫಲವೇ ಹೊರತು ತಂದೆಯ ಕೋಪದಿಂದುಂಟಾದ ಬಾಧೆಯಲ್ಲವಷ್ಟೆ? ಅದೇ ರೀತಿಯಲ್ಲಿಯೇ ಶ್ರುತಿ ಸ್ಮೃತಿ ನಿಷಿದ್ಧಗಳಾದ ಕಾರ್ಯಗಳನ್ನು ಅಜ್ಞಾನದಿಂದ ಮಾಡಿದರೂ ಬೆಂಕಿಯನ್ನು ಮುಟ್ಟಿದ ಮಗುವಿನಂತೆ ತದನುಗುಣವಾದ ಫಲವನ್ನು ಅನುಭವಿಸಲೇಬೇಕಲ್ಲದೆ ಬೇರೆಯಲ್ಲ. ಮನುಷ್ಯರು ಈ ನ್ಯಾಯವನ್ನು ತಿಳಿದುಕೊಳ್ಳುವವರೆಗೂ ಕರ್ತವ್ಯಾಕರ್ತವ್ಯಗಳನ್ನು ತಿಳಿಯದೆ ಕಷ್ಟಕ್ಕೆ ಒಳಗಾಗುವರು. ಈ ನ್ಯಾಯವನ್ನು ತಿಳಿದುಕೊಂಡಮೇಲೆ ಕೋರಿದ ಫಲಗಳನ್ನು ಕೊಡತಕ್ಕ ಕರ್ಮಗಳನ್ನು ಮಾತ್ರ ಮಾಡುತ್ತ ಅನಿಷ್ಟವಾದ ಫಲಗಳನ್ನು ಕೊಡತಕ್ಕ ಕರ್ಮಗಳನ್ನು ಬಿಟ್ಟುಬಿಡುವರು. ಜಗತ್ತಿನಲ್ಲಿ ಜನರೆಲ್ಲರೂ ಸದಾ ಸುಖವನ್ನೇ ಅಪೇಕ್ಷಿಸುವರಾದುದರಿಂದ ಎಂತಹ ಕಾರ್ಯಗಳು ಕೊನೆಗೆ ಸುಖವನ್ನುಂಟುಮಾಡುವುದರಿಂದ ಮಾಡಲ್ಪಡತಕ್ಕವೋ ಎಂತಹ ಕಾರ್ಯಗಳು ಬಿಡತಕ್ಕವೋ ತಿಳಿಯಬೇಕಾದುದು ಅವಶ್ಯಕವು ಆದುದರಿಂದ ಕರ್ಮಸ್ವರೂಪವನ್ನು ಕುರಿತು ವಿಚಾರಮಾಡಬೇಕಾಗಿದೆ.

ಎಂತಹ ಕರ್ಮವನ್ನಾದರೂ ಮಾಡುವುದರಲ್ಲಿ ಮೂರವಸ್ಥೆಗಳಿವೆ ಪ್ರಥಮತಃ ವಿಷಯೇಚ್ಛೆಯುಂಟಾಗುತ್ತಲೇ ಅದನ್ನು ಈಡೇರಿಸಿಕೊಳ್ಳುವ ವಿಧವನ್ನು ಮನಸ್ಸಿನಲ್ಲಿ ಸಂಕಲ್ಪಿಸಿ ಅನಂತರ ಕರ್ಮವನ್ನು ಬಾಹ್ಯವಾಗಿ ಮಾಡುವನು.

ಆದುದರಿಂದಲೇ ಬೃಹದಾರಣ್ಯಕ ಶ್ರುತಿಯಲ್ಲಿ:—

“ ಕಾಮಮಯ ಏವಾಯಂ ಪುರುಷ ಇತಿ ಸ ಯಥಾಕಾಮೋ ಭವತಿ ತತ್ಕ್ರತುರ್ಭವತಿ ಯತ್ಕ್ರತುರ್ಭವತಿ ತತ್ಕರ್ಮ ಕುರುತೇ ತದಭಿಸಂಪದ್ಯತೇ ”

ಎಂದರೆ, ಈ ಪುರುಷನು ಕಾಮಸ್ವರೂಪನು. ಕಾಮಾನುಗುಣವಾಗಿ ಸಂಕಲ್ಪಿಸತಕ್ಕವನು. ಸಂಕಲ್ಪಾನುಸಾರವಾಗಿ ಕರ್ಮವನ್ನು ಮಾಡತಕ್ಕವನು ಕರ್ಮಾನುಸಾರವಾಗಿ ಫಲವನ್ನು ಹೊಂದುತ್ತಾನೆ.—ಎಂದು ಹೇಳಿರುವುದು.

ಪುರುಷನು ಯಾವ ಯಾವ ಕಾಮಗಳಿಗೆ ಒಳಪಟ್ಟಿರುವನೋ ಆಯಾ ವಿಷಯಗಳಿಗೂ ಕಾಮವುಳ್ಳ ಜೀವನಿಗೂ ದೃಢವಾದ ಅನುಬಂಧವುಂಟಾಗುತ್ತದೆ. ಆ ವಿಷಯಗಳನ್ನು ಕರ್ಮಫಲರೂಪವಾಗಿ ಅನುಭವಿಸುವುದಕ್ಕೇ ವಿಧಿಯಾಗಿ ಅವು ಇರುವ ಸ್ಥಳಕ್ಕೆ ವಿಧಿವಶಾತ್ ಎಳೆಯಲ್ಪಡುತ್ತಾನೆ. ಹೀಗೆ ಕಾಮವು ಬಂಧವಾಗುತ್ತದೆ.

ಮನಸ್ಸು ಕಲ್ಪನಾಶಕ್ತಿಯುಳ್ಳದ್ದು. ಮತ್ತು ಮನಸ್ಸು ಯಾವ ವಿಷಯವಲ್ಲಿ ಮಗ್ನವಾಗುತ್ತಿರುವುದೋ ಆ ವಿಷಯವನ್ನು ಕುರಿತು ಕರ್ಮಾನುಸಾರವಾಗಿ ಜೀವನು ಹೋಗುತ್ತಾನೆ. ಫಲಾಪೇಕ್ಷೆಯಿಂದ ಜೀವನು ಎಂತೆಂತಹ ಕಾರ್ಯಗಳನ್ನು ಮಾಡುವನೋ ಅಂತಂತಹ ಶುಭಾಶುಭ ಕರ್ಮ ಫಲಗಳನ್ನೇ ಮುಂದಿನ ಜನ್ಮದಲ್ಲಿ ಅನುಭವಿಸುವನು.

ಜೀವನು ಯಾವಾಗಲೂ ಹೊಸದಾಗಿ ಕರ್ಮವನ್ನು ಮಾಡುತ್ತಲೂ ಪೂರ್ವ ಕರ್ಮ ಫಲವನ್ನು ಅನುಭವಿಸುತ್ತಲೂ ಇರುವನು. ಪೂರ್ವದ ರಾಗದ್ವೇಷವಾಸನೆಗಳೊಡನೆಯೇ ಹುಟ್ಟದಿದ್ದರೆ ತೀರದು. ಪೂರ್ವಸಂಕಲ್ಪದಿಂದ ಉಂಟಾದ ಸ್ವಭಾವಕ್ಕೆ ಒಳಪಟ್ಟೇ ವರ್ತಿಸುತ್ತಿರುವನು. ಪೂರ್ವದ ಕಾರ್ಯಗಳಿಂದುಂಟಾದ ಋಣಾನುಬಂಧರೂಪವಾದ ಅನುಕೂಲ ಪ್ರತಿಕೂಲಗಳ ನಿರ್ಬಂಧಗಳಿಗೆ ಒಳಗಾಗದಿದ್ದರೆ ತೀರದು. ಹೀಗೆಲ್ಲಾ ಇದ್ದರೂ ಜೀವಾತ್ಮನು ಈಶ್ವರನನಿಂದ ಇಚ್ಛಾ ಜ್ಞಾನ ಕ್ರಿಯಾ ಶಕ್ತಿಗಳಿಂದ ಪ್ರತಿಬಿಂಬಿತನಾಗಿ ಸ್ವತಂತ್ರವಾಗಿರತಕ್ಕವನು. ಪೂರ್ವದಲ್ಲಿ ಯಾವ ರೀತಿ ಇಚ್ಛಿಸಿದನೋ, ಸಂಕಲ್ಪಿಸಿದನೋ, ಬಾಹ್ಯಕಾರ್ಯಗಳಲ್ಲಿ ಪ್ರವರ್ತಿಸಿದನೋ ಅದೇ ರೀತಿಯಲ್ಲಿಯೇ ಯಾವ ವಿಧವಾಗಿಯಾದರೂ ಇಚ್ಛಿಸುವುದಕ್ಕೂ ಕರ್ಮಗಳನ್ನು ಮಾಡುವುದಕ್ಕೂ ಸ್ವತಂತ್ರನಾಗಿರುವನು. ಪೂರ್ವದ ಕರ್ಮಬಂಧಗಳಿಗೆ ವಶನಾಗಿ ವರ್ತಿಸುತ್ತಿದ್ದಾಗ್ಗೂ ತನ್ನ ಸ್ವಾತಂತ್ರ್ಯವನ್ನು ಸ್ವಲ್ಪ ಮಟ್ಟಿಗೆ ಉಪಯೋಗಿಸುವುದರಿಂದ ಆ ಪೂರ್ವದ ಬಂಧಗಳನ್ನು ಕ್ರಮ ಕ್ರಮವಾಗಿ ಬಿಡಿಸಿಕೊಳ್ಳುವುದಕ್ಕೆ ಶಕ್ತಿಯುಳ್ಳವನಾಗಿರುವನು. ಪೂರ್ವ ಕರ್ಮಾನುಸಾರವಾದ

(೩ನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ನವಂಬರ್ ೧೫ನೇ ಸೋಮವಾರ

ಕಲಿಪ್ರಾಬಲ್ಯ

ಪ್ರತ್ಯಹಂ ಪ್ರತ್ಯವೇಕ್ಷೇತ ನರಶ್ಚರಿತಮಾತ್ಮನಃ |
ಕಿಂನು ಮೇ ಪಶುಭಿಸ್ತುಲ್ಯಂ ಕಿಂನು ಸತ್ಪುರುಷೈರಿತಿ |

'ಆಹಾರ, ನಿದ್ರಾ, ಮೈಥುನಗಳಲ್ಲಿ ಮಾತ್ರ ಆಸಕ್ತವಾಗಿರುವ ಪಶುಗಳಂತೆ ಆಚರಿಸಿರುವೆನೋ ಅಥವಾ ಧರ್ಮಾಧರ್ಮವಿವೇಕಶಕ್ತಿಯು [illegible] ಸತ್ಪುರುಷನ ಧರ್ಮವನ್ನೇನಾದರೂ ಆಚರಿಸಿರುವೆನೋ' ಎಂದು ಪ್ರತಿಯೊಬ್ಬನೂ ಪ್ರತಿದಿವಸವೂ ತನ್ನ ನಡತೆಯನ್ನು ವಿಚಾರ ಮಾಡಿಕೊಳ್ಳುತ್ತಿರಬೇಕ [illegible] ಯೋಕ್ತಿಯನ್ನು ಪರಿಶೀಲಿಸಿದರೆ ಈಶ್ವರನ [illegible] ದತ್ತ ವಿವೇಕಶಕ್ತಿಯುಳ್ಳ ಮನುಷ್ಯನು [illegible] ಶಾಸ್ತ್ರದಲ್ಲಿ ವಿಧಿಸಿರುವ ವಿಧಿನಿಷೇಧಕರ್ಮಗಳನ್ನು ತಿಳಿದು ನಿಷಿದ್ಧಗಳಾದ ಕರ್ಮಗಳಲ್ಲಿ ಮನಸ್ಸಿಗೊಡದೆ ವಿಹಿತಗಳಾದ ಕರ್ಮಗಳನ್ನಾಚರಿಸಿ ಪರಮೇಶ್ವರನ ಅನುಗ್ರಹವನ್ನು ಸಂಪಾದಿಸುವುದೇ ಆಸ್ತಿಕ ಜನಗಳ ಕರ್ತವ್ಯವಾಗಿರುತ್ತದೆಂದು ಸ್ಪಷ್ಟವಾಗುವುದು ಜನ್ಮಜನ್ಮಾಂತರಗಳಿಂದ ಜೀವಾತ್ಮನು ಈ ಘೋರವಾದ ಭವಸಮುದ್ರದಲ್ಲಿ ಬಿದ್ದು ಆಶಾಪಾಶಾದಿಗಳೆಂಬ ತರಂಗಗಳ ಹೊಡೆತದಿಂದ ಅನೇಕ ದುಃಖಗಳಿಗೀಡಾಗಿರುತ್ತಾನೆ ಈ ಸಮುದ್ರದಿಂದ ಈಚೆಗೆ ಬರುವವರೆಗೂ ತರಂಗಗಳ ಹೊಡೆತವು ತಪ್ಪುವಂತಿಲ್ಲ ಇಂತಹ ಭಯಂಕರವಾದ ಭವಸಮುದ್ರವನ್ನು ದಾಂಟುವುದಕ್ಕಾಗಿಯೇ ಜೀವಾತ್ಮನು ಪುಣ್ಯವೆಂಬ ಧನವನ್ನು ಕೊಟ್ಟು ಪರಮಕೃಪಾಳುವಾದ ಈಶ್ವರನಿಂದ ಈ ಶರೀರವೆಂಬ ಹಡಗನ್ನು ಪಡೆದಿರುತ್ತಾನೆ ಈ ಶರೀರವೆಂಬ ಹಡಗು ಎಲ್ಲಿವರೆಗೆ ಭದ್ರವಾಗಿರುತ್ತದೆಯೋ ಅಷ್ಟರಲ್ಲಿಯೇ ಇದರ ಸಹಾಯದಿಂದ ಜನನಮರಣರೂಪವಾದ ಸಮುದ್ರವನ್ನು ದಾಂಟಬೇಕು ಹಾಗೆ ದಾಂಟದಿದ್ದರೆ ಪುಣ್ಯದಿಂದ ಪಡೆದಿರುವ ಈ ಶರೀರವೇ ವ್ಯರ್ಥವಾಗುವುದು ಪ್ರತಿಯೊಂದು ಆತ್ಮರು ಇಂಥ ಶರೀರವೆಂಬ ಹಡಗಿನಲ್ಲಿ ಕುಳಿತುಕೊಂಡು ಭವಸಮುದ್ರವನ್ನು ದಾಂಟಲು ಪ್ರಯಾಣಬೆಳೆಯಿಸಿದ್ದಾರೆ ಇದಕ್ಕೆ ಬುದ್ಧಿ, ಜ್ಞಾನ, ಇಂದ್ರಿಯಗಳು ಸಹಾಯಕಗಳಾಗಿರುತ್ತವೆ ಈ ಮಧ್ಯದಲ್ಲಿ ವಿಷಯೇಚ್ಛೆಗಳೆಂಬ ದೊಡ್ಡ ದೊಡ್ಡ ತರಂಗಗಳು ಎದ್ದು ಈ ಹಡಗನ್ನು ಮುಂದಕ್ಕೆ ಬಿಡದೆ ಅಲ್ಲಿಯೇ ಮುಳುಗಿಸಯತ್ನಿಸುತ್ತವೆ ಈ ವಿಷಮ ಸಮಸ್ಯೆಯನ್ನು ನೋಡಿ ಆತ್ಮನು ಎಲ್ಲಿ ಈ ಹಡಗಿನ ಸಂಗಡ ಮುಳುಗಿಹೋಗುತ್ತೇನೆಯೋ ಎಂಬ ಭಯದಿಂದ ತಗಲಿರುವ ಅಧರ್ಮವೆಂಬ ಕುಮಾರ್ಗದಲ್ಲಿ ಕಾಲಿಡದೆ ಯಾವುದೊಂದೂ ಕಷ್ಟಬಾಧೆಗಳಿಲ್ಲದ ಧರ್ಮಮಾರ್ಗದಲ್ಲಿಯೇ ಈ ಹಡಗನ್ನು ನಡೆಸಬೇಕಾಗಿದ್ದರೂ ಇದನ್ನು ಮರೆತು ಐಹಿಕಸೌಖ್ಯವೊಂದೇ ಮಾನವಜನ್ಮದ ಫಲವೆಂದು ಭ್ರಮಿಸಿ ಈಗಿನಕಾಲದಲ್ಲಿ ಅನೇಕರು ಧರ್ಮಮಾರ್ಗವನ್ನು ಬಿಟ್ಟು ಸ್ವೇಚ್ಛಾವಿಹಾರಿಗಳಾಗುತ್ತ ಈಶ್ವರನ ಸಂಕಲ್ಪಕ್ಕೆ ವಿರೋಧವಾಗಿ ನಡೆಯುತ್ತಿರುವುದು ವಿಷಾದಜನಕವಾಗಿದೆ

ಇದರಿಂದ ಐಹಿಕಸುಖವು ಮನುಷ್ಯನಿಗೆ ಬೇಡವೆಂದು ಯಾರೂ ಭಾವಿಸಲಾಗದು. ಆದರೆ ಮಾನವನಿಗೆ ಐಹಿಕ ಸೌಖ್ಯವೊಂದೇ ಮುಖ್ಯಪುರುಷಾರ್ಥವಲ್ಲ ಭವಸಾಗರವನ್ನು ದಾಂಟುವುದೇ ಮುಖ್ಯಪುರುಷಾರ್ಥವು ಲೋಕದಲ್ಲಿ ಒಬ್ಬನು ಕಾಶೀಕ್ಷೇತ್ರಕ್ಕೆ ಪ್ರಯಾಣ ಬೆಳೆಸಿದ್ದರೂ ದಾರಿಯಲ್ಲಿ ಪ್ರಯತ್ನವಿಲ್ಲದೆ ಅನೇಕ ಪಟ್ಟಣಗಳನ್ನೂ, ಅನೇಕ ವಸ್ತುಗಳನ್ನೂ ನೋಡುತ್ತ ಹೇಗೆ ಸೌಖ್ಯವನ್ನು ಹೊಂದುವನೋ ಹಾಗೆ ಆತ್ಮನು ನಿತ್ಯಸುಖಸ್ಥಾನವಾದ ಪರಮಾತ್ಮನನ್ನು ಸೇರುವುದಕ್ಕೆ ಪ್ರಯಾಣಮಾಡಿ ಮಧ್ಯದಲ್ಲಿ ಐಹಿಕಸೌಖ್ಯವನ್ನು ಪಡೆಯಬೇಕಾಗಿದೆಯಲ್ಲದೆ ಮುಕ್ತಿಯೆಂಬ ಮುಖ್ಯಧ್ಯೇಯವನ್ನೇ ಮರೆತು ಕ್ಷಣಭಂಗುರವಾದ ಇಂದ್ರಿಯ ದೇಹಸೌಖ್ಯದಲ್ಲಿಯೇ ಮಗ್ನನಾದವನು ಕಾಶಿಯಲ್ಲಿ ಗಂಗಾಸ್ನಾನಮಾಡಿ ವಿಶ್ವನಾಥದರ್ಶನಮಾಡುತ್ತೇನೆಂದು ಪ್ರಯಾಣಮಾಡಿ ದಾರಿಯಲ್ಲಿ ದೊಡ್ಡ ದೊಡ್ಡ ಪಟ್ಟಣಗಳ ವೈಭವವನ್ನು ನೋಡುತ್ತ ವಿಷಯಲೋಲನಾಗಿ ಮುಂದಿನ ದಾರಿಯನ್ನೇ ಮರೆತು ಕೈಯಲ್ಲಿದ್ದ ಹಣವನ್ನೆಲ್ಲಾ ಹಾಳುಮಾಡಿಕೊಳ್ಳುವ ಪಾಮರನಿಗೆ ಸಮಾನನಾಗುವನು ದೇಹೇಂದ್ರಿಯಗಳಿಂದುಂಟಾದ ಸೌಖ್ಯವು ಕ್ಷಣಿಕಸುಖವಲ್ಲದೆ ನಿತ್ಯಸುಖವಲ್ಲ ಕಣ್ಣು ಇರುವವರೆಗೂ ನಾಟಕ, ಸಿನೀಮಾ ಮುಂತಾದ ದೃಶ್ಯಗಳನ್ನು ಕಾಣಬಹುದು ಕಿವಿಗಳಿದ್ದರೆ ಸಂಗೀತ ವಾದ್ಯಾದಿಗಳನ್ನು ಕೇಳಬಹುದು ದೇಹಕ್ಕೆ ಮುಪ್ಪಿಲ್ಲದಿದ್ದರೆ ವೈಷಯಿಕ ಸುಖಾನುಭವಮಾಡಬಹುದು ಇಂಥ ಐಹಿಕಸುಖಸಾಧನಗಳಾದ ಇಂದ್ರಿಯ ದೇಹಾದಿಸಾಮಗ್ರಿಗಳೆಲ್ಲವೂ ಅನಿತ್ಯಗಳಾದುವಲ್ಲದೆ ಇವುಗಳಿಂದಾಗುವ ಸೌಖ್ಯವೂ ಸಹ ಕ್ಷಣಿಕವೇ ಆಗಿರುತ್ತದೆ ವಿವೇಕಿಯಾದ ಮಾನವನು ಇವನ್ನೇ ನಂಬಿ ಮುಂದಿನ ಯೋಚನೆಯಿಲ್ಲದ ಕೇವಲ ವಿಷಯಾತುರನಾಗಿರುವುದಿಲ್ಲ ನಮ್ಮ ಭಾರತೀಯರು ಇಂಥ ತುಚ್ಛವಾದ ಐಹಿಕಸೌಖ್ಯದಲ್ಲಿಯೇ ಕಾಲವನ್ನು ಕಳೆಯದೆ ಪರಮಾತ್ಮನಲ್ಲಿ ಬೆರೆತು ನಿತ್ಯಾನಂದವನ್ನು ಹೊಂದುವ ಸ್ವಭಾವವುಳ್ಳವರಾಗಿದ್ದರೂ ಈಗಿನ ನವನವೋನ್ಮೇಷಶಾಲಿಯಾದ ಅನ್ಯದೇಶೀಯ ಸಂಸ್ಕೃತಿಯೆಂಬ ಆಪಾತರಮಣೀಯವಾದ ಮಹಾಮಾಯೆಯಿಂದ ಹಿಡಿಯಲ್ಪಟ್ಟವರಾಗಿ ಪರಮಾತ್ಮಾನಂದವೆಂಬ ಅಮೃತಫಲವನ್ನು ಬಿಡುತ್ತಿರುವ ಧರ್ಮವೃಕ್ಷದ ಶಾಖೆಗಳನ್ನೆಲ್ಲ ನಾಸ್ತಿಕತೆಯೆಂಬ ಕೊಡಲಿಯಿಂದ ಕಡಿದುಹಾಕಿ ವಿಷಯಪಂಕದಲ್ಲಿ ಸಿಕ್ಕಿ ಒದ್ದಾಡುತ್ತಿರುವ ರಕ್ತಮಾಂಸಮಯವಾದ ದೇಹೇಂದ್ರಿಯಗಳಿಗೆ ವಶನಾದ ಜೀವಾತ್ಮನನ್ನು ಕೇವಲ ಹೇಳವನಂತೆ ಕುಳ್ಳಿರಿಸಬೇಕಾಗುವುದು ಇದರಿಂದ ಆತ್ಮನಿಗೆ ಆಗಬೇಕಾದ ಉನ್ನತಿಯನ್ನೇ ಹಾಳುಮಾಡಿಕೊಂಡಂತಾಗುವುದಲ್ಲದ ಇನ್ನಾವ ಫಲವನ್ನೂ ಹೊಂದಿದಂತಾಗಲಿಲ್ಲ ಹೀಗೆ ಬಾಹ್ಯಸೌಖ್ಯಾಭಿಲಾಷೆಯ ಸೆಳವಿಗೆ ಬಿದ್ದ ಆತ್ಮನಿಗೆ ಉತ್ತರೋತ್ತರ ಸಂಭವಿಸಬಹುದಾದ ಅಹಿಂಸಾ ಸತ್ಯ ಅಕ್ರೋಧ ಶಾಂತಿ ದಯಾ ಮಾರ್ದವ ಕ್ಷಮಾ ಧೃತಿ ಮುಂತಾದ ಮುಕ್ತಿರಾಜ್ಯವನ್ನು ಹೊಂದಿಸುವ ದೈವೀಸಂಪತ್ತುಗಳು ಹೇಳಹೆಸರಿಲ್ಲದಂತಾಗಿ ಆ ಸ್ಥಾನದಲ್ಲಿ ಡಂಭ, ದರ್ಪ, ಅತಿಮಾನಿತೆ, ಕ್ರೋಧ, ಕಾಠಿನ್ಯ, ಅಜ್ಞಾನ ಮುಂತಾದ ನರಕಹೇತುಗಳಾದ ಆಸುರೀ ಸಂಪತ್ತುಗಳು ಕಾಲಿಟ್ಟು ಪರಮಾತ್ಮನ ಅಭಿಮುಖವಾಗಿದ್ದ ಜೀವರನ್ನು ಕಾಡಿಗೆಳೆದು ಅರಿಷಡ್ವರ್ಗವೆಂಬ ಕಳ್ಳರ ಬಾಧೆಗೆ ಸಿಕ್ಕು ಆತ್ಮನು ಕುಳಿತಿರುವ ದೇಹವೆಂಬ ರಥವು ವಿಷಯಗಳೆಂಬ ಕುಮಾರ್ಗಪ್ರವೇಶದಿಂದ ಮುರಿದುಹೋಗಿ ಬುದ್ಧಿಯೆಂಬ ಸಾರಥಿಯು ಮೂಲೆ ಪಾಲಾಗಿ ಮನಸ್ಸೆಂಬ ಲಗಾಮು ಕಿತ್ತುಹೋಗಿ ಆ ಶರೀರವೆಂಬ ಗಾಡಿಯನ್ನು ಎಳೆಯುತ್ತಿರುವ ಇಂದ್ರಿಯಗಳೆಂಬ ಕುದುರೆಗಳು ದುರ್ವ್ಯಾಪಾರವೆಂಬ ಹಳ್ಳಕೊಳ್ಳದಲ್ಲಿ ಬಿದ್ದು ಆತ್ಮನು ನಗೆಗೀಡಾಗುವನು ಇಂತಹ ದುಃಸ್ಥಿತಿಯನ್ನು ಹೊಂದುವ ಮಾನವಪ್ರಾಣಿಯು ದ್ವಿಪಾದಪಶುವೆಂದು ಭಾವಿಸಲ್ಪಡಬೇಕಾಗುವುದು

ಧರ್ಮವಿರೋಧಿಯಾದ ಕಲಿಪುರುಷನು ಹೀಗೆ ಸನಾತನಿಗಳನ್ನು ತನ್ನ ಪರಮಪವಿತ್ರವಾದ ಆತ್ಮೀಯರಾಜ್ಯದಲ್ಲಿ ಜಿಹಾಸೆಯುಳ್ಳವರನ್ನಾಗಿ ಮಾಡಿ ಹುಣ್ಣಿಗೆರಗಿದ ಹುಳುಗಳಂತೆ ವೈಷಯಿಕಸೌಖ್ಯಕ್ಕೆರಗುವಂತೆ ಮಾಡಿ ಮಾಯಾರಾಜ್ಯದಲ್ಲಿ ತಾಂಡವವನ್ನು ಮಾಡಿಸುತ್ತಿರುವನು ಇದರಿಂದ ಸನಾತನ ಧರ್ಮಾಧಾರದಲ್ಲಿ ನಿಂತಿರುವ ಭಾರತಮಾತೆಗೆ ಮೈತುಂಬಾ ಅಧರ್ಮಗಳೆಂಬ ಮುಳ್ಳುಗಳು ಚುಚ್ಚಿ ಯಾವಾಗಲೂ ಪರಿತಪಿಸುವ ಸಮಯವು ಬಂದೊದಗಿದೆ

ನಿರ್ವೀರ್ಯಾ ಪೃಥಿವೀ ನಿರೋಷಧಿರಸಾ ನೀಚಾ ಮಹತ್ತ್ವಂ ಗತಾಃ |
ಭೂಪಾಲಾಃ ನಿಜಕರ್ಮಧರ್ಮರಹಿತಾಃ ವಿಪ್ರಾಃ ಕುಮಾರ್ಗೇ ರತಾಃ |
ಭಾರ್ಯಾ ಭರ್ತೃವಿರೋಧಿನೀ ಪರರತಾ ಪುತ್ರಾಃ ಪಿತೃದ್ವೇಷಿಣಃ |
ಹಾ ಕಷ್ಟಂ ಖಲುವರ್ತತೇ ಕಲಿಯುಗೇ ಧನ್ಯಾ ನರಾ ಯೇ ಮೃತಾಃ ||

ಎಂದರೆ ಪಾಪಮಯವಾದೀ ಕಲಿಯುಗದ ಪ್ರಾಬಲ್ಯದಿಂದ ಭೂದೇವಿಯು ಸತ್ತ್ವಶೂನ್ಯಳಾದಳು. ಗಿಡ ಮರ ಬಳ್ಳಿಗಳು ಒಣಗಲಾರಂಭಿಸಿದುವು ನೀಚರು ದೊಡ್ಡ ದೊಡ್ಡ ಸ್ಥಾನವನ್ನೇರಿದರು ದುಷ್ಟಶಿಕ್ಷಕರಾದ ಮಹಾರಾಜರು ಧರ್ಮದಿಂದ ವಿಮುಖರಾದರು ವೇದಶಾಸ್ತ್ರ ಪಾಠಕರಾದ ಬ್ರಾಹ್ಮಣರು ದುಷ್ಟಮಾರ್ಗವನ್ನು ಹಿಡಿದರು ಹೆಂಡತಿಯು ಪರಪುರುಷಾಸಕ್ತಳಾಗಿ ಗಂಡನನ್ನು ದ್ವೇಷಿಸುವಳು ಮಕ್ಕಳು ಕಲಿಕಾಲದ ವಿದ್ಯೆಯನ್ನು ಕಲಿತು ತಂದೆಗಳನ್ನು ಹಿಂಸಿಸುವರು ಹಾಯ್! ಹಾಯ್!! ಬಹಳ ಕಷ್ಟಪರಂಪರೆಯೊದಗಿದಂತಾಯಿತು ಆದುದರಿಂದ ಇಂಥ ವಿಷಮಕಾಲವನ್ನು ನೋಡುತ್ತ ಬದುಕಿರುವದಕ್ಕಿಂತಲೂ ಮರಣಹೊಂದುವುದೇ ಲೇಸೆಂದು ಒಬ್ಬ ಕವಿಯು ಈ ಕಲಿಯುಗದ ಪ್ರಾಬಲ್ಯವನ್ನು ವರ್ಣಿಸಿರುವನು ಆದರೆ—

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ |
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಂ ||

ಧರ್ಮಕ್ಕೆ ಎಂದು ಹ್ರಾಸವುಂಟಾಗುವುದೋ ಅಂದು ಈಶ್ವರನೇ ಒಂದೊಂದು ರೂಪದಿಂದ ಅವತರಿಸಿ ಭಾರತಮಾತೆಯ ಕೋಮಲವಾದ ಅಂಗದಲ್ಲಿ ಚುಚ್ಚಿಕೊಂಡಿರುವ ಅಧರ್ಮವೆಂಬ ಮುಳ್ಳುಗಳನ್ನು ಕಿತ್ತೊಗೆದು ಎಂದಿನಂತೆ ಭಾರತಾಂಬೆಯನ್ನು ಸಂತೋಷಪಡಿಸುತ್ತಾನೆಂಬ ಗೀತೋಕ್ತಿಯಂತೆ ಅನಿತರಸಾಧಾರಣ ಶಕ್ತಿಯುಳ್ಳ ದೈವೀಪುರುಷನು ಭಾರತಮಾತೆಯ ಗರ್ಭಾಂಬುಧಿಯಲ್ಲಿ ಹುಟ್ಟುವವರೆಗೂ ದೈವಭಕ್ತರು ಎಲೆಮರೆಯ ಕಾಯಿಯಂತೆ ಸಹಿಸಿಕೊಂಡಿರಬೇಕಾಗಿದೆ

ಯುದ್ಧವಾರ್ತೆ.

ಫ್ರಾನ್ಸ್ ದಂಡಯಾತ್ರೆ

ಇನ್ನು ಅಲ್ಪ ಕಾಲದಲ್ಲಿಯೇ ಮಿತ್ರ ಸೇನೆಗಳು ಫ್ರಾನ್ಸಿಗೆ ಒಂದಿಳಿಯುವುವೆಂದು ಕಾಣಬರುತ್ತದೆ ಇಂಗ್ಲೆಂಡಿನ ದಕ್ಷಿಣ ತೀರದಾಚೆ ಬ್ರಿಟಿಷ್ ಹಡಗುಗಳ ಚಟುವಟಿಕೆ ಅಸಾಧ್ಯವಾಗಿತ್ತೆಂಬುದಾಗಿ 'ಪ್ಯಾರಿಸ್ ಸೋಯಿರ್' ಪತ್ರಿಕೆಯೂ ತಿಳಿಸಿದೆ "ಕಳೆದ ಹಲವು ದಿನಗಳಿಂದ ಬ್ರಿಟಿಷ್ ನೌಕಾ ಪಡೆಯ ಹಡಗುಗಳು ಇಂಗ್ಲಿಷ್ ಕಡಲ್ಗಾಲುವೆಯ ಬಂದರುಗಳಲ್ಲಿ ಬಂದು ನೆರೆಯುತ್ತಿವೆ ಅನೇಕ ವ್ಯಾಪಾರ ಹಡಗುಗಳು ದಕ್ಷಿಣ ಇಂಗ್ಲೆಂಡಿಗೆ ಆಗಮಿಸಿವೆ. ಸಂಗ್ರಾಮದ ಇತಿಹಾಸದಲ್ಲಿ ಹೊಸ ಪ್ರಕರಣವು ಇನ್ನೇನು ಆರಂಭವಾಗುವಂತಿದೆ. ಯಾವ ಕ್ಷಣದಲ್ಲಿ ಬೇಕಾದರೂ ಮಿತ್ರ ಸೇನೆಗಳು ಫ್ರಾನ್ಸಿಗೆ ಮುತ್ತಿಗೆ ಹಾಕಬಹುದು"—ಎಂದು ಹೇಳಲಾಗಿದೆ

ಎಂಟನೆಯ ಸೇನೆಯ ಮುಂದೋಟ

ಇಟಲಿಯ ಏಡ್ರಿಯಾಟಿಕ್ ತೀರದಲ್ಲಿ ಎಂಟನೆಯ ಸೇನೆಯು ಸಾಂಗ್ರೊ ನದೀಮುಖದಲ್ಲಿರುವ ಬಂದರುಗಳ ಮೇಲೆ ಷೆಲ್ ಹಾರಿಸುತ್ತಿದೆ ಇಷ್ಟು ಅಗಲವಾದ ನದಿಯನ್ನು ಜ॥ ಮಾಂಟ್ಗೊಮೆರಿಯವರ ಸೇನೆ ಇದುವರೆಗೆ ಎದುರಿಸಿರಲಿಲ್ಲ ಅವರ ಮುಂದೋಟಕ್ಕೆ ಒಂದು ದೊಡ್ಡ ಅಡಚಣೆ ಆಗಿದೆ ಇಟಲಿ ಕೂಲಿಗಾರರಿಂದ ಬಲವಂತವಾಗಿ ಕೆಲಸ ಮಾಡಿಸಿಕೊಂಡು ನದಿಯ ಉತ್ತರ ದಡವನ್ನು ಜರ್ಮನರು ಬಲಪಡಿಸಿದ್ದಾರೆ ಅಲ್ಲಿಂದ ಕೆಲವು ಮೈಲಿಗಳಷ್ಟು ದೂರ ಒಳಕ್ಕಿರುವ ಹಲವು ನಗರಗಳನ್ನು ಮಿತ್ರಯೋಧರು ಹಿಡಿದಿದ್ದಾರೆ.

ಇಟಲಿಯಲ್ಲಿ ಕದನ

ಎಂಟನೆಯ ಸೇನೆಯು ಸಾಂಗ್ರೋ ನದಿಯ ಉದ್ದಕ್ಕೂ ಆರು ಮೈಲಿ ಕ್ಷೇತ್ರವನ್ನು ತನ್ನ ವಶಪಡಿಸಿಕೊಂಡಿದೆ. ಚಳಿಗಾಲದಲ್ಲಿ ಜ॥ ರಾಮೆಲ್ಲರು ನಿಂತು ಹೋರಾಡಲು ಏರ್ಪಡಿಸಿದ್ದ ವ್ಯೂಹವಿದು ಟ್ರಿಗ್ನೋ ನದಿಯ ಉತ್ತರದಲ್ಲಿರುವ ಕೆಲವು ಮುಖ್ಯ ನಗರಗಳನ್ನು ಮಿತ್ರಯೋಧರು ಹಿಡಿದಿದ್ದಾರೆ ಜರ್ಮನರು ಏರ್ಪಡಿಸಿರುವ ಚಳಿಗಾಲದ ವ್ಯೂಹವನ್ನು ಭೇದಿಸಲೋಸುಗ ಮಹಾ ಕದನ ನಡೆಸಲು ಜ॥ ಅಲೆಗ್ಝಾಂಡರ್‌ರವರ ಸೇನೆ ಮುನ್ನುಗ್ಗುತ್ತಿದೆ. ಸಾಂಗ್ರೋ ಮತ್ತು ಗಾರಿಗ್ಲಿಯಾನೋ ನದಿಯೂ ಮತ್ತು ಅಪೆನ್ನೈನ್ಸ್ ಪರ್ವತವೂ ಈ ವ್ಯೂಹಕ್ಕೆ ಆಧಾರವಾಗಿದೆ. ಬಲಭಾಗದಲ್ಲಿ ಸಾಂಗ್ರೋ ನದಿಯ ಬಳಿ ಎಂಟನೆಯ ಸೇನೆಯಾಗಲೇ ಅತಿ ಮುಖ್ಯ ಸ್ಥಾನಗಳನ್ನು ಹಿಡಿದಿದೆ. ಇಟಲಿಯಲ್ಲಿ ಇದುವರೆಗೆ ಸಾಂಗ್ರೋ ನದಿಯಂತಹ ಪ್ರಾಕೃತಿಕ ಅಡಚಣೆಯನ್ನು ಮಿತ್ರ ಸೇನೆಗಳು ಎದುರಿಸಿರಲಿಲ್ಲ.

ಕ್ಯಾಸಲ್ ಬೋರ್ಡಿನೋದಿಂದ ಹೊರಟ ಮಿತ್ರಯೋಧರು ನದಿಯಿಂದ ಒಂದೂವರೆ ಮೈಲಿ ದೂರದಲ್ಲಿರುವ ಬೋರಿನೋ ನಗರವನ್ನು ಹೊಕ್ಕಿದ್ದಾರೆ. ಎಂಟನೆಯ ಸೈನಿಕರು ಏಡ್ರಿಯಾಟಿಕ್ ತೀರದಿಂದ ಇಪ್ಪತ್ತು ಮೈಲಿ ಒಳಕ್ಕಿರುವ ಟೊರೆಬ್ರೂನಾ ನಗರವನ್ನು ಸಹ ಹಿಡಿದರು ಐದನೆಯ ಸೇನೆಯು ರಂಗದಲ್ಲಿ ವೆನಾಫ್ರೋ ಉತ್ತರದಲ್ಲಿ ಉಗ್ರವಾದ ಹೋರಾಟವು ನಡೆಯುತ್ತಿದೆ. ರೋಮಿಗೆ ಹೋಗುವ ಮುಖ್ಯ ಭೂಮಾರ್ಗದಲ್ಲಿರುವ ಮ್ಯಾಗಿಯೋರ್ ಪರ್ವತವನ್ನು ಜರ್ಮನರು ಬಲಪಡಿಸಿದ್ದಾರೆ ಇದಕ್ಕೂ ಉತ್ತರಕ್ಕೆ ಫಾರ್ಸೆಲಿಯಲ್ಲಿರುವ ಒಂದು ಗುಡ್ಡವನ್ನು ಮಿತ್ರಯೋಧರು ಹಿಡಿದಿದ್ದಾರೆ. ಆದಕಾರಣ ಜರ್ಮನರು ಹೆಚ್ಚಾಗಿ ಉಪಯೋಗಿಸುತ್ತಿರುವ ಬೆಟ್ಟದ ಮಾರ್ಗಗಳ ಮೇಲೆ ಫಿರಂಗಿಗಳನ್ನು ಹಾರಿಸಲು ಮಿತ್ರಯೋಧರಿಗೆ ಸಾಧ್ಯವಿದೆ

೩ ದಿನಕ್ಕೆ ೨೧,೦೦೦ ಜರ್ಮನರ ಸಾವು

ದಕ್ಷಿಣ ರಷ್ಯಾದಲ್ಲಿ ಸೋವಿಯಟ್ ಸೈನಿಕರು ವಾರ್ಸಾ ಒಡೆಸ್ಸಾ ರೈಲ್ವೆಮಾರ್ಗದಲ್ಲಿ ಬಹು ಶೀಘ್ರವಾಗಿ ಮುಂದುವರಿಯುತ್ತಿದ್ದಾರೆ ಕೀವ್ ದಕ್ಷಿಣದಲ್ಲಿ ಅವರಾಗಲೇ ೩೦ ಮೈಲಿ ದೂರ ಮುಂದೆ ಹೋಗಿದ್ದಾರೆ ನೀಪರ್ ತಿರುವಿನಲ್ಲೂ ಮತ್ತು ಅದಕ್ಕೆ ಕೆಳಗೆ ಕಪ್ಪುಕಡಲಿನ ತೀರದಲ್ಲೂ ಹೋರಾಡುತ್ತಿರುವ ನಾಜಿ ಸೇನೆಗಳಿಗೆಲ್ಲ ವಿಪತ್ತಿನ ಭಯವುಂಟಾಗಿದೆ. ರಷ್ಯನರು ಇನ್ನು ಕೊಂಚ ಮುಂದೆ ನುಗ್ಗುವುದಾದರೆ ನೀಪರ್ ತಿರುವಿನಲ್ಲಿರುವ ನಾಜಿ ಸೇನೆಯನ್ನೆಲ್ಲ ಹಿಂದಕ್ಕೆ ಕರೆಸಿಕೊಳ್ಳಬೇಕಾಗಿ ಬರುವುದೆಂದು ತಿಳಿಸಲಾಗಿದೆ ರಷ್ಯನರು ಟ್ಯಾಂಕ್ ಮತ್ತು ಶಸ್ತ್ರಬಂಡಿ ಪಡೆಗಳನ್ನು ಮುಂದೆ ಕಳುಹಿಸಿ ಕೈಬಲಪಡಿಸುತ್ತಿದ್ದಾರೆ ಜರ್ಮನರು ಬಲಿ ಬೀಳುತ್ತಿದ್ದಾರೆ ಕಳೆದ ಮೂರು ದಿನಗಳ ಕದನದಲ್ಲಿ [illegible]೦೦೦ ನಾಜಿಗಳು ಹತರಾದರು [illegible]೦೦ ಟ್ಯಾಂಕುಗಳು ಸಹ ನಾಶವಾದವು ಕೀವ್ ನಗರದ ಉತ್ತರ ಮತ್ತು ದಕ್ಷಿಣ ಭಾಗಗಳಲ್ಲಿ ಮೂರೇನೂರು ರಷ್ಯನ್ ಪಡೆಗಳು ಮುಂದೆ ನುಗ್ಗುತ್ತಿವೆ ಉತ್ತರದಲ್ಲಿ ರಷ್ಯನರು ಬಿಳಿಯ ರಷ್ಯಾ ಗಡಿಯ ಕಡೆಗೆ ೧೦ ಮೈಲಿ ಮುಂದುವರಿದಿದ್ದಾರೆ ವಾಯುವ್ಯದಲ್ಲಿ ಪೋಲೆಂಡ್ ಕಡೆಗೆ ೭ ಮೈಲಿ ನುಗ್ಗಿದ್ದಾರೆ ಕ್ರಿಮಿಯಾದೊಳಗೆ ಜರ್ಮನರು ಉಗ್ರವಾದ ಪ್ರತಿ ಮುತ್ತಿಗೆ ನಡೆಸುತ್ತಿದ್ದಾರೆ ಆದರೆ ರಷ್ಯನರ ಮುಂದೆ ಶತ್ರುಗಳ ಆಟ ಸಾಗುವಂತಿಲ್ಲ

ಹಿಟ್ಲರನ ಬೆದರಿಕೆ

ಮ್ಯೂನಿಚ್ಚಿನ ಬೀರ್ ಹಾಲ್ ಸಭಾಂಗಣದಲ್ಲಿ ಹರ್ ಹಿಟ್ಲರನು ಭಾಷಣಮಾಡುತ್ತ “ಈ ಸಂಗ್ರಾಮದಲ್ಲಿ ಬ್ರಿಟನ್ನೇ ಮುಖ್ಯ ಬಲ ದಬ್ಬಾಳಿಕೆ ನಡೆಸುತ್ತಿರುವುದು ಅದೇ. ಇಂತಹ ಕದನವು ಎರಡು ಸಾರೆ ಒಂದೇ ರೀತಿ ಮುಕ್ತಾಯವಾಗುವುದಿಲ್ಲ ೧೯೧೮ನೆಯ ನವೆಂಬರ್ ೯ ಕ್ಕೂ ೧೯೪೩ನೆಯ ನವೆಂಬರ್ ೯ ಕ್ಕೂ ವ್ಯತ್ಯಾಸವಿದೆ” ಎಂದನು “ಮಿತ್ರದೇಶಗಳಿಗಾಗಲೇ ಜಯವಾಯಿತೆಂದು ಪ್ರಚಾರ ಮಾಡಲಾಗುತ್ತಿದೆ ಆದರೆ, ತಮ್ಮಲ್ಲಿರುವ ಭಿನ್ನಾಭಿಪ್ರಾಯಗಳನ್ನು ಮುಚ್ಚಲು ಒಂದು ಸಮ್ಮೇಳನದಿಂದ ಇನ್ನೊಂದಕ್ಕೆ ಓಡುತ್ತಿದ್ದಾರೆ ಯುದ್ಧಾನಂತರ ವಿಶ್ವವನ್ನು ಹೇಗೆ ರೂಪುಗೊಳಿಸಬೇಕೆಂಬುದನ್ನು ಆಲೋಚಿಸಲು ಸಮಿತಿಗಳನ್ನು ನೇಮಿಸುವುದರಲ್ಲಿದ್ದಾರೆ ಆದರೆ ಸದ್ಯಕ್ಕೆ ತಮ್ಮ ವಿಶ್ವವನ್ನು ಹೇಗೆ ರೂಪುಗೊಳಿಸಬಹುದೆಂಬುದನ್ನು ಅವರು ಆಲೋಚಿಸಿದರೆ ಮೇಲು ಅಮೇರಿಕದಲ್ಲಿ ೧೩೦ ಲಕ್ಷ ನಿರುದ್ಯೋಗಿಗಳಿದ್ದಾರೆ! ಮಿತ್ರದೇಶಗಳ ಜಯದಿಂದ ಜರ್ಮನಿಯ ಭವಿಷ್ಯವು ಒಳ್ಳೆಯದಾದೀತೆಂದು ಭಾವಿಸುವವರಾರಾದರೂ ಈಗ ಜರ್ಮನಿಯಲ್ಲಿದ್ದಾರೋ ಏನೋ ಗೊತ್ತಿಲ್ಲ ತಮ್ಮ ಜನರನ್ನು ಗಲ್ಲಿಗೇರಿಸಲು ಕ್ರಿಮಿನಲ್‌ಗಳು ಮಾತ್ರ ಮುಂದಾರೆಂದು ನಾನು ಹೇಳಲಿಚ್ಛಿಸುವೆ ಅಂತಹ ವಿಜಯವು ಶತ್ರುಗಳಿಗೆ ಆಗುವುದೆಂದು ಜನಸಾಮಾನ್ಯರು ಭಾವಿಸುವುದಿಲ್ಲ ಆದರೆ, ಮೋಸದಿಂದ ತಮ್ಮ ಭವಿಷ್ಯವನ್ನು ಉತ್ತಮಗೊಳಿಸಿಕೊಳ್ಳಬಹುದೆಂದು ಹಲವು ಮಂದಿ ಅಧಮರು ಆಲೋಚಿಸುತ್ತಿದ್ದಾರೆ ಅಂತಹವರನ್ನು ಹೇಗೆ ಮಟ್ಟಹಾಕಬೇಕೆಂಬುದು ನಮಗೆ ಗೊತ್ತು ನಮ್ಮ ಸಹೋದ್ಯೋಗಿಗಳು ಸಾವಿರಗಟ್ಟಲೆ ಪ್ರಾಣತ್ಯಾಗ ಮಾಡುತ್ತಿರುವಾಗ ಅಂತಹ ತ್ಯಾಗಕ್ಕೆ ಸಿದ್ಧರಾಗಿದ್ದ ಜನಾಂಗಗಳನ್ನು ಎಚ್ಚರಿಸಲು ನಾವು ಭಯಗೊಳ್ಳುವುದಿಲ್ಲ ನಮ್ಮಲ್ಲಿರುವ ಹಲವು ನೂರು ಕ್ರಿಮಿನಲ್‌ಗಳನ್ನು ಗುಂಡಿನಿಂದ ಸುಡಲು ನಾವೇನೂ ಹಿಂಜರಿಯುವುದಿಲ್ಲ ಜರ್ಮನ್ ಎಂದಿಗೂ ಸೋಲದು. ಶತ್ರುಗಳು ನಡೆಸುತ್ತಿರುವ ಬಾಂಬು ಮುತ್ತಿಗೆಗಳಿಂದ ಜರ್ಮನರು ತುಂಬಾ ಕಷ್ಟವನ್ನು ಅನುಭವಿಸುತ್ತಿದ್ದಾರೆ ಸಂಗ್ರಾಮವು ಆರಂಭವಾದಾಗ ಬಾಂಬು ಕದನವನ್ನು ನಡೆಸಕೂಡದೆಂಬುದಾಗಿ ಅಮೇರಿಕದ ಅಧ್ಯಕ್ಷರು ನನಗೊಂದು ಪ್ರಾರ್ಥನೆ ಕಳುಹಿಸಿದರು ಪ್ರತಿ ಪಕ್ಷದವರು ಸಿದ್ಧತೆಮಾಡಿಕೊಳ್ಳಲು ಕಾಲಾವಕಾಶ ಸಿಕ್ಕುವಂತೆ ಮಾಡಬೇಕೆಂಬುದೇ ಅವರ ಹಂಚಿಕೆಯಾಗಿತ್ತು ಜನರು ತಮ್ಮ ಆಸ್ತಿಪಾಸ್ತಿಗಳನ್ನು ಕಳೆದುಕೊಳ್ಳುತ್ತಿರುವುದನ್ನು ನೋಡಿ ನನ್ನ ಮನಸ್ಸು ನೊಂದಿದೆ ನಮ್ಮ ನಗರಗಳಿಗೂ ಕೈಗಾರಿಕೆಗಳಿಗೂ ಆಗಿರುವ ನಷ್ಟವು ಮುಖ್ಯವಲ್ಲ ಬ್ರಿಟಿಷರೂ ಅಮೇರಿಕನರೂ ವಿಶ್ವವನ್ನು ಪುನರ್ನಿರ್ಮಾಣಮಾಡುವ ಆಲೋಚನೆ ನಡೆಸುವುದರೊಳಗಾಗಿ ನಾವು ನಮ್ಮ ನಗರಗಳನ್ನೂ ಕೈಗಾರಿಕೆಗಳನ್ನೂ ಪುನಃ ಕಟ್ಟುವೆವು ನಾವು ಸೇಡು ತೀರಿಸಿಕೊಳ್ಳುವ ಕಾಲವು ಬರುತ್ತದೆ ಈಗ ಅಮೇರಿಕವು ಬಹಳ ದೂರದಲ್ಲಿರಬಹುದು ಆದರೆ, ನಮ್ಮ ಬಾಗಿಲ ಮುಂದೆಯೇ ಒಂದು ದೇಶವಿದೆ ಅದಕ್ಕೆ ತಕ್ಕ ಪ್ರತೀಕಾರ ಮಾಡುವೆವು ಜರ್ಮನರಲ್ಲಿರುವ ಪ್ರತಿಭಟನೆಯ ಸಂಕಲ್ಪವನ್ನು ದುರ್ಬಲಗೊಳಿಸಲು ಸಾಧ್ಯವಿದೆಯೆಂದು ಶತ್ರುಗಳು ಭಾವಿಸಿದ್ದಾರೆ ಇದು ಭ್ರಾಂತಿ! ಬಾಂಬಿನಿಂದ ತಮ್ಮ ಮನೆ ಮಠಗಳನ್ನು ಕಳೆದುಕೊಂಡಿರುವ ಸಾವಿರಾರು ಮಂದಿ ಜನರು ಸೇಡು ತೀರಿಸಿಕೊಳ್ಳಲು ಮುಂದೆ ನುಗ್ಗುವರು

“ಈ ಸಂಗ್ರಾಮವು ಎಷ್ಟೇ ಕಾಲ ನಡೆದರೂ ಜರ್ಮನಿ ಬೀಳುವುದಿಲ್ಲ ಹಗಲುರಾತ್ರಿ ಮಾಡಿದರೂ ನಾವು ಹೋರಾಟ ನಡೆಸುವೆವು ಪ್ರತಿ ದಿನ ನಮ್ಮ ಶತ್ರುಗಳು ಹೊಸ ವದಂತಿಗಳನ್ನು ಹರಡುತ್ತಿದ್ದಾರೆ ನಾನು ಅಧೈರ್ಯಗೊಂಡಿರುವುದಾಗಿಯೂ ನನ್ನ ಮಿತ್ರನಾದ ಫೀಲ್ಡ್ ಮಾರ್ಷಲ್ ಗೋರಿಂಗ್ ಮುಂತಾದವರನ್ನು ಮನೆಗೆ ಕಳುಹಿಸಿರುವುದಾಗಿಯೂ ಸುದ್ದಿ ಹರಡುತ್ತಿದ್ದಾರೆ ಸೈನ್ಯಾಧಿಕಾರಿಗಳು ನನ್ನನ್ನೇ ಡಿಸ್‌ಮಿಸ್ ಮಾಡಿದರೆಂದು ಹೇಳುವುದೂ ಉಂಟು ಈ ಸಂಗ್ರಾಮದಲ್ಲಿ ಎಲ್ಲವೂ ಸಾಧ್ಯವಿರಬಹುದು ಆದರೆ ನಾನು ನನ್ನ ಧೈರ್ಯವನ್ನು ನೀಗಿಕೊಳ್ಳುವುದು ಮಾತ್ರ ಅಸಾಧ್ಯ ಒಂದು ಮಹಾ ಕಾರ್ಯವನ್ನು ನಡೆಸುವ ಭಾರವನ್ನು ದೇವರು ಒಬ್ಬನ ಮೇಲೆ ಹೊರಿಸಿರುವಾಗ ಆ ಕಾರ್ಯವನ್ನು ಸಾಧಿಸುವ ಮೊದಲೇ ಆತನನ್ನು ಮುರಿಯುವುದಿಲ್ಲ ನನ್ನ ಜನರಿಗೆ ಶಕ್ತಿಯನ್ನೂ ನಂಬಿಕೆಯನ್ನೂ ತುಂಬುವ ಕೆಲಸವು ನನ್ನ ಮೇಲೆ ಬಿದ್ದಿದೆ ಅದಕ್ಕಾಗಿ ನಾನು ಹೆಮ್ಮೆ ಪಡುತ್ತೇನೆ ನಾನು ನಾಳೆ ನನ್ನ ಸ್ವಸ್ಥಾನಕ್ಕೆ ಹಿಂದಿರುಗುತ್ತೇನೆ [illegible] ವಿಜಯವು ಖಂಡಿತವೆಂಬ ನಂಬಿಕೆಯಿಂದ ಹಿಂತಿರುಗಬೇಕು ತಾವು ಸುರಿಸಿದ ರಕ್ತಕ್ಕೂ ಅನುಭವಿಸಿದ ಕಷ್ಟಕ್ಕೂ ಪ್ರತಿಫಲವು ಜರ್ಮನರಿಗೆ ದೊರೆಯುವುದರಲ್ಲಿ ಸಂದೇಹವಿಲ್ಲ ಎಂದು ಉದ್ಘೋಷಿಸಿದನೆಂದು ಹೇಳಲಾಗಿದೆ

ಮಿಲಿಟರಿಗೆ ದವಸ ಸರಬರಾಯಿ ಮಾಡುತ್ತಿಲ್ಲ

ಮೈ|| ಸರಕಾರದ ಆಹಾರ ಸರಬರಾಜಿನ ಇಲಾಖೆಯು ಮಿಲಿಟರಿಗೆ ಧಾನ್ಯವೊದಗಿಸುತ್ತಿದೆ ಎಂಬ ವದಂತಿ ಅಸತ್ಯವಾಗಿದೆ. ಮೈಸೂರು ಸೇನೆಗೆ ಹೊರತು ಮತ್ತಾವ ಮಿಲಿಟರಿಗೂ ಆಹಾರವೊದಗಿಸಿಲ್ಲ ಬದಲಾಗಿ ಸಂಸ್ಥಾನದಲ್ಲಿ ನಿಲ್ಲಿಸಲಾದ ಮಿಲಿಟರಿಯವರು ಕಡಿಮೆ ಬಿದ್ದ ಸ್ಥಳಗಳಿಗೆ ಧಾನ್ಯ ಒದಗಿಸಲು ತಮ್ಮ ಲಾರಿಯನ್ನಿತ್ತು ತುಂಬಾ ಸಹಾಯಮಾಡುತ್ತಿದ್ದಾರೆ ಈ ವರ್ಷದಲ್ಲಿ ಬೆಂಗಳೂರು ನಗರಕ್ಕೆ ಈ ಲಾರಿಗಳು ೭ ಸಾವಿರ ಪಲ್ಲ ಧಾನ್ಯ ಸಾಗಿಸಿವೆ ಅಲ್ಲದೆ ೧೨ ಸಾವಿರ ಪಲ್ಲ ರಾಗಿ ೪ ಸಾವಿರ ಪಲ್ಲ ಜೋಳ ಬೆಂಗಳೂರಿಗೆ ತರಲು ವ್ಯವಸ್ಥೆ ನಡೆಸಲಾಗುತ್ತಿದೆ ಇಂಡಿಯಾ ಸರಕಾರವು ಮೈಸೂರು ಸಂಸ್ಥಾನಕ್ಕೆ ಸಿಂಧ್, ಪಂಜಾಬ್, ಭರತಪುರ, ಕೊಡಗು ಮತ್ತು ಇತರ ಸ್ಥಳಗಳಿಂದ [illegible] ಸಾವಿರ ಪಲ್ಲ ತರಿಸಲು ಒಪ್ಪಿ ಕೊಟ್ಟಿದ್ದಾರೆ ಎಂದು ಸರಕಾರಿ ಪ್ರಕಟಣೆ ಹೊರಟಿದೆ

(೬ನೇ ಪುಟದಿಂದ ಮುಂದುವರಿದುದು.)

ದುರ್ವಾಸನೆಗಳು ದುಃಸ್ವಭಾವಗಳು ದೃಢವಾಗಿದ್ದರೂ ಪ್ರಕೃತ ಜನ್ಮದಲ್ಲಿ ಪುರುಷಪ್ರಯತ್ನದಿಂದ ಆ ಸ್ವಭಾವಕ್ಕೊಳಪಡದೆ ಸನ್ಮಾರ್ಗದಲ್ಲಿ ಪ್ರವರ್ತಿಸಬಲ್ಲವನಾಗಿರುತ್ತಾನೆ ಜೀವನು ಪೂರ್ವಜನ್ಮಾಂತರದಲ್ಲಿ ನರಕಾನುಭವದಿಂದ ವಿಷಯೇಚ್ಛೆಗಳಿಗೆ ವಿಶೇಷವಾಗಿ ವಶನಾಗುವುದು ಬಾಧಕವೆಂಬ ಜ್ಞಾನವನ್ನು ಸಂಪಾದಿಸಿ ಅವುಗಳನ್ನು ಬಿಟ್ಟುಬಿಡಬೇಕೆಂಬ ನಿಶ್ಚಯವನ್ನು ಸ್ವಲ್ಪಮಟ್ಟಿಗಾದರೂ ಹೊಂದಿರುವನು ಆದುದರಿಂದ ಮುಂದಿನ ಜನ್ಮದಲ್ಲಿ ಪೂರ್ವಕರ್ಮಾನುಸಾರವಾದ ದುರ್ವಾಸನೆಗಳು ದೃಢವಾಗಿದ್ದರೂ ತನಗಿರುವ ಅಲ್ಪಜ್ಞಾನದಿಂದಲಾದರೂ ಸನ್ಮಾರ್ಗವನ್ನು ಅವಲಂಬಿಸತಕ್ಕ ಯತ್ನಮಾಡುತ್ತ ಕ್ರಮಕ್ರಮವಾಗಿ ಅಶುಭವಾಸನೆಗಳನ್ನು ನಾಶಮಾಡಿಕೊಳ್ಳಬಲ್ಲನು. ವ್ಯವಸಾಯಗಾರನು ಭೂಮಿಯಲ್ಲಿ ಮೊಳೆತಿರುವ ಮೊಳಕೆಗಳಲ್ಲಿ ಒಳ್ಳೆಯವುಗಳನ್ನು ಬೆಳೆಸಲು ಪ್ರಯತ್ನ ಮಾಡುತ್ತ ಇತರ ಮೊಳಕೆಗಳನ್ನು ನಾಶಮಾಡಲು ತಕ್ಕ ಪ್ರಯತ್ನಗಳನ್ನು ಮಾಡಿ ಅವುಗಳನ್ನು ಸಮೂಲವಾಗಿ ನಾಶಮಾಡುತ್ತಾನಷ್ಟೆ? ಹಾಗೆಯೇ ಜೀವನು ಹಿಂದೊಂದು ಜನ್ಮದಲ್ಲಿಯ ತನ್ನ ಶುಭವಾಸನೆಗಳನ್ನು ಕ್ರಮಕ್ರಮವಾಗಿ ಅಭಿವೃದ್ಧಿಮಾಡಿಕೊಳ್ಳುತ್ತ ಅಶುಭವಾಸನೆಗಳನ್ನು ಸಮೂಲವಾಗಿ ನಾಶಮಾಡಬೇಕು ಇದೇ ವಿದ್ಯಾಭ್ಯಾಸದಿಂದ ಮುಖ್ಯಪ್ರಯೋಜನವು ಗುರುಗಳಾದವರು ಶಿಷ್ಯರ ಸ್ವಭಾವವನ್ನು ಚೆನ್ನಾಗಿ ಪರಿಶೀಲಿಸಿ ಶುಭವಾಸನೆಗಳನ್ನು ಬೋಧೆಯಿಂದ ವೃದ್ಧಿಪಡಿಸುತ್ತ ಅಶುಭವಾಸನೆಗಳಿದ್ದರೆ ಅವುಗಳು ವೃದ್ಧಿಯಾಗದಂತೆ ನಾಶಮಾಡಬೇಕು ಹಾಗೆ ಮಾಡುವುದರಿಂದ ಪೂರ್ವದ ಕರ್ಮಬಂಧಗಳನ್ನು ಅತಿಕ್ರಮಿಸುವುದಕ್ಕೆ ಜೀವನಿಗೆ ಶಕ್ತಿಯುಂಟಾಗುವುದು “ಪ್ರಜ್ಞಾನುಸಾರಿಣೀ ವಿದ್ಯಾ ಬುದ್ಧಿಃ ಕರ್ಮಾನುಸಾರಿಣೀ” ಎಂಬ ಲೋಕೋಕ್ತಿಯ ಅಭಿಪ್ರಾಯವು ಇಷ್ಟೆ. ಇದರಲ್ಲಿ ಪೂರ್ವಾರ್ಧವನ್ನು ನಿರಾಕರಿಸಿ ಉತ್ತರಾರ್ಧವನ್ನು ಮಾತ್ರ ಕೆಲವರು ಪ್ರಮಾಣವಾಗಿ ತೆಗೆದುಕೊಳ್ಳುತ್ತ ತಮ್ಮ ಕಾರ್ಯಗಳಲ್ಲಿ ತಮಗೆ ಸ್ವಾತಂತ್ರ್ಯವಿಲ್ಲವೆಂದು ಭಾವಿಸುತ್ತಾರೆ ಇದು ತಪ್ಪು ತಿಳಿವಳಿಕೆ ಪ್ರತಿ ಜೀವನೂ ಪೂರ್ವಕರ್ಮಾನುಸಾರವಾಗಿಯೇ ನಡೆದುಕೊಳ್ಳುವುದು ವಿಧಿಯಾಗಿದ್ದರೆ ಶಾಸ್ತ್ರಗಳಲ್ಲಿ ಹೇಳಿರುವ ವಿಧಿನಿಷೇಧಗಳೆಲ್ಲವೂ ನಿಷ್ಪ್ರಯೋಜನಗಳಲ್ಲವೇ? ಶಾಸ್ತ್ರಗಳಲ್ಲಿ ಕೆಲವು ಕರ್ಮಗಳು ಕರ್ತವ್ಯಗಳೆಂಬುದಾಗಿ ವಿಧಿಸಲ್ಪಟ್ಟು ಇನ್ನು ಕೆಲವು ನಿಂದ್ಯಗಳೆಂಬುದಾಗಿ ನಿಷೇಧಿಸಲ್ಪಟ್ಟಿರುವುದರಿಂದ ಪೂರ್ವಕರ್ಮಾನುಸಾರ ನಿಂದ್ಯಕರ್ಮಗಳಲ್ಲಿ ಬುದ್ಧಿಯು ಪ್ರಸರಿಸುತ್ತಿದ್ದರೂ ಹಾಗೆ ಪ್ರವೃತ್ತರಾಗಿ ವರ್ತಿಸದೆ ಶಾಸ್ತ್ರಗಳನ್ನು ಪರಿಶೀಲಿಸಿ ಶಾಸ್ತ್ರಬೋಧಿತವಾದ ಕಾರ್ಯಗಳಲ್ಲಿಯೇ ಪ್ರವರ್ತಿಸಬೇಕೆಂದು ಪ್ರಯತ್ನಿಸಬೇಕಲ್ಲವೇ? ಇಲ್ಲದಿದ್ದರೆ ಶಾಸ್ತ್ರಗಳಿಂದ ಪ್ರಯೋಜನವೇ ಇಲ್ಲದೆ ಹೋಗುವುದು ಸ್ವಭಾವವು ಶಾಸ್ತ್ರಕ್ಕೆ ವಿರುದ್ಧವಾಗಿ ಇದ್ದಾಗಲೆಲ್ಲಾ ಅದನ್ನು ಬದಲಾಯಿಸಿ ಶಾಸ್ತ್ರಾನುಸಾರವಾಗಿ ಜೀವನು ವರ್ತಿಸಬೇಕು ಈ ಪ್ರಸಂಗದಲ್ಲಿ ಗೀತೆಯು —

ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ |
ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂ ಗತಿಂ ||
ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ |

ಎಂದು ಹೇಳಿರುವುದು

ಪುರುಷಪ್ರಯತ್ನವಿಲ್ಲದೆಯೇ ಕಾರ್ಯಸಿದ್ಧಿಯಾಗುವುದಿಲ್ಲ ಕಾರ್ಯವು ನೆರವೇರಿ ಸಿದ್ಧಿಸಬೇಕಾದರೆ ಪುರುಷಪ್ರಯತ್ನವು ಆರು ಭಾಗಗಳೆಂದೂ, ದೈವಿಕವು ಒಂದು ಭಾಗವೆಂದೂ ಪುರಾತನ ಗ್ರಂಥಗಳು ಸಾರುತ್ತಿರುವುವು. “ಷಡ್ಭಿರ್ಮನುಷ್ಯಯತ್ನೈಶ್ಚ ಸಪ್ತಮಂ ದೈವಚಿಂತನಂ.”

ಒಕ್ಕಲಿಗನು ಹೊಲವನ್ನು ಉತ್ತು ಬಿತ್ತಿ ಕಳೆತೆಗೆದು ಮತ್ತು ಅನೇಕ ವಿಧವಾದ ಪ್ರಯತ್ನವನ್ನು ಮಾಡಿದರಲ್ಲವೇ ದೈವಿಕವಾದ ಕಾಲ-ವರ್ಷಗಳು ಸಸ್ಯಗಳನ್ನು ಫಲಿಸುವಂತೆ ಮಾಡಬಲ್ಲವು ಪುರುಷ ಪ್ರಯತ್ನವಿಲ್ಲದಿದ್ದರೆ ದೈವಸಹಾಯದಿಂದ ಫಲವು ಹೇಗೆ ಸಿದ್ಧಿಸುವುದು? ನಾವು ಆಹಾರವನ್ನು ಬಾಯಿಯಲ್ಲಿಟ್ಟುಕೊಂಡರೂ ನುಂಗುವ ಪ್ರಯತ್ನ ಮಾಡಬೇಕಾಗುತ್ತದೆ

ಪುರುಷಪ್ರಯತ್ನವಿಲ್ಲದೆ ದೈವದಿಂದಲೇ ಫಲವು ಸಿದ್ಧಿಸುವುದಿಲ್ಲವೆಂಬ ಮಾತು ನಿರ್ವಿವಾದವಾದುದು ಪೂರ್ವಜನ್ಮಗಳಲ್ಲಿ ಮಾಡಿದ ಕರ್ಮವೇ ದೈವವೆಂಬುದಾಗಿ

ಹೇಳಲ್ಪಡುತ್ತದೆ ಆದುಪ್ರಯುಕ್ತ ಪುರುಷಪ್ರಯತ್ನವನ್ನು ಯತ್ನಪುರಸ್ಸರವಾಗಿ ಮಾಡಬೇಕು

ವಾಚಕಮಹಾಶಯರೇ! ಪುರುಷಪ್ರಯತ್ನವನ್ನು ಮಾಡುವ ಮನುಷ್ಯನಿಗೆ ಫಲಪ್ರಾಪ್ತಿಯುಂಟಾಗುವುದು, ದೈವದಿಂದಲೇ ಫಲವು ದೊರಕುವುದೆಂದು ಹೇಳುವುದು ಅಜ್ಞಾನಿಗಳ ಸೋಮಾರಿಗಳ ಮಾತು. ದೈವವನ್ನು ಹೊಡೆದು, ಆತ್ಮಶಕ್ತಿಯಿಂದ ಪುರುಷಪ್ರಯತ್ನವನ್ನು ಮಾಡಬೇಕು ಪ್ರಯತ್ನವನ್ನು ಮಾಡಿಯೂ ಫಲಿಸದಿದ್ದರೆ ದೋಷವಿಲ್ಲ ಶಾಸ್ತ್ರಗಳೂ ಶಾಸ್ತ್ರಾರ್ಥಗಳನ್ನು ತಿಳಿಸುವ ಇತರ ಗ್ರಂಥಗಳೂ ಈ ರೀತಿ ಉಪದೇಶಿಸುತ್ತಿರಲಾಗಿ ವಿಧಿಕೃತವು ನಡೆಯುತ್ತಿದೆಯೆಂದೂ, ಅದನ್ನು ಮೀರುವುದಕ್ಕೆ ಮನುಷ್ಯರಿಗೆ ಶಕ್ತಿ ಸಾಲದೆಂದೂ ಮನುಷ್ಯರು ಪ್ರವಾಹಪಾತಗಳಂತೆಯೂ, ಗಾಳಿಯಿಂದ ಹಾರಿ ಹೋಗುತ್ತಿರುವ ತೃಣದಂತೆಯೂ ಇದ್ದಾರೆಂದೂ ಎಣಿಸುವುದು ಎಂತಹ ತಪ್ಪು ಅಭಿಪ್ರಾಯವು? ಜೀವನು ಧೀರನಾಗಿ ಆತ್ಮಶಕ್ತಿಯನ್ನು ವಿನಿಯೋಗಿಸಿ ಅತ್ಯುತ್ತಮವಾದ ಕಾರ್ಯಗಳನ್ನು ಸಾಧಿಸಬೇಕು ಹಾಗೆ ಅಸಾಧ್ಯವೆಂಬುದಾಗಿ ಎಣಿಸಲ್ಪಟ್ಟ ಘನಕಾರ್ಯಗಳನ್ನು ಸಾಧಿಸಿದ ಮಹಾಪುರುಷರ ಮತ್ತು ಮಹಾ ಪತಿವ್ರತೆಯರ ಚರಿತ್ರೆಗಳು ಪೂರ್ವಗ್ರಂಥಗಳಲ್ಲಿವೆಯಷ್ಟೆ? ಮಾರ್ಕಂಡೇಯನ ಆಯುಸ್ಸು ಹದಿನಾರು ಸಂವತ್ಸರಗಳಿಗೆ ಹೆಚ್ಚಾಗಿಲ್ಲವೆಂದು ಹುಟ್ಟಿದಾಗಲೇ ವಿಧಿನಿರ್ದಿಷ್ಟವಾಗಿದ್ದರೂ ಸ್ವಪ್ರಯತ್ನದಿಂದಲೇ ಪೂರ್ಣಾಯುಸ್ಸನ್ನು ಹೊಂದಿದ್ದು ಮಾತ್ರವೇ ಅಲ್ಲದೆ ಚಿರಾಯುತ್ವವನ್ನೂ ಸಹ ಪಡೆದನಲ್ಲವೇ? ಪತಿವ್ರತಾಶಿರೋಮಣಿಯಾದ ಸಾವಿತ್ರಿಯು ಸ್ವಸಾಹಸದಿಂದಲೂ ಧೈರ್ಯದಿಂದಲೂ ಯಮನ ಕೈಗೆ ಸಿಕ್ಕಿದ ಪ್ರಾಣನಾಥನ ಪ್ರಾಣಗಳನ್ನು ಪುನಃ ತಿರುಗಿಸಿ ದುಸ್ತರವಾದ ವಿಧಿಲಿಖಿತವನ್ನೂ ಮೀರುವಂತೆ ಮಾಡಲಿಲ್ಲವೇ? ಯೋಗವಾಸಿಷ್ಠದಲ್ಲಿ —ಜೀವನು ಸತ್ಕರ್ಮವಶದಿಂದ ಇಂದ್ರನೂ, ಬ್ರಹ್ಮಪುತ್ರನೂ, ಹರಿದಾಸನೂ ಮತ್ತು ಜನ್ಮರಹಿತನೂ ಆಗಬಹುದು. ಇನ್ನೂ ಸಕಲ ಸಿದ್ಧಿಗಳನ್ನೂ ಹೊಂದಬಹುದು. ಅಮರತ್ವವನ್ನೂ ಹೊಂದಬಲ್ಲನು ಸಾಲೋಕ್ಯಾದಿ ಚತುರ್ವಿಧ ಮುಕ್ತಿಗಳನ್ನೂ ಹೊಂದಬಲ್ಲವನಾಗುವನು ದೇವತ್ವವನ್ನೂ ಮನುಷ್ಯತ್ವವನ್ನೂ ರಾಜೇಂದ್ರತ್ವವನ್ನೂ ಹೊಂದಲುಳ್ಳವನಾಗಿರುವನು ಸ್ವಕರ್ಮದಿಂದಲೇ ಶಿವತ್ವವನ್ನೂ ಗಣೇಶತ್ವವನ್ನೂ ಹೊಂದಲಾಪನು ಪುರುಷಪ್ರಯತ್ನದಿಂದಲೇ ಒಬ್ಬಾನೊಬ್ಬ ಜೀವನು ಬ್ರಹ್ಮತ್ವವನ್ನು ಹೊಂದುವನು ಹಾಗೆಯೇ ದೃಢವಾದ ಪುರುಷಪ್ರಯತ್ನದಿಂದಲೇ ವಿಷ್ಣುತ್ವವನ್ನೂ ಹೊಂದುವನು. ಪುರುಷಪ್ರಯತ್ನದಿಂದಲೇ ಒಬ್ಬಾನೊಬ್ಬ ಪುರುಷನು ಶಿವತ್ವವನ್ನು ಹೊಂದಿದನು ಎಂದು ಹೇಳಿರುವುದು. ಆದುದರಿಂದ ಉತ್ಸಾಹದಿಂದಲೂ ಶುದ್ಧಮನಸ್ಸಿನಿಂದಲೂ ಪ್ರಯತ್ನಪುರಸ್ಸರವಾಗಿ ಉದ್ಯಮಿಸತಕ್ಕವನಿಗೆ ಅಸಾಧ್ಯವಾದುದಾವುದೂ ಇಲ್ಲ.

ದೀಕ್ಷಾಸಂಸ್ಕಾರ

ಗುಲಬರ್ಗಾ ಡಿ|| ಚಿಂಚೋಳಿ ತಾಲೂಕು ಗಾರಂಪಳ್ಳಿಯ ಗುರುವಿನ ವೀರಭದ್ರಯ್ಯನವರ ಪುತ್ರ ಚಿ|| ಶಂಭುಲಿಂಗಯ್ಯನೆಂಬ ವಟುವಿಗೆ ದೀಕ್ಷಾಸಂಸ್ಕಾರವು ತಾ|| ೧೦-೧೧-೪೩ ನೆಯ ಬುಧವಾರ ದಿವಸ ಶ್ರೀಮನ್ನಿಡುಮಾಮಿಡಿ ಶ್ರೀಶೈಲಸಂಸ್ಥಾನಾಧೀಶ್ವರ ಶ್ರೀ ಚನ್ನಬಸವರಾಜದೇಶಿಕೇಂದ್ರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನೆರವೇರಿತು ಈ ಶುಭ ಕಾರ್ಯಕ್ಕೆ ಗಾರಂಪಳ್ಳಿ ದೇಶಮುಖರು ಮುಂತಾದವರು ಆಗಮಿಸಿದ್ದರು. ಸಾಹುಕಾರ ಶಿವಶರಣಪ್ಪ ಕಲ್ಲಪ್ಪ ಶೇಣಿ ರಂಜೇರಿ ಇವರು ಧಾರಾಳವಾಗಿ ದ್ರವ್ಯ ಸಹಾಯ ಮಾಡಿ ಪುಣ್ಯಭಾಗಿಗಳಾದರು. ಈ ಸಮಾರಂಭ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ೧ ರೂಪಾಯಿಯು ಸಮರ್ಪಿಸಲ್ಪಟ್ಟಿತು. ಕಾರ್ಯಭಾಗಿ.

ವರ್ಣಾಶ್ರಮಧರ್ಮನಾಶಕ್ಕೆ ಕಾರಣ

ಲೇ|| ಕನ್ನಡಕವಿ ಆಸ್ಥಾನ ವಿದ್ವಾನ್, ಅನವಟ್ಟಿ ರಾಮರಾಯರು

ಕೃತ, ತ್ರೇತಾ, ದ್ವಾಪರ, ಕಲಿಗಳೆಂಬ ನಾಲ್ಕು ಯುಗಗಳಲ್ಲಿ ಕೃತಯುಗವೇ ಸರ್ವೋತ್ತಮವಾದುದೆನಿಸಿಕೊಳ್ಳುವುದಕ್ಕೆ ಆ ಯುಗದಲ್ಲಿದ್ದವರೆಲ್ಲರೂ ಆಸ್ತಿಕರಾಗಿಯೂ, ಧರ್ಮಬುದ್ಧಿಯುಳ್ಳವರಾಗಿಯೂ, ಭಗವಂತನಲ್ಲಿ ದೃಢಭಕ್ತಿಯುಳ್ಳವರಾಗಿಯೂ ಇದ್ದುದೇ ಕಾರಣ

ತ್ರೇತಾಯುಗದಲ್ಲಿ ಈ ಸದ್ಗುಣಗಳು ಕ್ರಮೇಣ ಕುಗ್ಗುವ ಅವಸರದಲ್ಲಿ ಗೌತಮಮಹರ್ಷಿಗಳ ಶಾಪದಿಂದ ಜನರು ಗುರುಭಕ್ತಿ ಹೀನರಾಗಿಯೂ, ಸದ್ಗುಣಗಳಲ್ಲಿ ಲೋಪವುಳ್ಳವರಾಗಿಯೂ ವರ್ತಿಸುತ್ತ ಬರುವಂತಾಯಿತು!

ಗೌತಮಮಹರ್ಷಿಗಳು ಆ ಕಾಲದ ಜನರಿಗೆ ಶಾಪವನ್ನು ಕೊಡಲು ಕಾರಣವೇನೆಂದರೆ, ತ್ರೇತಾಯುಗವು ಪ್ರಾರಂಭವಾದ ಕೆಲವು ಕಾಲದ ಮೇಲೆ ಅಕಸ್ಮಾತ್ತಾಗಿ ಅನಾವೃಷ್ಟಿಯುಂಟಾಗಿ ಬೆಳೆಯಿಲ್ಲದೆ ಕೊನೆಗೆ ಘೋರ ಕ್ಷಾಮವು ಪ್ರಾಪ್ತವಾಯಿತು. ಇದರಿಂದ ಆ ಕಾಲದಲ್ಲಿದ್ದ ಬ್ರಾಹ್ಮಣರಿಗೆ ಜೀವನೋಪಾಯಕ್ಕೆ ಮಾರ್ಗವಿಲ್ಲದಂತಾಯಿತು ಅನಂತರ ಜನಗಳು ಪಡುತ್ತಿರುವ ವಿವಿಧ ಕಷ್ಟಗಳನ್ನು ನೋಡುತ್ತಿದ್ದ ಗೌತಮಮಹರ್ಷಿಗಳು ತಮ್ಮ ಆಶ್ರಮದಿಂದ ಕೆಲವು ದೂರದ ಪ್ರದೇಶಗಳಲ್ಲಿ, ತಮ್ಮ ಯೋಗಸಾಮರ್ಥ್ಯದಿಂದ, ಮಳೆಯಾಗುವಂತೆ ಏರ್ಪಡಿಸಿದರು ಇದರಿಂದ ಆ ಜನರು ಸುಖಜೀವನದಿಂದಿರಲು ಅವಕಾಶವಾಯಿತು. ಹೀಗೆ ಕೆಲವು ಕಾಲವಾದಮೇಲೆ ಮಿಕ್ಕ ಕಡೆಗಳಲ್ಲಿಯೂ ಒಳ್ಳೆಯ ಮಳೆಯಾಗಿ ಜನರೆಲ್ಲರೂ ಆನಂದದಿಂದಿರುವಂತಾಯಿತು ಜೀವನವಿಲ್ಲದ ಬಹಳ ಶ್ರಮಪಡುತ್ತಿದ್ದ ಬ್ರಾಹ್ಮಣರನ್ನೆಲ್ಲ ಗೌತಮರು ತಮ್ಮ ಆಶ್ರಮಕ್ಕೆ ಬರಮಾಡಿಕೊಂಡು ಕಾಪಾಡುತ್ತಿದ್ದರು ಹೀಗೆ ಕೆಲವು ಕಾಲವಾದ ಬಳಿಕ ಬ್ರಾಹ್ಮಣರು ಎಷ್ಟು ದಿವಸ ಸಂಸಾರ ಸಮೇತರಾಗಿ ಈ ಆಶ್ರಮದಲ್ಲಿ ಇರಬೇಕು ಎಂದು ಆಲೋಚಿಸಿ ಗೌತಮರ ಅನುಜ್ಞೆಯನ್ನು ಪಡೆದು ಹೊರಡೋಣವೆಂದರೆ, ಅವರು ಅಪ್ಪಣೆ ಕೊಡುವಂತಿಲ್ಲ, ಕೇಳದೆ ಹೊರಡೋಣವೆಂದರೆ ಅವರು ಎಲ್ಲಿ ತಮಗೆ ಶಾಪಕೊಡುವರೋ ಎಂಬ ಭೀತಿಯಿಂದ ಕೊನೆಗೆ ಹೇಗಾದರೂ ಮಾಡಿ ಆ ಸ್ಥಳವನ್ನೇ ತ್ಯಜಿಸಿ ತಮ್ಮ ಸ್ಥಳಕ್ಕೆ ಹೊರಡಬೇಕೆಂದು ನಿಶ್ಚಯಮಾಡಿಕೊಂಡರು

ಇತ್ತ ಕೈಲಾಸದಲ್ಲಿದ್ದ ಪಾರ್ವತೀದೇವಿಯು ತನ್ನ ಪತಿಯಾದ ಮಹಾದೇವನ ಜಟೆಯಲ್ಲಿ ಬದ್ಧಳಾಗಿದ್ದ ಭಾಗೀರಥಿಯನ್ನು ಪತಿಸಾನ್ನಿಧ್ಯದಿಂದ ದೂರಕ್ಕೆ ಕಳುಹಿಸಬೇಕೆಂದು ಆಲೋಚಿಸಿ, ತನ್ನ ಕುಮಾರನಾದ ವಿನಾಯಕನನ್ನು ಕರೆದು. ಮಗನೇ! ನೀನು ಭೂಲೋಕಕ್ಕೆ ಹೋಗಿ, ಗೌತಮರ ಆಶ್ರಮದಲ್ಲಿರುವ ಬ್ರಾಹ್ಮಣರನ್ನು ಕುರಿತು—ನೀವು ಗೌತಮರ ಆಶ್ರಮವನ್ನು ಬಿಟ್ಟು ಹೋಗಬೇಕಾಗಿದ್ದರೆ ನಿಮ್ಮ ಯೋಗಸಾಮರ್ಥ್ಯದಿಂದ ಒಂದು ಕೃತಕ ಗೋವನ್ನು ನಿರ್ಮಾಣಮಾಡಿ, ಪೈರುಗಳನ್ನು ಮೇಯುತ್ತಿರುವಂತೆ ಪ್ರೇರೇಪಿಸಿರಿ ಆಗ ಗೌತಮರು ಆ ಸ್ಥಳಕ್ಕೆ ಬಂದು, ಗೋವನ್ನು ಹೊಡೆಯುವರು ಆ ಕ್ಷಣವೇ ಅದು ಕೆಳಗೆ ಬಿದ್ದು ಮೃತಿಯೊಂದುವುದು ಆಗ ನೀವು ಗೋಹತ್ಯಾ ದೋಷವನ್ನು ಗೌತಮರ ಮೇಲೆ ಆರೋಪಿಸಿ, ಅಂತಹವರ ಅನ್ನವು ಗ್ರಾಹ್ಯವಲ್ಲವೆಂದು ಹೇಳಿ ಎಲ್ಲರೂ ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಬಹುದು ಎಂದು ತಿಳಿಸುವಂತೆ ಆಜ್ಞಾಪಿಸಿ ಕಳುಹಿಸಿದಳು.

ಇತ್ತ ವಿನಾಯಕನು ಮಾತೆಯ ಆಜ್ಞೆಯನ್ನು ಶಿರಸಾವಹಿಸಿ, ಅಲ್ಲಿಂದ ಹೊರಟು ಗೌತಮರ ಆಶ್ರಮದ ಹತ್ತಿರಕ್ಕೆ ಹೋಗಿ, ಬ್ರಾಹ್ಮಣರ ಮನೋಭಾವವನ್ನು ತಿಳಿದು, ತಾಯಿಯ ಉಪದೇಶದಂತೆ, ಅವರಿಗೆ ಬೋಧಿಸಿದನು. ಬ್ರಾಹ್ಮಣರು ತಮ್ಮ ಬಿಡುಗಡೆಗೆ ಉಪಾಯವು ಸಿಕ್ಕಿತೆಂದು ಸಂತೋಷಪಟ್ಟು, ತಮ್ಮ ತಪೋಬಲದಿಂದ ಒಂದು ಗೋವನ್ನು ಸೃಷ್ಟಿಸಿ, ಪೈರುಗಳನ್ನು ಮೇಯುವುದಕ್ಕೆ ಬಿಟ್ಟರು ಗೌತಮರು ಅದನ್ನು ಅಟ್ಟಬೇಕೆಂದು ಮುಟ್ಟಿದ ಕೂಡಲೆ ಗೋವು ಕೆಳಗೆ ಬಿದ್ದು ಪ್ರಾಣಬಿಟ್ಟಿತು. ಇದನ್ನು ನೋಡಿ ಗೌತಮರಿಗೆ ತುಂಬಾ ಆಶ್ಚರ್ಯವಾಯಿತು ಇದನ್ನು ನೋಡುತ್ತಿದ್ದ ಬ್ರಾಹ್ಮಣರು "ಗೌತಮರಿಗೆ ಗೋಹತ್ಯಾದೋಷವು ಪ್ರಾಪ್ತವಾಯಿತು. ಅವರ ಅನ್ನವು ತಮಗೆ ಯೋಗ್ಯವಲ್ಲ"—ಎಂದು ಹೇಳಿ ತಮ್ಮ ತಮ್ಮ ನಿವಾಸಗಳಿಗೆ ಹೊರಟು ಹೋದರು.

ಇತ್ತ ಗೌತಮರು ತಮ್ಮಿಂದ ನಡೆದ ಈ ಕಾರ್ಯವು ದಾವಾಗ್ನಿಯಂತೆ ಎಲ್ಲಾ ಕಡೆಯಲ್ಲಿಯೂ ಹಬ್ಬಿದ ವರ್ತಮಾನವನ್ನು ಕೇಳಿ, ಈ ರೀತಿ ನಡೆಯಲು ಕಾರಣವೇನೆಂದು ಚಿಂತಾಕ್ರಾಂತರಾಗಿ, ತಮ್ಮ ಯೋಗಸಿದ್ಧಿಯಿಂದ ನಿಜಸ್ಥಿತಿಯನ್ನು ತಿಳಿದು "ನಮ್ಮಲ್ಲಿಯೇ ಇದ್ದು, ನಮ್ಮ ಅನ್ನವನ್ನು ತಿಂದು ಕೊನೆಗೆ ಈ ರೀತಿ ಮೋಸಮಾಡಿದುದಕ್ಕೆ ಆ ಬ್ರಾಹ್ಮಣರ ಜ್ಞಾನವು ನಶಿಸಿ ಹೋಗಲಿ" ಎಂದು ಶಾಪವನ್ನು ಕೊಟ್ಟರು ಹೀಗೆ ಆ ಬ್ರಾಹ್ಮಣರು ಶಾಪಗ್ರಸ್ತರಾಗಿ ತಮ್ಮ ವಿಹಿತ ಕರ್ಮಗಳನ್ನು ಬಿಟ್ಟು, ಅನಾಚಾರಗಳಿಗೆಡೆಯಾಗಿ, ಕರ್ಮಭ್ರಷ್ಟತೆಯಿಂದ ಪಾಪಮಾರ್ಗದಲ್ಲಿ ನಡೆಯುತ್ತ, ಜ್ಞಾನಹೀನರಾಗಲು, ಧರ್ಮಾಧರ್ಮಗಳನ್ನು ಉಪದೇಶ ಮಾಡುವವರೇ ಇಲ್ಲದಂತಾಯಿತು ಅನೇಕರು ವರ್ಣಾಶ್ರಮಧರ್ಮಗಳನ್ನು ಬಿಟ್ಟು, ಪರಲೋಕಸಾಧನಮಾರ್ಗದೂರರಾಗಿ, ಪಶುಪ್ರಾಯರಾಗಿರುವ ಸ್ಥಿತಿಗೆ ಬಂದರು ಅನಂತರ ಗೌತಮರು ತಮಗೆ ಪ್ರಾಪ್ತವಾದ ಗೋಹತ್ಯಾದೋಷ ಪರಿಹಾರಾರ್ಥವಾಗಿ ಮಹಾದೇವನನ್ನು ಪ್ರಾರ್ಥನೆಮಾಡಿ, ಅವನ ಜಟೆಯಲ್ಲಿರುವ ಭಾಗೀರಥಿಯನ್ನು ಕರೆದುಕೊಂಡು ಬಂದು ಆ ಕೃತಕ ಗೋವಿನ ಮೇಲೆ ಬಿಟ್ಟು ಗೋವನ್ನು ಬದುಕಿಸಿ ಕೃತಾರ್ಥರಾದರು ಭಾಗೀರಥಿಯನ್ನು ರುದ್ರನು ಭೂಲೋಕಕ್ಕೆ ಕಳುಹಿಸಿದುದರಿಂದ ಪಾರ್ವತೀದೇವಿಯ ಮನಸ್ಸೂ ನೆಮ್ಮದಿಯಾಯಿತು ಗೌತಮರಿಗೆ ನಿಷ್ಕಾರಣವಾಗಿ ಪ್ರಾಪ್ತವಾಗಿದ್ದ ಗೋಹತ್ಯಾದೋಷವೂ ಪರಿಹಾರವಾಯಿತು

ಸ್ವೀಕಾರ

ಗುಲಬರ್ಗಾ ಜಿ|| ಚಿಂಚೋಳಿ ತಾ|| ಗಾರಂಪಳ್ಳಿಯ ಗುರುವಿನ ವೀರಭದ್ರಯ್ಯನವರ ಪುತ್ರ ಚಿ|| ಶಂಭುಲಿಂಗಯ್ಯನಿಗೆ ಶ್ರೀಮನ್ನಿಡುಮಾಮಿಡಿ ಶ್ರೀಶೈಲಸಂಸ್ಥಾನಾಧೀಶ್ವರ ಶ್ರೀಚನ್ನಬಸವರಾಜ ದೇಶಿಕೇಂದ್ರಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ನಡೆದ ಶಿವದೀಕ್ಷಾಸಮಾರಂಭದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಲ್ಪಟ್ಟ ೧ ರೂ. ಯು ಶ್ರೀ ಶಿವಶರಣಪ್ಪ ಕಲ್ಲಪ್ಪ ಶೇಣಿ ಸಾಹುಕಾರ್ ರಂಜೇರಿ ಇವರ ದ್ವಾರಾ ತಲ್ಪಿರುತ್ತದೆ

ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮತಾಳಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣಪ್ರಿಯವಾದುದು ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು ವೀರಶೈವಮತದಲ್ಲಿ ಸದ್ಯಃ ದೊರೆಯತಕ್ಕ ಗ್ರಂಥಗಳೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂ ರಚಿಸಲ್ಪಟ್ಟಿರುವುದು ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕ ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ ಆದ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ ಈ ಕೊರ ಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾ ಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ಪಾ ಠಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯು ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟವೆ ಈ ಗ್ರಂಥವು ಒಟ್ಟು ೬೬೩ ಪುಟಗಳಿಂದ ಕೂಡಿದ್ದು, ಸರ್ವಾಂ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನು ಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾ ಮನೋಹರತರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥ ಸೌಂದರ್ಯವು ವರ್ಣನಾತೀತವಾಗಿದೆ. ಕೈಬಿಟ್ಟು ಕಲ್ಪತರುವಿನಂ ರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾ ಓದಬೇಕು **ಬೆಲೆ ೩ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ. ೧೨ ಆಣೆ ವಿ ಪಿ ಖರ್ಚು ಸೇರಿ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೨೨ನೇ ನವಂಬರ್ ೧೯೪೩ [ಸಂಚಿಕೆ ೨೯

ಪ್ರಪಂಚದ ಗತಿಯು ಜೀವನಿಗೆ ಹಿತಕರವು

ಲೇ|| ಮಲ್ಲಿಕಾರ್ಜುನಾರಾಧ್ಯ [illegible]
[illegible]

ಈ ಸಂಸಾರದಲ್ಲಿ ಪ್ರತಿಕ್ಷಣವೂ ಎಲ್ಲೆಲ್ಲಿ ನೋಡಿದರೂ ಎಷ್ಟೋ ಕ್ಷೋಭೆಯನ್ನೂ ಕಷ್ಟವನ್ನೂ ದುಃಖವನ್ನೂ ವ್ಯಥೆಯನ್ನೂ ಜನರು ಅನುಭವಿಸುತ್ತಿರುವುದು ಕಂಡು ಬರುತ್ತಿದೆ. ಎಷ್ಟೋ ವಿಷಯಗಳಲ್ಲಿ ಶುಭಕ್ಕಿಂತಲೂ ಅಶುಭವೇ ಅಧಿಕವಾಗಿರುವಂತೆ ಕಂಡುಬರುತ್ತಿರುವುದು ಜಗತ್ತಿನ ಸ್ಥಿತಿಯು ಹೀಗಿರುವಲ್ಲಿ ಇಂತಹ ದುಃಖಮಯವಾದ ಸಂಸಾರವನ್ನು ಪ್ರಾಣಿಗಳ ಹಿತಕ್ಕಾಗಿಯೇ ಪರಮಾತ್ಮನು ಕಲ್ಪಿಸಿರುವನು ಎಂಬುದು ಮನಸ್ಸಿಗೆ ಒಪ್ಪುವುದಿಲ್ಲ ಆದರೆ ವಾಸ್ತವಸ್ಥಿತಿಯಲ್ಲೇನೋ ಅದು ಹಿತಕರವಾದುದೇ ಈ ಬಾಹ್ಯಪ್ರಪಂಚದಲ್ಲಿ ಕ್ಷೋಭೆಯಿಂದ ಎದ್ದಿರುವ ಧೂಳಿಪಟಲವನ್ನು ತಪ್ಪಿಸಿಕೊಂಡು ಮೇಲಕ್ಕೆ ಏರಿ ಶಾಂತಿಪದವಿಯನ್ನೂ ಜ್ಞಾನಸ್ಥಾನವನ್ನೂ ಹೊಂದಿ ಅಂತಹ ಉನ್ನತಸ್ಥಾನದಿಂದ ಬಾಹ್ಯಪ್ರಪಂಚವನ್ನು ನೋಡಿದರೆ ಆಗ ಅದು ವಾಸ್ತವಾಂಶವೆಂಬುದು ನಮಗೆ ಕಂಡುಬರುವುದು ಆಗ ಅನೇಕ ಅಂಶಗಳುಳ್ಳ ಈ ಸಂಸಾರ ಯಂತ್ರದ ವಾಸ್ತವವಾದ ಗತಿಯು ಗೋಚರವಾಗುವುದು ಆಗ ಶುಭಪ್ರವಾಹಕ್ಕೆ ಇದಿರಾಗಿ ಪ್ರವಹಿಸಿ ಅದನ್ನು ಅಡಗಿಸುವಂತೆ ಕಂಡುಬರುವ ಅಶುಭಪ್ರವಾಹಗಳೆಲ್ಲವೂ ಅಲ್ಪಸ್ವಲ್ಪವಾದ ಸುಳಿಗಳೆಂದು ತಿಳಿಯಬರುವುದು ಪ್ರವಾಹ ಮಾರ್ಗವನ್ನು ಬಿಟ್ಟು ಒಂದು ಕ್ಷಣಕಾಲ ಹಳ್ಳಕೊಳ್ಳಗಳೊಳಗೆ ಸ್ವಲ್ಪ ನೀರು ಪ್ರವಹಿಸಬಹುದು, ಇಲ್ಲವೆ ಪ್ರವಾಹದ ಮೇಲೆ ಸುಳಿಗಳಲ್ಲಿ ಸ್ವಲ್ಪಕಾಲ ನೀರು ಹಿಂತಿರುಗಿ ಹೋಗಬಹುದು. ಆದರೆ ಯಾವಾಗಲೂ ನದಿಯ ಮಹಾಪ್ರವಾಹವು ತಾನು ಹೋಗತಕ್ಕ ಮಾರ್ಗದಲ್ಲಿಯೇ ಹೋಗುತ್ತ, ಮೇಲೆ ಮೇಲೆ ಹುಟ್ಟುವ ಸುಳಿಗಳನ್ನೂ ಸಹ ಮುಂದಕ್ಕೆ ಸಾಗಿಸಿಕೊಂಡು ಹೋಗುವುದು ನದಿಯಂತೆಯೇ ಸಂಸಾರದ ಮಹಾಪ್ರವಾಹವೂ ತನ್ನ ಮಾರ್ಗದಲ್ಲಿ ಸಮವಾಗಿ ಮುಂದಕ್ಕೆ ಸಾಗುತ್ತಲೇ ಇರುತ್ತದೆ. ಎಷ್ಟೋ ಭಯಂಕರವಾದ ತುಫಾನುಗಳಂತೆ ತೋರುವುದೆಲ್ಲವೂ ಅದರ ಮೇಲ್ಭಾಗದಲ್ಲಿ ಉಂಟಾಗುವ ಅಲ್ಲಾಟವೇ ಹೊರತು ಬೇರೆಯಲ್ಲ.

ಕರ್ಮಯಂತ್ರನಿಯಂತ್ರಿತವಾದ ಈ ಸಂಸಾರದಲ್ಲಿ ಪರಮಾರ್ಥವಾಗಿ ಎಲ್ಲರಿಗೂ ನ್ಯಾಯವೇ ದೊರಕುವುದು, ಅನ್ಯಾಯವು ಎಂದಿಗೂ ನಡೆಯುವುದಿಲ್ಲ ಆದುದರಿಂದ ಎಂತಹ ಸ್ಥಿತಿಗತಿಗಳು ಒಬ್ಬ ಮನುಷ್ಯನಿಗೆ ಬಂದರೂ ಅವು ತಾನು ಮಾಡಿಕೊಂಡದ್ದೇ ಹೊರತು ಬೇರೆ ಯಾರೂ ಸಂಪಾದಿಸಿಕೊಟ್ಟದ್ದಲ್ಲವೆಂದು ತಿಳಿದುಕೊಳ್ಳಬೇಕು. ಇಷ್ಟೇ ಅಲ್ಲ. ಇದಕ್ಕಿಂತ ಹೆಚ್ಚಾದ ಅಂಶವನ್ನು ಕೂಡ ಅವನು ತಿಳಿದುಕೊಳ್ಳಬಹುದು. ಅದೇನೆಂದರೆ—ಪ್ರಾಣಿಗಳ ಪುರೋಭಿವೃದ್ಧಿಗೋಸ್ಕರವೇ ಸಂಸಾರಗತಿಯು ನಡೆಯತಕ್ಕದ್ದೆಂಬ ದೈವವಿಧಾನದ ಬಲದಿಂದ ಮನುಷ್ಯನಿಗೆ ಸಂಭವಿಸುವ ಸ್ಥಿತಿಗತಿಗಳೆಲ್ಲವೂ ಅವನ ಉನ್ನತಿಗೆ ಅತ್ಯಾವಶ್ಯಕವಾದ ಸುಗುಣಗಳು ಅವನಲ್ಲಿ ಆವಿರ್ಭಸಲು ಉಚಿತವಾದ ಕಾರಣಸಾಮಗ್ರಿಗಳಾಗಿರುತ್ತವೆಂದು ದೃಢವಾಗಿ ನಂಬಿರಬಹುದು ಅಂತಹ ಸ್ಥಿತಿಗತಿಗಳೆಲ್ಲವೂ ತಾನಾಗಿ ಇಷ್ಟಪಟ್ಟು ಮನುಷ್ಯನು ಬಯಸಿದವುಗಳಾಗಿಯೇ ಇರುತ್ತವೆಂದು ಹೇಳಲಾಗದು ಆದರೆ ಅವುಗಳೆಲ್ಲವೂ ಅವನವನ ಕರ್ಮಾನುಸಾರ ಬರತಕ್ಕವುಗಳೇ ಹೊರತು ಬೇರೆಯಲ್ಲ ಹೀಗೆ ಪೂರ್ವಕರ್ಮಾನುಸಾರವಾಗಿ ಮನುಷ್ಯರ ಸ್ಥಿತಿಗತಿಗಳಿರುತ್ತವೆ, ಅವುಗಳು ಆಗಾಗ್ಗೆ ಅವನ ಉನ್ನತಿಗೆ ಬಹಳ ಅಡ್ಡಿಮಾಡುತ್ತವೆ ಎಂಬೀ ಅಂಶವನ್ನು ಮಾತ್ರ ಬಿಟ್ಟು ಮಿಕ್ಕ ಅಂಶಗಳನ್ನು ನೋಡಿದರೆ ಪ್ರಕೃತ ಸ್ಥಿತಿಗಳೇ ಅವನ ಅಭಿವೃದ್ಧಿಗೆ ಸಾಧಕಗಳಾಗಿರುವುವು. ಪೂರ್ವಕರ್ಮದಿಂದ ಅವನಿಗೆ ನಾನಾವಿಧ ಕಷ್ಟವು ಬರಬಹುದು ಆದರೆ ಆ ಕಷ್ಟವನ್ನು ಕೊಡುವುದರಲ್ಲಿ ಒಂದು ಉದ್ದೇಶವಿದೆ ಅದೇನೆಂದರೆ—ಕಷ್ಟಗಳು ಬಂದಾಗ ಅವುಗಳನ್ನು ದಾಟುವ ಕ್ರಮವನ್ನು ತಿಳಿದುಕೊಳ್ಳುವನು ಅದರ ಜೊತೆಗೆ ಭೂತದಯಾಪಶ್ಚಾತ್ತಾಪಗಳು ಅಂಕುರಿಸುವುವು ಅಲ್ಲದೆ ಕಷ್ಟದ ಮೂಲಕವಾಗಿ ಧೈರ್ಯಸ್ಥೈರ್ಯ ಸಹನಶೀಲತೆ ಬಲ ಮೊದಲಾದ ಸುಗುಣಗಳನ್ನು ತನ್ನಲ್ಲಿ ಸಂಪಾದಿಸಿಕೊಳ್ಳುವನು ಸಾಧಾರಣವಾಗಿ ಜನರು ಹೇಳುವುದರಲ್ಲಿ ಸಂಸಾರಗತಿಯೆಲ್ಲವೂ ನಮಗೆ ವಿರೋಧಮಾಡುವುದಕ್ಕಾಗಿಯೇ ಹುಟ್ಟಿದುವೆಂದು ಅಭಿಪ್ರಾಯಪಡುವರು ಅದು ಹಾಗಲ್ಲ ಸಾವಧಾನವಾಗಿ ಜನರು ನೋಡಿದುದೇ ಆದರೆ, ವಸ್ತುಸ್ಥಿತಿ ಗೊತ್ತಾಗುವುದು ಪ್ರತಿಯೊಂದು ಸಂದರ್ಭವೂ ಶ್ರೇಯೋಮಾರ್ಗದಲ್ಲಿ ಮೇಲೆ ಮೇಲೆ ಹತ್ತುವುದಕ್ಕೆ ಸಹಾಯವಾಗುವಂತೆಯೇ ಉದ್ದೇಶಪೂರ್ವಕವಾಗಿ ಏರ್ಪಡಿಸಲ್ಪಟ್ಟಿರುವುದು "ಆಗುವುದೆಲ್ಲವೂ ಒಳ್ಳೆಯದಕ್ಕೇ" ಎಂಬ ಸಾನುತಿಯೂ ಉಂಟು ವಾಚಕಪ್ರಿಯರೇ, ಪ್ರಪಂಚವು ಮನುಷ್ಯನ ಅಭ್ಯುದಯಕ್ಕೋಸ್ಕರವಾಗಿಯೇ ರಚಿಸಲ್ಪಟ್ಟಿದೆ ಎಂಬುವದನ್ನು ತಿಳಿಯತಕ್ಕಷ್ಟು ಬುದ್ಧಿಶಕ್ತಿಯನ್ನೂ, ಪರರಿಗೆ ಸಹಾಯಮಾಡಬೇಕೆಂಬಷ್ಟು ಸೌಶೀಲ್ಯವನ್ನೂ ಸಂಪಾದಿಸಿದ ಕೂಡಲೆ ಮನುಷ್ಯನಾದವನು ಅಂತಹ ಪ್ರಪಂಚದ ಗತಿಯಲ್ಲಿ ವಿವೇಕಪೂರ್ವಕವಾಗಿ ನೆರವಾಗಬೇಕೆಂಬುದೂ ಸಹ ಪರಶಿವನ ಉದ್ದೇಶದ ಒಂದು ಅಂಶವೆಂಬ ವಿಷಯದಲ್ಲಿ ಏನೂ ಸಂಶಯವಿಲ್ಲ. ಅದು ಹಾಗಿರಲಿ ಭಗವಂತನು ಸೃಷ್ಟಿಸಿದ ಪ್ರಪಂಚವು ವಾಸ್ತವವಾಗಿಯೇ ಆಶ್ಚರ್ಯಕರವಾಗಿಯೂ ರಮಣೀಯವಾಗಿಯೂ ಇರುವುದರಿಂದ ಅಂತಹ ರಚನೆಯನ್ನು ತಿಳಿದುಕೊಂಡೊಡನೆಯೇ ಮನುಷ್ಯನು ತನ್ನ ಯಾವಚ್ಛಕ್ತಿಯನ್ನೂ ವಿನಿಯೋಗಿಸಿ ಆ ರಚನೆಯಲ್ಲಿ ತಾನೂ ಸಹಾಯನಾಗತಕ್ಕ ಪ್ರಯತ್ನವನ್ನು ಬಿಟ್ಟು ಬೇರೆ ಉದ್ದೇಶವನ್ನು ಎಂದಿಗೂ ಇಟ್ಟುಕೊಳ್ಳಲಾರನು. ಪ್ರಪಂಚದ ರಚನೆಯಲ್ಲಿ ತಾನು ನಿರ್ವಹಿಸತಕ್ಕ ಅಂಶವು ಎಷ್ಟು ಸ್ವಲ್ಪವಾಗಿದ್ದರೂ ಆ ಕಾರ್ಯದಲ್ಲಿಯೇ ಆಸಕ್ತನಾಗುವನು.

ಕಾರ್ತಿಕ ದೀಪೋತ್ಸವ

ತೀರ್ಥಹಳ್ಳಿ ತಾಲ್ಲೂಕು ಶ್ರೀ ಮಳಲಿ ಬೃಹನ್ಮಠದಲ್ಲಿ ಪದ್ಧತಿ ಪ್ರಕಾರ ಇದೇ ಕಾರ್ತಿಕ ಶುದ್ಧ|| ೧೪ ಬುಧವಾರ ಪ್ರಾತಃಕಾಲ ಶ್ರೀ ವೀರೇಶ್ವರ ನಾಗಾರ್ಜುನಮೂರ್ತಿಗಳಿಗೆ ರುದ್ರಾಭಿಷೇಕ ಅಷ್ಟವಿಧಾರ್ಚನಷೋಡಶಪೂಜೆಯೂ ಮಧ್ಯಾಹ್ನ ಗುರುಪಾದ ಮಹಾಪೂಜೆಯೂ ಗಣಸಂತರ್ಪಣೆಯೂ ನೆರವೇರಿದವು. ಬಳಿಕ ಸಾಯಂಕಾಲ ಮಠಾಧ್ಯಕ್ಷರಾದ ಶ್ರೀಗುರುನಾಗಾರ್ಜುನಶಿವಾಚಾರ್ಯಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಗುರುಬೋಧೆಯಿಂದ ಸರ್ವರೂ ಧನ್ಯರಾದರು

ತಳಿರ್ತೋರಣಾದಿಗಳಿಂದಲಂಕೃತವಾದ ಶ್ರೀ ಮಠದ ಮುಂಭಾಗದ ಆವರಣದಲ್ಲೂ ಗುರುದೇವತಾ ಮಂದಿರಗಳಲ್ಲೂ ದೀಪೋತ್ಸವವಾದೊಡನೆಯೇ ಕವಲೇದುರ್ಗದ ಬೃಹನ್ಮಠಾಧ್ಯಕ್ಷರಾದ ಶ್ರೀ ಚರಮೂರ್ತಿಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಕೀರ್ತನಕೇಸರಿ ವೇ|| ಗುಬ್ಬಿ ಶಿವರುದ್ರಶಾಸ್ತ್ರಿಗಳವರು ಸರಸ ಶಿವಸಂಕೀರ್ತನೆಯನ್ನು ಅನುವಾದ ಮಾಡಿ ಸಭಿಕರನ್ನು ಆನಂದಗೊಳಿಸಿದರು ತರುವಾಯ, ಅಧ್ಯಕ್ಷ ಸ್ವಾಮಿಗಳವರು ಶಾಸ್ತ್ರಿಗಳವರ ಕಥಾಸಂವಿಧಾನವನ್ನು ಕುರಿತು ಶ್ಲಾಘಿಸಿ ತಮ್ಮ ಹೃತ್ಪೂರ್ವಕವಾದ ಸಂತೋಷವನ್ನು ವ್ಯಕ್ತಗೊಳಿಸಿ ಆಶೀರ್ವದಿಸಿದರು. ಇಂತಹ ಕಠಿನಕಾಲದಲ್ಲೂ ಇಷ್ಟರಮಟ್ಟಿಗೆ ನಡೆಯುವುದೆಂದರೆ ಆಶ್ಚರ್ಯವೇ ಸರಿ.

ಓರ್ವ ಧರ್ಮಾಭಿಮಾನಿ

ತುರ್ಕಿಯು ಯುದ್ಧದಲ್ಲಿ ಭಾಗ ವಹಿಸುವುದೇ ?

"ಮುಂದೆ ಬಹು ಮುಖ್ಯವಾದ ಮಿಲಿಟರಿ ಮತ್ತು ರಾಜಕೀಯ ಘಟನಾವಳಿಗಳು ನಡೆಯಲಿವೆ. ತುರ್ಕಿಯು ಖಂಡಿತವಾಗಿ ಸಂಯುಕ್ತ ರಾಷ್ಟ್ರಗಳ ಕಡೆ ಸೇರಲಿದೆಯೆಂದು ಹೇಳಬಹುದು. ಸಕಾಲದಲ್ಲಿದು ಮಿತ್ರದೇಶಗಳ ಕಡೆ ಸೇರಿ ಹೋರಾಡುವುದು" ಎಂಬುದಾಗಿ ಸೈನ್ಯ ಪತ್ರಿಕೆಯಾದ 'ಆರ್ಮಿ ಎಂಡ್ ನೇವಿ ಜರ್ನಲ್' ಪತ್ರಿಕೆಯು ಈ ರೀತಿ ಬರೆದಿದೆ.

ಇಂಡಿಯಾ ಚೀಣಾ ರಣಕ್ಷೇತ್ರದ ಮಹತ್ತ್ವ

ಸಂಯುಕ್ತ ಸಂಸ್ಥಾನದ ಸೈನ್ಯದ ಬ್ರಿಗೇಡಿಯರ್ ಜನರಲ್ ಡಬ್ಲ್ಯು. ಇ. ಆರ್ ಕಾವೆಲ್‌ರವರು ಜನರಲ್ ವೀಲರ್‌ರವರ ಸ್ಥಾನದಲ್ಲಿ ಚೀಣಾ, ಬರ್ಮಾ ಮತ್ತು ಇಂಡಿಯಾಗಳ ಸೇವೆಗಾಗಿ ಇರುವ ಅಮೆರಿಕ ಸೈನ್ಯದ ಕಮ್ಯಾಂಡರಾಗಿ ಅಧಿಕಾರ ವಹಿಸಿಕೊಳ್ಳುವ ಸಲುವಾಗಿ ಡೆಲ್ಲಿಗೆ ಆಗಮಿಸಿದ್ದಾರೆ. ಜನರಲ್ ವೀಲರ್‌ರವರು ಹೊಸ ಕಮ್ಯಾಂಡಿನ ಅಧಿಕಾರ ವಹಿಸಿಕೊಳ್ಳಲು ಹೋಗುವವರಾಗಿದ್ದಾರೆ. ಬ್ರಿಗೇಡಿಯರ್ ಜನರಲ್ ಕಾವೆಲ್‌ರವರು ಮಾತನಾಡುತ್ತ ಇಂಡಿಯಾ ಬರ್ಮಾ ಮತ್ತು ಚೀಣಾದ ಯುದ್ಧ ಕ್ಷೇತ್ರವು ಅತ್ಯಂತ ಮುಖ್ಯವಾದುದೆಂದು ತಿಳಿಸಿದುದೇ ಅಲ್ಲದೆ ಸಧ್ಯದಲ್ಲಿಯೇ ಇದರ ಮಹತ್ತ್ವವು ಹೆಚ್ಚುವುದೆಂದೂ ಹೇಳಿದರು.

ಪಂಚಾಚಾರ್ಯಪ್ರಭಾ.

೧೯೪೩ನೆಯ ನವಂಬರ್ ತಾ। ೨೨ನೇ ಸೋಮವಾರ

ವೀರಶೈವಮತಸ್ಥಾಪನಾಚಾರ್ಯರು

ಋಗಾದಿವೇದಗಳ ಆಧಾರದಿಂದ ಹುಟ್ಟಿದ ಮತಗಳೆಲ್ಲವೂ ವೈದಿಕಮತಗಳೆನಿಸಿಕೊಳ್ಳುತ್ತವೆ ಈ ವೈದಿಕ ಮತಗಳು ಅನಂತವಾಗಿದ್ದರೂ ಪ್ರಕೃತದಲ್ಲಿ ಶೈವ ವೈಷ್ಣವ ಎಂಬ ಎರಡು ಭೇದಗಳು ಮಾತ್ರ ಸ್ಪಷ್ಟವಾಗಿ ಕಂಡು ಬರುತ್ತವೆ ಶೈವರಲ್ಲಿ ಅದ್ವೈತಿಗಳೆಂದೂ ಶಕ್ತಿವಿಶಿಷ್ಟಾದ್ವೈತಿಗಳೆಂದೂ ಎರಡು ಭೇದಗಳುಂಟು ವೈಷ್ಣವರಲ್ಲಿ ದ್ವೈತಿಗಳೆಂದೂ ವಿಶಿಷ್ಟಾದ್ವೈತಿಗಳೆಂದೂ ಎರಡು ಭೇದಗಳುಂಟು ಈ ನಾಲ್ಕು ಮತಗಳಿಗೂ ಒಬ್ಬೊಬ್ಬ ಮತಾಚಾರ್ಯರಿರುತ್ತಾರೆ ಅದ್ವೈತಮತಕ್ಕೆ ಶಂಕರಾಚಾರ್ಯರು, ಶಕ್ತಿವಿಶಿಷ್ಟಾದ್ವೈತಮತಕ್ಕೆ ರೇಣುಕಾದಿ ಪಂಚಾಚಾರ್ಯರು, ವಿಶಿಷ್ಟಾದ್ವೈತಮತಕ್ಕೆ ರಾಮಾನುಜಾಚಾರ್ಯರು ದ್ವೈತಮತಕ್ಕೆ ಮಧ್ವಾಚಾರ್ಯರು ಮೂಲಗುರುಗಳಾಗಿರುತ್ತಾರೆ ಆಯಾ ಮತಗಳಿಗೆ ಇವರು ನಾಲ್ವರೇ ಮೂಲಗುರುಗಳಾಗಲು ಕಾರಣವೇನೆಂಬ ಶಂಕೆಯು ಅನೇಕರಲ್ಲಿ ಉತ್ಪನ್ನವಾಗಬಹುದು ದ್ವೈತಮತದ ಆದ್ಯಂತಸ್ವರೂಪವು ಅದ್ವೈತಮತದ ಆದ್ಯಂತಸ್ವರೂಪವು ವಿಶಿಷ್ಟಾದ್ವೈತಮತದ ಶಕ್ತಿವಿಶಿಷ್ಟಾದ್ವೈತಮತದ ಆದ್ಯಂತಸ್ವರೂಪಗಳೂ ಆಯಾ ಮತಾಚಾರ್ಯರಿಂದ ಭೂಲೋಕದಲ್ಲಿ ಸ್ಪಷ್ಟವಾಗಿ ಬೆಳಗಲ್ಪಟ್ಟಿರುತ್ತವೆ ಆಯಾ ಸಿದ್ಧಾಂತಗಳಲ್ಲಿ ಜೀವಾತ್ಮ-ಪರಮಾತ್ಮಸ್ವರೂಪವು ಒಂದೊಂದು ವಿಧವಾಗಿ ವರ್ಣಿಸಲ್ಪಟ್ಟಿರುತ್ತವೆ ಇವೆಲ್ಲಾ ಮತಗಳ ಸ್ವರೂಪವು ವೇದಗಳಲ್ಲಿ ಉಕ್ತವಾಗಿದ್ದರೂ ಒಂದೇ ಎಡೆಯಲ್ಲಿ ಸ್ಪಷ್ಟವಾಗಿಲ್ಲ ಒಬ್ಬೊಬ್ಬರು ಮತಾಚಾರ್ಯರು ಅವತಾರಮಾಡಿ ಅಗಾಧವಾದ ವೇದಾರ್ಣವವನ್ನು ಪ್ರವೇಶಿಸಿ ತಮಗಭಿಮತವಾದ ತತ್ತ್ವರತ್ನಗಳನ್ನುದ್ಧರಿಸಿ ಮಾಲಿಕೆಯನ್ನಾಗಿ ಮಾಡಿ ಜೀವಕೋಟಿಗೆ ಬೋಧಿಸಿರುವುದರಿಂದ ಇವರನ್ನು ಆಯಾ ಮತಸ್ಥಾಪನಾಚಾರ್ಯರೆಂದು ಕರೆಯುತ್ತಾರೆ ವೇದಾಗಮಗಳಲ್ಲಿ ಅಡಕವಾಗಿರುವ ನಿಗೂಢವಾದ 'ಶಕ್ತಿವಿಶಿಷ್ಟಾದ್ವೈತ ಸಿದ್ಧಾಂತ" (ವೀರಶೈವಮತ) ಎಂಬ ಮಹಾರತ್ನವನ್ನು ಶೋಧಿಸಿ ಭೂಮಿಗೆ ತಂದವರೆಂದರೆ ಶ್ರೀರೇಣುಕಾದಿ ಪಂಚಾಚಾರ್ಯರಲ್ಲದೆ ಬೇರೆಯಲ್ಲ ಆಮೇಲೆ ಆ ರತ್ನವನ್ನು ಅನೇಕಜನ ಉಪಾಚಾರ್ಯರು ನಾನಾವಿಧವಾಗಿ ಪ್ರಕಾಶಗೊಳಿಸಿರುತ್ತಾರೆ ಅವರೆಲ್ಲರೂ ಆ ಮಹದಾಚಾರ್ಯರ ಅನುಯಾಯಿಗಳಾದರು . ವೀರಶೈವಮತವು ವೇದಾಗಮಗಳಲ್ಲಿ ಉಕ್ತವಾಗಿರುವುದರಿಂದ ಆ ವೇದಾಗಮಗಳು ಶಿವನಿಂದುಕ್ತಗಳಾದುದರಿಂದ ಈ ಮತಕ್ಕೆ ಶಿವನೇ ಮೂಲಕರ್ತನಲ್ಲದ ಪಂಚಾಚಾರ್ಯರಲ್ಲವೆಂದು ಈಗಿನ ಕಾಲದಲಿ ನಾನಾವಿಧದ ಸ್ವೇಚ್ಛಾವಾದಗಳು ಅಲ್ಲಲ್ಲಿಯೆ ತಲೆದೋರುತ್ತಿವೆ ಪಂಚಾಚಾರ್ಯರೇ ಮತವನ್ನು ಸ್ಥಾಪಿಸಿದರೆಂದರೆ ಅನೇಕರಿಗೆ ಒಂದು ವಿಧವಾದ ಶಿರೋವ್ಯಾಧಿಯೇಳುವುದು ಇದರ ಕಾರಣವೇನೆಂಬುದು ಮಾತ್ರ ಗೋಚರವಿಲ್ಲ ವೀರಶೈವಮತವು ಮೊದಲಿನಂತೆ ಅರ್ವಾಚೀನಮತವೆನ್ನುವ ಅಭಿನಿವೇಶವನ್ನು ಬಿಟ್ಟು ಬಹುಪ್ರಾಚೀನಮತವೆಂಬುದನ್ನು ಮಾತ್ರ ಈಗ ಒಪ್ಪುತ್ತಿರುವುದೊಂದು ಸಂತೋಷಸೂಚಕವಾದ ಸಂಗತಿಯೇ ಸರಿ ಇವಕ್ಕೆ ಇನ್ನಾವ ಸನಾತನಧರ್ಮಿಯೂ ಹೇಳಿಕೊಂಡರೂ ಪ್ರಾಚೀನತೆಯನ್ನೊಪ್ಪುತ್ತಿರಲಿಲ್ಲ ಈಗಿನ ತಮ್ಮ ವ್ಯೂಹದಲ್ಲಿ ಸೇರಿದವರು ಯಾರಾದರೂ ಬಂದು ಉಪನ್ಯಾಸಮಾಡಿದರೆ ಸುಮ್ಮನೆ ಒಪ್ಪಿಕೊಳ್ಳುತ್ತಾರೆ ತತ್ತ್ವಶೋಧಕರೆಂದು ಹೇಳಿಕೊಳ್ಳುವ ಆ ಮಹಾಶಯರಾದರೋ ವೀರಶೈವಮತವು ಪ್ರಾಚೀನಸನಾತನಮತವೆಂದು ಧೈರ್ಯದಿಂದ ಹೇಳಲುಪಕ್ರಮಿಸಿ ಮತಸ್ಥಾಪಕರಾದ ಆಚಾರ್ಯರ ವಿಷಯದಲ್ಲಿ ಮಾತ್ರ ಮೌನವ್ರತಾವಲಂಬಿಗಳಾಗಿದ್ದಾರೆ ಪಂಚಾಚಾರ್ಯರಿಂದಲೇ ವೀರಶೈವಸಿದ್ಧಾಂತವು ಸ್ಥಾಪಿತವಾಯಿತೆಂದು ಮನಸ್ಸಿನಲ್ಲಿ ನಿರ್ಧಾರವಾಗಿದ್ದರೂ ಅದು ವಾಕ್ಕಿನಲ್ಲಿ ವ್ಯವಹರಿಸುವುದು ಕಷ್ಟವಾಗಿ ಪರಿಣಮಿಸಿರುವುದು ವೀರಶೈವಮತಕ್ಕೆ ಅತಿಪ್ರಾಚೀನತೆಯನ್ನು ಒಪ್ಪಿಕೊಂಡಮೇಲೆ ಕರ್ತೃಗಳಾದ ಮತಸ್ಥಾಪನಾಚಾರ್ಯರನ್ನು ಒಪ್ಪಿಕೊಳ್ಳಬೇಕಾಗುವುದು ಸಪ್ತ ತತ್ತ್ವಗಳೂ ಚತುರ್ದಶಭುವನಗಳೂ ಎಂಬತ್ತುನಾಲ್ಕುಲಕ್ಷ ಜೀವರಾಶಿಗಳೂ ಸೂರ್ಯಚಂದ್ರಾತ್ಮರುಗಳೂ ಸಕಲವೂ ಈಶ್ವರನಿಂದಲೇ ಸೃಷ್ಟವಾಗಿರುತ್ತದೆ ಸಮಸ್ತ ಆಚಾರ್ಯರೂ ಪರಮೇಶ್ವರನೊಬ್ಬನಿಂದಲೇ ಸೃಷ್ಟಿಸಲ್ಪಟ್ಟಿರುತ್ತಾರೆ ಅಷ್ಟುಮಾತ್ರದಿಂದ ಮತಸ್ಥಾಪನಾಚಾರ್ಯರನ್ನು ಮತಸ್ಥಾಪಕರಲ್ಲವೆಂದು ಹೇಳುವುದಕ್ಕಾಗುವುದಿಲ್ಲ ಮಕ್ಕಳು ಈಶ್ವರನೇ ಸಕಲ ಉತ್ಪತ್ತಿಗೂ ಕಾರಣನೆಂದು ತಿಳಿದು ಜನಕಾಂಕಕಾರಣರಾದ ತಂದೆತಾಯಿಗಳನ್ನು ನಿರಾಕರಿಸಲಾದೀತೆ ? ಸರ್ವಸೃಷ್ಟಿಕರ್ತನಾದವನು ಪರಮೇಶ್ವರನೆಂಬುದು ಸಾಮಾನ್ಯನಿಯಮವಾದಾಗ್ಯೂ ಇವನು ನಮ್ಮ ತಂದೆ ಇವಳು ನಮ್ಮ ತಾಯಿ ಇದು ನಮ್ಮ ತಂದೆಯು ಕಟ್ಟಿದ ಮನೆಯು ಅದು ನಮ್ಮ ಮನೆಯಲ್ಲ ಎಂಬ ವಿಶೇಷನಿಯಮಗಳನ್ನು ಪ್ರತಿಯೊಬ್ಬನೂ ಪಾಲಿಸುವಂತೆ ವೀರಶೈವಮತಪ್ರಂಪಕೆ, ದ್ವೈತ ದ್ವೈತ ಮತಗಳೆಲ್ಲವೂ ಭಗವಂತನಿಂದಲೇ ವೇದಾಗಮಗಳ ಮೂಲಕ ಹೇಳಲ್ಪಟ್ಟಿದ್ದರೂ ಭೂಲೋಕದಲ್ಲಿ ಸ್ಥಾಪಿಸುವ ಮೂಲಕ ಒಂದೊಂದು ಮತಕ್ಕೆ ಒಬ್ಬೊಬ್ಬರು ಮತಸ್ಥಾಪನಾಚಾರ್ಯರೆಂಬ ವಿಶೇಷನಿಯಮವನ್ನು ಎಲ್ಲಾ ವೈದಿಕ ಅವೈದಿಕಮತಗಳೂ ಪಾಲಿಸುವಂತೆ ವೀರಶೈವಮತಸ್ಥಾಪನಾಚಾರ್ಯರು ರೇಣುಕಾದಿ ಪಂಚಾಚಾರ್ಯರೇ ಎಂದು ಪ್ರತಿಯೊಬ್ಬ ಲಿಂಗಧಾರಿಯೂ ದೃಢನಿಶ್ಚಯ ಮಾಡಿಕೊಳ್ಳಬೇಕು ಮೂಲಮತಾಚಾರ್ಯರಿಲ್ಲದ ಮತವು ರುಂಡವಿಲ್ಲದ ಮುಂಡದಂತೆ ನಿರ್ಜೀವವಾದುದೇ ಸರಿ ಅನಾದಿಕಾಲದಿಂದ ಪ್ರತಿಯೊಬ್ಬ ವೀರಶೈವನ ಮನೆಯಲ್ಲಿ ನಡೆಯುವ ನಿತ್ಯನೈಮಿತ್ತಿಕಾದಿ ಕರ್ಮಗಳಲ್ಲಿ ಶ್ರೀಪಂಚಾಚಾರ್ಯರನ್ನು ಆಯಾ ಋತ್ವಿಕ್ಕುಗಳ ಮೂಲಕ ಸಂಕಲ್ಪನ್ಯಾಸ ಆವಾಹನಾದಿಗಳಿಂದ ಪಂಚಕಲಶಗಳಲ್ಲಿ ಆವಾಹಿಸುವ ಪದ್ಧತಿಯಾದರೋ ಇವರೇ ಮತಸ್ಥಾಪನಾಚಾರ್ಯರೆಂಬುದವರ ಗುರುತನ್ನು ತೋರಿಸಿಕೊಡುತ್ತದೆ ಮಗು ಹುಟ್ಟಿದರೆ ಪಂಚಾಚಾರ್ಯರ ಸಾಕ್ಷಿಯಾಗಿ ಲಿಂಗಧಾರಣಮಾಡಬೇಕು ಪಂಚಾಚಾರ್ಯರ ಸಾಕ್ಷಿಯಾಗಿಯೇ ಬ್ರಹ್ಮಚರ್ಯಾಶ್ರಮ ಗೃಹಸ್ಥಾಶ್ರಮಗಳನ್ನೂ ಅದರ ಮುಂದಿನ ವಾನಪ್ರಸ್ಥಾಶ್ರಮವನ್ನೂ ಅದರ ಮುಂದಿನ ಸಂನ್ಯಾಸಾಶ್ರಮವನ್ನೂ ಸ್ವೀಕರಿಸಬೇಕಾಗಿದೆ ಮತ್ತು ಪ್ರತಿಯೊಬ್ಬ ಲಿಂಗಧಾರಿಯೂ ಆ ಪಂಚಾಚಾರ್ಯರ ಗೋತ್ರಸೂತ್ರಗಳನ್ನು ಹೇಳುತ್ತಲೇ ಬಂದಿರುತ್ತಾನೆ ವೀರಶೈವಸಿದ್ಧಾಂತವೂ ಸಹ ಇದೇ ಅಭಿಪ್ರಾಯವನ್ನೇ ಒತ್ತಿ ಒತ್ತಿ ಹೇಳುತ್ತದೆ ಇಷ್ಟರಮಟ್ಟಿಗೆ ವೀರಶೈವಪ್ರಪಂಚದಲ್ಲಿ ಶ್ರೀಪಂಚಾಚಾರ್ಯರ ವ್ಯಾಪಕತೆಯು ಉಂಟಾಗಿರುವಾಗ ಪಂಚಾಚಾರ್ಯರು ಇತ್ತೀಚಿನವರು, ಮತಸ್ಥಾಪನಾಚಾರ್ಯರಲ್ಲವೆಂದು ಹೇಳುವ ವಚನಗಳು ದ್ವೇಷಪೂರಿತವಾದವುಗಳೆಂದು ಹೇಳುವುದರಲ್ಲೇನೂ ಸಂಶಯವಿಲ್ಲ

ಯುದ್ಧವಾರ್ತೆ.

ಹಿಟ್ಲರ್ ಭೇಟಿ

ಹಿಟ್ಲರನ ಭೇಟಿಗಾಗಿ ಮುಸಲನಿಯು ಜರ್ಮನಿಗೆ ಹೋಗಿರುವನೆಂದು ಸ್ವಿಸ್ ಮೂಲಗಳಿಂದ ವರ್ತಮಾನ ಬರುತ್ತಿದೆ

ಇಟಲಿಯಲ್ಲಿ ಅಪಾರ ಚಳಿ

ಇಟಲಿಯಲ್ಲಿ ಎಂಟನೆಯ ಸೇನೆ ಇದುವರೆಗೆ ಅನುಭವಿಸದಿದ್ದಷ್ಟು ಚಳಿಯ ಹೊಡೆತಕ್ಕೆ ಸಿಕ್ಕಿದೆ ೫ ನೆಯ ಸೇನೆಯೂ ಸಹ ರೋಂ ನಗರದ ಹಾದಿಯಲ್ಲಿ ಪ್ರತಿಯೊಂದು ಗಜಕ್ಕೂ ಅಪಾರ ತ್ಯಾಗತೋರಿಸುವ ಕಾಲವು ಎಂದು ಹೇಳಲಾಗಿದೆ

ಬ್ರಿಟನಿಗೆ ವಹಿಸುವ ಸೂಚನೆ

ತುರ್ಕಿಯು ತನ್ನ ತಾಟಸ್ಥ್ಯಸ್ಥಿತಿಯನ್ನು ಮುಂದುವರಿಸುವುದಲ್ಲದೆ ತನ್ನ ಕೆಲವು ವಿಮಾನ ನೆಲೆಗಳನ್ನು ಮಿತ್ರದೇಶಕ್ಕೆ ಬಿಟ್ಟುಕೊಡುವ ನಿರೀಕ್ಷೆಯಿದೆಯೆಂದು ಸ್ಪೇನಿನ ಪತ್ರಿಕೆ ಹೇಳಿದೆ

ಭಾರತದ ಮೇಲೆ ಬೀಳಲಿರುವ ಹೊ

ಯುದ್ಧಾನಂತರ ಯೂರೋಪಿನ ದಲಿತ ರಾಷ್ಟ್ರಗ ಬಡತನದ ದುಃಖವನ್ನು ತೊಡೆಯಲು ಭಾರತದಿಂ ೩೫೦ ಲಕ್ಷ ಡಾಲರ್ (ಎಂದರೆ ೧೨ ಕೋಟಿ ರೂಪಾಯಿ ಕೊಡಬೇಕಾಗಿ ಬರಬಹುದೆಂದು ನಂಬಲಾಗಿದೆ

ಜರ್ಮನರು ದಾಳಿ ಆರಂಭಿಸಿದರು

ಜರ್ಮನರು (ಯುಗೊಸ್ಲಾವಿಯ) ಡಾಲ್ಮೇಷಿಯದಕ್ಕೆ ಭಾರಿ ದಾಳಿಯನ್ನು ಆರಂಭಿಸಿರುವರು ಏಡ್ರಿಯಾಟಿಕ ಸಮುದ್ರತೀರದ ಮುಖ್ಯ ದ್ವೀಪಗಳನ್ನೂ ಸ್ಥಳಗಳನ್ನೂ ಹಿಡಿಯಲು ಪ್ರಯತ್ನವಾಗಿದೆ ಸ್ವತಂತ್ರ ಯುಗೊಸ್ಲಾವ್ ಸೈನಿಕರ ಪ್ರತಿದಾಳಿಯೂ ಬಲವಾಗಿದೆ

೬ ತಿಂಗಳೊಳಗೆ ಜರ್ಮನಿ ಸೋಲುವುದೇ ?

ಅಮೆರಿಕದ ಅಭಿಪ್ರಾಯದಲ್ಲಿ ಇನ್ನೂ ಯುದ್ಧವು ಉತ್ಕಟಸ್ಥಿತಿಗೆ ಬಂದಿಲ್ಲವೆಂದೂ, ಇನ್ನು ೬ ತಿಂಗಳೊಳಗೆ ಜರ್ಮನಿಯು ಸೋಲಿಸಲ್ಪಡುವುದೆಂಬುದಾಗಿ ಅಮೆರಿಕನರು ನಂಬಿಲ್ಲವಾದರೂ ಅಷ್ಟರಲ್ಲಿ ಜರ್ಮನಿಯು ಕುಸಿದು ಬೀಳುವ ಸಂಭವವೇನೋ ಇದೆಯೆಂದೂ ಕಾವೆಲ್‌ರು ನುಡಿದರು

ರಷ್ಯದಲ್ಲಿ ಜರ್ಮನರು ಸೋತಂತೆಯೇ !

ರಷ್ಯದ ರಣರಂಗದಲ್ಲಿ ಜರ್ಮನರು ಸೋತಂತೆಯೇ ಎಂದು ಜಪಾನರಲ್ಲಿ ಭಾವನೆ ಮೂಡಿದೆಯೆಂದು ಮಿಲಿಟರಿ ಪ್ರವೀಣರೊಬ್ಬರು ಬರೆದಿರುವರಂತೆ ಅವರು ಕೆಲವು ದಿನಗಳಿಂದ ರಷ್ಯದ ರಣರಂಗದಲ್ಲಿ ಸಂಚರಿಸಿ ಈ ಅಭಿಪ್ರಾಯವನ್ನು ಪಟ್ಟಿರುವುದಾಗಿ ಹೇಳಲಾಗಿದೆ

ಮಿತ್ರಸೇನೆ ಹಿಂದೆ ಸರಿಯಿತು

ಇಟಲಿಯಲ್ಲಿ ಸಲೆರ್ನೊ ಕದನವಾದನಂತರ ಇದುವರೆಗೆ ಜರ್ಮನರು ಇಷ್ಟು ಉಗ್ರವಾಗಿ ಪ್ರತಿಭಟಿಸಿರಲಿಲ್ಲ ಈಗ ಅವರು ಬಲವಾಗಿ ಮುಂದೆ ನಡೆಯಲು ಯತ್ನಿಸುತ್ತಿದ್ದಾರೆ ಪಶ್ಚಿಮ ಅಪೆನೈನ್ಸ್ ಪರ್ವತ ಭಾಗದಲ್ಲಿ ಅಮೆರಿಕದ ಸೇನೆಗಳು ಸ್ವಲ್ಪ ಹಿಂದಕ್ಕೆ ಬಂದಿವೆ

ತುರ್ಕಿಯ ಮೇಲೆ ಸಂದೇಹ

ತುರ್ಕಿಯೇನಾದರೂ ಡಾರ್ಡನೆಲ್ಸ್ ಜಲಸಂಧಿ ಮತ್ತು ತಮ್ಮ ಕೆಲವು ವಿಮಾನದ ನೆಲೆಗಳನ್ನು ಬ್ರಿಟಿಷರ ವಶಪಡಿಸಿದರೆ, ಜರ್ಮನಿಯು ತೊಂದರೆಗೆ ಈಡಾಗುತ್ತದೆಯಷ್ಟೆ ? ಅದಕ್ಕಾಗಿ ಜರ್ಮನಿಯು ಡೆಡೊಕನೀಸ್‌ದ್ವೀಪ ಭಾಗದಲ್ಲಿ ತನ್ನ ಕೈ ಬಲಪಡಿಸಲು ಯತ್ನಿಸಿದೆ ಯುಗೋಸ್ಲಾವ್ ತೀರದಲ್ಲಿಯೂ ಬಲವಾದ ಕಾವಲನ್ನು ಏರ್ಪಡಿಸಿದೆ ಅಲ್ಲದೆ ಡಾರ್ಡನೆಲ್ಸ್ ಮಹಾದ್ವಾರದಂತಿರುವ ಅನೇಕ ದ್ವೀಪಗಳಲ್ಲಿ ಬಲವಾಗಿ ನಿಲ್ಲಲು ಯತ್ನಿಸಿದೆ ಲೆರಾಸ್ ದ್ವೀಪದ ಕದನಕ್ಕೂ ಇದೇ ಕಾರಣವೆಂದು ನಂಬಲಾಗಿದೆ

ಲೆರೋಸಿನ ಪ್ರಾಮುಖ್ಯ

“ಲೆರೋಸ್ ರಕ್ಷಣೆಗಾಗಿ ಜರ್ಮನಿಯು ಕ್ರೀಟ್ ಮತ್ತು ರ್ಹೋಡ್ಸ್ ದ್ವೀಪಗಳಲ್ಲಿರುವ ತನ್ನ ಬಲವನ್ನೆಲ್ಲಾ ವಿನಿಯೋಗಿಸುತ್ತಿದೆ. ಸೋಲಾಗಲಿ, ಗೆಲುವಾಗಲಿ ಹೊಡೆದಾಡಬೇಕಾದದ್ದೆ. ಲೆರೋಸ್ ಮತ್ತು ಸಾಮೋಸ್ ದ್ವೀಪಗಳು ಡಾರ್ಡನಲ್‌ಗೆ ಬೀಗದ ಕೈಯಂತಿವೆ ಬಾಲ್ಕನ್ಸನಲ್ಲಿ ಮಿತ್ರಸೇನೆಗಳ ಏಟು ಇಷ್ಟರಲ್ಲಿಯೇ ಬೀಳುವುದೆಂಬುದು ಖಚಿತವಾಗಿದೆ ಈ ಕ್ಷೇತ್ರದಲ್ಲಿ ಹಂಚಿಹೋಗಿರುವ ಜರ್ಮನ್ ಸೇನೆಗಳು ಆಯಾ ಸ್ಥಳಗಳನ್ನು ಬಿಡದಂತೆ ಮಾಡಿದರೆ ಬಹಳಮಟ್ಟಿನ ಜಯ ಲಭ್ಯವಾದಂತಾಗುವುದು ” ಎಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆ ತಿಳಿಸುತ್ತದೆ

ರಷ್ಯದಲ್ಲಿರುವ ನಾಜಿ ಸೈನ್ಯವನ್ನು ಉಳಿಸುವ ಪ್ರಯತ್ನ

ರಷ್ಯದಲ್ಲಿ ವೃಥಾ ನಾಶಕ್ಕೆ ಗುರಿಯಾಗುತ್ತಿರುವ ಜರ್ಮನ್ ಸೇನೆಯನ್ನು ಅಲ್ಲಿಂದ ಸುರಕ್ಷಿತವಾದ ಸ್ಥಾನಕ್ಕೊಯ್ಯಲು ಏನು ಉಪಾಯವನ್ನು ಕೈಕೊಳ್ಳಬಹುದೆಂಬ ವಿಚಾರವಾಗಿ ವರದಿಯೊಂದನ್ನು ಕಳುಹಿಸಲು ಹಿಟ್ಲರ್ ಕೇಳಿದ್ದಾನಂತೆ! ರಷ್ಯ ರಣರಂಗದ ಕೀವ್ ಭಾಗದಲ್ಲಿರುವ ಜರ್ಮನರನ್ನು ಹಿಂದಕ್ಕೆ ಕರೆಸದೆ ಹೋದರೆ, ಮತ್ತೊಂದು ಸ್ಟಾಲಿನ್‌ಗ್ರಾಡ್ ಆಗಬಹುದೆಂದು ಸೂಚಿಸಿರುವ ನಿಮಿತ್ತ ಈ ರೀತಿ ಹಿಟ್ಲರನು ಕೇಳಿರುವುದಾಗಿ ಹೇಳಲಾಗಿದೆ ಶೀಘ್ರದಲ್ಲಿಯೇ ನಡೆಯಲಿರುವ ಜರ್ಮನ್ ಪ್ರಮುಖರ ಸಭೆಯಲ್ಲಿ ಚರ್ಚಿಸುವ ನಿರೀಕ್ಷೆಯಿದೆ

ಲೆರೋಸ್ ದ್ವೀಪವನ್ನು ನಾಜಿಗಳು ಹಿಡಿದರು

ಲೆರೋಸ್ ದ್ವೀಪದ ಮೇಲೆ ಶತ್ರುಗಳು ಉಗ್ರವಾದ ಮುತ್ತಿಗೆ ನಡೆಸಿದರು ನಾಜಿಗಳ ಕಡೆಗೆ ಹೆಚ್ಚಿನ ಸೇನೆ ಒಂದು ಉಗ್ರ ಹೋರಾಟ ನಡೆಯಿತು ಐದು ದಿನಗಳ ಕಾಲ ಉಗ್ರವಾಗಿ ಹೋರಾಡಿದ ಮೇಲೆ ಬ್ರಿಟಿಷ್ ಮತ್ತು ಇಟಾಲಿಯನ್ ಯೋಧರು ರಕ್ಷಣ ಕಾರ್ಯವನ್ನು ತ್ಯಜಿಸಬೇಕಾಯಿತು ಜರ್ಮನರ ಕಡೆ ಹೆಚ್ಚು ವಿಮಾನಬಲವಿದ್ದುದೇ ಅವರ ಜಯಕ್ಕೆ ಕಾರಣ ಬ್ರಿಟಿಷ್ ಸೈನಿಕರು ಅದ್ಭುತರೀತಿಯಲ್ಲಿ ಹೋರಾಡಿದರು ಆದರೆ ಅವರಿಗೆ ಹೆಚ್ಚಿನ ಸೈನ್ಯಬಲವನ್ನು ಕೊಡುವುದಾಗಲಿ ಅಥವಾ ಅವರನ್ನು ಅಲ್ಲಿಂದ ಹಿಂದಕ್ಕೆ ಕರೆಸುವುದಾಗಲಿ ಸಾಧ್ಯವಾಗಲಿಲ್ಲ ಲೆರೋಸ್ ಹೋದುದರಿಂದ ಸಾಮೋಸ್ ದ್ವೀಪದಲ್ಲಿರುವ ಬ್ರಿಟಿಷ್ ಸೇನೆಗಳಿಗೆ ಹೆಚ್ಚಿನ ವಿಪತ್ತುಂಟಾಗಿದೆ ಎಂದು ಹೇಳಲಾಗಿದೆ

ರಷ್ಯದ ಬೇಡಿಕೆಗೆ ಸಮ್ಮತಿಯಿತ್ತರೇ?

ಮೆಕ್ಸಿಕೊ ನಗರದಲ್ಲಿರುವ ರಷ್ಯಾ ರಾಯಭಾರಿಯು ಮಾತನಾಡುತ್ತ ಪೋಲೆಂಡ್ ಗಡಿಯನ್ನು ಮುಟ್ಟಲು ರಷ್ಯನರಿನ್ನೂ ೨೬೦ ಮೈಲಿ ಹೋಗಬೇಕು ಎಂದು ಹೇಳಿರುವ ಅಂಶ ಕುರಿತು ಚರ್ಚೆಗಳಿಗೆ ಮೊದಲಾಗಿದೆ ಈಗ ಬರುತ್ತಿರುವ ವರದಿಯ ಪ್ರಕಾರ ರಷ್ಯನರು ಪೋಲೆಂಡಿನ ಗಡಿಗೆ ಕೇವಲ ೪೦ ಮೈಲಿ ದೂರದಲ್ಲಿರುವರು ಆದಗ್ಯೆ, ಮೆಕ್ಸಿಕೋದಲ್ಲಿರುವ ರಷ್ಯಾ ರಾಯಭಾರಿ ಹೇಳಿರುವುದನ್ನು ಕಂಡರೆ, ಪ್ರಾಯಶಃ ೧೯೩೯ ರಲ್ಲಿ ರಷ್ಯವು ಆಕ್ರಮಿಸಿದ ಪೋಲೆಂಡಿನ ಭಾಗವನ್ನು ಕೇಳಿದೆಯೆಂದು ವ್ಯಕ್ತವಾಗುತ್ತಿದೆ ಈ ಅಂಶಕ್ಕೆ ಪ್ರಾಯಶಃ ಏಡನ್ ಮತ್ತು ಹಲ್ ಇಬ್ಬರೂ ಅಂಗೀಕಾರ ಕೊಟ್ಟಿರಬೇಕೆಂದು ನಂಬಲಾಗಿದೆ ಈ ವಿಚಾರವಾಗಿ ಹಲ್‌ರವರು ಮಾತ್ರ ಯಾವ ಒಪ್ಪಂದವೂ ಆಗಿಲ್ಲವೆಂದೂ ಯುದ್ಧಾನಂತರ ಈ ವಿಚಾರ ನಿರ್ಧಾರವಾಗಬಹುದೆಂದೂ ಹೇಳಿರುವರಂತೆ ಕೆಲವು ರಾಜಕೀಯ ಪಟುಗಳ ನಿರೀಕ್ಷಣೆಯ ಪ್ರಕಾರ ಈ ಗಡಿನಾಡಿನ ಪ್ರಶ್ನೆಯು ಮುಂದೆ ನಡೆಯಲಿರುವ ಚರ್ಚಿಲ್, ಸ್ಟಾಲಿನ್, ರೂಜ್‌ವೆಲ್ಟ್ ಸಮ್ಮೇಳನದಲ್ಲಿ ನಿರ್ಧಾರವಾಗಬಹುದೆಂದು ಊಹಿಸಲಾಗಿದೆ

ಅಮೆರಿಯವರ ನೀತಿ ಖಂಡನೆ

ಫೆನ್ನರ್‌ಬ್ರಾಕ್‌ವೆಯವರು ಲಂಡನ್ನಿನ ನ್ಯೂಲೀಡರ್ ತ್ರಿಕೆಯಲ್ಲಿ ಭಾರತ ಸಚಿವ ಅಮೆರಿಯವರಿಗೆ ಬಹಿರಂಗ ತ್ರ ಬರೆದಿದ್ದಾರೆ ಅದರಲ್ಲಿ ಅಮೆರಿಯವರು ಭಾರತದ ಗ್ಗೆ ತೋರಿಸಿರುವ ನೀತಿಯನ್ನು ಖಂಡಿಸಿ, ಪತ್ರದ ನೆಯ ಭಾಗದಲ್ಲಿ ಕ್ರಾಮ್‌ವೆಲ್ಲರ ಮಾತನ್ನು ಉದ್ಧ ಸಿ 'ನೀವು ಮಾಡುತ್ತಿರುವ ಮಹತ್ಕಾರ್ಯವೃಷ್ಟಿಯಿಂದ ವು ಕುಳಿತು ಕಳೆಯುತ್ತಿರುವ ಕಾಲವು ಹೆಚ್ಚಾಯಿತು ವೆಲ್ಲಿ ನಿಮ್ಮನ್ನು ಹೊರಗೆ ನಯಮಾಡಿ ಎನ್ನುತ್ತೇನೆ ಂಬರ್ಲೇನರು ಮಹಾಮಂತ್ರಿ ಪದವಿಗೆ ರಾಜೀನಾಮೆ ತ್ತಾಗ ಈ ವಾಕ್ಯಗಳನ್ನು ಅಮೆರಿಯವರು ಉದ್ಧರಿಸಿ ಾತನಾಡಿದ್ದರು. ಫೆನ್ನರ್ ಬ್ರಾಕ್‌ವೆಯವರು ಇದನ್ನು ಪಿಗೆ ತಂದು, ಈ ಮಾತು ನಿಮಗೂ ಅನ್ವಯಿಸುತ್ತದೆ ಮ ಹೇಳಿದ್ದಾರೆ

ಆಹಾರ ಸ್ಥಿತಿಯನ್ನು ಕುರಿತು ಕೇಂದ್ರಸಭೆಯಲ್ಲಿ ಚರ್ಚೆ

ಕೇಂದ್ರಶಾಸನ ಸಭೆಯಲ್ಲಿ ಆಹಾರ ವಿಚಾರವಾಗಿ ಪ್ರಶ್ನೋತ್ತರಗಳು ಆಗುತ್ತಿರುವಾಗ ಸರ್ ಫ್ರೆಡರಿಕ್ ಜೇಮ್ಸ್‌ರವರು ತಿರುವಾಂಕೂರು ಕೊಚ್ಚಿಗಳಲ್ಲಿರುವ ಸ್ಥಿತಿಯನ್ನು ವಿವರಿಸಿದರು ರೇಷನಿಂಗ್ ಪ್ರಶ್ನೆಯೇ ಎಲ್ಲರಿಗೂ ಸಮಾನ ರೀತಿಯಿಂದ ಇದನ್ನು ಜಾರಿಗೆ ತಂದಿದ್ದೀರಾ—ಎಂದು ಕೇಳಿದರು

ಬೆಂಗಳೂರಲ್ಲಿ ಕೆಲವು ಮಿಲಿಟರಿಯವರ ಸಂಸಾರಗಳು ರೇಷನನ್ನು ತಮ್ಮ ಆವಶ್ಯಕತೆಯ ೧೨ ರಷ್ಟು ಪಡೆಯುತ್ತಿರುವುದನ್ನು ಸರಕಾರದ ಗಮನಕ್ಕೆ ತಂದು ಸಿವಿಲ್ ಪ್ರಜೆಗಳಿಗಿಂತ ಹನ್ನೆರಡರಷ್ಟು ಹೆಚ್ಚಾಗಿ ಸಲ್ಲುತ್ತಿರುವ ಅರ್ಥವೇನು ಎಂದು ಪ್ರಶ್ನಿಸಿದರು ಮಿಲಿಟರಿ ಆವರಣಗಳಲ್ಲಿ ಆಹಾರಧಾನ್ಯಗಳ ದುರ್ವ್ಯಯವಾಗುತ್ತಿದೆ ಸುಪ್ರಸಿದ್ಧ ವೈಜ್ಞಾನಿಕರೊಬ್ಬರ ಬಳಿಗೆ ಯುದ್ಧ ಬಂದಿಗಳ ಶಿಬಿರದ ಅಧಿಕಾರಿಗಳು ಹೋಗಿ ಹೆಚ್ಚಾಗಿ ಬರುತ್ತಿರುವ ರೊಟ್ಟಿಯಿಂದ ಗೊಬ್ಬರವನ್ನು ಹೇಗೆ ತಯಾರಿಸಬೇಕು? ಎಂದು ಕೇಳಿದ ಅಂಶವು ನನ್ನ ಗಮನಕ್ಕೆ ಬಂದಿದೆ ಅದರಲ್ಲಿಯೂ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವ ಈ ವಿಷಮಕಾಲದಲ್ಲಿ ಈ ದುರ್ವ್ಯಯವೇ? ಎಂದು ಕೇಳಿದರು ಭಾರತದ ಕ್ಷಾಮಕ್ಕೆ ಮಿತ್ರರಾಷ್ಟ್ರಗಳ ಜವಾಬ್ದಾರಿ ಅಪಾರವಾಗಿದೆಯೆಂದು ಸಾರಿದರು

ಶ್ರೀ ನಿಯೋಗಿಯವರು ಮಾತನಾಡುತ್ತ ಭಾರತದ ಆಹಾರ ದುಸ್ಥಿತಿಗೆ ಬ್ರಿಟನರು ಕೊಡುತ್ತಿರುವ ಕಾರಣವನ್ನು ಖಂಡಿಸಿದರು

“ಭಾರತದ ಆಹಾರ ದುಸ್ಥಿತಿಗೆ ಇಲ್ಲಿನ ಜನಸಂಖ್ಯೆ ಅಧಿಕವಾಗಿ ಬೆಳೆದುದೇ ಕಾರಣವೆಂದು ಹೇಳಲಾಗಿದೆ ಅದು ಶುದ್ಧ ತಪ್ಪು ಅಭಿಪ್ರಾಯ ಕಳೆದ ಮೂರು ಶತಮಾನಗಳಿಂದ ಬ್ರಿಟನ್ನಿನ ಜನಬಲವು ಭಾರತದ ಬೆಳವಣಿಗೆಗೆ ದಾಮಾಷಾಕ್ಕಿಂತ ಎಂಟರಷ್ಟು ಅಧಿಕವಾಗಿ ಬೆಳೆದಿದೆ ಕಳೆದ ೫೦ ವರ್ಷಗಳಿಂದ ಭಾರತದಲ್ಲಿ ಜನಸಂಖ್ಯೆ ಏರುವುದು ಶೇಕಡ ೩೯ ರಂತೆ ಆದರೆ ಅಮೆರಿಕದಲ್ಲಿ ಈ ಅವಧಿಯಲ್ಲಿ ೧೦೦ ಕ್ಕೆ ೧೧೬ ರಂತೆ ಏರಿದೆ ಅಲ್ಲೇಕೆ ಆಹಾರಕ್ಕೆ ಅಭಾವ ಒದಗಲಿಲ್ಲ? ಇನ್ನು ಬೆಳೆಯ ವಿಚಾರ! ಅಕ್ಬರನ ಕಾಲದಲ್ಲಿದ್ದ ಸರಾಸರಿ ಮೊತ್ತದ ಬೆಳೆಯೇ ಈಗಲೂ ಆಗುತ್ತಿದೆಯೆನ್ನುತ್ತಿದ್ದಾರೆ ಜಪಾನಿನಲ್ಲಿ ಇದಕ್ಕಿಂತ ತೀರ ಅಸಮರ್ಪಕವಾದ ಸ್ಥಿತಿಯಿದ್ದರೂ, ಅದರ ಸರಾಸರಿ ಬೆಳೆಯು ಮೊದಲಿಗಿಂತ ದ್ವಿಗುಣವಾಗಿದೆ ಚೀಣವೂ ಸಹ ಮುಂದುವರಿದಿದೆ ಇದಕ್ಕೆ ಕಾರಣ ಆಡಳಿತಗಾರರು ರಾಷ್ಟ್ರದ ಬೆಳವಣಿಗೆಯು ಅವನತಿಗೆ ಆಡಳಿತಗಾರರೇ ಕಾರಣ ಎಂದು ನಿಯೋಗಿಯವರು ಹೇಳಿದರು ಈಗ ಬಂಗಾಳಕ್ಕೆ ಬಂದಿರುವ ಕ್ಷಾಮವು ಬ್ರಿಟಿಷ್ ಕಾರ್ಖಾನೆಗಳಲ್ಲಿ ತಯಾರಾದದ್ದು ಎಂದು ವಾದಿಸಿದರು

ಆಹಾರಧಾನ್ಯಗಳ ಬೆಲೆ

ಭತ್ತ ಮತ್ತು ಇತರ ಆಹಾರವಸ್ತುಗಳ ಬೆಲೆಯನ್ನು ಅಖಿಲ ಭಾರತಕ್ಕೆಲ್ಲ ಅನ್ವಯಿಸುವ ಒಂದು ಸ್ಥಾಯಿಯಾದ ಮಟ್ಟದಲ್ಲಿಡಬೇಕೆಂಬ ಸಲಹೆಯು ಕೇಂದ್ರಶಾಸನ ಸಭೆಯಲ್ಲಿ ಬಂದಿತ್ತು ಆದರೆ ಇದನ್ನು ಜಾರಿಗೆ ತರಲು ಸಾಧ್ಯವಿಲ್ಲವೆಂದು ಸರ್ಕಾರದ ಪರವಾಗಿ ಸರ್ ಶ್ರೀವತ್ಸರವರು ಹೇಳಿದರು ಈ ಬಗ್ಗೆ ಆಯಾ ಪ್ರಾಂತಗಳ ಬೆಲೆಯನ್ನು ನಿರ್ಧರಿಸಲು ಅನುಮತಿ ಕೊಡುವುದಾಗಿ ಹೇಳಿದರು

ತಪ್ಪು ತಿದ್ದುಪಡಿ

ಕಳೆದ ವಾರದ ನಮ್ಮ ಪತ್ರಿಕೆಯಲ್ಲಿ ನಿಡುಮಾಮಿಡಿ ಮಠದ ಸ್ವಾಮಿಗಳಿಗೆ “ಶ್ರೀಶೈಲಸಂಸ್ಥಾನಾಧೀಶ್ವರ” ಎಂದು ಪ್ರಿಂಟಾಗಿರುವುದು ಅಜಾಗರೂಕತೆಯ ಫಲವೆಂದು ಭಾವಿಸಬೇಕು ಸಂಪಾದಕರು ಕೆಲವು ದಿವಸಗಳಿಂದ ಇಲ್ಲಿ ಇಲ್ಲದಿರುವುದೇ ಈ ವಿಧವಾದ ತಪ್ಪುಗಳಿಗೆ ಅವಕಾರನಾಗಿದೆಯೆಂದು ವಾಚಕರು ತಿಳಿಯಬೇಕು

ಮ್ಯಾನೇಜರ್

ರಾಜಧಾನಿಯಲ್ಲಿ ರೇಷನಿಂಗ್

ಮೈಸೂರು ರಾಜಧಾನಿಯಲ್ಲಿ ಡಿಸೆಂಬರ್ ತಿಂಗಳಿಂದ ರೇಷನಿಂಗ್ ಏರ್ಪಾಡು ಬರುವುದಷ್ಟೆ ಅದರ ವ್ಯವಸ್ಥೆಯನ್ನು ಈ ರೀತಿ ನಿರ್ಣಯಿಸಿರುವರು —

೧೯೪೩ ರಲ್ಲಿ ಈಗ ಮೈಸೂರು ನಗರದಲ್ಲಿ ನಡೆದ ರೇಷನ್ ಸೆನ್ಸಸ್‌ನಂತೆ ೨,೦೧,೪೩೩ ಜನಸಂಖ್ಯೆಯಿದೆ. ರೇಷನಿಂಗ್ ಲೆಕ್ಕದಂತೆ ೧೦ ವರ್ಷದ ಮೇಲ್ಪಟ್ಟ ದೊಡ್ಡವರು ೧,೫೯,೯೫೦, ಮತ್ತು ೧೦ ವರ್ಷದೊಳಗಿನ ಹುಡುಗರು ೪೧,೪೭೮ ಈ ಹುಡುಗರ ಸ್ಥಿತಿ ಒಂದು ದಿನದ ಹಸುಗೂಸೂ ಲೆಕ್ಕಕ್ಕೆ ಸೇರಿದೆ. ಒಟ್ಟು ಸಂಸಾರಗಳ ಸಂಖ್ಯೆ ೩೭,೪೩೧

ಸರಾಸರಿ ೬೫೦ ಸಂಸಾರಗಳಿಗೆ ಒಂದರಂತೆ ಒಟ್ಟು ೬೦ ಡಿಪೋಗಳನ್ನಿಡಲಾಗುವುದು ಎಲ್ಲವೂ ಸರ್ಕಾರಿ ಡಿಪೋಗಳೇ ಖಾಸಗಿ ವರ್ತಕರಿಗೆ ಕೊಡಲಾಗುವುದಿಲ್ಲ ಕೋ ಆ-ಸೊಸೈಟಿಗಳನ್ನು ಸೇರಿಸಿಕೊಳ್ಳಲಾಗುವುದು ಆವಶ್ಯಕ ಕಂಡರೆ ಸ್ತ್ರೀಯರಿಗೆ ಬೇರೆ ಡಿಪೋ ಮಾಡಲಾಗುವುದು ಎಲ್ಲರೂ ಒಂದೇ ದಿನ ನುಗ್ಗದಂತೆಯೂ, ಮೊದಲು ಬಂದವರಿಗೆ ಮೊದಲು ಸಿಕ್ಕುವಂತೆಯೂ ಬ್ಯಾಂಕಿನಂತೆ ಟೋಕನ್ ಕೊಡುವುದೇ ಮುಂತಾದ ವ್ಯವಸ್ಥೆ ಮಾಡಲಾಗುವುದು ಮುಂದೆ ಸಾಧ್ಯವಾದರೆ ಅವರವರ ಮನೆಬಾಗಿಲಿಗೇ ಕಳುಹಿಸಿ ಕೊಡತಕ್ಕ ವ್ಯವಸ್ಥೆ ಕೂಡ ಮಾಡಬೇಕೆಂದಿದೆ ಪ್ರತಿ ಮೊಹಲ್ಲಾಕ್ಕೂ ಒಬ್ಬ ಇನ್‌ಸ್ಪೆಕ್ಟರು ಇರುವರು ಒಬ್ಬಳು ಸ್ತ್ರೀ ಇನ್‌ಸ್ಪೆಕ್ಟರನ್ನು ಕೂಡ ನೇಮಿಸಲಾಗುವುದು

೬ ವಾರಗಳ ಅಥವಾ ೨ ತಿಂಗಳ ದಾಸ್ತಾನನ್ನು ಯಾರು ಬೇಕಾದರೂ ಹೊಂದಿರಬಹುದು ಅದಕ್ಕೆ ಮೇಲ್ಪಟ್ಟದ್ದರೆ ಅದನ್ನು ರೇಷನ್ ಕೊಡುವಾಗ ವಜಾ ಹಾಕಿ ಕೊಡಲಾಗುವುದು ಬಹಳ ಹೆಚ್ಚಿಗೆ ಇದ್ದರೆ ಏನು ಮಾಡಬೇಕೆಂಬುದನ್ನು ಪರ್ಯಾಲೋಚಿಸಲಾಗುವುದು ಎಲ್ಲರಿಗೂ ಮೈಸೂರಕ್ಕಿಯನ್ನೇ ಕೊಡಲಾಗುವುದು (ಕೊಯಮುತ್ತೂರು ಸಣ್ಣ ಮುಂತಾದ್ದು) ಕೊಡಗಿನ ಅಕ್ಕಿ ಮುಂತಾದವುಗಳನ್ನು ಖಂಡಿತ ತಿನ್ನಿಸುವುದಿಲ್ಲ

ರೇಷನ್ ಆಗುವ ವಸ್ತುಗಳು ಅಕ್ಕಿ ರಾಗಿ ಜೋಳ, ಕಂಬಿನ ಜೋಳ (ಬಾಜ್ರ), ಸಕ್ಕರೆ ಮತ್ತು ಸೀಮೆ ಎಣ್ಣೆ ಕೇವಲ ಅಕ್ಕಿಯನ್ನೇ ಬಳಸುವವರಿಗೆ ದಿನಕ್ಕೆ ತಲಾ ೧ ಪಾವು ಅಕ್ಕಿ (ಇವರು ‘ಎ’ ತರಗತಿಗೆ ಸೇರಿದವರು) ಅಕ್ಕಿ ರಾಗಿ ಬಳಸುವವರಿಗೆ ತಲಾ ದಿನಕ್ಕೆ ೧ ಪಾವು ರಾಗಿ ಮತ್ತು ಅರ್ಧಪಾವು ಅಕ್ಕಿ ದೊರೆಯುತ್ತದೆ (ಇವರು ‘ಬಿ ತರಗತಿ) ಮಕ್ಕಳಿಗೆ ಇದರಲ್ಲಿ ಅರ್ಧ ಪಡಿಪತ್ಯ ದೊರೆಯಲಿದೆ ವಾರಕ್ಕೆ ತಲಾ ಎಂಟನೆಯ ಒಂದು ವೀಸ ಸಕ್ಕರೆ ಕೊಡುವರು ವಿದ್ಯುದ್ದೀಪವಿರುವ ಮನೆಗೆ ತಿಂಗಳಿಗೆ ಅರ್ಧ ಸೀಸ ಸೀಮೆಯೆಣ್ಣೆ ಮತ್ತು ಕುಟುಂಬದಲ್ಲಿ ೫ ಮಂದಿಗಿಂತ ಕಡಿಮೆಯಿರುವ-ವಿದ್ಯುದ್ದೀಪ ಸೌಕರ್ಯವಿಲ್ಲದ-ಮನೆಗೆ ವಾರಕ್ಕೆ ಮೂರನೆಯ ಒಂದು ಸೀಸೆ ಮತ್ತು ೫ ಮಂದಿಗಿಂತ ಹೆಚ್ಚಾಗಿರುವ ಕುಟುಂಬಕ್ಕೆ ವಾರಕ್ಕೆ ಅರ್ಧ ಸೀಸೆ ಸೀಮೆಯೆಣ್ಣೆ ದೊರೆಯುತ್ತದೆ ಗೋಧಿಯನ್ನು ಇನ್ನೂ ರೇಷನಿಂಗ್ ವ್ಯವಸ್ಥೆಗೆ ಸೇರಿಸಿಲ್ಲ ಅದನ್ನು ಜನರು ಇಷ್ಟವಿದ್ದಷ್ಟು ಕೊಂಡು ಉಪಯೋಗಿಸಬಹುದು ಮನೆಗೆ ಅತಿಥಿಗಳು ಬಂದರೆ ಅವರು ೫ ದಿನಗಳಿಗಿಂತ ಅಧಿಕಕಾಲ ೧-೨ ವಾರಗಳವರೆಗೆ ಇರುವುದಾದರೆ, ಆ ಕುಟುಂಬದವರು ರೇಷನಿಂಗ್ ಅಧಿಕಾರಿಗಳಿಗೆ ಆಯಾ ಕೇಂದ್ರದ ಫುಡ್ ಇನ್‌ಸ್ಪೆಕ್ಟರ ಮೂಲಕ ಅರ್ಜಿ ಹಾಕಬೇಕು ಅಧಿಕಾರಿಗಳು ಪರಿಶೀಲಿಸಿ ಸಮರ್ಪಕವೆಂದು ತೋರಿದರೆ, ದೊರೆಯುವ ಆಹಾರವಸ್ತು ಪ್ರಮಾಣದ ವೃಷ್ಟಿಯಿಂದ ಗುಣಿಸಿ ಹೆಚ್ಚಿನ ಪಡಿಯನ್ನು ಒದಗಿಸಲು ಯತ್ನಿಸುವರು ಮದುವೆ ಮುಂಜಿ ಪ್ರಸ್ತ ಪ್ರಯೋಜನಗಳ ವಿಚಾರವಾಗಿ ಸ್ಪೆಷಲ್ ಪರ್ಮಿಟ್ ಪಡೆಯಲು ಅವಕಾಶವಿದೆ ಈ ವಿಚಾರವಾಗಿ ಸರ್ಕಾರದ ಆಜ್ಞೆಯನ್ನನುಸರಿಸಿ ನಿಯಮವೊಂದನ್ನು ಜಾರಿಗೆ ತರಲಾಗಿದೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಲೀಲೆಗಳಿಂದ ಕೂಡಿದ ಫೋಟೋ ಸೈಜು ೨೦ × ೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪ × [illegible] ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮುನಿಶ್ರೇಷ್ಠರಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦ × ೧೪ ಬೆಲೆ	೦—೨—೦
[illegible] ನವರು ಆಚಾರ್ಯರು ಒಂದರಲ್ಲಿಯೇ ಇರುವ ಫೋಟೋ ಸೈಜು ೧೪ × ೧೦ ಬೆಲೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪ × ೧೦ ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೨ × ೮ ಬೆಲೆ ೧ಕ್ಕೆ	೦—೧—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿದ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯ ಮೇರೆಗೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ್ಮಪೀಠದ ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೪ × ೧೦	೦—೬—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೨—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು [illegible] ಕೂಡಿದ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್ — **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುವ ಗ್ರಂಥಗಳಲ್ಲೆಲ್ಲ ಅತೀ ಬಹು ಪುರಾತನಗ್ರಂಥವೆಂದು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗಬಹುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೪೪೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅನರ್ಘ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು.

ಗೋತ್ರಸೂತ್ರಪಟ (೫ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೬ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೪ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶ ತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಗವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮುಲು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ ([illegible])	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೨೦ ಮಹತ್ವದ ಫೋಟೋಗಳಿರುವುದು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಿರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೬೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	१ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धांतशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४
[illegible]कारिका (संस्कृत)	२

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂ**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿದೆ.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಸಕಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಪ್ಪುದೀಲೋಕಮಂ ॥

ಸ್ಥಳದವರಿಗೆ ೨ ರೂ ಪರಸ್ಥಳದವರಿಗೆ ೨ ರೂ ೧೨ ಆಣೆ ವಿ ಪಿ ಖರ್ಚು ಸೇರಿ ೩ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೫ನೇ ನವಂಬರ್ ೧೯೪೩ [ಸಂಚಿಕೆ ೩೦

ಅವಲಕ್ಕಿ

ಇದು ಸ್ವಭಾವತಃ ರುಚಿಯಾಗಿದ್ದು ಹಲ್ಲಿಗೆ ಕಾವು ಕೊಡುವುದರಿಂದ ಬೇರೆ ಪದಾರ್ಥಗಳಿಲ್ಲದ ಒಂದನ್ನೇ ಅಗಿದು ತಿನ್ನಲು ರುಚಿಯಾಗಿರುವದು

ಸ್ವಲ್ಪ ಅವಲಕ್ಕಿ ತಿನ್ನುವುದರಿಂದಲೇ ಹಸಿವು ಶಾಂತವಾಗುವುದು

ಈಗಿನ ತುಟ್ಟಿ ಮತ್ತು ಆಹಾರದ ಅಭಾವಕಾಲದಲ್ಲಿ ಇದು ಅಲ್ಪ ಮೌಲ್ಯವಾದ ಆಹಾರ ಪದಾರ್ಥವಾಗಿದೆ

ಅವಲಕ್ಕಿಯಲ್ಲಿ ಪೋಷಕ ದ್ರವ್ಯಗಳು ಎಷ್ಟು ಇರುವುವು? ಅದರ ಸೇವನೆಯಿಂದಾಗುವ ದುಷ್ಪರಿಣಾಮವೇನು? ಸೇವಿಸುವ ಕ್ರಮವೇನು? ಎಂಬಿವೇ ಮುಂತಾದ ವಿಚಾರಗಳನ್ನು ಇಲ್ಲಿ ಹೇಳಲಾಗುವುದು

ಅವಲಕ್ಕಿಯಲ್ಲಿಯ ಶರೀರ ಪೋಷಕ ಘಟಕಗಳ ಪ್ರಮಾಣವನ್ನು ನೋಡಿದರೆ ಅದು ಪೌಷ್ಟಿಕವಾಗಿರುವುದೆಂದು ಹೇಳಲು ಯಾವ ಆತಂಕವೂ ಉಳಿಯಲಾರದು ಅದು ಕೆಳಗೆ ಬರೆದ ಕ್ರಮವಲ್ಲಿರುವುದು

	ಕೈಯಿಂದ ಕುಟ್ಟಿದ ಅಕ್ಕಿ	ಅವಲಕ್ಕಿ
ಸ್ನಿಗ್ಧ	೦ ೩೫	೧ ೧೫
ಖನಿಜ ದ್ರವ್ಯ	೦ ೭೦	೧ ೭೩
ಸುಣ್ಣ	೦.೦೦೭	೦ ೦೧೬
ಫಾಸ್ಫರಸ್ (ರಂಜಕ)	೦ ೧೬೫	೦ ೨೧೭
ಲೋಹ	೨ ೨೨	೮ ೦೦

ಬಿಳಿಯಕ್ಕಿಗಿಂತಲೂ ಕೆಂಪು ಅಕ್ಕಿಯಲ್ಲಿ ೫ ಪಟ್ಟು ಹೆಚ್ಚು ಲೋಹವು ಇರುವುದು.

ಇದು ಆಧುನಿಕ ರಸಾಯನಶಾಸ್ತ್ರಕ್ಕನುಸಾರವಾಗಿ ಆಯಿತು. ಆಯುರ್ವೇದದಲ್ಲಿ "ಪೃಥುಕಾಗುರವೋ ಬಲ್ಯಾಮಲವಿಷ್ಟಂಭಕಾರಿಣಃ ; ಕಫಪಿತ್ತಕರಾಶ್ಚ್ಯೇಯಾ" ಎಂದು ಹೇಳಿದೆ ಇಲ್ಲಿ ಕಫಕರ ಗುಣವು ಸ್ವಾಭಾವಿಕವಾದುದು ಕಫಕರತ್ವದಿಂದಲೇ ಬಲ್ಯವಾಗಿರುವುದು. ಗುರು ಮತ್ತು ಕಫಕರ ಗುಣದಿಂದ ಮಲಾವರೋಧ ಮಾಡುವುದು. ಮಲಾವರೋಧದಿಂದ ಪಿತ್ತವೃದ್ಧಿಯಾಗುವುದು ಸ್ವಭಾವತಃ ಪಿತ್ತಕರವಲ್ಲ

ಸಂಸ್ಕಾರದಿಂದ ಅವಲಕ್ಕಿಯು ಯಾವ ಗುಣಾವಗುಣಳನ್ನು ಕೊಡುವದೆಂಬುದನ್ನು ವಿಚಾರಮಾಡುವಾ ವಲಕ್ಕಿಯನ್ನು ಕೆಳಗೆ ಬರೆದ ಕ್ರಮದಲ್ಲಿ ಸಂಸ್ಕಾರ ಮಾಡಿ ಉಪಯೋಗಿಸುವರು ಹುರಿದ ಅವಲಕ್ಕಿ, ಹಸಿಯ ವಲಕ್ಕಿ, ಕರಿದವಲಕ್ಕಿ ಎಂದು ಮುಖ್ಯವಾಗಿ ಕೇವಲ ಹುರಿದ ಅವಲಕ್ಕಿಯು ಪಚನಕ್ಕೆ ಸ್ವಲ್ಪ ಹಗುರಾದರೂ ಕ್ಷವಾಗಿರುವದರಿಂದ ವಾತವನ್ನು ಹೆಚ್ಚಿಸುವುದು

ಹಸಿಯ ಅವಲಕ್ಕಿಯು ಹಾಗೆಯೇ ಅಗಿದು ತಿಂದರೆ ಷ್ಟಿಕವಾದದ್ದು. ಇದನ್ನು ಉಪ್ಪು, ಖಾರ, ಸ್ನಿಗ್ಧ ಅಥವಾ ಮೊಸರಿನ ಜೊತೆಗೆ ಹಾಲು, ಬೆಲ್ಲದ ತೆಗೆ ಸ್ನಿಗ್ಧ ಕೂಡಿಸಿ ತಿನ್ನುವ ರೂಢಿ ಹೆಚ್ಚು

ಉಪ್ಪು ಖಾರ ಸ್ನಿಗ್ಧ ಬೆರಸಿದ್ದುದನ್ನು ಸ್ವಲ್ಪ ತಿಂದರೆ ಹಿತ ಹೆಚ್ಚಾಗಿ ತಿಂದರೆ ವಿದಾಹಿ ಎಂದರೆ ಕಫ, ಪಿತ್ತಗಳನ್ನು ಕೆರಳಿಸಿ ಎದೆಯಲ್ಲಿ ಉರಿ ಹುಳಿಸುಡುವುದು ಇವುಗಳನ್ನು ಮಾಡುವುದು

ಮೊಸರು ಬೆರಸಿದ್ದು ಒಳ್ಳೆಯ ಮೊಸರಾಗಿದ್ದಲ್ಲಿ ಪೌಷ್ಟಿಕ ಹುಳಿಮೊಸರಾಗಿದ್ದರೆ ಅಥವಾ ಮೊಸರು ಬೆರಸಿ ಅತಿಯಾಗಿ ತಿಂದರೆ ವಿದಾಹಿ

ಹಾಲು ಸಕ್ಕರೆ ಅಥವಾ ಬೆಲ್ಲ ಸೇರಿಸಿದುದಕ್ಕೆ ಸ್ನಿಗ್ಧ ಸೇರಿಸಿದರೆ ಹೆಚ್ಚು ಪೌಷ್ಟಿಕ, ಇಲ್ಲವಾದರೆ ಸ್ವಲ್ಪ ಕಡಿಮೆ ಪಚನವಾಗುವಷ್ಟು ತಿಂದರೆ ಸ್ವತಃ ಪಚನವಾಗಿ ಮಲಮೂತ್ರಗಳನ್ನು ಸ್ವಚ್ಛವಾಗುವಂತೆ ಮಾಡಿ ಜೀರ್ಣಶಕ್ತಿಯನ್ನು ಹೆಚ್ಚಿಸುವುದು, ಹೆಚ್ಚಾಗಿದ್ದರೆ ಅಜೀರ್ಣವುಂಟುಮಾಡಿ ವಿದಾಹಕರವಾಗುವುದು

ಕರಿದ ಅವಲಕ್ಕಿ —ಎಣ್ಣೆಯಲ್ಲಾಗಲಿ ತುಪ್ಪದಲ್ಲಾಗಲಿ ಕರಿದರೆ ಅದರಲ್ಲಿ ಸತ್ವಾಂಶವೆಲ್ಲ ಹೋಗಿ ಪಿತ್ತಕರವಾಗುವುದು ವಾತವನ್ನು ಹೆಚ್ಚಿಸುವುದು, ಇದು ಕೇವಲ ರುಚಿಕರವೇ ಹೊರತು ಪೋಷಕವಲ್ಲ

ಜೀರ್ಣಶಕ್ತಿ ಚೆನ್ನಾಗಿದ್ದವರಿಗೆ, ಹಲ್ಲು ಇದ್ದವರಿಗೆ ಅವಲಕ್ಕಿ ಒಂದು ಒಳ್ಳೆಯ ಆಹಾರವೆಂದು ಹೇಳಬಹುದು ಇದನ್ನು ಹುರಿಯದೆ ಹಸೀಕೊಬ್ಬರಿ ಸವತೆಕಾಯಿ, ಈರುಳ್ಳಿ, ಸ್ವಲ್ಪ ಖಾರ, ಉಪ್ಪು, ಎಣ್ಣೆ ಅಥವಾ ತುಪ್ಪ ಬೆರಸಿ ಮಿತವಾಗಿ ತಿನ್ನುವುದು ಪೌಷ್ಟಿಕವಾದದ್ದು ರೋಗಿ ಜನರಿಗೂ, ಜೀರ್ಣಶಕ್ತಿ ಕಡಿಮೆ ಇದ್ದವರಿಗೂ ಇದು ಹಿತನಾದದ್ದಲ್ಲ

ಆರೋಗ್ಯಮಂದಿರ

ಬಂಗಾಳ ಅಧಿಕಾರಿಗಳೊಬ್ಬರಿಗೆ ಶಿಕ್ಷೆ

ಕಲ್ಕತ್ತದಲ್ಲಿ ತಾ|| ೧೮ ರಲ್ಲಿ ಬೀದಿಯಲ್ಲಿ ಹಣ್ಣು ಮಾರುತ್ತಿದ್ದ ಒಬ್ಬ ಧೃಡಕಾಯನನ್ನು ಮತ್ತು ಒಬ್ಬ ಕೂಲಿ ಹೆಂಗಸನ್ನು ಬಲಾತ್ಕಾರವಾಗಿ ಪರಿಹಾರ ನಿಲಯಕ್ಕೆ ಎಳೆದುಕೊಂಡು ಹೋದರೆಂದು ಸರ್ಕಾರದವರು ಇದರ ಬಗ್ಗೆ ತನಿಖೆ ಕ್ರಮ ನಡೆಸಿ ಆ ಅಧಿಕಾರಿಯು ತನ್ನ ಅಧಿಕಾರದ ಎಲ್ಲೆಯನ್ನು ಮೀರಿ ನಡೆದನೆಂದು ಅವನ ಮೇಲೆ ಶಿಸ್ತಿನ ಕಾರ್ಯಕ್ರಮ ತೆಗೆದುಕೊಂಡಿರುವುದಾಗಿ ಪ್ರಕಟಣೆ ಹೊರಡಿಸಿರುವರು

ಬಂಗಾಳದ ಅಮಾನ್ ಬೆಳೆ ಹತೋಟಿ

ಬಂಗಾಳದ್ದೇ ಏಕೆ, ಇಡಿಯ ಭಾರತದ ಆಯುಷ್ಯವು ಇಂದು ಬಂಗಾಳದಲ್ಲಿ ಸುಗ್ಗಿಗೆ ಬರುವ 'ಅಮಾನ್' ಬೆಳೆ ಹತೋಟಿಯ ಮೇಲೆ ನಿಂತಿದೆ ಈಗ ಬಂಗಾಳದ ಆಹಾರ ಸರಬರಾಜು ಅಧಿಕಾರಿಗಳಾದ ಸರ್ ಸಪ್ರು— ಅವರು ಎಲ್ಲ ಪಕ್ಷದ ಮುಖಂಡರನ್ನೂ ಆಹ್ವಾನಿಸಿ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ 'ಅಮಾನ್' ಬೆಳೆಯ ಹತೋಟಿಯನ್ನು ವಿವರಿಸಿದರು ಯೋಜನೆಯ ಮುಖ್ಯವಾದ ಉದ್ದೇಶಗಳೇನೆಂದರೆ, ದರಗಳ ಹತೋಟಿ, ವ್ಯಾಪಾರದ ಮೂಲಕ ಸಾಧ್ಯವಾದಷ್ಟು ಆಹಾರ ಪಡೆಯುವಿಕೆ ಮತ್ತು ಸುವ್ಯವಸ್ಥಿತವಾದ ಸರಬರಾಜು. ಪತ್ರವರ್ದಿಯವರು ಸಮ್ಮೇಳನದಲ್ಲಿ ತಮಗೆ ಅತ್ಯಂತ ಉಪಯುಕ್ತವಾದ ಸಲಹೆಗಳನ್ನೀಯಲಾಯಿತೆಂದೂ, ಇದರಿಂದ ತಮ್ಮ ಯೋಜನೆ ಫಲಕಾರಿಯಾಗಲೆಂದೂ ಆಶಿಸಿದರು

ಬಟ್ಟೆ ಮಾರಾಟದ ನಿರ್ಬಂಧ

ಡಿಸೆಂಬರ್ ೩೧ ರೊಳಗೆ ಗುರುತಿಲ್ಲದ ಎಲ್ಲಾ ಬಟ್ಟೆಯನ್ನೂ ವ್ಯಾಪಾರಸ್ಥರು ಮಾರಿಬಿಡಬೇಕು ತದನಂತರ ಯಾವ ವ್ಯಾಪಾರಿಯ ಬಳಿಯೇ ಆಗಲಿ 'ಮಾರ್ಕ್' ಮಾಡದ ಬಟ್ಟೆಯಿದ್ದಲ್ಲಿ ಅದು ಸರಕಾರದ ವಶವಾಗುವುದಲ್ಲದೆ, ಆ ರೀತಿಯಲ್ಲಿ ವ್ಯಾಪಾರಸ್ಥರ ಬಳಿಯಿರುವುದು ಆಜ್ಞೋಲ್ಲಂಘನೆಯಾದಂತೆ ಪರಿಗಣಿಸಿ ಅವರನ್ನು ಶಿಕ್ಷೆಗೆ ಗುರಿಮಾಡಲಾಗುವುದು ಎಂದು ಸರಕಾರಿ ಪ್ರಕಟಣೆ ತಿಳಿಸುತ್ತದೆ

ಭಾರತಕ್ಕೆ ಡೊಮಿನಿಯನ್ ಸ್ಟೇಟಸ್

ಭಾರತಕ್ಕೆ ಡೊಮಿನಿಯನ್ ಸರಕಾರ ಕೊಡಬೇಕೆನ್ನುವ ಬಿಲ್ ಒಂದನ್ನು ಲಾರ್ಡ್ ಸ್ಟ್ರಾಬೋಲ್ಗಿಯವರು ಪಾರ್ಲಿಮೆಂಟ್ ಮುಂದೆ ತರಲಿದ್ದಾರೆ ಇದು ಸಾಮಾನ್ಯವಾದುದು ವೆಸ್ಟ್‌ಮಿನಿಸ್ಟರ್ ಸ್ಟೆಚ್ಯೂಟಿಗೆ ಭಾರತವನ್ನು ಸೇರಿಸಬೇಕೆಂಬುದೇ ಇದರ ಉದ್ದೇಶ ಇದರಿಂದ ಇಂಡಿಯಾವ ಇಂದಿನ ನೀತಿಯು ಸರಕಾರಕ್ಕೆ ತಡೆಯಿಲ್ಲ ಬದಲಾಗಿ ತಮ್ಮ ರಾಜ್ಯಘಟನೆ ತಯಾರಿಸುವ ಹಕ್ಕನ್ನು ಭಾರತೀಯರ ವಶವೇ ಇದು ಇರಿಸುವುದು ಇಂದಿನ ಭಾರತೀಯ ಬಿಕ್ಕಟ್ಟಿನಿಂದ ಯಾರಿಗೂ ಸಂತೋಷವಾಗಲಾರದು. ನನ್ನ ಬಿಲ್‌ನಿಂದ ಬಿಕ್ಕಟ್ಟು ಸಡಿಲಾಗಿ ಸಂಧಾನಕ್ಕೆ ಆಸ್ಪದವಾಗಬಹುದೆಂಬ ನಂಬಿಕೆ ನನಗಿದೆ ಎಂದೂ ಈ ಬಿಲ್‌ನ ವಿಚಾರದಲ್ಲಿ ಪ್ರಮುಖ ನ್ಯಾಯಪತಿಗಳ ಸಲಹೆ ಪಡೆದಿರುವುದಾಗಿಯೂ ತಿಳಿಸಿದ್ದಾರೆ

ಸ್ವೀಕಾರ

ಬಳ್ಳಾರಿ ಡಿ|| ಹೂವಿನಹಡಗಲಿಯಲ್ಲಿರುವ ಮ|| ಹೊಗೆತೊಪ್ಪಲದ ಶರಣಪ್ಪನವರ ಧರ್ಮಪತ್ನಿ ಸೌ|| ಬಸವಲಿಂಗವ್ವನವರು ಶಿವಾಧೀನರಾದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2-8-0 ರೂ.ಗಳು ಮ|| ರಾ|| ಗುಗ್ರಿಹುಚ್ಚಪ್ಪನವರ ದ್ವಾರಾ ತಲುಪಿರುತ್ತವೆ

ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ

ಪಂಚಾಚಾರ್ಯಪ್ರಭಾ.

೧೯೪೩ನೆಯ ನವಂಬರ್ ತಾ|| ೨೯ನೇ ಸೋಮವಾರ

ಶಿವೋಪಾಸನೆ.

ಕಾಯದಲ್ಲಿಯೂ ವಚನದಲ್ಲಿಯೂ ಮನಸ್ಸಿನಲ್ಲಿಯೂ **ಶಿವನನ್ನು** ಉಪಾಸನೆ ಮಾಡುವುದೇ ಶಾಸ್ತ್ರವಿಹಿತವಲ್ಲದೆ **ಕೇವಲ** ಶರೀರದಲ್ಲಾಗಲಿ ಕೇವಲ ಮನಸ್ಸಿನಲ್ಲಾಗಲಿ, **ಕೇವಲ** ವಚನದಲ್ಲಾಗಲಿ ಶಿವನನ್ನು ಉಪಾಸಿಸುವದು ಶಾಸ್ತ್ರವಿಹಿತವಲ್ಲ

> ತಸ್ಮಾತ್ ಧ್ಯಾನಾದಿಭ್ಯ ಜನಾತ್ತತ ಭ— ಪೂಜಯ ಸ್ವಾಂತೇ
> ವಿಶ್ವಮಾ[illegible]ವೃತ್ತಿಃ |

ತಸ್ಯ ಆ ಪರಮೇಶ್ವರನನ್ನು [illegible] ಅಂತರಂಗದಲ್ಲಿ ಧ್ಯಾನಿಸುವುದರಿಂದಲೂ ಪೂಜನಾರ್ಥ ಸ್ಥೂಲಶರೀರದಲ್ಲಿ ಆ ಪರಮೇಶ್ವರನನ್ನು ಧರಿಸಿ ಪೂಜಿಸುವುದರಿಂದಲೂ, ಸಕಲಮಾಯಾನಿವೃತ್ತಿ. ಜನನಮರಣರೂಪವಾದ ದುಃಖವು ನಾಶವಾಗುತ್ತದೆ ಎಂದು ಶ್ರುತಿಯಲ್ಲಿಯೂ ಬಹಿರಂತರುಪಾಸನೆಯು ಸ್ಪಷ್ಟವಾಗಿ ಹೇಳಲ್ಪಟ್ಟಿರುತ್ತದೆ ಮತ್ತು

> ಜೀವನ್ಮುಕ್ತಪ್ರಾಣಲಿಂಗಾನ್ವೇಷೀ ಚೇನ್ನೋಪ ಸಂತ್ರಿ ವಿಧ್ಯ
> ದೃಷ್ಟಿಕರ್ತ್ರಾದಿನಾ ಕರ್ಮಯೋಗಾತ್ |

ಎಂದು ವ್ಯಾಸಮಹರ್ಷಿರಚಿತವಾದ ಬ್ರಹ್ಮಸೂತ್ರವು ಸಹ ಕೇವಲ ಪ್ರಾಣಲಿಂಗೋಪಾಸನೆಯನ್ನು ವಿಧಿಸದೆ ತ್ರಿವಿಧೋಪಾಸನೆಗಳನ್ನು ಸ್ಪಷ್ಟವಾಗಿ ವಿಧಿಸುವುದರಿಂದ ಮುಮುಕ್ಷುಗಳಾದ ಪುರುಷರು ಅಂತರುಪಾಸನೆಯಂತೆ ಬಹಿರುಪಾಸನೆಯನ್ನೂ ಮಾಡಬೇಕೆಂಬುದೇ ಸಿದ್ಧಾಂತವು ಇನ್ನು ಆ ಉಪಾಸನಾಕ್ರಮವು ಮಾನಸ ವಾಚಕ ಕಾಯಿಕವೆಂದು ಮೂರು ಬಗೆಯಾಗಿದೆ

> ಮಾನಸೋಪಾಸನಂ ಕುರ್ಯಾದ್ಧೃದಯೇ ನಿಶ್ಚಲೋಪಿ ವಾ |
> ಪಂಚಾಕ್ಷರ್ಯಾಶ್ಚ ಗಾಯತ್ರ್ಯಾ ರುದ್ರಸೂಕ್ತಾದಿಭಿಸ್ತಥಾ
> ವಾಚಿಕೋಪಾಸನಂ ಪ್ರೋಕ್ತಂ ಹೃದಿ ಲಿಂಗೇ ಶಿವಾತ್ಮಕೇ
> ಹಸ್ತಪೀಠೇ ತಥಾ ವಹ್ನೌ ಸ್ಥಂಡಿಲೇ ವಾ ವಿಧಾನತಃ |
> ಕಾಯಿಕೋಪಾಸನಂ ಕಾರ್ಯಂ ಶ್ರದ್ಧಾಭಕ್ತಿಸಮನ್ವಿತಂ |
> ಏವಂ ತ್ರಿಕರಣೈರ್ನಿತ್ಯಮೀಶ್ವರೋಪಾಸನಂ ದ್ವಿಜಃ |
> ಕುರ್ವನ್ಮುಕ್ತಿಮವಾಪ್ನೋತಿ ವೈದಿಕೋ ನಾನ್ಯಹೇತುನಾ ||

ದಹರಾಕಾಶದಲ್ಲಿ ಪ್ರಾಣಲಿಂಗವನ್ನು ಅನವರತವೂ ಧ್ಯಾನಿಸುತ್ತಿರುವುದೇ ಮಾನಸೋಪಾಸನೆಯೆನಿಸುತ್ತದೆ ಪಂಚಾಕ್ಷರಿ, ಗಾಯತ್ರಿ, ರುದ್ರಸೂಕ್ತ ಮುಂತಾದ ವೇದವಚನಗಳನ್ನುಚ್ಚರಿಸುತ್ತಿರುವುದೇ ವಾಚಕೋಪಾಸನೆಯೆನಿಸುತ್ತದೆ ಹಸ್ತಪೀಠದಲ್ಲಾಗಲಿ ಅಗ್ನಿಯಲ್ಲಾಗಲಿ ಸ್ಥಂಡಿಲಾದಿಗಳಲ್ಲಾಗಲಿ ಆ ಲಿಂಗರೂಪನಾದ ಪರಶಿವನನ್ನು ಅಷ್ಟವಿಧಾರ್ಚನೆಯಿಂದ ಪೂಜಿಸುತ್ತಿರುವುದೇ ಕಾಯಿಕೋಪಾಸನೆಯೆನಿಸುತ್ತದೆ ಯಾವ ವೈದಿಕನಾದ ದ್ವಿಜನು ಯಾವಾಗಲೂ ಇಂಥ ಕಾಯ ವಾಕ್ ಮನಸ್ಸುಗಳೆಂಬ ತ್ರಿಕರಣಗಳಿಂದ ಪ್ರತಿದಿವಸವೂ ಲಿಂಗರೂಪ ಪರಶಿವನನ್ನು ಶರೀರದಲ್ಲಿ ವಿಧಾನೋಕ್ತವಾಗಿ ಪೂಜಿಸುತ್ತಲೂ ವಚನದಲ್ಲಿ ವೇದಮಂತ್ರಗಳಿಂದ ಪಠಿಸುತ್ತಲೂ ದಹರಾಕಾಶದಲ್ಲಿ ಧ್ಯಾನಿಸುತ್ತಲೂ ಇರುವನೋ ಅವನು ಈ ಜನನ ಮರಣ ರೂಪವಾದ ದುಃಖದಿಂದ ಪಾರಾಗಿ ಮುಕ್ತಿಸಾಮ್ರಾಜ್ಯವನ್ನು ಪಡೆಯುವನಲ್ಲದೆ ಈ ಮೂರು ಉಪಾಸನೆಗಳನ್ನು ಬಿಟ್ಟು ಬೇರೆ ಯಾವುದರಿಂದಲೂ ಮೋಕ್ಷವನ್ನು ಪಡೆಯಲಾರನು

ಎಂದು ಸ್ಕಾಂದಪುರಾಣವು ಸಹ ಈ ಶ್ರುತ್ಯರ್ಥವನ್ನು ಸ್ಪಷ್ಟವಾಗಿ ಅನುವಾದಮಾಡುವುದರಿಂದ ಬಹಿರುಪಾಸನೆ ಅಂತರುಪಾಸನೆಗಳಿಲ್ಲದೆ ಮುಕ್ತಿಯನ್ನು ಬಯಸುವವನು ಮೋಡಗಳ ಸುಳಿವಿಲ್ಲದೆ ಶುಭ್ರವಾದ ಆಕಾಶದಲ್ಲಿ ಮಳೆಯನ್ನಪೇಕ್ಷಿಸುವ ಅಜ್ಞನಿಗೆ ಸಮಾನನಾಗುವನೆನ್ನುವಲ್ಲಿ ಆವ ಸಂಶಯವೂ ಇಲ್ಲವು ಕಾಯಿಕೋಪಾಸನೆಯಂ ಬಿಟ್ಟು ಕೇವಲ ಅಂತರುಪಾಸನೆಯನ್ನು ಮಾಡುವುದರಿಂದ ಈಶ್ವರಾನುಗ್ರಹದಿಂದ ಬಂದ ಈ ಸ್ಥೂಲಶರೀರವೇ ವ್ಯರ್ಥವಾಗುವುದು. ಅಂತರುಪಾಸನೆಯನ್ನು ಬಿಟ್ಟು ಕೇವಲ ಕಾಯಿಕೋಪಾಸನೆ ಮಾಡುವುದರಿಂದ ಅಂತರಂಗವು ಶುದ್ಧಿಯಾಗದು ಬಾಯಲ್ಲಿ ವೇದಮಂತ್ರಗಳನ್ನು ಪಠಿಸುವುದನ್ನು ಬಿಟ್ಟು ಕೇವಲ ಕಾಯಿಕಮಾನಸೋಪಾಸನೆಗಳನ್ನು ಮಾಡುವುದರಿಂದ ವಾಗಿಂದ್ರಿಯ ಶುದ್ಧಿಯಾಗದು ಕಾಯ ವಾಕ್ಕು ಮನಸ್ಸು ಈ ಮೂರನ್ನು ಪರಿಶುದ್ಧಗೊಳಿಸಿಕೊಳ್ಳದ ಹೊರತು ಮಾನವನಿಗೆ ಈಶ್ವರಾನುಗ್ರಹವಾಗುವುದಿಲ್ಲ ಇದೇ ತ್ರಿಕರಣಶುದ್ಧಿಯೆಂದು ಆರ್ಯರ ಅಭಿಮತವಾಗಿದೆ ವಚಸ್ಯೇಕಂ ಮನಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ ಮನಸ್ಸಿನಲ್ಲಿ ಏನನ್ನು ಧ್ಯಾನಿಸುತ್ತಿರುವರೋ ಮಾತಿನಲ್ಲಿ ಅದನ್ನೇ ಉಚ್ಚರಿಸುತ್ತಲೂ ಶರೀರದಲ್ಲಿ ಅದನ್ನೇ ಮಾಡುತ್ತಲೂ ಇರುವುದೇ ದೊಡ್ಡವರ ದಿನಚರ್ಯವೆಂದು ಅಭಿಯುಕ್ತಿಯಿರುತ್ತದೆ ಜಗಜ್ಜನಕನಾದ ಪರಮೇಶ್ವರನು ಆಕಾಶದಂತೆ ಸರ್ವವ್ಯಾಪಕನಾಗಿರುವುದರಿಂದ ಅವನು ಅಲ್ಪಜ್ಞನಾದ ಮಾನವನಿಗೆ ಪ್ರತ್ಯಕ್ಷವಾಗಬೇಕಾದರೆ ಸ್ಥೂಲೋಪಾಸನೆಯೂ ಅಂತರುಪಾಸನೆಯೂ ಅವಶ್ಯಕವು ಸಾಧಾರಣವಾಗಿ ಲೋಕದಲ್ಲಿ ವಿದ್ಯೆಯೆಂಬುದು ಒಂದು ಜ್ಞಾನರೂಪಗುಣವಾಗಿದ್ದರೂ ಅದು ಎಲ್ಲರಿಗೂ ಸ್ವಾಧೀನವಾಗಲಾರದು ಅದು ಸ್ವಾಧೀನವಾಗುವುದಕ್ಕಾಗಿ ಆ ವಿದ್ಯೆಯನ್ನು ತಿಳಿದವರು ಸುಲಭವಾಗಿ ವಿದ್ಯಾರ್ಥಿಗಳಿಗೆ ತಿಳಿಯಲೆಂದು ಅನೇಕ ಗ್ರಂಥರೂಪಗಳಿಂದ ಬರೆದಿಟ್ಟು ಅದನ್ನು ಓದುವುದಕ್ಕೆ ಅನೇಕ ಸಾಧನೆಗಳನ್ನು ಕಲ್ಪಿಸಿರುತ್ತಾರೆ ಗುರುಮುಖದಿಂದ ಕಾಲಕ್ಷೇಪಪಟ್ಟು ಆ ಸ್ಥೂಲಾಕಾರವಾದ ಗ್ರಂಥಗಳನ್ನು ಬಾಯಿಯಲ್ಲಿ ಉಚ್ಚರಿಸುತ್ತ ಸಿದ್ಧಾಂತಗಳನ್ನೆಲ್ಲಾ ಮನಸ್ಸಿನಲ್ಲಿ ಅದನ್ನೇ ಧ್ಯಾನಿಸುತ್ತಿದ್ದರೆ ಆ ಸೂಕ್ಷ್ಮವಾದ ವಿದ್ಯೆಯು ಅವನ ಸ್ವಾಧೀನವಾಗುತ್ತದೆ ಹಾಗೆಯೇ ಸರ್ವವ್ಯಾಪಕನಾದ ಪರಮೇಶ್ವರನ ಸ್ವರೂಪವನ್ನು ಕ್ರಮವಾಗಿ ಎಲ್ಲರಿಗೂ ಪ್ರತ್ಯಕ್ಷಗೊಳಿಸುವುದಕ್ಕಾಗಿ ಆ ಪರಮೇಶ್ವರನ ಸಾಕ್ಷಾತ್ಕಾರವನ್ನು ಪಡೆದ ಮಹರ್ಷಿಗಳು ಲೋಕಕಲ್ಯಾಣಕ್ಕಾಗಿ ಪರಮೇಶ್ವರನ ಶಕ್ತಿಯಿಂದೊಡಗೂಡಿದ ಅನಂತ ಸ್ಥೂಲಾಕಾರಗಳನ್ನು ಕಲ್ಪಿಸಿ ಸಾಧನೋಪಾಯಗಳನ್ನು ತಿಳಿಸಿರುತ್ತಾರೆ ಹೀಗೆ ಸ್ಥೂಲಶರೀರದಲ್ಲಿ ಸ್ಥೂಲೋಪಾಸನೆಯನ್ನು ಮಾಡದೆ ಬಾಯಿಯಲ್ಲಿ ಆ ಪರಮಾತ್ಮನ ನಾಮಗಳನ್ನುಚ್ಚರಿಸದೆ ಕೇವಲ ಮನಸ್ಸಿನಲ್ಲಿ ಪರಮಾತ್ಮನನ್ನುಪಾಸನ ಮಾಡುತ್ತೇನೆಂದರೆ ಹಣ ಕೊಟ್ಟು ವಿದ್ಯಾ ಗ್ರಂಥಗಳನ್ನು ಪಡೆಯುವ ಆ ಗ್ರಂಥಗಳಲ್ಲಿ ಹೇಳಿರುವ ವಚನಗಳನ್ನು ಸರ್ವದಾ ಉಚ್ಚರಿಸದೆ ಮನನ ಸಹಾಯದಿಂದಲೇ ವಿದ್ವಾಂಸನಾಗುತ್ತೇನೆಂದು ಹೇಳುವ ಮೂಢನಿಗೆ ಸಮನಾಗಿ ಹೋಗುತ್ತಾನೆ ಸ್ಥೂಲಾಕಾರವುಳ್ಳ ಗ್ರಂಥಗಳನ್ನು ಅಭ್ಯಾಸ ಮಾಡದಿದ್ದರೆ ಮನಸಿಗೆ ಜ್ಞಾನರೂಪವಾದ ವಿದ್ಯೆಯು ಸ್ವಾಧೀನವಾಗಲಾರದು? ಅದ ಕಾರಣವೇ ಹಿಂದಿನವರು ಆ ಸೂಕ್ಷ್ಮವಾದ ವಿದ್ಯೆಯನ್ನು ಕಲ್ಪಿತವಾದ ಪುಸ್ತಕರೂಪದಲ್ಲಿ ತೋರಿಸಿ ಆ ಪುಸ್ತಕದ ಸಹಾಯದಿಂದಲೇ ಆ ವಿದ್ಯೆಯು ಅತನಿಗೆ ಸ್ವಾಧೀನವಾಗುವಂತೆ ಮಾಡಿರುವುದರಿಂದ ಈಗ ಎಲ್ಲರೂ ಗುರುಮುಖದಿಂದ ಆ ಪುಸ್ತಕಗಳನ್ನು ಓದಿ ಸುಲಭವಾಗಿ ವಿದ್ವಾಂಸರಾಗಹತ್ತಿರುತ್ತಾರೆ ಹಾಗೆ ಕಲ್ಪಿತವಾದ ಒಂದೊಂದು ಸ್ಥೂಲಾಕಾರವಾದ ಲಿಪಿಯಲ್ಲಿ ಆ ವಿದ್ಯೆಯನ್ನು ಅವರು ಬರೆದಿಡದಿದ್ದಲ್ಲಿ ಮಾನವಜಾತಿಯಲ್ಲಿ ವಿದ್ಯೆಯೆಂಬುದೇ ಇಲ್ಲದಂತಾಗಿ ಎಲ್ಲರೂ ಪಶುಗಳಂತೆ ಕೇವಲ ಆಹಾರನಿದ್ರಾಮೈಥುನಾದಿಗಳಲ್ಲಿ ಮಾತ್ರ ಆಸಕ್ತರಾಗಿರಬೇಕಾಗುತ್ತಿತ್ತು

“ಮಣ್ಣನ್ನು ಬಿಟ್ಟು ಮಡಕೆಯಿಲ್ಲ, ತನ್ನನ್ನು ಬಿಟ್ಟು ದೇವರಿಲ್ಲ” ಎಂಬ ಗಾಥೆಯನ್ನು ಮಾತ್ರ ಕೇಳಿಕೊಂಡು ನಾನೇ ದೇವರಾಗಿರುತ್ತೇನೆಂದು ಹುಚ್ಚನಂತೆ ಬಾಯಿಯಲ್ಲಿ ಹೇಳಿಕೊಂಡು ಸ್ಥೂಲಶರೀರದಲ್ಲಿ ಆ ದೇವರ ಉಪಾಸನೆ ಮಾಡದಿದ್ದಲ್ಲಿ ಅಂತಹ ದೇವರು ತನಗೆ ಸಂಭವಿಸಿದ ಭವರೋಗವನ್ನು ಎಂದೂ ಪರಿಹರಿಸಲಾರನು ದೇವರ ಸ್ವರೂಪವು ತನಗೆ ಗೋಚರವಾಗಿ ಭವರೋಗವು ನಷ್ಟವಾಗುವುದಕ್ಕಾಗಿ ಋಷಿಗಳು ಸ್ಥೂಲಾಕಾರವಾಗಿ ದೇವರ ಆಕಾರವನ್ನು ಅವರವರ ಮತಾನುಸಾರವಾಗಿ ಅನಂತರೂಪಗಳಿಂದ ಕಲ್ಪಿಸಿಕೊಟ್ಟಿರುತ್ತಾರೆ ವೀರಶೈವ ಮತಾಚಾರ್ಯರಾದ ರೇಣುಕಾದಿಪಂಚರ್ಷಿಗಳು ಸುಲಭವಾಗಿ ಆ ಭಗವಂತನು ಪ್ರತ್ಯಕ್ಷವಾಗಲೆಂಬ ಮಹೋದ್ದೇಶದಿಂದ ದಹರಾಕಾಶದಲ್ಲಿ ರಾರಾಜಿಸುವ ಲಿಂಗರೂಪ ಪರಮೇಶ್ವರನನ್ನು ವೃತ್ತ, ಪೀಠ, ಗೋಮುಖ, ನಾಳ, ಗೋಳಕ ಎಂಬ ಐದು ಸೂತ್ರಗಳಿಂದೊಡಗೂಡಿದ ಕಲ್ಪಿತ ವಿಗ್ರಹದಲ್ಲಿ ಮಂತ್ರಶಕ್ತಿಯಿಂದ ನೆಲೆಗೊಳಿಸಿ ಶಿವದೀಕ್ಷೆಯಿಂದ ಪರಿಶುದ್ಧವಾದ ದೇಹದಲ್ಲಿ ಧಾರಣಮಾಡಿ “ಪರಬ್ರಹ್ಮಾಭಿದಂ ಲಿಂಗಂ ಪಶುಪಾಶವಿಮೋಚಕಂ” ಎಂಬ ಪ್ರಮಾಣದಂತೆ ಆ ಲಿಂಗಕ್ಕೆ ಭವಪಾಶವಿಚ್ಛೇದಿಯಾದ ಶಿವಲಿಂಗವೆಂಬ ಅಭಿಧಾನವನ್ನು ಇಟ್ಟಿರುತ್ತಾರೆ

> ಯೋ ಹಸ್ತಪೀಠೇ ನಿಜಲಿಂಗಮಿಷ್ಟಂ ವಿನ್ಯಸ್ಯ ತಲ್ಲೀನಮನಃ
> ಪ್ರಚಾರಃ |
> ಬಾಹ್ಯಕ್ರಿಯಾಸಂಕುಲನಿಸ್ಪೃಹಾತ್ಮಾ ಸಂಪೂಜಯತ್ಯಂಗ ಸ
> ವೀರಶೈವಃ ||

ಆ ಇಷ್ಟಲಿಂಗವನ್ನು ಹಸ್ತಪೀಠದಲ್ಲಿಟ್ಟು ಪೂಜಿಸುವವನೇ ವೀರಶೈವನೆಂದು ಹೇಳಿರುವುದರಿಂದ ಗುರುವಿನಿಂದ ಅನುಗ್ರಹೀತವಾದ ಸ್ಥೂಲಲಿಂಗೋಪಾಸನೆಯಿಲ್ಲದವನಿಗೆ ನೈಜವಾದ ಬ್ರಹ್ಮಲಿಂಗಸ್ವರೂಪಸಾಕ್ಷಾತ್ಕಾರವಾಗಲಾರದೆಂದು ಸ್ಪಷ್ಟವಾಗುತ್ತದೆ ಹೀಗೆ ಎಲ್ಲಾ ಮತೀಯರು ದೇವರ ಒಂದೊಂದು ನಾಮಗಳಿಂದ ಕಲ್ಪಿತವಾದ ಒಂದೊಂದು ಆಕಾರವನ್ನು ಪೂಜಿಸಿ ಬ್ರಹ್ಮಸಾಕ್ಷಾತ್ಕಾರ ಮಾಡಿಕೊಂಡಿರುವರಲ್ಲದೆ ಸ್ಥೂಲೋಪಾಸನೆಯ ಗಂಧವೇ ಇಲ್ಲದ ಯಾರಿಗೂ ಬ್ರಹ್ಮಸಾಕ್ಷಾತ್ಕಾರವಾಗಿಲ್ಲ ಅಗಸ್ತ್ಯಾದಿ ಮಹರ್ಷಿಗಳು ಸಹ ಒಂದೊಂದು ಆಕಾರವನ್ನು ಕಲ್ಪಿಸಿಕೊಂಡೇ ಬ್ರಹ್ಮಸಾಕ್ಷಾತ್ಕಾರ ಪಡೆದರೆಂಬುದಕ್ಕೆ ಅವರು ಪೂಜಿಸಿದ ಅಗಸ್ತ್ಯೇಶ್ವರ, ವ್ಯಾಸೇಶ್ವರ, ಮುಂತಾದ ವಿಗ್ರಹಗಳೇ ಸಾಕ್ಷಿಗಳಾಗಿವೆ ಇಂಥ ವೇದಾಗಮವಿಹಿತಗಳಾದ ಸ್ಥೂಲೋಪಾಸನೆಗಳನ್ನು ಕೆಲ ಆಧುನಿಕ ಸಮಾಜದವರು ಕಿತ್ತೊಗೆಯಲು ಹವಣಿಸಿರುತ್ತಾರೆ ಭಾರತ ಧರ್ಮಮಂದಿರದ ತಳಹದಿಯಂತಿರುವ ಆ ಪರಬ್ರಹ್ಮಸ್ಮಾರಕವಾಗಿರುವ ವಿಗ್ರಹಾರಾಧನೆಯೇ ಇಲ್ಲದಮೇಲೆ ಭಾರತ ಧರ್ಮಕ್ಕೇನೇ ಜಲಾಂಜಲಿಕೊಡುವ ಪ್ರಸಕ್ತಿ ಬರುವುದು ಆದುದರಿಂದ ಸೃಷ್ಟ್ಯಾರಂಭದಿಂದ ಬಂದಿರುವ ಶಾಸ್ತ್ರಸಿದ್ಧವಾದ ಸ್ಥೂಲೋಪಾಸನೆಯನ್ನು ಬಿಟ್ಟು ಅಂಥ ಅವೈದಿಕರ ಮಾಯಾ ಜಾಲಕ್ಕೆ ಬಿದ್ದು ತಮ್ಮ ನಿಜಧರ್ಮದಿಂದ ದೂರವಾಗದಂತೆ ಜಗದೀಶ್ವರನು ಎಲ್ಲರಿಗೂ ಸದ್ಬುದ್ಧಿಯನ್ನೀಯಲಿ

ಯುದ್ಧವಾರ್ತೆ.

ಜರ್ಮನಿಯ ಮೇಲೆ ಬಾಂಬು

ಕಳೆದ ವಾರ ಬ್ರಿಟನ್ ವಿಮಾನಗಳು ಬರ್ಲಿನ್ ಮತ್ತು ಲಡ್‌ವಿಗ್ ಹೇವನ್ ಮೇಲೆ ಭಾರಿ ಮುತ್ತಿಗೆಗಳನ್ನು ನಡೆಸಿದವು ಒಟ್ಟು ೨೫೦೦ ಟನ್ ಬಾಂಬುಗಳನ್ನು ಸುರಿಸಲಾಯಿತು ಅಸಾಧ್ಯ ಬೆಂಕಿ ಎದ್ದಿತ್ತು ೩೨ ವಿಮಾನಗಳು ಹಿಂತಿರುಗಲಿಲ್ಲ ಪ್ರಪಂಚದಲ್ಲೆಲ್ಲಾ ದೊಡ್ಡದಾದ ರಸಾಯನ ಕಾರ್ಖಾನೆ ಲಡ್‌ವಿಗ್ ಹೇವನ್ನಲ್ಲಿದೆ

ಬಾಂಬಿನಿಂದ ಬರ್ಲಿನ್ ಅರ್ಧ ನಾಶವಾಗಿದೆ

ಜರ್ಮನಿಯ ಮೇಲೆ ಬಾಂಬುಗಳು ಬಿದ್ದು ಅಗಾಧ ನಷ್ಟವಾಗಿದೆಯೆಂದೂ, ಇದರ ಫಲವಾಗಿ ಅರ್ಧ ಬರ್ಲಿನ್ ನಾಶವೆಂದು ಬರ್ಲಿನಿಂದ ಬಂದ ಪ್ರಯಾಣಿಕರು ತಿಳಿಸಿದರು ಆದರೆ ನೈತಿಕಶಕ್ತಿ ಮುರಿದಿಲ್ಲ ಬರ್ಲಿನಿಂದ ಸುದ್ದಿಗಳು ಬರುವುದೇ ನಿಂತುಹೋಗಿದೆ ಎಷ್ಟೇ ನಷ್ಟವಾದರೂ ಜರ್ಮನರು ವಿನಾಶಕಾರಕ ಕೃತ್ಯಗಳಲ್ಲಿ ತೊಡಗಿಲ್ಲ ಎಲ್ಲಿಯೂ ನಿರಾಶಾಭಾವನೆಯ ಸೂಚನೆಯೇ ತೋರಿಬರುವುದಿಲ್ಲ ನೈತಿಕಶಕ್ತಿಯು ಎಂದಿನಂತೆ ಬೆಳಗುತ್ತಿದೆಯೆಂದು ಹೇಳಲಾಗಿದೆ

ಬರ್ಲಿನ್ ರಾಜಬೀದಿಗಳಲ್ಲಿ ಮೃಗಗಳ ಓಡಾಟ

ಬಾಂಬಿನ ಹೊಡೆತದ ಪರಿಣಾಮವಾಗಿ ಬರ್ಲಿನ ರಾಜಬೀದಿಗಳಲ್ಲಿ ಕರಡಿಗಳು ಮತ್ತು ಆನೆಗಳು ದಿಕ್ಪಾಲಾಗಿ ಓಡುತ್ತಿವೆ

೪೦೦೦೦ ಜಪಾನರು ಸಿಕ್ಕಿಬಿದ್ದಿದ್ದಾರೆ !

ಬೌಗನ್‌ವಿಲ್ಲೆ ದ್ವೀಪದಲ್ಲಿರುವ ೪೮೦೦೦ ಜಪಾನ್ ಸೈನಿಕರೆಲ್ಲರೂ ಬಹಳ ಮಟ್ಟಿಗೆ ಮಿತ್ರ ಸೇನೆಗಳಿಂದ ಸುತ್ತುವರಿಯಲ್ಪಟ್ಟಿದ್ದಾರೆಂದೂ ಅವರಿಗೆ ಸಹಾಯ ಹೋಗಲು ಅವಕಾಶವೇ ಇಲ್ಲವೆಂದೂ ಸುದ್ದಿ ಬಂದಿದೆ

ಮುಸೊಲಿನಿ ಸತ್ತನೆ ?

ಮುಸೊಲಿನಿಯು ಕಳೆದ ಸೋಮವಾರ ಗಾರ್ಡಾ ಸರೋವರದ ಬಳಿ ಇರುವ ತನ್ನ ಬಂಗಲೆಗೆ ಬಂದನೆಂದೂ ಆತನು ತುಂಬಾ ಎದೆಗೆಟ್ಟಿದ್ದನೆಂದೂ ಜೀವನ ಸಾಕೆನಿಸಿತೆಂದೂ ರೋಗದಿಂದ ವೈದ್ಯರು ಬರುವುದರೊಳಗಾಗಿ ಮುಸೊಲಿನಿ ಬೇಸತ್ತು ಆತ್ಮಹತ್ಯ ಮಾಡಿಕೊಂಡಿದ್ದನೆಂದು ಸ್ವೀಡಿಷ್ ಪತ್ರಿಕೆಯ ಸುದ್ದಿಗಾರರು ತಿಳಿಸಿದರು ಇನ್ನಾವ ಮೂಲದಿಂದಲೂ ಈ ಸುದ್ದಿ ದೃಢಪಟ್ಟಿಲ್ಲ

ಗಂಡನ ತಪ್ಪಿಗೆ ಹೆಂಡತಿಗೆ ಬಂಧನ

ಲಂಡನ್ನಿನಲ್ಲಿರುವ ಪೋಲೆಂಡ್ ಮಹಾಪ್ರಧಾನರು ಪತ್ನಿಯನ್ನು ಪೋಲೆಂಡಿನಲ್ಲಿ ಭಯಂಕರ ಸೆರೆಮನೆಗೆ ದೂಡಿದ್ದಾರೆ ಅವರ ಪತಿ ಪೋಲೆಂಡಿಗೆ ಮಾಡಿದ ಅಪಕಾರಕ್ಕೆ ಇದು ಪ್ರತೀಕಾರವಂತೆ ಹಿಮ್ಲರ್‌ರವರ ಸ್ವಂತ ಆಜ್ಞೆಯಂತೆ ಆ ರೀತಿ ಮಾಡಲಾಗಿದ ಆಕೆಗೆ ಇನ್ನೂ ೧೩ ವರ್ಷ ರೈತನೊಬ್ಬನ ಮಗಳು ತನ್ನ ಗಂಡನ ರಾಜಕೀಯ ಹವ್ಯಾಸವು ಆಕೆಗೆ ಸ್ವಲ್ಪವೂ ತಾಕಿರಲಿಲ್ಲವೆಂದು ಹೇಳಲಾಗಿದೆ

ತುರ್ಕಿಗೆ ನಾಜಿ ಒತ್ತಾಯ

ಡೊಡಕನೀಸ್‌ನಲ್ಲಿ ತಮ್ಮ ಕೈ ಮೇಲಾಗಿರುವುದರಿಂದ ಜರ್ಮನರು ತುರ್ಕಿಯನ್ನು ಬಲವಂತ ಪಡಿಸಲು ಯತ್ನಿಸುತ್ತಿದ್ದಾರೆ ಇದು ಸಾಧ್ಯವಿಲ್ಲವೆಂದು ತುರ್ಕಿ ಪತ್ರಿಕೆಯೊಂದು ಬರೆದಿದೆ ಈ ಒತ್ತಾಯದ ವಾತಾವರಣ ಕಲ್ಪಿಸುವುದರಿಂದ ತುರ್ಕಿ ತನ್ನ ಮಾರ್ಗವನ್ನು ಬಿಡಲಾರದು ನಾಜಿ ರಷ್ಯಾ ಕದನಕ್ಕೆ ಮುನ್ನ ಅಚ್ಛೇಯದೆ ಇದ್ದ ಮಹಾನಾಜಿ ಬಲವು ಬಾಲ್ಕನ್ಸ್‌ಗೆ ನುಗ್ಗಿ ತಮ್ಮ ಗಡಿಯಲ್ಲಿ ಬಂದು ನಿಂತಾಗಲೇ ತುರ್ಕಿ ಬೆದರಲಿಲ್ಲ ಈಗ ಕೆಲವು ದ್ವೀಪಗಳನ್ನು ಹಿಡಿದ ಮಾತ್ರಕ್ಕೆ ತುರ್ಕಿ ಎದೆಗುಂದಲಾರದು ' ಎಂಬುದಾಗಿ ಸೂಚಿಸಿದೆ

ಟೋಕಿಯೋ ಮೇಲೆ ಮುತ್ತಿಗೆಗಾರಂಭ

ಇನ್ನೇನು ಟೋಕಿಯೋ ಮುತ್ತಿಗೆ ಆರಂಭವಾದ ಹಾಗೆಯೇ ಎಂದು ಅಭಿಪ್ರಾಯ ಪಡುತ್ತಿರಲಾಗಿದೆ ಈ ಕಾರ್ಯದ ಜವಾಬ್ದಾರಿ ಬಹಳ ಮಟ್ಟಿಗೆ ನೌಕಾಬಲದ ಮೇಲೆ ಬೀಳುವುದಾಗಿದ ಏಷ್ಯದ ಭೂಮಾರ್ಗದಲ್ಲಿ ಹೋಗಿ ಜಪಾನನ್ನು ಸೋಲಿಸುವುದಕ್ಕಿಂತ ಜಲಮಾರ್ಗದಲ್ಲಿ ಜಪಾನನ್ನು ಬೇಗ ನಡೆಬಡಿಯಬಹುದೆಂದ ಮೊದಲಿನಿಂದಲೂ ಅಮೇರಿಕ ಮಿಲಿಟರಿ ನಿಪುಣರು ಹೇಳುತ್ತಿದ್ದಾರೆ

ಇಟಲಿಯ ಯುದ್ಧರಂಗ

ಕ್ಯಾಸ್ಟಿಗ್ಲಿಯೋನ್ ನಗರದ ನೈಋತ್ಯಕ್ಕೆ ಆರು ಮೈಲಿ ದೂರದಲ್ಲಿರುವ ಅಗ್ನೋನ್ ಎಂಬುದು ಮಿತ್ರ ಸೇನೆಯ ವಶವಾಯಿತು 21ನೆಯ ತಾ ಭಾನುವಾರ ೮ನೆಯ ಸೇನೆಯ ರಂಗದಲ್ಲಿ ಜಾರಿ ಮಳೆ ಬಿತ್ತು ಆದರೂ ಮಿತ್ರ ಸೈನಿಕರು ತಮ್ಮ ಸ್ಥಾನವನ್ನು ಉತ್ತಮಪಡಿಸಿಕೊಂಡರು ಸಾಂಗ್ರೋ ನದಿಯ ಪೂರ್ವಕ್ಕೆ ಎರಡು ಮೈಲಿ ದೂರದಲ್ಲಿರುವ ತಿರ್ಣ ಎಂಬ ಊರೂ, ಅದರ ಬಳಿ ಇರುವ ಗುಡ್ಡವೂ ಮಿತ್ರ ಸೈನಿಕರ ವಶವಾಗಿದೆ ೫ನೆಯ ಸೇನೆಯ ರಂಗದಲ್ಲಿ ವಾಯುಗುಣವು ಚೆನ್ನಾಗಿರಲಿಲ್ಲ ೨೪ ಗಂಟೆಗಳಲ್ಲಿ ಎಲ್ಲಾ ಮುಖ್ಯಸ್ಥಾನಗಳನ್ನು ಹಿಡಿಯುವುದರ ಮೂಲಕ ಎಂಟನೆಯ ಸೇನೆಯು ಸಾಂಗ್ರೋ ನದಿಯ ಉದ್ದಕ್ಕೂ ಮುಂದುವರಿದಿದ ಆರ್ಗೋನ್ ಆಚೆ ನುಗ್ಗುತ್ತಾ ಎಂಟನೆಯ ಸೇನೆಯ ಸೈನಿಕರು ಶತ್ರುಗಳಿಗೆ ಬಹಳ ಹಾನಿಯುಂಟುಮಾಡಿದ್ದಾರೆ

ಎಂಟನೇ ಸೇನೆ ಜರ್ಮನ್ ವ್ಯೂಹದ ಹತ್ತಿರಕ್ಕೆ ಬಂದಿದೆ

ಎಂಟನೇ ಸೇನೆಯು ಇಟಲಿಯಲ್ಲಿ ಭಾರಿ ಮುತ್ತಿಗೆಯನ್ನು ಆರಂಭಿಸಿತೆಂದು ಜರ್ಮನ್ ವರ್ತಮಾನ ಸಂಸ್ಥೆ ತಿಳಿಸುತ್ತದೆ ಎರಡು ದಿನಗಳ ಕಾಲ ಎಂಟನೇ ಸೇನೆಯ ಯೋಧರು ಮುಂದೆ ನುಗ್ಗಿದ್ದರಿಂದ, ಏಡ್ರಿಯಾಟಿಕ್ ತೀರದಿಂದ ಒಳದೇಶಕ್ಕೆ ೬೦ ಮೈಲಿವರೆಗೆ ವ್ಯಾಪಿಸಿರುವ ನಾಜಿ ವ್ಯೂಹಕ್ಕೆ ಬಹಳ ಹತ್ತಿರ ಬಂದಂತೆ ಆಗಿದೆ ಕೇಂದ್ರ ಇಟಲಿಯಲ್ಲಿ ಸಾನ್ ಪೀಟ್ರೋ ಮತ್ತು ವಾಸ್ಟೋಗ್ಗಿ ಯಾರ್ಡಿ ಎಂಬೂರುಗಳನ್ನು ಮಿತ್ರ ಸೈನಿಕರು ಹಿಡಿದಿದ್ದಾರೆ ಹಲವು ಮಂದಿ ಕೆನೆಡಿಯನ್ ಯೋಧರು ಇಟಲಿಗೆ ಬಂದಿದ್ದಾರೆಂದು ಹೇಳಲಾಗಿದೆ

ಸಾಮೋಸ್ ದ್ವೀಪವನ್ನು ನಾಜಿಗಳು ಹಿಡಿದರು

ಡಾರ್ಡನೆಲ್ಸ್ ಜಲಸಂಧಿಗೆ ಬೀಗದ ಕೈಯಂತಿರುವ ಸಾಮೋಸ್ ದ್ವೀಪವನ್ನು ತಾವು ಆಕ್ರಮಿಸಿರುವುದಾಗಿ ಜರ್ಮನರು ತಿಳಿಸುತ್ತಾರೆ ಇದನ್ನು ಇತ್ತೀಚೆಗೆ ಬ್ರಿಟಿಷರು ಹಿಡಿದಿದ್ದರು ಸಾಮೋಸ್ ದ್ವೀಪ ಡೊಡೆಕನೀಸ್ ದ್ವೀಪಸ್ತೋಮಕ್ಕೆ ಉತ್ತರದಲ್ಲಿದೆ ಅದು ಗ್ರೀಸಿಗೆ ಸೇರಿದ್ದು ಬಹಳ ಫಲವತ್ತಾಗಿದೆ ಈ ಸುದ್ದಿ ನಿಜವೆಂದು ಲಂಡನ್ನಿನಲ್ಲಿ ಖಚಿತಪಡದೆ ಇದ್ದರೂ, ನಿಜವಲ್ಲವೆಂದು ಹೇಳಲು ಯಾರಿಗೂ ಮನಸಿಲ್ಲ ಆ ದ್ವೀಪದ ಮಧ್ಯಭಾಗದಲ್ಲಿ ಮಿತ್ರಸೈನಿಕರು ಅಲ್ಲಲ್ಲಿ ಅಡಗಿದ್ದು ಶತ್ರುಗಳಿಗೆ ತೊಂದರೆ ಕೊಡಲು ಅವಕಾಶವಿದೆ ಈ ದ್ವೀಪವು ತುರ್ಕಿತೀರಕ್ಕೆ ಕೇವಲ ಒಂದು ಮೈಲಿಯೊಳಗೆ ಇರುವುದರಿಂದ ರಾತ್ರಿ ಕಾಲಗಳಲ್ಲಿ ಯೋಧರು ಅಲ್ಲಿಗೆ ಹೋಗಲು ಅವಕಾಶವಿದೆಯೆಂದು ಹೇಳಲಾಗಿದೆ

ಗಿಲ್‌ಬರ್ಟ್ ದ್ವೀಪಕ್ಕೆ ಅಮೆರಿಕನರು ಬಂದಿಳಿದರು

ಬಲಯುತ ಅಮೆರಿಕನ್ ಪಡೆಗಳು ಗಿಲ್‌ಬರ್ಟ್ ದ್ವೀಪಸ್ತೋಮಕ್ಕೆ ಸೇರಿದ ಮಾಕಿನ್ ಮತ್ತು ತರಾವಾ ದ್ವೀಪಗಳಿಗೆ ಬಂದಿಳಿದಿವೆ ಮಾಕಿನ್ ದ್ವೀಪದಲ್ಲಿ ಶತ್ರು ಪ್ರತಿಭಟನ ಸಾಮಾನ್ಯವಾಗಿದೆ ತರಾವಾದಲ್ಲಿ ಜಪಾನರ ಪ್ರತಿಭಟನೆ ಜೋರಾಗಿದ ಹೊಡೆದಾಟವು ಮುಂದುವರಿಯುತ್ತಿದೆ ಮಿತ್ರ ಬಾಂಬರುಗಳು ಇದೇ ಸಮಯದಲ್ಲಿ ಮಾರ್ಷಲ್ ದ್ವೀಪದ ಮೇಲೆ ಮುತ್ತಿಗೆ ನಡೆಸಿದವು ಕಳೆದ ವಾರ ಗಿಲ್‌ಬರ್ಟ್ ದ್ವೀಪಗಳ ಮೇಲೆ ಅನೇಕ ಸಾರಿ ಮುತ್ತಿಗೆ ನಡೆಸಲಾಗಿದ್ದು ಕೇಂದ್ರ ಪೆಸಿಫಿಕ್‌ನಲ್ಲಿ ಮಿತ್ರ ಸೇನೆಗಳು ಜಪಾನಿನ ಮೇಲೆ ದಾಳಿಯ ಭಾರಿ ಪೆಟ್ಟು ಹಾಕಿದಂತಾಗಿದೆ ಅಲ್ಲಿ ಭೂಮಿಯ ವಿಮಾನ ಮತ್ತು ನೌಕಾ ಮೂಲಗಳಿಂದ ಮಿತ್ರ ಸೇನೆಗೆ ತುಂಬಾ ಸಹಾಯವಾಗುತ್ತಿದೆ ಹವಾಯ್‌ನಿಂದ ನೈಋತ್ಯ ಪೆಸಿಫಿಕ್ ರಂಗಗಳಿಗೆ ಹೋಗುವ ಮಿತ್ರ ಹಡಗುಗಳನ್ನು ಜಪಾನರು ಮುಳುಗಿಸದಂತೆ ತಡೆಯಬಹುದೆಂದು ಹೇಳಲಾಗಿದೆ

ಜಪಾನ್ ಮೇಲೆ ಕದನ

ನಾಜಿಗಳ ಮೇಲೆ ನಡೆಸುತ್ತಿರುವ ಕದನವು ಬೇಗನೆ ಕೊನೆಗಾಣುವುದೆಂಬ ನಂಬಿಕೆ ಬಲವಾದ ಹಾಗೆಲ್ಲ ಇಡಿಯ ಜಪಾನು ಸಂಯುಕ್ತ ರಾಷ್ಟ್ರಗಳ ಬಲವನ್ನೆದುರಿಸಿ ಬಹುಕಾಲ ನಿಲ್ಲಲಾರದೆಂಬ ಭಾವನೆ ಹರಡುತ್ತಿದೆ ಜಪಾನಿನ ಮೇಲೆ ನಡೆಸುವ ಈ ದಂಡಯಾತ್ರೆಗೆ ಭಾರತವೇ ಮುಖ್ಯ ಮೂಲವಾಗಿರುವುದು ರಷ್ಯವು ಮಿತ್ರ ದೇಶಗಳ ಕಡೆ ಸೇರಬಹುದು ಭಾರತದಲ್ಲಿ ತರಬೇತಾಗಿರುವ ಸೇನೆಯಲ್ಲಿ ಬಹಳ ಮಟ್ಟಿನ ಬಲವು ಅದಕ್ಕಾಗಿ ಉಪಯೋಗಿಸಲ್ಪಡಬಹುದು ಭಾರತದ ಮೇಲೆ ಜಪಾನು ನೇರವಾಗಿ ಏಟುಹಾಕುವುದನ್ನು ಭಾರತೀಯರು ಎದುರಿಸಬೇಕಾಗಬಹುದು ಲಾರ್ಡ್ ಮೌಂಟ್ ಬೇಟನ್ನರ ಕೈಕೆಳಗೆ ಕೂಡಿಸಬಹುದಾದ ಬ್ರಿಟಿಷ್, ಅಮೆರಿಕ ಮತ್ತು ಡೊಮಿನಿಯನ್ ಸೇನೆಗಳು ಸಹ ಹೊಡೆದಾಟದಲ್ಲಿ ಪಾಲು ವಹಿಸುವುವು ಬ್ರಿಟನ್, ಅಮೆರಿಕ ಚೀಣ, ಆಸ್ಟ್ರೇಲಿಯ ನ್ಯೂಜೀಲೆಂಡ್‌ಗಳಂತೆ ರಷ್ಯವು ಕೂಡ ಈ ದ್ವಿತೀಯ ಕದನದಲ್ಲಿ ಭಾಗವಹಿಸೀತು. ಸದ್ಯಕ್ಕೆ ಸ್ಟಾಲಿನ್ನರು ತಮ್ಮ ತಲೆಯ ಮೇಲೆ ಹೆಚ್ಚಿನ ಭಾರವನ್ನು ಎಳೆದುಕೊಳ್ಳಲು ಒಪ್ಪದಿರಲು ಕಾರಣಗಳಿವೆ ಆದರೆ, ಹಿಟ್ಲರನ ಆಟವು ಮುಗಿದಮೇಲೆ ರಷ್ಯವು ಸುಮ್ಮನೆ ಕುಳ್ಳಿರಲಾರದು ಈ ದ್ವಿತೀಯ ಕದನಕ್ಕಾಗಿ ಅಮೇರಿಕನರೂ, ಬ್ರಿಟಿಷರೂ ಚುರುಕಿನಿಂದ ಸಿದ್ಧತೆ ನಡೆಸುತ್ತಿದ್ದಾರೆ

ರಷ್ಯನರು ಸ್ವಲ್ಪ ಹಿಮ್ಮೆಟ್ಟಿದರು

ಕೀವ್ ಪ್ರದೇಶದಲ್ಲಿ ಜರ್ಮನರು ಅಸಾಧ್ಯ ಸೇನಾಸಂಗ್ರಹಣದಿಂದ ರಷ್ಯನರ ಮೇಲೆ ಭಾರಿ ಮುತ್ತಿಗೆಗೆ ಆರಂಭಿಸಿದ್ದಾರೆ ಬ್ರುಸಿಲೋವ್ ಮತ್ತು ಚೆರ್ನಿಕೋವ್ ಪ್ರದೇಶಗಳಿಂದ ರಷ್ಯನರು ಕೊಂಚ ಪ್ರದೇಶಗಳನ್ನು ತ್ಯಜಿಸಿ ಬರಬೇಕಾಯಿತು. ಬ್ರುಸಿಲೋವ್ ಕೀವ್‌ಗೆ ೪೭ ಮೈಲಿ ಪಶ್ಚಿಮದಲ್ಲಿದೆ ೪೮ ಘಂಟೆಗಳಲ್ಲಿ ಕೆಂಪು ಸೇನೆ ೩೦ ಮೈಲಿ ರಣರಂಗವನ್ನು ತ್ಯಜಿಸಬೇಕಾಯಿತು. ಪ್ರಿಪೆಟ್ ಜೌಗು ತೀರದಲ್ಲಿ ಮಾತ್ರ ರಷ್ಯನರ ಮುನ್ನಡೆಯು ಏಕಸಮವಾಗಿದೆ ಜಿಲ್ಲಾ ಕೇಂದ್ರವಾದ ಬ್ರೆಗಿನ್ ಎಂಬ ಆಯಕಟ್ಟಿನ ನೆಲೆಯನ್ನು ಕೆಂಪುಸೇನೆ ವಶಪಡಿಸಿಕೊಂಡಿರುವುದಲ್ಲದೆ ಇನ್ನೂ ೪೦ ಜನನಿಬಿಡ ಪ್ರದೇಶಗಳಿಂದ ಶತ್ರುಗಳನ್ನು ಹಿಮ್ಮೆಟ್ಟಿಸಿದೆಯೆಂದು ಹೇಳಲಾಗಿದೆ.

ಇಟಲಿಯಲ್ಲಿ ಭೀಕರ ಕಾಳಗಗಳು

ರಷ್ಯ ರಣರಂಗದಲ್ಲಿಯೂ, ಇಟಲಿ ರಣರಂಗದಲ್ಲಿಯೂ ಭೀಕರ ಕಾಳಗಗಳಾಗುತ್ತಿವೆ ಜರ್ಮನರು ದಿನದಿನಕ್ಕೂ ಸೇನಾಬಲವನ್ನು ಅಧಿಕ ಮಾಡಿಕೊಳ್ಳುತ್ತಿದ್ದಾರಲ್ಲದೆ ದಿಕ್ಕು ತೋಚದವರು ನಿರಾಶಾಭರಿತರಾಗಿ ಹೆಚ್ಚು ಹೆಚ್ಚು ಸೇನೆಯನ್ನು ರಣರಂಗದಲ್ಲಿ ಬಲಿಕೊಡುತ್ತಿದ್ದಾರೆ ರಷ್ಯ ರಣಕ್ಷೇತ್ರದಲ್ಲಿ ಕೀವ್ ಪ್ರದೇಶದಲ್ಲಿ ಉಭಯ ಸೇನೆಗಳ ಪರಸ್ಪರ ಘರ್ಷಣೆ, ಇತಿಹಾಸ ಪ್ರಸಿದ್ಧವಾದ ಹೋರಾಟಗಳಿಂದ ಇಡೀ ಪ್ರದೇಶದಲ್ಲಿ ರಕ್ತದ ಕಾಲುವೆಯು ಹರಿಯುತ್ತಿದೆ ಕೆಂಪು ಸೇನೆಯು ಮಾತ್ರ ನಾಜಿಗಳ ಉಗ್ರ ಪ್ರತಿಘಾತಗಳನ್ನೆಲ್ಲಾ ಅದ್ಭುತವಾಗಿ ತಡೆಗಟ್ಟುತ್ತ, ವೀರಾವೇಶದಿಂದ ಹೋರಾಡುತ್ತಿದೆ ಪ್ರಿಪೆಟ್ ಜೌಗು ತೀರದಲ್ಲಿ ಕ್ರೆಮೆಚಿಂಗ್ ಕಡೆ ಕೆಂಪುಸೇನೆಯು ಜನನಿಬಿಡವಾದ ಅನೇಕ ಪ್ರದೇಶಗಳನ್ನು ಆಕ್ರಮಿಸಿ ದಂಡಯಾತ್ರೆಯ ಬಿಗಿಯನ್ನು ಸಡಿಲ ಮಾಡದ ಪರಿಸ್ಥಿತಿಯ ಹತೋಟಿಯನ್ನು ತನ್ನ ವೀರ ಹಸ್ತಗಳಲ್ಲಿಯೇ ಉಳಿಸಿಕೊಂಡಿದೆ ಇಟಲಿಯಲ್ಲಿ ಬ್ರಿಟಿಷರ ಎಂಟನೆಯ ದಳವು ಬೆಟ್ಟ, ಕಾಡು, ಗುಡ್ಡಗಳನ್ನು ಲೆಕ್ಕಿಸದೆ ಶತ್ರುಸೇನಾಬಲಕ್ಕೆ ಉಗ್ರ ಪ್ರಹಾರಗಳನ್ನೀಯುತ್ತಿದೆ. ಸಾಂಗ್ರೋ ನದಿಯ ತೀರಕ್ಕೆ ಮಿತ್ರ ಸೇನೆಯು ಬಂದಿರುವುದು ಮತ್ತು ಸಾಂಗ್ರೋ ನದಿಯನ್ನು ದಾಟುವುದಕ್ಕೆ ಸನ್ನಾಹ ಮಾಡಿಕೊಳ್ಳುತ್ತಿದೆ ಅಮೆರಿಕನ್ ಐದನೆಯ ಪಡೆಯು ಬ್ರಿಟಿಷ್ ಅಷ್ಟಮ ದಳವನ್ನು ಸಂಧಿಸುವ ಉದ್ದೇಶದಿಂದ ಶತ್ರು ರಕ್ಷಣಾ ಸಾಲುಗಳ ಮೇಲೆಲ್ಲಾ ಬಾಂಬುಗಳನ್ನು ಸುರಿಸಿ ಆಯಕಟ್ಟಿನ ಪ್ರದೇಶಗಳನ್ನೆಲ್ಲಾ ಛಿದ್ರಿಸುತ್ತಿವೆ

ಸಾರ್ವಭೌಮರ ಭಾಷಣ

ಪಾರ್ಲಿಮೆಂಟಿನ ಹೊಸ ಅಧಿವೇಶನದ ಆರಂಭೋತ್ಸವವನ್ನು ಈ ದಿನ ಬ್ರಿಟಿಷ್ ರಾಜರು ನೆರವೇರಿಸುತ್ತಾ ' ಈ ಯುದ್ಧದ ಭೀಕರ ಪರಿಸ್ಥಿತಿಗಳಿಂದ ನನ್ನ ಪ್ರಜೆಗಳಾದ ಅನೇಕ ಭಾರತೀಯರು ತೊಂದರೆಗೀಡಾಗಿದ್ದಾರೆ ಮತ್ತು ನನ್ನ ಸರಕಾರವು ಭಾರತದ ಕೆಲವು ಪ್ರದೇಶಗಳಲ್ಲಿ ತಲೆದೋರಿರುವ ಆಹಾರದ ಅಭಾವವನ್ನು ತೊಲಗಿಸಲು ಪರಿಹಾರ ಮಾರ್ಗಗಳನ್ನೆಲ್ಲಾ ಅನುಸರಿಸುವುದು ” ಎಂಬುದಾಗಿ ನುಡಿದರು ಸಾರ್ವಭೌಮರು ಯುದ್ಧ ವೇಗದಲ್ಲಿಯೂ ಶಾಂತಿಯ ಪುನರುದ್ಧಾರಣೆಯಲ್ಲಿಯೂ, ಇತರ ರಾಷ್ಟ್ರಗಳ ಮತ್ತು ತಮ್ಮ ಡೊಮಿನಿಯನ್‌ಗಳ ಸಹಾಯ ಮತ್ತು ಸಹಕಾರಗಳಲ್ಲಿಯೂ ಮಾಸ್ಕೋ ಸಮ್ಮೇಳನದಲ್ಲಿಯೂ ಸಂತೋಷವನ್ನು ವ್ಯಕ್ತಪಡಿಸಿದರು. ಸಾರ್ವಭೌಮರು ರಷ್ಯಾ ಸೇನೆಯನ್ನು ಪ್ರಶಂಸಿಸಿ ನಾವು ಮತ್ತು ನನ್ನ ಪ್ರಜೆಗಳು ರಷ್ಯದ ಮಹಾ ಜಯಗಳಿಂದ ಮಹದಾನಂದ ಹೊಂದಿ ಲೋಕ ಶತ್ರುವಿನ ಹಿಂಸೆಯನ್ನು ಮುರಿಯಲು ಸಂತೋಷದಿಂದ ಮುನ್ನುಗ್ಗೋಣ ಎಂದು ಆಶಿಸಿದರು

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ ಒಂಭತ್ತು ಅವತಾರಗಳ ಕೂಡಿದ ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ ಲಿಂಗಾವತಾರದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು ಲೋಕವಿಖ್ಯಾತರಾದ ಅಗಸ್ತ್ಯ, ದಧೀಚಿ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಸಿದ್ಧಾಂತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೫ ಬೆಲೆ	೦—೩—೦
[illegible] ಒಂದರಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು ರುದ್ರಮುನೀಶ್ವರ ಶಿವಾಚಾರ್ಯರು ಭೂಗರ್ಭದಿಂದ ಅವತರಿಸಿರುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರನಿವಾಸಿಗಳಾದ ಶ್ರೀ ಜಗದ್ಗುರು ವಿಶ್ವಾರಾಧ್ಯರ ಮೂಲಧರ [illegible] ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೩—೦
ಶ್ರೀಮದುಜ್ಜಯಿನೀ ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೨—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಸುಖಾಸೀನರಾದಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೨—೦

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧರಿಸಿದ ಪ್ರತಿಯೊಬ್ಬನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣದಂತಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತಕ್ಕ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು **೨ ಸಾವಿರ** ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭದಂತಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರುರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವೆನಿಸಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು.

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೨ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿನಿಜತತ್ತ್ವದರ್ಪಣ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರಶೈವಾಚಾರವಿಧಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೩ನೆಯ ಆವೃತ್ತಿ)	೪ ಆಣೆ
ಶ್ರೀಪತಿಪಂಡಿತಾರಾಧ್ಯರ ಕಾಲನಿರ್ಣಯ	೬ ಆಣೆ
ಶೈವೋಪನಿಷತ್ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಾಶ್ರಮವಿಮರ್ಶತತ್ತ್ವಸ್ಥಿರೀಕರಣ (೩ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧|| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಮಿನೀಷಟ್ಪದಿ)	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*) ...	**8 As**
Speeches by Pandit Shri Kashinatha Shastriji (*English*)	**12 As**
लिंगधारणचंद्रिका (संस्कृत)	**३ रु**
वीरशैवरत्न (मराठी)	**१ रु.**
महानारायणोपनिषत् (वीरशैवभाष्य-संस्कृत)	**१ रु.**
सिद्धांतशिखामणि (मूल)	**६ आ.**
पुरुषसूक्तम् (वीरशैवप्राचीनभाष्योपेतम्)	**४ आ.**
नंदिकेश्वरकारिका (संस्कृत)	**२ आ.**

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನ-ಕಂಜ-ತಜ್ಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀ[illegible]ಲಿಂಗ[illegible] ಪ್ರವರ್ ।
ಪಂಚಾಚಾರ್ಯ[illegible] ಪರಿಶಿಷ್ಟ-ಶಾಸ್ತ್ರೋಪದೇಶಕರ್ ಪಂಚಾಚಾರ್ಯ ಜಗದ್ಗುರು[illegible]

ಸ್ಥಳವರ್ಗ ೩ ರೂ ಪರಸ್ಥಳ-ವರ್ಗ [illegible] ರೂ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೯ನೇ ಡಿಸೆಂಬರ್ ೧೯೪೬ [ಸಂಚಿಕೆ ೩೧

ಜಾತ್ರೆಯ ಮಹೋತ್ಸವ

ಕೊಂಡಗೂಳಿ ಶ್ರೀ ದಿವ್ಯಸಮಾಧಿಸ್ಥ ವೀರಶೈವ ಧರ್ಮದ ಜಯಸ್ತಂಭದಂತಿದ್ದ ಶ್ರೀ [illegible]ರ ಜಾತ್ರೆಯ ಮಹೋತ್ಸವವು ಇದೇ ಮಾರ್ಗಶೀರ್ಷ [illegible] ೧ ಭಾನುವಾರ ರುದ್ರಾಭಿಷೇಕ ಮುಂತಾದ ಸೇವೆಗಳಿಂದ ಆರಂಭವಾಗಿ ಮರುದಿನ ರಥೋತ್ಸವವೂ ಇತರ ಸೇವೆಗಳೂ ನಡೆಯುವುವು ಆ ಕಾಲಕ್ಕೆ ಭಕ್ತಾದಿಗಳು ಅಲ್ಲಿಗೆ ಬಂದು ಶ್ರೀಗಳ ಆಶೀರ್ವಾದಕ್ಕೆ ಪಾತ್ರರಾಗಬೇಕೆಂದು ಉತ್ಸವ ವ್ಯವಸ್ಥಾಪಕರಾದ ಶ್ರೀ ಗುರಪ್ಪ ಕೊಂಡಗೂಳಿ ಇವರು ಬರೆದು ತಿಳಿಸಿರುವರು

ಗುರುಕುಲಕ್ಕೆ ಶ್ರೀಶರಣರ ಭೇಟಿ

ತಾ॥ ೨೬-೧೧-೪೬ ದಿವಸ ಆಗರ್ಭ ಶ್ರೀಮಂತರೂ ಕಲಬುರ್ಗಿಯ ಶರಣ ಬಸವೇಶ್ವರರ ಪೀಠಾಧಿಕಾರಿಗಳೂ ಆದ ಶ್ರೀಮಾನ್ಯ ದೊಡ್ಡಪ್ಪ ಉರ್ಫ ಅಪ್ಪಾಸಾಹೇಬ ಇವರು ಸೊಲ್ಲಾಪುರದ ವೀರಶೈವ ಗುರುಕುಲಕ್ಕೆ ಭೇಟಿ ಇತ್ತರು ಅವರ ಜೊತೆಯಲ್ಲಿಯೇ ಆಗಮಿಸಿದ ಶ್ರೀ ಷ॥ ಬ್ರ॥ ಸಿದ್ಧಲಿಂಗಶಿವಾಚಾರ್ಯ ಮಹಾಸ್ವಾಮಿಗಳು ಇವರ ಅಧ್ಯಕ್ಷತೆಯಲ್ಲಿ ಮಧ್ಯಾಹ್ನ ೧ ಘಂಟೆಗೆ ಸಭೆ ಸೇರಿತು ಮೊದಲು ಶ್ರೀ॥ ವೇ॥ ಸಂ॥ ಜಗದೀಶ ಶಾಸ್ತ್ರಿಗಳು, ಸಾಹಿತ್ಯ ರತ್ನಂ, ಇವರು ಗುರುಕುಲದ ಮುಖ್ಯೋದ್ದೇಶ್ಯವೇನೆಂಬುದನ್ನು ಸ್ಪಷ್ಟವಾಗಿ ಶ್ರೀಶರಣರ ಮುಂದ ವಿವರಿಸಿದರು ಅನಂತರ ಇಲ್ಲಿಯ ಹಿರಿಯ ವಿದ್ಯಾರ್ಥಿಗಳಾದ ಶ್ರೀ ರುದ್ರಮುನಿಶಿವಾಚಾರ್ಯ ಹಿರೇಮಠ ಅಣ್ಣಿಗೇರಿ. ಶ್ರೀಸ್ವಾಮಿ ಪಟ್ಟದ ಹಿರೇಮಠ, ಹುಣಸಿಗಿ, ಶ್ರೀಗುರುಪಾದ ಶಿವಾಚಾರ್ಯ ಹಿರೇಮಠ ಸೂರಕೋಡ ಇವರುಗಳಿಂದ ದೇವಭಾಷೆಯಲ್ಲಿ ಭಾಷಣವಾದನಂತರ ನಮ್ಮ ಗುರುಗಳು ಗುರುಕುಲದ ಸ್ಥಾಪನೆಯ ವಿಷಯವಾಗಿ ಒಂದೆರಡು ಮಾತುಗಳನ್ನು ತಮ್ಮ ವಾಗ್ಝರಿಯಿಂದ ಹೊರಹೊಮ್ಮಿಸಿದ ಮೇಲೆ ಶ್ರೀಮಾನ್ಯ ಗಂಗಪ್ಪಣ್ಣಾ ಅಬ್ಬಲ್ ಪುರಕರ-ಇವರು ತಮ್ಮ ಭಾಷಣದಲ್ಲಿ ಗುರುಕುಲವು ಹೇಗೆ ನಡೆದೀತೆಂಬ ಕಳವಳವು ಬೇಡ, ವೀರಶೈವ ಧರ್ಮವು ಪರಧರ್ಮದ ಮೋಹವೆಂಬ ಹೊದಿಕೆಯನ್ನು ಹೊದ್ದುಕೊಂಡು ಮೂಲೆಗುಂಪಾಗಿ ಮಲಗಿದ ಗುರುಗಳು ಬೇಕು ಎಂಬಿವೇ ಮುಂತಾದ ವಿಚಾರಗಳನ್ನು ಹೃದಯಂಗಮವಾಗಿ ತಿಳಿಸಿದರು ಆಚಾರ್ಯರ ಮಂಗಲಜಯಘೋಷಗಳೊಡನೆ ಶ್ರೀಶರಣರು ಗುರುಕುಲಕ್ಕೆ ನೂರೊಂದು ರೂಪಾಯಿಗಳನ್ನಿತ್ತು ಗುರುಕುಲವು ಅಭಿವೃದ್ಧಿ ಹೊಂದುತ್ತ ನಡೆಯಲೆಂಬ ತಮ್ಮ ಸದಿಚ್ಛೆಯನ್ನು ಸೂಚಿಸಿದ ಮೇಲೆ ಆಚಾರ್ಯಜಯಘೋಷದೊಡನೆ ಸಭೆಯು ಮುಕ್ತಾಯವಾಯಿತು.

ಶ್ರೀ ಸ್ವಾಮಿ ಪಟ್ಟದ ಹಿರೇಮಠ ಹುಣಸಿಗಿ

ಮೂಲವ್ಯಾಧಿಯ ಲಕ್ಷಣಗಳು

ಸಾಮಾನ್ಯವಾಗಿ ಈ ರೋಗವು ಅನೇಕರಲ್ಲಿ ಕಂಡು ಬರತಕ್ಕದ್ದು [illegible] ತಡೆ ಮಾಂಸ[illegible] ಗುದಮಾರ್ಗದಲ್ಲಿ ಮೊಳಕೆ[illegible]ಗಳಿದ್ದು ಇವಕ್ಕೆ ಮೂಲವ್ಯಾಧಿ ಎನ್ನುವರು. ಇವಕ್ಕೆ ಸಂಸ್ಕೃತದಲ್ಲಿ ಅರ್ಶ[illegible] ಎನ್ನುವರು. ಇದು ಶತ್ರುವಿನಂತೆ ಮನುಷ್ಯನಿಗೆ ರೋಗ ಕೊಡುತ್ತದೆ ಎಂದು ಈ ಹೆಸರು ಬಂದಿದೆ. ಮಾನವ ಶರೀರದ ಕಟ್ಟಕಡೆಯ ನಾಲ್ಕು ಬೆರಳು ಉದ್ದವಾದ ಭಾಗಕ್ಕೆ ಗುದವೆಂದೆನ್ನುವರು ಇದರಲ್ಲಿ ಒಂದರೊಳಗೊಂದು ಅಂಗುಲಿ ಉದ್ದದ ಮೂರು ವಲಯ (ವಳಿಕೆ) ಗಳುಂಟು. ಹೊರಗಿನ ವಳಿಯಕ್ಕೆ ಪ್ರವಾಹಿನಿ ಎರಡನೆಯದಕ್ಕೆ ವಿಸರ್ಜನಿ, ಮೂರನೆಯದಕ್ಕೆ ಸಂವರಣಿ ಎಂಬ ಹೆಸರುಗಳುಂಟು. ಸಂವರಣಿಯು ಮುಂದ ಒಂದು ಅಂಗುಲಿ ಅಂತರದಿಂದ ಗುದರೋಮವಿರುತ್ತವ ಕೆಲವರಿಗೆ ಮೂಲವ್ಯಾಧಿಯು ಜನಿಸುವಾಗಲೇ ಮೊದಲಿನಿಂದಲೂ ಇರುವದುಂಟು. ಇದರಲ್ಲಿ ಸಾಧಾರಣವಾಗಿ ಶುಷ್ಕ ಸ್ರಾವಯುಕ್ತ ಎಂದು ಎರಡು ಭೇದಗಳನ್ನು ಮಾಡಬಹುದು ಮಾತಾಪಿತೃಗಳ ವಿರುದ್ಧ ಆಹಾರವಿಹಾರಗಳಿಂದಲೂ ಪ್ರಾಪಿಸಿದ ಗರ್ಭ ಉತ್ಪನ್ನವಾಗುವಾಗಲೇ ಸಹಜ ಮೂಲವ್ಯಾಧಿಯು ಬೀಜದೋಷದಿಂದ ಉತ್ಪನ್ನವಾಗುವುದು.

ಮೂಲವ್ಯಾಧಿ ರೋಗವು ಆನುವಂಶಿಕವಾಗಿ ಬರುವದೂ ಉಂಟು ಸಹಜ ಅರ್ಶವು ಸೂಕ್ಷ್ಮವಿದ್ದು ಕಣ್ಣಿಗೆ ಕಾಣಿಸದಂತೆ ಇರುವದು [illegible] ಮೊಳಕೆಗಳು ಒಳಭಾಗಕ್ಕೆ ಇದ್ದು ಚಿಕ್ಕವಾಗಿ ಇರುವವಲ್ಲದೆ ಒಳಗೆ ತೊಂದರೆಯನ್ನುಂಟುಮಾಡುವ ಸ್ವಭಾವವುಳ್ಳವುಗಳಾಗಿರುತ್ತವೆ ಜನ್ಮಾದನಂತರ ಉತ್ಪನ್ನವಾಗುವ ಅರ್ಶಗಳಲ್ಲಿ ವಾತಜ, ಪಿತ್ತಜ, ಕಫಜ ದ್ವಂದ್ವಜ, ಸಾನ್ನಿಪಾತಿಕ, ರಕ್ತಜ ಎಂದು ಆರು ಭೇದಗಳುಂಟು ವಾತಾರ್ಶ ಕಫಾರ್ಶಗಳು ಶುಷ್ಕವಾಗಿರುತ್ತವೆ ರಕ್ತಾರ್ಶ ಹಾಗೂ ಪಿತ್ತಾರ್ಶಗಳು ಸ್ರಾವಯುಕ್ತವಾಗಿ ಇರುತ್ತವೆ ಸಾಮಾನ್ಯಕಾರಣ ಅತಿ ಸ್ತ್ರೀಸಂಭೋಗ, ಕುದುರೆಯ ಸವಾರಿ, ಗುದದ್ವಾರಕ್ಕೆ ಆಘಾತ, ಬಹಳ ತಿಣುಕುವದು, ಅತಿ ಉಷ್ಣ ಪದಾರ್ಥಗಳ ಸೇವನೆ, ಮಲಾವರೋಧ, ವಾತ ಮೂತ್ರ-ಮಲಗಳ ವೇಗಗಳನ್ನು ತಡೆದು ಹಿಡಿಯುವದು, ಜ್ವರ, ಗುಲ್ಮ, ಅತಿಸಾರ, ಸಂಗ್ರಹಣಿ, ಪಾಂಡುರೋಗಗಳಿಂದ ಕ್ಷೀಣವಾಗುವುದು ಗರ್ಭಪಾತ ಇತ್ಯಾದಿ ಕಾರಣಗಳಿಂದಲೂ ಮೂಲವ್ಯಾಧಿಯು ಉತ್ಪನ್ನವಾಗುವದು

ಮೂಲವ್ಯಾಧಿಯ ಪೂರ್ವರೂಪದಲ್ಲಿ ಅಗ್ನಿಮಾಂದ್ಯ, ಹೊಟ್ಟೆ ಉಬ್ಬುವದು ಕೈಕಾಲು ಸೆಳೆಯುವದು, ಶ್ರಮ ಬಂದಂತಾಗುವುದು, [illegible] ಬರುವದು, ಕಣ್ಣಿಗೆ ಕತ್ತಲೆ, ಮಲಾವರೋಧ, ಹೊಟ್ಟೆಯಲ್ಲಿ ವಾತದ ವಿಶೇಷ ಸಂಚಾರ, ಡೇಕರಿಕೆಗಳು ಬಹಳ ಬರುವದು, ಅನ್ನದ ಮೇಲೆ ಇಚ್ಛೆ ಇಲ್ಲದಂತಾಗುವದು ಟೊಂಕಶೂಲೆ ಈ ಲಕ್ಷಣಗಳು ಪ್ರಾರಂಭವಾಗುವವು ಇನ್ನು ಮೂಲವ್ಯಾಧಿಯು ಬೆಳೆದು ಪೂರ್ಣವಾಯಿತೆಂದರೆ, ಮೇಲೆ ಹೇಳಿದ ವಿಕಾರಗಳಲ್ಲಿ ಹೆಚ್ಚು ಕಂಡು ಬರುವವು ಆದರೆ ಈ ಎಲ್ಲ ವಿಕಾರಗಳು ಕಾಣಬರುತ್ತವೆ ಎಂದು ತಿಳಿಯಬಾರದು, ಹೆಚ್ಚು ಕಡಿಮೆ ಪ್ರಮಾಣದಿಂದ ಕಾಣಬರುತ್ತವೆ ಎಂದು ತಿಳಿಯಬೇಕು. ವಾತಜ ಮೂಲವ್ಯಾಧಿಯ ಮೊಳಕೆಗಳು ಒಣಗಿದಂತೆ ಇರುತ್ತವೆ ಅದರಿಂದ ನೋವು ಬಹಳ [illegible] ವರ್ಣ ಕಪ್ಪು ಅಥವಾ ಕೆಂಪು ಮೊಳಕೆಗಳು ಬೇರೆ ಬೇರೆ ಆಕಾರದವು, ಇವು ಅಡ್ಡತಿಡ್ಡಾಗಿಯೂ ಇರುತ್ತವೆ ಅವುಗಳ ತುದಿಯು ಸೀಳಿದಂತೆ ಇರುತ್ತದೆ ವಾತದ ಅರ್ಶದಲ್ಲಿ ತಲೆಶೂಲೆ, ಟೊಂಕಶೂಲೆ ಪಾರ್ಶ್ವಶೂಲೆಗಳು ಇರುತ್ತವೆ ಮಲಾವರೋಧ, ಅರುಚಿ, ಹಸಿವೆಯಾಗದಿರುವದು. ತಲೆ ತಿರುಗಿದಂತಾಗುವದು ಈ ಲಕ್ಷಣಗಳು ಇರುವವು ತೃಷೆ, ಉಗುರು ಮಲ ಮೂತ್ರ, ಕಣ್ಣು ನಾಲಗೆಗಳು ಕಪ್ಪಾಗಿಯೂ [illegible] ಗಳಾಗುವವು ಪಿತ್ತಜನ್ಯ ಅರ್ಶದಲ್ಲಿಯ ಮೊಳಕೆಗಳ ವರ್ಣವು ನೀಲಿ ಬಣ್ಣವಾಗಿರುತ್ತದೆ ಅವುಗಳಿಂದ ರಕ್ತವು ಸೋರುತ್ತಿರುತ್ತದೆ ಒಮ್ಮೊಮ್ಮೆ ದುರ್ಗಂಧವಾದರೂ ಬರುವದುಂಟು ಪಿತ್ತಜನ್ಯ ಮೂಲವ್ಯಾಧಿಯಲ್ಲಿ ನೀರಡಿಕೆ ಹೆಚ್ಚಾಗುವದು ಜ್ವರ, ಕಣ್ಣುರಿ, [illegible] ಈ ಲಕ್ಷಣಗಳಾಗುವವು. ತ್ವಚೆ ಕಣ್ಣುಗಳು ಹಳದಿ ವರ್ಣದಂತಾಗಿ ಕಾಣುವವು, ಕಫಜನ್ಯ ಮೂಲವ್ಯಾಧಿಯ ಮೊಳಕೆಗಳು ಬಹಳ ಒಳಕ್ಕೆ ಇದ್ದು ಕಡಿಮೆ ವೇದನೆಯುಂಟುಮಾಡುವವು ಕಫಾರ್ಶದಿಂದ ನಪುಂಸಕತ್ವ, ಅಗ್ನಿಮಾಂದ್ಯ, ಅರುಚಿ, ವಾಂತಿ ಈ ವಿಕಾರಗಳಾಗುವವು ಉಗುರು ತ್ವಚೆ ಕಣ್ಣುಗಳು ಬಿಳುಪಾಗುವವು ಸಾಮಾನ್ಯವಾಗಿ ರಕ್ತಜ ಮೂಲವ್ಯಾಧಿಯು ಪಿತ್ತಜನ್ಯ ಮೂಲವ್ಯಾಧಿಯಂತೆಯೇ ಇರುತ್ತದೆ ಮೊಳಕೆಗಳು ರಕ್ತವರ್ಣವಾಗಿರುವವು ಭೇದಿಯಾಗುವ ಸಮಯದಲ್ಲಿ ಆ ಮೊಳಕೆಗಳಿಂದ ಅತಿಶಯ ರಕ್ತ ಬೀಳುವದು. ರಕ್ತಹೀನತೆಯಿಂದ ರೋಗಿಯು ಕಾಂತಿಹೀನ ಬಲಹೀನ ಉತ್ಸಾಹಹೀನನಾಗುವನು ಜೀವನ ಶಕ್ತಿಯು ತೀರ ಕುಗ್ಗುತ್ತ ಹೋಗುವದು ದ್ವಂದ್ವಜ ಮೂಲವ್ಯಾಧಿಯಲ್ಲಿ ಯಾವದೇ ಎರಡು ದೋಷಗಳ ಲಕ್ಷಣಗಳು ಕಂಡುಬರುವವು ಆ ಲಕ್ಷಣಗಳ ಮೇಲಿಂದ ಯಾವ ದೋಷಗಳೆಂಬುದನ್ನು ಗೊತ್ತುಹಚ್ಚಿಕೊಳ್ಳಬೇಕು ಇನ್ನು ಸಾನ್ನಿಪಾತಿಕ ಮೂಲವ್ಯಾಧಿಯಲ್ಲಿ ತ್ರಿದೋಷಗಳ ಲಕ್ಷಣಗಳು ಕಂಡುಬರುವವು ಸಹಜ ಹಾಗೂ ತ್ರಿದೋಷಜನ್ಯ ಮೂಲವ್ಯಾಧಿಯು ಅಸಾಧ್ಯವೆಂದು ತಿಳಿಯಬೇಕು ಉಳಿದವುಗಳು ವ್ಯಾಧಿಯು ಉತ್ಪನ್ನವಾಗಿ ಒಂದು ವರ್ಷದೊಳಗಿನವು ಇದ್ದು ರೋಗಿಯು ಬಲವುಳ್ಳವನಿದ್ದರೆ ಚಿಕಿತ್ಸೆಯಾಗಿ ಸುಲಭಸಾಧ್ಯವೆಂದು ತಿಳಿಯಬೇಕು

ರೇಷನಿಂಗ್ ಮುಂದುವರಿಯಿತು

ಮೈಸೂರು ನಗರದಲ್ಲಿ ಹತ್ತಿಪ್ಪತ್ತು ಸಾವಿರ ಜನಕ್ಕಿನ್ನೂ ಕಾರ್ಡು ಬರೆದಿಲ್ಲ ಅನೇಕ ಕಡೆ ಡಿಪೋವಿಗೆ ಜಾಗ, ಜನ ಸಿಕ್ಕಿಲ್ಲವೆಂಬುದಾಗಿ ರೇಷನಿಂಗ್ ಡಿಸೆಂಬರ್ ೩೧ ನೆಯ ತಾರೀಕಿನ ವರೆಗೆ ಮುಂದುವರಿಸಿರುತ್ತದೆ.

ಪಂಚಾಚಾರ್ಯಪ್ರಭಾ.

೧೯೪೩ನೆಯ ಡಿಸೆಂಬರ್ ೬ನೇ ಸೋಮವಾರ

ಸ್ವಧರ್ಮಪಾಲನೆ

ಜ್ಞಾನ [illegible]
[illegible] ಲೌಕಿಕಃ ।

ಶಿವ ಶಿವ [illegible] ಶ್ವಾಯೋಗದಿಂದ ಜ್ಞಾನ ಸಿದ್ಧಿಯನ್ನು ಪಡೆದ ಮಹಾತ್ಮರೂ ಸಹ ಶಾಸ್ತ್ರದಲ್ಲಿ ವಿಹಿತವಾದ ಧರ್ಮಮಾರ್ಗವನ್ನು ಬಿಡಕೂಡದೆಂದೂ ಮೂ[illegible]ರ ನಡೆವಳಿಕೆಯನ್ನು ನೋಡಿ ಇತರ ಲೌಕಿಕರು ಆ ಮಾರ್ಗದಲ್ಲಿಯೇ ಪ್ರವರ್ತಿಸಬೇಕಾಗುತ್ತದೆಂದೂ ಶ್ರೀರೇಣುಕಭಗವತ್ಪಾದರು ಅಗಸ್ತ್ಯ [illegible]ಗಳಿಗೆ ಉಪದೇಶಮಾಡಿರುವುದನ್ನು ಪರಿಶೀಲಿಸಿದರೆ ಧರ್ಮವೆಂಬ ಮಹಾಗುಣವನ್ನು ಸಾಮಾನ್ಯ ಮನುಷ್ಯರು ಮೊದಲುಮಾಡಿಕೊಂಡು ಬ್ರಹ್ಮಜ್ಞಾನಿಯಾದ ಮಹಾತ್ಮನವರೆಗೂ ಇರುವ ಪ್ರತಿಯೊಬ್ಬರೂ ಅನುಸರಿಸಬೇಕೆಂಬುದೇ ಸನಾತನಧರ್ಮದ ಧ್ಯೇಯ[illegible]ವೆಂಬುದು ಸ್ಪಷ್ಟವಾಗುತ್ತದೆ. ವೇದಾಗಮಪುರಾಣಶಾಸ್ತ್ರಗಳಲ್ಲಿ ವಿಧಿಸಲ್ಪಟ್ಟಿರುವುದೇ ಧರ್ಮವೆಂದು ತಿಳಿಯಬೇಕಲ್ಲದೆ ಅವರವರ ಇಷ್ಟಾನುಸಾರವಾಗಿ ತಮ್ಮ ತಮ್ಮ ಅನುಕೂಲಕ್ಕಾಗಿ ಕಲ್ಪಿಸಿಕೊಂಡ [illegible]ಗಳನ್ನು ಧರ್ಮಗಳೆಂದು ತಿಳಿಯಕೂಡದು

ಅಥವಾ [illegible] ।

ಶಾಸ್ತ್ರದಲ್ಲಿ ಯಾವ್ಯಾವು ನಿಷೇಧಿಸಲ್ಪಟ್ಟಿರುವುವೋ ಅವು ಅಧರ್ಮವೆಂತಲೂ, ಯಾವುವು ವಿಧಿಸಲ್ಪಟ್ಟಿರುವುವೋ ಅವು ಧರ್ಮವೆಂತಲೂ ಹೇಳಲ್ಪಟ್ಟಿರುವುದರಿಂದ ನಿಷಿದ್ಧವಾದ ಅಧರ್ಮವನ್ನು ಬಿಟ್ಟು ವಿಹಿತವಾದ ಧರ್ಮವನ್ನು ಅನುಷ್ಠಿಸುತ್ತ ಇರಬೇಕು. ಎಂಥ ಎಂತಹ ವಿಪತ್ಪರಂಪರೆಯೊದಗಿದ್ದರೂ ಧರ್ಮವನ್ನು ಬಿಡಕೂಡದು. ಧರ್ಮಜ್ಞಾನವೂ [illegible] ವಿಧಿನಿಷೇಧಜ್ಞಾನವಿರುವುದಿಲ್ಲ ಇದನ್ನು ಮರೆಯಬಾರದು. ಇದರ [illegible] ಎಂಬ ವಿಧಿನಿಷೇಧಜ್ಞಾನವಿಲ್ಲದವನನ್ನು ಸಾಧಾರಣವಾಗಿ ಎರಡು ಕಾಲಿನ ಪಶುವೆಂದು ಭಾವಿಸಬೇಕಾಗಿದೆ. ಪಶುವಿಗೆ ಆಹಾರ ನಿದ್ರಾ ಮೈಥುನ ಈ ಮೂರು ಕಾರ್ಯಗಳಿಗೆ ಪ್ರತಿಬಂಧಕವಿಲ್ಲದಿದ್ದರೆ ಸಾಕು. ಅದರ ಜೀವನ ಪಾವನ ಸಫಲವಾಗಿರುವುದಲ್ಲದೆ ಇನ್ನಾವುದನ್ನೂ ಅದು ಅಪೇಕ್ಷಿಸುವುದಿಲ್ಲ. ಅದಕ್ಕೆ ಇನ್ನಾವುದೂ ಬೇಕಾಗಿಯೂ ಇಲ್ಲ. ಮನುಷ್ಯಜನ್ಮವನ್ನು ಧರಿಸಿದವನಿಗೆ ಪಶುಗಳಿಗಿರುವಂತೆ ಆಹಾರ, ನಿದ್ರಾ, ಮೈಥುನಗಳೇ ಮುಖ್ಯ ಧರ್ಮಗಳಲ್ಲವು. ಇವು ಪಶುಪಕ್ಷ್ಯಾದಿ ಸಮಸ್ತಪ್ರಾಣಿಗಳಿಗಿರುವಂತೆ ಇವರಿಗೂ ಸಾಮಾನ್ಯ ಧರ್ಮಗಳಾಗಿರುತ್ತವೆ

ಮಾತೃವತ್ಪರದಾರೇಷು ಪರದ್ರವ್ಯೇಷು ಲೋಷ್ಟವತ್ ।
ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸ [illegible]

ಪರಸ್ತ್ರೀಯರನ್ನು ತಾಯಿಯಂತೆಯೂ, ಪರದ್ರವ್ಯವನ್ನು ಮಣ್ಣಿನ ಹೆಂಟೆಯಂತೆಯೂ, ಎಲ್ಲ ಪ್ರಾಣಿಗಳನ್ನು ತನ್ನಂತೆಯೂ ಯಾವನು ನೋಡುವನೋ ಅವನು ಧರ್ಮಿಷ್ಠರೊಳಗಲ್ಲ ಚಕ್ರವರ್ತಿಯೆಂದು ಶಾಸ್ತ್ರವು ಉದ್ಘೋಷಿಸುವುದರಿಂದ ಈ ನಿಯಮಗಳನ್ನು ಮನುಷ್ಯರು ಪಾಲಿಸಬಲ್ಲರೇ ಹೊರತು ಪಶುಗಳು ಪಾಲಿಸಲಾರವು. ಒಂದು ಪಶುವು ಇನ್ನೊಂದು ಪಶುವಿನ ಮುಂದಿರುವ ಹುಲ್ಲನ್ನು ತಿನ್ನಲು ಅಪೇಕ್ಷಿಸುತ್ತದೆ, ಸ್ವಕೀಯ ಪರಕೀಯ ಎಂಬ ಜ್ಞಾನವಿಲ್ಲದೆ ಎಲ್ಲವೂ ತನ್ನದೇ ಎಂದು ತಿಳಿದುಕೊಂಡಿರುತ್ತದೆ. ಅದಕ್ಕೆ ತನ್ನಂತೆ ಇತರ ಪ್ರಾಣಿಗಳನ್ನು ಕಾಣುವ ಸ್ವಭಾವವಿಲ್ಲ. ಮನುಷ್ಯನು ಇದಕ್ಕೆ ವಿರುದ್ಧಸ್ವಭಾವದವನಾಗಿರುವುದರಿಂದ "ಕ್ರಿಮಿಕೀಟಪತಂಗೇಭ್ಯಃ ಪಶವಃ ಪ್ರಜ್ಞಯಾಧಿಕಾಃ । ಪಶುಭ್ಯೋಽಪಿ ನರಾಃ ಶ್ರೇಷ್ಠಾಃ" ಎಂದು ಶಾಸ್ತ್ರದಲ್ಲಿ ಪ್ರಜ್ಞಾವಿಶೇಷದಿಂದ ಪ್ರಾಣಿತಾರತಮ್ಯವನ್ನು ಹೇಳಿ ಅವುಗಳೆಲ್ಲಾ ಮನುಷ್ಯನೇ ಶ್ರೇಷ್ಠನೆಂದು ಹೇಳಿರುವುದನ್ನು ನೋಡಿದರೆ ಮಾನವನು ವಿಧಿನಿಷೇಧವೆಂಬ ವಿಶೇಷಾಕಾರವಾದ ಜ್ಞಾನವುಳ್ಳವನಾದುದರಿಂದ ಮಾನವಜನ್ಮಧಾರಿಯು ಧರ್ಮನಿಬಂಧನೆಗೊಳಪಟ್ಟಿರಲೇಬೇಕು. ಮಾನವನು ಪರಮೇಶ್ವರನ ಪ್ರೀತಿಯನ್ನು ಪಡೆಯುವುದಕ್ಕೆ ಧರ್ಮವನ್ನುಳಿದು ಒಂದು [illegible] ಮಾರ್ಗ[illegible] ಈ ಮಾರ್ಗವನ್ನು ಆ ಪರಮೇಶ್ವರನೇ ಮಾನವರ ಹಿತಕ್ಕಾಗಿ ರಚಿಸಿರುವುದರಿಂದ ಎಲ್ಲರೂ ಈ ಧರ್ಮಮಾರ್ಗದಲ್ಲಿ ಪ್ರವೇಶಮಾಡಿ ಅವನ ಪ್ರೀತಿಯನ್ನು ಪಡೆಯಬೇಕಾಗಿದೆ. ಯಾರು ಪರಮೇಶ್ವರ ನಿರ್ಮಿತವಾದ ಧರ್ಮಮಾರ್ಗದಲ್ಲಿ ಕಾಲಿಡದೆ ಅಧರ್ಮಮಾರ್ಗದಲ್ಲಿ ನಡೆಯುವರೋ ಅವರು ನರಕವೆಂಬ ಕಾರಾಗೃಹವನ್ನು ಪ್ರವೇಶಮಾಡಿ ಅಲ್ಲಿ ಒದಗಿರುವ ಯಾತನೆಗಳನ್ನು [illegible] ಅನುಭವಿಸಬೇಕಾಗುವುದು. ಆಗ [illegible] ಸ್ವರೂಪರಾದ ಅನೇಕ ಜನ [illegible] ಕದಲ್ಲಿ ಅವತಾರಮಾಡಿ ಧರ್ಮಶಾಸ್ತ್ರಗಳೆಂಬ ರಾಜಮಾರ್ಗಗಳನ್ನು ರಚಿಸಿ ಎಲ್ಲರನ್ನೂ ಆ ರಾಜಮಾರ್ಗದಲ್ಲಿ ಪ್ರವೇಶಿಸುವಂತೆ ಬೋಧಿಸಿ ಮಾನವರ ಕಲ್ಯಾಣದ ಗತಿಯನ್ನು ತೋರಿಸಿಕೊಟ್ಟಿರುತ್ತಾರೆ. ಇದೇ ಮತಗಳೆಂದು [illegible] ಕರೆಯಲ್ಪಡುತ್ತವೆ. ಈ ಮತಗಳೆಲ್ಲಾ ಪರಮೇಶ್ವರನ [illegible] ಹೊಂದಿಸಲು [illegible] ಒಂದು ಪಟ್ಟಣವನ್ನು [illegible] ಅವರವರ ಇಷ್ಟಾನುಸಾರವಾಗಿ ಅನಂತಮಾರ್ಗಗಳು ರಚಿಸಲ್ಪಟ್ಟಿರುವಂತೆ, ಜಗನ್ನಿಯಾಮಕನಾದ ಈಶ್ವರನ ಸ್ಥಾನವನ್ನು ಸೇರಲು ಅನಂತ ಮಾರ್ಗಗಳು ರಚಿಸಲ್ಪಟ್ಟಿದ್ದರೂ ಅವುಗಳೆಲ್ಲವೂ ಪರಮೇಶ್ವರನನ್ನೇ ಲಕ್ಷೀಕರಿಸುತ್ತವೆಯಲ್ಲದೆ ಇನ್ನಾವುದನ್ನೂ ಲಕ್ಷೀಕರಿಸಲಾರವು. ಆದರೆ ಅನಾದಿಯಿಂದ ತನ್ನ ವಂಶಪರಂಪರೆಯಿಂದ ಬಂದ [illegible]ವನ್ನು ಪ್ರವೇಶಿಸಿ ಇನ್ನೊಂದ ಮತವನ್ನು ಪ್ರವೇಶಿಸಬೇಕೆಂದರೆ [illegible] ಭಾವಿಸಬೇಕಾಗುತ್ತದೆ. ಜನ್ಮ[illegible] ಎನ್ನುವಂತೆ ಒಬ್ಬನಿಗೆ ರುಚಿಸುವ ವಸ್ತುವು ಇನ್ನೊಬ್ಬನಿಗೆ ರುಚಿಸಲಾರದು. ಅದು ಮಾತ್ರವಲ್ಲ ಆ ವಸ್ತುವೇ ನಿಂದ್ಯವೆಂದು ಹೇಳಲು ಸಾಧ್ಯವಿಲ್ಲ. ಒಬ್ಬೊಬ್ಬನು ತಾನು ತನ್ನ [illegible] ಯಾವ ಧರ್ಮವನ್ನು ಆಚರಿಸುವನೋ ಅದಲ್ಲಿ ತನ್ನ [illegible] ಮತಧರ್ಮವೆಂದು ತನಗೆ [illegible]ಕವಾಗಿರುವುದಲ್ಲದೆ ತನ್ನ ಮಾತಾಪಿತೃಗಳು ತೋರಿದ ಧರ್ಮಮಾರ್ಗವನ್ನು ವಿಶೇಷವಾಗಿ ಅಭ್ಯಾಸ ಮಾಡಿಸುತ್ತ ಬರುವದರಿಂದ ಆ ಧರ್ಮಮಾರ್ಗದಲ್ಲಿ ಪ್ರಯಾಣಮಾಡುವುದೇ ಅವನಿಗೆ ಶ್ರೇಯಸ್ಕರವಾಗಿದೆ. ಈಗಿನ ಕಾಲದಲ್ಲಿ ಅನೇಕ ಜನ ಭಾರತೀಯರು ತಮ್ಮ ತಮ್ಮ ಪರಂಪರಾಗತವಾದ ಮತಧರ್ಮಗಳನ್ನು ಬಿಟ್ಟು ಭಿನ್ನ ಧರ್ಮಗಳನ್ನವಲಂಬಿಸಹತ್ತಿದ್ದಾರೆ. ಇದರಿಂದ ತಮ್ಮ ತಂದೆತಾಯಿಗಳು ತೋರಿಸಿಕೊಟ್ಟ ಸ್ವಧರ್ಮಕ್ಕೆ ತರ್ಪಣವನ್ನು ಕೊಟ್ಟು ಎಂದೂ ಅಭ್ಯಾಸಮಾಡದ ಪರಧರ್ಮದಲ್ಲಿ ಕಾಲಿಡುವುದೆಂದರೆ, 'ಸಿದ್ಧಾನ್ನಂ ಪರಿತ್ಯಜ್ಯ ಭಿಕ್ಷಾಮಟತಿ ದುರ್ಮತಿಃ' ಎನ್ನುವಂತೆ ತನ್ನ ಮುಂದೆ ಇಟ್ಟಿರುವ ಎಡೆಯನ್ನು ಕಾಲಿನಿಂದ ತಳ್ಳಿ ಹೋದಂತೆಯೇ ಸರಿ! ತನ್ನ ಹಿರಿಯರು ತೋರಿಸಿ ಕೊಟ್ಟಿರುವ ಧರ್ಮವನ್ನು ತಿರಸ್ಕರಿಸುವುದು ವಿವೇಕಶಾಲಿಗಳಿಗೆ ಯುಕ್ತವಲ್ಲ. ಇದೇ ಅಭಿಪ್ರಾಯವನ್ನು ಗೀತಾಕಾರರು "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" ತನ್ನ ವಂಶಾನುಗತವಾಗಿ ಬಂದಿರುವ ತನ್ನ ಕುಲಗುರುಗಳು ಹೇಳಿರುವ ಧರ್ಮಮಾರ್ಗವನ್ನು ಬಿಟ್ಟು ಪರಧರ್ಮಕ್ಕೆ ಕೈಹಾಕದಿರುವುದೇ ಶ್ರೇಯಸ್ಕರವೆಂದು ಬೋಧಿಸಿರುವುದರಿಂದ ಅನೂಚಾನವಾಗಿ ಬಂದ ತಮ್ಮ ತಮ್ಮ ಮತಾಚಾರ್ಯರಿಂದ ಸ್ಥಾಪಿತವಾದ ಧರ್ಮಮಾರ್ಗದಿಂದ ಯಾರೂ ಚ್ಯುತರಾಗಬಾರದಂತೆ ಜಗದೀಶ್ವರನು ಸದ್ಬುದ್ಧಿಯನ್ನೀಯಲಿ

ಟೆಹರಾನಿನಲ್ಲಿ ಮಾರ್ಷಲ್ ಸ್ಟಾಲಿನ್‌ರವರು

ಕೈರೋವಿನಲ್ಲಿ ಸಮ್ಮೇಳನ ನಡೆಸಿದ ಅಧ್ಯಕ್ಷ ರೂಸ್‌ವೆಲ್ಟ್, ಮಾರ್ಷಲ್ ಚಿಯಾಂಗ್ ಕೈಷೆಕ್ ಮತ್ತು ಮಿ। ಚರ್ಚಿಲ್ ಇವರುಗಳನ್ನು ಭೇಟಿಮಾಡುವ ಸಲುವಾಗಿ ರಷ್ಯಾದ ಮಾರ್ಷಲ್ ಸ್ಟಾಲಿನ್‌ರವರು ಟೆಹರಾನಿನಲ್ಲಿ ಕಾದಿದ್ದು ಸಮ್ಮೇಳನವನ್ನು ನಡೆಸಿದರು ಎಂಬುದಾಗಿ ತಿಳಿಸಲಾಗಿದೆ

ಯುದ್ಧವಾರ್ತೆ.

ಜಪಾನರು ದಿಕ್ಕುಗೆಟ್ಟು ಓಡುತ್ತಿದ್ದಾರೆ

ಕೇಂದ್ರ ಚೀಣಾರಂಗದಲ್ಲಿ ಚೀಣರಿಗೆ ಭಾರಿ ವಿಜಯ ಪ್ರಾಪ್ತವಾಯಿತು. ಜಪಾನರು ದಿಕ್ಕುಗೆಟ್ಟು ಓಡುತ್ತಿದ್ದಾರೆ. ಚಾಂಗ್‌ಟೆ ಸುತ್ತ ಇರುವ ಜಪಾನ್ ಸೇನೆಯನ್ನು ಚೀಣರು ಸುತ್ತುವರಿದಿದ್ದಾರೆ

ಗಿಲ್‌ಬರ್ಟ್ ದ್ವೀಪಗಳೆಲ್ಲ ಅಮೇರಿಕದ ವಶ

ಗಿಲ್‌ಬರ್ಟ್ ದ್ವೀಪಸಮೂಹದಲ್ಲಿರುವ ದ್ವೀಪಗಳೆಲ್ಲಾ ಅಮೇರಿಕನರ ವಶವಾಗಿವೆ ಎಂಬುದಾಗಿ ಈಗ ತಿಳಿಸಲಾಗಿದೆ. ಈ ಕದನದಲ್ಲಿ ಒಟ್ಟು ಒಂದು ಸಾವಿರಕ್ಕೆ ಮೇಲ್ಪಟ್ಟು ಅಮೇರಿಕನರು ಹತರಾದರೆಂದು ಹೇಳಲಾಗಿದೆ

ಚೀಣಾದಲ್ಲಿ ಯುದ್ಧ

ಜಪಾನೀಯರು ಚಾಂಗ್ಟೆ ನಗರದ ದಕ್ಷಿಣ ಮತ್ತು ಉತ್ತರ ಭಾಗಗಳಿಂದ ಹಿಮ್ಮೊಕ್ಕಿದ್ದಾರೆ. ಇಲ್ಲಿ ಕೈಕೈ ಮಿಲಾವಣೆ ನಡೆಯುತ್ತಿದೆ. ಚೀಣಾ ಯೋಧರು ಜಪಾನಿಯರನ್ನು ಧ್ವಂಸ ಮಾಡಿ ಟೆಜ್ಲಿ ಮತ್ತು ಟಾಟಾ ಮರ್ಗ ಪ್ರದೇಶಗಳನ್ನು ಮತ್ತೆ ಆಕ್ರಮಿಸಿಕೊಂಡರು. ಇದು ಭತ್ತದ ಗಣೆ ಎಂದು ಪ್ರಸಿದ್ಧಿಯಾಗಿದೆ

ಸೇನಿ ಮೇಲೆ ಧಾಳಿ

ಕಳೆದ ೨೯ ನೇ ತಾ। ಬೆಳಗ್ಗೆ ಜಪಾನೀ ವಿಮಾನಗಳು ಪೂರ್ವ ಬಂಗಾಲದ ಫೇನಿ ಜಿಲ್ಲೆಯ ಮೇಲೆ ಧಾಳಿ ನಡೆಸಿದವು. ಒಂದು ವಿಮಾನ ಕೆಡವಲಾಯಿತು. ಮ[illegible]ದಕ್ಕೆ ಏಟು ಬಿತ್ತು. ನಮ್ಮ ವಿಮಾನವೊಂದು ಹಿಂತಿರುಗಲಿಲ್ಲವೆಂದು ಪ್ರಕಟವಾಗಿದೆ

ಜಪಾನರು ಬಲಪಡಿಸುತ್ತಿದ್ದಾರೆ

ಟೈಮೋರ್‌ನಿಂದ ಮೊದಲಾಗಿ ಡಚ್ ನ್ಯೂಗಿನಿವರೆಗೆ ಜಪಾನರು ತಮ್ಮ ರಕ್ಷಣಾ ವ್ಯೂಹವನ್ನು ಬಲಗೊಳಿಸುತ್ತಿರುವರೆಂದು ಪರಿಶೀಲನೆಗಳಿಂದ ಗೊತ್ತಾಗಿಯೆಂದು ವರದಿ ಬಂದಿದೆ. ವಿಮಾನ ನೆಲೆಗಳು ಸಿದ್ಧವಾಗಿವೆ. ಸಂಚಾರಸೌಕರ್ಯಗಳಾಗುತ್ತಿವೆ. ಆದರೂ ಜಪಾನರು ಕೇವಲ ರಕ್ಷಣಾಕಾರ್ಯದಲ್ಲಿ ನಿರತರಾಗಿರುವರೇ ವಿನಾ ದಂಡಯಾತ್ರೆ ನಡೆಸುವ ಲಕ್ಷಣಗಳಿಲ್ಲವೆಂದು ಹೇಳಲಾಗಿದೆ

ರಷ್ಯದಲ್ಲಿ ಯುದ್ಧ

ಶ್ವೇತ ರಷ್ಯಾದಲ್ಲಿ ಜ್ಲೋಬಿನ್ ಮತ್ತು ಮೋಜಿರ್ ಪಟ್ಟಣಗಳ ಕಡೆಗೆ ರಷ್ಯನ್ ಸೈನ್ಯಗಳು ಮುಂದೊತ್ತುತ್ತಿವೆ. ಜ್ಲೋಬಿನ್ ಪಟ್ಟಣಕ್ಕೆ ೭ ಮೈಲಿ ದೂರ ರಷ್ಯನ್ ಸೈನ್ಯಗಳು ಬಂದಿವೆ. ಮೋಜಿರ್ ಪಟ್ಟಣದ ಕಡೆ ಬರುತ್ತಿರುವ ರಷ್ಯನ್ ಸೈನ್ಯಗಳು ೧೭ ಮೈಲಿಗಳಷ್ಟು ದೂರಕ್ಕೆ ಬಂದಿವೆ. ನೀಪರ್ ತಿರುವಿನಲ್ಲಿ ರಷ್ಯನ ಒತ್ತಾಯದಿಂದ ಜರ್ಮನರು ಒಂದಾಗುತ್ತಲೊಂದ ಸ್ಥಳವನ್ನು ಬಿಟ್ಟು ಹೋಗುತ್ತಿದ್ದಾರೆ. ಅಪೋಸ್ಟಲೋವೊವಿಗೂ, ನೀಪ್ರೊಪೆಟ್ರೋವ್ಸ್ಕಿಗೂ ಹೋಗುವ ಎರಡು ರೈಲ್ವೆಗಳ ಮಧ್ಯ ಭಾಗದಲ್ಲಿ ರಷ್ಯನರ ಮುಂದೋಟ ಬಲವಾಗಿದೆ

ಕೊರೊಸ್ಟೆನ್ ಪತನ

ಕೆಂಪುಸೇನೆಯು ಜ್ಲೋಬಿನ್ ಕಡೆ ವೇಗದಿಂದ ಮುನ್ನುಗ್ಗುತ್ತಾ ಅನೇಕ ಪ್ರದೇಶಗಳನ್ನು ವಶಪಡಿಸಿಕೊಂಡಿ ವುದಲ್ಲದೆ ಶತ್ರುವಿಗೆ ಅಪಾರ ನಷ್ಟವನ್ನುಂಟು ಮಾಡಿದೆ. ಇಡಿಯ ರಷ್ಯ ರಣರಂಗದಲ್ಲಿ ಎರಡು ಪಕ್ಷಗಳೂ ಅಧಿಕಾಧಿಕವಾಗಿ ಸೇನೆಯನ್ನು ತಂದು ಇಳಿಸುತ್ತಿದ್ದಾರೆ. ಉಭಯ ಸೇನೆಗಳ ಖಡ್ಗಗಳ ಝೇಂಕಾರ, ರಣರಂಗದ

ಹೆಣಗಳ ರಾಶಿ, ಯೋಧರ ಆರ್ಭಟ ಇವುಗಳಿಂದ ಇಡಿ ರಣಕ್ಷೇತ್ರವು ಕುರುಕ್ಷೇತ್ರದಂತೆ ಕಾಣುತ್ತಿದೆ. ಹೆಲ್ಸಿಂಕಿ ನಗರವನ್ನು ರಷ್ಯನರು ದಾಳಿಮಾಡಿರುವುದಾದರೂ ಇತ್ತ ಶ್ವೇತ ರಷ್ಯಾದಲ್ಲಿ ವೇಗದ ಬಿರುಸು [illegible] ಗ್ಲೋರ್ಬಿ ಬೋಲ್ಶೆವಿಸ್ಟ್ ರೈಲ್ವೆ ಮತ್ತು ರಸ್ತೆಗಳು ಸ್ಟಾಲಿನ್ ಸೇನೆ ಹತ್ತಿರ ಹತ್ತಿರ ಬರುತ್ತಿದೆ. ಜೆಕೋಸ್ಲೊವಾಕಿಯಾ ಸುತ್ತ ಗಟ್ಟಿಪಟ್ಟಿರುವ ಸಂಭವವಿದೆ. ರಷ್ಯನರು ಈಗ ಕಾನ ಹಿಡಿದಿರುವ ರುಸ್ಸೊಯಾ [illegible] ನಗರವು ಜೆಕೋಸಿಗೆ ಕೇವಲ [illegible] ಮೈಲಿ ಮಾತ್ರವಿದೆ. [illegible] ಪೆಲ್ ನಗರವನ್ನು ನಾಜಿಗಳು ತ್ಯಜಿಸುತ್ತಿರುವರು. ಅಲ್ಲಿರುವ ಕೈಗಾರಿಕೆಯ ಪ್ರದೇಶಗಳನ್ನೆಲ್ಲಾ ಧ್ವಂಸ ಮಾಡುತ್ತಿದ್ದಾರೆಂದೂ ಜರ್ಮನ್ [illegible] ಮತ್ತು ಲೆನಿನ್‌ಗ್ರಾಡ್ ಕ್ಷೇತ್ರದ ಕಡೆ [illegible] ಇಸ್ಟ್ಮಸ್ ಮೇಲೆ ಪ್ರಬಲ ವಿಮಾನ ದಾಳಿಯನ್ನು ರಷ್ಯನರು ನಡೆಸುತ್ತಿದ್ದಾರೆಂದು ವರ್ತಮಾನ ವರದಿಯಾಗಿದೆ.

ಜಪಾನಿನ ಮೇಲೆ ರಷ್ಯವು ಯುದ್ಧ ಘೋಷಿಸುವುದೆ?

—

ಕ್ರೈಮಿಯಾದಲ್ಲಿ ಚರ್ಚಿಲ್ ರೂಸ್‌ವೆಲ್ಟರ ಒಂದು ಒಪ್ಪಂದಕ್ಕೆ ಬಂದು, ಸ್ಟಾಲಿನರು ಜಪಾನ್ ಮೇಲೆ ಯುದ್ಧ ಘೋಷಿಸುವಂತೆ ಪ್ರೇರೇಪಿಸುವರೆಂದು [illegible] ಅಭಿಪ್ರಾಯಪಡುತ್ತಾರೆ. [illegible] ವಿಮಾನ [illegible] ಪತಿಗಳ ಅಭಿಪ್ರಾಯದಂತೆ ರಷ್ಯವು [illegible] ಉಪಯೋಗಿಸಲು [illegible] ಅನುಮತಿ ಕೊಟ್ಟರೆ ಅದರ ಜಪಾನಿನ ಮೇಲೆ ವಿಮಾನ ಧಾಳಿ ಮಾಡಲು ಕೇವಲ [illegible] ಮೈಲು ದೂರವಾಗುತ್ತದೆಂದು ಜಪಾನ್ ಮೇಲಿನ ಯುದ್ಧವು ಸುಗಮವಾಗುವುದೆಂದು ಹೇಳಲಾಗಿದೆ. ಆದರೆ ಸ್ಟಾಲಿನರು ಜಪಾನನ್ನು ಕೆಣಕಲು ಇಚ್ಛಿಸುವುದಿಲ್ಲವಾದರೂ ಅವರು ಯಾವ [illegible] ಮಾಡುವ [illegible] ಯೂರೋಪಿನಲ್ಲಿ ಯುದ್ಧವು ಉದ್ವೇಗಕರವಾಗಿರುವುದರಿಂದ [illegible] ನಿಶ್ಚಯವನ್ನು ಮಾಡಲು ಒಪ್ಪಿದಹಾಗಿಲ್ಲ.

ಎಂಟನೆಯ ಸೇನೆಯು ರೋಂ ಕಡೆಗೆ ಹೊರಟಿದೆ

—

ತಿರ್ನೋಲಿನ್ [illegible] ಕಾಸಲ್ [illegible] ಬಳಿ [illegible] ಸೇನೆಯು [illegible] ಕಡೆಗೆ [illegible] ಹೋರಾಡುತ್ತಿವೆ. ಜರ್ಮನರ ಮುಕ್ತಿ ಉಗ್ರವಾಗಿದೆ. [illegible] ಸೇನೆಯು ಏಡ್ರಿಯಾಟಿಕ್ ರಂಗದಲ್ಲಿ ಜರ್ಮನ್ ವ್ಯೂಹವನ್ನು ಭೇದಿಸಿದ ಜರ್ಮನ್ನರು ಹಿಮ್ಮೆಟ್ಟುತ್ತಿದ್ದಾರೆ. ನಾಜಿಗಳ ಪ್ರತಿಭಟನ ಜೋರಾಗಿದೆ. ಜರ್ಮನರು ಇಟಲಿಯಲ್ಲಿ ರಚಿಸಿದ್ದ ಚಳಿಗಾಲದ ವ್ಯೂಹವನ್ನು ಎಂಟನೇ ಸೇನೆ ಒಡೆದು ರಾಕಿದೆ. ಈಗ ತಿಳಿದಿರುವ ಮಟ್ಟಿಗೆ ಬೇರೆ ಹೊಸವಾರ್ತೆಯೂ ಇಲ್ಲ. ಜರ್ಮನ್ ಮಿಲಿಟರಿ ಸುದ್ದಿಗಾರರು ಈ ವಾರ್ತೆ ಕೊಟ್ಟಿದ್ದಾರೆ. "[illegible] ಮತ್ತು ನ್ಯೂಜೀಲೆಂಡ್ ಪಡೆಗಳೊಡನೆ ಬ್ರಿಟಿಷ್ ಎಂಟನೆಯ ಸೇನೆಯು ಸಾಂಗ್ರೋ ನದಿಯ ಕದನದಲ್ಲಿ ಭಾಗವಹಿಸಿದೆ. ಶತ್ರು ವಿಮಾನ ಬಲವು [illegible] ಜರ್ಮನ್ ಫಿರಂಗಿ ಸ್ಥಾನಗಳ ಮೇಲೆ ಉಗ್ರವಾಗಿ ಬಾಂಬು ಮಳೆಗರೆಯುತ್ತಿವೆ.

ಜರ್ಮನರಿಗೆ ಹಿಟ್ಲರನ ಎಚ್ಚರಿಕೆ

—

ನವೆಂಬರ್ ೩೦ ನೆಯ ತಾ|| ದಿನ ೨೦,೦೦೦ ಜರ್ಮನ್ ಅಧಿಕಾರಿಗಳನ್ನು ಕುರಿತು ಹರ್ ಹಿಟ್ಲರರು ಮಾಡಿದ ಭಾಷಣವನ್ನು ಜರ್ಮನ್ ವಾರ್ತಾ ಸಂಸ್ಥೆಯು ಈಗ ಹೊರಗೆಡಹಿದೆ—"ರಷ್ಯದ ಸಹಾಯ ಪಡೆದು ಜರ್ಮನಿಯನ್ನು ನಾಶಮಾಡಲೋಸುಗ ಬ್ರಿಟನ್ನು ಈ ಕದನವನ್ನು ಆರಂಭಿಸಿತು. ಜರ್ಮನಿಯು ತನಗಾಗಿಯೂ ಯೂರೋಪಿಗಾಗಿಯೂ ಈ ಕದನವನ್ನು ಗೆಲ್ಲದೆ ಇದ್ದರೆ ಬ್ರಿಟನ್ನಿನ ಭಯಂಕರ ವರ್ತನೆಯ ಪ್ರವಾಹದಲ್ಲಿ ಯೂರೋಪು ಮುಳುಗುವುದು ಖಂಡಿತ. ಯೂರೋಪಿನಲ್ಲಿ ಅಧಿಕಾರ ಬಲವನ್ನು ಸಂಗ್ರಹಿಸಲು ಈ ಕದನದಿಂದ ಸಾಧ್ಯವಾಗುವುದೆಂದು ಬ್ರಿಟನ್ನು ಭಾವಿಸಿತು. ನಿಜವಾಗಿ ಹೇಳುವುದಾದರೆ, ಕಳೆದ ೨೦೦ ವರ್ಷಗಳ ಯೂರೋಪನ್ನು ತನ್ನ ಕೈಗೊಂಬೆಯಾಗಿ ಮಾಡಿಕೊಳ್ಳಲು ಬ್ರಿಟನ್ನು ಯತ್ನಿಸುತ್ತಿರುವುದು. ಈಗಿನದು [illegible] ಜಗತ್ತಿನ ನಡೆಯುತ್ತಿರುವ ವಿಧಾನವು ಇದರಲ್ಲಿ ಒಂದೇ ಒಂದು ಆದರ್ಶಕ್ಕೆ ಜಯವಾಗಲಿದೆ. [illegible] ಈ ಕದನದಲ್ಲಿ [illegible] ವರೆಗೆ [illegible] ಜಯ [illegible] ಇತರೆಲ್ಲಕ್ಕಿಂತ ಹೆಚ್ಚಾಗಿ ರಷ್ಯವು ನಿರೀಕ್ಷಿಸುವುದು [illegible] ಈ ಕದನವು ಜರ್ಮನಿಗೆ ನಿಜವಾದ ಮುಕ್ತಿಯ ದಾರಿಯ [illegible] ಜರ್ಮನರಿಗೂ ತುಂಬಬೇಕು [illegible] ಅವರು [illegible] ಎಂದೆಂದಿಗೂ [illegible]

ಜರ್ಮನಿಯಿಂದ ಸಂಧಾನ ಸೂಚನೆಯೇ?

—

ಜರ್ಮನಿ [illegible] ಸಡಿಲಿಸುತ್ತಿರುವ [illegible] ಯುದ್ಧದಲ್ಲಿ ಸಮ್ಮತಿಯ ಶಾಂತಿ [illegible] ಮಾಡುವಂತೆ [illegible] ಇತ್ತ ಬ್ರಿಟಿಷರ [illegible] ವಿಶೇಷವಾಗಿ [illegible] ಮಾಡಿಕೊಂಡಿರುವ [illegible] ಮಿತ್ರರು ತಮ್ಮ [illegible] ಬಳಿಯಿಂದ [illegible] ದಾಳಿ [illegible] ಗಿರುವುದು. ಇವೆಲ್ಲವನ್ನು ನೋಡಿದಲ್ಲಿ ಯಾವ [illegible] ಜರ್ಮನಿಯ [illegible] ಮಿತ್ರರು ಅಗ್ಗ [illegible] ಒಂದು ಸುದ್ದಿ. ಅವರೇ ಜರ್ಮನರಾದರೆ ಇತ್ತ ಮಿತ್ರ ವಿಮಾನಗಳಿಂದ [illegible] ಮಕ್ಕಳ [illegible] ರಕ್ತಪಾತ [illegible] ಇವರ [illegible] ಜರ್ಮನ್ [illegible] ಶಾಂತಿ [illegible] ಮತ್ತು ಬ್ರಿಟಿಷ್ [illegible] ಸರ್ಕಾರದ ಅಧಿಕಾರವನ್ನು [illegible] ಕೆಲವು ಶಾಂತಿ [illegible] ಯೋಜನೆಯಲ್ಲಿಯಾದರೂ [illegible] ಘೋಷಿಸುತ್ತಿವೆ.

ಗೋಬಲ್ಸನ ಜಂಭ

ಜರ್ಮನಿಯ [illegible] ಗೋಬಲ್ಸರು [illegible] ಈಚೆಗೆ ನುಡಿದರು. ಜರ್ಮನಿಯ ಈಗಿನ—'ರಷ್ಯದ ಸಮ್ಮತಿ [illegible] ದಾಳಿಯಿಂದ [illegible] ಜಯವು [illegible] ತ್ತಿರುವರು. [illegible] ಇವರ ಯೋಜನೆಯಲ್ಲಿಲ್ಲ. ಒಬ್ಬ ವ್ಯಕ್ತಿ ಜರ್ಮನ್ ಪ್ರಜೆ [illegible] ಶಾಂತಿ [illegible] ಯಲ್ಲಿರುವ ಜರ್ಮನಿಯಲ್ಲಿ ಈ ದಾಳಿಗಳ ಪ್ರತೀಕಾರವನ್ನು ಕ್ರಮೇಣ [illegible] ನಡೆಸುತ್ತೇವೆ. ಶತ್ರು ವಿನಾಶ [illegible] ನಾವು ಮಾಡುವ [illegible] ಮಾಡಿದ [illegible] ಮೋಸ [illegible] ಉಪಯೋಗಿಸಿ [illegible] ನಮ್ಮ ಶಾಂತಿಯುತವಾದ ಪ್ರಜೆಗಳನ್ನು ಈ [illegible] ಮಾಡಿದ ಬ್ರಿಟಿಷರ ಮೇಲೆ ಸೇಡು ತೀರಿಸಿಕೊಳ್ಳುವವರೂ ನಾವೇ. ಕಷ್ಟನಷ್ಟಗಳು ಬಂದರೂ ಇಂತಹ ಸಂದರ್ಭದಲ್ಲಿಯೂ ನೀವು ತೋರಿಸಿದ ಧೈರ್ಯ ಸ್ಥೈರ್ಯಗಳು ಶಿಸ್ತು, ಹಿಟ್ಲರರಲ್ಲಿರುವ [illegible] ಭಕ್ತಿಯನ್ನು ನೋಡಿ ನಾನು ಮುಗ್ಧನಾದೆನು. ಶತ್ರುವಿಗೆ ನಾವು ಶರಣಾಗತರಾಗಬೇಕೆಂಬ ಇಚ್ಛೆಯಿದ್ದರೆ ಅದಕ್ಕೆ ನಿಮ್ಮ ಪರವಾಗಿ ನಾನು 'ನಾಸ್ತಿ' ಎಂದು ಉತ್ತರವೀಯುತ್ತೇನೆ. ಈ ದುರಾತ್ಮರು ದೇವರ ಹೆಸರನ್ನು ಜಪಿಸುತ್ತ ಜರ್ಮನಿಯಲ್ಲಿ ಗುಪ್ತ ಸ್ನೇಹಿತರನ್ನು ಒದಗಿಸುತ್ತಿರುವರಾದರೆ ಕೋಟ್ಯಧಿಕ್ಕರಿಸಿ, ಮತ್ತು ಶಾಶ್ವತವಾಗಿ [illegible] ಜರ್ಮನರ ಒಗ್ಗಟ್ಟು ಅವರ [illegible] ತಿರಸ್ಕಾರವಾದುದು ಎಂದು ಹೇಳುತ್ತೇನೆ.'

ನೌಕಾನಷ್ಟದಿಂದ ಅಮೇರಿಕ ಬೆದರದು

—

ಜರ್ಮನಿಯು ಅಮೇರಿಕದ ನೌಕಾದಳದ ಪ್ರತಿ [illegible] ಹಡಗುಗಳನ್ನು ಮುಳುಗಿಸಿರುವುದು ನಿಜವಷ್ಟೆ! ಆದರೆ ಈ ಮುಳುಗಿರುವ ಹಡಗುಗಳ ಸಂಖ್ಯೆಗಿಂತ ಶತ್ರುಗಳ ತಯಾರಿಕೆಯು ಅಧಿಕವಾಗಿರುವುದು ಅಮೇರಿಕದ ಅದ್ಭುತ ಸಾಹಸವೇ ಸರಿ ಎಂದು ಕರ್ನಲ್ ನಾಕರು ನುಡಿದರು.

ಮಿತ್ರ ನೌಕಾಬಲ ಸಿದ್ಧವಾಗಿದೆ

—

[illegible] ಇಂದು ಶೇಖರವಾಗಿರುವಷ್ಟು ನೌಕಾಬಲ ಹಿಂದೆ ಎಂದೂ ಶೇಖರವಾಗಿಲ್ಲ. ಸೂರಾರು ಮಿತ್ರ [illegible] ಸೈನ್ಯವನ್ನು ಎದುರಿಸಲು [illegible] ಮುಕ್ತಿಗಾಗಿ ಕಾದಿದ್ದಾರೆ. [illegible] ಇದುವರೆಗೂ ಯಾವ ರಂಗದಲ್ಲಿಯೂ ಕಾಣದೇ ಇದ್ದಂತಹ ಘೋರ ರಕ್ತಪಾತ ನಡೆಯಬಹುದು ಎಂದು ಹೇಳಲಾಗುತ್ತಿದೆ.

ಕ್ರಿಮಿಯಾ ಕದನ

—

ಕ್ರಿಮಿಯಾಕ್ಕೆ ಉತ್ತರದಿಂದ ಬರುವ ಮಾರ್ಗಗಳಲ್ಲಿ ರಷ್ಯನರು [illegible] ಪ್ರವಾಹ [illegible] ಆರಂಭಿಸಿರುವರೆಂದು ಜರ್ಮನ್ ವಾರ್ತಾ ಸಂಸ್ಥೆ ತಿಳಿಸುತ್ತದೆ. [illegible] ಕ್ಷೇತ್ರದಲ್ಲಿ ಜರ್ಮನರು ಹಿಮ್ಮೆಟ್ಟಿದರು. [illegible] ಜರ್ಮನ ವಾರ್ತಾ ಸಂಸ್ಥೆ ತಿಳಿಸಿತು. [illegible] ಪಟ್ಟಣದಲ್ಲಿ ರಷ್ಯನರ ಏಟು ಜೋರಾಗಿದೆ. ರಷ್ಯನರು ನಾಲ್ಕು ಕಡೆ [illegible] ಸನ್ನಾಹ [illegible] ತಂದು ಹೋರಾಡಲು ತೊಡಗಿದುದರಿಂದ ಜರ್ಮನರು ಕೆಲವು ಕಡೆ ಹಿಂದೆ ಸರಿಯಬೇಕಾಯಿತು.

ತುರ್ಕಿಯಲ್ಲಿ ಭೀಕರ ಭೂಕಂಪ

—

ತುರ್ಕಿಯಲ್ಲಿ ಭೀಕರ ಭೂಕಂಪವಾಗಿ 1800 ಪ್ರಾಣಹಾನಿಯೂ 2000 ಮಂದಿಗೆ ವಿಶೇಷ ಗಾಯಗಳೂ ಆಗಿರುವುದಲ್ಲದೆ 9 ಹಳ್ಳಿಗಳು ಧ್ವಂಸವಾಗಿವೆ. [illegible] 5 [illegible] ಸ್ಥಳ ಪೂರ್ತಿ ನಾಶವಾಗಿದೆ. ಅನೇಕ [illegible] ಜೋರಾಗಿದೆ [illegible] ಎಂದು [illegible] 0 ಹೆಣಗಳನ್ನು ಎಣಿಸಲಾಯಿತು. 1000 ಜನರು [illegible] ನಾಶವಾಗಿವೆಯೆಂದು ತಿಳಿದುಬರುತ್ತದೆ.

* * *

೧೩೭ ವಯಸ್ಸಿನ ಹೆಂಗಸು

—

[illegible] ನಗರದಲ್ಲಿ ಒಂದು [illegible] ಬಿಬಿ [illegible] ಜೀವನ ನಡೆಸುತ್ತಿದ್ದಾಳೆ. ಆಕೆಗೆ ೧೩೭ ವಯಸ್ಸು. ಆಕೆಗೆ ಜ್ಞಾನೇಂದ್ರಿಯಗಳ ಪಟುತ್ವ ಚೆನ್ನಾಗಿದೆ. [illegible] ಇವಳು ಈಗ ತನ್ನ ೧೩೦ ನೆಯ ವಯಸ್ಸಿನಲ್ಲಿ ತನ್ನ [illegible] ಮೆಕ್ಕಾ ಯಾತ್ರೆ ನಡೆಸಿದಳಂತೆ! ಈಕೆಗೆ ತಮ್ಮನ್ನಿದ್ದಾನೆ. ಅವನಿಗೆ ೧೩೫ ವಯಸ್ಸು. [illegible] ತಾಯಿಯು ತನ್ನ ೧೫೦ ನೆಯ ವರ್ಷದಲ್ಲಿ ಸತ್ತಳಂತೆ. ಇಷ್ಟೊಂದು ಕಾಲ ಬದುಕಲು ಏನು ಮಾಡುತ್ತಿರುವೆ? ಎಂದು ಕೇಳಿದಾಗ ಅಣಕಿಸುತ್ತ 'ಈಗಿನ ಆರೋಗ್ಯ ನಿಯಮಗಳೊಂದನ್ನೂ ನಾನು ಪಾಲಿಸುತ್ತಿಲ್ಲ' ಎಂದು ಹೇಳಿದಳಂತೆ!

ಬೊಂಬಾಯಿನಿಂದ ಬಂಗಾಳಕ್ಕೆ ಬಟ್ಟೆ

—

ಬೊಂಬಾಯಿ ಪ್ರೆಸಿಡೆನ್ಸಿಯಲ್ಲಿರುವ ಬೊಂಬಾಯಿ, ಅಹ್ಮದಾಬಾದು, ಶೋಲಾಪುರದಿಂದ ೩೦ ಪ್ಯಾಕು ಗಳನ್ನು ಚಿಲ್ಲರೆ ಬಟ್ಟೆಯನ್ನು ಬಂಗಾಳಕ್ಕೆ ರವಾನಿಸಲಾಗುತ್ತಿದೆ.

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ [illegible] ಫೋಟೋ ಸೈಜು ೨೦ × ೨೪ ಇಂಚು	೦—೦—೦
ಶ್ರೀರೇಣುಕಾಚಾರ್ಯರ [illegible] ಫೋಟೋ (ನಾನಾವಿಧಬಣ್ಣಗಳಿಂದ ಮುದ್ರಿಸಲಾಗಿದೆ) ಸೈಜು ೧೪ × ೧೦ ಇಂಚು	೦—೪—೦
ಶ್ರೀ ರೇಣುಕಾದಿ [illegible] ವ್ಯಾಸ, [illegible] ಮುಂತಾದವರಿಗೆ ಶಿವಾದ್ವೈತವನ್ನು [illegible] ಫೋಟೋ ಸೈಜು ೧೦ × ೧೪ ಇಂಚು ..	೦—೩—೦
ಸಪ್ತ [illegible] ಫೋಟೋ ಸೈಜು ೧೪ × ೧೦ ಇಂಚು	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಫೋಟೋ ಸೈಜು ೧೪ × ೧೦ ಇಂಚು	೦—೨—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾಕಾರದ ಫೋಟೋ ಸೈಜು ೧೦ × ೮ ಇಂಚು ..	೦—೧—೦
ಶ್ರೀ ಜಗದ್ಗುರು ಪಂಚಾಚಾರ್ಯರು [illegible] ಫೋಟೋ ...	೦—೧—೦
ಶ್ರೀ ರೇಣುಕಾಚಾರ್ಯರು [illegible] ಫೋಟೋ ...	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ [illegible] ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಅಗಸ್ತ್ಯರಿಗೆ [illegible] ಉಪದೇಶಿಸುವ ಫೋಟೋ	೦—೧—೦
ಶ್ರೀಶೈಲಕ್ಷೇತ್ರ [illegible] ಶ್ರೀ ಜಗದ್ಗುರು [illegible] ಫೋಟೋ .	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿಸಲಾಗಿದೆ) ಸೈಜು ೧೪ × ೧೦ ..	೦—೪—೦
[illegible] ಶ್ರೀ ಜಗದ್ಗುರು [illegible] ಫೋಟೋ	೦—೧—೦
[illegible] ಜಗದ್ಗುರು [illegible] ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿಸಲಾಗಿದೆ) ಚಿಕ್ಕ ಸೈಜು ೧ಕ್ಕೆ	೦—೨—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿಸಲಾಗಿದೆ) ದೊಡ್ಡ ಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ [illegible] ಸುಂದರವಾದ ಫೋಟೋ ೧ಕ್ಕೆ ...	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ [illegible] ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು [illegible] ಸುಂದರವಾದ [illegible] ಫೋಟೋ ...	೦—೧—೦
ಶಿವಭಕ್ತ [illegible] ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮದ್ [illegible] ವಿರಾಜಿಸುತ್ತಿರುವ ಫೋಟೋ ..	೦—೧—೦
ಬೆಂಗಳೂರು [illegible] ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ ಜನ್ಮಧಾರಣಮಾಡಿದ ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣವಾಗಿರುವುದು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ಧಿತಾರ್ಥವಾಗಿ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಮಾಡಿದ ವಿಷಯವು [illegible] ವೀರಶೈವಮತದಲ್ಲಿ ಸಕಲ [illegible] ಗ್ರಂಥಗಳಲ್ಲೆಲ್ಲ ಇದೇ ಬಹು ಪ್ರಾಚೀನವಾದ [illegible] ಎನಿಸುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯರಿಂದ** ರಚಿತವಾಗಿರುವುದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಇದರ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ಬರೆದು, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಇದರ ವ್ಯಾಖ್ಯಾನದ ಮಹತ್ವವು ವಾಚಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ, ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೭೭೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈವಲ್ಯಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟಿ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಪ್ರಮುಖಮರ್ಮ (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚಪೀಠ ಪ್ರಶ್ನಪ್ರಕಾರ (೨ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಳಸ್ತೋತ್ರಪ್ರಕಾಶ (೧ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೨ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವಾದಿಸ್ವಜತತ್ತ್ವವರ್ಣನ (೪ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರು[illegible]ಗಳು	೩ ಆಣೆ
ಶ್ರೀ[illegible]ಶಿವಾಚಾರ್ಯಶತಕ	೩ ಆಣೆ
ಪಂಚಾಚಾರ ಪ್ರಕಾಶಿಕಾ	೩ ಆಣೆ
ಬಿಲ್ವಮಹಾತ್ಮ್ಯ	೩ ಆಣೆ
ವೀರಶೈವಾಚಾರವಿಧಿ (೨ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
ವಿವಾಹವಿಧಿ (೨ನೆಯ ಆವೃತ್ತಿ)	೪ ಆಣೆ
ಶ್ರೀ[illegible]	೪ ಆಣೆ
[illegible]ಸಂಗ್ರಹಃ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೪ ಆಣೆ
ಸನ್ಯಾಸಪ್ರಮುಖಮರ್ಯಾದತತ್ತ್ವಸ್ಪಷ್ಟೀಕರಣ (೨ನೆಯ ಆವೃತ್ತಿ)	೬ ಆಣೆ
ಸಿದ್ಧಾಂತ ಶಿಖಾಮಣಿ (ಮೂಲಮಾತ್ರ, ಚಿಕ್ಕಸೈಜು)	೬ ಆಣೆ
ವೀರಶೈವಾಂತ್ಯೇಷ್ಟಿ—ಶ್ರಾದ್ಧವಿಧಿ	೬ ಆಣೆ
ವೀರಶೈವಮಹಾತ್ಮ್ಯ	೮ ಆಣೆ
ಬಸವಧ್ವಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ) .	೧೨ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ) ...	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ .	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿವಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಸಂಸ್ಕೃತ)	೧ ರೂ.
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ.
ವೀರಶೈವರತ್ನ (೩ನೆಯ ಆವೃತ್ತಿ, ೩೦ ಮಹಾತ್ಮರ ಫೋಟೋಗಳಿಂದೊಡಗೂಡಿದ)	೧|| ರೂ.
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ.
ರೇಣುಕವಿಜಯ ಮಹಾಪುರಾಣ (ಕನ್ನಡ ಭಾಷಾಂತರಸಹಿತ)	೧ ರೂ.
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ.
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ.
ವೀರಶೈವಸಿದ್ಧಾಂತಸುಧಾಕರ	೨ ರೂ.
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೨೪೪ ಪುಟ)	೮ ರೂ.
A brief life-sketch of Pandit Sri Kashinatha Shatriji (*English*)	4 As
The Philosophical Aspect of Virasaivism (*English*) ...	8 As-
Speeches by Pandit Shri Kashinatha Shastriji (*English*)	12 As-
लिंगधारणचंद्रिका (संस्कृत) ..	३ रु.
वीरशैवरत्न (मराठी .	१ रु.
महानारायणोपनिषत् (वीरशैवभाष्य-संस्कृत) .	१ रु.
सिद्धांतशिखामणि (मूल) ...	६ आ.
पुरुषसूक्तम् (वीरशैवभाष्यसमेतम्)	४ आ.
नंदिकेश्वरकारिका (संस्कृत)	२ आ.

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

REGISTERED No. M. 2266 ॥ ಶ್ರೀಜಗದ್ಗುರು ಪಂಚಾಚಾರ್ಯರ್ ಪ್ರಸೀದಂತು ॥ REGISTERED No. M. 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾಸನಪಂಕಜಾತಜನಿತರ್ ಪಂಚಾಸ್ಯಪೀಠಾಧಿಪರ್ । ಪಂಚಕ್ಲೇಶವಿನಾಶಕರ್ ಪರತತ್ತ್ವಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚಾಕ್ಷರೀಬೋಧಕರ್ । ಪಂಚಾಚಾರ್ಯಜಗದ್ಗುರೂತ್ತಮರವರ್ ಪಾಲಿಸ್ವುದೀಲೋಕಮಂ ॥

ಸ್ಥಳದವರಿಗೆ ೩ ರೂ. ಪರಸ್ಥಳದವರಿಗೆ ೩ ರೂ. ೧೨ ಆಣೆ. ವಿ. ಪಿ. ಖರ್ಚು ಸೇರಿ ೪ ರೂಪಾಯಿ.

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ|| ೧೩ನೇ ಡಿಸೆಂಬರ್ ೧೯೪೩ [ಸಂಚಿಕೆ ೩೨

ಶ್ರೀ ವೇದವ್ಯಾಸಾವತಾರದ ಕಾರಣ ಮತ್ತು ಅವರ ಕಾರ್ಯಗಳು

ಲೇ|| ಕನ್ನಡಕವಿ ಉಪ್ಪಾಸ ವಿದ್ವಾನ್, ಅನವಟ್ಟಿ [illegible].

ಗೌತಮರ ಶಾಪದಿಂದ ಪ್ರಪಂಚದಲ್ಲಿ ವಿಹಿತ ಕರ್ಮಗಳು ಶಿಥಿಲವಾಗಿ ಪಾಪಾಚರಣೆಗಳು ಹೆಚ್ಚುತ್ತಿರುವುದನ್ನು ನೋಡಿ ದೇವತೆಗಳು ಪರಮಾತ್ಮನ ಸನ್ನಿಧಿಗೆ ಹೋಗಿ ಭೂಲೋಕದಲ್ಲಿ ನಡೆಯುತ್ತಿರುವ ಅಧರ್ಮ ಕರ್ಮಗಳ ಪ್ರಾಬಲ್ಯವನ್ನು ವಿಜ್ಞಾಪಿಸಿಕೊಳ್ಳಲು, ಶ್ರೀ ಪರಮಾತ್ಮನು ಕೃಪಾಪೂರಿತನಾಗಿ ದೇವತೆಗಳನ್ನು ಕುರಿತು ಭೂಲೋಕದಲ್ಲಿ ನಾನೇ ಅವತಾರ ಮಾಡಿ ಜ್ಞಾನೋಪಾರ್ಜನೆಗೆ ಮಾರ್ಗವನ್ನು ತೋರಿಸುವೆನು. ಚಿಂತಿಸಬೇಡಿ ಎಂಬುದಾಗಿ ಅಭಯವನ್ನು ಕೊಟ್ಟು, ಅವರನ್ನು ಕಳುಹಿಸಿದನು. ಅನಂತರ ಪರಮಾತ್ಮನು ಭೂಲೋಕದಲ್ಲಿ ಪರಾಶರ ಮುನಿಗಳ ದೆಸೆಯಿಂದ ಸತ್ಯವತೀ ದೇವಿಯಲ್ಲಿ ವೇದವ್ಯಾಸರೆಂಬ ಅಭಿಧಾನದಿಂದ ಅವತರಿಸಿ ಗೌತಮರ ಶಾಪದಿಂದ ಅಸ್ತವ್ಯಸ್ತಸ್ಥಿತಿಯಲ್ಲಿದ್ದ ವೇದವನ್ನು ಸರಿಯಾಗಿ ಭಾಗ ಮಾಡಿದರು. ದ್ವಾಪರ ಯುಗದಲ್ಲಿದ್ದ ಜನರಿಗೆ ವೇದಾಧ್ಯಯನ ಮಾಡುವುದರಲ್ಲಿ ಹೆಚ್ಚು ಸಾಮರ್ಥ್ಯ ಇಲ್ಲದೆ ಹೋದುದನ್ನು ನೋಡಿದ ವ್ಯಾಸರು, ವೇದವನ್ನು ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವಣವೇದ ಎಂಬದಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಿ ಒಬ್ಬರು ಒಂದು ವೇದವನ್ನಾದರೂ ಅಧ್ಯಯನ ಮಾಡುವುದು ಅವಶ್ಯಕವೆಂದು ವ್ಯವಸ್ಥೆಮಾಡಿದರು. ಈ ವೇದಗಳ ಅರ್ಥವು ಸುಲಭವಾಗಿ ತಿಳಿಯುವಂತೆ ವ್ಯವಸ್ಥೆ ಮಾಡುವುದಕ್ಕಾಗಿ ಬ್ರಹ್ಮ ಸೂತ್ರಗಳನ್ನು ರಚಿಸಿದರು. ಆಕಾಲದ ದ್ವಿಜರು ಈ ಸೂತ್ರಗಳ ಸಹಾಯದಿಂದ ವೇದಾರ್ಥಗಳನ್ನು ಸ್ವಲ್ಪ ಸ್ವಲ್ಪ ತಿಳಿದುಕೊಂಡು ಭಗವಂತನ ಉಪಾಸನೆಯಿಂದ ಕೃತಾರ್ಥರಾಗುತ್ತಾ ಬಂದರು.

ವೇದಾಧಿಕಾರವಿಲ್ಲದ ಸ್ತ್ರೀ-ಶೂದ್ರಾದಿಗಳಿಗೆ ಜ್ಞಾನವನ್ನುಂಟುಮಾಡಲು ವೇದವ್ಯಾಸರು ಐದನೆಯ ವೇದವೆಂದು ಪ್ರಸಿದ್ಧವಾದ ಮಹಾಭಾರತವನ್ನು ಬರೆದರು. ಈ ಮಹಾಭಾರತದಲ್ಲಿ ಸಕಲ ವೇದಾರ್ಥಗಳ ಸಾರವೂ ತುಂಬಿದೆ. ಮತ್ತು ಭಾಗವತಾದಿ ಅಷ್ಟಾದಶ ಪುರಾಣಗಳನ್ನು ರಚಿಸಿದರು. ಬ್ರಾಹ್ಮಣಾದಿ ನಾಲ್ಕು ವರ್ಣದವರಿಗೂ ಧರ್ಮಜ್ಞಾನೋಪಾರ್ಜನೆಯ ವಿಧಾನದಲ್ಲಿ ಭೇದವಿದ್ದರೂ ಫಲದಲ್ಲಿ ಸಮವಾಗಿರುವುದೆಂದು ನಿರೂಪಿಸಿದರು ಭಾರತದ ೧೮ ಪರ್ವಗಳಲ್ಲಿ ಒಂದಾದ ಭೀಷ್ಮಪರ್ವದಲ್ಲಿ ಶ್ರೀ ಕೃಷ್ಣನು ಅರ್ಜುನನಿಗೆ ಬೋಧೆ ಮಾಡಿದ ಫಲಾಪೇಕ್ಷಾರಹಿತ ಕರ್ಮಯೋಗದಿಂದ ಕೂಡಿದ ಮೋಕ್ಷ ಮಾರ್ಗವನ್ನು ಪ್ರಪಂಚಕ್ಕೆ ಭಗವದ್ಗೀತೆ ಎಂದು ಹೆಸರನ್ನು ಕೊಟ್ಟು ಉಪದೇಶಮಾಡಿ ಲೋಕೋದ್ಧಾರವನ್ನು ಮಾಡಿದರು. ಅಂಥಾ ಮಹಿಮಾಯುತವಾದ ಗೀತಾರ್ಥವನ್ನು ಮುಂದೆ ಸಂಕ್ಷೇಪವಾಗಿ ಕೊಡಲಾಗುವುದು.

ದುಃಖವಾರ್ತೆ

ಶಿವಮೊಗ್ಗ ಡಿ|| ಚನ್ನಗಿರಿ ತಾ|| ಬಸವಾಪಟ್ಟಣದ ಅನುಗೋಡು ಮಠದ ವೇ|| ಹಾಲಪ್ಪಯ್ಯನವರು ಇದೇ ಆಶ್ವಯುಜ ಬ|| ೮ ಗುರುವಾರ ದಿವಸವೂ ಇವರ ಸಹೋದರರಾದ ವೇ|| ಸಂಗಪ್ಪಯ್ಯನವರು ಕಾರ್ತಿಕ ಬಹುಳ ೭ ಶುಕ್ರವಾರ ದಿವಸವೂ ಶಿವೈಕ್ಯರಾದರೆಂದು ತಿಳಿಸಲು ವಿಷಾದಪಡಿಸುತ್ತೇವೆ. ರಾಮಲಕ್ಷ್ಮಣರಂತಿದ್ದ ಈ ಅಣ್ಣ ತಮ್ಮಂದಿರು ಪರೋಪಕಾರಿಗಳೂ ಗುರುದೇವತಾ ಭಕ್ತಿಯುತರೂ ವೇದಾರ್ಥಜ್ಞಾನಿಗಳೂ ಜ್ಯೋತಿಷ್ಯ ಪಂಡಿತರೂ, ಸ್ವಧರ್ಮನಿಷ್ಠರೂ ಶಾಂತಸ್ವಭಾವಿಗಳೂ ಆಗಿದ್ದರು. ಇವರ ಮರಣವಾದರೂ ಆಶ್ಚರ್ಯಜನಕವಾಗಿದ್ದಿತು ಈ ಉಭಯ ಸೋದರರಿಗೂ ಉತ್ತರಾಯಣ ಕಾಲದವರೆಗೂ ಜ್ಞಾನವಿಸ್ಮೃತಿಯುಂಟಾಗದೆ ಕೊನೆಯವರೆಗೂ ಶಿವನಾಮಸ್ಮರಣೆಯನ್ನು ಮಾಡುತ್ತಲೇ ಈ ಭೌತಿಕ ಶರೀರವನ್ನು ತ್ಯಜಿಸಿದರು. ಈ ಸಂಬಂಧವಾಗಿ ತಾ|| ೩೦-೧೧-೪೩ ನೇ ಮಂಗಳವಾರ ದಿವಸ ರುದ್ರಾಭಿಷೇಕವೂ ಗಣಾರಾಧನೆಯೂ ಗುರುಪಾದಪೂಜೆಯೂ ನಡೆದವು ಪ್ರಭಾಪೋಷಣಕ್ಕಾಗಿ ೧ ರೂಪಾಯಿಯು ಸಮರ್ಪಿಸಲ್ಪಟ್ಟಿದೆ. ಇವರುಗಳ ಅಗಲುವಿಕೆಯಿಂದ ದುಃಖಿತರಾದ ಪುತ್ರ, ಮಿತ್ರ ಬಂಧುಬಾಂಧವರಿಗೆ ದುಃಖೋಪಶಮನವನ್ನೂ ಮೃತರ ಆತ್ಮಕ್ಕೆ ಶಾಂತಿಯನ್ನೂ ಅನುಗ್ರಹಿಸಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತೇನೆ

ಎ. ಎಂ. ಹಾಲಸಿದ್ದಯ್ಯ.

ಕಲಕತ್ತಾ ಮೇಲೆ ಬಾಂಬು ಧಾಳಿ

ಕಳೆದ ೫ ನೆಯ ತಾರೀಖು ಬೆಳಿಗ್ಗೆ ಕಲಕತ್ತಾ ಕ್ಷೇತ್ರದಲ್ಲಿ ಜಪಾನರು ನಡೆಸಿದ ವಿಮಾನ ಮುತ್ತಿಗೆಯ ವಿವರಗಳು ಈರೀತಿ ಇವೆ. ಬಾಂಬರುಗಳು ಫೈಟರುಗಳ ರಕ್ಷಣೆಯಲ್ಲಿ ಎರಡು ಗುಂಪುಗಳಾಗಿ ಬಂದು ಮುತ್ತಿಗೆ ನಡೆಸಿದವು. ನಮ್ಮ ಫೈಟರುಗಳು ಶತ್ರುಬಾಂಬರುಗಳನ್ನು ಎದುರಿಸಿದವು. ವಿಮಾನ ಧ್ವಂಸಕ ಫಿರಂಗಿಗಳ ಆರ್ಭಟ ಭಯಂಕರವಾಗಿತ್ತು. ಬಂದಿರುವ ವರ್ತಮಾನದ ಪ್ರಕಾರ ಎರಡು ಶತ್ರು ವಿಮಾನಗಳು ನಾಶವಾದವು. ನಾಲ್ಕಕ್ಕೆ ನಷ್ಟವುಂಟುಮಾಡಲಾಯಿತು. ಅನೇಕ ಬಾಂಬುಗಳನ್ನು ಸುರಿಸಲಾಯಿತು. ಬಾಂಬುಗಳಿಂದ ಆದ ವಸ್ತು ಹಾನಿ ಹೆಚ್ಚಾಗಿಲ್ಲ. ಆದರೆ ಸುಮಾರು 500 ಮಂದಿ ಸಿವಿಲಿಯನ್ನರು ಅಪಾಯಕ್ಕೆ ಸಿಕ್ಕಿದರು. ಅದರಲ್ಲಿ ಮೂರನೇ ಒಂದು ಭಾಗಕ್ಕಿಂತ ಹೆಚ್ಚು ಸತ್ತರು. ಮಿಲಿಟರಿಗೆ ಹೆಚ್ಚು ಅಪಾಯವಾಗಿಲ್ಲ.

ಕಳೆದ ಡಿಸೆಂಬರ್ ಮತ್ತು ಜನವರಿಗಳಲ್ಲಿ ಕಲಕತ್ತಾ ಜನರಿಗೆ ತೊಂದರೆ ಕೊಡಲಿಕ್ಕಾಗಿ ಜಪಾನರು ಹಲವು ಸಾರೆ ಮುತ್ತಿಗೆಗಳನ್ನು ನಡೆಸಿದ್ದರು. ಈಸಲ ಕಲಕತ್ತಾ ನಾಗರಿಕರು ಶತ್ರು ಮುತ್ತಿಗೆಯನ್ನು ಸಮಾಧಾನ ಚಿತ್ತದಿಂದಲೇ ಎದುರಿಸಿದರು. ಈ ಮುತ್ತಿಗೆಯು ವಿಶೇಷವೆಂದರೆ, ಅದು ಹಗಲಲ್ಲಿ ನಡೆಯಿತು. ಹಲವು ತಿಂಗಳಿಂದ ಮೌನವಾಗಿದ್ದ ಸೈರನ್ನುಗಳು ಕೂಗಿದಾಗ ಬೀದಿಗಳಲ್ಲಿ ಹೆಚ್ಚು ಜನರೇನೂ ಇರಲಿಲ್ಲ. ಮುತ್ತಿಗೆ ನಡೆದ ಮೇಲೆ ಪರೀಕ್ಷಿಸಿದಾಗ ನಷ್ಟ ಅಲ್ಪವಾಗಿರುವುದೂ ಗೊತ್ತಾಯಿತು ಶತ್ರು ವಿಮಾನಗಳು ಬಹಳ ಎತ್ತರದಲ್ಲಿ ಹಾರುತ್ತಿದ್ದವು. ನಮ್ಮ ವಿಮಾನ ಧ್ವಂಸಕ ಫಿರಂಗಿಗಳು ಉಗ್ರವಾಗಿ ಗುಂಡು ಹಾರಿಸಿದುದರಿಂದ ಶತ್ರು ವಿಮಾನಗಳು ಬಹಳ ಎತ್ತರದಿಂದಲೇ ಗುಂಡುಹಾಕಬೇಕಾಯಿತು" ಎಂದು ಹೇಳಲಾಗಿದೆ.

ಕೈರೋದಲ್ಲಿ ಸಮ್ಮೇಳನ?

ಮಧ್ಯಪೂರ್ವ ಪ್ರದೇಶದಲ್ಲಿ ನಡೆದ ಮೂರನೇ ಮಹಾ ಸಮ್ಮೇಳನವು 6ನೇ ತಾ|| ಸಂಜೆ ಮುಗಿಯಿತು. ಚೀನಾ ಮತ್ತು ರಷ್ಯಾದೊಂದಿಗೆ ಫಲಪ್ರದವಾಗಿ ಚರ್ಚೆ ನಡೆಸಿ ಬಂದ ಚರ್ಚಿಲ್ಲರು ಮತ್ತು ರೂಜ್‌ವೆಲ್ಟರು ತುರ್ಕಿ ರಾಜಕಾರಣಪಟುಗಳೊಡನೆ ಮಿಲಿಟರಿ, ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳನ್ನು ಚರ್ಚಿಸಿದರು. ವಿಸ್ತೃತ ಪರಿಸ್ಥಿತಿಯ ವಿಚಾರವಾಗಿ ಈ ಮೂರು ದೇಶಗಳೂ ಏಕಮುಖವಾದ ಅಭಿಪ್ರಾಯವನ್ನು ತೋರ್ಪಡಿಸಿದವು. ಕೆಳಗೆ ಕಂಡ ಮುಖ್ಯ ಅಂಶಗಳನ್ನು ಚರ್ಚಿಸಲಾಯಿತೆಂದು ತಿಳಿದುಬಂದಿದೆ. ೧. ಯುದ್ಧದಲ್ಲಿ ತುರ್ಕಿಯು ಭಾಗವಹಿಸಿ, ಮಿತ್ರದೇಶಗಳ ಉದ್ದಿಷ್ಟದ ವಿಚಾರದಲ್ಲಿ ತುರ್ಕಿ ಮೊದಲಿಂದ ಮೇಲೆ ತೋರಿಸುತ್ತಿದ್ದ ಸಹಾನುಭೂತಿಯನ್ನು ಕಾರ್ಯರೂಪಕ್ಕೆ ತರುವ ವಿಚಾರ. ೨. ಪೋರ್ಚುಗಲ್‌ನೊಡನೆ ಒಪ್ಪಂದ ಮಾಡಿಕೊಂಡು ಅಜೋರ್ಸ್‌ನಲ್ಲಿ ಮಿತ್ರದೇಶಗಳು ಬಲಮೂಲಗಳನ್ನು ಪಡೆದಂತೆ ತುರ್ಕಿಯಲ್ಲೂ ಪಡೆಯುವ ಸಂಭವನೆ. ೩. ಬಾಲ್ಕನ್ಸ್ ಪ್ರದೇಶದಲ್ಲಿ ತುರ್ಕಿಯ ಸ್ಥಾನಮಾನ. ೪. ರಷ್ಯಾ-ತುರ್ಕಿ ಸಂಬಂಧದ ನಿರ್ಧಾರ. ಯುದ್ಧ ಮುಗಿದ ಮೇಲೆ ಬಾಲ್ಕನ್ಸ್ ಮತ್ತು ಡ್ಯಾನ್ಯೂಬಿಯನ್ಸ್ ಕ್ಷೇತ್ರದಲ್ಲಿ ಇವೆರಡು ದೇಶಗಳ ಪ್ರಭಾವ ಕ್ಷೇತ್ರಗಳನ್ನೂ ಗೊತ್ತುಮಾಡುವುದು. "ತುರ್ಕಿಯು ಬಾಲ್ಕನ್ಸ್ ವಿಚಾರದಲ್ಲಿ ತುಂಬಾ ಆಸಕ್ತಿವಹಿಸಿದೆ. ತುರ್ಕಿಬಾಲ್ಕನ್ಸ್‌ನ ಒಂದು ಭಾಗವೇ' ಎಂಬುದಾಗಿ ತುರ್ಕಿ ನಾಯಕರು ತಿಳಿಸಿದರು.

ಸ್ವೀಕಾರ

ಶಿವಮೊಗ್ಗ ಡಿ|| ಚನ್ನಗಿರಿ ತಾ|| ಬಸವಾಪಟ್ಟಣದ ಅನುಗೋಡು ಮಠದ ವೇ|| ಹಾಲಪ್ಪಯ್ಯ ಮತ್ತು ವೇ|| ಸಂಗಪ್ಪಯ್ಯ ಇವರುಗಳು ಶಿವೈಕ್ಯರಾದ ಸಂಬಂಧವಾಗಿ ನಡೆದ ರುದ್ರಾಭಿಷೇಕ ಗಣಾರಾಧನೆ ಗುರುಪಾದ ಪೂಜಾ ಸಮಯದಲ್ಲಿ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 1 ರೂಪಾಯಿಯು ವೇ|| ಎ. ಎಂ. ಹಾಲಸಿದ್ದಯ್ಯನವರ ದ್ವಾರ ತಲ್ಪಿರುತ್ತದೆ.

ಮೇಲ್ಕಂಡ ಮಹಾಶಯರಿಗೆ ಶ್ರೀಜಗದ್ಗುರು ಪಂಚಾಚಾರ್ಯರು - ನಿತ್ಯಮಂಗಳವನ್ನೀಯಲೆಂದು ಹಾರೈಸುತ್ತೇವೆ.

ಪಂಚಾಚಾರ್ಯಪ್ರಭಾ.

[illegible]

ಪಾತಿವ್ರತ್ಯ

[illegible]

[illegible] ಪಾತಿವ್ರತ್ಯ [illegible] ಇತರ [illegible] ಈ ಪಾತಿವ್ರತ್ಯ ದವನ್ನಾದರೂ ನಕ್ಷತ್ರಮಂಡಲದಲ್ಲಿ [illegible] ರಾರಾಜಿಸುವನು [illegible] ಪತಿ ಸಹಿತಳಾಗಿ [illegible] ತನ್ನ ತಲೆಯನ್ನು [illegible] ಪಾತಿವ್ರತ್ಯಕ್ಕೆಂದೇ ಇರುವ ಒಂದು ಪ್ರತ್ಯೇಕ ದಿನ ಕನ್ನಿಲ್ಲವು ಕುಲಸ್ತ್ರೀಯರಿಗೆ ಪಾತಿವ್ರತ್ಯವೇ [illegible] ಪಾಪದ ಆಚರಣವು [illegible] ಇದ್ದಲ್ಲಿ ಪಾತಿವ್ರತ್ಯಾನುಷ್ಠಾನ ಕ್ಕಿಂತಲೂ [illegible] ಪಾತಿವ್ರತ್ಯ ನಿಯಮ (ಪತಿವ್ರತಾ [illegible] ಪತಿಧರ್ಮಪರಾಯಣರು [illegible] ವಲ್ಲಿ ಪತಿವ್ರತಾದಿದೇವತೆಯಾದ ಪಾರ್ವತಿಯು ಸದಾ ಸಸ್ಯೆ [illegible] ಅನುಗ್ರಹಶಕ್ತಿಯನ್ನು ಕೊಡುಮಾಡು ವಳು ಇಹಪರಸುಖಸಾಧಕವಾದ ಇಂತಹ ಪಾತಿವ್ರತ್ಯ ವೆಂಬ ಧನವನ್ನು ಯಾವ ಸ್ತ್ರೀಯು ಕಳೆದುಕೊಳ್ಳು ತ್ತಾಳೆ, [illegible] ಸ್ತ್ರೀಯಳು ಶೂರ್ಪನಖಾ ಮುಂತಾದ ಮಹಾರಾಕ್ಷಸಿಯರಂತೆ ಪಂಕ್ತಿಭೇದಕ ಳಾಗುತ್ತಾಳೆ ನಮ್ಮ ಭಾರತಭೂಮಿಯು ಕರ್ಮಭೂಮಿ ಯೆನಿಸಿಕೊಂಡಿದೆ ಕರ್ಮಾಧಿಕಾರವೆಂಬುವದು ಸತೀ ಸಾನ್ನಿಧ್ಯವಿದ್ದವರಿಗಲ್ಲದ ಇತರರಿಗೆ ಸಂಪೂರ್ಣ ದೊರೆ ಯಲಾರದು ಅದ್ದರಿಂದಲೇ ನಮ್ಮ ಹಿಂದಿನ ಋಷಿಗಳು ಪತ್ನಿಯರನ್ನು ಧರ್ಮಶಕ್ತಿ ಎಂದು ಕರೆದಿರುವುದರಿಂದ ನಮ್ಮ ಭಾರತ ಧರ್ಮಮಂದಿರವು ಪಾತಿವ್ರತ್ಯದ ತಳ ಹದಿಯ ಮೇಲೆ ನಿಂತಿರುತ್ತದೆಂದು ಹೇಳಿದರ ಅತಿಶ ಯೋಕ್ತಿಯೆನಿಸಲಾರದು ತಳಹದಿಯು ಎಷ್ಟು ಮಟ್ಟಿಗ ಬದ್ಧವಾಗಿರುತ್ತದೆಯೋ ಅದರ ಮೇಲಿನ ಕಟ್ಟ ಡವು ಅಂದವಾಗಿಯೇ ಇರುತ್ತದೆಯಲ್ಲವೆ?

ಹಿಂದೆ ಪುರಾಣಪ್ರಸಿದ್ಧರಾಗಿ ಹೋದ ಮಹಾಸತಿ ವ್ರತೆಯರ ಸೌಭಾಗ್ಯವಿಶೇಷದಿಂದಲೇ ಅನೇಕ ಮಹಾ ರಾಜರ ಮತ್ತು ಮಹರ್ಷಿಗಳ ಅಪ್ರತಿಹತವಾದ ಕೀರ್ತಿ ಯು ಈಗಲೂ ಅಚಲವಾಯಿತಂತೆ ಉಳಿದುಕೊಂಡಿರು ವುದಲ್ಲದೆ ಮುಂದೆ ಸೂರ್ಯಚಂದ್ರರಿರುವವರೆಗೂ ಇದ್ದೇ ಇರುತ್ತದೆ ಸೀತಾದೇವಿಯ ಪಾತಿವ್ರತ್ಯಭಾಗ್ಯ ದಿಂದ ರಾಮನೂ, ದ್ರೌಪದಿಯ ಭಾಗ್ಯದಿಂದ ಪಾಂಡ ವರೂ [illegible] ಸೌಭಾಗ್ಯದಿಂದ ನಳನೂ, [illegible] ದಿಂದ ಹರಿಶ್ಚಂದ್ರನೂ [illegible] ಜಗದ್ವಿಖ್ಯಾತರಾದರು [illegible] ಗೋಚರವಾದ [illegible] ಪಾತಿವ್ರತ್ಯ [illegible]

ಹಿಂದೆ [illegible] ರಾಜನು ತನ್ನ [illegible] ರಾತ್ರಿ ಗಸ್ತು [illegible] ತನ್ನ ಹೆಂಡತಿಯ ತೊಡೆಯಮೇಲೆ ನಿದ್ರೆಮಾಡುತ್ತಿರಲು ಅಕಸ್ಮಾತಾಗಿ [illegible] ಒಲೆಯಲ್ಲಿ ಉರಿಯುತ್ತಿರುವ [illegible] ಕೂಸಿನ ಬಳಿಗೆ [illegible] ತಾಯಿಯು ನೋಡಿ ಏನುಮಾಡಿ? ಆ ಮಗುವನ್ನು ಎತ್ತಿಕೊಂಡರೆ [illegible] ನಿದ್ರಾಭಂಗವಾಗುವುದೆಂದು [illegible] ಪತಿ [illegible] ಶುಶ್ರೂಷೆ [illegible] ಆ ಮಗುವು ಬೆಂಕಿಯಲ್ಲಿ [illegible] ಆಕೆಯ ಪಾತಿವ್ರತ್ಯಧರ್ಮಕ್ಕೆ [illegible] ತನ್ನ [illegible] ಶೀತಲವನ್ನು ಅಂಗೀಕರಿಸಿದನು ಮಗುವು [illegible] ಇಷ್ಟರಲ್ಲಿ [illegible] ಎಚ್ಚರಗೊಂಡು [illegible] ಆಕೆಯು ಎದ್ದು [illegible] ಮಗುವನ್ನು ಎತ್ತಿಕೊಂಡಳು [illegible] ಈ ಚರಿತ್ರವನ್ನು ನೋಡಿ ನನ್ನ ರಾಜ್ಯದಲ್ಲಿ [illegible] ಪತಿವ್ರತೆಯರು ಇರುವುದರಿಂದಲೇ ನಾನು [illegible] ಕ್ಷೇಮದಿಂದ [illegible] ಕಾಳಿ ದಾಸ [illegible] ಕರೆಯಿಸಿ ಒಂದು ಶ್ಲೋಕ [illegible] ಹುತಾಶನಶ್ಚಂದನಪಂಕಶೀತಲಃ [illegible] ಬೆಂಕಿಯು ಶ್ರೀಗಂಧದಂತೆ ತಣ್ಣಗಾಯಿತೆಂಬ [illegible] ಒಂದು ಪಾದವನ್ನು ಸಮಸ್ಯಾಪೂರ್ತಿಗಾಗಿ ಸಭೆಯ ಮುಂದಿರಿಸಿದನು. ಯಾರಿಂದಲೂ ಆ ಸಮಸ್ಯಾಪೂರ್ತಿ ಮಾಡಲು ಆಗದ ಕಾಳಿಕಾವರಪ್ರಸಾದವನ್ನು ಪಡೆದು ಮಹಾನುಭಾವನಾದ ಕಾಳಿದಾಸಕವಿಯು "ಸುತಂ ಪತಂತಂ ಪ್ರಸಮೀಕ್ಷ್ಯ ಪಾವಕೇ ನ ಬೋಧಯಾ ಮಾಸ ಪತಿಂ ಪತಿವ್ರತಾ ॥ ತದಾಭವತ್ತತ್ಪತಿಭಕ್ತಿಗೌರ ವಾತ್ ಹುತಾಶನಶ್ಚಂದನಪಂಕಶೀತಲಃ" ಎಂದು ರಾತ್ರಿ ನಡೆದ ಅದ್ಭುತಸಂಗತಿಯನ್ನು ಮೂರುಪಾದಗಳಲ್ಲಿ ಪೂರ್ಣಗೊಳಿಸಿದನು ಆಗ ಭೋಜರಾಜನು ಕಾಳಿ ದಾಸನನ್ನು ತಬ್ಬಿಕೊಂಡು ಅವನ ಪಾದಗಳಿಗೆರಗಿದನು ಇಂಥ ಪಾತಿವ್ರತ್ಯಸಂಬಂಧವಾದ ಇತಿಹಾಸಗಳು ನಮ್ಮ ಭಾರತೀಯರಲ್ಲಿ ಅಸಂಖ್ಯಾತವಾಗಿ ಇರುವವು ಈಗಿನ ನಮ್ಮ ಭಾರತಸ್ತ್ರೀಯರು ಅಂಥ ಪತಿಭಕ್ತಿಪರಾಯಣೆಯರ ಮೇಲ್ಪಂಕ್ತಿಯನ್ನು ಅನುಸರಿಸಿ ಪತಿಯು ಕುಂಟನೋ ಕುರುಡನೋ ಪತಿತನೋ ವಿದ್ವಾಂಸನೋ ಮೂರ್ಖನೋ ದೈವಾಯತ್ತನಾಗಿ ಬಂದ ತಮ್ಮ ಪತಿಸೇವೆಯಲ್ಲಿ ಆಸಕ್ತ ರಾಗುತ್ತ ಹಿಂದಣ ಸೀತಾ ದ್ರೌಪದಿ ದಮಯಂತಿ ಸಾವಿತ್ರಿ ಚಂದ್ರಮತಿ ಮುಂತಾದ ಮಹಾಪತಿವ್ರತಾ ಶಿರೋಮಣಿಗಳ ಮಧ್ಯದಲ್ಲಿ ಪರಿಗಣಿಸಲ್ಪಡುವುದೇ ನಮ್ಮ ಭಾರತಕುಲಸ್ತ್ರೀಯರುಗಳ ಧರ್ಮವಾಗಿದೆಯಲ್ಲದೆ ಈಗಿನ [illegible] ಸಂಸರ್ಗದ [illegible] ಸ್ವೇಚ್ಛೆಯಿಂದ ಪಾತಿ ವ್ರತ್ಯಭಂಗಕ್ಕೆ ಕಾರಣಗಳಾಗುವುದಾದ ವಿಧವಾವಿವಾಹ, ವಿವಾಹವಿಚ್ಛೇದ, ಸ್ತ್ರೀಸ್ವಾತಂತ್ರ್ಯ ಮುಂತಾದ ಬಲೆ ಗಳಿಗೆ ಸಿಕ್ಕು ತಮ್ಮ ಅದ್ಭುತಶಕ್ತಿಯುಳ್ಳ ಪಾತಿವ್ರತ್ಯಕ್ಕೆ ಕುಂದನ್ನು ತಂದುಕೊಳ್ಳುವುದು ಯಾರಿಗೂ ಭೂಷಣ ವಲ್ಲ ಕುಲಸ್ತ್ರೀಯರು ಪಾತಿವ್ರತ್ಯರಕ್ಷಣಾರ್ಥವಾಗಿ ಬೇಕಾದ ವಿದ್ಯೆಗಳನ್ನು ಕಲಿತು ಸಂಸಾರರಥವನ್ನು ನಡೆ ಸುವನ್ನು ಸ್ವಾತಂತ್ರ್ಯ ಪಡೆದವರಾಗಿ ಆರ್ಯಧರ್ಮವನ್ನು ಉಜ್ಜೀವನಗೊಳಿಸುತ್ತ ಪತಿವ್ರತಾಧರ್ಮಪರಾಯಣೆಯ ರಾಗಿ ಅನಾದಿಕಾಲದಿಂದ ನಾವು ಧರಿಸಿದ ಸ್ವರೂಪವನ್ನು ಕಾಣಿಸುವಂತೆ ನಮ್ಮ ಸನಾತನ ಆರ್ಯರ ಹಿಳೆಯರಲ್ಲಿ ರೂಢಮೂಲವಾಗಿದ್ದ ಈ ಪತಿವಿಶ್ವಾಸವನ್ನು ಸೌಭಾಗ್ಯದೇವತೆಯಾದ ಪಾರ್ವತಿಯು ಎಂದೆಂದೂ ಕಾಪಾಡುವಂತೆ ಅನುಗ್ರಹಿಸಲಿ

ಯುದ್ಧವಾರ್ತೆ.

ಹಂಗೇರಿ ರಷ್ಯಾದಿಂದ ಸೇನೆಯನ್ನು ಕರಸಿತು

ಜರ್ಮನರ [illegible] ಹೋರಾಡಿದ ಹಂಗೇರಿ ಸೇನ ಪ್ರತಿನಿಧಿಯಿಂದ [illegible] ಬಂದಿದೆ ಅದರ ಪ್ರಕಾರ ರಂಗದಲ್ಲಿ ಕೆಲವು ಕ್ಷೇತ್ರಗಳನ್ನು ಆಕ್ರಮಿಸಿರುವ ಹಂಗೇರಿ ಸೇನೆ ಇನ್ನೂ [illegible] ಇದೆ ಆದರ ಆ ಸೈನಿಕರ ಸಂಖ್ಯೆ ಬಹಳ ಕಡಿಮೆ ಅವರು [illegible] ಪರಿಸ್ಥಿತಿ ರಣರಂಗದಲ್ಲಿ ಉಂಟಾಗುವವರೆಗೆ [illegible] ಸೇನೆ ಸಲ್ಲಿಸುವರು" ಎಂಬುದಾಗಿ ಹಂಗೇರಿಯನ್ ಮಹಾ ಪ್ರಧಾನರು ಹೇಳಿದರೆಂದು ಬುಡಾಪೆಸ್ಟ್ ರೇಡಿಯೋ ತಿಳಿಸಿತು

ಚೀಣೀಯರ ಸೋಲು

[illegible] ನಗರದ ಬೀದಿ ಬೀದಿಯಲ್ಲಿ ಹೋರಾಟ [illegible] ಇನ್ನಗಳನ್ನು ಚೀಣೀಯರು [illegible] ಕ್ರಮದಿಂದ ಹೋರಾಡಿ ಎದುರಿಸಿದರೂ ಶತ್ರುಗ ಳಪರಿಮಿತ ಸೈನ್ಯಬಲವನ್ನು ತಡೆಯಲು ಸಾಕಷ್ಟು ಸೈನ್ಯ ಬಲವಿಲ್ಲದ ನಗರವು ಶತ್ರುವಶವಾಯಿತು

ಜಪಾನ್ ಮಂತ್ರಿಮಂಡಲದ ಸಭೆ

ಟೋಜೋರವರು ಡಿಸಂಬರ್ ೨೩ ಕ್ಕೆ ತಮ್ಮ ಮಂತ್ರಿ ಮಂಡಲವನ್ನು ಕರೆದಿರುವರು ಈ ಸಮಾಲೋಚ ನೆಯಲ್ಲಿ [illegible] ಯುದ್ಧ ಕಾರ್ಯ ಚರಣೆಗಳನ್ನು ತೀವ್ರಗೊಳಿಸುವದು ಮುಂತಾದ ವಿಷಯ ಗಳನ್ನು ಚರ್ಚಿಸಲಾಗುವುದೆಂದು ಊಹಿಸಲಾಗಿದ

ಜಪಾನರನ್ನು ಹಿಂದಟ್ಟಲಾಯಿತು

[illegible] ದರಿಯಲ್ಲಿ ಮಕಾವಾಂಗ್ ಕಣಿವೆಯಲ್ಲಿ ಜಪಾನರು ಮುಂದ ನುಗ್ಗಲು ಯತ್ನಿಸಿ ಮೂರು ಮಿತ್ರ ಸ್ಥಾನಗಳ ಮೇಲೆ ಬಿದ್ದರು ಆದರೆ ಅವರನ್ನು ಹಿಂದಕ್ಕೆ ಓಡಿಸಲಾಯಿತು ಕಮಯಿಂಗ್ ಉತ್ತರದಲ್ಲಿ ಶತ್ರು ವಾಹನಗಳ ಓಡಾಟ ಹೆಚ್ಚಾಗಿರುವುದರಿಂದ ಈ ಕ್ಷೇತ್ರ ದಲ್ಲಿ ಜಪಾನರು ಮೇಲಿಂದ ಮೇಲೆ ಮುಂದ ನುಗ್ಗಲು ಯತ್ನಿಸುವ ಸಂಭವ ಇದ ಎಂದು ಹೇಳಲಾಗಿದ

ಇಟಲಿಯಲ್ಲಿ ನಾಜಿ ಪ್ರತಿಭಟನೆ

ಜರ್ಮನರು ಅರ್ಸೋಗ್ನಾವನ್ನು ಎಂಟನೇ ಸೇನೆ ಯಿಂದ ಕಸಿದು ಕೊಂಡಿದ್ದಾರೆ ಇಟಲಿ ರಂಗದಲ್ಲಿ ಈಗ ಒಟ್ಟು ಒಂಭತ್ತು ಜರ್ಮನ್ ಡಿವಿಜನ್‌ಗಳಿವೆ ಇವು ಗಳಲ್ಲಿ ನಾಲ್ಕು ಎಂಟನೇ ಸೇನೆಗೆ ಎದುರಾಗಿ ನಿಂತಿವೆ ಕಾಮಿನೋ ಮತ್ತು ಮಗ್ಗಿಯೋರ್ ಪರ್ವತ ಪ್ರದೇಶ ದಲ್ಲಿ ಐದನೇ ಸೇನೆಯು ಶತ್ರುಗಳ ಬಲಯುತ ಸ್ಥಾನ ಗಳನ್ನು ಭೇದಿಸಿದಯೆಂದು ಅಲ್ಜೀರ್ಸ್ ರೇಡಿಯೋ ತಿಳಿಸಿತು ಕಾಮಿನೋ ಕ್ಷೇತ್ರದಲ್ಲಿರುವ ಮೂರು ಮುಖ್ಯ ಗುಡ್ಡಗಳು ಈಗ ಮಿತ್ರ ಸೇನೆಗಳ ಕೈಲಿವೆ ಸಾಂಗ್ರೊ ನದಿಯಿಂದಾಚೆಗೆ ೯ ಮೈಲಿ ದೂರದಲ್ಲಿರುವ ಅರ್ಸೋಗ್ನಾವನ್ನು ಮತ್ತೆ ವಶಪಡಿಸಿಕೊಳ್ಳಲು ಈಗ ಉಗ್ರ ಹೋರಾಟ ನಡೆಯುತ್ತಿದೆ ಎಂಟನೇ ಸೇನೆಯು ಇದನ್ನು ಹಿಡಿದಾಗ ೬೦ ಶತ್ರುಗಳು ಸೆರೆಯಾಗಿದ್ದರು ಜರ್ಮನರು ಟ್ಯಾಂಕ್‌ಗಳ ಸಹಾಯದಿಂದ ಪ್ರತಿ ಮುತ್ತಿಗೆ ನಡೆಸಿ ಅದನ್ನು ಹಿಡಿದರು

ಜಪಾನು ದೀರ್ಘಕಾಲ ಹೋರಾಡಲು ಸಿದ್ಧವಿದೆ

[illegible]

ಟೋಜೋರವರ ಭಾಷಣ

[illegible] ಬ್ರಿಟನ್, ಅಮೇರಿಕಾ [illegible]

ಗೊಬೆಲ್ಸ್‌ರವರ ಭಾಷಣ

[illegible] ಜರ್ಮನ [illegible]

ನಾಜಿ ಜರ್ಮನ್ ಅಧಿಕಾರಿಗಳಿಂದ ಶಾಂತಿ ಸಂಧಾನ

[illegible] ಅಧಿಕಾರಿಗಳು [illegible] ಪಡೆದು ಶಾಂತಿಗಾಗಿ ಸಂಧಾನ ನಡಸಿದರಂತೆ [illegible] ಯುದ್ಧ ನಿಲಿಸಬೇಕಾದರೆ ಮಿತ್ರರಾಷ್ಟ್ರಗಳು ಯಾವ ಷರತ್ತುಗಳನ್ನು [illegible] ತಿಳಿಯಬೇಕೆಂಬುದೇ ಇವರ ಉದ್ದೇಶವಾಗಿತ್ತು. ಈ ಸಂಧಾನ ನಡೆಸಿದ ಅಧಿಕಾರಿಗಳಲ್ಲಿ [illegible] ಅಧಿಕಾರದಲ್ಲಿಲ್ಲ. ಜರ್ಮನ್ ಕೈಗಾರಿಕೋದ್ಯಮಿಗಳು ಈ ಕಾರ್ಯದಲ್ಲಿ ತುಂಬಾ ಶ್ರದ್ಧೆ ತೋರಿಸುತ್ತಿದ್ದಾರೆ. [illegible] ಕಳಿಸಲ್ಪಟ್ಟ [illegible] ಅಧಿಕಾರಿಗಳು ಮತ್ತು ಪ್ರಮುಖ ಕೈಗಾರಿಕೋದ್ಯಮಿಗಳು [illegible] ಜರ್ಮನಿಯು ಸದ್ಯದ ಪರಿಸ್ಥಿತಿಯಲ್ಲಿ [illegible] ಎಂದು ಹೇಳಲಾಗಿದೆ.

ಕೌಂಟ್ ಸಿಯಾನೋವನ್ನು ಕೊಂದರೇ?

ಇಟಲಿಯ ಮಾಜಿ [illegible] ಸಿಯಾನೋನನ್ನು ಗುಂಡಿಟ್ಟು [illegible] ಹಾಕಲಾಯಿತೆಂದು ಹೇಳಲಾಗಿದೆ. [illegible] ಫಾಸಿಸ್ಟ್ ಪಕ್ಷಕ್ಕೆ ಸೇರಿದ [illegible]

ನಾಜಿ ಸೋಲು

[illegible]

ಲಂಡನ್ನಿನಲ್ಲಿ [illegible]

[illegible]

ಟೆಹರಾನ್ ಸಮ್ಮೇಳನದ ತೀರ್ಮಾನ

[illegible]

ಬೇಗನೆ ಯೂರೋಪಿನ ದಂಡಯಾತ್ರೆ ನಡೆಯಲಿದೆ

[illegible] ದಂಡಯಾತ್ರೆ [illegible]

[illegible]

ಚರ್ಚಿಲ್ ರೂಜ್‌ವೆಲ್ಟ್ ಸಂಚಾರ

[illegible] ಚರ್ಚಿಲ್ [illegible]

ಬಂಗಾಳಾ ಕ್ಷಾಮ

[illegible] ಚಿಕಿತ್ಸಾ [illegible] ಅನ್ನದಾನ ಮಾಡಲು [illegible]

ಮನೋಹರವಾದ ಫೋಟೋಗಳು.

ಶ್ರೀ ರೇಣುಕಾಚಾರ್ಯರ [illegible] ಫೋಟೋ ಸೈಜು ೨೦×೧೪ ಬೆಲೆ ೧ಕ್ಕೆ	೦—೪—೦
ಶ್ರೀರೇಣುಕಾಚಾರ್ಯರ [illegible] (ನಾನಾವರ್ಣಗಳಿಂದ ಮುದ್ರಿತವಾದ) ಸೈಜು ೧೪×೧೦ ಬೆಲೆ	೦—೪—೦
ಶ್ರೀ ರೇಣುಕಾದಿ ಪಂಚಾಚಾರ್ಯರು [illegible] ಮಹರ್ಷಿಗಳಿಗೆ ಶಿವಾದ್ವೈತವನ್ನು ಬೋಧಿಸುವ ಫೋಟೋ ಸೈಜು [illegible]	೦—೩—೦
ಸದ್ಯೋಜಾತಾದಿ [illegible] ಎಲ್ಲರೂ ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ [illegible] ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು ಪಂಚಾಚಾರ್ಯರ ಲಿಂಗಾವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೨—೦
ಶ್ರೀ ಜಗದ್ಗುರು [illegible] ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ರುದ್ರಮುನೀಶ್ವರ ಶಿವಾಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
ಶ್ರೀ ರೇಣುಕಾಚಾರ್ಯರು ವಿಭೀಷಣನ ಪ್ರಾರ್ಥನೆಯಂತೆ ೩ ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ ರೇಣುಕಾಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
ಶ್ರೀಕಾಶೀಕ್ಷೇತ್ರವಿರಾಜಮಾನ ಶ್ರೀ ಜಗದ್ಗುರು ವಿಶ್ವಾರಾಧ್ಯರ [illegible] ಫೋಟೋ	೦—೧—೦
ಶ್ರೀ ಕಾಶೀ ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೬×೧೨	೦—೩—೦
ಶ್ರೀಉಜ್ಜಯಿನೀ ಸಿಂಹಾಸನಾಧೀಶರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
ಶ್ರೀಮದ್ರಂಭಾಪುರೀ ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
ಶ್ರೀಮದುಜ್ಜಯಿನೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೩—೦
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—[illegible]—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೨—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರು ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

ವೀರಶೈವಮತದಲ್ಲಿ [illegible] ಪ್ರತಿಯೊಬ್ಬರಿಗೂ ಸಿದ್ಧಾಂತಶಿಖಾಮಣಿ ಗ್ರಂಥವು ಪ್ರಾಣಭೂತವಾದುದು. ಈ ಶಾಸ್ತ್ರದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿಗೆ ಉಪದೇಶಿಸಿದ ವೀರಶೈವಸಿದ್ಧಾಂತವನ್ನು [illegible] ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೇ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೩ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವುದು. ಈ ಪವಿತ್ರಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ ಇದಕ್ಕೆ ಇದುವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಅವರ [illegible] ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಬರೆಯಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದವರಿಗೆ ಪಂಡಿತರ ವ್ಯಾಖ್ಯಾನದ ಮಹತ್ವವು [illegible] ವೇದ್ಯವಾಗುವುದು. ಪಾಠಕರ ಅನುಕೂಲಕ್ಕಾಗಿ ಬಹು ಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೬೬೩ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರಭಾವಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. [illegible] ಈ ಅನುಪಮಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೩ ರೂಪಾಯಿ.**

ಮ್ಯಾನೇಜರ್— ಪಂಚಾಚಾರ್ಯಪ್ರಭಾ ಆಫೀಸ್,
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೩ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮನಿರ್ಣಯ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾಶ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೩ನೆಯ ಆವೃತ್ತಿ)	೩ ಆಣೆ
ಬಸವಾದಿನಿಜತತ್ವದರ್ಪಣ (೪ನೆಯ ಆವೃತ್ತಿ)	೩ ಆಣೆ
ಶ್ರೀರೇಣುಕಾಚಾರ್ಯಶತಕ (೩ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರುತತ್ತ್ವಪದಗಳು	೩ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ ಪ್ರಕಾಶಿಕಾ	೨ ಆಣೆ
ಬಸವಮಾಹಾತ್ಮ್ಯ	೩ ಆಣೆ
ವೀರಶೈವಾ[illegible]ದಿ (೩ನೆಯ ಆವೃತ್ತಿ)	೪ ಆಣೆ
ಲಿಂಗಧಾರಣವಿಧಿ	೪ ಆಣೆ
[illegible]ವಿಧಿ (೨ನೆಯ ಆವೃತ್ತಿ)	೬ ಆಣೆ
ಶ್ರೀ[illegible]	೪ ಆಣೆ
[illegible]ಸಂಗ್ರಹ (ಸಂಸ್ಕೃತ)	೪ ಆಣೆ
ವೀರಶೈವ ಪ್ರಾಯಶ್ಚಿತ್ತವಿಧಿ	೮ ಆಣೆ
ಸನ್ಯಾಸಾಶ್ರಮನಿರ್ಣಯ [illegible] (೨ನೆಯ ಆವೃತ್ತಿ)	೭ ಆಣೆ
ಸಿದ್ಧಾಂತ ಶಿಖಾಮಣಿ ([illegible])	೭ ಆಣೆ
ವೀರಶೈವ [illegible]	೭ ಆಣೆ
ವೀರಶೈವ [illegible]ಮಹಾತ್ಮರು	೮ ಆಣೆ
ಬಸವಧ್ವಾಂತದಿವಾಕರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರುಲವಾರಿ ಭಾಷಣಮು (ತೆಲುಗು)	**೮ ಆಣೆ**
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೩ ಆಣೆ
ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯ ಕೃತ)	೧೩ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೩ ಆಣೆ
ಮಹೇಶ್ವರ ದೀಕ್ಷಾವಿಧಿ (೩ನೆಯ ಆವೃತ್ತಿ)	೧೩ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೩ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೩ನೆಯ ಆವೃತ್ತಿ)	೧ ರೂ
ವೀರಶೈವತತ್ತ್ವ ([illegible])	೧| ರೂ
ಸಿದ್ಧಾಂತಶಿಖಾ [illegible] ([illegible])	೧ ರೂ
ಕೇನೋಪನಿಷತ್ತು (ಕನ್ನಡ [illegible])	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೩ ರೂ
ಶಿವಾಗಮಸಂಗ್ರಹ ([illegible] ಸಹಿತವಾದುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೩ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೬೪ ಪುಟ)	೮ ರೂ
A brief life sketch of Pandit Sri Kashinatha Shastriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु.
सिद्धान्तशिखामणि (मूल)	६ आ.
पुरुषसूक्तम् (वीरशैवप्राचीनभाष्यान्वितम्)	४ आ
नन्दिकेश्वरकारिका (संस्कृत)	२ आ

ಮ್ಯಾನೇಜರ್ **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ॥ ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

ಪಂಚಾಸ್ಯಾನನಪಂಕಜ ಪ್ರಸೃತರ್ ಪಂಚಾಕ್ಷರೀವಾದಿಪರ್ । ಪಂಚಕ್ಲೇಶವಿನಾಶಕರ್ ಪರತರಶ್ರೀಪಂಚಲಿಂಗೋದ್ಭವರ್ ॥
ಪಂಚಾಚಾರನಿಯಾಮಕರ್ ಪರಿಲಸತ್ಪಂಚ [illegible] ಧರರ್ । ಪಂಚಾಚಾರ್ಯಜಗದ್ಗುರೂತ್ತಮವರರ್ [illegible] ।

ಸ್ಥಳದವರಿಗೆ ೩ ರೂ ಪರಸ್ಥಳದವರಿಗೆ ೩ ರೂ ೧೨ ಆ ವಿ ಪಿ ಖರ್ಚು ಸಹಿತ ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೩ನೇ ಡಿಸೆಂಬರ್ ೧೯೪೦. [ಸಂಚಿಕೆ ೩೨

ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ವಿಗ್ರಹಸ್ಥಾಪನೆ

ಶ್ರೀಮನ್ಮಹಾರಾಜಾ ಶ್ರೀ ಜಯಚಾಮರಾಜೇಂದ್ರ ಒಡೆಯರು ತಾ॥ ೧೩ ೧೨ ೪೦ ಗುರುವಾರ ದಿವಸ ಬೇಲೂರು ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಆವರಣದಲ್ಲಿ ಅಂದ ಮಹಾಸ್ವಾಮಿಯವರಾದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಪಕ್ಷಿ ವಿಗ್ರಹದ ಸ್ಥಾಪನೆ ಮಾಡಿದರು ಗತಿಸಿದ ಪ್ರಭುಗಳ ಕಲಾರಾಧನೆಗೆ, ಧರ್ಮಭಕ್ತಿಗೆ ದ್ಯೋತಕವೋ ಎನ್ನುವಂತೆ ಆ ವಿಗ್ರಹವು ಚೆನ್ನಕೇಶವ ದೇವಾಲಯದಲ್ಲಿ ಶೋಭಿಸುತ್ತದೆ ಶ್ರೀಮನ್ಮಹಾರಾಜರು ಸೂಚಿಸಿದಂತೆ ಪುರಾತನ ಕಲಾಸಂಪತ್ತಿಯ ಜೀರ್ಣೋದ್ಧಾರಕ್ಕಾಗಿ ಅಂದ ಮಹಾಸ್ವಾಮಿಯವರು ಪಟ್ಟ ಶ್ರಮಕ್ಕೆ ಈ ವಿಗ್ರಹದ ಪ್ರತಿಷ್ಠೆ ಕೃತಜ್ಞತೆಯ ಕಾಣಿಕೆಯಾಗಿದೆ

ಕೃಷ್ಣರಾಜನಗರಕ್ಕೆ ಶ್ರೀಮನ್ಮಹಾರಾಜರವರ ಆಗಮನ

ತಾ॥ 15 12 40 ರಲ್ಲಿ ಬೆಳಿಗ್ಗೆ 9 ಗಂಟೆಗೆ ಶ್ರೀಮನ್ಮಹಾರಾಜರವರು ಕೃಷ್ಣರಾಜನಗರಕ್ಕೆ ದಿವಾನರು ಮತ್ತು ಕಾರ್ಯದರ್ಶಿಗಳಾದ ಶ್ರೀ ತಂಬೂಚೆಟ್ಟಿಯವರ ಸಹಿತ ದಯಮಾಡಿಸಿದರು ಪುರಜನಗಳು ಬಹಳ ವಿಜೃಂಭಣೆಯಿಂದ ಮಹಾಸ್ವಾಮಿಗಳನ್ನು ಸ್ವಾಗತಿಸಿದರು ಪೌರ ಸಭೆಯ ಪರವಾಗಿ ಲೋಕಸೇವಾನಿರತ ಬಿ ಸಿದ್ಧಲಿಂಗಶೆಟ್ಟರು ಬಿನ್ನವತ್ತಳೆಯನ್ನು ಓದಿ ಕಾಸ್ಕೆಟ್ಟನ್ನು ಅರ್ಪಿಸಿದರು ಹೈಸ್ಕೂಲಿನ ದಾತೃಗಳ ಪರವಾಗಿ ಮ॥ ಬಿ ಚನ್ನಪ್ಪನವರು ಬಿನ್ನವತ್ತಳೆಯನ್ನು ಓದಿ ಕ್ಯಾಸ್ಕೆಟ್ಟನ್ನು ಅರ್ಪಿಸಿದರು ಮಹಾಸ್ವಾಮಿಯವರು ಸಂತೋಷಗೊಂಡು ಸಮಯೋಚಿತವಾಗಿ ಭಾಷಣ ಮಾಡಿದರು ಲೋಕಸೇವಾನಿರತ ಬಿ ಸಿದ್ಧಲಿಂಗಶೆಟ್ಟರು ಹೈಸ್ಕೂಲಿನ ದಕ್ಷಿಣ ಭಾಗದ ಬ್ಲಾಕ್ ಕಟ್ಟಡಕ್ಕಾಗಿ [illegible] ಸಾವಿರ ರೂ ಗಳನ್ನೂ, ಶ್ರೀ ಬಳೆ ಬಸವರಾಜಪ್ಪನವರು ಹೈಸ್ಕೂಲು ಹಾಸ್ಟಲಿಗೆ 10 ಸಾವಿರ ರೂ ಗಳನ್ನೂ ಪ್ರಭುಗಳ ಎದುರಿನಲ್ಲಿ ವಾಗ್ದಾನ ಮಾಡಿದರು ಪ್ರಭುಗಳು ತಮ್ಮ ಸಂತೋಷವನ್ನು ಸೂಚಿಸಿದರು ಪ್ರಭುಗಳವರ ಮೆರವಣಿಗೆಯು ಊರಿನಲ್ಲೆಲ್ಲಾ ಜರುಗಿ ಮಧ್ಯಾಹ್ನ ಮೈಸೂರಿಗೆ ಪಯಣ ಮಾಡಿಸಿದರು

ಸೇತುವೆ ಪ್ರಾರಂಭೋತ್ಸವ

ಚಾಮರಾಜನಗರ ತಾ॥ ಚಂಪಕವಾಡಿ ಬಳಿಯಲ್ಲಿ ಸುವರ್ಣಾವತಿ ನದಿಗೆ ನಿರ್ಮಿಸಿರುವ ಸೇತುವೆಯ ಪ್ರಾರಂಭೋತ್ಸವವನ್ನು ಶ್ರೀಮನ್ಮಹಾರಾಜರವರು [illegible] ೧೨ ೧೩ ನೇ ದಿನ ಬೆಳಿಗ್ಗೆ ೧೧ ಗಂಟೆಗೆ ನೆರವೇರಿಸುವರು

ಬಿಲ್ವವೃಕ್ಷದ ಗುಣವಿಶೇಷ

ಬಿಲ್ವವೃಕ್ಷವು ಸರ್ವದಾ ಆರೋಗ್ಯಕರವಾಗಿರುವುದು. ಹಲವು ಇದರ ನೆರಳಿನಲ್ಲಿ ಕುಳಿತುಕೊಳ್ಳುತ್ತ ಒಂದು ಕ್ಷಣ [illegible] ಅನೇಕ ರೋಗಗಳು ಗುಣವಾಗುತ್ತವೆ ಈ ವೃಕ್ಷದ ಸನ್ನಿಧಿಯಲ್ಲಿ ಮಂತ್ರ ಸ್ಮರಣೆ ಮಾಡಿದರೆ ಶೀಘ್ರ ಸಿದ್ಧಿಸುವುದು

ಸಾಮಾನ್ಯ ಗುಣಧರ್ಮ—ಪೌಷ್ಟಿಕ ಪಾಚಕ, ರಕ್ತಶುದ್ಧಿಕಾರಕ, ಪಿತ್ತನಾಶಕ, ತ್ರಿದೋಷ ಶಮನಕಾರಕ

ಅತಿಸಾರಕ್ಕೆ— ಬಿಲ್ವಫಲದ ತಿರುಳಿನಲ್ಲಿ ಬೆಲ್ಲ ತುಪ್ಪ ಕಲಸಿ ತಿನ್ನುವುದರಿಂದ ಗುಣವಾಗುವುದು ಉದರ ಶೂಲ, ಅಜೀರ್ಣ, ಮಲಬದ್ಧತೆ, ರಕ್ತಾತಿಸಾರ ಇವು ನಾಶವಾಗುವವು

ಹೊಟ್ಟೆಯಲ್ಲಿ ಕ್ರಿಮಿಯಾದರೆ—ಬಿಲ್ವಪತ್ರದ ರಸ, ಜೀರಿಗೆ ಅರೆದು ಕುಡಿಸುವುದು

ಸರ್ವ ವಿಕಾರಕ್ಕೆ—ಬಿಲ್ವಫಲದ ತಿರುಳು, ಮಾವಿನ ಗೊಟ್ಟದ ತಿರುಳು, ಜೇನು ಕಲಿಸಿ ಕೊಡುವುದು

ಅಪಥ್ಯ ರಸ [illegible] ಭಕ್ಷಣದಿಂದ ಬಾಯಾರಿದರೆ ಬಿಲ್ವಫಲದ ತಿರುಳು ಹಾಲಿಯ ಓಮಕಾಳು, ಪಟಿಕ ಇವುಗಳನ್ನು ಕುದಿಸಿದ ನೀರು [illegible]

ವಿಷಮಜ್ವರಕ್ಕೆ—ಬಿಲ್ವಪತ್ರೆ, ಬೆಲ್ಲ, ಶುಂಠಿ, ಅಮೃತಬಳ್ಳಿ ಪತ್ರೆ, ಇವನ್ನು ಅರೆದು ಗುಳಿಗೆಮಾಡಿ, ತಿನ್ನಿಸುವುದು

ಪ್ರಮೇಹಕ್ಕೆ—ಬಿಲ್ವರಸದಲ್ಲಿ ಒಟಿವಟಿಗೆಯ ಬೇರನ್ನು ತೇಯ್ದು ಜೀರಿಗೆ ಬೆರೆಸಿ ಕೊಡಲು, ಅಸಾಧ್ಯ ಪ್ರಮೇಹವಿದ್ದರೂ ಗುಣ ಹೊಂದುವುದು

ಮೂಲವ್ಯಾಧಿಗೆ—ಜೀರಿಗೆ ಗಾಳಿಚೆನ್ನಿ, ಸೂರಣ, ಸಕ್ಕರೆ, ಇವುಗಳನ್ನು ಬಿಲ್ವರಸದಲ್ಲಿ ತೆಗೆದುಕೊಂಡರೆ ಮಲಬದ್ಧತೆ, ಮೂಲವ್ಯಾಧಿ, ಮೂತ್ರವೇದನೆ, ಕಾಮಾಲೆ, ಇವು ನಾಶವಾಗುವುವು

ಬಿಲ್ವ ಮೂಲವನ್ನು ಬಾಣಂತಿರೋಗಕ್ಕೆ ಅತಿಗುಣಕಾರಿಯಾದ ದಶಮೂಲದಲ್ಲಿ ಸೇರಿಸಿರುವರು

ಬಿಲ್ವಮೂಲವನ್ನು ಹಾಲಿನಲ್ಲಿ ತೇಯ್ದು ಕುಡಿಯಲು ಶುಕ್ರವೃದ್ಧಿ ಬಲವೃದ್ಧಿಯಾಗುವುದು ಬಿಲ್ವಮೂಲವನ್ನು ನಿಂಬೆಹಣ್ಣಿನ ರಸದಲ್ಲಿ ತೇಯ್ದು ನಾಲಿಗೆಗೆ ಹಚ್ಚಲು ನಾಲಿಗೆ ರೋಗಗಳು ಹೋಗುವವು

ಬಿಲ್ವಮೂಲವನ್ನು ನೀರಲ್ಲಿ ತೇಯ್ದು ಕುಡಿಸಿದರೆ ಸರ್ಪವಿಷವು ಇಳಿಯುವುದು ಬಿಲ್ವಪತ್ರೆ, ಗಜಗ ಇವುಗಳ ಬೇರು ಕಷಾಯಮಾಡಿ ಸ್ನಾನಮಾಡಿದರೆ ಮೈಕೈ [illegible] ನಿವೃತ್ತಿಯಾಗುವುದು

ಬಿಲ್ವಪತ್ರೆ, ಓಮ, ಜೀರಿಗೆ ಉಳ್ಳೀಗಡ್ಡಿ ಇವುಗಳನ್ನು ಅರೆದು ಗುಳಿಗೆಮಾಡಿ ೧ ಗುಳಿಗೆಯನ್ನು ತಿನ್ನುತ್ತ ಹೋದರೆ ಶೀತಜ್ವರವು ನಿವೃತ್ತಿಯಾಗುವುದು

ಬಿಲ್ವದ ತೊಗಟೆಯ ಕಷಾಯವನ್ನು ಜೇನುತುಪ್ಪದಲ್ಲಿ ಕೊಟ್ಟರೆ ಕ್ರಿಮಿಜನ್ಯವಾಂತಿಯು ನಾಶವಾಗುವುದು

ಬಿಲ್ವಫಲ, ಪತ್ರಮೂಲ ಶಿವಕಶುಂಠಿ ಇವುಗಳ ಕಲ್ಕವನ್ನು ಅಕ್ಕಿನೀರಿನಲ್ಲಿ ಕೊಟ್ಟರೆ ಗ್ರಹಣಿ ರೋಗ, ಅಗ್ನಿಮಾಂದ್ಯ, ಅರುಚಿ, ಇವುಗಳು ನಾಶವಾಗುವವು

ದುಃಖವಾರ್ತೆ

ಜಗತ್ತಿನಲ್ಲಿ ದೇಹಧಾರಣೆ ಮಾಡಿದ ಪ್ರತಿಯೊಂದು ಪ್ರಾಣಿಯು ಎಂದಾದರೊಂದು ದಿನ ಮರಣ ಹೊಂದಲೇಬೇಕೆಂಬುದು ಪ್ರಕೃತಿನಿಯಮವೆಂಬುದು ಸರ್ವವಿದಿತವಾದ ಅಂಶವೇ ಆಗಿರುತ್ತದೆ ಈ ವಿಷಯವನ್ನೇ ಶ್ರುತಿಯು ಜಾತಸ್ಯ ಮರಣಂ ಧ್ರುವಂ ಎಂದು ಹೇಳುವದು ಇಷ್ಟು ರಾಯಚೂರು ಜಿಲ್ಲಾ ಕನಕಗಿರಿ ವಾ॥ ರಾ। ಶ್ರೀ ಸಂಗಪ್ಪ ಸಜ್ಜನರ ಈ ಮಹನೀಯರು ಇದೇ ಕಾರ್ತೀಕ ಶುದ್ಧ ೧೧ ಬುಧವಾರ ಮಧ್ಯಾಹ್ನ ೨ ಘಂಟೆಗೆ ಶಿವೈಕ್ಯರಾದರೆಂದು ತಿಳಿಸಲು ಅತ್ಯಂತ ವ್ಯಸನಪಡಿಸುತ್ತದೆ ಇವರು ಮಹಾಸಾಧಾರಣ ಕುಶಲ ಕೈಗಾರಿಕೆಯಲ್ಲಿ ಬಹು ನೈಪುಣ್ಯವನ್ನು ಹೊಂದಿದ್ದರು ಯಾವದಾದರೊಂದು ಪುರಾತನ ದೇವಾಲಯ ಮೊದಲಾದ ಕಟ್ಟಡದ್ದೊಂದು ಅಪರೂಪ ಶಿಲ್ಪವು ಇವರ ಕಣ್ಣಿಗೆ ಬಿದ್ದಿತೆಂದರೆ ಅದರಂತೆಯೇ ತಾವಾದರೂ ಒಂದು ನಕಲನ್ನು ತಯಾರಿಸುವವರೆಗೆ ಬಿಡುತ್ತಿದ್ದಿಲ್ಲ ಪ್ರತಿಯೊಂದು ಕೆಲಸವನ್ನು ಬೇಸರಿಲ್ಲದೇ ಮಾಡುತ್ತಿದ್ದರು ವೀರಶೈವ ಸಮಾಜದಲ್ಲಿ ಬಹು ಸದಾಚಾರ ಆಚಾರವಂತರೂ ಆಗಿದ್ದರಲ್ಲದೇ ಶ್ರೀ ಜಗದಾಚಾರ್ಯರಲ್ಲಿ ಅತ್ಯಂತ ಭಕ್ತಿತತ್ಪರರಾಗಿದ್ದರು ಇಂಥವರನ್ನು ಕಳೆದುಕೊಂಡದ್ದು ಕನಕಗಿರಿ ವೀರಶೈವರ ದುರ್ದೈವವೆಂದು ಹೇಳಬೇಕಾಗಿದೆ ಇವರು ೩ ತಿಂಗಳಿಂದ ರೋಗಪೀಡಿತರಾಗಿದ್ದರು ವೈದ್ಯೋಪಚಾರದಿಂದ ರೋಗವು ಗುಣವಾಗುವ ಲಕ್ಷಣ ಕಾಣಲಿಲ್ಲ ಅದಕ್ಕಾಗಿ ಮರಣಹೊಂದಲಿಕ್ಕೆ ೧೫ ದಿವಸ ಮುಂಚಿತವಾಗಿಯೇ ಕನಕಗಿರಿ ವೀರಶೈವ ಪ್ರಮುಖರ ಸಮಕ್ಷಮ ಮೃತ್ಯುಪತ್ರವನ್ನು ಬರೆದರು ಇವರಿಗೆ ಮಕ್ಕಳಿಲ್ಲದ ಕಾರಣ ತಮ್ಮ ಅಣ್ಣಂದಿರ ಕುಟುಂಬಕ್ಕೆ ಕೆಲವು ಆಸ್ತಿಯನ್ನು ಬಿಟ್ಟು ಉಳಿದ ನಾಲ್ಕು ಸಾವಿರ ರುಪಾಯಿ ಬೆಲೆಬಾಳುವ ಹೊಲ ಮನೆಗಳನ್ನು ಬೆಂಗಳೂರು ಮಹಾಂತಿನ ಮಠದ ಶ್ರೀ॥ ಷ॥ ಬ್ರ। ಗಂಗಾಧರಶಿವಾಚಾರ್ಯರಿಂದ ಸ್ಥಾಪಿಸಲ್ಪಟ್ಟಿರುವ ಶ್ರೀ ಮುಕ್ತಿಮಂದಿರ ಗುರುಕುಲಕ್ಕೆ ದಾನವಾಗಿ ಕೊಟ್ಟು ಪುಣ್ಯಭಾಗಿಗಳಾದ್ದಲ್ಲದೆ ಜನರಲ್ಲಿ ಶಾಶ್ವತವಾದ ಕೀರ್ತಿಯನ್ನು ಸಂಪಾದಿಸಿದರು ಇಷ್ಟು ಇವರ ಅಂತ್ಯಸಂಸ್ಕಾರಕ್ಕೆ ಪುರಪ್ರಮುಖರೂ ಸ್ವಮತ ಪರಮತೀಯರಾದ ಬಹು ಜನರು ಆಗಮಿಸಿದ್ದರು ಇಲ್ಲಿಯ ಸಜ್ಜನ ಬಂಧುಗಳಾದ ಶ್ರೀಮಾನ್ ಚನ್ನಬಸಪ್ಪನವರು ಬಹು ಕಷ್ಟಪಟ್ಟು ಸಹಾಯ ಮಾಡಿ ಕೀರ್ತಿಪಡೆದರು ಅಂತ್ಯೇಷ್ಟಿ ಸಂಸ್ಕಾರಕ್ಕೆ ಇಲ್ಲಿಯ ಹಿರೇಮಠದ ಶ್ರೀ। ಷ॥ ಬ್ರ। ಪಂಚಾಕ್ಷರ ಶಿವಾಚಾರ್ಯರು ದಯಮಾಡಿಸಿ ಶಾಸ್ತ್ರೀಯವಾಗಿ ಆಚರಿಸಲ್ಪಟ್ಟಿತು ಆ ಸಮಯಕ್ಕೆ ಶ್ರೀ ಪಂಚಾಚಾರ್ಯ ಪ್ರಭಾಪ್ರೋತ್ಸಾಹಕ್ಕಾಗಿ ೨ ರೂಪಾಯಿಗಳು ಸಮರ್ಪಿಸಲ್ಪಟ್ಟಿತು. ಮೃತರ ಆತ್ಮಕ್ಕೆ ಶ್ರೀ ಪರಶಿವನು ಚಿರಶಾಂತಿಯನ್ನು ಹಾಗೂ ಅವರ ಬಂಧುವರ್ಗಕ್ಕೆ ದುಃಖೋಪಶಮನವನ್ನು ಅನುಗ್ರಹಿಸಿ ಕಾಪಾಡಲೆಂದು ಆ ಜಗದ್ಗುರು ಪಂಚಾಚಾರ್ಯರಲ್ಲಿ ಅನನ್ಯ ಭಕ್ತಿಯಿಂದ ಬೇಡುತ್ತೇನೆ

ಓರ್ವ ದುಃಖಭಾಗಿ

ಪಂಚಾಚಾರ್ಯಪ್ರಭಾ.

೧೯೪೩ನೇ ಡಿಸಂಬರ್ [illegible] ಸೋಮವಾರ

ಧರ್ಮಮಾರ್ಗದಿಂದಲೇ ನಿಶ್ರೇಯಸ್ಸು

ಈಗಿನ ಕಾಲದ [illegible] ನೋಡಿದರೂ ಜನರೆಲ್ಲರ [illegible] ನಡೆಯುವುದರಲ್ಲಿ ಆಸಕ್ತರಾಗಿರುವರು. [illegible] ಅತ್ಯಂತ ಪ್ರಾಚೀನವಾದ [illegible] ವಿಚಾರಗಳು, ಇವುಗಳ ಪ್ರತಿಪಾದಕಗಳಾದ [illegible] ಇದ್ದರ ಸಾಕಷ್ಟು [illegible] ಬಂದಿರುತ್ತವೆ. ತಮ್ಮ ಧನಾರ್ಜನೆಗೂ, ಪ್ರಯೋಜನಕ್ಕೂ, ತಮ್ಮ ಸ್ವೇಚ್ಛಾವಿಹಾರಕ್ಕೂ ಯಾವುದು ಅಡ್ಡಿಮಾಡುವುದೋ ಅದೆಲ್ಲವೂ ಅಧರ್ಮವೆಂತಲೂ, ಯಾವುದು ಅನುಕೂಲವಾಗಿರುವುದೋ ಅದೆಲ್ಲವೂ ಧರ್ಮವೆಂತಲೂ ಹೇಳಲು ಹಿಂಜರಿಯುವುದಿಲ್ಲ. ಆದರೆ ಮಾನವನಿಗೆ ಪ್ರತಿಷ್ಠೆ ಧನಾರ್ಜನ ಸ್ವೇಚ್ಛಾವಿಹಾರ ಮುಂತಾದ ಗುಣಗಳೇ ಮುಖ್ಯಗುಣಗಳಲ್ಲ. ಇವು ಪ್ರತಿಯೊಬ್ಬ ಮನುಷ್ಯನಿಗೂ ತಾನಾಗಿ ಹುಟ್ಟುವ ಗುಣಗಳಲ್ಲವೆ? [illegible] ವಿದ ಕಡೆ ಹರಿಯುವುದು [illegible] ಸ್ವಾಭಾವಿಕಗುಣವಾಗಿರುವುದೇ? ಹಾಗೆ ವಿಷಯಲಂಪಟನಾದ ಮಾನವನ ಮನಸ್ಸನ್ನು [illegible] ಮಾಡಬೇಕು. [illegible] ಸ್ವತಂತ್ರತೆಯನ್ನು [illegible] ಬಯಸುತ್ತಿದ್ದ ರಾವಣ [illegible] ಈ ಕಾಲದಲ್ಲಿ ಇದ್ದಿದ್ದರೆ [illegible] ಶ್ರೇಷ್ಠನಾಗಿದ್ದರು. [illegible] ಮಾನವನ [illegible] ಧರ್ಮಮಾರ್ಗವನ್ನು ಬಿಟ್ಟು [illegible] ಶ್ರೀರಾಮಚಂದ್ರ [illegible] ಇವರೆಲ್ಲರನ್ನೂ ರಾಕ್ಷಸಾಂಶಸಂಭೂತರೆಂದೇ ಹೇಳಬೇಕಾಗುವದಲ್ಲ? ದೇವಾಂಶಸಂಭೂತರೆಂದು ಹೇಳಬಹುದಲ್ಲ? ಹಿಂದೆ ರಾವಣಾದಿ ಮಹಾ ರಾಕ್ಷಸರೂ ಬಹು ಪ್ರಚಂಡರಾಗಿಯೂ ಐಶ್ವರ್ಯವಂತರಾಗಿಯೂ ಸ್ವೇಚ್ಛಾವಿಹಾರಿಗಳಾಗಿಯೂ ಇದ್ದರು. ಅವರ ಹೆಸರನ್ನು ಕೇಳಿದಮಾತ್ರದಿಂದ ಪ್ರತಿಯೊಬ್ಬನೂ ಕೋಪದಿಂದ ತಪ್ತನಾಗಿ ಕೇಳುವುದರಿಂದ ಅವರಲ್ಲರೂ ದುಷ್ಟಪ್ರಶಸ್ತಿ ಕೊಳ್ಳುತ್ತಾರಲ್ಲದೆ ಸತ್ಪುರುಷರೆನಿಸಿಕೊಳ್ಳುವುದಿಲ್ಲ. ರಾಮಾದಿಗಳು ಬಹುಕಾಲದವರೆಗೆ ಹೊಟ್ಟೆಗೆ ಅನ್ನ ಕಾಣದೆ [illegible] ಕಾಡಿನಲ್ಲಿ ಅಲೆಯುತ್ತಿದ್ದರೂ ಚಕ್ರವರ್ತಿಪದವಿಯನ್ನನುಭವಿಸಿದ್ದರೂ ಅವರಲ್ಲರೂ ಮಹಾತ್ಮರೆನಿಸಿಕೊಂಡಿದ್ದು ತದಾರಭ್ಯ ಮುಂದೆ ಪ್ರಪಂಚವಿರುವವರೆಗೂ ಸ್ಮರಣೀಯರಲ್ಲಿ ಸೇರಿದ್ದಾರೆ. ಹೀಗೆ ರಾವಣಾದಿ ರಾಕ್ಷಸರ, ರಾಮಾದಿ ಮಹಾರಾಜರೂ ಪ್ರತಿಷ್ಠೆ ಐಶ್ವರ್ಯ ಸಾಮ್ರಾಜ್ಯ ಸ್ವೇಚ್ಛಾವಿಹಾರಿತ್ವಾದಿ ಗುಣಗಳಲ್ಲಿ ಸಮಾನರಾಗಿದ್ದರೂ ರಾವಣಾದಿಗಳು ಯಾವಾಗಲೂ ಅಧರ್ಮಮಾರ್ಗದಲ್ಲಿಯೇ ಇದ್ದ ಮೂಲದ ಅಪವಿತ್ರಾತ್ಮರೆಂದೂ, ಶ್ರೀರಾಮಚಂದ್ರಾದಿಗಳು ಕಷ್ಟದಲ್ಲಿಯೂ ಧರ್ಮಮಾರ್ಗವನ್ನು ಬಿಡದೆ ಇದ್ದದರಿಂದ ಪವಿತ್ರಾತ್ಮರೆಂದೂ ಪ್ರತಿಯೊಬ್ಬರೂ ಸ್ವಭಾವದಿಂದ ಅವರವರ ಗುಣಾಗುಣಗಾನವನ್ನು ಮಾಡುತ್ತಲೇ ಬಂದಿದ್ದಾರೆ. ಇದರಿಂದ ಮನುಷ್ಯನು ಎಷ್ಟು ಖ್ಯಾತಿಯನ್ನು ಪಡೆಯಬೇಕಾಗಿದ್ದರೂ, ದ್ರವ್ಯಾರ್ಜನೆ ಮಾಡಬೇಕಾಗಿದ್ದರೂ, ಸ್ವಾತಂತ್ರ್ಯವನ್ನು ಗಳಿಸಬೇಕಾಗಿದ್ದರೂ ಧರ್ಮರಹಸ್ಯವನ್ನು ಅನುಸರಿಸಿರಬೇಕಲ್ಲದೆ ಧರ್ಮಮಾರ್ಗವನ್ನತಿಕ್ರಮಿಸಿರಲಾಗದೆಂದು ಸ್ಪಷ್ಟವಾಗುತ್ತದೆ.

ಈಗಿನ ನೂತನ ವಾತಾವರಣದಲ್ಲಿ ಧರ್ಮವೆಂಬುದು ಗೋಸುಂಬೆಯಂತೆ ನಾನಾರೂಪವನ್ನು ಹೊಂದುತ್ತ ಬರುತ್ತಲಿದೆ. ಹೀಗೆ ನಾನಾರೂಪವನ್ನು ಹೊಂದುವು[illegible] ಪಾಶ್ಚಾತ್ಯಸಂಸ್ಕೃತಿಯೇ ಕಾರಣವಾಗಿದೆ. [illegible] ನಾನಾಕಾರವನ್ನು [illegible] ಜಗದಾದಿಯಲ್ಲಿ ಪರಮೇಶ್ವರನು ಜಗತ್ತನ್ನು ಸೃಷ್ಟಿಸಿ ಆ ಜಗದುದ್ಧಾರಕ್ಕಾಗಿ ವೇದಗಳನ್ನು ಪ್ರಕಟಿಸಿದನು. ವೇದಗಳಲ್ಲಿ [illegible] ಧರ್ಮವೆಂದು ಯಾವುದ[illegible] ವೇದವು ಹೇಳಿರುವುದೋ ಅದೇ ಧರ್ಮವೆಂದು ಶ್ರೀ ಪಂಚಾಚಾರ್ಯರುಗಳು, ಮಹರ್ಷಿಗಳು ಎಲ್ಲರೂ 'ವೇದೇನ ಪ್ರಯೋಜನಮುದ್ದಿಶ್ಯ ವಿಧೀಯಮಾನೋ ಧರ್ಮಃ' ಎಂದು ಏಕಮುಖದಿಂದ ಒಪ್ಪಿಕೊಂಡಿರುವರು. ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನನ್ನು ಸಂಬೋಧಿಸಿ—

ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ ಕಾರ್ಯಾಕಾರ್ಯವ್ಯವಸ್ಥಿತೌ |
ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮ ಕರ್ತುಮಿಹಾರ್ಹಸಿ ||

ಯಾವ ಕಾರ್ಯವನ್ನು ಮಾಡಬೇಕೋ ಯಾವ ಕಾರ್ಯವನ್ನು ಮಾಡಬಾರದೋ ಎಂಬ ವ್ಯವಸ್ಥೆಯನ್ನು ವೇದಾಧಾರದಿಂದಲೇ ಮಾಡಿಕೊಳ್ಳಬೇಕು. ಯಾವ ಕರ್ಮವು ವೇದದಲ್ಲಿ ವಿಧಿಸಲ್ಪಟ್ಟಿರುತ್ತದೆಯೋ ಅಂಥ ಕರ್ಮವನ್ನೇ ಮಾಡಬೇಕು. ವೇದದಲ್ಲಿ ವಿಧಿಸಲ್ಪಡದಿರುವುದನ್ನು ಮಾಡಬಾರದೆಂದು ಹೇಳುತ್ತಾನೆ. ಆದುದರಿಂದ ಧರ್ಮಾಧರ್ಮನಿರ್ಣಯವು ವೇದದಿಂದಲೂ ಆ ವೇದಾನುಸಾರಿಗಳಾದ ಸ್ಮೃತ್ಯಾದಿಗಳಿಂದಲೂ ಆಗಬೇಕಾಗಿದೆ. ಯುಕ್ತವಾದ ಕಾಲಾನುಗುಣವಾಗಿ ತನ್ನ ಮನಸ್ಸಿಗೆ ಬಂದ ಹಾಗೆ ಧರ್ಮನಿರ್ಣಯ ಮಾಡಿಕೊಳ್ಳಬಾರದು.

ಪ್ರಕೃತದಲ್ಲಿ ಅನೇಕರು ಒಂದೊಂದು ರಾಜ್ಯಕಾರ್ಯದಲ್ಲಿ, ಬೇರೆ ಇತರ ಕಾರ್ಯಗಳಲ್ಲಿಯೋ ಹೊರಟು ತಮ್ಮ ತಪ್ಪಿನಿಂದ ಕೊನೆಗಾಣಿಸಲು ಆಗದ ಯಾವುದಾವುದೋ ಅಸಂಬದ್ಧ ಕಾರ್ಯಗಳನ್ನು ಮನಸ್ಸಿನಲ್ಲಿ ಊಹಿಸಿಕೊಂಡು, ಧರ್ಮವನ್ನಿವುಗಳಿಗೆ ಅನ್ವಯಿಸಲು ಹೊರಡುತ್ತಾರೆ. ಇದರಿಂದ ಧರ್ಮದ [illegible] ತಿಳಿಯದಿರುವ ಜನಗಳಿಗೂ ಇವರಿಗೂ ಯಾದವೀಕಲಹಕ್ಕೆ ಪ್ರಾರಂಭವಾಗುವುದು.

ಏಕೆಂದರೆ—ವೇದಶಾಸ್ತ್ರಪುರಾಣಗಳನ್ನು ತಿಳಿದ ಪ್ರಾಚೀನಸಂಪ್ರದಾಯದ ಗುರುಜನಗಳು ಪ್ರಾಚೀನಕಾಲದಿಂದ ರೂಢವಾಗಿ ಬಂದ ಧರ್ಮಮರ್ಮಗಳ ಸಿದ್ಧಾಂತವನ್ನು ವಿಪರೀತವ್ಯಾಖ್ಯಾನಕ್ಕೆ ಒಪ್ಪುವವರಲ್ಲ. [illegible] ಪರೋತ್ಕರ್ಷಿತನವಾದುದಕ್ಕೆ, ಪ್ರಾಣಬಿಡುವುದೂ ಒಳ್ಳೆಯದು ಎಂದು, ಬಗೆದ ಸ್ವಾತಂತ್ರ್ಯವಾದರೆಯಾಗಲಿ ವೇದಬಾಹ್ಯದಿಂದಾಗಲಿ, ಸ್ವಾಚ್ಛಂದ್ಯವಾಗಲಿ ಎಲ್ಲವನ್ನೂ ಸನಾತನಧರ್ಮದವರು ಬಹು [illegible] ದಿಂದ ಸಾಧಿಸಲು ಅಪೇಕ್ಷಿಸುತ್ತಾರೆ. ಆದರೆ, ಸನಾತನ ಧರ್ಮಕ್ಕೆ ವಿರೋಧವಾದ ಸ್ವಾತಂತ್ರ್ಯವನ್ನಾಗಲಿ ದೇಶಾಭ್ಯುದಯವನ್ನಾಗಲಿ ಅಪೇಕ್ಷಿಸುವವರಲ್ಲ. ಧರ್ಮಾಪಾಲನೆಯ ಮೇಲೆ ಬಂದ ಸ್ವಾತಂತ್ರ್ಯ ದಿಗಿಲ್ಲ ಆತ್ಮವಿಲ್ಲದ ಶರೀರದ (ಹೆಣದ) ಅಲಂಕಾರವಾದಂತೆ ವ್ಯರ್ಥವಾಗುವುದು. ಗುರುದೇವ [illegible] ಭಕ್ತಿ ಮೊದಲಾದ ಆಸ್ತಿಕ್ಯಧರ್ಮದಿಂದೊಡಗೂಡಿದ ಐಹಿಕಸೌಖ್ಯವನ್ನು ಅನುಭವಿಸುತ್ತಿರುವುದೇ ಸನಾತನಿಗಳ ಕರ್ತವ್ಯವು. ಧರ್ಮಸಾಧ್ಯವಾದ ಆಧ್ಯಾತ್ಮಸೌಖ್ಯವನ್ನೇ ಮರೆತು ಕೇವಲ ಬಾಹ್ಯಾಡಂಬರಸೌಖ್ಯದಲ್ಲಿ ಮಗ್ನನಾದವನು 'ಪ್ರತ್ಯಕ್ಷಮೇಕಂ ಚಾರ್ವಾಕಾಃ" ಎಂಬ ಪ್ರಮಾಣದಂತೆ ಚಾರ್ವಾಕನೆನಿಸುವನು. ಧರ್ಮದೇವತೆಯನ್ನು ತಳ್ಳಿ ವಿವೇಕಿಯಂತೆ ಸ್ತ್ರೀಯರಾಗಲಿ ಪುರುಷರಾಗಲಿ ಎಲ್ಲರೂ ಎಲ್ಲಾ ಭಾಗದಲ್ಲಿ ಸ್ವಾತಂತ್ರ್ಯವನ್ನು ಬಯಸುತ್ತ ಬಂದಲ್ಲಿ ಅದರಿಂದಾಗುವ ಅನರ್ಥಪರಂಪರೆಯು ಎಷ್ಟೆಂಬುದು ಎಲ್ಲರಿಗೂ ಪ್ರತ್ಯಕ್ಷವಾಗಿ ತಿಳಿಯದ ಹೋಗುವುದಿಲ್ಲ. ಆದ್ದರಿಂದ ಯಾರೂ ಧರ್ಮವಿರುದ್ಧಕಾರ್ಯದಲ್ಲಿ ಕೈಹಾಕಬಾರದೆಂದು ಬಯಸುತ್ತೇವೆ. ಅನಾದಿಕಾಲದಿಂದ ವಜ್ರಲೇಪದಂತೆ ಗಟ್ಟಿಗೊಂಡಿರುವ ಸನಾತನಿಗಳ ಹೃದಯವನ್ನು ಯಾರೂ ವಿನಿಮಯಗೊಳಿಸಲಾರರು. ಹಾಗೆ ವಿನಿಮಯಗೊಳಿಸುವುದು ಮಹಾಪಾಪಕರವಾಗಿದೆ.

ವಿಮಾನ ಉರುಳಿತು

ಅಸ್ಸಾಮಿನಲ್ಲಿ ಅಮೆರಿಕನ್ ವಿಮಾನವೊಂದು ಮುರಿದು ಬಿದ್ದುದರ ಫಲವಾಗಿ ೧೨ ಮಂದಿ ಪ್ರಾಣ ಬಿಟ್ಟರೆಂದು ತಿಳಿದುಬಂದಿದೆ

ಯುದ್ಧವಾರ್ತೆ.

ಎವರ್‌ಡರ್ ಮೇಲೆ ಬಾಂಬು

ಅಮೆರಿಕದ ಬಲಯುತ ಬಾಂಬರುಗಳು ಜರ್ಮನಿಯ ಎವರ್‌ಡರ್ ಮೂಲದ ಮೇಲೆ ಮುತ್ತಿಗೆ ನಡೆಸಿದರು ೧೩೮ ಜರ್ಮನ್ ವಿಮಾನಗಳನ್ನು ನಾಶ ಮಾಡಲಾಯಿತು ೨೦ ಅಮೆರಿಕನ್ ವಿಮಾನಗಳು ಹಿಂತಿರುಗಲಿಲ್ಲವೆಂದು ಹೇಳಲಾಗಿದೆ

ತುರ್ಕಿಯಲ್ಲಿ ಘರ್ಷಣ?

ತುರ್ಕಿ ಬಲ್ಗೇರಿಯಾ ಗಡಿಯನ್ನು ಮುಚ್ಚಲಾಗಿದೆ ತುರ್ಕಿ ಮತ್ತು ಜರ್ಮನ್ ಸೈನಿಕರಿಗೆ ಘರ್ಷಣವಾದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ ಎರಡು ಕಡೆಯೂ ಹೆಚ್ಚು ನಷ್ಟವಾಯಿತಂತೆ

ಅಸ್ಸಾಂ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ

೧೦ ನೇ ತಾ। ದಿನ ಜಪಾನ್ ಬಾಂಬರುಗಳು ಈಶಾನ್ಯ ಅಸ್ಸಾಮಿನಲ್ಲಿರುವ ಒಂದು ಅಮೆರಿಕನ್ ವಿಮಾನ ನಿಲ್ದಾಣದ ಮೇಲೆ ಮುತ್ತಿಗೆ ನಡೆಸಿದವು ಆದ ನಷ್ಟ ತೀರ ಅಲ್ಪ ಎರಡು ಜಪಾನ್ ಬಾಂಬರುಗಳನ್ನೂ ೨ ಫೈಟರುಗಳನ್ನೂ ಕೆಡವಲಾಯಿತೆಂದು ಪ್ರಕಟವಾಗಿದೆ

ಬಾಲ್ಕನ್ಸ್‌ಗೆ ಹೊಸ ನಾಜಿ ಪಡೆಗಳು ಬರುತ್ತಿವೆ

'ಬಲಯುತ ಜರ್ಮನ್ ಪಡೆಗಳು ಹೊಸದಾಗಿ ಬಾಲ್ಕನ್ಸ್ ಪ್ರದೇಶಕ್ಕೆ ತಲಪಿವೆ ತಕ್ಷಣ ಅವು ಹೊಡೆದಾಟಕ್ಕೆ ಇಳಿಯುವುದು ಬಾಲ್ಕನ್ಸ್‌ನಲ್ಲಿ ಪ್ರತಿಭಟನೆಯನ್ನು ಸಂಪೂರ್ಣವಾಗಿ ಅಡಗಿಸುವುದೇ ಇದರ ಉದ್ದಿಶ್ಯ' ಯೆಂಬುದಾಗಿ ಜರ್ಮನ್ ವಾರ್ತಾ ಸಂಸ್ಥೆ ತಿಳಿಸಿದೆ

ಎಂಟನೇ ಸೇನೆಯ ಮುಂದೋಟ

ಎಂಟನೇ ಸೇನೆಯ ರಂಗದಲ್ಲಿ ಶತ್ರು ಪ್ರತಿಭಟನೆ ಜೋರಾಗಿದ್ದರೂ ಮಿತ್ರಯೋಧರು ಮುಂದೆ ನುಗ್ಗುತ್ತಲೇ ಇದ್ದಾರೆ ಸಾನ್‌ಲಿಯೋನಾರ್ಡೋ ಮಿತ್ರರ ವಶವಾಯಿತು ಈಗ ಆರ್ಟೋನಾ ದಕ್ಷಿಣದಲ್ಲಿ ಉಗ್ರ ಕದನ ನಡೆಯುತ್ತಿದೆ ಐದನೇ ಸೇನಯ ರಂಗದಲ್ಲಿ ಮಿತ್ರ ಸೈನಿಕರು ತಮ್ಮ ಸ್ಥಾನವನ್ನು ಭದ್ರಪಡಿಸಿಕೊಂಡರು ಐದನೆ ಸೇನೆಯ ರಂಗದಲ್ಲಿ ಇಟಲಿ ಸೈನಿಕರು ಜರ್ಮನರಿಗೆ ವಿರುದ್ಧವಾಗಿ ಹೊಡೆದಾಡುತ್ತಿದ್ದಾರೆ

ಬೇಗನೆ ತುರ್ಕಿಯು ಸಂಗ್ರಾಮಕ್ಕಿಳಿದೀತು

ಅಮೆರಿಕದ ನ್ಯೂಯಾರ್ಕ್ ಟೈಮ್ಸ್ ಸುದ್ದಿಗಾರರಾದ ಶ್ರೀ ರೇ ಬ್ರಾಕ್‌ರವರು ಬ್ರಾಡ್‌ಕ್ಯಾಸ್ಟ್ ಭಾಷಣ ಮಾಡುತ್ತ ಇನ್ನು ಕೆಲವು ದಿನಗಳೊಳಗಾಗಿ ತುರ್ಕಿಯು ಸಂಗ್ರಾಮ ಘೋಷಣೆ ಮಾಡಲು ಸಿದ್ಧವಾಗುವುದು ಶರದೃತುವಿನ ಆರಂಭದಲ್ಲಿ ತುರ್ಕಿ ಸಂಗ್ರಾಮಕ್ಕೆ ಧುಮುಕೀತೆಂದು ನಾ ಭಾವಿಸುತ್ತೇನೆ ಎಂಬುದಾಗಿ ತಿಳಿಸಿದರು ಇತ್ತೀಚೆಗೆ ತುರ್ಕಿಯಿಂದ ಹಿಂತಿರುಗಿದ ಶ್ರೀ ಬ್ರಾಕ್‌ರವರು ತಮಗೆ ಈ ಸುದ್ದಿ ತುಂಬಾ ರಹಸ್ಯವಾದ ಕಡೆಗಳಿಂದ ತಿಳಿದುಬಂತೆಂದು ಹೇಳಿದ್ದಾರೆ ಇನ್ನು ಕೆಲವು ದಿನಗಳೊಳಗಾಗಿ ತುರ್ಕಿಯ ಸೇನಾನಾಯಕತ್ವದಲ್ಲಿ ಭಾರಿ ಬದಲಾವಣೆಯೊಂದು ಆಗಬಹುದು ಯುದ್ಧಕ್ಕಿಂತ ಮುಂಚೆ ಸೈನ್ಯಾಧಿಕಾರಿಗಳಾಗಿದ್ದ ಇಬ್ಬರು ತರುಣರು ಈಗ ಅಧಿಕಾರಕ್ಕೆ ಬರಬಹುದು ಎಂದು ಊಹಿಸಲಾಗಿದೆ

ರಷ್ಯಾ—ಜೆಕ್ ಒಪ್ಪಂದ

ರಷ್ಯಕ್ಕೂ ಜೆಕೋಸ್ಲಾವೇಕಿಯಕ್ಕೂ ಒಂದು ಒಪ್ಪಂದವಾಯಿತು. ಅದರ ಕರಾರುಗಳಿವು — [illegible] ಗಿದ ಮೇಲೆ ಎರಡೂ ದೇಶಗಳು ಪರಸ್ಪರ ಮೈತ್ರಿ ಹೊಂದಿರತಕ್ಕದ್ದು. ಜರ್ಮನಿಗೆ ವಿರುದ್ಧವಾಗಿ ಈಗ ನಡೆಯುತ್ತಿರುವ ಕದನದಲ್ಲಿ ಎರಡೂ ದೇಶಗಳೂ ಸರ್ವ ವಿಧದಲ್ಲೂ ಸಹಕರಿಸಿ ವರ್ತಿಸಬೇಕು. ಈ ಯುದ್ಧವಾಗಿಯುವವರೆಗೆ ಈ ಎರಡು ದೇಶಗಳು ಹಿಟ್ಲರ್ ಸರಕಾರದೊಡನೆ ಇದಾವ ದುಷ್ಟನೀತಿಯನ್ನು ಸಂಪೂರ್ಣವಾಗಿ ತ್ಯಜಿಸದಿರುವ ಯಾವುದೇ ಜರ್ಮನ್ ಸರಕಾರದೊಡನೆ ಸಂಧಾನ ನಡೆಸಬಾರದು, ಜರ್ಮನಿಯೊಂದಿಗೆ ಸಂಧಾನ ನಡೆಸಿ ಒಪ್ಪಂದ ಮಾಡಿಕೊಳ್ಳಬೇಕಾಗಿದ್ದರೆ ಈ ಎರಡು ದೇಶಗಳೂ ಪರಸ್ಪರ ಒಪ್ಪಬೇಕು.

ರಷ್ಯನರ ಹೊಸ ಮುತ್ತಿಗೆ

ನೀಸರ್ [illegible] ಕಿರೋವೋಗ್ರಾಡ್ ಕ್ಷೇತ್ರದಲ್ಲಿ ರಷ್ಯನರು ಹೊಸ ಮುತ್ತಿಗೆ ಆರಂಭಿಸಿದ್ದಾರೆ. [illegible] ಜ್ನಾಮೆನ್ಕಾ ಎಂಬಲ್ಲಿ ರಷ್ಯನರು ಟ್ಯಾಂಕ್ ಮತ್ತು ಕಾಲಾಳು ಪಡೆಗಳೊಂದಿಗೆ ಮುತ್ತಿಗೆಯಾರಂಭಿಸಿದ್ದಾರೆ. ಚರ್ಕಾಸಿ ಮತ್ತು ಕ್ರೆಮೆಂಚುಗ್‌ಗಳಿಂದ ಮುಂದೆ ನುಗ್ಗುತ್ತಾ ನೀಸರ್ ಬಳಿ ಸಂಧಿಸಲು ಯತ್ನಿಸುತ್ತಿದ್ದ ಎರಡು ರಷ್ಯನ್ ಪಡೆಗಳು ಈಗಲೇ ಸಂಧಿಸಿವೆ. ಕೀವ್ ಪಶ್ಚಿಮದಲ್ಲಿ ೬ ವಾರದಿಂದ ನಡೆಯುತ್ತಿರುವ ಕದನ ಈಗ ತುಂಬಾ ಜೋರಾಗಿದೆ. ಉಕ್ರೇನಿನ ರಾಜಧಾನಿಗೆ ನುಗ್ಗಲು ಜರ್ಮನರು ಹೊಸ ಕದನ ವಿಧಾನವನ್ನು ಅವಲಂಬಿಸಿದ್ದಾರೆ. ಲೆನಿನ್‌ಗ್ರಾಡ್ ರಂಗದಲ್ಲಿ ರಷ್ಯನರು ಚಳಿಗಾಲದ ಮುಖ್ಯ ಕದನವನ್ನು ಆರಂಭಿಸಿದ್ದಾರೆಂದು ಜರ್ಮನ್ ಮಿಲಿಟರಿ ಕ್ಷೇತ್ರಗಳಲ್ಲಿ ನಂಬಲಾಗಿದೆ.

ಬ್ರಿಟಿಷ್ ಕಾರ್ಮಿಕರ ಬೇಡಿಕೆ

[illegible] ಉಗ್ರ [illegible]ಗಳನ್ನು ಬ್ರಿಟಿಷ್ ಸರ್ಕಾರ ಬಿಡಿಸದೇ ಹೋದುದರಿಂದ ಇಲ್ಲಿನ ಜನರಲ್ಲಿ ಅಸಮಾಧಾನವು ಹೆಚ್ಚುತ್ತಿದ್ದು ಒಮ್ಮೊಮ್ಮೆ ರಾಜಕೀಯ [illegible]ಯಾಗಿ ಪರಿಣಮಿಸುತ್ತಿದೆ. 'ರೇನಾಲ್ಡ್ಸ್ ನ್ಯೂಸ್' ಪತ್ರಿಕೆಯ ರಾಜಕೀಯ ಸುದ್ದಿಗಾರರು ಹೀಗೆ ಬರೆದಿದ್ದಾರೆ. ಬ್ರಿಟಿಷ್ ನೀತಿಯನ್ನು ಸಂಪೂರ್ಣವಾಗಿ ಮಾರ್ಪಡಿಸುವುದಕ್ಕೆ ಪ್ರಥಮ ಕಾರ್ಯಕ್ರಮವಾಗಿ ಭಾರತದ ಕಾರ್ಯದರ್ಶಿಗಳಾದ ಶ್ರೀ ಅಮೆರಿಯವರನ್ನು ಮನೆಗೆ ಕಳಿಸಬೇಕೆಂದು "ಟ್ರಾನ್ಸ್‌ಪೋರ್ಟ್ ಮತ್ತು ಜನರಲ್ ವರ್ಕರ್ಸ್ ಯೂನಿಯನ್" ಸಂಸ್ಥೆಯ ಕಾರ್ಯನಿರ್ವಾಹಕ ಮಂಡಲಿಯವರು ನಿರ್ಧರಿಸಿದ ಬೇಡಿಕೆಯನ್ನು ಮುಂದಿಟ್ಟಿದ್ದಾರೆ. [illegible] ಟ್ರೇಡ್ ಯೂನಿಯನ್‌ಗಳ [illegible] ಇದೇ ಮಾದರಿಯ ನಿರ್ಣಯವನ್ನು ಮಹಾ ಪ್ರಧಾನ ಚರ್ಚಿಲ್ಲರಿಗೆ ಕಳಿಸಿಕೊಡಲಾಗಿದೆ. ಇದು ತುಂಬಾ ಬಲವುಳ್ಳ ಸಂಸ್ಥೆಯಾದ್ದರಿಂದ ಇದರ ನಿರ್ಣಯವನ್ನು 'ನ್ಯಾಷನಲ್ ಕೌನ್ಸಿಲ್ ಆಫ್ ಲೇಬರ್' ನವರೂ ಮತ್ತು ಟ್ರೇಡ್ ಯೂನಿಯನ್ ಕಾಂಗ್ರೆಸ್ಸಿನ ಜನರಲ್ ಕೌನ್ಸಿಲ್‌ನವರೂ ಬೆಂಬಲಿಸದೇ ಇರಲಾರರು ಎಂದು ಹೇಳಲಾಗಿದೆ.

ಪೆಸಿಫಿಕ್‌ನಲ್ಲಿ ಉಗ್ರ ದಂಡಯಾತ್ರೆ ನಡೆಸುವ ಯೋಚನೆ

ಅಮೆರಿಕದ ನೌಕಾ ಶಾಖೆಯ ಕಾರ್ಯದರ್ಶಿ ಕ| ಫ್ರಾಂಕ್ ನಾಕ್ಸ್‌ರವರು ಈಗಿನ ಯುದ್ಧ ವಿಷಯವಾಗಿ ಮಾತನಾಡುತ್ತ "ಒಂದು ದೊಡ್ಡ ಕೆಲಸವನ್ನಾರಂಭಿಸಿ, ಅದನ್ನು ಮುಗಿಸಲು ಬೇಕಾದ ಸಲಕರಣೆಗಳು ಮತ್ತು ಶರವೇಗದ ಜಲ ಬಲವನ್ನು ನಾವು ಪಡೆದಿದ್ದೇವೆ. ಯೋಜನೆಗಳ ಸಿದ್ಧತೆ ನಡೆಯುತ್ತಿದೆ. ಜಪಾನ್ ನೌಕಾಬಲದ ಮುಖ್ಯ ಭಾಗಗಳನ್ನು ಸ್ವಲ್ಪ ಸ್ವಲ್ಪವಾಗಿ ನಾಶ ಮಾಡಿದ್ದೇವೆ, ಪೆಸಿಫಿಕ್‌ನಲ್ಲಿ ನಾವು ದಿನೇ ದಿನೇ ಬಲವಂತರಾಗುತ್ತಿದ್ದೇವೆ. ಜಪಾನಿಗೆ ಸೇರಿದ ಪ್ರದೇಶದ ಹೊರ ವಲಯಗಳಲ್ಲಿ ಈಗ ಜಪಾನ್ [illegible] ಹಡಗುಗಳಾಗಲಿ ಯೋಧರು ತುಂಬಿದ ನೌಕೆಗಳಾಗಲಿ ಕಾಣ ಬರುತ್ತಿಲ್ಲ. ಅವರು ಬಾರ್ಜ್‌ಗಳಲ್ಲಿ ಸೈನಿಕರನ್ನೂ ವಸ್ತುಗಳನ್ನೂ ಸಾಗಿಸಲು [illegible] ಇಷ್ಟರಲ್ಲಿ [illegible] ಒಂದು [illegible] ಸಾಮಾನು ಸಾಗಿಸುವ ಹಡಗುಗಳನ್ನು ನಾಶ ಮಾಡಲಾಗಿದೆ. ನಮ್ಮ ಒಂದು [illegible] ಜಪಾನರ [illegible] ಹೋಗುತ್ತಿದೆ. [illegible] ದಂಡಯಾತ್ರೆ ನಡೆಸಲು [illegible] ಜನಾಂಗದ [illegible] ನಾವು ಹೋರಾಡಲಿದ್ದೇವೆ" ಎಂದು ಹೇಳಿದ್ದಾರೆ.

ಇಟೆಲಿಯಲ್ಲಿ ಮಿತ್ರ ನೌಕೆಗೆ ಭಾರಿ ನಷ್ಟ

ಡಿಸಂಬರ್ ೨ನೇ ತಾ|| ಇಟೆಲಿಯ ಬಾರಿ ಬಂದರಿನಲ್ಲಿ ತಂಗಿದ್ದ ಅಮೆರಿಕದ [illegible] ಜರ್ಮನ್ ವಿಮಾನಗಳು [illegible] ಮಿತ್ರನೌಕೆಗಳಿಗೆ ವಿಶೇಷ ಕೆಡುಕಾಯಿತು. ಜರ್ಮನರ [illegible] ಮಿತ್ರ ನೌಕೆ [illegible] ವಿನಾಶವಾಯಿತು. [illegible] ಮಿತ್ರರ [illegible] ಎರಡು [illegible] ಮಿತ್ರ ನೌಕೆಗಳ [illegible] ನಷ್ಟವು [illegible] ನೌಕೆಗಳು [illegible] ಕಡಿಮೆಯಾಗಿರಬೇಕು [illegible] ನಿರ್ದಿಷ್ಟವಾಗಿ ಗೊತ್ತಾಗಿಲ್ಲ ಎಂದು ಅಮೆರಿಕದ ನೌಕಾ ಕಾರ್ಯದರ್ಶಿಗಳು ಹೇಳಿದರು.

ರಷ್ಯನರಿಗೆ ಭಾರಿ ವಿಜಯ

[illegible] ಸ್ಟಾಲಿನ್‌ರವರು ಪ್ರಕಟನ ಹೊರಡಿಸಿ [illegible] ಭಾರಿ ಜಯಗಳಿಸುತ್ತಿರುವುದು [illegible] ಶುಕ್ರವಾರ [illegible] ಕೀವ್ [illegible] ಕೊರೋಸ್ಟೆನ್ [illegible] ರಷ್ಯದ ಮಿಲಿಟರಿ ನಾಯಕರಲ್ಲಿ [illegible] ಕ್ರೆಮೆಂಚುಗ್‌ಗಳನ್ನು ವಶಪಡಿಸಿದವರು ಇವರ [illegible] ಜರ್ಮನ್ [illegible] ಇದುವರೆಗೆ ಸೂಚಿಸಿದ ಕೀವ್ [illegible] ನಡೆಯುತ್ತಿರುವ ಕದನದ ಕರ್ತೃ [illegible] ಸೂಚನೆಯನ್ನು ಕಾಣುತ್ತಿದ್ದಾರೆ. ಜರ್ಮನರು ತಮ್ಮ ನವ ಶಕ್ತಿಯನ್ನೂ ಉಪಯೋಗಿಸಬಹುದೆಂದು ಕಾಣುತ್ತದೆ. [illegible] ತಮ್ಮ ಸೇನೆಯನ್ನು ಮತ್ತೆ ಕೂಡಿಸುತ್ತಿದ್ದಾರೆ. ಕೋಟೆಗಳನ್ನು ಕಟ್ಟಲು [illegible] ಕರೆಸಲು [illegible] ರಷ್ಯನರಿಗೆ ಕಾಲಾವಕಾಶ ದೊರಕಿದಂತಾಗಿದೆ. ಮುಂದಿನ [illegible] ರಷ್ಯನರೇ ಪ್ರತಿಮುತ್ತಿಗೆ ನಡೆಸುವರೇ ಎಂಬುದನ್ನು ನೋಡಬೇಕಾಗಿದೆ. ನೀಸರ್ ತಿರುವಿನ ಪರಿಸ್ಥಿತಿ ಜರ್ಮನರಿಗೆ ಸ್ವಲ್ಪವೂ ಉತ್ತಮ(?)ವಾಗಿಲ್ಲವೆಂದು ಹೇಳಲಾಗಿದೆ.

ಭಾರತದ ಸಿದ್ಧತೆ ಕುರಿತು ದಂಡನಾಯಕರ ಹೇಳಿಕೆ

'ಭಾರತದ ಗಡಿಯಲ್ಲಿ ನಾವು ನಮ್ಮ ಸ್ಥಾನಗಳನ್ನು ಬಲಪಡಿಸಿಕೊಂಡಿದ್ದೇವೆ. ಮುತ್ತಿಗೆ ನಡೆಸಲೋಸುಗ ಬಲಮೂಲಗಳನ್ನು ಕಟ್ಟಿದ್ದೇವೆ. ಮಾರ್ಗಸೌಕರ್ಯಗಳನ್ನು ಮಾಡಿಕೊಂಡಿದ್ದೇವೆ. ಈಗ ೧೮ ತಿಂಗಳ ಹಿಂದೆ ಅಸಾಧ್ಯವೆನಿಸಿದ್ದಷ್ಟು ಮಟ್ಟಿನ ಸಿದ್ಧತೆಗಳು ಇಂದು ನಡೆದಿವೆ. ಸ್ಥಾನಗಳನ್ನು ಬಲಪಡಿಸುವುದು ಮತ್ತು ಸಿದ್ಧತೆ ಮಾಡಿಕೊಳ್ಳುವುದು ಇನ್ನೂ ಮುಗಿದಿಲ್ಲ. ನಮ್ಮ ಪೂರ್ಣ ಶಕ್ತಿ ಸಾಮರ್ಥ್ಯವನ್ನು ವಿನಿಯೋಗಿಸಿ ಆ ಕಾರ್ಯವನ್ನು ಮುಂದುವರಿಸುತ್ತಿದ್ದೇವೆ. ಕಾಡು ಪ್ರದೇಶ, ರೋಗಗಳಿಂದ [illegible] ಆದರೆ [illegible] ಸಾಧ್ಯ [illegible] ನಾವು ಇವೇ [illegible] ಭಾರತ [illegible] ನಾವು ವಿಮಾನ [illegible] ಇದು ಅದ್ಭುತ ಕಾರ್ಯವೆಂದು [illegible] ಭಾರತದ [illegible] ಕದನದಿಂದ ನಮ್ಮ [illegible] ಒಂದು [illegible] ರಕ್ಷಣೆ [illegible] ಬಲಪಡಿಸುತ್ತಿದ್ದೇವೆ. [illegible] ನಮ್ಮ [illegible] ಭಾರತದ ನೌಕಾದಳ [illegible] ರಕ್ಷಣೆ [illegible] ಶಕ್ತಿ [illegible] ವಿಮಾನ ದಳ [illegible] ಮಿಲಿಟರಿ [illegible] ರಕ್ಷಣೆ [illegible] ನಡೆಸುವ ಶಕ್ತಿ ಜಪಾನಿಗಿದೆಯೆಂದು ನಾವು ಭಾವಿಸುವುದಿಲ್ಲ. ಕಳೆದ ವರ್ಷ ಅವರು ದಂಡಯಾತ್ರೆ ಪ್ರಯತ್ನ ಮಾಡಬಹುದಾಗಿತ್ತು. ಆ [illegible]ವನ್ನು ಅವರು ಕಳೆದುಕೊಂಡರೆಂದು [illegible] ಆದರೆ ನನಗೆ ತೋರುವುದೇನೆಂದರೆ [illegible] ಅವರು ನಮ್ಮ [illegible] ನಡೆಸ[illegible]ದು [illegible] ಅದಕ್ಕೆಲ್ಲ ನಾವು ಸಿದ್ಧರಾಗಿದ್ದೇವೆ' ಎಂಬ [illegible]ವಾಗಿ ಭಾರತದ ದಂಡನಾಯಕರಾದ ಸರ್ ಔಚಿನ್‌ಲೆಕ್‌ರವರು ತಿಳಿಸಿದ್ದಾರೆ.

ಬಂಗಾಲದ ಪರಿಸ್ಥಿತಿ ಉತ್ತಮವು ಗೊಳ್ಳುತ್ತಿದೆ.

ಬಂಗಾಲದ ಪರಿಸ್ಥಿತಿ ಉತ್ತಮಗೊಳ್ಳುತ್ತಿದೆ [illegible] ಕಾರ್ಯ [illegible] ಕೇಂದ್ರಗಳಲ್ಲಿ ಈಗ [illegible] ಇಂಗ್ಲೆಂಡಿನ [illegible] ಭೋಜನಶಾಲೆ [illegible] ಸರಕಾರದಿಂದಲೂ [illegible] ನಡೆಸಲ್ಪಡುತ್ತ [illegible] ೫,೦೦,೦೦೦ [illegible] ಒಂದು ಲಕ್ಷ ಜನರಿಗೆ [illegible] ೧೦,೦೦೦ [illegible] ಎಂದು [illegible] ಸರ್ ಸುಲ್ತಾನ [illegible] ಅಭಿಪ್ರಾಯಪಟ್ಟಿದ್ದಾರೆ.

ಸ್ವೀಕಾರ

ಹಿರೇಗೌರು ನಗರ ಗವಿಪುರದಲ್ಲಿರುವ ಶ್ರೀ ಪ್ರಸನ್ನ ಕಾಲ ರುದ್ರದೇವರ ಕೃತ್ತಿಕಾ ಮಹೋತ್ಸವ ಸಮಾಪ್ತಿ ಸಮಾರಂಭಕಾಲದಲ್ಲಿ (ತಾ ೯-೧೨-೪೩) ಪ್ರಭಾ ಪ್ರೋತ್ಸಾಹಕ್ಕೋಸ್ಕರ ಮೆ|| ಯಜಮಾನ್ ಕೆಂಚಪ್ಪನವರು ಅಂಡ್ ಬ್ರದರ್ಸ್ ಇವರು ಸಮರ್ಪಿಸಿದ ೭ ರೂಪಾಯಿಗಳು ವೇ|| ಆರ್ ಎಚ್ ಎಂ ಸದಾಶಿವಶಾಸ್ತ್ರಿಗಳ ದ್ವಾರ ತಲ್ಪಿರುತ್ತವೆ.

ನೈಜಾಂ ಇಲಾಖಾ ರಾಯಚೂರ ಜಿಲ್ಲಾ ಕನಕಗಿರಿ ಪರೋಪಕಾರನಿರತರಾದ ಶ್ರೀಮಾನ್ ಸಂಗಪ್ಪನವರು ಸಜ್ಜನರ ಇವರು ಶಿವಾಧೀನರಾದ ಸಮಯದಲ್ಲಿ ಪ್ರಭಾ ಪ್ರೋತ್ಸಾಹಕ್ಕಾಗಿ ಸಮರ್ಪಿಸಿದ 2 ರೂಪಾಯಿಗಳು ಕನಕಗಿರಿ ಹಿರೇಮಠದ ಶ್ರೀ|| ಷ|| ಬ್ರ|| ಪಂಚಾಕ್ಷರ ಶಿವಾಚಾರ್ಯರ ದ್ವಾರ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇನೆ.

ಮನೋಹರವಾದ ಫೋಟೋಗಳು.

[illegible] ಬಂಗಾರದ [illegible] ಫೋಟೋ ಸೈಜು ೨೦×೧೬ ಬೆಲೆ ೧ಕ್ಕೆ	೦—೪—೦
ಶ್ರೀ [illegible] ದ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦ ಬೆಲೆ	೦—೪—೦
ಶ್ರೀ [illegible] ಚಾರ್ಯರು [illegible] ಅಗಸ್ತ್ಯ, ದಧೀಚ, ವ್ಯಾಸ, ಸಾನಂದ, ದೂರ್ವಾಸ ಮಹರ್ಷಿಗಳಿಗೆ ಶಿವಾದ್ವೈತವನ್ನು ಉಪದೇಶಿಸುವ ಫೋಟೋ ಸೈಜು ೧೦×೧೪ ಬೆಲೆ	೦—೩—೦
[illegible] ಪಂಚಾಚಾರ್ಯರು ಒಂದೆಡೆಯಲ್ಲಿಯೇ ಇರುವ ಫೋಟೋ ಸೈಜು ೧೪×೧೦ ಬೆಲೆ	೦—೨—೦
ಶ್ರೀ ಜಗದ್ಗುರು [illegible] ಚಾರ್ಯರ [illegible] ಅವತಾರದ ಫೋಟೋ ಸೈಜು ೧೪×೧೦ ಬೆಲೆ ೧ಕ್ಕೆ	೦—೩—೦
ಶ್ರೀ ಜಗದ್ಗುರು [illegible] ಅವತಾರದ ಫೋಟೋ ಸೈಜು ೧೦×೮ ಬೆಲೆ ೧ಕ್ಕೆ	೦—೧—೦
ಶ್ರೀ ಜಗದ್ಗುರು [illegible] ಲಿಂಗ ಭೂಗರ್ಭದಿಂದ ಅವತರಿಸುವ ಫೋಟೋ	೦—೧—೦
[illegible] ಪುತ್ರ ಮುಕ್ತೇಶ್ವರ [illegible] ಚಾರ್ಯರಿಗೆ ಪಟ್ಟಾಭಿಷೇಕ ಮಾಡುವ ಫೋಟೋ	೦—೧—೦
[illegible] ವಿಭೀಷಣನ ಪ್ರಾರ್ಥನೆಯಂತೆ [illegible] ಕೋಟಿ ಶಿವಲಿಂಗಗಳನ್ನು ಪ್ರತಿಷ್ಠಿಸುವ ಫೋಟೋ ೧ಕ್ಕೆ	೦—೧—೦
ಶ್ರೀ [illegible] ಚಾರ್ಯರು ಶ್ರೀ ಶಂಕರಾಚಾರ್ಯರಿಗೆ ಚಂದ್ರಮೌಳೀಶ್ವರ ಲಿಂಗವನ್ನು ಅನುಗ್ರಹಿಸುವ ಫೋಟೋ	೦—೧—೦
[illegible] ಶ್ರೀ [illegible] ಸಿದ್ಧರಾಮೇಶ್ವರ ಮೂಲಧರ್ಮಪೀಠದ ಫೋಟೋ	೦—೧—೦
[illegible] ಜಗದ್ಗುರುಗಳ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಸೈಜು ೧೪×೧೦	೦—೪—೦
[illegible] ಸಿಂಹಾಸನಾಧೀಶ್ವರ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಫೋಟೋ	೦—೧—೦
[illegible] ಪೀಠಾಧೀಶ್ವರ ಜಗದ್ಗುರು ಶಿವಾನಂದಶಿವಾಚಾರ್ಯ ಮಹಾಸ್ವಾಮಿಗಳವರ ಫೋಟೋ	೦—೧—೦
[illegible] ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀ ಕಾಶೀನಾಥಶಾಸ್ತ್ರಿಗಳವರು ಕುಳಿತುಕೊಂಡಿರುವ ಫೋಟೋ	೦—೧—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ಚಿಕ್ಕಸೈಜು ೧ಕ್ಕೆ	೦—೨—೦
ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರ ಫೋಟೋ (ನಾನಾವಿಧ ಬಣ್ಣಗಳಿಂದ ಮುದ್ರಿತವಾದುದು) ದೊಡ್ಡಸೈಜು ೧ಕ್ಕೆ	೦—೪—೦
ಶ್ರೀ ಜಗದ್ಗುರು [illegible] ಉಜ್ಜಯಿನೀ ಪೀಠದ ಮಹಾದ್ವಾರದ ಅತ್ಯಂತ ಸುಂದರವಾದ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಉಜ್ಜಯಿನೀ ಪೀಠದ ಅತ್ಯಂತ ಪ್ರಾಚೀನ ಕಟ್ಟಡದ ಸುಂದರ ಫೋಟೋ ೧ಕ್ಕೆ	೦—೧—೦
ಶ್ರೀ ಜಗದ್ಗುರು ಕೇದಾರ ಸಿಂಹಾಸನದ ಅತ್ಯಂತ ಸುಂದರವಾದ ಗೋಪುರದ ಫೋಟೋ	೦—೧—೦
ಹಿಮವತ್ಪರ್ವತದ ಮಧ್ಯದಲ್ಲಿ ಶೋಭಿಸುವ ಶ್ರೀ ಕೇದಾರನಾಥಸ್ವಾಮಿಯ ಮಂದಿರದ ಸುಂದರ ಫೋಟೋ	೦—೧—೦
ಶ್ರೀ ರಂಭಾಪುರೀ ಜಗದ್ಗುರುಗಳವರ ಸನ್ನಿಧಿಯಲ್ಲಿ ಶ್ರೀಮನ್ಮಹಾರಾಜರವರು ವಿರಾಜಿಸುತ್ತಿರುವ ಫೋಟೋ	೦—೧—೦
ಬೆಂಗಳೂರ ಕಂಟೋನ್ಮೆಂಟಿನಲ್ಲಿ ನೆರವೇರಿದ ರಂಭಾಪುರೀ ಜಗದ್ಗುರುಗಳ ಅಡ್ಡಪಲ್ಲಕ್ಕಿ ಮಹೋತ್ಸವದ ಫೋಟೋ	೦—೧—೦

ಮ್ಯಾನೇಜರ್— ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು

ಸಿದ್ಧಾಂತಶಿಖಾಮಣಿ

[illegible] ಜನ್ಮ ಧನ್ಯವಾದ ಪ್ರತಿಯೊಬ್ಬ ವೀರಶೈವನಿಗೂ ಸಿದ್ಧಾಂತಶಿಖಾಮಣಿಗ್ರಂಥವು ಪ್ರಾಣಪ್ರಿಯವು. ಈ ಮಹಾಗ್ರಂಥದಲ್ಲಿ ಶ್ರೀಜಗದ್ಗುರು ರೇಣುಕಾಚಾರ್ಯರು ಜಗದ್ವಿಖ್ಯಾತರಾದ ಅಗಸ್ತ್ಯಮಹರ್ಷಿಗಳಿಗೆ ವೀರಶೈವಸಿದ್ಧಾಂತವನ್ನು ಉಪದೇಶಿಸಿದ ವಿಷಯವು ಪ್ರತಿಪಾದಿಸಲ್ಪಟ್ಟಿರುವುದು. ವೀರಶೈವಮತದಲ್ಲಿ ಸದ್ಯಃ ದೊರೆಯುತ್ತಿರುವ ಗ್ರಂಥಗಳಲ್ಲೆಲ್ಲ ಇದೆ ಬಹು ಪುರಾತನಗ್ರಂಥವೆನಿಸಿಕೊಂಡು ಮೆರೆಯುತ್ತಿರುವುದು. ಈ ಗ್ರಂಥವು ಈಗ್ಗೆ ಸುಮಾರು ೨ ಸಾವಿರ ವರ್ಷಗಳ ಪೂರ್ವದಲ್ಲಿದ್ದ **ಶ್ರೀಶಿವಯೋಗಿಶಿವಾಚಾರ್ಯ**ರೆಂಬ ಆಚಾರ್ಯರಿಂದ ರಚಿಸಲ್ಪಟ್ಟಿರುವದು. ಈ ಮಹಾಗ್ರಂಥವು ವೀರಶೈವಮತಕ್ಕೆ ಮೂಲಸ್ತಂಭವಾಗಿರುವುದರಿಂದ, ಇದಕ್ಕೆ ಇಂದಿನವರೆಗೆ ಅನೇಕರು ಅನೇಕ ವಿಧವಾದ ವ್ಯಾಖ್ಯಾನಗಳನ್ನು ಬರೆದಿರುತ್ತಾರೆ. ಆದರೆ ಒಂದು ವ್ಯಾಖ್ಯಾನದಲ್ಲಿಯಾದರೂ ಗೂಢಾರ್ಥಗರ್ಭಿತವಾದ ಶ್ಲೋಕಗಳಿಗೆ ಸರಿಯಾದ ಅರ್ಥವು ಒದಗಿಸಲ್ಪಟ್ಟಿಲ್ಲ. ಈ ಕೊರತೆಯನ್ನು ದೂರಮಾಡುವುದಕ್ಕಾಗಿ **ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರು** ಬಹುಶ್ರಮವಹಿಸಿ ಈ ಗ್ರಂಥಕ್ಕೆ ಕನ್ನಡ ಭಾಷೆಯಲ್ಲಿ ಬಹು ಸರಳವಾದ ವ್ಯಾಖ್ಯಾನವನ್ನು ರಚಿಸಿ, ಸಮಸ್ತ ವೀರಶೈವರ ಕೃತಜ್ಞತೆಗೆ ಪಾತ್ರರಾಗಿರುತ್ತಾರೆ. ಈ ಗ್ರಂಥವನ್ನು ಓದಿನೋಡಿದಮೇಲೆ ಪಂಡಿತರ ವ್ಯಾಖ್ಯಾನದ ಮಹತ್ತ್ವವು ಪಾಠಕರಿಗೆ ವೇದ್ಯವಾಗುವುದು. ವಾಚಕರ ಅನುಕೂಲಕ್ಕಾಗಿ ಬಹುಶ್ರಮವಹಿಸಿ ಸಿದ್ಧಪಡಿಸಿದ ವಿಷಯಾನುಕ್ರಮಣಿಕೆಯೂ ಶ್ಲೋಕಾನುಕ್ರಮಣಿಕೆಯೂ ಈ ಗ್ರಂಥದಲ್ಲಿ ಮುದ್ರಿಸಲ್ಪಟ್ಟಿವೆ. ಈ ಗ್ರಂಥವು ಒಟ್ಟು ೩೩೨ ಪುಟಗಳಿಂದ ಕೂಡಿದ್ದು, ಸರ್ವಾಂಗ ಸುಂದರವಾಗಿ ಮುದ್ರಿಸಲ್ಪಟ್ಟಿದೆ. ಈ ಗ್ರಂಥದಲ್ಲಿ ಸಂದರ್ಭಾನುಸಾರವಾಗಿ ಶ್ರೀಜಗದ್ಗುರು ರೇಣುಕಾಚಾರ್ಯರ ಲೀಲಾತ್ಮಕವಾದ ಮನೋಹರವಾದ ಚಿತ್ರಗಳು ಜೋಡಿಸಲ್ಪಟ್ಟಿರುವುದರಿಂದ ಗ್ರಂಥದ ಸೌಂದರ್ಯವು ವರ್ಣನಾತೀತವಾಗಿದೆ. ಕೈನಲ್ಲಿ ಕಲ್ಪತರುವಿನಂತಿರುವ ಈ ಅಮೂಲ್ಯಗ್ರಂಥವನ್ನು ವೀರಶೈವರೆಲ್ಲರೂ ಅವಶ್ಯವಾಗಿ ಓದಬೇಕು. **ಬೆಲೆ ೨ ರೂಪಾಯಿ.**

ಮ್ಯಾನೇಜರ್— **ಪಂಚಾಚಾರ್ಯಪ್ರಭಾ ಆಫೀಸ್,**
ಮೈಸೂರು.

ಸರ್ವೋತ್ತಮವಾದ ಮತಗ್ರಂಥಗಳು

ಗೋತ್ರಸೂತ್ರಪಟ (೨ನೆಯ ಆವೃತ್ತಿ)	೧ ಆಣೆ
ಸನ್ಯಾಸಾಶ್ರಮವಿಮರ್ಶೆ (೩ನೆಯ ಆವೃತ್ತಿ ಸಂಸ್ಕೃತ)	೧ ಆಣೆ
ಪಂಚವಿಂಶತಿ ಪ್ರಶ್ನಪ್ರಕಾರ (೩ನೆಯ ಆವೃತ್ತಿ)	೧ ಆಣೆ
ಶ್ರೀಪಂಚಾಚಾರ್ಯ ಮಂಗಲಸ್ತೋತ್ರಾವಳಿ (೯ನೆಯ ಆವೃತ್ತಿ)	೧ ಆಣೆ
ಸಂಕ್ಷಿಪ್ತ ಶಿವಪೂಜಾವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀಜಗದ್ಗುರು ಪಂಚಾಚಾರ್ಯರ ನಾಮಾವಳಿ (೨ನೆಯ ಆವೃತ್ತಿ)	೨ ಆಣೆ
ಬಸವ[illegible]ತತ್ತ್ವದರ್ಪಣ (೩ನೆಯ ಆವೃತ್ತಿ)	೨ ಆಣೆ
ಶ್ರೀರೇಣುಕಾಚಾರ್ಯಶತಕ (೨ನೆಯ ಆವೃತ್ತಿ)	೨ ಆಣೆ
ಪಂಚಾಚಾರ್ಯಪ್ರಭಾಕರ	೨ ಆಣೆ
ಶ್ರೀಗುರು [illegible]	೨ ಆಣೆ
ಶ್ರೀರುದ್ರಮುನಿಶಿವಾಚಾರ್ಯಶತಕ	೨ ಆಣೆ
ಪಂಚಾಚಾರ್ಯ ಪ್ರಕಾಶಿಕಾ	೨ ಆಣೆ
ಬಿಲ್ವಮಾಹಾತ್ಮ್ಯ	೨ ಆಣೆ
ವೀರ[illegible] (೩ನೆಯ ಆವೃತ್ತಿ)	೪ ಆಣೆ
ಲಿಂಗ [illegible]	೪ ಆಣೆ
[illegible] (೨ನೆಯ ಆವೃತ್ತಿ)	೪ ಆಣೆ
ಶ್ರೀ[illegible]ನಿರ್ಣಯ	೪ ಆಣೆ
ಶೈ[illegible] (ಸಂಸ್ಕೃತ)	೪ ಆಣೆ
ವೀರಶೈವ [illegible]	೪ ಆಣೆ
[illegible] (೨ನೆಯ ಆವೃತ್ತಿ)	೬ ಆಣೆ
ಸಿದ್ಧಾಂತಶಿಖಾಮಣಿ ([illegible] ಸಂಸ್ಕೃತ)	೬ ಆಣೆ
ವೀರಶೈವ [illegible]	೬ ಆಣೆ
ವೀರಶೈವ[illegible]ಮಾಹಾತ್ಮ್ಯ	೮ ಆಣೆ
ಬಸವ[illegible]ಶೇಖರ (೩ನೆಯ ಆವೃತ್ತಿ)	೮ ಆಣೆ
ಶಿವಾದ್ವೈತ[illegible] (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು ([illegible])	೮ ಆಣೆ
ಸದ್ಧರ್ಮರತ್ನಾಕರ	೮ ಆಣೆ
ವೈದಿಕ[illegible] ([illegible] ಅತ್ಯಂತ [illegible])	೧೨ ಆಣೆ
ಸಿದ್ಧಾಂತಸಾರಾವಳಿ (ಶ್ರೀಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರ ಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೯ನೆಯ ಆವೃತ್ತಿ, ೩೦ ಮಹತ್ವದ ಫೋಟೋಗಳಿರುವುದು)	೧॥ ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹಃ (ಚಂದ್ರಜ್ಞಾನಾಗಮ-ಕಾರಣಾಗಮ-ಮಕುಟಾಗಮ-ಸೂಕ್ಷ್ಮಾಗಮಗಳಿಂದ ಕೂಡಿರುವುದು)	೨ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೫ ರೂ
A brief life-sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिङ्गधारणचन्द्रिका (संस्कृत)	३ रु
वीरशैवरत्न (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धान्तशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

ಮ್ಯಾನೇಜರ್— **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು**

ಮೈಸೂರು [illegible]ದಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕ ರಾ|| ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು

REGISTERED No M 2266 ॥ ಶ್ರೀಜಗದ್ಗುರು ಪಂಚಾಚಾರ್ಯಾಃ ಪ್ರಸೀದಂತು ॥ REGISTERED No M 2266

ಪಂಚಾಚಾರ್ಯಪ್ರಭಾ

ಪ್ರತಿ ಸೋಮವಾರ ಮೈಸೂರು ರಾಜಧಾನಿಯಲ್ಲಿ ಪ್ರಕಟಿಸಲ್ಪಡುವುದು.

[illegible] ಪ್ರವರ್ತಕರ್ ಪರತತ್ತ್ವಪಂಚಲಿಂಗೋದ್ಭವರ್ ॥
ಪಂಚಾಚಾರನಿಧಾನರ್ [illegible] ಲೋಕರಮು ॥

ಸ್ಥಳದವರಿಗೆ ೨ ರೂ [illegible] ೪ ರೂಪಾಯಿ

ಸಂಪುಟ ೧೭.] ಪಂಚಾಚಾರ್ಯಪ್ರಭಾ, ಸೋಮವಾರ ತಾ॥ ೨೭ನೇ ಡಿಸೆಂಬರ್ ೧೯೪೩ [ಸಂಚಿಕೆ ೩೪

ವರ್ಧಂತೀ ಮಹೋತ್ಸವ ಸೋಲಾಪೂರ.

ತಾ॥ 4-12-43 ರಂದು ರವಿವಾರ ಶ್ರೀಬಾಲತಪಸ್ವಿ ಬೃಹನ್ಮಠದಲ್ಲಿ ಶ್ರೀಜಗದ್ಗುರು ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳವರ ವರ್ಧಂತ್ಯುತ್ಸವವನ್ನು ಬಹಳ ವೈಭವದಿಂದ ಮಾಡಲ್ಪಟ್ಟಿತು. ಆ ದಿವಸ ಬೆಳಿಗ್ಗೆ ವರ್ಧಂತಿ ಪ್ರೀತ್ಯರ್ಥವಾಗಿ ಲಿಂಗೋದ್ಭವ ಮೂರ್ತಿಗೆ ರುದ್ರಾಭಿಷೇಕ ಗಣಾರಾಧನೆ ಆಯಿತು. ಸಾಯಂಕಾಲ ೬ ಘಂಟೆಗೆ ಶ್ರೀ ಷ॥ ಬ್ರ॥ ಬಾಲತಪಸ್ವಿ ಚನ್ನವೀರ ಶಿವಾಚಾರ್ಯರು ಇವರ ಅಧ್ಯಕ್ಷತೆಯಲ್ಲಿ ಸಭೆಯು ನೆರೆಯಿತು. ಪ್ರಾರಂಭದಲ್ಲಿ ಶ್ರೀಜಗದ್ಗುರುಗಳ ಭಾವಚಿತ್ರವನ್ನು ಸಿಂಹಾಸನದಲ್ಲಿ ಮೂರ್ತಗೊಳಿಸಿ ಶ್ರೀಮದ್ವೀರಶೈವ ಗುರುಕುಲದ ವಿದ್ಯಾರ್ಥಿಗಳಿಂದ ಶ್ರೀಬಾಲತಪಸ್ವಿಗಳವರ ಘೋಷಣೆಯೊಂದಿಗೆ [illegible] ಮೇಲೆ ಶ್ರೀವೀರಶೈವ ಸದಾಚಾರ ಕುಮಾರಿಯವರು ಶ್ರೀಜಗದ್ಗುರುಗಳವರ ಸ್ತೋತ್ರವನ್ನು ಬಹಳ ಸುಂದರವಾಗಿ ಮನೋಹರವಾಗಿ ಹಾಡಿದರು. ನಂತರ ಕು॥ ಶಿವಶಾಂತಾದೇವಿ ತಮಶೆಟ್ಟಿ, ಕು॥ ಗಂಗಾದೇವಿ ಕಟಾಪ್, ಕು॥ ಪಾರ್ವತೀದೇವಿ ಕಾಡಶೆಟ್ಟಿ, ಕು॥ ಇಂದುಕಲಾ ಜೋಡಭಾವಿ ಕು॥ ಪದ್ಮಾವತಿ ಪಾಟೀಲ್ ಈ ಕುಮಾರಿಯರು "ಭಸ್ಮದ ಮಹತ್ವ" ಈ ವಿಷಯದ ಮೇಲೆ ಒಳ್ಳೆ ಹೃದಯಂಗಮವಾಗಿ ಸಂವಾದರೂಪ ಭಾಷಣ ಮಾಡಿ ಸಭಿಕರನ್ನು ಆನಂದಗೊಳಿಸಿದರು. ಆ ಮೇಲೆ ಶ್ರೀ॥ ಷ॥ ಬ್ರ॥ ಹುಣಸಿಗಿ ಪಟ್ಟಾಧ್ಯಕ್ಷರು ಶ್ರೀ ಅಣ್ಣಿಗೇರಿ ಪಟ್ಟಾಧ್ಯಕ್ಷರು ಶ್ರೀ ವೇ॥ ಸಿದ್ಧವೀರ [illegible], ಶ್ರೀ ಪಾಟೀಲ ವಿಜಾಪುರ ಇವರು ಶ್ರೀಜಗದ್ಗುರುಗಳವರ ಕಾರ್ಯಕಲಾಪ, ಚರಿತ್ರೆ [illegible] ಈ ವಿಷಯವಾಗಿ ಭಾಷಣ ಮಾಡಿದರು. ನಂತರ ಶ್ರೀ ವೇ॥ ಪಂ॥ ಜಗದೀಶ ಶಾಸ್ತ್ರಿಗಳವರು ಸಾಹಿತ್ಯರತ್ನ [illegible] ಶ್ರೀಗುರುಕುಲದ ಮುಖ್ಯೋಪಾಧ್ಯಾಯರೂ ಶ್ರೀ ಗುರುಬಾಯಿ ಮಠಪತಿ ಸೌ॥ ಭಾಗೀರಥೀಬಾಯಿ ಕಟಾಪ ಇವರು ಜಗದ್ಗುರುಗಳ ಶಿಷ್ಯೋದ್ಧಾರದ ವಿಷಯವಾಗಿ ಚೆನ್ನಾಗಿ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ ಬಾಲತಪಸ್ವಿಗಳು ಶ್ರೀ ವೀರಪೀಠಾಧ್ಯಕ್ಷರಾದ ಜಗದ್ಗುರುಗಳವರಿಗೆ ಧರ್ಮ ಸಂಚಾರದ ಮಧ್ಯದಲ್ಲಿ [illegible] ಮೊದಲಾದ ಸ್ಥಳಗಳಲ್ಲಿ ಎಷ್ಟು ಕಷ್ಟ ಒದಗಿದರೂ ಮುಂದಕ್ಕೆ ಇಟ್ಟ ಕಾಲು ಹಿಂದೆ ತೆಗೆಯುವುದಿಲ್ಲವೆಂಬ ವಿಷಯವನ್ನು ಹೇಳುತ್ತಿರುವಾಗ ಸಭಿಕರು ಆನಂದ [illegible] ಮೇಲಿಂದ ಮೇಲೆ ಕರತಾಡನ ಮಾಡುತ್ತಿದ್ದರು. ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯಮಹಾಸ್ವಾಮಿಗಳವರ ಕೃಪಾಕಟಾಕ್ಷದ ಪ್ರಯತ್ನದಿಂದ ಶ್ರೀರಂಭಾಪುರೀ ಪೀಠಕ್ಕೆ ಇಂಥ ಮಹಿಮಾಶಾಲಿಗಳಾದ ಗುರುಗಳು ದೊರೆತದ್ದು ಶ್ರೀ ರೇಣುಕರ ದಿವ್ಯಾಂಶವೇ ಮೂರ್ತಿವೆತ್ತಾಗಿರುವರೆಂದು ವಿಶದವಾಗಿ ಪ್ರತಿಪಾದಿಸಿದರು. ಆಮೇಲೆ ಶ್ರೀ ಜಗದ್ಗುರುಗಳವರ ಭಾವಚಿತ್ರಕ್ಕೆ ಶ್ರೀ ಜಗದ್ಗುರು ಸಿದ್ಧಲಿಂಗಶಿವಾಚಾರ್ಯರ ಭಾವಚಿತ್ರಕ್ಕೆ ಮಂಗಳಾರತಿ [illegible] ಶ್ರೀ ಜಗದ್ಗುರುಗಳವರ ಜಯಘೋಷದೊಂದಿಗೆ [illegible] ಶ್ರೀ [illegible] ಮತ್ತು [illegible] ಇವರ [illegible] ಜಗದ್ಗುರುಗಳ ಕೃಪಾಪಾತ್ರರಾದರು.

ಶ್ರೀ [illegible], ಪತ್ರಿಕೆ
ಶ್ರೀಮದ್ವೀರಶೈವ ಗುರುಕುಲ ಸೋಲಾಪೂರ

ಗುರುವಿನ ಮಹಿಮೆ

ಲೇ॥ [illegible]
[illegible]

ಗೊಬ್ಬೂರ [illegible] ಶ್ರೀಮಂತ ಸಿದ್ಧರಾಮಪ್ಪ ಪ್ರಭುಶೆಟ್ಟಿ ಪಾಟೀಲ ಇವರ ೭ ವರುಷದ ಮಗನಿಗೆ ತಾ॥ ೨೦-೧೧-೪೩ ರಿಂದ [illegible] ಜ್ವರ [illegible] ತಾ॥ ೩೦-೧೧-೪೩ ರಂದು ದಿವಸ [illegible] ನೋವು [illegible] ಡಾಕ್ಟರು [illegible] ಆ ಡಾಕ್ಟರು [illegible] ಡಿಗ್ರಿ [illegible] ಚಿಕಿತ್ಸೆ ಮಾಡಿದರು [illegible] ಡಾಕ್ಟರು [illegible] ಇವರ [illegible] ಮಾತ್ರ [illegible] ಭಾವದಿಂದ [illegible] ಪ್ರಸಂಗಕ್ಕಾಗಿ ಆ ಮಗುವಿನ ತಾಯಿಯವರಾದ ಶ್ರೀ ಸೌ॥ [illegible] ಮತ್ತು ಶ್ರೀಮಂತ ಸಿದ್ಧರಾಮಪ್ಪ ಪ್ರಭುಶೆಟ್ಟಿ ಪಾಟೀಲರು [illegible] ಹೊಂದಿ [illegible] ಕಾಡಿನಲ್ಲಿ ತಾಯಿಯನ್ನು [illegible] ತಾಯಿಯು [illegible] ಎತ್ತಲಿಂದಲೋ 'ಒಂದು [illegible] ಗುರು [illegible] ಶ್ರೀ॥ ಷ॥ ಬ್ರ॥ ಚನ್ನವೀರ ಶಿವಾಚಾರ್ಯರ [illegible] ರಾತ್ರಿ [illegible] ಘಂಟೆಗೆ ಮಗುವನ್ನು [illegible] ಮಧ್ಯರಾತ್ರಿಯಲ್ಲಿಯೆ ಗುರುಗಳನ್ನು ಎಬ್ಬಿಸಿ ಆವರ [illegible] ಮಗುವನ್ನು [illegible] ಗುರುಗಳೇ ತಾವು ಕೊಟ್ಟ [illegible] ಫಲವನ್ನು ತಾವೇ ರಕ್ಷಿಸಬೇಕಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲವೆಂದು [illegible] ದಿಂದ ಬೇಡಿಕೊಂಡರು.

ಅಷ್ಟರಲ್ಲಿ ಶ್ರೀಗಳವರು [illegible] ಸಕ್ಕದ(?) ಆಪ್ಪ' ಪ್ರತ್ಯಕ್ಷ ಶ್ರೀಶೈಲ ಮಲ್ಲಿಕಾರ್ಜುನನ [illegible] ಅವತಾರವನ್ನು ಧರಿಸಿದ ಈ [illegible] ಇನ್ನು [illegible] ಕಾರ್ಯಗಳ [illegible] ಪವಾಡವನ್ನು [illegible] ಇವರ [illegible] ಒಬ್ಬನಾಗಿ [illegible] ಈ ಶ್ರೀ [illegible] ಮಲ್ಲಿನಾಥ, ಮಲ್ಲಿನಾಥ [illegible] ಬೇಡಿಕೊಂಡು [illegible] ಪ್ರಕಾರ [illegible] ಹೋಗಿ [illegible] ಮನೆಗೆ ಹೋದಮೇಲೆ ಸ್ವಲ್ಪ ಹಾಲನ್ನು ತೆಗೆದುಕೊಂಡು ತನ್ನ ಬಾಲಲೀಲೆಗಳಿಂದ ತಂದೆ ತಾಯಿಗಳೆಲ್ಲರನ್ನು ಆನಂದಪಡಿಸಿದನು. ನಂತರ ಪಾಟೀಲರವರು ನನ್ನ ಗುರುಕೃಪೆಗೆ ಪಾತ್ರನಾಗುವನೆಂದು ತಿಳಿದು ಅನೇಕ ವಿಧವಾಗಿ ಆ ಗುರುವಿನ ವರ್ಣನೆಯನ್ನು ಮಾಡಿದರು. ಅದಲ್ಲದೆ ಪ್ರತಿವಿನಲ್ಲಿ ಆ ಶ್ರೀಗಳವರ ಮತ್ತು ಮಲ್ಲಿಕಾರ್ಜುನನ ತೀರ್ಥಪ್ರಸಾದವನ್ನು ಈ ಮಲ್ಲಿನಾಥನಿಗೆ ಕೊಡಲು ಪ್ರಾರಂಭಿಸಿದರು. ಸದ್ಯಃ ಆ ಬಾಲಕನು [illegible] ತನ್ನ ಬಾಲಲೀಲೆಗಳಲ್ಲಿ ತೊಡಗಿರುವನು. ಶ್ರೀ ಪಾಟೀಲರವರ ಸಾಕರನಾಗಿದ್ದ ನನಗೆ ಆ ಬಾಲಕನ [illegible] ಯಲ್ಲಿ ಪ್ರತ್ಯಕ್ಷವಾದ ಸಾಕ್ಷಿ —ಇದಲ್ಲದೆ [illegible] ಈ [illegible]

ಸಾಕ್ಷಾತ್ ಶ್ರೀಶೈಲ ಮಲ್ಲಿಕಾರ್ಜುನನ ಅವತಾರವನ್ನು ತೋರಿಸುತ್ತಿರುವ ಶ್ರೀ॥ ಷ॥ ಬ್ರ॥ ಬಾಲತಪಸ್ವಿ ಚೆನ್ನವೀರ ಶಿವಾಚಾರ್ಯರು ಹೊಟಗಿ ಇವರ ತಪಸ್ಸಿನ ಫಲವು ಮೊದಲನೆಯದು. ಶ್ರೀ ಸಾಕ್ಷಾತ್ ಸಿದ್ಧರಾಮನ ಅವತಾರವನ್ನು ಸೂಚಿಸುತ್ತಿರುವ ಶ್ರೀಮಂತ ಸಿದ್ಧರಾಮಪ್ಪ ಪ್ರಭುಶೆಟ್ಟಿ ಪಾಟೀಲ ಇವರ ನಿಜವಾದ ಭಕ್ತಿಯು ಎರಡನೆಯದು ಎಂದು [illegible] ಗುರುವಿನಲ್ಲಿ ಭಕ್ತಿ ಇರುವುದರಿಂದ ಗುರು ಕೃಪೆಯಾಗುವುದು ನಿಜ. ಆದ್ದರಿಂದ ಸರ್ವರೂ ಗುರುಭಕ್ತಿಯನ್ನು ಹೊಂದಿ ಮೋಕ್ಷಮಾರ್ಗವನ್ನು ಪಡೆಯಲು ಪ್ರಯತ್ನಿಸಬೇಕು.

ಮುಕ್ತಿ ಮಂದಿರ ಗುರುಕುಲಕ್ಕೆ ಉದಾರದಾನ.

[illegible] ಮಠದ ಅಧ್ಯಕ್ಷರಾದ ಶ್ರೀ ಷ॥ ಬ್ರ॥ ಗಂಗಾಧರ ಶಿವಾಚಾರ್ಯರವರಿಂದ ಸ್ಥಾಪಿಸಲ್ಪಟ್ಟ ಶ್ರೀವೀರಶೈವ ಗುರುಕುಲ ಮುಕ್ತಿ ಮಂದಿರಕ್ಕೆ [illegible] ಕನಕಗಿರಿ ದಾನ [illegible] ಸಜ್ಜನರ ಶ್ರೀಸಂಗಪ್ಪನವರು ನಾಲ್ಕು ಸಾವಿರ ರೂಪಾಯಿ ಬೆಲೆಬಾಳುವ ಆಸ್ತಿಯನ್ನು ದಾನಮಾಡಿ ಅಜರಾಮರರಾದ

(ಆರನೆಯ ಪುಟವನ್ನು ನೋಡಿ)

ಪಂಚಾಚಾರ್ಯಪ್ರಭಾ.

೧೯೪೩ನೆಯ ಡಿಸೆಂಬರ್ ತಾ॥ ೨೭ನೇ ಸೋಮವಾರ

ಆತ್ಮೋದ್ಧಾರ.

ಜಗತ್ತಿನಲ್ಲಿ ಎಲ್ಲ ಜೀವಿಗಳೂ ಪ್ರತಿಯೊಬ್ಬನೂ ಪ್ರಾಪಂಚಿಕಸೌಖ್ಯವನ್ನು ಪಡೆಯುವುದಕ್ಕಾಗಿ ಪ್ರಯತ್ನಿಸುತ್ತಾನಲ್ಲದೆ ಪಾರಮಾರ್ಥಿಕಸೌಖ್ಯವನ್ನು ಪಡೆಯಲು ಪ್ರಯತ್ನಿಸುವುದಿಲ್ಲ. ಸಮಸ್ತಮತದವರುಗಳೂ ಪ್ರಾಪಂಚಿಕಸೌಖ್ಯವು ಅನಿತ್ಯವಾದುದೆಂದೂ, ಪಾರಮಾರ್ಥಿಕಸೌಖ್ಯವು ನಿತ್ಯವಾದುದೆಂದೂ ಮುಕ್ತಕಂಠದಿಂದ ಸಾರುತ್ತಿರುವುದಲ್ಲದೆ ಎಲ್ಲಲ್ಲಿಯೂ ಗುರುಜನಗಳು ಸಹ ಈ ತತ್ತ್ವವನ್ನೇ ಬೋಧಿಸುತ್ತಲಿದ್ದಾರೆ. ಹೀಗಿದ್ದರೂ ಪಾರಮಾರ್ಥಿಕಸೌಖ್ಯದಲ್ಲಿ ಜನರಿಗೆ ಅಭಿರುಚಿಯು ಕಡಿಮೆಯಾಗುತ್ತ ಐಹಿಕಸೌಖ್ಯಾಭಿಲಾಷೆಯು ಹೆಚ್ಚುತ್ತ ಬರಲು ಕಾರಣವೇನಿರಬಹುದೆಂದು ಬಹುದೂರವಾಗಿ ಆಲೋಚಿಸಬೇಕಾಗಿದೆ. ಪಾರಮಾರ್ಥಿಕಸೌಖ್ಯವೆಂಬುದು ಪರಮಾತ್ಮಸಾನ್ನಿಧ್ಯದಿಂದ ಜನಿಸುವುದು. ಪ್ರಾಪಂಚಿಕಸೌಖ್ಯವೆಂಬುದು ವಿಷಯಸಾನ್ನಿಧ್ಯದಿಂದ ಜನಿಸುವುದು. ಪ್ರಾಪಂಚಿಕವಿಷಯ ಸಾಧನೆಗೆ ಪ್ರಯತ್ನವಿಲ್ಲದೆ ಕಾಲಿಟ್ಟ ಕಡೆಯಲ್ಲೆಲ್ಲಾ ಬಹು ಸುಲಭವಾಗಿ ದೊರೆಯುವವು. ಪರಮಾತ್ಮನೆಂಬ ವಸ್ತುವಾದರೆ ಹಾಗೆ ಸುಲಭವಾಗಿ ಎಲ್ಲರಿಗೂ ದೊರೆಯುವದಿಲ್ಲ. ನಮ್ಮ ದೇಹದಲ್ಲಿ ವಾಸವಾಗಿರುವ ಮನಸ್ಸು ಅಂತರಿಂದ್ರಿಯವು ಬಹು ಚಂಚಲಸ್ವಭಾವವುಳ್ಳದ್ದು. ಯಾವಾಗಲೂ ಚಕ್ಷುರಾದೀಂದ್ರಿಯಗಳ ದ್ವಾರಾ ವಿಷಯಗಳ ಮೇಲೆ ಎರಗುವುದೇ ಇದರ ಸ್ವಭಾವವಾಗಿರುತ್ತದೆಯಲ್ಲದೆ ಪರಮಾತ್ಮನೆಂಬ ಗುರುತರವಸ್ತುವಿನಕಡೆಗೆ ದೃಷ್ಟಿಯು ಹೋಗುವುದಿಲ್ಲ. ನಮ್ಮ ಮೂರು ಸುಂದರವಾದ ಇಂದ್ರಿಯಗಳು ದೂರಮುಖಗಳಾಗಿರುವುದರಿಂದ ಒಳಮುಖಗಳಾಗಿಲ್ಲವು. ಹೀಗೆ ಯಾವಾಗಲೂ ನಮ್ಮ ಬಹಿರಿಂದ್ರಿಯಗಳೂ ಅಂತರಿಂದ್ರಿಯವೂ ಬಹುಕಾಲದಿಂದ ಅನಿತ್ಯವಾದ ವಿಷಯಗಳೊಡನೆ ಒಡನಾಡುತ್ತಿರುವದರಿಂದ ವಿಷಯಸೌಖ್ಯಾನುಭವವೇ ಅತ್ಯಗತ್ಯ ಪರಮ ಧ್ಯೇಯವಾಗಿ ಪರಿಣಮಿಸಿರುತ್ತದೆ.

ಪ್ರಪಂಚದಲ್ಲಿ ಯಾವನಿಗೆ ಯಾವ ಸಂಸರ್ಗವು ಹೆಚ್ಚಾಗಿರುತ್ತದೆಯೋ ಅವನಿಗೆ ಅದೇ ಸ್ವಭಾವವು ಬರುತ್ತದೆಂಬುದು ಅನುಭವಸಿದ್ಧವಾದುದರಿಂದ ಜೀವಾತ್ಮನು ಕೇವಲ ಪರಮಾತ್ಮನ ಅಂಶಭೂತನಾಗಿದ್ದರೂ ವಿಷಯಲೋಲುಗಳಾದ ಈ ದೇಹೇಂದ್ರಿಯಗಳ ಸಂಸರ್ಗದಿಂದ ಈ ಆತ್ಮನು ತನ್ನ ನಿಜವಾದ ಸ್ವಚ್ಛಸ್ವಭಾವವನ್ನು ಮರೆತು ವಿಷಯಗಳಿಗೆ ಅಧೀನನಾಗಿ ಹೋಗಿರುತ್ತಾನೆ. ಇಂದ್ರಿಯಗಳು ಹೇಗೆ ಹೇಗೆ ವಿಷಯಗಳ ಮೇಲೆ ಹೋಗುವುವೋ ಹಾಗೆ ಹಾಗೆ ಆತ್ಮನು ಆ ಇಂದ್ರಿಯಗಳ ಬೆನ್ನಹತ್ತಿ ಅಲೆಯುತ್ತಲಿದ್ದಾನೆ. ನಾನು ಪರಮಾತ್ಮನ ಅಂಶಭೂತನಾದುದರಿಂದ ಯಾವಾಗಲೂ ಪರಮಾತ್ಮನೊಡನೆಯೇ ವಿಹರಿಸಬೇಕೆಂಬ ಜ್ಞಾನದಿಂದ ದೂರನಾಗಿದ್ದಾನೆ. ಲೋಕದಲ್ಲಿ ಮಗನಾದವನು ತಂದೆಯ ಆಜ್ಞೆಗೆ ಒಳಪಟ್ಟಿರಬೇಕಲ್ಲದೆ ತಂದೆಯ ಆಜ್ಞೆಯನ್ನು ಮೀರಿ ವಿಷಯಲಂಪಟನಾದರೆ ಆ ಮಗನು ದುರ್ಮಾರ್ಗಿಯಾಗಿ ತಂದೆಯ ಕೋಪಕ್ಕೆ ಪಾತ್ರನಾಗುವಂತೆ, ಜಗತ್ಪಿತನಾದ ಪರಮೇಶ್ವರನ ಆಜ್ಞೆಗೆ ವಿರುದ್ಧವಾಗಿ ಈ ಜೀವಾತ್ಮನೂ ನಡೆಯಬಾರದು. ಹಾಗೆ ನಡೆಯುವದರಿಂದ ಆ ಪರಮೇಶ್ವರನ ಸ್ಥಾನವಾಗಲಿ ಅವನ ಅಣಿಮಾದ್ಯೈಶ್ವರ್ಯವಾಗಲಿ ದೊರೆಯದೆ ಯಾವಾಗಲೂ ದುಃಖಗೊಂಡವನಾಗಿಯೇ ಇರಬೇಕಾಗುವದು.

ಆಬ್ರಹ್ಮಭುವನಾಲ್ಲೋಕಾಃ ಪುನರಾವರ್ತಿನೋಽರ್ಜುನ |
ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ |

ಯಾರು ವಿಷಯವ್ಯಾಪಾರದಿಂದ ನಿವೃತ್ತರಾಗಿ ಪರಮಾತ್ಮನನ್ನು ಹೊಂದುವರೋ ಅಂಥವರಿಗೆ ಪುನರ್ಜನ್ಮವಿಲ್ಲ. ಮಿಕ್ಕ ಅಲ್ಪರೆಲ್ಲಾ ಮಾಯಾಮೋಹಿತರಾಗಿ ಜನನ ಮರಣ ಚಕ್ರದಲ್ಲಿ ಸುತ್ತುತ್ತಲೇ ಇರಬೇಕಾಗಿದೆ ಎಂದು ಗೀತಾಕಾರರು ಸ್ಪಷ್ಟಪಡಿಸಿರುವುದಲ್ಲದೆ ಆ ಪರಮಾತ್ಮಪ್ರಾಪ್ತಿಯು ಪರಮಜ್ಞಾನದಿಂದಲೇ ಸಾಧ್ಯವಾಗುವುದಲ್ಲದೆ ಅನ್ಯ ಪ್ರಾಪಂಚಿಕ ವಿಷಯ ಜ್ಞಾನದಿಂದಲೂ ಸೌಖ್ಯವು ದೊರೆಯುವುದಿಲ್ಲವೆಂದು ಅನೇಕ ಶಾಸ್ತ್ರಗಳು ಹೇಳಿದ್ದರೂ ಆ ತಿಳುವಳಿಕೆಯನ್ನೆಲ್ಲಾ ಮೂಲೆಗೊತ್ತಿ ಅನಾದಿ ಸಂಸ್ಕಾರದಿಂದ ದೊರೆಯುತ್ತಿರುವ ವಿಷಯ ಸೌಖ್ಯಗಳಲ್ಲೇ ಪ್ರವರ್ತಿಸುತ್ತಿರುವರು. ಇದಕ್ಕೆಲ್ಲಾ ವಿಷಯಲೋಲುಪತೆಯಿಂದ ಪರಮಾತ್ಮನಿಂದ ಅಗಲಿ ವಿಷಯಲಂಪಟವಾದ ಬಹಿರಿಂದ್ರಿಯದ ಮತ್ತು ಸಂಸರ್ಗವೇ ಕಾರಣವಲ್ಲದೆ ಬೇರೆ ಕಾರಣವಿಲ್ಲ. ಈಗ ಆತ್ಮನಿಗೂ ಬಾಹ್ಯೇಂದ್ರಿಯಗಳಿಗೂ ಇರುವ ಸಂಬಂಧವನ್ನು ತಪ್ಪಿಸಿದ ಹೊರತು ಆತ್ಮನು ತನ್ನ ನಿಜಸ್ವರೂಪವನ್ನು ಅರಿಯುವ ಹಾಗಿಲ್ಲ. ಇಂದ್ರಿಯಗಳನ್ನು ವಿಷಯ ಸಂಬಂಧದಿಂದ ತಪ್ಪಿಸಿ ಪರಮಾತ್ಮನೆಂಬ ವಿಷಯದಲ್ಲಿ ಆಸಕ್ತಗಳನ್ನಾಗಿ ಮಾಡಬೇಕು. ಇದು ಅಭ್ಯಾಸಬಲದಿಂದ ಸಾಧ್ಯವಲ್ಲದೆ ಸುಲಭಸಾಧ್ಯವಲ್ಲ. ಇಂದ್ರಿಯಗಳೆಲ್ಲಕ್ಕೂ ಅಂತರಿಂದ್ರಿಯವಾದ ಮನಸ್ಸು ಬಹಳ ಬಲಿಷ್ಠವಾದುದು ಮತ್ತು ಚಂಚಲವಾದುದು. ಈ ವಿಷಯವನ್ನು ಗೀತಾಕಾರರು —

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥಿ ಬಲವದ್ದೃಢಂ |
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಂ ||

ಎಂದು ಸ್ಪಷ್ಟವಾಗಿ ಹೇಳಿರುತ್ತಾರೆ. ಮನಸ್ಸು ಎಷ್ಟರಮಟ್ಟಿಗೆ ನಿಗ್ರಹಿಸಲ್ಪಡುತ್ತದೋ ಅಷ್ಟಷ್ಟು ಇಂದ್ರಿಯಗಳು ನಿರ್ಮಲವಾಗಿ ಹರಿಯುವವು. ನಮ್ಮ ದೇಹ ಪ್ರವರ್ತನೆಗೆ ಶಾಸ್ತ್ರಕಾರರು ಶರೀರವನ್ನೇ ರಥವನ್ನಾಗಿಯೂ, ಇಂದ್ರಿಯಗಳನ್ನೇ ಆ ರಥಕ್ಕೆ ಹೂಡಿದ ಕುದುರೆಗಳನ್ನಾಗಿಯೂ, ಆತ್ಮನನ್ನೇ ರಥದಲ್ಲಿ ಕುಳಿತವನನ್ನಾಗಿಯೂ, ಮನಸ್ಸನ್ನೇ ಕುದುರೆಗಳಿಗೆ ಹಾಕಿದ ಕಡಿವಾಣವನ್ನಾಗಿಯೂ ವರ್ಣಿಸಿರುವುದನ್ನು ನೋಡಿದರೆ ಮನಸ್ಸು ವಿಷಯಗಳೆಂಬ ದುರ್ಮಾರ್ಗದಲ್ಲಿ ಓಡುತ್ತಿರುವ ಇಂದ್ರಿಯಗಳೆಂಬ ಕುದುರೆಗಳನ್ನು ಸನ್ಮಾರ್ಗಕ್ಕೆ ತರುವ ಸಾಧನವೆಂದು ಸ್ಪಷ್ಟವಾಗುತ್ತದೆ. ಈ ಮನಸ್ಸೆಂಬ ಕಡಿವಾಣವು ಆತ್ಮನ ಅಧೀನದಲ್ಲಿ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಇಂದ್ರಿಯಗಳೆಂಬ ಕುದುರೆಗಳು ಮನೋವಶದಲ್ಲಿರುತ್ತವೆ. ಈಗಿನ ಕಾಲದಲ್ಲಿ ಪ್ರಾಯಶಃ ಚಕ್ಷುರಾದೀಂದ್ರಿಯಗಳೆಂಬ ಕುದುರೆಗಳು ಮನವೆಂಬ ರಭಸವಾಗಿ ಕಾಣಿಸಿಕೊಳ್ಳುತ್ತಿರುವ ವಿಷಯಗಳನ್ನು ನೋಡಿ ಸ್ವೇಚ್ಛೆಯಿಂದ ಓಡುವ ಜೋರಿನಲ್ಲಿ ಆತ್ಮನೆಂಬ ರಥಿಕನು ಕೈಯಲ್ಲಿ ಹಿಡಿದಿರುವ ಮನಸ್ಸೆಂಬ ಲಗಾಮನ್ನು ಕಿತ್ತೊಗೆದು ಎತ್ತಬೇಕತ್ತ ಓಡುತ್ತ, ಶರೀರವೆಂಬ ರಥವು ಮುರಿಯುವಂತೆಮಾಡಿ ಒಳಗಿರುವ ಆತ್ಮನನ್ನು ಅನೇಕವಿಧ ಸಂಕಟಗಳಿಗೀಡುಮಾಡುತ್ತಿರುತ್ತವೆ. ಆತ್ಮನಿಗುಂಟಾದ ಈ ತರದ ಸಂಕಟವು ತಪ್ಪಬೇಕಾದರೆ, ಆ ಮನಸ್ಸು ಯಥಾಪ್ರಕಾರ ಆತ್ಮನ ಅಧೀನವಾಗಬೇಕು. ಮನಸ್ಸಾಧನದಿಂದ ಅಪ್ಪಮಾರ್ಗದಲ್ಲಿ ನುಗ್ಗಿರುವ ಕುದುರೆಗಳು ಗುರೂಪದೇಶದೊಡನೆ ನಾವು ಸನ್ಮಾರ್ಗದಲ್ಲಿ ಪ್ರವೇಶಿಸಬೇಕು. ಹಾಗಲ್ಲದಿದ್ದರೆ ಮುಕ್ತಿಯೆಂಬ ರಾಜಧಾನಿಗೆ ಹೋಗಲು ಸಾಧನವೆಂದು ಈಶ್ವರನಿಂದ ಅನುಗ್ರಹಿಸಲ್ಪಟ್ಟಿರುವ ಈ ಶರೀರವೆಂಬ ರಥವು ನರಕಸಾಧನವಾಗಿ ಪರಿಣಮಿಸಬೇಕಾಗುತ್ತದೆ. ಯಾವಾಗಲೂ ಸಂಸಾರವೆಂಬ ಕಾಡಿನಲ್ಲಿ ಅಲೆಯುತ್ತಿರುವ ಈ ಜೀವಾತ್ಮನು ತನ್ನ ಸ್ಥಾನವೆನಿಸಿದ ಶಿವರಾಜ್ಯವನ್ನು ಸೇರಲು ಅಪೇಕ್ಷಿಸಿ ಹೊರಟಿರುವದರಿಂದ ಈ ಶರೀರವು ಇಂದ್ರಿಯಗಳು ಮನಸ್ಸು ಮುಂತಾದ ಪದಾರ್ಥಗಳು ಆತ್ಮನಿಗೆ ಅನುಕೂಲಗಳಾಗಿರುವುದಕ್ಕೆ ಬದಲು ಪ್ರತಿಕೂಲಗಳಾಗಿರುವದರಿಂದ ಆತ್ಮನು ಪರಮಾತ್ಮನನ್ನು ಮರೆತು ರಾಧಾಪುತ್ರನೆಂದೇ ತಿಳಿದುಕೊಂಡಿದ್ದ ಕರ್ಣನಂತೆ ವಿಷಯಸೌಖ್ಯವೇ ತನ್ನ ಪರಮಧ್ಯೇಯವೆಂದು ತಿಳಿದುಕೊಂಡಿದ್ದಾನೆ. ಶ್ರೀಕೃಷ್ಣನ ಬೋಧೆಯಿಂದ ನಿಜವೃತ್ತಾಂತವನ್ನು ತಿಳಿದುಕೊಂಡಂತೆ ಸದ್ಗುರುವಿನ ಕಟಾಕ್ಷದಿಂದ ಆತ್ಮನು ನಿಜವೃತ್ತಾಂತವನ್ನು ತಿಳಿದ ಹೊರತು ಪರಿಭ್ರಮಣವು ತಪ್ಪುವಂತಿಲ್ಲ.

ರೋಮಿನಲ್ಲಿ ಕರ್ಫ್ಯೂ ಆಜ್ಞೆ

ತಾ॥ 19ನೇ ದಿವಸ ರಾತ್ರಿ ರೋಂ ನಗರದಲ್ಲಿ ವಾಹನ ಸಂಚಾರವೆಲ್ಲಾ ನಿಂತುಹೋಗಿತ್ತು. ಸಂಜೆ 7 ರಿಂದ ಬೆಳಿಗ್ಗೆ 6 ರವರೆಗೆ ಕರ್ಫ್ಯೂ ಆಜ್ಞೆಯಾಗಿತ್ತು.

ಯುದ್ಧವಾರ್ತೆ

ರೋಮಿನ ರಸ್ತೆ ಮಿತ್ರಸೇನೆಗಳ ಕೈಯಲ್ಲಿದೆ

ರೋಮಿಗೆ ತೆರಳುವ ಮುಖಮಾರ್ಗವನ್ನು ಐದನೇ ಸೇನೆಯು ಮತ್ತೆ ತೆರೆದಿವೆ. ೩ ದಿನ ಉಗ್ರವಾಗಿ ಹೊಡೆದಾಡಿ ಜರ್ಮನರನ್ನು ಹಿಂದಕ್ಕೆ ಅಟ್ಟಲಾಯಿತು. ಈ ಕ್ಷೇತ್ರವನ್ನು ನಾಜಿಗಳು ಬಲಪಡಿಸಿಕೊಂಡಿದ್ದರು. ಆದರೆ ಅಮೇರಿಕನರಿಂದ ಸುತ್ತುವರಿಯಲ್ಪಡುವ ಭೀತಿಯುಂಟಾದ್ದರಿಂದ ಅವರು ಹಿಮ್ಮೆಟ್ಟಿದರು. ಅಂತೂ ಈ ಕ್ಷೇತ್ರದಲ್ಲಿ ಐದನೇ ಸೇನೆ ಬಲವಾಗಿ ಬೇರೂರಿದ

ರೋಮನ್ನು ತ್ಯಜಿಸುವರೆ?

ರೋಂ ಕ್ಷೇತ್ರದಲ್ಲಿರುವ ಇಟಾಲಿಯನರನ್ನೆಲ್ಲ ಬಲವಂತದಿಂದ ಬೇರೆಕಡೆಗೆ ಸಾಗಿಸಲಾಗಿದೆಯೆಂದು ಸುದ್ದಿ ಬಂದಿದೆ. ಬಹುಶಃ ಪೈರ್‌ಗಳನ್ನೂ, ಸಿಡಿಮದ್ದನ್ನೂ ಹಾಕಲು ಅನುಕೂಲವಾಗುವಂತೆ ಮಾಡಿಕೊಳ್ಳುವುದೇ ಇದರ ಉದ್ದೇಶವಿರಬಹುದು. ಇದನ್ನು ನೋಡಿದರೆ ರೋಂ ನಗರವನ್ನು ತ್ಯಜಿಸಬೇಕೆಂದು ಜರ್ಮನರು ನಿರ್ಧರಿಸಿರಬಹುದೆಂದು ತೋರಿಬರುತ್ತದೆ. ರೋಂ ಕಡೆಗೆ ಹೋಗುವ ಮಾರ್ಗವನ್ನು ರಕ್ಷಿಸುತ್ತಿರುವ ಕಟ್ಟಕಡೆ ಜರ್ಮನ್ ಸ್ಥಾನವಾದ ಕ್ಯಾಸಿನೋವನ್ನು ಹಿಡಿಯಲು ಯುದ್ಧ ಆರಂಭವಾಗಿದೆ. ಐದನೇ ಸೇನೆ ಕಳೆದ 24 ಗಂಟೆಗಳಲ್ಲಿ ಶತ್ರುಗಳನ್ನು ಮುಖ್ಯ ಸ್ಥಾನಗಳಿಂದ ಹಿಂದಟ್ಟಿದ. ಮಿತ್ರಸೈನಿಕರು ಈಗ ನಗರವನ್ನು ಸುತ್ತುವರಿಯುವ ಪ್ರಯತ್ನದಲ್ಲಿದ್ದಾರೆ. ಜರ್ಮನರು ಮೇಲಿಂದ ಮೇಲೆ ಪ್ರತಿ ಮುತ್ತಿಗೆ ನಡೆಸುತ್ತಿದ್ದರೂ ಜ॥ ಮಾಂಟ್ಗೊಮರಿಯವರ ಸೈನಿಕರು ಮುಂದೆ ನುಗ್ಗುತ್ತಲೇ ಇದಾರೆಂದು ಹೇಳಲಾಗಿದೆ.

ಅಟ್ಲಾಂಟಿಕ್ ಕೋಟೆಯನ್ನು ರಾಮೆಲ್ಲರು ಪರೀಕ್ಷಿಸಿದರು

ಪಶ್ಚಿಮ ಯುರೋಪಿನಲ್ಲಿರುವ ಜರ್ಮನ್ ಸೇನೆಗಳ ದಂಡನಾಯಕರಾದ ವಾನ್‌ರಂಡ್ ಸ್ಟೆಡ್‌ರವರ ಕಚೇರಿಗೆ ಜ॥ ರಾಮೆಲ್ಲರು ಆಗಮಿಸಿದ್ದಾರೆ. ಯುರೋಪಿನ ಕೋಟೆಯ ರಕ್ಷಣೆಗೆ ಮಾಡಿಕೊಂಡಿರುವ ಏರ್ಪಾಡುಗಳನ್ನು ಪರಿಶೀಲಿಸುವ ಭಾರವನ್ನು ಜ॥ ರಾಮೆಲ್ಲರಿಗೆ ವಹಿಸಲಾಗಿದೆ. ಅಟ್ಲಾಂಟಿಕ್ ಕೋಟೆಯ ಬಲವನ್ನೂ ಮತ್ತು ಮಿತ್ರಸೇನೆಗಳ ದಂಡಯಾತ್ರೆಯನ್ನೆದುರಿಸಲು ಸಿದ್ಧರಾಗಿರುವ ಜರ್ಮನ್ ಬಲವನ್ನೂ ಅವರು ಪರಿಶೀಲಿಸಿದರು.

ಬೌಗನ್‌ಜಿಲ್ಲೆಯಲ್ಲಿ ಜಪಾನರ ಹಿಂದೋಟ

ಅರಾವೆ. ಕ್ಷೇತ್ರದಲ್ಲಿ ಅಮೇರಿಕನ್ ಸೈನಿಕರು ಮುಂದವರಿಯುತ್ತಲೇ ಇದ್ದಾರೆ. ನ್ಯೂಗಿನಿಯಿಂದ ತೀರ ಪ್ರದೇಶದಲ್ಲಿ ಆಸ್ಟ್ರೇಲಿಯನರು ಟ್ಯಾಂಕ್ ಬಲದೊಂದಿ ಸಾಂಗಾ ನದಿಯನ್ನು ದಾಟಿದ್ದಾರೆ. ಮುಂದೆ ಆಳವಾದ ಮುಸಾಹಾಂಗ್ ನದಿಯನ್ನು ದಾಟಬೇಕಾಗಿದೆ. ಜಪಾನರು ಹಿಂದ ಸರಿಯುತ್ತಿದ್ದಾರೆ.

೧೯೪೪ ರಲ್ಲಿ ಯೂರೋಪು ಮುತ್ತಿಗೆ!

ಅಮೇರಿಕದಿಂದ ಬ್ರಿಟನ್ನಿಗೆ ಎಡೆಬಿಡದೆ ಸೈನಿಕರ ಹ ಗುಗಳು ತೆರಳುತ್ತಿವೆ. ಇದನ್ನು ನೋಡಿದರೆ ೧೯೪೪ ರ ಆರಂಭದಲ್ಲಿ ಯುರೋಪಿನ ಮುತ್ತಿಗೆ ಖಂಡಿತವೆಂದ ಕಾಣುತ್ತದೆ. ಸಂಯುಕ್ತ ದೇಶಗಳು ಈಗ ಯೋಚಿಸಿದಂತೆ ಪಶ್ಚಿಮ ಯುರೋಪಿನ ಮೇಲೆ ದಂಡಯಾತ್ರೆ ನಡೆಸಬೇಕಾಗಿದ್ದರೆ ಕೋಟ್ಯಾಂತರ ಮಂದಿ ಅಮೇರಿಕಾ ಸೈನಿಕರು ಒಂದು ನಿರ್ಧರವಾದ ತಾರೀಖಿನೊಳಗಾಗಿ ಬ್ರಿಟನ್ನಿಗೆ ತಲುಪಬೇಕಾಗಿದೆಯೆಂದು ಹೇಳಲಾಗಿದೆ.

ಮುಂದಿನವರ್ಷ ಜಯ

ಬ್ರಿಟನ್ನಿನಿಂದ ಹಿಂತಿರುಗಿದ ಮೇಲೆ ಜ|| ಸ್ಮಟ್ಸ್‌ರವರು ಮೊದಲಸಾರಿ ಭಾಷಣಮಾಡುತ್ತ "ಮುಂದಿನ ವರ್ಷ ನಾವು ಮಹಾವಿಜಯವನ್ನು ನಿರೀಕ್ಷಿಸಬಹುದು. ಈ ವರ್ಷದ ಅಂತ್ಯದ ವೇಳೆಗೆ ನಾವು ಕಟ್ಟಕಡೇ ಮಹಾಕದನವನ್ನು ನಡೆಸುತ್ತಿರುವೆವು" ಎಂದು ಹೇಳಿದರು.

ಫ್ರಾಂಕ್‌ಫರ್ಟ್ ಮೇಲೆ ಪ್ರಚಂಡ ಧಾಳಿ

ಕಳೆದ 20ನೆಯ ತಾರೀಖು ರಾತ್ರಿ ಅನೇಕ ಬಾಂಬರುಗಳು ಜರ್ಮನಿಗೆ ತೆರಳಿ ಫ್ರಾಂಕ್‌ಫರ್ಟ್ ಮೇಲೆ ಮುತ್ತಿಗೆ ನಡೆಸಿದವು 2000 ಟನ್ನಿಗಿಂತ ಹೆಚ್ಚು ಬಾಂಬುಗಳನ್ನು ಸುರಿಸಲಾಯಿತು. ರಸಾಯನವಸ್ತು ಕಾರ್ಖಾನೆಗಳ ಮುಖ್ಯ ಕೇಂದ್ರವಿದು ಬಾಂಬು ಬಿದ್ದುದರಿಂದ ಅನೇಕಕಡೆ ಉಗ್ರವಾಗಿ ಬೆಂಕಿ ಉರಿಯಲಾರಂಭಿಸಿತು ೬೫ ಮಿತ್ರ ಬಾಂಬರುಗಳು ಮತ್ತು 8 ಫೈಟರುಗಳು ನಾಶವಾದವು.

ಜರ್ಮನರು ಹಿಮ್ಮೆಟ್ಟಿದರು

ನೆವೆಲ್ ದಕ್ಷಿಣದಲ್ಲಿರುವ ಜರ್ಮನ್ ಸೈನಿಕರು ವೈಟೆಸ್ಕ್ ಕಡೆಗೆ ಹಿಮ್ಮೆಟ್ಟುತ್ತಿದ್ದಾರೆ ಪೋಲೆಂಡ್ ಮತ್ತು ಬಾಲ್ಟಿಕ್ ದೇಶಗಳ ಕಡೆ ಹೋಗುವ ಮಾರ್ಗವನ್ನು ರಕ್ಷಿಸುತ್ತಿರುವ ಕಟ್ಟಕಡೆ ಸ್ಥಾನವೆಂದರೆ ವೈಟೆಸ್ಕ್ ಅಪಾರ ಸಂಗ್ರಾಮ ವಸ್ತುಗಳನ್ನು ಅಲ್ಲಿಯೇ ಬಿಟ್ಟು ಜರ್ಮನರು ಓಡುತ್ತಿದ್ದಾರೆ ನೆವೆಲ್ ದಕ್ಷಿಣದಲ್ಲಿ ರಷ್ಯನರು ಆರಂಭಿಸಿರುವ ಮುತ್ತಿಗೆಯು ಲೆನಿನ್‌ಗ್ರಾಡ್ ನಿಂದ ಕಪ್ಪುಸಮುದ್ರದವರೆಗೆ ಮುಂದೆ ಆರಂಭವಾಗಲಿರುವ ಮಹಾಕದನದ ಮುನ್ಸೂಚನೆಯೆಂದು ಕಾಣಬರುತ್ತಿದೆ

ವಿಮಾನನಿರ್ಮಾಣ ಪ್ರಯತ್ನ

ಟೋಕಿಯೋ ರೇಡಿಯೋದಲ್ಲಿ ಜಪಾನಿನ ವಿಮಾನ ಸೃಷ್ಟಿಶಾಖೆಯ ಮುಖ್ಯಾಧಿಕಾರಿಯು ಮಾತನಾಡುತ್ತ, 'ನಾವು ಶೀಘ್ರದಲ್ಲಿಯೇ ವಿಮಾನಗಳನ್ನು ಅಧಿಕ ಪ್ರಮಾಣದಲ್ಲಿ ಸೃಷ್ಟಿಸಬೇಕಾಗಿದೆ ಇದರಲ್ಲಿ ನಮ್ಮ ಶಕ್ತಿಯನ್ನು ತೋರಿಸಿರುವುದರಿಂದಲೇ ನಮ್ಮ ಸೋಲುಗೆಲವುಗಳ ನಿರ್ಧಾರವಾಗಬೇಕಾಗಿದೆ. ಈ ವರ್ಷಕಾಲದಲ್ಲಿ ಒಂದು ನಿಮಿಷವನ್ನೂ ವ್ಯರ್ಥಗೊಳಿಸಲಾಗದು" ಎಂದು ಹೇಳಿದರು ಎಂಬದಾಗಿ ಪ್ರಕಟವಾಗಿದೆ

ಹೊಸ ತುರ್ಕಿ-ರಷ್ಯಾ ಒಪ್ಪಂದ

ರಷ್ಯಾ-ತುರ್ಕಿಗಳಿಗೆ ಹೊಸ ಒಪ್ಪಂದವೊಂದು ಆಗಿದೆ ಎಂಬುದಾಗಿ ಸುದ್ದಿ ಹೊರಟಿದೆ. ರಷ್ಯಾ-ಚಕೊಸ್ಲೊವೇಕಿಯಾ ಒಪ್ಪಂದದ ಮಾದರಿಯಲ್ಲಿಯೇ ಇದೂ ಇರುವುದು. ಇದರ ಫಲವಾಗಿ ಬಾಲ್ಕನ್ನಿನಲ್ಲಿ ವಿಶೇಷ ಪರಿಣಾಮವು ಕಾಣಬರುವುದಾಗಿ ಊಹಿಸಲಾಗಿದೆ

ತುರ್ಕಿಯ ಮುಂದಿನ ನೀತಿಯೇನು?

ತುರ್ಕಿಯು ಸಂಗ್ರಾಮಕ್ಕೆ ಇಳಿಯುವ ವಿಚಾರದಲ್ಲಿ ಅಸಾಧ್ಯ ಊಹಾಪೋಹಗಳಾಗುತ್ತಿವೆ. ಆದರೆ ತುರ್ಕಿ ಕ್ಷೇತ್ರಗಳಿಂದ ಬರುತ್ತಿರುವ ಸುದ್ದಿಗಳನ್ನು ನೋಡಿದರೆ ತಾಟಸ್ಥ್ಯ ನೀತಿಯನ್ನು ತುರ್ಕಿ ಇನ್ನೂ ಸಡಲಿಸಿಲ್ಲವೆಂಬುದು ವ್ಯಕ್ತವಾಗುತ್ತದೆ. ತುರ್ಕಿಯ ಸಹಾನುಭೂತಿ ಸಂಪೂರ್ಣವಾಗಿ ಮಿತ್ರ ದೇಶಗಳ ಕಡೆ ಇದೆ ಆದರೆ ಈಗಿನ ಸಂಗ್ರಾಮ ಮುಗಿಯಲು ಇನ್ನೂ ಬಹಳ ಕಾಲ ಹಿಡಿಯುವುದೆಂದೂ, ಯುದ್ಧ ನಿಂತ ಮೇಲೆ ಆರಂಭವಾಗುವ ಉಗ್ರ ಕಿತ್ತಾಟವನ್ನು ಎದುರಿಸಲು ಸಣ್ಣ ಪುಟ್ಟ ದೇಶಗಳು ತಮ್ಮ ಬಲವನ್ನು ಕಾಯ್ದಿಡಬೇಕೆಂದೂ ತುರ್ಕಿಯು ಅಭಿಪ್ರಾಯಪಡುವಂತಿದೆ ಸಂಗ್ರಾಮಾನಂತರ ಈಗಿನದಕ್ಕಿಂತ ಉಗ್ರವಾದ ಪರಿಸ್ಥಿತಿ ತಲೆದೋರುವುದೆಂಬುದು ಅವರ ಮತ. ತುರ್ಕಿಯ ಜನ ಕದನ ಕುಶಲಿಗಳಾದರೂ ಅವರಿಗೆ ತಕ್ಕ ಸಾಧನ ಸಂಪತ್ತುಗಳಿಲ್ಲವೆಂಬ ಅಂಶವನ್ನು ಒಪ್ಪಿ ತಿಳಿಸುತ್ತಲಾಗಿದೆ ತುರ್ಕಿಯಲ್ಲಿ ಸಂಗ್ರಾಮ ವಸ್ತು ಕಾರ್ಖಾನೆಗಳಿಲ್ಲ. ಟ್ಯಾಂಕುಗಳು ವಿಮಾನಗಳು ಇವುಗಳೆಲ್ಲ ತುರ್ಕಿ ಪಶ್ಚಿಮ ದೇಶಗಳ ಕಡೆ ನೋಡಬೇಕಾಗಿದೆ. ಆದ್ದರಿಂದ ಅಕಾಲದಲ್ಲಿ ತಾಟಸ್ಥ್ಯ ನೀತಿಯನ್ನು ತ್ಯಜಿಸುವುದಾದರೆ ಬಲಯುತವಾದ ಶತ್ರು ಸೇನೆ ತುರ್ಕಿಯನ್ನು ಮುತ್ತಬಹುದೆಂದು ಅಭಿಪ್ರಾಯ ಪಡಲಾಗಿದೆ

ವಿಮಾನಮುತ್ತಿಗೆ ಭೀತಿ

ಜಪಾನಿನಲ್ಲಿರುವ ಎಲ್ಲ ಮುಖ್ಯ ನಗರಗಳಿಂದಲೂ ಜನರನ್ನು ಹೊರಗೆ ಕಳಿಸಬೇಕೆಂಬುದಾಗಿ ಜಪಾನ್ ಸರಕಾರ ಆಜ್ಞೆಮಾಡಿದೆ ಇದನ್ನು ವಿರೋಧಿಸಿದವರಿಗೆ ಮಿಲಿಟರಿ ಕಾನೂನು ಪ್ರಕಾರ ಶಿಕ್ಷೆ ವಿಧಿಸಲಾಗುತ್ತದೆ ಮಿತ್ರವಿಮಾನಗಳ ಮುತ್ತಿಗೆ ಭೀತಿಯಿಂದ ಈ ಕಾರ್ಯಕ್ರಮ ಕೈಗೊಳ್ಳಲಾಗಿದೆಯೆಂದು ಹೇಳಲಾಗಿದೆ

ನಿಜವಾದ ಕದನ ಮೊದಲಾಗಿಲ್ಲ

ಬರ್ಮಾ ಗಡಿನಾಡಿನಲ್ಲಿರುವ ಲಂಡನ್ ಡೇಲಿಮೇಲ್ ಸುದ್ದಿಗಾರರು ತಮ್ಮ ವರದಿಯಲ್ಲಿ — "ಆಗ್ನೇಯ ಏಷಿಯಾ ದಂಡನಾಯಕರ ಆಗಮನದಿಂದ ಈ ರಂಗದ ಸ್ಥಿತಿ ಉತ್ತಮಗೊಂಡರೂ ಈಗಾಗಲೇ ಮಹಾಕದನವು ಆರಂಭವಾಗುತ್ತದೆಯೆಂದು ಹೇಳಲು ಹಿಂತೆಗೆಯುತ್ತೇನೆ. ಜರ್ಮನಿಯ ಹಣೆಬರಹ ನಿರ್ಧಾರವಾಗುವವರೆಗೆ ಈ ರಂಗಕ್ಕೆ ಮಿತ್ರರಾಷ್ಟ್ರಗಳು ಸಂಪೂರ್ಣ ಲಕ್ಷ್ಯಕೊಡುವುದೇ ಎಂಬ ಸಂಶಯವು ಸಹಜವೆ. ನಿಶ್ಚಯವಾಗಿ ಹೇಳುವುದಾದರೆ ಈ ರಂಗದಲ್ಲಿ ಎಲ್ಲಿಯೂ ಶತ್ರುವಿನೊಂದಿಗೆ ಬಿಡಾಬಿಡಿ ಕದನವಾಗುತ್ತಿಲ್ಲ. ಸಂಪೂರ್ಣವಾದ ಮತ್ತು ಈ ಸಂಗ್ರಾಮದ ಹಣೆಬರಹವನ್ನು ರೂಪಿಸಬಲ್ಲ ಮಹಾಕದನ ನಡೆಸಲು ಇನ್ನೂ ಕೊಂಚ ಕಾಲ ಕಾಯಬೇಕೋ ಏನೋ ಎಂದು ನಾನು ಭಾವಿಸುತ್ತೇನೆ" ಎಂದು ತಿಳಿಸಿರುವುದಾಗಿ ಹೇಳಲಾಗಿದೆ.

ಪೋರ್ಚುಗೀಸರ ಬೇಡಿಕೆ

ನೈರುತ್ಯ ಪೆಸಿಫಿಕ್ ಸಾಗರದಲ್ಲಿರುವ ಪೋರ್ಚುಗೀಸರಿಗೆ ಸೇರಿದ ಟೈಮರ್ ದ್ವೀಪವನ್ನು ಜಪಾನರು ಆಕ್ರಮಿಸಿರುವರಷ್ಟೆ. ಅಲ್ಲಿಂದ ಜಪಾನರು ಕೂಡಲೇ ಹೊರಡಬೇಕೆಂದು ಪೋರ್ಚುಗೀಸ್ ಪತ್ರಿಕೆಯು ಹೇಳುತ್ತಿದೆ ಪೋರ್ಚುಗೀಸ್ ಮಂತ್ರಿ ಡಾ|| ಸಾಲ್ಜಾರ್ ರವರು ಈ ಬಗ್ಗೆ ಜಪಾನ್ ರಾಯಭಾರಿಯೊಂದಿಗೆ ಮಾತುಕತೆ ನಡೆಸಿದರೆಂದೂ ಹೇಳಲಾಗಿದೆ.

ಮುದ್ರೆಯಿಲ್ಲದ ಬಟ್ಟೆ ವಿಲೇವಾರಿ

೩೧-೧-೪೪ ರ ಅನಂತರ ವಿಲೇವಾರಿಯಾಗದೆ ಉಳಿಯುವ ಮುದ್ರೆಯಿಲ್ಲದ ಹತ್ತಿ ಬಟ್ಟೆಗಳು ಮತ್ತು ದಾಸ್ತಾನನ್ನು ಸಂಬಂಧಿಸಿದ ಅಧಿಕಾರಿಗಳು ವಶಪಡಿಸಿಕೊಂಡು ಸೀಲು ಮಾಡುವರು ಈ ಬಟ್ಟೆ ಮಾರಾಟವಾಗದೆ ಇರುವುದಕ್ಕೆ ಕಾರಣ ತೋರಿಸಲು ವ್ಯಾಪಾರಗಾರರು ಕೋರ್ಟಿಗೆ ಹೋಗಲು ಅವಕಾಶವಿದೆ ಈ ಬಟ್ಟೆಗಳ ಮೇಲೆ ಆಯಾ ಪ್ರಾಂತದ ಟೆಕ್ಸ್‌ಟೈಲ್ ಅಧಿಕಾರಿಗಳು ತಮ್ಮ ಅಪ್ಪಣೆ ಗುರುತು ಹಾಕಿಸಿ, ಅವುಗಳ [illegible] ಬೆಲೆಯನ್ನು ನಿಗದಿಮಾಡುತ್ತಾರೆ ಆ ರೀತಿ ನಿರ್ಣಯಿಸಿದ ಬೆಲೆಯ ಮೇಲೆ ಶೇಕಡ ೧೦ ರಷ್ಟು ಅಧಿಕವಾದ ಬೆಲೆಗೆ ಅವನ್ನು ಮಾರಲಾಗುತ್ತದೆ ಈ ವ್ಯಾಪಾರದಿಂದ ಬಂದ ಲಾಭವನ್ನು ಬಡಜನರ ವ್ಯಾಪಾರಸ್ಥರ ಸಹಾಯನಿಧಿಗಾಗಿ ಕೊಡಲಾಗುತ್ತದೆ ಹೀಗೆಂದು ಇಂಡಿಯಾ ಸರಕಾರದ ಪ್ರಕಟನೆ ತಿಳಿಸುತ್ತದೆ.

ಚಿತ್ತಗಾಂಗ್ ಮೇಲೆ ಬಾಂಬು

ಡಿಸೆಂಬರ್ 20ನೇ ತಾರೀಖಿನ ಬೆಳಗಿನ ಜಾವ ಚಿತ್ತಗಾಂಗ್ ಕ್ಷೇತ್ರದಲ್ಲಿ ಒಂದು ಶತ್ರುವಿಮಾನವು ಕೆಲವು ಬಾಂಬುಗಳನ್ನು ಮಾತ್ರ ಹಾಕಿತು ತೀರ ಕಡಿಮೆ ಜನರ ಸಾವುನೋವುಗಳು, ಹಾನಿಯಾದವೆಂದು ವರದಿ ಬಂದಿದೆ.

ಕಾಂಗ್ರೆಸ್ಸಿನವರು ಜಪಾನಿಗೆ ಜಯ ಬಯಸುವದಿಲ್ಲ

ಭಾರತದ ಸಂಗ್ರಾಮ ಪ್ರಯತ್ನದ ಅರಿವನ್ನು ಬ್ರಿಟಿಷ್ ಪ್ರಜೆಗಳಿಗೆ ಉಂಟುಮಾಡಿಕೊಡುವದಕ್ಕೋಸ್ಕರ ಬ್ರಿಟನ್ನಿಗೆ ಬಂದಿರುವ ನಿಯೋಗದವರೊಬ್ಬರು. ನಾಯಕರಾದ ಶ್ರೀ ಶ್ರೀನಿವಾಸ ಶರ್ಮರನ್ನು ಇಂದು ಸುದ್ದಿಗಾರರು ಭೇಟಿಮಾಡಿದಾಗ "ಕಾಂಗ್ರೆಸಿನ ಅತ್ಯಗ್ರ ನಾಯಕರೆನಿಸಿದವರು ಸಹ ಜಪಾನಿಗೆ ಜಯವಾಗಲೆಂದು ಬಯಸುವುದಿಲ್ಲ" ಎಂಬುದಾಗಿ ತಿಳಿಸಿದರು

ನಾಯಕರು ಬಿಕ್ಕಟ್ಟನ್ನು ಬಿಡಿಸಬೇಕು

ನಮ್ಮ ರಾಜಕೀಯ ಜಗಳವನ್ನು ಬಗೆಹರಿಸಿಕೊಂಡು ಜಪಾನಿನಮೇಲೆ ನಡೆಸಲಿರುವ ಕದನಕ್ಕೆ ಕಾಂಗ್ರೆಸ್ಸಿನವರೆಲ್ಲರ ಬೆಂಬಲವನ್ನು ನೀಡಬೇಕೆಂದು ಜನರಲ್ ಚಿಯಾಂಗ್ ಕೈ ಷೇಕರು ಕಾಂಗ್ರೆಸ್ ನಾಯಕರನ್ನು ಕುರಿತು ಪ್ರಾರ್ಥನೆಮಾಡಿದ್ದಾರೆಂಬುದಾಗಿ ನ್ಯೂಸ್ ಕ್ರಾನಿಕಲ್ ಪತ್ರಿಕೆಯ ನವದೆಹಲಿ ಸುದ್ದಿಗಾರರು ತಿಳಿಸುತ್ತಾರೆ. ಭಾರತದ ಬಿಕ್ಕಟ್ಟನ್ನು ಬಗೆಹರಿಸಿ ಜಪಾನಿನ ವಿರುದ್ಧವಾಗಿ ನಡೆಸಲಿರುವ ಕದನದಲ್ಲಿ ಪೂರ್ಣ ಬೆಂಬಲ ಕೊಡಬೇಕೆಂದು ಚಿಯಾಂಗ್ ಕೈ ಷೇಕರು ಗಾಂಧಿಜಿ ಮುಂತಾದ ಕಾಂಗ್ರೆಸ್ ನಾಯಕರಿಗೆ ಪ್ರಾರ್ಥನೆ ಮಾಡಿದ್ದಾರೆಂದು ಡೈಲಿ ಹೆರಾಲ್ಡ್ ಪತ್ರಿಕೆ ತಿಳಿಸಿದೆ ಜಪಾನಿನ ಮೇಲೆ ಭಾರಿ ದಂಡಯಾತ್ರೆ ನಡೆಸಲು ಭಾರತವು ಮುಖ್ಯ ಮೂಲಸ್ಥಾನವಾಗಬೇಕಾಗಿದ್ದರೆ, ಭಾರತದಲ್ಲಿ ಜನರ ಸ್ವಚ್ಛ ಸಮ್ಮತಿಯಿಂದೊಡಗೂಡಿದ ಸರಕಾರವಿರಬೇಕೆಂಬುದು ಚಿಯಾಂಗರ ಅಭಿಪ್ರಾಯ ಇದೆ ದಕ್ಷಿಣ ಭಾರತದಿಂದ ಆಗುವ ಮುತ್ತಿಗೆಯನ್ನು ಪ್ರಯೋಗಿಸುವ ಮುನ್ನ ಅಲ್ಲಿನ ಕ್ಷಾಮವನ್ನು ನಿವಾರಿಸಬೇಕೆಂದು ಸಹ ಅವರು ಭಾವಿಸಿದ್ದಾರೆ. ಹೊಸ ವರ್ಷದ ಆರಂಭದಲ್ಲಿ ಶ್ರೀ ಅಮೇರಿಯವರು ಭಾರತ ಕಛೇರಿಯನ್ನು ಬಿಡುವರೆಂದೂ, ಆಗ ಸಾ|| ಪಟೇಲರು, ಗಾಂಧೀಜಿ ನೆಹರೂ, ಆಜಾದ್ ಮುಂತಾದ ನಾಯಕರನ್ನು ಬಿಡುವರೆಂದೂ ರಾಷ್ಟ್ರೀಯ ಸರಕಾರ ಸ್ಥಾಪನೆಗಾಗಿ ಅವಕಾಶ ಕಲ್ಪಿಸಲಾಗುವುದೆಂದೂ ಇಷ್ಟಲ್ಲದೇ ವೈಸರಾಯರು ತಮ್ಮ ಮಂತ್ರಿಮಂಡಲದಲ್ಲಿ ಪೂರ್ಣವಾಗಿ ಭಾರತೀಯರೇ ಇರುವಂತೆ ಮಾಡುವರೆಂದೂ, ಸರ್ ಎ. ರಾಮಸ್ವಾಮಿ ಮೊದಲಿಯಾರರು ಹಣಕಾಸಿನ ಸಚಿವರಾಗುವರೆಂದೂ ಹೇಳಲಾಗಿದೆ

ಸ್ವೀಕಾರ

ಅಹಮ್ಮದನಗರ ಜಿ|| ಖರಡ ಗ್ರಾಮನಿವಾಸಿಗಳಾದ ರಾ|| ವೀರಭದ್ರಪ್ಪನವರ ವಿವಾಹವು ಜ್ಯೇಷ್ಠಮಾಸದಲ್ಲಿ ನೆರವೇರಿದ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 5 ರೂ. ಗಳು ಬಾರ್ಶಿ ಶ್ರೀ|| ವೇ|| ಬ್ರ|| ಪರಾಂಡಕರ್ ಸ್ವಾಮಿಗಳವರ ದ್ವಾರಾ ತಲ್ಪಿರುತ್ತವೆ.

ಸೊಲ್ಲಾಪುರದಲ್ಲಿರುವ ಗುರುಭಕ್ತ ಶಿಖಾಮಣಿ ಶ್ರೀಮಂತ ಸಿದ್ರಾಮಪ್ಪ ಪಾಕಳೆ ಇವರ ಪುತ್ರನಿಗೆ ಅಸಾಧ್ಯವಾದ ಘಟಸರ್ಪರೋಗವು ಸ್ವಸ್ಥವಾಗಿ ಶ್ರೀಗುರುವಿನ ಅನುಗ್ರಹದಿಂದ ನಿವಾರಣೆಯಾದ ಸಂತೋಷಕ್ಕೋಸ್ಕರ ಪ್ರಭಾಪೋಷಣಕ್ಕಾಗಿ ಸಮರ್ಪಿಸಿದ 2 ರೂ. ಗಳು ಮ|| ರಾ|| ಚನಗೊಂಡಪ್ಪ ಗುರುಪ್ಪಾ ಪಾಟೀಲ ಗೋಡ್ಯಾಳಕರ ಮು|| ಸೊಲ್ಲಾಪುರ ಇವರ ದ್ವಾರಾ ತಲ್ಪಿರುತ್ತವೆ.

ಬಳ್ಳಾರಿ ಜಿ|| ಹುವ್ವಿನಹಡಗಲಿಯಲ್ಲಿರುವ ಮ|| ರಾ|| ಬಣಕಾರ ಶಂಕರಪ್ಪನವರು ತಮ್ಮ ತಂದೆಯವರ ಕೈಲಾಸ ಗಣಾರಾಧನೆಯ ಸಮಯದಲ್ಲಿ ಪ್ರಭಾಪೋಷಣಕ್ಕೋಸ್ಕರ ಸಮರ್ಪಿಸಿದ 2 ರೂ. ಗಳು ಶ್ರೀಮಂತ ಗುಗ್ರಿ ಹುಚ್ಚಪ್ಪನವರ ದ್ವಾರಾ ತಲ್ಪಿರುತ್ತವೆ.

ಈ ಮೇಲ್ಕಂಡ ಮಹಾಶಯರಿಗೆಲ್ಲಾ ಶ್ರೀಜಗದ್ಗುರು ಪಂಚಾಚಾರ್ಯರು ನಿತ್ಯಮಂಗಲವನ್ನೀಯಲೆಂದು ಹಾರೈಸುತ್ತೇವೆ.

([illegible])

[illegible] ಶ್ರೀ [illegible] ಪ್ರಸಾದ [illegible] ಬಸವರಾಜ [illegible] ಮಠದ [illegible] ಸಾವಿರಾರು [illegible] ಬಿಟ್ಟು [illegible] ಇವರ [illegible] ವೃದ್ಧಿ [illegible] ಜನರು [illegible] ವಿದ್ಯಾಸಂಸ್ಥೆ [illegible] ಶ್ರೀ|| ಸ|| ಪಂಚಾಕ್ಷರ [illegible] ಒಂದು [illegible] ಒಂದು [illegible] ಶ್ರೀಗಳ [illegible] ಅವಕ್ಕೆ [illegible] ನಡೆಯಿತು [illegible] ಶ್ರೀ [illegible] ಮ|| ರ [illegible]

ಬಿಲಕೊಂಡಿಮಠದ [illegible] ದೊಡ್ಡಬಸಪ್ಪ [illegible] ವೀರಶೈವ ಸಂಪನ್ನರಾದ ಪಾಟೀಲ [illegible] ಶ್ರೀ [illegible] ಸಜ್ಜನರ [illegible] ಕರೆಯಿಸಿದರು [illegible] ಉಚಾರದಲ್ಲಿ [illegible] ಮುನ್ನೂರು ಎಕರೆ ಭೂಮಿ [illegible] ಶ್ರೀ [illegible] ವೀರಶೈವ [illegible] ರೂಪಾಯಿ [illegible] ಧನ್ಯ [illegible] ಪರಿಣಾಮ [illegible] ಶ್ರೀ [illegible] ಶ್ರೀಯುತರ [illegible] ಪತ್ನಿ ಶ್ರೀಮತಿ [illegible] ರಿಜಿಸ್ಟರ್ ಮಾಡಿಸಿಕೊಡಬೇಕೆಂದು ಹೇಳಿದರು. ಶ್ರೀಯುತರು ಇಂಥ ತ್ಯಾಗಬುದ್ಧಿಯಿಂದ [illegible] ಉಪಾಯ [illegible] ಆಜ್ಞೆಯನ್ನು [illegible] ಕೊಟ್ಟು [illegible] ಮುಂದಿನ [illegible] ಶ್ರೀ [illegible] ಮತ್ತು ದೊಡ್ಡ ಬಸಪ್ಪನವರು [illegible] ಸಂದರ್ಭ [illegible] ಮಾಡಬೇಕೆಂದು ಹೇಳಿದರು. ಗುರುಸ್ವಾ[illegible] ನಿರತರಾದ ಶ್ರೀಯುತ ಸಂಗಪ್ಪನವರಿಗೆ ಶ್ರೀಜಗದ್ಗುರು ಪಂಚಾಚಾರ್ಯರು [illegible] ಪ್ರಾರ್ಥಿಸುವ

[illegible] ಬಿಲಕೊಂಡಿಮಠ [illegible]

ಆಹಾರವಸ್ತುಗಳ ಮೇಲೆ ಸರಕಾರದ ಆಜ್ಞೆ

ಇನ್ನುಮುಂದೆ ಸಂಸ್ಥಾನದಲ್ಲಿ ಆಹಾರವಸ್ತುಗಳನ್ನು ಕೊಂಡು ಮಾರುವವರು [illegible] ಮಾತ್ರ [illegible] ಬೆಳೆಯುವವರು ತಮಗೆ ಸಾಕಾಗುವಷ್ಟು ಧವಸವನ್ನು ಇಟ್ಟುಕೊಂಡು ಉಳಿದದ್ದನ್ನು [illegible] ಕೊಟ್ಟುಬಿಡಬೇಕು [illegible] ಆದರೆ [illegible] ಅಥವಾ [illegible] ಇಟ್ಟು[illegible] ಬೇಕಾ[illegible] ಇಟ್ಟುಕೊಳ್ಳಬಹುದು [illegible] ಡಿವಿಜನ್ [illegible] ವೀರ [illegible] ಇಟ್ಟು[illegible] ಒಪ್ಪಿಸಬೇಕೆಂಬ ಆಜ್ಞೆ [illegible] ಎಕರೆಗೆ [illegible] ಜಮೀನಿನ ಆಧಾರ [illegible] ಎಕರೆ [illegible] ಇಟ್ಟುಕೊಳ್ಳ[illegible] ಮಾತ್ರ ಅನ್ವಯಿಸುವಂತೆ [illegible] ಪ್ರಮಾಣದ [illegible] ತಮಗೆ ಸಾಕಾಗಿ [illegible] ಧವಸವನ್ನು [illegible] ತಂದೊಪ್ಪಿಸಬೇಕೆಂಬ ನಿರ್ಬಂಧ [illegible] ಸರಕಾರದವರಿಗೆ [illegible] ಮತ್ತು [illegible] ಪ್ರಕಟಿಸಿರುವ [illegible] ಒಳಗಾಗುವುದಿಲ್ಲ [illegible] ಬೆಳೆಯುವ ಧವಸದ [illegible] ಒಂದು ಭಾಗವನ್ನು ಮಾತ್ರ ಕೊಟ್ಟರೆ ಸಾಕು [illegible] ಅತ್ಯಂತ ಸಮೀಪದ ಸರಕಾರಿ ಡಿಪೋವಿಗೆ ತಲುಪಿಸುವಂತೆ [illegible] ಆಗುವುದು [illegible] ಅಥವಾ [illegible] ಇತರರ ವಶದಲ್ಲಿ ಬಿಟ್ಟಿರಲಾಗುವುದು [illegible] ಇಟ್ಟುಕೊಳ್ಳಲು ತಿಂಗಳಿಗೆ [illegible] ಒಂದಕ್ಕೆ ೨ [illegible] ಕೊಡಲಾಗುವುದು.

ಸರ್ವೋತ್ತಮವಾದ ಮತಗ್ರಂಥಗಳು

[illegible] (೨ನೆಯ ಆವೃತ್ತಿ)	೧ ಆಣೆ
[illegible] (೨ನೆಯ ಆವೃತ್ತಿ ಸಂಸ್ಕೃತ)	೧ ಆಣೆ
[illegible] (೨ನೆಯ ಆವೃತ್ತಿ)	೧ ಆಣೆ
ಶ್ರೀ [illegible] ಮಂಗಲಸ್ತೋತ್ರಾವಳಿ (೫ನೆಯ ಆವೃತ್ತಿ)	೧ ಆಣೆ
[illegible] ವಿಧಿ (೭ನೆಯ ಆವೃತ್ತಿ)	೧ ಆಣೆ
ಶ್ರೀ [illegible] ಪಂಚಾಚಾರ್ಯರ ನಾಮಾವಳಿ ([illegible] ಆವೃತ್ತಿ)	೨ ಆಣೆ
ಬ[illegible] ತತ್ತ್ವದರ್ಪಣ (೨ನೆಯ ಆವೃತ್ತಿ)	೨ ಆಣೆ
ಶ್ರೀ [illegible] (೨ನೆಯ ಆವೃತ್ತಿ)	೨ ಆಣೆ
[illegible] ಪ್ರಭಾಕರ	೨ ಆಣೆ
ಶ್ರೀ[illegible]ತತ್ತ್ವ[illegible]	೨ ಆಣೆ
ಶ್ರೀ[illegible]	೨ ಆಣೆ
[illegible] ಪ್ರಕಾಶಿಕಾ	೨ ಆಣೆ
[illegible]	೨ ಆಣೆ
ವೀ[illegible]ವಿಧಿ (೩ನೆಯ ಆವೃತ್ತಿ)	೪ ಆಣೆ
ಲಿ[illegible]	[illegible] ಆಣೆ
[illegible] ([illegible] ಆವೃತ್ತಿ)	೪ ಆಣೆ
ಶ್ರೀ[illegible]	೪ ಆಣೆ
[illegible] ([illegible])	೪ ಆಣೆ
ವೀರಶೈವ [illegible]	೪ ಆಣೆ
ಸನ್ಯಾಸ [illegible] ([illegible] ಆವೃತ್ತಿ)	೬ ಆಣೆ
ಸಿದ್ಧಾಂತ[illegible]ಮಣಿ (ಮೂಲ [illegible])	೬ ಆಣೆ
ವೀರಶೈವ[illegible]ವಿಧಿ	೬ ಆಣೆ
ವೀರಶೈವಮತಸ್ತವ	೮ ಆಣೆ
ಬಸವಸಿದ್ಧಾಂತದಿವಾಕರ (೨ನೆಯ ಆವೃತ್ತಿ)	೮ ಆಣೆ
ಶಿವಾದ್ವೈತಪರಿಭಾಷಾ (ಸಂಸ್ಕೃತ)	೮ ಆಣೆ
ಪಂಡಿತ ಶ್ರೀಕಾಶೀನಾಥಶಾಸ್ತ್ರಿಗಳವರ ಭಾಷಣಗಳು ([illegible])	೮ ಆಣೆ
ಸದ್ಬೋಧರತ್ನಾವಳಿ	೮ ಆಣೆ
ವೈದಿಕಶಿವಪೂಜಾವಿಧಿ (ವೈದಿಕಸ್ವರಯುಕ್ತವಾದ ಅತ್ಯಂತ ಸುಂದರಮುದ್ರಣ)	೧೨ ಆಣೆ

ಸಿದ್ಧಾಂತಸಾರಾವಳಿ (ತ್ರಿಲೋಚನಶಿವಾಚಾರ್ಯಕೃತ)	೧೨ ಆಣೆ
ಶ್ರೀಜಗದ್ಗುರು ಪಂಚಾಚಾರ್ಯ ಸ್ತೋತ್ರರತ್ನಾಕರ	೧೨ ಆಣೆ
ಮಾಹೇಶ್ವರ ದೀಕ್ಷಾವಿಧಿ (೨ನೆಯ ಆವೃತ್ತಿ)	೧೨ ಆಣೆ
ಶಿಖಾಸೂತ್ರಸಿದ್ಧಾಂತದರ್ಪಣ	೧೨ ಆಣೆ
ಶ್ರೀಕರಭಾಷ್ಯಂ (ಚತುಸ್ಸೂತ್ರೀ)	೧ ರೂ
ಸಚಿತ್ರ ರೇಣುಕವಿಜಯ (೨ನೆಯ ಆವೃತ್ತಿ)	೧ ರೂ
ವೀರಶೈವರತ್ನ (೫ನೆಯ ಆವೃತ್ತಿ, ೩೦ ಮಹತ್ವದ ಫೋಟೋ [illegible])	೧|| ರೂ
ಸಿದ್ಧಾಂತಶಿಖೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ಕೇನೋಪನಿಷತ್ (ಕನ್ನಡ ಟೀಕಾಸಹಿತ)	೧ ರೂ
ರೇಣುಕವಿಜಯ ಮಹಾಪುರಾಣ (ಕನ್ನಡ [illegible])	೧ ರೂ
ಸಿದ್ಧಾಂತಶಿಖಾಮಣಿ (ಕನ್ನಡ ಟೀಕಾಸಹಿತ)	೨ ರೂ
ಶಿವಾಗಮಸಂಗ್ರಹ (ಚಂದ್ರಜ್ಞಾನಾಗಮ [illegible] ಸೂಕ್ಷ್ಮಾಗಮಗಳಿಂದ ಕೂಡಿರುವುದು)	೩ ರೂ
ವೀರಶೈವಸಿದ್ಧಾಂತಸುಧಾಕರ	೨ ರೂ
ಶಿವಾದ್ವೈತಮಂಜರಿ (ಕನ್ನಡವ್ಯಾಖ್ಯಾನ ೧೩೪೪ ಪುಟ)	೮ ರೂ
A brief life sketch of Pandit Sri Kashinatha Shatriji (*English*)	**4 As**
The Philosophical Aspect of Virasaivism (*English*)	**8 As**
Speeches by Pandit Shri Kashinatha Shastriji (*English*)	**12 As**
लिंगधारणचन्द्रिका (संस्कृत)	३ रु
वीरशैव[illegible] (मराठी)	१ रु
महानारायणोपनिषत् (वीरशैवभाष्य-संस्कृत)	१ रु
सिद्धान्तशिखामणि (मूल)	६ आ
पुरुषसूक्तम् (वीरशैवप्राचीनभाष्योपेतम्)	४ आ
नन्दिकेश्वरकारिका (संस्कृत)	२ आ

[illegible] **ಶ್ರೀಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.**

ಮೈಸೂರು ಸಯ್ಯಾಜಿರಾವ್ ರೋಡಿನಲ್ಲಿರುವ ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್ಸಿನಲ್ಲಿ ಸಂಪಾದಕರಾದ ವೇ|| ಪಂಡಿತ ಶ್ರೀ ಕಾಶೀನಾಥಶಾಸ್ತ್ರಿಗಳವರಿಂದ ಮುದ್ರಿಸಿ ಪ್ರಕಟಿಸಲ್ಪಟ್ಟಿತು